
ನಿಜಗುಣ

ಸಂಪಾದಕರು

ಡಾ॥ ಎಚ್. ಎಂ. ಮರುಳಸಿದ್ಧಯ್ಯ

ಷಣ್ಮುಖಯ್ಯ ಅಕ್ಕೂರ ಮಠ



ಶ್ರೀ ನಿ. ಪ್ರ. ನಿಜಗುಣ ಸ್ವಾಮಿಗಳವರ

ಅಮೃತ ಮಹೋತ್ಸವ

ಬೆಂಗಳೂರು

ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಕಾಣಿಕೆ

ಎಂ. ಚಿದಾನಂದಮೂರ್ತಿ

೬.೪.೯೮.

ಗ್ರಂಥಾಲಯಕ್ಕೆ

ನಿಜಗುಣ

ನಿಜಗುಣ

ಶ್ರೀ ನಿ. ಪ್ರ. ಶ್ರೀ ನಿಜಗುಣ ಮಹಾಸ್ವಾಮಿಗಳವರ

ಗೌರವ ಸಂಪುಟ

ಸಂಪಾದಕರು

ಡಾ॥ ಎಚ್. ಎಂ. ಮರುಳಸಿದ್ಧಯ್ಯ

ಷಣ್ಮುಖಯ್ಯ ಅಕ್ಕೂರಮಠ

ಪ್ರಕಾಶನ :

ಶ್ರೀ ನಿ. ಪ್ರ. ಶ್ರೀ ನಿಜಗುಣ ಮಹಾಸ್ವಾಮಿಗಳವರ

ಅಮೃತ ಮಹೋತ್ಸವ ಸಮಿತಿ

ಬೆಂಗಳೂರು

೧೯೯೬

NIJAGUNA : Felicitation Volume brought out on the occasion of Eightieth Birth Day Celebration of His Holiness Sri Nijaguna Swamiji of Jangama matha, Gavipura Extension, Bangalore City. Edited By : **Dr. H. M. Marulasiddaiah and Shanmukhaiah Akkuramatha**, and published by **Ni. Pra. Nijaguna Mahaswamigala Amrutha Mahotsava Samiti.,** Bangalore - 560 019 Pages : xlvi + 688

Year of Publication : March, 1996

Price : **Rs. 300**

Cover Design : **Sri Chandrakanta Pattan**

Volume Design : **Sri Go. Ru. Channabasappa**

ಪ್ರಕಟನ ವರ್ಷ : ಮಾರ್ಚ್, ೧೯೯೬

ಬೆಲೆ : ರೂ. ೩೦೦

ರಕ್ಷಾಪುಟ ವಿನ್ಯಾಸ : ಶ್ರೀ ಚಂದ್ರಕಾಂತ ಪಟ್ಟನ್

ಸಂಪುಟ ವಿನ್ಯಾಸ : ಶ್ರೀ ಗೊ. ರು. ಚನ್ನಬಸಪ್ಪ

Printed at
Sathyasri Printers Pvt Ltd.,
5th Main Road, Chamarajapet, Bangalore - 560 018,
Phone : 62 57 36

ಅಮೃತ ಮಹೋತ್ಸವ ಸಮಿತಿ

ಗೌರವಾಧ್ಯಕ್ಷರು
ಶ್ರೀ ಮನ್ಮಹಾರಾಜ ನಿರಂಜನ
ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು
ಮೂರು ಸಾವಿರ ಮಠ, ಹುಬ್ಬಳ್ಳಿ

ಉಪಾಧ್ಯಕ್ಷರು
ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ
ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು
ಸಂಸ್ಥಾನಮಠ, ಮುಂಡರಗಿ

ಗೌರವ ಕಾರ್ಯಾಧ್ಯಕ್ಷರು
ಶ್ರೀ ನಿ. ಪ್ರ. 'ಪ್ರವಚನಾಚಾರ್ಯ' ಮಲ್ಲಿಕಾರ್ಜುನ ಮಹಾಸ್ವಾಮಿಗಳು
ಶ್ರೀ ಸರ್ಪಭೂಷಣಮಠ, ಬೆಂಗಳೂರು

ಕಾರ್ಯಾಧ್ಯಕ್ಷರು
ಶ್ರೀ ಗೊ. ರು. ಚನ್ನಬಸಪ್ಪ
ಅಧ್ಯಕ್ಷರು, ಅ.ಭಾ.ಶರಣ ಸಾಹಿತ್ಯ ಪರಿಷತ್ತು

ಗೌರವ ಸಂಪುಟ ಸಮಿತಿ

ಸಂಪಾದಕರು : ಡಾ॥ ಎಚ್. ಎಂ. ಮರುಳಸಿದ್ಧಯ್ಯ
ಷಣ್ಮುಖಯ್ಯ ಅಕ್ಕೂರಮಠ

ಸದಸ್ಯರು : ಶ್ರೀ ಕುಮಾರ ನಿಜಗುಣಸ್ವಾಮಿಗಳು,
ಶ್ರೀ ನಿಜಗುಣ ಕ್ಷೇತ್ರ, ಚಿಲಕವಾಡಿ
ಡಾ॥ ಎಂ. ಚಿದಾನಂದಮೂರ್ತಿ
ಅಧ್ಯಕ್ಷರು, ಕನ್ನಡ ಶಕ್ತಿ ಕೇಂದ್ರ
ಪ್ರೊ॥ ಶಾಂತರಸ
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ
ಡಾ॥ ಎಸ್. ಎಂ. ವೃಷಭೇಂದ್ರ ಸ್ವಾಮಿ
ಡಾ॥ ಸಿ. ಯು. ಮಂಜುನಾಥ್
ಪ್ರೊ॥ ಎಂ.ಜಿ. ನಾಗರಾಜ್
ಡಾ॥ ಬಿ. ಎಸ್. ಸ್ವಾಮಿ
ಡಾ॥ ಪಂಚಾಕ್ಷರಿ ಹಿರೇಮಠ
ಶ್ರೀಮತಿ ಶಶಿಕಲಾ ವೀರಯ್ಯಸ್ವಾಮಿ

ಸಂಪಾದಕರ ನುಡಿ

ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರದ ಪ್ರಸಿದ್ಧ ವೀರಶೈವ ಮಠಗಳಲ್ಲಿ ಶ್ರೀ ನಿಜಗುಣರ ಜಂಗಮ ಮಠವೂ ಒಂದು. ಅದರ ಅಧ್ಯಕ್ಷರು ನಿ.ಪ್ರ.ಸ್ವ. ಶ್ರೀ ನಿಜಗುಣ ಮಹಾಸ್ವಾಮಿಗಳು. ಕಾಡಾಗಿದ್ದ ಸ್ಥಳವನ್ನು ಒಂದು. ಪವಿತ್ರ ಸುಕ್ಷೇತ್ರವನ್ನಾಗಿ ರೂಪಿಸಿದ ಕೀರ್ತಿ ಅವರದು. ಶ್ರೀ ಮಠದಲ್ಲಿ ಕಳೆದ ಎರಡು ದಶಕಗಳಿಂದ ಧಾರ್ಮಿಕ, ಸಾಹಿತ್ಯಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ನಡೆಸುತ್ತಾ ಶ್ರೀಮಠವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದ್ದಾರೆ. ಶ್ರೀಮಠದಲ್ಲಿ ಧಾರ್ಮಿಕ ಪ್ರವಚನ, ವಿಚಾರಸಂಕಿರಣ, ಸಂಗೀತ, ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲು ಆಶ್ರಯ ನೀಡುತ್ತಿದ್ದಾರೆ. ಭಕ್ತರನ್ನು ಶ್ರೀಮಠಕ್ಕೆ ಬರಮಾಡಿಕೊಂಡು ಅನ್ನದಾಸೋಹ, ಜ್ಞಾನದಾಸೋಹಗಳನ್ನು ಸತತವಾಗಿ ನಡೆಸುತ್ತಾ ಬಂದಿದ್ದಾರೆ. ಶ್ರೀಗಳವರು ನಮ್ಮ ನಾಡಿನ ವಿದ್ವಾಂಸರಿಗೆ, ಕಲಾವಿದರಿಗೆ, ಸಾಹಿತಿಗಳಿಗೆ ಉದಾರ ನೆರವು ನೀಡುತ್ತಾ ಬಂದಿದ್ದಾರೆ. ಕರ್ನಾಟಕದ ಸರ್ವಾಂಗೀಣ ಪ್ರಗತಿಗೆ ಪ್ರಾಮಾಣಿಕವಾಗಿ ಹೋರಾಟ ಮಾಡುತ್ತಿರುವ ಕನ್ನಡ ಪರ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲವಾಗಿರುವ 'ಕನ್ನಡ ಶಕ್ತಿ ಕೇಂದ್ರ' ಹಾಗೂ ಇತರ ಸಾಂಸ್ಕೃತಿಕ ಸಂಘಟನೆಗಳಿಗಾಗಿ ಶ್ರೀಗಳವರು ಉದಾರವಾಗಿ ಆಶ್ರಯ ನೀಡುತ್ತಿದ್ದಾರೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸುವಲ್ಲಿ ಶ್ರೀಮಠವು ಸದಾ ಕ್ರಿಯಾಶೀಲವಾಗಿದೆ.

ಕರ್ನಾಟಕದ ನಾನಾಭಾಗಗಳಿಂದ ಬೆಂಗಳೂರು ನಗರಕ್ಕೆ ಆಗಮಿಸುತ್ತಿರುವ ಹರಗುರುಚರಮೂರ್ತಿಗಳಿಗೆ ಶ್ರೀಮಠದಲ್ಲಿ ಸದಾ ಆದರಾತಿಥ್ಯ ನಡೆಯುತ್ತದೆ. ಸಹಾಯವನ್ನು ಅಪೇಕ್ಷಿಸಿ ಬಂದ ಬಡಬಗ್ಗರಿಗೆ ಶ್ರೀಗಳು ಅಂತಃಕರುಣದಿಂದ, ಉದಾರ ಮನಸ್ಸಿನಿಂದ ಸಹಾಯಮಾಡುತ್ತ ಬಂದಿದ್ದಾರೆ. ಹೀಗೆ ಸಮಾಜದ ಏಳಿಗೆಗಾಗಿ, ಜನಗಳ ಒಳಿತಿಗಾಗಿ ಹಲವು ಹತ್ತು ರೀತಿಯಿಂದ ಕೆಲಸಮಾಡುತ್ತಿರುವ ಕಾಯಕ ಯೋಗಿಗಳೂ, ಹೃದಯ ಸಂಪನ್ನರೂ ಆದ ಶ್ರೀ ನಿಜಗುಣಸ್ವಾಮಿಗಳವರು ತಮ್ಮ ಸಾರ್ಥಕ ಬದುಕಿನ ಎಂಭತ್ತು ವಸಂತಗಳನ್ನು ಕಂಡಿದ್ದಾರೆ. ಅದಕ್ಕಾಗಿ ಈ ಸಂದರ್ಭದಲ್ಲಿ ಪೂಜ್ಯರನ್ನು ಗೌರವಿಸಲು ಶ್ರೀಮಠದ ಅಭಿಮಾನಿಗಳು ಹಾಗೂ ಭಕ್ತರು ಅಮೃತ ಮಹೋತ್ಸವವನ್ನು ಆಚರಿಸಬೇಕೆಂದು ನಿರ್ಧರಿಸಿದರು. ಇದೇ ಸಂದರ್ಭದಲ್ಲಿ ಶ್ರೀಮಠದಲ್ಲಿ ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬೇಕೆಂದು ತೀರ್ಮಾನಿಸಿದರು. ಈ ಎಲ್ಲ ಕಾರ್ಯಕ್ರಮಗಳಿಗೂ ಕಳಸವಿಟ್ಟಂತೆ ಧಾರ್ಮಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಲೇಖನಗಳನ್ನು ಒಳಗೊಂಡ ವಿದ್ವತ್ಪೂರ್ಣವಾದ ಒಂದು ಗೌರವ ಸಂಪುಟವನ್ನು ಪೂಜ್ಯರಿಗೆ ಸಮರ್ಪಿಸಬೇಕೆಂದು ತೀರ್ಮಾನಿಸಲಾಯಿತು. ಇದಕ್ಕಾಗಿ ಒಂದು ಸಲಹಾ ಮಂಡಳಿಯನ್ನು ರಚಿಸಲಾಯಿತು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶಾಂತರಸರೂ, ಕನ್ನಡ ಶಕ್ತಿಕೇಂದ್ರದ ಅಧ್ಯಕ್ಷರೂ, ನಮ್ಮ ನಾಡಿನ ಪ್ರಸಿದ್ಧ ಸಂಶೋಧಕ ವಿದ್ವಾಂಸರೂ ಆದ

ಡಾ॥ ಎಂ. ಚಿದಾನಂದ ಮೂರ್ತಿಯವರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪನವರು, ಡಾ॥ ಪಂಚಾಕ್ಷರಿ ಹಿರೇಮಠ, ಡಾ॥ ಎಸ್.ಎಂ. ವೃಷಭೇಂದ್ರ ಸ್ವಾಮಿ , ಡಾ॥ ಸಿ.ಯು. ಮಂಜುನಾಥ್, ಶ್ರೀಮತಿ ಶಶಿಕಲಾ ವೀರಯ್ಯ ಸ್ವಾಮಿ ಹಾಗೂ ಪ್ರೊ॥ ಎಂ.ಜಿ. ನಾಗರಾಜ್ ಈ ಎಲ್ಲ ವಿದ್ವಾಂಸರ ಸಲಹೆ ಸಹಕಾರಗಳಿಂದ ಗೌರವ ಸಂಪುಟದ ರೂಪ ರೇಷೆಗಳನ್ನು ಸಿದ್ಧಪಡಿಸಲಾಯಿತು.

ಧರ್ಮದ ವಿಷಯವನ್ನು ಕೇಂದ್ರವನ್ನಾಗಿಟ್ಟುಕೊಂಡು ಇತರ ವಿಷಯಗಳೊಂದಿಗೆ ತೌಲನಿಕವಾಗಿ ವಿವೇಚಿಸುವ ಹಾಗೂ ವೀರಶೈವ ಧರ್ಮ ಮತ್ತು ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ವಿಷಯಗಳನ್ನೊಳಗೊಂಡ ವಿದ್ವತ್ಪೂರ್ಣ ಹಾಗೂ ವಿಚಾರಪರ ಲೇಖನಗಳಿಂದ ಗೌರವ ಸಂಪುಟ ಪ್ರಕಟವಾಗಬೇಕೆಂದು ಸಲಹಾ ಮಂಡಳಿಯ ಸದಾಶಯವಾಗಿತ್ತು. ಈ ಗೌರವ ಸಂಪುಟದ ಸಂಪಾದನೆಯ ಗುರುತರ ಜವಾಬ್ದಾರಿಯನ್ನು ಸಲಹಾ ಮಂಡಳಿಯು ನಮಗೆ ಒಪ್ಪಿಸಿತು. ಸಂತೋಷದಿಂದ ಇದೊಂದು ವಿದ್ವತ್ಸೇವೆಯೆಂದು ಭಾವಿಸಿ ಒಪ್ಪಿಕೊಂಡೆವು. ಕಳೆದ ನವೆಂಬರ್ ತಿಂಗಳಿಂದಲೇ ಈ ಕೆಲಸವನ್ನು ಆರಂಭ ಮಾಡಿ ವಿದ್ವಾಂಸರಿಗೆ ಪತ್ರಗಳನ್ನು ಬರೆದು ಲೇಖನಗಳಿಗೆ ವಿನಂತಿಸಿಕೊಂಡೆವು. ಹಲವರು ಒಪ್ಪಿಕೊಂಡರು, ಕೆಲವರು ಒಪ್ಪಿಕೊಳ್ಳಲಿಲ್ಲ. ಒಪ್ಪಿಕೊಳ್ಳದಿದ್ದ ಲೇಖಕರ ಲೇಖನಗಳಿಗೆ ಪರ್ಯಾಯ ವಿದ್ವಾಂಸರನ್ನು ಹುಡುಕಬೇಕಾಯಿತು. ಹೆಚ್ಚು ಸಮಯವಿರಲಿಲ್ಲ. ಗ್ರಂಥ ಬಿಡುಗಡೆಯ ದಿನಾಂಕ ಮೊದಲೇ ನಿಶ್ಚಯವಾಗಿತ್ತು. ಕೆಲವರ ಲೇಖನಗಳು ಕೈಸೇರಲು ವಿಳಂಬವಾಯಿತು. ಲೇಖನ ಕಳಿಸುತ್ತೇವೆ ಎಂದ ಕೆಲವರು ಕೊನೆಯವರೆಗೂ ಕಳಿಸಲಿಲ್ಲ.

ಧಾರ್ಮಿಕ ವಿಷಯಗಳು ಗಂಭೀರವಾಗಿರಬೇಕು, ವೈಚಾರಿಕ ನೆಲೆಯಲ್ಲಿ ಮೂಡಿಬರಬೇಕು ಎಂದು ಆಯಾ ವಿಷಯಗಳನ್ನು ಪ್ರಾಜ್ಞರಾದ ಲೇಖಕರಿಗೆ ಪತ್ರಬರೆದು ಅವರಿಂದ ಲೇಖನಗಳನ್ನು ಪಡೆದುಕೊಂಡೆವು. ವೀರಶೈವ ಸಂಪದ ವಿಭಾಗದ ಸಿದ್ಧಾಂತ ಹಾಗೂ ಶಾಸ್ತ್ರ ವಿಷಯಗಳು ಅಧಿಕಾರಯುತವಾಗಿರಬೇಕು, ಪರಂಪರೆಗೆ ಅನುಗುಣವಾಗಿರಬೇಕು ಎಂಬ ಅಪೇಕ್ಷೆಯಿಂದ ಆಯಾ ವಿಷಯಗಳಲ್ಲಿ ಪರಿಮತರಾದ್ಧ ವಿದ್ವಾಂಸರಿಂದಲೇ ಬರೆಸಬೇಕೆಂದು ವಿದ್ವಾಂಸರಿಗೆ ಪತ್ರ ಬರೆದೆವು. ಅವರು ಬರೆಯಲು ಒಪ್ಪಿಕೊಂಡರು. ಆದರೆ ನಾವು ನಿಗದಿಪಡಿಸಿದ ಸಮಯಕ್ಕೆ ಕೆಲವು ಲೇಖನಗಳು ಬಾರದಿದ್ದುದಕ್ಕಾಗಿ ವೀರಶೈವ ತತ್ತ್ವ ಹಾಗೂ ಸಿದ್ಧಾಂತಗಳಲ್ಲಿ ಮಹಾವಿದ್ವಾಂಸರಾಗಿದ್ದ ಆಸ್ಥಾನ ಮಹಾವಿದ್ವಾನ್ ಲಿಂ॥ ಗುರುಶಾಂತ ಶಾಸ್ತ್ರಿಗಳ, ಸರ್ವದರ್ಶನತೀರ್ಥ ಲಿಂ॥ವೈ. ನಾಗೇಶ ಶಾಸ್ತ್ರಿಗಳ ಹಾಗೂ ವೇದವೇದಾಂತ ವಿದ್ಯಾವಾಚಸ್ಪತಿ ನ್ಯಾಯಮೂರ್ತಿ ಲಿಂ॥ ಶ್ರೀ ಟಿ.ಎನ್. ಮಲ್ಲಪ್ಪನವರ ಲೇಖನಗಳನ್ನು ಸಂಪುಟಕ್ಕೆ ಬಳಸಿಕೊಳ್ಳಬೇಕಾಯಿತು. ಇದರಿಂದ ಈ 'ನಿಜಗುಣ' ಸಂಪುಟಕ್ಕೆ ಪೂರ್ಣತ್ವ ದೊರಕಿತೆಂಬ ಸಮಾಧಾನವು ನಮಗಾಯಿತು. ಈ ಸಂದರ್ಭದಲ್ಲಿ ಅವರ ವಿದ್ವತ್ಪೂರ್ಣ ಹಾಗೂ ಮೌಲಿಕ ಲೇಖನಗಳ ಸಂಪಾದಕರಿಗೂ, ಪ್ರಕಾಶಕರಿಗೂ ವಿಶೇಷ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಈ ಸಂಪುಟದಲ್ಲಿನ ಲೇಖನಗಳ ಬಗೆಗೆ ಒಂದು ಮಾತು: ನಮ್ಮ ವಿನಂತಿಯನ್ನು ಮನ್ನಿಸಿ ವಿದ್ವಾಂಸರು ಉತ್ತಮ ಲೇಖನಗಳನ್ನು ಕಳುಹಿಸಿ ಸಹಕರಿಸಿದ್ದಾರೆ. ಲೇಖಕರನ್ನು ಆಯ್ಕೆ ಮಾಡುವಾಗ ಹಿರಿಯ ವಿದ್ವಾಂಸರೊಂದಿಗೆ ಹೊಸಬರಿಗೂ ಇಲ್ಲಿ ಅವಕಾಶ ನೀಡಲಾಗಿದೆ. ಈ ಗೌರವ ಸಂಪುಟದ ರೂಪುರೇಷೆಯಂತೆ ವಿದ್ವಾಂಸರಿಂದ ನಾವು ನಿರೀಕ್ಷಿಸಿದ ವಿವಿಧ ಲೇಖನಗಳನ್ನು ಪಡೆಯುವಲ್ಲಿ ನೂರಕ್ಕೆನೂರು ಸಾಧ್ಯವಾಗದಿದ್ದರೂ ತೊಂಬತ್ತು ಭಾಗದಲ್ಲಾದರೂ ಸಫಲವಾಗಿದ್ದೇವೆ ಎನ್ನುವ ತೃಪ್ತಿ ನಮಗಿದೆ. ಲೇಖನಗಳನ್ನು ಕಳುಹಿಸಿ ತಮ್ಮ ವಿದ್ವತ್ಪ್ರೌಢಿಮೆ ಮತ್ತು ವಿಚಾರ ಪ್ರಭೆಯಿಂದ ಈ ಗೌರವಸಂಪುಟವು ಈ ಸ್ವರೂಪವನ್ನು ತಾಳಲು ಕಾರಣರಾದ ಎಲ್ಲ ವಿದ್ವಾಂಸರಿಗೂ ನಮ್ಮ ಅನಂತ ವಂದನೆಗಳು. ಈ ಗೌರವ ಸಂಪುಟಕ್ಕೆ ಸಲಹೆ ಸಹಕಾರವನ್ನು ನೀಡಿದ ಸಲಹಾ ಮಂಡಳಿಯವರಿಗೆ ನಮ್ಮ ನಮನಗಳು. ಈ ಬೃಹತ್ ಗೌರವ ಸಂಪುಟದ ಕಾರ್ಯದಲ್ಲಿ ಡಾ|| ಚಕ್ಕೆರೆ ಶಿವಶಂಕರ್, ಡಾ||ಸಿ.ಯು. ಮಂಜುನಾಥ್ ಹಾಗೂ ಶ್ರೀ ಕೆ.ಬಿ. ಮಲ್ಲೇಶಯ್ಯ – ಈ ವಿದ್ವಾಂಸರು ನೀಡಿದ ವಿಶೇಷ ನೆರವನ್ನು ನಾವು ಮರೆಯುವಂತಿಲ್ಲ.

ಪೂಜ್ಯ ನಿಜಗುಣ ಶ್ರೀಗಳವರ ಅಮೃತ ಮಹೋತ್ಸವದ ಕಲ್ಪನೆಯನ್ನು ನಮ್ಮ ಮನಸ್ಸಿಗೆ ತಂದು ನಮ್ಮನ್ನೆಲ್ಲ ಸಂಘಟಿಸಿ ಈ ಗೌರವ ಸಂಪುಟ ಪ್ರಕಟವಾಗಲೇಬೇಕೆಂದು ಸಂಕಲ್ಪಿಸಿ ಈ ಮಹತ್ಕಾರ್ಯದ ಮಣಿಹಕ್ಕೆ ನಮ್ಮನ್ನು ಅಣಿಗೊಳಿಸಿದವರು ಶ್ರೀ ಸರ್ಪಭೂಷಣ ಮಠಾಧ್ಯಕ್ಷರಾದ ಪ್ರವಚನಾಚಾರ್ಯ ಶ್ರೀ ನಿ.ಪ್ರ.ಸ್ವ. ಮಲ್ಲಿಕಾರ್ಜುನ ಮಹಾಸ್ವಾಮಿಗಳು. ಈ ಸಂದರ್ಭದಲ್ಲಿ ಅವರನ್ನು ನೆನೆಯುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈ ಗೌರವ ಸಂಪುಟವನ್ನು ಸಮರ್ಪಿಸಿಕೊಳ್ಳಲು ಸಮ್ಮತಿಯನ್ನು ನೀಡಿ ಅಮೃತ ಮಹೋತ್ಸವದ ಈ ಕಾರ್ಯಕ್ರಮವು ಅರ್ಥಪೂರ್ಣವಾಗಿ ನಡೆಯಲು ತುಂಬು ಹೃದಯದಿಂದ ನಮ್ಮನ್ನು ಆಶೀರ್ವದಿಸಿದ ಪೂಜ್ಯ ಶ್ರೀ ನಿಜಗುಣ ಸ್ವಾಮಿಗಳವರ ಪಾದಾರವಿಂದಗಳಲ್ಲಿ ನಮ್ಮ ಪ್ರಣಾಮಗಳು.

ಈ ಗೌರವ ಸಂಪುಟವನ್ನು ಸಂಪಾದಿಸುವ ಅವಕಾಶವನ್ನು ಕಲ್ಪಿಸಿಕೊಟ್ಟು ಸರ್ವಸ್ವಾತಂತ್ರವನ್ನು ನೀಡಿ ನಮ್ಮನ್ನು ಪ್ರೋತ್ಸಾಹಿಸಿದ ಸಲಹಾ ಮಂಡಳಿಯವರಿಗೂ , ಅದರಲ್ಲೂ ಸಂಪುಟಕ್ಕೆ ನಿರ್ದಿಷ್ಟ ವಿನ್ಯಾಸವನ್ನು ಪರಿಕಲ್ಪಿಸಿ, ವಿಶೇಷ ಆಸಕ್ತಿಯಿಂದ ನಮಗೆ ಮಾರ್ಗದರ್ಶನ ನೀಡಿದ ಶ್ರೀ ಗೊ.ರು. ಚನ್ನಬಸಪ್ಪನವರಿಗೆ ನಮ್ಮ ಕೃತಜ್ಞತೆಗಳು. ಕೊನೆಯದಾಗಿ ಈ ಬೃಹತ್ ಸಂಪುಟವನ್ನು ಸರ್ವಾಂಗ ಸುಂದರವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಮುದ್ರಣಾಲಯದ ಆಡಳಿತ ವರ್ಗದವರಿಗೂ, ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು. ಈ ಗುರುತರ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರನ್ನೂ ಈ ಸಮಯದಲ್ಲಿ ಸಂತೋಷದಿಂದ ಸ್ಮರಿಸುತ್ತೇವೆ.

ಬೆಂಗಳೂರು
ದಿನಾಂಕ ೦೪-೦೩-೧೯೯೭

ಡಾ|| ಎಚ್. ಎಂ. ಮರುಳಸಿದ್ಧಯ್ಯ
ಷಣ್ಮುಖಯ್ಯ ಅಕ್ಕೂರಮಠ









ಶ್ರೀಮಠದ ಅಧಿಕಾರ
ವಹಿಸಿಕೊಳ್ಳುವ ಪೂರ್ವದಲ್ಲಿ



ಯೌವನದ ಹಂತದಲ್ಲಿ ಶ್ರೀಗಳು



ತಾರುಣ್ಯದಲ್ಲಿ ಶ್ರೀ ನಿಜಗುಣ
ಮಹಾಸ್ವಾಮಿಗಳು



ಶ್ರೀ ಮ.ನಿ.ಪ್ರ ನಿಜಗುಣ ಮಹಾಸ್ವಾಮಿಗಳು,
ಗರ್ಲಜಿನೆಯ ಇಚ್ಛೆಯಲ್ಲಿ



ಮಠದ ಮುಂಭಾಗದಲ್ಲಿ
ನಿಜಗುಣ ಮಹಾಸ್ವಾಮಿಗಳು



ಶ್ರೀ ನಿಜಗುಣರ ಜಂಗಮ ಮಠದ
ಉತ್ತರಾಧಿಕಾರಿಯೊಡನೆ ಶ್ರೀಗಳು



ಶ್ರೀ ನಿ.ಪ್ರ. ನಿಜಗುಣ ಮಹಾಸ್ವಾಮಿಗಳು ಅಜಿನೆಯ ಇಚ್ಚಿಯಲ್ಲಿ



[illegible]



ಪೂಜಾನಿರತ ಶ್ರೀಗಳು







ಪ್ರವಾಸ ಸಂದರ್ಭವೊಂದರಲ್ಲಿ

ತ್ರೀಯ ಪರಗುರು ಚರಮೂರ್ತಿಗಳು ಮತ್ತು ಭಕ್ತರೊಂದಿಗೆ ಶ್ರೀಗಳು





ಜಂಗಮಮಠದಲ್ಲಿ ನಿಡಸೋಸಿ ಜಗದ್ಗುರುಗಳು

ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರು ಗಂಗಾಧರ ಧರ್ಮಪ್ರಸಾರ
ಮಂಡಳದ ರಜತ ಮಹೋತ್ಸವ ಸಮಾರಂಭದಲ್ಲಿ ನಿಜಗುಣ ಶ್ರೀಗಳು





ಶಿವಾನುಭವದ ವಿಚಾರ ಸಂಕಿರಣದಲ್ಲಿ

ಮೂರುಸಾವಿರಮಠದ ಶ್ರೀ ಜಗದ್ಗುರುಗಳವರ ಜೊತೆಯಲ್ಲಿ
ನಿಜಗುಣ ಶ್ರೀಗಳು ಮತ್ತು ಇತರ ಸ್ವಾಮಿಗಳು





[illegible]

ಶ್ರೀ ಮಠದ ಕಾರ್ಯಕ್ರಮವೊಂದರಲ್ಲಿ ಶ್ರೀಗಳಿಂದ [illegible] [illegible]
ಮಠದ ಜಗದ್ಗುರುಗಳಿಗೆ [illegible]





ಶ್ರೀ ಮಠದ ಕಾರ್ಯಕ್ರಮವೊಂದರಲ್ಲಿ [illegible] ಸಮಿತಿ ಅಧ್ಯಕ್ಷ ಡಾ|| ಬಿ.ಡಿ. ಜತ್ತಿ ಅವರು

[illegible] [illegible] [illegible] [illegible]ಗಂಗಾ ಶ್ರೀಗಳಿಗೆ ಗೌರವಾರ್ಪಣೆ





ಅಖಿಲ ಭಾರತ ೨ನೆಯ ಶರಣ ಸಾಹಿತ್ಯ ಸಮ್ಮೇಳನ - ಸುತ್ತೂರು ಜಗದ್ಗುರುಗಳು
ಮತ್ತು ತರಳಬಾಳು ಜಗದ್ಗುರುಗಳಿಗೆ ಸ್ವಾಗತ

ಅಖಿಲ ಭಾರತ ೨ನೆಯ ಶರಣ ಸಾಹಿತ್ಯ ಸಮ್ಮೇಳನ -
ಶ್ರೀ ನಿಜಗುಣ ಮಹಾಸ್ವಾಮಿಗಳು, ಶ್ರೀ ಜೆ.ಹೆಚ್. ಪಟೇಲ್, ಸುತ್ತೂರು ಜಗದ್ಗುರುಗಳು,
ರಾಜ್ಯಪಾಲ ಶ್ರೀ ವೆಂಕಟಸುಬ್ಬಯ್ಯ ಮತ್ತು ಡಾ|| ಆರ್.ಸಿ. ಹಿರೇಮಠ





ಶ್ರೀ ನಿಜಗುಣರ ಜಂಗಮಮಠದಲ್ಲಿ ವೀರಶೈವ ಧರ್ಮ
ಗ್ರಂಥ ನಿರ್ಣಯ ವಿಚಾರ ಕಮ್ಮಟ ನಡೆದಾಗ

ಶ್ರೀಮಠದಲ್ಲಿ ನಡೆದ 'ವೀರಶೈವ ಸಿದ್ಧಾಂತ ಸಂಪದ' ಕಾರ್ಯಕ್ರಮ ಸಂದರ್ಭದಲ್ಲಿ ಸರ್ಪಭೂಷಣ
ಮಠದ ಶ್ರೀಗಳು, ಸುತ್ತೂರು ಜಗದ್ಗುರುಗಳು, ಮೂರುಸಾವಿರ ಮಠದ ಜಗದ್ಗುರುಗಳು,
ಮುಂಡರಗಿ ಜಗದ್ಗುರುಗಳು, ನಿಜಗುಣ ಮಹಾಸ್ವಾಮಿಗಳು ಮತ್ತು ಬೇಲಿಮಠದ ಶ್ರೀಗಳು





ಶ್ರೀ ಸುತ್ತೂರು ಜಗದ್ಗುರುಗಳಿಂದ ಶ್ರೀ ಮಠದ ಕಾರ್ಯಕ್ರಮವೊಂದರ ಉದ್ಘಾಟನಾ ಸಂದರ್ಭದಲ್ಲಿ
ಶ್ರೀ ಗೊ.ರು.ಚನ್ನಬಸಪ್ಪನವರು, ನಿಜಗುಣ ಶ್ರೀಗಳು, ಡಾ॥ ಎಚ್. ತಿಪ್ಪೇರುದ್ರಸ್ವಾಮಿಯವರು

ಶ್ರೀ ಮಠದಲ್ಲಿ ಡಾ॥ ಎಂ.ಸಿ. ಮೋದಿಯವರಿಂದ
ಬೆಂಗಳೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಉದ್ಘಾಟನೆ





ಶ್ರೀಮಠದಲ್ಲಿ ನಡೆದ 'ಶಿವಯೋಗ ಸಂಪದ' ಕಾರ್ಯಕ್ರಮದಲ್ಲಿ
ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಅವರಿಗೆ ಆಶೀರ್ವಾದ

[illegible] ಪೂಜ್ಯರಿಂದ [illegible]






ಶ್ರೀ ನಿಜಗುಣ ಮಹಾಸ್ವಾಮಿಗಳು, ಶ್ರೀ ಮನ್ನಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮತ್ತು ಇಲಕಲ್ಲಿನ ಶ್ರೀ ಮಹಾಂತ ಶಿವಯೋಗಿಗಳು

ಖ್ಯಾತ ಸಂಶೋಧಕರಾದ ಡಾ॥ ಎಂ.ಚಿದಾನಂದಮೂರ್ತಿ ಅವರಿಗೆ ಶ್ರೀಗಳಿಂದ ಸನ್ಮಾನ





ವಿಚಾರಮಗ್ನರಾಗಿದ್ವಾಗ ಜಂಗಮಮಠದ
ಶ್ರೀ ನಿಜಗುಣ ಮಹಾಸ್ವಾಮಿಗಳು

ಶ್ರೀ ನಿಜಗುಣ ಮಹಾಸ್ವಾಮಿಗಳೊಂದಿಗೆ
ಡಾ॥ ಜೋಳದ ರಾಶಿ ದೊಡ್ಡನಗೌಡರು - ರಸ ಪ್ರಸಂಗವೊಂದರಲ್ಲಿ





ಕರ್ನಾಟಕ ಗಾನಕಲಾ ಪರಿಷತ್ತಿನ ಸಂಗೀತೋತ್ಸವದಲ್ಲಿ ಶ್ರೀಗಳು

ನವಿಲಗುಂದದ ಶ್ರೀ ಬಸವಲಿಂಗ ಸ್ವಾಮಿಗಳವರ ಜೊತೆಯಲ್ಲಿ ಶ್ರೀ ಸಿದ್ಧಗಂಗಾ ಮಹಾಸ್ವಾಮಿಗಳು



ಧಾರವಾಡದ ಶ್ರೀಮುರುಘಾಮಠದ ಪೂಜ್ಯ ಶ್ರೀ ನಿ.ಪ್ರ.ಮಹಾಂತ ಶಿವಯೋಗಿಗಳಿಗೆ
ಶ್ರೀಗಳಿಂದ ಗೌರವ ಸಮರ್ಪಣೆ



ಹುಬ್ಬಳ್ಳಿಯ ಮೂರು ಸಾವಿರಮಠದ ಜಗದ್ಗುರುಗಳಿಗೆ
ಶ್ರೀ ನಿಜಗುಣ ಮಹಾಸ್ವಾಮಿಗಳಿಂದ ಸನ್ಮಾನ





ಶ್ರೀ ನಿಜಗುಣರ ಜಂಗಮಮಠದ ಆಶ್ರಯದಲ್ಲಿ ಶಿವಾನುಭವ ಸಮ್ಮೇಳನದ
ಅಂಗವಾಗಿ ನಡೆದ ಶೂನ್ಯ ಸಂಪಾದನೆ ಕುರಿತ ವಿಚಾರ ಸಂಕಿರಣ ಸಂದರ್ಭ



ನಿಜಗುಣರ ಕಲ್ಯಾಣ ಕ್ಷೇತ್ರದ ಉದ್ಘಾಟನಾ ಸಂದರ್ಭದಲ್ಲಿ ಜಂಗಮಮಠದಿಂದ
ಉತ್ಸವದೊಡನೆ ಹೊರಟಾಗ ತೆಗೆದ ಚಿತ್ರ



ಶ್ರೀ ಮಠದ ಕಾರ್ಯಕ್ರಮವೊಂದರಲ್ಲಿ ಇಲಕಲ್ ಶ್ರೀಗಳು,
ಸಿದ್ಧಗಂಗಾ ಶ್ರೀಗಳು, ಮೂರುಸಾವಿರಮಠದ ಜಗದ್ಗುರುಗಳು, ಮುಂಡರಗಿ ಜಗದ್ಗುರುಗಳು
ಮತ್ತು ಶ್ರೀ ನಿಜಗುಣ ಮಹಾಸ್ವಾಮಿಗಳು



ಶ್ರೀಮಠದಲ್ಲಿ ನಡೆದ 'ವೀರಶೈವ ಸಿದ್ಧಾಂತ ಸಂಪದ' ಕಾರ್ಯಕ್ರಮ ಸಂದರ್ಭದಲ್ಲಿ ಸರ್ಪಭೂಷಣ
ಮಠದ ಶ್ರೀಗಳು, ಸುತ್ತೂರು ಜಗದ್ಗುರುಗಳು, ಮೂರುಸಾವಿರ ಮಠದ ಜಗದ್ಗುರುಗಳು,
ಮುಂಡರಗಿ ಜಗದ್ಗುರುಗಳು, ನಿಜಗುಣ ಮಹಾಸ್ವಾಮಿಗಳು ಮತ್ತು ಬೇಲಿಮಠದ ಶ್ರೀಗಳು



[illegible] ಕಾರ್ಯಕ್ರಮ

ಅಖಿಲ ಭಾರತ ೨ನೆಯ ಶರಣಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ
ಶ್ರೀ ನಿಜಗುಣ ಮಹಾಸ್ವಾಮಿಗಳವರಿಗೆ ಸನ್ಮಾನ



ನಿಜಗುಣ

ಪರಿವಿಡಿ

ವೀರಶೈವ ಸಂಪದ

ನಾವು ಕಂಡಂತೆ ಶ್ರೀ ಮ.ನಿ.ಪ್ರ. ನಿಜಗುಣ ಮಹಾಸ್ವಾಮಿಗಳವರು

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಡಾ। ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು,
ಮೂರುಸಾವಿರಮಠ, ಹುಬ್ಬಳ್ಳಿ

ಕನ್ನಡ ನಾಡಿನ ಹೆಮ್ಮೆಯ ರಾಜಧಾನಿ ಬೆಂಗಳೂರು ಮಹಾನಗರದ ಗವಿಪುರ ಬಡಾವಣೆಯಲ್ಲಿನ ಶ್ರೀ ಜಂಗಮಮಠವು ತನ್ನ ಹೆಸರಿಗೆ ತಕ್ಕ ಹಾಗೆಯೇ ಜಂಗಮಮಠ. ಈ ಮಠದ ಪೀಠಾಧಿಪತಿಗಳಾದ ಶ್ರೀ ಮ.ನಿ.ಪ್ರ. ನಿಜಗುಣ ಮಹಾಸ್ವಾಮಿಗಳವರ ಮಾತೃಹೃದಯದ ಮಮತೆ, ಕರ್ತವ್ಯನಿಷ್ಠೆಗಳು, ಧರ್ಮ, ಸಂಸ್ಕೃತಿ, ಸಾಹಿತ್ಯಪ್ರೇಮಗಳು ಅನುಕರಣೀಯ ವಾದವುಗಳು. ಅವರ ಮಮತೆಯನ್ನು ಸೇವಾನಿಷ್ಠತೆಯನ್ನು ಅತೀ ಹತ್ತಿರದಿಂದ ಬಲ್ಲವರು ನಾವು. ಸದಾ ನಗುಮೊಗದ ಅವರ ವ್ಯಕ್ತಿತ್ವ ಶ್ಲಾಘನೀಯವಾದುದು. ಇಂದು ಜಂಗಮಮಠ ಸರ್ವಾಂಗಸುಂದರವಾಗಿ ಕಂಗೊಳಿಸುತ್ತಲಿರುವುದು ಶ್ರೀಗಳವರ ಸತತ ಹೋರಾಟದ ಫಲವಾಗಿದೆ. ಅವರದು ನಿರಂತರ ಹೋರಾಟದ ಬದುಕು. ಅವರು ಕಳೆದ ಎಂಭತ್ತು ವಸಂತಗಳ ತುಂಬು ಬದುಕು ಹೂವಿನ ಹಾಸಿಗೆಯಾಗಿರಲಿಲ್ಲ. ಅನೇಕ ಕಷ್ಟಗಳು ವಿರೋಧಗಳ ನಡುವೆ ಅವರು ಬೆಂದಿದ್ದಾರೆ. ಬೆಂದನಂತರ ಚಿನ್ನದಂತೆ ಪರಿಪಕ್ವರಾಗಿದ್ದಾರೆ. ಆಡಂಬರ ರಹಿತ ಸರಳ ಸುಂದರ ಜೀವನ ಅವರದು. ಕೊಂಕು ಬಿಂಕುಗಳ ಸೋಂಕಿಲ್ಲದ ಪ್ರಾಮಾಣಿಕ ಬದುಕು, ಬಾಹ್ಯಾಭ್ಯಾಂತರದಲ್ಲಿ ಭೇದ ಕಾಣದ ಪರಿಶುದ್ಧ ಹೃದಯ, ವಿನಯಶೀಲತೆ, ಸಕಲರಿಗೂ ಲೇಸನ್ನೇ ಬಯಸುವ ಉದಾತ್ತ ಚಿಂತನೆಯನ್ನು ನಾವು ಶ್ರೀಗಳವರಲ್ಲಿ ಕಂಡಿದ್ದೇವೆ.

'ಕೂಡಲಸಂಗನ ಶರಣರ ಬರವೆಮಗೆ ಪ್ರಾಣ ಜೀವಾಳ'ಎನ್ನುವ ಹಂಬಲ ಅವರದು. ಶ್ರೀಗಳವರ ಅತಿಥಿ ಸತ್ಕಾರದ ಆದರಕ್ಕೆ ನಾವು ಮಾರುಹೋಗಿದ್ದೇವೆ. ಶ್ರೀಗಳವರು ಯಾರಿಗೂ ಕೇಡು ಬಯಸುವವರಲ್ಲ. ಕೇಡು ನುಡಿವವರೂ ಅಲ್ಲ. ಮೃದು ಮಧುರ ಮಿತ ಭಾಷಿಗಳು. ಅವರು ಪ್ರಚಾರಪ್ರಿಯರಂತೂ ಅಲ್ಲವೇ ಅಲ್ಲ. ತಮಗೆ ಕೇಡು ಬಗೆದವರಿಗೆ ಹರನ ಕರುಣೆಯಿರಲಿ ಎಂದು ಹಾರೈಸುವ ಕರುಣಾಮಯಿಗಳು ಅವರು. ಅಂತೆಯೇ ಅವರ

ಸತ್ಯ ಶುದ್ಧ ಕಾಯಕಕ್ಕೆ ಎಂದೂ ಸೋಲೆಂಬುದಾಗಿಲ್ಲ. ಬೆಂಗಳೂರಿನಂತಹ ಮಹಾನಗರದಲ್ಲಿ ಯಾರ ಸಹಾಯವೂ ಇಲ್ಲದಂತೆ ಸಾಧನೆಯ ಪಥದಲ್ಲಿಸಾಗಿ ಯಶಸಾಧಿಸುವುದು ಸಾಮಾನ್ಯದ ಮಾತಲ್ಲ. ಆದರೆ ಶ್ರೀಗಳವರು ಅದನ್ನು ಸಾಧಿಸಿ ತೋರಿದ್ದಾರೆ. ಅನ್ನದಾಸೋಹ ಜ್ಞಾನದಾಸೋಹ ಇಲ್ಲಿ ನಿರಂತರ ನಡೆದು ಆದರ್ಶಮಠವಾಗಿದೆ. ಸರ್ವರ ಮೆಚ್ಚುಗೆಗೆ ಪಾತ್ರವಾಗಿದೆ.

ನಮ್ಮೆಲ್ಲರ ಪ್ರೀತಿಯ, ಮಮತೆಯ ಮಂದಾರ ಮೂರ್ತಿಗಳಾದ ಶ್ರೀ ಮ.ನಿ.ಪ್ರ. ನಿಜಗುಣ ಮಹಾಸ್ವಾಮಿಗಳು ಇನ್ನೂ ನೂರ್ಕಾಲ ಚೆನ್ನಾಗಿ ಬಾಳಬೇಕೆಂಬುದೇ ನಮ್ಮ ಅಭೀಪ್ಸೆ. ಕರುಣಾಮಯಿ ಹುಬ್ಬಳ್ಳಿಪುರದೊಡೆಯ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಕೃಪಾಶೀರ್ವಾದಿಂದ ಅದುಸಾಧ್ಯವಾಗಲಿ ಎಂದು ನಾವು ಅತ್ಯಂತ ಪ್ರೀತಿಯಿಂದ, ಸದಮಲಾಂತ: ಕರುಣದಿಂದ ಶುಭ ಹಾರೈಸುತ್ತೇವೆ.

ಶುಭ ಸಂದೇಶ

ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು
ಶ್ರೀ ಮುರುಘರಾಜೇಂದ್ರ ಸಂಸ್ಥಾನಮಠ, ಆನಂದಪುರ, ಶಿವಮೊಗ್ಗ

ಕಾಯಕಯೋಗಿಗಳು, ಮಾತೃಹೃದಯಿಗಳು, ನ್ಯಾಯನಿಷ್ಠುರಿ, ದಾಕ್ಷಿಣ್ಯಪರರಲ್ಲದ ಸರಳ - ನೇರ ವೈಚಾರಿಕ ನಡವಳಿಕೆಯವರು, ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳು ಶ್ರೀ ನಿಜಗುಣ ಮಹಾಸ್ವಾಮಿಗಳವರು. ಶ್ರೀಗಳವರ ಎಂಭತ್ತು ಸಂವತ್ಸರಗಳ ಸಾರ್ಥಕ ಬದುಕಿನ ಸಂಸ್ಮರಣೆಯ ಅಮೃತಮಹೋತ್ಸವದೊಂದಿಗೆ 'ನಿಜಗುಣ' ಗೌರವ ಸಂಪುಟ ಸಮರ್ಪಿಸುತ್ತಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ.

ಬಡತನದ ಗ್ರಾಮೀಣ ಪರಿಸರದಲ್ಲಿ ಬೆಳೆದು ಬಂದು ಬದುಕಿನ ವಿಶ್ವವಿದ್ಯಾಲಯದಲ್ಲಿ ಬದುಕುವ ಪರಿಯನ್ನು ಕಂಡುಕೊಂಡು ಜೀವನಾನುಭವ ಸಂಪನ್ನರಾಗಿ ಶೋಭಿಸುತ್ತಿದ್ದ ಇವರನ್ನು ಬರಮಾಡಿಕೊಂಡುದು ಶ್ರೀ ಜಂಗಮಮಠ, ಇದೊಂದು ನಿಮಿತ್ತ. ಯಾರಾದರೂ ಕಂಡು ವಿಚಲಿತರಾಗುವಂತಹ ಪರಿಸರದ ಈ ಮಠಕ್ಕೆ ಹೇಳಿಮಾಡಿಸಿದಂತಹ ಘಟ ದೊರಕಿದಂತಾಯಿತು. ಈ ಘಟಕ್ಕೆ ಮಠದಿಂದ ಏನು ದೊರಕಿತೊ ಮಠವಂತೂ ಬೆಳಗಿತು. ಘಟದಿಂದಮಠ ಬೆಳಗಬೇಕೆಂಬ ಶ್ರೀ ಕುಮಾರ ಶಿವಯೋಗಿಗಳ ಮಾತು ನಿಜಗುಣ ಶ್ರೀಗಳವರಿಂದ ಅರ್ಥಪಡೆಯಿತು.

ಮಠಗಳು ಚಟುವಟಿಕೆಯ ಕೇಂದ್ರಗಳು, ಮಠಾಧೀಶರು ಕ್ರಿಯಾಶೀಲರು; ಜನತೆಯ ಹಾರ್ದಿಕ ಸ್ಪಂದನವು ಕೂಡಿದಾಗ ಆದರ್ಶಸಮಾಜ ರೂಪಿಸಲಿಕ್ಕೆ ಸಾಧ್ಯ. ಶ್ರೀಗಳವರು ತುಂಬಾ ಪರಿಶ್ರಮದಿಂದ ಮಠವನ್ನು ಬೆಳಸಿ ತನ್ಮೂಲಕ ಸದಾ ಧರ್ಮ, ಸಾಹಿತ್ಯ, ಕಲೆ-ಸಂಸ್ಕೃತಿ ಪ್ರಸಾರದ ಮಣಿಹವನ್ನು ಪೂರೈಸುತ್ತಿದ್ದಾರೆ. ಗ್ರಂಥ ಪ್ರಕಟಣೆ, ವಿಚಾರಸಂಕಿರಣ ಧರ್ಮಚಿಂತನ ಗೋಷ್ಠಿಗಳು ಅಲ್ಲದೆ ಸಮಾಜದ ಪ್ರಚಲಿತ ವಿಷಯಗಳ ಬಗೆಗೆ ಮುಕ್ತ ಚಿಂತನೆಗೆ ಅವಕಾಶ ಮಾಡಿಕೊಡುವ ವೈಚಾರಿಕ ನಿಲುವು ಅನ್ಯಾದೃಶವಾಗಿದೆ. ಸಮಾಜದ ದ್ವಂದ್ವ-ಗೊಂದಲ ಸನ್ನಿವೇಶದಲ್ಲಿ ತಕ್ಷಣ ಪ್ರತಿಕ್ರಿಯಿಸಿ ಎಲ್ಲರೀತಿಯಿಂದ ಸನ್ನದ್ಧರಾಗುವ, ಸಮಾಜದಬಗೆಗೆ ಅಪಾರ ಕಳಕಳಿಯಿರುವ ನಿಜಗುಣಮಹಾಸ್ವಾಮಿಗಳವರು ಆದರ್ಶರೆನಿಸಿದ್ದಾರೆ. ಅವರನ್ನು ಗೌರವಿಸಬೇಕಾದುದು ಕರ್ತವ್ಯವೇ ಸರಿ. ಈ ಸಂದರ್ಭದಲ್ಲಿ ಶ್ರೀಗಳವರಿಗೆ ಸಮರ್ಪಿಸುತ್ತಿರುವ 'ನಿಜಗುಣ' ಗೌರವಸಂಪುಟ ಅವರವ್ಯಕ್ತಿತ್ವವನ್ನು ಪರಿಚಯಿಸಿಕೊಡುವ ಮೌಲಿಕ ಸಾಹಿತ್ಯಕೃತಿಯಾಗಿ ಹೊರಬರಲೆಂದು ಹೃತ್ಪೂರ್ವಕವಾಗಿ ಹಾರೈಸಲಾಗಿದೆ.

ಸಂದೇಶ

ಶ್ರೀ ನಿ.ಪ್ರ. ಮಹಾಂತಸ್ವಾಮಿಗಳವರು
ಚಿತ್ತರಗಿ ಸಂಸ್ಥಾನಮಠ, ಇಳಕಲ್ಲ, ವಿಜಾಪುರ

ಪೂಜ್ಯ ನಿಜಗುಣ ಸ್ವಾಮಿಗಳವರು ಕರ್ನಾಟಕದ ಎಲ್ಲ ಸ್ವಾಮಿಗಳವರಿಗೆ ಮಾತೃಸ್ವರೂಪರು. ಶ್ರೀಗಳವರ ಸದುವಿನಯ, ಸರಳತೆ ಮತ್ತು ಸಹೃದಯತೆಗೆ ನಾವೂ ಮಾರುಹೋದವರು.

ಶ್ರೀ ಜಂಗಮ ಮಠದ ಮೂಲಕ ಪ್ರತಿ ವರ್ಷವೂ ಶರಣ ಸಂಸ್ಕೃತಿಯ ಬಹುದೊಡ್ಡ ಪ್ರಮಾಣದ ಪ್ರಸಾರ ನಡೆಯುತ್ತಿದೆ. ಅಧಿಕೃತ ಧರ್ಮಗ್ರಂಥದ ಸಿದ್ಧತೆಯ ಪ್ರಯತ್ನವನ್ನು ಶ್ರೀ ಮಠದ ಆಶ್ರಯದಲ್ಲಿ ಅನೇಕ ಸ್ವಾಮಿಗಳು, ಸಾಹಿತಿಗಳು ಮತ್ತು ಅನುಭಾವಿಗಳು ನಡೆಸುತ್ತಿರುವುದು ಪ್ರಶಂಸನೀಯ. ಇದು ಫಲಪ್ರದ ಆಗಲಿ ಎಂಬುದು ನಮ್ಮ ಆಶಯ.

ಶ್ರೀ ನಿಜಗುಣ ಸ್ವಾಮಿಗಳು ಗುರುಲಿಂಗ ಜಂಗಮ ಪ್ರೇಮಿಗಳು. ಇವರು ಸಾರ್ಥಕವಾದ ಕಾಯಕ ನಿಷ್ಠೆಯ ಜೀವನವನ್ನು ನಡೆಸುತ್ತಿರುವವರು. ಇವರ ಅಮೃತ ಮಹೋತ್ಸವವು ನಡೆಯುತ್ತಿರುವುದು ನಮಗೆ ಆನಂದವನ್ನುತಂದಿದೆ. ಆ ಮಹೋತ್ಸವವು ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

ಪೂಜ್ಯನಿಜಗುಣ ಮಹಾಸ್ವಾಮಿಗಳವರು

ಶ್ರೀ ಪರಮಪೂಜ್ಯ ಜಗದ್ಗುರು
ಶ್ರೀ ಚಂದ್ರಶೇಖರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳವರು
ಹೊಸಮಠ, ಹುಬ್ಬಳ್ಳಿ

ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಧಾರ್ಮಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸುಕ್ಷೇತ್ರವೆಂದು ಸುಪ್ರಸಿದ್ಧವಾಗಿರುವ ಶ್ರೀ ನಿಜಗುಣರ ಜಂಗಮ ಮಠವು ಇಂದು ಕನ್ನಡ ನಾಡಿನಲ್ಲಿ ಒಂದು ಪರಮ ಪವಿತ್ರ ಧಾರ್ಮಿಕ ಪೀಠವಾಗಿ ನಾಡಿನ ಅನೇಕ ಮೂಲೆ ಮೂಲೆಗಳಿಂದ ಸಾವಿರಾರು ಭಕ್ತರನ್ನು ಆಕರ್ಷಿಸುತ್ತಲಿದೆ. ಅನೇಕ ವರ್ಷಗಳಿಂದ ಇಲ್ಲಿ ನಿತ್ಯ ಧಾರ್ಮಿಕ ಪ್ರವಚನ, ಕೀರ್ತನ, ವಿಚಾರ ಸಂಕಿರಣ, ಹೀಗೆ ಒಂದಿಲ್ಲೊಂದು ಕಾರ್ಯಕ್ರಮವು ನಡೆದೇ ಇರುತ್ತದೆ. ಕನ್ನಡಿಗರ ಹಿತವನ್ನೇ ಬಯಸುತ್ತ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮತ್ತು ಭಕ್ತಿ ವಿಚಾರದ ನೀತಿಗಳನ್ನು ಜನಮನದಲ್ಲಿ ಬಿಂಬಿಸುತ್ತ ತನ್ನ ಕಾರ್ಯ ಚಟುವಟಿಕೆಗಳನ್ನು ಶ್ರೀ ನಿಜಗುಣರ ಮಠವು ಅನೂಚಾನವಾಗಿ ನಡೆಸುತ್ತಾ ಬಂದಿದೆ. ಇಷ್ಟೇ ಅಲ್ಲದೇ ನಾಡಿನ ಅನೇಕ ಮಹನೀಯರುಗಳನ್ನು ಇಲ್ಲಿ ಬರಮಾಡಿಕೊಂಡು ವಿದ್ವಾಂಸರು, ಪಂಡಿತರು, ಕಲಾವಿದರು, ಸಾಹಿತಿಗಳು, ಸಮಾಜ ಸೇವಕರು, ರಾಜಕೀಯ ಧುರೀಣರು, ಮುಂತಾದವರನ್ನು ಪುರಸ್ಕರಿಸಿ ಶ್ರೀ ಮಠವು ಸತ್ಕರಿಸುತ್ತಲಿದೆ. ಕನ್ನಡ ಪರ ಯಾವುದೇ ಹೋರಾಟ ಅಥವಾ ಚಳುವಳಿಗೆ ಶ್ರೀ ಮಠವು ಒಂದು ಸ್ಫೂರ್ತಿ ಕೇಂದ್ರವಾಗಿದೆ. ಅಷ್ಟೇ ಅಲ್ಲ ಶ್ರೀ ಮಠವು ಒಂದು ಉದಾರ ಆಶ್ರಯ ಸ್ಥಾನವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಇಂತಹ ಪರಮ ಪಾವನ ಚಟುವಟಿಕೆಗಳ ದಿವ್ಯ ಸ್ಫೂರ್ತಿ ಮತ್ತು ದಿವ್ಯ ಕೇಂದ್ರ ಬಿಂದುವೇ ನಿಜಗುಣ ಮಠಾಧೀಶರಾದ ಪೂಜ್ಯ ಶ್ರೀ. ಮ.ನಿ. ಪ್ರ. ನಿಜಗುಣ ಮಹಾಸ್ವಾಮಿಗಳವರು. ಸದಾ ಕಾಯಕಶೀಲರಾಗಿ ಮಾತೃ ಹೃದಯದ ಅಮೃತ ಸಿಂಚನ ನೀಡುತ್ತಿರುವ ಪೂಜ್ಯ ಶ್ರೀಗಳವರಿಗೆ ಇಂದು 80 ವಸಂತಗಳು ದಾಟಿವೆ. ಶ್ರೀ ನಿಜಗುಣರು ಹೆಸರಿಗೆ ತಕ್ಕಂತೆ

ನಿಜಗುಣರೇ ಆಗಿದ್ದಾರೆ. ದೈವೀ ಗುಣಗಳನ್ನೆಲ್ಲ ಸಾಕ್ಷಾತ್ಕಾರಗೊಳಿಸುತ್ತಿರುವ ಶ್ರೀಗಳವರ ಅಮೃತ ಸ್ನೇಹವು ನಮಗೆ ಈ ಕಾಲು ಶತಮಾನದಿಂದ ಒದಗಿ ಬಂದಿರುವ ಭಾಗ್ಯವಾಗಿದೆ ಎಂಬುದಾಗಿ ನಾವು ಇಂದಿನ ಈ ಸುಸಂದರ್ಭದಲ್ಲಿ ಶ್ರೀಗಳವರನ್ನು ಹೃದಯಾಂತರಾಳದಿಂದ ಸ್ಮರಿಸುತ್ತೇವೆ. ಅವರಿಂದ ಆದರಾತಿಥ್ಯವನ್ನು ಪಡೆದು ನಾವು ಧನ್ಯರಾಗಿದ್ದೇವೆ. ಸಂಸ್ಕಾರ, ನೀತಿ, ಧರ್ಮ, ಕಾಯಕ, ನ್ಯಾಯ, ಪ್ರೀತಿ, ವಿಶ್ವಾಸಗಳು ಶ್ರೀಗಳವರಲ್ಲಿ ಮನೆ ಮಾಡಿವೆ. ಭಾರತೀಯ ಆಧ್ಯಾತ್ಮಿಕತೆಯ ತವರೂರೇ ಶ್ರೀಗಳವರು ಎಂಬುದಾಗಿ ನಾವು ಭಾವಿಸುತ್ತೇವೆ.

ಶ್ರೀಗಳನ್ನು ಕುರಿತಾದ ಒಂದು ದಿವ್ಯ ಶ್ಲೋಕವನ್ನು ನಾವು ಇಲ್ಲಿ ಪ್ರಕಟಿಸಬಯಸುತ್ತೇವೆ.

'ಮನಸಿ, ವಚಸಿ, ಕಾಯೆ
ಪುಣ್ಯ ಪಿಯೂಷ ಪೂರ್ಣಾ:
ತ್ರಿಭುವನಮುಪಕಾರ:
ಶ್ರೇಣಿಭಿ: ಪ್ರೀಣಯಂತ:
ಪರಗುಣ ಪರಮಾಣೂನ್
ಪರ್ವತೀ ಕೃತ್ಯ ನಿತ್ಯಂ
ನಿಜಹೃದಿ ವಿಕಸಂತ:
ಸಂತಿ ಸಂತ: ಕಿ ಯಂತ: ?"

ಎಂಬಂತೆ ಶ್ರೀಗಳವರಾದ ಶ್ರೀ ಮ. ನಿ. ಪ್ರ. ನಿಜಗುಣ ಮಹಾಸ್ವಾಮಿಗಳವರು ಅಮೂಲ್ಯ ಗುಣಗಳಿಂದ ಶೋಭಿಸುತ್ತಿದ್ದಾರೆ.

ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಯಾರೇ ಧರ್ಮಶ್ರೀಗಳು ದಯಮಾಡಿಸಿದರೂ ಅವರಿಗೆ ಶ್ರೀ ನಿಜಗುಣರ ಜಂಗಮ ಮಠದಲ್ಲಿ ತುಂಬು ಹೃದಯದ ಆದರದ ಸತ್ಕಾರ ಮತ್ತು ಶ್ರೀಗಳವರ ಸ್ವಾಗತ ಕಾದಿರುತ್ತದೆ. ಕನ್ನಡ ನಾಡು ಇಂತಹ ಅಂತಃಕರಣ ಹೃದಯದ ಶ್ರೀಗಳವರನ್ನು ಪಡೆದು ಧನ್ಯವಾಗಿದೆ. ಶ್ರೀಗಳವರ ಸದ್ಗುಣಗಳು ಅನುಕರಣೀಯ. ಅವರ ಸಮಾಜ ಸೇವೆ ಮತ್ತು ಭಕ್ತಿ ಕೈಂಕರ್ಯಗಳು ಪ್ರಾತಃಸ್ಮರಣೀಯ. ಅವರ ಶಾಂತ ಗುಣ ಸ್ವಭಾವಸ್ಮರಣೀಯವಾದುದು. ಶ್ರೀ ನಿಜಗುಣರು ಮಹಾನುಭಾವಿಗಳು. ವೀರವಿರಕ್ತರು. ಅನುಪಮ ದಿವ್ಯ ತೇಜೋ ಮೂರ್ತಿಗಳು. ತ್ರಿವಿಧ ದಾಸೋಹ ಮೂರ್ತಿಗಳು. ಒಬ್ಬ ಶ್ರೇಷ್ಠ ಸಮಾಜದ ಹಿತಚಿಂತಕರು ಆಗಿರುತ್ತಾರೆ. ಈ ನಿತ್ಯಸತ್ಯ ಗುಣಗಳ ಕೀರ್ತಿ ಅನುಭವವೇದ್ಯವಾಗಿದೆ ಎಂಬುದರಲ್ಲಿ ತಿಲಮಾತ್ರವು ಸಂಶಯವಿಲ್ಲ. ಪೂಜ್ಯರು ನೂರು ಕಾಲ ಬಾಳಲಿ. ಕನ್ನಡ ನಾಡನ್ನು ಬೆಳಗಲಿ ಎಂದು ನಾವು ಹಾರೈಸುತ್ತೇವೆ.

– ಸನ್ಮಂಗಳಂ ಭವತು –

ಶುಭಸಂದೇಶ

ಜಗದ್ಗುರು ಶಿವಲಿಂಗೇಶ್ವರ ಮಹಾಸ್ವಾಮಿಗಳು ಶ್ರೀ ದುರದುಂಡೀಶ್ವರ
ಸಿದ್ಧಸಂಸ್ಥಾನ ಮಠ, ನಿಡಸೋಸಿ , ಬೆಳಗಾವಿ

ಕನ್ನಡ ನಾಡಿನ ಇತಿಹಾಸದಲ್ಲಿ ಮಠಗಳು ತನ್ನದೇ ಆದ ವಿಶಿಷ್ಟ ಪರಂಪರೆಯಲ್ಲಿ ದೇಶಸೇವೆ, ಜನಕಲ್ಯಾಣವನ್ನು ಬಯಸುತ್ತಾ - ಮಾಡುತ್ತಾ ಬಂದಿರುವುದು ಸರ್ವವಿದಿತ ಮಾತು. ಇಂಥ ಅನೇಕ ಮಠಗಳ ಸಾಧನೆಯ ಸಾಲಿನಲ್ಲಿ'ಧ್ರುವತಾರೆ' ಯಂತೆ ಕಂಗೊಳಿಸುತ್ತಿರುವುದು ಬೆಂಗಳೂರಿನ 'ನಿಜಗುಣರ' ಜಂಗಮ ಮಠ'ವೂ ಒಂದು.

ನದಿ ಹರಿಯುವಾಗ ಮೊದಮೊದಲು ಚಿಕ್ಕದಾಗಿಯೆ ಪ್ರವಹಿಸಿ ಅನಂತರ ತನ್ನ ಪರಿಧಿಯನ್ನು ವಿಶಾಲಮಾಡಿಕೊಂಡು ದೇಶಸೇವೆ-ಜನತೆಯ ಉಸಿರಾಗಿ ನಿಲ್ಲಲು ಅಣಿಯಾಗುತ್ತದೆ. ಹಾಗೆಯೆ ಈಗಿನ ಪರಮ ಪೂಜ್ಯ ಶ್ರೀ ಮ.ನಿ.ಪ್ರ. ಶ್ರೀ ನಿಜಗುಣ ಮಹಾಸ್ವಾಮಿಗಳವರು ಮೊದಲು ಒಂದು ಸುಂದರ - ಸರಳ-ಸಾದಾ ಕಲ್ಲಿನ ಮಂಟಪ, ಅದರ ಪಕ್ಕಕ್ಕೆ ಒಂದು ತಗಡಿನ ಶೆಡ್ಡು, ಜತೆಗೆ ಗೋಸೇವೆ, ಇವುಗಳ ಮುಖಾಂತರವಾಗಿ ನಿಜಗುಣರ ಜಂಗಮಮಠಕ್ಕೆ ಹಂತಹಂತವಾಗಿ ಹೊಸ ರೂಪ, ಹೊಸಕಳೆ, ಹೊಸ ಚೈತನ್ಯವನ್ನು ತುಂಬುತ್ತಾ ಬಂದಿದ್ದಾರೆ. ಪೂಜ್ಯರು ತಮ್ಮ ಜೀವಿತದಲ್ಲಿ ಹಿಂದೆ ಕಂಡುಂಡ ನೋವಿನ ಅನುಭವಗಳು ಅಗಣಿತ. ಅಂತೆಯೆ ಇಟ್ಟ, ದಿಟ್ಟ ಹೆಜ್ಜೆ, ಧೈರ್ಯ, ಸಾಹಸಗಳನ್ನು ಕೇವಲ ಈ ನಾಲ್ಕಕ್ಷರಗಳಲ್ಲಿ ವರ್ಣಿಸಲಾದೀತೆ ?

''ಕಾಯಕದಲ್ಲಿ ನಿರತನಾದೊಡೆ ಲಿಂಗಪೂಜೆಯಾದರೂ ಮರೆಯಬೇಕು'' ಎನ್ನುವ ಬಸವಣ್ಣನವರ ವಚನದಂತೆ ಪೂಜ್ಯರು ತಮ್ಮ ಜೀವನದುದ್ದಕ್ಕೂ ಕಾಯಕವನ್ನೇ ಉಸಿರಾಗಿರಿಸಿಕೊಂಡ ಪ್ರತೀಕವಾಗಿ ಇಂದು ಬೆಂಗಳೂರಿನ ಶ್ರೀ ನಿಜಗುಣರ ಜಂಗಮ ಮಠವು ವಿನೂತನವಾಗಿ ಸಮಾಜದ ಉನ್ನತಿಗೆ ಸಿದ್ಧವಾಗಿದೆ. ಅಂತೆಯೆ ನಮ್ಮೆಲ್ಲರಿಗೆ ಅಧ್ಯಾತ್ಮಿಕ, ಸಾಹಿತ್ಯಕ, ಶೈಕ್ಷಣಿಕ ಕಾರ್ಯಗಳಿಗೆ ಕೇಂದ್ರವಾಗಿ ನಿಂತಿದೆ.

'ಹಳೆಬೇರು ಹೊಸ ಚಿಗುರು ಕೂಡಿರಲು ಮರಸೊಗಸು'ಎನ್ನುವಂತೆ ಪೂಜ್ಯರು ಹಳೆಯ ಸಂಸ್ಕೃತಿಯನ್ನೇ ಇಟ್ಟುಕೊಂಡು ಹೊಸ ವಿಜ್ಞಾನಯುಗಕ್ಕೆ ಧರ್ಮವನ್ನು ಹೊಂದಿಸಿಕೊಂಡು ನಡೆದಿರುವುದು; ಇಂದಿನ ಯುವ ಸ್ವಾಮಿಗಳಿಗೂ ಸಮಾಜಕ್ಕೂ ಆದರ್ಶನೀಯ ಸಂಗತಿ; ಅವರ ನಡೆಯೊಂದು ಮಾರ್ಗದರ್ಶಕ. ಹಿತಮಿತ ಮೃದುವಚನ, ಮಾತೃಹೃದಯಿಗಳಾದ ಶ್ರೀ ಪೂಜ್ಯರ ಅಮೃತ ಮಹೋತ್ಸವ ಆಚರಿಸುತ್ತಿರುವುದು ಅತ್ಯಂತ ಅರ್ಥಪೂರ್ಣವಾದುದು. ತನ್ನಿಮಿತ್ತ 'ನಿಜಗುಣ' ಗೌರವ ಸಂಪುಟ ಹೊರಬರುತ್ತಿರುವುದು ಅಭಿನಂದನೀಯವಾದ ಶುಭ ಪ್ರಸಂಗ ಎಂಬುದರಲ್ಲಿ ಎರಡು ಮಾತಿಲ್ಲ.

ಪೂಜ್ಯರ ಅಮೃತ ಮಹೋತ್ಸವ ಸಮಾರಂಭ ಅರ್ಥಪೂರ್ಣವಾಗಿ, ಯಶಸ್ವಿಯಾಗಿ ಜರುಗಲಿ; ನೂರು ವಸಂತಗಳನ್ನು ಕಳೆದು ಶತಮಾನೋತ್ಸವವು ಸಹ ಆಚರಿಸುವಂತಾಗಲಿ ಎಂಬುದಾಗಿ ಆಶಿಸುತ್ತೇವೆ.

ಶ್ರೀ ನಿಜಗುಣ ಮಹಾಸ್ವಾಮಿಗಳು

ಶ್ರೀ ಶಿವಯೋಗಿ ಸ್ವಾಮಿಗಳು, ಮುರುಘಾಮಠ, ಧಾರವಾಡ

ಬೆಂಗಳೂರು ಗವಿಪುರ ಬಡಾವಣೆಯಲ್ಲಿರುವ ಜಂಗಮಮಠದ ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ನಿಜಗುಣ ಮಹಾಸ್ವಾಮಿಗಳ ಅಮೃತ ಮಹೋತ್ಸವ ಜರುಗಿಸುವ ಸಂಗತಿ ತಿಳಿದು ನಮಗೆ ಸಂತೋಷವಾಯಿತು. ನಿಜಗುಣ ಮಹಾಸ್ವಾಮಿಗಳು ಭಾಗ್ಯವಂತರು. ಇವರು ದೇವರಾಗಿದ್ದಾಗ ಅಥಣಿ ಗಚ್ಚಿನ ಮಠದ ಜಗದ್ವಂದ್ಯರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಕೃಪೆಗೆ ಪಾತ್ರರಾಗಿ ಅವರಿಂದ ಜಂಗಮಾಧಿಕಾರ ಸ್ವೀಕರಿಸಿದರು. ಇಂತಪ್ಪಯೋಗ ದುರ್ಲಭವಾದುದು. ಶಿವನ ಕೃಪೆಯಿಲ್ಲದೆ ದೊರಕಲಾರದು.

ದುರ್ಲಭಂ ತ್ರಯಮೇವ ತತ್ ದೇವಾನುಗ್ರಹಹೇತುಕಂ।
ಮನುಷ್ಯತ್ವಂ ಮುಕ್ಷತ್ವಂ ಮಹಾಪುರುಷಸಂಶ್ರಯಂ॥

ನಿಜಗುಣ ಮಹಾಸ್ವಾಮಿಗಳು ಸಾಹಸ, ಧೈರ್ಯ, ಪರಾಕ್ರಮ, ಬುದ್ಧಿಮತ್ತೆ ಸತ್ಕಾರ್ಯಗಳಿಂದ ಆರ್ಥಿಕವಾಗಿ ಹಿಂದುಳಿದಿದ್ದ ಜಂಗಮ ಮಠವನ್ನು ಸಂಪದ್ಭರಿತ ಮಠವನ್ನಾಗಿ ಮಾಡಿದ್ದಾರೆ. ಇಂಥವರಿಗೆ ಶಿವನು ನಿರಂತರ ಸಹಾಯಕನಾಗಿರುತ್ತಾನೆ.

ಉದ್ಯಮಂ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ।
ಷಡೇತೇಯತ್ರು ವರ್ತಂತೇ ತತ್ರದೇವಃ ಸಹಾಯಕೃತ್॥

ಹಣವು ಹೆಚ್ಚಿದಂತೆ ನಿಜಗುಣ ಮಹಾಸ್ವಾಮಿಗಳ ತ್ಯಾಗವು ಹೆಚ್ಚಿದೆ. ತಮ್ಮ ಮಠಕ್ಕೆ ಆಗಮಿಸಿದ ಅತಿಥಿಗಳಿಗೆ ಭಕ್ತರಿಗೆ ಗುರುಜಂಗಮರಿಗೆ ವಸತಿ ಪೂಜೆ ಪ್ರಸಾದಗಳ ವ್ಯವಸ್ಥೆಯನ್ನು ಶ್ರದ್ಧೆಯಿಂದ ಮಾಡಿಸುತ್ತಾರೆ. ಇಂತಪ್ಪವರೇ ನಿಜವಾದ ಗುರುಗಳು.

ಶಿವ ಗುರುವೆಂದು ಬಲ್ಲಾತನೇ ಗುರು
ಶಿವ ಲಿಂಗವೆಂದು ಬಲ್ಲಾತನೇ ಗುರು
ಶಿವ ಜಂಗಮವೆಂದು ಬಲ್ಲಾತನೇ ಗುರು
ಇಂತೀ ತ್ರಿವಿಧವು ಶಿವನೆಂದರಿದ
ಸಂಗನಬಸವಣ್ಣನು ಎನಗೆಯೂ ಗುರು
ನಿನಗೆಯೂ ಗುರು ಜಗವೆಲ್ಲಕ್ಕೂ ಗುರು
ಕಾಣಾ ಗುಹೇಶ್ವರಾ ।

ಜಗದ್ಗುರು ಪ್ರಭುದೇವರ ವಚನವನ್ನು ಸಾರ್ಥಕಗೊಳಿಸಿದ ಶ್ರೀ ನಿಜಗುಣ ಮಹಾಸ್ವಾಮಿಗಳು ನಿಜಕ್ಕೂ ಪೂಜ್ಯ ಗುರುಗಳಾಗಿದ್ದಾರೆ. ನಿಜಗುಣ ಮಹಾಸ್ವಾಮಿಗಳು ನಮ್ಮ ಗುರುಗಳಾದ ಶ್ರೀ ಮಹಾಂತಪ್ಪಗಳಲ್ಲಿ . ಶ್ರೀ ಮೃತ್ಯುಂಜಯ ಅಪ್ಪಗಳಲ್ಲಿ ಅಪಾರ ನಂಬುಗೆ ಇರಿಸಿಕೊಂಡಿದ್ದರು. ಶ್ರೀಮಹಾಂತಪ್ಪಗಳನ್ನು ತಮ್ಮ ಮಠಕ್ಕೆ ಪ್ರತಿವರ್ಷ ಕರೆಸಿಕೊಳ್ಳುತ್ತಿದ್ದರು. ನಾವು ಬೆಂಗಳೂರಿಗೆ ಬಂದಾಗ ನಾವುಗಳೆಲ್ಲ ಗುರುಬಂಧುಗಳೆಂದು ಅಪ್ಪಿಕೊಳ್ಳುವರು. ಇಂಥವರು ಜೀವಿಸಿದಷ್ಟು ದೇಶಕ್ಕೆ ಒಳ್ಳೆಯದು. ನಿಜಗುಣ ಮಹಾಸ್ವಾಮಿಗುಳು ಶತಾಯುಷಿಗಳಾಗಲೆಂದು ಹಾರೈಸುತ್ತೇವೆ.

ಶ್ರೀ ನಿ.ಪ್ರ. ಶ್ರೀ ನಿಜಗುಣ ಸ್ವಾಮಿಗಳವರು

ಶ್ರೀ ನಿ.ಪ್ರ. ಚರಮೂರ್ತಿ ಶ್ರೀ ಎಂ. ಕಾಲಾಗ್ನಿ ರುದ್ರಮುನಿಸ್ವಾಮಿಗಳು

ಪೂಜ್ಯ ನಿಜಗುಣ ಸ್ವಾಮಿಗಳು, ಮೃದು, ಮಧುರ, ಹಿತಮಿತವಾಗ್ಮಿಗಳು. ಇವರು ಮಾತನಾಡುವಾಗ ಅವರ ಸದ್ಭಾವ ಮಂದಹಾಸದ ರೂಪದಲ್ಲಿ ಹೊರ ಹೊಮ್ಮುತ್ತದೆ. ದೃಢಕಾಯ, ತೆಳು ಕಾಷಾಯ ವಸ್ತ್ರಧಾರಿಗಳಾದ ಇವರ ದರ್ಶನ ಮಾಡುತ್ತಲೇ ದರ್ಶನ ಮಾಡುವವರ ಮನದಲ್ಲಿ ಪೂಜ್ಯಭಾವ ಉಕ್ಕಿ ಹರಿಯುತ್ತದೆ. ಭಕ್ತರನ್ನು ಆಹ್ವಾನಿಸುವಾಗ ನೋಡಬೇಕು ಅವರಲ್ಲಿರುವ ವಾತ್ಸಲ್ಯದ ಹೃದಯವನ್ನ. ನಿರಾಡಂಬರತ್ವ, ನಿಗರ್ವ, ವ್ಯವಹಾರಕೌಶಲ, ಅನ್ಯಾಯದ ವಿರುದ್ಧ ಹೋರಾಟ ಮನೋಭಾವ ಇವೆಲ್ಲ ಇವರಲ್ಲಿ ಮನೆಮಾಡಿಕೊಂಡಿವೆ.

ಭಕ್ತೋದ್ಧಾರವೇ ಪರಮಗುರಿ ಎಂದು ಭಾವಿಸಿದ್ದ ಶ್ರೀಗಳು ಶ್ರಾವಣ ಮಾಸದಲ್ಲಿ ಶ್ರೀ ಮಠದಲ್ಲಿ ವಿದ್ವಾಂಸರಿಂದ ಪುರಾಣ ಪ್ರವಚನ, ವಚನಸಾಹಿತ್ಯ ವಿಮರ್ಶೆ ಮತ್ತು ಶಿವಾನುಭವದ ಸಮ್ಮೇಳನವನ್ನು ನಡೆಸಿ ಜನರು ಸುಸಂಸ್ಕೃತರಾಗಲು ನೆರವಾಗುತ್ತಾರೆ. ವಿದ್ವಾಂಸರನ್ನು, ಕವಿಗಳನ್ನು ಸನ್ಮಾನಿಸುತ್ತಾ ಬಂದಿರುವ ಶ್ರೀಗಳು ಸ್ವತಃ ವಿದ್ವಾಂಸರೂ, ವಿದ್ವಜ್ಜನ ಪ್ರೇಮಿಗಳೂ ಆಗಿದ್ದಾರೆ.

ಎಂಬತ್ತೊಂದು ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಶ್ರೀಗಳವರ ಶರೀರಕ್ಕೆ ಮುಪ್ಪು ಬಂದಂತೆ ಕಾಣುತ್ತದೆಯೇ ಹೊರತು, ಮನಸ್ಸಿಗೆ ಮಾತ್ರ ನವತಾರುಣ್ಯ. ಮನುಷ್ಯ ಪ್ರಯತ್ನ ದೊಡ್ಡದು ಇದರ ಜೊತೆಗೆ ದೈವೀ ಬಲ ಬೇಕು ಎಂಬುದು ಇವರ ದೃಢನಿಲುವು. ಅಂತರಂಗ - ಬಹಿರಂಗ ಶುದ್ಧರಾಧ ಶ್ರೀಗಳು ಸಕಲರಿಗೂ ಲೇಸನ್ನೇ ಬಯಸುವ ಶುದ್ಧಾತ್ಮರು. ಇವರ ದಾಸೋಹಂಭಾವ ವರ್ಣಿಸಲು ಅಸದಳವಾದದ್ದು.'ಎನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ' ಎಂಬ ಮಾತು ಇವರಿಗೆ ಪೂರ್ಣ ಅನ್ವಯವಾಗುತ್ತದೆ.

ಮೂರು ಸಾವಿರ ಮಠದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ರಾಜಯೋಗೀಂದ್ರ ಮಹಾಸ್ವಾಮಿಗಳು ಶ್ರೀಗಳವರಿಗೆ 'ನಿರಾಭಾರಿ ಸದ್ಗುರು' 'ಕಾಯಕಯೋಗಿ' ಎಂಬ ಪ್ರಶಸ್ತಿ ನೀಡಿರುವುದು ಅನ್ವರ್ಥವಾಗಿದೆ. ಸತ್ಯಶುದ್ಧ ಕಾಯಕನಿಷ್ಠರಾದ ಶ್ರೀ ನಿಜಗುಣ ಮಹಾಸ್ವಾಮಿಗಳು ಶತಾಯುಷಿಗಳಾಗಿ, ಇವರ ಸೇವೆ ಸಮಾಜಕ್ಕೆ ದೊರಕುವಂತಾಗಲಿ, ಇವರ ಕೃಪಾಶೀರ್ವಾದ ಭಕ್ತರ ಮೇಲೆ ಸದಾ ರಾರಾಜಿಸಲಿ, ಪೂಜ್ಯರ ಬದುಕು ಸಮಾಜಕ್ಕೆ ದಾರಿದೀಪವಾಗಲಿ ಎಂದು ಆಶಿಸೋಣ.

ಶ್ರೀ ನಿ.ಪ್ರ.ಸ್ವ. ನಿಜಗುಣ ಮಹಾಸ್ವಾಮಿಗಳು

ನಿ.ಪ್ರ.ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು
ಸರ್ಪಭೂಷಣ ಮಠ, ಬೆಂಗಳೂರು,

ಪೂಜ್ಯ ಶ್ರೀ ನಿಜಗುಣ ಮಹಾಸ್ವಾಮಿಗಳವರ ಅಮೃತೋತ್ಸವ ಸಮಾರಂಭ ನಡೆಯುತ್ತಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ಕಳೆದ ಎರಡು ದಶಕಗಳಿಂದಲೂ ಪೂಜ್ಯರ ದರ್ಶನ ಒಡನಾಟ ನಮಗಿದೆ. ಧಾರವಾಡದ ಪೂಜ್ಯ ಮಹಾಂತಪ್ಪಗಳವರಲ್ಲಿ ನಿಜಗುಣಸ್ವಾಮಿಗಳವರಿಗೆ ತುಂಬಾ ಗೌರವವಿತ್ತು. ಧಾರವಾಡದ ಅಪ್ಪಗಳೊಂದಿಗೆ ನಾವು ಬಂದಾಗಲೆಲ್ಲ ಪೂಜ್ಯರ ಪರಿಚಯ ಸಾನಿಧ್ಯ ತುಂಬಾ ನಿಕಟವಾಯಿತು. ನಾವು ಸರ್ಪಭೂಷಣ ಮಠಕ್ಕೆ ಅಧ್ಯಕ್ಷರಾದ ಮೇಲೆ ಅವರ ಸಲಹೆ – ಸಹಕಾರಗಳು ನಮಗೆ ತುಂಬಾ ಧೈರ್ಯವನ್ನು ತಂದುಕೊಟ್ಟಿವೆ. ಪೂಜ್ಯರು, ಕಾಯಕ ಯೋಗಿಗಳು, ಲಿಂಗಪೂಜಾನಿಷ್ಠರು, ಕ್ರಿಯಾಶೀಲರು ಜಂಗಮ ಪ್ರಾಣಿಯಾಗಿದ್ದ ಬಸವಣ್ಣನವರು ಜಂಗಮರಲ್ಲಿ ಕೂಡಲಸಂಗಮನನ್ನೇಕಾಣುತ್ತಿದ್ದರು. ಶರಣರ ಆದರ್ಶವನ್ನೇ ಪಾಲಿಸುತ್ತಾ ಮಠಕ್ಕೆ ಬಂದ ಜಗದ್ಗುರುಗಳನ್ನು ಜಂಗಮರನ್ನು ಆದರದಿಂದ ಬರಮಾಡಿಕೊಂಡು ಅತಿಥಿ ಸತ್ಕಾರ ಮಾಡುತ್ತಾರೆ. ಅವರು ಮಾತೃಹೃದಯಿಗಳು ಶ್ರೀಮಠದಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಸದಾ ನಡೆಯುತ್ತಿರುತ್ತವೆ. ಪೂಜ್ಯರು ಬಹಳ ಕಷ್ಟಪಟ್ಟು ಮಠವನ್ನು ನಿರ್ಮಿಸಿದ್ದಾರೆ. ಅವರದು ಹೋರಾಟದ ಬದುಕು. ಘಟದಿಂದ ಮಠ ಎನ್ನುವ ಮಾತಿಗೆ ಉದಾಹರಣೆಯಾಗಿದ್ದಾರೆ. ಸಮಾಜದ ಒಳಿತಿಗಾಗಿ ಹಲವು ಹತ್ತುರೀತಿಯಿಂದ ಕೆಲಸಮಾಡುತ್ತಿರುವ ಪೂಜ್ಯ ಶ್ರೀ ನಿಜಗುಣ ಸ್ವಾಮಿಗಳವರು ಎಂಬತ್ತು ವಸಂತಗಳನ್ನು ಕಂಡಿದ್ದಾರೆ. ಜೀವನದ ಸಂಧ್ಯಾಕಾಲದಲ್ಲಿ ಸಾಗುತ್ತಿರುವ ಅವರ ಬದುಕು ಸಾರ್ಥಕವಾಗಿದೆ.

ಅವರು ನೂರುಕಾಲ ನಮ್ಮೊಂದಿಗೆ ಇದ್ದು ಅವರ ಶತಮಾನೋತ್ಸವವನ್ನು ಆಚರಿಸುವ, ಸದವಕಾಶ ಪ್ರಾಪ್ತವಾಗಲಿ ಎಂದು ಹಾರೈಸುತ್ತೇವೆ.

ಸಹಜ ದಾಸೋಹದ ನಿಜ ಜಂಗಮ

ಶ್ರೀ. ನಿ. ಪ್ರ. ಶ್ರೀ ಗುದ್ದಲೀಶ್ವರ ಸ್ವಾಮಿಗಳು, ಹೊಸರಿತ್ತಿ

ಸರಿಸುಮಾರು 28 ವರ್ಷಗಳಿಗಿಂತಲೂ ಮುಂಚಿನಿಂದ ಈ ಪರಮ ಪೂಜ್ಯರ ಪರಿಸರದಲ್ಲಿದ್ದು ಧನ್ಯನಾದವನು ನಾನು. ಒಳ್ಳೆಯದಕ್ಕೋಸ್ಕರ ಅವರು ಪಡುವ ಕಳಕಳಿ, ಬಿಡದ ಛಲ, ಸಾಧಿಸಿ ತೋರಿಸುವ ನಿಷ್ಠುರತೆ, ಎಂಥವರನ್ನೂ ದಂಗಾಗಿಸುತ್ತದೆ. ಹೀಗಾಗಿ ಅವರಿರುವ ಪರಿಸರ ಒಂದು ಸ್ವಚ್ಛವಾತಾವರಣವಾಗಿ ಪರಿಣಾಮಗೊಂಡು ನಮ್ಮಂಥ ಸಾಧಕ ಜೀವಿಗಳಿಗೆ ಆದರ್ಶವಾಗಿ ಕಾಣಿಸುವುದರಲ್ಲಿ ಆಶ್ಚರ್ಯವಿಲ್ಲ.

ಜೀವನದಲ್ಲಿ ಬರುವ ಎಷ್ಟೇ ಚಿಕ್ಕಘಟನೆಗಳಾಗಲಿ, ವಿಷಯಗಳಾಗಲಿ ಅದನ್ನು ಅಲಕ್ಷಮಾಡದೆ, ಅವನ್ನು ಪೂರ್ಣತಳಸೋಸಿ ಪರಿಹಾರ ಕಂಡುಕೊಳ್ಳುವ ಅವರ ಜಾಗ್ರತೆ, ಅವಧಾನಿಗಳಾಗಿರುವ ಅವರ ಸಾಧನೆ, ಅವರು ಯಾವ ಕೆಲಸಗಳನ್ನೇ ಆಗಲಿ ಮಾಡಿದರೆ, ಅದು ಶಾಶ್ವತ ಚಿರಂತನ ನಿತ್ಯನೂತನವಾಗಿಯೇ ಇರುವದೆಂಬುದಕ್ಕೆ ಅವರು ಸಾಧಿಸಿದ ಸಾಧನೆಯೇ ನಮಗೆ ಪ್ರತ್ಯಕ್ಷ ಸಾಕ್ಷಿಯಾಗಿ ನಿಲ್ಲುತ್ತದೆ.

ಇಷ್ಟೆಲ್ಲ ಸಾಧಿಸಿದರೂ, ಅವರಲ್ಲಿರುವ ಜಂಗಮಭಕ್ತಿ, ಸಂಸ್ಕಾರಕ್ಕೆ ಅವರು ಕೊಡುವ ಗೌರವ ಮುಂದಿನ ಪೀಳಿಗೆಗೆ ಒಂದು ದಿವ್ಯ ಆದರ್ಶ. ಮಾತೃಹೃದಯದ ಪೂಜ್ಯರ ಭಕ್ತಿ ವಿಶ್ವಾಸಗಳು ಅವರು ಜೀವನದುದ್ದಕ್ಕೂ, ಮಾಡಿಕೊಂಡು ಬಂದಿರುವ ಹಿರಿಯರ ಪೂಜ್ಯರ ಸೇವಾ ಫಲಗಳಾಗಿ ನಮಗೆ ಸ್ಪಷ್ಟವಾಗಿ ಗೋಚರಿಸುತ್ತವೆ. ಇವರೆ ಸಹಜ ದಾಸೋಹದ ನಿಜ ಜಂಗಮರು, ಇಂಥ ಪರಮಪೂಜ್ಯರ ಅಮೃತೋತ್ಸವ ಸಮಾಜಕ್ಕೆ ದೊರೆತದ್ದುಪುಣ್ಯವೆಂದು ಭಾವಿಸಬೇಕು, ಪರಮಪೂಜ್ಯರ ಶತಮಾನೋತ್ಸವವನ್ನು ಮಾಡಿ ಕೃತಾರ್ಥತೆಯನ್ನು ಪಡೆಯಬೇಕೆಂಬ ನಮ್ಮ ಆಶಯವನ್ನು ಪೂರೈಸಲೆಂದು ಜಂಗಮಜ್ಯೋತಿಗೆ ಭಕ್ತಿ ಪುರಸ್ಕರ ನಮನಗಳೊಂದಿಗೆ ಪ್ರಾರ್ಥಿಸುತ್ತ ನುಡಿ ಪುಷ್ಪವನ್ನು ಶ್ರೀಪಾದಕ್ಕೆ ಅರ್ಪಿಸುವೆ.

ಸಂದೇಶ

ತ್ರಿಭಾಷಾಕವಿ, ಶ್ರೀ ವೇ ||ಡಾ ||ಪಂ || ಪುಟ್ಟರಾಜ ಕವಿ ಗವಾಯಿಗಳು
ಶ್ರೀ ವೀರೇಶ್ವರ ಪುಣ್ಯಾಶ್ರಮ, ಪಂಚಾಕ್ಷರ ನಗರ,
ಗದಗ

ಭರ್ತೃಹರಿ ಕವಿವಾಣಿಯದಲ್ಲಿ ಸತ್‌ಪುರುಷರ ನೀತಿ ರೀತಿಯು ವರ್ಣಿತವಾಗಿದೆ. ಇದರ ತಾತ್ಪರ್ಯವಿಷ್ಟೇ, ಸತ್ಪುರುಷರಾದವರು ಮನಸ್ಸಿನಲ್ಲಿಯೂ, ಮಾತಿನಲ್ಲಿಯೂ, ಶರೀರದಲ್ಲಿಯೂ, ಪುಣ್ಯವೆಂಬ ಅಮೃತದಿಂದ ಪೂರ್ಣರಾಗಿ ಮೂರು ಲೋಕಗಳನ್ನು ಉಪಕಾರಗಳಿಂದ ಸಂತೋಷ ಪಡಿಸತಕ್ಕವರಾಗಿ ಪರರ ಅತ್ಯಲ್ಪ ಸದ್ಗುಣಗಳನ್ನು ಪರ್ವತಪ್ರಾಯವಾಗಿ ಮಾಡಿ ಸತ್ಯವಾದುದನ್ನು ತಮ್ಮ ಹೃದಯದಲ್ಲಿ ಮೂಡಿಸಿಕೊಂಡು ಬೆಳೆಯಿಸಿಕೊಳ್ಳತಕ್ಕವರಾಗಿದ್ದಾರೆ. ಇಂತಹ ಸತ್ಪುರುಷರು ಎಂಥವರು ಎಂದು ಜನರನ್ನು ಕವಿಯು ಪ್ರಶ್ನಿಸಿದ್ದಾನೆ.

ಈ ಪ್ರಶ್ನೆಗೆ ಅವರು ದೇವತೆಗಳಿಗೆ ಮೀರಿದವರು ಎಂದು ನಾವು ಉತ್ತರಿಸಬಹುದು. ಇಂತಹ ಸತ್ಪುರುಷರಿಗೆ ಅವರವರ ಮತ ಧರ್ಮದ ಆಚಾರ ವಿಚಾರಗಳನ್ನು ಕಲ್ಪಿಸತಕ್ಕವರು ಸ್ವಾಮಿಗಳು. 'ಸ್ವಮ್ ಆಮಿಮೀತಿ ಇತಿ ಸ್ವಾಮಿ' ಅಂದರೆ ತನ್ನನ್ನು ತಾನು ಅಳತೆ ಮಾಡಿಕೊಳ್ಳತಕ್ಕವನು. ಅಂದರೆ ಇಂಚು ಪಟ್ಟಿಯಿಂದ ಅಲ್ಲ, ಬುದ್ಧಿಶಕ್ತಿಯಿಂದ ಅಳತೆ ಮಾಡಿಕೊಳ್ಳುವರು. ಅಂದರೆ ತಾನು ಹೇಗಿದ್ದೇನೆ ಎಂಬುದನ್ನು ಅರಿತುಕೊಂಡು ವ್ಯತ್ಯಾಸವಿದ್ದರೆ, ತಿದ್ದಿಕೊಂಡು ಬಾಳತಕ್ಕವನೇ ಸ್ವಾಮಿ ಎಂದರ್ಥ. ಇಂತಹ ವರ್ಗಕ್ಕೆ ಸೇರಿದವರು ನಮ್ಮ 'ನಿಜಗುಣ ಸ್ವಾಮಿಗಳವರು'.

ಆಗಾಗ ಬೆಂಗಳೂರಿನಲ್ಲಿರುವ ತಮ್ಮ ಮಠದಲ್ಲಿ ಅನುಭಾವಿಗಳನ್ನು ಕರೆಯಿಸಿಕೊಂಡು ಬಸವಾದಿ ಶಿವಶರಣರು ಬರೆದ 'ವಚನ ಶಾಸ್ತ್ರ'ವನ್ನು ಜನರಿಗೆ ಬೋಧನೆ ಮಾಡಿಸಿ ಜನ ಜಾಗ್ರತಿಯನ್ನು ಮಾಡುತ್ತಿದ್ದಾರೆ.

ಮಠದಲ್ಲಿ ಬಡವರಿಗಾಗಿ ಕಲ್ಯಾಣ ಮಂದಿರವನ್ನು ಕೂಡ ನಿರ್ಮಾಣಗೊಳಿಸಿ ಬಡವರಿಗೆ ಆಧಾರಿಗಳಾಗಿದ್ದಾರೆ. ಬಡವರಾಗಲಿ ಬಲ್ಲಿದರಾಗಲಿ ಯಾರೇ ಆಗಲಿ ತಮ್ಮ ಮಠಕ್ಕೆ ಬಂದರೆ, ಅವರ ಕಷ್ಟ ನಷ್ಟಗಳನ್ನು ವಿಚಾರಿಸಿ, ಅವರಿಗೆ ಸೂಕ್ತ ಸಲಹೆಗಳನ್ನು ನೀಡಿ, ಸುವ್ಯವಸ್ಥೆ ಗೊಳಿಸತಕ್ಕವರಾಗಿದ್ದಾರೆ. ಶಿವಪೂಜಕರಿಗೆ ತಮ್ಮ ಮಠದಲ್ಲಿ ಸರ್ವ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಇಂತಹ ಪುಣ್ಯಾತ್ಮರಾದ 'ಶ್ರೀ ಮ.ನಿ.ಪ್ರ. ನಿಜಗುಣ ಮಹಾಸ್ವಾಮಿಗಳವರು ಇನ್ನು ಬಹುಕಾಲ ಬಾಳಲೆಂದು ಯಡೆಯೂರು ಶ್ರೀ ಸಿದ್ಧಲಿಂಗೇಶ್ವರರನ್ನು ಪ್ರಾರ್ಥಿಸುತ್ತೇವೆ.

ಓಂ ಸತ್ಯಂ ಶಿವಂ ಸುಂದರಂ

ಸರ್ವಂ ಭದ್ರಂ ಭೂಯಾತ್

ಕಾರುಣ್ಯ ಶರಧಿ

ಡಾ। ಪಂಚಾಕ್ಷರಿ ಹಿರೇಮಠ

ಬೆಂಗಳೂರಿನ 'ನಿಜಗುಣ ಕ್ಷೇತ್ರ' ಹಾಗೂ 'ಶ್ರೀ ಜಂಗಮಮಠ' ಈಗ ನಾಡಿನ ತುಂಬ ಪ್ರಸಿದ್ಧ. ಬಸವನಗುಡಿ ಹಾಗೂ ಗವೀಪುರ ಬಡಾವಣೆಗಳು ಇವುಗಳಿಂದ ಲೋಕಪ್ರಿಯವಾಗಿವೆ. ಇವುಗಳನ್ನು ಶಾರೀರಿಕ ಪರಿಶ್ರಮದಿಂದ'ಭಲಬೇಕು ಶರಣಂಗೆ' ಎಂಬ ವಚನಕ್ಕೆ ವ್ಯಾಖ್ಯೆಯೇ ತಾವಾಗಿ ದುಡಿದು, 'ಬೇಡುವಾತ ಜಂಗಮನಲ್ಲ' ಎಂಬುದನ್ನು ಆಚರಣೆಯಲ್ಲಿ ತಂದು, ಈ ಯುಗದಲ್ಲೂ ನಡೆದು ತೋರಿಸಿ, ಹಿಡಿದ ಬೃಹತ್ ಕಾರ್ಯಗಳನ್ನು ಮುಗಿಸಿ ಎರಡೂ ಸಂಸ್ಥೆಗಳನ್ನು ಸಮಾಜದ, ಧರ್ಮದ, ಸಂಸ್ಕೃತಿಯ, ಸಾಹಿತ್ಯದ ಸೇವೆಯಲ್ಲಿ ತೊಡಗಿಸಿದ ನಿರ್ಮೋಹಿಗಳು, ಮನದಲ್ಲಿ ನಿರಹಂಕಾರಿಗಳು, ಪುಣ್ಯಚರಿತರು.

ಶ್ರೀಗಳು ಮಠದಿಂದ ಘಟವಲ್ಲ, ಘಟದಿಂದ ಮಠ ಎಂಬುದನ್ನು ಸಿದ್ಧಮಾಡಿ ತೋರಿಸಿದರು. ಆರಂಭದಲ್ಲಿ, ಪರ್ಣಕುಟಿ ಕಟ್ಟಿಕೊಂಡು ಅಲ್ಲಿಯೇ ಲಿಂಗಪೂಜೆ, ಪಾದೋದಕ, ಪ್ರಸಾದ, ದಾಸೋಹ ನಡೆಸಿದರು. ಕಾಯಕದ ತತ್ವವನ್ನೇ ತಮ್ಮ ಜೀವನದ ಉಸಿರನ್ನಾಗಿ ಮಾಡಿಕೊಂಡು, ಸತ್ಯ ಶುದ್ಧವಾದ ರೀತಿಯಲ್ಲಿ ದುಡಿದು, ಎಂಥ ಕಷ್ಟದ ಸಮಯದಲ್ಲೂ ದೈನ್ಯತೆಗೆ ಎಡೆಗೊಡದೆ, ಯಾರಿಗೂ ಕೈಚಾಚದ ಲಿಂಗನಿಷ್ಠೆಯಿಂದ ದುಡಿದು, ಮೊದಲು ಕಲ್ಯಾಣ ಮಂಟಪವನ್ನೊಳಗೊಂಡ ಶ್ರೀ ನಿಜಗುಣ ಕ್ಷೇತ್ರವನ್ನು ಕಟ್ಟಿ, ಅದರ ಆದಾಯದಿಂದ ಮುಂದೆ ಭವ್ಯವಾದ ಸುಂದರವಾದ ಶ್ರೀ ಜಂಗಮಮಠ ನಿರ್ಮಿಸಿದರು.

ಶ್ರೀ ನಿಜಗುಣ ಕ್ಷೇತ್ರದ ಕಲ್ಯಾಣ ಮಂಟಪದಿಂದ ಬರುವ ಎಲ್ಲ ಆದಾಯವನ್ನು ಧರ್ಮ, ಸಂಸ್ಕೃತಿ, ಸಾಹಿತ್ಯ ಪ್ರಚಾರಕ್ಕಾಗಿ, ದಾಸೋಹಕ್ಕಾಗಿ ವಿನಿಯೋಗಿಸುತ್ತ ದಾಸೋಹಂಭಾವದಲ್ಲಿದ್ದು, ಹರ ಗುರು ಚರಮೂರ್ತಿಗಳ ಸೇವೆಯಲ್ಲಿ ತನು ಮನ ಧನ ಸವೆಸುತ್ತಲಿರುವ ಶ್ರೀಗಳು, ಗುರುವಾಗಿ ಗುರುವ ಪೂಜಿಸುತ್ತ, ಲಿಂಗವಾಗಿ ಲಿಂಗವ ಅರ್ಚಿಸುತ್ತ, ಜಂಗಮವಾಗಿ ಜಂಗಮವ ಪೂಜಿಸುತ್ತ ಸಚ್ಚಿದಾನಂದಲೋಲರಾಗಿದ್ದಾರೆ.

ಶ್ರೀ ಜಂಗಮಮಠ, ಶ್ರೀ ನಿಜಗುಣ ಕ್ಷೇತ್ರಗಳು, ಶ್ರೀ ನಿಜಗುಣ ಮಹಾಸ್ವಾಮಿಗಳ ಬಹು ಅಪೂರ್ವ ಕೊಡುಗೆಗಳು. ಅವುಗಳ ವಾಸ್ತುಶಿಲ್ಪ ಹಾಗೂ ಅವುಗಳ ಉಪಯುಕ್ತತೆಯಲ್ಲಿ

ಶ್ರೀಗಳು ತೋರಿದ ಜಾಣ್ಮೆ ಅಸದೃಶವಾದುದೆಂದೇ ನಾನು ಭಾವಿಸಿದ್ದೇನೆ. ಹಿಂದೆಯೂ ಕಷ್ಟದ ಕಾಲದಲ್ಲಿಯೇ ಶ್ರೀಗಳು ಯಾವ ಭಕ್ತನ ಮನೆಗೂ ಹೋಗಿ 'ಭಿಕ್ಷಾಂದೇಹಿ' ಎಂದವರಲ್ಲ. ಈಗಂತೂ ಅದಕ್ಕೆ ಅವಕಾಶವೇ ಇಲ್ಲ. ಬಸವನಗುಡಿಯಲ್ಲಿರುವ 'ಶ್ರೀ ನಿಜಗುಣ ಕ್ಷೇತ್ರ' ಅದರೊಂದಿಗೇ ಇರುವ ಗವಿಪುರ ಬಡಾವಣೆಯಲ್ಲಿರುವ 'ಶ್ರೀ ಜಂಗಮಮಠ' ಎರಡೂ ಆಯಾ ಕ್ಷೇತ್ರಗಳಿಗೆ ಕಳಸಪ್ರಾಯವಾಗಿವೆ. ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ಶ್ರೀಮಠ ತನ್ನ ಪ್ರಾಂಗಣದಲ್ಲಿರುವ ತರುಲತೆಗಳಿಂದ, ಫಲಪುಷ್ಪಗಳಿಂದ, ಅಸಂಖ್ಯಾತ ಕಲ್ಪವೃಕ್ಷಗಳಿಂದ, ಸುಶೋಭಿತಗೊಂಡಿದೆಯಲ್ಲದೆ ಶ್ರೀ ಸಿದ್ಧಲಿಂಗೇಶ್ವರರ ಗದ್ದುಗೆಯ ಗೋಪುರಕ್ಕಿರುವ ಕಳಸದಿಂದ ದೇದೀಪ್ಯಮಾನವಾಗಿ ಕಂಗೊಳಿಸುತ್ತಲಿದೆ. ಅದೊಂದು ನಿತಾಂತ ಶಾಂತಿಧಾಮವಾಗಿದೆ. ಪೂಜ್ಯ ಶ್ರೀಗಳ ತಪಸ್ಸಿನಿಂದ ಪ್ರತಿ ಬೆಳಗಿನಲ್ಲಿ ಅದೇ ಅರಳಿ ಗಾಳಿಯೊಂದಿಗೆ ಸುತ್ತಲೂ ತಮ್ಮ ಗಂಧ ಸೂಸಿ ಇಡೀ ವಾತಾವರಣವನ್ನು ಪಾವನಗೊಳಿಸುವ ಪುಷ್ಪರಾಶಿ ತನ್ನ ಕಾಯಕದಲ್ಲಿ ನಿರತವಾಗಿದ್ದರೆ; ಮಠದ ಒಳಗೆ ಲೋಕ ಕಲ್ಯಾಣಕ್ಕಾಗಿ ಮಠದ ಶ್ರೀಗಳಾದ ಶ್ರೀ ನಿಜಗುಣ ಸ್ವಾಮಿಗಳು ತಮ್ಮ ಲಿಂಗಾನುಸಂಧಾನದಲ್ಲಿ ತನ್ಮಯರಾಗಿರುವುದಕ್ಕೆ ಸಾಕ್ಷಿಯಾಗಿ ಗಂಟೆ, ಜಾಗಟೆಗಳ ಸುನಿನಾದ ಇಡೀ ಪರಿಸರವನ್ನು ತನ್ನ ಪಾವನತೆಯಲ್ಲಿ ಅದ್ದಿ ತೆಗೆಯುತ್ತಿರುತ್ತದೆ. ಓ ಅದೊಂದು ದಿವ್ಯಾನುಭವ. ಅಲ್ಲಿ ಆ ಪವಿತ್ರ ಸಮಯದಲ್ಲಿದ್ದು ಪ್ರತ್ಯಕ್ಷ ಅನುಭವಿಸುವುದೇ ಒಂದು ಪರಮಭಾಗ್ಯ. ಅಂಥ ಭಾಗ್ಯವನ್ನು ಶ್ರೀಮಠಕ್ಕೆ ಬಂದ ಎಲ್ಲ ಶ್ರೀಗಳೂ, ಸದ್‌ಭಕ್ತರೂ ಅನುಭವಿಸಿದ್ದಾರೆ. ಪೂಜ್ಯಶ್ರೀ ನಿಜಗುಣ ಸ್ವಾಮಿಗಳು ಅಪಾರ ಕರುಣಾಳುಗಳು, ದಾಸೋಹಂಭಾವಿಗಳು. ಸೇವಾಧರ್ಮವೇ ಅವರ ಧರ್ಮ. ಅವರ ಬದುಕು ಅಂತಃಕರಣದಾಗರ, ಸಾಮರಸ್ಯ, ಸಹಿಷ್ಣುತೆಯ ಪ್ರತೀಕವಾಗಿದೆ. ಅವರದು ಅಭೂತಪೂರ್ವವಾದ ಕರ್ತೃತ್ವಶಕ್ತಿ. ಅಂತೆಯೇ 'ಶ್ರೀ ನಿಜಗುಣ ಕ್ಷೇತ್ರ' 'ಶ್ರೀ ಜಂಗಮಮಠ'ಗಳನ್ನು ನಿರ್ಮಿಸಲು ಸಾಧ್ಯವಾಯಿತು.

ಸದೃಢ ಭಕ್ತಿ ನಿಷ್ಠೆ, ಸುಪ್ರಸನ್ನತೆ, ನಯ, ಅಂತಃಸತ್ವ, ಉಜ್ವಲ ವೀರಭಾವ ಹಾಗೂ ಛಲ ಶ್ರೀಗಳ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿರುವುದನ್ನು, ಪೂಜ್ಯರ ಶ್ರೀಮುಖದಲ್ಲಿ ಸದಾ ಮುಗುಳ್ನಗೆ ಬೆಳಕಾಗಿ ಅರಳಿರುವುದನ್ನು ನಾನು ಕಂಡು ಆನಂದಿಸಿದ್ದೇನೆ.

ಪೂಜ್ಯ ಶ್ರೀ ನಿಜಗುಣಸ್ವಾಮಿಗಳು ಮಾಡಿದ ಭಕ್ತಿಯಿಂದ, ಗೈದ ಸೇವೆಯಿಂದ ಅವರ ವ್ಯಕ್ತಿತ್ವ ದೀಪ್ತಿಮಯವಾಗಿದೆ. ಇಷ್ಟೆಲ್ಲ ಸಾಧಿಸಿಯೂ, ಸೇವೆ ಮಾಡಿಯೂ, ಮಾಡುವಾತ ನಾನಲ್ಲ, ನೀಡುವಾತ ನಾನಲ್ಲ, ಎಲ್ಲವೂ ಶ್ರೀಗುರುವಿನ ಕಾರುಣ್ಯವೆಂದು ಹೇಳುವ ಶ್ರೀ ನಿಜಗುಣ ಸ್ವಾಮಿಗಳದು ಅಪೂರ್ವ ನಿರಹಂಕಾರಮಯ ಜೀವನ. ಬದುಕಿಗೆ ಅವಶ್ಯವಾಗಿರುವ ಮೌಲ್ಯಗಳನ್ನು ಸಮಾಜದಲ್ಲಿ ಪುನಃ ಪ್ರತಿಷ್ಠಾಪಿಸುವ ಇಚ್ಛೆಯಿಂದ ಪೂಜ್ಯ ಶ್ರೀಗಳು ಶ್ರೀ ಜಂಗಮಮಠದಲ್ಲಿ ವಾರಕ್ಕೊಮ್ಮೆ ಶಿವಾನುಭವ ಗೋಷ್ಠಿಗಳನ್ನು ಹಮ್ಮಿಕೊಂಡಿದ್ದಾರೆ. ನಾಡಿನ ಬೇರೆ ಬೇರೆ ಭಾಗದಿಂದ ಅನುಭಾವಿಗಳನ್ನು, ಪಂಡಿತರನ್ನು ಕರೆಯಿಸಿ ಉಪನ್ಯಾಸ

ಮಾಡಿಸುತ್ತಾರೆ. ಶ್ರಾವಣ ಹಾಗೂ ಯುಗಾದಿ ಪರ್ವದಲ್ಲಿ ವೀರಶೈವ ಧರ್ಮ, ಸಾಹಿತ್ಯಗಳ ಬಗ್ಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದ್ದೂರಿಯಿದ ಸಾಂಗಗೊಳಿಸುತ್ತಾರೆ, 'ತನುವ ದಾಸೋಹಕ್ಕೆ ಸವೆಸಿ, ಮನವ ಲಿಂಗಧ್ಯಾನದಲ್ಲಿ ಲೀನಗೊಳಿಸಿ, ಧನವ ಜಂಗಮಕ್ಕೆ ನೀಡಿ' ತಾವು ಮಾತ್ರ ನಿರಂಜನ ನಿರಾಬಾರಿ ಜಂಗಮವಾಗಿಯೇ ಉಳಿದಿದ್ದಾರೆ. 'ಮಾಡಿದೆನೆನ್ನದಿರಾ ದಾಸೋಹಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ, ಮಾಡಿದೆನೆನ್ನದಿರಾ ಲಿಂಗಕ್ಕೆ ' ಎನ್ನುವುದಕ್ಕೆ ಪೂಜ್ಯ ಶ್ರೀಗಳು ತಮ್ಮ ನಡೆಯಿಂದ ವಾಖ್ಯೆ ಬರೆದಿದ್ದಾರೆ. ಸದಾಕಾಲ ಶ್ರೀ ಮಠದಲ್ಲಿ ಹರಗುರು ಚರಮೂರ್ತಿಗಳು ಇದ್ದೇ ಇರುತ್ತಾರೆ. ಅವರೆಲ್ಲರಿಗೂ ಮಾತೃಹೃದಯದ ಶ್ರೀ ನಿಜಗುಣ ಸ್ವಾಮಿಗಳ ಸೇವೆ ನಿರಂತರ ನಡೆದಿರುತ್ತದೆ. ಸದಾ ಲಿಂಗಪೂಜೆ, ಪಾದೋದಕ, ಪ್ರಸಾದ, ಅನುಭವದ ಸುಖದಲ್ಲಿ ಕಾಲ ಕಳೆವ ಶ್ರೀಗಳು ಮೃದು ಭಾಷೆ, ಮೃದು ನಡೆಯುಳ್ಳವರು, ಅಪಾರ ಕರುಣಾಮಯರು. ಅವರದು ಲಿಂಗದ ನಡೆ, ಲಿಂಗದ ನುಡಿ.

'ಶ್ರೀ ನಿಜಗುಣ ಕ್ಷೇತ್ರ' ಹಾಗೂ 'ಶ್ರೀ ಜಂಗಮ ಮಠ' ಗಳು ಪೂಜ್ಯ ಶ್ರೀಗಳ ದಿವ್ಯ ಚೇತನದಿಂದ ಮೂಡಿ ಬಂದವುಗಳು. ಜೀವನದ ಗುರಿ ಮುಕ್ತಿಯಲ್ಲ ಭಕ್ತಿಯೆಂಬುದನ್ನು ರುಜುವಾತು ಮಾಡಿ ತೋರಿದ ಹಿರಿಮೆ ಶ್ರೀಗಳದು. ಶ್ರೀಗಳ ಈ ಸುದೀರ್ಘವಾದ ಬದುಕು ಸ್ಫಟಿಕ ಸದೃಶ. ಅವರ ನಡೆ ಶುದ್ಧ, ನುಡಿ ಪರುಷ. ಅವರ ಪ್ರಶಾಂತವಾದ ಆ ನಗುಮುಖ ಅದೊಂದು ತೇಜೋನಿಧಾನ. ಮದನಕೆರೆಯ ಈ ಭಾಗ್ಯ ರೂಢಿ ಜನತೆಯ ಸಂಬಂಧ ತೊರೆದು, ಜಂಗಮ ಕರುಣೆಯಿಂದ ಶ್ರೀಮಠದ ಪೀಠವನಲಂಕರಿಸಿ, ಶ್ರೀ ಸಿದ್ಧಲಿಂಗ ಶಿವಯೋಗಿಯ ಪಾದಸ್ಪರ್ಶದಿಂದ ಪುನೀತವಾದ ಗರ್ಭಗುಡಿಯಲ್ಲಿ ಹೊಂಗಿರಣದಾರತಿಯ ಹಿಡಿದು, ಲೋಕ ಹಿತಕ್ಕಾಗಿ, ಲಿಂಗಯ್ಯನಲ್ಲಿ ಧ್ಯಾನಸ್ಥರಾಗಿರುವ ದೃಶ್ಯ ನೋಡುವುದೇ ಒಂದು ಭಾಗ್ಯ.

ಇಂಥ ಭಾಗ್ಯ ನೀಡಿರುವ ಮಹಾಸ್ವಾಮಿಗಳ ಅಮೃತ ಮಹೋತ್ಸವ ನಡೆಯುತ್ತಿರುವುದು ನಾಡಿನ ಭಾಗ್ಯ. ಇಂದು ಭಕ್ತರು ಪೂಜ್ಯಶ್ರೀಗಳ ಅಮೃತ ಮಹೋತ್ಸವ ನಡೆಸುವ ಭಾಗ್ಯ ಪಡೆದಿರುವಂತೆ ಮುಂದೆ ಪೂಜ್ಯರ ಶತಮಾನೋತ್ಸವ ನಡೆಸುವ ಭಾಗ್ಯವನ್ನು ಪಡೆಯಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಜಂಗಮಮಠದ ಶ್ರೀಗಳು-ನಾನು ಕಂಡಂತೆ

- ಯೋಗೀಶ. ಯಡ್ರಾವಿ

ಲೋಕದಂತೆ ಬಾರರು, ಲೋಕದಂತೆ ಇರರು,
ಲೋಕದಂತೆ ಹೋಗರು ನೋಡಯ್ಯ
ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು,
ಮುಕ್ತಿಯಂತೆ ಹೋಹರು ನೋಡಯ್ಯ! - ಉರಿಲಿಂಗದೇವರು

ಪರಮ ಪೂಜ್ಯ ಶ್ರೀ ಮ.ನಿ. ಪ್ರ. ನಿಜಗುಣ ಮಹಾಸ್ವಾಮಿಗಳವರ ಅಮೃತ ಮಹೋತ್ಸವದ ಆಚರಣೆಯ ಈ ಶುಭ ಸಂದರ್ಭದಲ್ಲಿ ನನಗೂ ಈ ಚಿಕ್ಕನುಡಿ-ಸೇವೆಯನ್ನು ಸಮರ್ಪಿಸುವ ಮಹದ್ಭಾಗ್ಯ ಸಂಪ್ರಾಪ್ತವಾದುದಕ್ಕೆ ನನಗೆ ಅತೀವ ಆನಂದವೆನಿಸಿದೆ. ಇಂಥದೊಂದು ಅವಕಾಶವನ್ನು ನನಗೆ ದೊರಕಿಸಿಕೊಟ್ಟ ಸಂಬಂಧಪಟ್ಟ ಪೂಜ್ಯರಿಗೂ, ಹಿರಿಯರಿಗೂ, ಸ್ನೇಹಿತರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳನ್ನು ಅತ್ಯಂತ ಹೃತ್ಪೂರ್ವಕವಾಗಿ ಈ ಮೂಲಕ ಸಲ್ಲಿಸಲಿಚ್ಛಿಸುತ್ತೇನೆ.

ಒಂದು ಮಠದ ಸ್ವಾಮಿಗಳಾಗುವುದು ಒಂದು ಭಾಗವಾದರೆ ಅದನ್ನು ಸಮರ್ಥವಾಗಿ, ಸಮರ್ಪಕವಾಗಿ, ಅರ್ಥಪೂರ್ಣವಾಗಿ ನಿಭಾಯಿಸಿಕೊಂಡು ಹೋಗುವುದೇ ಇನ್ನೊಂದು ಭಾಗ. ನಾನು ಹೀಗೆ ಹೇಳಲು ಕಾರಣವೆಂದರೆ, ಪೂಜ್ಯಶ್ರೀಗಳು ಈ ಶ್ರೀ ಮಠದ ಅಧಿಕಾರ ವಹಿಸಿಕೊಂಡಾಗಿನ ಪರಿಸ್ಥಿತಿ ಮತ್ತು ಅದರ ಇಂದಿನ ಪರಮೋನ್ನತ ಪ್ರಗತಿ, ಇದಕ್ಕಾಗಿ ನಡೆದ ಸುದೀರ್ಘ ಹಾಗೂ ಸಂಘರ್ಷಮಯ ಮೌನ ಹೋರಾಟ - ಇವು ನನ್ನ ಮನೋನೇತ್ರದ ಮುಂದೆ ಬಂದು ನಿಲ್ಲುತ್ತವೆ. ಆಗ ಶ್ರೀಗಳವರ ಸ್ವಭಾವಗತ ಸಹಜ ಸದ್ಗುಣಗಳಾದ ಸೌಮ್ಯತೆ ಮತ್ತು ಸಹನಶೀಲತೆಗಳೇ ಅವರ ನಿಜ ಸಹಾಯಕರಾಗಿ ನಿಂತವೆಂಬುದು ಸುವಿದಿತ. 'ಅಕಟಕಟಾ! ಶಿವ ನಿನಗಿನಿತು ಕರುಣವಿಲ್ಲ: ಅಕಟಕಟಾ, ಶಿವನಿನಗಿನಿತು ಕೃಪೆಯಿಲ್ಲ ! ...ಎನಗಾಗಿ ಮತ್ತೊಂದು ತರುಮರನಿರಲಿಲ್ಲವೆ ?'' (ಬಸವಣ್ಣ) ಎಂಬಂತಹ ಕರುಳಿನ ಕೂಗೊಂದು ಶ್ರೀಗಳಿಂದ ತೂರಿ ಶಿವನಡಿಯ ಸೇರಿರಬೇಕು. ಬಾಹ್ಯ ಸಂಕಷ್ಟ, ಆಂತರಿಕ ಸಹಿಷ್ಣುತೆಗಳು ಅವರ ಅದ್ಭುತ ತಪಸ್ಸಿನ ಎರಡೆಸಳುಗಳಾಗಿರಬೇಕು.

ಪೂಜ್ಯರು ಒಬ್ಬ ಆದರ್ಶ ಕಾಯಕಯೋಗಿ. ಅವರನ್ನು ಸಮೀಪದಿಂದ ಅರಿತವರಿಗೆ ನನ್ನೀ ನುಡಿ ಬರಿಯ ಔಪಚಾರಿಕ ಎಂದು ಅನ್ನಿಸದು. ಕಾಯಕಕಲೆ ಅವರ ಭವ್ಯವಕ್ತಿತ್ವದ ಸಹಜ ಸ್ವರೂಪವಾಗಿದೆ. ಅಣ್ಣನವರ ಅಮರವಾಣಿಯಿಂದ ಹೊರಹೊಮ್ಮುವ ಈ ಹೊಗರು ಅವರ ಕಾಯಕ ಕಲೆಯ ಉಸಿರಾಗಿದೆ. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನಡಂಗುರ! ಮಾಡಿದೆನೆನ್ನದಿರಾ ಲಿಂಗಕ್ಕೆ ! ಮಾಡಿದೆನೆನ್ನದಿರಾ ಜಂಗಮಕ್ಕೆ !.. "ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ. ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ! ಮಾಡುವ ನೀಡುವ ನಿಜಗುಣವುಳ್ಳರೆ, ಕೂಡಿಕೊಂಡಿಪ್ಪ ನಮ್ಮ ಕೂಡಲ ಸಂಗಮ ದೇವ!" (ಬಸವಣ್ಣ) ಎಂಬಂತೆ ಅನೇಕ ಮಹಾಸ್ವಾಮಿಗಳು, ಅಂತೆಯೇ ವಿದ್ವನ್ಮಣಿಗಳು ಇವರಿಗೆ ಅತ್ಯಂತ ಆತ್ಮೀಯರೂ, ಅಭಿಮಾನಿಗಳೂ ಆಗಿದ್ದಾರೆ. ಇಂದು ಸ್ವಲ್ಪನ್ನೇ ಮಾಡಿದರೂ ಬಹಳಷ್ಟು ಜೋರಾಗಿ ಡಂಗುರ ಹೊಡೆಸಿಕೊಳ್ಳುವ ಅನೇಕ ನಿರಂಜನ ಮೂರ್ತಿಗಳೆನಿಸಿ ಕೊಳ್ಳುವವರ ಮಧ್ಯದಲ್ಲಿ ಇವರೊಬ್ಬ ಒಡೆದು ಕಾಣುವ ಅಪವಾದವಾಗಿ ನಮ್ಮ ಮನದೆದುರು ನಿಲ್ಲುತ್ತಾರೆ. ಅವರಿಗೆ ಇಂಥದೊಂದು ದಿವ್ಯ ಜೀವನಕಲೆ ಸಿದ್ಧಿಸಿರುವುದಕ್ಕೆ ಅವರ ಬದುಕಿನ ಸಹಜ ಧೋರಣೆಯೇ ಕಾರಣವಾಗಿದೆ ಎಂದು ಹೇಳಬೇಕಾಗುತ್ತದೆ. ಅವರ ಆ ನೈಜ ಧೋರಣೆಯ ಸ್ವರೂಪ ವರ್ಣನೆ ಈ ವಚನದಲ್ಲಿ ಅದ್ಭುತವಾಗಿ ಅಭಿವ್ಯಕ್ತಿ ಪಡೆದಿದೆ : "ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದೊಳು ತಾನಿಲ್ಲದಿರಬೇಕು !..."(ಬಸವಣ್ಣ) ಭಗವದ್ಗೀತೆಯು ಒಂದು ಕರ್ಮ ಘಟಿಸಬೇಕಾದರೆ ಐದು ಕಾರಣಗಳಿರುತ್ತವೆ ಎಂಬುದನ್ನು ಗುರುತಿಸಿದೆ : ಅಧಿಷ್ಠಾನ (ದೇಹ), ಕರ್ತೃ, ವಿವಿಧ ಕರಣಗಳು, ವಿಭಿನ್ನ ಚೇಷ್ಟೆ (ಯತ್ನ)ಗಳು ಮತ್ತು ದೈವ - ಇವೇ ಆ ಐದು ಕಾರಣಗಳು (೧೮-೧೫) ಇವುಗಳಲ್ಲಿ ಕರ್ತೃ ಅಥವಾ ಕರ್ತೃತ್ವಾಭಿಮಾನ ಎಂಬುದು ಇಲ್ಲದಿದ್ದರೆ (ಮಾಡುವ ಮಾಟದೊಳು ತಾನಿಲ್ಲದಿರೆ) ಅದು ಕರ್ಮವಾಗದೆ ಕ್ರಿಯೆಯಾಗುತ್ತದೆ. ಕರ್ಮ ಬಂಧನಕಾರಿಯಲ್ಲದೆ, ಕ್ರಿಯೆಯಲ್ಲ ! ಇದು ಶ್ರೀಗಳವರ ಕಾಯಕಕಲೆಯ ನಿಜ ಮರ್ಮ! ಅಂತಲೇ ಅವರಿಗೆ ಕಾಯಕವೇ ಕೈಲಾಸ ! ಇಂತಹ ಬದುಕಿನ ಗುಟ್ಟನ್ನು ಅರಿತು ಅದರ ಬೆಳಕಿನಲ್ಲಿಯೇ ತಮ್ಮ ಬಾಳಬಟ್ಟೆಯನ್ನು ನೆಟ್ಟನೆ ರೂಪಿಸಿಕೊಂಡವರು ನಿಜಕ್ಕೂ ಧನ್ಯರು, ಬಹುಮಾನ್ಯರು! ನಮ್ಮ ಶ್ರೀಗಳವರು ಅಂತಹ ಅಗ್ರಮಾನ್ಯರ ಅಗ್ರಪಂಕ್ತಿಯಲ್ಲಿಯೇ ಅಗ್ರಗಣ್ಯರಾಗಿದ್ದಾರೆಂಬಲ್ಲಿ ಅತಿಶಯೋಕ್ತಿಯೇನೂ ಇಲ್ಲ. ನಿಜವಾಗಿಯೂ ಅವರೊಬ್ಬ ಮಹಾನ್ ಕಾಯಕಯೋಗಿ!

ಶ್ರೀಗಳು ಸರಳ ಹೃದಯಿಗಳು, ಸೌಮ್ಯಮೂರ್ತಿಗಳು, ಅಷ್ಟೇ ವಿನಯಗುಣ ಸಂಪನ್ನರು! Really, this outstanding virtue of his attractive personality viz. humility has won him many an admirer both among the heads of various maths and other citizens. "ಕಂಡ ಭಕ್ತರಿಗೆ ಕೈ ಮುಗಿವಾತನೇ ಭಕ್ತ;

ಮೃದುವಚನವೆ ಸಕಲ ಜಪಂಗಳಯ್ಯಾ! ಮೃದು ವಚನವೆ ಸಕಲ ತಪಂಗಳಯ್ಯಾ! ಸದುವಿನಯವೆ ಸದಾಶಿವನ ಒಲುಮೆಯಯ್ಯಾ!'' (ಬಸವಣ್ಣ). ತಮ್ಮ ಶ್ರೀಮಠಕ್ಕೆ ಬಂದವರನ್ನು ಅವರು ಉಪಚರಿಸುವ ರೀತಿಯೇ ಒಂದು ತೂಕ ! ಅವರ ಆ ಮಾತೃಹೃದಯದ ವಾತ್ಸಲ್ಯಪೂರ್ಣ ಸಹಜ ವರ್ತನೆ ಎಲ್ಲರನ್ನೂ, ಎಂಥವರನ್ನೂ ಸಹ ಮಂತ್ರಮುಗ್ಧರನ್ನಾಗಿ ಮಾಡುತ್ತದೆ. ನಾನಂತೂ ಅವರ ಮುಖದಲ್ಲಿ ಮಿನಿಟು - ಮಿನಿಟಿಗೂ ಮಿಂಚುವ ಆ ಮುಗುಳ್ನಗೆಯ ಮಾಂತ್ರಿಕತೆಗೆ ಮಾರುಹೋಗಿದ್ದೇನೆ. ಆದರೆ, ಅವರು ಹೊರಗೆ ಇಷ್ಟೊಂದು ಸದುವಿನಯದ ಸಾಕಾರಮೂರ್ತಿಗಳಾಗಿ ತಮ್ಮೆಡೆಗೆ ಸರ್ವರನ್ನೂ ಆಕರ್ಷಿಸುತ್ತಿದ್ದರೂ, ಒಳಗೆ ಮಾತ್ರ ಬಹು ಗಟ್ಟಿಕುಳ ! "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ।'' ಎಂಬೀ ಮಾತು ನೆನಪಿಗೆ ಬರದಿರಲಾರದು. ಅವರ ಆಂತರಿಕ ಧೈರ್ಯ, ಬಲ, ಛಲ ಇವು ನಿಜಕ್ಕೂ ಅಪರಿಮಿತ! 'ಛಲ ಬೇಕು ಶರಣಂಗೆ...' (ಬ.ವ. ೬೭೬) ಎಂಬ ವಚನಾರ್ಥ ಅವರ ನಿಜಬದುಕಿಗೆ ಅಕ್ಷರಶಃ ಅನ್ವಯಿಸುತ್ತದೆ. ನಿಜವಾಗಿಯೂ ಅವರ ಬದುಕು ಮೊನ್ನೆ - ಮೊನ್ನೆಯವರೆಗೂ ಎಂಥವರನ್ನೂ ಎದೆಗುಂದಿಸಬಹುದಾದ ಘಟನಾವಳಿಯ ಸರಮಾಲೆಯಾಗಿತ್ತು ! ಇದನ್ನೆಲ್ಲಾ ಮನದಲ್ಲಿ ನೆನೆದಾಗ "ಕಿಡಿ ಕಿಡಿ ಕೆದರಿದಡೆ ಎನಗೆ ಹಸಿವು - ತೃಷೆ ಯಡಗಿತ್ತೆಂಬೆನು ! ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು ! ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು ! ಚನ್ನಮಲ್ಲಿಕಾರ್ಜುನಯ್ಯ, ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು'' (ಅ.ವ. ೧೨೫) ಎಂಬ ಮಹಾದೇವಿಯಕ್ಕಗಳ ವಚನ ನೆನಪಿನಂಗಳದಲ್ಲಿ ಹೊಳೆದು ನಿಲ್ಲುತ್ತದೆ.

ಪೂಜ್ಯ ಶ್ರೀಗಳವರದು ನಿಜ ಬದುಕು ರೂಪಿಸಿದ ಮಾಗಿದ ನೈಜ ವ್ಯಕ್ತಿತ್ವ. ಅವರ ಇಂದಿನ ಅಕ್ಕರತೆ ಉಕ್ಕಿಸುವ ಅಮಳವ್ಯಕ್ತಿತ್ವದ ಹಿಂದೆ ಅವರು ಬಹುದೀರ್ಘ ಕಾಲದವರೆಗೂ ನಡೆಸಿದ ದಿಟ್ಟ ಹೋರಾಟದ ನೀಳ್ಗತೆಯಿದೆಯಷ್ಟೇ? ಅದನ್ನೆಲ್ಲಾ ನಾವು ಮನದಲ್ಲಿ ತಂದುಕೊಂಡಾಗ ಮಹಾನುಭಾವಿ ಬಸವಣ್ಣನವರ ಅನುಭವವಾಣಿ ನಮ್ಮ ಸ್ಮೃತಿಪಟಲದ ಮೇಲೆ ಮೂಡಿ ನಿಲ್ಲುತ್ತದೆ.: 'ಸುಖ ಬಂದಡೆ ಪುಣ್ಯದ ಫಲವೆನ್ನೆನು, ದುಃಖ ಬಂದಡೆ ಪಾಪದ ಫಲವೆನ್ನೆನು ! ನೀ ಮಾಡಿದೊಡಾಯಿತ್ತೆಂದೆನ್ನೆನು, ಕರ್ಮಕ್ಕೆ ಕರ್ತುವೆ ಕಡೆಯೆಂದೆನ್ನೆನು, ಉದಾಸೀನವಿಡಿದು ಶರಣೆನ್ನೆನು !' 'ಕಾಯದ ಕಳವಳಕ್ಕಂಜಿ 'ಕಾಯಯ್ಯಾ' ಎನ್ನೆನು; ಜೀವನೋಪಾಯಕ್ಕಂಜಿ 'ಈಯಯ್ಯಾ' ಎನ್ನೆನು !... ಉರಿಬರಲಿ, ಸಿರಿಬರಲಿ - ಬೇಕು ಬೇಡೆನ್ನೆನು ! ಆ (ನಾ) ನಿಮ್ಮ ಹಾರೆನು, ಮಾನವರ ಬೇಡೆನು! (ಬಸವಣ್ಣ). ಶ್ರೀಗಳು ಯಾವುದಕ್ಕೂ ಸೊಪ್ಪು ಹಾಕಿದವರಲ್ಲ, ಪರಿತಪಿಸಿದವರಲ್ಲ. ಪಶ್ಚಾತ್ತಾಪಪಟ್ಟವರಲ್ಲ, ತಲೆಯ ಮೇಲೆ ಕೈಯಿಟ್ಟುಕೊಂಡು ಕುಳಿತುಕೊಂಡವರಲ್ಲ. ಅವರದು ಎಲ್ಲಂದದಿಂದಲೂ ಶರಣಜೀವನ, ಅಂಜಿಕೆ - ಅಳುಕುಗಳು ಅವರತ್ತ ಸುಳಿಯಲಿಲ್ಲ; ಅವರು ಯಾವ ಬೆದರಿಕೆಗೂ ಜಗ್ಗಲಿಲ್ಲ, ಬಗ್ಗಲಿಲ್ಲ; ಭಯಭೀತರಾಗಲಿಲ್ಲ.

‘ನಾಳೆ ಬಪ್ಪುದು ನಮಗಿಂದೇ ಬರಲಿ; ಇಂದು ಬಪ್ಪುದು ನಮಗೀಗಲೇ ಬರಲಿ; ಇದಕಾರಂಜುವರು, ಇದಕಾರಳುಕುವರು ?’ (ಬಸವಣ್ಣ) ಎಂಬ ವಚನಾಭಿಪ್ರಾಯ ಅವರ ಬದುಕಿಗೆ ಅಕ್ಷರಶಃ ಅನ್ವಯಿಸುತ್ತದೆ, ಎಂದು ಬೇರೆ ಹೇಳಬೇಕಾಗಿಲ್ಲ. ‘ಜಾತಸ್ಯ ಮರಣಂ ಧ್ರುವಂ’, ‘ಯದ್ಭಾವಂ ತದ್ಭವತಿ’, ‘ಮರಣವೆ ಮಹಾನವಮಿ!’ ಇವು ಅವರು ಇಟ್ಟುಕೊಂಡ ಅನುಭವಸತ್ಯವೂ ಹೌದು, ಆದರ್ಶವೂ ಹೌದು. ನಿಜವಾಗಿಯೂ, ಅವರ ಸಮಗ್ರ ಬದುಕೇ ಶರಣರ ವಚನಾನುಭವಕ್ಕೆಬರೆದ ಒಂದು ಸುಂದರ, ಬಂಧುರ ಭವ್ಯ ಭಾಷ್ಯ! “ My life is my message!” ಎಂಬಂತೆ ಅವರ ನಿಜಜೀವನವೇ ಅವರು ಸಮಾಜಕ್ಕೆ ನೀಡುವ ಮಹಾನ್ ಸಂದೇಶವಾಗಿದೆ. ನಾಲ್ಕು ದಿನಗಳ ಕಾಲ ಮಾತ್ರ ಅವರ ಆತ್ಮೀಯ ಒಡನಾಟದಲ್ಲಿ ಕಳೆದ ನಾನೇ ಇಷ್ಟೊಂದು ಪ್ರಭಾವಿತನಾಗಿರಬೇಕಾದರೆ, ಬಹು ಕಾಲ ಅವರ ದಿವ್ಯಸಾನ್ನಿಧ್ಯ- ಸಾಮೀಪ್ಯಗಳ ಸವಿಯುಂಡವರು ಅದೆಷ್ಟು ಪ್ರಭಾವಿತರಾಗಿರಬೇಡ!! ಪೂಜ್ಯರ ಅಮೃತ ಮಹೋತ್ಸವದ ಈ ಮಂಗಲ ಪ್ರಸಂಗದಲ್ಲಿ, ಅವರು ಬೆಳಕಿನ ಬೆಟ್ಟವಾಗಿ ನಮ್ಮ ನಡುವೆ ನೂರ್ಕಾಲ ಬಾಳಲೆಂದು ಬಸವಾದಿ ಪ್ರಮಥರಲ್ಲಿ ಅನನ್ಯವಾಗಿ ಪ್ರಾರ್ಥಿಸುತ್ತೇನೆ.

ಮಾತೃ ಹೃದಯದ ಮಹಾಮೂರ್ತಿ

ಡಾ॥ ಸಾ.ಶಿ. ಮರುಳಯ್ಯ

'ಶರಣು ಸ್ವಾಮೀಜಿ....'

'ಶ್... ಅಯ್ಯೋ....ಬುದ್ಧೀ....!....!

ಮಾತು ನಿಂತಿತು.

ಮೌನ ಮಾತಾಡಿತು.

ಇಬ್ಬರ ಕಣ್ಣುಗಳಲ್ಲೂ ಕೋಡಿ ಹರಿಯಿತು ಕಣ್ಣೀರು. ಅಲ್ಲಿ ಕರುಣೆಯ ಕಡಲುಗಳು ಉರುಳಿದವು. ತೋಳುಗಳು ಮುಂದೆ ಬಂದವು.

ದೀರ್ಘಾಲಿಂಗನದಲ್ಲಿ ಋತುಗಳು ಬಳಲಿದವು. ಸೆಂಟ್ ಜಾನ್ ಆಸ್ಪತ್ರೆಯ ಕೋಣೆಯ ಕಿಟಕಿ ಬಾಗಿಲುಗಳೂ ಕಣ್ಣೀರು ಕರೆದವು. ಗೋಡೆ ಮಾಡಗಳಲ್ಲಿ ಕಾಠಿಣ್ಯ ಕರಗಿದಂತೆ ಭಾಸ. ಅದು ನೋವಿನದಾದರೂ ಅವರಿಬ್ಬರ ಆತ್ಮೀಯತೆಯನ್ನು ಅಭಿವ್ಯಕ್ತಿಸುತ್ತಿತ್ತು.

ಘಳಿಗೆಗಳು ಹೊರಳಿದವು;

ನಿಮಿಷಗಳು ಜಾರಿದವು.

ಬಹಳ ಹೊತ್ತಾದಮೇಲೆ ಉಕ್ಕಿಬಂದ ದುಃಖ ಕಣ್ಣೀರಿನಿಂದ ಶಮನವಾಗಿ ತಳಕ್ಕಿಳಿದಿತ್ತು.

ಕುಪ್ಪೂರು ಗದ್ದಿಗೆ ಮಠಾಧ್ಯಕ್ಷರಾದ ಷ.ಬ್ರ. ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳೇ ಮೌನ ಮುರಿದು ಮಾತಿಗಾರಂಭಿಸಿದರು. ಕೋಲಾರದ ಹಾದಿಯಲ್ಲಿ ವಾಹನವು ಅಪಘಾತಕ್ಕೀಡಾದದ್ದು, ಸರ್ಪಭೂಷಣ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳ ದೇಹ ಗುರುತು ಹಿಡಿಯಲಾರದಷ್ಟು ಹರಿದು ಚಿಂದಿಯಾಗಿ ಬಿದ್ದದ್ದು, ಅವರೊಡನೆಯೇ ಮೂರು ನಾಲ್ಕು ಜನರು ಶಿವೈಕ್ಯರಾದದ್ದು, ಆ ಸಾವು ಆ ನೋವು ಎಲ್ಲವೂ ಪ್ರಸ್ತಾಪಗೊಂಡವು. ಪೂಜ್ಯರಾದ ನಿ. ಪ್ರ. ಶ್ರೀ ನಿಜಗುಣ ಮಹಾಸ್ವಾಮಿಗಳು ಮಾತಿಗೆ ತೊಡಗಿದ್ದು ಶ್ರೀ ಚಂದ್ರಶೇಖರ ಶಿವಾಚಾರ್ಯರಿಗೂ ಸಮಾಧಾನ ತಂದಿತ್ತು. ಇವರ ಸಾಂತ್ವನ ಅವರಾತ್ಮಕ್ಕೆ ಸಂಜೀವನವೂ ಆಗಿತ್ತು.

‘ಅಲ್ಲಾ ಬುದ್ಧಿ, ತಾವು ಬದುಕಿದ್ದೇ ಒಂದು ಪವಾಡ ಅಲ್ಲವೆ ?’

‘ಅದು ಶಿವನಿಚ್ಛೆ; ಸತ್ಯ ಶಿವಯೋಗಿಗಳ ನಿತ್ಯದಾಶೀರ್ವಾದ. ಅದು ಸರಿ, ತಾವೀಗ ಬೆಂಗಳೂರಿಗೆ ದಯಮಾಡಿಸಿದ್ದು ?’

‘ಒಂದು, ತಮ್ಮ ದರ್ಶನ; ಎರಡನೆಯದು, ನಮ್ಮ ಮರುಳಯ್ಯನ ಮಗಳ ಮದುವೆ ನಿಶ್ಚಯ ಕಾರ್ಯ ಇತ್ತು; ಎರಡೂ ಕಾರ್ಯ ಬಂದಿದ್ದು’.

‘ಬಹಳ ಸಂತೋಷ ಬುದ್ಧಿ ಅಂದ ಹಾಗೆ ಮರುಳಯ್ಯನವರು ಅಂದರೆ, ಡಾ| ಸಾ.ಶಿ. ಮರುಳಯ್ಯನವರು ತಾನೆ ?’

‘ಹೌದು ಅವರೇ. ಅವರ ಮಗಳ ನಿಶ್ಚಿತಾರ್ಥ ಆಯಿತು.’

‘ಎಲ್ಲಿಗೆ ?’

‘ಇಲ್ಲೇ ಹಿರಿಯೂರು ತಾಲ್ಲೂಕು ಅಬ್ಬಿನಹೊಳೆಗೆ. ಆದರೆ ವರ ಇರುವುದು ಅಮೇರಿಕೆಯಲ್ಲಿ, ಕ್ಯಾಲಿಫೋರ್ನಿಯಾ ಸ್ಟೇಟಿನಲ್ಲಿ. ಈಗ ದೇಶಕ್ಕೆ ಬಂದಿದ್ದಾನೆ. ಇನ್ನು ಒಂದು ವಾರದಲ್ಲಿ ಮದುವೆ ಮುಗಿಸಿಕೊಂಡು ಅಮೇರಿಕೆಗೆ ಹಿಂದಿರುಗಬೇಕಂತೆ. ತುರ್ತು ಲಗ್ನ, ನಿಶ್ಚಯ ಮಾಡಿಬಿಟ್ವಿ.’

‘ಅಂದ ಹಾಗೆ ಲಗ್ನ ಎಲ್ಲಿ ? ಯಾವ ಛತ್ರದಲ್ಲಿ ?’

‘ಲ... ಗ್ನಾ.... ! ಇಷ್ಟು ಅರ್ಜೆಂಟ್‌ಗೆ ಬೆಂಗಳೂರಿನಲ್ಲಿ ಛತ್ರ ಸಿಗೋದು ಕಷ್ಟಾಂತ, ಚಿಕ್ಕನಾಯಕನಹಳ್ಳಿ ಹತ್ತಿರ ಇರೋ ನಮ್ಮ ಮಠದಲ್ಲೇ ಎಂದು ನಿರ್ಧರಿಸಿದ್ವಿ.’

‘ಯಾಕೆ ಬುದ್ಧಿ ? ಬೆಂಗಳೂರಿನಲ್ಲಿ ನಾವಿನ್ನೂ ಇಲ್ವಾ. ಮರುಳಯ್ಯನವರು ನಮ್ಮ ಮಠಕ್ಕೆ ತುಂಬಾ ಸೇವೆ ಸಲ್ಲಿಸಿದ್ದಾರೆ. ಅವರ ಮಗಳ ಮದುವೆಗೆ ನಮ್ಮ ಮಠದಲ್ಲಾಗಲಿ, ಕಲ್ಯಾಣ ಮಂಟಪದಲ್ಲಾಗಲಿ ಇಷ್ಟು ಅವಕಾಶ ಮಾಡಿಕೊಡೋದು ನಮ್ಮ ಕರ್ತವ್ಯ ಅಲ್ವಾ, ತಾಳಿ, ನಮ್ಮ ತಿಪ್ಪೇಸ್ವಾಮಿ ಕರೀತೀನಿ.’

ಹಾಗೆಂದವರೆ ಕರೆಗಂಟೆ ಒತ್ತಿ ಕಲ್ಯಾಣ ಮಂಟಪದ ವ್ಯವಸ್ಥಾಪಕ ಶ್ರೀ ತಿಪ್ಪೇಸ್ವಾಮಿಯವರನ್ನು ಕರೆದರು. ಕರೆದು ‘ಛತ್ರ ... ಖಾಲಿ ಇದೆಯೇ’ ? ಎಂದು ಕೇಳಿದರು. ತಿಪ್ಪೇಸ್ವಾಮಿಯವರು ಮಠಕ್ಕೆ ಹೋಗಿ ದಾಖಲೆ ಪುಸ್ತಕ ತರುವುದಾಗಿ ಹೇಳಿ ಅರ್ಧ ಗಂಟೆಯಲ್ಲಿ ತಂದರು.

ಅದು ನನ್ನ ಮಗಳು ರಾಗಿಣಿಯ ಭಾಗ್ಯ, ಅವಳ ತಂದೆ ತಾಯಿಯರಾದ ನಮ್ಮ ಪುಣ್ಯ. ನಾವು ಲಗ್ನ ಕಟ್ಟಿದ್ದ 28,29,30 – ಆ ಮೂರು ದಿನಗಳಲ್ಲಿ ಸರಿಯಾಗಿ ಛತ್ರ ಖಾಲಿ ಇತ್ತು. ಅದನ್ನು ನೋಡಿ ಶ್ರೀ ನಿ. ಪ್ರ.ನಿಜಗುಣ ಮಹಾಸ್ವಾಮಿಗಳು ಹಿರಿ ಹಿರಿ ಹಿಗ್ಗಿದರು. ಕುಪ್ಪೂರು

ಗದ್ದಿಗೆ ಸ್ವಾಮಿಗಳಿಗೂ ನಮಗೆಲ್ಲರಿಗೂ ಆದ ಆನಂದಕ್ಕಿಂತ ಹೆಚ್ಚಿನ ಆನಂದ ನಿಜಗುಣ ಮಹಾಸ್ವಾಮಿಗಳದ್ದಾಗಿತ್ತು.

ಅವು ನನ್ನ ಬಡತನದ ದಿನಗಳಾಗಿದ್ದವು. ಬರುವ ಸಂಬಳ ಸಂಸಾರ ನಿರ್ವಹಣೆಗೆ ಏನೇನೂ ಸಾಲುತ್ತಿರಲಿಲ್ಲ. ನಾನು ಮಂಗಳೂರು, ಹಿರೀ ಮಗ ಶಿವು ಗುಲ್ಬರ್ಗಾ (ಎಂ.ಎ. ವಿದ್ಯಾರ್ಥಿ), ಕಿರಿಮಗ ರವಿ ತುಮಕೂರು (ಇಂಜಿನಿಯರಿಂಗ್ ಓದುತ್ತಿದ್ದ), ಮಧ್ಯದ ಮಗಳು ರಾಗಿಣಿ ಮೈಸೂರು (ಸ್ಪೀಚ್ ಅಂಡ್ ಹಿಯರಿಂಗ್ ಕಾಲೇಜು ವಿದ್ಯಾರ್ಥಿನಿ), ನನ್ನ ಹೆಂಡತಿ ಬೆಂಗಳೂರು. ಹೀಗೆ ಐದೂ ಜನ ಐದು ದಿಕ್ಕಿನಲ್ಲಿ ಹಂಚಿಹೋಗಿದ್ದೆವು. ಮೂರು ಕಡೆ ಮಕ್ಕಳ ವಿದ್ಯಾಭ್ಯಾಸ, ಬೇರೆಡೆ ಅಂದರೆ ಮೂರು ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರಿರುವ ಮಂಗಳೂರು ಸರ್ಕಾರಿ ಕಾಲೇಜಿನ ನನ್ನ ಪ್ರಿನ್ಸಿಪಾಲಗಿರಿಯ ಬದುಕು, ಬೆಂಗಳೂರಿನಲ್ಲಿ ನನ್ನ ಹೆಂಡತಿಯ ಉದರಂಭರಣ; ಸಾಕು ಬೇಕಾಗಿತ್ತು. ಅಂತಹ ಸಂದಿಗ್ಧ ಸಮಯದಲ್ಲಿ ರಿಯಾಯಿತಿಯಲ್ಲಿ ಕಲ್ಯಾಣ ಮಂಟಪದಲ್ಲಿ ಅನುವು ಮಾಡಿಸಿಕೊಟ್ಟು ಮಂಗಳ ಕಾರ್ಯಕ್ಕೆ ಆಶೀರ್ವದಿಸಿದವರು ನಮ್ಮ ನಿಜಗುಣ ಮಹಾಸ್ವಾಮಿಗಳು. ಅವರ ನೆರವು ಚಿರಸ್ಮರಣೀಯ.

ಅಂದಿನಿಂದ ಪೂಜ್ಯರ ಮತ್ತು ನನ್ನ ಬಾಂಧವ್ಯದ ಬೆಸುಗೆ ಭದ್ರವಾಯಿತು. ಅದಕ್ಕೆ ಪೂರ್ವದಿಂದಲೂ ಇತ್ತು; ಆದರೂ ಅದಕ್ಕೊಂದು ಸ್ಥಾಯಿತ್ವ ದೊರೆತದ್ದು ಅಂದಿನಿಂದ. ಶ್ರೀ ಮಠದ ಯಾವುದೇ ಧಾರ್ಮಿಕ ಇಲ್ಲವೇ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕರೆ ಬರುತ್ತಿತ್ತು. ನನ್ನ ಕೈಲಾದ ಸೇವೆ ಸಲ್ಲಿಸುತ್ತಾ ಬರುತ್ತಿದ್ದೆ. ಯಾವ ಸಂದರ್ಭದಲ್ಲೇ ಆಗಲಿ ನಾನು ಮಠಕ್ಕೆ ಹೋದಕೂಡಲೇ ಪೂಜ್ಯರು ಬರೀ ಬಾಯಿ ಮಾತಿನಲ್ಲಿ ಕಳುಹಿಸುತ್ತಿರಲಿಲ್ಲ; ಹೊಟ್ಟೆ ತುಂಬ ಹಾಲು ತುಂಬಿಸಿ ಕಳುಹಿಸುತ್ತಿದ್ದರು. ಹಾಲು ಕುಡಿಯದೆ ಮಠದಿಂದ ನಾನು ಹಿಂತಿರುಗಿದ ದಿನವೇ ನೆನಪಿಲ್ಲ. ಅಂತಹ ವಾತ್ಸಲ್ಯ, ಅಭಿಮಾನ ಪೂಜ್ಯರದ್ದು.

ಪೂಜ್ಯ ಶ್ರೀ ನಿಜಗುಣ ಮಹಾಸ್ವಾಮಿಗಳವರಿಗೆ ಎಲ್ಲ ಹರಗುರು ಚರಮೂರ್ತಿಗಳಲ್ಲಿ ಅನನ್ಯ ಭಕ್ತಿ; ಶಿಷ್ಯ ಪ್ರಶಿಷ್ಯರಲ್ಲಿ, ವಿದ್ವಾಂಸ ವಿಚಾರವಾದಿಗಳಲ್ಲಿ ಅಷ್ಟೇ ಪ್ರೀತಿ. ಗುರು ಜಗದ್ಗುರುಗಳನ್ನು ಭಕ್ತಿಯಿಂದ ಪೂಜಿಸಿದರೆ, ವಿದ್ವಾಂಸರನ್ನು ಪ್ರೀತಿಯಿಂದ ಗೌರವಿಸುತ್ತಿದ್ದರು. ಇಂದಿಗೂ ಶ್ರೀಮಠದಲ್ಲಿ ಆ ಪರಿಪಾಠ ಇದೆ. ಮಹಿಳೆಯರನ್ನು ಅವರು ಯಾರೇ ಆಗಿರಲಿ ಅವರನ್ನು 'ತಾಯಿ...ಏನ್‌ತಾಯಿ.... ಬನ್ನಿ ತಾಯಿ' ಎಂದೇ ಗೌರವಭಾವದಿಂದ ಸಂಬೋಧಿಸುತ್ತಾರೆ. ಅಕ್ಕರೆಯ ಸಕ್ಕರೆ ತುಂಬಿದ ಅವರ ನುಡಿಗಳಲ್ಲಿ ಅಮೃತತ್ವವಿರುವುದು ಅನುಭವ ವೇದ್ಯ.

ಇಂತಹ ಮಾತೃಹೃದಯ ಮಹಾಮೂರ್ತಿ ಬಹುಕಾಲ ನಮ್ಮೊಡನಿರಬೇಕೆಂದು ಅಪೇಕ್ಷಿಸುತ್ತೇನೆ. ಅಮೃತ ಮಹೋತ್ಸವವನ್ನಾಚರಿಸುತ್ತಿರುವ ಅವರ ಭಕ್ತರಾದ ನಮಗೆ ಅವರ ಶತಮಾನೋತ್ಸವವನ್ನೂ ಆಚರಿಸುವ ಭಾಗ್ಯವನ್ನು ಶಿವಯೋಗಿಗಳು ಕರುಣಿಸಲೆಂದು ಹಾರ್ದಿಕವಾಗಿ ಹಾರೈಸುತ್ತಾ ವಿರಮಿಸುತ್ತೇನೆ.

ಜಂಗಮ ಮಠದ ಶ್ರೀ ನಿಜಗುಣ ಸ್ವಾಮಿಗಳು

ಡಾ॥ ಬಿ. ನಂಜುಂಡಸ್ವಾಮಿ

ಕಲ್ಯಾಣ ನಗರ ಎಂದು ಪ್ರಖ್ಯಾತವಾಗಿರುವ ಬೆಂಗಳೂರಿನ ಮಠಗಳ ಇತಿಹಾಸ ಬಹಳ ದೊಡ್ಡದು, ಅವುಗಳ ವ್ಯವಸ್ಥಿತವಾದ ಅಧ್ಯಯನ ನಡೆಯುತ್ತಾ ಇದೆ. ಕಾಲಗರ್ಭದಲ್ಲಿ ಅಡಗಿ ಹೋಗುತ್ತಾ ಇದ್ದ "ಸುಂಕೇನಹಳ್ಳಿ ಮಠ" ಅಥವಾ "ಜಂಗಮಮಠ" ದ ಮೂರ್ತಿಯಾಗಿ ಬೆಂಗಳೂರಿನಲ್ಲಿ "ಶಿವಾನುಭವ" "ಅನುಭಾವಗೋಷ್ಠಿ" "ವಿಚಾರ ಸಂಕಿರಣ" ಗಳನ್ನು ಏರ್ಪಡಿಸಿ ಸಮಾಜ ಜನಕ್ಕೆ ವೀರಶೈವ ಧರ್ಮವನ್ನು ಪರಿಚಯ ಮಾಡಿ ಕೊಡುತ್ತಿರುವ ಕೆಲವೇ ಮಂದಿ ವಿರಕ್ತರಲ್ಲಿ ಜಂಗಮ ಮಠದ ಶ್ರೀಗಳು ಪ್ರಮುಖರು.

ಕನ್ನಡ ನಾಡು ನುಡಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಶ್ರೀಗಳು, ತಾವು ಧರಿಸಿದ ಕಾವಿಯ ಗುಣದಂತೆ ತ್ಯಾಗಮಯವಾದ ಜೀವನ ನಡಸುತ್ತಾ ಬಂದಿದ್ದಾರೆ. ಕಾಯಕ ಧರ್ಮದಿಂದ ಮಠವನ್ನು ಬೆಳಸಿದ ಅಪರೂಪದ ಸ್ವಾಮಿಗಳು, ಶತಾಯುಷಿಗಳಾಗಿ ನಮ್ಮೆಲ್ಲರನ್ನು ಆಶೀರ್ವದಿಸುವಂತೆ ಬೇಡಿಕೊಳ್ಳುತ್ತೇನೆ.

ಕಾಯಕ ಯೋಗಿ

ಗಂಗಪ್ಪವಾಲಿ

ಬೆಂಗಳೂರು ಜಂಗಮಮಠದ ಶ್ರೀ ಮ.ನಿ. ಪ್ರ. ಶ್ರೀ ನಿಜಗುಣ ಸ್ವಾಮಿಗಳಿಗೆ ನಮನಗಳು

ಜಂಗಮ ಮಠಾಧ್ಯಕ್ಷ ತುಂಗತರ ಕೃತಿದಕ್ಷ
ಇಂಗದಿರ ನಗೆಮೊಗದ ಸದಯ ವಕ್ಷ ॥
ಲಿಂಗ ಪೂಜಾನಂದದಿಂಗಿತದ ರೂಪಾಗಿ
ಕಂಗೊಳಿಪ ಶ್ರೀ ಸ್ವಾಮಿ ನಿಜಗುಣಾಖ್ಯ ॥೧॥

ಮಠಗಳುದಯಿಸಬೇಕು ಘಟದಿಂದ ಎಂಬುದನು
ದಿಟಗೈದು ತೋರಿರುವ ಸುಕೃತಯೋಗೀ ॥
ಪುಟಿಯುತಿದೆ ನಿಮ್ಮಲ್ಲಿ ಪಟುತರದ ಕ್ರತುಶಕ್ತಿ
ದಿಟಸಾಕ್ಷಿ ಕಲ್ಯಾಣ ಮಂಟಪಗಳು ॥೨॥

ತುಂಬುವವು ಸಂತಸದ ಕಂಬನಿಗಳೀ ಯತಿಯ
ನಂಬುಗೆಯ ನಡೆನುಡಿಯ ದರ್ಶನದಲಿ ॥
ಶಂಭುವಿನ ಧ್ಯಾನ ಮಕರಂದ ರಸಭರಿತ ಹೃದ-
ಯಾಂಬುಜದ ಯತಿಪದಾಂಬುಜಕೆ ನಮನ ॥೩॥

ಆಧುನಿಕತೆಯು ಇಲ್ಲಿ ಸಾಧುಸಜ್ಜನಿಕೆಯಲಿ
ಮೋದದಲಿ ಸಮ್ಮಿಲಿತವಾಗಿರುವುದು ॥
ಈ ಧರೆಯೊಳೆಲ್ಲವರು ಭೇದಗಳ ಮರೆಯುತ್ತ-
ಗಾಧ ಸುಖಶಾಂತಿ-ಯಿಂದೆಂದಿರ್ಪರೋ !॥೪॥

ನಾಗಾಂಬಿಕೆಯರಿಲ್ಲಿ ನೀಗದಷ್ಟೆಡೆ ಮಾಡಿ
ತೇಗುವಂತುಣಿಸಿ ಸಂತೋಷಿಸುತಿರೆ ॥
ಲೋಗರೇಳಿಗೆಯೆ ಶಿವಯೋಗವೆನ್ನುತ ದುಡಿವ
ತ್ಯಾಗಿ ನಿಜಗುಣ ಸ್ವಾಮಿಗಭಿವಂದಿಪೆಂ ॥೫॥

ಮಾಧುರ್ಯರಸಭರಿತ ಆದರಾತಿಥ್ಯಗಳು
ಈ ಧರ್ಮ ಸಂಸ್ಥಾನ ಲಕ್ಷಣಗಳು ॥
ಮೇದಿನಿಯೊಳೀ ಬಗೆಯ ಸ್ವಾದುಸ್ವಚ್ಛತೆಗೆ
ಹೆಸರಾದ ಸಂಸ್ಕೃತಿ ಬೆಳೆದು ಬೆಳಗುತಿರಲಿ ॥೬॥

॥ ಶ್ರೀ ಗುರು ಬಸವಲಿಂಗಾಯ ನಮಃ ॥

ಚಿತ್ತರಗಿ ಶಿವಾನುಭವ ಚರವರ್ಯರೂ ಮಹಾಂತಜೋಳಿಗೆಯ ಶಿವಶಿಲ್ಪಿಗಳೂ ಆದ

ಪರಮಪೂಜ್ಯ ಶ್ರೀ ನಿ. ಪ್ರ. ಮಹಾಂತಸ್ವಾಮಿಗಳವರು

ಚಿತ್ತರಗಿ ಸಂಸ್ಥಾನಮಠ ಇಲಕಲ್ಲ ಅವರ ಅನುಜ್ಞೆಯಂತೆ

ಬೆಂಗಳೂರಿನ ಶ್ರೀ ಜಂಗಮಮಠಾಧೀಶರಾದ

ಕಾಯಕಯೋಗಿ ಶ್ರೀ ಮ. ನಿ. ಪ್ರ. ನಿಜಗುಣ ಮಹಾಸ್ವಾಮಿಗಳವರ

ಸನ್ನಿಧಿಯಲ್ಲಿ ಇಲಕಲ್ಲ ಚಿತ್ತರಗಿ ಸಂಸ್ಥಾನಮಠದಲ್ಲಿ ಸಮರ್ಪಿಸಿದ

ಸನ್ಮಾನ ಪ್ರಶಸ್ತಿ ಪತ್ರ

ಪೂಜ್ಯರೇ,

ಅನೇಕ ಸಾಹಿತಿಗಳನ್ನೂ ಸಂಗೀತಗಾರರನ್ನೂ ವಿದ್ವಾಂಸರನ್ನೂ ಕಲಾವಿದರನ್ನೂ ಕಲ್ಯಾಣನಗರಿ ಎಂದು ಅಭಿದಾನ ಪಡೆದ ಬೆಂಗಳೂರು ನಗರ, ಭಾರತ ದೇಶದಲ್ಲಿಯ ಮಹಾನಗರಗಳಲ್ಲಿ ಒಂದೆನಿಸಿದೆ. ಮಠ ಮಾನ್ಯಗಳ-ಕಲಾವಿದರ-ವಿದ್ವಾಂಸರ-ರಾಜಕಾರಣಿಗಳ ನೆಲೆವೀಡಾದ ಈ ಮಹಾನಗರ ಯಲಹಂಕ ಭೂಪಾಲ ಮಾಗಡಿ ಕೆಂಪೇಗೌಡನ ಕಾಲದಲ್ಲಿ, ೬೩ ವೀರಶೈವ ಮಠಗಳನ್ನು ಹೊಂದಿತ್ತು ಎನ್ನುವುದು ಚಾರಿತ್ರಿಕ ದಾಖಲೆಯಾಗಿದೆಯೇ ವಿನಃ, ಇಂದು ಉಳಿದಿರುವುವು ಏಳೆಂಟು ಮಠಗಳು ಮಾತ್ರ. ಅದರಲ್ಲಿ ಪ್ರಾಚೀನವಾದ ಶೂನ್ಯಸಿಂಹಾಸನ ಪರಂಪರೆಯ ಶ್ರೀ ಸಿದ್ಧಲಿಂಗ ಮಹಾಶಿವಯೋಗಿಗಳವರು ಅನುಷ್ಠಾನ ಗೈದ ಪರಮ ಪಾವನ ಕ್ಷೇತ್ರವಾದ ಶ್ರೀ ಜಂಗಮಮಠವು ಇಂದು ಹೆಮ್ಮೆಯ ಮಠವಾಗಿದೆ. ಈ ಶ್ರೀಮಠದ ನವ ನಿರ್ಮಾಣಕ್ಕೆ ಕಾರಣೀಭೂತರಾದ, ಸಮಾಜ ಚಿಂತನೆಯಲ್ಲೇ ಸದಾ ನಿಮಗ್ನರಾಗಿರುವ ತಮ್ಮನ್ನು ಈ ಶುಭ ಸಂದರ್ಭಲ್ಲಿ ಇಲಕಲ್ಲಿನ ಚಿತ್ತರಗಿ ಸಂಸ್ಥಾನ ಪೀಠದ ಅಪಾರ ಭಕ್ತವೃಂದದ ಪರವಾಗಿ ಗೌರವಿಸಿ, ಸತ್ಕರಿಸಲು ಅಭಿಮಾನವೂ, ಹರ್ಷವೂ ಎನಿಸುತ್ತದೆ.

ಶಿವಯೋಗಿ ತ್ರಯರ ಕಾರುಣ್ಯ ಮೂರ್ತಿಗಳೇ,

ಶೂನ್ಯಸಿಂಹಾಸನಾ ಪರಂಪರೆಯ ಪುಣ್ಯ ಕ್ಷೇತ್ರವಾದ ಶ್ರೀ ಜಂಗಮ ಮಠದ ಅಧಿಪತಿಗಳಾದ ತಾವು, ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ 'ಮೆದನಕೆರೆ' ಗ್ರಾಮದ ಮಾಲ್ವೆಮಠದ ಶ್ರೀ ರುದ್ರಯ್ಯ-ರಾಚಮ್ಮ ದಂಪತಿಗಳ ಪುತ್ರರಾಗಿ ೧೯೬೭ರಲ್ಲಿ ಜನ್ಮ ತಳೆದಿರಿ. ಸಮಾಜದಲ್ಲಿ ಸರ್ವತೋಮುಖ ಪ್ರಗತಿ ಸಾಧಿಸಿದ, ಘನ ಮಹಿಮರಾದ ಶೂನ್ಯಸಿಂಹಾಸನಾಧೀಶ್ವರ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಕಾರುಣ್ಯ-ದೃಷ್ಟಿಗೆ ಸಿಲುಕಿ, ಐದುವರ್ಷ

ವಯಸ್ಸಿನಲ್ಲಿಯೆ ಅವರ 'ಮರಿದೇವರಾಗಿ' ಸ್ವೀಕೃತರಾದಿರಿ. ಅನಂತರ ಶ್ರೀ ಜಗದ್ಗುರು ಸನ್ನಿಧಿಯವರ ಅಪ್ಪಣೆ ಮೇರೆಗೆ ಕರ್ನಾಟಕದ ಶಿವಯೋಗಿ ಕ್ಷೇತ್ರವೆನಿಸಿದ, ಪರಮ ವೈರಾಗ್ಯಮೂರ್ತಿ ಶ್ರೀ ಮುರುಘೇಂದ್ರ ಶಿವಯೋಗಿಗಳವರ ಕ್ಷೇತ್ರವಾದ ಅಥಣಿ ಗಚ್ಚಿನ ಮಠದ ಶ್ರೀ ಮ.ನಿ.ಪ್ರ. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರಲ್ಲಿ ಸೇವೆಗೈದು, ವಿದ್ಯಾಭ್ಯಾಸ ನಡೆಸಿ, ಅವರಿಂದ ಅನುಗ್ರಹ-ಉಪದೇಶ ಪಡೆದು ಧನ್ಯರಾದಿರಿ. ಅನಂತರ ಅಭಿನವ ಅಲ್ಲಮರೆಂದು ಖ್ಯಾತಿವೆತ್ತ, ಕಲ್ಯಾಣ ನಗರಿಯ ಶ್ರೀ ಸರ್ಪಭೂಷಣ ಮಠಾಧೀಶರಾಗಿದ್ದ ಶ್ರೀ ಮ. ನಿ. ಪ್ರ. ಶ್ರೀ ಮಹಾದೇವ ಸ್ವಾಮಿಗಳವರಲ್ಲಿಗೆ ಬಂದು ನಿಂತ ತಾವು ಕೆಲಕಾಲದಲ್ಲಿಯೇ ಅವರ ಪ್ರೀತ್ಯಾದರಗಳಿಗೆ ಪಾತ್ರರಾದಿರಿ.

ಕಾಯಕ ಯೋಗಿಗಳೇ,

ಶಿವಯೋಗಿತ್ರಯರ ಕಾರುಣ್ಯಮೂರ್ತಿಗಳಾಗಿ ಬೆಳೆದುನಿಂತ ತಾವು ಭಕ್ತರ ಆಗ್ರಹ, ಪೂಜ್ಯ ಜಗದ್ಗುರು ಸನ್ನಿಧಿಯವರ ಆದೇಶ, ಶ್ರೀ ಮಹಾದೇವ ಸ್ವಾಮಿಗಳ ಒಲುಮೆಗೆ ಕಟ್ಟುಬಿದ್ದು, ನಿಲ್ಲಲು ನೆಲೆಯಿಲ್ಲದ, ಜೀರ್ಣವಾಗಿದ್ದ, ಗತ ಇತಿಹಾಸದ ಶ್ರೀ ಜಂಗಮ ಮಠಕ್ಕೆ ಅಧಿಪತಿಗಳಾದಿರಿ. ಶ್ರೀ ಸಿದ್ಧಲಿಂಗ ಶಿವಯೋಗಿಯವರು ಅನುಷ್ಠಾನಗೈದ ಕುರುಹಾಗಿ, ನಾಲ್ಕು ಮಣ್ಣಿನ ಗೋಡೆಗಳ ಮಧ್ಯೆ ಕಲ್ಲು ಮಂಟಪದಲ್ಲಿಈ ಮಠದ ಉದ್ಧಾರಕ್ಕಾಗಿ ಬರಲಿರುವ 'ಕಾಯಕಯೋಗಿ ಪುಂಗವ' ನಿಗಾಗಿಯೋ ಎಂಬಂತೆ ಪ್ರಸನ್ನ ಚಿತ್ತದಿಂದ ಲಿಂಗ ಪೂಜೆಯಲ್ಲಿ ಕುಳಿತು ಶಿವಯೋಗ ನಿರತವಾದ ಆ ಘನಮಹಿಮನ ಪಾವನ ಪ್ರತಿಮೆ ಮತ್ತು ೧೫ ರೂ. ವಾರ್ಷಿಕ ಆದಾಯ ತರುತ್ತಿದ್ದ ೩ ಎಕರೆ ಜಮೀನು ಮಾತ್ರ ಮಠದ ಆಸ್ತಿಯಾಗಿ ಉಳಿದಿದ್ದವು.

ನಿಜಗುಣ ಕ್ಷೇತ್ರ ನಿರ್ಮಾಪಕರೇ,

ನಮ್ಮ ಪರಮಪೂಜ್ಯ ಗುರುಗಳಾದ ಚಿತ್ತರಗಿ ಚಿಜ್ಯೋತಿ ಶ್ರೀ ವಿಜಯ ಮಹಾಂತ ಶಿವಯೋಗಿಗಳವರು ಗೋಮಾತೆ ಮಹಾಂತಮ್ಮನನ್ನು ಮುಂದಿಟ್ಟುಕೊಂಡು ನಡೆದಂತೆ, ತಾವು ಭಕ್ತರ ನೆರವು, ಚಂದಾ ವಸೂಲಿಗಳೊಂದೂ ಇಲ್ಲದೆ ಸ್ವತಃ ಗೋಸೇವೆಗೈದು ಆದರಿಂದಲೂ ಮತ್ತು ಸತತ ವ್ಯಾಜ್ಯಗಳನ್ನು ಎದುರಿಸಿ ಜಮೀನಿನಿಂದ ಬಂದ ಹಣದಿಂದಲೂ 'ಶ್ರೀ ನಿಜಗುಣರ ಕ್ಷೇತ್ರ'ವನ್ನು ಭವ್ಯವಾಗಿ ನಿರ್ಮಿಸಿ, ಧಾರ್ಮಿಕ ಸಾಂಸ್ಕೃತಿಕ-ಸಾಮಾಜಿಕ ಕಾರ್ಯಗಳಿಗೆ ಅನುವು ಮಾಡಿ ಶ್ರೀ ಕ್ಷೇತ್ರದಿಂದ ಬಂದ ಉತ್ಪತ್ತಿಯಿಂದ 'ಶ್ರೀ ಜಂಗಮಮಠ'ದ ಪುನರ್ ನಿರ್ಮಾಣ ಮಾಡಿ ಶ್ರೀ ಮಠದ ಕರ್ತೃಗಳೇ ತಾವಾದಿರಿ.

ಸಮಾಜ ಪ್ರೇಮಿಗಳೇ,

ಅಂದು 'ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ' ಎಂದು ಹಂಬಲಿಸಿದ ಭಕ್ತಿ ಭಂಡಾರಿ ಬಸವೇಶ್ವರರಂತೆ, ಇಂದು ತಾವು ರಾಜಧಾನಿಗೆ ದಯಮಾಡಿಸುವ

ನಾಡಿನ ಮಠಾಧೀಶರನ್ನು, ತುಂಬು ಹೃದಯದಿಂದ ಸ್ವಾಗತಿಸಿ, ಸತ್ಕರಿಸುವ ಮಾತೃಹೃದಯಿಗಳಾದ ತಾವು ಸಭೆ-ಸಮಾರಂಭಗಳ ಮೂಲಕ ಪೂಜ್ಯ ಮಹಾಸ್ವಾಮಿಗಳ ದರ್ಶನ-ಆಶೀರ್ವಾದಗಳನ್ನು ಸಾರ್ವಜನಿಕರಿಗೆ ಲಭಿಸುವಂತೆ ಮಾಡುತ್ತಿರುವುದು ತಮ್ಮ ಔದಾರ್ಯದ ಪ್ರತೀಕವಾಗಿದೆ. ವೀರಶೈವ ಮಠಾಧೀಶರು ಎಲ್ಲರೂ ಒಂದಾಗಬೇಕು ಆದಾಗ ಸಮಾಜದ ಉದ್ಧಾರ ಸಾಧ್ಯವೆಂಬುದನ್ನು ಮನಗಂಡ ತಾವು 'ವೀರಶೈವ ಮಠಾಧಿಪತಿಗಳ ಸಂಘದ'ದ ಪ್ರಧಾನ ಕಛೇರಿಯನ್ನು ತಮ್ಮ ಮಠದಲ್ಲಿ ನೆಲೆಗೊಳಿಸಿ ಪ್ರಧಾನ ಕಾರ್ಯದರ್ಶಿಗಳಾಗಿ ಶ್ರಮಿಸುತ್ತಿರುವಿರಿ. ಬೆಂಗಳೂರಿನ 'ಲಿಂಗಾಯತ ಸಮಾಜದ ರುದ್ರಭೂಮಿಗಳ ವ್ಯವಸ್ಥಾಪಕ ಸಮಿತಿ'ಯ ಅಧ್ಯಕ್ಷರಾಗಿ ಲೋಕ ಕಲ್ಯಾಣ ಟ್ರಸ್ಟ್‌ನ ಟ್ರಸ್ಟಿ (ಧರ್ಮದರ್ಶಿ)ಯಾಗಿ ತಾವು ನಿರ್ವಹಿಸುತ್ತಿರುವ ಕಾರ್ಯ ತಮ್ಮ ಸಮಾಜೋದ್ಧಾರದ ಕೆಲವು ಮುಖಗಳು ಮಾತ್ರ.

ಜ್ಞಾನ ದಾಸೋಹಿಗಳೇ,

ಶ್ರೀ ಜಂಗಮ ಮಠದ ಪುನರ್ನಿರ್ಮಾಣದನಂತರ, ಸಾಪ್ತಾಹಿಕ ಸಂಸ್ಕೃತಿಪರ ಕಾರ್ಯಕ್ರಮಗಳನ್ನು ತಮ್ಮ ಮಠದಲ್ಲಿ ನಡೆಸುತ್ತಾ ಬಂದಿರಲ್ಲದೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನಗಳನ್ನೇರ್ಪಡಿಸುತ್ತಾ, ಜ್ಞಾನ ದಾಸೋಹ ಕಾರ್ಯ ಕೈಗೊಂಡಿರುವಿರಿ. ಭವಿಷ್ಯದಲ್ಲಿ ಅನೇಕ ಯೋಜನೆಗಳನ್ನಿಟ್ಟುಕೊಂಡಿರುವ, ಸದ್ದು ಗದ್ದಲವಿಲ್ಲದೆ ತಮ್ಮ ಸಾಧನೆಗಳಲ್ಲಿ, ಸಮಾಜದ ಹಿತ ಚಿಂತನೆಯಲ್ಲಿ ಅನುಗಾಲ ನಿರತರಾದ ತಮ್ಮ ಕ್ರಿಯಾಪೂರ್ಣ ಕಾರ್ಯಶೀಲ ಬದುಕನ್ನು ಕಂಡು, ತಮ್ಮ ಈ ಷಷ್ಟ್ಯಬ್ಧ ಪೂರ್ಣ ಕಾರ್ಯಕ್ರಮದ ಸಂದರ್ಭದಲ್ಲಿ ತಮ್ಮನ್ನು ಸನ್ಮಾನಿಸಲು ಹರ್ಷವೆನಿಸುತ್ತದೆ.

ಸದಾ ಸಮಾಜ ಚಿಂತನೆಯಲ್ಲಿರುವ ತಾವು ಚಿತ್ತರಗಿ ಶ್ರೀ ವಿಜಯ ಮಹಾಂತ ಶಿವಯೋಗಿಯ ಕೃಪೆಯಿಂದ ನೂರ್ಕಾಲ ನಮ್ಮಗಳ ನಡುವೆ ಉಳಿದು ಮಾರ್ಗದರ್ಶನ ಮಾಡುತ್ತೀರೆಂದು ಹಾರೈಸುತ್ತೇವೆ.

ಇಲಕಲ್ಲ — ಚಿತ್ತರಗಿ ಶ್ರೀ ವಿಜಯ ಮಹಾಂತೇಶ
೮-೮-೧೯೮೨ — ಸಂಸ್ಥಾನಮಠ ಇಲಕಲ್ಲ

॥ಶ್ರೀಗುರು ಬಸವಲಿಂಗಾಯ ನಮಃ ॥

ಪೂಜ್ಯ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ, ಹುಬ್ಬಳ್ಳಿ ಅವರ ಪೀಠಾರೋಹಣ ರಜತ ಮಹೋತ್ಸವದ ಸಂಸ್ಮರಣೆಯಲ್ಲಿ

ಪೂಜ್ಯ ಶ್ರೀ ಮ. ನಿ. ಪ್ರ. ನಿಜಗುಣ ಮಹಾಸ್ವಾಮಿಗಳು,

ಬೆಂಗಳೂರು ಅವರಿಗೆ ದಯಪಾಲಿಸಿದ

ಸನ್ಮಾನ ಪತ್ರ

ಪೂಜ್ಯರೆ :

ತಾವು ಚಿತ್ರದುರ್ಗ ಜಿಲ್ಲೆಯ ಮೆದನಕೆರೆ ಗ್ರಾಮದ ಮಾಲ್ವೆ ಮಠದ ಶ್ರೀ ರುದ್ರಯ್ಯನವರು ಹಾಗೂ ಧರ್ಮಪತ್ನಿ ರಾಚಮ್ಮನವರು- ಈ ಪುಣ್ಯ ದಂಪತಿಗಳಿಗೆ ಸುಪುತ್ರರಾಗಿ ೧೯೧೬ರಲ್ಲಿ ಜನಿಸಿದಿರಿ. ತೊಟ್ಟಿಲ ನಾಮ ಶರಣಯ್ಯನೆಂದು ಪಡೆದ ತಾವು ಶರಣಪಥದಲ್ಲಿ ಸಾಗುವ ಒಂದು ಸಂಯೋಗವೆಂದು ಭಾವಿಸಿದ್ದೇವೆ.

ವಿದ್ಯಾ ವಿನಯಸಂಪನ್ನರೇ :

ತಾವು ಚಿತ್ರದುರ್ಗ ಶ್ರೀ ಜಯದೇವ ಜಗದ್ಗುರುಗಳ ಕಾರುಣ್ಯ ಶಿಶುವಾಗಿ ಬೆಳೆಯುತ್ತಾ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದಿರಿ. ಮುಂದೆ ಜಗದ್ಗುರುಗಳು ತಮಗೆ 'ನಿಜಗುಣ ದೇವರೆಂದು' ಅಭಿದಾನವಿಟ್ಟು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಥಣಿ ಗಚ್ಚಿನಮಠಕ್ಕೆ ಕಳುಸಿದರು. ಇಲ್ಲಿ ಕಾವ್ಯ, ಸಾಹಿತ್ಯ, ಶಿವಾನುಭವ ಹಾಗೂ ವಚನಶಾಸ್ತ್ರಗಳನ್ನು ಚನ್ನಾಗಿ ಅಧ್ಯಯನ ಮಾಡಿ ವಿನಯ ವಿಧೇಯತೆಗಳ ಸದ್ಗುಣಗಳಿಂದ ತಾವು ಗುರುಕೃಪೆಗೆ ಪಾತ್ರರಾದಿರಿ. ಹಾಗೂ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳಿಂದ ಅನುಗ್ರಹ ಉಪದೇಶ ಹೊಂದಿದಿರಿ.

ಸಮರ್ಥ ಶಿವಯೋಗಿಗಳೆ :

ನಿಮ್ಮ ವಿದ್ಯೆ-ವಿನಯ-ಸೌಜನ್ಯ ಹಾಗೂ ತತ್ತ್ವ ಶಕ್ತಿಯನ್ನು ಗುರುತಿಸಿದ ಚಿತ್ರದುರ್ಗ ಜಗದ್ಗುರುಗಳು ನಿಮನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಮಹಾಸಂಸ್ಥಾನ ಮಠದ ಜವಾಬ್ದಾರಿಯ ಮಣಿಹವನ್ನು ಒಪ್ಪಿಸಿದರು. ತಾವು ಪ್ರಾಮಾಣಿಕತನ, ಕರ್ತವ್ಯನಿಷ್ಠೆ ಹಾಗೂ ಸೇವಾ ಮನೋಭಾವನೆಯಿಂದ ಸಂಸ್ಥಾನಕ್ಕೆ ಅಪಾರ ಸೇವೆಸಲ್ಲಿಸಿ ಜಗದ್ಗುರುಗಳ ಕೃಪೆಗೆ ಪಾತ್ರರಾದಿರಿ. ೧೯೩೮ರಲ್ಲಿ ಹರ-ಗುರು-ಚರಮೂರ್ತಿಗಳ ಸಮ್ಮುಖದಲ್ಲಿ ಶಿವಾನುಭವಿಗಳಾದ ಮಠದ ಶ್ರೀ ನಿ. ಪ್ರ. ಬಸವರಾಜ ಮಹಾಸ್ವಾಮಿಗಳಿಂದ ಜಂಗಮಮಠದ ನಿರಂಜನ ಪಟ್ಟಾಧಿಕಾರವನ್ನು ಸ್ವೀಕರಿಸಿದಿರಿ. ಅಂದಿನಿಂದ ಭಕ್ತರ ಉದ್ಧಾರ ಹಾಗೂ ಸಮಾಜದ ಏಳ್ಗೆಯ ಬಗ್ಗೆ ಕಾರ್ಯ ಕೈಕೊಂಡಿದ್ದೀರಿ.

ಕಾಯಕಯೋಗಿಗಳೇ :

ತಾವು ಅಧಿಕಾರ ಹೊಂದಿದ ಮಠವು ಅಂದು ಕಾಡುಪ್ರದೇಶದಲ್ಲಿತ್ತು. ಮಣ್ಣುಗೋಡೆಗಳಿಂದಿದ್ದ ಮಠ ವಾಸಕ್ಕೂ ಅನುಕೂಲವಾಗಿರಲಿಲ್ಲ. ಮಠಕ್ಕೆ ಕೇವಲ ೩ ಎಕರೆ ಜಮೀನು ಮಾತ್ರವಿತ್ತು. ಅದರ ವಾರ್ಷಿಕ ಉತ್ಪನ್ನ ಕೇವಲ ಇಪ್ಪತ್ತು ರೂಪಾಯಿ ಬರುತ್ತಿತ್ತು. ಪಾಲಿಗೆ ಬಂದದ್ದು ಪಂಚಾಮೃತ, ''ಗುರುಕೃಪೆ', ಶಿವಯೋಗಿಗಳ ಕರುಣೆ ಎಂದು ತಿಳಿದು ಸ್ವತಃ ಕಾಯಕದಿಂದಲೇ ಮಠವನ್ನು ಅಭಿವೃದ್ಧಿಗೊಳಿಸುವ ಸಂಕಲ್ಪ ಮಾಡಿದಿರಿ. ತಾವು ಮಠದ ಜೀರ್ಣೋದ್ಧಾರ ಕಾರ್ಯ ಮುಗಿಸಿದಿರಿ. ಅನಂತರ ಸಾರ್ವಜನಿಕರಿಗೆ ಮಂಗಲಕಾರ್ಯಕ್ಕೆ ಅನುಕೂಲವಾಗಲು ನಿಜಗುಣರ ಕಲ್ಯಾಣಕ್ಷೇತ್ರವನ್ನು ಕಟ್ಟಿಸಿದಿರಿ. ಶ್ರೀಮಠದ ಪುನರ್ ನಿರ್ಮಾಣ ಕಲ್ಯಾಣ ಕ್ಷೇತ್ರದ ರಚನೆ ತಮ್ಮ ಸಾಧನೆಯ ಕೀರ್ತಿ ಶಿಖರಗಳೆಂದು ನಾವು ಭಾವಿಸಿದ್ದೇವೆ. ತಮ್ಮ ಜಂಗಮಮಠ ರಾಜಧಾನಿಯಲ್ಲಿ ನಿರ್ಮಲ ವಾತಾವರಣದಲ್ಲಿದ್ದು ನಿಸರ್ಗ ಸೌಂದರ್ಯದಿಂದ, ಸ್ವಚ್ಛತೆಯಿಂದಾಗಿ ಯಾತ್ರಿಕರಿಗೆ ಒಂದು ಪ್ರಶಾಂತ ಆಶ್ರಮದ ನೆನಪನ್ನು ತರುತ್ತದೆ.

ಮಾತೃ ಹೃದಯದ ಶ್ರೀಗಳೇ :

ತಾವು ಅಂತಃಕರುಣ ಪೂರ್ವಕ ಮಾಡುವ ಅತಿಥಿ ಸತ್ಕಾರಕ್ಕೆ ಮೆಚ್ಚಿ ಹುಬ್ಬಳ್ಳಿ ಮೂರುಸಾವಿರಮಠದ ಪೂಜ್ಯ ಜಗದ್ಗುರು ಸನ್ನಿಧಿಯವರು, ಧಾರವಾಡದ ತ್ರಿವಿಧ ದಾಸೋಹ ಮೂರ್ತಿಗಳಾದ ಪೂಜ್ಯ ಮಹಾಂತಪ್ಪಗಳವರು, ಇಲಕಲ್ಲಿನ ಪೂಜ್ಯ ಮಹಾಂತಸ್ವಾಮಿಗಳವರು ಹಾಗೂ ಪೂಜ್ಯ ಗುಳೇದಮಠದ ನೀಲಕಂಠಸ್ವಾಮಿಗಳವರು ಹಾಗೂ ಅನೇಕ ಹರ-ಗುರು-ಚರಮೂರ್ತಿಗಳು ತಮ್ಮನ್ನು ಮಾತೃಹೃದಯದ ಶ್ರೀಗಳೆಂದು ಕರೆದಿರುವುದು ಅರ್ಥಪೂರ್ಣವಾಗಿದೆ.

ಸಮಾಜ ಹಿತಚಿಂತಕರೇ :

ತಾವು ಕಾಯಕಯೋಗಿಗಳೂ ಹೌದು, ಲೋಕೋಪಕಾರಿಗಳೂ ಹೌದು. ಸಮಾಜದ ಐಕ್ಯತೆಗೆ ಮಠಾಧಿಪತಿಗಳು ಬಂದುಹೋಗಬೇಕು, ಮುಂದಾಗಬೇಕೆಂದು ತಿಳಿದ ಮಠಾಧಿಪತಿಗಳು ಸಂಘದ ಕಾರ್ಯಾಲಯವನ್ನೂ ಶ್ರೀಮಠದಲ್ಲಿ ಸ್ಥಾಪಿಸಿ ೧೯೭೭ ರಿಂದ ಸಂಘದ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದೀರಿ. ಬೆಂಗಳೂರು ನಗರದಲ್ಲಿರುವ ವೀರಶೈವ ಸಮಾಜದ ರುದ್ರಭೂಮಿಯನ್ನು ಉಳಿಸಲು ಒಂದು ಸಮಿತಿಯನ್ನು ರಚಿಸಿ ತಾವು ಸಾಕಷ್ಟು ಹಣ ಖರ್ಚುಮಾಡಿ ಅದಕ್ಕೊಂದು ಸೂಕ್ತ ವ್ಯವಸ್ಥೆ ಮಾಡಿದ್ದೀರಿ. ತಮ್ಮ ಮಹದುಪಕಾರವನ್ನು ಸಮಾಜ ಇಂದಿಗೂ ಸ್ಮರಿಸುತ್ತಿದೆ. ನಮ್ಮ ನಾಡಿನ ದಿನಪತ್ರಿಕೆಗಳಲ್ಲೊಂದಾದ 'ಲೋಕವಾಣಿ' ಪತ್ರಿಕೆಯು ನಮ್ಮ ಸಮಾಜದ ಮುಖವಾಣಿಯಾಗಿರಬೇಕೆಂದು ಬಯಸಿ ಲೋಕಕಲ್ಯಾಣ ಟ್ರಸ್ಟಿಗೆ ಉದಾರವಾಗಿ ಸಹಸ್ರಾರು ರೂಪಾಯಿ ಸಹಾಯ ನೀಡಿದ್ದೀರಿ.

ನಿಜಗುರುವೇ :

ತಮಗೆ ಈಗ ೭೧ ವರ್ಷ, ಕಳೆದ ವರ್ಷ ತಾವು ಒಂದು ದೊಡ್ಡ ದುರಂತದಿಂದ ಪಾರಾದಿರಿ. ಅದು ತಮ್ಮ ತಪಸ್ಸಿನ ಫಲ ಶಿವಯೋಗಿಗಳ ಕರುಣೆ ತಮ್ಮ ಮೇಲಿದೆ ಎಂದು ಭಾವಿಸಿದ್ದೇವೆ. ತಾವು ಸಾರ್ಥಕ ಬದುಕು ಬಾಳಿದ್ದೀರಿ. ಈಗ ಧರ್ಮ ಗ್ರಂಥಗಳ ವ್ಯಾಸಂಗ, ಶಿವಾನುಭವ ಸಾಧನೆಯಿಂದ ವಿಶ್ರಾಂತಿ ಜೀವನ ಕಳೆಯುತ್ತಿರುವಿರಿ. ತಾವು ಎಂದೂ ಲೌಕಿಕ ಪ್ರಚಾರವನ್ನೂ ಬಯಸುವವರಲ್ಲ.

ಹುಬ್ಬಳ್ಳಿ
೨-೪-೧೯೯೦

ಪೀಠಾರೋಹಣದ ರಜತ ಮಹೋತ್ಸವ ಸಮಿತಿ,
ಶ್ರೀ ಜಗದ್ಗುರು ಮೂರುಸಾವಿರ ಮಠ ಹುಬ್ಬಳ್ಳಿ

ಹೃದಯ ಸಂಪದ

ಶ್ರೀ ನಿಜಗುಣ ಮಹಾಸ್ವಾಮಿಗಳ ಜೀವನ ಹಾಗೂ ಸಾಧನೆ

ಷಣ್ಮುಖಯ್ಯ ಅಕ್ಕೂರಮಠ

ಭಾರತದಲ್ಲಿ ಖ್ಯಾತಿವೆತ್ತ ಮಹಾನಗರ ಬೆಂಗಳೂರು. ಅದು ಕರ್ನಾಟಕದ ರಾಜಧಾನಿ. ಇದಕ್ಕೆ ಕಲ್ಯಾಣನಗರಿ ಎನ್ನುವ ಅಭಿದಾನವೂ ಉಂಟು. ಇದು ರಾಜಕಾರಣಿಗಳ ನೆಲೆವೀಡು; ಕಲಾವಿದರ ವಿದ್ವಾಂಸರ ಬೀಡು. ಅಂತೆಯೇ ಧಾರ್ಮಿಕ ಮಠಪೀಠಗಳ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಗೂಡೂ ಹೌದು.

ಜಗತ್ತಿನ ಜನರು ಹೆಚ್ಚಾಗಿ ಅಮೆರಿಕಾ ದೇಶಕ್ಕೆ ಹೋಗಬೇಕೆಂದು ಬಯಸಿದರೆ, ಅಮೆರಿಕಾ ಜನರು ಮಾತ್ರ 'ಲಾಸ್ ಏಂಜಲೀಸ್' ನಗರಕ್ಕೆ ಹೋಗಲು ಬಯಸುತ್ತಾರಂತೆ. ಅಮೆರಿಕಾ ದೇಶದವರಿಗೆ ಲಾಸ್ ಏಂಜಲಿಸ್ ನಗರ ಆಕರ್ಷಣೀಯವೆನಿಸಿರುವಂತೆ ಬೆಂಗಳೂರು ನಗರ ಭಾರತೀಯರಿಗೆ ಆಕರ್ಷಣೀಯ ನಗರವೆನಿಸಿದೆ.

ಕ್ರಿ. ಶ. ೧೫೩೭ರಲ್ಲಿ ಸ್ಥಾಪನೆಗೊಂಡ ಈ ನಗರಕ್ಕೆ ೪೫೦ ವರ್ಷಗಳು ಮಿಕ್ಕಿವೆ. ಹಿಂದೆ ಒಂದು ಕಾಲದಲ್ಲಿ, ಒಂದು ಸಣ್ಣ ಗ್ರಾಮವಾಗಿ ಅಸ್ತಿತ್ವದಲ್ಲಿದ್ದು, ಹೊಯ್ಸಳ ರಾಣಿ ಶಾಂತಲಾದೇವಿಯ ತಂದೆಯ ವಶದಲ್ಲಿ ಇದು ಇದ್ದಿತೆಂದು ಇತಿಹಾಸ ಹೇಳುತ್ತದೆ. ಕನ್ನಡಿಗರ ರಾಜಧಾನಿಯಾಗಿರುವ ಈ ನಗರವನ್ನು ಕೆಂಪೇಗೌಡ, ಶಹಾಜಿ, ಹೈದರ್ ಹಾಗೂ ಟಿಪ್ಪೂ ಬೆಳಸಿಕೊಂಡು ಬಂದರೆಂಬುದಕ್ಕೆ ಐತಿಹಾಸಿಕ ದಾಖಲೆಗಳಿವೆ. ಹಿಂದೆ ಬೆಂಗಳೂರಿನಲ್ಲಿ ೧೨೪ ವೀರಶೈವ ಮಠಗಳಿದ್ದವೆಂದು ದಾಖಲೆ ಇದೆ. ಗುರುಗಳ ಸಾಮರ್ಥ್ಯ ಹಾಗೂ ಭಕ್ತರ ತ್ಯಾಗ ಗುಣಗಳಿಂದ, ಮಠಗಳು ಹೆಚ್ಚು ನಿರ್ಮಾಣವಾದವು; ಕಾಲ ಕಳೆದಂತೆ ಗುರುಗಳ ಅಸಾಮರ್ಥ್ಯ ಭಕ್ತರ ಸ್ವಾರ್ಥ ಗುಣಗಳಿಂದ ಅವುಗಳ ಸಂಖ್ಯೆ ಅತ್ಯಂತ ವಿರಳವಾಗಿ ಬೆರಳೆಣಿಕೆಗೆ ಬಂದು ನಿಂತಿದೆ.

ಈಗ ಬೆಂಗಳೂರಿನ ಗವೀಪುರ ಬಡಾವಣೆಯಲ್ಲಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಲ್ಯಾಣ ಕಾರ್ಯಗಳಿಂದ ನಾಡಿನ ಜನಾಂಗವನ್ನು ಆಕರ್ಷಿಸುತ್ತ ಕಾರ್ಯಪ್ರವೃತ್ತವಾಗಿರುವ ಧಾರ್ಮಿಕ ಸಂಸ್ಥೆಗಳಲ್ಲಿ ಶ್ರೀ ಜಂಗಮಮಠವೂ ಒಂದು. ಹಿಂದೆ

ಈ ಪ್ರದೇಶಕ್ಕೆ 'ಸುಂಕೇನಹಳ್ಳಿ' ಎಂದು ಕರೆಯುತ್ತಿದ್ದರು. ಆಗ ಹಾಳು ಹಳ್ಳಿಯಾಗಿದ್ದ ಪ್ರದೇಶ ಇದು. ಇಂದು ಸಾಂಸ್ಕೃತಿಕ, ಸುಂದರ ಬಡಾವಣೆಯಾಗಿದೆ. ಶ್ರೀ ಜಂಗಮಮಠದ ಪೂರ್ವಭಾಗಕ್ಕೆ ಧರ್ಮಸ್ಥಳದ ಕಲ್ಯಾಣಮಂಟಪ, ಗಣೇಶಮಂದಿರ, ಆಗ್ನೇಯ ಭಾಗಕ್ಕೆ ತುಂಗಾಕೃತಿಯ ಬಸವನಗುಡಿ, ಶ್ರೀ ನಿಜಗುಣರ ಕಲ್ಯಾಣಕ್ಷೇತ್ರ, ದಕ್ಷಿಣಕ್ಕೆ ಶ್ರೀ ಕಬೀರಮಠ, ಉತ್ತರ ಭಾಗಕ್ಕೆ ಶ್ರೀ ರಾಮಕೃಷ್ಣಾಶ್ರಮ, ಪಶ್ಚಿಮ ಭಾಗಕ್ಕೆ ಅನತಿ ದೂರದಲ್ಲಿ ಗವಿ ಗಂಗಾಧರೇಶ್ವರ ಹಾಗೂ ರಾಮಾಂಜನೇಯ ಬೆಟ್ಟ-ಹೀಗೆ ಮಠದ ಸುತ್ತಲೂ ಧಾರ್ಮಿಕ, ಸಾಂಸ್ಕೃತಿಕ ಸಂಸ್ಥೆಗಳಿಂದ ತುಂಬಿ ಕಂಗೊಳಿಸುವ ಈ ಬಡಾವಣೆ ಸಂಸ್ಕೃತಿ ಹಾಗೂ ನಾಗರಿಕತೆಗೆ ಪ್ರಸಿದ್ಧವಾಗಿದೆ.

ಶ್ರೀ ಜಂಗಮಮಠದ ಅಧಿಪತಿಗಳು ಶ್ರೀ ನಿಜಗುಣ ಮಹಾಸ್ವಾಮಿಗಳು. ಅವರದು ತುಸು ಎತ್ತರವಾದ ನಿಲವು, ಅಗಲವಾದ ಹಣೆ, ಹೊಳಪು ಕಣ್ಣು, ಗೌರವವರ್ಣ, ತೇಜಃ ಪುಂಜ ಮುಖಮುದ್ರೆ, ಅಂತಃಕರಣ ಉಕ್ಕಿ ಹೊರಸೂಸುವ ನಗುಮುಖ, ಹಿತ-ಮಿತ ಆದರೂ ನಯ ವಿನಯದ ಮಾತುಕತೆ. ಕಾಷಾಯವಸನ, ಮೇಲೊಂದು ಕೇಸರೀವರ್ಣದ ತೆಳುವಾದ ಉತ್ತರೀಯ. ನೋಡುವವರಿಗೆ ಪೂಜ್ಯತೆಯ ಧನ್ಯಭಾವ ಉಂಟಾಗುವ ವ್ಯಕ್ತಿತ್ವ. ಅವರ ಬಳಿ ಸಾರಿಬಂದ ಭಕ್ತರಿಗೆ ಸಾಂತ್ವನ ನೀಡುವ ಮಾತುಕತೆ, ಅಭಯಹಸ್ತ. ಭಕ್ತರು ಬಂದು ನಮಿಸಿದಾಗ 'ಫಲಿತ ಕದಳಿಯ ಗೊನೆಯ ಬಿಳ್ಪಿನಿಂದ ಬಾಗಿದ ಬಾಳೆಯ ಗಿಡದಂತೆ' ಅವರ ದೇಹ ಬಾಗುತ್ತದೆ. ಅವರ ಬಳಿ ಹೋದವರನ್ನು 'ಇವನಾರವ, ಇವನಾರವ ನೆನ್ನದೆ ಇವ ನನ್ನವ ಇವ ನನ್ನವ' ಎನ್ನುವ ವಾತ್ಸಲ್ಯಭಾವ ಅವರದು. ಅವರನ್ನು ಕಂಡಾಗ -

> ''ತಪೋದೀಕ್ಷೆಯ ಕೊಂಡೆಸಪ ರಸಋಷಿಗೆ ಯೋಗಮತಿ
> ಸಹೃದಯ ವಿಭೂತಿಗೆ ನಮೋ''

ಎನ್ನುವ 'ರಾಮಾಯಣ ದರ್ಶನಂ'' ಕಾವ್ಯದ ಪಂಕ್ತಿ ಪಕ್ಕನೇ ನೆನಪಾಗುತ್ತದೆ.

> ಮನುಷ್ಯನ ಹಿರಿಮೆ ಮೂರು ತೆರ: ಹುಟ್ಟಿನಿಂದ ಬಂದದ್ದು;
> ತಾನೇ ದುಡಿದು ಪಡೆದದ್ದು; ಇತರರು ತಂದು ಹೊರಿಸಿದ್ದು.

-ಇದು ಆಂಗ್ಲ ಕವಿ ಷೇಕ್ಸ್‌ಪಿಯರ್‌ನ ಮಾತು.

ಶ್ರೀ ಸ್ವಾಮಿಗಳ ಹಿರಿಮೆ ಇನ್ನೊಬ್ಬರು ಹೊರಿಸಿದ್ದಲ್ಲ; ವಂಶಪಾರಂಪರ್ಯದ್ದಲ್ಲ; ಬಹುಪಾಲು ತಾವೇ ದುಡಿದು ಗಳಿಸಿದ್ದು; ಶಾಶ್ವತವಾಗಿ ನಿಲ್ಲಬಲ್ಲದ್ದು. ಅದು ಅವರ ಜೀವಮಾನದ ಅದ್ಭುತ ಸಾಧನೆ.

ಈಗ 80ರ ಗಡಿ ದಾಟಿರುವ ಶ್ರೀಗಳವರ ಜೀವನ ನಿಷ್ಠಾವಂತ ಜೀವನ. ಅವರೊಬ್ಬ ಶಿಸ್ತಿನ ಸಿಪಾಯಿ; ಸ್ನಾನ-ಪೂಜೆ-ಅನುಷ್ಠಾನ ಪ್ರಾತರ್ವಿಧಿಗಳೆಲ್ಲ ನಿಯಮಾನುಸಾರ, ಸಮಯಾನುಸಾರ. ದಿನ-ಚರಿ ಕ್ರಮಬದ್ಧ.

ಒಂದು ದಿನ ಪೂಜ್ಯ ಸ್ವಾಮೀಜಿಯವರೊಂದಿಗೆ ಮಾತಿನ ದೋಣಿಯ ಮೇಲೆ ಕೂತು, ಜೀವನಾನುಭವದ ನದಿಯಲ್ಲಿ ವಿಹರಿಸುತ್ತಿದ್ದಾಗ ಧರ್ಮ-ಸಮಾಜದ ಬಗ್ಗೆ ಚರ್ಚೆ ಸಾಗಿತ್ತು. ಕೊನೆಗೆ ತಮ್ಮ ಜೀವನಾನುಭವಗಳನ್ನು ತಿಳಿಸುತ್ತಾ-ತಮ್ಮ ಸಾಹಸಮಯವಾದ ಜೀವನ ಚರಿತ್ರೆಯನ್ನೇ ತಮ್ಮಸ್ಮೃತಿ ಚಿತ್ರಗಳಿಂದಾಯ್ದು ನನ್ನ ಮುಂದೆ ಇಟ್ಟರು. ಅದನ್ನು ಕೇಳಿ ನಾನು ಮೂಕವಿಸ್ಮಿತನಾದೆ. ಶ್ರೀಗಳವರನ್ನು ಕುರಿತು ಅವರ ಜೀವನ ಚರಿತ್ರೆಯನ್ನು ಬರೆಯಬೇಕೆನಿಸಿತು. ಕಡಲನ್ನು ಕೊಡದಲ್ಲಿರಿಸುವ ಸಾಹಸವಿದು. ಶ್ರೀಗಳವರ ಮೇಲಿನ ನನ್ನ ಭಕ್ತಿ-ಗೌರವಗಳ ದ್ಯೋತಕವಾಗಿ ಇದೊಂದು ಶಬ್ದಚಿತ್ರ. ನಿರಾಡಂಬರ, ಪ್ರಾಮಾಣಿಕತೆ, ಪರಿಶುದ್ಧತೆ, ವಿನಯಶೀಲತೆಗಳಿಗೆ ಮತ್ತೊಂದು ಹೆಸರು ಶ್ರೀ ನಿಜಗುಣ ಮಹಾಸ್ವಾಮಿಗಳು. ಅವರ ಸಾರಸ್ವತ ಸೇವೆಯನ್ನು ಕಳೆದ ಹಲವಾರು ವರ್ಷಗಳಿಂದ ನೋಡುತ್ತಿರುವ ಈ ಲೇಖಕನಿಂದ ಅವರ ಜೀವನ-ಸಾಧನೆಗಳ ಕಿರುಪರಿಚಯವನ್ನು ಮಾಡುವ ನಮ್ರ ಪ್ರಯತ್ನ ಈ ಲೇಖನ.

ಶ್ರೀಗಳ ಜನನ

ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿ ಮೆದನಕೆರೆ ಎಂಬ ಒಂದು ಸಣ್ಣ ಗ್ರಾಮ. ಅಲ್ಲೊಂದು ಗೃಹಸ್ಥ ಜಂಗಮರ ಮನೆತನ. ಮನೆತನದ ಒಡೆಯರು ಮೆದನಕೆರೆ ಮಠದ ಶ್ರೀ ರುದ್ರಯ್ಯನವರು, ಅವರ ಧರ್ಮಪತ್ನಿ ರಾಚಮ್ಮನವರು. ಸದಾಚಾರ ಸಂಪನ್ನರು. ಗುರು-ಲಿಂಗ-ಜಂಗಮ ಪೂಜಾನಿಷ್ಠರಾದ ಈ ಪುಣ್ಯ ದಂಪತಿಗಳಿಗೆ ಮಗನಾಗಿ 1916ರಲ್ಲಿ ಶ್ರೀಗಳು ಜನಿಸಿದರು. ಮಗುವಿಗೆ 'ಶರಣಯ್ಯ'ನೆಂದು ತಂದೆ ತಾಯಿಗಳು ಕರೆದರು. ಜನ್ಮನಾಮ ಶರಣ ನಾಮವನ್ನು ತೊಟ್ಟು ಮುಂದೆ ಶರಣ ಪಥದಲ್ಲಿ ಸಾಗುವ ನಿರಾಭಾರಿ ಜಂಗಮನಾದುದು ಯೋಗಾಯೋಗವೇ ಸರಿ.

ಗುರು ಕೃಪಾದೃಷ್ಟಿ

'ಶರಣಯ್ಯ'ನ ಬಾಲ್ಯ ಜೀವನ ಸ್ವಗ್ರಾಮವಾದ 'ಮೆದನಕೆರೆ' ಗ್ರಾಮದಲ್ಲಿಯೇ ಕಳೆಯಿತು. ಶರಣಯ್ಯ 3 ವರ್ಷದವನಿದ್ದಾಗ ತಂದೆ-ತಾಯಿಗಳು ಕಾರಣಾಂತರದಿಂದ ಆ ಹಳ್ಳಿಯನ್ನು ಬಿಟ್ಟು ಹೊಳಲಕೆರೆಗೆ ಬಂದು ನೆಲಸಿದರು. ಎರಡು ವರ್ಷ ಕಳೆಯಿತು. ಒಮ್ಮೆ ಆ ಊರಿಗೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಆಗಮಿಸಿದರು. ಶ್ರೀ ರುದ್ರಯ್ಯನವರು ಜಗದ್ಗುರುಗಳನ್ನು ಭಕ್ತಿ ಪೂರ್ವಕವಾಗಿ ತಮ್ಮ ಮನೆಗೆ ಆದರೋಪಚಾರಗಳಿಂದ ಬರಮಾಡಿಕೊಂಡು ಪಾದಪೂಜೆ ನೆರವೇರಿಸಿ ಪ್ರಸಾದವನ್ನು ಕೊಂಡು ಕೃತಾರ್ಥರಾದರು. ಜಗದ್ಗುರುಗಳು ಸ್ವಲ್ಪ ಹೊತ್ತು ದಂಪತಿಗಳೊಂದಿಗೆ ಕುಶಲ ಸಂಭಾಷಣೆ ಮಾಡುತ್ತಿದ್ದಂತೆ ಅವರ ಕೃಪಾ ದೃಷ್ಟಿ ಐದು ವರ್ಷದ ಮುದ್ದಾದ ಶರಣಯ್ಯನ ಮೇಲೆ ಬಿತ್ತು. ಬಾಲಕನ ಮುಖಭಾವ-ತೇಜಸ್ಸನ್ನು ಗುರುತಿಸಿ ಈ

ಮಗುವಿಗೆ ಮುಂದೆ ಉಜ್ವಲ ಭವಿಷ್ಯವಿದೆ 'ನಮಗೆ ಮರಿಯಾಗಿ ಕೊಡಿ' ಎಂದು ಆ ದಂಪತಿಗಳಿಗ ಅಪ್ಪಣೆ ಮಾಡಿದರು. ಆ ದಂಪತಿಗಳಿಗೆ ದಿಕ್ಕೇ ತೋಚದಂತಾಯಿತು. ಗುರುಗಳ ಅಪ್ಪಣೆಯನ್ನು ಮೀರದಂತಾಯಿತು. ಗುರುವಾಣಿಗೆ ಪ್ರತಿಯಾಗಿ ಏನನ್ನೂ ಹೇಳದೆ ಶಿರಬಾಗಿದರು. ತಮ್ಮ ಮುದ್ದು ಮಗ ಶರಣಯ್ಯನನ್ನು ಜಗದ್ಗುರುಗಳ ಪಾದಕ್ಕೆ ಅರ್ಪಿಸಿದರು. ಅಂದಿನಿಂದ ಶರಣಯ್ಯ ಗುರುವಿನ ಕೃಪೆಗೆ ಪಾತ್ರನಾಗಿ ಗುರುಪುತ್ರನಾದ. ಈ ಘಟನೆ ಬಾಲಕ ಶರಣಯ್ಯನ ಜೀವನದಲ್ಲೊಂದು ದೈವೀಕ್ಷಣ ಹಾಗೂ ಮಹತ್ವದ ತಿರುವು.

ಶರಣಯ್ಯ ಜಗದ್ಗುರುಗಳ ಕಾರುಣ್ಯ ಶಿಶುವಾಗಿ ಬೆಳೆಯುತ್ತಿದ್ದ. ಶರಣಯ್ಯನ ಪ್ರಾಥಮಿಕ ಶಿಕ್ಷಣ ಚಿತ್ರದುರ್ಗದಲ್ಲಿಯೇ ಸಾಗಿತು. ಜಗದ್ಗುರುಗಳ ಮಾರ್ಗದರ್ಶನ ಆಶ್ರಮದಲ್ಲಿಯೇ ಮುನ್ನಡೆಯಿತು. ಆಗ ಶರಣಯ್ಯನಿಗೆ 9-10 ವರ್ಷಗಳಾಗಿದ್ದವು.

ಚಿತ್ರದುರ್ಗದ ಶ್ರೀ ಜಯದೇವ ಜಗದ್ಗುರುಗಳು ಘನ ವಿದ್ವಾಂಸರು, ತಪಸ್ವಿಗಳು, ಲಿಂಗಪೂಜಾನಿಷ್ಠರು ಹಾಗೂ ವ್ಯವಹಾರ ಕುಶಲರಾಗಿದ್ದರು. ಚಿತ್ರದುರ್ಗದ ಮುರುಘಾ ಮಠವು ಪ್ರಭು ಸಂಪ್ರದಾಯದ ಶೂನ್ಯ ಸಿಂಹಾಸನದ ನಿರಾಭಾರಿ ಜಂಗಮ ಜಗದ್ಗುರುಪೀಠ. ಅದು ವೈಭವ-ವೈರಾಗ್ಯಗಳಿಗೆ ಹೆಸರಾದ ಪೀಠ. ಆನೆ, ಕುದುರೆ, ಒಂಟೆ, ಪಲ್ಲಕ್ಕಿ, ರಥ, ಮೇನೆ, ಕಾಲಾಳುಗಳು, ಚತುರಂಗ ಬಲ- ಎಲ್ಲಾ ಒಂದು ರಾಜಮನೆತನದ ವೈಭವ ಅಲ್ಲಿ ಕಾಲು ಮುರಿದುಕೊಂಡು ಬಿದ್ದಿತ್ತು. ಜಯದೇವ ಜಗದ್ಗುರುಗಳು ಪೀಠಾಧಿಪತಿಗಳಾದ ಮೇಲೆ ಪೀಠದ ವೈಭವದ ಪ್ರಭೆ ನಾಡಿನ ಉದ್ದಗಲಕ್ಕೂ ಹರಡಿತು. ಸಮಾಜದ ಸಂಘಟನೆಗಾಗಿ, ವೀರಶೈವ ಧರ್ಮದ ಸಮುದ್ಧಾರಕ್ಕಾಗಿ ಅವರ ಧರ್ಮಯಾತ್ರೆ ಈ ನಾಡಿನಲ್ಲಿ ಸಾಗಿತ್ತು.

ಶರಣಯ್ಯನ ಬಾಲ್ಯದ ಬದುಕು ಚಿತ್ರ ದುರ್ಗದ ಜಗದ್ಗುರು ಪೀಠದಲ್ಲಿಯೇ ಅರಳಿತು. ಮಠದಲ್ಲಿದ್ದಾಗ ಪಾಠ, ಪ್ರವಚನ, ಶಿವಾನುಭವ ವ್ಯಾಸಂಗ ತಪ್ಪದೇ ನಡೆಯುತ್ತಿದ್ದವು. 'ಶರಣಯ್ಯ' ಶ್ರೀಮಠದಲ್ಲಿ ಅಧ್ಯಯನ, ಸೇವೆ ಮಾಡುತ್ತಾ ಮಠಕ್ಕೆ ಬಂದು ಹೋಗುವ ಜನಗಳ ಅತಿಥಿ ಸತ್ಕಾರ ಹಾಗೂ ಇತರ ವ್ಯವಹಾರಗಳನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದ. ಹೀಗಾಗಿ ಚಿಕ್ಕ ವಯಸ್ಸಿನಲ್ಲಿಯೇ ಶರಣಯ್ಯನಿಗೆ ಶಿವಾನುಭವದೊಂದಿಗೆ ಲೋಕಾನುಭವವೂ ಉಂಟಾಯಿತು. ಜಗದ್ಗುರುಗಳು ಶರಣಯ್ಯನನ್ನು ಸಂಚಾರ ಕಾಲದಲ್ಲಿ ತಮ್ಮಲ್ಲಿ ಇರಿಸಿಕೊಳ್ಳುತ್ತಿದ್ದರು. ಶರಣಯ್ಯನ ಶ್ರದ್ಧೆ, ಸೇವಾಮನೋಭಾವ, ಪ್ರಾಮಾಣಿಕತನಗಳು ಜಗದ್ಗುರುಗಳಿಗೆ ತುಂಬಾ ಮೆಚ್ಚುಗೆಯಾಗಿದ್ದವು. ಶರಣಯ್ಯನಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಬೇಕೆಂಬ ವಿಚಾರ ಜಗದ್ಗುರುಗಳಿಗೆ ಇತ್ತು. ಒಂದು ಸಲ ಜಗದ್ಗುರುಗಳ ಉತ್ಸವ ನಿಪ್ಪಾಣಿಯಲ್ಲಿತ್ತು. ಸನ್ನಿಧಿಯವರ ಸಂದರ್ಶನಕ್ಕಾಗಿ ಅಥಣಿ ಗಚ್ಚಿನ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಅಲ್ಲಿಗೆ ದಯಮಾಡಿಸಿದ್ದರು. ಅಥಣಿ ಶಿವಯೋಗಿಗಳ ಹೆಸರನ್ನು ಕೇಳದ ಕನ್ನಡಿಗನಿಲ್ಲ. ಮಹಾ ವಿರಕ್ತರು, ಪರಮ ಶಿವಾನುಭಾವಿಗಳು ಆಗಿದ್ದರು, ಶ್ರೀ ಮುರುಗೇಂದ್ರ ಶಿವಯೋಗಿಗಳು. ಅವರ ಪರಂಪರೆಯಲ್ಲಿ ಬಂದ ಗಚ್ಚಿನಮಠ

ಶಿವಾನುಭವಿಗಳಿಗೆ, ಸದ್ಭಕ್ತರಿಗೆ, ಪರಮ ವಿರಕ್ತರಿಗೆ ಬಹು ನೆಚ್ಚಿನ, ಮೆಚ್ಚಿನ ಮಠವೂ ಹೌದು. 'ಅಥಣಿಯ ಶಿವಯೋಗಿ ಕಾಶಿ ವಿಶ್ವನಾಥನಿಗೆ ಕಡಿಮೆ ಅಲ್ಲ' ಎನ್ನುವ ಅಚಲ-ಹಿಮಾಚಲದಂತಹ ಭಾವನೆ ನಾಡಿನ ಜನಾಂಗದಲ್ಲಿ ಬೇರೂರಿತ್ತು. ವೀರಶೈವರಿಗಷ್ಟೇ ಅಲ್ಲ ಸಕಲ ಮತಬಾಂಧವರಿಗೆ ಅಥಣಿಯೇ ಕಾಶಿಯಾಗಿತ್ತು. ಶ್ರೀ ಸಿದ್ಧಲಿಂಗ ಸ್ವಾಮಿಗಳು ಪರಮ ಶಿವಾನುಭವಿಗಳಾಗಿದ್ದರು. ಅವರ ಆಶ್ರಯದಲ್ಲಿಯೇ ಜಗದ್ಗುರುಗಳು ಶರಣಯ್ಯನನ್ನು ವಿದ್ಯಾಭ್ಯಾಸಕ್ಕೆ ಬಿಡಲು ಅಪೇಕ್ಷಿಸಿ ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ತಮ್ಮ ಬಳಿ ಕರೆದು 'ಈ ಮರಿಯನ್ನು ನಿಮ್ಮ ಆಶ್ರಯದಲ್ಲಿಟ್ಟುಕೊಂಡು ಇವನಿಗೆ ಚೆನ್ನಾಗಿ ವಿದ್ಯಾಭ್ಯಾಸ ಕೊಡಿಸಿ' ಎಂದು ಅಪ್ಪಣೆ ಮಾಡಿದರು. ಮತ್ತು ಅದೇ ಸಂದರ್ಭದಲ್ಲಿ ಜಗದ್ಗುರುಗಳು ಶರಣಯ್ಯನಿಗೆ 'ನಿಜಗುಣ ಮರಿದೇವರು' ಎಂಬ ನೂತನ ನಾಮದಿಂದ ಕರೆದು ಪೂಜ್ಯ ಸಿದ್ಧಲಿಂಗ ಸ್ವಾಮಿಗಳೊಂದಿಗೆ ಅಥಣಿ ಮಠಕ್ಕೆ ಕಳಿಸಿಕೊಟ್ಟರು. ಅಂದಿನಿಂದ ಶರಣಯ್ಯ 'ನಿಜಗುಣ ಮರಿದೇವ'ರಾದರು.

ವಿದ್ಯಾಭ್ಯಾಸ ಹಾಗೂ ಶಿವಾನುಭವ ಸಾಧನೆ

ಶ್ರೀ ಜಗದ್ಗುರುಗಳ ಅಪ್ಪಣೆಯಂತೆ ಅಥಣಿ ಮಠದ ಶ್ರೀ ಸಿದ್ಧಲಿಂಗ ಮಹಸ್ವಾಮಿಗಳ ಆಶ್ರಯದಲ್ಲಿ ನಿಜಗುಣ ಮರಿದೇವರು ಪ್ರೌಢ ವಿದ್ಯಾಭ್ಯಾಸವನ್ನು ಮುಂದುವರಿಸಿದರು.



ಲಿಂಗ ಪೂಜೆಯಲ್ಲಿ ನಿರತ ಶ್ರೀಗಳು

ಮಠದಲ್ಲಿ ಬಸವಲಿಂಗ ಶಾಸ್ತ್ರಿಗಳು ಕಾಶೀ ಪಂಡಿತರು ಮತ್ತು ಚಿತ್ರದುರ್ಗದ ಜಗದ್ಗುರುಗಳ ಸಹಪಾಠಿಗಳು. ಅವರ ಬಳಿಯಲ್ಲಿಯೇ ಮರಿದೇವರು ಸಂಸ್ಕೃತ-ವಚನಸಾಹಿತ್ಯವನ್ನು ಅಧ್ಯಯನ ಮಾಡಿದರು. ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಬಳಿಯಲ್ಲಿದ್ದು ಸೇವಾಮನೋಭಾವನೆಯನ್ನು ರೂಢಿಸಿಕೊಂಡು ಸಿದ್ಧಲಿಂಗರ ಕೃಪೆಗೆ ಪಾತ್ರರಾದರು. ಅಥಣಿ, ಶಿವಯೋಗಿಗಳ ಸಾನ್ನಿಧ್ಯದಿಂದಾಗಿ ಅಲೆದಾಡುವ ಮನಸ್ಸಿಗೆ ಒಂದು ನೆಲೆ ಸಿಕ್ಕಂತಾಯಿತು ಮರಿದೇವರಿಗೆ. 'ಸೇವಾಜೀವನ ದೀಕ್ಷೆ' ಪ್ರಾಪ್ತವಾಯಿತು. ಸದಾ ವಿನಯ, ಸದಾಚಾರ, ಲಿಂಗಪೂಜಾ ನಿಷ್ಠೆ ಜೀವನದಲ್ಲಿ ಸಾಕಾರಗೊಳ್ಳತೊಡಗಿದವು. ಶಿವಯೋಗಿಗಳ ಆಶೀರ್ವಾದ, ಜಗದ್ಗುರುಗಳ ಕೃಪೆ ಮರಿದೇವರ ಮೇಲೆ ಇದ್ದವು. ಅಥಣಿಯಲ್ಲಿ ಮರಿದೇವರು ಕ್ರಮಬದ್ಧವಾದ ದಿನಚರಿ, ಲಿಂಗಪೂಜಾನಿಷ್ಠೆ, ಸದ್ಗುಣ ಶಿವಾನುಭವ ವ್ಯಾಸಂಗದೊಂದಿಗೆ ವಿನಯ ಸಂಪನ್ನತೆ- ಈ ಗುಣಗಳು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳನ್ನು ಆಕರ್ಷಿಸಿದವು. ಆ ಪೂಜ್ಯರಿಂದಲೇ ನಿಜಗುಣ ಮರಿದೇವರಿಗೆ ಅನುಗ್ರಹ-ಉಪದೇಶವಾಯಿತು. ಶಿಕ್ಷಾಗುರುಗಳೂ, ದೀಕ್ಷಾ ಗುರುಗಳೂ ಅವರೇ ಆಗಿದ್ದರು. 'ಎಡದ ಕೈಯ್ಯಲಿ ಪಾಲು, ಬಲದ ಕೈಯ್ಯಲಿ ಕೋಲು ಬಡಿದೊಮ್ಮೆ ಹಾಲು ಕುಡಿಸುವ ಮಾತೃಹೃದಯಿಗಳಾಗಿದ್ದರು ಶ್ರೀ ಸಿದ್ಧಲಿಂಗ ಸ್ವಾಮಿಗಳು. ಅವರು ಮರಿದೇವರಿಗೆ 'ನಿಜಗುಣ ದೇವ'ರೆಂದು ಕರೆದು ಆಶೀರ್ವದಿಸಿದರು. ಹೀಗೆ ಮರಿದೇವರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ತೇಜೋ ವಲಯದಲ್ಲಿ ಸಿಕ್ಕು ವ್ಯಕ್ತಿತ್ವ ಅರಳಿಸಿಕೊಂಡು ಅನ್ವರ್ಥದಲ್ಲಿ ನಿಜಗುಣ ದೇವರೇ ಆದರು. ನಿಜಗುಣದೇವರ ಮನಸ್ಸು ಸಿದ್ಧಲಿಂಗರ ಸಾನ್ನಿಧ್ಯದಿಂದ, ವೈರಾಗ್ಯದಲ್ಲಿ ಗಟ್ಟಿಗೊಳ್ಳುತ್ತಾ ಇದ್ದರೂ - ಮುಂದಿನ ದಾರಿ ಸ್ಪಷ್ಟವಾಗಿರಲಿಲ್ಲ.

ಜಗದ್ಗುರುಗಳಿಂದ ಕರೆ

ಅಥಣಿಯಲ್ಲಿ ಸಿದ್ಧಲಿಂಗ ಮಹಾಸ್ವಾಮಿಗಳ ಆಶ್ರಯದಲ್ಲಿ ಅಧ್ಯಯನ ಮಾಡುತ್ತಿರುವಾಗಲೇ ನಿಜಗುಣ ದೇವರಿಗೆ ಜಯದೇವ ಜಗದ್ಗುರುಗಳಿಂದ ಕರೆ ಬಂದಿತು. ನಿಜಗುಣ ದೇವರು ಕೂಡಲೇ ಹೊರಡಬೇಕಾಯಿತು. ಗಚ್ಚಿನಮಠದ ಸ್ವಾಮಿಗಳಿಂದ ನಿಜಗುಣ ದೇವರಿಗೆ ಇನ್ನೂ ಅಧ್ಯಯನ ಮಾಡುವ ಹಂಬಲವಿತ್ತು ಮತ್ತು ಸಿದ್ಧಲಿಂಗ ಸ್ವಾಮಿಗಳ ಶಿಷ್ಯ ವಾತ್ಸಲ್ಯ ಇವರ ಮೇಲೆ ಪ್ರಭಾವ ಬೀರಿತ್ತು. ಅವರನ್ನು ಅಗಲಿ ಬರುವಾಗ ನಿಜಗುಣ ದೇವರಿಗೆ ಅತ್ಯಂತ ದುಃಖವೂ ಆಯಿತು. ಭಾರವಾದ ಮನಸ್ಸಿನಿಂದಲೇ ಹೊರಟು ಬಂದರು. ಜಗದ್ಗುರುಗಳ ಅಪ್ಪಣೆಯನ್ನು ಮೀರುವಂತಿರಲಿಲ್ಲ. ಚಿತ್ರದುರ್ಗಕ್ಕೆ ಬಂದು ಜಗದ್ಗುರುಗಳ ಅಪೇಕ್ಷೆಯಂತೆ ಕೆಲವು ವರ್ಷ ಶ್ರೀಮಠದ ವಹಿವಾಟುಗಳನ್ನು ನೋಡಿಕೊಳ್ಳುತ್ತಿದ್ದರು. ಮಹಾ ಸಂಸ್ಥಾನದ ಕೆಲಸ ಕಾರ್ಯಗಳನ್ನು ಅತ್ಯಂತ ನಿಷ್ಠೆಯಿಂದ ನಿರ್ವಹಿಸುತ್ತಿದ್ದರು. ಕರ್ತವ್ಯ ನಿಷ್ಠೆಯೊಂದಿಗೆ ಅಪಾರ ಲೋಕಾನುಭವದ ಪಾಠ ದೊರೆಯಿತು. ಜಗದ್ಗುರುಗಳಿಗೆ ನಿಜಗುಣದೇವರ, ಸೇವಾನಿಷ್ಠೆ, ಪ್ರಾಮಾಣಿಕತನಗಳು ಮೆಚ್ಚಿಗೆ ಆಗಿದ್ದವು.

ನಿಜಗುಣದೇವರನ್ನು ಹಾವೇರಿ ಹೊಸಮಠಕ್ಕೆ ಕಳಿಸಿಕೊಟ್ಟರು. ನಿಜಗುಣದೇವರು ಹಾವೇರಿ ಹೊಸಮಠದಲ್ಲಿ ಹೋಗಿ ಇದ್ದರು. ಅಲ್ಲಿ ಮಠದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದವರು ಹೇಮಗಿರಿ ಚನ್ನಬಸವಯ್ಯನವರು. ನಿಜಗುಣದೇವರು ಹಾವೇರಿ ಹೊಸಮಠದಲ್ಲಿ ಎರಡು ವರ್ಷಗಳ ಕಾಲವಿದ್ದು ಮಠದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಇದೇ ಸಂದರ್ಭದಲ್ಲಿ ಮೈಸೂರು ಮಹಾರಾಜರ ಪ್ರಾರ್ಥನೆಯ ಮೇರೆಗೆ ಜಗದ್ಗುರುಗಳು ಮೈಸೂರಿಗೆ ದಯಮಾಡಿಸಬೇಕಾಯಿತು. ಮಹಾರಾಜರ ಗೌರವಅತಿಥಿಗಳಾಗಿ ಒಂದು ತಿಂಗಳ ಕಾಲ ಮೈಸೂರಿನಲ್ಲಿಯೇ ವಾಸ್ತವ್ಯ ಮಾಡಬೇಕಾಗಿತ್ತು. ಆ ಸಂದರ್ಭದಲ್ಲಿ ಜಗದ್ಗುರುಗಳ ಸರ್ಕೀಟಿನ ವ್ಯವಹಾರ ನೋಡಿಕೊಳ್ಳಲು, ನಿಜಗುಣದೇವರನ್ನು ಹಾವೇರಿಯಿಂದ ಕರೆಯಿಸಿಕೊಂಡರು. ದೇವರು ಜಗದ್ಗುರುಗಳೊಂದಿಗೆ ಮೈಸೂರಿನಲ್ಲಿಯೇ ಇದ್ದರು. ಜಗದ್ಗುರುಗಳ ಉತ್ಸವ ನಂಜನಗೂಡಿನಲ್ಲಿಯೂ ನಡೆಯಿತು. ಆ ಸನ್ನಿವೇಶದಲ್ಲಿ ಮಹಾ ಸಂಸ್ಥಾನದ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆ ನಿಜಗುಣದೇವರಿಗೆ ಅನಾರೋಗ್ಯ ಉಂಟಾಯಿತು. ರೋಗ ಉಲ್ಬಣವಾಯಿತು. ಇದನ್ನು ಕಂಡು ಜಗದ್ಗುರುಗಳು ದೇವರನ್ನು ಕೂಡಲೇ ಆರೋಗ್ಯ ಸುಧಾರಣೆಗಾಗಿ ವಿಶ್ರಾಂತಿ ಪಡೆಯಲು ಬೆಂಗಳೂರಿನ ಶ್ರೀ ಸರ್ಪಭೂಷಣ ಮಠಕ್ಕೆ ಕಳಿಸಿಕೊಟ್ಟರು.

ಆಗ ಶ್ರೀ ಸರ್ಪಭೂಷಣ ಮಠಾಧಿಪತಿಗಳಾಗಿದ್ದ ಶ್ರೀ ಮಹದೇವ ಸ್ವಾಮಿಗಳವರು ದೊಡ್ಡ ವಿದ್ವಾಂಸರು, ಶಿವಾನುಭವಿಗಳು, ಹಲವು ಭಾಷೆಗಳನ್ನು ತಿಳಿದವರಾಗಿದ್ದರು. ಅವರಿಗೆ 'ಅಭಿನವ ಅಲ್ಲಮ'ರೆಂಬ ಖ್ಯಾತಿಯೂ ಇತ್ತು. ಆ ವರು ಜಗದ್ಗುರುಗಳ ಕಡೆಯಿಂದ ಬಂದಿದ್ದ ನಿಜಗುಣದೇವರನ್ನು ಅತ್ಯಂತ ಪ್ರೀತಿಯಿಂದ ಕಂಡು ಅವರಿಗೆ ಆಶ್ರಯ ನೀಡಿ, ಅವರ ಆರೋಗ್ಯ ಸುಧಾರಿಸಲು ಎಲ್ಲ ವಿಧವಾದ ಸಹಾಯ - ಸಹಕಾರ ನೀಡಿದರು. ಒಂದೆರಡು ತಿಂಗಳಲ್ಲಿ 'ದೇವರ' ಆರೋಗ್ಯ ಸುಧಾರಿಸಿತು. ಶ್ರೀ ಮಹದೇವಸ್ವಾಮಿಗಳವರ ಪ್ರೀತಿ ವಿಶ್ವಾಸದ ಮೇರೆಗೆ ಕೆಲವು ತಿಂಗಳು ದೇವರು ಸರ್ಪಭೂಷಣ ಮಠದಲ್ಲೇ ಉಳಿದರು. ನಿಜಗುಣ ದೇವರ ಸರಳತೆ, ಪ್ರಾಮಾಣಿಕತನ, ವ್ಯವಹಾರ ಕೌಶಲ್ಯ, ಕಾರ್ಯದಕ್ಷತೆ-ಈ ಗುಣಗಳು ಶ್ರೀ ಮಹದೇವಸ್ವಾಮಿಗಳಿಗೆ ಮೆಚ್ಚುಗೆಯಾದವು. ಇಬ್ಬರಲ್ಲಿ ವಿಶ್ವಾಸ ಬೆಳೆಯಿತು. ಇದಕ್ಕೆ ಕಾರಣವೂ ಇತ್ತು - ಸರ್ಪಭೂಷಣ ಮಠಕ್ಕೂ, ಕೋರ್ಟಿಗೂ ಬಹಳ ವರ್ಷಗಳ ನಂಟು. ಆ ನಂಟಸ್ಥಿಕೆಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದು ಮಠದ ಕೆಲವು ಭಕ್ತರ ಜಾಣ್ಮೆಯಾಗಿದೆ. ಶ್ರೀ ಮಹದೇವ ಸ್ವಾಮಿಗಳ ಕಾಲದಲ್ಲಿಯೂ ಗುರುಗಳ ಹಾಗೂ ಧರ್ಮದರ್ಶಿಗಳ ವ್ಯಾಜ್ಯವಿತ್ತು; ಇಂದಿಗೂ ಇದೆ. ಇಂತಹ ಸಂದರ್ಭದಲ್ಲಿ ಶ್ರೀ ಮಹದೇವ ಸ್ವಾಮಿಗಳಿಗೆ ಲೌಕಿಕ ವ್ಯವಹಾರದಲ್ಲಿ ಸಲಹೆಗಾರರಾಗಿ ನಿಜಗುಣ ದೇವರು ದೊರೆತದ್ದು ಯೋಗಾಯೋಗವೇ ಸರಿ. ಆಪತ್ ಕಾಲದಲ್ಲಿ ಆಪ್ತರೊಬ್ಬರು ದೊರಕಿದರೆನ್ನುವ ಸಂತೃಪ್ತ ಭಾವನೆ ಶ್ರೀ ಮಹದೇವ ಸ್ವಾಮಿಗಳಿಗೂ ಇತ್ತು. ಆದ್ದರಿಂದ ನಿಜಗುಣ ದೇವರನ್ನು ಬೇರೆ ಕಡೆಗೆ ಕಳುಹಿಸಲು ಶ್ರೀ ಮಹದೇವಸ್ವಾಮಿಗಳಿಗೆ ಇಚ್ಛೆ ಇರಲಿಲ್ಲ. ಹೀಗಾಗಿ ಮಠದಲ್ಲಿಯೇ ಉಳಿಸಿಕೊಂಡರು.

ನಿಜಗುಣದೇವರಿಗೆ ನಿರಂಜನ ಪಟ್ಟಾಧಿಕಾರ

ಈಗ ಬೆಂಗಳೂರು ನಗರದ ಗವೀಪುರ ಬಡಾವಣೆ ಹಿಂದೆ 1938ರಲ್ಲಿ ಸುಂಕೇನಹಳ್ಳಿ ಎಂದು ಹೆಸರಾಗಿತ್ತು. ಅದು ಕಾಡು ಪ್ರದೇಶವಾಗಿತ್ತು. ಅಲ್ಲೊಂದು ಪಾಳುಬಿದ್ದ ಮಠ. ಮಠದ ಹೆಸರು ಜಂಗಮ ಮಠ. ಇದು ವಿರಕ್ತ ಪರಂಪರೆಗೆ ಸೇರಿದ್ದು. ಹಿಂದೆ ಶ್ರೀ ಸಿದ್ಧಲಿಂಗೇಶ್ವರರು ಇದೇ ಸ್ಥಳದಲ್ಲಿ ಅನುಷ್ಠಾನ ಮಾಡುತ್ತ ಕೆಲವಾರು ತಿಂಗಳು ನೆಲಸಿದ್ದರೆಂದು ತಿಳಿದುಬರುತ್ತದೆ. ಮಠ ಏಳು ಅಂಕಣದ್ದಾಗಿತ್ತು. ಶಿಥಿಲವಾದ ಮಣ್ಣಿನ ಗೋಡೆಗಳು. ಈ ಮಠದ ಮೂಲ ಕರ್ತೃ ಶ್ರೀ ಸಿದ್ಧಲಿಂಗೇಶ್ವರ ಮೂರ್ತಿ. ಈ ಮೂರ್ತಿಯೂ ಮಾವಿನ ಹಲಗೆಯಿಂದ ಮುಚ್ಚಿಹೋಗಿತ್ತು. ಮಠದ ಆವರಣ ಕೆಲವು ಕಡೆ ಮಣ್ಣಿನಿಂದ ಹೂತುಹೋಗಿತ್ತು. ಅಲ್ಲಿ ವಾಸ ಮಾಡಲು ಯಾವ ಅನುಕೂಲತೆಯೂ ಇರಲಿಲ್ಲ. ಮಠಕ್ಕೆ 3 ಎಕರೆ ಜಮೀನು ಮಾತ್ರವಿತ್ತು. ಅದರ ವಾರ್ಷಿಕ ಉತ್ಪತ್ತಿ 20.00 ರೂಪಾಯಿಗಳು. ಕಂದಾಯ ಐದು ರೂಪಾಯಿಗಳು. ಇಂಥ ಮಠಕ್ಕೆ ಬೆಂಗಳೂರಿನ ಭಕ್ತರು ಯೋಗ್ಯ ವಟುವನ್ನು ಹುಡುಕುತ್ತಿದ್ದರು. ಭಕ್ತರು ಬಂದು ಶ್ರೀ ಸರ್ಪಭೂಷಣ ಮಠದಲ್ಲಿ ವಾಸ್ತವ್ಯ ಮಾಡಿದ್ದ ನಿಜಗುಣ ದೇವರನ್ನು ಕಂಡು ತಮ್ಮ ಸದಿಚ್ಛೆಯನ್ನು ತಿಳಿಸಿದರು. ನಿಜಗುಣದೇವರಿಗೆ



ಶ್ರೀಮಠದ ಮೂಲ ಕರ್ತೃ ಶ್ರೀ ಸಿದ್ಧಲಿಂಗೇಶ್ವರ

ಮಠಾಧಿಪತಿಗಳಾಗುವ ಹಂಬಲವಿರಲಿಲ್ಲ. ದೊಡ್ಡವರ ಸೇವೆಯಲ್ಲಿದ್ದು ಶಿವಯೋಗ ಸಾಧಿಸುವುದೇ ಅವರ ಮನೋಬಯಕೆಯಾಗಿದ್ದಿತು. ಭಕ್ತರ ಆಗ್ರಹ ಬೇರೆ, ಜೊತೆಗೆ ಹಿತೈಷಿಗಳಾದ ಮಹದೇವಸ್ವಾಮಿಗಳವರ ಆತ್ಮೀಯ ಒಲವಿನ ಒತ್ತಾಸೆಗಳು ಜಂಗಮ ಮಠಕ್ಕೆ ಅಧಿಪತಿಗಳಾಗಲು ಪ್ರೇರಕವಾದವು. ಬಿಡಿಕಾಸೂ ಆದಾಯವಿಲ್ಲದ, ಹಾಳುಬಿದ್ದ ಮಠವೊಂದಕ್ಕೆ ನಿಜಗುಣದೇವರು ಅಧಿಪತಿಗಳಾಗಬೇಕೆಂಬುದು ಅವರ ಧೈರ್ಯ, ಸಾಹಸಗಳನ್ನೇ ಪ್ರಶ್ನಿಸಿದಂತಿತ್ತು.

ಒಂದು ದಿನ ಮಹದೇವ ಸ್ವಾಮಿಗಳವರು ನಿಜಗುಣದೇವರನ್ನು ಕರೆದು ಹೀಗೆ ಅಪ್ಪಣೆ ಕೊಡಿಸಿದರು :

"ಧರ್ಮ-ಸಂಸ್ಕೃತಿ ಪ್ರಚಾರಕ್ಕೆ ಮಠಗಳು ಸಾಧನಗಳು; ಸಾರ್ವಜನಿಕ ಕೇಂದ್ರಗಳು. ಮಠಕ್ಕೆ ಅಧಿಕಾರಿಯಾಗಿ ಜನಜಾಗೃತಿಗೊಳಿಸುವುದು ಮಠಾಧಿಪತಿಗಳ ಕರ್ತವ್ಯ. ಸ್ವಾಮಿಗಳು ಜನಸಮುದಾಯದ ಪ್ರತಿನಿಧಿಗಳು. ಸಾಂಸ್ಕೃತಿಕ ರಾಯಭಾರಿಗಳು, ಧಾರ್ಮಿಕ ನೇತಾರರೂ ಹೌದು. ಮಠವೊಂದು ಕೇವಲ ಉಪಾಧಿ. ಮಠ ಸ್ಥಿತಿಶೀಲಭೌತಿಕ ವಸ್ತು, 'ಸ್ವಾಮಿ' ಗತಿಶೀಲ ಚೈತನ್ಯ ಸ್ವರೂಪ ಜಂಗಮ. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ. ಕ್ರಿಯಾಶೀಲ ಜಂಗಮನಿಂದ ಮಠಗಳ ಅಭಿವೃದ್ಧಿ ಸಾಧ್ಯ... (ಕಾರಣ 'ದೇವರು' ಅಧಿಕಾರ ವಹಿಸಿಕೊಳ್ಳುವ ಮಠ ಹಾಳು ಬಿದ್ದಿತ್ತು) ಇತ್ಯಾದಿ ವಿಚಾರಗಳನ್ನು ದೇವರಿಗೆ ತಿಳಿಸಿ ಅವರ ಮನಸ್ಸನ್ನು ಒಪ್ಪಿಸುವಲ್ಲಿ ಸಫಲರಾದರು ಹಾಗೂ ಮುಂದಿನ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿದರು.

ಬೆಂಗಳೂರ ಭಕ್ತರ ಹಂಬಲ, ಮಹದೇವ ಸ್ವಾಮಿಗಳವರ ಬೆಂಬಲ ದೊರಕಿ ನಿಜಗುಣದೇವರು ಸುಂಕೇನಹಳ್ಳಿ ಜಂಗಮ ಮಠಕ್ಕೆ ಅಧಿಪತಿಗಳಾಗುವುದು ನಿಶ್ಚಯವಾದಂತಾಯಿತು. 'ದೇವರು'ಸಹ ಆತ್ಮವಿಶ್ವಾಸ ಉಳ್ಳವರಾಗಿ ಭಕ್ತರ ಹಾಗೂ ಮಹದೇವಸ್ವಾಮಿಗಳವರ ಒಲುಮೆ ಒತ್ತಾಯಕ್ಕೆ ಮಣಿದರು. ಮಠದ ಮೂಲ ಕರ್ತೃ ಸಿದ್ಧಲಿಂಗರ ಇಚ್ಛೆ ಇದ್ದಂತಾಗಲಿ ಎಂದು ಸಂಪೂರ್ಣ ನಿರ್ಧಾರಕ್ಕೆ ಬಂದರು.

1938ರಲ್ಲಿ ಶ್ರೀಮಠದ ಭಕ್ತರ ಹಾಗೂ ಅಭಿಮಾನಿಗಳ ಕೋರಿಕೆಯಂತೆ ಹರ-ಗುರು ಚರಮೂರ್ತಿಗಳು ಸಮಾವೇಶಗೊಂಡು ವೀರಶೈವ ಧಾರ್ಮಿಕ ವಿಧಿಯಂತೆ ಬೆಂಗಳೂರಿನ ಶ್ರೀ ಗಂಜಾಂ ಮಠದ ಶ್ರೀ ನಿ. ಪ್ರ. ಬಸವರಾಜ ಮಹಾಸ್ವಾಮಿಗಳಿಂದ ನಿರಂಜನ ನಿರಾಭಾರಿ ಪಟ್ಟಾಧಿಕಾರದೊಂದಿಗೆ ವಿರಕ್ತಾಶ್ರಮ ಸ್ವೀಕಾರ ವಿಧಿಗಳು ಶಾಸ್ತ್ರೋಕ್ತವಾಗಿ ಜರುಗಿದವು. ಆಗ ನಿಜಗುಣದೇವರಿಗೆ ಶ್ರೀ ನಿ. ಪ್ರ. ಸ್ವ. ನಿಜಗುಣ ಸ್ವಾಮಿಗಳೆಂಬ ನೂತನ ನಾಮಕರಣ ಮಾಡಲಾಯಿತು. ಈ ನಿರಂಜನ ಪಟ್ಟಾಧಿಕಾರದ ಪವಿತ್ರ ಕಾರ್ಯಕ್ರಮಕ್ಕೆ ನಾಡಿನ ಎಲ್ಲ ಮಹಾಸ್ವಾಮಿಗಳೂ ಸನ್ಮಂಗಳವನ್ನು ಕೋರಿದ್ದರು ಮತ್ತು ಕರ್ನಾಟಕದ ನಾನಾ ಭಾಗಗಳಿಂದ ಹರ-ಗುರು ಚರಮೂರ್ತಿಗಳೂ, ಭಕ್ತಾದಿಗಳೂ ಆಗಮಿಸಿದ್ದರು.

ಶ್ರೀಗಳವರ ಹೋರಾಟದ ಬದುಕು

ಸುಂಕೇನಹಳ್ಳಿಯ ಕಾಡು ಪ್ರದೇಶ. ನಿರ್ಜನ ಅರಣ್ಯ. ಅಲ್ಲೊಂದು ಪಾಳು ಬಿದ್ದ ಜಂಗಮ ಮಠ. ಜನ ಸಂಚಾರವಿಲ್ಲ; ಕಾಡು ರಸ್ತೆ. ರಾತ್ರಿ ಬೆಳಕಿನ ವ್ಯವಸ್ಥೆ ಇಲ್ಲ. ಇಂಥ ಮಠಕ್ಕೆ ಅಧಿಪತಿಗಳಾದ ನಿ. ಪ್ರ. ಸ್ವ. ನಿಜಗುಣ ಶ್ರೀಗಳು ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಅವರು ಪಟ್ಟಾಧಿಕಾರಿಗಳಾದ ನಂತರ ಶ್ರೀ ಸರ್ಪಭೂಷಣ ಮಠದಲ್ಲಿಯೇ ಪೂಜಾ ಪ್ರಸಾದ ಮಾಡಿಕೊಂಡು ಶ್ರೀ ಮಹದೇವ ಸ್ವಾಮಿಗಳೊಂದಿಗೆ ವಾಸ್ತವ್ಯ ಮಾಡಿದ್ದರು. ಪ್ರತಿದಿನ 7-8 ಕಿಲೋಮೀಟರ್ ರಸ್ತೆ ಕಾಲು ನಡಿಗೆಯಲ್ಲಿ ತಮ್ಮ ಸುಂಕೇನಹಳ್ಳಿಯ ಜಂಗಮ ಮಠಕ್ಕೆ ತಪ್ಪದೆ ಬಂದು ಹೋಗುತ್ತಿದ್ದರು. ಒಂದೆರಡು ತಿಂಗಳು ಕಳೆದ ಮೇಲೆ ಪಾಳುಬಿದ್ದ ಮಠದ ಬದಿಯಲ್ಲಿಯೇ ಒಂದು ಗುಡಿಸಲು ಹಾಕಿಕೊಂಡು, ರಾತ್ರಿ ಸಮಯದಲ್ಲಿ ಒಂದು ಸೀಮೆ ಎಣ್ಣೆಯ ಬುಡ್ಡಿಯ ಬೆಳಕಿನಲ್ಲಿ ವಾಸ ಮಾಡಿದರು. ಅಲ್ಲಿಯೇ ಅಡಿಗೆ ಮಾಡಿಕೊಂಡು ಇದ್ದರು. ಕಾಡು, ಜನಸಂಚಾರವಿಲ್ಲ. ಅಲ್ಲಿ ಒಬ್ಬಂಟಿಗರಾಗಿ ಶ್ರೀಗಳು ಹಠಯೋಗಿಗಳಂತೆ ಕಾಲ ಕಳೆಯತೊಡಗಿದರು. ಇಂತಹ ಪರಿಸ್ಥಿತಿಯಲ್ಲೂ ಯಾರನ್ನೂ ಯಾಚಿಸದೆ ಪಾಲಿಗೆ ಬಂದದ್ದು ಗುರುಕೃಪೆ-ಶಿವಯೋಗಿಗಳ ಇಚ್ಛೆ ಎಂದು ಭಾವಿಸಿ ಶ್ರೀಮಠವನ್ನು ಊರ್ಜಿತಗೊಳಿಸುವ ಸಂಕಲ್ಪ ಮಾಡಿದರು. ಇವರ ಬಳಿಯಲ್ಲಿ ಪಟ್ಟಾಧಿಕಾರದಲ್ಲಿ ಬಂದ ಅಲ್ಪ ಸ್ವಲ್ಪ ದಕ್ಷಿಣೆಯ ಕಾಸೂ ಇತ್ತು.

ಕಾಡಿನಲ್ಲಿರುವ ಮಠವನ್ನು ಕಟ್ಟುವುದು ಸಾಹಸದ ಕೆಲಸವೇ ಆಗಿತ್ತು. ಶ್ರೀಗಳು ದೃಢ ಸಂಕಲ್ಪ ಮಾಡಿ ಒಂದೆರಡು ಹಸುಗಳನ್ನು ಸಾಕಿದರು. ಗೋಸೇವೆಯನ್ನು ಕೈ ಕೊಂಡರು. ಹಸುವಿನ ಹಾಲು ಮಾರಾಟದಿಂದ ಅಲ್ಪ ಸ್ವಲ್ಪ ಹಣ ಬರುತ್ತಿತ್ತು. ಹೇಗೋ ಜೀವನ ನಿರ್ವಹಣೆಯಾಗುತ್ತಿತ್ತು. ಕಾಲ ಕಳೆದಂತೆ ಹತ್ತಾರು ಹಸುಗಳ ಸಂಖ್ಯೆ ಹೆಚ್ಚಾಯಿತು. ಹಸುಗಳ ಪಾಲನೆ-ಪೋಷಣೆ ಶ್ರೀಗಳ ಪವಿತ್ರ ಕಾಯಕವಾಯಿತು. ಅಲ್ಪ ಸ್ವಲ್ಪ ಆದಾಯವೂ ಬರುತ್ತಿತ್ತು. ತಮ್ಮ ಜೀವನ ನಿರ್ವಹಣೆಗಾಗಿ ಮಿಕ್ಕಿದ ಅಲ್ಪಸ್ವಲ್ಪ ಹಣದಿಂದ, ತಮ್ಮ ಮಠದ ಸ್ಥಳದಲ್ಲಿಯೇ ಎರಡು ಚಿಕ್ಕ ಕೊಠಡಿಗಳನ್ನು ಕಟ್ಟಿಸಿದರು ಮತ್ತು ಅವುಗಳನ್ನು ಅಂಗಡಿಗೆ ಬಾಡಿಗೆಗೆ ಕೊಟ್ಟರು. ಕ್ರಮೇಣ ಶ್ರೀಗಳ ವಾಸ್ತವ್ಯದಿಂದ ಸುಂಕೇನಹಳ್ಳಿಯ ಕಾಡು ಪ್ರದೇಶ, ಜನವಸತಿಗೆ ಕಾರಣವಾಯಿತು.

''ಬೇಡುವವ ಜಂಗಮನಲ್ಲ; ಬೇಡಿಸಿಕೊಳ್ಳುವಾತನು ಭಕ್ತನಲ್ಲ'' ಎನ್ನುವ ಶರಣವಾಣಿಯನ್ನು ಧ್ಯೇಯವಾಗಿ ಹೊಂದಿದ್ದ ಶ್ರೀಗಳು, ಅವರ ಬಳಿ ಒಂದೊಂದು ಸಂದರ್ಭದಲ್ಲಿ ಬಿಡಿಗಾಸು ಇಲ್ಲದಿದ್ದರೂ ಯಾರ ಸಹಾಯವನ್ನೂ ಯಾಚಿಸಿದವರಲ್ಲ. ಎಷ್ಟೋ ಸಲ ಈ ಕಾಡಿನ ವಾಸದಲ್ಲಿ 'ಉಪವಾಸ'ದಿಂದಿರುವುದು ಶ್ರೀಗಳಿಗೆ ರೂಢಿಯೇ ಆಗಿತ್ತು. ಒಂದೊಂದು ಸಲ ಆರ್ಥಿಕ ತೊಂದರೆಗೀಡಾದಾಗ, ಯಾರನ್ನು ಕೇಳಿದರೂ ಕೊಡದೇ ಇರುವ ಸಂದರ್ಭದಲ್ಲಿ ತಮ್ಮ ಕರಡಿಗೆ, ಶಿವಪೂಜಾ ಸಾಮಾನುಗಳನ್ನು ಒತ್ತೆ

ಇಡುವ ಪ್ರಸಂಗವೂ ಅವರ ಪಾಲಿಗೆ ಬಂದಿತ್ತು. ಇಂತಹ ಎಲ್ಲ ಕಷ್ಟಗಳನ್ನು ಅವರು ಅನುಭವಿಸಿದ್ದಾರೆ. ಹಿಂದಿನ ತಮ್ಮ ಕಷ್ಟದ ದಿನಗಳನ್ನು ಶ್ರೀಗಳು ಈಗಲೂ ನೆನೆದು ಕೊಳ್ಳುತ್ತಾರೆ.

> ಮಾಡುವ ಮಾಟಕ್ಕೆ ಮಹತ್ವವಿಲ್ಲ; ಅದರ ಹಿಂದಿನ ಘನ ಮನಕ್ಕೆ ಮಹತ್ವವಿದೆ. ಗೋಸಂರಕ್ಷಣೆ-ಗೋಸೇವೆಯಿಂದ ಪರಿಶುದ್ಧ ಕಾಯಕ ನಡೆಸುತ್ತಾ ಸದ್ದಿಲ್ಲದೆ, ಗದ್ದಲವಿಲ್ಲದೆ-'ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ ಸೌರಭವನೆಲ್ಲೆಡೆಗೆ ಸೂಸುವಂತೆ' ಹಸುಗಳೊಡನೆ ಹಸುವಾಗಿ ಬಾಳಿ, ಹಸನಾಗಿ ಬಾಳಿ. 'ಆವ ಕಾಯಕದಲ್ಲಾದರೂ ಭಾವ ಶುದ್ಧಿಯಾಗಬೇಕು.'

ಇದು ಶರಣರ ಜೀವನ ಸೂತ್ರ. ಇದನ್ನೇ ಸೇವಾ ಸೂತ್ರವೆಂದು ಭಾವಿಸುತ್ತಾ ಶ್ರೀಗಳು ವ್ರತದಂತೆ ಪಾಲಿಸುತ್ತಿದ್ದರು. ಹಸುಗಳ ಹೈನುಗಾರಿಕೆ ಹಾಗೂ ಎರಡು ಅಂಗಡಿಗಳ ಅತ್ಯಲ್ಪ ಬಾಡಿಗೆ ಹಣ ಇವುಗಳನ್ನು ಕೂಡಿಸಿಕೊಂಡು, ಮಠದ ಸುತ್ತಲೂ ಮೊದಲು ಆವರಣವನ್ನು ನಿರ್ಮಿಸುವ ಯೋಜನೆ ಕೈಗೊಂಡರು. ಅದಕ್ಕೆ ಮೊದಲು ಬಹಳ ವರ್ಷಗಳಿಂದ ಮಠಕ್ಕೆ ಸಂಬಂಧಪಟ್ಟ ಜಮೀನಿನ ಕಂದಾಯವನ್ನೇ ಕಟ್ಟಿರಲಿಲ್ಲ. ಶ್ರೀಗಳು ಕಷ್ಟಪಟ್ಟು ಕೂಡಿಟ್ಟ ಹಣವನ್ನೇ ನಗರಸಭೆಗೆ ಕಟ್ಟಿ ಜಮೀನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ಕೆಲವು ವರ್ಷಗಳ ನಂತರ ನಗರಸಭೆ ಮಠದ ಕೆಲವು ಭಾಗಗಳನ್ನು ರಸ್ತೆಗಾಗಿ ತೆಗೆದುಕೊಳ್ಳುವ ಸಂದರ್ಭ ಬಂತು. ಶ್ರೀಗಳು ರಸ್ತೆಗಾಗಿ ಮಠದ ಜಮೀನನ್ನು ಬಿಟ್ಟುಕೊಟ್ಟರು. ಸರಕಾರ ಪರಿಹಾರ ಧನವಾಗಿ 17 ಸಾವಿರ ರೂಪಾಯಿಗಳನ್ನು ನೀಡಿತು. ಆಗ ಶ್ರೀಗಳ ಸಂಕಲ್ಪ ಚಿಗುರೊಡೆಯಿತು. ಅದೇ ಹಣದಲ್ಲಿ ಮಠದ ಸುತ್ತಲೂ ಆವರಣವನ್ನು ಕಟ್ಟಿಸಿದರು. ಅಲ್ಲಿಯೇ ತಮ್ಮ ವಾಸಕ್ಕೂ ಒಂದು ಚಿಕ್ಕ ಮನೆಯನ್ನು ಕಟ್ಟಿಸಿಕೊಂಡರು. ದಿನಗಳು ಉರುಳಿದಂತೆ ನಗರವು ಬೆಳೆಯುತ್ತಾ ಬಂತು. ಸುಂಕೇನಹಳ್ಳಿ ಬಡಾವಣೆಯ ಕಾಡು ಹೋಗಿ, ನಾಡಾಗುತ್ತಾ ಬಂತು. ಸುಂಕೇನಹಳ್ಳಿ ಪ್ರದೇಶದಲ್ಲಿ ಅಲ್ಲಲ್ಲಿ ಜನ ವಾಸಿಸತೊಡಗಿದರು. ಮಠದ ಸುತ್ತಲೂ ಕೆಲವರು ಗುಡಿಸಲು ಹಾಕಿಕೊಂಡು ಮಠದ ಸ್ಥಳವನ್ನು ಆಕ್ರಮಿಸಲು ಹೊಂಚುಹಾಕುತ್ತಿದ್ದರು.

ಕಾಳಗದ ಕಲಿಯಾಗಿ ಶ್ರೀಗಳು

ಶರಣ ತುರುಗಾಹಿ ರಾಮಣ್ಣನ ಸತ್ಯಶುದ್ಧ ಕಾಯಕ ಮಾಡುತ್ತಾ ಶ್ರೀಗಳು ಸ್ವಾವಲಂಬಿಗಳಾಗಿ ಮುನ್ನಡೆದಿದ್ದರು. ಶ್ರೀಗಳು ಏಳ್ಗೆ ಹೊಂದುತ್ತಿರುವುದನ್ನು ಕಂಡು ಸಹಿಸಲಾರದ ಬೆಂಗಳೂರು ಭಕ್ತರಲ್ಲಿ ಕೆಲವರು ಶ್ರೀಗಳು ವಾಸವಾಗಿದ್ದ ಮಠದ ಸ್ಥಳವನ್ನೇ ಬಿಡಿಸಬೇಕೆಂಬ ದುರಾಲೋಚನೆ ಮಾಡಿದ್ದರು. ಮಠದ ಸುತ್ತಮುತ್ತಲಿನ ಆಕ್ರಮಣಕಾರರು ಮತ್ತು ನಗರಾಭಿವೃದ್ಧಿ ಮಂಡಲಿಯೂ ಸಹ ಮಠದ ಭೂಮಿಯನ್ನು ಅತಿಕ್ರಮಿಸಲು ಸಂಚು


ಹೂಡಿತ್ತು. ಹೀಗೆ ಎಲ್ಲಕಡೆಗೂ ವಿರೋಧ. ಸುತ್ತಲೂ ಕತ್ತಲೇ. ಮಠದ ಅಧಿಕಾರ ಹೂವಿನ ಹಾಸಿಗೆ ಆಗಲಿಲ್ಲ; ಮುಳ್ಳಿನ ಹಾಸಿಗೆ ಆಗಿತ್ತು ಶ್ರೀಗಳವರಿಗೆ. ಉಪಾಯವಿಲ್ಲ. ಹೂವೆಂದು ಭಾವಿಸಿದ್ದು ಮುಳ್ಳಾಯಿತೆಂದು ತಿಳಿದು ಶ್ರೀಗಳು ಅಧೈರ್ಯ ಪಡಲಿಲ್ಲ; ಎದೆಗುಂದಲಿಲ್ಲ. ಶ್ರೀಮಠದ ಒಳಹೊರಗಿನ ವಿರೋಧಿಗಳನ್ನೆಲ್ಲ ಎದುರಿಸಲು ಸಿದ್ಧರಾದರು. ಅವರಿಗೆ ಆ ಸಂದರ್ಭದಲ್ಲಿ ಯಾರ ಬೆಂಬಲವೂ ಇರಲಿಲ್ಲ; ಆತ್ಮರಕ್ಷಣೆಗೆ ಬಂದೂಕಧಾರಿಗಳಾಗಿ ಅಹೋರಾತ್ರಿ ಮಠದ ಆವರಣವನ್ನು ಕಾವಲು ಮಾಡುತ್ತಿದ್ದರು. ರಾತ್ರಿ ಕೆಲವು ಜನ ಕಿಡಿಗೇಡಿಗಳು ಮಠದ ಪ್ರದೇಶವನ್ನು ಆಕ್ರಮಣ ಮಾಡಿಕೊಳ್ಳಲು ಹೊಂಚುಹಾಕುತ್ತಿದ್ದಾಗ ಶ್ರೀಗಳು ಗುಂಡು ಹಾರಿಸಿ ಕೇಡಿಗಳನ್ನು ಹಿಮ್ಮೆಟ್ಟಿಸುತ್ತಿದ್ದರು. ಸೀಮೆ ಎಣ್ಣೆಯ ಬುಡ್ಡಿಯ ಬೆಳಕು, ಒಂದೊಂದು ಸಲ ಪಂಜಿನ ಬೆಳಕಿನಲ್ಲಿ ರಾತ್ರಿ ಕಾಲ ಸದಾ ಎಚ್ಚರವಾಗಿದ್ದು, ವಿರೋಧಿಗಳನ್ನು ಎದುರಿಸುವ ಪ್ರಸಂಗ ಬರುತ್ತಿತ್ತು. ಶ್ರೀಗಳ ಮನಸ್ಸು ಅವರ ಸಂಕಲ್ಪ ಉಕ್ಕಿನಂತೆ ಕಠಿಣವಿರುತ್ತಿತ್ತು.

ಅದೊಂದು ದಿನ ಹೀಗಾಯಿತು : ಶ್ರೀಗಳು ಮಠದಲ್ಲಿ ಒಬ್ಬರೇ ಕುಳಿತುಕೊಂಡಿದ್ದರು. ಸಾಯಂಕಾಲ ಇದ್ದಕ್ಕಿದ್ದಂತೆ 3-4 ಜನ ಪುಂಡರು ಮಠಕ್ಕೆ ಬಂದು ಶ್ರೀಗಳನ್ನು ಕಂಡು ಬೆದರಿಕೆ ಹಾಕಿದರು. ''ನೀವು ಇಲ್ಲಿಂದ ಬಿಟ್ಟು ಹೋದರೆ ಸರಿ, ಇಲ್ಲವಾದರೆ ಈ ರಾತ್ರಿ ಇನ್ನು ಕೆಲವರು ಬಂದು ನಿಮ್ಮನ್ನು ಇಲ್ಲಿಂದ ಓಡಿಸಿಬಿಡುತ್ತೇವೆ'' ಎಂದು ಹೇಳಿದರು. ಆಗ ಶ್ರೀಗಳು ಧೈರ್ಯ ಕಳೆದುಕೊಳ್ಳದೆ ''ಬನ್ನಿ ಈ ರಾತ್ರಿ ನೀವೆಲ್ಲ ಖಂಡಿತ ಬರಬೇಕು. ಆದರೆ ಒಂದು ವಿಚಾರ, ಬರುವಾಗ ನಿಮ್ಮ ಹೆಂಡತಿಯರ ಕೊರಳೊಳಗಿನ ಮಾಂಗಲ್ಯವನ್ನು ತನ್ನಿ'' ಎಂದು ಕ್ರೋಧಾವೇಶದಿಂದ ನುಡಿದಾಗ ಹೆದರಿ ಒಬ್ಬರೂ ಮಠದ ಬಳಿ ಸುಳಿಯಲಿಲ್ಲವಂತೆ. ಈ ಸಂದರ್ಭವನ್ನು ನೆನಪಿಸಿಕೊಂಡಾಗ ಈಗಲೂ ಶ್ರೀಗಳು ಆವೇಶಭರಿತರಾಗುತ್ತಾರೆ.

ಹೀಗೆ ಶ್ರೀಗಳು ಏಕಾಂಗ ವೀರರಾಗಿ, ಕಲಿಗಳಾಗಿ ಹೋರಾಟ ಮಾಡಬೇಕಾಯಿತು. ವಿಜಯನಗರದ ಮೇಲೆ ಮುಸ್ಲಿಮರ ದಾಳಿ ನಡೆದಾಗ 'ಏಳು ಸಾಯಣ ಕಟ್ಟು ಗ್ರಂಥವ, ಸಾಗು ತುಂಗಭದ್ರಾ ತೀರಕೆ'' ಎಂದು ಸಾಯಣನ ಅಂತರ್ವಾಣಿ ನುಡಿದು ಸನ್ಯಾಸಿಯೂ ರಾಜ್ಯ ರಕ್ಷಣೆಗೆ ಖಡ್ಗವನ್ನು ಹಿಡಿಯಬೇಕಾಯಿತು. ಕಲ್ಯಾಣ ಕ್ರಾಂತಿಯಲ್ಲಿ ಘಟ್ಟಿವಾಳಯ್ಯ, ಮಡಿವಾಳ ಮಾಚಯ್ಯ ಮೊದಲಾದ ಶರಣರು ತಮ್ಮ ಧ್ಯೇಯ ಸಾಧನೆಗಾಗಿ, ಜೀವನವನ್ನೇ ಪಣವಾಗಿಟ್ಟು ಹೋರಾಡಬೇಕಾಯಿತು. ಇಂತಹ ಹೋರಾಟದ ಬದುಕು ಶ್ರೀಗಳವರಿಗೂ ಅನಿವಾರ್ಯವಾಯಿತು. ''ವನೌಕಸೋಪಿ ಲೌಕಿಕಜ್ಞಾವಯಂ'' ಎಂದು ಹೇಳುವ ಕಾಳಿದಾಸನ ಮಾತಿನಂತೆ ಸನ್ಯಾಸಿಗಳಾಗಿದ್ದರೂ ಅವರಿಗಿದ್ದ ಅಪಾರ ವ್ಯವಹಾರಜ್ಞಾನ ಈ ಸಂದರ್ಭದಲ್ಲಿ ಅವರಿಗೆ ನೆರವು ನೀಡಿತು. ಮಠದ ಉದ್ಧಾರಕ್ಕಾಗಿ ತಮ್ಮನ್ನೇ ಬಲಿದಾನ ಮಾಡಿಕೊಳ್ಳಲು ಶ್ರೀಗಳು ಸಿದ್ಧರಾದರು; ಸನ್ನದ್ಧರಾದರು. 'ಕೆಟ್ಟವಂಗೆ ಕೆಳೆ ಇಲ್ಲ, ಜಗದ ನಂಟ ನೀನೆ ಅಯ್ಯಾ' ಎಂದು ಜನಗಳ ಬೆಂಬಲವಿಲ್ಲದಿದ್ದರೂ ದೈವವನ್ನೇ ನಂಬಿ, ಆತ್ಮವಿಶ್ವಾಸದಿಂದ ಕಾನೂನಿನ ಸಹಾಯದಿಂದ ಶ್ರೀಗಳು ಹಲವುಹತ್ತು ವಿರೋಧಗಳನ್ನು ಎದುರಿಸಬೇಕಾಯಿತು

-ಕೋರ್ಟಿನ ಮೂಲಕ. ಶ್ರೀಗಳು ತಮ್ಮ ಮಠದ ರಿಕಾರ್ಡುಗಳನ್ನೆಲ್ಲ ಕಾರ್ಪೊರೇಷನ್ ಮೂಲಕ ಪಡೆದರು. ಶ್ರೀಮಠದ ಕಾಗದ ಪತ್ರಗಳಲ್ಲಿ ಜಂಗಮ ಮಠ ಬಹಳ ಕಾಲದಿಂದ ಒಂದು ಸ್ವತಂತ್ರ ಮಠ. ಇದು ವಿರಕ್ತ ಪರಂಪರೆಯ ಮಠ. ಮೂಲ ಕರ್ತೃ, ಸಿದ್ಧಲಿಂಗೇಶ್ವರರು. ಈ ಮಠದ ಹಿಂದಿನ ಗುರುಗಳು ಗುರುಸಿದ್ಧ ದೇವರು. (ಅವರ ಕಾಲಕ್ಕೆ ಶ್ರೀಮನ್ಮಹಾರಾಜರಿಂದ 2-3ಎಕರೆ ಜಮೀನು ಶ್ರೀಮಠಕ್ಕೆ ದತ್ತಿ ಬಂದಿತ್ತು). ಶ್ರೀ ನಿಜಗುಣಸ್ವಾಮಿಗಳು ಬಹಳ ವರ್ಷಗಳ ಕಂದಾಯ ಕಟ್ಟಿ ಜಮೀನನ್ನು ತಮ್ಮ ಸ್ವಾಧೀನ ಮಾಡಿಕೊಂಡರು. ಜಮೀನು ಬೆಲೆ ಬಾಳುವಷ್ಟು ದುಡ್ಡನ್ನು ಸರಕಾರಕ್ಕೆ ಕಟ್ಟಿ ತಮ್ಮ ಸ್ವಂತ ಆಸ್ತಿಯನ್ನಾಗಿ ಮಾಡಿಕೊಂಡರು. ಈ ಎಲ್ಲ ವಿಷಯಗಳ ಬಗ್ಗೆ ಸ್ಪಷ್ಟವಾದ ಕಾಗದ ಪತ್ರಗಳನ್ನು ಸಂಗ್ರಹಿಸಿ ಸಮರ್ಥ ವಕೀಲರ ಮೂಲಕ ಕಾಳಗದ ಕಣಕ್ಕೆ ಇಳಿದರು. ನ್ಯಾಯಾಲಯದ ಮೆಟ್ಟಿಲು ಹತ್ತುವುದಕ್ಕೆ ಹೆಚ್ಚು ಸಮಯ ಬೇಕಾಗುವುದಿಲ್ಲ. ಅಲ್ಲಿಂದ ಇಳಿದು ಬರಲು ಇಷ್ಟೇ ಸಮಯವೆಂದು ಯಾರಿಗೂ ಹೇಳಲಿಕ್ಕಾಗುವುದಿಲ್ಲ. ಶ್ರೀಗಳವರಿಗೆ ಕೋರ್ಟು ಕಚೇರಿ ಅಲೆದಾಟ ಆರಂಭವಾಯಿತು. ಒಂದುಕಡೆ ವಕೀಲರಿಗೆ ಮಠದ ಸರಿಯಾದ ಮಾಹಿತಿ ಗಾಗಿ ಹಳೆಯ ಕಾಗದ ಪತ್ರಗಳನ್ನು ಒದಗಿಸುವುದು, ಮತ್ತೊಂದು ಕಡೆಗೆ ಹಣದ ವ್ಯವಸ್ಥೆಮಾಡಿಕೊಳ್ಳುವುದು, ದಿನನಿತ್ಯದ ಕಾಯಕ ಮಾಡುವುದು ಇತ್ಯಾದಿ ಬಿಡುವಿಲ್ಲದ ದುಡಿಮೆಯಲ್ಲಿ ನಿರತರಾದರು. ಮಠದ ಜಮೀನಿನಲ್ಲಿ ಕೆಲವಾರು ಸೈಟುಗಳನ್ನು ಮಾಡಿ ಅವುಗಳ ವಿಲೇವಾರಿಯಿಂದ ಬಂದ ಹಣದಿಂದ ವ್ಯಾಜ್ಯ ನಡೆಸಿದರು. ಸೈಟಿನ ಹಣ ಸಕಾಲಕ್ಕೆ ಬರುವುದು ತಡವಾದಾಗ-ಒಂದೊಂದು ಸಲ ಕೋರ್ಟು ಫೀಜು ಕಟ್ಟಲು ಹಣಕಾಸಿನ ಅಭಾವ ಬಂದಾಗ ತಮ್ಮ ಹಸುಗಳನ್ನು ಮಾರಿದ್ದುಂಟು. ಮತ್ತೆ ಕೆಲವು ಸಂದರ್ಭದಲ್ಲಿ 'ಲಿಂಗದ ಕರಡಿಗೆ, ಪೂಜಾ ಸಾಮಾನುಗಳನ್ನು ಒತ್ತೆ ಇಟ್ಟು ಹಣ ತಂದು ಕೋರ್ಟಿನ ಫೀಜು ಕಟ್ಟಿದ್ದೇನೆ' ಎಂದು ಶ್ರೀಗಳು ತಮ್ಮ ಹಿಂದಿನ ಕಷ್ಟದ ದಿನಗಳನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಶ್ರೀಗಳವರಿಗೂ ವಿರೋಧಿಗಳಿಗೂ ಮುನ್ಸಿಫ್ ಕೋರ್ಟಿನಿಂದ 17- 18 ವರ್ಷ ಉಚ್ಚ ನ್ಯಾಯಾಲಯದವರೆಗೆ ವ್ಯಾಜ್ಯಗಳು ನಡೆದವು. ಶ್ರೀಗಳವರ ಹಳೆಯ ಪ್ರಾಮಾಣಿಕವಾದ ದಾಖಲೆ ಪತ್ರಗಳನ್ನು ನ್ಯಾಯಾಧೀಶರು ಪರಿಶೀಲಿಸಿ ತೀರ್ಪು ನೀಡಿದರು. ಅವರ ನಿರ್ಣಯ ಹೀಗಿತ್ತು. ''ಸುಂಕೇನಹಳ್ಳಿಯ ಜಂಗಮ ಮಠ ಒಂದು ಸರ್ವತಂತ್ರ ಸ್ವತಂತ್ರ ಮಠ. ಇದು ಯಾವ ಮಠದ ಶಾಖೆಯಲ್ಲ. ಈಗಿನ ಶ್ರೀ ನಿಜಗುಣಸ್ವಾಮಿಗಳು ಸರಕಾರಕ್ಕೆ ದುಡ್ಡನ್ನು ಕಟ್ಟಿ ಮಠದ ಜಮೀನನ್ನು ಸ್ವಂತಕ್ಕಾಗಿ ಪಡೆದಿದ್ದಾರೆ. ಹಿಂದೆ ಈ ಜಮೀನನ್ನು ಗುರುಲಿಂಗ ಜಂಗಮ ಪ್ರೇಮಿಗಳಾದ ಮೈಸೂರು ನಾಡಿನ ಪ್ರಭುಗಳು ಶ್ರೀಮಠಕ್ಕೆ ಭಕ್ತಿಪೂರ್ವಕ ದತ್ತಿ ನೀಡಿದ್ದರು. ಇದರ ಸರ್ವಸ್ವಾಮ್ಯ ಇಂದಿನ ಪಟ್ಟಾಧಿಕಾರಿಗಳಾದ ಶ್ರೀ ನಿಜಗುಣ ಸ್ವಾಮಿಗಳವರಿಗೆ ಸೇರಿದೆ'' ಎಂಬ ಅರ್ಥ ಬರುವ ರೀತಿಯಲ್ಲಿ ಸರ್ವೋಚ್ಚನ್ಯಾಯಾಲಯ ನ್ಯಾಯ ಸಮ್ಮತವಾದ ತೀರ್ಪನ್ನು ನೀಡಿತು. ವಿರೋಧಿಗಳ ಮುಖಭಂಗವಾಯಿತು. ನ್ಯಾಯದೇವತೆ ಶ್ರೀ ನಿಜಗುಣಸ್ವಾಮಿಗಳಿಗೆ 'ವಿಜಯ ಮಾಲೆ'ಯನ್ನು ಹಾಕಿದಳು. ತಮ್ಮ ಹೋರಾಟ ಸಫಲ ಹಾಗೂ ಸುಫಲವಾದುದಕ್ಕೆ ಶ್ರೀಗಳು ಸಂತೋಷ ಪಟ್ಟರು.

ಶ್ರೀಗಳು ಮತ್ತೆ ತಮ್ಮ ಯೋಜನೆಯನ್ನು ಮುಂದುವರಿಸಿದರು. ಕೋರ್ಟು ಕಚೇರಿಗೆ ಹಣವೆಲ್ಲ ವ್ಯಯವಾಗಿ ಶ್ರೀಗಳು ಬರಿಗೈ ಬಂಟರಾಗಿದ್ದರು. ಮತ್ತೆ ತಮ್ಮ ಜಮೀನಿನಲ್ಲಿ ಕೆಲವು ಸೈಟುಗಳನ್ನು ವಿಲೇವಾರಿ ಮಾಡಿ, ಬಂದ ಹಣದಿಂದ 1966ರಲ್ಲಿ ಸುಮಾರು ಒಂದು ಎಕರೆ ಭೂಮಿಯನ್ನು 2400 ರೂಪಾಯಿಗಳಿಗೆ ಖರೀದಿ ಮಾಡಿದರು. ನಂತರ ಲಕ್ಷಾಂತರ ರೂಪಾಯಿಗಳನ್ನು ಬ್ಯಾಂಕುಗಳಲ್ಲಿ ಸಾಲ ಪಡೆದು ಕಲ್ಯಾಣಕ್ಷೇತ್ರದ ಯೋಜನೆಯನ್ನು ರೂಪಿಸಿ, ನಗರ ಸಭೆಯ ಅನುಮತಿ ಪಡೆದು 3-4 ವರ್ಷ ಕಲ್ಯಾಣ ಕ್ಷೇತ್ರವನ್ನು ಕಟ್ಟುವ ಕೆಲಸ ಆರಂಭಿಸಿದರು. ಅದು 1974ರಲ್ಲಿ ಪೂರ್ಣಗೊಂಡಿತು. ಅದಕ್ಕೆ 'ಶ್ರೀ ನಿಜಗುಣರ ಕಲ್ಯಾಣಕ್ಷೇತ್ರ' ವೆಂದು ಹೆಸರಿಟ್ಟರು. ಭಕ್ತರ ನೆರವಿಲ್ಲ; ಚಂದಾವಸೂಲಿ ಇಲ್ಲ; ಶ್ರೀಗಳು ಬ್ಯಾಂಕಿನ ಸೌಲಭ್ಯದಿಂದ, ಸತ್ಯಶುದ್ಧಕಾಯಕದಿಂದ ಹಾಗೂ ವ್ಯವಹಾರ ಜಾಣ್ಮೆಯಿಂದ ಕಲ್ಯಾಣಕ್ಷೇತ್ರವನ್ನು ಕಟ್ಟಿಸಿದರು. ಪ್ರಶಾಂತ ಪರಿಸರದಲ್ಲಿ ಭವ್ಯವಾದ ಹಾಗೂ ಸುಂದರವಾದ ಕಲ್ಯಾಣ ಕ್ಷೇತ್ರದ ಪ್ರತಿಯೊಂದು ಹಂತದಲ್ಲೂ ಶ್ರೀಗಳವರ ಯೋಜನೆ-ವಾಸ್ತುಶಿಲ್ಪದ ತಾಂತ್ರಿಕ ಕೌಶಲ್ಯವನ್ನು ಯಾರಾದರೂ ಕಾಣಬಹುದಾಗಿದೆ. ಕಲ್ಯಾಣಮಂಟಪದ ದಕ್ಷಿಣ



ಶ್ರೀ ನಿಜಗುಣರ ಕಲ್ಯಾಣ ಕ್ಷೇತ್ರ

ಉತ್ತರ ಭಾಗದಲ್ಲಿ ಉತ್ತುಂಗ ತೆಂಗಿನ ಮರಗಳು, ಬಾಳೆಯ ಗಿಡಗಳು, ಬಿಲ್ವವೃಕ್ಷಗಳು, ವಿಧವಿಧದ ಪರಿಮಳ ಬೀರುವ ಪುಷ್ಪ ಪಾದಪಗಳು, ಹಚ್ಚಹಸುರಿನ ಗಿಡಮರ, ಸುಯ್ಯೆಂದು ಗಾಳಿ ಬೀಸಿದಾಗ ಮರಗಿಡಗಳ ನರ್ತನ. ಇವುಗಳ ಮಧ್ಯೆ ಮೈದಳೆದು ನಿಂತಿದೆ; ನಿಜಗುಣರ ಕಲ್ಯಾಣಕ್ಷೇತ್ರ. ಅದರ ವಿನ್ಯಾಸ, ವಾಸ್ತುಶಿಲ್ಪವನ್ನು ಕಂಡಾಗ ಎಂತಹ ತಂತ್ರಜ್ಞರೂ ಶ್ರೀಗಳವರ ಬುದ್ಧಿಕೌಶಲಕ್ಕೆ ಬೆರಗಾಗದೆ ಇರಲಾರರು. ಕಲ್ಯಾಣಕ್ಷೇತ್ರದ ಉದ್ಘಾಟನಾ ಕಾರ್ಯ ಚಿತ್ರದುರ್ಗದ ಹಿಂದಿನ ಜಗದ್ಗುರುಗಳ (ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ) ಸನ್ನಿಧಾನದಲ್ಲಿ ಧಾರವಾಡದ ಮುರುಘಾಮಠದ ಅಧಿಪತಿಗಳಾದ ಮಹಾಂತ ಸ್ವಾಮಿಗಳವರ ಅಮೃತ ಹಸ್ತದಿಂದ 17.4.1974ರಲ್ಲಿ ಸಾಂಗವಾಗಿ ನೆರವೇರಿತು. ಸಮಾರಂಭದ ಅಂಗವಾಗಿ ಮೂರು ದಿನಗಳ ಕಾಲ ಶಿವಾನುಭವ ಕಾರ್ಯಕ್ರಮಗಳೂ, ಅನ್ನದಾಸೋಹ ವಿವಾಹಾದಿ ಮಂಗಳ ಕಾರ್ಯಗಳೂ ನೆರವೇರಿದವು. ಈ ಸಮಾರಂಭಕ್ಕೆ ನಾಡಿನ ನಾನಾ ಭಾಗಗಳಿಂದ ಹರ-ಗುರು ಚರಮೂರ್ತಿಗಳೂ ಆಗಮಿಸಿದ್ದರು.


ಕಲ್ಯಾಣಕ್ಷೇತ್ರದ ಕಾರ್ಯ ಒಂದು ಹಂತಕ್ಕೆ ತಲುಪಿದ ನಂತರ ಶ್ರೀಗಳವರು ಹಳೆಯ ಮಠದ 3-4 ಗುಂಟೆ ಪ್ರದೇಶದಲ್ಲಿ ಶ್ರೀಮಠದ ಪುನರ್ ನಿರ್ಮಾಣ ಕಾರ್ಯವನ್ನು ಕೈಗೊಂಡರು.



ಶ್ರೀಮಠದ ಒಂದು ನೋಟ

ಅದಕ್ಕೂ ಬ್ಯಾಂಕಿನಿಂದ ಸಾಲ ರೂಪದಲ್ಲಿ ಹಣ ಪಡೆದು ಕಾರ್ಯ ಆರಂಭಿಸಿದರು. ಮಠದ ವಾಸ್ತುಶಿಲ್ಪ ರಚನೆಗೆ ಶ್ರೀಗಳೇ ಮಾರ್ಗದರ್ಶಕರು. ಅವರ ಪರಿಶ್ರಮದ ಫಲವಾಗಿ ಹಂತ ಹಂತವಾಗಿ ಮಠದ ಕಾರ್ಯ ಪೂರ್ಣಗೊಂಡಿತು. ಮಠದ ಕಟ್ಟಡದ ಪ್ರತಿಯೊಂದು ಭಾಗದ ವಿನ್ಯಾಸದಲ್ಲೂ ಶ್ರೀಗಳವರ ಯೋಜನೆ ಎದ್ದು ಕಾಣುತ್ತದೆ. ಶ್ರೀಮಠದ ವಾತಾವರಣ ಪ್ರಶಾಂತವಾಗಿದ್ದು, ಮಠದ ಮುಂಭಾಗ ಹಾಗೂ ಸುತ್ತಲೂ ಉತ್ತಮವಾದ ತೆಂಗಿನ ಮರಗಳೂ, ನಾನಾ ಬಗೆಯ ಹೂವಿನ ಗಿಡಗಳೂ, ಹಚ್ಚಹಸಿರಾದ ಹುಲ್ಲು, ಸುಂದರವಾದ ಉದ್ಯಾನವನವನ್ನು ನೆನಪಿಗೆ ತರುತ್ತವೆ. ಶ್ರೀಗಳು ಕಟ್ಟಿಸಿದ ಮಠ ರಾಮಕೃಷ್ಣಾಶ್ರಮವನ್ನು ನೆನಪಿಗೆ ತರುವಂತಿದೆ.

ಶ್ರೀಮಠದ ಪ್ರವೇಶೋತ್ಸವ ತ್ರಿವಿಧ ದಾಸೋಹಮೂರ್ತಿಗಳಾದ ಧಾರವಾಡದ ಮಹಾಂತ ಶಿವಯೋಗಿಗಳ ಅಮೃತ ಹಸ್ತದಿಂದ 29.3.79ರಲ್ಲಿ ನೆರವೇರಿತು. ನಾಡಿನ ಹರ-ಗುರು-ಚರಮೂರ್ತಿಗಳು ಈ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶಿವಾನುಭವ ಕಾರ್ಯಕ್ರಮಗಳು ಜರುಗಿ ಸಹಸ್ರಾರು ಜನ ದೀನ ದಲಿತರಿಗೆ ಅನ್ನ ದಾಸೋಹ ನಡೆಯಿತು. ಸ್ವಾಮಿಗಳು ಇಂದಿಗೂ ಕರ್ನಾಟಕದ ನಾನಾ ಭಾಗಗಳಿಂದ ದಯಮಾಡಿಸುವ ಮಠಾಧೀಶರನ್ನು ಶ್ರೀಗಳು ತುಂಬು ಹೃದಯದಿಂದ ಸ್ವಾಗತಿಸಿ-ಸತ್ಕರಿಸಿ ಸಭೆ,



ಕಲ್ಯಾಣ ಕ್ಷೇತ್ರದ ಉದ್ಘಾಟನಾ ಸಮಾರಂಭದಲ್ಲಿ ಧಾರವಾಡ ಮುರುಘಾಮಠದ ಪೂಜ್ಯ ಮಹಾಂತಅಪ್ಪಗಳವರು

ಸಮಾರಂಭಗಳನ್ನೇರ್ಪಡಿಸಿ ಸಾರ್ವಜನಿಕರಿಗೆ ಅವರ ದರ್ಶನ ಪರಿಚಯ ಮಾಡಿಸುವುದು ಅವರ ಔದಾರ್ಯದ ಪ್ರತೀಕವಾಗಿದೆ.

ಸಮಾಜ ಕಲ್ಯಾಣ

ಭಾರತದಲ್ಲಿ ವೀರಶೈವ ಮಠಾಧೀಶರು ಸಮಾಜೋದ್ಧಾರಕ್ಕಾಗಿ ಮಾಡಿರುವ ಕೆಲಸಗಳು ಅಪಾರ. ಆದರೆ ಸಾಮೂಹಿಕ ಸಂಘಟಿತ ಪ್ರಯತ್ನದ ಕೊರತೆಯಿಂದ ಸಮಾಜದ ಸಂಘಟನೆಗೆ ದೊಡ್ಡ ಪೆಟ್ಟು ಬಿದ್ದಿದೆ. ಶ್ರೀಗಳವರು ನಿಜಗುಣ ಕಲ್ಯಾಣಕ್ಷೇತ್ರ ಹಾಗೂ ಜಂಗಮ ಮಠದ ನಿರ್ಮಾಣದ ಯೋಜನೆಯನ್ನು ಮುಗಿಸಿ, ಶ್ರೀಮಠದಲ್ಲಿ ಆಗಾಗ್ಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಜರುಗಿಸುತ್ತಾ ಅನೇಕ ಧಾರ್ಮಿಕ ಸಂಸ್ಥೆಗಳಿಗೆ ಉದಾರವಾಗಿ ನೆರವು ನೀಡುತ್ತ ಬಂದಿದ್ದಾರೆ. ಸಮಾಜದ ಐಕ್ಯತೆಗೆ, ಅದರ ಸಮರಸ ಜೀವನಕ್ಕೆ ಮಾರ್ಗದರ್ಶಕರಾದ ಮಠಾಧಿಪತಿಗಳು ಒಂದಾಗಬೇಕು; ಮುಂದಾಗಬೇಕು ಎಂಬುದು ಶ್ರೀಗಳ ಸಂಕಲ್ಪ. ಇದನ್ನು ಮನಗಂಡು ಅದಕ್ಕಾಗಿ ಅಖಿಲ ಕರ್ನಾಟಕ ಮಠಾಧಿಪತಿಗಳ ಸಂಘದ ಪ್ರಧಾನ ಕಛೇರಿಯನ್ನು ಶ್ರೀಮಠದಲ್ಲಿಯೇ ಆರಂಭಿಸಿ 1978ರಿಂದ ಸಂಘದ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು. ಸಂಘ ಮೊದಲು ಮೈಸೂರು-ಬೆಂಗಳೂರು-ಮಂಡ್ಯ ಮೊದಲಾದ ಜಿಲ್ಲಾ ಕೇಂದ್ರಗಳಲ್ಲಿ ತನ್ನ ಘಟಕಗಳನ್ನು ಸ್ಥಾಪಿಸಿ ಉತ್ಸಾಹದಿಂದ ಸಾಗಿತು. ಪ್ರತಿ ತಿಂಗಳೂ ಒಂದೊಂದು ಮಠದಲ್ಲಿ ಮಠಾಧಿಪತಿಗಳೆಲ್ಲ ಸಮಾವೇಶಗೊಂಡು, ಸಮಾಜದ ಒಳಿತಿಗಾಗಿ ಚಿಂತಿಸಿ, ಕಾರ್ಯ ಪ್ರವೃತ್ತರಾಗುವುದು ಸಂಘದ ಹಲವಾರು ಉದ್ದೇಶಗಳಲ್ಲಿ ಒಂದಾಗಿತ್ತು. ಸಂಘದ ಕಾರ್ಯ ಕಲಾಪಗಳು ಒಂದೆರಡು ವರ್ಷ ಚೆನ್ನಾಗಿ ನಡೆದವು. ಮೊದಲ ವರ್ಷದ ಮಠಾಧಿಪತಿಗಳ ಸಭೆಯಲ್ಲಿ 300 ಜನ ಭಾಗವಹಿಸಿದ್ದರು. ಕ್ರಮೇಣ ಬೇಸಿಗೆಯಲ್ಲಿ ಹುಟ್ಟಿ ಮಳೆಗಾಲದಲ್ಲಿ ನಿಂತು ಹೋಗುವ ನಾಟಕ ಕಂಪನಿಗಳಂತೆ ಮಠಾಧಿಪತಿಗಳ ಸಂಘದ ಕಾರ್ಯ ಕಲಾಪಗಳು ಬಹಳ ಕಾಲ ಮುಂದುವರಿಯಲಿಲ್ಲ. ಇದಕ್ಕೆ ಕಾರಣ ಸ್ಪಷ್ಟವಾಗಿದೆ. ಮಠಾಧಿಪತಿಗಳಲ್ಲಿ ಕೆಲವರು ಜಗದ್ಗುರುಗಳಾಗಿಯೂ, ಇನ್ನು ಕೆಲವರು ತಮ್ಮ ತಮ್ಮ ಮಠಗಳಲ್ಲಿದ್ದು ತಮ್ಮ ತಮ್ಮ ಶಿಷ್ಯ ಸಮೂಹದಲ್ಲಿ ಪ್ರತಿಷ್ಠಿತರಾಗಿದ್ದವರು. ಅವರೆಲ್ಲ ಈ ಸಂಘಕ್ಕೆ ಬಂದು ಸಮಾನರಾಗಿ ಆಸೀನರಾಗುವುದು, ಸಹಭಾಗಿಗಳಾಗಿ ಕಾರ್ಯ ಕಲಾಪಗಳನ್ನು ನಡೆಸುವುದು, ಸಮಾನತೆಯಿಂದ ವರ್ತಿಸುವುದು ಕೆಲವರು ತಮ್ಮ ಪ್ರತಿಷ್ಠೆಗೆ ಕುಂದು ಬಂದಂತೆ ಎಂದು ಭಾವಿಸಿದರು. ತಮ್ಮ ತಮ್ಮ ಮಠಗಳ ಏಳ್ಗೆಯ ಬಗ್ಗೆ ಕಾಳಜಿ ವಹಿಸಿದಂತೆ ಉದಾತ್ತವಾದ ಧ್ಯೇಯೋದ್ದೇಶಗಳನ್ನು ಹೊಂದಿದ್ದ ಸಂಘದ ಬೆಳವಣಿಗೆಯ ಕಡೆಗೆ ದಿವ್ಯ ನಿರ್ಲಕ್ಷ್ಯ ವಹಿಸಿದರು. ಸಂಘವು ಸಾಧಿಸಬೇಕೆಂದಿದ್ದ ಯೋಜನೆಗಳಿಗೆ ಧನಸಹಾಯ ಮಾಡಲು ಯಾರೂ ಮುಂದೆ ಬರಲಿಲ್ಲ. ಈ ಎಲ್ಲ ಕಾರಣಗಳಿಂದ ಸಂಘದ ಚಟುವಟಿಕೆಗಳು ಮುಂದುವರಿಯಲಿಲ್ಲ. ಮಠಾಧಿಪತಿಗಳನ್ನು ಒಂದುಗೂಡಿಸುವ ಕೆಲಸ ಅತ್ಯಂತ ಕಷ್ಟದಾಯಕವಾಗಿದ್ದರೂ ತಮ್ಮ ಶಕ್ತಿ ಮೀರಿ ಎರಡು ಮೂರು ವರ್ಷ ಶ್ರೀ ನಿಜಗುಣ ಸ್ವಾಮಿಗಳು ಅದಕ್ಕಾಗಿ ಪರಿಶ್ರಮಿಸಿದರು. ಸಂಘದ ಉದ್ದೇಶ ಸಫಲವಾಗಲಿಲ್ಲ; ನಿಜ.

ಅದಕ್ಕೆ ಕೆಲವು ಮಠಾಧಿಪತಿಗಳ ಅಸಹಕಾರ, ಮನೋಭಾವನೆ ಕಾರಣವಾಗಿತ್ತು. ಶ್ರೀಗಳವರ ಪ್ರಯತ್ನ ಮೆಚ್ಚಬೇಕಾದದ್ದು. ಘನ ಉದ್ದೇಶಕ್ಕಾಗಿ ಮಾಡುವ ಪ್ರಯತ್ನ, ಅದರ ಸೋಲೂ ಸಹ ಗೆಲುವಿಗೆ ಸಮಾನವಾದುದು. ಮಠಾಧಿಪತಿಗಳ ಸಂಘದ ಶ್ರೇಯಸ್ಸಿಗೆ ನಿಜಗುಣ ಸ್ವಾಮಿಗಳು ವಿಶೇಷವಾಗಿ ಶ್ರಮಿಸಿದರು. ಹಗಲು-ಇರುಳು ಎನ್ನದೆ ಸಂಚಾರ ಮಾಡುತ್ತಿದ್ದರು. ಈಗ ಶ್ರೀಗಳು ಮಠಾಧಿಪತಿಗಳ ಸಂಘವನ್ನು ನೆನಪಿಸಿಕೊಂಡು "ನಮ್ಮ ಮಠಾಧಿಪತಿಗಳಲ್ಲಿಯೇ ಹೊಂದಾಣಿಕೆ ಬರಲಿಲ್ಲವಲ್ಲ; ಇವರು ಸಮಾಜಕ್ಕೆ ಐಕ್ಯತೆಯನ್ನು ಬೋಧಿಸುವುದು ಹುರುಳಿಲ್ಲದ ಉಪದೇಶ" ಎಂದು ನಿರಾಸೆಯ ನಿಟ್ಟುಸಿರು ಬಿಡುತ್ತಾರೆ.

ಬೆಂಗಳೂರಿನಂತಹ ಮಹಾನಗರದಲ್ಲಿ ವೀರಶೈವ ಸಮಾಜದ ಹಲವಾರು ಸಮಸ್ಯೆಗಳಲ್ಲಿ ಮಾನವನ ಕಟ್ಟಕಡೆಯ ನೆಲೆಯಾದ ರುದ್ರಭೂಮಿಯ ಸಮಸ್ಯೆಯೂ ಒಂದಾಗಿದೆ. ಹಿಂದೆ 1927ರಲ್ಲಿ ಘನ ಸರಕಾರವು ವೀರಶೈವ ಸಮಾಜಕ್ಕೆ ರುದ್ರಭೂಮಿಗಾಗಿ ಚಾಮರಾಜಪೇಟೆಯಲ್ಲಿ 9 ಎಕರೆ 19 ಗುಂಟೆ ನಿವೇಶನ ನೀಡಿತ್ತು. ಪರಮತೀಯರು ಕೆಲವು ಪುಂಡ ರಾಜಕಾರಣಿಗಳ ಬೆಂಬಲದಿಂದ ಆ ಸ್ಥಳವನ್ನು ಆಕ್ರಮಿಸಲು ಕೆಲವಾರು ವರ್ಷಗಳಿಂದ ಹವಣಿಸುತ್ತಿದ್ದರು. ಇಂತಹ ಪ್ರಸಂಗದಲ್ಲಿ ಇದು ಸಮಾಜದ ಗೌರವ ಹಾಗೂ ಪ್ರತಿಷ್ಠೆಯ ಪ್ರಶ್ನೆಯೆಂದು ಭಾವಿಸಿದ ಶ್ರೀಗಳು ಕೂಡಲೆ, ವೀರಶೈವ ಸಮಾಜದ ಪ್ರಮುಖರನ್ನೊಳಗೊಂಡ ಸಮಿತಿಯನ್ನು ರಚಿಸಿ ರುದ್ರಭೂಮಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಸಂಗ್ರಹಿಸಿ ಸದಸ್ಯರಿಂದಲೂ ಸಾರ್ವಜನಿಕರಿಂದಲೂ ಹತ್ತಾರು ಸಹಸ್ರ ರೂಪಾಯಿಗಳನ್ನು ಕೂಡಿಸಿ ಶ್ರೀಗಳ ನೇತೃತ್ವದಲ್ಲಿ ರುದ್ರಭೂಮಿಯ ಸುತ್ತಲೂ ಲಿಂಗಮುದ್ರೆಯ ಕಲ್ಲುಗಳನ್ನು ಹಾಕಿಸಿ ಭದ್ರವಾದ ಆವರಣವನ್ನು ಕಟ್ಟಿಸುವ ಕೆಲಸ ಭರದಿಂದ ಸಾಗಿ, ಕೆಲವಾರು ತಿಂಗಳಲ್ಲಿ ಅದು ಪೂರ್ಣಗೊಂಡಿತು. ಈ ಕಾರ್ಯಕ್ಕಾಗಿ ಎರಡು ಲಕ್ಷ ರೂಪಾಯಿಗಳ ಸಂಗ್ರಹವಾಯಿತು. ನಗರದ ರುದ್ರಭೂಮಿಯನ್ನು ಸಮಾಜ ಕಲ್ಯಾಣಕ್ಕಾಗಿ ಸುವ್ಯವಸ್ಥೆಗೊಳಿಸುವ ಕಾರ್ಯದಲ್ಲಿ ಶ್ರೀಗಳ ಪಾತ್ರ ಮಹತ್ವಪೂರ್ಣವಾಗಿದೆ.

ನಮ್ಮ ನಾಡಿನ ದಿನಪತ್ರಿಕೆಗಳಲ್ಲಿ ಒಂದಾದ 'ಲೋಕವಾಣಿ' ಪತ್ರಿಕೆ ಸಮಾಜದ ಮುಖವಾಣಿಯಾಗಿರಲೆಂಬ ಸದಾಶಯ, ಸದಿಚ್ಛೆಯ ಮೇರೆಗೆ ಶ್ರೀಗಳವರು ಲೋಕ ಕಲ್ಯಾಣ ಟ್ರಸ್ಟಿಗೆ ಧರ್ಮದರ್ಶಿಗಳಾಗಿ, ಹತ್ತು ಸಾವಿರ ರೂಪಾಯಿಗಳನ್ನು ಉದಾರವಾಗಿ ನೀಡಿದರು. ಸಮಾಜದಲ್ಲಿ ಪ್ರಾಮಾಣಿಕರಾದ, ನಿಷ್ಠಾವಂತರಾದ ಜನಗಳ ಕೊರತೆ ಇರುವುದರಿಂದ ಶ್ರೀಗಳವರು ನಿರೀಕ್ಷಿಸಿದಷ್ಟು 'ಲೋಕವಾಣಿ' ಪತ್ರಿಕೆ ಪ್ರಗತಿಪರವಾಗಿ ಮುನ್ನಡೆಯಲಿಲ್ಲ. ಈ ನೋವು ಶ್ರೀಗಳವರಿಗೆ ಇನ್ನೂ ಇದೆ. "ಕರ್ನಾಟಕದ ಬಹು ದೊಡ್ಡ ಸಮಾಜವೊಂದರಲ್ಲಿ ಒಂದು ಪತ್ರಿಕೆ ಅತ್ಯಧಿಕ ಪ್ರಸಾರವನ್ನು ಹೊಂದಿ ಮುನ್ನಡೆಯಲಿಲ್ಲವಲ್ಲಾ; ನಮ್ಮೆಲ್ಲರ ಕನಸು ನನಸಾಗಲಿಲ್ಲವಲ್ಲ" ಎನ್ನುವ ನಿರಾಶೆ ಇನ್ನೂ ಶ್ರೀಗಳನ್ನು ಕಾಡುತ್ತಿದೆ. ಅದಕ್ಕೆ ಅವರು ಹೇಳುತ್ತಾರೆ "ನಮ್ಮ ಸಮಾಜದಲ್ಲಿ ವಿದ್ವಾಂಸರಿದ್ದಾರೆ, ಶ್ರೀಮಂತರಿದ್ದಾರೆ, ಉದಾರಿಗಳೂ ಇದ್ದಾರೆ. ಎಲ್ಲ ಸೌಲಭ್ಯ, ಸೌಕರ್ಯಗಳೂ ಇವೆ. ಆದರೆ ಪ್ರಾಮಾಣಿಕ

ವಾಗಿ ಸೇವಾ ಭಾವನೆಯಿಂದ ದುಡಿಯುವವರ ಸಂಖ್ಯೆ ಅತ್ಯಂತ ಕಡಿಮೆ ಇದೆ. ಆದ್ದರಿಂದ ನಮ್ಮ ಯೋಜನೆಗಳೆಲ್ಲ ಮುಗ್ಗರಿಸುತ್ತವೆ; ಮುರಿದು ಬೀಳುತ್ತವೆ" ಎಂದು ವಿಷಾದಪಡುತ್ತಾರೆ.

ಶ್ರೀಗಳು ಶ್ರೀಮಠದ ನಿರ್ಮಾಣಕ್ಕಾಗಿ ಹಲವಾರು ಕಷ್ಟಗಳನ್ನು, ವಿಪತ್ತುಗಳನ್ನು ಎದುರಿಸಿ, ಸ್ವಾರ್ಥಿಗಳ ಕಿರುಕುಳವೆಂಬ ಹಾಲಾಹಲವನ್ನು ಕುಡಿದು ನೀಲಕಂಠರಾಗಿದ್ದಾರೆ. ಜೀವನದಲ್ಲಿ ಅಪಾರವಾದ ನೋವನ್ನುಂಡಿದ್ದಾರೆ. ಗೌತಮನ ಶಾಪದಿಂದ ಶಿಲೆಯಾಗಿ ಬಿದ್ದ ಅಹಲ್ಯೆ ಶ್ರೀರಾಮನ ಪಾದಸ್ಪರ್ಶದಿಂದ ಪುನರ್ಜಾತಳಾದಂತೆ ಶ್ರೀಗಳವರ ಆಗಮನದಿಂದ ಅವರ ಅವಿಶ್ರಾಂತ ಹೋರಾಟ, ಸತ್ಯಶುದ್ಧ ಕಾಯಕ, ಕರ್ತೃತ್ವಶಕ್ತಿ, ವ್ಯವಹಾರ ಕುಶಲತೆಗಳ ಫಲವಾಗಿ ಕಾಡು ನಾಡಾಯಿತು.

ಶ್ರೀಗಳ ಜ್ಞಾನ ದಾಸೋಹ

ಅರಿವು, ಆಚಾರ ವಿಚಾರಗಳು ಜನಜೀವನದಲ್ಲಿ ಅಳವಡಬೇಕು. ಜನತೆ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಸಮಾಜ ಸುಸಂಸ್ಕೃತವಾಗಬೇಕೆಂದು ನಂಬಿದ ಶ್ರೀಗಳು,



'ಶೂನ್ಯ ಸಂಪಾದನೆ' ವಿಚಾರ ಸಂಕಿರಣದ ಸಂದರ್ಭ

ಶ್ರೀಮಠದಲ್ಲಿ ಪ್ರತಿ ಶ್ರಾವಣ ಮಾಸದಲ್ಲಿ ವಿದ್ವಾಂಸರಿಂದ ಪುರಾಣ ಪ್ರವಚನ ಆಗಾಗ್ಗೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೆಲವಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಸಾಮೂಹಿಕ ದೀಕ್ಷಾ ವಿವಾಹಾದಿ ಸತ್ಕಾರ್ಯಗಳು ಜರುಗುತ್ತವೆ. 1987ರ ಜುಲೈನಲ್ಲಿ




ಶ್ರೀಮಠದಲ್ಲಿ ದೀಕ್ಷಾಸಮಾರಂಭ

ಶ್ರೀಮಠದಲ್ಲಿ 'ಶೂನ್ಯ ಸಂಪಾದನೆ'ಯ ವಿಚಾರ ಸಂಕಿರಣ ಕಾರ್ಯಕ್ರಮ ಮೂರು ದಿನಗಳ ಕಾಲ ನಡೆಯಿತು. ನಾಡಿನ ಪ್ರಸಿದ್ಧ ವಿದ್ವಾಂಸರು, ಸಂಗೀತ ಕಲಾವಿದರೂ ಭಾಗವಹಿಸಿದ್ದರು. ಮೂರು ದಿನ ಅನ್ನ-ಜ್ಞಾನ ದಾಸೋಹವು ಅತ್ಯಂತ ಸಮರ್ಪಕವಾಗಿ ನಡೆಯಿತು. ನಾಡಿನ ನಾನಾ ಭಾಗಗಳಿಂದ ಬಂದ ಹರ-ಗುರು-ಚರಮೂರ್ತಿಗಳು, ಮೂರುಸಾವಿರ ಮಠದ ಪೂಜ್ಯ ಜಗದ್ಗುರುಗಳೂ ಈ ಕಾರ್ಯಕ್ರಮದಲ್ಲಿ ಪಾಲುಗೊಂಡಿದ್ದರು. ಒಂದು ವಿಶ್ವವಿದ್ಯಾಲಯ ಮಾಡಬೇಕಾದ ಕಾರ್ಯವನ್ನು ಶ್ರೀಗಳು ತಮ್ಮ ಮಠದಲ್ಲಿ ಅತ್ಯಂತ ಅನುಕರಣೀಯವಾಗಿ ಮಾಡಿ ತೋರಿಸಿದ್ದರು. ಕಾರ್ಯಕ್ರಮವನ್ನು ನೋಡಿದ ಜನಗಳೆಲ್ಲ ಅತ್ಯಂತ ಸಂತೋಷಪಟ್ಟರು. ಈ ವಿಚಾರ ಸಂಕಿರಣಕ್ಕಾಗಿ ತಮ್ಮ ಮಠದಿಂದ ಸುಮಾರು 50-60 ಸಾವಿರ ರೂಪಾಯಿಗಳನ್ನು ಶ್ರೀಗಳವರು ವೆಚ್ಚಮಾಡಿದರು. ಇಂಥ ರಚನಾತ್ಮಕ ಕಾರ್ಯಕ್ರಮಗಳನ್ನು ಗಮನಿಸಿದಾಗ ಶ್ರೀಗಳವರಿಗೆ ನಮ್ಮ ಸಮಾಜದ ಬಗ್ಗೆ ಇರುವ ಕಳಕಳಿ ಹಾಗೂ ಶ್ರದ್ಧೆಯ ಬಗ್ಗೆ ಅರಿವು ಎಲ್ಲರಿಗೂ ವ್ಯಕ್ತವಾಗುತ್ತದೆ.



ಶಿವಯೋಗ ಸಮಾಧಿಯ ಒಂದು ನೋಟ



ತಪೋವನದಲ್ಲಿ ಶ್ರೀಗಳು

ಶ್ರೀಗಳು ಸ್ಥಾಪಿಸಿದ ಶ್ರೀಮಠ, ಕಲ್ಯಾಣಕ್ಷೇತ್ರಗಳು ಹಾಗೂ ಇತ್ತೀಚೆಗೆ ಕಟ್ಟಿಸಿದ "ಶ್ರೀ ನಿಜಗುಣ ಸಭಾಂಗಣ" ಹಾಗೂ ಶಿವಯೋಗ ಸಮಾಧಿಗಳು ಅವರ ಸಾಧನೆಯ ಶಿಖರಗಳಾದರೂ ಆ ಭೌತಿಕ ಸಂಪತ್ತಿಗಿಂತ ಅವರ ನಿರಾಡಂಬರ ವಿನಯ, ಸರಳ ಸ್ವಭಾವ ಶಿವಾನುಭವ ದೃಷ್ಟಿಯ ಈ ಗುಣಸಂಪತ್ತು ಮಿಗಿಲಾದುದು.

ಕಾಯಕಶ್ರೀ

ಶ್ರೀಗಳು ಯಾವುದೇ ಕಾಯಕವನ್ನು ಕೈಗೆತ್ತಿಕೊಳ್ಳುವ ಮುನ್ನ ಸಂಪೂರ್ಣ ಸಮಾಲೋಚಿಸಿ ಕಾರ್ಯಪ್ರವೃತ್ತರಾಗುತ್ತಾರೆ. ಕಾಯಕ ಆರಂಭಿಸಿದ ಮೇಲೆ ಎಷ್ಟೇ ಎಡರು ತೊಡರುಗಳು ಬಂದರೂ, ಅವುಗಳನ್ನು ಲೆಕ್ಕಿಸದೆ, ಮುನ್ನಡೆಯುವ ಗಣಾಚಾರ ಅವರಿಗೆ ಸಾಧಿಸಿದೆ. 'ಅನುಭವದ ಅಲಗ ಅವಧಾನ ತಪ್ಪದೆ ಹಿಡಿಯುವ' ಶರಣರ ಭೃತ್ಯಾಚಾರ ಅವರಿಗೆ ಸಿದ್ಧಿಸಿದೆ. ಚಿಕ್ಕ ಪುಟ್ಟ ಯಾವುದೇ ಕೆಲಸ ಮಾಡಿದರೂ ಶಿಸ್ತು - ಅಚ್ಚುಕಟ್ಟುತನಗಳು ಅವರಲ್ಲಿ ಎದ್ದು ಕಾಣುತ್ತವೆ. ಅವರು ಶಿಸ್ತಿನ ಸಿಪಾಯಿಗಳು. ಸಾವಿರಾರು ಮೈಲುಗಳ ಯಾತ್ರೆ ಒಂದು ಹೆಜ್ಜೆಯಿಂದ ಆರಂಭವಾಗುತ್ತದೆ, ಸಾವಿರಾರು ಪುಟಗಳ ಗ್ರಂಥ ಒಂದು ಅಕ್ಷರದಿಂದ ಆರಂಭವಾಗುತ್ತದೆ; ಎಲ್ಲ ದೊಡ್ಡ ಕೆಲಸಗಳೂ ಸಣ್ಣ ಕೆಲಸಗಳ ಮೊತ್ತ. ಸಣ್ಣ ಕೆಲಸವನ್ನು ಕಾಯಕ ದೃಷ್ಟಿಯಿಂದ ಮಾಡಲು ಕಲಿತರೆ, ದೊಡ್ಡ ಕೆಲಸವೂ ಚೆನ್ನಾಗಿಯೇ ಯಶಸ್ವಿಯಾಗುತ್ತದೆ. ಪ್ರತಿಯೊಬ್ಬ ಮನುಷ್ಯನ ಕೆಲಸ ಅವನ ವ್ಯಕ್ತಿತ್ವದ ಸಾಕ್ಷಿಚಿತ್ರ ಎಂಬುದು ತಮ್ಮ 'ಕಾಯಕ' ಕುರಿತು ಶ್ರೀಗಳ ಅನುಭವದ ಮಾತು. ಬದುಕಿನಲ್ಲಿ ಯಾವುದು ಅತ್ಯಂತ ಪರಿಣಾಮಕಾರಿ ?

ಅಮೆರಿಕಾದ ಪ್ರಸಿದ್ಧ ಮನೋವಿಜ್ಞಾನಿ ವಿಲಿಯಂ ಜೇಮ್ಸ್ ಹೇಳುತ್ತಾರೆ : ವ್ಹಾಟ್ ಟೆಲ್ಸ್ ಇನ್ ಲೈಫ್ ಈಸ್ ದ ಹೋಲ್ ಮೈಂಡ್ ವರ್ಕಿಂಗ್ ಟುಗೆದರ್' - ಮನಸ್ಸು ಒಮ್ಮುಖವಾಗಿ ಪೂರ್ಣಶಕ್ತಿಯಿಂದ ಮಾಡುವ ಕೆಲಸ ಕಲೆ ಎನ್ನುತ್ತಾನೆ.

ಬುದ್ಧಿ ಭಾವಗಳ, ವಿದ್ಯುದಾಲಿಂಗನ ಉದ್ಯೋಗದೊಂದಿಗೆ ಮೇಳೈಸಿದಾಗ ಅದು ಕಾಯಕ ಕಲೆಯಾಗುತ್ತದೆ ಎನ್ನುವುದು ಶರಣರ ವಾಣಿ. ಇಂಥ ಕಾಯಕ ಕಲೆಯನ್ನು ಶ್ರೀಗಳು ತಮ್ಮ ಜೀವನದಲ್ಲಿ ಚೆನ್ನಾಗಿ ಅಳವಡಿಸಿಕೊಂಡಿದ್ದಾರೆ. ಆರರವರೆಗೆ ಮನುಷ್ಯ ಪ್ರಯತ್ನ, ಏಳನೆಯದು ದೈವಕೃಪೆ ಎನ್ನುವ ಮಾತಿದೆ. ಸಾಧನೆ, ಪರಿಶ್ರಮ ಅತ್ಯಾವಶ್ಯಕ ಎಂಬುದು ಶ್ರೀಗಳ ವಿಚಾರ. ಅದು ಅವರ ಬಾಳಿನ ಸೂತ್ರವೂ ಹೌದು. ಜೀವನದಲ್ಲಿ ಶ್ರದ್ಧೆ ಒಂದು ಶ್ರೇಷ್ಠ ಮೌಲ್ಯ. ಶ್ರದ್ಧೆ ಇಲ್ಲದೆ ಯಾವ ವ್ಯಕ್ತಿಯೂ ದೊಡ್ಡವನಾಗಿಲ್ಲ; ಯಾವ ಮಹಾ ಕಾರ್ಯ ನಡೆದಿಲ್ಲ; ಶ್ರದ್ಧೆ ದೊಡ್ಡದಾದಷ್ಟು ಜೀವನ ದೊಡ್ಡದಾಗುತ್ತದೆ. ಒಬ್ಬ ಮನುಷ್ಯನಿಗೂ, ಇನ್ನೊಬ್ಬನಿಗೂ ಅಂತರವಾಗುವುದು ಈ ಶ್ರದ್ಧೆಯಿಂದ. ಶ್ರೀಗಳವರ ಜೀವನದುದ್ದಕ್ಕೂ ಇಂಥ ಶ್ರದ್ಧೆಯನ್ನು ಕಾಣುತ್ತೇವೆ. ಅವರ ಜೀವನದ ಮಹಾಸಾಧನೆಗೆ ಅದೇ ಕಾರಣ.

ಸಾರ್ಥಕ ಬದುಕು

ಖೇತ್ರಿ ಮಹಾರಾಜರು ಒಂದು ದಿನ 'ಜೀವನವೆಂದರೇನು ?' ಎಂದು ಸ್ವಾಮಿ ವಿವೇಕಾನಂದರನ್ನು ಪ್ರಶ್ನಿಸಿದಾಗ ಸ್ವಾಮೀಜಿ ಹೇಳಿದರು : 'ತನ್ನನ್ನು ಅದುಮಿಡುವ ಸಂದರ್ಭಗಳಲ್ಲೂ ಒಂದು ಜೀವ ವಿಕಾಸಗೊಂಡು ಬೆಳವಣಿಗೆ ಪಡೆಯುವುದೇ 'ಜೀವನ' ಎಂದು. ಶ್ರೀಗಳವರ ಸುತ್ತ ಮುತ್ತಲೂ ಅವರನ್ನು ಹತ್ತಿಕ್ಕುವ ದುಷ್ಟಶಕ್ತಿಗಳಿದ್ದರೂ ಅವುಗಳನ್ನು ಮೆಟ್ಟಿ, ಮೇಲೇರಿ ಅವರ ಜೀವನ ವಿಕಾಸಗೊಂಡು ಬದುಕು ಬೆಳಕಾಯಿತು, ಸಾರ್ಥಕವಾಯಿತು.

ಅಕೃತ್ವಾ ಪರಸಂತಾಪಂ
ಅಗತ್ವಾ ಖಲ ನಮ್ರತಾಂ
ಅನುತ್ಸೃಜ್ಯಸತಾಂವರ್ತ್ಮ
ಯತ್ ಸ್ವಲ್ಪಮಪಿ ತದ್‌ಬಹು ॥

ಎಂಬ ಮಾತಿನಂತೆ "ಇತರರಿಗೆ ದುಃಖ ಉಂಟು ಮಾಡದೆ ಪ್ರಬಲರಾದ ದುಷ್ಟ ಜನಗಳಿಗೆ ತಲೆ ತಗ್ಗಿಸದೆ, ಸಜ್ಜನರೊಂದಿಗೆ ಸಹಜವಾದ ನಡತೆಯನ್ನು ಬಿಡದೆ, ಏನನ್ನು ಸಾಧಿಸುತ್ತೇವೆಯೋ ಅದೇ ಶ್ರೇಷ್ಠ. ಅದು ಅಲ್ಪವಾದರೂ ಗೌರವಕ್ಕೆ ಪಾತ್ರವಾದುದು" ಎನ್ನುವ ನೀತಿ ಸೂತ್ರವನ್ನು ತಮ್ಮ ಬಾಳಿನಲ್ಲಿ ಅನುಷ್ಠಾನಕ್ಕೆ ತಂದಿದ್ದಾರೆ ಶ್ರೀಗಳು.

ಶ್ರೀಗಳ ಬಹುಪಾಲು ಜೀವನ ಹೋರಾಟದಲ್ಲಿಯೇ ಕಳೆದಿದೆ. ಸಮಾಜದ ದುಷ್ಟ ಶಕ್ತಿಗಳ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಹೋರಾಟ ಶ್ರೀಗಳ ಬಾಳಿನ ಪಲ್ಲವಿ, ಅನುಪಲ್ಲವಿ. ಹೋರಾಟವೇ ಜೀವನದ ಲಕ್ಷಣ. ಜನನ ಮರಣಗಳ ನಡುವಿನ ಹೋರಾಟವೇ ಜೀವನ. ಶಕ್ತಿ - ಸಾಮರ್ಥ್ಯಗಳ, ನ್ಯಾಯ-ಅನ್ಯಾಯಗಳ, ಒಳಿತು-ಕೆಡಕುಗಳ ನಿದರ್ಶನವೇ ಹೋರಾಟ. ವಿರೋಧ ಶಕ್ತಿಗಳಿಲ್ಲದಿದ್ದರೆ ಬಾಳಿನಲ್ಲಿ ಹೋರಾಟವೂ ಇಲ್ಲ-ಶುಚಿ, ರುಚಿಗಳೂ ಇಲ್ಲ. ಇದು ಶ್ರೀಗಳ ಜೀವನದ ಅನುಭವ ವೇದಾಂತ.

ಶ್ರೀಗಳವರು ಗತಕಾಲದ ಘಟನೆಗಳನ್ನು ನೆನೆದು, ಶೋಕಿಸುತ್ತಾ ಕುಳಿತುಕೊಳ್ಳುವವರಲ್ಲ. ಮುಂದಿನ ಭವಿಷ್ಯವೇನು ? ಎಂದು ಚಿಂತಿಸುವವರೂ ಅಲ್ಲ. ವರ್ತಮಾನ ಕಾಲದ ಬದುಕಿಗೆ ಸ್ಪಂದಿಸುತ್ತಾ ಕಾರ್ಯನಿರತರಾಗುವುದು ಅವರ ಹುಟ್ಟುಗುಣ. 'ನೀನು ಈ ದಿನವನ್ನು ನೋಡಿಕೊ. ಅದು ನಾಳೆಯನ್ನು ನೋಡಿಕೊಳ್ಳುತ್ತದೆ' ಎನ್ನುತ್ತಾನೆ ಒಬ್ಬ ಅಂಗ್ಲ ವಿದ್ವಾಂಸ. 'ನಿನ್ನೆ ಸತ್ತಿಹುದೀಗ ನಾಳೆ ಹುಟ್ಟದೇ ಇಹುದು, ಇಂದು ಸೊಗವಿರಲದನು ಮರೆತಳುವುದೇಕೆ? ಎನ್ನುತ್ತಾನೆ ಉಮರ ಖಯ್ಯಾಮ್. ನಾಳೆ ಬಪ್ಪುದು ನಮಗೆ ಇಂದೇ ಬರಲಿ. ಇಂದೇ ಬಪ್ಪುದು ನಮಗೀಗಲೇ ಬರಲಿ-ಎಂದು ಶರಣರ ಅಭಿಮತ. ಈ ಎಲ್ಲ ವಿಚಾರಗಳೂ ವರ್ತಮಾನ ಕಾಲದಲ್ಲಿ ಕಾರ್ಯನಿರತರಾಗುವ ಅವಶ್ಯಕತೆಯನ್ನೇ ತಿಳಿಸುತ್ತವೆ.

ಶ್ರೀಗಳವರ ಈ ಎಲ್ಲ ಸಂಕಲ್ಪ ಸಾಧನೆಗಳ ಹಿಂದೆ ಪ್ರಸಾದ ಕಾಯಕದ ಮೂಲಕ ನೆರವಾದ ಅವರ ಪೂರ್ವಾಶ್ರಮದ ಕಿರಿಯ ಸಹೋದರಿ ಶರಣೆ ಅಕ್ಕನಾಗಮ್ಮನವರು



ಶ್ರೀಗಳವರ ಸಂಕಲ್ಪ-ಸಾಧನೆಗಳಿಗೆ ನೆರವಾದ
ಶ್ರೀಗಳ ಪೂರ್ವಾಶ್ರಮದ ಸಹೋದರಿ ಶರಣೆ ಅಕ್ಕನಾಗಮ್ಮನವರು

ಇಂದಿಗೂ ಶ್ರೀಗಳ ಜೀವನದ ಕ್ರತುಶಕ್ತಿಯಾಗಿ, ರಕ್ಷಾಕವಚವಾಗಿದ್ದಾರೆ. ಈ ಸಹೋದರ ಸಹೋದರಿಯ ಸಂಬಂಧ ಶೂನ್ಯ ಸಂಪಾದನೆಯ ಅಜಗಣ್ಣ- ಮುಕ್ತಾಯಕ್ಕನವರನ್ನು ನೆನಪಿಗೆ ತರುವಂತಿದೆ. "ಆ ಮಹಾತಾಯಿಯಿಂದ ನನ್ನ ಸಂಕಲ್ಪ ನೆರವೇರಲು ಸಾಧ್ಯವಾಯಿತು" ಎಂದು ಶ್ರೀಗಳು ಈಗಲೂ ಅವರನ್ನು ಧನ್ಯತೆಯಿಂದ ನೆನೆಯುತ್ತಾರೆ.

ಶ್ರೀಗಳವರು 1985ರಲ್ಲಿ ಒಂದು ಸಮಾರಂಭದಲ್ಲಿ ಭಾಗವಹಿಸಿ ಹಿಂತಿರುಗಿ ನಗರಕ್ಕೆ ಬರುತ್ತಿರುವಾಗ ಮಾರ್ಗದಲ್ಲಿ ದೊಡ್ಡ ಅಪಘಾತವೊಂದರಿಂದ ಪಾರಾದರು. ಸುಮಾರು 3-4 ತಿಂಗಳು ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿದ್ದು, ಆರೈಕೆ ಹೊಂದಿದರು. ಜೊತೆಗಿದ್ದ ಸಹಯಾತ್ರಿಗಳಲ್ಲಿ ಕೆಲವರು ಅಪಘಾತದಲ್ಲಿ ಮಡಿದರು. 'ಪುರಾಕೃತಾನಿ ಪುಣ್ಯಾನಿ ರಕ್ಷಂತಿ' ಎಂದು ಹೇಳುವ ಮಾತಿಗೆ ಸಾಕ್ಷಿ, ಎನ್ನುವಂತೆ ಶ್ರೀಗಳು ಬದುಕಿ ಬಂದುದು ಶಿವಯೋಗಿಗಳ ಹರಕೆ ಹಾಗೂ ಸಮಾಜದ ಪುಣ್ಯವಿಶೇಷ. ಶಿವಯೋಗ ಸಮಾಧಿ, ನಿಜಗುಣರ ಸಭಾಂಗಣ, ಶೂನ್ಯ ಸಂಪಾದನೆಯ ವಿಚಾರ ಸಂಕಿರಣದಂತಹ ಮಹತ್ವದ ಕಾರ್ಯಗಳನ್ನು ಪೂರ್ಣಗೊಳಿಸಲು

ಇನ್ನೂ ಉಳಿದ ಸಂಕಲ್ಪಗಳನ್ನು ನೆರವೇರಿಸಲು ಭಗವತ್ ಕೃಪೆಯಿಂದ ಶ್ರೀಗಳು ಅಂತಹ ಭೀಭತ್ಸಕರವಾದ ದುರ್ಘಟನೆಯಿಂದ ಪಾರಾಗಿ ಬಂದಿದ್ದಾರೇನೋ ಎಂದೆನಿಸುತ್ತದೆ.

ಈಗ ಪೂಜ್ಯರಿಗೆ 80 ವರ್ಷಗಳು. ತುಂಬುಬಾಳು, ಅವಿಶ್ರಾಂತ ಜೀವನ ನಡೆಸಿ ಶಿವಾನುಭವದ ಸಾಧನೆ, ಧರ್ಮ ಗ್ರಂಥಗಳ ಪಠಣದೊಂದಿಗೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮ ಕೊನೆಯುಸಿರು ಇರುವವರೆಗೂ ಯಥಾ ಶಕ್ತಿ ಸೇವೆಗೈಯುವ ಹಂಬಲವಿದೆ ಎನ್ನುತ್ತಾರೆ ಶ್ರೀಗಳು. ಜೀವನದ ಸಂಧ್ಯಾಕಾಲದಲ್ಲೂ ಅವರ ಉತ್ಸಾಹ ಉಡುಗಿಲ್ಲ; ಕಾರ್ಯ ಚಟುವಟಿಕೆಗಳು ಕಡಿಮೆಯಾಗಿಲ್ಲ; ಅವರ ಸಾಧನೆ ಸಾಗಿದೆ.

ಶ್ರೀಗಳು ತಮ್ಮ ಜೀವನದ ಗತಕಾಲವನ್ನು ನೆನಪಿಸಿಕೊಳ್ಳುತ್ತಾ 'ಮನುಷ್ಯನ ಪ್ರಯತ್ನದೊಂದಿಗೆ ದೈವೀಶಕ್ತಿಯ ಕರುಣೆ ಬೇಕೇಬೇಕು' ಎನ್ನುತ್ತಾರೆ. ಇಲ್ಲವಾದರೆ ಮನುಷ್ಯನ ಬದುಕು ಸಾರ್ಥಕವಾಗಲಾರದು ಎಂಬುದು ಅವರ ದೃಢವಾದ ನಿಲವು..

"ಈ ಜಗತ್ತು ಒಂದು ಭವನದಿ. ನದಿಯ ಪ್ರವಾಹವೇ ದೈವೀ ಒತ್ತಡ. ಬಾಳೆಂಬ ನೌಕೆಯನ್ನು ಏರಿ ವಿಹರಿಸುವ ಪಥಿಕನಿಗೆ ಪ್ರವಾಹದ ಸೆಳೆತದೊಡನೆ ಪುರುಷ ಪ್ರಯತ್ನವೆಂಬ ಹುಟ್ಟುಹಾಕುವ ಕಾರ್ಯವೂ ಬೇಕು. ಪುರುಷ ಪ್ರಯತ್ನ ದೈವ ಬಲದ ಸಮತೋಲನ ಅವಶ್ಯಕ" ಎಂದು ಹೇಳುವ ಅನುಭವ ವಾಣಿ ಶ್ರೀಗಳವರಿಗೆ ಪೂರ್ಣ ಸಮ್ಮತ.

ಶ್ರೀಗಳವರು ಯಾರಿಗೂ ಕೇಡು ಬಗೆಯುವವರಲ್ಲ; ಕೇಡು ನುಡಿಯುವವರೂ ಅಲ್ಲ. ಅವರಿಗೆ ಪ್ರಚಾರವೆಂದರೆ ಇಷ್ಟವಿಲ್ಲ. ಎಲೆಮರೆಯ ಕಾಯಿಯಂತೆ, ನೆಲದ ಮರೆಯ ನಿಧಾನದಂತೆ ಬಾಳಬೇಕೆಂಬಾಸೆ. ತಮಗೆ ಕೇಡು ಬಗೆದ ಸ್ವಾರ್ಥಿಗಳಿಗೂ ಶಿವಯೋಗಿಗಳು ಸದ್ಗತಿಯನ್ನು ಕರುಣಿಸಲಿ ಎನ್ನು ಹರಕೆ ಅವರದಾಗಿದೆ.

ನಿರಾಭಾರಿ ಸದ್ಗುರುವಿಗೆ ನಾಡಿನ ಪರಮ ಪೂಜ್ಯರಿಂದ ಪ್ರಶಂಸೆ ಹಾಗೂ ಪ್ರಶಸ್ತಿಗಳು

ಪೂಜ್ಯ ನಿಜಗುಣ ಶ್ರೀಗಳ ಜೀವನ-ಸಾಧನೆಯನ್ನು ತೀರಾ ಹತ್ತಿರದಿಂದ ಕಂಡ ನಾಡಿನ ಪೂಜ್ಯ ಮಠಾಧೀಶರ ಅಭಿಪ್ರಾಯಗಳು ಹೀಗಿವೆ :

1. ಜಗದ್ಗುರು ಮೂರು ಸಾವಿರ ಮಠದ ಸನ್ನಿಧಿಯವರು ಶ್ರೀ ನಿಜಗುಣ ಸ್ವಾಮಿಗಳನ್ನು ಹೀಗೆ ಕಂಡಿದ್ದಾರೆ :

"ಕೂಡಲ ಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ"

ಎಂದು ಹಂಬಲಿಸಿದ ಭಕ್ತಿ ಭಂಡಾರಿ ಬಸವಣ್ಣನವರ ಪಥವಿಡಿದು ಶ್ರೀಮಠಕ್ಕೆ ದಯಮಾಡಿಸುವ ಪೂಜ್ಯರುಗಳನ್ನು, ವಿದ್ವಾಂಸರನ್ನು, ಅತ್ಯಂತ ಆದರದಿಂದ ಸ್ವಾಗತಿಸಿ, ಉಪಚರಿಸಿ, ಸತ್ಕರಿಸುವ ತಮ್ಮ ಮಾತೃಹೃದಯವನ್ನು ಏನೆಂದು ಬಣ್ಣಿಸುವುದು ?

ಆಡಂಬರ ರಹಿತ ಸರಳ ಸುಂದರ ಜೀವನ. ಕೊಂಕು ಬಿಂಕಗಳ ಸೋಂಕಿಲ್ಲದ ಪ್ರಾಮಾಣಿಕ ಬದುಕು.

ಬಾಹ್ಯಾಭ್ಯಂತರದಲ್ಲಿ ಭೇದ ಕಾಣದ ಪರಿಶುದ್ಧ ಹೃದಯ. ವಿನಯಶೀಲತೆ ಸಕಲರಿಗೂ ಲೇಸನ್ನೇ ಬಯಸುವ ಉದಾತ್ತ ಚಿಂತನೆಯನ್ನು ಶ್ರೀಗಳವರಲ್ಲಿ ಕಂಡಿದ್ದಾರೆ.

2. ತ್ರಿವಿಧ ದಾಸೋಹ ಮೂರ್ತಿಗಳಾದ ಧಾರವಾಡದ ಪೂಜ್ಯ ಮಹಾಂತಪ್ಪಗಳವರ ಅಭಿಪ್ರಾಯ ಹೀಗಿದೆ :

ತಮ್ಮ (ಪೂಜ್ಯ ನಿಜಗುಣಶ್ರೀಗಳು) ಅಂತಃಕರಣ. ತಮ್ಮ ದಾಸೋಹಂಭಾವ. ವರ್ಣನಾತೀತ. ಶಬ್ದಕ್ಕೆ ನಿಲುಕದು. ತಮ್ಮ ಬದುಕೇ ಅಂತಃಕರಣದಾಗರ. ಸಾಮರಸ್ಯ ಸಹಿಷ್ಣುತೆಯ ಪ್ರತೀಕ. ತಾವು ಅಭೂತಪೂರ್ವವಾದ ಕರ್ತೃತ್ವ ಶಕ್ತಿಯನ್ನು ಪಡೆದಿದ್ದೀರಿ. ಆದ್ದರಿಂದಲೇ ಭವ್ಯವಾದ ನಿಜಗುಣಕ್ಷೇತ್ರ, ಹಾಗೂ ಶ್ರೀ ಜಂಗಮಮಠಗಳನ್ನು ನಿರ್ಮಿಸಲು ತಮ್ಮಿಂದ ಸಾಧ್ಯವಾಯಿತು ಎಂದು ತಿಳಿಸಿ ವಿದ್ವಾಂಸರ ಸಭೆಯಲ್ಲಿ ನಿರಾಭಾರಿ ಸದ್ಗುರುವೆಂದು ಸಂಬೋಧಿಸಿ 'ಕಾಯಕಯೋಗಿ' ಎಂಬ ಪ್ರಶಸ್ತಿಯೊಂದಿಗೆ ಸನ್ಮಾನ ಪತ್ರ ಸಮರ್ಪಿಸಿದ್ದಾರೆ.

3. ಚಿತ್ತರಗಿ ಸಂಸ್ಥಾನ ಮಠದ ಪೂಜ್ಯ ಮಹಾಂತ ಸ್ವಾಮಿಗಳವರು ಇಲಕಲ್ ಅವರ ಅಭಿಪ್ರಾಯ ಹೀಗಿದೆ :

ಅಂದು "ಕೂಡಲ ಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯ" ಎಂದು ಹಂಬಲಿಸಿದ ಭಕ್ತಿ ಭಂಡಾರಿ ಬಸವೇಶ್ವರರಂತೆ ಇಂದು ತಾವು ರಾಜಧಾನಿಗೆ ದಯಮಾಡಿಸುವ ನಾಡಿನ ಮಠಾಧೀಶರನ್ನು, ತುಂಬು ಹೃದಯದಿಂದ ಸ್ವಾಗತಿಸಿ, ಸತ್ಕರಿಸುವ ಮಾತೃ ಹೃದಯಿಗಳಾದ ತಾವು, ಸಭೆ, ಸಮಾರಂಭಗಳ ಮೂಲಕ ಪೂಜ್ಯ ಮಹಾಸ್ವಾಮಿಗಳ ದರ್ಶನ, ಆಶೀರ್ವಾದಗಳನ್ನು ಸಾರ್ವಜನಿಕರಿಗೆ ಲಭಿಸುವಂತೆ ಮಾಡುತ್ತಿರುವುದು-ತಮ್ಮ ಔದಾರ್ಯದ ಪ್ರತೀಕವಾಗಿದೆ" ಎನ್ನುತ್ತಾರೆ.

4. ತ್ರಿವಿಧ ದಾಸೋಹ ಮೂರ್ತಿಗಳಾದ ಸಿದ್ಧಗಂಗಾ ಮಠಾಧೀಶರಾದ ಪೂಜ್ಯ ಡಾ: ಶಿವಕುಮಾರ ಸ್ವಾಮಿಗಳು ಶ್ರೀ ನಿಜಗುಣ ಸ್ವಾಮಿಗಳನ್ನು ಹೀಗೆ ಕಂಡಿದ್ದಾರೆ:

"ಪೂಜ್ಯ ನಿಜಗುಣ ಶ್ರೀಗಳ ಸಾಧನೆಯನ್ನು ಹಲವಾರು ವರ್ಷಗಳಿಂದ ಗಮನಿಸುತ್ತ ಬಂದಿದ್ದೇವೆ. ಅವರು ಈ ಮಠವನ್ನು ಈ ಸ್ಥಿತಿಗೆ ತರಬೇಕಾದರೆ ಸಾಕಷ್ಟು ಕಷ್ಟಪಟ್ಟಿದ್ದಾರೆ.; ಸಾಕಷ್ಟು ವಿರೋಧವನ್ನು ಎದುರಿಸಿದ್ದಾರೆ. ಅವರ ಸತ್ಯಶುದ್ಧ ಕಾಯಕದ ಫಲ ಈ ಶ್ರೀಮಠ. ಅವರ ಹೋರಾಟ, ಪ್ರಾಮಾಣಿಕ ಬದುಕು, ಕಾಯಕನಿಷ್ಠೆ, ಸರಳ ಜೀವನ, ನಯ ವಿನಯ ಸಂಸ್ಕೃತಿಗಳು ಆದರ್ಶ ಹಾಗೂ ಅನುಕರಣೀಯವಾಗಿವೆ" ಎಂದು ಅಭಿಪ್ರಾಯಪಡುತ್ತಾರೆ.

(ಜೀವರತ್ನಕ್ಕೆ ಪ್ರಶಂಸೆಯ ಹಾಗೂ ಪ್ರಶಸ್ತಿಯ ಅಗತ್ಯ ಬೇಕಾಗಿಲ್ಲವಾದರೂ ನಾಡಿನ ಪರಮಪೂಜ್ಯ ಮಠಾಧೀಶ್ವರರ ಅಭಿಪ್ರಾಯ ಶ್ರೀಗಳನ್ನು ಕುರಿತು ಹೀಗಿದೆ ಎಂದು ಓದುಗರ ಅವಗಾಹನೆಗಾಗಿ ಅವರ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದೇನೆ).

'ಜೀವೇಮಶ್ಶರದಶ್ಶತಂ' - ಪೂಜ್ಯ ನಿಜಗುಣ ಶ್ರೀಗಳು ನಮ್ಮೆಲ್ಲರ ನಡುವೆ ಇನ್ನೂ ನೂರು ಕಾಲವಿದ್ದು ಮಾರ್ಗದರ್ಶನ ಮಾಡುತ್ತ ನಮ್ಮನ್ನು ಹರಸುತ್ತಿರಲಿ ಎಂಬುದೇ ನಮ್ಮ ಹಂಬಲ.

ಸಂಪತ್‌ಶೀಲ ಶ್ರೀ ನಿಜಗುಣ ಸ್ವಾಮಿಗಳು ಮತ್ತು ಜಂಗಮ ಮಠದ ಸಾಂಸ್ಕೃತಿಕ ಕಾರ್ಯಕ್ರಮಗಳ ಪಕ್ಷಿನೋಟ

ಶ್ರೀ ಮ. ನಿ. ಪ್ರ ಜ ॥ ಅನ್ನದಾನೀಶ್ವರ ಮಹಾಸ್ವಾಮಿಗಳು

ವೀರಶೈವಧರ್ಮದ ಪಾರಿಭಾಷಿಕ ಪದಗಳು ಬಹುಶಃ ಭಾರತೀಯ ಬೇರೆ ಧರ್ಮಗಳಲ್ಲಿ ಕಂಡುಬರುವುದಿಲ್ಲ. ವೀರಶೈವಧರ್ಮ, ದರ್ಶನ, ಸಿದ್ಧಾಂತ ಸಾಧನೆ. ಸಂಸ್ಕೃತಿಗಳಲ್ಲಿ ವಿಶೇಷವಾದ ಪದಪ್ರಯೋಗಗಳೇ ಆಗುತ್ತವೆ. ಇಲ್ಲಿ ಅವನ್ನೆಲ್ಲ ವಿಶ್ಲೇಷಿಸುವುದು ಅಪ್ರಸ್ತುತ. ಮುಖ್ಯವಾಗಿ ಗುರು ಜಂಗಮರಿಗೆ ಉಪಯೋಗಿಸುವ ಒಕ್ಕಣಿಕೆಗಳು ತಾತ್ವಿಕವಾಗಿವೆ. ರಾಜ ಮಹಾರಾಜರಂತೆ ಅವು ಬಿರುದುಗಳೂ ಅಲ್ಲ. ಆ ಪದಗಳು ಅವರ ವ್ಯಕ್ತಿತ್ವನ್ನು ಸೂಚಿಸುತ್ತವೆ. ಗುರುಗಳಿಗೆ ಶ್ರೀ ಮದ್ಘನ ಲಿಂಗ ಚಕ್ರವರ್ತಿ, ಶ್ರೀ ಷಟ್‌ಸ್ಥಲ ಬ್ರಹ್ಮಿ ಎಂಬ ಒಕ್ಕಣಿಕೆಗಳು ಪ್ರಯೋಗಿಸಲ್ಪಟ್ಟರೆ ಜಂಗಮ ಮೂರ್ತಿಗಳಿಗೆ "ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ"ಗಳೆಂದು ಕರೆಯುತ್ತಾರೆ.

'ಶ್ರೀಮನ್ನಿರಂಜನ' ಪದದಲ್ಲಿ ಶ್ರೀ-ಮತ್-ನಿರಂಜನ ಮೂರು ಪದಗಳಿವೆ. ಶ್ರೀಕಾರವು ನಾನಾರ್ಥಗಳಲ್ಲಿ ಪ್ರಯೋಗವಾಗಿದೆ. ಶಬ್ದಕೋಶವು 16-17 ಅರ್ಥಗಳನ್ನು ಸೂಚಿಸಿದೆ. ಅಮರಕೋಶದಲ್ಲಿ 'ಸಂಪತ್ತಿ : ಶ್ರೀಶ್ಚ ಲಕ್ಷ್ಮೀಶ್ಚ" ಶ್ರೀ ಶಬ್ದವು ಮುಖ್ಯವಾಗಿ ಸಂಪತ್ತ ಲಕ್ಷಿ ಎಂಬರ್ಥಗಳನ್ನು ಸೂಚಿಸುತ್ತದೆ. ಶ್ರೀಕಾರವು ಇಲ್ಲಿ ಸಂಪತ್ ಸೂಚಕವೇ ಆಗಿದೆ. ಜಂಗಮನಿಗಿರುವ ಸಂಪತ್ತು ಆಧ್ಯಾತ್ಮಿಕವಾದುದು. ಇವರು ಭೌತಿಕ ಸಂಪತ್ತಿನಿಂದ ದೂರವಿರುತ್ತಾರೆ. ಆದರೆ ಇಂದಿನ ಸ್ಥಿತಿಗತಿಗಳು ಬೇರೆ, ಇರಲಿ. ಸತಿ, ಪುತ್ರ, ಧನ, ಧಾನ್ಯ, ಕರಿ, ತುರುಗಾದಿಗಳು ಲೌಕಿಕ ಸಂಪತ್ತೆನಿಸಿದರೆ; ಭಕ್ತಿ, ಜ್ಞಾನ-ವೈರಾಗ್ಯಾದಿಗಳು ಪಾರಮಾರ್ಥಿಕ ಸಂಪತ್ತೆನಿಸುವುದು.

ಜಂಗಮನು ನಿರಾಭಾರಿ ಸದ್ಗುರುವೆನಿಸುತ್ತಾನೆ. ಇವನು ಕರುಣ-ಸತ್ಕಲೆ-ಶಾಸ್ತ್ರಪರಿಣತಿ-ಸೌಂದರತೆ-ನಿರಾಶೆಗಳೆಂಬ ಪಾರಮಾರ್ಥಿಕ ಸಂಪತ್ತಿನಿಂದ ಶೋಭಾಯಮಾನವಾಗಿರುವಂತೆ, ಜ್ಞಾನ, ಐಶ್ವರ್ಯ, ಯಶಸ್ಸು, ಧರ್ಮ, ವೀರ್ಯ,

ತೇಜಸ್ಸುಗಳೆಂಬ ಷಡ್ಗುಣೈಶ್ವರ್ಯ ಭರಿತನಾಗಿರುತ್ತಾನೆ. ಈ ಷಡ್ಗುಣೈಶ್ವರ್ಯಗಳನ್ನು ಸಂಪಾದಿಸಿದರೂ ನಿರಂಜನನಾಗಿರಬೇಕು. ಅಂತೆಯೇ ಶ್ರೀಮನ್ನಿರಂಜನ ಪದ ಪ್ರಯೋಗವಾಗಿದೆ. ಶ್ರೀಮತ್ ಶಬ್ದವು ಷಡ್ಗುಣೈಶ್ವರ್ಯವುಳ್ಳವನು ಎಂಬುದನ್ನು ತೋರಿಸುತ್ತದೆ. ಸ್ವಾಮಿಗಳಿಗೆ ಬರೆಯುವ ಈ ಒಕ್ಕಣಿಕೆಯು ಅವರ ಆ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಅವರ ಸಾಧನೆಯನ್ನು ಎತ್ತಿ ತೋರಿಸುತ್ತದೆ.

ಸ್ವಾಮಿಗಳಾದವರಿಗೆ ಸಂಸ್ಕಾರದಿಂದ ಜಂಗಮತ್ವ ಬರುವುದಾದರೂ ಅಷ್ಟರಿಂದಲೇ ಜಂಗಮತ್ವ ಅಳವಡದು. ಸಾಧನೆಯಿಂದ ಅದನ್ನು ಸಾಧಿಸಿಕೊಳ್ಳಬೇಕಾಗುವದು. ಜಂಗಮನಾದವನು ಸಂಪತ್‌ಶೀಲನಾಗಬೇಕಾಗುವದು.

ಪಾರಮಾರ್ಥಿಕ ಸಂಪತ್ತನ್ನು ಸಂಪಾದಿಸಿಯೂ ನಿರಂಜನನಾದ ಜಂಗಮನು ಸದಾಕಾಲದಲ್ಲಿ ಮಂತ್ರಾನುಸಂಧಾನದಲ್ಲಿ ತೊಡಗಿರುವುದರಿಂದ ಪ್ರಣವ ಸ್ವರೂಪನೆನಿಸುತ್ತಾನೆ. ಜ್ಞಾನಿಯಾದ ಜಂಗಮನು ವಸ್ತುತಃ ಪ್ರಣವಸ್ವರೂಪನೆನಿಸುವನು.

ಈ ದಿಶೆಯಲ್ಲಿ ಸಂಪತ್ ಶೀಲರಾದವರು ಬೆಂಗಳೂರಿನ ಜಂಗಮ ಮಠಾಧೀಶರಾದ ನಿಜಗುಣಸ್ವಾಮಿಗಳು. ಇವರು ಕ್ರಿಯಾಶೀಲರು, ಆಚಾರ ಶೀಲರು, ಲೌಕಿಕ ಪಾರಮಾರ್ಥಿಕ ಸಂಪತ್ ಶೀಲರೂ ಆಗಿದ್ದಾರೆ.

1975ರಲ್ಲಿ ಬೆಂಗಳೂರಿಗೆ ಸಂದರ್ಶನ ಕೊಟ್ಟಾಗ ಶ್ರೀ ನಿಜಗುಣ ಸ್ವಾಮಿಗಳವರನ್ನು ಹಾಗೂ ಅವರ ಕಲ್ಯಾಣ ಕ್ಷೇತ್ರವನ್ನು ನೋಡಿದ್ದೆವು. ಆಗ ಮಠದ ನಿರ್ಮಾಣವಾಗಿರಲಿಲ್ಲ. ಪೂಜ್ಯಶ್ರೀಗಳು ಕಾಯಕಷ್ಟದಿಂದ ಸತ್ಯ ಶುದ್ಧ ಕಾಯಕ ಮಾಡುತ್ತ ಭೌತಿಕ ಸಂಪತ್ತಿನ ಸಂಪಾದನೆಗೈದರೂ ಸಂತೃಪ್ತರಾಗಲಿಲ್ಲ. ಮೊದಲಿನಿಂದಲೂ ಪಾರಮಾರ್ಥಿಕ ಸಂಪತ್ತಿನ ಸಂಪಾದನೆಯಲ್ಲಿ ಆಸಕ್ತಿ ವ್ಯಕ್ತಿಗತವಾಗಿತ್ತು. ನಿತ್ಯ ಲಿಂಗಾರ್ಚನೆ ಹಾಗೂ ಸತ್ಯದ ಕಾರ್ಯ ನಡೆದಿತ್ತು. ಕಾಯಕ ಫಲವನ್ನು ದಾಸೋಹಂಭಾವದಿಂದ ಸಮಾಜಕ್ಕೆ ಸಮರ್ಪಿಸುವಲ್ಲಿ ಸತ್‌ಸಂಕಲ್ಪಗೈದರು. ನಾಡಿನ ಮಠಾಧೀಶರಿಗೂ ಸ್ವಯಂ ಪ್ರಭೆಯನ್ನು, ಸಾಧಿಸಿಕೊಳ್ಳಲೆಂದು 1978ರಲ್ಲಿ 'ಅಖಿಲ ಕರ್ನಾಟಕ ಮಠಾಧಿಪತಿಗಳ ಸಂಘ' ವನ್ನು ಸಂಘಟಿಸಿ ಸ್ವತ : ಶ್ರೀಗಳು ಪ್ರಧಾನಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಅದರ ಪ್ರಧಾನ ಕಚೇರಿಯನ್ನು ಜಂಗಮ ಮಠದಲ್ಲಿಯೇ ತೆರೆದರು. ನಾಡಿನ ಅನೇಕ ಮಠಾಧಿಪತಿಗಳನ್ನು ಈ ಸಂಘದ ಸದಸ್ಯರಾಗಲು ಸಂಚರಿಸಿದರು. ಈ ಹಂತದಲ್ಲಿ ಸರ್ವಭೂಷಣ ಮಠಾಧ್ಯಕ್ಷರಾಗಿದ್ದ ಶ್ರೀ ಶಿವಕುಮಾರ ಸ್ವಾಮಿಗಳೊಡನೆ ಮುಂಡರಗಿಯ ಶ್ರೀಮಠಕ್ಕೂ ಪ್ರಥಮವಾಗಿ ಆಗಮಿಸಿದ್ದರು.

''ಶ್ರೀಗಳು ಗತಕಾಲದ ಘಟನೆಗಳನ್ನು ನೆನೆದು ಶೋಕಿಸುತ್ತಾ ಕುಳಿತುಕೊಳ್ಳುವವರಲ್ಲ; ಮುಂದಿನ ಭವಿಷ್ಯವೇನು ? ಎಂದು ಚಿಂತಿಸುವವರೂ ಅಲ್ಲ. ವರ್ತಮಾನ ಕಾಲದ ಬದುಕಿಗೆ ಸ್ಪಂದಿಸುತ್ತಾ ಕಾರ್ಯನಿರತರಾಗುವುದು ಅವರ ಹುಟ್ಟುಗುಣ''[1] ಎಂದು ಸಮೀಪವರ್ತಿಗಳು,

1. ಶೂನ್ಯಸಂಪಾದನೆ ಒಂದು ಅಧ್ಯಯನ- ಸಂ. ಡಾ. ಸಾ. ಶಿ. ಮರುಳಯ್ಯ-ಜ್ಯೋತಿಪ್ರಭಾ, ಪುಟ - 32

ವಿವೇಚಿಸಿದ ನುಡಿ ಸತ್ಯಸ್ಯಸತ್ಯವೆನಿಸಿದೆ. ಭೌತಿಕ ಸಂಪತ್ತು ವರ್ಧಿಸಿದಂತೆ ಅದರ ಸದುಪಯೋಗದತ್ತ ಶ್ರೀಗಳು ಕಾರ್ಯನಿರತರಾದರು. ಜ್ಞಾನ, ದಾಸೋಹಕ್ಕಾಗಿ ಸುಜ್ಞಾನ ಸಂಪತ್ತಿನ ಸಂಪಾದನೆಗಾಗಿ ಸತ್‌ಸಂಕಲ್ಪ ಮಾಡಿದರು. ತಮ್ಮೊಂದಿಗೆ ಭಕ್ತ ಸಮೂಹಕ್ಕೂ ಇದು ಸಾಧ್ಯವಾಗಲೆಂದು 1981 ಹಾಗೂ 1982ರ ಶ್ರಾವಣದಲ್ಲಿ ಬೇಲಿಮಠ ಶ್ರೀಗಳಿಂದ, ಷಣ್ಮುಖಯ್ಯ ಅಕ್ಕೂರಮಠ ಅವರಿಂದ ತುಪ್ಪದ ಬಸವ ರಾಜವಿರಚಿತ 'ಶ್ರೀ ಬಸವ ದರ್ಶನಂ' ಕಾವ್ಯದ ಪ್ರವಚನಗಳು ಮತ್ತು ಸಾಪ್ತಾಹಿಕ ಉಪನ್ಯಾಸಗಳು ಜರುಗಿ ಜನಮನಕ್ಕೆ ಬಸವ ಸಂದೇಶವನ್ನು ಬೀರಿದವು.

ಧಾರ್ಮಿಕ ಬದುಕು

ದಿ. 4-4-1983 ರಿಂದ 6-4-83ರವರೆಗೆ ತ್ರಿವಿಧ ದಾಸೋಹ ಮೂರ್ತಿಗಳೆಂದೂ, ಮಹಾಪುರುಷಗಳೆಂದೂ ಖ್ಯಾತನಾಮರಾದ ಧಾರವಾಡ ಮುರಘಾಮಠದ ಪೂಜ್ಯರ ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದರು. ಹುಬ್ಬಳ್ಳಿ ಮೂರು ಸಾವಿರ ಮಠದ ಧರ್ಮ ಪ್ರಚಾರಕ ಮಂಡಳದ ಸಂಸ್ಕೃತಿ ಪ್ರಚಾರೋಪನ್ಯಾಸಮಾಲೆಯ ಪುಸ್ತಕ ಬಿಡುಗಡೆಯೂ ಜರುಗಿತು. 1984 ರಲ್ಲಿ ಮಾನವನನ್ನು ಮಹಾದೇವನನ್ನಾಗಿಸುವ ದೀಕ್ಷಾ ಸಮಾರಂಭವನ್ನು ನಡೆಸಿಕೊಟ್ಟರು. ಅಲ್ಲದೆ ಆ ಶ್ರಾವಣದಲ್ಲಿ 'ಈಶ್ವರಾನುಗ್ರಹ', 'ಹರಿಹರನ ರಗಳೆಗಳಲ್ಲಿ ಜೀವನದರ್ಶನ', 'ಹರಿಶ್ಚಂದ್ರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ' ವಿಷಯಕ ಉಪನ್ಯಾಸಗಳು ಮನಂಬುಗುವಂತೆ ನಡೆದವು.

1985ರಲ್ಲಿ ವಾಹನ ಅಪಘಾತದಲ್ಲಿ ಶ್ರೀಗಳವರು ತೀವ್ರವಾದ ಪೆಟ್ಟು ತಿಂದರು. ಗುರು ಜಂಗಮ ಸೇವಾಸಕ್ತರಾದ ಪೂಜ್ಯರು ಗುಣಮುಖರಾಗಿ 1987ರ ಜುಲೈ 18-19-20 ದಿನಾಂಕಗಳಲ್ಲಿ ನಡೆಸಿದ ಶಿವಾನುಭವ ಸಮ್ಮೇಳನ, ಶೂನ್ಯಸಂಪಾದನೆ ವಿಚಾರ ಸಂಕಿರಣ ಮಹತ್ವಪೂರ್ಣವಾದುದು. ಇದು ಹುಬ್ಬಳ್ಳಿಯ ಮೂಜಗಂ ಅವರ ಪೀಠಾರೋಹ ರಜತೋತ್ಸವದ ಅಂಗವಾಗಿ ನಡೆದು ಜಂಗಮ ಗೌರವ ಸಲ್ಲಿಸಲಾಯಿತು. ಈ ಕಾರ್ಯಕ್ರಮದ ಪ್ರಾರಂಭದಲ್ಲಿ ಮತ್ತೊಂದು ವಿನೂತನ 'ಶ್ರೀ ನಿಜಗುಣ ಸಂಭಾಗಣ'ದ ಪ್ರವೇಶೋತ್ಸವವು ಜರುಗಿತಲ್ಲದೆ ಶೂನ್ಯ ಸಂಪಾದನೆ - ಕುರಿತ ವಿಚಾರ ಸಂಕಿರಣಗಳಲ್ಲಿ 1 ಶೂನ್ಯದ ಪರಿಕಲ್ಪನೆ ವೀರಶೈವದಲ್ಲಿ ಮತ್ತು ಇತರ ದರ್ಶನಗಳಲ್ಲಿ, 2 ಸಂಪಾದನೆ ಮಾತಿನ ಅರ್ಥ, 3 ಶೂನ್ಯ ಸಂಪಾದನೆಯ ಅಜಗಣ್ಣ ಮತ್ತು ಆತನ ವಚನಗಳ ಅಭಿಜ್ಞೆ 4. ಶೂನ್ಯ ಸಂಪಾದನೆ ಸಾಹಿತ್ಯಕ ಮೌಲ್ಯಗಳು 5. ಶೂನ್ಯ ಸಂಪಾದನೆ ರಾಚನಿಕ ವಿವೇಚನೆ. ಶೂನ್ಯ ಸಂಪಾದನೆ ಮತ್ತು ಪ್ರಭುಲಿಂಗಲೀಲೆ ಒಂದು ವಿವೇಚನೆ 7. ಶೂನ್ಯ ಸಂಪಾದನೆ ಮತ್ತು ಪ್ಲೇಟೋ ಡೈಲಾಗಗಳು 8. ಶೂನ್ಯ ಸಂಪಾದನೆಯ ಮಹತ್ವದ ಪ್ರಸಂಗಗಳು 9. ಶೂನ್ಯ ಸಂಪಾದನೆ ಕುರಿತ ಇತ್ತೀಚಿನ ವ್ಯಾಖ್ಯಾನಗಳು 10. ಶೂನ್ಯ ಸಂಪಾದನೆಯಲ್ಲಿರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರ 11 ಶೂನ್ಯ ಸಂಪಾದನೆ : ಒಂದು ಅನುಭವ ಗ್ರಂಥವಾಗಿ ಹೀಗೆ

ಅನುಭಾವ ಗಮ್ಯ ಉಪನ್ಯಾಸಗಳು ನಡೆದವು. ಅಲ್ಲದೆ ಮಹಿಳಾಗೋಷ್ಠಿ, ಕವಿಗೋಷ್ಠಿ ಗುರುದರ್ಶನ ಗೋಷ್ಠಿ, ಯುವಗೋಷ್ಠಿಗಳು ನಡೆದು ಶೂನ್ಯಸಂಪಾದನೆಯ ಕೃತಿಗಾಗಿ ದುಡಿದ ಮಹನೀಯರನ್ನು ಗೌರವಿಸಿದ್ದು ಔಚಿತ್ಯಪೂರ್ಣವಾದುದು. ಶೂನ್ಯಸಂಪಾದನಶೀಲರಾದ ಗುರುಜಂಗಮ ಸಮ್ಮುಖದಲ್ಲಿ ಗೌರವಾನ್ವಿತರಾದವರು- ಡಾ.ಜ.ಚ.ನಿ, ಡಾ ಆರ್. ಸಿ. ಹಿರೇಮಠ, ಡಾ. ಎಲ್ ಬಸವರಾಜು, ಡಾ॥ ಎಚ್ ತಿಪ್ಪೇರುದ್ರಸ್ವಾಮಿ. ಪ್ರೊ।ಸಂ. ಶಿ. ಭೂಸನೂರ ಮಠ, ಡಾ।ಜೋಳದ ರಾಶಿ ದೊಡ್ಡನಗೌಡ, ಡಾ ಎಂ. ಚಿದಾನಂದಮೂರ್ತಿ, ಡಾ. ಪ್ಹಿ. ಎಸ್. ಕಂಬಿ ರಜತೊತ್ಸವದ ನೆನಹಿನಲ್ಲಿ ವಿಶೇಷ ಗೌರವವನ್ನು ನಿಜಗುಣಸ್ವಾಮಿಗಳು ಸಲ್ಲಿಸಿ ಸಂತಸಪಟ್ಟರು. ಜಂಗಮನಾದರೂ ಜಂಗಮ ಭಕ್ತಿಯನ್ನು ಸಲ್ಲಿಸುವುದು ವೀರಶೈವದ ಮಹಿಹ. ಕಾಯಕದಿಂದ ಬಂದ ಸಂಪತ್ತು ಜಂಗಮಾರ್ಪಿತವಾಗಲೇ ಬೇಕು. ಈ ಸಂದರ್ಭದ ಕೊನೆಗೆ ಸಂಗೀತ ಸಾಮ್ರಾಟರೆನೆನಿಸಿದ ಕಾಳಿದಾಸ ಪ್ರಶಸ್ತಿ ವಿಜೇತ ಡಾ। ಮಲ್ಲಿಕಾರ್ಜುನರ ಮಹತ್ತರವಾದ ವಚನ ಗಾಯನ ಸನ್ಮಾನ ನಡೆದ ದೃಶ್ಯ ಅಪೂರ್ವವಾಗಿತ್ತು. ಈ ಮಹತ್ತರ ಜ್ಞಾನದಾಸೋಹಕ್ಕೆ ಸಾಕಷ್ಟು ರೀತಿಯಲ್ಲಿ ಎಲ್ಲ ವ್ಯವಸ್ಥೆಗೈದು ಹೆಚ್ಚಿನ ವಿನಿಯೋಗ ಮಾಡಿದರು. ಭೌತಿಕ ಸಂಪತ್ತು ವಿನಿಯೋಗವಾದರೂ ಆಧ್ಯಾತ್ಮಿಕ ಸಂಪತ್ತಿನ ಸಂಪಾದನೆಯಾಗಿತ್ತು. ಈ ನೆನಹಿನ 'ಶೂನ್ಯ ಸಂಪಾದನೆ ಒಂದು ಅಧ್ಯಯನ' ಕೃತಿಯನ್ನು ಡಾ। ಸಾ. ಶಿ. ಮರುಳಯ್ಯ ಇವರು ಸಂಪಾದಿಸಿದ್ದು ಸ್ತುತ್ಯ.

ಎರಡನೆಯ ಅಖಿಲ ಭಾರತ ಶರಣಸಾಹಿತ್ಯ ಸಮ್ಮೇಳನ

ಕ್ರಿ. ಶ. 1988ನೇ ಸೆಪ್ಟಂಬರ 10-11-12ರಂದು ಶ್ರೀ ನಿಜಗುಣರ ಕ್ಷೇತ್ರದಲ್ಲಿ ಸಮಾವೇಶಗೊಂಡ ಎರಡನೆಯ ಅಖಿಲ ಭಾರತ ಶರಣಸಾಹಿತ್ಯ ಸಮ್ಮೇಳನ ಮಹತ್ವಪೂರ್ಣವಾದುದು. ಈ ಸಮ್ಮೇಳನವು ಸುತ್ತೂರು ಮಠದ ಶ್ರೀ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮೈಸೂರು ಇವರು ಸ್ಥಾಪಿಸಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮುಖಾಂತರ ನೆರವೇರಿತು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ನಿವೃತ್ತ ಕುಲಪತಿಗಳೂ ಹಿರಿಯ ಸಂಶೋಧಕರೂ ಆದ ಡಾ. ಆರ್. ಸಿ ಹಿರೇಮಠರು ವಹಿಸಿದ್ದರು. 10-9-1988ರಂದು ಕರ್ನಾಟಕ ರಾಜ್ಯದ ರಾಜ್ಯಪಾಲ ಶ್ರೀ ಪಿ. ವೆಂಕಟಸುಬ್ಬಯ್ಯ ಇವರು ಈ ಸಮ್ಮೇಳನವನ್ನು ಉದ್ಘಾಟಿಸಿದ್ದರು. ತರಳಬಾಳು ಡಾ। ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಗ್ರಂಥ ಪ್ರದರ್ಶನವನ್ನು ಪ್ರಾರಂಭಿಸಿದರು. ಮೂರುದಿನಗಳ ಕಾಲ ಐದು ಗೋಷ್ಠಿಗಳಲ್ಲಿ -1. ಶರಣಶಬ್ದದ ಪರಿಕಲ್ಪನೆ 2. ಶರಣರ ಧಾರ್ಮಿಕ ಧೋರಣೆ 3. ಮರಾಠಿಯಲ್ಲಿ ಶರಣಸಾಹಿತ್ಯ 4. ವಚನ ಸಾಹಿತ್ಯ ಮೌಲ್ಯ ವಿವೇಚನೆ 5. ವಚನೇತರ ಶರಣಸಾಹಿತ್ಯ 6. ತೆಲುಗಿನಲ್ಲಿ ಶರಣ ಸಹಿತ್ಯ 7. ಬಸವ ಪೂರ್ವವಚನಕಾರರು 8. ಬಸವ ಯುಗದ ವಚನಕಾರರು 9. ವಚನಕಾರ್ತಿಯರು 10.

ಶರಣ ಸಾಹಿತ್ಯಕ್ಕೆ ಪ್ರೇರಣೆಗಳು 11. ಶರಣಸಾಹಿತ್ಯದ ಪ್ರಭಾವ 12. ಶರಣ ಸಾಹಿತ್ಯದ ಪ್ರಸ್ತುತತೆ ಹೀಗೆ ಮಹತ್ವ ಪೂರ್ಣ ವಿಷಯಗಳನ್ನು ಪಂಡಿತರು ಮಂಡಿಸಿದರು. ಸಮ್ಮೇಳನದ ಅಧ್ಯಕ್ಷ ಡಾ। ಹಿರೇಮಠರ ಭಾಷಣ ಅಭ್ಯಾಸಪೂರ್ಣವಾಗಿತ್ತು. ಅ. ಭಾ. ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ। ಎಚ್. ತಿಪ್ಪೇರುದ್ರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಬಹಿರಂಗ ಅಧಿವೇಶನ ನಡೆಸಿ ಶ್ರೀ ನಿಜಗುಣಸ್ವಾಮಿಗಳ ಸಮ್ಮುಖದಲ್ಲಿ ಸಮಾರೋಪಗೊಳ್ಳುವುದರಿಂದ ಸನ್ಮಾನ್ಯ ಡಾ। ಆರ್. ಆರ್. ದಿವಾಕರ, ಶ್ರೀ ವೈ. ಚಂದ್ರಶೇಖರ ಶಾಸ್ತ್ರಿ, ಟಿ. ಎಸ್. ಶಾಮರಾವ್, ಶ್ರೀಮತಿ ಶಾಂತಾದೇವಿ ಮಾಳವಾಡ ಹಾಗೂ ಡಾ. ಜೋಳದರಾಶಿ ದೊಡ್ಡನಗೌಡ ಇವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಹೋದ ವರುಷ ಸಂಪನ್ನವಾದ 'ಶೂನ್ಯ ಸಂಪಾದನೆ, ಒಂದು ಅಧ್ಯಯನ' ಕೃತಿಯನ್ನು ಸಿದ್ಧಗಂಗಾ ಮಠದ ಶ್ರೀಗಳು ಬಿಡುಗಡೆ ಮಾಡಿದರು. ಈ ಪರಿಷತ್ ಗೌರವಾಧ್ಯಕ್ಷ ಸುತ್ತೂರು ಜಗದ್ಗುರುಗಳು ಹಿತನುಡಿದರು. ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರುಗಳು ಸಮ್ಮೇಳನದ ಸಮಾರೋಪಗೈದರು.

ತತ್ತ್ವ ಚಿಂತನ ಗೋಷ್ಠಿ

1989ನೇ ಏಪ್ರಿಲ್ 1 ರಿಂದ 7 ರವರೆಗೆ (ವೀರಶೈವ) ತತ್ತ್ವ ಚಿಂತನ ಗೋಷ್ಠಿಯು ಪ್ರತಿನಿತ್ಯ ನಡೆಯಿತು. ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿತವಾದ ಹಲವಾರು ತತ್ತ್ವಗಳ ಚಿಂತನಗಳು ಮಾರ್ಮಿಕವಾಗಿ ನಡೆದವು. ಈ ಕಾರ್ಯಕ್ರಮದಲ್ಲಿ ಸುತ್ತೂರು, ಹುಬ್ಬಳ್ಳಿ, ಅನಂತಪುರ, ಮುಂಡರಗಿ ಜಗದ್ಗುರುಗಳು, ಸರ್ಪಭೂಷಣ ಮಠ, ಮುರುಗೋಡ, ಶಿರ್ಶಿ ಹಂದಿಗನೂರು, ಹೊಸರಿತ್ತಿ, ನಂದಿವೇರಿಮಠ, ಬೇಲಿಮಠ, ಗಾಂಜಾಮಠ, ನರಗುಂದದೇವರ ಮಠ ಮೊದಲಾದ ಶ್ರೀಗಳವರು ಪಾಲ್ಗೊಂಡಿದ್ದರು. ದಿ 3 ತಿರಂದು ನಾವು ಭಾಗವಹಿಸಿ ಕರಣ ಹಸಿಗೆಯಲ್ಲಿ ಪಂಚಭೂತಗಳು-ಪಂಚೀಕರಣ ಅವುಗಳ ಗುಣ-ಧರ್ಮ-ವರ್ಣ ವಿಚಾರಗಳನ್ನು ಹೊಸ ವಿಧಾನವನ್ನು ಅನುಸರಿಸಿ ಪ್ರವಚನ ನೀಡಿದಾಗ ಸಭಿಕರೆಲ್ಲ ಸಂತಸಪಟ್ಟರು. 4-4-89ರಂದು ನೂರೊಂದು ಸ್ಥಳಗಳಲ್ಲಿ ಅಂಗಸ್ಥಲಗಳು 44 ಲಿಂಗಸ್ಥಳಗಳು 57 ಏಕೆ ಎಂಬುದನ್ನು ತಾತ್ವಿಕವಾಗಿ ಪ್ರತಿಪಾದಿಸಲಾಯಿತು. ಡಾ। ಎಚ್. ತಿಪ್ಪೇರುದ್ರಸ್ವಾಮಿಯವರು ವೀರಶೈವ ಸಿದ್ಧಾಂತದಲ್ಲಿ ಬುದ್ಧಿಯ ಪ್ರಖರತೆಯಿದೆಯೆಂಬ ವಿಚಾರ ಮಂಡಿಸಿದಾಗ ಇಲ್ಲಿ ಜ್ಞಾನಾಧಿಕ್ಯತೆಯಿದ್ದರೂ ಜ್ಞಾನ-ಕ್ರಿಯಾ ಸಮನ್ವಯದಿಂದಾಗಿ ಅನುಭವಗಮ್ಯವೆಂಬ ವಿಚಾರವಿದೆ, ಎಂದು ಸಮಾರೋಪಗೊಳಿಸಲಾಯಿತು. 5 ರಂದು ಮಂತ್ರಗೋಪ್ಯವನ್ನು ಪ್ರಸ್ತಾಪಿಸುತ್ತ ಲಿಂಗಸಕೀಲಗಳನ್ನು ವಿವರಿಸಿ ವೀರಶೈವರು ನಿತ್ಯಮುಕ್ತರು ಷಟ್‌ಸ್ಥಲಾತ್ಮಕವಾಗಿ ಶಿವಪೂಜೆಗೈದು ಪಾದೋಕ ಪ್ರಸಾದ ಸ್ವೀಕರಿಸುವಲ್ಲಿ ನಿತ್ಯ ಮುಕ್ತತ್ವವಿದೆ. ಯಾಕಂದರೆ ವೀರಶೈವ ಸಿದ್ಧಾಂತದಲ್ಲಿ ಚತುರ್ವಿಧ ಸಾರಾಯ ಸಂಪತ್ತಿನಲ್ಲಿ ಪ್ರಸಾದ ಸದ್ಭಾವವೇ ಕೊನೆಯದು ಎಂಬ ಅನುಭವ ನಡೆಯಿತು.

ಇಂದು ಸಮಾವೇಶಗೊಂಡ ಮಠಾಧೀಶರೆಲ್ಲ ಗಣಾಚಾರದ ನಿಯಮದಂತೆ ಡಾ। ಎಂ. ಎ. ಕಲಬುರ್ಗಿಯವರು ಶರಣರನ್ನು ಕುರಿತು ಬರೆದ ಊಹಾತ್ಮಕ ಲೇಖನಗಳ ಮಾರ್ಗ 1.'ನ್ನು ಕುರಿತು ಚರ್ಚಿಸಿ ಖಂಡಿಸಲಾಯಿತು "ಅಭಿವ್ಯಕ್ತಿ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಅಸಂಗತ ಅಸಮಾಧಾನಕಾರಕ ವಿಚಾರಗಳನ್ನು ಪ್ರಕಟಿಸಿ ಅನಗತ್ಯ ಗೊಂದಲವೆಬ್ಬಿಸಬಾರದು" ಎಂದು ಸರ್ವಾನುಮತದ ನಿರ್ಣಯ ಕೈಕೊಂಡು ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಯಿತು.

ಅಂದು ಸಂಜೆ ಸರ್ಪಭೂಷಣ ಮಠದಲ್ಲಿ ಸರ್ಪಭೂಷಣ ಶಿವ ಯೋಗಿಗಳ ಜಯಂತಿಯ ಕಾರ್ಯಕ್ರಮ ನೆರವೇರಿತು. ಮಠಾಧ್ಯಕ್ಷರಾದ ಮಲ್ಲಿಕಾರ್ಜುನ ಸ್ವಾಮಿಗಳು ಶಿವಯೋಗಿತ್ರಯರ ಜಯಂತಿಯನ್ನು ವ್ಯವಸ್ಥಿತವಾಗಿ ನಡೆಸುತ್ತಬಂದಿದ್ದಾರೆ.

6-4-89 ಗುರುವಾರ ಯುಗಾದಿ ಅಮಾವಾಸ್ಯೆ. ತತ್ತ್ವ ಚಿಂತನಗೋಷ್ಠಿಯು ಯಥಾವತ್ತಾಗಿ ನಡೆಯಿತು. ಅನೇಕ ಅನುಭಾವಿಗಳು ತಮ್ಮ ವಿಚಾರಗಳನ್ನು ಮಂಡಿಸಿದರು. ನಿಜಗುಣ ಮಹಾಸ್ವಾಮಿಗಳು ಹಾಗೂ ಇತರರ ಇಚ್ಛೆಯಂತೆ 'ಶಿವಯೋಗ'ದ ವಿಚಾರವನ್ನು ಪ್ರಸ್ತಾಪಿಸುತ್ತ ಲಿಂಗಪೂಜಾ ಮಹತ್ವವನ್ನು ತಿಳಿಸುತ್ತ ಲಿಂಗಪೂಜಾನುಸಂಧಾನದಲ್ಲಿ ವಿಧಿನಿಷೇಧಗಳಲ್ಲಿ. ತನಗೆ ಆನಂದವಾಗುವಂತೆ ಅರ್ಚಿಸಬೇಕು. ಅಂಗಕ್ಕೆ ಉಪಚಾರಗಳು ಅವಶ್ಯವಿರುವಂತೆ ಲಿಂಗಕ್ಕೆ ಅಭಿಷೇಕಾದಿಗಳು ಬೇಕು. ಶ್ರೀರುದ್ರವನ್ನು ಪಠಿಸಿದರೆ ತಪ್ಪಿಲ್ಲ. ಶ್ರೀರುದ್ರದಲ್ಲಿ ಸರ್ವೇಶ್ವರತ್ವ, ಸರ್ವಾಂತರ್ಯಾಮಿತ್ವ, ಸರ್ವಕರ್ತೃತ್ವಗುಣಗಳನ್ನೆಲ್ಲ ವರ್ಣಿಸಿದ್ದು ಕಾಯಕ ವಿಚಾರಗಳು ಬಂದಿವೆ, ಎಂದು ಪ್ರತಿಪಾದಿಸುವ ಸಂದರ್ಭದಲ್ಲಿ ಬೇಲಿಮಠ ಶ್ರೀ ಶಿವರುದ್ರಸ್ವಾಮಿಗಳು ಪೂರ್ವಪಕ್ಷ ಮಾಡಿ ಪ್ರಶ್ನಿಸುತ್ತಿರಲು ಶಿವಶರಣರ ಅನೇಕ ವಚನಗಳಲ್ಲಿ ಶ್ರೀ ರುದ್ರ ಪುರುಷನನ್ನು ಸ್ತುತಿಸಿದ ವಿಚಾರಗಳನ್ನು ಸೂಚಿಸ ಬೇಕಾಯಿತು.

7-4-89ಯುಗಾದಿಯಂದು ತತ್ವ ಚಿಂತನಗೋಷ್ಠಿಯ ಮುಕ್ತಾಯ ಸಮಾರಂಭ. ಇಂದು ಶುಕ್ರವಾರ ಪದ್ಧತಿಯಂತೆ ಮೌನವಿದ್ದರೂ ಜಂಗಮರ ಅಪ್ಪಣೆಯಂತೆ ಮಂಗಲಕರ ನುಡಿಗಳನ್ನು ಹೇಳಬೇಕಾಯಿತು. ಜ್ಞಾನ ಕ್ರಿಯೆಗಳ ಸಮಸಮುಚ್ಚಯದಲ್ಲಿ ಆಚರಿಸುವುದು ಕರ್ತವ್ಯ. ಜಂಗಮದಪ್ಪಣೆಗಿಂತ ಮಿಗಲು ಮತ್ತೊಂದಿಲ್ಲ. ಈ ತತ್ತ್ವ ಚಿಂತನಗೋಷ್ಠಿಯಿಂದ ಸಮಾಧಾನ-ಶಾಂತಿ, ಆದರೆ ಕೇವಲ ಬುದ್ಧಿ ಪ್ರಖರತೆಯಲ್ಲಿ ಶಾಂತಿಯಿಲ್ಲ. ತರ್ಕಕ್ಕೆ ತರ್ಕ ಬೆಳೆದು ಸತ್ಯಯಾಚಾರ ಬೆಳೆಯುವುದಿಲ್ಲ. ಭಕ್ತಿಭಾವವೂ ವರ್ಧಿಸುವುದಿಲ್ಲ. ಕಾರಣ ಆತ್ಮನಿರೀಕ್ಷಣೆ ಅವಶ್ಯ. ಬೇವುಬೆಲ್ಲದಂತೆ ಶರಣ ಜೀವನ ಮಧುರವಾಗಿದೆ. ವೀರಶೈವ ತತ್ವಾಚರಣೆಗಳು ಕೇವಲ ಚಿಂತನೆಗಾಗಿ ಅಲ್ಲ. ಅವುಗಳನ್ನು ಮೈಗೂಡಿಸಿಕೊಳ್ಳಲು ಸಾಧ್ಯ, ಎಂದು ನಮ್ಮ ಅನಿಸಿಕೆಗಳನ್ನು ಮಂಡಿಸಲಾಯಿತು. ಮಠಾಧ್ಯಕ್ಷರು ಆಗಮಿಸಿದ ಪೂಜ್ಯರಿಗೆಲ್ಲ ತಮ್ಮ ಜಂಗಮಭಕ್ತಿಯನ್ನು ಸಮರ್ಪಿಸಿದರು. ನಿನ್ನೆ ನಿಜಗುಣರ ಜಯಂತಿ ಇಂದು

ಪ್ರಭುವಿನ ಜಯಂತಿ ಕಾರ್ಯಕ್ರಮಗಳು ಸರ್ಪಭೂಷಣರ ಮಠದಲ್ಲಿ ಸಂಜೆ ಸಂಪನ್ನವಾದವು. ಬೆಂಗಳೂರಿನ ಭಕ್ತರ ಭಕ್ತಿ ಆತ್ಮೀಯತೆಯಲ್ಲಿ ಕಾಲಕಳೆದುದೇ ಗೊತ್ತಾಗುವುದಿಲ್ಲ. ಅನೇಕ ಭಕ್ತರು ತಮ್ಮ ಮನೆಗೆ ಬಿನ್ನೈಸಿಕೊಂಡು ಜಂಗಮಭಕ್ತಿಯನ್ನು ಸಮರ್ಪಿಸಿದರು.

ಶಿವಯೋಗ ಸಂಪದ

1990 ಮಾರ್ಚ್‌ನಲ್ಲಿ 20 ರಿಂದ 27ರವರೆಗೆ ಜಂಗಮ ಮಠಾಧೀಶರು 'ಶಿವಯೋಗ ಸಂಪದ'ವನ್ನು ಸಮಾವೇಶಗೊಳಿಸಿದರು. ಹುಬ್ಬಳ್ಳಿ, ಧಾರವಾಡ, ಮೈಸೂರು, ಮುಂಡರಗಿ ಆನಂದಪುರ, ಇಳಕಲ್ಲ, ಗುಳೇದಗುಡ್ಡ, ಚಿಂಚಣಿ ಹಂದಿಗನೂರು, ಹೊಸರಿತ್ತಿ ಹಾಗೂ ಬೆಂಗಳೂರಿನ ಮತ್ತು ಸುತ್ತ ಮುತ್ತಲಿನ ಎಲ್ಲ ಶ್ರೀಗಳನ್ನು ಬರಮಾಡಿಕೊಂಡು 'ಶಿವಯೋಗ ಸಂಪದ'ವನ್ನು ಸಂಪಾದಿಸಿಕೊಂಡ 1 ನಿಜಗುಣ ಶಿವಯೋಗಿಗಳು 2. ಸಿದ್ಧಲಿಂಗಶಿವಯೋಗಿಗಳು, 3 ಷಣ್ಮುಖ ಶಿವಯೋಗಿಗಳು 4. ಮುರುಘೇಂದ್ರ ಶಿವಯೋಗಿಗಳು 5. ಬಾಲಲೀಲಾ ಮಹಾಂತ ಶಿವಯೋಗಿಗಳು 6. ಸರ್ಪಭೂಷಣ ಶಿವಯೋಗಿಗಳು ಇವರನ್ನು ಕುರಿತು ಅವರು ಸಾಧಿಸಿದ ಶಿವಯೋಗ ಸಿದ್ಧಿಯ ಮರ್ಮವನ್ನು ಚಿಂತಿಸ ಹಚ್ಚಿಸಿದರು. ಪ್ರಾತಃ ಕಾಲದಲ್ಲಿ ಶಿವಾನುಭವ ಚಿಂತನೆಗೆ ಅವಕಾಶವಿತ್ತು. ಈ ಸಮಾವೇಶದಲ್ಲಿ ಪಾಲ್ಗೊಂಡವರಿಗೆಲ್ಲ ಪ್ರಸಾದ ವ್ಯವಸ್ಥೆಯನ್ನು ಮಾಡಿದ್ದು ಮಠಾಧ್ಯಕ್ಷರ ಧಾರಾಳವಾದ ದಾಸೋಹಂ ಭಾವವು ಅನುಕರಣೀಯವಾಗಿತ್ತು. ಪ್ರತಿದಿನ ನಾಲ್ಕು ಗಂಟೆಗೆ ಬೆಂಗಳೂರಿನ ಸ್ನೇಹಾ ಬಳಗದವರ ಪ್ರಾರ್ಥನೆ ಭಕ್ತಿಭಾವವನ್ನು ಬೆಳೆಸುತ್ತಿತ್ತು.

ವೀರಶೈವ ಸಿದ್ಧಾಂತ ಸಂಪದ

ಮಾರ್ಚ್ ತಿಂಗಳಲ್ಲಿ ಶಿವಯೋಗ ಸಂಪದವು ಸಂಪನ್ನವಾಗಿದ್ದರೂ ನಿಜಗುಣ ಸ್ವಾಮಿಗಳಿಗೆ ಸಂತೃಪ್ತಿಯಾಗಿರಲಿಲ್ಲ. ಮತ್ತೆ 1990ರ ಅಕ್ಟೋಬರ ತಿಂಗಳಲ್ಲಿ ವೀರಶೈವ ಸಿದ್ಧಾಂತ ಸಂಪದವನ್ನು ಏರ್ಪಡಿಸಿದರು. ತತ್ತ್ವ ಚಿಂತನೆಯಲ್ಲಿ ಶಿವಾರ್ಚನೆಯಲ್ಲಿ ತೊಡಗಿದ ನಮ್ಮನ್ನು ಶ್ರೀಗಳವರು ಹೆಚ್ಚು ಹೆಚ್ಚು ಸಮೀಪಕ್ಕೆ ಬರಮಾಡಿಕೊಳ್ಳಲು ಇಚ್ಛಿಸಿ ಮೈಲಾರಬಸವಲಿಂಗ ಶರಣರ ಗುರುಕರುಣ ತ್ರಿವಿಧಿಗೆ ವೀರಶೈವ ದಾರ್ಶನಿಕ ಸಿದ್ಧಾಂತ' ರೂಪ ವ್ಯಾಖ್ಯಾನವನ್ನು ಪ್ರತ್ಯಕ್ಷವಾಗಿ ಜನತೆಗೆ ನೀಡುವಂತೆ ಪ್ರೇರೇಪಿಸಿದರು.

ಗುರು ಕರುಣ ತ್ರಿವಿಧಿಯು ಬಸವಲಿಂಗ ಶರಣರ ಅತ್ಯುತ್ತಮ ಕೃತಿ. ಇದರಲ್ಲಿ ಸಮಗ್ರ ವೀರಶೈವ ದಾರ್ಶನಿಕ ಸಿದ್ಧಾಂತವು ಪ್ರತಿಪಾದಿಸಲ್ಪಟ್ಟಿದೆ. ವೀರಶೈವರ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಳಗಳು ಒಂದಕ್ಕೊಂದು ಆಚರಣೆಯಲ್ಲಿ ಹೇಗೆ ಸಮನ್ವಯಗೊಳ್ಳುತ್ತವೆಂಬ ಪರಿ ಸುಂದರವಾಗಿ ಈ ಚಿಕ್ಕ ಕೃತಿಯಲ್ಲಿ ವರ್ಣಿತವಾಗಿದೆ. 333 ತ್ರಿಪದಿಗಳುಳ್ಳ ಕೃತಿಯನ್ನು ಬಸವಲಿಂಗಶರಣರು ಗುರುಶಾಪವಿಮೋಚನೆಗಾಗಿ ಬರೆದುದೆಂಬ

ವದಂತಿ ಸಾಧುವಲ್ಲ. ಶಾಪಗ್ರಸ್ಥನಾದ ಸನ್ನಿವೇಶ ಎಲ್ಲಿಯೂ ಉಕ್ತವಾಗಿಲ್ಲ. ಕೇವಲ ಪಾರಾಯಣ ಕೃತಿಯೆನಿಸಿದ ತ್ರಿವಿಧಿಯನ್ನು ಅಷ್ಟು ಸುಲಭವಾಗಿ ಅರ್ಥೈಸುವುದು ಸಾಧ್ಯವಿರಲಿಲ್ಲ. ಸಂಸಾರ ಹೇಯಸ್ಥಲದ ಬೆಡಗಿನ ತ್ರಿಪದಿಗಳು ಮಾರ್ಮಿಕವಾಗಿವೆ. ಶರಣರು ಈ ತ್ರಿವಿಧಿಯಲ್ಲಿ ಶಾಸ್ತ್ರೀಯ ಪದ್ಧತಿಯಲ್ಲಿ ವಿಷಯ ವಿವೇಚನ ಮಾಡುವುದು ಗಮನಾರ್ಹ ಸಂಗತಿ. ದೈವ ಸಂಕಲ್ಪದಂತೆ 1975 ಹಾಗೂ 1979ರಲ್ಲಿ 30 ದಿನ 21 ದಿನ ಒಟ್ಟು 51 ದಿನಗಳ ಅನುಷ್ಠಾನ ಫಲವಾಗಿ 600 ಪುಟಗಳ ಈ ವೀರಶೈವದಾರ್ಶನಿಕ ಸಿದ್ಧಾಂತ ಕೃತಿಯು ಮೂಡಿಬಂತು. 1981ರಲ್ಲಿ ಪ್ರಕಟಗೊಂಡು ವಿದ್ವಾಂಸರ ಕೈಸೇರಿ ಮೆಚ್ಚಿಗೆ ಪಡೆಯಿತು. ಶಿವಯೋಗಮಂದಿರದ ಸಂಚಾಲಕರಾಗಿದ್ದ ನಮ್ಮ ವಿದ್ಯಾ ಗುರುಗಳಾದ ಲಿಂ. ಶ್ರೀ ಸದಾಶಿವ ಮಹಾಸ್ವಾಮಿಗಳು ಈ ಕೃತಿಯನ್ನು ಕುರಿತು "ವೀರಶೈವ ಸಾಹಿತ್ಯ ಸಂಸ್ಕೃತಿಯ, ವಿಶಿಷ್ಟ ಕೊಡುಗೆ. ವಿಶ್ವಮಾನವನ ಹೃದಯಕ್ಕೆ ನಿಜಾನುಭೂತಿಯ ಬೆಳಗನ್ನು, ಆನಂದವನ್ನು ನೀಡಬಲ್ಲ ಶ್ರೇಷ್ಠ ಹೊತ್ತಿಗೆ" ಎಂದು ಮನದುಂಬಿ ಹೊಗಳಿದರು.

ಧಾರವಾಡ ಮುರುಘಾಮಠದ ಶ್ರೀ ಮಹಾಂತಪ್ಪಗಳು 333 ತ್ರಿಪದಿಗಳ ಮೇಲೆ ರಚಿಸಿದ ವೀರಶೈವ ದಾರ್ಶನಿಕ ಸಿದ್ಧಾಂತವು ಉತ್ತಮ ಗ್ರಂಥವಾಗಿದೆ. ಇದು 'ಪಿ ಎಚ್.ಡಿ'ಗೆ ಯೋಗ್ಯವಾಗಿದೆ' ಎಂಬ ಪ್ರಶಸ್ತಿಯನ್ನು ನೀಡಿದ್ದಲ್ಲದೆ ಪ್ರಪ್ರಥಮವಾಗಿ ತಮ್ಮ ಮಠದಲ್ಲಿ ಆದರದಿಂದ ಗೌರವಿಸಿದ್ದು ಸ್ಮರಣೀಯ. ಡಾ। ಟಿ. ಜಿ. ಸಿದ್ಧಪ್ಪಾರಾಧ್ಯರು.. ಡಾ ಎಚ್. ತಿಪ್ಪೇರುದ್ರಸ್ವಾಮಿಯವರು ಮತ್ತಿತರರು ಮೆಚ್ಚಿಗೆಯ ನುಡಿಯಾಡಿದ್ದು ನಮ್ಮ ನುಡಿಸೇವೆಗೆ ಸಾರ್ಥಕತೆಯೊದಗಿಸಿತು. ಡಾ। ಬಿ. ವ್ಹಿ. ಮಲ್ಲಾಪೂರವರು-"ಪೂಜ್ಯ ಶ್ರೀಗಳವರ ಈ ವೀರಶೈವದಾರ್ಶನಿಕ ಸಿದ್ಧಾಂತ ಕೃತಿ ಕನ್ನಡ ತತ್ತ್ವ ಸಾಹಿತ್ಯಕ್ಕೆ ನಿಶ್ಚಯವಾಗಿಯೂ ಒಂದು ಅಮೂಲ್ಯ ಕೊಡುಗೆ" ಎಂದು ತಮ್ಮ ಸಜ್ಜನಿಕೆಯ ಅಭಿಪ್ರಾಯವಿತ್ತರು.

ಕನ್ನಡ ನುಡಿ, ಸೇವೆಗೆ ಗೌರವ ನೀಡುವ ವಿಶ್ವವಿದ್ಯಾಲಯಗಳಾಗಲಿ, ಸಾಹಿತ್ಯಪರಿಷತ್ತಾಗಲಿ ಇಂಥ ಸಾಹಿತ್ಯಸೇವೆಯನ್ನು ಗಮನಿಸದಿದ್ದರೂ ಬೆಂಗಳೂರಿನ ಜಂಗಮ ಮಠದ ಪೂಜ್ಯರು ಈ ಕೃತಿಯ ಮೌಲ್ಯವನ್ನು ಜನತೆಗೆ ತಿಳುಹಲೆಂದೇ ಈ ವೀರಶೈವ ಸಿದ್ಧಾಂತ ಸಂಪದ ಪ್ರವಚನ ಕಾರ್ಯಕ್ಕೆ ಅಣಿಗೊಳಿಸಿದರು. ವಸ್ತುತಃ ಪ್ರವಚನಕಾರರಲ್ಲದ ನಮ್ಮಿಂದ ದಿ-1-10-90ರಿಂದ 14-10-90ರವರೆಗೆ 14 ದಿನಗಳ ಕಾಲ ವೀರಶೈವ ಸಿದ್ಧಾಂತ ಸಂಪದ ಪ್ರವಚನವು ಸಕಲರ ಮನಮುಟ್ಟುವಂತೆ ನೆರವೇರಿದ್ದು ಜಂಗಮದೇವರ ಕೃಪೆಯೆಂದೇ ಭಾವಿಸುತ್ತೇವೆ. ದಿ 15-10-90ರಂದು ಈ ಸಂಪದ ಸಮಾರೋಪ ಸಮಾರಂಭವು ಹುಬ್ಬಳ್ಳಿಯವರ ಸಾನ್ನಿಧ್ಯದಲ್ಲಿ ಆನಂದಪುರ ಶ್ರೀಗಳ ಅಧ್ಯಕ್ಷತೆಯಲ್ಲಿ ಸುತ್ತೂರ ಮಠ ಶ್ರೀಗಳ ಸಂದೇಶದೊಂದಿಗೆ ಮಂಗಲಗೊಂಡಿತು. ರಾಜಧಾನಿಯ ಜನತೆಗೆ ವೀರಶೈವ ಸಿದ್ಧಾಂತದ ಸಂಪತ್ತಿನ ಸಂಗ್ರಹವಾದುದಕ್ಕೆ ನಿಜಗುಣಸ್ವಾಮಿಗಳು ಮಾತೃಹೃದಯದಿಂದ ಅಪಾರವಾಗಿ ಅನಂತರ ದಿನಾಂಕ 8-10-90 ಸೋಮವಾರದಂದು ರಾಜಾಪುರ

ಸಂಸ್ಥಾನ ಮಠದ ಪೂಜ್ಯ ಶ್ರೀ ರೇಣುಕ ಶಿವಾಚಾರ್ಯರಿಂದ ವಟುಗಳಿಗೆ ದೀಕ್ಷಾ ಸಂಸ್ಕಾರವನ್ನು ಕೊಡಿಸಲಾಯಿತು ವೀರಶೈವ ಸಿದ್ಧಾಂತ ಸಂಪದವನ್ನು ಸಾಧಿಸುವ ಸಾಧನೆಯು ಅನೇಕ ಭಕ್ತರಿಗೆ ಲಭಿಸಿದ್ದು ವಿಶೇಷ ಅನಂತರ ವಿಶೇಷಉಪನ್ಯಾಸಗಳೂ ಜರುಗಿದವು.

1991 ಮಾರ್ಚ್‌ನಲ್ಲಿ ಶರಣ ಸಂಪದ ಜ್ಞಾನದಾಸೋಹಕ್ಕೆ ಸಿದ್ಧರಾದ ಶ್ರೀ ನಿಜಗುಣರ ದಿ. 18-19-20 ಈ ಮೂರು ದಿನ ಹುಬ್ಬಳ್ಳಿ ಮೂಜಗಂ ಹಾಗೂ ಧಾರವಾಡ ಮುರುಘಾಮಠಾಧ್ಯಕ್ಷರ ಸಾನ್ನಿಧ್ಯದಲ್ಲಿ ಬೇಲಿಮಠಾಧೀಶರ ಅಧ್ಯಕ್ಷತೆಯಲ್ಲಿ ಗೊ.ರು.ಚ. ಇವರು ಮಡಿವಾಳ ಮಾಚಿದೇವನನ್ನು ಕುರಿತು, ದೇಗುಲ ಮಠ ಶ್ರೀಗಳ ಅಧ್ಯಕ್ಷತೆಯಲ್ಲಿ ಡಾ। ಸಾ. ಶಿ. ಮರುಳಯ್ಯ, ಉರಿಲಿಂಗ ಪೆದ್ದಿಯನ್ನು ಕುರಿತು, ಇಳಕಲ್ಲ ಶ್ರೀಗಳ ಅಧ್ಯಕ್ಷತೆಯಲ್ಲಿ 'ಶರಣ ನೀಲಮ್ಮ'ನವರನ್ನು ಕುರಿತು ಉಪನ್ಯಾಸ ನೀಡಿದವರು ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ ಇವರು. ಡಾ।ಎಚ್. ಚಂದ್ರಶೇಖರ ಇವರು ಸ್ಲೈಡ್ ಮೂಲಕ ಶರಣರ ಕ್ಷೇತ್ರದರ್ಶನ ಮಾಡಿಸಿದರು. ಸರಳವಾಗಿ ಈ ಶರಣಸಂಪದ ದಾಸೋಹ ಜರುಗಿತು.

ಇದೇ 1991 ಸಪ್ಟಂಬರದಲ್ಲಿ 15 ರಿಂದ 21ರವರೆಗೆ ಅನುಭಾವ ಸಪ್ತಾಹ ಸಂಪನ್ನವಾಯಿತು. ಇದೊಂದು ವಿಶಿಷ್ಟ ಸಪ್ತಾಹ. ''ವೀರಶೈವ ಧರ್ಮ ಗ್ರಂಥ ನಿರ್ಣಯ ವಿಚಾರಕಮ್ಮಟ'' ವನ್ನೇನೊ ಶ್ರೀಗಳು ಸಂಘಟಿಸಿದ್ದರು. ನಾಡಿನ ಮಹಾಸ್ವಾಮಿಗಳನ್ನಲ್ಲದೆ ಅನೇಕ ವಿದ್ವಾಂಸರನ್ನು, ಶರಣರನ್ನು ಬರಮಾಡಿಕೊಂಡಿದ್ದರು. ನಮಗೂ ಆಮಂತ್ರಣ ವಿತ್ತು.

ದಿ. 15-9-91 ರವಿವಾರ ಬೆಳಗಿನ ಶಿವಾರ್ಚನೆ, ಶಿವಾರ್ಪಣ ವಾದ ಬಳಿಕ, ವೀರಶೈವ ಧರ್ಮ ಗ್ರಂಥ ನಿರ್ಣಯ ವಿಚಾರ ಕಮ್ಮಟ' ಪ್ರಾರಂಭವಾಯಿತು. ಡಾ।ಸಾ. ಶಿ. ಮರುಳಯ್ಯ ಗೊ. ರು. ಚ ಇವರ ಹಿರಿತನದಲ್ಲಿ ಡಾ।ಸಿದ್ಧಯ್ಯ ಪುರಾಣಿಕ, ಡಾ।ಎಚ್. ತಿಪ್ಪೇರುದ್ರಸ್ವಾಮಿ, ಬಿ. ವಿರೂಪಾಕ್ಷಪ್ಪ, ಸಂಗಮದ, ಸಿದ್ಧಣ್ಣಲಂಗೋಟಿ ಮೊದಲಾದವರು ಕೂಡಿದ್ದರು. ವಸ್ತುತಃ ವೀರಶೈವರು ಇಲ್ಲಿಯವರೆಗೆ ಧರ್ಮಗ್ರಂಥ ವೊಂದರ ನಿರ್ಣಯ ಮಾಡಿಲ್ಲ. ಯಾಕೆಂದರೆ ವೀರಶೈವರು ಗ್ರಂಥ ಪ್ರಾಮಾಣ್ಯಕ್ಕಿಂತ ಅನುಭವ ಪ್ರಾಮಾಣ್ಯವನ್ನು ಮನ್ನಿಸುತ್ತಾರೆ. ಎಲ್ಲ ವಿಚಾರ ವಿನಿಮಯದ ನಂತರ ವೀರಶೈವ ಧರ್ಮದರ್ಶಿನಿ'' ಅಂತ ನಿರ್ಣಯ ಗೊಳ್ಳಲಿರುವ ಗ್ರಂಥದ ಹೆಸರು ನಿರ್ಣಯವಾಯಿತು. ಕೆಲವರು 'ವೀರಶೈವ ಧರ್ಮದೀಪಿಕೆ' ಎಂದೂ ಸೂಚಿಸಿದ್ದರು. ಇವರಲ್ಲಿ ಪ್ರೊ. ವಿ.ವಿ. ಸಂಗಮದ ಇವರೂ ಮುಖ್ಯರು. ಇಲ್ಲಿ ವಿಚಾರಣೀಯ ಸಂಗತಿಯೆಂದರೆ ಧರ್ಮದ ಪದದೊಂದಿಗೆ ವೀರಶೈವಧರ್ಮವೆಂಬುದನ್ನು ಪ್ರತಿಪಾದಿಸಿ ಒಪ್ಪಿದ ಸಂಗಮದ ಇವರು ಈಗ ಲಿಂಗಾಯತ, ಲಿಂಗವಂತ, ಧರ್ಮವೆಂದು ಪ್ರತಿಪಾದಿಸುತ್ತಿರುವುದರಿಂದ ಅವರ ವಿಕ್ಷಿಪ್ತತೆಯನ್ನು ಅರಿಯಬಹುದು.

ಈ ಕಮ್ಮಟದಲ್ಲಿ ಅನೇಕ ಮಹತ್ವಪೂರ್ಣ ವಿಚಾರಗಳು ಬಂದವು. ಜೊತೆಗೆ ಹಲವಾರು

ಆಕ್ಷೇಪ ಪರ ಮಾತುಗಳೂ ಜರುಗಿದವು. ಈ ಸಂದರ್ಭದಲ್ಲಿ ಭಾಲ್ಕಿ ಬಸವಲಿಂಗ ಪಟ್ಟದೇವರು, ದಾವಣಗೆರೆಯ ಬಸವ ಬಳಗದವರು ಪಾಂಡೋಮಟ್ಟಿಶ್ರೀಗಳು ಮೊದಲಾದವರೂ ಆಗಮಿಸಿದ್ದರು. ಸುಮಾರು 1958-59ರಿಂದ ಶಿವಾರ್ಚನೆಯಲ್ಲಿ ಶ್ರೀರುದ್ರಾಭಿಷೇಕವನ್ನು ಮಾಡುತ್ತಬಂದ ನಮಗೆ ಶಿವಪೂಜೆ ಮಾಡುವುದೇ ಮುಜಗರ ವೆನಿಸ ಹತ್ತಿತು. ಇಷ್ಟಲಿಂಗಾನುಸಂಧಾನದ ಆನಂದಕ್ಕೆ ಅಡ್ಡಿಯಾಗಹತ್ತಿತು. ನಿಜಗುಣ ಸ್ವಾಮಿಗಳ ಬಲವಂತಕ್ಕಾಗಿ ಏನೂ ಮಾಡಲು ಆಗಲಿಲ್ಲ. ಸಭೆಯಲ್ಲಿ "ಮುಂಡರಗಿ ಶ್ರೀಗಳು ರುದ್ರಾಭಿಷೇಕ ಮಾಡುತ್ತಾರೆ. ಇದು ಸರಿಯಲ್ಲ ಶರಣತತ್ವಕ್ಕೆ ವಿರೋಧ" ಎಂದು ಲಂಗೋಟಿಯವರು ಪ್ರಸ್ತಾಪಿಸಿದರು. ಆಗಲೇ "ಇಷ್ಟಲಿಂಗಾರ್ಚನೆ ಹಾಗೂ ಶ್ರೀರುದ್ರ" ಕುರಿತು ನಮ್ಮ ಪುಸ್ತಕ ಪ್ರಕಟವಾಗಿದ್ದುದನ್ನು ಪ್ರಸ್ತಾಪಿಸಿ ಉತ್ತರಿಸಲಾಯಿತು. ಆ ಸಮೂಹದಲ್ಲಿ ಮಾನಸಿಕ ತುಮಲ ಬೆಳೆಯುತ್ತಲೇ ಇತ್ತು. ಗುರುವಣ್ಣದೇವರ ಮಠದ ಶ್ರೀಗಳ ಇಚ್ಛೆಯಂತೆ ಅವರಲ್ಲೊಂದು ಶಿವಪೂಜೆ ನಡೆಯಿತು. ಸಾಯಂಕಾಲ ಅನುಭವ ಸಪ್ತಾಹದ ಅಂಗವಾಗಿ 1 ಗುರು ಲಿಂಗ ಜಂಗಮದ ಪರಿಕಲ್ಪನೆಯನ್ನು ಡಾ। ಎಚ್. ತಿಪ್ಪೇರುದ್ರಸ್ವಾಮಿ, 2. ಅಷ್ಟಾವರಣದ ಅಂತರಂಗ ವ್ಹಿ. ವ್ಹಿ. ಸಂಗಮದ 3 ಪಂಚಾಚಾರದ ಪರಿಪೂರ್ಣತೆ - ಪ್ರೊ। ಲಂಗೋಟಿ 4. ಷಟ್‌ಸ್ಥಲದ ಸೋಪಾನ ಡಾ। ಸಾ. ಶಿ. ಮರುಳಯ್ಯ, 5. ವೀರಶೈವಧರ್ಮ ಸಂಸ್ಕಾರಗಳು, ಬೇಲಿಮಠ ಶ್ರೀಗಳು 6. ವೀರಶೈವ ವಿವಾಹಪದ್ಧತಿ - ಪಂ. ಚನ್ನಪ್ಪ ಎರೆಸೀಮೆ, 7. ಸಮಾಜ ಮತ್ತು ಧರ್ಮ ಮಹಾದೇವ ಬಣಕಾರ ಇವರೆಲ್ಲರ ಉಪನ್ಯಾಸಗಳು ನಡೆದವು. ಆಮೇಲೆ ಬೇರೆ ಬೇರೆ ಶ್ರೀಗಳು ಆಶೀರ್ವಚನಗಳು ಸಾಂಗವಾಗುತ್ತಿದ್ದವು.

ದಿ 20-9-91 ಶುಕ್ರವಾರ ಅಚಾತುರ್ಯ ಜರುಗಿತು. ಇದೊಂದು ನಿಷ್ಠೆಯ ನಿಷ್ಕರ್ಷೆಯೇ ಆಗಿತ್ತು. ಕೆಲವು ವರ್ಷಗಳಿಂದ ಶುಕ್ರವಾರಕ್ಕೊಮ್ಮೆ ಮೌನಾನುಷ್ಠಾಗೈವುದು ವಾಡಿಕೆ. ಅದರಿಂದ ಮಾನಸಿಕ ನೆಮ್ಮದಿ, ಬಿಡುವು ಅದರೊಂದಿಗೆ ಸಾಹಿತ್ಯಕ, ಅನುಭಾವಿಕ ವಿಷಯಗಳನ್ನು ಸಂಗ್ರಹಿಸಲು ರಚಿಸಲು ಅನುಕೂಲವೂ ಆಗುತ್ತಬಂದಿದೆ. ಜಂಗಮಮಠದಲ್ಲಿ ಈ ಕಮ್ಮಟದಿಂದಾಗಿ ಗದ್ದಲ ಎದ್ದುದು ಸಹಜ. ಶ್ರೀಗಳ ನಿರ್ದೇಶದಂತೆ ನೀರಿನ ಟ್ಯಾಂಕಿನ ಮನೆಯಲ್ಲಿ ಶಿವಪೂಜೆಗೆ ವ್ಯವಸ್ಥೆಯಾಗಿತ್ತು. ಮುಂಜಾನೆ ಮತ್ತು ಮಧ್ಯಾಹ್ನದ ಶಿವಾರ್ಚನೆಗಳು ಪೂರೈಸಿದ್ದವು. 'ವೀರಶೈವ ಧರ್ಮ ಗ್ರಂಥ ನಿರ್ಣಯ ವಿಚಾರ ಕಮ್ಮಟ"ದಲ್ಲಿ ಮೌನಿಗಳಾಗಿ ವೀರಶೈವರ ವಿವಾಹ ಮತ್ತು ಅಭಿಷೇಕದ ಚರ್ಚೆಗಳನ್ನು ಕೇಳಿ ಹೊರಬರುತ್ತಿದ್ದಂತೆ ನಮ್ಮ ಶಿವಪೂಜೆಯ ಬೆಳ್ಳಿಸಾಮಾನುಗಳನ್ನು ಖೋಲಿಯ ಬೀಗ ಮುರಿದು 4 ಘಂಟೆಯ ಸುಮಾರಿನಲ್ಲಿ ಕಳುವಾದುದು ತಿಳಿದು ವಿಷಾದವಾಯಿತು. 1967ರಿಂದ ಪೂಜ್ಯ ಗುರುಗಳು ಲಿಂಗೈಕ್ಯರಾದಂದಿನಿಂದ ಅನುಗ್ರಹೀತರಾಗಿ ಅವರ ಸಾಮಾನುಗಳನ್ನು ಉಪಯೋಗಿಸುತ್ತ ಬಂದಿರುವುದರಿಂದ ಮನಸ್ಸಿಗೆ ಹಳಹಳಿಯಾಯಿತು. ಎಲ್ಲವೂ ಶಿವನಿಚ್ಛೆ. ಇಲ್ಲೊಂದು

ಆಶ್ಚರ್ಯಕರ ಘಟನೆ ಜರುಗಿತ್ತು. ಪ್ರಸಾದದ ಬಟ್ಟಲು, ತಾಟು-ತಂಬಿಗೆ ವಾಟೆ - ಮೊದಲಾದವು ಕಳವಾದವು. ರೂ ಪೂಜಾಮಣೆಯ ಕೆಳಗೆ ಅಭಿಷೇಕದ ಬಟ್ಟಲು ಧಾರಾಪಾತ್ರೆ, ಧೂಪಾರತಿಗಳು ಮಾತ್ರ ಉಳಿದಿದ್ದವು. ಈ ಕಮ್ಮಟದಲ್ಲಿ ಶ್ರೀ ರುದ್ರಾಭಿಷೇಕ ಮಾಡುವುದು ಸರಿಯಲ್ಲವೆಂಬ ವಿಚಾರ ಬಂದಿದ್ದಕ್ಕೆ ಶಿವನು ರುದ್ರಾಭಿಷೇಕವನ್ನು ಬಿಡಬಾರದೆಂಬ ಸಂದೇಶ ನೀಡಿದ್ದ. ಅಸಂಗತವಾದಿಗಳಿಗೆ ಅವಕಾಶ ನೀಡಿದ ನಿಜಗುಣ ಸ್ವಾಮಿಗಳು ಆ ಭಾರವನ್ನು ಹೊರಬೇಕಾಯಿತು. ಕಳೆದುದಕ್ಕೆ ನೀವೇಕೆ ಕೊಡಬೇಕೆಂದರೂ ಶ್ರೀಗಳವರು ಒತ್ತಾಯ ಪೂರ್ವಕ ಶಿವಪೂಜಾ ಸಾಮಾನುಗಳನ್ನು ಸಲ್ಲಿಸಿದರು. ವಿತಂಡ ವಾದಿಗಳ ಮಧ್ಯದಲ್ಲಿ ಸೇರಿದ ಪರಿಣಾಮ ಉಭಯರು ಹೊಂದಬೇಕಾಯಿತು. ಆದರೆ ಜಂಗಮ ಮಠ ಶ್ರೀಗಳವರ ಉದಾರತನ ದೊಡ್ಡದು. ಈ ವಿಚಾರ ಕಮ್ಮಟದಲ್ಲಿ ಭಾಗವಹಿಸಿದ್ದು ಸಂತೃಪ್ತಿ ನೀಡಲಿಲ್ಲ. ವಿಚಾರ ಸರಣಿಯೂ ಏಕಮುಖವಾಗಿತ್ತು. ಸಾಣೆಹಳ್ಳಿ ಪಂಡಿತಾರಾಧ್ಯರು ಅದನ್ನು ಖಂಡಿಸಿದ್ದರು. 21ರಂದು ವಾಸ್ತವ್ಯ ಮಾಡಲು ಬೇಜಾರೆನಿಸಿ ಪ್ರಯಾಣಕ್ಕೆ ಅಣಿಯಾದಾಗ ಎಲ್ಲ ಶ್ರೀಗಳು ಹಾಗೂ ಮಠಾಧ್ಯಕ್ಷರ ಒತ್ತಾಯದ ಮೇಲೆ 11 ಸಾಮಾನುಗಳನ್ನು ಸ್ವೀಕರಿಸಿಬೇಕಾಯಿತು.

ಪ್ರವಚನ ಸಂಪದ

1992 ಸೆಪ್ಟೆಂಬರ್ 14 ರಿಂದ 23ರವರೆಗೆ ಶಿವಾನುಭವ ಚರಮೂರ್ತಿ ಬೇಲಿಮಠದ ಶಿವರುದ್ರಸ್ವಾಮಿಗಳಿಂದ ಮಗ್ಗೆಯ ಮಾಯಿದೇವರ ಶತಕತ್ರಯದ ವಿಶೇಷಪ್ರವಚನ ಸಂಪದವನ್ನು ಏರ್ಪಡಿಸಿದ್ದರು. ಬೆಂಗಳೂರಿಗೆ ದಯಮಾಡಿಸಲು ಬೇಸರವೆನಿಸಿದರೂ ನಿಜಗುಣಮಹಾಸ್ವಾಮಿಗಳಇಚ್ಛೆಯನ್ನು ನಿರಾಕರಿಸಲುಆಗಲಿಲ್ಲ. ನಮ್ಮ ಅಧ್ಯಕ್ಷತೆಯಲ್ಲಿಯೇ ಈ ಪ್ರವಚನವು ಸಾಂಗವಾಯಿತು. ಪ್ರವಚನದಲ್ಲಿ ಬಲ್ಲಿದರಾದ ಬೇಲಿಮಠ ಶ್ರೀಗಳು, ಶತಕತ್ರಯದ ವಿಚಾರಗಳನ್ನು ಜನಮನಕ್ಕೆ ಮುಟ್ಟುವಂತೆ ಬೋಧಿಸಿದರು. ನಿಜಗುಣ ಸ್ವಾಮಿಗಳಿಗೆ ಶತಕತ್ರಯವು ಮೊದಲಿನಿಂದ ಪ್ರೀತಿಯ ಗ್ರಂಥ.

ಈ ಅವಧಿಯಲ್ಲಿ ಮೈಸೂರು ಸುತ್ತೂರು ಮಠದ ಜಗದ್ಗುರುಗಳು ನಡೆಸಿದ ಶಿವಯೋಗ ವಿಚಾರ ಸಂಕಿರಣದ ಮುಕ್ತಾಯ ಸಮಾರಂಭದಲ್ಲಿ ಅಧ್ಯಕ್ಷರಾಗಿ ಭಾಗವಹಿಸಿದ್ದು ಸ್ಮರಣೀಯ ಉತ್ತರಭಾರತದ ಯೋಗಿ ಸ್ವಾಮಿರಾಮರು ಆಗಮಿಸಿ ತಮ್ಮ ಅನುಭವವನ್ನು ತಿಳಿಸಿದರು. ಮುಂಡರಗಿಯಿಂದಲೇ ಮೈಸೂರಿಗೆ ಆಗಮಿಸಲು ಆಗುತ್ತಿರಲಿಲ್ಲ. ಜಂಗಮ ಮಠ ಶ್ರೀಗಳ ಸಂಪರ್ಕದಿಂದ ಆಧ್ಯಾತ್ಮಿಕ ಸಂಪತ್ತನ್ನು ಸಂಪಾದಿಸಲು ಅನುವಾಯಿತು. ಹಿಂದಿನ ವರುಷ ಜರುಗಿದ ವಿಚಾರ ಕಮ್ಮಟದ 'ವೀರಶೈವ ಧರ್ಮದರ್ಶಿನಿ' ಗ್ರಂಥದ ಯಾವ ಕಾರ್ಯ ಕಲಾಪಗಳು ನಡೆದಿರಲಿಲ್ಲ. ಅದಕ್ಕಾಗಿ ಆಸ್ಥೆವಹಿಸಿದವರೂ ಯಾವಕೆಲಸಕ್ಕೋ ಅಣಿಯಾಗಿರಲಿಲ್ಲ. ಶ್ರೀಗಳವರ ಕಳಕಳಿ ಬಹಳ. ತಾವಾದರೂ ಅದನ್ನು ಪೂರೈಸಬೇಕೆಂಬ

ಇಚ್ಛೆ. ಜಂಗಮನ ಇಚ್ಛೆಯನ್ನು ಅಲ್ಲಗಳೆಯುವುದು ವೀರಶೈವನ ಕರ್ತವ್ಯವಲ್ಲ. ಆ ದಿಶೆಯಲ್ಲಿ ವೀರಶೈವಧರ್ಮ ಕುರಿತು ಆವಶ್ಯಕಲೇಖಿನವನ್ನು ಬರೆಯಲು ಅನುವಾಗಬೇಕಾಯಿತು.

1993 ಅಕ್ಟೋಬರ 29-30-31 ಮೂರು ದಿನ ಗುರವಣ್ಣ ದೇವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಇಚ್ಛೆಯಂತೆ ನೂತನ ಶ್ರೀಮಹಂತ ಪ್ರಾರ್ಥನಾಮಂದಿರದಲ್ಲಿ ನಮ್ಮ ಸಾಹಿತ್ಯ ಕುರಿತ ವಿಚಾರಸಂಕಿರಣ ಅದ್ದೂರಿಯಿಂದ ನಡೆಯಿತು. ಸರ್ಪಭೂಷಣ ಮಠಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿಗಳ ಗಾಂಜಾಮಠಶ್ರೀಗಳ ನೇತೃತ್ವದಲ್ಲಿ ಆ ಭಾಗದ ಸುಮಾರು 50-60 ಜನ ಸ್ವಾಮಿಗಳು ಆಗಮಿಸಿ ಶೋಭೆ ತಂದಿದ್ದರು. ಈ ಸಂದರ್ಭದಲ್ಲೂ ನಿಜಗುಣಸ್ವಾಮಿಗಳು ತಮ್ಮ ಜಂಗಮ ಭಕ್ತಿ ದಾಸೋಹವನ್ನು ನೆರವೇರಿಸಿದರು. ವರ್ಷಾಂತ್ಯದಲ್ಲಿ ಶ್ರೀಗಳವರಿಗೆ ದೇಹಾರೋಗ್ಯ ವಿಷಮಿಸಿತು. ವಯೋಮಾನದಿಂದ ತೀವ್ರ ಗುಣವಾಗಲಾರದ ಪಾರ್ಶ್ವವಾಯು ಅವರ ಜಂಗಮಭಕ್ತಿಯ ಕಾರಣದಿಂದಾಗಿ ಆದಷ್ಟು ತೀವ್ರವೇ ಗುಣಮುಖರಾಗಿ ಅಡ್ಡಾಡಹತ್ತಿದರು. 1994ರ ಜನವರಿ ಹಾಗೂ ಮೇ ದಲ್ಲಿ ಶ್ರೀಗಳ ಯೋಗಕ್ಷೇಮ ವಿಚಾರಿಸುವ ಸಂದರ್ಭದಲ್ಲೂ ಪೂಜ್ಯರು ಗ್ರಂಥಪ್ರಕಟಣೆಗಾಗಿ ತಮ್ಮ ವಂತಿಕೆ ಸಲ್ಲಿಸಿದ್ದನ್ನು ಸ್ಮರಿಸದೆ ಇರಲಾರೆವು.

ನಿಜಗುಣ ಮಹಾಸ್ವಾಮಿಗಳು, ನ್ಯಾಯನಿಷ್ಠುರರು. ಜಂಗಮಭಕ್ತಿ ಸಂಪನ್ನರು. ಅವರ ಮಠದಲ್ಲಿ ಉತ್ತರ ನಾಡಿನ ಸ್ವಾಮಿಗಳೆಲ್ಲ ಆಶ್ರಯ ಪಡೆದುದುಂಟು. ಬಸವಣ್ಣನವರು 'ಶರಣರ ಬರವೆಮಗೆ ಪ್ರಾಣ ಜೀವಾಳ''ವೆಂದು ಸಾರಿದಂತೆ ನಿಜಗುಣ ಸ್ವಾಮಿಗಳು ಶರಣರ ಬರವಿಗಾಗಿ ಸದಾ ಹಾರೈಸುತ್ತಾರೆ. ಶಿವ ಪೂಜಾ ನಿಷ್ಠರನ್ನು ಕಂಡರೆ ಎಲ್ಲಿಲ್ಲದ ಭಕ್ತಿ. ಸ್ವಂತ ಶ್ರಮದಿಂದ ಭೌತಿಕ ಸಂಪತ್ತನ್ನು ಸಂಪಾದಿಸಿದ್ದಾರೆ. ಸಂಪತ್ತು ಸಂಪಾದನೆಯಾದರೆ ಸಾಲದು. ಸಂಪಾದನೆಗೆ ದಾಸೋಹ ಅವಶ್ಯ. ದಾಸೋಹಂಭಾವದಿಂದಲೇ ಸಂಪಾದನೆಗೆ ಸಾರ್ಥಕತೆ ಶ್ರಿಮತ್ ನಿಜಗುಣರು 'ವಿತರಣದೊಡನೆ ಭೋಗಿಸುವರ್ಥದೊದವನು ಬೇಡಿದಂತೆ ಜಂಗಮ ಮಠದ ಶ್ರೀಗಳು ಆಧ್ಯಾತ್ಮಿಕ ಸಂಪತ್ ಸಂಗ್ರಹಕ್ಕಾಗಿ, ತಮ್ಮ ಸಂಪಾದನೆಯ ಸದುಪಯೋಗ ಮಾಡುತ್ತಿರುತ್ತಾರೆ. ಸಾಮಾನ್ಯವಾಗಿ ಒಬ್ಬರು ಮತ್ತೊಬ್ಬರ ಒಳ್ಳೆ ಗುಣ ಕಂಡು ಅಸೂಯೆ ಪಡುವವರು ಹಲವರು. ಆದರೆ ಶ್ರೀಗಳು ಗುಣಕ್ಕೆ ಮತ್ಸರಿಸದೆ ಆದರಿಸುವ ಹೃದಯ ಸಂಪತ್ತಿದೆ. ಶಿವಯೋಗ ಸಂಪತ್ತಿನಿಂದ ಪ್ರಾರಂಭಿಸಿ, ವೀರಶೈವ ಸಿದ್ಧಾಂತಸಂಪದ, ಶರಣಸಂಪದ, ಅನುಭಾವ ಸಂಪದಗಳೊಂದಿಗೆ ಪ್ರವಚನಸಂಪದವನ್ನು ಸಾಧಿಸುವ ವಿಶಾಲ ದೃಷ್ಟಿ ಶ್ರೀಗಳವರದು. 1995ರ ಶ್ರಾವಣದಲ್ಲಿ ಬಸವಪುರಾಣ ಪ್ರವಚನವನ್ನು ಪ್ರವಚನಾಚಾರ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಂದ ನೆರವೇರಿಸಿ ಜನಮನಕ್ಕೆ ಆಧ್ಯಾತ್ಮ ಸಂಪದವನ್ನು ಕರುಣಿಸಿದರು.

ಶ್ರೀಗಳವರು ಪ್ರವಚನಕಾರರಲ್ಲ; ಭಾಷಣಕಾರರಲ್ಲ ಸಾಹಿತಿಗಳಲ್ಲ. ಆದರೆ ಇವರೆಲ್ಲರಿಗೆ ತುಂಬುಹೃದಯದಿಂದ ಅವಕಾಶವೀಯುವ ಹೃದಯ ಸಂಪತ್‌ಶೀಲರು. ಅವರು ಸಮಾಜಕ್ಕೆ ಕೊಡ ಮಾಡಿದ ಆಧ್ಯಾತ್ಮಿಕ ಸಂಪತ್ ಸಂಗ್ರಹವು ಮರೆಮಾಚಬಾರದೆಂದು ಈ ಲೇಖನದಲ್ಲಿ ಸಂಗ್ರಹಿಸಿ ಪೂಜ್ಯರ ಸಂಪತ್‌ಶೀಲತನವನ್ನು ವ್ಯಕ್ತ ಪಡಿಸಿ ನಮ್ಮ ಕೃತಜ್ಞತೆಯನ್ನು ಪ್ರಕಟಿಸುವ ಪ್ರಯತ್ನ ಮಾಡಲಾಗಿದೆ. ಇಂಥ ಸಂಪತ್ ಶೀಲದಿಂದ ಜಗತ್ತು ಸದಾಕಾಲ ಶ್ರೀಮಂತವಾಗಿರುತ್ತ ಸಮೃದ್ಧವಾಗುತ್ತದೆ.

●

ಶ್ರೀ ನಿಜಗುಣ ಸ್ವಾಮೀಜಿಯವರು

ಜಿ. ವಿ. ಜಯಾ ರಾಜಶೇಖರ್

ಕೆಲವು ವರ್ಷಗಳ ಹಿಂದೆ ಜಯನಗರದ ಬಸವ ಸೇವಾ ಸಮಿತಿಯ ಕಾರ್ಯದರ್ಶಿಗಳಾಗಿದ್ದ ಶ್ರೀಯುತ ಬಸವಯ್ಯನವರು ಮತ್ತು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಓಡಾಡುತ್ತಿದ್ದು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀಯುತ ಗೊ. ರು. ಚನ್ನಬಸಪ್ಪನವರು ಒಂದು ದಿನ ನಮ್ಮ ಮನೆಗೆ ಬಂದರು. ಗವಿಪುರ ಬಡಾವಣೆಯಲ್ಲಿರುವ ಶ್ರೀ ಜಂಗಮ ಮಠದ ಶ್ರೀ ನಿಜಗುಣಸ್ವಾಮಿಗಳು ತಮ್ಮ ಮಠದಲ್ಲಿ ಒಂದು ತಿಂಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿಯೂ, ನಾನು ಶೂನ್ಯಸಂಪಾದನೆ ಹಾಡಬೇಕೆಂದೂ, ಚನ್ನಬಸಪ್ಪನವರು ವ್ಯಾಖ್ಯಾನ ಮಾಡುವುದಾಗಿಯೂ ಕೇಳಲು ಬಂದಿದ್ದರು. ಸತತವಾಗಿ ಒಂದು ತಿಂಗಳು ಹಾಡಲು ಸಾಧ್ಯವಾಗುವುದಿಲ್ಲವೆಂದು ಹತ್ತುದಿನಗಳ ಕಾರ್ಯಕ್ರಮಕ್ಕೆ ಒಪ್ಪಿಕೊಂಡೆ.

ಕಾರ್ಯಕ್ರಮದ ಮೊದಲ ದಿನ ಹೋದಾಗ ಮೊಟ್ಟಮೊದಲಬಾರಿ ಜಂಗಮ ಮಠವನ್ನು ನೋಡಿದ್ದು. ಪ್ರಥಮ ನೋಟದಲ್ಲೇ ಆಹ್ಲಾದವಾಯ್ತು. ಋಷ್ಯಾಶ್ರಮ ಪ್ರವೇಶಿಸಿದ ಅನುಭವ, ಪಟ್ಟಣದ ಗದ್ದಲವಿರದ ಶಾಂತ ವಾತಾವರಣ, ಸ್ವಚ್ಛಗಾಳಿ, ಧಾರಾಳ ಬೆಳಕು,ಬಿಲ್ವಪತ್ರೆಯ ಮರದಿಂದ ಹಿಡಿದು ವಿವಿಧ ಜಾತಿ ಪುಷ್ಪಫಲಗಳ ತರುಲತೆಗಳು, ಅರಳಿನಿಂತ ಹೂಗಳು. ಹಣ್ಣಾಗಿನಿಂತ ಕಾಫಿ ಹಣ್ಣುಗಳ ಜೊತೆಗೆ ತೆಂಗು ಮುಂತಾದ ಸಮೃದ್ಧ ಬೆಳೆ. ನಿಜವಾಗಿಯೂ ಕಲುಷಿತ ವಾತಾವರಣ, ಗೌಜು, ಗದ್ದಲದಿಂದ ವ್ಯಗ್ರವಾದ ಮನಕ್ಕೆ ತಂಪೆರೆದಂತಾಯ್ತು.

ಪೂಜ್ಯ ಸ್ವಾಮೀಜಿಯವರನ್ನು ಈ ಮೊದಲು ಕೆಲವು ಬಾರಿ ನೋಡಿದ್ದರೂ ಪರಿಚಯವಿರಲಿಲ್ಲ. ನಿಜಗುಣ ಕಲ್ಯಾಣ ಕ್ಷೇತ್ರವೂ ಸ್ವಾಮೀಜಿಯವರಿಗೇ ಸೇರಿದ್ದೆಂದು ಅನಂತರ ತಿಳಿಯಿತು. ಮಠಕ್ಕೆ ಹೋದಾಗ ಸ್ವಾಮೀಜಿಯವರು ಗಂಡನ ಮನೆಯಿಂದ ತವರಿಗೆ ಬಂದ ಮಗಳನ್ನು ಸ್ವಾಗತಿಸುವಂತೆ ''ತಾಯಿ, ಬಂದೆಯಾ, ಬಾರವ್ವಾ, ನೀನು ಬಂದಿದ್ದು ತುಂಬಾ ಸಂತೋಷ'' ಎಂದು ಆತ್ಮೀಯ ನಗು ಬೀರಿ ಸ್ವಾಗತಿಸಿದರು.

ಮಹಡಿಯ ಮೇಲೆ ಇರುವ ಅತಿದೊಡ್ಡದಲ್ಲದ, ಚಿಕ್ಕದಲ್ಲದ ಹಾಲ್‌ನಲ್ಲಿ ಒಂದು ವೇದಿಕೆ ನಿರ್ಮಿಸಿದ್ದರು. ಪಕ್ಕದಲ್ಲಿ ಸ್ವಾಮೀಜಿಯವರು ಕುಳಿತುಕೊಳ್ಳಲು ಒಂದು ವೇದಿಕೆ. ಅದೇ ಮೊಟ್ಟಮೊದಲ ಶೂನ್ಯಸಂಪಾದನೆಯ ನನ್ನ ಪ್ರವಚನ. (ಆನಂತರದ ಪ್ರವಚನಗಳಲ್ಲಿ ನನ್ನದೇ ಗಾಯನ ಮತ್ತು ವ್ಯಾಖ್ಯಾನ. ಡಾ. ಜೋಳದರಾಶಿ ದೊಡ್ಡನಗೌಡರ ಖಚಿತವಾದ ಆಜ್ಞೆಯ ಮೇರೆಗೆ ಮುಂದೆ ನಾನೇ ಗಾಯನದೊಂದಿಗೆ ವ್ಯಾಖ್ಯಾನ ಮಾಡುವುದನ್ನೂ ರೂಢಿಸಿಕೊಂಡೆ. "ನಿನಗೆ ತಿಳಿದಿದ್ದನ್ನು ನೀನೇ ಹೇಳಬೇಕಲ್ಲದೆ, ಬೇರೆಯವರು ಹೇಳಿದ್ದಕ್ಕೆ ನೀನು ಹಾಡುವುದಲ್ಲ" ಎಂದು ರೇಗಿದ ಗೌಡರು ಮುಂದೆ ಬೇರೆಯವರ ವ್ಯಾಖ್ಯಾನಕ್ಕೆ ಹಾಡುವುದಿಲ್ಲ ಎಂದು ಹೇಳುವತನಕ ಸಮಾಧಾನ ತಂದುಕೊಳ್ಳಲಿಲ್ಲ.) ಮುಂದೆ ನನ್ನ ಪ್ರವಚನಗಳ ಸೇವೆಗೆ ಇಲ್ಲಿಂದಲೇ ನಾಂದಿಯಾಯ್ತು.

ಶೂನ್ಯಸಂಪಾದನೆಯ ವಚನಗಳನ್ನು ಹಾಡುವುದಕ್ಕೂ, ಕೆಲವು ವಚನಗಳನ್ನು ತಕ್ಕ ವಿವರಣೆಯೊಂದಿಗೆ ಹಾಡುವುದಕ್ಕೂ ಪೂರ್ಣಪ್ರಮಾಣದ ಪ್ರವಚನ ಮಾಡುವುದಕ್ಕೂ ತುಂಬಾ ವ್ಯತ್ಯಾಸವಿದೆ. ಇದೇ ಮೊದಲ ಬಾರಿ ಧೈರ್ಯ ಮಾಡಿ ಪ್ರವಚನಕ್ಕೆ ಒಪ್ಪಿಕೊಂಡಿದ್ದೆ.

ಆಸಕ್ತರಾದ ಸುಮಾರು ೪೫-೫೦ ಜನ ಕಾರ್ಯಕ್ರಮಕ್ಕೆ ಸೇರುತ್ತಿದ್ದರು. ಇಂತಹ ಕಾರ್ಯಕ್ರಮಗಳಿಗೆ ಇಷ್ಟು ಜನ ಸೇರುವುದೂ ದೊಡ್ಡದೇ. ಇಂತಹ ಗಹನವಾದ ತಾತ್ವಿಕ ವಿಚಾರದಲ್ಲಿ ಆಸಕ್ತಿ ಇರಲೂ ತಕ್ಕ ಒಂದು ಸಂಸ್ಕಾರವಿರಬೇಕು. ಆಧ್ಯಾತ್ಮಿಕ ವಿಚಾರಗಳನ್ನು ಕೇಳಿ ಅರಗಿಸಿಕೊಳ್ಳಲು ಒಂದು ಮಾನಸಿಕ ಸಿದ್ಧತೆ ಇರಲೇಬೇಕೆಂಬುದು ನನ್ನ ಅನಿಸಿಕೆ.

ಏಳೆಂಟು ಸಾವಿರ ಜನ ಇರುವ ಸಭೆ, ಸಮಾರಂಭಗಳಲ್ಲೂ ನಾನು ಹಾಡಿ ಮಾತನಾಡಿದ್ದೇನೆ. ಅಂತಹ ದೊಡ್ಡಸಭೆಗಳಲ್ಲಿ ಹಲವು ರೀತಿಯ, ವಿಭಿನ್ನ ಆಸಕ್ತಿಯ ಜನ ಇರುತ್ತಾರೆ. ಕೆಲವರಿಗೆ ಆಕಳಿಕೆ, ಕೆಲವರಿಗೆ ತೂಕಡಿಕೆ ಆದರೆ ಮತ್ತೆ ಕೆಲವರಿಗೆ ಜನರನ್ನು ಸಂಧಿಸಿ, ಹರಟೆ ಹೊಡೆಯುವ ತಾಣವಾಗಿರುತ್ತದೆ. ಧ್ವನಿವರ್ಧಕದ ಮುಂದೆ ಮಾತನಾಡುವವರ ಧ್ವನಿಯನ್ನೂ ಮೀರಿಸಿದ ಧ್ವನಿಯಲ್ಲಿ ಮಾತನಾಡತೊಡಗಿ ಸಂತೆಯ ವಾತಾವರಣ ನಿರ್ಮಿಸಿ, ಭಾಷಣ ಮಾಡುವವರ, ಹಾಡುವವರ ಏಕಾಗ್ರತೆಗೆ ಭಂಗ ತರುವುದೂ ಉಂಟು. ಮತ್ತೆ ಕೆಲವರು ಅಲ್ಲಿ ಇಲ್ಲಿ ನಿಂತು, ಕುಳಿತು, ಕಾರ್ಯಕ್ರಮದ ಒಂದು ಅಂಗವಾದ ಭೋಜನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನುಗ್ಗಿ "ಭಾಷಣದ ಸಮಯದಲ್ಲಿ ಇಷ್ಟು ಜನ ಇರಲಿಲ್ಲವಲ್ಲ, ಎಲ್ಲಿಂದ ಇಷ್ಟು ಸಂಖ್ಯೆಯಲ್ಲಿ ಬಂದರು!" ಎಂದು ಬೆರಗುಂಟು ಮಾಡುತ್ತಾರೆ. ತಿಳಿಯಬೇಕೆನ್ನುವ ಆಸಕ್ತಿ ಇರುವವರು ನಾಲ್ಕಾರು ಜನ ಇದ್ದರೂ ಹೇಳುವವರಿಗೆ ಉತ್ತೇಜನವನ್ನು ಕೊಟ್ಟು, ನವಸ್ಫೂರ್ತಿಯನ್ನೊದಗಿಸಿ ಕಾರ್ಯಕ್ರಮ ಮತ್ತೂ ಚೆನ್ನಾಗುವಂತೆ ಮಾಡುತ್ತಾರೆ. ಕಾರ್ಯಕ್ರಮ ಚೆನ್ನಾಗಿ ನಡೆಯಬೇಕಾದರೆ ವೇದಿಕೆಯ ಮೇಲಿರುವವರಷ್ಟೇ ಅಲ್ಲ, ಶ್ರೋತೃಗಳೂ ಕಾರಣರಾಗುತ್ತಾರೆ. ಶ್ರೋತೃಗಳೇ ನಮ್ಮಿಂದ ಚೆನ್ನಾಗಿ ಹಾಡಿಸುತ್ತಾರೆ, ಮಾತನಾಡಿಸುತ್ತಾರೆ.

ಶ್ರೀಮಠದಲ್ಲಿ ಪ್ರತಿದಿನ ಸಂಜೆ ಆರು ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗುತ್ತಿತ್ತು. ಪ್ರಾರಂಭಕ್ಕೆ ಕೆಲವು ನಿಮಿಷಕ್ಕೆ ಮೊದಲೇ ಸ್ವಾಮೀಜಿಯವರು ಆಸೀನರಾಗಿರುತ್ತಿದ್ದರು. ಕೆಲವು ಕಡೆ ಕಾರ್ಯಕ್ರಮ ಏರ್ಪಡಿಸಿದ ಹಿರಿಯರೋ, ಸ್ವಾಮಿಗಳೋ ಸಭೆಯಲ್ಲಿ ಇಲ್ಲದೆ ಇರುವುದನ್ನು ಕಂಡಿದ್ದೇನೆ. ಯಾರೋ ಬಂದು ಹಾಡಿಕೊಂಡು ಹೋದರು; ಯಾರೋ ಬಂದು ಕೇಳಿಕೊಂಡು ಹೋದರು ಎಂಬಂತಾಗಿರುವುದನ್ನು ಗಮನಿಸಿದ್ದೇನೆ. ಹಾಗಲ್ಲದೆ ನಮ್ಮ ಸ್ವಾಮೀಜಿಯವರು ಒಂದು ದಿನವೂ ತಪ್ಪದೆ ಸಮಯಕ್ಕೆ ಮೊದಲೇ ಆ ಸ್ಥಳಕ್ಕೆ ಆಗಮಿಸಿ ಆ ಪುಟ್ಟ ಸಭೆಗೇ ಶೋಭೆಯನ್ನು ತರುತ್ತಿದ್ದರು. ಬೇರೆ ಬೇರೆ ಮಠಗಳ ಶ್ರೀಗಳೂ, ಬೇರೆ ಊರುಗಳಿಂದ ದಯಮಾಡಿಸಿದ ಸ್ವಾಮೀಜಿಯವರುಗಳೂ ವೇದಿಕೆಯ ಮೇಲಿರುತ್ತಿದ್ದರು. ಆಸಕ್ತಿಯಿಂದ ಈ ಎಳೆಯಳ ಕಾರ್ಯಕ್ರಮವನ್ನು ಕೇಳಿ ತಲೆದೂಗುತ್ತಿದ್ದರು. ನಿಜಗುಣ ಸ್ವಾಮೀಜಿಯವರಂತೂ ತನ್ಮಯರಾಗಿ ಕುಳಿತು ಬಿಡುತ್ತಿದ್ದರು.

ನನ್ನ ತಂಬೂರಿಯನ್ನು ದಿನವೂ ತಂದು, ತೆಗೆದುಕೊಂಡು ಹೋಗುವುದು ಬೇಡವೆಂದು ಮಠದಲ್ಲೇ ಇಟ್ಟಿದ್ದೆ. ಸ್ವಾಮೀಜಿಯವರು ತುಂಬಾ ಭಾವುಕರು, ಮಾತೃಸದೃಶ ಹೃದಯವುಳ್ಳವರು. ಕಾರ್ಯಕ್ರಮಕ್ಕೆ ಮೊದಲು ಅವರ ಶ್ರೀಚರಣಗಳಿಗೆ ವಂದಿಸಿ ವೇದಿಕೆಗೆ ಹೋಗುತ್ತಿದ್ದೆ. ಇನ್ನು ಮೂರು ದಿನಗಳ ಕಾರ್ಯಕ್ರಮ ಉಳಿದಿತ್ತು. ಅಂದು ನಮಸ್ಕಾರ ಮಾಡಿದಾಗ ''ಎಷ್ಟು ಚೆನ್ನಾದ ಕಂಠದಿಂದ ಹಾಡುತ್ತಿದ್ದೆ. ಇನ್ನು ಮೂರೇ ದಿನ ಉಳಿಯಿತಲ್ಲವ್ವ'' ಎಂದು ಕಣ್ಣೀರ್ಗರೆದರು !

ಕೊನೆಯ ದಿನ ಮಾತ್ರ ನಮ್ಮ ಯಜಮಾನರು ಬರಲು ಸಾಧ್ಯವಾಗಿತ್ತು. ನನ್ನ ವಿದ್ಯಾಗುರುಗಳಾದ ಡಾ. ಸಾ. ಶಿ. ಮರುಳಯ್ಯನವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದ ಸರಳ, ಸುಂದರ ಸಮಾರಂಭವದು. ಅವರಿಬ್ಬರೂ ಹಿರಿಯರು. ಕಾರ್ಯಕ್ರಮದ ಮುಕ್ತಾಯದ ನಂತರ ಭಾಷಣ ಮಾಡಿ, ನನ್ನ ಬಗೆಗೆ ಅತೀವ ಮೆಚ್ಚುಗೆ ಸೂಚಿಸಿ, ಸಂಕೋಚದಿಂದ ನಾನು ಮುದುಡಿಹೋಗುವಂತೆ ಮಾಡಿದರು. ನಾನು ಅಂದು ಮಾತನಾಡಲು ಬಯಸಿದೆ. ಅದೂ ಆ ಹಿರಿಯರಿಬ್ಬರೂ ಮಾತನಾಡುವ ಮೊದಲು. ಆಗ ಗೊ. ರು. ಚನ್ನಬಸಪ್ಪನವರು ''ಇದೂ ಸರಿಯೇ, ಗುರುಗಳಿಗಿಂತ ಮೊದಲು ಶಿಷ್ಯೆ ಮಾತನಾಡುತ್ತಾರಂತೆ'' ಎಂದದ್ದಲ್ಲದೆ, ''ಇದುವರೆಗೆ ನಾನು ಮಾತನಾಡುತ್ತಿದ್ದೆ ಅವರು ಹಾಡುತ್ತಿದ್ದರು; ಇಂದು ಅವರು ಮಾತನಾಡಲಿದ್ದಾರೆ, ಆದರೆ ನಾನು ಹಾಡಲಾರೆ'' ಎಂದು ನಕ್ಕರು. ಅವರು ಎಲ್ಲ ವಿಷಯವನ್ನೂ ಹಾಸ್ಯಮಯವಾಗಿಯೆ ಹೇಳುವುದು ರೂಢಿ.

ಅಂದು ಕಾರ್ಯಕ್ರಮ ಮುಗಿದು ಹೊರಡುವಾಗ ತಂಬೂರಿಯನ್ನು ಎತ್ತಿಕೊಂಡೆ. ಸ್ವಾಮೀಜಿಯವರು ''ಇದುವರೆಗೆ ತಂಬೂರಿ ಇಲ್ಲಿದ್ದದ್ದು ನೀನೇ ಇದ್ದಂತೆ ಆಗಿತ್ತು;

ತೆಗೆದುಕೊಂಡು ಹೋಗುತ್ತಿದ್ದೀಯಲ್ಲ ತಾಯಿ, ಮನಸ್ಸಿಗೆ ಏನೋ ಭಣ, ಭಣ, ಎನ್ನಿಸುತ್ತಾ ಇದೆ'' ಎಂದು ಮತ್ತೆ ಕಣ್ಣಿನಲ್ಲಿ ನೀರು ತುಂಬಿಕೊಂಡು ಗದ್ಗದಿತರಾದರು.

ನಮ್ಮ ಯಜಮಾನರಿಗೆ ''ತಾಯಿ ಬಹಳ ಚೆನ್ನಾಗಿ ಹಾಡುತ್ತಾಳೆ, ಮಾತನಾಡುತ್ತಾಳೆ, ಎರಡೂ ದೇವರು ಕೊಟ್ಟ ವರ. ಯಾವಾಗ ಕೇಳಿದರೂ ಇಲ್ಲ ಎನ್ನದೆ ನಮ್ಮ ಮಠದ ಕಾರ್ಯಕ್ರಮಗಳಿಗೆ ಕಳಿಸಿಕೊಡಿ ಡಾಕ್ಟ್ರೇ'' ಎಂದು ಅವರ ಕೈ ಹಿಡಿದುಕೊಂಡು ಹೇಳಿದರು!

೧೯೮೭ರ ಜುಲೈ ೧೮-೧೯-೨೦ ಈ ಮೂರುದಿನಗಳು ಅದೇ ಜಂಗಮ ಮಠದಲ್ಲಿ ಡಾ.ಸಾ.ಶಿ. ಮರುಳಯ್ಯನವರ ನೇತೃತ್ವದಲ್ಲಿ ''ಶೂನ್ಯಸಂಪಾದನೆ'' ಕುರಿತ ವಿಚಾರ ಸಂಕಿರಣ ನಡೆಯಿತು. ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ನಡೆದ ವೈಚಾರಿಕ ಕಾರ್ಯಕ್ರಮವಿದು. ಡಾ. ಚಿದಾನಂದಮೂರ್ತಿ, ಡಾ.ಎಂ.ಎಂ. ಕಲ್ಬುರ್ಗಿ, ಡಾ.ಎಸ್. ಎಂ. ವೃಷಭೇಂದ್ರಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಗಳು ಬಹು ಮಹತ್ತರವಾದುವು. ಅತ್ಯಂತ ವ್ಯವಸ್ಥಿತವಾಗಿ ನಡೆದ ಕಾರ್ಯಕ್ರಮವೂ ಹೌದು.

ಇದೇ ಸಂದರ್ಭದಲ್ಲಿ ಇದುವರೆಗೂ ಸಿಕ್ಕಿಯೇ ಇಲ್ಲವೆಂದು ಹೇಳಲಾಗಿದ್ದ ''ಸೋಮೇಶ್ವರ'' ಎಂಬ ಅಂಕಿತವುಳ್ಳ ಅಜಗಣ್ಣನ ಐದು ವಚನಗಳನ್ನು ಡಾ.ಚಿದಾನಂದಮೂರ್ತಿ ಮತ್ತು ಶ್ರೀಯುತ ಎಸ್. ಶಿವಣ್ಣ-ಇವರು ಬೆಳಕಿಗೆ ತಂದರು. ಇದರಿಂದಾಗಿ ಈ ವಿಚಾರಸಂಕಿರಣಕ್ಕೊಂದು ಐತಿಹಾಸಿಕ ಮಹತ್ವ ಬಂತು. ಇಂತಹ ವಿದ್ವದ್‌ಗೋಷ್ಠಿಯಲ್ಲಿ ನಾನು ಒಂದು ಪ್ರಬಂಧ ಮಂಡಿಸಿದ್ದು ನನ್ನ ಭಾಗ್ಯವೇ ಸರಿ. ಇಲ್ಲಿ ಕೇಳಿದ ಡಾ.ಎಂ. ಎಂ. ಕಲ್ಬುರ್ಗಿಯವರ ಭಾಷಣ ಶೂನ್ಯಸಂಪಾದನೆಯನ್ನು ಕುರಿತು ನಾನು ಮಾಡುತ್ತಿರುವ ಕೆಲಸಕ್ಕೆ ಪ್ರೇರಣೆಯಾಗಿದ್ದೂ ನಿಜ.

ಈ ಮೂರು ದಿನಗಳ ಕಾರ್ಯಕ್ರಮ ನಡೆಯುವ ಮೊದಲು ನಡೆಯುತ್ತಿದ್ದ ಮೀಟಿಂಗ್‌ಗಳಿಗೆ ಹೋಗುತ್ತಿದ್ದೆ. ಎಷ್ಟೊಂದು ಸಡಗರ, ಸಂಭ್ರಮ-ಒಳ್ಳೆಯ ಮದುವೆಮನೆಯ ವಾತಾವರಣ (ಈಗಿನಂತೆ ಛತ್ರಗಳಲ್ಲಿ ನಡೆಯುವ ಮದುವೆಗಳಲ್ಲ. ತುಂಬಾ ಜನ ಸೇರಿದರೂ ಪರಸ್ಪರ ದ್ವೇಷ, ಅಸೂಯೆಗಳಿಗೆ ಎಡೆಯಿಲ್ಲದೆ ಪ್ರೀತಿ ಗೌರವ, ಆದರಗಳಿಂದ ಕೂಡಿದ ಸನ್ನಿವೇಶ).

ಮೂರೂ ದಿನಗಳ ಮಹಾದಾಸೋಹ ನಡೆಯಿತು. ಹಸಿದ ಹೊಟ್ಟೆಗೂ ಊಟ, ಜ್ಞಾನದ ತೃಷೆಗೂ ಗಂಗಾಜಲ! ಸ್ವಾಮೀಜಿಯವರು ಸುಮಾರು ಒಂದು ಲಕ್ಷರೂಪಾಯಿಗಳಿಗೂ ಮಿಗಿಲಾಗಿ ಖರ್ಚುಮಾಡಿ, ಸಾರ್ಥಕ ಕೆಲಸ ಮಾಡಿದ್ದಲ್ಲದೆ, ಮುಂದೆ ''ಶೂನ್ಯಸಂಪಾದನೆ: ಒಂದು ಅಧ್ಯಯನ'' ಎಂಬ ಹೆಸರಿನಲ್ಲಿ ವಿದ್ವಾಂಸರ ಭಾಷಣಗಳನ್ನಾಧರಿಸಿದ ಲೇಖನಗಳನ್ನೊಳಗೊಂಡ ಗ್ರಂಥ ಮಾಡಿಸಿದರು.

ನಮ್ಮ ನಿಜಗುಣಸ್ವಾಮಿಗಳದು ಅತ್ಯಂತ ಕಳಕಳಿಯ ಹೃದಯ. ಆ ಮೂರೂ

ದಿನಗಳು ಅವರು ಗೋಷ್ಠಿಗಳು ನಡೆಯುವ ಸಮಯದಲ್ಲಿ ವೇದಿಕೆಯ ಮೇಲಿದ್ದರೂ ಅವರ ಗಮನವೆಲ್ಲಾ ದಾಸೋಹದ ವ್ಯವಸ್ಥೆಯ ಕಡೆಗೇ ಇರುತ್ತಿತ್ತು. ಗೋಷ್ಠಿ ಮುಗಿಯುತ್ತಿದ್ದಂತೆಯೇ ಅಡುಗೆಸಾಲಿಗೆ ಧಾವಿಸಿ ಹೋಗುವರು. ಅಡುಗೆಯವರಿಗೆ ಸಲಹೆ, ಸೂಚನೆ ನೀಡುವರು. ''ಬೇಕಾದಷ್ಟು, ಬೇಕಾದ ಅಡುಗೆ ಮಾಡಿ, ಸಾಕಾಗಲಿಲ್ಲ ಎನ್ನಿಸಬೇಡಿ'' ಎಂದು ಆದೇಶ ನೀಡುವರು. ಅವರ ಪೂರ್ವಾಶ್ರಮದ ಸೋದರಿ (ಮಠದಲ್ಲಿ ನಿತ್ಯ ನಡೆಯುವ ದಾಸೋಹವನ್ನೂ ಶ್ರಮವಹಿಸಿ, ಸಾರ್ಥಕವಾಗಿ ನಡೆಸಿಕೊಂಡು ಬರುವವರು) ಅನೇಕ ಬಗೆಯ ತಿಂಡಿಗಳನ್ನು ಮಾಡಿಸಿ, ಬಂದ ಬಂದವರಿಗೆಲ್ಲಾ ಕೊಡುವರು. ಇವರನ್ನು ಕಂಡಾಗೆಲ್ಲಾ ನನಗೆ ಶ್ರೀ ಬಸವಣ್ಣನವರ ಸೋದರಿ ಅಕ್ಕನಾಗಮ್ಮನ ನೆನಪಾಗುತ್ತದೆಂದರೆ ಉತ್ಪ್ರೇಕ್ಷೆ ಖಂಡಿತ ಅಲ್ಲ.

ಬಿಡಿದಿನಗಳಲ್ಲೂ ಮಠಕ್ಕೆ ಹೋದವರಿಗೆ ಉಣ್ಣಲು, ತಿನ್ನಲು, ಕುಡಿಯಲು ಸ್ವಾಗತವಿದ್ದೇ ಇದೆ. ನಾನು ಸ್ವಾಮೀಜಿಯವರ ಹೋರಾಟದ ಜೀವನದ ಬಗೆಗಾಗಲಿ, ಅವರ ಸಾಧನೆಗಳ ಬಗೆಗಾಗಲಿ ಇಲ್ಲಿ ಬರೆಯುತ್ತಿಲ್ಲ. ವ್ಯವಹಾರ ಕುಶಲಿಗಳೂ, ಧೈರ್ಯಶಾಲಿಗಳೂ, ಕಾಯಕಯೋಗಿಗಳೂ, ಗೋಸೇವಾತತ್ಪರರೂ ಆಗಿರುವ ಸ್ವಾಮೀಜಿಯವರ ಪ್ರಖರ ವ್ಯಕ್ತಿತ್ವ ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಅವರು ಮಾಡುತ್ತಿರುವ ಸಾರ್ಥಕವಾದ ಮತ್ತು ಸಕಾಲಿಕ ಎನ್ನುವುದಕ್ಕಿಂತ ಸರ್ವಕಾಲಕ್ಕೂ ಬೇಕಾಗುವಂತಹ ಕೆಲಸವೆಂದರೆ ಬೆಂಗಳೂರಿಗೆ ಬರುವ ಯಾವುದೇ ಮಠಾಧೀಶ್ವರರುಗಳಿಗೂ ತಂಗಲು ಸ್ಥಳ, ಪೂಜಾಪ್ರಸಾದಗಳ ವ್ಯವಸ್ಥೆ. ಇದು ಬಹು ಗಣನೀಯವಾದ ಕೆಲಸ ಅಷ್ಟೇ ಅಲ್ಲ, ಜವಾಬ್ದಾರಿಯುತವಾದ ಕೆಲಸವೂ ಹೌದು.

ಇದಕ್ಕೆ ಒಂದು ಘಟನೆಯನ್ನು ಉದಾಹರಣೆಯಾಗಿ ಹೇಳಬಹುದು. ಶ್ರೀ ನಿಜಗುಣಸ್ವಾಮಿಗಳು ಮೇಲೆ ಹೇಳಿದಂತೆಯೇ ಆಗಾಗ ಸಂಗೀತ, ಸಾಹಿತ್ಯದ ಕಾರ್ಯಕ್ರಮಗಳನ್ನೊಳಗೊಂಡಂತಹ ಧಾರ್ಮಿಕ ಶಿಬಿರ, ಸಭೆಗಳನ್ನು ಏರ್ಪಡಿಸುತ್ತಿರುತ್ತಾರೆ. ಒಮ್ಮೆ ಹೀಗೆ ಅಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರವಚನಗಳನ್ನು ನಡೆಸಿಕೊಡಲು ಶಿಷ್ಯರೊಡನೆ ಬಂದು ಮಠದಲ್ಲೇ ತಂಗಿದ್ದ ಪರವೂರಿನ ಸ್ವಾಮಿಗಳೊಬ್ಬರ ಬೆಳ್ಳಿಯ ಶಿವಪೂಜಾ ಪರಿಕರಗಳೆಲ್ಲ ಕಳುವಾದುವು! ಆ ಸ್ವಾಮಿಗಳಂತೂ ವಿಷಣ್ಣರಾಗಿ ಕುಳಿತು ಬಿಟ್ಟರು. ಅವರು ಎಷ್ಟು ಬೇಡವೆಂದರೂ ಕೇಳದೆ, ನಮ್ಮ ನಿಜಗುಣಸ್ವಾಮಿಗಳು ಆದ ಕಳವಿನ ಹೊಣೆಗಾರಿಕೆಯನ್ನು ತಾವೇ ಹೊತ್ತು ಇಡೀ ಶಿವಪೂಜಾ ಪರಿಕರಗಳ ಒಂದು ಜೊತೆಯನ್ನೇ ಅವರಿಗೆ ಕೊಟ್ಟರು! ಇದು ಜವಾಬ್ದಾರಿಯುತವಾಗಿ ವರ್ತಿಸುವವರ, ಮರ್ಯಾದೆಗಾಗಿ ಅಂಜುವವರ ಮೇಲೆ ಬೀಳುವ ಹೆಚ್ಚಿನ ಭಾರ!

೧೯೮೯ರಲ್ಲಿ ಡಾ. ಜೋಳದರಾಶಿ ದೊಡ್ಡನಗೌಡರಿಗೆ ಬೆಂಗಳೂರಿನಲ್ಲಿ ಸನ್ಮಾನ ಮಾಡಬೇಕೆಂದೂ, ಅದೇ ಸಮಯದಲ್ಲಿ ಒಂದು ಅಭಿನಂದನಾ ಗ್ರಂಥ ಹೊರತರಬೇಕೆಂದೂ

ಅವರ ಅಭಿಮಾನಿಗಳಾದ ನಾವುಗಳೆಲ್ಲಾ ಯೋಚಿಸಿದೆವು. ಆದರೆ ಮೊದಲು ಮೊದಲು ಈ ಕೆಲಸ ಮಾಡುತ್ತೇವೆಂದು ಮುಂದೆ ಬಂದವರ್‍ಯಾರೂ ಏನೇನೂ ಕೆಲಸ ಮಾಡಲಿಲ್ಲ. ಆಗ ನಮ್ಮ ಸ್ವಾಮೀಜಿಯವರು ಅಭಿನಂದನಾ ಸಮಿತಿಗೆ ಅಧ್ಯಕ್ಷರಾಗಿ ನಿಂತು ಸಮಯೋಚಿತವಾಗಿ ತಕ್ಕ ಸಲಹೆ, ಸೂಚನೆಗಳನ್ನಿತ್ತು ನನ್ನನ್ನು ಕೆಲಸ ಮಾಡಲು ಹುರಿದುಂಬಿಸಿದರು. ನಮ್ಮ ಮನೆಯಲ್ಲೇ ನಡೆಯುತ್ತಿದ್ದ ಮೀಟಿಂಗ್‌ಗಳಿಗೆ ದಯಮಾಡಿಸಿ, ಆದ ಕೆಲಸಗಳನ್ನು ವೀಕ್ಷಿಸಿ, ಮುಂದೇನಾಗಬೇಕೆಂಬುದನ್ನು ಹೇಳಿಕೊಡುತ್ತಿದ್ದರು.

"ನಾನು ಅವರ ಜಿಲ್ಲೆಯವನೇ. ನೀವು ಮುಂದೆ ನಿಂತು ಮಾಡುತ್ತಿರುವ ಕೆಲಸಕ್ಕೆ ನಮ್ಮ ಬೆಂಬಲ ಇದೆ. ಸಾಹಿತ್ಯ ಭಾಗದ ಕೆಲಸ ನೀವು ನೋಡಿಕೊಳ್ಳಿ, ಹಣ ಸಂಗ್ರಹಿಸುವ ಕೆಲಸ ನನಗಿರಲಿ, ಎಂದ ಮಹನೀಯರೊಬ್ಬರು ಅನಂತರ ಎಷ್ಟೋ ಬಾರಿ, ನಾಚಿಕೆಬಿಟ್ಟು ಫೋನ್ ಮಾಡಿದಾಗಲೂ ನನಗೆ ಹುಷಾರಿಲ್ಲ ನಾನು ಎಷ್ಟೋ ಕೆಲಸಗಳಿಗೆ ಹಣ ಸಂಗ್ರಹ ಮಾಡಿದ್ದೇನೆ. ಈಗ ಕೇಳಲು ಹೋದರೆ ಜನ ನನ್ನನ್ನು ನೋಡಿದರೆ ಕಲ್ಲು ತಗೊಂಡು ಹೊಡೀತಾರೆ." ಮುಂತಾಗಿ ಹೇಳಿ ಜಾರಿಕೊಂಡರು. ಮುಂದೆ ಅಡಿ ಇಟ್ಟಾಗಿದೆ, ಈ ಕೆಲಸಕ್ಕೆ ನಿಂತ ಮೇಲೆ ಹಿಂದೆ ಬರುವಂತಿಲ್ಲ! ಏನು ಮಾಡುವುದೆಂದೇ ತೋಚಲಿಲ್ಲ.

ಆಗ ಅನುಭವಿಗಳಾದ ನಮ್ಮ ಸ್ವಾಮೀಜಿಯವರು "ತಾಯಿ, ಜನ ಹೇಳಿದ ಮಾತುಗಳನ್ನು ನಂಬಬೇಡ. ನೀನು ಸರಳ ಸ್ವಭಾವದವಳು. ಇದು ಇಂದು ಪ್ರಯೋಜನಕ್ಕೆ ಬರುವುದಿಲ್ಲ. ಯಾರೂ ಒಂದು ರೂಪಾಯಿಯನ್ನೂ ಸಂಗ್ರಹಿಸಿಕೊಡುವುದಿಲ್ಲ. ಬೇಕಾದರೆ ಆ ಕೆಲಸಕ್ಕೆ ಹೋದಾಗ ಆಟೋಛಾರ್ಜು ಇಷ್ಟಾಯ್ತು, ಈ ಕೆಲಸಕ್ಕೆ ಹೋದಾಗ ಊಟದ ಹೊತ್ತು ಮೀರಿದ್ದರಿಂದ ಹೋಟೆಲ್‌ಗೆ ಹೋಗಿದ್ದೆ, ಬಿಲ್ಲು ಇಷ್ಟಾಯ್ತು, ಎಂದು ನೀನು ಕಷ್ಟಪಟ್ಟು ಸಂಗ್ರಹಿಸಿದ ಹಣವನ್ನು ಕಮಿಟಿಯಲ್ಲಿದ್ದೇವೆಂಬ ಕಾರಣಕ್ಕೆ ಧಾರಾಳವಾಗಿ ಖರ್ಚು ಮಾಡುತ್ತಾರೆ. ಎಚ್ಚರವಾಗಿರು." ಎಂದು ಬುದ್ಧಿಮಾತು ಹೇಳಿದ್ದಲ್ಲದೆ "ಇಂತಹ ಕಮಿಟಿ ಎಂದು ಮಾಡಿ ಸಾರ್ವಜನಿಕ ಹಣ ಲೂಟಿ ಹೊಡೆಯುವ ಗ್ಯಾಂಗ್‌ಗಳೇ ಇವೆ. ಸಂಗ್ರಹಿಸಿದ ಹಣವನ್ನು ನಿನ್ನ ಕೈಲಿಟ್ಟುಕೊಂಡು ಕೆಲಸಮಾಡು. ಬೇರೆಯವರ ಕೈಗೆ ಹಣ ಸಿಕ್ಕಿಸಬೇಡ. ನೀನು ಲೂಟಿಹೊಡೆಯಲು ಹಣ ಕೊಡದಿದ್ದ ಮೇಲೆ ಆ ಗ್ಯಾಂಗ್‌ಮನ್‌ಗಳು ಈ ಕಡೆ ಸುಳಿಯುವುದೂ ಇಲ್ಲ." ಎಂದು ಸತ್ಯವಾದ ಮಾತನ್ನು ಹೇಳಿದರು.

ತಾವೇ ಕೈಯಿಂದ ಮೊಟ್ಟಮೊದಲು ಸಾವಿರದ ಐನೂರು ರೂ.ಗಳನ್ನು ಕೊಟ್ಟು ಪ್ರೋತ್ಸಾಹದ ನುಡಿಗಳನ್ನಾಡಿ, "ಹಣ ಸಂಗ್ರಹ ಮಾಡು, ಬೇರೆಯವರನ್ನು ನೆಚ್ಚಬೇಡ, ಕೊನೆಯಲ್ಲಿ ಸಾಲದೆ ಹೋದರೆ ಕೇಳು, ಸಾಲದೆ ಬಂದಷ್ಟನ್ನು ಮತ್ತೆ ಕೊಡುವೆ." ಎಂದು ಹೇಳಿ, ಒತ್ತಾಸೆಯಾಗಿ ನಿಂತು, ನಾನು ಮಾಡಬೇಕೆಂದುಕೊಂಡಿದ್ದ ಕೆಲಸಕ್ಕೆ

ಪೂರ್ಣಮನದಿಂದ ಆಶೀರ್ವದಿಸಿದರು. ಅಂದು ಅವರು "ನಾನಿದ್ದೇನೆ" ಎಂದು ಹೇಳಿದ್ದನ್ನು ನೆನೆದರೆ ಇಂದೂ ನನಗೆ ಕೃತಜ್ಞತೆಯ ಕಣ್ಣೀರು ಸುರಿಯುತ್ತದೆ.

ಮುಂದೆ ದೇವರ ದಯದಿಂದಲೂ ಸ್ವಾಮೀಜಿಯವರಂತಹ ಸತ್ಪುರುಷರ ಶುಭ ಆಶೀರ್ವಾದಗಳಿಂದಲೂ ಪುನಃ ಅವರನ್ನು ಹಣಕ್ಕೆ ಕಾಡುವಂತಹ ಪರಿಸ್ಥಿತಿ ಬರಲಿಲ್ಲ! ನಾನು ನನ್ನ ಗೆಳತಿಯರು-ಹೆಣ್ಣು ಮಕ್ಕಳು ಮನಸ್ಸು ಮಾಡಿದರೆ, ಒಂದು ಕೆಲಸಕ್ಕೆ ಕೈಹಾಕಿದರೆ ಎಷ್ಟು ಸಮರ್ಪಕವಾಗಿ ಮಾಡಬಲ್ಲರು ಎಂಬುದಕ್ಕೆ ಮಾದರಿ ಎಂಬಂತೆ ಮಾಡಿ ತೋರಿಸಿದೆವು. ಸಭೆಗಳಲ್ಲಿ ಭಾಷಣದಲ್ಲಿ ಆಡಿ ಸೋಲುವುದಕ್ಕೂ, ಕೆಲಸಕ್ಕೆ ಕೈಹಾಕಿ ಮಾಡಿ ತೋರಿಸುವುದಕ್ಕೂ ಮಹದಂತರವಿದೆ. ಇದನ್ನು ನಾವು ಸಾಧಿಸಿ, ಮಹಿಳೆಯರ ಕಾರ್ಯಶಕ್ತಿವ್ಯಾಪ್ತಿಯನ್ನು ತೋರಿಸಿದೆವು ನಿಜ. ಆದರೆ ಇದಕ್ಕೆ ಪ್ರಥಮದಲ್ಲಿ ನಮ್ಮನ್ನು ಬೆಂಬಲಿಸಿದ ನಮ್ಮ ಸ್ವಾಮೀಜಿಯವರೇ ಇದಕ್ಕೆಲ್ಲಾ ಚೇತನಶಕ್ತಿ ಎಂಬುದನ್ನು ನಾನು ಎಂದೂ ಮರೆಯುವಂತಿಲ್ಲ; ಮರೆಯಬಾರದು.

೧೯೯೧ರಲ್ಲಿ "ಮಹದೇವಿಯಕ್ಕಗಳ ಸಂಪಾದನೆ"ಯ ಜೋಡಿ ಕ್ಯಾಸೆಟ್ ಮೊದಲು ಅಮೇರಿಕೆಯಲ್ಲಿ ಬಿಡುಗಡೆಯಾಯ್ತು. ಇಂಡಿಯಾದಲ್ಲಿ ಮಾರುವ ಹಕ್ಕನ್ನು ಉಳಿಸಿಕೊಂಡಿದ್ದ ನಾನು ಇಲ್ಲಿ ಬಿಡುಗಡೆ ಮಾಡಬೇಕೆಂದು ಯೋಚಿಸಿದೆ. ಆಗಲೂ ನನಗೆ ನಮ್ಮ ಸ್ವಾಮಿಜಿಯವರದೇ ಒತ್ತಾಸೆ. ೨೯-೧೧-೯೧ರಂದು ಅದೇ ತಪೋಭೂಮಿ ಜಂಗಮಮಠದಲ್ಲಿ ನೂತನವಾಗಿ ನಿರ್ಮಿಸಿದ್ದ "ನಿಜಗುಣ ಸಭಾಂಗಣದಲ್ಲಿ" ಬೇಲಿಮಠದ ಶ್ರೀ ನಿ. ಪ್ರ. ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಮ್ಮ ನಿಜಗುಣ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ, ನನ್ನ ವಿದ್ಯಾಗುರುಗಳಾದ ಡಾ.ಸಾ.ಶಿ. ಮರುಳಯ್ಯನವರ ಅಮೃತ ಹಸ್ತಗಳಿಂದ ಬಿಡುಗಡೆಯಾಯ್ತು. ಅಂದು ಶ್ರೀಯುತ ಎಂ. ಪಿ. ಪ್ರಕಾಶ ಅವರೂ, ನನ್ನಲ್ಲಿ ಪಿತೃಸದೃಶ ವಾತ್ಸಲ್ಯವಿರಿಸಿರುವ ಡಾ.ಬಿ.ಡಿ.ಜತ್ತಿಯವರೂ ಮುಖ್ಯ ಅತಿಥಿಗಳಾಗಿ ದಯಮಾಡಿಸಿದ್ದರು. ಅಂದು ನಮ್ಮ ಸ್ವಾಮೀಜಿಯವರಿಗೆ ಅತಿ ಹರ್ಷ, ಉತ್ಸುಕತೆ. ಆ ಸಭಾಂಗಣವನ್ನು ಉಪಯೋಗಿಸಿಕೊಳ್ಳಲು ಉಚಿತವಾಗಿತ್ತರು. ಅಲ್ಲಿಯ ವಿದ್ಯುಚ್ಛಕ್ತಿ ಬಿಲ್‌ಗಾದರೂ ಸಾಕಾಗುವಷ್ಟು ತೆಗೆದುಕೊಳ್ಳಿ ಎಂದು ನಮ್ಮ ಯಜಮಾನರು ಎಷ್ಟು ಹೇಳಿದರೂ ಬೇಡವೆಂದುಬಿಟ್ಟರು. ಇಷ್ಟು ಸಾಲದೆಂಬಂತೆ ನೂರು ಜೊತೆ ಕ್ಯಾಸೆಟ್ ಕೊಂಡು ನನ್ನ ಕಲೆಗೆ ಪ್ರೋತ್ಸಾಹ ನೀಡಿ, ಪೂರ್ಣ ಮನದ ಆಶೀರ್ವಾದವಿತ್ತರು.

ಮುಂದೆ ೧೯೯೨ರ ನವಂಬರ್ ೯ನೆಯ ತಾ. ನನ್ನ ಎರಡನೆಯ ಜೋಡಿ ಕ್ಯಾಸೆಟ್ "ಪ್ರಭುದೇವರ ಆರೋಗಣೆ"ಯ ಬಿಡುಗಡೆಯ ಸಮಯದಲ್ಲೇ ಬಸವ ಸಮಿತಿಯವರು ಪ್ರಕಟಿಸಲಿದ್ದ ನನ್ನ "ಶೂನ್ಯಸಂಪಾದನೆಯಲ್ಲಿ ಸ್ತ್ರೀ ಪಾತ್ರಗಳು" ಎಂಬ ಪುಸ್ತಕದ ಪ್ರಕಟಣಾ ಕಾರ್ಯವೂ ಸೇರಿಕೊಂಡು, ಅದೊಂದು ನನ್ನ ಜೀವನದ ಸುದಿನವಾಯ್ತು.

ನುಲಿಯ ಚಂದಯ್ಯಗಳಿಗೆ ಆ ಸಂಪಾದನೆಯಲ್ಲಿ ಮಾಚಿದೇವ "ಮಧುರಕ್ಕೆ ಮಧುರ ಒದಗಲಾಗಿ, ಆ ಸವಿಗೆ ಸವಿ ಕೊರತೆಯುಂಟೆ ? ದ್ರವ್ಯಕ್ಕೆ ದ್ರವ್ಯ ಒದಗಲಾಗಿ ಬಡತನವುಂಟೆ?" ಎಂದು ಕೇಳಿದಂತೆ ಸಂತೋಷದ ಸಕ್ಕರೆಗೆ ಮೇಲಿನ ಸಂತೋಷದ ಮಧು ಬೆರೆತಂತಾಯ್ತು ಅಂದು.

ನನ್ನ ಅಚ್ಚುಮೆಚ್ಚಿನ ಗ್ರಂಥ "ಶೂನ್ಯಸಂಪಾದನೆ"ಯ ಬಗೆಗೆ ನಾನು ಮಾಡಿದ ಎರಡು ಪುಟ್ಟ ಕೆಲಸಗಳ ಸಮ್ಮಿಲನ! ಎಷ್ಟು ಜನರಿಗೆ ಈ ಭಾಗ್ಯ ಒದಗೀತು ! ಈ ಅಪರೂಪದ ಕೆಲಸಗಳೂ ಅದೇ ದಿವ್ಯ ತಪೋವನದಲ್ಲಿ ನಮ್ಮ ಸ್ವಾಮೀಜಿಯವರ ಆಹ್ಲಾದಮಯ ಸಾನ್ನಿಧ್ಯದಲ್ಲಿ, ಮೈಸೂರಿನ ಸುತ್ತೂರು ಮಠದ ಶ್ರೀಗಳಾದ ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಜಗದ್ಗುರುಗಳ ಘನ ಅಧ್ಯಕ್ಷತೆಯಲ್ಲಿ, ನನ್ನ ಬಾಲ್ಯದ ಸಂಗೀತ ಗುರುಗಳೂ ಯೂನಿವರ್ಸಿಟಿಯ ಸಂಗೀತ ವಿಭಾಗದ ಮುಖ್ಯಸ್ಥರೂ ಆಗಿದ್ದ, ನಿವೃತ್ತ ಪ್ರೊಫೆಸರ್ ವಿದ್ವಾನ್ ಬಿ. ಕೃಷ್ಣಪ್ಪನವರ ಅಮೃತಹಸ್ತಗಳಿಂದ ಕ್ಯಾಸೆಟ್ ಬಿಡುಗಡೆಯಾಯ್ತು.

ಮಾಜಿ ಉಪರಾಷ್ಟ್ರಪತಿಗಳಾದ ಡಾ. ಬಿ. ಡಿ. ಜತ್ತಿಯವರು ತುಂಬಾ ಸಂತೋಷದಿಂದ ಪುಸ್ತಕ ಬಿಡುಗಡೆ ಮಾಡಿ ಶುಭ ಕೋರಿದರು. ಬಸವ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಜಮಖಂಡಿಮಠ, ಐ.ಎ.ಎಸ್. (ನಿವೃತ್ತ) ಅವರು, ಡಾ. ಚಿದಾನಂದಮೂರ್ತಿಯವರೂ ಆಗಮಿಸಿದ್ದರು. ಚಿದಾನಂದಮೂರ್ತಿಯವರು ಪುಸ್ತಕದ ಬಗೆಗೆ ವಿಮರ್ಶಾತ್ಮಕವಾಗಿ ತುಂಬಾ ವೈಚಾರಿಕವಾಗಿ ಮಾತನಾಡಿದರು.

ಆಗಲೂ ನಮ್ಮ ಕಾರ್ಯಕ್ರಮಕ್ಕೆ ಸಭಾಂಗಣವನ್ನು ಉಚಿತವಾಗಿಯೇ ಇತ್ತ ಧಾರಾಳ ಮನದ ನಮ್ಮ ಸ್ವಾಮೀಜಿಯವರ ಹರ್ಷ ಹೇಳತೀರದು. "ತಾಯಿ, ಇಲ್ಲಿ ಇಂತಹ ಕಾರ್ಯಕ್ರಮಗಳನ್ನು ಎಷ್ಟಾದರೂ ಮಾಡವ್ವಾ. ನಮಗೆ ತುಂಬಾ ಆನಂದವಾಗುತ್ತದೆ. ನನ್ನಂತಹ ಕಲೋಪಾಸಕಿಗೆ ನಮ್ಮ ಸ್ವಾಮೀಜಿಯವರಂತಹ ಕಲಾಪೋಷಕರ ಪ್ರೋತ್ಸಾಹವೇ ಒಂದು ಶ್ರೀರಕ್ಷೆ. ಕಲೆಯ ಬೆಳವಣಿಗೆಗೆ ನೀರು, ಗೊಬ್ಬರ ಇದ್ದಂತೆ!

ನಮ್ಮ ಸ್ವಾಮೀಜಿಯವರ ತನ್ಮಯತೆಯಿಂದ ಕ್ಯಾಸೆಟ್ ಕೇಳಿ ಪಟ್ಟ ಸಂತೋಷವನ್ನು ನೆನಸಿಕೊಂಡರೆ ನನಗೆ ಈಗಲೂ ಅಮಿತಾನಂದವಾಗುತ್ತದೆ. ಮಠಕ್ಕೆ ಬಂದ ಬಂದವರಿಗೆಲ್ಲಾ "ನಮ್ಮ ತಾಯಿ ಬಹಳ ಚೆನ್ನಾಗಿ ಹಾಡಿ, ಕ್ಯಾಸೆಟ್ ಮಾಡಿದೆ ನೋಡ್ರೀ" ಅನ್ನುವರು.

ಸುತ್ತೂರು ಶ್ರೀಗಳು ಅಧ್ಯಕ್ಷರಾಗಿರುವ ಶರಣ ಸಾಹಿತ್ಯ ಪರಿಷತ್ತಿನ ಎರಡನೆಯ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ಅದಕ್ಕೆ ಪೂರ್ವಭಾವಿಯಾಗಿ ನಡೆಯುತ್ತಿದ್ದ ಮೀಟಿಂಗ್‌ಗಳಿಗೆ ನನಗೂ ಆಹ್ವಾನವಿದ್ದುದರಿಂದ ಹೋಗುತ್ತಿದ್ದೆ. ಅವು ನಡೆಯುತ್ತಿದ್ದುದು

ನಮ್ಮ ನಿಜಗುಣ ಸ್ವಾಮಿಗಳ ಜಂಗಮಮಠದಲ್ಲೇ. ಅಲ್ಲಿ ಬಂದವರಿಗೆಲ್ಲಾ ಆಹಾರ, ಪಾನೀಯ ಒದಗಿಸುತ್ತಿದ್ದರು. ಸಮ್ಮೇಳನ ನಡೆದದ್ದು ಶ್ರೀ ನಿಜಗುಣರ ಕಲ್ಯಾಣ ಕ್ಷೇತ್ರದಲ್ಲಿ! ತುಂಬಾ ವ್ಯವಸ್ಥಿತವಾಗಿ ನಡೆದ ಆ ಸಮ್ಮೇಳನಕ್ಕೆ ನಮ್ಮ ಸ್ವಾಮೀಜಿಯವರ ಪ್ರೋತ್ಸಾಹ ತುಂಬಾ. ಇಂತಹ ಕೆಲಸಗಳಿಗೆಲ್ಲಾ ಸ್ವಾಮಿಗಳು ಯಾವಾಗಲೂ ಮುಂದು.

ನಮ್ಮ ಸ್ವಾಮೀಜಿಯವರು ವೇದಿಕೆಯ ಮೇಲೆ ಹೆಚ್ಚು ಮಾತನಾಡುವವರಲ್ಲ; ಕಾಯಕಶೀಲರು. ಕಂಡವರನ್ನು ಬೇಡುವ ಸ್ವಾಮಿಗಳಲ್ಲ ಅವರು. ತಾವೇ ಕೈಯೆತ್ತಿಕೊಡುವ ಧಾರಾಳಿಗಳು. ಕಾಯಕಷ್ಟ ಮಾಡಿ ದುಡಿದು ತಿನ್ನಬೇಕೆಂಬುದೇ ಅವರ ಮತ. ಕಾಯಕವೇ ಕೈಲಾಸವೆಂಬ ಶರಣರ ನುಡಿ ಅವರ ನಡೆಯಾಗಿರುವುದನ್ನಿಲ್ಲಿ ಪ್ರತ್ಯಕ್ಷ ಕಾಣುತ್ತೇವೆ.

ಆಗಾಗ ನಾನೂ ನಮ್ಮವರೂ ಶ್ರೀಮಠಕ್ಕೆ ಹೋಗುತ್ತಿರುತ್ತೇವೆ. ನಮ್ಮಿಬ್ಬರನ್ನೂ ಕಂಡರೆ ಸ್ವಾಮಿಗಳಿಗೆ ತುಂಬಾ ಮಮತೆ. ಹೋದೊಡನೆ ನಮಗೆ ಹಾಲು ಕೊಡಿಸಬೇಕು. ಬೇಡವೆಂದರೆ ಕೇಳರು. ''ಡೈರಿ ಹಾಲಲ್ಲ, ಮನೆಹಸುವಿನ ಹಾಲು ತೆಗೆದುಕೊಳ್ಳಿ'' ಎನ್ನುವರು. ಮಠದಲ್ಲಿ ಆ ಸಮಯದಲ್ಲಿ ಯಾರೂ ಇಲ್ಲದಿದ್ದರೆ ಹಾಲು ತರಲು ತಾವೇ ಒಳಕ್ಕೆ ಹೊರಡುವರು. ನಾನು ತಡೆದರೆ ''ಒಳಗೇ ನೀನೇ ಹೋಗಿ ಎರಡು ಲೋಟಕ್ಕೆ ಹಾಲು ಹಾಕಿಕೊಂಡು ಬಾರವ್ವಾ, ನಿನ್ನದೇ ಮನೆ'' ಎನ್ನುವರು.

ಸ್ವಾಮೀಜಿಯವರು ಸ್ವತಃ ಸಾಕಿರುವ ಹಸುವಿನ ಹಾಲನ್ನೂ, ಅವರ ಮಮತೆಯ ಕ್ಷೀರವನ್ನೂ ಜೊತೆಜೊತೆಯಾಗಿ ಪಡೆಯುವ ಭಾಗ್ಯ ನಮ್ಮದಾಗಿದೆ. ಆದ್ದರಿಂದಲೇ ಆ ದಿವ್ಯ ತಪೋವನದಂತಿರುವ, ನಮ್ಮ ಸ್ವಾಮೀಜಿಯವರಿರುವ, ಆ ತಾಣಕ್ಕೆ ಹೋದರೆ ತವರಿಗೆ ಹೋದಂತಹ ಹಿತ. ಅದೇ ತಾಯಿ ಮಮತೆ, ಅದೇ ಮನೆಯ ಹಸುವಿನ ಹಾಲು! ಎಷ್ಟು ಬಾರಿ ಹೋಗಲೂ ಬೇಸರವಿಲ್ಲ. ಹೋಗುವುದು ತುಂಬಾ ದಿನಗಳಾದರೆ ''ಯಾಕವ್ವಾ ತಾಯೀ, ತುಂಬಾ ದಿನಗಳಿಂದ ಈ ಕಡೆ ಬರಲೇ ಇಲ್ಲ, ನೀವೆಲ್ಲ ಬಂದರೇ ಒಂದು ಕಳೆ, ಚೆಂದ, ನಮಗೆ ಆನಂದ.'' ಎನ್ನುವರು ಮಾತೃ ವಾತ್ಸಲ್ಯವುಳ್ಳ, ಸರಳ ಬದುಕನ್ನು ಬದುಕುವ ನಮ್ಮ ಸ್ವಾಮೀಜಿಯವರು. ಇಂತಹ ಹೃದಯವಂತರಿಗೆ ದೇವರು ಹೆಚ್ಚು ಆಯಸ್ಸನ್ನು ಕೊಟ್ಟರೆ ಜನರ ಭಾಗ್ಯ ಬೆಳೆದಂತೆ. ದೇವರಲ್ಲಿ ನಮ್ಮಂತಹ ಅವರ ಮಕ್ಕಳ ಬೇಡಿಕೆ ಇದೇ.

●

ಧರ್ಮ ಸಂಪದ

ಧರ್ಮದ ಪರಿಕಲ್ಪನೆ

ಪ್ರೊ॥ ಸಾ. ಕೃ. ರಾಮಚಂದ್ರರಾವ್

(೧)

ಧರ್ಮವೆಂಬ ಮಾತು ನಮ್ಮ ವ್ಯವಹಾರದಲ್ಲಿ ವಿಶೇಷವಾಗಿ ರೂಢಿಗೆ ಬಂದುದು ರಾಮಾಯಣದಿಂದ ಎಂದು ತೋರುತ್ತದೆ. ವಾಲ್ಮೀಕಿಗಳು ರಾಮನನ್ನು ಬಣ್ಣಿಸಿ ಬಣ್ಣಿಸಿ ಮಾತುಗಳು ಸಾಲದೆನಿಸಿದಾಗ 'ರಾಮೋ ವಿಗ್ರಹವಾನ್ ಧರ್ಮಃ' ಎಂದಷ್ಟು ಹೇಳಿ ಮುಗಿಸುತ್ತಾರೆ. ಧರ್ಮವೆಂಬುದು ಮೈದಳೆದು ಮನುಷ್ಯಾಕಾರವನ್ನು ಹೊಂದಿತೆಂದರೆ ರಾಮನಾಗಿ ತೋರಿಕೊಳ್ಳುತ್ತದೆಯಂತೆ. ಧರ್ಮದ ಸ್ವರೂಪ, ಸ್ವಭಾವ, ಅಗತ್ಯ, ಅನ್ವಯ, ಪ್ರಯೋಜನ, ಮುಂತಾದುವು ಆದಿಕಾವ್ಯದಲ್ಲಿ ಅಡಿಗಡಿಗೆ ಕಾಣಿಸಿಕೊಳ್ಳುತ್ತವೆ. ರಾಮನಲ್ಲದೆ, ಸೀತೆ, ಲಕ್ಷ್ಮಣ, ವಿಭೀಷಣ, ಹನುಮಂತ ಇವರೆಲ್ಲರೂ ಧರ್ಮಕ್ಕೆ ಕಟ್ಟು ಬಿದ್ದವರೇ. ಧರ್ಮದ ಕಟ್ಟುಪಾಡಿನಿಂದ ಹೊರತಾದವರು ವಾಲಿ, ರಾವಣ, ಮಾರೀಚ ಮೊದಲಾದವರು. 'ರಾಮಾದಿವದ್ವರ್ತಿತವ್ಯಂ ನ ರಾವಣಾದಿವತ್' ಎಂಬುದು ಕಾವ್ಯದ ಪ್ರಯೋಜನವೂ ಹೌದೆಂದು ನಮ್ಮ ಕವಿಗಳೂ ಆಲಂಕಾರಿಕರೂ ಹೇಳಿದರು.

ಧರ್ಮದ ಕಲ್ಪನೆಯನ್ನು ಶಾಸ್ತ್ರದ, ಲೋಕದ ಚೌಕಟ್ಟಿನಲ್ಲಿ ಸ್ಪಷ್ಟಪಡಿಸಿಗವರು ಮೀಮಾಂಸಕರು. ಆರ್ಷೇಯ ಸಂಸ್ಕೃತಿಗೆ ಆಕರವೆನಿಸಿದ ವೇದವು ಧರ್ಮವನ್ನು ತಿಳಿಸಲೆಂದೇ ಹೊರಟಿತೆಂದು ಅವರ ವಿಶ್ವಾಸ. ವೇದ ವಾಙ್ಮಯದಲ್ಲಿ ಧರ್ಮದ ಉಲ್ಲೇಖ ವಿಶೇಷವಾಗಿಯೇ ಇದೆಯೆನ್ನಿ. ಉಪನಿಷತ್ತುಗಳಲ್ಲಾದರೋ ಅಷ್ಟಾಗಿ ಕಾಣುವುದಿಲ್ಲ. ಆದರೆ ಉಪನಿಷತ್ತುಗಳಿಂದ ಸ್ಫೂರ್ತಿ ಪಡೆದ ಬೌದ್ಧದರ್ಶನದಲ್ಲಿ ಧರ್ಮವೇ ಮೂಲಭೂತ ಕಲ್ಪನೆಯಾಯಿತು. ತ್ರಿಪಿಟಕಗಳಲ್ಲಿ ಒಂದಾದ ಸೂತ್ರಪಿಟಕ ಧರ್ಮವನ್ನೇ ಕುರಿತದ್ದು; ನಮ್ಮ ಭಗವದ್ಗೀತೆಗೆ ಪರ್ಯಾಯವಾಗಿ ಅವರಲ್ಲಿರುವುದು ಧರ್ಮಪದವಲ್ಲವೆ? ಮಹಾವೀರಸ್ವಾಮಿಗಳೂ 'ಧಮ್ಮೋ ಮಂಗಲ ಮುಕ್ಕಿಟ್ಠಂ' (ಧರ್ಮವೇ ಉತ್ಕೃಷ್ಟವಾದ ಮಂಗಳ) ಎಂದು ಹೇಳಿ ಧರ್ಮವೆಂದರೆ ಅಹಿಂಸೆ, ಸಂಯಮ, ತಪಸ್ಸು ಎಂದು ನಿರ್ದೇಶನವನ್ನೂ ಮಾಡಿದರು. ನಾಸ್ತಿಕರೆನಿಸಿದ ಲೋಕಾಯತರೂ ಧರ್ಮವನ್ನೇನು ಕೈಬಿಡಲಿಲ್ಲ. ಆದರೆ ಧರ್ಮಕ್ಕೆ ಅಧ್ಯಾತ್ಮದ ಹಿನ್ನೆಲೆ ಅಗತ ವಿಲ್ಲವೆಂದರು.

ಜನರ ಮನಸ್ಸಿನಲ್ಲಿ ದೇವರಿಗೂ ಧರ್ಮಕ್ಕೂ ನಂಟು ಒದಗಿ ಬಂದಿರುವುದುಂಟು, ದಿಟ. ಆದರೆ ಇದು ಸಹಜವಾದುದೂ ಅಲ್ಲ, ಅಗತ್ಯವಾದುದೂ ಅಲ್ಲ. ದೇವರನ್ನು ನಂಬದವರೂ ಧರ್ಮವನ್ನು ಕೈಬಿಡುವಂತಿಲ್ಲ. ಬದುಕಿನಲ್ಲಿ ದೇವರ ಕೆಲಸವೇ ಬೇರೆ, ಧರ್ಮದ ಕೆಲಸವೇ ಬೇರೆ; ಧರ್ಮದ ಹರವು ಹೆಚ್ಚಿನದು. ರಾಮ ದೇವರೆಂದು ರಾಮಾಯಣ ನಮ್ಮಲ್ಲಿ ಜನಪ್ರಿಯವಾದದ್ದಲ್ಲ; ರಾಮ ಧರ್ಮಪರನೆಂದೇ ರಾಮನ ಕತೆಗೆ ಹೆಗ್ಗಳಿಕೆ. ರಾಮನಿಂದ ಧರ್ಮಕ್ಕೆ ಒತ್ತಾಸೆ; ಧರ್ಮದಿಂದ ರಾಮನಿಗೆ ನಾಯಕಪಟ್ಟ. ರಾಮಾಯಣದಲ್ಲಿ ದೇವರ ಸೊಲ್ಲು ತೀರ ಅಲ್ಪ; ರಾಮನಿಗಂತೂ ಧರ್ಮಕ್ಕಿಂತ ಬೇರೆ ದೇವರಿಲ್ಲ. ರಾಮನು ವಿಷ್ಣುವಿನ ಅವತಾರವೆಂಬುದು ರಾಮನು ಪ್ರಸಿದ್ಧನಾದಮೇಲೇ ಬೇರೂರಿಕೊಂಡ ಕಲ್ಪನೆ. ರಾಮನ ಹಿರಿಮೆಗೆ ಅವತಾರದ ನೆರವಿನ ಅಗತ್ಯವೇನಿರದು. ಅವತಾರಕ್ಕೇ ರಾಮನ ಬಲದಿಂದ ಪ್ರಯೋಜನವಿದ್ದೀತು! ಈ ವಿಚಾರವಾಗಿ ರಾಮಾಯಣದಲ್ಲಿರುವ ಉಲ್ಲೇಖಗಳೆಲ್ಲವೂ ಪ್ರಕ್ಷಿಪ್ತಭಾಗಗಳೆಂದು ವಿದ್ವಾಂಸರ ಬಹುಮತ. ಇದು ಹೇಗಾದರೂ ಇರಲಿ, ಧರ್ಮದ ಅಗತ್ಯಕ್ಕೆ ದೇವರೆಂಬ ಬೇರು ಬೇಕಾದುದಿಲ್ಲ; ಶ್ರದ್ಧೆ, ಭಕ್ತಿ, ಪೂಜೆಗಳೆಂಬ ಪರಿಕರಗಳು ಬೇಕಾದುದಿಲ್ಲ. ಅದು ಸ್ವತಂತ್ರವಾಗಿಯೇ ನಿಲ್ಲಬಲ್ಲ ಕಲ್ಪನೆ.

(೨)

ಧರ್ಮವೆಂಬ ಸಂಸ್ಕೃತಮಾತಿನ ಮೂಲ 'ಧೃಜ್' (ಧಾರಣೇ) ಎಂಬ ಧಾತು. ಕಾಲುಜಾರುವ ಸಂದರ್ಭದಲ್ಲಿ ಆಯತಪ್ಪಿ ಬೀಳಗೊಳದೆ ಹಿಡಿದು ಎತ್ತಿ ಹಿಡಿದು ನಿಲ್ಲಿಸುವುದು ಧಾತ್ವರ್ಥ. ಧರ್ಮದಲ್ಲಿ ತತ್ತ್ವಭಾಗವೊಂದಿದೆ; ಸಾರಭೂತವಾದ, ಸಮಗ್ರವಾದ ಸಮೀಕ್ಷೆ ನಡೆಸಿದವರು ಮೀಮಾಂಸಕರು. ಅವರ ಸಮೀಕ್ಷೆಯಿಂದಲೇ ಧರ್ಮದ ಕಲ್ಪನೆ ದೃಢವಾಯಿತು, ಪ್ರಸಿದ್ಧವಾಯಿತು, ಪ್ರಚಲಿತವಾಯಿತು. ಮೊದಲ ಮೀಮಾಂಸಕರೆಲ್ಲ ದೇವರನ್ನು ನಂಬಿದವರಲ್ಲವೆಂಬುದನ್ನು ಗಮನಿಸಬೇಕು. ಮೀಮಾಂಸಾ ಸೂತ್ರಕಾರರಾದ ಜೈಮಿನಿಗಳಾಗಲಿ (ಕ್ರಿಸ್ತಪೂರ್ವ ೪೦೦) ಭಾಷ್ಯಕಾರರಾದ ಶಬರಸ್ವಾಮಿಗಳಾಗಲಿ (ಕ್ರಿಸ್ತಪೂರ್ವ ೫೭), ವಾರ್ತಿಕಕಾರರಾದ ಕುಮಾರಿಲ ಭಟ್ಟರಾಗಲಿ (ಕ್ರಿಸಾಬ್ದ ೬೦೦) ದೇವರನ್ನು ಕುರಿತಂತೆ ನಾಸ್ತಿಕರೇ. ಅವರ ಪ್ರಕಾರ ಪ್ರಪಂಚಕ್ಕೆ ಮೊದಲಿಲ್ಲ, ಕೊನೆಯಿಲ್ಲ; ಇಂದಿರುವಂತೆಯೇ ಎಂದೂ ('ನಹಿ ಕದಾಚಿದನೀದೃಶಂ ಜಗತ್') ಎಂದ ಮೇಲೆ ಜಗತ್ಕರ್ತನೆಂದಾಗಲೀ ಲಯಕಾರಿಯೆಂದಾಗಲೀ ದೇವರನ್ನು ಒಪ್ಪಿಕೊಳ್ಳಬೇಕಾದುದಿಲ್ಲ: ಇನ್ನು ಜಗತ್ತಿನ ಸ್ಥಿತಿಗತಿಗಳಿಗೆ, ಆಗುಹೋಗುಗಳಿಗೆ ಕರ್ಮದ ಕಲ್ಪನೆ ಸಾಕು; ದೇವರೇನು ಕರ್ಮನಿಯಾಮಕನೂ ಅಲ್ಲ, ಕರ್ಮಫಲಾಧ್ಯಕ್ಷನೂ ಅಲ್ಲ. ಈಶ್ವರನ ಇಚ್ಛೆಯನ್ನು ಒಪ್ಪಿಕೊಂಡರೆ ಕರ್ಮದ ಕಲ್ಪನೆಯು ನಿಷ್ಫಲವೆಂದು ಕುಮಾರಿಲರ ವಾದ. ಕರ್ಮದ ಕಲ್ಪನೆಯಿದ್ದಮೇಲೆ ದೇವರ ಹಂಗೇನೂ ಇರದು.

ಆದರೆ ಮೀಮಾಂಸಕರು ವೇದದ ಪ್ರಾಮಾಣ್ಯವನ್ನು ಒಪ್ಪಿಕೊಂಡವರು; ವೇದದ ಮುಖ್ಯ ತಾತ್ಪರ್ಯವೇನೆಂದು ವಿಚಾರ ಮಾಡುವುದೇ ಮೀಮಾಂಸೆ. ವೇದ ಹೇಳಲು ಹೊರಟಿರುವುದು ಧರ್ಮವನ್ನೇ ಎಂದು ಈ ಶಾಸ್ತ್ರದ ನಿಲುವು; ಉಳಿದ ತಾತ್ಪರ್ಯಗಳು ಎಣಿಕೆಗೆ ಬರುವ ಕಾರಣವಿಲ್ಲ. ಪಾರ್ಥಸಾರಥಿಮಿಶ್ರರು ಕುಮಾರಿಲರ ದೃಷ್ಟಿಯನ್ನು 'ತಸ್ಮಾದ್ಧರ್ಮ ಇತ್ಯೇವ ಶಾಸ್ತ್ರವಿಷಯೋ, ನ ವೇದಾರ್ಥ ಇತಿ' ಎಂದು ತಮ್ಮ ಶಾಸ್ತ್ರ ದೀಪಿಕೆಯಲ್ಲಿ ಕಾಣಿಸಿದ್ದಾರೆ. ವೇದಾರ್ಥವೇ ಧರ್ಮವೆಂದು ಪ್ರಭಾಕರಮಿಶ್ರರೂ ಗ್ರಹಿಸಿದ್ದಾರೆನ್ನಿ. ವೇದದಲ್ಲಿ ನಾವು ಗುರುತಿಸಬೇಕಾದುದು ಧರ್ಮವನ್ನು. ವೇದವಲ್ಲದೆ ಧರ್ಮಕ್ಕೆ ಬೇರೆ ಆಕರವಿರದು. ವೇದಪ್ರಾಮಾಣ್ಯವಿರುವುದು ಧರ್ಮದ ಅಗತ್ಯದಿಂದಲೇ; ಧರ್ಮವನ್ನು ಕುರಿತಂತೆ ನಮಗೆ ಸರಿಯಾದ ಅರಿವು ಬರುವುದು ವೇದದಿಂದಲೇ; ಪ್ರತ್ಯಕ್ಷಾನುಮಾನಗಳು ಇಲ್ಲಿ ಕೆಲಸಕ್ಕೆ ಬರಲಾರವು. ವೇದದ ಪ್ರಯೋಜನವು ಧರ್ಮದಲ್ಲೇ ಪರ್ಯಾಪ್ತವಾಗುತ್ತದೆ.

ನಮ್ಮ ದೇಶದಲ್ಲಿ ಧರ್ಮವನ್ನು ಕುರಿತಂತೆ ಜಿಜ್ಞಾಸೆ ಆರಂಭವಾದದ್ದು ಹೀಗೆ. ಈ ಜಿಜ್ಞಾಸೆಗೆ ವಿಷಯವಾದ ಧರ್ಮ ಯಾವುದು ? ಮೀಮಾಂಸಾಶಾಸ್ತ್ರದ ಜೈಮಿನಿಸೂತ್ರಗಳ ಮೊದಲಲ್ಲೆ 'ಅಥಾತೋ ಧರ್ಮಜಿಜ್ಞಾಸಾ' ಎಂಬ ಉದ್ದೇಶಸೂತ್ರ ಬಂದು, ಅನಂತರ ಧರ್ಮವನ್ನು ನಿರ್ದೇಶಿಸುವ ಲಕ್ಷಣಸೂತ್ರ ಬರುತ್ತದೆ; ಅದು 'ಚೋದನಾಲಕ್ಷಣೋಽರ್ಥೋ ಶ್ರೇಯಸ್ಕರಃ' ಎಂಬುದು ಇಲ್ಲಿ ಚೋದನೆಯೆಂದರೆ ವಿಧಿ, ಉಪದೇಶ; ನಿರ್ದಿಷ್ಟ ಕ್ರಿಯೆಯೊಂದರಲ್ಲಿ ನಮ್ಮನ್ನು ತೊಡಗಿಸುವ ಮಾತು. ವೇದದಲ್ಲಿ ಮಂತ್ರ, ಬ್ರಾಹ್ಮಣಗಳೆಂಬೆರಡು ಭಾಗಗಳಿವೆಯಷ್ಟೆ ? ಬ್ರಾಹ್ಮಣ ಭಾಗದಲ್ಲಿ ಯಾಗಾದಿಗಳಿಗೆ ಸಂಬಂಧಿಸಿದಂತೆ ವಿಧಿಗಳೆಂಬ ಮಾತುಗಳು ಬರುತ್ತವೆ, 'ಯಜೇತ', 'ಜುಹೋತಿ' ಇತ್ಯಾದಿ. ಹೀಗೆ ಕ್ರಿಯಾಪ್ರವರ್ತಕವಾದ ವಾಕ್ಯಗಳೇ ವಿಧಿಗಳು: ಅದೇ ಚೋದನೆ. ಬರಿಯ ಚೋದನೆಯಷ್ಟೇ ಇದ್ದರೆ ಅದು ಧರ್ಮವಾಗಲಾರದು ಎಂಬ ಕಾರಣದಿಂದ 'ಅರ್ಥ' ಎಂಬ ಮಾತೂ ಲಕ್ಷಣ ಸೂತ್ರದಲ್ಲಿ ಸೇರಿಬಂದಿದೆ. ಅರ್ಥವೆಂದರೆ ಮನುಷ್ಯನು ಬಯಸುವ ಪ್ರಯೋಜನ. ಈ ಪ್ರಯೋಜನವು ಮನುಷ್ಯನ ಶ್ರೇಯಸ್ಸಿಗೆ ನೆರವಾಗಬೇಕು. 'ಯಾವುದು ಶ್ರೇಯಸ್ಕರವೋ ಅದೇ ಧರ್ಮ' ಎಂದು ಶಬರಸ್ವಾಮಿಗಳ ಒಕ್ಕಣೆ ('ಯ ಏವ ಶ್ರೇಯಸ್ಕರಃ ಸ ಏವ ಧರ್ಮ ಶಬ್ದೇನೋಚ್ಯತೇ')

ಶ್ರೇಯಸ್ಸಿನ ವಿವರಣೆಯನ್ನು ವೈಶೇಷಿಕದರ್ಶನದಲ್ಲಿಯೂ ಕಾಣುತ್ತೇವೆ. ಜೈಮಿನಿಸೂತ್ರಗಳಿಗಿಂತ ಸುಮಾರು ಮುನ್ನೂರು ವರ್ಷಗಳ ಹಳೆಯದಾದ ಕಣಾದಸೂತ್ರಗಳು 'ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ' ಎಂದು ಆರಂಭವಾಗಿ 'ಯಾವುದರಿಂದ ಅಭ್ಯುದಯವೂ ನಿಃಶ್ರೇಯಸವೂ ಒದಗಿಬರುವುದೋ ಅದೇ ಧರ್ಮ' ('ಯತ್ಯೋಽಭ್ಯುದಯ ನಿಃಶ್ರೇಯಸಸಿದ್ಧಿ : ಸ ಧರ್ಮಃ') ಎಂಬ ಲಕ್ಷಣ ನಿರ್ದೇಶನ ಮಾಡುತ್ತವೆ. ಶ್ರೇಯಸ್ಸಿನಲ್ಲಿ ಅಭ್ಯುದಯ (ಎಂದರೆ ಲೌಕಿಕವಾದ ಸುಖಸಂಪತ್ತುಗಳು) ಮತ್ತು ನಿಃಶ್ರೇಯಸ (ಎಂದರೆ

ಮುಕ್ತಿ, ಕೈವಲ್ಯ) ಎಂಬೆರಡು ವಿಧಗಳನ್ನು ವೈಶೇಷಿಕರೂ ಮೀಮಾಂಸಕರೂ ಗುರುತಿಸಿದ್ದಾರೆ. ಪ್ರಸಿದ್ಧವಾದ ನಾಲ್ಕು ಪುರುಷಾರ್ಥಗಳಲ್ಲಿ ಧರ್ಮ, ಅರ್ಥ, ಕಾಮ ಇವು ಮೂರು ಅಭ್ಯುದಯವೆನಿಸಿಕೊಳ್ಳುತ್ತವೆ; ನಾಲ್ಕನೆಯದಾದ ಮೋಕ್ಷವು ನಿಃಶ್ರೇಯಸ. ಪುರುಷಾರ್ಥಗಳಲ್ಲಿ ಸೇರುವ ಧರ್ಮಕ್ಕೆ ನೀತಿಯೆಂಬ ವಿಶೇಷಾರ್ಥವಿದೆ; ಇದು ವೇದಾರ್ಥವಾದ ಧರ್ಮಕ್ಕಿಂತ ಸಂಕುಚಿತವಾದ ಅರ್ಥ. ಈ ನಾಲ್ಕು ಪುರುಷಾರ್ಥಗಳಲ್ಲಿ ಅರ್ಥ-ಕಾಮಗಳು ವ್ಯವಹಾರಕ್ಕೆ ಸಂಬಂಧಪಟ್ಟವು; ಲೋಕಾನುಭವದಿಂದಲೇ ಅವನ್ನು ತಿಳಿಯಬೇಕು. ಶಾಸ್ತ್ರದ ನೆರವು ಅವುಗಳಿಗೆ ಬೇಕಾದುದಿಲ್ಲ. ಧರ್ಮ ಮೋಕ್ಷಗಳಾಗದರೋ ಇಲ್ಲಿಯ ವ್ಯವಹಾರಕ್ಕೆ ನೆರವಾಗುವ ಪ್ರತ್ಯಕ್ಷಾನುಮಾನಗಳಿಂದ ತಿಳಿಯಲಾಗುವುದಿಲ್ಲ; ವೇದಶಾಸ್ತ್ರಗಳ ಮೂಲಕವೇ ಅವು ಸ್ಪಷ್ಟವಾಗಬೇಕು. ಹೀಗೆಂದು ಕುಮಾರಿಲ ಭಟ್ಟರು ತಿಳಿಸಿದ್ದಾರೆ ('ಯಾವದ್ಧರ್ಮಮೋಕ್ಷಸಂಬಂಧಿ ತದ್ವೇದಪ್ರಭವಂ; ಯತ್ತ್ವರ್ಥಸುಖವಿಷಯಂ ತಲ್ಲೋಕವ್ಯವಹಾರಮಿತಿ ವಿವೇಕ್ತವ್ಯಂ').

ಶಬರಸ್ವಾಮಿಗಳು ತಮ್ಮ ಭಾಷ್ಯದಲ್ಲಿ ಶ್ರೇಯಸ್ಸೆಂದರೆ ಮನುಷ್ಯನಿಗೆ ಪ್ರಿಯವಾದುದು, ಅವನ ಸಂತೋಷಕ್ಕೆ ಕಾರಣವಾಗುವಂಥದು ('ಶ್ರೇಯೋ ಹಿ ಪುರುಷಪ್ರೀತಿಃ') ಎಂದು ವಿವರಿಸಿದ್ದಾರೆ. ಈ ಬಗೆಯ ಶ್ರೇಯಸ್ಸಿನಲ್ಲಿ ದ್ರವ್ಯ, ಗುಣ, ಕರ್ಮಗಳು ಶಾಸ್ತ್ರದಲ್ಲಿ ಹೇಳಿರುವಂತೆ ಸೇರಿಕೊಳ್ಳುತ್ತವೆ. ಧರ್ಮವಿರುವುದು ಈ ದ್ರವ್ಯ, ಗುಣ, ಕರ್ಮಗಳಲ್ಲೇ ಎಂದು ಅವರ ಎಣಿಕೆ; ಶ್ರೇಯಸ್ಸಿಗೆ ಕಾರಣವಾಗುವ ದ್ರವ್ಯ, ಗುಣ, ಕರ್ಮಗಳನ್ನು ವೇದಶಾಸ್ತ್ರವೇ ತಿಳಿಸಿಕೊಡಬೇಕು ('ಶ್ರೇಯಃಸಾಧನತಾ ಹ್ಯೇಷಾಂ ನಿತ್ಯಂ ವೇದಾತ್ ಪ್ರತೀಯತೇ') ಈ ಅರ್ಥದಲ್ಲಿ ಧರ್ಮವೆನ್ನುವ ಮಾತಿಗೆ 'ಧೃತಿಸಾಧನಂ ಧರ್ಮಃ' ಎಂಬ ನಿಷ್ಪತ್ತಿಯನ್ನು ಕಾಣುತ್ತೇವೆ. ಧೃತಿಯೆಂದರೆ ಪ್ರೀತಿ, ನಾವು ಬಯಸುವುದು; ಅದನ್ನು ಆಗಮಾಡಿಸುವುದು ಧರ್ಮ ('ಧೃತಿಃ ಪ್ರೀತಿಃ ತತ್ಸಾಧನಂ ಇಷ್ಟಸಾಧನಂ') ಎಂದು ವೇದಾಂತದೇಶಿಕರ ವಿವರಣೆಯಿದೆ (ಸೇಶ್ವರಮೀಮಾಂಸಾ).

(೩)

ಧರ್ಮ ಎನ್ನುವ ಮಾತಿಗೆ ಅನೇಕ ಅರ್ಥಗಳಿವೆ. ಸಾಂಖ್ಯದರ್ಶನದಲ್ಲಿ ಅಂತಃಕರಣದ ವೃತ್ತಿ ವಿಶೇಷಕ್ಕೆ ಧರ್ಮವೆಂದು ಹೆಸರು; ಬೌದ್ಧದರ್ಶನದಲ್ಲಿ ಶುಭವಾದ ಚಿತ್ತವಾಸನೆ ಧರ್ಮವೆನಿಸಿಕೊಳ್ಳುತ್ತದೆ; ವೈಶೇಷಿಕದರ್ಶನದಲ್ಲಿ ವಿಹಿತಕ್ರಿಯಾಸಾಧ್ಯವಾದ ಪುರುಷಗುಣವಿಶೇಷ; ಜೈನದರ್ಶನದಲ್ಲಿ ಇದು ಪುಣ್ಯಪುದ್ಗಲ. ಸಾಮಾನ್ಯಜನರು 'ದಾನಧರ್ಮ' ಎನ್ನುವಾಗ ಕೆರೆ ತೋಡಿಸುವುದು, ಕೊಳವನ್ನು ಕಟ್ಟುವುದು, ದಾರಿಯಲ್ಲಿ ಮರಗಳನ್ನು ನೆಡುವುದು, ಅನ್ನದಾನ ಮಾಡುವುದು ಮುಂತಾದ ಪರೋಪಕಾರ ಕಾರ್ಯಗಳನ್ನು ಗಮನಿಸುತ್ತಾರೆ. ಮೀಮಾಂಸಕರ ಧರ್ಮ ಇದು ಯಾವುದೂ ಅಲ್ಲ. ಶಬರಸ್ವಾಮಿಗಳು ವೇದದಲ್ಲಿ (ಎಂದರೆ ಬ್ರಾಹ್ಮಣ ಗ್ರಂಥಗಳಲ್ಲಿ) ಹೇಳಿರುವ ಯಾಗಾದಿ

ಕರ್ಮವೇ ಧರ್ಮ ಎಂದು ಸ್ಪಷ್ಟಪಡಿಸುತ್ತಾರೆ; ಏಕೆಂದರೆ ಈ ತೆರನಾದ ಕರ್ಮದಿಂದಲೇ ಶ್ರೇಯಸ್ಸು ಒದಗುವುದು. ವೇದೋಕ್ತ ಕರ್ಮವೇ ಶ್ರೇಯಸ್ಕರ. ಯಾಗಾದಿಗಳನ್ನು ಮಾಡುವ ಮನುಷ್ಯನೇ ಧಾರ್ಮಿಕನೆನಿಸಿಕೊಳ್ಳುತ್ತಾನೆ, ಅಡುಗೆ ಮಾಡುವವನು ಪಾಚಕನೆನಿಸಿಕೊಂಡಂತೆ.

ಯಾಗದಲ್ಲಿ ದ್ರವ್ಯ (ಬಳಸುವ ಪದಾರ್ಥಗಳು), ಗುಣ (ನೆರವಾಗುವ ವಸ್ತುಗಳು) ಮತ್ತು ಕರ್ಮ (ಮಾಡಬೇಕಾದ ಕೆಲಸಗಳು) ಇವುಗಳನ್ನು ವೇದ ಗೊತ್ತು ಪಡಿಸುತ್ತದೆ. ಯಾಗವೆನ್ನುವ ಮಾತಿಗೆ ದೇವತೋದ್ದೇಶದಿಂದ ಮಾಡುವ ಹವಿಸ್ಸಿನ ರೂಪವಾದ ದ್ರವ್ಯ ತ್ಯಾಗ ಎಂದು ಅರ್ಥವಿದೆ. ಈ ಉದ್ದೇಶ ನೆರವೇರಲು ದ್ರವ್ಯ, ಗುಣ, ಕರ್ಮಗಳಿಗೆ ಯಾಗ ಮಾಡುವವನು ಬಯಸಿದ ಪ್ರಯೋಜನವನ್ನು ಕೈಗೂಡಿಸುವ ಶಕ್ತಿಯಿರುತ್ತದೆ ('ಇಷ್ಟಾರ್ಥಸಾಧನಯೋಗ್ಯತೆ'); ಇದರಿಂದಾಗಿ ಶ್ರೇಯಸ್ಸು ಒದಗಿಬರುತ್ತದೆ. ಹೀಗೆ ಶ್ರೇಯಃಸಾಧನಗಳಾದ ದ್ರವ್ಯ, ಗುಣ, ಕರ್ಮಗಳಲ್ಲಿಯೇ ಧರ್ಮವೆಂಬುದಿರುವುದು; ಅದೊಂದು ಯೋಗ್ಯತೆ. ಧರ್ಮಕ್ಕೆ ಯಾಗವೇ ಚೌಕಟ್ಟು. ಯಾಗಕ್ಕೆ ವೇದವೇ ಪ್ರಮಾಣ.

ಯಾಗದಲ್ಲಿ ದ್ರವ್ಯತ್ಯಾಗ ಮುಖ್ಯವಾದ ವಿಚಾರ; ಆದರೆ ದ್ರವ್ಯತ್ಯಾಗಕ್ಕೆ ದೇವತೋದ್ದೇಶವಿರಬೇಕು. ತ್ಯಾಗಮಾಡಬೇಕಾದ ದ್ರವ್ಯವನ್ನೂ, ಉದ್ದೇಶಿಸಬೇಕಾದ ದೇವತೆಯನ್ನೂ ಮಂತ್ರ ತಿಳಿಸುತ್ತದೆ; ದ್ರವ್ಯತ್ಯಾಗದ ಕ್ರಮವನ್ನೂ, ಅನುಸರಿಸಬೇಕಾದ ವಿಧಿ-ವಿಧಾನಗಳನ್ನೂ ಬ್ರಾಹ್ಮಣಗಳು ತಿಳಿಸುತ್ತವೆ. ಇಲ್ಲಿ ದೇವತೆಗಳನ್ನು ಉದ್ದೇಶಿಸಿ ದ್ರವ್ಯತ್ಯಾಗ ಮಾಡಬೇಕೆಂಬುದೇ ಯಾಗದ ಸ್ವರೂಪವಾದರೆ, ದೇವತೆಗಳನ್ನು, ನಂಬದಿದ್ದರೆ ಹೇಗೆ ? ನಂಬಿಕೆಗೆ ಪಾತ್ರರಾಗದ ದೇವತೆಗಳನ್ನು ಉದ್ದೇಶಿಸುವುದಾದರೂ ಹೇಗೆ ? ಜೈಮಿನಿ, ಶಬರಸ್ವಾಮಿ, ಕುಮಾರಿಲ ಭಟ್ಟ, ಮೊದಲಾದ ಮೀಮಾಂಸಕರು ದೇವತೆಗಳಿದ್ದಾರೆಂದು ನಂಬುವವರಲ್ಲ; ಈ ವಿಚಾರದಲ್ಲಿ ಅವರು ನಾಸ್ತಿಕರೇ, ಲೋಕಾಯತರೇ. ಮತ್ತೆ, ಯಾಗದ ಪ್ರಯೋಜನವನ್ನು ಒತ್ತಿ ಹೇಳುವವರು, ವೇದವಾದಿಗಳು. ಎರಡರ ಸಮನ್ವಯ ಹೇಗೆ ?

ಶಬರಸ್ವಾಮಿಗಳ ಪ್ರಕಾರ ದ್ರವ್ಯತ್ಯಾಗದಲ್ಲಿ ಉದ್ದಿಷ್ಟರಾದ ದೇವತೆಗಳೆಂದರೆ ಯಾರನ್ನುದ್ದೇಶಿಸಿ ವೇದಮಂತ್ರಗಳಿವೆಯೋ ಅವರು; ಯಾರಿಗಾಗಿ ಹವಿಸ್ಸನ್ನು ಕೊಡುವೆವೋ ಅವರು ('ಸೂಕ್ತಭಾಜೋ ಹವಿರ್ಭಾಜಶ್ಚ ದೇವತಾಃ') ಆದರೆ ಮಂತ್ರಗಳಾಚೆ, ಹವಿಸ್ಸನ್ನು ಸ್ವೀಕರಿಸಲು ಸಿದ್ಧರಾಗಿ ಕೆಲವರು ದೇವತೆಗಳು ಮೈದುಂಬಿ, ರೂಪ ತಳೆದು ನಿಂತಿದ್ದಾರೆಂದು ಇದರ ಅರ್ಥವಲ್ಲ. ಅಂಥ ದೇವತೆಗಳು ದಿಟವಾಗಿ ಯಾರೂ ಇಲ್ಲ. ನಾವು ಯಾಗದಲ್ಲಿ ನೀಡುವ ಹವಿಸ್ಸು ಭೋಜನವೇನಲ್ಲ; ಅದನ್ನು ತಿನ್ನಲು ಕಾತರರಾಗಿ ಹಸಿದು ದೇವತೆಗಳೇನು ಬರುವುದಿಲ್ಲ; ನಮ್ಮ ಹವಿಸ್ಸನ್ನು ಅವರು ತಿನ್ನುವುದೂ ಇಲ್ಲ. ಯಾಗದಲ್ಲಿ ಮಂತ್ರಗಳನ್ನು ಹೇಳಿಕೊಂಡು ದ್ರವ್ಯತ್ಯಾಗ ಮಾಡುವಾಗ ಮಂತ್ರದ ಮಾತುಗಳಷ್ಟೇ ದೇವತಾರೂಪ. ಆ ಮಾತುಗಳನ್ನು ಮೀರಿ ದೇವತೆಯೆಂಬುದಿಲ್ಲ (ಶಾಬರಭಾಷ್ಯ ೧೦, ೪, ೨೩).

ಒಂದು ನಿದರ್ಶನವನ್ನೂ ಕೊಡುತ್ತಾರೆ. 'ಐಂದ್ರಂ ದಧಿ' ಎಂಬುದೊಂದು ವಿಧಿ. ಇಂದ್ರನ ಸಲುವಾಗಿ ಮಾಡಬೇಕಾದ ಮೊಸರು-ಯಾಗ (ದಧಿಯಾಗ)ವನ್ನು ಕುರಿತದ್ದು. ಇದರಲ್ಲಿ ಮೊಸರನ್ನು ಹವಿಸ್ಸಿನಂತೆ ಅಗ್ನಿಗೆ ಸಲ್ಲಿಸುವಾಗ 'ಇಂದ್ರಾಯೇದಂ, ನ ಮಮ' ಎಂದು ಹೇಳಬೇಕೆಂಬ ವಿಧಿಯಿದೆ. ಇಂದ್ರನೆನ್ನುವ ವೈದಿಕ ದೇವತೆಗೆ ವೇದದಲ್ಲಿ ಶಕ್ರ, ಪಾಕಶಾಸನ, ಪುರುಹೂಕ, ವಜ್ರಪಾಣಿ ಮೊದಲಾದ ಹೆಸರುಗಳಿವೆಯಷ್ಟೆ ? ಇವುಗಳಲ್ಲಿ ಯಾವ ಹೆಸರನ್ನಾದರೂ ದಧಿಯಾಗದಲ್ಲಿ ಬಳಸಬಹುದೋ ? ('ಶಕ್ರಾಯೇದಂ' ಪುರುಹುತಾಯೇದಂ' ಇತ್ಯಾದಿ) ಎಂದರೆ, ಕೂಡದು. ವಿಧಿಯ ವಾಕ್ಯದಲ್ಲಿ ಬರುವ ಹೆಸರೇ ದೇವತಾರೂಪ; ಹವಿರ್ದಾನವೆಂಬ ಕ್ರಿಯೆ ಫಲಕಾರಿಯಾಗುವುದು ಈ ರೂಪದಿಂದಲೇ. ವಿಧಿವಾಕ್ಯದಾಚೆ ಯಾವ ದೇವತೆಯೂ ಇಲ್ಲ.

ಮೀಮಾಂಸಕರಲ್ಲಿ ಭಾಟ್ಟಸಂಪ್ರದಾಯದವರು ಯಾಗಾದಿ ಕರ್ಮವೇ ಧರ್ಮವೆಂದರೆ, ಪ್ರಾಭಾಕರ ಸಂಪ್ರದಾಯದವರು ಯಾಗಾದಿಕರ್ಮಗಳಿಂದ ಒದಗಿಬರುವ ಅಪೂರ್ವವೆಂಬ ಪುಣ್ಯವೇ ಧರ್ಮವೆಂದು ಬಗೆಯುತ್ತಾರೆ. ವಿಹಿತಕರ್ಮಗಳನ್ನು ಆಚರಿಸಿದ್ದರಿಂದ ಬರುವ ಅದೃಷ್ಟವಿಶೇಷವನ್ನು ಧರ್ಮವೆನ್ನುತ್ತಾರೆ. ವೇದವು ಈ ಪ್ರಯೋಜನವನ್ನು ದೃಷ್ಟಿಯಲ್ಲಿರಿಸಿಕೊಂಡೇ ಯಾಗಾದಿಕರ್ಮಗಳನ್ನು ಮಾಡಲು ವಿಧಿಸುವುದು. ಮೀಮಾಂಸಾನ್ಯಾಪ್ರಕಾಶದಲ್ಲಿ 'ವೇದೇನ ಪ್ರಯೋಜನಮುದ್ದಿಶ್ಯ ವಿಧೀಯಮಾನೋಽರ್ಥೋ ಧರ್ಮಃ' ('ವೇದಪ್ರತಿಪಾದ್ಯಃ ಪ್ರಯೋಜನ ವದರ್ಥೋ ಧರ್ಮಃ') ಎಂಬ ನಿರೂಪಣೆಯಿದೆ. ಯಾಗವಾಗಲಿ, ಅಪೂರ್ವವಾಗಲಿ ಅದು ನಿರತಿಶಯಸುಖಕ್ಕೆ 'ಅಸಾಧಾರಣಕಾರಣ'ವಾಗಿರುವುದರಿಂದ ಧರ್ಮವೆನಿಸಿಕೊಳ್ಳುತ್ತದೆ.

(೪)

ಪೂರ್ವ ಮೀಮಾಂಸೆಯಲ್ಲಿ ಹೀಗೆ ಬಳಕೆಗೆ ಬಂದ ಧರ್ಮವು ವೇದವಿಹಿತವಾದ ಕರ್ಮದ ಚೌಕಟ್ಟಿನಲ್ಲೇ ಕೂಡಿ ಬಂದುದರಿಂದ ಕೆಲಸದಲ್ಲಿಯೇ ಧರ್ಮವಿರುವುದೆಂಬ ಕಲ್ಪನೆ ಒದಗಿ ಬಂದಿತು. 'ವೃತ್ತಿಮತ್ತ್ವಂ ಧರ್ಮಸ್ಯ ಲಕ್ಷಣಂ' ಎಂಬ ನಿರೂಪಣೆಯೂ ಇದೆ. ವೈಶೇಷಿಕರ ವಿಶ್ಲೇಷಣೆಯಂತೆ ಧರ್ಮವು ವಿಧಿರೂಪವಾಗಿರಬಹುದು, ನಿವೃತ್ತಿ ಲಕ್ಷಣದ್ದಾಗಿರಬಹುದು (ವೈಶೇಷಿಕ ಸೂತ್ರ ೧, ೧, ೨,) ಮೊದಲನೆಯದು ಪ್ರವೃತ್ತಿಯನ್ನು ಪ್ರಚೋದಿಸುವಂಥ ವಿಧಿಗಳು. ಪ್ರಯೋಜನವಿದೆಯೆಂದಮೇಲೆ ಅದನ್ನು ಕೈಗೂಡಿಸಿಕೊಳ್ಳಲು ಕೆಲಸದಲ್ಲಿ ತೊಡಗಬೇಕಷ್ಟೆ? ಪ್ರಯೋಜನವು ಕಣ್ಣಿಗೆ ಕಾಣದೆ, ವರ್ತಮಾನದಲ್ಲಿ ಇರದೆ, ವ್ಯವಹಾರದಿಂದ ಸಿದ್ಧವಾಗದೆ ಇರುವಾಗ ಅದನ್ನು ಸಾಧಿಸಿಕೊಳ್ಳಲು ವಿಧಿಯ ನೆರವು ಬೇಕು. ವೇದದಲ್ಲಿ ಹೇಳುವ ಸ್ವರ್ಗದಂಥ ಪ್ರಯೋಜನವು ಪೂರಯಿಸಬೇಕೆಂದರೆ ವೇದವು ಸಾಧನೆಯ ವಿಧಿಗಳನ್ನೂ ತಿಳಿಯಪಡಿಸಬೇಕು. ಇದನ್ನು ಮೀಮಾಂಸಕರು 'ಚೋದನೆ' ಯೆಂದು ಕರೆದರು; ಎಂದರೆ ಉಪದೇಶ, ಕೆಲಸದಲ್ಲಿ ತೊಡಗಿಸುವುದು ('ಕ್ರಿಯಾಯಾಃ

ಪ್ರವರ್ತಕಂ ವಚನಂ') ಶಾಸ್ತ್ರದಲ್ಲಿರುವ ಪ್ರವರ್ತಕವಾಕ್ಯಗಳಷ್ಟೇ ವಿಧಿರೂಪದವು ಎಂದು ಕುಮಾರಿಲಭಟ್ಟರು ಹೇಳಿದರೆ, ಪ್ರಭಾಕರಮಿಶ್ರರು ಮಾಡಬೇಕೆಂದು ಕಟ್ಟುಪಾಡಿರುವ ಪ್ರವರ್ತಕ ವಾಕ್ಯಗಳಂತೆಯೆ ಮಾಡಬಾರದೆಂದು ತಡೆಹಿಡಿಯುವ ನಿವರ್ತಕವಾಕ್ಯಗಳೂ ವಿಧಿಗಳೇ ಎಂದು ಹೇಳಿದರು. ಏನಾದರಿರಲಿ, ನಮ್ಮ ಕರ್ತವ್ಯವನ್ನು ತಿಳಿಯಹೇಳುವುದು ('ಕರ್ತವ್ಯತಾವಬೋಧಕ') ಚೋದನೆಯೆನಿಸಿಕೊಳ್ಳುತ್ತದೆ. ವಿಧಿ ನಿಷೇಧಾತ್ಮವಾದ ಪುರುಷವ್ಯಾಪಾರವೇ ಪ್ರಯೋಜನವಾಗಿ ಉಳ್ಳದ್ದು.

ಆದರೆ ಚೋದನೆಯಷ್ಟೇ ಧರ್ಮವಾಗಲಾರದು ಎಂದು ತಿಳಿಸಲು ಮೀಮಾಂಸಾಸೂತ್ರವು 'ಅರ್ಥ'ವೆಂಬ ಮಾತನ್ನು ಧರ್ಮದ ನಿರೂಪಣೆಯಲ್ಲಿ ಸೇರಿಸುತ್ತದೆ ('ಚೋದನಾಲಕ್ಷಣೋಽರ್ಥೋ ಧರ್ಮಃ ಶ್ರೇಯಸ್ಕರಃ' ೧,೧,೨). ಇಲ್ಲಿ ಅರ್ಥವೆಂದರೆ ಪ್ರಯೋಜನ, ನಿಃಶ್ರೇಯಸದೊಂದಿಗೆ ನಮ್ಮನ್ನು ಸೇರಿಸುತ್ತದೆಯಾಗಿ ಅದು ಧರ್ಮವೆನಿಸಿಕೊಳ್ಳುತ್ತದೆ (''ತಸ್ಯ ಯೋ ಲಕ್ಷ್ಯತೇ ಸೋರ್ಥಃ ಪುರುಷಂ ನಿಃಶ್ರೇಯಸೇನ ಸಂಯುನಕ್ತೀತಿ ಪ್ರತಿಜಾನೀಮಹೇ'', ಶಬರಸ್ವಾಮಿಗಳ ಭಾಷ್ಯ). ಪೂರ್ವಮೀಮಾಂಸೆಯಲ್ಲಿ ಬಂದ ಈ ಧರ್ಮಜಿಜ್ಞಾಸೆ ಭಗವದ್ಗೀತೆಯಲ್ಲೂ ಒದಗಿಬಂದಿತ್ತು. ಶಂಕರಾಚಾರ್ಯರು ತಮ್ಮ ಗೀತಾಭಾಷ್ಯದ ಮೊದಲಲ್ಲಿ 'ವೇದೋಕ್ತವಾದ ಪ್ರವೃತ್ತಿ-ನಿವೃತ್ತಿಗಳೆಂಬ ದ್ವಿವಿಧ ಧರ್ಮವನ್ನು' ತಿಳಿಯ ಹೇಳುವುದೇ ಭಗವದ್ಗೀತೆಯ ಉದ್ದೇಶವಾಗಿರುವುದರಿಂದ ಇದು 'ಸಮಸ್ತ ವೇದಾರ್ಥಸಾರಸಂಗ್ರಹಭೂತ' ವಾಗಿದೆಯೆನ್ನುತ್ತಾರೆ.

ಭಗವದ್ಗೀತೆಯು ಧರ್ಮವನ್ನು ಕುರಿತ ಗ್ರಂಥವೆಂದಾಗ 'ಯಾಗಾದಿಗಳಷ್ಟೇ ಧರ್ಮ' ಎನ್ನುವ ಶಬರಸ್ವಾಮಿಗಳ ನಿರೂಪಣೆ ಹೊಂದುವುದಿಲ್ಲ. ಯಾಗ-ಯಜ್ಞ ಎಂಬ ಮಾತಿಗೆ ಗೀತೆ ಕೊಟ್ಟಿರುವ ಅರ್ಥ ವಿಶಾಲವಾದುದು; ಕರ್ಮಕಾಂಡದ ಚೌಕಟ್ಟು ಇಲ್ಲಿ ಕೂಡುವುದಿಲ್ಲ ಯಜ್ಞವೆಂಬ ಕಲ್ಪನೆಯಲ್ಲಿ ದ್ರವ್ಯತ್ಯಾಗವೇ ಮುಖ್ಯವಾಗಿದೆಯಷ್ಟೆ ? ಗೀತೆಯಲ್ಲಿ ತ್ಯಾಗವೆಂಬುದೇ ದೊಡ್ಡ ಮಾತು ಸಂನ್ಯಾಸವೆಂಬುದೂ ಸಂಕಲ್ಪತ್ಯಾಗವೇ. 'ಬಹುವಿಧಯಜ್ಞ'ಗಳಲ್ಲಿ ತ್ಯಾಗವೇ ಮುಖ್ಯ; ಕಾಮನಾತ್ಯಾಗ. ಮೀಮಾಂಸಕರ 'ಧರ್ಮಸಂಸ್ಥಾಪನೆ' ಯಜ್ಞಯಾಗಾದಿಗಳನ್ನು ಎತ್ತಿ ಹಿಡಿಯುವುದಿಲ್ಲ; ಅಪೂರ್ವವೆಂಬ ಪುಣ್ಯಸಂಪಾದನೆಯನ್ನೂ ತೋರಿಸುವುದಿಲ್ಲ. ಬದುಕಿನಲ್ಲಿ ಒದಗಿಬರಬೇಕಾದ ಸಂಸ್ಕಾರವನ್ನು ತಿಳಿಸುವ ಮಾತು ಅದು. ಪ್ರಶಸ್ತಪಾದರ ವೈಶೇಷಿಕಸೂತ್ರಭಾಷ್ಯದಲ್ಲಿ ಧರ್ಮವೆಂದರೆ 'ಭಾವಪ್ರಸಾದ'ವೆಂಬ ಸೂಚನೆಯಿರುವುದನ್ನು ಗಮನಿಸಬೇಕು. ಮನಸ್ಸಿನ ಮತ್ತು ಜೀವದ ನೆಲೆಯಲ್ಲಿ ಈಗಲೇ ಬದುಕಿರುವಾಗಲೇ ನೆಮ್ಮದಿಯನ್ನು, ಶಾಂತಿಯನ್ನು, ಸಮಾಧಾನವನ್ನು ಒದಗಿಸಬಲ್ಲುದು ಧರ್ಮ ('ದೃಷ್ಟಂ ಚ ಪ್ರಯೋಜನಮುದ್ದಿಶ್ಯೈತಾನಿ ಸಾಧನಾನಿ ಭಾವಪ್ರಸಾದಂ ಚಾಪೇಕ್ಷ್ಯ ಆತ್ಮನಸೋಃ ಸಂಯೋಗಾತ್ ಧರ್ಮೋತ್ಪತ್ತಿಃ').

ಇಲ್ಲಿ ದೇವರ ಕಲ್ಪನೆಯೂ ಪ್ರಸಕ್ತವಲ್ಲ, ಕರ್ಮಕಾಂಡದ ಹಿಡಿತವೂ ಇಲ್ಲ. ರಾಮಾಯಣದಲ್ಲಿ ಎದ್ದು ಕಾಣುವ ಧರ್ಮದ ಕಲ್ಪನೆಯನ್ನು ಅರಿತುಕೊಳ್ಳಲು ನೆರವಾಗುವ ಈ ಸಂದರ್ಭವನ್ನು ನೋಡಿ. ಮರುದಿನ ತನ್ನ ಮಗ ಯುವರಾಜ ಪಟ್ಟವನ್ನು ಪಡೆಯುವನೆಂದು ಸಂತೋಷ ಪಡುತ್ತಿದ್ದ ಕೌಸಲ್ಯೆಗೆ ರಾಮ ತಾನು ಕಾಡಿಗೆ ಹೋಗಲಿರುವ ಸುದ್ದಿಯನ್ನು ತಿಳಿಸಿದಾಗ, ಆ ತಾಯಿ ಮಗನನ್ನು ಹರಸಿದ ರೀತಿಯನ್ನು ನೋಡಿ -

'ಯಂ ಪಾಲಯಸಿ ಧರ್ಮಂ ಧೃತ್ಯಾ ಚ ನಿಯಮೇನ ಚ।
ಸ ವೈ ರಾಘವ ಶಾರ್ದೂಲ ಧರ್ಮಸ್ತ್ವಾಮಭಿರಕ್ಷತು॥

ಮಗನನ್ನು ಕಾಪಾಡಲು ಯಾವ ದೇವರನ್ನೂ ಆಕೆ ಬೇಡಿಕೊಳ್ಳಲಿಲ್ಲ. ಕಾಪಾಡಬಲ್ಲುದು ತಾನು ಮಾಡುವ ಧರ್ಮವೇ ಎಂದು ಆಕೆಯ ವಿಶ್ವಾಸ. "ಯಾವ ಧರ್ಮವನ್ನು ನೀನು ಧೈರ್ಯದಿಂದಲೂ ನಿಷ್ಠೆಯಿಂದಲೂ ಕಾಪಾಡುವೆಯೋ ಅದೇ ಧರ್ಮ ನಿನ್ನನ್ನು ಕಾಪಾಡಲಿ" ಎನ್ನುವುದು ಆಕೆಯ ಹರಕೆ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ನಾಣ್ನುಡಿಯೂ ಇದೆಯಲ್ಲವೆ ? ನಾವು ಕಾಯ್ದುಕೊಂಡ ಧರ್ಮ ನಮ್ಮನ್ನು ಕಾಯುತ್ತದೆ. ವಾಲ್ಮೀಕಿಗಳು ರಾಮನನ್ನು ಹೊಗಳುವಾಗಲೆಲ್ಲ ಅವನು ಧರ್ಮಪರ, ಧರ್ಮಿಷ್ಠ ಎಂಬುದನ್ನು ಮರೆಯುವುದಿಲ್ಲ. 'ರಾಮೋ ವಿಗ್ರಹವಾನ್ ಧರ್ಮಃ' ಎನ್ನುವುದು ಅವರ ಮಾತು. ಧರ್ಮವೇ ಮೈವೆತ್ತು ಬಂದಂತೆ ಇರುವವನು ರಾಮನಂತೆ.

ರಾಮಾಯಣದಂತೆ ಮಹಾಭಾರತದಲ್ಲೂ ಧರ್ಮದ ಹೆಚ್ಚಳವನ್ನು ಕುರಿತು ಹೇಳುವಾಗ, ಬದುಕಿನಲ್ಲಿ ಬೆಳಕನ್ನು ನೀಡುವುದೇ ಧರ್ಮವೆಂಬ ತಾತ್ಪರ್ಯವಿದೆ. 'ಧೃಜ್ ಧಾರಣೇ' ಎಂಬ ಧಾತ್ವರ್ಥದಲ್ಲಿರುವ ಊರುಗೋಲಾಗಿ ನಮ್ಮನ್ನು ಬೀಳಗೊಡದೆ ನಿಲ್ಲಿಸುವುದೆಂಬ ಸೂಚನೆಯೇ ಗೀತೆಯಲ್ಲೂ, ಮಹಾಭಾರತ, ರಾಮಾಯಣಗಳಲ್ಲೂ ಕಾಣಸಿಗುವುದು. ಧರ್ಮದ ನೆರವಿರದೆ ನೇರವಾಗಿ ಬದುಕುವುದಾಗದು ಎಂಬುದು ಇಲ್ಲಿನ ಸಿದ್ಧಾಂತ. ಮಹಾಭಾರತದಲ್ಲಿ (ಅನುಶಾಸನಪರ್ವ, ೩, ೧೮-೧೯) ಬದುಕಿನ ಪ್ರಯೋಜನಗಳು ಮೂರೆಂದೂ, ಧರ್ಮ-ಅರ್ಥ-ಕಾಮಗಳೆಂದೂ, ಧರ್ಮವನ್ನು ಬಿಡದೆ ಉಳಿದೆರಡನ್ನು ಸಾಧಿಸಿಕೊಳ್ಳಬೇಕೆಂದೂ ಹೇಳಿದೆ.

'ಧರ್ಮಶ್ಚಾರ್ಥಶ್ಚ ಕಾಮಶ್ಚ ತ್ರಿತಯಂ ಜೀವಿತೇ ಫಲಂ।
ಏತತ್ ತ್ರಯಮವಾಪ್ತವ್ಯಂ ಅಧರ್ಮಪರಿವರ್ಜಿತಂ॥

ಇಲ್ಲಿ ಧರ್ಮವೆನ್ನುವ ಮಾತಿಗೆ ಸರಳವಾದ ವಿವರಣೆಯೂ ಅಲ್ಲಿಯೇ ಬಂದಿವೆ (೧೧೩, ೮-೯) ತನಗೆ ಅಹಿತವೆಂದು ತೋರಿದುದನ್ನು ಇತರರಿಗೆ ಒದಗಿಸಬಾರದೆಂಬುದೇ ಧರ್ಮದ ಸರ್ವಸ್ವ.

'ನ ತತ್ ಪರಸ್ಯ ಸಂದಧ್ಯಾತ್ ಪ್ರತಿಕೂಲಂ ಯದಾತ್ಮನಃ।
ಏಷ ಸಂಕ್ಷೇಪತೋ ಧರ್ಮಃ ಕಾಮಾದನ್ಯಃ ಪ್ರವರ್ತತೇ॥'

ತನಗೆ ಬೇಡವಾದುದನ್ನು ಬೇರೆಯವರಿಗೆ ಬಯಸಬಹುದೆ ? ಬೇರೆಯವರು ತನಗೆ ಮಾಡಿದುದನ್ನು ಸಹಿಸಲಾರೆನೆಂದಾದರೆ, ತಾನು ಬೇರೆಯವರಿಗೆ ಅದನ್ನೇ ಮಾಡಬಹುದೆ? ಮಹಾಭಾರತದ ಶಾಂತಿಪರ್ವದಲ್ಲೂ ಇದೇ ಮಾತು ಬರುತ್ತದೆ (೨೬೦, ೨೦)

'ಯದನ್ಯೈರ್ವಿಹಿತಂ ನೇಚ್ಛೇದಾತ್ಮನಃ ಕರ್ಮ ಪೂರುಷಃ।
ನ ತತ್ಪರೇಷು ಕುರ್ವೀತ ಜಾನನ್ನಪ್ರಿಯಮಾತ್ಮನಃ॥'

ತನ್ನಂತೆ ಇತರರು ಎಂಬ ಭಾವನೆ ಇಲ್ಲಿ ಮುಖ್ಯ. ತನಗೆ ಹಿತವಲ್ಲದ್ದು ಬೇರೆಯವರಿಗೂ ಹಿತವಾಗದು. ಕೃತ್ಯರತ್ನಾಕರವೆಂಬ ಗ್ರಂಥದಲ್ಲಿ ದೇವಲ ಮುನಿಯ ಮಾತೆಂದು ಈ ಶ್ಲೋಕವಿದೆ.

'ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಂ।
ಆತ್ಮನಃ ಪ್ರತಿಕೂಲಾನಿ ಪರೇಷಾಂ ಪರೇಷಾಂ ನ ಸಮಾಚರೇತ್॥'

ತನಗೆ ಪ್ರತಿಕೂಲವೆಂದಾದುದನ್ನು ಬೇರೆಯವರಿಗೆ ಸಲ್ಲಿಸಬಾರದು - ಇದೇ ಧರ್ಮಸರ್ವಸ್ವ ಇಷ್ಟನ್ನು ತಿಳಿದುಕೊಂಡರೆ ಧರ್ಮವನ್ನು ಆಮೂಲಾಗ್ರವಾಗಿ ತಿಳಿದಂತಾಯಿತು. ತಿಳಿಯುವುದಷ್ಟೇ ಸಾಲದು, ಅದನ್ನು ಆಚರಣೆಯಲ್ಲಿ ತಂದುಕೊಳ್ಳಬೇಕು. ಬದುಕಿನಲ್ಲಿ ಹಾಸುಹೊಕ್ಕಾದ ದೃಷ್ಟಿ ಇದಾಗಬೇಕು. ಇದನ್ನೇ ಅವಧಾರಣೆಯೆಂದು ದೇವಲಮುನಿ ಕರೆದಿರುವುದು.

(೫)

ಮುಂದೆ ಧರ್ಮಶಾಸ್ತ್ರ ಮೈದಳೆದು ಜನರ ನಿತ್ಯಜೀವನದಲ್ಲಿ ಮಾರ್ಗದರ್ಶನಮಾಡಲು ಹೊರಟಂದು ಈ ಧರ್ಮದ ಕಲ್ಪನೆಯೇ ಬುನಾದಿಯಾಯಿತು. ಆದರೆ ಸಾಮಾನ್ಯ-ವಿಶೇಷವೆಂಬ ಭೇದ ಮೂಡಿಕೊಳ್ಳುವುದು ಅನಿವಾರ್ಯವಾಯಿತು. ಎಲ್ಲ ಮನುಷ್ಯರಿಗೂ ಸಮಾನವಾಗಿಯೇ ಅಗತ್ಯವಾದುದು ಸಾಮಾನ್ಯ ಧರ್ಮ. ಮಹಾಭಾರತದಲ್ಲಿ (ಆಶ್ರಮವಾಸಿಪರ್ವ)-

'ಏತದ್ಧಿ ತ್ರಿತಯಂ ಶ್ರೇಷ್ಠ ಸರ್ವಭೂತೇಷು ಭಾರತ।
ನಿರ್ವೈರತಾ ಮಹಾರಾಜ ಸತ್ಯಮಕ್ರೋಧ ಏವ ಚ॥'

ಎಂದು ಹೇಳಿದಾಗ ಯಾವ ಪ್ರಾಣಿಯಲ್ಲೂ ಹಗೆತನ ಮಾಡದಿರುವುದು, ದಿಟವನ್ನು ನುಡಿಯುವುದು, ಸಿಟ್ಟಿಗೇಳದಿರುವುದು ಇಷ್ಟು ಸಾಮಾನ್ಯಧರ್ಮದ ಚೌಕಟ್ಟೆಂದು ಕಾಣಿಸಿದರು. ಅದೇ ಗ್ರಂಥ ಇನ್ನೊಂದೆಡೆ (ಶಾಂತಿ ಪರ್ವ, ೬೦೭-೮) ಸಾಮಾನ್ಯ ಧರ್ಮದ ಪ್ರಕಾರಗಳನ್ನು ಒಂಬತ್ತೆಂದು ಹಿಗ್ಗಿಸಿತು

'ಅಕ್ರೋಧಂಃ ಸತ್ಯವಚನಂ ಸಂವಿಭಾಗಃ ಕ್ಷಮಾಯಥಾ ।
ಪ್ರಜನಃ ಸ್ವೇಷು ದಾರೇಷು ಶೌಚಮದ್ರೋಹ ಏವ ಚ।
ಆರ್ಜವಂ ಭೃತ್ಯಭರಣಂ ನವೈತೇ ಸಾರ್ವವರ್ಣಿಕಂ॥'

ಸಿಟ್ಟಿಗೇಳದಿರುವುದು, ದಿಟವನ್ನೇ ನುಡಿಯುವುದು, ತನ್ನದನ್ನು ಇತರರೊಂದಿಗೆ ಹಂಚಿಕೊಳ್ಳುವುದು, ತಾಳ್ಮೆ (ಸಹನೆ), ಕಾಮುಕತೆ ಇಲ್ಲದಿರುವುದು, ಶುಚಿಯಾಗಿರುವುದು, ಬೇರೆಯವರಿಗೆ ದ್ರೋಹವೆಣಿಸದಿರುವುದು, ವ್ಯವಹಾರದಲ್ಲಿ ಕಪಟವಿಲ್ಲದಿರುವುದು, ಆಳುಮಂದಿಯನ್ನು ಕಾಪಿಡುವುದು ಇವು ಒಂಬತ್ತು ಎಲ್ಲರಿಗೂ ಅಗತ್ಯವಾದುವು. ವಾಮನ ಪುರಾಣದಲ್ಲಿ ಹತ್ತು ಸಾಮಾನ್ಯಧರ್ಮಗಳನ್ನು ಹೇಳಿದೆ -

'ಅಹಿಂಸಾ ಸತ್ಯಮಸ್ತೇಯಂ ದಾನಂ ಕ್ಷಾಂತಿರ್ದಮಃ ಶಮಃ।
ಅಕಾರ್ಪಣ್ಯಂ ಚ ಶೌಚಂ ಚ ತಪಶ್ಚ ರಜನೀಚರ।
ದಶಾಂಗೋ ರಾಕ್ಷಸಶ್ರೇಷ್ಠ ಧರ್ಮೋऽಸೌ ಸಾರ್ವವರ್ಣಿಕಃ॥'

ಮೇಲಿನ ಅದ್ರೋಹ ಇಲ್ಲಿ ಅಹಿಂಸೆಯಾಗಿದೆ; ದಾನವೆಂಬ ಮಾತಿಗೆ ಸಂವಿಭಾಗವೆಂದೇ ಅರ್ಥ. ಕ್ಷಮೆ ಕ್ಷಾಂತಿ ಪರ್ಯಾಯಪದಗಳೇ. ಔದಾರ್ಯವನ್ನೂ ಇಂದ್ರಿಯ ನಿಗ್ರಹವನ್ನೂ (ದಮ), ಮನೋಸಂಯಮವನ್ನೂ (ಶಮ), ತಪಸ್ಸನ್ನೂ ಇಲ್ಲಿ ಸಾಮಾನ್ಯಧರ್ಮಗಳೆಂದು ಕಾಣಿಸಲಾಗಿದೆ. ಬ್ರಹ್ಮಪುರಾಣದ ಒಕ್ಕಣೆ ಇನ್ನಷ್ಟು ಸ್ವಾರಸ್ಯವಾಗಿದೆ.-

'ದಯಾ ಸಮಸ್ತಭೂತೇಷು ತಿತಿಕ್ಷಾ ನಾಭಿಮಾನಿತಾ।
ಸತ್ಯಂ ಶೌಚಮನಾಯಾಸೋ ಮಂಗಲಂ ಪ್ರಿಯವಾದಿತಾ॥
ಮೈತ್ರೀ ಚೈವಾಸ್ಪೃಹಾ ತದ್ವದಕಾರ್ಪಣ್ಯಂ ದ್ವಿಜೋತ್ತಮಃ।
ಅನಸೂಯಾ ಚ ಸಾಮಾನ್ಯಾ ವರ್ಣಾನಾಂ ಕಥಿತಾ ಗುಣಾಃ॥'

ಮೇಲಿನ ಅಹಿಂಸೆ ಇಲ್ಲಿ ಎಲ್ಲ ಪ್ರಾಣಿಗಳಲ್ಲೂ ದಯೆಯಾಗಿದೆ; ಅಲ್ಲಿನ ಕ್ಷಾಂತಿ ಇಲ್ಲಿ ತಿತಿಕ್ಷೆ. ಇಲ್ಲಿ ಹೆಚ್ಚಾಗಿ ಹೇಳಿರುವ ವಿವರಗಳೆಂದರೆ ಅಹಂಕಾರವಿಲ್ಲದಿರುವುದು, ಒಳ್ಳೆಯದನ್ನು ಮಾಡುವ ಬಯಕೆ, ಹಿತವಾದ ಮಾತನ್ನೇ ಆಡುವುದು, ಮೈತ್ರಿ, ದುರಾಸೆಯಿಲ್ಲದಿರುವುದು, ಬರಿದೆ ಆಯಾಸಗೊಳ್ಳದಿರುವುದು, ಪರರ ಉತ್ಕರ್ಷೆಯನ್ನು ಕಂಡು ಕರುಬದಿರುವುದು. ಒಟ್ಟು ಹನ್ನೆರಡು ಸಾಮಾನ್ಯ ಧರ್ಮಗಳು.

ಮನುಧರ್ಮಶಾಸ್ತ್ರದಲ್ಲಿ (೧೦-೬೩) ಸಂಗ್ರಹವಾಗಿ ಹೇಳಿರುವುದನ್ನು ಮುಂದೆ ಎಲ್ಲರೂ ಉದ್ಧರಿಸುತ್ತಾರೆ.

'ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯನಿಗ್ರಹಃ।
ಏವಂ ಸಾಮಾಸಿಕಂ ಧರ್ಮಂ ಚಾತುರ್ವರ್ಣ್ಯೇऽಬ್ರವೀನ್ಮನುಃ॥'

ಯಾರಿಗೂ ಯಾವರೀತಿಯಲ್ಲೂ ಗಾಸಿ ಮಾಡದಿರುವುದು, ದಿಟವನ್ನು ನುಡಿಯುವುದು, ಪರರ ಸ್ವತ್ತನ್ನು ಕದಿಯದಿರುವುದು, ಮನಸ್ಸು-ದೇಹಗಳೆರಡರಲ್ಲೂ ಶುಚಿಯಾಗಿರುವುದು, ಇಂದ್ರಿಯವ್ಯಾಪಾರದಲ್ಲಿ ಸಂಯಮವಿರುವುದು ಇಷ್ಟು ಸಾಮಾನ ಧರ್ಮದ ಚೌಕಟ್ಟು, ಮನುವೇ ಹತ್ತು ವಿಧದ ಧರ್ಮವನ್ನು ಹೇಳಿರುವನೆಂಬ ಉಲ್ಲೇಖವೂ ಇದೆ ('ದಶವಿಧ ಧರ್ಮಲಕ್ಷಣ') (೬.೯೧)

'ಧೃತಿಃ ಕ್ಷಮಂ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಂ॥'

ಇಲ್ಲಿ ಸತ್ಯ, ಅಸ್ತೇಯ, ಅಹಿಂಸೆ, ಶೌಚ, ದಮ, ಕ್ಷಮ, ಇವುಗಳೊಂದಿಗೆ ಧೃತಿ (ಎಂದರೆ ಧೈರ್ಯ, ಸ್ಥೈರ್ಯ), ದೀ (ಎಂದರೆ ವಿಚಾರಮಾಡುವ ಶಕ್ತಿ), ವಿದ್ಯಾ (ಎಂದರೆ ತಿಳಿವಳಿಕೆ, ಓದು) ಇವನ್ನೂ ಸಾಮಾನ್ಯ ಧರ್ಮದಲ್ಲೇ ಸೇರಿಸಿರುವುದು ಸ್ವಾರಸ್ಯವಾಗಿದೆ. ಇವು ಎಲ್ಲ ವರ್ಣದವರಿಗೂ ಅಗತ್ಯವಾದುವು ಎಂಬುದು ತಾತ್ಪರ್ಯ. ಪುರುಷಾರ್ಥಗಳಲ್ಲಿ ಅರ್ಥ ಮತ್ತು ಕಾಮಗಳು ಸೇರುತ್ತವೆ; ಆದರೆ ಅವು ಧರ್ಮಕ್ಕೆ ವಿರುದ್ಧವಾಗಿದ್ದರೆ ಅವನ್ನು ಕೈಬಿಡಬೇಕು ಎಂದು ಮನು ಹೇಳಿದಾಗ (೪, ೧೭೬, 'ಪರಿತ್ಯಜೇದರ್ಥ ಕಾಮೌ ಯೌ ಸ್ಯಾತಾಂ ಧರ್ಮವರ್ಜಿತೌ') ಸಾಮಾನ್ಯ ಧರ್ಮವನ್ನೇ ಅವನು ಸೂಚಿಸಿರುವುದು. ಸತ್ಯ, ಅಹಿಂಸೆ, ಅಸ್ತೇಯ, ಶೌಚ ಮೊದಲಾದುವನ್ನು ಬಿಟ್ಟೇ ಹಣ ಸಂಪಾದನೆ ಮಾಡಬೇಕಾದರೆ ಹಣಸಂಪಾದನೆಯನ್ನೇ ಬಿಡಬೇಕು; ಅವನ್ನು ಬಿಟ್ಟೇ ವಿಷಯಸುಖವೆಂದಾದರೆ ವಿಷಯಸುಖವನ್ನೇ ಬದಿಗೊತ್ತಬೇಕು. ಧರ್ಮದಿಂದ ದೂರವಾದ ಅರ್ಥ-ಕಾಮಗಳು ಊರ್ಜಿತವಾಗಲಾರವು ಎಂದು ತಾತ್ಪರ್ಯ.

(೬)

ಮಿತಾಕ್ಷರ ಪದ್ಧತಿಯ ಪ್ರಕಾರ ಧರ್ಮವೆಂಬುದು ಆರು ಬಗೆಯಾಗಿವೆ ('ಅತ್ರ ಚ ಧರ್ಮಶಬ್ದಃ ಷಡ್ವಿಧಸ್ಮಾರ್ತಧರ್ಮವಿಷಯಃ')- ವರ್ಣಧರ್ಮ, ಆಶ್ರಮಧರ್ಮ, ಗುಣಧರ್ಮ, ನಿಮಿತ್ತಧರ್ಮ, ಸಾಧಾರಣಧರ್ಮ. ಕಡೆಯದಾದ ಸಾಧಾರಣಧರ್ಮವೆಂಬುದೇ ಮೇಲೆ ಹೇಳಿದ ಸಾಮಾನ್ಯ ಧರ್ಮ. ಉಳಿದ ಐದಕ್ಕೆ ವಿಶೇಷ ಧರ್ಮವೆಂಬ ಮಾತು ಬಳಕೆಯಲ್ಲಿದೆ. ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯ ಅಂಗವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣವಿಭಜನೆಯೂ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸವೆಂಬ ಆಶ್ರಮ ವಿಭಜನೆಯೂ ಇವೆಯಷ್ಟೆ. ಇವಕ್ಕೆ ಅನುಸಾರವಾಗಿ ವಿಶೇಷ ಧರ್ಮಗಳು ಕರ್ತವ್ಯವಿಶೇಷವಾಗಿ ವಿಧಿಸಲ್ಪಟ್ಟಿವೆ. ಧರ್ಮಶಾಸ್ತ್ರಗಳು ಸಿದ್ಧವಾದ ಕಾಲದಲ್ಲಿ ಇದ್ದಿರಬಹುದಾದ ವರ್ಣಾಶ್ರಮವ್ಯವಸ್ಥೆ ಈಗ ಪ್ರಸಕ್ತವಾದುದಲ್ಲ. ಅದನ್ನವಲಂಬಿಸಿ ಮೈದಳೆದು ಧರ್ಮಶಾಸ್ತ್ರದ ಕಟ್ಟುಪಾಡಾಗಲಿ ಈಗ ಸಾಧುವಾದುದಲ್ಲ.

ಧರ್ಮಶಾಸ್ತ್ರವೆಂಬುದು ಒಂದಲ್ಲವೆಂಬುದನ್ನೂ ಗಮನಿಸಬೇಕು; ಯಾವ ಕಾಲದಲ್ಲೂ ಒಂದೇ ಧರ್ಮಶಾಸ್ತ್ರ ಪ್ರಮಾಣವಾಗಿದ್ದುದಕ್ಕೆ ನಿದರ್ಶನವಿಲ್ಲ. ಹೇಮಾದ್ರಿ ಖಂಡದಲ್ಲಿ ಧರ್ಮಶಾಸ್ತ್ರವನ್ನು 'ಮನ್ವಾದಿ ಪ್ರಣೀತಶಾಸ್ತ್ರ' ವೆಂದು ನಿರೂಪಣೆ ಮಾಡಿ ಮನು, ವಿಷ್ಣು, ಯಮ, ದಕ್ಷ, ಅಗ್ನಿಹೋತ್ರಿ, ಬೃಹಸ್ಪತಿ, ಉಶನ, ಆಪ್ತಸ್ತಂಬ, ವಶಿಷ್ಠ, ಕಾತ್ಯಾಯನ, ವ್ಯಾಸ, ಶಂಕಲಿಖಿತ, ಸಂವರ್ತ, ಗೌತಮ, ಶಾತಾತಪ, ಹಾರೀತ,

ಯಾಜ್ಞವಲ್ಕ್ಯ, ಪ್ರಾಚೇತಸರೇ ಮೊದಲಾಗಿ ಹಲವು ಧರ್ಮ ಶಾಸ್ತ್ರಕಾರರನ್ನು ಉಲ್ಲೇಖಿಸಿರುವುದಿದೆ. 'ಮೊದಲಾಗಿ' (ಆದಯಃ) ಎಂದರೆ ವೃದ್ಧದೇವಲ, ಸೋಮ, ಜಮದಗ್ನಿ, ಪ್ರಜಾಪತಿ, ವಿಶ್ವಾಮಿತ್ರ, ಪೈಠೀನಸಿ, ಪಿತಾಮಹ, ಬೋಧಾಯನ, ಛಾಗಲೇಯ, ಜಾಬಾಲಿ, ಚ್ಯವನ, ಮರೀಚಿ, ಕಾಶ್ಯಪರು ಸೇರುತ್ತಾರಂತೆ! ಇಷ್ಟೊಂದು ಮಂದಿ ಶಾಸ್ತ್ರಕಾರರಿರುವಾಗ. ಮಹಾಭಾರತದ ಯಕ್ಷಪ್ರಶ್ನೆಯಲ್ಲಿ ಯುಧಿಷ್ಠಿರ ಹೇಳುವಂತೆ, ಯಾರನ್ನೂ ಪ್ರಮಾಣವೆಂದು ಗ್ರಹಿಸುವ ಹಾಗಿಲ್ಲ ('ನಾಸ್ತಿ ಏಕೋ ಮುನಿಃ ಯಸ್ಯ ಮತಂ ಪ್ರಮಾಣಂ'). ಇವರಲ್ಲಿ ಅಭಿಪ್ರಾಯ ಭೇದಗಳಿರುವುದನ್ನು ಶಾಸ್ತ್ರಕಾರರೇ ಎತ್ತಿ ತೋರಿಸುತ್ತಾರೆ. ಯಾವ ಕಾಲದಲ್ಲಾಗಲಿ ಯಾವುದೇ ಆಚಾರವನ್ನು ನಿರ್ವಿವಾದವಾಗಿ ಎಲ್ಲರೂ ಒಪ್ಪಿದ್ದರೆಂದು ಹೇಳುವುದು ಕಷ್ಟ.

ಈಗಂತೂ ಧರ್ಮವೆನ್ನುವ ಕಲ್ಪನೆ ಉಳಿಯಬೇಕೆಂದರೆ ಧರ್ಮಶಾಸ್ತ್ರಗಳ ಚೌಕಟ್ಟಿನಿಂದ ಅದನ್ನು ಬಿಡಿಸಿಯೇ ತೋರಿಸಬೇಕಾಗುತ್ತದೆ. ಇದನ್ನು ಮನುವೂ ಸೂಚಿಸಿದ್ದಾನೆನ್ನಿ (೨, ೬). ಧರ್ಮದ ಮೂಲವೇನೆಂಬುದನ್ನು ವಿಚಾರಮಾಡುತ್ತ ಧರ್ಮದ ನೆಲೆಯನ್ನು ಐದು ಬಗೆಗಳಲ್ಲಿ ಗುರುತಿಸುತ್ತಾನೆ–

'ವೇದಾಖಿಲೋ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಂ।
ಆಚಾರಾಶ್ಚೈವ ಸಾಧೂನಾಂ ಆತ್ಮನಸ್ತುಷ್ಟಿರೇವ ಚ ॥'

ಮೊದಲನೆಯದೇನೋ ವೇದ; ಅದು ಸಂಪ್ರದಾಯದ ಎಣಿಕೆಯಷ್ಟೆ. ಮೀಮಾಂಸಕರ ಧರ್ಮದ ಕಲ್ಪನೆ ಇದನ್ನು ಅವಲಂಬಿಸಿದ್ದುದನ್ನು ಮೊದಲೆ ಕಾಣಿಸಿದ್ದೇನೆ. ಇದಕ್ಕೆ ಹೆಚ್ಚಿನ ಒತ್ತು ಕೊಡಬೇಕಾದ ಅಗತ್ಯವಿಲ್ಲವೆನಿಸುತ್ತದೆ. ಎರಡನೆಯದು ಸ್ಮೃತಿ; ಮೇಲೆ ಹೇಳಿದ ಮಹಾಭಾರತವೇ ಮೊದಲಾದ ಮಾರ್ಗದರ್ಶಕ ವಾಙ್ಮಯ. ಇದರಲ್ಲೇ ಧರ್ಮಶಾಸ್ತ್ರಗಳೂ ಸೇರುತ್ತವೆ. ಮೂರನೆಯದು ಧರ್ಮಶಾಸ್ತ್ರಗಳನ್ನೂ ಮಹಾಭಾರತಾದಿ ಗ್ರಂಥಗಳನ್ನೂ ಅಧ್ಯಯನಮಾಡಿ, ಅವುಗಳ ತಾತ್ಪರ್ಯವನ್ನು ತಿಳಿದುಕೊಂಡವರ ಮಾತು, ಅವರ ಉಪದೇಶ. ನಾಲ್ಕನೆಯದು ಸಮಾಜದಲ್ಲಿ ಒಳ್ಳೆಯವರೆಂದು ಎಣಿಕೆಗೆ ಬಂದ ಮಹನೀಯರು ಬದುಕುವ ಬಗೆ, ಅವರ ನಡವಳಿಕೆ. ತೈತ್ತರೀಯೋಪನಿಷತ್ತಿನಲ್ಲಿ ಗುರುವು ಶಿಷ್ಯನಿಗೆ ಪಾಠವನ್ನೆಲ್ಲ ಮುಗಿಸಿ, ಅವನನ್ನು ಬೀಳ್ಕೊಡುವ ಸಂದರ್ಭದಲ್ಲಿ ಹೇಳುವ ಮಾತುಗಳು ಸ್ವಾರಸ್ಯವಾಗಿವೆ. ಅವುಗಳಲ್ಲೊಂದು– "ನಿನಗೆ ಧರ್ಮದ ವಿಚಾರವಾಗಿ ಹೀಗೆ ಮಾಡುವುದೋ ಹಾಗೆ ಮಾಡುವುದೋ, ಮಾಡುವುದೋ ಬಿಡುವುದೋ ಎಂದೆಲ್ಲ ಸಂದೇಹ ಒದಗಿದಾಗ, ಸಮಾಜದಲ್ಲಿ ಹಿರಿಯರು ಈ ವಿಚಾರದಲ್ಲಿ ಹೇಗೆ ನಡೆದುಕೊಳ್ಳುವರೋ ನೋಡು, ನೀನೂ ಹಾಗೆಯೇ ನಡೆದುಕೊಂಡರಾಯಿತು!" ಮನು ಹೇಳಿದ 'ಸಾಧುಗಳು ಆಚಾರ' ಇದರ ಅನುವಾದವೇ. ಸಾಧುಗಳೆಂದರೆ ಸಜ್ಜನರು, ಒಳ್ಳೆಯ ಜನ ಎಂದರ್ಥ. ಧರ್ಮ ವ್ಯವಹಾರದಲ್ಲಿ ನಿಲ್ಲುವಾಗ ಶಾಸ್ತ್ರಗ್ರಂಥಗಳಿಗಿಂತ ಹೆಚ್ಚು ಪ್ರಯೋಜನ ಇಂಥವರ ಆದರ್ಶದಿಂದ.

ಕಡೆಯದು 'ತನ್ನ ಸಂತೋಷ' (ಆತ್ಮತುಷ್ಟಿ). ಇಲ್ಲಿ ಸಂತೋಷವೆಂದರೆ ಆತ್ಮಸಾಕ್ಷಿಯಾಗಿ ನಡೆದುಕೊಂಡಿದ್ದೇನೆಂಬ ತೃಪ್ತಿ ಸಮಾಧಾನ. ಕಾಳಿದಾಸನು 'ಪ್ರಮಾಣಂತಃ ಕರಣಪ್ರವೃತ್ತಯಃ' ಎಂದು ಹೇಳಿದಾಗ ಅವನ ಮನಸ್ಸಿನಲ್ಲಿದ್ದುದು ಇದೇ. ಇದರ ಸೂಚನೆಯೂ ಉಪನಿಷತ್ತಿನಲ್ಲೇ ಇದೆ-"ಸಾಧುವಾದುದನ್ನು ಮಾಡಲಿಲ್ಲವೇಕೆ ? ಅಸಾಧುವಾದುದನ್ನು ಮಾಡಿದನೇಕೆ?" ಎಂಬ ಅಳುಕು, ಒಳಬೇಗುದಿ, ಪಶ್ಚಾತ್ತಾಪ ಬಾರದಿರುವಂತೆ ನಡೆದುಕೊಳ್ಳಬೇಕೆಂಬ ಒಕ್ಕಣೆಯಿದೆ ('ಕಿಮಹಂ ಸಾಧು ನಾಕರವಂ' ಇತ್ಯಾದಿ). ಬುದ್ಧನೂ ಕೂಡ "ಮುಂದೆ ಕಣ್ಣೀರು ಸುರಿಸಿ, ಅಯ್ಯೋ ಇದನ್ನೇಕೆ ಮಾಡಿದೆ, ಎಂದು ಮರುಗಬೇಕಾದ ಪರಿಸ್ಥಿತಿ ಬಾರದಿರುವಂತೆ ಕೆಲಸ ಮಾಡು" ('ಯಂ ಕೃತ್ವಾ ಅನುತಪ್ಪಸ್ಸಿ) ಎಂದು ಹೇಳಿದನಲ್ಲವೆ ? ಇದನ್ನು ಆಪಸ್ತಂಬ ಧರ್ಮಸೂತ್ರದಲ್ಲಿ 'ಧರ್ಮಜ್ಞಸಮಯ'ವೆಂದು ಕರೆದಿದ್ದಾರೆ. ಧರ್ಮವನ್ನು ತಿಳಿದವರು ಏರ್ಪಡಿಸಿರುವ ಕಟ್ಟಳೆಯೆಂದರ್ಥ.

ಹೀಗೆ ಧರ್ಮಕ್ಕೂ ಒಳ್ಳೆಯವರಿಗೂ ತೀರದ ನಂಟು ಒಂದು ಇರುವುದನ್ನು ಗಮನಿಸಬಹುದು. ಒಳ್ಳೆಯತನವೆಂದರೇನೆಂಬುದನ್ನೂ ನಮ್ಮವರು ಸಂದಿಗ್ಧವಾಗಿ ಬಿಟ್ಟಿಲ್ಲ. ಮಹಾಭಾರತದಲ್ಲೇ ಶಾಂತಿಪರ್ವದಲ್ಲಿ ಈ ನಿರೂಪಣೆಯಿದೆ –

'ಅದ್ರೋಹಃ ಸರ್ವಭೂತೇಷು ಕರ್ಮಣಾ ಮನಸಾ ಗಿರಾ।
ಅನುಗ್ರಹಶ್ಚ ದಾನಂ ಚ ಸತಾಂ ಧರ್ಮಃ ಸನಾತನಃ॥'

ಕೈಯಿಂದಲಾಗಲಿ, ಮನಸ್ಸಿನಿಂದಲಾಗಲಿ, ಮಾತಿನಿಂದಲಾಗಲಿ ಯಾವ ಪ್ರಾಣಿಗೂ ಕೇಡು ಬಗೆಯದಿರುವುದು ಎಲ್ಲ ಕಾಲಕ್ಕೂ ಒಳ್ಳೆಯತನವೇ. ಇತರ ಜೀವಿಗಳಲ್ಲಿ ಸ್ನೇಹಭಾವವಿರಿಸಿಕೊಂಡು ಅನುಕೂಲವಾಗಿ ನಡೆದುಕೊಳ್ಳುವುದು ಅನುಗ್ರಹ; ತನ್ನದಾದುದನ್ನು ತಾನೇ ಅನುಭವಿಸಬೇಕೆಂಬ ಹಟವಿಲ್ಲದೆ ಇತರರೊಂದಿಗೆ ಅದನ್ನು ಹಂಚಿಕೊಳ್ಳುವುದು ದಾನ ('ದಾನಂ ಸಂವಿಭಾಗಃ'). ಇವೆರಡೂ ಗುಣಗಳು 'ಸರ್ವಭೂತೇಷು ಅದ್ರೋಹಃ' ಅಥವಾ 'ದಯಾ ಸರ್ವಭೂತೇಷು' ಎಂಬುದಕ್ಕೆ ಹೊಂದಿಕೊಳ್ಳುತ್ತವೆ. ಆಪಸ್ತಂಬಸ್ಮೃತಿಯು (೧೦, ೧೨) ಸಂಗ್ರಹವಾಗಿ ಇದನ್ನೇ

'ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ ಸ ಪಶ್ಯತಿ।'

ಎಂದು ನಿರೂಪಿಸಿದೆ. ಮಹಾಭಾರತವೂ (ಶಾಂತಿಪರ್ವ, 260, 20) 'ಬೇರೆಯವರು ನಿನಗೆ ಏನನ್ನು ಮಾಡಬಾರದೆಂದು ಎಣಿಸುವೆಯೋ, ಅದನ್ನು ನೀನು ಬೇರೆಯವರಿಗೆ ಮಾಡದಿರು. ಧರ್ಮವೆಂದರೆ ಪ್ರೀತಿಯ ದಾರಿಯನ್ನು ಹಿಡಿಯುವುದು" ಎಂದು ಹೇಳಿದಾಗ ಇದೇ ನಿಲುವೇ

'ಯದನ್ಯೈರ್ವಿಹಿತಂ ನೇಚ್ಛೇದಾತ್ಮನಃ ಕರ್ಮ ಪೂರುಷಃ।

ನ ತತ್ ಪರೇಷುಕ್ಕು ರ್ವೀತ ಜಾನನ್ನಪ್ರಿಯಮಾತ್ಮನಃ।
ಸರ್ವಂ ಪ್ರಿಯಾಭ್ಯುಪಗತಂ ಧರ್ಮ ಪ್ರಾಹುರ್ಮನೀಷಿಣಃ ॥'

ಇಂಥ ಧರ್ಮದ ಪರಿಕಲ್ಪನೆ ಮಾನವಕೋಟಿಯ ಹಿತವನ್ನು ಸಾಧಿಸುವುದಿಲ್ಲವೆ ? ವ್ಯಕ್ತಿಜೀವನದಲ್ಲಿ ಮತ್ತು ಸಮುದಾಯ ಸಂಘಟನೆಯಲ್ಲಿ ಒಡೆಯುವ ಪ್ರವೃತ್ತಿಗಳೇ ಹೆಚ್ಚುತ್ತಿರುವಾಗ, ಒಂದುಗೂಡಿಸುವ ಕರೆಗೆ ಓಗೊಡುವವರು ಈ ಧರ್ಮದ ಪರಿಕಲ್ಪನೆಯತ್ತ ದೃಷ್ಟಿ ಹರಿಸಿದರೆ ಒಳಿತು. ಅನುಕೂಲಸಿಂಧುವೆಂಬ ಕಾರಣದಿಂದಲ್ಲ. ಉಪಾಯವೆಂಬ ಎಣಿಕೆಯಿಂದಲ್ಲ; ಮಾನವಸ್ವಭಾವವನ್ನೇ ಶೋಧಿಸಿಕೊಂಡು ಹೃದಯಕ್ಕೆ ಸಂಸ್ಕಾರವನ್ನು ತಂದುಕೊಂಡು ಎಲ್ಲರೂ ನೆಮ್ಮದಿಯಿಂದ ಬಾಳಬೇಕೆಂಬ ಆಶಯದಿಂದ. ಋಗ್ವೇದವೇ ಬದುಕಿನ ಸೂತ್ರವನ್ನು 'ಯಥಾವಃ ಸುಸಹಾ ಸತಿ' ಎಂದು ಕಾಣಿಸಿದೆಯಲ್ಲವೆ ? ಅದಕ್ಕನುಗುಣವಾಗಿ –

'ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ
ಸಮಾನಮಸ್ತು ವೋ ಮನೋ'

(೭)

ಆಜೀವಿಕ, ಜೈನ, ಬೌದ್ಧ ಮೊದಲಾದ ಶ್ರಮಣಪರಂಪರೆಯಲ್ಲಿಯೂ ಧರ್ಮ ವಹಿಸಿದ ಪಾತ್ರ ಪ್ರಮುಖವಾದುದೇ. ಇಲ್ಲಿ ಧರ್ಮವೆಂದರೆ ಸಾಮಾನ್ಯ ಧರ್ಮ; ವರ್ಣಾಶ್ರಮವ್ಯವಸ್ಥೆಯಲ್ಲಿ ಸೇರಿಬಂದದ್ದಲ್ಲ. ನೇರವಾಗಿ, ಸರಳವಾಗಿ, ಸುಖವಾಗಿ ಬಾಳಲು ಅಗತ್ಯವೆನಿಸಿದ ಜೀವನಧರ್ಮ. ಮಹಾವೀರಸ್ವಾಮಿಗಳು ಮನುಷ್ಯನಿಗೆ ಮಂಗಳ ವನ್ನೆಸಗುವ ಪರಿಕರಗಳಲ್ಲಿ ಧರ್ಮವೇ ಉತ್ಕೃಷ್ಟವಾದುದೆಂದು ಹೇಳಿ, ಧರ್ಮವೆಂದರೆ ಅಹಿಂಸೆ, ಸಂಯಮ, ತಪಸ್ಸು, ಎಂದು ನಿರೂಪಿಸಿದರು; ಧರ್ಮದಲ್ಲಿ ಮನಸ್ಸನ್ನಿರಿಸಿದವನನ್ನು ದೇವತೆಗಳು ಕೂಡ ನಮಸ್ಕರಿಸುವರಂತೆ (ದಶವೈತಾಲಿಕ, ೧, ೧)

ಧಮ್ಮೊ ಮಂಗಲಮುಕ್ಕಿಟ್ಠಂ ಅಹಿಂಸಾ ಸಂಜಮೋ ತವೊ।
ದೇವಾವಿತಂ ನಮಂಸ್ಸಂತಿ ಜಸ್ಸ ಧಮ್ಮೆ ರಿತೋ ಮಣೊ ॥

ಅಹಿಂಸೆಯೆಂಬುದೇನೋ ಸಾಮಾನ್ಯಧರ್ಮದ ಮೊದಲ ವಿವರವೇ. ಸಂಯಮವೆಂಬ ಮಾತಿನಲ್ಲಿ ಸಾಮಾನ್ಯಧರ್ಮದ ಉಳಿದೆಲ್ಲ ವಿವರಗಳೂ ಸೇರುತ್ತವೆ. ಇಂದ್ರಿಯಗಳನ್ನು, ಮನಸ್ಸನ್ನು ಹಿಡಿತದಲ್ಲಿರಿಸಿಕೊಳ್ಳುವುದು ಸಂಯಮ. ವಿಷಯಸುಖಗಳನ್ನೇ ಅರಸಿಕೊಂಡು ಹೋಗುವ ಪ್ರವೃತ್ತಿ ಕೇಡಿನ ಕಡೆಗೆ ನಮ್ಮನ್ನು ಒಯ್ಯುತ್ತದೆ; ಅಭ್ಯಾಸದಿಂದಲೂ, ಎಚ್ಚರದಿಂದಲೂ, ವಿವೇಕದಿಂದಲೂ, ವಿಚಾರದಿಂದಲೂ ಈ ಪ್ರವೃತ್ತಿಯನ್ನು ಬಿಗಿಹಿಡಿಯುವುದು ಧರ್ಮದ ಒಂದು ಅಂಗ. ಇನ್ನು ತಪಸ್ಸೆಂದರೆ ಕರ್ಮದ ಒತ್ತಡದಿಂದ ತಪ್ಪಿಸಿಕೊಳ್ಳುವ ಉಪಾಯ; ಕ್ಲೇಶದ ಭಾರವು ಜೀವವನ್ನು ಕುಗ್ಗಿಸಿರುವಾಗ, ಜೀವವನ್ನು ಹಗುರಾಗಿಸುವ, ಮೇಲೆ ಸಾಗಲು ಅಣಿಮಾಡಿಕೊಡುವ ಹವಣಿಕೆ.

ಸಂಸಾರದ ಕತ್ತಲೆಯಲ್ಲಿ ಬಿರುಗಾಳಿಗೆ ಸಿಕ್ಕು ತೊಳಲಾಡುತ್ತಿರುವ ಜನಕ್ಕೆ ಧರ್ಮವೇ ದಾರಿದೀಪವಂತೆ ಧರ್ಮವೇ ನೆಲೆಗಾಣಿಸುವ ತಾಣವಂತೆ, ಸೊಗಸಾದ ಆಸರೆಯಂತೆ (ಉತ್ತರಾಧ್ಯಯನ ೨೩, ೬೮)

'ಜರಾಮರಣವೇಗೇಣ ಬುಜ್ಝಮಾಣಾಣ ಪಾಣ್ಣಂ।
ಧಮ್ಮೋ ದೀವೋ ಪಇಟ್ಠಾ ಯ ಗಈ ಸರಣಮುತ್ತಮಂ॥'

ಇಲ್ಲಿ ಧರ್ಮವೆಂದರೆ ಆತ್ಮಜಯಕ್ಕೆ ದಾರಿ; ಆತ್ಮಜಯದಿಂದಲೇ ಇಲ್ಲಿಯೂ ಮುಂದೆಯೂ ಸುಖ ('ಅಪ್ಪಾ ದಂತೋ ಸುಹೀ ಹೋ ಇ, ಅಸ್ಸಿಂ ಲೋಏ ಪರತ್ಥ ಚ') ತನ್ನನ್ನು ತಾನು ಗೆದ್ದು ಕೊಂಡದ್ದರಿಂದಲೇ ವರ್ಧಮಾನನು 'ಮಹಾವೀರ' ನೆನಿಸಿಕೊಂಡದ್ದು. ಸಮರಾಂಗಣದಲ್ಲಿ ಸಾವಿರಮಂದಿಯನ್ನು ಸಾಯಿಸಬಹುದು, ಶತ್ರುಸೇನೆಯನ್ನು ಸೋಲಿಸಬಹುದು. ಆದರೆ ತನ್ನ ರಾಗ ದ್ವೇಷ ಮೋಹಾದಿ ಪ್ರವೃತ್ತಿಗಳನ್ನು ಅಡಗಿಸಿ, ತನ್ನನ್ನು ತಾನು ಗೆದ್ದುಕೊಳ್ಳುವುದು ಕಷ್ಟ. ಅದೇ ದಿಟವಾದ ಜಯ; ಆತ್ಮಜಯ. ಇದು ಧರ್ಮದ ನೆರವಿಲ್ಲದೆ ಕೈಗೂಡಲಾರದು.

ಮತ್ತೊಂದು ಕಡೆ ಮಹಾವೀರಸ್ವಾಮಿಗಳು ಧರ್ಮದ ವಿವರಗಳನ್ನು ಮತ್ತಷ್ಟು ಸ್ಪಷ್ಟಪಡಿಸಿದ್ದಾರೆ. (ಉತ್ತರಾಧ್ಯಯನ, ೨೧, ೧೨) ಧರ್ಮವೆಂದರೆ ಯಾವ ಪ್ರಾಣಿಯನ್ನೂ ಗಾಸಿಗೀಡು ಮಾಡದಿರುವುದು (ಅಹಿಂಸೆ), ಸುಳ್ಳಾಡದಿರುವುದು (ಸಚ್ಚಂ) ಕಳುವುಮಾಡದಿರುವುದು, (ಅತೇಣಗಂ), ಕಾಮುಕತನವಿಲ್ಲದಿರುವುದು (ಬಂಭಂ), ತನ್ನದಲ್ಲದನ್ನು ಪಡೆದುಕೊಳ್ಳದಿರುವುದು (ಅಪರಿಗ್ಗಹಂ) ಇವು ಪಂಚವ್ರತಗಳಂತೆ. ಇದೇ ಜಿನರು ತೋರಿಸಿದ ಧರ್ಮದ ದಾರಿ ('ಧಮ್ಮಂ ಜಿಣದೇಸಿಯಂ ವಿದೂ') ಇದೇ ನಮ್ಮನ್ನು ದಿವ್ಯಗತಿಗೆ ಸೇರಿಸುವ ಆರ್ಯಧರ್ಮ ('ದಿವ್ವಂ ಚ ಗ ಇಂ ಗಚ್ಛಂತಿ ಚರಿತ್ತಾ ಧಮ್ಮಮಾರಿಯಂ', ಅಲ್ಲಿಯೇ, ೧೮, ೨೫).

ಮಹಾವೀರಸ್ವಾಮಿಗಳ ಕಿರಿಯಸಮಕಾಲಿಕರಾಗಿದ್ದ ಗೌತಮಬುದ್ಧ ಇದೇ ನಿಲುವನ್ನು ಅಂಗೀಕರಿಸಿದುದನ್ನು ಗಮನಿಸಬಹುದು. ಸಿದ್ಧಾಂತ ಭಾಗದಲ್ಲಿ ಒಮ್ಮತವಿಲ್ಲದಿದ್ದರೂ, ಜೈನ-ಬೌದ್ಧ ದರ್ಶನಗಳ ಧರ್ಮದ ಕಲ್ಪನೆ ಒಂದೇ. ಬುದ್ಧನ ಮೊದಲ ಉಪದೇಶವೇ ಧರ್ಮಚಕ್ರವನ್ನು ತಿರುಗಿಸುವ ಯತ್ನವೆನಿಸಿಕೊಂಡಿತು (ಧರ್ಮಚಕ್ರಪ್ರವರ್ತನ). ಭವಚಕ್ರಕ್ಕೆ ವಿರುದ್ಧವಾದುದು ಧರ್ಮಚಕ್ರ. ಭವಚಕ್ರವೆಂದರೆ ಸಂಸಾರದ ದಾರಿ; ರಾಗ (ಬಯಕೆಗಳು), ದ್ವೇಷ (ಹಗೆತನ), ಮೋಹ (ವಿವೇಕವಿಲ್ಲದಿರುವುದು)ಗಳಿಂದ ಉಂಟಾದುದು. ಇದು ಕ್ಲೇಶಕ್ಕೆ, ದುಃಖಕ್ಕೆ, ದುರ್ಗತಿಗೆ ಒಯ್ಯುವಂಥದು. ಧರ್ಮಚಕ್ರ ಈ ಸಂಸಾರದ ಸುಳಿಯಿಂದ ನಮ್ಮನ್ನು ಪಾರುಗಾಣಿಸಿ ನಿರ್ವಾಣವೆಂಬ ದಡಕ್ಕೆ ಸೇರಿಸುತ್ತದೆ. ಬುದ್ಧನು ತಾನು ತಿಳಿಯಪಡಿಸುವುದು ಧರ್ಮವನ್ನೇ ಎಂದು ಹೇಳಿಕೊಂಡದ್ದಿದೆ ('ಧಮ್ಮಂ ದೇಸೇಮಿ'). ಕಾಣ್ಕೆಯನ್ನು ಪಡೆದುಕೊಂಡ ಬುದ್ಧನು ಲೋಕದಲ್ಲಿ ಧರ್ಮವನ್ನುಪದೇಶಿಸಿದನೆಂದು

'ಪಾರಾಯಣವಗ್ಗ' (ವತ್ಥುಗಾಥಾ) ಹೇಳುತ್ತದೆ ('ಬುದ್ಧೋ ಸೋ ಭಗವಾ ಲೋಕೇ ಧಮ್ಮಂ ದೇ ಸತಿ ಚಕ್ಖುಮಾ')

ಧರ್ಮವೆನ್ನುವ ಮಾತಿಗೆ ಬೌದ್ಧ ಸಂಪ್ರದಾಯದಲ್ಲಿ ಬುದ್ಧನ ಇಡೀ ಉಪದೇಶ, ದರ್ಶನ, ಸಿದ್ಧಾಂತ ಎಂಬ ಅರ್ಥವೂ ತಳೆದುಕೊಂಡಿತು. ತ್ರಿರತ್ನಗಳಲ್ಲಿ (ಬುದ್ಧ, ಧರ್ಮ, ಸಂಘ) ಧರ್ಮ ಒಂದಾಗಿ ಶರಣ್ಯವಾಗಿರುವುದು ಈ ಅರ್ಥದಲ್ಲೇ. ಮುಂದೆ ಸಿದ್ಧಾಂತದ ಚೌಕಟ್ಟಿನಲ್ಲಿ (ಧಮ್ಮಸಂಗಣಿ, ಅಭಿಧಮ್ಮಪಿಟಕ ಮುಂತಾದುವಲ್ಲಿ) ಉಳಿದುಕೊಂಡಿತು. ದೀರ್ಘನಿಕಾಯದ ಶಕ್ರಪ್ರಶ್ನೆಯಲ್ಲಿ 'ಧಮ್ಮೋ ಸೇವಿತಬ್ಬೋ' (ಧರ್ಮವನ್ನನುಸರಿಸಬೇಕು) ಎಂದು ಹೇಳುವಾಗ ವಿವೇಕದಿಂದ ಕುಶಲಮೂಲವಾದ ಧರ್ಮಗಳನ್ನು ಹೆಚ್ಚುಹೆಚ್ಚು ಮಾಡಿಕೊಳ್ಳಬೇಕು, ಅಕುಶಲಧರ್ಮಗಳನ್ನು ಬಿಡಬೇಕು ('ಅಕುಸಲಾ ಧಮ್ಮಾ ಪರಿಹಾಯಂತಿ, ಕುಸಲಾ ಧಮ್ಮಾ ಅಭಿವಡ್ಢಂತಿ') ಎಂಬ ಇಂಗಿತವನ್ನು ಸೂಚಿಸಿದ್ದಾರೆ. ಧರ್ಮಚಕ್ರವು ತಿರುಗಬೇಕಾದುದು ಕುಶಲ ಕಡೆಗೆ (ಎಂದರೆ ಪ್ರದಕ್ಷಿಣಾ ಕ್ರಮದಲ್ಲಿ); ಅಕುಶಲದ ಕಡೆಗೆ ತಿರುಗವುದು ಭವಚಕ್ರ. (ಅಪ್ರಾದಕ್ಷಿಣ್ಯ ಕ್ರಮದಲ್ಲಿ). ಧರ್ಮದ ವಿಚಾರವಾಗಿ ಅಲಸಿಕೆಯಿಲ್ಲದಿರುವವನ್ನು ಬುದ್ಧನು 'ಧರ್ಮಧರ' ನೆಂದು ಕರೆದಿದ್ದಾನೆ ('ಸ ವೇ ಧಮ್ಮಧರೋ ಹೋತಿ ಯೋ ಧಮ್ಮಂ ನ ಪ್ಪಮಜ್ಜತಿ', ಧಮ್ಮಪದ, ೧೯, ೪) ಧರ್ಮದೊಂದಿಗೆ ಸತ್ಯ, ಅಹಿಂಸೆ, ಸಂಯಮ, ದಮಗಳು ಸೇರಿದರೆ ಅವನು ಸ್ಥವಿರನೆನಿಸುತ್ತಾನೆಂಬ ಒಕ್ಕಣೆಯೂ ಇರುವುದು ಸ್ವಾರಸ್ಯವಾಗಿದೆ (ಅಲ್ಲಿಯೇ, ೧೯-೬), ಇಲ್ಲಿ ಧರ್ಮವನ್ನು ಸತ್ಯಮೊದಲಾದುಗಳಿಂದ ಬೇರೆಯಾಗಿ ಕಾಣಿಸಿದ್ದಾರೆ. ಇಲ್ಲಿ ಧರ್ಮವೆಂದರೆ ಕುಶಲವನ್ನು ಸಾಧಿಸುವ ಸಂಕಲ್ಪ, ವೀವೇಕ, ಪ್ರಜ್ಞೆ.

ಧರ್ಮವೆಂದರೆ ಆಧ್ಯಾತ್ಮಪ್ರವೃತ್ತಿಯೆಂಬುದೂ ಬುದ್ಧವಚನದಲ್ಲಿದೆ. ಸುತ್ತನಿಪಾತದಲ್ಲಿ ದಾನ, ಧರ್ಮಚರ್ಯೆ, ಬಂಧುಗಳೊಂದಿಗೆ ಒಡನಾಟ, ನಿರ್ದುಷ್ಟವಾದ ಕರ್ಮ; ಪಾಪಕರ್ಮಗಳಿಂದ ವಿರತಿ, ಮದ್ಯಪಾನ ಮಾಡದಿರುವುದು, ಧರ್ಮದಲ್ಲಿ ಅಪ್ರಮಾದ; ಇದ್ದದ್ದರಲ್ಲಿ ತೃಪ್ತಿ, ಒಳ್ಳೆಯದನ್ನು ಮಾಡಿದೆನೆಂಬ ಸಮಾಧಾನ, ಕಾಲದಲ್ಲಿ ಧರ್ಮಶ್ರವಣ; ಕ್ಷಾಂತಿ, ಕಾಲದಲ್ಲಿ ಧರ್ಮವಿಚಾರ ಮಾಡುವುದು ಇವೆಲ್ಲ ಉತ್ತಮವಾದ ಮಂಗಳಗಳೆಂದು ಹೇಳಿದೆ (ಮಹಾಮಂಗಳಸುತ್ತ, ಚೂಲಗವಗ್ಗ, ೪) ಇಲ್ಲಿ 'ಧಮ್ಮಚರಿಯಾ', 'ಅಪ್ಪಮಾದೋ ಚ ಧಮ್ಮೇಸು', 'ಧಮ್ಮಸವಣಂ', 'ಧಮ್ಮಸಾಕಚ್ಛಾ' ಎಂಬ ಮಾತುಗಳೆಲ್ಲ ಅಧ್ಯಾತ್ಮಪರವಾದುವೇ. ಧರ್ಮಚರ್ಯೆಯೇ ಬ್ರಹ್ಮಚರ್ಯೆ ಎಂದು ಹೇಳಿರುವುದೂ ಇದೆ (ಕಪಿಸುತ್ತ, ೧೮); ಹಳೆಯಕಾಲದ ಬ್ರಾಹ್ಮಣರು ಬದುಕುವ ಬಗೆಯನ್ನು ಅರಿತಿದ್ದುದನ್ನು ಬುದ್ಧನು ಬ್ರಾಹ್ಮಧರ್ಮವೆಂದೇ ಕರೆದು ಹೊಗಳಿದ್ದಾನೆ ('ಪೋರಾಣಾನಂ ಬ್ರಾಹ್ಮಣಾನಂ ಬ್ರಾಹ್ಮಣಧಮ್ಮೇತಿ', ಸುತ್ತನಿಪಾತ, ಚೂಲವಗ್ಗ, ಬ್ರಾಹ್ಮಣಧಮ್ಮಿಕ ಸುತ್ತ, ೧) 'ಅವರನ್ನು ಯಾವ ಕಾರಣಕ್ಕಾದರೂ ದೂರಲಾಗುತ್ತಿರಲಿಲ್ಲ,

ಅವರನ್ನು ಸೋಲಿಸುವುದೂ ಸಾಧ್ಯವಿರಲಿಲ್ಲ; ಧರ್ಮ ಅವರನ್ನು ಕಾಪಾಡುತ್ತಿದ್ದಿತು' (ಅವಜ್ಞಾ ಬ್ರಾಹ್ಮಣಾ ಆಸುಂ ಅಜೇಯ್ಯಾ ಧಮ್ಮರಕ್ಖಿತಾ, ೫)

ಮಹಾವೀರ ಹೇಳಿದಂತೆಯೇ ಬುದ್ಧನೂ 'ಧರ್ಮವನ್ನು ಅರಿತವನನ್ನು ದೇವತೆಗಳು ಕೂಡ ಪೂಜಿಸುತ್ತಾರೆ' ('ಯಸ್ಮಾ ಹಿ ಧಮ್ಮಂ ಪುರಿಸೋ ವಿಜಜ್ಞಾ, ಇಂದವಂ ನಂ ದೇವತಾ ಪೂಜಯೇಯ್ಯ' ನಾವಾಸುತ್ತ), ಎಂದೂ 'ಆರ್ಯರಿಂದುಪದಿಷ್ಟವಾದ ಧರ್ಮದಲ್ಲಿ ಮೈ, ಮನಸ್ಸು, ಮಾತುಗಳಿಂದ ತೊಡಗಿರುವವರು ಉತ್ತಮರು' (ಸುತ್ತನಿಪಾತ, ೨೧, ಕಿಂಸೀಲಸುತ್ತ, ೭) ಎಂದೂ ಹೇಳಿದ್ದಾನೆ. ಇಲ್ಲಿ ಧರ್ಮವೆಂದರೆ ಸಾಧುಸತ್ಪುರುಷರ ಪರಂಪರೆಯಿಂದ ಬಂದ ಆಚಾರಸಂಹಿತೆಯೆಂಬ ಅರ್ಥವನ್ನು ವ್ಯಾಖ್ಯಾನಕಾರರು ಹೊರಡಿಸುತ್ತಾರೆ (ಅನುಸ್ಸವ, ಇತಿಹ-ಇತಿಹ-ಪರಂಪರಾಪಿಟಕಸಂಪದಾ ಧಮ್ಮ', ಮಜ್ಝಿಮನಿಕಾಯ ೧,೫೨೦) ಇದೇ ಮುಂದೆ ವೈಶೇಷಿಕ, ಮೀಮಾಂಸಾದರ್ಶನಗಳಲ್ಲಿ ಅಭ್ಯುದಯ ನಿಃಶ್ರೇಯಸಗಳಿಗೆ ಕಾರಣವಾಗುವ ಧರ್ಮವೆಂಬ ಕಲ್ಪನೆಗೆ ಎಡೆ ಮಾಡಿ ಕೊಟ್ಟಿತು.

ಉಪನಿಷತ್ತುಗಳಲ್ಲಿ 'ಸತ್ಯಂ ವದ', 'ಧರ್ಮಂ ಚರ' ಎಂಬ ಆದೇಶ ಮೈದಳೆದದ್ದನ್ನೇ ಬುದ್ಧನು 'ಅರಿಯಪ್ಪವೇದಿತಂ ಧಮ್ಮಂ', 'ಇಸಿಪ್ಪವೇದಿತಂ ಧಮ್ಮಂ' ಎಂದರೆ ಆರ್ಯರು ಹೇಳಿದ ಧರ್ಮ, ಋಷಿಗಳು ಹೇಳಿದ ಧರ್ಮ)ಎಂದು ಬಣ್ಣಿಸಿದನು. ಉಪನಿಷತ್ತುಗಳೇ ಬೌದ್ಧ ಧರ್ಮಕ್ಕೆ ಮೂಲವೆಂಬುದೂ ಆ ಕಾರಣದಿಂದಲೇ ಅದು ಪ್ರಮಾಣವೆಂಬುದೂ ಸುಪ್ರಸಿದ್ಧ ಮೀಮಾಂಸಕರಾದ ಕುಮಾರಿಲಭಟ್ಟರ ಮಾತುಗಳಿಂದ ಸ್ಪಷ್ಟವಾಗುತ್ತದೆ (ತಂತ್ರವಾರ್ತಿಕ 'ವಿಜ್ಞಾನಮಾತ್ರಕ್ಷಣಭಂಗುರ ನೈರಾತ್ಮ್ಯಾದಿವಾದಾನಾಮಪಿ ಉಪನಿಷತ್ ಪ್ರಭವತ್ವಂ ವಿಷಯೇಷ್ವಾತ್ಯಂತಿಕಂ ರಾಗಂ ನಿವರ್ತಯಿತುಂ ಇತ್ಯುಪಪನ್ನಂ ಸರ್ವೇಷಾಂ ಪ್ರಾಮಾಣ್ಯಂ') ಬುದ್ಧನು ಧರ್ಮವನ್ನು ಸನಾತನವನ್ನು ಬಣ್ಣಿಸಿದ್ದನ್ನೂ ('ಏಸ ಧಮ್ಮೊ ಸನಂತನೋ') ಧರ್ಮವನ್ನರಿತವನು ವೇದವನ್ನು ತಿಳಿದವನೆಂದು ಹೇಳಿದ್ದನ್ನೂ 'ಧಮ್ಮಂ ಜಾನಾತಿ ವೇದಗೂ') ಈ ಸಂದರ್ಭದಲ್ಲಿ ಗಮನಿಸಬೇಕು.

ಹೀಗೆ ಧರ್ಮದ ಪರಿಕಲ್ಪನೆ ನಮ್ಮ ನಾಡಿನ ಅನಾದಿಕಾಲದಿಂದ ಸಾರೋದ್ಧಾರವಾಗಿ ಬೆಳೆದುಬಂದಿದೆ. ಸಿದ್ಧಾಂತಗಳು ವೈವಿಧ್ಯವಾಗಲಿ, ದರ್ಶನಗಳ ವೈಷಮ್ಯವಾಗಲಿ, ಮತಪ್ರಕ್ರಿಯೆಗಳ ಗೊಂದಲವಾಗಲಿ ಧರ್ಮದ ಸ್ವರೂಪವನ್ನಾಗಲಿ, ಪ್ರಯೋಜನವನ್ನಾಗಲಿ, ಅಗತ್ಯವನ್ನಾಗಲಿ ಅಲ್ಲಗಳೆದಿಲ್ಲ. ದರ್ಶನದ ವಿವರಗಳು ಬಹುಮಟ್ಟಿಗೆ ಬೌದ್ಧಿಕ ಚಿಂತನೆಗಳು, ವಿಚಾರಲಹರಿಗಳು. ಬದುಕನ್ನು ತಿದ್ದುವ, ಸಾರ್ಥಕಗೊಳಿಸುವ ಕೆಲಸ ಧರ್ಮದ್ದು; ಇದು ಯಾವ ದರ್ಶನಕ್ಕೆ ತಾನೆ ಬೇಡ ? ಹೇಗೆ ತಾನೆ ಬೇರೆಯಾದೀತು ? ಧರ್ಮದ ಕಲ್ಪನೆಯಲ್ಲಿ ದೇವರೂ ಮುಖ್ಯವಲ್ಲವೆಂಬುದನ್ನು ವೈದಿಕರಾದ ಮೀಮಾಂಸಕರೇ

ಸಿದ್ಧಪಡಿಸಿದರು. ಧರ್ಮಕ್ಕೂ ದೇವರಲ್ಲಿರುವ ನಂಬಿಕೆಗೂ ಏನೇನೂ ಸಂಬಂಧವಿಲ್ಲವೆಂಬುದೂ ಸ್ಪಷ್ಟವಾಗಿದೆ. ರಾಮಾಯಣ, ಮಹಾಭಾರತಗಳಲ್ಲಿ ಬರುವ ಧರ್ಮನಿರೂಪಣೆಯಲ್ಲಿ ಆಸ್ತಿಕ್ಯಬುದ್ಧಿ ಎಂಬುದೇನು ಸೇರಿಬರುವುದಿಲ್ಲ; ಸ್ಮೃತಿಗ್ರಂಥಗಳೂ ದಶವಿಧ, ದ್ವಾದಶವಿಧ ಧರ್ಮಗಳಲ್ಲಿ ದೈವಶ್ರದ್ಧೆಯನ್ನಾಗಲಿ ದೈವಾರ್ಚನೆಯನ್ನಾಗಲಿ ಸೇರಿಸುವುದಿಲ್ಲ. ಸತ್ಯ, ಅಹಿಂಸೆ, ಶೌಚ, ಕ್ಷಮೆ, ದಾನ, ಮುಂತಾದ ಗುಣಗಳ ನಡುವೆ ದೇವರ ಪೂಜೆಯನ್ನು ಧರ್ಮಶಾಸ್ತ್ರಗಳೂ ಕಾಣಿಸುವುದಿಲ್ಲ ಎಂದಮೇಲೆ ಮತ ಪ್ರಕ್ರಿಯೆಗಳ ಸಂಕುಚಿತ ಚೌಕಟ್ಟು ಧರ್ಮದ್ದಲ್ಲ.

ಮನುಷ್ಯನನ್ನು ಅವನ ಬದುಕಿನಲ್ಲಿ ಎತ್ತಿ ನಿಲ್ಲಿಸುವುದು ಧರ್ಮ; ಮಾತಿನ ಮೂಲಾರ್ಥವೂ, ಅದೇ, ಮಥಿತಾರ್ಥವೂ ಅದೇ. ದೇಶ, ಕಾಲ, ಸಂದರ್ಭಗಳನ್ನು ಮೀರಿದ ಕಲ್ಪನೆ ಅದು. ಯಾವ ಸಂಸ್ಕೃತಿಯಲ್ಲಾದರೂ ಅದರ ಪಾತ್ರವಿದ್ದೇ ಇರುತ್ತದೆ; ಅದರ ಅಗತ್ಯವನ್ನು ಗಮನಿಸಿಯೇ ಇರುತ್ತಾರೆ. ಅದರ ಸ್ವರೂಪವಾಗಲಿ, ಸ್ವಭಾವವಾಗಲಿ ಅಷ್ಟೇನು ಭಿನ್ನವಾಗುವುದೂ ಇಲ್ಲ. ಇದೇ ಧರ್ಮದ ಕಲ್ಪನೆಯ ಸ್ವಾರಸ್ಯ.

ಷಡ್ದರ್ಶನಗಳು

ವೈ. ನಾಗೇಶ ಶಾಸ್ತ್ರಿ

ದರ್ಶನವೆಂದರೆ ನೋಡುವಿಕೆ ಎಂದು ಅರ್ಥ-ಶ್ರುತಿ, ಸ್ಮೃತಿ, ಆಗಮ-ಇವುಗಳ ಯುಗವಾದಮೇಲೆ ದರ್ಶನಯುಗ ಆರಂಭವಾಯಿತು. ಶ್ರುತಿ ಎಂದರೆ ಕೇಳಿದ್ದು; ಸ್ಮೃತಿ ಎಂದರೆ ಕೇಳಿದ್ದನ್ನು ತಲೆಯಲ್ಲಿ ತಾಳಿದ್ದು; ಆಗಮವೆಂದರೆ ಅನೂಚಾನವಾಗಿ, ಅವ್ಯಾಹತವಾಗಿ ಒಬ್ಬನಿಂದ ಒಬ್ಬನಿಗೆ ಪ್ರಾಪ್ತವಾದದ್ದು. ದರ್ಶನವೆಂದರೆ ಕೇಳಿದ್ದನ್ನು, ಕೇಳಿ ತಾಳಿದ್ದನ್ನು, ಪರಂಪರಾನುಗತವಾಗಿ ಪ್ರಾಪ್ತವಾದದ್ದನ್ನು ಸ್ವಬುದ್ಧಿ, ಸ್ವವಿಮರ್ಶೆಗಳಿಂದ ನೋಡುವಿಕೆ.

ಭಾರತದಲ್ಲಿ ಬುದ್ಧನ ಅವತಾರವಾಗುವ ಮುನ್ನ ವೈದಿಕ ಧರ್ಮದಲ್ಲಿ ಬುದ್ಧಿ ಶ್ರದ್ಧೆಯ ಅಂಕಿತದಲ್ಲಿತ್ತು. ಶ್ರದ್ಧೆಗಿದ್ದ ಪ್ರಾಧಾನ್ಯ ಬುದ್ಧಿಗಿದ್ದಿಲ್ಲ. ವೇದಪ್ರತಿಪಾದಿತವಾದ ಯಜ್ಞ ಯಾಗಾದಿಗಳು ಒಬ್ಬನಿಗೆ ಒಪ್ಪಿತವಿರಲಿ ಒಪ್ಪಿತವಿರದಿರಲಿ, ಮಾಡಲೇಬೇಕಾದ 'ವಿಧಿ' ಎಂಬ ನಿಯಂತ್ರಣವಿತ್ತು. ವೈದಿಕ ಜ್ಞಾನವನ್ನು ವಿಮರ್ಶಿಸುವ ಅಧಿಕಾರವಾಗಲಿ ಯೋಗ್ಯತೆಯಾಗಲಿ ಯಾರಿಗೂ ಇರಲಿಲ್ಲ. ವಿಧಿ-ನಿಷೇಧಗಳನ್ನು ಪ್ರಭುಸಮ್ಮಿತವಾಗಿ ನಿರೂಪಿಸುವ ವೇದಗಳಲ್ಲಿ ಶ್ರದ್ಧೆಯಿಟ್ಟು ಪ್ರವರ್ತಿಸುವುದೇ ಪ್ರಸ್ತುತವಾಗಿತ್ತು. ಅಂಧಶ್ರದ್ಧೆಯಲ್ಲಿ ಅಂಧಾನುಕರಣದಲ್ಲಿ ಧರ್ಮವೇ ಅಧರ್ಮವಾಗಿ ಪರಿಣಮಿಸಿದ ವಿಷಮಸ್ಥಿತಿಯಲ್ಲಿ ಬುದ್ಧನ ಅವತಾರವಾಯಿತು. ಸಂಗತ-ವಿಸಂಗತಗಳನ್ನು, ವಿಧಿ-ನಿಷೇಧಗಳನ್ನು, ಧರ್ಮ-ಅಧರ್ಮಗಳನ್ನು ನಿರ್ಣಯಿಸುವ ನಿಶ್ಚಿತಾಧಿಕಾರ ಸ್ವಾಂತರ್ಗತವಾದ ಬುದ್ಧಿಗೊಂದೇ ಇದೆ. ಬುದ್ಧಿಗೆ ದೋಷವೆನಿಸುವ ಹಿಂಸಾತ್ಮಕವಾದ ಯಜ್ಞಕ್ರಿಯೆಯನ್ನು ಶಾಸ್ತ್ರೋಕ್ತವೆಂದು ಸಂಭಾವಿಸುವುದಾಗಲಿ ಆಚರಿಸುವದಾಗಲಿ ಅಯೋಗ್ಯವೆಂದೂ, ಪಾಪಭೂಯಿಷ್ಠವಾದ ಕರ್ಮಗಳ ಆಚರಣೆಯಿಂದ, ಕರ್ಮಠವಾದ ಪೂಜಾವಿಧಾನಗಳಿಂದ ಸಂತೃಪ್ತನಾಗಿ ಸಂಪ್ರೀತನಾಗಿ ಫಲಪ್ರದಾತನಾದ ದೇವರು ಅಥವಾ ದೇವರುಗಳ ಇರುವಿಕೆಯನ್ನು ನಂಬಲು ಯಾವ ಆಧಾರವೂ ಇಲ್ಲವೆಂದು ಬುದ್ಧನು ಬೋಧಿಸತೊಡಗಿದನು. ಆಸ್ತಿಕರೆನ್ನುವವರು ಒಪ್ಪಿದ್ದ ವೇದಗಳನ್ನೂ ದೇವರನ್ನೂ ಬುದ್ಧನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ತನ್ನ ಬುದ್ಧಿವಾದವನ್ನೇ ಸರ್ವಸಮ್ಮತವಾಗುವಂತೆ ಮಂಡಿಸತೊಡಗಿದನು. ಅಂದಿನಿಂದ ಶ್ರದ್ಧೆ ಬುದ್ಧಿಯ ಅಂಕಿತಕ್ಕೆ ಬಂತು. ಬುದ್ಧನು ಮಾಡಿದ ಮಹೋಪಕಾರ ಇದೇ. ಬುದ್ಧಿಯ

ಬಲವನ್ನು ಭಾರತದಲ್ಲಿ ಬೆಳೆಸಿದ ಆದ್ಯ ಪುರುಷ ಬುದ್ಧನೇ. ಕರ್ಮದ ಕತ್ತಲೆಯಲ್ಲಿ ಧರ್ಮವನ್ನು ಹುಡುಕುತ್ತಿದ್ದ ಭಾರತಕ್ಕೆ ಬುದ್ಧಿಯ ಬೆಳಕನ್ನು ನೀಡಿದ ಮಹಾದಾನಿ ಆತ.

ಅದಾದ ತರುವಾಯ ಚಾರ್ವಾಕ ಬೌದ್ಧ, ಜೈನವಾದಗಳು ಪ್ರಬಲಿಸಿ ಆಸ್ತಿಕ್ಯದ ಅಸ್ತಿತ್ವವನ್ನೇ ತಮ್ಮ ಸುನಿಶಿತ ವಿಚಾರದಿಂದ ಅಳಿಸಲು ಉದ್ಯುಕ್ತವಾದಾಗ, ಆಸ್ತಿಕರು ಎಚ್ಚರಗೊಂಡರು. ಯಾವ ಬುದ್ಧಿಯ ಬಲದಮೇಲೆ, ಯಾವ ವಿಚಾರ ವೈಖರಿಯಮೇಲೆ ಬೌದ್ಧ, ಜೈನ, ಚಾರ್ವಾಕ ಮತಗಳು ಜನಮನಕ್ಕೆ ಗ್ರಾಹ್ಯವಾಗುವ ರೀತಿಯಲ್ಲಿ ಹಬ್ಬಿದವೋ ಹಾಗೆಯೇ ವೇದಪ್ರಮಾಣವನ್ನು ಹಿಡಿದೇ ವಿಚಾರ, ವಿಮರ್ಶೆ, ಬುದ್ಧಿಯ ಬಲಗಳನ್ನು ಬಿಡದೆ ಆಸ್ತಿಕರು[1] ನಾಸ್ತಿಕರನ್ನು ಎದುರಿಸಲಾರಂಭಿಸಿದರು. ಯುಕ್ತಿವಾದದ ಪ್ರಬಲತೆಯಿಂದ ನಾಸ್ತಿಕವಾದಿಗಳು ವೇದಗಳನ್ನೂ ವೇದಪ್ರಾಮಾಣ್ಯವನ್ನು ನಿರಾಕರಿಸಿದ್ದರು. ಅಂತಹ ಯುಕ್ತಿವಾದದ ಬಲದಿಂದಲೇ ವೇದ ಪ್ರಾಮಾಣ್ಯವನ್ನು ಆಸ್ತಿಕರು ನಿರೂಪಿಸತೊಡಗಿಸಿದರು[2]. ಈ ವಿಚಾರೋತ್ಕ್ರಾಂತಿಯ ಮೂಲ ರೂಪರೇಖೆ ಅಲ್ಲಲ್ಲಿ ವೇದಗಳಲ್ಲಿಯೂ ಇದೇ. ವೈದಿಕ ಋಷಿಗಳೂ ಈಶ್ವರನ ಅಸ್ತಿತ್ವದ ಬಗ್ಗೆ ಸಂದೇಹಿಸಿದ್ದಾರೆ. ಋಗ್ವೇದದಲ್ಲಿ "ಅಂತಹ ದೇವರೊಬ್ಬನು ಇರುವನೇ ಇಲ್ಲವೇ ?" ಎಂಬ ಅನುಮಾನಾರ್ಥಕವಾದ ಮಂತ್ರಗಳಿವೆ. ವೇದಾಂತಿಗಳು ಬಹುವಾಗಿ ಹೇಳುವ "ಚಕಿತಮಭಿದತ್ತೇ ಶ್ರುತಿರಪಿ" ಎಂಬ ಮಾತೂ ನಾಸದೀಯ ಸೂಕ್ತಗಳೂ ಭಗವದ್ವಿಷಕಯಾಗಿರುವ ಅನಿರ್ದಿಷ್ಟತ್ವವನ್ನು ನಿರೂಪಿಸುತ್ತವೆ. ಕೇನೋಪನಿಷತ್ ಪ್ರಶ್ನೋಪನಿಷತ್ತುಗಳಲ್ಲಿ ಈ ವಿಚಾರವೇ ಆದ್ಯಂತವಾಗಿ ಕಂಡುಬರುತ್ತದೆ. ತಾಮಸಕರ್ಮನಿರಸನಾತ್ಮಕವೂ, ಸಾತ್ವಿಕ ಜ್ಞಾನೋದ್ಬೋಧಕವೂ ಆದ ಉಪನಿಷತ್ತುಗಳಿಂದಲೇ ಬೌದ್ಧ ದರ್ಶನವು ಪ್ರಚೋದಿತವಾಗಿರಬೇಕು ಎಂಬ ಮಾತು ನಿರ್ಹೇತುಕವಲ್ಲ.

ಅಪರೋಕ್ಷವಾದ ಆತ್ಮಾನುಭೂತಿಯನ್ನು ಪರೋಕ್ಷಪ್ರಮಾಣಗಳಿಂದ ಅಳೆದು ನೋಡುವ, ತಿಳಿದು ನೋಡುವ ವಿಶೃಂಖಲಾ ವಿಮರ್ಶಾಶಕ್ತಿ ಮತ್ತು ವಿಮರ್ಶನಾ ಸಕ್ತಿ ಕ್ರಿ.ಪೂ. ಆರನೆಯ ಶತಮಾನದ ಸುಮಾರಿಗೆ ಆರಂಭವಾಗಿರಬೇಕು. ಇದನ್ನೇ ದರ್ಶನಯುಗವೆಂದು ಕರೆಯುತ್ತಿರುವುದು.

ಅಂತಹ ದರ್ಶನಗಳಲ್ಲಿ ಆರು ಮಾತ್ರ ಸರ್ವಸಮ್ಮತವಾದ ರೀತಿಯಲ್ಲಿ ಪ್ರಸಿದ್ಧಿಗೆ ಬಂದವು. ಗೌತಮನ ನ್ಯಾಯದರ್ಶನ, ಕಣಾದನ ವೈಶೇಷಿಕ ದರ್ಶನ, ಕಪಿಲನ ಸಾಂಖ್ಯ

---

1. "ಪ್ರಾಮಾಣ್ಯ ಬುದ್ಧಿರ್ವೇದೇಷು"-ಮನು
2. "ನಾಸ್ತಿಕೋವೇದನಿಂದಕಃ"-ಮನು
3. "The astika, or nastika character of a system does not depend on its positive or negative conclusions regarding the nature of the supreme spirit, but on the acceptance or non-acceptance of the authority of the Vedas."
-Indian Philosophy (Vol. II) By S. Radhakrishnan.

ದರ್ಶನ, ಪತಂಜಲಿಯ ಯೋಗದರ್ಶನ,ಜೈಮಿನಿಯ ಪೂರ್ವ ಮೀಮಾಂಸಾದರ್ಶನ, ಬಾದರಾಯಣನ ಉತ್ತರ ಮೀಮಾಂಸಾದರ್ಶನ-ಇವೇ ಷಡ್ದರ್ಶನಗಳು. ಇವು ಆರೂ ಆಸ್ತಿಕದರ್ಶನಗಳೇ. ವೇದ ವೇದಾಂತ ಪ್ರಾಮಾಣ್ಯದ ಮೇಲೆ ಯುಕ್ತಿಯುಕ್ತವಾಗಿ ವಾದಿಸ ಹೊರಟ, ಸಾಧಿಸ ಹೊರಟ ಈ ಷಡ್ದರ್ಶನಗಳೂ ಅಲ್ಲಲ್ಲಿ ತಮ್ಮ ಪೂರ್ವ ನಿರ್ದಿಷ್ಟ ಉದ್ದೇಶದಿಂದ ಭಿನ್ನವಾದ ಅಡ್ಡದಾರಿ ಹಿಡಿದಂತೆ ಕಾಣುತ್ತದೆ. ಎಲ್ಲ ದರ್ಶನಗಳೂ ಒಂದೇ ರೀತಿಯಾಗಿ ವೇದವನ್ನೂ ವೇದವೇದಾಂತ ಸಿದ್ಧಾಂತೋಕ್ತನಾದ[4] ಈಶ್ವರನನ್ನೂ ಒಪ್ಪಿಲ್ಲ. ವೈಶೇಷಿಕರು ಮತ್ತು ನೈಯಾಯಿಕರು ಯುಕ್ತಿಗಳಿಂದ ಈಶ್ವರನನ್ನು ಇರುವನೆಂದು ಸಾಧಿಸುತ್ತಾರೆ. ಸಾಂಖ್ಯರು ಈಶ್ವರನೇ ಇಲ್ಲವೆನ್ನುತ್ತಾರೆ. ಯೋಗಿಗಳು ವೇದಗಳನ್ನು ಬಿಟ್ಟು ಈಶ್ವರನನ್ನೇ ಇಲ್ಲವೆನ್ನುತ್ತಾರೆ. ಯೋಗಿಗಳು ವೇದಗಳನ್ನು ಬಿಟ್ಟು ಈಶ್ವರನನ್ನೇ ಪ್ರತ್ಯೇಕಿಸಿ ಹಿಡಿದು ವಾದಿಸುತ್ತಾರೆ. ಪೂರ್ವ ಮೀಮಾಂಸಾಕಾರರು ವೇದಗಳನ್ನು ಹಿಡಿದು ವಾದಿಸಿದರೂ ಈಶ್ವರನನ್ನು ಅಷ್ಟು ಹೆಚ್ಚಾಗಿ ಹಚ್ಚಿಕೊಂಡಿಲ್ಲ. ಈ ಎಲ್ಲ ಲೋಪ ದೋಷಗಳನ್ನೂ ತಿದ್ದಿಕೊಂಡು ಉತ್ತರ ಮೀಮಾಂಸಾಕಾರರು ಶ್ರೌತಶ್ರದ್ಧೆಯಿಂದಲೂ ಬುದ್ಧಿಯಿಂದಲೂ ಸ್ವಯಮಾರ್ಜಿತ ಶಕ್ತಿಯಿಂದಲೂ ಯುಕ್ತಿಯಿಂದಲೂ ಈಶ್ವರನನ್ನು ನಿರ್ದಿಷ್ಟವಾಗಿ ಇರುವನೆಂದು ನಿಶ್ಚಯಿಸುವರು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತಾದಿ ಸಿದ್ಧಾಂತಗಳು ಉತ್ತರ ಮೀಮಾಂಸಾದರ್ಶನ ದರ್ಶನ ವಿಶೇಷಗಳು ಅಥವಾ ದರ್ಶನ ಪ್ರಭೇದಗಳು.

ಪರಸ್ಪರವಾಗಿ ತೋರಿಕೆಯಲ್ಲಿ ಒಂದಕ್ಕೊಂದು ವಿಭಿನ್ನವೂ, ವಿರುದ್ಧವೂ ಅನ್ನುವಂತೆ ಆರು ದರ್ಶನಗಳನ್ನು ಕಂಡರೂ ಸಮನ್ವಯ ದೃಷ್ಟಿಯಿಂದ ಸಮಾಲೋಚಿಸಿದಾಗ ಈ ಆರಕ್ಕೂ ಶೃಂಖಲಾನ್ಯಾಯ ಸಂಬಂಧವಿದ್ದಂತೆ ಕಾಣುವುದು ಅನಿವಾರ್ಯ. ಷಡ್ದರ್ಶನಗಳಿಗೂ ಸಾಮಾನ್ಯವಾದ ಸನ್ನಿಹಿತವಾದ ಸಂಬಂಧ ವಿಶೇಷಗಳನ್ನು ಈ ರೀತಿಯಾಗಿ ಸಂಗ್ರಹಿಸಬಹುದು.

ಈ ಆರೂ ಆಸ್ತಿಕದರ್ಶನಗಳೆನಿಸುವುದರಿಂದ ಈ ಆರಕ್ಕೂ ವೇದವೇ ಆಧಾರ. ಜ್ಞಾನಿಗಳ ಅನುಭವವೇ ಯುಕ್ತಿಗೆ ಒರೆಗಲ್ಲು. ಎಲ್ಲ ದರ್ಶನಗಳೂ ಅವೈದಿಕ ಮತಗಳಾದ ಜೈನ, ಬೌದ್ಧ ಚಾರ್ವಾಕಾದಿಗಳನ್ನು ಖಂಡಿಸುವದಕ್ಕೆ ತಲೆಯೆತ್ತಿದಂಥವುಗಳು. ಜಗತ್ತು ಕ್ಷಣಿಕ, ಅಸತ್ಯ ಮತ್ತು ಅನಿತ್ಯವೆಂಬುದು ಬೌದ್ಧರ ವಾದವಾದರೆ ಪ್ರಪಂಚವು ಸತ್ಯವೆಂಬುದು ದರ್ಶನಗಳ ವಾದ.[5] ಜಡಜಗತ್ತಿನ ವಿಮರ್ಶೆಗೆ ತೊಡಗಿದ ಕಣಾದನ ವೈಶೇಷಿಕ ದರ್ಶನ

---

4. ವೇದಸಿದ್ಧಾಂತಯೋರೈಕ್ಯಂ ಏಕಾರ್ಥ ಪ್ರತಿಪಾದನಾತ್'' - ಸಿದ್ಧಾಂತ ಶಿಖಾಮಣಿ

5. ಶಂಕರ ಭಗವತ್ಪಾದರು ಜಗನ್ಮಿಥ್ಯಾವಾದಿಗಳಾದರೂ ಅವರು 'ಮಿಥ್ಯಾ' ಪದ ಪ್ರಯೋಗದ ಅರ್ಥವೇ ಬೇರೆ. ಜಗತ್ತನ್ನು ವ್ಯಾವಹಾರಿಕ ಸತ್ಯವೆಂದು ಅದ್ವೈತಿಗಳೂ ಸ್ವೀಕರಿಸಿದ್ದಾರೆ.
''ಋತಂ ಸತ್ಯಂ ಪರಂಬ್ರಹ್ಮ ಪುರುಷಂ ಕೃಷ್ಣ ಪಿಂಗಲಂ।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈನಮಃ॥''
ಎಂಬ ತೈತ್ತಿರೀಯ ಅರಣ್ಯಕದ ಈ ಸೂಕ್ತಿಯಲ್ಲಿ ಬರುವ 'ಋತಂ ಸತ್ಯಂ' ಎಂಬ ಎರಡು ಪದಗಳಿಗೆ ಋತಂ ಎಂದರೆ ವ್ಯಾವಹಾರಿಕ ಸತ್ಯರೂಪವಾದ ಜಗತ್ತೆಂತಲೂ, ಸತ್ಯಂ ಎಂದರೆ ಪಾರಲೌಕಿಕ ಸದ್ರೂಪಿಯಾದ ಬ್ರಹ್ಮವೆಂತಲೂ ಅರ್ಥಮಾಡುತ್ತಾರೆ.

ಅಣುಗಳ ಸಂಯೋಗ ವಿಯೋಗ ವಿಶೇಷವೇ ದೃಗ್ಗೋಚರವಾಗುತ್ತಿರುವ ಜಗತ್ತೆಂದಿತು. ಅದ್ವೈತಾದಿ ದರ್ಶನಗಳು ಪ್ರಕೃತಿಯನ್ನು ಮಾಯೆಯೆಂದು ಕರೆದವು. ಇದಕ್ಕೆ 'ಮಾಯಾಂತು ಪ್ರಕೃತಿಂ ವಿದ್ಧಿ ಮಾಯಿನಂತು ಮಹೇಶ್ವರಂ' - ಎಂಬ ಶ್ವೇತಾಶ್ವತರ ಶ್ರುತಿಯೇ ಪ್ರಮಾಣ. ಈ ಷಡ್ದರ್ಶನಗಳು ಪ್ರಕೃತಿಯನ್ನು ಮಾಯೆಯೆಂದು ಕರೆದವು. ಇದಕ್ಕೆ 'ಮಾಯಾಂತು ಪ್ರಕೃತಿಂ ವಿದ್ಧಿ ಮಾಯಿನಂತು ಮಹೇಶ್ವರಂ' - ಎಂಬ ಶ್ವೇತಾಶ್ವತರ ಶ್ರುತಿಯೇ ಪ್ರಮಾಣ. ಈ ಷಡ್ದರ್ಶನಗಳ ಮೂಲಭೂತವಾದ ಏಕಮೇವ ಅದ್ವಿತೀಯವಾದ ಉದ್ದೇಶ- ಬಂಧ, ಬಂಧ ಕಾರಣ, ಮೋಕ್ಷ, ಮೋಕ್ಷೋಪಾಯಗಳ ನಿತಾಂತ ವಿಮರ್ಶೆ. ಕೆಲವು ದರ್ಶನಗಳು ಸದೇಹ ಮುಕ್ತಿ ಅಥವಾ ಜೀವನ್ಮುಕ್ತಿಯನ್ನೂ ಕೆಲವು ದರ್ಶನಗಳು ವಿದೇಹ ಮುಕ್ತಿಯನ್ನೂ ಸಾಧುವೆಂದು ಸಾಧಿಸಿವೆ. ಹೊಸದಾಗಿ ಹುಟ್ಟಿದ್ದೇನೆಯೆಂಬುವವನೂ, ಸತ್ತಮೇಲೆ ಇನ್ನೇನೂ ಇಲ್ಲಯೆಂಬುವವನೂ ದಾರ್ಶನಿಕರ ದೃಷ್ಟಿಯಲ್ಲಿ ಅವೈದಿಕನೇ ! ನಾಸ್ತಿಕನೇ! 'ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ', ಎಂದು ಎಲ್ಲ ಜೀವಿಗಳನ್ನೂ ಅಮೃತಪುತ್ರರೆಂದು ಉಪನಿಷದ್ವಾಣಿ ಸಂಬೋಧಿಸುತ್ತಿದೆ. ಆತ್ಮದ ಅಥವಾ ಜೀವಿಯ ಜರಾಮರಣರಾಹಿತ್ಯವನ್ನು ಎಲ್ಲ ದರ್ಶನಗಳೂ ಬಹಳವಾಗಿ ಒಪ್ಪಿವೆ. ಅಜ್ಞಾನವೇ ದುಃಖಹೇತುವಾದ ಸಂಸಾರದ ಬೀಜ. ಜ್ಞಾನವೇ ದುಃಖೋಪಶಮನಕ್ಕೂ, ಬಂಧನಿವಾರಣಕ್ಕೂ ಕಾರಣ. ಪರೋಕ್ಷ ಪ್ರಮಾಣ ಅಗತ್ಯವಾದರೂ ಅಪರೋಕ್ಷಾನು ಭೂತಿಯೂ, ಸ್ವಸಂವೇದ್ಯವೂ ಅಂತರ್ಮುಖ ಸಮಾರಾಧ್ಯವೂ ಆದ ಸಾಕ್ಷಾತ್ಕಾರವೇ ಸತ್ಯವಾದ ಸಿದ್ಧಿ ಎಂಬುದೇ ಸರ್ವದರ್ಶನಗಳ ಸಿದ್ಧಾಂತ. ಬುದ್ಧಿ ಶ್ರದ್ಧೆಗಳೆರಡೂ ಸಿದ್ಧಿಗೆ ಅತ್ಯಗತ್ಯವೆಂಬುದು ದಾರ್ಶನಿಕರ ವಾದವಿಧಾನ. ತನ್ನೊಳಗೆ ಹೊಳೆದದ್ದನ್ನು ತಿಳಿದು ನೋಡುವ ಕ್ರಮವಿದು. ಅರಿವಿನಿಂದ ಅನುಭವವನ್ನೂ ಅನುಭವದಿಂದ ಅರಿವನ್ನೂ ಬೆಳೆಸಿಕೊಳ್ಳುವ ರೀತಿಯಿದು.

ಈ ಆರು ದರ್ಶನಗಳನ್ನು ಮೂರು ಗುಂಪುಗಳಾಗಿ ವಿಂಗಡಿಸುವ ಕ್ರಮ ದರ್ಶನಾಭ್ಯಾಸಿಗಳಲ್ಲಿ ರೂಢಿಯಲ್ಲಿದೆ. ನ್ಯಾಯ, ವೈಶೇಷಿಕ ದರ್ಶನಗಳದೊಂದು ಗುಂಪು; ಸಾಂಖ್ಯ, ಯೋಗ ದರ್ಶನಗಳದೊಂದು ಗುಂಪು; ಪೂರ್ವೋತ್ತರ ಮೀಮಾಂಸಾದ್ವಯಗಳದೊಂದು ಗುಂಪು.

೧. ನ್ಯಾಯದರ್ಶನ

"ಗೌತಮೋಕ್ತ ನ್ಯಾಯವು ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅವಯವ, ತರ್ಕ, ನಿರ್ಣಯ ವಾದ, ಜಲ್ಪ, ವಿತಂಡ, ಹೇತ್ವಾಭಾಸ, ಛಲ, ಜಾತಿ ನಿಗ್ರಹ, ಸ್ಥಾನಗಳೆಂಬ ಷೋಡಶ ಪದಾರ್ಥಂಗಳಂ ನಿರೂಪಿಸುತ್ತಲೀ ಪ್ರಪಂಚಕ್ಕೆ ಪರಮೇಶ್ವರ ಕರ್ತೃಕಮಂ ನಿಶ್ಚಯಿಸುವುದು."

ವಿವೇಕ ಚಿಂತಾಮಣಿ

೨. ವೈಶೇಷಿಕ ದರ್ಶನ

"ಕಾಣಾದವೆಂಬ ವೈಶೇಷಿಕ ಶಾಸ್ತ್ರವೇ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ ಸಮವಾಯ ಅಭಾವಗಳೆಂಬ ಪದಾರ್ಥ ಸಪ್ತಕಮಂ ವಿವರಿಸಿ ವಿಭಾಗಿಸುತಿರ್ಕುಂ"

-ವಿವೇಕ ಚಿಂತಾಮಣಿ

ನ್ಯಾಯ ವೈಶೇಷಿಕ ದರ್ಶನಗಳು ಎರಡೂ ಭಿನ್ನದರ್ಶನಗಳಾಗಿದ್ದು ಸುಮಾರು ಹತ್ತನೇ ಶತಮಾನದಿಂದ ಒಂದಾಗಿ ಹೊಂದಿಕೊಂಡವು.

ನ್ಯಾಯ ದರ್ಶನಗಳು ನ್ಯಾಯ ಸೂತ್ರಗಳನ್ನು ರಚಿಸಿದವರು ಗೌತಮರು. ವಿಚಾರ ಮತ್ತು ವಿಚಾರಿಸತಕ್ಕ ಕ್ರಮವನ್ನು ಕುರಿತು ಸಕ್ರಮವಾಗಿ ನ್ಯಾಯ ಸೂತ್ರಗಳಲ್ಲಿಯೂ ಆ ಸೂತ್ರಾಧಾರದ ಮೇಲೆ ವೈಯಾಯಿಕ ಪ್ರಮುಖರಾದ ವಾತ್ಸಾಯನ, ಪ್ರಶಸ್ತಪಾದ, ಉದ್ಯೋತ್ಕರ, ಉದಯನ, ವಾಚಸ್ಪತಿಮಿಶ್ರ, ಗದಾಧರಭಟ್ಟಾಚಾರ್ಯ, ಗಂಗೇಶೋಪಾಧ್ಯಾಯಾದಿಗಳ ಸೂತ್ರಭಾಷ್ಯ ಮತ್ತು ವೃತ್ತಿಗಳಲ್ಲಿ ವಿಷಯಪ್ರತಿಪಾದನೆಯಿದೆ. ನ್ಯಾಯವೆಂದರೆ ಬುದ್ಧಿಯ ಒರೆಗಲ್ಲಿನಮೇಲೆ ಬಂಗಾರವೆನಿಸಿದ್ದನ್ನು ತಿಕ್ಕಿನೋಡಿ ಬಂಗಾರವೇ ಎಂದು ನಿರ್ಣಯಿಸತಕ್ಕ ಯುಕ್ತಿಯುಕ್ತವಾದ ರೀತಿ. ಇದಕ್ಕೆ ಅನ್ವೀಕ್ಷಣ[6] ಎಂಬ ಪರ್ಯಾಯನಾಮವೂ ಇದೆ. ಆಮೂಲಾಗ್ರವಾಗಿ ವಿಮರ್ಶಿಸಿ ನೋಡುವಿಕೆಗೇ ಆನ್ವೀಕ್ಷಣವೆನ್ನುತ್ತಾರೆ. ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಬಂಧ-ಮೋಕ್ಷಗಳ ವಿಷಯವನ್ನೇ ಚರ್ವಿತಚರ್ವಣಗೊಳಿಸಲು ನ್ಯಾಯದರ್ಶನ ಹುಟ್ಟಿಲ್ಲ ವೆಂತಲೂ, ನ್ಯಾಯದರ್ಶನದ ಮುಖ್ಯವಾದ ಉದ್ದೇಶ ಮತ್ತು ನಿರ್ದೇಶ ತಾತ್ವಿಕ ವಿಮರ್ಶೆಯೇ ಯೆಂದು ಪ್ರಬಲ ನೈಯಾಯಿಕರಾದ ವಾತ್ಸಾಯನ ಉದ್ಯೋತ್ಕರಾದಿಗಳ ವಾದ. ಜ್ಞಾನ, ಜ್ಞಾತೃ, ಜ್ಞೇಯಾತ್ಮಕವಾದ ಸಚರಾಚರ ಸೃಷ್ಟಿಯನ್ನು ಕೆದಕಿ, ಬೆದಕಿ, ಪರೀಕ್ಷಿಸಿ ನೋಡುವಿಕೆಯ ಬುದ್ಧಿ ವೈಶಿಷ್ಟ್ಯವೇ ನ್ಯಾಯದರ್ಶನದ ವಿಶಿಷ್ಟತೆಯೆಂದು ವಾಚಸ್ಪತಿಯ ವಾದ.[8]

ವೈಶೇಷಿಕ ದರ್ಶನಕ್ಕೆ ಕಣಾದರೇ ಆದ್ಯ ಆಚಾರ್ಯರು. ವೈಶೇಷಿಕ ಶಬ್ದ ವಿಶೇಷವೆಂಬ ಶಬ್ದದಿಂದ ಸಿದ್ಧಿಸಿದೆ. ನ್ಯಾಯ ಸಿದ್ಧಾಂತ ಜ್ಞಾನವನ್ನು ವಿಮರ್ಶಿಸಿದಂತೆ ವೈಶೇಷಿಕ ಸಿದ್ಧಾಂತವು ಜ್ಞೇಯವಾದ ವಸ್ತುಗಳ ಮತ್ತು ವಾಸ್ತವಿಕ ವಿಷಯಗಳ ಲಕ್ಷಣ ವಿಶೇಷಗಳ ವಿಮರ್ಶೆಗೆ ತೊಡಗಿದೆ. ಚಾರಿತ್ರಿಕ ದೃಷ್ಟಿಯಿಂದ ನ್ಯಾಯದರ್ಶನಕ್ಕಿಂತಲೂ ವೈಶೇಷಿಕದರ್ಶನ

---

6. ಅನು + ಈಕ್ಷಣ=ಅನ್ವೀಕ್ಷಣ
7. "ಬುದ್ಧ್ಯಾ ಯದುಪಪನ್ನಂ ತತ್ಸರ್ವಂ ನ್ಯಾಯಮತಂ"

ಪ್ರಾಚೀನವೆಂಬ ಮಾತು ನಿರ್ವಿವಾದ. ಆದರೂ ಅಭ್ಯಾಸ ಕ್ರಮದಲ್ಲಿ ಪ್ರಥಮತಃ ನ್ಯಾಯವನ್ನೇ ಅಭ್ಯಾಸಮಾಡುವುದು ರೂಢಿಯಲ್ಲಿದೆ. ವಸ್ತು ವಿಗಿಂತಲೂ ವಸ್ತುವಿಷಯಕ ಜ್ಞಾನಕ್ಕೆ ಪ್ರಮುಖ ಸ್ಥಾನ ನೈಯಾಯಿಕರಿತ್ತಿದ್ದಾರೆ. ವಸ್ತುಗಳ ಅಣು ಸಂಯೋಜನೆಯ ಕ್ರಮ ವಿಶೇಷವನ್ನು ಅರಿಯುವ ಆಣವಿಕ ವಿಮರ್ಶೆಗೆ ಪ್ರಮುಖ ಸ್ಥಾನವನ್ನು ವೈಶೇಷಿಕರಿತ್ತಿದ್ದಾರೆ. ಅದಕ್ಕಾಗಿ ಸರ್ವಶಾಸ್ತ್ರಕ್ಕೂ ಆಧಾರಭೂತವಾದ ಶಬ್ದಶಾಸ್ತ್ರ ಹಾಗೂ ಬುದ್ಧಿ ಶಾಸ್ತ್ರಗಳ ಮೂಲಪುರುಷರಾದ ಪಾಣಿನೀ ಕಾಣಾದರನ್ನು :

''ಕಾಣಾದಂ ಪಾಣಿನೀಯಂಚ ಸರ್ವಶಾಸ್ತ್ರೋಪಕಾರಕಂ'

ಎಂದು ಶಾಸ್ತ್ರಕಾರರು ನಿರ್ವಚಿಸಿದ್ದಾರೆ.

ನ್ಯಾಯ ವೈಶೇಷಿಕ ದರ್ಶನಗಳನ್ನು ಸಮಾನ ತಂತ್ರಗಳೆಂದು ಕರೆದು ಈ ಎರಡು ದರ್ಶನಗಳನ್ನೂ ಒಂದಾಗಿ ಜೋಡಿಸಿದರು. ವಾತ್ಸಾಯನನ ನ್ಯಾಯ ಭಾಷ್ಯದಲ್ಲಿಯೂ ಇದು ಎದ್ದು ಕಾಣುತ್ತದೆ.

"The fusion of these two schools began early and seems to have been complete at the time of Nyaya Vartikka was written"

ಎಂದು ಜಾಕೋಬಿಯು ಹೇಳುವ ಮಾತೂ,

"The systems are indeed orthodox and admit the authority of the sacred scriptures, but they attack the problems of existence with human means, and scripture serves for all practical purposes but to lend sanctity to results which are achieved not only without its aid , but often in very dubious harmony with its tenets,".

ಎಂದು ಕೀತ್ ಹೇಳುವ ಮಾತು ಗಮನಾರ್ಹವಾಗಿವೆ. ನ್ಯಾಯವೈಶೇಷಿಕ ದರ್ಶನಗಳ ಸಾರವನ್ನು ಈ ರಿತಿಯಾಗಿ ಸಂಗ್ರಹಿಸಬಹುದು :

[8]''ಯಥಾರ್ಥ ಜ್ಞಾನಕ್ಕೆ ವಿಷಯವಾದ ಪದಾರ್ಥಗಳು ಅನೇಕ. ಅವೆಲ್ಲವೂ ಸತ್ಯ. ವಸ್ತುವು ಸತ್ಯವೆನ್ನಲು ಜ್ಞಾನವೇ ಪ್ರಮಾಣ. ಜ್ಞಾನದಲ್ಲಿ ಕಂಡುಬರುವ ಪ್ರಭೇದಕ್ಕನುಸಾರವಾಗಿ ವಸ್ತುವಿನಲ್ಲಿಯೂ ಪ್ರಭೇದಗಳಿರುವುವು. ಘಟವೆಂಬ ವಸ್ತುವನ್ನು ಉದಾಹರಣೆಗೆ ತೆಗೆದುಕೊಂಡರೆ ಘಟಜ್ಞಾನಕ್ಕೂ ಅದರ ರೂಪದ ಜ್ಞಾನಕ್ಕೂ, ಘಟಕ್ಕೆ ಸಂಭವಿಸುವ ಚಲನೆಯನ್ನು ಗ್ರಹಿಸುವ ಜ್ಞಾನಕ್ಕೂ, ಘಟಪರಮಾಣುಗಳನ್ನು ಇತರ ಪರಮಾಣುಗಳಿಂದ ಭಿನ್ನವನ್ನಾಗಿ ಮಾಡುವ ವಿಶೇಷದ ಜ್ಞಾನಕ್ಕೂ, ಇವುಗಳಿಗೆ ಪರಸ್ಪರ ಸಂಬಂಧವನ್ನುಂಟು

---

8. ಶ್ರೀ ರಾಘವೇಂದ್ರಾಚಾರ್ಯರ 'ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ'

ಮಾಡುವ ಸಮವಾಯಜ್ಞಾನಕ್ಕೂ, ಘಟಕಕ್ಕೆ ಇತರ ವಸ್ತುಗಳಿಂದಿರುವ ಭೇದ ಮುಂತಾದ ಅಭಾವದ ಜ್ಞಾನಕ್ಕೂ ಭೇದವಿರುವುದರಿಂದ ಘಟವೆಂಬ ವಸ್ತುವಿನಲ್ಲಿಯೂ ಈ ರೀತಿಯಾಗಿ ಪದಾರ್ಥ ಭೇದಗಳಿರುವುದೆಂದು ತಿಳಿಯಬೇಕು.

[9]ಈ ಸಪ್ತಪದಾರ್ಥಗಳು ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದವೆಂಬ ಪ್ರಮಾಣಗಳಿಗೆ ಗೋಚರಿಸುವುವು. ವಸ್ತುವಿರುವಂತೆ ಗ್ರಹಿಸುವ ಇಂದ್ರಿಯ ಮೊದಲಾದುವು ಪ್ರಮಾಣ. ಅವುಗಳಿಂದುತ್ಪನ್ನವಾದ ಜ್ಞಾನ ಪ್ರಮಿತಿಯು.

ಪ್ರಪಂಚದಲ್ಲಿ ಯಾವ ವಸ್ತುವೂ ಕ್ಷಣಿಕವಲ್ಲ. ವಸ್ತುಗಳಲ್ಲಿ ಕೆಲವು ನಿತ್ಯ; ಕೆಲವು ಅನಿತ್ಯ.

ಆತ್ಮನು ದ್ರವ್ಯರೂಪನು. ಇವನಲ್ಲಿ ಜ್ಞಾನ ಮುಂತಾದ ಗುಣಗಳಿರುವುವು. ಇವು ಸಂಸಾರ ಕಾಲದಲ್ಲಿ ಆತ್ಮನಲ್ಲಿ ಕಂಡುಬರುವುವು.

ಆತ್ಮನಿಗೆ ನಿತ್ಯಾನಿತ್ಯ ವಸ್ತುಗಳ ವಿವೇಕಜ್ಞಾನದಿಂದ ಆತ್ಯಂತಿಕ ದುಃಖನಿವೃತ್ತಿಯೆಂಬ ಮೋಕ್ಷವು ಸಂಭವಿಸುವುದು.

ಪ್ರತ್ಯಕ್ಷಾದಿ ಪ್ರಮಾಣಗಳಿಂದ ಚಾರ್ವಾಕ ಬೌದ್ಧ ದರ್ಶನಗಳು ಭಗವದಸ್ತಿತ್ವವನ್ನು ನಿರಾಕರಿಸಿದ್ದರೆ, ನ್ಯಾಯವೈಶೇಷಿಕ ದರ್ಶನಕಾರರು ಅನುಮಾನ ಪ್ರಮಾಣದ ಬಲದಮೇಲೆಯೇ ಈಶ್ವರನು ಅಸ್ತಿತ್ವವನ್ನು ನಿರ್ಧರಿಸುತ್ತಾರೆ. ಸೃಷ್ಟಿಯೆಂಬ ಈ ಮಹತ್ಕಾರ್ಯಕ್ಕೆ ಕಾರಣರೂಪನಾದ ಈಶ್ವರನೊಬ್ಬನಿದ್ದೇ ತೀರಬೇಕು. ಆತ್ಮಗಳು ಅನೇಕವೂ ಅನಂತವೂ ಆಗಿವೆ. ಜಗದ್ವ್ಯವಹಾರ ನಿಯಂತ್ರಣಕರ್ತನಾದ ಪರಮ ಆತ್ಮನೊಬ್ಬನಿದ್ದಾನೆ-ಎಂಬುದೇ ಅವರ ಕಾರ್ಯಕಾರಣವಾದ ಅಥವಾ ಅನುಮಾನಪ್ರಮಾಣದ ಅಂತಿಮ ಧ್ಯೇಯ.''

3. ಸಾಂಖ್ಯ ದರ್ಶನ

> ''ಸಾಂಖ್ಯವು ನಿತ್ಯನಿರ್ಲಿಪ್ತಾತ್ಮ ಸನ್ನಿಧಾನದಿಂ ಗುಣತ್ರಯಾತ್ಮಕ ಪ್ರಕೃತಿಕರ್ತೃಕ ಮಹದಾದಿ ಪಂಚವಿಂಶತಿ ತತ್ತ್ವಾತ್ಮಕ ಪ್ರಪಂಚವಾಗಿ ವ್ಯವಹರಿಸುವುದೇ ಸಂಸಾರವೆಂಬುದರಿಂ, ಸತ್ವಾದಿ ಗುಣತ್ರಯಾನುಕ್ರಮದಿಂದ ಶ್ಲೇಷ್ಮ ಪ್ರಕೃತಿ, ಪಿತ್ತ ಪ್ರಕೃತಿ, ವಾತಪ್ರಕೃತಿಗಳುಳ್ಳ ಶಾಂತಕ್ರೋಧ ಮೂಢತಾದಿ ಪ್ರಧಾನರಾದ ಉತ್ತಮ, ಮಧ್ಯಮ, ಅಧಮ ಪುರುಷತ್ರಯದ ವರ್ಣರೀತಿ ಮೊದಲಾದವುಗಳಂ ಭಾವಿಸುವುದು.''
>
> -ವಿವೇಕ ಚಿಂತಾಮಣಿ

ಸಾಂಖ್ಯಶಾಸ್ತ್ರದ ಕೆಲವು ಪ್ರಕ್ರಿಯೆಗಳು-ವೇದಗಳಲ್ಲಿ ದೃಗ್ಗೋಚರಿಸುವುದರಿಂದ ಅದು

---

9. ದ್ರವ್ಯ, ಗುಮ, ಕರ್ಮ, ಸಾಮಾನ್ಯ, ವಿಶೇಷ ಸಮವಾಯ, ಅಭಾವ.

ಸಿದ್ಧವಾಗುತ್ತದೆ. [10] ವೇದಗಳಲ್ಲಿ ಹಾಗೂ ಉಪನಿಷತ್ತುಗಳಲ್ಲಿ ವಿದಿತವಾದ ಈ ಶಾಸ್ತ್ರಕ್ಕೆ ಸ್ವತಂತ್ರ ರೂಪವನ್ನು ಕೊಟ್ಟು ಸಂಖ್ಯಾದರ್ಶನ ಸೂತ್ರಗಳನ್ನು ರಚಿಸಿದವನು ಕಪಿಲ. ಕಪಿಲನನ್ನು ಸಿದ್ಧನೆಂದು ಸಂಬೋಧಿಸಿ, ಆ ಕಪಿಲನೂ ತಾನೇ ಎಂದು ಶ್ರೀಕೃಷ್ಣನು ಹೇಳುವ ಮಾತು ಶ್ರೀಕೃಷ್ಣನಿಗೂ ಸಾಂಖ್ಯದಲ್ಲಿದ್ದ ಶ್ರದ್ಧೆಗೆ ಸಾಕ್ಷಿಯಾಗಿದೆ.

ಸಾಂಖ್ಯವೆಂಬ ಶಬ್ದವು, ಸಂಖ್ಯಾಶಬ್ದದಿಂದ ಸಿದ್ಧಿಸುತ್ತದೆ. ಸಂಖ್ಯೆಯೆಂದರೆ ಚರ್ಚೆಯೆಂದೂ, ವಿಚಾರಣೆಯೆಂದೂ, ಎಣಿಕೆಯೆಂದೂ ಅರ್ಥ. ತತ್ತ್ವಗಳನ್ನು ಎಣಿಸಿ, ವಿಂಗಡಿಸಿ ಅವುಗಳ ಸ್ವರೂಪವನ್ನು ನಿರ್ಣಯಿಸುವ ಶಾಸ್ತ್ರವೆಂದರ್ಥ.

> "ಸಂಖ್ಯಾ ಚರ್ಚಾ ವಿಚಾರಣಾ"
> "ಸಮ್ಯಗ್ವಿವೇಕೇನ ಆತ್ಮಕಥನಮ್"
> "ಶುದ್ಧಾತ್ಮ ತತ್ತ್ವ ವಿಜ್ಞಾನಂ ಸಾಂಖ್ಯಮಿತ್ಯಭಿಧೀಯತೆ"
> "ದೋಷಣಾಂಚ ಗುಣಾನಾಂಚ ಪ್ರಮಾಣಾನಾಂ ವಿಭಾಗತಃ।
> ಕಿಂಚಿದರ್ಥಂ ಅಭಿಪ್ರೇತ್ಯಸಾ ಸಾಂಖ್ಯೇತಿ ಉಪಧಾರ್ಯತಾಂ॥"

ಮುಂತಾದ ಪ್ರಾಮಾಣ್ಯ ವಾಕ್ಯಗಳಿಂದ ಸಾಂಖ್ಯಶಬ್ದದ ಸಾಧುತ್ವವೂ, ಅದರ ಉದ್ದೇಶವೂ ಸ್ಪಷ್ಟವಾಗುತ್ತದೆ. ಪಾಶ್ಚಾತ್ಯ ತತ್ತ್ವಜ್ಞಾನಿಯಾದ ಪೈಥಾಗರಸ್‌ನ ಮೇಲೆಯೂ ಭಾರತೀಯ ಸಾಂಖ್ಯ ಶಾಸ್ತ್ರವು ಪ್ರಭಾವ ಮೂಡಿಸಿದೆಯೆಂದು ವಿಂಟರ್‌ನಿಜ್ ಅಭಿಪ್ರಾಯ ಪಡುತ್ತಾನೆ.

> "In Kapila's doctrine for the first time in the history of the world, the complete independence and freedom of the human mind, its full confidence in its own powers, were exhibited".

ಎಂದು ರಿಚರ್ಡ್‌ಗಾರ್ಬ್ ಹೇಳುವ ಮಾತು ಗಮನಾರ್ಹವಾಗಿದೆ.

ಶೂನ್ಯವಾದಿಗಳಾದ ಬೌದ್ಧರು "ಸರ್ವಂ ಶೂನ್ಯಂ" ಎಂದು ವಾದಿಸಿದರೆ ಸಾಂಖ್ಯರು "ಸರ್ವಂ ಸತ್ಯಂ" ಎಂದು ಪ್ರತಿವಾದಿಸುತ್ತಾರೆ. ಪ್ರಪಂಚವು ಚೇತನಾಚೇತನಾತ್ಮಕವಾದದ್ದು. ಚೇತನಾಚೇತನಾತ್ಮಕವಾದ ಪ್ರಪಂಚದಲ್ಲಿ ಇಪ್ಪತ್ತೈದು ತತ್ತ್ವಗಳಿವೆ. ಅಸದ್ರೂಪವಾದ ಅವ್ಯಕ್ತದಿಂದ ಸದ್ರೂಪವಾದ ಜಗತ್ತು ಹುಟ್ಟಿತೆಂದು ಕೆಲವರೂ, ಸದ್ರೂಪವಾದ ಅವ್ಯಕ್ತದಿಂದ ಅಸದ್ರೂಪವಾದ ಜಗತ್ತು ಹುಟ್ಟಿತೆಂದು ಕೆಲವರೂ ವಾದಿಸುವುದನ್ನು ಸಾಂಖ್ಯರು ಖಂಡಿಸಿ ಸತ್ಪದಾರ್ಥದ ಕಾರಣದಿಂದಲೇ ಸದ್ರೂಪವಾದ ಕಾರ್ಯದ ಪರಿಣಾಮವೆಂದು ಸತ್ಕಾರ್ಯವಾದವನ್ನು ನಿರ್ಧರಿಸಿದ್ದಾರೆ. ಇಪ್ಪತ್ತೈದು ತತ್ತ್ವಗಳನ್ನು ಪ್ರಕೃತಿಯೆಂದೂ, ವಿಕೃತಿಯೆಂದೂ, ಪ್ರಕೃತಿ-ವಿಕೃತಿಯೆಂದೂ, ಪ್ರಕೃತಿ ವಿಕೃತಿಗಳೆರಡೂ ಅಲ್ಲದ್ದೆಂದೂ ಚತುರ್ವಿಧವಾಗಿ ವಿಭಜಿಸಿದ್ದಾರೆ. ಪ್ರಕೃತಿಯು ಇನ್ನೊಂದನ್ನು ಹುಟ್ಟಿಸುತ್ತದೆಯೇ ಹೊರತು

---

10. There is in detail, in the Samkhya little that cannot be found in the Upanishads in some place or other." -Keith

ತಾನು ಯಾವುದರಿಂದಲೂ ಹುಟ್ಟಿದ್ದಲ್ಲ. ಅದು ಎಲ್ಲದರ ತಾಯಿ; ಯಾರ ಮಗುವೂ ಅಲ್ಲ. ಪ್ರಕೃತಿ ಯಿರುವುದೂ, ಅದು ಪರಿಣಾಮವಾಗುವುದೂ ಪುರುಷನ ಭೋಗಕ್ಕಾಗಿಯೇ. ಪ್ರಕೃತಿ ಅಚೇತನ ಪದಾರ್ಥ. ಅದಕ್ಕೆ ತಾನಿದ್ದೇನೆ ಎನ್ನುವ ತಿಳಿವಳಿಕೆ ಇಲ್ಲ. ಸತ್ವರಜಸ್ತಮೋಗುಣಗಳಿಂದೊಡಗೂಡಿದ್ದು. ಪುರುಷನು ಚಿದ್ರೂಪಿ. ಚೈತನ್ಯರೂಪಿಯಾದ ಪುರುಷನ ಸಾನ್ನಿಧ್ಯದಿಂದ ಪ್ರಕೃತಿ ಅನಂತ ವಿಧವಾಗಿ ಪರಿಣಮಿಸಿದೆ. ಪ್ರಕೃತಿಯ ಸಂಗವೇ ಪುರುಷನ ದುಃಖ ಹೇತುವಾದ ಸಂಸಾರ ಬಂಧನ. ಪ್ರಕೃತಿಯ ಸಂಗದಿಂದ ದೂರ ಸರಿದು ನಿಸ್ಸಂಗಿಯಾದಾಗ ಪುರುಷನು ಮುಕ್ತನಾಗುತ್ತಾನೆ. ಪ್ರಕೃತಿಯಿಂದ ಪುರುಷನ ವಿಯೋಗವೇ ಮುಕ್ತಿ. ಮುಕ್ತಿಗೇ ಕೈವಲ್ಯ ಅಥವಾ ಅಪವರ್ಗವೆಂದು ಹೆಸರು. ಶಾಸ್ತ್ರಜ್ಞಾನ, ವೈರಾಗ್ಯ, ಸ್ವಸದ್ಭಾವವೆಂಬ ವಿವೇಕಖ್ಯಾತಿಯಿಂದ ಪುರುಷನಿಗೆ ಅಪವರ್ಗ ಪ್ರಾಪ್ತಿಯಾಗುತ್ತದೆ. ಪ್ರಕೃತಿಯಂತೆ ಪುರುಷರೂ ಅನಂತರು. ಬಂಧಮೋಕ್ಷಗಳೆರಡೂ ಪ್ರಕೃತಿಗೆ ಸಂಬಂಧಿಸಿದವುಗಳು. ಬಂಧನದಲ್ಲಿ ಹಿಡಿದಿರುವ ಪ್ರಕೃತಿಯೇ ಪುರುಷನಿಗೆ ಮುಕ್ತಿಯನ್ನೂ ನೀಡುವುದು. ಪುರುಷನಿಂದ ಪ್ರಕೃತಿಗೆ ಉಪಕಾರವಾಗಲೀ ಉಪಯೋಗವಾಗಲೀ ಇಲ್ಲ. ಪ್ರಕೃತಿಯಂತೆ ಪುರುಷರೂ ಅನಂತರು. ಬಂಧಮೋಕ್ಷಗಳೆರಡೂ ಪ್ರಕೃತಿಗೆ ಸಂಬಂಧಿಸಿದವುಗಳು. ಬಂಧನದಲ್ಲಿ ಹಿಡಿದಿರುವ ಪ್ರಕೃತಿಯೇ ಪುರುಷನಿಗೆ ಮುಕ್ತಿಯನ್ನೂ ನೀಡುವುದು. ಪುರುಷನಿಂದ ಪ್ರಕೃತಿಗೆ ಉಪಕಾರವಾಗಲೀ ಉಪಯೋಗವಾಗಲೀ ಇಲ್ಲ. ಪ್ರಕೃತಿಯಿಂದ ಪುರುಷನಿಗೇ ಉಪಕಾರ. ಈ ಪ್ರಕೃತಿಯ ಮೇಲೆ ಪ್ರಭುವಾದ ಈಶ್ವರನೊಬ್ಬನಿಲ್ಲ. ಸೃಷ್ಟಿಗೆ ಈಶ್ವರನ ಅಗತ್ಯವಿಲ್ಲ. ಈಶ್ವರನೊಬ್ಬನಿರುವನೆಂದೂ ಅವನಿಂದ ಸೃಷ್ಟಿಯಾಯಿತೆಂದೂ ಒಪ್ಪಲು ಯಾವ ಪ್ರಮಾಣವೂ ಇಲ್ಲ. ಒಂದು ವೇಳೆ ಈಶ್ವರನಿದ್ದರೆ - ಅವನು ತನ್ನ ಯಾವ ಕೊರತೆ ತೀರಿಸಿಕೊಳ್ಳಲು ಈ ಪ್ರಪಂಚವನ್ನು ಸೃಷ್ಟಿಸಿದ ? ಯಾವ ಕೊರತೆಯಿದ್ದರೂ ಅವನು ಈಶ್ವರಪದವಾಚ್ಯನಾಗಲಾರ. ಸುಖದುಃಖಾತ್ಮಕವಾಗಿರುವ ಈ ಸೃಷ್ಟಿಯಿಂದ ಪ್ರಯೋಜನವೇನು ? ಪ್ರಯೋಜನವಿರುವುದಾದರೆ ಅದು ಯಾರಿಗೆ ? ಸೃಷ್ಟಿಸಿದ ಪ್ರಭುವಿಗಾ ಅಥವಾ ಸೃಷ್ಟಿಸಲ್ಪಟ್ಟ ಜೀವಿಗಳಿಗಾ ? ಪ್ರಯೋಜನವೇ ಇಲ್ಲವೆಂದರೆ ಸೃಷ್ಟಿ ಸಲ್ಪಟ್ಟ ಜೀವಿಗಳಿಗಾ ? ಪ್ರಯೋಜನವೇ ಇಲ್ಲವೆಂದರೆ ಸೃಷ್ಟಿಸಿದ ಪ್ರಭುವು ಅಪ್ರಯೋಜಕನಾಗುತ್ತಾರೆ ಈಶ್ವರನನ್ನು ಅಪ್ರಯೋಜಕನೆನ್ನಬಹುದೇ ? - ಈ ಎಲ್ಲಾ ವಿಮರ್ಶೆಯಿಂದ ಸಂಖ್ಯಾದರ್ಶನ ಈಶ್ವರನನ್ನು ಹಾಗೇ ಕೈಬಿಟ್ಟಿದೆ. ಇದಿಷ್ಟು ಸಾಂಖ್ಯದರ್ಶನದ ಸಿದ್ಧಾಂತ. ಇಲ್ಲಿಗೇ ನಿಲ್ಲದೆ ತಾತ್ತ್ವಿಕ ವಿಚಾರ ಮುಂದುವರಿದು ಯೋಗದರ್ಶನ ಅಸ್ತಿತ್ವಕ್ಕೆ ಬಂತು.

4. ಯೋಗದರ್ಶನ

> "ಪಾತಂಜಲವು ಯಮಾದ್ಯಷ್ಟಾಂಗ ಯೋಗಸಾಧನದಿಂ ಮನೋನಿಶ್ಚಲತೆಯಂ ನಿಶ್ಚಲ ಪರಿಪಕ್ವಾಂತಃಕರಣಂಗೆ ಮೋಕ್ಷಸಿದ್ಧಿಯಂ ಬೋಧಿಸಿ ಸಾಧಿಸುವುದು" - ವಿವೇಕ ಚಿಂತಾಮಣಿ

ಯೋಗಸೂತ್ರಗಳನ್ನು ಕ್ರಿ.ಪೂ. 147ರ ಸುಮಾರಿಗೆ ಪತಂಜಲಿ ಮಹರ್ಷಿಯು ರಚಿಸಿದನು. ಸಾಂಖ್ಯದರ್ಶನ ಎಲ್ಲಿಗೆ ನಿಂತಿತೋ ಅಲ್ಲಿಂದ ಮುಂದಕ್ಕೆ ಯೋಗದರ್ಶನ ಮುನ್ನುಗ್ಗಿದೆ.

ಸಾಂಖ್ಯದ ಗುರಿ ಒಂದಾಗಿದ್ದದ್ದು ಈ ಅನಂತವಾಗಿ ಪರಿಣಮಿಸಿತೆಂತು ಎಂಬುದನ್ನು ವಿಮರ್ಶಿಸುವುದು. ಯೋಗದ ಗುರಿ ಈ ಅನಂತವೂ ಆವೊಂದರಲ್ಲಿ ಕೂಡುವುದೆಂತು ಎಂದು ಪರಾಮರ್ಶಿಸುವುದು. ಪ್ರಕೃತಿಯಿಂದ ನಿಸ್ಸಂಗಿಯಾಗುವುದೇ ಮುಕ್ತಿಯೆಂದು ಸಾಂಖ್ಯ ನಿರ್ಧರಿಸಿದರೆ, ಯೋಗವು ಈಶ್ವರ ಸಂಗಿಯಾಗುವುದೇ ಮುಕ್ತಿಯೆನ್ನುತ್ತದೆ. ಪ್ರಕೃತಿ ಪುರುಷರ ವಿಯೋಗವನ್ನು ಸಾಂಖ್ಯ ಹೇಳುತ್ತಿದ್ದರೆ, ಪುರುಷ ಪುರುಷೋತ್ತಮರ ಸಂಯೋಗವನ್ನು ಯೋಗದರ್ಶನ ಹೇಳುತ್ತದೆ.

''ಸಂಯೋಗೋ ಯೋಗ ಇತ್ಯುಕ್ತೋ ಜೀವಾತ್ಮ ಪರಮಾತ್ಮನೋರಿತಿ''

-ಎಂದು ಯಾಜ್ಞವಲ್ಕ್ಯನು ಯೋಗ ಸಿದ್ಧಾಂತವನ್ನು ನಿರ್ದೇಶಿಸಿದ್ದಾನೆ. ಈ ಯೋಗದರ್ಶನವು ಈಶ್ವರನನ್ನು ಒಪ್ಪುವುದರಿಂದ ಹಾಗೂ ಸಾಂಖ್ಯರ ತತ್ತ್ವ ವಿಭಜನೆಯನ್ನು ಒಪ್ಪುವುದರಿಂದ ಇದನ್ನು **''ಸೇಶ್ವರ ಸಾಂಖ್ಯ''** ವೆಂದೂ ಕರೆದಿದ್ದಾರೆ. ಮೇಲ್ನೋಟಕ್ಕೆ ಪರಸ್ಪರ ವಿರುದ್ಧಗಳಾಗಿ ಕಾಣುವ ಈ ಎರಡು ದರ್ಶನಗಳನ್ನು ಸಮನ್ವಯಗೊಳಿಸಿ ಎರಡರ ಆತ್ಯಂತಿಕ ಗುರಿ ಒಂದೇ ಎಂಬುದನ್ನು ಗೀತಾಚಾರ್ಯನ:

''ಏಕಂ ಸಾಂಖ್ಯಂಚ ಯೋಗಂಚ ಯಃ ಪಶ್ಯತಿ ಸಪಶ್ಯತಿ''.

ಎಂಬ ಮಾತಿನಲ್ಲಿ ಮನಗಾಣಬಹುದು.

ಚೇತನಾತ್ಮಕವಾದ ಪುರುಷನನ್ನೂ-ಅಚೇತನಾತ್ಮಕವಾದ ಪ್ರಕೃತಿಯನ್ನೂ ತನ್ನ ಸ್ವಾಧೀನದಲ್ಲಿಟ್ಟುಕೊಂಡು ಅವುಗಳನ್ನು ಕೂಡಿಸುವ, ಜೋಡಿಸುವ, ಆಡಿಸುವ ಹಾಗೂ ಬಿಡಿಸುವ ಈಶ್ವರನೊಬ್ಬನಿದ್ದಾನೆ. ಅವನೇ ಪುರುಷೋತ್ತಮ. ಪ್ರಕೃತಿಯಿಂದ ಬಿಡಿಸಿಕೊಂಡು ಪುರುಷೋತ್ತಮನಲ್ಲಿ ಸೇರುವುದೇ ಪುರುಷನಿಗೆ ಮುಕ್ತಿ. ಈ ಮುಕ್ತಿ ಮೂಲವಾದದ್ದೇ ಯೋಗ, ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರೆ, ಸ್ಮೃತಿ - ಈ ಐದೂ ಅಂತಃಕರಣ ವೃತ್ತಿಗಳು. ಅಂತಃಕರಣ ವೃತ್ತಿಗಳೇ ಪುರುಷನ ಪ್ರಪಂಚಾನುಭವ ರೂಪವಾಗಿದೆ.

''ಅಥ ಯೋಗಾನುಶಾಸನಮ್''.

ಎಂದು ಪ್ರಥಮ ಸೂತ್ರದಲ್ಲಿ ಯೋಗ ಸಿದ್ಧಾಂತವನ್ನು ಪ್ರಾರಂಭಿಸಿದ ಪತಂಜಲಿ, ಸಂಸರಣ ಹೇತುವಾದ ಚಿತ್ತವೃತ್ತಿಗಳ ನಿರೋಧವೇ.

''ಯೋಗಃ ಚಿತ್ತವೃತ್ತಿ ನಿರೋಧಃ''.

-ಎಂಬ ದ್ವಿತೀಯ ಸೂತ್ರದಲ್ಲಿ ನಿರ್ದೇಶಿಸಿದ್ದಾನೆ. ಹಾಗೆ ಚಿತ್ತಚಾಂಚಲ್ಯವನ್ನು ತಡೆ ಹಿಡಿದು ಅಂತರ್ಮುಖಿಯಾದಾಗ

''ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಮ್''.

ಎಂದರೆ ಸ್ವಸ್ವರೂಪಸ್ಥಿತನಾಗಿ ಇರುತ್ತಾನೆ ಎಂದರ್ಥ. ಸ್ವಸ್ವರೂಪಸ್ಥಿತನಾದರೂ ಆತ್ಮನು

''ವೃತ್ತಿ ಸಾರೂಪ್ಯಂ ಇತರತ್ರ''.

ಎಂದು ಪತಂಜಲಿಯೇ ಹೇಳುತ್ತಾನೆ. ಚಾಂಚಲ್ಯವೃತ್ತಿಗಳ ನಿರೋಧದಿಂದ ಚಿತ್ತಕ್ಕೆ ಸಾಮರ್ಥ್ಯ ಪ್ರಾಪ್ತವಾಗುತ್ತದೆ. ಹಾಗಾಗುವದಕ್ಕೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಈ ಎಂಟೂ ಆವಶ್ಯಕ. ಪತಂಜಲಿಯ ಯೋಗಸಿದ್ಧಾಂತ ಈ ಎಂಟನ್ನೂ, ಒಡಗೂಡಿರುವುದರಿಂದ "ಅಷ್ಟಾಂಗಯೋಗ" ವೆನ್ನುತ್ತಾರೆ. ಯೋಗ ಸಿದ್ಧಾಂತ ಈಶ್ವರನ ಅಸ್ತಿತ್ವವನ್ನು ಸ್ವೀಕರಿಸಿದೆ; ಸ್ಥಿರೀಕರಿಸಿದೆ.

"ಕ್ಲೇಶಕರ್ಮ ವಿಪಾಕಾಶಯ್ಯೆರಪರಾಮೃಷ್ಟಃ ಪುರುಷ ವಿಶೇಷಃ ಈಶ್ವರಃ"

ಎಂದು ಈಶ್ವರನನ್ನು ಕುರಿತು ನಿರ್ವಚಿಸಿರುವ ಪತಂಜಲಿಯ ಮಾತು ಮಹೋತ್ಕೃಷ್ಟವಾಗಿದೆ! ಮನನೀಯವಾಗಿದೆ! ಕ್ಲೇಶಾದಿಗಳಿಂದಲೂ ಅಪರಾಮೃಷ್ಟನಾದ ಪುರುಷ ವಿಶೇಷನೇ ಈಶ್ವರನು. ಈಶ್ವರನು ಮಹದೈಶ್ವರ್ಯ ಗುಣಪೂರ್ಣನಾದ ಭಗವಂತನು; ಏಕಮೇವಾದ್ವಿತೀಯನು; ಸರ್ವಜ್ಞನು; ಶಾಶ್ವತನು; ಚಿದ್ರೂಪಿಯಾದ ಪುರುಷನು. ಅವನೇ ಜಗದ್ಗುರುವು, ಅವನ ಧ್ಯಾನವೇ ಅವನ ಧಾರಣವೇ ಪುರುಷಾರ್ಥಪ್ರದವೆಂಬುದು ಯೋಗಸಿದ್ಧಾಂತ.

"ತಸ್ಯವಾಚಕಃ ಪ್ರಣವ"

ಎಂದರೆ ಪ್ರಣವವು ಈಶ್ವರ ಸ್ವರೂಪ ನಿರ್ದೇಶಕವಾದ ಮಾತಿನ ಮೂರ್ತಿ.

"ತಜ್ಜಪಃ ತದರ್ಥ ಭಾವನಮ್".

ಪ್ರಣವ ಮಂತ್ರ ಸ್ವರೂಪನೂ, ಪ್ರಣವಾರ್ಥ ಸ್ವರೂಪನೂ ಆದ ಈಶ್ವರನನ್ನು ಆರಾಧಿಸುವುದೆಂದರೆ ಪ್ರಣವ ಮಂತ್ರದ ಜಪದಿಂದಲೇ.

ಈ ಯೋಗ ಸಿದ್ಧಾಂತದಲ್ಲಿ ಶಬ್ದ ಪ್ರಾಮಾಣ್ಯಕ್ಕೆ ಅಂದರೆ ವೇದಗಳಿಗೆ ಅಷ್ಟು ಮಹತ್ವದ ಸ್ಥಾನವಿಲ್ಲ. ಇದನ್ನು ಗಮನಿಸಿ ಮೀಮಾಂಸಾದರ್ಶನ ತಲೆಯೆತ್ತಿತು.

5. ಪೂರ್ವ ಮೀಮಾಂಸಾ

"ಅದರೋಳ್ ಪೂರ್ವ ಮೀಮಾಂಸೆಯು ತಾತ್ಪರ್ಯ ನಿರ್ಣಾಯಕಮಾದ ಉಪಕ್ರಮಾದಿ ಷಡ್ವಿಧ ಲಿಂಗಂಗಳಿಂ ವೇದವಾಕ್ಯ ವಿಚಾರ ಪೂರ್ವಕಮಾಗಿ ಜ್ಯೋತಿಷ್ಟೋಮಾದಿ ಯಾಗ ಪ್ರಮುಖ ವಿಧಾನ ಕ್ರಮವಂ ನಿರ್ವಹಿಸುವುದರಿಂ ಕರ್ಮಕಾಂಡಮೆನಿಸುವುದು."

– ವಿವೇಕ ಚಿಂತಾಮಣಿ

ಚಿತ್ತವೃತ್ತಿನಿರೋಧರೂಪಕವಾದ ಅಷ್ಟಾಂಗಯೋಗಾಭ್ಯಾಸದಿಂದ ಅಣಿಮಾದ್ಯಷ್ಟಸಿದ್ಧಿಗಳೂ ಸಿದ್ಧಿಸಿ, ಕಲ್ಪಾಕಲ್ಪ ವಿಕಲ್ಪ ವಿರಹಿತವಾದ ಶಿವಜೀವೈಕ್ಯವನ್ನು ಸಾಧಿಸಿ, ದುಃಖ ರಾಹಿತ್ಯವಾದ ಮುಕ್ತಿಯೆಂಬ ಸುಖವನ್ನು ಹೊಂದುತ್ತಾನೆ–ಎಂಬ ಸ್ವತಂತ್ರ ಸಿದ್ಧಾಂತಕ್ಕೆ ಪಾತಂಜಲ ದರ್ಶನ ಬಂದಾಗ ವೇದಾಧ್ಯಯನ, ವೇದೋಕ್ತವಾದ ಯಜನ ಯಾಜನಗಳ ಕ್ರಮ ನಿಲ್ಲುತ್ತಾ ಬಂತು. "ಯೋಗಿಗಳು ವೇದದ ಸಂಬಂಧವೇ ಇಲ್ಲದ

ಈಶ್ವರನನ್ನೇರ್ಪಡಿಸಿದರು.''[11] ಈ ಕಾಲದಲ್ಲಿ ವೇದವಿಧಿಯನ್ನು ಸ್ಥಾಪಿಸಲು ಮೀಮಾಂಸಾಕಾರರೂ ಅವರ ದರ್ಶನವೂ ಮೇಲೆದ್ದವು. ವೇದವು ವ್ಯರ್ಥ, ವೇದವು ಅನರ್ಥ ಎನ್ನುವ ನಾಸ್ತಿಕವಾದ ಆಸ್ತಿಕರಲ್ಲಿಯೇ ಪ್ರಾದುರ್ಭವಿಸಿದಾಗ ವೇದಾರ್ಥ ನಿರ್ಣಯುಕ್ತಪುರವನ್ನು ಮೀಮಾಂಸಾಕಾರರು ಕೈಗೊಂಡರು. ವೇದಸೂಕ್ತಗಳಿಗೆ ಅರ್ಥಮಾಡುವ ರೀತಿಯ ಜೈಮಿನೀಯ ಮೀಮಾಂಸಾಸೂತ್ರಗಳಲ್ಲಿ ನಿರೂಪಿತವಾಗಿದೆ. ಜೈಮಿನಿಗೆ ಪೂರ್ವದಲ್ಲಿಯೇ ಈ ಅರ್ಥಕ್ರಮವಿತ್ತೆಂತಲೂ, ನ್ಯಾಯವೈಶೇಷಿಕ ದರ್ಶನಾದಿಗಳು ಇದ್ದವೆಂತಲೂ ವ್ಯಕ್ತವಾಗುತ್ತದೆ. ಮೀಮಾಂಸಾ ಸೂತ್ರಗಳು ಹನ್ನೆರಡು ಅಧ್ಯಾಯಗಳಲ್ಲಿವೆ. ತಾತ್ವಿಕ ದೃಷ್ಟಿಯಿಂದ ಪ್ರಥಮಾಧ್ಯಾಯವೇ ಮುಖ್ಯವಾದದ್ದು. ಕ್ರಿ. ಪೂ. ಒಂದನೆಯ ಶತಮಾನದಲ್ಲಿದ್ದ ಶಬರ 'ಶಾಬರ ಭಾಷ್ಯ' ದಿಂದ ಶಬರನಿಗೂ ಮೊದಲು ಬೃಹಸ್ಮಿತ್ರ, ಭಾವದಾಸಾದಿಗಳು ಜೈಮಿನೀಯ ಸೂತ್ರಗಳಿಗೆ ಭಾಷ್ಯ ಬರೆದಿದ್ದರೆಂದು ಕಾಣುತ್ತದೆ. ಆಗರೂ ಸಾಬರ ಭಾಷ್ಯವನ್ನನುಸರಿಸಿ ಪೂರ್ವಮೀಮಾಂಸೆಯೆಂದು ಪ್ರಸಿದ್ಧವಾದ ಈ ದರ್ಶನ ಏರ್ಪಟ್ಟಿತು.

ಅಂಸಶ್ಯಕ್ತಿಯಿಂದ ಭೂತ ಭವಿಷತ್ಕಾಲಗಳೂ, ಕಣ್ಣಿಗೆ ಕಾಣದೆ ದೂರವಿರುವ ವಸ್ತುಗಳ ಜ್ಞಾನವೂ ಯೋಗಿಗಳಿಗೆ ಆಗುತ್ತದೆ ಎಂಬ ಮಾತನ್ನು ಕುಮಾರಿಲಾದಿ ಮೀಮಾಂಸಾಕಾರರು ಖಂಡಿಸಿ ಅದು ವೇದಾಧ್ಯಯನ, ವೇದೋಕ್ತ ಮಾರ್ಗಾನುಸರಣ, ವೇದಾರ್ಥ ನಿರ್ಣಾಜ್ಞಾನದಿಂದ ಮಾತ್ರವೇ ಸಾಧ್ಯವೆಂದು ಸಾಧಿಸುತ್ತಾರೆ.

ಮೀಮಾಂಸಾ ಎಂದರೆ ಪ್ರಮಾಣ ಪುರಸ್ಸರವಾಗಿ ವಿಚಾರಮಾಡುವುದೆಂದು ಅರ್ಥ. 'ಜ್ಞಾತುಮಿಚ್ಛಾ ಜಿಜ್ಞಾಸಾ' ಆದಂತೆ 'ಮಾತುಮಿಚ್ಛಾಮೀಮಾಂಸಾ' ಎಂದಾಗುತ್ತದೆ. ಅರ್ಥಾತ್ ಪ್ರಮಾಣ ಪುರಸ್ಸರವಾಗಿ ತಿಳಿದುಕೊಳ್ಳುವ ಇಚ್ಛೆ. ವೇದವು ಅಪೌರಷೇಯ. ಪುರುಷನ ಪ್ರಜ್ಞೆ ದೋಷಮಿಶ್ರಿತವಾದದ್ದು. ಅಪೌರಷೇಯವಾದ ವೇದ ನಿರ್ದೋಷವಾದದ್ದು. ತತ್ಪ್ರಯುಕ್ತ ಧರ್ಮಾಧರ್ಮಾ ನಿರ್ಣಯಾಧಿಕಾರಿ ವೇದವೊಂದೇ. ವೇದವು ಸ್ವಾಭಾವಿಕ ವಾಗಿಯೇ ಸ್ವಯಮೇವ ಪ್ರಮಾಣವಾದದ್ದು. ವೇದವು ಯಾರ ನಿರುಕ್ತಿಯೂ ಅಲ್ಲ. ಅದು ಸ್ವಯಂಭು, ಜ್ಞಾತೃಜ್ಞೇಯ ಸಂಬಂಧವಿಲ್ಲದೇ ಜ್ಞಾನ ಪ್ರಾಮಾಣ್ಯವು ಸ್ವತಂತ್ರವಾದದ್ದು. ವೇದೋಕ್ತವಾದ ವೈದಿಕ ಕ್ರಿಯಾನುಸರಣದಿಂದಲೇ ಮುಕ್ತಿ ಎಂಬುದು ಮೀಮಾಂಸಾಕಾರರ ಮತ. ವೈದಿಕ ಜ್ಞಾನವು ವಿಧಿ, ನಿಷೇಧ, ಮಂತ್ರ, ನಾಮಧೇಯ, ಅರ್ಥವಾದವೆಂದು ವಿಭಜಿತವಾಗಿದೆ.

ಜೈಮಿನೀಯ ಮೀಮಾಂಸಾ ಶಾಸ್ತ್ರಕ್ಕೆ ಪ್ರಮುಖ ಪ್ರಚಾರಕನು ಕುಮಾರಿಲಭಟ್ಟ.

---

11. ಭಾರತೀಯ ತತ್ತ್ವ ಶಾಸ್ತ್ರ ಸಂಗ್ರಹ.

ಭಾರತೀಯ ತತ್ತ್ವಶಾಸ್ತ್ರದಲ್ಲಿ ವೇದಪ್ರಾಮಾಣ್ಯವು ಪ್ರಬಲವಾದದ್ದು ಇವನಿಂದಲೇ. ಇವನ ಮತಕ್ಕೇ ಭಾಟ್ಟಮತವೆಂದು ಹೆಸರು.

ವೇದೋಕ್ತ ಕರ್ಮಗಳನ್ನು ಕಾಮ್ಯಕರ್ಮ, ನಿಷಿದ್ಧಕರ್ಮ, ನಿತ್ಯಕರ್ಮ ಎಂದು ಮೂರು ತೆರನಾಗಿ ವಿಂಗಡಿಸಿದ್ದಾರೆ. ಕಾಮ್ಯಕರ್ಮಗಳಾದ ಜ್ಯೋತಿಷ್ಟೋಮಾದಿ ಯಾಗಗಳನ್ನು ಸ್ವರ್ಗ ಪ್ರಾಪ್ತಿಗಾಗಿ ಮಾಡಬೇಕು. ನಿಷಿದ್ಧ ಕರ್ಮಗಳನ್ನು ಮಾಡದಿರಬೇಕು; ಮಾಡಿದರೆ ನರಕ ಪ್ರಾಪ್ತಿ. ನಿತ್ಯಕರ್ಮಗಳನ್ನು ಮಾಡುವುದರಿಂದ ವಿಶೇಷವಾದ ಫಲ ಪ್ರಾಪ್ತಿಯಿಲ್ಲದಿದ್ದರೂ ಅವುಗಳನ್ನು ಬಿಡುವುದು ಮಾತ್ರ ಸಲ್ಲದು. ಬಿಟ್ಟರೆ ಪ್ರತ್ಯವಾಯರೂಪ ದೋಷ ಹೇತು. ಹೀಗೆ ವೇದೋಕ್ತಗಳಾದ ಕರ್ಮದಂತೆ ನಡೆಯುವುದೇ ಧರ್ಮ. ಧರ್ಮವೆಂಬುದು ಸುಖಕ್ಕೆ ಸಾಧನೆಯೆಂಬುದು ಭಾಟ್ಟಮತವಾದರೆ ಧರ್ಮವೇ ಪುರುಷಾರ್ಥವೆಂಬುದು ಪ್ರಾಭಾಕರಮತ.

ಪ್ರಪಂಚವೂ, ಆತ್ಮವೂ, ಅವೆರಡರ ಸಂಬಂಧವೂ ನಿಜವಾದದ್ದೇ ಎಂದೂ, ದುಃಖ ನಾಶವೇ ಮೋಕ್ಷವೆಂದೂ, ಮನಸ್ಸಿನ ಮೂಲಕ ಪ್ರಪಂಚಕ್ಕೂ ತನಗೂ ಸಂಬಂಧ ಕಲ್ಪಿಸಿ ಕೊಳ್ಳುತ್ತಿರುವ ಆತ್ಮನು ತಪ್ಪಿಸಿಕೊಂಡಾಗ ಜ್ಞಾನವು ಸೂಕ್ಷ್ಮಾವಸ್ಥೆಯಲ್ಲಿ ಆತ್ಮನಲ್ಲಿರುತ್ತದೆಂದೂ ಅಂಥಾ ಅನುಭವವೇ ಮೋಕ್ಷವೆಂದೂ ಮೀಮಾಂಸಾಕಾರರು ನಿರ್ಧರಿಸಿದ್ದಾರೆ.

ಈಶ್ವರನ ಬಗ್ಗೆ ಮೀಮಾಂಸಾಕಾರರ ಅಭಿಪ್ರಾಯ ನಿರ್ದಿಷ್ಟವಾಗಿಲ್ಲ. ಸೃಷ್ಟಿಯನ್ನು ನೋಡಿ ನೈಯಾಯಿಕರು ಈಶ್ವರನನ್ನು ಅದರ ಕರ್ತೃವೆಂದು ಅನುಮಾನಿಸಿದಂತೆ, ತದನಂತರ ಬಂದವರೆಲ್ಲರೂ ಕರ್ಮಕ್ಕೆ ತಕ್ಕ ಪ್ರತಿಫಲ ಪ್ರದಾತನಾದ ಪ್ರಭುವೊಬ್ಬನಿರಬೇಕೆಂದು ತರ್ಕಿಸಿದರು. ಆ ಮಾತನ್ನು ಜೈಮಿನಿ ಖಂಡಿಸಿದ್ದಾನೆ. ಕರ್ಮವೇ ಫಲವೂ ಫಲದಾಯಕವೂ ಎಂದು ಜೈಮಿನಿಯ ವಾದ. ಫಲಪ್ರದಾತನಾದ ಈಶ್ವರ ಅನವಶ್ಯಕ ಅವನ ದೃಷ್ಟಿಯಲ್ಲಿ. ಸೃಷ್ಟಿಗೆ ಕರ್ತೃವಾದ ಈಶ್ವರನೊಬ್ಬನಿಲ್ಲವೆಂದೂ ಸೃಷ್ಟಿಗೆ ಪ್ರಳಯವಾಗಲೀ ಯುಗಭೇದವಾಗಲೀ ಇಲ್ಲವೆಂದೂ ಅವನ ಅಭಿಪ್ರಾಯ. ಆದರೂ ಕುಮಾರಿಲನ ಕರ್ಮ ಮತ್ತು ಉಪಾಸನಾಮಾರ್ಗಗಳಿಂದಲೂ ಅವನು ತನ್ನ ಶ್ಲೋಕವಾರ್ತಿಕಾರಂಭದಲ್ಲಿ[12] "ಯಾರ ದೇಹವು ವಿಶುದ್ಧ ಜ್ಞಾನವೋ, ಯಾರ ಮೂರು ಕಣ್ಣುಗಳೂ ವೇದಗಳೋ, ಯಾರ ಶಿರೋಭೂಷಣವು ಚಂದ್ರಾರ್ಧವೋ ಅವನನ್ನು ಶ್ರೇಯಃಪ್ರಾಪ್ತಿಗಾಗಿ ನಮಸ್ಕರಿಸುತ್ತೇನೆ" ಎಂದು ಶಿವನನ್ನು ಪ್ರಾರ್ಥಿಸಿರುವುದರಿಂದಲೂ ಅವನನ್ನು ಸೇಶ್ವರ ಮೀಮಾಂಸಾಕಾರನೆಂದು ಊಹಿಸಲು ಅವಕಾಶವಿದೆ. ಕೆಲವರಂತೂ ಕುಮಾರಿಲನನ್ನು ವೇದಾಂತಿಗಳ ಗುಂಪಿಗೇ ಸೇರಿಸಿದ್ದಾರೆ. ಕುಮಾರಿಲನಿಗೂ ಜೈಮಿನೀಯ ದರ್ಶನದಲ್ಲಿ ಎದ್ದು ಕಾಣುವ ಭಗವದಭಾವ

---

12. ವಿಶುದ್ಧ ಜ್ಞಾನದೇಹಾಯ ತ್ರಿವೇದಿ ದಿವ್ಯಚಕ್ಷುಷೇ
ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧಧಾರಿಣೇ" — ಶ್ಲೋಕವಾರ್ತಿಕ

ಬೇಡನಿಸಿರಬೇಕು. ಅಂದಿನಿಂದ ಈಶ್ವರನನ್ನೂ ಮೀಮಾಂಸಾಶಾಸ್ತ್ರದಲ್ಲಿ ಅಳವಡಿಸಿಕೊಂಡರೆಂದು ಕಾಣುತ್ತದೆ

ಈ ದರ್ಶನದಲ್ಲಿರುವ ಕೊರತೆಗಳಿಗೆ ಸಮಾಧಾನಗಳನ್ನು ದಾರ್ಶನಿಕರು ಹುಡುಕ ತೊಡಗಿದಾಗ ಆ ಅನ್ವೇಷಣೆ ಉತ್ತರಮೀಮಾಂಸಾ ಶಾಸ್ತ್ರಸಿದ್ಧಾಂತದಲ್ಲಿ ಪರ್ಯವಸಾನವಾದಂತಿದೆ. ಮನುಷ್ಯನು ಹುಡುಕುತ್ತಿರುವ ಹೃದಯಶಾಂತಿಗೂ, ಆತ್ಮೋನ್ನತಿಗೂ ಜೈಮಿನೀಯ ದರ್ಶನ ನಿಷ್ಪ್ರಯೋಜನವೆನಿಸಿದಾಗ ತಾತ್ತ್ವಿಕರ ಇನ್ನೊಂದು ತಂಡ ತಲೆಯೆತ್ತಿತು.[13]

೬. ಉತ್ತರ ಮೀಮಾಂಸಾ

> "ಉತ್ತರ ಮೀಮಾಂಸೆಯು ಸರ್ವೋಪನಿಷದರ್ಥ ಪ್ರತಿಪಾದಕವಾದ ವೇದಾಂತ ಶಾಸ್ತ್ರವೆಂತಲೂ, ಬ್ರಹ್ಮವಿದ್ಯೆಯೆಂತಲೂ, ಪಾರಂಪರ್ಯ ಪ್ರಸಿದ್ಧಮಾಗಿ ದೃಷ್ಟ ಪ್ರಪಂಚಕ್ಕೆ ಮಿಥ್ಯಾ ತ್ವವಂ ಸಾಧಿಸುವುದರಿಂದ ದ್ವೈತಭಾವೋಪಲಕ್ಷಿತ ಬ್ರಹ್ಮಾತ್ಮೈಕ್ಯಮಂ ಉಪದೇಶಿಸುವುದಾಗಿ ಜ್ಞಾನಿಗಳಿಗಭಿಮತಮಾಗಿರ್ಕುಂ" -ವಿವೇಕ ಚಿಂತಾಮಣಿ

ವೇದವು ಕರ್ಮಜ್ಞಾನಗಳೆರಡನ್ನೂ ಪೂರ್ವಾದರವಾಗಿ ಬೋಧಿಸುತ್ತದೆ. ಮಂತ್ರ, ಬ್ರಾಹ್ಮಣ ಮುಂತಾದವುಗಳ ಕರ್ಮಸಿದ್ಧಾಂತವನ್ನೇ ಆಧಾರವಾಗಿಟ್ಟುಕೊಂಡು ಕರ್ಮದಿಂದ ಜ್ಞಾನಪ್ರಾಪ್ತಿಯೆಂಬ ಪ್ರಮೇಯದಮೇಲೆ ಉಂಟಾದದ್ದು ಪೂರ್ವಮೀಮಾಂಸೆ. ಕರ್ಮಕ್ಕೂ ಪೂರ್ವಸಿದ್ಧವಾದ ಜ್ಞಾನ ಸಿದ್ಧಾಂತದವೇಲೆ ಉಂಟಾದದ್ದೂ ವೇದೋಪನಿಷದಾಧಾರವುಳ್ಳದ್ದೂ ಉತ್ತರಮಿಮಾಂಸೆ. ಪೂರ್ವೋತ್ತರ ಮೀಮಾಂಸೆಗಳೆರಡೂ ಕೊಂಚ ಇಂಚು ಮಿಂಚು ಬೈಬಲಿನ ಓಲ್ಡ್ ಟೆಸ್ಟ್‌ಮೆಂಟ್ ಮತ್ತು ನ್ಯೂ ಟೆಸ್ಟ್‌ಮೆಂಟ್ ಇದ್ದ ಹಾಗೆ. ಉತ್ತರ ಮೀಮಾಂಸಾಕಾರರನ್ನು ವೇದಾಂತಿಗಳೆಂದು ಕರೆಯುವುದೂ ವಾಡಿಕೆ. ಯುಕ್ತಿಯುಕ್ತವಾದ ರೀತಿಯಲ್ಲಿ ವೇದಾರ್ಥ ಮತ್ತು ವೇದಾಂತ ಸಿದ್ಧಾಂತವನ್ನು ಮಂಡಿಸುವುದರಿಂದ, ಮೇಲಿನ ಐದು ದರ್ಶನಗಳಲ್ಲಿಯ ಕುಂದು ಕೊರತೆಗಳನ್ನು ನಿವಾರಿಸಿಕೊಂಡು ಸರ್ವಸಮ್ಮತವಾಗುವಂತೆ ವಿಚಾರಿಸುವುದರಿಂದ ಅವರ 'ಮತಿ'ಯೇ ಮತವಾಗಿ ಪ್ರಸಿದ್ಧವಾಯಿತು.

ವೇದಾಂತ ನಿರ್ಣಯಾತ್ಮಕವಾದ ಬ್ರಹ್ಮಸೂತ್ರಗಳನ್ನು ಬಾದರಾಯಣನು[14] ರಚಿಸಿದ. ಸೂತ್ರವೆಂದರೆ ಶ್ರೀಮನ್ನಿಜಗುಣ ಶಿವಯೋಗಿಗಳು ಹೇಳುವಂತೆ :

---

13. There is little in such a religion to touch the heart and make it glow. No wonder a reaction occurred in favour of monotheism, Vaisnavas, or Tantrika, which gave man a supreme God on whom he could depend and to whom he could surrender himself in sorrow and suffering."Indian Philosophy, Vol. II by S. Radhakrishnan.

14. ಇವನನ್ನೇ ರಾಮಾನುಜೀಯರು ಬೋಧಾಯನನೆಂದೂ ಕರೆದಿದ್ದಾರೆ. ಶಂಕರರು ಬಾದರಾಯಣನೆಂದೇ ಕರೆದಿದ್ದಾರೆ.

"ಬಳಿಕ ಸರ್ವೋಪನಿಷದರ್ಥ ನಿರ್ಣಾಯಕಮಾಗಿ ಸ್ರುತಿಲಿಂಗಾದಿ ಪಾರದೌರ್ಬಲ್ಯ ಪೂರ್ವಪ್ರಾಬಲ್ಯಾದಿ ದ್ಯೋತಕತ್ವದಿಂ ಬಹ್ವರ್ಥ ಸೂಚಕಮಪ್ಪಂತೆ ಮಿತಾಕ್ಷರಮಾಗಿ ವಿಶ್ರುತಾ ಚಾರ್ಯರಿಂ ರಚಿಸಲ್ಪಟ್ಟ ವಾಕ್ಯಜಾತಮೇ ಸೂತ್ರಮಾಗಿರ್ಪುದು."

ಈ ಬ್ರಹ್ಮಸೂತ್ರಾದಿ ಪ್ರಸ್ಥಾನತ್ರಯಕ್ಕೆ [15] ಅರ್ಥಮಾಡುವಾಗಲೇ ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ದ್ವೈತ ಸಿದ್ಧಾಂತಗಳು ಬೆಳಕಿಗೆ ಬಂದವು. ಬ್ರಹ್ಮವಾದಿಗಳಾದ ವೇದಾಂತಿಗಳಲ್ಲಿ ಕೆಲವರು ನಿಷ್ಪ್ರಪಂಚ ಬ್ರಹ್ಮವಾದಿಗಳು; ಕೆಲವರು ಸಪ್ರಪಂಚ ಬಹ್ಮವಾದಿಗಳು. ಕೆಲವರು ಸಗುಣಬ್ರಹ್ಮವಾದಿಗಳು ; ಕೆಲವರು ನಿರ್ಗುಣಬ್ರಹ್ಮವಾದಿಗಳು. ನಿಷ್ಪ್ರಪಂಚವೂ, ನಿರ್ಗುಣವೂ ಆದ ಬ್ರಹ್ಮನನ್ನೇ ಹಿಡಿದು ವಾದಿಸುವವರು ಅದ್ವೈತಿಗಳು. ನಿರ್ದ್ವಯವೂ, ನಿರ್ದ್ವಂದ್ವವೂ ಆದ ಏಕಮೇವ ಅದ್ವಿತೀಯ ಬ್ರಹ್ಮವೊಂದೇ ವೇದವೇದಾಂತಗಳ ಅರ್ಥವೆಂಬುದು ಅದ್ವೈತ ಸಿದ್ಧಾಂತ. ಸಪ್ರಪಂಚ ಸಗುಣಬ್ರಹ್ಮವಾದಿಗಳಾಗಿ ಈಶ್ವರನು ಗುಣರೂಪವಿಶಿಷ್ಟನೆಂದರು ವಿಶಿಷ್ಟಾದ್ವೈತಿಗಳು. ಈಶ್ವರನಿಗೂ ಜೀವಿಗೂ ಯಾವ ಸ್ಥಿತಿಯಲ್ಲಿಯೂ ಅಭೇದವನ್ನು ಒಪ್ಪದೆ ದ್ವೈತವೇ ವೇದಾಂತದ ಸಿದ್ಧಾಂತವೆನ್ನುವವರು ದ್ವೈತಿಗಳು. ಈಶ್ವರನು ಸರ್ವತಂತ್ರ ಸ್ವತಂತ್ರನಿರುವುದರಿಂದ ಅವನು ಸಗುಣನೂ ನಿಜ; ನಿರ್ಗುಣನೂ ನಿಜ. ಶಿವನು ಶಕ್ತಿ ವಿಶಿಷ್ಟನಾಗಿದ್ದಾನೆ . ಶಕ್ತಿಯ ಸಂಕೋಚ ವಿಕಾಸವೇ ಜೀವತ್ವ ಶಿವತ್ವಗಳು. ಶಿವನೇ ತನ್ನ ಶಕ್ತಿಯ ಸಂಕೋಚದಿಂದ ಜೀವನಾಗಿದ್ದಾನೆ. ಜೀವನು ತನ್ನ ಶಕ್ತಿಯ ವಿಕಾಸದಿಂದ ಶಿವನಾಗುತ್ತಾನೆ . ಪ್ರಪಂಚವು ಈಶ್ವರನ ಪ್ರಕಟಿತರೂಪ. ಪದಾರ್ಥ ದೃಷ್ಟಿಯಿಂದ ಸೃಷ್ಟಿಯು ಹೇಯವಾದರೂ ಪ್ರಸಾದ ದೃಷ್ಟಿಯಿಂದ ಅದು ಉಪಾದೇಯ. ಶಿವಜೀವರು ಪೂರ್ಣಭಿನ್ನರೂ ಅಲ್ಲ; ಪೂರ್ಣ ಅಭಿನ್ನರೂ ಅಲ್ಲ. ತನ್ನ ಶಿವತ್ವವನ್ನು ಮರೆತು ಜೀವಿಯಾದವನಿಗೆ ಮರಳಿ ತನ್ನ ಶಿವತ್ವದ ಅರಿವು ಮರುಕಳಿಸುವುದೇ ಪ್ರತ್ಯಭಿಜ್ಞೆಯೆನಿಸುವುದು. ಕರ್ಮ ಜ್ಞಾನಗಳೆರಡೂ ಸಿದ್ಧಿಗೆ ಸಾಧನಗಳು. ಮುಕ್ತಸ್ಥಿತಿಯಲ್ಲಿಯೂ ಮೈಮರೆದರೆ ಸಾವಧಾನಿಯಾಗಿ ಭಕ್ತನಾಗಿರಬೇಕು. ಚತುರ್ವಿಧ ಪುರುಷಾರ್ಥಗಳಲ್ಲಿ ಮುಕ್ತಿ ಕೊನೆಯದಾದರೂ ಭಕ್ತಿ ಪರಮಪುರುಷಾರ್ಥ. ಶಕ್ತಿಯಿಂದ ಲೀಲಾವಿಲಾಸಕ್ಕಾಗಿ ಶಿವನು ಜೀವನಾದಂತೆ. ಜೀವನು ತನ್ನ ಭಕ್ತಿಯ ವಿಕಾಸದಿಂದ ಶಿವನಾಗುತ್ತಾನೆ. ಜೀವನ್ಮುಕ್ತಿಯೆಂದರೆ ಮುಕ್ತ ಜೀವನವೇ. ಇದನ್ನೇ ಶಿವಾನುಭವವೆಂದು ಕರೆದಿದ್ದಾರೆ.[16] ಶಿವನನ್ನು ಬಿಡದೆ ಜೀವಿಸುವಿಕೆ ಅರ್ಥಾತ್ ಶಿವಾತ್ಮಕವಾದ ಜೀವನ-ಎಂಬುದೇ ಶಕ್ತಿವಿಶಿಷ್ಟಾದ್ವೈತ ಅಥವಾ ಶಿವಾದ್ವೈತ ಸಿದ್ಧಾಂತ. *

15. ಬ್ರಹ್ಮಸೂತ್ರ, ಉಪನಿಷತ್ತು, ಭಗವದ್ಗೀತೆ.

16. ಶಿವ+ಅನು+ಭವ= ಶಿವಾನುಭವ.

* ಕೃಪೆ : ಅ. ನ. ಕೃಷ್ಣರಾಯ, ಭಾರತೀಯ ಸಂಸ್ಕೃತಿದರ್ಶನ, ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು ಸರ್ಕಾರ, ಬೆಂಗಳೂರು, 1962

ಧರ್ಮ ಮತ್ತು ಇತಿಹಾಸ

ಡಾ। ಸೂರ್ಯನಾಥ ಕಾಮತ್

''ಧರ್ಮವನ್ನು ಪಾಲಿಸುವವನನ್ನು ಧರ್ಮ ಕಾಪಾಡುತ್ತದೆ'' (ಧರ್ಮೋ ರಕ್ಷತಿ ರಕ್ಷಿತಃ) ಎಂಬ ಮಾತಿನಿಂದ ಆರಂಭಿಸಿ ಧರ್ಮವು 'ಒಂದು ಮಾದಕ ದ್ರವ್ಯ' (ಅಫೀಮು) ಎನ್ನುವವರೆಗೆ ಧರ್ಮದ ಬಗ್ಗೆ ವಿವಿಧ ವ್ಯಾಖ್ಯಾನಗಳೂ ಅಭಿಪ್ರಾಯಗಳೂ ಇವೆ. ವಿಲ್ ಡ್ಯೂರಾಂಟ್‌ನಂಥ ಇತಿಹಾಸಕಾರ ಇತಿಹಾಸ ಕಲಿಸುವ ಪಾಠಗಳ ಬಗ್ಗೆ ಹೇಳುವಾಗ ಧರ್ಮವನ್ನು ಮಾನವ ಜೀವನದಿಂದ ಬಹಿಷ್ಕರಿಸಬೇಕು, ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾನೆ. ಈ ಮಾತನ್ನು ಹೇಳುವಲ್ಲಿ ಅದರ ಕಾರಣವನ್ನು ಅಲ್ಲೇ ಹೇಳಿರದಿದ್ದರೂ ಅವನು ಬರೆದ 'ಸ್ಟೋರಿ ಆಫ್ ಸಿವಿಲೈಜೇಷನ್'ನ ಉದ್ದಕ್ಕೂ ಧರ್ಮ ಪಂಥಗಳು ನಡೆಸಿದ ಅವಾಂತರಗಳ ಬಗ್ಗೆ, ಧರ್ಮಗಳ ಹೆಸರಲ್ಲಿ ಮುಸಲ್ಮಾನರು ನಡೆಸಿದ್ದ 'ಜೈಹಾದ್' ಕ್ರೈಸ್ತರು ನಡೆಸಿದ ಕ್ರೂಸೇಡ್, ಕ್ರೈಸ್ತ ಪಂಥಗಳ ನಡುವೆ ಯೂರೋಪ್‌ಗಳಲ್ಲಿ ನಡೆದ ಮೂವತ್ತು ವರ್ಷಗಳ ಯುದ್ಧ (೧೬೧೮-೪೮), ಐರೋಪ್ಯರು ತಮ್ಮ ವಸಾಹತುವಾದದ ಬೆಂಬಲಕ್ಕಾಗಿ ಜಗತ್ತನ್ನು ಉದ್ಧರಿಸುವುದಾಗಿ ನಡೆಸಿದ 'ಮಿಶನರಿ' ಚಟುವಟಿಕೆಗಳ ಹೆಸರಲ್ಲಿನ ದೌರ್ಜನ್ಯಗಳು, ಇದನ್ನೆಲ್ಲ ಗಮನಿಸಿ ಈ ಮಾತನ್ನು ಆತ ಹೇಳಿದ್ದಾನೆ.

ಇಲ್ಲಿ ಧರ್ಮ ಎಂದಾಗ ಧರ್ಮಪಂಥ ಅಥವಾ ಮತಗಳ ವಿಚಾರ ಗಮನಕ್ಕೆ ಬರುತ್ತವೆ. ಬೇರೆ ಬೇರೆ ಧರ್ಮಗಳ ನಡುವಿನ ಸ್ಪರ್ಧೆಗೆ, ಯುದ್ಧಗಳಿಗೆ ಈ ಮತಗಳ ನಡುವಣ ಪ್ರಸರಣೋತ್ಸಾಹವೇ ಕಾರಣ. ಆದುದರಿಂದ ಮತಗಳನ್ನು ಪ್ರತಿಬಂಧಿಸಿ ಒಂದು ಧರ್ಮವನ್ನು ಇಟ್ಟುಕೊಳ್ಳಬೇಕು, ಇದಕ್ಕೆ ಮಾನವ ಧರ್ಮ ಎಂದು ಹೆಸರಿಡಬೇಕು ಎಂದವರಿದ್ದಾರೆ. ಇಂಥ ಮಾನವಧರ್ಮದ ವಿಚಾರವನ್ನು ವಿಚಾರವೇತ್ತರು, ಬುದ್ಧಿ ಜೀವಿಗಳು ಮಾತ್ರ ಅರ್ಥಮಾಡಿಕೊಳ್ಳಬಹುದು. ಜನ ಸಾಮಾನ್ಯರಿಗೆ, 'ದೇವರು' 'ಪಾಪಪುಣ್ಯಗಳ' ಹೆಸರಿನಲ್ಲಿ ಮಾತ್ರ ಸರಿದಾರಿಗೆ ಹಚ್ಚಲು ಸಾಧ್ಯವಾಗುತ್ತದೆಂಬುದು ಈವರೆಗಿನ ಅನುಭವ.

ಧರ್ಮವೆಂದರೆ ಅಫೀಮು ಎಂದು ಹೇಳಿದ ಕಾರ್ಲ್ ಮಾರ್ಕ್ಸ್‌ನ ಸೂಚನೆಯಂತೆ ಸೌಮ್ಯವಾಗಿ ರಾಷ್ಟ್ರಗಳಲ್ಲಿ ಧರ್ಮವನ್ನು ಓಡಿಸಲಾಯಿತು. ಆದರೆ ಧರ್ಮವನ್ನು ಜನಪ್ರಿಯಗೊಳಿಸಲೆಂದು ನಡೆಸುವ ಉತ್ಸವ, ಜಾತ್ರೆಗಳ ಸ್ಥಳದಲ್ಲಿ ಪಕ್ಷದ ಮೆರವಣಿಗೆಗಳು,

ಪರೇಡುಗಳು, ಹಬ್ಬಗಳ ಬದಲಿಗೆ ಕ್ರಾಂತಿಯ ದಿನಾಚರಣೆಗಳು, ದೇವಾಲಯಗಳ ಬದಲಿಗೆ ಗಣ್ಯರ ಸಮಾಧಿಗಳು, ಪ್ರತಿಮೆಗಳು, ಕ್ರಾಂತಿ ನಡೆದ ಕ್ಷೇತ್ರಗಳು - ಚೌಕಗಳು ಇವುಗಳ ದರ್ಶನ ಇವೆಲ್ಲ ಧಾರ್ಮಿಕ ಚಟುವಟಿಕೆಯ ಸ್ಥಳದಲ್ಲಿ ಬಂದ ಹೊಸ ವ್ಯವಸ್ಥೆಗಳು. ಆದರೆ ಹಲವು ದಶಕಗಳ ಕಾಲ ಇವು ನಡೆದಾಗ ಧರ್ಮ ಕಲಿಸುತ್ತಿದ್ದ ನೈತಿಕತೆ, ದೈವಭೀರುತ್ವ, ಕಾಯಕ ಶ್ರದ್ಧೆ ಇಲ್ಲದೆ ದೇಶದ ಆರ್ಥಿಕ ವ್ಯವಸ್ಥೆಯೇ ಕುಸಿದು ಬಿದ್ದುದು ಕಾಣುತ್ತದೆ. ನಮ್ಮ ದೇಶದ ಸರಕಾರೀ ಉದ್ಯಮರಂಗದಲ್ಲಿ ಕಾಣಿಸುತ್ತಿರುವ ಮೈಗಳ್ಳತನ ಅವ್ಯವಹಾರ ಇವು ಆ ದೇಶಗಳ ಇಡೀ ದೇಶದಲ್ಲಿ ವ್ಯಾಪಿಸಿರುವ ಸರಕಾರೀ ವ್ಯವಸ್ಥೆಯಡಿಯ ಕೈಗಾರಿಕೆಗಳಲ್ಲೂ ಕೃಷಿ ಕ್ಷೇತ್ರದಲ್ಲೂ ಕಾಣಿಸಿ ಆಹಾರ, ಬಳಕೆ ವಸ್ತುಗಳ ಅಭಾವ ಕಾಣಿಸಿ ಇಡೀ ವ್ಯವಸ್ಥೆ ಕುಸಿಯಿತು. ಕಮ್ಯುನಿಸ್ಟ್ ಕ್ರಾಂತಿ ಮಾಡಿದಾಗ ಇದ್ದ ಕೆಲವೇ ಕಾಂತ್ರಿಕಾರೀ ನಾಯಕರ, ಕಾರ್ಯಕರ್ತರ ಧ್ಯೇಯನಿಷ್ಠೆ, ಅದರಿಂದ ಮೂಡಿಬಂದ ಸಾಮಾಜಿಕ ಪ್ರಜ್ಞೆ, ವೈಯಕ್ತಿಕ ಶೀಲಗಳು ಇಡೀದೇಶದಲ್ಲಿ ಕಮ್ಯುನಿಸ್ಟ್ ಪಕ್ಷ ಹರಡಿದಾಗ ಅದೇ ಪ್ರಮಾಣದಲ್ಲಿ ಹರಡುವುದು ಸಾಧ್ಯವಿರಲಿಲ್ಲ. ಮುಂದಿನ ತಲೆಮಾರುಗಳಲ್ಲಂತೂ ಇದು ಮೂಡುವಂತೆಯೇ ಇರಲಿಲ್ಲ. ಧರ್ಮ ಕಲಿಸುವ ನೀತಿ ಕರ್ತವ್ಯ ಪ್ರಜ್ಞೆಗಳನ್ನು ಪಕ್ಷವು ಕಲಿಸದೆ ಹೋಯಿತು. ಧರ್ಮ ದೇಶ ಭ್ರಷ್ಟವಾದುದರಿಂದ ಈ ಕೆಲಸವನ್ನು ಮಾಡುವ ಸಾಮರ್ಥ್ಯ ಧರ್ಮಕ್ಕೆ ಅಲ್ಲಿ ಇಲ್ಲದೆ ಹೋಯಿತು. ಧರ್ಮ ಕಲಿಸುವ ಪಾಪಪುಣ್ಯಗಳ ಕಲ್ಪನೆ, ದೈವಭೀರುತನಗಳು 'ಮಾನವತೆ' ಅಥವಾ 'ನೈತಿಕತೆಗಳ ಪ್ರಚಾರದಿಂದ ಮಾತ್ರ ಮಾನವನ್ನು 'ಮಾನವ'ನಾಗಿ ಮಾಡಬಲ್ಲುದು ಎಂಬುದಕ್ಕೆ ಜೀವಂತ ನಿದರ್ಶನ ಇದು.

ಧರ್ಮವನ್ನು ಜನರಿಗೆ ಮುಟ್ಟಿಸುವ, ವಿತರಿಸುವ ಅಂಗಡಿಗಳಂತೆ ಧರ್ಮಪಂಥಗಳು ಕೆಲಸಮಾಡುತ್ತವೆ. ಆದರೆ ಈ ಅಂಗಡಿಗಳನ್ನು ಹುಟ್ಟು ಹಾಕಿದವರ ಉದ್ದೇಶ ಆ ಅಂಗಡಿಯಿಂದ ಲಾಭ ಪಡೆಯಬೇಕೆಂದಲ್ಲ. ಧರ್ಮ ವ್ಯಾಪಾರದ ಅಂಗಡಿಯ ರೂಪ ತಳೆದುದು ಸುಳ್ಳಲ್ಲ ಆದರೆ ಕಾಲ, ದೇಶ, ಪರಿಸರಗಳಿಗೆ ಅನುಗುಣವಾಗಿ ಬೇರೆ ಬೇರೆ ದಷ್ಟಾರರು ಕಂಡ ಕಾಣಿಕೆಗಳನ್ನು ಅವರು ತಮಗೆ ಸರಿಕಂಡಂತೆ ಪ್ರಚಾರಮಾಡಿದರು. ಮೈಸೂರಿನ ಜನರಾಗಿಮುದ್ದೆ, ಧಾರವಾಡದ ಜನ ಜೋಳದ ರೊಟ್ಟಿ, ಅಲ್ಲಿನ ಅನುಕೂಲವಂತ ಜನ ಚಪಾತಿ ದಕ್ಷಿಣ ಭಾರತದ ಜನ ಅನ್ನ, ಕರಾವಳಿಯ ಜನ ಕುಸುಬಲವಕ್ಕಿಯ ಅನ್ನ, ಹೀಗೆಲ್ಲ ಆಹಾರವಾಗಿ ಉಪಯೋಗಿಸುತ್ತಾರೆ. ಅವರಿಗೆ ಹಸಿವಾದಾಗ ಆಯಾ ಆಹಾರದ ನೆನಪಾಗುತ್ತದೆ. ಅದರಂತೆ ದೇವರೆಂಬ ಕಲ್ಪನೆ ಕೂಡ ಒಬ್ಬೊಬ್ಬರಿಗೆ ಒಂದೊಂದು ರೀತಿ. ಆಹಾರದಲ್ಲಿ ಸಮಾನತೆ ಹೇಗೆ ಸಾಧ್ಯಾವಾಗಲಾರದೋ, ಅದರಂತೆ ಧರ್ಮದಲ್ಲಿ ಕೂಡ ಆಗಲಾರದು.

ಪೂಜಾವಿಧಿ, ಪ್ರಾರ್ಥನಾವಿಧಿಗಳಲ್ಲೂ ವ್ಯತ್ಯಾಸವಿದೆ. ಅವುಗಳಲ್ಲಿ ನಾನಾ ರೀತಿಯ ಸಂಪ್ರದಾಯಗಳು; ಕರ್ಮಕಾಂಡಗಳು ಬೆಳೆದಿವೆ. ಅವುಗಳು ಅನವಶ್ಯ, ಹಾಸ್ಯಾಸ್ಪದ, ಶೋಷಕ, ಎನಿಸಿದರೂ ಅವುಗಳು ಅನಿವಾರ್ಯವಾಗಿ ಬೆಳೆದಿವೆ. ಅನವಶ್ಯ ಕರ್ಮಕಾಂಡ, ಶೋಷಣೆಗಳ

ವಿರುದ್ಧ ಧ್ವನಿ ಎತ್ತಿದ ಸುಧಾರಕರೂ ಇದ್ದಾರೆ. ಆದರೆ ಅಂಥವರು ಧರ್ಮವನ್ನು ಅಲ್ಲಗಳೆದಿಲ್ಲ; ದೇವರ ಅಸ್ತಿತ್ವವನ್ನು ತಿರಸ್ಕರಿಸಿಲ್ಲ. ಜಗತ್ತಿನಲ್ಲಿ ಎಲ್ಲೆಡೆ ಇದು ನಡೆದಿದೆ. ಯಾವ ಧರ್ಮವೂ ಇದಕ್ಕೆ ಹೊರತಾಗಿಲ್ಲ.

ಒಂದು ಪಂಥವನ್ನು ನೆಚ್ಚಿದವನು ತನ್ನ ಪಂಥ ಶ್ರೇಷ್ಠವೆಂಬ ಭಾವನೆ ಹೊಂದುವುದು ಸಹಜ. ನನಗೆ ಪೂಜ್ಯರಾಗಿದ್ದ ನನ್ನ ಕ್ರೈಸ್ತ ಅಧ್ಯಾಪಕರು ಹೀಗೆ ಹೇಳುತ್ತಿದ್ದರು: “ನನಗೆ ಲಾಭವಾದ ವಸ್ತುವಿನಿಂದ ನನಗೂ ಲಾಭವಾಗುತ್ತದೆಂದು ಹೇಳುವುದರಲ್ಲಿ ತಪ್ಪೇನಿದೆ ? ನನಗೆ ಬಂದಿದ್ದ ರೋಗ ಗುಣವಾಗಿದ್ದು ನಿನಗೆ ಅದೇ ರೋಗ ಬಂದಾಗ ನೀನೂ ಅದರಿಂದ ಗುಣಮುಖಿವಾಗಲಿ ನಾನು ಹೋಗಿದ್ದ ವೈದ್ಯನಲ್ಲಿಗೇ ಹೋಗು ಎನ್ನುವುದು ಅನ್ಯಾಯವೆ ?’ ಎಂದೊಮ್ಮೆ ಹೇಳಿದ್ದರು. ಇಲ್ಲಿನ ತರ್ಕ ಗಮನಿಸಬೇಕಾದದ್ದು.

ಆದಿ ಮಾನವ ಭಾರಿ ಮಳೆ, ಕಡಲ ಭೋರ್ಗರೆತ, ಸಿಡಿಲು, ಮಿಂಚು, ಉಲ್ಕಾಪಾತ, ಭೂಕಂಪ, ಜ್ವಾಲಾಮುಖಿಗಳಂಥ ನೈಸರ್ಗಿಕ ಶಕ್ತಿಗಳಿಂದ ಭೀತನಾದಾಗ ತೀವ್ರತೊಂದರೆಗೆ ಒಳಗಾದಾಗ ಯಾವುದೇ ಅಮೂರ್ತ, ನಿಸರ್ಗಾವೇತ ವ್ಯಕ್ತಿಯೊಂದು ತನ್ನನ್ನು ಶಿಕ್ಷಿಸುತ್ತದೆ – ತನ್ನ ಕೆಲಸಗಳಿಗಾಗಿ ಹಾಗಾಗಿದೆ ಎಂದು ಭಾವಿಸಿ ಅದರ ಪ್ರೀತ್ಯರ್ಥ ಪೂಜೆ, ಪ್ರಾರ್ಥನೆ, ಬಲಿ, ಯಜ್ಞ ಇವುಗಳನ್ನು ಕೊಡಲಾರಂಭಿಸಿದ. ಸೂರ್ಯ, ಆಕಾಶ, ಭೂಮಿ, ಸಾಗರ, ನದಿ ಇವುಗಳಲ್ಲಿ ದೇವತೆಗಳ ರೂಪಕಂಡ. ಅವುಗಳಿಗೆ ಒಂದು ಹೆಸರಿಟ್ಟ. ಈಜಿಪ್ಟ್‌ನಲ್ಲಿ ಸೂರ್ಯನನ್ನು ‘ರಾ’ ಅಥವಾ ‘ರೆ’ ಎಂದರು. ನೈಲ್ ನದಿಯ ಅಧಿದೇವತೆಯನ್ನು ‘ಆಸಿರೆ’ (ದೇವತೆ) ಎಂದು ಕರೆದರು. ಮೆಸಪೋಟೇಮಿಯದಲ್ಲಿ ‘ತಮಾರ್’ ಎಂದು ಸೂರ್ಯನನ್ನು ಕರೆದರು. ಭೂಮಿಯನ್ನು ‘ಬೆಲ್’ ಎಂದು ದೈವೀ ಕರಿಸಿದರು. ಪ್ರಾಚೀನ ಚೀನದಲ್ಲೂ ಗಾಳಿ, ಬೆಟ್ಟ, ಸಿಡಿಲುಗಳನ್ನು ದೈವರಾಗಿ ಪೂಜಿಸಿದರು. ಭಾರತದಲ್ಲಿ ಆಕಾಶವನ್ನು ‘ದ್ಯಾಉಸ್’ ನೆಲವನ್ನು ‘ಪೃಥಿವೀ’ ಎಂದು ಕರೆದರು. ಮಳೆತರುವ ಶಕ್ತಿ ‘ಇಂದ್ರ’ ನಾದ. ಸೂರ್ಯದೇವನ ಆರಾಧನೆಯಂತೂ ಇದ್ದೇ ಇತ್ತು. ಚೀನದಲ್ಲಿ ಪೂರ್ವಜರ ಆರಾಧನೆ, ನಾನಾ ರೀತಿಯ ಭೂತಗಳ ಆರಾಧನೆ ಇತ್ತು. ಮರ, ಬೆಟ್ಟ, ನದಿ, ಝುರಿಗಳು, ಉಲ್ಕೆ, ಸರ್ಪ ಮುಂತಾದ ಪ್ರಾಣಿಗಳು, ಇವುಗಳ ಆರಾಧನೆಯೂ ಇದೆ. ಆರಾಧ್ಯ ವಸ್ತುವನ್ನು ಆದರಿಸುವಾಗ ಅದರ ಬಗ್ಗೆ ಭಯವೂ ಇರಬಹುದು. ಅದರ ಬಗ್ಗೆ ಉಪಕಾರ ಸ್ಮರಣೆಯೂ ಇರಬಹುದು. ಗೋವಂಶವನ್ನು ಆರಾಧಿಸುವಾಗ ಉಪಕಾರ ಸ್ಮರಣೆ, ಸಮೃದ್ಧಿಯ ಆಶೆ ಇದ್ದರೆ, ಸರ್ಪದ ಆರಾಧನೆಗೆ ಭಯ ಕಾರಣವಿರಬಹುದು.

ವಿವಿಧ ರೀತಿಯ ಆರಾಧನೆಗಳ ನಡುವೆಯೂ ಭಾರತದಲ್ಲಿ ಬಲು ಪ್ರಾಚೀನ ಕಾಲದಿಂದ ‘ಏಕಂ ಸತ್, ವಿಪ್ರಾ ಬಹುದಾ ವದಂತಿ’ (ದೇವರು ಒಬ್ಬನೆ, ತಿಳಿದವರು ಅವನನ್ನು ನಾನಾ ರೀತಿ ವರ್ಣಿಸುತ್ತಾರೆ) ಎಂದಿದೆ. ಪಾಶ್ಚಾತ್ಯ ಲೇಖಕರು ತಾವು ಏಕೇಶ್ವರ ವಾದಿಗಳು ಭಾರತೀಯರು ಬಹುದೇವತಾ ಆರಾಧಕರು ಎಂದು ಬಣ್ಣಿಸುತ್ತಾರೆ. ‘ದೇವನೊಬ್ಬ ನಾಮ

ಹಲವು', 'ಆಕಾಶದಿಂದ ಬೀಳುವ ನೀರು ಸಾಗರಕ್ಕೆ ಹೋಗುವಂತೆ ಎಲ್ಲ ದೇವರಿಗೆ ಮಾಡುವ ನಮಸ್ಕಾರ ಒಬ್ಬರೇ ದೇವರಿಗೆ ಸಲ್ಲುತ್ತದೆ (ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಃ ಸರ್ವದೇವ ನಮಸ್ಕಾರಃ ಕೇಶವಂ. 'ಪ್ರತಿಗಚ್ಛತಿ') ಎಂಬ ಕಲ್ಪನೆಯ ಅರಿವಿಲ್ಲದೆ ನುಡಿವ ಮಾತುಗಳು ಇವು. ಇಲ್ಲಿ ಸಗುಣದೇವರ ಕಲ್ಪನೆ ಇದೆ; ವಿಷ್ಣು, ಶಿವ, ಶಕ್ತಿ, ಸೂರ್ಯ ಎಂದು ಮುಂತಾಗಿ ರೂಪ ನಿರ್ದೇಶ ಮಾಡಿ ಅದರಂತೆ ಮೂರ್ತಿಗಳನ್ನೂ ಮಾಡಿದ್ದಿದೆ. ಮೂರ್ತಿಗಳನ್ನೂ ಮಾಡದೆ ನಿರ್ಗುಣ ದೇವರ ಉಪಾಸನೆಯೂ ಇದೆ. ಎಲ್ಲ ಕಲ್ಪನೆಗಳು ಸರಿ, ಆದರೆ ಅವು ಪೂರ್ಣವಾಗಿ ಸರಿಯಲ್ಲ ಎಂಬ, ಆರು ಕುರುಡರು ಆನೆಯನ್ನು ಮುಟ್ಟಿ ವರ್ಣಿಸಿದ ಕತೆ ಉಪನಿಷತ್ತಿನಲ್ಲಿ ಇದೆ. ಸರಿಯಲ್ಲ ಎಂದಾದರೆ ಮೂರ್ತಿಪೂಜೆ ಏಕೆ ? ಈ ಪ್ರಶ್ನೆಗೆ ರಾಮಕೃಷ್ಣ ಪರಮಹಂಸರ ಉತ್ತರ ಮಾರ್ಮಿಕ. ಕುರುಡನಿಗೆ ನಡೆಯಲು ಊರುಗೋಲು ಬೇಕು. ಕುರುಡನಾಗಿದ್ದಷ್ಟು ದಿನ ಅವನು ಊರುಗೋಲಿಲ್ಲದೆ ನಡೆಯಲಾರ. ಬೌದ್ಧಿಕ ಪ್ರಗತಿ ಹೊಂದಿರದ ವ್ಯಕ್ತಿಗಳಿಗೆ, ಹುಲುಮಾನವರಿಗೆ ಮನಸ್ಸನ್ನು ಕೇಂದ್ರೀಕರಿಸಲು ಮೂರ್ತಿಬೇಕು. ಮಾನಸಿಕ ಪಂಗುತನ ಇಲ್ಲದವನಿಗೆ ಮೂರ್ತಿ ಬೇಕಾಗಿಲ್ಲ, ಆತ ನಿರಾಕಾರ ದೇವರನ್ನು ಪೂಜಿಸಬಹುದು, ಎಂದರು.

ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಲು ಅನೇಕ ದಾರಿಗಳಿರಬಹುದು. ರಾಜಮಾರ್ಗ ವಿರಬಹುದು; ಒಳದಾರಿ ಇರಬಹುದು. ಹೀಗಾಗಿ ವಿವಿಧ ಆರಾಧನಾ ವಿಧಿಗಳನ್ನು 'ಪಂಥ' (ದಾರಿ) ಎಂದರು. ಸಾಗಲು ನಡುಗೆ, ಎತ್ತಿನಗಾಡಿ, ಕುದುರೆಸವಾರಿ, ಸಾಯ್ಕಲ್, ಸ್ಕೂಟರ್, ಕಾರು , ಬಸ್ಸು, ವಿಮಾನ, ಹೀಗೆ ಹಲವು ಹತ್ತು ಸಾಧನಗಳನ್ನು ಬಳಸಬಹುದು. ಇದನ್ನು ಗಮನಿಸಿದರೆ ನಮ್ಮ ವಿವಿಧ ಆರಾಧನಾ ವಿಧಾನಗಳ ಅರ್ಥ ಆಗಬಹುದು. ಮನುಷ್ಯನ ಪ್ರವೃತ್ತಿ, ಮನೋಬಲಕ್ಕೆ ಅನುಗುಣವಾಗಿ ಶಾಂತ, ಉಗ್ರ ಹೀಗೆ ವಿವಿಧ ದೇವರನ್ನು ಆರಾಧಿಸಬಹುದು. ಭಕ್ತಿ, ಜ್ಞಾನ, ಕರ್ಮಮಾರ್ಗಗಳನ್ನು ಬಳಸಬಹುದು. ಈ ದೇಶದ ಮೇಲೆ ಶಕರ ದಾಳಿ ಆದಾಗ ಅಷ್ಟಭುಜದುರ್ಗೆ ಜನಪ್ರಿಯ ದೇವತೆಯಾದಳು. ವಿಜಯನಗರದ ಕಾಲಕ್ಕೆ ವೀರರಸ ಉಕ್ಕಿಸಲು ಹನುಮಂತ, ವೀರಭದ್ರರ ಆರಾಧನೆ ಜನಪ್ರಿಯವಾಯಿತು. ಇಲ್ಲಿ ನನ್ನದೇ ಸರಿ, ಎನ್ನುವ ಅಹಂಭಾವವಿಲ್ಲ. ಸಹಿಷ್ಣುತೆ ಇದೆ. 'ನಿನ್ನದೂ ಸರಿ, ನನ್ನದೂ ಸರಿ' ಎಂಬ ನಿಲುವಿದೆ. ಇದೇ ಸಹಿಷ್ಣುತೆ.

ಏಕ ವಿಶ್ವ ಸರಕಾರ ಬೇಕು ಎಂಬ ವಿಚಾರ ಪ್ರತಿಪಾದಿಸಿ ಅರ್ನಾಲ್ಡ್ ಟಾಯ್ನಬಿ, ವಿಶ್ವ ಐಕ್ಯಕ್ಕೆ ಅಡ್ಡಲಾಗುವ ಭೌಗೋಲಿಕ ಅಡಚಣೆ, ಭಾಷೆ, ಜನಾಂಗ, ಮುಂತಾದ ಅಡೆತಡೆಗಳ ಬಗ್ಗೆ ಚರ್ಚಿಸುತ್ತ ಧರ್ಮಗಳ ಭೇದವು ಜಾಗತಿಕ ಐಕ್ಯಕ್ಕೆ, ತಡೆಯಾಗುತ್ತದೆ, ಎಂದು ಹೇಳಿದರು. ಧರ್ಮದ ವಿಚಾರಕ್ಕೆ ಬಂದಾಗ, ಭಾರತದ ಹಿಂದೂ ಮತ್ತು ಬೌದ್ಧ ಧರ್ಮಗಳ ಸಹಿಷ್ಣು ನೀತಿಯನ್ನು ಜಗತ್ತು ಅನುಸರಿಸಿದರೆ ಈ ಒಂದು ಅಡಚಣೆ ನಿವಾರಣೆ ಆಗಬಹುದು ಎಂದಿದ್ದಾರೆ.

ಭಾರತದಲ್ಲಿ ಬಲು ಹಿಂದಿನಿಂದ ವಿವಿಧ ಧರ್ಮಗಳು ಪಂಥಗಳು ಇದ್ದರೂ ಧರ್ಮದ

ಹೆಸರಲ್ಲಿ ಪಾಶ್ಚಾತ್ಯ ಮತ್ತು ಮಧ್ಯ ಪೂರ್ವದ ದೇಶದಲ್ಲಿ ನಡೆದಂಥ ಭಾರೀ ರಕ್ತಪಾತದ ಯುದ್ಧಗಳಾಗಲಿಲ್ಲ. ಇಂಥ ಯುದ್ಧಗಳು ಆರಂಭವಾದುದು ವಿದೇಶಿ ಮೂಲದ ಅಸಹಿಷ್ಣು ಧರ್ಮಗಳು ಬಂದ ನಂತರವೇ. ಅದಕ್ಕೆ ಮೊದಲು ಭಾರತದ ಧರ್ಮಗಳಲ್ಲಿ ಭಾರೀ ರಕ್ತಪಾತದ ಯುದ್ಧಗಳಾಗಲಿಲ್ಲ. ರಾಜ ತನ್ನದೇ ಒಂದು ಧರ್ಮವಿದ್ದರೂ ಬೇರೆ ಧರ್ಮಗಳಿಗೆ ರಕ್ಷಣೆ ನೀಡಿದ. ಈ ರೀತಿ ರಕ್ಷಣೆ ನೀಡುವುದು 'ರಾಜಧರ್ಮ' ಎಂಬ ಕಲ್ಪನೆ ಇತ್ತು. ವಿಜಯನಗರದ ಕಾಲದಲ್ಲೇ ಜೈನರನ್ನು ಶ್ರೀ ವೈಷ್ಣವರು ಹಿಂಸಿಸಿದಾಗ ಬುಕ್ಕರಾಯನು ಮಧ್ಯಸ್ಥಿಕೆ ವಹಿಸಿದ್ದು ಪ್ರಸಿದ್ಧ. ಎಲ್ಲ ಧರ್ಮ ಪಂಥಗಳ ಕೇಂದ್ರಗಳಿಗೂ ರಾಜ ದಾನ ನೀಡುತ್ತಿದ್ದ. ಅಶೋಕನ ಕಾಲದಲ್ಲಿ ರಾಜ ಬೌದ್ಧ ಧರ್ಮಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿದ ತಾನೇ ನಡೆಸಿದ ಕಳಿಂಗ ಯುದ್ಧದಂತಹ ರಕ್ತಪಾತದ ಸನ್ನಿವೇಶ ಕಂಡು ಇದರ ನಿವಾರಣೆಗೆ ಬುದ್ಧನ ತತ್ತ್ವ ಅನಿವಾರ್ಯ ಎಂದು ಅವನಿಗೆ ಅನಿಸಿರಬೇಕು. ಆದರೆ ಅನ್ಯ ಧರ್ಮಗಳನ್ನು ಆತ ವಿರೋಧಿಸಲಿಲ್ಲ. ಅವನ ಶಾಸನಗಳಲ್ಲಿ ಹೇಳಿರುವುದು ಧರ್ಮ ತತ್ತ್ವಗಳ ಬೋಧನೆ, ಬೌದ್ಧ ಧರ್ಮದ ಪ್ರಚಾರವಲ್ಲ, ಎನ್ನುವವರುಂಟು, ಆದರೆ ಬೌದ್ಧ ಧರ್ಮದ ಪ್ರಚಾರಕ್ಕೆ ಆತ ಪ್ರಚಾರಕರನ್ನು ಎಲ್ಲೆಡೆ ಕಳಿಸಿದ್ದು ನಿಜ. ಅಶೋಕ, ಹರ್ಷ, ಬಂಗಾಳದ ಪಾಲರಿಂದ ಬೌದ್ಧ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ಸಿಕ್ಕಿತು. ಗಣ್ಯಸ್ಥಳಗಳಲ್ಲಿ ಚೈತ್ಯ, ವಿಹಾರಗಳನ್ನು ಇವರು ಕಟ್ಟಿದರು. ಸಾವಿರಾರು ಜನ ವಿಹಾರಗಳಲ್ಲಿ ಭಿಕ್ಕುಗಳಾಗಿ, ಭಿಕ್ಕುಣಿಯರಾಗಿ ನಾನಾ ಕಾರಣಗಳಿಗಾಗಿ ಸೇರಿದರು.

ದೇವತ್ವದ ಕಲ್ಪನೆಯ ಬಗ್ಗೆ ಖಚಿತವಾಗಿ ಬುದ್ಧನು ಏನನ್ನೂ ಹೇಳಿರಲಿಲ್ಲ. ಹೀಗಾಗಿ ಬೌದ್ಧರೂ ಬುದ್ಧನನ್ನೇ ದೇವರೆಂದು ನಂಬಿ ಆರಾಧಿಸಲು ಆರಂಭಿಸಿದರು. ನಾನಾ ಸಾಮಾಜಿಕ ಕಾರಣಗಳಿಂದ (ಬಹಿಷ್ಕೃತರು, ತಿರಸ್ಕೃತರು) ಬೌದ್ಧ ಧರ್ಮ ಸೇರಿ ಸಾಮಾಜಿಕ ಸ್ಥಾನಮಾನಗಳಿಸಿದರು. ಆದರೆ ವೈದಿಕ ಧರ್ಮ ಸುಮ್ಮನಿರಲಿಲ್ಲ. ತಮ್ಮ ಧರ್ಮ ತಪ್ಪು ಬೌದ್ಧನ ವಿಚಾರ ಸರಿ ಎಂದರೆ ಸುಮ್ಮನಿರಲಾದೀತೆ ? ವೇದಗಳು, ಉಪನಿಷತ್ತುಗಳು ಹೇಳಿದ ವಿಚಾರ ಸುಳ್ಳೇ ?

ಹೀಗಾಗಿ ವೈದಿಕರಲ್ಲಿ ಧರ್ಮೋತ್ಸಾಹ ಕೆರಳಿತು. ಅಲ್ಲದೆ ಸಾಮಾಜಿಕ ಕಾರಣಗಳಿಗಾಗಿ ಬೌದ್ಧರಾದವರಿಗೆ, ಕಾಲಕ್ರಮದಲ್ಲಿ ಮೋಕ್ಷ ಒಂದರ ಚಿಂತೆಯಲ್ಲೇ ಇರಲಾದೀತೆ ? ಧರ್ಮದ ಕಲ್ಪನೆ ಬೆಳೆದುದು ಭಯದಿಂದ, ಪರಾಶಕ್ತಿಯನ್ನು ಒಲಿಸಿಕೊಳ್ಳುವ ಉದ್ದೇಶದಿಂದ. 'ಮಹಾಸ್ವಾಮಿ, ನಾನು ನಿನಗೆ ಶರಣು, ನನ್ನನ್ನು ಕಾಪಾಡು, ಸಂಕಟಗಳಿಂದ ರಕ್ಷಿಸು' ಎಂದು ಆರಂಭವಾದ ಆರಾಧನೆ, ಪ್ರಾರ್ಥನೆ, ನಮಗೆ ಹಿಂಸೆ ಕೊಡದ ಈ ದೇವರು ನಮಗೆ ಏನನ್ನಾದರೂ ಕೊಡು ಎಂದರು, ಕೊಡಲಾರನೆ ? ಅವನು ಸರ್ವಶಕ್ತ. ಮಕ್ಕಳನ್ನು ನಾವು ರಕ್ಷಿಸುವುದರ ಜೊತೆ, ಪೋಷಿಸುವುದರ ಜೊತೆ ಅವರಿಗೆ ಬಟ್ಟೆ, ಆಭರಣ, ಅವರು ಕೇಳಿದ ವಸ್ತು ಕೊಡುವುದಿಲ್ಲವೆ ? ಹೀಗೆಯೇ ಈ ಸರ್ವಶಕ್ತನು ನಮಗೆ 'ವರ' ಕೊಡನೆ ? ಧನ, ಸುಂದರಪತ್ನಿ, ಗಂಡುಮಗು, ಬಡ್ತಿ, ಪರೀಕ್ಷೆಯಲ್ಲಿ ತೇರ್ಗಡೆ, ಹೀಗೆ ನಾನಾರೀತಿಯ

ಸವಲತ್ತು ಕೊಡನೆ ? ಕಾಮೇಷ್ಟಿ ಮಗನನ್ನು ಪಡೆಯಲುಎಂಬ ಯಜ್ಞವೇ ಇದೆ, ಹಿಂದೂ ದೇವರನ್ನು ವರದವಿಠ್ಠಲ, ವರದವೆಂಕಟೇಶ ಎಂದೂ ಕರೆಯುವರು.

ಬೌದ್ಧ, ಜೈನಧರ್ಮಗಳಲ್ಲಿ ಇಂಥ ವರದ ದೇವರು ಇರಲಿಲ್ಲ. ಆದರೆ ಹಿಂದೂ ಧರ್ಮದ ಯೋಗ ಸಾಧನೆಯಿಂದ ಸಿದ್ಧಿ ಪಡೆದವರೆನ್ನಲಾದ ಜನ ಭಕ್ತರಿಗೆ ವರಕೊಡಿಸುವ, ಪವಾಡ ನಡೆಸುವ ಸಾಮರ್ಥ್ಯ ಹೊಂದಿದ್ದರೆಂಬ ನಂಬಿಕೆ. ಜನಪ್ರಿಯತೆಯನ್ನು ಉಳಿಸಲು, ಜನರನ್ನು ಆಕರ್ಷಿಸಲು ಬೌದ್ಧರೂ ಯೋಗಸಿದ್ಧಿಗೆ ಶ್ರಮಿಸಿದರು. ಶಾಕ್ತರು ಸಾಧಿಸಿದ್ದರೆನ್ನಲಾದ ಸಿದ್ಧಿಗಳನ್ನು ಪಡೆಯಲ ತಾವೂ ಪಂಚ 'ಮಕಾರ'ಗಳನ್ನು (ಮದ್ಯ, ಮಾಂಸ, ಮತ್ಸ್ಯ ಮೈಥುನ, ಇತ್ಯಾದಿ) ಬಳಸಿ ಪ್ರಯೋಗ ಆರಂಭಿಸಿದರು. ಶಾಕ್ತರು ಇದನ್ನು ಕದ್ದು ಮುಚ್ಚಿ ಏಕಾಂತದಲ್ಲಿ ಮಾಡುತ್ತಿದ್ದರು. ಬೌದ್ಧರೂ ಇದನ್ನು ಮಾಡಲಾರಂಭಿಸಿದರು. ಸಿದ್ಧಿಯ ಸಾಧನೆಯ ಒಂದು ಭಾಗವಾದ ಮೈಥುನಕ್ಕೆ ಭಿಕ್ಷುಣಿಯರು ಪಕ್ಕಾದರು. ಧರ್ಮದ ಹೆಸರಲ್ಲಿ, 'ಅನುಕೂಲ ಸಿಂಧುವೂ ಆಗಿ ನಡೆಯುವ ಈ ವ್ಯಭಿಚಾರ ವಿಚಾರವಂತರನ್ನು ಕೆರಳಿಸಿತು. ಗಣ್ಯ ಕೇಂದ್ರಗಳಲ್ಲಿ, ಆಯಕಟ್ಟಿನ ಸ್ಥಳಗಳಲ್ಲಿ ಇದ್ದ ಶ್ರೀಮಂತ ವಿಹಾರಗಳಲ್ಲಿ ಇದು ಸಾಗಲು ವಿಚಾರವಂತರು ನೊಂದರು. ಆದಿ ಶಂಕರರೇ ಇದರ ವಿರುದ್ಧ ಯುದ್ಧ ಸಾರಿದರು. ಅದು ಬೌದ್ಧಿಕವಾಗಿತ್ತು. ಯಾವುದೇ ರಾಜ ಶಂಕರರರಿಗೆ ಬೆಂಬಲಕೊಟ್ಟ, ಸೇನಾಬಲ ಒದಗಿಸಿದ ಉದಾಹರಣೆ ಇಲ್ಲ. ವೈದಿಕ ಧರ್ಮದಲ್ಲಿ ತಪ್ಪುಹುಡುಕಿದ್ದ ಬುದ್ಧನ ಬಗ್ಗೆ ವೈದಿಕ ಮತೀಯರಲ್ಲಿ ಸಿಟ್ಟು ಇದ್ದು. ಇದೇ ಕಾಲದಲ್ಲಿ ಬೌದ್ಧರಲ್ಲಿ ಉಂಟಾದ ದೌರ್ಬಲ್ಯಗಳ ಲಾಭವನ್ನು ಶಂಕರರಂಥ ಭಾರೀ ವಿದ್ವಾಂಸರ ಮೂಲಕ ವೈದಿಕರು ಪೂರ್ಣವಾಗಿ ಪಡೆದರು. ಶಂಕರರಿಗೆ ಸಮಾಜದಿಂದ ಅಪಾರ ಬೆಂಬಲ ದೊರೆಯಿತು.

ಶಂಕರರು ವೈದಿಕರನ್ನು ಸಂಘಟಿಸಿ, ವಿವಿಧ ಪಂಥಗಳ ಸಮೀಕರಣ ಸಾಧಿಸಿದರು. ಪಂಚಾಯತನ ಕಲ್ಪನೆ ತಂದರು. ಶಿವ, ವಿಷ್ಣು, ಶಕ್ತಿ, ಗಣಪತಿ, ಸೂರ್ಯ ಈ ಐದು ಪಂಥಗಳನ್ನು ಒಟ್ಟುಗೂಡಿಸಿ, ಅವರವರಿಗೆ ಪ್ರಿಯವಾದ ದೇವರನ್ನು ಮಧ್ಯದಲ್ಲಿಟ್ಟು ಆರಾಧನೆಗೆ ಅವಕಾಶಮಾಡಿದರು. ಕಾಲಕ್ರಮದಲ್ಲಿ ಕುಮಾರ (ಕಾರ್ತಿಕೇಯ) ನನ್ನೂ ಸೇರಿಸಿ ಷಣ್ಮತ ಸ್ಥಾಪನಾಚಾರ್ಯರೆನಿಸಿದರು. ಬುದ್ಧನ ತಾತ್ತ್ವಿಕ ಕಲ್ಪನೆಗಳನ್ನೆ ಬಳಸಿ ವೈದಿಕ ಕಲ್ಪನೆಗಳನ್ನು ಮುಂದಿಟ್ಟರು. ಬುದ್ಧನನ್ನು ವಿಷ್ಣುವಿನ ದಶಾವತಾರದಲ್ಲಿ ಸೇರಿಸಿದರು. ಮುಂದಿನ ಹಿಂದೂ ತತ್ತ್ವಜ್ಞಾನಿಗಳು ಇದಕ್ಕಾಗಿ ಶಂಕರರನ್ನು ಪ್ರಚ್ಛನ್ನ (ಮಾರುವೇಷದ) ಬೌದ್ಧ ಎಂದೂ ಖಂಡಿಸಿದರು.

ಇದೇ ರೀತಿ ಜೈನರಲ್ಲಿ ತೀರ್ಥಂಕರರು ವರದ ದೇವರಲ್ಲವಾಗಿ ತೀರ್ಥಂಕರರ ಶಾಸನ ದೇವತೆಗಳಾದ ಪದ್ಮಾವತಿ, ಕೂಷ್ಮಾಂಡಿನಿ, ಜ್ವಾಲಾಮಾಲಿನಿ ಇವರನ್ನು 'ವರದ' ದೇವತೆಗಳಾಗಿ ಆರಾಧಿಸಿದರು. ಹುಂಚದ ಪದ್ಮಾವತಿ ವರದ ದೇವತೆಯೆಂದು ಪ್ರಸಿದ್ಧಳು (ಪದ್ಮಾವತಿ ಪಾರ್ಶ್ವನಾಥ ತೀರ್ಥಂಕರರ ಶಾಸನ ದೇವತೆ).

ಇನ್ನು ಪಾಶ್ಚಾತ್ಯ ದೇಶದಲ್ಲಿ ಕಾಣಿಸಿದ, ಇನ್ನೂ ಆರಾಧಿಸಲಾಗುವ ದೇವರೆಂದರೆ ಯಹೂದಿಗಳ 'ಜಾವೆ' ಇವನಲ್ಲದೆ ಬೇರೆ ದೇವರಿಲ್ಲ. ಅವನ ಭಕ್ತರಾದ ನಾವು ಆಯ್ದು ಜನ (Choscn people) ಎಂದು ಯಹೂದಿಗಳು ನಂಬಿದವರು. ಹಳೆಯ ಒಡಂಬಡಿಕೆ (Old Testment) ಅವರ ಧರ್ಮಗ್ರಂಥ. ಅವರ ಧರ್ಮತತ್ತ್ವಗಳಾದ 'ತೋರಾ'ಗಳನ್ನು ಸಂತ ಮೋಸಸ್ ನೀಡದನಂತೆ. ಅವನು ಈಜಿಪ್ಟ್‌ನಿಂದ ಅವರನ್ನು ಕ್ಯಾನನ್ (ಈಗಿನ ಇಸ್ರೇಲ್ ಪ್ಯಾಲೆಸ್ತೀನ್) ಗೆ ಕರೆದುತಂದ. ಅವನು ಹೇಳಿಕೊಟ್ಟ ತತ್ತ್ವಗಳೇ ಹತ್ತು ಆಜ್ಞೆಗಳು (Ten Commandments). ಇಸ್ರೇಲ್‌ನ ಮೂಲ ಪುರುಷನು ಅಬ್ರಹಾಂ (ಮುಸಲ್ಮಾನರು ಹೇಳುವಂತೆ ಇಬ್ರಾಹಿಂ). ಸುನ್ನತ ಎಂಬ ಪುರುಷಲಿಂಗದ ಮುಂದೊವಲು ಕತ್ತರಿಸುವ ವಿಧಿ ದೇವರು ಮತ್ತು ಮಾನವನ ಜೊತೆ ಸಂಪರ್ಕ ಸೂಚಿಸುವಂಥದ್ದು (ನಮ್ಮಲ್ಲಿ ಉಪನಯನ ಅಥವಾ ಲಿಂಗದೀಕ್ಷೆ ಇದ್ದಂತೆ) ದೇವರ ಆಯ್ದ ಜನ ತಾವು ಎಂದು ಭಾವಿಸುವ ಯಹೂದಿಗಳು ಅವರನ್ನು 'ಮ್ಲೇಚ್ಛ' (Barbarians) ಎಂದು ಭಾವಿಸಿ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುವುದಿಲ್ಲ.

ಮರುಭೂಮಿಯಾದ ಇಸ್ರೇಲ್‌ನಲ್ಲಿ ವಾಸಿಸಿದ ಯಹೂದಿಯರು ವ್ಯಾಪಾರ, ಬಡ್ಡಿ ವ್ಯವಹಾರದಲ್ಲಿ ಚತುರರು. ರೋಮನ್ ಸಾಮ್ರಾಜ್ಯದ ಕಾಲದಲ್ಲಿ ಅವರನ್ನು ಇಸ್ರೇಲ್‌ನಿಂದ ಓಡಿಸಿದರು. ಜಗತ್ತಿನ ನಾನಾಭಾಗಗಳಲ್ಲಿ ಅವರು ಹರಡಿದರು. ಯೂರೋಪ್‌ನ ಎಲ್ಲ ದೇಶಗಳಲ್ಲಿ ಅವರಿದ್ದರು. ಕೆಲವು ಸಾವಿರ ಜನ ಭಾರತಕ್ಕೂ ಬಂದು ಕೇರಳ, ಮಹಾರಾಷ್ಟ್ರ ಗುಜರಾತ್ ಕರಾವಳಿಯಲ್ಲೂ ಇದ್ದರು. ಯೂರೋಪ್‌ನಲ್ಲಿ ಅವರನ್ನು ಅಸ್ಪೃಶ್ಯರಂತೆ ಕಾಣಲಾಗುತ್ತಿತ್ತು. ವ್ಯಾಪಾರೀವೃತ್ತಿಯವರೂ ಜಿಪುಣರೂ ಎಂದು ಭಾವಿಸಲಾದ ಜ್ಯೂಗಳು ಐರೋಪ್ಯ ಕ್ರೈಸ್ತರಿಂದ ತಿರಸ್ಕಾರಕ್ಕೆ ಒಳಗಾದರು. ಅವರಿಗೆ ಪ್ರತ್ಯೇಕ ಕಾದಿಟ್ಟ (ರಕ್ಷಿತ) ವಸತಿಗಳಿದ್ದವು. ಷೇಕ್ಸ್‌ಪಿಯರನ ನಾಟಕ 'ಮರ್ಚಂಟ್ ಆಫ್ ವೆನೀಸ್'ನಲ್ಲಿ ಚಿತ್ರಿಸಿದ ಯುಹೂದಿ ಷೈಲಾಕ್ ಹಣದಾಸೆಯ ಕ್ರೂರಿ ಎಂಬ ಚಿತ್ರ ಯಹೂದಿಗಳ ಬಗ್ಗೆ ಐರೋಪ್ಯರಿಗಿದ್ದ ಭಾವನೆಯನ್ನು ಪ್ರತಿಬಿಂಬಿಸುತ್ತದೆ.

ಯಹೂದಿಗಳು 'ದೇವರ ಆಯ್ದ ಜನ ತಾವು' ಎಂಬ ಭಾವನೆಯಿಂದ ದಿಟ್ಟ ಜೀವನ ನಡಸಿದರು. ಬುದ್ಧಿವಂತರಾದ, ಜಿಗುಟಾದ ಜನ. ಶಿಕ್ಷಣ, ಕಲೆ, ವಿಜ್ಞಾನಗಳಲ್ಲಿ ಮೇಲ್ಮೈಸಾಧಿಸಿದರು. ಮೆನುಹಿನ್, ಮಾರ್ಕ್ಸ್, ಐನ್‌ಸ್ಟಿನ್ ಇವರೆಲ್ಲ ಯಗೂದಿಗಳು. ಪ್ರತೀಹೊಸವರ್ಷದ ಕಾಲಕ್ಕೆ ಮುಂದಿನ ವರ್ಷ ತಾವು ಜೆರುಸಲೆಂ ತಲಪಬೇಕು, ಎಂದು ಪ್ರತಿಜ್ಞೆ ಮಾಡುತ್ತ ಎರಡು ಸಾವಿರ ವರ್ಷಗಳವರೆಗೆ ಅವರು ಪೀಳಿಗೆಯಿಂದ ಪೀಳಿಗೆಗೆ ತಮ್ಮ ತಾಯಿನಾಡಿನ ಬಗೆಗಿನ ಎಚ್ಚರವನ್ನು ಜೀವಂತವಾಗಿಟ್ಟರು. ರೋಮನರ ವಶವಿದ್ದ ಜೆರುಗಿಸಲೆಂ ಮುಂದೆ ಅರಬ್ಬರ ವಶವಾಗಿ, ಇಸ್ಲಾಂನ ನೆಲವಾಯಿತು.

ಅನೇಕ ಯಹೂದಿಗಳು ಅಮೆರಿಕಕ್ಕೆ ಹೋದರು. ಅಮೆರಿಕದ ಸಮೃದ್ಧ ಭೂಮಿಯಲ್ಲಿ ಕಷ್ಟಪಟ್ಟು ದುಡಿದು ಶ್ರೀಮಂತರಾದರು. ವ್ಯಾಪಾರ, ಕೈಗಾರಿಕೆ, ವಿಜ್ಞಾನ, ಶಿಕ್ಷಣಗಳಲ್ಲಿ

ಪ್ರಗತಿ ಸಾಧಿಸಲು ಮುಕ್ತ ಅವಕಾಶ ಪಡೆದರು. ಹಲವು ಮಿಲಿಯ ಯೆಹೂದಿಗಳು ಅಲ್ಲಿಯ ನೆಲೆನಿಂತು ಅಮೆರಿಕದ ರಾಜಕಾರಣದಲ್ಲಿ ಒಂದು ಭದ್ರ, ದೃಢ ಧ್ವನಿ ಪಡೆದರು. ಇಂಗ್ಲಂಡ್‌ನಲ್ಲೂ ಅವರಿಗೆ ಬಲವಾದ ನೆಲೆಸಿಕ್ಕಿತು.

ಯಹೂದಿಗಳಲ್ಲೇ ಒಬ್ಬನಾದ ಯೇಸು ಯಹೂದಿಗಳು ತಮ್ಮ ಮೂಲದೇಶದಲ್ಲಿ ಶ್ರೀಮಂತರಾಗಿ, , ಶೋಷಕರಾಗಿ ಬಡವರನ್ನು ಪೀಡಿಸಿ, ಧಾರ್ಮಿಕ ಕರ್ಮಕಾಂಡಗಳಲ್ಲಿ ಮಗ್ನನಾಗಿದ್ದಾಗ ಬಂಡು ಕೋರನಾಗಿ ಹುಟ್ಟಿದ ಸರಳ ಧರ್ಮಬೋಧಿಸಿದ. ಶೋಷಕ 'ಪರಿಪಾಯ'ರ ವಿರುದ್ಧ ಜನರನ್ನು ರಕ್ಷಿಸಿದ. ಬಡಜನ ಅವರ ಜೊತೆ ಸೇರಿದರು. ಯೇಸುವಿನ ಬಂಡಾಯ ಸಹಿಸದ ಯಹೂದಿಗಳು ರೋಮನ್ ಅಧಿಕಾರಿಗೆ ಫಿರ್ಯಾದು ನೀಡಿದರು. ಅವನನ್ನು ವಿಚಾರಣೆಗೆ ಒಳಪಡಿಸಿ ಶಿಲುಬೆಗೇರಿಸಿದರು.

ಯೇಸುವಿನ ೧೨,ಅಗ್ರಶಿಷ್ಯರಲ್ಲದೆ, ಮುಂದೆ ಯೇಸು ಮರಣಿಸಿದ ನಂತರ ಪಾತ್ ಎಂಬ ವ್ಯಕ್ತಿ ಯೇಸುವಿನ ಭಕ್ತನಾದ ಏಸು ಬೋಧಿಸಿದ್ದ ಯಹೂದಿಗಳಿಗಷ್ಟೇ ಎಂಬ ಭಾವನೆ ಇದ್ದಾಗ ಅರಬ್ಬರು, ಐರೋಪರಲ್ಲೂ, (ಗ್ರೀಸ್, ರೋಮ್) ಈ ಧರ್ಮವನ್ನು ಸಹ ಬೋಧಿಸಿದ ರೋಮ್ ನಗರಕ್ಕೂ ಹೋಗಿ ಕ್ರೈಸ್ತ ಅನುಯಾಯಿಗಳನ್ನು ಪಡೆದ. ಕ್ರಾಸ್ ಏರಿ ಹುತಾತ್ಮನಾದ ಏಸುವಿನ ಅನುಯಾಯಿಗಳು ಕ್ರೈಸ್ತರೆನಿಸಿದರು. ಏಸುವಿನ ಅಗ್ರ ಶಿಷ್ಯ ಪೀಟರ್ ನನ್ನ ಮುಂದೆ ರೋಮ್‌ನಲ್ಲಿ ಶಿಲುಬೆಗೇರಿಸಿ ರೋಮಿನ ಸಮ್ರಾಟರು ಕೊಲ್ಲಿಸಿದರು ಹುತಾತ್ಮರ ರಕ್ತ ಕ್ರೈಸರಿಗೆ ಪ್ರಚೋದಕವಾಯಿತು. ಬಡವರ, ದಲಿತರ ಒಲವು ಪಡೆದಿದ್ದ ಕ್ರೈಸ್ತಧರ್ಮ ನೂರಾರು ಉತ್ಸಾಹೀ ಪ್ರಚಾರಕರಿಂದ ಯುರೋಪ್‌ನಲ್ಲಿ ಸತತ ಪ್ರಸಾರವಾಯಿತು. ಭೂಮಧ್ಯ ಸಮುದ್ರದ ಸುತ್ತ ಹಾಗೂ ಏಷ್ಯಮೈನರರ್ ನಲ್ಲೂ ಧರ್ಮ ಹರಡಿತು. ರೋಮನ್ ಸಮ್ರಾಟ ಡಯೋಕ್ಲಿಶಿಯಸ್ ಶ(ಕ್ರಿ.ಶ ೨೮೪-೩೦೫) ಕ್ರೈಸ್ತಧರ್ಮವನ್ನು ಅಳಿಸಿ ಹಾಕ ಹೊರಟ. ಆದರೆ ಮುಂದಿನ ಚಕ್ರವರ್ತಿ ಕಾನ್ಸ್‌ಟೆಂಟೈನ್ ತಾನೇ ಕ್ರೈಸ್ತ ಧರ್ಮ ಸ್ವೀಕರಿಸಿ ಧರ್ಮಕ್ಕೆ ಪೂರ್ತಿ ಬೆಂಬಲಕೊಟ್ಟ. ಚಕ್ರವರ್ತಿ ಥಿಯಡೊಸಿಯಸ್ ಕಾಲದಲ್ಲಿ (೩೪೫-೯೫) ಕ್ರೈಸ್ತಧರ್ಮ ಸಾಮ್ರಾಜ್ಯದ ಧರ್ಮವಾಯಿತು. ರೋಮ್ ನಗರ ಕ್ರೈಸ್ತಧರ್ಮದ ಮುಖ್ಯಸ್ಥ ಪೋಪರ ಪೀಠವಾಯಿತು.

ಮುಂದೆ ಹಲವು ಬರ್ಬರ ಜನಾಂಗಗಳು ಪಾಂಡಲರು, ಗಾಥರು, ನಿಸಿಗಾಥರು, ಜೂಟರು, ಫ್ರ್ಯಾಂತರು, ಆ್ಯಂಗ್ಲೊ ಸ್ಯಾಕ್ಸನರು, ಹೂಣರು ಇವರೆಲ್ಲ ರೋಮನ್ ಸಾಮ್ರಾಜ್ಯವನ್ನು ಆಕ್ರಮಿಸಿ ಸಾಮ್ರಾಜ್ಯದಲ್ಲಿ ಕೊಲೆ, ಸುಲಿಗೆ, ಲೂಟಿ ಮಾಡಿ ಸಾಮ್ರಾಜ್ಯವನ್ನು ನಾಲ್ಕು, ಐದನೆಯ ಶತಮಾನದಲ್ಲಿ ನಾಮಾವಶೇಷಮಾಡಿದರು. ಅಸಾಧರಣ ಅಮಾನವೀಯ ಕ್ರೂರರಾದ ಈ ಜನರ ಉತ್ತರಾಧಿಕಾರಿಗಳೇ ಈಗ ಯೂರೋಪ್‌ನ ವಿವಿಧ ದೇಶಗಳಲ್ಲಿ ಇರುವ ಜನ.

ಈ ಅನಾಗರಿಕರನ್ನು ಕಾಲಕ್ರಮದಲ್ಲಿ ಕ್ರೈಸ್ತಧರ್ಮಕ್ಕೆ ಮತಾಂತರ ಮಾಡಿದರು. ಈ

ಅನಾಗರಿಕ ಕ್ರೂರ ಜನ ಇದರಿಂದ ನಾಗರಿಕರಾದರು. ಪೋಪರು ಧರ್ಮದ ಕಟ್ಟುಪಾಡಿನಲ್ಲಿ ತಂದು ಅವರನ್ನು ನೀತಿವಂತರಾಗಿ ಮಾಡಿದರು. ಪೋಪರು ಎಲ್ಲೆಡೆ ಇಡೀ ಯೂರೋಪ್‌ನಲ್ಲಿ ರೋಮನ್ ಸಾಮ್ರಾಜ್ಯವಿದ್ದಲ್ಲೆಲ್ಲ ಪ್ರಭಾವ ಹೊಂದಿದರು. ಎಲೆಲ್ಲೂ ಹಿಂದಿನ ರೋಮನ್ ಸಾಮ್ರಾಜ್ಯದ ಪ್ರಾಂತಗಳಂತೆ ಧರ್ಮಪ್ರಾಂತಗಳನ್ನು ಮಾಡಿ ಅವುಗಳಿಗೊಬ್ಬ ಆರ್ಚ್ ಬಿಷಪ್, ಅವನ ಕೆಳಗೆ ಬಿಷಪ್, ಅವನ ಕೆಳಗೆ ಪ್ರತೀ ದೇವಾಲಯ (ಚರ್ಚ್ ಅಥವಾ ಇಗರ್ಜಿ) ಇದ್ದಲ್ಲಿ ಒಬ್ಬ ಪಾದ್ರಿ (ಪ್ಯಾರಿಷ್ ಪ್ರೀಸ್ಟ್)ಯನ್ನು ನೇಮಿಸಿದರು. ಈ ಎಲ್ಲ ಧಾರ್ಮಿಕ ಮುಖ್ಯರು ಅವಿವಾಹಿತರಾಗಿದ್ದು ಧಾರ್ಮಿಕ ಹಾಗೂ ಅನ್ಯ ಶಿಕ್ಷಣ ಪಡೆದವರು. ಸಾಮ್ರಾಜ್ಯ ಇರದಿದ್ದರೂ ಕ್ರೈಸ್ತಧರ್ಮ ಯೂರೋಪ್‌ಗೆ ಐಕ್ಯನೀಡಿತು. ಲ್ಯಾಟಿನ್ ಭಷೆ (ಇದು ಕ್ರಿಸ್ತನ ಭಾಷೆ್ಲಅಲ್ಲ ರೋಮ್‌ನ ಭಾಷೆ) ಯೂರೋಪ್‌ನ ಬೌದ್ಧಿಕ ಚಟುವಟಿಕೆಗಳ, ಧಾರ್ಮಿಕ ಕಾರ್ಯಗಳ ಭಾಷೆಯಾಗಿ ಬೌದ್ಧಿಕ ಒಗ್ಗಟಿಗೆ ದಾರಿಮಾಡಿತು.

ಮಧ್ಯಯುಗದಲ್ಲಿ (೫ ರಿಂದ ೧೫ನೆಯ ಶತಮಾನ) ಯೂರೋಪ್‌ನಲ್ಲಿ ಸರಂಜಾಮು ಷಾಹಿ (ಫ್ಯೂಡಲಿಸಂ) ಮತ್ತು ಅಲ್ಲಿ ಇಲ್ಲಿ ಕೆಲವು ಪ್ರಭುತ್ವಗಳಾದವು. ಇವುಗಳನ್ನು ನಿಯಂತ್ರಿಸಲು ಪವಿತ್ರ ರೋಮನ್ ಸಾಮ್ರಾಜ್ಯ (ಹೋಲಿ ರೋಮನ್ ಎಂಪಯಿರ್) ಎಂಬ ಪೋಪ್‌ರ ಬೆಂಬಲ ಪಡೆದ ಒಂದು ವ್ಯವಸ್ಥೆ ರೂಪು ತಾಳಿತು. ಇಟಲಿ, ಜರ್ಮನಿ, ಸ್ಪೇನ್‌ಗಳಲ್ಲಿ ಇದರ ಅಲ್ಪಸ್ವಲ್ಪ ವರ್ಚಸ್ಸು ಇತ್ತು. ಉಳಿದಂತೆ ಕಾಲಕ್ರಮದಲ್ಲಿ ಇಂಗ್ಲೆಂಡ್, ಫ್ರಾನ್ಸ್,ರಷ್ಯ ಮುಂತಾದೆಡೆ ಸ್ವತಂತ್ರ ರಾಷ್ಟ್ರೀಯ ಪ್ರಭುತ್ವಗಳು ಮಧ್ಯಯುಗದಲ್ಲಿ ಬೆಳೆಯ ಹತ್ತಿದವು.

ಇದೇ ಕಾಲದಲ್ಲಿ ಕ್ರೈಸ್ತಧರ್ಮವನ್ನು ಬಲಪಡಿಸುವ ಅನೇಕ ಸಂನ್ಯಾಸಿ ಪಂಥಗಳು ಬೆಳೆದವು. ಸಂತ ಬೆನಡಿಕ್ಟ್ ಆರನೆಯ ಶತಮಾನದಲ್ಲಿ ಆರಂಭಿಸಿದ ಬೆನೆಡಿಕ್ಟಿಯಸ್ ಸಂನ್ಯಾಸಿ ಪಂಥ, ಫ್ರಾನ್ಸ್‌ನಲ್ಲಿ ೧೦೯೮ರಲ್ಲಿ ಆರಂಭವಾದ ಸಿಸ್ಟರ್ಸಿಯನ್ ವಂಥ, ಇಟಲಿಯಲ್ಲಿ ೧೨ ನೇಯ ಶತಮಾನದಲ್ಲಿ ಬೆಳೆದ ಫ್ರಾನಿಸ್ಕನ್ ಪಂಥ, ಡಾಮಿನಿಕನ್ ಪಂಥ ಈ ಎಲ್ಲ ಪಂಥಗಳ ಸಂನ್ಯಾಸಿ (ಫಾದ್ರಿ) ಗಳು ಪೋಪರಿಗೆ ಅಧೀನರಾಗಿ ಶಿಕ್ಷಣ, ಶುಶ್ರೂಷೆ, ಮುಂತಾದ ಸೇವಾಕಾರ್ಯಗಳಲ್ಲಿ ತೊಡಗಿ ಕ್ರೈಸ್ತಧರ್ಮವನ್ನು ಜನಪ್ರಿಯಗೊಳಿಸಿದವು. ಯೂರೋಪ್‌ನಲ್ಲಿ ಅದರ ಪ್ರಭಾವ ಪೂರ್ಣವಾಯಿತು. ಸಂನ್ಯಾಸಿಯರ (ನನ್ಸ್) ಪಂಥಗಳೂ ಬೆಳೆದವು. ಮುಂದೆ ಸಂನ್ಯಾಸಿಯರ ಜೊತೆ ಪಾದ್ರಿಗಳ ಅನೈತಿಕ ಸಂಬಂಧಗಳು ಬೆಳೆದು, ಈ ಬಗ್ಗೆ ಬುಕೇಕಿಯೋ ಎಂಬ ಇಟಲಿಯ ಲೇಖಕ ಚರ್ಚನ್ನು ಲೇವಡಿಮಾಡಿ ಅನೇಕ ಕತೆಗಳನ್ನು ಬರೆದ.

ಆದರೆ ಪೋಪರ ಧಾರ್ಮಿಕ ಸರ್ವಾಧಿಕಾರೀ ಪ್ರಭುತ್ವದ ವಿರುದ್ಧ ರಾಜರೂ ಅನೇಕ ಧಾರ್ಮಿಕ ನಾಯಕರೂ ಬಂಡಾಯ ಹೂಡುತ್ತಲೇ ಇದ್ದರು. ಇದೇ ಕಾಲಕ್ಕೆ ಏಳನೆಯ ಶತಮಾನದಲ್ಲಿ ಇಸ್ಲಾಂಧರ್ಮ ಸ್ಥಾಪನೆಯಾಗಿ ಆ ಧರ್ಮೀಯರಾದ ಅರಬ್ಬರು ಯೇಸು

ಕ್ರೈಸ್ತನು ಹುಟ್ಟಿದ್ದ ಬೆತ್ಲಹೆಂ, ಜೆರುಸಲೆಂ ಮುಂತಾದ ಸ್ಥಳಗಳನ್ನು ಗೆದ್ದಾಗ ಅವುಗಳ ರಕ್ಷಣೆಗಾಗಿ ಯೂರಪ್ ನಿರ್ದೇಶನದಂತೆ ಧರ್ಮಯುದ್ಧಗಳ ಸರಣಿ ನಡೆಸಿತು. ಹನ್ನೊಂದರಿಂದ ೧೪ನೆಯ ಶತಮಾನದವರೆಗೆ ನಡೆದ ಎಂಟು ಧರ್ಮಯುದ್ಧಗಳು ಪೋಪರ ಶಕ್ತಿವರ್ಧನೆಗೆ ಕಾರಣವಾದವು. ಯೂರೋಪ್‌ನ ಹಲವು ಪಾಳೆಯಗಾರರು ಅವುಗಳಲ್ಲಿ ಪಾಲುಗೊಂಡು ಹತರಾದರು; ಇಲ್ಲವೇ ಕಾಯಂ ಆಗಿ ಪೂರ್ವಯೂರೋಪ್, ಪಶ್ಚಿಮ ಏಷ್ಯಗಳಿಗೆ ವಲಸೆಹೋಗಲು ಕಾರಣವಾದವು. ಈ ಪಾಳೆಯಗಾರರು ಕಣ್ಮರೆಯಾದಾಗ ಅವರ ನೆಪಮಾತ್ರ ಯಜಮಾನರಾಗಿದ್ದ ಅರಸರು ಪ್ರಬಲಿಸಿದರು. ರಾಷ್ಟ್ರೀಯ ಪ್ರಭುತ್ವಗಳು ಯೂರೋಪ್‌ನಲ್ಲಿ ಬೆಳೆಯಲು ಇದರಿಂದ ಅನುಕೂಲವಾಯಿತು. ಪ್ರಬಲರಾದ ಈ ರಾಷ್ಟ್ರೀರಿಯ ಪ್ರಭುಗಳು ಪವಿತ್ರ ರೋಮನ್ ಸಾಮ್ರಾಜ್ಯ ಹಾಗು ಪೋಪರ ಹಿಡಿತದಿಂದ ಪಾರಾಗಲು ಉತ್ಸುಕರಾದರು.

ಇದೇ ಕಾಲದಲ್ಲಿ ಪೋಪರ ಅಧಿಕಾರದ ವಿರುದ್ಧ ಬಂಡಾಯಗಳೂ ಆದವು. ಯೂರೋಪ್‌ನಲ್ಲಿ ಆಗ ವೈಚಾರಿಕ ಪುನರುಜ್ಜೀವನ (Renaissance) ಕಾಣಿಸಿಕೊಂಡು ಭೂಮಿಯ ಬಗ್ಗೆ, ಬ್ರಹ್ಮಾಂಡದ ಬಗ್ಗೆ, ನಿಸರ್ಗದ ಬಗ್ಗೆ ಕ್ರೈಸ್ತಧರ್ಮ ಹೇಳುತ್ತಿದ್ದ ಸಂಗತಿಗಳು ನಿಜವಲ್ಲವೆಂದು ತಿಳಿಯುತ್ತಿರಲು ವಿಚಾರ ವಾದಿಗಳ ಚರ್ಚ್‌ನ ತತ್ತ್ವಗಳ ಬಗ್ಗೆ ನಂಬಿಕೆ ಸಡಿಲಾಯಿತು. ಇಂಗ್ಲೆಂಡ್‌ನಲ್ಲಿ ಜಾನ್ ವೈಕ್ಲಿಫ್ (೧೩೬೯-೧೪೧೫), ಬೊಹಿಮಿಯದಲ್ಲಿ (೧೩೬೯-೧೪೧೫), ಸ್ವಿಜರ್ಲೆಂಡ್‌ನಲ್ಲಿ ಉಲ್‌ರಿಕ್ ಜ್ವಿಂಗಲಿ (೧೪೮೪-೧೫೩೧) ಪೋಪರ ಅಧಿಕಾರ, ವಿಚಾರಗಳ ಬಗ್ಗೆ ಬಂಡೆದ್ದರು. ಆದರೆ ಜರ್ಮನಿಯ ಮಾರ್ಟಿನ್ ಲೂಥರ್(೧೪೮೩-೧೫೪೬) ಎಂಬಾತ ನಡೆಸಿದ ಬಂಡಾಯ ಪ್ರಬಲವಾಗಿ, ಮುಂದೆ ಕ್ಯಾಥಲಿಕ್ ಚರ್ಚ್ ಒಡೆಯಿತು. ಹೋಲಿರೋಮನ್ ಸಾಮ್ರಾಜ್ಯದ ವಿರುದ್ಧ ಬಂಡೇಳಬಯಸಿದ ಜರ್ಮನಿಯ ಹಲವು ಪುಂಡರಸು ಲೂಥರ್‌ಗೆ ಬೆಂಬಲವಿತ್ತರು.

ಈ ನಡುವೆ ಪೋಪರ ಮೇಲೆ ಇಟಲಿಗೆ ಇರುವ ಅಧಿಕಾರವನ್ನು ಧಿಕ್ಕರಿಸಿ ಫ್ರಾನ್ಸ್ ಪೋಪರನ್ನು ಫ್ರಾನ್ಸ್‌ನಲ್ಲಿ ಒತ್ತಾಯದಿಂದ ೧೩೦೭ರಿಂದ ೧೩೭೭ರ ವರೆಗೆ ತಂದಿರಿಸಿಕೊಂಡರು. ಹಳೆಯ ಒಡಂಬಡಿಕೆಯಲ್ಲಿ ಹೇಳಿದ್ದ ಎಲ್ಲ ಯಹೂದಿಯರನ್ನು ಬ್ಯಾಬಿಲನ್ (ಮೆಸಪೊಟೇಮಿಯ) ಗೆ ಒಯ್ದು ಬಂಧನದಲ್ಲಿ ಇಟ್ಟ ಪ್ರಕರಣವನ್ನು ಜ್ಞಾಪಿಸಿ ಪೋಪರ ಈ ಸ್ಥಿತಿಯನ್ನು (ಬ್ಯಾಬಿಲನ್‌ನಲ್ಲಿ ಜೈಲುವಾಸ) (Babylonish captivity) ಎಂದು ಲೇವಡಿಮಾಡಿದರು. ಆಗ ಪೋಪ್ ಫ್ರೆಂಚ್ ದೊರೆಯ ಕೈಗೊಂಬೆಯಾಗಿರಬೇಕಾಯಿತು. ಇದನ್ನುಕೊನೆಗೊಳಿಸಲು ೧೩೭೮ರಲ್ಲಿ ಇಟಲಿ ಮತ್ತು ಅದರ ಮಿತ್ರ ದೇಶಗಳ ಧರ್ಮಸಂಸ್ಥೆಗಳು ಬೇರೊಬ್ಬ ಪೋಪರನ್ನು ಆಯ್ಕೆ ಮಾಡಿ, ಫ್ರಾನ್ಸ್‌ನಲ್ಲಿರುವ ಪೋಪರನ್ನು ಪದಚ್ಯುತಗೊಳಿಸಿದರು. ಆದರೆ ಫ್ರಾನ್ಸ್‌ನ ಪೋಪ್ ನಿವೃತ್ತರಾಗಲಿಲ್ಲ. ಹೀಗಾಗಿ ಕ್ರೈಸ್ತ ಸಂಪ್ರದಾಯಕ್ಕೆ ಇಬ್ಬರು ಪೋಪರಾದರು ('ಪೋಪ್' ಎಂದರೆ ತಂದೆ ಎಂದೂ ಅರ್ಥ) ಒಬ್ಬ ಪೋಪರು ಇನ್ನೊಬ್ಬ ಪೋಪರ ಅನುಯಾಯಿಗಳನ್ನು ಬಹಿಷ್ಕರಿಸಿದರು. ಇಬ್ಬರೂ ಈ ಕೆಲಸ ಮಾಡಿದ್ದರಿಂದ ಕ್ರೈಸ್ತ ಧರ್ಮಾನುಯಾಯಿಗಳೆಲ್ಲರೂ ಬಹಿಷ್ಕೃತ ಸ್ಥಿತಿಗೆ ಇಳಿದರೆಂದು ಎಚ್.ಜಿ.ವೆಲ್ಸ್ ಹೇಳಿದ್ದಾನೆ.

ಮುಂದೆ ಇಬ್ಬರೂ ಪೋಪರನ್ನು ಪದಚ್ಯುತಗೊಳಿಸಿ ಮೂರನೆಯ ಪೋಪರನ್ನು ಆಯ್ದುರು. ಈಗ ಕ್ರೈಸ್ತರಿಗೆ ಮೂವರು ಪೋಪರಾದರು. ಮಹಾ ಒಡಕು (Great Schism) ಎಂದು ಪ್ರಸಿದ್ಧವಾದ ಈ ಕಾಲಖಂಡ (೧೩೭೭-೧೪೧೫) ಪೋಪರ ಸ್ಥಾನಮಾನಕ್ಕಿದ್ದ ಗೌರವವನ್ನು ಮಣ್ಣು ಪಾಲು ಮಾಡಿತು. ಮುಂದೆ ೧೪೧೫ರಲ್ಲಿ ಇಡೀ ಸಮಾಜಕ್ಕೆ ಒಬ್ಬನೇ ಪೋಪನಿರುವಂತೆ ದಾರಿಯಾಯಿತು. ಪೋಪರು ನಡೆಸುತ್ತಿದ್ದ ರಾಜಕೀಯ ವ್ಯವಹಾರಗಳೇ ಇಂಥ ಗೊಂದಲಗಳು ಹುಟ್ಟಲು ಕಾರಣ.

ಮುಂದೆ ರೋಮ್‌ನಲ್ಲಿ ಕಟ್ಟಲಿರುವ ಸೆಂಟ್ ಪೀಟರ್ಸ್ ಕದೀಡ್ರಲ್ ಎಂಬ ಭಾರಿ ಚರ್ಚಿಗೆ ಹಣ ಸಂಗ್ರಹಿಸಲು ಪೋಪರು ಕ್ಷಮಾ ಪತ್ರ ಎಂಬ ದಾಖಲೆಗಳನ್ನು ಮಾರುವ ಚಳವಳಿ ಆರಂಭಿಸಿದರು. ಕ್ಷಮಾಪತ್ರ ಕೊಂಡವನು ಪಾಪಮುಕ್ತನಾಗಿ ಸ್ವರ್ಗದ ಬೀಗದ ಕೈ ಪಡೆಯುವನೆಂಬ ಪ್ರಚಾರ ಸಾಗಿತು. ಟೆಬ್‌ಜೆತ ಎಂಬ ಒಬ್ಬ ಪೋಪರ ದಲಾಲ ವಿಟ್ಟೆನ್‌ಬರ್ಗ್‌ಗೆ ಬಂದು ಈ ಕ್ಷಮಾಪತ್ರ ಮಾರಲು ಯತ್ನಿಸಿದಾಗ ಅಲ್ಲಿದ್ದ ಪಾದ್ರಿ ಲೂಥರ್ ಇದರ ವಿರುದ್ಧ ಧ್ವನಿಯತ್ತಿ ಬಂಡಾಯ ಹೂಡಿದ. ಅವನಿಗೆ ಜರ್ಮನಿಯ ತುಂಡರಸರ ಬೆಂಬಲ ದೊರೆತು ಬಂಡಾಯ ಯಶಸ್ವಿಯಾಯಿತು. ಇದರಿಂದ ಪ್ರಾಟೆಸ್ಟೆಂಟ್ ಚರ್ಚ್ ಹುಟ್ಟಿ ಜರ್ಮನಿ, ಡೆನ್‌ಮಾರ್ಕ್, ನಾರ್ವೆ, ಸ್ವೀಡನ್, ಹಾಲಂಡ್‌ಗಳಲ್ಲಿ ಬಲವಾಯಿತು. ಇಂಗ್ಲೆಂಡ್‌ನ ಅರಸು ಎಂಟನೆಯ ಹೆನ್ರಿ ತನ್ನ ಎರಡನೆಯ ಮದುವೆಗೆ ಪೋಪ್ ಅನುಮತಿ ನೀಡಲಿಲ್ಲವೆಂದು ಬಂಡೆದ್ದು ಸ್ವತಂತ್ರ ಆ್ಯಂಗ್ಲಿಕನ್ ಚರ್ಚ್ ಸ್ಥಾಪಿಸಿದ.

ಯೂರೋಪ್‌ನಲ್ಲಿ ಒಡಕಾಯಿತು. ಪ್ರಾಟೆಸ್ಟೆಂಟ್ ಮತ್ತು ರೋಮನ್ ಕ್ಯಾಥಲಿಕ್ ಚರ್ಚ್‌ಗಳ ಹೆಸರಲ್ಲಿ ರಾಜಕೀಯವೂ ಸೇರಿಕೊಂಡು ಯೂರೋಪ್‌ನಲ್ಲಿ ೧೬೧೮ರಿಂದ ೧೬೪೮ರವರೆಗೆ ರಕ್ತಪಾತದ ಮೂರು ದಶಕಗಳ ಯುದ್ಧವಾಯಿತು.

ಕ್ಯಾಥಲಿಕ್ ಚರ್ಚ್‌ನಲ್ಲಿ ಪ್ರತಿ ಸುಧಾರಣೆ ಆಗಿ ಜೆಸುಯಿಟ್ ಸಂನ್ಯಾಸಿಪಂಥ ಬಲವಾಗಿ ಪೋಪರ ಬಲವಾದ ಬೆಂಬಲದ ಒಂದು ಪಡೆ ಮೂಡಿತು. ಪಾಖಂಡಿತನ ಹತ್ತಿಕ್ಕಲು ಅತ್ಯಂತ ಅಮಾನವೀಯವಾದ inquisition ಎಂಬ ಧಾರ್ಮಿಕ ವಿಚಾರಣೆ ನಡೆಯಿತು. ಚಾಡಿಕೋರರ ಮಾತು ಕೇಳಿ ಸಾವಿರಸಾವಿರ ಜನರನ್ನು ಧರ್ಮದ್ರೋಹಿಗಳೆಂದು ಕರೆದು ಗೂಟಕ್ಕೆ ಕಟ್ಟಿ ಕುರುಳನ್ನು ಒಟ್ಟಿ ಜೀವಂತ ಸುಟ್ಟರು; ದಂಡಹೇರಿದರು; ಆಸ್ತಿಪಾಸ್ತಿ ಮುಟ್ಟಗೋಲು ಹಾಕಿದರು. ಗೋವಾದಲ್ಲೂ ೧೬-೧೭ನೆಯಶತಮಾನದಲ್ಲಿ ಇದು ನಡೆದು ಅನೇಕ ನವಮತಾಂತರಿತ ಕ್ರೈಸ್ತರೇ ಗೋವೆ ತ್ಯಜಿಸಿ ಓಡಿಹೋಗುವಂತಾಯಿತು.

ಸಮಾಜದ ಮೇಲೆ, ರಾಜಕೀಯದ ಮೇಲೆ ಚರ್ಚ್‌ನ ಅತಿಯಾದ ಹಿಡಿತವಾಗಿ ವೈಚಾರಿಕ, ರಾಜಕೀಯ ಸ್ವಾತಂತ್ರ್ಯಗಳಿಗೂ ಧಕ್ಕೆ ಬಂದು, ಇದರಿಂದ ೧೮ ನೆಯ ಶತಮಾನದಲ್ಲಿ ಕಾಣಿಸಿದ Age of reason ಎಂಬ ವೈಚಾರಿಕ ಯುಗದಲ್ಲಿ ರಾಜಶಕ್ತಿ, ಧಾರ್ಮಿಕ ಶಕ್ತಿಗಳ ಅತಿ ಅಧಿಕಾರದ ವಿರುದ್ಧ ರೂಸೊ, ವಾಲ್ಟೇರ್, ದಿದೆರೊ, ಮಾಂಟೆಸ್ಕು ಮುಂತಾದ

ವಿಚಾರವೇತ್ತರು ಧ್ವನಿಎತ್ತಿದರು. ಇದರಿಂದ ಫ್ರಾನ್ಸ್‌ನಲ್ಲಿ ಕ್ರಾಂತಿ ಆಯಿತು. ಫ್ರಾನ್ಸ್ ಕ್ರಾಂತಿಯಿಂದ ಪ್ರಜಾಸತ್ತೆಯ ತತ್ವದ ಜೊತೆಗೆ ಧರ್ಮನಿರಪೇಕ್ಷತೆ (secularism) ದೃಢವಾಯಿತು. ಇದು ಚರ್ಚ್‌ನ ಚಟುವಟಿಕೆಗಳಿಗೆ ಬಂದ ತೀವ್ರ ಪ್ರತಿಕ್ರಿಯೆ. ಧರ್ಮ ಸಾರ್ವಜನಿಕ ಜೀವನದಲ್ಲಿ ಹಸ್ತಕ್ಷೇಪಮಾಡಲಾಗದು, ಎಂಬುದಷ್ಟೇ ಈ ಕಲ್ಪನೆಯ ಅರ್ಥ, ವ್ಯಕ್ತಿ ವ್ಯಕ್ತಿಗಳ ಸಂಬಂಧಕ್ಕೆ, ಸಾರ್ವಜನಿಕ ಅಥವಾ ರಾಜಕೀಯ ಜೀವನಕ್ಕೆ ಧರ್ಮದಿಂದ ಯಾವುದೇ ಪ್ರಭಾವ ಆಗಬಾರದು, ಎಂದು ಇದರ ಅರ್ಥ .

ಆದರೆ ಯಹೂದಿಗಳ ಬಗ್ಗೆ ಮಾತ್ರ ಐರೋಪ್ಯರ ನಿಲುವು ಬದಲಾಗಲಿಲ್ಲ. ಇಂಗ್ಲೆಡ್‌ನ ಕ್ಯಾಥಲಿಕರು, ಕ್ವೇಕರ್ ವರ್ಗದವರು, ಬೇರೆ ಬೇರೆ ದೇಶಗಳ ಧಾರ್ಮಿಕ ಅಲ್ಪ ಸಂಖ್ಯಾತರು, ಯಹೂದಿಗಳು ೧೭-೧೮ನೆಯ ಶತಮಾನದಲ್ಲಿ ಅಮೆರಿಕಕ್ಕೆ ವಲಸೆ ಹೋದರು. ಆದರೆ ಕೋಟಿ ಕೋಟಿ ಯಹೂದಿಗಳು ಯೂರೋಪ್‌ನಲ್ಲಿ ಇದ್ದರು. ಆಗ ಭಾರತದ ಬಗ್ಗೆ ಅಧ್ಯಯನಮಾಡಿದ ಜರ್ಮನ್ ಪಾದ್ರಿ ಮ್ಯಾಕ್ಸ್ ಮುಲರ್ ವೇದಗಳಲ್ಲಿ ಕಂಡುಬಂದ 'ಆರ್ಯ' ಎಂಬ ಶಬ್ದ ಜನಾಂಗ ವಾಚಕ ಎಂದ. ಅದಕ್ಕೆ ವಿರುದ್ಧವಾದ ' 'ದ್ರಾವಿಡ' (ಮೂಲ ಖಚಿತ ಅರ್ಥ ತಮಿಳು ಹಾಗೂ ತಮಿಳು ನಾಡು ಎಂಬ ಜನಾಂಗವೆಂದು ಹೇಳಿದ. ಸಂಸ್ಕೃತ ಮತ್ತು ಐರೋಪ್ಯ ಭಾಷೆಗಳಿರುವ ಸಾಮ್ಯದಿಂದ ಭಾಷೆಗಳನ್ನು (ಸಂಸ್ಕೃತ, ಲ್ಯಾಟಿನ್, ಗ್ರೀಕ್, ಜರ್ಮನ್, ಇಂಗ್ಲಿಷ್, ಫ್ರೆಂಚ್) ಭಾಷೆ ಮಾತನಾಡುವ ಜನ 'ಆರ್ಯ' ಜನಾಂಗದವರು ಎಂದ. ಸಾಮ್ರಾಜ್ಯ ದಾಹಿಯಾದ ಹಿಟ್ಲರ್‌ಗೆ ಈವಾದ ಆಪ್ಯಾಯ ಮಾನವೆನಿಸಿತು. ಬುದ್ಧಿವಂತರೆಂದು ತಿಳಿದು ಯಹೂದಿಗಳನ್ನು ದ್ವೇಷಿಸುತ್ತಿದ್ದ ಹಿಟ್ಲರ್, ಯಹೂದಿಗಳು ತಮ್ಮನ್ನು ಶ್ರೇಷ್ಠ ಜನ ಎನ್ನುತ್ತಿದ್ದರು. ನಾವು ಅವರಿಗಿಂತ ಶ್ರೇಷ್ಠರಾದ 'ಆರ್ಯರು' ಎಂದ. ಸರ್ವಾಧಿಕಾರೀ ಹಾಗೂ ಸಾಮ್ರಾಜ್ಯಷಾಹೀ ರಾಷ್ಟ್ರ ಕಟ್ಟ ಬಯಸುವವನಿಗೆ ಒಬ್ಬ ಶತ್ರು ಬೇಕು. ಆರ್ಯ ಜನಾಂಗದ ಶತ್ರುಗಳು ಯಹೂದಿಗಳು, ಎಂದು ಸತತ ಪ್ರಚಾರಮಾಡಿ ಜರ್ಮನ್ ಜನ ಹುಚ್ಚೇಳುವಂತೆ ಹುರಿದುಂಬಿಸಿದ. ೬೦-೭೦ಲಕ್ಷ ಯಹೂದಿಗಳನ್ನು ಎರಡನೆಯ ಮಹಾಯುದ್ಧಕಾದಲ್ಲಿ ವಿಷಾನಿಲದ ಕೊಠಡಿಗಳಲ್ಲಿ ಹಾಕಿ ಕೊಲ್ಲಿಸಿದ.

ಈ ಮಹಾಯುದ್ಧದ ಕಾಲದಲ್ಲಿ ಅಪಾರವಾಗಿ ಸೇವೆ ಸಲ್ಲಿಸಿದ ತಮ್ಮ ದೇಶದ ಯಹೂದಿಗಳ ಬಗ್ಗೆ ಅಮೆರಿಕ, ಇಂಗ್ಲೆಂಡ್‌ಗಳಲ್ಲಿ ಸಹಾನುಭೂತಿ ಇತ್ತು. ಹಿಟ್ಲರ್ ನಡೆಸಿದ ಹತ್ಯಾಕಾಂಡದಿಂದ ನೊಂದ ಯಹೂದಿ ಜನಾಂಗಕ್ಕೆ ಇಸ್ರೇಲ್‌ನಲ್ಲಿ ರಾಷ್ಟ್ರ ಸ್ಥಾಪಿಸಲು ೧೯೪೮ರಲ್ಲಿ ಈ ಮಿತ್ರ ರಾಷ್ಟ್ರಗಳು (ಅಮೇರಿಕ, ಇಂಗ್ಲೆಂಡ್, ಫ್ರಾನ್ಸ್) ಬೆಂಬಲ ನೀಡಿದರು. ಇಸ್ರೇಲ್‌ನಲ್ಲಿ ನೆಲೆಗಿಂತ ಫ್ಯಾಲಿಸ್ತೀನಿಯರನ್ನು ಹೊರದೂಡಿ ಜಗತ್ತಿನ ಎಲ್ಲೆಡೆ ಯಿಂದ ಯಹೂದಿಗಳು ಅಲ್ಲಿ ಬಂದು ನೆಲಸಿದರು. ಸುತ್ತಲ ಅರಬ್ (ಮುಸ್ಲಿಂ) ರಾಷ್ಟ್ರಗಳ ಎಲ್ಲ ತರಹದ ವಿರೋಧವನ್ನು ಲೆಕ್ಕಿಸದೆ ಹೋರಾಟದ ಜೀವನ ನಡೆಸಿ ಮರುಭೂಮಿ ಇಸ್ರೇಲನ್ನು ನಂದನವನವಾಗಿ ಮಾಡಿದರು. ಈಗ ಇಸ್ರೇಲ್‌ನ ಜನಸಂಖ್ಯೆ ೫೦ ಲಕ್ಷ.

ಎರಡನೆಯ ಮಹಾಯುದ್ಧದ ನಂತರ ಮಧ್ಯಪೂರ್ವರಣದ ಅಗ್ನಿಕುಂಡವಾಯಿತು. ಅರಬ್ ದೇಶಗಳೆಲ್ಲ ಒಂದಾಗಿ ಇಸ್ರೇಲ್ ವಿರುದ್ಧ ಪ್ರತಿಭಟಿಸಿ ಭಾರಿ ರಕ್ತಪಾತದ ಯುದ್ಧಗಳಾದವು. ಆದರೆ ಇಸ್ರೇಲ್ ದೃಢವಾಗಿ ನಿಂತಿತು. ಇತ್ತೀಚೆಗೆ ಹೊರದೂಡಿದ ಪ್ಯಾಲಿಸ್ಟೀನಿಯರಿಗೆ ಭೂಮಿ ಬಿಟ್ಟುಕೊಟ್ಟು ಶಾಂತಿ ಸ್ಥಾಪನೆ ಆಗಿದೆ. ಆದರೆ ಯಹೂದಿ ಧರ್ಮಕ್ಕಾದ ಚಲನವು ಇತಿಹಾಸದುದ್ದಕ್ಕೂ ತನ್ನ ಛಾಯೆಯನ್ನು ಮೂಡಿಸಿದೆ.

ಯಹೂದಿಗಳ ವಿರುದ್ಧ ಅರಬ್ಬರು ಒಂದಾದರೂ ಮತ್ತೆ ಒಡೆದಿದ್ದಾರೆ. ಅವರಲ್ಲೂ ಈಗ ಬೇರೆ ಬೇರೆ ಶಿಬಿರಗಳಿಗೆ ಸಮೃದ್ಧವಾಗಿ ಪೆಟ್ರೋಲ್ ಇಂಧನ ಸಿಗುತ್ತಿರುವ ಅರಬ್ ದೇಶಗಳ ಇತಿಮಿತಿ ಇಲ್ಲದ ಐಷಾರಾಮ, ಕಾಲುಕೆದರಿ ಜಗಳ ತೆಗೆಯುವ ನೀಲುವನ್ನು ತಳೆದಿವೆ. ಇರಾನ್, ಇರಾಕ್, ಅರೇಬಿಯಾದಂಥ ದೇಶಗಳ ನಿಲುವುಗಳು ಚಿತ್ರವಿಚಿತ್ರವಾಗಿವೆ.

ಅರೇಬಿಯದಲ್ಲಿ ಪ್ರವಾದಿ ಮಹಮ್ಮದರು (೬೭೦-೭೩೨) ಇಸ್ಲಾಂ ಧರ್ಮ ಸ್ಥಾಪಿಸಿದರು. ಹಳೇ ಒಡಂಬಡಿಕೆಯಲ್ಲಿ ಹೇಳಿದ ಮೋಸಸ್ (ಮೂಸಾ) ಅಬ್ರಹಾಂ ('ಇಬ್ರಾಹಿಂ') ಮುಂತಾದ ಪ್ರವಾದಿಗಳನ್ನು ಅವರು ಒಪ್ಪಿದರೂ ಮಹಮ್ಮದರೇ ಕೊನೆಯ ಪ್ರವಾದಿ ಎಂದರು. ದೇವರು ಒಬ್ಬನೇ. ಅವನು ಗಂಡಲ್ಲ, ಹೆಣ್ಣಲ್ಲ, ವ್ಯಕ್ತಿಯಲ್ಲ, ರೂಪಾಕಾರ ಇಲ್ಲದವನು. ಕ್ರೈಸ್ತರು ಹೇಳುವಂತೆ ಅವನು ತಂದೆಯಲ್ಲ. ಅವನ ಯಾವ ಪ್ರತಿಮೆ, ಪ್ರತೀಕ ಪೂಜಿಸಬಾರದು. ಅರೇಬಿಯಾದ ಮಕ್ಕಾದಲ್ಲಿ ಇರುವ ಪ್ರಾಚೀನ ಪವಿತ್ರ ಶಿಲೆ ಕಾಬಾದ ಕಡೆ ಮುಖಮಾಡಿ ನಮಾಜ್ ಮಾಡಬೇಕು. ಕಾಬಾದಲ್ಲಿ ಇದ್ದ ಹಲವಾರು ಮೂರ್ತಿಗಳನ್ನು ಮಹಮ್ಮದರು ಕಿತ್ತುಹಾಕಿದರು. ಹಿಂದಿನಿಂದ ಅಲ್ಲಿಗೆ ಯಾತ್ರೆಗೆಂದು ಬರುತ್ತಿದ್ದ ಅರಬ್ಬರು ಅಮೋದ ಪ್ರಮೋದ ನಡೆಸುತ್ತಿದ್ದ ಮಕ್ಕಾದಲ್ಲಿ ಇದ್ದ ಪಾನ ಗೃಹ, ವೇಶ್ಯಾವಾಟಿಕೆಗಳನ್ನು ಮುಚ್ಚಿಸಿದರು. ಕಟುವಾದ ನೀತಿ ನಿಯಮಗಳನ್ನು ಜಾರಿಗೆ ತಂದರು. ಅವಿವಾಹಿತ ಜೀವನವನ್ನು ಪುರಸ್ಕರಿಸಲಿಲ್ಲ. ಒಬ್ಬ ಪುರುಷ ತನಗೆ ಸಾಕಲು ಸಾಧ್ಯವಿದ್ದರೆ ಒಮ್ಮೆಗೇ ನಾಲ್ಕು ಹೆಂಡಿರನ್ನು ಹೊಂದಿರಬಹುದೆಂದರು. ಒಳಜಗಳಗಳಿಂದ ತುಂಬಿದ್ದ ಅರಬ್ ಪಂಗಡಗಳಲ್ಲಿ ಐಕ್ಯ ಮೂಡಿಸಿ ಸತ್ವಶಾಲೀ ಜನಾಂಗವಾಗಿ ಅರಬ್ಬರನ್ನು ಬೆಳಸಿದರು. ಇಸ್ಲಾಂ ಧರ್ಮವ್ಯವಸ್ಥೆ ರಾಜ ವ್ಯವಸ್ಥೆಯೂ ಆಯಿತು. ಧರ್ಮಕ್ಕೆ ಬಂದ ವಿರೋಧ ಎದುರಿಸಲು 'ಜೇಹಾದ್' ನಡೆಸಿ ಸಾಮ್ರಾಜ್ಯ ವಿಸ್ತರಿಸಿದರು. ಸಾಮ್ರಾಜ್ಯದಲ್ಲಿ ಇದ್ದು ಇಸ್ಲಾಂ ಧರ್ಮ ಸ್ವೀಕರಿಸದವರು ಜಝಿಯಾ ಎಂಬ ತಲೆ ತೆರಿಗೆ ಕೊಡಬೇಕೆಂದರು. ಆರಂಭದಲ್ಲಿ ಮೊಹಮ್ಮದರನಂತರ ಪ್ರವಾದಿಗಳ ಉತ್ತರಾಧಿಕಾರಿಗಳಾಗಿ ಆಡಳಿತ ನಡೆಸುವ ಖಲೀಫರೆಂಬವರು ಒಂದು ರೀತಿಯ ಸರ್ವಾನುಮತದಿಂದ ಆಯ್ಕೆ ಆದ ಅರಸರಿದ್ದರೂ ಕಾಲಕ್ರಮದಲ್ಲಿ ಈ ಪದವಿ ಒಂದೇ ಕುಟುಂಬದಲ್ಲಿ ನೆಲೆಯಾಯಿತು. ಮುಂದೆ ಪರ್ಶಿಯದ ಬಾಗ್ದಾದ್‌ನಲ್ಲಿ ಖಲೀಫರ ನೆಲೆಯಾಯಿತು. ಕಡೆಗೆ ಅದು ಟರ್ಕಿಗೆ ಹೋಯಿತು.

ಇಸ್ಲಾಂ ವಿಶಾಲ ಸಾಮ್ರಾಜ ಕಟ್ಟಿತು. ಯೂರೋಪ್‌ನ ದಕ್ಷಿಣದಲ್ಲಿ ಸ್ಪೇನ್‌ವರೆಗಿನ

ಪ್ರದೇಶ ಅವರ ವಶವಿತ್ತು. ಭಾರತಕ್ಕೂ ಅರಬ್ಬರು ಬಂದರು. ಮುಂದೆ ಅಫಘಾನಿಸ್ತಾನದಿಂದ ಬಂದ ತುರ್ಕರು, ಅಫಘಾನರು, ಮಧ್ಯಏಷ್ಯದಿಂದ ಬಂದ ಮುಘಲರೂ ಭಾರತದ ದೆಹಲಿಯಿಂದ ಆಳಿದರು. ಮುಸಲ್ಮಾನರು ರಾಜ್ಯ, ಸಾಮ್ರಾಜ್ಯಗಳು ೧೧ನೆಯ ಶತಮಾನದಿಂದ ೧೮ನೆಯ ಶತಮಾನದವರೆಗೆ ನಡೆದವು. ಬ್ರಿಟಿಷರ ಆಗಮನದಿಂದ ಇದಕ್ಕೆ ಕೊನೆಯಾದರೂ ಪಾಕಿಸ್ತಾನವೆಂಬ ಮುಸ್ಲಿಂರಾಷ್ಟ್ರ ಭಾರತದ ನೆಲದಲ್ಲಿ ಬ್ರಿಟಿಷರ ನಿರ್ಗಮನ ಕಾಲದಲ್ಲಿ ನೆಲೆಯಾಯಿತು.

ಮತಾಂತರೋತ್ಸಾಹದ ಧರ್ಮಗಳು ಜಗತ್ತಿನಲ್ಲಿ ಯುದ್ಧ, ರಕ್ತಪಾತಗಳಿಗೆ ಕಾರಣವಾಗಿವೆ. ಐರೋಪ್ಯರಂತೂ ತಮ್ಮ ಸಾಮ್ರಾಜ್ಯವಾದ, ವಸಾಹತುವಾದಗಳಿಗೆ ಜಗತ್ತಿನ ಕ್ರೈಸ್ತೀಕರಣದಿಂದ ಜನರನ್ನು 'ಮೇಲೆತ್ತುವ' ಉತ್ಸಾಹದ ನೆಪ ತೋರಿ ಅಪಾರ ಅನಾಹುತ ಮಾಡಿದ್ದಾರೆ. 'ಜೇಹಾದ್'ಗಳು ನಡೆಸಿದ ಅನಾಹುತವೂ ಅಂಥದೇ.

ಭಾರತದ ಧರ್ಮಗಳಲ್ಲಿ ಮತಾಂತರದ ಉತ್ಸಾಹ ಇರಲಿಲ್ಲ. ಎಲ್ಲ ಧರ್ಮಗಳೂ ಸರಿ ಎಂಬ ನಿಲುವಿತ್ತು. ಕೆಲವೇ ಸಾವಿರ ಯಹೂದಿಗಳು ಭಾರತಕ್ಕೆ ಆಶ್ರಯಕೋರಿ ಬಂದಾಗ ಅವರಿಗೆ ಸ್ವಾಗತ ನೀಡಿದರು. ಜಗತ್ತಿನ ಅತ್ಯಂತ ಹಳೆಯ ಯಹೂದಿ ಪ್ರಾರ್ಥನಾ ಕೇಂದ್ರಗಳಲ್ಲಿ ನಾಲ್ಕನೆಯದು ಭಾರತದ ಕೊಚ್ಚಿಯಲ್ಲಿದೆ. ಯಹೂದಿಗಳನ್ನು ಅತ್ಯಂತ ಚನ್ನಾಗಿ ನಡೆಸಿಕೊಂಡ ದೇಶ ಭಾರತವೆಂಬ ಕೀರ್ತಿ ವಿಶ್ವದ ಯಹೂದಿಗಳಲ್ಲಿ ಇದೆ.

ಕ್ರಿಸ್ತ ಶಕ ಏಳನೆಯ ಶತಮಾನದಲ್ಲಿ ಪರ್ಶಿಯ (ಈಗಿನ ಇರಾನ್) ನಲ್ಲಿ ಜರತುಷ್ಟ್ರನಿಂದ ಸ್ಥಾಪಿತವಾದ ಅಗ್ನಿ ಆರಾಧಕರ ಫಾರಸಿಧರ್ಮ ಇಸ್ಲಾಂ ದಾಳಿಯಿಂದ ನೆಲೆ ಕಳೆದುಕೊಂಡಿತು. ಕೆಲವು ಸಾವಿರಜನ ಭಾರತಕ್ಕೆಬಂದರು. ಗುಜರಾತಿನ ಒಬ್ಬರಾಜ ಅವರನ್ನು ಸ್ವಾಗತಿಸಿದ. ಆ ರಾಜ ಪಾರ್ಸಿಗಳ ಮುಖ್ಯಸ್ಥರಿಗೆ ಸ್ವಾಗತದ ಪ್ರತೀಕವಾಗಿ ಒಂದು ಲೋಟಹಾಲನ್ನಿತ್ತನಂತೆ. ಆ ಹಾಲಿಗೆ ಸಕ್ಕರೆ ಬೆರಸಿ ಆ ಮುಖಂಡ ರಾಜನಿಗೆ ಮರಳಿಸಿದನಂತೆ. ಇದನ್ನು ರಾಜನೇ ಕುಡಿಯಲು ಬೇಕೆಂದು ಹಟಹಿಡಿದನಂತೆ. ನಾವು ಪಾರಸಿಕರು ಹಾಲನ್ನು ಸಕ್ಕರೆಯಿಂದ ಸಿಹಿಗೊಳಿಸಿದಂತೆ ನಿಮ್ಮ ದೇಶದ ಜೀವನ ಶ್ರೀಮಂತ ಗೊಳಿಸುತ್ತೇವೆ; ಹಾಲಿನಲ್ಲಿ ಹುಳಿಹಿಂಡುವುದಿಲ್ಲ, ಎಂದನಂತೆ.

ಪಾರಸಿಕರು ಈ ದೇಶದಲ್ಲಿ ಒಂದು ಲಕ್ಷದಷ್ಟು ಇದ್ದಾರೆ. ಟಾಟಾ, ಭಾಭಾ, ಪಿರೋಜ್‌ಷಾ ಮೆಹಾತಾ, ದಾದಾಬಾಯಿನವರೋಜಿ ಈ ದೇಶವನ್ನು ವಿವಿಧ ಮುಖಗಳಲ್ಲಿ ಶ್ರೀಮಂತಗೊಳಿಸಿದವರು. ಅಲ್ಪ ಸಂಖ್ಯಾತರಾದ ಅವರಿಗಾಗಲೀ ಯಹೂದಿಯರಿಗಾಗಲೀ ಈ ದೇಶದಲ್ಲಿ ಹಿಂಸೆ ಆಗಿಲ್ಲ ತೊಂದರೆ ಆಗಿಲ್ಲ. ಉಳಿದ ಅಲ್ಪ ಸಂಖ್ಯಾತರ ಬೊಬ್ಬಾದಕ್ಕೆ ಅವರೇ ಕಾರಣ ಕಂಡುಕೊಳ್ಳಬೇಕು; ಅವರೇ ಪರಿಹಾರ ಕಾಣಬೇಕು.

ಹಿಂದೂ ಧರ್ಮದಲ್ಲಿ ವರ್ಣವ್ಯವಸ್ಥೆ, ಜಾತಿ ಭೇದ, ಪುರೋಹಿತರ ಮೇಲ್ಮೈಗಳಿಂದ

ಅನೇಕ ಏರು ಪೇರುಗಳಾಗಿವೆ. ಯಜ್ಞಯಾಗಗಳ ಹಿಂಸಾತ್ಮಕ ಕರ್ಮಕಾಂಡಗಳ ವಿರುದ್ಧ ಬುದ್ಧ, ಮಹಾವೀರರು ಧ್ವನಿಯೆತ್ತಿದರು. ಮಹಾವಿರರ ಬೋಧನೆಯಿಂದ ಶಾಖಾಹಾರ ವೈದಿಕರಲ್ಲೂ ಒಂದು ಸ್ವೀಕೃತ ಪದ್ಧತಿಯಾಯಿತು. ಜೈನ, ಬೌದ್ಧರು ಕಟ್ಟಿದ ಚೈತ್ಯ ಬಸದಿ, ಸ್ತೂಪಗಳಿಂದ ಸ್ಫೂರ್ತಿ ಪಡೆದು ವೈದಿಕರೂ ಮೂರ್ತಿಪೂಜಕರಾದರು. ಯಜ್ಞಯಾಗ, ದೇವಾಲಯಗಳ ಕರ್ಮಕಾಂಡಗಳ ವಿರುದ್ಧ, ವರ್ಣವ್ಯವಸ್ಥೆಯ ವಿರುದ್ಧ ಬಸವಣ್ಣನವರು ಧ್ವನಿ ಎತ್ತಿದರು. ವೈದಿಕರ ಅಗ್ರಹಾರಗಳಿಗೂ ದೇವಾಲಯಗಳಿಗೂ ಉದಾರವಾಗಿ ಸಂದ ದಾನಗಳಿಂದ ಅಗ್ರಹಾರಗಳೂ ದೇವಾಲಯಗಳೂ ವೈದಿಕ ಮತ ಮೇಲು ವರ್ಗದವರ ಅಟ್ಟಹಾಸದ ಕೇಂದ್ರಗಳಾದಾಗ ಬಸವಣ್ಣನವರು ಸರಳವಿಧಿಗಳಲ್ಲಿ, ಸಾಮಾಜಿಕ ಸಮಾನತೆ ಸಾರುವ, ಕರ್ಮಕಾಂಡಗಳಿಂದ ಮುಕ್ತವಾದ ವಿಚಾರಗಳನ್ನು ಪ್ರತಿಪಾದಿಸಿದರು.

ಭಕ್ತಿಪಂಥ ಜಾತಿಭೇದಗಳ ಉಗ್ರತೆ ಕಡಮೆಮಾಡಿ ಸದಾಚಾರಕ್ಕೆ ಒತ್ತು ಕೊಟ್ಟಿತು. ಸಮಾಜದಲ್ಲಿ ಕಾಣಿಸಿದ ಅತಿಯೆನಿನಿಸಿದ ಕೆಲವೊಂದು ವಿಧಿ, ನಂಬಿಕೆಗಳ ವಿರುದ್ಧ ನಾನಕ, ಕಬೀರ, ರಾಜಾರಾಮಮೋಹನ್‌ರಾಯ್, ದಯಾನಂದ ಸರಸ್ವತಿ, ನಾರಾಯಣಗುರು, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದ, ಮಹಾತ್ಮಾಗಾಂದಿಯವರಂಥ ಗಣ್ಯರು ತಮ್ಮದೇ ದಾರಿ ತೋರಿದ್ದಾರೆ. ಯಾವ ನಂಬಿಕೆಯೂ ಅನಿವಾರ್ಯವಲ್ಲ, ಯಾವ ಆಚರಣೆಯೂ ತ್ರಿಕಾಲಬಾಧಿತವಲ್ಲ, ದೈವಭಕ್ತಿ, ಸದಾಚಾರ ಮುಖ್ಯ ಎಂದಿದ್ದಾರೆ.

ಮನುಷ್ಯನನ್ನು ಪಶುತ್ವದಿಂದ ಮಾನವತ್ವಕ್ಕೂ ಮಾನವತ್ವದಿಂದ ದೈವತ್ವಕ್ಕೂ ಮುಟ್ಟಲು ಧರ್ಮ ಅನಿವಾರ್ಯ. ಧರ್ಮ ಹೇಳುವ ಪಾಪ - ಪುಣ್ಯಗಳ ಕಲ್ಪನೆಯೇ ನೀತಿ ನಿಯಮಗಳ ಆಚರಣೆಗೆ ಪ್ರೇರಕವಾಗಿದೆ. ಧರ್ಮದ ವಿನಾ ಈ ಕಾರ್ಯಮಾಡುವ ಬೇರಾವ ಯಂತ್ರ ಯಶಸ್ವಿಯಾಗಿಲ್ಲ. ಧರ್ಮದಿಂದಾದ ಹಿಂಸೆ, ಯುದ್ಧ, ಕ್ಷೋಭೆಗಳು ತಿಳಿಯದ ವಿಷಯಗಳಲ್ಲ. ಆದರೆ ಜಾಗೃತ ಸಮಾಜವು ಸುಧಾರಕರನ್ನು ಸಮಾಜಯಂತ್ರ ತಿದ್ದುವ ಶಿಲ್ಪಿಗಳನ್ನೂ ಸೃಷ್ಟಿಸಬಲ್ಲುದು.

ಅಲ್ಲಿಗೂ ಧರ್ಮ ಮನಷ್ಯನನ್ನು ತಿದ್ದಬಲ್ಲದು. ಆಧ್ಯಾತ್ಮಿಕತೆಯು ಬುದ್ಧಿಮಾಂದ್ಯ, ಮಾನಸಿಕ ದೋಷ, ಮಾದಕಗಳ ದುಷ್ಪರಿಣಾಮದಿಂದ ಮನುಷ್ಯನನ್ನು ರಕ್ಷಿಸಬಲ್ಲ ವೆಂದು ತಜ್ಞರು ಹೇಳಿದ್ದಾರೆ. ಭಾರತದಲ್ಲಿ ಯೋಗದಂಥ ಮಹಾವಿದ್ಯೆ ಹುಟ್ಟಿದ್ದು ಧರ್ಮದಿಂದಲೇ.

ಧರ್ಮದ ಕಾರಣದಿಂದ ದೇವಾಲಯ, ಇಗರ್ಜಿ, ಮಸೀದಿ, ಚರ್ಚ್ ಸ್ತೂಪ, ಬಸದಿಗಳನ್ನು ಕಟ್ಟಿ ವಾಸ್ತು ಶಿಲ್ಪ ರೂಪ ತಾಳಿತು. ಅದರ ಅಲಂಕರಣದಿಂದ ಮೂರ್ತಿ ಶಿಲ್ಪ, ವರ್ಣ ಚಿತ್ರ ಬೆಳೆಯಿತು. ದೇವರ ಸೇವೆಯ ಭಾಗವಾಗಿ ಸಂಗೀತ ನರ್ತನ ಬೆಳೆದವು. ನಮ್ಮ

ಹಿಂದಣ ಸಾಹಿತ್ಯಕ್ಕೆಲ್ಲ ಧರ್ಮವೇ ಮೂಲಪ್ರೇರಣೆ. ಧಾರ್ಮಿಕ ವಲ್ಲದ ಸಾಹಿತ್ಯ ವ್ಯಾಪಕವಾಗಿ ಬೆಳೆದುದು ಇತ್ತೀಚಿನ ಒಂದೆರಡು ಶತಮಾನಗಳಲ್ಲಿ.

ಗ್ರೀಸ್‌ನ ರುದ್ರನಾಟಕಗಳಿಗೆ 'ಒಪೆರಾ' ಎಂಬ ಧಾರ್ಮಿಕ ಕ್ರಿಯೆಯೇ ಮೂಲ. ಡಯೊನಿಸಿಯಸ್ ದೇವತೆಯ ಹಬ್ಬದ ಕಾಲಕ್ಕೆ ಈ ನಾಟಕಗಳು ಆರಂಭವಾದುವು. ಒಲಿಂಪಿಕ್ ಕ್ರೀಡೆಗಳು ಆರಂಭವಾದುದೂ ಒಲಿಂಪಸ್ ಎಂಬ ದೇವತೆ ಪ್ರೀತ್ಯರ್ಥ. ನಮ್ಮ ಎಲ್ಲ ಜಾನಪದ ಕಲೆಗಳ ಮೂಲವೂ ಧರ್ಮವೇ. ಅದು ಯಕ್ಷಗಾನವೇ ಇಲಿ, ನಂದಿ ಕೋಲು ಕುಣಿತವೇ ಇರಲಿ, ಕಂಸಾಳೆಯೇ ಆಗಲಿ, ಯಾವುದನ್ನಾದರೂ ಪರಿಗಣಿಸಿ. ಹೀಗೆ ಸಂಸ್ಕೃತಿಯ ವಿಕಾಸಕ್ಕೆ ಧರ್ಮ ನೀಡಿದ ಕೊಡುಗೆ ಭಾರಿದೊಡ್ಡದು.

ಧರ್ಮ ಅನೇಕ ದುರಂತಗಳಿಗೆ, ಅವ್ಯವಸ್ಥೆಗಳಿಗೆ ಕಾರಣವಾಗಿದೆ, ನಿಜ. ಆದರೆ ಅದರ ಪರವಾಗಿ ಇರುವ ಅಂಶಗಳು ಹೆಚ್ಚಿನವು ಅದರ ಬದಲಿಗೆ (ಪರ್ಯಾಯವಾಗಿ) ಬೇರೆ ಸರ್ವಮಾನ್ಯ, ಖಚಿತ ಪರಿಣಾಮಕಾರೀ ಸಾಧನ ಈವರೆಗೆ ಹುಟ್ಟಿಲ್ಲ.

●

ಧರ್ಮ - ಜೀವನ ಸಂಜೀವಿನಿ

ನ್ಯಾಯಮೂರ್ತಿ ಎಂ. ರಾಮಾಜೋಯಿಸ್

ಇಪ್ಪತ್ತನೇ ಶತಮಾನದಲ್ಲಿ, ಮಾನವನು, ವಿಜ್ಞಾನದ ಮೂಲಕ ಮಾಡಿರುವ ಸಾಧನೆಗಳು ಅಪಾರ. ಹಿಂದಿನ ಶತಮಾನಗಳಲ್ಲಿ ಇಂತಹ ಸಾಧನೆಗಳನ್ನು ಊಹಿಸಲು ಸಹ ಅಸಾಧ್ಯವಾಗಿತ್ತು. ಆಕಾಶವಾಣಿ, ದೂರದರ್ಶನ, ದೂರ ಮುದ್ರಣ ಇವುಗಳಿಂದ ಜಗತ್ತಿನಲ್ಲಿ, ನಡೆಯುವ ಘಟನೆಗಳನ್ನು ಕ್ಷಣಮಾತ್ರದಲ್ಲಿ ತಿಳಿದುಕೊಳ್ಳಬಹುದು. ವಿಮಾನಯಾನದ ಮೂಲಕ ಜಗತ್ತಿನ ಯಾವಭಾಗಕ್ಕಾದರೂ ಅತಿ ಶೀಘ್ರವಾಗಿ ಹೋಗುವುದು ಸಾಧ್ಯವಾಗಿದೆ. ಅದೇ ರೀತಿ ಅತ್ಯಂತ ಆಧುನಿಕ ರಸ್ತೆ ವಾಹನಗಳು ಜಲವಾಹನಗಳ ಒಂದೆಡೆಯಿಂದ ಇನ್ನೊಂದೆಡೆಗೆ ಶೀಘ್ರವಾಗಿ ಹೋಗುವುದು ಸಾಧ್ಯವಾಗಿದೆ. ಮನುಷ್ಯನ ಸುಖಜೀವನಕ್ಕೆ ಬೇಕಾದ ನಾನಾರೀತಿಯ ಯಂತ್ರಗಳು, ಸಾಧನಗಳು ತಯಾರಾಗಿವೆ. ಹೊಸ ಹೊಸದು ತಯಾರಾಗುತ್ತಲೇ ಇವೆ. ಜೊತೆಯಲ್ಲೇ ಕ್ಷಣ ಮಾತ್ರದಲ್ಲಿ ಯಾವುದಾದರೂ ದೇಶವನ್ನು ಅಥವಾ ಜನರನ್ನು ನಾಶಮಾಡಬಲ್ಲ ಆಧುನಿಕ ಶಸ್ತ್ರಾಸ್ತ್ರಗಳೂ ತಯಾರಾಗಿವೆ. ಜಪಾನಿನ ಹಿರೋಶಿಮಾ, ನಾಗಸಾಕಿಯ ಮೇಲೆ ಪ್ರಯೋಗ ಮಾಡಿದ ಅಣ್ವಸ್ತ್ರ ಈ ಭಯಾನಕ ಪರಿಸ್ಥಿತಿಯ ಪುರಾವೆಯಾಗಿದೆ. ಆ ದುರ್ಘಟನೆ ನಡೆದ ಐದು ದಶಕಗಳಲ್ಲಿ ಅಂತಹ ಮಾರಕ ಅಸ್ತ್ರಗಳನ್ನು ತಯಾರುಮಾಡುವುದರಿಲ್ಲಿ ಅಪಾರ ಪ್ರಗತಿಯಾಗಿದೆ. ಇಂತಹ ಅಸ್ತ್ರಗಳನ್ನು ಪ್ರಯೋಗಿಸಿ ನಮ್ಮ ಸಹೋದರ ಮಾನವರ ನಾಶ ಅವರ ಕುಟುಂಬದವರು ಹಾಗೂ ಬಂಧುಗಳಿಗೂ, ಸ್ನೇಹಿತರಿಗೂ ದೇಶ ಬಾಂಧವರಿಗೂ, ಸಹಿಸಲಾಗದ ಯಾತನೆ ಉಂಟು ಮಾಡುವ ಪ್ರವೃತ್ತಿಯೂ ದಿನೇ ದಿನೇ ಜಾಸ್ತಿಯಾಗುತ್ತಿದೆ. ಜಗತ್ತಿನಲ್ಲಿ, ರಾಜಕೀಯ ಉದ್ದಿಶ್ಯಗಳಿಗಾಗಿ, ವೈಯಕ್ತಿಕ, ಅಥವಾ ಜಾತಿ ಯಾ ಪಂಗಡದ ದ್ವೇಷ ಸಾಧನೆಗಾಗಿ ಭಯಾನಕ ಕೃತ್ಯಗಳನ್ನೆಸುಗುವ ವ್ಯಕ್ತಿಗಳ ಸಂಖ್ಯೆ ಏರುತ್ತಿದೆ.. ಪ್ರತಿನಿತ್ಯ ಇಂತಹ ಹೃದಯವಿದ್ರಾವಕ ಸುದ್ದಿಗಳನ್ನು ಆಕಾಶವಾಣಿ ದೂರದರ್ಶನಗಳಿಂದ ಕೇಳುತ್ತಿದ್ದೇವೆ. ಪತ್ರಿಕೆಗಳಲ್ಲಿ ಓದುತ್ತೇವೆ. ದೂರದರ್ಶನದ ಮೂಲಕ, ಕ್ರೂರಕೃತ್ಯಗಳು, ಸ್ತ್ರೀಯ ಮೇಲೆ ಅತ್ಯಾಚಾರ ಇವುಗಳ ದೃಶ್ಯಗಳನ್ನು ತೋರಿಸಲಾಗುತ್ತಿದೆ. ಯುವಕ ಯುವತಿಯರ ಮನಸ್ಸಿನ ಮೇಲೆ ಇವುಗಳಿಂದಾಗುವ ಪರಿಣಾಮ ಭೀಕರ. ಅನ್ಯೆತಿಕತೆಯೇ ನಾಗರೀಕತೆ, ನೈತಿಕತೆಯೇ, ಅನಾಗರೀಕತೆ ಎಂಬ ಭಾವನೆ ನಿರ್ಮಾಣವಾಗಿದೆ ಈ ಪರಿಸ್ಥಿತಿಯ ಪರಿಣಾಮವಾಗಿ, ದುರಾಸೆಯನ್ನು

ಪೂರೈಸಿಕೊಳ್ಳಲು ಅನೈತಿಕ ಸುಖಗಳನ್ನು ಅನುಭವಿಸಲು ಉಪಯೋಗಿಸಲಾಗುತ್ತಿದೆ. ಇತರರ ಶೋಷಣೆ ಮಾಡಿ ಅದರಿಂದ ಲಾಭ ಪಡೆಯುವ ಜನರು ಹೆಚ್ಚಾಗುತ್ತಿದ್ದಾರೆ.

ಇವೆಲ್ಲದರ ಪರಿಣಾಮವಾಗಿ, ನಮ್ಮ ಜೀವನ ಮೌಲ್ಯಗಳೆಲ್ಲ ನಾಶವಾಗುತ್ತಿವೆ. ಪತಿ ಪತ್ನಿಯರ ಪವಿತ್ರ ಸಂಬಂಧವೂ ಸಹ ನಾಶವಾಗಿ ಕೇವಲ ಕ್ಷಣಿಕ ಆಸೆಗಳಿಗಾಗಿ ಮಕ್ಕಳ ಭವಿಷ್ಯವನ್ನು ಕಡೆಗಾಣಿಸಿ, ಆ ಸಂಬಂಧವನ್ನು ಕಡಿದು ಹಾಕಲಾಗುತ್ತಿದ್ದು, ಇದರ ಪರಿಣಾಮವಾಗಿ ಅನೇಕ ಮಕ್ಕಳು ಅನಾಥರಾಗಿ, ನಂತರ ದಾರಿತಪ್ಪಿದ ಯುವಕ ಯುವತಿಯರಾಗಿ, ಸಮಾಜಕ್ಕೆ ಆಸ್ತಿಯಾಗುವುದರ ಬದಲು, ಹೊರೆಯಾಗುತ್ತಿದ್ದಾರೆ. ಸಾಮಾನ್ಯವಾಗಿ ಎಲ್ಲರ ಮನಸ್ಸಿನಲ್ಲೂ ಈ ಪರಿಸ್ಥಿತಿಯ ಬಗ್ಗೆ ಚಿಂತೆಯುಂಟಾಗಿದೆ. ಬಹುಜನರು ಇದೇ ವಿಷಯ ಮಾತನಾಡುತ್ತಿದ್ದಾರೆ.

ಹೀಗಿರುವಾಗ ಈ ದುಃಸ್ಥಿತಿಗೆ ಕಾರಣವೇನು ಪರಿಹಾರವೇನು ? ಎಂದು ಯೋಚಿಸಿದರೆ, 'ಧರ್ಮ' ಏನು ಎಂದು ಅರ್ಥ ಮಾಡಿಕೊಂಡಿರುವವರಿಗೆಲ್ಲಾ ಇಂದಿನ ಎಲ್ಲ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ರೋಗಗಳಿಗೆ ಧರ್ಮವನ್ನು ಕಡೆಗಾಣಿಸಿದ್ದೇ ಕಾರಣ, ಈ ಎಲ್ಲ ರೋಗಗಳಿಗೆ 'ಧರ್ಮ'ವೇ ಸಂಜೀವಿನಿ, ಧರ್ಮದ ಪುನರ್ ಸಂಸ್ಥಾಪನೆಯಿಂದಲೇ ಸರ್ವರೋಗಗಳನ್ನು ನಿವಾರಿಸಲು ಸಾಧ್ಯ, ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಹಾಗಾದರೆ 'ಧರ್ಮ' ಎಂದರೇನು 'ಧರ್ಮ' ಸಂಸ್ಕೃತ ಭಾಷೆಯ ಪದ. ಇದರ ವ್ಯಾಪ್ತಿ ಬಹು ವಿಶಾಲ. ಇದಕ್ಕೆ ಸಮಾನಪದ ಜಗತ್ತಿನ ಯಾವ ಭಾಷೆಯಲ್ಲೂ ಸಿಗುವುದಿಲ್ಲ . ಬೇರೆ ಭಾಷೆಗಳಲ್ಲಿ 'ಧರ್ಮ' ಏನೆಂಬುದನ್ನು ತಿಳಿಯುವಂತೆ ವಿವರಿಸಲು ಮಾತ್ರ ಸಾಧ್ಯ. ಪ್ರತಿಯೊಬ್ಬ ಮನುಷ್ಯನೂ, ಜೀವನದ ಪ್ರತಿಯೊಂದು ಹಂತದಲ್ಲೂ, ಪ್ರತಿಯೊಂದು ಪಾತ್ರದಲ್ಲೂ, ಅನುಸರಿಸಬೇಕಾದ ಸೂಕ್ತವಾದ ನಿಯಮಗಳೆಲ್ಲ 'ಧರ್ಮ'ದ ವ್ಯಾಪ್ತಿಯಲ್ಲಿ ಬರುತ್ತವೆ. ಆದುದರಿಂದ 'ಧರ್ಮ' ಸಂದರ್ಭಕ್ಕೆತಕ್ಕಂತೆ ಆಯಾ ನಿಯಮಗಳ ಅರ್ಥವನ್ನು ಕೊಡುತ್ತದೆ. ಉದಾಹರಣೆಗೆ, ಒಂದು ಮೊಕದ್ದಮೆಯಲ್ಲಿ ಧರ್ಮ ವಾದಿಯ ಕಡೆ ಇದೆ ಎಂದರೆ, ನ್ಯಾಯ ಎಂಬ ಅರ್ಥ ಪಡೆಯುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಬೇರೆಯವರಿಗೆ ಸಹಾಯ ಮಾಡಬೇಕಾದ್ದು 'ಧರ್ಮ' ಎಂದರೆ ಕರ್ತವ್ಯ ಎಂಬ ಅರ್ಥ ಪಡೆಯುತ್ತದೆ. ಒಳ್ಳೆಯ ಕೆಲಸಕ್ಕೆ, ಪುಣ್ಯ ಕಾರ್ಯಗಳಿಗೆ ಹಣ ಕೊಡಬೇಕಾದ್ದು ಧರ್ಮ ಎಂದಾಗ 'ದಾನ' ಅನ್ನುವ ಅರ್ಥ ಪಡೆಯುತ್ತದೆ. ಪ್ರತಿಯೊಬ್ಬ ಸ್ತ್ರೀಯನ್ನು ತಾಯಿಯಂತೆ ಗೌರವಿಸುವುದು ಅತ್ಯಾಚಾರ ಭ್ರಷ್ಟಾಚಾರ ಮಾಡದಿರುವುದು ಧರ್ಮ ಎಂದಾಗ ನೀತಿ ಎಂಬ ಅರ್ಥ ಪಡೆಯುತ್ತದೆ; ನೀರಿನ ಧರ್ಮ ಹರಿಯುವುದು ಬೆಂಕಿಯ 'ಧರ್ಮ' ಸುಡುವುದು ಎಂದಾಗ, ಪ್ರಕೃತಿದತ್ತ ಗುಣ ಎಂಬ ಅರ್ಥ ಪಡೆಯುತ್ತದೆ. ಸಂವಿಧಾನ ಮತ್ತು ಶಾಸನಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕಾದ್ದು ಪ್ರತಿಯೊಬ್ಬ ವ್ಯಕ್ತಿಯ 'ಧರ್ಮ' ಎಂದಾಗ, ಧರ್ಮ ಎಂಬ ಪದಕ್ಕೆ ಸಂವಿಧಾನ, ಶಾಸನ ಎಂಬ ಅರ್ಥ ಬರುತ್ತದೆ. ಈ ರೀತಿ ಧರ್ಮ ಸಂದರ್ಭೋಚಿತವಾದ ಅರ್ಥವನ್ನು

ಪಡೆಯುವ, ವ್ಯಾಪಕ ಅರ್ಥವಿರುವ ಪದ ಶಾಶ್ವತವಾದ ಧರ್ಮದ ನಿಯಮಗಳು ಪ್ರಕೃತಿಯ ನಿಯಮಗಳಂತೆ ಬದಲಾಯಿಸುವುದಿಲ್ಲ. ಸರ್ವಕಾಲಕ್ಕೂ ಎಲ್ಲ ಮಾನವರಿಗೂ ಅನ್ವಯವಾಗುವಂತಹ ಎಲ್ಲ ನಿಯಮಗಳೂ ಧರ್ಮದ ವ್ಯಾಪ್ತಿಯಲ್ಲಿ ಬರುತ್ತವೆ.

ಧರ್ಮ ಇಡೀ ಮಾನವ ಕೋಟಿಗೆ, ಭಾರತ ನೀಡಿರುವ ಅಮೂಲ್ಯ ಕೊಡುಗೆ.

ವ್ಯಕ್ತಿ ಮತ್ತು ಸಮಾಜದ ನಡುವೆ ಸಾಮರಸ್ಯತೆ ಉಂಟುಮಾಡಿ, ಎಲ್ಲರೂ ಸುಖವಾಗಿ ಬಾಳುವಂತೆ ಮಾಡುವ ಸಾಮರ್ಥ್ಯ ಧರ್ಮಕ್ಕಿದೆ. ಆದುದರಿಂದ, ಭಾರತದಲ್ಲಿ 'ಧರ್ಮ' ಎಂಬ ಪದ ಕಿವಿಗೆ ಬಿದ್ದೊಡನೆ, ವ್ಯಕ್ತಿಯ ಆತ್ಮ ಜಾಗೃತಿಯಾಗುತ್ತದೆ. ಆದುದರಿಂದಲೇ ಪುರಾತನ ಕಾಲದಿಂದಲೂ ಭಾರತದಲ್ಲಿ ಧರ್ಮಕ್ಕೆ ಸರ್ವೋಚ್ಚ ಸ್ಥಾನ ನೀಡಲಾಗಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಪ್ರಜೆಗಳನ್ನು ರಕ್ಷಿಸಲು ರಾಜ ಹಾಗೂ ರಾಜ್ಯದ ವ್ಯವಸ್ಥೆ ಹೇಗೆ ಜಾರಿಗೆ ಬಂತೆಂಬುದನ್ನು ವಿವರಿಸುತ್ತಾ, ರಾಜ್ಯಶಕ್ತಿಯ ಮೇಲೂ ನಿಯಂತ್ರಣವಿಡಬಲ್ಲ ಶಕ್ತಿಯೊಂದನ್ನು ನಿರ್ಮಿಸಲಾಯಿತು. ಅದೇ 'ಧರ್ಮ' ಎಂದು ಹೇಳಿದೆ. ಈ ಅಂಶವನ್ನು ವ್ಯಕ್ತ ಪಡಿಸಿರುವ ಶ್ಲೋಕ ಈ ರೀತಿ ಇದೆ.

ಕ್ಷತ್ರಸ್ಯ ಕ್ಷತ್ರಂ ಯುದ್ಧರ್ಮ:
ಅಥೋ ಅಬಲಿಯಾನ್ ಬಲಿಯಾನ್
ಸಮಾಶಂಸೇತೇ ಧರ್ಮೇಣ
ಯಥಾ ರಾಜ್ಞಾ ಏವಮ್

ರಾಜನಿಗೆ ರಾಜ ಧರ್ಮ – ಧರ್ಮದ ಬಲದಿಂದ, ಹಾಗೂ ರಾಜನ (ರಾಜ್ಯ ಶಕ್ತಿಯ) ಸಹಾಯದಿಂದ, ಅತ್ಯಂತ ದುರ್ಬಲ ವ್ಯಕ್ತಿಯೂ ಬಲಿಷ್ಠನನ್ನು ಗೆಲ್ಲಬುಹುದು –

ಈ ಶ್ಲೋಕದ ಅರ್ಥ ತುಂಬಾ ಮಹತ್ವದ್ದು. ರಾಜನಾದವನು ಧರ್ಮಕ್ಕೆ ಅಡಿಯಾಳು. ರಾಜ ತಪ್ಪು ಮಾಡುವುದೇ ಇಲ್ಲ ಎಂಬ ಸಿದ್ಧಾಂತವನ್ನು 'ಧರ್ಮ' ನಿರಾಕರಿಸಿತು. ಧರ್ಮಕ್ಕನುಗುಣವಾಗಿ ರಾಜ್ಯವಾಳುವ, ಪ್ರಜೆಗಳಿಗೆ ನ್ಯಾಯ ದೊರಕಿಸಿಕೊಡುವುದು ರಾಜನ, ರಾಜ್ಯ ಶಕ್ತಿಯ ಕರ್ತವ್ಯ. ಈ ವ್ಯವಸ್ಥೆಯಲ್ಲಿ, ದುರ್ಬಲನ ಪರವಾಗಿ ನ್ಯಾಯವಿದ್ದಲ್ಲಿ ಅವನ ವಿರೋಧಿ ಎಷ್ಟೇ ಬಲಿಷ್ಠನಾಗಿದ್ದರೂ, ಧರ್ಮದ ಬಲದಿಂದ ಗೆಲ್ಲಬಹುದು – ಅಂದ ಮೇಲೆ ಧರ್ಮಕ್ಕನುಗುಣವಾಗಿ ಆಡಳಿತ ನಡೆಸುವುದು ರಾಜ್ಯ ಸೂತ್ರ ಹಿಡಿದವರ ಕರ್ತವ್ಯ, ಜವಾಬ್ದಾರಿ. ಮತ್ತು ಧರ್ಮರಾಜ್ಯ ಎಂದರೆ, ಧರ್ಮದ ನಿಯಮಗಳಿಗನುಗುಣವಾಗಿ ನಡೆಸುವ ರಾಜ್ಯ ವ್ಯವಸ್ಥೆ ಎಂಬುದು ಸುಸ್ಪಷ್ಟ.

ಶಾಶ್ವತವಾದ ಧರ್ಮದ ನಿಯಮಗಳನ್ನು, ಎರಡು ಭಾಗವಾಗಿ ವಿಂಗಡಿಸಲಾಗಿದೆ. ಮೊದಲನೆಯದು ಸಾಮಾನ್ಯ ಧರ್ಮ, ಎರಡನೆಯದು ರಾಜಧರ್ಮ :

ಸಾಮಾನ್ಯ ಧರ್ಮ

ಅಹಿಂಸಾ ಸತ್ಯಮಸ್ತೇಯಂ
ಶೌಚಂ ಇಂದ್ರಿಯ ನಿಗ್ರಹ:
ಏತಂ ಸಾಮಾಸಿತಂ ಧರ್ಮಂ (ಮನು - x-೬೩)

ಅಹಿಂಸೆ - ಯಾವ ಜೀವಿಗೂ ಹಿಂಸೆಯನ್ನು ಮಾಡದಿರುವುದು, ಸತ್ಯಂ, ಸತ್ಯವನ್ನೇ ಹೇಳುವುದು, ಅಸ್ತೇಯ - ಕಳ್ಳತನ ಮೋಸ, ಅನ್ಯಾಯವಾದ ಮಾರ್ಗಗಳಿಂದ ಹಣಸಂಪಾದನೆ ಮಾಡದಿರುವುದು, ಶೌಚಂ, ಅಂತರಂಗ 'ಶುದ್ಧಿ, ಬಹಿರಂಗ ಶುದ್ಧಿ ಅಂದರೆ ಮನಸ್ಸು ನಡೆ - ನುಡಿಗಳಲ್ಲಿ ವ್ಯತ್ಯಾಸವಿಲ್ಲದಿರುವುದು, ಇಂದ್ರಿಯನಿಗ್ರಹ, ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಇವುಗಳ ಪ್ರಭಾವಕ್ಕೆ ಒಳಗಾಗಿ, ಇಂದ್ರಿಯಗಳ ಮೂಲಕ, ಅಪರಾಧಗಳನ್ನು ಮಾಡುವುದನ್ನು ತಡೆಯುವುದು, ಇವುಗಳೇ ಎಲ್ಲಮಾನವರೂ ಅನುಸರಿಸಬೇಕಾದ ನಿಯಮಗಳು.

ಈ ಧರ್ಮದ ನಿಯಮಗಳನ್ನು ಅನುಸರಿಸಿದರೆ, ವ್ಯಕ್ತಿಯ ಹಿತಕ್ಕೂ ಸಮಾಜದ ಅಂದರೆ ಇತರ ವ್ಯಕ್ತಿಗಳ ಹಿತಕ್ಕೂ ಯಾವ ಘರ್ಷಣೆಯೂ ಉಂಟಾಗುವುದಿಲ್ಲ. ಸಮನ್ವಯ ಉಂಟಾಗುತ್ತದೆ. ವ್ಯಕ್ತಿಯೂ ಹಾಗೂ ಸಮಾಜವು ಸುಖ, ಶಾಂತಿಗಳನ್ನು ಪಡೆಯುತ್ತದೆ

ಮನುಷ್ಯನಲ್ಲಿ ಅವನನ್ನು ಅಧರ್ಮದ ಹಾದಿಗೆಳೆಯುವ ಶತ್ರುಗಳಾದ, ಕಾಮ, ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯಗಳು ಅಂತರ್ನಿಹಿತವಾಗಿರುವುದನ್ನು, ಮನುಷ್ಯನ ಸ್ವಭಾವ ಜನ್ಯವಾದ ಆಸೆ, ಆಕಾಂಕ್ಷೆಗಳನ್ನೂ, ಪರಿಗಣಿಸಿ ಧರ್ಮದ ಆಧಾರದ ಮೇಲೆ ಜೀವನ ಸಿದ್ಧಾಂತವೊಂದನ್ನು ನಮ್ಮ ಪೂರ್ವಜರು ರಚಿಸಿದರು. ಅದೇ 'ಧರ್ಮ', 'ಅರ್ಥ' 'ಕಾಮ' ವೆಂಬ ತ್ರಿವರ್ಗ ಸಿದ್ಧಾಂತ. ಈ ಸಿದ್ಧಾಂತವೇನೆಂದರೆ ಅರ್ಥ, ಅಂದರೆ ಜಗತ್ತಿನ ಸಕಲ ರೀತಿಯ ಐಶ್ವರ್ಯಗಳು, ಕಾಮ, ಅಂದರೆ ಮನುಷ್ಯನ ಮನಸ್ಸಿನಲ್ಲಿ ಉಂಟಾಗುವ ಎಲ್ಲ ರೀತಿಯ ಆಸೆಗಳು, ಇವುಗಳನ್ನು ಧರ್ಮಕ್ಕನುಗುಣವಾಗಿದ್ದರೆ ಮಾತ್ರ ಪಡೆಯಬೇಕು, ಅನುಭವಿಸಬೇಕು. ಧರ್ಮದ ವಿರುದ್ಧವಾಗಿದ್ದರೆ ಅಂತಹ ಐಶ್ವರ್ಯ, ಅಥವಾ ಆಸೆಗಳನ್ನು ತ್ಯಜಿಸಬೇಕು. ಇದನ್ನು ಮನು ಸ್ಮೃತಿಯಲ್ಲಿ ಬಹಳ ಸ್ಪಷ್ಟವಾಗಿ ಸೂತ್ರರೂಪದಲ್ಲಿ ಹೇಳಲಾಗಿದೆ. ಅದೇನೆಂದರೆ

'ಪರಿತ್ಯಜೇದರ್ಥ ಕಾಮೌಯೌ ಸ್ಯಾತಾಂಧರ್ಮ ವರ್ಜಿತೌ' -ಧರ್ಮಕ್ಕೆ ವಿರುದ್ಧವಾದ, ಹಣ ಐಶ್ವರ್ಯ, ಆಸೆ, ಇವುಗಳನ್ನು ತ್ಯಜಿಸಬೇಕು.

ಮೇಲೆ ಹೇಳಿದ ನಿಯಮಗಳು ಎಷ್ಟು ಮಹತ್ವವಾದುದು ಎಂಬುದು, ನಿಯಮವನ್ನು ಓದಿದೊಡನೆಯೇ ತಿಳಿಯುತ್ತದೆ. ಯಾವಾಗ ಮನುಷ್ಯನು ತನಗೆ ನ್ಯಾಯವಾಗಿ ಸಿಗಬೇಕಾದ ಹಣ, ಐಶ್ವರ್ಯಕ್ಕಿಂತ ಹೆಚ್ಚಾದ್ದನ್ನು ಪಡೆಯಲು ಅಧರ್ಮದ ಮಾರ್ಗ ಹಿಡಿಯುತ್ತಾನೋ, ಅದೇ ರೀತಿ ಶಾರೀರಿಕ ಸುಖಕ್ಕಾಗಿ, ಧರ್ಮಕ್ಕನುಗುಣವಾದ ವೈವಾಹಿಕ ಜೀವನವನ್ನು ಬಿಟ್ಟು,

ಅಧರ್ಮದ ಮಾರ್ಗ ಹಿಡಿಯುತ್ತಾನೋ ಅವನು, ಕ್ಷಣಿಕವಾಗಿ ಸುಖವನ್ನು ಪಡೆದರೂ ಕೊನೆಯಲ್ಲಿ ತಾನೂ ಹಾಳಾಗುತ್ತಾನೆ ಸಮಾಜಕ್ಕೂ ಕಂಟಕನಾಗುತ್ತಾನೆ.

ಈ ತ್ರಿವರ್ಗಸಿದ್ಧಾಂತವನ್ನು ಜಾರಿಗೆ ಕೊಡುವುದೇ ರಾಜ್ಯ ವ್ಯವಸ್ಥೆಯ ಜವಾಬ್ದಾರಿ ಎಂಬುದನ್ನು ಬೃಹಸ್ಪತಿ ಸ್ಮೃತಿಯಲ್ಲಿ ಘೋಷಿಸಲಾಗಿದೆ.

ನೀತೇಃ ಫಲಂ ಧರ್ಮಾರ್ಥಕಾಮವಾಪ್ತಿಃ

ಪ್ರತಿಯೊಬ್ಬ ಪ್ರಜೆಯೂ ಅರ್ಥಕಾಮಗಳನ್ನು ಧರ್ಮಕ್ಕನುಗುಣವಾಗಿ ಮಾತ್ರ ಅನುಭವಿಸುವಂತೆ ಮಾಡುವುದು, ನೋಡಿಕೊಳ್ಳುವುದು ರಾಜ್ಯದ ಅಧಿಕಾರ - ಜವಾಬ್ದಾರಿ.

ಈ ಜವಾಬ್ದಾರಿಯನ್ನು ನಿರ್ವಹಿಸಲು ರಾಜನಾದವನು ನಿರ್ವಹಿಸಬೇಕಾದ, ಮೂಲ ಭೂತ ಕರ್ತವ್ಯಗಳನ್ನು ರಾಜಧರ್ಮದಲ್ಲಿ, ಸೂಚಿಸಲಾಗಿದೆ - ಅವು

ದುಷ್ಟಸ್ಯದಂಡಃ ಸುಜನಸ್ಯ ಪೂಜಾ
ನ್ಯಾಯೇಣ ಕೋಶಸ್ಯಚ ಸಂಪ್ರವೃದ್ಧಿಃ
ಅಪಕ್ಷಪಕ್ಷೇರ್ಥಿಸುರಾಷ್ಟ್ರರಕ್ಷಾ
ಪಂಚೈವ ಯಜ್ಞಾಃ ಕತಿಥಾ ಕದಿರುನೃಪಾಣಂ.

ದುಷ್ಟರನ್ನು ಅಂದರೆ ಧರ್ಮಕ್ಕೆ ವಿರುದ್ಧವಾದ ಅರ್ಥಕಾಮಗಳನ್ನು ಪಡೆಯುವವರನ್ನು ಶಿಕ್ಷಿಸುವುದು, ಸಜ್ಜನರನ್ನು ಅಂದರೆ ಧರ್ಮಕ್ಕನುಗುಣವಾಗಿ ನಡೆದುಕೊಳ್ಳುವ ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳುವುದು ನ್ಯಾಯವಾದ ತೆರಿಗೆ ವಸೂಲು ಮಾಡುವುದು ವಾದಿ ಪ್ರತಿ ವಾದಿಗಳ ನಡುವೆ ನಿಷ್ಪಕ್ಷಪಾತದಿಂದ ನ್ಯಾಯ ವಿತರಣೆ ಮಾಡುವುದು ರಾಷ್ಟ್ರದ ರಕ್ಷಣೆ, ಇವು ಐದು ರಾಜನು ಮಾಡಬೇಕಾದ ಐದು ಯಜ್ಞಗಳು, ಅಂದರೆ ನಿಃ ಸ್ವಾರ್ಥ ಭಾವನೆಯಿಂದ ಮಾಡಬೇಕಾದ ಮೂಲಭೂತ ಕರ್ತವ್ಯಗಳು.

ಅಲ್ಲದೆ ರಾಜನಾದವನು ಎಲ್ಲ ಜಾತಿ ಪಂಥದ ಜನರಿಗೂ ಸಮಾನವಾಗಿ ರಕ್ಷಣೆ ಕೊಡಬೇಕು ಎಂದು ನಾರದ ಸ್ಮೃತಿಯಲ್ಲಿರುವ ನಿಯಮ ಈ ರೀತಿ ಇದೆ:

ಪಾಷಂಡ ನೈಗಮ ಪುಗ ವ್ರತ ಗಣಾದಿಷ್ಟು:
ಸಂರಕ್ಷೇತ್ ಸಮಯಂ ರಾಜ.

ವೇದವನ್ನು ನಂಬುವವರಿಗೂ ನಂಬದವರಿಗೂ ಸಮಾನ ರೀತಿಯಲ್ಲಿರಕ್ಷಣೆ ಕೊಡಬೇಕು.

ಮತ್ತು

ಯಥಾಸರ್ವಾಣಿ ಭೂತಾನಿ ಧರಾಧಾರಯತೇ ಸಮಂ
ಕಥಾ ಸರ್ವಾಣಿ ಭೂತಾನಿ ಬಿಭ್ರತಃ ಪಾರ್ಥಿವಂ ವ್ರತಮ್ (ಮನು ೯-೩೧೧)

ಯಾವರೀತಿ ಭೂತಾಯಿ ಪ್ರತಿಯೊಂದು ಜೀವಿಗೂ ಸಮಾನರೀತಿಯಲ್ಲಿ ಆಧಾರವಾಗಿದೆಯೋ ಅದೇರೀತಿಯಲ್ಲಿ, ರಾಜನಾದವನು ಎಲ್ಲ ಜೀವಿಗಳಿಗೂ ಸಮಾನವಾದ ರಕ್ಷಣೆ, ಪೋಷಣೆ ನೀಡಬೇಕು.

ರಾಜ್ಯ ವ್ಯವಸ್ಥೆಯ ಗುರಿಯೇನು? ರಾಜ ಹೇಗೆ ವರ್ತಿಸಬೇಕು ? ಎಂಬುದನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅರ್ಥಗರ್ಭಿತವಾಗಿ ಘೋಷಿಸಲಾಗಿದೆ. ಅದು ಈ ರೀತಿ ಇದೆ:

ಪ್ರಜಾಸುಖಂ ಸುಖೇ ರಾಜ್ಞ:
ಪ್ರಜಾನಾಂಚ ಹಿತೇ ಹಿತಮ್
ನಾತ್ಮಂಪ್ರಿಯಂ ಹಿತಂ ರಾಜ್ಞ:
ಪ್ರಜಾನಾಂತು ಪ್ರಿಯಂ ಹಿತಂ

ಪ್ರಜೆಗಳ ಸುಖವೇ ರಾಜನ ಸುಖ, ಪ್ರಜೆಗಳಿಗೇನು ಹಿತವೋ ಅದು ರಾಜನ ಹಿತ. ತನ್ನ ಮನಬಂದಂತೆ ರಾಜಮಾಡಬಾರದು. ಪ್ರಜೆಗಳಿಗೆ ಪ್ರಿಯವಾದುದನ್ನೇ ಮಾಡಬೇಕು

ಬಹುಶಃ ಇದಕ್ಕಿಂತ ಉತ್ತಮವಾದ ನಿಯಮಗಳನ್ನು ಮಾಡಲು ಸಾಧ್ಯವಿಲ್ಲ. ಈ ನಿಯಮಗಳೇ 'ಧರ್ಮ', ದೇವರಿದ್ದಾನೆ ಎಂದು ನಂಬಿದವರು, ಆತನನ್ನು ಉಪಾಸನೆ ಆರಾಧನೆ ಮಾಡುವ ಪದ್ಧತಿಗಳು ಮತ, ಸಂಪ್ರದಾಯ ಆಗುತ್ತವೆ. ಉದಾಹರಣೆ: ಶೈವ, ವೈಷ್ಣವ, ಬೌದ್ಧ, ಜೈನ, ಸಿಖ್, ಇಸ್ಲಾಂ, ಕ್ರೈಸ್ತ ಇತ್ಯಾದಿ ಮತ ಅಥವಾ ಪಂಥಗಳು ಯಾರು ಯಾವ ಮತಕ್ಕೆ ಸೇರಿರುತ್ತಾರೋ ಆ ಉಪಾಸನಾ ಪದ್ಧತಿಯನ್ನು ಅನುಸರಿಸುವುದಕ್ಕೆ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ ಎಂಬುದೇ ಧರ್ಮದ ನಿಯಮ.

ಸಾಧಾರಣ ವ್ಯಕ್ತಿಯೇ ಆಗಲಿ, ರಾಜನೇ ಆಗಲಿ ಅಧರ್ಮದ ಮಾರ್ಗ ಹಿಡಿಯಬಾರದು. ಅಧರ್ಮದ ಮಾರ್ಗವನ್ನೇನಾದರೂ ಅನುಸರಿಸಿದಲ್ಲಿ .ತಾತ್ಕಾಲಿಕವಾಗಿ ಲಾಭವಾದರೂ, ಅಂತಿಮವಾಗಿ ದುಃಖಪಡಬೇಕಾಗುವುದು ಎಂದು ಮನುಸ್ಮೃತಿಯಲ್ಲಿ ಎಚ್ಚರಿಕೆ ನೀಡಿದ ಶ್ಲೋಕ ಈ ರೀತಿ ಇದೆ.

ಅಧರ್ಮೇಣೈಧತೇ ತಾವತ್
ತತೋಭದ್ರಾಣಿ ಪಶ್ಯತಿ
ಸಪತ್ನಾನ್ ಜಯತಿ
ಸಮೂಲಸ್ತು ವಿನಶ್ಯತಿ

ಅಧರ್ಮದ ಮಾರ್ಗ ಹಿಡಿದವರು ತಕ್ಷಣ ತಾವಿಚ್ಛಿಸಿದ್ದನು ಪಡೆಯುತ್ತಾರೆ, ಅನೇಕ ಸುಖಗಳನ್ನೂ ಕಾಣುತ್ತಾರೆ, ವಿರೋಧಿಗಳನ್ನೂ ಗೆಲ್ಲುತ್ತಾರೆ. ಆದರೆ, ಕೊನೆಯಲ್ಲಿ ಅವರ ಸರ್ವನಾಶ ಶತಸಿದ್ಧ.

ಇದು ಚಿರಂತನ ಸತ್ಯ - ಅಧರ್ಮದಿಂದ ಐಶ್ವರ್ಯ, ಶಾರೀರಿಕ ಸುಖ, ಇತ್ಯಾದಿ ಪಡೆಯುವವರ ಗತಿ ಕೊನೆಯಲ್ಲಿ ದುರ್ಗತಿಯೇ ಆಗಿರುತ್ತದೆ. ಅಂತಹವರು ಮಾನಸಿಕ

ಶಾಂತಿಯನ್ನು ಕಳೆದುಕೊಳ್ಳುತ್ತಾರೆ, ಮಾನವನ್ನು ಕಳೆದುಕೊಳ್ಳುತ್ತಾರೆ. ತಮಗೂ ತಮ್ಮ ಕುಟುಂಬಕ್ಕೂ ನಾನಾ ರೀತಿಯ ಕಷ್ಟವನ್ನು ತಂದುಕೊಳ್ಳುತ್ತಾರೆ. ಇಂತಹ ಅನೇಕ ವ್ಯಕ್ತಿಗಳನ್ನು ನಾವು ನೋಡುತ್ತಿದ್ದೇವೆ.

ಹಾಗಿದ್ದರೂ ಮನುಷ್ಯನ ನಡತೆ ವಿಚಿತ್ರ. ಅಧಿಕಾರ, ಹಣ, ಐಶ್ವರ್ಯ, ಶಾರೀರಿಕ ಸುಖ ಇವುಗಳಿಗಾಗಿ ನಾನಾ ರೀತಿಯ ಅಧರ್ಮದ ಮಾರ್ಗ ಅನುಸರಿಸುವವರು ದಿನೇ ದಿನೇ ಜಾಸ್ತಿಯಾಗುತ್ತಿದ್ದಾರೆ. ಐಶ್ವರ್ಯ ಹಣಕ್ಕಾಗಿ ಅಧಿಕಾರದ ದುರುಪಯೋಗ, ಲಂಚ, ಭ್ರಷ್ಟಾಚಾರ, ವ್ಯಾಪಾರ, ಉದ್ಯೋಗಗಳ ಮೂಲಕ ಜನರ ಶೋಷಣೆ, ಅನಾಚಾರ ಅತ್ಯಾಚಾರಗಳ ಮೂಲಕ ಶಾರೀರಿಕ ಸುಖಪಡೆಯುವ ಪ್ರವೃತ್ತಿ ವಿಪರೀತಕ್ಕೆ ಹೋಗಿದೆ ಸ್ವಾರ್ಥ ದುರಾಸೆ ತಾಂಡವವಾಡುತ್ತಿದೆ. ಹೀಗಾಗಿರುವ ಇಂದಿನ ಎಲ್ಲ ರಾಜಕೀಯ, ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಕಾರಣ ಧರ್ಮವನ್ನು ಕಡೆಗಾಣಿಸಿದ್ದೇ ಆಗಿದೆ. ಆದುದರಿಂದ ಈಗಲಾದರೂ ನಾವು ಎಚ್ಚೆತ್ತುಕೊಳ್ಳಬೇಕು.

ಜಗಜ್ಯೋತಿ ಬಸವೇಶ್ವರ, ತಮ್ಮ ವಚನದಲ್ಲಿ-
ಹೊತ್ತು, ಹೋಗದ ಮುನ್ನ
ಮೃತ್ಯು ಒಯ್ಯದ ಮುನ್ನ
ತೊತ್ತುಗೆಲಸವ ಮಾಡು !
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು !
ಆಗ್ಗವಣಿ ಪತ್ರೆಯ ತಂದು
ಪೂಜಿಸು ಲಿಂಗವ

ಎಂದು ಎಚ್ಚರಿಸಿರುವಂತೆ, ನಮ್ಮ ರಾಷ್ಟ್ರ ಸರ್ವನಾಶದತ್ತ ಹೋಗುವ ಮುನ್ನ 'ಧರ್ಮ' ಪುನರ್‌ಸಂಸ್ಥಾಪನೆಯನ್ನು ಮಾಡಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಧರ್ಮಕ್ಕನುಗುಣವಾಗಿ ನಡೆದುಕೊಳ್ಳುವ ಸಂಸ್ಕಾರ ನೀಡಬೇಕು. ಅಂತಹ ವ್ಯಕ್ತಿಗಳ ಸಂಖ್ಯೆ ಜಾಸ್ತಿಯಾದಾಗ ಮಾತ್ರ ನೈತಿಕ ಅಧಃಪತನದಿಂದ ನರಳುತ್ತಿರುವ ನಮ್ಮ ರಾಷ್ಟ್ರವು, ಶುದ್ಧವೂ ಸಮೃದ್ಧವೂ, ಚೈತನ್ಯ ಪೂರ್ಣವೂ ಆಗುತ್ತದೆ.

ಮಹಾಭಾರತದಲ್ಲಿ ಘೋಷಿಸಿರುವಂತೆ 'ಯತೋಧರ್ಮಸ್ತತ್ರೋಜಯಃ 'ಅಂದರೆ ಧರ್ಮಕ್ಕೆ ಜಯ ಖಂಡಿತ ಎಂಬುದು ನಮ್ಮ ಅಚಲವಾದ ನಂಬಿಕೆ. ಆದರೆ ಬರೀ ನಂಬಿಕೆಯಿಂದ ಧರ್ಮ ಸಂಸ್ಥಾಪನೆಯಾಗುವುದಿಲ್ಲ. ಹಲವರ ಶ್ರಮ, ತ್ಯಾಗ, ಬಲಿದಾನಗಳಿಂದ ಮಾತ್ರ ಧರ್ಮ ಸಂಸ್ಥಾಪನೆ ಮಾಡಬಹುದು. ಇಂದಿನ ನಮ್ಮ ಎಲ್ಲ ಸಮಸ್ಯೆಗಳಿಗೂ ಧರ್ಮವೊಂದೇ ಸಂಜೀವಿನಿ.

ಧರ್ಮ ಮತ್ತು ಸಂಸ್ಕೃತಿ

ಡಾ॥ ಬಸವರಾಜ ಸಬರದ

ಧರ್ಮ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಅರ್ಥಪೂರ್ಣವಾದ ಸಂಬಂಧವಿದೆ. ಇವೆರಡೂ ಪದಗಳ ಅರ್ಥ ವ್ಯಾಪ್ತಿ, ದೇಶ, ಕಾಲ, ಭಾಷೆಗಳನ್ನು ಮೀರಿದ ವಿಶಾಲಾರ್ಥವನ್ನು ವೈವಿಧ್ಯತೆಯನ್ನು ಪಡೆದಿವೆ. ಈ ಎರಡೂ ಪದಗಳ ಅರ್ಥ ವಿಶ್ಲೇಷಣೆ ಕಾಲದಿಂದ ಕಾಲಕ್ಕೆ ಬೆಳವಣಿಗೆಯಾಗುತ್ತ ಬಂದಿದೆ. ಧರ್ಮ ಆದರ್ಶವನ್ನು ಹೇಳಿದರೆ ಸಂಸ್ಕೃತಿ ವಾಸ್ತವವನ್ನು ತೆರೆದಿಡುತ್ತದೆ. ಹೀಗಾಗಿ ಧರ್ಮ ಸಂಸ್ಕೃತಿಗಳ ಅಧ್ಯಯನವೆಂದರೆ ಅದು ಒಂದರ್ಥದಲ್ಲಿ ಆದರ್ಶ-ವಾಸ್ತವಗಳ ನಡುವೆ ನಡೆದ ಸಂಘರ್ಷವೇ ಆಗಿದೆ. ಆದ್ದರಿಂದ ಧರ್ಮ ಮತ್ತು ಸಂಸ್ಕೃತಿಗಳ ಸಂಬಂಧ ಸಮನ್ವಯಕ್ಕೆ ಕಾರಣವಾಗಿರುವಂತೆ ಸಂಘರ್ಷವನ್ನೂ ಒಳಗೊಂಡಿದೆ. ಆ ಕಾರಣಕ್ಕಾಗಿ ಧರ್ಮ ಮತ್ತು ಸಂಸ್ಕೃತಿಗಳ ಅಧ್ಯಯನವೆಂದರೆ ಸೂಕ್ಷ್ಮವಾಗಿ ಗಮನಿಸಿದಾಗ ಸಮನ್ವಯ-ಸಂಘರ್ಷಗಳ ಮುಖಾಮುಖಿಯಾಗಿ ಕಾಣುತ್ತದೆ.

'ಸಂಸ್ಕೃತಿ' ಎಂಬ ಪದದ ವಿಶಾಲಾರ್ಥದ ಒಡಲಲ್ಲಿಯೇ ಧರ್ಮ ಒಂದು ಭಾಗವಾಗಿರುತ್ತದೆ. 'ಸಂಸ್ಕೃತಿ'ಗೆ ಸಂಬಂಧಿಸಿದಂತೆ ಅನೇಕ ವ್ಯಾಖ್ಯಾನಗಳು ಕಾಲದಿಂದ ಕಾಲಕ್ಕೆ ಬೆಳೆದುಕೊಂಡು ಬಂದಿವೆ. ಸಂಸ್ಕೃತಿಯಲ್ಲಿಯೇ ಪ್ರಧಾನ ಸಂಸ್ಕೃತಿ, ಉಪ ಸಂಸ್ಕೃತಿ, ಪರ್ಯಾಯ ಸಂಸ್ಕೃತಿ, ಪ್ರತಿ ಸಂಸ್ಕೃತಿ ಎಂಬ ವಿಂಗಡಣೆಗಳಿವೆ. ಸಂಸ್ಕೃತಿಗೆ ಸಂಬಂಧಿಸಿದ ಎಲ್ಲ ವ್ಯಾಖ್ಯಾನಗಳನ್ನು ಹೇಳುವುದು ನನ್ನ ಉದ್ದೇಶವಲ್ಲ. ನನ್ನ ಪ್ರಕಾರ 'ಸಂಸ್ಕೃತಿ'ಯೆಂದರೆ ಒಂದೇ ಮಾತಿನಲ್ಲಿ ಹೇಳುವುದಾದರೆ ಜೀವನ ವಿಧಾನವೇ ಆಗಿದೆ. ಈ ಜೀವನ ವಿಧಾನ ಕಾಲ, ಪ್ರದೇಶ, ಸಮುದಾಯಗಳಿಗೆ ಸಂಬಂಧಿಸಿದಂತೆ ಬೇರೆಬೇರೆಯಾಗಿ ವೈವಿಧ್ಯಮಯವಾಗಿ ಕಂಡುಬರುತ್ತದೆ. ಆದ್ದರಿಂದ ಸಂಸ್ಕೃತಿಯಲ್ಲಿ ಶ್ರೇಷ್ಠತೆ, ಕನಿಷ್ಠತೆಗಳ ಪರಿಕಲ್ಪನೆಗಳಾಗಲೀ ಮೇಲು-ಕೀಳು ಭೇದಭಾವಗಳಾಗಲೀ ಇರುವುದಿಲ್ಲ. ಆಫ್ರಿಕಾ ದೇಶದ ಸಂಸ್ಕೃತಿ ಭಾರತೀಯ ಸಂಸ್ಕೃತಿಗೆ ವಿಚಿತ್ರವಾಗಿ ಕಾಣಬಹುದು. ಭಾರತದಲ್ಲಿಯೇ ಇರುವ ಅನೇಕ ಉಪ ಸಂಸ್ಕೃತಿಗಳು ಇಲ್ಲಿಯ ಪ್ರಧಾನ ಸಂಸ್ಕೃತಿಗೆ ಹೋಲಿಸಿದರೆ ಬೇರೆಯಾಗಿಯೇ ಕಾಣಬಹುದು. ಕಾಲದ ಬೆಳವಣಿಗೆಯಲ್ಲಿ ಪ್ರಧಾನವೆಂದು ಕರೆಯಬಹುದಾದ ಸಂಸ್ಕೃತಿಗೆ ಪರ್ಯಾಯ ಸಂಸ್ಕೃತಿಯೊಂದು ಹುಟ್ಟಿಕೊಳ್ಳಬಹುದು. ಅಥವಾ ಪ್ರಧಾನ ಸಂಸ್ಕೃತಿಯ

ಸ್ಥಗಿತತೆಯನ್ನು ಮೀರಿದ ಪ್ರತಿ ಸಂಸ್ಕೃತಿಯೊಂದು ಹುಟ್ಟಿಕೊಂಡು ತನ್ನ ಅಸ್ತಿತ್ವವನ್ನು ಸ್ಥಾಪಿಸಬಹುದು. ಆದುದರಿಂದ ಯಾವುದೇ ಸಂಸ್ಕೃತಿ ಶ್ರೇಷ್ಠವೂ ಅಲ್ಲ, ಕನಿಷ್ಠವೂ ಅಲ್ಲ. ಅದು ಜನ ಸಮುದಾಯದ ಅನಿವಾರ್ಯವಾದ ಜೀವನ ವಿಧಾನವಾಗುತ್ತದೆಂಬುದು ಮುಖ್ಯ ಸಂಗತಿ.

'ಸಂಸ್ಕೃತಿ' ಯೆಂಬುದು ಕಾಲ-ದೇಶ-ಜನಸಮುದಾಯಗಳನ್ನವಲಂಬಿಸಿದೆ. ಆಯಾ ಕಾಲ-ದೇಶ-ಸಮುದಾಯಗಳ ಜೀವನ ವಿಧಾನದಲ್ಲಿ ನಿರಂತರವಾದ ಬೆಳವಣಿಗೆ ನಡೆದಿರುತ್ತದೆ. ಧರ್ಮ-ಸಾಹಿತ್ಯ-ಕಲೆ-ಸಂಗೀತ-ಆಚರಣೆ-ಹಬ್ಬ-ಮದುವೆ-ಸಂಸ್ಕಾರ ಇವೆಲ್ಲಾ ಸಂಸ್ಕೃತಿಯೊಂದರ ಒಳಗಡೆ ನಡೆಯುವ ವಿವಿಧ ಕ್ರಿಯೆಯಾಗಿ ಕಾಣುತ್ತವೆ. ಹೀಗಾಗಿ ಸಂಸ್ಕೃತಿಯೆಂಬುದು ಎಲ್ಲವನ್ನೂ ಒಳಗೊಂಡ ಆಯಾ ಕಾಲಘಟ್ಟದ ಸಮುದಾಯ ಬದುಕಿನ ಪ್ರತಿನಿಧಿಯಾಗಿ ಕಾಣುತ್ತದೆ.

ಭಾರತದಂತಹ ಒಂದೇ ದೇಶದಲ್ಲಿ ಅನೇಕ ಸಂಸ್ಕೃತಿ-ಉಪಸಂಸ್ಕೃತಿಗಳಿವೆ. ಈ ಸಂಸ್ಕೃತಿ ಉಪ.ಸಂಸ್ಕೃತಿಗಳಲ್ಲಿ ಎಷ್ಟೋ ಭಿನ್ನತೆಯಿದ್ದರೂ ಒಟ್ಟಂದದ ಆಶಯದಲ್ಲಿ ಅಲ್ಲಿ ಏಕತೆಯನ್ನು ಕಾಣಬಹುದಾಗಿದೆ. ಆದುದರಿಂದಲೇ ಭಾರತೀಯ ಸಂಸ್ಕೃತಿಯು ಭಿನ್ನತೆಯಲ್ಲಿಯೇ ಏಕತೆಯನ್ನು ಸಾಧಿಸಿದ ವಿಶಿಷ್ಟ ಸಂಸ್ಕೃತಿಯಾಗಿ ಕಾಣುತ್ತದೆ.

ಇವು ಈ ದೇಶದ ಸಂಸ್ಕೃತಿಯ ಒಂದು ಮುಖವಾದರೆ, ಮತ್ತೊಂದು ಮುಖದಲ್ಲಿ ಇಲ್ಲಿಯ ಪ್ರಧಾನ ಸಂಸ್ಕೃತಿ ಅನೇಕ ಉಪಸಂಸ್ಕೃತಿಗಳನ್ನು ಮರೆಮಾಡಿ ತಾನೊಂದೇ ಯಜಮಾನ ಸ್ಥಾನದಲ್ಲಿ ನಿಂತು ಯಾಜಮಾನ್ಯ ಸಂಸ್ಕೃತಿಯಾಗಿ ಪೋಜು ಕೊಟ್ಟಿರುವ ಅಂಶವನ್ನು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ.

ಈ ದೇಶದ ಸಂಸ್ಕೃತಿಯಲ್ಲಿ ಧರ್ಮ-ಸಾಹಿತ್ಯ-ಕಲೆ-ಆಚರಣೆಗಳು ಕೂಡಿಕೊಂಡಿರುವಂತೆ ಧರ್ಮ-ಅರ್ಥ-ಕಾಮ- ಮೋಕ್ಷದಂಥ ಪುರುಷಾರ್ಥಗಳೂ ಸೇರಿಕೊಂಡಿವೆ. ಹೀಗಾಗಿ ಸಂಸ್ಕೃತಿಯೆಂಬುದು ಸಮುದ್ರವಾಗಿ ಕಂಡರೆ ಧರ್ಮವೆಂಬುದು ಅದರಲ್ಲಿನ ಒಂದು ತೊರೆಯಾಗಿ ಕಾಣಿಸಬಹುದಾಗಿದೆ. ತುಂಬಾ ಕುತೂಹಲದ ಸಂಗತಿಯೆಂದರೆ ಈ ದೇಶದ ಧರ್ಮ ಮತ್ತು ಸಂಸ್ಕೃತಿಗಳ ಉದ್ದೇಶ ಜನ ಸಮುದಾಯದ ಕಲ್ಯಾಣವೇ ಆದರೂ ಕಾಲಘಟ್ಟದ ಆಚರಣೆಯಲ್ಲಿ ಅವು ಅನೇಕ ಸಲ ಪುರೋಹಿತಶಾಹಿಗಳ ಹಿಡಿತಕ್ಕೆ ಸಿಕ್ಕು ಶೋಷಣೆಯ ಕಾರಣಗಳೂ ಆಗಿವೆ. ಧರ್ಮದ ಮೂಲಕ, ದೇವರುಗಳ ಮೂಲಕ ಈ ದೇಶದ ಮುಗ್ಧ ಜನತೆಯ ಶೋಷಣೆಯನ್ನು ನಿರಂತರವಾಗಿ ಮಾಡುತ್ತ ಬಂದಿರುವುದಕ್ಕೆ ಅನೇಕ ಉದಾಹರಣೆಗಳಿವೆ. ಅದೇ ರೀತಿ ಈ ಧರ್ಮ ಸಂಸ್ಕೃತಿಗಳ ಮೂಲಕ ಇಲ್ಲಿಯ ಜನಸಮುದಾಯ ಒಳ್ಳೆಯ ಸಂಸ್ಕಾರವನ್ನು ಪಡೆದು ಜನಪರ ಆಶಯದಲ್ಲಿ ಬದುಕಿದ ಸಂಗತಿಗಳೂ ನಮ್ಮ ಗಮನ ಸೆಳೆಯುತ್ತವೆ.

'ಸಂಸ್ಕೃತಿ' ಪದದ ವ್ಯಾಖ್ಯೆ ಕಾಲ ದೇಶ ಸಮುದಾಯಗಳಿಗೆ ಸಂಬಂಧಿಸಿದಂತೆ ವಿವಿಧ ಅರ್ಥ ಸಾಧ್ಯತೆಗಳನ್ನು ಪಡೆದುಕೊಳ್ಳುತ್ತ ಹೋಗುತ್ತದೆ. ಭಾರತಕ್ಕೆ ಸೀಮಿತಗೊಳಿಸಿ ಈ ಪದದ ಅರ್ಥವ್ಯಾಖ್ಯೆಯನ್ನು ಮಾಡಲೆತ್ನಿಸಿದಾಗ ಇಲ್ಲಿ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಸಂಸ್ಕೃತಿಯೆಂದರೆ ಯಾರ ಸಂಸ್ಕೃತಿ ? ಯಾವ ಕಾಲದ ಸಂಸ್ಕೃತಿ ? ಯಾವ ಸಮುದಾಯದ ಸಂಸ್ಕೃತಿ ? ಎಂಬಂತಹ ಪ್ರಶ್ನೆಗಳು ಬಹು ಮುಖ್ಯವಾಗುತ್ತವೆ. ಭಾರತದಂತಹ ಒಂದೇ ದೇಶದಲ್ಲಿಯೇ ಆರ್ಯ ಸಂಸ್ಕೃತಿ-ದ್ರಾವಿಡ ಸಂಸ್ಕೃತಿಗಳ ನಡುವೆ, ಪ್ರಧಾನ ಸಂಸ್ಕೃತಿ-ಉಪಸಂಸ್ಕೃತಿಗಳ ನಡುವೆ, ಶಿಷ್ಟ ಸಂಸ್ಕೃತಿ-ಜನಪದ ಸಂಸ್ಕೃತಿ, ಹಾಗೂ ನಗರ ಸಂಸ್ಕೃತಿ-ಗ್ರಾಮೀಣ ಸಂಸ್ಕೃತಿಗಳ ನಡುವೆ ನಿರಂತರವಾದ ಸಂಘರ್ಷ ನಡೆದೇ ಇದೆ. ಆಯಾ ಸಂಸ್ಕೃತಿ ತನಗಿಷ್ಟವಾದ ಧರ್ಮಗಳನ್ನು-ಸಿದ್ಧಾಂತಗಳನ್ನು ಆಚರಿಸುತ್ತಲಿರುತ್ತದೆ. ಆದುದರಿಂದ ಪ್ರತಿಯೊಂದು ಸಂಸ್ಕೃತಿಗೂ ಅದರದೇ ಆದ ಧರ್ಮ-ಸಾಹಿತ್ಯ-ಕಲೆ ಆಚರಣೆಗಳಿರುತ್ತವೆ. ಆದರೆ ಈ ದೇಶದ ಯಜಮಾನ ಸಂಸ್ಕೃತಿ ಉಳಿದ ಉಪಸಂಸ್ಕೃತಿಗಳ ಧರ್ಮ ಆಚರಣೆಗಳನ್ನು ಕಡೆಗಣಿಸುತ್ತ ಬಂದಿದೆ. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿಯೂ ಇಲ್ಲಿಯ ಉಪಸಂಸ್ಕೃತಿಗಳು ಯಜಮಾನ ಸಂಸ್ಕೃತಿಯೊಂದಿಗೆ ಹೋರಾಡುತ್ತ ಕೆಲವು ಸಂದರ್ಭಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡೇ ಬಂದಿವೆ.

ಹೀಗಿರಬೇಕೆಂಬ ಆದರ್ಶವನ್ನು ಧರ್ಮ ಹೇಳಿದರೆ, ಬದುಕು ಹೀಗಿದೆಯೆಂಬ ವಾಸ್ತವವನ್ನು ಸಂಸ್ಕೃತಿ ತಿಳಿಸುತ್ತದೆ. ಭಾರತೀಯ ಸಂಸ್ಕೃತಿಗೆ ಒಂದು ದೀರ್ಘ ಪರಂಪರೆಯಿರುವಂತೆ ಭಾರತೀಯ ಧರ್ಮಗಳಿಗೂ ಒಂದು ಮಹತ್ವದ ಪರಂಪರೆಯಿದೆ. ಧರ್ಮ ಮೊದಲೋ ಸಂಸ್ಕೃತಿ ಮೊದಲೋ ಎಂಬ ವಾದಕ್ಕಿಂತ ಧರ್ಮದಿಂದೊಡಗೂಡಿದ ಜನಪರ ಸಂಸ್ಕೃತಿ ತೀರಾ ಮುಖ್ಯವಾದುದೆಂದು ಈಗ ಎಲ್ಲರೂ ಒಪ್ಪುತ್ತಾರೆ. ಈ ದೇಶದ ಸಂಸ್ಕೃತಿ ಕೆಲವೊಮ್ಮೆ ಧರ್ಮಪರವಾಗಿ, ಮತ್ತೊಮ್ಮೆ ರಾಜಪರವಾಗಿ, ಇತ್ತೀಚೆಗೆ ಜನಪರವಾಗಿ ಬೆಳೆಯುತ್ತ ಬಂದಿದೆ.

ಸಂಸ್ಕೃತಿಯಾಗಲೀ ಧರ್ಮವಾಗಲೀ ಆಕಾಶದಿಂದ ಬೀಳುವಂತಹದ್ದಾಗಿರದೇ ಆಯಾ ಕಾಲದ ಜನಸಮುದಾಯ ತನ್ನ ಯುಗಕ್ಕೆ ತಕ್ಕಂತೆ ರೂಪಿಸಿಕೊಂಡ ಅನಿವಾರ್ಯ ಜೀವನ ವಿಧಾನಗಳಾಗಿವೆ. ಆದುದರಿಂದಲೇ ಜನ ಸಮುದಾಯ ಬದಲಾದಂತೆ ಧರ್ಮ-ಸಂಸ್ಕೃತಿಗಳಲ್ಲಿ ಬದಲಾವಣೆ ಕಂಡುಬರುವುದು ಸಹಜವಾದ ಕ್ರಿಯೆಯಾಗಿದೆ.

ಭಾರತದ ಯಾವುದೇ ಧರ್ಮದ ಹುಟ್ಟಿನ ಉದ್ದೇಶ ಆಯಾ ಜನಸಮುದಾಯದ ಸಂಸ್ಕೃತಿಯನ್ನು ವಿಕಸನಗೊಳಿಸುವದೇ ಆಗಿದೆ. ಆದರೆ ಆ ಧರ್ಮದ ತತ್ತ್ವಗಳನ್ನು ಆಚರಣೆಗೆ ತರುವವರು ತಮ್ಮ ಸ್ವಾರ್ಥ ಸಾಧನೆಗಾಗಿ ಧರ್ಮವನ್ನುಪಯೋಗಿಸಿಕೊಂಡಾಗ ಧರ್ಮವು ಮತವಾಗಿ, ಕುಲವಾಗಿ ಭೇದ ಹುಟ್ಟಿಸಿ ಅಸಮಾನತೆಯ ಹುಟ್ಟಿಗೆ ಕಾರಣವಾದಂತೆ

ಕಾಣಸುತ್ತದೆ. ಧರ್ಮ ಮತವಾಗಿ ಸಂಕುಚಿತಗೊಂಡು ಬಿರುಕು ಬಿಡಲು ಆ ಧರ್ಮವನ್ನು ಗುತ್ತಿಗೆ ಹಿಡಿದ ಸ್ವಾರ್ಥಿಯಾದ ಪುರೋಹಿತಶಾಹಿ ಗುಣವೇ ಮುಖ್ಯ ಕಾರಣವಾಗಿದೆ. ಭಾರತದ ಪುರಾತನ ಧರ್ಮವಾದ ಚಾರ್ವಾಕ ಧರ್ಮವನ್ನು ಅದರ ತತ್ವಗಳನ್ನು ನಾಶಗೊಳಿಸಿದ ಪುರೋಹಿತಶಾಹಿ ಸ್ವಾರ್ಥಗುಣ ಈ ದೇಶದಲ್ಲಿ ಚಾತುರ್ವರ್ಣ ಪದ್ಧತಿಯನ್ನು ಜಾರಿಗೆ ತಂದು ಮನುಷ್ಯ-ಮನುಷ್ಯರ ನಡುವೆ ಗೋಡೆ ನಿಲ್ಲಲು ಕಾರಣವಾಯಿತು. ಇಂತಹ ಚಾತುರ್ವರ್ಣ ಪದ್ಧತಿಯೇ ಈ ದೇಶದ ಧರ್ಮವಾಗಿ ಹಲವು ಕಾಲ ಅಸಮಾನತೆಯನ್ನು ಹುಟ್ಟು ಹಾಕಿದ್ದನ್ನು ಇತಿಹಾಸ ಮರೆತಿಲ್ಲ. ಇಂತಹ ಚಾತುರ್ವರ್ಣ ಪದ್ಧತಿಯನ್ನು ವಿರೋಧಿಸಿದ ಕೆಲವು ಧರ್ಮಗಳನ್ನು ಈ ದೇಶದಿಂದಲೇ ಗಡೀಪಾರು ಮಾಡಲಾಯಿತು. ಇಂತಹ ಅನೇಕ ಸಂದರ್ಭಗಳಲ್ಲಿ ಈ ದೇಶದ ಕೆಲವು ಧರ್ಮಗಳು ವರವಾಗುವದರ ಬದಲು ಶಾಪವಾಗಿ ಪರಿಣಮಿಸಿದವು. ಇನ್ನೂ ಕೆಲವು ಧರ್ಮಗಳು ತಮ್ಮ ಕಾಲದ ಮಿತಿಯೊಳಗೇ ಜನಹಿತ ಕಾರ್ಯವನ್ನು ಮಾಡಿದವು.

ಈ ನಾಡಿನ ಧಾರ್ಮಿಕ ಪರಂಪರೆ ಬಹು ದೊಡ್ಡದು. ಕ್ರಿ. ಶ. ೫೦೦೦ ವರ್ಷಗಳ ಹಿಂದಿನ ಮೊಹೆಂಜೋದಾರೋ-ಹರಪ್ಪ ಸಂಸ್ಕೃತಿಗಳ ಒಡಲೊಳಗೇ ಅನೇಕ ಧರ್ಮಗಳು ಇದ್ದುದನ್ನುಕಾಣಬಹುದಾಗಿದೆ. ಇಲ್ಲಿ ಚಾರ್ವಾಕ-ಬೌದ್ಧ-ಜೈನ-ಶೈವ-ವೈಷ್ಣವ-ವೀರಶೈವ-ದ್ವೈತ-ಅದ್ವೈತ-ವಿಶಿಷ್ಟಾದ್ವೈತ-ಮುಸ್ಲಿಂ-ಕ್ರಿಶ್ಚಿಯನ್-ಸಿಖ್ ಈ ಮುಂತಾದ ಅನೇಕ ಧರ್ಮಗಳು ಈ ದೇಶದ ಜನ ಸಮುದಾಯದಲ್ಲಿ ಹಂಚಿಹೋಗಿವೆ. ಆಯಾ ಜನಾಂಗದ ಸಂಸ್ಕೃತಿಯ ಮೂಲ ಆಕರಗಳಾಗಿ ಅವು ಕಾರ್ಯ ನಿರ್ವಹಿಸಿವೆ. ಈ ಧರ್ಮಗಳನ್ನವಲಂಬಿಸಿಯೇ ಆಯಾ ದೇವಾಲಯಗಳು, ಕಲೆಗಳು ಹುಟ್ಟಿಕೊಂಡಿವೆ. ಹೀಗಾಗಿ ಧರ್ಮ, ಕಲೆ, ಸಾಹಿತ್ಯ, ಸಂಗೀತಗಳು, ಒಂದಕ್ಕೊಂದು ಪೂರಕವಾಗಿ ಹುಟ್ಟಿಕೊಂಡು ಒಂದು ಸಮುದಾಯದ ಸಂಸ್ಕೃತಿಯನ್ನು ಬೆಳೆಸುವಲ್ಲಿ ಸಹಾಯಕ ವಾಗಿವೆ.

ಭಾರತದಲ್ಲಿ ಪ್ರಾಚೀನ ಧರ್ಮಗಳಿರುವಂತೆ, ಅರ್ವಾಚೀನ ಧರ್ಮಗಳೂ ಇವೆ. ಪ್ರಾಚೀನ ಧರ್ಮಗಳಿಗೆ ದರ್ಶನಗಳೇ ಮೂಲ ಆಕರಗಳಾಗಿವೆ. ದರ್ಶನದಲ್ಲಿ ತತ್ವ ಮಾರ್ಗಕಂಡರೆ ಮತದಲ್ಲಿ ಭಕ್ತಿಮಾರ್ಗವಿದೆ. ತತ್ವಮಾರ್ಗದಲ್ಲಿ ಪ್ರಮುಖವಾಗಿರುವ ಹನ್ನೊಂದು ದರ್ಶನಗಳನ್ನು ಹಿಂದೂ ದರ್ಶನಗಳೆಂದು ಪರಿಗಣಿಸಲಾಗಿದೆ. ಚಾರ್ವಾಕ, ಸೌಗತ, ಸಾಂಖ್ಯ, ಅರ್ಹತ, ಯೋಗ, ತಾರ್ಕಿಕ, ಮೀಮಾಂಸಕ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಶೈವ-ಈ ಹನ್ನೊಂದು ದರ್ಶನದಲ್ಲಿ ಚಾರ್ವಾಕ ದರ್ಶನವೇ ಪ್ರಾರಂಭದ ಪುರಾತನ ದರ್ಶನವಾಗಿದೆ. ಕೆಲವರು ಇವುಗಳಲ್ಲಿ ಷಡ್‌ದರ್ಶನಗಳಿಗೆ ಮಾತ್ರ ಪ್ರಾಧಾನ್ಯತೆ ನೀಡಿದ್ದಾರೆ. (ನೋಡಿ : ಹಿಂದೂ ದರ್ಶನ ಸಾರ : ಶ್ರೀನಿವಾಸಾಚಾರ್ಯ, ಪು. ೧೦) ಶೈವ ಧರ್ಮದ ಮುಂದಿನ ಬೆಳವಣಿಗೆಯಾಗಿ ವೀರಶೈವ ಧರ್ಮ ಹುಟ್ಟಿಕೊಂಡಿದೆ.

ಅದೇ ರೀತಿ ಬೌದ್ಧ, ಜೈನ ಧರ್ಮಗಳೂ ದರ್ಶನಗಳಲ್ಲಿ ಮುಖ್ಯಸ್ಥಾನ ಪಡೆದುಕೊಂಡಿವೆ. ಹೊರದೇಶದಿಂದ ಬಂದ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮಗಳು ಭಾರತದಲ್ಲಿ ತಮ್ಮದೇ ಆದ ಪರಂಪರೆಯನ್ನು ರೂಪಿಸಿಕೊಂಡಿವೆ. ಈ ಎಲ್ಲ ಧರ್ಮ-ದರ್ಶನಗಳ ಹುಟ್ಟುಬೆಳವಣಿಗೆಯನ್ನು ಅದರ ಸಿದ್ಧಾಂತಗಳ ವಿವರಣೆಯನ್ನು ಕೊಡುವುದು, ಲೇಖನದ ಉದ್ದೇಶವಲ್ಲವಾದ್ದರಿಂದ ಈ ಎಲ್ಲ ಧರ್ಮಗಳ ಮುಖ್ಯ ಆಶಯಗಳೊಂದಿಗೆ ಇಲ್ಲಿ ಬೆಳೆದು ಬಂದ ಸಂಸ್ಕೃತಿಯನ್ನು ವಿಶ್ಲೇಷಿಸಬಹುದಾಗಿದೆ.

ಈ ಎಲ್ಲ ಧರ್ಮಗಳಲ್ಲಿ ಈ ದೇಶದ ಪ್ರಾಚೀನ ಧರ್ಮವಾದ ಚಾರ್ವಾಕ ಧರ್ಮ ಮಾತ್ರ ನಾಸ್ತಿಕವಾಗಿದೆ, ಉಳಿದೆಲ್ಲ ಧರ್ಮಗಳು ಆಸ್ತಿಕವಾಗಿವೆ. ಆದರೆ ಬೌದ್ಧ ಧರ್ಮ ಮಾತ್ರ ಆಸ್ತಿಕ-ನಾಸ್ತಿಕಗಳ ಎರಡೂ ಪರಂಪರೆಗಳನ್ನು ಕೈಬಿಟ್ಟು ಭಿನ್ನವಾಗಿ ಆಲೋಚಿಸುತ್ತದೆ. ಹನ್ನೆರಡನೇ ಶತಮಾನದ ಬಸವಣ್ಣನ ಕಾಲದ ವೀರಶೈವ ಧರ್ಮ ಕರ್ಮವನ್ನು ಹರಿದೊಗೆದು ಕಾಯಕಕ್ಕೆ ಮಹತ್ವ ನೀಡುತ್ತದೆ. ದಾನ ಸಂಸ್ಕೃತಿಗೆ "ಶಿವನಿಗಿಂತ ಶಿವಶರಣರಧಿಕ" ಎಂಬ ತತ್ತ್ವದ ಮೂಲಕ ಮನುಷ್ಯ ಪ್ರಯತ್ನಗಳಿಗೆ ಮೊದಲ ಬಾರಿಗೆ ಮಹತ್ವ ನೀಡುತ್ತದೆ. ಜಾತಿ-ಲಿಂಗ-ಪ್ರದೇಶ-ಅಧಿಕಾರ-ಅಂತಸ್ತು ಈ ಎಲ್ಲ ಭೇದಗಳನ್ನು ಅಳಿಸಿಹಾಕಿ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದು ಸಮಾನತೆ ತರಲು ಪ್ರಯತ್ನಿಸಿದೆ. ಈ ದೇಶದಲ್ಲಿ ಮೊದಲ ಬಾರಿಗೆ ಮಹಿಳೆಯರು ದಲಿತರು-ದುಡಿವ ವರ್ಗದವರು ಧರ್ಮದ ಪ್ರಮುಖ ಅಂಗವಾಗಿ ಕಂಡಿರುವುದು ವೀರಶೈವದಲ್ಲಿ ಮಾತ್ರ. ಹನ್ನೆರಡನೇ ಶತಮಾನದ ಶಿವಶರಣರು ಈ ವೀರಶೈವ ಧರ್ಮಕ್ಕೆ ಹೊಸ ಆಯಾಮ ನೀಡಿ ಅದನ್ನು ವೈಜ್ಞಾನಿಕ ಧರ್ಮವನ್ನಾಗಿ ಮಾಡಿದ್ದಾರೆ. ದೇವರನ್ನು ಪ್ರಶ್ನಿಸುವ, ಪರೀಕ್ಷಿಸುವ ಕ್ರಿಯೆಗಳು ಈ ಧರ್ಮದಲ್ಲಿ ಮಾತ್ರ ಕಾಣಸುತ್ತವೆ. ಜನಪದ ಮೂಲ ತಿರುಳನ್ನೇ ತನ್ನ ಹೃದಯವನ್ನಾಗಿ ಮಾಡಿಕೊಂಡ ಈ ಶರಣ ಧರ್ಮಕ್ಕೆ ದಯವೇ ಧರ್ಮದ ಮೂಲವಾಗಿದೆ.

ಈ ಎಲ್ಲ ಧರ್ಮಗಳಲ್ಲಿ ಯಾವುದೇ ಒಂದು ಧರ್ಮ ಮೇಲು ಮತ್ತೊಂದು ಕೀಳು ಎಂದು ತಿಳಿಯುವುದು ತಪ್ಪಾಗುತ್ತದೆ. ಆಯಾ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಈ ಧರ್ಮಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಎಲ್ಲ ಧರ್ಮಗಳು ಒಬ್ಬೊಬ್ಬ ವ್ಯಕ್ತಿಯಿಂದ ಸ್ಥಾಪಿತಗೊಂಡಿದ್ದರೆ ವೀರಶೈವ ಧರ್ಮ ಸಾಮೂಹಿಕವಾಗಿ, ಸಮುದಾಯದಿಂದ ಹುಟ್ಟಿಕೊಂಡಿರುವುದರಿಂದ ಒಂದರ್ಥದಲ್ಲಿ ಇದು ಜಾನಪದರ ಜಾನಪದೀಯ ಧರ್ಮವಾಗಿದೆ. ಚಾರ್ವಾಕ ಧರ್ಮಕ್ಕೆ ಬೃಹಸ್ಪತ್ಯಾಚಾರ್ಯರು ಪ್ರವರ್ತಕರಾದರೆ, ಚಾರುವಾಕರೆಂಬ ವಿದ್ವಾಂಸರು ಭಾಷ್ಯಕಾರರಾಗಿದ್ದಾರೆ. ಇದೇ ರೀತಿ ಬುದ್ಧನಿಂದ ಬೌದ್ಧಧರ್ಮ, ಮಹಾವೀರನಿಂದ ಜೈನಧರ್ಮ, ಶಂಕರಾಚಾರ್ಯರಿಂದ ಅದ್ವೈತ ಧರ್ಮ, ರಾಮಾನುಜಾಚಾರ್ಯರಿಂದ ವಿಶಿಷ್ಟಾದ್ವೈತ ಧರ್ಮ, ಮಧ್ವಾಚಾರ್ಯರಿಂದ ದ್ವೈತ ಧರ್ಮಗಳು ಹುಟ್ಟಿಕೊಂಡಿವೆ. ಈ ಎಲ್ಲ ಧರ್ಮಗಳ ಹಿಂದೆ ಒಬ್ಬೊಬ್ಬ ಮಹಾ ವ್ಯಕ್ತಿ

ಆಯಾ ಧರ್ಮಗಳ ಪ್ರವರ್ತಕನಾಗಿದ್ದಾನೆ. ಆದರೆ ವೀರಶೈವ ಧರ್ಮಕ್ಕೆ ಇಂತಹ ಪ್ರವರ್ತಕರಿಲ್ಲ. ವೈಷ್ಣವ ಧರ್ಮಗಳಿಗೆ ವೇದ ಪ್ರಾಮಾಣ್ಯ, ಇಸ್ಲಾಂ ಧರ್ಮಗಳಿಗೆ ಕುರಾನ್ ಪ್ರಾಮಾಣ್ಯ, ಕ್ರಿಶ್ಚಿಯನ್ ಧರ್ಮದವರಿಗೆ ಬೈಬಲ್ ಪ್ರಾಮಾಣ್ಯ ಹಾಗೂ ಸಿಖ್ ಧರ್ಮಕ್ಕೆ ಗುರುಗ್ರಂಥ ಸಾಹಿಬ್ ಪ್ರಾಮಾಣ್ಯವಾಗಿರುವಂತೆ ವೀರಶೈವ ಧರ್ಮಕ್ಕೆ ಅಥವಾ ಶರಣಧರ್ಮಕ್ಕೆ ಯಾವುದೇ ಒಂದು ಗ್ರಂಥ ಪ್ರಾಮಾಣ್ಯವಾಗಿರುವದಿಲ್ಲ. ಯಾವುದೇ ಒಬ್ಬ ವ್ಯಕ್ತಿಯಿಂದ ಮಾತ್ರ ಹುಟ್ಟಿರದ; ಯಾವುದೇ ಒಂದು ಗ್ರಂಥವನ್ನುಮಾತ್ರ ಪ್ರಾಮಾಣ್ಯವೆಂದು ಒಪ್ಪದ ವೀರಶೈವ ಧರ್ಮ ಜನಸಮುದಾಯದಿಂದ ಜನಸಮುದಾಯಕ್ಕಾಗಿಯೇ ಹುಟ್ಟಿಕೊಂಡ ಧರ್ಮವಾಗಿದೆ. ವ್ಯಕ್ತಿ ಪ್ರಾಮಾಣ್ಯ ಮತ್ತು ಗ್ರಂಥ ಪ್ರಾಮಾಣ್ಯಗಳೆರಡನ್ನೂ ಏಕಕಾಲಕ್ಕೆ ಧಿಕ್ಕರಿಸಿ ಈ ಧರ್ಮ ಹೆಚ್ಚು ಪ್ರಜಾಸತ್ತಾತ್ಮಕವಾಗಿ ಕಾಣುತ್ತದೆ. ಈ ಪ್ರಾಮಾಣ್ಯಗಳ ಚೌಕಟ್ಟನ್ನು ಮುರಿದೊಗೆದು ಒಳ್ಳೆಯ ವಿಚಾರ ಯಾವುದೇ ಗ್ರಂಥದಲ್ಲಿರಲಿ ಅದನ್ನು ಸ್ವೀಕರಿಸುವ ಉದಾತ್ತ ಉದ್ದೇಶವನ್ನು ಈ ಧರ್ಮ ಹೊಂದಿದೆ. ಆದರೆ ಹನ್ನೆರಡನೇ ಶತಮಾನದ ಶಿವಶರಣರ ನಂತರ ಈ ಧರ್ಮವು ಸಂಪ್ರದಾಯವಾದಿ ಸ್ವಾರ್ಥಿಗಳ ಕೈಗೆ ಸಿಕ್ಕು ಮಠ-ಪೀಠಗಳ ಗೊಂದಲದಲ್ಲಿ, ಜಗದ್ಗುರುಗಳ ಜಗಳಗಳಲ್ಲಿ ಕಳೆದುಹೋಗಿದೆ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಧ್ಯೇಯ ವಾಕ್ಯವನ್ನು ಕೈಬಿಟ್ಟು ಸ್ವಾರ್ಥಿಗಳ, ಡಾಂಭಿಕರ, ಪುರೋಹಿತಶಾಹಿಗಳ ಕೈಗೆ ಸಿಕ್ಕು ಇಂದು ಬಸವಾದಿ ಶರಣರ ಹೆಸರುಗಳ ಬೋರ್ಡುಗಳನ್ನು ಹಚ್ಚಿಕೊಂಡು ಉದ್ಯಮವಾಗಿ ಇದು ಬೆಳೆಯತೊಡಗಿದೆ. ಈ ಮಾತು ಬಹುಶಃ ಎಲ್ಲ ಧರ್ಮಗಳಿಗೂ ಅನ್ವಯವಾಗುತ್ತದೆ. ಪುರೋಹಿತಶಾಹಿಯೆಂಬುದು ಎಲ್ಲ ಧರ್ಮಗಳಲ್ಲೂ ಮನೆ ಮಾಡಿದೆ. ಹೀಗೆ ಪ್ರಾಚೀನ ಧರ್ಮಗಳೆಲ್ಲ ಅರ್ಥ ಕಳೆದುಕೊಂಡು ಇಂದು ಕುಲಗಳಾಗಿ ಕಾಡತೊಡಗಿರುವಾಗ, ಜಾತಿಗಳಾಗಿ ಜಗಳಾಡುತ್ತಿರುವಾಗ, ಮಾನವೀಯ ಧರ್ಮವನ್ನು ಸ್ಥಾಪಿಸುವ ಕಾರ್ಯ ಸಮುದಾಯದಿಂದಲೇ ಪ್ರಾರಂಭವಾಗಬೇಕಿದೆ.

'ದೇವನೊಬ್ಬ ನಾಮ ಹಲವು' ಎಂಬ ಮಾತು ಜನಜನಿತವಾಗಿರುವಂತೆ ಧರ್ಮಗಳು ಹಲವಾದರೂ ಅವುಗಳ ಉದ್ದೇಶ ಒಂದೇ ಆಗಿದೆ. ದಯೆ, ಅಂತಃಕರಣ, ಮಾನವೀಯತೆಗಳನ್ನೇ ಎಲ್ಲ ಧರ್ಮಗಳೂ ಹೇಳಿವೆ. ಆದರೆ ಮುಂದೆ ಬಂದ ಧರ್ಮಾಧಿಕಾರಿಗಳು ಮತ್ತು ಸಂಪ್ರದಾಯವಾದೀ ಅನುಯಾಯಿಗಳು ಧರ್ಮದ ಮೂಲ ರೂಪವನ್ನು ಬದಲಿಸಿ ತಮ್ಮ ಅನುಕೂಲತೆಗೆ ತಕ್ಕಂತೆ ರೂಪಿಸಿಕೊಂಡರು. 'ಶಿವ, ಬ್ರಹ್ಮ, ಬುದ್ಧ, ವಿಷ್ಣು ಜಿನ 'ಇವೆಲ್ಲ ದೇವರಿಗೆ ಇರುವ ಬೇರೆ ಬೇರೆ ಹೆಸರುಗಳು ಎಂದು ತುಮಕೂರು ಜಿಲ್ಲೆಯ ಕೇದಾಳದ ಕ್ರಿ. ಶ. ೧೧೫೧ರ ಶಾಸನದಲ್ಲಿ ಹೇಳಲಾಗಿದೆ. 'ಶೈವರು ಶಿವನೆನ್ನಲಿ, ವೇದಾಂತಿಗಳು ಬ್ರಹ್ಮನೆನ್ನಲಿ, ಬೌದ್ಧರು ಬುದ್ಧನೆನ್ನಲಿ, ನೈಯಾಯಿಕರು ಕರ್ತನೆನಲಿ, ಜೈನರು ಅರ್ಹನ್ ಎನ್ನಲಿ, ಮೀಮಾಂಸಕರು ಕರ್ಮವೆನ್ನಲಿ, ದೇವರು ಒಬ್ಬನೇ' ಎಂದು ಬೇಲೂರಿನ ಹೊಯ್ಸಳ ರಾಜರ ಕಾಲದ ದೇವಾಲಯದ ಶಾಸನವೊಂದು

ವಿವರಿಸುತ್ತದೆ. ಹೀಗೆ ಯಾವುದೇ ಧರ್ಮದ ದೇವರುಗಳ ಹುಟ್ಟಿನ ಉದ್ದೇಶಕ್ಕೆ ತಾತ್ತ್ವಿಕವಾದ ಹಿನ್ನೆಲೆಯಿರುವುದನ್ನು ಕಾಣಬಹುದಾಗಿದೆ.

ಇಂತಹ ಅನೇಕ ಧರ್ಮಗಳನ್ನೊಳಗೊಂಡಿರುವ ಭಾರತೀಯ ಸಂಸ್ಕೃತಿಯಲ್ಲಿ ವೈರುಧ್ಯತೆಯನ್ನು ದ್ವಂದ್ವವನ್ನು ಗುರುತಿಸಬಹುದಾಗಿದೆ. ಧರ್ಮದನುಯಾಯಿಗಳು ದಾರಿ ತಪ್ಪಿದಾಗ ಅವರ ಸಂಸ್ಕೃತಿಯಲ್ಲಿ ಕೂಡಾ ವಿಪರ್ಯಾಸ ಉಂಟಾದುದನ್ನು ಕಾಣಬಹುದಾಗಿದೆ. ಈ ದೇಶದ ಅನೇಕ ಧರ್ಮಗಳು ಚಾತುರ್ವರ್ಣ ವ್ಯವಸ್ಥೆಯನ್ನು ಒಪ್ಪಿಕೊಂಡಾಗ ಹುಟ್ಟೊಂದೇ ಪ್ರಧಾನವಾಗಿ ಅನೇಕ ಜಾತಿ ಮತಗಳು ಬೆಳೆದು ಮನುಷ್ಯ ಮನುಷ್ಯರಲ್ಲಿಯೇ ಗೋಡೆಗಳು ಬೆಳೆದು ಅನೇಕ ಉಪಸಂಸ್ಕೃತಿಗಳು ಬೆಳೆದು ಬಂದುದನ್ನು ಕಾಣಬಹುದಾಗಿದೆ. ಬೆಕ್ಕು-ನಾಯಿಗಳನ್ನು ಮುಟ್ಟುತ್ತಿದ್ದ ಮೇಲ್ಜಾತಿಯವರು ಶೂದ್ರರನ್ನು-ಪಂಚಮರನ್ನು ಅಸ್ಪೃಶ್ಯರಾಗಿಸಿ ಮನುಷ್ಯರನ್ನು ನಾಯಿ-ನರಿಗಳಿಗಿಂತಲೂ ಕಡೆಯಾಗಿ ಕಂಡಿದ್ದರಿಂದ ಸಂಸ್ಕೃತಿಯಲ್ಲಿಯೂ ಭಿನ್ನತೆ ಹುಟ್ಟಿಕೊಂಡಿರುವುದು ಸಹಜವಾಗಿದೆ. ಯಾವುದೇ ಪ್ರಧಾನ ಸಂಸ್ಕೃತಿ ಉಪಸಂಸ್ಕೃತಿಯನ್ನು ನಾಶಮಾಡುವದಾಗಲೀ, ಯಾವುದೇ ಬಹುಸಂಖ್ಯಾತರ ಧರ್ಮ, ಅಲ್ಪಸಂಖ್ಯಾತರ ಧರ್ಮಗಳನ್ನು ಅಲ್ಲಗಳೆಯುವದಾಗಲೀ ಪ್ರಜಾಸತ್ತಾತ್ಮಕ ನೀತಿಯಾಗಲಾರದು. ಯಾವುದೇ ಧರ್ಮ ಸಂಸ್ಕೃತಿ ಮನುಷ್ಯ ಮನುಷ್ಯರಲ್ಲಿ ಮಧುರ ಸಂಬಂಧವನ್ನು, ಸಮನ್ವಯವನ್ನು ಸಹಬಾಳ್ವೆಯನ್ನುಕಲಿಸಬೇಕೇ ಹೊರತು ಬೇರೆ ಬೇರೆ ಭೇದಗಳ ಹುಟ್ಟು ಹಾಕಿ ಮಾನವೀಯತೆಯನ್ನು, ಅಂತಃಕರಣವನ್ನು ನಾಶಪಡಿಸಬಾರದು.

ಉಪನಿಷತ್ತುಗಳಲ್ಲಿ ಧರ್ಮ ಮತ್ತು ನೀತಿ

ಪ್ರೊ॥ ಕೆ. ಟಿ ಪಾಂಡುರಂಗಿ

ಉಪನಿಷತ್ತುಗಳು ಭಾರತೀಯ ತತ್ತ್ವಜ್ಞಾನದ ಉಗಮಸ್ಥಾನಗಳಾಗಿವೆ. ಪುರಾತನ ಋಷಿಗಳು ನಿರಂತರ ತಪಸ್ಸಿನಿಂದಲೂ ಸತತ ಅಭ್ಯಾಸದಿಂದಲೂ ಕಂಡುಕೊಂಡ ಸತ್ಯವು ಅವುಗಳಲ್ಲಿ ಅಡಕವಾಗಿದೆ.

ಆಹಾರ ನಿದ್ರಾ ಭಯ ಮೈಥುನಾದಿ ಪಶುಸಮಾನ ವೃತ್ತಿಯಿಂದ ಜೀವನವನ್ನು ಕಳೆಯದೆ ಘನವಾದ ಉದ್ದೇಶದಿಂದಲೂ ಗೌರವಯುತವಾದ ಮತ್ತು ನೀತಿ ಸಂಪನ್ನವಾದ ಕ್ರಮದಿಂದಲೂ ಜೀವನವನ್ನು ಸಾಗಿಸುವುದರಲ್ಲಿ ಮಾನವನ ಕೃತಕೃತ್ಯತೆಯಿದೆ. ಈ ರೀತಿಯಿಂದ ಜೀವನವನ್ನು ಸಾಗಿಸಲು ನಿರ್ದುಷ್ಟವಾದ ತತ್ತ್ವಜ್ಞಾನವೂ ಯೋಗ್ಯವಾದ ಜೀವನ ದೃಷ್ಟಿಯೂ ಅವಶ್ಯವಾಗಿವೆ. ಇಂಥ ತತ್ತ್ವ ಮತ್ತು ಜೀವನ ದೃಷ್ಟಿಗಳ ವಿವೇಚನೆಯು ಉಪನಿಷತ್ತುಗಳಲ್ಲಿದೆ.

ನಮ್ಮ ಜೀವನ ಯಾತ್ರೆಯುದ್ದಕ್ಕೂ ಭೌತಿಕ ಸುಖ ಸಂಪತ್ತುಗಳೂ ಮಾನ ಸನ್ಮಾನಗಳೂ ದೊರೆತು ಜೀವನವು ಅಕ್ಲಿಷ್ಟವೂ ತೃಪ್ತಿಪರ್ಯಾವಸಾಯಿಯೂ ಆಗಿರಬೇಕೆಂಬುದು ಒಂದು ದೃಷ್ಟಿ. ಧರ್ಮ ಕರ್ಮಾದಿಗಳನ್ನು ಮಾಡಿ ಇಹದಲ್ಲಿರುವ ಪ್ರತಿಕೂಲಗಳೂ ಕ್ಲೇಶಗಳೂ ಇಲ್ಲದಿರುವ ಸ್ವರ್ಗಾದಿ ಸುಖಗಳನ್ನು ಪಡೆಯಬೇಕೆಂಬುದು ಇನ್ನೊಂದು ದೃಷ್ಟಿ. ಇವೆರಡೂ ಭೋಗ ದೃಷ್ಟಿಗಳು. ಈ ಎರಡು ವಿಧವಾದ ಭೋಗ ದೃಷ್ಟಿಗಳೂ ಉಪನಿಷತ್ತುಗಳಿಗೆ ಸಮ್ಮತ ಜೀವನ ದೃಷ್ಟಿಯಲ್ಲ. ಕಠೋಪನಿಷತ್ತಿನಲ್ಲಿ ಬರುವ ನಚಿಕೇತನ ಕಥೆಯೂ, ನಚಿಕೇತ-ಯಮರ ಸಂವಾದವೂ ಈ ಮಾತನ್ನು ಸ್ಪಷ್ಟ ಪಡಿಸುತ್ತವೆ. ತಂದೆಯ ಶಾಪದಿಂದ ಯಮಲೋಕಕ್ಕೆ ಹೋದ ನಚಿಕೇತನಿಗೆ ಯಮನು ಮೂರು ವರಗಳನ್ನು ಕೊಡುವನು. ಅದರಲ್ಲಿ ಮೂರನೆಯ ವರದಿಂದ ನಚಿಕೇತನು ಪರತತ್ತ್ವದ ಸ್ವರೂಪವನ್ನು ತಿಳಿಸಲು ಬೇಡುವನು. ಆಗ ಯಮನು, ಶತಾಯುಷಃ ಪುತ್ರ ಪೌತ್ರಾನ್ ವೃಣೇಷ್ವ ಬಹೂನ್ ಪಶೂನ್ ಹಸ್ತಿ ಹಿರಣ್ಯ ಮಶ್ವಾನ್।... ಭುಮೆರ್ಮಹದಾಯತನಂ ವೃಣೇಷ ॥ಸ್ವಯಂ ಚ ಜೀವ ಶರದೋ ಯಾವದಿಚ್ಛಸಿ। ಇಮಾ ರಾಮಾಃ ಸರಥಾಃ ಸತೂರ್ಯಾಃ ನ ಹೀದೃಶಾಃ ಲಂಭನೀಯಾ ಮನುಷ್ಯೈಃ॥ಆಯುಷ್ಯ, ಪುತ್ರ, ಪಶುಗಳು, ಐಶ್ವರ್ಯ, ರಾಜ್ಯ ಸುಂದರಿಯರು, ಬೇಕಾದುದನ್ನು

ಬೇಡಿಕೋ. ಈ ಪರತತ್ತ್ವದ ತೊಡಕಿಗೆ ಬೀಳಬೇಡ ಎಂದು ಹೇಳುವನು. ಆದರೆ ನಚಿಕೇತನು ನೂರು ವರ್ಷದ ಆಯುಷ್ಯವೂ ಕಡಿಮೆಯೇ, ಎಷ್ಟು ಐಶ್ವರ್ಯದಿಂದಲೂ ತೃಪ್ತಿಯಾಗುವದು ಸಾಧ್ಯವಿಲ್ಲ. ನಿನ್ನಆನೆ, ಕುದುರೆ, ರಥಗಳೆಲ್ಲ ನಿನಗೇ ಇರಲಿ (ಅಪಿ ಸರ್ವಂ ಜೀವಿತಮಲ್ಪಮೇವ.... ನ ವಿತ್ತೇನ ತರ್ಪಣೀಯೋ ಮನುಷ್ಯಃ। .... ತವೈವ ವಾಹಾಸ್ತವ. ನೃತ್ಯಗೀತೇ ॥) ಎನ್ನುವನು. ಮನುಷ್ಯನ ಎದುರಿಗಿರುವ ಪ್ರೇಯೋ ಮಾರ್ಗ ಮತ್ತು ಶ್ರೇಯೋ ಮಾರ್ಗಗಳಲ್ಲಿ ಶ್ರೇಯೋ ಮಾರ್ಗವನ್ನೇ ಆರಿಸಿಕೊಳ್ಳಬೇಕೆಂಬುದು ಕಠೋಪನಿಷತ್ತಿನ ಸ್ಪಷ್ಟವಾದ ಅಭಿಪ್ರಾಯವಾಗಿರುವದು.

ಐಹಿಕ ಭೋಗವಾಗಲೀ ಸ್ವರ್ಗಾದಿ ಭೋಗವಾಗಲೀ ಜೀವನ ಗುರಿಯಾಗಿರಬಾರದು. ಪುತ್ರೈಷಣಾ, ವಿತ್ತೈಷಣಾ ಮತ್ತು ಲೋಕೈಷಣಾ ಪುತ್ರ, ವಿತ್ತ, ಮತ್ತು ಸ್ವರ್ಗಾದಿ ಸುಖಗಳು ಈ ಮೂರನ್ನು ದಾಟಿ ನಿಲ್ಲುವದರಲ್ಲಿಯೇ ಮಾನವನ ಶ್ರೇಯಸ್ಸಿದೆ, ಎಂದು ಬೃಹದಾರಣ್ಯಕವು ಸಾರುತ್ತದೆ. ಒಮ್ಮೆ ಯಾಜ್ಞವಲ್ಕ್ಯನು ಗೃಹಸ್ಥಾಶ್ರಮವನ್ನು ಬಿಟ್ಟು ತತ್ವಚಿಂತನೆಯಲ್ಲಿ ತೊಡಗಬೇಕೆಂದು ನಿರ್ಧರಿಸಿ ತನ್ನ ಇಬ್ಬರು ಹೆಂಡಂದಿರಾದ ಕಾತ್ಯಾಯಿನಿ ಮತ್ತು ಮೈತ್ರೇಯಿಯರನ್ನು ಕರೆದು ಮೈತ್ರೇಯಿ ನನ್ನ ಸೊತ್ತನ್ನೆಲ್ಲ ನಿನಗೂ ಕಾತ್ಯಾಯಿನಿಗೂ ಹಂಚಿ ಕೊಡುವೆನು- ಎಂದು ಹೇಳುವನು. ಆದರೆ ಮೈತ್ರೇಯಿಯು ಈ ಪೃಥ್ವಿಯಲ್ಲಿಯ ವಸ್ತುಗಳೆಲ್ಲ ನನ್ನವಾದರೆ ನಾನು ಪರಮ ಸುಖ ಪಡೆಯಬಲ್ಲೆನೇ ? (ಇನ್ನು ಮ ಇಯಂ ಭೋಗಃ ಸರ್ವಾ ಪೃಥಿವೀ ವಿತ್ತೇನ ಪೂರ್ಣಾಸ್ಯಾತ್ ಕಥಂ ತೇ ನಾಮೃತಾ ಸ್ಯಾಮ) ಎಂದು ಕೇಳುವಳು. ನಿನ್ನ ಜೀವಿತವೂ ಕೂಡ ಇನ್ನಿತರ ಸಾಮಾನ್ಯ ಜನರ ಜೀವಿತದಂತೆಯೇ ಆಗುವದು. ಅಮೃತತತ್ವವು ದೊರೆಯಲಾರದು. (ನೇತಿ ಹೋವಾಚ ಯಾಜ್ಞವಲ್ಕ್ಯೋ ಯಥೈವೋಪಕರಣವತಾಂಜೀವಿತಂ ಸ್ಯಾತ್ ತಥೈವ ತೇ ಜೀವಿತಂ ಸ್ಯಾತ್ ಅಮೃತತ್ವಸ್ಯತು ನಾಶಾಸ್ತಿ ವಿತ್ತೇನೇತಿ) ಎಂದು ಯಾಜವಲ್ಕ್ಯನು ಹೇಳುವನು. ಅದಕ್ಕೆ ಮೈತ್ರೇಯಿಯು ಹಾಗಾದರೆ ಈ ನಿನ್ನ ಸೊತ್ತಿನಲ್ಲಿಯ ಪಾಲು ನನಗೆ ಬೇಡ ಎಂದು ಹೇಳುವಳು.

ಮೈತ್ರೀ ಉಪನಿಷತ್ತಿನಲ್ಲಿ, ಕಾಮೋಪಭೋಗಗಳ ಅರ್ಥವು ಇದಕ್ಕೂ ನಿಷ್ಠುರವಾಗಿ ಪ್ರತಿಪಾದಿತವಾಗಿದೆ. ಅಸ್ತಿ ಮಾಂಸಗಳ ಮುದ್ದೆಯಾದ ಅಶುಚಿ ಶರೀರಕ್ಕೆ ಕಾಮೋಪಭೋಗಗಳೇಕೆ ? (ಭಗವನ್ನಸ್ಥಿಮಾಂಸಂ ಚರ್ಮಸ್ನಾಯುಮುಜ್ಜಾ ಮಾಂಸಶುಕ್ರಶೋಣಿತಶ್ಲೇಷ್ಮಾಷ್ಮಾಶ್ರುದೂಷಿತೇ ವಿಣ್ಮೂತ್ರ ವಾತ ಪಿತ್ತಕಫಸಂಘಾತೇ ದುರ್ಗಂಧೇ ನಿಃಸಾರೇಸ್ಮಿನ್ ಶರೀರೇ ಕಿಂ ಕಾಮೋಪಭೋಗೈಃ) ಕಾಮ ಕ್ರೋಧಾದಿ ಅರಿಷಡ್ವರ್ಗಗಳಿಗೆ ಬಲಿಯಾಗಿರುವ ಹಸಿವೆ, ನೀರಡಿಕೆ ಹುಟ್ಟು, ಸಾವುಗಳಿಗೆ ಗುರಿಯಾದ ಈ ಶರೀರಕ್ಕೆ ಕಾಮೋಪಭೋಗಗಳೇಕೆ ? (ಕಾಮಕ್ರೋಧಲೋಭಭಯವಿಷಾದೇರ್ಷ್ಯೇಷ್ಟಿ ವಿಯೋಗಾನಿಷ್ಟ ಸಂಪ್ರಯೋಗ ಕ್ಷುತ್ಪಿಪಾಸಾ ಜರಾ ಮೃತ್ಯು ರೋಗ ಶೋಕಾದ್ಯೈರಭಿಹತೇಸ್ಮಿನ್ ಶರೀರೇ ಕಿಂ ಕಾಮೋಪ ಭೋಗೈಃ) ಗಿಡಬಳ್ಳಿ ಮತ್ತು ಹುಳಹುಪ್ಪಡಿಗಳಂತೆ ನಮ್ಮ ಶರೀರವೂ

ನಶ್ವರವು. (ಯಥೇಮೇ ದಂಶಮಶಕಾದಯಸ್ತೃಣವನಸ್ಪತಯಃ) ಸುದ್ಯುಮ್ನ, ಭೂರಿದ್ಯುಮ್ನ, ಇಂದ್ರದ್ಯುಮ್ನ ಮೊದಲಾದ ಚಕ್ರವರ್ತಿಗಳು ಇಂದು ಹೇಳಹೆಸರಿಲ್ಲದಂತಾಗಿರುವರು. ಮಹಾಸಾಗರಗಳು ಒಣಗುವವು, ಪರ್ವತಗಳು ಉರುಳುವವು, ದೇವತೆಗಳೂ ಸ್ಥಾನ ಭ್ರಷ್ಟರಾಗುವರು. ಇಂಥ ಅಸ್ಥಿರ ಮತ್ತು ನಶ್ವರ ಭೋಗಗಳೇಕೆ?

ಹೀಗೆ ಉಪನಿಷತ್ತುಗಳಲ್ಲಿ ಜೀವನವು ಕೇವಲ ಭೋಗದೃಷ್ಟಿ ಪರವಾಗಿರುವದನ್ನು ಬಲವಾಗಿ ಖಂಡಿಸಲಾಗಿದೆ. ಆದರೆ ಇದರಿಂದ ಉಪನಿಷತ್ತುಗಳು ಜೀವನದಲ್ಲಿ ನಿರಾಶಾವಾದವನ್ನೂ, ತಿರಸ್ಕಾರ ದೃಷ್ಟಿಯನ್ನೂ ಸಮರ್ಥಿಸುತ್ತವೆ ಎಂದು ಮಾತ್ರ ತಿಳಿಯಬಾರದು. ಈ ಶಾವಾಸ್ಯೋಪನಿಷತ್ತಿನಲ್ಲಿ ವಿಹಿತವಾದ ಕರ್ಮವನ್ನು ಮಾಡುತ್ತ ನೂರುವರ್ಷ ಬಾಳಬೇಕು (ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ) ಎಂದು ಪ್ರತಿಪಾದಿಸಲಾಗಿದೆ. ಶ್ವೇತಾಶ್ವೇತರೋಪನಿಷತ್ತಿನಲ್ಲಿ ಪುತ್ರ, ಪಶು, ಮತ್ತು ಆಯುಷ್ಯಗಳ ವಿಷಯಗಳಲ್ಲಿ ನಾವು ತೊಂದರೆಗೀಡಾಗುವದು ಬೇಡ (ಮಾ ನಸ್ತೋಕೇ ತನಯೇ ಮಾ ನ ಆಯುಷಿ ಮಾ ನೋ ಗೋಷು ಮಾ ನೋ ಅಶ್ವೇಷು ರೀರಿಷಃ) ಎಂದು ಪ್ರಾರ್ಥಿಸಲಾಗಿದೆ. ತೈತ್ತರೀಯದಲ್ಲಿ ಮಾನವನ ಆನಂದವನ್ನು ವಿವರಿಸುತ್ತ ಆಶಾವಾದಿಯೂ, ದೃಢಚಿತ್ತನೂ, ಬಲಕಾಯನೂ (ಆಶಿಷ್ಠೋ ದೃಢಿಷ್ಠೋ ಬಲಿಷ್ಠಃ) ಆಗಿರುವದೇ ಮಾನುಷ ಆನಂದ ಎಂದು ಹೇಳಲಾಗಿದೆ. ಆದುದರಿಂದ ಕೇವಲ ಭೋಗದೃಷ್ಟಿಯು ಹೇಗೆ ಉಪನಿಷತ್ಕಾರರಿಗೆ ಸಮ್ಮತವಿಲ್ಲವೋ ಹಾಗೆಯೇ ನಿಷ್ಕ್ರಿಯ ವೃತ್ತಿಯೂ, ತಿರಸ್ಕಾರ ದೃಷ್ಟಿಯೂ ಸಮ್ಮತವಿಲ್ಲ. ಜನಕನ ಸಭೆಗೆ ಬಂದ ಯಾಜ್ಞವಲ್ಕ್ಯನಿಗೆ ಇಷ್ಟು ದೂರ ನಾನು ಏತಕ್ಕೆಬಂದೆ, ಪಶುಗಳನ್ನು ಪಡೆಯುವದಕ್ಕಾಗಿಯೋ ಅಥವಾ ತತ್ವದ ಚರ್ಚೆಗಾಗಿಯೋ(ಕಿಮರ್ಥಮಾಚರೀಃ ಪಶೂನಿಚ್ಛನಣ್ವಂತಾನ್) ಎಂದು ಕೇಳಿದಕ್ಕೆ ಯಾಜ್ಞವಲ್ಕ್ಯನು ಎರಡಕ್ಕಾಗಿಯೂ ಬಂದೆನು (ಉಭಯಮೇವ ಸಮ್ರಾಡಿತಿ ಹೋವಾಚ) ಎಂದು ಹೇಳುವನು. ಯಾಜ್ಞವಲ್ಕ್ಯನ್ನಂಥ ಮಹರ್ಷಿಗೆ ಪಶುಗಳ ಆಶೆ ಇರಲಾರದೆಂಬುದು ಸ್ಪಷ್ಟವಿದೆ. ಆದರೆ ಪಶುಪುತ್ರಾದಿ ವಿಷಯದಲ್ಲಿ ಜುಗುಪ್ಸೆಯನ್ನು ಬೆಳೆಯಿಸುವದು ಉಪನಿಷತ್ತುಗಳ ಆಶಯವಲ್ಲವೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ನಿರ್ವಿಣ್ಣನೂ ವಿಷಣ್ಣನೂ ಆದವನಿಗೆ ಆತ್ಮವು ದೊರೆಯಲಾರದು (ನಾಯಮಾತ್ಮಾ ಬಲಹೀನೇನ ಲಭ್ಯಃ) ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಹಾಗಾದರೆ ಒಂದು ಕಡೆಯಿಂದ ಸುಖೋಪಭೋಗಗಳನ್ನು ನಿಂದಿಸುವ ಮತ್ತು ಇನ್ನೊಂದು ಕಡೆಯಿಂದ ಸಕ್ರಿಯ ಜೀವನವನ್ನು ಬೋಧಿಸುವ ಉಪನಿಷತ್ಕಾರರ ಅಭಿಪ್ರಾಯವೇನು ? ಭೋಗ ದೃಷ್ಟಿಯೂ ತಿರಸ್ಕಾರ ದೃಷ್ಟಿಯೂ ಅವರ ಜೀವನ ದೃಷ್ಟಿಯಲ್ಲದಿದ್ದರೆ ಅವರು ಉಪದೇಶಿಸುವ ಜೀವನ ದೃಷ್ಟಿ ಯಾವದು ?

ಮಾನವ ಜೀವನದ ಘನತೆಯು ಭೌತಿಕ ಪರಿಸರದ ದಾಸರಾಗುವದರಿಂದಲೂ ಸಾಧಿಸುವದಿಲ್ಲ. ಅಥವಾ ಅದನ್ನು ಜುಗುಪ್ಸೆಯಿಂದ ಕಾಣುವದರಿಂದಲೂ ಸಾಧಿಸುವದಿಲ್ಲ. ಆದರೆ ಅದನ್ನು ಸಾಧನ ಭೂಮಿಯೆಂದು ಪ್ರಯೋಗಿಸಿ ಅದರಲ್ಲಿ ಇದ್ದೂ ಇಲ್ಲದಂತಿದ್ದು ತನ್ನನ್ನು ತಾನು ಅರಿತುಕೊಳ್ಳುವದರಲ್ಲಿ ಮತ್ತು ವಿಶ್ವನಿಯಾಮಕನಿಗೆ ಸಮರ್ಪಿಸುವದರಲ್ಲಿ ಮಾನವ ಜೀವನದ ಸಾರ್ಥಕತೆಯಿದೆ. ಈ ಅನಾಸಕ್ತಿ ದೃಷ್ಟಿ ಮತ್ತು ಸಮರ್ಪಣ ದೃಷ್ಟಿಗಳೇ ಉಪನಿಷತ್ಕಾರರಿಗೆ ಸಮ್ಮತವಾದ ಜೀವನ ದೃಷ್ಟಿ.

ಇಂಥ ಅನಾಸಕ್ತಿ ದೃಷ್ಟಿ ಮತ್ತು ಸಮರ್ಪಣಾಭಾವಗಳು ಬೆಳೆದು ಬರಬೇಕಾದರೆ ಮಾನವನು ತನ್ನ ಪರಿಮಿತಿಯನ್ನು ಅರಿತುಕೊಳ್ಳಬೇಕಾಗುವದು. ತನ್ನ ಜೀವನ ಯಾತ್ರೆಯ ಉದ್ದೇಶ ಮತ್ತು ಕ್ರಮಗಳನ್ನು ನಿರ್ಧರಿಸಿ ಕೊಳ್ಳವಾಗ ತನ್ನ ಇಚ್ಛೆ, ಪ್ರವೃತ್ತಿ ಕೃತಿಗಳೇ ನಿರ್ಣಾಯಕವೆಂದಾಗಲೀ, ತಾನಿರುವ ಕಾಲ ದೇಶಗಳಿಂದ ಪರಿಮಿತವಾದ ಸಮಾಜದ ಇಚ್ಛೆ, ಪ್ರವೃತ್ತಿ, ಕೃತಿಗಳೇ ಅಂತಿಮ ನಿರ್ಣಾಯಕಗಳೆಂದಾಗಲೀ ಭಾವಿಸದೆ, ಸರ್ವವೂ ವಿಶ್ವಶಕ್ತಿಯ ಅಧೀನವಾಗಿರುವದನ್ನು ಅದರ ಇಚ್ಛೆ ಪ್ರೇರಣೆಗಳ ಚೌಕಟ್ಟಿನಲ್ಲಿಯೇ ಚೇತನಾಚೇತನಗಳು ಪ್ರವೃತ್ತಿಸುತ್ತಿರುವುದನ್ನೂ ಅರಿತುಕೊಳ್ಳಬೇಕಾಗುವದು.

ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ
ಭಯಾದೇಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ॥

ಎಂದು ಕಠೋಪನಿಷತ್ತಿನಲ್ಲಿ ಎಲ್ಲವೂ ವಿಶ್ವ ತತ್ವದ ಅಧೀನವಾಗಿರುವದನ್ನು ಪ್ರತಿಪಾದಿಸಿದೆ. ತದೇತತ್ ಪ್ರೇಯಃ ಪುತ್ರಾತ್ ಪ್ರೇಯೋ ವಿತ್ತಾತ್ ಪ್ರೇಯೋನ್ಯಸ್ಮಾತ್ ಸರ್ವಸ್ಮಾದಂತರತಮಂ ಯದಯಮಾತ್ಮಾ ಎಂದು ಬೃಹದಾರಣ್ಯಕವು ಪರತತ್ವದಲ್ಲಿ ಅನಿತರ ಸಾಧಾರಣ ಪ್ರೇಮವನ್ನು ಮಾಡಲು ಬೋಧಿಸುತ್ತದೆ. ನಮ್ಮ ಜೀವನವು ಮಧುರವಾಗಿರಲು ನಾವು ಪ್ರೀತಿಸುವ ಪುತ್ರ, ಪತ್ನಿ, ವಿತ್ತ ಭೂತಾದಿಗಳ ಮೇಲಿನ ನಮ್ಮ ಪ್ರೇಮಕ್ಕೂ ಪರಮಾತ್ಮ ಪ್ರೇಮವೇ ಮಧ್ಯ ಬಿಂದುವಾಗಿದೆ. ಪರಮಾತ್ಮ ಪ್ರೇಮವೇ ಪ್ರವರ್ತಕವಾಗಿದೆ. ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ। ನ ವಾ ಅರೇ ಜಾಯಾಯಾಃ ಕಾಮಾಯ ಜಾಯಾ ಪ್ರಿಯಾ ಭವತಿ ಆತ್ಮನಸ್ತು ಕಾಮಾಯ ಜಾಯಾ ಪ್ರಿಯಾ ಭವತಿ॥ ಎಂಬ ಸುಪ್ರಸಿದ್ಧವಾದ ಬೃಹದಾರಣ್ಯಕದ ವಾಕ್ಯಗಳಲ್ಲಿ ಜೀವನದಲ್ಲಿಯ ಪ್ರೇಮ ಪ್ರವಾಹಕ್ಕೆಲ್ಲ ಪರಮಾತ್ಮ ಪ್ರೇಮವೇ ಸತಿಯಾಗಿರಬೇಕೆಂದು ಸುಂದರವಾಗಿ ಪ್ರತಿಪಾದಿಸಲಾಗಿದೆ. ಅವನು ಇಚ್ಛಿಸಿದಂತೆಯ ಪ್ರವೃತ್ತಿಗಳೂ, ಕೃತಿಗಳೂ ಕೃತಿಫಲಗಳೂ ಆಗುವವು. (ಸ ಯಥಾ ಕಾಮೋ ಭವತಿ ತತ್ಕ್ರತುರ್ಭವತಿ, ತತ್ಕರ್ಮ ಕುರುತೇ ಯತ್ಕರ್ಮ ಕುರುತೇ ತದಭಿಸಂಪದ್ಯತೇ). ಏಷಹ್ಯೇವ ಸಾಧುಕರ್ಮ ಕಾರಯತಿ ತಂ ಯಮೇಭ್ಯೋ ಲೋಕೇಭ್ಯೋ ಉನ್ನಿನೀಷತ ಏಷ ಉ ಏವಾ ಸಾಧುಕರ್ಮ ಕಾರಯತಿ ತಂ ಯಮೇಭ್ಯೋ ನಿನೀಷತ ಏಷ ಲೋಕ-ಪಾಲಃ ಏಷ ಲೋಕಾಧಿಪತಿಃ

ವಿಷ ಲೋಕೇಶಃ ಎಂದು ಕೌಷೀತಕೀ ಉಪನಿಷತ್ತಿನಲ್ಲಿ ಪರಮಾತ್ಮನೇ ಎಲ್ಲಕ್ಕೂ ಸೂತ್ರಧಾರನು ಎಂದು ಪ್ರತಿ ಪಾದಿಸಿದೆ. ಹೀಗೆ ನಾವು ಪರತತ್ವದ ಅಧೀನರೆಂಬ ಭಾವನೆಯನ್ನು ಯಾವಾಗಲೂ ಜಾಗ್ರತವಾಗಿಟ್ಟುಕೊಂಡು ಅಹಂಕಾರ ಮಮಕಾರಗಳನ್ನು ಕಳೆದುಕೊಂಡು ಪರತತ್ವದಲ್ಲಿ ಅನಿತರ ಸಾಧಾರಣ ಪ್ರೇಮದ ಆಧಾರದ ಮೇಲೆ ನಮ್ಮ ಪರಿಸರದಲ್ಲಿಯ ವ್ಯಕ್ತಿ ಮತ್ತು ವಸ್ತುಗಳ ಬಗ್ಗೆ ಮೈತ್ರೀ ಕರುಣಾ ಮುದಿತತಾ ಭಾವಗಳಸ್ನು ತಾಳಿ ಅಭಿಮಾನವನ್ನೂ ಅಭಿನಿವೇಶವನ್ನೂ ಹಿಂದಕ್ಕೆ ಸರಿಸಿ ವಿಹಿತ ಕರ್ಮಗಳನ್ನು ಸಮರ್ಪಣ ಬುದ್ಧಿಯಿಂದಲೂ ದ್ವಂದ್ವಾತೀತರಾಗಿಯೂ ಮಾಡುವದೇ ಉಪನಿಷತ್ತುಗಳು ನಮಗೆ ಬೋಧಿಸುವ ಜೀವನ ದೃಷ್ಟಿ.

ಇಂಥ ದೃಷ್ಟಿಯನ್ನಿಟುಕೊಂಡು ಜೀವನ ಯಾತ್ರೆಯನ್ನು ಸಾಗಿಸುವಾಗ ಬರುವ ಸಂದೇಹಗಳಿಗೂ, ಧರ್ಮ ಸಂಕಟಗಳಿಗೂ ಉಪನಿಷತ್ಕಾರರು ಒಂದು ವ್ಯಾವಹಾರಿಕವಾದ ಸೂಚನೆಯನ್ನು ಮಾಡಿರುವರು. ಕರ್ತವ್ಯದ ವಿಷಯದಲ್ಲಿಯಾಗಲೀ ನಡತೆಯ ವಿಷಯದಲ್ಲಿಯಾಗಲೀ ಬಂದರೆ ಧರ್ಮಿಷ್ಟರೂ, ಜಾಗೃತರೂ, ವಿಚಾರ ಶೀಲರೂ ಆದವರು ಯಾವ ರೀತಿ ನಡೆದುಕೊಳ್ಳವರೋ ಆ ರೀತಿ ನಡೆದುಕೊಳ್ಳಬೇಕು ಅಲ್ಲದೆ ನಿತ್ಯದ ಜೀವನದಲ್ಲಿ ಅನುಸರಿಸಬೇಕಾದ ಕೆಲವು ಸತ್ಸಂಗತಿಗಳನ್ನು ಹೀಗೆ ಹೇಳುವರು (ಅಥ ಯದಿ ತೇ ಕರ್ಮ ವಿಚಿಕಿತ್ಸಾ ವಾ ವೃತ್ತ ವಿಚಿಕಿತ್ಸಾ ವಾ ಸ್ಯಾತ್ ಯೇ ತತ್ರ ಬ್ರಾಹ್ಮಣಾಃ ಸಮ್ಮರ್ಶಿನಃ ಅಲೂಕ್ಷಾಃ ಧರ್ಮಕಾಮಾಃಸ್ಯುಃ ಯಥಾತೇ ತತ್ರವರ್ತೇರನ್‌ತಥಾ ತತ್ರ ವರ್ತೇಥಾಃ) ಸತ್ಯ, ಧರ್ಮ, ಹಿತ, ಮತ್ತು ಕಲ್ಯಾಣಕರವಾದುದನ್ನು ಮಾಡಲು ತಪ್ಪಬಾರದು. (ಸತ್ಯಾನ್ನ ಪ್ರಮದಿತವ್ಯಂ। ಧರ್ಮಾನ್ನ ಪ್ರಮದಿತವ್ಯಂ। ಕುಶಲಾನ್ನ ಪ್ರಮದಿ ತವ್ಯಂ। ಭೂತ್ಯೆ ನ ಪ್ರಮದಿತವ್ಯಂ। ಉಪದೇಶವನ್ನು ಮಾಡುವವರೂ ಕೂಡ ತಮ್ಮಲ್ಲಿಯೂ ಕೊರತೆಯಿರಬಹುದೆಂಬ ಮಾತನ್ನು ಅರಿತಿರಬೇಕು. ತಮ್ಮ ದೆಲ್ಲವನ್ನು ಪರರು ಅನುಸರಿಸಲೇ ಬೇಕೆಂಬ ಆಗ್ರಹವಿರಬಾರದು. ಎಂಬುದನ್ನು ಬಲ್ಲ ಉಪನಿಷತ್ಕಾರರು ನಮ್ಮಲ್ಲಿಯ ಒಳ್ಳೆಯದನ್ನಷ್ಟೇ ಅನುಸರಿಸಿರಿ. ಎಲ್ಲವನ್ನು ಬೇಡ (ಯಾನ್ಯಸ್ಮಾಕಂ ಸುಚರಿತಾನಿ ತಾನಿ ಸೇವಿತವ್ಯಾನಿ ನೋ ಇತರಾಣಿ) ಎಂದು ಧೈರ್ಯವಾಗಿ ಹೇಳುವರು.

ಬೃಹದಾರಣ್ಯಕದ ಒಂದು ಸಂದರ್ಭದಲ್ಲಿ ನಾವು ಜೀವನದಲ್ಲಿ ಅನುಸರಿಸಬೇಕಾದ ಮೂರು ಮುಖ್ಯ ಸಂಗತಿಗಳ ಬಗ್ಗೆ ಒಂದು ಸೊಗಸಾದ ಕಥೆ ಇದೆ . ಒಮ್ಮೆ ದೇವತೆಗಳು, ಮನುಷ್ಯರು, ಅಸುರರು ಪ್ರಜಾಪತಿಯನ್ನು ಕುರಿತು ತಪಸ್ಸನ್ನು ಮಾಡಿದರಂತೆ. ಆಗ ಅವನು ಆ ಮೂವರಿಗೂ 'ದ' ಎಂಬ ಅಕ್ಷರವನ್ನು ಕೊಟ್ಟು ಇದರಿಂದ ನಿಮ್ಮ ನಿಮ್ಮ ಕರ್ತವ್ಯವನ್ನು ತಿಳಿದುಕೊಳ್ಳಿರೆಂದು ಹೇಳಿದನಂತೆ. ಆಗ ಎಲ್ಲರೂ ತಿಳಿದುಕೊಂಡೆವು ಎಂದು ಹೇಳಿದರು. ಯಾರು ಯಾರು ಏನನ್ನು ತಿಳಿದು ಕೊಂಡಿರೆಂದು ಕೇಳಿದ್ದಕ್ಕೆ ದೇವತೆಗಳು ನಮಗೆ 'ದ' ಎಂದರೆ ದಮನವನ್ನು ಸಂಯಮವನ್ನು ಉಪದೇಶಿಸಿದ್ದೀ ಎಂದರು. ಮನುಷ್ಯರು ನಮಗೆ 'ದ' ಎಂದು

ದಾನವನ್ನು ಮಾಡಲು ಹೇಳಿದ್ದೀ ಎಂದರು. ಅಸುರರು ನಮಗೆ 'ದ' ಎಂದರೆದಯೆಯನ್ನು ತೋರಿಸಲು ಹೇಳಿದ್ದೀ ಎಂದರು. ಹೀಗೆ ದಮ ದಾನ ಮತ್ತು ದಯೆಗಳು ಜೀವನದಲ್ಲಿ ಅನುಸರಿಸಬೇಕಾದ ಸತ್ಸಂಗತಿಗಳು. ಒಟ್ಟಿನ ಮೇಲೆ ಸತ್ಯ, ಧರ್ಮ, ಕುಶಲಾದಿಗಳನ್ನು, ದಮ, ದಾನ, ದಯೆಗಳನ್ನು ಪರಿಪಾಲಿಸುತ್ತ ಕೇವಲ ಭೋಗೈಕ ದೃಷ್ಟಿಯನ್ನು ತಾಳದೇ ಪುತ್ರ ಪಶ್ವಾದಿಗಳಲ್ಲಿ ಜುಗುಪ್ಸಾ ಭಾವವನ್ನು ತಾಳದೇ ದ್ವಂದ್ವಾತೀತನೂ ನಿಸ್ಸಂಗನೂ ಆಗಿ ಭಗವತ್ ಸಮರ್ಪಣ ಬುದ್ಧಿಯಿಂದ ವಿಹಿತ ಕರ್ಮಗಳನ್ನು ಮಾಡುತ್ತ ಹೋಗುವದೇ ಉಪನಿಷತ್ತುಗಳು ಹಾಕಿ ಕೊಟ್ಟ ಜೀವನ ದೃಷ್ಟಿ.

●

ಧರ್ಮ ಮತ್ತು ನ್ಯಾಯ

ಹೆಚ್. ಗಂಗಾಧರನ್

ಮಾನವ ಸಮಾಜದ ಸುಖದ ಬದುಕಿಗೆ ಧರ್ಮ ಮತ್ತು ನ್ಯಾಯ ಎರಡೂ ಅಗತ್ಯ. ಧರ್ಮ ಬದುಕಿನ ಜೀವನಾಡಿಯಾದರೆ ನ್ಯಾಯ ಸಂರಕ್ಷಣೆಯ ಸಂಪತ್ತು. ಇವೆರಡು ಒಂದು ನಾಣ್ಯದ ಎರಡು ಮುಖಗಳು ಎನ್ನಬಹುದು. ಆಧುನಿಕ ವಿಶ್ಲೇಷಣೆಯಲ್ಲಿ ಇವೆರಡನ್ನು ಪ್ರತ್ಯೇಕಗೊಳಿಸಿದ ಪ್ರಸಂಗಗಳು ಉಂಟು. ಆದರೆ ಮೂಲತಃ ಪ್ರತ್ಯೇಕತೆಯು ಕಂಡು ಬರುವುದಿಲ್ಲ. ಮನು ಧರ್ಮಶಾಸ್ತ್ರವನ್ನು ಬರೆದು ಅದರಲ್ಲಿ ಇದಕ್ಕೆ ಹತ್ತು ಲಕ್ಷಣಗಳನ್ನು ಹೇಳಿದ್ದಾನೆ. ಅವು ಯಾವುವೆಂದರೆ

ಧೃತಿಃ ಕ್ಷಮದಮೋಸೇಯಂ ಶೌಚಮಿಂದ್ರಿಯ ನಿಗ್ರಹಃ।
ದ್ವಿರ್ವಿದ್ರಾ ಸತ್ಯಂಕ್ರೋಧೋ ದಶಕಂ ಧರ್ಮಲಕ್ಷಣಂ॥

– ಎಂದಿದ್ದಾರೆ.

ಅಂದರೆ ಧೃತಿ (ದೃಢತೆ) ಕ್ಷಮ, ದಮ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ಬುದ್ಧಿ ವಿದ್ಯೆ, ಸತ್ಯ, ಆಕ್ರೋಧ ಇವು ಧರ್ಮದ ಮೂಲ ಲಕ್ಷಣಗಳೆಂದು ವಿಶ್ಲೇಷಿಸಿದೆ. ಧರ್ಮಕ್ಕೂ ಮತ್ತು ನ್ಯಾಯಕ್ಕೂ ಹಿಂದೂ ಸಂಸ್ಕೃತಿಯಲ್ಲಿ ಮೂಲ ಒಂದೇ ಆದರೂ ಈ ಮೂಲವನ್ನು ವೇದ ಉಪನಿಷತ್ತುಗಳು, ಧರ್ಮಶಾಸ್ತ್ರಗಳು ಗೃಹ್ಯಸೂತ್ರಗಳು ಇತ್ಯಾದಿ ಪ್ರಾಚೀನ ಸಾಹಿತ್ಯದಲ್ಲಿ ಕಾಣುತ್ತೇವೆ.

ಶಾಸ್ತ್ರದ ಪ್ರಾಚೀನತೆ

ಸಂಹಿತೆಗಳು ಬ್ರಾಹ್ಮಣಕಗಳು ಮತ್ತು ಉಪನಿಷತ್ತುಗಳ ಕಾಲವನ್ನು ಕ್ರಿ. ಪೂ. ೪೦೦೦ ರಿಂದ ೫೦೦ಸಾವಿರ ವರ್ಷಗಳು ಎಂದು ನಿರ್ಧರಿಸಲಾಗಿದೆ. ಆಪಸ್ತಂಭ, ಆಶ್ವಲಾಯನ, ಬೌಧಾಯನ, ಕಾತ್ಯಾಯನ ಮತ್ತು ಇತರರ ಪ್ರಮುಖ ಸೂತ್ರಗಳು ಹಾಗೂ ಆಪಸ್ತಂಭ ಮತ್ತು ಆಶ್ವಲಾಯನರ ಗೃಹ್ಯಸೂತ್ರಗಳು ಕ್ರಿ. ಪೂ. ೮೦೦ ರಿಂದ ೪೦೦ರವರೆಗಿನ ಮಧ್ಯ ಕಾಲದವುಗಳೆಂದು ನಿರ್ಧರಿಸಲಾಗಿದೆ. ಕ್ರಿ. ಪೂ. ೬೦೦ ರಿಂದ ೩೦೦ ರರವರೆಗೆ ಗೌತಮ ಆಪಸ್ತಂಭ ಬೌಧಾಯನ, ವಾಶಿಷ್ಠರ ಧರ್ಮಸೂತ್ರಗಳು ಮತ್ತು ಇತರರ ಗೃಹ್ಯಸೂತ್ರಗಳ ಯುಗವೆಂದು ಕರೆಯಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವು ಕ್ರಿ. ಪೂ. ೩೦೦ ರಿಂದ ೧೦೦ರ

ಮಧ್ಯದಲ್ಲಿ ಇರಬಹುದು. ಮನುಸ್ಮೃತಿಯು ಕ್ರಿ. ಪೂ. ೨೦೦ ರಿಂದ ಕ್ರಿ. ಶ. ೧೦೦ರ ಕಾಲಾವಧಿಯಲ್ಲಿ ಹುಟ್ಟಿರಬಹುದು. ಕ್ರಿ. ಶ. ೧೦೦ ರಿಂದ ಕ್ರಿ. ಶ. ೩೦೦ರ ಕಾಲಾವಧಿಯಲ್ಲಿ ಯಾಜ್ಞವಲ್ಕ್ಯ ಸ್ಮೃತಿಯು ಹುಟ್ಟಿತು ಕಾತ್ಯಾಯನ ಸ್ಮೃತಿಯ ಕಾಲ ಸ್ಥೂಲವಾಗಿ ಕ್ರಿ.ಶ.೪೦೦ ರಿಂದ ಕ್ರಿ. ಶ. ೬೦೦ರವರೆಗೆ ಎಂದು ಭಾವಿಸಲಾಗಿದೆ. ಇತರ ಎಲ್ಲಾ ಸ್ಮೃತಿಗಳು ಕ್ರಿ. ಶ. ೬೦೦ ರಿಂದ ಕ್ರಿ. ಸ. ೯೦೦ರ ಒಳಗೆ ರಚನೆಯಾಗಿರಬೇಕು. ಯಾಜ್ಞವಲ್ಕ್ಯ ಸ್ಮೃತಿಯ ಭಾಷ್ಯವನ್ನು ವಿಶ್ವರೂಪನು ಕ್ರಿ. ಶ. ೮೦೦ ರಿಂದ ೮೫೦ರ ಮಧ್ಯದಲ್ಲಿ ಬರೆದಿರಬೇಕು. ಮನು ಸ್ಮೃತಿಯ ಭಾಷ್ಯವನ್ನು ಮೇಧಾತಿಯು ಕ್ರಿ. ಶ.೯೦೦ರಲ್ಲಿ ಬರೆದ. ವಿಜ್ಞಾನೇಶ್ವರನು ತನ್ನ ಮಿತಾಕ್ಷರವನ್ನು ಕ್ರಿ. ಶ. ೧೦೭೦-೧೧೦೦ರ ಮಧ್ಯದಲ್ಲಿ ರಚಿಸಿರಬೇಕು. ದಾಯಭಾಗದ ಕರ್ತೃವಾದ ಜೀಮೂತವಾಹನ ಕ್ರಿ. ಶ. ೧೧೦೦-೧೧೫೦ರಲ್ಲಿ ಮೆರೆದ. ದಾಯತತ್ತ್ವದ ಕರ್ತೃವಾದ ರಘುನಂದನನು ಕ್ರಿ. ಶ. ೧೫೨೦ ರಿಂದ ೧೫೭೫ರವರೆಗೆ ಇದ್ದ. ದತ್ತಕಮೀಮಾಂಸದ ಕರ್ತೃವಾದ ನಂದಪಂಡಿತನು ಕ್ರಿ. ಶ. ೧೫೯೫ ರಿಂದ ೧೬೩೦ರ ವರೆಗೆ ಇದ್ದ ನಿರ್ಣಯ ಸಿಂಧುವನ್ನು ಕಮಲಾಕರ ಭಟ್ಟನು ಕ್ರಿ. ಶ. ೧೬೧೦ ರಿಂದ ೧೬೪೦ರ ಮಧ್ಯದಲ್ಲಿ ರಚಿಸಿರಬೇಕು. ನೀಲಕಂಠ ಭಟ್ಟನು ತನ್ನ ವ್ಯವಹಾರ ಮಯೂಖ ಎಂಬ ಕೃತಿಯನ್ನು ೧೬೧೫ ಮತ್ತು ೧೬೪೫ರ ಮಧ್ಯದಲ್ಲಿ ರಚಿಸಿರಬೇಕು. ಅದೇ ಕಾಲಾವಧಿಯಲ್ಲಿ ವೀರಮಿತ್ರೋದಯವು ರಚನೆಯಾಯಿತು. ಬಾಲಂಭಟ್ಟನು ಮಿತಾಕ್ಷರದ ಭಾಷ್ಯವನ್ನು ಕ್ರಿ. ಶ. ೧೭೫೦-೧೮೨೦ರ ಮಧ್ಯದಲ್ಲಿ ಬರೆದನು. ಕಾಶೀನಾಥನೆಂಬಾತನು ತನ್ನ ಧರ್ಮಸಿಂಧು ಎಂಬ ಗ್ರಂಥವನ್ನು ಕ್ರಿ. ಶ. ೧೭೯೦ರಲ್ಲಿ ರಚಿಸಿದ. ಹೀಗೆ ಹಿಂದೂ ನ್ಯಾಯಶಾಸ್ತ್ರದ ಬೆಳವಣಿಗೆಯು ೬೦೦೦ ವರ್ಷಗಳ ತನಕ ಬ್ರಿಟೀಷರು ಈ ದೇಶವನ್ನು ಗೆದ್ದು ವಶಪಡಿಸಿಕೊಳ್ಳುವವರೆಗೆ ಹಬ್ಬಿದೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಇದರ ಬೆಳವಣಿಗೆಗೆ ಒಂದು ಅರ್ಥದಲ್ಲಿ ಕುಂಠಿತವಾಯಿತು. ಭಾಷ್ಯಕಾರರ ಕಾಲ ಕೊನೆಗೊಂಡಿತು. ಮುಂದೆ ಬಂದ ನ್ಯಾಯಾಧೀಶರ ಕಾಲದಲ್ಲಿ ಹಿಂದೂ ನ್ಯಾಯಶಾಸ್ತ್ರದ ಧಾರ್ಮಿಕ ಮೂಲಾಧಾರ ಸ್ಥಾನವನ್ನು ಭಾಷೆಗಳೇ ಆಕ್ರಮಿಸಿಕೊಂಡವು. ಅದರ ಕತೆಯೇ ಬೇರೆ. ಹಿಂದೂ ಧರ್ಮ ಶಾಸ್ತ್ರದ ಐತಿಹಾಸಿಕ ಹಿನ್ನೆಲೆಯನ್ನು ಕುರಿತು ಪ್ರಸ್ತಾಪಿಸುವ ನಾವು ಈ ದೀರ್ಘ ಕಾಲಾವಧಿಯಲ್ಲಿ ಭಾರತ ದೇಶದ ರಾಜಕೀಯ, ಸಾಮಾಜಿಕ, ಮತ್ತು ಆರ್ಥಿಕ ಬೆಳವಣಿಗೆಯ ಸ್ಥೂಲ ಪರಿಚಯವನ್ನು ಮಾಡಿಕೊಳ್ಳಲೇಬೇಕು.

ಈ ಅವಧಿಯಲ್ಲಿ ಸಮಾಜದ ವ್ಯವಸ್ಥೆಯು ಧರ್ಮವನ್ನೇ ಅವಲಂಬಿಸುತ್ತದೆ. ಜನತೆ ಮಹಾನುಭಾವರು ಕೊಟ್ಟ ಧರ್ಮಸೂತ್ರಗಳನ್ನು ಪರಿಪಾಲಿಸುತ್ತಾ ತಮ್ಮ ಜೀವನವನ್ನು ಸುಖಮಯ ಮಾಡಿಕೊಳ್ಳುತ್ತಿದ್ದರು. ಧರ್ಮಸೂತ್ರಗಳಿಗೆ ವಿರೋಧವಾಗಿ ನಡೆದ ವ್ಯಕ್ತಿ ಅಥವಾ ಸಮಾಜ ಇತರರ ಸಂಪರ್ಕದಿಂದ ಬಹಿಷ್ಕೃತಗೊಳ್ಳುತ್ತಿದ್ದರು. ಅದರಿಂದಾಗಿ ಅವರಿಗೆ ಮಾನಸಿಕ ಹಿಂಸೆ ಆಗುತ್ತಿದ್ದುದು ಅಲ್ಲದೆ ಸಮಾಜದ ದೃಷ್ಟಿಯಲ್ಲಿ ಕೀಳಾಗಿ ಪರಿಗಣಿಸಲ್ಪಡುತ್ತಿದ್ದರು. ಆದುದರಿಂದ ಅವರ ಜೀವನ ಕಷ್ಟದಾಯಕವಾಗುತ್ತಿತ್ತು. ಅವರು

ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಕಠಿಣ ಸಾಧನೆಯಿಂದ ಪಾಪವಿಮುಕ್ತರಾಗುತ್ತಿದ್ದರು. ಸಮಾಜದ ಸಂಸ್ಕಾರಕ್ಕೆ ಒಳಗಾಗುತ್ತಿದ್ದರು. ಈ ಪರಿಸ್ಥಿತಿಯು ಒಂದು ದೃಷ್ಟಿಯಿಂದ ನಿಜವಾದ ಪ್ರಜಾಪ್ರಭುತ್ವ ಎನ್ನಬಹುದು. ಧರ್ಮದ ಅವಲಂಬನೆ, ನ್ಯಾಯ ಪಾಲನೆ ಸಮಾಜ ಜೀವನದಲ್ಲಿ ಅಂತರ್‌ಗತವಾಗಿ ಬೆಳೆದು ಬಂದಿತ್ತು. ಯಾರು ಯಾರಿಗೂ ಅಧೀನರಾಗಿ ಬಾಳುತ್ತಿರಲಿಲ್ಲ. ಯಾವುದೇ ಕಟ್ಟಪ್ಪಣೆ ಬಂಧನಕ್ಕೂ ಒಳಗಾಗುತ್ತಿರಲಿಲ್ಲ. ಯಾವುದೇ ಒಂದು ವಿಚಾರವನ್ನು ಸಾಮೂಹಿಕವಾಗಿ ನಿರ್ಧರಿಸಿ ಅದನ್ನು ಸಮಾಜ ಜೀವನಕ್ಕೆ ಅಳವಡಿಸಿಕೊಳ್ಳಬೇಕಾಗಿತ್ತು. ಇಡೀ ಸಮಾಜವೇ ಅದರ ಚಿಂತನೆ ಮಾಡುತ್ತಿದ್ದಿತು. ಅಂದು ಸಮಷ್ಟಿ ಚಿಂತನೆ ಪ್ರಬಲವಾಗಿತ್ತು. ವ್ಯಷ್ಟಿ ಚಿಂತನೆಗೆ ಅವಕಾಶವಿರಲಿಲ್ಲ, ಮಹತ್ವವೂ ಇರಲಿಲ್ಲ. ಸಮಷ್ಟಿ ಚಿಂತನೆಯಲ್ಲಿ ಇಡೀ ಸಮಾಜದ ಮತ್ತು ರಾಜ್ಯದ ಧರ್ಮದ ಚಿಂತನೆ ಅಡಗಿದ್ದಿತು. ಇದನ್ನು ಸಮಾಜ ಪಾಲಿಸುತ್ತಾ ಬಂದಿತ್ತು. ಆದಕಾರಣ ಧರ್ಮ ಮತ್ತು ನ್ಯಾಯವು ಏಕೀಭವಿಸಿಕೊಂಡು ಸಮಾಜದ ಸಂರಕ್ಷಣೆಯ ಹೊಣೆ ಹೊತ್ತ ತತ್ವವಾಗಿತ್ತು. ಕಾಲಗತಿಯಲ್ಲಿ ಈ ಪರಿಸ್ಥಿತಿಯು ಬದಲಾಗುತ್ತಾ ಬಂದುದರಿಂದ ಧರ್ಮ ಮತ್ತು ನ್ಯಾಯ ಪ್ರತ್ಯೇಕವಾಗಿ ಪರಿಗಣಿಸಲ್ಪಟ್ಟವು. ಸಮಾಜದ ಪರಿವರ್ತನೆಯ ಪರಿಣಾಮವನ್ನು ಗಮನಿಸಿದ ಜ್ಞಾನಿಗಳು ಸಮಾಜದ ಹಿತಚಿಂತಕರು ನ್ಯಾಯಕ್ಕೆ ಪ್ರತೀಕವಾದ ಸ್ವರೂಪವನ್ನು ಕೊಡುವುದಕ್ಕೆ ಆರಂಭಿಸಿದರು. ಆಗ ನ್ಯಾಯಶಾಸ್ತ್ರದ ಚಿಂತನೆ ಆರಂಭವಾಗಿ ಧರ್ಮ ಮಾನವನ ಅಂತರಿಕ ಅಭ್ಯುದಯದ ಸಾಧನೆಯ ಸಿದ್ಧಾಂತದ ಸ್ವರೂಪವನ್ನು ಪಡೆಯಿತು. ಆದಾಗ್ಯೂ ಧರ್ಮವನ್ನೆ ಅಧಾರವಾಗಿ ಇಟ್ಟುಕೊಂಡು ಬೆಳೆದ ನ್ಯಾಯಶಾಸ್ತ್ರದ ರೂಪಾಂತರಣವನ್ನು ಪ್ರಾಚೀನ ಸಾಹಿತ್ಯದಲ್ಲಿ ಕಾಣಬಹುದು. ಧರ್ಮ ಹಾಗೂ ನ್ಯಾಯದ ಬೆಳವಣಿಗೆ ಹಾಗೂ ರೂಪಾಂತರದಲ್ಲಿ ಅವುಗಳಿಗೆ ಪ್ರೇರಕವಾಗಿ ಇದ್ದಂತಹ ರಾಜ್ಯಪದ್ಧತಿ, ಸಮಾಜದ ರಚನೆ ಇವು ಗಮನಾರ್ಹ. ರಾಜ್ಯಪದ್ಧತಿಯ ರಾಜಕಾರಣದ ಸ್ಥೂಲ ಸ್ವರೂಪವು ವೇದದಲ್ಲಿ ಕಂಡುಬರುತ್ತದೆ. ಬ್ರಾಹ್ಮಣದಲ್ಲಿ ಸ್ವಲ್ಪಮಟ್ಟಿಗೆ ವಿಸ್ತಾರವಾಗಿ ಹೇಳಿದೆ. ಈ ಬಗೆಗೆ ಚಿಂತನೆ ಮಾಡಿದ ಡಾ: ಜೈಸ್ವಾಲ್‌ರವರು ಮೊದಲು ಹಿಂದೂ ಸಮಾಜದಲ್ಲಿ ರಾಜತ್ವದ ಪ್ರಸ್ತಾಪವೇ ಇರಲಿಲ್ಲ. ಪ್ರಜೆಗಳಲ್ಲಿ ಸಂಘರ್ಷವೂ ಇರಲಿಲ್ಲ. ಆದರೆ ದೇವತೆಗಳು ಮತ್ತು ರಾಕ್ಷಸರಲ್ಲಿ ಸಂಘರ್ಷ ನಡೆಯುತ್ತಿತ್ತು. ಒಬ್ಬರನ್ನು ನಾಯಕರನ್ನಾಗಿ ಮಾಡಿಕೊಂಡಿದ್ದ ರಾಕ್ಷಸರು ನಾಯಕರಿಲ್ಲದ ದೇವತೆಗಳನ್ನು ಸೋಲಿಸುತ್ತಿದ್ದರು ಎಂಬುದನ್ನು ಮನಗಂಡು ಪ್ರಜೆಗಳು ಕಾಲಾನಂತರದಲ್ಲಿ ರಾಜ್ಯತ್ವವನ್ನು ಒಪ್ಪಿಕೊಂಡರು ಎಂಬುದು ಯಜುರ್ವೇದದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ರಾಜ್ಯಾಧಿಕಾರದ ಹೊಣೆಗೆ ಒಬ್ಬ ನಾಯಕನನ್ನು ದೊರೆಯಾಗಿ ಮಾಡಿದರು ಎಂದಿದ್ದಾರೆ. ಅವರಿಗೆ ಮಾರ್ಗದರ್ಶನ ಮಾಡಿ ಕಾರ್ಯಗಳನ್ನು ನಡೆಸುವ ಹೊಣೆಗಾರಿಕೆಯನ್ನು ಋಷಿ ಮುನಿಗಳೇ ಹೊತ್ತಿದ್ದರು ಎಂಬ ಅಂಶ ಅಥರ್ವಣ ವೇದದಲ್ಲಿ ಉಲ್ಲೇಖಿತವಾಗಿದೆ. ಈ ರಾಜರನ್ನು ನೇಮಿಸಿದಾಗ ಪ್ರಾರಂಭದ ದಿನಗಳಲ್ಲಿ ಋಷಿ ಮುನಿಗಳೇ ಸಮರ್ಥರಾದ ವ್ಯಕ್ತಿಯನ್ನು ನೇಮಿಸುತ್ತಿದ್ದರು. ಅದು ಸಹಾ ಪರಿವರ್ತನೆಗೊಂಡು ಪ್ರಜೆಗಳೇ

ಒಮ್ಮೊಮ್ಮೆ ತಮ್ಮ ನಾಯಕನನ್ನು ಚುನಾಯಿಸುತ್ತಿದ್ದರು. ಕಾಲಾನಂತರದಲ್ಲಿ ಒಮ್ಮೆ ಚುನಾಯಿತರಾದ ರಾಜರು ತಮ್ಮ ದೇಹಶಕ್ತಿ ಮತ್ತು ದೈವಶಕ್ತಿಯ ಬಲದಿಂದ ಸಂಪೂರ್ಣ ಅಧಿಕಾರವನ್ನು ಕೈಗೆ ತೆಗೆದುಕೊಂಡು ರಾಜ್ಯಾಧಿಕಾರದ ಸಂಪೂರ್ಣ ಹಕ್ಕನ್ನು ಅವರು ತಮ್ಮ ಕೈವಶಮಾಡಿ ಕೊಂಡಿದ್ದರು. ಆ ನಂತರ ರಾಜ್ಯಾಭಿಷೇಕವು ಅವರ ವಂಶಪಾರಂಪರ್ಯವಾಗಿ ನಡೆದು ಬಂದಿರುವುದನ್ನು ಧರ್ಮಶಾಸ್ತ್ರಗಳು ಸಾರುತ್ತವೆ. ರಾಜ್ಯಾಧಿಕಾರದ ವರ್ಣನೆಯನ್ನು ವಂಶಾನುಗತವಾಗಿ ಬಂದ ರಾಜರುಗಳ ಆಗು-ಹೋಗುಗಳನ್ನು ಪುರಾಣ ಸಾಹಿತ್ಯದಲ್ಲಿ ಕಾಣುತ್ತೇವೆ. ಪ್ರಾಚೀನ ರಾಜ್ಯಪದ್ಧತಿಯಲ್ಲಿ ರಾಜನ ಕೈಯಲ್ಲಿ ಸರ್ವಾಧಿಕಾರವು ಇದ್ದರೂ ಸಮಾಜದ ಜಟಿಲ ಸಮಸ್ಯೆಗೆ ಸೂಚನೆ ಸಲಹೆ ಸೂತ್ರಗಳನ್ನು ಕೊಡುವ ವ್ಯವಸ್ಥೆ ರಾಜಗುರು ವರ್ಗದವರಿಗೆ ಮೀಸಲಾಗಿದ್ದಿತು. ಆದರೆ ಇಬ್ಬರು ಸಮಾಜದ ಹಿತಕ್ಕಾಗಿ ಶ್ರಮಿಸುತ್ತಿದ್ದ ಕಾಲವೊಂದಿತ್ತು. ಆ ನಂತರ ರಾಜರು ಸ್ವಾವಲಂಬಿಗಳಾಗಿ ಅವರಿಗೆ ಅಧಿಕಾರವನ್ನು ಚಲಾಯಿಸುವ ಪದ್ಧತಿಯು ರೂಢಿಗೆ ಬಂದುದನ್ನು ಪುರಾಣಗಳಲ್ಲಿ ಕಾಣುತ್ತೇವೆ.

ರಾಜಕೀಯ ಪದ್ಧತಿಯ ಈ ಪರಿವರ್ತನೆಗೆ ಅಂದಿನ ಸಮಾಜದ ಪರಿಸ್ಥಿತಿಯು ಕಾರಣ ಎನ್ನಬಹುದು. ಇತಿಹಾಸವನ್ನು ಗಮನಿಸಿದಾಗ ಭಾರತದಲ್ಲಿ ಆರ್ಯರು ಬರುವುದಕ್ಕಿಂತ ಮೊದಲು ಇಲ್ಲಿದ್ದ ಮೂಲ ನಿವಾಸಿಗಳನ್ನು ದಸ್ಯುಗಳೆಂದು ಕರೆಯಲಾಗಿದೆ. ಲೋಕಮಾನ್ಯ ತಿಲಕರ ಅಭಿಪ್ರಾಯದಂತೆ ಆರ್ಯರು ಆರ್ಕಟಿಕ್ ಪ್ರದೇಶದಿಂದ ಭಾರತಕ್ಕೆ ಬಂದು ಇಲ್ಲಿನ ದಸ್ಯುಗಳೆನಿಸಿದ ಮೂಲ ನಿವಾಸಿಗಳನ್ನು ಗೆದ್ದು ಅವರ ಮೇಲೆ ಪ್ರಭುತ್ವವನ್ನು ಸ್ಥಾಪಿಸಿದ್ದರು ಎಂಬ ಅಂಶವನ್ನು ಅನೇಕ ಪ್ರಾಚ್ಯ ಸಂಶೋಧನಾ ವಿದ್ವಾಂಸರು ಒಪ್ಪಿದ್ದಾರೆ. ಆರ್ಯರು ಪರದೇಶದಿಂದ ಬಂದವರಲ್ಲ ಎಂಬ ವಾದಗಳನ್ನು ಸಮರ್ಥಿಸಿದ ವಿದ್ವಾಂಸರು ಇದ್ದಾರೆ. ಆರ್ಯರು ಮೂಲ ನಿವಾಸಿಗಳ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ನಂತರ ಚತುರ್ವರ್ಣ ಪದ್ಧತಿ ಕಟ್ಟುನಿಟ್ಟಾಗಿ ಆಚರಣೆಗೆ ಬಂದಿತು ಎಂಬುದನ್ನು ವಿದ್ವಾಂಸರು ಒಪ್ಪಿದ್ದಾರೆ. ಆ ಸಮಯದಲ್ಲಿ ಸಂಘರ್ಷದಲ್ಲಿ ಸೋತ ದಸ್ಯುಗಳು ಆರ್ಯರಿಗೆ ಸೇವೆ ಮಾಡುವ ಕಾಯಕದಲ್ಲಿ ತೊಡಗಬೇಕಾಗಿ ಬಂದಿತು. ಅವರನ್ನು ಶೂದ್ರರೆಂದು ಪರಿಗಣಿಸಲಾಗಿತ್ತು. ಬ್ರಾಹ್ಮಣರ ನಂತರ ಶೂದ್ರ ಕಲ್ಪನೆಯು ಪ್ರಬಲಗೊಂಡು ಯಜ್ಞ ಯಾಗಾದಿಗಳನ್ನು ತಮ್ಮ ಕಾಯಕವಾಗಿ ಮಾಡಿಕೊಂಡ ಬ್ರಾಹ್ಮಣ ಸಂಸ್ಕೃತಿಯ ವೈಭವೀಕರಣವಾಯಿತು ಎಂದು ಡಾ: ಗುರ್ಯೆವರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಶೂದ್ರರಲ್ಲೂ ಕಾಲಾಂತರದಲ್ಲಿ ಅಸ್ಪೃಶ್ಯರೆಂಬ ವರ್ಗವೇ ನಿರ್ಮಾಣವಾಯಿತು. ಇದಕ್ಕೆ ಎರಡು ಮೂಲ ಕಾರಣಗಳು ಇವೆ. ೧) ಬ್ರಾಹ್ಮಣರಿಂದ ಪರಾಜಿತರಾದ ಬೌದ್ಧರಂತೆ ತಮಗೆ ದಾಸರಾಗಿ ವರ್ತಿಸಲು ಹಿಂದೆಗೆದ ದಸ್ಯುಗಳಲ್ಲಿ ಕೆಲವರ ಬಗೆಗೆ ತುಚ್ಛ ಭಾವನೆ ಮತ್ತು ಅವರ ಮೇಲಿನ ದ್ವೇಷ ಬೆಳೆಯತೊಡಗಿತ್ತು 2) ಮೂಲತಃ ಆರ್ಯರು ಮತ್ತು ಎಲ್ಲರೂ ಗೋಮಾಂಸ ಭಕ್ಷಕರಾಗಿದ್ದರು ಎಂದೂ, ಕಾಲಾನಂತರದಲ್ಲಿ ಮೇಲುವರ್ಗದ ಜನ ಆ ಪದ್ಧತಿಯನ್ನು ಬಿಟ್ಟರೂ, ತುಚ್ಛವಾಗಿ ಪರಿಗಣಿಸಲ್ಪಟ್ಟ ಒಂದುವರ್ಗದ

ಜನರು ಗೋಮಾಂಸ ಭಕ್ಷಣೆಯನ್ನು ಬಿಡದಿದ್ದುದು ಈ ಅಸ್ಪೃಶ್ಯತೆಯ ನಿರ್ಮಾಣಕ್ಕೆ ಕಾರಣವೆಂದು ಡಾ : ಅಂಬೇಡ್ಕರ್ ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ. ಇಂತಹ ವರ್ಗ ನಿರ್ಮಾಣ ಮಾಡಿ ಉಚ್ಚನೀಚ ಭಾವನೆಗಳಿಗೆ ಅವಕಾಶ ಮಾಡಿಕೊಟ್ಟಿತು. ಇದು ಬ್ರಾಹ್ಮಣ ವರ್ಗದ ಪುರೋಹಿತ ಶಾಹಿಯ ಕೊಡುಗೆಯೆಂದು ಹಿಂದೂ ಶಾಸನವನ್ನು ವಿಶ್ಲೇಷಿಸಿದ ಸರ್ ಹೆನ್ರಿಮೇನ್ (Early Law and Customs) ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಸಮಾಜದ ಈ ಸ್ಥಿತಿಯನ್ನು ಗಮನಿಸಿದಾಗ ಅನಿವಾರ್ಯವಾಗಿ ಸಮಾಜದಲ್ಲಿ ಸಂಘರ್ಷಗಳು ಮೂಡಿರುವ ಸಂಭವವಿದೆ. ರಾಜ್ಯಾಧಿಕಾರವು ಮೊದಲು ಮೇಲು ವರ್ಗದವರ ವ್ಯಾಪ್ತಿಯಲ್ಲಿ ಇದ್ದ ಕಾರಣ ಸೇವೆ ಮಾಡುವುದರಲ್ಲೆ ದುಡಿದು ಸೋತ ಜನ ಪ್ರತಿಭಟಿಸಿದಾಗ ಅದನ್ನು ಹತ್ತಿಕ್ಕುವ ಪ್ರಯತ್ನ ನಡೆದು ಬಂದ ಕಾರಣ ಈ ವರ್ಣಾಭಿಪ್ರಾಯವನ್ನು ಶಾಶ್ವತಗೊಳಿಸುವುದಕ್ಕಾಗಿ ಈ ಧಾರ್ಮಿಕ ವಿಚಾರಧಾರೆಯನ್ನು ನ್ಯಾಯ ಶಾಸ್ತ್ರವಾಗಿ ಘೋಷಿಸಿ ತಮಗೆ ಅನುಕೂಲವಾಗುವ ರೀತಿಯಲ್ಲಿ ವೈಭವೀಕರಿಸಲಾಯಿತು ಮತ್ತು ತನ್ಮೂಲಕ ಪರಾಜಿತ ಮತ್ತು ಪರಾಧೀನ ವರ್ಗದವರ ಮೇಲೆ ಕೀಳರಿಮೆಯ ಭಾವನೆಯನ್ನು ಪ್ರಭಾವಯುತವಾಗಿ ಬಿತ್ತಲಾಯಿತು ಎಂಬುದನ್ನು ವಿದ್ವಾಂಸರು ಸಮರ್ಥಿಸಿದ್ದಾರೆ. ಹೀಗೆ ಒಂದೇ ನಾಣ್ಯದ ಎರಡು ಮುಖವಾಗಿದ್ದ ಧರ್ಮ ಮತ್ತು ನ್ಯಾಯ ಭಿನ್ನ ವ್ಯಾಖ್ಯಾನದಲ್ಲಿ ಪರಿವರ್ತನೆಗೊಂಡಿತು.

ಧರ್ಮದ ವ್ಯಾಖ್ಯಾನ

ಸಮಾಜದ ಹಗೂ ರಾಜ್ಯಪದ್ಧತಿಯ ಪರಿವರ್ತನೆಗನುಗುಣವಾಗಿ ಧರ್ಮ ಶಬ್ದದ ವ್ಯಾಖ್ಯೆ ಬಹು ರೂಪವನ್ನು ತಾಳುತ್ತದೆ. ಧರ್ಮ ಶಬ್ದಕ್ಕೆ ಬಹುಮುಖವಾದ ಅರ್ಥ ಕೊಡಬೇಕಾಯಿತು ಎಂದು ಧರ್ಮಶಾಸ್ತ್ರ ಎಂಬ ಮಹಾನ್ ಕೃತಿಯನ್ನು ರಚಿಸಿದ ಡಾ: ಪಿ. ವಿ. ಕಾಣೆಯವರು ಅಭಿಪ್ರಾಯ ಪಟ್ಟಿದ್ದಾರೆ. ಹಿಂದೆ ಹೇಳಿದಂತೆ ಪರಾಜಿತರಾದವರ ಮೇಲೆ ಆರ್ಯರ ಪ್ರಭುತ್ವ ಆರಂಭಗೊಂಡಾಗ ಪರಾಜಿತ ವರ್ಗದಲ್ಲಿ ಕೆಲವರು ಮೇಲುವರ್ಗದ ಸಂಸ್ಕೃತಿಯನ್ನು ವಿರೋಧಿಸುವುದು ಕಂಡುಬರುತ್ತದೆ. ಅವರನ್ನು ಇತಿಹಾಸದಲ್ಲಿ ನಾಸ್ತಿಕರೆಂದು ಲೋಕಾಯುತರೆಂದು ಕರೆಯಲಾಗಿದೆ. ಅವರು ಪ್ರಾಚೀನ ಸಂಸ್ಕೃತಿಯ ಧರ್ಮ ಶಬ್ದ ಅರ್ಥ ವಿವರಣೆಯನ್ನು ಪ್ರತಿಭಟಿಸಿ ಲೋಕ ಜೀವನದಲ್ಲಿ ಮನುಷ್ಯನಿಗೆ ಸಮಾನ ಸುಖವನ್ನು ಯಾವುದು ದೊರಕಿಸಿ ಕೊಡುತ್ತದೊ ಅದನ್ನು ಧರ್ಮವೆಂದು ಕರೆದರು. ಈ ವರ್ಗದವರಿಂದ ಪ್ರೇರಣೆಗೆ ಒಳಗೊಂಡ ಮತ್ತೊಂದು ವರ್ಗ ಜೈನ ಸಂಪ್ರದಾಯವಾಗಿ ಬೆಳೆಯಿತು. ಅವರು ಧರ್ಮ ಶಬ್ದಕ್ಕೆ ಪುದ್ಗಲವೆಂದು ಕರೆದರು. ಅವರ ಅಭಿಪ್ರಾಯದಂತೆ ಪುಣ್ಯವೇ ಧರ್ಮವಲ್ಲ. ಅದರಿಂದ ಉತ್ಪನ್ನವಾಗುವ ಪರಮಾಣುಗಳಿಗೆ ಪುದ್ಗಲ ಅಥವಾ ಧರ್ಮವೆಂದು ಕರೆದರು. ಅದೇ ದಾರಿಯನ್ನು ಅವಲಂಬಿಸಿದ ಬೌದ್ಧ ಸಂಪ್ರದಾಯದಲ್ಲಿ ಧರ್ಮ ಶಬ್ದಕ್ಕೆ ವ್ಯಾಪಕವಾದ ಅರ್ಥ ಪ್ರಾಪ್ತಿಯಾಯಿತು. ಅವರ ಪ್ರಕಾರ ವ್ಯವಹಾರಿಕ ಪ್ರಪಂಚದಲ್ಲಿ ಹಿಂಸೆ ಮತ್ತು ನಿರ್ವಾಣಕ್ಕೆ ಸಾಧನವಾಗುವ ಪಂಚ ಸ್ಕಂದಗಳನ್ನೇ ಧರ್ಮವೆಂದು ಕರೆದರು. ನ್ಯಾಯ

ದರ್ಶನದ ಪರಿಣತರಾದ ಗೌತಮರು ಆತ್ಮದ ಒಂದು ವಿಶೇಷ ಗುಣವನ್ನು ಧರ್ಮ ಅಥವಾ ಅದೃಷ್ಟವೆಂದು ಕರೆದರು. ವೈಶೇಷಿಕ ದರ್ಶನ ಪರಿಣತರಾದ ಮಹರ್ಷಿ ಕಣಾದರು ಯಾವ ಮಾರ್ಗದಿಂದ ಮನುಷ್ಯನಿಗೆ ಇಹಲೋಕದಲ್ಲಿ ಅಭ್ಯುದಯವು ಪರಲೋಕದಲ್ಲಿ ನಿಃಶ್ರೇಯಸ್ಸು ಪ್ರಾಪ್ತವಾಗುವುದೋ ಅದನ್ನು ಧರ್ಮವೆಂದು ಕರೆದರು. ಒಂದು ದೃಷ್ಟಿಯಿಂದ ಲೌಕಿಕ ಮತ್ತು ಪಾರಮಾರ್ಥಿಕ ಸಮಾನತ್ವವನ್ನು ಸಾಧಿಸಬಯಸಿದವರು ಕಣಾದರು.

ಸಾಂಖ್ಯ ಸಿದ್ಧಾಂತದ ಪ್ರತಿಪಾದಕರಾದ ಕಪಿಲ ಮಹರ್ಷಿಗಳು ಸತ್‌ಕರ್ಮ ಜನ್ಯವಾದ ಅಂತಃಕರಣದ ವಿಶೇಷ ವೃತ್ತಿಯನ್ನು ಧರ್ಮವೆಂದು ಕರೆದಿದ್ದಾರೆ. ಅಂದರೆ ಪ್ರಕೃತಿಯ ವಿಕಾರ ವಿಶ್ಲೇಷಣೆಗಳಲ್ಲಿ ಅನಾಶಕ್ತಿಯನ್ನು ಕೂಡಿಸಿ ಪುರುಷತತ್ವದಲ್ಲಿ ಸ್ವರೂಪದ ಅನುಸಂಧಾನಕ್ಕೆ ಅನುಕೂಲವಾದ ಅಂತಃಕರಣವನ್ನು ನಿರ್ಮಾಣ ಮಾಡುವ ಕಾರ್ಯವನ್ನೇ ಧರ್ಮವೆಂದು ಕರೆದಿದ್ದಾರೆ. ಯೋಗಾಚಾರ್ಯರಾದ ಪತಂಜಲಿ ಮಹರ್ಷಿಗಳು ''ಮನವೇ ಬಂಧನ ಮತ್ತು ಮೋಕ್ಷಕ್ಕೆ ಕಾರಣ. ಆ ಮನಸ್ಸಿನ ಪರಿವರ್ತನೆಯನ್ನು ವಿರೋಧಿಸುವುದೇ ಧರ್ಮವೆಂದು ಕರೆದಿದ್ದಾರೆ.

ಮಹಾಭಾರತದಲ್ಲಿ ''ಧಾರಣಾದ್ಧರ್ಮಮಿತ್ಯಾಹುರ್ಧರ್ಮೋ ಧಾರಯತೇ ಪ್ರಜಾಃ।
ಯತ್‌ಸ್ಯಾದ್ ಧಾರಣ ಸಂಯುಕ್ತಂ ಸಧರ್ಮಇತಿ ನಿಶ್ಚಯಃ॥ ಎಂದಿದೆ

ಅಂದರೆ ಸಕಲ ಜೀವರಾಶಿಗಳ ರಕ್ಷಣೆಯ ವಿಧಾನವೇ ಧರ್ಮವೆಂದು ಹೇಳಿದೆ. ಮಹಾನಾರಾಯಣ ಉಪನಿಷತ್ತಿನಲ್ಲಿ

''ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ ಲೋಕೇ
ಧರ್ಮಿಷ್ಠರಿ ಪ್ರಜಾ ಉಪಸರ್ಪಂತೀ।
ಧರ್ಮೇಣ ಪಾಪಮಪನುದತಿ ಧರ್ಮೇ ಸರ್ವಂ
ಪ್ರತಿಷ್ಠಿತಂ ತಸ್ಮಾದ್ಧರ್ಮಂ ಪರಮಂ ವದಂತೀ॥

ಅಂದರೆ ಧರ್ಮವು ಸಕಲ ಜಗತ್ತಿನ ಸ್ಥಿತಿಗೆ ಮೂಲ ಕಾರಣ, ಜಗತ್ತಿನ ಜನತೆ ಧರ್ಮಾತ್ಮರನ್ನೇ ಅನುಸರಣೆ ಮಾಡುತ್ತಾ ಬಂದಿದೆ. ಧರ್ಮದಿಂದ ಪಾಪ ದೂರವಾಗುತ್ತದೆ. ಜಗತ್ತಿನ ಇರುವಿಕೆಗೆ ಧರ್ಮವೇ ಆಧಾರ. ಆದುದರಿಂದ ಧರ್ಮವನ್ನು ಪರಮ ಪದವೆಂದು ಕರೆಯುತ್ತಾರೆ ಎಂದಿದೆ. ಶ್ರೀ ಮದ್ಭಾಗವತದಲ್ಲಿ ಹೀಗೆ ಹೇಳಿದೆ.

ಸತ್ಯಂದಯಾತಪಃ ಶಚಂತಿತಿಕ್ಷೇಕ್ಷಾಶಮೋದಮಃ।
ಅಹಿಂಸಾಬ್ರಹ್ಮಚರ್ಯ ತ್ಯಾಗಃ ಸ್ವಾಧ್ಯಾ ಆರ್ಜವಂ॥
ಸಂತೋಷಃ ಸಮದಕ್ಸೇವಾ ಗ್ರಾಮ್ಯೆಹೋಪರಮಃ ಶನ್ಯೆಃ।
ನೃಣಾಂವಿಪರ್ಯಯೇಹೇಕ್ಷಾಮನಮೆತ್ಮವಿಮರ್ಶನಂ॥

ಅನ್ನಾದ್ಯಾದೇ : ಸಂವಿಭಾಗೋಭೂತೇಭ್ಯಶ್ಚಯಥಾರ್ಹತಃ।
ತೇಷ್ವಾತ್ಮದೇವತಾಬುದ್ಧಿ: ಸುತರಾಂನ್ನೃಷುಪಾಂಡವ ॥

ಶ್ರವಣಂ ಕೀರ್ತನಂ ಚಾಸ್ಯಸ್ಮರಣಂಮಹತಾಂಗತೇಃ।
ಸೇತವೇಜ್ಯಾವದತಿರ್ದಾಸ್ಯಂ ಸಖ್ಯಮಾತ್ಮಸುಮರ್ಪಣಂ ॥

ನೃಣಾಮಯಂ ಪರೋಧರ್ಮ ಸರ್ವೇಷಾಂಸಮುದಾಹೃತಃ।
ತ್ರಿಂಶಕರಲ್ಲಿ ಕ್ಷಣವಾನ್‌ರಾಜನ್ ಸರ್ವಾತ್ಮಾಯೇನತುಷ್ಯತಿ ॥

ಸತ್ಯ, ದಯಾ, ತಪಸ್ಯ, ಶೌಚ, ತಿಥಿಕ್ಷ ಉಚಿತ ಮತ್ತು ಅನುಚಿತ ವಿಚಾರ ಸಂಯಮ, ಅಹಿಂಸಾ ಬ್ರಹ್ಮಚರ್ಯ, ತ್ಯಾಗ ಸ್ವಾಧ್ಯಾಯ, ಸರಳತೆ ಸಂತೋಷ, ಸಮದರ್ಶ, ಮಹಾತ್ಮರ ಸೇವೆ ಸಂಸಾರ ಭೋಗನಿವೃತ್ತಿ, ದುರಭಿಮಾನದಿಂದ ಮುಕ್ತಿ, ಮೌನ ಆತ್ಮಚಿಂತನೆ ಪ್ರಾಣಿಗಳಿಗೆ ಅನ್ನದಾನ ಮತ್ತು ರಕ್ಷಣೆ, ಸಮಾಜದಲ್ಲಿ ಇಷ್ಟದೇವತಾ ಭಾವನೆ, ಸಂತರ ಆಶ್ರಯ ಶ್ರೀಕೃಷ್ಣನಾಮ, ಗುಣ ಲೀಲೆಗಳ, ಶ್ರವಣ, ಕೀರ್ತನ, ಸ್ಮರಣಸೇವೆ, ಪೂಜಾ, ನಮಸ್ಕಾರ, ಧ್ಯಾನ, ಸಖ್ಯ, ಆತ್ಮಸಮರ್ಪಣಾ ಈ ಮೂವತ್ತು ಧರ್ಮದ ಲಕ್ಷಣಗಳೆಂದು ಹೇಳಿದೆ.

ಧರ್ಮದ ವ್ಯವಹಾರಗಳಲ್ಲೆಲ್ಲ ವೇದ ಮತ್ತು ಸ್ಮೃತಿ ಸಾಹಿತ್ಯದ ಪ್ರೇರಣೆ ಇರುವುದು ಕಂಡುಬರುತ್ತದೆ. ಸ್ಮೃತಿ ಸಾಹಿತ್ಯದಲ್ಲಿ ಧರ್ಮ ಶಬ್ಧವು ನ್ಯಾಯ ಮತ್ತು ನೀತಿ ಎಂಬ ಅರ್ಥವನ್ನು ಹೊಂದಿದೆ. ಈ ಸಂಸ್ಕೃತ ಶಬ್ದ ನಿರ್ದಿಷ್ಟ ಅರ್ಥ ವಿವರಣೆಯನ್ನು ನೀಡುವುದು ಕಷ್ಟವೆಂದು ವಿದ್ವಾಂಸರೇ ಅಭಿಪ್ರಾಯ ಪಟ್ಟಿದ್ದಾರೆ. ಋಗ್ವೇದದಲ್ಲಿ ಬರುವ ಋತ ಶಬ್ದದಲ್ಲಿ ಪ್ರಾಚೀನ ನ್ಯಾಯ ಶಾಸ್ತ್ರದ ಕಲ್ಪನೆ ಅಡಕವಾಗಿದೆ. ಅದರಂತೆ ಋತ ಧರ್ಮ ಕಾಮ ಮತ್ತು ಸ್ವತ ಎಂಬ ಪದಗಳು ಋತದ ವಿವಿಧ ಮುಖಗಳನ್ನು ಪ್ರತಿಬಿಂಬಿಸುತ್ತವೆ. ಋತವು ವಿಶ್ವದ ಕ್ರಮಗೊಂಡ ತತ್ವವನ್ನು ಮತ್ತು ಪ್ರಾಪಂಚಿಕ ಜೀವನವನ್ನು ನಿರೂಪಿಸುವ ದೈವೀ ಆಜ್ಞೆಯನ್ನು ಸೂಚಿಸುತ್ತದೆ ಎಂದು ಡಾ. ಪಿ. ವಿ. ಕಾಣೆಯವರು ಹೇಳಿದ್ದಾರೆ.

ಋಗ್ವೇದದಲ್ಲಿ ಧರ್ಮ ಎಂಬ ಪದವು ಕನಿಷ್ಠ ಐವತ್ತು ಸಾರಿ ಬರುತ್ತದೆ. ಧರ್ಮ ಎಂಬುದು'ಧೃ ಎಂಬ ಧಾತುವಿನಿಂದ ಹುಟ್ಟಿದೆ. 'ಧೃ' ಎಂದರೆ ಸಲಹು, ಎತ್ತಿಹಿಡಿ, ಕಾಪಾಡು ಎಂದಾಗುತ್ತದೆ. ಧರ್ಮ ಎಂಬ ಪದವನ್ನು ಐತರೇಯ ಬ್ರಾಹ್ಮಣದಲ್ಲಿ ಧಾರ್ಮಿಕ ಕರ್ತವ್ಯ ಶ್ರೇಣಿಯೆಂದು ಉಲ್ಲೇಖಿಸಿದೆ. ಹೀಗೆ ಧರ್ಮ ಮತ್ತು ನ್ಯಾಯ ಶಾಸ್ತ್ರದ ವಿವರಣೆಗಳು ದೇಶ ಕಾಲಕ್ಕನುಗುಣವಾಗಿ ವಿಶಿಷ್ಟ ಅರ್ಥವನ್ನು ಒಳಗೊಳ್ಳುತ್ತಾ ಬಂದಿರುವುದನ್ನು ಕಾಣುತ್ತೇವೆ.

ಮಾನವ ಜೀವನದ ಗುರಿಯನ್ನು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳಾಗಿ ಶಾಸ್ತ್ರಗಳಲ್ಲಿ ಉಲ್ಲೇಖಿಸಿದೆ. ಹಿಂದೂ ಸಂಸ್ಕೃತಿಯ ಮೂಲ ನೆಲೆಗಟ್ಟು ಈ ಪುರುಷಾರ್ಥದಲ್ಲಿದೆ. ಮಾನವ ಅರ್ಥ, ಕಾಮಗಳನ್ನು ಅನುಭವಿಸಬೇಕು. ಅದಕ್ಕೆ ಧರ್ಮ ಆಧಾರವಾಗಿರಬೇಕು. ಈ ಅನುಭವಕ್ಕೆ ಮೋಕ್ಷ ಗುರಿಯಾಗಬೇಕು ಎಂಬುದು

ಹಿಂದೂ ಸಂಸ್ಕೃತಿಯ ಸಾರ. ಅರ್ಥ ಮತ್ತು ಕಾಮಗಳ ವಿಶಿಷ್ಟತೆಯನ್ನು ಅರ್ಥಶಾಸ್ತ್ರದಿಂದ ಪ್ರತ್ಯೇಕಿಸಿರುವ ವಿಶ್ಲೇಷಣೆಯಿರುವುದು ಕಂಡುಬರುತ್ತದೆ. ಈ ಸಂಸ್ಕೃತಿಯ ಸಾಧನೆಗೆ ಬೇಕಾದ ರೀತಿ ನೀತಿಗಳನ್ನು ಮೊಟ್ಟಮೊದಲು ಮನು ಮಹರ್ಷಿ ತನ್ನ ಧರ್ಮಶಾಸ್ತ್ರದಲ್ಲಿ ಸೂಚಿಸಿದರು. ನಂತರ ಅನೇಕರು ಈ ಸಿದ್ಧಾಂತವನ್ನು ರಚಿಸಿದರು. ಸಮಾಜದ ಬದುಕಿಗೆ ಬೇಕಾದ ನೀತಿನಿಯಮಗಳು ಮನುವಿನ ಸಿದ್ಧಾಂತವನ್ನೇ ಹೆಚ್ಚು ಅವಲಂಬಿಸುತ್ತಾ. ಬಂದಿರುವುದನ್ನು ಹಿಂದೂ ಸಂಸ್ಕೃತಿಯ ಇತಿಹಾಸದಲ್ಲಿ ಕಾಣುತ್ತೇವೆ. ಅದರೆ ಮನುವಿಗಿಂತಲೂ ಮೊದಲೆ ಕ್ರಿ. ಪೂ. ೩೦೦ ರಿಂದ ಕ್ರಿ. ಶ. ೧೦೦ ಮಧ್ಯಾಂತರದ ಕಾಲದಲ್ಲಿ ಕೌಟಿಲ್ಯನೆಂದು ಖ್ಯಾತನಾದ ಚಾಣುಕ್ಯನು ರಚಿಸಿದ 'ಅರ್ಥಶಾಸ್ತ್ರ' ಗ್ರಂಥ ಹಿಂದೂಧರ್ಮ ಹಾಗೂ ನ್ಯಾಯ ಶಾಸ್ತ್ರದ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದೆ. ಈ ಅರ್ಥಶಾಸ್ತ್ರದಲ್ಲಿ ಅನೇಕ ಧಾರ್ಮಿಕ ಸಂಗತಿಗಳನ್ನು ವಿಧಿನಿಷೇಧಗಳನ್ನು ಸೂಚಿಸಿದರು. ಅರ್ಥ ಶಾಸ್ತ್ರವು ಧರ್ಮ ಶಾಸ್ತ್ರದ ಒಂದು ಅಂಗ ಎಂದು ಪರಿಗಣಿಸಲಾಗಿದೆ. ಅರ್ಥಶಾಸ್ತ್ರದಲ್ಲಿ ರಾಜರ ಜವಾಬ್ದಾರಿಯನ್ನು ಅವರ ಕರ್ತವ್ಯವನ್ನು ವಿವರಿಸಿದೆ. ಹಾಗೆಯೇ ಇತರ ಧರ್ಮ ಗ್ರಂಥಗಳಲ್ಲೂ ಸಹ ರಾಜರು ಅನುಸರಿಸಬೇಕಾದ ಕಟ್ಟುಕಟ್ಟಳೆಗಳನ್ನು ತಿಳಿಸಿದೆ. ಅರ್ಥಶಾಸ್ತ್ರದ ವಿಧಿನಿಯಮಗಳಿಗೂ ಮನು ಧರ್ಮಶಾಸ್ತ್ರದ ವಿಧಿನಿಯಮಗಳಿಗೂ ಭಿನ್ನತೆಗಳು ಇದ್ದರೂ ಈ ಎರಡರ ಗುರಿಯು ಸಮಾಜದ ಸಂರಕ್ಷಣೆಯೇ ಆಗಿದೆ. ಈ ಎಲ್ಲಾ ವಿವೇಚನೆಗಳಿಂದ ಧರ್ಮ ಶಾಸ್ತ್ರ ಮತ್ತು ನ್ಯಾಯಶಾಸ್ತ್ರಗಳು ವಿವರಣೆಯಲ್ಲಿ ವೈವಿಧ್ಯವನ್ನು ಪಡೆದಿದ್ದರೂ ಗುರಿಯಲ್ಲಿ ಒಂದೇ ಆಗಿದೆ ಎಂಬುದನ್ನು ಗಮನಿಸಬಹುದು.

ನವೀನ ನ್ಯಾಯ ಪದ್ಧತಿ

ಸಮಾಜದ ನೀತಿನಿಯಮಗಳನ್ನು ಸಮಾಜವೇ ನಿರ್ವಹಿಸುತ್ತಿದ್ದ ಕಾಲ ಮುಗಿದು ಸಮಾಜ ರಕ್ಷಣೆಯ ಹೊಣೆ ರಾಜತ್ವದ ಕೈಸೇರಿತು. ರಾಜರು ಪ್ರಜಾನುರಾಗಿಗಳಾಗಿ ಧರ್ಮ ಸಂರಕ್ಷಣೆ ಮಾಡುತ್ತಾ ನ್ಯಾಯ ನಿರ್ದೇಶನ ಮಾಡುತ್ತಿದ್ದರು. ಚಾರಿತ್ರಿಕವಾಗಿ ಗಮನಿಸಿದಾಗ ರಾಜರು ಸಹ ಜಾತಿ, ಮತ, ಪಂಥಗಳ ಪ್ರಭಾವಕ್ಕೆ ಒಳಗಾಗಿ ಅಯಾಯಾ ಪಂಥಗಳ ಅಭ್ಯುದಯವನ್ನು ಆಧಾರವಾಗಿ ಇಟ್ಟುಕೊಂಡು ನ್ಯಾಯ ರಕ್ಷಣೆ ಮಾಡುತ್ತಿದ್ದ ಸಂಗತಿಗಳು ಕಂಡುಬರುತ್ತವೆ.

ಅದನ್ನೆ ಆರ್ಯ ಸಂಸ್ಕೃತಿ ಅನುಸರಿಸುತ್ತಾ ಬಂದು ಸಮಾಜದ ಒಂದು ವರ್ಗವನ್ನೇ ಸೇವಕರಾಗಿ ಪರಿಗಣಿಸಿ ಅವರ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದುದನ್ನು ಹಿಂದೆ ಹೇಳಿದೆ. ಭಾರತವು ಇಸ್ಲಾಂ ಧರ್ಮೀಯರ ಅಧಿಪತ್ಯಕ್ಕೆ ಒಳಗಾದ ಮೇಲೆ ಹಿಂದೂ ಧರ್ಮದ ಮೇಲೆ ಇಸ್ಲಾಂ ಸಂಸ್ಕೃತಿಯ ನ್ಯಾಯ ನಿರ್ಣಯಕ್ಕೆ ಹಿಂದೂ ಧರ್ಮೀಯರು ತಲೆ ಬಾಗಿ ಬದುಕಬೇಕಾದ ಪ್ರಸಂಗವು ಬಂದಿತ್ತು. ಆದಾಗ್ಯೂ ಹಿಂದೂ ಸಮಾಜ ತನ್ನ

ಆಚಾರವಿಚಾರದಲ್ಲಿ ಹಿಂದೂ ನ್ಯಾಯ ಶಾಸ್ತ್ರದ ಪದ್ಧತಿಯನ್ನೇ ಪ್ರತಿಪಾದಿಸುತ್ತಾ ಹಿಂದೂ ಧರ್ಮವನ್ನು ಸಂರಕ್ಷಿಸಿಕೊಂಡು ಬಂದಿರುವ ಘಟನೆ ಸ್ಮರಣೀಯವಾದುದು. ಬ್ರಿಟಿಷರು ಭಾರತವನ್ನು ಆಕ್ರಮಿಸಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ಮೇಲೆ ಪಾಶ್ಚಾತ್ಯ ಪದ್ಧತಿಯ ನ್ಯಾಯ ನಿರ್ಣಯಗಳು ರೂಢಿಗೆ ಬಂದವು. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ತನ್ನ ಪ್ರಭುತ್ವವನ್ನು ಕಾಪಾಡಿಕೊಳ್ಳುವುದಕ್ಕಾಗಿ ಹಿಂದು ಧಾರ್ಮಿಕ ಆಚರಣೆಗಳಿಗೆ ಅಡ್ಡಿಬಾರದೆ ಸಾಮಾಜಿಕ ವ್ಯವಸ್ಥೆಗೆ ಸೂಕ್ತವಾದ ನ್ಯಾಯಶಾಸ್ತ್ರವನ್ನು ರೂಪಿಸಿ ಆಡಳಿತದಲ್ಲಿ ಅಳವಡಿಸಿಕೊಂಡಿತು. ಅದಕಾರಣ ಹಿಂದೂ ಸಮಾಜದ ಆಂತರಿಕ ವ್ಯವಹಾರಗಳಿಗೆ ಹಿಂದೂ ಧಾರ್ಮಿಕ ಶಾಸನವು ಮಹಮದೀಯರ ಆಂತರಿಕ ವ್ಯವಸ್ಥೆಗೆ ಮಹಮದೀಯ ಶಾಸನವು ಇಂದಿಗೂ ಉಳಿದುಕೊಂಡು ಬಂದಿದೆ. ಆದರೆ ಎಲ್ಲಾ ಸಮಾಜದ ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟಂತೆ ಸರ್ವಕಾನೂನುಗಳನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿ ಭಾರತದಲ್ಲಿ ರೂಪಿಸಿತ್ತು. ಅದೇ ಪದ್ಧತಿ ಇಂದಿಗೂ ಮುಂದುವರಿದಿದೆ. ಇಂದಿನ ಆಧುನಿಕ ಶಾಸನಗಳಲ್ಲೂ ಸಹ ಧರ್ಮದ ರಕ್ಷಣೆ ಕಂಡುಬರುತ್ತದೆ. ಧರ್ಮ ಸಮಾಜದ ಆಚರಣೆಯ ಸಾಧನ; ನ್ಯಾಯ, ಧರ್ಮಕ್ಕೆ ವಿರೋಧವಾಗಿ ನಡೆದವರನ್ನು ಶಿಕ್ಷಿಸಿ ಅವರ ಕೋಟಲೆಯಿಂದ ಧರ್ಮವಾಗಿ ನಡೆಯುವರನ್ನು ರಕ್ಷಿಸುವ ಹೊಣೆಗಾರಿಕೆ ಇಂದಿನ ನ್ಯಾಯಶಾಸ್ತ್ರಕ್ಕೆ ಇದೆ. ಇದನ್ನು ಸರಳವಾಗಿ ಅರ್ಥೈಸುವುದಾದರೆ ಬಸವಣ್ಣನವರ ಒಂದು ವಚನವನ್ನು ಉದಾಹರಿಸಬಹುದು,

> 'ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
> ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
> ತನ್ನ, ಬಣ್ಣಿಸಬೇಡ ಇದಿರ ಆಳಿಯಲುಬೇಡ, ಇದೇ, ಅಂತರಂಗ ಶುದ್ಧಿ
> ಇದೇ ಬಹಿರಂಗ ಶುದ್ಧಿ, ಇದೇ ನಮ್ಮ
> ಕೂಡಲ ಸಂಗಮದೇವನೊಲಿಸುವ ಪರಿ, ಎಂದಿದ್ದಾರೆ.

ಇಲ್ಲಿ ಕಳ್ಳತನ ಮಾಡುವುದು, ಕೊಲೆ ಮಾಡುವುದು, ಸುಳ್ಳು ಹೇಳುವುದು ತನ್ನನ್ನು, ತಾನು ಬಣ್ಣಿಸಿಕೊಳ್ಳುವುದು ಪರರನ್ನು ನಿಂದೆ ಮಾಡುವುದು ಅನ್ಯರನ್ನು ಅಸಹ್ಯದಿಂದ ನೋಡುವುದು ಇತ್ಯಾದಿಗಳು ಧರ್ಮದ ಸಂದೇಶಗಳಾಗಿವೆ. ಆದರೆ ಇದಕ್ಕೆ ವಿರೋಧವಾಗಿ ನಡೆದರೆ ಧರ್ಮ ಶಾಸ್ತ್ರದಲ್ಲಿ ಪಾಪ ಬರುತ್ತದೆ ಎಂಬ ಭಯದ ಸಂಗತಿಯನ್ನು ರೂಪಿಸಲಾಗಿತ್ತು. ಇದಕ್ಕಾಗಿಯೇ ಹಿಂದೂ ಸಂಸ್ಕೃತಿಯಲ್ಲಿ ಸ್ವರ್ಗ, ನರಕಗಳ, ಪುನರ್ ಜನ್ಮ ಇತ್ಯಾದಿ ಕಲ್ಪನೆಯನ್ನು ಕೊಟ್ಟಿತ್ತು. ಧರ್ಮ ಶಾಸ್ತ್ರವು ಬೋಧಿಸಿದ ಕಣ್ಣಿಗೆ ಕಾಣದ ಕಲ್ಪನೆಗಳನ್ನು ಸಮಾಜ ನಂಬದೇ ಸ್ವೇಚ್ಛೆಯಾಗಿ ಅನುಸರಿಸುವ ಕ್ಷುಲ್ಲಕ ಕಾರ್ಯಗಳನ್ನು ಕಾನೂನು ದಂಡ ಉಪಯೋಗಿಸಿ ಶಿಕ್ಷಿಸುವುದಕ್ಕಾಗಿ ನ್ಯಾಯಶಾಸ್ತ್ರ ರೂಪುಗೊಂಡಿತು.

ಇಂದು ಧರ್ಮಕ್ಕೆ ವಿಪರೀತವಾದ ಅರ್ಥ ಕಲ್ಪನೆಗಳು ಸೃಷ್ಟಿಯಾಗಿವೆ. ಮತ್ತೆ ಕೆಲವರ

ದೃಷ್ಟಿಯಲ್ಲಿ ಧರ್ಮ ಸಮಾಜದ ಪ್ರಗತಿಗೆ ಆತಂಕವೆಂಬ ಭಾವನೆ ಮೂಡಿದೆ. ಆದರೆ ನ್ಯಾಯಶಾಸ್ತ್ರದಲ್ಲಿರುವ ಮೂಲ ಅಂಶವನ್ನು ಗಮನಿಸಿದರೆ ಸಮಾಜದ ಸೌಹಾರ್ದಯುತವಾದ ಬದುಕಿಗೆ ಬೇಕಾದ ನೀತಿನಿಯಮಗಳನ್ನು ರೂಢಿಸುವುದಾಗಿದೆ ಎಂಬುದನ್ನು ಮನಗಾಣಬಹುದು. ಸೂಕ್ಷ್ಮವಾಗಿ ಪರಿಶೀಲಿಸಿದರೆ ಇಂದಿಗೂ ಸಹ ನಿಜವಾದ ಧರ್ಮ ಮತ್ತು ನ್ಯಾಯ ಎರಡು ಒಂದೇ ಗುರಿಯನ್ನುಳ್ಳ ಒಂದೇ ನಾಣ್ಯದ ಎರಡು ಮುಖಗಳು ಎಂಬುದನ್ನು ಒಪ್ಪಲೇಬೇಕಾಗುತ್ತದೆ.

ಸಹಾಯಕ ಕೃತಿಗಳು

1. Hindu Law : N. R. Ragavachar
2. Cultural Heritage of India - Vol. II (Ramakrishna Ashram Publication)
3. Hindu Dharma Shasthra : Dr. P. V. Kane
4. Hindu Polity : K. P. Jayaswal
5. Untouchables : Dr. B. R. Ambedkar
6. ಕೌಟಿಲ್ಯನ ಅರ್ಥಶಾಸ್ತ್ರ : ಡಾ॥ ಶಾಮಾಶಾಸ್ತ್ರಿ
7. ಹಿಂದೂ ವಿವಾಹ ಶಾಸನ : ಹೆಚ್. ಗಂಗಾಧರನ್
8. ಕಲ್ಯಾಣ : ಧರ್ಮಶಾಸ್ತ್ರಾಂಕ್ (ಹಿಂದಿ)
9 1995 Criminal Law Journal page 73

ಧರ್ಮ ಮತ್ತು ವ್ಯಕ್ತಿತ್ವ ವಿಕಸನ

ಡಾ. ಎಂ. ಶಿವಮೂರ್ತಿ

೧. ವ್ಯಕ್ತಿ ಮತ್ತು ವ್ಯಕ್ತಿತ್ವ

'ವ್ಯಕ್ತಿತ್ವ' ಎನ್ನುವುದು ವ್ಯಕ್ತಿಗೆ ವಿಶಿಷ್ಟತೆಯನ್ನು ತಂದುಕೊಟ್ಟು ಪ್ರತ್ಯೇಕ ಘಟಕವಾಗಿ ಗುರುತಿಸಲ್ಪಡುವಂತೆ ಮಾಡುವ ಗುಣ ಲಕ್ಷಣ ಎಂದು ಸ್ಥೂಲವಾಗಿ ನಿರೂಪಿಸಬಹುದು. 'ವ್ಯಕ್ತಿ' ಪ್ರತ್ಯೇಕವಾದ ಒಂದು ಅತಿ ಚಿಕ್ಕ ಘಟಕ. ಸಾಮಾನ್ಯಾರ್ಥದಲ್ಲಿ ಮಾನವ ಜನಾಂಗದ ಒಂದು ಅತಿ ಚಿಕ್ಕ ಘಟಕ (ಅದು ಹೆಣ್ಣಾಗಿರಬಹುದು ಅಥವಾ ಗಂಡಾಗಿರಬಹುದು) ಎಂದು ಹೇಳಲಾಗುತ್ತದೆ. ಆದರೆ ಈ ಶಬ್ದವನ್ನು ಯಾವ ಅತಿ ಚಿಕ್ಕ ಜೀವಿಕ ಘಟಕಕ್ಕಾದರೂ ಬಳಸಬಹುದು. ಈ ಲೇಖನದಲ್ಲಿ 'ವ್ಯಕ್ತಿ' ಎಂದರೆ ಮಾನವ ಜನಾಂಗದ ಅತಿ ಚಿಕ್ಕ ಘಟಕವೆಂದೇ ಇಟ್ಟುಕೊಳ್ಳಲಾಗಿದೆ.

ವ್ಯಕ್ತಿಗಳ ವಿವಿಧ ರೀತಿಯ ಗುಂಪುಗಳನ್ನು ಕುಟುಂಬ, ಸಮೂಹ, ಸಮುದಾಯ, ಸಮಾಜ, ರಾಜ್ಯ, ರಾಷ್ಟ್ರ, ಪ್ರಪಂಚ ಎಂದು ಗುರುತಿಸಲಾಗುತ್ತದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ವ್ಯಕ್ತಿ ತನ್ನಷ್ಟಕ್ಕೆ ತಾನೆ, ಮತ್ತು ಈ ವಿವಿಧ ಗುಂಪುಗಳಲ್ಲಿ ವ್ಯಕ್ತಿ-ವ್ಯಕ್ತಿಗಳೊಂದಿಗೆ ಬೇರೆ ಬೇರೆ ರೀತಿಯ ಚಟುವಟಿಕೆಗಳಲ್ಲಿ ನಿರೂಪಿತವಾಗ ಬೇಕಾಗುತ್ತದೆ. ಇದರಿಂದ ವ್ಯಕ್ತಿ ವ್ಯಕ್ತಿಗಳೊಳಗೆ ಬೇರೆ ಬೇರೆ ರೀತಿಯ ಪಾರಸ್ಪರಿಕ ಸಂಬಂಧಗಳು ಬೆಳೆಯುತ್ತವೆ. ಹೀಗೆ ಚಟುವಟಿಕೆಗಳಲ್ಲಿ ಪ್ರವೃತ್ತನಾದ ವ್ಯಕ್ತಿ ತನ್ನ ಪ್ರಭಾವವನ್ನು ಇತರ ವ್ಯಕ್ತಿಗಳ ಮೇಲೆ ಬೀರುತ್ತಾನೆ(ಳೆ). ಹಾಗೆಯೇ ಇತರ ಅನೇಕ ವ್ಯಕ್ತಿಗಳ ಪ್ರಭಾವಗಳಿಗೆ ಈ ವ್ಯಕ್ತಿಯು ಒಳಗಾಗುತ್ತಾನೆ(ಳೆ). ಜೀವಂತ ಇರುವ ಎಲ್ಲ ವ್ಯಕ್ತಿಗಳ ಚಟುವಟಿಕೆಗಳು ಈ ರೀತಿಯಲ್ಲಿ ಅನಂತವಾಗಿ ಎಡೆಬಿಡದೆ ನಡೆದೇ ಇರುತ್ತವೆ. ಈ ಚಟುವಟಿಕೆಗಳಿಗೆ ವ್ಯಕ್ತಿಯ 'ವ್ಯಕ್ತಿತ್ವ' ಕಾರಣವಾಗುತ್ತದೆ. ಹಾಗೆಯೇ ಈ ಚಟುವಟಿಕೆಗಳ ಪ್ರಭಾವ ಪರಿಣಾಮವೇ ವ್ಯಕ್ತಿತ್ವ ವಿಕಸನಕ್ಕೆ ಕಾರಣವೂ ಆಗುತ್ತದೆ.

೨. ವ್ಯಕ್ತಿತ್ವದ ಮಹತ್ವ

ವ್ಯಕ್ತಿಯ ಸ್ಥಾನಮಾನಗಳಿಗೆ, ವ್ಯಕ್ತಿ-ವ್ಯಕ್ತಿಗಳ ನಡುವಿನ ಪರಸ್ಪರ ವ್ಯವಹಾರಕ್ಕೆ

ವ್ಯಕ್ತಿಯ ವ್ಯಕ್ತಿತ್ವ ಮಹತ್ವದ ಪಾತ್ರ ವಹಿಸುತ್ತದೆ. ವ್ಯಕ್ತಿತ್ವವೇ ವ್ಯಕ್ತಿಗೆ ಸಾಮಾಜಿಕ ಮಾನ್ಯತೆಯನ್ನು ತಂದುಕೊಡುತ್ತದೆ. "ಇವಳು ಸುಂದರಿ, ಅವನು ಧೈರ್ಯಶಾಲಿ, ಇವನು ಉದಾರಿ, ಅವನು ಚಾಣಾಕ್ಷ" ಇತ್ಯಾದಿ, ಇತ್ಯಾದಿಯಾಗಿ ಒಬ್ಬ ವ್ಯಕ್ತಿಯನ್ನು ಇತರ ವ್ಯಕ್ತಿಗಳು ಗುರುತಿಸಿಕೊಳ್ಳುವುದು ತಾವು ಕಂಡ ಅವನ(ಳ) ವ್ಯಕ್ತಿತ್ವದ ಆಧಾರದ ಮೇಲೆಯೇ. ಹಾಗೆಯೇ, ಆ ವ್ಯಕ್ತಿಯೂ "ತಾನು ಬುದ್ಧಿವಂತ, ತಾನು ಇಂಥವನು, ತಾನು ಅಂಥವನು, ತನಗೆ ಸರಿಸಮಾನರು ಯಾರೂ ಇಲ್ಲ" ಎಂದೆಲ್ಲ ತಿಳಿದುಕೊಳ್ಳುವುದು ಕೂಡ ತಾನು ಕಂಡುಕೊಂಡ ತನ್ನ ವ್ಯಕ್ತಿತ್ವದ ಆಧಾರದ ಮೇಲೆಯೇ. ಆದರೆ ಇವೆರಡೂ ಅನಿಸಿಕೆಗಳು ಆ ವ್ಯಕ್ತಿಯ ನಿಜ ವ್ಯಕ್ತಿತ್ವವನ್ನು ತೋರಿಸಲಿಕ್ಕಿಲ್ಲ. ವ್ಯಕ್ತಿಯ ನಿಜ ವ್ಯಕ್ತಿತ್ವ ಕೆಲವು ಕ್ಲಿಷ್ಟ ಸಂಕೀರ್ಣ ಸಂದರ್ಭಗಳಲ್ಲಿ ಮಾತ್ರ ಪ್ರಕಟವಾಗುತ್ತದೆ. ಆಗ ಇತರ ವ್ಯಕ್ತಿಗಳು "ಅವನು ಇಂಥವನೆಂದು ಅನ್ನಿಸುವುದೇ ಇಲ್ಲ" ಎಂದರೆ, "ನಾನು ಹೀಗೆ ವರ್ತಿಸಿದೆನೆಂದರೆ ನನಗೇ ನಾಚಿಕೆಯಾಗುತ್ತದೆ" ಎಂದು ವ್ಯಕ್ತಿಯೇ ವಿಸ್ಮಯ ವ್ಯಕ್ತಗೊಳಿಸುತ್ತಾನೆ. ಎಂದರೆ ವ್ಯಕ್ತಿತ್ವ ಸಂಪೂರ್ಣವಾಗಿ ತನಗಾಗಲಿ, ಇತರರಿಗಾಗಲಿ ಕಾಣುವಂತಹುದಲ್ಲ; ಪೂರ್ಣ ಅರ್ಥೈಸಿಕೊಳ್ಳಲು ಸಾಧ್ಯವಾಗುವಂತಹುದೂ ಅಲ್ಲ!

೩. ವ್ಯಕ್ತಿತ್ವದ ಸ್ತರಗಳು

ಪ್ರತಿ ವ್ಯಕ್ತಿಗೆ ಸ್ಥೂಲ ಶರೀರ, ಸೂಕ್ಷ್ಮಶರೀರ ಹಾಗೂ ಕಾರಣ ಶರೀರ ಎಂದು ಮೂರು ಶರೀರಗಳಿರುತ್ತವೆ. ಎಂದರೆ, ಪ್ರತಿ ವ್ಯಕ್ತಿ ಈ ಮೂರು ರೀತಿಯ 'ಇರುವಿಕೆ'ಯನ್ನು ಹೊಂದಿರುತ್ತಾನೆ(ಳೆ). ಈ ಶರೀರಗಳಿಗೆ ಸಂಬಂಧಿಸಿದಂತೆ ವ್ಯಕ್ತಿತ್ವದಲ್ಲಿ ಮೂರು ಸ್ತರಗಳನ್ನು ಗುರುತಿಸಬಹುದು. ಪಂಚಭೂತಾತ್ಮಕವಾದ ಭೌತ ಪ್ರಪಂಚದಲ್ಲಿ ಕರ್ಮ ಪಂಚೇಂದ್ರಿಯಗಳಿಗೆ, ಜ್ಞಾನ ಪಂಚೇಂದ್ರಿಯಗಳಿಗೆ ಅನುಭವಗಮ್ಯವಾಗುವಂತಹ ಚಟುವಟಿಕೆಗಳಲ್ಲಿ ತೊಡಗಿರುವ ಶರೀರವೇ ಸ್ಥೂಲ ಶರೀರ. ಇದಕ್ಕೆ ಸಾಕಷ್ಟು ಇತಿಮಿತಿಗಳಿವೆ ಎನ್ನುವುದು ಸ್ಪಷ್ಟ.

ಭಾವನಾ ವಿಶೇಷಗಳ, ಆಲೋಚನಾ ತರಂಗಗಳ, ಚಿಂತನಾ ವೈವಿಧ್ಯತೆಗಳ ಮನೋವ್ಯಾಪಾರದಲ್ಲಿ ತೊಡಗಿರುವ ಶರೀರವೇ ಸೂಕ್ಷ್ಮ ಶರೀರ. ಇದರ ಚಟುವಟಿಕೆಗಳು ಬಾಹ್ಯ ಇಂದ್ರಿಯಗಳ ಅನುಭವಕ್ಕೆ ಮೀರಿದವುಗಳು. ಸೂಕ್ಷ್ಮ ಶರೀರಕ್ಕೆ ಕಾಲ, ದೇಶದ ಪರಿಮಿತಿಗಳಿಲ್ಲ. ಲಂಡನ್ನಿನಲ್ಲಿದ್ದ ಮಗ ಭಾರತದಲ್ಲಿಯ ತನ್ನ ತಂದೆ-ತಾಯಿಗಳೊಂದಿಗೆ ಇದ್ದ ಇರವನ್ನು ಸೂಕ್ಷ್ಮ ಶರೀರದಿಂದ ಅನುಭವಿಸಿ ಆನಂದಿಸಬಹುದು, ಅಥವಾ ಒಂದು ಕ್ಷಣದಲ್ಲಿ ಲಂಡನ್ನಿನಿಂದ ಭಾರತಕ್ಕೆ ಬಂದು ಇಲ್ಲಿನ ವಿಷಯಗಳನ್ನು ಅನುಭವಿಸಿಕೊಂಡು ವಾಪಸಾಗಿ ಲಂಡನ್ನಿನಲ್ಲಿಯ ಆಫೀಸ್ ಕೆಲಸವನ್ನು ಮುಂದುವರಿಸಬಹುದು. ಹಾಗೆಯೇ ಕನಸಿನಲ್ಲಿ ಭೌತಿಕ ಶರೀರ ನಿಷ್ಕ್ರಿಯವಾಗಿ ಮಲಗಿದ್ದಾಗಲೂ ಎಲ್ಲ ವ್ಯವಹಾರದಲ್ಲಿ ತೊಡಗಿರಬಲ್ಲುದು ಸೂಕ್ಷ್ಮ ಶರೀರ.

ಕಾರಣ ಶರೀರವು ವೃಕ್ಷವನ್ನೂ, ಅದರಿಂದ ಬರುವ ಬೀಜವನ್ನೂ ಒಳಗೊಂಡಿರುವ ಬೀಜದಂತೆ ಇರುತ್ತದೆ. ಇದು ವ್ಯಕ್ತಿಯ ಮೂಲ ಪ್ರೇರಕ ಶಕ್ತಿಗಳ ಸಮುದಾಯವಾಗಿದ್ದು, ನಿಜ ವ್ಯಕ್ತಿತ್ವವನ್ನು ಒಳಗೊಂಡಿರುತ್ತದೆ.

ಮೋಹಕ ನಗುಮುಖ, ಗಂಭೀರ ನಡೆ, ಮೃದು ನುಡಿ, ಇತ್ಯಾದಿ ದೃಶ್ಯರೂಪದಲ್ಲಿ ವ್ಯಕ್ತವಾಗುವುದು ವ್ಯಕ್ತಿತ್ವದ ಸ್ಥೂಲ ರೂಪ. ವೈಜ್ಞಾನಿಕ ಚಿಂತನೆ, ಕವಿತಾಪ್ರತಿಭೆ, ಕಲಾ ಪ್ರಾವೀಣ್ಯ , ಇತ್ಯಾದಿ ಮನೋಬುದ್ಧಿ ಸಂಬಂಧಿತವಾದುದು ವ್ಯಕ್ತಿತ್ವದ ಸೂಕ್ಷ್ಮರೂಪ. ಜೀವನದ ಪರೀಕ್ಷಾ ಕಾಲಗಳಲ್ಲಿ ಮನೋ-ಬುದ್ಧಿಗಳಿಗೆ ಅರಿವಿಲ್ಲದಂತೆ ಹೊರ ಹೊಮ್ಮುವುದು ವ್ಯಕ್ತಿತ್ವದ ಕಾರಣ ಸ್ವರೂಪ.

೪. ವ್ಯಕ್ತಿತ್ವದ ವಿಕಸನ

ವ್ಯಕ್ತಿತ್ವ ಸಂಕೀರ್ಣವಾದುದು ಎನ್ನುವುದು ಸ್ಪಷ್ಟ. ಹಾಗೆಯೇ ವ್ಯಕ್ತಿತ್ವದ ವಿಕಸನವೂ ಸಂಕೀರ್ಣ ಪ್ರಕ್ರಿಯೆಯಾಗಿರುತ್ತದೆ. ಯಾವ ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ತಂದೆ-ತಾಯಿಗಳ ಮಗುವಾಗಿ ಜನಿಸುವುದು ಆಕಸ್ಮಿಕ ಘಟನೆಯಲ್ಲ. ಒಂದು ಆಕಾಶವಾಣಿ ಕೇಂದ್ರದಿಂದ ಹೊರಹೊಮ್ಮಲ್ಪಟ್ಟ ಶಬ್ದದ ಅಲೆಗಳು, ಅವುಗಳನ್ನು ಸ್ವೀಕರಿಸಲು ನಿಯೋಜಿತವಾದ ಸ್ವೀಕರಣಾಯಂತ್ರದಲ್ಲಿ ಮಾತ್ರ ಶೇಖರಿಸಲ್ಪಟ್ಟು ಶಬ್ದವಾಗಿ ಬಿತ್ತರಿಸಲ್ಪಡುವಂತೆ, ನಿರ್ದಿಷ್ಟ ತಂದೆ-ತಾಯಿಗಳ ಸಂಸ್ಕಾರಗಳು ಅದಕ್ಕೆ ಹೊಂದಿಕೆಯಾಗುವಂತಹ ಸಂಸ್ಕಾರ ಉಳ್ಳ 'ಜೀವಿ'ಯನ್ನು ಆಕರ್ಷಿಸುತ್ತವೆ. ಹಾಗೆಯೇ, ನಿರ್ದಿಷ್ಟ ಸಂಸ್ಕಾರಗಳು ಪ್ರೇರಕ ಶಕ್ತಿಯುತನಾದ ವ್ಯಕ್ತಿ (ಕಾರಣ ಶರೀರದಲ್ಲಿ ಇರುವವನು) ತನ್ನಲ್ಲಿಯೇ ಪ್ರೇರಕ ಶಕ್ತಿಗಳ ಪ್ರೇರಣೆಗೆ ಅನುಗುಣವಾದ ಸಂಸ್ಕಾರಗಳ ಪ್ರೇರಕ ಶಕ್ತಿಯುಳ್ಳ ತಂದೆ-ತಾಯಿಗಳನ್ನೇ ಅರಸುತ್ತಿರುತ್ತಾನೆ. ಈ ಎರಡೂ ಪ್ರೇರಕ ಶಕ್ತಿಗಳು ಸಮನ್ವಯವಾದಾಗ ಮಾತ್ರ ಒಬ್ಬ ವ್ಯಕ್ತಿ ನಿರ್ದಿಷ್ಟ ತಂದೆ-ತಾಯಿಗಳಿಗೆ ಮಗುವಾಗಿ ಜನಿಸುತ್ತಾನೆ(ಳೆ).

ಹೀಗೆ ಭೌತ ದೇಹ ಧಾರಣೆ ಮಾಡಿ ಬಂದ ವ್ಯಕ್ತಿಯ ವ್ಯಕ್ತಿತ್ವದ ವಿಕಸನದಲ್ಲಿ ವಿವಿಧ ಪ್ರಭಾವಗಳು ಕೆಲಸ ಮಾಡುತ್ತವೆ. ಒಬ್ಬ ವ್ಯಕ್ತಿಯ ಪೂರ್ಣ ವ್ಯಕ್ತಿತ್ವ ಹದಿನಾರು ಆಣೆ (=ಭಾಗ) ಎಂದಿಟ್ಟುಕೊಂಡರೆ, ಅದರಲ್ಲಿ ಸಮಾವೇಶಗೊಳ್ಳುವ ಪ್ರಭಾವಗಳನ್ನು ಸ್ಥೂಲವಾಗಿ ಕೆಳಗಿನಂತೆ ವಿಭಾಗಿಸಬಹುದೆಂದು ಹೇಳಲಾಗುತ್ತದೆ. ಎರಡು ಆಣೆ ತಂದೆಯ ವ್ಯಕ್ತಿತ್ವದಿಂದ ಬಂದುದಾಗಿರುತ್ತದೆ; ಎರಡು ಆಣೆ ತಾಯಿಯದು; ಒಂದಾಣೆ ತಂದೆಯ ತಂದೆಯ (ಅಜ್ಜನ) ಕಡೆಯದು; ಒಂದಾಣೆ ತಂದೆಯ ತಾಯಿಯ (ಅಜ್ಜಿಯ) ಕಡೆಯದು; ಒಂದಾಣೆ ತಾಯಿಯ ತಂದೆಯ (ಅಜ್ಜನ) ಕಡೆಯದು; ಮತ್ತು ಒಂದಾಣೆ ತಾಯಿಯ ತಾಯಿಯ (ಅಜ್ಜಿಯ) ಕಡೆಯದು. ಹೀಗೆ, ಆನುವಂಶೀಯವಾಗಿ ಬಂದ ಭಾಗ ೮

ಆಣೆಯದಾಗಿರುತ್ತದೆ. ಇನ್ನುಳಿದ ಎಂಟು ಆಣೆ ಭಾಗ ಪರಿಸರದಿಂದ ವಿಕಸನಗೊಂಡುದಾಗಿರುತ್ತದೆ. ಇದರಲ್ಲಿ ೨ ಆಣೆ ಮನೆಯೊಳಗಣ ವಾತಾವರಣದ ಪರಿಣಾಮ - ತಂದೆ-ತಾಯಿಗಳೊಳಗಿನ ಸಮರಸತೆ, ಅವರಿಂದ ದೊರೆತ ಪ್ರೀತ್ಯಾದರ; ಅಕ್ಕ-ತಂಗಿಯರು, ಅಣ್ಣ ತಮ್ಮಂದಿರು, ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ, ದೊಡ್ಡಮ್ಮ, ಇತ್ಯಾದಿ ಹತ್ತಿರದ ರಕ್ತ ಸಂಬಂಧಿಗಳು ಮನೆಯೊಳಗೆ ಒಟ್ಟಿಗೆ ಇರುವಾಗ ಉಂಟಾಗುವ ಪರಿಸರ ಎಷ್ಟು ಸೌಹಾರ್ದಯುತವಾಗಿರುತ್ತದೆ ಎನ್ನುವುದು. ಮತ್ತೆ ೨ ಆಣೆ ಭಾಗ ಬಂಧುಬಳಗದವರ ಪರಿಣಾಮವಾಗಿರುತ್ತದೆ. ಎಂದರೆ ಮನೆಗೆ ಸಾಮಾನ್ಯವಾಗಿ ಬಂದು ಹೋಗುವ ವ್ಯಕ್ತಿಗಳ ಪರಿಣಾಮ. ಇದರಲ್ಲಿ, ಮನೆಯಲ್ಲೇ ಒಟ್ಟಿಗಿರುವವರನ್ನು ಬಿಟ್ಟು ಇತರ ಬಂಧುಗಳು, ಅತಿಥಿಗಳು, ಅಭ್ಯಾಗತರು, ಇವರುಗಳ ಪರಿಣಾಮವನ್ನು ಪರಿಗಣಿಸಬೇಕಾಗುತ್ತದೆ. ಇನ್ನುಳಿದ ೪ ಆಣೆ ಭಾಗದಲ್ಲಿ ೨ ಆಣೆ ಭಾಗ ಸ್ನೇಹಿತರು, ಸಹಪಾಠಿಗಳು, ಅಧ್ಯಾಪಕರು, ಅಧ್ಯಯನ, ಇತ್ಯಾದಿ ನಿಕಟವರ್ತಿಗಳು ಉಂಟು ಮಾಡುವ ಪರಿಣಾಮವಾದರೆ, ಉಳಿದ ೨ ಆಣೆ ಭಾಗ ಸಮಾಜದಲ್ಲಿಯ ಇತರ ಪರಿಸರದ ಪರಿಣಾಮ. ಸಮಾಜ, ರಾಜ್ಯ, ದೇಶ, ಪ್ರಪಂಚದಲ್ಲಿಯ ಸಾಮಾಜಿಕ, ರಾಜಕೀಯ, ಆರ್ಥಿಕ ಇತ್ಯಾದಿ ಪರಿಸ್ಥಿತಿಗಳ ಪ್ರಭಾವವಾಗಿರುತ್ತದೆ.

ಮೇಲಿನ ವಿವರಣೆಯನ್ನು ನಿಷ್ಪೃಷ್ಟವಾದ ಗಣಿತಿ ಮಾಪನೆ ಎಂದು ಪರಿಗಣಿಸಬಾರದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ: ವ್ಯಕ್ತಿಯ ಜೀವನ ಅನೇಕ ಸಮಕಾಲೀನ ಸಮೀಕರಣಗಳನ್ನೊಳಗೊಂಡಿರುತ್ತದೆ ಎನ್ನುವುದು. ಇದರಿಂದಾಗಿ ವ್ಯಕ್ತಿತ್ವ ವಿಕಸನ ಬಹು ಸಂಕೀರ್ಣ ಪ್ರಕ್ರಿಯೆಯಾಗುತ್ತದೆ.

ದೇಹ ಹುಟ್ಟಿದಂದಿನಿಂದ ದೇಹ ಬಿಡುವವರೆಗೆ ಪ್ರತಿ ವ್ಯಕ್ತಿಯೂ ಜೀವನದ ಅನೇಕ ಕ್ಷೇತ್ರಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಮಗುವಾಗಿ-ತಂದೆಯಾಗಿ (ತಾಯಿಯಾಗಿ), ಅಣ್ಣ (ಅಕ್ಕ) ಆಗಿ, ತಮ್ಮ (ತಂಗಿ)ಆಗಿ, ಮಾವ (ಅತ್ತೆ) ಆಗಿ, ಅಳಿಯ (ಸೊಸೆ)ಆಗಿ, ಇತ್ಯಾದಿಯಲ್ಲದೆ ವ್ಯಾಪಾರಿಯಾಗಿ (ಗ್ರಾಹಕನಾಗಿ, ಅಧಿಕಾರಿಯಾಗಿ (ಸೇವಕನಾಗಿ), ಇತ್ಯಾದಿ ಫಾತ್ರ ವಹಿಸಬೇಕಾಗುತ್ತದೆ. ಈ ಪಾತ್ರಗಳಲ್ಲಿ ವ್ಯಕ್ತಿ ಪಡೆಯುವ ಅನುಭವಗಳೂ ಅನೇಕ. ಪ್ರತಿಯೊಂದು ಅನುಭವವೂ ಅಂತಃ ಕರಣಗಳಾದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಇವುಗಳ ಮೂಲಕ ಜ್ಞಾತೃ (=ಅರಿಯುವವನನ್ನು)ವನ್ನು ತಲುಪುತ್ತದೆ. ವೇದಾಂತ ಪರಿಭಾಷೆಯಲ್ಲಿ ಇದನ್ನೇ ಚಿತ್ರಗುಪ್ತರು (ಎಂದರೆ ವಿವಿಧ ಚಟುವಟಿಕೆಗಳಲ್ಲಿ ತೊಡಗುವ ಇಂದ್ರಿಯಗಳು ಹಾಗೂ ಗುಪ್ತವಾಗಿರುವ ಮನಸ್ಸು) ನಾವು ಮಾಡುವುದೆಲ್ಲವನ್ನೂ ಬರೆದುಕೊಳ್ಳುತ್ತಾರೆ ಎಂದು ಹೇಳಲಾಗುತ್ತದೆ. ವ್ಯಕ್ತಿ ಪ್ರತಿಯೊಂದು ಯೋಚನಾ ತರಂಗವೂ ಆ ವ್ಯಕ್ತಿಯ ಚಿತ್ತದಲ್ಲಿ ದಾಖಲಾಗುತ್ತದೆ. ಚಿತ್ತಭಿತ್ತಿಯಲ್ಲಿ ದಾಖಲಾಗದೆ ಇರುವ ಯಾವ ವಿಷಯವೂ ವ್ಯಕ್ತಿಗೆ

ತಿಳಿಯುವುದಿಲ್ಲ. ಚಿತ್ತ ವೃತ್ತಿ ಬೇರೆ ಕಡೆಗೆ ಇದ್ದಾಗ ಎದುರಿಗೆ ಬಂದ ಸ್ನೇಹಿತನನ್ನೇ ಗುರುತಿಸಲು ಸಾಧ್ಯವಾಗುವುದಿಲ್ಲ.

ಹೀಗೆ ಸ್ಥೂಲ, ಸೂಕ್ಷ್ಮ ಶರೀರಗಳ ಮೂಲಕ ಒದಗುವ ಅನುಭವ ಬುದ್ಧಿಯ ತರ್ಕವನ್ನು ದಾಟಿ ಸಾಕಷ್ಟು ಪುನರಾವರ್ತಿತವಾದರೆ ಅದು ವ್ಯಕ್ತಿಯ ಮನಸ್ಸನ್ನು ಆಕ್ರಮಿಸಿ ವ್ಯಕ್ತಿಯ ಸ್ವಭಾವವಾಗಿ ಬಿಡುತ್ತದೆ. ಅದೇ ಇನ್ನೂ ದೃಢವಾಗಿ ಬೆಳೆದರೆ ಸಂಸ್ಕಾರವಾಗಿ ವ್ಯಕ್ತಿಯ ಚಿತ್ತದಲ್ಲಿ ಸ್ಪಷ್ಟವಾಗಿ ನೆಲೆಗೊಳ್ಳುತ್ತದೆ. ಅಂತಹ ಸಂಸ್ಕಾರ ಇನ್ನೂ ಬಲಗೊಂಡಾಗ ಜ್ಞಾತೃವಿನಲ್ಲಿ ಪ್ರೇರಕ ಶಕ್ತಿಯಾಗಿ ಬಿಡುತ್ತದೆ. ಈ ಪ್ರೇರಕ ಶಕ್ತಿಯೇ ಕಾರಣ ಶರೀರದಲ್ಲಿದ್ದು ಬೀಜರೂಪವಾಗಿ ಸ್ಥೂಲ ದೇಹಧಾರಣೆಗೆ ಕಾರಣವಾಗುತ್ತದೆ. ಎಂದರೆ ಜನ್ಮ ಜನ್ಮಾಂತರಗಳನ್ನು ಉಂಟುಮಾಡುತ್ತದೆ. ಇಂತಹ ಪ್ರೇರಣ ಶಕ್ತಿಗಳು ಇಲ್ಲದಂತಾಗಿ ಚಿತ್ತ ಭಿತ್ತಿ ನಿಸ್ತರಂಗ ಸಾಗರದಂತಾದರೆ ಕೇವಲ ಆನಂದ ಮಾತ್ರ ಚಿತ್ತದಲ್ಲಿ ಉಳಿಯುತ್ತದೆ. ಅದೇ ಸಚ್ಚಿದಾನಂದ ಸ್ವರೂಪ. ಇದು ಎಲ್ಲ ಜೀವಿಗಳಲ್ಲೂ, ಎಲ್ಲ ಕಾಲದಲ್ಲೂ ಒಂದೇ ಆಗಿರುತ್ತದೆ. ಇದನ್ನೇ ಶೂನ್ಯ ಸಂಪಾದನೆ, ಮೋಕ್ಷಸಾಧನೆ, ಇತ್ಯಾದಿಯಾಗಿ ಕರೆಯುತ್ತಾರೆ.

ಮೇಲೆ ವಿವರಿಸಿದುದು ಸಾಮಾನ್ಯವಾಗಿ ನಡೆಯುವ ಪ್ರಕ್ರಿಯೆ. ಕೆಲವು ಸಾರೆ ಅನುಭವವು ಅತಿ ತೀವ್ರವಾದ ಪರಿಣಾಮವನ್ನು ಉಂಟುಮಾಡಿದಾಗ ಪುನರಾವರ್ತನೆ ಇಲ್ಲದೆಯೇ ಆ ಪರಿಣಾಮ ನೇರವಾಗಿ ಚಿತ್ತ ಭಿತ್ತಿಯಲ್ಲಿ ಸ್ಪಷ್ಟವಾಗಿ ಮೂಡಿಬಿಡುತ್ತದೆ. ಪ್ರೇರಣಾ ಶಕ್ತಿಯಾಗಿ ಬಿಡುತ್ತದೆ. ಇಂತಹ ಪರಿಸ್ಥಿತಿಯಲ್ಲಿ ವ್ಯಕ್ತಿತ್ವ ಪವಾಡವೆನ್ನುವಂತೆ ಬದಲಾಗಿ ಬಿಡುತ್ತದೆ. ಹೀಗೆ ವ್ಯಕ್ತಿತ್ವ ಬದಲಾದ ಉದಾಹರಣೆಗಳನ್ನು ಮಹಾ ಕವಿ ಕಾಳಿದಾಸ ಮುಂತಾದ ಕೆಲವು ವ್ಯಕ್ತಿಗಳ ಜೀವನ ಚರಿತ್ರೆಯಲ್ಲಿ ಕಾಣುತ್ತೇವೆ.

೫. ಧರ್ಮ ಎಂದರೇನು ?

ಇನ್ನು ಧರ್ಮ ಎಂದರೆನು ಎಂದು ವಿವೇಚಿಸೋಣ. ವಿಶಾಲಾರ್ಥದಲ್ಲಿ, ಧರ್ಮ ಎಂದರೆ ಪ್ರೇರಕ ಅಂತಃಶಕ್ತಿ ಎಂದು ಹೇಳಬಹುದು. ಉದಾಹರಣೆಗೆ, ಅರಳುವುದು ಹೂವಿನ ಧರ್ಮ, ಹರಿಯುವುದು ನೀರಿನ ಧರ್ಮ, ಹುಟ್ಟು-ಬೆಳವಣಿಗೆ-ಕೃಶತ್ವ-ನಾಶ ಹೊಂದುವುದು ಸ್ಥೂಲ ಶರೀರದ ಧರ್ಮ; ಮೋಹ-ಸುಖ-ದುಃಖ ಅನುಭವಿಸುವುದು ಮನಸ್ಸಿನ ಧರ್ಮ, ಇತ್ಯಾದಿ.

ವಿಶಿಷ್ಟಾರ್ಥದಲ್ಲಿ, ಧರ್ಮ ಎನ್ನುವುದು ಇಂಗ್ಲೀಷಿನ 'Religion' ಎನ್ನುವ ಪದಕ್ಕೆ ಸಮಾನಾರ್ಥ ಉಳ್ಳ ಪದ ಎಂದಿಟ್ಟುಕೊಳ್ಳುತ್ತೇವೆ. ಈ ಅರ್ಥದಲ್ಲಿ ಧರ್ಮ ಎಂದರೆ ವಿಶಿಷ್ಟ ತತ್ತ್ವಗಳು ಮತ್ತು ಅವುಗಳನ್ನು ಆಧಾರಿತವಾದ ಆಚರಣೆಗಳು ಎಂದು ಇಟ್ಟುಕೊಳ್ಳಬಹುದು. ಉದಾಹರಣೆಗೆ, ವೀರಶೈವ ಧರ್ಮ, ಜೈನ ಧರ್ಮ, ಬೌದ್ಧ

ಧರ್ಮ, ಇಸ್ಲಾಮ್‌ಧರ್ಮ, ಕ್ರೈಸ್ತಧರ್ಮ, ಇತ್ಯಾದಿ. ಎಂದರೆ ಪ್ರತಿಯೊಂದು ಧರ್ಮವೂ ತಾತ್ತ್ವಿಕ ಭಾಗ ಮತ್ತು ಆಚರಣೆಗಳ ಭಾಗ ಎಂದು ಎರಡು ಭಾಗಗಳನ್ನು ಅವಶ್ಯವಾಗಿ ಒಳಗೊಂಡಿರುತ್ತದೆ. ತಾತ್ತ್ವಿಕ ಭಾಗ ಕಾಲ-ದೇಶಗಳಿಂದ ಅಬಾಧಿತವಾಗಿ ಯಾವಾಗಲೂ ಒಂದೇ ರೀತಿ ಇರುವ ಭಾಗ. ಆದರೆ ಆಚರಣೆಯ ಭಾಗ (ಆಚಾರಗಳು)ಕಾಲ-ದೇಶಗಳಿಗನುಗುಣವಾಗಿ ಬದಲಾಗಬಹುದು. ತಾತ್ತ್ವಿಕ ವಿಚಾರವಿಲ್ಲದಿದ್ದರೆ ಆಚರಣೆಗಳು ಕುರುಡಾಗುತ್ತವೆ, ಕಂದಾಚಾರಗಳೆನಿಸಿಕೊಳ್ಳುತ್ತವೆ. ಆಚಾರಗಳಿಲ್ಲದಿದ್ದರೆ ತಾತ್ತ್ವಿಕ ವಿಚಾರ ಹೆಳವಾಗುತ್ತದೆ, 'ಪುಸ್ತಕದ ಬದನೇಕಾಯಿ'ಯಾಗುತ್ತದೆ. ತತ್ತ್ವ ಎಂದರೆ ನಿಜ ವಿಚಾರ ಎಂದರ್ಥ. ಆದ್ದರಿಂದ, ನಿಜವಿಚಾರದ ಅರಿವು ಇಲ್ಲದಿದ್ದರೆ ಪ್ರತಿಯೊಂದು ಆಚಾರವೂ ಮೂಢನಂಬಿಕೆಯ ಕಂದಾಚಾರವಾಗಿ ಕಾಣಬಹುದು. ಅರಿವು ಮೂಡಿದಾಗ ಆಚಾರದ ಅರ್ಥವೇ ಬೇರೆಯಾಗಬಹುದು.

ಧರ್ಮಾಚಾರವು ವಿಚಾರವನ್ನು ಮೂಡಿಸಬೇಕು. 'ಆಚಾರ ಒಕ್ಕಾಲಾದರೆ ವಿಚಾರ ಮುಕ್ಕಾಲು ಇರಬೇಕು'-ಎಂದು ಹೇಳುತ್ತಾರೆ. ವಿಚಾರದಿಂದ ವಿವೇಕ ಉತ್ಪತ್ತಿಯಾಗುತ್ತದೆ. ವಿವೇಕವೇ ಕರಿಗೊಂಡಾಗ ಅರಿವಾಗುತ್ತದೆ. ಈ ಅರಿವಿನಿಂದಲೇ ಆನಂದ ಉಂಟಾಗುತ್ತದೆ. ಅಂತಹ ಆನಂದ ಸದಾಕಾಲ ಉಳಿದರೆ ಸಚ್ಚಿದಾನಂದವಾಗುತ್ತದೆ. ಇದೇ ಎಲ್ಲ ಧರ್ಮದ ಪರಮಗುರಿಯಾದ ಪರಮಾತ್ಮ ಸ್ವರೂಪ ಸಾಧನೆಯಾಗಿದೆ.

ಪ್ರಪಂಚದಲ್ಲಿಯ ಯಾವುದೇ ಧರ್ಮವಾದರೂ ಕಲ್ಪನೆಯ ಕಾದಂಬರಿಯಲ್ಲ.ನಿಜ ತತ್ತ್ವವನ್ನು ಅರಿತು ಅನುಭವ ಪಡೆದ ಮಹಾತ್ಮರು ಅಥವಾ ನಿಜ ತತ್ತ್ವ ಸ್ವರೂಪವೇ ತಾವಾದ ಅವತಾರಿಗಳು ಎಲ್ಲ ಜೀವಿಗಳ ಹಿತಾರ್ಥವಾಗಿ ತತ್ತ್ವವಿಚಾರಗಳನ್ನು ಮತ್ತು ಅನುಷ್ಠಾನ ಮಾಡಿ ಅನುಭವ ಪಡೆಯಲು ಆಚಾರಗಳನ್ನು ನಿರೂಪಿಸುತ್ತಾರೆ. ಹೀಗಾಗಿ ಪ್ರಪಂಚದಲ್ಲಿ ಅನೇಕ ಧರ್ಮಗಳು ಹುಟ್ಟಿಕೊಂಡಿವೆ. ಅವುಗಳೆಲ್ಲವುಗಳ ಗುರಿ ಒಂದೇ ಆದರೂ ಆಚರಣೆಗಳು ಬೇರೆ ಬೇರೆಯಾಗಿರುತ್ತವೆ.

೬. ಧರ್ಮದ ಸ್ವರೂಪ

'ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ।
ದಾನಂ ಪೂಜಾ ಜಪೋ ಧ್ಯಾನಂ ಇತ್ತಿ ಧರ್ಮಸ್ಯ ಸಂಗ್ರಹಃ॥

[ಸಿದ್ಧಾಂತ ಶಿಖಾಮಣಿ : ಧರ್ಮಾಚಾರ ಸ್ಥಲಂ, 16(39)]

ಅಹಿಂಸೆ, ಸತ್ಯ, ಅಸ್ತೇಯ (ಪರಧನ, ಪರವಧುವಿಗೆ ಆಸೆ ಮಾಡದಿರುವುದು), ಬ್ರಹ್ಮಚರ್ಯ (ದೈಹಿಕ ಕಾಮದಾಸೆಯನ್ನು ಮೀರಿ ನಿಲ್ಲುವುದು, ಅಥವಾ ತನ್ನ ಸಂಗಾತಿಯನ್ನು ಬಿಟ್ಟು ಇತರ ಯಾರನ್ನೂ ಕಾಮದಾಸೆಯಿಂದ ಬಯಸದಿರುವುದು), ದಯೆ, ಕ್ಷಮೆ, ದಾನ (ಸತ್ಪಾತ್ರಕ್ಕೆ ತನು, ಮನ, ಧನ ನೀಡುವುದು), ಪೂಜೆ, ಜಪ, ಧ್ಯಾನ-ಈ ಹತ್ತು ಧರ್ಮದ ಸಾರಭೂತ ಅಂಶಗಳಾಗಿವೆ. ಇವನ್ನು ವೀರಶೈವ ಧರ್ಮದ ಸ್ಥಾಪನಾಚಾರ್ಯರಾದ

ಪೂಜ್ಯ ಜಗದ್ಗುರು ಪಂಚಾಚಾರ್ಯರಲ್ಲೊಬ್ಬರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಮಹಾಮುನಿ ಅಗಸ್ತ್ಯರಿಗೆ ಬೋಧಿಸಿದರು. ಅವುಗಳನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು ತಾವು ಬರೆದ ವೀರಶೈವ ಧರ್ಮದ ಸಿದ್ಧಾಂತ ಗ್ರಂಥವಾದ 'ಸಿದ್ಧಾಂತ ಶಿಖಾಮಣಿ' ಗ್ರಂಥದಲ್ಲಿಯ ಮೇಲಿನ ಶ್ಲೋಕದಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ.

ಇವು ವೀರಶೈವ ಧರ್ಮಕ್ಕೆ ಸೀಮಿತವಾದ ಅಂಶಗಳೇನಲ್ಲ ಎನ್ನುವುದು ಸ್ಪಷ್ಟವಿದೆ. ಜಗತ್ತಿನಲ್ಲಿಯ ಯಾವ ಧರ್ಮವೂ ಈ ಅಂಶಗಳಲ್ಲಿ ಯಾವುದೊಂದು ಅಂಶವನ್ನೂ ಅಲ್ಲಗಳೆಯುವುದಿಲ್ಲ. ಅಲ್ಲದೆ ಇವು ಎಂದಿಗೂ ಬದಲಾಗಲು ಸಾಧ್ಯವಿಲ್ಲದಂತಹ ಅಂಶಗಳಾಗಿವೆ. ಆದ್ದರಿಂದ ಈ ಹತ್ತು ಅಂಶಗಳು ಧರ್ಮದ ಸ್ವರೂಪವನ್ನು ವಿವರಿಸುತ್ತವೆ ಎಂದು ಹೇಳಬಹುದು. ಯಹೂದಿ ಧರ್ಮದ ಪ್ರವಾದಿಯಾದ ಮೋಜೆಸ್ ಪಡೆದ ಹತ್ತು ನಿರ್ದೇಶನಗಳು(Ten Commandments) ಮೇಲಿನ ನಿರೂಪಣೆಯನ್ನೇ ಹೋಲುತ್ತವೆ. ಕೆಲವು ಸಾರೆ ಧರ್ಮವನ್ನು ವಿವರಿಸುವವರು ಇವುಗಳಲ್ಲಿ ಕೆಲವು ಅಂಶಗಳಿಗೆ ಒತ್ತು ಕೊಡಲೂ ಬಹುದು. ಉದಾಹರಣೆಗೆ, ಹನ್ನೆರಡನೆಯ ಶತಮಾನದ ಧಾರ್ಮಿಕ-ಸಾಮಾಜಿಕ ಕ್ರಾಂತಿಗೆ ಕಾರಣರಾದ ಭಕ್ತಿ ಭಂಡಾರಿ ಬಸವಣ್ಣನವರು ದಯೆಗೇ ಹೆಚ್ಚು ಒತ್ತು ಕೊಟ್ಟು, 'ದಯವಿಲ್ಲದಾ ಧರ್ಮವು ಆವುದಯ್ಯಾ, ದಯವೇ ಧರ್ಮದ ಮೂಲವಯ್ಯ' ಎಂದಿದ್ದಾರೆ. ಹಾಗೆಯೇ, ಕ್ರೈಸ್ತ ಧರ್ಮದಲ್ಲಿ ಕ್ಷಮೆಗೇ ಆದ್ಯತೆ ಕೊಡಲಾಗಿದೆ. ಆದರೆ ಇತರ ಅಂಶಗಳನ್ನು ಕಡೆಗಣಿಸಲಾಗುವುದಿಲ್ಲ.

ವೀರಶೈವ ಧರ್ಮದ ಷಟ್‌ಸ್ಥಲ ಸಿದ್ಧಾಂತವನ್ನು (ಶಕ್ತಿ ವಿಶಿಷ್ಟಾದ್ವೈತ ತತ್ತ್ವವನ್ನು) ಅರಿತು ಅನುಭವ ಪಡೆದ ವ್ಯಕ್ತಿಯಲ್ಲಿ ಮೇಲಿನ ದಶಗುಣಗಳು ಅಭಿವ್ಯಕ್ತವಾಗಬೇಕು. ಬೇರೆ ಯಾವ ಧರ್ಮದ ತಾತ್ವಿಕ ಭಾಗವನ್ನು ಅರಿತು ಅನುಭವ ಪಡೆದುಕೊಂಡ ಧರ್ಮಾಚಾರಿಯಲ್ಲಾದರೂ ಈ ಸ್ವರೂಪ ಲಕ್ಷಣಗಳು ಅಭಿವ್ಯಕ್ತವಾಗುತ್ತಿರುತ್ತವೆ.

೨. ಧರ್ಮಾಚರಣೆ

ಧರ್ಮಾಚರಣೆಯಲ್ಲಿ ನಿತ್ಯಾಚಾರಗಳು, ಸಮಯಾಚಾರಗಳು ಇರುತ್ತವೆ. ಇವುಗಳು ವ್ಯಕ್ತಿಯಲ್ಲಿ ಅನುಭವಗಳಾಗಿ ಸ್ವಭಾವವಾಗುತ್ತವೆ. ಅವೇ ಮುಂದೆ ವ್ಯಕ್ತಿಯ ಸಂಸ್ಕಾರಗಳಾಗುತ್ತವೆ, ಪ್ರವೃತ್ತಿಗಳಾಗುತ್ತವೆ.

ಧರ್ಮಾಚರಣೆಯ ಅನುಭವವು ಬೇರೆ ಬೇರೆ ಹಂತಗಳಲ್ಲಿ ಆಗಬೇಕು ಎನ್ನುತ್ತಾರೆ ಪೂಜ್ಯ ಶ್ರೀಗುರು ಚರಂತಪ್ಪಯ್ಯತಾತನವರು (ನಂದಿಪುರದ ಅಜ್ಜನವರು). ಒಂದು ವ್ಯಕ್ತಿಯಲ್ಲಿ 'ನಾನು' ಎಂದು ವ್ಯವಹರಿಸುವುದು ಯಾವುದು? ಶರೀರವೇ?, ಮನಸ್ಸೇ?, ಬುದ್ಧಿಯೇ ? ಮತ್ತೊಂದು ವ್ಯಕ್ತಿಯಲ್ಲಿ 'ನಾನು' ಎಂದು ವ್ಯವಹರಿಸುವುದು ಯಾವುದು? ಈ ಎರಡು ವ್ಯಕ್ತಿಗಳಲ್ಲಿ (ಅದರಂತೆಯೇ ವಿವಿಧ ವ್ಯಕ್ತಿಗಳಲ್ಲಿ) ವ್ಯವಹರಿಸುವ 'ನಾನು'

ಎನ್ನುವುದು ಭಿನ್ನ, ಭಿನ್ನವಾಗಿರುತ್ತದೆಯೇ? ಈ ವಿಚಾರವಾಗಿ ಅನುಭವ ಪಡೆಯುವುದಕ್ಕಾಗಿಯೇ ವೀರಶೈವ ಧರ್ಮದಲ್ಲಿ ವ್ಯಕ್ತಿಗೆ ತನ್ನ ಸ್ವಂತಕ್ಕೇ ಇಷ್ಟಲಿಂಗವನ್ನು ಕೊಡಲಾಗಿರುತ್ತದೆ. ಇಷ್ಟಲಿಂಗವು ಆ ವ್ಯಕ್ತಿಗೇ ಸಂಬಂಧ ಪಟ್ಟದ್ದಾಗಿರುತ್ತದೆ, ಇತರ ಯಾರಿಗೂ ಅದು ಸಂಬಂಧಿಸಿದುದಾಗಿರುವುದಿಲ್ಲ. ಅದನ್ನು ಕುರುಹಾಗಿಟ್ಟುಕೊಂಡು 'ನಾನು' ಎನ್ನುವುದರ ನಿಜ ಅರಿವನ್ನು ಪಡೆಯುವುದೇ ಚಿದಾನಂದಾನುಭವದ ಮೂಲವಾಗಿದೆ. ಇತರ ಧರ್ಮದಲ್ಲಿಯೂ ಹೀಗೆಯೇ ವೈಯಕ್ತಿಕವಾಗಿ ವ್ಯಕ್ತಿವಿಕಸನವನ್ನು ಸಾಧಿಸಿಕೊಳ್ಳಲು ಅವಕಾಶವಿರುತ್ತದೆ. ಇದಕ್ಕೆ ಘಟಾಕಾಶ ಧರ್ಮಾಚರಣೆ ಎನ್ನುತ್ತಾರೆ.

ಒಂದು ಕುಟುಂಬದಲ್ಲಿ ಒಬ್ಬ ವ್ಯಕ್ತಿ ಹುಟ್ಟಿ ಬಂದಾಗ ಒಂದು ಕಚೇರಿಯಲ್ಲಿ ಒಬ್ಬ ಅಧಿಕಾರಿ ಬಂದು ಕೆಲಸಕ್ಕೆ ಸೇರಿಕೊಂಡಂತೆ ಎಂದಿಟ್ಟುಕೊಳ್ಳಬಹುದು. ಹಾಗೆ ಅಧಿಕಾರ ವಹಿಸಿಕೊಂಡ ಅಧಿಕಾರಿಗೆ ಆ ಆಫೀಸ್‌ನ ರೀತಿ-ರಿವಾಜು, ನೀತಿ-ನಿಯಮಗಳನ್ನು ಅನುಸರಿಸಿಕೊಂಡು ಕೆಲಸ ಮಾಡುವ ಜವಾಬ್ದಾರಿ ಇರುತ್ತದೆ. ಹಾಗೆಯೇ ಒಂದು ಕುಟುಂಬದಲ್ಲಿ ಹುಟ್ಟಿದ ವ್ಯಕ್ತಿಯು ಆ ಮನೆತನದ ರೀತಿ-ನೀತಿಗಳನ್ನು ಪಾಲಿಸಿಕೊಂಡು ಹೋಗುತ್ತಾ ಆ ಕುಟುಂಬದ ಯೋಗ ಕ್ಷೇಮವನ್ನು ನೋಡಿಕೊಂಡು ಹೋಗಬೇಕಾದುದು ಅವಶ್ಯವಾಗುತ್ತದೆ. ಇದರಿಂದಾಗಿಯೇ ಪ್ರತಿಯೊಂದು ಮನೆಯಲ್ಲಿ ಒಂದು ದೇವರು ಮನೆಯನ್ನು ನಿರ್ಮಿಸಿಕೊಂಡು ಅದರಲ್ಲಿ 'ಮನೆದೇವರನ್ನು' ಇಟ್ಟುಕೊಂಡು ಪೂಜಿಸುವುದರ ಮೂಲಕ ಆ ಮನೆ ತನದ ಯೋಗಕ್ಷೇಮವನ್ನು ನೋಡಿಕೊಂಡು ಹೋಗಲು ಆ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯೂ ಪ್ರಯತ್ನಿಸಬೇಕು. ಇದು ಮಠಾಕಾಶ ಧರ್ಮಾಚರಣೆ. ಈ ಧರ್ಮಾಚರಣೆಯ ಜವಾಬ್ದಾರಿಯು ಆ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಇರುತ್ತದೆ. ಆದರೆ ಇನ್ನೊಂದು ಕುಟುಂಬದ ಯಾವ ವ್ಯಕ್ತಿಗೂ ಇದು ಸಂಬಂಧವಿರುವುದಿಲ್ಲ.

ಭೌತ ಪ್ರಪಂಚದಲ್ಲಿ ಹುಟ್ಟಿ ಬಂದ ಪ್ರತಿಯೊಂದು ವ್ಯಕ್ತಿಯೂ ತನ್ನ ಜೀವಿತ ಕಾಲದಲ್ಲಿ ಪ್ರಪಂಚದಲ್ಲಿಯೇ ಇತರ ಅನೇಕ ಜೀವಿಗಳ ಸಹಾಯ-ಸಹಕಾರ ಪಡೆದುಕೊಂಡೇ ಜೀವಿಸಬೇಕಾಗುತ್ತದೆ. ಹಾಗೆಯೇ ಆ ವ್ಯಕ್ತಿ ಇತರ ಜೀವಿಗಳಿಗೆ ತನ್ನ ಸಹಾಯ ಸಹಕಾರ ನೀಡಬೇಕಾಗುತ್ತದೆ. ಇದಕ್ಕೇ ಪರಸ್ಪರ ಋಣಾನುಬಂಧ ಎಂದು ಕರೆಯುತ್ತಾರೆ. ಉದಾಹರಣೆಗೆ, ಒಬ್ಬ ವ್ಯಕ್ತಿ ತಾನು ಅಂಗಿಯನ್ನು ತೊಟ್ಟುಕೊಳ್ಳಬೇಕಾದರೆ, ಹೊಲ ಹಸನು ಮಾಡಿದ ಕೆಲಸಗಾರರಿಂದ ಹಿಡಿದು, ಬೀಜ ಬಿತ್ತಿದವರು, ಹತ್ತಿ ಹರಿದವರು, ನೂಲು ತೆಗೆದವರು, ಬಟ್ಟೆ ತಯಾರಿಸಿದವರು, ಬಟ್ಟೆಮಾರಾಟ ಮಾಡಿದವರು, ಮತ್ತು ಅಂಗಿ ಹೊಲಿದವರು, ಇಷ್ಟೆಲ್ಲ ಜನರಿಗೆ ಋಣಿಯಾಗಿರಬೇಕಾಗುತ್ತದೆ. ಆದ್ದರಿಂದ, ಇಂತಹ ಋಣವನ್ನು ತೀರಿಸಿಕೊಳ್ಳಲು ಪ್ರತಿಯೊಬ್ಬ ವ್ಯಕ್ತಿಯೂ ಇತರ ಎಲ್ಲ ಜೀವಿಗಳಿಗಾಗಿ ಕೆಲಸ ಮಾಡಬೇಕು ಎಂಬ ಅರಿವನ್ನು ಇಟ್ಟುಕೊಂಡು ಶ್ರದ್ಧೆವಹಿಸಿ ಕೆಲಸ

ಮಾಡಬೇಕಾಗುತ್ತದೆ. ಇದು ಮೂರನೆಯ ರೀತಿಯ ಧರ್ಮಾಚರಣೆ. ಇದಕ್ಕೆ ಮಹಾಕಾಶ ಧರ್ಮಾಚರಣೆ ಎಂದು ಕರೆಯುತ್ತಾರೆ. ಈ ಧರ್ಮಾಚರಣೆಯ ಸಲುವಾಗಿಯೇ, ಅನೇಕ ಕುಟುಂಬಗಳ ಗುಂಪು ಇರುವ ಒಂದು ಹಳ್ಳಿಗೆ (ಅಥವಾ ಒಂದು ಪಟ್ಟಣಕ್ಕೆ) ಕೆಲವು ಊರು ದೇವರುಗಳನ್ನು ನಿಯಮ ಮಾಡಿಕೊಂಡಿರುತ್ತಾರೆ. ಆ ಹಳ್ಳಿಯಲ್ಲಿರುವ ಎಲ್ಲ ಕುಟುಂಬಗಳೂ ಆ ಎಲ್ಲ ದೇವರುಗಳನ್ನೂ ಪೂಜೆ ಮಾಡಿ ಫಲ ಪಡೆದುಕೊಳ್ಳಬಹುದು. ಆದರೆ, ಬೇರೆ ಊರಿನವರಿಗೆ ಅವು ಸಂಬಂಧವಿರುವುದಿಲ್ಲ.

ಇನ್ನು ಪುಣ್ಯಕ್ಷೇತ್ರಗಳಲ್ಲಿರುವ ದೇವರುಗಳು, ಮಹಾತ್ಮರುಗಳು, ಅವತಾರ ಪುರುಷರುಗಳು-ಇವು ಎಲ್ಲ ಹಳ್ಳಿಗಳಲ್ಲಿ, ಎಲ್ಲ ಪಟ್ಟಣಗಳಲ್ಲಿ ಅಷ್ಟೇ ಅಲ್ಲದೆ ಬೇರೆ ಬೇರೆ ದೇಶಗಳಲ್ಲಿರುವ ವ್ಯಕ್ತಿಗಳಿಗೂ ಸಂಬಂಧಿಸಿದವುಗಳಾಗಿರುತ್ತವೆ. ಆದ್ದರಿಂದ, ಯಾರಾದರೂ ಇವುಗಳನ್ನು ಪೂಜಿಸಿ, ದರ್ಶನಾಶೀರ್ವಾದ ಪಡೆದುಕೊಂಡು, ಪ್ರಸಾದ ಪಡೆದುಕೊಂಡು ಪಾವನರಾಗಬಹುದು (ಅಂದರೆ ಫಲ ಪಡೆದುಕೊಳ್ಳಬಹುದು), ಇತರರ ಕ್ಷೇಮವನ್ನೂ ಸಾಧಿಸಿಕೊಳ್ಳಬಹುದು. ಇದು ಮಹಾಕಾಶ ಧರ್ಮಾಚರಣೆ. ಈ ಧರ್ಮಾಚರಣೆಯು ಮನೋವಿಶಾಲತೆಯನ್ನು ಬೆಳೆಸುತ್ತದೆ. ಇದರಿಂದ ಬೇರೆ ಬೇರೆ ಧರ್ಮದವರೊಳಗೆ ದ್ವೇಷಕ್ಕೆ ಅವಕಾಶವಿಲ್ಲದಾಗಿ ಜಗತ್ ಶಾಂತಿಗೆ ಕಾರಣವಾಗುತ್ತದೆ.

ಹೀಗೆ ಧರ್ಮಾಚರಣೆಯು ಮೂರು ರೀತಿಯದಾಗಿರುತ್ತದೆ. ಇದನ್ನು ಸರಿಯಾಗಿ ಅರಿತುಕೊಂಡು, ಈ ಧರ್ಮಾಚರಣೆಗಳನ್ನು ಶ್ರದ್ಧೆಯಿಂದ ಅಳವಡಿಸಿಕೊಂಡರೆ ಆ ವ್ಯಕ್ತಿಯ ವ್ಯಕ್ತಿತ್ವ ಸೌಹಾರ್ದಯುತವಾಗಿ ಆತನು (ಆಕೆಯು) ಶ್ರೇಷ್ಠತೆಗೆ ಏರುತ್ತಾನೆ (ಳೆ), ದೇವತ್ವವನ್ನು ಪಡೆಯುತ್ತಾನೆ(ಳೆ).

೮. ವ್ಯಕ್ತಿತ್ವ ವಿಕಸನದಲ್ಲಿ ಧರ್ಮಾಚರಣೆಯ ಪಾತ್ರ

ವ್ಯಕ್ತಿತ್ವದ ಮೇಲೆ ಧರ್ಮಾಚರಣೆಯು ಹೇಗೆ ಪರಿಣಾಮ ಬೀರುತ್ತದೆ ಎನ್ನುವುದನ್ನು ಅರ್ಥೈಸಿಕೊಳ್ಳಲು ಕೆಳಗಿನ ಚಿಕ್ಕ ಕತೆಯನ್ನು ಸೂಕ್ಷ್ಮವಾಗಿ ಗಮನಿಸಬಹುದು.

ಒಬ್ಬ ಗುರುವಿನ ಹತ್ತಿರ ಇಬ್ಬರು ಭಕ್ತರು ಸೇವೆ ಮಾಡುತ್ತಾ ಇದ್ದರು. ಅವರು ತಮಗೆ ಉಪದೇಶ ದಯಪಾಲಿಸಬೇಕೆಂದು ಗುರುಗಳನ್ನು ಆಗಾಗ ಕೇಳುತ್ತಲೇ ಇದ್ದರು. ಬೇಳೆ ಬೆಂದಾಗ ಬೆಲ್ಲ ಹಾಕಿದರೆ ಮಾತ್ರ ರುಚಿಯಾದ ಹೋಳಿಗೆ ಮಾಡಲು ಸಾಧ್ಯವಾಗುತ್ತದೆ. ಅದೇರಂತೆ, ಈ ಭಕ್ತರನ್ನು ಉಪದೇಶ ಪಡೆಯಲು ಯೋಗ್ಯರನ್ನಾಗಿ ತಯಾರು ಮಾಡಿ ಉಪದೇಶ ಕೊಟ್ಟರೆ ಆಗ ಮಾತ್ರ ಅದು ಸಾರ್ಥಕವಾಗುತ್ತದೆ, ಇಲ್ಲವಾದರೆ ಉಪದೇಶ ವ್ಯರ್ಥವಾಗುತ್ತದೆ ಎಂದು ಗುರುಗಳು ಯೋಚಿಸಿ, ಆ ಭಕ್ತರಿಬ್ಬರನ್ನು ಕರೆದು, ''ನಮ್ಮ ಮನೆಯ ಮುಂದಿರುವ ಈ ಗುಂಡುಕಲ್ಲನ್ನು ಎತ್ತಿರಿ''

ಎಂದರು. ಇಬ್ಬರೂ ಪ್ರಯತ್ನಿಸಿದರು. ಇಬ್ಬರಿಗೂ ಆ ಕಲ್ಲು ಗುಂಡನ್ನು ಎತ್ತಲಾಗಲಿಲ್ಲ. ಆಗ ಗುರುಗಳು, ''ಈ ಕಲ್ಲುಗುಂಡು ಹಗುರವಾದಾಗ ನಿಮಗೆ ಉಪದೇಶ ಕೊಡುತ್ತೇನೆ'' ಎಂದು ಅಪ್ಪಣೆ ಕೊಡಿಸಿದರು.

'ಕಲ್ಲುಗುಂಡು ಹಗುರವಾಗಲು ಸಾಧ್ಯವೇ ? ಗುರುಗಳು ನಮಗೆ ಉಪದೇಶ ಕೊಡಲು ಆಗುವುದಿಲ್ಲ ಎಂದು ಹೇಳುವ ಬದಲು ಹೀಗೆ ನೆವ ಹೇಳುತ್ತಿದ್ದಾರೆ' ಎಂದು ಒಬ್ಬ ಭಕ್ತನು ನಿರುತ್ಸಾಹ ಹೊಂದಿ ಸುಮ್ಮನೇ ಕೈಬಿಟ್ಟುಬಿಟ್ಟನು. ಆದರೆ, ಇನ್ನೊಬ್ಬ ಭಕ್ತನು, 'ಗುರುಗಳು ಹೀಗೆ ಹೇಳುತ್ತಿರಬೇಕಾದರೆ ಇದರಲ್ಲೇನೋ ಒಳ ಅರ್ಥವಿರಬೇಕು' ಎಂದು ಯೋಚಿಸ ತೊಡಗಿದನು. ಹೀಗೆ ಯೋಚಿಸುತ್ತಾ ದಾರಿಯಲ್ಲಿ ಹೋಗುತ್ತಿರುವಾಗ ಆತನು ಒಂದು ದೃಶ್ಯವನ್ನು ನೋಡಿದನು. ನೀರಿನ ನಳದ ಹತ್ತಿರ ಇಬ್ಬರು ಹೆಣ್ಣು ಮಕ್ಕಲು ನೀರು ತುಂಬಿದ ಕೊಡವನ್ನು ಎತ್ತಲು ಪ್ರಯತ್ನಿಸುತ್ತಿದ್ದರು. ಒಬ್ಬಾಕೆ ಅದನ್ನು ಎತ್ತಲು ಪ್ರಯತ್ನಿಸಿ, 'ಎಷ್ಟು ಭಾರವಾಗಿದೆ, ನನ್ನಿಂದ ಎತ್ತಲಾಗುತ್ತಿಲ್ಲ' ಎಂದಳು. ಇನ್ನೊಬ್ಬಾಕೆ ಅದನ್ನು ಎತ್ತಿ ತನ್ನ ಸೊಂಟದಲ್ಲಿಟ್ಟುಕೊಳ್ಳುತ್ತಾ, 'ಎಷ್ಟು ಹಗುರವಾಗಿದೆಯಲ್ಲೇ!' ಎಂದಳು. ಈ ದೃಶ್ಯವನ್ನು ನೋಡುತ್ತಿದ್ದಂತೆಯೇ ಆ ಎರಡನೆಯ ಭಕ್ತನು ಯೋಚಿಸತೊಡಗಿದನು. 'ನಾನು ಶಕ್ತಿ ಶಾಲಿಯಾದರೆ ಕಲ್ಲುಗುಂಡನ್ನು ಸುಲಭವಾಗಿ ಎತ್ತಬಹುದು, ಎಂದರೆ ಕಲ್ಲು ಗುಂಡು ಹಗುರ ಆದಂತಾಯಿತಲ್ಲಾ! ಇದೇ ಗುರುಗಳು ಹೇಳಿದ ಮಾತಿನ ಇಂಗಿತಾರ್ಥವಿರಬೇಕು'- ಎಂದು ಆತನು ತರ್ಕಿಸಿದನು. ಹಾಗೆ ಯೋಚಿಸಿದವನೇ ನಿತ್ಯ ಹೆಚ್ಚು ಹೆಚ್ಚು ಭಾರ ಎತ್ತುವುದನ್ನು ಸಾಧಿಸತೊಡಗಿದನು. ಕೆಲವೇ ತಿಂಗಳುಗಳಲ್ಲಿ ಆತನು ಗುರುಗಳ ಹತ್ತಿರ ಬಂದು 'ನಾನು ಕಲ್ಲುಗುಂಡನ್ನು ಎತ್ತುತ್ತೇನೆ, ಅದು ನನಗೆ ಈಗ ಹಗುರಾಗಿದೆ, ದಯವಿಟ್ಟು ಉಪದೇಶ ಕೊಡಿರಿ' - ಎಂದು ಅರಿಕೆ ಮಾಡಿಕೊಂಡನು. ಗುರುಗಳು ಆತನ ಶ್ರದ್ಧಾ ಭಕ್ತಿಯ ಸಾಧನೆಗೆ ಸಂತೋಷಗೊಂಡು ಆತನಿಗೆ ಉಪದೇಶ ದಯಪಾಲಿಸಿದರು.

ಅಂದರೆ ಧರ್ಮಾಚರಣೆಯು ವ್ಯಕ್ತಿತ್ವದಲ್ಲಿ ಧೀಶಕ್ತಿಯನ್ನು ಬೆಳಸುತ್ತದೆ, ಅಂತಃ ಸತ್ವವನ್ನು ತುಂಬುತ್ತದೆ. ಇದರಿಂದ ವ್ಯಕ್ತಿಯ ಜೀವನಕ್ಕೆ ಅಪಾರ ಲಾಭವಾಗುತ್ತದೆ. ಇದನ್ನು ಸೂಚಿಸಲು ಪೂಜ್ಯ ಶ್ರೀಗುರು ಚರಂತಪ್ಪಯ್ಯ ತಾತನವರು ಒಂದು ವಿಶಿಷ್ಟಾರ್ಥ ಉಳ್ಳ ಕತೆಯನ್ನು ಹೇಳುತ್ತಿರುತ್ತಾರೆ ! ಅಮಾವಾಸೆಯ ರಾತ್ರಿ, ಮೋಡ ಕವಿದಿದೆ. ಆಗ ಒಬ್ಬ ಸಾಹುಕಾರ ತನ್ನ ಬೆಲೆ ಬಾಳುವ ಒಡವೆ - ವಸ್ತ್ರಗಳನ್ನು ತೆಗೆದುಕೊಂಡು ಒಂದು ಅಡವಿಯನ್ನು ದಾಟಿ ಹೋಗಬೇಕಾಗಿದೆ. ಆಗ, ಆತನು ತಾನೊಬ್ಬನೇ ಹೊರಡಲು ಹೆದರಿ ಹಿಂಜರಿಯತೊಡಗುತ್ತಾನೆ. ಆದರೆ, ಆತನ ಸ್ನೇಹಿತರು ಇಬ್ಬರು ಬಲಶಾಲಿಗಳಾದ ಜಟ್ಟಿಗಳನ್ನು ಜೊತೆಗೆ ಕಳುಹಿಸಿಕೊಟ್ಟು, 'ಸಾಹುಕಾರರನ್ನು ಬೆಟ್ಟ ದಾಟಿಸಿ ಬನ್ನಿರಿ' ಎಂದು ಹೇಳಿದರೆ, ಆ ಸಾಹುಕಾರನಿಗೆ 'ನನ್ನ ಜೊತೆಗೆ ಇಬ್ಬರು ಜಟ್ಟಿಗಳಿರುತ್ತಾರೆ, ಹೆದರಿಕೆ

ಇಲ್ಲ ಬಿಡು' ಎಂದೆನ್ನಿಸಿ ಆತನ ಮನಸ್ಸಿನಲ್ಲಿ ಭಯ ಕಡಿಮೆಯಾಗಿ ಧೈರ್ಯ ಮೂಡುತ್ತದೆ. ಇದರ ಬದಲು, ಆ ಸ್ನೇಹಿತರು ಪಳಗಿದ ಆನೆಯನ್ನು ಮತ್ತು ಒಳ್ಳೆಯ ಮಾವುತನನ್ನು ಕರೆದು 'ಸಾಹುಕಾರರನ್ನು ಆನೆಯ ಮೇಲೆ ಕೂಡಿಸಿಕೊಂಡು ಹೋಗಿ ಬೆಟ್ಟ ದಾಟಿಸಿ ಬಾ. ಆನೆಯ ಕೈಯಲ್ಲಿ ಒಂದು ದೊಡ್ಡ ಸರಪಣಿಯನ್ನು ಕೊಟ್ಟಿರು. ಆಕಸ್ಮಾತ್ ಅಪಾಯದ ಸಂದರ್ಭ ಬಂದರೆ ಅದು ಎದುರಿಗೆ ಬಂದ ಎಲ್ಲರನ್ನೂ ಸದೆ ಬಡಿದು ಬಿಡುತ್ತದೆ' ಎಂದು ಹೇಳಿಕಳುಹಿಸಿಕೊಟ್ಟರೆ, ಆತನಲ್ಲಿಯ ಭಯ ಇನ್ನೂ ಕಡಿಮೆಯಾಗಿ ಧೈರ್ಯ ಇನ್ನೂ ಹೆಚ್ಚುತ್ತದೆ. ಆಗ, ಆತನು ಆನಂದದಿಂದ ಆನೆಯ ಮೇಲೆ ಕುಳಿತುಕೊಂಡು ಹೋಗುತ್ತಾನೆ. ಆದರಂತೆಯೇ, 'ಸರ್ವಶಕ್ತನಾದ, ಸರ್ವಜ್ಞನಾದ, ಎಲ್ಲೆಡೆಯೂ ಇರುವ ಪರಮಾತ್ಮ ನನ್ನೊಟ್ಟಿಗಿದ್ದಾನೆ, ಅವನೇ ನನ್ನ ರಕ್ಷಣೆ ಮಾಡುತ್ತಿರುವಾಗ ನನಗೇಕೆ ಭಯ'- ಎನ್ನುವ ಭಾವ ಆ ಸಾಹುಕಾರನ ಮನಸ್ಸಿನಲ್ಲಿ ದೃಢವಾದರೆ ತಾನೊಬ್ಬನೇ ಆನಂದದಿಂದ ಬೆಟ್ಟವನ್ನು ದಾಟಲು ಹಿಂಜರಿಯುವುದಿಲ್ಲ. ಹೀಗೆ, ಭಯದ ಅಂತ್ಯವಾದರೆ, ಆಗಲೇ ಅಭಯಕ್ಕೆ ನಾಂದಿಯಾಗುತ್ತದೆ. ಇದು ಅಂತರಂಗದ ಬೆಳವಣಿಗೆ. ಜೀವನದ ಪರೀಕ್ಷಾ ಸಮಯಗಳಲ್ಲಿ ಮನಸ್ಸಿನ ಸಮತೋಲನವನ್ನು ಕಾಯ್ದುಕೊಳ್ಳಲು ಬೇಕಾದ ಧೀಶಕ್ತಿಯನ್ನು ಬೆಳೆಸುವುದೇ ಧರ್ಮದ ಮೂಲ ಉದ್ದೇಶ. ಇದರಿಂದ ವ್ಯಕ್ತಿ ಆತ್ಮ ವಿಶ್ವಾಸವನ್ನು ಬೆಳಸಿಕೊಂಡು ಸದೃಢ ವ್ಯಕ್ತಿತ್ವ ಬೆಳೆಯಲು ಸಾಧ್ಯವಾಗುತ್ತದೆ.

ಧರ್ಮಾಚರಣೆಯಿಂದ ವ್ಯಕ್ತಿತ್ವ ವಿಕಸನಗೊಳ್ಳುವ ಪ್ರಕ್ರಿಯೆಯನ್ನು ಪೂಜ್ಯ ತಾತನವರು ತೆಂಗಿನ ಮರದ ಉದಾಹರಣೆಯ ಮೂಲಕ ವಿವರಿಸುತ್ತಾರೆ: ತೆಂಗಿನ ಬೀಜವು ಪಂಚ ಭೂತಗಳಾದ : ಭೂಮಿ, ನೀರು, ಶಾಖ (ಬಿಸಿಲು), ಗಾಳಿ ಮತ್ತು ಆಕಾಶ (ಅವಕಾಶ ಅಥವಾ ಜಾಗ) ಇವುಗಳ ಸಹವಾಸ ಸಂಪರ್ಕದ ಮೂಲಕ ತನ್ನ ಅಂತಃಶಕ್ತಿಯಿಂದ ತೆಂಗಿನ ಸಸಿಯಾಗಿ ಮೊಳೆಯುತ್ತದೆ. ಹಾಗೆ ಸಸಿಯಾದುದು ಪಂಚ ಭೂತಗಳ ಸಾರವನ್ನು ಹೀರಿಕೊಳ್ಳುತ್ತಾ ಬೆಳೆಯುತ್ತದೆ, ಹೂವುಗಳನ್ನು ಪಡೆದು ಕಾಯಿಯಾಗುತ್ತದೆ. ಆಗಲೂ ಪಂಚಭೂತಗಳ ಸಹವಾಸ-ಸಂಪರ್ಕವನ್ನು ಇಟ್ಟುಕೊಂಡೇ ಬಲಿಯುತ್ತದೆ. ಕಾಯಿ ಬಲಿತಂತೆ ಗಟ್ಟಿಯಾದ ಚಿಪ್ಪು ಬೆಳೆದು ಅದರೊಳಗೆ ತಿರುಳಾದ ಕೊಬ್ಬರಿ ಬೆಳೆಯುತ್ತದೆ. ಕೊಬ್ಬರಿ (ಅಂದರೆ ಅಂತರಂಗ) ಚೆನ್ನಾಗಿ ಬಲಿತಾಗ ಕಾಯಿ ತನಗೆ ಆಧಾರವಾಗಿದ್ದ ಮರವನ್ನು ಬಿಟ್ಟು ಬಿದ್ದುಬಿಡುತ್ತದೆ, ಇಲ್ಲಿಗೂ ಅದರ ಬೆಳವಣಿಗೆ ಮುಗಿಯುವುದಿಲ್ಲ. ಹೀಗೆ ಮರದಿಂದ ಕಳಚಿ ಬಿದ್ದ ಸೊಗಸಾಗಿ ಬಲಿತ ತೆಂಗಿನ ಕಾಯಿ ಪುನಃ ಪಂಚ ಭೂತಗಳ ಸಹವಾಸ ಸಂಪರ್ಕ ಪಡೆದರೆ ಅದು ಪುನಃ ತೆಂಗಿನ ಸಸಿಯಾಗಿ ಮೊಳೆತು ಮತ್ತೊಂದು ಜೀವನದ ಸುತ್ತನ್ನು ಪ್ರಾರಂಭಿಸುತ್ತದೆ. ಪೂರ್ಣ ಬಲಿಯುವ ಮೊದಲೇ ಕಾಯಿ ಮರದ ಆಧಾರವನ್ನು ಬಿಟ್ಟುಬಿಟ್ಟರೆ ಅದು ಕೆಟ್ಟು ಹೋಗುತ್ತದೆ. ಪೂರ್ಣ ಬಲಿತ ಮೇಲೆ ಪಂಚಭೂತಗಳ ಸಹವಾಸ ಸಂಪರ್ಕ ಪಡೆಯದಿದ್ದರೆ, ತನ್ನೊಳಗೆ ಇದ್ದ ಕೊಬ್ಬರಿ

ನೀರಿನಂಶವನ್ನು ಹೀರಿಕೊಳ್ಳುತ್ತಾ, ಹೀರಿಕೊಳ್ಳುತ್ತಾ ತನಗೆ ಆಧಾರವಾಗಿದ್ದ ಚಿಪ್ಪನ್ನೂ ಬಿಟ್ಟು ಬಿಡುತ್ತದೆ. ಹಾಗೆ ಚಿಪ್ಪನ್ನು ಬಿಟ್ಟ ಕೊಬ್ಬರಿ ಮುಂದೆ ಪೂರ್ಣ ಒಣಗಿ ಒಣಕೊಬ್ಬರಿಯಾಗಿ ಬಿಡುತ್ತದೆ. ಆಗ ಅದು ಪುನಃ ಮೊಳೆಯುವ ಸಾಧ್ಯತೆಯಿಲ್ಲದಾಗುತ್ತದೆ, ಅದು ದೇವರಿಗೆ ಎಡೆಮಾಡಲು ಶ್ರೇಷ್ಠವಾಗುತ್ತದೆ. ಹೀಗೆ ಮಾನವ ವ್ಯಕ್ತಿತ್ವ ವಿಕಸನಗೊಂಡು ಪಕ್ವವಾಗಿ ಮಹಾದೇವತ್ವಕ್ಕೇರಲು ವೀರಶೈವಧರ್ಮ ಆರುಮೆಟ್ಟಲುಗಳನ್ನು ನಿಯೋಜಿಸಿದೆ.

ಇದೇ ರೀತಿಯಲ್ಲಿ ವ್ಯಕ್ತಿಯ ವ್ಯಕ್ತಿತ್ವ ಅರಿತುಕೊಂಡು, ಪೂರ್ಣ ಪಕ್ವವಾದಾಗ 'ಪುನರಪಿ ಜನನಂ, ಪುನರಪಿ ಮರಣಂ' ರೂಪವಾದ ಸಂಸಾರ ಚಕ್ರದಿಂದ ಬಿಡುಗಡೆ ಹೊಂದಿ ವ್ಯಕ್ತಿ ವಿಶ್ವ ಚೇತನದಲ್ಲಿ ಒಂದಾಗಿಬಿಡುತ್ತದೆ. ಇದನ್ನೇ ಮುಕ್ತಿ ಪಡೆಯುವುದು, ನಿರ್ವಾಣ ಹೊಂದುವುದು, ಅಥವಾ ಶೂನ್ಯ ಸಂಪಾದನೆ ಎಂದು ಕರೆಯಲಾಗುತ್ತದೆ. ಇದೇ ಎಲ್ಲ ಧರ್ಮಗಳ ಪರಮೋದ್ದೇಶವಾಗಿರುತ್ತದೆ.

ಯೋಗಿಯಾಗಲಿ, ವಿಜ್ಞಾನಿಯಾಗಲಿ, ರಾಜಕಾರಣಿಯಾಗಲಿ ಜೀವನದ ಯಾವ ರಂಗದಲ್ಲಿಯೇ ಇರುವ ವ್ಯಕ್ತಿಯಾಗಲಿ ಆತನ ಕಾರ್ಯ ಚಟುವಟಿಕೆಗಳಿಗೆ ಆತ್ಮವಿಶ್ವಾಸ ಉಳ್ಳ ವ್ಯಕ್ತಿತ್ವ ಅತ್ಯಗತ್ಯವಾಗುತ್ತದೆ. ಆತ್ಮವಿಶ್ವಾಸವೆಂದರೆ ಅಹಂಕಾರವಲ್ಲ! ಆತ್ಮ ವಿಶ್ವಾಸವಿಲ್ಲದ ವ್ಯಕ್ತಿ ಜೀವನದಲ್ಲಿ ಏನನ್ನೂ ಸಾಧಿಸಲಾರ. ಇಂತಹ ಆತ್ಮವಿಶ್ವಾಸ ಪೂರ್ಣ ವ್ಯಕ್ತಿತ್ವವನ್ನು ಬೆಳೆಸುವುದೇ ಧರ್ಮಾಚರಣೆಯ ಉಪಯೋಗ. ಕಾರಣ, ಧರ್ಮಾಚರಣೆಗಳನ್ನು ಸರಿಯಾಗಿ ಅರಿತುಕೊಂಡು ಅವುಗಳಿಂದ ಉತ್ತಮ ಲಾಭ ಪಡೆದುಕೊಳ್ಳುವಂತಹ ಸತ್ ಸಂಸ್ಕಾರಗಳು ಮೂಡಿಬರುತ್ತವೆ. ಇದರಿಂದ ಭಾರತದ ಸಮಾಜಕ್ಕಷ್ಟೇ ಅಲ್ಲ, ಜಾಗತಿಕ ಜನಾಂಗಕ್ಕೂ ಸುಖಶಾಂತಿ ಉಂಟಾಗುವಲ್ಲಿ ಸಂದೇಹವಿಲ್ಲದಾಗುತ್ತದೆ.

●

ಧರ್ಮ, ಮಾನಸಿಕ ಆರೋಗ್ಯ ಮತ್ತು ಮನೋಚಿಕಿತ್ಸೆ

ಡಾ॥ ಸಿ.ಆರ್. ಚಂದ್ರಶೇಖರ್

ಮನಸ್ಸುಗಳನ್ನು ಅರಳಿಸಿ, ವ್ಯಕ್ತಿಗಳ ಅಭ್ಯುದಯಕ್ಕೆಕಾರಣವಾಗಬೇಕಾದ 'ಧರ್ಮಗಳು' ಇಂದು, ಮನುಷ್ಯರನ್ನು ಮನುಷ್ಯರ ವಿರುದ್ಧ ಎತ್ತಿಕಟ್ಟುವ, ರಾಗದ್ವೇಷಗಳನ್ನುಂಟುಮಾಡುವ, ಕೆಲವೇ ಸ್ವಾರ್ಥ ಜನರ ಹಣ, ಸ್ಥಾನ, ಅಧಿಕಾರ ದಾಹವನ್ನು ತೀರಿಸುವ ಬುದ್ಧಿವಂತರು ಕುಟಿಲತೆಯಿಂದ, ಅಮಾಯಕರನ್ನು ಶೋಷಿಸುವ ಸಾಧನಗಳಾಗಿರುವುದು ದುರ್ದೈವದ ಸಂಗತಿ. ಧರ್ಮವು ಜೀವಿಗಳನ್ನು ಸ್ನೇಹ ಪ್ರೀತಿಗಳಿಂದ ಬಂಧಿಸುವ ಶಕ್ತಿ ಆಗುವುದರ ಬದಲು ಅವರನ್ನು ಹಿಂಸಿಸುವ ಅಸುರೀ ಶಕ್ತಿಯಾಗಿ ಮಾರ್ಪಾಟಾಗಿರುವುದು ಒಂದು ದುರಂತ. ಅಸ್ಪೃಶ್ಯತೆಯ ಹೆಸರಿನಲ್ಲಿ, ಜಾತೀಯ ವಿಂಗಡಣೆಯಲ್ಲಿ ಹಿಂದೂ ಧರ್ಮೀಯರು ನಡೆದುಕೊಳ್ಳುತ್ತಿರುವ ರೀತಿಯಾಗಲೀ, ಮೂಲಭೂತವಾದಿ ಮುಸ್ಲಿಂ ಬಾಂಧವರು ವರ್ತಿಸುತ್ತಿರುವ ರೀತಿಯಾಗಲೀ, ತಮ್ಮ ಧರ್ಮದ ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸಲು ನಾನಾ ಪ್ರಲೋಭನೆಯ ಮಾರ್ಗಗಳನ್ನು ಬಳಸುವ ಕ್ರೈಸ್ತ ಮಿಶನರಿಗಳಾಗಲೀ ಅವರವರ ಧರ್ಮಗಳಿಗೆ ಮಸಿ ಬಳಿಯುತ್ತಿರುವುದು ಕಟುವಾಸ್ತವ. ಕಾಶ್ಮೀರ, ಪಾಕಿಸ್ತಾನ, ಬೋಸಿಯಾ ಪ್ಯಾಲೆಸ್ಟೈನ್ ಈ ಎಲ್ಲ ಕಡೆ ನಡೆಯುತ್ತಿರುವುದು ಧರ್ಮ ಬಾಹಿರ ಘಟನೆಗಳೇ.

ಯಾವುದೇ ಧರ್ಮದ ಮೂಲಭೂತ ಲಕ್ಷಣಗಳೆಂದರೆ, ಅತೀಂದ್ರಿಯವಾದ ಹಾಗೂ ಮಾನವಾತೀತ 'ಶಕ್ತಿ'ಯ ಇರುವಿಕೆಯಲ್ಲಿ ನಂಬುಗೆ ಮತ್ತು ಆ ಶಕ್ತಿಯನ್ನು ಸಂಪ್ರೀತಗೊಳಿಸುವ ವಿಧಿ - ವಿಧಾನಗಳು. ಪ್ರಾಚೀನ ಕಾಲದಲ್ಲಿ ಕೂಡ, ಮನುಷ್ಯರು, ಇತರ ಸಸ್ತನಿಗಳಂತೆ, ಗುಂಪಾಗಿ ವಾಸಿಸುತ್ತಿದ್ದುದರಿಂದ, ಸಮುದಾಯದ ಒಳಿತಿಗೆ ನೆರವಾಗುವ 'ವರ್ತನೆಗಳನ್ನು' ಒಳ್ಳೆಯ ವರ್ತನೆಗಳೆಂದೂ, ವ್ಯಕ್ತಿ ತನ್ನ ಸ್ವಾರ್ಥ ಸಾಧನೆಗೆ ಸಮುದಾಯದ ಹಿತವನ್ನು ಬಲಿಕೊಡುವುದು ಕೆಟ್ಟನಡೆವಳಿಕೆ ಎಂದೂ ಪರಿಗಣಿಸಲಾಯಿತು. ವ್ಯಕ್ತಿ., ಸಮುದಾಯದ ಹಿತಕ್ಕೋಸ್ಕರ ಕೆಲವಾರು ಕಟ್ಟುಪಾಡುಗಳನ್ನು ಅನುಸರಿಸುವುದು ಮಾನವಾತೀತ ಶಕ್ತಿಯನ್ನು ಸಂಪ್ರೀತಗೊಳಿಸಲು ಉತ್ತಮ ವಿಧಾನವೆನಿಸಿಕೊಂಡಿತು. ಹೀಗಾಗಿ ಕೆಲವು ಸಾರ್ವತ್ರಿಕ ನಡೆವಳಿಕೆಗಳು, ನೀತಿ ನಿಯಮಾವಳಿಗಳನ್ನು ಬಹುತೇಕ ಧರ್ಮಗಳು ತಮ್ಮ ಅನುಯಾಯಿಗಳು ಪಾಲಿಸಬೇಕೆಂದು ವಿಧಿಸಿದುವು.

‘ಸತ್ಯವನ್ನು ಹೇಳು, ಸುಳ್ಳು ಹೇಳಬೇಡ’

‘ಎಲ್ಲರನ್ನೂ ಪ್ರೀತಿಸು, ಯಾರನ್ನೂ ದ್ವೇಷಿಸಬೇಡ’

‘ಪ್ರಾಮಾಣಿಕವಾಗಿರು, ಇತರರಿಗೆ ಮೋಸ ವಂಚನೆ ಮಾಡಬೇಡ’

‘ಕಷ್ಟದಲ್ಲಿರುವವರಿಗೆ, ದುಃಖಿತರಿಗೆ ನೆರವಾಗು ಅವರ ಅಸಹಾಯಕತೆಯನ್ನು ದುರುಪಯೋಗಮಾಡಿ, ಅವರನ್ನು ಶೋಷಿಸಬೇಡ.

‘ಇತರರು ಬದುಕಲು ಸಹಾಯಮಾಡು, ಯಾರನ್ನೂ ಕೊಲ್ಲಬೇಡ.

‘ದಯೆ, ಅನುಕಂಪ, ಸಹಾನುಭೂತಿ, ಪರೋಪಕಾರ ಇತ್ಯಾದಿ ಗುಣಗಳನ್ನು ಪ್ರಕಟಿಸು. ಕ್ರೌರ್ಯ, ದ್ವೇಷ, ಮತ್ಸರಗಳನ್ನು ಬಿಡು – ಇತ್ಯಾದಿ ಗುಣ ನಡವಳಿಕೆಗಳನ್ನು ಬಹುತೇಕ ಧರ್ಮಗಳು ಪ್ರೋತ್ಸಾಹಿಸಿವೆ. ಈ ನಡೆವಳಿಕೆಗಳನ್ನು ಪ್ರಕಟಿಸದೆ ಧರ್ಮಕ್ಕೆ ವಿರುದ್ಧವಾಗಿ ಹೋಗುವವರನ್ನು ನೇರವಾಗಿ ಪರೋಕ್ಷವಾಗಿ ಶಿಕ್ಷಿಸುವ ಪರಿಪಾಠವೂ ಬೆಳೆಯಿತು. ಧರ್ಮದ ಪಾಲನೆಯನ್ನು ನಿರ್ದೇಶಿಸಲು ಕೆಲವರು ನಿಯೋಜಿತರಾದಾಗ, ನಿಜವಾದ ಸಮಸ್ಯೆ ಹುಟ್ಟಿಕೊಂಡಿತು. ಸಾಮಾನ್ಯಜನ ಮಾನವಾತೀತ ಶಕ್ತಿಯನ್ನು ಸಂಪ್ರೀತಗೊಳಿಸುವುದರ ಜೊತೆಗೆ, ಇವರನ್ನೂ ಸಂಪ್ರೀತಗೊಳಿಸಬೇಕಾಯಿತು. ಸ್ವಾರ್ಥಿಗಳು ಧರ್ಮಪಾಲನೆಗೆ ನಿಯೋಜಿತರಾದಾಗ, ಧರ್ಮ, ಅವರ ಕೈಗೊಂಬೆಯಾಯಿತು. ಜನ ಸಾಮಾನ್ಯರನ್ನು ಹತೋಟಿಯಲ್ಲಿಡಲು, ಅವರನ್ನು ಶೋಷಿಸಲು ಧರ್ಮದ ಬಳಕೆಯಾಗತೊಡಗಿತು. ಯಾವಧರ್ಮ ವ್ಯಕ್ತಿ ಮತ್ತು ಸಮುದಾಯದ ಹಿತವನ್ನು ಕಾಪಾಡಬೇಕಿತ್ತೋ ಅದೇ ಧರ್ಮ ವ್ಯಕ್ತಿ ಮತ್ತು ಸಮುದಾಯಕ್ಕೆ ಒಂದು ಶಾಪವಾಗಿದ್ದನ್ನು ಜಗತ್ತಿನ ಚರಿತ್ರೆ ಸಾಕಷ್ಟು ದಾಖಲೆಗಳನ್ನು ಒದಗಿಸುತ್ತದೆ.

ಹೀಗೆ ಧರ್ಮ, ವ್ಯಕ್ತಿಯ ಮಾನಸಿಕ ಆರೋಗ್ಯಕ್ಕೂ, ಅನಾರೋಗ್ಯಕ್ಕೂ ಕಾರಣ ವಾಗಿರುವುದನ್ನು ನಾವು ಕಾಣಬಹುದು.

ಮಾನಸಿಕ ಆರೋಗ್ಯವೆಂದರೇನು ?

ಚೆನ್ನಾಗಿ, ಸುಸಂಬದ್ಧವಾಗಿ ಯೋಚಿಸುವುದು, ಯಾವುದೇ ಸಮಸ್ಯೆಗೆ ಪರಿಹಾರವನ್ನು ಹುಡುಕುವುದು, ಯಾವುದೇ ಕಷ್ಟನಷ್ಟಗಳುಂಟಾದಾಗ ಧೈರ್ಯವಾಗಿರುವುದು, ಹೊಸ ವಿಷಯಗಳನ್ನು ಕಲಿಯುವುದು, ಕಲಿತದ್ದನ್ನು ಮರೆಯದೇ, ಬೇಕಾದಾಗ ಬಳಸಿಕೊಳ್ಳುವುದು, ತನ್ನ ಬೇಕು ಬೇಡಗಳನ್ನು ಗಮನಿಸುವುದು, ನೈತಿಕ, ಸಾಮಾಜಿಕ ನಿಯಮಗಳನ್ನು ಸಂತೋಷದಿಂದ ಪಾಲಿಸುವುದು. ನಿಂತ ನೀರಾಗದೆ ಪ್ರಗತಿಯತ್ತ ಹೆಜ್ಜೆಹಾಕುವುದು, ಯಾವುದೇ ಬೇಧವೆಣಿಸದೇ ಎಲ್ಲರಿಗೂ ನೆರವಾಗುವುದು, ಆರೋಗ್ಯವಂತ ಮನಸ್ಸಿನ ಲಕ್ಷಣಗಳು.

1908ರಲ್ಲಿ ಜನಿಸಿದ ಅಮೆರಿಕಾದ ಮನೋವಿಜ್ಞಾನಿ ಅಬ್ರಹಾಂ ಮಾಸ್ಲೋ, ಅನೇಕ ಯಶಸ್ವಿ, ಜನಪ್ರಿಯ ವ್ಯಕ್ತಿಗಳನ್ನು (ಉದಾ: ಲಿಂಕನ್, ರೂಸ್‌ವೆಲ್ಟ್, ಐನ್‌ಸ್ಟೈನ್ ಇತ್ಯಾದಿ) ಅಧ್ಯಯನ ಮಾಡಿ ಆರೋಗ್ಯಕರ ವ್ಯಕ್ತಿತ್ವಉಳ್ಳವರ ಗುಣಲಕ್ಷಣಗಳನ್ನು ಈ ರೀತಿ ಪಟ್ಟಿ ಮಾಡಿದ್ದಾನೆ.

1. ಒಳ್ಳೆಯ ವಾಸ್ತವಿಕ ಪ್ರಜ್ಞೆ : ಪಂಚೇಂದ್ರಿಯಗಳ ನೆರವಿನಿಂದ ಪರಿಸರವನ್ನು, ಪರಿಸರದಲ್ಲಿ ನಡೆಯುವ ವಿದ್ಯಮಾನಗಳನ್ನು ನಿಖರವಾಗಿ ಅರ್ಥೈಸುವುದು. ಗಾಳಿಗೋಪುರ, ಹಗಲುಗನಸು, ಊಹಾಪೋಹಗಳು ಅವರ ಹತ್ತಿರ ಸುಳಿಯವು.

2. ಯಾವ ಷರತ್ತಿಲ್ಲದೆ, ತಮ್ಮನ್ನು, ತಾವಿರುವಂತೆಯೇ ಒಪ್ಪಿಕೊಳ್ಳುವುದು ಹಾಗೂ ತಮ್ಮ ಬಗ್ಗೆ ಗೌರವ ಹಾಗೂ ಹೆಮ್ಮೆ ಪಡುವುದು. ತಾವು ಬೇರೆಯವರಷ್ಟು ಚೆನ್ನಿಲ್ಲ ಎಂಬಕೀಳರಿಮೆ ಅವರನ್ನು ಬಾಧಿಸದು.

3. ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವ ಶಕ್ತಿ -ಚತುರತೆ ಅವರಿಗಿರುತ್ತದೆ. ಇತರರನ್ನು ಅವರು ಈ ವಿಚಾರದಲ್ಲಿ ಅವಲಂಬಿಸರು.

4. ಸ್ವಪ್ರತಿಷ್ಠೆ, ಸ್ವಾರ್ಥಕ್ಕೆ ಯಾವ ಮಹತ್ವಕೊಡದೆ, ವಿಷಯ ಹಾಗೂ ಸಂದರ್ಭದ ಅಗತ್ಯಗಳಿಗೆ ಹೆಚ್ಚು ಮಹತ್ವಕೊಡುತ್ತಾರೆ.

5. ಸ್ವತಂತ್ರ ಆಲೋಚನೆ, ಸ್ವಾವಲಂಬನೆ : ಸಂಪ್ರದಾಯ, ಸಂಸ್ಕೃತಿಯ ಕಟ್ಟಳೆ, ರೂಢಿ ಎಂದು ಯಾವುದನ್ನೂ ಅವರು ಆಲೋಚಿಸದೆ ಒಪ್ಪರು. ಸಾಮಾನ್ಯರಿಗಿಂತ, ಭಿನ್ನವಾಗಿ. ಆಲೋಚಿಸಿ, ಸರಿಧೋರಣೆ ಮತ್ತು ಆಚರಣೆಗೆ ಒಳಿಯುತ್ತಾರೆ.

6. ಜೀವನದ ಎಲ್ಲ ಅನುಭವಗಳನ್ನು - ಅವು ಸುಖದಾಯಕವಾಗಿರಲಿ ದುಃಖದಾಯಕವಾಗಿರಲೀ, ಅವರು ಪ್ರೀತಿಸುತ್ತಾರೆ. ಪಲಾಯನವಾದಿಗಳಾಗುವುದಿಲ್ಲ.

7. ಸರ್ವ ಜನರ (ಇಡೀ ಸಮುದಾಯ ಮಾನವಕುಲ) ಅಭ್ಯುದಯಕ್ಕಾಗಿ ದುಡಿಯುತ್ತಾರೆ.

8. ಬಹುಜನರ ಅಭಿಪ್ರಾಯಕ್ಕೆ ಮನ್ನಣೆ ಮತ್ತು ಗೌರವವನ್ನು ಕೊಡುತ್ತಾರೆ. ಸರ್ವಾಧಿಕಾರೀ ಪ್ರವೃತ್ತಿಯನ್ನು ತೋರುವುದಿಲ್ಲ. ವಿನೀತರಾಗಿರುತ್ತಾರೆ.

9. ಅವರಿಗೆ ಗುರಿ ಎಷ್ಟು ಮುಖ್ಯವೋ ಮಾರ್ಗವೂ ಅಷ್ಟೇ ಮುಖ್ಯ.

10. ಹಾಸ್ಯ ಪ್ರಜ್ಞೆಚೆನ್ನಾಗಿರುತ್ತದೆ. ಕಠಿಣ ಸನ್ನಿವೇಶದಲ್ಲಿ, ಗಂಭೀರವಾತಾವರಣದಲ್ಲಿ, ಸೋಲು ನಿರಾಸೆಯ ಸಂದರ್ಭದಲ್ಲಿ ಹಾಸ್ಯಚಟಾಕಿಯನ್ನು ಹಾರಿಸಿ, ತಾವೂ ನಕ್ಕು, ಇತರರನ್ನೂ ನಗಿಸಬಲ್ಲರು.

11. ಏಕಾಂತ ಪ್ರಿಯತೆ ಮತ್ತು ಉತ್ತುಂಗ ಅನುಭವ (ಪೀಕ್ ಎಕ್ಸ್‌ಪೀರಿಯನ್ಸ್)ವ ವರ್ಣನೆಗೆ ಮೀರಿದ ಅಮಿತ - ಆನಂದದ ಅನುಭವವನ್ನು ಪಡೆಯುತ್ತಾರೆ. ಆಗಾಗ

ಜನ ಜಂಗುಳಿಯಿಂದ ದೂರವಾಗಿ ಏಕಾಂತವಾಗಿದ್ದು, ಆತ್ಮಾವಲೋಕನ ಮಾಡಿಕೊಳ್ಳುತ್ತಾರೆ.

12. ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಹೊಸತನ್ನು ಸೃಷ್ಟಿಸಿ, ಆನಂದಪಡುತ್ತಾರೆ.

ಉತ್ತಮ ಮಾನಸಿಕ ಆರೋಗ್ಯವುಳ್ಳವ್ಯಕ್ತಿಯನ್ನು ನಮ್ಮಲ್ಲಿ 'ಯೋಗಿ' ಎಂದು ಕರೆಯುತ್ತಾರೆ. ಆತ ಮಹಾತ್ಮನೂ ಹೌದು. ಆತನ ವಿಶೇಷಗಳೆಂದರೆ.

1. ಕರ್ಮಫಲವನ್ನು ನಿರೀಕ್ಷಿಸದೇ ಕರ್ತವ್ಯನಿರತನಾಗಿರುತ್ತಾನೆ

2. ಜಿತೇಂದ್ರಿಯ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಡಬಲ್ಲ ಸಂಯಮಿ. ಸುಖ ಲೋಲುಪನಲ್ಲ. ಕಷ್ಟ ಸಹಿಷ್ಣು ಮತ್ತು ಸರಳ ಜೀವಿ.

3. ಸಂಪತ್ತು- ಸವಲತ್ತುಗಳ ಅನಗತ್ಯ ಸಂಗ್ರಹಣೆ ಮಾಡದೇ, ಇರುವುದನ್ನು ಹಂಚಿ, ಇತರರಿಗೆ ನೆರವಾಗುತ್ತಾನೆ.

4. ಆತ ಸ್ಥಿರ ಚಿತ್ತ, ಸಮಚಿತ್ತ ಹಾಗೂ ಸ್ಥಿರ ಪ್ರಜ್ಞ

5. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಇತ್ಯಾದಿ ಅರಿಷಡ್ವರ್ಗಗಳನ್ನು ಹತೋಟಿಯಲ್ಲಿಡಬಲ್ಲ.

6. ಆತ ದಯಾವಂತ, ಸಕಲ ಪ್ರಾಣಿಗಳ ನೋವನ್ನು ತನ್ನ ನೋವೆಂದು ತಿಳಿದು, ಇತರರ ನೆರವಿಗೆ ಧಾವಿಸುತ್ತಾನೆ.

7. ಇತರರ ಸುಖ - ದುಃಖಗಳನ್ನು ತನ್ನದೆಂದು ಭಾವಿಸಿ, ಎಲ್ಲರ ಅಭ್ಯುದಯವೇ ತನ್ನ ಅಭ್ಯುದಯವೆಂದು ತಿಳಿಯುತ್ತಾನೆ.

8. ಸದಾ ಪ್ರಸನ್ನತೆ, ಪ್ರಶಾಂತತೆಯನ್ನು ಉಳಿಸಿಕೊಳ್ಳುತ್ತಾನೆ.

9. ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಾನೆ.

10. ಆತ್ಮ ಸಾಕ್ಷಾತ್ಕಾರ, ಮೋಕ್ಷಸಾಧನೆ ಅವನ ಗುರಿಯಾಗುತ್ತದೆ.

ಮನೋಕ್ಲೇಶ, ಮಾನಸಿಕ ಒತ್ತಡ :

ಇಂದಿನ ಸಾಮಾಜಿಕ ಪರಿಸರದಲ್ಲಿ, ಜೀವನ ಶೈಲಿಯಲ್ಲಿ, ಭೋಗ ಭಾಗ್ಯಗಳ ಅನ್ವೇಷಣೆಗೆ ಪ್ರಥಮ ಪ್ರಾಶಸ್ತ್ಯ. ಹೇಗಾದರೂ ಮಾಡಿ, ಬೇಗ ಹಣ ಸಂಪಾದಿಸಬೇಕು. ಒಡವೆ ವಸ್ತ್ರ, ಮನೆ, ಕಾರು, ಇತರ ಐಶಾರಾಮ ಜೀವನಕ್ಕೆ ಬೇಕಾದ ಸಕಲ ವಸ್ತುಗಳನ್ನು ಕೊಂಡುಕೊಳ್ಳಬೇಕು. ಸ್ಥಾನಮಾನ, ಕೀರ್ತಿ ಪ್ರಶಸ್ತಿಗಳನ್ನು ಪಡೆಯಬೇಕು ಎಂಬುದೇ ಬಹುಜನರ ಜೀವನದ ಗುರಿ.

ಓಟಗಾಗಿ ಎಲ್ಲೆಡೆ ಸ್ಪರ್ಧೆ, ಕಿತ್ತಾಟ, ಒಬ್ಬನು ಮೇಲೇರಲು ನೂರಾರು ಜನರನ್ನು ಕೆಳಕ್ಕೆ ತಳ್ಳುವ ಪರಿಪಾಠ. ಎಲ್ಲದಕ್ಕೂ ಅಭಾವ ಬಹುಪಾಲು ಜನರಿಗೆ ಏನೂ ಸಿಗದು. ಎರಡು ಹೊತ್ತು ಊಟ- ಎರಡು ಜೊತೆ ಬಟ್ಟೆಗೂ ಪರದಾಟ. ಶೇಕಡಾ 10 ರಷ್ಟು ಜನರ ಕೈಯಲ್ಲಿ ನಾಡಿನ ಸಂಪತ್ತು ಸವಲತ್ತುಗಳು. ಪ್ರೀತಿ ವಿಶ್ವಾಸ ಹೊಂದಾಣಿಕೆಗಳಿಂದ ತುಂಬಿರುತ್ತಿದ್ದ ಅವಿಭಕ್ತ ಕುಟುಂಬಗಳು ಒಡೆದು, ಸಣ್ಣ ಸಣ್ಣ ಕುಟುಂಬಗಳಾಗಿ, ಕೌಟುಂಬಿಕ ಆಸರೆಯಿಂದ ವೃದ್ಧರೂ, ಅಂಗವಿಕಲರೂ, ರೋಗಿಗಳೂ, ಮಕ್ಕಳೂ ವಂಚಿತರಾಗುತ್ತಿದ್ದಾರೆ. ಇನ್ನೊಬ್ಬರ ಕಷ್ಟವನ್ನು ಕಂಡು ಮರುಗಲೂ ಜನರಿಗೆ ಸಮಯವಿಲ್ಲ. ಮೌಲ್ಯಗಳು ನಶಿಸುತ್ತಿರುವುದರಿಂದ, ದುರ್ಬಲರು, ಅಸಹಾಯಕರು ಶೋಷಣೆಗೆ ಗುರಿಯಾಗುತ್ತಿದ್ದಾರೆ. ಅಭದ್ರತೆ ಭಾವನೆ ಉಳ್ಳವರನ್ನೂ, ಇಲ್ಲದಿರುವವರನ್ನೂ ಸಮವಾಗಿ ಕಾಡುತ್ತಿದೆ. ಪಂಚೇಂದ್ರಿಯಗಳನ್ನು ಸಂತೋಷಪಡಿಸುವುದರಲ್ಲೇ ಸದಾಮಗ್ನರಾಗಿರುವ ಜನರಿಗೆ ತೃಪ್ತಿ ಎಂಬುದೇ ಇಲ್ಲ. ಇಷ್ಟು ಸಿಕ್ಕಿದರೆ ಮತ್ತಷ್ಟು ಬೇಕು, ಮತ್ತಷ್ಟು ಸಿಕ್ಕಿದರೂ ಅದು ಸಾಲದೇ ಮಗದಷ್ಟು ಬೇಕು. ಇದರಿಂದ ಸಾಮಾಜಿಕ ವ್ಯವಸ್ಥೆ ಕುಸಿಯುತ್ತಿದೆ. ಇದು ಮನೋಕ್ಲೇಶ, ಮಾನಸಿಕ ಒತ್ತಡಕ್ಕೆ ಎಡೆಮಾಡಿಕೊಟ್ಟಿದೆ. ಬಹಳಷ್ಟು ಜನ ಮಾನಸಿಕ ನೆಮ್ಮದಿಯಿಂದ ವಂಚಿತರಾಗುತ್ತಿದ್ದಾರೆ. ಚಿಂತೆ ತಪ್ಪಿತಸ್ಥ ಭಾವನೆ, ಭಯ, ಏನೋ ಕೊರತೆಯ ಅನಿಸಿಕೆ. ಅತೃಪ್ತಿ ಅವರನ್ನು ಕಾಡುತ್ತವೆ. ಇದರ ಫಲವಾಗಿ ಅವರ ಸ್ವಾಯತ್ತನರ ವ್ಯವಸ್ಥೆ ಪ್ರಚೋದಿತಗೊಳ್ಳುತ್ತದೆ. ದೇಹದಲ್ಲಿ ಹೆಚ್ಚು ಅಡ್ರಿನಲಿನ್ ರಸದೂತ ಉತ್ಪತ್ತಿಯಾಗುತ್ತದೆ. ಅದು ವ್ಯಕ್ತಿಯನ್ನು ಹೋರಾಟ/ಅಥವಾ ಪಲಾಯನಕ್ಕೆ ಸಿದ್ಧಮಾಡುತ್ತದೆ. ಹೃದಯ ಬಡಿತ ಹೆಚ್ಚುತ್ತದೆ. ಉಸಿರಾಟದ ವೇಗ ತೀವ್ರವಾಗುತ್ತದೆ. ಜಠರದಲ್ಲಿ ಹೆಚ್ಚು ಹೈಡ್ರೋಕ್ಲೋರಿಕ್ ಆಮ್ಲ ಉತ್ಪತ್ತಿಯಾಗುತ್ತದೆ. ಮಿದುಳು ದಣಿಯುತ್ತದೆ. ಮನಸ್ಸನ್ನು ಭಯ, ದುಃಖ, ಕೋಪಗಳು ಆವರಿಸುತ್ತವೆ. ನಿದ್ರೆ, ಹಸಿವು ಏರು ಪೇರಾಗುತ್ತವೆ. ಈ ಬದಲಾವಣೆಗಳು ದೀರ್ಘಕಾಲ ಇದ್ದದ್ದೇ ಆದರೆ, ವ್ಯಕ್ತಿ ಅನಾರೋಗ್ಯಪೀಡಿತನಾಗುತ್ತಾನೆ. ಜಠರದ ಹುಣ್ಣು ರಕ್ತದ ಏರೊತ್ತಡ, ಅರೆತಲೆ ಶೂಲೆ, ಕೀಲು ಬಾಧೆ, ಸಿಹಿಮೂತ್ರರೋಗ, ಅಲರ್ಜಿ, ಸೋರಿಯಾಸಿಸ್‌ನಂತಹ ಚರ್ಮ ರೋಗಗಳು, ಋತು ಚಕ್ರದ ಏರುಪೇರು ಇತ್ಯಾದಿ ಮನೋದೈಹಿಕ ಬೇನೆಗಳೂ, ರೋಗ ನಿರೋಧಕ ಶಕ್ತಿ ಕಡಿಮೆಯಾಗಿ, ಸೋಂಕು ರೋಗಗಳೂ, ಛಿನ್ನತೆ, ಆತಂಕ ಉನ್ಮಾದದಂತಹ ಮಾನಸಿಕ ಅಸ್ವಸ್ಥತೆಗಳೂ ಉಂಟಾಗುತ್ತವೆ. ಯಾವುದೇ ಸಮಾಜದಲ್ಲಿ ಶೇಕಡಾ 30 ರಷ್ಟು ಜನ, ಮಾನಸಿಕ ಜನ್ಯವಾದ ಈ ಕಾಯಿಲೆಗಳಿಂದ ಬಳಲುತ್ತಾರೆ.

ಇಷ್ಟೊಂದು ಜನ, ಈ ರೀತಿ ವಿವಿಧ ಕಾಯಿಲೆಗಳಿಂದ ಬಳಲುವಾಗ ಔಷಧಿಗಳ ಮೊರೆಹೋಗುತ್ತಾರೆ. ಔಷಧಿಯಲ್ಲದೆ, ಇತರ ಚಿಕಿತ್ಸಾ ವಿಧಾನಗಳಿಗಾಗಿ ಸಾಕಷ್ಟು ಹಣ - ಸಮಯವನ್ನು ಖರ್ಚು ಮಾಡುತ್ತಾರೆ. ಎಷ್ಟು ಪ್ರಯತ್ನಪಟ್ಟರೂ ರೋಗ ವಾಸಿಯಾಗದೇ, ಕಷ್ಟ ನಷ್ಟಗಳಿಗೆ ತುತ್ತಾಗುತ್ತಾರೆ. ರೋಗ ನಿವಾರಣೆಗಾಗಿ 'ದೇವರ' ಮೊರೆ ಹೋಗುತ್ತಾರೆ.

ಸಂಕಟ ಬಂದಾಗ ವೆಂಕಟರಮಣ ಎಂಬ ಗಾದೆಯಂತೆ, ದೇವರಿಗೆ ವಿಶೇಷ ಪೂಜೆಮಾಡುತ್ತಾರೆ. ಹರಕೆಕಟ್ಟುತ್ತಾರೆ. ಕಾಣಿಕೆ ನೀಡುತ್ತಾರೆ. ಅವೆಲ್ಲ ಫಲ ನೀಡದಿರಲು ಕಂಗಾಲಾಗುತ್ತಾರೆ.

ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಕಿತ್ಸೆ

ಕಾಯಿಲೆಗಳು ಬಾರದಂತೆ ಮಾಡಲು, ಬಂದ ಕಾಯಿಲೆ, ಬೇಗ ಗುಣವಾಗಲು, ಮನಸ್ಸಿನ ನೆಮ್ಮದಿ, ಆತ್ಮ ವಿಶ್ವಾಸ ಹೆಚ್ಚಿಸಿಕೊಳ್ಳಬೇಕು. ದಣಿದ ದೇಹ ಮತ್ತು ಮನಸ್ಸುಗಳಿಗೆ ವಿರಾಮ ಸಿಗಬೇಕು. ಅವುಗಳ ಮೇಲಿನ ಒತ್ತಡ ತಗ್ಗಬೇಕು. ಈ ದಿಸೆಯಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳು ಖಂಡಿತ ನೆರವಾಗುತ್ತವೆ.

1. ದೇವರಲ್ಲಿ ನಂಬಿಕೆ : ಮಾನವಾತೀತ ಶಕ್ತಿಯೊಂದರಲ್ಲಿ ನಂಬಿಕೆ 'ಕಷ್ಟ ಕಾಲದಲ್ಲಿ' ನಮ್ಮ ಊರುಗೋಲಾಗುತ್ತದೆ. ಅಪಾರ ಶಕ್ತಿ, ಸರ್ವವ್ಯಾಪಿ, ವಿರಾಟ್ ಸ್ವರೂಪಿ ದೇವರ ಮುಂದೆ ನಮ್ಮ 'ಅಹಂ' ನಾಶವಾಗುತ್ತದೆ. ನಾವು ವಿನೀತಭಾವದಿಂದಿರಲು ಸಹಾಯ ಮಾಡುತ್ತದೆ. ಮಾಡುವ ಕೆಲಸವನ್ನು 'ಅವನಿಗೆ' ಅರ್ಪಿಸಿ, ಸಂತೋಷ ತೃಪ್ತಿಪಡುವ ಅವಕಾಶ ಲಭಿಸುತ್ತದೆ. 'ಪ್ರಯತ್ನ ನನ್ನದು, ಫಲ ಭಗವಂತನದು' ಎಂಬ ಧೋರಣೆಯಿಂದ ಕರ್ತವ್ಯಶೀಲನಾಗಲು ಸಾಧ್ಯವಾಗುತ್ತದೆ. ಆದರಿಂದ ನಿರ್ವಹಣಾ ಆತಂಕ ನಿವಾರಣೆಯಾಗುತ್ತದೆ. ಸೋಲು, ನಷ್ಟವಾದಾಗ ಅವಮಾನ ಭರಿಸುವ ಶಕ್ತಿ ದೊರಕುತ್ತದೆ. ಮನೋಕ್ಲೇಶ ತಗ್ಗುತ್ತದೆ.

2. ಧ್ಯಾನ ಪ್ರಾರ್ಥನೆ : ಪ್ರತಿಯೊಂದು ಧರ್ಮದಲ್ಲೂ ಧ್ಯಾನ - ಪ್ರಾರ್ಥನೆಗಳಿಗೆ ಸಾಕಷ್ಟು ಆದ್ಯತೆ ಕೊಡಲಾಗುತ್ತದೆ. ನಿಶ್ಚಲ ಮನಸ್ಸಿನಿಂದ, ದೇವರ ಮೂರ್ತಿಯನ್ನು ಮನದೊಳಗೆ ಪ್ರತಿಷ್ಠಾಪಿಸಿ ಧ್ಯಾನಿಸುವುದು, ಪ್ರಾರ್ಥನೆ ಸಲ್ಲಿಸುವುದು, ಮನೋಕ್ಲೇಶವನ್ನು ಕಡಿಮೆ ಮಾಡಲು ಸಹಾಯಮಾಡುತ್ತದೆ. ಪ್ರತಿದಿನ, ಅಲ್ಪ ಸಮಯವಾದರೂ, ಧ್ಯಾನ - ಪ್ರಾರ್ಥನೆ ಮಾಡುವುದರಿಂದ ಮಾನಸಿಕ - ಸಮತೋಲನವನ್ನು ಸಾಧಿಸಬಹುದು. ಮಾನಸಿಕ ಚಿಂತೆ, ಖಿನ್ನತೆಯನ್ನು ದೂರ ಮಾಡಲು, ಧ್ಯಾನ ಪ್ರಾರ್ಥನೆ ಸುಲಭ ಹಾಗೂ ಪರಿಣಾಮಕಾರಿ ವಿಧಾನ. ಪ್ರಶಾಂತಸ್ಥಳದಲ್ಲಿ, ಪ್ರಶಾಂತ ಸಮಯದಲ್ಲಿ ಧ್ಯಾನ -ಪ್ರಾರ್ಥನೆ ಮಾಡುವುದು ಅನುಕೂಲಕಾರಿ.

3. ಮಂತ್ರಪಠಣ, ದೇವರನಾಮೋಚ್ಚಾರಣೆ, ಪೂಜೆಗಳು : ವಿಶೇಷ ಶಬ್ದಪದಗಳಿಂದ ರಚಿಸಲ್ಪಟ್ಟ ಮಂತ್ರಗಳು, ದೇವರ ಕೀರ್ತನೆಗಳು, ಭಜನೆ, ಹಾಡುಗಳು ಕೇಳುಗರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ಸ್ಪಷ್ಟವಾಗಿ ರಾಗಲಯಬದ್ಧವಾಗಿರುವ ಈ ರಚನೆಗಳ ಸರಿಯಾದ ಪಠಣದಿಂದ, ಹಾಡುವಿಕೆಯಿಂದ ಮನಸ್ಸಿನ ನೆಮ್ಮದಿ ಹೆಚ್ಚುತ್ತದೆ. ಮನಸ್ಸಿನ ಏಕಾಗ್ರತೆಗೆ ನೆರವಾಗುವ ಪೂಜಾ ವಿಧಿಗಳು ಈ ದಿಸೆಯಲ್ಲಿ ಸಹಕಾರಿ. ಆದರೆ, ಈ ಪೂಜಾ ವಿಧಾನಗಳಲ್ಲಿ ಆಡಂಬರ, ಹಣದ ಅಪವ್ಯಯವಾಗದಂತೆ ಎಚ್ಚರವಹಿಸಬೇಕು.

4. ತೀರ್ಥಯಾತ್ರೆ, ಪುಣ್ಯಕ್ಷೇತ್ರಗಳ ಸಂದರ್ಶನ : ಹೆಚ್ಚಿನ ತೀರ್ಥಕ್ಷೇತ್ರಗಳು, ದೇವಾಲಯಗಳು ನದಿತೀರದಲ್ಲಿ, ಸಮುದ್ರತಟದಲ್ಲಿ, ಬೆಟ್ಟಪರ್ವತಗಳತುದಿಯಲ್ಲಿ, ಪ್ರಕೃತಿ ಮಾತೆಯ ಮಡಿಲಲ್ಲಿ ಇರುತ್ತವೆ. ಇಂತಹ ಕ್ಷೇತ್ರಗಳಿಗೆ ಹೋಗಿ ಬರುವುದು, ಜನರಿಗೆ ತಮ್ಮ ಜೀವನ - ಜಂಜಾಟದಿಂದ ದೂರವಿರಲು ನೆರವಾಗುತ್ತವೆ.

5. ದಾನ, ಧರ್ಮ, ಪರೋಪಕಾರ : ನಮ್ಮ ಆದಾಯ ಎಷ್ಟೇ ಇರಲಿ, ನಮ್ಮ ನೋವು ಕಷ್ಟಗಳು ಎಷ್ಟೇ ಇರಲಿ, ನಮ್ಮ ಕೈಲಾದಷ್ಟು, ಇತರರಿಗೆ ನೆರವಾಗುವುದು. ದುಃಖಿತರಿಗೆ, ಅಸಹಾಯಕರಿಗೆ ದಾನ ಧರ್ಮ ಪರೋಪಕಾರ ಮಾಡುವುದು, ನಮ್ಮ ಆತ್ಮವಿಶ್ವಾಸ ಹೆಚ್ಚುತ್ತದೆ.

6. ಧಾರ್ಮಿಕ - ಆಧ್ಯಾತ್ಮಿಕ ಪುಸ್ತಕಗಳ ಅಧ್ಯಯನ ಮತ್ತು ಆಧ್ಯಾತ್ಮಿಕ ಚಿಂತನೆ : ಧಾರ್ಮಿಕ - ಆಧ್ಯಾತ್ಮಿಕ ಸಾಹಿತ್ಯ ನಮ್ಮ ಹಿರಿಯರ ಚಿಂತನೆಯ ಫಲ. ಇದನ್ನು ಓದುವುದು. ಅದರ ಬಗ್ಗೆ ಚಿಂತನೆ ಮಾಡುವುದು, ನಮ್ಮ ಜೀವನ ಶೈಲಿಯನ್ನು ಬದಲಿಸಿಕೊಳ್ಳುವುದು ಬಹಳ ಸಹಾಯಕಾರಿ. ಈ ಸಾಹಿತ್ಯದಲ್ಲಿ ನಮ್ಮ ಮನಸ್ಸಿನ ಆರೋಗ್ಯವನ್ನು ಹೆಚ್ಚಿಸಿಕೊಳ್ಳಲು ಅನೇಕ ಮಾರ್ಗಗಳಿವೆ. ಕಷ್ಟ ಸಮಸ್ಯೆಗಳಿರುವ ಸಮಯ ಸಂದರ್ಭಗಳಲ್ಲಿ, ಅವುಗಳನ್ನು ನಿಭಾಯಿಸಲು ಈ ಮಾರ್ಗಗಳು ನೆರವಾಗುತ್ತವೆ.

7. ಯೋಗ : ಯೋಗ ವಿಧಾನಗಳು ಹಂತಹಂತವಾಗಿ ಮೈಮನಸ್ಸುಗಳನ್ನು ಸೊಗಸುಗೊಳಿಸಿ, ಉತ್ತಮ ಮಟ್ಟಕ್ಕೆ ಒಯ್ಯುತ್ತವೆ. ಯೋಗದಿಂದ ಧೃಡ ಶರೀರ, ಪರಿಶುದ್ಧ ಮನಸ್ಸು, ಏಕಾಗ್ರತೆ, ಸಾಧನೆ, ತೃಪ್ತಿಯ ಬದುಕು ಸಾಧ್ಯ. ಪತಂಜಲಿ ಮಹರ್ಷಿ ಬೋಧಿಸಿರುವ ಅಷ್ಟಾಂಗ ಯೋಗಗಳನ್ನು ಗಮನಿಸಿ :

1) ಯಮ : ಸತ್ಯ ಹೇಳುವುದು, ಅಹಿಂಸಾ ಪಾಲನೆ, ಕಳ್ಳತನ ಮಾಡದಿರುವುದು, ನಾಳೆಗಾಗಿ ಸಂಗ್ರಹಿಸದಿರುವುದು ಹಾಗೂ ಮನೋಕಾಮನೆಗಳ ಹತೋಟಿ.

2.. ನಿಯಮ : ಸ್ವಚ್ಛತೆ, ತಪ, ಅಧ್ಯಯನ

3. ಆಸನಗಳು :ದೇಹವನ್ನು ಹಿತಕಾರವಾದ ಭಂಗಿಗಳಲ್ಲಿಟ್ಟು ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವುದು.

4. ಪ್ರಾಣಾಯಾಮ : ಶರೀರದೊಳಕ್ಕೆ ಹೋಗಿಬರುವ ಉಸಿರಿನ ನಿಯಂತ್ರಣ ನಿದಾನವಾಗಿ, ದೀರ್ಘವಾಗಿ ಉಸಿರೆಳೆದು ಹಾಗೆಯೇ ನಿದಾನವಾಗಿ ಹೊರಬಿಡುವುದು. ತನ್ಮೂಲಕ ಶರೀರದ ಬಿಗಿತವನ್ನು ತಗ್ಗಿಸುವುದು.

5. ಪ್ರತ್ಯಾಹಾರ : ಪಂಚೇ ದ್ರಿಯಗಳು ಸಹಜವಾಗಿ ಬಹಿರ್ಮುಖಿಗಳು. ಅವುಗಳು ಅಂತ ರ್ಮುಖಿಯಾಗುವಂತೆ ಮಾಡುವುದು.

ಧರ್ಮ ಮತ್ತು ಸಮಾಜಕಾರ್ಯ

ಡಾ॥ ಮಠಂ ವಾಸುದೇವ ಮೂರ್ತಿ

ಧರ್ಮ ಅನ್ನುವ ಪದಕ್ಕೆ ಅನೇಕಾರ್ಥಗಳಿವೆ. ಮತ, ಆಚಾರ, ಸ್ವಭಾವ ಮೊದಲಾದ ಅರ್ಥಗಳಲ್ಲಿ ಧರ್ಮ ಶಬ್ದವನ್ನು ಉಪಯೋಗಿಸುವುದು ಬಹಳ ಪ್ರಚಾರದಲ್ಲಿದೆ. ಧರ್ಮ ಶಬ್ದವು ಸಂಸ್ಕೃತದಲ್ಲಿನ 'ಧೃ'ಧಾತುವಿನಿಂದ ನಿಷ್ಪನ್ನವಾಗಿದೆ. 'ಧೃ'ಎಂದರೆ ಧರಿಸುವುದು, ಹಿಡಿಯುವುದು, ಉಳಿಸುವುದು ಎಂದರ್ಥವಾಗುತ್ತೆ.

ಪ್ರಸ್ತುತ ವಿಷಯದಲ್ಲಿ ಉಳಿಸುವುದು, ಬೆಳಸುವುದು ಅನ್ನುವ ವಿಶೇಷಾರ್ಥದಲ್ಲಿ ಧರ್ಮ ಶಬ್ದವನ್ನು ಉಪಯೋಗಿಸೋಣ. ಕಾಪಾಡುವುದು, ಬೆಳಸುವುದು ಅನ್ನುವ ಅರ್ಥಗಳಲ್ಲಿ ಉಪಯೋಗಿಸುವ ಉದ್ಧಾರ ಶಬ್ದವು, ಧೃ ಧಾತುವಿನಿಂದ, ಹುಟ್ಟಿರುವುದು. ಆದ್ದರಿಂದ ಧರ್ಮ ಶಬ್ದಕ್ಕೆ ಉಳಿಸುವ ಆಚರಣೆ ಎಂದರೆ ವಿಪರೀತವಾದ ಅರ್ಥವೇನೂ ಅಲ್ಲ.

ಧರ್ಮ ಯಾರನ್ನ ಉಳಿಸುವುದು ? ಯಾರನ್ನ ಬೆಳಸುವುದು ಅಂತ ಪ್ರಶ್ನಿಸಬಹುದು. ಇದಕ್ಕೆ ನಮ್ಮ ಉತ್ತರ: "ಧರ್ಮವನ್ನ ಯಾವ ಮನುಷ್ಯನು ಉಳಿಸುತ್ತಾನೋ ಅವನನ್ನು ಧರ್ಮ ಉಳಿಸುವುದು, ಬೆಳಸುವುದು; ಯಾವ ಇತರ ಜನರಲ್ಲಿ ಧರ್ಮದಿಂದ ವ್ಯವಹರಿಸುತ್ತೇವೋ, ಆ ಜನರನ್ನು ಉಳಿಸುವುದು, ಬೆಳಸುವುದು; ಮತ್ತು, ಯಾವ ಸಮಾಜಧರ್ಮ ಪ್ರಧಾನವಾದದ್ದೋ ಆ ಸಮಾಜವನ್ನು ಧರ್ಮ ಉಳಿಸುವುದು ಬೆಳಸುವುದು. ಈ ಅರ್ಥದಲ್ಲೇ "ಧರ್ಮೋ ರಕ್ಷತಿ ರಕ್ಷಿತಃ" ಅಂತ ಒಂದು ಅರ್ಥಗರ್ಭಿತವಾದ ಹೇಳಿಕೆಯಿದೆ. ಅಂದರೆ "ಯಾರು ಧರ್ಮವನ್ನ ಕಾಪಾಡುತ್ತಾರೋ ಅವರನ್ನು ಧರ್ಮವು ಕಾಪಾಡುತ್ತದೆ."

ಇಲ್ಲಿ ಗಮನಿಸಿಬೇಕಾದ ಒಂದು ಮುಖ್ಯಾಂಶವು. ಕೇವಲ ಮನಸ್ಸಿನಲ್ಲಿ ಊಹಿಸಿ, ಹೃದಯದಿಂದ ಸ್ಪಂದಿಸಿ, ಶರೀರದಿಂದ ರೋಮಾಂಚಿತನಾಗಿ, ಕುಳಿತು ಕಣ್ಣು ಮುಚ್ಚಿ ಅನುಭವ ಮಾತ್ರದಿಂದ ಮುಗಿಸುವಂಥದ್ದಲ್ಲ ಧರ್ಮ. ನಿಷ್ಕಾಮದಿಂದ ಫಲಾನುಸಂಧಾನವಿಲ್ಲದೆ ಮಾಡುವ ಆಚರಣೆಯೂ ಅಲ್ಲ ಧರ್ಮವು. ಧರ್ಮದ ತಿರುಳು,

ಸದ್ಭಾವನೆಯಿಂದ ಕೂಡಿದ ಆಚರಣೆಯಲ್ಲಿ (ಕೆಲಸದಲ್ಲಿ)ದೆ. ಧರ್ಮವು ಮಾನಸಿಕವಾದ ಹಾರ್ದಿಕವಾದ ಸತ್ಕರ್ಮ ರೂಪ. ಅನುಷ್ಠಾನವೇ ಅದರ ಆಕೃತಿ. (ಧರ್ಮಾಂಚರ) ಸದ್ಭಾವನವೇ ಜೀವ; ಪಾರ್ವತೀ ಪರಮೇಶ್ವರರು ಹೇಗೆ ಸಂಪೃಕ್ತರೋ ಹಾಗೆಯೇ ಸದ್ಭಾವನೆಯೂ ಅನುಷ್ಠಾನವು ಎರಡೂ ಸೇರಿ ಧರ್ಮದಲ್ಲಿ ಬೇರ್ಪಡಿಸಲಾಗದೆ ಸಮ್ಮಿಳಿತವಾಗಿರುತ್ತವೆ.

ಧರ್ಮವನ್ನು ರಕ್ಷಿಸುವವನನ್ನು ಧರ್ಮವು ರಕ್ಷಿಸುವುದು ಅಂತ ಹೇಳಿದ್ದಾಯಿತಷ್ಟೆ. ಇದು ಹೇಗೆ ಅಂತ ವಿಚಾರ ಮಾಡುವುದು ಪ್ರಕೃತ. ಮನುಸ್ಮೃತಿಯಲ್ಲಿ ಎಲ್ಲಜನರಿಗೂ ಅನ್ವಯಿಸುವಂಥಾ ಧರ್ಮದ ಐದು ಅಂಶಗಳನ್ನು ಒಟ್ಟುಗೂಡಿಸಿ ಸಂಗ್ರಹವಾಗಿ ಹೀಗೆ ಹೇಳಲ್ಪಟ್ಟಿದೆ.

''ಅಹಿಂಸಾಸತ್ಯಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ
ಏತಂ ಸಾಮಾಸಿಕಂ ಧರ್ಮಂ ಚಾತುರ್ವರ್ಣ್ಯೇಬ್ರವೀನ್ಮನುಃ।।''

-ಐದು ಸಾಧಾರಣ ಧರ್ಮಗಳಾವುವು ಅಂದರೆ; ಅಹಿಂಸೆ, ಸತ್ಯ, ಅಸ್ತೇಯ (ಅಂದರೆ ಇತರರ ವಸ್ತುಗಳನ್ನು ಕೋರದಿರುವುದು; ಅಸ್ತೇಯ ಎಂದರೆ ಅವಶ್ಯಕತೆಗಿಂತ ಹೆಚ್ಚಿಗೆ ಇಟ್ಟುಕೊಂಬುವುದು, ಇತರರಿಗೆ ಹಂಚದೆ ತಾನೇ ಉಣ್ಣುವುದು ಸಲ್ಲದು ಮೊದಲಾದ ಅರ್ಥಗಳು ಬರುತ್ತವೆ) ಶೌಚ (ಶುಭ್ರತೆ, ನಿರ್ಮಲತೆ) ಇಂದ್ರಿಯ ನಿಗ್ರಹ. ಈ ಐದು ಧರ್ಮಗಳನ್ನು ಪ್ರತಿಯೊಬ್ಬನೂ ಅನುಷ್ಠಾನದಲ್ಲಿ ತರಬೇಕು. ಇವುಗಳನ್ನು ಆಚರಿಸಿದ ಮನುಷ್ಯನು ಬಾಳುವನು ಬೆಳೆಯುವನು. ಇದೇ ತತ್ತ್ವ ಸಮಾಜಕ್ಕೂ ಸಂಗತವಾಗುತ್ತದೆ.

ಉದಾಹರಣೆಗೆ ''ಶೌಚ'' ವಿಚಾರಿಸಿ ನೋಡೋಣ. ಬದುಕಬೇಕಾದರೆ ದೇಹ ಶುಭ್ರತೆ ಮತ್ತು ಪರಿಸರ ಶುಭ್ರತೆ ಎಲ್ಲರಿಗೂ ಅತ್ಯಾವಶ್ಯಕ. ಮೈಯಿಂದ ಹೊರಗೆ ಬರುವ ಕೊಳೆ, ಪರಿಸರದಿಂದ ಬಿದ್ದ ಧೂಳು ಮತ್ತಿತರ ಮಾಲಿನ್ಯ ತೊಳೆಯದೆ, ಸ್ನಾನ ಮಾಡದೆಯಿದ್ದರೆ ರೋಗರುಜಿನಗಳು ಆವರಿಸುತ್ತವೆ. ಬೇಗ ಮೃತ್ಯುವಿಗೆ ತುತ್ತಾಗುವನು. ಅಲ್ಲದೆ ರೋಗಗಳನ್ನು ಇತರರಿಗೆ ಹಚ್ಚುವನು. ಸಮಾಜವು ಇಂಥ ಮಲಿನಪುರುಷನನ್ನು ದೂರವಿಡುವುದು. ಶೌಚವನ್ನು ಕಾಪಾಡಿದರೆ, ಶೌಚವು ಮನುಷ್ಯನನ್ನು ಕಾಪಾಡುತ್ತೆ.

ಸ್ನಾನ ಮಾಡಿ ಮೈ ಮೇಲಿನ ಕೊಳೆ ಮಾತ್ರ ತೊಳೆದುಕೊಂಡರೆ ಶೌಚಧರ್ಮ ನಿರ್ವಹಿಸಿದಂತಾಗುವುದಿಲ್ಲ. ಶರೀರದ ಒಳಗಿನ ಕೊಳೆಯ ವಿಚಾರವೇನು ? ಅದನ್ನು ಹೋಗಿಸಲಿಲ್ಲವಲ್ಲ ! ಹೊತ್ತು ಗೊತ್ತು ಮಾಡದೆ, ಸ್ಥಿತಿ ಮಿತಿ ನೋಡದೆ, ತಿನ್ನಬಹುದು ತಿನ್ನುಬಾರದು ಅಂತ ಲೆಕ್ಕಿಸದೆ ಹೊಟ್ಟೆ ತುಂಬಿಕೊಳ್ಳುವವರಿಗೆ ಶ್ಲೇಷ್ಮವಾತಪಿತ್ತಾದಿ ರೋಗಗಳು ಕಾಡದೇಯಿರುವವೇ, ರಕ್ತ ಕೆಡದೆ ? ಶರೀರದ ಬಾಹ್ಯದ ಶೌಚ ಎಷ್ಟು ಮುಖ್ಯವೋ ಶರೀರದ ಆಂತರಿಕ ಶೌಚವೂ ಅಷ್ಟೇ ಮುಖ್ಯ, ಇನ್ನೂ ಹೆಚ್ಚು ಮುಖ್ಯ

ಅನ್ನಬಹುದು. ದೇಹದ ಬಾಹ್ಯಾಭ್ಯಂತರ ಶೌಚ ಧರ್ಮವನ್ನು ನಡಿಸಿಕೊಂಡು ಬಂದರೇನೇ ಮನುಷ್ಯನು ಉಳಿಯುವನು, ಬೆಳೆಯುವನು ಇಲ್ಲದಿದ್ದರೆ ಅಳಿಯುವನು. ದೇಹದ ಒಳಗೆ ಹೊರಗೆ ಶೌಚವನ್ನು ಪಾಲಿಸಿದರೆ ಸಾಲದು. ಮನಸ್ಸು ಕೂಡ ಪ್ರಶಾಂತವಾಗಿ, ಪ್ರಸಾದವಾಗಿ, ಸಂತೋಷವಾಗಿಯಿದ್ದರೇನೆ ಶೌಚಕ್ರಿಯೆ ಸಾಧ್ಯವಾಗುವುದು. ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಾದಿ ವ್ಯಸನಗಳು ಇಂದ್ರಿಯಗಳನ್ನು ಸೆಳೆದು, ಉದ್ರೇಕಗೊಳಿಸಿ, ಪಚನ ಪ್ರಕ್ರಿಯೆಯನ್ನು ಹಾಳು ಮಾಡಿ, ನರಗಳನ್ನು ದುರ್ಬಲಗೊಳಿಸಿ, ಮನುಷ್ಯನನ್ನು ಸಾವಿನತ್ತ ಕೊಂಡೊಯ್ಯುತ್ತವೆ. ಶೌಚ ರಕ್ಷಣೆಗೆ ನಿಗ್ರಹವು ಕೂಡ ಒಂದು ಧರ್ಮ ಎಂದು ಪರಿಗಣಿಸಲಾಗಿದೆ. ನೆಮ್ಮದಿಯಾಗಿ ಬಾಳಲಿಚ್ಛಿಸುವವನು, ಸತ್ಸಮ್ಮತವಾಗಿ ಬೆಳೆಯಲು ಅವಕಾಶವನ್ನು ಕೋರುವನು. ಇದಕ್ಕಾಗಿ ಅವನು ತನ್ನ ಇಂದ್ರಿಯಗಳನ್ನ ಮುಂಗಡವಾಗಿ ವಶಪಡಿಸಿಕೊಳ್ಳಬೇಕು. ಇಂದ್ರಿಯಗಳನ್ನು ವಶಪಡಿಸಿಕೊಂಡರೆ ಎಲ್ಲವನ್ನೂ ಗೆದ್ದಂತೆಯೇ. ಈ ಸಂದರ್ಭದಲ್ಲಿ ಪ್ರಹ್ಲಾದನು ತನ್ನ ತಂದೆಯಾದ ಹಿರಣ್ಯಕಶಿಪು ಮಹಾರಾಜನಿಗೆ ಹೇಳಿದ ಮಾತು ತುಂಬ ಅರ್ಥಗರ್ಭಿತವಾಗಿದೆ: ''ಪ್ರಿಯ ಜನಕನೇ, ನೀನು ಮೂರುಲೋಕಗಳನ್ನು ಜಯಿಸಿದಿ; ಆದರೆ ಇಂದ್ರಿಯಗಳಿಗೆ ಅಧಿಷ್ಠಾನವಾದ, ಮಾಂಸಮಯವಾದ ನಿನ್ನ ಸಣ್ಣದೇಹವನ್ನು ಜಯಿಸಲಾರದೇ ಹೋದಿ. ಇಂದ್ರಿಯ ನಿಗ್ರಹದಿಂದ ನಿನ್ನ ಶರೀರವನ್ನು ನೀನು ಜಯಿಸಿಕೊಂಡರೆ ಈ ವಿಶ್ವದಲ್ಲಿ ನಿನ್ನ ಸರಿ ಯಾರೂ ಇರಲಾರರು.''

ಇಂದ್ರಿಯ ನಿಗ್ರಹಕ್ಕೆ ಮನಸ್ಸೇ ಕಾರಣ, ಅಂದರೆ ಸಾಧನ. ಮನಸ್ಸಿನ ಸಹಾಯದಿಂದಲೇ ಇಂದ್ರಿಯಗಳನ್ನ ವಶಪಡಿಸಿಕೊಳ್ಳಲು ಸಾಧ್ಯವಾಗುವುದು. ಭಗವದ್ಗೀತೆಯಲ್ಲಿ ಹೇಳಿದಂತೆ ಮನಸ್ಸು ಅತಿ ಚಂಚಲವಾದದ್ದು. ಬಲವಾಗಿ ಆಕಡೆ ಈಕಡೆ ಎಳೆಯುತ್ತದೆ. ಮನಸ್ಸಿಗೆ ಒಂದು ಕಡೆ ನಿಲುವು ತರುವುದು ಕಷ್ಟ. ಆದರೂ, ಶ್ರೀ ಕೃಷ್ಣನು ಬೋಧಿಸಿದಂತೆ ಅಭ್ಯಾಸದಿಂದ, ವೈರಾಗ್ಯಭಾವನೆಯಿಂದ ಕ್ರಮೇಣ ಚಂಚಲ ಮನಸ್ಸನ್ನು ಸ್ಥಿರಪಡಿಸಿ, ವಶದಲ್ಲಿಟ್ಟುಕೊಳ್ಳಬಹುದು. ಮನಸ್ಸು ಸ್ವಾಧೀನದಲ್ಲಿದ್ದವನಿಗೆ ಇತರ ಇಂದ್ರಿಯವ್ಯಾಪಾರಗಳು ತನ್ನ ಅಧೀನ. ಮನಸ್ಸು ಕೇಂದ್ರಸ್ಥಾನದಲ್ಲಿರುವ ಒಂದು ಪ್ರಮುಖವಾದ ಅಂತರಂಗದಲ್ಲಿರುವ ಇಂದ್ರಿಯ. ಹೇಗೆ ಚಕ್ರದ ಅರೆಗಳು ಗುಂಬದಲ್ಲಿ ಹುದುಗಿಕೊಂಡಿರುವುವೋ, ಹಾಗೆಯೇ ಶ್ರೋತ್ರ, ಘ್ರಾಣ, ರಸನ, ಸ್ಪರ್ಶ, ದರ್ಶನ ಮೊದಲಾದ ಪಂಚೇಂದ್ರಿಯಗಳು ಮನಸ್ಸಿನಲ್ಲಿ ಹುದುಗಿಕೊಂಡಿರುವುವು. ಏನಾದರೂ ಕೇಳಬಯಸಲು, ವಾಸನೆ ನೋಡಲಿಚ್ಛಿಸಲು, ತಿನ್ನಲೆಳಸಲು, ಮುಟ್ಟಿ ನೋಡಲು ನೋಡಲಪೇಕ್ಷಿಸಲು, ಮನವೇ ಮೂಲಕಾರಣ. ಎಲ್ಲ ವ್ಯವಹಾರಗಳಲ್ಲಿ ಪ್ರವರ್ತನೆಗೆ ಪ್ರಬೋಧನೆ ಮಾಡಿ, ಇತಿ ಮಿತಿ, ರೀತಿ ನೀತಿ, ಬೇಕುಬೇಡಗಳನ್ನು ಪಾಲಿಸುವುದಕ್ಕೂ, ಪಾಲಿಸದೇ ಇರುವುದಕ್ಕೂ ಮನವೇ ಮುಖ್ಯ ಕಾರಣ. ಮನಸ್ಸಿನ ಪ್ರೇರಣೆ ಸಹಾಚರಣೆಯಿಲ್ಲದೆ ಯಾವ ಇಂದ್ರಿಯವೂ ಸಾರ್ಥಕವಾಗಿ ವಿಷಯಗಳಲ್ಲಿ

ಪ್ರವರ್ತಿಸಲಾರದು. ಬುದ್ಧಿಯಿಂದ ಮನಸ್ಸನ್ನು ವಶಪಡಿಸಿಕೊಂಡು ಇಂದ್ರಿಯಗಳನ್ನು ಸತ್ಕಾರ್ಯಗಳತ್ತ ನಡಿಸಬೇಕು. ಈ ವಿಷಯವನ್ನೇ ಉಪಮಾನಾಲಂಕಾರದ ರೀತಿಯಲ್ಲಿ ಮನತಟ್ಟುವಂತೆ ಕಠೋಪನಿಷತ್ತು ಹೀಗೆ ಹೇಳುತ್ತದೆ : ಶರೀರವೇ ಒಂದು ರಥ, ಈ ರಥದಲ್ಲಿ ಪ್ರಯಾಣ ಮಾಡುತ್ತಿರುವನೇ ಜೀವನು, ಇಂದ್ರಿಯಗಳೇ ರಥವನ್ನು ಎಳೆಯುತ್ತಿರುವ ಕುದುರೆಗಳು, ವಿಷಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಕುದುರೆಗಳು ಓಡುತ್ತಿರುವವು, ಮನಸ್ಸೇ ಈ ಕುದುರೆಗಳಿಗೆ ಲಗಾಮು, ಬುದ್ಧಿಯೇ ಈ ಲಗಾಮನ್ನು ನಿಯಂತ್ರಿಸುವುದು. ಜೀವನು ಬುದ್ಧಿಯುಕ್ತವಾದ ಮನಸ್ಸಿನಿಂದ ತನ್ನ ಇಂದ್ರಿಯಗಳನ್ನು ಉಪಯೋಗಿಸಿ ವಿಷಯಗಳನ್ನು ಅನುಭವಿಸುವನು.

> (ಆತ್ಮಾನಂ ರಥಿನಂ ವಿದ್ಧಿ, ಶರೀರಂ ರಥಮೇವ ತು । ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹ ಮೇವ ಚ । ಇಂದ್ರಿಯಾಣಿ ಹಯಾನ್ಯಾಹುಃ ವಿಷಯಾತೇಷು ಗೋಚರಾನ್। ಆತ್ಮೇಂದ್ರಿಯ ಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ॥ (ಕಠ 1, 3,3)

ಈ ವಿಚಾರಗಳಿಂದ ಒಂದು ಅಭಿಪ್ರಾಯ ಸೂಚಿತವಾಗುತ್ತದೆ. ಎಲ್ಲ ಪ್ರವೃತ್ತಿಗಳ, ಧರ್ಮಾಚರಣೆಗಳ ಹೊಣೆ, ಇಂದ್ರಿಯ ನಿಗ್ರಹದ ಮೇಲಿದೆ. ವಿವೇಕಯುಕ್ತವಾದ ಮನಸ್ಸಿನಿಂದ ಇಂದ್ರಿಯಗಳನ್ನು ನಡೆಸಿಕೊಂಡರೆ, ಎಲ್ಲ ಧರ್ಮಗಳನ್ನು, ಅಂದರೆ, ಅಹಿಂಸೆ, ಸತ್ಯ, ಶೌಚ, ಅಸ್ತೇಯ, ಇವುಗಳನ್ನು ಸುಲಭವಾಗಿ ಅನುಷ್ಠಾನಗೊಳಿಸಬಹುದು. ಇಂದ್ರಿಯನಿಗ್ರಹವು ಒಂದು ಇಲ್ಲದಿದ್ದರೆ ಯಾವ ಧರ್ಮದ ಮದ, ಮಾತ್ಸರ್ಯದಿಗಳೆಂಬ ಅಂತರ್ವೈರಿಗಳನ್ನು ಹೊರ ಓಡಿಸಿ ಅಂತಶ್ಶುದ್ಧಿ ತರುವುದು ಇಂದ್ರಿಯ ನಿಗ್ರಹವೇ. ಬಾಹ್ಯಾಂತರ ಶುದ್ಧಿ, ಪರಿಸರ ಶುದ್ಧಿ ವಿಷಯದ ಬಗ್ಗೆ, ಆಯುರ್ವೇದಶಾಸ್ತ್ರ, ಯೋಗಶಾಸ್ತ್ರಗಳಲ್ಲಿ ಸಾಕಷ್ಟು ನಿರ್ದೇಶಗಳು ದೊರೆಯುತ್ತವೆ.

ಸತ್ಯ

ಸತ್ಯವನ್ನು ಪಾಲಿಸಬೇಕೆಂಬ ಧರ್ಮ ಎಲ್ಲರಿಗೂ ಅನ್ವಯಿಸುತ್ತದೆ. ಸತ್ಯವೆಂದರೆ ತಪ್ಪದೆ ಇರುವುದು ಎಂದರ್ಥ. ಯಾವ ವಿಷಯದಲ್ಲಿ ತಪ್ಪದೇ ಇರುವುದು ? ಅಂತ ಕೇಳಬಹುದು. ನಡೆಯಲ್ಲಿ ನುಡಿಯಲ್ಲಿ ಅನಿಸಿಕೆಯಲ್ಲಿ ತಪ್ಪದೇ ಇರುವುದು ಸತ್ಯ. ಅಂದರೆ, ಸತ್ಯಸಂಧನಾದವನಿಗೆ ಯೋಚನೆ, ವಚನ, ಆಚರಣೆ ಒಂದೇ ರೀತಿಯಿರುವುವು. ದುರ್ಜನಗೆ ಬೇರೆ ಬೇರೆ. ಇದನ್ನೇ ಚಮತ್ಕಾರವಾಗಿ ಹೀಗೆ ಹೇಳಲಾಗಿದೆ :

> ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಃ
> ಮನಸ್ಯನ್ಯಂ ವಚಸಸ್ಯಂ ಕರ್ಮಣ್ಯೇನ್ಯ ದುರಾತ್ಮನಃ

ಮಹಾತ್ಮನಿಗೆ ಮನಸ್ಸಿನಲ್ಲಿ ಮಾತಿನಲ್ಲಿ ಮಾಡುವುದರಲ್ಲಿ ಒಂದೇ ರೀತಿಯಿರುತ್ತದೆ; ಆದರೆ ದುರಾತ್ಮನು ಯೋಚಿಸುವುದೊಂದು, ಹೇಳುವುದೊಂದು, ಮಾಡುವುದೊಂದು.

ಸೂರ್ಯ ಚಂದ್ರರು ಯುಗಯುಗಾಂತರದಿಂದ ತಮ್ಮ ಕೆಲಸವನ್ನು ಒಂದು ದಿವಸವೂ, ಒಂದು ಕ್ಷಣವೂ ತಪ್ಪದೇ ನಿರ್ವಹಿಸುತ್ತಿದ್ದಾರೆ. ಸ್ವಲಾಭಕ್ಕಲ್ಲದೇ, ಲೋಕೋಪಕಾರಕ್ಕಾಗಿಯೇ ಪೂರ್ವದಲ್ಲಿ ಹುಟ್ಟಿ, ಪಶ್ಚಿಮದಲ್ಲಿ ಮುಳುಗಿ, ದಾರಿ ತಪ್ಪದೆ, ಸಮಯವನ್ನು ಉಲ್ಲಂಘಿಸದೆ, ವಿಶ್ರಾಂತಿಗೊಳ್ಳದೆ, ನಿಯತವಾಗಿ ಬೆಳಕು, ಉಷ್ಣ, ಶೀತ ಪ್ರಪಂಚಕ್ಕೆ ತಲುಪಿಸುತಿದ್ದಾರೆ. ಭೂಮಿಯು ವಿರಾಮವಿಲ್ಲದೆ ತಾನು ತಿರುಗಬೇಕಾದ ವೇಗದಿಂದ ಸೂರ್ಯನನ್ನೆ ಸುತ್ತುತ್ತಿದೆ. ವಾಯುವು ''ಸದಾಗತಿ''ಯಂತೆ ತನ್ನನೆ ಹೆಸರಿಗನುಗುಣವಾಗಿ ಪ್ರಾಣಿಗಳ ಹಿತಕ್ಕೋಸ್ಕರ ಸದಾ ಚಲಿಸುತ್ತಲೇ ಇದೆ. ವಸಂತಾದಿ ಋತುಗಳು ತಮ್ಮ ತಮ್ಮ ಕಾಲಕ್ಕೆ ತಪ್ಪದೇ ಬರುವುದು ನೋಡುತ್ತಲೇ ಇದ್ದೇವೆ. ಹೀಗೆ, ಸೂರ್ಯ ಚಂದ್ರರು, ಭೂಮಿ, ಗಾಳಿ, ಅಗ್ನಿ ಮೊದಲಾದ ಪ್ರಕೃತಿಯ ಅಂಗಗಳು ಕಿಂಚಿತ್ತೂ ತಪ್ಪದೇ ಜಗದುಪಕಾರಕ್ಕಾಗಿ ತಮ್ಮ ತಮ್ಮ ನಿರ್ದಿಷ್ಟ ಕಾರ್ಯಗಳನ್ನ ನಡೆಸಿಕೊಂಡು ಬರುವುದನ್ನು ಕಂಡು, ವೇದ ಕಾಲದ ಋಷಿಗಳು, ಪ್ರಕೃತಿಯಲ್ಲಿ ಲೋಕಹಿತಕ್ಕಾಗಿ ಪದಾರ್ಥಗಳನ್ನ ಪ್ರಚೋದಿಸುವ ಒಂದು ಶಕ್ತಿಯಿದೆಯಂತ ಊಹಿಸಿದರು. ಆ ಶಕ್ತಿಯನ್ನು ''ಋತ'' ಅಂತ ಕರೆದರು. ಋತ ಎನ್ನುವ ಶಬ್ದದಲ್ಲಿ, ನಿಯಮ, ನ್ಯಾಯ, ಧರ್ಮ, ಸತ್ಯ ಮೊದಲಾದ ಅರ್ಥಗಳು ಅಡಗಿವೆ. ವೇದಗಳಲ್ಲಿ ಋತ ಸತ್ಯ ಪದಗಳು, ಪರ್ಯಾಯ ಪದಗಳಾಗಿ ಉಪಯೋಗಿಸಲಾಗಿದೆ. ಉದಾಹರಣೆಗೆ, ''ಋತಂ ವದಿಷ್ಯಾಮಿ, ಸತ್ಯಂ ವದಿಷ್ಯಾಮಿ'' ''ಸತ್ಯಂತ್ವರ್ತೇನ''.

ಮಾನವ ಸಮಾಜ ವಿಪುಲವು, ಸುಯೋಜಿತವು ಆಗಿ ವೃದ್ಧಿಗೊಂಡ ಹಾಗೆಲ್ಲ, ಮನೀಷಿಗಳ ವಿಚಾರದೃಷ್ಟಿ ಸುನಿಶ್ಚಿತವೂ ಪ್ರಕಾಶಮಾನವೂ ಆಗತೊಡಗಿತು. ಕ್ರಮೇಣ ಋತ, ಸತ್ಯ, ಧರ್ಮ ಪದಗಳು ತಮ್ಮ ಬಾಂಧವ್ಯದ ಸಂಬಂಧ ಕಳೆದುಕೊಳ್ಳದೆ, ತಮ್ಮದೇ ಆದ ನಿಶ್ಚಿತಾರ್ಥವನ್ನು ಹೊಂದಲಾರಂಭಿಸಿದವು. ಪ್ರಕೃತಿಯ ಅಂಗಗಳಾದ ಸೂರ್ಯ ಚಂದ್ರ, ವಾಯು, ಭೂಮಿ ಮೊದಲಾದವುಗಳು ತಮ್ಮ ತಮ್ಮ ಕಾರ್ಯಗಳಲ್ಲಿ ಸಕಾಲಕ್ಕೆ ಪಾಲಿಸುತ್ತಿರುವ ನಿಯತ್ತಿಗೆ ಋತವೆಂದರ್ಥವಾಯಿತು. ಈ ಪ್ರಕೃತ್ಯಂಗಗಳ ಆಧಾರದ ಮೇಲೆ ಜೀವಂತನಾಗಿ, ಬದುಕಿ ಬೆಳೆಯಬೇಕಾದ ಮನುಷ್ಯ ವಿಚಾರಾಚಾರ ವಚನಗಳ ನಿಯತ್ತಿಗೆ ಸತ್ಯವೆಂದರ್ಥವಾಯಿತು. ಮನುಷ್ಯನಲ್ಲಿ ತಾನಿದ್ದು, ತನ್ನಲ್ಲಿ ಮನುಷ್ಯನನ್ನಿರಿಸಿಕೊಂಡು ಉಳಿದು ಬೆಳೆಯುವ ಸಮಾಜದ ನಿಯತ್ತಿಗೆ ಧರ್ಮವೆಂದರ್ಥ. ಇದನ್ನೆ ಇನ್ನೊಂದು ರೀತಿಯಲ್ಲಿ ಹೇಳಬಹುದು: ಋತ ಮೂರು ರೂಪಗಳನ್ನು ತಾಳುತ್ತದೆ, ಪ್ರಕೃತಿಯಲ್ಲಿ ಋತ ರೂಪವನ್ನು, ಮನುಷ್ಯನಲ್ಲಿ ಸತ್ಯರೂಪವನ್ನು, ಸಮಾಜದಲ್ಲಿ ಧರ್ಮರೂಪವನ್ನು. ಎಲ್ಲ ರೂಪಗಳಲ್ಲಿ ಋತದ ಪ್ರಭಾವ ಕಡಿಮೆಯಿಲ್ಲದೆ ಒಂದೇ ಸಮಾನವಾಗಿರುತ್ತದೆ; ತನ್ನ ಬಳಸಿದವನನ್ನು ಉಳಿಸಿ ಬೆಳಸುವುದು, ಇಲ್ಲದವನನ್ನು ಅಳಿಸುವುದು.

ಇನ್ನೊಂದು ಗಮನಾರ್ಹ, ಸತ್ಯ ಮೇವ ಜಯತೇ ಅಂತ ಪ್ರಯೋಗವಿದೆ. ಸತ್ಯವೇ ಯಾವಾಗಲೂ ಗೆಲ್ಲುತ್ತದೆ ಎಂದರ್ಥ. ಈ ಪ್ರಯೋಗ ಆತ್ಮನೇಪದದಲ್ಲಿದೆ. ಅಂದರೆ,

ಗೆಲ್ಲುವುದು ಸತ್ಯವೇ ಇನ್ಯಾರೂ ಅಲ್ಲ. ಗೆಲ್ಲುವುದಕ್ಕೆ ಸತ್ಯಕ್ಕೆ ಯಾವ ಆಶ್ರಯವೂ ಬೆಂಬಲವೂ ಬೇಡ. ಆದರೆ ನಾವು ಉಳಿದು ಬೆಳೆಯಬೇಕಾದರೆ ಸತ್ಯದ ಆಶ್ರಯ ಬೇಕೇ ಬೇಕು. ಸತ್ಯವಿಲ್ಲದ ಬಾಳು ಹಾಳು. ಅದು ಅನೃತ. ಅಂದರೆ, ಸತ್ಯವಿಲ್ಲದವನ ಜೀವನ ಪ್ರಕೃತಿಗೆ ವಿರುದ್ಧವಾದದ್ದು. (ಅನ್+ಋತ). ಅಂಥವನ ಬದುಕು ಕ್ಷಯೋನ್ಮುಖಿ.

ಅಹಿಂಸೆ

ಅಹಿಂಸೆಯೇ ಪರಮ ಧರ್ಮವು (ಅಹಿಂಸಾ ಪರಮೋಧರ್ಮ) ಅಂತ ಒಂದು ನಿರ್ದೇಶವಿದೆ. ಅಹಿಂಸೆ ಎಂದರೆ, ಮನಸಾವಾಚಾ ಕರ್ಮಣಾ ಇನ್ನೊಬ್ಬರಲ್ಲಿ ದ್ವೇಷಯಿಡದೇ ಇರುವುದು, ಯಾರಿಗೂ ಅಪಕಾರ, ನೋವು, ಪೀಡೆ ಉಂಟುಮಾಡದೇ ಇರುವುದು. ಅಹಿಂಸೆ ಶಬ್ದವು ಹಿಂಸೆಯಭಾವನೆಯಿಲ್ಲದಿರುವಿಕೆ, ಹಿಂಸೆ ಮಾಡಬಾರದು ಅಂತಲೂ ಹಿಂಸೆಯ ಅಭಾವ ನಿಷಿದ್ಧಾರ್ಥಗಳಲ್ಲಿ ಹೇಳಲಾಗಿದೆ. ಇದು ಕೇವಲ ನಿವೃತ್ತಿಮಾರ್ಗವಾಯಿತಲ್ಲ, ದಯೆ, ಸೇವೆ, ಚಿಕಿತ್ಸೆ ಮೊದಲಾದ ಸಮಾಜೋಪಯೋಗಿ ಗುಣಗಳಿಗೆ ಸ್ಥಾನವಿಲ್ಲ, ಅಂತ ಕೇಳಬಹುದು. ಇದಕ್ಕೆ ಉತ್ತರ ಹೀಗೆ ಹೇಳಬೇಕಾಗುತ್ತೆ. ನಾಭಿಪ್ರಾಯವಾಗಿಯೇ ಅಹಿಂಸಾ ಶಬ್ದವನ್ನು ಹಿಂಸೆಯಭಾವನೆಯ ಅಭಾವ, ಹಿಂಸಾಕಾರ್ಯ ನಿಷಿದ್ಧದ ಅರ್ಥಗಳಲ್ಲಿ ಹೇಳಲ್ಪಟ್ಟಿದೆ. ಮನಸ್ಸು ಮೊದಲು ನಿರ್ಮಲವಾಗಿದ್ದರೇನೇ ಅದನ್ನು ಒಳ್ಳೇಕಾರ್ಯಗಳತ್ತ ತಿರುಗಿಸಬಹುದು. ರಾಗದ್ವೇಷಗಳಿಂದ ಕೂಡಿದ ಹೃದಯ ದಯಾದಾಕ್ಷಿಣ್ಯ ಭಾವಗಳಿಗೆ ಸ್ಥಾನ ಕೊಡುವುದಿಲ್ಲ. ಒಂದು ವೇಳೆ ಇಂಥಾ ಮನಸ್ಸನ್ನು ಬಲವಂತವಾಗಿ ಒಳ್ಳೆಯ ಕೆಲಸಗಳ ಕಡೆ ತಿರುಗಿಸಿದರೂ, ಮಾಡಿದ ಕೆಲಸಗಳು ಹೃದಯಪೂರ್ವಕವಾಗಿ ಮಾಡಿದಂತಾಗುವುದಿಲ್ಲ. ಇದು ಡಂಭಾಚಾರವಾಗುತ್ತೆ. ಮೊಟ್ಟ ಮೊದಲು ಹೃದಯದಿಂದ ರೋಷದ್ವೇಷವೈಷಮ್ಯಗಳನ್ನು ಹೊರಗೆಡವಿ ನಿರ್ಮಲಗೊಳಿಸಿದರೆ, ಸ್ನೇಹಸೌಹಾರ್ದ ಸಹಾನುಭೂತಿ ಭಾವನೆಗಳು ನೆಲೆಗೊಳ್ಳಲಿಕ್ಕೆ ಅನುಕೂಲವಾಗುವುದು. ಈ ಭಾವನೆಗಳು ನೆಲೆಗೊಂಡಲ್ಲಿ ಸಮಾಜ ಕಾರ್ಯ ಸಹಜವೂ, ಸಾರ್ಥಕವೂ, ಸಂಪೂರ್ಣವೂ ಆಗುವುದು. ಅಹಿಂಸೆ ಒಂದು ಮೌಲಿಕವಾದ ಧರ್ಮ. ಇದು ಒಂದು ನಿಯಮವೂ ಹೌದು. ಒಂದು ರೂಪದ ನಿಗ್ರಹವು ಕೂಡ. ಈ ಹಿಂಸಾ ನಿವೃತ್ತಿ ವ್ರತದಲ್ಲಿ ಭೂತದಯಾಸೇವಾಚಿಕಿತ್ಸಾದಿ ಪ್ರವೃತ್ತಿ ಧರ್ಮಗಳು ಅಡಗಿಕೊಂಡಿವೆ. ಈ ಅಹಿಂಸಾ ಧರ್ಮ ಕಾರ್ಯಗತವಾಗಿದ್ದು, ಶಿಬಿ ಚಕ್ರವರ್ತಿಯಲ್ಲಿ, ದಧೀಚಿಯಲ್ಲಿ, ಬುದ್ಧನಲ್ಲಿ, ಯೇಸುಕ್ರಿಸ್ತನಲ್ಲಿ, ಬಸವಣ್ಣನಲ್ಲಿ, ಮಹಾತ್ಮಗಾಂಧಿಯಲ್ಲಿ ಎದ್ದುಕಾಣುತ್ತದೆ.

ಅಸ್ತೇಯ

ಸ್ತೇನ ಪದಕ್ಕೆ ಕಳ್ಳ ಎಂದರ್ಥ. ಸ್ತೇಯ ಎಂದರೆ ಕಳ್ಳತನ. ಇತರರ ಸ್ವಾಮ್ಯದಲ್ಲಿರುವ ವಸ್ತುವನ್ನು ಅನುಮತಿಯಿಲ್ಲದೆ ಸ್ವಾಧೀನಪಡಿಸಿಕೊಂಬುವುದು ಸ್ತೇಯ, ಕಳ್ಳತನ.

ಕಳ್ಳತನದಲ್ಲಿ, ವಂಚನೆಯಿದೆ, ಬಲಾತ್ಕಾರವಿದೆ, ಹಿಂಸೆಯೂ ಇದೆ. ಸಾಧಾರಣವಾಗಿ ಲೋಭದಿಂದ ಪ್ರೇರಿತನಾಗಿ ಅನುಕಂಪ ತೊರೆದು ಇನ್ನೊಬ್ಬನ ಸ್ವಾಮ್ಯದಲ್ಲಿರುವ ವಸ್ತುವಿಗೆ ಆಶೆಪಟ್ಟು, ಕಳ್ಳತನಕ್ಕೆ ತೊಡಗುತ್ತಾನೆ. ನನಗಿರುವುದು ಸಾಕು, ಇದು ನನ್ನ ಜೀವನಕ್ಕೆ ಪರ್ಯಾಪ್ತವಾದುದು, ಇನ್ನು ಹೆಚ್ಚು ಬೇಡ. ಅನ್ನುವ ಭಾವನೆ ದೊಡ್ಡದಾದ ಸಂತೋಷ ಗುಣ. ಸಂತೋಷ ಗುಣವಿರುವವನು ನಿತ್ಯ ತೃಪ್ತನು. ಸಂತುಷ್ಟೋ ಯೇನಕೇನಚಿತ್ ಅಂತ ಗೀತೆಯಲ್ಲಿದೆ. ಅಂದರೆ ತನ್ನ ಪಾಲಿಗೆ ಬಂದ ಅಲ್ಪಸ್ವಲ್ಪದಿಂದ ತೃಪ್ತನಾಗಿರುವವನು ತನ್ನ ಪೂರೈಕೆಗಳತ್ತ ಧ್ಯಾನ ಕೊಡದೆ, ಇತರರ ಮತ್ತು ಸಮಾಜದ ಹಿತಕ್ಕಾಗಿ ಯೋಚಿಸುವನು ಪರೋಪಕಾರ ಕಾರ್ಯಗಳಲ್ಲಿ ತೊಡಗುವನು. ಈ ಸಂತೋಷ ಗುಣ ನೆಲೆಗೊಳ್ಳಬೇಕಾದರೆ ಮನುಷ್ಯ ತನ್ನ ಹೃದಯದಲ್ಲಿನ ಹಿಂಸೆ, ವೈರ, ಲೋಭ ಮೊದಲಾದ ಅವಗುಣಗಳನ್ನು ಹೊರಗೆಡವಿ, ಪ್ರೇಮ, ಸೌಹಾರ್ದತೆ, ದಯ ಮುಂತಾದ ಸುಗುಣಗಳನ್ನ ಹೊಮ್ಮಿಕೊಳ್ಳಬೇಕು. ಇಂಥ ಮನಸ್ಥಿತಿಯನ್ನು ಹೊಂದುವುದೇ ಅಸ್ತೇಯಧರ್ಮ. ಅಹಿಂಸೆಯಂತೆ, ಅಸ್ತೇಯವೂ ದಯಾಪ್ರವೃತ್ತಿಗೆ ಪ್ರಚೋದಕ ಶಕ್ತಿಯಾಗಿರುವುದು.

ಜಗತ್ತಿನಲ್ಲಿರುವ ಸಕಲ ಚರಾಚರ ಪದಾರ್ಥಗಳು ಈಶ್ವರನ ಅಧೀನದಲ್ಲಿವೆ. ಅವು ನಮ್ಮವಲ್ಲ. ಆ ಈಶ್ವರನು ನಮಗೆ ಕೊಟ್ಟಿರುವಷ್ಟು ಪದಾರ್ಥಗಳನ್ನು ಮಾತ್ರ ಅನುಭವಿಸಬೇಕು. ಹೆಚ್ಚು ಆಶೆಪಡಬಾರದು.

(ಈಶಾವಾಸ್ಯಮಿದಂ ಸರ್ವಂ, ಯತ್ಕಿಂಚ್ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯ ಸ್ವಿದ್ಧನಂ ॥ (ಈಶಾವಾಸ್ಯೋ ಪನಿಷತ್ತು)

ಮೇಲೆ ಹೇಳಿದಂತೆ, ಹೆಚ್ಚು ಆಶೆಪಡಬಾರದು, ದೇವರು ಕೊಟ್ಟಿದ್ದರಲ್ಲೇ ತೃಪ್ತಿಪಡಬೇಕು ಅಂತ ಈ ಶ್ಲೋಕದರ್ಥ. ಇನ್ನೊಂದು ವಿಶೇಷ ಗಮನಿಸತಕ್ಕದ್ದು. ಎಲ್ಲ ಪದಾರ್ಥಗಳೂ ಈಶ್ವರನ ಅಧೀನದಲ್ಲಿವೆ ಎಂದ ಮೇಲೆ, ಭಗವಂತನು ಕೊಟ್ಟಿದುದಕ್ಕಿಂತ ಹೆಚ್ಚು ತೊಗೊಳ್ಳುವವನು ಕಳ್ಳನೇ ಆದಂತೆ. ಇದೇ ಭಗವದ್ಗೀತೆಯಲ್ಲಿ ಇನ್ನೊಂದು ರೀತಿ ತಿಳಿಸಲಾಗಿದೆ.

ಇಷ್ಟಾನ್ಭೋಗಾ ನ್ಹಿ ವೋದೇವಾ ದಾಸ್ಯನ್ತೇ ಯಜ್ಞಭಾವಿತಾಃ
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೆಸ್ತೇನ ಯೇವಸಃ॥

ದೇವತೆಗಳನ್ನು ಆರಾಧಿಸಿದರೆ ನಿಮಗೆ ಬೇಕಾದ ಪದಾರ್ಥಗಳನ್ನು ಕೊಡುವರು. ಅವರಿಗೆ ನೀವು ಋಣಿಗಳು. ಆ ದೇವತೆಗಳು ಕೊಟ್ಟ ಪದಾರ್ಥಗಳನ್ನು ಮತ್ತು ಅವರಿಗೆ ಕೊಡದೆ ಅನುಭವಿಸುವವನು ಶುದ್ಧ ಕಳ್ಳ.

ದೀರ್ಘವಾಗಿ ಆಲೋಚನೆ ಮಾಡಿದರೆ ಈ ಶ್ಲೋಕದ ಅರ್ಥ ಆಳವಾಗಿ ತೋರುವುದು. ಮನುಷ್ಯನಿಗೆ ಸಮಾಜವೇ ದೊಡ್ಡ, ಪವಿತ್ರವಾದ ದೇವತೆ. ಸಮಾಜದಲ್ಲೇ ಮನುಜನು ಹುಟ್ಟಿ ಬೆಳೆಯುತ್ತಾನೆ. ಭಾಷೆ, ಮತ, ಮೈ ಮನಸ್ಸುಗಳ ಏಳಿಗೆ ಸಮಾಜದಿಂದಲೇ

ದೊರೆಯುತ್ತದೆ. ಉದ್ಯೋಗ, ಜೀವನ, ಆಹಾರ, ವಿಹಾರ, ವ್ಯವಹಾರ ಸಮಾಜದಿಂದಲೇ ಆಗುತ್ತದೆ. ಕೊನೆಗೆ ಸತ್ತಮೇಲೂ ಸಮಾಜವೇ ಅಂತ್ಯಕ್ರಿಯೆ ಮಾಡುತ್ತದೆ! ಮನುಷ್ಯ ಆದ್ಯಂತ ಸಮಾಜ ಜೀವಿ. ವ್ಯಕ್ತಿಗೆ ಸಮಾಜಕ್ಕೆ ಅವಿನಾಭಾವ ಸಂಬಂಧ. ಮನುಷ್ಯನ ಬೃಹದಾಕಾರ ಸಮಾಜ; ಸಮಾಜದ ಪ್ರತಿಬಿಂಬ ಮಾನವ.

ಕೆಲವು ಕೀಟಗಳು ಮೊಟ್ಟೆ ಒಡೆದು ಬಂದ ಕೂಡಲೆ ಹಾರಿಹೋಗುತ್ತವಂತೆ. ಮೃಗವತ್ಸಗಳು ಹುಟ್ಟಿದ ಎರಡು ಮೂರು ದಿನಗಳ ಅವಧಿಯಲ್ಲಿ ಓಡಿಯಾಡಬಲ್ಲವು. ಮನುಷ್ಯನು ಹಾಗಲ್ಲ. ಮಗುವನ್ನು ಮೂರು ನಾಲ್ಕು ವರ್ಷಗಳವರೆಗೂ (ಇನ್ನೂಹೆಚ್ಚು ಅವಧಿ) ತಾಯಿಯೊ, ತಂದೆಯೋ, ಸಮಾಜದ ಮತ್ತೊಬ್ಬರೊ, ನೋಡಿಕೊಳ್ಳದ್ದಿರೆ, ಅದು ಬೆಳೆಯಲಾರದು. ಅರಕ್ಷಿತವಾದ ಮಗು, ಹುಟ್ಟಿದ ದಿವಸವೇ ಸಾಯುವುದು ಅಸಂಭವವೇನಲ್ಲ. ಮನುಷ್ಯನಿಗೆ ಸಮಾಜದ ಕೊಡುಗೆ ಅಷ್ಟಿಷ್ಟೆನಲಾಗದು. ಸಮಾಜಕ್ಕೆ ಮಾನವ ಋಣಿ. ಈ ಋಣವನ್ನು ಹೇಗೆ ತೀರಿಸಬಲ್ಲ? ತೀರಿಸಲೇಬೇಕು. ಸಮಾಜದಲ್ಲಿ ಎಷ್ಟೋ ಸಮಸ್ಯೆಗಳಿವೆ. ನಿರಕ್ಷರತೆ, ದರಿದ್ರತೆ, ಅಜ್ಞಾನ, ಹುಟ್ಟು ಹಾನಿಕರವಾದ ನಂಬುಗೆಗಳು, ಪರಿಸರಮಾಲಿನ್ಯ, ಬಾಲರ, ಸ್ತ್ರೀಯರ, ಅಶಕ್ತರ ಶೋಷಣೆ, ಅಂಗವಿಕಲರ ಅಸಹಾಯತೆ, ಮತಿಗೆಟ್ಟವರ ದಯನೀಯ ಸ್ಥಿತಿ, ಭಿಕ್ಷುಕರ ಗೋಳು, ಭಯಂಕರರೋಗಗಳಿಂದ ನರಳುವವರ ಆಕ್ರಂದನೆ ಸಮಾಜ ಕಾರ್ಯಕರ್ತರನ್ನು ಕೂಗಿಕರೆಯುತ್ತಿರುವ ಸಮಸ್ಯೆಗಳಿಷ್ಟು ಅಂತ ಪರಿಚ್ಛೇದಿಸಿ ಉಲ್ಲೇಖಿಸೋಣ ! ಎಲ್ಲೆಲ್ಲಿ ನೋಡಿದರೂ ಅಲ್ಲಿ ಒಂದಲ್ಲ ಒಂದು ಸಮಸ್ಯೆ!

ಸಮಾಜದ ಋಣ ತೀರಿಸಬೇಕು ಅಂತ ಪ್ರಜೆ ಸಂಕಲ್ಪ ಮಾಡಿದರೆ ಈ ಸಮಸ್ಯೆಗಳನ್ನು ಬಹಳ ಮಟ್ಟಿಗೆ ಪರಿಹರಿಸುವುದೇನೂ ಅಷ್ಟು ಕಷ್ಟವಲ್ಲ. ಓದು ವೃತ್ತಿ ಕಲಿತವರು. ಇಲ್ಲದವರಿಗೆ ನಿಶ್ಶುಲ್ಕವಾಗಿ (ವ್ಯಾಪಾರ ದೃಷ್ಟಿಯಿಂದಲ್ಲ) ಕಲಿಸುವುದು ಧರ್ಮ. ಅನೇಕರು ಅವಶ್ಯಕತೆಗಿಂತ ಅಧಿಕವಾಗಿ ಇಟ್ಟುಕೊಳ್ಳುತ್ತಾರೆ, ಉಪಯೋಗಿಸುತ್ತಾರೆ, ವ್ಯರ್ಥ ಮಾಡುತ್ತಾರೆ. ತನಗೆ, ತನ್ನವರಿಗೆ, ಎಷ್ಟುಬೇಕೊ ಅಷ್ಟು ಮಾತ್ರ ಇಟ್ಟುಕೊಂಡು ಉಪಯೋಗಿಸಿ ಇಲ್ಲದವರಿಗೆ, ಅಗತ್ಯವನ್ನು ಕೂಡಾ ಪೂರೈಸಲಾಗದವರಿಗೆ ದಾನ ಮಾಡುವುದು ಧರ್ಮ. ಹೊಟ್ಟೆ ತುಂಬವದಕ್ಕಿಂತ ಹೆಚ್ಚು ಇಟ್ಟುಕೊಳ್ಳುವವನು ಕಳ್ಳ ಅಂತ ಒಂದು ಪುರಾಣದಲ್ಲಿದೆ! ಹೀಗೆ, ತಮ್ಮ ತಮ್ಮ ಗೃಹಗಳನ್ನು ಪರಿಸರವನ್ನು ನಿರ್ಮಲವಾಗಿಟ್ಟುಕೊಳ್ಳಬೇಕು. ಪ್ರತಿಯೊಬ್ಬ ದೃಢಕಾಯನು, ಅಂಗವಿಕಲರಿಗೆ, ವೃದ್ಧರಿಗೆ, ಅಸಹಾಯಕರಿಗೆ, ನೆರವಾಗಬೇಕು. ಉದ್ಯೋಗ ನಿವೃತ್ತರಾದವರು ತಮ್ಮ ವಿರಾಮದ ವೇಳೆಯಲ್ಲಿ ಜನರಿಗೆ ಸಲಹೆ ಕೊಡುತ್ತಿರುವುದು ಉಚಿತ. ಪ್ರತಿಯೊಬ್ಬನೂ ಎಷ್ಟು ಸ್ವಲ್ಪ ಧನ ಕೊಟ್ಟರೂ, ಎಲ್ಲರ ಕೊಡಿಗೆ ಸೇರಿ ಮಹಾ ನಿಧಿಯಾಗುವುದು. ಈ ನಿಧಿಯಿಂದ ಆರೋಗ್ಯಕೇಂದ್ರಗಳು, ಕ್ರೀಡಾಂಗಣಗಳು, ವಿದ್ಯಾಭವನಗಳನ್ನು ನಿರ್ಮಿಸಬಹುದು. ಈ ಆರೋಗ್ಯ ಕೇಂದ್ರಗಳಲ್ಲಿ, ವೈದ್ಯ ವೃತ್ತಿಯಿಂದ ನಿವೃತ್ತರಾದವರು, ಉಚಿತವಾಗಿ

ಸೇವೆಸಲ್ಲಿಸಬೇಕು. ಈಗ ತಮ್ಮ ವೃತ್ತಿ ನಡೆಸಿಕೊಂಡು ಬರುತ್ತಿರುವ ನಾನಾ ಕ್ಷೇತ್ರಗಳಲ್ಲಿ ನಿಪುಣರಾದ ವೈದ್ಯರು ಕೊನೆಯಿಲ್ಲದ ಅರ್ಥದಾಶೆ ಬಿಡಬೇಕು, ಇಲ್ಲ, ಕಡಿಮೆಯಾದರೂ ಮಾಡಿಕೊಳ್ಳಬೇಕು. ತಮ್ಮ ವೃತ್ತಿಯಲ್ಲಿ, ಒಂದು ಗಂಟೆಯಾದರು ಉಚಿತ ಸೇವೆಗಾಗಿ ಮೀಸಲಿಟ್ಟು ಬಡ ರೋಗಿಗಳಿದ್ದ ಕಡೆ ಹೋಗಿ ಚಿಕಿತ್ಸೆ ಮಾಡುವುದು ಬಹಳ ಶ್ಲಾಘನೀಯ ಗುಣ ನಮ್ಮ ದೇಶದಲ್ಲಿ ಇದು ಅತ್ಯಾವಶ್ಯಕ. ಒಂದು ಹೊತ್ತಿಗೂ ಪೂರ್ತಿ ಊಟ ದೊರಕದೇ ಹಸಿವಿನಿಂದ ನರಳುವವರು ಅನೇಕರು ನಮ್ಮಲ್ಲಿದ್ದಾರೆ. ಪ್ರತಿ ಭಾರತೀಯನೂ ವಾರಕ್ಕೆ ಒಂದು ಸಮಯದ ಊಟ ಬಿಟ್ಟು, ಇಂಥ ಕ್ಷುಧಾರ್ತರಿಗೆ ತಲುಪಿಸಿದರೆ, ಉಭಯ ಧನ್ಯತೆ ಆದೀತು, ಊಟ ಪಡೆದವನು ಧನ್ಯ, ಊಟ ಕೊಟ್ಟವನು ಧನ್ಯ. ಇದನ್ನೇ ಇಂಗ್ಲಿಷಿನಲ್ಲಿ "ಟ್ವೈಜ್ ಬ್ಲೆಸ್ಸ್‌ಡ್" ಅನ್ನುತ್ತಾರೆ. (Twice blessed).

ಹೀಗೆ ಪ್ರತಿಯೊಂದು ಸಮಸ್ಯೆಗೂ ಪ್ರತಿಕ್ರಿಯೆ ಸೂಚಿಸುತ್ತಾ ಹೋದರೆ ಒಂದು ವಿಪುಲ ಗ್ರಂಥವೇ ಆದೀತು. ವೈಚಾರಿಕ ದೃಷ್ಟಿಯಿಂದ ತಜ್ಞರು ಸಮಗ್ರ ಸಮಸ್ಯೆಗಳನ್ನು ಎದುರಿಸುವ ಸಮಾಜ ಕಾರ್ಯ ಪ್ರಣಾಳಿ ಸಿದ್ಧಮಾಡುವುದು ದುಸ್ಸಾಧ್ಯವಲ್ಲ.

ಕವಿಗಳು ಮೇಘವು ನಿರ್ವ್ಯಾಜೋಪಕಾರಕ ಗುಣಗಳುಳ್ಳದ್ದು ಅಂತ ಉತ್ಪ್ರೇಕ್ಷಿಸಿದ್ದಾರೆ. ಆದ್ದರಿಂದಲೇ ಮೇಘ ಉನ್ನತ ಸ್ಥಾನದಲ್ಲಿರುತ್ತದೆ. ತಾನಾಗಿಯೇ ಬಂದು, ವರ್ಷಿಸಿ, ಪೈರುಫಲಪುಷ್ಪಾದಿ ವೃಕ್ಷಗಳನ್ನು ಬೆಳಸಿ ಎಲ್ಲರಿಗೂ ಆಹಾರಸಿಗುವಂತೆ ಮಾಡುತ್ತದೆ ಮೇಘ. ಅದು ಸ್ವಲ್ಪ ನೀರು ತೊಗೊಂಡು ನೂರರಷ್ಟು ಹೆಚ್ಚಿನ ಪ್ರಮಾಣ ನೀರು ಕೊಡುತ್ತದೆ. ಅಲ್ಲದೆ, ತನ್ನ ಶರೀರವನ್ನೇ ಪರೋಪಕಾರಕ್ಕಾಗಿ ಆಹುತಿಕೊಡುತ್ತದೆ. ಇದಲ್ಲದೆ "ದ ದ ದ " ಅಂತ ಮೂರುಸಾರಿ ತನ್ನ ಉಪದೇಶವನ್ನು ಗುಡುಗುತ್ತದೆ, ಏನಾ ಉಪದೇಶ ? ಕೇಳಿ :

ಮೊದಲನೆ, 'ದ' = ಎಲೋ ಮಾನವನೇ, ಕಾಮ ಕ್ರೋಧ ಲೋಭಗಳಿಗೆ ಮೂಲವಾದ ನಿನ್ನ ಇಂದ್ರಿಯಗಳನ್ನು ದಮನ ಮಾಡು,ವಶದಲ್ಲಿಟ್ಟುಕೋ.ತದನಂತರ ಎರಡನೇ 'ದ'= ದಯಾಗುಣವನ್ನು ಅಳವಡಿಸಿಕೊಳ್ಳೋ ಮನುಜನೇ. ದಯಾಗುಣ ಮನುಷ್ಯನನ್ನು ಸಮಾಜ ದತ್ತ, ಆರ್ತಜನದತ್ತ ಆಕರ್ಷಿಸುತ್ತದೆ. ಮೂರನೆ 'ದ' ದಾನ ಮಾಡೋ, ನಿರಂತರ, ಯಾಕೆ ಕೂಡಿಟ್ಟುಕೊಂಡು ಒಬ್ಬನೆ ಅನುಭವಿಸುವಿ ಈ ಹಸಿದಜೀವಿಗಳ ಮಧ್ಯೆ. (ನೋಡು: ಬೃಹದಾರಣ್ಯಕೋಪ ನಿ. II.2)

ಹೀಗೆ ಪ್ರಕೃತಿಯಿಂದ ಪಾಠ ಕಲಿಯುವ ಸಂದರ್ಭಗಳು ಬಹಳಷ್ಟಿವೆ. ಆದರೆ ಅದು ತಿಳಿಯುವದಕ್ಕೆ ಕಲಿಯುವುದಕ್ಕೆ ಚೂಪಾದ ನೋಟ, ತಿಳಿಯಾದ ಮನಸು ಬೇಕು. ಕಾಳಿದಾಸ ಭಾರತದೇಶದ ಮಹಾಕವಿಯಂತ ಎಲ್ಲರಿಗೂ ತಿಳಿದಿದೆ. ದಿಲೀಪ ರಾಜನನ್ನು ವರ್ಣಿಸುತ್ತಾ, ನಿಸರ್ಗ ನಿರ್ವ್ಯಾಜ ಪರೋಪಕಾರಪ್ರಕೃತಿಯನ್ನು ಈ ಕವಿ ನಿಗೂಢವಾಗಿ ಹೀಗೆ ಉಲ್ಲೇಖಿಸಿದ್ದಾನೆ. ಪೃಥಿವಿ, ಅಗ್ನಿ, ವಾಯುವು, ಆಕಾಶ, ಜಲ, ಇವು ಪಂಚ

ಮಹಾಭೂತಗಳು. ಇದರಲ್ಲಿ ಪ್ರತಿಯೊಂದು ಪರಾರ್ಥವಾಗಿಯೇ ಇದೆ. ಯಾರಿಂದಲೂ, ಯಾವುದಕ್ಕೂ ಏನೂ ಬೇಕಾಗಿಲ್ಲ. ಈ ಮಹಾಪದಾರ್ಥಗಳಿಂದ ಬ್ರಹ್ಮನು ಪರಮಾಣುಗಳನ್ನು ಸಂಗ್ರಹಿಸಿ ಈ ರಾಜನನ್ನು ಸೃಷ್ಟಿಸಿದ್ದಾನೆ. ಆದುದರಿಂದಲೇ, ಈತನ ಗುಣಗಳೆಲ್ಲಾ ಪರಾರ್ಥೈಕಫಲವಾದವುಗಳು. ಅಂದರೆ, ಈ ರಾಜನ ಜೀವನ ಲೋಕೋಪಕಾರಕ್ಕೋಸ್ಕರವೆ. ಈ ದೃಷ್ಟಿಯಿಂದ ನೋಡಿದರೆ, ಎಲ್ಲ ಪ್ರಜೆಗಳ ದೇಹವೂ ಇವೇ ಪಂಚಮಹಾಭೂತಗಳ ಪರಮಾಣಗಳಿಂದ ನಿರ್ಮಿತವಾಗಿವೆ. ಹೀಗಾಗಿದ್ದರೂ ಮಾನವನೇಕೆ ಸ್ವಾರ್ಥಿ? ಅವನಲ್ಲಿ ಪರಾರ್ಥ ಗುಣಗಳು ಇನ್ನೂ ಏಕೆ ಜಾಗೃತವಾಗಲಿಲ್ಲ? ಇದಕ್ಕೆ ಬರ್ನಾರ್ಡ್ ಷಾನ ಸಮಾಧಾನವು ಯೋಚಿಸತಕ್ಕದ್ದು ''ಮಾನವನು ಇನ್ನೂ ಮಾನವನಾಗಿಲ್ಲ''.

ಧರ್ಮ ಮತ್ತು ವಿಜ್ಞಾನ

ಲಂಕಾ ಕೃಷ್ಣಮೂರ್ತಿ

ಇತ್ತೀಚಿನವರೆಗೂ ಪ್ರಪಂಚದ ಎರಡು ಅತಿ ಬಲಿಷ್ಠ ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದಾಗಿ ಅಣು ಯುದ್ಧದ ಭಯದಿಂದ ಪ್ರಪಂಚವೇ ನಡುಗುತ್ತಿತ್ತು. ಆದರೆ ಈ ಎರಡು ರಾಷ್ಟ್ರಗಳ ನಡುವೆ ಇತ್ತೀಚೆಗೆ ಬೆಳೆದ ಸೌಹರ್ದದಿಂದ ಈ ಭಯವು ಸ್ವಲ್ಪ ಕಡಿಮೆಯಗಿದೆ. ಆದರೂ ಅಣು ಯುದ್ಧದ ಸಂಭವವೇ ತೊಲಗಿದೆ ಎಂದು ಹೇಳುವಂತಿಲ್ಲ. ಪ್ರಪಂಚದ ಒಂದು ಕಡೆ ಪರಿಸ್ಥಿತಿ ಸುಧಾರಿಸುತ್ತಿದ್ದರೆ ಮತ್ತೊಂದು ಕಡೆ ಹದಗೆಡುತ್ತಿರುವುದೂ, ಇನ್ನೊಂದು ರೀತಿಯ ಹೊಸ ದ್ವೇಷಗಳು ಹುಟ್ಟುತ್ತಿರುವುದೂ ಕಂಡುಬರುತ್ತಿದೆ. ಅಣು ಯುದ್ಧದ ವಿಚಾರದಲ್ಲಿ ಇನ್ನೂ ನಾವು ಅಜಾಗರೂಕತೆಯಿಂದ ಇರಲು ಸಾಧ್ಯವಿಲ್ಲ. ಅಣು ಯುದ್ಧವೇ ನಡೆದದ್ದಾದರೆ ಇಂದಿನ ವಿಜ್ಞಾನ ಯುಗದಲ್ಲಿ ಮಾನವನು ಸಂಪಾದಿಸಿದ್ದೆಲ್ಲವೂ ನಾಶವಾಗುವುದಲ್ಲದೆ ಈ ಭೂಮಿ ಎಂಬ ಗ್ರಹದ ಮೇಲೆ ಮನುಷ್ಯ ಪ್ರಾಣಿಯ ಅಸ್ತಿತ್ವಕ್ಕೇ ಧಕ್ಕೆ ಬರುವುದು. ಇದು ಭವಿಷ್ಯದ ವಿಚಾರವೇ ಆದರೂ ಎಲ್ಲರೂ ಈ ವಿಷಯದಲ್ಲಿ ಜಾಗ್ರತೆಯಿಂದಿದ್ದು ಅಪಾಯವನ್ನು ತಪ್ಪಿಸುವ ಮಾರ್ಗವನ್ನು ಇಂದಿನಿಂದಲೇ ಹುಡುಕುತ್ತಿರಬೇಕಾಗಿದೆ.

ಈಗ ಇಂದಿನ ಪ್ರಪಂಚದ ಪರಿಸ್ಥಿತಿಯನ್ನು ಸ್ವಲ್ಪ ಗಮನಿಸೋಣ. ಹಿಂದುಳಿದ ರಾಷ್ಟ್ರಗಳಲ್ಲಿ ಆಹಾರದ ಕೊರತೆ, ಆರೋಗ್ಯದ ಏರ್ಪಾಡಿನ ಕೊರತೆ, ಮತ್ತು ಕನಿಷ್ಠ ಜೀವನಾವಶ್ಯಕತೆಗಳ ಅಭಾವದಿಂದಾಗಿ ಜನರು ನರಳುತ್ತಿದ್ದಾರೆ. ಕೆಲವೆಡೆ ದೀರ್ಘ ದ್ವೇಷಗಳಿಂದಲೂ ಕೊನೆಗಾಣದ ಯುದ್ಧಗಳಿಂದಲೂ ಜನರು ನರಳುತ್ತಿದ್ದಾರೆ. ನಮ್ಮ ಭಾರತದ ದೇಶದಲ್ಲಿಯು, ಒಳ್ಳೆಯ ವೈಜ್ಞಾನಿಕ ಪ್ರಗತಿಯನ್ನು ಸಾಧಿಸಿದ್ದರೂ, ಪರಿಸ್ಥಿತಿ ದಿನ ದಿನಕ್ಕೂ ಹದಗೆಡುತ್ತಿದೆ. ಮಿಗಿಲಾಗಿ ಸಂಪನ್ನ ರಾಷ್ಟ್ರಗಳಲ್ಲಿನ ಜನರಲ್ಲಿಯು ದ್ವೇಷಾಸೂಯೆಗಳು, ಸ್ಪರ್ಧೆ, ಆವೇಶ, ಅಪರಾಧಗಳು, ಅಸಂತೃಪ್ತಿ ಮೊದಲಾದವುಗಳಿಂದ ಬಾಧೆಯು ನಿರಂತರವಾಗಿದ್ದೇ ಇದೆ ಎಂಬುದು ರಹಸ್ಯವೇನಲ್ಲ. ಅತ್ಯುತ್ತಮ ಮಟ್ಟಕ್ಕೆ ಬೆಳೆದಿರುವ ಭೌತವಿಜ್ಞಾನಗಳ ಸಹಾಯದಿಂದ ಐಹಿಕ ಸಂಪತ್ತನ್ನು ಬೆಳೆಸಲು ನಾವು ಎಷ್ಟಾದರೂ ಕಷ್ಟಪಡುತ್ತಿದ್ದೇವೆ. ಇಂದಿನ ಹೊಸಯುಗದಲ್ಲಿ ಮುಗಿಲೆತ್ತರಕ್ಕೆ ಬೆಳೆದ ಕಾನೂನು ಮೊದಲಾಗಿ ಸಮಾಜ ವಿಜ್ಞಾನಗಳನ್ನು ನಾವು ಚರ್ಚಿಸುತ್ತೇವೆ. ಅವುಗಳಿಂದ ಮಾನವರನ್ನು ದಾಸ್ಯವಿಮುಕ್ತರನ್ನಾಗಿ ಮಾಡಲು, ಎಲ್ಲರಿಗೂ ಸಮಾನವಾದ ಅವಕಾಶಗಳನ್ನು

ಕೊಡಲು, ಸಾಮಾಜಿಕ ಕಾನೂನನ್ನು ಜಾರಿಗೆ ತರಲು, ಇನ್ನೂ ಉತ್ತಮವಾದ ರಾಜಕೀಯ ವ್ಯವಸ್ಥೆಯನ್ನು ಸೃಷ್ಟಿಸಿ ಜನರ ಹಿತವನ್ನು ಸಾಧಿಸಲು ನಾವೆಲ್ಲರೂ ಪ್ರಯತ್ನಿಸುತ್ತಲೇ ಇದ್ದೇವೆ. ಸಾಹಿತ್ಯ ಮತ್ತು ಕಲೆಗಳ ಕ್ಷೇತ್ರದಲ್ಲಿಯೂ ಸ್ವಚ್ಛಂದ ವಿಚಾರವನ್ನು ಮತ್ತು ಮುಕ್ತ ಅಭಿವ್ಯಕ್ತಿಯನ್ನೂ ಅಂಗೀಕರಿಸಿದ್ದೇವೆ. ಮತಗಳ ಕ್ಷೇತ್ರದಲ್ಲಿಯೂ ಮತಶ್ರದ್ಧೆಗೆ ಲೋಪವೇನೂ ಬಂದಿಲ್ಲ. ದರ್ಶನಗಳ ವಿಷಯದಲ್ಲಿ ಅತಿ ದೊಡ್ಡ ವಿದ್ವಾಂಸರಿಂದಿಗೂ ಅನೇಕ ಜನ ಇದ್ದಾರೆ. ಅವರ ಭಾಷಣಗಳನ್ನು ಕೇಳಲು ಸಾವಿರಾರು ಜನ ಗುಂಪುಗೂಡುತ್ತಾರೆ. ಮೋಕ್ಷಕ್ಕೆ ಅಭ್ಯಾಸದ ರೂಪದಲ್ಲಿರುವ 'ಯೋಗ'ವು ಸಹ ಇಂದು ಜನರಲ್ಲಿ ಹೆಚ್ಚಿನ ಪ್ರಚಾರವನ್ನು ಪಡೆದು ನವಜೀವನವನ್ನೂ ಕೊಡುತ್ತಿದೆ. ಇಷ್ಟಾದರೂ, ಜನಸಾಮಾನ್ಯರ ಕಷ್ಟಕಾರ್ಪಣ್ಯಗಳಿಗೆ ಉಪಶಮನವಾಗಲಿ ಹೆದರಿಕೆಯ ನಿವಾರಣೆಯಾಗಲಿ ಕಂಡುಬರುತ್ತಲೇ ಇಲ್ಲ. ಇಷ್ಟೊಂದು ಮಾನವ ಪ್ರಯತ್ನವಿದ್ದರೂ ಮಾನವರ ನಡುವಿನ ಸೌಹಾರ್ದವು ದಿನದಿನಕ್ಕೂ ನಾಶವಾಗುತ್ತಿರುವುದನ್ನು ನೋಡಿದರೆ ಗತಿಕಾಣದಂತಾಗಿದೆ. ಎಷ್ಟು ವಿಧವಾದ ಕಾನೂನುಗಳನ್ನು ಮಾಡಿದರೂ ಪ್ರಯೋಜನ ಕಂಡು ಬರುತ್ತಿಲ್ಲ. ವೇದಾಂತಗಳ ಬೋಧನಗಳಿಂದ ನೈತಿಕ ಮೌಲ್ಯಗಳಿಲ್ಲದವರನ್ನು ಪರಿವರ್ತಿಸುವುದು ಸಾಧ್ಯವೇ ? ಆದುದರಿಂದ ನಮ್ಮಲ್ಲಿನ ಲೋಪವೆಲ್ಲಿದೆ ಎಂಬುದನ್ನು ಕಂಡುಹಿಡಿದು ನಿವಾರಿಸಬೇಕಾದುದು ಇಂದು ಅತ್ಯಾವಶ್ಯಕವಾಗಿದೆ.

ಮಾನವರ ನಡುವಣ ಸಹಕಾರವು ಎಲ್ಲ ವಿಧದಲ್ಲೂ ಸಹಕರಿಸುವವರಿಗೆ ಒಳಿತನ್ನು ಮಾಡಿಯೇ ತೀರುತ್ತದೆ. ಅಸಹಕಾರ ಮತ್ತು ಸ್ಪರ್ಧೆ ಎಂದೆಂದಿಗೂ ನೆಮ್ಮದಿಯ ಬಾಳಿಗೆ ಕುಂದುಗಳೇ. ಅವುಗಳಿಗೆ ಸಿಲುಕಿಕೊಂಡವರ ಅಭಿವೃದ್ಧಿಗೆ ಮಾರಕಗಳೇ. ಸಹಕಾರದಲ್ಲಿ ಸಹಕರಿಸುವವರ ಶಕ್ತಿಗಳೆಲ್ಲವೂ ಒಟ್ಟುಗೂಡಿ ಅವರೆಲ್ಲರ ಹಿತದಲ್ಲಿ ಪರಿಣಮಿಸುತ್ತದೆ. ಆದರೆ ಸ್ಪರ್ಧೆಯಲ್ಲಿನವರ ಶಕ್ತಿಗಳಲ್ಲಿ ಬಹುಪಾಲುವ್ಯರ್ಥವಾಗಿ ಸ್ಪರ್ಧಾಳುಗಳ ಹಿತಕ್ಕೆ ನೆರವಾಗುವುದು ಸ್ವಲ್ಪ ಮಾತ್ರ. ಆದ್ದರಿಂದ ಗಳಿಸುವ ಸಾಧನೆಯ ಆನಂದವನ್ನೂ ಸಹ ಸ್ಪರ್ಧೆಯಲ್ಲಿನ ಕಹಿ ಕೆಡಿಸಬಿಡುತ್ತದೆ. ಸಹಕಾರ ಸ್ಪರ್ಧೆಗಳ ಈ ರಹಸ್ಯವು ಎಲ್ಲರಿಗೂ ತಿಳಿದಿರುವುದೇ ಆದರೆ ಯಾರೋ ಕೆಲವರು ಪುಣ್ಯಾತ್ಮರು ಮಾತ್ರ ಇತರರೊಂದಿಗೆ ಹೊಂದಾಣಿಕೆಯಿಂದ ಬಾಳಬಲ್ಲರು. ಉಳಿದೆಲ್ಲರೂ ಅವರ ಸ್ವಾರ್ಥದಿಂದಲೂ, ಸಂಕುಚಿತ ದೃಷ್ಟಿಯಿಂದಲೂ ವಂಚಿತರಾಗಿರುತ್ತಾರೆ. ತೃಪ್ತಿಯಿಲ್ಲದ ಆಸೆಯಿಂದಾಗಿ ಅವರು ಸದಾ ಇತರರೊಂದಿಗೆ ಸ್ಪರ್ಧಿಸುತ್ತಲೇ ಇರುತ್ತಾರೆ. ಈ ಸ್ಪರ್ಧೆಯಲ್ಲಿ ಅವರು ತಮ್ಮ ಸದ್ಗುಣಗಳನ್ನೂ, ಸುಖ ಶಾಂತಿಗಳನ್ನೂ ಒಂದೊಂದು ಸಲ ಪ್ರಾಣಗಳನ್ನು ಸಹ ತಾತ್ಕಾಲಿಕ ಪ್ರಯೋಜನಗಳಿಗಾಗಿ ಬಲಿ ಕೊಡುವುದುಂಟು. ಈ ರೀತಿಯ ಜೀವನ ವಿಧಾನವೇ ಇಂದಿನ ಪದ್ಧತಿಯಾಗಿರುವಾಗ ಮಾನವರಲ್ಲಿ ಸೌಹಾರ್ದದ ಬೆಳವಣಿಗೆಯನ್ನು ನಾವು ಅಪೇಕ್ಷಿಸಲು ಹೇಗೆ ಸಾಧ್ಯ ? ಇಂತಹ ಸ್ವಭಾವದವರು ಅನೇಕ ಸಲ ದೊಡ್ಡ ಮನುಷ್ಯರಂತೆ ಕಂಡುಬಂದರೂ ಅದು ಬರೀ ತೋರಿಕೆ. ಅವರಲ್ಲಿ ಪ್ರಾಮಾಣಿಕತೆಯಿರುವುದಿಲ್ಲ. ತಮಗೆ ತೊಂದರೆಯಾಗದಿದ್ದರೆ ಅವರು ಕಾನೂನನ್ನು

ಮುರಿಯಲು ಸಹ ಸಿದ್ಧರಾಗಿರುತ್ತಾರೆ. ಅವರು ತಮ್ಮ ಬುದ್ಧಿಶಕ್ತಿಯಿಂದ ಇತರರನ್ನು ವಂಚಿಸಲು ಮತ್ತು ಅಶಕ್ತರಿಂದ ಅಕ್ರಮಲಾಭ ಪಡೆಯಲು ಉಪಯೋಗಿಸುತ್ತಾರೆ. ಅವರಲ್ಲಿನ ದೈತ್ಯನು ಧರ್ಮಶಾಸ್ತ್ರಗಳ ಶ್ಲೋಕಗಳನ್ನು ಹೇಳುವುದೂ ಉಂಟು. ಆದರೆ ಎಂತಹವನೂ ಒಂದೇ ಸಮನೆ ಲೋಕವನ್ನು ವಂಚಿಸುವುದು ಅಸಾಧ್ಯ. ಚರಿತ್ರೆಯಲ್ಲಿ ಎಷ್ಟು ಜನ ನಿರಂಕುಶಾಧಿಕಾರಿಗಳ ಗತಿ ಕೊನೆಗೆ ಏನಾಯಿತು ? ಅಧಿಕಾರ ದಾಹವುಳ್ಳ ಅವರ ಪ್ರಭಾವವು ಅಲ್ಪಕಾಲಿಕವಾದುದು. ಅದು ಅವರನ್ನೇ ತಲೆಕೆಳಗೆ ಉರುಳಿಸಿಬಿಡುತ್ತದೆ. ಮಾನವ ಸಂಬಂಧಗಳನ್ನು ಉತ್ತಮಪಡಿಸುವುದರಲ್ಲಿ ಕೊಳಕು ಹೃದಯಗಳ ಮತ್ತು ನಂಬಿಕೆಗೆ ಅನರ್ಹರಾದ ಅಧಿಕಾರಲಾಲಸರು ತಾನೆ ಅಡ್ಡಿ ನಿಂತಿರುವುದು ? ಜಾತಿ ಮತ್ತು ಕೋಮು, ಭಾಷೆ, ಸಂಸ್ಕೃತಿಗಳ ಹೆಸರುಗಳಲ್ಲಿ ಜನರ ನಡುವೆ ವೈಷಮ್ಯಗಳನ್ನು ಸೃಷ್ಟಿಸುತ್ತಿರುವ ಅಧಿಕಾರಲಾಲಸರ ಪ್ರಯತ್ನಗಳು ಅಂಟುರೋಗಗಳಿಗಿಂತಲೂ ಅಪಾಯಕರವಲ್ಲವೇ ? ವಿಜ್ಞಾನಿಗಳು ಅಂಟು ರೋಗಗಳನ್ನು ನಾಶಪಡಿಸುತ್ತಾರೆ. ಆದರೆ ಅದೇ ವಿಜ್ಞಾನಿಗಳು ಸ್ವಾರ್ಥದಿಂದ ಅಧಿಕಾರಲಾಲಸರ ಕೈಗೊಂಬೆಗಳಾಗಿ ಮಾನವರನ್ನು ಕೊಲ್ಲುವ ಭಯಂಕರ ಮತ್ತು ಅತಿಹೀನವಾದ ಮಾರಕಾಸ್ತ್ರಗಳ ತಯಾರಿಕೆಯಲ್ಲಿ ತೊಡಗುತ್ತಾರೆ. ನಾಗರಿಕರೆಂದೆನಿಸಿಕೊಳ್ಳುವ ನಾವು ಆತ್ಮವಿನಾಶಕರವಾದ ಹಾದಿಯಲ್ಲಿ ಪ್ರಳಯದತ್ತ ಸಾಗುತ್ತಿದ್ದೇವೆ.

ಆಸುರೀಶಕ್ತಿಯ ಹಾವಳಿ ಇಂದಿಗಿಂತಲೂ ಹಿಂದಿನ ಕಾಲದಲ್ಲಿ ಕಡಿಮೆಯಾಗಿರಲಿಲ್ಲ. ಆದರೆ ಅದಕ್ಕೆ ಸಹಾಯಕವಾಗಿ ಇಂದಿನ ಮಾರಕಾಸ್ತ್ರಗಳು ಅಂದು ಇರಲಿಲ್ಲ. ಇಂದಿನ ವಿಜ್ಞಾನದಿಂದುಂಟಾದ ಲಾಭಗಳು ಅದರಿಂದುಂಟಾಗುತ್ತಿರುವ ನಷ್ಟಗಳಿಗಿಂತಲೂ ಹೆಚ್ಚಾಗಿಲ್ಲ. ನಷ್ಟಗಳೇ ಹೆಚ್ಚಾಗಿವೆಯೆಂದು ಹೇಳಬಹುದು. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯಿಂದುಂಟಾದ ಐಹಿಕ ಸಂಪತ್ತಿನಿಂದ ಕೆಲವು ಅನುಕೂಲಗಳುಂಟಾಗಿವೆಯಾದರೂ ಇದು ಮಾನವನ ಕೊನೆಯಿಲ್ಲದ ಆಸೆಗಳೆಂಬ ಅಗ್ನಿಯಲ್ಲಿ ತುಪ್ಪ ಸುರಿಯುತ್ತ ಹಿಂದಿನ ಕಾಲದಲ್ಲಿ ಒಂದೊಂದು ಸಲವಾದರೂ ಆತನಿಗೆ ಸಿಗುತ್ತಿದ್ದ ಶಾಂತಿಯನ್ನು ಸಹ ದೋಚುತ್ತಿದೆ. ವಿಜ್ಞಾನವು ಮಾನವನಲ್ಲಿನ ಅಸುರೀ ಶಕ್ತಿಗೆ ಮಾರಕಾಸ್ತ್ರಗಳನ್ನೊದಗಿಸಲು ಸಹಕಾರಿಯಾಗಿ ನಿಂತಿದೆ. ಈ ಹುಚ್ಚಿನಲ್ಲಿ ಮಾನವನು ತನ್ನನ್ನು ಸಾವಿರಗಟ್ಟಲೆ ವರ್ಷಗಳಿಂದ ಬೆಳೆಸಿ ಪೋಷಿಸುತ್ತ ಬಂದಿರುವ ಮಾನವೀಯ ಮೌಲ್ಯಗಳ ಬೆಲೆಯನ್ನು ಮರೆತಿದ್ದಾನೆ. ಇಂದು ನಾವು ಮಾನವರ ಮನಸ್ಸುಗಳನ್ನು ಬದಲಾಯಿಸಿ ಅವರು ಒಟ್ಟು ಜನರ ಹಿತದೃಷ್ಟಿಯಲ್ಲಿ ಪರಸ್ಪರ ಸಹರಿಸುವಂತೆ ಮಾಡಬೇಕಾಗಿದೆ.

ಒಂದು ಪ್ರಯೋಜನವಿದೆಯೆಂದು ತಿಳಿದುಬಂದರೆ ಯಾರಾದರೂ ಅದರ ಕಡೆ ಆಕರ್ಷಿತರಾಗುತ್ತಾರೆ. ಸಮುದ್ರದ ತಳದಲ್ಲಿ ಚಿನ್ನದ ರಾಶಿಯಿದೆಯೆಂದು ತಿಳಿದು ಬಂದರೆ ಮಾನವನು ಅದಕ್ಕಾಗಿ ನೀರಿನಲ್ಲಿ ಮುಳುಗಲು ಸಾಹಸ ಮಾಡುತ್ತಾನೆ. ಹಾಗೆಯೇ

ಅಪಾಯವಿದೆಯೆಂದು ತಿಳಿದುಬಂದರೆ ಹೆದರಿಕೆಯಿಂದ ತನ್ನ ಉದ್ದೇಶಗಳನ್ನು ಬದಲಾಯಿಸಿಕೊಳ್ಳುತ್ತಾನೆ. ಆಸೆ ಮತ್ತು ಹೆದರಿಕೆ ಎಂಬೀ ಎರಡೂ ಮಾನವರ ದೃಷ್ಟಿಕೋನಗಳನ್ನು ಬದಲಾಯಿಸುವ ಪ್ರಬಲ ಶಕ್ತಿಗಳು.

ಮಾನವರಲ್ಲಿನ ಪರಸ್ಪರ ಸದ್ಭಾವದಿಂದ ಮತ್ತು ಸಹಕಾರದಿಂದ ಅವರಿಗೆ ಲಾಭವಿದೆಯೆಂಬುದು ನಿಸ್ಸಂಶಯ. ಪರಸ್ಪರ ವೈಷಮ್ಯಗಳಿಂದ ಅಪಾಯವಿದೆಯೆಂಬುದೂ ಅಷ್ಟೇ ನಿಜ. ಆದರೆ ಈ ಎರಡರಿಂದುಂಟಾಗುವ ಆಸೆ ಮತ್ತು ಹೆದರಿಕೆಯ ಶಕ್ತಿಗಳು ಮಾನವನ ಆವೇಶಗಳಲ್ಲಿ ಮೀರಿ ನಿಲ್ಲುವಷ್ಟು ಸಮರ್ಥಗಳಲ್ಲ. ಮಾನವನಲ್ಲಿ ಲಾಲಸೆಯ ಶಕ್ತಿ ಆತನ ವಿವೇಕವನ್ನು ಕುಂಠಿತ ಮಾಡುತ್ತದೆ. ಹೇಗಾದರೂ ತಪ್ಪಿಸಿಕೊಳ್ಳುವ ಅವಕಾಶವಿದೆಯೆಂದು ಕಂಡುಬಂದರೆ, ಕಳ್ಳತನಕ್ಕೆ ಶಿಕ್ಷೆಯಿದೆಯೆಂದು ತಿಳಿದಿದ್ದರೂ ಮಾನವನು ಇನ್ನೊಬ್ಬನ ಚಿನ್ನದ ಸರವನ್ನು ಕದ್ದು ತಾನೇಕೆ ಕೂಡಲೇ ಧನಿಕನಾಗಬಾರದೆಂದು ಆಲೋಚಿಸುತ್ತಾನೆ. ಅಂದರೆ ಮಾನವನು ಸಮೀಪ ದೃಷ್ಟಿ ಉಳ್ಳವನು ಮಾತ್ರವೆಂಬುದು ತಿಳಿದುಬರುತ್ತದೆ. ಸದಾಚಾರ, ನೀತಿ, ನಡವಳಿಕೆಗಳಿಂದ ಲಭಿಸುವ ಶಾಶ್ವತ ಪ್ರಯೋಜನವು ಈತನಿಗೆ ಗೋಚರಿಸುವುದಿಲ್ಲ. ಗೋಚರಿಸಿದರೂ ಅದರ ಮೇಲೆ ಗಮನ ನಿಲ್ಲುವುದಿಲ್ಲ. ಸಮಾಜದಲ್ಲಿ ಇದೇ ಪ್ರವೃತ್ತಿಯೇ ತುಂಬಿರುವಾಗ ತಾತ್ಕಾಲಿಕ ಲಾಭದ ಗೀಳು ಹೆಚ್ಚಾಗಿರುವುದೂ ಅದರಿಂದ ಮುಂದೆ ಬರಬಹುದಾದ ಅನರ್ಥದ ಹೆದರಿಕೆ ಕಡಿಮೆಯಾಗಿರುವುದೂ ಸಹಜ.

ಆದುದರಿಂದ ನೀತಿಯ ಲಾಭಗಳನ್ನು ಮತ್ತು ಅನೀತಿಯ ಅಪಾಯಗಳನ್ನು ಕುರಿತು ಜನರಿಗೆ ಸರಿಯಾದ ತಿಳುವಳಿಕೆಯನ್ನು ಕೊಡುವುದೊಂದೇ ಉಳಿದಿರುವ ಮಾರ್ಗ. ಸದ್ವರ್ತನೆ ಮತ್ತು ನೀತಿಯ ವಿಷಯವಾಗಿ ಜನರಲ್ಲಿರುವ ಅಭಿಪ್ರಾಯವನ್ನು ಉತ್ತಮಗೊಳಿಸಬೇಕಾಗಿದೆ. ಹೀಗೆ ಮಾಡುವುದರಿಂದ ಒಳಿತಿನ ಆಸೆಯ ಶಕ್ತಿಗೂ ಅಪಾಯಗಳ ಹೆದರಿಕೆಯ ಶಕ್ತಿಗೂ ಬೆಂಬಲ ನೀಡಿದಂತಾಗುವುದು.

ಮೂರನೆಯ ಶಕ್ತಿಯೂ ಒಂದಿದೆ. ಮಾನವನಲ್ಲಿ ಇತರ ಮಾನವರ ಮೇಲೆ ಸಹಜವಾಗಿರುವ ಪ್ರೇಮದಿಂದಲೂ ಸಹಜವಾದ ವಿವೇಕದಿಂದಲೂ ಸಹಜವಾಗಿ ಉಂಟಾಗುವ ಸದ್ಭಾವನೆಯ ಶಕ್ತಿಯೇ ಇದು. ಈ ಶಕ್ತಿಯು ಪ್ರತಿ ಒಬ್ಬನಲ್ಲಿಯೂ ಇದ್ದೇ ಇರುತ್ತದೆ. ಆದರೆ ಬೇರೆ ಬೇರೆ ಜನರಲ್ಲಿ ಬೇರೆ ಬೇರೆ ಪ್ರಮಾಣದಲ್ಲಿರಬಹುದಷ್ಟೇ. ಸದ್ವರ್ತನೆ ಮತ್ತು ನೀತಿಯ ಒಪ್ಪುವ ರೀತಿಯ ಪ್ರಭಾವಶಾಲಿ ಪ್ರಚಾರದಿಂದ ಈ ಶಕ್ತಿಗೂ ಬಲವನ್ನೊದಗಿಸಲು ಸಾಧ್ಯ.

ಸದ್ವರ್ತನೆಯ ವಿಷಯವನ್ನಾಗಲಿ ನೀತಿಗಳನ್ನಾಗಲಿ ತಿಳಿಯದಿರುವ ಮನುಷ್ಯನೇ ಇಲ್ಲ. ಆದರೆ ಅವುಗಳಲ್ಲಿ ದೃಢವಿಶ್ವಾಸ ಅಥವಾ ಶ್ರದ್ಧೆಯಿರುವುದು ಅಪರೂಪ. ನೀತಿಗಳಲ್ಲಿನ ಶ್ರದ್ಧೆ ಹಿಂದಿನ ಕಾಲದಲ್ಲಿ ಸಾಮಾನ್ಯ ಜನರಲ್ಲಿ ಹೆಚ್ಚಾಗಿದ್ದಿತು. ಇದಕ್ಕೆ ಕಾರಣ ಅವರಿಗೆ ಅವರವರ ಮತಗಳಲ್ಲಿದ್ದ ಶ್ರದ್ಧೆ. ಈಗಲೂ ಮತಗಳನ್ನು ಸರಿಯಾದ ರೀತಿಯಲ್ಲಿ ಪ್ರಚಾರ

ಮಾಡಿದರೆ ಅದೇ ಫಲದೊರೆಯುತ್ತದೆ. ಆದರೆ ದುರದೃಷ್ಟದಿಂದ ಬೋಧಕರ ವಿಷಯದಲ್ಲೂ ಶಿಷ್ಯರ ವಿಷಯದಲ್ಲೂ ಮತವೆಂಬುದು ಬರುಬರುತ್ತ ಗುಂಪುಗಾರಿಕೆಯನ್ನು ಬೆಳೆಸುವ ಸಾಧನವಾಗುತ್ತಿದೆ. ಮತ್ತು ದೇವರ ಪ್ರಾರ್ಥನೆಯಿಂದ ಐಹಿಕ ಸುಖವನ್ನು ಪಡೆಯಬಹುದೆಂಬ ಆಶೆಯನ್ನು ಬೆಳೆಸುವ ಸಾಧನವಾಗುತ್ತಿದೆ. ನೈತಿಕ ಮಟ್ಟವನ್ನು ಕೆಳಗಿಳಿಯದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಮತಗಳು ಕೈಬಿಟ್ಟಿವೆ, ಎಂದು ಅಧಿಕಾರದ ರಾಜಕೀಯವು ಮಠಗಳಲ್ಲಿ ತಲೆಹಾಕಿತೋ ಅಂದೇ ಈ ದುಸ್ಥಿತಿ ತಲೆದೋರಿತು. ಅಮೇರಿಕಾದ ಅಧ್ಯಕ್ಷರು ಚರ್ಚಿಗೆ ಗೌರವ ತೋರಿಸುವವರಾಗಿದ್ದಾರೆ. ಆದರೆ ಆ ದೇಶವು ಹಿರೋಷಿಮಾ ಮೇಲೆ ಅಣುಬಾಂಬನ್ನೆಸೆದಾಗ ಚರ್ಚಿನವರು ಆತನನ್ನೇಕೆ ಆಕ್ಷೇಪಿಸಲಿಲ್ಲ ? ಯುದ್ಧವನ್ನು ನಿಲ್ಲಿಸಲು ಅಮೇರಿಕಾ ತನ್ನ ಶಕ್ತಿಯನ್ನು ಬೇರೆ ರೀತಿಯಲ್ಲಿ ತೋರಿಸಿದ್ದರೆ ಆಗುತ್ತಿರಲಿಲ್ಲವೇ ? ಕಮ್ಯೂನಿಜಂ ತಲೆದೋರಲು ಕಾರಣವೇನು ? ನೈತಿಕ ಮಟ್ಟವು ಸರಿಯಾಗಿದ್ದಿದ್ದರೆ ಕಾರ್ಲ್‌ಮಾರ್ಕ್ಸ್ ಚರ್ಚಿಗೆ ವಿರುದ್ಧವಾಗಿ ಬಂಡಾಯ ಹೂಡಲು ಕಾರಣವಿತ್ತೇ ? ಅನುದ್ದಿಷ್ಟವಾಗಿಯೇ ಆದರೂ ವೈಜ್ಞಾನಿಕ ಸತ್ಯಗಳು ಮತಗಳ ಪುರಾಣ ಸಾಹಿತ್ಯದ ಅನೇಕ ಅಂಶಗಳ ವಾಸ್ತವಿಕತೆಗೆ ಪೆಟ್ಟು ಹೊಡೆದಿವೆ. ಆಸ್ತಿಕ್ಯಕ್ಕಲ್ಲ. ಈ ಅಂಶಗಳಿಂದ ಜನರಲ್ಲಿನ ನೈತಿಕ ಶ್ರದ್ಧೆಗೆ ಬಹಳ ಬೆಂಬಲವಿತ್ತು. ಸರಿಯಾಗಿ ವಿಚಾರ ಮಾಡಿದರೆ ನೈತಿಕ ಶ್ರದ್ಧೆಯು ಆಸ್ತಿಕ್ಯ ಅಥವಾ ಪುರಾಣ ಕಥೆಗಳ ಆಧಾರದ ಮೇಲೆಯೇನೂ ನಿಂತಿಲ್ಲ. ಆದರ ಇವು ನೈತಿಕ ಶ್ರದ್ಧೆಗೆ ಬೆಂಬಲ ನೀಡುತ್ತಿದ್ದವೆಂಬುದು ನಿಸ್ಸಂಶಯ. ಆದರೆ ನೈತಿಕ ಶ್ರದ್ಧೆಯು ಶೂನ್ಯವಾಗಿರುವ ಕೇವಲಾಸ್ತಿಕ್ಯ ಮತ್ತು ಪುರಾಣಕಥೆಗಳು ಜನರನ್ನು ವಂಚಿಸುವಂತಹವು ಮತ್ತು ಅಪಾಯಕರವೂ ಆಗಿರುತ್ತವೆ.

ಒಂದು ವಿಷಯವನ್ನು ಕುರಿತು ಜನರು ಸರಿಯಾದ ಆಲೋಚನೆಯನ್ನು ಸಹ ಮಾಡದಿರುವುದು ಬಹಳ ಶೋಚನೀಯ, ಆ ವಿಷಯವಿದು. ಎಲ್ಲಾ ಮತಗಳೂ ನೀತಿ ನಡವಳಿಕೆಗಳ ಮಹತ್ವವನ್ನು ಒಂದೇ ರೀತಿಯಲ್ಲಿ ಹೇಳಿರುತ್ತವೆ. ಎಲ್ಲಾ ಮತಗಳ ಗುರುಗಳೂ ಈ ವಿಷಯದಲ್ಲಿ ಬೇರೆ ಮತ ವಿಷಯಗಳನ್ನು ಸೇರಿಸದೆ, ಒಟ್ಟಾಗಿ ಜನರಿಗೆ ಬೋಧನೆ ಮಾಡುವ ಪ್ರಯತ್ನವನ್ನು ಏಕೆ ಮಾಡಲಿಲ್ಲ ? ಅವರವರ ಮತಗಳಿಗೆ ಪ್ರತ್ಯೇಕವಾದ ವಿಷಯಗಳನ್ನು ಅವರು ನೀತಿ ನಡವಳಿಕೆಗಳ ಮಹತ್ವವನ್ನೂ ಸೇರಿಸಿ ಪ್ರತ್ಯೇಕವಾಗಿ ಅವರವರ ಅನುಯಾಯಿಗಳಿಗೆ ಬೋಧಿಸುವುದರ ಜೊತೆಗೆ ಒಟ್ಟಾಗಿ ಮೇಲೆ ಹೇಳಿದಂತೆ ನೀತಿ ಬೋಧನೆಯನ್ನು ಪ್ರಭಾವಶಾಲಿಯಾಗಿ ಮಾಡಲು ಏಕೆ ಮುಂದೆ ಬರಲಿಲ್ಲ ? ಹೀಗೆ ಮಾಡಿದ್ದರೆ ದೇವರಿಗೆ ಎಷ್ಟೋ ತೃಪ್ತಿಯಾಗುತ್ತಿತ್ತು ಮತ್ತು ಇಂದು ಸ್ವರ್ಗದಲ್ಲಿರುವ ಎಲ್ಲ ಮತಗಳ ಸ್ಥಾಪಕರೂ ಸಂತೋಷಪಡುತ್ತಿದ್ದರು. ಮಾನವ ಜಾತಿಗೂ ಬಹಳ ಉಪಕಾರವಾಗುತ್ತಿತ್ತು. ಇದಕ್ಕೆ ಕಾರಣ ಈ ಮಠ ಗುರುಗಳೆಲ್ಲರೂ ತಮ್ಮ ತಮ್ಮ ಮತವೇ ದೊಡ್ಡದೆಂಬ ಒಂದು ಮಾನಸಿಕ ಪಕ್ಷಪಾತಕ್ಕೆ ಗುರಿಯಾಗಿರುವುದೇ ಎಂದು ಭಾವಿಸಬೇಕು. ಈ ಪ್ರಪಂಚಕ್ಕೆಲ್ಲಾ ಇರುವ ದೇವರೊಬ್ಬನೇ. ಮತಗಳಲ್ಲಿನ ಭಿನ್ನತೆ ಆ ಒಬ್ಬನೇ ದೇವನ

ಸೃಷ್ಟಿಯಲ್ಲೇ ಕಾಣುವ ವೈವಿಧ್ಯದಿಂದ ಮಾತ್ರ ಉಂಟಾಗಿದೆ ಎಂಬ ಸತ್ಯವೇ ಇವರಿಗೆ ಕಂಡುಬಂದಂತೆ ಕಾಣುವುದಿಲ್ಲ.

ಮೇಲಿನ ವಿಚಾರದಿಂದ ಸದಾಚಾರ, ಸದ್ವರ್ತನೆ, ನೀತಿ ಅಥವಾ ಧರ್ಮ ವೆಂಬುದಾವುದಿದೆಯೋ ಅದನ್ನು ಇಂದು ಮತದಿಂದ ಪ್ರತ್ಯೇಕಿಸಿ ಪ್ರಚಾರ ಮಾಡಬೇಕಾದ ಅತ್ಯವಸರ ಅವಶ್ಯಕತೆ ಇದೆ ಎಂದು ಸ್ಪಷ್ಟವಾಗುತ್ತದೆ. ಇದರ ಜೊತೆಗೆ ಧರ್ಮಕ್ಕೆ ಪ್ರಾಧಾನ್ಯಕೊಟ್ಟು ವಿವಿಧ ಮತಗಳ ಪ್ರತ್ಯೇಕವಾದ ಪ್ರಚಾರವೂ ನಡೆಯಲಿ. ಮತದಿಂದ ಬೇರ್ಪಡಿಸುವುದರಿಂದ ಧರ್ಮಕ್ಕೆ ಮತದ ಜೋಡಣೆಯಿಂದ ಸಿಗುತ್ತಿದ್ದ ಆಸಕ್ತಿ ಸಿಗದೇ ಇರಬಹುದು. ಆದರೆ ಇದನ್ನು ವೈಚಾರಿಕತೆಯ ಶಕ್ತಿಯಿಂದ ಪೂರೈಸಬೇಕು. ಅಂದರೆ ಧರ್ಮವನ್ನು ಒಂದು ಸಮಾಜ ಮತ್ತು ಮಾನಸಿಕ ವಿಜ್ಞಾನವನ್ನಾಗಿ ಪ್ರಚಾರ ಮಾಡಬೇಕಾಗಿದೆ. ಆರೋಗ್ಯ ಶಾಸ್ತ್ರವು ಒಂದು ವಿಜ್ಞಾನ, ವೈದ್ಯ ಶಾಸ್ತ್ರವು ಒಂದು ವಿಜ್ಞಾನ. ಜನರು ಇವುಗಳಿಗೆ ಮನ್ನಣೆ ಕೊಟ್ಟು ಆಸೆಗಳನ್ನು ಚಪಲಗಳನ್ನು ಬಿಟ್ಟು, ಸಾಕಷ್ಟು ಹಣ ವೆಚ್ಚಮಾಡಿ ಆರೋಗ್ಯದ ಅಪೇಕ್ಷೆಯಿಂದಲೂ ಖಾಯಿಲೆಗಳ ಹೆದರಿಕೆಯಿಂದಲೂ ಮುನ್ನೆಚ್ಚರವನ್ನು, ಚಿಕಿತ್ಸೆಯನ್ನೂ ಪಡೆಯುತ್ತಿಲ್ಲವೇ ? ಧರ್ಮದ ವೈಜ್ಞಾನಿಕ ಪ್ರಚಾರದಲ್ಲಿ ಸಮಾಜದಲ್ಲಿನ ಶ್ರೇಷ್ಠರೆನಿಸಿಕೊಂಡವರು ಆಸಕ್ತಿಯನ್ನು ತೋರಿಸಿ ಪ್ರಯತ್ನವನ್ನು ಆರಂಭಿಸಬೇಕಷ್ಟೇ. ಬೇರೆ ಎಲ್ಲರೂ ಹಿಂದೆ ಬರುತ್ತಾರೆ. ಇಂದಿನ ನೈತಿಕ ಪತನಕ್ಕೆ ಇದೊಂದೇ ಮದ್ದು. ಇದಕ್ಕೂ ಮತಗಳಿಗೂ, ವೇದಾಂತ ಅಥವಾ ದರ್ಶನಕ್ಕೂ ಯಾವ ವಿರೋಧವೂ ಇಲ್ಲ. ಅವು ಸಹ ಧರ್ಮದ ಬೆಳವಣಿಗೆಗೆ ಸಹಾಯ ಮಾಡಬಲ್ಲವು.

ಧರ್ಮವನ್ನು ಸಮಾಜ ಮತ್ತು ಮಾನಸಿಕ ವಿಜ್ಞಾನವನ್ನಾಗಿ ಭಾವಿಸಲು ಸಾಧ್ಯವೇ ಎಂಬ ಪ್ರಶ್ನೆ ಉಳಿಯುತ್ತದೆ. ನನ್ನ ಅಭಿಪ್ರಾಯದಂತೆ ಇದು ಸಾಧ್ಯ. ಈ ಕೆಳಗೆ ಧರ್ಮದ ಕೆಲವು ಮೂಲತತ್ತ್ವಗಳನ್ನು ನಮೂದಿಸುವ ಪ್ರಯತ್ನ ಮಾಡಿರುತ್ತೇನೆ. ಇವು ಸ್ವಯಂ ಸಿದ್ಧ ಸತ್ಯಗಳೂ, ಅನುಭವ ಮತ್ತು ಪ್ರಯೋಗಗಳಿಂದ ಸಾಧಿಸಲ್ಪಟ್ಟ ಅಥವಾ ಸಾಧಿಸಬಹುದಾದ ಸತ್ಯಗಳೂ ಆಗಿರುತ್ತವೆ. ಇವುಗಳಲ್ಲಿ ಸ್ವಯಂಸಿದ್ಧ ಸತ್ಯಗಳಿಗೆ ಬೆಂಬಲವಾಗಿ ಅತಿ ಪ್ರಾಚೀನ ಕಾಲದಿಂದ ಪ್ರಪಂಚದ ಎಲ್ಲ ದೇಶಗಳ ಮಹಾ ಮೇಧಾವಿಗಲೂ ತಮ್ಮ ಅನುಭವದ ಮೇಲೆ ಪಕ್ಷಪಾತವಿಲ್ಲದೆ ಲೋಕ ಹಿತಕ್ಕಾಗಿ ಹೇಳಿರುವ ಅಭಿಪ್ರಾಯಗಳ ಸಾಕ್ಷ್ಯವು ಸಾಕಷ್ಟಿದೆ. ಕೆಳಕಂಡ ತತ್ತ್ವಗಳನ್ನು ಭಿನ್ನ ಭಿನ್ನ ರಾಜಕೀಯ ವ್ಯವಸ್ಥೆಗಳವರೆಲ್ಲರೂ ಉಪಯೋಗಿಸಿ ಪ್ರಯೋಜನವನ್ನು ಪಡೆಯಬಹುದು.

ಧರ್ಮವಿಜ್ಞಾನದ ಮೂಲತತ್ತ್ವಗಳು

1. ನಿರ್ವಚನ

1. ಅಂತರಾತ್ಮವನ್ನು ಪರಿಶುದ್ಧವಾಗಿಡಲು, ನೈತಿಕ ಪ್ರವರ್ತನೆಯನ್ನು ಧೈರ್ಯದಿಂದ ಮುಂದುವರಿಸಲು ಆಧ್ಯಾತ್ಮಿಕ ಉನ್ನತಿಯನ್ನು ಪಡೆಯಲು, ಮನಸ್ಥೈರ್ಯವನ್ನು

ಬೆಳೆಸಿಕೊಳ್ಳಲು ಮತ್ತು ವ್ಯಕ್ತಿಗತವಾಗಿ ಶಾಶ್ವತವಾದ ಆನಂದವನ್ನು ಪಡೆಯಲು ಮತ್ತು 2. ಸಮಾಜದಲ್ಲಿ ವೈಷಮ್ಯಗಳು ಮತ್ತು ಸ್ಪರ್ಧೆಗಳು ಕಡಿಮೆಯಾಗಿ ಸಹಕಾರವು ಹೆಚ್ಚುವುದರಿಂದ ಅತಿ ಗರಿಷ್ಠ ಪ್ರಯೋಜನವನ್ನು ಸಾಧಿಸಿ ಅದನ್ನು ಸಮಾಜದ ಎಲ್ಲರೂ ಸಮಾನವಾಗಿ ಹಂಚಿಕೊಳ್ಳಲು ಜನರೆಲ್ಲರೂ ಅನುಸರಿಸಬೇಕಾದ ನೀತಿ ನಿಯಮಗಳ ಗುಂಪಿಗೆ ಧರ್ಮವೆಂದು ಹೆಸರು.

2. ಧರ್ಮದ ಅವಶ್ಯಕತೆ

ಅರ್ಥ ಎಂದರೆ ಐಹಿಕ ಸಂಪತ್ತು ಮತ್ತು ಕಾಮ ಎಂದರೆ ಇಂದ್ರಿಯ ಸುಖ. ಈ ಎರಡೂ ವ್ಯಕ್ತಿಯ ಮತ್ತು ಸಮಾಜದ ಸುಖಕ್ಕೆ ಅವಶ್ಯವಾದವು. ವ್ಯಕ್ತಿಯ, ಸಮಾಜದ ಸುಖವನ್ನು ಸಾಧಿಸಲು ಮಾನವನು ಮಾಡುವ ನಿರಂತರವಾದ ಪರಿಶ್ರಮಕ್ಕೆ ಮೇಲ್ಕಂಡವುಗಳಲ್ಲಿನ ಆಸೆಯೇ ಮುಖ್ಯವಾದ ಪ್ರಚೋದಕ ಶಕ್ತಿ. ಆದರೆ ಈ ಆಸೆಯು ನಿಯಂತ್ರಿತವೂ, ಸರಿಯಾದ ಮಾರ್ಗದಲ್ಲಿ ಪ್ರೇರಿತವೂ ಆಗಿರಬೇಕು. ಇಲ್ಲದಿದ್ದರೆ ಇದರಿಂದ ಮಾನವರಲ್ಲಿ ವೈಷಮ್ಯಗಳು ಹುಟ್ಟಿ ಎಲ್ಲರಿಗೂ ಪ್ರತಿಕೂಲಕರವೂ, ವಿನಾಶಕರವೂ ಆಗುತ್ತದೆ. ಮೇಲ್ಕಂಡ ಆಸೆಗಳ ನಿಯಂತ್ರಣವು ಸ್ವಲ್ಪಮಟ್ಟಿಗೆ ಪ್ರತಿ ಒಂದು ರಾಷ್ಟ್ರವು ಜಾರಿಗೆ ತರುವ ಕಾನೂನಿನಿಂದ ಮಾಡಲ್ಪಡುತ್ತದೆ. ಅಂತರ ರಾಷ್ಟ್ರೀ ಮಟ್ಟದಲ್ಲಂತೂ ಈ ಕಾನೂನಿನಿಂದುಂಟಾದ ನಿಯಂತ್ರಣವು ಅತ್ಯಲ್ಪವೇ ಸರಿ. ನಿಯಂತ್ರಣದ ವಿಷಯದಲ್ಲೂ ಅರ್ಥಗಳ ಆಸೆಯನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯುವ ವಿಷಯದಲ್ಲೂ ಕಾನೂನು ಸಾಧಿಸಲಾರದುದನ್ನು ಧರ್ಮವು ಸಾಧಿಸಬೇಕಾಗಿದೆ. ಕಾನೂನಿನಿಂದುಂಟಾಗುವ ನಿಯಂತ್ರಣವು ಬಲಾತ್ಕಾರದ ರೂಪದಲ್ಲಿರುತ್ತದೆ. ಆದರೆ ಧರ್ಮದ ನಿಯಂತ್ರಣವು ಇಚ್ಛಾಪೂರ್ವಕವಾದುದು. ಇಚ್ಛಾ ಪೂರ್ವಕವಾದ ನಿಯಂತ್ರಣವೇ ಮಾನವನು ಸಾಧಿಸಿರುವ ಪ್ರಗತಿಗೆ ಲಕ್ಷಣ. ಅದುಮಾತ್ರ ಮಾನವನು ಸಾಧಿಸಿರುವ ಪ್ರಗತಿಗೆ ಲಕ್ಷಣ. ಅದು ಮಾತ್ರ ಮಾನವನ ಸಮಸ್ಯೆಗಳನ್ನು ಶಾಶ್ವತವಾದ ರೀತಿಯಲ್ಲಿ ಪರಿಹರಿಸಬಲ್ಲುದು. ಅದರಲ್ಲೂ ಇಂದಿನ ವಿಜ್ಞಾನದ ಮತ್ತು ವಿದ್ಯೆಯ ಪ್ರಗತಿಯ ಯುಗದಲ್ಲಿ ಇದು ಹೆಚ್ಚಿನ ಸತ್ಯ.

3. ಧರ್ಮದ ಉದ್ದೇಶಗಳ ಬಗ್ಗೆ ವಿವರಣೆ

ಅ. ಸಮಾಜಿಕ ದೃಷ್ಟಿಕೋನ

1. ಪ್ರಾಣರಕ್ಷಣೆ 2. ಆಹಾರ, ಬಟ್ಟೆ ಮತ್ತು ಮನೆ 3. ವೈದ್ಯಕೀಯ ಸಹಾಯ 4. ಮನಶ್ಶಾಂತಿ 5. ಮರ್ಯಾದೆ 6. ಸಭ್ಯ ಮನರಂಜನೆ 7. ಜ್ಞಾನಾರ್ಜನೆಗೆ ಅವಕಾಶ 8. ಆಧ್ಯಾತ್ಮಿಕ ಪ್ರಗತಿಗೆ ಅವಕಾಶ ಮುಂತಾದವು ಎಲ್ಲ ಮಾನವರಿಗೂ ಬೇಕಾಗಿದೆ. ಲಿಂಗಭೇಧ, ಜಾತಿ, ಜಾತೀಯತೆ, ವೃತ್ತಿ ಮುಂತಾದ ಯಾವ ಭೇದವನ್ನೂ ಗಣಿಸದೆ ಇವೆಲ್ಲವನ್ನೂ

ಎಲ್ಲರಿಗೂ ಸಾಧ್ಯವಾದಷ್ಟು ಸಮಾನವಾಗಿ ಒದಗಿಸುವುದೇ ಧರ್ಮದ ಉದ್ದೇಶವಾಗಿರಬೇಕು. ಇದರಿಂದ ಮಾತ್ರ ಪರಸ್ಪರ ವೈಷಮ್ಯವನ್ನು ನಿವಾರಿಸಲು ಸಾಧ್ಯವೆಂಬುದು ನಿಸರ್ಗ ನಿಯಮ. ಈ ಗುರಿಯನ್ನು ಸಾಧಿಸದಿದ್ದರೆ ವೈಷಮ್ಯವು ತಪ್ಪದೆ ಬೆಳೆಯುತ್ತಿರುತ್ತದೆ. ಆದ್ದರಿಂದ ಮಾನವ ಲೋಕಕ್ಕೇ ಅನಾನುಕೂಲ. ಮೇಲ್ಕಂಡ ಪ್ರಯೋಜನಗಳನ್ನು ಪ್ರತಿಯೊಬ್ಬ ವ್ಯಕ್ತಿಯು ಸಮಾಜದ ಅಂಗವಾಗಿ ಅಪೇಕ್ಷಿಸಬೇಕೇ ಹೊರತು ಸಮಾಜವನ್ನು ಲಕ್ಷಿಸದೆ ಅಪೇಕ್ಷಿಸಬಾರದು.

ಆ. ವೈಯಕ್ತಿಕ ದೃಷ್ಟಿಕೋನ

ಮೇಲೆ ಧರ್ಮದ ನಿರ್ವಚನದಲ್ಲಿ ಹೇಳಿರುವ ವ್ಯಕ್ತಿಯ ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಗತಿಯ ವಿಷಯದಲ್ಲಿ ಮಾತ್ರ ಸಮಾಜವನ್ನು ಗಮನಿಸದೆ ವೈಯಕ್ತಿಕ ದೃಷ್ಟಿಕೋನದಿಂದ ಧರ್ಮವನ್ನು ನೋಡಬಹುದು. ಇಲ್ಲಿನ ರಹಸ್ಯವೇನೆಂದರೆ ಈ ಪ್ರಗತಿ ವೈಯಕ್ತಿಕವಾದರೂ ಇದರಿಂದ ಸಮಾಜಕ್ಕೆ ಪ್ರಯೋಜನವಿದ್ದೇ ಇರುತ್ತದೆ.

4. ವೈಜ್ಞಾನಿಕ ದೃಷ್ಟಿಕೋನ

ಧರ್ಮದ ತತ್ವಗಳನ್ನು ಕಂಡುಹಿಡಿದು, ಪರಿಸ್ಥಿತಿಗಳನ್ನನುಸರಿಸಿ ಅವುಗಳ ಅನ್ವಯದಿಂದ ಆಚರಣ ಯೋಗ್ಯವಾದ ಧರ್ಮವನ್ನು ನಿರ್ಣಯಿಸುವುದರಲ್ಲಿ ವೈಜ್ಞಾನಿಕ ದೃಷ್ಟಿಕೋನವಿರಬೇಕು. ಇದರಿಂದ ಫಲ ಹೀಗೇ ಆಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುತ್ತದೆ. ಆವೇಶದ ಅಥವಾ ನಂಬಿಕೆಯ ದೃಷ್ಟಿಕೋನದಿಂದ ಧರ್ಮಕ್ಕೆ ಹೆಚ್ಚಿನ ಶಕ್ತಿ ಲಭಿಸುವ ಸಂಭವವಿದ್ದರೂ ಅದರಿಂದ ಅನರ್ಥಗಳ ಸಂಭವವೂ ಇದೆ. ವೈಜ್ಞಾನಿಕ ದೃಷ್ಟಿಕೋನದಿಂದಲೂ ಶಕ್ತಿ ಬರುತ್ತದೆ. ಈ ಶಕ್ತಿ ದೃಢವಾದುದು. ವೈಜ್ಞಾನಿಕ ದೃಷ್ಟಿಕೋನದಲ್ಲಿ ಆಲೋಚನೆ, ಅನುಭವ ಮತ್ತು ಪ್ರಯೋಗಗಳಿಗೆ ಹೆಚ್ಚಿನ ಮಹತ್ವವಿದೆ.

5. ಮಾನವ ಮಾನವರಲ್ಲಿರುವ ಭೇದ

ವೈಜ್ಞಾನಿಕ ದೃಷ್ಟಿಕೋನದಲ್ಲಿ ಬುದ್ಧಿಶಕ್ತಿ, ದೇಹ ಶಕ್ತಿ, ಮುಂತಾದವು ಮತ್ತು ಕಲಾ ಪ್ರತಿಭೆ, ಸ್ವಭಾವ ಮುಂತಾದ ವಿಷಯದಲ್ಲಿ ಬೇರೆ ಬೇರೆ ಮಾನವರಲ್ಲಿರುವ ವ್ಯತ್ಯಾಸಗಳನ್ನು ಗಮನಿಸದಿರಬಾರದು. ಈ ವಿಷಯದಲ್ಲಿ ಆವೇಶದಿಂದಾಗಲಿ, ತೋರಿಕೆಗಾಗಲಿ ಇಲ್ಲದ ಸಮಾನತ್ವವನ್ನು ಇದೆಯೆಂದು ಭಾವಿಸುವುದು ಜನರನ್ನು ತಪ್ಪು ದಾರಿಗೆಳೆಯುತ್ತದೆ.

6. ಧರ್ಮದ ಮೂಲತತ್ವಗಳು

ಕೆಳಕಂಡವೂ ಮತ್ತು ಅಂತಹವೇ ಆದ ಬೇರೆಯವು ಧರ್ಮದ ಸಾರ್ವತ್ರಿಕ ಸಾರ್ವಕಾಲಿಕ ಮೂಲತತ್ವಗಳೆಂದು ಪರಿಗಣಿಸಬಹುದು :

1. ತನಗೆ ಸಾಧ್ಯವಾದಷ್ಟು ಪ್ರಾಣಿಹಿಂಸೆ ಮಾಡದಿರುವುದು (ಅಹಿಂಸೆ)

2. ಸತ್ಯ
3. ಕದಿಯದಿರುವಿಕೆ(ಅಸ್ತೇಯ)
4. ಮಾನಸಿಕ, ಶಾರೀರಕ ಮತ್ತು ಅರ್ಥಶುಚಿತ್ವ
5. ದಮ ಅಥವಾ ಇಂದ್ರಿಯ ನಿಗ್ರಹ
6. ದಾನ ಅಥವಾ ಪರೋಪಕಾರ
7. ದಯೆ
8. ಕ್ಷಮೆ
9. ಆರ್ಜನ (ಕುಟಿಲತೆ ಇಲ್ಲದಿರುವಿಕೆ)
10. ವಿವೇಕ
11. ಸಂಯಮ

ಮೇಲ್ಕಂಡ ಮೂಲತತ್ವಗಳ ಮೇಲೆ ಆಧಾರ ಪಟ್ಟಿದ್ದರೂ ಬೇರೆ ಬೇರೆ ಸಂದರ್ಭಗಳಲ್ಲಿ ಧರ್ಮದ ಆಚರಣೆಯು ಭಿನ್ನವಾಗಿರಲು ಸಾಧ್ಯ.

7. ತಲೆ ಮತ್ತು ಹೃದಯ

ತಲೆ ಮತ್ತು ಹೃದಯ– ಇವುಗಳ ಸಹಜವಾದ ಶಕ್ತಿಗಳಾದ ವಿವೇಕ ಮತ್ತು ಔದಾರ್ಯಗಳೇ ಧರ್ಮವನ್ನು ಪೋಷಿಸುತ್ತಿರುವ ನೈಸರ್ಗಿಕ ಶಕ್ತಿಗಳು. ಇವು ಎಲ್ಲ ಮಾನವರಲ್ಲೂ ಇದ್ದೇ ಇವೆ. ಆದರೆ ಸ್ವಾರ್ಥದ ದುಷ್ಟ ಶಕ್ತಿಗಳಿಂದ ಮುಚ್ಚಲ್ಪಟ್ಟಿವೆ. ಮೇಲ್ಕಂಡ ಸಚ್ಛಕ್ತಿಗಳು ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿರುತ್ತವೆ. ಮೇಲ್ಕಂಡ ದುಷ್ಟಶಕ್ತಿಗಳನ್ನು ತಿರಸ್ಕರಿಸಿ ಮೇಲ್ಕಂಡ ದೈವೀಶಕ್ತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದೇ ಧರ್ಮವನ್ನು ಬೆಳೆಸುವ ರೀತಿ.

8. ಸೂಕ್ಷ್ಮ ಧರ್ಮ

ಆಚರಣಯೋಗ್ಯವಾದ ಧರ್ಮವನ್ನು ನಿರ್ಣಯಿಸುವಾಗ ಸೂಕ್ಷ್ಮವಾದ ವಿಚಾರ ಬೇಕು. ಸ್ಥೂಲವಾದ ನಿರ್ಣಯ ಸರಿಹೋಗುವುದಿಲ್ಲ. ಆಚರಣೆಯ ಬಾಹ್ಯ ಸ್ವರೂಪಕ್ಕಿಂತಲೂ ಅದು ಧರ್ಮದ ಮೂಲ ತತ್ವಗಳಿಗೂ ಉದ್ದೇಶಕ್ಕೂ ಅನುಗುಣವಾಗಿದೆಯೇ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು ಬಹಳ ಮುಖ್ಯ.

9. ಧರ್ಮಪುರುಷ :

ವಿಧಿ ನಿಷೇಧಗಳು ಧರ್ಮದ ಶರೀರವಿದ್ದಂತೆ. ತನ್ನ ಶಕ್ತಿಗಳು ಕೇವಲ ಸ್ವಾರ್ಥಕ್ಕೆ ಉಪಯೋಗಿಸಲಿ ಎಂದು ಭಾವಿಸದೆ ಇತರರ ಸೇವೆಗೂ ಉಪಯೋಗವಾಗಲಿ ಎಂಬ

ಉದಾತ್ತವಾದ ಹಂಬಲವೇ ಧರ್ಮದ ಪ್ರಾಣ. ಒಂದೇ ಆತ್ಮವೇ ಎಲ್ಲ ಪ್ರಾಣಿಗಳಲ್ಲಿದೆ, ಅಥವಾ ಎಲ್ಲರೂ ಒಬ್ಬನೇ ದೇವರ ಮಕ್ಕಳು ಅಥವಾ ನನ್ನಂತೆಯೇ ಇತರರು ಎಂಬ ಭಾವನೆಯೇ ಧರ್ಮದ ಆತ್ಮ.

10. ಆಚಾರದ ಪ್ರಾಮುಖ್ಯ :

'ಧರ್ಮವು ಆಚರಿಸಲ್ಪಟ್ಟರೆ ಮಾತ್ರ ಧರ್ಮವಾಗುತ್ತದೆ. ಆಚರಿಸದೆ ಬೋಧಿಸಿದರೆ ಅದು ಧರ್ಮವಲ್ಲ.

11. ತಾನೇ ವಿಧಿಸಿಕೊಂಡ ನಿಯಮಗಳು :

ನಿಯಮಗಳನ್ನು ತಾನೇ ವಿಧಿಸಿಕೊಂಡು ನಿತ್ಯ ಜೀವನದಲ್ಲಿಯೂ ವೈಯಕ್ತಿಕ ಜೀವನದಲ್ಲಿಯೂ ಅನುಸರಿಸುವುದೂ, ತಪ್ಪು ಮಾಡಿದರೆ ಪಶ್ಚಾತ್ತಾಪಪಡುವುದೂ ಮತ್ತು ಪ್ರಾಯಶ್ಚಿತ್ತ ಮಾಡಿಕೊಳ್ಳುವುದೂ, ಧರ್ಮದ ಶುದ್ಧಿಯನ್ನೂ ಪ್ರಕಾಶವನ್ನೂ ಕಾಪಾಡಿಕೊಳ್ಳಲು ತುಂಬಾ ಮುಖ್ಯ.

12. ಮತಭೇದಗಳು :

ಭಿನ್ನ ಭಿನ್ನ ಮತಗಳ ವಿಷಯಗಳಲ್ಲಾಗಲಿ, ದರ್ಶನಗಳಲ್ಲಿನ ಮತಭೇದಗಳ ವಿಷಯದಲ್ಲಾಗಲಿ, ವೈಜ್ಞಾನಿಕರ ಅಭಿಪ್ರಾಯ ಭೇದದ ವಿಷಯದಲ್ಲಾಗಲಿ ತಾಳ್ಮೆಯನ್ನು ತೋರಿಸುವುದೂ, ಒಳ್ಳೆಯದು ಎಲ್ಲಿದ್ದರೂ ಗ್ರಹಿಸುವುದೂ, ಭೇದಗಳ ವಿಷಯವಾಗಿ ಅತಿ ಮಾಡದಿರುವೂದು ಮುಖ್ಯ.

13. ಸಂಪ್ರದಾಯಗಳೆಲ್ಲವೂ ಧರ್ಮವಲ್ಲ :

ಅನೇಕ ಸಂಪ್ರದಾಯಗಳನ್ನು ನಾವು ಧರ್ಮಬೋಧೆಗಳೆಂದು ಭಾವಿಸುತ್ತೇವೆ. ಯಾವ ಯಾವ ಸಂಪ್ರದಾಯವು ಎಷ್ಟರಮಟ್ಟಿಗೆ ಧರ್ಮಕ್ಕಾಗಿ ಜಾರಿಗೆ ಬಂದಿದೆ, ಎಷ್ಟರಮಟ್ಟಿಗೆ ಇತರ ಉದ್ದೇಶಗಳಿಂದ ಜಾರಿಗೆ ಬಂದಿದೆ ಎಂಬುದನ್ನು ವಿವೇಚಿಸಬೇಕು. ಸಂಪ್ರದಾಯಗಳ ಅಂಧಾನುಕರಣೆಯು ಧರ್ಮದ ವಿರುದ್ಧವಾದರೆ ಅಂತಹ ಸಂಪ್ರದಾಯವನ್ನು ಕೂಡಲೇ ಬಿಡಬೇಕು.

14. ಶಕ್ತಿಧರ್ಮ ಸಂಯೋಗ :

ಬುದ್ಧಿಶಕ್ತಿ, ದೇಹಶಕ್ತಿ, ಹಣದ ಶಕ್ತಿ, ಕಲಾ ಪ್ರತಿಭೆ ಮೊದಲಾಗಿ ಶಕ್ತಿಯು ಅನೇಕ ರೂಪಗಳಲ್ಲಿರುತ್ತೆ. ಧರ್ಮ ಮತ್ತುಶಕ್ತಿಯ ಸಂಯೋಗವು ಸಮಾಜಕ್ಕೆ ಹಿತಕರವೆಂಬುದು ಶಾಶ್ವತ ಸತ್ಯ. ಇದನ್ನನುಸರಿಸಿ, ಸಮಾಜ ಕಲ್ಯಾಣಕ್ಕಾಗಿ ಧರ್ಮಕ್ಕೆ ಶಕ್ತಿಯನ್ನು ಜೋಡಿಸಬೇಕು. ಶಕ್ತಿಗೆ ಧರ್ಮವನ್ನು ಜೋಡಿಸಬೇಕು, ಶಕ್ತಿಯಿಂದ ಅಧರ್ಮವನ್ನು ತೊಲಗಿಸಬೇಕು.

ಅಧರ್ಮದಿಂದ ಶಕ್ತಿಯನ್ನು ತೊಲಗಿಸಬೇಕು ಎಂಬ ನಾಲ್ಕು ಉಪ ಸಿದ್ಧಾಂತಗಳನ್ನು ಗ್ರಹಿಸಬಹುದು.

15. ಧರ್ಮದಲ್ಲಿನ ರಮ್ಯತೆ ಮತ್ತು ಆನಂದ :

ಧರ್ಮವೆಂದರೆ ತನ್ನ ಮೇಲೆ ತಾನೇ ವಿಧಿಸಿಕೊಂಡ ನಿಯಮಗಳಾದುದರಿಂದ ಇದರಲ್ಲಿ ರಮಣೀಯತೆ ಆಗಲೀ ಆನಂದವಾಗಲೀ ಇರಲು ಸಾಧ್ಯವೇ ಎಂದು ಶಂಕಿಸುವುದು ಸರಿಯಲ್ಲ. ಕಾಲಾಂತರದಲ್ಲಿ ಇದರಿಂದ ಸ್ವಾರ್ಥಪೂರ್ಣತೆಗಿಂತಲೂ ಮಿಗಿಲಾದ ಮತ್ತುಶಾಶ್ವತವಾದ ಆನಂದವು ಲಭಿಸುತ್ತದೆ. ಆದುದರಿಂದ ಸತ್ಕರ್ಮಾಚರಣೆಯಲ್ಲಿ ಈ ಧರ್ಮಾನಂದವು ದೊಡ್ಡ ಶಕ್ತಿಯಾಗಿ ಕೆಲಸಮಾಡುತ್ತದೆ.

16. ಹಕ್ಕು-ಭಾವನೆ ಮತ್ತುಕರ್ತವ್ಯ ಭಾವನೆ :

ಹಕ್ಕುಗಳಿಗೂ ಕರ್ತವ್ಯಗಳಿಗೂ ಅವಿನಾಭಾವ ಸಂಬಂಧವಿದ್ದರೂ ಸಹ ಧರ್ಮವು ಹಕ್ಕುಭಾವನೆಗಿಂತಲೂ ಹೆಚ್ಚಾಗಿ ಕರ್ತವ್ಯ ಭಾವನೆಯ ಮೇಲೆ ನಿಂತಿದೆ.

●

ಧರ್ಮ ಮತ್ತು ಶಿಕ್ಷಣ

ಸಾ. ಮಂಚಯ್ಯ

ಪ್ರಸ್ತಾವನೆ

ಭಾರತದ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ನಮ್ಮ ಅರಿವಿಗೆ ಬರುವ ವಿಷಯ ಈ ದೇಶದಲ್ಲಿ ಸಾಮಾಜಿಕ ವ್ಯವಸ್ಥೆ ರಾಜಕೀಯ ಮತ್ತು ಆರ್ಥಿಕ ವಿಷಯಗಳ ಪ್ರಭಾವಕ್ಕಿಂತಲೂ ಹೆಚ್ಚಾಗಿ ಧಾರ್ಮಿಕ ವಿಷಯಗಳ ಪ್ರಭಾವದಿಂದ ರೂಪು ಗೊಂಡಿದೆ ಎಂಬುದು ಸತ್ಯ. ಧರ್ಮ ಮಾನವ ಜೀವನದ ಎಲ್ಲ ಕ್ಷೇತ್ರಗಳ ಮೇಲ್ಲೂ ತನ್ನ ಹಿಡಿತಹೊಂದಿತ್ತು. ಇಲ್ಲಿ 'ಧರ್ಮ' ಅಂದರೆ ಏನು ? ಅದರ ಅರ್ಥವೇನು ಎಂಬುದಕ್ಕೆ ವಿವರಣೆ ಆಗತ್ಯವೆ (ಧರ್ಮ ಕುರಿತಂತೆ ಎರಡು ಪರಿಕಲ್ಪನೆಗಳಿವೆ ಒಂದು ಮತೀಯ ವಿಷಯಗಳಿಗೆ ಸಂಬಂಧಿಸಿದ ಧರ್ಮ (Theology of Religion or Religious Theology) ಮತ್ತೊಂದು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಜೀವನದ ಮುಖ್ಯ ತತ್ವಗಳನ್ನು ಒಟ್ಟು ಗೂಡಿಸಿ ರೂಪಿಸಿದ ಸೈದ್ಧಾಂತಿಕ ನಿಲುವೇ ಧರ್ಮ.

ಧರ್ಮ ಎಂದರೇನು?

ಧರ್ಮ ಎಂದರೆ ಧರಿಸಬಲ್ಲದ್ದು. "ಧಾರಣಾತ್ ಧರ್ಮಮ್ ಇತ್ಯಾಹುಃ" ಯಾವ ಕಟ್ಟು ಪಾಡು ಎಲ್ಲವನ್ನೂ ಕಾಪಾಡಬಲ್ಲದೋ ಅದು ಧರ್ಮ. ಧರ್ಮೋರಕ್ಷತಿ ರಕ್ಷಿತಃ", ಯಾವುದನ್ನು ನಾವು ಪಾಲಿಸಿದರೆ ಅದು ನಮ್ಮನ್ನು ಪಾಲಿಸುವುದೋ ಆವಿಧದ ನೀತಿ ನಿಯಮಗಳು ಧರ್ಮ.

"ಯಾವ ವ್ಯವಸ್ಥೆಯೂ-ಯಾವಚರ್ಯೆಯೂ (೧) ಜೀವಿಗಳಿಗೆ ಇಹದಲ್ಲಿಯೋ ಪರದಲ್ಲಿಯೊ ಸದ್ಗತಿಯನ್ನು ಸಂಪಾದಿಸಿಕೊಡಬಲ್ಲುದೋ ಅದುಧರ್ಮ"[1]

ಪ್ರಾಚೀನ ಭಾರತದಲ್ಲಿ ಧರ್ಮ

ಪ್ರಾಚೀನ ಭಾರತದಲ್ಲಿ ಅಂದರೆ ಪ್ರಾಚೀನ ಭಾರತೀಯರ ಸಾಮಾಜಿಕ ಜೀವನದ ನಿಯಮಗಳನ್ನು ರೂಪಿಸಿದುದು. ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿದುದು ಧರ್ಮ. ಅಷ್ಟೇ ಅಲ್ಲ. ಅದು ಅವರ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುತ್ತಿತ್ತು; ರಾಜಕೀಯ

ವ್ಯವಸ್ಥೆಯ ಮೇಲೂ ಪ್ರಭಾವ ಬೀರಿತು. ಅವರಿಗೆ ದೇಶ ಎಂದರೆ ಕೇವಲ ಒಂದು ಭೌಗೋಳಿಕ ಎಲ್ಲೆಗಳ ಭೂಪ್ರದೇಶವಾಗಿರದೆ ಅವರ ಸಂಸ್ಕೃತಿಯ ಪ್ರತೀಕವಾಗಿತ್ತು. ಅವರ ದೇಶವೇ ಸಂಸ್ಕೃತಿ; ಸಂಸ್ಕೃತಿಯೇ ದೇಶ. ಅದು ಆಧ್ಯಾತ್ಮದ ನಿಜವಾದ ನೆಲೆ ; ಸಂಸ್ಕೃತಿಯ ಅಗೋಚರದೇವಾಲಯ. ಇದು ಭಾರತೀಯರ ವಿಶೇಷ ಕಲ್ಪನೆ.

ಈ ಉದಾತ್ತದ ಧ್ಯೇಯಗಳನ್ನು ಪ್ರತಿಪಾದಿಸುತ್ತಿದ್ದ ಧರ್ಮ, ಅದರಿಂದ ರೂಪುಗೊಂಡ ಸಂಸ್ಕೃತಿ, ನಾಗರಿಕತೆಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವುದಲ್ಲದೆ ಹಾಗೆ ತಲತಲಾಂತರಗಳಿಂದ, ಹಸ್ತಾಂತರವಾಗಿ ಬಂದ ಧರ್ಮ, ಮತ್ತು ಸಂಸ್ಕೃತಿಗಳನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಸಾಧನ ಒಂದು ಅಗತ್ಯವಲ್ಲವೆ ? ಆ ಸಾಧನವೇ ಶಿಕ್ಷಣ. ''ವಿದ್ಯೆ'' ಎಂದರೆ ಜ್ಞಾನ ಅಂದರೆ ಅರ್ಥಜ್ಞಾನ- ಕಾರಣಕಾರ್ಯ ಸಂಬಂಧ ಪರಾಮರ್ಶೆಯಿಂದ ಉತ್ಪನ್ನವಾದ ಜ್ಞಾನ. ವಿಚಾರಸಿದ್ಧವಾದ ಜ್ಞಾನವೇ ವಿಜ್ಞಾನ. ಇಂತಹ ವಿದ್ಯೆಯಿಂದಲೆ ಧರ್ಮ, ಸಂಸ್ಕೃತಿಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಹಸ್ತಾಂತರವಾಗುತ್ತ ಬಂದಿವೆ. ವಿದ್ಯೆಯೇ ಧರ್ಮಪ್ರಸಾರದ ಮುಖ್ಯ ಸಾಧನ. ಅಂದರೆ ವಿದ್ಯೆ ಅಥವಾ ಶಿಕ್ಷಣಕ್ಕೂ ಧರ್ಮಕ್ಕೂ ನಿಕಟ ಸಂಬಂಧ ಇದೆ. ಶಿಕ್ಷಣ ವ್ಯವಸ್ಥೆ ಪ್ರಾರಂಭವಾದುದೆ ಧರ್ಮ ಮತ್ತು ಸಂಸ್ಕೃತಿಗಳ ಪ್ರಸಾರಕ್ಕಾಗಿ. ಅವುಗಳನ್ನು ಅಂದಂದಿನ ಪೀಳಿಗೆಗೆ ವಿವರಿಸಿ ಅವರು ಅದರ ಪಾಲಕರಾಗಿ ಮಾತ್ರ ಇರುವಂತೆ ಮಾಡದೆ ಅದನ್ನು ಬೆಳೆಸಿಕೊಂಡು ಪ್ರಸಾರಮಾಡಿ ಮುಂದಿನ ಪೀಳಿಗೆಗೆ ತಮ್ಮ ಕಾಣಿಕೆಯಾಗಿ ಕೊಡುವ ಜ್ಞಾನವಾಹಕರನ್ನಾಗಿಯೂ ಮಾಡುವ ಉದ್ದೇಶದಿಂದಲೇ ಪ್ರಾಚೀನ ಭಾರತದಲ್ಲಿ ಋಷ್ಯಾಶ್ರಮಗಳಲ್ಲಿ ಶಿಕ್ಷಣವ್ಯವಸ್ಥೆ ಪ್ರಾರಂಭವಾಯಿತು.

ಆಶ್ರಮಗಳು

ಈ ಋಷಿಗಳ ಆಶ್ರಮಗಳು ಅರಣ್ಯಗಳ ಪ್ರಶಾಂತ ವಾತಾವರಣದಲ್ಲಿದ್ದೂ ಏಕಾಗ್ರತೆಯಿಂದ ಅಧ್ಯಯನ ಶೀಲರಾಗಲು ಉತ್ತೇಜನಕಾರಿಯಾಗಿತ್ತು. ಈ ಋಷಿಗಳೇನು ಸರ್ವಸಂಗ ಪರಿತ್ಯಾಗ ಮಾಡಿದ ಸನ್ಯಾಸಿಗಳಾಗಿರಲಿಲ್ಲ. ಅವರೂ ಗೃಹಸ್ಥಾಶ್ರಮ ಕೈಗೊಂಡಿದ್ದರು. ಸತ್ಯಾನ್ವೇಷಿಗಳಾಗಿ ಸತತ ಸಮಾಜದ ಒಳಿತನ್ನು ಚಿಂತಿಸುತ್ತ ತಮ್ಮ ತಪಸ್ಸು ಮತ್ತು ಅಧ್ಯಯನ, ಜಿಜ್ಞಾಸೆಗಳ ಫಲವಾಗಿ ತಾವು ಕಂಡ ಸತ್ಯವನ್ನು ಸಮಾಜಕ್ಕೆ ಲಭ್ಯವಾಗುವಂತೆ ಮಾಡುತ್ತಿದ್ದರು. ಅವರು ದಾರ್ಶನಿಕರು. ಆದ್ದರಿಂದಲೇ ಅವರ ಬಗೆಗೆ ಅಷ್ಟೊಂದು ಗೌರವ, ಪೂಜ್ಯ ಭಾವನೆ.

ಪ್ರಾಚೀನರ ಅರ್ಥದಲ್ಲಿ ವಿದ್ಯೆ

ಪ್ರಾಚೀನರ ದೃಷ್ಟಿಯಲ್ಲಿ ಲೌಕಿಕಾಭ್ಯುದಯಕ್ಕೆ ಮಾತ್ರವಲ್ಲ, ಆಧ್ಯಾತ್ಮ ಸಾಧನೆಗೂ ನೆರವಾಗಬಲ್ಲ ಮತ್ತೊಂದು ಸಾಧನವೇ ವಿದ್ಯೆ.''ಸಾವಿದ್ಯಾಯಾ ವಿಮುಕ್ತಯೇ'' ಎಂದು

ಹೇಳಿರುವುದು ಈ ದೃಷ್ಟಿಯಿಂದಲೆ. ಇಲ್ಲಿ ಮುಕ್ತಿ ಎರಡು ವಿಧ : ಲೌಕಿಕ ಮತ್ತು ಆಧ್ಯಾತ್ಮಿಕ. ಆದರಿಂದ ದೇಹ ಶ್ರೀಯೂ ಬೆಳೆಯ ಬೇಕು, ಆತ್ಮ ಶ್ರೀಯೂ ವಿಕಾಸಗೊಳ್ಳಬೇಕು. ಮೂಕನಿಗೆ ನಾಲಿಗೆ ಕೊಡುವುದೆ ವಿದ್ಯೆ. ನಮಗೆ ವಿದ್ಯೆ ಅವಿದ್ಯೆ ಎರಡೂ ಬೇಕು''. ಬರಿಯ ಅವಿದ್ಯೆಯನ್ನು ಉಪಾಸಿಸುವವನು ತಮಸ್ಸಿಗೆ ಇಳಿಯುತ್ತಾವೆ. ವಿದ್ಯೆ ನಮ್ಮನ್ನು ಭಗವಂತನ ಕಡೆಗೆ ಕೊಂಡೊಯ್ಯುತ್ತದೆ; ಅವಿದ್ಯೆ ಲೌಕಿಕ ಸುಖವನ್ನು ನೀಡುವುದು. ಅವಿದ್ಯೆಯನ್ನು ಸಂಪೂರ್ಣವಾಗಿ ಬಿಟ್ಟೇ ಬಿಡುತ್ತೇನೆಂದು ಬರಿಯ ವಿದ್ಯೆಯನ್ನೇ ಬೆನ್ನಟ್ಟುವವನು ಅವಿದ್ಯೆಯಿಂದ ಭಯಂಕರವಾದ ಕತ್ತಲೆಗೆ ಇಳಿಯುತ್ತಾನೆ. ಇಲ್ಲಿ ವಿದ್ಯೆ ಅವಿದ್ಯೆ ಎರಡನ್ನೂ ಅಭ್ಯಸಿಸಬೇಕು. ಪರಸ್ಪರ ವಿರುದ್ಧವಾಗದಂತೆ ಅವರೆಡನ್ನೂ ಸಮನ್ವಯಗೊಳಿಸಿಕೊಂಡವರು ಸುಖಿಗಳಾಗುತ್ತಾರೆ. ಉಚಿತವರಿತು ಎಲ್ಲ ವಿದ್ಯೆಗಳನ್ನೂ ಸಾಧಿಸಬೇಕೆಂಬುದೇ ಕುವೆಂಪು ಅವರ ಬೋಧನೆಯ ತಿರುಳಾಗಿತ್ತು.

ಧರ್ಮ ಮತ್ತು ಶಿಕ್ಷಣದ ಸಂಬಂಧ

ಶಿಕ್ಷಣ ಮತ್ತು ಧರ್ಮದ ಸಂಬಂಧವನ್ನು ಅರಿಯಬೇಕಾದರೆ ವಸ್ತು ಮತ್ತು ಅದರ ಆಧಾರಗಳು ಅಂದರೆ ಪ್ರಮೇಯ ಪ್ರಮಾಣ ವಿಚಾರ ಅವುಗಳ ಮೂಲತತ್ವಗಳನ್ನು ಕುರಿತ ವಿಚಾರ ಮತ್ತು ಆಧ್ಯಾತ್ಮಿಕ ವಿಷಯಗಳ ಅಧ್ಯಯನ ಮತ್ತು ಪರಿಚಯ ಅಗತ್ಯ. ಅಂತಹ ಗಹನ ವಿಚಾರ ಇಲ್ಲಿ ಅಗತ್ಯವಿಲ್ಲ. ಅವುಗಳ ಸಂಬಂಧ ಅರಿತುಕೊಳ್ಳಲು ಧಾರ್ಮಿಕ ರಂಗದ ಮತ್ತು ಶಿಕ್ಷಣದ ತತ್ವ ದಾರ್ಶನಿಕರ ನಿಲುವನ್ನು ತಿಳಿದರೆ ಬಹುಶಃ ಸಾಕೆಂದುಕಾಣುತ್ತದೆ. ಧಾರ್ಮಿಕ ರಂಗದ ಔನ್ನತ್ಯವನ್ನು ಪ್ರತಿಪಾದಿಸುವವರು ಮಾನವನ ಅನುಭವ ಗ್ರಹಿಸಲಾರದ ಪರಿಪೂರ್ಣ ಸತ್ಯಗಳಿವೆ. ಸತ್ಯ ಮತ್ತು ಮೂಲಭೂತ ಮೌಲ್ಯಗಳ ದೈವ ಮೂಲದಿಂದ ಬಂದವುಗಳು ಮತ್ತು ಜ್ಞಾನಾರ್ಜನೆ ಕೇವಲ ಜ್ಞಾನೇಂದ್ರಿಯಗಳಿಂದಲೇ ಮಾತ್ರವಲ್ಲ ಅದು ದೈವದತ್ತವಾದ ಮಾನವನ ಬುದ್ಧಿಶಕ್ತಿ ಮತ್ತು ಅಂತರ್ಜ್ಞಾನದಿಂದ ದೊರಕುತ್ತದೆ. ಮಾನವ ಜೀವನದ ಗುರಿ ಮುಕ್ತಿಸಾಧನೆ.

ಮೇಲಿನ ನಿಲುವಿಗೆ ವಿರುದ್ಧವಾಗಿ ಅನುಭವೈಕ (empiricists) ವಾದಿಗಳು ಮತ್ತು ಮಾನವ ಹಿತೋತ್ಸಾಹಿಗಳು ಪರಮ ಸತ್ಯವೆಂಬುದೇ ಇಲ್ಲ; ಮೌಲ್ಯಗಳು ಮಾನವನ ಅನುಭವದಿಂದ ಜನ್ಯವಾದವುಗಳು; ಪ್ರಯೋಗದ ಮೂಲಕ ಪ್ರದರ್ಶಿಸಬಹುದಾದುದೇ ಸತ್ಯ ಮತ್ತು ಮಾನವ ತನ್ನ ಪರಿಸರದಲ್ಲಿ ಕ್ರಿಯಾಶೀಲವಾಗಬಹುದಾದಂತಹ ಅಥವಾ ಉಪಯುಕ್ತವಾಗಬಹುದಾದಂತಹ ಜ್ಞಾನ ಮತ್ತು ಸಾಮರ್ಥ್ಯ (ಕಾಶಲಗಳನ್ನು) ಗಳಿಸಿ ಕೊಳ್ಳಲು ನೆರವಾಗುವುದೇ ಶಿಕ್ಷಣದ ಪರಮಗುರಿ. ಮತೀಯ ಧರ್ಮವನ್ನೂ ಎತ್ತಿ ಹಿಡಿದು ಅದೇ ಶ್ರೇಷ್ಠ ಅದರಂತೆ ಮಾನವ ಜೀವನದ ಮತ್ತು ಜ್ಞಾನಾರ್ಜನೆಯ ಪರಮ ಗುರಿ ಮುಕ್ತಿ ಸಾಧನೆ. ಜ್ಞಾನಾರ್ಜನೆ ಆ ಮಾರ್ಗದಲ್ಲಿ ಮುನ್ನಡೆಸಬೇಕು, ಎಂದು ವಾದಿಸಿದವರು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಚರ್ಚ್‌ಗಳ ಪುರೋಹಿತವರ್ಗ. ಕಾನ್‌ಸ್ಟಾಂಟಿ

ನೋಪಲ್‌ನ ಪತನದ ಫಲವಾಗಿ ಅಲ್ಲಿನ ವಿದ್ವಾಂಸರು ತಮ್ಮ ಗ್ರಂಥ ಭಂಡಾರಗಳನ್ನು ತಮ್ಮೊಡನೆ ಹೊತ್ತು ಯೂರೋಪಿನ ಪಶ್ಚಿಮರಾಷ್ಟ್ರಗಳ ಕಡೆ ಹೊರಟು ಜರ್ಮನಿ ಮುಂತಾದ ಮಧ್ಯ ಐರೋಪ್ಯ ರಾಷ್ಟ್ರಗಳಲ್ಲಿ ನೆಲಸಿದರು. ಸಾಮಾನ್ಯರಿಗೆ ಗ್ರೀಕ್ ಮತ್ತು ಲಾಟಿನ್ ಭಾಷೆಗಳ ಪರಿಚಯವಾಯಿತು. ಅಲ್ಲಿಯವರೆಗೂ ಕೇವಲ ಕೆಲವರಿಗೇ ಲಭ್ಯವಿದ್ದ ಜ್ಞಾನ ಇತರರಿಗೂ ದೊರೆತು ಅವರು ಮೌಢ್ಯ ಕಳಚಿ ಬೆಳಕು ಹರಿಯಿತು. ಇದೇ ಜ್ಞಾನ ಪುನರುಜ್ಜೀವನಕಾಲ. ನಂತರ ಕೈಗಾರಿಕಾ ಕ್ರಾಂತಿಯೂ ಸೇರಿ ಜನರಲ್ಲಿ ಧರ್ಮ ಅಂದರೆ ಮತ ಧರ್ಮವನ್ನು ರಾಷ್ಟ್ರಧರ್ಮವನ್ನಾಗಿ ಅಂಗೀಕರಿಸಿವೆ.

ಭಾರತದ ನಿಲುವು

ಭಾರತವು ಇದಕ್ಕೆ ಹೊರತಾಗಿದೆ. ಇತರ ನಾಗರಿಕತೆಗಳಲ್ಲಿ, ಸಂಸ್ಕೃತಿಗಳಲ್ಲಿ ಕಂಡ ಉತ್ತಮ ಅಂಶಗಳನ್ನೆಲ್ಲ ಹಿಂದೂಧರ್ಮ ಹೀರಿಕೊಂಡು ಬೆಳೆದಿದೆ. ಭಾರತದ ಮೇಲೆ ಧಾಳಿ ಮಾಡಿದ ಗ್ರೀಕರು, ಪರ್ಷಿಯನರು, ಮಹಮ್ಮದೀಯರು ಎಲ್ಲರೂ ಬೇರೆ ಬೇರೆ ದೃಷ್ಟಿಯಿಂದ ಬಂದರೂ ಭಾರತದಲ್ಲಿ ನೆಲಸಿ ಭಾರತೀಯರೆ ಆಗಿ ಹೋದರು. ಇತಿಹಾಸದ ಪ್ರಾರಂಭದ ಕಾಲದಿಂದಲೂ ಪರಮತಸಹಿಷ್ಣುತೆಯನ್ನು ಕಾಣುತ್ತೇವೆ. ಅಶೋಕ, ಹರ್ಷ, ಕಾನಿಷ್ಕ ಮೊದಲಾದವರು ಬೌದ್ಧ ಮತಾವಲಂಬಿಗಳಾದರೂ ಇತರರ ಮತಗಳನ್ನು ಅಲಕ್ಷ್ಯದಿಂದ ನೋಡಲಿಲ್ಲ. ಅವರಿಗೂ ಪ್ರೋತ್ಸಾಹಕೊಟ್ಟರು. ಇದೇ ಭಾರತೀಯ ಧರ್ಮದ ಅಂತಸತ್ವ; ಹಿರಿಮೆ. ಈ ದೃಷ್ಟಿಕೋನವನ್ನು ಬೆಳೆಸುವ ಉದ್ದೇಶದಿಂದಲೇ ಶಿಕ್ಷಣ ವ್ಯವಸ್ಥೆಯಾಗಿತ್ತು.

ಹದಿನೆಂಟನೆ ಶತಮಾನದ ಅಂತ್ಯದವರೆಗೂ ವಿಶ್ವದ ಯಾವುದೇ ರಾಷ್ಟ್ರವೂ ತನ್ನ ಪ್ರಜೆಗಳ ಮಕ್ಕಳೆಲ್ಲರಿಗೂ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ವಹಿಸಿಕೊಂಡಿರಲಿಲ್ಲ. ಶಿಕ್ಷಣ ಸಮಾಜದ ಕೆಲವೇ ಜನರಿಗೆ ಮಾತ್ರ ಲಭ್ಯವಿತ್ತು. ಆ ವ್ಯವಸ್ಥೆಯಲ್ಲಿ ಲೌಕಿಕ ಧರ್ಮ ಬೋಧನೆಗೆ ಪೂರ್ಣ ಅವಕಾಶವಿತ್ತು. ವೃತ್ತಿ ಶಿಕ್ಷಣ ವ್ಯವಸ್ಥೆಯೂ ಇದ್ದು ಹೊಸಜ್ಞಾನ ಮೂಡಿತು. ಚರ್ಚ್‌ನ ಅಧಿಕಾರವನ್ನು ಪ್ರಶ್ನಿಸಲು ಪ್ರಾರಂಭಿಸಿ ಇದು ಸುಧಾರಣೆಯ ಕಾಲ. ಈ ಅವಧಿಯಲ್ಲಿ ಐರೋಪ್ಯ ರಾಷ್ಟ್ರಗಳು ಪೋಪನ ಪರ ಮತ್ತು ವಿರೋಧವಾಗಿ ನಿಂತು ಹೋರಾಡಿದರು. ಅಲ್ಲಿಯವರೆಗೂ ಶಿಕ್ಷಣ ಕಾರ್ಯದಲ್ಲಿ ಚರ್ಚ್‌ಗಳದೇ ಮುಖ್ಯ ಪಾತ್ರವಾಗಿತ್ತು. ಆದುದರಿಂದ ಶಿಕ್ಷಣದಲ್ಲಿ ಪ್ರಾಧ್ಯಾನ್ಯವನ್ನು ಎತ್ತಿ ಹಿಡಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಭಾರತ ಇದಕ್ಕೆ ಹೊರತು. ಭಾರತೀಯರಿಗೆ ದೇಶ ಆಧ್ಯಾತ್ಮದ ನೆಲೆ, ಸಂಸ್ಕೃತಿಯ ಆಗೋಚರ ದೇವಾಲಯ. ಅದು ಭೌಗೋಳಿಕ ಮೇರೆಗಳಿಂದ ಬಂಧಿತವಾಗಿರಲಿಲ್ಲ. ಈಕಾರಣದಿಂದಲೇ ಏನೋ ಭಾರತ ವಿಶೇಷವಾದ ಪ್ರದೇಶವಿರುವ ಜನಾಂಗ ಎಂಬ ಪರಿಕಲ್ಪನೆಯ ಪ್ರಥಮ ನಾಡಾಯಿತು ಮತ್ತು ಪ್ರತಿಯೊಂದು ಜನಾಂಗವೂ ತನ್ನದೇ ಆದ ಸಂಪ್ರದಾಯಗಳನ್ನು ಆಚರಿಸುವ ಸ್ವಾತಂತ್ರ್ಯ ಬೀಡಾಯಿತು.

ವಿಶ್ವದ ಅನೇಕ ರಾಷ್ಟ್ರಗಳ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಅವುಗಳಲ್ಲಿ ನಮಗೆ ಈ ಚಿತ್ರ ದೊರಕುವುದಿಲ್ಲ. ಅವುಯಾವುದೋ ಒಂದು ಧರ್ಮವನ್ನು ಪ್ರೋತ್ಸಾಹಿಸಿಕೊಂಡು ಪ್ರಚಾರ ಮಾಡಿಕೊಂಡು ಬರುತ್ತಿದ್ದುದನ್ನು ಕಾಣುತ್ತೇವೆ. ಆಧುನಿಕ ಕಾಲದಲ್ಲಿಯೂ ಕೆಲವು ರಾಷ್ಟ್ರಗಳು ಒಂದು ನಿರ್ದಿಷ್ಟ ಬೇರೆ ಬೇರೆ ವೃತ್ತಿಗಳಲ್ಲಿ ಸಂಬಂಧಪಟ್ಟ ಶ್ರೇಣಿಗಳು ಶಿಕ್ಷಣ ನೀಡುತ್ತಿದ್ದುವು. ಅವರು ತಮ್ಮ ತಮ್ಮ ವೃತ್ತಿ ಧರ್ಮವನ್ನು ಕಾಪಾಡಿಕೊಂಡು ಬರುತ್ತಿದ್ದರು. ಈ ಎಲ್ಲ ಕಾರಣಗಳಿಂದ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆ ತೃಪ್ತಿಕರವಾಗಿದ್ದು ಜನರು ಸುಖಸಂತೋಷದಿಂದಿದ್ದರು.

ವಿದ್ಯೆಯಿಂದ ದೊರಕುವ ಫಲ

"ವಿದ್ಯೆಯಿಂದ ಸಂಸ್ಕೃತಿ ಬೆಳೆಯುತ್ತದೆ; ವಿದ್ಯಾದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ ಪಾತ್ರತ್ವಾ ಧನ ಮಾಪ್ನೋತಿ ಧನಾಧರ್ಮಂ ತತಃ ಸುಖಂ" ಎಂದು ಹಿತೋಪದೇಶ ಹೇಳುತ್ತದೆ. ಅಂದರೆ ವಿದ್ಯೆಯ ಫಲ ವಿನಯ, ಅಹಂಕಾರ ನಾಶ, ಸಂಪತ್ತು. ಸಂಪತ್ತಿನಿಂದ ಧರ್ಮ. ಅದರಿಂದ ಸುಖ ಲಭ್ಯ. ಅಹಂಕಾರವಿದ್ದೆಡೆ ವಿನಯಕ್ಕೆ ಸ್ಥಾನವಿಲ್ಲ. ಎಲ್ಲಿ ವಿನಯ ವಿಲ್ಲವೋ ಅಲ್ಲಿ ಸಂಸ್ಕೃತಿಯಿಲ್ಲ. ಅಹಂಕಾರ ಹಾನಿಕಾರಕವಾದುದು. ಈ ಮಾತಿಗೆ ಬೆರಳ್‌ಗೆ ಕೊರಳ್ ನಾಟಕದ ಅರ್ಜುನನೇ ಸಾಕ್ಷಿ

> ಬಿಂಕಕ್ಕೆಡೊಳೀವುದದು ವಿದ್ಯೆಯೆ ? ಅ ವಿದ್ಯೆ;
> ಕವಿಪುದಾವುದದೋ ಅಹಂಕಾರಮಂ ಅದು ವಿದ್ಯೆ;
> ಮಿಕ್ಕುದೆಲ್ಲಂ ಅವಿದ್ಯೆ.

ದ್ರೋಣನ ಈ ಮಾತು ಸರ್ವಕಾಲಿಕ ಸತ್ಯ. ಈ ಮಾತು ಎಲ್ಲ ದೇಶಗಳಿಗೂ ಎಲ್ಲ ಜನಾಂಗಗಳಿಗೂ ಅನ್ವಯವಾಗುತ್ತದೆ. ನಮಗೆ ಬೇಕಾಗಿರುವುದು ಇಂಥ ವಿದ್ಯೆ.

ಐಹಿಕ ಸುಖಕ್ಕೆ ಪ್ರಾಶಸ್ತ್ಯ

ಅನ್ವೇಷಣೆ, ಸಂಶೋಧನೆಗಳ ಫಲವಾಗಿ ಕ್ಷಣ ಕ್ಷಣಕ್ಕೂ ಜ್ಞಾನದ ಸ್ಫೋಟ ಆಗುತ್ತಿದೆ. ವಿಜ್ಞಾನ ನಮ್ಮ ಅಳತೆಗೂ ಮೀರಿ ಬೆಳೆದಿದೆ, ಬೆಳೆಯುತ್ತಿದೆ. ಇಂದು ಮನುಷ್ಯ ಹಕ್ಕಿಯಂತೆ ಆಕಾಶದಲ್ಲಿ ಹಾರಾಡಬಲ್ಲ, ಮೀನಿನಂತೆ ನೀರಿನಲ್ಲಿ ಈಜ ಬಲ್ಲ, ತಾರೆ ನೀಹಾರಿಕೆಗಳ ರಹಸ್ಯವನ್ನು ಭೇದಿಸಲು ಹೊರಟಿದ್ದಾನೆ. ಎಲ್ಲ ಕ್ಷೇತ್ರಗಳಲ್ಲೂ ರಾಷ್ಟ್ರ ರಾಷ್ಟ್ರಗಳ ನಡುವೆ ಪೈಪೋಟೀ ಸತತವಾಗಿ ನಡೆಯುತ್ತಿದೆ. ಅಣ್ವಸ್ತ್ರಗಳನ್ನು ನಾಶಮಾಡಬೇಕೆಂಬ ಆಗ್ರಹ ಒಂದೆಡೆ ಬಲವಾಗಿದ್ದರೆ ಮತ್ತೊಂದೆಡೆ ಅದರ ಪರೀಕ್ಷೆಗಳು ನಡೆಯುತ್ತಲೇ ಇವೆ. ಇದು ಹೀಗೆಯೇ ಮುಂದುವರಿದರೆ ವಿಜ್ಞಾನ ನಮ್ಮನ್ನು ಎಲ್ಲಿಗೆ ಕರೆದೊಯ್ಯುವುದೊ ತಿಳಿಯದು.

ಇಂದು ವಿಶ್ವದ ಎಲ್ಲಕಡೆಗಳಲ್ಲೂ ಕಾಣುತ್ತಿರುವ ಸ್ಥಿತಿಗೆ, ಜನಾಂಗೀಯ ಕಲಹಕ್ಕೆ, ಹಿಂಸಾಚಾರಕ್ಕೆ ನಾವು ನಮ್ಮ ಐಹಿಕ ಸುಖಕ್ಕೆ ಕೊಟ್ಟಿರುವ ಅನಗತ್ಯ ಪ್ರಾಮುಖವೇ ಆಗಿದೆ..

ವಿಜ್ಞಾನದ ಮುನ್ನಡೆಯಿಂದಾಗಿ ಭೌತಿಕ ಸಂಪತ್ತು ಹೆಚ್ಚಿದೆ ಜೀವನಾವಶ್ಯಕತೆಗಳೂ ಹೆಚ್ಚಾಗಿವೆ. ಭೋಗ ವಸ್ತುಗಳಿಗೆ ಬೇಡಿಕೆ ದಿನೇದಿನೇ ಹೆಚ್ಚುತ್ತಿದೆ. ಪಕ್ಕದವನ ಸರಿಸಮನಾಗಿ ಬಾಳು ಎಂಬುದು ಇಂದುನಾವು ಅನುಸರಿಸುತ್ತಿರುವ ನೀತಿ. ಅದಕ್ಕಾಗಿ ನ್ಯಾಯ ಬದ್ಧವಾದ ಮಾರ್ಗವನ್ನೇ ಅನುಸರಿಸಬೇಕೆಂದಿಲ್ಲ. ಯಾವ ಮಾರ್ಗವಾದರೂ ಸರಿಯೆ ನಮ್ಮ ಬೇಡಿಕೆ ಇಚ್ಛೆ ಪೂರೈಕೆಯಾದರೆ ಸಾಕು. ಹಿಂದೆ ಗುರಿ ಮತ್ತುಅದನ್ನು ಸಾಧಿಸುವ ಮಾರ್ಗ ಎರಡರ ಬಗೆಗೆ ಯೋಚಿಸಿ ಗುರಿ ಒಳ್ಳೆಯದ್ದಾಗಿದ್ದರೆ ಅದನ್ನುಸಾಧಿಸಲು ಅನುಸರಿಸು ವಮಾರ್ಗವೂ ಒಳ್ಳೆಯದಾಗಿರಬೇಕೆಂದು ನಿರ್ಧರಿಸುತ್ತಿದ್ದೆವು. ಈಗೇನೂ ಮಾರ್ಗದ ಬಗೆಗೆ ಯೋಚಿಸುವ ಗೊಡವೆಗೆ ಹೋಗುವುದಿಲ್ಲ. ಅದು ಬುದ್ಧಿಯಿಲ್ಲದವರು ಮಾಡುವ ಕೆಲಸವೆಂದು ಭಾವಿಸುವರು. ಹಣ ಸಂಪಾದಿಸಬೇಕು; ಅದರಿಂದ ಏನು ಬೇಕಾದರೂ ಸಾಧಿಸಬಹುದು ಎಂಬ ನಂಬಿಕೆ ಅಥವಾ ಭಾವನೆ ಬಹುತೇಕ ಜನರಲ್ಲಿ ಮನೆ ಮಾಡಿಕೊಂಡಿದೆ. ಅಂತಹ ವರ್ಗದ ಜನರೇ ಇಂದು ನಮ್ಮ ಮುಖಂಡರಾಗಿದ್ದಾರೆ. ಸಾಮಾಜಿಕ, ಆರ್ಥಿಕ, ರಾಜಕೀಯ ಜೀವನದಲ್ಲಿ ಧರ್ಮ ಮರೆಯಾಗುತ್ತಿದೆ. ಅಂದರೆ ಲೌಕಿಕ ಧರ್ಮ ಅಲಕ್ಷಿಸಿದ್ದೇವೆ.

ಇಂದಿನ ವಿದ್ಯೆ

ಇಂದು ವಿದ್ಯಾವಂತರು ವಿನಯಶಾಲಿಗಳಾಗಿರುವುದು ಬಹಳ ಅಪರೂಪ. ಕಲಿತ ವಿದ್ಯೆಯಾವಾಗಲೂ ಒಳ್ಳೆಯ ಕಾರ್ಯಕ್ಕೆ ಬಳಕೆಯಾಗಬೇಕು. ಆಗ ಅದು ಧರ್ಮಮಾರ್ಗ ಅನುಸರಿಸಿದಂತಾಗುವುದು. ಹಿಂಸೆ, ವಂಚನೆ, ಕೊಲೆ, ಕುಯುಕ್ತಿ ಆಡಂಬರ ಮೊದಲಾದ ಹೇಯ ಕೃತ್ಯಗಳಿಗೆ ವಿದ್ಯೆ ಉಪಯೋಗವಾಗುವುದಾದರೆ ದೈವದ್ರೋಹವಾಗುಕ್ತದೆ, ಆತ್ಮ ವಂಚನೆ ಯಾಗುತ್ತದೆ. ಈ ಹೊತ್ತಿನ ರಾಜಕೀಯದ ಜನ ನಡೆಸುತ್ತಿರುವ ನಾಟಕ ಪೂರ್ತಿ ಮೋಸದಿಂದ ಕುಟಿಲತಂತ್ರಗಳಿಂದಕೂಡಿದ್ದು. ಅರ್ಜುನನ ವಿದ್ಯೆಯೂ ಹಿಂಸಾಕಾರ್ಯಕ್ಕೆ ವಿನಿಯೋಗವಾಯಿತು. ಏಕಲವ್ಯ ಕಲಿತ ವಿದ್ಯೆ ಮಾತ್ರ ಸಾರ್ಥಕವಾಯಿತು; ಕಲಿಸಿದವರಿಗೆ ಮೆಚ್ಚುಗೆಯಾಯಿತು.

> ''ಅಪರಾಧ ಮಿಲ್ಲದಾ ಸಾಧುಮಂ ಕೊಲಲಲ್ತು, ಆಚಾರ್ಯ, ಆ ವಿದ್ಯೆಯಂ ನೀನಿತ್ತುದೆನಗೆ.
> ಮುನಿಗುಂ ಮಂತ್ರಾಧಿ ದೇವತೆ; ಮೇಣ್, ದಿವ್ಯ ವಿದ್ಯಾ ಬಲದಿ ಪಾಪಕಾರ್ಯವವೆಸಗೆ ಧರ್ಮಂ
> ಖುತ ಚ್ಯುತನೆನಗೆ ತಾನುಗ್ರಮಕ್ಕುಂ; ಮೇಣ್ ವಿದ್ಯಾಶಕ್ತಿತಾನೊಡನೆ ತಿರೋಹಿತ ಮಕ್ಕುಂ.''

ಏಕಲವ್ಯ ದ್ರೋಣನಿಗೆ ಕೊಟ್ಟಿರುವ ಉತ್ತರದ ಮೂಲಕ ಕುವೆಂಪು ಲೋಕದ ವಿದ್ಯಾವಂತರೆನಿಸಿ ಕೊಂಡವರಿಗೆ ನೀಡಿದ ಅಮೃತ ಸಲಹೆಯಾಗಿದೆ.

ಇಂದು ವಿದ್ಯೆ ಎಂದರೆ ಪದವಿಗಳನ್ನು ಗಳಿಸುವುದು. ಯಾರು ತಮ್ಮ ಹೆಸರಿನ ಮುಂದೆ ಯಾರು ಹೆಚ್ಚು ಪದವಿಗಳನ್ನು ಹಚ್ಚಿಕೊಂಡಿದ್ದಾರೆಯೋ ಅವರೇ ಮಹಾವಿದ್ವಾಂಸರು, ಮಹಾಪಂಡಿತರು. ಆ ಪದವಿಗಳೇ ಅವರ ಕೋಡುಗಳು. ಅವುಗಳೇ ಅವರಿಗೆ ಸಮಾಜದಲ್ಲಿ ಪ್ರತಿಷ್ಠೆಯನ್ನು ತಂದು ಕೊಡುವ ಸಾಧನಗಳು; ಅವರು ತಮ್ಮ ಅಧ್ಯಯನದ ಮೂಲಕ

ಸಾಧಿಸಿದ ಜ್ಞಾನದ ಆಳವಿಸ್ತಾರಗಳಿಲ್ಲ; ಅವರು ಬೆಳೆಸಿಕೊಂಡಿರುವ ಸಂಸ್ಕಾರವಿಲ್ಲ; ಅವರಲ್ಲಿ ಎದ್ದು ಕಾಣಬಹುದಾದ ವಿನಯ ಸೌಜನ್ಯಗಳಲ್ಲ. ಅವುಗಳಿಲ್ಲದಿದ್ದರೂ ಚಿಂತೆಯಿಲ್ಲ ಎಂಬುದು ಅವರ ನಿಲುವು. ಈ ರೀತಿಯ ವ್ಯಕ್ತಿತ್ವದ ಬೆಳವಣಿಗೆಗೆ ನಾವು ರೂಪಿಸಿ ಅನುಷ್ಠಾನಕ್ಕೆ ತಂದಿರುವ ಶಿಕ್ಷಣ ಪದ್ಧತಿಯೇ ಕಾರಣ. ಲೌಕಿಕ ಧರ್ಮದ ಮೂಲ ಭೂತ ಮೌಲ್ಯಗಳನ್ನು ನಮ್ಮ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸದೆ ಕೇವಲ ವಿಷಯ ಸಂಗ್ರಹಕ್ಕೇ ಪ್ರಾಮುಖ್ಯಕೊಟ್ಟು ಗುರುತರವಾದ ತಪ್ಪು ಮಾಡಿದ್ದೇವೆ. ಈ ಲೋಪವನ್ನು ಶೀಘ್ರವಾಗಿ ಸರಿಪಡಿಸದೆ ಹೋದರೆ ಇಡೀ ರಾಷ್ಟ್ರವೇ ಸಂಕಷ್ಟಕ್ಕೊಳಗಾಗುವುದು.

ಶಿಕ್ಷಣದ ಗುರಿಗಳಾವುವು ?

ಶಿಕ್ಷಣದ ಧ್ಯೆಯೋದ್ದೇಶಗಳ ಬಗೆಗೆ ಎಂದೂ ಒಮ್ಮತವಿರಲಿಲ್ಲ; ಇಂದೂ ಇಲ್ಲ. ಒಮ್ಮತಕ್ಕೆ ಬರಲು ಅಡ್ಡಿಯಾಗಿರುವ ವಿಷಯ ಎಂದರೆ ಈ ವಿಶ್ವದ ವಾಸ್ತವಿಕತೆಯ ಬಗೆಗೆ ಒಮ್ಮತವಿಲ್ಲದಿರುವುದು. ವಿಶ್ವದ ಎಲ್ಲ ಶಿಕ್ಷಣ ತತ್ವದರ್ಶನಗಳೂ ವಿಶ್ವದ ವಾಸ್ತವಿಕಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣ ಪದ್ಧತಿಯನ್ನು ರೂಪಿಸಬೇಕೆಂಬುದರ ಬಗ್ಗೆ ಒಮ್ಮತವಿದ್ದರೂ ಈ ಒಮ್ಮತ ಕಲಿಯುವ ಮಗು ಎಂತಹ ಪ್ರಪಂಚವನ್ನು ಎದುರಿಸುವುದು ಎಂಬ ಪ್ರಶ್ನೆ ಉದ್ಭವಿಸಿ ಈ ಒಮ್ಮತ ಛಿದ್ರ ಛಿದ್ರವಾಗುವುದು. ಶಿಕ್ಷಣದ ಗುರಿಗಳು ಸದಾ ಕಾಲಕ್ಕೂ ಒಂದೇ ಆಗಿರುವುದಿಲ್ಲ. ಅವುಗಳು ಕಾಲದೇಶಗಳು, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗನುಗುಣವಾಗಿ ಬದಲಾವಣೆ ಆಗುವುದು ಸಹಜ; ಆಗಲೇಬೇಕು.

ಶಿಕ್ಷಣದ ಗುರಿಗಳಲ್ಲಿ ಎರಡು ವಿಧಗಳಿವೆ

(೧) ಸಾಮಾನ್ಯ ಗುರಿಗಳು

(೨) ವಿಶೇಷ ಗುರಿಗಳು

ಸಾಮಾನ್ಯ ಗುರಿಗಳು ಎಲ್ಲ ಸಮಾಜಕ್ಕೂ ಎಲ್ಲ ದೇಶಗಳಿಗೂ ಅನ್ವಯ ಆಗುವಂತಹವುಗಳು. ಅವುಗಳನ್ನು ಲೌಕಿಕ ಧರ್ಮ ಆಧರಿಸಿದ ಮೌಲ್ಯಗಳು ಎಂದು ಕರೆಯಬಹುದು-ಸಂಯಮಯುತಸಹಬಾಳ್ವೆ, ಪಾಪಕಾರ್ಯದಿಂದ ದೂರವಿರುವುದು ಮಾತ್ರವಲ್ಲ ಅಂತಹಕಾರ್ಯಗಳಿಗೆ ಪ್ರೋತ್ಸಾಹನೀಡದಿರುವುದು ಮತ್ತು ಅವುಗಳನ್ನು ಖಂಡಿಸುವುದು, ಪರೋಪಕಾರ ಮತ್ತು ಕಷ್ಟದಲ್ಲಿರುವವರ ಬಗೆಗೆ ಅನುಕಂಪೆ ತೋರುವುದು, ಗುರು ಹಿರಿಯರಿಗೆ ಗೌರವ, ಹಿಂಸಾಮಾರ್ಗ ತ್ಯಜಿಸುವುದು, ಒಳ್ಳೆಯ ಮಾರ್ಗದಲ್ಲಿ ನಡೆಯುವುದು, ಸಮಾಜದ ಒಳ್ಳಿತನ್ನು ಬಯಸುವುದು, ಅನ್ಯರಾಷ್ಟ್ರಗಳನ್ನು ದ್ವೇಷಿಸದ ರಾಷ್ಟ್ರದ ಪ್ರೇಮ-ಇವು ಎಲ್ಲ ದೇಶಗಳಿಗೂ ಅನ್ವಯವಾಗುವ ಸಾಮಾನ್ಯ ಗುರಿಗಳು. ಇವುಗಳಿಗೆ ಸಂಬಂಧಿಸಿದಂತೆ ಚರ್ಚೆ ಅನಗತ್ಯ.

ಪ್ರತಿಯೊಂದು ರಾಷ್ಟ್ರಕ್ಕೂ ಅದರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ವ್ಯವಸ್ಥೆಗಳನ್ನು ಆಧರಿಸಿದ ವಿಶೇಷ ಗುರಿಗಳಿವೆ. ಈ ಗುರಿಗಳಲ್ಲಿ ವ್ಯವತ್ಯಾಸ ಇರುತ್ತದೆ.

ಭಾರತ ಒಂದು ಸರ್ವ ತಂತ್ರ ಗಣರಾಜ್ಯ. ಅದಕ್ಕೆ ತನ್ನದೆ ಆದ ಸಂವಿಧಾನ ಇದೆ. ಸಂವಿಧಾನದಲ್ಲಿ ಉಕ್ತವಾಗಿರುವ ಮತ್ತು ನಾವೇ ನಿರ್ಧರಿಸಿಕೊಂಡಿರುವ ಕೆಲವು ರಾಷ್ಟ್ರೀಯ ಗುರಿಗಳೂ ಇವೆ. ಅವುಗಳು :

೧. ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ
   ಅ. ಆಹಾರದಲ್ಲಿ ಸ್ವಾವಲಂಬನೆ
   ಆ. ಆರ್ಥಿಕ ಪ್ರಗತಿ ಮತ್ತು ಎಲ್ಲರಿಗೂ ಉದ್ಯೋಗಾವಕಾಶಗಳು
   ಇ. ಸಾಮಾಜಿಕ ಮತ್ತು ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವುದು
   ಈ. ರಾಜಕೀಯ ಪ್ರಗತಿ
೨. ಶಿಕ್ಷಣವನ್ನು ಬದಲಾವಣೆಯ ಸಾಧನವನ್ನಾಗಿ ಉಪಯೋಗಿಸುವುದು
   ಅ. ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು
   ಆ. ಶಿಕ್ಷಣವನ್ನು ಜೀವನದ ಅವಶ್ಯಕತೆಗಳಿಗೆ ಮತ್ತು ಆಕಾಂಕ್ಷೆಗಳ ಪೂರೈಕೆಗೆ ಹೊಂದಿಸುವುದು
   ಇ. ವಿಜ್ಞಾನವನ್ನು ಶಿಕ್ಷಣ ಮತ್ತು ಸಂಸ್ಕೃತಿಯ ಮುಖ್ಯ ಆಧಾರವನ್ನಾಗಿಟ್ಟುಕೊಳ್ಳುವುದು
೩. ಸೆಕ್ಯೂಲರಿಸಂ – ಲೌಕೀಕರಾಜ್ಯ–ಅಂದರೆ ಎಲ್ಲ ಧರ್ಮೀಯರಿಗೂ ಅವರು ತಮ್ಮ ತಮ್ಮ ಧರ್ಮಾಚರಣೆ ಅನುಸರಿಸಲು ಸಂಪೂರ್ಣ ಸ್ವಾತಂತ್ರ್ಯ
೪. ಎಲ್ಲರಿಗೂ ಏಕರೀತಿಯ ನ್ಯಾಯ
೫. ಎಲ್ಲರಿಗೂ ಸಮಾನ ಅವಕಾಶಗಳು
೬. ರಾಷ್ಟ್ರ ಪ್ರೇಮ ಬೆಳೆಸುವುದು
೭. ಅಂತರರಾಷ್ಟ್ರೀಯ ಮನೋಭಾವ ಬೆಳೆಸುವುದು
೮. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರಿವು ಮಾಡಿಕೊಡುವುದು.

ಇವೆಲ್ಲವೂ ಅಗತ್ಯವಾಗಿ ಮಕ್ಕಳಲ್ಲಿ ಬೆಳೆಸಬೇಕಾದ ಗುಣಗಳೇ. ಶಿಕ್ಷಣ ಪದ್ಧತಿ ಈ ಗುರಿಗಳನ್ನು ಕಡೆಗಣಿಸುವಂತಿಲ್ಲ; ನಿಜ. ಆದರೆ ಈ ಗುರಿಗಳನ್ನು ಸಾಧಿಸುವುದರಿಂದಲೇ ಮಾನವ ಜೀವನ ಪೂರ್ಣ ತೃಪ್ತಿಪಡೆಯುವುದು, ಲೌಕಿಕ ಧರ್ಮ ಅನುಷ್ಠಾನ ಮಾಡಿದಂತಾಗುವುದು ಎಂದು ಭಾವಿಸಿದರೆ ತಪ್ಪಾಗುವುದು. ಈ ಎಲ್ಲಗುರಿಗಳೂ ಸಮಾಜವನ್ನು ಆಧುನೀಕರಿಸಲು ನೆರವಾಗುವುವೇ ಹೊರತು ಜನರು ಮೌಲಿಕವಾದ ಜೀವನವನ್ನು ನಡೆಸುವಂತೆ ಮಾಡಲಾರವು. ''ಆಧುನೀಕರಣ ಎಂದರೆ ಅತಿ ಮುಖ್ಯವಾದ ಮತ್ತು ಅತ್ಯಮೂಲ್ಯವಾದ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕಿರಿಯ ಪೀಳಿಗೆ ಮೈಗೂಡಿಸಿಕೊಂಡು ಬೆಳೆಯುವುದನ್ನು

ತಿರಸ್ಕರಿಸುವುದೆಂದೂ ಸ್ವಯಂ ಶಿಸ್ತನ್ನು ಕಡೆಗಣಿಸುವುದೆಂದೂ ಅರ್ಥೈಸಬಾರದು.'' ಅವುಗಳಿಲ್ಲದ ಜೀವನಕ್ಕೆ ಅರ್ಥವಿಲ್ಲ. ಆಧುನೀಕರಣ ಮುನ್ನಡೆದಂತೆಲ್ಲ ಆರ್ಥಿಕ ಪ್ರಗತಿ ಮುಂದುವರಿಯುತ್ತಿರುತ್ತದೆ; ಅದರ ಫಲವಾಗಿ ಸಂಪತ್ತು ಸಂಚಯವಾಗುವುದು; ತತ್ಪರಿಣಾಮವಾಗಿ ಜೀವನಾವಶ್ಯಕತೆಗಳೂ ಅಧಿಕವಾಗಿ ವ್ಯಕ್ತಿ ಈ ಅನೇಕ ಅವಶ್ಯಕತೆಗಳಲ್ಲಿ ಆಗತ್ಯತೆಯನ್ನನುಸರಿಸಿ ಕೆಲವನ್ನು ಆಯ್ಕೆ ಮಾಡಿಕೊಳ್ಳಬೇಕಾಗುವುದು. ಈ ಆಯ್ಕೆಯ ಸ್ವಾತಂತ್ರ್ಯ ಕೆಲವು ಅನುಕೂಲಗಳನ್ನು ಹೊಂದಿದ್ದರೂ ಸಮಾಜದ ಭವಿಷ್ಯ ಅವರು ಮಾಡುವ ಆಯ್ಕೆಯನ್ನವಲಂಬಿಸಿದೆ. ಏಕೆಂದರೆ ವ್ಯಕ್ತಿ ಈ ಆಯ್ಕೆಯನ್ನು ತನ್ನ ತೃಪ್ತಿಗಾಗಿ ಮಾಡಬಹುದು; ಅಥವಾ ಎಲ್ಲರ ಒಳ್ಳಿತನ್ನು ಸಾಧಿಸುವ ದೃಷ್ಟಿಯಿಂದ ಸೇವಾ ಮನೋಭಾವವನ್ನೇ ಪ್ರಧಾನವಾಗಿಟ್ಟುಕೊಂಡು ಮಾಡಬಹುದು. ಇದು ಆ ವ್ಯಕ್ತಿ ಜೀವನದಲ್ಲಿ ಅಳವಡಿಸಿಕೊಂಡು ಅನುಷ್ಠಾನಕ್ಕೆ ತರಬಯಸುವ ಮೌಲ್ಯಗಳನ್ನವಲಂಬಿಸಿದೆ. ಆದುದರಿಂದ ಕ್ಷಣ ಕ್ಷಣದಲ್ಲೂ ಸ್ಫೋಟಗೊಳ್ಳುತ್ತಿರುವ ಜ್ಞಾನ ಸಮಾಜಕ್ಕೆ ಅಪಾರ ಶಕ್ತಿಯನ್ನು ಕೊಟ್ಟಿದೆ. ಮನುಕುಲದಕ್ಷೇಮಚಿಂತಕರು ಈ ಜ್ಞಾನ ಸಾಮಾಜಿಕ ಜವಾಬ್ದಾರಿ ಮತ್ತು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಬಗೆಗೆ ಅತಿಯಾದ ಮೆಚ್ಚುಗೆ ಇದ್ದೂ ಅವುಗಳನ್ನು ಮೈಗೂಡಿಸಿಕೊಂಡು ಅನುಸರಿಸಿದರೆ ಮಾತ್ರ ಸಮಾಜಕ್ಷೇಮ ಸಾಧ್ಯ ಎಂಬ ನಿಲುವು ತಳೆದಿದ್ದಾರೆ. ಅಜ್ಞಾನದಿಂದ ಕೂಡಿದ ಒಳ್ಳೆಯತನ ನಿಷ್ಪ್ರಯೋಜಕ ಎಂದು ಭಾವಿಸಿದರೆ ಅತ್ಯಗತ್ಯವಾದ ಮೌಲ್ಯ ರಹಿತವಾದ ಜ್ಞಾನ ಹಾನಿಕರ ಪಾಶ್ಚಾತ್ಯ, ದೇಶಗಳಲ್ಲಿ ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು ಕಿರಿಯ ಪೀಳಿಗೆಯಲ್ಲಿ ಬೆಳೆಸದಿರುವುದರಿಂದ ಸಾಮಾಜಿಕ ಮತ್ತು ನೈತಿಕ ಸಮಸ್ಯೆಗಳು ಉದ್ಭವಿಸಿ ಆ ರಾಷ್ಟ್ರಗಳ ತತ್ವಜ್ಞಾನಿಗಳು ಮತ್ತು ಚಿಂತಕರು ವಿಜ್ಞಾನ ಮತ್ತು ತಂತ್ರಜ್ಞಾನಗಳ ಪ್ರಗತಿಯಿಂದ ಲಭ್ಯವಾಗಿರುವ ಜ್ಞಾನ ಮತ್ತು ಕೌಶಲಗಳು ಮತ್ತು ಮಾನವ ಜೀವನದ ಮೌಲ್ಯಗಳು ಮತ್ತು ನೈತಿಕ ಮತ್ತು ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ-ಅಂದರೆ ಆತ್ಮಜ್ಞಾನ ಸಂಪಾದಿಸುವುದು, ಜೀವನದ ಅರ್ಥ ತಿಳಿಯುವುದು, ಇತರ ಜೀವರಾಶಿಗಳೊಡನೆ ಮಾನವನ ಸಂಬಂಧ ಅರಿಯುವುದು ಮತ್ತು ಅಂತಿಮ ಸತ್ಯ ಹುಡುಕುವುದು ಇವುಗಳ ನಡುವೆ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ನಮ್ಮ ಸ್ಥಿತಿಯೂ ಅದಕ್ಕಿಂತ ಉತ್ತಮವಾಗೇನೂ ಇಲ್ಲ. ಆದುದರಿಂದ ಪ್ರಾಪಂಚಿಕ ವಿಷಯಗಳಿಗೆ ಸಂಬಂಧಿಸಿದಂತೆ ಬೆಳೆಯುತ್ತಿರುವ ಅತಿಯಾದ ಆಶೆ ಅದನ್ನು ಪಡೆಯುವುದಕ್ಕಾಗಿ ಅನುಸರಿಸುವ ಅಧರ್ಮ ಮಾರ್ಗಗಳು ವ್ಯಕ್ತಿಯನ್ನು ಪರಿವರ್ತಿಸಿ ಋಜು ಮಾರ್ಗಕ್ಕೆ ತಿರುಗುವಂತೆ ಮಾಡುವ ಪ್ರಯತ್ನವನ್ನು ನಾವು ತ್ವರಿತವಾಗಿ ಮಾಡಬೇಕಾಗಿದೆ.

ಇದನ್ನು ಸಾಧಿಸುವುದು ಹೇಗೆ ? ನಮ್ಮ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ ಮತ್ತು ಮೌಲ್ಯ ಶಿಕ್ಷಣವನ್ನು ಕಡೆಗಣಿಸಿದ್ದೇವೆ. ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾನಂತರದ ಪ್ರಾರಂಭದ ವರ್ಷಗಳಲ್ಲಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದು ಪ್ರತಿ ತರಗತಿ ಅಥವಾ ವಿಭಾಗದಲ್ಲಿ ೩೫ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿರದಿದ್ದುದರಿಂದ ಶಿಕ್ಷಕ ಮತ್ತು

ವಿದ್ಯಾರ್ಥಿಗಳ ಅನುಪಾತ ಕಡಿಮೆ ಇದ್ದು ಇಬ್ಬರ ನಡುವೆ ನಿಕಟ ಸಂಪರ್ಕ ಇತ್ತು. ಅಲ್ಲದೆ ಶಿಕ್ಷಕರೂ ತಮ್ಮ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವುದರಲ್ಲಿ ಆಸಕ್ತರಾಗಿದ್ದುದರಿಂದ ಶಾಲೆಯ ಒಳಗೆ ಮತ್ತು ಹೊರಗೆ ಅವಕಾಶ ಸಿಕ್ಕಿದಾಗಲೆಲ್ಲ ವಿದ್ಯಾರ್ಥಿಗಳ ತಪ್ಪುಗಳನ್ನು ತಿದ್ದುವ ಪ್ರಯತ್ನ ಮಾಡುತ್ತಿದ್ದರು. ಜೊತೆಗೆ ಶಾಲೆಯಲ್ಲಿ ವ್ಯವಸ್ಥೆಯಾಗುತ್ತಿದ್ದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡೆಗಳು, ಸ್ಕೌಟ್ ಮತ್ತು ಸೇವಾದಳಗಳು ಮತ್ತು ಪ್ರವಾಸಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಾಮಾಜಿಕ ಜೀವನ ಮೌಲ್ಯಗಳನ್ನು ಸ್ವತಹ ಅನುಷ್ಠಾನಕ್ಕೆ ತಂದು ಅವುಗಳಿಂದ ದೊರೆಯುವ ಸಂತೋಷವನ್ನು ಅನುಭವಿಸುವ ವಿಪುಲ ಅವಕಾಶಗಳನ್ನು ಉಂಟು ಮಾಡುತ್ತಿದ್ದುವು. ಇಂದು ಅಪವಾದವೆನಿಸುವ ಕೆಲವು ಶಾಲೆಗಳನ್ನು ಬಿಟ್ಟು ಬಹುತೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳು ಇವುಗಳ ಹೆಸರನ್ನೇ ಕೇಳಿಲ್ಲ. ಕನಿಷ್ಠ ಸೌಲಭ್ಯಗಳೂ ಇಲ್ಲ. ಶಾಲೆಯ ಸಮಯದನಂತರ ಅಧ್ಯಾಪಕರುಗಳಿರಲಿ ವಿದ್ಯಾರ್ಥಿಗಳನ್ನೂ ಶಾಲಾ ಮೈದಾನದಲ್ಲಿ ಕಾಣುವುದು ದುರ್ಲಭವಾಗಿದೆ. ನಾವು ಜ್ಞಾನಾರ್ಜನೆಗೆ ಅನಗತ್ಯವಾದ ಒತ್ತು ಕೊಟ್ಟು ಶಿಕ್ಷಣದ ಅತಿ ಮುಖ್ಯ ಗುರಿಯಾದ ಮಕ್ಕಳ ಸರ್ವಾಂಗೀಣ ವಿಕಾಸವನ್ನು ಕಡೆಗಣಿಸಿದ್ದೇವೆ. ಇದು ಹೀಗೆಯೇ ಮುಂದುವರಿದರೆ ಸಮಾಜ ವಿಪತ್ತಿಗೆ ಗುರಿಯಾಗುವುದು. ಅದಕ್ಕೆ ಮೊದಲೇ ನಾವು ಎಚ್ಚೆತ್ತುಕೊಳ್ಳಬೇಕು.

ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾ ನಂತರ ನೇಮಕಗೊಂಡ ಎಲ್ಲ ಶಿಕ್ಷಣ ಆಯೋಗಗಳು ಮತ್ತು ಸಮಿತಿಗಳು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬೆಳೆಯುವಂತೆ ಮಾಡಲು ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶಿಕ್ಷಣ ಪದ್ಧತಿಯಲ್ಲಿ ಆಗತ್ಯ ವ್ಯವಸ್ಥೆ ಮಾಡಬೇಕೆಂಬ ವಿಷಯದಲ್ಲಿ ಏಕಾಭಿಪ್ರಾಯ ಹೊಂದಿವೆ. ಪಾಶ್ಚಾತ್ಯರಾಗಲಿ ಪೌರ್ವಾತ್ಯರಾಗಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡಭಿಪ್ರಾಯಗಳನ್ನು ವ್ಯಕ್ತಪಡಿಸುವುದಿಲ್ಲ. ಎಲ್ಲರೂ ಅದರ ಅಗತ್ಯವನ್ನು ಮನಗಂಡಿದ್ದಾರೆ. ನಾವೂ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಮೌಲ್ಯ ಶಿಕ್ಷಣವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದೇವೆ. ಆದರೆ ದೃಢಸಂಕಲ್ಪದಿಂದ ಪ್ರಯತ್ನಮಾಡಿಲ್ಲ.

ಮೌಲ್ಯ ಶಿಕ್ಷಣ ಹೇಗೆ ಅನುಷ್ಠಾನಕ್ಕೆ ತರಬೇಕು ?

ಕರ್ನಾಟಕದಲ್ಲಿ ಮೌಲ್ಯ ಶಿಕ್ಷಣಕ್ಕೆ ಪಠ್ಯವಸ್ತು ಸಿದ್ಧಪಡಿಸಿದೆವು; ಪಠ್ಯಪುಸ್ತಕವೂ ಸಿದ್ಧವಾಯಿತು. ಇಷ್ಟು ಸಾಕೆ ? ಕೆಲವರು ಇದು ಪರೀಕ್ಷೆಯ ವಿಷಯವಾಗಬೇಕೆಂದರು. ಏನನ್ನು ಪರೀಕ್ಷಿಸುವಿರಿ ? ಇದು ಕೇವಲ ಒಂದೆರಡು ಗಂಟೆಗಳಲ್ಲಿ ಪರೀಕ್ಷಿಸುವ ವಿಷಯವೇ? ಪ್ರಾಚೀನ ಭಾರತದ ಒಂದು ಕಥೆ ನೆನಪಿಗೆಬರುತ್ತದೆ. ಒಂದು ಋಷ್ಯಾಶ್ರಮದಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಅವರಲ್ಲಿ ಮೂರು ಮಂದಿ ತಮ್ಮ ಶಿಕ್ಷಣವನ್ನು ಮುಗಿಸಿ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುವ ಕಾಲ ಸನ್ನಿಹಿತವಾಯಿತು. ಅವರೆಲ್ಲರೂ ಸ್ನಾತಕ ಪದವಿಗೆ ಅರ್ಹರಾಗಿದ್ದರು. ಆಶ್ರಮ ಕುಲಪತಿಗಳು ಅವರು ಶಿಕ್ಷಣವನ್ನು

ಜೀರ್ಣಿಸಿಕೊಂಡಿರುವ ರೀತಿಯನ್ನು ಒರೆ ಹಚ್ಚಿನೋಡುವ ಉದ್ದೇಶದಿಂದ ಆ ಮೂವರಿಗೂ ಮೂರು ಕುಂಭಗಳನ್ನು ಕೊಟ್ಟು ಸಮೀಪದ ನದಿಯಿಂದ ನೀರು ತರುವಂತೆ ಹೇಳಿದರು ನದಿಗೆ ಹೋಗುವಾಗ ಅವರು ಹೋಗುವದಾರಿಯಲ್ಲಿ ಏನೂ ತೊಂದರೆ ಇರಲಿಲ್ಲ. ಆದರೆ ನೀರು ತೆಗೆದುಕೊಂಡು ಬರುವಾಗ ಅವರು ಹೋದ ದಾರಿಯ ಮಧ್ಯದಲ್ಲಿ ವಿಪರೀತ ಮುಳ್ಳುಗಳು ಹರಡಿದ್ದುವು. ಮೊದಲನೆಯವನು ಯೋಚಿಸಿದ. ಅವನಿಗೆ ಹೊಳೆದ ಉಪಾಯ ಆ ದಾರಿಯ ಪಕ್ಕದಲ್ಲಿ ಮುಳ್ಳಿಲ್ಲದ ಮಾರ್ಗದಲ್ಲಿ ಹಾದು ಹೋಗುವುದೆಂದು ತೀರ್ಮಾನಿಸಿ ಹಾಗೆಯೇ ಆಶ್ರಮ ಸೇರಿದ. ಎರಡನೆಯವನು ಕುಂಭವನ್ನು ಕೆಳಗಿಟ್ಟು ಅಗಲವಾದ ಕಲ್ಲುಗಳನ್ನು ಆಯ್ದು ಅಲ್ಲಲ್ಲಿ ಇಟ್ಟು ಅವುಗಳ ಮೇಲೆ ಹೆಜ್ಜೆ ಇಟ್ಟು ಮುಳ್ಳುಗಳನ್ನು ನಿವಾರಿಸಿ ಆಶ್ರಮ ಸೇರಿದ. ಮೂರನೆಯವನು ಏನು ಮಾಡಿದ ? ಆತ ಕುಂಭವನ್ನು ಕೆಳಗಿಟ್ಟು ಹರಡಿದ್ದ ಮುಳ್ಳುಗಳೆಲ್ಲವನ್ನೂ ಒಂದೆಗುಡ್ಡೆ ಮಾಡಿ ಆ ದಾರಿಯಿಂದ ದೂರಹಾಕಿ ಆ ದಾರಿಯನ್ನು ಎಲ್ಲರೂ ಉಪಯೋಗಿಸಲು ಸುಗಮವಾಗಿರುವಂತೆ ಮಾಡಿ ಆಶ್ರಮ ಸೇರಿದ. ಗುರುಗಳ ಆಶ್ರಮದಿಂದ ಹೊರಟು ಮತ್ತೆ ಆಶ್ರಮಕ್ಕೆ ಬರುವವರೆಗಿನ ಘಟನೆಗಳನ್ನು ಹೇಳುವಂತೆ ಅವರಿಗೆ ತಿಳಿಸಿದರು. ಅವರು ಹೇಳಿದುದನ್ನು ಕೇಳಿದ ಮೇಲೆ ಮೂರನೆಯವನ ಶಿಕ್ಷಣ ಸಾಂಗವಾಗಿ ಮುಗಿದಿದೆಯೆಂದೂ ಆತನೂ ಸುಖಿಸಿ ಸಮಾಜದ ಇತರರನ್ನೂ ಸುಖಪಡಿಸಬಲ್ಲನೆಂದೂ, ಅವನಿಗೆ ಕೇವಲ ಜೀವನ ಮೌಲ್ಯಗಳೇ ಅಲ್ಲ, ಲೌಕಿಕ ಧರ್ಮದ ಅರಿವೂ ಆಗಿದೆ ಎಂದು ನಿರ್ಧರಿಸಿ ಆತನಿಗೆ ತುಂಬು ಮನಸ್ಸಿನಿಂದ ಆಶೀರ್ವದಿಸಿ ಮನೆಗೆಕಳುಹಿಸಿಕೊಟ್ಟರು. ಉಳಿದಿಬ್ಬರ ಶಿಕ್ಷಣ ಪೂರ್ಣವಾಗಿಲ್ಲ ಅವರು ಇನ್ನೂ ಕೆಲವು ಕಾಲ ಆಶ್ರಮದಲ್ಲಿಯೇ ಇದ್ದು ಶಿಕ್ಷಣ ಪಡೆಯಬೇಕೆಂದು ತಿಳಿಸಿದರು. ಎಷ್ಟು ಪ್ರಶ್ನೆ ಪತ್ರಿಕೆಗಳು ಇಂತಹ ಅನುಭವಗಳನ್ನು ಆಳೆಯಬಲ್ಲವು ? ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸ ಎಷ್ಟಾಗಿದೆ ಎಂಬುದನ್ನು ಎಷ್ಟು ಪ್ರಶ್ನೆ ಪತ್ರಿಕೆಗಳು ಒರೆ ಹಚ್ಚಬಲ್ಲವು ? ಇದರ ಅರ್ಥ ಇಷ್ಟೇ ಈ ವಿಷಯಗಳನ್ನು ಪಠ್ಯಪುಸ್ತಕಗಳ ಮೂಲಕ ಬೋಧಿಸಲು ಸಾಧ್ಯವಿಲ್ಲ. ಮಹಾಕಾವ್ಯಗಳು, ಪುರಾಣಗಳ ಮತ್ತು ಇತಿಹಾಸಗಳ ಘಟನೆಗಳ ಚಿತ್ರಗಳನ್ನು ಮಕ್ಕಳ ಮುಂದೆ ಇಡುವುದರಿಂದ ಅವು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರಬಹುದು. ಉದಾಹರಣೆಗೆ ವಾಲಿಯ ವಧೆಯ ಸಂದರ್ಭದಲ್ಲಿ ರಾಮನ ತಪ್ಪೊಪ್ಪಿಗೆ, ರಾವಣನ ವಿಷಯದಲ್ಲಿ ರಾಮನ ಭಾವನೆ, ರಾಮ ವಿಭೀಷಣನಿಗೆ ಎಲ್ಲ ರೀತಿಯಲ್ಲೂ ಆತ ನನಗೆ ಸಮಾನ ''ಸುಪಿತ ನಾಂ ನಿಸನಂಗೆ ಸಗುವ ಸತ್ಕ್ರಿಯೊಳ್'' ಎಂಬುದರಿಂದ ವ್ಯಕ್ತವಾಗುವುದು. ಈ ವ್ಯಕ್ತಿತ್ವದಿಂದಲ್ಲವೆ ರಾಮ ಶ್ರೀ ರಾಮನಾದುದು; ಲೋಕೈಕ ರಾಮನಾಗಿ ಸರ್ವರ ಆರಾಧನೆಗೂ ಪಾತ್ರನಾದುದು. ಅದು ಬಿಟ್ಟು ಸತ್ಯವನ್ನೇ ಹೇಳುತ್ತೇನೆ, ಅಹಿಂಸೆ ಮಾರ್ಗ ಅನುಸರಿಸುತ್ತೇವೆ ಎಂಬ ಮಾತುಗಳು ನೂರು ಸಾರಿ ಅವರಿಂದ ಹೇಳಿಸಿದರೂ ಅವರು ಸತ್ಯವನ್ನು ಹೇಳದೆ ಹೋಗಬಹುದು; ಅಹಿಂಸಾ ಮಾರ್ಗ ಅನುಸರಿಸದಿರಬಹುದು. ಏಕೆಂದರೆ ಇವೆಲ್ಲವೂ ಹೇಡಿಗಳಿಂದ ಸಾಧ್ಯವಿಲ್ಲ.

ಧೀರರು ಮಾತ್ರ ಇವುಗಳನ್ನು ಅನುಸರಿಸಬಲ್ಲರು. ನಾವು ನಮ್ಮ ಜನಾಂಗವನ್ನು ವೀರ್ಯವತ್ತಾದ ಜನಾಂಗವನ್ನಾಗಿ ಮಾಡಿ ಅವರು ಲೌಕಿಕ ಧರ್ಮ ಪಾಲನೆಗೆ ದೀಕ್ಷೆ ತೋಡುವಂತೆ ಮಾಡಿದರೆ ಉಳಿದೆಲ್ಲ ಆಸೆ ಆಕಾಂಕ್ಷೆಗಳೂ ಹೆಚ್ಚು ಪ್ರಯಾಸವಿಲ್ಲದೆ ಕೈಗೂಡುವುವು.

ಆಧಾರ ಗ್ರಂಥಗಳ

1. Ancient Indian Education by Radha Kumud Mukerji
2. Towards Universal Man by Rabindranath Tagore
3. Modern Philosophies of education by John S. Brubacher
4. Doctrines of the Great Educators by, Robert R. Rush
5. The sociology of Education in India Published by N.C.E.R.T
6. Democracy and Education -An introduction to philosophy of education by John Dewey
7. ಶ್ರೀ ಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮ ಯೋಗ : ಡಿ. ವಿ. ಗುಂಡಪ್ಪ
8. ಕುವೆಂಪು ದರ್ಶನ ಮತ್ತು ಸಂದೇಶ : ದೇಜಗೌ

10. Report of the Education Commission - 1966
11. Educational Philosophy of Swami Vivekananda by T. S. Avinasha Lingam

ಧರ್ಮ ಮತ್ತು ಆರ್ಥಿಕತೆ

ಡಾ. ಸಿ.ಕೆ. ರೇಣುಕಾರ್ಯ

ವಿಶ್ವದ ಇತಿಹಾಸದಲ್ಲಿ ಅನೇಕ ಧರ್ಮಗಳು ವಿಕಾಸಗೊಂಡು, ಬೆಳವಣಿಗೆಯ ಸ್ಥಿತಿಯನ್ನನುಭವಿಸಿವೆ. ಇಂದು, ಎಲ್ಲ ಧರ್ಮಗಳೂ ಬಿಕ್ಕಟ್ಟನ್ನು ಅನುಭವಿಸುತ್ತಿವೆ. ಇದಕ್ಕೆ ಕಾರಣ, ಅವುಗಳ ಆಂತರಿಕ ದೌರ್ಬಲ್ಯವಲ್ಲ. ಬದಲಿಗೆ, ಪ್ರಪಂಚದಲ್ಲಿ ಇಂದು ಆರ್ಥಿಕ ಅಭಿವೃದ್ಧಿಗೆ ದೊರೆತಿರುವ ಪ್ರಾಶಸ್ತ್ಯ ವಿಜ್ಞಾನ ಮತ್ತು ತಂತ್ರಜ್ಞಾನಗಳ ವಿಕಾಸ ಮತ್ತು ಅವುಗಳ ಪ್ರಭಾವದಿಂದಾಗಿ ಪ್ರತಿಯೊಂದು ಆರ್ಥಿಕತೆಯಲ್ಲೂ ಆಗುತ್ತಿರುವ ಬದಲಾವಣೆಗಳು. ಹಳೆಯ ಧರ್ಮಗಳು ಈ ಹಿನ್ನೆಲೆಯಲ್ಲಿ ಕುಸಿಯುತ್ತಿರುವಂತೆ ಭಾಸವಾಗುತ್ತದೆ. ಮತ್ತು ಹೊಸ ಧರ್ಮ ತನ್ನ ಹುಟ್ಟು ಮತ್ತು ಸ್ವರೂಪವನ್ನು ಗುರುತಿಸಿಕೊಳ್ಳಲಾಗದೇ ಅತಂತ್ರವಾಗಿರುವಂತೆ ಸಹ ಭಾಸವಾಗುತ್ತದೆ. ಹೀಗಾಗಿ ಇಡೀ ವಿಶ್ವದ ಜನತೆಯೇ ಹಳತು ಹೊಸತುಗಳ ನಡುವೆ ಇಕ್ಕಟ್ಟಿನಲ್ಲಿರುವಂತೆ ಸಹ ತೋರುತ್ತದೆ.

ಪಾಶ್ಚಿಮಾತ್ಯ ಆರ್ಥಿಕತೆಗಳಲ್ಲಿ, ಭೌತಿಕ ಪ್ರಗತಿಯ ಹಿನ್ನೆಲೆಯಲ್ಲಿ ಧರ್ಮಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಂತೆ ಕಾಣುತ್ತಿದ್ದರೂ, ಉತ್ತುಂಗ ಭೌತಿಕ ಪ್ರಗತಿಯೇ ಯುವ ಜನಾಂಗ ತಮ್ಮ ಅಂತರಾಳದಲ್ಲಿಯೇ ಅಸಂತುಷ್ಟತೆಯನ್ನು ಹೊಂದಿ, ಶಾಂತಿಗಾಗಿ ನಿರಂತರವಾಗಿ ಏನನ್ನೋ ಅರಸುತ್ತಿರುವುದು ಕಂಡುಬರುತ್ತದೆ. ಹಳೆಯ ಮತ್ತು ಹೊಸ ತಲೆಮಾರುಗಳ ನಡುವೆ ಧರ್ಮದ ದೃಷ್ಟಿಯಿಂದ ಹೊಸ ಘರ್ಷಣೆಯೇ ನಡೆದಿದೆ ಎಂದರೂ ತಪ್ಪಾಗುವುದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಬಡತನ ಉಗ್ರಸ್ವರೂಪದ್ದಾಗಿಲ್ಲ. ಅಲ್ಲಿಯ ಜನರ ತಲಾ ವರಮಾನ ಬಹಳ ಹೆಚ್ಚಾಗಿದೆ. ಆದರೆ, ಈ ಹೆಚ್ಚಿನ ವರಮಾನ ಹೆಚ್ಚಿನ ಸಂತೋಷವನ್ನೇನೂ ತನ್ನ ಜೊತೆಗೆ ತಂದಿಲ್ಲ. ಇದನ್ನು ನಮ್ಮ ಉಪನಿಷತ್ತುಗಳು ಬಹಳ ಹಿಂದೆಯೇ ಸಾರಿದ್ದವು. "ನ. ವಿ.ತ್ತೇನ ತರ್ಪಣಿಯೋ ಮನುಷ್ಯೋ" ಅಂದರೆ, ಸಂಪತ್ತು ಮನುಷ್ಯನಿಗೆ ಸಂತೋಷವನ್ನು ತಂದುಕೊಡುವುದಿಲ್ಲ ಎಂಬುದನ್ನು ನಮ್ಮ ಉಪನಿಷತ್ತು ಘೋಷಿಸಿತ್ತು. ಇದು ಅತ್ಯಂತ ಹೆಚ್ಚಿನ ರಾಷ್ಟ್ರೀಯ ವರಮಾನವಿರುವ ರಾಷ್ಟ್ರಗಳಲ್ಲಿ ಇಂದು ಸತ್ಯವಾಗಿದೆ. ಧರ್ಮವನ್ನು ಗೌಣವಾಗಿ ಪರಿಗಣಿಸಿರುವ ಪಾಶ್ಚಾತ್ಯರು ಇಂದು ಹೊಸ ಧರ್ಮವೊಂದರ ಪರಿಶೋಧನೆಯಲ್ಲಿ ತೊಡಗಿದ್ದಾರೆ. ಈ ವಿಜ್ಞಾನ, ತಂತ್ರಜ್ಞಾನಗಳ

ಪ್ರಗತಿ, ಮನುಷ್ಯ ಹೆಚ್ಚು-ಹೆಚ್ಚು ಆಳವಾಗಿ ತನ್ನನ್ನೇ ಕುರಿತು ಚಿಂತಿಸುವಂತೆ ಮಾಡಿದೆ ಎನ್ನುವುದು ವಿಪರ್ಯಾಸ.

ಅತ್ಯಂತ ಹೆಚ್ಚಿನ ಬಡತನವಿರುವ ಆದರೆ ಧರ್ಮಗಳೇ ಜನರ ಜೀವನದ ಹಾಸುಹೊಕ್ಕಾಗಿರುವ ನಮ್ಮಂತಹ ರಾಷ್ಟ್ರಗಳಲ್ಲಿನ ಪರಿಸ್ಥಿತಿಯೇ ಬೇರೆ. ಎಲ್ಲ ಧರ್ಮಗಳಿಗೆ ಆಶ್ರಯಕೊಟ್ಟಿರುವ ರಾಷ್ಟ್ರ ನಮ್ಮದು. ಹಾಗೆಯೇ ಅತ್ಯಂತ ಪ್ರಾಚೀನ ಧರ್ಮ ವಿಕಾಸಗೊಂಡಿರುವ ರಾಷ್ಟ್ರ ಸಹ ನಮ್ಮದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ನಿಸರ್ಗವನ್ನು ಒಂದು ಮೃತ ವಸ್ತುವಾಗಿ ಭಾವಿಸಿ ಮಾನವನ ಐಹಿಕಾಭ್ಯುದಯಕ್ಕಾಗಿ ಅದನ್ನು ಶೋಷಿಸುವ ನಿರಂತರ ಕ್ರಿಯೆ ನಡೆದಿದ್ದರೆ, ಭಾರತದಲ್ಲಿ ನಿಸರ್ಗವನ್ನು ದೈವವಾಗಿ ಪರಿಗಣಿಸಿ ಅದನ್ನು ಆರಾಧಿಸುವ ಕ್ರಿಯೆ ನಡೆದು ಬಂದಿದೆ. ಇದು ಈ ಎರಡೂ ಗುಂಪಿನ ರಾಷ್ಟ್ರಗಳ ಅತ್ಯಂತ ಮೂಲಭೂತವಾದ ಅಂಶ ಎನ್ನುವುದನ್ನು ಪರಿಗಣಿಸಬೇಕು. ಭಾರತದಲ್ಲಿ ಹಿಂದೂ ಧರ್ಮ ಅತಿ ಮುಖ್ಯವಾದುದು ಮತ್ತು ಬಹಳ ಪ್ರಾಚೀನವಾದುದು. ಆರ್ಥಿಕತೆಯನ್ನು ಧರ್ಮ ಪ್ರಭಾವಿಸುತ್ತಾ ಬಂದಿರುವ ಒಂದು ಮಹತ್ವದ ಸಂಗತಿ ಸಹ ಬಹಳ ಗಮನಾರ್ಹ.

ಹಿಂದೂಧರ್ಮ, ಮನುಷ್ಯನ ಅತೀತವನ್ನು ಹೆಚ್ಚಾಗಿ ಗುರುತಿಸುತ್ತಾ ಬಂದಿದೆ. ಐಹಿಕತೆ, ಆಧ್ಯಾತ್ಮಿಕತೆ ಈ ಧರ್ಮದಲ್ಲಿ ಮುಖ್ಯ. ಇಲ್ಲಿ ನಿಸರ್ಗ ಮತ್ತು ಮಾನವ ಪ್ರತ್ಯೇಕವಾದ ವಿಷಯಗಳಲ್ಲ. ನಿಸರ್ಗದ ಶೋಷಣೆ ಮಾನವನ ಐಹಿಕಾಭಿವೃದ್ಧಿಗಾಗಿ ಇದೆ ಎನ್ನುವ ಭಾವನೆ ಈ ಧರ್ಮದಲ್ಲಿ ಬೆಳೆದು ಬಂದಿಲ್ಲ. ಬದಲಿಗೆ ನಿಸರ್ಗದ ಪ್ರತಿಯೊಂದು ವಿಷಯದ ಮೇಲೂ ದೈವತ್ವದ ಋಜುವಿದೆ. ಹೀಗಾಗಿ ನಿಸರ್ಗ ಮತ್ತು ಮನುಷ್ಯ ಪ್ರತ್ಯೇಕವಾದ ವಸ್ತುಗಳಲ್ಲ. ಆದ್ದರಿಂದ, ನಿಸರ್ಗವನ್ನು ಶೋಷಿಸಿ, ಬಂಡವಾಳವನ್ನು ಸಂಚಿಸುವ ಕ್ರಿಯೆ ಹಿಂದೂ ಧರ್ಮದಿಂದ ಉದ್ಭವವಾದುದೇ ಅಲ್ಲ. ಬದಲಿಗೆ ಅದು ಧರ್ಮಕ್ಕೆ ಹೊಸದು. ಅದನ್ನು ಅಪೋಷಿಸಿಕೊಳ್ಳುವುದು ಕಷ್ಟ ಸಹ. ಹಿಂದೂ ಧರ್ಮದ ಮತ್ತೊಂದು ಸ್ವಾರಸ್ಯವೆಂದರೆ, ಇಸ್ಲಾಂ, ಕ್ರೈಸ್ತ ಅಥವಾ ಬುದ್ಧ ಧರ್ಮಗಳನ್ನು ಸ್ಥಾಪಿಸಿದವರಂತೆ, ಹಿಂದೂ ಧರ್ಮವನ್ನು ಸ್ಥಾಪಿಸಿದವರು ಯಾರೂ ಇಲ್ಲ. ಪ್ರಾಚೀನ ಕಾಲದಿಂದ ಅಭಿವೃದ್ಧಿಗೊಂಡ ಈ ಧರ್ಮ ತನ್ನದೇ ಆದ ನೈತಿಕ ಚೌಕಟ್ಟಿನ್ನೊಳಗೆ ನಡೆದಿರುವುದು ವಿಶೇಷ. ಈ ಮೊದಲೇ ಹೇಳಿದಂತೆ ಭಾರತದಲ್ಲಿ ಅನೇಕ ಧರ್ಮಗಳು ಅಸ್ತಿತ್ವಕ್ಕೆ ಬಂದು ವಿಕಾಸಗೊಂಡಿದ್ದರೂ, ಆರ್ಥಿಕತೆಯನ್ನು ವಿಶೇಷವಾಗಿ ಪ್ರೇರೇಪಿಸಿಕೊಂಡು ಬಂದಿರುವ ಧರ್ಮ, ಹಿಂದೂ ಧರ್ಮವೇ ಆಗಿದೆ. ಈ ಶತಮಾನದಲ್ಲಿ ಸಹ. ಸ್ವಾಮೀ ವಿವೇಕಾನಂದ, ರಮಣ ಮಹರ್ಷಿ, ಶ್ರೀ ಅರವಿಂದೋ ಮತ್ತು ಮಹಾತ್ಮಾ ಗಾಂಧೀ ಹಿಂದೂ ಧರ್ಮಕ್ಕೆ ತಮ್ಮದೇ ಆದ ನವೀನ ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ. ಈ ವ್ಯಾಖ್ಯಾನಗಳು ಬದಲಾಗಿರುವ ಆರ್ಥಿಕ ಅಭಿವೃದ್ಧಿಯ ಪರಿಸ್ಥಿತಿಗಳನ್ನು ಗಮನಿಸಿ ಕೊಟ್ಟಿರುವ ವ್ಯಾಖ್ಯೆಗಳಾಗಿವೆ. ಸ್ವಾಮೀ ವಿವೇಕಾನಂದರ ಈ ಮಾತುಗಳನ್ನು ನೋಡೋಣ :

"ಮೊದಲು ಆಹಾರ ಅನಂತರ ಧರ್ಮ, ಬಡವರು ಆಹಾರಕ್ಕಾಗಿ ಪರದಾಡುತ್ತಿರುವಾಗ, ಅವರಿಗೆ ಧರ್ಮವನ್ನು ಅತಿಯಾಗಿ ತುಂಬಲು ನಾವು ಹೋಗುತ್ತೇವೆ. ಯಾವುದೇ ಧಾರ್ಮಿಕ ನಂಬಿಕೆಯಾಗಲೀ ಹಸಿವನ್ನು ನೀಗಿಸುವುದು ಸಾಧ್ಯವೇ ಇಲ್ಲ. ಇಲ್ಲಿ ಎರಡು ದೋಷಗಳಿವೆ. ಮೊದಲನೆಯದು ಬಡತನದಿಂದಾಗಿ, ದೈಹಿಕ ದುರ್ಬಲತೆ ಇರುತ್ತದೆ. ಎರಡನೆಯದಾಗಿ, ಈರ್ಷ್ಯೆ ಸಹಜವಾಗಿ ಬೆಳೆದಿರುತ್ತದೆ. ಬಡತನದಿಂದ ಹೃದಯ ಹೀನತೆ ಸಹ ಬರುತ್ತದೆ."

ಧಾರ್ಮಿಕ ನಂಬಿಕೆ ಮತ್ತು ಆರ್ಥಿಕ ಅಭಿವೃದ್ಧಿಗಳ ನಡುವೆ ಹಿಂದೂ ಧರ್ಮದಲ್ಲಿ ಕೊಂಡಿ ಇಲ್ಲ ಎನ್ನುವುದನ್ನು ಮೇಲಿನ ಮಾತು ಅತ್ಯಂತ ಸ್ಪಷ್ಟವಾಗಿ ತಿಳಿಸುತ್ತದೆ. ಹಾಗೆ ನೋಡುವುದಾದರೆ, ಹಿಂದೂ ಧರ್ಮದ ಉದ್ದಕ್ಕೂ, ಆಧ್ಯಾತ್ಮಿಕತೆಗೆ ದೊರೆತ ಪ್ರಾಮುಖ್ಯತೆ, ಐಹಿಕಾಭ್ಯುದಯಕ್ಕೆ ದೊರೆತೇ ಇಲ್ಲ ಎಂದು ಹೇಳಬಹುದು. ದೇಹ ಇರುವುದು ಮುಕ್ತಿಯ ಸಾಧನೆಗಾಗಿ ಎನ್ನುವುದನ್ನು ನೋಡಿದಾಗ, ಆರ್ಥಿಕ ಅಭಿವೃದ್ಧಿ ಗೌಣವಾಗುತ್ತದೆ. ದೇವರಿಗಾಗಿಯೇ, ದೇಹವಿರುವುದು. ಅದು ಆರ್ಥಿಕಾಭಿವೃದ್ಧಿಗಲ್ಲ ಎನ್ನುವುದು, ವೇದ, ಪುರಾಣ, ವಚನ, ಉಪನಿಷತ್ತುಗಳಿಂದ ಬಹಳ ಸ್ಪಷ್ಟವಾಗಿ ಕಾಣುತ್ತದೆ. ಅಲ್ಲಮಪ್ರಭುವಿನ ಈ ವಚನವನ್ನು ನೋಡಿ.

ಆಸೆಗೆ ಸತ್ತುದು ಕೋಟಿ
ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು, ಹೆಣ್ಣು, ಮಣ್ಣಿಗೆ ಸತ್ತುದು ಕೋಟಿ
ಗುಹೇಶ್ವರಾ, ನಿಮಗಾಗಿ ಸತ್ತವರನಾರನೂಕಾಣೆ

ದೈವಸಾಕ್ಷಾತ್ಕಾರವೇ ಮಾನವನ ಅಂತಿಮ ಗುರಿ, ಉಳಿದೆಲ್ಲವೂ ಗೌಣ ಎನ್ನುವುದನ್ನು ಮೇಲಿನ ವಚನ ಸ್ಪಷ್ಟಪಡಿಸುತ್ತದೆ.

ಸಮಾಜದ ಸುಸ್ಥಿರತೆಗಾಗಿ ಪ್ರತಿಯೊಬ್ಬನೂ, ಕಾಯಕದಲ್ಲಿ, ತೊಡಗಬೇಕು ಎಂಬುದನ್ನು ಬಸವಣ್ಣನವರು ಪ್ರತಿಪಾದಿಸಿದರೂ, ಕಾಯಕ ಸಹ ಮಾನವನನ್ನು ಆಧ್ಯಾತ್ಮಿಕತೆಗೆ ಕೊಂಡೊಯ್ಯುವ ಸಾಧನವೇ ಆಗುತ್ತದೆ.

ಹಿಂದೂ ಧರ್ಮದ ಆಧ್ಯಾತ್ಮಿಕತೆ, ಜೀವನದಲ್ಲಿ ತಕ್ಕಂತೆ ಹೆಚ್ಚಿನ ಶಿಸ್ತನ್ನು ಬೇಡುವಂಥದು. ಇಹ-ಪರ ಸಾಧನೆಗಳೆರಡರಲ್ಲೂ ಅತ್ಯಂತ ಹೆಚ್ಚಿನ ಮಟ್ಟದ ಶಿಸ್ತನ್ನು ಇದು ನಿರೀಕ್ಷಿಸುತ್ತದೆ. ಸಾಮಾನ್ಯವ್ಯಕ್ತಿಗಳು ಇವುಗಳನ್ನು ಕಾಪಾಡಿಕೊಂಡು ಬರುವುದು ಕಷ್ಟವಾಗುತ್ತದೆ. ಹೀಗಾಗಿ, ಸಾಮಾನ್ಯ ವ್ಯಕ್ತಿ ಇಂತಹ ಸಮಾಜದಲ್ಲಿ ಆಧ್ಯಾತ್ಮಿಕವಾಗಿ ಎತ್ತರದ ಮಟ್ಟಕ್ಕೆ ಏರಲಾರದೇ, ಕೆಳಮಟ್ಟಗಳಲ್ಲಿ ಎಲ್ಲ ವಿಷಯಗಳ ಬಗ್ಗೆ ಔದಾಸೀನ್ಯತೆಯನ್ನು ಬೆಳೆಸಿಕೊಂಡು ಸೋಮಾರಿಯಾದ ಬೆಳವಣಿಗೆಯನ್ನು ಸಹ ನಾವು ಕಾಣುತ್ತೇವೆ. ಹೀಗಾಗಿ ಭಾರತ ಐಹಿಕಾಭಿವೃದ್ಧಿಯ ದೃಷ್ಟಿಯಿಂದ, ಹೆಚ್ಚನ್ನು ಸಾಧಿಸಲಾಗದ ರಾಷ್ಟ್ರವಾಗಿ ಬೆಳೆಯಬೇಕಾಗಿ ಬಂದುದನ್ನು ಸಹ ನಾವು ನೋಡುತ್ತೇವೆ.

ಮೇಲಿನ ವಿವರಣೆಯಿಂದ ಭಾರತ, ಆಧುನಿಕತೆಯನ್ನು ಅಂತರ್ಗತ ಮಾಡಿಕೊಳ್ಳುವುದು ಸಾಧ್ಯವಾಗಲೇ ಇಲ್ಲ. ಈ ಕಾರಣದಿಂದಲೇ ಗಾಂಧೀಜಿಯವರು ಸಹ ಅನೇಕ ಬಗೆಯ ಸಾಮಾಜಿಕ ಸುಧಾರಣೆಗಳನ್ನು ಪ್ರತಿಪಾದಿಸುವಾಗಲೂ, ಪಾಶ್ಚಾತ್ಯರಾಷ್ಟ್ರಗಳ ರೀತಿಯ ಅಭಿವೃದ್ಧಿಯನ್ನು ಕಟುವಾಗಿಯೇ ಟೀಕಿಸುತ್ತಿದ್ದರು. ಗಾಂಧೀಜಿಯವರ ಆರ್ಥಿಕತೆ ಹೊರಗಿನದನ್ನು ಸ್ವೀಕರಿಸಿದೆ ಮುಚ್ಚಿದ ಅರ್ಥ ವ್ಯವಸ್ಥೆ. ವಾಸ್ತವವಾಗಿ ಗಾಂಧೀಜಿ ವಿದೇಶೀ ಸರಕುಗಳನ್ನಷ್ಟೇ ಅಲ್ಲದೆ, ಫ್ಯಾಕ್ಟರೀ ಉತ್ಪಾದನೆಯನ್ನೇ ತಿರಸ್ಕರಿಸಿದ್ದರು . ಹೀಗಾಗಿ ಕೈಗಾರಿಕಾಭಿವೃದ್ಧಿಗೆ ಪೋಷಕವಾಗುವ ರೀತಿಯಲ್ಲಿ ಆರ್ಥಿಕತೆ ಅಭಿವೃದ್ಧಿ ಹೊಂದುವುದು ಕಷ್ಟವಾಗಿತ್ತು. ಹಾಗೆ ನೋಡುವುದಾದರೆ, ಸ್ವಾತಂತ್ರ್ಯದ ಹಿಂದಿನ ವರ್ಷಗಳಲ್ಲಿ, ಭಾರತೀಯ ಆರ್ಥಿಕತೆಯ, ಜಾತಿಪದ್ಧತಿ, ಒಟ್ಟು ಕುಟುಂಬ ಪದ್ಧತಿ, ಬಾಲ್ಯ ವಿವಾಹ ಇತ್ಯಾದಿಗಳು ಆರ್ಥಿಕ ಅಭಿವೃದ್ಧಿಗೆ ಪೋಷಕವಾದ ಅಂಶಗಳೇ ಆಗಿರಲಿಲ್ಲ ಎಂದು ಸಹ ವಾದಿಸುವುದಕ್ಕೆ ಸಾಧ್ಯ.

ಪಾಶ್ಚಾತ್ಯ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಎರಡು ಅಂಶಗಳನ್ನು ನಾವು ಗಮನಿಸುತ್ತೇವೆ. ಅವುಗಳೆಂದರೆ, ಜನರಲ್ಲಿ ಅಭಿವೃದ್ಧಿಗೊಂಡ ಉದ್ಯಮ ಸಾಹಸತೆ ಮತ್ತು ಅವರ ರಾಷ್ಟ್ರಗಳು ತಮ್ಮ ಜನರಿಗೆ ಹೆಚ್ಚಿನ ತಲಾ ವರಮಾನವನ್ನು ತಂದು ಕೊಡುವುದಕ್ಕೆ ಶಕ್ತವಾದವು. ಆದರೆ ಭಾರತದ ಧಾರ್ಮಿಕ ಹಿನ್ನೆಲೆಯಲ್ಲಿ ಇವೆರಡೂ ಅಂಶಗಳೂ ಅಭಿವೃದ್ಧಿಗೊಳ್ಳಲಿಲ್ಲ ಹೀಗಾಗಿ ಒಂದು ಕಡೆ ಅಸಂಖ್ಯಾತ ಪ್ರಮಾಣದ ಜನಸಂಖ್ಯೆ ಮತ್ತೊಂದು ಕಡೆ, ಆರ್ಥಿಕ ಅಭಿವೃದ್ಧಿಗೆ ಪೋಷಕವಲ್ಲದ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆ, ನಮ್ಮ ರಾಷ್ಟ್ರದ ಬಡತನಕ್ಕೆ ಮುಖ್ಯವಾದ ಕಾರಣಗಳಾದವು. ಸ್ವಾತಂತ್ರ್ಯದ ನಂತರ ಸಹ, ಬಂಡವಾಳಷಾಹಿಯನ್ನು ತಿರಸ್ಕರಿಸಿ, ಯೋಜಿತ ಅರ್ಥ ವ್ಯವಸ್ಥೆಯನ್ನು ಭಾರತ ಆರಿಸಿಕೊಂಡಿತು. ಜೊತೆಗೆ, ಔದ್ಯೋಗೀಕರಣದ ಗುರಿಯನ್ನು ಸಹ ಅದು ಹಾಕಿಕೊಂಡಿತು. ಆದರೆ ಇಂದಿಗೂ ಸಹ, ಸಾಂಸ್ಕೃತಿಕ ಮೌಲ್ಯಗಳನ್ನು ಆರ್ಥಿಕ ಅಭಿವೃದ್ಧಿಯ ಮೌಲ್ಯಗಳೊಡನೆ ಹೊಂದಾಣಿಕೆ ಮಾಡುವುದು ಶಕ್ಯವಾಗಿಲ್ಲದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಹೊಸ ಆರ್ಥಿಕ ನೀತಿ ಮತ್ತು ಧರ್ಮ :

ಈ ಲೇಖನದ ಪ್ರಾರಂಭದಲ್ಲಿಯೇ ಸೂಚಿಸಿರುವಂತೆ ಹಿಂದೂ ಧರ್ಮ ಭಾರತದಲ್ಲಿ ದುರ್ಬಲಗೊಳ್ಳುತ್ತಿದೆ. ಅತ್ಯುನ್ನತ ಆಧ್ಯಾತ್ಮಿಕತೆಗೆ ಹೊಂದಿಕೊಂಡಂತೆ, ವಿಜ್ಞಾನ, ತಂತ್ರಜ್ಞಾನಗಳನ್ನು ಆಪೋಷಿಸಿಕೊಳ್ಳುವ ಶಕ್ತಿ ಅದಕ್ಕಿಲ್ಲದಿರುವುದು ಗೋಚರವಾಗುತ್ತಿದೆ. ಅಸಾಧಾರಣ ಪ್ರಮಾಣದ ಬಡತನ, ರಾಷ್ಟ್ರದ ಶೇ. 50ಕ್ಕಿಂತಲೂ ಹೆಚ್ಚಿನ ಜನರ ಅನಕ್ಷರತೆ, ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಸಮಸ್ಯೆಗಳನ್ನು ಬಿಡಿಸಿಕೊಳ್ಳಲು ರಾಷ್ಟ್ರ ಹೆಣಗುತ್ತಿದೆ. ಹೊಸ ಆರ್ಥಿಕ ನೀತಿಯ ಮೂಲಕ ಪಾಶ್ಚಾತ್ಯ ರಾಷ್ಟ್ರಗಳ ಆರ್ಥಿಕತೆಗಳಿಗೆ ಹೊಂದಿಕೊಳ್ಳುವ ಪ್ರಯತ್ನವನ್ನು ಸಹ ನಡೆಸುತ್ತಿದೆ. ಯೋಜನಾ ಬದ್ಧ ಅರ್ಥ ವ್ಯವಸ್ಥೆಯನ್ನು ಕೈಬಿಟ್ಟು, ಮುಕ್ತ ಆರ್ಥಿಕತೆಯನ್ನು ಅನುಸರಿಸಲು ಆರಂಭಿಸಿದೆ. ಹಿಂದೂ ಧರ್ಮವೇ ಏಕೆ,

ಪ್ರಪಂಚದ ಎಲ್ಲ ಧರ್ಮಗಳೂ ಹೊಸತನವನ್ನು ಹುಡುಕಿಕೊಳ್ಳಲು ಆರಂಭಿಸಿವೆ. ಈ ಪ್ರಯತ್ನಗಳು ಮುಖ್ಯವಾಗಿ ಹಿಂದುಳಿದ ರಾಷ್ಟ್ರಗಳನ್ನು ಅದರಲ್ಲೂ, ಭಾರತದಂತಹ ರಾಷ್ಟ್ರವನ್ನು ಎಲ್ಲಿಗೆ ಕೊಂಡೊಯ್ಯುತ್ತವೆ ಎನ್ನುವುದು ಪ್ರಸ್ತುತದ ಅತಿಮುಖ್ಯ ಪ್ರಶ್ನೆಯಾಗಿದೆ. ಈ ಪ್ರಶ್ನೆಗಳಿಗೆ ಉತ್ತರವನ್ನು ಬಹಳ ಕುಶಾಗ್ರಮತಿಯಿಂದ ಹುಡುಕ ಬೇಕಾಗಿದೆ.

ಭಾರತದ ಅಭಿವೃದ್ಧಿ ಕುರಿತ ಇಂದಿನ ಮುಖ್ಯ ಸಮಸ್ಯೆ ಜನಸಂಖ್ಯೆಯದು. ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ಬಗೆಹರಿಸಿಕೊಳ್ಳದೆ, ಬೆಳವಣಿಗೆಯ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಸಾಧ್ಯವಿಲ್ಲ. ಹಿಂದೂ ಧರ್ಮ ಕುಟುಂಬ ಯೋಜನೆಗೆ ವಿರುದ್ಧವಾಗಿಲ್ಲ. ಆದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಕುಟುಂಬಯೋಜನೆಯನ್ನು ವಿರೋಧಿಸುತ್ತವೆ. ಮುಖ್ಯವಾಗಿ ಕಳೆದ ದಶಕದಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚಾಗುತ್ತಾ ಬಂದಿದೆ. 1981-91ರ ದಶಕದಲ್ಲಿ ಭಾರತದ ಜನಸಂಖ್ಯೆ ಒಟ್ಟು ಶೇ 23.7ರಷ್ಟು ಹೆಚ್ಚಾಗಿವೆ ಇದರಲ್ಲಿ ಹಿಂದೂಗಳ ಹೆಚ್ಚಳ ಶೇ 22.78ರಷ್ಟಾಗಿದ್ದಾರೆ, ಮುಸ್ಲಿಂ ಜನಸಂಖ್ಯೆ ಶೇ. 32 - 76 ರಷ್ಟು ಹೆಚ್ಚಾಗಿದೆ. ಈ ಬೆಳವಣಿಗೆಯ ದರಗಳು ಆರ್ಥಿಕ ಅಭಿವೃದ್ಧಿಗೆ ಪೋಷಕವಾದುವಲ್ಲ. ಆದ್ದರಿಂದ ಇಡೀ ರಾಷ್ಟ್ರಕ್ಕೆ ಪೋಷಕವಾಗುವ ರೀತಿಯ ಜನಸಂಖ್ಯಾ ನೀತಿಯನ್ನು ರಾಷ್ಟ್ರದಲ್ಲಿ ರೂಪಿಸುವ ಅಗತ್ಯವಿದೆ.

ಇನ್ನು ಬಡತನ ಮತ್ತು ಅನಕ್ಷರತೆಗಳ ವಿಷಯವನ್ನು ವಿಶ್ಲೇಷಿಸುವುದಾದರೆ, ನಮ್ಮ ರಾಷ್ಟ್ರದ ಧರ್ಮಗಳು, ಇವುಗಳ ಮೇಲೆ ಪ್ರಭಾವ ಬೀರುವುದಕ್ಕೆ ಶಕ್ತವಾಗಿಲ್ಲ. ಚಾತುರ್ವರ್ಣ್ಯಗಳು ವಾಸ್ತವವಾಗಿ ಸಮಾಜವನ್ನು ವಿಭಜಿಸುತ್ತಾ ಬಂದಿವೆ. ನಮ್ಮ ಉಪನಿಷತ್ತು, "ಬಹುಜನ ಸುಖಾಯ, ಬಹುಜನ ಹಿತಾಯ" ಎಂದು ಸಾರಿದ್ದರೂ, "ಸರ್ವೇಜನಾ: ಸುಖಿನೋ ಭವಂತು" ಎಂದು ಘೋಷಿಸಿದ್ದರೂ, ವಾಸ್ತವವಾಗಿ ನಡೆದಿರುವ ಬೆಳವಣಿಗೆಗಳೇ ಬೇರೆ. ರಾಷ್ಟ್ರದ ಶೇ 50 ರಷ್ಟು ಜನ ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಶೇ. 50 ರಷ್ಟು ಜನ ಏನನ್ನೂ ಓದಲು ಬಾರದವರಾಗಿದ್ದಾರೆ. "ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೆ ದೇವತಾಃ" ಎಂದು ಉದ್ಘೋಷಿಸಲಾಗಿದ್ದರೂ, ಸ್ತ್ರೀಯರ ಸ್ಥಿತಿ ಆರ್ಥಿಕವಾಗಿ ಚಿಂತಾಜನಕವಾಗಿದೆ. ಮಹಿಳೆಯರ ವಿದ್ಯಾಭ್ಯಾಸ ಶೇ. 50 ಕ್ಕಿಂತಲೂ ಕಡಿಮೆಯಿದೆ. ಈ ಅಂಶಗಳು ಆರ್ಥಿಕ ಬೆಳವಣಿಗೆಗೆ ಪೋಷಕವಾಗಿಲ್ಲ.

ವಾಸ್ತವವಾಗಿ ಗಮನಿಸಬೇಕಾದ ಅಂಶವೆಂದರೆ, ತಂತ್ರಜ್ಞಾನ ಮತ್ತು ಬಂಡವಾಳವನ್ನು ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ವರ್ಗಾಂತರಿಸಬಹುದು. ಆದರೆ ಸಾಂಸ್ಥಿಕ ಅಧೋರಚನೆಯನ್ನು ವರ್ಗಮಾಡುವುದಕ್ಕಾಗುವುದಿಲ್ಲ. ಜನರ ಧಾರ್ಮಿಕ ನಂಬಿಕೆಗಳನ್ನು ಬದಲಾಯಿಸುವುದು ಸಹ ಅವು ಸುಲಭವಲ್ಲ. ಹಿಂದೂ ಧರ್ಮದಲ್ಲಿ ಅನೇಕ ಉದಾತ್ತ ಧ್ಯೇಯಗಳಿರುವುದು ನಿಜ. ಬಸವಣ್ಣನವರ "ಕಾಯಕವೇ ಕೈಲಾಸ" ಪರಿಭಾವನೆ ಮಹಾತ್ಮಾ ಗಾಂಧಿಯವರ "ಅನ್ನಕ್ಕಾಗಿ ದುಡಿಮೆ" ಪರಿಭಾವನೆಗಳು ಬಹಳ ಉದಾತ್ತವಾದುದಷ್ಟೇ ಅಲ್ಲದೆ, ಅಭಿವೃದ್ಧಿಗೆ ಪೋಷಕವಾದವು ಸಹ. ಆದರೆ, ವೇಗವಾದ ಆರ್ಥಿಕ ಬೆಳವಣಿಗೆಗೆ ಅಗತ್ಯವಾದ, ಸಂಸ್ಥೆಗಳು ಮತ್ತು ಅಧೋರಚನೆ ಕೇವಲ ಈ ಉದಾತ್ತ ಧ್ಯೇಯಗಳಿಂದ

ಸೃಷ್ಟಿಯಾಗುವುದಿಲ್ಲ. ಆದರೆ ನೈತಿಕ ಚೌಕಟ್ಟಿನೊಳಗೆ ಕಾರ್ಯೋನ್ಮುಖಿವಾಗಬಲ್ಲ ಉದ್ಯಮ ಸಾಹಸ ವರ್ಗದ ಸೃಷ್ಟಿ ಅಗತ್ಯ. ಹಿಂದೂ ಧರ್ಮ ಇದಕ್ಕೆ ಒತ್ತನ್ನು ಕೊಡುವುದಿಲ್ಲ. ಸ್ವಾಮೀ ವಿವೇಕಾನಂದರ ಅಭಿಪ್ರಾಯ ಪಡುವಂತೆ:

"ಒಂದು ವಿಶ್ವಧರ್ಮ ಇರಬೇಕಾದರೆ, ಅದಕ್ಕೆ ಕಾಲ ಮತ್ತು ಸ್ಥಳ ಇರಬಾರದು. ಅದು ಅನಂತವಾಗಿರಬೇಕು. ದೇವರಂತೆ, ಅದು ಬೋಧಿಸಬೇಕು. ಕೃಷ್ಣ, ಕ್ರಿಸ್ತ, ಸಾಧು ಸಂತರು ಮತ್ತು ಅಪರಾಧಿಗಳೆಲ್ಲರ ಮೇಲೆ ಏಕ ಸಮಾನವಾಗಿ ಅದು ಪ್ರಕಾಶ ಬೀರುವಂತಿರಬೇಕು. ಅದು ಬ್ರಾಹ್ಮಣ್ಯವಾಗಿರಬಾರದು, ಬುದ್ಧ, ಕ್ರೈಸ್ತ, ಮುಸ್ಲಿಂ ಧರ್ಮವಾಗಿರಬಾರದು. ಆದರೆ ಇವೆಲ್ಲ ಕ್ರೋಢೀಕೃತವಾದುದಾಗಿರಬೇಕು. ಇದಕ್ಕೆ ಅಭಿವೃದ್ಧಿಗೊಳ್ಳುವುದಕ್ಕೆ ಅಮಿತ ಅವಕಾಶವಿರಬೇಕು. ಪ್ರತಿಯೊಬ್ಬ ವ್ಯಕ್ತಿಗೂ, ತನ್ನ ಬಾಹುವಿನಲ್ಲಿ ಅದು ಅವಕಾಶ ಕೊಡುವಂತಿರಬೇಕು ಆತ ಅತ್ಯಂತ ಕೆಳದರ್ಜೆಯಲ್ಲಿರುವವನಾಗಿರಲಿ, ಅತ್ಯಂತ ಉನ್ನತ ಮಟ್ಟದ ವ್ಯಕ್ತಿಯಾಗಿರಲೀ, ಅವರೆಲ್ಲರಿಗೂ ಆಶ್ರಯ ಕೊಡುವಂತಿರಬೇಕು. ಇಂಥ ಧರ್ಮದಲ್ಲಿ ಅಸಹಿಷ್ಣುತೆಗೆ ಅವಕಾಶವಿರಲೇಬಾರದು. ಈ ಧರ್ಮ, ಪ್ರತಿವ್ಯಕ್ತಿಯಲ್ಲಿ ದೈವತ್ವನ್ನು ಗುರುತಿಸುವಂತಿರಬೇಕು. ಈ ಧರ್ಮದ ವ್ಯಾಪ್ತಿ, ಮನುಷ್ಯನಿಗೆ ನೆರವಾಗುವ ಮತ್ತು ಮನುಷ್ಯ ತನ್ನ ದೈವತ್ವವನ್ನು ಗುರುತಿಸಲು ಸಹಾಯಕವಾಗುವಂತಿರಬೇಕು."

ಭಾರತಕ್ಕೆ ಮೇಲೆ ವಿವರಿಸಿದ ರೀತಿಯ ಧರ್ಮವೊಂದರ ಅಗತ್ಯ ಇಂದು ಇದೆ. ಇಂತಹ ಧರ್ಮ ಆಧುನಿಕತೆಯನ್ನು ಆಪೋಷಿಸುವುದಕ್ಕೆ ಶಕ್ತವಾಗಿರುತ್ತದೆ ಸಹ. ಹೀಗಾಗಿ ಭಾರತದ ಬಡತನವನ್ನು ತೊಲಗಿಸಿ ಅಭಿವೃದ್ಧಿಗೆ ಪೋಷಕವಾಗಿರುತ್ತದೆ ಸಹ. ಇಂತಹ ಧರ್ಮವೊಂದರ ಸೃಷ್ಟಿಯಾದರೆ, ಇದು, ರಾಧಾಕೃಷ್ಣನ್, ಭಾವೆ ಮತ್ತು ನೆಹರೂ ನಿರೀಕ್ಷಿಸಿದ ರೀತಿಯ ಧರ್ಮ ಮತ್ತು ವಿಜ್ಞಾನಗಳ ಸಂಯೋಗವನ್ನು ಸಾಧಿಸುವುದು ಸಹ ಶಕ್ಯವಾಗುತ್ತದೆ. ಇಂತಹ ಧರ್ಮ, ಮುಕ್ತ ಆರ್ಥಿಕತೆಗೆ ಹೊಂದಿಕೊಳ್ಳುವುದು ಸಹ ಸಾಧ್ಯವಾಗುತ್ತದೆ. ಹಿಂದೂ ಧರ್ಮದ ಸಾಂಪ್ರದಾಯಿಕತೆಯಲ್ಲಿ ಮುಕ್ತ ಆರ್ಥಿಕ ನೀತಿಗಳು ತಮ್ಮ ಯಶಸ್ಸನ್ನು ಸಾಧಿಸುವುದು ಕಷ್ಟ ಬದಲಿಗೆ, ಬರು-ಬರುತ್ತಾ ಹಿಂದೂ ಧರ್ಮವೇ ತನ್ನ ಅರ್ಥವನ್ನು ಕಳೆದುಕೊಳ್ಳುವಂತಾಗುತ್ತದೆ ಸಹ. ಹಿಂದೂ ಧರ್ಮಕ್ಕೆ, ಭೌತಿಕ ಪ್ರಗತಿಯಲ್ಲಿ ಮಾನವ ಕಂಡುಕೊಳ್ಳಬಹುದಾದ ಆಂತರಿಕ ಶೂನ್ಯತೆಯನ್ನು ತುಂಬಿಸುವ ಅಗಾಧ ಶಕ್ತಿ ಇರುವುದು ನಿಜ. ಆದರೆ ಭಾರತ ಆರ್ಥಿಕ ಪ್ರಗತಿಯನ್ನೇ ಸಾಧಿಸುವುದು ಶಕ್ಯವಾಗದಿದ್ದರೆ, ಇಂತಹ ಶೂನ್ಯತೆಯ ಪ್ರಶ್ನೆ ಸಹ ಏಳುವುದಿಲ್ಲ. ಅಭಿವೃದ್ಧಿಗೆ ಪೋಷಕವಾಗುವ ಧರ್ಮವೊಂದು ರೂಪಿತವಾಗಬಹುದೆಂದು ಆಶಿಸಬಹುದೇ ?

●

ಧರ್ಮ ಮತ್ತು ವಾಣಿಜ್ಯ

ಡಾ॥ ಬಿ. ಆರ್. ಹಿರೇಮಠ

ಪ್ರಾಚೀನ ಕರ್ನಾಟಕದ ವಾಣಿಜ್ಯ

ವ್ಯಾಪಾರವನ್ನು ಮತ್ತು ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡವರು ವರ್ತಕರು. ವೈಯಕ್ತಿಕವಾಗಿ, ಸಾಂಘಿಕವಾಗಿ ಈ ವರ್ತಕರು ಕೈಕೊಂಡ ವ್ಯಾಪಾರವೃತ್ತಿಯಿಂದ ಸಮಾಜದ ಜೀವನಸ್ಥಿತಿ, ನಾಡಿನ ಆರ್ಥಿಕ ಪರಿಸ್ಥಿತಿಗಳು ಒಂದು ಆಕಾರ ಪಡೆಯಲು ಸಾಧ್ಯವಾಗುತ್ತದೆ. ಭಾರತೀಯ ಹಿನ್ನೆಲೆಯಲ್ಲಿ ಹೇಳುವುದಾದರೆ ವರ್ತಕರ ಮತ್ತು ವಾಣಿಜ್ಯದ ಪ್ರಥಮ ಉಲ್ಲೇಖ ವೈದಿಕಸಾಹಿತ್ಯದಷ್ಟು ಪೂರ್ವದಲ್ಲಿಯೇ ಸಿಗುವುದುಂಟು. ಆದರೆ ಕರ್ನಾಟಕದ ಶಾಸನಗಳಲ್ಲಿ ಮಾತ್ರ ಇವುಗಳ ಉಲ್ಲೇಖ 7-8ನೆಯ ಶತಮಾನದಿಂದ ಕಂಡುಬರುತ್ತದೆ.

ಆರ್ಯರು ವ್ಯಾಪಾರವನ್ನು, ವ್ಯಾಪಾರಸ್ಥರನ್ನು ಮಾತ್ರ ಪ್ರೋತ್ಸಾಹಿಸಲಿಲ್ಲವೆಂದು ಕಾಣುತ್ತದೆ. ಹೀಗಿದ್ದರೂ ವೈದಿಕ ಯುಗದಲ್ಲಿ 'ಪಣಿ' (ದ್ರಾವಿಡ)ಗಳೆಂಬ ವರ್ತಕರು ಪ್ರಬಲರಾಗಿದ್ದರು. ವೈದಿಕ ಸಾಹಿತ್ಯದಲ್ಲಿ ವ್ಯಾಪಾರದ ಬಗೆಗೆ ಲಭಿಸುವ ಮಾಹಿತಿ ಅತ್ಯಂತ ಕಡಿಮೆ. ಮಹಾಭಾರತದಲ್ಲಿ ಸರಕು ಮೊದಲಾದ ವ್ಯಾಪಾರ-ವಾಣಿಜ್ಯದ ವಿಷಯವಿದೆ. ಆದರೆ ಬೌದ್ಧ ಸಾಹಿತ್ಯದಲ್ಲಿ ವರ್ತಕರು, ವರ್ತಕ ಸಂಘಗಳನ್ನು ಕುರಿತು ವಿವರವಾದ ವಿಪುಲ ಸಾಮಗ್ರಿಯಿದೆ.

ಜೈನ ಸಾಹಿತ್ಯ, ಯುನಾನೀಯ, ರೋಮದ ಭೌಗೋಲಿಕ ವೃತ್ತಾಂತ, ಚೀನಿ ಪ್ರವಾಸಿಗಳ ವರ್ಣನೆ ಮೊದಲಾದವುಗಳು ಪ್ರಾಚೀನ ಭಾರತದ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ವ್ಯಾಪಾರ-ವಾಣಿಜ್ಯಗಳ ಮೇಲೆ ಸಾಕಷ್ಟು ಬೆಳಕು ಬೀರುತ್ತವೆ. ಈ ಆಕರ ಸಾಮಗ್ರಿಗಳನ್ನು ಬಿಟ್ಟರೆ ವ್ಯಾಪಾರ ಪರಂಪರೆಯ ಇತಿಹಾಸವನ್ನು ತಿಳಿಸುವ ಪ್ರಧಾನ ಆಕರಗಳೆಂದರೆ ಕಾವ್ಯ ಮತ್ತು ಶಾಸನಗಳು ಆಗಿರುತ್ತವೆ.

ಭಾರತೀಯ ವರ್ತಕರಲ್ಲಿಯಂತೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವರ್ತಕರಲ್ಲಿಯೂ ಅನೇಕ ಪ್ರಕಾರಗಳಿದ್ದವು. ಸೆಟ್ಟಿ-ಬಣಂಜಿಗ, ಸೆಟ್ಟಿ ಗುತ್ತ, ನಕರ,

ಮುಂಮುರಿದಂಡ, ವಡ್ಡವ್ಯವಹಾರಿ, ಗವರೆ, ಗಾತ್ರಿಗ, ಸೆಟ್ಟಿಕಾರ, ಹಲರು, ಎಳಮೆ, ಸಾಲಿಕೆ ಬಲ್ಲಾಳು, ಅಯ್ಯಾವೊಳೆ ಐನೂರ್ವರು, ಹಂಜಮಾನದವರು - ಇವು ಪ್ರಾಚೀನ ಕರ್ನಾಟಕದ ವಿನಿಮಯ ವರ್ತಕ ಪ್ರಕಾರಗಳು. ಕುಂಬಾರ, ಅಕ್ಕಸಾಲಿ, ಮಾದಿಗ, ಸಮಗಾರ, ಮೇದರು ಪ್ರಾಚೀನ ಕರ್ನಾಟಕದ ಉತ್ಪಾದಕ - ವಿನಿಮಯ ವರ್ತಕರಾಗಿರುತ್ತಾರೆ. ಪ್ರಾಚೀನ ಕರ್ನಾಟಕದಲ್ಲಿ 'ವ್ಯಾಪಾರ', 'ವರ್ತಕ' ಪದಗಳು 'ಜಾತಿವಾಚಿ'ಗಳಾಗಿರದೆ, 'ವೃತ್ತಿವಾಚಿ'ಗಳಾಗಿದ್ದವು. ಹೀಗಾಗಿ ಈ ವರ್ತಕ ಪ್ರಕಾರಗಳಲ್ಲಿ ಎಲ್ಲ ವರ್ಗದ, ವರ್ಣದ, ಧರ್ಮದ ಜನರು ಕಂಡುಬರುತ್ತಾರೆ. ಆರಂಭದಲ್ಲಿ ಕರ್ನಾಟಕದಲ್ಲಿ ವ್ಯಾಪಾರ ವೃತ್ತಿ ಜಾತಿನಿಷ್ಠವಾಗಿರದೆ, ವೃತ್ತಿನಿಷ್ಠವಾಗಿ ಬೆಳೆದುಬಂದುದನ್ನು ಶಾಸನಗಳಿಂದ ಗುರುತಿಸುತ್ತೇವೆ. ಧರ್ಮ, ಜಾತಿಯಾಗಿ ಪರಿಣಮಿಸಿದ ಕಾಲದಲ್ಲಿ ಕರ್ನಾಟಕದಲ್ಲಿ 'ವ್ಯಾಪಾರ' ವೃತ್ತಿ ಬೆಳೆದು ಬರುವಂತಾಯಿತು. ಹೀಗಾಗಿ ಕರ್ನಾಟಕದ ವಾಣಿಜ್ಯೋದ್ಯಮ ಬೆಳಸುವಲ್ಲಿ ವೈದಿಕ, ಜೈನ, ಶೈವ ಧರ್ಮದ ವರ್ತಕರೂ ಉತ್ಪಾದಕ ವಿನಿಮಯ ವರ್ತಕ ಪ್ರಕಾರದವರೂ ಸಕ್ರಿಯವಾಗಿದ್ದಾರೆ. ಹೀಗೆ ಪ್ರಾಚೀನ ಕರ್ನಾಟಕದ ವರ್ತಕರು, ವೃತ್ತಿವಾಚಿಯಾಗಿ, ಧರ್ಮವಾಚಿಯಾಗಿ ಇದ್ದರೇ ಹೊರತು ಜಾತಿವಾಚಿಯಾಗಿರಲಿಲ್ಲವೆಂಬುದು ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಈ ಉಭಯ ಪ್ರಕಾರದ ವರ್ತಕರು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ, ವಿವಿಧ ಕಾಲಘಟ್ಟಗಳಲ್ಲಿ ಠೋಕ (ಸಗಟು=wholesale) ಹಾಗೂ ಕಿರುಕಳ ವ್ಯಾಪಾರ ಕೈಕೊಂಡಿರುತ್ತಾರೆ.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವರ್ತಕರ ವ್ಯಾಪಾರ ವಾಣಿಜ್ಯದ ಸ್ವರೂಪವನ್ನು ಸಂತೆ, ಅಂಗಡಿ, ಪೇಟೆ, ಪಟ್ಟಣ, ವ್ಯಾಪಾರವೆಂಬ ಶೀರ್ಷಿಕೆಗಳ ಅಡಿಯಲ್ಲಿ ವಿವೇಚಿಸಬಹುದಾಗಿದೆ.

ಸಂತೆ :

ಇದು ಪ್ರಾಚೀನ ಕರ್ನಾಟಕದ ಪ್ರಮುಖ ವ್ಯಾಪಾರ ವೇದಿಕೆಯಾಗಿದ್ದಿತು. ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಔದ್ಯೋಗಿಕ ಪ್ರಗತಿ ಸಾಧಿಸುವಲ್ಲಿ; ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವಲ್ಲಿ, ಎತ್ತರಿಸುವಲ್ಲಿ ಈ 'ಸಂತೆ' ಅತ್ಯಂತ ಮಹತ್ವದ ಪಾತ್ರವನ್ನಾಡಿದೆ. ಗೌಡ ಮಹಾಪ್ರಭು, ವರ್ತಕ ಮುಂತಾದವರು ಕೂಡಿಕೊಂಡು ಆಯಾ ಪ್ರದೇಶ, ಗ್ರಾಮ, ಪಟ್ಟಣಗಳಲ್ಲಿ ಈ ಸಂತೆಯನ್ನು ನೆರೆಯಿಸುತ್ತಿದ್ದರು. ಈ ಸಂತೆಯಲ್ಲಿ ಕಟ್ಟಿದ ಅಂಗಡಿಗಳಿದ್ದವು. ಸಂತೆ ನೆರೆಯುವ ಸ್ಥಲದ ಸುತ್ತಲೂ ಗೋಡೆಯಿದ್ದು, ಒಂದುಕಡೆ ಮಾತ್ರ ಹೆಬ್ಬಾಗಿಲಿರುತ್ತಿದ್ದಿತು. ಈ ಸಂತೆ ಪಟ್ಟಣದ ಹೊರವಲಯದಲ್ಲಿಯೂ ನೆರೆಯುತ್ತಿದ್ದಿತು. ಸಂತೆ ಕೂಡುವ ಸ್ಥಳದ ಒಳಾಂಗಣದಲ್ಲಿ ದೇವಾಲಯಗಳಿರುತ್ತಿದ್ದವು. ವ್ಯವಹಾರದಲ್ಲಿ ಅಚಾತುರ್ಯ ಅನ್ಯಾಯಗಳು ಸಂಭವಿಸದಂತೆ ನೋಡಿಕೊಳ್ಳಲು ಈ ದೇವಾಲಯಗಳ ಮುಂದೆ ನನ್ನಿ ಕಂಬವನ್ನು ಸತ್ಯ, ಪ್ರಾಮಾಣಿಕತೆಗಳ ಸಂಕೇತವಾಗಿ

ನಿಲ್ಲಿಸುತ್ತಿದ್ದರು. ಹೊಸದಾಗಿ ಆರಂಭಿಸಿದ ಸಂತೆಗೆ ವರ್ತಕರನ್ನು ಆಕರ್ಷಿಸಲು ಸರಕುಗಳಿಗೆ ತೆರಿಗೆ ರಿಯಾಯತಿ ನೀಡುತ್ತಿದ್ದರು. ಸಂತೆ ನೆರೆಯುವ ಪ್ರದೇಶದಲ್ಲಿಯ ಸಂತೆಯ ಕಟ್ಟಡಗಳು ಖಿಲವಾದರೆ, ಬಿದ್ದು ಹೋದರೆ ಅಂಥವುಗಳನ್ನು ಜೀರ್ಣೋದ್ಧಾರ ಮಾಡಲಾಗುತ್ತಿತ್ತು, ಹೊಸದಾಗಿ ಕಟ್ಟಿಸಲಾಗುತ್ತಿತ್ತು. ಇಂಥ 'ಸಾಮಾನ್ಯಸಂತೆ'ಗಳಲ್ಲದೆ ಕರ್ನಾಟಕದಲ್ಲಿ 'ಧರ್ಮಸಂತೆ'ಗಳೂ ಅಸ್ತಿತ್ವದಲ್ಲಿದ್ದವು. ಈ 'ಧರ್ಮಸಂತೆ' ನೆರೆಯಿಸುವುದರಿಂದ ಪುಣ್ಯ ದೊರೆಯುವುದೆಂಬ ಭಾವನೆ ಅಂದಿನ ಜನರಲ್ಲಿದ್ದಿತು. ಈ ಧರ್ಮಸಂತೆಗಳಿಗೆ ಬರುವ ಸರಕುಗಳಿಗೆ ಸಂತೆಸುಂಕ (ಸಂತೆ ಆಯ), ಮಾರಾಟ ತೆರಿಗೆ (Sales Tax) ಆಕರಿಸುತ್ತಿರಲಿಲ್ಲ. ಧರ್ಮಸಂತೆಗಳನ್ನು ಸಂರಕ್ಷಿಸಿದರೆ ರಾಜ್ಯಸಂಪದ ಸಂಪ್ರಾಪ್ತವಾಗುವುದೆಂಬ ನಂಬಿಕೆ ಪ್ರಚಲಿತದಲ್ಲಿದ್ದಿತು. ಸಂತೆಯ ದಿನ ಪ್ರತಿಯೊಬ್ಬ ವರ್ತಕರಿಂದ ಸಂಗ್ರಹಿಸುವ ಹಣ ಅಥವಾ ವಸ್ತುವನ್ನು 'ಸಂತೆಯ ಪಸಿಗೆ'ಯೆಂದು ಕರೆಯುತ್ತಿದ್ದರು. ಸಂತೆಯ ಪಸಿಗೆಯನ್ನು ವಿದ್ಯಾರ್ಥಿ, ಅತಿಥಿಗಳ ಉಚಿತ ಭೋಜನಕ್ಕಾಗಿ ವಿನಿಯೋಗಿಸುತ್ತಿದ್ದರು. ಈ 'ಪಸಿಗೆ' ಪದ್ಧತಿ ಕರ್ನಾಟಕದ ವಿವಿಧ ಪ್ರದೇಶದಲ್ಲಿ ಈಗಲೂ ಪ್ರಚಲಿತದಲ್ಲಿದೆ. ಹೀಗೆ ಪ್ರಾಚೀನ ಕರ್ನಾಟಕದಲ್ಲಿ ಸಂತೆ, ರಾಜ್ಯದ ಹಲವಾರು ಆರ್ಥಿಕ ಸಂಪನ್ಮೂಲಗಳಲ್ಲಿ ಅತ್ಯಂತ ಪ್ರಮುಖವಾಗಿ ಪರಿಣಮಿಸಿದ್ದಿತು.

ಅಂಗಡಿ

ವ್ಯಾಪಾರ ನಿರ್ವಹಣೆಗಾಗಿ ಸಂತೆ ಕೂಡುವ ಸ್ಥಳಗಳಲ್ಲಿ ಅಂಗಡಿಗಳನ್ನು ಕಟ್ಟಿಸಿರುತ್ತಿದ್ದರು. ಇನ್ನು ಕೆಲವು ಬಯಲು ಅಂಗಡಿಗಳಿರುತ್ತಿದ್ದವು. ಇವು ಸಂತೆಯ ದಿನ ಮಾತ್ರ ತೆರೆದಿರುತ್ತಿದ್ದವು. ಪೇಟೆ, ಪಟ್ಟಣಗಳಲ್ಲಿ ಕಟ್ಟಿದ ಅಂಗಡಿ (ಮಳಿಗೆ)ಗಳು ಪ್ರತಿನಿತ್ಯ ಕಾರ್ಯ ನಿರ್ವಹಿಸುತ್ತಿದ್ದವು. ಪೇಟೆಯಲ್ಲಿ ಅಂಗಡಿ ಸಾಲುಗಳಿರುತ್ತಿದ್ದರೆ, ಪಟ್ಟಣದ ಒಳಭಾಗದಲ್ಲಿ ಬಿಡಿಬಿಡಿಯಾದ ಅಂಗಡಿಗಳಿದ್ದವು. ವರ್ತಕರ ಅಂಗಡಿಗಳ ಸಾಲು ಅಥವಾ ವಾಸಸ್ಥಳವೇ 'ಹರದಗೇರಿ'. ಈ ಅಂಗಡಿಗಳಲ್ಲಿ ಸಾಮಾನ್ಯ ಅಂಗಡಿ, ಬಯಲು ಅಂಗಡಿ, ಧರ್ಮದ ಅಂಗಡಿ, ದೇವರ ಅಂಗಡಿ, ಮಾನ್ಯದ ಅಂಗಡಿ ಎಂಬ ಪ್ರಭೇದಗಳಿದ್ದವು. ಇವುಗಳಲ್ಲಿ ಧರ್ಮದ ಅಂಗಡಿ, ದೇವರ ಅಂಗಡಿ, ಮಾನ್ಯದ ಅಂಗಡಿಗಳಿಗೆ ತೆರಿಗೆ ವಿನಾಯತಿಯಿದ್ದಿತು. ಈ ಅಂಗಡಿಗಳ ಉಸ್ತುವಾರಿ ನೋಡಿಕೊಳ್ಳಲು 'ಅಂಗಡಿ ಅಧಿಕಾರಿ' ಇರುತ್ತಿದ್ದ. ಕೆಲವು ಅಂಗಡಿಗಳಿಗೆ ವ್ಯಕ್ತಿಯ ಹೆಸರು ಇಡುತ್ತಿದ್ದರು. ಉದಾಹರಣೆ : ಕೇತಲದೇವಿಯರಂಗಡಿ, ಬೊಮ್ಮಲದೇವಿಯಂಗಡಿ.

ಪೇಟೆ

ಸಂತೆಯಲ್ಲಿರುವ ಪೇಟೆಯನ್ನು 'ಹೊರಪೇಟೆ'ಯೆಂದೂ ಪಟ್ಟಣದಲ್ಲಿರುವ ಪೇಟೆಯನ್ನು 'ಒಳಪೇಟೆ' ಯೆಂದೂ ಕರೆಯುತ್ತಿದ್ದರು. ವಾರದಲ್ಲೊಂದು ದಿನ ಸಂತೆ ಕೂಡಿದಾಗ ಹೊರಪೇಟೆಯಲ್ಲಿ, ಉಳಿದ ದಿನಗಳಲ್ಲಿ 'ಒಳಪೇಟೆ'ಗಳಲ್ಲಿ ವ್ಯಾಪಾರ ನಡೆಯುತ್ತಿದ್ದಿತು. ಈ ಪೇಟೆಗಳಿಗೆ ಚತುಸ್ಸೀಮೆ ಗೊತ್ತುಪಡಿಸುತ್ತಿದ್ದರು. ಪೇಟೆಯಲ್ಲಿ ಬಂದು ಖಾಯಂ ಆಗಿ

ವಾಸಿಸುವವರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದ್ದಿತು. ಪೇಟೆ ಕಟ್ಟಿಸಿದ ತರುವಾಯ ಬರುವ ಒಕ್ಕಲುಗಳಿಗೆ 1 ವರ್ಷ ತೆರಿಗೆ ರಿಯಾಯತಿ, ಕಾಲಕ್ರಮೇಣ ಅನುಕೂಲಕ್ಕೆ ತಕ್ಕಂತೆ ಕಟ್ಟಾಳಿ ಸೌಕರ್ಯ ಕಲ್ಪಿಸುತ್ತಿದ್ದರು. ಇಂಥ ಅನೇಕ ಉಪಯುಕ್ತ ಸೌಲಭ್ಯಗಳಿಂದಾಗಿ ವರ್ತಕರು ಪೇಟೆಗಳತ್ತ ಧಾವಿಸಿ ಬರುತ್ತಿದ್ದರು. ಇದು ಪೇಟೆಯ ಬೆಳವಣಿಗೆಗಾಗಿ ಅಧಿಕಾರಿಗಳು ಕೈಕೊಂಡ ಮಹತ್ವಪೂರ್ಣ ವಿಧಾನವಾಗಿದೆ. ಪೇಟೆ ಖಿಲವಾದರೆ, ಹೊಸದಾಗಿ ಕಟ್ಟಿಸುತ್ತಿದ್ದರು ಇಲ್ಲವೆ ರಿಪೇರಿ ಮಾಡಿಸುತ್ತಿದ್ದರು. ಕೆಲವು ಪೇಟೆಗಳಿಗೆ ರಾಜಮನೆತನದವರ ಹೆಸರಿಡುವ ಪರಿಪಾಠವಿದ್ದುದು ಗೊತ್ತಾಗುತ್ತದೆ. ಉದಾಹರಣೆ : ವರದರಾಜಮ್ಮನಪೇಟೆ. ಪೇಟೆಗೆ ಬಂದ ವಸ್ತುಗಳನ್ನು ಕಠಾರ ಇಲ್ಲವೆ ಮಂಟೆಯಗಳೆಂಬ ಉಗ್ರಾಣ (Ware house) ಗಳಲ್ಲಿ ಸಂಗ್ರಹಿಸಿಡುತ್ತಿದ್ದರು.

ಪಟ್ಟಣ

ಸಂತೆ ಮಾಡಿಸುವುದರಿಂದ ಮಾತ್ರ ಯಾವುದೇ ಗ್ರಾಮ ಪಟ್ಟಣ ಎನಿಸಿಕೊಳ್ಳುತ್ತಿತ್ತು. ಆದುದರಿಂದ ಪ್ರಾಚೀನ ಕರ್ನಾಟಕದ ಪ್ರತಿಯೊಂದು ಪಟ್ಟಣ ಸ್ಥಳದಲ್ಲಿಯೂ ತಪ್ಪದೆ ಸಂತೆ ಜರುಗುತ್ತಿದ್ದುದು ವಿದಿತವಾಗುತ್ತದೆ. ಕೆಲವುಸಲ ಸಂತೆ ಕಟ್ಟಿಸಿ, ಗ್ರಾಮವನ್ನೇ ಪಟ್ಟಣವನ್ನಾಗಿ ಪರಿವರ್ತಿಸುತ್ತಿದ್ದರು. ಹೊಸದಾಗಿ ನಿರ್ಮಿಸಿದ ಪಟ್ಟಣ, ಮೂಲಗ್ರಾಮದಿಂದ ಪ್ರತ್ಯೇಕವಾಗಿರುತ್ತಿತ್ತು. ಗ್ರಾಮವನ್ನೇ ಪಟ್ಟಣವನ್ನಾಗಿ ಪರಿವರ್ತಿಸಿದಾಗ ಈ ಪ್ರಸಂಗ ಬರುವುದಿಲ್ಲ.

ಪಟ್ಟಣ ನಿರ್ಮಾಣದ ಮೂಲ ಉದ್ದೇಶ ವರ್ತಕರನ್ನು ಸ್ಥಿರವಾಗಿ ನೆಲೆಗೊಳಿಸುವುದು, ವಾಣಿಜ್ಯೋದ್ಯಮ ಬೆಳೆಸುವುದು ಆಗಿದ್ದಿತು. ಈ ಉದ್ದೇಶದಿಂದ ನಾನಾ ಸ್ಥಳದ ವರ್ತಕ ಕುಟುಂಬಗಳು ಹೊಸ ಪಟ್ಟಣದಲ್ಲಿ ಬಂದು ನೆಲೆಸುತ್ತಿದ್ದವು. ಹೊಸದಾಗಿ ಕಟ್ಟಿಸಿದ ಪಟ್ಟಣದಲ್ಲಿ ಬಂದು ವಾಸಿಸುವ ವರ್ತಕರಿಗೆ ವಿಶೇಷ ಸೌಲಭ್ಯ, ತೆರಿಗೆ ವಿನಾಯತಿ ನೀಡುತ್ತಿದ್ದರು. ಗ್ರಾಮದ ಹಿರಿಯ ಹಾಗೂ ಪ್ರಮುಖ ಆಡಳಿತಾಧಿಕಾರಿಗಳಾದ ಗೌಡ, ಪ್ರಭುಗಳು ಪಟ್ಟಣ ಕಟ್ಟಿಸುವುದರಲ್ಲಿ ತೋರಿಸಿದ ಆಸಕ್ತಿ, ಒಲವು ಕಾರಣವಾಗಿ ಗ್ರಾಮಗಳು ವ್ಯಾಪಾರ ಚಟುವಟಿಕೆಯ ಕೇಂದ್ರ ಸ್ಥಳಗಳಾಗಿ ನಿಂತವು. ಇದರಿಂದ ಜನರ ಜೀವನಮಟ್ಟ ಸುಧಾರಣೆಯಾಗಲು ಸಾಧನವಾಯಿತು.

ಹೀಗೆ ಪೇಟೆ, ಪಟ್ಟಣಗಳನ್ನು ಕಟ್ಟಿಸಿ ಸಂತೆ ಕೂಡಿಸುವುದರಿಂದ ರಾಜ್ಯದ ಆದಾಯ, ಉದ್ಯೋಗಾವಕಾಶ, ಸಾರಿಗೆ ಸಂಪರ್ಕ, ಜೀವನಮಟ್ಟ ಉನ್ನತಸ್ಥಿತಿಗೇರುವಂತಾಯಿತು. ಒಟ್ಟಿನಲ್ಲಿ ಪ್ರಾಚೀನ ಕರ್ನಾಟಕದ ಸಂತೆ, ಪೇಟೆ, ಪಟ್ಟಣ ರಚನಾಕಾರ್ಯ ಹಾಗೂ ಸಂತೆ ಕೂಡಿಸುವ ಕಾರ್ಯಗಳಲ್ಲಿ ರಾಜರ ಪ್ರೇರಣೆ, ಪ್ರೋತ್ಸಾಹ, ಸಹಾಯಗಳೂ ಇದ್ದುವೆಂಬುದು ತಿಳಿದುಬರುತ್ತದೆ.

ವ್ಯಾಪಾರ

ಗ್ರಾಮ, ಪಟ್ಟಣಗಳಲ್ಲಿ ವಾಸಿಸುತ್ತಿದ್ದ ಪ್ರಾಚೀನ ಕರ್ನಾಟಕದ ವರ್ತಕರು ಪಾದ ಮಾರ್ಗ, ಜಲಮಾರ್ಗಗಳ ಮೂಲಕ ಒಬ್ಬಂಟಿಗರಾಗಿಯೂ ಗುಂಪಾಗಿಯೂ, ಬೇರೆ ಬೇರೆ ಸ್ಥಳಗಳಿಗೆ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. ಕರ್ನಾಟಕದ ವರ್ತಕರು ಈ ಸಮಯದಲ್ಲಿ ಹಸುಬೆ, ಮೂಟೆ, ಹೆಡಿಗೆ, ಬರಕ, ಕಲ್ಲಿ, ಕೊಡ, ಚರ್ಮದ ಚೀಲ, ಬಿದಿರಿನ ಕೋಳಿವೆ (=ಲಳಿಗೆ), ಸಿಂಗಡಿಕಾಯಿ, ಕರಂಡಿಗೆ, ಜಿಲ್ಲೆಗಳಲ್ಲಿ ತುಂಬಿದ ವಿವಿಧ ಸರಕುಗಳನ್ನು ಎತ್ತು, ಕತ್ತೆ, ಕೋಣ, ಎಮ್ಮೆ, ಕುದುರೆ, ತೊತ್ತು, ಬಂಡಿಗಳ ಮೂಲಕ ಸಾಗಿಸುತ್ತಿದ್ದರು. ಮೂಟೆ, ಹೆಡಿಗೆ, ಜಿಲ್ಲೆಗಳನ್ನು ತಲೆಯ ಮೇಲೆ ಹೊತ್ತುಕೊಂಡೂ ಕಂಕುಳಲ್ಲಿ ಇಟ್ಟುಕೊಂಡೂ ಹೆಗಲ ಮೇಲೆ ಹಸುಬೆ (ಚೀಲ) ಹಾಕಿಕೊಂಡೂ ಈ ವರ್ತಕರು ವ್ಯಾಪಾರಕ್ಕೆ ಹೋಗುತ್ತಿದ್ದುದು ತಿಳಿದುಬರುತ್ತದೆ. ಪಾದಮಾರ್ಗದ ವ್ಯಾಪಾರ ಬಂಡಿಯ ದಾರಿ, ಬಂಡಿಯ ಹೆದ್ದಾರಿ, ರಾಜಬೀದಿ, ಕೀಳ್ಪಟ್ಟೆ (ಸಣ್ಣದಾರಿ), ಮೇಲ್ಪಟ್ಟೆ (ದೊಡ್ಡಮಾರ್ಗ), ಅಡ್ಡವಟ್ಟೆ (ನಡುದಾರಿ) ಮುಖಾಂತರ ಸಾಗುತ್ತಿದ್ದಿತು. ಮಧ್ಯದಲ್ಲಿ ಬರುವ ನದಿ, ಹಳ್ಳಗಳನ್ನು ತೆಪ್ಪ, ದೋಣಿಗಳ ಮೂಲಕ ದಾಟುತ್ತಿದ್ದರು. ಪಾದಮಾರ್ಗದಿಂದ ಹೋಗುವಾಗ ಮಾರ್ಗಮಧ್ಯದಲ್ಲಿ ಹಾದಿಗಳ್ಳರು ದಾಳಿ ಮಾಡಿ. ಸರಕು, ಹಣ ಪ್ರಾಣಿಗಳನ್ನು ದೋಚುತ್ತಿದ್ದರು. ಈ ದಾರಿಗಳ್ಳ ದಾಳಿಯಿಂದ ತಮ್ಮನ್ನೂ ತಮ್ಮ ಸರಕುಗಳನ್ನೂ ಸಂರಕ್ಷಿಸಿಕೊಳ್ಳಲು ಕೆಲವು ಜನ ದೊಡ್ಡ ವರ್ತಕರು 'ಬಿಲ್ಲರು' ಎಂಬ ವೀರಯೋಧರನ್ನೂ ಬಿಲ್ಲರಲ್ಲದ ಬೇರೆ ಯೋಧರನ್ನೂ ಇಟ್ಟುಕೊಂಡಿದ್ದರು. ಈ ಯೋಧರು ಸ್ವಗ್ರಾಮಗಳಲ್ಲಿದ್ದು, ವ್ಯಾಪಾರ ಪ್ರಸಂಗದಲ್ಲಿ ಮಾತ್ರ ವರ್ತಕರೊಂದಿಗೆ ನೆರವಿಗೆ ಹೋಗುತ್ತಿದ್ದರು.

ವರ್ತಕರು ಸುಂಕದ ಕಟ್ಟೆಯಲ್ಲಿ ಸಾರಿಗೆ ವಾಹನಗಳ ಬಣ್ಣ, ವಯಸ್ಸು ಬರೆಸುತ್ತಿದ್ದರಲ್ಲದೆ ಸರಕಿನ ಅಧಿಕೃತತೆಯುಳ್ಳ ಚೀಟಿಯನ್ನು (Permit) ಪಡೆದುಕೊಂಡು ಸಾಗುತ್ತಿದ್ದರು. ಮಾರ್ಗಮಧ್ಯದಲ್ಲಿ ಅಧಿಕಾರಿಗಳು ಸರಕುಗಳನ್ನು ಪರೀಕ್ಷಿಸಿದರೆ, ಸರಕಿನ ಬಗೆಗೆ ಸಂಶಯ ವ್ಯಕ್ತಪಡಿಸಿದರೆ ತಾವು ಸುಂಕದ ಕಟ್ಟೆಯಲ್ಲಿ ಪಡೆದುಕೊಂಡು ಬಂದ ಚೀಟಿ (Permit) ಯನ್ನು ವರ್ತಕರು ಅವರಿಗೆ ತೋರಿಸುತ್ತಿದ್ದರು. ಕೆಲವು ಜನ ವರ್ತಕರು ಸುಂಕದ ಕಟ್ಟೆಗೆ ಹೋಗದೆ, ಸುಂಕ (Tax) ವನ್ನು ಕೊಡದೆ ಕಳ್ಳಸರಕುಗಳನ್ನು ಕಳ್ಳಹಾದಿಯ ಮೂಲಕ ಸಾಗಿಸುತ್ತಿದ್ದರು. ಹೀಗೆ ಸಂತೆ, ಪೇಟೆ, ಪಟ್ಟಣ ಪ್ರವೇಶಿಸುವ ವ್ಯಾಪಾರದ ವಸ್ತುಗಳ ಮೇಲೆ ತೆರಿಗೆ ವಿಧಿಸುತ್ತಿದ್ದರು. ಇದನ್ನೇ 'ಪ್ರವೇಶ ತೆರಿಗೆ'ಯೆಂದು ಕರೆಯಬಹುದಾಗಿದೆ.

ವರ್ತಕರಲ್ಲಿಯೇ ಕೆಲವರು ಪಟ್ಟಣಸ್ವಾಮಿ, ಮಂಡಳಸ್ವಾಮಿ ನಾಡಸ್ವಾಮಿಗಳಾಗಿದ್ದು ನಾಡಿನ ಆರ್ಥಿಕ ಚಟುವಟಿಕೆಗಳು ಬೆಳೆಯುವಂತೆ ಮಾಡಿದರು. ಇವರು ಪೇಟೆ, ಸಂತೆ, ಪಟ್ಟಣಗಳ ಸಂಯೋಜನೆ, ಕಾರ್ಯಾಚರಣೆಗಳನ್ನು ಶ್ರಮವಹಿಸಿ ನೆರವೇರಿಸಿದರು. ಇವರು

ರಾಜ-ಪ್ರಜೆ-ವರ್ತಕರು ಮಧ್ಯದ ಮಹತ್ವದ ಕೊಂಡಿಯಾಗಿದ್ದರು. ಈ ಹುದ್ದೆಗಳು ನಾಡಿನ ಆರ್ಥಿಕ ಚಟುವಟಿಕೆಗಳ ವಿಕೇಂದ್ರೀಕರಣವನ್ನು ಪ್ರತಿಪಾದಿಸುತ್ತದೆ.

ಸ್ವಸ್ಥಳ ಹಾಗೂ ಪರಸ್ಥಳದ ವರ್ತಕರು ಸಂತೆಯಲ್ಲಿ ಬಯಲು ಅಂಗಡಿ ಹಚ್ಚುವುದರೊಂದಿಗೆ ದವಸ-ಧಾನ್ಯ ಮುಂತಾದವುಗಳನ್ನು ರಾಶಿಯಾಗಿ ಕೂಡಿಹಾಕುತ್ತಿದ್ದರು. ವಸ್ತುಗಳನ್ನು ತೂಗಿ, ಎಣಿಸಿ, ಅಳೆದು ಮಾರುತ್ತಿದ್ದರು. ವಸ್ತುಗಳನ್ನು ತೂಗಲು ತಕ್ಕಡಿ, ಬೆನಕ (ಅಳತೆ ಕಲ್ಲು) ಗಳಿದ್ದವು. ಕೆಲವು ಸರಕುಗಳನ್ನು ಮಾನ, ಬಳ್ಳ, ಸೊಳಸ, ಸೊಲ್ಲಗೆ, ಅದ್ದನ, ಗಿದ್ದನ, ಕೊಳಗ ಪ್ರಮಾಣಗಳಿಂದ ಅಳೆಯುತ್ತಿದ್ದರೆ; ಇನ್ನು ಕೆಲವು ವಸ್ತುಗಳನ್ನು ಕೈಯ ಹಿಡಿ ಅಥವಾ ಎಣಿಕೆಗಳಿಂದ ಎಣಿಸುತ್ತಿದ್ದರು.

ಸಂತೆಗೆ ಬರುವ ಪ್ರತಿಯೊಂದು ಸರಕಿನ ಮೇಲೂ ತೆರಿಗೆ ಆಕರಿಸಲಾಗುತ್ತಿತ್ತು. ಇದಕ್ಕೆ ಸಂತೆಯ ಆಯ, ಸಂತೆಯ ಸುಂಕ, ಸಂತೆಯ ಆಯದಾಯ, ಸಂತೆಯ ತೆರಿಗೆಯೆಂದು ಹೆಸರಿದ್ದಿತು. ಪ್ರಾಚೀನ ಕರ್ನಾಟಕದ ಬೇರೆ ಬೇರೆ ಪ್ರದೇಶ, ಕಾಲಗಳಲ್ಲಿ ವಸ್ತುಗಳಿಗೆ ಸಂತೆಯ ಸುಂಕ (ತೆರಿಗೆ)ವನ್ನು ಹಣ ಮತ್ತು ವಸ್ತುಗಳ ರೂಪದಲ್ಲಿ ಆಕರಿಸುತ್ತಿದ್ದ, ಸರಕು ತುಂಬಿದ ವಸ್ತುವಿಗನುಗುಣವಾಗಿ ಇದು ಹೆಚ್ಚು - ಕಡಿಮೆಯಾಗಿದ್ದ, ಒಂದೇ ಶತಮಾನದಲ್ಲಿ (ಸಂತೆಯ ಸುಂಕದಲ್ಲಿ) ಕೆಲವು ಕಡೆ ಏಕರೂಪತೆ, ಇನ್ನು ಕೆಲವುಕಡೆ ಬಹುರೂಪತೆಯಿದ್ದ ಸಂಗತಿಯೂ ಆಯಾ ಸಂತೆ ಪೇಟೆ ಪಟ್ಟಣಗಳಿಗೆ ಬರುತ್ತಿದ್ದ, ಅಲ್ಲಿ ಬೆಳೆಯುತ್ತಿದ್ದ ಸರಕು (=ವಸ್ತು)ಗಳು ಮತ್ತು ಅವುಗಳ ಪ್ರಮಾಣವೂ ಶಾಸನಗಳಿಂದ ತಿಳಿದುಬರುತ್ತದೆ.

ಸಂತೆಯ ಸುಂಕವನ್ನು ಸರಕುಗಳ ತೂಕ, ತುಂಬಿದ ವಸ್ತುವಿನ ಗಾತ್ರ, ಸಾಗಿಸುವ ವಾಹನ, ಸರಕಿನ ಬೆಲೆ, ಅಳತೆ, ಪ್ರಮಾಣ ಹಾಗೂ ರಾಶಿ(ಬಟ್ಟಲ)ಗಳ ಮೇಲೆ ನಿಗದಿಪಡಿಸುತ್ತಿದ್ದರು. ವರ್ತಕರು ಈ ಸಂತೆಯ ಸುಂಕದೊಂದಿಗೆ ಮಾರಾಟ ತೆರಿಗೆಯನ್ನೂ ಸಲ್ಲಿಸಬೇಕಾಗುತ್ತಿತ್ತು. ಈ ಮಾರಾಟ ಸುಂಕ, ಆಯಾ ಕಾಲ ಪ್ರದೇಶಗಳಲ್ಲಿ ಬೇರೆ ಬೇರೆ ಯಾಗಿದ್ದು, ವಸ್ತು ಹಾಗೂ ಹಣಗಳ ರೂಪದಲ್ಲಿ ವಸೂಲು ಮಾಡುತ್ತಿದ್ದರು. ಪ್ರಾಚೀನ ಕರ್ನಾಟಕದಲ್ಲಿ ಭತ್ತ, ಬೆಲ್ಲ, ಸಕ್ಕರೆ, ಎಲೆ, ಅಡಕೆ, ಹತ್ತಿ, ಸೀರೆ, ಸಾಸಿವೆ, ಜೀರಿಗೆ, ಶುಂಠಿ, ಅರಿಷಿಣ, ಮೆಣಸು, ಗಂಧವಣ, ಇಂಗು ಮೊದಲಾದ ವಸ್ತುಗಳ ಮೇಲೆ ಮಾರಾಟ ಕರ ವಿಧಿಸಲಾಗಿದ್ದ ಅಂಶ ಶಾಸನಗಳಿಂದ ಗೊತ್ತಾಗುತ್ತದೆ. ಹೀಗೆ ವರ್ತಕರು ವ್ಯಾಪಾರಕ್ಕೆ ತಂದ ಸರಕುಗಳಿಗೆ ಸಂತೆಯ ಸುಂಕ (ಆಯ), ಮಾರಾಟ ಕರಗಳನ್ನು ಆಕರಿಸಿಲಾಗುತ್ತಿತ್ತು. ಇದಲ್ಲದೆ ವರ್ತಕರ ಪ್ರತಿಯೊಂದು ಖಾಯಂ ಅಂಗಡಿಯ ಮೇಲೆಯೂ ತೆರಿಗೆ ವಿಧಿಸುತ್ತಿದ್ದರು. ಶಾಸನಗಳಲ್ಲಿ ಇಂಥ ತೆರಿಗೆಯನ್ನು 'ಅಂಗಡಿ ಆಯ' ಅಥವಾ 'ಅಂಗಡಿದೆರೆ' ಎಂದು ಹೆಸರಿಸಲಾಗಿದೆ. ಹೀಗೆ ಸಂತೆಯಲ್ಲಿ ಸುಂಕಾಧಿಕಾರಿಗಳಿಂದ ಸಂಗ್ರಹವಾದ ಸಂತೆಯ ಆಯ, ಮಾರಾಟ ಕರ, ಅಂಗಡಿ ಆಯ, ಸೆಟ್ಟಿದೆರೆ, ಸೆಟ್ಟಿವಣ, ವರ್ತಕರ ಸುಂಕ, ಎತ್ತಿನ ಸುಂಕ, ಗಾಡಿಯ ಸುಂಕ, ಬಂಡಿದೆರೆ, ಕೀಳ್ಪಟ್ಟೆಸುಂಕ, ಈ ಸಂತೆಯ ಸುಂಕ, ಮಾರಾಟ ಸುಂಕ, ಅಂಗಡಿ

ಆಯಗಳು ಆಯಾ ಕಾಲ, ದೇಶ, ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದವು. ಕೆಲವು ಸಲ ಒಂದೇ ಪ್ರದೇಶ, ಕಾಲದಲ್ಲಿಯೂ ಇಂಥ ವ್ಯತ್ಯಾಸವಿದ್ದುದು ಕಂಡುಬರುತ್ತದೆ.

ಕರ್ನಾಟಕ ಪ್ರಾಚೀನಕಾಲದಿಂದಲೂ ಹೊರನಾಡು, ವಿದೇಶಗಳೊಂದಿಗೆ ವಾಣಿಜ್ಯ ಸಂಪರ್ಕವನ್ನಿರಿಸಿಕೊಂಡಿರುವುದು ಕಾವ್ಯ, ಶಾಸನಗಳಿಂದ ಗೊತ್ತಾಗುತ್ತದೆ. ಸಿಲೋನ ಮತ್ತು ಬ್ರಹ್ಮದೇಶದ ಶಾಸನಗಳು ಉಲ್ಲೇಖಿಸುವ 'ನಾನಾದೇಸಿ'ಯರು ಕರ್ನಾಟಕದ ವರ್ತಕರಾಗಿರುತ್ತಾರೆ. ಹೀಗೆ ಕರ್ನಾಟಕದ ವಾಣಿಜ್ಯ ವಿದೇಶಗಳಿಗೂ ವ್ಯಾಪಿಸಿದ್ದಿತೆಂಬುದು ತಿಳಿದುಬರುತ್ತದೆ. ಹೀಗಿದ್ದರೂ ಕರ್ನಾಟಕದ ವರ್ತಕರು ಪ್ರಾರಂಭದಿಂದಲೂ ಒಳನಾಡಿನ ವ್ಯಾಪಾರ - ವಾಣಿಜ್ಯಗಳ ಅಭಿವೃದ್ಧಿಗಾಗಿಯೇ ಹೆಚ್ಚಿನ ಆದ್ಯತೆ ಕೊಟ್ಟಿರುವುದು ವೇದ್ಯವಾಗುತ್ತದೆ. ಪ್ರಾಚೀನ ಕರ್ನಾಟಕದ ಪ್ರಧಾನ ವಾಣಿಜ್ಯ ಕೇಂದ್ರಗಳನ್ನು ಶಾಸನಗಳಲ್ಲಿ ಆದಿ ಬಣಂಜುವಟ್ಟಣ, ಬಣಂಜುವಾದಿ ಪಟ್ಟಣ, ಅನಾದಿ ಬಣಂಜುವಟ್ಟಣ, ಬಣಂಜುಪಟ್ಟಣ, ವೀರಬಣಂಜುಪಟ್ಟಣ, ತೆಂಕಣ ಬಣಂಜದಾದಿಪಟ್ಟಣ, ತೆಂಕಣ ಅಯ್ಯಾವೊಳೆ ಅಥವಾ ದಕ್ಷಿಣ ಅಯ್ಯಾವೊಳೆ, ಮಹಾಪಟ್ಟಮ, ಆನಾದಿ ಪಟ್ಟಣ, ಆದಿ ಪಟ್ಟಣ, ಬಲೆಯಪಟ್ಟಣ, ರಾಜಧಾನಿ, ಅನಾದಿ ಹೆಗ್ಗಡೆ ಮನೆ, ಹೆಗ್ಗಡೆ ಮನೆ, ಪೇಠೆದಾಣ, ಮಳಿಗೆಯ ಮನೆ, ಶಾಸನದ ಮನೆ, ಪಟ್ಟದಮನೆ ಎಂದು ಹೆಸರಿಸಲಾಗಿದೆ.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಸಂತೆ-ಪೇಟೆ-ಪಟ್ಟಣಗಳಲ್ಲಿ ವಿನಿಮಯವಾಗುತ್ತಿದ್ದ ಸರಕುಗಳನ್ನು ಹೀಗೆ ಪಟ್ಟಿ ಮಾಡಿಕೊಡಬಹುದಾಗಿದೆ : ಭತ್ತ ಜೋಳ, ಅಕ್ಕಿ, ಎಳ್ಳು, ಹಾಲುವಳ್ಳಿ, ಅವರೆ, ಕಡಲೆ, ತೊಗರಿ, ಗೋಧಿ, ಉದ್ದು ; ಜೀರಿಗೆ ಸಾಸಿವೆ ಮೆಣಸು ಅಲ್ಲ ಶುಂಠಿ ಅರಿಷಿಣ ಯಾಲಕ್ಕಿ ಮೆಂತೆ ಸಬ್ಬಸಗಿ ಕೋತಂಬರಿ ಬಳ್ಳೊಳ್ಳಿ ಈರುಳ್ಳಿ ಬಜಿ ಭದ್ರಮುಸ್ತೆ ಇಂಗು; ಹತ್ತಿಹಾಜಿ ನೂಲು ಸೀರೆ ಪಟ್ಟೆ ಪಟ್ಟಾವಳಿ ಪಳಿಪಟ್ಟೆ ಪಟ್ಟೆ ಸೂತ್ರ ಪಂಚವರ್ಣ್ಣಿಗೆ ಸಣಬುಕಂಬಳಿ ಹುಲಿದೊಗಲು ವೀಳ್ಯದೆಲೆ ವಜ್ರ ವೈಡೂರ್ಯ ಗೋಮೇಧಿಕ ಪುಷ್ಯರಾಗ ಪದ್ಮರಾಗ ಪದಳ ಮರಕತರ್ಕೇತನ ಚಿನ್ನ ತವರ; ಬೆಲ್ಲ, ಸಕ್ಕರೆ, ಉಪ್ಪು ಎಣ್ಣೆ ತುಪ್ಪ; ಲವಂಗ ಅಗರು ಚಂದನ ಕುಂಕುಮ ಮಲೆ ಗಜ ಕರ್ಪೂರ ಕಸ್ತೂರಿ ದವಣ ಬಳೆ ಕಾಡಿಗೆ (ತಾಳಿ) ಓಲೆ ಕಾಯಿಪಲ್ಲೆ; ಬಾಳೆಯಹಣ್ಣು ತೆಂಗಿನಕಾಯಿ ಎಲಿವಾದ್ರಕಾಯಿ ನೆಲ್ಲಿಕಾಯಿ ಹೂವು ಹೂಮಾಲೆ ಕಬ್ಬು ಹಿಪ್ಪಲಿ ಶಂಖ ಕಾಷ್ಠ ಕುದುರೆ ಎತ್ತು ಆನೆ ನಾರುಬೇರು ಚಮರಿ ಸೈಂಧವ ಕಾರಬೀಜ ಮೊರ ಪಾದರಕ್ಷೆ ಮಿಣಿ ಗಡಿಗೆ ಹುಲ್ಲು ಬುಟ್ಟಿ ಇತ್ಯಾದಿ. ಇವು ಶಾಸನೋಕ್ತ ಸರಕುಗಳಾಗಿರುತ್ತವೆ.

ಜೀರಿಗೆ ಸಾಸಿವೆ ಮೆಣಸು ಶುಂಠಿ ಅರಿಷಿಣ ಮೊದಲಾದ ಸಂಬಾರ, ಸಂಬಾರ ವಸ್ತು, ಭತ್ತ ಕಡಲೆ ಗೋದಿ ಉದ್ದು ತೊಗರಿ ಎಳ್ಳು ಹಾಲುದಳ್ಳಿ ಮೊದಲಾದ ದವಸ-ಧಾನ್ಯ, ನೆಲ್ಲಿಕಾಯಿ ಮುಂತಾದವುಗಳನ್ನು ಅಳೆದು ಮಾರುತ್ತಿದ್ದರು. ಕೊಳಗ, ಬಳ್ಳ, ಮಾನ, ಸೊಲ್ಲಗೆ, ಸಟ್ಟುಗ, ಸೋಂಟಿಗೆ, ಸೊಳಸ, ಪಡಿ, ಅದ್ದನ, ಗಿದ್ದನ, ಪಳಿಗೆ, ದಳ, ಹಾನೆ, ಸೆಡೆ

ಮೊದಲಾದ ಮಾಪುಗಳಿಂದ ಈ ವಸ್ತುಗಳನ್ನು ಅಳೆದು ಮಾರುತ್ತಿದ್ದರು. ಇವು ವರ್ತಕರು ಉಪಯೋಗಿಸುತ್ತಿದ್ದ ಅಳತೆಯ ಪ್ರಮಾಣಗಳು. ಹಣ್ಣು ಹಂಪಲು, ತೆಂಗಿನಕಾಯಿ, ಕಬ್ಬು, ಅಡಕೆ, ಬೆಲ್ಲದ ಅಚ್ಚುಗಳನ್ನು ಎಣಿಸಿ ಮಾರಲಾಗುತ್ತಿತ್ತು. ವೀಳ್ಯದೆಲೆ, ಕಾಯಿಪಲ್ಲೆ, ಈರುಳ್ಳಿ, ಹುಲ್ಲುಗಳನ್ನು ಹಿಡಿ ಅಥವಾ ಸೂಡುಗಳಾಗಿ ವ್ಯಾಪಾರ ಮಾಡುತ್ತಿದ್ದರು. ತೆಂಗು ಹಾಗೂ ಹತ್ತಿಗಳನ್ನು ತೂಗಿ ಮಾರಾಟ ಮಾಡುತ್ತಿದ್ದರು. ಮಳವೆ, ಪಲ, ಬಿಸಿಗೆ, ಕೊಡಿಗೆ, ಬೆಲ್ಲಳಿಗೆ - ಇವು ವರ್ತಕರು ಬಳಸುತ್ತಿದ್ದ ತೂಕವಿಶೇಷಗಳು. ಹೊನ್ನ, ಹಾಗ, ಪಣ, ವೀಸ, ಬೇಳೆ, ಅಡ್ಡ, ಕಾಗಿಣಿ, ತಾರ, ದ್ರಮ್ಮ- ಇವು ವ್ಯಾಪಾರ ಸಮಯದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳಾಗಿರುತ್ತವೆ. ಹೀಗೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವ್ಯಾಪಾರ - ವಾಣಿಜ್ಯ ಚಟುವಟಿಕೆಗಳು ನಾಡಿನುದ್ದಕ್ಕೂ ಪಸರಿಸುವಂತೆ ಮಾಡಿ ವ್ಯಾಪಾರ ವೃತ್ತಿಯನ್ನು, ಆರ್ಥಿಕ ಸ್ಥಿತಿಯನ್ನು ಉಚ್ಚಸ್ಥಿತಿಗೇರಿಸಿದ ಶ್ರೇಯಸ್ಸು ವರ್ತಕ ಪ್ರಕಾರದವರಿಗೆ ಸಲ್ಲುತ್ತದೆ. ನಾಡಿನ ವಾಣಿಜ್ಯೋದ್ಯಮದ ಬೆಳವಣಿಗೆ, ಉದ್ಯೋಗಾವಕಾಶಗಳ ಅನುಕೂಲತೆಯನ್ನು ವಾಣಿಜ್ಯ ಚಟುವಟಿಕೆಗಳ ಮೂಲಕ ಕಲ್ಪಿಸಿ, 'ವ್ಯಾಪಾರ' ವೃತ್ತಿಯನ್ನು ಹುಲುಸಾಗಿಸಿದವರು ಪ್ರಾಚೀನ ಕರ್ನಾಟಕದ ವರ್ತಕರಾಗಿದ್ದಾರೆ. ಈ ರೀತಿಯಾಗಿ ವರ್ತಕರು, ಸಂತೆ, ಅಂಗಡಿ, ಪೇಟೆ, ಪಟ್ಟಣಗಳ ಪ್ರಾಮುಖ್ಯತೆ, ಇವುಗಳ ನಿರ್ಮಾಣ ಕಾರ್ಯದ ಹಿಂದಿರುವ ಪ್ರೇರಕ ಶಕ್ತಿಗಳು; ವ್ಯಾಪಾರ ಮಾರ್ಗ, ಸಾಧನ, ಸಾಗಾಣಿಕ, ಸಂತೆ ಸುಂಕ, ಮಾರಾಟ ತೆರಿಗೆ, ಸರಕು, ವ್ಯಾಪಾರ ವಿಧಾನ, ವ್ಯಾಪಾರ ಒಳನಾಡು-ಹೊರನಾಡು ವ್ಯಾಪಾರಗಳ ಮೂಲಕ ಇಲ್ಲಿ ಪ್ರಾಚೀನ ಕರ್ನಾಟಕದ 'ವಾಣಿಜ್ಯ ಸ್ವರೂಪ'ವನ್ನು ವಿವರಿಸಲಾಗಿದೆ. ಇನ್ನು ಈ ವರ್ತಕರು ಕೈಕೊಂಡ ಧಾರ್ಮಿಕ ಕಾರ್ಯಗಳನ್ನು ಕುರಿತು ಹೀಗೆ ವಿವೇಚಿಸಬಹುದಾಗಿದೆ.

ವರ್ತಕರ ಧಾರ್ಮಿಕ ಕಾರ್ಯಗಳು

ತಾವು ವ್ಯಾಪಾರದಿಂದ ಗಳಿಸಿದ ಹಣವನ್ನು ವರ್ತಕರು ಸತ್ಕಾರ್ಯ, ಸದ್ಧರ್ಮಗಳಿಗಾಗಿ ವಿನಿ ಯೋಗಿಸಿದ್ದಾರೆ. ತಮ್ಮ ಲೌಕಿಕ ಬದುಕಿನೊಂದಿಗೆ ಧಾರ್ಮಿಕ ಬದುಕೂ ಬಹುದೊಡ್ಡದೆಂದು ಇವರು ಭಾವಿಸಿದ್ದರು. ಹೀಗಾಗಿ ವೈದಿಕ, ಜೈನ, ಶೈವ ಧರ್ಮದ ವರ್ತಕರು ತಮ್ಮ ಮತ-ವರ್ಗ-ವರ್ಣ ವಯಸ್ಸುಗಳ ತಾರತಮ್ಯವಿಲ್ಲದೆ ವೈಯಕ್ತಿಕವಾಗಿ, ಸಾಮೂಹಿಕವಾಗಿ ದೇವಾಲಯ, ದೀಪಮಾಲೆಕಂಬ, ಮಂಟಪ, ಸುಕನಾಶಿ, ಮಠ, ಅನ್ನಛತ್ರ, ಕೆರೆ ನಿರ್ಮಾಣ, ಜೀರ್ಣೋದ್ಧಾರಗಳನ್ನೂ ಸ್ವ-ಪರ ಶ್ರೇಯೋಭಿವೃದ್ಧಿಗಾಗಿ ವಿಗ್ರಹ, ಲಿಂಗಗಳ ಪ್ರತಿಷ್ಠಾಪನೆಯನ್ನೂ ದೇವಾಲಯಗಳ ವಿವಿಧ ಕಾರ್ಯ ನೂರಾರು ಸಂಖ್ಯೆ ದಾನಗಳನ್ನೂ ಮಾಡಿದುದು ಅನುಕರಣೀಯ. ಆದರ್ಶನೀಯವೆನಿಸುತ್ತದೆ. ಇಂಥ ಧಾರ್ಮಿಕ ಕಾರ್ಯ ಪ್ರಸಂಗಗಳಲ್ಲಿ ತೋರಿಬರುವ ವರ್ತಕರ ಭಕ್ತಿಭಾವ, ಧಾರ್ಮಿಕ ಶ್ರದ್ಧೆ, ತ್ಯಾಗಗುಣ, ಸ್ವಮತಾಭಿಮಾನ, ಪರಮತ ಪುರಸ್ಕಾರಗಳು ಮನನೀಯವಾಗಿರುತ್ತವೆ; ಮಾದರಿಯೆನಿಸಿರುತ್ತವೆ. ಹೀಗೆ ಈ ವರ್ತಕರು ಕೈಕೊಂಡ ಧಾರ್ಮಿಕ ಕಾರ್ಯಗಳನ್ನು ನಿರ್ಮಾಣ,

ಪ್ರತಿಷ್ಠಾಪನ, ದಾನವೆಂದು ಗುರುತಿಸಬಹುದಾಗಿದೆ. ವರ್ತಕರ ಈ ಧಾರ್ಮಿಕ ಕಾರ್ಯಗಳಲ್ಲಿ ಪ್ರಧಾನವಾದುದು ದಾನ. ಈ ದಾನ ಕಾರ್ಯದ ಮೂಲಕ ಪ್ರಕಟಗೊಂಡ ಪ್ರಾಚೀನ ಕರ್ನಾಟಕದ ವರ್ತಕರ ಧಾರ್ಮಿಕ ಮನೋಧರ್ಮವನ್ನು ಹೀಗೆ ವಿವರಿಸಬಹುದು.

ವರ್ತಕರು ತಮ್ಮ ದಾನ ಕಾರ್ಯಗಳ ಮೂಲಕ ತ್ಯಾಗ ಮೌಲ್ಯವನ್ನು ಪ್ರಕಟಪಡಿಸಿದ್ದಾರೆ. ತ್ಯಾಗಮೌಲ್ಯಕ್ಕೆ ಕಾರಣವಾದ ವರ್ತಕರ ದಾನ ಕಾರ್ಯಗಳನ್ನು ವೈಯಕ್ತಿಕದಾನ, ಸಾಮೂಹಿಕ ದಾನಗಳೆಂದು ಗುರುತಿಸಬಹುದಾಗಿದೆ.

ಪ್ರಾಚೀನ ಕರ್ನಾಟಕದಲ್ಲಿ ಶಿವಾಲಯ, ಜಿನಾಲಯ, ವೈಷ್ಣವಾಲಯಗಳ ವಿವಿಧ ಕಾರ್ಯಗಳು ಅವ್ಯಾಹತವಾಗಿ ಮುಂದುವರಿಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಸಮಾಜದ ಮೇಲಿದ್ದಿತು. ಹೀಗಾಗಿ ಸಮಾಜದ ಸರ್ವಮತೀಯರೂ ಸಕಲ ವರ್ಗದವರೂ ಕಾಲ ಕಾಲಕ್ಕೆ ದಾನಗಳನ್ನು ನೀಡುತ್ತ, ಅವುಗಳನ್ನು ಮುಂದುವರಿಸಿಕೊಂಡು ಬಂದರು. ಇವರಲ್ಲಿ ವರ್ತಕರು ವೈಯಕ್ತಿಕವಾಗಿ ನೀಡಿದ ದಾನ ಕಾರ್ಯಗಳು ನೆನೆಯುವಂಥವುಗಳಾಗಿರುತ್ತವೆ. ವಡ್ಡವ್ಯವಹಾರಿ, ಸೆಟ್ಟಿಯರೇ ಅಧಿಕ ಸಂಖ್ಯೆಯಲ್ಲಿ ದತ್ತಿ ಬಿಟ್ಟಿರುವುದು ಸಮಗ್ರ ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ನಕರ, ಮುಮ್ಮುರಿದಂಡ, ಸೆಟ್ಟಿಗುತ್ತ, ಅಯ್ಯಾವೊಳೆ ಐನೂರ್ವರು, ಗಾತ್ರಿಗ, ಹಲರು, ಎಳಮೆ ಮುಂತಾದ ವರ್ತಕ ಪ್ರಕಾರದವರು ವೈಯಕ್ತಿಕವಾಗಿ ದಾನ ಕಾರ್ಯ ನೆರವೇರಿಸಿದಂತೆ ಕಾಣುವುದಿಲ್ಲ. ವರ್ತಕರ ಮಡದಿ, ಮಕ್ಕಳು, ಸಹೋದರ, ಮೊಮ್ಮಕ್ಕಳು, ಅಳಿಯಂದಿರೂ ಈ ದಾನ ಕಾರ್ಯದಲ್ಲಿ ಭಾಗವಹಿಸಿದ್ದಾರೆ.

ವರ್ತಕರು ವಿವಿಧ ಧಾರ್ಮಿಕ ಕಾರ್ಯಗಳಿಗಾಗಿ ಸಂಯುಕ್ತವಾಗಿ ಬಿಟ್ಟ ದಾನಗಳೇ ಅಧಿಕವಾಗಿರುತ್ತವೆ. ವರ್ತಕರಲ್ಲಿಯೇ ಒಂದೊಂದು ವಿಶಿಷ್ಟ ಪ್ರಕಾರಕ್ಕೆ (ನಕರ, ಮುಮ್ಮುರಿದಂಡ, ತಂಬುಳಿಗ) ಸೇರಿದವರು ದಾನ ಕಾರ್ಯಗಳ ಪುಣ್ಯಕೆಲಸದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇಂಥ ವರ್ತಕರಲ್ಲಿ ತೆಲ್ಲಿಗರು, ತಂಬುಲಿಗರು ಹಾಗೂ ನಕರರು ಬಹುಪಾಲು ದಾನಗಳನ್ನು ಕೊಟ್ಟಿರುವುದು ಶಾಸನಗಳಿಂದ ಗೊತ್ತಾಗುತ್ತದೆ. ತೆಲ್ಲಿಗ ವರ್ತಕರು ದೇವಾಲಯಗಳ ನಂದಾದೀವಿಗೆಗೆ ಎಣ್ಣೆಯನ್ನು, ಗವರೆ - ಗಾತ್ರಿಗ-ತಂಬುಲಿಗರೆಂಬ ವೀಳ್ಯದೆಲೆ ವರ್ತಕರು ದೇವಾಲಯದ ಎಲೆ ಪೂಜೆಗೆ ವೀಳ್ಯದೆಲೆಯನ್ನು, ನಕರರೆಂಬ ಧಾನ್ಯವರ್ತಕರು ತಪೋಧನ, ವಿದ್ಯಾರ್ಥಿ, ಬ್ರಾಹ್ಮಣರ ಆಹಾರಕ್ಕಾಗಿ ಭತ್ತ ಮೊದಲಾದ ಧಾನ್ಯಗಳನ್ನು ದಾನವಾಗಿ ನೀಡಿದ್ದಾರೆ. ಸಂತೆಗೆ ವ್ಯಾಪಾರಕ್ಕೆಂದು ಹೋದ ವಿವಿಧ ಪ್ರಕಾರದ ವರ್ತಕರು ತಮ್ಮ ತಮ್ಮ ಸರಕುಗಳ ಮೇಲಿನ ಸುಂಕವನ್ನು ದೇವಾಲಯಗಳಿಗೆ ದತ್ತಿಯಾಗಿ ಬಿಟ್ಟಿದ್ದಾರೆ. ಹೀಗೆ ಸಂತೆಯ ಆಯ ಅಥವಾ ಸಂತೆಯ ಸುಂಕವನ್ನು ಧಾರ್ಮಿಕ ಕಾರ್ಯಗಳಿಗೆ ದತ್ತಿ ನೀಡುವ ಮೊದಲು ವರ್ತಕರು ಚಕ್ರವರ್ತಿ ಇಲ್ಲವೆ ಮಂಡಲೇಶ್ವರರ ಅನುಮತಿ ಪಡೆಯಬೇಕಾಗುತ್ತಿತ್ತು. ಸಾಮಾನ್ಯವಾಗಿ ತೆಲ್ಲಿಗರು ತೆಲ್ಲಿಗೇಶ್ವರ, ನಕರರು ನಕರೇಶ್ವರ ದೇವಾಲಯಗಳಿಗೆ ದಾನ ಮಾಡಿದ್ದಾರೆ. ಆದರೆ ವರ್ತಕರಾದ ಬಣಜಿಗರು-

ಮುಂಮುರಿದಂಡರು ನಕರರು-ಅಯ್ಯಾವೊಳೆ ಐನೂರ್ವರು ಗವರೇಶ್ವರ ದೇವಾಲಯಗಳಿಗೂ ಅಯ್ಯಾವೊಳೆ ಐನೂರ್ವರು ತೆಲ್ಲಿಗೇಶ್ವರ ದೇವಾಲಯಗಳಿಗೂ ದತ್ತಿ ನೀಡಿರುವುದು ಗೊತ್ತಾಗುತ್ತದೆ. ಹೀಗೆ ಆಯಾ ಪ್ರಕಾರದ ವರ್ತಕರು ತಮ್ಮ ತಮ್ಮ ವೃತ್ತಿಯ ಹೆಸರಿನ ದೇವಾಲಯಗಳಿಗೆ ಮಾತ್ರವಲ್ಲದೆ ಇತರ ವರ್ತಕಪ್ರಕಾರದವರ ಹೆಸರಿನಲ್ಲಿರುವ ದೇವಾಲಯಗಳಿಗೂ ದಾನ ನೀಡಿರುತ್ತಾರೆ. ಇದು ವರ್ತಕರ ಸಹಬಾಳ್ವೆ, ಅನ್ಯೋನ್ಯತೆ, ಸಮಾನತೆಗಳ ಸಂಕೇತವೆಂದು ಹೇಳಬಹುದಾಗಿದೆ.

ಇದಲ್ಲದೆ ನಕರ, ಮುಂಮುರಿದಂಡ, ಗವರೆ, ಗಾತ್ರಿಗ, ಸೆಟ್ಟಿಗುತ್ತ ಮೊದಲಾದ ವರ್ತಕ ಪ್ರಕಾರದವರು ಕೂಡಿಕೊಂಡು ಅನೇಕ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದ್ದಾರೆ. ಇದು ಈ ವರ್ತಕರ ಸಹಕಾರ ಭಾವನೆ, ಸಹಜೀವನ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನೂ ಬದುಕಿನ ಸಾರ್ಥಕತೆಯನ್ನೂ ಎತ್ತಿ ತೋರಿಸುವಂತಿದೆ. ಬೇರೆ ಬೇರೆ ಸ್ಥಳದಿಂದ ವ್ಯಾಪಾರಕ್ಕಾಗಿ ಸಂತೆಗೆ ಬಂದ ವಿವಿಧ ಪ್ರಕಾರದ ವರ್ತಕರೆಲ್ಲರೂ ದೇವಾಲಯಗಳಲ್ಲಿ ನೆರೆದು ತಮ್ಮ ಆಯಾ ಸರಕುಗಳ ಮೇಲೆ ವಿಧಿಸಲಾದ ಸಂತೆಯ ಸುಂಕವನ್ನೇ ಎಲ್ಲ ಮತದ ದೇವಾಲಯಗಳಿಗೆ ಹೆಚ್ಚಾಗಿ ದಾನವಾಗಿ ನೀಡಿರುವುದು ಕಂಡುಬರುತ್ತದೆ. ಹೀಗೆ ವರ್ತಕರು ಬಿಟ್ಟ ಸಂತೆಯ ಸುಂಕ ಆಯಾ ಗ್ರಾಮ ಅಥವಾ ಪಟ್ಟಣದ ಒಂದೊಂದು ವಾರದ ಸಂತೆಯ ಸುಂಕ ವಾಗಿರುತ್ತಿತ್ತು. ಇದಲ್ಲದೆ ವಿವಿಧ ಪ್ರಕಾರದ ವರ್ತಕರು ಅನ್ಯವರ್ಗದ ವ್ಯಕ್ತಿಗಳು, ಸಂಘ-ಸಂಸ್ಥೆಗಳು ಕೂಡಿಕೊಂಡು ದೇವಾಲಯ, ದೇವಕಾರ್ಯಗಳಿಗಾಗಿ ಹಲವು ರೂಪದ ಧಾರ್ಮಿಕ ಕಾರ್ಯ ಮಾಡಿದ್ದಾರೆ. ಈ ವಿವಿಧ ಪ್ರಕಾರದ ವರ್ತಕರು ಗೌಡ ಪ್ರಭು ಊರೊಡೆಯ ಪ್ರಧಾನಿ ದಂಡನಾಯಕ ಮನ್ನೆಯ ಚಕ್ರವರ್ತಿ ಮಹಾಜನ ಪಂಚಮಠ ಎಂಟು ಹಿಟ್ಟು ಅರುವತ್ತೊಕ್ಕಲು - ಹೀಗೆ ಸಮಾಜದ ವಿವಿಧ ವರ್ಗದ ಜನ ಹಾಗೂ ಸಂಘಗಳೊಂದಿಗೆ ಕೂಡಿಕೊಂಡು ದಾನಕಾರ್ಯ ಪೂರೈಸಿದ ವಿಷಯ ಶಾಸನಗಳಿಂದ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಇವರೆಲ್ಲರೂ ಒಡಂಬಟ್ಟು, ಏಕಸ್ಥರಾಗಿ, ಧರ್ಮಕ್ಕನುಕೂಲವಾಗಿ ದತ್ತಿ ಕೊಟ್ಟಿರುವುದು ಕಂಡುಬರುತ್ತದೆ. ಇದರಿಂದ ವರ್ತಕರ ಧರ್ಮ ಸಮನ್ವಯತೆ, ಸಮಾಜದ ವಿಭಿನ್ನ ಜನ - ಸಂಘಗಳೊಂದಿಗೆ ಹೊಂದಿದ್ದ ಸಹಕಾರ ಭಾವಗಳು ವ್ಯಕ್ತವಾಗುತ್ತವೆ.

ಹೀಗೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವರ್ತಕರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದ್ದಾರೆ. ಈ ಧಾರ್ಮಿಕ ಕಾರ್ಯಗಳು ಸ್ವಮತಾಭಿಮಾನ ಹಾಗೂ ಪರಮತ ಪುರಸ್ಕಾರಗಳಿಂದ ಕೂಡಿದವುಗಳಾಗಿರುತ್ತವೆ. ವೈಯಕ್ತಿಕ ಧಾರ್ಮಿಕ ಕಾರ್ಯಗಳಿಗಿಂತ ಸಾಮೂಹಿಕ ಧಾರ್ಮಿಕ ಕಾರ್ಯಗಳೇ ಅಧಿಕವಾಗಿರುತ್ತವೆ. ಮತ, ವರ್ಗ, ವರ್ಣ, ವಯಸ್ಸುಗಳ ತಾರತಮ್ಯವಿಲ್ಲದೆ ಈ ವರ್ತಕರು ದೇವಾಲಯಗಳ ವಿವಿಧ ಕಾರ್ಯಗಳಿಗೆ ಅಧಿಕ ದತ್ತಿ ನೀಡಿದ್ದಾರೆ. ದೇವಾಲಯ ನಿರ್ಮಾಣ, ವಿಗ್ರಹ ಪ್ರತಿಷ್ಠಾಪನದಂಥ ಪುಣ್ಯ ಕಾರ್ಯ ಕೈಕೊಂಡಿದ್ದಾರೆ. ಇದರಿಂದ ವರ್ತಕರ ಧಾರ್ಮಿಕ ನಿಷ್ಠೆ, ಭಕ್ತಿ ಭಾವ, ತ್ಯಾಗಗುಣ, ಸಮಾಜದಲ್ಲಿ ಹೊಂದಿದ್ದ ಸ್ಥಾನವನ್ನು ತಿಳಿದುಕೊಳ್ಳಲು

ಸಾಧ್ಯವಾಗುತ್ತದೆ. ಧಾರ್ಮಿಕ ಕಾರ್ಯ ಪ್ರಸಂಗದಲ್ಲಿ ಕಂಡುಬರುವ ಇವರ ಸಂಘಟನೆ, ಒಲವು, ಒಗ್ಗಟ್ಟು, ಸಾಮೂಹಿಕ ಜವಾಬ್ದಾರಿ, ಸಾಮೂಹಿಕ-ಧಾರ್ಮಿಕ ಬದುಕು ನಿಜಕ್ಕೂ ಅನುಕರಣೀಯ.

ಪುಣ್ಯಕಾರ್ಯ, ಧಾರ್ಮಿಕ ಕಾರ್ಯಗಳನ್ನು ಪೂರೈಸುವುದು ಸಮಾಜದ ಆದ್ಯ ಕರ್ತವ್ಯವೆಂಬ ಭಾವನೆಯಿಂದ ಸಮಾಜದ ಪ್ರಧಾನ ಘಟಕವಾದ ವರ್ತಕರು ಕಾರ್ಯಪ್ರವೃತ್ತರಾದುದರಿಂದ ವೈದಿಕ, ಜೈನ-ಶೈವ ದೇವಾಲಯಗಳ ನಿರ್ಮಾಣ ; ದೀಪಮಾಲೆ ಕಂಬ, ಮಂಟಪ ಸುಕನಾಸಿ, ಮಠ-ಅನ್ನಛತ್ರ, ಕೆರೆ, ಜೀರ್ಣೋದ್ಧಾರ, ವಿಗ್ರಹ-ಲಿಂಗ ಪ್ರತಿಷ್ಠಾಪನದಂಥ ರಚನಾತ್ಮಕ ಕಾರ್ಯಗಳು ನಿರಂತರ ನಡೆದು ಬರುವಂತಾಯಿತು. ದೇವಾಲಯಗಳ ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವ ಚೈತ್ರ ಪರ್ವ ಪವಿತ್ರ ಪರ್ವ ದೀಪಾವಳಿ ಪರ್ವ ಪಂಚ ಪರ್ವ ನಂದಾದೀವಿಗೆ ಪೂಜೆ ಅಭಿಷೇಕ, ನೈವೇದ್ಯ, ಜೀರ್ಣೋದ್ಧಾರ ರಂಗಭೋಗ ರಥೋತ್ಸವ ಸ್ಥಾನಾಚಾರ್ಯ ತಪೋಧನ ವಿದ್ಯಾರ್ಥಿಗಳ ಉಚಿತ ಭೋಜನ ಪುರಾಣ ಮೊದಲಾದ ಮಂಗಲಕಾರ್ಯಗಳಿಗೂ ಕೆರೆ ಹೂದೂಟ ಸೂತ್ರಗಳೆಂಬ ಪುಣ್ಯ ಕೆಲಸಗಳಿಗೂ ಇವರು ಭೂಮಿ, ಹಣ, ಸುವರ್ಣ, ಸಂತೆಯ ಸುಂಕ, ಎಣ್ಣೆ, ಪ್ರಾಣ, ಪೂಜೋಪಕರಣ, ನಿವೇಶನ, ಅಂಗಡಿ, ಗ್ರಾಮ, ಧಾನ್ಯಗಳನ್ನು ತುಂಬುಹೃದಯದಿಂದ ಉದಾರ ಮನಸ್ಸಿನಿಂದ, ಮುಕ್ತ ಹಸ್ತದಿಂದ ದಾನ ಮಾಡಿದ್ದಾರೆ. ತಾವು ಮಾಡಿದ ಧಾರ್ಮಿಕ ಕಾರ್ಯಗಳಿಗೆ ಪೂಜ್ಯತೆ, ಸಾರ್ವಜನಿಕ ಮಾನ್ಯತೆ ಮತ್ತು ಜವಾಬ್ದಾರಿ ಸಂಪ್ರಾಪ್ತವಾಗಲು ಈ ವರ್ತಕರು ಸ್ಥಾನಾಚಾರ್ಯರ ಕಾಲಂ ಕರ್ಚಿ, ಮಹಾಜನರ ಪಾದಪೂಜೆ ಮಾಡಿ ದಾನ ನೀಡಿದ್ದಾರೆ. ವರ್ತಕರು ವ್ಯಕ್ತಿ, ಸತ್ರ ಕೆರೆ ಮೊದಲಾದವುಗಳಿಗೆ ನೀಡಿದ ದಾನಗಳಿಗಿಂತ ದೇವಾಲಯಗಳಿಗೆ ಅದರಲ್ಲಿಯೂ ಶೈವ ದೇವಾಲಯಗಳಿಗೆ ಮಾಡಿದ ಧಾರ್ಮಿಕ ಕಾರ್ಯಗಳೇ ಹೆಚ್ಚಾಗಿರುತ್ತವೆ. ಇವರು ಈ ಧಾರ್ಮಿಕ ಕಾರ್ಯಗಳನ್ನು ದಿನಂ ಪ್ರತಿ, ಪ್ರತಿತಿಂಗಳು, ವರ್ಷಂ ಪ್ರತಿಯಾಗಿ ನಡೆಸಿಕೊಂಡು ಬರುತ್ತಿದ್ದರು. ಒಟ್ಟಿನಲ್ಲಿ ಪ್ರಾಚೀನ ಕರ್ನಾಟಕದ ವರ್ತಕರು ಮಾಡಿದ ಧಾರ್ಮಿಕ ಕಾರ್ಯಗಳು ಕಳಶಪ್ರಾಯವಾದವುಗಳಾಗಿರುತ್ತವೆ. ಹೀಗೆ ಪ್ರಾಚೀನ ಕರ್ನಾಟಕದ ವಾಣಿಜ್ಯ ಚಟುವಟಿಕೆಗಳು, ಅವುಗಳ ಸ್ವರೂಪವನ್ನೂ ತಮ್ಮ ಭೌತಿಕ ಬದುಕಿಗಿಂತ ಧಾರ್ಮಿಕ ಬದುಕೇ ಶ್ರೇಷ್ಠವೆಂದು ಬಗೆದ ವರ್ತಕರ ಧಾರ್ಮಿಕ ಕಾರ್ಯಗಳನ್ನೂ ಇಲ್ಲಿ ಸ್ಥೂಲವಾಗಿ ಪರಿಚಯಿಸಲು ಪ್ರಯತ್ನಿಸಲಾಗಿದೆ.

ಧರ್ಮ ಮತ್ತು ಸಾಹಿತ್ಯ

ಡಾ|| ಪಿ. ವಿ. ನಾರಾಯಣ

'ಧರ್ಮ' ಎಂಬ ಶಬ್ದಕ್ಕೆ ನಿಘಂಟು ಹತ್ತಾರು ಅರ್ಥಗಳನ್ನು ನೀಡುತ್ತದೆ : ಆಚಾರ, ಸಂಪ್ರದಾಯ, ಪುಣ್ಯ, ಕರ್ತವ್ಯ, ಮತ, ರೀತಿ, ಕ್ರಮ-ಇನ್ನೂ ಅನೇಕವು. 'ಧಾರಣಾತ್ ಧರ್ಮಂ ಇತ್ಯಾಹುಃ' ಎಂದು ಮಹಾಭಾರತವು ಹೇಳಿದರೆ, 'ಧರ್ಮದಾಧರದಲ್ಲಿಹುದು ಜಗ' ಎಂಬುದು ಕುಮಾರವ್ಯಾಸನ ಮಾತು. ಇಡೀ ಜಗತ್ತಿಗೆ ಆಧಾರವಾದದ್ದೇ ಧರ್ಮ, ಎಂದರೆ ಪ್ರಾಕೃತಿಕ ವ್ಯವಸ್ಥೆ ಎಂಬರ್ಥ ಇಲ್ಲಿರುವಂತೆ ತೋರುತ್ತದೆ. 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ 'ಎಂಬ ಭಗವದ್ಗೀತೆಯ ಮಾತಿನಲ್ಲಿರುವ 'ಧರ್ಮ' ಶಬ್ದಕ್ಕೆ ಕರ್ತವ್ಯ ಎಂಬರ್ಥವನ್ನು ಹಿರಿಯರು ನೀಡುವುದನ್ನು ನಾವು ಕೇಳುತ್ತೇವೆ. ''ನಮ್ಮ ಸುತ್ತಮುತ್ತಲು ಇರುವುದು ಮನುಷ್ಯರು ಮಾತ್ರವೇ ಅಲ್ಲ-ಪಶುಪಕ್ಷಿಗಳು, ವನಸ್ಪತಿಗಳು; ಹೊಳೆ ಹಳ್ಳ ಬೆಟ್ಟ ಸಮುದ್ರಗಳು; ಮೇಲೆ ನೋಡಿದರೆ ಕಾಣುವ ಆಕಾಶ, ಅಲ್ಲಿ ತೇಲುವ ಬಿಳಿ ಕರಿ ಮೋಡಗಳು; ಮೋಡಗಳಾಚೆ ಆಗೀಗ ಗೋಚರಿಸುವ ವಿಶಾಲ ಆಕಾಶ ಆಕಾಶದಲ್ಲಿ ಸೂರ್ಯಚಂದ್ರರು, ಕೋಟಿ ಕೋಟಿ ನಕ್ಷತ್ರಗಳು ಇವೂ ಹೌದು. ಇವೆಲ್ಲ ಸೇರಿದರೆ ವಿಶ್ವ. ಈ ವಿಶ್ವದ ಒಂದು ಅಂಶ ಮಾನವ ಕುಲ; ಆ ಮಾನವ ಕುಲದ ಒಂದು ಎಸಳು ಪ್ರತ್ಯೇಕ ವ್ಯಕ್ತಿ. ಆದ ಕಾರಣ ಒಬ್ಬ ವ್ಯಕ್ತಿ ಈ ಎಲ್ಲದರ ಜೊತೆಯೂ ಸಾಂಗತ್ಯವನ್ನೇರ್ಪಡಿಸಿಕೊಂಡು ಅವುಗಳಲ್ಲಿ ಒಂದಾಗಿ ಬದುಕಲು ಸಾಧ್ಯವಾದರೆ ಮಾತ್ರ ಅವನ ಬದುಕು ಸಾರ್ಥಕ. ಈ ಹೊಂದುವಳಿಕೆಯ ಸೂತ್ರವೇ ಧರ್ಮ'' - ಎಂದು ಗೋಪಾಲಕೃಷ್ಣ ಅಡಿಗರು ಒಂದೆಡೆ ವಿವರಿಸುತ್ತಾರೆ.

ಆದರೆ 'ಧರ್ಮ'' ಪದವು ವ್ಯಾಪಕವಾಗಿ ಬಳಕೆಯಲ್ಲಿರುವುದು ಇಂಗ್ಲಿಷಿನ 'ರಿಲಿಜನ್' ಪದದ ಸುಮಾರು ಸಂವಾದಿಯಾಗಿ. ಅನೇಕರು ಧರ್ಮ ಬೇರೆ. ಮತ ಬೇರೆ ಎಂದು ವಿವರಿಸುತ್ತಾರೆ. ಹಾಗೆ ನೋಡಿದರೆ ನಮ್ಮ ಮನೋಭಾವಕ್ಕೆ ತಕ್ಕಂತೆ, ಆವಶ್ಯಕತೆಗೆ ತಕ್ಕಂತೆ ವಿವರಿಸಬಲ್ಲ ಶಬ್ದವಾಗಿರುವುದರಿಂದಲೇ, ಅದಕ್ಕಿಂತ ಹೆಚ್ಚಾಗಿ ಪರಿಕಲ್ಪನೆಯಾಗಿರುವುದರಿಂದಲೇ, 'ಧರ್ಮ'ವು ಗೊಂದಲವನ್ನುಂಟುಮಾಡಲು ಸಾಧ್ಯವಾಗುವುದು. ಹಿಂದೂಧರ್ಮ, ಜೈನಧರ್ಮ, ಕ್ರಿಶ್ಚಿಯನ್ ಧರ್ಮ ಎಂಬ ಮಾತುಗಳನ್ನು ಖಚಿತವಾಗಿ

ಅರ್ಥೈಸುವುದು ಹೇಗೆ ? ಈ ಎಲ್ಲದರ ನಡುವೆ ಇರುವ ವ್ಯತ್ಯಾಸವಾವುದು ? ಒಬ್ಬ ವ್ಯಕ್ತಿಯು ಜೈನನೋ, ಮುಸಲ್ಮಾನನೋ ಎಂದು ಗುರುತಿಸುವುದು ಯಾವ ಆಧಾರದ ಮೇಲೆ ? ಒಬ್ಬ ವ್ಯಕ್ತಿ ತಾನು ಸೇರಿದ್ದೇನೆಂದು ಭಾವಿಸುವ ಧರ್ಮದ ದಾರ್ಶನಿಕ ಅಂಶವನ್ನು ತಿಳಿದಿದ್ದಾನೆ ಎಂದೇ ? ಆ ಮತ ಅಥವಾ ಧರ್ಮದ ದೇವತಾ ರೂಪಗಳಲ್ಲಿ ನಂಬಿಕೆ ಹೊಂದಿ ಪೂಜಿಸುತ್ತಾನೆ ಎಂದೇ ? ಅದರ ಸಾಂಪ್ರದಾಯಿಕ ವಿಧಿಗಳನ್ನು ಅನುಸರಿಸುತ್ತಾನೆ ಎಂದೇ ? ತಾವು ಸೇರಿದ ಧರ್ಮದ ತಾತ್ವಿಕಾಂಶಗಳನ್ನು ತಿಳಿದವರು ಸಂಖ್ಯೆ ಯಾವುದರಲ್ಲೇ ಆಗಲಿ ಅತ್ಯಲ್ಪ ; ಬಹು ಮುಖ್ಯವಾಗಿ ಮತ್ತು ಎದ್ದು ಕಾಣುವ ಲಕ್ಷಣವೆಂದರೆ ಆಚಾರಗಳು; ಸಾಮಾನ್ಯರ ಅರ್ಥದಲ್ಲಿ ಒಬ್ಬನ ಧರ್ಮವನ್ನು ಗುರುತಿಸಲು ಅದೇ ಸಹಾಯಕ; ಮತ್ತು ಯಾವ ಧರ್ಮದವರೋ ಆ ತಾಯ್ತಂದೆಯರ ಮಗ.

ವಿಧಿ-ಸಂಪ್ರದಾಯ-ಪದ್ಧತಿಗಳ ಭಾಗದ ಧರ್ಮಕ್ಕೂ ಸಾಹಿತ್ಯಕ್ಕೂ ಇರುವ ಸಂಬಂಧವೆಂತಹುದು ? ಸಾಹಿತ್ಯವು ವ್ಯಕ್ತಿಯ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಅನುಭವಗಳನ್ನು ಅದರ ಸಾಂದ್ರವೂ ವಿಶಿಷ್ಟವೂ ಆದ ಸನ್ನಿವೇಶದಲ್ಲಿ ಸೆರೆ ಹಿಡಿಯುತ್ತದೆ. ವ್ಯಕ್ತಿ ಹಾಗೂ ಸಮಾಜಗಳ ನಡುವಣ ಸಂಬಂಧದ ಸ್ವರೂಪವನ್ನೇ ಈ ಆಚರಣೆ - ಸಂಪ್ರದಾಯಗಳು ನಿರ್ಧರಿಸುತ್ತವೆ. ಆ ಕಾರಣದಿಂದ ವ್ಯಕ್ತಿಯೊಬ್ಬ ಪಡೆಯುವ ಅನುಭವದ ಸ್ವರೂಪವೂ ಈ ಎರಡರ ಸಂಬಂಧದಿಂದ ನಿರ್ಧಾರಿತವಾಗುತ್ತದೆ. ಅಲ್ಲದೆ ವ್ಯಕ್ತಿಯು ಸಮಾಜದಲ್ಲಿ ಬದುಕಬೇಕಾದ ರೀತಿಯನ್ನು ಈ ವಿಧಿಗಳು ಆಚರಣೆಗಳು ನಿರ್ಬಂಧಿಸುತ್ತವೆ. ಸಾಹಿತ್ಯಕೃತಿಯೊಂದು ವ್ಯಕ್ತಿಯೊಬ್ಬನ ಜೀವನವನ್ನು ಚಿತ್ರಿಸುವ ವಿವರಗಳಲ್ಲಿ ಸಹಜವಾಗಿಯೇ ಇವೆಲ್ಲ ಚಿತ್ರಿತವಾಗುತ್ತವೆ. ಆದರೆ ಸಾಹಿತ್ಯದ ಬಹುಮುಖ ಕೆಲಸವೆಂದರೆ ಬದುಕಿನ ವಿವಿಧನೆಲೆಗಳ ಸಂಘರ್ಷವನ್ನು ಚಿತ್ರಿಸುವುದು ಅಥವಾ ಅಂಥ ಸಂಘರ್ಷದ ನೆಲೆಯಲ್ಲಿ ಬದುಕನ್ನು ಅರ್ಥೈಸಲು ಪ್ರಯತ್ನಿಸುವುದು. ಇಂಥ ಸಂದರ್ಭದಲ್ಲಿಯೇ ಸಾಹಿತ್ಯವು ದಟ್ಟ ರಚನೆಯಾಗುವುದು. ಕೃತಿಕಾರನೊಬ್ಬನಿಗೆ ಎರಡು ವ್ಯಕ್ತಿತ್ವಗಳಿರುತ್ತವೆ; ಅವನ ಸ್ವಂತ ಬದುಕಿನ ವ್ಯಕ್ತಿಗತಭಾಗ; ಹಾಗೂ ಪ್ರತಿಭಾತ್ಮಕ ಭಾಗ. ಮೊದಲನೆಯದು ಸೀಮಿತವಾದುದನ್ನಷ್ಟೇ ಸ್ವೀಕರಿಸುತ್ತದೆ. ಆದರೆ ಪ್ರತಿಭೆಯು ವ್ಯಕ್ತಿಮಿತಿಯಿಂದ ದೂರವಾಗಿ ಸಾರ್ವತ್ರಿಕತೆಯನ್ನು ಗುರುತಿಸುವ ಶಕ್ತಿಯನ್ನು ಹೊಂದಿರುತ್ತದೆ. ಈ ಕಾರಣದಿಂದ ಧರ್ಮ ಅಥವಾ ಮತಕ್ಕೆ ಸಂಬಂಧಿಸಿದಂತೆ ಅನೇಕ ವೇಳೆ ಒಬ್ಬನದೇ ಸಾಹಿತ್ಯದಲ್ಲಿ ವಿವಿಧತೆಯನ್ನು ಕಾಣಲು ಸಾಧ್ಯ. ಅಥವಾ ಈ ವೈವಿಧ್ಯಕ್ಕೆ ಕಾರಣ ಆಯಾ ಸನ್ನಿವೇಶವನ್ನು ಚಿತ್ರಿಸುವಾಗ ಮೇಲುಗೈಯಾಗುವ ಕವಿಯ ವ್ಯಕ್ತಿತ್ವದ ಭಾಗ. ಒಂದು ನಿದರ್ಶನವನ್ನು ತೆಗೆದುಕೊಳ್ಳೋಣ: ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಜಾತಿ-ಮತಗಳ ಬಗ್ಗೆ ಕವಿ ತಳೆಯುವ ಧೋರಣೆ. 'ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ ಮಾತೊ? ಜಿನೇಂದ್ರ ಧರ್ಮಮ ವಲಂ ದೊರೆ ಧರ್ಮದೊಳ್' ಎಂದು ಪ್ರಾರಂಭವಾಗಿ ತನ್ನ ತಂದೆಯು ಜೈನವನ್ನು ಆಶ್ರಯಿಸಿದ್ದರ

ಬಗ್ಗೆ ಹೇಳುತ್ತಾನೆ ಒಂದು ಪದ್ಯದಲ್ಲಿ. ಇಲ್ಲಿ ಬ್ರಾಹ್ಮಣ ಜಾತಿಯು ಜಾತಿಯಲ್ಲಿ ಶ್ರೇಷ್ಠವಾದರೂ ಧರ್ಮಗಳಲ್ಲಿ ಜೈನವು ಅತಿಶಯ ಎಂಬ ಭಾವನೆ ಕಂಡುಬರುತ್ತದೆ. ಈ ಭಾವನೆಯು ಅವನ ತಂದೆಯದಿರಬಹುದಾದರೂ ಪಂಪ ಅದಕ್ಕೆ ವ್ಯತಿರಿಕ್ತವಾದುದೇನನ್ನೂ ಇಲ್ಲಿ ಸೂಚಿಸುತ್ತಿಲ್ಲ. ಈ ಪದ್ಯವು ಕಾವ್ಯದ ಕೊನೆಯಲ್ಲಿ ಬಂದಿದೆ. ವ್ಯಕ್ತಿ ವಿಷಯ ವಿವರಣೆಯ ಸಂದರ್ಭದಲ್ಲಿ ಕವಿ ಈ ರೀತಿ ಹೇಳುತ್ತಾನೆ. ಇಲ್ಲಿ ಕಾವ್ಯವೇನಿಲ್ಲ; ಇಲ್ಲಿ ಜಾಗ್ರತವಾಗಿರುವುದು ಪಂಪನ ವ್ಯಕ್ತಿಗತ ಪ್ರಜ್ಞೆ. ಆದರೆ ಇದೇ ಕಾವ್ಯದ ಪ್ರಸಂಗವೊಂದರಲ್ಲಿ ಭೀಷ್ಮನಿಗೆ ಸೇನಾಪತಿ ಪಟ್ಟಕಟ್ಟುವ ಸನ್ನಿವೇಶದಲ್ಲಿ ಈ ಜಾತಿ ಬಗೆಗೆ ಗೋಚರವಾಗುವುದು ಬೇರೊಂದೇ ಧೋರಣೆ. ಭೀಷ್ಮನಂತಹ ಮುದಿಯನಿಗೆ ಪಟ್ಟಕಟ್ಟುವುದನ್ನು ಕರ್ಣ ವ್ಯಂಗ್ಯವಾಡುತ್ತಾನೆ. ಇದರಿಂದ ಕ್ರೋಧಗೊಂಡ ದ್ರೋಣರು 'ಕುಲಜ'ರನ್ನು ಹೀಗೆ ಹೀಗಳೆಯುವ ಕರ್ಣ ತನ್ನ ಜಾತಿಗೆ ತಕ್ಕಂತೆ ಮಾತಾಡುತ್ತಿದ್ದಾನೆ ಎಂದು ಕೆಣಕುತ್ತಾನೆ. ಆಗ ಕರ್ಣನು ಕುಲದ ಮಾತಿನಿಂದ ಕ್ರೋಧಗೊಂಡು 'ಕುಲಮನೆ ಮುನ್ನಮುಗ್ಗಡಿಪಿರೇಂಗಳ ನಿಮ್ಮ ಕುಲಂಗಳಾಂತು ಮಾರ್ಮಲೆವವನಟ್ಟಿ ತಿಂಬುವೆ ? ಕುಲಂ ಕುಲಮಲ್ತು ಚಲಂ ಕುಲಂ ಗುಣಂ ಕುಲಮಭಿಮಾನಮೊಂದೆ ಕುಲಂ' ಎಂದು ಗರ್ಜಿಸುತ್ತಾನೆ. ಇಲ್ಲಿ ಪಂಪನ ಪ್ರತಿಭಾತ್ಮಕ ವ್ಯಕ್ತಿತಕ್ಕೆ ಕುಲದಿಂದಾಗುವ ವ್ಯಕ್ತಿತ್ವಘಾತವು ಗೋಚರವಾಗುತ್ತದೆ. ಅದನ್ನು ಕಾವ್ಯದಲ್ಲಿ ಕುಲದಿಂದ ಗಾಸಿಗೊಂಡ ಪಾತ್ರದ ಮೂಲಕ ತೋಡಿಕೊಳ್ಳುತಾನೆ. ಅಂತೆಯೇ ಈಚಿನ ಕೃತಿಯೊಂದರ ನಿದರ್ಶನ ನೋಡೋಣ. ನಾನು ಪ್ರಸ್ತಾಪಿಸುತ್ತಿರುವುದು ಮಾಸ್ತಿಯವರ 'ಸುಬ್ಬಣ್ಣ'ದ ಬಗ್ಗೆ ನಾರಾಯಣ ಶಾಸ್ತ್ರಿಗಳು ದೊಡ್ಡ ಸಂಸ್ಕೃತ ವಿದ್ವಾಸರಾದರೂ, ಅವರ ಮಗ ಹಾಗಾಗಲಿಲ್ಲ. "ಸುಬ್ಬಣ್ಣ ತಂದೆಯಂತೆ ಸಂಸ್ಕೃತ ಕಲಿತು ಪಂಡಿತನಾಗಿದ್ದರೆ ಸುಬ್ರಹ್ಮಣ್ಯಶಾಸ್ತ್ರಿ ಎಂದು ಕರೆದುಕೊಳ್ಳಬಹುದಾಗಿತ್ತು ಅವನೂ ಪುರಾಣ ಹೇಳಬಹುದಾಗಿತ್ತು. ಆದರೆ ಅವನ ಮನಸ್ಸು ಸಂಸ್ಕೃತದ ಕಡೆಗೆ ಹೋಗಲಿಲ್ಲ; ಸಂಗೀತದ ಕಡೆಗೆ ಹೋಯಿತು. "ಸಂಗೀತದ ಅಭಿಲಾಷೆ ಬಲವಾದ ಹಾಗೆ ಸುಬ್ಬಣ್ಣ ಅದು ಎಲ್ಲಿ ನಡೆದರೆ ಅಲ್ಲಿ ಹೋಗುವುದಕ್ಕೆ ಮೊದಲು ಮಾಡಿದನು. ಅವನಿಗೆ ಕೊಂಚ ದಿನದಲ್ಲೇ ಮೈಸೂರಿನ ವಾರಸ್ತ್ರೀಯರ ಮನೆಗಳಿಗೆಲ್ಲ ಹೋಗಿ ಬರುವಂತೆ ದಾರಿಯಾಯಿತು." "ಸುಬ್ಬಣ್ಣನವರಿಗೆ ಗಾನದ ಮೂಲಕ ಸರ್ವತತ್ವವೂ ತಿಳಿದು ಹೋಗಿತ್ತು. ಇಂಥಾ ತಿಳಿವು ಇಂಥಾ ಸಾಧನ. ಈ ತಿಳಿವು ಸಾಧನದಿಂದ ಇಲ್ಲೂ ಇನ್ನೂ ಮೇಲೂ ಯಾವ ಅವಸ್ಥೆ ಬರಬಹುದೋ ಅದು ಮುಕ್ತಿಯಲ್ಲದಿದ್ದರೆ ಮುಕ್ತಿಯೆನ್ನುವುದು ಇನ್ನು ಬೇರೆ ಯಾವುದು?" ಇಡೀ ಈ ದೀರ್ಘ ನಿರೂಪಣೆಯಲ್ಲಿ ಲೇಖಕರ ಪ್ರತಿಭೆ ವಾರಸ್ತ್ರೀಯರ ಆಶ್ರಯದಲ್ಲಿದ್ದ ಸಂಗೀತವನ್ನು ಉಪಾಸಿಸಿದ (ಗೀರ್ವಾಣ ಮಾರ್ಗವಾದ ಸಂಸ್ಕೃತವನ್ನು ಬಿಟ್ಟು!) ಸುಬ್ಬಣ್ಣನ ಬಗ್ಗೆ ಸಹಾನುಭೂತಿ ಪರವಾಗಿದೆ, ಗೌರವ ಸಲ್ಲಿಸುತ್ತದೆ. ಸಂಪ್ರದಾಯಸ್ಥರಾದ ಮಾಸ್ತಿಯವರ ವ್ಯಕ್ತಿಗತ ಪ್ರಜ್ಞೆ ಹೀಗೆ ನಡೆಯುತ್ತಿತ್ತೋ ಇಲ್ಲವೋ ! ಹಾಗೇ ದೇವರು-ದಿಂಡರುಗಳಲ್ಲಿ ಅಪಾರ ವಿಶ್ವಾಸವಿಟ್ಟಿದ್ದ, ಸಂಪ್ರದಾಯಗಳನ್ನೆಂದೂ

ಅಷ್ಟಾಗಿ ಪ್ರತಿಭಟಿಸದ ಬೇಂದ್ರೆಯವರು ಅನೇಕ ಪದ್ಯಗಳಲ್ಲಿ - ಧಾರ್ಮಿಕ ಸಂಪ್ರದಾಯಗಳು ವ್ಯಕ್ತಿ ಜೀವನವನ್ನು ಹಾಳುಗೆಡಹುವ ಸನ್ನಿವೇಶಗಳಲ್ಲಿ ಅವುಗಳ ಬಗ್ಗೆ ಕ್ರೋಧವೇ ವ್ಯಕ್ತವಾಗುತ್ತದೆ. 'ಪುಟ್ಟವಿಧವೆ', 'ಮನುವಿನ ಮಕ್ಕಳು' ಇತ್ಯಾದಿ ಕವನಗಳನ್ನು ನೋಡಬಹುದು. ನರಬಲಿಯಾಗುತ್ತಿದ್ದರೂ ಏನೂ ಮಾಡದ ದೇವರ ಬಗೆಗಿನ ಅವರ ಆಕ್ರೋಶ ಸಿಡಿಲಿನಂತಹದು:"ಅಮರರೆಂಬುವರು ಕೊಳೆಯದ ಹೆಣಗಳೊ ? ಮುಚ್ಚದ ಕಣ್ಣುಳು ಮುಚ್ಚಿದ ಕಣ್ಣುಳೊ?" ಇತ್ಯಾದಿ

ನಿದರ್ಶನಗಳ ಮೂಲಕ ಇಲ್ಲಿ ನಾನು ಗುರುತಿಸುತ್ತಿರುವುದು ಸಾಹಿತ್ಯವು ಈ ಧಾರ್ಮಿಕ ನಿಧಿಗಳನ್ನು ನೋಡುವ ಬಗೆಯನ್ನು ಆಗಲೇ ಶ್ರುತ ಪಡಿಸಿದಂತೆ ಸಾಹಿತ್ಯ ವು ಪ್ರತಿಭಾಚಕ್ಷುವಿನ ನೋಟದಿಂದ ಕೂಡಿರುವ ಕಾರಣ ಅದಕ್ಕೆ ಗೋಚರವಾಗುವುದು ಸಾರ್ವತ್ರಿಕ ಅಂಶಗಳು. ಹಾಗಾಗಿಯೇ ವೈಯಕ್ತಿಕ ನಂಬಿಕೆಗೆ ವಿರುದ್ಧವಾದ ನಿಲವುಗಳೂ ಬರಹಗಾರನೊಬ್ಬನ ಕೃತಿಯಲ್ಲಿ ಕಾಣಬಹುದು. ಪ್ರಾಯಶಃ ಇದನ್ನೇ ಏನೋ ಟಿ. ಎಸ್. ಎಲಿಯಟ್ 'ಎಸ್ಕೇಪ್ ಫ್ರಂ ಪರ್ಸನಾಲಿಟಿ'' ಎಂದು ಕರೆದದ್ದು. ಈ ಸಾರ್ವತ್ರಿಕತೆ ಯಾವುದು ? ಅದು ಪ್ರಾಯಶಃ ಮಾನವೀಯತೆ. ಮನುಷ್ಯನ ಸಹಜ ಪ್ರವೃತ್ತಿಯನ್ನು ಕೊಲ್ಲುವ ಸಂಪ್ರದಾಯಗಳೆಂಬ ಕಡಿವಾಣಗಳ ವಿರುದ್ಧ ಕವಿಪ್ರತಿಭೆ ಪ್ರತಿಭಟಿಸುತ್ತದೆ; ಕೆಲವು ವೇಳೆ ಬಹು ಮೃದುವಾಗಿ, ಮಾರ್ಮಿಕವಾಗಿ; ಕೆಲವು ವೇಳೆ ಗಟ್ಟಿಯಾಗಿ, ಕ್ರೋಧದಿಂದ, ಕನಕದಾಸನ 'ರಾಮಧ್ಯಾನಚರಿತೆ ಕಾವ್ಯವನ್ನು ಪರಿಶೀಲಿಸಿ. ರಾಮನ ಸನ್ನಿಧಿಯಲ್ಲಿ ಎಲ್ಲವೂ ನಡೆದರೂ ಬತ್ತ-ರಾಗಿಗಳ ಮೂಲಕ ಮೇಲುವರ್ಗ ಕೆಳವರ್ಗಗಳ ನಡುವಣ ಸಂಘರ್ಷವೇ ಅಲ್ಲಿನ ಪ್ರಧಾನ ಆಶಯ. ಕನಕದಾಸನ ಪೂರ್ವ ಜೀವನದ ಸ್ವರೂಪವೇನೋ ತಿಳಿಯದು. ಅವನು ಕುರುಬನೇ, ಬೇಡನೇ, ಪಾಳೆಯಗಾರನೇ ತಿಳಿಯದು. ಆದರೆ ಕನಕದಾಸ (ಅದು ಅವನ ಹುಟ್ಟು ಹೆಸರಂತೂ ಅಲ್ಲ) ಕೆಳವರ್ಗದಿಂದ ಬಂದಿರುವುದು ಬಹುತೇಕ ಖಚಿತ. 'ಕನಕನ ಕಿಂಡಿ'ಯ ಕತೆಯೂ ಇದನ್ನೇ ಪುಷ್ಟೀಕರಿಸುತ್ತದೆ. ಪಂಚ ತಾರತಮ್ಯಗಳಲ್ಲಿ ನಂಬಿಕೆಯಿಟ್ಟ ದ್ವೈತಿಗಳ ನಡುವೆ ಆತ ಅಬ್ರಾಹ್ಮಣನಾಗಿ ಪಟ್ಟ ಪಾಡುಗಳೆಷ್ಟೋ! ವ್ಯಾಸರಾಯರ ಶಿಷ್ಯನಾಗಿ ಸಹಪಾಠಿಗಳಿಂದ ಶೂದ್ರನಾಗಿದ್ದುದಕ್ಕಾಗಿ ಅವನು ಅನುಭವಿಸಿದ ಕಷ್ಟಗಳ ಕತೆಗಳೂ ಇವೆಯಲ್ಲ. ಹೀಗಾಗಿ ಅವನ ವ್ಯಕ್ತಿಗತ ಜೀವನದ ಗಾಸಿಯನ್ನು ಹಿನ್ನೆಲೆಯಲ್ಲಿರಿಸಿಕೊಂಡ ಅವನ ಕಾವ್ಯ ಪ್ರತಿಭೆ ಪ್ರತಿಮಾತ್ಮಕವಾಗಿ ಕೆಳವರ್ಗದವರ ನೋವನ್ನು, ತಾವು ಕೀಳಲ್ಲವೆಂಬ ಆತ್ಮಪ್ರತ್ಯಯವನ್ನು ರಾಮನಿಂದ ಮಾನ್ಯತೆ ಪಡೆದ ರಾಗಿಯ ಹಿರಿಮೆಯ ಮೂಲಕ ಪ್ರಚುರಪಡಿಸುತ್ತಿದೆ ! ಮಾನವೀಯತೆಗೆ ವಿರುದ್ಧವಾದುದರ ಬಗ್ಗೆ ಪ್ರತಿಭಟನೆಯೇ ಪ್ರಾಯಶಃ ಸೃಜನಶೀಲ ಸಾಹಿತ್ಯ ಎಲ್ಲ ಸಂದರ್ಭಗಳಲ್ಲೂ ತೋರ್ಪಡಿಸಿಕೊಳ್ಳುತ್ತ ಬಂದಿರುವ ಮನೋಭಾವ ಎನ್ನಿಸುತ್ತದೆ.

ವಚನಕಾರರ ಧ್ವನಿ ಕನಕದಾಸನ ಹಾಗೆ ಮಿದುವಾಗಿಲ್ಲ. ಧಾರ್ಮಿಕಾಚರಣೆಯ ಪ್ರತೀಕಗಳ ಮೂಲಕವೇ ಕೆಲವು ವಚನಗಳು ಅವುಗಳಲ್ಲಿ ಅಂತರ್ಗತವಾದ ಮಾನವಿರೋಧಿ

ಧೋರಣೆಯನ್ನು ಹೀಗಳೆಯುತ್ತವೆ. 'ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೆ ಹೋತೇ, ಅಳು ಕಂಡಾ. ವೇದವನೋದದವರ ಮುಂದೆ ಅಳುಕಂಡಾ, ಶಾಸ್ತ್ರವ ನೋಡಿದವರ ಮುಂದೆ ಅಳು ಕಂಡಾ. ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ' ಎಂಬ ವಚನವನ್ನು ನೋಡಿ. ಅಳುತ್ತಿರುವ ಹೋತ ಹಾಗೆ ಮಾಡುತ್ತಿರುವುದು ಯಾರ ಮುಂದೆ ? ವೇದ ಶಾಸ್ತ್ರಗಳನ್ನು ಓದಿದವರ ಮುಂದೆ ! ಇಂಥ ಶಾಸ್ತ್ರವೇತ್ತರು ಆಚರಣೆ ವಿಧಿನಿಯಮಗಳ ಕಗ್ಗಾಡಿನಲ್ಲಿ ಮಾನವೀಯತೆಯನ್ನು ಮರೆಯುವ ರಾಕ್ಷಸರಾಗುತ್ತಾರೆಂಬ ಕ್ರೋಧ ಇಲ್ಲಿದೆ. ತನ್ನ ಚಿಕ್ಕಂದಿನಲ್ಲಿ ಬ್ರಾಹ್ಮಣ ಹಿನ್ನೆಲೆಯ ಕಾರಣದಿಂದಾಗಿ ಯಜ್ಞಯಾಗಾದಿ ಆಚರಣೆಗಳ ನೇರ ಪರಿಚಯವಿದ್ದ ಬಸವಣ್ಣನಿಗೆ ಅವುಗಳಲ್ಲಿನ ಅಮಾನವೀಯತೆಯಿಂದಾಗಿ ಸಾಮಾಜಿಕ ಕ್ರೌರ್ಯವನ್ನು ಸಂಕೇತಿಸಲು ಅವು ಸಮರ್ಥ ರೂಪಕಗಳಾದವು. ಮೋಕ್ಷದಾಯಿಯಾಗುವ ಆಶಯ ಹೊತ್ತ ಯಜ್ಞ ಕ್ರೌರ್ಯದ ಸಂಕೇತವಾಗುತ್ತದೆ. ಗೋಪಾಲಕೃಷ್ಣ ಅಡಿಗರು 'ಸುಲಿಗೆಯೆಂಬ ಯಾಗ' ಎಂಬ ಹೆಸರಿನ ಕವನವನ್ನು ಬರೆದಿದ್ದಾರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸೃಜನಶೀಲ ಬರಹಗಾರರು ಧಾರ್ಮಿಕ ವ್ಯಕ್ತಿಗಳ ಬಗ್ಗೆ ಗೌರವ ಭಕ್ತಿಗಳನ್ನು ಹೊಂದಿರಬಹುದು. ಅಂಥವರು ಪೌರಾಣಿಕ ವ್ಯಕ್ತಿಗಳಾಗಬಹುದು, ಐತಿಹಾಸಿಕ ವ್ಯಕ್ತಿಗಳಾಗಿರಬಹುದು. ಅಂಥವರ ಬಗ್ಗೆಯೇ ಕೃತಿಗಳನ್ನವರು ರಚಿಸಬಹುದು. ಇಂಥವುಗಳಲ್ಲಿ ಯಾವುವು ಶ್ರೇಷ್ಠ ರಚನೆಗಳಾಗುತ್ತವೆ ಅಥವಾ ಯಾವ ಭಾಗ ಕಾವ್ಯಮಯತೆಯಿಂದ ಕೂಡಿರುತ್ತದೆ ? ಪಂಪನಿಂದಲೇ ಆರಂಭಿಸೋಣ. 'ವಿಕ್ರಮಾರ್ಜುನ ವಿಜಯ'ದ ಕೊನೆಯಲ್ಲಿನ ಸ್ವವಿಷಯನಿರೂಪಣೆಯ ಮಧ್ಯೆ 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ, ಸಮಸ್ತ ಭೂತಳಕೆ ಸಮಸ್ತಭಾರತಮುಮಾದಿ ಪುರಾಣಮುಮೆಂದು ... ಬಣ್ಣಿಸಿದಂ ಕವಿತಾ ಗುಣಾರ್ಣವಂ' ಎಂದು ಆತ ಹೇಳಿಕೊಳ್ಳುತ್ತಾನೆ. ತನ್ನ ಭಾರತಕಾವ್ಯ ಲೌಕಿಕ; ಆದಿಪುರಾಣ ಜಿನಾಗಮ ಕಾವ್ಯ ಎಂಬ ವಿಂಗಡಣೆಯನ್ನು ಆತನೇ ಮಾಡಿಕೊಳ್ಳುತ್ತಾನೆ. ಧರ್ಮವಿಷಯವಾದ ಅಥವಾ ಜಿನಾಗಮವನ್ನು ಬೆಳಗುವ ಆಶಯವುಳ್ಳ ಆದಿಪುರಾಣ ಎಂತಹ ಕಾವ್ಯವಾಗಿದೆ ? ಕವಿಯಾಗಿ ಅಲ್ಲಿ ಕಾಣುವ ಪಂಪನ ಸ್ಥಿತಿಯನ್ನು ಕೈಕಟ್ಟಿಸಿಕೊಂಡು ಕುಸ್ತಿಯಾಡಬೇಕಾದ ಮಲ್ಲನದು ಎಂದು ತೀ. ನಂ. ಶ್ರೀ. ವರ್ಣಿಸಿದ್ದಾರೆ. ಅಂದರೆ ಪುರಾಣದ ರಚನೆಯೆಂದರೆ ಧರ್ಮದ ಹಾಗೆಯೇ ಕಟ್ಟುಪಾಡುಗಳಿಂದ ಕೂಡಿರುವಂಥದು. ಆದರೆ ಅಂಥಲ್ಲಿಯೂ ಪಂಪನ ಪ್ರತಿಭೆ ಕೆಲವು ಕಡೆ ಮಿಂಚಿದೆ. ಶ್ರೀಮತಿ-ವಜ್ರ ಜಂಘರ ಪ್ರಣಯದ ತೀವ್ರತೆಯಲ್ಲಿ. ನೀಲಾಂಜನೆಯ ನೃತ್ಯಪ್ರಸಂಗದಲ್ಲಿ ಧುತ್ತನೆ ಸಾವು ಸುಳಿಯುವ ರೀತಿಯಲ್ಲಿ, ಹೆಮ್ಮೆಯಿಂದ ಪ್ರಾರಂಭವಾದರೂ ಹೆಮ್ಮರವಾಗಿ ಕ್ಷಣಾರ್ಧದಲ್ಲಿ ಬೆಳೆದುಬಿಡುವ ಬಾಹುಬಲಿಯ ವ್ಯಕ್ತಿತ್ವ ಚಿತ್ರಣದಲ್ಲಿ ಏಕೆಂದರೆ ಈ ಪ್ರಸಂಗಗಳು ಹೀಗೆಯೇ ನಿರೂಪಣೆಗೊಳ್ಳಬೇಕೆಂಬ ನಿರ್ಬಂಧಗಳಿಂದ ಮುಕ್ತವಾಗಿವೆ.

ಪುರಾಣದ ಸ್ತರದಿಂದ ದೂರವುಳಿದ ಹರಿಹರನ ಚಿತ್ರಣಗಳನ್ನು ನೋಡೋಣ. 'ಬಸವರಾಜದೇವರ ರಗಳೆ'ಯ ಬಸವಣ್ಣನಾಗಲೀ, 'ಪ್ರಭು ದೇವರ ರಗಳೆ'ಯ ಪ್ರಭುವಾಗಲೀ. ನಮ್ಮ ಕಣ್ಣು ಸೆಳೆಯುವುದು ತಮ್ಮ ಮಾನವೀಯಗುಣಗಳಿಂದಲೇ. ಬಸವಣ್ಣನು ಕೆಲವು ಪವಾಡಗಳನ್ನು ಎಸಗಬಹುದು. ಆದರೆ ಅವುಗಳನ್ನು ಯಥಾವತ್ತಾಗಿ ನಾವು ನಂಬ ಬೇಕಾಗಿಲ್ಲ. ಪವಾಡಗಳಿದ್ದೂ 'ಬಸವರಾಜ ದೇವರ ರಗಳೆ' ಕಾವ್ಯವಾಗಿದೆ : ಅದೇ ಭೀಮಕವಿಯದು (ಅಥವಾ ಮೂಲ ತೆಲುಗಿನ ಪಾಲ್ಕುರಿಕೆ ಸೋಮನಾಥನದು) ಪುರಾಣವಾಗಿದೆ. ಯಾಕೆ ? ಹರಿಹರ ಪವಾಡಗಳನ್ನು ಕಾವ್ಯ ಪ್ರತಿಮೆಗಳನ್ನಾಗಿಸುತ್ತಾನೆ, ಆ ಮೂಲಕವೇ ಬಸವಣ್ಣನ ಮಾನವೀಯ ಮುಖವನ್ನು ಓದುಗರ ಎದೆವುಗಿಸುತ್ತಾನೆ. ತನಗೆ ಮೋಸಮಾಡಲು ಬಂದವರು ಎದೆಯ ಬಳಿ ಕಟ್ಟಿಕೊಂಡಿದ್ದ ಬದನೆಕಾಯಿಗಳು ಬಸವಣ್ಣನಿಂದಾಗಿ ಲಿಂಗಗಳಾದವು; ಎಂದರೆ ಬಸವಣ್ಣನಿಂದಾಗಿ ಅವರ ಎದೆಗಳಲ್ಲಿ ಲಿಂಗಪ್ರೀತಿ ಉಂಟಾಯಿತು. ಈ ತನ್ನನ್ನು ಕಾಣಲು ಬಂದ ಜಂಗಮರು ಕಾಣಲಾರದೇ ಹೋದಾಗ ಅವರ ಹಿಂದೆ ಬಸವಣ್ಣನ ಪ್ರಾಣವೂ ಹೋಯಿತೆಂಬ ಮೂಲಕ ಅವನ ಜಂಗಮಪ್ರೀತಿಯು ವ್ಯಕ್ತವಾಗುತ್ತದೆ; ಹೀಗೇ ಬೇರೆಯವು, ಆದರೆ ಪುರಾಣಗಳಲ್ಲಿ ಬಸವಣ್ಣನ ನಿಜ ವ್ಯಕ್ತಿತ್ವ ಪವಾಡಗಳ ಹಾರಗಳ ರಾಶಿಯಲ್ಲಿ ಹುಗಿದುಹೋಗುತ್ತದೆ. ಹಾಗೆಯೇ ಪ್ರಭುದೇವನ ವ್ಯಕ್ತಿತ್ವ ಇಹದಿಂದ ಪರದೆಡೆಗೆ ಸೆಳೆಯಲ್ಪಟ್ಟ ಸನ್ನಿವೇಶದ ನಿರ್ವಹಣೆ. ನೆಲದಲ್ಲಿ ಹುದುಗಿದ್ದ ದೇವಾಲಯವೊಂದರ ಗೋಪುರಕಳಶದ ತುದಿಯನ್ನು ಆಕಸ್ಮಾತ್ತಾಗಿ ಕಂಡು ಅವನ ಕುತೂಹಲ ಕೆರಳಿ ಅವನ ಧಾತುವನ್ನೇ ಮಾರ್ಪಡಿಸಿದ ಪ್ರಸಂಗ, ಇದಕ್ಕಿಂತ ಸುಂದರವಾಗಿ ವ್ಯಕ್ತಿತ್ವದ ಮಾರ್ಪಾಟಿನ ಚಿತ್ರ ಅಸಾಧ್ಯ. ಅಲ್ಲಮನಲ್ಲಂತೂ ಪವಾಡಗಳೇ ಇಲ್ಲ. ಆದರೆ ಅದೇ ಚಾಮರಸನ 'ಪ್ರಭುಲಿಂಗಲೀಲೆ' ಅಲ್ಲಮನನ್ನು ಚಿತ್ರಿಸುವ ರೀತಿ ಪೂರ್ತಿ ಪ್ರತಿಮಾತ್ಮಕ. ಹರಿಹರನ ಮೇಲಿನ ಸನ್ನಿವೇಶದಂತಹ ತೀವ್ರರಸಘಟ್ಟ ಚಾಮರಸನಲ್ಲಿ ಇಲ್ಲ. ಅವನು ಇತರ ಪುರಾಣಕಾರರಿಗಿಂತ ಉತ್ತಮ ಕವಿಯಾದರೂ ಹರಿಹರ ಚಿತ್ರಿಸುವ ಸಂಘರ್ಷ ಅವನಲ್ಲಿಲ್ಲ. ಹರಿಹರನ ಕಾವ್ಯಮಾರ್ಗವನ್ನು ಮುಂದಿನ (ವೀರಶೈವ) ಕವಿಗಳು ಅನುಸರಿಸಲಿಲ್ಲ; ಆದಕ್ಕೆ ಅವನ ಕಾವ್ಯಗಳಂತಹ ರಚನೆಗಳು ಮುಂದೆ ಬರಲಿಲ್ಲ. ಆ ಮಾತು ಹಾಗಿರಲಿ. ತಮ್ಮ ಕಾವ್ಯನಾಯಕರಾದ ಧಾರ್ಮಿಕ ಪುರುಷರು ಈ ಕಾವ್ಯಗಳಲ್ಲಿ ನಮಗೆ ಹತ್ತಿರವಾಗುವುದು ಯಾವ ಕಾರಣದಿಂದ ? ಅವರು ನಾವು ಕಾಣದಿರುವ ಆಧ್ಯಾತ್ಮಿಕ ಶಿಖರಗಳನ್ನೇರಿದವರು ಎಂಬುದರಿಂದ ಭಕ್ತಿಯುಕ್ಕಬಹುದು; ಆದರೆ ಅವರು ಆತ್ಮೀಯರಾಗುವುದು ಅವರ ಮಾನವೀಯತೆಯಿಂದಲೇ. ಬಸವಣ್ಣ, ಮಹಾದೇವಿಯಕ್ಕರಾಗುವುದು ಹೀಗೆ. ಪವಾಡಗಳಾದರೂ ಸಂಕೇತಿಸುವುದು ಏನನ್ನು ? ಮಾನವೀಯ ಗುಣವನ್ನೇ ಅಲ್ಲವೇ ? ಏಸುಕ್ರಿಸ್ತ ಕುಷ್ಠರೋಗವನ್ನು ವಾಸಿಮಾಡಿದ, ಎರಡು ರೊಟ್ಟಿಗಳಿಂದಲೇ ಹಲವಾರು ಹಸಿವನ್ನು ಹಿಂಗಿಸಿದ ಪವಾಡಗಳು ಆ ಜನರ ರೋಗ ಹಸಿವುಗಳ ನಿವಾರಣೆಗೆ ಮಾಡಿದ

ಪ್ರಯತ್ನಗಳನ್ನೇ ಅಲ್ಲವೇ ತಮ್ಮ ಬಸಿರಲ್ಲಿ ಹುದುಗಿಸಿಟ್ಟುಕೊಂಡಿರುವುದು. ಬೇಂದ್ರೆಯವರು ಚಿತ್ರಿಸುವ ಬುದ್ಧ ಜಗವೆಲ್ಲ ಮಲಗಿರುವಾಗ ತಾನು ಎದ್ದು, ಚಂದ್ರಸೂರ್ಯಲೋಕಗಳನ್ನೆಲ್ಲ ಮೀರಿ ಮೇಲೇರಿ ಹೋಗುತ್ತಾನೆ. ಅಲ್ಲಿಂದ ಭೂಮಿಯೆಡೆ ನೋಡಿದಾಗ, ಜಗತ್ತು ಇದ್ದಹಾಗೇ ಇದ್ದುದನ್ನು ಕಂಡು, ತಾನು ಮಾಡಿದ್ದೇನು ಎಂದು ಆಶ್ಚರ್ಯಗೊಂಡು ಮತ್ತೆ ಇಲ್ಲಿಗೇ ಬರುತ್ತಾನೆ. ಇಂಥ ಧಾರ್ಮಿಕ ಮೇರುಪರ್ವತಗಳಲ್ಲಿ ಕವಿಗಳು ಕಾಣುವುದು ಅವರ ಹೃದಯಗಳಲ್ಲಿನ ಆರ್ದ್ರತೆಯನ್ನು, ಮಾನವ ಪ್ರೀತಿಯನ್ನು, ಜೀವಪರತೆಯನ್ನು.

ಮತ ಧರ್ಮಗಳ ಮತ್ತೊಂದು ನೆಲೆಯೆಂದರೆ ತಾತ್ವಿಕತೆ, ದರ್ಶನಗಳದ್ದು. ವಿಶ್ವದ ರಚನೆ, ದೈವಸ್ವರೂಪ ಜೀವ-ದೇವ ಸಂಬಂಧಗಳಂಥ, ಅಥವಾ ಹುಟ್ಟು-ಸಾವು-ಜನ್ಮಗಳಂತಹ ಪಾರಭೌತಿಕ ವಿಷಯಗಳಿಗೆ ಸಂಬಂಧಿಸಿದ ನಂಬಿಕೆಗಳು. ಬಹುತೇಕ ಮನುಷ್ಯನ ನಂಬಿಕೆಗಳು ಧರ್ಮದ ಆವರಣದಿಂದ ವ್ಯಕ್ತಿಗೆ ಇಳಿದು ಬಂದಿರುವಂತಹವು; ಅಥವಾ ವ್ಯಕ್ತಿ ಸಮುದಾಯದ ನಂಬಿಕೆಗಳೇ ಧಾರ್ಮಿಕ ನಂಬಿಕೆಗಳಾಗುವದು. ಹಾಗಾಗಿ ಯಾವ ದೇಶದ, ಯಾವ ಕಾಲದ ಜನರೇ ಆಗಲಿ ನಂಬಿಕೆಗಳನ್ನು ಬಿಟ್ಟು ಇರಲಾರರು. ಏಕೆಂದರೆ ಬದುಕಿನಲ್ಲಿ ಕಾಣುವುದಕ್ಕಿಂತ ಕಾಣದುದೇ ಹೆಚ್ಚಾಗಿದೆ. ವ್ಯಕ್ತಿಗಳಾಗಿ ಕೆಲವರು ಬಹುಸಂಖ್ಯಾತ ಜನರ ನಂಬಿಕೆಗಳನ್ನು ಒಪ್ಪದಿರಬಹುದು. ಒಬ್ಬ ಇಂಗ್ಲಿಷ್ ಪ್ರಬಂಧಕಾರ ಹೇಳುತ್ತಾನೆ : 'I have no belief in beliefs' ಎಂದು ! ನಂಬದಿರುವುದೂ ನಂಬಿಕೆಯ ಇನ್ನೊಂದು ಮುಖ, ಲೋಕಾಯತ, ಚಾರ್ವಾಕ ದರ್ಶನಗಳಿರಲಿಲ್ಲವೇ ? ಬದುಕಿನಲ್ಲಿರುವಂತೆ ಸಾಹಿತ್ಯದಲ್ಲಿಯೂ ಈ ತಾತ್ವಿಕ ಸಂಘರ್ಷಗಳಿರಬಹುದು. ಆ ಕಾರಣಕ್ಕಾಗಿ ಹೊಸ ಸಾಹಿತ್ಯ ಚಳವಳಿಯೇ ಹುಟ್ಟಬಹುದು. ಪಾಶ್ಚಾತ್ಯರಲ್ಲಿನ ಅಸ್ತಿತ್ವವಾದ (ವಿಶೇಷವಾಗಿ ನಾಸ್ತಿಕ ಅಸ್ತಿತ್ವವಾದ) ದ ಕಾರಣದಿಂದಾಗಿ ಅಸಂಗತ ಸಾಹಿತ್ಯ ಚಳುವಳಿ ರೂಪಿತವಾಯಿತು. ತಮ್ಮ ಪರಂಪರಾಗತ ನಂಬಿಕೆಗಳನ್ನು ಬರಹದಲ್ಲಿ ಮೂಡಿಸಿದರೆ, ಅದಕ್ಕೆ ಸಾಮುದಾಯಿಕ ನಂಬಿಕೆಯನ್ನು ಅನುಭವದ ನೆಲೆಗಟ್ಟಿನ ಮೇಲೆ ಮಾಡಿ ಸಾಹಿತ್ಯವೆನಿಸಿಕೊಳ್ಳಬಹುದು. ಪಂಪನ 'ಆದಿಪುರಾಣ'ದಲ್ಲಿ ವಿಶೇಷವಾಗಿ ಜೈನ ಸಮುದಾಯದ ಲೋಕೋತ್ತರ ವಿಷಯಗಳ ನಂಬಿಕೆಯ ಪ್ರತಿಪಾದನೆ ಋಷಭನಾಥನ ಜೀವನ (ಭವಾವಳಿ) ಚಿತ್ರಣದ ಮೂಲಕ ಕಾಣಿಸಿಕೊಂಡಿದೆ. ಪಂಪನ ವೈಯಕ್ತಿಕ ನಂಬಿಕೆ ಒಟ್ಟು ಸಾಮುದಾಯಿಕ ನಂಬಿಕೆಯಲ್ಲಿ ಲೀನವಾಗಿದೆ. ಆದರೆ ಕುಮಾರವ್ಯಾಸ ಮಹಾಭಾರತವನ್ನು ಕನ್ನಡದಲ್ಲಿ ಪುನರುಚಿಸಿ, ಆ ಕತೆಯೆಂದರೆ ಒಟ್ಟು ಜೀವದ ವಿವಿಧ ಸ್ವರೂಪ ಆಕಾರಗಳ ಕತೆ, ಅದು ನಡೆಯುವುದು ಕೃಷ್ಣ ಶಕ್ತಿಯ ಸಂಕಲ್ಪದಿಂದ ಇಲ್ಲಿನ ಜೀವಿಗಳು ನಡೆದುಕೊಳ್ಳುವುದು ಕೇವಲ ಸೂತ್ರದ ಗೊಂಬೆಗಳಂತೆ 'ಅವನು' ಆಡಿಸಿದಂತೆ ಎಂಬ ಸಾಂಕೇತಿಕತೆಯನ್ನು ಒದಗಿಸಿದ. ದುರ್ಯೋಧನನು ಕೂಡ ವಿಶ್ವದ ಪ್ರದರ್ಶನಕ್ಕೆ ಮುಂಚೆಯೇ ಕೃಷ್ಣನನ್ನು ಪಾಂಡವ ದೂತನಾಗಿ ಎದುರಿಸಿದಾಗಲೇ, ತನಗೂ ಕೃಷ್ಣನ

ನಿಜಸ್ವರೂಪದ ಅರಿವಿರುವುದಾಗಿ ಹೇಳುತ್ತಾನೆ; ಮೂರಡಿ ಭೂಮಿಯನ್ನು ಬಲಿಯಿಂದ ಬೇಡಿ ಅವನನ್ನು ಪಾತಾಳಕ್ಕೆ ತುಳಿದವನು ಕೃಷ್ಣನೇ ಎಂದು ಹೇಳುತ್ತಾನೆ. ಕೃಷ್ಣ ವಿಶ್ವರೂಪದರ್ಶನವನ್ನು ತೋರಿಸಿದ ಮೇಲೆ ಹೆದರಿದ ಧೃತರಾಷ್ಟ್ರಾದಿಗಳಿಗೆ ದುರ್ಯೋಧನ ಹೇಳುವ ವಿವರಣೆ ಅವನು ತಾತ್ವಿಕನೆಂಬಂತೆ ಚಿತ್ರಿಸುತ್ತದೆ. ಕುಮಾರವ್ಯಾಸ ಭಾರತ. ''ಕೊಲಿಸುವನನ್ಯರ ನನ್ಯರಿಂದವೆ ಕೊಲಿಸುವನು ಕಮಲಾಕ್ಷನಲ್ಲದೆ ಉಳಿದ ಜೀವವ್ರಾತಕೇ ಸ್ವಾತಂತ್ರ್ಯವಿಲ್ಲ'' ಎನ್ನುವ ದುರ್ಯೋಧನ 'ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ'' ಎಂದು ಹೇಳುತ್ತಾನೆ. ಹೀಗೆ ಕುಮಾರವ್ಯಾಸ ತನ್ನ 'ಅದ್ವೈತ'ವನ್ನು ಕಾವ್ಯದಲ್ಲಿ ಪ್ರತಿಪಾದಿಸುತ್ತಾನೆ. ಆದರೆ ಒಂದು ನೆಲೆಯಲ್ಲಿ 'ಅದ್ವೈತಿ'ಯೂ ದೇವ-ಜೀವರ ಭಿನ್ನತೆಯನ್ನು ಗುರುತಿಸುತ್ತಾನೆ. ಹೀಗಾಗಿ ತನ್ನನ್ನು ಸಂಕಷ್ಟದಿಂದ ಪಾರುಮಾಡುವಂತೆ ಬೇಡಿಕೊಳ್ಳುವ ಭಕ್ತನ ಆರ್ತತೆ ಸ್ತೋತ್ರಗಳಾಗುತ್ತವೆ: ಅದರಲ್ಲಿ ಸಾಂಪ್ರದಾಯಿಕತೆಗಿಂತ ವೈಯಕ್ತಿಕ ನೋವಿನ ಅಭಿವ್ಯಕ್ತಿ ಸಹಜವಾಗಿ ಆದಾಗ ಶ್ರೇಷ್ಠ ಕಾವ್ಯವೂ ಆಗುತ್ತದೆ. ಬಸವ, ಮಹಾದೇವಿಯಕ್ಕ ಮುಂತಾದ ಅನೇಕರ ವಚನಗಳು, ದಾಸರ ಕೀರ್ತನೆಗಳು, ಬೇಂದ್ರೆಯವರ ಹಲವು ಹಾಡುಗಳು ಇಂತಹವು. ತಾತ್ವಿಕತೆಯು ಬುದ್ಧಿಪೂರ್ವಕವಾಗಿ ವಿವರಣೆಗೊಂಡರೆ ಆಚಾರ್ಯರುಗಳ 'ಭಾಷ್ಯ'ಗಳಾಗುತ್ತವೆ; ಆರ್ದ್ರ ಅನುಭವದ ಅಭಿವ್ಯಕ್ತಿಯಾದರೆ ತತ್ವಪದಕಾರರ ಹಾಡುಗಳಾಗುತ್ತವೆ. ಹೀಗೆ ಧಾರ್ಮಿಕ ನಂಬಿಕೆಗಳು ಸಾಹಿತ್ಯವಾಗುವುದು 'ಕೃಷ್ಣನ ಕೆಣಕಿದ' ಅನುಭವಗಳು ಮಾತುಗಳಾದಾಗ.

ಬೌದ್ಧಿಕವಾದ ನೆಲೆಯಲ್ಲಿ ಚರ್ಚಿತವಾಗುವ ತಾತ್ವಿಕತೆಯೂ ಅಲ್ಲದ, ಕೇವಲ ನಂಬಿಕೆಯೂ ಅಲ್ಲದೆ, ಆದರೆ ನಂಬಿಕೆಯಿಂದಾಗಿಯೇ ತನ ಅನುಭವಕ್ಕೇ ದೈವಿಕತೆ ನುಸುಳವುದನ್ನು ಅನುಭಾವ ಎನ್ನಬಹುದೇನೋ. ಐಹಿಕ ಜೀವನದಲ್ಲಿ ಸಾಂಪ್ರದಾಯಿಕ ಕಟ್ಟು ಪಾಡುಗಳಿಗೆ ಒಳಗಾಗದೆ, ನಾಗರಿಕ ಶಿಸ್ತಿನ ಜೀವನ ನಡೆಸದೆ 'ಅದ'ನ್ನು ಹುಡುಕುತ್ತಾ ಹೋಗುವ ಅವಧೂತರುಗಳು ಭಾರತೀಯ ಅಥವಾ ಕನ್ನಡ ಸಂದರ್ಭದಲ್ಲಿ ಬೇಕಾದಷ್ಟು ಸಂಖ್ಯೆಯಲ್ಲಿ ಸಿಕ್ಕುತ್ತಾರೆ. ಅಲ್ಲಮ, ಸರ್ವಜ್ಞ, ಶಿಶುನಾಳ ಶರೀಫ, ಕಬೀರ ಕಡಕೋಳ ಮಡಿವಾಳಪ್ಪ ಮುಂತಾದವರು ಬೌದ್ಧಿಕ ಚರ್ಚೆಗೆ ಇಳಿಯದೆ, 'ದೇವರ' ಅನುಭವಕ್ಕೆ ಪ್ರಾಮುಖ್ಯವಿತ್ತವರು. ಅವರ ಹೆಚ್ಚಿನ ಕೃತಿಗಳಲ್ಲಿ ಈ ಬದುಕಿನ ಬಗ್ಗೆ ಅಥವಾ ಅದನ್ನು ನಿಯಂತ್ರಿಸುವ ಸಾಮಾಜಿಕತೆಯ ಬಗ್ಗೆ ಅಸಡ್ಡೆ ಕಾಣುತ್ತದೆ. ಅಂತಹವರಿಗೆ ಇತರರ ಒಡನಾಟಕ್ಕಿಂತ ಏಕಾಂತವೇ ಪ್ರಿಯವಾಗುತ್ತದೆ. ಹೊರನೋಟಕ್ಕೆ ತಿಕ್ಕಲುಗಳ ಹಾಗೆ ಕಂಡರೂ ಅಂತರ್ಯದಲ್ಲಿ ವಿಶ್ವ ವೈಶಾಲ್ಯ ಮನೆ ಮಾಡಿರುತ್ತದೆ. ಸಮಾಜ ಗುರುತಿಸುವ ಜಾತಿಮತ, ಮಡಿಮೈಲಿಗೆ, ಶಿಷ್ಟ ಅನಿಷ್ಟ-ಇಂತಹ ಕೃತಕ ವಿಂಗಡಣೆಯನ್ನೇ ಅವರು ಮಾನ್ಯ ಮಾಡುವುದಿಲ್ಲ. ಹೊರನೋಟಕ್ಕೆ ತುಂಬ ಕಠಿಣರಾಗಿಯೂ ಅವರು ಕಾಣಸಬಹುದು. ತಮ್ಮ ಪುಟ್ಟ ವ್ಯಕ್ತಿತ್ವದಲ್ಲಿ ವಿಶ್ವಚೇತನವು ಮನೆಮಾಡಿಕೊಂಡಿರುವ ಅನುಭವ ಅವರಲ್ಲಿ

ತೀವ್ರವಾಗಿ ಆದಾಗ ಅವರು ತೆಗೆದ ಉದ್ಗಾರಗಳು ಬಹು ಚೆಲುವಾದ ಸಾಹಿತ್ಯವಾಗಿದೆ. ಅಲ್ಲಮನಂತಹವರು ಮಾತಾಡುವ ರೀತಿಯೇ ವಿಚಿತ್ರ, ಆದರೆ ಅದರ ಹಿಂದೆ ಅಪರೂಪದ ಅನುಭಾವ ಹುದುಗಿರುತ್ತದೆ. ಇಂತಹ ಅನುಭಾವಿಕತೆಯಲ್ಲಿ ನಂಬಿಕೆಯಿಡದವರೂ ಅವರ ರಚನೆಯ ಸಾಹಿತ್ಯಕತೆಯನ್ನು ಸವಿಯುವಲ್ಲಿ ಅಡ್ಡಿಯಿರುವುದಿಲ್ಲ; ಏಕೆಂದರೆ ಅಲ್ಲಿರುವುದೂ ಅನುಭವವೇ.

ದೇವರ ಅಸ್ತಿತ್ವದಲ್ಲಿ ನಂಬಿಕೆಯಿಡದ ನಾಸ್ತಿಕರೂ ಅಜ್ಞೇಯತಾ ವಾದಿಗಳೂ ನೈತಿಕ ಬಿಕ್ಕಟ್ಟಿನ ಅನುಭವಗಳನ್ನು ಸಾಹಿತ್ಯವಾಗಿಸಬಹುದು. ಧಾರ್ಮಿಕತೆ ಎಂಬುದು ಕೇವಲ ಇಂಥ ನಂಬಿಕೆಗಳಿಗೆ ಮಾತ್ರ ಸಂಬಂಧಿಸಿದ್ದೇ? ತನ್ನ ವೈಯಕ್ತಿಕತೆಯನ್ನು ಹೊರತುಪಡಿಸಿದ ಸಕಲ ಜೀವಾತ್ಮರ ಲೇಸನ್ನು ಬಯಸುವ ಮಾನವತಾವಾದವೂ ಧಾರ್ಮಿಕತೆಯೇ ಪ್ರಾಯಶಃ ವೈಯಕ್ತಿಕ ಸಾರ್ವತ್ರಿಕ ಹಿತಗಳ ನಡುವಣ ಸಂಘರ್ಷವು ಅಂತರ್ಯದಲ್ಲಿ ನೈತಿಕ ಸ್ವರೂಪದ್ದೇ ಆಗಿರುತ್ತದೆ. 'ನೀತಿ' ಎಂದರೆ ಯಾವುದೋ ಹಿನ್ನೆಲೆಯಲ್ಲಿ ರಚಿತವಾದ ಬೇಕುಬೇಡಗಳಲ್ಲ ಮೂಲಭೂತ ಒಳಿತುಕೆಡಕುಗಳಿಗೆ ಸಂಬಂಧಿಸಿದ್ದೂ ಆಗಬಹುದು. ಅಜ್ಞೇಯತಾ ವಾದಿಗಳಾದವರೂ ಪ್ರಾಮಾಣಿಕತೆ, ಶ್ರದ್ಧೆ, ಅನುಕಂಪ ಮುಂತಾದ ಮೌಲ್ಯಗಳಲ್ಲಿ ಬದುಕುವವರಿರಬಹುದು. ಹಾಗಾಗಿ ಇಂತಹವೇ ನಿಜ ಬದುಕಿನಲ್ಲಿ ಪರೀಕ್ಷೆಗೆ ಸಿಲುಕುತ್ತವೆ. ಅಂಥ ಸಂದರ್ಭದ ಚಿತ್ರಣಗಳು ಮನಕಲಕುವ ಸಾಹಿತ್ಯವಾಗಬಹುದು. ಈಗೀಗ ಪ್ರಕೃತಿ-ಪರಿಸರಗಳ ಶುಚಿಯ ಕಡೆ ಮಾನವರ ಗಮನ ವಿಶೇಷವಾಗಿ ಹರಿಯುತ್ತಿದೆ. ತನ್ನ ಸ್ವಾರ್ಥಕ್ಕಾಗಿ ಮಿಕ್ಕೆಲ್ಲವನ್ನೂ ಕಡೆಗಣಿಸಿ ಪ್ರಕೃತಿಯನ್ನು ಸೂರೆ ಮಾಡುವುದರ ವಿರುದ್ಧ ಬೌದ್ಧಿಕ ನೆಲೆಯಲ್ಲಿ ಪರಿಸರವಾದಿಗಳು ಚರ್ಚೆ ನಡೆಸುವಂತೆಯೇ ಸಾಹಿತಿಯೂ ಅನುಭವಿಕವಾಗಿ ಅಂತಹದರ ಬಗ್ಗೆ ಒಳನೋಟಗಳನ್ನು ಹರಿಯಿಸಬಹುದು. ಇದು ಆಧುನಿಕರಿಂದ ಮಾತ್ರ ಆಗುತ್ತಿದೆ ಎಂದೇನೂ ಅಲ್ಲ. ಕಾಂಡವವನ ದಹನದ ಪ್ರಸಂಗದಲ್ಲಿ. ಕಾಡನ್ನು ನಾಶಮಾಡಿ ನಾಡು ಕಟ್ಟುವ ರೀತಿಯ ಹಿಂದೆ ಅಡಗಿದ ಮಾನವನ ಸ್ವಾರ್ಥದ ಒಂದು ಮುಖ ಗೋಚರವಾಗಬಹುದು.

ಹೀಗಾಗಿ ಧಾರ್ಮಿಕತೆಯೆಂಬುದು ದೇವರುದಿಂಡರು, ಸ್ವರ್ಗ ನರಕ ಪುನರ್ಜನ್ಮ-ಮೋಕ್ಷ ಇತ್ಯಾದಿಗಳ ನಂಬಿಕೆಯಿಂದ ಹಿಡಿದು ವ್ಯಕ್ತಿ - ಪ್ರಕೃತಿ ಸಂಬಂಧದ ಸ್ವರೂಪ ಚಿಂತನೆಯವರೆಗೆ, ವ್ಯಕ್ತಿ ಹಿತದ ಪ್ರಬಲ ಅನಿಸಿಕೆಯಿಂದ ಮೊದಲಾಗಿ ಸರ್ವಜೀವದಯ ಪಾರಿತ್ಯದವರೆಗೆ; ಕಾಲಕಾಲಕ್ಕೆ ಬದಲಾಗುವ ಸಾಮಾಜಿಕ ಕಟ್ಟುಪಾಡುಗಳಿಂದ ಹಿಡಿದು ಸಾರ್ವತ್ರಿಕ-ಸಾರ್ವಕಾಲಿಕ ಮಾನವೀಯತೆಯವರೆಗೆ; ಕೇವಲ ನಂಬಿಕೆಯಿಂದ ಹಿಡಿದು ವಿವೇಚನಾ ಶೀಲ ನಡೆವಳಿಕೆಯವರೆಗೆ ವ್ಯಾಪಿಸಿಕೊಂಡಿದೆ. ಹಾಗೆ ನೋಡಿದರೆ, ಎಲ್ಲವನ್ನೂ 'ಧರ್ಮ'ದ ತೆಕ್ಕೆಯೊಳಗೆ ತರುವುದು ಸಾಧ್ಯ. ಏನೇ ಆಗಲಿ, ಮನುಷ್ಯನ ಅನುಭವವೆಲ್ಲ ಒಂದಲ್ಲ ಒಂದು ಬಗೆಯ ಘರ್ಷಣೆಗೆ ಒಳಗಾಗುತ್ತಲೇ ಇರುವ ಕಾರಣ ಅವನ, ಬುದ್ಧಿಯಲ್ಲ,

ಹೃದಯವು ಇಕ್ಕಟ್ಟಿಗೆ ಸಿಕ್ಕುತ್ತದೆ. ಅಂತಹುದರ ಚಿತ್ರಣವೇ ಸಾಹಿತ್ಯದ ವಸ್ತು. ಅತ್ಯಂತ ಹೃದಯಭೇದಕ ಸಾಹಿತ್ಯವು ಘರ್ಷಣೆಯಿಂದ ಕೂಡಿದ ಅನುಭವದ ಅಭಿವ್ಯಕ್ತಿ. ಆದ್ದರಿಂದ ಸಾಹಿತ್ಯ ತರ್ಕಕ್ಕೆ ಸಿಕ್ಕದ ಆದರೆ ಆತ್ಮ ಸಾಕ್ಷಿಗೆ ತೃಪ್ತಿಕೊಡುವ ನಿಲವನ್ನು ತಳೆಯಲು ನೈತಿಕ ಬೆಂಬಲವನ್ನು ನೀಡಬಹುದು. ಏಕೆಂದರೆ ಪ್ರತಿಭೆಯು, ಹಿಂದಾಗಲೇ ಗಮನಿಸಿರುವಂತೆ, ಮಾನವೀಯತೆಯ ಕಡೆಗೇ ಒಳೆಯುವಂತಹುದು. ಹೀಗಾಗಿಯೇ ಸಾಹಿತ್ಯಕೃತಿಯ ಆಸ್ವಾದನೆಯ ಕಾಲದಲ್ಲಿ ಓದುಗನ ಮನಸ್ಸು-ಹೃದಯಗಳು ಕೆಟ್ಟವನಾದರೂ ಕಷ್ಟಪಡುವವನಬಗ್ಗೆ ಸಹಾನುಭೂತಿಪರವಾಗುವುದು; ತಾರ್ಕಿಕತೆಯನ್ನು ಮೀರಿ ಓದುಗನಲ್ಲಿ ಮಾನವತೆಯನ್ನು ಕೆದಕುವಂತಾಗುವುದು. ಪ್ರಾಯಶಃ ಈ ಅರ್ಥದಲ್ಲಿಯೇ ಎಂದು ಕಾಣುತ್ತದೆ ಕವಿರಾಜಮಾರ್ಗಕಾರ ಹೇಳುವುದು: ''ಪಾಪಮಿದು ಪುಣ್ಯಮಿದು, ಹಿತರೂಪಮಿದು ಅಹಿತಪ್ರಕಾರಮಿದು, ಸುಖಮಿದು ದುಃಖೋಪಾತ್ತಮಿದೆಂದು ಅರಿಪುಗುಂ ಮಹಾಕವಿಪ್ರಧಾನರಾ ಕಾವ್ಯಂಗಳ್'' ಎಂದು.

ಧರ್ಮ: ಸಂಗೀತ ಮತ್ತು ನೃತ್ಯ

ಎಲ್. ಜಿ. ಮೀರಾ

ನಮ್ಮ ದೇಶದ ಲಲಿತ ಕಲೆಗಳಲ್ಲಿ ಸಂಗೀತ ಮತ್ತು ನೃತ್ಯ ಪ್ರಮುಖ ಸ್ಥಾನವನ್ನು ಪಡೆದಿವೆ. ಇವುಗಳ ಬಗ್ಗೆ ಯಾವಾಗ ಚರ್ಚೆ ನಡೆದರೂ ಅವುಗಳಲ್ಲಿರುವ ಧರ್ಮದ ಆಯಾಮವನ್ನು ಬಿಟ್ಟು ಚರ್ಚಿಸಲಾಗುವುದಿಲ್ಲ. ಏಕೆಂದರೆ ಭಾರತೀಯ ಸಂಗೀತ, ನೃತ್ಯ ಮತ್ತು ಧರ್ಮಕ್ಕೆ ಒಂದು ವಿಧದ ಮೂಲಭೂತ ಸಂಬಂಧ ಇದೆ. ಈ ಸಂಬಂಧದ ಬಗ್ಗೆ ಚರ್ಚಿಸುವ ಪ್ರಯತ್ನ ಈ ಲೇಖನದ್ದು.

ಇಲ್ಲಿ ನಾವು ಒಂದು ವಿಷಯದ ಬಗ್ಗೆ ಸ್ಪಷ್ಟಪಡಿಸಿಕೊಂಡು ಮುಂದುವರಿಯಬೇಕಾಗಿದೆ. ಅದೇನೆಂದರೆ ನಾವು ಇಲ್ಲಿ ಯಾವ ಧರ್ಮದ ಬಗೆಗೆ ಮಾತಾಡುತ್ತಿದ್ದೇವೆ ಎಂದು. ನೃತ್ಯ ಮತ್ತು ಸಂಗೀತಗಳ ಬಗೆಗೆ ಮಾತಾಡುವಾಗ ನಮ್ಮ ಮನಸ್ಸಿನಲ್ಲಿರುವುದ ವೈದಿಕ ಸಂಸ್ಕೃತಿ. ಶಾಸ್ತ್ರಜ್ಞರ ಪ್ರಕಾರ ವೈದಿಕ ಧರ್ಮ ಆರ್ಯರಿಂದ ಭಾರತದಲ್ಲಿ ಪ್ರಾಚುರ್ಯಕ್ಕೆ ಬಂದದ್ದು- ಭಾರತದಲ್ಲಿರುವ ಇತರ ಅನೇಕ ಧರ್ಮಗಳಲ್ಲಿ ಒಂದು. ಬೌದ್ಧ, ಜೈನ, ಇಸ್ಲಾಂ, ಕ್ರೈಸ್ತ, ವೀರಶೈವ ಮುಂತಾದ ಲಿಖಿತ ಧರ್ಮಗಳಲ್ಲದೆ, ಮೂಲನಿವಾಸಿ ಬುಡಕಟ್ಟು ಜನಾಂಗಗಳ ಅನೇಕ ಅಲಿಖಿತ ಧರ್ಮಗಳೂ ಭಾರತದಲ್ಲಿವೆ. ಮೂಲತಃ ಅಲೌಕಿಕ ಶಕ್ತಿಯೊಂದರ ಇರವಿನ ಬಗ್ಗೆ ನಂಬಿಕೆ, ಆ ಕುರಿತ ಆಚಾರವಿಚಾರ, ತತ್ಸಂಬಂಧವಾದ ಜೀವನವಿಧಾನ, ದಾಖಲೆಗಳು ಇವೆಲ್ಲ ಸೇರಿ ಧರ್ಮ ಅನಿಸಿಕೊಳ್ಳುವುದು. ಪೂಜೆ-ಪುನಸ್ಕಾರ, ವಿಧಿ, ನೇಮ, ಪಾಪಪುಣ್ಯದ ಕಲ್ಪನೆ ಇವೆಲ್ಲ ಇದರಲ್ಲಿ ಸೇರುತ್ತವೆ. ಜೀವನವಿಧಾನ ಬದಲಾದಂತೆ ಧರ್ಮದ ಕಲ್ಪನೆಯು ಬದಲಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ವೈದಿಕಧಾರೆಯಿಂದ ಪ್ರಭಾವಿತವಾದ ನೃತ್ಯ ಮತ್ತು ಸಂಗೀತಗಳು ಇಡೀ ಭಾರತದ ಸಂಸ್ಕೃತಿಯನ್ನು ಪ್ರತಿನಿಧಿಸುವುದಿಲ್ಲ, ಪ್ರತಿನಿಧಿಸಲಾರವು ಎಂಬುದು ಸ್ಪಷ್ಟವಾಗುತ್ತದೆ. ಇವು ಭಾರತೀಯ ಸಂಸ್ಕೃತಿಯ ಒಂದು ಭಾಗ, ಒಂದು ಜನಜೀವನದ ಪ್ರತೀಕ, ಇಡೀ ಭಾರತೀಯ ಸಂಸ್ಕೃತಿ ಸಂಕೇತ ಅಲ್ಲ ಎಂಬ ವಿನಯ ನಮಗಿರಬೇಕು. ಭಾರತದ ಬಹುಮುಖಿ ಸಂಸ್ಕೃತಿಯ ಹಿನ್ನೆಲೆಯ ಕುರಿತ ಅರಿವು, ಇಲ್ಲಿ ನಾವು ಯಾವುದೇ ಉತ್ಪ್ರೇಕ್ಷೆ ಮಾಡುವುದನ್ನು ತಪ್ಪಿಸುತ್ತದೆ.

ಇದಾದ ನಂತರ, ಸಂಗೀತ ಮತ್ತು ನೃತ್ಯಗಳಿಗೆ ಇರುವ ಧರ್ಮದ ಹಿನ್ನೆಲೆಯ ಬಗೆಗೆ

ನಾವು ವಿಚಾರ ಮಾಡಬಹುದು. ಸಂಸ್ಕೃತ ಭಾಷೆ, ಉಪನಿಷತ್, ವೇದಗಳಾದಿಯಾಗಿ ಗ್ರಂಥಸಮೂಹ ರಾಮಾಯಣ ಮಹಾಭಾರತದ ಸಮೃದ್ಧ ಕಥಾನಕಗಳು, ಶಿಷ್ಟರೂಪದ ಪರಿಷ್ಕೃತ ಅಭಿವ್ಯಕ್ತಿ ಮತ್ತು ಇವೆಲ್ಲದರ ಪರಂಪರೆ ನೃತ್ಯ ಮತ್ತು ಸಂಗೀತಕ್ಕೆ ಆರ್ಯನಾಗರಿಕತೆಯಿಂದ ನೇರವಾಗಿ ಇಳಿದುಬಂದಿವೆ. ಈ ಹಿನ್ನೆಲೆಯಿಂದಾಗಿ ಇವುಗಳಲ್ಲಿ ಅಪಾರ ಮಟ್ಟದ ಪರಿಷ್ಕೃತತೆ, ಕೌಶಲ್ಯ (ಸೊಫೆಸ್ಟಿಕೇಶನ್ ಅನ್ನುತಾರಲ್ಲ ಅದು) ಮೈ ತುಂಬಿವೆ. ಮೂಲನಿವಾಸಿ, ಜಾನಪದ ಸಂಗೀತ ನೃತ್ಯಗಳ ಪ್ರಕೃತಿ ಸಹಜರೀತಿಗೂ ಸಂಗೀತ ನೃತ್ಯಗಳ ಪರಿಷ್ಕೃತತೆಗೂ ವೈದೃಶ್ಯ ಉಂಟಾಗುವುದು ಇದರಿಂದಾಗಿಯೆ ಸಂಗೀತ ಮತ್ತು ನೃತ್ಯಗಳನ್ನು ನೂರಾರು ವರ್ಷಗಳಿಂದ ಜಾಗೃತೆಯಾಗಿ ಕಾಪಾಡಿಕೊಂಡು, ಪೀಳಿಗೆಯಿಂದ ಪೀಳಿಗೆಗೆ ಶ್ರದ್ಧೆಯಿಂದ ಕಲಿಸುತ್ತಾ ಉಳಿಸಿಕೊಂಡು ಬರಲಾಗಿದೆ. ಸಾಧನೆ ಮತ್ತು ಪರಿಷ್ಕೃತತೆ ಅಂದಿಗೂ, ಇಂದಿಗೂ ಇವುಗಳಲ್ಲಿ ಸಾಧನೆಯ ಒರೆಗಲ್ಲು. ಈ ಅಗ್ನಿ ಪರೀಕ್ಷೆಯಿಲ್ಲದೆ ಯಾರೂ ಹೆಸರಾಂತ ಕಲಾವಿದರಾಗಲು ಸಾಧ್ಯ ಇಲ್ಲ.

ಸಂಗೀತ ಮತ್ತು ವೇದ

ಕ್ರಿ. ಪೂ. ಎರಡನೆಯ ಶತಮಾನಕ್ಕಿಂತಲೂ ಹಿಂದಿನಿಂದ ಭಾರತೀಯ ಸಂಗೀತ ಬೆಳೆದುಬಂದಿದೆ ಎಂಬುದಕ್ಕೆ ಸಾಮವೇದ, ಛಾಂದೋಗ್ಯ ಮತ್ತು ಬೃಹದಾರಣ್ಯಕ ಉಪನಿಷತ್ತುಗಳಲ್ಲಿ ಆಧಾರಗಳು ಸಿಗುತ್ತವೆ. ಧರ್ಮದ ದೇವತೆಗಳ ಬಗ್ಗೆ ಬರೆಯಲಾದ ಕಥೆಗಳಲ್ಲಿಯೂ ಸಂಗೀತಕ್ಕೆ ಪ್ರಮುಖ ಸ್ಥಾನ ಇದೆ. ಪುಸ್ತಕ, ವೀಣೆಗಳನ್ನು ಹಿಡಿದ ಸರಸ್ವತಿದೇವಿಯನ್ನು ಸಂಗೀತದ ಆರಾಧ್ಯ ದೇವತೆ ಎಂದು ತಿಳಿಯಲಾಗುತ್ತದೆ. ಪೌರಾಣಿಕ ವ್ಯಕ್ತಿಗಳಾದ ನಾರದ, ತುಂಬುರರ ಸಂಗೀತ ಪ್ರತಿಭೆಯೂ ಅನೇಕ ಬಾರಿ ವರ್ಣಿಸಲ್ಪಟ್ಟಿದೆ. ''ಗಂಧರ್ವವೆಂದು ಕರೆಯಲ್ಪಟ್ಟಿರುವ ಭಾರತೀಯ ಸಂಗೀತ ಶಾಸ್ತ್ರವನ್ನು ಭರತಮುನಿಯು ಅಪ್ಸರೆಯರಿಗೂ, ನಾರದಮುನಿಯು ಮಾನವರಿಗೂ ಉಪದೇಶಿಸದಂತೆ ಪುರಾಣಗಳಲ್ಲಿ ಕಂಡುಬರುತ್ತದೆ. ಸಂಗೀತ ಶಾಸ್ತ್ರವನ್ನು ನಿರೂಪಿಸಿದವನು ಭರತಮುನಿಯೆಂದು ನಂಬಲರ್ಹವಾದ ಗ್ರಂಥಗಳಿವೆ. ಮೊದಲಿಗೆ ನೃತ್ಯ, ನಾಟಕ, ಬಾಯಿ ಹಾಡುಗಾರಿಕೆ ಮತ್ತು ವಾದ್ಯಸಂಗೀತಗಳೆಲ್ಲವನ್ನೂ 'ಸಂಗೀತ' ಎಂಬ ನಾಮಧೇಯದಿಂದ ಕರೆಯಲ್ಪಡುತ್ತಿದ್ದು ಮಹೇಶ್ವರನಿಂದಲೇ ಈ ಶಾಸ್ತ್ರವು ನಿರ್ಮಾಣವಾಯಿತೆಂದು ಹೇಳಲಾಗಿದೆ. ವೇದ, ಉಪನಿಷತ್ತು ಮತ್ತು ಪುರಾಣಗಳಲ್ಲಿ ಉಲ್ಲೇಖಗೊಂಡ ಭಾರತೀಯ ಸಂಗೀತ ಶಾಸ್ತ್ರದ ಬಗ್ಗೆ ವ್ಯಾಕರಣ ಶಾಸ್ತ್ರ ನಿಪುಣನಾದ ಪಾಣಿನಿ (ಕ್ರಿ. ಪೂ. 326) ಯ ಗ್ರಂಥಗಳಲ್ಲಿ ಆಧಾರವಿದೆ. ಇದಕ್ಕೂ ಮುಂದೆ ಉದ್ಭವವಾದ ರಾಮಾಯಣ (ಕ್ರಿ. ಪೂ. 400) ಮತ್ತು ಮಹಾಭಾರತ (ಕ್ರಿ. ಪೂ. 500) ಗಳಲ್ಲಿಯೂ ಪುಷ್ಟಿಗೊಂಡಿದೆ'' (ಭಾರತೀಯ ಕಲಾದರ್ಶನ, ಪು.3)

ಅಂದರೆ ಸಂಗೀತದ ಮೂಲ ವೈದಿಕ ಸಾಹಿತ್ಯದಲ್ಲಿ ಸಿಕ್ಕುತ್ತದೆ ಎಂದಾಯಿತು. ಸಾಮವೇದದ ಉದಾತ್ತ (ಉಚ್ಚ) ಮತ್ತು ಅನುದಾತ್ತ (ನೀಚ) ಸ್ವರಗಳಿಂದ ಹಾಡಲ್ಪಡುತ್ತಿದ್ದ

ಕ್ರಮ ಮುಂದೆ ನಾಲ್ಕು ಸ್ವರಗಳ ಸಂಚಾರದಿಂದ ನಂತರ ಸಪ್ತಸ್ವರಗಳಿಗೆ ದಾರಿ ಮಾಡಿತು ಎಂದು ಗುರುತಿಸಲಾಗುತ್ತದೆ. ಸಪ್ತಸ್ವರಗಳೇ ತಾನೆ ಶಾಸ್ತ್ರೀಯ ಸಂಗೀತದ ಅಡಿಪಾಯ . ಇಷ್ಟೇ ಅಲ್ಲದೆ ಸಂಗೀತದೊಳಗಿನ ಸಾಹಿತ್ಯದ ರಚನೆಗಳಲ್ಲಿ (ಇವುಗಳನ್ನು ಪ್ರಬಂಧಗಳು ಎಂದು ಕರೆಯಲಾಗುತ್ತದೆ) ಅಂದರೆ ಗೀತೆ, ಸ್ವರಜತಿ, ವರ್ಣ ಕೃತಿ, ದೇವರ ನಾಮ ಇವುಗಳಲ್ಲಿ 'ಭಗವಂತನ ನಾಮ ಸಂಕೀರ್ತನೆಯೆ' ಮುಖ್ಯವಾಗಿರುವುದನ್ನು ಗಮನಿಸ ಬೇಕು. ಗಣೇಶ, ಶಿವ ದೇವಿ, ಕೃಷ್ಣಳರಾಮ ಮುಂತಾದ ಆರ್ಯದೇವರುಗಳ ಸ್ತುತಿ ಇಲ್ಲಿರುತ್ತದೆ.

ಹಾಗೆ ನೋಡಿದರೆ ವೈದಿಕ ತತ್ವಗಳಲ್ಲಿ ಹೇಳುವ ಬ್ರಹ್ಮಾನಂದಕ್ಕೆ ಆಧ್ಯಾತ್ಮ ಒಂದು ದಾರಿಯಾದರೆ ಸಂಗೀತ ಇನ್ನೊಂದು ದಾರಿ ಎನ್ನಲಾಗುತ್ತದೆ. ಇಲ್ಲಿ ಬ್ರಹ್ಮಾನಂದ ಎಂದರೆ ಮನುಷ್ಯನಿಗೆ ದೊರೆಯಬಹುದಾದ ಅಂತಿಮ ಆನಂದ ಎಂದು ಅರ್ಥ. ಸಂಗೀತದಿಂದ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ಭಗವದ್ಭಕ್ತಿಯಿಂದ ಕೂಡಿದ ಸಂಗೀತ ಮೋಕ್ಷದಾಯಕವಾಗಬಲ್ಲುದು ಎಂಬ ನಂಬಿಕೆ ಸಂಗೀತದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ತಪಸ್ಸು, ಧ್ಯಾನ, ಯೋಗಗಳಂತೆ ಸಂಗೀತ ಕೂಡ ಒಂದು ಆಧ್ಯಾತ್ಮಿಕ ಸಾಧನೆ ಎಂದು ತಿಳಿಯಲಾಗುತ್ತದೆ ಎಂಬುದು ಇದರಿಂದ ಸ್ಪಷ್ಟ

" ಕರ್ನಾಟಕ ಸಂಗೀತದ ಬೆಳವಣಿಗೆಗೆ ಬಹುಮಟ್ಟಿಗೆ ಭಜನೆ ಮತ್ತು ಹರಿಕಥೆಗಳು ಸಹಾಯಕವಾಗಿವೆ. ದೇವಾಲಯಗಳಲ್ಲಿ ಮಹತ್ವದ ದಿನಗಳಲ್ಲಿ ಭಜನೆಗೂ ಹರಿಕಥೆಗೂ ಅವಕಾಶ ಏರ್ಪಡುತ್ತಿದ್ದು, ಈ ಎರಡೂ ಪದ್ಧತಿಗಳಲ್ಲಿಯೂ ಸಂಗೀತವು ಮುಖ್ಯ ಅಂಗವಾಗಿರುತ್ತಿದ್ದುದರಿಂದ, ಇವೆರಡರಲ್ಲಿಯೂ ಸಂಗೀತ ಪರಿಷ್ಕಾರ ಹೊಂದಿ ನಿರ್ದಿಷ್ಟ ರೂಪ ತಾಳಲು ಸಾಧಕವಾಗಿವೆ. ಅನೇಕ ಹರಿಕಥಾ ಭಾಗವತರು, ಭಜನೆ ನಡೆಸುವ ವಿದ್ವಾಂಸರೂ ಹೆಸರಾಂತ ವಿದ್ವಾಂಸರಾಗಿದ್ದವರೆ / ಸಂಗೀತ ಶಾಸ್ತ್ರದ ಸಕಲವರ್ಣಗಳಿಂದ ಕೂಡಿರುವ 'ಸೂಳಾದಿ'ಗಳು ಈ ಪ್ರಕಾರದಿಂದಲೇ ಉದ್ಭವವಾದವು ಎಂಬುದನ್ನೂ ಇಲ್ಲಿ ಸ್ಮರಿಸಬಹುದು. (ಭಾರತೀಯ ಕಲಾದರ್ಶನ, ಪು.10).

ಪುರಂದರ ದಾಸರು ವ್ಯಾಸರಾಯರ ದ್ವೈತದರ್ಶನದಿಂದ ಪ್ರೇರಿತರಾಗಿ ಹರಿಸೇವೆಗೆ ತಮ್ಮನ್ನು ಕೊಟ್ಟುಕೊಂಡು, ಜನತೆಯಲ್ಲಿ ಹರಿಭಕ್ತಿ ಮೂಡಿಸಲು ಸಂಗೀತವನ್ನೇ ಪ್ರಧಾನ ಸಾಧನನ್ನಾಗಿ ಮಾಡಿಕೊಂಡರು. ಪುರಂದರ ದಾಸರು ರಚಿಸಿರು ನೂರಾರು ಹಾಡುಗಳಲ್ಲಿ ಕೃಷ್ಣ, ವಿಷ್ಣುವಿನ ಮಹಿಮೆ ಅನೇಕ ಬಣ್ಣಗಳಲ್ಲಿ ವಿವರವಾಗಿ ನಿರೂಪಿತವಾಗಿದೆ. ನಂತರ ಬಂದ ಪ್ರಸಿದ್ಧ ವಾಗ್ಗೇಯಕಾರರಾದ ಶ್ಯಾಮಾಶಾಸ್ತ್ರಿಗಳು, ತ್ಯಾಗರಾಜರು ಮತ್ತು ಮುತ್ತ ಸ್ವಾಮಿ ದೀಕ್ಷಿತರು ಭಗವದ್ಭಕ್ತಿಯ ಈ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಇವರೆಲ್ಲರೂ ಸಂಗೀತವನ್ನು ದೈವಸಾಕ್ಷಾತ್ಕಾರಕ್ಕೆ ಒಂದು ಸನ್ಮಾರ್ಗ ಎಂದೇ ತಿಳಿಯುತ್ತಿದ್ದರು, ಕನ್ನಡದ ನಿಜಗುಣ ಶಿವಯೋಗಿಗಳ 'ವಿವೇಕ

ಚಿಂತಾಮಣಿ' ಕೃತಿ ಕೂಡಾ ಸಂಗೀತದ ಭಕ್ತಿ, ದರ್ಶನಗಳ ಆಯಾಮಕ್ಕೆ ಒತ್ತು ಕೊಟ್ಟಿರುವುದನ್ನು ಗಮನಿಸಬಹುದು.

ಹೀಗೆ ಭಗವಂತನ್ನು ಕುರಿತ ಅಲೌಕಿಕ ಚಿಂತನೆಯಲ್ಲಿ ಸಂಗೀತ ಪ್ರಮುಖ ಪಾಲು ಪಡೆದರೆ; ಪೂಜೆ, ಆಚರಣೆ ಮುಂತಾದ ಲೌಕಿಕ ಸಂಗತಿಗಳಲ್ಲೂ ತನ್ನ ಪಾಲು ಹೊಂದಿತ್ತು. ಈ ಪೂಜೆ, ಆಚರಣೆಗಳ ಭಾಗವೇ ಆಗಿತ್ತು (ಪೂಜಾಂತ್ಯೆ ಛತ್ರಂ ಸಮರ್ಪಯಾಮಿ, ಚಾಮರಂ ಸಮರ್ಪಯಾಮಿ, ಗೀತಂ ಶ್ರಾವಯಾಮಿ, ನೃತ್ಯಂ ದರ್ಶಯಾಮಿ) ಭಗವಂತನನ್ನು ಒಲಿಸಿಕೊಳ್ಳುವ ಸಾಧನಗಳಲ್ಲಿ ಸಂಗೀತವೂ ಒಂದು ಎಂಬುದೇ ಇಲ್ಲಿನ ಗೃಹೀತ. ಇಂದಿಗೂ ನಮ್ಮ ಅನೇಕ ಪೂಜೆಗಳು ಹಾಡಿಲ್ಲದೆ ಸಂಪೂರ್ಣವಾಗುವುದಿಲ್ಲ.

ಸಂಗೀತ ಮತ್ತು ಭಕ್ತಿ

ದೇವರ ಮೇಲಿನ ನಂಬಿಕೆಯಿಂದ ಕೂಡಿದ ತನ್ಮಯತೆ, ಅವನನ್ನು ಸೇರುವ ಹಂಬಲಗಳು ಭಕ್ತಿ ಅನ್ನಿಸಿಕೊಳ್ಳುತ್ತವೆ. ಧರ್ಮದ ಒಂದು ಪ್ರಧಾನ ಸಂಗತಿ ಇದು. ಹಿಂದೆ ವಿವರಿಸಿದಂತೆ ಸಂಗೀತವೇ ಭಗವದ್ಭಕ್ತಿಯ ಸಾಧನ. ಅಂದರೆ ಭಗವಂತನನ್ನು ಭಕ್ತಿಯಿಂದ ಒಲಿಸಿಕೊಳ್ಳುವಲ್ಲಿ ಸಂಗೀತ ಪ್ರಪಂಚಕ್ಕಿರುವ ಮುಖ್ಯ ನಿಲುವು ಸಂಗೀತವನ್ನು ತಪಸ್ಸು ಎಂದು ಕರೆಯುವುದನ್ನು ಗಮನಿಸಬೇಕು. ಸಂಗೀತದ ಪಾತ್ರ ದೊಡ್ಡದು ಎಂದು ಕರೆಯುವುದನ್ನೂ ಗಮನಿಸಬೇಕು. ಸಂಗೀತದ ಸಂದರ್ಭದಲ್ಲಿ ತಪಸ್ಸು, ಭಕ್ತಿ, ಧ್ಯಾನ, ದರ್ಶನ ಮುಂತಾದ ಆಧ್ಯಾತ್ಮಿಕ ಪದಗಳ ಬಳಕೆಯಲ್ಲೇ ನಮಗೆ ಧರ್ಮ ಮತ್ತು ಸಂಗೀತದ ಸಂಬಂಧ ತಿಳಿಯುತ್ತದೆ. ಸಂಗೀತ ಕೇವಲ ಮನರಂಜನೆಯ, ಸಮಯ ಕಳೆಯುವ ಸಾಧನ ಅಲ್ಲ, ಸಾಕ್ಷಾತ್ಕಾರದ ಸಾಧನ ಎಂದೇ ಅನಾದಿಕಾಲದಿಂದಲೂ ಪರಿಗಣಿತವಾಗಿದೆ. ಸಂಗೀತದಿಂದ ಪ್ರತೀತಿಯಾಗುವ ಆನಂದವನ್ನು 'ಬ್ರಹ್ಮಾನಂದ ಸಹೋದರ' ಎಂದು ಸೌಂದರ್ಯ ಶಾಸ್ತ್ರದಲ್ಲಿ ಕರೆಯುತ್ತಾರೆ. ಸತ್ಯಂ, ಶಿವಂ, ಸುಂದರಂ ಎಂಬ ಸಂಸ್ಕೃತ ಕಾವ್ಯ ಮೀಮಾಂಸೆಯ ತತ್ತ್ವವನ್ನು ಸಂಗೀತಕ್ಕೂ ಅನ್ವಯಿಸಲಾಗಿದೆ. (ನೃತ್ಯಕ್ಕೂ ಇದು ಅನ್ವಯಿಸುತ್ತದೆ ಎಂಬುದನ್ನು ಮುಂದೆ ನೋಡುತ್ತೇವೆ.)

ಆತ್ಮ, ಪರಮಾತ್ಮ, ಸಾಕ್ಷಾತ್ಕಾರ, ಮೋಕ್ಷ ಮುಂತಾದ ಕಲ್ಪನೆಗಳಿಂದ ಕೂಡಿದ, ಸಂಗೀತ ಶಾಸ್ತ್ರ ಹೀಗೆ ಧಾರ್ಮಿಕ ತತ್ತ್ವಗಳನ್ನು ಆಧರಿಸಿದೆ.

ಸಂಗೀತ ಮತ್ತು ಧರ್ಮ

ಇಂದಿನ ಆಧುನಿಕ ಯುಗದಲ್ಲಿ ಸಂಗೀತವು ಕಲೆಯಾಗಿ, ವೈಯಕ್ತಿಕ ಸಾಧನೆಯ ಸಾಧನವಾಗಿ, ಒಂದು ವೃತ್ತಿಯಾಗಿ ನೆಲೆಗೊಂಡಿದೆ. ಸಮೂಹ ಸಂಪರ್ಕ ಮಾಧ್ಯಮಗಳು ಸಂಗೀತದ ಪ್ರಾಚುರ್ಯತೆಗೆ ತಮ್ಮ ಪಾಲನ್ನು ನೀಡುತ್ತಿವೆ. ಇಂದಿಗೂ ಸಂಗೀತದ ವಸ್ತು, ವಿಷಯಗಳಲ್ಲಿ ಪರಂಪರಾಗತ ನಿಲುವುಗಳು ಕೆಲಸ ಮಾಡುತ್ತವೆ. 'ಭಗವನ್ನಾಮ ಸಂಕೀರ್ತನೆ' ಮಾಡುವ ಕೃತಿಗಳೇ ಇಂದೂ ಕೂಡಾ ಶ್ರದ್ಧೆಯಿಂದ ಹಾಡಲ್ಪಡುತ್ತವೆ. ಇಲ್ಲಿ ಪರಂಪರೆಯ

ಮುಂದುವರಿಕೆಯನ್ನು ಕಾಣುತ್ತೇವೆ. ಕೆಲವು ಹಬ್ಬಗಳಲ್ಲಿ, ಧಾರ್ಮಿಕ ಆಚರಣೆಗಳಲ್ಲಿ ಇಂದಿಗೂ ಸಂಗೀತ ಮುಂಚೂಣಿಗೆ ಬರುತ್ತದೆ. ಉದಾ : ಗಣೇಶೋತ್ಸವ, ಶ್ರೀ ರಾಮನವಮಿ ಉತ್ಸವ, ತ್ಯಾಗರಾಜ ಆರಾಧನೆ, ಪುರಂದರದಾಸರ ಆರಾಧನೆ ಮುಂತಾದ ಆಚರಣೆಗಳು. ಸಂಗೀತದಲ್ಲಿ ಆಗುವ ಪ್ರಯೋಗಗಳು, ನೂತನ ನೆಲೆಗಳಿಗಾಗಿ ಹುಡುಕಾಟಗಳು ಏನಿದ್ದರೂ ಅದರ ಪ್ರಾಯೋಗಿಕ ವಿಷಯಗಳಲ್ಲಿ (ರಾಗ, ತಾಳಗಳಲ್ಲಿನ ವೈವಿಧ್ಯ) ಮಾತ್ರ ಎಂಬುದನ್ನು ಗಮನಿಸಬೇಕು. ಇಲ್ಲಿನ ಧಾರ್ಮಿಕ ಆಶಯಗಳು ರೂಢಿ ಎಂಬಂತೆ ಮುಂದುವರಿಯುತ್ತಾ ಬರುತ್ತಿವೆ. ಪರಿಷ್ಕೃತ ಅಭಿರುಚಿಯ ಸಂಕೇತವಾಗಿ, ಶಿಷ್ಟತೆಯ ಪ್ರತೀಕವಾಗಿ ಸಂಗೀತ ರಸಿಕರಲ್ಲಿ ಉಳಿದು ಬರುತ್ತಿದೆ. ಸಂಗೀತ ತನ್ನ ಕ್ಲಿಷ್ಟತೆಯ ಕಾರಣದಿಂದಾಗಿ ಜನಸಮೂಹದ ಎಲ್ಲ ಪದರಗಳನ್ನು ಮುಟ್ಟಲಾರವಾದರೂ, ತನ್ನ ವಲಯದಲ್ಲಿ ತನ್ನದೇ ಆದ ರೀತಿಯಲ್ಲಿ ಬೆಳೆಯುತ್ತಿದೆ. ಅಷ್ಟೇ ಅಲ್ಲದೆ ತನ್ನ ಪರಂಪರೆಯನ್ನು ಶ್ರದ್ಧೆಯಿಂದ (ಕಲುಷಿತವಾಗುವುದರಿಂದ ತಪ್ಪಿಸಿಕೊಂಡು ಉಳಿಯಲು) ಉಳಿಸಿಕೊಳ್ಳಲು ಪ್ರಯತ್ನಿಸುತ್ತಿವೆ.

ಸಂಗೀತದ ಹಿಂದಿನ 'ಬ್ರಹ್ಮಾನಂದ ತತ್ವ', ಇಂದಿಗೂ ಕೂಡಾ ಪರಂಪರೆಯನ್ನು ಬಿಡಲು ಅದು ನಿರಾಕರಿಸುವುದು ಅವುಗಳ ಹಿಂದೆ ಧಾರ್ಮಿಕ ಹಿನ್ನೆಲೆ ಇರುವುದು ಸ್ಪಷ್ಟ.

ನೃತ್ಯ ಮತ್ತು ಧರ್ಮ

ಸಂಗೀತದಂತೆಯೇ ನೃತ್ಯಕ್ಕೂ ಕೂಡಾ ಧಾರ್ಮಿಕ ಹಿನ್ನೆಲೆ ಇದೆ. ಹಾಗೆ ನೋಡಿದರೆ ಸಂಗೀತ ನೃತ್ಯಗಳೆರಡೂ ಸಂಗೀತ ಎಂಬ ಒಂದೇ ವಿಭಾಗದಲ್ಲಿ ಬರುತ್ತಿದ್ದವೆಂದು ಸಾರಂಗದೇವನ 'ಸಂಗೀತರತ್ನಾಕರ' ಹೇಳುತ್ತದೆ. ಶಿವಪಾರ್ವತಿಯರು ನೃತ್ಯ ಮಾಡುತ್ತಿದ್ದಾಗ ರಾಗ-ರಾಗಿಣಿಯರು (ರಾಗಗಳನ್ನು ಈ ರೀತಿ ವಿಭಾಗಿಸಲಾಗುತ್ತದೆ) ಉದ್ಭವವಾದರೆಂದು ಹೇಳಲಾಗುತ್ತದೆ. ನೃತ್ಯದಲ್ಲಿ ಸಂಗೀತ ಬಹು ಮುಖ್ಯವಾದ ಆಯಾಮ. ಸಂಗೀತಕ್ಕೆ ಮೂಲವೆಂದು ಭರತ ಮುನಿಯನ್ನು ಗುರುತಿಸುವಂತೆ ನೃತ್ಯಕ್ಕೂ ಅವನನ್ನೇ ಮೂಲವೆಂದು ಗುರುತಿಸಲಾಗುತ್ತದೆ. ಹೀಗಾಗಿ ಸಂಗೀತ ಮತ್ತು ನೃತ್ಯಗಳ ಧಾರ್ಮಿಕ ಹಿನ್ನೆಲೆಯಲ್ಲಿ ಅನೇಕ ಅಂಶಗಳು ಸಮವಾಗಿವೆ.

ಪ್ರಾಚೀನ ಕಾಲದಿಂದಲೂ ಭಾರತದ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ನೃತ್ಯಕ್ಕೆ ಪ್ರಮುಖಸ್ಥಾನವಿದೆ. "ಇದರ ಪ್ರಾಚೀನತೆಯನ್ನು ನಿಖರವಾಗಿ ಗುರುತಿಸಲು ಆಗಿರದಿದ್ದರೂ, ಋಗ್ವೇದದಲ್ಲಿ ಇದರ ಪ್ರಸ್ತಾಪ ಇರುವುದರಿಂದ ಋಗ್ವೇದಕ್ಕಿಂತಲೂ ಇದನ್ನು ಪ್ರಾಚೀನವೆನ್ನಬಹುದು. ನೃತ್ಯಕ್ಕೆ ಒಂದು ಶಾಸ್ತ್ರದ ರೂಪ ತಂದವನು ಭರತಮುನಿ. ಅವನು ರಚಿಸಿರುವ ನಾಟ್ಯಶಾಸ್ತ್ರವೇ, ಸಿಕ್ಕಿರುವ ಲಕ್ಷಣ ಗ್ರಂಥಗಳಲ್ಲಿ ಮೊದಲನೆಯದು. ನಂದಿಕೇಶ್ವರ ಎಂಬ ಮತ್ತೊಬ್ಬ ನೃತ್ಯಪ್ರಸಾರಕನ ಬಗ್ಗೆ ಕೂಡಾ ಪುರಾಣ ಕಥೆಗಳಲ್ಲಿ ಉಲ್ಲೇಖ ಇದೆ." ಈ ಐತಿಹ್ಯವನ್ನು ಸ್ವಲ್ಪ ಗಮನಿಸಬಹುದು. ಇದು ಚಾರಿತ್ರಿಕವಾಗಿ

ನಿಖರವಲ್ಲದಿದ್ದರೂ, ನಮ್ಮ ಚರ್ಚೆಗೆ ಮುಖ್ಯವಾದ ಕೆಲವು ವಿಷಯಗಳು ಇದರಿಂದ ಹೊರಡುತ್ತವೆ.

ಆ ಕಥೆ ಹೀಗಿದೆ: (ದೇವತೆಗಳು ಮತ್ತು ಭೂಮಿಯ ಜನರ ಆನಂದಕ್ಕಾಗಿ) ಭರತನೆಂಬ ಋತುಗೆ ಬ್ರಹ್ಮನೇ ನಾಟ್ಯವೇದವನ್ನು ಉಪದೇಶಿಸಿದ್ದು. ಈ ನಾಟ್ಯವೇದ ಅನ್ನುವುದು ನಾಲ್ಕು ವೇದಗಳಿಂದ ಒಂದೊಂದು ಅಂಶವನ್ನು (ಋಗ್ವೇದಿಂದ ಪಠ್ಯವನ್ನು, ಯಜುರ್ವೇದದಿಂದ ಅಭಿನಯವನ್ನು, ಸಾಮವೇದದಿಂದ ಸಂಗೀತವನ್ನು, ಅಥರ್ವಣವೇದದಿಂದ ರಸವನ್ನು) ಪಡೆದು ಭರತನಿಗೆ ಅನುಗ್ರಹಿಸಿದನೆಂದು ಹೇಳಲಾಗುತ್ತವೆ. ಬ್ರಹ್ಮನಿಂದ ನಾಟ್ಯವೇದವನ್ನು ಪಡೆದ ಭರತ ಅದನ್ನು ತನ್ನ ನೂರು ಜನ ಮಕ್ಕಳಿಗೆ ಕಲಿಸಿದನೆಂದು ತಿಳಿದು ಬರುತ್ತದೆ. ನಾಟ್ಯಕಲಾ ಸಂಪನ್ನರಾದ ತನ್ನ ಮಕ್ಕಳಿಂದ, ಇಂದ್ರನ ಧ್ವಜೋತ್ಸವ ಸಮಾರಂಭ ಕಾಲದಲ್ಲಿ, ಭರತ ತನ್ನ ನಾಟ್ಯ ಪ್ರಯೋಗವನ್ನು ಪ್ರದರ್ಶಿಸುತ್ತಾನೆ. ಅನಂತರ ಶಿವನೇ ಪ್ರಧಾನ ಪಾತ್ರವಾಗಿ ಉಳ್ಳ 'ತ್ರಿಪುರಸಂಹಾರ' ನಾಟ್ಯವನ್ನು ಭರತ ಕೈಲಾಸದಲ್ಲಿ ಶಿವಪಾರ್ವತಿಯರು ಸಮ್ಮುಖದಲ್ಲಿ ಪ್ರದರ್ಶಿಸಿದಾಗ, ಆ ಪ್ರದರ್ಶನದಿಂದ ಸುಪ್ರೀತನಾದ ಶಿವ ನಾಟ್ಯದ ಜೊತೆಗೆ ನೃತ್ಯವನ್ನು ಸೇರಿಸಿದರೆ ಪ್ರದರ್ಶನ ಹೆಚ್ಚು ಪ್ರಭಾವಶಾಲಿ ಯಾಗಿರುವುದೆಂದು ಸೂಚಿಸಿದನಂತೆ. ಆದರೆ ಭರತನಿಗೆ ನೃತ್ಯ ತಿಳಿದಿರಲಿಲ್ಲ. ಆಗ ಪರಶಿವನು ತನ್ನ ಶಿಷ್ಯನಾದ ತಂಡು ಅಥವಾ ನಂದಿಕೇಶ್ವರನಿಂದ ಕಲಿತ ನೃತ್ಯ 'ತಾಂಡವ'ವೆಂದೂ, ಪಾರ್ವತಿಯಿಂದ ಕಲಿತ ನೃತ್ಯ 'ಲಾಸ್ಯ'ವೆಂದೂ ಹೇಳಲಾಗಿದೆ.'' (ಭಾರತೀಯ ಕಲಾದರ್ಶನ ಪು. 125-126) ಈ ಕಥೆಯಿಂದ ಸ್ಪಷ್ಟವಾಗುವ ವಿಷಯ ಅಂದರೆ ಶಾಸ್ತ್ರೀಯ ನೃತ್ಯ, ನಾಟ್ಯ ಎಂಬವು ದೇವತಾ ಪ್ರದಾನವಾಗಿ ದೊರೆತ ಕಲಾಪ್ರಕಾರಗಳು ಎಂಬ ನಂಬಿಕೆ - ಈ ಮೂಲಕ ಧಾರ್ಮಿಕ ಅಂಶಗಳಿಗೆ ಸಿಗುವ ಒತ್ತು. ಶಾಸ್ತ್ರೀಯ ನೃತ್ಯಕ್ಕೆ ಸಾವಿರಾರು ವರ್ಷಗಳ ಹಿಂದಿನ ಈ ಕಥಾನಕದ ಹಿನ್ನೆಲೆ ಇರುವುದರಿಂದ ಗಮನಿಸಬೇಕು.

ನೃತ್ಯಕಲೆ ಬೆಳೆದ ರೀತಿ ತುಂಬ ಕುತೂಹಲಕರವಾದುದು, ಸಾವಿರಾರು ವರ್ಷಗಳ ಹಿಂದಿನಿಂದ ಶಾಸ್ತ್ರದ ಚೌಕಟ್ಟಿನಲ್ಲಿ, ಜನಜೀವನದ ಧಾರ್ಮಿಕ, ಸಾಮಾಜಿಕ ಜೀವನದಲ್ಲಿ ಬೆಳೆದು ಬಂದ ನೃತ್ಯಕಲೆ, ಕೆಲವು ಆಕ್ಷೇಪಣೆ, ಉಗ್ರ ಟೀಕೆಗಳಿಗೆ ಬಲಿಯಾಯಿತು. ಇದಕ್ಕೆ ಕಾರಣವೇನೆಂದರೆ ರಾಜಾಸ್ಥಾನ ಮತ್ತು ದೇವಸ್ಥಾನಗಳಲ್ಲಿ ನರ್ತಕಿಯರಿಗಿದ್ದ ಗೌರವದ ಸ್ಥಾನ ಬರುಬರುತ್ತಾ ಕಡಿಮೆಯಾಗುತ್ತಾ ಬಂದದ್ದು. ನೃತ್ಯ ಒಂದು ದೈವೋಪಾಸನೆ ಎಂಬ ಅಭಿಪ್ರಾಯ ಹೋಗಿ ಪೋಷಕರ ಮತ್ತು ದೇಶವನ್ನು ಆಕ್ರಮಿಸಿ ಆಳಿದ ಜನಗಳ ಭೋಗಾಸಕ್ತಿಯ ಪರಿಣಾಮವಾಗಿ ನೃತ್ಯಗಾತಿಯರೆಂದರೆ ನೀತಿದೂರರು, ಆಕರ್ಷಣೆಯ ಸಾಧನ ಎಂಬ ಅಭಿಪ್ರಾಯ ಬಂತು. ಕುಲೀನ ಸ್ತ್ರೀಯರಿಗೆ ನೃತ್ಯ ನಿಷಿದ್ಧ ಎಂಬ ನೃತ್ಯ ವಿರೋಧೀ ಧೋರಣೆ ಬೆಳೆಯಿತು. ಆದರೆ ಈ ನಿಷೇಧ ಶಾಶ್ವತವಾಗಿ ಉಳಿಯಲಾಗಲಿಲ್ಲ.

16,17,18 ನೆ ಶತಮಾನಗಳಲ್ಲಿ ನೃತ್ಯಕಲೆಯ ಸಾರ್ವತ್ರಿಕ ಪುನರುಜ್ಜೀವನ ಮತ್ತು

ಅಭಿವೃದ್ಧಿಯನ್ನು ಕಾಣುತ್ತೇವೆ. ಕೇರಳದಲ್ಲಿ ರಾಜರುಗಳ ಆಸಕ್ತಿಯಿಂದ ಕಥಕ್ಕಳಿ, ರೂಪುಗೊಂಡಿತು. ತಂಜಾವೂರಿನ ದೊರೆಗಳ ಉತ್ತೇಜನದಿಂದ ತಮಿಳು ನಾಡಿನ ಭರತನಾಟ್ಯ, ಮಣಿಪುರಿಯ ಅರಸನಾದ ಭಾಗ್ಯಚಂದ್ರನ ಪ್ರೋತ್ಸಾಹದಿಂದ, ಅಲ್ಲಿಯ 'ರಾಸನೃತ್ಯ' ಮೊಘಲ್ ಚಕ್ರವರ್ತಿ, ನವಾಬರು, ರಾಜರುಗಳ ಪ್ರೋತ್ಸಾಹದಿಂದ ಉತ್ತರ ದೇಶದ ಕಥಕ್ ನೃತ್ಯ ಸಂಪ್ರದಾಯಗಳು ಪುರಸ್ಕಾರ ಹೊಂದಿ ಅಭಿವೃದ್ಧಿ ಹೊಂದಿದವು. (ಭಾರತೀಯ ಕಲಾ ದರ್ಶನ; ಪು. 157).

"ಆಂಧ್ರ, ತಮಿಳುನಾಡಿನ ಮತ್ತು ಮೈಸೂರಿನ ದೇವಾಲಯ, ಅರಮನೆಗಳು ದೇವದಾಸಿ ನೃತ್ಯದ ಪ್ರಮುಖ ಪೋಷಕಗಳಾಗಿದ್ದವು. ಆದರೆ ಮದರಾಸು ಮತ್ತು ಆಂಧ್ರ ಪ್ರಾಂತ್ಯಗಳಲ್ಲಿ ದೇವದಾಸಿ ಪದ್ಧತಿಯನ್ನು ಕಾನೂನಿನಿಂದ ರದ್ದುಗೊಳಿಸಿದಾಗ ಅನೇಕ ನಟುವನಾರರೂ (ನರ್ತಕಿಯರಿಗೆ ತಾಳದ ಸಹಾಯ ಒದಗಿಸುವವರು, ಗುರುಗಳು) ನರ್ತಕಿಯರು ಆಧಾರ, ಆಶ್ರಯರಹಿತರಾಗಿ ಅನ್ಯವೃತ್ತಿಗಳನ್ನು ಅವಲಂಬಿಸಿದರು. ಸಾಹಸಿಗಳಾದ ಹಲವರು ಪಟ್ಟಣ ವಾಸಿಗಳಾಗಿ ನಾಟಕ, ಸಿನಿಮಾಗಳ ಆಶ್ರಯ ಪಡೆದರು. ಈ ಪರಿಸ್ಥಿತಿಯಲ್ಲಿ ತಮಿಳುನಾಡಿನ ಮತ್ತು ಮೈಸೂರಿನ ಕೆಲವು ಮನೆತನದವರು ಈ ನೃತ್ಯ ಸಂಪ್ರದಾಯವನ್ನು ಉಳಿಸಿಕೊಂಡು ಬಂದರು " (ಪು. 160, ಅದೇ)

"ತಮಿಳುನಾಡಿನಲ್ಲಿ ಈ ನೃತ್ಯಪರಂಪರೆಯ ಶುದ್ಧರೂಪವನ್ನು ಪ್ರಚಾರಕ್ಕೆ ತಂದು, ನೃತ್ಯಕಲೆಗೆ ಬಂದಿದ್ದ ಕಳಂಕವನ್ನು ನಿವಾರಿಸಿ ಇದರ ಪುನರುದ್ಧಾರ ಮಾಡಿದ ಕೀರ್ತಿ ಪಂಟನಲ್ಲೂರು ಮೀನಾಕ್ಷಿ ಸುಂದರಂ ಪಿಳ್ಳೆ ಮತ್ತು ಶ್ರೀಮತಿ ರುಕ್ಮಿಣಿ ಅರುಂಡೇಲರಿಗೆ ಪ್ರಧಾನವಾಗಿ ಸಲ್ಲುತ್ತದೆ". (ಪು.160 ಅದೇ)

ಒಟ್ಟಿನಲ್ಲಿ ದೇವದಾಸಿ ಪದ್ಧತಿಯ ಬಗ್ಗೆ ದೇಶದ ಅನೇಕ ಕಡೆ ವಾದವಿವಾದಗಳಾಗಿವೆ, ಇಂದಿಗೂ ಆಗುತ್ತಿವೆ. ಕಲೆಯ, ದೇವಸೇವೆಯ ಕಾರಣಕ್ಕಾಗಿ ಕೆಲವರು ಇದನ್ನು ಎತ್ತಿ ಹಿಡಿದರೆ, ನೈತಿಕ ದೃಷ್ಟಿಯಿಂದ ಸರ್ಕಾರ ಇದನ್ನು ಅಲ್ಲಗಳೆಯುತ್ತದೆ. ಈ ವಾಗ್ವಾದ ನೃತ್ಯ ಮತ್ತು ಧರ್ಮಗಳ ಸಂಬಂಧವನ್ನೇ ಒತ್ತಿ ತೋರಿಸುತ್ತದೆ ಎಂಬುದನ್ನು ಗಮನಿಸಬೇಕು.

ನಮ್ಮ ಪ್ರಾಚೀನ ದೇವಾಲಯಗಳು ತಮ್ಮ ಅದ್ಭುತ ಶಿಲ್ಪಗಳಲ್ಲಿ ವಿವಿಧ ನೃತ್ಯಭಂಗಿಗಳನ್ನು ಸೆರೆ ಹಿಡಿದಿಟ್ಟಿವೆ. ಕೊನಾರ್ಕದ ಸೂರ್ಯ ದೇವಾಲಯ, ತಮಿಳುನಾಡಿನ ಚಿದಂಬರಂ ದೇವಾಲಯ, ಕರ್ನಾಟಕ ಬೇಲೂರು ಹಳೇಬೀಡು ದೇವಾಲಯಗಳಲ್ಲಿ (ಇನ್ನೂ ಅನೇಕ ದೇವಾಲಯಗಳಲ್ಲಿ) ನೃತ್ಯವೇ ಘನೀಭೂತವಾಗಿ ಹೆಪ್ಪುಗಟ್ಟಿರುವುದನ್ನು ಗಮನಿಸಬಹುದು. ನೃತ್ಯಾಭ್ಯಾಸಿಗಳಿಗೆ ಇಂದಿಗೂ ಈ ದೇವಾಲಯಗಳು ಪ್ರಮುಖ ಅಭ್ಯಾಸ ಕೇಂದ್ರಗಳಾಗಿವೆ. ಅಂದಮೇಲೆ ದೇವಾಲಯಗಳು ಮತ್ತು ಶಾಸ್ತ್ರೀಯ ನೃತ್ಯಕಲೆಗಳಿಗಿರುವ ಸಂಬಂಧದ ಬಗ್ಗೆ ಹೆಚ್ಚು ವಿವರಿಸಬೇಕಿಲ್ಲ.

ಶಬ್ದಂ, ಪದಂ, ವರ್ಣಂ, ದೇವರನಾಮ ಇತ್ಯಾದಿ ನೃತ್ಯಬಂಧಗಳಲ್ಲಿ ರಾಮಾಯಣ,

ಮಹಾಭಾರತ, ಭಾಗವತ, ಶಿವಕಥೆಯನ್ನಾಧರಿಸಿದ ಸಾಹಿತ್ಯವೇ ಹೆಚ್ಚಾಗಿರುತ್ತದೆ. ದೇವದೇವಿಯರ ಮಹಾತ್ಮೆ, ಅವರ ಜೀವನಕಥೆಗಳನ್ನು ನೃತ್ಯಬಂಧಗಳು ನಿರೂಪಿಸುತ್ತವೆ. ನೃತ್ಯದಲ್ಲಿ ತುಂಬಾ ಪ್ರಮುಖ ಸ್ಥಾನ ಪಡೆದಿರುವ ನಾಯಕ - ನಾಯಕಿ ಭಾವದಲ್ಲಿ ನಾಯಕ ಮತ್ತು ನಾಯಕಿಯರ ನಡುವಿನ ಪ್ರೇಮ, ಆಕರ್ಷಣೆ ಕೇವಲ ದೈಹಿಕ ಮಟ್ಟದಲ್ಲಿ ನಿಲ್ಲುವುದಿಲ್ಲ, ನಾಯಕ ಪರಮಾತ್ಮನಾಗಿ, ನಾಯಕಿ ಜೀವಾತ್ಮನಾಗಿ, ಆತ್ಮಗಳ ಮಿಲನದ ಆಧ್ಯಾತ್ಮದ ತನಕ ಈ ಸಖ್ಯ ಏರುತ್ತದೆ. ಪ್ರೇಮ ಇಲ್ಲಿ ಭಕ್ತಿಯಾಗಿ ಕೊನೆಗೆ ಧರ್ಮಾನುರಕ್ತಿಯಾಗಿ ನೃತ್ಯವು ಮೋಕ್ಷ ಸಾಧಕವಾಗುತ್ತದೆ ಎನ್ನಲಾಗುತ್ತದೆ. ನೃತ್ಯಕ್ಕಿರುವ ಧಾರ್ಮಿಕ ಮುಖಕ್ಕೆ ಇದು ಶಕ್ತಿ ಕಾಲ ಸಂಕೇತ. ಸಂಗೀತದಿಂದ ನೃತ್ಯದ ಹಿಂದಿರುವ ತತ್ವವೂ ಧರ್ಮಾವನ್ನೇ ಅವಲಂಬಿಸಿದೆ. ದೇವದಾಸಿ ಪದ್ಧತಿಯ ಏಳುಬೀಳಿನ ಸಮಸ್ಯೆ ಅಂತಿಮವಾಗಿ ಧಾರ್ಮಿಕ ಆಚರಣೆ ಮತ್ತು ವಾಸ್ತವ ಜೀವನದ ನಡುವಿನ ಬಿಕ್ಕಟ್ಟಿನ ಸಮಸ್ಯೆ ಆಗುತ್ತದೆ. (ಶಾಸ್ತ್ರೀಯ ನೃತ್ಯದ ಪುನರುಜ್ಜೀವನದಲ್ಲಿ ಭಕ್ತಿಯ 'ಅತಿಕ್ರಮಣ' ಆಗಿ ದೇವದಾಸಿ ನೃತ್ಯಪದ್ಧತಿಯ 'ಶೃಂಗಾರ' ಕಡೆಗಣಿಸಲ್ಪಟ್ಟಿತು ಎಂಬ ವಾದ ಇದೆ)

ಇಂದಂತೂ ನೃತ್ಯ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಕುಲೀನ ಮನೆತನಗಳಿಂದಲೂ ಆದರಿಸಲ್ಪಟ್ಟಿದೆ. ಇಂದು ಅದನ್ನು ದೇವಪೂಜೆಯ ಒಂದು ಬಾಗ ಎಂದೇ ಮಾಡಿದ್ದಿದರೂ ವೈಯಕ್ತಿಕ ಕಲಾಸಾಧನೆ, ವ್ಯಕ್ತಿತ್ವದ ಪರಿಷ್ಕರ ಎಂಬಂತೆ ಪುರಸ್ಕರಿಸಲಾಗುತ್ತದೆ. ಸಮೂಹ ಮಾದ್ಯಮಗಳು ಮತ್ತು ಧಾರ್ಮಿಕ ಆಚರಣೆಗಳು ನೃತ್ಯಕ್ಕೆ (ಸಂಗೀತದಂತೆಯೇ) ಅವಕಾಶ ನೀಡುತ್ತಿವೆ. ಇಂದಿಗೂ ನೃತ್ಯದ ವಸ್ತುವಿನಲ್ಲಿ ಬಹುಪಾಲು ಪುರಾಣ ಕಥೆಗಳೇ ಇವೆ. ಕೃಷ್ಣ, ಶಿವರ ಲೀಲೆಗಳು ವಿಜೃಂಬಿಸುತ್ತವೆ. ಧಾರ್ಮಿಕ ವಸ್ತುವನ್ನು ಬಿಟ್ಟು, ಸಾಮಾಜಿಕ ಸಮಸ್ಯೆಗಳನ್ನು 'ಪರಿಸರ' ಮುಂತಾದ ಸಂಗತಿಗಳನ್ನು ನೃತ್ಯದಲ್ಲಿ ಮೂಡಿಸುವ ಪ್ರಯತ್ನಗಳಾಗುತ್ತಿವೆಯಾದರೂ ಇವನ್ನು ಕೇವಲ ಪ್ರಯೋಗಗಳೆಂಬಂತೆ ನೋಡಲಾಗುತ್ತದೆ ಎಂಬುದನ್ನು ಗಮನಿಸಬೇಕು. ಮುಖ್ಯದಾರೆಯ ನೃತ್ಯಕ್ಕೆ ಧಾರ್ಮಿಕ ವಸ್ತುವಿನಲ್ಲೇ, ಹೆಚ್ಚು ಹಿತ.

ಈ ಹಂತದಲ್ಲಿ ಒಂದು ಸ್ವಾರಸ್ಯಕರ ಸಂಗತಿಯನ್ನು ಗಮನಿಸಬಹುದು, ಅದೇನೆಂದರೆ ಲಲಿತಕಲೆಗಳಲ್ಲೇ ಒಂದು ಎಂದು ಪರಿಗಣಿಸಲ್ಪಡುವ ಸಾಹಿತ್ಯ ಬದಲಾವಣೆಗಳಿಗೆ ತೆರೆದುಕೊಳ್ಳುವಷ್ಟು ಸುಲಭವಾಗಿ ಸಂಗೀತ ಮತ್ತು ನೃತ್ಯ ತೆರೆದುಕೊಳ್ಳುವುದಿಲ್ಲ. ಸಾಹಿತ್ಯದಲ್ಲಿ ಧರ್ಮ, ದೇವರ ಕುರಿತು ಅತ್ಯುಗ್ರ ಚರ್ಚೆಗಳಾಗಿವೆ. ದೇವರು 'ಸತ್ತ' ಸ್ಥಿತಿಯ ಬಗ್ಗೆ ಸಾವಿರಾರು ಪುಟಗಳು ಬರೆಯಲ್ಪಟ್ಟಿವೆ. ಅಧಾರ್ಮಿಕ ಸಂಗತಿಗಳ ಬಗ್ಗೆ ಸಾಹಿತ್ಯಕ್ಕೆ ಅದರಲ್ಲೂ ಕಾವ್ಯಕ್ಕೆ ಒಂದು ಆಕರ್ಷಣೆ. ಪರಂಪರೆಯನ್ನು ಉಳಿಸಿಕೊಳ್ಳುವುದರ ಬದಲು ಪ್ರಶ್ನಿಸುವುದರ ಬಗ್ಗೆಯೇ ಸಾಹಿತ್ಯಕ್ಕೆ ನಂಬಿಕೆ ಹೆಚ್ಚು. ಸಂಗೀತ ಮತ್ತು ನೃತ್ಯ ಇಲ್ಲೇ ಸಾಹಿತ್ಯಕಿಂತ ಭಿನ್ನವಾಗುವುದು. ಪರಂಪರೆಯ, ಧರ್ಮದ ರಕ್ಷಕಗಳಾಗಿ, ಸಂಗ್ರಹಾಲಯಗಳಾಗಿ ಸಂಗೀತ, ನೃತ್ಯಗಳನ್ನು ನೋಡಿದರೆ, ಸಾಹಿತ್ಯವನ್ನು ಧರ್ಮ ತುಂಬ ಅನುಮಾನದಿಂದ ನೋಡುತ್ತದೆ. ನೃತ್ಯ ಸಂಗೀತ ತನ್ಮಯವಾಗುವುದನ್ನು, ಮುಳುಗಿ ಮೈ

ಮರೆಯುವುದನ್ನು ಅಂತಿಮ ಎಂದು ನೋಡಿದರೆ ಸಾಹಿತ್ಯ ಕತ್ತರಿಸುವ ಪ್ರಶ್ನೆಗಳನ್ನು ಕೇಳುತ್ತಾ ಸಂಕಟದಲ್ಲಿ ಮುಳುಗಿ ತನ್ನದೇ ಆದ ವೈಯಕ್ತಿಕ ತತ್ವವೊಂದನ್ನು ಹುಡುಕಿಕೊಳ್ಳುವುದನ್ನು 'ಅಂತಿಮ ಎಂದು ನೋಡುತ್ತದೆ. ಲಲಿತಕಲೆಗಳಲ್ಲೇ ಧರ್ಮದ ಬಗೆಗೆ ಇರುವ ಈ ಬಿನ್ನಾಭಿಪ್ರಾಯ ತುಂಬ ಕುತೂಹಲಕರವಾದುದು.

ಒಟ್ಟಿನಲ್ಲಿ ಮನುಷ್ಯನ ಚಟುವಟಿಕೆಯ ಗುಣಕ್ಕೆ ಸಂಕೇತವಾಗಿ ಹುಟ್ಟಿ, ಧರ್ಮ ಗ್ರಂಥಗಳ ಆಧಾರದಿಂದ ಬೆಳೆದು ಅತ್ಯಂತ ಪರಿಷ್ಕೃತ ಕಲಾ ಪ್ರಕಾರಗಳಾಗಿ ನೆಲೆಯೂರಿರುವ ಸಂಗೀತ ಮತ್ತು ನೃತ್ಯ ತಮ್ಮ ಚರಿತ್ರೆಯ ಉದ್ದಕ್ಕೂ ಧರ್ಮದೊಂದಿಗೆ ಸಂಬಂಧವನ್ನಿಟ್ಟುಕೊಂಡೇ ಬೆಳೆದಿವೆ. ಎಂಥ ಆಧುನಿಕ ಸಂದರ್ಭದಲ್ಲೂ ತಮ್ಮ 'ಪ್ರಾಚೀನತೆ', 'ಸಾಂಪ್ರದಾಯಕ' ಕಾರಣಕ್ಕಾಗಿಯೇ ಆಧುನಿಕರಿಂದ ಆಕರ್ಷಿತವಾಗುತ್ತಾ ತಮ್ಮದೇ ಆದ ರೀತಿಯಲ್ಲಿ ಬೆಳೆಯುತ್ತಿವೆ. ಬದಲಾವಣೆಗಳಿಗೆ ಎಷ್ಟೇ ತೆರೆದುಕೊಂಡರೂ, ಪ್ರಾಚೀನತೆಯಲ್ಲಿ ಸುಭದ್ರವಾಗಿ ಬೇರುಬಿಟ್ಟಿರುವ ಇವು ಆಧುನಿಕ ವೈಚಾರಿಕರಿಗೆ ಸವಾಲುಗಳಾಗಿವೆ, ಚರ್ಚೆಯ ಸಂಗತಿಗಳಾಗಿವೆ.

ಆಧುನಿಕರು ಎಷ್ಟೇ ಚರ್ಚೆ ಮಾಡಿದರೂ, ನೃತ್ಯ ಮತ್ತು ಸಂಗೀತಗಳಿಗೆ ಧಾರ್ಮಿಕ ಪರಂಪರೆಗಳಿಂದ ಒದಗಿಬಂದಿರುವ ಶಕ್ತಿಯನ್ನು ನಾವು ನಿರಾಕರಿಸಲಾಗುವುದಿಲ್ಲ. ಈ ಕಾರಣಕ್ಕಾಗಿ ಅವುಗಳಲ್ಲಿ ಉಂಟಾಗಿರವ ಪರಿಷ್ಕೃತತೆ, ಕೌಸಶಲ್ಯಗಳನ್ನು ಪ್ರಶಂಶಿದೆ ಇರಲಾಗುವುದಿಲ್ಲ. ಪ್ರಾಚೀನ ಮಾನವನೇ ಆಗಲಿ ಆಧುನಿಕ ಮಾನವನೇ ಆಗಲಿ ಎಲ್ಲ ಮಾನವರೂ ಬಯಸುವ 'ಬಿಡುಗಡೆ' ಯನ್ನು, 'ಆಧ್ಯಾತ್ಮಿಕ ಸೌಂದರ್ಯ, ಸ್ವಾತಂತ್ರ್ಯವನ್ನು ಕೊಡಲು ಈ ಕಲೆಗಳಿಗೆ ಶಕ್ತಿ ಇದೆ ' ಎಂದು ಗುರುತಿಸಲಾಗಿದೆ. ಈ ಶಕ್ತಿಯಲ್ಲಿ ಸಾವಿರಾರು ವರ್ಷಗಳಿಂದ ಉಳಿದು ಬಂದಿರುವ ಧರ್ಮದ್ದು ಸಿಂಹಪಾಲು.

ಈ ಎಲ್ಲ ಕಾರಣಗಳಿಂದಾಗಿ ಸಂಗೀತ ಮತ್ತು ನೃತ್ಯಗಳಿಗಿರುವ ಧಾರ್ಮಿಕ ಸಂಬಂಧದ ಚರ್ಚೆ ಇಂದಿಗೂ ಪ್ರಸ್ತುತವಾಗಿದೆ.

●

ಧರ್ಮ ಮತ್ತು ಚಿತ್ರಕಲೆ

ಡಾ| ಅ.ಲ. ನರಸಿಂಹನ್

ಧರ್ಮ ಎಂಬುದು ಒಂದು ಸಂಕೀರ್ಣವಾದ ವಿಷಯ. ಅದರ ಸ್ವರೂಪದ ಬಗ್ಗೆ ವೈವಿಧ್ಯತೆಯ ಬಗ್ಗೆಯಲ್ಲದೆ ಅವಶ್ಯಕತೆ, ಬದಲಾವಣೆ, ಸಾಧಕ-ಬಾಧಕಗಳ ಕುರಿತು ಪ್ರಪಂಚದಾದ್ಯಂತ, ನಾಗರೀಕತೆಯ ಆರಂಭ ಕಾಲದಿಂದ ಈ ವರೆವಿಗೂ ಚರ್ಚೆಗಳು ನಡೆಯುತ್ತಲೇ ಇವೆ. ಗ್ರಂಥಗಳು ಹೊರಬರುತ್ತಿವೆ. ಧರ್ಮದ ಹೆಸರಿನಲ್ಲಿ ಸೌಹಾರ್ದತೆಗಳು ನೆಲೆಸಿದಂತೆಯೇ ಹೋರಾಟಗಳೂ ಆಗಿದೆ, ಆಗುತ್ತಿವೆ.

ಎರಡನೆಯದಾಗಿ 'ಧರ್ಮ' ಎಂಬುದು ಹೇಗೆ ಸಾಮಾಜಿಕವಾಗಿ ಸಮಷ್ಠಿ ಪ್ರಜ್ಞೆಯದಾಗುತ್ತದೋ ಹಾಗೆಯೇ ವ್ಯಕ್ತಿಗತವೂ ಆಗುತ್ತದೆ. ಎಂದರೆ ವ್ಯಕ್ತಿ ಬದುಕುವ ರೀತಿ ಅಥವ ದೈನಂದಿನ 'ಕಾಯಕ' ದಂತೆಯೂ ವ್ಯವಹರಿಸುತ್ತದೆ. ಇಂತಹ ಬಹುಮುಖಿಉಳ್ಳ ಬಣ್ಣನೆಗೆ ಬಾರದ ಸಂಕೀರ್ಣವಾದ 'ಧರ್ಮ' ಎಂಬುದಕ್ಕೆ ಕಲಾವಿದರು ಒಂದು 'ಮೂರ್ತ' ರೂಪ ನೀಡಿ ಕಲಾಕೃತಿಯಾಗಿಸುವಲ್ಲಿ ಪಡೆದಿರುವ ಯಶಸ್ಸು ಕುತೂಹಲಕಾರಿಯಾದುದು.

ಧರ್ಮವೇ ತನ್ನ ಪ್ರಸರಣಕ್ಕೆ ಕಲೆಗಳನ್ನು ಬಳಸಿಕೊಂಡಿತೋ ಅಥವಾ ಕಲೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಧರ್ಮದ ಆಶ್ರಯ ಪಡೆಯಿತೋ ಎಂಬುದು ಚಿಂತನೀಯ ವಿಷಯ. ಲೈಂಗಿಕ ಕ್ರಿಯೆಯಂತಹ ಅಪ್ಪಟ ಖಾಸಗಿ ಸಂಗತಿಗಳೂ ಪಂಚ 'ಮ' ಕಾರಗಳಲ್ಲಿ ಒಂದೆಂದೂ ವಾಮಾಚಾರ 'ಪಂಥ'ದವರ ಸಾಧನೆಗಳ ಒಂದು ಅಂಗವೆಂದೂ ಪರಿಗಣಿಸಿ ದೇವಾಲಯಗಳ ಪ್ರವೇಶ ದ್ವಾರದಲ್ಲೇ ಅಲಂಕರಿಸಿರುವ ಮಿಥುನ ಶಿಲ್ಪಗಳೂ 'ಧರ್ಮ'ದ ಒಂದು ಅಂಗವೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ.

ಅಂತೆಯೆ ಸ್ತ್ರೀ- ಪುರುಷರ ನಗ್ನ ಭಾವ ಭಂಗಿಗಳೂ ಶರಣಾಗತಿಯ, ವಿರಕ್ತಿಯ ದ್ಯೋತಕವಾಗಿ ಮೆರೆಯುತ್ತಿವೆ. ಒಂದು ಅರ್ಥದಲ್ಲಿ ಇವೆಲ್ಲವೂ ಕಲಾಕೃತಿಗಳೂ ಆಗುತ್ತವೆ. ಎಂದರೆ ಒಟ್ಟಿನಲ್ಲಿ ಧರ್ಮ ತನ್ನ ಪ್ರಸರಣ ಕಾರ್ಯಕ್ಕೆ ಕಲೆಯನ್ನು ; ಕಲೆ ತನ್ನ ಉಳಿವಿಗೆ ಧರ್ಮವನ್ನು ಆಶ್ರಯಿಸಿರುವುದು ನಿಜ ಹಾಗೂ ಇವರೆಡೂ ಪರಸ್ಪರ ಪೂರಕವಾಗಿ ಇಂದಿಗೂ ಉಳಿದು ಬಂದಿರುವುದೂ ಸಹ ನಿಜ.

ಹಾಗೆಂದು ಎಲ್ಲ ಧರ್ಮಗಳು ಕಲೆಯನ್ನು ಆಶ್ರಯಿಸಿಲ್ಲ. ಕಲಾಕೃತಿಗಳೆಲ್ಲವೂ ಧಾರ್ಮಿಕ ಅಂಶವನ್ನಷ್ಟೆ ಚಿತ್ರಿಸಿದ್ದು, ಕಲೆಗೆ ಆದ್ಯತೆ ನೀಡದ ಧರ್ಮಗಳು ಒತ್ತಾಯದಿಂದ ಇಲ್ಲವೆ

ಶಿಕ್ಷೆಯ ಹೆದರಿಕೆಯಿಂದ ಉಳಿಯುವಂತಾದರೆ, ಧರ್ಮ ವಿಹೀನವಾದ ಕಲೆ ಕೇವಲ ದೃಶ್ಯ ಮಾಧ್ಯಮವಾಗಿ ಅರ್ಥವಂತಿಕೆಯಿಂದ ದೂರ ಸರಿಯುತ್ತದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ಚಿತ್ರಕಲೆಯಲ್ಲಿ ಕಂಡುಬರುವ ಧಾರ್ಮಿಕ ಅಂಶಗಳ ಬಗ್ಗೆ ಸ್ಥೂಲವಾದ ನೋಟ ಹರಿಸಬಹುದು. ಇಲ್ಲಿಯೂ ಚಿತ್ರಗಳಲ್ಲಿ ಧರ್ಮದ ಅಂಶ ಕುರಿತ ಚಿತ್ರಣ ಒಂದಾದರೆ ಇನ್ನೊಂದು ಧರ್ಮದ ಆಚರಣೆಯ ಅಂಗವಾಗಿ ಇಲ್ಲವೇ ಪೂರಕವಾಗಿ ಚಿತ್ರಕಲೆ ಬಳಕೆಯಾಗುವುದು ಇನ್ನೊಂದು.

'ಧರ್ಮ' ಎಂಬುದು ಪರಿಪೂರ್ಣವಾಗಿದ್ದು ಹಲವಾರು ಸಂಕೇತಗಳಿಂದ ಕೂಡಿದ ದೇವರು, ದೇವತೆ, ಪರಿವಾರದೇವತೆ ಮುಂತಾದವುಗಳು ಮೂರ್ತರೂಪವನ್ನು ಪಡೆಯಬಹುದಲ್ಲದೆ, ಒಂದು ತತ್ತ್ವ, ಜಾತಿ, ವರ್ಗ, ವರ್ಣ ಇತ್ಯಾದಿಗಳಿಂದಲೂ ಒಳಗೊಡಿರುತ್ತದೆ. ಎಂದರೆ ಸ್ಪಷ್ಟವಾಗಿ ಗುರುತಿಸಬಹುದಾದಂತಹ ಪ್ರತ್ಯೇಕತೆಯನ್ನು ಧರ್ಮಗಳು ಹೊಂದಿರುತ್ತವೆ. ದೇವರ ಅಸ್ತಿತ್ವವನ್ನು ಒಪ್ಪಿಕೊಳ್ಳದ ಧರ್ಮಗಳು ಆಯಾ ಧರ್ಮವನ್ನು ಆರಂಭಿಸಿ ಪ್ರಚುರ ಪಡಿಸಿದ ಮೂಲ ವ್ಯಕ್ತಿಯನ್ನೋ ಅದೇ ಪರಂಪರೆಯಲ್ಲಿ ಬಂದ ಆಚಾರ್ಯಪುರುಷರನ್ನೋ ಸಾಂಕೇತಿಕವಾಗಿ ಇರಿಸಿಕೊಳ್ಳುತ್ತವೆ.

ಧರ್ಮದ ವಿವರಣೆ ನೀಡುವಾಗ ಆಯಾ ಧರ್ಮದಲ್ಲಿ ಬಂದ ಚಿಂತಕರು ಅದನ್ನು ಒಂದು ತತ್ವವಾಗಿರಿಸಿ ಹೇಳುವುದುಂಟು. ಅವು ಸಾಮಾನ್ಯ ಮನುಷ್ಯನಿಗೆ ಅಥವಾ ಬೇರೆಯ ಧರ್ಮಾವಲಂಬಿಗೆ ಸುಲಭವಾಗಿ ಅರ್ಥ ವಾಗದೇ ಹೋಗಬಹುದು. ಅಂತಹ ವೇಳೆಯಲ್ಲಿ ತತ್ವಗಳನ್ನು ಸಲಭವಾದ ಕಥೆಗಳ ಮೂಲಕ ಹೇಳುವುದುಂಟು. ಚಿತ್ರ ಮತ್ತು ಶಿಲ್ಪಕಲಾವಿದರು ಅನುಸರಿಸುವುದು ಈ ಬಗೆಯ ಕಥಾನಕಗಳನ್ನೇ.

ಇತಿಹಾಸ ಪೂರ್ವದ ಮನುಷ್ಯನಿಗೆ ಯಾವುದೇ ಒಂದು ನಿಶ್ಚಿತ ಧರ್ಮ ಅಥವ ಮತ ಇರಲಿಲ್ಲವಾಗಿ ಆತನು ಗುಹೆಗಳಲ್ಲಿ ಬರೆದ ಚಿತ್ರಗಳಲ್ಲಿ ಮತ ಸಂಬಂಧವಾದ ಚಿತ್ರಣಗಳು ಕಂಡು ಬರುವುದಿಲ್ಲ. ಆದರೂ ಬಳ್ಳಾರಿ ಬಳಿಯ ಕಪ್ಪಗಲ್ಲಿನ ಗುಹಾ ಚಿತ್ರವೊಂದರಲ್ಲಿ ಲಿಂಗ ಹಾಗೂ ವೃಷಭದ ಚಿತ್ರ ಹಾಗೂ ಪಿಕ್ಲಿಹಾಲ್, ಮಾಧವಪುರ ಇತ್ಯಾದಿ ಕಡೆಗಳಲ್ಲಿ ದೊರೆತ ಅವಶೇಷಗಳಲ್ಲಿ ಶೈವ ಪರವಾದ ಕೆಲವು ಗೊಂಬೆಗಳು ಇದ್ದು ಇವು ಧಾರ್ಮಿಕ ಪರಿಕಲ್ಪನೆಯ ಆರಂಭ ಕಾಲದ್ದವಾಗಿರಬಹುದು.

ಕ್ರಿಸ್ತಪೂರ್ವದಲ್ಲೆ ವೈದಿಕ ಧರ್ಮ ಅಸ್ತಿತ್ವವನ್ನು ಪಡೆದಿತ್ತಾದರೂ, ಕಲೆಗಾಗಲೀ ಮೂರ್ತ ಸ್ವರೂಪದ ಅಭಿವ್ಯಕ್ತಿಗಾಗಲೀ ಹೆಚ್ಚಿನ ಪ್ರಾಶಸ್ತ್ಯನೀಡಿದಂತೆ ಕಂಡು ಬರುವುದಿಲ್ಲ. ಆದರೆ ಬೌದ್ಧ ಮತ್ತು ಜೈನ ಧರ್ಮಗಳು ಕಲೆಯನ್ನು ತನ್ನ ಧರ್ಮ ಪ್ರಸರಣಕಾರ್ಯಕ್ಕೆ ಬಳಸಿಕೊಂಡಿತು. ಇಂದಿಗೂ ಕಲೆ ಅದರಲ್ಲೂ ಜಾನಪದ ಕಲೆ ಕೆಳವರ್ಗದವರ ಸ್ವತ್ತಾಗಿದ್ದು ಅಂದಿನ ಬೌದ್ಧ-ಜೈನ ಧರ್ಮಗಳು ಕೆಳವರ್ಗದ ಜನರನ್ನು ತನ್ನ ಮತಕ್ಕೆ ಸೆಳೆಯುವಾಗ ಅವರ ಕಲೆಯನ್ನೂ ಪೂರಕವಾಗಿ ಬಳಸಿಕೊಂಡಿರಬಹುದು. ಅಲ್ಲದೆ ಬೌದ್ಧ-ಜೈನ ಧಾರ್ಮಿಕ

ಪ್ರಸರಣಕಾರರು ಊರೂರು ತಿರುಗುವಾಗ ಸಹಜವಾಗಿ ಚಿಕ್ಕ ಅಳತೆಯ ಚಿತ್ರ ಶಿಲ್ಪ ಗಳನ್ನು ಕೊಂಡೊಯ್ಯುತ್ತಿದ್ದು ಕಲೆ ಆ ಮೂಲಕ ಬೆಳೆಯಲು ಸಾಧ್ಯವಾಯಿತು. ಬೌದ್ಧಮತದಲ್ಲಿ ಹೀನಯಾನ, ಮಹಾಯಾನ ಹಾಗೂ ವಜ್ರಯಾನವೆಂಬ ವಿವಿಧ ಕಾಲಘಟ್ಟಗಳನ್ನು ಗುರುತಿಸಲಾಗಿದೆ. ಹೀನಯಾನ ಅಥವ ಆರಂಭಕಾಲದ ಬೌದ್ಧ ಧರ್ಮದಲ್ಲಿ ಬುದ್ಧನ ಪಾದುಕೆ ವೃಕ್ಷಗಳ ಇತ್ಯಾದಿ ಸಾಂಕೇತಿಕ ಅಭಿವ್ಯಕ್ತಿಯಿದ್ದು ಗುಲಬರ್ಗ ಜಿಲ್ಲೆಯ ಸನ್ನತಿ ಮುಂತಾದೆಡೆಯಲ್ಲಿ ಈ ಬಗೆಯ ಶಿಲ್ಪಗಳನ್ನು ಕಾಣಬಹುದು. ಮಹಾಯಾನ ಕಾಲದಲ್ಲಿ ಬುದ್ಧ ಹಾಗೂ ಆತನ ಜನ್ಮಾಂತರದ ಜಾತಕ ಕಥೆಗಳಿಗೆ ಸಂಬಂಧಿಸಿದಂತೆ ಅವುಗಳ ಚಿತ್ರಣ ಅಜಂತೆಯೂ ಸೇರಿದಂತೆ ಭಾರತದ ಹಲವಾರು ಗುಹಾಂತರ ದೇವಾಲಯಗಳಲ್ಲಿ ಕಾಣಬಹುದು. ಕದ್ರಿ, ಹಂಪೆ, ಹೈಗುಂದ, ಗುಲಬರ್ಗ ಇತ್ಯಾದಿ ಕಡೆಗಳಲ್ಲಿ ಬುದ್ಧನ ಹಲವಾರು ಮೂರ್ತಿಶಿಲ್ಪಗಳು ದೊರೆತಿವೆ. ವಜ್ರಯಾನ ಪಂಥದ ಕಾಲದಲ್ಲಿ ತಾರಾಭಗವತಿಯ ಆರಾಧನೆಯಿದ್ದು ಆಕೆಯ ಶಿಲ್ಪಗಳು ಬಳ್ಳಿಗಾವೆ, ಕೋಳಿವಾಡಗಳಲ್ಲಿ ದೊರೆತಿವೆ. ಇದೇ ವೇಳೆಯಲ್ಲಿಬುದ್ಧ ಒಂದು ಅವತಾರವಾಗಿದ್ದು ನಗ್ನನಾಗಿ ನಿಂತ ಬುದ್ಧನ ಚಿತ್ರ ಶಿಲ್ಪಗಳು ಹಂಪೆ, ಕೊಳ್ಳೆಗಾಲ, ಶೃಂಗೇರಿ ಇತ್ಯಾದಿ ಕಡೆಗಳಲ್ಲಿ ಕಂಡು ಬರುತ್ತವೆ.

ಜೈನ ಧರ್ಮವೂ ಕರ್ನಾಟಕಕ್ಕೆ ಹೊರಗಿನಿಂದ ಬಂದುದಾದರೂ ಕನ್ನಡದ ಮೊದಮೊದಲ ಜೈನ ಗ್ರಂಥಗಳಲ್ಲಿ ಚಿತ್ರರಚನೆ ಕುರಿತು, ಚಿತ್ರ ಕಲೆಯ ಪಾರಿಭಾಷಿಕ ಪದಗಳನ್ನು ಕುರಿತ ಮಾಹಿತಿದೊರೆಯತ್ತವೆ. ಬಾದಾಮಿ ಚಾಳುಕ್ಯರ ಕಾಲದಿಂದಲೇ ಜೈನ ಮತಕ್ಕೆ ಸಂಬಂಧಿಸಿದ ಬಸ್ತಿ ಇತ್ಯಾದಿ ಧಾರ್ಮಿಕ ಕಟ್ಟಡಗಳು ಕರ್ನಾಟಕದಲ್ಲಿ ಕಂಡುಬರುತ್ತದೆ. ಈ ಕಾಲದ 'ಶಂಖ ಬಸ್ತಿ' ಲಕ್ಷ್ಮೇಶ್ವರದಲ್ಲಿರುವುದಲ್ಲದೆ ಬಾದಾಮಿಯ ಗುಹಾಂತರ ದೇವಾಲಯಗಳಲ್ಲಿ ಒಂದು ಜೈನ ಧರ್ಮಕ್ಕೆ ಮೀಸಲಾಗಿದೆ.ಅನಂತರ ಎಲ್ಲ ರಾಜಕೀಯ ಪಕ್ಷಗಳು ಜೈನಧರ್ಮಕ್ಕೆ ಆ ಮೂಲಕ ಅವರ ಧಾರ್ಮಿಕ ವಾಸ್ತುಶಿಲ್ಪ, ಹಾಗೂ ಶಿಲ್ಪಗಳಿಗೆ ಉತ್ತೇಜನ ನೀಡಿದ್ದು ಕರ್ನಾಟಕದಾದ್ಯಂತ ಇಂದಿಗೂ ಕಾಣಬಹುದಾಗಿದೆ. ಶ್ರವಣಬೆಳಗೊಳದ ಗೊಮ್ಮಟೇಶ್ವರ ತನ್ನ ಔನ್ನತ್ಯದಿಂದಾಗಿ ಲೋಕವಿಖ್ಯಾತವಾಗಿದೆ. ಜೈನಧರ್ಮವು ತ್ಯಾಗ, ಅಹಿಂಸೆ, ಸರಳತೆಗಳಿಗೆ ಹೆಚ್ಚು ಒತ್ತು ನೀಡಿದ್ದು ಅದರ ಶಿಲ್ಪ, ವಾಸ್ತುಶಿಲ್ಪಗಳಲ್ಲಿಯೂ ಈ ಸರಳತೆಯನ್ನು ಗುರುತಿಸಬಹುದು. ಶಿಲ್ಪಗಳನ್ನು ತ್ಯಾಗವೇ ಮೈವೆತ್ತುಬಂದಂತೆ ದೂರದಿಗಂತದಲ್ಲಿ ದೃಷ್ಟಿ ನೆಟ್ಟು ವೈರಾಗ್ಯ ಮೂರ್ತಿಗಳನ್ನಾಗಿ ಕಂಡರಿಸುವಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ.

ಶ್ರವಣಬೆಳಗೊಳದ ಶ್ರೀಮಠದಲ್ಲಿಯ ಭಿತ್ತಿ ಚಿತ್ರ ಕರ್ನಾಟಕದಲ್ಲಿ ಜೈನ ಚಿತ್ರಕಲೆಯ ಉತ್ತಮ ಉದಾಹರಣೆ. ಪಾರ್ಶ್ವನಾಥ ತೀರ್ಥಂಕರರ ಜೀವನ ಚರಿತ್ರೆಗೆ ಸಂಬಂಧಿಸಿದ ಚಿತ್ರಣದಲ್ಲಿ ಮೈಸೂರು ಚಿತ್ರಕಲಾ ಶೈಲಿಯನ್ನು ಕಾಣಬಹುದು. ಇನ್ನೊಂದು ಬದಿಯಲ್ಲಿ ಜೈನ ಅರಸು ನಾಗಕುಮಾರನ ಕಥೆಯನ್ನು ಚಿತ್ರಿಸಿದೆ. ಭಿತ್ತಿಯನ್ನು ಚಿಕ್ಕ ಚಿಕ್ಕ ಅಂಕಣಗಳನ್ನಾಗಿ ಮಾಡಿಕೊಂಡು ನಿರೂಪಣಾ ವಿಧಾನದಲ್ಲಿ ಚಿತ್ರಿಸಿದೆಯಲ್ಲದೆ ಸಮವಸರಣದ ವೃತ್ತಾಕಾರ

ರಚನೆ ದೊಡ್ಡ ಹರಹಿನಲ್ಲಿದ್ದು ಕಲಾವಿದನ ಹಸ್ತ ಕೌಶಲದೊಂದಿಗೆ ಧಾರ್ಮಿಕ ಚಿತ್ರಣವೂ ಮಿಳಿತಗೊಂಡಿದೆಯೆನ್ನಬಹುದು.

ಶೈವ ಧಾರ್ಮಿಕ ಚಿತ್ರಗಳು ತಮಿಳುನಾಡಿನಲ್ಲಿ ಆರಂಭಕಾಲದಿಂದ ಕಂಡು ಬರುತ್ತವೆಯಾದರೂ ಕರ್ನಾಟಕದಲ್ಲಿ ಬಾದಾಮಿ ಚಾಳುಕ್ಯರು ಶೈವಧರ್ಮಕ್ಕೂ ಆಶ್ರಯ ನೀಡಿದ್ದು ಅಲ್ಲಿಯ ಗುಹಾಲಯದಲ್ಲಿ ನಟರಾಜನೇ ಮೊದಲಾದ ಹಲವಾರು ಶಿಲ್ಪಗಳು ಕಲೆಯದೃಷ್ಟಿಯಿಂದ ಅದ್ಭುತವಾದ ರಚನೆಗಳು. ಐಹೊಳೆ, ಪಟ್ಟದಕಲ್ಲಿನಲ್ಲಿಯ ರಾವಳಪಹಾಡಿ, ಮಲ್ಲಿಕಾರ್ಜುನ, ಪಾಪನಾಥ ಇತ್ಯಾದಿ ದೇವಾಲಯಗಳೂ ಕಲಾತ್ಮಕ ರಚನೆಗಳು. ಚಿತ್ರಕಲೆಯಲ್ಲಿ ಹಂಪೆಯ ವಿರೂಪಾಕ್ಷ ದೇವಾಲಯ, ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯ, ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯ, ಇತ್ಯಾದಿ ದೇವಾಲಯಗಳಲ್ಲಿ ಪ್ರಮುಖವಾಗಿಯೂ, ಸೀಬಿ, ಕೆರೆಗೋಡಿರಂಗಾಪುರ, ಹರದನಹಳ್ಳಿ, ತುಮಕೂರು ಇತ್ಯಾದಿ ಕಡೆಗಳಲ್ಲಿ ಉಳಿದ ವಿಷಯಗಳ ಜೊತೆಯಲ್ಲಿ ಶೈವ ಪರವಾದ ಚಿತ್ರಣಗಳನ್ನು ಕಾಣಬಹುದು. ಈ ಚಿತ್ರ, ಶಿಲ್ಪಗಳಲ್ಲಿ ಶಿವನ 'ಪಂಚವಿಂಶತಿ' ರೂಪಗಳಿಗೆ ಸಂಬಂಧಿಸಿದ ಇಲ್ಲವೆ ಶೈವ ಭಕ್ತಾದಿಗಳಿಗೆ ಸಂಬಂಧಿಸಿದ ಚಿತ್ರಣಗಳೇ ಅಧಿಕವಾಗಿವೆ. ಗರ್ಭಗುಡಿಯ 'ಲಿಂಗ' ಹೆಚ್ಚು ಕಲಾತ್ಮಕವಾಗಿಲ್ಲವಾದರೂ ಒಳ-ಹೊರ ಭಿತ್ತಿಗಳಲ್ಲಿ, ಗೋಚರವಾಗುವ ಬಿಡಿ ಶಿಲ್ಪಗಳು ಅವುಗಳ ಲಾಲಿತ್ಯ, ಚಲನ ಶೀಲತೆಯಿಂದಾಗಿ ಮನೋಹರ ರಚನೆಗಳಾಗಿವೆ.

ಶೈವ ಧಾರ್ಮಿಕ ಚಿತ್ರಣಗಳಲ್ಲಿ ಅವರದೇ ಆದ ಉದ್ಧರಣೆಯ ವಚನಗಳು ಉಲ್ಲೇಖಾರ್ಹವಾದುದು. ಸುಮಾರು ೩೦ ಅಡಿಗಳಷ್ಟು ಉದ್ದವಾದ ಹಲವಾರು ಅಂಕಣಗಳಿಂದ ಚಿತ್ರಿತವಾದ ಇವುಗಳಲ್ಲಿ ಧಾರ್ಮಿಕ ಚಿತ್ರಣಗಳು ಇರುತ್ತವೆ. ಶಿವ ಶಕ್ತಿಯರು, ಬಸವ, ಲಿಂಗ, ಊರ್ಧ್ವಮುಖ ಹಾಗೂ, ಅಧೋಮುಖ ಕುಂಡಲಿನಿಗಳಲ್ಲದೆ ಬೀಜ ರೂಪದ ರಹಸ್ಯ ಮಂತ್ರಗಳು ಹಲವಾರು ಆಕಾರಗಳಲ್ಲಿ ಚಿತ್ರಿತವಾಗಿರುತ್ತವೆ. ವೀರಶೈವ ಮಠಗಳ ಗುರುಗಳು ತಮ್ಮ ಉತ್ತರಾಧಿಕಾರಿಗೆ ರಹಸ್ಯ ಮಂತ್ರೋಪದೇಶಮಾಡಿ ನೀಡುವ ವಸ್ತುಗಳಲ್ಲಿ ಉದ್ಧರಣೆಯ ವಚನಗಳೂ ಒಂದಾಗಿದ್ದು ಕಾಗದ, ಬಟ್ಟೆ ಇಲ್ಲವೆ ತಾಳೆಯೋಲೆಯ ಮೇಲೆ ರಚಿತವಾದ ಚಿತ್ರಗಳು ಕಲಾತ್ಮಕವಾಗಿದ್ದು ಬಿಡಿಯಾಗಿ ನೋಡಿದಾಗ ಕಲಾಕೃತಿಗಳೆಂಬಂತೆ ಕಂಡುಬರುತ್ತದೆ.

ವೈಷ್ಣವ ಮತದ ವಾಸ್ತುಶಿಲ್ಪ, ಶಿಲ್ಪಗಳು ಕದಂಬ ಚಾಳುಕ್ಯರ ಕಾಲದಿಂದಲೇ ಕಾಣಿಸಿಕೊಂಡಿದ್ದರೂ ಕರ್ನಾಟಕದಲ್ಲಿ ಶೈವವಾಸ್ತುವಿಗೆ ಹೋಲಿಸಿದರೆ ಕಡಿಮೆಯೆಂದೇ ಹೇಳಬಹುದು. ಕರ್ನಾಟಕದ, ವಿಶೇಷವಾಗಿ ಉತ್ತರ ಕರ್ನಾಟಕದ ಅನೇಕ ಪುರಾತನ ವೈಷ್ಣವ ದೇವಾಲಯಗಳು ಭಗ್ನವಾಗಿ ಪೂಜಾರಹಿತ ಸ್ಥಿತಿಯನ್ನು ತಲಪಿವೆ. ಇದಕ್ಕೆ ಹಲವಾರು ಕಾರಣಗಳು ಇರಬಹುದಾದರೂ ಈ ಎಲ್ಲ ದೇವಾಲಯಗಳ ಶಿಲ್ಪಗಳಲ್ಲಿ ಭಾಗವತ ರಾಮಾಯಣ ಭಾರತದ ಕಥಾ ಮಾಲಿಕೆಗಳು ವಿಷ್ಣುವಿನ ದಶಾವತಾರಗಳು, ಸಾಲಭಂಜಿಕೆ,

ಮೋಹಿನಿಯದು ಕಣ್ಮನ ಸೆಳೆಯುವಂತೆ ಚಿತ್ರಿತವಾಗಿವೆ. ಶೃಂಗಾರ ಶಿಲ್ಪಗಳಿಗೂ ಕೊರತೆಯಿಲ್ಲ. ಭಿತ್ತಿಚಿತ್ರಗಳಲ್ಲಿಯೂ ಈ ಅಂಶಗಳೇ ಚಿತ್ರಿತವಾಗಿರುವುದನ್ನು ಸೀಬಿ, ತುಮಕೂರು, ನರಗುಂದ, ನಿಪ್ಪಾಣಿ ಹಾಗೂ ಮೈಸೂರಿನ ಕೆಲವು ದೇವಾಲಯಗಳಲ್ಲಿ ಕಾಣಬಹುದು.

ಮಹಮದೀಯ ಧರ್ಮದಲ್ಲಿ ವ್ಯಕ್ತಿಗಳ ಚಿತ್ರಣ ನಿಷಿದ್ಧವಾಗಿದ್ದರೂ ಅವರ ಧಾರ್ಮಿಕ ಮಂದಿರಗಳಲ್ಲಿ ಹೂ ಬಳ್ಳಿಗಳ ವಿನ್ಯಾಸಗಳು, ಅಲಂಕರಣಗಳು, ಸುಂದರವಾದ ಲಿಪಿ ವಿನ್ಯಾಸ (ಕ್ಯಾಲಿಗ್ರಫಿ)ಗಳ ಚಿತ್ರಣಗಳು ಕಾಣಬಹುದು ಇವು ಗುಲಬರ್ಗ, ಬೀದರ್, ಬಿಜಾಪುರ ಜಿಲ್ಲೆಯ ಹಲವಾರು ಮುಸ್ಲಿಂ ಧಾರ್ಮಿಕ ಸ್ಥಳಗಳಲ್ಲಿ ಮನೋಹರವಾಗಿ ಚಿತ್ರಿತವಾಗಿವೆ.

ಕ್ರಿಶ್ಚಿಯನ್ ಧಾರ್ಮಿಕ ಕಥೆಗಳ ಹಾಗೂ ಏಸುವಿನ ಜೀವನಕ್ಕೆ ಸಂಬಂಧಿಸಿದ ವರ್ಣ ಚಿತ್ರಗಳೂ ಕರ್ನಾಟಕದಲ್ಲಿದ್ದು ಇವು ಮಂಗಳೂರಿನ ಸೆಂಟ್ ಅಲಾಸಿಯಸ್, ಕುಲಶೇಖರ ಜಪ್ಪು ಇತ್ಯಾದಿ ಚರ್ಚ್‌ಗಳಲ್ಲಿ ಅಲ್ಲದೆ ಬಳಿಯ ಹಲವಾರು ಸ್ಥಳಗಳಲ್ಲಿ ಚಿತ್ರಿತವಾಗಿರುವುದು ಕಾಣಬಹುದು. ಇವುಗಳೂ ಸೇರಿದಂತೆ ಬೆಂಗಳೂರು, ಮೈಸೂರುಗಳ ಕೆಲವಾರು ಚರ್ಚ್‌ಗಳಲ್ಲಿ ಗಾಜಿನ ಫಲಕದ ಮೇಲೆ ರಚಿಸಿದ ಚಿತ್ರಗಳು ದೊರೆಯುತ್ತವೆ.

ಹೀಗೆ ಎಲ್ಲ ಪ್ರಮುಖ ಧರ್ಮಗಳು ಚಿತ್ರಶಿಲ್ಪಗಳ ಮೂಲಕ ಕರ್ನಾಟಕ ಜನತೆಗೆ ಪರಿಚಿತವಾಗಿದ್ದು, ಧರ್ಮ ಹಾಗೂ ಕಲೆಗಳು ಪರಸ್ಪರ ಬೆಳೆಯಲು ನೆರವಾಗಿದ್ದು ಕಂಡುಬರುತ್ತದೆ. ಆದರೆ ಕಥೆಯ ದೃಷ್ಟಿಯಿಂದ ಅಥವ ದೇವಾಧಿದೇವರ ಆಯುಧ, ನಿಲವು, ವಾಹನ ಇತ್ಯಾದಿ ಸಂಕೇತಗಳಲ್ಲಿ ಹೆಚ್ಚಿನ ಬದಲಾವಣೆ ಸಾಧ್ಯವಿಲ್ಲವಾದ್ದರಿಂದ ಕಲಾವಿದನಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆಯಲಿಲ್ಲವಾಗಿದ್ದು ಕೃತಿಗಳು ಏಕತಾನತೆಯಿಂದ ಬಳಲುವಂತಾಯಿತು. ಆದರೆ ವಿವಿಧ ಪ್ರದೇಶಗಳಲ್ಲಿ ವಿವಿಧ ಅರಸುಮನೆತನಗಳ ಕಾಲದಲ್ಲಿ ಹೊರಬಂದ ಕೃತಿಗಳಿಗೆ ಬಳಸಿದ ಶಿಲೆ, ಲೋಹ ಇತ್ಯಾದಿಗಳೂ ವೈವಿಧ್ಯವಾಗಿದ್ದು ಶೈಲಿಯಲ್ಲಿ (ಕೃತಿ ರಚನೆಯ) ಬದಲಾವಣೆಗಳು ಕಂಡುಬರುತ್ತವೆ. ಅಲ್ಲದೆ ಕ್ರಿಯಾಶೀಲವಾಗಿರುವ ಶಿಲ್ಪಗಳಲ್ಲಿ ಅಥವ ಬೃಹದಾಕಾರದ ವಾಸ್ತು ಶಿಲ್ಪದಲ್ಲಿ ಕಲಾವಿದನ ಪ್ರತಿಭೆ, ಸೃಜನ ಶೀಲತೆಗಳನ್ನು ಕಾಣಬಹುದು.

ಆರಂಭದಲ್ಲಿ ಹೇಳಿದಂತೆ ಒಂದು ಧಾರ್ಮಿಕ ಆಚರಣೆಯ ಅಂಗವಾಗಿ ಶಿಲ್ಪ, ಚಿತ್ರಗಳು ಪಾಲುಗೊಳ್ಳುವುದನ್ನು ಸಂಕ್ಷಿಪ್ತವಾಗಿ ನೋಡಬಹುದು. ಇವುಗಳು ಜನಪದ ಅಥವ ಉಪಸಂಸ್ಕೃತಿಯ ವಿಧಿಕ್ರಿಯೆಯಲ್ಲಿ ಕಂಡು ಬಂದು ಆಚರಣೆಯ ಆರಂಭದಲ್ಲಿ ಮೂರ್ತಗೊಂಡು ಆಚರಣೆಯ ನಂತರದಲ್ಲಿ ವಿಸರ್ಜನೆಗೊಳ್ಳುವ 'ಕ್ಷಣಿಕತ್ವ' ಇವುಗಳಿಗಿರುವುದರಿಂದ ಹೆಚ್ಚಿನ ಪ್ರಕಾಶವನ್ನು ಇವು ಕಂಡಿಲ್ಲ. ಆದರೂ ಅವುಗಳ ವೈವಿಧ್ಯತೆ, ಮಾಧ್ಯಮ,ತಯಾರಿಕೆ, ಬಳಕೆ, ಆರಾಧನೆ - ವಿಧಿಕ್ರಿಯೆ ಹಾಗೂ ಅಂತಿಮವಾಗಿ ವಿಜರ್ಸನೆ ಎಲ್ಲವೂ ಕಲಾತ್ಮಕವಾದ ಅಭಿವ್ಯಕ್ತಿಯಿಂದ ಕೂಡಿರುವುದು ಕಂಡುಬರುತ್ತವೆ.

ಕಾಮನ ಹಬ್ಬದಲ್ಲಿ ರತಿಮನ್ಮಥರ ಚಿತ್ರ ಶಿಲ್ಪಗಳು ರಚಿಸುವುದು ನಾಡಿನಾದ್ಯಂತ ಕಾಣಬಹುದು. ಅಂತೆಯೇ ನಾಗ, ತೇರು, ಸೂರ್ಯ-ಚಂದ್ರಮಂಡಲಗಳು, ಬುಧ, ಬೃಹಸ್ಪತಿ, ಗಣೇಶ-ಪಾರ್ವತಿ, ಸೀಗಿ ಚಿತ್ರಗಳು, ಶುಭಕಾರ್ಯಗಳಲ್ಲಿ ಗೋಡೆಯ ಮೇಲಿನ 'ಹಸೆಗೋಡೆ ಚಿತ್ರಗಳು' ಗೋಡೆ ಹಾಗೂ ನೆಲದ ಮೇಲಿನ ರಂಗೋಲಿಗಳು ವಾಸ್ತು ಪುರುಷ ಇತ್ಯಾದಿ ಆಚರಣೆಯಲ್ಲಿ ನೆಲದ ಮೇಲೆ ಬರೆಯುವ ಚಿತ್ರಗಳು ಮುಂತಾದ ಅನೇಕ ಉದಾಹರಣೆಗಳನ್ನು ನೀಡಬಹುದು.

ಕೇರಳವೂ ಸೇರಿದಂತೆ ದಕ್ಷಿಣ ಕರಾವಳಿಯುದ್ದಕ್ಕೂ ನಾಗ ಹಾಗೂ ಹಲವಾರು ಭೂತಗಳ ಆರಾಧನೆ ನಡೆಯುತ್ತಿದ್ದು ಆಚರಣೆಯ ಕಾಲದಲ್ಲಿ ಪಂಚವರ್ಣಗಳಿಂದ (ಕೆಂಪು, ಹಳದಿ, ಬಿಳಿ, ಹಸಿರು, ಕಪ್ಪು ಇಲ್ಲವೆ ನೀಲಿ) ಬೃಹದಾಕರದ ನಾಗ ಹಾಗೂ ಆಯಾ ಭೂತಗಳ ಚಿತ್ರಣಗಳನ್ನು ನೆಲದ ಮೇಲೆ ಬಿಡಿಸುತ್ತಾರೆ. ಅಂತೆಯೇ ವಾಸ್ತುಪುರುಷ ಇಲ್ಲವೆ ಮಾಂತ್ರಿಕ ಆಚರಣೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಇವೇ ಪಂಚವರ್ಣದಿಂದ ಬಿಡಿಸುತ್ತಾರೆ. ಇವುಗಳು ಇಂದಿನ ಆಧುನಿಕ ಚಿತ್ರಕಲೆಯನ್ನು ಹೋಲುವಂತೆ ಅಮೂರ್ತವಾದ ಆಕಾರದಿಂದ ಕೂಡಿದ್ದು, ವರ್ಣ ಪಟ್ಟಿಕೆಗಳನ್ನು ವೈವಿಧ್ಯಮಯವಾಗಿ ಕಲಾತ್ಮಕವಾಗಿ ಹೊಂದಿದ್ದು ಆದರ್ಶಣೀಯವಾಗಿ ಕಾಣುವಂತಿರುತ್ತವೆ.

ಜಾನಪದ ಅಥವ ಹರಕೆಯ ಶಿಲ್ಪಗಳಲ್ಲಿಯ ವೈವಿಧ್ಯತೆ ಬಣ್ಣಿಸಲಸದಳವಾದುದು. ಮಣ್ಣು, ಗಾರೆ, ಮರ, ಕಲ್ಲು, ಚರ್ಮ, ಚಿನ್ನ ,ಬೆಳ್ಳಿ ಇತ್ಯಾದಿ ಹಲವಾರು ಮಾಧ್ಯಮಗಳಲ್ಲಿ ನೋಡಸಿಗುತ್ತವೆ. ಸಿರಿಯಾಳನ ಬೃಹದಾಕಾರದ ಶಿಲ್ಪ ರಚಿಸಿ ಕೇವಲ ಮೂರು ಗಂಟೆಗಳ ನಂತರ ವಿಸರ್ಜಿಸಿದರೆ, ಜೋಕುಮಾರನ ಶಿಲ್ಪ ಏಳುದಿನಗಳಕಾಲ ಅಸ್ತಿತ್ವವನ್ನು ಪಡೆದಿರುತ್ತದೆ. ಸುಡಾವೆ ಮಣ್ಣಿನ (ಟೆರ್ರಕೋಟ) ಶಿಲ್ಪಗಳು ಹೆಚ್ಚುಕಾಲ ಉಳಿಯಬಹುದು. ಶಿಲಾಶಿಲ್ಪಗಳಿಗೆ ಇನ್ನು ಹೆಚ್ಚಿನ ಆಯುರ್ಮಾನ ದೊರೆಯುತ್ತದೆ.

ಹರಕೆಯೊಪ್ಪಿಸುವ ಶಿಲ್ಪಗಳು ಮನಸ್ಸಿನ ಭಾವನೆಗಳ ಧಾರ್ಮಿಕ ರೂಪದ್ದಾಗಿರುತ್ತವೆ. ದೇಹದ ಯಾವುದಾದರೂ ಭಾಗಕ್ಕೆ ತೊಂದರೆಯಾದರೆ ಆಭಾಗದ, ಇಲ್ಲವೆ ತಮ್ಮ ಧನ, ಕನಕ, ವಸ್ತು, ವಾಹನಗಳಿಗೆ ಧಕ್ಕೆಯುಂಟಾದರೆ ಇಲ್ಲವೆ ಬೇಡಿಕೆ ಬಯಸಿದರೆ ಅವುಗಳ ರೂಪವನ್ನು ಮಾಡಿಸಿ ಹರಕೆಯೊಪ್ಪಿಸುವುದುಂಟು. ಯಾವುದೇ ಉರಗ-ಪಶು-ಪಕ್ಷಿಗಳಿಂದ ತೊಂದರೆಯುಂಟಾಗದಂತೆ ಅವುಗಳ ಶಿಲ್ಪ ಮಾಡಿಸಬಹುದು. ಇಲ್ಲವೆ ತಾನು ತೊಡಗಬಹುದಾದ ವ್ಯಾಪಾರ - ವ್ಯವಹಾರಗಳಿಗೆ ಸಂಬಂಧಿಸಿದಂತಹ ವಸ್ತುಗಳನ್ನು ರೂಪಿಸಿ ಅರ್ಪಿಸಬಹುದು. ದಕ್ಷಿಣಕನ್ನಡದ ಸುರಿಯೆ ಎಂಬಲ್ಲಿ ಈ ಬಗೆಯ ಲಕ್ಷಾಂತರ ಶಿಲ್ಪಗಳು ಭಕ್ತಾದಿಗಳಿಂದ ಕಾಣಿಕೆಯ ರೂಪದಲ್ಲಿಗುಡ್ಡೆಯಾಗಿ ಬಿದ್ದಿವೆ.

ಕೊಡಗು ಜಿಲ್ಲೆಯಾದ್ಯಂತ, ಮನದ ಕಾಮನೆಗೆ ಸೇರಿದ : ಅತೃಪ್ತ ಆಸೆಗಳ; ಹಿರಿಯರ ವಾಕ್ಯ ಪರಿಪಾಲನೆಯ ಇಲ್ಲವೆ ಧರ್ಮ-ಮೋಕ್ಷಾರ್ಥವಾಗಿ ಇತ್ಯಾದಿ ಹಲವಾರು ಕಾರಣಗಳಿಂದ

ಕೂಡಿದ ಹರಕೆಯ ಶಿಲ್ಪಗಳು ಕಂಡುಬಂದಿದ್ದು ಅವುಗಳನ್ನು ಕುರಿತು ವ್ಯವಸ್ಥಿತವಾಗಿ ಸಂಶೋಧನೆ ಹಾಗೂ ಅಧ್ಯಯನ ಮಾಡಿರುವ ಶ್ರೀಯುತ ಎಂ.ಜಿ. ನಾಗರಾಜ್ ಅವರು ವೃಕ್ಷಾರಾಧನೆ, ಬೇತಾಳ ಮೂರ್ತಿ, ವೀರ-ದಾನದ ಶಿಲ್ಪಗಳು, ಮಿಥುನ ಶಿಲ್ಪ, ಪ್ರಾಣಿರೂಪ ಇತ್ಯಾದಿಗಳ ಪ್ರಭಾವ ಸಮಾಜದ ಆರಾಧನಾ ಪ್ರತೀಕಗಳ ಮೇಲೆ ಆಗಿರುವುದನ್ನು ಸೋದಾಹರಣವಾಗಿ ವಿವೇಚಿಸಿದ್ದಾರೆ. ('ಹರಕೆಯ ಶಿಲ್ಪಗಳು', ಶಿಲ್ಪಕಲಾಪ್ರಪಂಚ, ಬೆಂಗಳೂರು, 1994)

ಈ ಹಿನ್ನೆಲೆಯಲ್ಲಿ ಚಿತ್ರ, ಶಿಲ್ಪಗಳಿಗೂ ಧರ್ಮದ ಒಂದು ಅಂಗವಾದ 'ಪೂಜಾವಿಧಿ'ಗೂ ಸಂಬಂಧವಿರುವುದನ್ನು ಒಂದು ಅರ್ಥದಲ್ಲಿ ಕಲಾಕೃತಿ ಎಂದು ಪರಿಗಣಿತವಾಗುವ ಚಿತ್ರ, ಶಿಲ್ಪಗಳು 'ಪೂಜಾರ್ಹ' ಮೂರ್ತಿಗಳಾಗುವುದನ್ನು ಗುರುತಿಸಬಹುದಾಗಿದೆ. ಧರ್ಮ ಒಂದು ನಿಶ್ಚಿತವಾದ ರೂಪವನ್ನು ಪಡೆದಿದ್ದರೂ ಅದಕ್ಕೆ ಪೂರಕವಾಗಿ ಇಲ್ಲವೆ ಪ್ರೇರೇಪಿತವಾಗಿ ಬಂದ ಚಿತ್ರ, ಶಿಲ್ಪಗಳ ಕಲಾವಿದನಿಗೆ ಧಾರ್ಮಿಕ ಚೌಕಟ್ಟಿನ ಒಳಗೇ ಸ್ವಾತಂತ್ರವನ್ನೂ ನೀಡಿ ಆತನ ಕೃತಿಗಳು 'ಕಲಾಕೃತಿ'ಗಳಾಗುವಂತೆ ಸಾಧ್ಯವಾಗಿರುವುದೇ ಕಲೆ ಉಳಿದು ಬರಲು ಕಾರಣವಾಯಿತೆಂದು ಹೇಳಬಹುದು. ಈ ಸ್ವಾತಂತ್ರ್ಯ ಜನಪದ ಕಲೆಗಳಲ್ಲಿ ಹೆಚ್ಚಾಗಿದ್ದರೆ ಶಿಷ್ಟಪದ ಕಲೆಯಲ್ಲಿ ಕಡಿಮೆಯಾಗಿರಬಹುದು.

●

ಧರ್ಮ ಮತ್ತು ಆಧುನಿಕ ಯುಗ

ಮಲ್ಲೇಪುರಂ ಜಿ. ವೆಂಕಟೇಶ್

ಆಧುನಿಕ ಯುಗದ ನಿರ್ವಚನವೆಂದರೆ 'ಧರ್ಮ'ದ ಅಪವ್ಯಾಖ್ಯಾನವೆಂದೇ ಅರ್ಥ ಆಧುನಿಕ ಯುಗದ ಮನಸ್ಸು ಧರ್ಮ ಮತ್ತು ಮತವೆಂಬ ಪರಿಕಲ್ಪನೆಗಳನ್ನು ಕಲಸೋಗರದ ನೆಪದಲ್ಲಿ ತನ್ನನ್ನು ತಾನೆ ಆತ್ಮಘಾತುಕಗೊಳಿಸಿಕೊಂಡಿದೆ. ಇಂದು 'ಧರ್ಮ' ಎಂಬ ಪದಕ್ಕೆ ಕೇವಲ ಅಪವ್ಯಾಖ್ಯಾನ ಮಾತ್ರವಲ್ಲ, ಅದರ ಸಾಂದರ್ಭಿಕ ಮತ್ತು ಸಮಯಿಕ ಅರ್ಥದ ನೆಲೆಯಲ್ಲೂ ಅಪವ್ಯಾಖ್ಯಾನಕ್ಕೆ ತುತ್ತಾಗಿದೆ. ಇದು ಎಲ್ಲಿಂದ ಶುರುವಾಯಿತು. ಧರ್ಮ ಎಂಬ ಮಾತನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳಲು ಕಾರಣವಾದ ನೆಲೆಗಳೂ ಆಶಯಗಳೂ ಯಾವುವು ? ಈ ಪ್ರಶ್ನೆಯನ್ನು ಹಾಕಿಕೊಳ್ಳುವುದು ಉಚಿತ. ಇದಕ್ಕೆ ತಕ್ಷಣವೇ ಉತ್ತರ ಸಿಗಬಹುದೆಂದು ನನ್ನ ಅರ್ಥವಲ್ಲ. ಉತ್ತರ ಮತ್ತು ಅರ್ಥಗಳು ಪರಸ್ಪರ ಸಹಸಂಗತಿಗಳಲ್ಲ. ಅದೂ ನಿಜ. ಆದರೆ, ಉತ್ತರಗಳನ್ನು ಅರಸುವ ಮೊದಲು ಇದರ ಹಿನ್ನೆಲೆಯಾದ ಕೆಲವು ಚಾರಿತ್ರಿಕ ಎಳೆಗಳನ್ನು ಗುರುತಿಸುವುದರ ಅಗತ್ಯವಿದೆ. ಈ ಬಗೆಯ ಅಗತ್ಯವೂ ಇಂದು ಬೇಕು. ಒಂದರ್ಥದಲ್ಲಿ 'ಆಧುನಿಕ' ಎಂಬ ಸಂವೇದನೆ ನಾನಾ ಬಗೆಯ ವಿಲಾಸಗಳನ್ನು ಹಲವು ಬಗೆಯ ನೆಪಗಳನ್ನೂ ಇನ್ನೂ ಕೆಲವು ಸಂಗತಿಗಳನ್ನು ಮೈಮೇಲೆ ಹಾಕಿಕೊಂಡಿದೆ. ಇವನ್ನೆಲ್ಲ ನುಂಗಿನೊಣೆಯದೆ ಅದಕ್ಕೆ ಮೋಕ್ಷವಿಲ್ಲ. ಅಲ್ಲಮನೇನೊ 'ತನ್ನ ತಾನರಿವಡೆ ತನ್ನರಿವೆ ಗುರು' ಎಂದು ಹೇಳಿ ಎಂಟುನೂರು ವರ್ಷಗಳು ಸಂದುವು. ಧರ್ಮದ ಬೆಳಕನ್ನು ಅಲ್ಲಮನಷ್ಟು ಸರಳವಾಗಿಯೂ ಸೂಚ್ಯವಾಗಿಯೂ ಸಾಂದರ್ಭಿಕವಾಗಿಯೂ ಹೇಳಿದವರು ಕಡಿಮೆ. ಆ ಬಗೆಗಿನ ವಿವರಗಳಿಗೆ ನಾನು ಹೋಗುವುದಿಲ್ಲ.

ಆಧುನಿಕ ಯುಗವು ಧರ್ಮವನ್ನು ಹೇಗೆ ವ್ಯಾಖ್ಯಾನಿಸಿಕೊಂಡಿದೆ ಎಂಬ ಸಂಗತಿಯನ್ನು ಹಲವು ಬಗೆಗಳಲ್ಲಿ ನೋಡುವುದರ ಅಗತ್ಯವಿದೆ. ಇಲ್ಲೆ 'ಮಹಾಭಾರತ'ದ ಒಂದು ಪ್ರಸಂಗ ನೆನೆಪಿಗೆ ಬರುತ್ತದೆ. ಒಮ್ಮೆ ಶಂತನುವಿನ ತಂದೆ ಪ್ರತೀಪ, ಗಂಗಾನದಿ ತೀರದಲ್ಲಿ ಜಪಮಾಡುತ್ತ ಕುಳಿತಿದ್ದ. ಆಗ ರೂಪಲಾವಣ್ಯವತಿಯಾದ ತರುಣಿಯೊಬ್ಬಳು ಬಂದು ಆತನ ತೊಡೆಯಮೇಲೆ ಕುಳಿತುಕೊಂಡು ನನ್ನನ್ನು ಮದುವೆ ಮಾಡಿಕೋ ಎಂದಳು. ಆಗ ಪ್ರತೀಪನು 'ನಾನು ಪರಸ್ತ್ರೀಯರನ್ನು ಬಯಸುವುದಿಲ್ಲ. ಬೇರೆ ಜಾತಿಯವರನ್ನೂ ಮದುವೆಯಾಗುವುದಿಲ್ಲ.

ಇದು ನನ್ನ ಧರ್ಮ, ಇದು ನನ್ನ ವ್ರತ ' ಎಂದನು. ಅದಕ್ಕೆ ಅವಳು 'ನಾನು ಪರಸ್ತ್ರೀಯಲ್ಲ, ನಾನು ದಿವ್ಯಕನ್ಯೆ' ಎಂದಳು. ಆಗ ಆತನು. 'ಅಮ್ಮ ಸ್ತ್ರೀರತ್ನವೆ, ನೀನು ನನ್ನ ವ್ರತವನ್ನು ಬಿಡು ಎನ್ನಬೇಡ. ನೀನು ಬಲ ತೊಡೆಯಲ್ಲಿ ಕುಳಿತಿರುವೆ ಬಲತೊಡೆಯು ಮಕ್ಕಳೂ ಸೊಸೆಯರೂ ಕುಳಿತುಕೊಳ್ಳುವ ಜಾಗ. ಆದ್ದರಿಂದ ನೀನು ನನಗೆ ಸೊಸೆಯಾಗು' ಎಂದನು. ಇಡೀ ಈ ರೂಪಕವು ಆಧುನಿಕ ಯುಗ ಯಾವುದನ್ನು ಬಿಡುಬೀಸಿಲ್ಲದೆ ನಿರಾಕರಿಸುತ್ತದೋ ಅದಕ್ಕೆಪ್ರತಿಯಾಗಿದೆಯಷ್ಟೆ. ಈಗ ಯಾರೂ, ಯಾವಾಗ ಬೇಕಾದರೂ ಯಾರ ತೊಡೆಯ ಮೇಲೆ ಕೂತರೂ ನಡೆಯುತ್ತದೆ. ಈಗ ಗೃಹಸ್ಥ ಧರ್ಮ, ರಾಜ್ಯಧರ್ಮ, ವ್ಯಕ್ತಿಧರ್ಮ, ಸಮಷ್ಟಿಧರ್ಮ, ಸಮುದಾಯಧರ್ಮ ಇವೆಲ್ಲನುಚ್ಚುನೂರಾಗಿರುವ ಕಾಲ ಕೂಡಾ ಈ ಕಾಲಕ್ಕೆ ದುರ್ವಾಸನೆಯೇ ಹಿತ; ಸುವಾಸನೆಯಂತೂ ಎಂದೆಂದೂ ಅಹಿತ. ಇಪ್ಪತ್ತನೆಯ ಶತಮಾನದ ಕೊನೆಯ ಅಂಚಿನಲ್ಲಿ ನಿಂತಿರುವ ನಮಗೆ 'ಹಿತಾಹಿತ'ಗಳ ನಡುವಣ ಸೂಕ್ಷ್ಮ ಗೆರೆಗಳನ್ನು ಅಳಿಸಿಕೊಂಡು ಮುನ್ನುಗ್ಗಿ ಬಿಡುವ ಆತುರ - ಕಾತರ. ಈ ಕಾತರಕ್ಕೆ ಸಹನೆ ಮತ್ತು ಸೂಕ್ಷ್ಮತೆಗಳು ಇಲ್ಲ.

ಮುರಳಿ, ತುಸು ಹೊತ್ತು ಸ್ವಾತಂತ್ರ್ಯೋದಯ ಕಾಣಿಸಿಕೊಂಡ ಹೊತ್ತನ್ನು ನೆನಪಿಸಿಕೊಳ್ಳೋಣ ಗಾಂಧೀಜಿ ಮತ್ತು ನೆಹರೂ ಇವರೆಲ್ಲರೂ ನಮ್ಮ ನೆನೆಪಿಗೆ ಬರಲಿ. 1947ರಲ್ಲಿ ಪಂಡಿತ ನೆಹರು ಅವರು ಸಂವಿಧಾನ ರಚನೆಯ ಅಧಿವೇಶನದಲ್ಲಿ ರಾಷ್ಟ್ರಕ್ಕೆ ರಾಷ್ಟ್ರಧ್ವದವನ್ನು ಅರ್ಪಿಸುತ್ತ, ಒಂದು ನಿರ್ಣಯವನ್ನು ಮಂಡಿಸಿದರು. ಆ ನಿರ್ಣಯದಲ್ಲಿ ಧ್ವಜಾಂತರ್ಗತವಾದ ಚಕ್ರಕ್ಕೆ ಸಂಬಂಧಿಸಿದ ನಿರ್ಣಯ ಈ ಪ್ರಕಾರವಿದೆ. 'ತ್ರಿವರ್ಣಧ್ವಜದ ಮಧ್ಯಭಾಗದಲ್ಲಿ ಅಶೋಕ ಚಕ್ರವನ್ನು ಅಳವಡಿಸತಕ್ಕದ್ದು' ಮತ್ತು ಅದೇ ಕಾಲದಲ್ಲಿ ಚರಕದ ಸ್ಥಾನದಲ್ಲಿ ಚಕ್ರದ ಪರಿವರ್ತನೆ ಹೇಗೆ ಮತ್ತು ಈ ಪರಿವರ್ತನೆಯ ಅವಶ್ಯಕತೆ ಏನು? ಎಂಬುದನ್ನು ಅವರು ವಿವರಿಸಿದ್ದಾರೆ.

ನೆಹರು ಅವರು ಭಾಷಣದ ಅನಂತರ ಡಾ।ರಾಧಾಕೃಷ್ಣನ್ ಅವರು ಚಕ್ರದ ಮಹತ್ವವನ್ನು ವಿವರಿಸುತ್ತ 'ಇದು ಮಾನವನ ಧರ್ಮದ ನಿಯಮವನ್ನು ಪ್ರತಿಬಿಂಬಿಸುತ್ತದೆ. ರಾಜ್ಯಬಾರವನ್ನು ನಿರ್ವಹಿಸುವ ಕ್ರೀಯಾಶೀಲರೆಲ್ಲ ಸತ್ಯ ಮತ್ತು ಧರ್ಮದ ಪರಿಪಾಲನೆ ಮಾಡಿ ಪ್ರಜೆಗಳಿಗೆ ಮಾರ್ಗದರ್ಶಕರಾಗಿರತಕ್ಕದ್ದು. ಚಕ್ರವು ನಿರಂತರ ಭ್ರಮಣವನ್ನು ಸೂಚಿಸುತ್ತದೆ. ಚಲನೆಯಿಲ್ಲದ ಜಡತೆ ಮರಣಕ್ಕೆ ಸಮಾನ. ಚಲನೆಯಿಲ್ಲದೆ ಪ್ರಗತಿ ಸಾಧ್ಯವಿಲ್ಲ. ಪ್ರಗತಿಯಲ್ಲಿ ಶ್ರದ್ಧೆಯಿಟ್ಟು ಭಾರತವು ಕಾಲಾನುಗುಣವಾಗಿ ಮುಂದುವರಿಯಬೇಕು. ಭಾರತೀಯ ಮೂಲತತ್ತ್ವ ಸಂದೇಶವನ್ನು ಪಾಲಿಸುತ್ತ ಶಾಂತರೀತಿಯಿಂದ ವ್ಯವಹರಿಸತಕ್ಕದ್ದು. ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯನ್ನು ಕಡೆಗಣಿಸಿದ ಪ್ರಗತಿ ಅರ್ಥರಹಿತ. ಧರ್ಮಚಕ್ರ ಆಧ್ಯಾತ್ಮಿಕ ಸಂಸ್ಕೃತಿಯ ಪ್ರತೀಕ' ಎಂದು ಹೇಳಿ ಧ್ವಜದ ಮೂರು ವರ್ಣಗಳ ಸ್ವರೂಪವನ್ನು ಹೀಗೆ ಹೇಳಿದ್ದಾರೆ : ಅ) ಕೇಸರಿವರ್ಣವು ತ್ಯಾಗವೈರಾಗ್ಯಗಳನ್ನು ಸೂಚಿಸುತ್ತದೆ. ರಾಜಕೀಯ ನಾಯಕರು ಸ್ವಾರ್ಥಕ್ಕಾಗಿ ಅರ್ಥ ಅಥವಾ ಅಧಿಕಾರ ಸಂಪಾದನೆಯನ್ನು ಸೌಲಭ್ಯಗಳನ್ನು

ಅಪೇಕ್ಷಿಸದೆ ರಾಷ್ಟ್ರದ ಅಭ್ಯುದಯಕ್ಕಾಗಿ ದುಡಿಯತಕ್ಕದ್ದು ಆ) ರಾಜನೀತಿ ನಿಶ್ಶಂಕವಾಗಿ ಶುದ್ಧವಾಗಿರಬೇಕೆಂದು ಶ್ವೇತವರ್ಣ ತಿಳಿಸುತ್ತದೆ (ಇ) ರಾಷ್ಟ್ರಕ್ಕೆ ಅನ್ನದಾತೃವಾದ ಕೃಷಿಕ್ಷೇತ್ರದ ಮೌಲ್ಯವನ್ನು ಪಚ್ಚೆವರ್ಣ ಸೂಚಿಸುತ್ತದೆ. ಹೀಗೆಂದು ಧ್ವಜದ ಮೂರು ವರ್ಣಗಳ ಸಂಕೇತವನ್ನು ವಿವರಿಸಿದ್ದಾರೆ.

ಆಧುನಿಕ ಯುಗದ ರಾಜಕಾರಣವು ಧರ್ಮವನ್ನು ಪ್ರಗತಿಯ ಸಂಕೇತದಲ್ಲಿ ಸ್ವೀಕರಿಸಿದೆ. ಸ್ವಾತಂತ್ರ್ಯ ಬಂದ ಹೊತ್ತಿನಲ್ಲಿ 'ಧರ್ಮ'ಕ್ಕೆ ನೀಡಿದ ಈ ಬಗೆಯ ಅರ್ಥವು ಮನುಷ್ಯ ಸಮುದಾಯವನ್ನು ಗಣನೆಗೆ ತೆಗೆದುಕೊಂಡ ನಿಲುವು ಕಾಣಬರುತ್ತದೆ. ರಾಜಕಾರಣ ಧರ್ಮದ ವ್ಯಾಖ್ಯಾನವನ್ನು ನೆಹರು ಮಂಡಿಸಿದ್ದೇನೋ ನಿಜ. ಪ್ರಗತಿ ಎಂಬ ಮಾತಿನಲ್ಲಿ ಅದನ್ನು ಪುನರ್ ವ್ಯಾಖ್ಯಾನಿಸಿದ್ದೂ ಸರಿ. ಕೊನೆಗೆ, ನೆಹರೂ ವಿಶ್ವಮುಖೀ ತಂತ್ರಜ್ಞಾನದ ಕಡೆಗೆ ತೆರಳಿ, ಅಲ್ಲಿಂದ ವಿಜ್ಞಾನದ ಸೌಧವನ್ನು ತಂದು ನೆಟ್ಟದ್ದು ಇನ್ನೊಂದು ಮುಖ. ಅವರು ಅದನ್ನೂ 'ಪ್ರಗತಿ' ಎಂಬ ವ್ಯಾಖ್ಯಾನದಲ್ಲೇ ನಿರಂತರ ಮಂಡಿಸುತ್ತ ಬಂದರು. ಸಮುದಾಯಗಳು ಧರ್ಮವನ್ನು ಕಂಡುಕೊಳ್ಳುವ ಬಗೆಗೂ ರಾಜಕಾರಣವು ಧರ್ಮವನ್ನು ಕಂಡುಕೊಳ್ಳುವ ಬಗೆಗೂ ವಿಪುಲ ವ್ಯತ್ಯಾಸಗಳಿರುತ್ತವೆ. ಅಥವಾ ಧರ್ಮದ ಸೂಕ್ಷ್ಮವ್ಯಾಪಾರವನ್ನು ಕಾತರದಿಂದ ನಾವು ನಿರೀಕ್ಷಿಸಲೂ ಬಹುದು. ರಾಜಕಾರಣವು ಧರ್ಮವನ್ನು ಪರಿಗ್ರಹಿಸಿದ ಕ್ರಮ-ತನ್ನ ಮೂಗಿನ ನೇರಕ್ಕೆ ಇರುತ್ತದೆ. ರಾಜಕಾರಣದ ಹುನ್ನಾರಕ್ಕೂ ಅದು ಸಮಾಜವನ್ನು ಗ್ರಹಿಸಿದ ಮಾದರಿಗೂ ಒಂದು ಬಗೆಯ ಸೂಕ್ಷ್ಮವಾದ ಆಪ್ತತೆ ಇರುತ್ತದೆ. ಅದನ್ನು ನಾವು ನೆಹರೂ ಮಾತಿನಲ್ಲಿ ಕಂಡಿದ್ದೇವೆ. 'ಭಾರತವು ಪ್ರಗತಿಯ ಹಾದಿಯಲ್ಲಿದೆ ' ಎಂದು ಮಾಧ್ಯಮ ಮತ್ತು ರಾಷ್ಟ್ರರಾಜಕಾರಣದ ಭಾಷಣದಲ್ಲಿ ಹೇಳುತ್ತಿರುವ ಮಾದರಿಯನ್ನೂ ನಾವು ಗಮನಿಸುತ್ತೇವಷ್ಟೆ. ಅದು ಐವತ್ತು ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬಂದದ್ದೇ ಹಲವು ದುರಂತಗಳಿಗೆ ಕಾರಣವಾಯಿತು. ಧರ್ಮದ ಆಂತರಿಕ ಸೂಕ್ಷ್ಮ ಸಂಗತಿಗಳನ್ನು ಹೊರಗಿಟ್ಟು ನಡೆದ ಈ ಹುನ್ನಾರವು 'ವಿಗತಿ'ಯ ನೆಲೆಯನ್ನು ಮುಟ್ಟಲು ಅನಿವಾರ್ಯವಾಯಿತು.

ಈ ವರೆಗೂ ರಾಜಕಾರಣದ ನೆಲೆಯು ಧರ್ಮವನ್ನು ವ್ಯಾಖ್ಯಾನಿಸಿದ್ದು ತನ್ನ ಮೂಗಿನ ನೇರಕ್ಕೆ ಮಾತ್ರ. ಇದರ ಆದ್ಯಪುರುಷ ನೆಹರೂ, ಆದರೆ, ಇವರಿಗಿಂತ ಹಿಂದಿದ್ದ 'ಗಾಂಧೀಜಿ'ಯು ಧರ್ಮವನ್ನು ಹೇಗೆ ವ್ಯಾಖ್ಯಾನಿಸಿಕೊಂಡರೆಂಬುದನ್ನು ಮರೆತು ನಡೆದರೆ - ರಾಜಕಾರಣದ ಈ ಬಗೆಯ ಗೂಢಾತ್‌ಗೂಢತರ ನೆಲೆಯನ್ನು ಅರ್ಥಮಾಡಿಕೊಂಡಂತೆ ಆಗುವುದಿಲ್ಲ. ಗಾಂಧೀ ಮತ್ತು ನೆಹರೂ ಅವರ ವೈಚಾರಿಕ ಹೋರಾಟಗಳಲ್ಲಿ ಒಂದು ಮುಖ್ಯವಾದ ಸಂಗತಿ ಹೀಗಿದೆ. ಗಾಂಧೀಜಿಯವರು ಆಂತರಿಕ ಪ್ರಗತಿ ಮತ್ತು ಆಂತರಿಕ ಅಭ್ಯುದಯದಲ್ಲಿ ಮಾನವ ಸಮುದಾಯಕ್ಕೆ ಅಗತ್ಯವೆಂದು ಪ್ರತಿಪಾದಿಸಿದರೆ; ನೆಹರೂ ಈ ಮಾತಿಗೆ ಗೌಣಸ್ಥಾನವನ್ನು ಕೊಟ್ಟು ಬಾಹ್ಯ ಪ್ರಗತಿ ಮತ್ತು ಬಾಹ್ಯ ಅಭ್ಯುದಯಗಳೇ ದೇಶದ ಮುನ್ನಡೆಗೂ ಸ್ಥಿರತೆಗೂ ಕಾರಣವೆಂದು ಪ್ರತಿಪಾದಿಸಿದರು. ಇವರಿಬ್ಬರು ಕೊಟ್ಟುಕೊಂಡ ಈ ಬಗೆಯ ನಿಲುವಿನಲ್ಲಿ

ಗಾಂಧೀಜಿ ಸಣ್ಣಪುಟ್ಟ ಸಮುದಾಯಗಳ ಮುಖಾಂತರ ಆಂತರಿಕ ಧರ್ಮವ್ಯಾಪಾರದ ವಿನ್ಯಾಸಕ್ಕೆ ತೆರಳಿದರೆ; ನೆಹರು ದೊಡ್ಡ ದೊಡ್ಡ ಸಮುದಾಯಗಳ ಮುಖಾಂತರ ಬಾಹ್ಯ ವಿನ್ಯಾಸಕ್ಕೂ ಬೃಹದುದ್ದಿಮೆಗಳ ಕಡೆಗೂ ತೆರಳಿದರು. ಸ್ವಾತಂತ್ರ್ಯ ಅನಂತರದ ಭಾರತದಲ್ಲಿ 'ಧರ್ಮ' ತನ್ನಅಪಮೌಲ್ಯವನ್ನು ಕಳೆದುಕೊಂಡದ್ದರ ಹಿನ್ನೆಲೆ ಇಲ್ಲಿದೆ. ಏಕೆಂದರೆ ಗಾಂಧೀಜಿ ಎಂದೆಂದೂ ಜಪಿಸಿದ್ದು ಸತ್ಯ ಮತ್ತು ಧರ್ಮಗಳ ಆಂತರಿಕ ಸ್ವರೂಪದ ಕಡೆಗೇ. ಅವೆರಡನ್ನು ಹೊರತು ಪಡಿಸಿದರೆ ಇನ್ನೇನು ಮಾತನಾಡಲು ಅವರಿಗೆ ಶಕ್ಯವಿರಲಿಲ್ಲ. ರಾಜಕಾರಣವನ್ನು ಅವರು ಗ್ರಹಿಸಿಕೊಂಡದ್ದು ಆಂತರಿಕ ಪರಿವರ್ತನೆಯ ಹಿನ್ನೆಲೆಯಲ್ಲೇ ಇದನ್ನು ಇನ್ನಷ್ಟು ಸೂಕ್ಷ್ಮವಾಗಿ ಹೇಳುವುದಾದರೆ : ರಾಜಕಾರಣವನ್ನು ತಮ್ಮ ಸ್ವಂತದ ಮೆಹನತ್ತಿಗೆ ಗಾಂಧೀ ಎಂದೆಂದೂ ಬಳಸಿಕೊಳ್ಳಲಿಲ್ಲ. ಆ ಬಗೆಯ ಕಲ್ಪನೆ ಅವರಿಗೆ ಅಸಾಧ್ಯವೇ ಆಗಿತ್ತು. ಗಾಂಧೀಜಿ ಸಮಕಾಲೀನ ರಾಜಕಾರಣಿಗಳಿಗೂ ನೆಹರು ಅನಂತರದ, ನೆಹರೂ ಸಮಕಾಲೀನ ರಾಜಕಾರಣಿಗಳಿಗೂ ಇರುವ ಮುಖ್ಯ ವ್ಯತ್ಯಾಸ ಒಡೆದು ಕಾಣುವುದು ಇಂಥ ನೆಲೆಗಳಲ್ಲೇ ಇವನ್ನೂ ಹೊರತು ಪಡಿಸಿ ವ್ಯಾಖ್ಯಾನಿಸುವುದಾದರೂ ಹೇಗೆ ?

ಧರ್ಮಕ್ಕೆ ಪರಿವರ್ತನೆಯ ಗುಣ ಇರುವುದು ಅದರ ಸ್ಥಳಭಾವದಲ್ಲೇ ಇದೆ. 'ಚೋದಯಿತ್ರೀ ಸೂನೃತಾನಾಂ, ಚೇತಂತೀ ಸುಮತೀನಾಂ' ಎಂದು ವೇದದ ವಾಕ್ಕು ಧರ್ಮದ ಆಂತರಿಕ ವ್ಯಾಖ್ಯಾನವನ್ನು ಮಾಡಿಕೊಂಡು ಬಂದೇ ಇದೆ. ಇದು ಮೌಖಿಕ ಸಂವೇದನೆಯಲ್ಲೂ ಉಂಟು ! ಜಾನಪದವು 'ಧರ್ಮ'ವನ್ನು ತನ್ನ ಆಂತರಿಕ ವಿಕಾಸ ಮತ್ತು ನಡಾವಳಿಯಲ್ಲಿ ನೋಡಿಕೊಂಡುಬಂದಿದೆ. ಆ ಬಗೆಗಿನ ವಿವರಗಳು ಇಲ್ಲಿ ಅನಗತ್ಯ. ಆದರೆ, ಇಂದು ಸಮುದಾಯಗಳ ಘಟಕಗಳ ಹಿನ್ನೆಲೆಯಲ್ಲಿ ಅದರ ಸಾಂಸ್ಕೃತಿಕ ಧರ್ಮವನ್ನೂ ಕುರಿತು ಒಂದಷ್ಟು ಹೇಳುವುದು ಅಗತ್ಯವಿದೆ. ಇನ್ನು ಮುಂದಿನ ಕೆಲವು ಮಾತುಗಳು ಅದಕ್ಕೆ ಸೀಮಿತವಾಗಿವೆ.

ಧರ್ಮದ ನೆಲೆಯನ್ನು ಸಾಂಸ್ಕೃತಿಕ ವಿನ್ಯಾಸದ ನೆಲೆಯಲ್ಲಿ ನೋಡುವ ಬಗೆ ಹೇಗೆ ? ಇದಕ್ಕೆ ಅಷ್ಟು ಕಷ್ಟಗಳಿಲ್ಲ. ಏಕೆಂದರೆ : ಸಾಂಸ್ಕೃತಿಕ ವಿಕರ್ಷಣೆ ಮತ್ತು ಆಕರ್ಷಣೆಗಳೆರಡೂ ಬಾಹ್ಯದ ಒತ್ತಡಗಳಿಗಿಂತ ಆಂತರಿಕ ಒತ್ತಡಗಳ ಕಡೆಗೆ ಸೆಳೆಯುತ್ತದೆ. ಸಾಂಸ್ಕೃತಿಕ ಆಕರ್ಷಣೆಯ ಬಾಹ್ಯದ ಕಟ್ಟಡಗಳನ್ನೂ ಬೃಹತ್ ಉದ್ದಿಮೆಗಳನ್ನೂ ಸಂಕೇತಿಸುತ್ತದೆ. ಆದರೆ, ಸಾಂಸ್ಕೃತಿಕ ವಿಕರ್ಷಣೆಯು ಸತ್ಯ ಮತ್ತು ಮೌಲ್ಯಗಳ ವಿನ್ಯಾಸವನ್ನು ಸಂಕೇತಿಸುತ್ತದೆ. ಇವೆರಡನ್ನು ಆಯಾಯ ನೆಲೆಗಳಲ್ಲಿ ಇಟ್ಟು ನೋಡಬೇಕು. ಈ ತಾರತಮ್ಯಗಳನ್ನು ಮರೆತು ಬಿಟ್ಟರೆ ಕಲಸುಮೇಲೋಗರದಲ್ಲಿ ಎಲ್ಲವನ್ನು ಒಟ್ಟಾಗಿ ನೋಡಬೇಕಾಗುತ್ತದೆ. ಏಕೆಂದರೆ: ಒಂದು ಸಂಸ್ಕೃತಿಯಲ್ಲಿ ಏಕಘನಾಕೃತಿಯ ಆಶಯಗಳು ಆತ್ಮಘಾತುಕವನ್ನು ತರುತ್ತದೆ. ಅದು ವ್ಯಕ್ತಿಮತದ ಕಡೆಗೆ ಚಲಿಸುತ್ತದೆ. ಅದರಿಂದಾಗಿ ಬಹುಘನಾಕೃತಿಯ ಆಶಯಗಳು ಸಮುದಾಯ ಧರ್ಮದ ಕಡೆಗೆ ಕರೆದೊಯ್ಯುತ್ತದೆ. ಇದು ಇಂದು ಆಗಬೇಕಾದ ಮುಖ್ಯ ಪರಿಚರ್ಯೆ ಕೂಡಾ.

ಆಧುನಿಕ ಯುಗವು ಧರ್ಮವನ್ನು ಗ್ರಹಿಸುತ್ತಿರುವ ಮಾದರಿಯನ್ನು ಇದುವರೆಗೂ ಭಾರತೀಯ ಸಂಸ್ಕೃತಿ ನೆಲೆಯಲ್ಲಿ ನೋಡಲಾಯಿತು. ಇದು ಅನಿವಾರ್ಯಕೂಡಾ. 'ಆಧುನಿಕ' ಎಂಬ ಮಾತೇ ಇಪ್ಪತ್ತನೆಯ ಶತಮಾನದ ಪರಿಕಲ್ಪನೆ. ಈ ಪರಿಕಲ್ಪನೆಯ ಗರ್ಭದಲ್ಲಿ ವಿಜ್ಞಾನ, ಸಮಾಜಶಾಸ್ತ್ರ, ಚರಿತ್ರೆ, ಪುರಾಣ, ಭವಿಷ್ಯದ ಕನಸು, ವಿನಾಶದ ಅಂಚು, ಅದು ಸ್ಥಾವರಗಳ ಆಟಾಟೋಪ, ಏಕಾಲಜಿ ಪ್ರಶ್ನೆ - ಹೀಗೆ ಹತ್ತು ಹಲವು ಸಮಸ್ಯೆಗಳು ತುಂಬಿಕೊಂಡಿವೆ. 'ಆಧುನಿಕ'ಕ್ಕೆ ಬಡಿದಿರುವ ರೋಗವೆಂದರೆ ಸುಸ್ಥಿತಿಗಿಂತಲೂ ಅಸ್ವಾಸ್ಥ್ಯದ ಬರ ಹಿಮ್ಮೆಟ್ಟದೆ ತುಂಬಿರುವುದೇ ಆಗಿದೆ.

ಈ ಸಂಗತಿಯನ್ನು ಹಲವು ನೆಲೆಗಳಲ್ಲಿ ನೋಡಬಹುದು. ಈಗಾಗಲೇ ರಾಜಕಾರಣದ ನೆಲೆಯಲ್ಲಿ ಧರ್ಮದ ವ್ಯಾಖ್ಯಾನವನ್ನು ನೋಡಲಾಯಿತಷ್ಟೆ. ಈಗ ಇದನ್ನು ಸಮಾಜ ಶಾಸ್ತ್ರ ಮತ್ತು ಚಾರಿತ್ರಿಕ ಮೂಲದ ನೆಲೆಯಿಂದ ನೋಡಲು ಸಾಧ್ಯವಿದೆಯೇ ಗಮನಿಸೋಣ. ಏಕೆಂದರೆ : ಧರ್ಮವನ್ನು ವಿರೋಧಿಸುವ ಗುಣವೇ ಎಲ್ಲ ಕಡೆ ತುಂಬಿದೆ. ಧರ್ಮಕ್ಕೆ ಇಂದು ಶಕ್ತಿ ಇಲ್ಲವೆಂಬುದು ಹಲವರ ಅಂಬೋಣ. ಧರ್ಮಕ್ಕೆ ಜಾತಿ ಲೇಪ ಬಂದಿರುವುದೇ ಇದಕ್ಕೆ ಕಾರಣ. ಧರ್ಮವನ್ನು ಜಾತಿ ಮತ್ತು ಮತದ ಇಬ್ಬಗೆಯಲ್ಲಿ ನೋಡಲು ಶುರುವಾದಾಗಲೇ ಧರ್ಮಕ್ಕೆ ಸಮಷ್ಟಿತತ್ತ್ವ ಹೋಗಿ ವ್ಯಷ್ಟಿತತ್ತ್ವ ಮುಕುರುವುದಕ್ಕೆ ಆರಂಭವಾಯಿತು. ಯಾವುದೇ ಒಂದೊಂದು ಬಗೆಯ ಸಮುದಾಯಗಳು, ತನ್ನನ್ನು ನೈತಿಕವಾಗಿ ಕಾಪಾಡಿಕೊಳ್ಳಲು ಹಲವು ದಾರಿಗಳನ್ನು ಕಂಡುಕೊಳ್ಳುತ್ತದೆ. ಅವು ಒಂದೊಂದು ಬಗೆಯ ಪ್ರಕಾರಗಳಾಗಿರುತ್ತವೆ. ಧರ್ಮವನ್ನು ಸಾಹಿತ್ಯಕೃತಿಗಳು ತಮ್ಮ ಕೃತಿಗಳಲ್ಲಿ ಇಟ್ಟುಕೊಳ್ಳುವ ಬಗೆ ಬೇರೆ. ಇದರಂತೆ, ಕಲೆ, ನಾಟಕ, ಸಂಗೀತ ಇಂಥವು ಹತ್ತಾರು ಇವೆ. ಇವೆಲ್ಲವೂ ತನ್ನ ಕಾಲವನ್ನು ಬದುಕಿಸಿ, ಮುಂದಿನ ಕಾಲದ ರಕ್ಷಣೆಗೆ ಅಣಿಯಾಗಲು ತಯಾರಾಗುತ್ತವೆ. ಕೆಲವೊಮ್ಮೆ ಧರ್ಮದ ಆಳದ ಬೆಳಕಿಗೆ ಕಣ್ಣುಮುಚ್ಚುವುದೂ ಉಂಟು. ಮಹಾಭಾರತದಲ್ಲಿ ದುರ್ಯೋಧನ ಹೇಳಿಕೊಳ್ಳುವ ಮಾತು, ಪ್ರತಿಯೊಬ್ಬ ವ್ಯಕ್ತಿಯ ಮತ್ತು ಸಮುದಾಯದ ಅಭಿಪ್ರಾಯದಂತಿವೆ. ದುರ್ಯೋಧನನು ಒಂದು ಆತಂಕದ ವೇಳೆಯಲ್ಲಿ ಹೇಳಿಕೊಳ್ಳುವುದಿತ್ತು.

ಜಾನಾಮಿ ಧರ್ಮಂ ನಚಮೇ ಪ್ರವೃತ್ತಿಃ।

ಜಾನಾಮಿ ಅಧರ್ಮಂ ನ ಚಮೇ ನಿವೃತ್ತಿಃ॥

'' ನನಗೆ 'ಧರ್ಮ' ಯಾವುದೂಂತ ಗೊತ್ತು. ಆದರೆ, ಅದರಲ್ಲಿ ನಾನುಹೋಗಲಾರೆ. ನನಗೆ 'ಅಧರ್ಮ' ಯಾವುದೂಂತ ಗೊತ್ತು ಆದರೂ ಅದರಿಂದ ಹಿಂದಕ್ಕೆ ಬರಲಾರೆ.'' ಈ ಬಗೆಯ ಸಂಕಟವನ್ನು ಆಧುನಿಕ ಮಾನವ ಅನುಭವಿಸುತ್ತಿದ್ದಾನೆ. ಬುದ್ಧ ಒಮ್ಮೆ 'ಅನ್ನಭಾರ' ಎನ್ನುವವನಿಗೆ ಹೇಳಿದ ಒಂದು ಮಾತು ನೆನಪಿನಲ್ಲಿಟ್ಟುಕೊಳ್ಳುವಂತಿದೆ : ''ಅದೋ ಅಲ್ಲಿ ನೋಡು. ಆ ಗ್ರಾಮದಲ್ಲಿ ನೂರು ಮನೆಗಳಿವೆ. ಒಂದು ಮನೆಯಲ್ಲಿ ಸದಾ ದೀಪ ಉರಿಯುತ್ತಿದೆ. ಆ ಗ್ರಾಮದ ಜನ ಬಂದು ತಮ್ಮ ದೀಪಗಳನ್ನು ಹತ್ತಿಸಿಕೊಂಡು ಹೋಗುತ್ತಾರೆ.

ಇದರಿಂದ ಹತ್ತಿಸಿಕೊಂಡ ದೀಪಕ್ಕಾಗಲಿ, ಬೆಳಕನ್ನು ಕೊಟ್ಟ ದೀಪಕ್ಕಾಗಲೀ ಯಾವ ಬಗೆಯ ಕುಂದೂ ಇಲ್ಲ. ತಮ್ಮ ತಮ್ಮ ಯೋಗ್ಯತಾನುಸಾರ ಬೆಳಕನ್ನು ಹಚ್ಚಿಕೊಳ್ಳುತ್ತ ಹೋಗಬಹುದು. ಇದು 'ಧರ್ಮದಬೆಳಕು' ಹೀಗೆಂದು ಗೌತಮ ಬುದ್ಧ ಧರ್ಮಕ್ಕೆ ವ್ಯಾಖ್ಯಾನ ನೀಡುತ್ತಾನೆ. ಈ ವ್ಯಾಖ್ಯಾನದಲ್ಲಿ ಸಮುದಾಯ ಮತ್ತು ಸಮುದಾಯದ ಆಂತರಿಕ ಮನಃಸ್ಥಿತಿಗಳ ಬಗೆಗೆ ಆಳವೂ ಸ್ಪಷ್ಟವೂ ಆದ ನಿಲುವುಗಳನ್ನು ಅವನು ಮಂಡಿಸಿದ್ದಾನೆ. ಹಾಗೆ ನೋಡಿದರೆ, ಆಧುನಿಕ ಯುಗವು ಬುದ್ಧ ಮತ್ತು ಗಾಂಧಿ ಇವರನ್ನು ಬಲವಾಗಿ ಅಪ್ಪಿಹಿಡಿದಿದೆ. ತನ್ನ ಅಸುಖವನ್ನು ಇವರಿಬ್ಬರ ಮಾತುಗಳ ನೆರವಿನಲ್ಲಿ ಪರಿಹಾರ ಮಾಡಿಕೊಳ್ಳಲು ಹವಣಿಸಿದೆ.

ಆಧುನಿಕ ಯುಗ ಮತ್ತು ಆಧುನಿಕ ಮಾನವ ಕೇವಲ ಒಂದು ಧರ್ಮದ ನೆಲೆಯಲ್ಲಿ ಜೀವಿಸಲಾರ – ಅನ್ನುವುದು ಇದಕ್ಕಾಗಿಯೇ. ಈ ಮಾತನ್ನು ಹೀಗೂ ಹೇಳಬಹುದು. ಒಂದು ಅಥವಾ ಹೆಚ್ಚು ಧರ್ಮಗಳ ಸಂಬಂಧವಿಲ್ಲದೆ ನಮಗೆ ನಮ್ಮ ಧರ್ಮವೇ ಅರ್ಥವಾಗದು. ಏಕೆಂದರೆ ಡಾ॥ ರಾಧಾಕೃಷ್ಣನ್ ಅವರು ಈ ಬಗೆಗೆ ಮಾತಾಡಿರುವ ಮಾತುಗಳು ಮನನೀಯವಾಗಿವೆ. ಮಾತುಗಳು ತುಸು ದೀರ್ಘವಾಗಿದ್ದರೂ ಉಚಿತವಾಗಿವೆ.

''ಧರ್ಮವೆಂಬುದು ಸಂಸ್ಕೃತಿಯ ಅಂತಸ್ಸತ್ತ್ವ, ಸಾಮಾಜಿಕ ಸಂಘಟನೆಯೆಂಬ ದೇಹಕ್ಕೆ ಜೀವವಿದ್ದಂತೆ. ವೈಜ್ಞಾನಿಕ ಉಪಯೋಗಗಳು, ಆರ್ಥಿಕ ವ್ಯವಸ್ಥೆಗಳು, ರಾಜಕಾರಣ ಸಂಸ್ಥೆಗಳು, ಇವೆಲ್ಲ ಜಗತ್ತನ್ನು ಬಾಹ್ಯದಲ್ಲಿ ಸಂಘಟಿಸಬಲ್ಲುವು; ಆದರೆ, ದೃಢವಾದ ಚಿರಂತನವಾದ ಏಕತಾನವಾಗಬೇಕಾದರೆ ಭಾವನೆಗಳ, ಆದರ್ಶಗಳ ಬಾಂಧವ್ಯವನ್ನು ದೃಢಪಡಿಸಬೇಕು. ಮಾನವಕೋಟಿಯ ಮನೆಯನ್ನು ಮತ್ತೆ ಕಟ್ಟುವ ಕೆಲಸದಲ್ಲಿ ವಿಜ್ಞಾನದಷ್ಟೇ ಧರ್ಮದ ಪಾತ್ರವೂ ಮುಖ್ಯವಾದುದು. ಮಾನವ ವ್ಯಕ್ತಿಯು ದೇಹ ಮನಸ್ಸು, ಚೇತನ ಇವುಗಳ ಸಮಷ್ಟಿ. ಒಂದೊಂದಕ್ಕೂ ಅದರದರ ಆಹಾರ ಅಗತ್ಯ ಆಹಾರ ಮತ್ತು ವ್ಯಾಯಾಮದಿಂದ ದೇಹ ಸಮರ್ಪಕವಾಗಿರುತ್ತದೆ; ವಿಜ್ಞಾನ ಮತ್ತು ವಿಮರ್ಶೆಯಿಂದ ಮನಸ್ಸು ಪುಷ್ಟವಾಗುತ್ತದೆ; ಕಲೆ, ಸಾಹಿತ್ಯ, ದರ್ಶನ, ಧರ್ಮ ಇವುಗಳಿಂದ ಚೇತನ ಪ್ರಬುದ್ಧವಾಗುತ್ತದೆ. ಮಾನವಕೋಟಿಯ ಚೇತನ ಬೆಳೆಯಬೇಕೆಂದರೆ, ಅದರ ಸುಂದರ ಪ್ರವೃತ್ತಿಗಳನ್ನು ಬಳಸುವುದರಿಂದಲೇ ಏಷಿಯಾ ಮತ್ತು ಐರೋಪ್ಯ ಪ್ರವಾಹಗಳು ತಂತಮ್ಮ ಬಗೆಗಳಲ್ಲಿ ಅದ್ಭುತ ಫಲಗಳನ್ನು ಗಳಿಸಿವೆ; ಏಷಿಯ ತನ್ನ ಆಧ್ಯಾತ್ಮಿಕ ಪರಿಪೂರ್ಣತೆಯಿಂದ, ಯೂರೋಪು ತನ್ನ ಬುದ್ಧಿ ಬಲದಿಂದ.'' (ಧರ್ಮದಲ್ಲಿ ಪೂರ್ವಪಶ್ಚಿಮ ಪುಟ: ೩೮,೯೬೮) ಶ್ರೀ ರಾಧಾಕೃಷ್ಣನ್ ಮೇಲಿನ ಮಾತುಗಳನ್ನು ಹೇಳಿ ಅರುವತ್ತಾರು ವರ್ಷಗಳಾದುವು. ಆಧುನಿಕ ಕಾಲದ ಹೊಂಬೆಳಗಿನಲ್ಲಿ ರಾಧಾಕೃಷ್ಣನ್ ಹೇಳಿದ ಮಾತುಗಳು ಈಗಲೂ ಆಪ್ಯಾಯಮಾನವಾಗಿವೆ. ಇಪ್ಪತ್ತನೆಯ ಶತಮಾನದ ಕೊನೆಯಂಚಿನಲ್ಲಿ ನಿಂತಿರುವ ನಮಗೆ ಹೊಸನೆಲೆಗಳನ್ನು ಸೂಚಿಸುಂತಿವೆ.

ಆಧುನಿಕ ಮನಸ್ಸು ಮತ್ತು ವಸಂವೇದನೆಯು 'ಧರ್ಮ'ವನ್ನು ಮತೀಯ ನೆಲೆಯಲ್ಲಿ ವಾಖ್ಯಾನಿಸಿದೆ ಹಾಗೂ ಜಾತೀಯ ನೆಲೆಯಲ್ಲಿ ವ್ಯಾಖ್ಯಾನಿಸಿದೆ. ಇದಕ್ಕೆ ಭಿನ್ನವಾದ

ಆಶಯಗಳು ಇಲ್ಲವೆಂತಲ್ಲ, ಅದು ಗೌಣವಾಗಿ ಪರಿಗಣಿಸಲ್ಪಟ್ಟಿವೆ - ಮಾತ್ರ. ಧರ್ಮ ಅನ್ನುವುದು ಮಾನವ ಸಮುದಾಯವು ಒಟ್ಟಾಗಿ ನಡೆಯಬೇಕಾದ ಕ್ರಿಯೆ. ತಂತಮ್ಮ ನೆಲೆಯಲ್ಲಿ ಭಿನ್ನರೂಪಗಳಿದ್ದರೂ ಅಳಿಯದ ನೆಲೆಯಲ್ಲಿ, ತಾತ್ವಿಕ ಮಟ್ಟದಲ್ಲಿ – 'ಧರ್ಮ' ಮನಸ್ಸಿನ ತ್ಯಾಗವಾಗಿ ಸಮುದಾಯದ ಒತ್ತಾಸೆಯಾಗಿ, ಬೆಳೆದು ಬರಬೇಕಾಗಿದೆ. ಇದನ್ನು ಸಾಹಿತ್ಯ, ಕಲೆ, ಸಂಗೀತ ಮತ್ತು ವಿಜ್ಞಾನಗಳು ತಂತಮ್ಮ ನೆಲೆಯಲ್ಲಿ ಸರಿಯಾಗಿಯೇ ವ್ಯಾಖ್ಯಾನಿಸುತ್ತಿವೆ, ವ್ಯಾಖ್ಯಾನಿಸಿವೆ. ಇಪ್ಪತ್ತನೆಯ ಶತಮಾನದ ಆಧುನಿಕ ಮನಸ್ಸು ಮತ್ತು ಸಂವೇದನೆಗಳು ಆ ಚಾರಿತ್ರಿಕ ನೆಲೆಯಿಂದ ಬೇರೆಯಾಗಲಾರವು. ಇದು ಪಾತಿವ್ರತ್ಯ ತೊಟ್ಟ ಹೆಂಗಸಿನಂತಲ್ಲ; ಸಹಜಗುಣದಿಂದ ಶೋಭಿತವಾದ ಮನಸ್ಸಿನಂತೆ.

●

‘ಧರ್ಮ ಮತ್ತು ಯುವಜನ’

ಜ.ಹೊ. ನಾರಾಯಣ ಸ್ವಾಮಿ

ಧರ್ಮ ಎಂದರೆ ಏನು ? ಇದಕ್ಕೆ ಅನೇಕ ಅರ್ಥಗಳನ್ನು ಕೊಡಲಾಗಿದೆ. ‘ಜಗತ್ತಿನ ಸ್ಥಿತಿಗತಿಗಳ ದೃಷ್ಟಿಯಿಂದ ದೃಢವಾಗಿ ಹಿಡಿಯಬೇಕಾದುದು; ನಿಷ್ಠೆಯಿಂದ ಪಾಲಿಸಬೇಕಾದುದು; ವಾಡಿಕೆಯಿಂದ ಬಂದ ಮತ ಸಂಬಂಧವಾದ ಅನುಷ್ಠಾನ; ಕಟ್ಟಳೆ, ವಿಧಿ, ಆಚಾರ, ಸಂಪ್ರದಾಯ, ವಿಹಿತವಾದ ಆಚರಣೆ, ಪುಣ್ಯ; ಚತುರ್ವಿಧ ಪುರುಷಾರ್ಥಗಳಲ್ಲಿ ಒಂದು; ಕರ್ತವ್ಯ, ಗುಣ, ಸ್ವಭಾವ, ಲಕ್ಷಣ, ನ್ಯಾಯ, ನೀತಿ, ದಾನ, ನಿಷ್ಠೆ, ಶ್ರದ್ಧೆ, ಭಕ್ತಿ, ಮತ, ದಯೆ, ಕರುಣೆ, ಕೃಪೆ, ರೀತಿ, ಕ್ರಮ, ಶಿವ ಇತ್ಯಾದಿ ಅರ್ಥಗಳನ್ನು ಆರೋಪಿಸಲಾಗಿದೆ.

ಧರ್ಮದ ಒಂದು ವಿಶೇಷತೆ ಎಂದರೆ ಸೃಷ್ಟಿಯ ಚರಾಚರ, ಅಣುರೇಣು ತೃಣ ಕಾಷ್ಠದೊಳಗೆಲ್ಲಾ ಅಂತರ್ನಿಹಿತವಾಗಿರುವುದು. ಈ ಅಂತರ ನಿಹಿತವಾಗಿರುವ ಅದನ್ನು ಅರಿಯುವಲ್ಲಿ ನಡೆದ ಮಾನವ ಚಿಂತನೆ ಅನೇಕ ಮುಖಗಳಲ್ಲಿ ಪ್ರಕಟವಾಗಿದೆ, ಪ್ರಕಟವಾಗುತ್ತಿದೆ. ಇದು ಪ್ರಧಾನವಾಗಿ ಎರಡು ನೆಲೆಗಟ್ಟಿನಲ್ಲಿ ಅನ್ವೇಷಣೆಗೆ ಒಳಪಟ್ಟು ಹೊರಹೊಮ್ಮುತ್ತಿದೆ. ಒಂದು ಅಧ್ಯಾತ್ಮ ಮತ್ತೊಂದು ವಿಜ್ಞಾನ.

ಅನ್ವೇಷಣೆಯ ಗುರಿ ಸತ್ಯ ಸಾಕ್ಷಾತ್ಕಾರ. ಅದು ಭೌತಿಕ ಮತ್ತು ಆದಿಭೌತಿಕ ನೆಲೆಗಟ್ಟಿನಲ್ಲಿ ನಡೆಯುವಂಥದ್ದು. ಭೌತಿಕ ಅನ್ವೇಷಣೆ ಪ್ರಾಕೃತಿಕ ಸತ್ಯಗಳನ್ನು ಕಂಡುಕೊಂಡರೆ ಆಧಿಭೌತಿಕ ಅನ್ವೇಷಣೆ ಅದರ ಆಂತರಿಕ ಸತ್ಯಗಳನ್ನು ಅರಿವಿಗೆ, ಸ್ವಾನುಭವಕ್ಕೆ ತಂದುಕೊಡುತ್ತದೆ.

ಧರ್ಮದ ಉಗಮಕ್ಕೆ ಮೂಲಕಾರಣಗಳೆದರೆ ಭಯ ಮತ್ತು ಅರಿವು. ಪ್ರಕೃತಿಯ ಪವಾಡ ಸದೃಶ ಕ್ರಿಯೆಗಳನ್ನು ಕಂಡ ಮನುಷ್ಯ ಭಯದಿಂದ ಹುಟ್ಟು ಹಾಕಿಕೊಂಡ ದೈವದ ಕಲ್ಪನೆ, ಅದರ ಸಂತೃಪ್ತಿಗಾಗಿ ತಂದ ಆಚರಣೆಗಳು ಒಂದು ಕಡೆಯಾದರೆ ಈ ಸೃಷ್ಟಿ ಎನ್ನುವುದು ಏನು ? ಇದರ ಮೂಲ ಯಾವುದು ಎಂಬ ಪ್ರಶ್ನೆಯ ಹಿನ್ನೆಲೆಯಲ್ಲಿ ಅರಿವಿನ ಮೂಲಕ ಹೊರಟಿದ್ದು ಮತ್ತೊಂದು. ಈ ಭಯ ಮತ್ತು ಅರಿವಿನ ಹಳಿಗಳ ಮೇಲೆ ಈ ಸೃಷ್ಟಿಯ ನಿಗೂಢವನ್ನು ಕುರಿತ ಮಾನವ ಚಿಂತನೆ ಅಂದಿನಿಂದ ಇಂದಿನವರೆಗೆ ಸಾಗುತ್ತಲೇ ಬಂದಿದೆ.

‘ಭಯ’ ಅಜ್ಞಾನ ಜನ್ಯ. ಅದು ಕೆಡುಕನ್ನು ನಿವಾರಿಸಲು ಹುಟ್ಟಿಕೊಂಡು ಕೆಡುಕಿಗೆ ಕಾರಣವಾಗಿದೆ. ಭಯ - ಅದರಿಂದ ಆರಾಧನೆ - ಆರಾಧನೆಯಿಂದ ಬಂಧನ - ಬಂಧನದಿಂದ ಶೋಷಣೆ ಹೀಗೆ ತನ್ನ ಕರಾಳ ಮುಖವನ್ನು ಬಿಂಬಿಸಿ ಸ್ವತಂತ್ರ ಮನಸ್ಸನ್ನು ಬಂಧಿಸಿ ಕವುಚಿಕೊಂಡಿದೆ.

ಅರಿವು ಜ್ಞಾನ ಜನ್ಯ. ಅದರ ಅಂತರಂಗ ಒಳಿತು. ಅದರಿಂದ ಉಂಟಾಗುವುದು ಬಂಧನವಲ್ಲ ಬಿಡುಗಡೆ, ಮುಕ್ತಿ. ಅರಿವಿನ ಮಾರ್ಗದಲ್ಲಿ ಧರ್ಮದ ಕ್ರಿಯೆ ನಿತ್ಯ ಮುಕ್ತವಾದ ವಿಕಾಸದ ನೆಲೆಗಟ್ಟಿನಲ್ಲಿ ನಡೆದರೆ ಭಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸಾಂಪ್ರದಾಯಿಕ ಆಚರಣೆಗಳು ಮತಗಳನ್ನು ಹುಟ್ಟಿಹಾಕಿಕೊಂಡು ಬಂಧನಕ್ಕೊಳಗಾಗಿ ತವ್ಮೊಳಗೇ ಮುರುಟಿಕೊಂಡಿವೆ.

ಧರ್ಮ = Religion ಎಲ್ಲರನ್ನೂ, ಎಲ್ಲವನ್ನೂ ಒಳಗೊಂಡಿರುವುದು. ಮತ- Religion ಮನಸ್ಸಿನಿಂದ ಹುಟ್ಟಿಕೊಂಡಿರುವುದು. ಧರ್ಮಕ್ಕೆ ಹೃದಯ ನೆಲೆಗಟ್ಟಾದರೆ ಮತಕ್ಕೆ ಮನಸ್ಸು ಮೂಲವಾಗಿದೆ. ಇಂದು ಹೃದಯ ಮೂಲದ ಧರ್ಮ ಮರೆಯಾಗಿ ಮನಸ್ಸು ಮೂಲದ ಧರ್ಮ ಕಾರಣವಾಗಿ ತನ್ನ ದೈತ್ಯ ನರ್ತನಕ್ಕೆ ತೊಡಗಿರುವುದರಿಂದ ಧರ್ಮಕ್ಕೆ ಬದಲಾಗಿ ಧರ್ಮದ ಹೆಸರಿನ ವಿಕೃತ ರೂಪವನ್ನು ಕಾಣುತ್ತಿದ್ದೇವೆ.

ಧರ್ಮ ಎಂದರೆ ಏನು ?

‘ಧರ್’ ಎನ್ನುವ ಧಾತುವಿನಿಂದ ಬಂದಿರುವ ಧರ್ಮ ಎನ್ನುವ ಪದ ಧರಿಸು, ಎತ್ತಿಹಿಡಿ ಎನ್ನುವ ಅರ್ಥವನ್ನು ಒಳಗೊಂಡಿದೆ. ವಿಶ್ವದ ಮೂಲ ಯಾವುದೋ ಅದನ್ನು ಅರಿವಿನ ಮೂಲಕ ಒಳಗೊಳ್ಳುವುದು, ಬುದ್ಧನಂತೆ. ಬದುಕಿನಲ್ಲಿ ಧರಿಸಿಕೊಳ್ಳುವುದು. ತನ್ಮೂಲಕ ಎತ್ತಿಹಿಡಿಯುವುದು. ಆ ಕಾರಣದಿಂದಲೇ ವಿವೇಕಾನಂದರು

‘ಧರ್ಮ ಬಾಯಿ ಮಾತಲ್ಲ, ನಂಬಿಕೆಯಲ್ಲ, ಸಿದ್ಧಾಂತವಲ್ಲ,

ಅಥವಾ ಅದೊಂದು ಕೋಮುವಾರು ಭಾವನೆಯೂ ಅಲ್ಲ;

ಅದು ದೇವಸ್ಥಾನ ಕಟ್ಟುವುದರಲ್ಲಿಲ್ಲ, ಸಾಮಾಜಿಕ

ಪೂಜೆಗೆ ಹೋಗುವುದರಲ್ಲಿಯೂ ಇಲ್ಲ, ಗ್ರಂಥಗಳಲ್ಲಿಲ್ಲ,

ಸಂಸ್ಥೆಯಲ್ಲಿಯೂ ಇಲ್ಲ; ಮಾತಿನಲ್ಲಿಲ್ಲ, ಉಪವಾಸ

ದಲ್ಲಿಯೂ ಇಲ್ಲ; ಧರ್ಮವೆಂದರೆ ಸಾಕ್ಷಾತ್ಕಾರ’ ಎಂದು ಸಾರಿದ್ದು.

ವಿಶ್ವಸ್ಥವಾಗಿರುವುದೇ ಹೃದಯಸ್ಥವಾಗಿರುವ, ಹೃದಯಸ್ಥವಾಗಿರುವುದೇ, ವಿಶ್ವಸ್ಥವಾಗಿರುವ ಆ ಮೂಲವನ್ನು ಅರಿತು ಸಾಕ್ಷಾತ್ಕರಿಸಿಕೊಂಡು ಅದೆ ಆಗುವುದು

ಧರ್ಮದ ಮೂಲಗುರಿ. ಅದು ಹೃದಯ ಮೂಲದ ನೆಲೆಗಟ್ಟನ್ನು ಬಿಟ್ಟು ಕೇವಲ ಮನಸ್ಸಿನಿಂದ ಮೈ ಪಡೆದದ್ದಾದರೆ ಅದು ಲೌಕಿಕಗೊಂಡು ಒಳಿತಿಗಿಂತ ಕೆಡುಕಿಗೆ ಕಾರಣವಾಗಿ ಬಿಡುವ ದುರಂತಗಳನ್ನು ಕಂಡ ವಿವೇಕಾನಂದರು

"ಎಲ್ಲ ಮೂಢನಂಬಿಕೆಗಳನ್ನೂ ಧ್ವಂಸಮಾಡಿ. ಗುರುಗಳಾಗಲೀ,

ಧರ್ಮ ಗ್ರಂಥಗಳಾಗಲೀ, ದೇವರುಗಳಾಗಲೀ ಇಲ್ಲ.

ಈ ಎಲ್ಲವೂ ನೆಲೆ ಇಲ್ಲದವು .ಅವತಾರ ಪುರುಷರನ್ನೂ

ಪ್ರವಾದಿಗಳನ್ನು ಧ್ವಂಸಮಾಡಿ, ನಾನೇ ಪರಮ ಪುರು

ಷೋತ್ತಮ. ತತ್ವಜ್ಞಾನಿಗಳೆ ಎದ್ದು ನಿಲ್ಲಿ.

ಭಯಬೇಡ, ದೇವರನ್ನು ಕುರಿತ ಮೂಢನಂಬಿಕೆಗಳನ್ನು

ಕುರಿತ ಮಾತು ಬೇಡ! ಸತ್ಯಕ್ಕೆ ಜಯ" ಎಂದು

ಹೃದಯ ಮೂಲದಲ್ಲೇ ಮರ್ಮರಿಸುತ್ತಿರುವ ವಿಶ್ವ ಮೂಲದ ಆ ಪರಮ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಕರೆ ಇತ್ತರು.

ಪ್ರತಿಯೊಂದು ಜೀವಿಯೂ ತನ್ನತನದ ತಾನನದಲ್ಲೇ ಈ ವಿಶ್ವಾತ್ಮ ಭಾವದ, ಸೌಂದರ್ಯದ ಸವಿಯನ್ನು ಮುಕ್ತವಾಗಿ ಸವಿಯುತ್ತಿದೆ. ಆದರೆ ಲೌಕಿಕ ಮತಗಳು ಹೃದಯ ಮೂಲದ ಅಧರ್ಮವನ್ನು ಮೆಟ್ಟಿ ಲೌಕಿಕ ಆಚರಣೆಗಳಿಗಷ್ಟೇ ಒಲಿದು ಬಂಧಿಯಾಗಿ ಬಂಧಿಸಲು ಉದ್ಯುಕ್ತವಾಗಿವೆ. ಆದಕಾರಣವೆ ಜಗತ್ತಿಗೆ ಬಂದ ಮಹಾನ್ ದಾರ್ಶನಿಕರ ನಂತರ ಅವರು ಸಾಕ್ಷಾತ್ಕರಿಸಿಕೊಂಡಿದ್ದ ಹೃದಯ ಮೂಲದ ಧರ್ಮ ಅವರ ಕಾಲಾನಂತರ ಮತೀಯಗೊಂಡು ಒಡೆದು ಚೂರಾಗಿಹೋದುವು. ಉದಾಹರಣೆಗೆ ಗೌತಮ ಬುದ್ಧ ಕಂಡುಕೊಂಡ ಬೌದ್ಧಧರ್ಮ ಅವನ ಕಾಲಾನಂತರ ಹೀನಾಯಾನ, ಮಹಾಯಾನವಾಗಿ; ಮಹಾವೀರ ಕಂಡುಕೊಂಡ ಜೈನಧರ್ಮ ನಂತರ ಶ್ವೇತಾಂಬರ, ದಿಗಂಬರವಾಗಿ; ಏಸುವಿನ ನಂತರ ಕ್ರಿಶ್ಚಿಯನ್ ಧರ್ಮ ಕ್ಯಾಥೊಲಿಕ್, ಪ್ರೊಟೆಸ್ಟೆಂಟ್ ಆಗಿ ಹಾಗೆ ಪೈಗಂಬರರ ನಂತರ ಇಸ್ಲಾಂಧರ್ಮ ಶಿಯಾ, ಸುನ್ನಿಯಾಗಿ ಇಬ್ಭಾಗವಾಗಿವೆ. ಹಾಗೆ ಹಿಂದು ಧರ್ಮದಲ್ಲಿ, ಶೈವಧರ್ಮದಲ್ಲಿ ಇತ್ಯಾದಿ ಎಲ್ಲಾ ಧರ್ಮಗಳಲ್ಲಿ ಅನೇಕ ಒಳಪಂಗಡಗಳಿದ್ದು ತದ್ವಿರುದ್ಧವಾದ ಆಚರಣೆಗಳಲ್ಲಿ ತೊಡಗಿ ಯಾವ ಧರ್ಮಗಳು ಮನುಕುಲಕ್ಕೆ ವರವಾಗಿ ಪರಿಣಮಿಸಬೇಕಿತ್ತೋ ಅವು ಶಾಪವಾಗಿ ಸುಡಹತ್ತಿವೆ.

ಸಮಾಜದಲ್ಲಿ ನೆಲೆಗೊಂಡಿರುವ ಈ ಪರಿಸ್ಥಿತಿಯಿಂದಾಗಿ ಯುವಜನ ಗಲಿಬಿಲಿಗೊಂಡಿದೆ. ಧರ್ಮ ಯಾರ ಬದುಕಿನಲ್ಲೂ, ಯಾವ ಮತಗಳಲ್ಲೂ ಪ್ರಕಟವಾಗದೆ ಗುಡಿ, ಚರ್ಚ್, ಮಸೀದಿ ಮಠಮಾನ್ಯಗಳಲ್ಲಿ ಬಂಧಿತವಾಗಿ ಲೌಕಿಕಗೊಂಡಿರುವ ಕಾರಣ ಯುವಜನತೆ

ಧರ್ಮದ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಒಂದರ್ಥದಲ್ಲಿ ಧರ್ಮ ಎಂದರೆ ದೂರ ಇರುವ ಇಲ್ಲಾ ಸಾಂಪ್ರದಾಯಿಕ ಕ್ರಿಯೆಗಳಿಗೆ ಬಂದಿಯಾಗುವ ಮನೋಧರ್ಮ ಬೆಳೆಸಿಕೊಳ್ಳುತ್ತಿದ್ದಾರೆ. ಅಲ್ಲದೆ ಪಾಶ್ಚಾತ್ಯೀ ಕರಣದ ಪ್ರಬಲ ಸೆಳೆತಕ್ಕೆ ಒಳಗಾಗುತ್ತಿದ್ದಾರೆ. ಇದು ಸರಿಯೆ ? ಎಂಬ ಪ್ರಶ್ನೆ ಇಂದು ಪ್ರಮುಖವಾಗಿ ನಿಂತಿದೆ. ಹಿರಿಯರು ಕಿರಿಯರ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರೆ ಕಿರಿಯರು ಹಿರಿಯರ ಧರ್ಮಾಚರಣೆಯ ಕೇವಲವನ್ನರಿತು, ನಡೆನುಡಿಯ ಅಂತರವನ್ನು ಕಂಡು ಸಿನಿಕರಾಗುತ್ತಿದ್ದಾರೆ. ಲೌಕಿಕಗೊಂಡಿರುವ ಮಠಾಧೀಶರ ಸ್ವಾರ್ಥ, ಜಾತಿ, ಆಸೆ ಆಮಿಷಗಳು, ರಾಜಕೀಯ ಇತ್ಯಾದಿಗಳನ್ನು ಕಂಡು ವಿಚಲಿತರಾಗಿದ್ದಾರೆ. ಏಕೆ ಹೀಗಾಗುತ್ತಿದೆ ? ಹಿರಿಯ ಕಿರಿಯರಲ್ಲಿ ಧರ್ಮದ ಹೊಂದಾಣಿಕೆಯಾಗದೆ ದೊಡ್ಡ ಕಂದಕ ಏರ್ಪಡುತ್ತಿರುವುದಕ್ಕೆ ಕಾರಣವೇನು ? ಇಲ್ಲಿ ವಿವೇಕಾನಂದರ ಒಂದು ಮಾತು ದಾರಿ ದೀಪವಾಗಬಲ್ಲುದು ಎನಿಸುತ್ತದೆ.

"ಯುವಕನು ಚರ್ಚಿಗೆ ಹೋಗದಿದ್ದರೆ ಅವನನ್ನು ಬಲಾತ್ಕರಿಸಬೇಕು.

ಆದರೆ ವೃದ್ಧನು ಇನ್ನೂ ಚರ್ಚಿಗೆ ಹೋಗುತ್ತಿದ್ದರೆ ಅವನಿಗೆ

ಬುದ್ಧಿಯನ್ನು ಹೇಳಬೇಕು" ಎಂದು.

ವಿವೇಕಾನಂದರ ಈ ಮಾತಿನಲ್ಲಿ ಒಂದು ಅದ್ಭುತ ಸತ್ಯ ಅಡಗಿದೆ. ಗುಡಿ, ಚರ್ಚು, ಮಸೀದಿ ಇತ್ಯಾದಿಗಳೆಲ್ಲಾ ಅರಿವನ್ನು ಉಂಟುಮಾಡುವ ಪ್ರಾಥಮಿಕ ಸಂಸ್ಥೆಗಳು ಅಷ್ಟೇ; ಅವೇ ಸರ್ವಸ್ವವಲ್ಲ. ಅಣುರೇಣು ತೃಣಕಾಷ್ಠದೊಳಗೆಲ್ಲಾ ಸೃಷ್ಟಿಕರ್ತನನ್ನು ಕಾಣುವ, ಸೃಷ್ಟಿಯ ನಿಯಮವನ್ನರಿವ ದೃಷ್ಟಿಯನ್ನು ಅವು ತಂದುಕೊಡಬೇಕು. ಆ ದೃಷ್ಟಿಯನ್ನು ಒಳಗೊಂಡಮೇಲೆ ಅದನ್ನು ನಮ್ಮ ಬದುಕಿನ ಪ್ರತಿ ಉಸಿರಿನಲ್ಲಿಯೂ ಕಂಡುಕೊಂಡು ಮುನ್ನಡೆಯಬೇಕು ಎನ್ನುವುದು. ಅದು ಬಿಟ್ಟು ನಿತ್ಯ ಬದುಕಿನಿಂದ ಧರ್ಮವನ್ನು ಬೇರ್ಪಡಿಸಿ ಗುಡಿ ಚರ್ಚು ಮಸೀದಿಗಳಲ್ಲಿ ಒಂದು, ಆಚರಣೆಯಲ್ಲಿ ಮತ್ತೊಂದು ಮಾಡಹೊರಟರೆ ಅದು ಧರ್ಮದ ಆಚರಣೆ ಆಗುವುದಿಲ್ಲ, ಅದು ಕೇವಲ ಲೌಕಿಕ ಕ್ರಿಯೆಯಾಗಿ ಕಾಲಾನಂತರದಲ್ಲಿ ಮಾನಸಿಕ ರೋಗವಾಗಿ ಪರಿಣಮಿಸಿ ಬಿಡುತ್ತದೆ. ಯಾವಧರ್ಮ ನಿತ್ಯ ಕ್ರಿಯೆಯಲ್ಲಿ ಅರಳದೆ ಕೇವಲ ಸಾಂಪ್ರದಾಯಿಕ ಆಚರಣೆಗೆ ಸೀಮಿತವಾಗಿ ಬಂಧಿಯಾಗಿ ಬಿಡುವುದೋ ಅದು ಒಳಿತಿಗಿಂತ ಹೆಚ್ಚು ಕೆಡುಕನ್ನುಂಟುಮಾಡುತ್ತದೆ; ಚಕ್ರೀಯ ಕ್ರಿಯೆಯಲ್ಲಿ ಕಟ್ಟಿಹಾಕಿ ಬಿಡುತ್ತದೆ. ಈ ಅಪಾಯವನ್ನು ಕಂಡೆ ವಿವೇಕಾನಂದರು ವೃದ್ಧರಿಗೆ ಬುದ್ಧಿಯನ್ನು ಹೇಳಬೇಕು ಎಂದದ್ದು. ಹಿರಿಯರಲ್ಲಿ ಈ ವಿವೇಕದ ಮೊಳಕೆಯೊಡೆದರೆ ಕಿರಿಯರಲ್ಲಿ ಧರ್ಮ ತಾನಾಗಿಯೆ ಅರಳುತ್ತದೆ.

ದೇವರು ಧರ್ಮಗಳ ಮೂಲ ಯಾವುದು ಎಂದು ಅರಿಯಹೊರಟ ಅಧ್ಯಾತ್ಮ - ವಿಜ್ಞಾನಗಳು ಆ ಆಗುವಿಕೆಯ ಅರಿವಿನ ಹಾದಿಯಲ್ಲಿ ನಿರಂತರ ಪಯಣಿಸುತ್ತಲೇ ಇವೆ. ಆ ಆಗುವಿಕೆಯೆ ಪ್ರಕೃತಿಯ ಅಂತರಂಗದ ಸೂತ್ರ. ಆ ಮೂಲವನ್ನರಿತ ಕಾರಣ ರಾಷ್ಟ್ರಕವಿ

ಕುವೆಂಪು ಅವರು ತಮ್ಮ ಅನಿಕೇತನ ಎನ್ನುವ ವಿಶ್ವಮಾನವ ಗೀತೆಯಲ್ಲಿ ಆ ಸಾರ ಸರ್ವಸ್ವವನ್ನು ಹೇಳಿ ಕೊನೆಯ ಸಾಲಿನಲ್ಲಿ 'ಆಗು ಆಗು ಆಗು ಆಗು' ಎನ್ನುವ ಆಳವಾದ ಅರ್ಥವನ್ನಿಟ್ಟು ಅಂತ್ಯಗೊಳಿಸಿದ್ದಾರೆ. ಆ ಆಗುವಿಕೆಯೆ ಅಮೃತತ್ವ; ಇಲ್ಲದಿರೆ ಸಾವು.

ಈ ಅಧ್ಯಾತ್ಮ ವಿಜ್ಞಾನಗಳ ಮಹಾನ್ ಯಾತ್ರೆಯಲ್ಲಿ ಮನುಕುಲ ಅನೇಕ ಮಹತ್ವದ ಅಂಶಗಳನ್ನು ಕಂಡುಕೊಂಡಿದೆ; ತನ್ನದಾಗಿಸಿಕೊಂಡಿದೆ. ಇನ್ನೂ ಮಹತ್ತಾದುದನ್ನು ಕಂಡುಕೊಳ್ಳಲು ಯತ್ನಿಸುತ್ತಿದೆ. ಏಕೆಂದರೆ ವಿಕಾಸ ಅದರ ಅಂತರಂಗ, ಆನಂದ ಅದರ ಗುರಿ. ಈ ಹಿನ್ನೆಲೆಯಲ್ಲಿ ಇದುವರೆಗೆ ಕ್ರಮಿಸಿರುವ ಜ್ಞಾನದ ವಿಸ್ತಾರವನ್ನು ಅಭಿವ್ಯಕ್ತಿಸುವ ನನ್ನ ಇತ್ತೀಚಿನ ಒಂದು ಕವನ ಇಲ್ಲಿ ಪ್ರಸ್ತುತ ಎಂದು ಭಾವಿಸಿ ಕೊಡುತ್ತಿದ್ದೇನೆ.

ಹೋರುತ್ತಿದೆ ಭೂಮಿ

ಅಸ್ತಿತ್ವಕೆ ಹೋರಾಡುತ್ತಿರುವಂತೆ ನಾವಿಲ್ಲಿ
ಹೋರುತ್ತಿದೆ ಸೌರವ್ಯೂಹದಲಿ ಚಲಿಸುತ್ತಿಹ ಭೂಮಿ
ಸುತ್ತುವ ಗ್ರಹಗಳ ಸೆಳತಕೆ ಸೋತರೆ ನುಚ್ಚುನೂರು
ಆಗ ಹೇಳಿ ನಿಲ್ಲಲು ನಮಗೆ ಯಾವುದು ಊರು ?

ಈ ಇಳೆಯ ಒಡಲಲ್ಲಿ ಎಂಥ ಜೀವಂತ ಸೋಜಿಗಗಳು !
ಎಣಿಕೆಗೆಟುಕದ ಜೀವ ಜಾಲಗಳು, ಮರುಮರೀಚಿಕೆಗಳು
ಮಿಲನದೊಲವುಗಳು, ಆನಂದದದ್ಭುತಗಳು !
ಕಣ್ಮುಚ್ಚಿದರೆ ಕಾಣುವ, ಮೌನದಲ್ಲಿ ನಿಜವಾಗುವ ವಿಸ್ಮಯಗಳು !

ಎಲೆತಾಯೆ ಕಂಡುಕೊಂಡಿತೆ ನಿನ್ನ ಮನುಜಕುಲ ?
ದೇವರು ಧರ್ಮಗಳಿಗೆ ಹೇಳು ಯಾವುದು ನೆಲ ?
ಆಕಾಶದಲಿ ತಿರುಗುತ್ತಿರುವ ಬುಗುರಿ ನೀನು
ತಿರುಗಿಸುವ ಕೈ ತನ್ನಿರವು ಕಾಣಗೊಡದಲ್ಲ !

ಬ್ರಹ್ಮ ವಿಷ್ಣು ಶಿವ ಅಹುರಮಜ್ದಾ ಜಹೂವ
ರಾಮ ಕೃಷ್ಣ ಪೈಗಂಬರ್, ಏಸು ಅಲ್ಲಾ ?
ಹೇಳುತ್ತಹೋದರೆ ಹೆಸರುಗಳಿಗೆ ಕೊನೆ ಇಲ್ಲಾ
ಒಳಗೆ ತಿಳಿಯದೆ ಹೊರಟ ಕಲ್ಪನೆಗೆ ಮಿತಿ ಇಲ್ಲಾ !

ಗುಡಿ ಚರ್ಚು ಮಸೀದಿಗಳೆಲ್ಲಾ ಭೂಮಿತಾಯಿಯ
ಒಡಲ ಬಗೆದು ಕಟ್ಟಿದಿಟ್ಟಿಗೆ ಗೂಡುಗಳು
ಒಳಗುರಿಯುತಿದೆ ಜ್ಯೋತಿಯಲ್ಲ ಸುಡುವ ಸೂಡು
ಎದೆಯ ದೀಪವಳಿದ ಮೇಲೆ ಬೆಳಗೀತೆ ನಾಡು
ಉನ್ಮತ್ತದಿ ಕುಣಿಯುವ ಪ್ರೇತಗಳ ಸುಡುಗಾಡು.

ಬಡವರ ಬೆವರ ಬಸಿದು ಒಡಲ ತುಂಬಿದ್ದೇವೆ
ಸುಡುವಣೆ ಬಾಂಬುಗಳ, ಉಣುವ ತುಟಿಗಳ
ಹೊಲೆದಿದ್ದೇವೆ; ಪ್ರೀತಿಯ ಬಾಹುಗಳ ಬಂಧಿಸಿದ್ದೇವೆ
ಮೆರೆದಿದೆ ಮೌಢ್ಯದ ಮೆರವಣಿಗೆ; ಕಡೆಯ
ಉಸಿರಿಗೆ ಮಿಟುಕುತ್ತಿದೆ ಬತ್ತಿದೆದೆಯ ಹಣತೆ

ಸುತ್ತುತಿದೆ, ಸೆಣೆಸುತ್ತಿದೆ, ಕ್ಷಣ ಕ್ಷಣವೂ ಹೋರುತ್ತಿದೆ
ಜೀವಸಂಕುಲಗಳ ಉಳಿವಿಗೆ ನಮ್ಮೀ ಭೂಮಿ
ಯಾವ ಕ್ಷಣದಲ್ಲಿ ಏನೋ ಗೆಳೆಯ ! ಎದೆಯು
ನಗುತಲಿರಲಿ; ನಿರಂತರ ಪ್ರೀತಿ ತುಂಬಿ ಬರಲಿ.

ಪ್ರಕೃತಿಯ ಅಂತರಂಗದ ಆಶಯವಾದ 'ಎದೆಯು ನಗುತಲಿರಲಿ' ಹಾಗೂ 'ಪ್ರೀತಿ ತುಂಬಿ ಬರಲಿ' ಎಂಬುದು ಧರ್ಮದ ಮೂಲ ಆಶಯವೂ ಆಗಿ ಅನುರಣಿಸುತ್ತಿದೆ. ಮನುಷ್ಯ ಪ್ರಜ್ಞಾಪೂರ್ವಕವಾಗಿ ಆ ಸ್ಥಿತಿಯನ್ನು ಪ್ರಾಪ್ತಗೊಳಿಸಿಕೊಳ್ಳಲು ಹೋರಾಡುತ್ತಿದ್ದರೆ ಪ್ರಕೃತಿಯ ಇನ್ನಿತರ ಚರಾಚರ ವಸ್ತುಗಳೆಲ್ಲವೂ ಪ್ರಕೃತಿಯ ಆ ಸೂತ್ರದಲ್ಲೆ ತನ್ಮಯವಾಗಿವೆ; ಅಮೃತಮಯವಾಗಿವೆ.

ಈ ಹೋರಾಟ ಮಾಡುತ್ತಿರುವ ಮನುಷ್ಯ ಏಕಕಾಲದಲ್ಲಿ ಎರಡು ಲೋಕಗಳಲ್ಲಿ ವಿಹರಿಸುತ್ತಾನೆ. ಒಂದು ಹೊರ ಲೋಕ, ಮತ್ತೊಂದು ಒಳಲೋಕ. ಹೊರ ಲೋಕದ ಅನ್ವೇಷಣೆಯನ್ನು 'ವಿಜ್ಞಾನ' ಎಂದು ಕರೆಯುತ್ತಾರೆ; ಒಳಲೋಕದ ಅನ್ವೇಷಣೆಯನ್ನು ಅಧ್ಯಾತ್ಮ ಎಂದು ಕರೆಯುತ್ತಾರೆ. ವಿಜ್ಞಾನದ ಗುರಿ ವಸ್ತುವಿನ ಮೂಲ ಸ್ವರೂಪವನ್ನು ಕಂಡು ಹಿಡಿಯುವುದು. ಉದಾ H_2O. ಎರಡು ಭಾಗ ಜಲಜನಕ ಒಂದು ಭಾಗ ಆಮ್ಲಜನಕಗಳು ಸೇರಿದರೆ ನೀರು ಆಗುತ್ತದೆ. ಹೀಗೆ ಸಾಬೀತು ಪಡಿಸುವುದು. ಅಧ್ಯಾತ್ಮದ ಗುರಿ ಅರಿಷಡ್ವರ್ಗಗಳಾಚೆ ಇರುವ ನೈಜ ಸ್ವರೂಪವನ್ನು ಕಂಡುಕೊಳ್ಳುವುದು; ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಮೀರಿದಾಗ ಕಾಣುವ ಒಳಬೆಳಕು. ಉದಾ : ಗೌತಮ ಬುದ್ಧನ ಸ್ಥಿತಿ. ಒಳಗೆ ಕಂಡುಕೊಂಡ ಬೆಳಕನ್ನೂ ಹೊರಗೂ ಕಾಣುವ ಸ್ಥಿತಿ.

ವಿಜ್ಞಾನ ಮತ್ತು ಅಧ್ಯಾತ್ಮಗಳ ಆಚೆಗೂ ಒಂದು ನಿಗೂಢತೆ ಇದೆ. ಅದು ಅಭೇದ್ಯ. ಆಮ್ಲಜನಕ ಜಲಜನಕಗಳು ಇಂತಿಷ್ಟು ಪ್ರಮಾಣಗಳಲ್ಲಿ ಸೇರಿದರೆ ನೀರು ಆಗುತ್ತದೆ. ಅದು ಪ್ರಕೃತಿ ಸಹಜ ಕ್ರಿಯೆ. ಅದು ನೀರೇ ಆಗುತ್ತದೆ. ಬೇರೆ ಏನೂ ಆಗುವುದಿಲ್ಲ ಏಕೆ ? ಎನ್ನುವ ಪ್ರಶ್ನೆಗೆ ನಿಯಮ ಎನ್ನುವ ಉತ್ತರ ಕೊಡಬಹುದಾದರೂ ಆ ಉತ್ತರ ಸೀಮಿತವಾಗುತ್ತದೆ. ವಾಸ್ತವವಾಗಿ ಅದಕ್ಕೆ ಸರಿಯಾದ ಉತ್ತರ ನಿರುತ್ತರವೇ ಆಗಿದೆ. ಏಕೆಂದರೆ ಮನುಷ್ಯನ ಹೊರ ಲೋಕ ಅನ್ವೇಷಣೆಯ ಲಕ್ಷ್ಮಣ ರೇಖೆ ಅದು. ಅದಕ್ಕೆ ಅನುಗುಣವಾಗಿ ಹೊಂದಿಕೊಂಡು ಬದುಕುವುದು ಅನಿವಾರ್ಯ. ಇದು ವಿಜ್ಞಾನದ ಮಿತಿ. ಅಧ್ಯಾತ್ಮದ ಅನೇಷಣೆಯ

ಫಲವಾಗಿ ಮನುಷ್ಯನ ನೈಜ ಸ್ವರೂಪದ ಅರಿವಾದರೂ ಅದು ತಿಳಿದಷ್ಟೂ ತಿಳಿಯುತ್ತಾ, ಇಳಿದಷ್ಟೂ ಇಳಿಯುತ್ತಾ, ಹಾರಿದಷ್ಟೂ ಅಗಲವಾಗುತ್ತಾ, ಏರಿದಷ್ಟೂ ಎತ್ತರವಾಗುತ್ತಾ ಆಳ, ಅಗಲ, ಎತ್ತರಗಳಿಗೆ ಉತ್ತರಿಸಲಾಗದಷ್ಟು ವಿಸ್ತರಿಸಿಕೊಳ್ಳುತ್ತ ಹೋಗುವ ಸ್ಥಿತಿ. ಇದು ಅಧ್ಯಾತ್ಮದ ಮಿತಿ.

ಸೃಷ್ಟಿಯ ಈ ಅನುಭವಕ್ಕೆ ಅಂತ್ಯವಿದೆಯೆ ? ಈ ನಿಗೂಢವನ್ನೇ ದೇವರು ಎಂದು ಕರೆಯಲಾಗಿದೆಯೆ ? ರೂಪಾತೀತವಾದ, ಗುಣಾತೀತವಾದ, ನಾಮಾತೀತವಾದ, ಶಬ್ದಾತೀತವಾದ ಅದು ಯಾವುದು ?

ಶಂಕರಾಚಾರ್ಯ 'ಬ್ರಹ್ಮಸತ್ಯ - ಜಗನ್ಮಿಥ್ಯ'' ಎನ್ನುವ ಸಿದ್ಧಾಂತ ಯಾವ ಅಥವಾ ಯಾವುದರ ಸ್ಥಿತಿಯನ್ನು ಕುರಿತದ್ದು ? ಅದ್ವೈತವನ್ನು ಒಪ್ಪುವುದಾದರೆ ಶಂಕಾರಾಚಾರ್ಯ ಪಾದಿಸಿದ ಈ ಅದ್ವೈತವೂ, ಉಪನಿಷತ್ತುಗಳಲ್ಲಿ ಅನುರಣಿತವಾಗಿರುವ 'ಆತ್ಮವತ್ ಸರ್ವಭೂತೇಷು' ಎನ್ನುವ ಅದ್ವೈತವೂ ಒಂದೆಯೇ ? ಎಂಬ ಪ್ರಶ್ನೆ ಪ್ರಮುಖ ಸ್ಥಾನ ಪಡೆಯುತ್ತದೆ. ತರ್ಕಕ್ಕೆ ಅನುವು ಮಾಡುತ್ತದೆ.

ರಾಷ್ಟ್ರಕವಿ ಕುವೆಂಪು ಅವರು ತಮ್ಮ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ

'ಬ್ರಹ್ಮಸತ್ತೆಯನಾ ಪರಬ್ರಹ್ಮ ಸತ್ತೆಯಿಂ
ಮಾತ್ರಮೆಯೆ ದರ್ಶಿಸುತಿದಂ ಮಿಥ್ಯೆಯೆಂಬುದೇಂ
ಪೂರ್ಣಸತ್ಯಮೆ ? ಯೋಗ ವಿಜ್ಞಾನಮೊಪ್ಪದು ಕಣಾ !
ಪೂರ್ಣಮದು; ಪೂರ್ಣಮಿದು; ಪೂರ್ಣದಿಂ ಒಂದುದೀ
ಪೂರ್ಣಮಾ ಪೂರ್ಣದಿಂ ಪೂರ್ಣಮಂ ಕಳೆದೊಡಂ
ಪೂರ್ಣಮೆಯೆ ತಾನುಳಿವುದಾ ಪ್ರಜ್ಞೆಗದು ವಿದುಂ
ಸರ್ವಮುಂ ಸತ್ಯದಾವಿಷ್ಕಾರ ವಿನ್ಯಾಸಗಳ್.''

ಎಂದಾಗ, ಈಗ ಯಾವುದು ಸತ್ಯ ? ಯಾವುದು ಮಿಥ್ಯ ? ಸತ್ಯದಿಂದ ಮಿಥ್ಯದ ಉದಯ ಸಾಧ್ಯವೆ ? ಸಾಧುವೆ ? ಬೆಳಕು ಬೆಳಕನ್ನಲ್ಲದೆ ಕತ್ತಲೆಯನ್ನು ಬೀರುವುದೆ ?

ವಿಜ್ಞಾನ ಅಧ್ಯಾತ್ಮಗಳು ಕಂಡುಕೊಳ್ಳುವ ಸ್ಥಿತಿಯ ಆಚೆಗೂ ವಿಸ್ತರಿಸಿರುವ ಅದರ ಪಾದ ತಳವಿರದ ಪಾತಾಳದಲ್ಲಿ; ಅದರ ಶಿರ ಕೊನೆ ಇರದ ಆಕಾಶದಲ್ಲಿ !

ಇದು ಅರ್ಥಕ್ಕೆ ನಿಲುಕದ ಕೇವಲ ಅನುಭವವೇದ್ಯವಾದ 'ಅನುಭಾವ' ಎಂದು ಅದನ್ನು ಕಂಡುಕೊಳ್ಳಬುಹುದೆ ?!

ಆದಕಾರಣದಿಂದಲೇ ಎಂದು ಕಾಣುತ್ತದೆ ಡಿ.ವಿ.ಜಿ. ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ

ಜೀವ ಜಡರೂಪ ಪ್ರಪಂಚವನದಾವುದೋ
ಆವರಿಸಿಕೊಂಡು ಮೊಳನೆರೆದುಮಿಹುದಂತೆ॥
ಭಾವಕೊಳಪಡದಂತೆ ಅಳತೆಗವತೆದಂ ।ತೆ।
ಆ ವಿಶೇಷಕೆ ಮಣಿಯೊ- ಮಂಕುತಿಮ್ಮ॥

ಇಹುದೋ ಇಲ್ಲವೋ ತಿಳಿಯಗೊಡದೊಂದು ವಸ್ತು ನಿಜ।
ಮಹಿಮೆಯಿಂ ಜಗವಾಗಿ ಜೀವವೇಶದಲಿ॥
ವಿಹರಿಪುದದೊಳ್ಳಿತೆಂಬುದು ನಿಶದವಾದೊಡಾ।
ಗಹನ ತತ್ವಕೆ ಶರಣೊ - ಮಂಕುತಿಮ್ಮ॥
ಎಂದೂ

ಕುವೆಂಪು ತಮ್ಮ 'ಶ್ರೀರಾಮಾಯಣ ದರ್ಶನಂ' ಕಾವ್ಯದಲ್ಲಿ

ಓಂ ನಮೋ ಸಚ್ಚಿದಾನಂದನೆ ನಮೋ ನಮೋ ।
ಓಂ ನಮೋ ಸರ್ವಸ್ವತಂತ್ರನೆ ನಮೋ ನಮೋ ।
ಆದಿ ಆದಿಯೆ ನಮೋ, ಅಂತ್ಯದಂತ್ಯವೆ ನಮೋ।
ಆದ್ಯಂತದಾಚೆಗಿರುವಾತನೆ ನಮೋ ನಮೋ ।
ನಮೋ, ನಮೋ, ನಮೋ, ನಮೋ, ನಮೋ, ನಮೋ ।

ಎಂದು ಹಾಡಿ ಮಣಿದಿದ್ದಾರೆ, ಶರಣು ಹೋಗಿದ್ದಾರೆ, ನಮಿಸಿದ್ದಾರೆ.

ಈ ಆದಿಗೆ ಆದಿಯೂ, ಅಂತ್ಯದ ಅಂತ್ಯವೂ, ಆದ್ಯಂತದ ಆಚೆಗೆ ಇರುವ ಅವನು ಅಥವಾ ಅದನ್ನು ಸಾಕ್ಷಾತ್ಕರಿಸಿ ಅದು ಇದು ಎಂದು ಅಭಿವ್ಯಕ್ತಿಸಲು ವಿಜ್ಞಾನದಿಂದ ಸಾಧ್ಯವೆ? ಅಧ್ಯಾತ್ಮದಿಂದ ಸಾಧ್ಯವೆ ! ಇಲ್ಲಾ ಅದು ಅಭಿವ್ಯಕ್ತಿಸಲಾಗದ ಕೇವಲ ಅನುಭವವೇದ್ಯ ಮಾತ್ರವೆ ?!

ಅತ್ಯಂತ ಸೂಕ್ಷ್ಮಾತಿಸೂಕ್ಷ್ಮವಾದ ಧರ್ಮದ ಈ ಸ್ಥಿತಿಯ ಸಾಕ್ಷಾತ್ಕಾರ ಜಗತ್ತಿನ ಜೀವಿಗಳಿಗೆ ವೈವಿಧ್ಯಮಯವೂ ಅನಂತ ಮುಖಿಯೂ ಆಗಿ ಪ್ರಾಪ್ತವಾಗುತ್ತಿದೆ. ಒಂದೊಂದು ಜೀವವೂ, ವೈವಿಧ್ಯಮಯವಾಗಿದ್ದು ತನ್ನತನದ ತಾನನದಲ್ಲೆ ತನ್ಮಯವಾಗಿ ಎರಡಿಲ್ಲದಂತೆ ಒಂದಾಗುವ ಸ್ಥಿತಿಯನ್ನು ಪ್ರಕೃತಿಯೆ ಕರುಣಿಸಿದೆ.

No man is born to any religion;
every man has a Religion in his soul
Let there be as many Religions as
there are human beings in the world.

(ಯಾರೊಬ್ಬರೂ ಯಾವುದೇ ಮತದಲ್ಲಿ ಜನಿಸಿಲ್ಲ
ಪ್ರತಿಯೊಬ್ಬರ ಹೃದಯದಲ್ಲೂ ಧರ್ಮವಿದೆ
ಪ್ರಪಂಚದಲ್ಲಿ ಎಷ್ಟು ಮಾನವರಿದ್ದಾರೋ
ಅಷ್ಟು ಧರ್ಮಗಳು ಪ್ರಪಂಚದಲ್ಲಿರಲಿ)

ಎನ್ನುವ ವಿಶ್ವಧರ್ಮದ ಮೂಲ ಸೂತ್ರವನ್ನು ವಿವೇಕಾನಂದರು ಅಭಿವ್ಯಕ್ತಿಸಿದ್ದಾರೆ. ಈ ಮೂಲಭೂತ ಸಾರವನ್ನು ಹೀರಿಕೊಂಡು ಕುವೆಂಪು ಚೇತನ 'ಅನಿಕೇತನ'ದ ಸ್ಥಿತಿಯನ್ನು ವಿಶ್ವಮಾನವ ಗೀತೆಯಲ್ಲಿ ಅಭಿವ್ಯಕ್ತಿಸಿದೆ.

ವಿಶ್ವಮಾನವಗೀತೆ – ಅನಿಕೇತನ

ಓ ನನ್ನ ಚೇತನ
ಆಗು ನೀ ಅನಿಕೇತನ !

ರೂಪರೂಪಗಳನು ದಾಟಿ
ನಾಮ ಕೋಟಿಗಳನು ಮೀಟಿ
ಎದೆಯ ಬಿರಿಯ ಭಾವದೀಟಿ
ಓ ನನ್ನ ಚೇತನ
ಆಗು ನೀ ಅನಿಕೇತನ ! ||೧||

ನೂರು ಮತದ ಹೊಟ್ಟ ತೂರಿ
ಎಲ್ಲ ತತ್ವದೆಲ್ಲೆ ಮೀರಿ
ಎರ್ದಿಗಂತವಾಗಿ ಏರಿ
ಓ ನನ್ನ ಚೇತನ
ಆಗು ನೀ ಅನಿಕೇತನ !||೨||

ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು !
ಓ ನನ್ನ ಚೇತನ
ಆಗು ನೀ ಅನಿಕೇತನ ! ||೩||

ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ ;
ಅನಂತ ನೀ ಅನಂತವಾಗು
ಆಗು ಆಗು ಆಗು ಆಗು ! ||೪||

ಓ ನನ್ನ ಚೇತನ
ಆಗು ನೀ ಅನಿಕೇತನ !

ವಿಶ್ವಸೃಷ್ಟಿಯ ಅಂಶವಾದ - ಒಂದರ್ಥದಲ್ಲಿ ಅದೆ ಆಗಿರುವ - ಆ ಚಿನೇತ ಅನಂತ ಮುಖಿ. ಸ್ವಯಂ ಪ್ರಕಾಶಮಯವಾದದ್ದು. ನಿರಂತರ ಬೆಳಕೆ ಧರ್ಮದ ಮೂಲ; ಅಮೃತತ್ವದ ಅಡಿಗಲ್ಲು. ಧರ್ಮದ ಗುರಿ ಎಂದೂ ಕೊಲ್ಲುವುದಲ್ಲ. ಕೊಲ್ಲುವ ಮನಸ್ಸನ್ನು ಗೆಲ್ಲುವುದು. ಆ ಅಮೃತತ್ವದ ಅಭಿವ್ಯಕ್ತಿಯನ್ನು ಜಾತಿ, ಮತಗಳಿಂದ ಮುಕ್ತರಾಗಿದ್ದ ನಮ್ಮ ಪುರಾತನ ಮಹರ್ಷಿಗಳು ತಮ್ಮ ತಪೋಮಯ ಚಿಂತನೆಯಿಂದ ಹೊರಗೆಡಹಿದ್ದಾರೆ. ಕಠೋಪನಿಷತ್ತಿನ ಈ ಒಂದು ಮಂತ್ರ ಆ ಸತ್ಯವನ್ನು ಸಮರ್ಥವಾಗಿ ಅಭಿವ್ಯಕ್ತಿಸಿದೆ.

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇ ಮಾ ವಿದ್ಯುತೋ ಭಾಂತಿ ಕುತೋಯ ಮಗ್ನಿ : ।
ತಮೇವ ಭಾಂತಮನುಬಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥

(ಅಲ್ಲಿ (ಅಂತಸ್ಸಾಕ್ಷಿ) ಸೂರ್ಯನಾಗಲೀ, ಚಂದ್ರನಾಗಲೀ, ನಕ್ಷತ್ರಗಳಾಗಲೀ, ಪ್ರಕಾಶಿಸುವುದಿಲ್ಲ. ಈ ಮಿಂಚುಗಳೂ ಮಿಂಚುವುದಿಲ್ಲ; ಈ (ಕಣ್ಣಿಗೆ ಕಾಣುವ) ಅಗ್ನಿಯು ಪ್ರಕಾಶಿಸುವುದೆಲ್ಲಿ ? ಪ್ರಕಾಶಿಸುತ್ತಿರುವ ಅವನನ್ನೇ (ಅಂತಃ ಸ್ವಾಕ್ಷಿಯನ್ನೇ) ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತಿರುವುವು. ಅವನ (ಅಂತಃ ಸಾಕ್ಷಿಯ) ಪ್ರಕಾಶದಿಂದಲೇ ಇದೆಲ್ಲವೂ ಪ್ರಕಾಶಿಸುತ್ತಿರುವುದು.)

ಶ್ರೀ ಬಸವಣ್ಣನವರು ಕೂಡ ಜಗತ್ತಿಗೆ ಮೂಲವಾಗಿ ಒಳಹೊರಗನ್ನು ಆವರಿಸಿಕೊಂಡಿರುವ ಆ ಅವ್ಯಕ್ತ ಶಕ್ತಿಯೇ ಅವರ ಕರಸ್ಥಲಕೆ ಬಂದು ನಿಂದುದನ್ನು ಕುರಿತು

'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀ ಮಕುಟ.
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಲಕೆ ಬಂದು ಚುಳುಕಾದಿರಯ್ಯಾ

ಎಂದು ಅಭಿವ್ಯಕ್ತಿಸಿದ್ದಾರೆ.

ಮರ್ತ್ಯದ ಉದಯಕ್ಕೆ ಅಮರ್ತ್ಯ ಕಾರಣವಾಗಿರುವುದನ್ನು, ಆ ಅಮರ್ತ್ಯಮರ್ತ್ಯದ ಪಾಲನೆ ಪೋಷಣೆ ಮಾಡುತ್ತಾ ಅದರ ಉದ್ದೇಶದ ಕ್ರಿಯೆಯಲ್ಲಿ ತೊಡಗಿರುವುದನ್ನು ಕುವೆಂಪು ತಮ್ಮ 'ತಪೋನಂದನ' ಕೃತಿಯ 'ಕಾವ್ಯವಿಮರ್ಶೆ'ಯಲ್ಲಿ ಪೂರ್ಣ ದೃಷ್ಟಿ ಎಂಬ ಲೇಖನದಲ್ಲಿ ಮನವರಿಕೆ ಮಾಡಿದ್ದಾರೆ.

'ಸೃಷ್ಟಿ ಕವಿಯ ವಿಶ್ವಕಾವ್ಯಕ್ಕೆ ಆನಂದವೇ ಕಾರಣ, ಉದ್ದೇಶ ಮತ್ತು ಪ್ರಯೋಜನ - ಎಂಬುದು ಪೂರ್ಣದೃಷ್ಟಿಗೆ ಮಾತ್ರ ಸಂವೇದ್ಯ. ಖಂಡ ಅಥವಾ ಆಂಶಿಕ ದೃಷ್ಟಿಗೆ ಅದು ಸ್ವಯಂ ಸಾಧ್ಯವಲ್ಲ. ಯಾವ ಪ್ರಜ್ಞೆ ಹಿಂದು ಮುಂದಿಂದುಗಳನ್ನು ಏಕಕಾಲದಲ್ಲಿ ಅಥವಾ

ಕಾಲಾತೀತವಾದ ನಿತ್ಯದಲ್ಲಿ ಅಖಂಡವಾಗಿ ಗ್ರಹಿಸಬಲ್ಲದೊ ಅದಕ್ಕೆ ಮಾತ್ರ ಗೋಚರ - ಎಲ್ಲದರ ಕಾರಣ, ಎಲ್ಲದರ ಉದ್ದೇಶ ಮತ್ತು ಎಲ್ಲದರ ಪ್ರಯೋಜನ .... ಮರ್ತ್ಯವು ಅಮರ್ತ್ಯದ ಶಿಶು.. ಮರ್ತ್ಯಕ್ಕೂ ಅಮರ್ತ್ಯಕ್ಕೂ ಇರುವ ಸಂಬಂಧ ಶಕುಂತಲೆಗೂ ಮೇನಕೆಗೂ ಇರುವ ಸಂಬಂಧದಂತೆ ಪ್ರೇಮಮಯವಾದುದು. ಉದಾಸೀನವಾಗಿಯೂ ತಟಸ್ಥವಾಗಿಯೂ ಒಮ್ಮೊಮ್ಮೆ ಕ್ರೂರವಾಗಿಯೂ ತೋರಿದರೂ ಅಮರ್ತ್ಯವು ಮರ್ತ್ಯವನ್ನು ನಿರ್ಲಕ್ಷಿಸುವುದಿಲ್ಲ. ಪರೀಕ್ಷಿಸಿದರೂ ಶಿಕ್ಷಿಸಿದರೂ ತೋರಿದರೂ ಅಮರ್ತ್ಯವು ಮರ್ತ್ಯವನ್ನು ನಿರ್ಲಕ್ಷಿಸುವುದಿಲ್ಲ. ಪರೀಕ್ಷಿಸಿದರೂ ಶಿಕ್ಷಿಸಿದರೂ ಮರ್ತ್ಯದ ರಕ್ಷಣೆಯು, ಪೋಷಣೆಯು ಮತ್ತು ಉದ್ಧಾರದ ಭಾರವನ್ನು ಅಮರ್ತ್ಯವು ತಾಯಿಯ ಔದಾರ್ಯದಿಂದ ಅವಶ್ಯವಾಗಿ ವಹಿಸುತ್ತದೆ. ಹಿಂದೆ ಮುಂದೆ ಮೇಲೆ ಕೆಳಗೆ ಸುತ್ತಲೂ ಮರ್ತ್ಯವನ್ನು ಆವರಿಸಿ ಅದಕ್ಕೆ ಮಡಿಲೂ ತೊಟ್ಟಿಲೂ ಆಗಿದೆ. ಅಮರ್ತ್ಯ ಮರ್ತ್ಯವು ಸರ್ವದಾ ಅಮರ್ತ್ಯದ ಆಲಿಂಗನದಲ್ಲಿದೆ. ಮರ್ತ್ಯದ ಮೊಟ್ಟೆಯ ಮೇಲೆ ಅಮರ್ತ್ಯವು ಸದಾ ಕಾವು ಕೂತಿದೆ, ತನ್ನ ಉದ್ದೇಶದ ಮರಿಯ ಮೈದೋರಿಕೆಗಾಗಿ. ಕಾವು ಕೂತಿರುವುದು ಮಾತ್ರವಲ್ಲ, ಕಾವಲೂ ಕೂತಿದೆ. ತಾಯಿಯ ರೂಪದಲ್ಲಿ ಕಾವು ಕೂತಿದ್ದರೆ ಧರ್ಮದ ರೂಪದಲ್ಲಿ ಶಿಕ್ಷೆಯ ರೂಪದಲ್ಲಿ ಕಾವಲೂ ಕೂತಿದೆ.'

ಈ ತಾಯಿಯ ರೂಪದಲ್ಲಿ ಕಾವು ಕೊಡುವ, ಧರ್ಮದ ರೂಪದಲ್ಲಿ ಕಾವಲು ಕೂತಿರುವ ಈ ಸೃಷ್ಟಿಯ ಮೂಲ ಉದ್ದೇಶ ಯಾವುದು? ಅದೇ ಆನಂದ. ಇದನ್ನು ಸ್ವಲ್ಪ ವಿಶ್ಲೇಷಣೆ ಮಾಡಿದರೆ ಮನುಷ್ಯ ಈ ಧರ್ಮದ ನೆಲೆಗಟ್ಟಿನಲ್ಲಿ ನಡೆದರೆ ಆ ಆನಂದಾನುಭೂತಿಯನ್ನು ಪಡೆಯಲು ಸಾಧ್ಯ ಎನ್ನುವ ಸತ್ಯವನ್ನು ಅದು ಸಾರುತ್ತದೆ. ಅದರ ಮೂಲ ಹೃದಯವೇ ಅದಾಗಿದೆ.

ಶಿಷ್ಟ ಹಾಗೂ ದುಷ್ಟ ಶಕ್ತಿಯನ್ನು ಹೃದಯದಲ್ಲಿ ಸೃಷ್ಟಿಯೇ ಹುಟ್ಟಿ ಹಾಕಿದೆ. ಅದರ ಸದಸದ್ ವಿವೇಚನೆಯ ವಿವೇಕವನ್ನು ಮನಸ್ಸಿನ ಮೂಲಕ ಗ್ರಹಿಸುವ ಶಕ್ತಿಯನ್ನು ಸಹ ಆ ಸೃಷ್ಟಿಯೇ ನೆಲೆಗೊಳಿಸಿದೆ. ಸಕಾರಾತ್ಮಕ ಹಾಗೂ ನಕಾರಾತ್ಮಕ ದೃಷ್ಟಿಗಳ ಆಯ್ಕೆಯ ಸ್ವಾತಂತ್ರ್ಯದ ಸಾಧ್ಯತೆಯನ್ನು ಸಹ ಅದು ಜೀವಿಗೆ ನೀಡಿದೆ. ಯಾರು ಯಾವುದನ್ನು ಒಳಗೊಳ್ಳುವರೋ ಅವರು ಅದನ್ನು ಪಡೆಯುತ್ತಾರೆ.

ಜಗತ್ತಿನ ಮಹಾ ಕಾದಂಬರಿಗಳಲ್ಲೊಂದಾದ Crime and Punishment (ಅಪರಾಧ ಮತ್ತು ಶಿಕ್ಷೆ) ನಲ್ಲಿ ರಷ್ಯಾದ ಮಹಾನ್ ಕಾದಂಬರಿಕಾರ ದಾಸ್ತೆವೆಸ್ಕಿ ತನ್ನ ಕಾದಂಬರಿಯ ನಾಯಕ 'ರೆಸ್ಕಾಲ್ರಿಕಾಫ್' ತಪ್ಪು ಮಾಡಿದಾಗ ಪಡುವ ಯಾತನೆ ಅದರಿಂದ ಬಿಡುಗಡೆಗೊಂಡ ನಂತರ ಪಡುವ ಆನಂದವಾಗಲೀ; ಹಾಗೆ ಕುವೆಂಪು ಅವರ 'ಶ್ರೀರಾಮಾಯಾಣ ದರ್ಶನಂ' ನಲ್ಲಿ ಬರುವ ಸೀತೆಯನ್ನು ಕಾಮುಕ ದೃಷ್ಟಿಯಿಂದ ನೋಡುವ ರಾವಣ ಪಡುವ

ಹಿಂಸೆ; ಸ್ವಪ್ನಸಿದ್ಧಿಯ ನಂತರ ಸೀತೆಯಲ್ಲಿ ಮಾತೆಯನ್ನು ಕಾಣುವ ರಾವಣನ ಅಂತಃಶ್ಶಕ್ತಿಯ ಅಭಿವ್ಯಕ್ತಿ ಅಪರೂಪದ ಅವ್ಯಕ್ತ ಶಕ್ತಿಯ ವಿರಾಡ್ ದರ್ಶನ ಮಾಡಿಸುತ್ತದೆ. ಸೀತೆಯಲ್ಲಿ ಮಾತೆಯನ್ನು ಕಂಡ ರಾವಣ ಮಾರನೆಯ ದಿನ ತ್ರಿಕೂಟಾದ್ರಿ ಶಿಖರದಲ್ಲಿ ನಿಂತು ನೋಡುವ ಸೂರ್ಯೋದಯದ ದರ್ಶನದಲ್ಲಿ ಅವನೊಳಗೇ ಆದ ಪರಿವರ್ತನೆಯ ಸುಂದರ ಚಿತ್ರಣವನ್ನು ಕುವೆಂಪು ಅವರು ರೋಮಾಂಚನವಾಗುವಂತೆ ಚಿತ್ರಿಸಿದ್ದಾರೆ.

'ಇದೇನಿಂದು ಪಿಂತೇಗಳೆನಗೆ ಪೊಳ್ತರೆಯಿಂತು
ಸೊಗಸಿತಿಲ್ಲೆನೆ ಸೊಬಗು ನನ್ನಂತರಾತ್ಮಮಂ
ಬೆಳಗುತಿದೆ ? ಜೇನ್ಮಳೆಯ ಕರೆಯುತಿದೆ ! ಪಾಲ್ ಪೊನಲ್
ನಾಳನಾಳದಿ ಪರಿಸುತಿರ್ಪುದಮೃತತ್ವಮಂ.
ಶಾಂತಿಯಂ, ವೀರ್ಯಮಂ, ಶಕ್ತಿಯಂ, ತೇಜಮಂ,
ನಿಧನ ನಿಧುವನ ಪದದ ಮಧುರ ಚೈತನ್ಯಮಂ !''

ಎಂದರ ಧರ್ಮ ಹೃದಯ ಮೂಲದಲ್ಲೇ ಇದ್ದು ಶಿಷ್ಟ ನಡವಳಿಕೆಯಿಂದ ಅಮೃತತ್ವವೂ, ದುಷ್ಟ ನಡವಳಿಕೆಯಿಂದ ಸಾವು, ಕೇಡು, ಹಿಂಸೆಗಳೂ ಪ್ರಾಪ್ತವಾಗುತ್ತವೆ ಎಂಬ ಅದ್ಭುತ ಸತ್ಯವನ್ನು ಸಾಕ್ಷಾತ್ಕರಿಸಿ ಕೊಡುತ್ತದೆ.

ಹೃದಯಮೂಲದಲ್ಲೆ ಮಡುಗಟ್ಟಿರುವ ಈ ಮೂಲ ಶಕ್ತಿಯ ಸಾಕ್ಷಾತ್ಕಾರಕ್ಕೆ ಇಂಬಾಗಬೇಕಾದ ಧರ್ಮಗಳು· ಮತಗಳಾಗಿ ಮಾರ್ಪಟ್ಟು ಜಗತ್ತಿನಲ್ಲಿ ಏನೆಲ್ಲಾ ಅನಾಹುತಗಳಿಗೆ ಕಾರಣವಾಗಿವೆ ಎಂಬ ಅಂಶವನ್ನು 'ಕಾಲ' ವಿವೇಕಾನಂದರ ಮೂಲಕ ದಿನಾಂಕ ೧೧-೯-೧೮೯೩ರಂದು ವಿಶ್ವ ವೇದಿಕೆಯಲ್ಲಿ ಪ್ರಕಟ ಪಡಿಸಿತು.

'... ಸ್ವಮತಾಭಿಮಾನ, ಅನ್ಯಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನ ಈ ಸುಂದರ ಜಗತ್ತನ್ನು ಬಹುಕಾಲದಿಂದಲೂ ಆವರಿಸಿಕೊಂಡಿರುವುವು. ಇವು ಜಗತ್ತನ್ನೆಲ್ಲ ಹಿಂಸೆಯಿಂದ ತುಂಬಿರುವುವು, ಹಲವು ವೇಳೆ ನರ ರಕ್ತದಿಂದ ತೋಯಿಸಿರುವುವು, ಸಂಸ್ಕೃತಿಯನ್ನು ನಾಶಮಾಡಿರುವುವು. ಹಲವು ದೇಶಗಳಲ್ಲಿ ನಿರಾಶೆಯ ಕೂಪಕ್ಕೆ ತಳ್ಳಿರುವುವು. ಇಂತಹ ಉಗ್ರಧರ್ಮಾಂಧತೆಯ ದೈತ್ಯರಿಲ್ಲದೇ ಇದ್ದರೆ ಮಾನವ ಜನಾಂಗ ಇಂದಿಗಿಂತಲೂ ಎಷ್ಟೋ ಮುಂದುವರಿದು ಹೋಗಬೇಕಾಗಿತ್ತು. ಆದರೆ ಅವುಗಳ ಅಂತ್ಯಕಾಲ ಸಮೀಪಿಸಿದೆ. ಈ ಸಭೆಯ ಸಮಾರಂಭವನ್ನು ಸೂಚಿಸಿದ ಘಂಟಾನಾದವು ಖಡ್ಗದ ಮೂಲಕವಾಗಿಯಾಗಲೀ, ಲೇಖನಿಯ ಮೂಲಕವಾಗಿಯಾಗಲೀ ಆದ ಎಲ್ಲಾ ಮತಾಂಧತೆಯ, ಅನ್ಯಮತ ಹಿಂಸೆಯ ಮತ್ತು ಒಂದೇ ಗುರಿಯೆಡೆಗೆ ನಡೆಯುತ್ತಿರುವ ದಾರಿಗಳಲ್ಲಿ ಆದ ಮನಸ್ತಾಪಗಳೆಂಬ ಭೂತಗಳ ಅಂತ್ಯಕ್ರಿಯೆಯನ್ನು ಜಗತ್ತಿಗೆ ಸೂಚಿಸುವ ಧ್ವನಿಯಾಗಲೆಂಬುದೇ ನನ್ನ ಆಶಯ.'

ಸಮಾಜದಲ್ಲಿ ನೆಲೆ ನಿಂತಿರುವ ಧಾರ್ಮಿಕ ಕೇಂದ್ರಗಳು ಈ ಮೂಲವನ್ನರಿತು ತಮ್ಮ ಕ್ರಿಯೆಯಲ್ಲಿ 'ಧರ್ಮ'ವನ್ನು ಅಭಿವ್ಯಕ್ತಿಸಬೇಕಾಗಿದೆ. ಅಂತಹ ವಾಸ್ತವ ಅಭಿವ್ಯಕ್ತಿ ಯುವ ಜನತೆಯ ಸ್ಫೂರ್ತಿಯ ಸೆಲೆಗಳಾಗುವುದರಲ್ಲಿ ಅನುಮಾನವಿಲ್ಲ.

ಯುವಜನತೆಯೂ ಕೂಡ 'ಧರ್ಮ'ದ ಈ ವಿಶ್ವವ್ಯಾಪಕ ದೃಷ್ಟಿಯನ್ನು ಒಳಗೊಳ್ಳುವ ಪ್ರಕ್ರಿಯೆಯಲ್ಲಿ ಉದ್ಯುಕ್ತವಾಗಿ ತಮ್ಮದೇ ಆದ ನೆಲೆಗಟ್ಟಿನಲ್ಲಿ ನಿಂತು ತಮ್ಮದನ್ನಾಗಿಸಿಕೊಳ್ಳಬೇಕಾದ ಅನಿವಾರ್ಯತೆ ಕೂಡ ಇದೆ.

ಒಟ್ಟಿನಲ್ಲಿ ಮತಗಳು ಹುಟ್ಟುಹಾಕಿರುವ ಸಾಂಪ್ರದಾಯಿಕ ಆಚರಣೆಗಳನ್ನು ಮೀರಿದ 'ಧರ್ಮ'ದ ಸಾಕ್ಷಾತ್ಕಾರದಲ್ಲಿ ಅವರಿವರೆನ್ನದೆ ಎಲ್ಲರೂ ಮುಂದಾಗಿ ಒಂದಾಗಿ ಕಂಡುಕೊಳ್ಳುವ ತೀವ್ರತೆ ಹಿಂದೆಂದಿಗಿಂತಲೂ – ಅಂದರೆ ಸಮಾಜ ಧಾರ್ಮಿಕವಾಗಿ ಒಡೆದು ಚೂರಾಗುತ್ತಿರುವ, ರಾಷ್ಟ್ರರಾಷ್ಟ್ರಗಳು ಹತ್ತಿ ಉರಿಯುತ್ತಿರುವ, ಒಟ್ಟಿಗೇ ಬದುಕುತ್ತಿರುವ ಜೀವಿಗಳ ಹೃದಯ ಮನಸ್ಸುಗಳು ಬರಡಾಗುತ್ತಿರುವ ಈ ಹೊತ್ತಿನಲ್ಲಿ ಅತ್ಯಂತ ತುರ್ತಿನದಾಗಿದೆ.

ಧಾರ್ಮಿಕ ಸಂಘರ್ಷ ಮತ್ತು ಸಮನ್ವಯ

(ಕರ್ನಾಟಕದ ಪೂರ್ವ ಮಧ್ಯ ಮತ್ತು ಮಧ್ಯಕಾಲೀನ ಅವಧಿಯ ಮಿತಿಯಲ್ಲಿ)

ಡಾ। ಸಿ.ಯು. ಮಂಜುನಾಥ್

'ಧರ್ಮ' ಭಾರತೀಯ ಸಂಸ್ಕೃತಿಯಲ್ಲಿ ಅತ್ಯಂತ ಮಹತ್ವ ಪಡೆದ ಒಂದು ಅಂಶ. ಆದರೆ ಅದರ ವ್ಯಾಖ್ಯೆ ತುಂಬ ಕ್ಲಿಷ್ಟವಾದುದು.'ಭಾರತೀಯ ತತ್ತ್ವದ ಇತಿಹಾಸದಲ್ಲಿ ಧರ್ಮವೆನ್ನುವ ಪದ ಬಹಳ ಮಹತ್ವ ಪಡೆದಿದೆ. ಆದರೆ ದುರ್ದೈವವೆಂದರೆ ಅದರ ನಿರೂಪಣೆಯನ್ನು ಕೊಡುವುದು ಸುಲಭ ಸಾಧ್ಯವಲ್ಲ'[1] . ಇಲ್ಲಿ ಹೆಚ್ಚು ವಿವರಗಳಿಗೆ ಹೋಗದೆ ಸಂಕ್ಷಿಪ್ತವಾಗಿ ಪ್ರಸ್ತುತ ಅಗತ್ಯಾನುಸಾರ ಅದರ ನಿರೂಪಣೆ ಮಾಡಿಕೊಂಡು ಮುಂದುವರಿಯಬಹುದು. ಧರ್ಮ ಪದವನ್ನು ಸಂಸ್ಕೃತದ 'ಧೃ' ಎಂಬ ಧಾತುವಿನಿಂದ ನಿಷ್ಪತ್ತಿ ಮಾಡಲಾಗುತ್ತದೆ. ಅದಕ್ಕೆ ಧರಿಸು, ಪೋಷಿಸು, ಎತ್ತಿಹಿಡಿ ಎಂಬ ಅರ್ಥಗಳನ್ನು ಹೇಳಲಾಗಿದೆ. ಧರ್ಮವೆನ್ನುವುದು ವ್ಯಕ್ತಿಯನ್ನು ವ್ಯಷ್ಟಿಯಾಗಿ ಸಮಾಜವನ್ನು ಸಮಷ್ಟಿಯಾಗಿ ಉತ್ತಮ ಸ್ಥಿತಿಯಲ್ಲಿ ಎತ್ತಿ ಹಿಡಿಯುವ ಅಖಂಡ ಶಕ್ತಿಯೆಂದು ಹೇಳಬಹುದು. ಕರ್ನಾಟಕ ಸಾಂಸ್ಕೃತಿಕ ಪರಂಪರೆಯನ್ನು ಗಮನಿಸಿದರೆ ಧಾರ್ಮಿಕ ಸಹಿಷ್ಣುತೆ ಮೇಲೆದ್ದು ಕಾಣುವ ವಿಶಿಷ್ಟ ಅಂಶ. ಸಮಾಜ - ಎಲ್ಲ ವರ್ಗಗಳ, ಎಲ್ಲ ಮನೋಭಾವದ ಜನಸಮುದಾಯವಾಗಿರುವುದರಿಂದ ಅನೇಕ ಸಂದರ್ಭಗಳಲ್ಲಿ ಧಾರ್ಮಿಕ ಅಂಶ ಪರಸ್ಪರ ಅಹಿತಕರ ಘರ್ಷಣೆಗಳಿಗೆ ಅವಕಾಶ ಮಾಡಿಕೊಟ್ಟಿರುವುದು ಕಂಡು ಬರುತ್ತದೆ. ಹಾಗೆಯೇ ಕರ್ನಾಟಕದ ಅರಸರು, ಅಧಿಕಾರಿಗಳು, ಧಾರ್ಮಿಕ ವ್ಯಕ್ತಿಗಳು, ಶ್ರೀ ಸಾಮಾನ್ಯರು ಮತ್ತೆ ಮತ್ತೆ ಸಮನ್ವಯದ ಕಡೆ ಧಾರ್ಮಿಕ ಘರ್ಷಣೆಗಳ ಗತಿಯನ್ನು ಬದಲಿಸಿರುವುದು ಅಷ್ಟೇ ಪ್ರಮುಖವಾದ ಘಟನೆಗಳಾಗಿರುವುದು ಗಮನಾರ್ಹವಿಷಯವಾಗಿದೆ.

ಧರ್ಮ ಎಲ್ಲ ಕಾಲದಲ್ಲಿಯೂ ಮಾನವರನ್ನು ಭಾವನಾತ್ಮಕವಾಗಿ ಒಗ್ಗೂಡಿಸುವ ಹಾಗೂ ಪ್ರಚೋದಿಸುವ ಶಕ್ತಿಯಾಗಿದೆ. ಕರ್ನಾಟಕ'ಧಾರ್ಮಿಕ ಸಮನ್ವಯ ಭೂಮಿ' ಎಂದು ಖ್ಯಾತಿ ಪಡೆದಿರುವುದು ನಿಜವಾದರೂ ಇಲ್ಲಿ ಕಂಡುಬರುವ ಕೆಲವು ಶಾಸನಗಳು, ಭಗ್ನದೇವಾಲಯಗಳು, ಶಿಲ್ಪಗಳು, ಹಾಳುಬಿದ್ದ ಅಗ್ರಹಾರಗಳು, ಊರುಗಳು ನಡೆದಿರುವ

೧. ಕೆ.ಬಿ. ರಾಮಕೃಷ್ಣರಾವ್ : ಭಾರತೀಯ ತತ್ತ್ವಶಾಸ್ತ್ರದ ಮೂಲಾಂಶಗಳು, ಪು. 34

ಧಾರ್ಮಿಕ ಘರ್ಷಣೆಗಳಿಗೆ ಸಾಕ್ಷಿಗಳಾಗಿವೆ. ಎಲ್ಲ ವಿನಾಶಗಳಿಗೆ ಧಾರ್ಮಿಕ ಘರ್ಷಣೆಗಳೇ ಕಾರಣವಾಗಿಲ್ಲವೆಂಬುದು ಸ್ಪಷ್ಟ. ಯುದ್ಧಗಳು, ವೈಯಕ್ತಿಕ ವೈಷಮ್ಯ ಮತ್ತು ಜನರ ಅನಾದರಣೆಗಳೂ ಕಾರಣವಾಗಿವೆ. ಹಾಗೆಯೇ ಕೆಲವಕ್ಕಾದರೂ ಮತೀಯ ವೈಷಮ್ಯಗಳು ಕಾರಣವಾಗಿವೆ ಎಂಬ ಅಂಶವನ್ನು ಅಲ್ಲಗಳೆಯುವಂತಿಲ್ಲ.

ಜೈನ-ಶೈವ : ಜೈನಧರ್ಮ ಪ್ರಮುಖ ರಾಜವಂಶಗಳ, ಹಿರಿಯ ಅಧಿಕಾರಿಗಳ, ಶ್ರೀಮಂತ ವ್ಯಾಪಾರಿಗಳ ಮತ್ತು ಜನಸಾಮಾನ್ಯರ ಪ್ರೋತ್ಸಾಹ ಬೆಂಬಲಗಳನ್ನು ಪಡೆದು ಕರ್ನಾಟಕದ ಪ್ರಬಲ ಧರ್ಮಗಳಲ್ಲಿ ಒಂದಾಗಿತ್ತು. ಕರ್ನಾಟಕದ ದಕ್ಷಿಣ ಭಾಗದಲ್ಲಿ ರಾಮಾನುಜರ ಆಗಮನದಿಂದ ಹೊಯ್ಸಳ ವಂಶದ ರಾಜರ ಬೆಂಬಲದಿಂದ ಶ್ರೀ ವೈಷ್ಣವ ಧರ್ಮ ಕ್ರಮೇಣ ವೃದ್ಧಿಸುತ್ತಾ ಜೈನರ ಏಕಸ್ವಾಮ್ಯಕ್ಕೆ ಧಕ್ಕೆಯನ್ನು ತರತೊಡಗಿತು. ಈ ಕಾರಣಗಳಲ್ಲದೆ ಆಂತರಿಕ ಬಾಹ್ಯಕಾರಣಗಳಿಂದ ಪ್ರಚೋದಿತವಾಗಿ ಯಕ್ಷಿಆರಾಧನೆ, ತಂತ್ರ-ಮಂತ್ರ, ಮಾಯ-ಮಾಟಗಳ ಕಡೆ ಒಲಿಯತೊಡಗಿತು. ಉಳಿದ ಧರ್ಮಗಳೊಂದಿಗೆ ಸ್ಪರ್ಧಿಸಿ ತನ್ನ ಜನಪ್ರಿಯತೆಯನ್ನು ಉಳಿಸಿಕೊಳ್ಳಲು ಜೈನಧರ್ಮ ಇಂಥ ಅಂಶಗಳನ್ನು ತನ್ನ ಕಕ್ಷೆಯಲ್ಲಿ ಅಳವಡಿಸಿಕೊಳ್ಳತೊಡಗಿತು. ಉತ್ತರ ಕರ್ನಾಟಕದ ಕೆಲವು ಶೈವ ಉಗ್ರವಾದಿಗಳು ಜೈನ ಧರ್ಮದ ಮೇಲೆ ನೇರ ಸಮರವನ್ನೇ ಹೂಡಿದರು. ತಾಳಿಕೋಟೆ ಶಾಸನದಲ್ಲಿ ಶೈವರ ಆಕ್ರಮಣಶೀಲ ಸ್ವರೂಪದ ಒಂದು ಚಿತ್ರ ಕಂಡು ಬರುತ್ತದೆ. 'ಪರಸಮಯ ಗಿರಿ ವಜ್ರದಂಡರುಂ, ಜಿನಸಮಯದಹನ ದಾವಾನಳರುಂ, ಮುನಿದರ್ಗೆ ಹಾಳಾಹಳರುಂ... ಅನ್ಯ ಸಮಯಿಗಳ ಬೆನ್ನ ಬಾರನೆತ್ತುವರುಂ, ಸೆಣಸುವರ ನೆತ್ತರಂ ಮರುಳ್ಗಳಿಂ ಕುಡಿಸುವರುಂ, ಪರಸಮಯ ಘುರಟ್ಟರುಂ.'..[2] ಅಲ್ಲದೆ 'ಪರಿಯಳಿಗೆ, ಅಣಲೆವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮುರಡಿಗೆ, ಅಣಂಪೂರು, ಕರಹಾಡ, ಕೆಂಬಾವಿ, ಬಮ್ಮುಕೂರು' ಮೊದಲಾದ ಸ್ಥಳಗಳಲ್ಲಿ 'ಬಸದಿಗಳನ್ನು ಹೊಸೆದು ಮುಕ್ಕಿ ಶಿವಲಿಂಗ ಸಿಂಹಾಸನಮಂ ಕಣ್ಗೊಳ್ಳಿಸಿದವರು'. ಈ ಶಾಸನ ಜೈನ ಧರ್ಮೀಯರ ಮೇಲೆ ಆಗಿರುವ ಆಕ್ರಮಣ ಸ್ವರೂಪವನ್ನು ಮತ್ತು ಜೈನ ಬಸದಿಗಳ ಮೇಲೆ, ಜೈನ ಕ್ಷೇತ್ರಗಳ ಮೇಲೆ ಆಗಿರುವ ನೇರ ಆಕ್ರಮಣವನ್ನು ತಿಳಿಸುತ್ತದೆ.

ಏಕಾಂತದ ರಾಮಯ್ಯ ಜೈನ ಧರ್ಮದ ಮೇಲೆ ನೇರ ಪ್ರಹಾರ ಮಾಡಿದ ವ್ಯಕ್ತಿ. ನಿಷ್ಠ ಶೈವನಾಗಿದ್ದ ಅವನ ವಿಷಯ ಅಬ್ಬಲೂರಿನ ಶಾಸನದಿಂದ ಪ್ರಸಿದ್ಧವಾಗಿದೆ.[3] ಜೈನರು ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯದಲ್ಲಿ ಜಿನಪಾರಮ್ಯವನ್ನು ಘೋಷಿಸಿದಾಗ ಸ್ಪರ್ಧೆಯಂತೆ ತನ್ನ ಶಿರಸ್ಸನ್ನು ಕತ್ತರಿಸಿಕೊಂಡು ಮರಳಿ ಪಡೆದು ಕರಾರಿನಂತೆ ಜಿನ ಬಸದಿಗಳನ್ನು ಒಡೆದು ಲಿಂಗ ಸ್ಥಾಪನೆಯನ್ನು ಮಾಡಿದನು. ಇವನ ವಿಷಯ ಹರಿಹರ ಮತ್ತು

---

2. ಎಸ್.ಐ.ಐ. 15 ಬಿಜಾಪುರ 56 ಕ್ರಿ.ಶ. 1184
3. ಎ.ಇ. 5 ಕ್ರಿ.ಶ. 1200

ಶಾಂತಲಿಂಗದೇಶಿಕರ ಕೃತಿಗಳಲ್ಲಿ ಮೂಡಿಬಂದಿದೆ. ಅಬ್ಬಲೂರಿನ ಸೋಮೇಶ್ವರ ದೇವಾಲಯದ ಬಿತ್ತಿಯ ಮೇಲೆ ಏಕಾಂತದ ರಾಮಯ್ಯನಿಗೂ ಜೈನರಿಗೂ ನಡೆದ ಘರ್ಷಣೆಯ ವಿವಿಧ ಘಟನೆಗಳು ಶಿಲ್ಪ -ಶಾಸನಗಳಲ್ಲಿ ನಿರೂಪಿತವಾಗಿವೆ[4]. ಹೀಗೆ ಜೈನರ ಮೇಲಿನ ವಿಜಯವನ್ನು ಶಿಲ್ಪ ಶಾಸನಗಳ ಮೂಲಕ ಬಹಿರಂಗವಾಗಿ ಹಾಕಿಸಿರುವುದು ಆಶ್ಚರ್ಯ ತರುತ್ತದೆ; ಹಾಗೆಯೇ ಜೈನಧರ್ಮೀಯರು ಆ ಕಾಲದಲ್ಲಿ ಅನುಭವಿಸಬೇಕಾಗಿ ಬಂದ ಒಂದು ಶೋಚನೀಯ ಪರಿಸ್ಥಿತಿಯ ಚಿತ್ರವನ್ನು ಕೊಡುತ್ತದೆ. ಶಾಸನದಲ್ಲಿ ನಿರೂಪಿತವಾಗಿರುವಂತೆ ಏಕಾಂತದ ರಾಮಯ್ಯನ ವಿಜಯವನ್ನು ಮೆಚ್ಚಿ ಬಿಜ್ಜಳ ಜಯಪತ್ರ ನೀಡಿ ಕೆಲವು ಊರುಗಳನ್ನು ದಾನ ನೀಡಿದ್ದಾನೆ. ಹಾಗೆಯೇ ಚಾಳುಕ್ಯ ಸೋಮೇಶ್ವರ, ಕದಂಬ ಕಾಮದೇವರು ಮೆಚ್ಚಿ ದಾನ ನೀಡಿದ್ದಾರೆ. ಏಕಾಂತದ ರಾಮಯ್ಯನ ಕಾರ್ಯಕ್ಕೆ ಪರೋಕ್ಷವಾಗಿ ರಾಜಮನೆತನಗಳ ಅಂಕಿತ ಬಿದ್ದಂತಾಗಿದೆ.

ಏಕಾಂತದ ರಾಮಯ್ಯನಂತೆ ಆದಯ್ಯನೆಂಬ ಶಿವಭಕ್ತ ಜೈನರ ಮೇಲೆ ಸ್ಪರ್ಧೆ ಹೂಡಿ ಸೌರಾಷ್ಟ್ರದ ಸೋಮನಾಥನನ್ನು ಪುಲಿಗೆರೆಗೆ ತಂದು ಜೈನ ಬಸದಿಯಲ್ಲಿಯೇ ಪ್ರತಿಷ್ಠಾಪಿಸಿದವನು. ಕವಿ ರಾಘವಾಂಕ ಸೋಮನಾಥ ಚರಿತೆಯಲ್ಲಿ ಆದಯ್ಯನ ಕತೆಯನ್ನು ವಿವರವಾಗಿ ನಿರೂಪಿಸಿದ್ದಾನೆ. ಆ ಕಾಲಕ್ಕಾಗಲೇ 'ಜೈನ ಹಾಗೂ ಶೈವ ಮತಗಳಲ್ಲಿ ಸೌಹಾರ್ದತೆ ಇದ್ದಿಲ್ಲವೆಂಬುದು ಸ್ಪಷ್ಟವಾಗಿ ಒಡಮೂಡಿದೆ.'[5]

ಅಣ್ಣಿಗೇರಿಯ ಶಾಸನವೊಂದು ಗೊಗ್ಗರಸ ಎಂಬುವವನಿಂದ ಜೈನ ಧರ್ಮಕ್ಕೆ ಒದಗಿದ ಆಕ್ರಮಣವನ್ನು ನಿರೂಪಿಸುತ್ತದೆ. 'ಜಯಿನಮೃಗಬೇಂಟೆಕಾಱಂ, ಜಯಿನಾಗಮಧೂಮಕೇತು, ಜಯಿನಕು(ಠಾ)ರಂ, ಜಯಿನಘಣಿವಯಿನಕೇತನಂ, ಜಯಿನಾನ್ತಕನೆನಿಸಿ ನೆಗಳ್ದ ನೀ ಗೊಗ್ಗರಸಂ, ಅಗ್ಗದ ಘಟಾಂತಿಕೆಯಂ ಅದು ನುಗ್ಗಾಗಿರೆಯೊಡೆದು ಕಳೆದು ಕಳೆದು ಜಿನನಂತಾಗಲೆ ದುರ್ಗತಿಯೊಳಿಕ್ಕಿ ಮೆಟ್ಟಿದ ಗೊಗ್ಗರಸಾಗ್ರಣಿ.[6] ಇಂಥ ಉಗ್ರ ಆಕ್ರಮಣದ ಜೊತೆಯಲ್ಲಿಯೇ ದೇವರ ದಾಸಿಮಯ್ಯನಂಥ ಧಾರ್ಮಿಕ ವ್ಯಕ್ತಿಗಳು (ಕ್ರಿ.ಶ. 1040) ತಮ್ಮ ಕಾಲದ ಜೈನ ಯತಿಯನ್ನು ಧಾರ್ಮಿಕ ಚರ್ಚೆಯಲ್ಲಿ ಸೋಲಿಸಿದ ವಿಷಯವೂ ಅನೇಕ ವೀರಶೈವ ಕೃತಿಗಳಲ್ಲಿ ಬಂದಿದೆ.

ಬಿಜ್ಜಳನ ಕಾಲದಲ್ಲಿ ವೀರಶೈವ ಧರ್ಮ ಬಸವಣ್ಣನವರ ನೇತೃತ್ವದಲ್ಲಿ ಹೆಚ್ಚು ಪ್ರಕಾಶಕ್ಕೆ ಬಂದಾಗ ಮುಂದಿನ ಜೈನ ಕಾವ್ಯಗಳು ಬಿಜ್ಜಳನನ್ನು ಜೈನನೆಂದೂ ಬಸವಣ್ಣನವರನ್ನು

4. ಎ.ಇ. 29 ಪು. 140-141
5. ಬಿ.ಎಸ್. ಕುಲಕರ್ಣಿ : ಕವಿ ರಾಘವಾಂಕನ ಸೋಮನಾಥ ಚರಿತೆಯಲ್ಲಿಮೂಡಿದ ಸಮಾಜ ಚಿತ್ರ,ಜೆ.ಕೆ.ಯು. ಸಂ. 6. ಪು. 184
6. ಎಸ್.ಐ.ಐ.15 ನವಲಗುಂದ 59 ಕ್ರಿ.ಶ. 1184

ಅವನ ಪ್ರತಿಸ್ಪರ್ಧಿಯಂತೆ ಚಿತ್ರಿಸಿದವು[7]. ಡಾ. ಪಿ.ಬಿ. ದೇಸಾಯಿ ಅವರು ಅಭಿಪ್ರಾಯದಂತೆ 'ಈ ನವ ಮಾರ್ಗದ ಶಿವಭಕ್ತರು ತಮ್ಮ ಮತ ಪ್ರಸಾರದ ಆಂದೋಲನವನ್ನು ರಭಸದಿಂದ ಮುಂದೂಡಿದಾಗ ಆ ಬಿರುಗಾಳಿಯಲ್ಲಿ ಮುಂದೆ ಜೈನ ಮತೀಯರೂ ಸಿಲುಕಿ ಗಾಸಿಯಾದರು. ಆದರೆ ಅನುಷಂಗಿಕವಾಗಿ; ಏಕೆಂದರೆ ವೀರಶೈವದ ನೇರವಾದ ಇದಿರಾಳಿ ಜೈನವಲ್ಲ, ಪುರಾತನವಾದಿ'[8]

ಶೈವರಿಂದ ಆಗುತ್ತಿದ್ದ ನೇರ ದಾಳಿಯನ್ನು, ಆಘಾತಗಳನ್ನು ತಪ್ಪಿಸಿಕೊಳ್ಳಲು ಆ ಕಾಲದ ಶಕ್ತ ಕಾಳಾಮುಖ ಶೈವರೊಂದಿಗೆ ಜೈನರು ಒಂದು ರೀತಿಯ ಧಾರ್ಮಿಕ ಒಡಂಬಡಿಕೆ ಮಾಡಿಕೊಂಡಿರುವುದುಂಟು. ಅನೇಕ ಶಾಸನಗಳಿಂದ ಈ ಅಂಶ ಸ್ಪಷ್ಟವಾಗಿದೆ. ತೇರದಾಳದ ಶಾಸನದಲ್ಲಿ ನಿರೂಪಿತವಾಗಿರುವಂತೆ ನೇಮಿನಾಥೇಶ್ವರ ಜಿನಾಲಯ ಹಿಂದೆ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಡಳಿತದಡಿಯಲ್ಲಿತ್ತು. ಆದರೆ ಅದೇ ಊರಿನ ನಕರಗಳ ವಿನಂತಿಯಂತೆ ಕೊಲ್ಲಾಪುರದ ಘಟಿಕಾಸ್ಥಾನದ ಆಚಾರ್ಯರು ಮತ್ತು ಎಕ್ಕೋಟಿ ಅಸಂಖ್ಯಾತಗಣಂಗಳು ಒಂದುಗೂಡಿ ಜಿನಾಲಯವನ್ನು ಅದೇ ಊರಿನ ಕಲಿದೇವರ ದೇವಾಲಯಕ್ಕೆ ಪ್ರತಿಬದ್ಧ ಮಾಡಿದ ವಿಷಯವನ್ನು ತಿಳಿಸುತ್ತದೆ. ಶಾಸನ ಮುಂದುವರಿದು ತೇರದಾಳದ ಗೊಂಕಜಿನಾಲಯ ಹೊಸ ಒಡಂಬಡಿಕೆಯಂತೆ ಅದರ ಆಚಾರ್ಯರಾಗಿದ್ದ ಪ್ರಭಾಚಂದ್ರ ಪಂಡಿತರಿಗೆ ಇಗ್ಗಳೆಯ ಜೋಗವಟ್ಟಿಗೆಯ ಸ್ಥಾನಮೆನ್ನು ಜೋಗವಟ್ಟಿಗೆಯ ನಿಕ್ಕಿದರು. ಅಲ್ಲದೆ ಬಸದಿಯ ಮೇಲೆ ಶೂದ್ರಕನ, ಸಿಂಹದ, ಚಕ್ರದ ಚಿಹ್ನೆಯನ್ನು ಮತ್ತು ತ್ರಿಶೂಲದ ಘಂಟೆಯನ್ನೂ ಪಜೆಯನ್ನೂ ಇಟ್ಟರೆಂದು ತಿಳಿಸುತ್ತದೆ.[9] ಅಂದು ನಡೆಯುತ್ತಿದ್ದ ಧಾರ್ಮಿಕ ಆಂದೋಲನದ ಚಿತ್ರವನ್ನು, ಅಂಥ ದುರ್ಘಟನೆ ತೇರದಾಳದ ಬಸದಿಗೆ ಒದಗಬಾರದೆಂಬ ಉದ್ದೇಶದಿಂದ ಶೈವ ರಕ್ಷೆಯನ್ನು ಬೇಡಿದ ಸಂದರ್ಭವನ್ನು ನಿರೂಪಿಸುತ್ತದೆ.[10] ಈ ರೀತಿ ಜೈನ ಬಸದಿಗಳು ಪರಿಸ್ಥಿತಿಯ ಅನಿವಾರ್ಯತೆಯಿಂದ ಶೈವ ರಕ್ಷೆಯನ್ನು ಬೇಡಿದ ಅದರ ಸಂಕೇತವಾಗಿ ಜೋಗವಟ್ಟಿಗೆ ಮತ್ತು ಇನ್ನಿತರ ವಸ್ತುಗಳನ್ನು ಬಸದಿಗಳಿಗೆ ಪಡೆದ ವಿಷಯ ಹಲವು ಶಾಸನಗಳಲ್ಲಿ ವ್ಯಕ್ತವಾಗಿದೆ. ಇದು ಕೇವಲ ಉತ್ತರ ಕರ್ನಾಟಕದ ಭಾಗಕ್ಕೆ ಮಾತ್ರ ಸೀಮಿತವಾಗದೆ ದಕ್ಷಿಣ ಭಾಗದ ಕರ್ನಾಟಕಕ್ಕೂ ಅನ್ವಯವಾಗುವುದನ್ನು ಗಮನಿಸಬಹುದು.[11]

---

7. ಧರಣಿ ಪಂಡಿತನ ಬಿಜ್ಜಳರಾಯ ಚರಿತ್ರೆ ಹಾಗೂ ಚಂದ್ರ ಸಾಗರ ವರ್ಣಿಯ ಬಿಜ್ಜಳರಾಯ ಪುರಾಣಗಳನ್ನು ಗಮನಿಸಬಹುದು.
8. ಪಿ.ಬಿ. ದೇಸಾಯಿ : ಕರ್ನಾಟಕದ ಕಲಚುರಿಗಳು. ಕಸಾಪಪ 37-1-2 ಪು. 92
9. ಕ.ಇ. 5 ಜಮಖಂಡಿ 98 ಕ್ರಿ.ಶ. 1181
10. ಎಸ್. ನಾಗರಾಜು. ಕರ್ನಾಟಕದ ಧಾರ್ಮಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಜನಜೀವನ. ಕಸಾಚಸಂ 5(1) ಪು. 143-44
11. ವಿವರಗಳಿಗೆ ನೋಡಿ. ಡಾ. ಸಿ.ಯು. ಮಂಜುನಾಥ್. 'ಎಕ್ಕೋಟಿ ಜಿನಾಲಯಗಳು' ಸಂಶೋಧನ (ಸಂ) ಲಕ್ಷ್ಮಣ ತೆಲಗಾವಿ ಪು. 632-36

ಶೈವಧರ್ಮೀಯರ ಆಕ್ರಮಣ ಅಥವಾ ಪ್ರಭಾವದಿಂದ ಅನೇಕ ಜೈನ ಬಸದಿಗಳು ಶಿವಾಲಯಗಳಾಗಿ ಪರಿವರ್ತನೆಹೊಂದಿದವು. ಡಾ. ಅ. ಸುಂದರ ಅವರು ನರಗುಂದ ತಾಲ್ಲೂಕಿನ ಕೊಣ್ಣೂರಿನ ಈಗಿನ ಪರಮೇಶ್ವರ ದೇವಾಲಯ ಮೂಲತಃ ಜೈನ ಮಂದಿರವಾಗಿದ್ದಿತೆಂಬುದನ್ನು ಶಾಸನ ಮತ್ತು ಶಿಲ್ಪಗಳ ಆಧಾರದಿಂದ ತೋರಿಸಿಕೊಟ್ಟಿದ್ದಾರೆ.[12]

ಜೈನ - ವೈಷ್ಣವ : ಕರ್ನಾಟಕದ ಉತ್ತರ ಭಾಗದಲ್ಲಿ ಶೈವ ಧರ್ಮದ ಆಕ್ರಮಣವನ್ನು ಎದುರಿಸಬೇಕಾಗಿಬಂದ ಕಾಲದಲ್ಲಿಯೇ ಹೊಯ್ಸಳ ಸಾಮ್ರಾಜ್ಯದ ಭಾಗದಲ್ಲಿ ಶ್ರೀವೈಷ್ಣವದ ವಿಶೇಷ ಪ್ರಸಾರದಿಂದ ಇನ್ನೊಂದು ರೀತಿಯ ಆಘಾತವನ್ನು ಜೈನಧರ್ಮ ಎದುರಿಸುವ ಪರಿಸ್ಥಿತಿ ಉಂಟಾಯಿತು. ಈ ಪ್ರದೇಶದಲ್ಲಿ ಬಸದಿಗಳು ನಾಶವಾದ ಸ್ಪಷ್ಟ ಶಾಸನೋಲ್ಲೇಖಗಳು ದೊರೆಯದೇ ಹೋದರೂ ಅನೇಕ ರೀತಿಯ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ವಿಷ್ಣು ದೇವಾಲಯಗಳ ನಿರ್ಮಾಣ,ಅಗ್ರಹಾರಗಳ ನಿರ್ಮಾಣ ಇವು ಶ್ರೀವೈಷ್ಣವರನ್ನು ಹೆಚ್ಚು ಪ್ರಭಾವಿಗಳನ್ನಾಗಿ ಮಾಡಿದವು. ಕ್ರಮೇಣ ಎಲ್ಲ ಹಂತಗಳಲ್ಲಿ ಜೈನರು ತಮ್ಮ ಮೊದಲಿನ ಪ್ರಭಾವ ಕಳೆದುಕೊಳ್ಳತೊಡಗಿದರು. ಈ ಹಂತದಲ್ಲಿ ಸ್ಪರ್ಧೆ ಪ್ರಾರಂಭವಾಗಿ ಘರ್ಷಣೆಗಳು ಅನಿವಾರ್ಯವಾಗಿರಬೇಕು. ಬುಕ್ಕನ ಕಾಲದಲ್ಲಿ ಇಂಥ ಘರ್ಷಣೆಯನ್ನು ಗಮನಿಸಿ ರಾಜಿಮಾಡಿಸುವ ಪ್ರಯತ್ನ ನಡೆದಿರುವುದು ಶ್ರವಣಬೆಳಗೊಳದ ಶಾಸನವೊಂದರಲ್ಲಿ ನಿರೂಪಿತವಾಗಿದೆ. ಶಾಸನದ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಜೈನರು ಮತ್ತು ಬಸದಿಗಳು ವೈಷ್ಣವರ ಕೃಪೆಯಲ್ಲಿರಬೇಕಾದ ಪರಿಸ್ಥಿತಿ ಉದ್ಭವವಾಗಿದ್ದಿತ್ತೆಂಬುದು ಸ್ಪಷ್ಟವಿದೆ. ಜೈನರಿಗೆ ಶ್ರೀ ವೈಷ್ಣವರಿಂದ ಅನ್ಯಾಯವಾಗಲು ಆನೆಯಗೊಂದಿ, ಹೊಸಪಟ್ಟಣ, ಪೆನುಗೊಂಡೆ, ಕಲ್ಲೆಹ ಪಟ್ಟಣ ಒಳಗಾದ ಸಮಸ್ತ ಜನರು ಬುಕ್ಕರಾಯನ ಬಳಿಗೆ ಹೋಗಿ ಬಿನ್ನಹ ಮಾಡಿಕೊಂಡಾಗ ಶ್ರೀ ವೈಷ್ಣವರ ಕೈಯಲ್ಲಿ ಜೈನರ ಕೈಹಿಡಿದು ಕೊಟ್ಟು ಜೈನದರ್ಶನಕ್ಕೆ ಪೂರ್ವಮರ್ಯಾದೆಯಂತೆ ಪಂಚಮಹಾವಾದ್ಯಗಳು ಹಾಗೂ ಕಳಶ ಸಲ್ಲುತ್ತವೆ ಎಂದು ಹೇಳುವ ಮಾತು ಮತ್ತು ಜೈನ ದರ್ಶನಕ್ಕೆಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು ಎಂಬ ಮಾತುಹಾಗೂಎಲ್ಲಾ ರಾಜ್ಯದೊಳಗೂ ಇರುವಂತಹ ಬಸದಿಗಳಿಗೆ ಶ್ರೀವೈಷ್ಣವರು ಶಾಸನವನ್ನು ನಟ್ಟು ಪಾಲಿಸಬೇಕು ಎಂದೂ, ಬುಕ್ಕರಾಯನು ಆ ಸಂದರ್ಭದಲ್ಲಿ 'ಶ್ರೀವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲ'ವೆಂದು ಹೇಳಿದ ಮಾತು ಪ್ರಸಿದ್ಧವಾದ ಈ ಶಾಸನದಲ್ಲಿ ನಿರೂಪಿತವಾಗಿದೆ[13]. ಬುಕ್ಕರಾಯನ ಉದಾತ್ತ ಭಾವನೆಗಳಿಗೆ ದ್ಯೋತಕವಾಗಿರುವ ಈ ಶಾಸನ ಧಾರ್ಮಿಕ ಸಮನ್ವಯಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ದೊರೆಯೇನೊ ಒಪ್ಪಂದ ಮಾಡಿಸಿ ಉದಾತ್ತ ಮನೋಭಾವ

---

12. ಅ.ಸುಂದರ 'ಉತ್ತರ ಧಾರವಾಡ ಜಿಲ್ಲೆಯ ಕ್ರಿ.ಶ. 9-10ನೇ ಶತಮಾನದ ದೇವಾಲಯಗಳು ಮತ್ತು ಹೊಯ್ಸಳ ವಾಸ್ತು ಶಿಲ್ಪ, ಸಾಧನೆ 1-2 ಪು. 106

13. (ಮೈ) ಎಕ 2 ಶ್ರವಣಬೆಳಗೊಳ 475 ಕ್ರಿ.ಶ. 1368

ಪ್ರಕಟಪಡಿಸಿದ್ದಾನೆ. ಆದರೆ ಈ ಶಾಸನ ಸ್ಪಷ್ಟವಾಗಿ ಶ್ರೀ ವೈಷ್ಣವ ಪ್ರಾಬಲ್ಯವನ್ನು ಮತ್ತು ಜೈನರ ಕ್ಷೀಣಿಸುವ ಸ್ಥಿತಿಯನ್ನು ಎತ್ತಿ ತೋರಿಸುತ್ತದೆ.

ಶ್ರೀವೈಷ್ಣವ ಪ್ರಾಬಲ್ಯಕ್ಕೆ ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು. ಗುಂಡ್ಲುಪೇಟೆಯ ಒಂದು ಶಾಸನದಲ್ಲಿ ನಿರೂಪಿತವಾದಂತೆ ಗೊಮ್ಮಟಹಳ್ಳಿ ಮತ್ತು ಕಾಚಗಾವುಂಡನ ಮಾದೆಯ ಹಳ್ಳಿಗಳು ಅಗ್ರಹಾರಗಳಾಗಿ ಪರಿವರ್ತನೆ ಆದಾಗ ಅದಕ್ಕೆ ರಾಘವಪುರವೆಂಬ ಹೊಸ ಹೆಸರು ಬಂದಿತು. ಇಂಥ ಹಲವು ಕಹಿ ಪ್ರಸಂಗಗಳು ಜೈನ ಸಮುದಾಯಕ್ಕೆ ಬಂದವು ಎಂದು ಕಾಣುತ್ತದೆ. [14]

ಈ ಎಲ್ಲ ರೀತಿಯ ಆಕ್ರಮಣ ಆಘಾತಗಳಿಗೆ ಜೈನ ಧರ್ಮ ಹೇಗೆ ಪ್ರತಿರೋಧ ಒಡ್ಡಿತು ಎಂಬುದು ಕುತೂಹಲಕರ ವಿಷಯವಾಗಿದೆ. ಅಬ್ಬಲೂರಿನ ಶಾಸನದಲ್ಲಿ ನೇರವಾಗಿ ಜೈನರು ಘರ್ಷಣೆಗೆ ಇಳಿದಂತೆ ನಿರೂಪಿತವಾಗಿದೆಯಾದರೂ ಉಳಿದಂತೆ ಅಂಥ ವಿವರಗಳು ದೊರೆಯುವುದಿಲ್ಲ. ಜೈನರು ಹಲವು ಸಾರಿ ಒಡಂಬಡಿಕೆಯ ಮಧ್ಯಸ್ಥ ಮಾರ್ಗವನ್ನು ಅನುಸರಿಸಿರುವುದು ಕಂಡು ಬರುತ್ತದೆ. ಕೆಲವು ಶಾಸನಗಳು ಜೈನ ಪಂಡಿತರು ಇತರ ಧರ್ಮದ ಪಂಡಿತರನ್ನು ವಾದಗಳಲ್ಲಿ ಸೋಲಿಸಿದ ವಿಷಯವನ್ನು ನಿರೂಪಿಸುತ್ತವೆ. ಶ್ರವಣಬೆಳಗೊಳದ ಒಂದು ಶಾಸನ 'ದೇವಕೀರ್ತಿ ಪಂಡಿತನು ಚಾರ್ವಾಕ, ಬೌದ್ಧ, ನೈಯಾಯಿಕ, ಕಾಪಾಲಿಕ ಮತ್ತು ವೈಶೇಷಿಕರನ್ನು ಪರಾಭವಗೊಳಿಸಿದ[15] ನೆಂದು ಹೇಳುತ್ತದೆ. ಇಂಥ ವಿವರಗಳನ್ನು ಕೊಡುವ ಕೆಲವು ಶಾಸನಗಳು ದೊರೆಯುತ್ತವೆ. ಅನ್ಯ ಧರ್ಮಾನುಯಾಯಿಗಳನ್ನು ವಾದದಲ್ಲಿ ಸೋಲಿಸಿ ಪಲಾಯನ ಮಾಡುವಂತೆ ಮಾಡಿದ ಜೈನ ಯತಿಗಳು ಆ ಕಾಲದ ಇತರರಿಗಿಂತ ಉತ್ಕೃಷ್ಟರೆಂದು ತೋರಿಸುವ ಈ ಕಾಲದ ಪ್ರವೃತ್ತಿ .. ಜೈನರು ತಮ್ಮ ಹಿಂದಿನ ಸ್ಥಾನಮಾನವನ್ನು ಪಡೆಯಲು ಮಾಡಿದ ಪ್ರಯತ್ನಗಳನ್ನು ನಾವಿಲ್ಲಿ ನೋಡಬಹುದು.[16]

ಜೈನ ಧರ್ಮಕ್ಕೆ ತನ್ನಲ್ಲಿ ಮೂಲತಃ ಆಕ್ರಮಣಶೀಲತೆಯ ಕೊರತೆ ಇದ್ದುದರಿಂದ ಉಳಿದ ಧರ್ಮಗಳೊಂದಿಗೆ ಹೋರಾಡಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳದೇ ಹೋಯಿತು. ಈ ಆಕ್ರಮಣಶೀಲತೆಯ ಕೊರತೆಯೇ ಆ ಧರ್ಮದ ಇಳಿಮುಖಕ್ಕೆ ಒಂದು ಕಾರಣವಾಗಿದೆ ಎಂದು ಡಾ. ಎಂ. ಚಿದಾನಂದ ಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. [17] ಧರ್ಮಾಮೃತ ಮತ್ತು ಸಮಯ ಪರೀಕ್ಷೆಯಂಥ ಕೃತಿಗಳು ಸ್ವಮತರಕ್ಷಣೆ ಅನ್ಯಮತ ಖಂಡನೆಯ ದೃಷ್ಟಿಯಿಂದ ಜೈನ ಧರ್ಮದ ಪ್ರಮುಖ ಕೃತಿಗಳಾಗಿವೆ.

---

14. (ಮೈ) ಎ.ಕ. 3 ಗುಂಡ್ಲುಪೇಟೆ 40 ಕ್ರಿ.ಶ. 1320
15. (ಮೈ) ಎ.ಕ. 2 ಶ್ರವಣಬೆಳಗೊಳ 70 ಕ್ರಿ.ಶ. 1163
16. (ಮೈ) ಎ.ಕ. 2 ಮುನ್ನುಡಿ ಪು - xi viii - xiix
17. ಎಂ ಚಿದಾನಂದ ಮೂರ್ತಿ : The Concept of War and Ahimsa in Jainism in Karnataka' Jainism and Karnataka Culture P. 127-138

ಶೈವ-ವೈಷ್ಣವ : ಶೈವ-ವೈಷ್ಣವ ಧರ್ಮಾನುಯಾಯಿಗಳು ಪರಸ್ಪರ ಸ್ಪರ್ಧೆಗೆ ಇಳಿದು ಅದು ಘರ್ಷಣೆಗೆ ದಾರಿಮಾಡಿರುವುದುಂಟು. ಈ ಎರಡೂ ಧರ್ಮದ ಜನರು ಅಗ್ರಹಾರಗಳಲ್ಲಿ ಆರಂಭ ಕಾಲದಿಂದ ಸಹಬಾಳ್ವೆ ನಡೆಸುತ್ತ ಬಂದಿದ್ದರು. ಕಾಲಕ್ರಮೇಣ ಸ್ಪರ್ಧೆ ಪೈಪೋಟಿಗಳು ಪ್ರಾರಂಭವಾದವು. ತಲಕಾಡಿನ ಕೀರ್ತಿನಾರಾಯಣ ದೇವಾಲಯದಲ್ಲಿ ಯಾರು ಮೊದಲು ಪ್ರಸಾದ ಸ್ವೀಕರಿಸಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ತೀವ್ರ ಸ್ವರೂಪ ಮುಟ್ಟಿ ಸ್ವತಃ ಬಲ್ಲಾಳನೇ ಪರಿಹರಿಸಬೇಕಾದ ಅಗತ್ಯ ಉಂಟಾಯಿತು. ಇದು ಶೈವ ವೈಷ್ಣವರ ಮಧ್ಯೆ ಭಿನ್ನಾಭಿಪ್ರಾಯವೆಂದು ಡಾ॥ ಎಸ್.ಶೆಟ್ಟರ್ ಭಾವಿಸುತ್ತಾರೆ.[18] ಅವರು ಆ ಎರಡೂ ಧರ್ಮೀಯರ ಮಧ್ಯೆ ಮೂಡಿದ್ದ ಅಂತರವನ್ನು ದೇವಾಲಯ ನಿರ್ಮಾಣ, ಶಿಲ್ಪಗಳಲ್ಲಿಯೂ ಗುರುತಿಸಿದ್ದಾರೆ.

ಅಗ್ರಹಾರಗಳ ಸಹಬಾಳ್ವೆಯೂ ವಿಷಮ ಸ್ಥಿತಿಯನ್ನು ಮುಟ್ಟತೊಡಗಿತು. ಸೋಮನಾಥಪುರದ ಅಗ್ರಹಾರದಲ್ಲಿ ಸ್ವತಃ ಬಲ್ಲಾಳನೇ ವೃತ್ತಿಗಳ ಮತ್ತು ಸಿದ್ಧಾಯದ ವಿಷಯದಲ್ಲಿ ಇದ್ದ ವಿವಾದವನ್ನು ಪರಿಹರಿಸಿ ನಿರ್ಣಯವನ್ನು ಪತ್ರ ಶಾಸನದಲ್ಲಿ ಮಹಾಜನರಿಗೆ ನೀಡುತ್ತಾನೆ. ಅಗ್ರಹಾರದಲ್ಲಿ ಒಂದು ಭಾಗ ವೈಷ್ಣವಸ್ಥಾನವಾದರೆ ಇನ್ನೊಂದು ಭಾಗ ಶೈವಸ್ಥಾನವೆಂದು ಗುರುತಿಸಲ್ಪಟ್ಟಿದೆ.[19] ತಮಿಳು ನಾಡಿನಲ್ಲಿ ತೀರಾ ವಿಕೋಪಕ್ಕೆ ಹೋಗಿದ್ದ ಶೈವ - ವೈಷ್ಣವ ವೈಷಮ್ಯ ಕನ್ನಡ ನಾಡಿಗೂ ಅಡಿ ಇಟ್ಟು ಭಿನ್ನಾಭಿಪ್ರಾಯದ ಬಿರುಕು ವಿಸ್ತಾರಗೊಳ್ಳತೊಡಗಿತು. ದೇವಸ್ಥಾನಗಳ ಜಮೀನಿನ ವಿಷಯ, ನೀರಿನ ಹಂಚಿಕೆ ಕರ್ತವ್ಯಲೋಪ ಮುಂತಾದವುಗಳನ್ನು ಮತ್ತೆ ಮತ್ತೆ ಸರಿಪಡಿಸಬೇಕಾದ ಸ್ಥಿತಿ ಒದಗಿತು.

ಅದ್ವೈತ - ದ್ವೈತ : ಅದ್ವೈತ ಸಿದ್ಧಾಂತದ ಪರಂಪರೆಯವರಿಗೂ ದ್ವೈತ ಸಿದ್ಧಾಂತದ ಮಧ್ವರಿಗೂ ಅನೇಕ ವಿದ್ವತ್ ಗೋಷ್ಠಿಗಳಲ್ಲಿ ಚರ್ಚೆಗಳು ನಡೆದಂತೆ ತಿಳಿದು ಬರುತ್ತದೆ. ಅದ್ವೈತ ಸಿದ್ಧಾಂತದ ಕೇಂದ್ರಗಳಲ್ಲೊಂದಾದ ಶೃಂಗೇರಿ ದ್ವೈತ ಸಿದ್ಧಾಂತದ ಮೂಲಸ್ಥಳವಾದ ಉಡುಪಿಯಿಂದ ಕೇವಲ ನಲ್ವತ್ತು ಕಿಲೋ ಮೀಟರುಗಳ ಅಂತರದಲ್ಲಿದೆ. ವೈಮನಸ್ಯದಿಂದ ಅದ್ವೈತ ಅನುಯಾಯಿಗಳು ದ್ವೈತ ಸಿದ್ಧಾಂತ ಗ್ರಂಥಗಳನ್ನು ನಿರ್ಮೂಲ ಮಾಡುವ ಉದ್ದೇಶದಿಂದ ಮಧ್ವರ ಇಡೀ ಗ್ರಂಥಭಂಡಾರವನ್ನು ಹೊತ್ತುಕೊಂಡು ಹೋದಾಗ ವಿಷ್ಣುಮಂಗಲದ ಜಯಸಿಂಹ ಮಧ್ಯೆ ಪ್ರವೇಶಿಸಿ ಆ ಗ್ರಂಥಗಳು ಅವರಿಗೆ ಮರಳಿ ದೊರೆಯುವಂತೆ ಮಾಡಿದನು[20]. ಈ ಘಟನೆಗೆ ಖಚಿತ ಐತಿಹಾಸಿಕ ಆಧಾರಗಳು ದೊರೆಯದೇ ಹೋದರೂ ಪರಸ್ಪರ ಸ್ಪರ್ಧೆ ಎಂಥ ಅಹಿತಕರ ಘಟನೆಗಳಿಗೆ ದಾರಿ ಮಾಡಿಕೊಡಬಲ್ಲುದು ಎಂಬುದು ವೇದ್ಯವಾಗುತ್ತದೆ.

18. (ಮೈ) ಎ.ಕ. 5 ತಿ. ನರಸೀಪುರ 164 ಕ್ರಿ.ಶ. 1180; ಎಸ್.ಶೆಟ್ಟರ್ ' ಭಾರತೀಯ ಹಿನ್ನಲೆಯಲ್ಲಿ ಕರ್ನಾಟಕದ ಧಾರ್ಮಿಕ ಸಾಮಾಜಿಕ ಜೀವನ' ಸಮಗ್ರ ಸಾಹಿತ್ಯ ಚರಿತ್ರೆ ಸಂ.3 ಪು. 26

19. (ಮೈ) ಎ.ಕ. 5 ತಿ. ನರಸೀಪುರ 89 ಕ್ರಿ.ಶ. 1300

20. Encylopaedia of Religion & Ethics viii p. 232 - 234

ಇಸ್ಲಾಂಧರ್ಮ : ಭಾರತಕ್ಕೆ ಇಸ್ಲಾಂ ಧರ್ಮ ಯಾವಾಗ ಪ್ರವೇಶ ಮಾಡಿತು ಎಂದು ಖಚಿತವಾಗಿ ಹೇಳುವುದು ಕಠಿಣವೇ. ಏಕೆಂದರೆ ಭಾರತಕ್ಕೂ ಪಶ್ಚಿಮ ಏಷ್ಯಾಕ್ಕೂ ಚರಿತ್ರಪೂರ್ವಕಾಲದಲ್ಲಿಯೇ ವಾಣಿಜ್ಯ ಸಂಬಂಧ ಬೆಳೆದಿದ್ದಿತು. ಈಜಿಪ್ಟಿನವರು, ಪಾರಸಿಕರು, ಗ್ರೀಕರು, ರೋಮನರು, ಅರಬರೇ ಮುಂತಾದವರು ವಾಣಿಜ್ಯಸಂಬಂಧದಿಂದ ಪಶ್ಚಿಮ ಸಮುದ್ರತೀರಗಳಿಗೆ ಬಂದು ಹೋಗುತ್ತಿದ್ದರು. ಮಲಬಾರಿನಿಂದ ಮೆಣಸು, ಏಲಕ್ಕಿ, ತೇಗ ಮುಂತಾದ ವಸ್ತುಗಳನ್ನು ಅವರು ತೆಗೆದುಕೊಂಡು ಹೋಗುತ್ತಿದ್ದರು. ಕ್ರಿ.ಶ. 636ರ ನಂತರ ಅರಬರು ಥಾಣದ ಮೇಲೆ ಆಕ್ರಮಣ ಮಾಡಿದರು. ಅನಂತರ ಒಂದಾದ ಮೇಲೆ ಒಂದರಂತೆ ಸಿಂದ್ ಪ್ರಾಂತ್ಯದ ಮೇಲೆ ಆಕ್ರಮಣಗಳು ನಡೆದು ಆ ಪ್ರದೇಶ ಅವರ ವಶವಾದವು. ಮುಂದೆ ತುರುಷ್ಕರು ಭಾರತದ ಪ್ರದೇಶಗಳ ಮೇಲೆ ದಾಳಿಗಳನ್ನು ಪ್ರಾರಂಭಿಸಿದರು. (ಸು.ಕ್ರಿ.ಶ. 9ನೆಯ ಶ.ಮಾ. ದ ಮಧ್ಯ ಕಾಲ) ಘಜ್ನಿ ಮಹಮದನ ಸತತ ದಾಳಿಗಳಿಂದ ಭಾರತದ ಅನೇಕ ಪ್ರಾಂತ್ಯಗಳು ಅವನ ವಶವಾದವು. ಕ್ರಮೇಣ ದೆಹಲಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿತು. ಅಲ್ಲಾವುದ್ದೀನನು ಮುಂದೆ ವಿಂಧ್ಯ ಪರ್ವತವನ್ನು ದಾಟಿ ದಕ್ಷಿಣ ಭಾರತದ ಮೇಲೆ ಆಕ್ರಮಣ ಮಾಡಿದ ಪ್ರಥಮ ಸುಲ್ತಾನನಾಗಿದ್ದಾನೆ. ದೇವಗಿರಿಗೆ ಅಲ್ಲಾವುದ್ದೀನ್ ಆಕ್ರಮಣ ಮಾಡುವ ಮೊದಲೇ ಸೇವುಣ ರಾಜ್ಯಕ್ಕೆ ಇಸ್ಲಾಂ ಧರ್ಮ ಸೂಫಿ ಗುರುಗಳಾದ ಮುನಿನ್ ಆರಿಫ್ ಮತ್ತು ಜಲಾಲುದ್ದೀನ್ ಗಂಜ್ರವಾನ್ ಮೂಲಕ ಬಂದಿದ್ದಂತೆ ತಿಳಿದು ಬರುತ್ತದೆ. ರಾಮಚಂದ್ರನನ್ನು (ಸೇವುಣಮನೆತನ) ಕ್ರಿ.ಶ. 1282ರ ಒಂದು ಶಾಸನ '...ರಣರಂಗಧೀರ ತುರು (ঃ) ಷ್ಕೋಪದ್ರವ ಸಮಸ್ತ ಮೇದಿನೀ ಮಹಾಸಮುದ್ಧರಣೈಕನಾಥ' ಎಂದು ಕೀರ್ತಿಸುತ್ತದೆ.[21] ರಾಮಚಂದ್ರನ ಕಾಲದ ಕ್ರಿ.ಶ. 1298ರ ಒಂದು ಶಾಸನ ಮಸೀದಿಗೆ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.[22]

ಮುಸ್ಲಿಮರ ದಾಳಿ ಹೊಯ್ಸಳ ಪ್ರಾಂತ್ಯದ ಮೇಲೆ ಆದುದನ್ನು ಅನೇಕ ಶಾಸನಗಳು ತಿಳಿಸುತ್ತವೆ. ಮೊದಮೊದಲು ಐಶ್ವರ್ಯ ಗ್ರಹಣ ದೃಷ್ಟಿಯಿಂದ ಆಕ್ರಮಣ ಮಾಡುತ್ತಿದ್ದವರು ಕ್ರಮೇಣ ಈ ನಾಡಿನಲ್ಲಿ ನೆಲಸತೊಡಗಿದರು. ಕ್ರಿ.ಶ . 1347ರಲ್ಲಿ ಗುಲ್ಬರ್ಗವು ರಾಜಧಾನಿಯಾಗಿ ಬಹಮನಿ ರಾಜ್ಯವು ಉದಯಿಸಿದನಂತರ ನಿರಂತರವಾಗಿ ಹಾಗೂ ಪರಿಣಾಮಕಾರಿಯಾದ ರೀತಿಯಲ್ಲಿ ಇಸ್ಲಾಂ ಸಂಪರ್ಕವು ಕರ್ನಾಟಕದೊಂದಿಗಾಯಿತು.[23]

ಕಲ್ಯಾಣದ ಒಂದು ಶಾಸನ ಸುಲ್ತಾನ್ ಮಹಮ್ಮದ್ ತುಘಲಕ್‌ನ ಆಳ್ವಿಕೆಗೆ ಸಂಬಂಧಿಸಿದ್ದು ಅವನ ಅಧಿಕಾರಿ ಮಹಾಪ್ರಧಾನಿ ಮಲ್ಲಿಕ್‌ಕಾಮದಿನ ಮಹಾರಾಷ್ಟ್ರ ಮಂಡಲದ

---

21. ಎಸ್‌ಐಐಕೆ ix(i) ಹರಪನಹಳ್ಳಿ380 ಕ್ರಿ.ಶ. 1282
22. ಎಸ್. ಎಚ್.ರಿತ್ತಿ : The Seunas p. 267-68
23. ಖಿಜರ್ ಅಲಿಖಾನ್ 'ಕರ್ನಾಟಕದಲ್ಲಿ ಇಸ್ಲಾಂಧರ್ಮದ ಪಾತ್ರ' ಕರ್ನಾಟಕದ ಪರಂಪರೆ II ಪು. 276

ಸಂಪೂರ್ಣ ಅಧಿಕಾರದಲ್ಲಿದ್ದುದನ್ನು ತಿಳಿಸುತ್ತದೆ. ಕಲ್ಯಾಣದಲ್ಲಿ ಮಧುಕೇಶ್ವರ ದೇವಾಲಯವು ಬಾಹದಿನನ ದಂಗೆಯ ಕಾಲದಲ್ಲಿ ತುಂಬಾ ಹಾನಿಗೊಳಗಾಗಿರಲು (ಕರ್ನಾಟಕದ) ಕಲ್ಯಾಣದ ಜನರ ಪ್ರಯತ್ನದಿಂದ ಮಧುಕೇಶ್ವರ ಶಿವಲಿಂಗ ಪುನರ್ ಪ್ರತಿಷ್ಠೆಗೊಂಡು ಪೂಜಾಕಾರ್ಯಗಳು ನಡೆಯುವಂತೆ ಏರ್ಪಾಟಾದ ವಿಷಯವನ್ನು ತಿಳಿಸುತ್ತದೆ. ಮುಸ್ಲಿಂ ಅಧಿಕಾರಿಯ ಆಡಳಿತದಲ್ಲಿ ಹಿಂದೂ ಶೈವ ದೇವಾಲಯ ಜೀರ್ಣೋದ್ಧಾರವಾದ ಅಪರೂಪದ ವಿಷಯವನ್ನು ಈ ಶಾಸನ ತಿಳಿಸುತ್ತದೆ[24]

ತುಳುನಾಡಿನ ಕೋಟೀಶ್ವರ ದೇವಸ್ಥಾನದಲ್ಲಿ ನಡೆದ ಒಂದು ವಿಶೇಷ ಘಟನೆ, ಅದೇ ದೇವಾಲಯದ ಶಾಸನದಲ್ಲಿ ಕಂಡು ಬರುವುದನ್ನು ಡಾ॥ ಕೆ.ವಿ. ರಮೇಶ್ ಅವರು ತೋರಿಸಿಕೊಟ್ಟಿದ್ದಾರೆ. ಕ್ರಿ.ಶ. 1550ರ ವರ್ಷದ ಕುಡಿಯ ಹಬ್ಬದಲ್ಲಿ ಇಡಿಯ ತುಳು ರಾಜ್ಯದಿಂದ ಬಂದು ಜನರು ಸೇರಿದ್ದಾಗ ಯಾವುದೋ ಕಾರಣಕ್ಕೆ ಜನರು ತಮ್ಮ ತಮ್ಮಲ್ಲಿ ಹೋರಾಡಿ ಬ್ರಾಹ್ಮಣರ, ಶೂದ್ರರ ಹೆಣಗಳು ಅಲ್ಲಿ ಬೀಳುವಂತಾಯಿತು. ಗೋಹತ್ಯೆಯೂ ಆಗಿ ಸುಮಾರು ಆರು ತಿಂಗಳುಗಳ ಕಾಲ ದೇವಸ್ಥಾನದ ಪೂಜೆ ಇತ್ಯಾದಿಗಳು ಸಂಪೂರ್ಣವಾಗಿ ನಿಂತು ಹೋಗಿತ್ತು. ಕ್ರಿ.ಶ. 1551ರಲ್ಲಿ ಅಳಿಯ ರಾಮರಾಜ ಮತ್ತು ಅವನ ತಮ್ಮ ವೆಂಕಟಾದ್ರಿ ಇವರಿಬ್ಬರಿಗೂ 'ಧರ್ಮವಾಗಬೇಕೆಂದು' ಬಾರಕೂರ ರಾಜ್ಯದ ರಾಜ್ಯಪಾಲನು ಆ ದೇವಾಲಯದಲ್ಲಿ ನಡೆಯಬೇಕಾಗಿ ಬಂದ ಪ್ರಾಯಶ್ಚಿತ್ತ ಕರ್ಮಗಳ ವೆಚ್ಚಕ್ಕಾಗಿ ದಾನಗಳನ್ನು ಕೊಟ್ಟನು. ಇದರಲ್ಲಿ ಆಶ್ಚರ್ಯದ ವಿಷಯವೆಂದರೆ ಈ ಕಾರ್ಯಕ್ರಮ ಕೈಗೊಂಡ ರಾಜ್ಯಪಾಲ ಎಕದಳಖಾನ ಒಡೆಯನೆಂಬುವನು. ವಿಜಯನಗರ ಕಾಲದ ತುಳುನಾಡಿನಲ್ಲಿ ಅಧಿಕಾರ ನಡೆಸಿದ ರಾಜ್ಯಪಾಲರುಗಳಲ್ಲಿ ಇವನೊಬ್ಬನೆ ಇಸ್ಲಾಂ ಧರ್ಮದವನು. ಹಿಂದೂ ದೇವಾಲಯದ ಪ್ರಾಯಶ್ಚಿತ್ತ ಕಾರ್ಯಗಳು ಮುಸಲ್ಮಾನ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ಆದ ಅಪರೂಪದ ಘಟನೆ ಇದಾಗಿದೆ.[25]

ಧಾರ್ಮಿಕ ಸಂಘರ್ಷದ ಹಲವು ಮುಖಗಳನ್ನು ಗಮನಿಸಿದರೆ ಕರ್ನಾಟಕದ ಸಾಂಸ್ಕೃತಿಕ ಜೀವನ ಹಲವು ಪ್ರಕ್ಷುಬ್ಧ ಪರಿಸ್ಥಿತಿಗಳ ಸರಮಾಲೆಯಾಗಿದ್ದಿತೆಂದು ಭಾವಿಸುವಂತೆ ಪ್ರೇರೇಪಿಸಬಹುದು. ಆದರೆ ಧಾರ್ಮಿಕ ಸಮನ್ವಯದ ಸುಲಲಿತ ಸಾಂಸ್ಕೃತಿಕ ಚಿತ್ರವೂ ನಮಗೆ ದೊರೆಯುತ್ತದೆ. ಕರ್ನಾಟಕವು ಧಾರ್ಮಿಕ ಸಮನ್ವಯ ಖ್ಯಾತಿಯ ನಾಡಾಗಿ ಇತಿಹಾಸದುದ್ದಕ್ಕೂ ಬೆಳೆದು ಬಂದಿರುವುದೂ ಕೂಡ ಅಷ್ಟೇ ನಿಖರವಾಗಿ ಕಂಡು ಬರುವ ವಿಷಯವಾಗಿದೆ.

ಸಾಮರಸ್ಯ; ಸಮನ್ವಯ : ಕರ್ನಾಟಕ ಪ್ರಾಚೀನ ಕಾಲದಿಂದಲೂ ಎಲ್ಲ ಪ್ರಮುಖ ಧರ್ಮಗಳಿಗೂ ಬೆಳೆಯಲು ಅವಕಾಶ ಕಲ್ಪಿಸಿದ ಪ್ರದೇಶ. ಒಂದೇ ಪ್ರಾಂತ್ಯದಲ್ಲಿ ಅತ್ಯಂತ

---

24. ಇ. ಆಪ್ರ 7 ಕ್ರಿ.ಶ. 1326

25. ಕೆ.ವಿ. ರಮೇಶ್ : ತುಳುನಾಡಿನ ಇತಿಹಾಸ, ಪು. 114

ಸಹಜವಾಗಿ ಅನೇಕ ಧರ್ಮಗಳು ಸಾಮರಸ್ಯದಿಂದ ಇದ್ದುದಕ್ಕೆ ಶಾಸನಗಳು ಸಾಕಷ್ಟು ಆಧಾರಗಳನ್ನು ಒದಗಿಸುತ್ತವೆ.

ಬೆಳಗಾಂ ಜಿಲ್ಲೆಯ ಸೌಂದತ್ತಿ ಗ್ರಾಮವನ್ನು ವರ್ಣಿಸುವ ಒಂದು ಶಾಸನ ಅದರ ಸಸ್ಯ ಸಮೃದ್ಧಿಯನ್ನು ವರ್ಣಿಸಿದನಂತರ ಶಿವಾಲಯ ಮತ್ತು ಹೊಳೆವ ಜಿನೇಂದ್ರ ಗೃಹದಿಂದ ಶೋಭಿಸುವುದನ್ನು ವರ್ಣಿಸುತ್ತದೆ.[26] ಆ ಕಾಲದಲ್ಲಿ ಬೌದ್ಧ, ಜೈನ, ಶೈವ ಮತ್ತು ವೈಷ್ಣವ ಧರ್ಮಗಳನ್ನು ಚತುಸ್ಸಮಯಗಳೆಂದು ಸಂಬೋಧಿಸಿವೆ. ಅನೇಕ ರಾಜರ ಬಿರುದಾವಳಿಗಳಲ್ಲಿ 'ಚತುಸ್ಸಮಯ ಸಮುದ್ಧರಣ' ರೆಂದು ಅವರನ್ನುಸ್ತುತಿಸಿವೆ. ರಾಜರನ್ನು ಅನುಸರಿಸಿ ರಾಣಿಯರು, ಅಧಿಕಾರಿಗಳು, ಶ್ರೀಮಂತರು, ಜನ ಸಾಮಾನ್ಯರೂ ಸಮನ್ವಯ ಮಾರ್ಗವನ್ನು ಅನುಸರಿಸುತ್ತಿದ್ದರು. ಈ ಕಾರಣದಿಂದ ಭಿನ್ನ ಧರ್ಮಗಳಿಗೆ ಸೇರಿದವರಾಗಿದ್ದರೂ ಸಹಬಾಳ್ವೆಗೆ ಯಾವುದೇ ಅಡ್ಡಿ ಉಂಟಾಗುತ್ತಿರಲಿಲ್ಲ. ಸಾಮಂತ ಚಟ್ಟನ ಹೆಂಡತಿ ಶಾಂತಲೆಯನ್ನು ವರ್ಣಿಸುತ್ತ ಒಂದು ಶಾಸನ ಅವಳು ಶೈವ, ಜೈನ, ವೈಷ್ಣವ ಬೌದ್ಧಾಗಮ ನಾಲ್ಕೂ ಸಮಯಗಳನ್ನು ಅರಿತವಳಾಗಿದ್ದಳು ಎಂದು ತಿಳಿಸುತ್ತದೆ.[27]

ಪರಸ್ಪರ ಸಹಬಾಳ್ವೆಯ ನಿಕಟತ್ವದಲ್ಲಿ ಧರ್ಮಗಳೂ ಪರಸ್ಪರ ಪ್ರಭಾವಕ್ಕೆ ಒಳಗಾಗುತ್ತಿದ್ದವು. ಶಿವಪುರಾಣ, ಭಾಗವತ ಪ್ರಥಮ ಸ್ಕಂಧಗಳಲ್ಲಿಯೇ ಬುದ್ಧನನ್ನು ವಿಷ್ಣುವಿನ ಒಂಬತ್ತನೆಯ ಅವತಾರವೆಂದು ಪರಿಭಾವಿಸಲಾಗಿದೆ. ಹನ್ನೆರಡನೆಯ ಶತಮಾನದ ವೈಷ್ಣವ ದೇವಾಲಯಗಳಲ್ಲಿ ಬುದ್ಧನ ವಿಗ್ರಹಗಳು ಕಂಡು ಬರುತ್ತವೆ. ಆ ಕಾಲಕ್ಕೆ ಹಿಂದೂಗಳು ಬುದ್ಧನನ್ನು ವಿಷ್ಣುವಿನ ಅವತಾರವೆಂದು ಸ್ವೀಕರಿಸಿ ತಮ್ಮ ದೇವತೆಗಳಲ್ಲಿ ಸೇರಿಸಿಕೊಂಡಿದ್ದರು. ಜೈನರೂ ಅನೇಕ ಹಿಂದೂ ದೇವತೆಗಳನ್ನು, ಹಬ್ಬಗಳನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದರು. ಧರ್ಮಗಳ ಪರಸ್ಪರ ಕೊಳುಕೊಡೆ ತುಂಬ ಆಳವಾದ ಅಧ್ಯಯನವನ್ನು ಬಯಸುವ ಕ್ಷೇತ್ರವಾಗಿದೆ.

ಎಲ್ಲ ಧರ್ಮಗಳನ್ನು ಸಮಭಾವದಿಂದ ಕಾಣಬೇಕೆನ್ನುವುದು ಆ ಕಾಲದ ಒಂದು ಪ್ರಮುಖ ಮನೋಧರ್ಮ ಹಾಗೂ ಬದುಕಿನ ಆದರ್ಶವಾಗಿದ್ದಿತು. ಅರಸೀಕೆರೆಯ ಒಂದು ಶಾಸನ ದೇವ ಪಿಳ್ಳೈ ಎಂಬ ವೈದ್ಯನನ್ನು 'ಸರ್ವಸಮಯ ಸಮದರ್ಶಿ'[28] ಎಂದು ವರ್ಣಿಸುತ್ತದೆ. ಒಂದು ಶಾಸನ (ಕ್ರಿ.ಶ. 1129) ಒಂದು ಸ್ಥಳದ ಜನರ ಸದ್ಗುಣಗಳನ್ನು ವರ್ಣಿಸಿದನಂತರ ಹರಿ, ಹರ, ಕಮಲಾಸನ, ವೀತರಾಗ, ಬೌದ್ಧಾಲಯಗಳಿಂದಿನವಸುಂಧರೆಗೆಸೆವ ಪಂಚಶರದಂತಿರೆ ಪಂಚಮಠಗಳೆಸವುವಾ ಪಟ್ಟಣದೊಳ್' ಎಂದು ವರ್ಣಿಸುತ್ತದೆ.[29] ಹೀಗೆ ಧಾರ್ಮಿಕ ಸಾಮರಸ್ಯ-ಸಹಬಾಳ್ವೆ ಬದುಕಿನ ಒಂದು ವಿಧಾನವೇ ಆಗಿದ್ದಂತೆ ಕಂಡುಬರುತ್ತದೆ.

---

26. ಕ ಇ 6 ಸೌಂದತ್ತಿ 73 ಕ್ರಿ.ಶ. 1228
27. (ರೈ) ಎಕ 9 ಚಿಕ್ಕನಾಯಕನ ಹಳ್ಳಿ 21 ಕ್ರಿ.ಶ. 1160
28. (ರೈ) ಎಕ 5 ಅರಸಿಕೆರೆ 9 ಕ್ರಿ.ಶ। 1286
29. ಎಸ್.ಎಸ್. ರಾಘವಾಚಾರ್ ' ಧರ್ಮ ಸಮಾಜ ಮತ್ತು ಸಂಸ್ಕೃತಿ' ಧರ್ಮ ಮತ್ತು ತತ್ತ್ವಜ್ಞಾನ ಕಲ್ಯಾಣಚಾಲುಕ್ಯರ ಕಾಲ ಕರ್ಣಾಟಕ ಪರಂಪರೆ 1 ಪು. 391

ಸಮಾಜದ ಒಂದು ಅತ್ಯಂತ ಕಿರು ಘಟಕವಾದ ಕೌಟುಂಬಿಕ ನೆಲೆಯಲ್ಲಿಯೂ ಧಾರ್ಮಿಕ ಸಾಮರಸ್ಯ ಕಂಡು ಬರುತ್ತಿತ್ತು. ಭಿನ್ನ ಮತ ಧರ್ಮಗಳನ್ನು ಅನುಸರಿಸುತ್ತಿದ್ದ ವ್ಯಕ್ತಿಗಳು ಶಾಂತಿ ಸಮಾಧಾನಗಳಿಂದ ಒಂದೆ ಕುಟುಂಬದಲ್ಲಿ ಜೀವಿಸುತಿದ್ದ ನಿದರ್ಶನಗಳು ದೊರೆಯುತ್ತವೆ. ವಿಷ್ಣು ವರ್ಧನನ ವೈಯಕ್ತಿಕ ಧರ್ಮ ಯಾವುದೆಂಬುದನ್ನು ಹೇಳುವುದು ಕಷ್ಟವಾದರೂ ಆತನ ರಾಣಿ ಶಾಂತಲೆ ಜೈನಳು. ಅವಳ ತಂದೆ ಮಾರಸಿಂಗಮಯ್ಯ ನಿಷ್ಠಾವಂತ ಶೈವ, ತಾಯಿ ಮಾಚಿಕಬ್ಬೆ ಜೈನಳು. ಎರಡನೆಯ ಬಲ್ಲಾಳನ ಮಂತ್ರಿ ಚಂದ್ರಮೌಳಿ ಬ್ರಾಹ್ಮಣ ಅವನ ಮಡದಿ ಆಚಿಯಕ್ಕ ಜೈನಳು. ಇಂಥ ಭಿನ್ನ ಧರ್ಮಗಳಿಗೆ ಸೇರಿದ ಕುಟುಂಬಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಬಸವಣ್ಣ, ಬ್ರಹ್ಮಶಿವ ಇಂಥ ಕುಟುಂಬಗಳನ್ನು ಪುರಸ್ಕರಿಸಿಲ್ಲ[30] ರಾಜರು ಯಾವುದೇ ಧರ್ಮವನ್ನು ವೈಯಕ್ತಿಕವಾಗಿ ಅನುಸರಿಸುತ್ತಿದ್ದರೂ ಎಲ್ಲ ಧರ್ಮಗಳಿಗೆ ಸಾಮಾನ್ಯವಾಗಿ ಸಮಾನ ಪ್ರೋತ್ಸಾಹ ನೀಡುತ್ತಿದ್ದರು.

ಹರಪನಹಳ್ಳಿಯ ಒಂದು ಶಾಸನ ಜೀರ್ಣೋದ್ಧಾರವಾದ ಒಂದು ಜಿನಾಲಯಕ್ಕೆ ವೈಷ್ಣವ ಕುಲತಿಲಕ, ಚನ್ನ ಕೇಶವ ಪಾದಪದ್ಮಾರಾಧಕ ಹಾಗೂ ಚತುಸ್ಸಮಯ ಸಮುದ್ಧರಣ ಭೈರಸದೇವರಸ ದಾನನೀಡಿದ ವಿಷಯ ತಿಳಿಸುತ್ತದೆ.[31] ದೇವಿ ಹೊಸೂರಿನ ಒಂದು ಶಾಸನ ಅಲ್ಲಿಯ ಅಗ್ರಹಾರದ ಸಾವಿರ ಮಹಾಜನರನ್ನು 'ಚತುಃ ಸೀಮಾಂತರಂಗಳೊಳಾದ ಸಕಲ ಧರ್ಮಂಗಳಂ ತಮ್ಮ ಧರ್ಮವೆಂದಾರಯ್ದು' ಆಚರಿಸುತ್ತಿದ್ದ ವಿಷಯ ತಿಳಿಸುತ್ತದೆ.[32]

ಮಹಾ ಸಾಮಂತ ಬಾಚಿದೇವ ಎನ್ನುವವನು ತನ್ನ ತಂದೆಯ ಹೆಸರಿನಲ್ಲಿ ಪರೋಕ್ಷವಿನಯವಾಗಿ ಗಂಗೇಶ್ವರ ದೇವಾಲಯ ಕಟ್ಟಿಸಿದ, ತನ್ನ ಮಗಳ ಪರೋಕ್ಷವಿನಯವಾಗಿ ರಾಮೇಶ್ವರ ದೇವಾಲಯ ಕಟ್ಟಿಸಿದ, ಹೆಂಡತಿ ಭೀಮವ್ವೆಯ ಪರೋಕ್ಷವಿನಯವಾಗಿ ಭೀಮಜಿನಾಲಯ ಕಟ್ಟಿಸಿ ಭೀಮ ಸಮುದ್ರವೆಂಬ ಕೆರೆ ಕಟ್ಟಿಸಿದ. ಬಾಚಿ ದೇವನು ತನ್ನ ಆತ್ಮೀಯರು ಅಗಲಿದಾಗ ಪರೋಕ್ಷವಿನಯವಾಗಿ ಶೈವ ವೈಷ್ಣವ ಜೈನ ಧರ್ಮಗಳಿಗೆ ತನ್ನ ಕಾಣಿಕೆಗಳನ್ನು ನೀಡಿ ಧರ್ಮ ಸಮನ್ವಯ ಮೆರೆದಿದ್ದಾನೆ.[33]

ಜೈನಗುರು ಕೋಲೂರು ನಾಡಿನಲ್ಲಿ ಶೈವ ದೇವಸ್ಥಾನವನ್ನು ಕಟ್ಟಿಸಿರುವುದುಂಟು[34]. ಹೀಗೆ ವೈಯಕ್ತಿಕವಾಗಿ ತಾವು ಯಾವುದೇ ಧರ್ಮಕ್ಕೆ ಸೇರಿರಲಿ ಪರಧರ್ಮಗಳ ವಿಷಯದಲ್ಲಿ ತುಂಬ ಉದಾರವಾದಿಯಾದ ದೃಷ್ಟಿಯನ್ನು ಉಳ್ಳವರಾಗಿದ್ದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

---

30. ಬಿ.ಎಸ್. ಕುಲಕರ್ಣಿ(ಸಂ) ಸಮಯಪರೀಕ್ಷೆ 4-125 ಮತ್ತು ಆರ್.ಸಿ. ಹಿರೇಮಠ (ಸಂ) ಬಸವಣ್ಣನವರ ವಚನಗಳು 104
31. ಎಸ್ ಐಐ9(1) ಹರಪನಹಳ್ಳಿ 387 ಕ್ರಿ.ಶ. 1297
32. ಎಸ್ಐಐ 18 ಹಾವೇರಿ 152 ಕ್ರಿ.ಶ. 11249
33. (ರೈ) ಎಕ 12 ತುಮಕೂರು 9 ಕ್ರಿ.ಶ. 1151
34. ಹಿರೇಮಲ್ಲೂರ ಈಶ್ವರನ್ : ಲಿಂಗಾಯತಧರ್ಮ ಸಂಸ್ಕೃತಿ ಮತ್ತು ಸಮಾಜ ಪು. 35

ಶೈವ-ವೈಷ್ಣವರು ಅಗ್ರಹಾರಗಳಲ್ಲಿ ಸಹಬಾಳ್ವೆ ಮಾಡುತ್ತಿದ್ದರು. ಕೆಲವು ಸಾರಿ ಸ್ಪರ್ಧಾ ಮನೋಭಾವದಿಂದ ಮತ್ತು ಇನ್ನಿತರ ಕಾರಣಗಳಿಂದ ವೈಷಮ್ಯ ಮೂಡುತ್ತಿದ್ದುದು ಸಹಜವೇ ಆಗಿದ್ದಿತು. ಕೆಲವು ಸಂದರ್ಭಗಳಲ್ಲಿ ಅದು ಘರ್ಷಣೆಯ ಹಾದಿಯನ್ನು ಹಿಡಿಯುತ್ತಿದ್ದುದೂ ಉಂಟು. ಶೈವ - ವೈಷ್ಣವರಲ್ಲಿ ಸಮನ್ವಯದ ಒಂದು ಹಾದಿಯನ್ನು ತರಲೋ ಎಂಬಂತೆ 'ಹರಿಹರ' ಕಲ್ಪನೆ ಮೂಡಿ ಬಂದಿರಬೇಕು. ಕ್ರಿ.ಶ. 1113ರ ಮರಲೆ ಶಾಸನದಲ್ಲಿ 'ಹರಿಹರ' ಬೇರೆಯಲ್ಲ ಎಂದು ಒತ್ತಿ ಹೇಳಲಾಗಿದೆ. ಹರಿಹರ ಕ್ಷೇತ್ರದ ದೈವ ಎಷ್ಟು ಪ್ರಾಚೀನ ಎಂಬುದಕ್ಕೆ ಖಚಿತ ಆಧಾರಗಳು ಇಲ್ಲದೇ ಹೋದರೂ ಕ್ರಿ.ಶ. 1143ರ ಶಾಸನದಲ್ಲಿ ಹರಿಹರೇಶ್ವರ ದೇವರ ಹೆಸರು ಬಳಕೆಯಾಗಿದೆ.

ಹೊಯ್ಸಳ ವೀರ ನರಸಿಂಹನ ಪ್ರಧಾನಿ ಪೋಲಾಳ್ವ ದಂಡನಾಥ ಕ್ರಿ.ಶ. 1224ರಲ್ಲಿ 115 ಹೊನ್ನಕಳಶಗಳಿಂದ ಮೆರೆಯುವ ಹರಿಹರ ದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ. 1180 1224ರ ಮಧ್ಯದ ಅವಧಿಯಲ್ಲಿ ಮೊದಲಿದ್ದ ದೇವಸ್ಥಾನ ಬಿದ್ದು ಹಾಳಾಗಿ ಹೋಗಿರಬೇಕು. ಆ ಸ್ಥಳಕ್ಕೆ ಮೊದಲು ಕೂಡಲೂರು ಎಂಬ ಹೆಸರಿದ್ದು ಅನಂತರದಲ್ಲಿ 15-16 ನೆಯ ಶತಮಾನ ಗಳಿಂದೀಚೆಗೆ ಹರಿಹರ ಎಂಬ ಹೆಸರು ಬಳಕೆಗೆ ಬಂದಂತಿದೆ. ಹರಿಹರ ಸಮನ್ವಯ ಕಲ್ಪನೆ ಆ ಶಾಸನದಲ್ಲಿ ಸುಂದರವಾಗಿ ಮೂಡಿಬಂದಿದೆ.

> ಹರಿಯಿಂ ಬಿಟ್ಟು ದೈವಂ ಧರಣಿ ತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್
> ಹರನಿಂದಂ ಬಿಟ್ಟು ದೈವಂ ಧರಣಿ ತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್
> ನರರಾ ಸಂದೇಹಮಂ ಪಿಂಗಿಸಲತಿಶಯದಿಂಕೂಡಲೂರಲ್ಲಿ ಶೋಭಾ
> ಕರಮಪ್ಪಂತೊಂದೆ ರೂಪಂ ತಳೆದ ಹರಿಹರಂ ಕೂರ್ತು ರಕ್ಷಿಕೆ ನಮ್ಮಂ ||[35]

ಶೈವ ವೈಷ್ಣವರಲ್ಲಿ ಸಾಮರಸ್ಯ ತರುವ ಈ ಕಲ್ಪನೆ ಹೆಚ್ಚು ಪ್ರಾಚುರ್ಯ ಪಡೆದಂತಿದೆ [36] ಶಿವ, ವಿಷ್ಣು ಪ್ರಾರ್ಥನೆಗಳ ಪರ್ಯಾಯವಾಗಿ 'ಶ್ರೀ ಶಂಕರ ನಾರಾರಯಣ ನಮಃ' ಎಂದು ಅನೇಕ ಶಾಸನಗಳು ಪ್ರಾರಂಭವಾಗತೊಡಗಿದವು.[37] ಶಿವ ವಿಷ್ಣು ದೈವಗಳನ್ನು ಸಮನ್ವಯಗೊಳಿಸಿದ ಶಾಸನಗಳು ಕಂಡುಬರುತ್ತವೆ. ಹಾಗೆಯೇ ಒಂದೇ ದೇವಾಲಯದಲ್ಲಿ ಶಿವ, ವಿಷ್ಣು ವಿಗ್ರಹಗಳನ್ನು ಪ್ರತಿಷ್ಠೆ ಮಾಡಿಸಿದ ಉದಾಹರಣೆಗಳೂ ಕಂಡು ಬರುತ್ತವೆ. ಒಂದು ಶಾಸನ ಬಮ್ಮೆಯನಾಯಕ ಎಂಬುವವನನ್ನು 'ವೈಷ್ಣವ ಶಿವಾತ್ಮಕಂ'[38] ಎಂದು ಕರೆದಿದೆ.

---

35. (ರೈ) ಎಕ. 11 ದಾವಣಗೆರೆ 25 ಕ್ರಿ.ಶ| 1224
36. ಹರಿಹರ ಕಲ್ಪನೆಯನ್ನು ಬಸವಣ್ಣನವರು ತೀವ್ರವಾಗಿ ವಿರೋಧಿಸಿದ್ದಾರೆ 'ಹರಿಹರನೊಂದೆ ಎಂದಡೆ ಸುರಿಯವೆ ಬಾಯಲ್ಲಿ ಬಾಲ ಹುಳುಗಳು' ಬ.ವ. 542
37. ಎಸ್‌ಐಐ 9 (ಗ1) ಕೂಡ್ಲಿಗಿ 338 ಕ್ರಿ.ಶ| 1221; ಎಸ್ ಐಐ 9(1) ಹಡಗಲಿ 329 ಕ್ರಿ.ಶ. 1209
38. ಎಸ್ ಐಐ 20 ಸಿಂದಗಿ 178 ಕ್ರಿ.ಶ| 1192

ಅಗ್ರಹಾರಗಳನ್ನು ನಿರ್ಮಿಸುವಾಗ ಶೈವ - ವೈಷ್ಣವ ಧರ್ಮಗಳನ್ನು ಸಮನ್ವಯ ಗೊಳಿಸಲು ಅನೇಕ ಪ್ರಯತ್ನಗಳು ನಡೆದವು. ಅಗ್ರಹಾರಗಳನ್ನು ನಿರ್ಮಾಣ ಮಾಡುವ ಹಂತಗಳಲ್ಲೇ ಶಿವ, ವಿಷ್ಣುದೈವಗಳ ದೇವಾಲಯಗಳನ್ನು ನಿರ್ಮಿಸಿ ಭವಿಷ್ಯದ ಸಮನ್ವಯ ಹಾದಿಯನ್ನು ಹಾಕಿರುತ್ತಿದ್ದರು.[39] ಇಂಥ ಕಡೆಗಳಲ್ಲಿ ಧಾರ್ಮಿಕ ದೂರ ದೃಷ್ಟಿ ಕಂಡು ಬರುತ್ತದೆ.

ಕರ್ನಾಟಕದ ಧಾರ್ಮಿಕ ಇತಿಹಾಸದ ಚಿತ್ರವನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಆರಂಭಕಾಲ ಹೆಚ್ಚು ಸಮನ್ವಯ ಶೀಲವೂ - ಸಹ ಬಾಳ್ವೆಯ ಹಂಬಲದ ಕಡೆ ಒಲಿದಿರುವುದು ಕಂಡು ಬರುತ್ತದೆ. ಹನ್ನೊಂದನೆಯ ಶತಮಾನದನಂತರ ಅನ್ಯಧರ್ಮ ಸಹಿಷ್ಣುಬಾವ ಕ್ರಮೇಣ ಕಡಮೆಯಾಗುತ್ತಿರುವುದನ್ನು ಗುರುತಿಸಬಹುದು. ಮತೀಯವೈಷಮ್ಯ, ಅಸಹನೆಗಳು ಹನ್ನೆರಡನೆಯ ಶತಮಾನದಲ್ಲಿಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾದುವಲ್ಲ. ಅದಕ್ಕೆ ನೆರೆ ನಾಡುಗಳ ಪ್ರಭಾವ ಎಷ್ಟು ಕಾರಣ, ಸ್ಥಳೀಯ ಒತ್ತಡಗಳು ಎಷ್ಟು ಪ್ರೇರಕ ಎಂಬ ಅಂಶಗಳೂ ಗಣನೆಗೆ ಬರಬೇಕಾಗಿದೆ. ಆರ್.ಸಿ. ಮಜುಂದಾರ್ ಅವರ ಅಬಿಪ್ರಾಯದಂತೆ ಅಷ್ಟು ಹೊತ್ತಿಗೆ ಇಡೀ ಭಾರತಾದ್ಯಂತ ಸಾಮಾನ್ಯವಾಗಿ ಬೌದ್ಧಿಕ ಮತ್ತು ಸಾಂಸ್ಕೃತಿಕ ಇಳಿಮುಖ ಆರಂಭವಾಗಿತ್ತು. ಅವು ಹೇಗೆ ಪರಸ್ಪರ ಪ್ರಭಾವ ಬೀರಿದ್ದವು ಎಂಬುದನ್ನು ನಿರ್ಧರಿಸುವುದು ಕಠಿಣ. ಆದರೆ ಯಾವುದೇ ಕಾರಣವಾಗಿರಲಿ ಮತ್ತು ಪ್ರತಿ ಕ್ರಿಯೆಯಾಗಿರಲಿ ಒಟ್ಟಿನಲ್ಲಿ ಸಭ್ಯ ಆದರ್ಶಗಳ ಮತ್ತು ಲೈಂಗಿಕ ನೀತಿಯ ಅದಃಪತನಗಳು ಧಾರ್ಮಿಕ ಆಚರಣೆಗಳ ಮೂಲಕ ಉಂಟಾಗಿದ್ದವು.[40]

ಕರ್ನಾಟಕದ ಮಣ್ಣಿನ ಗುಣದಿಂದ ಸಹಜವಾಗಿ ಮೂಡಿಬಂದಂತಿರುವ ಉದಾರವಾದಿ ಮನೋಭಾವ, ಪರಧರ್ಮ ಸಹಿಷ್ಣುತೆ, ಸಹಬಾಳ್ವೆ ಆರಂಭಕಾಲದಿಂದಲೂ ಶಕ್ತಿಯುತವಾಗಿ ಬೆಳೆದು ಬಂದದ್ದರಿಂದ ತೀರಾ ಅತಿರೇಕದ ಧಾರ್ಮಿಕ ಘರ್ಷಣೆಗಳು ನಡೆದಂತಿಲ್ಲ. ಘರ್ಷಣೆಯ ಹಾದಿಗಿಂತಲೂ ಶಾಂತಿಯುತ ಸಮನ್ವಯ ಪಥ ಈ ನಾಡಿನ ಜನರದಾಗಿದೆ.

---

39. (ರೈ) ಎ.ಕ. 5 ಚನ್ನರಾಯಪಟ್ಟಣ 197 ಕ್ರಿ.ಶ. 1223

40. G.S. Dixit : ' Social and Religious conditions of Karnataka before Basava' Sri Basaveswara Commemoration volume p131 Quoted from R.C. Majumdar : Struggle for Empire p. 400.

ವೀರಶೈವ ಸಂಪದ

ವೀರಶೈವ

ಶ್ರೀಮನ್ನಿರಂಜನ ಪ್ರಣವಸ್ವರೂಪ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು, ಸಂಸ್ಥಾನಮಠ, ಮುಂಡರಗಿ

ವೀರಶೈವ ಇದೊಂದು ಮಹಾನ್ ಧರ್ಮ. ಇದು ಜಾತಿ ವಾಚಕವಲ್ಲ; ತತ್ತ್ವ ನಿಷ್ಠವಾದುದು. ಜಾಗತಿಕ ಧರ್ಮಗಳಲ್ಲಿ ವಿಶ್ವಮಾನ್ಯ ಮೌಲ್ಯಗಳನ್ನು ಹೊಂದಿದೆ ವೀರಶೈವವು. ಇದು ಪ್ರಾಚೀನಧರ್ಮ. ವೀರಶೈವವು ಅನಾದಿ ಸಂಸಿದ್ಧವೆಂಬುದನ್ನು ಕ್ರಿ. ಶ. 1904ರಲ್ಲಿ ಸಮಾವೇಶಗೊಂಡ ಅಖಿಲ ಭಾರತ ವೀರಶೈವ ಮಹಾಸಭೆಯು ಸರ್ವಾನುಮತದಿಂದ ಒಪ್ಪಿಕೊಂಡಿದೆ. ಈ ಕುರಿತು ಪ್ರಪ್ರಥಮ ನಿರ್ಣಯ ಹೀಗಿದೆ-ವೀರಶೈವ ಮತವು ನಿಗಮಾಗಮೋಪನಿಷದ್ ಭಾಷ್ಯ ಪ್ರತಿಪಾದಿತ ತತ್ತ್ವದಿಂದ ಅನಾದಿ ಸಂಸಿದ್ಧವೆಂತಲೂ, ಶ್ರೀ ಬಸವೇಶ್ವರ ದೇವರು ಈ ಮತವನ್ನು ಪ್ರಚುರ ಪಡಿಸಿದರೇ ಹೊರ್ತು, ಸ್ಥಾಪಕರಲ್ಲವೆಂಬುದು ಶಿಲಾಲೇಖಾದಿ ಪ್ರಮಾಣಗಳಿಂದ ಸಿದ್ಧವಾಗುತ್ತದೆಂತಲೂ ಈ ಮಹಾಸಭೆಯವರು ಖಂಡಿತವಾಗಿ ಹೇಳುತ್ತಾರೆ. ಈ ಠರಾವನ್ನು ವಿಶಾಲ ಮನಸ್ಸಿನಿಂದ ಮನ್ನಿಸುವಲ್ಲಿ ವೀರಶೈವರಿಗೆ ಹಿತವಿದೆ; ಸುಖವಿದೆ.

ಇಪ್ಪತ್ತನೆ ಶತಮಾನ ಮುಗಿಯುತ್ತಿದ್ದು ಇಪ್ಪತ್ತೊಂದನೆ ಶತಮಾನಕ್ಕೆ ಪದಾರ್ಪಣ ಮಾಡುತ್ತಿದ್ದರೂ ವೀರಶೈವ ಧಾರ್ಮಿಕ ಸಂದೇಹ ಸಂಶಯಗಳು ಮಾನವನ ಕಲ್ಯಾಣಕ್ಕೆ ಕಾರಣವಾಗಲಾರವು. ಅದರಲ್ಲೂ ವೀರಶೈವರ ಅನೈಕ್ಯತೆ ವಿಶೇಷವಾಗಿ ವ್ಯಕ್ತವಾಗುತ್ತಿದೆ. ವಸ್ತುತಃ ಶ್ರದ್ಧಾವಂತಿಕೆ ಧರ್ಮದ ಅಡಿಗಲ್ಲು. ಮುಖ್ಯವಾಗಿ ವೀರಶೈವ ಧರ್ಮಕ್ಕೆ ಶ್ರದ್ಧಾ ಭಕ್ತಿಯೆ ತಳಪಾಯ. ಶ್ರದ್ಧೆ ಇಂದಲೆ ಷಟ್‌ಸ್ಥಲ ಮಾರ್ಗಭದ್ರವಾಗುವುದು. ವೀರಶೈವರು ಅಂಧ ಶ್ರದ್ಧಾಳುಗಳಲ್ಲ; ವೈಚಾರಿಕ ನಿಲವುಳ್ಳವರು. ಹೀಗಿದ್ದರೂ ಇತ್ತೀಚಿಗೆ ವೀರಶೈವ ಧರ್ಮದ ಬಗೆಗೆ ಸಂದೇಹಗಳನ್ನು ವ್ಯಕ್ತಪಡಿಸುತ್ತಿರುವುದು ಪ್ರಜ್ಞಾವಂತರಿಗೆ ಉಚಿತವಾದುದಲ್ಲ.

ಜಿಲ್ಲಾನ್ಯಾಯಾಧೀಶರ ಈ ಮಾತುಗಳು ಮನನೀಯವಾಗಿವೆ-''ವೀರಶೈವಕ್ಕೊಂದು

---

1. ಅ.ಭಾ.ವೀ.ಮಹಾ ಸಭೆಯ ಪ್ರಥಮ ರಿಪೋರ್ಟ ೧೯೦೪

ಇತಿಹಾಸವಿದೆ. ಆದರೆ ಅಧ್ಯಯನವಿಲ್ಲ. ಅದರದೇ ಒಂದು ವಚನ ಶಾಸ್ತ್ರವೆಂಬ ಸಂಹಿತೆ ಇದೆ, ವ್ಯವಸ್ಥೆ ಇಲ್ಲ. ಸಂಸ್ಕೃತಿ ಇದೆ, ಸಂವಹನ ಸಾಧ್ಯತೆಗಳು ಸಾಕಷ್ಟು ಇಲ್ಲ. ದರ್ಶನವಿದೆ, ಮಾರ್ಗದರ್ಶನವಿಲ್ಲ. ಪರಂಪರೆ ಇದೆ, ಪರಿಣಾಮವಿಲ್ಲ. ಅನುಭಾವವಿದೆ, ಅನುಷ್ಠಾನವಿಲ್ಲ. ಸಿದ್ಧಾಂತವಿದೆ, ಸಾಧನೆ ಸಿದ್ಧಿಗಳಿಲ್ಲ. ಸಮಾಜವಿದೆ, ಸಂಘಟನೆ ಇಲ್ಲ. ಈ ಎಲ್ಲ ಇಲ್ಲಗಳನ್ನು ಇದೆ ಎಂದಾಗಿಸಬೇಕೆಂಬ ಹಂಬಲಮಾತ್ರ ಇಂದಿನ ವೀರಶೈವ ಸಮಾಜಕ್ಕೆ ಬೆಳೆದುಬರಬೇಕಾಗಿದೆ.''[2] ವೀರಶೈವಧರ್ಮಕ್ಕೆ ಬಹುಪ್ರಾಚೀನತೆಯಿದ್ದರೂ ಅಧ್ಯಯನದ ಅಭಾವದಿಂದಾಗಿ ಇತಿಹಾಸ ರೂಪುಗೊಳ್ಳಲಿಲ್ಲ. ವಚನ ಶಾಸ್ತ್ರಕ್ಕೆ ಮೂಲವೆನಿಸಿದ ವೇದಾಗಮ ಶಾಸ್ತ್ರ ಸಂಹಿತೆಯಿದ್ದರೂ ತೌಲನಿಕವಾಗಿ ಸಂಶೋಧಿಸುವ ಸೂಕ್ಷ್ಮತೆ ಮರೆಯಾಗಿದೆ. ಹರಪ್ಪಾ ಮೊಹೆಂಜೋದಾರೋ ನಗರಗಳ ಅಗೆತಗಳಲ್ಲಿ ಲಭ್ಯವಿರುವ ಅವಶೇಷಗಳಿಂದ ಶೈವ ಸಂಸ್ಕೃತಿಯಲ್ಲದೆ ವೀರಶೈವ ಸಂಸ್ಕೃತಿಯೂ ವೇದ್ಯವಾಗುತ್ತಿದೆ. ಅಲ್ಲಿ ಇಷ್ಟಲಿಂಗಗಳು ದೊರೆತಿವೆಯಲ್ಲದೆ ಶಿವಯೋಗ ಸಾಧನೆಯ ಪ್ರಕ್ರಿಯೆಂತೂ ಅವಗತವಾಗುತ್ತದೆ. ಅಲ್ಲಿಯ ಚಿತ್ರಲಿಪಿಗಳಲ್ಲಿ ಮೀನ್‌ಕಣ್, ಮುಂಕಣ್, ಓರ್‌ಕಣ್ ಪದಗಳು ಅಚ್ಚಕನ್ನಡದವುಗಳಾಗಿದ್ದು ಶಿವಯೋಗ ವಿಚಾರವನ್ನೇ ತಿಳಿಸುತ್ತವೆ ಒಂದು ಉಲ್ಲೇಖದಲ್ಲಿ 'ಬಾನ್ ತೇರ್ ಓರ್‌ಮೀನ್ ಕಣ್‌ವೇಳ್', ಅಂದರೆ ಒಬ್ಬ ಮೀನ್ ಕಣ್ಣಿನವನು ಬಾನ್ ಅರ್ಥಾತ್ ಆಗಸವನ್ನು ಮುಟ್ಟಿ ಆನಂದವನ್ನು ಹೊಂದುವನು ಎಂದಾಗಿ ಅನಿಮಿಷದೃಷ್ಟಿಯ ವಿಚಾರವೇ[3] ಇಲ್ಲಿದೆ. ಇದು ವೀರಶೈವರ ಉನ್ನತ ಸಾಧನೆ ಸಿದ್ಧಿಯ ಸ್ವರೂಪವನ್ನು ತಿಳಿಸುತ್ತದೆ. ಹೀಗೆ ವೀರಶೈವ ದರ್ಶನ, ಪಂರಪರೆ ಅನುಭಾವ, ಸಿದ್ಧಾಂತಗಳನ್ನೊಳಗೊಂಡ ಸಮಾಜವಿದ್ದರೂ ಸಾಧನೆ-ಸಿದ್ಧಿ-ಸಂಘಟನೆಗಳ ಅಭಾವದಿಂದಾಗಿ ವೀರಶೈವವು ಸಂಕುಚಿತಗೊಳ್ಳಹತ್ತಿದೆ. ವೀರಶೈವ ಪದವನ್ನೇ ಅಳಿಸಿಹಾಕ ಹೊರಟ ಮಹಾಶಯರು ಇಲ್ಲದಿಲ್ಲ. ಆದರೆ ಅದೆಲ್ಲ ಅವರ ಮಟ್ಟವನ್ನು ಮಾತ್ರ ತೋರಿಸುತ್ತದೆ.

ವೀರಶೈವ ಧರ್ಮವು ಜೀವನದಿ ಯಿದ್ದಂತೆ ಜೀವಂತಧರ್ಮ. ಇದು ಶೈವ ಧರ್ಮದಂತೆ ನಿಸರ್ಗ ಸಹಜವಾಗಿ ಬೆಳೆದು ಬಂದಿದೆ. ಶೈವಧರ್ಮವು ಎಂದು ಉದಿಸಿತೋ ಅಂದೇ ಲಿಂಗಧಾರಣವು ಬಂದಿತೆಂದು ದೃಢವಾಗಿ ತಿಳಿಯಬೇಕು. ಶಿವಾಗಮಗಳಲ್ಲಿ ಶೈವ ವೀರಶೈವ ಎರಡನ್ನೂ ಅನುಸರಿಸಲಿಕ್ಕೆ ಭಿನ್ನ ಭಿನ್ನಯೋಗ್ಯತೆಯವರಿಗೆ ಹೇಳಿದಂತೆ ಇರುವುದೆ ಹೊರತು, ಮೊದಲೇ ಶೈವ ಮತ್ತು ಆ ಮೇಲೆ ವೀರಶೈವಾಯಿತು ಎಂಬ ಬರವಣಿಗೆಯು ಎಲ್ಲಿಯೂ ತೋರಿಬರುವುದಿಲ್ಲ'',[4] ಎಂಬ ಪಂಡಿತರ ಅಭಿಪ್ರಾಯ ವಿಚಾರಾರ್ಹವಾಗಿದೆ. ಆಗಮಗಳ ಅಧ್ಯಯನದಿಂದ ಈ ಮಾತು ಸುಸ್ಪಷ್ಟವಿದೆ. ಈ ವಿಚಾರಗಳನ್ನು 'ವೀರಶೈವ ಧರ್ಮ ಒಂದು ಅಧ್ಯಯನ'ಎಂಬ ಕೃತಿಯಲ್ಲಿ ಕಾಣಬಹುದು. ಜೀವಂತ ನದಿಯಾದರೂ ಎಲ್ಲ ಕಾಲದಲ್ಲಿ

---

2. ವೀರಶೈವದರ್ಶನ ಸಾರ ಲೇ : ಬಿ. ಎಸ್. ಪಾಟೀಲ, ೧೯೯೪

3 ಸಿದ್ಧಗಂಗಾ ಶ್ರೀ: ಸಿದ್ಧಂಗಾ ಮಠದ ಶ್ರೀಗಳ ಅಭಿನಂದನಗ್ರಂಥ ನೋಡಿ

4. ಲಿಂಗಧಾರಣೋಪನಿಷತ್ ಪ್ರಾರಂಭಿಕ ಮಾತು, (ಸಂ) ಚನ್ನಮಲ್ಲಿಕಾರ್ಜುನ

ಎಲ್ಲವಾರ್ಗದಲ್ಲಿ ಒಂದೇ ಸಮನಾಗಿ ಪ್ರವಹಿಸುವುದಿಲ್ಲ. ಒಮ್ಮೆ ಶಾಂತವಾಗಿ, ಮತ್ತೊಮ್ಮೆರಭಸವಾಗಿ, ಮಗದೊಮ್ಮೆ ಗುಪ್ತಗಾಮಿನಿಯಾಗಿ ಹರಿಯುವಂತೆ ವೀರಶೈವವಾದರೂ ವಿಭಿನ್ನ ಅವಸ್ಥೆಯನ್ನು ಹೊಂದಿರಲು ಸಾಕು. ಬಹುಶಃ ವೀರಶೈವವು ವೇದಾಗಮಗಳ ಪೂರ್ವಕಾಲದ್ದು. ಮಹಾಜ್ಞಾನಿಗಳಾದ ಅಲ್ಲಮ ಪ್ರಭುದೇವರು ತಮ್ಮ ಅನುಭಾವ ಗೀತೆಯಲ್ಲಿ- "ವೇದದ ಮೊದಲಿನ ಮೂಲವಿದು" ಎಂದೇ ವೀರಶೈವ ಸಂಸ್ಕೃತಿಯನ್ನು ಗುರುತಿಸಿದ್ದಾರೆ. ಭಕ್ತಿ ಭಂಡಾರಿ ಬಸವಣ್ಣನವರು.

> ಹರನು ಮೂಲಿಗನಾಗಿ ಪುರಾತನರೊಳಗಾಗಿ
> ಬಳಿ ಬಳಿಯಲು ಬಂದವ"[6]

ಎಂದು ತಮ್ಮ ಪರಂಪರೆಯನ್ನು ಹೇಳಿಕೊಂಡಿದ್ದಾರೆ. 'ಬಳಿ ಬಳಿಯಲು' ಎಂದರೆ ವಂಶ ಹರನ ವಂಶದಲ್ಲಿ ಬಂದವನೆಂಬುದು ಸ್ಪಷ್ಟವಿದೆ. ವೀರಶೈವ ಧರ್ಮದ ಮೂಲಿಗ ಅಥವಾ ಮೂಲಪುರುಷ 'ಹರ' ಅಥವಾ 'ರುದ್ರ' ಎಂಬುದನ್ನು ಅವರ ವಚನಗಳಲ್ಲಿ ಉದಾಹರಿಸಿದ್ದಾರೆ.

ಶ್ವೇತಾಶ್ವತರೋಪನಿಷತ್ತಿನಲ್ಲಿ ಶಿವ ಮತ್ತು ರುದ್ರ ಪದಗಳು ಒಂದೇ ಅರ್ಥದಲ್ಲಿ ಬಳಕೆಯಾಗಿವೆ. ಉಪನಿಷತ್‌ಗಳಲ್ಲಿ ರುದ್ರ ಶಬ್ದವೇ ಹೆಚ್ಚು ಬಂದಿದೆ. ಅದಕ್ಕಾಗಿಯೇ ಬಸವಣ್ಣನವರು ರುದ್ರ ಪುರುಷನನ್ನು ತಮ್ಮ ವಚನಗಳಲ್ಲಿ ಸ್ತುತಿಸಿದ್ದಾರೆ. ಗೌರವಿಸಿದ್ದಾರೆ.

> "ಏಕ ಏವ ರುದ್ರೋ ನದ್ವಿತೀಯ
> ಎಂದು ನಂಬುವುದು ಕಾಣಿರಣ್ಣಾ"[7]

ರುದ್ರನ ಅದ್ವಿತೀಯತ್ವವನ್ನು ಅವರ ೫೩೫, ೫೨೭, ೫೪೬, ೮೭೫-ಈ ವಚನಗಳಲ್ಲಿ ಅವಲೋಕಿಸಬಹುದು. ಚನ್ನಬಸವಣ್ಣನವರು ಸಹ ತಮ್ಮ ೧೫೮ ನೇ ವಚನದಲ್ಲಿ 'ಶೃತಿ ಪುರಾಣಾಗಮ ಇತಿಹಾಸಗಳಿಂದ ಶಿವನೇ ಅಧಿಕನೆಂದರಿದು ಸಕಲ ಋಷಿ ಜನಂಗಳು ದೇವರ್ಕಳು ರುದ್ರನಿಂದ ದೀಕ್ಷೆಪಡೆದು ಲಿಂಗಧಾರಣ ಮಾಡಿದ್ದನ್ನು ಪ್ರತಿಪಾದಿಸಿದ್ದಾರೆ. ಮೋಳಿಗೆಯ ಮಾರಯ್ಯನವರು. 'ರುದ್ರತತ್ವ ಲಿಂಗ ಮೂರ್ತಿಯಾಗಿ ಎಂದೇ ನಿರೂಪಿಸಿದ್ದಾರೆ. ಅಂದರೆ ರುದ್ರ ಹಾಗೂ ಇಷ್ಟಲಿಂಗ ಪದಗಳ ಪರಿಭಾಷೆಯ ಅರ್ಥ ಒಂದೇ ತೆರನಾಗಿದೆ. ದುಃಖ ಗಳನ್ನು ದೂರಮಾಡುವವನು ರುದ್ರನೆನಿಸಿದರೆ, ಅನಿಷ್ಟಗಳನ್ನು ಪರಿಹರಿಸಿ ಇಷ್ಟಾರ್ಥಗಳನ್ನು ಕರುಣಿಸುವುದೇ ಇಷ್ಟಲಿಂಗವೆನಿಸಿದೆ. ಈ ವಿಚಾರದಲ್ಲಿ ನಮ್ಮ ಶ್ರೀ ರುದ್ರ ಹಾಗೂ ಇಷ್ಟಲಿಂಗಾರ್ಚನೆ ಕೃತಿಯನ್ನು ಪರಾಮರ್ಶಿಸಬೇಕು.

---

5. ವೀರಶೈವ ಧರ್ಮ ಒಂದು ಅಧ್ಯಯನ :ಶ್ರೀ ಸನ್ನಿಧಿಪ್ರಕಾಶನ, ಮೂರು ಸಾವಿರ ಮಠ ಹುಬ್ಬಳ್ಳಿ, ೧೯೯೫
6. ಬ. ಷ. ವ. ೩
7. ಅದೇ, ೫೨೯

ವೀರಶೈವವು ಪ್ರಾಯೋಗಿ ಧರ್ಮ. ನುಡಿಯ ಬ್ರಹ್ಮನನ್ನು ನಡೆಯಲ್ಲಿ ತಂದ ಧರ್ಮ. ಶ್ರೀ ರುದ್ರ ಸೂಕ್ತವೂ ಸಹ ಯಾ ತೇ ರುದ್ರ ಶಿವಾ ತನೂರಘೋರಾ ಪಾಪಕಾಶಿನೀ 'ಅಂದರೆ' ಲಿಂಗಧಾರಣ ಮಾಡುವುದರಿಂದ ಶರೀರವು ಮಂಗಲಕರವೂ ರುದ್ರ ಸ್ವರೂಪವೂ ಎನಿಸಿ ನಡೆದಾಡುವ ಶಿವಾಲಯವೆನಿಸುವುದು. ಅದಕ್ಕಾಗಿ ವೀರಶೈವವು ಸರ್ವೋತ್ತಮವೆನಿಸಿದೆ ಎಂದಿದೆ. ಪಾರಮೇಶ್ವರಾಗಮದಲ್ಲಿ ವೀರಶೈವ ಸರ್ವೋತ್ತಮತೆಯನ್ನು ಕಾಣಬಹುದು. ಇದರಲ್ಲಿ ಭಾರತೀಯ ದರ್ಶನಗಳನ್ನು ಪ್ರತಿಪಾದಿಸಿ ಕೊನೆಗೆ ವೀರಶೈವದ ಶ್ರೇಷ್ಠತೆಯನ್ನು ವಿವರಿಸಿದ್ದು ಮಹತ್ವದ ಸಂಗತಿಯಾಗಿದೆ.

ನಿಜಗುಣರು ಅನುಪಮಜ್ಞಾನಿಗಳು ವಿಶ್ವಸಾಹಿತ್ಯದಲ್ಲಿ ಮಹಾಕವಿ, ಯೋಗಿ, ಲೌಕಿಕ ಪಾರಮಾರ್ಥಿಕ ಜ್ಞಾನಿ, ಅನುಭಾವಿಗಳು. ಇವರು ವಿವೇಕ ಚಿಂತಾಮಣಿಯೆಂಬ ಕನ್ನಡದ ವಿಶ್ವಕೋಶವನ್ನು ರಚಿಸಿದರು. ಇದರ ಪ್ರಥಮ ಪರಿಚ್ಛೇದದಲ್ಲಿ ಭಾರತೀಯ ವೇದಾಗ ಮೋಪನಿಷತ್ತುಗಳ ಪರಿಚಯದೊಂದಿಗೆ ಚಾತುರ್ವರ್ಣಗಳನ್ನು, ಎಲ್ಲ ದರ್ಶನಗಳ ವಿಚಾರಗಳನ್ನು ವಿಸ್ತಾರವಾಗಿ ಪ್ರತಿಪಾದಿಸಿ ಮೋಕ್ಷಕ್ಕೆ ಕಾರಣವಾದ ಸಮಾಧಿಯ ಸ್ವರೂಪವನ್ನು ಜೀವನ್ಮುಕ್ತಿ ಹಾಗೂ ಜೀವನ್ಮುಕ್ತ ಲಕ್ಷಣ, ವಿದೇಹಕೈವಲ್ಯಾಂತವಾದ, ಇತ್ಯಾದಿ ವಿಚಾರಗಳನ್ನು ವಿವರಿಸಿ ದ್ವಿತೀಯ ಪರಿಚ್ಛೇದದಲ್ಲಿ 'ಶಿವಸಿದ್ಧಾಂತ' ಪದ್ಧತಿಯನ್ನು ವಿವರವಾಗಿ ನಿರೂಪಿಸಿದ್ದಾರೆ. ಶೈವಧರ್ಮಕ್ಕೆ ಮೂಲವೆನಿಸಿದ ಆಗಮಗಳ ಅವತರಣ, ಭೇದ ಸಂಖ್ಯೆ, ಪ್ರತಿಪಾದ್ಯ ವಿಚಾರ, ಆಗಮಪಾದಗಳ ವಿಷಯ, ಶೈವಭೇದ ಪ್ರಭೇದಗಳು, ಶೈವರ ಲಕ್ಷಣಗಳು, ಶೈವರ ಆಚಾರ, ವಿಭೂತಿ ರುದ್ರಾಕ್ಷಿ ಮಂತ್ರ, ನ್ಯಾಸ ಜಪವಿಧಾನಾದಿ ವಿಚಾರಗಳನ್ನು ಪ್ರತಿಪಾದಿಸಿ ಬಳಿಕ ವೀರಶೈವರ ವಿಚಾರವು ನಿರೂಪಿಸಲ್ಪಟ್ಟಿರುತ್ತದೆ. ಇದರಿಂದ ನಿಜಗುಣರು ಭಾರತೀಯ ದರ್ಶನಗಳನ್ನು ಶೈವ ಮಾರ್ಗವನ್ನು ಪೂರ್ವಪಕ್ಷವಾಗಿರಿಸಿ, ವೀರಶೈವ ಸಿದ್ಧಾಂತವನ್ನು ಉತ್ತರ ಪಕ್ಷವಾಗಿ ಸಿದ್ಧಾಂತಗೊಳಿಸಿದ್ದಾರೆ.''[9] ಯಾವ ಧರ್ಮದವರಾಗಲಿ, ತಮ್ಮ ಸಿದ್ಧಾಂತದ ವೈಶಿಷ್ಟ್ಯವನ್ನು ವಿವರಿಸುವ ಪೂರ್ವದಲ್ಲಿ ಇತರ ದರ್ಶನಗಳ ಜ್ಞಾನ ಮಾಡಿಕೊಳ್ಳುವುದು ವಿಚಾರವಂತರ ಕರ್ತವ್ಯವೇ ಆಗಿದೆ. ಪಾರಮೇಶ್ವರಾಗಮದ ಜಾಡನ್ನೇ ನಿಜಗುಣರು ಪಾಲಿಸಿದಂತಿದೆ. ನಿಜಗುಣರು ಆಗಮ ಅಮ್ನಾಯಗಳೆರಡನ್ನು ಆಧಾರವಾಗಿವುಳ್ಳ ಸ್ಮೃತಿ ಇತಿಹಾಸ ಪುರಾಣಗಳ ಅನುಸಾರವಾಗಿ ವಿವೇಕ ಚಿಂತಾಮಣಿಯನ್ನು ರಚಿಸಿರುವುದಲ್ಲದೆ ಅನುಭವಿಗಳು ಹೌದೆನ್ನುವಂತೆ ತಮ್ಮ ಸ್ವಾನುಭಾವವನ್ನು ಪ್ರತಿಪಾದಿಸಿದ್ದಾರೆ. ಸ್ವಕಪೋಲ ಕಲ್ಪಿತವಾದ ಸಂಗತಿ ಇಲ್ಲದಂತೆ ಎಚ್ಚರವಹಿಸಿರುವುದನ್ನು ಸ್ವತಃ ಅವರೇ ಹೇಳಿರುವರು. ಇದನ್ನೆಲ್ಲ ಗ್ರಹಿಸಿದರೆ ವೀರ ಶೈವ ಸಿದ್ಧಾಂತ ಸಂಸ್ಕೃತಿಯು ಪ್ರಾಚೀನ ಮತ್ತು ತಾತ್ವಿಕ

---

1. ಶ್ರೀ ರುದ್ರ ಪ್ರಥಮಾನುವಾದದಲ್ಲಿ
9. ಶ್ರೀ ಮನ್ನಿಜಗುಣರು ಹಾಗೂ ವೀರಶೈವ ಸಿದ್ಧಾಂತ : ಲೇ. ಶ್ರೀ ಸನ್ನಿಧಿ- ಪುಟ ೧೧-೧೨

ವಾದುದೆಂಬುದು ಸ್ವತಃ ಸಿದ್ಧವಾಗುತ್ತದೆ ಆದಕ್ಕಾಗಿ ಅಖಿಲ ಭಾರತ ವೀರಶೈವ ಮಹಾಸಭೆಯವರು ವೀರಶೈವವನ್ನು ಅನಾದಿ ಸಂಸಿದ್ಧವೆಂದೇ ಕರೆದರು.

ವೀರಶೈವವು ಪರಿಪೂರ್ಣ ಧರ್ಮ

ಅನಾದಿ ಸಂಸಿದ್ಧವಾದ ವೀರಶೈವವು ಜಾಗತಿಕ ಮೌಲ್ಯಗಳನ್ನು ಒಳಗೊಂಡಿದೆ. ಪರಿಪೂರ್ಣ ಧರ್ಮ ದರ್ಶನದಲ್ಲಿರಬೇಕಾದ ೧. ಸಿದ್ಧಾಂತ, ೨. ಸಾಧನೆ, ೩. ದರ್ಶನ ೪. ಸಂಸ್ಕಾರ ೫ ಸಮಾಜಶಾಸ್ತ್ರ ೬. ನೀತಿ ಶಾಸ್ತ್ರ ೭. ಅರ್ಥಶಾಸ್ತ್ರ ೮. ಸಂಸ್ಕೃತಿ ೯. ಪಂರಪರೆ, ೧೦. ಸಾಹಿತ್ಯ ೧೧. ಧರ್ಮಗುರು ಈ ಹನ್ನೊಂದು ಅಂಶಗಳನ್ನು ತನ್ನಲ್ಲಿರಿಸಿಕೊಂಡಿದೆ. ವೀರಶೈವವು ಹೀಗಿದ್ದರೂ ಇತ್ತೀಚೆಗೆ ಈ ಧರ್ಮ ೧೨ನೇ ಶತಮಾನದ್ದೆಂದು ವಾದಿಸುವುದು ಸರಿಯೆನಿಸುವುದಿಲ್ಲ. ವೀರಶೈವವು ಅಷ್ಟಾವರಣವೇ ಅಂಗ, ಪಂಚಾಚಾರ ಪ್ರಾಣ, ಷಟ್‌ಸ್ಥಲವೇ ಆತ್ಮವೆಂಬ ತಾತ್ವಿಕ ಹಿನ್ನೆಲೆಯುಳ್ಳುದು. ತತ್ವಪ್ರಧಾನವಾದ ಈ ಧರ್ಮವು ವ್ಯಕ್ತಿನಿಷ್ಠವಲ್ಲ; ತತ್ವನಿಷ್ಠವಾಗಿದೆ. ತತ್ವಗಳನ್ನು ಅರಿತು ಆಚರಿಸಿ ಅಳವಡಿಸಿಕೊಳ್ಳುವ ಘನತೆ ವೀರಶೈವದಲ್ಲಿದೆ.

ಭಾರತೀಯ ಧರ್ಮಗಳೆನಿಸಿದ ಜೈನ, ಬೌದ್ಧ, ಮಹಮ್ಮದೀಯ, ಕ್ರೈಸ್ತ ಸೀಖ ಮೊದಲಾದವುಗಳನ್ನು ಸ್ಥಾಪಿಸಿದ ಧರ್ಮಸ್ಥಾಪಕರ ಹೆಸರಿನ ಮೇಲೆ ಆಯಾ ಧರ್ಮಗಳು ರೂಪುಗೊಂಡು ಬೆಳೆದಿವೆ. ಜಿನನಿಂದ ಸ್ಥಾಪಿಸಲ್ಪಟ್ಟಿದ್ದು ಜೈನವಾದರೆ, ಬುದ್ಧನಿಂದ ರೂಪಿತವಾದುದು ಬೌದ್ಧವೆನಿಸಿದೆ. ಮಹಮ್ಮದ ಪೈಗಂಬರನಿಂದ ಸ್ಥಾಪಿಸಲ್ಪಟ್ಟಿದ್ದು ಮಹಮದೀಯ ಧರ್ಮವೆನಿಸಿದೆ. ಕ್ರಿಸ್ತನಿಂದ ಬಂದುದು ಕ್ರೈಸ್ತವಾಗಿದೆ. ಆದರೆ ಗುರು ನಾನಕರಿಂದ ನಿರ್ಮಾಣವಾದ ಧರ್ಮವು ಸಿಖ್ಖಧರ್ಮವೆನಿಸಿದ್ದು ವಿಶೇಷ. ಸಿಖ್ಖರು ಧರ್ಮಸಿಂಹರಾಗಿ ಬಾಳುವ ಕಲೆಯನ್ನು ಅಳವಡಿಸಿಕೊಂಡು ಬಂದರು. ವೀರಶೈವ ಧರ್ಮವು ಬಹು ಪ್ರಾಚೀನವೆಂದು ತಿಳಿಸಿದಂತೆ ಧರ್ಮಸಂಸ್ಥಾಪಕ ಅಥವಾ ವೀರಶೈವಧರ್ಮೋತ್ಪಾದಕನು 'ಪರಶಿವ' ನೆಂಬುದು ಆಗಮಗಳಿಂದ ವೇದ್ಯವಾಗುತ್ತದೆ. ಆದರೆ ಕೆಲವರು 'ಬಸವಣ್ಣನವರಿಂದ ಈ ಧರ್ಮ ಸ್ಥಾಪಿತವಾಯಿತೆಂದು ವಾದಿಸಿದರೆ ಹಲವರು ಪಂಚಾಚಾರ್ಯರಿಂದ ಸಂಸ್ಥಾಪಿಸಲ್ಪಟ್ಟಿತೆಂದು ಮಂಡಿಸುತ್ತಾರೆ. ಜಿನ-ಬುದ್ಧರಿಂದ ಆದುದು ಜೈನ ಬೌದ್ಧವೆಂದು ಖ್ಯಾತಿವೆತ್ತಂತೆ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟಿದ್ದರೆ ಬಸವಧರ್ಮವೆಂದು ಕರೆಯಲ್ಪಡುತ್ತಿತ್ತು. ಇತ್ತೀಚೆಗೆ ಆ ಹೆಸರು ಕೇಳಬರಹತ್ತಿದೆ. ಪಂಚಾಚಾರ್ಯರಿಂದ ನಿರ್ಮಿಸಲ್ಪಟ್ಟಿದ್ದರೆ ಪಂಚಾಚಾರ್ಯಧರ್ಮವೆಂದಾಗಬೇಕಿತ್ತು. ಪರಶಿವನಿಂದ ಉತ್ಪಾದಿಸಲ್ಪಟ್ಟುದು ವೀರಶೈವ ವೆನಿಸಿದ್ದರಲ್ಲಿ ಅರ್ಥವಿದೆ.

ಆದರೆ ಕೆಲವರು ಭಾರತೀಯ ಸಂವಿಧಾನ ಮಾನ್ಯತೆಗಾಗಿ ಬಸವಣ್ಣನವರೇ ಲಿಂಗಾಯತ (ಲಿಂಗವಂತ) ಧರ್ಮಸ್ಥಾಪಕರು, ಅವರು ನೀಡಿದ ಇಷ್ಟಲಿಂಗವೇ ನಮ್ಮ ದೇವರು, ವಚನಗಳೇ ಧರ್ಮ ಗ್ರಂಥ, ಬಸವ ಕಲ್ಯಾಣವೇ ನಮ್ಮ ಧರ್ಮ ಕೇಂದ್ರವೆಂದು ಕೆಲವರು; ಕೂಡಲಸಂಗಮವೇ ನಮ್ಮ ಧರ್ಮ ಕೇಂದ್ರವೆನ್ನುತ್ತಾರೆ ಹಲವರು. ಕನ್ನಡವೇ ನಮ್ಮ

ಧರ್ಮದ ಭಾಷೆಯೆನ್ನುವುದು ಸರಿಯಷ್ಟೆ! ಕನ್ನಡ ಪದ ವೀರಶೈವರ ಮಣಿಹವನ್ನೇ ಬೋಧಿಸುತ್ತದೆ. ಕಣ್ಣು ಅಡಿಯಲ್ಲಿ ಉಳ್ಳವನು ಯಾವನೋ ? ಅವನು ಕನ್ನಡಿಗ. ಕಣ್ಣು ಜ್ಞಾನದ ಸಂಕೇತ. ಅಡೀ ಪಾದ ಕ್ರಿಯಾಸಂಕೇತ, ಜ್ಞಾನಕ್ರಿಯೆಗಳ ಸಮಸಮುಚಯದಲ್ಲಿ ನಡೆಯುವಾತನು ಕನ್ನಡಿಗ. ದ್ರಾವಿಡ ಸಂಸ್ಕೃತಿಯನ್ನು ಬಳಸಿಕೊಂಡು ಬಂದವರು ವೀರಶೈವರು. ಮಿಾನ್‌ಕಣ್, ಬಿಡುಗ್‌ಣ್. ಮುಂಕಣ್, ಪದಗಳು ೫-೬ ಸಾವಿರ ವರುಷದವುಗಳಿದ್ದು ಇವು ಅಚ್ಚ ಕನ್ನಡದವು ಎಂಬುದನ್ನು ಈಗಾಗಲೇ ವಿವರಿಸಲಾಗಿದೆ.

ವೀರಶೈವರು ಗ್ರಂಥ ಪ್ರಾಮಾಣ್ಯವನ್ನೇ ಮುಖ್ಯವಾಗಿ ಮನ್ನಿಸುವುದಿಲ್ಲ. ಅನುಭಾವವೇ ವೀರಶೈವರ ಪ್ರಮುಖ ಪ್ರಮಾಣ. ಆದರೂ ಆ ದಿಶೆಯಲ್ಲಿ ಜ್ಞಾನಕಾಂಡವನ್ನು ಪ್ರತಿಪಾದಿಸುವ ವೇದಗಳ ಅಂತ್ಯ ಭಾಗವೆನಿಸಿದ ಉಪನಿಷತ್‌ಗಳನ್ನು; ಆಗಮಗಳಲ್ಲಿಯಾದರೂ ಉತ್ತರಕಾಂಡವನ್ನು ಧರ್ಮಜ್ಞಾನಕ್ಕಾಗಿ ಸಹಾಯ ಪಡೆಯುತ್ತಾರೆ. ವೀರಶೈವ ಸಿದ್ಧಾಂತವು ಕೇವಲ ಅರಿವು ಪಡೆವುದಕ್ಕಲ್ಲ. ಅರಿವು ಆಚರಣೆಯಲ್ಲಿ ಅಳವಡುವುದೇ ಪ್ರಮುಖ ಗುರಿ. ಅರಿವು ಆಚರಣೆಯಲ್ಲಿ ಅಳವಡುವದರಿಂದ ಅನುಭಾವ ಪ್ರಮುಖವೆನಿಸಿ ಆನಂದಕ್ಕೆ ಕಾರಣವೆನಿಸುವುದು.ನಮ್ಮ ಷಟ್‌ಸ್ಥಲ ಮಾರ್ಗವಾದರೂ ಇದನ್ನೇ ಪ್ರತಿಪಾದಿಸಿದೆ. ಮೊದಲನೆಯದು ಶ್ರದ್ಧೆ. ಧಾರ್ಮಿಕ ಸಾಹಿತ್ಯದಲ್ಲಿ, ಧರ್ಮಚಿನ್ನೆಗಳಾದ ಎಂಟು ಆವರಣಗಳೆನಿಸಿದ ಅಷ್ಟಾವರಣಗಳಲ್ಲಿ ಶ್ರದ್ಧೆಯಿರಬೇಕು. ಅಷ್ಟಾವರಣಗಳಲ್ಲಿ ಶ್ರದ್ಧೆಯುಳ್ಳವನಾಗಿ ನಿಷ್ಠೆಯನ್ನು ಚನ್ನಾಗಿ ಬೆಳಸಿಕೊಂಡು ಸಾವಧಾನದಿಂದ ಅವುಗಳನ್ನು ಆಚರಣೆ ತರಬೇಕಾಗುತ್ತದೆ. ಈ ದಾರಿಯಲ್ಲಿ ಉಪಯುಕ್ತವಾದ ಜ್ಞಾನ ಸಾಹಿತ್ಯ ವೀರಶೈವರಿಗೆ ಗ್ರಾಹ್ಯವಾದುದು. ಆದರೆ ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಪ್ರಮಥರಿಂದ ನಿರ್ಮಾಣಗೊಂಡ ವಚನ ಸಾಹಿತ್ಯ ಸಾಧಕನಿಗೆ ಹೆಚ್ಚು ಹೆಚ್ಚು ಸಹಾಯಕವಾಗಿದೆ. ಸಹಕಾರಿಯಾಗಿದೆ. ವಚನಕಾರರು ವೇದದ ಕರ್ಮಕಾಂಡವನ್ನು ಖಂಡಿಸಿದರೆಂದರೆ ವೇದವನ್ನೇ ಅಲ್ಲಗಳೆದಿಲ್ಲ. ಹಾಗೆ ಆಗಮದ ತಂತ್ರಮಾರ್ಗವನ್ನು ಪೌರೋಹಿತ್ಯವನ್ನು ಕಡೆಗಣಿಸಿದರೆಂದರೆ ಸಂಪೂರ್ಣವಾಗಿ ಆಗಮಗಳನ್ನು ತಿರಸ್ಕರಿಸಲಿಲ್ಲ. ಹೀಗೆ ವಚನ ಸಾಹಿತ್ಯವಾದರೂ ವಿಭಿನ್ನ ಶಿವಶರಣರಿಂದ ರಚಿಸಲ್ಪಟ್ಟಿದ್ದು ಕ್ರಮಬದ್ಧವಾಗಿ ಒಂದೇ ಶಾಸ್ತ್ರಗ್ರಂಥವೆನಿಸಿಲ್ಲ. ಸಂದರ್ಭೋಚಿತವಾಗಿ ಅನೇಕ ವಿಚಾರಗಳನ್ನು ಆಚಾರಗಳನ್ನು ಪ್ರತಿಪಾದಿಸುವುದರೊಂದಿಗೆ ತಾವು ಅನುಭವಿಸಿದ ಆನಂದದ ನಿಲವನ್ನು ನಿರೂಪಿಸಿದ್ದುಂಟು. ಅದಕ್ಕಾಗಿ ಆಗಮಗಳಲ್ಲಿ ವೀರಶೈವ ಧರ್ಮ, ಸಂಸ್ಕೃತಿ, ಆಚಾರ-ವಿಚಾರ, ಸಾಧನೆ-ಸಿದ್ಧಿಗಳ ಮರ್ಮವಿದೆ. ವಚನ ಸಾಹಿತ್ಯವಾದರೂ ಈ ಎಲ್ಲ ವಿಷಯಗಳನ್ನು ಜನಭಾಷೆಯಲ್ಲಿ ಪ್ರತಿಪಾದಿಸಿರುವುದರಿಂದ ಈ ಎರಡನ್ನು ಧರ್ಮ ಗ್ರಂಥರೂಪದಲ್ಲಿ ಮನ್ನಿಸಿದರೆ ತಪ್ಪಲ್ಲ.

ವೀರಶೈವರು ದೇವರನ್ನು ಹೊರಗೆ ಹುಡುಕಲಿಲ್ಲ. ಪಂಚಭೂತಗಳಲ್ಲಿ ದೈವ ಕಲ್ಪನೆಯನ್ನು ಕಂಡ ಮಾನವನು ಕಾಲಿಡಲು ಇಂಬಿಲ್ಲದಂತೆ ದೇವರ ಸೃಷ್ಟಿಮಾಡಿದ್ದಾನೆ. ಆದರೆ ವೀರಶೈವರು ಇಂಥ ಕಲ್ಲು ಮಣ್ಣಿನ ದೇವರುಗಳು ನಾಶ ಹೊಂದುತ್ತಿದ್ದು ಇವು

ದೇವರಲ್ಲವೆಂಬುದನ್ನು ಅರಿತರು. ತಮ್ಮ ಅಂತರಂಗದ ಅರುಹಿನ ಕುರುಹೇ ಭಗವಚ್ಚೈತನ್ಯ, ಅದನ್ನೇ ಸದ್ಗುರುನಾಥನು ತನ್ನ ಯೋಗ ಶಕ್ತಿಯಿಂದ ಶಿಷ್ಯನ ಮಸ್ತಕದಿಂದ, ದೀಕ್ಷಾಕ್ರಮದಿಂದ ಹೊರತೆಗೆದು ಇಷ್ಟಲಿಂಗವನ್ನಾಗಿ ಕರುಣಿಸುತ್ತಾನೆ. ಈ ಇಷ್ಟಲಿಂಗವು ಅರುಹಿನ ಕುರುಹು. ಏಕೇಶ್ವರತ್ವದ ನಿಲವು. ಸರ್ವಾಂತರ್ಯಾಮಿ ಪರಶಿವನ ಪ್ರತೀಕ. ಇಂಥ ಇಷ್ಟಲಿಂಗವೇ ವೀರಶೈವರ ದೇವರು. ಆದರೆ ಇಷ್ಟಲಿಂಗವನ್ನು ಕರುಣಿಸಿದ ಗುರುವನ್ನು, ಆ ಲಿಂಗದ ಪ್ರಾಣಸ್ವರೂಪವೆನಿಸಿದ ಜಂಗಮನನ್ನೂ ದೇವರನ್ನಾಗಿ ಕಂಡವರು ವೀರಶೈವರು. ಅಲ್ಲದೆ ವೀರಶೈವರಿಗೆ ಲಿಂಗವೇ ದೇವರಾಗಿ ಉಳಿಯುವುದಿಲ್ಲ. ಆ ಇಷ್ಟಲಿಂಗವನ್ನು ಅರ್ಚಿಸಿ ತಾನೇ ಅರ್ಥಾತ್ ಅಂಗನೂ ಲಿಂಗವಾಗುವ ಸಾಧನೆ ವೀರಶೈವನದು. ಇವನು ಸರ್ವಾಂಗ ಲಿಂಗಿಯೆನಿಸುವುದರಿಂದ ಇಷ್ಟಲಿಂಗವೇ ದೇವರಾಗಿ ಉಳಿಯುವುದಿಲ್ಲ. ಪ್ರತಿವ್ಯಕ್ತಿಯೂ ಇಂಥ ಸಾಧನೆಯನ್ನು ಮಾಡಬೇಕಾಗುತ್ತದೆ. ಅದು ಇವನ ಪರಮಗುರಿ.

ಭಾರತೀಯ ಇತರ ಧರ್ಮಗಳ ಸಿದ್ಧಾಂತಕ್ಕೂ ವೀರಶೈವ ಸಿದ್ಧಾಂತಕ್ಕೂ ಬಹಳ ಅಂತರವಿದೆ. ಯಾವ (ಕೆಲವು) ಧರ್ಮಗಳಲ್ಲಾದರೂ ದೇವರ ಸಾನಿಧ್ಯಕ್ಕೆ ಸೇರುತ್ತಾನೆ ಸಾಧಕನು. ವೀರಶೈವನು ಮಾತ್ರ ಲಿಂಗದೇವರನ್ನು ಆರಾಧಿಸಿ ಲಿಂಗವೇ ತಾನಾಗುತ್ತಾನೆ. ಲಿಂಗವೇ ತಾನಾಗುವ ಮಾರ್ಗವನ್ನು ತೋರಿಸಿಕೊಡುವ ಸದ್ಗುರು ಪ್ರತಿವ್ಯಕ್ತಿಗೆ ಬೇಕಾಗುತ್ತಾನೆ. ಹೀಗೆ ಪ್ರತ್ಯಕ್ಷವಾಗಿ ಮಾರ್ಗದರ್ಶನ ಮಾಡಬಲ್ಲ ಗುರುನಾಥನೆ ಧರ್ಮಗುರುವಾಗಬಲ್ಲನೆ ಹೊರತು, ಎಂದೋ ಸ್ಥಾಪಿಸಿದರೆನ್ನುವ ಧರ್ಮಗುರು ಶಿಷ್ಯನನ್ನು ಉದ್ಧರಿಸಲಾರನು. ಒಬ್ಬ ಶಿಷ್ಯನಿಗೆ ಒಬ್ಬ ಗುರು ಬೇಕು. ಒಬ್ಬ ಜಂಗಮಬೇಕು. ಐದು ಆಚಾರ್ಯರ ಅವಶ್ಯಕತೆಯಿಲ್ಲ. ಪಂಚಾಚಾರ್ಯರ ಈ ವಾದವೂ ಅವಾಸ್ತವಿಕವೇ ಆಗಿದೆ. ಆಗಮಗಳಲ್ಲಿ ಈ ಪಂಚಾಚಾರ್ಯರ ಪ್ರಸ್ತಾಪವೇ ಇಲ್ಲ. ಆಗಮಸಾಹಿತ್ಯವನ್ನೇ ಆಧರಿಸಿ ವ್ಯಕ್ತವಾದ ಸಿದ್ಧಾಂತ ಶಿಖಾಮಣಿಯಲ್ಲಾದರೂ ಅವರ (ಪಂಚಾಚಾರ್ಯರ) ಪ್ರಸ್ತಾಪವಿಲ್ಲ. ರೇಣುಕರ ದಾರುಕರ ವಿಷಯ ಮಾತ್ರ ದೊರೆಯುತ್ತದೆ. ಎಲ್ಲೇ ದೊರೆತರೂ ಅದು ಪ್ರಕ್ಷಿಪ್ತವಾಗಿದೆ.

ದೀಕ್ಷಾಗುರುಗಳೇ ಧರ್ಮಗುರುವೆನಿಸಿದರೂ ಧರ್ಮಕ್ಕಾಗಿ ದುಡಿದವರನ್ನು ಗೌರವಿಸುವ ಪರಂಪರೆ ವೀರಶೈವರದು. ಧರ್ಮೋದ್ಧಾರಕರನ್ನು ಆದರದಿಂದ ಕಾಣಬೇಕು. ಅವರನ್ನು ಹಾಗೂ ಅವರ ಸಂದೇಶಗಳನ್ನು ಅರಿಯಬೇಕು. ತನಗೆ ದೀಕ್ಷೆಗೈದು ಧರ್ಮಗುರುವೆನಿಸಿ ನೆಲಸಿದ ಮಠವೇ ಧರ್ಮಕ್ಷೇತ್ರವೆನಿಸುತ್ತದೆ. ಪ್ರತಿಯೊಂದು ಊರುಗಳಲ್ಲಿ ಮಠಗಳು ಧರ್ಮಗುರುಗಳು ನೆಲಸುವಂತೆ, ವೀರಶೈವ ಧರ್ಮದ ವ್ಯವಸ್ಥೆ ಮೊದಲಿನಿಂದಲೂ ಬೆಳೆದು ಬಂದಿದೆ. ಜಂಗಮನು ವೀರಶೈವರಿಗೆ ಪರಮನು ದೈವ. ಬಸವಣ್ಣನವರು ಜಂಗಮನಿಗೆ 'ಗುರುವಿನ ಗುರು ಜಂಗಮ''[10] ಎಂದು ಗೌರವಿಸಿದ್ದಾರೆ. ವಸ್ತುತಃ ಜಂಗಮನು

---

10. ಬ.ಷ. ವಚನ ೪೨೪

ಮಹಾಜ್ಞಾನಿಯಾಗಿರುತ್ತಾನೆ. ಆತನು ಪರಮ ಜ್ಞಾನಿಯಾಗಿ ತನ್ನ ನಡೆ ನುಡಿಗಳಿಂದ ಭಕ್ತರಿಗೆ ಮಾರ್ಗದರ್ಶಕವಾಗಬೇಕು. ಪರಮಾನುಭಾವಿಯಾದ ಜಂಗಮದೇವನೇ ವೀರಶೈವರ ಆದರ್ಶ ಹಾಗೂ ಅನುಕರಣೀಯ ವ್ಯಕ್ತಿಯೆನಿಸಿದ್ದಾನೆ. ಆತನು ಪ್ರತ್ಯಕ್ಷ ಪ್ರಮಾಣವೆನಿಸುವುದರಿಂದ ಧರ್ಮ ಗ್ರಂಥದ ಅವಶ್ಯಕತೆಯೆ ಬರುವುದಿಲ್ಲ. ಇಂಥ ಜಂಗಮ ಪುಂಗವ ನೆಲಸಿದ ನೆಲವೇ ಪರಮ ಪಾವನ. ಮಹಾಕ್ಷೇತ್ರ. ಈ ಮಾತನ್ನೇ ಶಿವಾನುಭವಿಗಳಾದ ಮೈಲಾರ ಬಸವಲಿಂಗ ಶರಣರು –

> ಹಲುವು ಮಾತೇನು ? ನೀನೊಲಿದು ಪಾದವನಿಟ್ಟ
> ನೆಲವೆ ಸುಕ್ಷೇತ್ರ ಜಲವೆ ಪಾವನ ತೀರ್ಥ
> ಸುಲಭ ಶ್ರೀಗುರುವೆ ಕೃಪೆಯಾಗು [11]

ಸ್ಪಷ್ಟವಾಗಿ ವೀರಶೈವರ ಧರ್ಮ ಕ್ಷೇತ್ರದ ವಿವರಣೆ ನೀಡಿರುವರು. ಇನ್ನೊಂದು ಕಡೆ

> ಮೃಡಜಂಗಮ ಲಿಂಗ ತನ್ನಡಿಯಿಟ್ಟ ಜಲ ತೀರ್ಥ
> ಪೊಡವಿ ಸುಕ್ಷೇತ್ರ ಕಡು ನಿಜವೆಂದೊರೆದ ಎ
> ನ್ನೊಡೆಯ ಶ್ರೀಗುರುವೆ ಕೃಪೆಯಾಗು [12]

ಸಾಕ್ಷಾತ್ ಶಿವನೇ ಜಂಗಮವೆನಿಸಿದ್ದರಿಂದ ಆತ ಮನವೊಲಿದು ಅಡಿಯಿಟ್ಟ ಜಲ ತೀರ್ಥವೆನಿಸುವುದು. ನೆಲ ಸುಕ್ಷೇತ್ರವೆನಿಸುವುದರಲ್ಲಿ ಕಡು ಸತ್ಯವೆಂಬುದಾಗಿ ಪ್ರತಿಪಾದಿಸಿದ್ದಾರೆ. ಬಸವಣ್ಣನವರಾದರೂ 'ನಡೆಲಿಂಗ ಜಂಗಮ' ವೆಂದಿದ್ದಾರೆ. ಕಾರಣ ಜಂಗಮ ನೆಲಸಿದ ನೆಲೆಯೇ ಸುಕ್ಷೇತ್ರವೆನಿಸುವುದರಿಂದ ಅನ್ಯಕ್ಷೇತ್ರಗಳ ಅವಶ್ಯಕತೆಯೇ ಇಲ್ಲ. ವ್ಯಕ್ತಿಗತ ಸ್ವಾರ್ಥಕ್ಕಾಗಿ ಸ್ಥಾವರ ಕ್ಷೇತ್ರಗಳನ್ನು ಬೆಳಸಿಕೊಳ್ಳುತ್ತಿರುವುದನ್ನು ವೀರಶೈವರು ಅರಿಯಬೇಕು.

ಷಟ್‌ಸ್ಥಲವೇ ಆತ್ಮವೆನಿಸಿದ ವೀರಶೈವನು ತತ್ವನಿಷ್ಠನಾಗಬೇಕು. ವ್ಯಕ್ತಿ ಪ್ರತಿಷ್ಠೆಗಾಗಿ, ಆನೆಯ ನೇರಿಕೊಂಡು ಕುದುರೆಯನೇರಿಕೊಂಡು ಪಲ್ಲಕ್ಕಿಯನೇರಿಕೊಂಡು ಅಹಂಕಾರವೆಂಬ ಮದಗಜವನೇರಿ ಹೋದವರನ್ನು ನಂಬಬೇಡಿರೆಂದು ಬಸವಣ್ಣನವರು ಎಚ್ಚರಿಕೆಯಿತ್ತಿದ್ದಾರೆ.

> ಉತ್ತಮ ಮಧ್ಯಮ ಕನಿಷ್ಠವೆಂದು ಬಂದ ಜಂಗಮವನೆಂದೆನಾದಡೆ
> ನೊಂದೆನಯ್ಯಾ, ಬೆಂದೆನಯ್ಯಾ ಎನ್ನ ಕಿಚ್ಚು ಎನ್ನಸುಟ್ಟಿತ್ತು.
> ಸುಖಿ ಜಂಗಮ, ಸಾಮಾನ್ಯ ಜಂಗಮವೆಂದುಂಟೆ ?
> ಕೂಡಲಸಂಗಮ ದೇವಾ [13]

ಗುರು-ಜಂಗಮರು ಪೂಜ್ಯರು. ಅವರಲ್ಲಿ ಉತ್ತಮ ಮಧ್ಯಮ ಕನಿಷ್ಠವೆಂಬುದಿಲ್ಲವೆಂದಿದ್ದಾರೆ.

---

11. ಮೈಲಾರ ಬಸವಲಿಂಗಶರಣರ ಗುರುಕರುಣ ತ್ರಿವಿಧಿ – ಪದ್ಯ ೨೩
12. ಅದೇ ಪದ್ಯ ೨೪೨
13. ಬಷವ. ೪೦೦

ಭೇದವೆಣಿಸಿದರೆ ನೊಂದೆ, ಬೆಂದೆನೆಂದಿದ್ದಾರೆ. ಗುರು ತತ್ವದಲ್ಲಾಗಲಿ, ಜಂಗಮ ತತ್ತ್ವದಲ್ಲಾಗಲಿ ಭಿನ್ನತೆಯಿಲ್ಲ. ಭಕ್ತರು ಇದನ್ನು ಚೆನ್ನಾಗಿ ಅರಿಯಬೇಕು. ಬಸವಲಿಂಗ ಶರಣರಾದರೂ ಚೆನ್ನಾಗಿ ವಿವರಿಸುತ್ತಾರೆ.

> ಗುರು ಸೇವಾಭೃತ್ಯತ್ವ। ಚರಲಿಂಗದೇಕತ್ವ
> ವರ ಸತ್ಕಾಯಕ ಉರೆದಾಸೋಹವೇ ಭಕ್ತ
> ನಿರವೆಂದ ಗುರುವೆ ಕೃಪೆಯಾಗು[14]

ಭಕ್ತನಾದವನು ಗುರುವಿನ ಜಂಗಮನ ಸೇವೆಗಾಗಿ ಭೃತ್ಯನಾಗಬೇಕು. ಆ ಗುರುಜಂಗಮರಲ್ಲಿ ಅಭಿನ್ನತೆಯುಳ್ಳವನಾಗಬೇಕು. ತರತಮಭಾವವನ್ನು ಎಣಿಸಬಾರದು. ಗುರು-ಚರ ಸೇವೆಗಾಗಿ ಕಾಯಕಶೀಲನಾಗಿರಬೇಕು. ಕಾಯಕದ ಸಾರ್ಥಕತೆಗೆ ದಾಸೋಹಂ ಭಾವಿಯಾಗಿರುವುದೇ ಭಕ್ತನ ಸ್ವರೂಪವೆನಿಸುವುದು. ಭಕ್ತರನ್ನು ಮರುಳು ಮಾಡುವ ಶ್ರೀಮಂತ ಗುರುಗಳು ಸಮಾಜದಲ್ಲಿ ತತ್ವಕ್ಕೆ ಬೆಲೆ ನೀಡದೆ ಆಡಂಬರಕ್ಕೆ ಮನಸೋತು ನಾನೊಬ್ಬನೆ ಮಹಾಗುರು ಜಗದ್ಗುರುವೆಂದು ನುಡಿಯುವುದಕ್ಕೆ ಭಕ್ತ ಬಳಗ ಅವಕಾಶ ನೀಡುವುದರಿಂದಲೇ ಸಮಾಜದಲ್ಲಿ ತರ ತಮಭಾವ ಬೆಳೆಯುತ್ತದೆ. ಗುರುವಾಗಲಿ ಜಂಗಮವಾಗಲಿ ಅವರಿಗೂ ಅಷ್ಟಾವರಣಬೇಕು. ಭಕ್ತಿ ಬೇಕು. ಹೀಗಿದ್ದರೂ ಇತರ ಗುರುಗಳ ಹೆಸರನ್ನು ಒಂದೇ ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕೂ ಬೇಡವೆನ್ನುವ ಮಹಾಶಯರಿಗೆ ಏನೆನ್ನಬೇಕು?

ಗುರುವಾದಡೆಯೂ ಆಗಲಿ, ಲಿಂಗವಾದಡೆಯೂ ಆಗಲಿ

ಜಂಗಮವಾದಡೆಯೂ ಆಗಲಿ

ಪಾದೋದಕ ಪ್ರಸಾದವಿಲ್ಲದ ಪಾಪಿಯ ಮುಖವನೋಡಲಾಗದು,[15] ಎಂದಿದ್ದಾರೆ ಅವಿರಳಜ್ಞಾನಿ ಚನ್ನಬಸವಣ್ಣನವರು. ''ಹಿರಿಯುತನಕ್ಕೆ ಬೆಬ್ಬನೆ ಬೆರೆತು ಉದರವ ಹೊರೆದು ಕೊಂಡಿಹ ಕ್ರೂರಕರ್ಮಿಯ ಮುಖವನೆನ್ನತ್ತ ತೋರಿದಿರಯ್ಯ''[16] ಎಂದು ಕಡು ನೊಂದಿದ್ದಾರೆ. ಕಂಡ ಭಕ್ತರಿಗೆ ಕೈಮುಗಿಯುವಾತನೆ ಭಕ್ತ. ಮೃದುವಚನವೆ ಸಕಲ ಜಪಂಗಳು ಮೃದುವಚನವೆ ಸಕು ತಪಂಗಳೆಂದು [17] ಸಾರಿದ ಮಹಾನುಭಾವಿ ಬಸವಣ್ಣನವರ ಅಂತರಾರ್ಥವನ್ನು ಅರಿಯಬೇಕು. ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ ಹಿಡಿದಿರ್ದ ಲಿಂಗವು ಘಟಸರ್ಪ[18] ವೆಂದು ಎಚ್ಚರಗೊಳಿಸಿದ್ದಾರೆ. ನುಡಿಯ ಘೋಷಣೆ ನಡೆಯಲ್ಲಿ ಬೇಡವೇ ? 'ಮಾನವ

---

14. ಗು. ಕ. ತ್ರಿವಿಧಿ 226
15. ಚನ್ನಬಸವಣ್ಣನವನವರ ವಚನಗಳು (ಸಂ.) ಡಾ. ಆರ್. ಸಿ. ಹಿರೇಮಠ- ೫೬೫
16. ಅದೇ ೫೬೪
17. ಬ.ಷ. ವ ೨೪೪
18. ಅದೇ, ೬೪೫

ಧರ್ಮಕ್ಕೆ ಜಯವಾಗಲಿ' ಎನ್ನುವುದರ ಅರ್ಥವಾದರೂ ಏನು ? ಒಬ್ಬ ಗುರು ಮತ್ತೊಬ್ಬ ಗುರುವಿಗೆ ಗೌರವ ನೀಡದಿರುವುದು ಆದಾವ ಮಾನವ ಧರ್ಮ ? ವೈಚಾರಿಕ ಪ್ರಜ್ಞೆಯುಳ್ಳ ವೀರಶೈವರು ಇಂಥ ಮೂಢ ಕಂದಾಚಾರಗಳನ್ನು ಕಡೆಗಾಣಿಸಬೇಕು. ಗುರುಸೇವಾ ಭೃತ್ಯನಾಗಿರುವಂತೆ, ಗುರು-ಜಂಗಮರಲ್ಲಿ ಏಕತ್ವವನ್ನು ಅಭಿನ್ನತೆಯನ್ನು ಕಾಣಬೇಕು. ಮೇಲುಕೀಳುತನಗಳು ತತ್ವನಿಷ್ಠೆಗೆ ಕುಂದು. ಪ್ರಸ್ತುತ ದಿನಮಾನಗಳಲ್ಲಿ ಪ್ರತ್ಯಕ್ಷ ನಡೆದ ಸಂಗತಿಗಳತ್ತ ವೀರಶೈವರು ಗಮನಿಸಲೆಂದೇ ಈ ವಿಚಾರಗಳನ್ನು ಪ್ರಸ್ತಾಪಿಸಬೇಕಾಯಿತು. ಧಾರ್ಮಿಕ ಸ್ವಾತಂತ್ರ್ಯವನ್ನು ಪಡೆದ ವೀರಶೈವನು ಮೂಢ ನಂಬಿಕೆಗಳಲ್ಲಿ ವ್ಯಕ್ತಿ ಪ್ರತಿಷ್ಠೆಗಳಲ್ಲಿ ಮುಳುಗಿದರೆ ಇವಕ್ಕೆಲ್ಲ ಅಂತ್ಯವಿಲ್ಲ. ಧರ್ಮಕ್ಕೇನೆ ಅಂತ್ಯ ವೆಂಬುದನ್ನು ನೊಂದುಹೇಳಬೇಕಾಗುತ್ತದೆ. ಪ್ರಾಣಸ್ವರೂಪವಷ್ಟೇ ಅಲ್ಲ ವೀರಶೈವರ ಪರಮಧ್ಯೇಯಗಳೆನಿಸಿದ ಪಂಚಾಚಾರಗಳ ಅರ್ಥಕ್ಕಾದರೂ ಬೆಲೆ ಬೇಡವೆ ? ಇವನಾರವ ಇವನಾರವನೆಂದೆನಿಸದ, ಇವನಮ್ಮವ ಇವ ನಮ್ಮವನೆಂಬ ತತ್ವವನ್ನು ಬೀರಿದ ಶಿವಾಚಾರವನ್ನು ಬಾಯಿಂದ ನುಡಿದು "ನಾನೊಬ್ಬನೆ ದೊಡ್ಡವ; ನನ್ನ ಸರಿಸಮಾನ ಯಾರೂ ಕೂಡಬಾರದು. ನನ್ನ ಹೆಸರಿನ ಪತ್ರಿಕೆಯಲ್ಲಿ ನನ್ನ ಸಮಾನ ಬೇರೊಬ್ಬರ ಹೆಸರು ಬೇಡವೆನ್ನುವುದು ಸಮಂಜಸವೆ ? ವ್ಯಕ್ತಿ ಗೌರವವನ್ನು ತಿಳಿಸಿಕೊಡುವ 'ಭೃತ್ಯಾಚಾರ'ದ ಅರ್ಥವಾದರೂ ಏನು? ಮಹಾಪುರುಷರೆನಿಸಿದ ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ ಶಿವ ಭಕ್ತರಿಗಿಂತ ಹಿರಿಯರಿಲ್ಲ'[19] ಎಂದು ನುಡಿದಿರುವುದರಿಂದಲೇ ವೀರಶೈವತ್ವದ ಗುರಿಯನ್ನು ಸಾಧಿಸಿದರು. ಸಕಲರಿಗೆ ವ್ಯಕ್ತಿಗೌರವ ನೀಡಿದ ಫಲವಾಗಿಯೇ ಕಲ್ಯಾಣ ಮಾನವತಾವಾದಿಯ ನೆಲೆಯಾಯಿತು. ಬಾಯಿ ಘೋಷಣೆಯಿಂದ ಮಾನವ ಕಲ್ಯಾಣವಾಗಲಾರದು.

ವೀರಶೈವರು ಅಷ್ಟಾವರಣ ಪಂಚಾಚಾರ ಷಟ್‌ಸ್ಥಲಗಳನ್ನು ಪ್ರತಿಪಾದಿಸಿ ಅವುಗಳನ್ನು ಅರಿತು ಅಳವಡಿಸಿಕೊಳ್ಳುತ್ತಿರುವುದರಿಂದಾಗಿ ಈ ತತ್ವತ್ರಯಗಳನ್ನೊಳಕೊಂಡ ಷಟ್‌ಸ್ಥಲ ಚಿನ್ನವೇ ವೀರಶೈವರ ಷಟ್‌ಸ್ಥಲ ಧ್ವಜವಾಗಬೇಕು. ಪ್ರತಿವ್ಯಕ್ತಿಯು ತತ್ವಪುರುಷನಾಗುವ ಮಹಿಮೆಯನ್ನು ಹೊಂದಬೇಕಾಗಿರುವುದರಿಂದ ಈ ತತ್ವತ್ರಯಗಳನ್ನು ವ್ಯಕ್ತಪಡಿಸುವ ಧ್ವಜ ವೀರಶೈವರ ಪರಮ ಧರ್ಮಚಕ್ರವಾಗಿದೆ. ಈ ಎಲ್ಲ ದೃಷ್ಟಿಯಿಂದ ವೀರಶೈವರ ಸಿದ್ಧಾಂತ ಸಾಧನೆಗಳು ಅನ್ಯರಿಗಿಂತ ವಿಶಿಷ್ಟವಾಗಿದ್ದು ಸಕಲ ಜೀವಾತ್ಮರ ಲೇಸ ಬಯಸುವಿಕೆಯೇ ವೀರಶೈವ ಧರ್ಮದ ಧ್ಯೇಯವೆನಿಸಿದೆ. ಕೇವಲ ಮಾನವ ಕಲ್ಯಾಣವನ್ನು ನಮ್ಮವರು ಬಯಸಲಿಲ್ಲ; ಸಕಲ ಜೀವರಾಶಿಗಳ ಲೇಸನ್ನು ಬಯಸಿದ್ದಾರೆ.

ವೀರಶೈವರು ಇತಿಹಾಸಬಲ್ಲವರಲ್ಲ. ಅಂತೆಯೇ ವೀರಶೈವರ ಇತಿಹಾಸ ಬೆಳೆದು

---

19. ಅದೇ : ವ ೩೩೮

20 ವೀರಶೈವಧರ್ಮದ ಕೈಪಿಡಿ ಡಾ। ನಂದಿಮಠರ ಇಂಗ್ಲೀಷ ಅನುವಾದ ಕೃತಿ, ಅನುವಾದಕರು ಪ್ರೇಮಾ ದೇವಿ ಮಳಿಮಠ ಪ್ರ ಕ. ವಿ. ವಿ. ಧಾರವಾಡ – ಪು ೨

ಬಂದಿಲ್ಲ. ಇತಿಹಾಸವಿಲ್ಲದ ಕಾರಣ, ವೀರಶೈವ ಧರ್ಮದ ಬಗೆಗೆ ಊಹಾಪೋಹಗಳು. ಕಾಣಿಸಿಕೊಂಡವು. ಡಾ। "ನಂದಿಮಠರು, ವೀರಶೈವದ ಪ್ರಾಚೀನ ಇತಿಹಾಸ ಅಸ್ಪಷ್ಟವಾಗಿದೆ. ಅದನ್ನು ಸರಿಯಾಗಿ ತಿಳಿದುಕೊಳ್ಳುವ ಅಥವಾ ಅರ್ಥಮಾಡಿಕೊಳ್ಳುವ ಯಾವ ಪ್ರಯತ್ನಗಳು ಕೂಡ ನಡೆದಿಲ್ಲ. ಈ ಧರ್ಮದ ಬಗೆಗೆ ಅಧಿಕಾರಯುತವಾಗಿ ಹೇಳಬಲ್ಲ ಯಾವ ಪ್ರಮಾಣ ಗ್ರಂಥಗಳೂ ಹನ್ನೊಂದನೆಯ ಶತಮಾನಕ್ಕಿಂತ ಮೊದಲಿನದು ಲಭ್ಯವಿಲ್ಲದಿರುವುದು ಅತ್ಯಂತ ದುರ್ದೈವದ ಸಂಗತಿ"[20] ಎನ್ನುವುದು ತೀರಾ ಸತ್ಯವಾದರೂ ವೀರಶೈವ ಸಂಸ್ಕೃತಿ ಪ್ರಾಚೀನವಾಗಿ ಬೆಳೆದು ಬಂದಿದೆಯೆಂಬುದನ್ನು ಮರೆಯುವಂತಿಲ್ಲ. ಇಪ್ಪತ್ತನೇ ಶತಮಾನದಲ್ಲಿ ಪಂಡಿತರಾದ ಡಾ। ನಂದಿಮಠರ ಕೃತಿಗೆ ವಿಶೇಷ ಮಹತ್ವಬಂದಿದೆ. ಅವರು ಮುಂದುವರೆದು ಕಲಚುರಿ ದೊರೆ ಬಿಜ್ಜಳನ (ಕ್ರಿ. ಶ. ೧೧೬೨-೧೧೬೭) ಮಂತ್ರಿಯಾಗಿದ್ದ ಶ್ರೀ ಬಸವಣ್ಣನವರಿಂದಲೇ ಈ ಮತವು ಸ್ಥಾಪಿತವಾಯಿತೆಂದು ಬಲವಾಗಿ ನಂಬಿದ್ದಾರೆ. ಇದು ಸತ್ಯಕ್ಕೆ ದೂರವಾಗಿದೆ. ಕನ್ನಡ ಇಲ್ಲವೆ ಸಂಸ್ಕೃತ ಯಾವ ಗ್ರಂಥಗಳಲ್ಲಿಯೂ ಬಸವಣ್ಣನವರಿಂದಲೇ ವೀರಶೈವ ಧರ್ಮ ಪ್ರಾರಂಭಗೊಂಡಿತೆಂದು ಖಚಿತವಾಗಿ ಹೇಳಿಲ್ಲ. [21] ಎಂದು ಸ್ಪಷ್ಟಪಡಿಸಿದ್ದಾರೆ. ವೀರಶೈವರು ಗುಪ್ತವಾಗಿ ತಮ್ಮ ಧರ್ಮಾಚರಣೆಯನ್ನು ಅನುಸರಿಸಿದವರು. ಇವರು ಆತ್ಮಪ್ರಶಂಸಾಪ್ರಿಯರಲ್ಲ. ಆತ್ಮ ಸ್ತುತಿ-ಪರನಿಂದೆಗೆ ಹೊರಗಾದವರು. ವೀರಶೈವದ ಪ್ರಾಚೀನ ಇತಿಹಾಸ ಅಸ್ಪಷ್ಟವಾಗಿದ್ದಂತೆ ಸರಿಯಾಗಿ ಅದನ್ನು ತಿಳಿದುಕೊಳ್ಳುವ ಪ್ರಯತ್ನ ಹಿಂದೂ ನಡೆದಿಲ್ಲ, ಇಂದೂ ನಡೆದಿಲ್ಲ. ಕೆಲವರು ಪ್ರಯತ್ನಿಸಿದ್ದಕ್ಕೆ ಪುರಸ್ಕಾರ ಸಿಗುತ್ತಿಲ್ಲ. ಆಗಮ ಸಾಹಿತ್ಯವನ್ನು ಅಧ್ಯಯನ ಮಾಡುವುದರಿಂದ ಈ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಬಹುದು. ಶಿವಶರಣರು ತಮ್ಮ ಕೆಲವು ವಚನಗಳಲ್ಲಿ ವೀರಶೈವರ ಪ್ರಾಚೀನತೆಯನ್ನು ವ್ಯಕ್ತಪಡಿಸಿದ್ದನ್ನು ನಮ್ಮ ಲೇಖನದಲ್ಲಿ [22] ತೋರಿಸಲು ಪ್ರಯತ್ನಿಸಲಾಗಿದೆ.

ಆಗಮಗಳು ವೀರಶೈವಕ್ಕೆ ಮೂಲ

ಕೆಲವು ಆಗಮಗಳಲ್ಲಿ ಇತ್ತೀಚೆಗೆ ಪ್ರಕ್ಷಿಪ್ತತೆ ನಡೆದುದು ಕಂಡುಬರುತ್ತದೆ. ಶಿ.ಶಿ. ಬಸವನಾಳರು - ವೀರಶೈವದ ಹುಟ್ಟು ಬೆಳವಣಿಗೆ ಮೂರು ಉಪನ್ಯಾಸಗಳಲ್ಲಿ "ಸ್ವಾಯಂಭುವ, ಯೋಗಜ ಪಾರಮೇಶ್ವರ ಮೊದಲಾದ ಆಗಮಗಳಲ್ಲಿಯೂ ಬಸವಣ್ಣನವರ ಬಗೆಗೂ ಅಲ್ಲಮಪ್ರಭುವಿನ ಬಗೆಗೂ ಹಲವು ಸಂಗತಿಗಳು ಸಿಕ್ಕುತ್ತವೆ" [23] ಎನ್ನುವ ನುಡಿ ತೀರಾ ಸಟೆಯಾಗಿದೆ. ವಾರಾಣಸಿಯ ಪಂ. ವಜ್ರವಲ್ಲ ದ್ವಿವೇದರು ಇತ್ತೀಚೆಗೆ ಸಂಪಾದಿಸಿ ಪ್ರಕಟಿಸಿದ ಐದು ಆಗಮಗಳಲ್ಲಿ ಇದೂ ಒಂದು. ಪಾರಮೇಶ್ವರಾಗಮವನ್ನು ಸಂಪೂರ್ಣವಾಗಿ

---

21. ಅದೇ, ಪುಟ, ೩
22. 'ಶಿವಶರಣರ ದೃಷ್ಟಿಯಲ್ಲಿ ವೀರಶೈವದ ಪ್ರಾಚೀನತೆ', ೧೯೯೪ರ ಸಂ. ಕರ್ನಾಟಕ ಹಾಗೂ ಪರಂಜ್ಯೋತಿ ಮಾಸಿಕದಲ್ಲಿ ಪ್ರಕಟ
23. ವೀರಶೈವದ ಹುಟ್ಟು- ಬೆಳವಣಿಗೆ, ಶಿ. ಶಿ. ಬಸವನಾಳ, ಪುಟ. ೧೪

ಅಧ್ಯಯನ ಮಾಡಿದರೆ ಎಲ್ಲಿಯೂ ಬಸವಾಲ್ಲಮರ ಸಂಗತಿಯಂತೂ ದೊರೆಯಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ವೀರಶೈವ ಧರ್ಮದ ಶ್ರೇಷ್ಠತೆಯೇ ಗೋಚರಿಸಿತು. ಮತ್ತು ಈ ಆಗಮಗಳಲ್ಲಿ ಪಂಚಾಚಾರ್ಯರ ಉಲ್ಲೇಖ ಸಿಗುವವುದಿಲ್ಲ. ಕೆಲವರು ವ್ಯಕ್ತಿ ಪ್ರತಿಷ್ಠೆಯನ್ನು ಸ್ಥಾಪಿಸಲು ಮಧ್ಯಂತರೆ ಈ ಪ್ರಕ್ಷಿಪ್ತ ಕಾರ್ಯವನ್ನು ಮಾಡಿರುವುದರಿಂದ ವೀರಶೈವ ಮತೇತಿಹಾಸಕ್ಕೆ ಧಕ್ಕೆಯಾಗಿರುವುದು ಖಂಡಿತ ಸತ್ಯವಾಗಿದೆ.

ನಿಜಗುಣರ ವಿವೇಕಚಿಂತಾಮಣಿಗೆ ಪಾರಮೇಶ್ವರಾಗಮವೆ ಪ್ರೇರಣೆ ನೀಡಿರಬಹುದು. ಭಾರತೀಯ ಸೌಗತ –ವೈದಿಕ-ಸೌರ-ವೈಷ್ಣವ ಮತಗಳ ನಿರೂಪಣೆ ಮಾಡಿ ಶೈವತಂತ್ರದ ಪ್ರತಿಪಾದನೆ ಪಾರಮೇಶ್ವರದಲ್ಲಿ ಸ್ಪಷ್ಟವಾಗಿದೆ. ವೀರಶೈವವು ಸ್ವತಂತ್ರ ಹಾಗೂ ಶ್ರೇಷ್ಠತಮ ಮತವೆಂಬುದಕ್ಕೆ ಸಾಕಷ್ಟು ಪ್ರಾಮಾಣಿಕ ಶ್ಲೋಕಗಳನ್ನು ಉದಾಹರಿಸಬಹುದು.

''ಶೈವಂ ಸಪ್ತವಿಧಂ ಪುಣ್ಯ ವೀರಶೈವಾದಿ ಭೇದತಃ। ೧-೧೫
ವೀರಶೈವಂ ತಥಾನಾದಿ ಶೈವಮಾದಿ ಪದಂ ತತಃ ॥ ೧-೧೬

ಇಲ್ಲಿ ವೀರಶೈವವೇ ಪ್ರಥಮವಾಗಿದೆ. ವೀರಶೈವವನ್ನು ಅನುಸರಿಸಿದವರು ಶೈವರಾಗಿ ಪರಿವರ್ತನೆಗೊಂಡದ್ದು ಗೋಚರಿಸುತ್ತದೆ.

ಅತ್ರಾದೌ ವೀರಶೈವಾಖ್ಯಂ ತಂತ್ರಾಣಾಮುತ್ತಯೋತ್ತಮಮ್ ॥ ೧-೩೨

ಇತರ ಎಲ್ಲ ತಂತ್ರಗಳಲ್ಲಿ ವೀರಶೈವ ತಂತ್ರವೇ ಸರ್ವೋತ್ತಮವೆಂದಿದ್ದಾನೆ ಶಿವನು. ವೀರಶೈವ ಮತ ವೈಶಿಷ್ಟ್ಯ ಕುರಿತ ವಿಚಾರಗಳು ಸಂಗ್ರಾಹ್ಯವಾಗಿವೆ.

ವೀರಶೈವ ಮತಂ ಸದ್ಯೋಭೋಗಮೋಕ್ಷೈಕ ಸಾಧನಮ್।
ಸರ್ವೋತ್ತಮಂ ಮಮ ಮತಂ ಯತಃ ಸರ್ವೋತ್ತಮೋಸ್ಪೃಹಮ್ ॥ ೧-೪೧

ನ ವೀರಶೈವ ಸದೃಶಂ ಮತಮಸ್ತಿ ಜಗತ್ರಯೇ ।
ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಮ್ ॥ ೧-೪೨

ಯೇ ವೀರಶೈವೇ ದೇವೇಶಿ ದೀಕ್ಷಿತಾಃ ಶಿವಯೋಗಿನಃ।
ತಾನ್ ದೃಷ್ಟ್ವೈವ ಫಲಾಯಂತೇ ದೂರತೋ ಯಮಕಿಂಕರಾ ॥ ೧-೪೬

ಯಸ್ಯ ಭಸ್ಮ ಲಲಾಟೇಽಸ್ತಿ ಕಂಠೇ ಲಿಂಗಂ ಮದಾತ್ಮಕಮ್
ರುದ್ರಾಕ್ಷಧಾರಣಂ ದೇಹೇ ಸೋಹಂ ದೇವಿ ನಸಂಶಯಃ ॥ ೧-೪೧

ಬ್ರಾಹ್ಮಣಾ ಕ್ಷತ್ರಿಯಾ ವೈಶ್ಯಾಃ ಶೂದ್ರಾಯೇ ಚಾನ್ಯಜಾತಯಃ।
ಲಿಂಗಧಾರಣ ಮಾತ್ರೇಣ ಶಿವಾ ಏವ ನ ಸಂಶಯಃ । ೧-೫೮

ಸ್ತ್ರೀಯೋ ಬಾಲಾಸ್ತಥಾ ವೃದ್ಧಾ ಖಂಜಾಕುಬ್ಜಾಂಧ ಪಂಗವಃ।
ಉನ್ಮತ್ತಾ ಬಧಿರಾಃ ಕಾಣಾ ಶಠಾ ಧೂರ್ತಾಶ್ಚ ವಂಚಕಾಃ ॥ ೧-೫೬ ॥

ಚೋರಾ ಜಾರಾಸ್ತಥಾ ವೇಶ್ಯಾ ಆ ಚಾಂಡಾಲಾಂತ ಸಂಭವಾಃ।
ಮಲ್ಲಿಂಗ ಧಾರಣಾದೇವ ಮದ್ರೂಪಾ ಏವತೇ ಶಿವೆ ೧-೬೦[25]

ಬಸವಣ್ಣನವರು ಕೂಡಲ ಸಂಗಮದಲ್ಲಿ ಅಧ್ಯಯನಮಾಡುತ್ತಿರುವಾಗ ಪಾರಮೇಶ್ವರಾಗಮದ ಈ ಶ್ಲೋಕಗಳು ಅವರನ್ನು ಕ್ರಾಂತಿಮಾರ್ಗಕ್ಕೆ ಪ್ರೇರೇಪಿಸಿರಲು ಸಾಕು. ವೀರಶೈವ ಮತ ಸರ್ವೋತ್ತಮವೆನಿಸುವುದಕ್ಕೆ ಸಕಲರ ಹಿತವನ್ನು ಬಯಸಿದ್ದು ಅವರ ಗಮನವನ್ನು ಸೆಳೆದಿದೆ. ಈಶ್ವರನು ಪಾರ್ವತಿಗೆ ಹೇಳುತ್ತಾನೆ "ಎಲ್ಲರಲ್ಲಿ ನಾನು ಸರ್ವಶ್ರೇಷ್ಠನಾಗಿರುವಂತೆ ಸದ್ಯೋಭೋಗಮೋಕ್ಷೈಕ ಸಾಧನವೆನಿಸಿದ ವೀರಶೈವ ಮತವು ಸರ್ವೋತ್ತಮವೆನಿಸಿದೆ. ಸರ್ವಭೋಗಪ್ರದವಾದ ಪುಣ್ಯಮಯವಾದ ಶಿವಸಾಯುಜ್ಯವನ್ನುಂಟುಮಾಡುವ ವೀರಶೈವಮತಕ್ಕೆ ಸದೃಶವಾದ ಮತ್ತೊಂದು ಮತವು ಮೂರು ಲೋಕದಲ್ಲಿಯೇ ಇಲ್ಲ. ಯಾಕಂದರೆ ವೀರಶೈವ ಧರ್ಮದಲ್ಲಿ ದೀಕ್ಷಿತರಾಗಿ ಶಿವಯೋಗ ಸಾಧನೆಗೈದ ಶಿವಯೋಗಿಗಳನ್ನು ನೋಡಿಯೇ ಯಮದೂತರು ಓಡಿ ಹೋಗುತ್ತಾರೆ.

"ಯಾವನು ಹಣೆಯಲ್ಲಿ ಭಸ್ಮ, ಕಂಠದಲ್ಲಿ ನನ್ನ ಸ್ವರೂಪವಾದ ಲಿಂಗ, ಮತ್ತು ರುದ್ರಾಕ್ಷವನ್ನು ಧರಿಸಿಕೊಂಡಿರುವನೊ ನಿಶ್ಚಯವಾಗಿ ಅವನೇ ನಾನು. ಅಂದರೆ ಶಿವಲಾಂಛನಧಾರಿಗಳೆಲ್ಲ ನನ್ನ ಸ್ವರೂಪರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಯಾರೇ ಆಗಲಿ ಶಿವಲಿಂಗಧಾರಣ ಮಾಡಿಕೊಳ್ಳುವದರಿಂದ ಅವರೆಲ್ಲ ಶಿವಸ್ವರೂಪರು. ಸ್ತ್ರೀಯರು, ಬಾಲರು, ಮುದುಕರು, ಕುಂಟರು, ಕಳ್ಳರು, ಅಂಧರು, ಹೆಳವರು, ಉನ್ಮತ್ತರು, ಕಿವುಡರು ಮೆಳ್ಳುಗಣ್ಣನವರು, ದುಷ್ಟರು ಧೂರ್ತರು, ವಂಚಕರು, ಕಳ್ಳರು, ವ್ಯಭಿಚಾರಿಗಳು, ವೇಶ್ಯೆಯರು. ಕೊನೆಯದಾಗಿ ಚಾಂಡಾಲರವರೆಗಿರುವ ಎಲ್ಲರೂ ನನ್ನ ಸ್ವರೂಪವಾದ ಲಿಂಗಧಾರಣ ಮಾತ್ರದಿಂದ ನನ್ನ ಸ್ವರೂಪವೇ ಆಗುವರು." ಎಂದು ಮುಂತಾಗಿ ಪಾರ್ವತಿಗೆ ವೀರಶೈವದ ವೈಶಿಷ್ಟ್ಯವನ್ನು ಬಿತ್ತರಿಸುತ್ತಾನೆ ಶಿವನು. ಗ್ರಂಥಸ್ಥವಾದ ಈ ಎಲ್ಲ ವಿಚಾರಗಳನ್ನು ಮನನ ಮಾಡಿದ ಬಸವೇಶ್ವರರು ಕಾರ್ಯಗತಗೊಳಿಸಿದರೆಂದರೆ ಯಾವ ಅಪಚಾರವಾಗುವುದಿಲ್ಲ ಸಕಲ ಜೀವಾತ್ಮರಿಗೆ ಲೇಸ ಬಯಸುವ ಸಕಲ ಮಾನವರ ಕಲ್ಯಾಣಕ್ಕಾಗಿ ಏಕದೇವೋಪಾಸನೆಯ ಕುರುಹಾದ ಇಷ್ಟಲಿಂಗಧಾರಣೆಗೆ ಮಹತ್ವವನ್ನು ಕೊಟ್ಟರು. ಈ ವಿಚಾರವನ್ನು ಅನುಸರಿಸಿಯೇ ಬಸವಣ್ಣನವರು "ಶ್ರೀವಿಭೂತಿ ರುದ್ರಾಕ್ಷಿಯಿದ್ದವರ ಲಿಂಗವೆಂಬೆ"[26] ಎಂಬ ವಚನವನ್ನು ಸಾರಿದರು. ದೇವ ಸಹಿತ ಭಕ್ತ ಬಂದರೆ ಕೂಡಲಸಂಗಯ್ಯನೆಂದೇ ಕಂಡರು.

ಸೂಕ್ಷ್ಮಾಗಮದಲ್ಲಿ ವೀರಶೈವಕ್ಕೆ ಮೂಲನೆನಿಸಿದ ಪರಾತ್ಪರ ಪರಶಿವನ ವರ್ಣನೆಯಿಂದಲೇ ಆಗಮ ಪ್ರಾರಂಭವಾಗುತ್ತದೆ. ವಸ್ತುತಃ ಪರಶಿವನೇ ವೀರಶೈವದ

24.25 ಪಾರಮೇಶ್ವರಾಗಮಃ-(ಸಂ) ಪಂ. ವ್ರಜವಲ್ಲಭದ್ವಿವೇದಿಃ, ಪ್ರ. ಜಂಗಮವಾಡೀಮಠ ವಾರಾಣಾಸೀ
26. ಬ. ಷ. ವಚನಗಳು ೪೫೧, ೨೭೧; ಸೂಕ್ಷ್ಮಾಗಮ ೪-೪೬ (ಸಂ) ವ್ರಜವಲ್ಲಭದ್ವಿವೇದಿಃ

ಉತ್ಪಾದಕನು ಎಂಬುದನ್ನು ಇಲ್ಲಿ ಅರಿಯಲು ಸಾಧ್ಯವಿದೆ. ಇಲ್ಲಿ ಓಂಕಾರದ ವಿವರಣ ಚೆನ್ನಾಗಿ ಬಂದಿದೆ. ಓಂಕಾರಯುಕ್ತವಾದ ಪಂಚಾಕ್ಷರಗಳೇ ಷಡಕ್ಷರ ಮಂತ್ರ. ಇದುವೇ ಷಟ್‌ಸ್ಥಲಕ್ಕೆ ಮೂಲವೆನಿಸಿದೆ. ಈ ಷಡಕ್ಷರಗಳಿವೆ ಷಡ್‌ಲಿಂಗಗಳ ಹಾಗೂ ಷಡಂಗಗಳ ಸಂಬಂಧವನ್ನು ಕಾಣಬಹುದು. ಷಡ್‌ಲಿಂಗಗಳನ್ನು ಷಟ್ ಹಸ್ತಗಳಿಂದ ಅರ್ಚಿಸಲು ವಿಧಾನವಿಲ್ಲಿದೆ. ಶಿವಶರಣ ಸಾಹಿತ್ಯಕ್ಕಿಂತ ಮುಂಚೆ ಷಟ್‌ಸ್ಥಲ ವಿಚಾರ ಇಲ್ಲವೆಂಬ ವಾದವನ್ನು ಈ ಸೂಕ್ಷ್ಮಾಗಮವು ಸ್ಪಷ್ಟವಾಗಿ ಅಲ್ಲಗಳೆಯುತ್ತದೆ. ಇಷ್ಟಲಿಂಗ ಸಂಸ್ಕಾರದ ವಿಧಾನವು ಮನೋಜ್ಞವಾಗಿ ಮೂಡಿಬಂದಿದೆ. ಇದನ್ನೆಲ್ಲ ನಮ್ಮ 'ವೀರಶೈವ ಧರ್ಮ ಒಂದು ಅಧ್ಯಯನ,' ಕೃತಿಯಲ್ಲಿ ಅವಲೋಕಿಸಬಹುದು

ದತ್ತಂ ಲಿಂಗಮಿದಂ ವತ್ಸ ನ ಕದಾಚಿದ್ ವಿಯೋಜಯ
ಪ್ರಾಣವದ್‌ರಕ್ಷಣೀಯಂ ಹಿ ಪ್ರಾಣಲಿಂಗಮಿದಂ ತವ[27]

ಲಿಂಗದೀಕ್ಷೆಯನ್ನು ಮಾಡಿದ ಗುರು ಶಿಷ್ಯನಿಗೆ ನಿರೂಪಿಸುತ್ತಾನೆ. ಹೇ, ಶಿಷ್ಯ, ನಿನಗೆ ಕೊಡಲ್ಪಟ್ಟ ಈ ಲಿಂಗವನ್ನು ಎಂದೂ ಅಗಲಿರಬೇಡ. ನಿನ್ನ ಪ್ರಾಣದಂತೆ ಈ ಪ್ರಾಣಲಿಂಗವನ್ನು ಕಾಪಾಡಬೇಕು, ಎನ್ನುವ ವಿಚಾರದಲ್ಲಿ ಚರಲಿಂಗದ ಕಲ್ಪನೆಯು ಇಲ್ಲವೆ ಇಲ್ಲ. ಮುಂದುವರೆದು ಲಿಂಗಧರಿಸಬೇಕಾದ ಶಿವ ಕಂಠ ಕಕ್ಷ, ಉರ, ಕರಸ್ಥಲದ ವಿವರಣೆಯೂ ಬಂದಿದೆ ಮತ್ತು

ಏಕಕಾಲಂ ದ್ವಿಕಾಲಂ ವಾ ತ್ರಿಕಾಲಂ ವಾಪಿ ಶಾಂಕರಿ
ಪೂಜಯೇನ್ನಿಯತಂ ಲಿಂಗಂ ಪ್ರಾಣಲಿಂಗಪರಾಯಣ । ೬-೫೧
ಏವಂ ಯಃ ಕುರುತೇ ಭಕ್ತ್ಯಾ ಪ್ರಾಣಲಿಂಗಾರ್ಚನಂ ಸದಾ।
ವೀರಶೈವಃ ಸ ವಿಜ್ಞೇಯಃ ಸರ್ವಶೈವೋತ್ತಮೋತ್ತಮ ॥೬-೫೨ [28]

ಪ್ರಾಣಲಿಂಗ ಪರಾಯಣನಾದ ಸದ್ಭಕ್ತನು ತ್ರಿಕಾಲದಲ್ಲಿ ಲಿಂಗವನ್ನು ಪೂಜಿಸಬೇಕು. ಅದು ಸಾಧ್ಯವಾಗದಿದ್ದರೆ ಎರಡು ಸಮಯದಲ್ಲಿ ಅದೂ ಆಗದಿದ್ದರೆ ಒಮ್ಮೆಯಾದರೂ ತಪ್ಪದೆ ಲಿಂಗವನ್ನು ಅರ್ಚಿಸಬೇಕು. ಯಾವನು ಭಕ್ತಿಯಿಂದ ಹೀಗೆ ಪ್ರಾಣಲಿಂಗಾರ್ಚನೆಯನ್ನು ಮಾಡುವನೋ ಅವನೇ ವೀರಶೈವನೆನಿಸುವನು. ಇವನು ಸರ್ವ ಶೈವರಲ್ಲಿ ಉತ್ತಮೋತ್ತಮನೆನಿಸುವನು, ಎಂದುದಾಗಿ ಶಿವನು ಪ್ರತಿಪಾದಿಸಿದ್ದಾನೆ. ಲಿಂಗದಲ್ಲಿ ಪ್ರಾಣವನನ್ನಿರಿಸಿ ಪ್ರಾಣದಲ್ಲಿ ಲಿಂಗವನ್ನು ನೆನೆಯುತ್ತ ಸಮರಸಭಾವದಿಂದ ಅರ್ಚಿಸುವ ವಿಧಾನವೇ ವೀರಶೈವರದು ಇದನ್ನೆ ಮುಂದುವರೆದು ಷಟ್‌ಸ್ಥಲಾತ್ಮಕ ಪೂಜೆಯನ್ನು ಪ್ರಸ್ತಾಪಿಸುತ್ತ

ಇದ ಮತ್ರ ರಹಸ್ಯಂ ವೈ ಶ್ರೂಯತಾಂ ಷಟ್‌ಸ್ಥಲಾತ್ಮಕಮ್।
ಏವಂ ಸಮರಸಾತ್ ಭಾವಾದಂಗ ಷಟ್‌ಸ್ಥಲಯೋಗತಃ॥
ಯಃ ಪೂಜಯತಿ ಮಾಂ ದೇವಿ ವೀರಶೈವ ಸ ಉಚ್ಯತೇ ॥

27.28. ಸೂಕ್ಷ್ಮಾಗಮ ಆರನೆಯ ಪಟಲ

ಷಟ್‌ಸ್ಥಲಾತ್ಮಕ ಶಿವಪೂಜೆಯು ರಹಸ್ಯಮಯವಾಗಿದೆ. ಅದನ್ನು ಅಂಗ ಲಿಂಗಗಳ ಸಮರಸ ಭಾವದಿಂದ ಅರಿತ ಯಾವಾತನು ಪೂಜಿಸುವನೋ ಅವನೇ ವೀರಶೈವನೆನಿಸುವನು ಎಂಬುದನ್ನು ಸ್ಪಷ್ಟವಾಗಿ ವಿವರಿಸಿದ್ದನ್ನು ಇಲ್ಲಿ ಕಾಣಬಹುದು.

ವೀರಶೈವದ ನಿರುಕ್ತ

ಸೂಕ್ಷ್ಮಾಗಮದ ಏಳನೆಯ ಪಟಲದಲ್ಲಿ ಸಪ್ತ ಶೈವಗಳ ವಿವರಣೆ ಬಂದಿದ್ದು ಸಪ್ತ (ಏಳು) ಶೈವಗಳನ್ನು ಹೇಳಿ 'ವೀರಶೈವ ಮಥಶೃಣು' ಎಂದು ಶಿವನೇ ಪ್ರತಿಪಾದಿಸುತ್ತಾನೆ. ಇದರಿಂದ ಸಪ್ತಶೈವಗಳೇ ಬೇರೆ ವೀರಶೈವವೇ ಭಿನ್ನವೆಂಬುದು ಸ್ಪಷ್ಟವೆನಿಸುತ್ತದೆ. ಶೈವದಿಂದಲೇ ವೀರಶೈವ ಎಂಬ ಸಂಶಯಕ್ಕೆ ಕೊನೆಯೆನಿಸಿದೆ. ಮುಂದುವರೆದು ಬೋಧಕನಾದ ಶಿವನು

> ವೀತರಾಗಾದಿ ದೋಷತ್ವಾದಾತ್ಮ ತತ್ವ ವಿಚಾರಣಾತ್
> ವಿಕಲ್ಪಾಕಲ್ಪಶೂನ್ಯತ್ವಾತ್ ವೀರಶೈವಮತ ಸ್ಮೃತಮ್ ॥೭-೨೯॥ [29]

ಯಾವಾತನು ರಾಗ-ದ್ವೇಷಾದಿ ಸಕಲ ದೋಷಗಳಿಂದ ಮುಕ್ತನಾಗಿ ಆತ್ಮ ತತ್ವಚಿಂತನೆಯಲ್ಲಿ ಯಾವಾಗಲೂ ತೊಡಗುವನೋ ಮತ್ತು ಸಂಕಲ್ಪ ವಿಕಲ್ಪಗಳಿಂದ ಬಿಡುಗಡೆಯುಳ್ಳವನಾಗುವನೋ ಅವನೇ ವೀರಶೈವನೆನಿಸುವನು. ಈ ವೀರಶೈವನು ಆಚರಣೆಯ ಭೇದದಿಂದ ಸಾಮಾನ್ಯ-ವಿಶೇಷ-ನಿರಾಭಾರಿಯೆಂದು ಮೂರು ತೆರನಾಗುವನು ಎಂದು ವಿವರಿಸಿ ಆಯಾ ಭೇದಗಳ ವಿವರವನ್ನು ಪ್ರತಿಪಾದಿಸುತ್ತಾನೆ. ಈ ಮೂರು ಭೇದಗಳನ್ನು ನಿಜಗುಣರ ವಿವೇಕಚಿಂತಾಮಣಿಯಲ್ಲಿ, ತೋಂಟದ ಸಿದ್ಧೇಶ್ವರರ ಷಟ್‌ಸ್ಥಲ ಜ್ಞಾನ ಸಾರಾಮೃತದಲ್ಲಿಯೂ ಅವಲೋಕಿಸಬಹುದು.

ಮೊಗ್ಗೆಯ ಮಾಯಿದೇವರು ವೀರಶೈವದ ಪರಿಭಾಷೆಯನ್ನು ಮೇಲಿನ ಪ್ರಮಾಣವನ್ನೇ ಅನುಸರಿಸಿದ್ದಾರೆ.

> ವೀರಶೈವನಿರುಕ್ತಿರ್ಯಾ ದ್ವಯಮೇವಾಧುನೋಚ್ಯತೇ ।
> ವಿಶಬ್ದೋತ್ರ ವಿಕಲ್ಪಾರ್ಥೋः ಶಬ್ದೋ ರಹಿತಾರ್ಥಕಾः।
> ವಿಕಲ್ಪ ರಹಿತಂ ಶೈವಂ ವೀರಶೈವಮಿತಿ ಸ್ಮೃತಂ॥
> ಏಕಮೇವಾದ್ವಿತೀಯಂ ಯದವಿಕಲ್ಪಂ ಪರಂ ಪದಂ।
> ತದ್ವೀರಶೈವ ಮಿತ್ಯುಕ್ತಂ ನೇತರಂ ಸವಿಕಲ್ಪಕಂ॥ [30]

ವೀರಶೈವ ಶಬ್ದಾರ್ಥವು ಎರಡು ತೆರನಾಗದೆ. ವೀರ ಪದದಲ್ಲಿಯ 'ವಿ' ಅಕ್ಷರವು ವಿಕಲ್ಪಾರ್ಥದಲ್ಲಿ ಪ್ರಯೋಗವಾಗಿದೆ. 'ರ' ಕಾರವು ರಹಿತಾರ್ಥದಲ್ಲಿ ವ್ಯಕ್ತವಾಗಿದೆ. ವಿಕಲ್ಪರಹಿತವಾದಶೈವವೇ ವೀರಶೈವ ವಾಗುವದು. ವೀರಶೈವನು ಏಕ ಮೇವಾದ್ವಿತೀಯವೆನಿಸಿದ ಇಷ್ಟಲಿಂಗದಲ್ಲಿ ನಿಷ್ಠೆಯುಳ್ಳವನಾಗುವದೇ ವಿಕಲ್ಪ

---

29. ಸೂಕ್ಷ್ಮಾಗಮ ಏಳನೆ ಪಟಲ
30. ವಿಶೇಷಾರ್ಥ ಪ್ರಕಾಶಿಕೆ 2-3-31, 32, ಶ್ಲೋಕ

ರಹಿತತೆಯೆನಿಸುವುದು. ಅಂದರೆ ವೀರಶೈವನು ಏಕದೇವೋಪಾಸಕನು. ಇತರೆ ಶೈವಗಳು ವಿಕಲ್ಪವುಳ್ಳವು ಸಂಕಲ್ಪ ವಿಕಲ್ಪಗಳಿಂದ ಪೂಜಿಸುತ್ತಾರೆ. ಒಂದೇ ಶಿವಲಿಂಗವನ್ನು ಪೂಜಿಸುವುದಿಲ್ಲ. ಅದಕ್ಕಾಗಿ ವೀರಶೈವ ಶಬ್ದದ ನಿರಕ್ತಿಯನ್ನುಮೇಲಿನಂತೆಮಾಡಿದ್ದಾರೆ. ಸಿದ್ಧಾಂತ ಶಿಖಾಮಣಿಯಲ್ಲಿ

ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯ ಬೋಧಿಕಾ।
ಯಸ್ಸಾಂರ ಮಂತೇಯೇ ಶೈವಾಃ ವೀರಶೈವಾಃ ಪ್ರಕೀರ್ತಿತಾ :[31]

'ವೀರಶೈವ' ಪದವು ವಿರಶೈವರ ಸಾಧನೆಯನ್ನೇ ತಿಳಿಸುತ್ತದೆ. 'ವೀ' ಪದವು ಶಿವ ಜೀವರೈಕ್ಯತೆಯನ್ನು ಬೋಧಿಸಿದರೆ ಅದರಲ್ಲಿ ಆನಂದಿಸುವಿಕೆಯನ್ನು 'ರ' ಪದವು ಸೂಚಿಸುತ್ತದೆ. ಮೇಲೆ ವಿವರಿಸಿದಂತೆ ಪ್ರಾಣಲಿಂಗಪೂಜಾ ಪರಾಯಣನಾಗುವಿಕೆಯನ್ನೇ ಶಿವ ಜೀವರೈಕ್ಯತೆ ತಿಳಿಸುತ್ತದೆ. ಅಂಗ-ಲಿಂಗಗಳ ಸಮರಸಭಾವದ ಸಾಧನೆ‌ಇಲ್ಲಿದೆ. ಸಂಸ್ಕೃತದ ಜ್ಞಾನವಿಲ್ಲದವರು 'ವೀರ' ಪದದ ಮಧ್ಯದ ದೀರ್ಘಕ್ಕೆ ಯಾವ ಅರ್ಥವೆಂದು ಪ್ರಶ್ನಿಸುತ್ತಾರೆ. ಸಂಸ್ಕೃತ ವ್ಯಾಕರಣದಲ್ಲಿ ಹ್ರಸ್ವದೀರ್ಘಗಳಿಗೆ ಸಮಾನ ಪ್ರಯತ್ನವಿರುವುದರಿಂದ ವ್ಯತ್ಯಾಸ ಮನ್ನಿಸುವುದಿಲ್ಲ. ಮುಖ್ಯವಾಗಿ ವೀರಶೈವನು ಲಿಂಗಾಂಗ ಸಾಮರಸ್ಯದಲ್ಲಿ ಮಗ್ನನಾಗುವುದೇ ಅವನ ಮುಖ್ಯಗುರಿಯಾಗಿದೆ. ಅದನ್ನೇ ಶಾಸ್ತ್ರಕಾರರು ಇನ್ನೂ ಸ್ಪಷ್ಟವಾಗಿ ವಿವರಿಸುತ್ತಾರೆ.

ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ
ವಿನ್ಯಸ್ಯ ತಲ್ಲೀನ ಮನಃ ಪ್ರಚಾರಃ
ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ
ಸಂಪೂಜಯತ್ಯಂಗ ಸವೀರಶೈವಃ ||[32]

ಯಾವ ಭಕ್ತ (ಅಂಗ)ನು ತನ್ನ ವಾಮಕರ ಪೀಠದಲ್ಲಿ ಇಷ್ಟಲಿಂಗವನ್ನು ಇರಿಸಿ ಆ ಲಿಂಗದಲ್ಲಿ ಮನವನ್ನು ನಿಲ್ಲಿಸಿ ಬಾಹ್ಯಕ್ರಿಯೆಗಳನ್ನೆಲ್ಲ ಮರೆತು ತದೇಕಚಿತ್ತನಾಗಿ ಲಿಂಗಾನುಸಂಧಾನವನ್ನು ಸಾಧಿಸುವನೋ, ಅವನೇ ವೀರಶೈವನೆನಿಸುತ್ತಾನೆ. ಇಲ್ಲಿ ಪ್ರಯೋಗಿಸಿದ ಅಂಗಪದವು ಶಿಷದೀಕ್ಷೆಯಾಯಗುವಿಕೆಯನ್ನು ಸೂಚಿಸುತ್ತದೆ. ಗುರುವಿನಿಂದ ದೀಕ್ಷಾಬದ್ಧನಾದರೇನೆ ಲಿಂಗಾಗ ಸಾಮರಸ್ಯದ ಅಧಿಕಾರಬರುತ್ತದೆ . ಅಂಥವನೇ ವೀರಶೈವ ಪದವಾಚ್ಯನೆನಿಸುವನು. ಅವಿರಳ ಜ್ಞಾನಿ ಚನ್ನಬಸವಣ್ಣನವರು ವಿವರಿಸಿದಂತೆ ವೀರಶೈವನ ಸ್ವರೂಪ ಹೀಗಿದೆ.

''ವೀರಶೈವನಾದಡೆ ಪರಧನ ಪರಸ್ತ್ರೀಯರ ಮುಟ್ಟದಿರಬೇಕು.
ಎಂದೂ ಪರಹಿಂಸೆಯನೆಸಗದಿರಬೇಕು
ಒಡಲಳಿದಡೆಯೂ ಹಿಡದಾಚಾರವ ಬಿಡದಿರಬೇಕು

---

31. ಸಿದ್ಧಾಂತ ಶಿಖಾಮಣಿ ೨೧-೧೫
32. ಶಂಕರ ಸಂಹಿತೆ

ಇಂತೀ ವೀರಾಚಾರವು ನೆಲೆಗೊಳ್ಳದೆ
ವೀರವಂಶದಲ್ಲಿ ಹುಟ್ಟಿದ ಮಾತ್ರಕ್ಕ ವೀರಶೈವನೆಂತಪ್ಪನಯ್ಯಾ ?
ಕೂಡಲ ಚನ್ನ ಸಂಗಮ ದೇವಾ [33]

ಇಲ್ಲಿ ವೀರಶೈವತ್ವದ ತಿರುಳನ್ನೇ ಕಾಣುತ್ತೇವೆ. ವೀರಶೈವದ ಸಂಸ್ಕಾರ, ಸಂಸ್ಕೃತಿ ಸದಾಚಾರಗಳಿಲ್ಲದೆ ಕೇವಲ ವೀರಶೈವ ಕುಲದಲ್ಲಿ ಹುಟ್ಟಿದ ಮಾತ್ರಕ್ಕೆ ವೀರಶೈವನಾಗುವುದಿಲ್ಲ. ಪರಧನ, ಪರಸತಿಯರ ಮುಟ್ಟದಿರುವಿಕೆ ಪರಹಿಂಸೆಯನೆಸಗದಿರುವಿಕೆಗಳೇ ವೀರಶೈವರ ಉಚ್ಚಸಂಸ್ಕೃತಿ. ಒಡಲಳಿದಡೆಯೂ ಹಿಡದಾಚಾರವನ್ನು ಬಿಡದೆ ಪಾಲಿಸುವ ವೀರತನದ ಸದಾಚರಣೆ ವೀರಶೈವರಿಗೆ ಮಿಾಸಲಾಗಿದೆ.

ವೀರವ್ರತಂ ನಾಮ ದೇವೇಶಿ ಯತೋ ವೀರೋರಣೇ ಭಟಃ।
ತಥಾ ಮತೇಚ ಸದ್ಭಕ್ತ್ಯಾ ವೀರೋ ವೈರಾಗ್ಯತೋ ದೃಢಾತ್
ಈ ಷಣತ್ರಯ ನಿರ್ಮುಕ್ತ್ವಾ ಜ್ಞಾನ ವಿಜ್ಞಾನ ತತ್ಪರಾಃ।
ದೃಢವೈರಾಗ್ಯಸಂಪನ್ನಾ ವೀರಾಸ್ತೇ ಶಿವಯೋಗಿನಃ ।8।
ಅಂಧಾ ಯೇ ಲಿಂಗಿನೋದೇವಿ ಪರಸ್ತ್ರೀರೂಪ ದರ್ಶನೇ
ಯುವಾನಶ್ಚಾಪಿ ಪಟವಸ್ತೇ ವೀರಾಃಶಿವಯೋಗಿನಃ ॥9॥
ಯೇ ಮೂಕಾಲಿಂಗಿನೋದೇವಿ ಪರದೋಷಾಮವಾದನೇ ।
ಸರ್ವಜ್ಞಾ ಅಪಿ ವಾ ಬಾರಾಸ್ತೇ ವೀರಾಃ ಶಿವಯೋಗಿನಃ ॥12॥
ಯೇ ಷಂಡಾ ಪರಕಾಂತಾಸು ಪಂಗವೋ ಯೇಽನ್ಯಪೀಡನೆ
ಅಜಿಹ್ವಾ ಯೇರಸಾಸ್ವಾದೇ ವೀರಾಸ್ತೇ ಶಿವಯೋಗಿನಃ ൦൦[34]

ಶಿವನು ವೀರಶೈವನ ವೀರತ್ವವನ್ನು ಕುರಿತು ಅನೇಕ ಶ್ಲೋಕಗಳಿಂದ ವಿವರಿಸುತ್ತಾನೆ. "ಪಾರ್ವತಿಯೇ ಕೇಳು ! ಯುದ್ಧದಲ್ಲಿ ಯೋಧನು ಹೇಗೆ ತನ್ನ ಪರಾಕ್ರಮವನ್ನು ತೋರಿಸುತ್ತಾನೋ ಅದೇ ರೀತಿ ನನ್ನ ಮತದಲ್ಲಿ ಸದ್ಭಕ್ತಿ ಹಾಗೂ ವೈರಾಗ್ಯದಲ್ಲಿ ದೃಢತ್ವ ವನ್ನು ತೋರಿಸುವವನು ವೀರ ನೆನಿಸಿಕೊಳ್ಳುತ್ತಾನೆ. ಪುತ್ರೇಷಣಾ, ವಿತ್ರೇಷಣಾ, ಲೋಕೇಷಣಾ ಗಳೆಂದು ಉಪನಿಷತ್ತುಗಳಲ್ಲಿ ಪ್ರತಿಪಾದಿತ ಮೂರು ಈಷಣ (ಇಚ್ಛೆ) ಗಳಿಂದ ಮುಕ್ತನಾಗಿ ಜ್ಞಾನ ಮತ್ತು ವಿಜ್ಞಾನ ಮಾರ್ಗದಲ್ಲಿ ತತ್ಪರರಾದ ದೃಢ ವೈರಾಗ್ಯ ಸಂಪನ್ನರಾದ ಶಿವಯೋಗಿ ಗಳು ವೀರರೆನಿಸಿಕೊಳ್ಳುತ್ತಾರೆ. ಹೇ ದೇವಿ ! ಯಾವ ಶಿವಯೋಗಿಯ ಯುವಕನಾಗಿದ್ದು ಇಂದ್ರಿಯಗಳು ಪ್ರಬಲರಾಗಿದ್ದರೂ ಪರಸ್ತ್ರೀಯರ ರೂಪವನ್ನು ಕಾಣುವಲ್ಲಿ ಅಂಧರಂತೆ ವರ್ತಿಸುವರೋ ಅವರೇ ವೀರರು. ಯಾವ ಶಿವಯೋಗಿಯು ಎರಡನೆಯವರ ದೋಷಗಳನ್ನು ದೂಷಿಸುವಲ್ಲಿ ಮೌನಿಗಳಾಗುವರೋ ಸರ್ವಜ್ಞರಾಗಿಯಾ ಬಾಲಕರಂತೆ ವರ್ತಿಸುವವರೋ ವೀರಲಿಂಗಾಂಗಿಗಳೆನಿಸುವರು. ಯಾವ ಶಿವಯೋಗಿಯು ಪರಸ್ತ್ರೀಯರ ವಿಷಯದಲ್ಲಿ

---

33. ಚ. ಬ. ವಚನಗಳು ೨೨
34. ಪಾರಮೇಶ್ವರಾಗಮ ಎಂಟನೇ ಪಟಲ

ಷಂಡರಂತೆ, ಪರಹಿಂಸೆಯನೆಸಗುವಲ್ಲಿ ಕುಂಟನಂತೆ ವಿಷಯಾಸ್ವಾದನೆಯಲ್ಲಿ ಬಾಯಿ ಚಪಲವಿಲ್ಲದವರಂತೆ ನಡೆಯುವರೋ ಅವರೇ ವೀರರು. ಅಂದರೆ ಪರಸ್ತ್ರೀ, ಪರಪೀಡೆ, ಮತ್ತು ಜಿಹ್ವಾ ಚಾಪಲ್ಯಗಳಿಂದ ಪರಾಙ್ಮುಖರಾಗಿರುವರೋ ಅವರು ನಿಜವಾದ ವೀರಶೈವರೆನಿಸುವರು. ಇವರು ನಿರಹಂಕಾರಿಗಳೂ, ಗರ್ವ ರಹಿತರೂ, ಅಹಿಂಸಾಪರರು, ದಯಾಪರರು, ಕ್ಷಮಾಶೀಲರು, ಸರಳರೂ ಆಗಿರುತ್ತಾರೆ.'' ಎಂದು ಮುಂತಾಗಿ ವೀರಶೈವದ ವೀರತ್ವವನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾನೆ. ಈ ವೀರತ್ವವು ವಿಶೇಷ ಹಾಗೂ ನಿರಾಭಾರಿ ವೀರಶೈವರ ಸ್ವರೂಪವನ್ನೇ ತಿಳಿಸುತ್ತದೆ. ಚನ್ನಬಸವಣ್ಣನವರ ಮೇಲಿನ ವಚನ ಸಾಮಾನ್ಯ ವೀರಶೈವನಿಗೆ ಅನ್ವಯಿಸುತ್ತದೆ. ಈ ತೆರನಾದ ಅರ್ಥವಿವರಣೆ ಲಿಂಗವಂತ ಅಥವಾ ಲಿಂಗಾಯತ ಪದಗಳಲ್ಲಿ ಕಾಣಬರುವುದಿಲ್ಲವಾದರೂ ಲಾಕ್ಷಣಿಕವಾಗಿ ಅದೇ ಅರ್ಥವನ್ನು ವ್ಯಕ್ತಪಡಿಸುತ್ತವೆ.

> ಸಿರಿಯುಳ್ಳವನೆ ಸಿರಿವಂತ
> ಗುಣವುಳ್ಳವನೆ ಗುಣವಂತ
> ಲಿಂಗವುಳ್ಳವನೆ ಲಿಂಗವಂತನು ನಿಜದಿ
> ಲಿಂಗ ಗುಣಗಳನು ಆಯತ ಸ್ವಾಯತ ಸನ್ನಿಹಿತ
> ಮಾಡಿಕೊಂಡವನೆ ಲಿಂಗಾಯತನು
> ಲಿಂಗಾಂಗ ಸಾಮರಸ್ಯದ ಸವಿಯನುಂಡವನೆ
> ನಿಜವಾದ ಶೈವನಯ್ಯಾ ಮೃಡಗಿರಿ ಅನ್ನದಾನೀಶ [35]

ವ್ಯಾವಹಾರಿಕವಾಗಿ ಸಂಪತ್ತು ಇದ್ದವರಿಗೆ ಸಿರಿವಂತ; ಗುಣವುಳ್ಳವನಿಗೆ ಗುಣವಂತ ಎಂದು ಕರೆಯುವಂತೆ, ಎದೆಯ ಮೇಲೆ ಲಿಂಗವಿದ್ದರೆ 'ಲಿಂಗವಂತ' ಎನಿಸುತ್ತಾನೆ. ಗುರುವಿನಿಂದ ದೀಕ್ಷಾಪೂರ್ವಕ ಲಿಂಗವನ್ನು ಆಯತಮಾಡಿಕೊಂಡರೆ 'ಲಿಂಗಾಯತ' ಪದ ಯೋಗ್ಯವೆನಿಸುವುದು. ಇಷ್ಟಲಿಂಗವನ್ನು ಆಯತ ಮಾಡಿಕೊಂಡರೆ ಸಾಲದು. ಶಿವಾರ್ಚನೆ ಅರ್ಥಾತ್ ಶಿವಯೋಗ ಸಾಧನೆಯಿಂದ ಶಿವಲಿಂಗವನ್ನು ತನ್ನದನ್ನಾಗಿಸಿಕೊಳ್ಳುವುದು ಲಿಂಗಸ್ವಾಯತವೆನಿಸುವುದು. ತನ್ನದನ್ನಾಗಿಸಿಕೊಳ್ಳುವುದೆಂದರೆ ಲಿಂಗವೇ ತನ್ನ ಪ್ರಾಣವೆಂದು ಭಾವಿಸಿ ಲಿಂಗವೇ ಪ್ರಾಣ, ಅಥವಾ ಪ್ರಾಣಲಿಂಗ ಸಂಬಂಧಿಯಾಗಬೇಕು. ಲಿಂಗಪ್ರಾಣಿಯಾದವನು ಲಿಂಗ ಸನ್ನಿಹಿತನಾಗುವನು. ಮೇಲೆ ವಿವರಿಸಿದಂತೆ ಲಿಂಗಾಂಗ ಸಾಮರಸ್ಯವನ್ನು ಸಾಧಿಸುವವನು ನಿಜವಾದ ವೀರಶೈವನೆನಿಸುವನು. ಬಾಹ್ಯ ಪ್ರಾಪಂಚಿಕ ವಿಷಯಗಳನ್ನು ಪರಿಹರಿಸಿ ಶಿವಯೋಗ ಸಿದ್ಧಿಯನ್ನು ಬಯಸುವವನೇ ವಿಶೇಷ ಹಾಗೂ ನಿರಾಭಾರಿ ವೀರಶೈವನೆನಿಸುವನು. ವೀರಶೈವ ಪದವು ಅರ್ಥಪೂರ್ಣವಾಗಿದ್ದು ಬಸವಾದಿ ಶಿವಶರಣರು ''ವೀರಶೈವ' ಪದವನ್ನು ಸಾಕಷ್ಟು ಸಲ ಬಳಸಿದ್ದಾರೆ. ಚನ್ನಬಸವಣ್ಣನವರು

---

35. ವಚನ ಸಂಪದ ; ಶ್ರೀ ಸನ್ನಿಧಿಯ ವ. ೧೪೬ ೯೬, ಚ. ಬ. ವಚನಗಳು ೬೦೬

ತಮ್ಮ ೧೪೦, ೧೬೩, ೨೨೮, ೪೫೩, ೬೦೬, ೬೦೮, ೭೧೬ ಇತ್ಯಾದಿ ವಚನಗಳಲ್ಲಿ 'ವೀರಶೈವ' ಪದ ಪ್ರಯೋಗ ಮಾಡಿರುವರು.

ಲಲಾಟ ಮೊದಲಾದ ನಾಲ್ವತ್ತೆಂಟು ಸ್ಥಾನಂಗಳಲ್ಲಿ
ಧಾರಣ ಮಾಡುವುದು, ಇದು ವೀರಶೈವರಿಗೆ ಸಲ್ಲುವ ನಡತೆ'' [36]

ಎಂದು ವೀರಶೈವ ಸಂಸ್ಕೃತಿಯನ್ನು ಬಿತ್ತರಿಸಿದ್ದಾರೆ ; ಇನ್ನೊಂದರಲ್ಲಿ

ವೀರಶೈವ ದೀಕ್ಷೆಯ ಮಾಡಿ
ಷಟ್‌ಸ್ಥಲ ಮಾರ್ಗಕ್ರೀಯ ನಿರೂಪಿಸಿ...[37]

ವೀರಶೈವ ದೀಕ್ಷೆಯ ವಿಚಾರವನ್ನೇ ಪ್ರಸ್ತಾಪಿಸುವುದಲ್ಲದೆ; ವೀರಶೈವ ದೀಕ್ಷೆಯನ್ನು ಪಡೆದ ಬಳಿಕ ಷಟ್‌ಸ್ಥಲ ಮಾರ್ಗಕ್ರಿಯೆಯನ್ನು ಅನುಸರಿಸಲು ಬರುವುದು ಎಂಬುದನ್ನು ಇಲ್ಲಿ ಕಾಣುತ್ತೇವೆ. ಅಲ್ಲದೆ

'ವೀರಶೈವ ವಂಶದಲ್ಲಿ ಜನಿಸಿಹುದು
ಅತ್ಯಂತ ದುರ್ಲಭವಾಗಿರ್ಪುದು ಕಾಣಾ'

ಎಂದು ಹೇಳುತ್ತ

ಆಗಮ ಪ್ರಮಾಣವನ್ನು ಉದಾಹರಿಸಿ ಕೊನೆಗೆ
ಕೂಡಲ ಚನ್ನಸಂಗಮದೇವಾ : [38]
ಮತ್ತು ವೀರಶೈವ ಸಂಪನ್ನರಾದ ಸದ್ಭಕ್ತ ಶರಣ ಗಣಂಗಳಾದಡೆಯೂ [39]
ಮತ್ತು ನಿರಾಭಾರಿ ವೀರಶೈವ ನಿರ್ವಾಣ ಸದ್ಭಕ್ತಜಂಗಮ ಗಣಂಗಳು [40]
ಮತ್ತು ವೀರಶೈವ ಮಂತ್ರೋಪದೇಶದಿಂದ ಆತನ ಕಾಯಶುದ್ಧವ ಮಾಡಿ [41]
ಮತ್ತು ಪೂರ್ವದ ಜಡಶೈವ ಮಾರ್ಗವ ಬಿಡಿಸಿ
ನಿಜವೀರಶೈವ ದೀಕ್ಷೆಯನೆ ಇತ್ತು ಹಸ್ತಮಸ್ತಕ ಸಂಯೋಗವ ಮಾಡಿ
ಅಂತರಂಗದಲ್ಲಿರುವ ಪ್ರಾಣಲಿಂಗ ಬಹಿಷ್ಕರಿಸಿ ಕರಸ್ಥಲಕ್ಕೆ ತಂದುಕೊಟ್ಟನು [42]
ಮತ್ತು 'ವೀರಶೈವ ಶರಣರು ಮೆಚ್ಚರು'. [43]

ಹೀಗೆ ಅನೇಕ ವಚನಗಳಲ್ಲಿ 'ವೀರಶೈವ', ಪದವನ್ನು ಅರ್ಥವತ್ತಾಗಿ ಬಳಸಿದ್ದಾರೆ. ವೀರಶೈವ ಧರ್ಮದ ಘನತೆಯನ್ನು ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು ಇಷ್ಟು ಸ್ಪಷ್ಟವಾಗಿ ಪ್ರತಿಪಾದಿಸಿದ್ದರೂ ವೀರಶೈವ ಪದವನ್ನು ಕಡೆಗಣಿಸಿ ಲಿಂಗವಂತ ಧರ್ಮ ಸ್ಥಾಪಕ ಬಸವಣ್ಣನೆಂದು ಘೋಷಣೆ ಮಾಡುವ ಮಹಾಶಯರಿಗೇನೆನ್ನಬೇಕು ?

37. ಅದೇ ೬೦೮
38 ಅದೇ ೪೮೩ (೪೦೬)
39. ಅದೇ ೧೬೩
40. ಅದೇ ೧೫೫
41. ಅದೇ ೪೦
42. ಅದೇ ೬೧೬
43. ಅದೇ ೭೧೬;

ಬಸವಣ್ಣನವರಾದರೂ ವೀರಶೈವತ್ವವನ್ನು ತಮ್ಮ ವಚನದಲ್ಲಿ ಪ್ರತಿಪಾದಿಸುತ್ತಾರೆ. "ವೀರಶೈವ ಸಂಪನ್ನನ್ನೆನಿಸಿ ಲಿಂಗವಂತನಾದ ಬಳಿಕ[44] ಎಂದರೆ ಇವೆರಡೂ ಭಿನ್ನವೆಂದಲ್ಲ. ಭಾರತ (ದೇಶವಾಚಕ) ಭಾರತೀಯ (ಭಾರತನಿವಾಸ) ಭಾರತೀಯತ (ಭಾರತನಿವಾಸಿ ಯಾದರೂ ಭಾರತೀಯತೆಯಿಲ್ಲದವನು ಭಾರತೀಯಮನಾಗುವುದಿಲ್ಲ ಅರ್ಥಗೌರವ ವಿರುವಂತೆ ಲಿಂಗವಂತಿಕೆ ಪದವು ವೀರಶೈವ ಸಂಸ್ಕೃತಿಯನ್ನು ವ್ಯಕ್ತಗೊಳಿಸುವ ಪರ್ಯಾಯ ಪದವೇ ಹೊರತು ಲಿಂಗವಂತ ಎಂಬುದು ಪ್ರತೇಕವಲ್ಲ. ಚನ್ನಬಸವಣ್ಣನವರು

ಉದಯದ ಮುಖದಲ್ಲಿ ಲಿಂಗದರ್ಶನ
ಹಗಲಿನ ಮುಖದಲ್ಲಿ ಜಂಗಮದರ್ಶನ ಲೇಸು ಲೇಸು
ಸಮಯಶೀಲ ಲಿಂಗವಂತಂಗೆ ಇದೇ ಪಥವು [45]
ಸಮಯಶೀಲ ಲಿಂಗವಂತಂಗೆ ಇದೇ ಪಥವು., ಎಂದಿದ್ದರೆ ಶಿವಯೋಗದಲ್ಲಿರುವಾತನೆ
ಲಿಂಗವಂತನೆಂಬೆನಯ್ಯಾ ಎಂದು[46]

ಇನ್ನೊಂದೆಡೆ ಲಿಂಗವಂತನ ವ್ಯಾಖ್ಯೆಗೈದಿದ್ದಾರೆ. ಲಿಂಗವಂತಿಕೆಯ ವಿವರವನ್ನು

ಕರಸ್ಥಲದಲಿ ಲಿಂಗವಧರಿಸಿ ಅನ್ಯದೈವಕ್ಕೆ ತಲೆವಾಗದಾತ ಲಿಂಗವಂತನೆಂಬೆನಯ್ಯ
ಕರಸ್ಥಲದಲ್ಲಿ ಲಿಂಗವಧರಿಸಿ ಭವಿಸಂಗವ ಮಾಡದಾತ ಲಿಂಗವಂತನೆಂಬೆನಯ್ಯಾ [47]

ಎಂದು ಮುಂತಾಗಿ ಪ್ರಸ್ತಾಪಿಸುತ್ತ ಶಿವಪೂಜೆ, ಶಿವಮಂತ್ರ ಶಿವಾರ್ಪಣ ಶಿವಶಾಸ್ತ್ರ ಶಿವಯೋಗದಲ್ಲಿರುವಾತನೆ ಲಿಂಗವಂತನೆನಿಸುತ್ತಾನೆಂಬುಗನ್ನು ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ಶುದ್ಧ ಭವಿಯೆನಿಸುವುದನ್ನು ವಿವರಿಸಿದ್ದಾರೆ. ಬಸವಣ್ಣನವರಾದರೂ ಲಿಂಗವಂತ ಎನ್ನುವುದು ವೀರಶೈವ ಸಂಸ್ಕೃತಿಯನ್ನು ಪ್ರತಿಪಾದಿಸುವಲ್ಲಿಯೇ ಹೆಚ್ಚು ಆ ಪದ ಬಳಕೆ ಮಾಡಿದ್ದಾರೆ.

ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವದು[48]
"ಲಿಂಗವಂತನ ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ ಅವಗುಣಕ್ಕೆ
ಮುನಿವನಲ್ಲದೆ ಲಾಂಛನಕ್ಕೆ ಮುನಿಯ[49]
ಲಿಂಗವಂತರು ತಾವು ಅಂಜಲೇಕೆ ? ಲಿಂಗವಿರಿಸಿದಂತಿಪ್ಪುದಲ್ಲದೆ ? [50]

---

44. ಬ.ಷ.ವ ೧೧೭೪
45. ಚ. ಲ. ವ. ೧೩೫
46. ಅದೇ ೨೦೭
47. ಅದೇ ವಚನ ೨೦೭
48. ಬ.ಷ.ವ ೧೫೧
49. ಅದೇ ವ ೬೫೨
50 ಅದೇ ೬೪೮

ಈ ವಚನಗಳು ಲಿಂಗವಂತನ ಬದುಕುಕುರಿತ ವಿವರಣೆ ನೀಡಿವೆ. ಆದರೆ ಲಿಂಗವಂತ ಧರ್ಮವೆಂಬುದನ್ನು ಪ್ರತ್ಯೇಕವಾಗಿ ಹೇಳಿದ್ದು ಕಂಡುಬರುವುದಿಲ್ಲ.

ಶಿ. ಶಿ. ಬಸವನಾಳದಿಂದ ವೀರಶೈವದ ಹುಟ್ಟು ಬೆಳವಣಿಗೆ ಕುರಿತು ಮೂರು ಉಪನ್ಯಾಸಗಳು ಕೊಡಲ್ಪಟ್ಟಿದ್ದು ಅವು ಅಭ್ಯಾಸಪೂರ್ಣವೆನಿಸಿದರೂ ಕೆಲ ಸಂಗತಿಗಳು ಅಸಂಗತವೆನಿಸುತ್ತವೆ. ಇವರಾದರೂ ಶೈವದ ಪಂಗಡವೇ ವೀರಶೈವ ವೆಂದಿದ್ದಾರೆ. ಇದು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟಿದೆಯೆಂಬುದಕ್ಕೆ ಕೆಲವು ಕವಿಗಳ ಹಾಗೂ ಕೆಲವು ಕೃತಿಗಳ ಉದಾಹರಣೆ ನೀಡುವುದು ಘಟ್ಟಿಯಾದ ಆಧಾರಗಳನಿಸುವುದಿಲ್ಲ. ಸ್ತುತಿಪರವಾದ ಶಬ್ದಗಳು ವೀರಶೈವ ಧರ್ಮದ ಸ್ಥಾಪಕತ್ವವನ್ನು ಹೇಳಲಾರವು. ಬಸವಣ್ಣನವರ ಬಗೆಗೆ ಇರುವಂತೆ ಚನ್ನಬಸವಣ್ಣನವರ ಪರವಾಗಿಯೂ ಇಂಥ ರೋಚಕ ಪದಗಳುನ್ನ ಅವಲೋಕಿಬಹುದು. ಆಗಮ ಸಾಹಿತ್ಯದಲ್ಲಿ ಬಸವಣ್ಣನವರ ನಾಮ ಉಲ್ಲೇಖಗೊಂಡಿದೆಯೆಂದು ಉದಾಹರಿಸುತ್ತ ಅವರ ಉಪನ್ಯಾಸ ೧ರಲ್ಲಿ ಬಸವಾಕ್ಷರತ್ರಯಗಳು ಮಂತ್ರವಾಗಿದು. ಪಾರಮೇಶ್ವಗಾಮದಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತಾರೆ ಎಂದು ಈ ಆಗಮದ ೧೧-೨೩ ಹಾಗೂ ೧೮-೨೦ ಎರಡು ಶ್ಲೋಕಗಳನ್ನು ಉದಾಹರಿಸಿದ್ದಾರೆ. ಆದರೆ ಈ ಶ್ಲೋಕಗಳು ಪಾರಮೇಶ್ವರಾಗಮದಲ್ಲಿ ಇರುವುದಿಲ್ಲ. ವಾರಣಾಸಿಯ ಗ್ರಂಥದಲ್ಲಿ ಎಲ್ಲೂ ಬಸವಣ್ಣನವರ ಹೆಸರು ಬರುವುದಿಲ್ಲ. ವಾರದವರು ೧೯೦೫ರಲ್ಲಿ ಪ್ರಕಟಿಸಿದ ಕೃತಿಯಲ್ಲೂ ಈ ಶ್ಲೋಕ ಇಲ್ಲ. ಅನಾದಿ ವೀರಶೈವ ಸಂಗ್ರಹ ಪ್ರಾಚೀನ ಗ್ರಂಥವಲ್ಲ. ಇತ್ತೀಚಿನ ಅಂದರೆ ಕೆಳದಿ ಅರಸರ ಕಾಲದಲ್ಲಿ ಪ್ರಕಟವಾದುದು. ೧೨ನೇ ಶತಮಾನದಲ್ಲಿ ಬಸವಣ್ಣನವರು ವೀರಶೈವ ಧರ್ಮೋದ್ಧಾರ ಗೈದ ಮಣಿಹ ಮಹತ್ತರವಾದುದು. ಮಾನವತಾವಾದಿ. ಆ ಮಹಾನುಭಾವಿಯನ್ನು ಸ್ಮರಿಸುವುದು ಮುಂದಿನ ಗ್ರಂಥಕಾರರ ಕರ್ತವ್ಯ ಆಗಿದೆ. ಇಂದಿನವರೆಗೂ ಅನುಕರಣೀಯ.

ವೀರಶೈವ ಧರ್ಮೀಯರಲ್ಲಿ ಸಂಪೂರ್ಣ ಅಧ್ಯಯನದ ಅಭಾವದಿಂದಾಗಿ ಅನೇಕ ಸಂಶಯಗಳು ಬೆಳೆದು ಬಂದಿರುವುದು ಕಂಡು ಬರುತ್ತದೆ. ಅವುಗಳಿಗೆ ಪರಿಹಾರ ನೀಡುವ ಪ್ರಯತ್ನ ಮಾಡಲಾಯಿತು. ಇದೊಂದು ಸೀಮಿತ ಲೇಖನವಾಗಿರುವುದರಿಂದ ಸಾಕಷ್ಟು ಅವಕಾಶ ಸಿಗದೆ ಹೋಗಿರಬಹುದು. 'ವೀರಶೈವಧರ್ಮ ಒಂದು ಅಧ್ಯಯನವನ್ನು ಅವಲೋಕಿಸಲು ಸೂಚಿಸಬಯಸುತ್ತೇನೆ.

ಉಪಸಂಹಾರ

ವೀರಶೈವಕ್ಕೆ ಲಿಂಗಾಯತ, ಲಿಂಗವಂತ ಪದಗಳು ಪರ್ಯಾಯವಾಗಿ ವ್ಯಾವಹಾರಿಕವಾಗಿ ಬೆಳೆದು ಬಂದಿವೆ. ವೀರಶೈವವು ಶಕ್ತಿ ವಿಶಿಷ್ಟಾದ್ವೈತ, ಶಿವಾದ್ವೈತ, ದ್ವೈತಾದ್ವೈತ ಸಿದ್ಧಾಂತ ದರ್ಶನವನ್ನು ಹೊಂದಿದೆ. ಇದು ಸಕಲ ದರ್ಶನಗಳ ಸಾರವನ್ನು ಅಳವಡಿಸಿಕೊಂಡು ತನ್ನ

51. ವೀರಶೈವರ ಹುಟ್ಟು ಬೆಳವಣಿಗೆ ಶಿ.ಶಿ. ಬಸವನಾಳ ಪುಟ 2

ವಿಶಿಷ್ಟತೆಯನ್ನು ಒಳಗೊಂಡಿದೆ. ಷಡ್ದರ್ಶನಗಳಲ್ಲಿ ತರ್ಕ ಪ್ರಧಾನವಾದುದು ನ್ಯಾಯ; ಇದು ಜ್ಞಾನವನ್ನು ವಿಮರ್ಶಿಸಿದರೆ, ವೈಶೇಷಿಕವು ಜ್ಞೇಯ ವಸ್ತುಗಳ ಲಕ್ಷಣದ ವಿಶೇಷ ವಿಮರ್ಶೆಯನ್ನು ಮಾಡಿತು. ತತ್ತ್ವಗಳ ಪರಿಗಣನೆ ಮಾಡಿದ ಕಾರಣ ಸಾಂಖ್ಯದರ್ಶನವಾಯಿತು. ಸಾಂಖ್ಯದರ್ಶನ ನಿಂತಲ್ಲಿಂದ ಯೋಗದರ್ಶನ ಮುನ್ನಡೆಯಿತು. ಒಂದಾಗಿದ್ದುದನ್ನು ವಿವಿಧ ಬಗೆಯಲ್ಲಿ ವಿಂಗಡಿಸುವುದು ಸಾಂಖ್ಯರ ಗುರಿಯಾದರೆ; ಈ ಅನಂತ ರೂಪಾದ ಸೃಷ್ಟಿಯೆಲ್ಲವೂ ಒಂದು ವಸ್ತುವಿನಲ್ಲಿ ಕೂಡುವುದೆಂಬುದನ್ನು ಪರಿಶೀಲಿಸುವುದೇ ಯೋಗದ ಗುರಿ. ಜೀವಾತ್ಮ-ಪರಮಾತ್ಮರ ಸಂಯೋಗವೇ ಇದರ ಮಣಿಹ. ಯಜ್ಞಾಯಾಗಾದಿಗಳ ವಿಧಿ ವಿಧಾನಗಳನ್ನು ವರ್ಣಿಸುವ ಕರ್ಮಕಾಂಡವೇ ಪೂರ್ವ ಮೀಮಾಂಸೆ. ಜೀವ ಜಗತ್ತು-ಈಶ್ವರ ಇವುಗಳ ಸ್ವರೂಪ ಮತ್ತು ಸಂಬಂಧ ನಿರೂಪಣೆಯೇ ಉತ್ತರ ಮೀಮಾಂಸೆಯ ವಿಷಯವಾಗಿದೆ. ಇದು ಕೇವಲ ಜ್ಞಾನವನ್ನು ಹೇಳುತ್ತಿದೆ. ಇದಕ್ಕೆ ವೇದಾಂತವೆಂಬ ನಾಮವೂ ಉಂಟು. ಇದು ಜೀವ ಬ್ರಹ್ಮರ ಅದ್ವೈತವನ್ನು ತಿಳಿಸುವುದರಿಂದ ಅದ್ವೈತ ಸಿದ್ಧಾಂತವೆನಿಸಿದೆ. ಜೀವ ಬೇರೆ ಬ್ರಹ್ಮ ಬೇರೆ ಎಂದು ಹೇಳುವ ದ್ವೈತ ಸಿದ್ಧಾಂತವೂ ಇದೆ. ವೀರಶೈವರು ಶಿವ-ಶಕ್ತಿಯ ವಿಶಿಷ್ಟತೆಯನ್ನು ಪ್ರತಿಪಾದಿಸುವ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಒಪ್ಪಿದ್ದಾರೆ. ಷಟ್‌ಸ್ಥಲದ ಪೂರ್ವಭಾಗದಲ್ಲಿ ಉಪಾಸ್ಯ ಉಪಾಸಕ ದೃಷ್ಟಿಯಿಂದ ದ್ವೈತವೆನಿಸಿ ಉತ್ತರ ಭಾಗದಲ್ಲಿ ಅದ್ವೈತವನ್ನು ಸಾಧಿಸುವುದರಿಂದ ದ್ವೈತಾದ್ವೈತಿಗಳೆಂದು ಕರೆಯಲ್ಪಟ್ಟರು. ವೀರಶೈವರು ವೇದಾಂತಿಗಳಂತೆ ಜಗತ್ತನ್ನು ಮಿಥ್ಯವೆಂದು ಕರೆಯದೆ ದೇವರನ್ನು ಒಲಿಸಲು ಬಂದ ಪ್ರಸಾದಕಾಯವನ್ನು ಭೋಗೋಪಭೋಗದಿಂದ ರಕ್ಷಿಸುತ್ತಿದ್ದು ಜಗತ್ತೂ ಸತ್ಯವೆಂದರು.

ವೀರಶೈವರು ಜಗತ್ತನ್ನು ಮಾಯೆಯೆನ್ನದೆ ಮನದ ಮುಂದಣ ಆಶೆಗೆ ಮಾಯೆಯೆಂದರು. ಈ ಆಶೆಯನ್ನು ಸತ್ಕ್ರಿಯೆಗಳಿಗೆ ತೊಡಗಿಸಿ ಶುದ್ಧೀಕರಿಸುವ ಉದಾತ್ತೀಕರಣವನ್ನು ತಮ್ಮದನ್ನಾಗಿಸಿಕೊಂಡರು. ಇವರು ತತ್ತ್ವಜ್ಞಾನವನ್ನು ಹಾಗೂ ಧರ್ಮಾಚಾರಗಳನ್ನು ಸಮನ್ವಯ ಮಾಡಿಕೊಂಡರು. ವೀರಶೈವ ಸಿದ್ಧಾಂತದಲ್ಲಿ ಕ್ರಿಯಾ-ಜ್ಞಾನಗಳ ಸಮಸಮುಚ್ಚಯ ವಿದೆ. ಅಂಗ-ಲಿಂಗಳ ಸಮರಸವಿದೆ. ಸ್ವಾನುಭೂತಿಯ ದರ್ಶನವಿದೆ. ಜಗತ್ತನ್ನೇ ಶಿವಮಯವಾಗಿ ಕಾಣುವ ಪವಿತ್ರದೃಷ್ಟಿಯಿದೆ. ವೀರಶೈವರಲ್ಲಿ ದ್ವೈತ ಮತದ ಭಕ್ತಿ, ಅದ್ವೈತ ಮತದ ಜ್ಞಾನ ಇವೆರಡರ ಸಮನ್ವಯವಿದೆ.

ಮೊದಲು ತಿಳಿಸಿದಂತೆ ವೀರಶೈವದರ್ಶನದ ಪರಿಪೂರ್ಣತೆಯ ಅಂಶಗಳಾದ ಹನ್ನೊಂದು ಅಂಶಗಳು ಯಥಾವತ್ತಾಗಿವೆ. ವೀರಶೈವರಿಗೆ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ವಿದೆ. ಈ ಸಿದ್ಧಾಂತಕ್ಕೆ ತತ್ವಪುರುಷನೆ ತಾನಾಗುವ ಶಿವಯೋಗ ಸಾಧನವಿದೆ. ಈ ಶಿವಯೋಗವನ್ನು ಸಾಧಿಸಲು ಷಟ್‌ಸ್ಥಲಾತ್ಮಕ ದರ್ಶನವಿದೆ. ವೀರಶೈವನಿಗೆ ವೀರಶೈವತ್ವವು ಸಂಸ್ಕಾರದಿಂದಲೇ ಪ್ರಾಪ್ತವಾಗುವುದು. ಇಲ್ಲಿ ಸಾಮಾನ್ಯ, ವಿಶೇಷ, ನಿರಾಭಾರಿ ಸಂಸ್ಕಾರಗಳಿವೆ. ವ್ಯವಸ್ಥಿತವಾದ ಸಮಾಜ ಶಾಸ್ತ್ರವಿದೆ . ಪಂಚಾಚಾರಗಳನ್ನೆ ಪ್ರಾಣವಾಗಿಸಿಕೊಂಡ ವೀರಶೈವವು ನೀತಿಶಾಸ್ತ್ರದ ಅಡಿಗಲ್ಲನ್ನು ಹೊಂದಿದೆ. ಲಿಂಗವನ್ನು ಪೂಜಿಸುವ ಕೈ ಯಾರನ್ನು ಬೇಡಲಾಗದು. ಕಾಯಕ

ತತ್ತ್ವ ಜೀವಿಯಾದ ವೀರಶೈವನಿಗೆ ಅರ್ಥಶಾಸ್ತ್ರದ ಗಟ್ಟಿಗತನವಿದೆ. ಅನಾದಿ ಸಂಸಿದ್ಧವಾದ ವೀರಶೈವಕ್ಕೆ ಉಚ್ಚ ಸಂಸ್ಕೃತಿಯಿದೆ. ಪ್ರಾಚೀನವಾದ ಪರಂಪರೆಯಿದೆ. ಮನೆಗೆ ಬಂದ ಶಿವಭಕ್ತನನ್ನು ಶಿವನೆಂದೇ ಭಾವಿಸುವ ಪರಂಪರೆಯು ವೀರಶೈವರದು. ಅನ್ಯ ಅಸತ್ಯಗಳಿಂದ ದೂರಾದವರು ವೀರಶೈವರು. ಆತ್ಮಸ್ತುತಿ ಪರನಿಂದೆಗಳಿಗೆ ಹೊರತಾದವರು ಇವರು. ಸ್ತ್ರೀಪುರುಷರೆಂಬ ಭೇದವಿಲ್ಲದೆ ಧರ್ಮಸಾಧನೆಯಲ್ಲಿ ಉಭಯ ಸಮಾನಾಧಿಕಾರವುಳ್ಳವರು. ವೀರಶೈವರು ಗ್ರಂಥ ಪ್ರಾಮಾಣ್ಯಕ್ಕಿಂತ ಅನುಭಾವ ಪ್ರಾಮಾಣ್ಯವುಳ್ಳವರು. ಹೀಗಾಗಿ ವೇದಾಗಮಗಳ ಕರ್ಮಕಾಂಡವನ್ನು ಅಲ್ಲಗಳೆದರೂ ವೇದಾಗಮಗಳ ಜ್ಞಾನ ಕಾಂಡವನ್ನು ಮನ್ನಿಸಿದರು. ವೀರಶೈವಕ್ಕೆ ಶಿವಾಗಮಗಳೇ ಮೂಲ. ಸಂಸ್ಕೃತ ಸಾಹಿತ್ಯವಲ್ಲದೆ ೧೨ನೇ ಶತಮಾನದ ಶಿವಶರಣರ ವಚನ ಸಾಹಿತ್ಯ ಸಕಲರಿಗೆ ತಿಳಿಯುವಂತೆ ಬೆಳೆದು ಬಂದಿದೆ. ಇದು ವಿಶ್ವಸಾಹಿತ್ಯಕ್ಕೆ ಆದರ್ಶವೆನಿಸಿದೆ.

ಈಗಾಗಲೇ ಧರ್ಮಗುರು ಧರ್ಮಗ್ರಂಥ ಕುರಿತ ವಿವರಣೆ ನೀಡಲಾಗಿದೆ. ವೀರಶೈವ ಧರ್ಮದೇವರು ಇಷ್ಟಲಿಂಗವೆನಿಸುವಜೊತೆಗೆ ಗುರು-ಜಂಗಮರೂ ಈ ಧರ್ಮದೇವರುಗಳೆನ್ನುವುದನ್ನು ಮರೆಯುವಂತಿಲ್ಲ. ಪ್ರತಿಯೂರಿನ ಜಂಗಮ ಮಠಗಳೇ ಧರ್ಮಕೇಂದ್ರಗಳೂ ಹೌದು ಧರ್ಮಕ್ಷೇತ್ರಗಳೂ ಹೌದು. ಅಷ್ಟಾವರಣ ಪಂಚಾಚಾರ, ಷಟ್‌ಸ್ಥಲಾತ್ಮಕವಾದ ಪಂಚಕೋನದ ಷಟ್‌ಸ್ಥಲ ಧ್ವಜವೇ ವೀರಶೈವರ ಧ್ವಜವೆನಿಸಿದೆ. ಅಚ್ಚಕನ್ನಡಿಗರು ವೀರಶೈವರಾಗಿರುವುದರಿಂದ ಕನ್ನಡವೇ ವೀರಶೈವರ ಭಾಷೆ. ಸಕಲರ ಲೇಸ ಬಯಸುವಿಕೆಯೇ ಈ ಧರ್ಮದ ಪರಮ ಧ್ಯೇಯ ವೆನಿಸಿದೆ. ಸಕಲರಿಗೂ ಕಲ್ಯಾಣಬಯಸುವ ವಿಶ್ವಧರ್ಮ ವೀರಶೈವ.

ವೀರಶೈವವು ಎಲ್ಲ ಧರ್ಮಗಳ ವಿಶಿಷ್ಟಗುಣಗಳನ್ನು ಅಳವಡಿಸಿಕೊಂಡಿದ್ದು ವಿಶೇಷವಾದ ತತ್ತ್ವಜ್ಞಾನವನ್ನು ಹೊಂದಿದೆ. ಜಾಗತಿಕ ತತ್ತ್ವದರ್ಶನಗಳಲ್ಲಿ ತನ್ನದೇ ಆದ ವಿಶೇಷ ಸ್ಥಾನವನ್ನು ಉಳಿಸಿಕೊಂಡುಬಂದಿದೆ. ಅರುಹಿನ ಕುರುಹೆನಿಸಿದೆ. ಏಕೇಶ್ವರತ್ವದ ಗುರಿಯನ್ನು ಸಾಧಿಸಲಿರುವ ಇಷ್ಟಲಿಂಗಧಾರಣೆಯನ್ನು ಪಡೆದ ಮಾನವರೆಲ್ಲ ಒಂದೆಂಬ ಭಾವೈಕ್ಯತೆಯುಳ್ಳದ್ದು ವೀರಶೈವ. ಇಷ್ಟಲಿಂಗದ ಶಿವಯೋಗಸಾಧನೆಯಿಂದ ಸುಲಭವಾಗಿ ಮುಕ್ತನಾಗುವ ಮಹಾಸಾಧವಾಗಿರುವುದಲ್ಲದೆ ಸ್ತ್ರೀಪುರುಷರಿಗೆ ಸಮಾನವಾದ ಧರ್ಮತತ್ತ್ವ ಬೀರಿದೆ ವೀರಶೈವ. ಇಷ್ಟಲಿಂಗೋಪಾಸನೆಯ ಮೂಲಕ ಅರ್ಚನೆ, ಅಭಿಷೇಕ-ಉಪಚಾರಗಳನ್ನು ಬಳಸಿಯೂ ಅತೀತವಾಗಿ ನಿಂತ ವಿಧಾನ ಇಲ್ಲಿದೆ. ಭಾರತೀಯ ಯೋಗ ಸಾಧನೆಗಳ ಸಮನ್ವಯ ಪಡೆದೂ ಶಿವಯೋಗದ ವಿಶಿಷ್ಟತೆಯುಳ್ಳದು ವೀರಶೈವ. ದ್ವೈತ-ಅದ್ವೈತ ಮತಗಳ ಸಮರಸವಿದೆ. ಪೂರ್ವಮೀಮಾಂಸೆಯ ಕ್ರಿಯಾವಿಧಾನ-ನ್ಯಾಯಮತದ ಜ್ಞಾನವಿಧಾನಗಳನ್ನು ಅಳವಡಿಸಿಕೊಂಡು ಕ್ರಿಯಾ-ಜ್ಞಾನಗಳ ಸಮಸಮುಚ್ಚಯವನ್ನು ಪಡೆದಿದೆ ವೀರಶೈವ. ಧಾರ್ಮಿಕ ಸ್ವಾತಂತ್ರ್ಯವುಳ್ಳ ಏಕೈಕ ಧರ್ಮ ವೀರಶೈವ. ಜಡ ಕ್ರಿಯೆಗಳ

ಸೋಂಕಿಲ್ಲ. ಕಂದಾಚಾರದ ಬಂಧನವಿಲ್ಲ. ಇಲ್ಲಿ ಪಂಚವಿಷಯಗಳ ತ್ಯಾಜ್ಯವಿಲ್ಲ. ಆದರೆ ಲಿಂಗಭೋಗೋಪಭೋಗದ ಸಂತೃಪ್ತಿಯಿದೆ. ಎಲ್ಲವನ್ನು ಆಂಶಿಕವಾಗಿ ಅಳವಡಿಸಿಕೊಳ್ಳುತ್ತ ಪೂರ್ಣತ್ವವನ್ನು ಸಾಧಿಸುತ್ತದೆ ಈ ವೀರಶೈವಧರ್ಮವು.

ವಸ್ತುತಃ ವಿಶಿಷ್ಟವಾದ ವೀರಶೈವಧರ್ಮಕ್ಕೆ ವೀರಶೈವ ಸಂಸ್ಕೃತಿಗೆ ಭಾರತ ಸಂವಿಧಾನದಲ್ಲಿ ಪ್ರತ್ಯೇಕ ಸ್ಥಾನಮಾನ ಅವಶ್ಯ. ಈ ಧರ್ಮದ ಮರ್ಮವನ್ನು ಅಳವಡಿಸಿಕೊಂಡು ತಮ್ಮತನವನ್ನು ಉಳಿಸಿ ಬೆಳಸಿಕೊಂಡು ಮುನ್ನಡೆವ ಶ್ರದ್ಧೆನಿಷ್ಠೆಗಳು ವೀರಶೈವರಲ್ಲಿ ಬೆಳೆದು ಬರಲೆಂದು ಹಾರೈಸುತ್ತೇವೆ.

●

ವೀರಶೈವರ ಧರ್ಮ ಸಂವಿಧಾನ

ಧರ್ಮಗುರು :	ಮಾಂಸಪಿಂಡವನ್ನು ಮಂತ್ರಪಿಂಡವಾಗಿಸಿದ ದೀಕ್ಷಾಗುರು. ಪ್ರತ್ಯಕ್ಷವಾಗಿ ಪ್ರತಿವ್ಯಕ್ತಿಯನ್ನು ಉದ್ದೇಶಿಸುವವನೇ ಧರ್ಮಗುರು.
ಧರ್ಮದೇವರು :	ತನ್ನ ಚೈತನ್ಯದ ಚುಳುಕಾದ ಇಷ್ಟಲಿಂಗ ಇದು ಅರುಹಿನ ಕುರುಹು. ಈ ಇಷ್ಟಲಿಂಗವನ್ನು ಕರುಣಿಸಿದ ಧರ್ಮಗುರು ಮೊದಲನೇ ದೈವ, ಗುರುಲಿಂಗ ಮೋಕ್ಷಮೂರ್ತಿ, ಮಹಾಜ್ಞಾನಿ ಜಂಗಮಲಿಂಗ, ಮೂರನೇ ದೇವರು
ಧರ್ಮಕ್ಷೇತ್ರ :	ನಿಜದರಿವನ್ನು ಮೂಡಿಸುವ, ಗುರುಲಿಂಗ ಜಂಗಮಲಿಂಗರು ನೆಲಸಿದ ಪ್ರತಿಯೊಂದು ಊರಿನ ಮಠಗಳು.
ಧರ್ಮಧ್ವಜ :	ಅಷ್ಟಾವರಣವೇ ಅಂಗ, ಪಂಚಾಚಾರಗಳೇ ಪ್ರಾಣ, ಷಟ್‌ಸ್ಥಲವೇ ಆತ್ಮವಾಗಿರುವ ಪಂಚಕೋನವುಳ್ಳ ಷಟ್‌ಸ್ಥಲ ಧ್ವಜ
ಧರ್ಮಗ್ರಂಥ:	ವೀರಶೈವತತ್ತ್ವವನ್ನು ಪ್ರತಿಪಾದಿಸಿದ ಶಿವಾಗಮಗಳು, ಜನಭಾಷೆಯಲ್ಲಿ ವೀರಶೈವವನ್ನು ತಿಳಿಸಿದ ಬಸವಾದಿ ಪ್ರಮಥರು ಬೋಧಿಸಿದ ವಚನಸಾಹಿತ್ಯ.
ಧರ್ಮಭಾಷೆ :	ಕನ್ನಡ
ಧರ್ಮದ ಧ್ಯೆಯ	ಸಕಲಜೀವಾತ್ಮರಿಗೆ ಲೇಸ ಬಯಸುವಿಕೆ.
ಧರ್ಮದ ಸಿದ್ಧಾಂತ :	ಶಕ್ತಿ ವಿಶಿಷ್ಟಾದ್ವೈತ, ಶಿವಾದ್ವೈತ, ದ್ವೈತಾದ್ವೈತ ಪರ್ಯಾಯ ಪದಗಳು
ಧರ್ಮದ ಉತ್ಪಾದಕ :	ಪರಶಿವ (ಉಳಿದವರೆಲ್ಲ ಧರ್ಮೋದ್ಧಾರಕರು)
ಧರ್ಮದ ಗುರಿ :	ತತ್ವಸ್ವರೂಪವೇ ತಾನಾಗುವುದು. (ವೀರಶೈವ ವ್ಯಕ್ತಿನಿಷ್ಠರಲ್ಲ)

ಶಕ್ತಿವಿಶಿಷ್ಟಾದ್ವೈತ (ವೀರಶೈವ) ಸಿದ್ಧಾಂತ

ಸಿರಸಿ ಗುರುಶಾಂತಶಾಸ್ತ್ರಿ

ಏಕೋದೇವಃ

ನಮ್ಮ ಭರತಖಂಡದಲ್ಲಿ ಪ್ರಾಚೀನ ಕಾಲದಿಂದ ಅನೇಕ ತತ್ತ್ವಜ್ಞಾನಿಗಳು ಅವತರಿಸಿ ಸ್ವಾತ್ಮಾನುಭವರೂಪವಾದ ಅಪರೋಕ್ಷ ಜ್ಞಾನವನ್ನು ಪಡೆದು, ಶಕ್ತಿಪಾತದಿಂದ ಪವಿತ್ರಿತ ಹೃದಯರಾಗಿ ಅನೇಕ ಮಹಿಮಾತಿಶಯಗಳನ್ನು ತೋರಿಸಿರುತ್ತಾರೆ. ತಾವು ಅನುಭವಿಸಿದ ಪರಮಾನಂದಾಮೃತವನ್ನು ಭಕ್ತವೃಂದಕ್ಕೆ ಉಣಿಸುವುದಕ್ಕೋಸ್ಕರ ವಿಶಾಲವಾದ ಒಂದೊಂದು ಸಾಧನಮಾರ್ಗವನ್ನು ರಚಿಸಿದರು. ಅವೇ ಕಾಲಕ್ರಮದಲ್ಲಿ ಮತಗಳೆಂದು ಪ್ರಚಾರಗೊಂಡವು. ಪರಮಾರ್ಥವಾಗಿ ಪರಮಾತ್ಮನೊಬ್ಬನೇ ಆಯಾಯ ತತ್ತ್ವ ಚಿಂತಕರು ತಮ್ಮ ತಮ್ಮ ಅಭಿರುಚಿಗನುಸಾರವಾಗಿ ಆ ಪರಮಾತ್ಮನನ್ನು ಒಂದೊಂದು ಹೆಸರಿನಿಂದ ಧ್ಯಾನಿಸುತ್ತಲೂ, ಪೂಜಿಸುತ್ತಲೂ ಬಂದಿರುತ್ತಾರೆ. ತತ್ತ್ವದಲ್ಲಿ ಭೇದವಿಲ್ಲ. ಹೆಸರುಗಳು ಅಥವಾ ಅಭಿಲಾಪಕ ಶಬ್ದಗಳು ಬೇರೆ ಬೇರೆಯಾಗಿರುತ್ತವೆ.

> ಬ್ರಹ್ಮಾಹುಶ್ಶಾಂಕರಾ ಯತ್ಪಶುಪತಿಮಪರೇ
> ಪಾಂಚರಾತ್ರಾಶ್ಚ ವಿಷ್ಣುಂ ಕರ್ಮೇಡ್ಯಂ ಜೈಮಿನೀಯಾಃ
> ಕಣಭುಗನುಗತಾಶ್ಚೇಶ್ವರಂ ಗೌತಮೀಯಾಃ ॥
> ಅವ್ಯಕ್ತಂ ಕಾಪಿಲೇಯಾಃ ಫಣಿಪಮತವಿದಶ್ಚೇಶ್ವರಂ ತನ್ನಿದಾನಂ
> ಸ್ವಾಭಿನ್ನಾಚಿಂತ್ಯಶಕ್ತಿಸ್ಫುರಣಸಮರಸಂ ಶ್ರೀ ಮಹಾಲಿಂಗಮೀಡೇ ॥ ವೀರಶೈವಾನಂದಚಂದ್ರಿಕೆ

ಯಾವ ಒಂದೇ ಪರವಸ್ತುವನ್ನು ಅದ್ವೈತಿಗಳು ಬ್ರಹ್ಮವೆಂದೂ ಪಾಶುಪತರು ಪಶುಪತಿಯೆಂದೂ, ಪಾಂಚರಾತ್ರರು ವಿಷ್ಣುವೆಂದೂ, ಮೀಮಾಂಸಕರು ಕರ್ಮವೆಂದೂ, ಗೌತಮ ಮತ್ತು ಪತಂಜಲಿಮತಾನುಯಾಯಿಗಳು ಈಶ್ವರನೆಂದೂ, ಕಾಪಿಲೇಯರು ಅವ್ಯಕ್ತ (ಪ್ರಧಾನ)ವೆಂದೂ, ಅಪೃಥಕ್ ಸಿದ್ಧವಾದ, ಅಚಿಂತ್ಯವಾದ ವಿಮರ್ಶ ಶಕ್ತಿ ಯಿಂದೊಡಗೂಡಿದ ಅಂತಹ ಮಹಾಲಿಂಗ (ಶಿವ) ವನ್ನು ಸ್ತುತಿಸುವೆನು ಎಂದು ಎಲ್ಲಾ ದೇವರಲ್ಲಿಯೂ ಏಕತ್ವವನ್ನು ತೋರಿಸಿ ತಾವು ಉಪಾಸಿಸುವ ದೇವತಾ ಸ್ವರೂಪವನ್ನು ಸೂಚಿಸಿರುತ್ತಾರೆ.

> ''ಯಥಾಕ್ರತುರಸ್ಮಿನ್ ಲೋಕೇ ಪುರುಷೋ ಭವತಿ।
> ತಥೇತಃ ಪ್ರೇತ್ಯಭವತಿ''

ಎಂಬ ಛಾಂದೋಗ್ಯ ಶ್ರುತಿಯಲ್ಲಿ ಹೇಳಿದ ಯಥಾಕ್ರತು ನ್ಯಾಯಾನುಸಾರವಾಗಿ ಒಬ್ಬ ದೇವರೇ ಆಯಾಯ ತತ್ತ್ವ ಚಿಂತಕರ ಇಚ್ಛಾನುಸಾರವಾಗಿ ಆಯಾಯ ಆಕಾರದಿಂದ ಮೈದೋರಿ ಅವರಿಷ್ಟಾ ರ್ಥವನ್ನು ದಯಪಾಲಿಸುತ್ತಾನೆ.

ವೀರಶೈವ ಮತ

ವೀರಶೈವ ಮತವು ಶೈವಮತವೆಂಬ ಮಹಾವೃಕ್ಷದಿಂದೊಡಮೂಡಿದ ಪ್ರಧಾನಶಾಖೆಯಾಗಿರುತ್ತದೆ. ಆಚಾರ ಭೇದದಿಂದಲೂ, ಅನುಭವ ಭೇದದಿಂದಲೂ, ಶೈವದಲ್ಲಿ-ಅನಾದಿಶೈವ, ಆದಿಶೈವ ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ, ವೀರಶೈವ ಎಂಬ ಏಳು ಭೇದಗಳು ಏರ್ಪಟ್ಟಿರುತ್ತವೆ.

ಯೋಗಜ್ಞಾನದ್ವಯೇ ಭಕ್ತ್ಯಾ ಯೋಽತೀತ್ಯಃ ಸರ್ವನಿಸ್ಪೃಹಃ
ಶಿವೋಹಂಭಾವಾನಾಧೀರೋ ವೀರಶೈವ ಉದಾಹೃತಃ॥
ಜ್ಞಾನೇನ ಹೀನಮುಖಿಲಂ ವಿಫಲಂತು ಕರ್ಮ
ಜ್ಞಾನಂ ಚ ತೇನ ಹಿ ವಿನಾ ನಕದಾಪ್ಯದೇತಿ।
ತಸ್ಮಾದವಶ್ಯಮುಭಯಂ ಪರಿಪಾಲನೀಯಂ
ತ್ಯಾಗಃ ಫಲಸ್ಯ ವಿಹಿತಂ ಖಲು ನಶ್ವರಸ್ಯ

ವೀರಶೈವಧರ್ಮಶಿರೋಮಣಿ (ಪು. 85-6)

ಯೋಗ ಜ್ಞಾನಗಳ ಒಂದುಗೂಡುವಿಕೆಯೇ ವೀರಶೈವಮತ. ಯೋಗವಿಲ್ಲದ ಜ್ಞಾನವಾಗಲಿ ಜ್ಞಾನವಿಲ್ಲದ ಯೋಗವಾಗಲಿ ಫಲಕಾರಿಯಾಗಲಾರವು. ಮುಮುಕ್ಷುವಾದ ವೀರಶೈವನಿಗೆ ಯೋಗಜ್ಞಾನಗಳೆರಡೂ ಸಮಪ್ರಧಾನವಾಗಿ ಸಹಾಯಕಗಳಾಗಿವೆ. ಇಲ್ಲಿ ಯೋಗವೆಂದರೆ ಪತಿ ಧರ್ಮ. ಧರ್ಮಗಳಲ್ಲಿ ಪಶುಧರ್ಮ ಪತಿಧರ್ಮ ಎಂದು ಎರಡು ವಿಧ. ಯಜ್ಞಯಾಗಾದಿ ಕರ್ಮಗಳ ಅನುಷ್ಠಾನದಿಂದ ಇಹದಲ್ಲಿ ಸುಖವೂ ಪರದಲ್ಲಿ ಆನಂದವೂ ದೊರೆಯುತ್ತವೆ. ಆದರೆ ಈ ಇಷ್ಟಾಪೂರ್ತಾದಿಗಳಿಂದ ದೊರೆಯುವ ಸುಖವು ಅನಿತ್ಯವಾದುದು. ಉಪಾಸಕನನ್ನು ಪುನಃ ಪುನಃ ಜನನಮರಣಗಳ ಚಕ್ರದಲ್ಲಿ ತೊಡಗಿಸುವುದು. ಆದುದರಿಂದ ಇವುಗಳಲ್ಲಿ ಇದು ಪಶುಧರ್ಮವೆನಿಸಿದೆ.

ಪಶುಧರ್ಮಃ ಪ್ರಾಥಮಿಕಃ ಪತಿಧರ್ಮೋ ದ್ವಿತೀಯಕಃ।
ಅನುತಿಷ್ಠನ್ ಪಶೋರ್ಧರ್ಮಾನ್ ಪತಿಧರ್ಮಾನ್ ಸಚಾರ್ಹತಿ॥
ಯಥಾ ಪಿ ಪೀಲಿಕಾ ವೃಕ್ಷಮೂಲಮಾಘ್ರಾಯ ತತ್ಫಲಂ।
ಆರುಹ್ಯ ಲಭತೇ ತದ್ವತ್ ಪತಿಧರ್ಮೈಕತತ್ಪರಃ
ಯಥಾ ವಿಹಂಗಃಪಕ್ಷಾಭ್ಯಾಂ ಫಲಿತಂ ವೃಕ್ಷಮಾಗತಃ
ಪಶ್ಯನ್‌ಫಲಮವಾಪ್ನೋತಿ ತದ್ವತ್ ಶೀಘ್ರಂ-ತದರ್ಹತಿ॥ ಕ್ರಿಯಾಸಾರ-ಉಪದೇಶ 3

ಪಶುಧರ್ಮಾಚರಣೆಯುಳ್ಳವರು ಇರುವೆಯು (ಪಿಪೀಲಿಕಾ) ಮರದ ಬುಡವನ್ನಾಘ್ರಾಣಿಸಿ ಸಾವಕಾಶವಾಗಿ ಮರವನ್ನೇರಿ ಹಣ್ಣನ್ನು ಆಸ್ವಾದಿಸುವಂತೆ ಸಾವಕಾಶವಾಗಿ ಫಲವನ್ನು ಪಡೆಯುವರು. ಪತಿಧರ್ಮಾಚರಣೆಯುಳ್ಳ ಶಿವಭಕ್ತರು. ಪಕ್ಷಿಗಳು ತಮ್ಮ ಎರಡು ರೆಕ್ಕೆಗಳ ಸಹಾಯದಿಂದ ಶೀಘ್ರವಾಗಿ ವೃಕ್ಷದ ತುದಿಯನ್ನೇರಿ ಅಲ್ಲಿರುವ ಹಣ್ಣನ್ನು ಆಸ್ವಾದಿಸಿ ಸಂತೋಷಿಸುವಂತೆ ಜ್ಞಾನಕಾಂಡೋಕ್ತಗಳಾದ ಶಿವಾರ್ಚನಾದಿ ಪತಿಧರ್ಮಗಳ್ನಾಚರಿಸುತ್ತ ಜೀವಾತ್ಮನನ್ನು ಅನಾದಿಕಾಲದಿಂದ ಆವರಿಸಿದ ಆಣವಾದಿ ಮಲಗಳಿಂದ ನಿವೃತ್ತರಾಗಿ ಲಿಂಗಾಂಗಸಾಮರಸ್ಯಸಿದ್ಧಿಯನ್ನು ಪಡೆಯುವರು. ಶಿವವ್ರತ, ಶಿವಧ್ಯಾನ, ಶಿವಜ್ಞಾನ, ಶಿವಭಕ್ತಿ, ಶಿವಾರ್ಚನ ಇವು ಐದು ಪತಿಧರ್ಮಗಳು. ಶಿವಾರ್ಚನೆಗೆ ಶಿವವ್ರತ, ಶಿವಧ್ಯಾನ, ಶಿವಜ್ಞಾನ, ಶಿವಭಕ್ತಿಗಳು ಮಂಚಕ್ಕೆ ನಾಲ್ಕು ಪಾದಗಳಂತೆ ಆಧಾರಗಳಾಗಿರುತ್ತವೆ. ಶ್ರೀರೇಣುಕಾಚಾರ್ಯರು–

'ಅನೇನ ಪಂಚಯಜ್ಞೇನ ಯಃ ಪೂಜಯತಿ ಶಂಕರಂ'

ಸಿ. ಶಿ.ಪ್ರಕರಣ

ಎಂದು ಈ ಐದು ಪತಿಧರ್ಮಗಳನ್ನೇ ಪಂಚಮಹಾಯಜ್ಞಗಳೆಂದು ವಿವರಿಸಿರುತ್ತಾರೆ.

ಭೃಂಗಧ್ಯಾನದ್ಯಥಾ ಕೀಟೋ ಭೃಂಗರೂಪೋ ಭವೇತ್ಸದಾ।
ಶಿವಧ್ಯಾನಾತ್ತತೋ ಜೀವಶಿವೋ ಭವತಿ ನಾನ್ಯಥಾ॥

ಶ್ರೀಕರಭಾಷ್ಯ

ಅವರೆ ಹುಳುವು ಎಡೆಬಿಡದೆ ಭ್ರಮರಚಿಂತನೆಯ ಸಾಮರ್ಥ್ಯದಿಂದ ತನ್ನ ಕೀಟಾಕಾರವನ್ನೂ, ಕೀಟಸ್ವಭಾವವನ್ನೂ ಕಳೆದುಕೊಂಡು ಭ್ರಮರಾಕಾರವನ್ನು ಹೊಂದುವಂತೆ ಜೀವನು ಪತಿಕರ್ಮಗಳ ಮೂಲಕ ಅವಿಚ್ಛಿನ್ನವಾಗಿ ಶಿವೋಪಾಸನೆಯನ್ನು ಮಾಡಿ ಜೀವಭಾವವನ್ನಳಿದು ಶಿವಸ್ವರೂಪವನ್ನು ಪಡೆಯುವನು.

ವೀರಶೈವ ಎಂಬ ಪದದಲ್ಲಿ 'ವೀರ' ಎಂಬ ಶಬ್ದವು ವಿಶೇಷಣ. ವೀರಶ್ಚಾಸೌ ಶೈವಶ್ಚ ಎಂಬ ಸಮಾಸಾನುಗುಣವಾಗಿ 'ವೀರ' ಶಬ್ದವು ಶೌರ್ಯದ್ಯೋತಕವಾಗಿದ್ದರೂ ಈ ಶಬ್ದದ ಮುಂದೆ 'ಶೈವ' ಎಂಬ ವಿಶೇಷ್ಯ ಪದವಿರುವುದರಿಂದ ಶಿವಸಂಬಂಧಿಯಾದ ಪತಿಧರ್ಮಾಚರಣೆಯಲ್ಲಿ ಸಾಹಸವುಳ್ಳವನು ಎಂದು ಅರ್ಥ.

ವೀರತ್ವಮಸ್ಯ ನಧನೇನ ನವಾಬಲೇನ
ನೋಕಾರ್ಯತಶ್ಚ ವಿಹಿತಂ ದೃಢಶಂಭುಭಕ್ತ್ಯಾ
ವೀರಸ್ತುರೀಯ ಇತಿ ಶಂಕರ ಭಾಷಣೇನ
ಶ್ರೀ ವೀರಶೈವಮತಗಾನ್ನಪರೋಸ್ತಿಕಶ್ಚಿತ್॥

ವೀರಶೈವ ಧರ್ಮಶಿರೋಮಣಿ ಪು. 86

ಎಂತಹ ಕಷ್ಟಗಳೊದಗಿದರೂ ತಾನು ಅವಲಂಬಿಸಿರುವ ಧರ್ಮಗಳನ್ನು ಬಿಡದೆ ಆಚರಿಸಬೇಕೆಂಬ

ಅಂಶವನ್ನು ಈ 'ವೀರ' ಶಬ್ದವು ಸೂಚಿಸುತ್ತದೆಯಲ್ಲದೆ ಲೌಕಿಕಗಳಾದ ಧನವನ್ನಾಗಲಿ, ಶೌರ್ಯವನ್ನಾಗಲಿ ಇತರ ಕಾರ್ಯಗಳನ್ನಾಗಲಿ ಸೂಚಿಸುವುದಿಲ್ಲ.

ಹೀಗೆ ಪೂರ್ವಾರ್ಜಿತ ಪುಣ್ಯವಿಶೇಷದಿಂದ ಶೈವಮತದ ಸಪ್ತಸೋಪಾನಗಳನ್ನೇರಿ ಕ್ಷಣಿಕ ಫಲಪ್ರದಗಳಾದ, ಜೀವಭಾವವನ್ನು ತೊಲಗಿಸದ ಪಶುಕರ್ಮಾಚರಣೆಗಳನ್ನು ಬಿಟ್ಟು ದೃಢತರ ಶಿವಜ್ಞಾನ ಶಿವಭಕ್ತಿಗಳಿಂದ ಕೂಡಿರುವುದೇ ವೀರಶೈವಪದವಾಚ್ಯಾರ್ಥವು. ಈ ಸಪ್ತವಿಧ ಶೈವ ಭೇದಗಳು ಶಿವೋಪಾಸನೆ ಎಂಬ ಸಾಮಾನ್ಯಾಕಾರದಿಂದ ಅಭಿನ್ನಗಳಾಗಿದ್ದರೂ ಲಿಂಗಾಂಗ ಸಾಮರಸ್ಯರೂಪವಾದ ವಿಶೇಷಾಕಾರದಿಂದ ಭಿನ್ನಗಳೇ ಆಗಿವೆ.

ಲಿಂಗಸ್ವರೂಪ

'ಲೀನಮರ್ಥಂಗಮಯತಿ ಇತಿ ಲಿಂಗಂ' ಎಂಬ ವ್ಯುತ್ಪತ್ತಿಗನುಸಾರವಾಗಿ ಕಣ್ಣಿಗೆ ಕಾಣುತ್ತಿರುವ ಈ ಪ್ರಪಂಚವೆಲ್ಲ ಯಾವುದರಿಂದ ಹೊರಹೊಮ್ಮಿ, ಯಾವುದರಿಂದ ರಕ್ಷಿತವಾಗಿ ಪುನಃ ಯಾವುದರಲ್ಲಿ ಅಡಗುವುದೋ ಅಂತಹ ಸರ್ವಾಧಾರವಾದ ವಸ್ತುವೇ ಲಿಂಗವು.

ಯತೋವಾ ಇಮಾನಿ ಭೂತಾನಿ ಜಾಯಂತೇ (ತೈತ್ತಿರೀಯ)
ಯಥೋರ್ಣನಾಭಿಃಸೃಜತೇ ಗೃಹ್ಣತೇಚ (ಮುಂಡಕ)
ಲಿಂಗೇ ಸುಷುಪ್ತಿಃ (ಮಹೋಪನಿಷತ್)

ಇತ್ಯಾದಿ ಶ್ರುತಿವಾಕ್ಯಗಳು ಇದಕ್ಕೆ ಪ್ರಮಾಣಗಳು. 'ಲಿಂಗಂ ತದ್ಬ್ರಹ್ಮಶಾಶ್ವತಂ' ಲಿಂಗಂ ಬ್ರಹ್ಮಸನಾತನಂ' ಇಂತಹ ಲಿಂಗವನ್ನು ಶಿವನೆಂದೂ, ಬ್ರಹ್ಮವೆಂದೂ ಪೂರ್ವಾಚಾರ್ಯರು ಕರೆದಿರುತ್ತಾರೆ.

'ಶೇತೇ ಅಸ್ಮಿನ್ ಸರ್ವಮಿತಿ ಶಿವಃ' ಚರಾಚರ ಜಗತ್ತೆಲ್ಲ ಇವನೊಳಡಗಿರುವುದರಿಂದ ಶಿವನೆಂಬ ಹೆಸರುಂಟಾಯಿತು. 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ' (ಛಾಂದೋಗ್ಯ) ಎಂಬಲ್ಲಿ 'ಜಾಯತೇ' ಇತಿ'ಜಂ' ಲೀಯತೇ ಇತಿ 'ಲಂ' 'ಅನತಿ-ಜೀವತಿ ಇತಿ ಅನ್ ಅಂದರೆ ಸಮಸ್ತ ಪ್ರಪಂಚವೂ ಪರಬ್ರಹ್ಮದಿಂದ ಹುಟ್ಟಿತು. ಪರಬ್ರಹ್ಮದಲ್ಲಿಯೇ ಲಯವಾಗುತ್ತದೆ. ಪರಬ್ರಹ್ಮದಿಂದಲೇ ಬದುಕಿರುತ್ತದೆ. ಕಾಣುತ್ತಿರುವ ಈ ಪ್ರಪಂಚವೆಲ್ಲ ಬ್ರಹ್ಮ ಸ್ವರೂಪವೇ ಆಗಿದೆ. ಸೃಷ್ಟಿ ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳು ಬ್ರಹ್ಮಾಧೀನವಾಗಿವೆ; ಮತ್ತು ಬ್ರಹ್ಮಸ್ವರೂಪವೂ ಆಗಿವೆ. ಸರ್ವ ಶಬ್ದಗಳೂ ಬ್ರಹ್ಮವಾಚಕಗಳೇ ಆಗಿರುತ್ತವೆ.

ಎಲ್ಲರೂ ತನ್ನವರೇ ಆಗಿರುತ್ತಾರೆ. ತನಗೆ ದ್ವೇಷಿಗಳಾರೂ ಇಲ್ಲ ಎಂದು ಶಾಂತಿಯಿಂದ ಉಪಾಸಿಸಬೇಕೆಂದು ಶ್ರುತಿಯು ಬೋಧಿಸುತ್ತದೆ. ಮಲಮಾಯಾರೂಪವಾದ ಪಾಶದಿಂದ ಬಂಧಿಸಲ್ಪಟ್ಟವರಾದುದರಿಂದ ಪಶುವೆನಿಸಿದ ಜೀವರು ಈ ರಹಸ್ಯಾರ್ಥವನ್ನು ತಿಳಿಯದೆ ಸುಖದುಃಖಗಳನ್ನು ಅನುಭವಿಸುತ್ತಿರುತ್ತಾರೆ. ಅಲೆ, ನೊರೆ, ಗುಳ್ಳೆಗಳು

ಸಮುದ್ರದಲ್ಲಿ ಬೇರೆಬೇರೆಯಾಗಿ ಕಂಡರೂ ತತ್ವತಃ ಇವು ಬೇರೆಯಲ್ಲ. ಇದೇ ರೀತಿಯಾಗಿ ವಿಶ್ವವು ಶಕ್ತಿವಿಶಿಷ್ಟವಾದ ಪರಶಿವಲಿಂಗದಲ್ಲಿ ನಾಮರೂಪಾದಿಗಳಿಲ್ಲದೆ ತಾದಾತ್ಮ್ಯ ಸಂಬಂಧದಿಂದ ಸೂಕ್ಷ್ಮರೂಪದಿಂದ ಅಡಗಿರುತ್ತದೆ. ಪುನಃ ಸ್ಥೂಲಾಕಾರದಿಂದ ಹೊರಹೊಮ್ಮುತ್ತದೆ.

ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ।
ತಸ್ಮಾಲ್ಲಿಂಗಂ ಪರಂಬ್ರಹ್ಮ ಕಾರಣಂ ನಿತ್ಯಮವ್ಯಂ॥ ಸಿದ್ಧಾಂತ ಶಿಖಾಮಣಿ

ಲಿಂಗ ಎಂಬ ಪದವು ಸೃಷ್ಟಿ ಸ್ಥಿತಿ ಲಯಗಳಿಗೆ ಆಧಾರವಾಗಿರುವ ಪರತತ್ತ್ವವನ್ನು ಬೋಧಿಸುತ್ತದೆ. ಲಿಂಗ ಶಬ್ದಕ್ಕೆ ಅನೇಕಾರ್ಥಗಳಿದ್ದರೂ ಇಲ್ಲಿ ಪ್ರಕರಣಾನುಸಾರವಾಗಿ ಪರಶಿವ ಬ್ರಹ್ಮವೆಂದೇ ಅರ್ಥ. ಇದಕ್ಕೆ ಭರತ ಖಂಡದಲ್ಲಿ ಸುಪ್ರಸಿದ್ಧಗಳಾದ ದ್ವಾದಶ ಜ್ಯೋತಿರ್ಲಿಂಗಗಳೇ ನಿದರ್ಶನಗಳಾಗಿವೆ.

ಶಕ್ತಿ ವೈಶಿಷ್ಟ್ಯ

'ಕಾರ್ಯೋಪಯೋಗೇ ಅಪೃಥಕ್ಸಿದ್ಧ ವಿಶೇಷಣಂ ಹಿ ಶಕ್ತಿಃ' ಚರಾಚರಾತ್ಮಕವಾದೀ ಜಗತ್ತನ್ನು ತನ್ನ ಲೀಲಾವಸ್ಥೆಯಲ್ಲಿ ಸೃಷ್ಟಿ ಮಾಡುವುದಕ್ಕಾಗಿ ಪರಶಿವ ಬ್ರಹ್ಮದೊಡನೆ (ಅಪೃಥಕ್ಸಿದ್ಧ) ಅಭಿನ್ನವಾಗಿರುವ ಧರ್ಮಕ್ಕೆ ಶಕ್ತಿಯೆಂದು ಹೆಸರು. 'ಶಕಲೃ ಶಕ್ತೌ' ಎಂಬ ಧಾತುವಿಗೆ 'ಕ್ತಿನ್' ಪ್ರತ್ಯಯವು ಬಂದು 'ಶಕ್ತಿ' ಎಂದು ಆಗಿದೆ.

ನಶಿವೇನ ವಿನಾ ಶಕ್ತಿಃ ನ ಶಕ್ತಿರಹಿತಶಿವಃ
ಪುಷ್ಪ ಗಂಧವದನ್ಯೋನ್ಯಂ ಮಾರುತಾಂಬರಯೋರಿವ॥
ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ
ತಥಾಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ।

ಸಿದ್ಧಾಂತ ಶಿಖಾಮಣಿ

ಘಟಪಟಾದಿಗಳಂತೆ ಶಿವಶಕ್ತಿಗಳು ಒಂದನ್ನು ಬಿಟ್ಟು ಒಂದು ಇರದೆ ಪುಷ್ಪಗಂಧಗಳಂತೆ, ವಾಯ್ವಾಕಾಶಗಳಂತೆ, ಚಂದ್ರ ಮತ್ತು ಬೆಳದಿಂಗಳಂತೆ ಯಾವಾಗಲೂ ಕೂಡಿಕೊಂಡಿರುತ್ತವೆ. ಇದೇ ಅರ್ಥವನ್ನು ಶ್ರೀಮನ್ನಿಜಗುಣ ಶಿವಯೋಗಿಯು–

"ಇಂಗಡಲೊಳಿಂಪು ಬೆಳದಿಂಗಳೊಳು ತಂಪು ಕುಸು
ಮಂಗಳೊಳು ಕಂಪು ಬೆರೆದಂತೆ ಪರಮನೊಳು
ಪಿಂಗದಗಸುತೆಗೆ ನತನಪ್ಪೆಂ" (ಪುರಾತನರ ತ್ರಿವಿಧಿ)

ಎಂದು ಶಿವಶಕ್ತಿಯರಿಗಿರುವ ಅವಿನಾಭಾವಸಂಬಂಧವನ್ನು ಹೃದಯಂಗಮವಾಗಿ ವರ್ಣಿಸಿರುತ್ತಾರೆ.

"ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ
ಸ್ವಾಭಾವಿಕೀ ಜ್ಞಾನಬಲಕ್ರಿಯಾಚ" (ಶ್ವೇತಾಶ್ವತರ)

ಎಂಬ ಶ್ರುತಿಯು ಶಿವನಲ್ಲಿ ಶಕ್ತಿಯು ಆಗಂತುಕವಾಗಿರದೆ ಸ್ವಾಭಾವಿಕವಾಗಿಯೂ, ನಾನಾ ಸ್ವರೂಪವಾಗಿಯೂ, ಜ್ಞಾನೇಚ್ಛಾದಿ ಸ್ವರೂಪವಾಗಿಯೂ ಇರುವುದೆಂದು ಸ್ಪಷ್ಟಪಡಿಸುತ್ತದೆ.

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತ ಸ್ವಭಾವತಃ
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮ ನಿಷ್ಠಾಸನಾತನೀ ॥ (ಸಿದ್ಧಾಂತಾಗಮ)

ಪರಶಿವಬ್ರಹ್ಮದಲ್ಲಿರುವ ಶಕ್ತಿಯೇ ಮಾಯೆಯೆನಿಸಿಕೊಳ್ಳುತ್ತದೆ. ಇಂತಹ ಶಕ್ತಿಯ ಪರಿಮಾಣವನ್ನು ಯಾರಿಂದಲೂ ತಿಳಿಯಲು ಶಕ್ಯವಿಲ್ಲ.

ವಿಶ್ವೋತ್ತರೋತ್ತರ ವಿಚಿತ್ರ ಮನೋರಥಸ್ಯ
ಯಸ್ಯೈಕ ಶಕ್ತಿಶಕಲೇ ಸಕಲಸ್ಸಮಾಪ್ತಃ ॥ (ಶ್ರೀಕರ ಭಾಷ್ಯ)

ಪರಶಿವ ಬ್ರಹ್ಮದಲ್ಲಿರುವ ಅನನ್ಯವಾದ ಶಕ್ತಿಯ ಲೇಶ (ಚೂರು)ದಲ್ಲಿ ಸಮಸ್ತ ಭುವನಗಳೂ ಅಡಕವಾಗಿವೆ ಎಂದು ಭಾಷ್ಯಕಾರರು ಶಕ್ತಿಸ್ವರೂಪವನ್ನು ವರ್ಣಿಸಿರುವರು. ಇಂತಹ ವಿಚಿತ್ರಶಕ್ತಿಯು ಜಗಜ್ಜನ್ಮಾದಿ ಕಾರಣನಾದ ಪರಶಿವನ ಸ್ವಭಾವವೇ ಆಗಿರುವುದಲ್ಲದೆ, ಪರಶಿವ ಬ್ರಹ್ಮದಂತೆ ಸತ್ಯವೂ, ನಿತ್ಯವೂ ಆಗಿದೆ. ಮಿಥ್ಯೆಯಲ್ಲ.

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ರ್ಯಕಾರಿಣೀ।
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಮ್ ॥ (ಸಿದ್ಧಾಂತ ಶಿಖಾಮಣಿ)

ಚಿತ್ರವಿಚಿತ್ರವಾದ ಪ್ರಪಂಚ ಸೃಷ್ಟಿಗೆ ಕಾರಣವಾದ ವಿಮರ್ಶಾನಾಮಕವಾದ ಪರಾಶಕ್ತಿಯು ಪರಶಿವಬ್ರಹ್ಮದಲ್ಲಿ ಸುಪ್ರತಿಷ್ಠಿತವಾಗಿರುವುದರಿಂದ ಈ ಶಕ್ತಿಯು ಪರಶಿವ ಬ್ರಹ್ಮದಂತೆ ಸತ್ಯವೇ ಆಗಿದೆ. ಶಿವನಲ್ಲಿ ಇಂತಹ ನಿತ್ಯಶಕ್ತಿಯನ್ನಂಗೀಕಾರ ಮಾಡದಿದ್ದಲ್ಲಿ-

ಯಯಾ ವಿರಹಿತಶ್ಶಕ್ತ್ಯಾ ಶಿವೋಪಿ ಶವತಾಂ ವ್ರಜೇತ್।

ಶಕ್ತಿಯಿಲ್ಲದ ಪದಾರ್ಥವು ಶಿವನಾಗಿದ್ದರೂ ನಿಷ್ಪ್ರಯೋಜಕವಾದುದೆಂದೂ-

''ಶಿವಶ್ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ''

ಶಿವನು ಅಂತಹ ಅಪರಿಚ್ಛಿನ್ನವಾದ ಶಕ್ತಿಯುಳ್ಳವನಾಗಿರುವುದರಿಂದಲೇ ಅಖಂಡ ಪ್ರಪಂಚವನ್ನು ಸಂಕಲ್ಪಮಾತ್ರದಿಂದ ನಿರ್ಮಿಸಬಲ್ಲನೆಂದು ಅಭಿಯುಕ್ತರು ಸಮ್ಮತಿಸಿರುತ್ತಾರೆ. ಇದರಿಂದ ಶಕ್ತಿವಿಶಿಷ್ಟನಾದ ಶಿವನು ಸಗುಣನೆಂದು ಸ್ಪಷ್ಟವಾಯಿತು. ಗುಣವು ಯಾವಾಗಲೂ ದ್ರವ್ಯ (ಗುಣಿ)ವನ್ನು ಆಶ್ರಯಿಸಿಯೇ ಪ್ರಕಾಶಿಸಬೇಕು. ಶಿವನ ಆಶ್ರಯದಿಂದಲೇ ಶಕ್ತಿಯು ತನ್ನ ಕಾರ್ಯವನ್ನು ಮಾಡಬೇಕಾಗಿದೆ. ಇಲ್ಲಿ ಬ್ರಹ್ಮನು ಸಗುಣನೆಂದರೆ ಪರಿಚ್ಛೇದ್ಯ (ಖಂಡ) ವಸ್ತುವಾಯಿತಲ್ಲದೆ ಆ ಬ್ರಹ್ಮನಲ್ಲಿರುವ ಅಪರಿಚ್ಛೇದ್ಯತ್ವ (ಅಖಂಡತ್ವ)ವೇ ನಷ್ಟವಾಯಿತಲ್ಲ ಎಂಬ ಆಶಂಕೆಯನ್ನು ಮಾಡಬೇಕಾಗಿಲ್ಲ. ಏಕೆಂದರೆ ಬ್ರಹ್ಮನು ಘಟಪಟಾದಿಗಳಂತೆ ಪರಿಚ್ಛೇದ್ಯನಾಗದಿದ್ದರೂ 'ನೇತಿ ನೇತಿ' 'ಅಸ್ಥೂಲಮನಣ್ವದೀರ್ಘಂ' ಎಂಬಬ್ರಹ್ಮದ ಲಕ್ಷಣವು ಮತ್ತೊಂದು ಸಜಾತೀಯ ವಿಜಾತೀಯ ಪದಾರ್ಥಗಳಲ್ಲಿ ಎಲ್ಲಿಯೂ ಇಲ್ಲ. ಎಂಬ ವ್ಯಾವರ್ತ್ಯ ಲಕ್ಷಣಮುಖದಿಂದಅಘಟನಘಟನಾ ಸಾಮರ್ಥ್ಯವುಳ್ಳಬ್ರಹ್ಮಕ್ಕೆ ಪರಿಚ್ಛೇದ್ಯತ್ವವನ್ನು

ಹೇಳುವುದರಲ್ಲಿ ಯಾವ ಬಾಧಕವೂ ಇಲ್ಲ. ಸರ್ವಸ್ವತಂತ್ರನೂ, ಅನಂತ ಶಕ್ತಿವಿಶಿಷ್ಟನೂ ಆದ ಪರಶಿವನು ತನ್ನ ಕೇವಲಾವಸ್ಥೆಯನ್ನು ಬಿಟ್ಟು ಲೀಲಾವಸ್ಥೆಗೆ ಬಂದು ತನ್ನಲ್ಲಿರುವ ಶಕ್ತಿ ಬಲದಿಂದಲೇ ಶಿವಾದಿಭೂಮ್ಯಂತಗಳಾದ ಮೂವತ್ತಾರು ತತ್ತ್ವರೂಪವಾದ ಜಗದಾಕಾರದಿಂದ ಪರಿಣಮಿಸಿ ಬಹು (ಪರಿಚ್ಛಿನ್ನ) ರೂಪಗಳನ್ನು ಪಡೆದು ಕ್ರೀಡಾರಸವನ್ನು ಅನುಭವಿಸುತ್ತಿರುವನು. ಈತನು ಏಕಾಕಿಯಾಗಿ ಕ್ರೀಡಾರಸವನ್ನು ಅನುಭವಿಸಲಾರನೆಂಬುದನ್ನು -

'ಏಕಾಕೀ ನರಮತೇ ಸದ್ವಿತೀಯಮೈಚ್ಛತ್'

ಎಂಬ ಮಹೋಪನಿಷದ್ವಾಕ್ಯಗಳು ಬೋಧಿಸುತ್ತವೆ.

'ಇಂದ್ರೋಮಾಯಾಭಿಃ ಪುರುರೂಪ ಈಯತೇ' (ಬೃಹದಾರಣ್ಯಕ)

ಎಂಬ ಶ್ರುತಿವಚನಾನುಸಾರವಾಗಿ ಈ ವಿಚಿತ್ರ ಸೃಷ್ಟಿಗೆ ಮುಖ್ಯೋಪಕರಣವಾಗಿರುವ (ಮಾಯೆ) ಶಕ್ತಿಯು ಒಂದೇ ಆಗಿದ್ದರೂ ಸೃಷ್ಟಿ ಸಮಯದಲ್ಲಿ ಅನಂತ ರೂಪವನ್ನು ಹೊಂದುವುದರಿಂದ ಈ ಒಂದೇ ಶಕ್ತಿಯು "ಮಾಯಾಭಿಃ" ಎಂದು ಅನಂತ ರೂಪವಾಗಿ ವರ್ಣಿಸಲ್ಪಟ್ಟಿದೆ. ಇಂತಹ ಅನಂತ ಶಕ್ತಿಗಳಿಂದೊಡಗೂಡಿದ ಮಾಯೆಗೆ ಅಧಿಪತಿಯಾಗಿಯೂ, ಆ ಮಾಯೆಯು ತನ್ನೊಳಗಿದ್ದರೂ ಆ ಮಾಯೆಗೆ ತಾನು ವಶನಾಗದೆ ಆ ಮಾಯೆಯನ್ನೇ ತನ್ನ ವಶ (ವಶೀಕೃತ ಮಾಯಾ ಶಕ್ತಿಯುಳ್ಳವನಾಗಿ) ಮಾಡಿಕೊಂಡಿರುವುದರಿಂದ ಪರಶಿವನೇ ಜಗಜ್ಜನ್ಮಾದಿಗಳಿಗೆ ಕರ್ತನಲ್ಲದೆ ಮಾಯೆಯಲ್ಲ.

"ಯುಜಾನೋ ಹರಿಥಾ ರಥೇ ಭೂರಿತ್ವಷ್ಟೇಹ ರಾಜತಿ"

ಎಂದು ಋಗ್ವೇದವು ವಿಶ್ವಸೃಷ್ಟಿಯ ಮೂಲಕರ್ತನಾದಪರಶಿವ ಬ್ರಹ್ಮಕ್ಕೆಶಿಲ್ಪಿಯ ಹೋಲಿಕೆಯನ್ನು ಕೊಟ್ಟಿದೆ. ಜಗತ್ಪ್ರಸಿದ್ಧನಾದಶಿಲ್ಪಿಗಿಂತಲೂ ವೇದಪ್ರಸಿದ್ಧನಾದ ಪರಶಿವಬ್ರಹ್ಮನು ಮಹಾಶಿಲ್ಪಿ.

ಶಕ್ತಿವಿಶಿಷ್ಟಾದ್ವೈತ

ಶಕ್ತಿ ವಿಶಿಷ್ಟಾದ್ವೈತ ಎಂಬ ಪದವು ಶಕ್ತಿ, ವಿಶಿಷ್ಟ, ಅದ್ವೈತ ಎಂಬ ಮೂರು ಶಬ್ದಗಳಿಂದ ಕೂಡಿರುತ್ತದೆ. ಇಲ್ಲಿ ಶಕ್ತಿಶ್ಚ ಶಕ್ತಿಶ್ಚ ಶಕ್ತೀ, ಶಕ್ತಿಭ್ಯಾಂ ವಿಶಿಷ್ಟಾಶಕ್ತಿವಿಶಿಷ್ಟೌ, ಶಕ್ತಿವಿಶಿಷ್ಟಯೋಃ ಅದ್ವೈತಂ-ಶಕ್ತಿವಿಶಿಷ್ಟಾದ್ವೈತಂ (ಏಕರಸತ್ವಂ) "ಸ್ಥೂಲಶಕ್ತಿರಿದಂ ಕಾರ್ಯಂ ಸೂಕ್ಷ್ಮಶಕ್ತಿಸ್ತು ಕಾರಣಂ" ಎಂಬ ಪ್ರಮಾಣಾನುಸಾರವಾಗಿ ಒಂದು ಶಕ್ತಿಯು ಸ್ಥೂಲ ಚಿದಚಿದಾತ್ಮಕಶಕ್ತಿ. ಮತ್ತೊಂದು ಸೂಕ್ಷ್ಮ ಚಿದಚಿದಾತ್ಮಕಶಕ್ತಿ. 'ಚಿತ್' ಅಂದರೆ ಚೇತನ. 'ಅಚಿತ್' ಅಂದರೆ ಜಡ. ಶಿವನ ಅಂಶನಾದ ಜೀವಾತ್ಮ (ಅಂಗ)ನು ಸ್ಥೂಲ ಚಿದಚಿಚ್ಛಕ್ತಿಯುಳ್ಳವನು. ಅಂಶಿಯಾದ ಪರಶಿವ (ಲಿಂಗ)ನು ಸೂಕ್ಷ್ಮ ಚಿದಚಿಚ್ಛಕ್ತಿಯುಳ್ಳವನು. ಜೀವಾತ್ಮನ ಸ್ಥೂಲ ಚಿಚ್ಛಕ್ತಿಯು ಕಿಂಚಿಜ್ಞತ್ವಾದಿ ಧರ್ಮವುಳ್ಳುದು. ಸ್ಥೂಲ ಅಚಿಚ್ಛಕ್ತಿಯು ಕಿಂಚಿತ್ಕರ್ತೃತ್ವಾದಿ ಧರ್ಮವುಳ್ಳುದು.

ಶಿವನ ಸೂಕ್ಷ್ಮ ಚಿಚ್ಛಕ್ತಿಯಾದರೋ ಸರ್ವಜ್ಞತ್ವಾದಿ ಧರ್ಮವುಳ್ಳುದು. ಸೂಕ್ಷ್ಮ ಅಚಿಚ್ಛಕ್ತಿಯು ಸರ್ವಕರ್ತೃತ್ವಾದಿ ಧರ್ಮವುಳ್ಳುದು. ಇಂತಹ ಜೀವಾತ್ಮ ಮತ್ತು ಪರಮಾತ್ಮ (ಅಂಗಲಿಂಗ)ರು ಒಂದುಗೂಡುವುದೇ (ಸಾಮರಸ್ಯವು) ಶಕ್ತಿವಿಶಿಷ್ಟಾದ್ವೈತ ಪದದ ವಿಶಿಷ್ಟಾರ್ಥವು.

ಸ್ಥಿತಿರ್ವಿಕಾಸ ಸಂಕೋಚ ಸಮಾನಾವಸ್ಥಯಾ ಭವೇತ್।
ಕೂರ್ಮಾವಯವ ನ್ಯಾಯೇನ ತತ್ಕ್ರಮಃಸಮುದೀರಿತಃ (ಸಿದ್ಧಾಂತ ಚಂದ್ರಿಕಾ)

ಆಮೆಯು ತನ್ನ ಅವಯವಗಳನ್ನು ತನ್ನ ಇಚ್ಛಾಶಕ್ತಿಯಿಂದ ಹೊರಪಡಿಸಿ ಪುನಃ ತನ್ನಲ್ಲಿ ಅಡಗಿಸಿಕೊಳ್ಳುವಂತೆ ಶಿವನುಕಾರಣಾವಸ್ಥೆಯಲ್ಲಿ ಅವ್ಯಕ್ತರೂಪದಿಂದ ತನ್ನಲ್ಲಿರುವ ವಿಶ್ವಾತ್ಮಕವಾದ ಪ್ರಪಂಚವನ್ನು ಕಾರ್ಯಾವಸ್ಥೆಯಲ್ಲಿ ಸ್ಥೂಲರೂಪದಿಂದ ಹೊರಹೊಮ್ಮಿಸಿ ಪುನಃ ಅವುಗಳನ್ನು ತನ್ನೊಳಗೆ ಅಡಗಿಸಿಕೊಳ್ಳುತ್ತಾನೆ.

ಶಕ್ತೇರ್ವಿಕಾಸ ಭಾವೇನ ವಿಶ್ವಸೃಷ್ಟಿರ್ಭವೇತ್ತದಾ।
ತಸ್ಯಾಸ್ಸಂಕೋಚಭಾವೇನ ವಿಶ್ವಸ್ಯ ಪ್ರಲಯೋ ಭವೇತ್ ॥ (ಸಿ. ಚಂ)

ಶಿವಶಕ್ತಿಯ ವಿಕಾಸವೇಸೃಷ್ಟಿ, ಸಂಕೋಚವೇ ಪ್ರಳಯ.

ಒಂದುವೇಳೆ ಪರಶಿವನಿಗೆ ವಿಶ್ವವನ್ನು ಸೃಜಿಸಿ ವಿನೋದಿಸಬೇಕೆಂಬ ಸಗುಣಾನಂದ ಲೀಲಾವಿಲಾಸದ ನೆನಹು ತೋರಿದಡೆ "ಇದಂ ಭೂತ್ವಾ" ಎಂದು ನೆನೆದಾಕ್ಷಣವೇ ಅನಂತ ಬ್ರಹ್ಮಾಂಡತಂಡಗಳಂ ಪುಟ್ಟಿಸಿ ಅದರೊಳಗಿರುವ ದೇವ ದಾನವ ಮಾನವಾದಿಗಳೇ ಭೃತ್ಯರಾಗಿ, ತಾನೇಕರ್ತನಾಗಿ, ಅವರಿಂದ ಪೂಜಾನಮಸ್ಕಾರವ ಕೈಕೊಂಡು, ಅವರವರ ಮನೋಭೀಷ್ಟಂಗಳಂ ಕೊಟ್ಟು ವಿನೋದಿಸಬಲ್ಲನು. ಒಂದುವೇಳೆ ಪರಶಿವಂಗೆ ಆ ಲೀಲೆಯು ಸಾಕಾದರೆ "ಹುತಭುಕ್" ಎಂದು ನೆನೆದಾಕ್ಷಣಅವನ್ನೆಲ್ಲಾ ತನ್ನಲ್ಲಿ ಒಳಕೊಂಡು, ತಾನೆಂದಿನಂತೆ ನಿರಾಕಾರನಾಗಿರಬಲ್ಲನು". (ಪ್ರಭುದೇವರ ವಚನ)

ತನಗಿಂತಲೂ ಭಿನ್ನವಾದ ಮತ್ತೊಂದು ಕಾರಣಾಪೇಕ್ಷೆಯಿಲ್ಲದೆ ಇಷ್ಟಾರ್ಥದಾಯಕವಾದ ಶಕ್ತಿಯು ಚಿಂತಾಮಣಿಯಲ್ಲಿ ಅಡಕವಾಗಿರುವಂತೆಯೂ, ವಿಚಿತ್ರ ಘಟನೆಗಳನ್ನು ತೋರಿಸುವ ಶಕ್ತಿಯು ಯೋಗಸಿದ್ಧನಲ್ಲಿ ಅಡಕವಾಗಿರುವಂತೆಯೂ, ತನ್ನ ಹೊಟ್ಟೆಯಲ್ಲಿದ್ದ ಸೂಕ್ಷ್ಮವಾದ ಎಳೆಗಳನ್ನು ಹೊರಹೊಮ್ಮಿಸಿ ನಾನಾ ಪ್ರಕಾರವಾದ ಬಲೆಗಳನ್ನು ನಿರ್ಮಿಸಿ ಆ ಎಳೆಗಳನ್ನು ಪುನಃ ತನ್ನೊಳಗೆ ಅಡಗಿಸಿಕೊಳ್ಳುವ ಶಕ್ತಿಯು (ಊರ್ಣನಾಭಿ)ಜೇಡರ ಹುಳುವಿನಲ್ಲಿರು ವಂತೆಯೂ ನವಿಲಿನ ತತ್ತಿಯ ರಸದಲ್ಲಿ ಮುಂದೆ ಹುಟ್ಟುವ ಮರಿಯ ಕೊಕ್ಕು, ಕಾಲು, ಗರಿಗಳಲ್ಲಿ ಕಾಣುವ ನಾನಾ ಪ್ರಕಾರದ ಬಣ್ಣಗಳು ಅಡಗಿರುವಂತೆ ಅಖಿಲ ಜಗದ್ರಚನೆಗೆ ಬೇಕಾದ ಎಲ್ಲ ಸಾಮಗ್ರಿಗಳು ಸಂಪೂರ್ಣವಾಗಿ ಪರಶಿವನಲ್ಲಿ ಅಡಕವಾಗಿರುವುದರಿಂದ, ಪರಶಿವನು ಸೃಷ್ಟಿಸ್ಥಿತ್ಯಾದಿ ಪಂಚಕೃತ್ಯಗಳನ್ನು ಕಾರಣಾಂತರದ ಅಪೇಕ್ಷೆಯಿಲ್ಲದೆ ನೆರವೇರಿಸುವನು. ಇಂತು ಶಕ್ತಿವಿಶಿಷ್ಟ ಪರಶಿವನು ಸ್ವಸ್ವರೂಪವೆಂಬ ಸ್ವಚ್ಛವಾದ ಕನ್ನಡಿಯಲ್ಲಿ ತಾದಾತ್ಮ್ಯ ಸಂಬಂಧವನ್ನು ಪಡೆದಿರುವ ವಿಮರ್ಶ ಶಕ್ತಿಯಿಂದ

ಕ್ರೋಢೀಕೃತವಾಗಿರುವ ಆಕಾಶಾದಿ ಜಡಪ್ರಪಂಚವನ್ನೂ, ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯಗಳೆಂಬ ನಾಲ್ಕು ಅವಸ್ಥೆಗಳಲ್ಲಿ ಅನುವರ್ತಿಸುತ್ತಿರುವ ವಿಶ್ವ, ತೈಜಸ, ಪ್ರಾಜ್ಞ, ತುರೀಯಗಳೆಂಬ ಅಜಡ ಪ್ರಪಂಚವನ್ನೂ ಸ್ವಾತಂತ್ರ್ಯ ಪ್ರಯುಕ್ತವಾದ ಇಚ್ಛಾಶಕ್ತಿ ಎಂಬ ಟಂಕ (ಉಳಿ) ದಿಂದ ಶಿವಾದಿ ಪೃಥಿವ್ಯಂತವಾದ ಮೂವತ್ತಾರು ತತ್ತ್ವರೂಪದಿಂದ ನಿರ್ಮಿಸಿ, ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಪಂಚ ಕೃತ್ಯ ರೂಪವಾದ ಮಹಾನಾಟ್ಯದಲ್ಲಿ ವಿಹರಿಸುತ್ತಿರುವನು.

ಜೀವಾತ್ಮ

ಯಥಾ ಸುದೀಪ್ತಾತ್ ಪಾವಕಾತ್ ವಿಸ್ಫುಲಿಂಗಾಃ
ಸಹಸ್ರಶಃ ಪ್ರಭವಂತೇ ಸರೂಪಾಃ
ತಥಾಕ್ಷರಾತ್ ವಿವಿಧಾಃ ಸೌಮ್ಯಭಾವಾಃ
ಪ್ರಭವಂತೇ ತತ್ರ ಚೈವಾಪಿಯಂತಿ ॥ (ಮುಂಡಕ 2-1.1)

ಪ್ರಜ್ವಲಿಸುತ್ತಿರುವ ಲೀಲಾವಶನಾದ ಶಕ್ತಿ ವಿಶಿಷ್ಟ ಪರಶಿವನಿಂದ ಅನಂತಾನಂತ ಜೀವಾತ್ಮರು ಹುಟ್ಟಿ ಅಲ್ಲಿಯೇ ಲಯವಾಗುವರು.

ಅಗ್ನಿತ್ವೇನ ಕಣತ್ವೇನ ಭೇದೋಽಪಿ ಸ್ಫುರತಿ ಕ್ವಚಿತ್
ಯಥಾಹಿ ಕುಂಡಲಮಿತಿ ಭೇದಾಭೇದೌ ತಥಾತ್ರಚ ॥ (ಕ್ರಿಯಾಸಾರ. ಉ. 2)

ಶಿವನಿಗೂ ಶಿವಾಂಶನಾದ ಜೀವನಿಗೂ ಅತ್ಯಂತ ಅಭೇದವನ್ನು ಹೇಳಲಾಗುವುದಿಲ್ಲ. ಶಿವನಲ್ಲಿರುವ ಸರ್ವಜ್ಞತ್ವಾದಿ ಧರ್ಮಗಳು ಜೀವನಲ್ಲಿರಬೇಕಾಗುವುದು. ಅತ್ಯಂತ ಭೇದವನ್ನೂ ಹೇಳಲಾಗುವುದಿಲ್ಲ. ಏಕೆಂದರೆ ಜಡರಾದ ಅಂತಹ ಜೀವರಿಂದ ಜ್ಞಾನರೂಪವಾದ ಕಾರ್ಯವೇ ಆಗದಿರಬೇಕು. ಜೀವನು ಘಟಪಟಾದಿ ಪ್ರಮೇಯವನ್ನು ಅರಿಯುತ್ತಲೇ ಇರುವನು. ಆದುದರಿಂದ ಶಿವ ಜೀವರಿಗೆ ಸತ್ಯವಾದ ಭೇದಾಭೇದವನ್ನು ಒಪ್ಪಬೇಕಾಗುವುದು. ಅಗ್ನಿಗೂ ಅದರ ಕಿಡಿಗಳಿಗೂ ಅಗ್ನಿತ್ವರೂಪದಿಂದಲೂ ಕಣತ್ವರೂಪದಿಂದಲೂ ಭೇದ ವಿದ್ದರೂ ಎರಡಕ್ಕೂ ಅಗ್ನಿತ್ವ (ದಾಹಕತ್ವ) ರೂಪಧರ್ಮದಿಂದ ಅಭೇದವೇ ಸಿದ್ಧಿಸುವುದು. ಉದ್ದವಾಗಿ ಹರಿಯುವ ಹಾವಿಗೂ, ಸುತ್ತಿಕೊಂಡು ಮಲಗಿರುವ ಹಾವಿಗೂ ದೀರ್ಘತ್ವರೂಪದಿಂದಲೂ, ಕುಂಡಲತ್ವ ರೂಪದಿಂದಲೂ ಭೇದವಿದ್ದರೂ, ಅಹಿತ್ವ (ಸರ್ಪತ್ವ) ರೂಪದಿಂದ ಅಭೇದವು ಸಿದ್ಧಿಸುವಂತೆ ಶಿವ ಜೀವರಿಗೆ ವಿಭುತ್ವ ರೂಪದಿಂದಲೂ, ಅಣುತ್ವ ರೂಪದಿಂದಲೂ ಭೇದವಿದ್ದರೂ, ಉಭಯರಿಗೂ ಚೇತನತ್ವರೂಪದಿಂದ ಅಭೇದವು ಸಿದ್ಧಿಸುತ್ತದೆ. ಆದುದರಿಂದ ವೀರಶೈವ ಮತಕ್ಕೆ ದ್ವೈತಾದ್ವೈತ ಮತವೆಂಬ ಪರ್ಯಾಯ ನಾಮವಿದೆ. ಹೀಗೆ ದ್ವೈತಾದ್ವೈತವನ್ನು ಹೇಳುವುದರಿಂದ ವೇದದಲ್ಲಿ ಬರುವ ದ್ವೈತವಾಕ್ಯಗಳಿಗೂ, ಅದ್ವೈತವಾಕ್ಯಗಳಿಗೂ ಸಮನ್ವಯವಾಗುತ್ತದೆ. ಹಾಗಿಲ್ಲದಿದ್ದರೆ ಶ್ರುತಿಗಳಿಗೆ ಸಂಕೋಚವನ್ನು ಕಲ್ಪಿಸಿದಂತಾಗುತ್ತದೆ.

ದ್ವೈತಾದ್ವೈತ ಮತೇ ಶುದ್ಧೇ ವಿಶಿಷ್ಟಾದ್ವೈತ ಸಂಜ್ಞಕೇ
ವೀರಶೈವೈಕ ಸಿದ್ಧಾಂತೇ ಸರ್ವಶ್ರುತಿ ಸಮನ್ವಯಃ॥ (ಶ್ರೀಕರ ಭಾಷ್ಯ)

ಎಂದು ಶ್ರೀಪತಿ ಪಂಡಿತರು ವೀರಶೈವ ಸಿದ್ಧಾಂತದಲ್ಲಿ ಸರ್ವ ಶ್ರುತಿಗಳಿಗೂ ಸಮನ್ವಯವುಂಟೆಂದು ಎಂದು ಹೇಳಿರುವರು. ಶ್ರೀಗಂಧವನ್ನು ದೇಹದ ಒಂದು ಭಾಗಕ್ಕೆ ಹಚ್ಚಿದರೂ ಅದರ ಶೈತ್ಯವು ಶರೀರವನ್ನೆಲ್ಲ ವ್ಯಾಪಿಸುವಂತೆಯೂ, ದೀಪವು ಒಂದು ಕಡೆಯಿದ್ದರೂ ಅದರ ಪ್ರಕಾಶವು ಎಲ್ಲಾ ಕಡೆಯಲ್ಲಿ ವ್ಯಾಪಿಸುವಂತೆಯೂ, ಅಣುರೂಪನಾದ ಜೀವನು ಒಂದು ಪ್ರದೇಶದಲ್ಲಿದ್ದರೂ ಶರೀರವನ್ನೆಲ್ಲಾ ವ್ಯಾಪಿಸಿರುವುದರಿಂದ ಶರೀರದ ಯಾವ ಭಾಗದಲ್ಲಿ ಬಾಧೆಯಾದರೂ, ಸುಖವಾದರೂ ಆ ಸುಖದುಃಖಗಳನ್ನು ಜೀವನು ಅನುಭವಿಸುತ್ತಾನೆ. ಈ ಜೀವನು ದೇಹ, ಇಂದ್ರಿಯ, ಮನಸ್ಸು, ಪ್ರಾಣಗಳಿಗಿಂತ ಭಿನ್ನನು, ನಿತ್ಯನು, ಚಿದಾತ್ಮಕನು, ಅನೇಕನು, ಮಲಾವೃತನು, ಅಸ್ವತಂತ್ರನು, ಕಿಂಚಿಜ್ಞನು ಮತ್ತು ಸೇಶ್ವರನೂ ಆಗಿರುತ್ತಾನೆ.

ಮಲತ್ರಯ

ಶಿವನೊಳಿರುವ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳು ಸಂಕೋಚಹೊಂದಿ ಆಣವ, ಮಾಯಾ, ಕಾರ್ಮಿಕ ಎಂಬ ಮೂರು ಮಲಗಳಾಗಿವೆ. ''ಅಣವತ್ವಂನಾಮ, ಆತ್ಮನಃ ತಿರೋಧಾಯಕತ್ವಂ ಅಸ್ಯ ಚ ಆಣವತ್ವೋಕ್ತಿರ್ವಿಭೋಃ ಆತ್ಮನಃ ಅಣುತ್ವಸಂಪಾದನಾತ್'' ಇವುಗಳಲ್ಲಿ ಮೊದಲನೆಯದಾದ ಆಣವ ಮಲವು ಅತೀಂದ್ರಿಯವಾದುದರಿಂದ ಅತಿಸೂಕ್ಷ್ಮವಾದುದು. ಈ ಮಲದಿಂದ ಆವೃತನಾದ ಜೀವನು ಅಣು ಎಂಬ ಹೆಸರನ್ನು ಪಡೆಯುವನು. ನಾನು ಪೂರ್ಣನಲ್ಲ ಎಂಬುದೇ ಆಣವ ಮಲದ ಕಾರ್ಯವು. ಪರಶಿವನ ಅಂತಃಕರಣ ರೂಪವಾದ ಚಿಚ್ಛಕ್ತಿಯು ಅಂದರೆ ನಾನು ಸರ್ವಾತ್ಮಕನು, ನಾನು ಸರ್ವಾಧಿಪನು, ನಾನು ಪರಿಪೂರ್ಣನು ಎಂಬ ವೃತ್ತಿಗೆ ಕಾರಣವಾದ ವಿಮರ್ಶ ಶಕ್ತಿಯು ಸ್ವಸ್ಥಾನದಿಂದ ವಿಭಕ್ತವಾಗಿ ಸಂಕೋಚವನ್ನು ಹೊಂದಿ ಚಿತ್ತವೆನಿಸಿತು. ಆ ಚಿತ್ತವೇ ನಾನು ಸರ್ವಾತ್ಮಕನಲ್ಲ. ಸರ್ವಾಧಿಪನಲ್ಲ. ಪರಿಪೂರ್ಣನೂ ಅಲ್ಲ ಎಂಬ ವೃತ್ತಿಗೆ ಕಾರಣವಾಗುತ್ತದೆ. ಆ ಚಿತ್ತವೇ ಆಣವ ಮಲವೆಂದೂ ಅಖ್ಯಾತಿಯೆಂದೂ ಕರೆಯಲ್ಪಡುವುದು. ಏಕೆಂದರೆ ಜೀವನು ಸರ್ವಜ್ಞತ್ವ. ಸರ್ವಕರ್ತೃತ್ವಾದಿ ಗುಣವುಳ್ಳವನಾಗಿದ್ದರೂ ಶಕ್ತಿ ಸಂಕೋಚವು ಆ ಗುಣಗಳನ್ನು ಹ್ರಾಸಗೊಳಿಸಿ ಕಿಂಚಿಜ್ಞತ್ವ ರೂಪವಾದ ವಿದ್ಯಾತತ್ತ್ವವುಳ್ಳವನನ್ನಾಗಿಯೂ, ಕಿಂಚಿತ್ಕರ್ತತ್ವರೂಪವಾದ ಕಲಾತತ್ತ್ವ ಉಳ್ಳವನನ್ನಾಗಿಯೂ, ಸರ್ವತ್ರ ಪರಿಪೂರ್ಣನಾಗಿದ್ದರೂ, ನಾನು ಪರಿಪೂರ್ಣನಲ್ಲ ವೆಂಬ ಅಜ್ಞಾನವನ್ನುಂಟುಮಾಡುವದರಿಂದ ಹಾಗೆ ಹೇಳಬೇಕಾಗುತ್ತದೆ. ಈ ಚಿತ್ತರೂಪವಾದ ಆಣವಮಲವು ಮುಂದಿನ ಮಾಯಾ ಮಲಕ್ಕೂ, ಕಾರ್ಮಿಕಮಲಕ್ಕೂ ಕಾರಣವಾಗಿರುವುದರಿಂದ ಕಾರ್ಯಕಾರಣಗಳಿಗೆ ಅಭೇದದೃಷ್ಟಿಯಿಂದ ಚಿತ್‌ಶಕ್ತಿಸಂಕೋಚರೂಪವಾದ ಚಿತ್ತವಿಶಿಷ್ಟನೇ ಜೀವವೆಂದು ಹೇಳಲ್ಪಡುವನು. ವೀರಶೈವ ಸಿದ್ಧಾಂತದಲ್ಲಿ ಚಿತ್ತವೆಂಬುದು ಪ್ರಕೃತಿಯ

ಕಾರ್ಯವಲ್ಲ. ಮಲತ್ರಯದ ಸ್ವರೂಪ ಜೀವನ ಸ್ವಾಭಾವಿಕವಾದ ಸರ್ವಜ್ಞತ್ವಾದಿ ಸ್ವರೂಪವನ್ನು ಆಚ್ಛಾದಿಸಿ ಕಿಂಚಿಜ್ಞತ್ವಾದಿ ಅಲ್ಪ ಗುಣವುಳ್ಳವನನ್ನಾಗಿ ಮಾಡುವುದೇ ಆಣವ ಮಲದ ಕಾರ್ಯವು..

ಎರಡನೆಯದಾದ ಮಾಯೀಯ ಮಲವು ಸೂಕ್ಷ್ಮವಾದದ್ದು. ಮೂವತ್ತಾರು ತತ್ತ್ವಗಳೊಳಗಿರುವ ''ಮಾಯಾ, ಕಾಲ, ಕಾಲ, ರಾಗ, ನಿಯತಿ, ವಿದ್ಯಾ'' ಎಂಬ ಆರು ತತ್ತ್ವಗಳೇ ಮಾಯೀಯ ಮಲಗಳು. ಇವುಗಳನ್ನು ಷಟ್ಕಂಚುಕವೆಂದು ಕರೆಯುವರು, ಈ ಮಾಯೀಯ ಮಲವು 'ಜ್ಞಾನವು ಕ್ರಿಯೆಯಲ್ಲ, ಕ್ರಿಯೆಯು ಜ್ಞಾನವಲ್ಲ, ನಾನು ಶಿವನಲ್ಲ, ಶಿವನು ನಾನಲ್ಲ' ಎಂಬ ಭೇದಜ್ಞಾನವನ್ನು ಹುಟ್ಟಿಸುವುದು. ನಾನು ಇದನ್ನು ಅರಿಯೆನು ಎಂಬುದೇ ಮಾಯೀಯ ಮಲದ ಕಾರ್ಯವು.

ಮೂರನೆಯದಾದ ಕಾರ್ಮಿಕ ಮಲವು ಸ್ಥೂಲವಾದುದು. ಪ್ರಧಾನ (ಪ್ರಕೃತಿ) ತತ್ತ್ವದಿಂದ ಪರಂಪರೆಯಾಗಿ ಹುಟ್ಟಿದ ಸ್ಥೂಲ ಶರೀರವೇ ಕಾರ್ಮಿಕ ಮಲವು. ಇದು ತ್ವಜ್ಮಾಂಸಾದಿ ರೂಪವಾಗಿರುವುದರಿಂದ ಸ್ಥೂಲವೆಂಬ ಹೆಸರನ್ನು ಪಡೆಯಿತು. ಈ ಶರೀರವು ಪುಣ್ಯಾಪುಣ್ಯ ಕರ್ಮಗಳಿಗೂ ಅವುಗಳಿಂದುಂಟಾದ ಸುಖದುಃಖಗಳಿಗೂ ಭಾಗಿಯಾಗಿರುವುದು. ನಾನು ಪುಣ್ಯ ಪಾಪಗಳಿಂದುಂಟಾದ ಸುಖದುಃಖಗಳನ್ನನುಭವಿಸುವೆನು ಎಂಬುದೇ ಕಾರ್ಮಿಕಮಲದ ಕಾರ್ಯವು ಜೀವನು ಇಂತಹ ಮೂಲ ಮಲಗಳಿಂದ ಆವೃತನಾಗಿರುವುದರಿಂದ ಅಣು, ಕಿಂಚಿಜ್ಞ, ಪಶು ಎನಿಸಿದನು.

ಶಿವದೀಕ್ಷೆ

ತನುತ್ರಯಗತಾನಾದಿ ಮಲತ್ರಯಮಸೌಗುರುಃ
ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್ ॥ (ಸಿ. ಶಿ. ದೀಕ್ಷಾಸ್ಥಲ)

ಕಾರಣ, ಸೂಕ್ಷ್ಮ, ಸ್ಥೂಲಗಳೆಂಬ ಮೂರು ದೇಹಗಳನ್ನು ಅನಾದಿಕಾಲದಿಂದ ಅಂಟಿಕೊಂಡಿರುವ ಈ ಆಣವ, ಮಾಯಾ, ಕಾರ್ಮ ಮಲಗಳನ್ನು ಶ್ರೀಗುರುವು, ವೇಧಾ, ಮನು, ಕ್ರಿಯೆಗಳೆಂಬ ಮೂರು ದೀಕ್ಷೆಗಳಿಂದ ಸುಟ್ಟು, ಭಾವ, ಪ್ರಾಣ, ಇಷ್ಟಗಳೆಂಬ ಮೂರು ಲಿಂಗಗಳನ್ನು ಆ ಮೂರು ಶರೀರಗಳಲ್ಲಿ ಧರಿಸುವನು.

''ಅನಯೋಃ ಶಾಸನೇ ಸಿದ್ಧಾ ದೀಕ್ಷಾ ಕ್ಷಪಣದಾನಯೋಃ'' (ಶಿದ್ಧಾಂತಾಗಮ)

ಆತ್ಮನಿಗೆ ಮಲನಿವೃತ್ತಿಪೂರ್ವಕ ಶಿವತ್ವ ಸಮಾವೇಶಗೊಳಿಸುವ ಕ್ರಿಯಾಶಕ್ತಿಯೇ ದೀಕ್ಷೆಯು. ಇದು–

''ಗರ್ಭಾಷ್ಟಮೇ ಕೃತಾ ದೀಕ್ಷಾ ಮುಖ್ಯಾ ಸಾ ಷೋಡಶಾವಧಿಃ ॥'' (ಕ್ರಿಯಾಸಾರ)

ಎಂಟನೆಯ ವರ್ಷದಿಂದ ಹದಿನಾರು ವರ್ಷಗಳೊಳಗೆ ಸ್ವಶಾಖೀಯ ಗುರುಗಳಿಂದ ಮಾಡುವ ಸಂಸ್ಕಾರ ವಿಶೇಷವು. ಈ ದೀಕ್ಷೆಯಲ್ಲಿ ಅವರವರ ಶಕ್ತಿಪಾತಾನುಸಾರವಾಗಿ ಮಂದ, ತೀವ್ರ

ಇತ್ಯಾದಿ ಅನೇಕ ಭೇದಗಳಿವೆ. ''ಅಥಾತೋ ಬ್ರಹ್ಮ ಜಿಜ್ಞಾಸಾ'' ಎಂಬ ಬ್ರಹ್ಮಸೂತ್ರದಲ್ಲಿರುವ ''ಅಥ'' ಶಬ್ದವನ್ನು ವಿವರಿಸುವ ಸಂದರ್ಭದಲ್ಲಿ ಶ್ರೀಪತಿ ಪಂಡಿತರು-

''ಷಟ್‌ಸ್ಥಲ ಪರಶಿವ ಸಾಕ್ಷಾತ್ಕಾರಕಾರಣ.......... ಮಲತ್ರಯಧ್ವಂಸಕ ಅಷ್ಟಾವರಣ ಪಂಚಾಚಾರ ಸದ್ಗುರು ಕರುಣಾಕಟಾಕ್ಷಲಬ್ಧ ಶಕ್ತಿಪಾತಾದ್ಯವಚ್ಛಿನ್ನ ಪರಶಿವೇಷ್ಟ ಲಿಂಗಧಾರಣಾತ್ಮಕ ದೀಕ್ಷಾನಂತರ್ಯಂ'' ಎಂದು ಲಿಂಗಧಾರಣಾತ್ಮಕ ಶಿವದೀಕ್ಷೆಯನ್ನು ಪಡದವನೇ ಬ್ರಹ್ಮವಿಚಾರಕ್ಕರ್ಹನಾಗುತ್ತಾನೆಂದು ವೀರಶೈವ ಮತದ ತತ್ತ್ವವನ್ನು ಸಂಕ್ಷೇಪವಾಗಿ ತೋರಿಸಿರುತ್ತಾರೆ.

''ದೀಕ್ಷಯಾ ರಹಿತಸ್ಸಾರ್ಕ್ಷಾನ್ನಾಪ್ನುಯಾಲ್ಲಿಂಗಮುತ್ತಮಂ।'' (ಸಿದ್ಧಾಂತಶಿಖಾಮಣಿ)

ದೀಕ್ಷೆಯನ್ನು ಹೊಂದದವನು ಲಿಂಗಧಾರಣಕ್ಕೆ ಅರ್ಹನಲ್ಲ. ಮಣ್ಣಿನ ಮುದ್ದೆಯು ನದಿಯಲ್ಲಿ ಬಿಟ್ಟರೆ ಮುಳುಗಿಹೋಗುವುದು. ಅದೇ ಮಣ್ಣಿನ ಮುದ್ದೆಯನ್ನು ಗಡಿಗೆಯನ್ನು ಮಾಡಿ ಬೆಂಕಿಯಲ್ಲಿ ಬೇಯಿಸಿದರೆ ಅದು ನೀರಿನ ಮೇಲೆ ತೇಲುತ್ತದೆ. ಆ ಗಡಿಗೆಯ ಬಣ್ಣವೂ, ನಾದವೂ, ಕ್ರಿಯೆಯೂ ಬದಲಾಗುತ್ತವೆ. ಆಗ ಆ ಗಡಿಗೆಯ ಸಹಾಯದಿಂದ ನದಿಯನ್ನು ದಾಟಬಹುದು. ಇದೇ ರೀತಿ ಕಾಮ ಕ್ರೋಧಾದಿ ಅನೇಕ ದುರ್ಗುಣಗಳಿಂದ ಕೂಡಿರುವ ಚಿತ್ತವನ್ನು ಶಿವದೀಕ್ಷೆಯೆಂಬ ಮಹಾಗ್ನಿಯಿಂದ ಸಂಸ್ಕರಿಸಿ ಉಪಾಸನಾರೂಢನಾದರೆ ಆ ದುರ್ಗುಣಗಳೆಲ್ಲವೂ ಅಳಿದು ಸಂಸಾರ ಸಮುದ್ರವನ್ನು ಸುಖವಾಗಿ ದಾಟುತ್ತಾನೆ; ಮತ್ತು ಮರದ ತುದಿಯಲ್ಲಿರುವ ಪಕ್ಷಿಯ ಮರಿಯೊಂದು ಸಂತೋಷದಿಂದ ತನ್ನ ತಾಯಿತಂದೆಗಳ ಜೊತೆಯಲ್ಲಿ ಕಾಲಕಳೆಯುತ್ತಿರಲು ಅದೇ ಮರಿಯು ವಿಹಾರಾರ್ಥವಾಗಿ ತನ್ನ ತಾಯಿತಂದೆಗಳನ್ನಗಲಿ ಭೂಮಿಗಿಳಿಯಲು ಬೇಡನ ಬಲೆಯೊಳಗೆ ಸಿಕ್ಕು ಸಂಕಟಪಡುತ್ತಿರಲು ದಯಾಶೀಲನಾದ ಪುರುಷನೊಬ್ಬನು ಕರುಣೆಯಿಂದ ಆ ಜಾಲವನ್ನು ಕತ್ತರಿಯಿಂದ ಕತ್ತರಿಸಲಾಗಿ, ದುಃಖದಿಂದ ಬಿಡುಗಡೆ ಹೊಂದಿ ತನ್ನ ತಾಯಿತಂದೆಗಳನ್ನು ಸೇರುವಂತೆ ಆತ್ಮನು ತನ್ನ ಸ್ಥಾನವನ್ನು ಬಿಟ್ಟು ಚಿತ್ತವೆಂಬ ಬಲೆಯೊಳಗೆ ಸಿಕ್ಕಿ ತಾಪತ್ರಯ, ಪಂಚಕ್ಲೇಶ, ಅರಿಷಡ್ವರ್ಗ, ಷಡ್ಭಾವ ವಿಕಾರಾದಿಗಳಿಂದ ಸಂಕಟಪಡುತ್ತಿರುವಾಗ ಶಿವಜ್ಞಾನಿಯಾದ ಗುರುವು ಅವನ ಶಕ್ತಿಪಾತವನ್ನರಿತು ಶಿವದೀಕ್ಷೆಯೆಂಬ ಕತ್ತರಿಯಿಂದ ಚಿತ್ತವೆಂಬ ಬಲೆಯನ್ನು ಕತ್ತರಿಸಲು, ಮಲತ್ರಯದಿಂದ ಬಿಡುಗಡೆ ಹೊಂದಿ ತನ್ನ ಪೂರ್ವದ ಸ್ಥಿತಿಯನ್ನು ಸ್ಮರಿಸುತ್ತ ದೃಢತರ ಶಿವಯೋಗಾಭ್ಯಾಸದಿಂದ ಶಕ್ತಿವಿಶಿಷ್ಟ ಶಿವನೊಳು ಸೇರಿ ಸುಖಿಪಡುವನು.

ಗರ್ಭಿಣಿಯರಾದ ವೀರಶೈವ ಸ್ತ್ರೀಯರ ಗರ್ಭದಲ್ಲಿ ಚೈತನ್ಯವು ಎಂದು ಉದಿಸಿತೊ ಆಗಲೇ ಅಂದರೆ ಎಂಟನೆಯ ತಿಂಗಳೊಳಗೆ ಸ್ವಶಾಖೀಯ ಗುರುಗಳು ಸ್ಫಟಿಕ, ಚಂದ್ರಕಾಂತ, ಶ್ರೀಶೈಲಜ ಮುಂತಾದವುಗಳಲ್ಲಿ ಯಾವುದಾದರೊಂದು ಪಂಚಸೂತ್ರ ಘಟಿತವಾದ ಲಿಂಗವನ್ನು ಸಾಮಾನ್ಯಾಕಾರದಿಂದ ಸಂಸ್ಕರಿಸಿ ಗರ್ಭಿಣಿಯರ ವಶಕ್ಕೆ ಕೊಡುವರು. ಮುಂದೆ ಮಗುವಿಗೆ ಎಂಟು ವರ್ಷಗಳು ಕಳೆದ ಮೇಲೆ ಕ್ರಮವಾಗಿ ಕುಂಡ, ಮಂಡಪ, ಪಂಚಕಲಶಗಳನ್ನು ಸ್ಥಾಪಿಸಿ

ಸುಪ್ತಾವಸ್ಥೆಜಾಗ್ರದವಸ್ಥೆಗೊಳಿಸಿ ಷಡಧ್ವಶುದ್ಧಿ, ಭೂತಶುದ್ಧಿ, ಕಲಾನ್ಯಾಸಾದಿಗಳಿಂದ ಸಂಸ್ಕೃತವಾದ ಅಂಗದಲ್ಲಿ ಶಿವಕಲಾಸಮಾವಿಷ್ಟವಾದ ಲಿಂಗವನ್ನು ಮಂತ್ರೋಪದೇಶ ಪೂರ್ವಕವಾಗಿ ನೆಲೆಗೊಳಿಸುವನು. ಈ ದೀಕ್ಷೆಯು ಮುಕ್ತಿಮಂದಿರಕ್ಕೆ ಮಹಾದ್ವಾರವಾಗಿದೆ.

ಲಿಂಗಧಾರಣ

ಶಕ್ತಿವಿಶಿಷ್ಟಾದ್ವೈತ ಸಂಪ್ರದಾಯದಲ್ಲಿ ಲಿಂಗವನ್ನು ಶರೀರದಲ್ಲಿ ಧರಿಸುತ್ತ ಕರಪೀಠದಲ್ಲಿಯೇ ಅರ್ಚಿಸಬೇಕೆಂಬುದು ವಿಶೇಷ ನಿಯಮ. ಲಿಂಗವು ಸ್ಥಾವರ, ಇಷ್ಟ ಎಂದು ಎರಡು ವಿಧ. ದೇವಾಲಯಗಳಲ್ಲಿ ಪ್ರತಿಷ್ಠಿತವಾದ ಲಿಂಗವು ಸ್ಥಾವರಲಿಂಗ. ಶರೀರದಮೇಲೆ ಧರಿಸುವ ಲಿಂಗವು ಇಷ್ಟಲಿಂಗ. ಉಭಯ ಲಿಂಗಗಳಿಗೂ ಷಡಧ್ವಾದಿ ಸಂಸ್ಕಾರಗಳಲ್ಲಿಯೂ ಪಂಚ-ಸೂತ್ರಾದಿ ಲಕ್ಷಣಗಳಲ್ಲಿಯೂ ಭೇದವಿಲ್ಲದಿದ್ದರೂ ಸ್ಥಾವರಲಿಂಗವನ್ನು ಅನೇಕರು ಪೂಜಿಸಬಹುದು. ಇಷ್ಟಲಿಂಗವನ್ನು ಮಾತ್ರ ಯಾವ ಸಾಧಕನು ಧರಿಸಿರುತ್ತಾನೋ ಆತನು ಆಜನ್ಮ ಮರಣಾಂತವಾಗಿ ನಿತ್ಯವೂ ಪೂಜಿಸಬೇಕು. ದೇಹ ತ್ಯಾಗಾನಂತರ ಆ ಲಿಂಗವು ಅವನೊಡನೆಯೇ ವಿಲೀನವಾಗುತ್ತದೆ. ಆದುದರಿಂದ ಇದಕ್ಕೆ ಇಷ್ಟಲಿಂಗವೆಂದು ಹೆಸರು.

ಇಷ್ಟಾವಾಪ್ತಿಕರಂ ಸಾಕ್ಷಾದನಿಷ್ಟ ಪರಿಹಾರಕಂ।
ಇಷ್ಟಿಃ ಪೂಜಾ ತಯಾ ನಿತ್ಯಮಿಷ್ಟಂ ಪೂಜಿತಮಾದರಾತ್ ॥

ಅನುಭವ ಸೂತ್ರ

ಎಂಬ ಪ್ರಮಾಣಾನುಸಾರವಾಗಿ ಇಷ್ಟಲಿಂಗ ಪೂಜೆಯು ತನಗುಂಟಾಗುತ್ತಿರುವ ಅನಿಷ್ಟಗಳನ್ನೆಲ್ಲ ಪರಿಹರಿಸಿ ಇಷ್ಟಾರ್ಥವನ್ನು ಕೊಡುವುದರಿಂದ ಇದಕ್ಕೆ ಇಷ್ಟಲಿಂಗವೆಂಬ ಹೆಸರು ಅನ್ವರ್ಥವಾಗಿದೆ.

ಬಾಹ್ಯಪೀಠಾರ್ಚನಾದೇತತ್ಕರಪೀಠಾರ್ಚನಂ ವರಂ।
ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಂ ॥ ಸಿದ್ಧಾಂತ ಶಿಖಾಮಣಿ

ಶಿವಕಲಾಸಮಾವಿಷ್ಟವಾದ ಇಷ್ಟಲಿಂಗವನ್ನು ವೀರಶೈವರು ಕರಪೀಠದಲ್ಲಿಟ್ಟು ಅರ್ಚಿಸಬೇಕು.

"ಮೂರ್ಧ್ನಿವಾ ಕಂಠದೇಶೇವಾ ಕಕ್ಷೇ ವಕ್ಷಸ್ಥಲೇ ಪಿವಾ" (ಸಿ. ಶಿ)

ಇತ್ಯಾದಿ ಶರೀರದಲ್ಲಿ ಲಿಂಗವನ್ನು ಧರಿಸುವ ಸ್ಥಾನಗಳನ್ನು ತೋರಿಸಿ.

"ನಾಭೇರಧಸ್ತಾಲಿಂಗಸ್ಯ ಧಾರಣಂ ಪಾಪಕಾರಣಂ" (ಸಿ.ಶಿ)

ಹೊಕ್ಕಳಿನಿಂದ ಕೆಳ ಭಾಗದಲ್ಲಿ ಲಿಂಗವನ್ನು ಧರಿಸುವುದು ಪ್ರತ್ಯವಾಯಜನಕವೆಂದು ನಿಯಮವನ್ನು ಮಾಡಿರುತ್ತಾರೆ.

ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ।
ವಿನ್ಯಸ್ಯ ತಲ್ಲೀನಮನಃಪ್ರಚಾರಃ॥
ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ।
ಸಂಪೂಜಯತ್ಯಂಗ ಸ ವೀರಶೈವಃ॥ - ಸ್ಕಾಂದಪುರಾಣ

ಇಷ್ಟಲಿಂಗವನ್ನು ಹಸ್ತ ಪೀಠದಲ್ಲಿಟ್ಟು ಪೂಜಿಸುವುದು ವೀರಶೈವ ಲಕ್ಷಣವೆಂದು ವ್ಯಾಸ ಮಹರ್ಷಿಗಳು ಹೇಳಿರುತ್ತಾರೆ. ಶ್ರೀ ರೇಣುಕಾಚಾರ್ಯರು-

''ಪ್ರಾಣವದ್ಧಾರಣೀಯಂ ತತ್ ಪ್ರಾಣಲಿಂಗಮಿದಂ ತವ'' (ಸಿ.ಶಿ)

ಎಲೌ ಶಿಷ್ಯನೇ! ಈ ಲಿಂಗವನ್ನು ನಿನ್ನ ಪ್ರಾಣದಂತೆ ರಕ್ಷಿಸು. ಯಾವ ಕಾರಣದಿಂದಲೂ ನಿನ್ನ ಶರೀರದಿಂದ ಇದನ್ನು ಅಗಲಿಸಬಾರದು. ಒಂದುವೇಳೆ ಪ್ರಮಾದದಿಂದ ಲಿಂಗ ವಿಯೋಗ ವಾದರೆ ಪ್ರಾಣವನ್ನಾದರೂ ಬಿಡಲು ಸಿದ್ಧನಾಗಿರು. ಈ ನಿಯಮಾನುಸಾರವಾಗಿ ಲಿಂಗವನ್ನು ಧರಿಸಿ ಪೂಜಿಸುವುದರಿಂದ ಅಭ್ಯುದಯ ನಿಶ್ರೇಯಸ ಸಂಪತ್ತು ನಿನ್ನ ಕರಗತವಾಗುವುದೆಂದು ಬೋಧಿಸಿರುತ್ತಾರೆ. ಲಿಂಗಧಾರಣ, ಲಿಂಗಪೂಜಾ ವ್ರತವನ್ನು ಶಾಂಭವವ್ರತ, ಪಾಶುಪತವ್ರತ, ಶಿರೋವ್ರತವೆಂದು ಶಿವಾಗಮಗಳು ಹೇಳುತ್ತವೆ.

ಇಂತಹ ಲಿಂಗಧಾರಣ ದೀಕ್ಷೆಯನ್ನು ವಹಿಸಿದವನೇ ಬ್ರಹ್ಮವಿದ್ಯೆಗೆ ಅಧಿಕಾರಿಯಾಗುತ್ತಾನೆ. ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲಿ, ಯತಿಯಾಗಲಿ ಲಿಂಗಧಾರಣವುಳ್ಳವನು 'ಅತ್ಯಾಶ್ರಮಿ' ವೀರಶೈವ ಮತದಲ್ಲಿ 'ಅತ್ಯಾಶ್ರಮಿ' ಎಂಬ ವ್ಯವಹಾರವು ಸರ್ವಾಶ್ರಮ ಸಾಧಾರಣವಾಗಿದೆ. ಈ ಲಿಂಗಧಾರಣವು ಋಗ್ಯಜುಃ ಸಾಮಾಥರ್ವಣ ವೇದಗಳಲ್ಲಿ ಹೇಳಲ್ಪಟ್ಟಿರುತ್ತದೆಂದು ಶ್ರೀಪತಿ ಪಂಡಿತರು, ಶ್ರೀಕರ ಭಾಷ್ಯದ 9,10, 11ನೆಯ ಪುಟಗಳಲ್ಲಿ ಆಯಾಯ ಮಂತ್ರಗಳಿಗೆ ಭಾಷ್ಯವನ್ನು ಬರೆಯುತ್ತಾ ಲೈಂಗ್ಯಸ್ಕಾಂದಾದಿ ಮಹಾಪುರಾಣಗಳ ಉಪಬೃಂಹಣವಾಕ್ಯಗಳನ್ನು ತೋರಿಸಿರುತ್ತಾರೆ.

ಲಿಂಗಧಾರಣವು ಬಾಹ್ಯ, ಅಭ್ಯಂತರ ಎಂದು ಎರಡು ವಿಧ.

''ಆಧಾರೇ ಕನಕ ಪ್ರಖ್ಯಂ ಹೃದಯೇ ವಿದ್ರುಮಪ್ರಭಂ।
ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಂ' ಯೋಗೀ ವಿಭಾವಯೇತ್'' (ಸಿ. ಶಿ)

ಆಧಾರ ಚಕ್ರದಲ್ಲಿ ಚಿನ್ನದ ಕಾಂತಿಯಂತೆ, ಅನಾಹತ ಚಕ್ರದಲ್ಲಿ ಹವಳದ ಹೊಳಪಿನಂತೆ, ಆಜ್ಞಾ ಚಕ್ರದಲ್ಲಿ ಸ್ಫಟಿಕದ ಪ್ರಭೆಯಂತೆ ಹೊಳೆಯುತ್ತಿರುವ ಜೋತಿರ್ಲಿಂಗವನ್ನು ಧ್ಯಾನಿಸುವುದೇ ಅಂತರ್ಲಿಂಗಧಾರಣ. ಈ ಅಂತರ್ಲಿಂಗಾನುಸಂಧಾನವನ್ನು ಮಾಡಲು ಶಕ್ತಿಯಿರಲಿ ಇಲ್ಲದಿರಲಿ ಗುರುದತ್ತವಾದ ಇಷ್ಟಲಿಂಗವನ್ನು ಅದೇ ಸ್ವರೂಪವೆಂದು ಭಾವಿಸಿ ಪೂಜಿಸುತ್ತಾ ಬಂದರೆ ಸ್ಥೂಲಾರುಂಧತೀನ್ಯಾಯಾನುಸಾರವಾಗಿ ದಹರಾಕಾಶದಲ್ಲಿ ಬೆಳಗುತ್ತಿರುವ ಜ್ಯೋತಿರ್ಲಿಂಗದ ಸಾಕ್ಷಾತ್ಕಾರವಾಗುವುದು.

ವೀರಶೈವ ಸ್ತ್ರೀಪುರುಷರೆಲ್ಲರೂ ಶಿವದೀಕ್ಷೆಯನ್ನು ಪಡೆದು ಯಾವಜ್ಜೀವವೂ ದೇಹದಲ್ಲಿ ಧರಿಸಿ ಲಿಂಗಪೂಜೆಯನ್ನು ಮಾಡಲೇಬೇಕೆಂಬ ಪ್ರಬಲ ವಿಧಿಯಿರುವುದರಿಂದ ಇವರಿಗೆ ಲಿಂಗ ಧಾರಣ, ಲಿಂಗಪೂಜೆಗಳಲ್ಲಿ ಪಂಚಸೂತಕಗಳ ನಿರ್ಬಂಧವಿಲ್ಲ. ಈ ಮಹಾವ್ರತವನ್ನು ಎಲ್ಲರೂ ನಿತ್ಯವೂ ತಪ್ಪದೆ ಆಚರಿಸಲೇಬೇಕು. ಹಾಗಿಲ್ಲದಿದ್ದರೆ ವ್ರತಲೋಪವುಂಟಾಗಿ ಮುಕ್ತಿಗೆ ಪ್ರತಿಬಂಧಕವಾಗುವದೆಂಬ ವಿಶೇಷ ನಿಯಮವಿದೆ. ನಿಯಮ (ವಿಧಿ)ಗಳಲ್ಲಿ

ಸಾಮಾನ್ಯ ವಿಶೇಷ ಎಂದು ಎರಡು ವಿಧ. 'ಪಶುಮಾಲಭೇತ' ಎಂಬ ವಿಶೇಷ ವಾಕ್ಯದಲ್ಲಿರುವ ಪಶ್ವಾಲಂಬನ ವಿಧಿಯನ್ನು ಯಜ್ಞ ಕರ್ಮಕ್ಕೋಸ್ಕರ ಸಂಸ್ಕಾರ ಹೊಂದಿದ ಪಶುವೊಂದಕ್ಕೆ ಅನ್ವಯಿಸಬೇಕಲ್ಲದೆ. ಮಿಕ್ಕ ಪಶುಗಳಲ್ಲಿ 'ನಹಿಂಸ್ಯಾತ್ ಸರ್ವಾಭೂತಾನಿ' ಎಂಬ ಸಾಮಾನ್ಯ ವಿಧಿಯನ್ನು ಪಾಲಿಸಬೇಕು. ಇದರಂತೆ ಈ ವಿಶೇಷ ವಿಧಿಯು ಲಿಂಗಧಾರಣ ಲಿಂಗಪೂಜೆಗಳಲ್ಲಿ ಮಾತ್ರ ಪ್ರವರ್ತಿಸುವುದಲ್ಲದೇ ಸರ್ವತ್ರ ಪ್ರವರ್ತಿಸುವುದಿಲ್ಲ. ಸಾಮಾನ್ಯ ವಿಧಿಯು ವ್ಯಾಪಕ, ವಿಶೇಷ ವಿಧಿಯು ವ್ಯಾಪ್ಯ, ಆದುದರಿಂದ ದೀಕ್ಷಿತರಾದ ವೀರಶೈವರಿಗೆ ಲಿಂಗಪೂಜೆಯು ಯಾವಜ್ಜೀವವೂ ಮಾಡಬೇಕಾದ ಮಹಾಯಜ್ಞವಾದುದರಿಂದ, ಲಿಂಗಧಾರಣ, ಲಿಂಗಪೂಜೆಗಳಲ್ಲಿ ಮಾತ್ರ ಯಾವ ವಿಧವಾದ ಆಶೌಚಪ್ರತಿಬಂಧಕವೂ ಇಲ್ಲ. ಇತರ ವ್ಯವಹಾರಗಳಲ್ಲಿ ದೈಹಿಕ ಮತ್ತು ಧಾರ್ಮಿಕ ನಿಯಮಾನುಸಾರವಾಗಿ ಆಶೌಚನಿಯಮಗಳನ್ನು ಅನುಸರಿಸಬೇಕು.

ಲಿಂಗಾರ್ಚನ

ಇಂತಹ ಶಿವಪದವಾಚ್ಯವಾದ ಲಿಂಗವನ್ನು ಅರ್ಚಿಸುವುದರಿಂದ ಸಕಲ ಭೋಗ ಮೋಕ್ಷಗಳೂ ದೊರೆಯುವುವೆಂದು ವೇದಗಳು ಘೋಷಿಸುತ್ತವೆ.

> ತವ ಶ್ರಿಯೇ ಮರುತೋ ಅರ್ಚಯಂತೋ ರುದ್ರ ಯತ್ತೇ ಜನಿಮ ಚಾರು ಚಿತ್ರಂ।
> ಪದಂ ಯದ್ವಿಷ್ಣೋರುಪಮಂ ನ್ಯದಾಯಿ।
> ತೇನ ಪಾಸಿ ಗುಹ್ಯಂ ನಾಮ ಗೋನಾಂ ॥ (ಋಗ್ವೇದ)

ಹೇ ರುದ್ರ, ಚಾರುಚಿತ್ರಂ ರತ್ನ ಹೇಮರಜತ, ಶಿಲಾ ಪ್ರವಾಳಾದಿ ಬಹುವಿಧಂ, ಜನಿಮ-ಲಿಂಗಂ ಯತ್ ಪ್ರಾದುರ್ಭೂತಮಿತ್ಯರ್ಥಃ ಮರುತಃ ದೇವಾಃ, ತೇ ತವ, ಶ್ರಿಯೇ-ಐಶ್ವರ್ಯಾಯ, ಆರ್ಚಯಂತಃ ಅಭಿಷೇಕಾದಿನಾ ಪೂಜಯಂತೀತ್ಯರ್ಥ ತೇನ-ಐಶ್ವರಾದಿಪ್ರದಾಯಕ ಶಿವಲಿಂಗೇನ, ಉಪಮಂ-ಉಪ-ಸಮೀಪೇ, ಮಾ-ಲಕ್ಷ್ಮೀಃ, ಯಸ್ಮಿಂತತ್-ಉಪಮಂ-ಸರ್ವದಾ ಅನಪಾಲಯಲಕ್ಷ್ಮೀಕಂ, ವಿಷ್ಣೋಃ ಪದಂ-ಆಧಿಪತ್ಯಂ. ನ್ಯದಾಯಿ, ಗೋನಾಂ-ವೇದಾನಾಂ, ಗುಹ್ಯಂ-ರಹಸ್ಯಭೂತಂ, ನಾಮ-ಅಭಿಧಾನವಾನ್; ತ್ವಂ ಪಾಸಿ-ರಕ್ಷಸಿ ಎಂದು ಶ್ರೀಪತಿ ಪಂಡಿತರು ವ್ಯಾಖ್ಯಾನಮಾಡಿ, ಲಿಂಗಾರ್ಚನೆಯಿಂದಾಗುವ ಫಲವನ್ನು ತೋರಿಸುತ್ತ-

> ರೌದ್ರಂ ಲಿಂಗಂ ಮಹಾವಿಷ್ಣು ರ್ಭಕ್ತ್ಯಾಶ್ಚುದ ಶಿಲಾಮಯಂ।
> ಚಾರು ಚಿತ್ರಂ ಸಮಭ್ಯರ್ಚ್ಯ ಲಬ್ದವಾನ್ ಪರಮ ಪದಂ॥
> ಸಾಚ-ಲಕ್ಷ್ಮೀಸ್ಸಮಾಖ್ಯಾತಾ ಮಹಾವಿಷ್ಣೋಸ್ತು ವಲ್ಲಬಾ
> ಯಸ್ಯಲಿಂಗಂ ಸಮಭ್ಯರ್ಚ್ಯ ಸಂಪೂಜ್ಯ ಸರ್ವಚೇತನೈಃ॥

ಎಂದು ಪರಾಶರ ಪುರಾಣದ ಉಪಬೃಂಹಣ ವಾಕ್ಯವನ್ನು ಉದಾಹರಿರುತ್ತಾರೆ. ಮತ್ತು ಯಜುರ್ವೇದದಲ್ಲಿ-

> 'ಅರ್ಚತ ಪ್ರಾರ್ಚತ'
> 'ತ್ರಿಯಂಬಕಂ ಯಜಾಮಹೇ,

ಇತ್ಯಾದಿ ಅನೇಕ ಮಂತ್ರಗಳು ಲಿಂಗಾರ್ಚನೆಯ ಮಹತ್ವವನ್ನು ಹೇಳುತ್ತವೆ. ಆದುದರಿಂದ ಲಿಂಗಾರ್ಚನೆಯು ಭುಕ್ತಿ, ಮುಕ್ತಿ ಪ್ರದಾಯಕವಾದುದೆಂದು ಸ್ಪಷ್ಟವಾಗುತ್ತದೆ.

ಷಟ್‌ಸ್ಥಲಗಳು

''ಯದ್ಭವೇತ್ಪರಮಂ ಬ್ರಹ್ಮ ಸ್ಥಲಂ ತತ್ಪ್ರಾಹುರಕ್ಷರಂ ॥ ಅನುಭವ ಸೂತ್ರ 2

ಚರಾಚರಾತ್ಮಕವಾದ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ ತಿರೋಧಾನ ಅನುಗ್ರಹಗಳೆಂಬ ಪಂಚಕೃತ್ಯಗಳ ನಿರ್ವಹಣ ರೂಪವಾದ ಮಹಾಚಿತ್ರದ ರಚನೆಗೆ ಯಾವ ವಸ್ತುವು ಭಿತ್ತಿಯಂತೆ ಮೂಲಾಧಾರವಾಗಿರುವುದೋ ಅಂತಹ ವಸ್ತುವೇ 'ಸ್ಥಲ' ಎನಿಸಿಕೊಳ್ಳುತ್ತದೆ. ಇಂತಹ ಸ್ಥಲ ಶಬ್ದವಾಚ್ಯನಾದ ಬ್ರಹ್ಮನು ಬೇರೆ ಮತ್ತೊಂದು ಪದಾರ್ಥದ •ಸಹಾಯವನ್ನಪೇಕ್ಷಿಸದೆ ತನ್ನಲ್ಲಿರುವ ಶಕ್ತಿಯ ಸಹಾಯದಿಂದ ಸೃಷ್ಟ್ಯಾದಿ ಸಕಲ ಕಾರ್ಯಗಳನ್ನೂ ಮಾಡುವುದರಿಂದ ನಿರಂಕುಶ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಇವನಲ್ಲಿ ಸತ್, ಚಿತ್, ಆನಂದ ಎಂಬ ಮೂರು ಧರ್ಮಗಳು ಸಕ್ರಮಾಕ್ರಮ ಸ್ವಭಾವವಿಲ್ಲದೇ ಸರ್ವ ಕಾಲಗಳಲ್ಲಿಯೂ ಸ್ವಯಂಪ್ರಕಾಶವಾಗಿ ಅಕ್ರಮ ಸ್ವಭಾವದಿಂದಲೇ ಸ್ಫುರಿಸುತ್ತಿರುವುವು. ಇಂತಹ ಪರಿಪೂರ್ಣ ಪರಾಹಂತಾ ಸ್ವರೂಪ ಪರಶಿವನಿಗೆ ತನ್ನಲ್ಲಿಯೇ ಒಂದಂಶವನ್ನು ಪೂಜ್ಯವನ್ನಾಗಿಯೂ ಮತ್ತೊಂದಂಶವನ್ನು ಪೂಜಕವನ್ನಾಗಿಯೂ ಮಾಡಿಕೊಂಡು ವಿನೋದಿಸಬೇಕೆಂಬ ಲೀಲೆಯು ಉದಿಸಿತು. ವಾಯು ಸಂಪರ್ಕವಿಲ್ಲದ ಪ್ರಶಾಂತವಾದ ಸಮುದ್ರದಲ್ಲಿ ಮುಂದೆ ಫೇನ ತರಂಗ ಬುದ್ಬುದಾದಿಗಳು ಏಳುತ್ತವೆಂಬುದನ್ನು ಸೂಚಿಸುವುದಕ್ಕಾಗಿ ಮೊದಲು ಒಂದು ಲಹರಿಯು ಹುಟ್ಟುವಂತೆ ''ಶಿವ ಏವ ಕೇವಲಂ'' ಎಂಬ ಶ್ರುತ್ಯನುಸಾರವಾಗಿ ಅದ್ವಿತೀಯನೂ ಸ್ವಾವಿಭಾಗಾಪನ್ನ ಚಿದಚಿಚ್ಛಕ್ತಿಯುಳ್ಳವನೂ, ಸ್ವಪ್ರಕಾಶನೂ ಆದ ಶಿವನೊಬ್ಬನಿದ್ದನಲ್ಲದೆ ಸೂರ್ಯ ಚಂದ್ರರಾಗಲಿ, ದಿವಾರಾತ್ರಿಗಳಾಗಲಿ, ಸದಸದ್ವ್ಯವಹಾರಗಳಾಗಲಿ ಯಾವೂ ಇರಲಿಲ್ಲ. ಹೀಗಿರುವಾಗ ಪೂಜ್ಯ ಪೂಜಕ ಭಾವಲೀಲಾರಸಾನು ಭವೇಚ್ಛಾ ರೂಪವಾದ ಒಂದು ಸ್ಪಂದ (ಈಷಚ್ಚಲನ)ವುಂಟಾಯಿತು.

ಲೋಕದಲ್ಲಿ ಧೈರ್ಯಶೌರ್ಯಾದಿಗಳಿಂದ, ಕೂಡಿದ ಮಹಾರಾಜನಿಗೆ ಲೀಲಾವಸ್ಥೆ ಕೇವಲಾವಸ್ಥೆ ಎಂದು ಎರಡವಸ್ಥೆಗಳಿರುತ್ತವೆ. ಲೀಲಾವಸ್ಥೆಯುಂಟಾದಾಗ ಅಖಿಲ ಸೈನ್ಯದೊಡನೆ ಯುದ್ಧಾರಂಭ ಕಾರ್ಯದಲ್ಲಿ ತೊಡಗುವನು. ಕೇವಲಾವಸ್ಥೆಯಲ್ಲಿರುವಾಗ ಯಾವಕಾರ್ಯಕ್ಕೂ ತೊಡಗದೆ ಶಾಂತನಾಗಿರುತ್ತಾನೆ. ಅದರಂತೆ ಪರಶಿವನು ಪೂರ್ಣಕಾಮನೂ, ಸತ್ಯಸಂಕಲ್ಪನೂ, ಏಕಾಕಿಯೂ ಆಗಿದ್ದರೂ ತಾನು ಬಹುರೂಪವನ್ನು ಹೊಂದಿ ವ್ಯವಹರಿಸಬೇಕೆಂಬ ಲೀಲೆಯುಂಟಾದಾಗ ಜಗದ್ರೂಪವನ್ನು ಪಡೆದನು. ಕೇವಲಾವಸ್ಥೆಯಲ್ಲಿ ''ನೇಹ ನಾನಾಸ್ತಿ ಕಿಂಚನ'' ಎಂಬ ಶ್ರುತ್ಯನು ಸಾರವಾಗಿ ತಾನೊಬ್ಬನೇ ಇರುವನು 'ತೋಕವತ್ತು ಲೀಲಾಕೈವಲ್ಯಂ' ಎಂಬ ಸೂತ್ರವೂ ಇದೇ ಅಭಿಪ್ರಾಯವನ್ನು ಬೊಧಿಸುತ್ತದೆ. ಸೂತ್ರವೂ ಇದೇ ಅಭಿಪ್ರಾಯವನ್ನು ಬೋಧಿಸುತ್ತದೆ.

''ಸ್ವಶಕ್ತಿಕ್ಷೋಭ ಮಾತ್ರೇಣ ಸ್ಥಲಂ ತದ್ವಿವಿಧಂ ಭವೇತ್'
ಏಕಂ ಲಿಂಗಸ್ಥಲಂ ಪ್ರೋಕ್ತಂ ಅನ್ಯದಂಗಸ್ಥಲಂ ಸ್ಮೃತಂ ॥ ಅನುಭವಸೂತ್ರ

ಇಂತಹ ಈಷಚ್ಚಲನ ರೂಪ ಇಚ್ಛಾದಿ ವಿಶೇಷ ಸ್ಪಂದದಿಂದ ಪರಶಿವನು ಅಧಿಕಾಂಶದಿಂದಲೂ ನ್ಯೂನಾಂಶದಿಂದಲೂ ಎರಡು ತೆರನಾದನು. ಅಧಿಕಭಾವವನ್ನು ಹೊಂದಿದ ಸ್ವಪ್ರಕಾಶತ್ವದಲ್ಲಿ ಪ್ರತಿಫಲನ ರೂಪದಿಂದ ಸ್ಫುರಿಸಿ ಅಂಗವೆನಿಸಿದನು. ಹೀಗೆ ವಿಭಕ್ತವಾದ ಬಳಿಕ ಒಂದೊಂದರಲ್ಲಿ ಮೂರು ಮೂರು ಭಾಗವಾಗಿ, ಆ ಮೂರರೊಳಗೆ ಒಂದೊಂದು ಎರಡೆರಡಾಗಿ ಷಟ್‌ಸ್ಥಲಗಳೂ ಷಡ್ಲಿಂಗಗಳೂ ಆದವು. ಇವುಗಳಲ್ಲಿ ಲಿಂಗಸ್ಥಲವು, ಭಾವಲಿಂಗ ಪ್ರಾಣಲಿಂಗ, ಇಷ್ಟಲಿಂಗ ಎಂದು ಮೂರು ವಿಧವಾಯಿತು. ಇವುಗಳಲ್ಲಿ ಭಾವಲಿಂಗವು ನಿಷ್ಕಲವೂ ಭಾವ ಗ್ರಾಹ್ಯವೂ, ಪರಾತ್ಪರವೂ ಆದುದು. ಪ್ರಾಣಲಿಂಗವು ಸಕಲನಿಷ್ಕಲ ಮತ್ತು ಮನೋಗ್ರಾಹ್ಯವು, ಇಷ್ಟಲಿಂಗವು ಸಕಲ ಮತ್ತು ಚಕ್ಷುರ್ಗ್ರಾಹ್ಯವು. ಇವುಗಳಲ್ಲಿ ಭಾವಲಿಂಗವು, ಮಹಾಲಿಂಗ, ಪ್ರಸಾದಲಿಂಗ, ಪ್ರಾಣಲಿಂಗವು-ಶಿವಲಿಂಗ, ಜಂಗಮಲಿಂಗ, ಇಷ್ಟಲಿಂಗವು ಗುರುಲಿಂಗ, ಆಚಾರ ಲಿಂಗವೆಂದು ಷಡ್ರೂಪವನ್ನು ಹೊಂದಿದವು. ಆಗ ಶಿವನೊಳಿರುವ ಶಕ್ತಿಯು ಚಿಚ್ಛಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಕ್ರಿಯಾಶಕ್ತಿ ಎಂಬ ಷಡ್ರೂಪದಿಂದ ಕ್ರಮವಿಡಿದು ಮಹಾಲಿಂಗ ಮೊದಲಾದ ಷಡ್ಲಿಂಗಗಳನ್ನಾಶ್ರಯಿಸಿತು. ಮಹಾಲಿಂಗವು ಹೃದಯಾಕಾಶವನ್ನೂ, ಪ್ರಸಾದಲಿಂಗವು ಶ್ರೋತ್ರೇಂದ್ರಿಯವನ್ನೂ, ಜಂಗಮಲಿಂಗವು ತ್ವಗಿಂದ್ರಿಯವನ್ನೂ, ಶಿವಲಿಂಗವು ನೇತ್ರೇಂದ್ರಿಯವನ್ನೂ, ಗುರುಲಿಂಗವು ರಸನೇಂದ್ರಿಯವನ್ನೂ ಅಚಾರಲಿಂಗವು ಘ್ರಾಣೇಂದ್ರಿಯವನ್ನೂ ಆಶ್ರಯಿಸಿದವು. ಇದರಂತೆ ಶರೀರದಲ್ಲಿರುವ ಷಟ್ಚಕ್ರಗಳಲ್ಲಿ ಆಜ್ಞಾಚಕ್ರದಲ್ಲಿ ಮಹಾಲಿಂಗ, ವಿಶುದ್ಧಿ ಚಕ್ರದಲ್ಲಿ ಪ್ರಸಾದಲಿಂಗ, ಅನಾಹತ ಚಕ್ರದಲ್ಲಿ ಜಂಗಮಲಿಂಗ, ಮಣಿ ಪೂರಕ ಚಕ್ರದಲ್ಲಿ ಶಿವಲಿಂಗ, ಸ್ವಾಧಿಷ್ಠಾನ ಚಕ್ರದಲ್ಲಿ ಗುರುಲಿಂಗ, ಆಧಾರ ಚಕ್ರದಲ್ಲಿ ಆಚಾರ ಲಿಂಗಗಳು ವಿರಾಜಿಸುತ್ತಿರುವುವು.

ಇನ್ನು ನ್ಯೂನ ಭಾವವನ್ನು ಹೊಂದಿದ ಅಂಗಸ್ಥಲವು (ಶುದ್ಧ ಜೀವನು) ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರು ವಿಧವಾಯಿತು. ಗುರುಲಿಂಗ ಜಂಗಮರಿಗೆ ಅಭೇದ ವನ್ನೊಳಗೊಂಡಿರುವುದರಿಂದ ಯೋಗಾಂಗವೆಂದೂ, ಗುರುಲಿಂಗಜಂಗಮಾರ್ಪಿತ ಪ್ರಸಾದವನ್ನು ಸ್ವೀಕರಿಸುವುದರಿಂದ ಭೋಗಾಂಗವೆಂದೂ, ಗುರುಲಿಂಗ ಜಂಗಮರಿಗೆ ತನು ಮನೋ ಧನಗಳನ್ನು ಸಮರ್ಪಿಸಿರುವುದರಿಂದ ತ್ಯಾಗಾಂಗವೆಂದೂ ಹೇಳಿಸಿಕೊಳ್ಳುತ್ತದೆ. ಯೋಗಾಂಗವು ಐಕ್ಯ, ಶರಣ, ಭೋಗಾಂಗವು ಪ್ರಾಣಲಿಂಗಿ, ಪ್ರಸಾದಿ, ತ್ಯಾಗಾಂಗವು ಮಹೇಶ್ವರ, ಭಕ್ತ ಎಂದು ಆರು ವಿಧವಾಗಿ ಷಟ್‌ಸ್ಥಲಗಳಾದುವು. ಈ ಆರು ಸ್ಥಲಗಳಲ್ಲಿ ಮೊದಲಿನ ಮೂರು ಸ್ಥಲಗಳು ಜ್ಞಾನಕ್ಕೆ ಪ್ರಾಧಾನ್ಯವನ್ನೂ, ಕರ್ಮಕ್ಕೆ ಅಪ್ರಾಧಾನ್ಯವನ್ನೂ ಉಳಿದ ಮೂರು ಸ್ಥಲಗಳು ಕರ್ಮಗಳಿಗೆ ಪ್ರಾಧಾನ್ಯವನ್ನೂ ಜ್ಞಾನಕ್ಕೆ ಅಪ್ರಾಧಾನ್ಯವನ್ನೂ ಹೇಳುತ್ತವೆ.

ಶಕ್ತಿಃ ಪ್ರವೃತ್ತಿರಾಖ್ಯಾತಾ ನಿವೃತ್ತಿ ರ್ಭಕ್ತಿರೀರಿತಾ।
ಶಕ್ತ್ಯಾ ಪ್ರಪಂಚ ಸೃಷ್ಟಿಸ್ಸ್ಯಾತ್ ಭಕ್ತ್ಯಾ ತದ್ವಿಲಯೋ ಮತಃ ॥ ಅನುಭವಸೂತ್ರ

ಶಿವನಲ್ಲಿರುವ ಶಕ್ತಿಯು ಜಗತ್ಸೃಷ್ಟಿಯರೂಪವಾದ ಪ್ರವೃತ್ತಿಮಾರ್ಗದಲ್ಲಿ ತಾನು ಶಕ್ತಿ

ರೂಪದಿಂದಿದ್ದು ಸಹಾಯವನ್ನಿತ್ತು ನಿವೃತ್ತಿಮಾರ್ಗದಲ್ಲಿ ಆ ಶಕ್ತಿಯು ಭಕ್ತಿರೂಪವನ್ನು ತಾಳಿ ಮುಮುಕ್ಷುಗಳಿಗೆ ಸಹಾಯ ನೀಡಲು ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ, ಸಮರಸ ಎಂದು ಆರು ಪ್ರಕಾರವಾಗಿ ಕ್ರಮದಿಂದ ಭಕ್ತಾದಿ ಆರು ಸ್ಥಲಗಳನ್ನಾಶ್ರಯಿಸಿತು.

ಶರೀರದಲ್ಲಿ ಲಿಂಗವನ್ನು ಧರಿಸುವುದರಿಂದ ಈ ಶರೀರವು ಮಂತ್ರಪಿಂಡವೆನಿಸಿತು. ಲಿಂಗ ಧಾರಣವಿಲ್ಲದ ಮಾನವನ ಶರೀರವು ಮಾಂಸಪಿಂಡವೆನಿಸಿತು. ಪ್ರಾಣಿಸಾಮಾನ್ಯರಲ್ಲಿ ತೋರುವ ಹಸಿವು, ತೃಷೆ, ಆಲಸ್ಯ, ಕಾಮ, ಕ್ರೋಧಾದಿಗಳ ವ್ಯವಹಾರವೇ ಮಾಂಸಪಿಂಡದ ಕಾರ್ಯಗಳು. ಕರುವು ತಾಯಿಯನ್ನು ಹಂಬಲಿಸುವಂತೆ ಶುದ್ಧಜೀವನು ಶಿವಶಕ್ತಿಯರೆಂಬ ತಂದೆತಾಯಿಗಳನ್ನು ಸೇರಿ ಸುಖಿಸಬೇಕೆಂಬ (ಹಂಬಲ) ಉತ್ಕಟೇಚ್ಛೆಗೆ 'ಶ್ರದ್ಧೆ' ಎಂದು ಹೆಸರು. ಈ ಶ್ರದ್ಧಾಭಕ್ತಿಯಿಂದ ಭಕ್ತನು ಅಷ್ಟಾವರಣ ಸಂಪನ್ನನಾಗಿ ಪಂಚಾಚಾರ ಪರಾಯಣನಾಗಿ ಅಂತಃಕರಣಶುದ್ಧಿಯಿಂದ ಚಿತ್ತದಲ್ಲಿ ಒಂದು ವಿಧವಾದ ಪರಿಪಾಕವನ್ನು ಹೊಂದುವನು. ಭಕ್ತಸ್ಥಲದ ಕ್ರಿಯಾಜ್ಞಾನಾಚರಣೆಗಳು ಪೂರ್ಣವಾದ ಬಳಿಕ ಅವನೇ ಮಹೇಶ್ವರ ಸ್ಥಲವನ್ನೇರುವನು. ಆಗ ಆ ಶ್ರದ್ಧಾಭಕ್ತಿಯೇ ನಿಷ್ಠಾಭಕ್ತಿಯಾಗಿ ಆ ಮಹೇಶ್ವರ ಸ್ಥಲದ ಕ್ರಿಯಾಚರಣೆಗೆ ಸಹಾಯವನ್ನು ನೀಡುವುದು. ಅಂದರೆ ಲಿಂಗದಲ್ಲಿರಿಸಿದ ಶ್ರದ್ಧೆಯು ಚಂಚಲವಿಲ್ಲದೆ ಸ್ಥಿರಪಡಿಸಿಕೊಂಡು ಕಾಮಕ್ರೋದಾದಿಗಳಿಗೆ ಅವಕಾಶವನ್ನು ಕೊಡದಿರುವಿಕೆಯು. ಹೀಗೆ ಶ್ರದ್ಧೆಯಿಂದ ನಿಷ್ಠೆಯಾಗಿ, ನಿಷ್ಠೆಯಾದ ಬಳಿಕ ಅವಧಾನವೆಂಬ ಹೆಸರನ್ನು ಪಡೆದು ಪ್ರಸಾದಿ ಸ್ಥಲಕ್ಕೇರಿರುವವನನ್ನು ಜಾಗ್ರತಗೊಳಿಸಿ ಶಿವನನ್ನು ಯಾವಾಗಲೂ ಮರೆಯದಂತೆ ಮಾಡಿ ಪ್ರಸನ್ನಚಿತ್ತನನ್ನಾಗಿ ಮಾಡುವುದು. ಈ ಅವಧಾನಭಕ್ತಿಯು ಅನುಭಾವ ವೆಂಬ ಹೆಸರನ್ನು ಪಡೆದು, ಪ್ರಾಣಲಿಂಗಿಗೆ ಶಿವತತ್ತ್ವಾನುಭವವನ್ನುಂಟು ಮಾಡುವುದು. ಈ ಅನುಭಾವಭಕ್ತಿಯು ಆನಂದ ರೂಪವನ್ನು ತಾಳಿ ಅಜ್ಞಾನವನ್ನು ನಾಶಗೊಳಿಸಿದ ಶರಣನಿಗೆ ಸಹಾಯವನ್ನಿತ್ತು ಶಿವತತ್ತ್ವ ಸಾಕ್ಷಾತ್ಕಾರದಿಂದ ಲಿಂಗವನ್ನು ಪತಿಭಾವದಿಂದಲೂ ಅಂಗರೂಪನಾದ ಜೀವವನ್ನು ಸತೀಭಾವದಿಂದಲೂ ಭಾವಿಸುತ್ತ ಪ್ರಾಪಂಚಿಕ ವ್ಯವಹಾರದಿಂದ ಬಿಡಲ್ಪಟ್ಟ ಶರಣನು ಆನಂದ ವಿಶೇಷವನ್ನನುಭವಿಸುವನು. ಅಲ್ಲಿಂದ ಪರಿಪೂರ್ಣ ಪರಿಪಕ್ವಾ ವಸ್ಥೆಯನ್ನು ಪಡೆದು ಐಕ್ಯಸ್ಥಲದಲ್ಲಿ ಸಮರಸ ಭಕ್ತಿಯಿಂದೊಡಗೂಡಿ ಅಂಗಗುಣವಳಿದು ಲಿಂಗವೇ ತಾನಾಗಿ (ಶಿವೋಹಂಭಾವನಾ ಸಂಪನ್ನನಾಗಿ) ಅವಿರಳಾನಂದವನ್ನನುಭವಿಸುವನು.

ಯೋಗವೂ ಜ್ಞಾನವೂ ಇಲ್ಲದಿದ್ದರೆ ಇಂತಹ ಅಂತರ್ಲಿಂಗ ಸಾಕ್ಷಾತ್ಕಾರವೆಂದಿಗೂ ಆಗುವುದಿಲ್ಲವಾದುದರಿಂದ ಯೋಗ ಜ್ಞಾನಗಳೆರಡರ ಸಮ್ಮೇಳನವೇ ವೀರಶೈವವೆಂದು ಪ್ರಥಮದಲ್ಲಿಯೇ ತೋರಿಸಲಾಗಿದೆ.

ಊರ್ಧ್ವಾಯ ನಮಃ ಊರ್ಧ್ವ ಲಿಂಗಾಯ ನಮಃ

ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ ॥ ತೈತ್ತಿರಿಯ ಉ 4-16-33-24

ಎಂಬ ತೈತ್ತಿರೀಯ ಶ್ರುತಿಯು ಬಹು ಮನೋಹರವಾಗಿ ಈ ಲಿಂಗಗಳನ್ನು ಲಿಂಗಗಳ ಪೂಜಾ ಕ್ರಮಗಳನ್ನೂ ವರ್ಣಿಸಿರುತ್ತದೆ. ಹೇಗೆಂದರೆ

ನಾಲ್ಕು ದಳದ ಆಧಾರಚಕ್ರವೆಂಬ ರತ್ನಮಂಟಪದಲ್ಲಿ ಪೃಥ್ವೀ ತತ್ವಾಭಿಮಾನಿಯಾದ ಆಚಾರಲಿಂಗಕ್ಕೆ ಆನಂದವೆಂಬ ಜಲವನೆರೆದು, ಸುಖವೆಂಬ ಸುಗಂಧವ ಲೇಪಿಸಿ, ಚಿತ್ತವೆಂಬ ಅಕ್ಷತೆಯ ನಿರಿಸಿ 'ವ, ಶ, ಷ, ಸ' ಎಂಬ ಬೀಜಾಕ್ಷರಗಳೆಂಬ ಪೂಮಾಲೆಯಂ ಧರಿಸಿ, ಪೃಥ್ವಿಯ ಪೀತವರ್ಣವೆಂಬ ಜ್ಯೋತಿಯ ಬೆಳಗಿ, ಜಾಗ್ರದವಸ್ಥೆಯೆಂಬ ಪೀತಾಂಬರವನುಡಿಸಿ, ನಿಷ್ಕಾಮವೆಂಬ ಆಭರಣವನಲಂಕರಿಸಿ, ಸುಗಂಧವೆಂಬ ಧೂಪವ ಹಾಕಿ, ಭಕ್ತಿಯೆಂಬ ಭಕ್ಷ್ಯವ ನಿಷೇದಿಸಿ, ಶ್ರದ್ಧೆ ಯೆಂಬ ತಾಂಬೂಲವನರ್ಪಿಸುವುದೇ ಆಚಾರಲಿಂಗದ ಪೂಜೆಯು.

ಆರು ದಳದ ಸ್ವಾಧಿಷ್ಠಾನವೆಂಬ ಸಿಂಹಾಸನದಲ್ಲಿ ಮಂಡಿಸಿರುವ ಜಲತತ್ವಾಭಿಮಾನಿಯಾದ ಗುರುಲಿಂಗಕ್ಕೆ ಪರಿಣಾಮವೆಂಬ ಉದಕದಿಂದ ಸ್ನಾನಮಾಡಿಸಿ ಆನಂದವೆಂಬ ಗಂಧವ ಲೇಪಿಸಿ, ಬುದ್ಧಿಯೆಂಬ ಅಕ್ಷತೆಯನಿಟ್ಟು ಬ, ಭ, ಮ, ಯ, ರ, ಲ ಎಂಬ ಆರು ಬೀಜಾಕ್ಷರಗಳೆಂಬ ಪುಷ್ಪ ಮಾಲಿಕೆಯನ್ನು ಧರಿಸಿ, ಸುವಾಸನೆಯೆಂಬ ಧೂಪವ ಬೀಸಿ, ಶ್ವೇತ ವರ್ಣವೆಂಬ ಕರ್ಪೂರವ ಹಚ್ಚಿ, ಸ್ವಪ್ನಾವಸ್ಥೆಯೆಂಬ ಪೀತಾಂಬರವನುಡಿಸಿ, ಅಕೋಪವೆಂಬ ಆಭರಣವ ತೊಡಿಸಿ, ಸುರುಚಿಯೆಂಬ ನೈವೇದ್ಯವನರ್ಪಿಸಿ, ನಿಷ್ಠೆಯೆಂಬ ತಾಂಬೂಲವನೀಡಿ, ಆನಂದಿಸುತ್ತಿಹುದೇ ಗುರುಲಿಂಗದ ಪೂಜೆಯು.

ಹತ್ತು ದಳದ ಮಣಿಪೂರಕವೆಂಬ ಪೀಠದಲ್ಲಿ ವಿರಾಜಿಸುತ್ತಿರುವ ತೇಜಸ್ತತ್ವಾಭಿಮಾನಿಯಾದ ಶಿವಲಿಂಗಕ್ಕೆ ಪರಮಾನಂದವೆಂಬ ಜಲದಿಂದ ಸ್ನಾನಮಾಡಿಸಿ ನಿರಹಂಕಾರವೆಂಬ ಗಂಧವಲೇಪಿಸಿ,ಅಹಂಕಾರವೆಂಬ ಅಕ್ಷತೆಯನಿಟ್ಟು, ಡ, ಢ, ಣ, ತ, ಥ, ದ, ಧ, ನ ಪ, ಫ ಕರ್ಪೂರವ ಹಚ್ಚಿ, ಸುಷುಪ್ತ್ಯವಸ್ತೆಯೆಂಬ ವಸ್ತ್ರವ ಹೊದ್ದಿಸಿ, ನಿರ್ಮದವೆಂಬ ಆಭರಣವತೊಡಿಸಿ, ಸುರೂಪವೆಂಬ ನೈವೇದ್ಯವನರ್ಪಿಸಿ, ಅವಧಾನವೆಂಬ ತಾಂಬೂಲವನಿತ್ತು ಆನಂದಿಸುವುದೇ ಶಿವಲಿಂಗದ ಪೂಜೆಯು.

ಹನ್ನೆರಡು ದಳದ ಅನಾಹತ ಚಕ್ರವೆಂಬ ಮಂಟಪದಲ್ಲಿ ಮೂರ್ತಗೊಂಡ ವಾಯು ತತ್ವಾಭಿಮಾನಿಯಾದ ಜಂಗಮಲಿಂಗಕ್ಕೆ ಶಾಂತಿಯೆಂಬ ಜಲವನೆರೆದು, ನಿರಹಂಕಾರವೆಂಬ ಗಂಧವಧರಿಸಿ, ಕವರ್ಗ, ಚವರ್ಗ, ಟ, ಠ ಎಂಬ ಹನ್ನೆರಡು ಬೀಜಾಕ್ಷರಗಳೆಂಬ ಪುಷ್ಪಮಾಲೆ ಯನರ್ಪಿಸಿ, ಸದ್ವಾಸನೆಯೆಂಬ ಧೂಪವ ಬೀಸಿ, ಮಾಂಜಿಷ್ಠ ವರ್ಣವೆಂಬ ಕರ್ಪೂರವ ಹಚ್ಚಿ, ತುರೀಯಾವಸ್ಥೆಯೆಂಬ ವಸ್ತ್ರವನಾಚ್ಛಾದಿಸಿ, ನಿರ್ಮೋಹವೆಂಬ ಅಭರಣವನಿಕ್ಕಿ, ಸುಸ್ಪರ್ಶವೆಂಬ ನೈವೇದ್ಯವನರ್ಪಿಸಿ, ಅನುಭವವೆಂಬ ತಾಂಬೂಲವಕೊಟ್ಟು, ಭೇದಭಾವವನಳಿದು ಆನಂದಿಸುವುದೇ ಜಂಗಮ ಲಿಂಗದ ಪೂಜೆಯು.

ಹದಿನಾರು ದಳದ ವಿಶುದ್ಧಿ ಚಕ್ರವೆಂಬ ಪೀಠದಲ್ಲಿರುವ ಆಕಾಶತತ್ವಾಭಿಮಾನಿಯಾದ ಪ್ರಸಾದ ಲಿಂಗಕ್ಕೆ ಶಮವೆಂಬ ಜಲವನೆರೆದು, ದಮವೆಂಬ ಗಂಧವ ಲೇಪಿಸಿ ಶಾಂತಿಯೆಂಬ ಅಕ್ಷತೆಯನಿಟ್ಟು, ಹದಿನಾರು ಸ್ವರಗಳೆಂಬ ಕುಸುಮಮಾಲೆಯ ಧರಿಸಿ, ಸದ್ವಾಸನೆಯೆಂಬ ಧೂಪವ ಬೀಸಿ, ನೀಲವರ್ಣವೆಂಬ ಕರ್ಪೂರವ ಬೆಳಗಿ, ತುರೀಯಾತೀತಾವಸ್ಥೆಯೆಂಬ ವಸ್ತ್ರವ ಹೊದ್ದಿಸಿ, ನಿರ್ವೈರವೆಂಬ ಆಭರಣವ ತೊಡಿಸಿ, ಸುಶಬ್ದವೆಂಬ ನೈವೇದ್ಯವನರ್ಪಿಸಿ,

ಆನಂದವೆಂಬ ತಾಂಬೂಲವನೀಡಿ, ಭೇದಭಾವವಡಗಿ ಆನಂದಿಸುತ್ತಿಹುದೇ ಪ್ರಸಾದ ಲಿಂಗದ ಪೂಜೆಯು.

ಎರಡು ದಲದ ಆಜ್ಞಾಚಕ್ರವೆಂಬ ರತ್ನಪೀಠದಲ್ಲಿರ್ಪ ಮಹಾಲಿಂಗಕ್ಕೆ ಆನಂದವೆಂಬ ಜಲವನೆರೆದು, ಶಾಂತಿಯೆಂಬ ಗಂಧವಧರಿಸಿ, ಸದ್ಭಾವವೆಂಬ ಅಕ್ಷತೆಯನಿಟ್ಟು, ಹಂ. ಸಂ. ಎಂಬ ಬೀಜಾಕ್ಷರದ ಪುಷ್ಪಹಾರವನರ್ಪಿಸಿ, ಸದ್ವಾಸನೆಯೆಂಬ ಧೂಪವಬೀಸಿ, ಮಾಣಿಕ್ಯವರ್ಣವೆಂಬ ಕರ್ಪೂರವಬೆಳಗಿ, ನಿರವಸ್ತೆಯೆಂಬ ವಸ್ತ್ರವಧರಿಸಿ, ನಿರ್ಮಲವೆಂಬ ಆಭರಣವನಿರಿಸಿ, ತೃಪ್ತಿಯೆಂಬ ನೈವೇದ್ಯವನರ್ಪಿಸಿ, ಸಮರಸವೆಂಬ ತಾಂಬೂಲವನೀಡಿ, ತಾದಾತ್ಮ್ಯ ಬಲಿದು ಆನಂದಿಸುವುದೇ ಮಹಾಲಿಂಗ ಪೂಜೆಯು.

' ಇಂತು ಭಕ್ತಾದಿಯಾ ಕ್ರಮವಿಡಿದು ಐಕ್ಯಸ್ಥಲವನ್ನು ಹೊಂದಿದ ಶಿವಯೋಗಿಯು

> ''ವಿದ್ಯಾವಿದ್ಯಾಲಕ್ಷಣ ನಿರತಿಶಯ ನಿರಂಜನ, ನಿರ್ವಿಕಾರ ನಿರವಯವ ಪರಮಾಕಾಶರೂಪ ಪರಿಪೂರ್ಣ ಶಿವತತ್ತ್ವ ಸಾಕ್ಷಾತ್ಕಾರಾನುಭವೇನು ಪ್ರಚಂಡಾತಪಮಧ್ಯನಿಕ್ಷಿಪ್ತ ನಿರ್ವಾತ ನಿಶ್ಚಲಿತ ಕರ್ಪೂರದೀಪವತ್ ಸ್ಥಿತಿಂ ವ್ಯಪೋಹ್ಯ ಶರೀರೇಂದ್ರಿಯ ಮನಃ ಪ್ರಾಣಾದಿ ಬಾಹ್ಯಾಭ್ಯಂತರವಸ್ತು ಪರಿಜ್ಞಾನಶೂನ್ಯ ಮನೋಲಯಾತ್ಮಕ ಉನ್ಮನ್ಯವಸ್ಥಾಪ್ರಾಪ್ತಿಪಟ್ಯೋಹಿ ಐಕ್ಯಸ್ಥಲೇ ಅಭಿಧೀಯತೇ'' (ಶ್ರೀ ಕರಭಾಷ್ಯ- ಅ. 3 ಪಾ 2)

ನಿರತಿಶಯವೂ, ನಿರಂಜನವೂ, ನಿರ್ವಿಕಾರವೂ, ನಿರಾಮಯವೂ ಪರಮಾಕಾಶಸ್ವರೂಪವೂ, ಪರಿಪೂರ್ಣವೂ ಆದ ಶಿವತತ್ತ್ವ ಸಾಕ್ಷಾತ್ಕಾರಾನುಭವವನ್ನು ಹೊಂದಿ, ಗಾಳಿಯಿಲ್ಲದ ಬಿಸಿಲಿನಲ್ಲಿ ಹಚ್ಚಿದ ಕರ್ಪೂರದೀಪದಂತೆ ನಿಶ್ಚಂಚಲತೆಯನ್ನು ಪಡೆದು, ಬಾಹ್ಯೇಂದ್ರಿಯ, ಅಂತರಿಂದ್ರಿಯ ವಸ್ತು ಪರಿಜ್ಞಾನಶೂನ್ಯನಾಗಿ ಮನೋಲಯಾತ್ಮಕ ಉನ್ಮನ್ಯವಸ್ಥೆಯನ್ನು ಹೊಂದಿ ''ಶಿವಾನಂದ ಸುಧಾಸಿಂಧೌ ಮಜ್ಜನಾದೈಕ್ಯವಾನ್ ಭವೇತ್'' (ಸಿದ್ಧಾಂತ ಶಿಖಾಮಣಿ) ಎಂಬ ಪ್ರಮಾಣಾನುಸಾರವಾಗಿ ಶಿವಾನಂದ ಮಹಾ ಸಮುದ್ರದಲ್ಲಿ ಮುಳುಗಿ, ಅವಿರಳಾನಂದವನ್ನು ಪಡೆದವನಾಗಿ ಕ್ರಮವಾಗಿ ಪಿಪೀಲಿಕಾ, ಮರ್ಕಟ, ಪಕ್ಷಿ ಗೋವು, ಮತ್ಸ್ಯ ಕಚ್ಛಪ ನ್ಯಾಯಾನುಸಾರವಾಗಿ ಭಕ್ತಾದಿ ಐಕ್ಯಾಂತ ಷಟ್ ಸೋಪಾನಗಳನ್ನೇರಿ, ಸ್ವಾಭಾವಿಕವಾಗಿದ್ದ ಜೀವಭಾವ ನಿವೃತ್ತಿಪೂರ್ವಕ ಶಿವತ್ವ ಪ್ರಾಪ್ತಿರೂಪವಾದ ಮೋಕ್ಷವನ್ನು ಪಡೆಯುವನು. ಆಗ ಆತ್ಮನ ದೇಹಾದಿಕರಣಗಳು ತಮ್ಮ ಕಾರಣ ಪರಂಪರೆಯಲ್ಲಿ ಅಡಗಿ, ಆ ಕಾರಣವು ಮೂಲಪ್ರಕೃತಿಯಲ್ಲಿ ಹುದುಗಿ, ಆ ಮೂಲ ಪ್ರಕೃತಿಯು ಶಕ್ತಿಯಲ್ಲಿ ಅಡಗಿ, ಆ ಶಕ್ತಿಯು ಶಿವನಲ್ಲಿ ಅಭೇದವನ್ನು ಹೊಂದಿದ ಅನುಭವವೇ ಲಿಂಗಾಂಗಸಾಮರಸ್ಯವು. ಈ ಸ್ಥಿತಿಯನ್ನು ಪಡೆದ ಶಿವಯೋಗಿಗೆ ಅತಿವರ್ಣಾಶ್ರಮಿ ಷಟ್‌ಸ್ಥಲ ಬ್ರಹ್ಮಿ, ಎಂಬ ಪರ್ಯಾಯನಾಮಗಳಿವೆ.

●

ಕೃಪೆ : ಭಾರತೀಯ ಸಂಸ್ಕೃತಿ ದರ್ಶನ : ಸಂ. ಅ. ನ. ಕೃ

ಪ್ರ : ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ಮೈಸೂರು ಸರ್ಕಾರ, ಬೆಂಗಳೂರು ಪ್ರ : 1962

‘ವೇದ-ವೀರಶೈವ’

(ಸಮೀಕ್ಷೆ)

ನ್ಯಾಯಮೂರ್ತಿ ಟಿ. ಎಸ್. ಮಲ್ಲಪ್ಪ

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್॥

ವೇದ, ಶಾಸ್ತ್ರ, ಪುರಾಣಗಳು ಮತ್ತು ಕಾಮಿಕಾದಿ ಆಗಮಗಳಲ್ಲಿ ಲಿಂಗಧಾರಣವು ಉಕ್ತವಾಗಿರುವುದರಿಂದ ವೀರಶೈವವು ವೈದಿಕ ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಉಕ್ತವಾಗಿದೆ. ಈ ಅಂಶವನ್ನು ಶ್ರೀಕರಭಾಷ್ಯ ಮತ್ತು ಲಿಂಗಧಾರಣ ಚಂದ್ರಿಕಾ ಮುಂತಾದ ಗ್ರಂಥಗಳು ಪ್ರತಿಪಾದಿಸಿವೆ. ಆದರೆ ವೀರಶೈವ ಧರ್ಮದ ಮುಖ್ಯ ಕುರುಹಾಗಿರುವ ಲಿಂಗಧಾರಣವು ವೇದಪೂರ್ವ ಯುಗಕ್ಕೆ ಸಂಬಂಧಿಸಿದುದೆಂದು ಇತ್ತೀಚಿನ ಸಮೀಕ್ಷೆಗಳಿಂದ ದೃಢಪಟ್ಟಿದೆ. ಈ ಅಂಶವನ್ನು ಮುಂದೆ ಸಮರ್ಥಿಸಲಾಗುತ್ತದೆ.

ವೇದ ಪೂರ್ವಯುಗ

ಶೈವಧರ್ಮವು ಪ್ರಪಂಚದ ಧರ್ಮಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದ ಧರ್ಮವೆಂದೂ, ಅದು ಶಿಲಾಯುಗಕ್ಕೂ ಹಿಂದಿನದೆಂದೂ, ಇಂದೂ ವೀರಶೈವರು ಧರಿಸುವಂತೆ ಲಿಂಗವನ್ನು ಇಷ್ಟಪ್ರಾಪ್ತಿಗೂ, ಅನಿಷ್ಟ ನಿವೃತ್ತಿಗೂ ತಾಯತದಂತೆ ಧರಿಸುವ ಪದ್ಧತಿಯು ವೇದಗಳ ಕಾಲಕ್ಕೆ ಹಿಂದೆ ಎಂದರೆ ಇಂದಿಗೆ ಐದಾರು ಸಹಸ್ರ ವರ್ಷಗಳ ಹಿಂದೆಯೇ ಸಿಂಧೂತೀರದ ದ್ರಾವಿಡ ನಾಗರಿಕರಲ್ಲಿ ಪ್ರಚಾರದಲ್ಲಿದ್ದಿತೆಂದೂ, ಆ ನಾಗರಿಕತೆಯ ವಿಷಯದ ಅನ್ವೇಷಕರಾದ ಸರ್ ಜಾನ್ ಮಾರ್ಷಲ್ಲರು ಹೇಳಿದ್ದಾರೆ.[1] ಆ ಕಾಲದಲ್ಲಿ ಲಿಂಗವನ್ನು ಧರಿಸುವ ಈ ಪದ್ಧತಿಯು ಮೆಡಿಟರೇನಿಯನ್ ತೀರದವರೆಗೂ ಹಬ್ಬಿದ್ದಿತೆಂಬುದು ವಿದ್ವಾಂಸರ ಅಭಿಪ್ರಾಯ. ಇಂದಿನಂತೆ ಅಂದೂ ನಾಗರಿಕರಂತೆ ಅನಾಗರಿಕರೂ ಇದ್ದರಷ್ಟೆ. ಅಂದಿನ ನಾಗರಿಕರಲ್ಲಿ ಇದ್ದ

1. 'Indeed the only explanation applicable to them all is that they were sacred objects of some sort, the larger ones serving as aniconic agalmata for cult purpose, the smaller as amulets to be carried by the person, just as miniature lingas are commonly carried by saivites today. Sir Johan Marshall's report on 'Mahenjo Daro Indus civilization' Page. 59. 9see also page 61 where by Saivites he means Lingaits).

ಈ ಪದ್ಧತಿಯು ಇಂದಿನವರೆಗೂ ವೀರಶೈವರಲ್ಲಿ ಉಳಿದು ಬಂದಿರುವಂತೆ ಅಂದಿನ ಅನಾಗರಿಕರಲ್ಲಿಯೂ ಇದ್ದ ಈ ಪದ್ಧತಿಯು ಈಗಲೂ ಅನಾಗರಿಕರಾಗಿರುವ ಅರೆಬೆತ್ತಲೆಯ ಆಂಧ್ರದ ಕೋಯಾ ಜನರಲ್ಲಿ ಉಳಿದುಬಂದಿದೆ.[1] ಲಿಂಗಧಾರಣೆಯ ಪದ್ಧತಿಯು ಬಡವರಲ್ಲಿನ ಒಂದು ಬಗೆಯವರಲ್ಲಿ ಇಂದೂ ಇರುವುದು, 'ವಿಮರ್ಶವಿಶಾರದ' ಅಕುಲಯ್ಯದೀಕ್ಷಿತರ ಲೇಖನದಿಂದ ಸಿದ್ಧವಾಗುತ್ತದೆ. (ವೀರಶೈವ ತ್ರೈಮಾಸಿಕ 1962ನೆಯ ಸೆಪ್ಟಂಬರ್ ಸಂಚಿಕೆ) ಈ ಅನಾಗರಿಕ ಜನರಲ್ಲಿ ಇರುವ ಈ ಪದ್ಧತಿಯು ಬಹಳ ಹಿಂದಿನಿಂದ ಬಂದುದೇ ಹೊರತು, ಸುಧಾರಕರಾರಿಂದಲೂ ಇದು ಬಂದುದಲ್ಲ. ಲಿಂಗಧಾರಣೆಯ ಪದ್ಧತಿಯು ಅತಿ ಪುರಾತನವಾದುದೆಂದು ಇದರಿಂದ ನಿರ್ಧರಿಸಬೇಕೇ ಹೊರತು, ಆಹಿಂದೆ ಲಿಂಗವನ್ನು ಧರಿಸುತ್ತಿದ್ದವರೆಲ್ಲರೂ ಅನಾಗರಿಕರೆಂದಲ್ಲ. ಲಿಂಗಧಾರಣೆಯ ಪದ್ಧತಿಯಿದ್ದ ಸಿಂಧೂ ನದೀ ತೀರದ ನಾಗರಿಕತೆಯ ಜನರು ಆರ್ಯರಷ್ಟೇ, ಅಲ್ಲವಾದರೆ ಅವರಿಗಿಂತಲೂ ಹೆಚ್ಚು ನಾಗರಿಕರಾಗಿದ್ದರೆಂಬುದು ಅನ್ವೇಷಕರ ಮತ. ವೀರಶೈವದ ಮೂಲಸ್ವರೂಪವು ಅವರಲ್ಲಿ ಇದ್ದುದನ್ನು 'ವೀರಶೈವದ ಉಗಮ ಮತ್ತು ಪ್ರಗತಿ' ಎಂಬ ಗ್ರಂಥದಲ್ಲಿ ಸಿದ್ಧಾಂತ ಮಾಡಿದೆ. ಅದೆಲ್ಲವನ್ನು ಇಲ್ಲಿ ಹೇಳುವುದು ಸಾಧ್ಯವಿಲ್ಲವಾಗಿ ಅದರಲ್ಲಿ ಈ ವಿಷಯವಾಗಿ ಹೇಳಿರುವ ವಿಷಯಗಳ ಅನುಕ್ರಮಣಿಕೆಯನ್ನು ಮಾತ್ರ ಇಲ್ಲಿ ಕೊಟ್ಟಿದೆ :

> 'ವೀರಶೈವದ ಆಧ್ಯಾತ್ಮಿಕ ಆದಿದೈವಿಕ ಆದಿಭೌತಿಕಮೂಲ ಕಲ್ಪನೆಗಳನ್ನು ಮೊಹೆಂಜೊದಾರೋ ಕಾಲದಲ್ಲಿಯೇ ಗುರುತಿಸಬಹುದು. ಮೆಹೆಂಜೋ ಹರಪ್ಪ ನಾಗರಿಕತೆಯಲ್ಲಿ ವೀರಶೈವದ ಆದಿದೈವಿಕ ಮೂಲ ಕಲ್ಪನೆ; ಶಿವನು ಯೋಗಾರೂಢನಾದ ದಕ್ಷಿಣಾಮೂರ್ತಿ ಎಂಬ ಕಲ್ಪನೆಯು ಅಂದಿನದೇ; ಮೂರು ಕಣ್ಣಿನವನೆಂದರೆ ಶಿವನೆಂದು ಆಗಲೇ ಪ್ರಸಿದ್ಧವಾಗಿದ್ದಿತು; ಶಿವನು ಸ್ವಯಂಭು, ಅಷ್ಟತನು, ನಟರಾಜ, ತಾಂಡವನ್ ಎಂಬ ಕಲ್ಪನೆಗಳು ಆಗಿನವೇ; ಶಿವನು ತ್ರಿಶೂಲಧಾರಿ, ಸರ್ಪಭೂಷಣ, ಪರಶುಧಾರಿ ಎಂಬ ಕಲ್ಪನೆಗಳು ಅಂದಿನವೇ; ಶಿವನು ಅರ್ಧನಾರೀಶ್ವರ ಎಂಬ ಕಲ್ಪನೆಯು ಅಂದಿನದೇ; ಶಿವನು ಪರಾತ್ಪರ ಸರ್ವಜ್ಞ ವರದ ಎಂಬ ಅಂದಿನ ಕಲ್ಪನೆ; ಸೃಷ್ಟಿ ಸ್ಥಿತಿ ಲಯ ಕಾರಣನೆಂಬ ಕಲ್ಪನೆಯ ಮೂಲ, ಚಂದ್ರಚೂಡ ಧವಳಗಿರಿನಿವಾಸ ಎಂಬ ಕಲ್ಪನೆಗಳು; ವೃಷಭಪೂಜೆ; ವೀರಶೈವದ ಆಧ್ಯಾತ್ಮಿಕ ಕಲ್ಪನೆ; ವೀರಶೈವರ ಆಧಿಭೌತಿಕ ಆಚರಣೆ; ಶಿವಯೋಗ; ಲಿಂಗಾರ್ಚನ ಲಿಂಗಧಾರಣ; ಲಿಂಗಧಾರಣವು ಸಿಂಧೂ ನದಿಯ ತೀರದ ವರೆಗೆ ಹರಡಿ ಮೆಡಿಟರೇನಿಯನ್ ತೀರದ ವರೆಗೆ ಹರಿಯಿತು; ಕರ್ನಾಟಕವು ಆದಿಮಾನವನ ತೊಟ್ಟಿಲು; ಕರ್ನಾಟಕವೂ

---

1. Quarterly Journal of the Andhra Historical research Society Vol. I Part I Page 37

ಮೊಹೆಂಜೋದಾರೋವೂ; ಇಂದಿನ ವೀರಶೈವರ ಮನೆಯ ಗೋಡೆಯ ಮೇಲಿನ ರೇಖಾಚಿತ್ರ ಅಂದಿನ ಮುದ್ರಿಕೆಗಳಲ್ಲಿ; ಸಾರಾಂಶ ಹೀಗಿದೆ 'ವೀರಶೈವದ ಉಗಮ ಮತ್ತು ಪ್ರಗತಿ' ಗ್ರಂಥದಲ್ಲಿ ಉಕ್ತವಾಗಿರುವ ವಿಷಯಗಳ ಸೂಚನೆ."

ಸಿಂಧು ತೀರದ ಮೊಹೆಂಜೊದಾರೋ ಹರಪ್ಪ ಜನರು ಲಿಂಗಧಾರಿಗಳಾಗಿದ್ದರೆಂಬುದೂ ಯೋಗೀಶ್ವರನಾದ ಪಶುಪತಿಯನ್ನೂ ಶಕ್ತಿಯನ್ನೂ ವೃಷಭನನ್ನೂ ಅವರು ಆರಾಧಿಸುತ್ತ ಇದ್ದರೆಂಬುದೂ,[1] ಶಿವಯೋಗವು[2] ಅವರಲ್ಲಿ ಪ್ರಚಲಿತವಾಗಿದ್ದಿತೆಂಬುದೂ ಸಂಶೋಧಕರ ನಿರ್ಣಯ. ಆದುದರಿಂದ ಸಿಂಧೂ ನದಿಯ ದ್ರಾವಿಡ ನಾಗರಿಕರಲ್ಲಿ ವೀರಶೈವರ ಮುಖ್ಯ ಲಕ್ಷಣಗಳಾದ ಲಿಂಗಧಾರಣ, ಶಿವ-ಶಕ್ತಿ-ವೃಷಭಪೂಜೆ, ಶಿವಯೋಗ ಇವುಗಳು ಕಂಡುಬಂದಿರುವುದು ಗಮನಾರ್ಹವಾಗಿದೆ. ಇದಲ್ಲದೆ ವೀರಶೈವರ ಮುಖ್ಯ ಲಕ್ಷಣವಾದ ಯಜ್ಞ ವಿರೋಧಿತ್ವವು ಈ ಜನರಲ್ಲಿಯೂ ಇದ್ದಿತೆಂಬುದಕ್ಕೆ ಆಧಾರವಿದೆ. ಆರ್ಯರು ಮಾಡುತ್ತಿದ್ದ ಯಜ್ಞಗಳನ್ನು ಕೆಡಿಸುತ್ತಿದ್ದ ಈ ಜನರಿಂದ ರಕ್ಷಣೆಯನ್ನು ಅವರು ಇಂದನಿಂದ ಪಡೆಯುತ್ತಿದ್ದರೆಂಬುದಕ್ಕೆ ಋಗ್ವೇದ ಮಂತ್ರಗಳು ಸಾಕ್ಷಿಯಾಗಿವೆ.[3] ಹಿಂಸಾತ್ಮಕವೂ, ಅನೈತಿಕವೂ ಆದ ಯಜ್ಞಗಳನ್ನು ಮಾಡಲು ಒಪ್ಪದೆ ಸಿಡಿದುಬಿದ್ದು ದ್ರಾವಿಡರೊಡನೆ ಸೇರಿಕೊಂಡ ಆರ್ಯರು ಅಸುರರೆನಿಸಿಕೊಂಡು ಯಜ್ಞಧ್ವಂಸಿಗಳೆಂದು ಪ್ರಸಿದ್ಧರಾದರು.

1Ii) Siva was one of the principle dieties of the people along with the Mother Goddess.
The diety is sitting cross-legged in a Padmasana Posture with eyes turned towards the tip of the nose which evidences yogeswara aspect of the diety.
-Allen and Anvin in 'Vedic Age'

ii) That this cult (worship of the Bull) was prevalent in chalcolithic times throughout sind, Punjab and Beluchistan in proved by the large number of terra-cotta bulls found at Mohenjo Daro and harapp-page 72 of sir John Marshall's report.

2. As for yoga..... it is attested in Harappa civilization not only by the Pasupathi seel...... but also by a number of other minor antiquities as well. Development of religium in South India by Neelakanta Sastry. There is evidence that yoga was already playing its part as a religious practice-Page 77 of sir John Marshall's Report

2 ಪರಾಚ್ಛೀರ್ಷಾವ ವೃಜಸ್ತ ಇಂದ್ರಾಯ ಜ್ಞಾನೋ ಯಜ್ವಭಿಃ ಸ್ಪರ್ಧಮಾನಾ।
ಪದ್ದಿವೋ ಹರಿವಃ ಸ್ಥಾತರುಗ್ರ ನಿರವ್ರತಾ ಅಧಮೋ ರೋಧಸ್ಯೋಃ॥
ಸಾಯಣ ಭಾಷ್ಯ : ಆಯಜ್ವಾನಃ ಸ್ವಯಂ ಯಾಗರಹಿತಾಃ, ಪ್ರತ್ಯುತ ಯಜ್ವಭಿಃ
ಯಾಗನುಷಾತೃಭಿಃ ಸಹ ಸ್ಪರ್ಧಮಾನಾಃ

ಯಜ್ಞ ಮಾಡದವರು ಅಸುರರೆಂದು ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಿದೆ.[1] ಯಜ್ಞ ಮಾಡಲು ಅಧಿಕಾರವನ್ನು ಕೊಡುವ ಯಜ್ಞೋಪವೀತವನ್ನು ತ್ಯಜಿಸಿದುದರಿಂದ ಇವರುವ್ರಾತ್ಯರು[1ಎ] ಅಸುರರು ಉಗ್ರ ಶಿವಭಕ್ತರು. ಇವರಲ್ಲಿ ಲಿಂಗಧಾರಿಗಳಿದ್ದುದಕ್ಕೆ ಆಧಾರಗಳಿವೆ : ಮಹಿಷಾಸುರನನ್ನು ಮರ್ದಿಸುವಾಗ ಅವನ ಕೊರಳಲ್ಲಿದ್ದ ಲಿಂಗವು ದೇವಿಯ ಕೈಗೆ ಅಂಟಿಕೊಂಡಿತಂತೆ.[2] ತ್ರಿಪುರಾಸುರ ಸಂಹಾರ ಕಾಲದಲ್ಲಿ ಅವರ ಕೊರಳಲ್ಲಿದ್ದ ಲಿಂಗಗಳನ್ನು ತೆಗೆದಹೊರತು ಅವರು ಸಾಯಲಿಲ್ಲವಂತೆ.[3] ರಾವಣಾಸುರನು ಎಲ್ಲಿ ಹೋದರಲ್ಲಿಗೆ ಲಿಂಗವನ್ನು ತೆಗೆದುಕೊಂಡು ಹೋಗುತ್ತಿದ್ದನೆಂದು ರಾಮಾಯಣದಲ್ಲಿ ಹೇಳಿದೆ.[4] ಯುದ್ಧ ಕಾಲದಲ್ಲಿಯೂ ಮೈಮೇಲೆ ಲಿಂಗವನ್ನು ಧರಿಸುತ್ತಿದ್ದ ಈ ದೈತ್ಯ ದ್ರಾವಿಡರನ್ನು ಆ ಆರ್ಯರು 'ಶಿಶ್ನದೇವಾಃ' ಎಂದು ಕರೆದುದು ಸಂಭವನೀಯವೇ.

ವೇದೋಪನಿಷತ್ ಗೀತೆಗಳ ಮೇಲೆ ವೇದ ಪೂರ್ವಲಿಂಗಧಾರೀ ಧರ್ಮದ ಪ್ರಭಾವ

ಕಾಲಾಯ ತಸ್ಮೈನಮಃ! ಕಾಲಕ್ರಮದಲ್ಲಿ ಆರ್ಯರೂ ವ್ರಾತ್ಯರೂ ಒಂದಾದರು. ವ್ರಾತ್ಯರನ್ನು ವೈದಿಕ ಆರ್ಯರೊಳಗೆ ಸಮಾವೇಶ ಮಾಡುವ ಸಂಸ್ಕಾರಕ್ಕೆ 'ವ್ರಾತ್ಯಸ್ತೋಮ'ವೆಂದು ಹೆಸರು. ಸಿಂಧೂತೀರದ ವ್ರಾತ್ಯರ ಮುಖ್ಯ ದೇವತೆ ಪಶುಪತಿಯಷ್ಟೆ; ಆದುದರಿಂದ ಇವರು 'ಪಾಶಪತ ಮಾಹೇಶ್ವರರು'; ಇದು ಬಸವ ಪೂರ್ವಲಿಂಗಧಾರೀ ಧರ್ಮದ ಪ್ರಸಿದ್ಧವಾದ ಹೆಸರು. ಯಜ್ಞವಿರೋಧಿಗಳಾದ ಈ ಪಾಶುಪತ ಮಾಹೇಶ್ವರರ ಪ್ರಭಾವವು ವೇದೋಪನಿಷತ್ತು ಭಗವದ್ಗೀತೆಗಳ ಮೇಲೆ ಬಿದ್ದಿದ್ದಿತು. ವೈದಿಕ ರುದ್ರನು ಪಶುಪತಿಯಾದನು. ಯಜ್ಞಪರ ತ್ರೈವಿದ್ಯರು ಮಾನ್ಯ ಮಾಡದ ಅಥರ್ವವೇದದಲ್ಲಿ ಪಶುಪತಿಯ 'ವ್ರಾತ್ಯ' ಎಂಬ ಹೆಸರಿನಿಂದಲೇ ಮಹಾದೇವನಾದನು. ಈ ಪಶುಪತಿಯ ಭಕ್ತರಿಗೆ ದಕ್ಷಿಣದಲ್ಲಿ ಶ್ರೀಶೈಲವೂ ಉತ್ತರದಲ್ಲಿ ಕಾಶಿಯೂ ಪುರಾತನ ಕಾಲದಿಂದಲೂ ಕೇಂದ್ರಗಳಾಗಿದ್ದವು. ಸ್ಕಾಂದಪುರಾಣಾಂತರ್ಗತ

---

1. 'ಅಯಜಮಾನಮಾಹುರಾಸುರಃ'-ಛಾಂದೊಗ್ಯ 8-8-5;
   ಶಾಂಕರ ಭಾಷ್ಯ :-ಅಯಜಮಾನಂ ಅಯಜನ ಸ್ವಭಾವಂ

1ಎ. ಸಾವಿತ್ರೀ ಪತಿತಾ ವ್ರಾತ್ಯಾ-ಮನು.

2. ಆದತ್ತ ಸಹಸ್ರಾಗೌರೀ. ಲಿಂಗಂ ತಸ್ಯಗಳೇ ಸ್ಥಿತು

3. ಪುರತ್ರಯಾ ವಾಸಾ ದೈತೇಯಾ ಲಿಂಗಧಾರಕಾಃ।
   ಅದಿತಾ ಶಂಭುನಾ ಪೂರ್ವಂ ಮುಕ್ತಲಿಂಗ ವಿದೂಷಿತಾಃ॥ -ಸ್ಕಾಂದ ಪುರಾಣ

4. ಯತ್ರಯತ್ರ ಚ ಯಾತಿಸ್ಮ ರಾವಣೋ ರಾಕ್ಷಸೋತ್ತಮಃ।
   ಜಂಬೂನದಮಯಂ ಲಿಂಗಂ ತತ್ರ ತತ್ರ ಚ ನೀಯತೇ ॥

ಶಂಕರ ಸಂಹಿತೆಯ 85ನೆಯ ಅಧ್ಯಾಯದಲ್ಲಿ 'ಲಿಂಗಾಂಗ ಸಂಬಂಧೀ ಸದಾನಂದಾಹ್ವಯೋ ಮುನಿಃ.... ಧೃತಪಾಶುಪತವ್ರತಃ। ಅತಿವರ್ಣಾಶ್ರಮೀ ಯೋಗೀ ಜೀವನ್ಮುಕ್ತೋ ಜಗದ್ಗುರುಃ' ಎಂದು ಹೇಳಿರುವ ಲಿಂಗಧಾರೀ ಸದಾನಂದ ಜಗದ್ಗುರುವು ಶ್ರೀಶೈಲದಲ್ಲಿದ್ದ ಪಾಶುಪತ ಮಾಹೇಶ್ವರನೆ. ಕುಮಾರ ಸಂಭವ ಕರ್ತೃ ನನ್ನ ಚೋಡದೇವನು ಸ್ತುತಿಸಿರುವ 'ಅಖಿಲ ಜಗದ್ಗುರು ಜಂಗಮ ಮಲ್ಲಿಕಾರ್ಜುನನು' ಶ್ರೀ ಶೈಲದಲ್ಲಿ ಪಾಶುಪತ ಮಾಹೇಶ್ವರನೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಇನ್ನು ಕಾಶೀ ಕ್ಷೇತ್ರವಾದರೂ ಶ್ರೀಶೈಲದಷ್ಟೇ ಪುರಾತನ ಚರಿತ್ರೆಯುಳ್ಳದ್ದು. ಅಲ್ಲಿರುವ ಜಂಗಮವಾಡೀ ಮಠವು ಜನಮೇಜಯನ ಕಾಲದಿಂದಲೂ ಇದ್ದುದೆಂದು ಆ ಮಠದಲ್ಲಿನ ಆಧಾರಗಳಿಂದ ತಿಳಿದುಬರುತ್ತದೆ; ಅಂತೂ ಜಂಗಮವಾಡೀ ಮಠವು ಸಹಸ್ರಾರು ವರ್ಷಗಳಿಂದ ಅಸ್ತಿತ್ವದಲ್ಲಿದ್ದುದೆಂಬುದರಲ್ಲಿ ಸಂದೇಹವಿಲ್ಲ. ಈ ಪ್ರಾಂತ್ಯದಲ್ಲಿ ಪಶುಪತಿಯ ಧರ್ಮವು ಪ್ರಾಮುಖ್ಯವಾಗಿರುವುದಕ್ಕೆ ಕಾರಣವನ್ನು ಕಸ್ತೂರಿ ಮಾಸಿಕದಲ್ಲಿ ಪ್ರಕಟವಾದ ಈ ಲೇಖನ ಭಾಗದಿಂದ ತಿಳಿಯಬಹುದು.

''ಗಂಗಾ ಕಣಿವೆಗೆ ಕಾಲಿಟ್ಟ ಆರ್ಯರಲ್ಲಿ ಕಾಶಿಗಳೇ ಮೊದಲಿಗರು; ಅದು ಭಾರತದೊಳಗಿನ ಭಾರತವೆಂದು ಪ್ರಸಿದ್ಧವಾಗಿದ್ದಿತು...... ಗಂಗಾ ಕಣಿವೆಯ ಅನುಪಮ ದೇಶವನ್ನಾಳುತ್ತಿದ್ದ ವ್ರಾತ್ಯರಾಜನ್ಯರು ಜೀವನದಲ್ಲಿಯೂ ವಿಚಾರದಲ್ಲಿಯೂ ಆರ್ಯರಿಗಿಂತ ಮಿಗಿಲಾಗಿದ್ದರು. ಅವರ ರಾಜ್ಯಭಾರ ಪದ್ಧತಿಯು ಬೌದ್ಧಿಕ ಹೆಚ್ಚಳಕ್ಕೆ ಸಾಕ್ಷ್ಯವಾಗಿದ್ದರೆ ಅವರ ತಾತ್ತ್ವಿಕ ಹಾಗೂ ಪೌರಾಣಿಕ ಕಲ್ಪನೆ ಆರ್ಯ ಬ್ರಾಹ್ಮಣರಿಗೂ ಅವರಿಗೂ ಉಂಟಾದ ಸಾಮಾಜಿಕ ಮತ್ತು ರಾಜಕೀಯ ಸಂಪರ್ಕದಲ್ಲಿ ಪ್ರದರ್ಶಿತವಾಗಿತ್ತು. ಆರ್ಯಬ್ರಾಹ್ಮಣರು. ವ್ರಾತ್ಯರಾಜನ್ಯರಿಂದ ಹಲವಾರು ವಿಷಯಗಳನ್ನು ಉತ್ಸಾಹದಿಂದ ಕಲಿತುಕೊಳ್ಳುವಂತಾಯಿತು-ಎಂದು ನರೇಂದ್ರನಾಥ ಘೋಷರು ಹೇಳಿದ್ದಾರೆ.''[1]

ಹಿಂಸಾತ್ಮಕ ಯಜ್ಞಗಳನ್ನು ವ್ರಾತ್ಯರು ವಿರೋಧಿಸುತ್ತಿದ್ದುದು ಆರ್ಯರ ಮೇಲೆ ಪ್ರಭಾವವನ್ನು ಬೀರಿತು. ಆದುದರಿಂದಲೇ ಮುಂಡಕ ಉಪನಿಷತ್ತಿನಲ್ಲಿ 2 ಯಜ್ಞಗಳನ್ನು ಒಡಕು ದೋಣಿಗಳಿಗೆ ಹೋಲಿಸಿದೆ; ಭಗವದ್ಗೀತೆಯಲ್ಲಿ 3 ಕರ್ಮ ಪರವಾದ ವೇದದಲ್ಲಿ ರತರಾದವರನ್ನು ದಡ್ಡರೆಂದು ಹೀಯಾಳಿಸಿದೆ. ಹಿಂದುಗಳಲ್ಲಿ ಇಂದೂ ವೀರಶೈವರೊಬ್ಬರೇ ಯಜ್ಞವಿರೋಧಿಗಳೆಂಬ ಅಂಶವನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬಹುದು.

---

1. ಕಸ್ತೂರಿ ಮಾಸಿಕದಲ್ಲಿ 'ಕ್ಷೇತ್ರರಾಜ ಕಾಶಿ' ಇಲ್ಲಿ ಬಾರತದ ಸಂಯುಕ್ತ ಸಂಸ್ಕೃತಿಯ ಬೀಜಾರೋಪವಾಯಿತು ಎಂಬ ಲೇಖನದ ಭಾಗ.
2. ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾಃ -ಮುಂಡಕ, ಖಂ. 2-ಮಂ 7
3. ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ಭ. ಗೀ. 2-42

ಆರ್ಯರಿಗೆ ದ್ರಾವಿಡರ ಸಂಪರ್ಕವು ಹೆಚ್ಚಿದಂತೆ, ವೇದಗಳಲ್ಲಿ ದೇವದೇವೋತ್ತಮನೆಂದು ಹೊಗಳಿಸಿಕೊಳ್ಳುತ್ತಿದ್ದ ಇಂದ್ರನ ಕಲೆಯು ಇಳಿಮುಖವಾಗುತ್ತಾ ಹೋಗುತ್ತದೆ; 'ಶಿಶ್ನದೇವಾಃ' ಎಂದು ಶಿವಭಕ್ತರನ್ನು ಮೊದಮೊದಲು ಹಳಿಯುತ್ತಿದ್ದ ಆರ್ಯರು, 'ಶಿಶ್ನದೇವಾಃ' ಎಂದರೆ 'ಅಬ್ರಹ್ಮಚಾರಿಗಳು' ಎಂದು ತೇಲಿಸಿ ಅರ್ಥಮಾಡುವ ಕಾಲ ಬಂದಿತು.[1] ಋಗ್ವೇದದಲ್ಲಿಯೇ ತ್ರ್ಯಂಬಕ ಶಿವನು ಮೋಕ್ಷಕ್ಕಾಗಿ ಪ್ರಾರ್ಥಿಸಲ್ಪಟ್ಟನು.[2] ಯಜುರ್ವೇದದ ಹೊತ್ತಿಗೆ ಶಿವನ ಸ್ಥಾನವು ಮತ್ತಷ್ಟು ಹೆಚ್ಚಿತು.[3] ಶಿವನು ಸಾಮಗಾನಪ್ರಿಯನು, ಅವನು ಅಥರ್ವಸ್ವರೂಪಿ ಎಂದು ಮಹಾಭಾರತದಲ್ಲಿ ಸ್ತುತ್ಯನಾಗಿದ್ದಾನೆ. ಅಥರ್ವವೇದದಲ್ಲಿ ಏಕವ್ರಾತ್ಯನೆಂದು ಕರೆಯಲ್ಪಟ್ಟ ಶಿವನು ಮಹಾದೇವನಾದನು. ವ್ರಾತ್ಯವಿದ್ವಾಂಸರು ರಾಜಾಧಿರಾಜರಿಂದ ಸಂಪೂಜ್ಯರಾದರು.[4] ಈ ವಿದ್ವಾಂಸರು ಮನೆಗೆ ಬಂದರೆ ಅವರ ಅಪ್ಪಣೆ ಇಲ್ಲದೆ ಯಜ್ಞಮಾಡಬಾರದೆಂದು ಅಥರ್ವವೇದದಲ್ಲಿ ಹೇಳಿದೆ.

ಮುಂಡಕೋಪನಿಷತ್ತು ಶೈವಪರವಾದ ಉಪನಿಷತ್ತೆನ್ನಲು ಆಧಾರವುಂಟು. ಇದರಲ್ಲಿ ಇದ್ದುದೆಂದು ಶಿವೋತ್ಕರ್ಷವನ್ನು ಹೇಳುವ ಶ್ಲೋಕವೊಂದು ಶ್ರೀಕಂಠ ಭಾಷ್ಯದಲ್ಲಿ ಉಕ್ತವಾಗಿದೆ. ಮುಂಡಕ ಉಪನಿಷತ್ತಿನಲ್ಲಿ ಇಲ್ಲದಿರುವ ಶ್ಲೋಕವೊಂದನ್ನು ಅದರಲ್ಲಿ ಇರುವುದೆಂದು ಒಬ್ಬ ಭಾಷ್ಯಕಾರನು ಹೇಳಿರುವನೆನ್ನುವುದು ಸರಿಯಲ್ಲ; ಶಿವಪರ ಶ್ಲೋಕಗಳು ಶಂಕರಾಚಾರ್ಯರಿಂದಲೂ, ಅವರಿಂದೀಚೆಗೆ ವಿದ್ವಾಂಸರಿಂದಲೂ ಕೈಬಿಟ್ಟಿರಬೇಕೆಂಬ ವಾದವು ಎದ್ದಿರುವುದನ್ನು ಎಂಬ ಗ್ರಂಥ'ದ 234ನೆಯ ಪುಟದಲ್ಲಿ ಉಕ್ತವಾಗಿದೆ. ಮುಂಡಕೋಪನಿಷತ್ತಿನಲ್ಲಿ ಈಗಿರುವ ಉಕ್ತಿಗಳಿಂದಲೇ ಅದು ಲಿಂಗಧಾರೀ ಧರ್ಮವನ್ನು ಪ್ರತಿಪಾದಿಸುವ ಉಪನಿಷತ್ತೆಂದೇ ತೋರಿಸಬಹುದು. ಈ ಉಪನಿಷತ್ತಿನಲ್ಲಿ ಲಿಂಗವಿಲ್ಲದಿದ್ದರೆ ತಪಸ್ವಿಗೂ ಮೋಕ್ಷವಾಗುವುದಿಲ್ಲವೆಂದು. ಹೇಳಿದೆ. ಹಾಗೆಯೇ ಶಿರೋವ್ರತವುಳ್ಳವನಿಗೇ ಈ ಉಪನಿಷತ್ತನ್ನು ಉಪದೇಶಿಸಬೇಕೆಂದು ಹೇಳಿದೆ. 5 ಶಿರೋವ್ರತವೆಂದರೆ ಲಿಂಗವನ್ನು ಶಿರಸ್ಸಿನಲ್ಲಿ ಸದಾಧರಿಸುವ ವ್ರತ. ಶಿರೋವ್ರತ ಅತ್ಯಾಶ್ರಮ, ಪಾಶುಪತ, ಶಾಂಭವ ಪದಗಳಿಂದ

1ಎ. ಶಿಶ್ನೇನ ಪ್ರಕೀರ್ಮಾಭಿಃ ಸ್ತ್ರೀಭಿಃ ದಿವ್ಯಂತಿ ಕ್ರೀಡಂತ ಇತಿ - ನಿರುಕ್ತ (ದುರ್ಗಾಚಾರ್ಯ)

ಬಿ. ಶಿಶ್ನೇನ ದಿವ್ಯಂತಿ ಕ್ರೀಡಂತ ಇತಿ-ಸಾಯಣ

2. ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ।
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯಮಾಮೃತಾತ್ ॥ ಋ, 7-59-12

3. ಏಕ ಏವ ರುದ್ರೋ ನದ್ವಿತೀಯಾಯ ತಸ್ಥೆ

4. ತದ್ಯಸ್ಯೈವಂ ವಿದ್ವಾನ್ ವ್ರಾತ್ಯೋ ರಾಜ್ಞೋತಿಥಿರ್ಗೃಹಾನಾಗಚ್ಛೇತ್।
ಶ್ರೇಯಾಂಸಮೇನಮಾತ್ಮನೋ ಮಾನಯೇತ್ತಥಾ ಕ್ಷತ್ರಾಯ ವೃಶ್ಚತೆ ತಥಾ
ರಾಷ್ಟ್ರಾಯ ವೃಶ್ಚತೇ ॥ ಅಥರ್ವವೇದ xv 10 ಹಾಗೆಯೇ xv 12 ನೋಡಿ

5. ತೇಷಾಮೇವೈತಾಂ ಬ್ರಹ್ಮವಿದ್ಯಾಂ ವದೇತ ಶಿರೋವ್ರತಂ ಯೈಸ್ತುಚೀರ್ಣಂ
ಮುಂಡಕ 3-2-10

ಸ್ಥೂಲಸೂಕ್ಷ್ಮಕಾರಣ ತನುಗಳಲ್ಲಿ ಕ್ರಮವಾಗಿ ಇಷ್ಟ ಪ್ರಾಣ ಭಾವವೆಂಬ ಲಿಂಗತ್ರಯವನ್ನು ಸಂಬಂಧಿಸುವ ದೀಕ್ಷೆಯೇ ಎಂಬುದು ನಿಗಮಾಂತದಲ್ಲಿ ಉಕ್ತವಾಗಿದೆ ಎಂದು ಕಾರಣಾಗಮದಲ್ಲಿ ಹೇಳಿದೆ.[1] ಇದನ್ನೇ ಶ್ರೀಕರ ಭಾಷ್ಯದಲ್ಲಿ ಲೈಂಗ್ಯ ಸ್ಕಂದ ಕೂರ್ಮ ಪುರಾಣಗಳ ಆದಾರದ ಬಲದಿಂದ ಸಿದ್ಧಾಂತ ಮಾಡಲಾಗಿದೆ.[2] ಆದುದರಿಂದ, ಶಿರೋವ್ರತ ಅತ್ಯಾಶ್ರಮ ಪಾಶುಪತ ಪದಗಳಿಂದ ಲಿಂಗಧಾರಣೆಯ ವ್ರತವೇ ಉಕ್ತವಾಗಿದೆಯೆಂಬುದು ಸ್ಪಷ್ಟ ಶ್ರೀಕರಭಾಷ್ಯಕ್ಕೂ ಶ್ರೀಕಂಠಭಾಷ್ಯಕ್ಕೂ ಮುಖ್ಯ ಆಧಾರವಾದ ಶಿವ ಮಹಾಪುರಾಣದ ವಾಯವೀಯ ಸಂಹಿತೆಯ (ಪೂರ್ವಭಾಗ 33ನೆಯ ಅಧ್ಯಾಯ)ಲ್ಲಿ ದೇಹಾಂತವಾಗಿ ಆಚರಿಸಲ್ಪಡುವ ನೈಷ್ಠಿಕವ್ರತಕ್ಕೆ ಅತ್ಯಾಶ್ರಮೀ ಮಹಾಪಾಶುಪತ, ಮಹಾವ್ರತವೆಂಬ ಹೆಸರುಗಳೂ ಇವೆಯೆಂದು ಹೇಳಿದೆ.[3] ಇದೇ ಶಿವ ಮಹಾಪುರಾಣದಲ್ಲಿ ದೇಹಾಂತದವರೆಗೂ ಈ ಲಿಂಗಪೂಜಾ ವ್ರತವನ್ನು ಆಚರಿಸುವ ನಿವೃತ್ತರು ಲಿಂಗವನ್ನು ಕರದಲ್ಲಿ ಪೂಜಿಸಿ, ಸದಾತಲೆಯಲ್ಲಿ ಧರಿಸಬೇಕೆಂದು ಹೇಳಿದೆ.4 ಶಂಕರ ಸಿದ್ಧಾಂತಕ್ಕೆ ಮೂಲವೆಂದು ನಂಬಲ್ಪಟ್ಟಿರುವ ಸೂತಸಂಹಿತೆಯಲ್ಲಿಯೂ ಶಿವಾಗಮೋಕ್ತಾ ಶ್ರಮ ನಿಷ್ಠಮಾನವರು ಸದಾ ಲಿಂಗವನ್ನು

---

1. ನಿವೇದಯಿಷ್ಯನ್ ಮದ್‌ಜ್ಞಾನಂ ದದ್ಯಾದಾದೌ ಶಿರೋವ್ರತಂ।
   ಅತ್ಯಾಶ್ರಮಂ ಪಾಶುಪತು ಶಾಂಭವಂ ತಚ್ಛಿರೋವ್ರತಂ॥
   ಇತೀದಂ ನಾಮಭಿಃ ಪುಣ್ಯೈಃನಿಗಮಾಂತೇಷು ಗೀಯತೇ।
   ತನುತ್ರಯಗತಾನಾದಿ ಮಲತ್ರಯಮಸೌ ಗುರುಃ॥
   ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶೇತ್॥
2. ಶರೀರ ತ್ರಿತಯೇ ಭಕ್ತ್ಯಾ ಲಿಂಗಂ ಪರಶಿವಾತ್ಮಕಂ।
   ಯೋ ಧೃತ್ವಾ ವಿಚರೇದ್ ಭೂಮೌ ಸ ಪಾಶುಪತ ಉಚ್ಯತೇ॥
   ಲಿಂಗ ಶಿವೋ ಭವೇತ್ ಕ್ಷೇತ್ರಮಂಗಂ ಸಂಯೋಗ ಆಶ್ರಯಃ।
   ತಸ್ಮಾಲ್ಲಿಂಗಾಂಗಸಂಯುಕ್ತೋ ಯೋಽಪಿ ಸೋತ್ಯಾಶ್ರಮೀ ಭವೇತ್॥
   .... ಇತ್ಯಾದಿ ಲೈಂಗ್ಯ ಸ್ಕಂದ ಕೂರ್ಮ ಪುರಾಣೇಷು ಪಾಶುಪತಾತ್ಯಾಶ್ರಮೀ ಶಬ್ದಯೋ
   ಲಿಂಗಧಾರೀಪರ್ಯಾಯತ್ವೇನ ನಿರ್ದೇಶಾತ್ ತತ್ಪರತ್ವಮೇವೇತಿ ಸಿದ್ಧಂ
3. ಯಃ ಕೃತ್ವಾತ್ಯಂತಕೀಂ ದೀಕ್ಷಾಮಾದೇಹಾಂತಮನಾಕುಲಂ।
   ವ್ರತಮೇತತ್ ಪ್ರಕುರ್ವೀತ ಸ ತು ವೈ ನೈಷ್ಠಿಕಃ ಸ್ಮೃತಃ॥
   ಸೋತ್ಯಾಸ್ರಮೀ ಚ ವಿಜ್ಞೇಯೋ ಮಹಾಪಾಶುಪತಸ್ತಥಾ।
   ಸಏವ ತಪಸಾಂ ಶ್ರೇಷ್ಠಃ ಸ ಏವ ಚ ಮಹಾವ್ರತೀ॥
4. ಕರಪೂಜಾ ನಿವೃತ್ತಾನಾಂ... ಪೂಜಾಂ ಕೃತ್ವಾಥ ತಲ್ಲಿಂಗಂ ಶಿರಸಾ ಧಾರಯೇತ್ ಸಾದ॥
   18ನೆಯ ಅಧ್ಯಾಯ ಶ್ಲೋಕ 55-57

ತಲೆಯಲ್ಲಿ ಧರಿಸ ಬೇಕೆಂದು ಹೇಳಿದೆ. 1 ಕಾರಣ ತಂತ್ರವೆಂಬ ಶಿವಾಗಮದಲ್ಲಿ ಉಕ್ತವಾದ ಲಿಂಗತ್ರಯವನ್ನು ಶರೀರತ್ರಯಕ್ಕೆ ಸಂಬಂಧಿಸುವ ಮತ್ತು ಶಿರೋವ್ರತವೆಂದೂ ಪಾಶುಪತವೆಂದೂ ಅತ್ಯಾಶ್ರಮವೆಂದೂ ಕರೆಯಲ್ಪಡುವ ವ್ರತವನ್ನು ದೇಹಾಂತವಾಗಿ ಅನುಸರಿಸುವವರು, ಹರಿಹರ, ಪದ್ಮರಸರಂತೆ[2] ತಲೆಯಲ್ಲಿ ಲಿಂಗವನ್ನು ಧರಿಸಿದ ಯಜ್ಞೋಪವೀತಧಾರೀ ವೀರಶೈವ ಬ್ರಾಹ್ಮಣರಾಗಿರಬೇಕು. ಆದುದರಿಂದ ಮುಂಡಕೋಪನಿಷತ್ತಿನಲ್ಲಿ ಹೇಳಿರುವ ಶಿರೋವ್ರತವೆಂದರೆ ತಲೆಯಲ್ಲಿ ಸದಾಲಿಂಗವನ್ನು ಧರಿಸಬೇಕಾದ ಅತ್ಯಾಶ್ರಮವ್ರತ; ಅದರಿಂದ ಮೋಕ್ಷವೆಂದು ಶ್ರೀಕಂಠ ಭಾಷ್ಯದಲ್ಲಿ ಹೇಳಿದೆ. [3] ಅಲ್ಲದೆ ಲಿಂಗವಿಲ್ಲದುದರಿಂದ ಎಂದರೆ ಅಲಿಂಗಿಗೆ ಮೋಕ್ಷವಾಗುವುದಿಲ್ಲವೆಂದೂ ಮುಂಕಡಕೋಪನಿಷತ್ತಿನಲ್ಲಿ ಹೇಳಿದೆ.[4]

ಯಜ್ಞವಿರೋಧವೂ, ಶಿವಭಕ್ತಿ, ಲಿಂಗಪೂಜೆ, ಲಿಂಗಧಾರಣ ಇವುಗಳು ವೇದ ಪೂರ್ವ ಲಿಂಗಧಾರೀ ಧರ್ಮದ ಹಾಗೂ ಇಂದಿನ ವೀರಶೈವದ ವೈಶಿಷ್ಟ್ಯವಾಗಿದೆ. ಯಜ್ಞಪರ ತ್ರಯಿಧರ್ಮದ ಕರ್ಮಠರು ಮಾನ್ಯ ಮಾಡದ ಅರ್ಥವೇದಕ್ಕೆ ಸೇರಿದ ಮುಂಡಕೋಪನಿಷತ್ತಿನಲ್ಲಿ ಯಜ್ಞಕರ್ಮವನ್ನು ನಂಬುವವರನ್ನು ದಡ್ಡರೆಂದು ಹೀಯಾಳಿಸಿ, ಅದು ಈ ವಿಷಯದಲ್ಲಿ ಭಗವದ್ಗೀತೆಗೆ ಮಾರ್ಗದರ್ಶಕವಾಗಿದೆ. ಲಿಂಗರಹಿತರಿಗೆ ಮೋಕ್ಷವಿಲ್ಲವೆಂದು ಹೇಳಿರುವುದಲ್ಲದೆ ಶಿರಸ್ಸಿನಲ್ಲಿ ಲಿಂಗವನ್ನು ಧರಿಸುವುದನ್ನು ವಿಧಿಸುವ ಶಿರೋವ್ರತರಿಗೆ ಮಾತ್ರ ಈ ಮೋಕ್ಷದಾಯಕ ಉಪನಿಷತ್ತನ್ನು ಉಪದೇಶಿಸಬೇಕೆಂದು ಹೇಳಿ ಶಿವಭಕ್ತಿಯನ್ನೂ ಲಿಂಗಧಾರಣವನ್ನೂ ಈ ಉಪನಿಷತ್ತು ಎತ್ತಿ ಹಿಡಿದು, ಶಿರೋವ್ರತದ ಪರ್ಯಾಯ ಪದವಾದ ಅತ್ಯಾಶ್ರಮ ಪದದಿಂದ ಉಕ್ತವಾದ ಲಿಂಗಧಾರಣವನ್ನು ಹೇಳುವ ಶ್ವೇತಾಶ್ವೇತರ ಶೈವ ಉಪನಿಷತ್ತಿಗೆ ಮಾರ್ಗದರ್ಶಕವಾಗಿದೆ. ಮುಂಡಕವು ಮೊದಲು ಬ್ರಹ್ಮದೇವನಿಂದ ಅವನ ಜೇಷ್ಟ ಪುತ್ರನಿಗೆಉಪದೇಶಸಲ್ಪಟ್ಟು ಕೊನೆಗೆ ಶೌನಕನೆಂಬ ಮಹಾ ಗೃಹಸ್ಥನಿಗೆ ಉಪದೇಶಿಸಲ್ಪಟ್ಟಿತಾಗಿ[5] ಗೃಹಸ್ಥರೂ ಮೋಕ್ಷಾರ್ಹರೆಂಬ ವೀರಶೈವರ ನಿಲುವನ್ನು ಅದು ಎತ್ತಿ ಹಿಡಿದಿದೆ.

---

1. ಶಿವಾಗಮೋಕ್ತಾಶ್ರಮ ನಿಷ್ಠಮಾನಃ। ತ್ರಿಪುಂಡ್ರ ಲಿಂಗಂ ತು ಸ ದೈವ ಧಾರಯೇತ್ ॥
2. ಶಿರದೊಳಿಸವ ಲಿಂಗದಿಂ ಯಜ್ಞಸೂತ್ರದಿಂ ರಂಜಿಸುವ ಎರಡನೆಯ ಶಿವನು ಎಂಬಂತೆ ಹರೀಶ್ವರನು (ರಾಘವಂಕ ಚರಿತ್ರೆ) ಪದ್ಮರಸನೆನಿಸುವ ಬ್ರಾಹ್ಮಣೋತ್ತಮಂ ವೀರಶೈವಾಚಾರ್ಯಂ (ವಿರೂಪಾಕ್ಷ ಪಂಡಿತ)
3. ಅತ್ಯಾಶ್ರಮ ಸಂಜ್ಞಕೋಯಮಾಶ್ರಮಭೇದಃ ಸ್ವತಂತ್ರಃ ಪರಮಶಿವ ಪ್ರಾಪ್ತಿಹೇತುಃ (ಶ್ರೀಕಂಠಭಾಷ್ಯ) ಆತ್ಯಂತಿಕಮತ್ಯಾಶ್ರಮ ಸಂಜ್ಞಕಮಪವರ್ಗಹೇತುಃ ಶ್ರೀಕಂಠ ಭಾಷ್ಯ)
4 ನಾಯಮಾತ್ಮಾ ಬಲಹೀನೇನ ಲಭ್ಯೋನ ಚ ಪ್ರವಚನಾ ತಪಸೋವಾಪ್ಯಲಿಂಗಾತ್ (ಮುಂಡಕ)
5. ಶೌನಕೋಹ ವೈ ಮಹಾಶಾಲಃ-ಮುಂ 1-1-3. ಶಾಂಕರಭಾಷ್ಯ- ಮಹಾಶಾಲಃ ಮಹಾಗೃಹಸ್ಥ :

ತಲೆಯಲ್ಲಿ ಲಿಂಗವನ್ನು ಧರಿಸುವ ವ್ರತವೇ ಶಿರೋವ್ರತವೆಂದು ಸಿದ್ಧಾಂತ ಮಾಡಲಾಯಿತಷ್ಟೆ. ಈ ಶಿರೋವ್ರತವನ್ನು ಆಚರಿಸುವವನಿಗೆ ಮಾತ್ರ ಮುಂಡಕೋಪನಿಷತ್ತನ್ನು ಹೇಳಬೇಕೆಂದೂ, 'ಅಜೀರ್ಣವ್ರತ' (ಅದನ್ನು ಆಚರಿಸದವ) ನಿಗೆ ಅದನ್ನು ಉಪದೇಶಿಸಲಾಗದೆಂದು ಆ ಉಪನಿಷತ್ತಿನಲ್ಲಿಯೇ ಹೇಳಿರುವುದರಿಂದ ಅಲಿಂಗಿಗೆ ಮೋಕ್ಷವಿಲ್ಲವೆಂದು ಅದರಲ್ಲಿ ಹೇಳಿರುವುದು ತರ್ಕಬದ್ಧವಾದುದೇ ಆಗಿದೆ. ಆದರೆ ಈ 'ಲಿಂಗ' ಶಬ್ದಕ್ಕೆ ಶಂಕರ ಭಾಷ್ಯದಲ್ಲಿ 'ಸಂನ್ಯಾಸ' ಎಂದು ಎಳೆದು ಅರ್ಥ ಮಾಡಿ, ಆ ಸಂನ್ಯಾಸವಿಲ್ಲದಿದ್ದರೆ ಮೋಕ್ಷವಾಗುವುದಿಲ್ಲವೆಂದು ಹೇಳಲಾಗಿದೆ. ಇದಕ್ಕೆ ಕಾರಣ ಸಂನ್ಯಾಸವೇ ಮೋಕ್ಷದಾಯಕವೆಂಬುದು ಅವರ ಸಿದ್ಧಾಂತ. ಶಂಕರಭಾಷ್ಯದ ಈ ಅರ್ಥವು ಸರಿಯಾಗಿದ್ದರೆ, ಆ ಮುಂಡಕೋಪನಿಷತ್ತನ್ನು ಸಂನ್ಯಾಸಿಗೆ ಮಾತ್ರ ಉಪದೇಶಮಾಡಬೇಕಾಗಿತ್ತಲ್ಲವೆ ? ಆದರೆ ಅದನ್ನು ಉಪದೇಶಮಾಡಿರತಕ್ಕದ್ದು ಸಂನ್ಯಾಸಿಗಲ್ಲ-ಶೌನಕನೆಂಬ ದೊಡ್ಡ ಗೃಹಸ್ಥನಿಗೆ ಅದರ ಮೊದಲ ಉಪದೇಶ ಗೃಹಸ್ಥನಾದ ಬ್ರಹ್ಮನಿಂದ ಅವನ ಜೇಷ್ಠ ಪುತ್ರನಿಗೆ. ಇದಲ್ಲದೆ ಈ ಉಪನಿಷತ್ತಿನ ಉಪದೇಶವನ್ನು ಪಡೆಯಲು ಅರ್ಹನಾದವನು ಏಕರ್ಷಿ ಎಂಬ ಅಗ್ನಿಯನ್ನು ಹೋಮ ಮಾಡುವ ಕ್ರಿಯಾವಂತ ಗೃಹಸ್ಥನೇ ಹೊರತು ನಿರಗ್ನಿಯಾದ ಸಂನ್ಯಾಸಿಯಲ್ಲ[1] ಮತ್ತು ಈ ಉಪನಿಷತ್ತಿನಲ್ಲಿಯೇ ಬ್ರಹ್ಮವಿದನ ಕುಲದಲ್ಲಿ ಅಬ್ರಹ್ಮವಿದನು. ಹುಟ್ಟುವುದಿಲ್ಲವೆಂದು ಹೇಳಿರುವುದರಿಂದ ಆ ಬ್ರಹ್ಮವಿದನ ಗೃಹಸ್ಥನೇ[2] ಆಗಿರ ಬೇಕಾಗುತ್ತದೆ.

ಶಿರೋವ್ರತವೆಂದರೆ ತಲೆಯಲ್ಲಿ ಅಗ್ನಿಯನ್ನು ಧರಿಸುವ ವ್ರತ ಎಂದು ಶಾಂಕರ ಭಾಷ್ಯದಲ್ಲಿ ಹೇಳಿರುವುದು ಸಮಂಜಸವಲ್ಲ ಮತ್ತು ಹಾಗೆ ಹೇಳಲು ಯಾವ ಆಧಾರವೂ ಇಲ್ಲ. ಯಜ್ಞ ಮಾಡಲು ಅಧಿಕಾರವನ್ನು ಕೊಡುವ ಯಜ್ಞೋಪವೀತವನ್ನು ಧರಿಸದೆ ಇರುವವರೇ ವ್ರಾತ್ಯರು. ಈ ವ್ರಾತ್ಯರು ರಾಜಸನ್ಮಾನಿತರೆಂದೂ, ಶಿವನು ಏಕವ್ರಾತ್ಯನೂ ಮಹಾದೇವನೂ ಎಂದು ಹೇಳುವ ಅಥರ್ವವೇದಕ್ಕೆ ಸೇರಿದ ಈ ಅಥರ್ವಣೋಪನಿಷತ್ತು ಯಜ್ಞಗಳನ್ನು ನಿರರ್ಥಕವಾದ ಒಡಕು ದೋಣಿಗಳಿಗೆ ಹೋಲಿಸಿ, ಲಿಂಗಧಾರಿಯಾದ ಶಿರೋವ್ರತನಿಗೆ ಈ ಉಪನಿಷತ್ತನ್ನು ಉಪದೇಶಿಸಬೇಕೆಂದು ಹೇಳಿರುವುದು ನ್ಯಾಯವಾಗಿಯೇ ಇದೆ.

ಅತ್ಯಾಶ್ರಮ, ಶಾಂಭವ, ಪಾಶಪತ, ಶಿರೋವ್ರತ ಎಂಬೀ ಸಮಾನಾರ್ಥದ ಪದಗಳಿಂದ ತ್ರಿವಿಧ ಲಿಂಗದೀಕ್ಷೆಯು ವೇದಾಂತದಲ್ಲಿ ಹೇಳಲ್ಪಟ್ಟಿದೆಯೆಂಬುದಕ್ಕೆ ಸಾಕಾದಷ್ಟು ಆಧಾರಗಳನ್ನು ಈ ಹಿಂದೆಯೇ ಕೊಟ್ಟಿದೆಯಷ್ಟೆ. ಅತಾಶ್ರಮಿಗಳಿಗೆ

---

1. ಕ್ರಿಯಾವಂತ : ಶ್ರೋತ್ರಿಯಾ ಬ್ರಹ್ಮನಿಷ್ಠಾಃ ಸ್ವಯಂ ಜುಹ್ವತ ಏಕರ್ಷಿಂ ಶ್ರದ್ಧಯಂತಃ।
   ತೇಷಾಮೇ ವೈ ತಾಂ ಬ್ರಹ್ಮವಿದ್ಯಾಂವದೇತ ಶಿರೋವ್ರತಂ ವಿಧಿವದ್ಯೈಸ್ತು ಚೀರ್ಣಂ॥
   -ಮು ಂ 3-2-10, 'ನೈತದಚೀರ್ಣವ್ರತೋಧೀತೇ' (ಮುಂ 3-2-5)
2. ಬ್ರಹ್ಮ ವೇದ ಬ್ರಹ್ಮೈವ ಭವತಿ ನಾಸ್ಯೋ ಬ್ರಹ್ಮವಿದ್‌ಕುಲೇ ಭವತಿ (ಮುಂ. 3-2-9)

ಶ್ವೇತಾಶ್ವತರೋಪನಿಷತ್ತನ್ನು ಉಪದೇಶಿಸಿದುದಾಗಿ ಅದರಲ್ಲಿಯೇ ಹೇಳಿದೆ.[1] ಅತ್ಯಾಶ್ರಮವೆಂದರೆ ಅಂತ್ಯಾಶ್ರಮವಾದ ಸಂನ್ಯಾಸಾಶ್ರಮದ ಪರಮಹಂಸಸ್ಥಿತಿಯೆಂದು ಶಾಂಕರಭಾಷ್ಯದಲ್ಲಿ ಅರ್ಥಮಾಡಿರುವುದು ಸಮಂಜಸವಾಗುವುದಿಲ್ಲ.

ಅತ್ಯಾಶ್ರಮವೇ ಸಂನ್ಯಾಸಾಶ್ರಮ; ಎಂದರೆ ಅಂತ್ಯಾಶ್ರಮವಾದ ಸಂನ್ಯಾಸಾಶ್ರಮಕ್ಕೂ ಹೊರತಾದುದು ಅತ್ಯಾಶ್ರಮ. ವೀರಶೈವರು ಎಲ್ಲ ವರ್ಣಗಳಿಗೂ ಹೊರ (ಅತಿಶಯ)ತಾದ ಅತಿವರ್ಣಗಳು ಹೇಗೋ ಹಾಗೆಯೇ ಅವರು ಎಲ್ಲ ಆಶ್ರಮಗಳಿಗೂ ಮೀರಿದ ಅತ್ಯಾಶ್ರಮಿಗಳು ಅವರಿಗೆ ಮುಖ್ಯ ಆಧಾರ ಗ್ರಂಥಗಳಾದ ಸಿದ್ಧಾಂತಶಿಖಾಮಣಿ ಮತ್ತು ಕ್ರಿಯಾಸಾರ ಇವುಗಳು ವಾಯವೀಯ ಸಂಹಿತೆಯನ್ನೊಳಗೊಂಡ ಶಿವ ಮಹಾಪುರಾಣದ ಅನೇಕ ಶ್ಲೋಕಗಳನ್ನು ಬಳಸಿಕೊಂಡಿವೆ. ಆ ಶಿವ ಮಹಾಪುರಾಣವಾದರೋ ಶ್ವೇತಾಶ್ವತರ ಶ್ರುತಿಯ ಅನೇಕ ಮಂತ್ರಗಳನ್ನು ನೇರವಾಗಿಯೋ ಅಥವಾ ಸ್ವಲ್ಪ ವ್ಯತ್ಯಾಸಮಾಡಿಕೊಂಡೋ ಬಳಸಿಕೊಂಡಿವೆ. ಈ ಶ್ವೇತಾಶ್ವತರೋಪನಿಷತ್ತು ವೀರಶೈವಕ್ಕೆ ಮುಖ್ಯ ಆಧಾರ. ವಾಯವೀಯ ಸಂಹಿತೆಯಂತೆ ಅತ್ಯಾಶ್ರಮವೆಂದರೆ ಲಿಂಗಧಾರಣವೇ. ವೇದಗಳ ಕಾಲದಲ್ಲಿ ದ್ರಾವಿಡ ಧೈತ್ಯವ್ರಾತ್ಯರಲ್ಲಿ ಪ್ರಚಲಿತವಾಗಿದ್ದ ಲಿಂಗಧಾರೀ ಧರ್ಮದ ಮುನ್ನಡೆಯನ್ನು ಮುಂಡಕ ಶ್ವೇತಾಶ್ವತರ ಉಪನಿಷತ್ತುಗಲ್ಲಿ ಹಾಗೂ ವಾಯವೀಯ ಸಂಹಿತೆಯಲ್ಲಿ ಕಾಣಬಹುದು.

ಆಗಮ ಪುರಾಣಗಳು – ವೀರಶೈವ

ವೇದೋಪನಿಷತ್ತುಗಳ ಕಾಲದಿಂದ ಇಂದಿನವರೆಗೂ ಲಿಂಗಧಾರೀ ಧರ್ಮವು ಉಳಿದುಬಂದುದನ್ನು ನೋಡಿದರೆ, ಕಾಲ ಕ್ರಮದಲ್ಲಿ ಅದು ದುರ್ಬಲವಾದಾಗಲೆಲ್ಲ ಶಿವಾಂಶ ಪುರುಷರು ಹುಟ್ಟಿ ಅದನ್ನು ಪ್ರಬಲೀಕರಿಸಿರಬೇಕು. ನಾಲ್ಕು ಯುಗಗಳಲ್ಲಿಯೂ ಆಚಾರ್ಯ ಪುರುಷರು ಹುಟ್ಟಿ ಈ ಕಾರ್ಯವನ್ನು ಮಾಡಿದರೆನ್ನುವ ಪುರಾಣಾಗಮ ವಾಕ್ಯಗಳಲ್ಲಿ ಇರುವುದು ಈ ಅಭಿಪ್ರಾಯವೇ. ಶಿವನು ಸ್ಥಾವರ ಲಿಂಗಗಲ್ಲಿ ಆಚಾರ್ಯರು ಹುಟ್ಟಬೇಕೆನ್ನುವಾಗ ಅದರ ಉದ್ದೇಶವನ್ನು ಸ್ವಾಯಂಭುವಾಗಮದಂತೆ ಮದ್ಭಕ್ತಿಂ ಸ್ಥಾಪಯಿತ್ವಾ 'ಮಹೀತಲೇ ಮನ್ಮತಂ ಪ್ರಬಲೀ ಕೃತ್ವಾ' ಎಂದು ಹೇಳಿದ್ದಾನೆ. ಶಿವಭಕ್ತಿಯು ನಶಿಸಿ ಹೋಗುತ್ತಿತ್ತು, ಶಿವಭಕ್ತಿಯನ್ನು ಸ್ಥಾಪಿಸ ಬೇಕಾಯಿತು. ವೀರಶೈವ ಮತವು ದುರ್ಬಲವಾಗಿತ್ತು. ಅದನ್ನು ಪ್ರಬಲೀಕರಿಸಬೇಕಾಯಿತು. ಹೊಸ ಹೊಸದಾಗಿ ಮತ್ತೆ ಮತ್ತೆ ಆಚಾರ್ಯರು ಹುಟ್ಟಿದಂತೆಲ್ಲ ಹೊಸ ಮತವನ್ನು ಸ್ಥಾಪಿಸಿದರೆಂಬುದು ಆಗಮಗಳ

---

1. ತಪಃ ಪ್ರಬಾವಾತ್ ದೇವಪ್ರಸಾದಾಚ್ಚ ಬ್ರಹ್ಮಹ ಶ್ವೇತಾಶ್ವತರೋಥ ವಿದ್ವಾನ್
ಅತ್ಯಾಸ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ ಸಮ್ಯಗ್ ಋಷಿಸಂಗಜುಷ್ಟ ॥

– ಶ್ವೇ 6-21

ಅಭಿಪ್ರಾಯವಲ್ಲ. ಸಿದ್ಧಾಂತ ಶಿಖಾಮಣಿಯೆಲ್ಲಾದರೂ ರೇಣುಕಾಚಾರ್ಯರು ಈ ಮತವನ್ನು ಸ್ಥಾಪಿಸಿದರೆಂದು ಹೇಳಿಲ್ಲ. ಅದರಲ್ಲಿ 'ಶೈವಾಗಮೇಷು ಸರ್ವೇಷು ಪುರಾಣೇಷ್ವಖಿಲೇಷು ಚ। ಪುರಾದೇವೇನ ಕಥಿತಂ ದೇವ್ಯೈಃ ತನ್ನಂದನಾಯ ಚ। ತತ್ ಸಂಪ್ರದಾಯ ಸಿದ್ಧೇನ ರೇಣುಕೇನ ಮಹಾತ್ಮನಾ। ಗಣೇಶ್ವರೇಣ ಕಥಿತಮಗಸ್ತ್ಯಾಯ ಪುನಃ ಕ್ಷಿತೌ'॥ ನಿಷ್ಣಾತರಾದ ರೇಣುಕಾಚಾರ್ಯರಿಂದ ಅಗಸ್ತ್ಯರಿಗೆ ಆ ಧರ್ಮದ ಉಪದೇಶವಾಯಿತೆಂದು ಅರ್ಥ. ಈ ಪಂಚಾಚಾರ್ಯರ ಗೋತ್ರ ಪುರುಷರಿಂದ ಶಿವೋಕ್ತವಾದ ಈ ಧರ್ಮವು ಪ್ರಚಾರಕ್ಕೆ ಬಂದಿತೆಂಬುದು ಸ್ಕಾಂದಪುರಾಣದ ನಿಲುವು.[1] ಶಿವನು ಪ್ರಥಮ ಗುರು; ಗುರುಪುತ್ರನಾದ ವೀರಭದ್ರನೂ ಗುರುವೆ. ದಕ್ಷಯಜ್ಞಧ್ವಂಸಿಯಾದ ವೀರಭದ್ರನೇ ಪ್ರಥಮ ವೀರಶೈವನೇನೋ! ಅವನಿಂದಲೇ ಈ ಮತಕ್ಕೆ ವೀರಶೈವವೆಂಬ ಹೆಸರು ಬಂದಿತೇನೋ! ನಂದಿ, ವೃಷಭ ಸ್ಕಂದರ ಮತೋದ್ಧಾರ ಕಾರ್ಯವೂ ಇದರಲ್ಲಿ ಸ್ಮರಿಸಲ್ಪಟ್ಟಿದೆ. ಈ ಮತವು ಸನಾತನವಾದುದೆಂದು ಅಂದೇ ಹೇಳಿರುವುದೂ, ಸ್ಕಂದನೂ ಈ ಮಾತವನ್ನು ಅಗಸ್ತ್ಯನಿಗೆ ಉಪದೇಶಿಸಿದನೆಂದು ಹೇಳಿರುವುದು ಗಮನಾರ್ಹ ವಿಷಯಗಳಾಗಿವೆ. ಬದುಕಿದ್ದಾಗ ಹೇಗೋ ಹಾಗೆಯೇ ಸತ್ತಮೇಲೂ ಲಿಂಗವನ್ನು ಶವದ ಮೇಲೆ ಧರಿಸುವ ಇಂದಿನ ಪದ್ಧತಿಯು ಅಂದು ಇದ್ದುದನ್ನು ಈ ಆಧಾರದಲ್ಲಿ ಸ್ಮರಿಸಿರುವುದೂ ಗಮನಾರ್ಹವೇ.

ವೀರಶೈವವು ವೇದಾಗಮ ಪುರಾಣೋಕ್ತವಾದ ಸನಾತನ ಧರ್ಮವೆಂಬುದೇ ಆಗಮ

---

1. ಕಥಿತಾ ಶಂಕರಣೈವ ಲಿಂಗಸ್ಯಾರ್ಚನ ಸೂಚಕಾಃ।
ಸಂತಿ ರುದ್ರೇಣ ಕಥಿತಾಃ ಶಿವಧರ್ಮಾಸ್ಸನಾತನಾಃ॥
ವೀರಭದ್ರೋಯಥಾರುದ್ರಸ್ತನ್ಯೇ ಚ ಗುರವಃ ಸ್ಮೃತಾ।
ಗುರೋರ್ಜಾತಾಶ್ಚ ಗುರವೋ ವಿಖ್ಯಾತಾ ಭುವನತ್ರಯೇ॥
ಲಿಂಗಸ್ಯ ಮಹಿಮಾನಂ ತು ನಂದೀ ಜಾನಾತಿ ತತ್ತ್ವತಃ
ತಥಾ ಸ್ಕಂದೋಹಿ ಭಗವಾನನ್ಯೇ ತೇ ನಾಮಧಾರಕಾಃ॥
ಯಥೋಕ್ತಾಃ ಶಿವಧರ್ಮಾ ಹಿ ನಂದಿನಾ ಪರಿಕೀರ್ತಿತಾಃ।
ಶೈಲಾದೇನ ಮಹಾಭಾಗಾ ವಿಚಿತ್ರಾ ಲಿಂಗಧಾರಕಾಃ॥
ಶಿವಸ್ಯೋಪು ಲಿಂಗಂ ಚ ಧ್ರಿಯತೇ ಚ ಪುರಾತನೈಃ।
ಲಿಂಗೇನ ಸಹ ಪಂಚತ್ವಂ ಲಿಂಗೇನ ಸಹಜೀವಿತಂ॥
ಏತೇ ಧರ್ಮಾ ಸುಪ್ರತಿಷ್ಠಾಃ ಶೈಲಾದೇನ ಪ್ರತಿಷ್ಠಿತಾಃ।
ಧರ್ಮಃ ಪಾಶುಪತಃಶ್ರೇಷ್ಠಃ ಸ್ಕಂದೇನ ಪ್ರತಿಪಾದಿತಃ॥
ಸ್ಕಂದಾತ್ ತತ್ಸಮನುಪ್ರಾಪ್ತಮಗಸ್ತ್ಯೇನ ಮಹಾತ್ಮನಾ।
ವೀರಮಾಹೇಶ್ವರಾ ಜ್ಞೇಯಾ ಪಾಪಕ್ಷಯಕರಾ ವೃಮಾಂ॥

–ಸಾಕಂದಪುರಾಮಾಂತರ್ಗತ ಕೇದಾರಖಂಡ

ಪುರಾಣಗಳ ನಿಲುವು.[1]. ಜಾತಿಭೇದವನ್ನು ತೊಡೆದುಹಾಕಿ 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ...... ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯಾ' ಎನ್ನುವಬಸವೇಶ್ವರರ ಅನುಯಾಯಿಗಳು ತಾವು ಬ್ರಾಹ್ಮಣರೆಂದು ಹೇಳಿಕೊಳ್ಳುವುದಿಲ್ಲ. ಲಿಂಗಧಾರಿಗಳು ಬ್ರಾಹ್ಮಣರು ಎಂಬ ಆಗಮವಾಕ್ಯಗಳು ಬಸವಪೂರ್ವ ಲಿಂಗಧಾರಿಗಳನ್ನು ಕುರಿತು ಹೇಳಿದವು.[2] ಬಸವೇಶ್ವರನ ಕಾಲದಲ್ಲಿ ಆರಾಧ್ಯಬ್ರಾಹ್ಮಣರಿದ್ದುದು 'ಆರಾಧ್ಯಪ್ರಾಣಲಿಂಗವೆಂದರಿದು' ಎಂದು ಮೊದಲಾಗುವ ಬಸವೇಶ್ವರ ವಚನವೊಂದರಿಂದ ಸಿದ್ಧವಾಗುವುದು. ಬಸವೇಶ್ವರನ ವಿಷಯದಲ್ಲಿ ಭಕ್ತಿಯುಳ್ಳವರಾದರೂ ಬಸವೇಶ್ವರನ ಸಮಕಾಲೀನರಾದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಬ್ರಾಹ್ಮಣ್ಯವನ್ನು ಬಿಡಲೊಪ್ಪದಿದ್ದುದು ಗಮನಾರ್ಹ. 'ಶ್ರೀಮದ್ದಂಡ ಶಿಖೋಪವೀತ ವಿಲಸತ್ ಕೃಷ್ಣಾ ಅಜಿನಾಲಂಕೃತಃ' ಎಂದು ಶ್ರೀಕರಭಾಷ್ಯದಲ್ಲಿ ಹೊಗಳಲ್ಪಟ್ಟ ಏಕೋರಾಮರೂ ಲಿಂಗಯಜ್ಞೋಪವೀತಧಾರಿಗಳೇ. ಇವರೀರ್ವರೂ ಶಿರಿವಾಳಶಾಸನೋಕ್ತ ರೇಣುಕರಂತೆ ಸಪುತ್ರಗೃಹಸ್ಥರು. ಏಕೋ ರಾಮ ಪುರಾಣದಲ್ಲಿ ಹೇಳಿರುವಂತೆ ಏಕೋರಾಮರು ಕಮ್ಮೆಕುಲದ ರಾಮಭದ್ರಾಚಾರ್ಯರ ಪುತ್ರರು. ಯಜ್ಞೋಪವೀತಧಾರಿಯೂ, ಶಿರಸ್ಸಿನಲ್ಲಿ ಲಿಂಗವನ್ನು ಧರಿಸಿದವನೂ ಆದ ಹರಿಹರನ ಸೋದರಳಿಯ ರಾಘವಾಂಕನಿಗೆ ಸಮಾಧಿಯನ್ನು ಕರುಣಿಸಿದ ಲಿಂಗಯಜ್ಞೋಪವೀತಧಾರಿ 'ವೀರಶೈವ ಬ್ರಾಹ್ಮಣೋತ್ತಮ' ಪದ್ಮರಸನತಾಯಿ ಕವಿಚರಿತ್ರೆಯಲ್ಲಿ ಹೇಳಿದಂತೆ 'ಕಮ್ಮೆಕುಲವಲ್ಲಭ ಗೌರಪನಅಕ್ಕನಮಗಳೇ'. ಇಂದರಿಂದ ಕಮ್ಮೆಕುಲದಲ್ಲಿ ಲಿಂಗಯಜ್ಞೋಪವೀತವೆರಡನ್ನೂ ಧರಿಸುವ ಪದ್ಧತಿಯಿದ್ದಿತು ಎಂಬುದು ಸ್ಪಷ್ಟ. ಕಮ್ಮೆಕುಲದ ಹರಿಹರನು ಹೇಳಿದಂತೆ ಈ ಕಮ್ಮೆಕುಲದ ಆರಾಧ್ಯ ಬ್ರಾಹ್ಮಣರ ಪುತರ್ರಾಗಿ ಬಸವೇಶ್ವರರು ಹುಟ್ಟಿ ವೀರಶೈವ ಧರ್ಮವನ್ನು ಸಂಸ್ಕರಿಸಿದರು.

ಯಮ ನಿಯಮ ಸ್ವಾಧ್ಯಾಯ ಧ್ಯಾನ ದಾರಣ ಮೌನಾನುಷ್ಠಾನ ಜಪತಪ ಸಮಾಧಿಶೀಲಗುಣಸಂಪನ್ನರಾಗಿಯೂ, ಋಕ್‌ಯಜುಸ್ಸಾಮಾಥರ್ವವೇದವೇದಾಂಗಾದಿಗಳನ್ನು ಕಲಿಸುವ ವಿದ್ಯಾಕೇಂದ್ರಗಳ ಅಧಿಪತಿಗಳೂ, ಸಕಲಾಗಮಾಚಾರ್ಯರೂ ಆಗಿ

---

1. ವೇದೇಷು ಶಾಸಂಘೇಷು ಪುರಾಣೇಷ್ವಾಗಮೇಷು ಚ।
ಲಿಂಗಧಾರಣಮಾಖ್ಯಾತಂ ಬ್ರಾಹ್ಮಣಸ್ಯ ಷುನಿಶ್ಚಿತಾತ್ ॥ -ಲಿಂಗಪುರಾಣ
ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ।
ಲಿಂಗಧಾರಣಮಾಖ್ಯಾತಂ ವೀರಶೈವಶ್ಚ ನಿಶ್ಚಯಾತ್ ॥ -ಸಿದ್ಧಾಂತಶಿಖಾಮಮಣಿ

2. ಮುಖೇ ಮಂತ್ರೋ ಹೃದಿ ಧ್ಯಾನಂ ಮಸ್ತಕೇ ಲಿಂಗಧಾರಣಂ।
ಶಿಖಾರುದ್ರಾಕ್ಷಭಸ್ಮಾನಿ ಇತಿ ಬ್ರಾಹ್ಮಣಲಕ್ಷಣಂ। ಗೌತಮ ಸ್ಮೃತಿ
ಬ್ರಾಹ್ಮಣಾ ವೀರಶೈವಸ್ಥಾಃ ಶಿಖಾಯಜ್ಞೋಪವೀತಿನಃ।
ಲಿಂಗರುದ್ರಾಕ್ಷ ಭಸ್ಮಾಂಕಾ ಬ್ರಹ್ಮಕರ್ಮಸಮಾಶ್ರಿತಾಃ ॥ - ಪಾರಮೇಶ್ವರಾಗಮ

ಅನೇಕ ಶತಮಾನಗಳಿಂದಲೂ ರಾಜಮಹಾರಾಜರುಗಳಾಗಿಯೂ ಇದ್ದ, ಶಾಸನೋಕ್ತರಾದ ಮಾಹೇಶ್ವರರ ಉಚ್ಛ್ರಾಯ ಕಾಲದಲ್ಲಿ ಹುಟ್ಟಿದರು ಭಕ್ತಿಭಂಡಾರಿ ಬಸವೇಶ್ವರರು. ಅತ್ಯುತ್ತಮವಾದ ಸಂಪ್ರದಾಯಗಳೊಡನೆ, ಯಜ್ಞಯಾಗಾದಿ ಘೋರಕರ್ಮಗಳೂ, ಶಾಕ್ತರ ಅತಿಮಾರ್ಗಿಕ ದುರಾಚಾರಗಳೂ ವರ್ಣವ್ಯತ್ಯಾಸಗಳೇ ಮೊದಲಾದ ದೋಷಗಳು ಸೇರಿಕೊಂಡಿದ್ದ ಪಾಶುಪತ ಕ್ಷೇತ್ರದಲ್ಲಿ ಈ ದೋಷಗಳೆಂಬ ಕಳೆಗಳನ್ನು ಕಿತ್ತೊಗೆದು ಶಿವೈಕನಿಷ್ಠೆ, ಲಿಂಗಪೂಜೆ, ಲಿಂಗಧಾರಣೆ ಸದಾಚಾರ ಮೊದಲಾದ ಸದ್ಗುಣಗಳ ಬೆಳೆಗಳನ್ನು ಉಳಿಸಿ ಬೆಳೆಸಿದರು ಈ ಮಹನೀಯರು. ಆಗಮಗಳಲ್ಲಿ ಕ್ವಚಿತ್ತಾಗಿ ಉಪಯೋಗಿಸಲ್ಪಡುತ್ತಿದ್ದ 'ವೀರಶೈವ' ಎಂಬ ಅಭಿಧಾನದಿಂದ ಬೆಳೆದುಬಂದ ಬಸವೇಶ್ವರರಿಂದ ಸಂಸ್ಕರಿಸಲ್ಪಟ್ಟ ಈ ಧರ್ಮಕ್ಕೆ ವಿವಿಧ ಮತದ ವಿವಿಧ ದೇಶದ ಲಕ್ಷೋಪಲಕ್ಷ ಜನರು ಸೇರಿಕೊಂಡುದೂ, ಶ್ರೀಶೈಲ, ಪಂಚವಣ್ಣಿಗೆ ಮೊದಲಾದ ಅನೇಕ ಪಾಶುಪತ ಮಠಗಳು ಸಂಸ್ಕರಿಸಿದ ವೀರ ಶೈವದ ಮಠಗಳಾದುದೂ ವಿಮರ್ಶಕರು ನಿರ್ಧರಿಸಿರುವ ವಿಷಯಗಳಾಗಿವೆ.

ಪಾಶುಪತರಲ್ಲಿ ಲಿಂಗ ರುದ್ರಾಕ್ಷ ಭಸ್ಮಗಳನ್ನು ಧರಿಸುವ ವೈದಿಕರೂ[1] ತಪ್ತ ಲಿಂಗಮುದ್ರೆಯನ್ನು ಧರಿಸುತ್ತಿದ್ದ ತಾಂತ್ರಿಕರೂ, ಶಿವನೊಡನೆ ಇತರ ದೇವತೆಗಳನ್ನು ಸೂಚಿಸುವ ಮಿಶ್ರಶೈವರೂ ಇದ್ದಂತೆ ಕೂರ್ಮಪುರಾಣದಿಂದ ತಿಳಿದುಬರುತ್ತದೆ. ಪಾಶುಪತ ಗುರುಗಳಲ್ಲಿ ಗೃಹಸ್ಥರೂ ಸಂನ್ಯಾಸಿಗಳೂ ಇರುವುದಾಗಿಯೂ, ಇವರಲ್ಲಿ ಸಂನ್ಯಾಸಿಗಳು ಶ್ರೇಷ್ಠರೆಂದು, ಇವರು ತೋಳಿನಲ್ಲಾಗಲೀ, ತಲೆಯಲ್ಲಾಗಲೀ, ಜಟೆಯೊಳಗಾಗಲೀ ಲಿಂಗವನ್ನು ಧರಿಸುವವರೆಂದೂ ಹರಿಭದ್ರಸೂರಿಯೆಂಬ ಜೈನನ ಷಡ್ದರ್ಶನ ಸಮುಚ್ಚಯದಲ್ಲಿ ಹೇಳಿದೆ. ಸಾಯಣ ಮಾಧವ ಪ್ರಣೀತ ಸರ್ವದರ್ಶನ ಸಂಗ್ರಹದಲ್ಲಿ ಪಾಶುಪತರ ವಿಷಯವಾಗಿ 'ಅನುಸ್ನಾನ ನಿರ್ಮಾಲ್ಯ ಲಿಂಗಧಾರೀತಿ' ಎಂದು ಹೇಳಿದೆ. ಡಾ॥ ಭುಡಾರ್ಕರ್ ಅವರು, ಪಾಶುಪತರು ಲಿಂಗವನ್ನೂ ಅದರ ಮೇಲೆ ಪೂಜಾಕಾಲದಲ್ಲಿ ಧರಿಸಿದ ಪತ್ರೆ ಪುಷ್ಪಗಳನ್ನೂ ಧರಿಸಿಕೊಳ್ಳುವರೆಂದು ಅವರು ಶೈವ ವೈಷ್ಣವಾದಿ ಮತ ವಿಷಯಕ ಗ್ರಂಥದಲ್ಲಿ ಹೇಳಿದ್ದಾರೆ. ಶಂಕರವಿಜಯದಲ್ಲಿ 'ಶಿರಸಿ ಪಾಷಾಣಲಿಂಗಂ ಚ ಧಾರಿಣಃ ಜಂಗಮಾಃ, ಲಲಾಟೇ ಭುಜದ್ವಯೇ ಹೃನ್ನಾಭಿಷು ಲಿಂಗಧಾರಿಣಃ ಪಾಶುಪತಾಃ' ಎಂದು ಹೇಳಿದೆ. ಇವೆಲ್ಲಕ್ಕೂ ಮಿಗಿಲಾಗಿ ಪಾಶುಪತ ಸೂತ್ರಗಳ ಪ್ರಥಮಾಧ್ಯಾಯದಲ್ಲಿಯೇ 'ಲಿಂಗಧಾರೀ' ಎಂಬ ಸೂತ್ರವಿದೆ. ಇದರ ಕೌಂಡಿನ್ಯ ಭಾಷ್ಯದಲ್ಲಿ 'ಲಿಂಗಂ ತದ್‌ಧಾರಯನ್ ಲಿಂಗಧಾರೀ ಭವತಿ, ದಂಡಧಾರಿ ವತ್ ಇತ್ಯರ್ಥಃ' ಎಂದು ಹೇಳಿದೆ. ದಂಡವನ್ನು ಧರಿಸಿದವನು ದಂಡಧಾರಿ ಹೇಗೆಯೋ ಹಾಗೆಯೇ ಲಿಂಗವನ್ನು ಧರಿಸಿದವನು ಲಿಂಗಧಾರೀ ಎಂಬುದು ಸೂತ್ರದ ಅರ್ಥವೆಂಬುದನ್ನು ಈ ಭಾಷ್ಯವು ಸ್ಪಷ್ಟಮಾಡುತ್ತದೆ.

---

1. ಲಿಂಗ ರುದ್ರಾಕ್ಷ ಭಸ್ಮಾದಿ ಧಾರಣಂ ವೈದಿಕಂ ಭವೇತ್

ಬಸವೇಶ್ವರ ಪೂರ್ವಯುಗದಲ್ಲಿ ಲಿಂಗಧಾರಿ ಮಾಹೇಶ್ವರರಿದ್ದುದರಲ್ಲಿ ಸಂದೇಹವೇ ಇಲ್ಲ. ಬಸವೇಶ್ವರರಿಂದ ಸಂಸ್ಕರಿಸಲ್ಪಟ್ಟ ಆ ಧರ್ಮವೇ ಇಂದಿನ ವೀರಶೈವ. ಶಿರಸ್ಸಿನಲ್ಲಿ ಲಿಂಗವನ್ನು ಧರಿಸಿದ ಬಸವೇಶ್ವರ ಪೂರ್ವಲಿಂಗಧಾರಿ ಧರ್ಮದವರು ಮಾಹೇಶ್ವರರೆಂದೋ, ಪರಮ ಮಾಹೇಶ್ವರರೆಂದೋ ಕರೆದುಕೊಳ್ಳುತ್ತಿದ್ದರು. ಬಸವರಾಜದೇವರ ರಗಳೆಯಲ್ಲಾಗಲೀ ಸಿದ್ಧರಾಮ ಪುರಾಣದಲ್ಲಾಗಲೀ ವೀರಶೈವ ಪದವು ಕಂಡುಬರುವುದಿಲ್ಲ. ಮಾಹೇಶ್ವರರ ಜಂಗಮ ಪದಗಳಿಂದ ಲಿಂಗಧಾರಿಗಳು ಉಕ್ತರಾಗಿದ್ದಾರೆ. ಆರನೆಯ ವಿಕ್ರಮಾದಿತ್ಯನ ಮಗಳ ಮಗ ಪೆಮ್ಮಡಿರಾಯನು ಮಾಹೇಶ್ವರ ಬಿರುದಾಂಕಿತನು (Q.J.M.S. v. No. 1/Page 26) ಇದೇ ಆಧಾರದಲ್ಲಿ ಉಕ್ತರಾದ ಚಂದ್ರಭೂಷಣ ಪಂಡಿತರು 'ಶಿವಪಾದಾಂಬುರುಹ ಶೇಖರರು ಗೋಳಕೀಮಠದ ವೀರಶೈವ ಕಾಕತೀಯರಾಜರ ದೀಕ್ಷಾಗುರು ವಿಶ್ವೇಶ್ವರ ದೇಶಿಕರು ಕ್ರಿ. ಶ. 1261ನೆಯ ಇಸವಿಯ ಮಲ್ಕಾರಪುರ ಶಾಸನದಂತೆ 'ಮಹೀಸುರರು ಎಂದರೆ ಬ್ರಾಹ್ಮಣರು ಮತ್ತು ವೀರಶೈವಾಚಾರ್ಯ ಶತೈರ್ವೃತರು' ವೀರಶೈವ ಪದವಿರುವ ಮೊದಲನೆಯ ಶಾಸನವಿದು. ಗೋಳಕೀಮಠದ ಈಶಾನಗುರುವಿನ ಶಿಷ್ಯನಾದ ರಾಜರಾಜಚೋಳನು 'ಶಿವಪಾದಶೇಖರ'. ಷಿಖಾರಿಪುರದ 110 ಮತ್ತು 130ನೆಯ ಶಾಸನಗಳಲ್ಲಿ ಭುವನೈಕಮಲ್ಲದೇವನು 'ಪನ್ನಗರಾಜ ಭೂಷಣ ಪದಾಬ್ಜಶೇಖರ'ನೆಂದು ಉಕ್ತನಾಗಿದ್ದಾನೆ. 'ಶಿವಪಾದಶೇಖರರು ಮಹೇಶ್ವರ ಗಣರು' ಸೊರಬ 348ನೇ ಶಾಸನದಲ್ಲಿ ಉಕ್ತರಾಗಿದ್ದಾರೆ. ಇವರು ಕಾಶ್ಯಪ ಗೋತ್ರದವರು. ಕ್ರಿಸ್ತಶಕೆಯ ಮೊದಲ ದಶಕದಲ್ಲಿ ಕಂಚಿಯಲ್ಲಿ ಆಳುತ್ತಿದ್ದ ಪಲ್ಲವ ರಾಜರು ತಲೆಯಲ್ಲಿ ಲಿಂಗವನ್ನು ಧರಿಸುತ್ತಿದ್ದರು; ಇವರಲ್ಲಿ 'ಮಹಾ ಮಹೇಶ್ವರ ಬಿರುದಾಂಕಿತ ಮಹೇಂದ್ರವರ್ಮ ಗುಣಭದ್ರನು' ಅತ್ಯಂತ ಪ್ರಸಿದ್ಧನು. ಇವರು ಬಸವಪೂರ್ವಲಿಂಗಧಾರೀಧರ್ಮದವರೆಂಬುದು ಶಾಸನಇಲಾಖೆಯ ಪ್ರಮುಖಾಧಿಕಾರಿ ಕೃಷ್ಣಶಾಸ್ತ್ರಿಗಳ ಲೇಖನದಿಂದ ತಿಳಿಯುವುದು.

The adjunctಮಹೇಶ್ವರ ಶಿಖಾಮಣಿ ದೀಪ್ತಮೌಳಿ1. which occurs in these verses and which literally Rendered means one whose diadem shines with the head -jewel viz Maheshvara (Siva) is rather

---

1. ಯಃ ಪಲ್ಲವಾನ್ವಯ ಕುಲಾಚಲ ರಾಜಸಿಂಹೋ।
ಯಃ ಕ್ಷತ್ರಸಿಂಹ ಇತಿ ವಿಶ್ರುತ ಪುಣ್ಯಕೀರ್ತಿಃ॥
ಜೀಯಾನ್ಮಹೇಶ್ವರ ಶಿಖಾಮಮಣಿ ದೀಪ್ತಮೌಲಿ।
ಯುರ್ದ್ಧಾರ್ಜುನೋ ಸ ಖಲು ಲೋಕ ನರೇಂದ್ರಸಿಂಹಃ॥

perplexing. Comparing this with titles like Sivachudamani1 etc., which occurs in South Indian Inscriptions Vol. I. Nos. 18 & 19 all with reference to Rajasimha, it looks as if the king did actually wear a figure of Siva or rather his symbol linga on his head. The fact is also evidently hinted in the verse 'Yasyan gustabharakranta 2 etc., (I bid No. 33 V. 2) which refers to the convernsion of the Pallava King Mahendra varman. i Gunabhara from Jainsmto Saivism. Again V. 4 of No. 34 in the same Volume speaks of 'Siva fixed in the mind beign worn on the head. all these references clearly points to the the existence of a ling cult long before the revival of the veerasaiva faith under the auspicies of the famous Kalachur Minister basava (Channabasava in which the wearing of Linga plays a prominent part).

ಬಸವೇಶ್ವರರ ಕಾಲದಲ್ಲಿ ಪರಿಪೂರ್ಣತೆಯನ್ನು ಪಡೆದ ವೀರಶೈವ ಮಹಾವೃಕ್ಷವು ಪಲ್ಲವಿಸಿ, ಹೂತು ಫಲಪುಷ್ಪಗಳಿಂದ ರಾರಾಜಿಸುತ್ತಲಿದ್ದುದು ಹನ್ನೆರಡನೆಯ ಶತಮಾನದ ಅನಂತರವೇ ಆದರೂ ಅದು ಅಂದಂದು ಅವತರಿಸಿದ ಆಚಾರ್ಯ ಮಹಾಮಹೇಶ್ವರ ರಾಜಮಹಾರಾಜ ರಾಜಗುರುಗಳಿಂದಲೂ ಪರಿಪೋಷಿತವಾಗಿ ಬೆಳೆದುಬಂದಿದ್ದಿತೆಂಬುದೂ ಆದಿಮಾನವನ ಕಾಲದಲ್ಲಿಯೇ ಮೊಳಕೆಯೊಡೆದು ಚಿಗುರಿನಿಂದ ಸಸಿಯಲ್ಲಿಯೇ ಈ ಮಹಾವೃಕ್ಷದ ಲಕ್ಷಣಗಳಿದ್ದವೆಂಬುದೂ ಗಮನಾರ್ಹ.

(ಕೃಪೆ : 'ದರ್ಶನ ದೀಪ್ತಿ' ಸಂ. ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು ಶಿವಾದ್ವೈತ ತತ್ವ ಪ್ರಚಾರ ಕೇಂದ್ರ ಗುರುಕುಮಾರಾಶ್ರಮ ಗಿರಿಯಾಪುರ ಪ್ರ : 1973)

---

1. ರಾಜಸಿಂಹೋ ರಣಜಯಃ ಶ್ರೀಧರಶ್ಚಿತ್ರಕಾರ್ಮುಕಃ।
ಏಕವೀರಶ್ಚಿರಂ ಪಾತು ಶಿವಚೂಡಾಮಣಿರ್ಮಹಿಂ॥

2. ಯಸ್ಯಾಂಗುಷ್ಠ ಭರಾಕ್ರಾಂತಃ ಕೈಲಾಸಂ ಸ ದಶಾನನಃ।
ಪಾತಾಲಮಗಮನ್ಮೂರ್ಧ್ನಾ ಶ್ರೀನಿಧಿ ಸ್ತಂಭಭರ್ತ್ಯಜಂ॥
ಅಭಿಷಿಕ್ತ ಜಲಾಪೂರ್ಣೇ ಚಿತ್ರರತ್ನಾಂಬುಜಾಕರೇ।
ಆಸ್ತೇ ವಿಶಾಲಸುಮುಖಿಃ ಸಿರಸ್ಸರಸಿ ಶಂಕರಃ॥

ಶಿವಾಗಮಗಳಲ್ಲಿ ವೀರಶೈವ ಧರ್ಮ, ಮತ್ತು ಸಂಸ್ಕೃತಿ

ಷಣ್ಮುಖಯ್ಯ ಅಕ್ಕೂರಮಠ

ಭಾರತೀಯ ಸಂಸ್ಕೃತಿಯಲ್ಲಿ ವೈದಿಕ ಹಾಗೂ ಆಗಮಿಕ ಸಂಸ್ಕೃತಿಗಳೆಂಬ ಎರಡು ಪ್ರವಾಹಗಳು ಪ್ರಧಾನವಾಗಿವೆ. ಎರಡೂ ಪರಂಪರೆಗಳು ಪ್ರಾಚೀನ. ವೇದಾಗಮ, ನಿಗಮಾಗಮ ಎಂದು ರೂಢಿಯಲ್ಲಿ ಅವುಗಳನ್ನು ಒಟ್ಟಿಗೆ ಕರೆಯುವ ಪದ್ಧತಿ ಇದೆ. ಆದ್ದರಿಂದ ಭಾರತೀಯ ಸಂಸ್ಕೃತಿ ನಿಗಮಾಗಮ ಸಂಸ್ಕೃತಿ.

ವೇದವೆಂದರೆ ಜ್ಞಾನ. ಆಗಮವೆಂದರೆ ಅನುಷ್ಠಾನ. ವೇದವೆಂದರೆ ಅರಿವು. ಆಗಮ ಅದರ ಅನ್ವಯ. ದೇವಾಲಯ ಸಂಪ್ರದಾಯ, ಮೂರ್ತಿ ಕಲ್ಪನೆ, ಪೂಜಾವಿಧಾನ, ಇಷ್ಟಲಿಂಗ ಪೂಜಾಪದ್ಧತಿ ಇವು ವೈದಿಕವಲ್ಲ; ಆಗಮದ ನೆಲೆಯಿಂದಲೇ ಮೂಡಿ ಬಂದವು. ನಂತರ ವೈದಿಕ ಮಂತ್ರಗಳನ್ನು, ವೈದಿಕ ಕಲ್ಪನೆಗಳನ್ನು ಅಳವಡಿಸಿಕೊಂಡವು. ಶೈವ, ವೈಷ್ಣವ, ಶಾಕ್ತ ಪಂಥಗಳ ಆಗಮ ಸಾಹಿತ್ಯ ವಿಪುಲವಾಗಿದೆ. ಶೈವಾಗಮಗಳನ್ನು ಕುರಿತು ಸಾಕಷ್ಟು ವಿವೇಚನೆ ನಡೆದಿದೆ. ಇದೇ ಸಂಪ್ರದಾಯಕ್ಕೆ ಸೇರಿದ ವೀರಶೈವಾಗಮಗಳ ಬಗ್ಗೆ ಹೆಚ್ಚು ವಿವೇಚನೆ ನಡೆದಿಲ್ಲ. ವಿದ್ವಜ್ಜನರ ಗಮನ ಅಷ್ಟಾಗಿ ಈ ಕಡೆ ಹರಿಯಲಿಲ್ಲ.

ವೀರಶೈವ ಆಗಮಗಳನ್ನು ಕುರಿತು ಈಗ ನಮಗೆ ಉಪಲಬ್ಧವಿರುವ ಆಗಮ ಸಾಹಿತ್ಯವೆಂದರೆ ಹುಬ್ಬಳ್ಳಿಯ ಮೂರುಸಾವಿರ ಮಠದ ಪ್ರಕಟಣೆ 'ತಂತ್ರ ಸಂಗ್ರಹ' (1914). ಇದರಲ್ಲಿ ವಾತು ಲಾಗಮ ದೇವೀಕಾಲೋತ್ತರ, ಸೂಕ್ಷ್ಮಾಗಮ ಪಾರಮೇಶ್ವರಾಗಮಗಳಿವೆ. ಇವು ಪೂರ್ಣ ರೂಪದಲ್ಲಿಲ್ಲ. ಪಂಡಿತ ಕಾಶೀನಾಥ ಶಾಸ್ತ್ರಿಗಳು ಸೂಕ್ಷ್ಮಾಗಮ, ಪಾರಮೇಶ್ವರಾಗಮ, ಮಕುಟಾಗಮ, ಕಿರಣಾಗಮ, ಚಂದ್ರಜ್ಞಾನಾ ಗಮಗಳನ್ನು ಪ್ರಕಟಿಸಿದ್ದಾರೆ. ಸೊಲ್ಲಾಪುರದವಾರದ ಮಲ್ಲಪ್ಪನವರು (1905) ಸ್ವಯಂಭುವ, ಸುಪ್ರಭೇದ ಹಾಗೂ ಪಾರಮೇಶ್ವರಾಗಮಗಳನ್ನು ಪ್ರಕಟಿಸಿದ್ದಾರೆ. ಡಾ:ನಂದೀಮಠ ಅವರು ಆಗಮಗಳ ಮೇಲೆ ಮಹಾಪ್ರಬಂಧ ರಚಿಸಿದ್ದಾರೆ. ಅವರು ನೇಪಾಳದ ದರ್ಬಾರ್ ಲೈಬ್ರರಿಯಲ್ಲಿ ಆಗ ಮಗಳ ಹಸ್ತಪ್ರತಿಗಳುಂಟೆಂದು ತಿಳಿಸುತ್ತಾರೆ. ವಿದ್ಯಾವಾಚಸ್ಪತಿ ಶಂಭುಲಿಂಗ ಶಿವಾಚಾರ್ಯರ ಪುಸ್ತಕ 'ಆಗಮ ಪರಿಜ್ಞಾನ' ಆಗಮಗಳ ಮೇಲೆ ಬೆಳಕು ಚೆಲ್ಲುತ್ತದೆ. ಕಾಶೀ ಮಹಾವಿದ್ವಾಂಸರಾದ ಗೋಪೀನಾಥ ಕವಿರಾಜರ Some aspects of Indian

Philosophy ಗ್ರಂಥವು ಶೈವಾಗಮಗಳನ್ನು ಕುರಿತು ಬರೆದ ಪ್ರೌಢ ಪ್ರಬಂಧ. ಕರ್ನಾಟಕ ಖ್ಯಾತ ವಿದ್ವಾಂಸರಾದ ಸಿದ್ಧರಾಮಪ್ಪ ಪಾವಟೆ ಅವರು ಬರೆದ Veerashaiva Philosophy of the Shivagams ಕೃತಿ ಚಿಕ್ಕದಾದರೂ, ಅತ್ಯಂತ ಮಹತ್ವಪೂರ್ಣವಾಗಿದೆ. ಡಾ: ಎಚ್. ಪಿ. ಮಲ್ಲೇದೇವರು ಬರೆದ Shivagamas and Upanishats ಮಹಾಪ್ರಬಂಧ ಮೌಲಿಕವಾದುದು. ಡಾ: ಆರ್. ಆರ್. ದಿವಾಕರ ಅವರ ವಚನಶಾಸ್ತ್ರ ರಹಸ್ಯ ಎನ್ನು ಗ್ರಂಥದಲ್ಲಿ 10ನೆಯ ಪ್ರಕರಣವು ಶಿವಾಗಮಗಳ ಹಾಗೂ ವಚನ ಶಾಸ್ತ್ರದ ತೌಲನಿಕ ಅಧ್ಯಯನ. ಪ್ರೊ : ಎಂ. ಆರ್. ಸಾಖರೆಯವರು ಲಿಂಗಧಾರಣ, ಚಂದ್ರಿಕೆಗೆ ಬರೆದ ವಿದ್ವತ್ ಪೂರ್ಣವಾದ ಮುನ್ನುಡಿ, ವಿವೇಕ ಚಿಂತಾಮಣಿಯ ಆಗಮ ಪಾದದಲ್ಲಿ ಬರುವ ಆಗಮದ ವಿಚಾರ ಡಾ : ಜ.ಚ.ನಿ ಅವರು ಬರೆದ ಶಿವಾಗಮ ಸಾಹಿತ್ಯ, ಶಿವಾಗಮಗಳಲ್ಲಿ ವೀರಶೈವ ಧರ್ಮ ಹಾಗೂ ಸಂಪಾದಿಸಿದ ವೀರಾಗಮ ಬೃಹತ್ ಕೃತಿ. ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು ಸಂಪಾದಿಸಿದ 'ಶಿವಾಗಮ ಸೌರಭ' ಮೈಸೂರು ಪ್ರಾಚ್ಯ ವಿದ್ಯಾಸಂಸ್ಥೆಯವರು ಪ್ರಕಟಿಸಿದ ವಾತುಲ ಶುದ್ಧಾಗಮ 11 ಹಾಗೂ ವೀರಾಗಮೊತ್ತರಮ್ 1. ಗುಬ್ಬಿ ಮಲ್ಲಣಾರ್ಯರ ವಾತುಲಾಗಮದ ಟೀಕೆಯು ಹಸ್ತಪ್ರತಿ ಕರ್ನಾಟಕ ವಿಶ್ವವಿದ್ಯಾಲದ ಹಸ್ತ ಪ್ರತಿ ಭಂಡಾರದಲ್ಲಿದೆ. ಇಷ್ಟು ಸಾಹಿತ್ಯ ಸಾಮಗ್ರಿ ಶಿವಾಗಮಗಳಲ್ಲಿ ವೀರಶೈವ ಧರ್ಮ, ತತ್ತ್ವ, ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವವರಿಗೆ ಉಪಲಬ್ಧವಿದೆ. ಕುಂಭಕೋಣಂ, ತಂಜಾವೂರು ಗ್ರಂಥ ಭಂಡಾರಗಳಲ್ಲೂ ಕೆಲವು ಆಗಮಗಳು ದೊರೆಯುತ್ತವೆ ಎಂದು ಸಂಶೋಧಕರ ಅಭಿಪ್ರಾಯ.

ಶಿವಾಗಮಗಳು ವೀರಶೈವ ಸಿದ್ಧಾಂತಕ್ಕೆ ಅಡಿಗಲ್ಲುಗಳು. ಎಲ್ಲ ಆಗಮಗಳೂ ಸಂಪೂರ್ಣವಾಗಿ ದೊರೆತಿದ್ದರೆ ವೀರಶೈವ ದರ್ಶನದ ಬೆಳವಣಿಗೆಗೆ ತುಂಬ ಸಹಾಯಕವಾಗುತ್ತಿತ್ತು. ವೀರಶೈವ ದಾರ್ಶನಿಕರು, ಆಚಾರ್ಯರು, ವಚನಕಾರರು, ಪುರಾಣಕಾರರು ಹಾಗೂ ಕವಿಗಳು ಆಗಮ ವಾಕ್ಯಗಳನ್ನು ತಮ್ಮ ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿರುವುದರಿಂದ ವೀರಶೈವ ಧರ್ಮದ ಪ್ರಾಚೀನತೆಗೆ, ಪರಿಪೂರ್ಣತೆಗೆ ಸಾಕಷ್ಟು ಸಹಾಯವಾಗಿದೆ. ವೀರಶೈವ ವಿದ್ವಾಂಸರು ಆಗಮ ಸಾಹಿತ್ಯದ ಕಡೆಗೆ ಲಕ್ಷ್ಯಕೊಟ್ಟು ಸಹೃದಯತೆಯಿಂದ ಅಧ್ಯಯನ ಮಾಡಿ ಈ ಸಾಹಿತ್ಯವನ್ನು ಕುರಿತು ಕೃತಿಗಳನ್ನು ರಚಿಸಿ ಪ್ರಚಾರಕ್ಕೆ ತಂದರೆ ಕೇವಲ ವೀರಶೈವ ದಾರ್ಶನಿಕ ಸಾಹಿತ್ಯ ಕ್ಕಷ್ಟೇ ಅಲ್ಲ, ಜಗತ್ತಿನ ದಾರ್ಶನಿಕ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದಂತಾಗುತ್ತದೆ.

ಶಿವಾಗಮಗಳಲ್ಲಿ ಶೈವ, ವೀರಶೈವ ಎರಡೂ ತತ್ವಗಳಿವೆ. ಕಾರಣ, ವೀರಶೈವ ಶೈವ ಧರ್ಮ ವೃಕ್ಷದ ಒಂದು ಶಾಖೆ. ಶೈವ ವಿಭಾಗಕ್ಕೆ ಸೇರಿದ ಒಂದು ಪ್ರಭೇದ. ಶೈವ ಸಂತಾನ. ಇಂದು ಎಲ್ಲರನ್ನೂ ಸಾರಾಸಗಟಾಗಿ ಹಿಂದುಗಳೆಂದು ಕರೆಯುವಂತೆ, ಹಿಂದೆ ಶೈವಧರ್ಮದ ಬೇರೆ ಬೇರೆ ಶಾಖೆಯವರನ್ನು ಒಟ್ಟಾಗಿ ಶೈವರೆಂದೇ ಕರೆಯುತ್ತಿದ್ದರು. ಮೊದಲು ವೀರಶೈವಕ್ಕೆ

ಶೈವಗ್ರಂಥಗಳೇ ಪಠ್ಯಪುಸ್ತಕಗಳಾಗಿದ್ದವು. ವೀರಶೈವರು ಶಿವನ ವರ್ಗದವರು. ಅವರ ಇಷ್ಟ ಲಿಂಗವೂ ಶಿವ. ಶಿವಸ್ತೋತ್ರ, ಶಿವಪಾರಾಯಣ, ಶಿವಧ್ಯಾನ, ವೀರಶೈವರಿಗೆ ಮಾನ್ಯ. ವೀರಶೈವರು ಜಪಿಸುವ ಮಂತ್ರ ಶಿವಪಂಚಾಕ್ಷರಿ (ನಮಃ ಶಿವಾಯ). ಹೀಗಾಗಿ ಶೈವಕ್ಕೂ, ವೀರಶೈವಕ್ಕೂ ಅವಿನಾಭಾವ ಸಂಬಂಧ. ಆದ್ದರಿಂದ ಶಿವಾಗಮಗಳಲ್ಲಿ ಎರಡು ಸಂಸ್ಕೃತಿಗಳ ವಿಚಾರಧಾರೆಯನ್ನು ಕಾಣುತ್ತೇವೆ. ಪೂರ್ವಭಾಗದಲ್ಲಿ ದೇವಾಲಯದ ಸಂಸ್ಕೃತಿ, ಉತ್ತರ ಭಾಗದಲ್ಲಿ ಇಷ್ಟಲಿಂಗ ಸಂಸ್ಕೃತಿಗಳನ್ನು ಕಾಣುತ್ತೇವೆ. ಒಂದಕ್ಕೊಂದು ಪರಸ್ಪರ ವಿರೋಧದಂತೆ ಕಂಡರೂ, ಒಂದು ಹಳೆಯದು ಇನ್ನೊಂದು ಹೊಸದು. ದೇವಾಲಯ ಸಂಸ್ಕೃತಿಯ ವಿಕಾಸ ರೂಪವೇ ಇಷ್ಟಲಿಂಗ ಸಂಸ್ಕೃತಿ. ಹಳೆಯದನ್ನು ಸ್ಥಾವರಲಿಂಗ ಎಂದು ಕರೆದ ಆಗಮಕಾರರು, ಇಷ್ಟಲಿಂಗವನ್ನು 'ಜಂಗಮಲಿಂಗ'ವೆಂದು ಅರ್ಥಪೂರ್ಣವಾಗಿ ಕರೆದಿದ್ದಾರೆ.

'ಆಗಮ' ಎಂದರೇನು ?

ಆಗಮ ಶಬ್ದಕ್ಕೆ ಬರು ಎಂದು ಅರ್ಥ. ಗಮ್ ಧಾತುಆಜ್ ಉಪಸರ್ಗ ಸೇರಿ ಆ + ಗಮ ಎಂದರೆ ಪೂರ್ಣಜ್ಞಾನ ಎಂದು ಅರ್ಥ. ಆಗಮಗಳು ಪರಮಾತ್ಮನ ವಾಣಿ ಎನ್ನುವ ನಂಬಿಕೆ ಇದೆ. ತಂತ್ರ ಎನ್ನುವ ಇನ್ನೊಂದು ಹೆಸರೂ ಇದೆ. ತನುತೆ ವಿಸ್ತಾರ್ಯತೆ ಜ್ಞಾನಂ ಅನೇನ ತ್ರಾಯತೇ ತಂತ್ರಮ್. ಜ್ಞಾನ ವಿಕಾಸವಾಗಿ ಮನುಷ್ಯನ ಉದ್ಧಾರ ಸಾಧ್ಯ ಎನ್ನುವ ಅರ್ಥದಲ್ಲಿ ತಂತ್ರ ಎಂದು ಹೆಸರು. ಶಿವ-ಶಕ್ತಿಗಳನ್ನು ಉಪಾಸಿಸುವ ಪೂಜಾ ವಿಧಾನವೂ ತಂತ್ರವೆ. ವೈದಿಕೀ ತಾಂತ್ರಿಕೀ ಚೈವ ದ್ವಿಧಾ ಶೃತಿ ಕೀರ್ತಿತಾ (ಮನುಸ್ಮೃತಿ ವ್ಯಾಖ್ಯಾನ) ವೇದಗಳಂತೆ ಆಗಮಗಳೂ 'ಶೃತಿ' ಎನ್ನುವ ಗೌರವಕ್ಕೆ ಪಾತ್ರವಾಗಿವೆ. ಈಶಾನ್ಯ ಶಿವಾಚಾರ್ಯರು ತಮ್ಮ ಪದ್ಧತಿ ಗ್ರಂಥದಲ್ಲಿ 'ಶಿವಾಗಮಾಶ್ಚ ವೇದಾಶ್ಚ ನಿತ್ಯ ಏವ ಪ್ರಮಾಣತಃ' ಎನ್ನುತ್ತಾರೆ. 'ಆಗತಂ ಶಿವ ವಕ್ತ್ರೇಭ್ಯ: ಗತಂತು ಗಿರಿಜಾಶೃತೌ' ಶಿವನಿಂದ ಗಿರಿಜೆಗೆ ಬೋಧಿಸಿದ ಜ್ಞಾನವೇ ಆಗಮ-ಎಂದು ಶಾರದಾ ತಿಲಕ (ಪುಟ 26) ತಿಳಿಸುತ್ತದೆ. ಅಮರಸಿಂಹ ತನ್ನ ಕೋಶದಲ್ಲಿ ತಾಂತ್ರಿಕೋಜ್ಞಾತ ಸಿದ್ಧಾಂತ ಎಂದು ಕರೆದರೆ, ಪಾಲ್ಕುರಿಕೆ ಸೋಮನಾಥನು ತನ್ನ 'ಜ್ಯೋತಿರ್ಮಯ ಶಾಂಭವೀಜ್ಞಾನ ದೀಕ್ಷಾ ಬೋಧೆಯಲ್ಲಿ ಆಗಮಗಳನ್ನು ಸಿದ್ಧಾಂತ ಶಾಸ್ತ್ರಗಳೆಂದು ಕರೆಯುತ್ತಾನೆ. ಶಿವಾಗಮಗಳಿಗೆ ಶಿವಶಾಸನ :, ವೇದಸಾರ: ಎನ್ನುವ ಅಪರ ನಾಮಗಳೂ ಇವೆ.

ಅಷ್ಟಾದಶ ಪುರಾಣಾನಾಂ ಕರ್ತಾ ಸತ್ಯವತೀ ಸುತಃ।
ಕಾಮಿಕಾದಿ ಪ್ರಭೇದಾನಾಂ ಯಥಾ ದೇವೋ ಮಹೇಶ್ವರಃ॥

ಸೂತ ಸಂಹಿತೆ ಹೇಳುವ ಈ ಮಾತು ಶಿವಾಗಮಗಳಿಗೆ ಈಶ್ವರನೇ ಕರ್ತನೆಂದು ತಿಳಿಸುತ್ತವೆ. ಆಗಮಗಳಲ್ಲಿ ಶೈವ-ಶಾಕ್ತ-ಪಾಂಚರಾತ್ರ-ವೈಖಾನಸ-ಜೈನ-ಬೌದ್ಧವೆಂಬ ಅನೇಕ ಪ್ರಕಾರಗಳಿವೆ. ಶಿವಾಗಮಗಳ ಉತ್ತರ ಭಾಗದಲ್ಲಿ, ವೀರಶೈವದ ತತ್ತ್ವದ ನೆಲೆಯನ್ನು ಕಾಣುತ್ತೇವೆ. ಸ್ವಯಂಭುವ, ಸುಪ್ರಭೇದ, ವಾತುಲ, ಮಕುಟ, ಪೌಷ್ಕರ, ಪಾರಮೇಶ್ವರ,

ಕಾಮಿಕ, ಕಿರಣ, ಸೂಕ್ಷ್ಮ, ಚಂದ್ರಜ್ಞಾನ ಆಗಮಗಳಲ್ಲಿ ವೀರಶೈವ ತತ್ತ್ವ ಸ್ಪಷ್ಟವಾಗಿ ಕಂಡುಬರುತ್ತದೆ.

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟ ಮುತ್ತರೇಭಾಗೇ ವೀರಶೈವ ಮತಂಪರಂ॥ (ಸಿದ್ಧಾಂತ ಶಿಖಾಮಣಿ)

ಎಂದು ಸಿದ್ಧಾಂತ ಶಿಖಾಮಣಿಯು ಶಿವಾಗಮಗಳ ಉತ್ತರ ಬಾಗದಲ್ಲಿ ವೀರಶೈವ ಮತದ ವಿಚಾರಗಳಿವೆ ಎನ್ನುವ ವಿಚಾರವನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಮಹಾಭಾರತದಲ್ಲಿ ಬರುವ ಭಗವದ್ಗೀತೆಯಲ್ಲಿ ಅನೇಕ ಆಗಮ ಶ್ಲೋಕಗಳಿವೆ ಎಂಬುದನ್ನು ಸಿದ್ಧರಾಮಪ್ಪ ಪಾವಟೆ ಅವರು ಸಾಧಾರವಾಗಿ ಪ್ರತಿಪಾದಿಸಿದ್ದಾರೆ. ಈ ವಿಷಯದಲ್ಲಿ ಆಸಕ್ತಿವುಳ್ಳವರು ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು ಸಂಪಾದಿಸಿದ ಶಿವಾಗಮ ಸೌರಭದ ಅನುಬಂಧಗಳು (ಪುಟ 54) ಇಲ್ಲೂ ನೋಡಬಹುದು.

ಕೆಲವು ಆಗಮಗಳು ಪ್ರಾಚೀನವಾಗಿವೆ; ಕೆಲವು ನೂತನವಾಗಿವೆ. ಆಗಮ ಪರಂಪರೆ ಪ್ರಾಚೀನವಾದರೂ ಕಾಲಕಾಲಕ್ಕೆ ಆಗಮಗಳು ಸೃಷ್ಟಿಯಾಗುತ್ತಾ ಬಂದಿವೆ. ಸ್ಮೃತಿಗಳ ಹೆಸರಿನಲ್ಲಿ ದೇವಲಸ್ಮೃತಿ, ಉಪನಿಷತ್ತುಗಳ ಹೆಸರಿನಲ್ಲಿ ಅಲ್ಲೋಪನಿಷತ್, ವಚನೋಪನಿಷತ್, ಪುರಂಧರೋಪನಿಷತ್‌ಗಳಂತೆ ಹಳೇ ಆಗಮದ ಹೆಸರು ಹಿಡಿದು ಹೊಸ ಆಗಮಗಳು ಸೃಷ್ಟಿಯಾಗಿವೆ, ಆಗುತ್ತಾ ಇವೆ. ಆದರೂ ಪ್ರಸಿದ್ಧವಾದ ಪ್ರಾಚೀನ ಆಗಮಗಳೂ ಇವೆ.

ಆಗಮಗಳ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ವೇದ-ಉಪನಿಷತ್-ಬ್ರಹ್ಮಸೂತ್ರ-ಪುರಾಣಗಳಿಗೆ ಭಾಷ್ಯ-ವ್ಯತ್ಯಾಸವಾಗುವಂತೆ ಭಾಷಾಶಾಸ್ತ್ರದ ಆಧಾರದ ಮೇಲೆ ಆಗಮಗಳ ಕಾಲವನ್ನು ಗುರುತಿಸಬಹುದಾಗಿದೆ.

ಆಗಮಗಳ ಇತಿಹಾಸ :

ಆಗಮಗಳ ಕಾಲ ಕ್ರಿ. ಶ. ಒಂದನೆಯ ಶತಮಾನದಿಂದ 13ನೆಯ ಶತಮಾನದವರೆಗೂ ಇದೆ ಎಂದು ವಿದ್ವಾಂಸರ ಅಭಿಪ್ರಾಯ 8-9ನೇ ಶತಮಾನದ ಕೆಲವು ಆಗಮಗಳ ಹಸ್ತಪ್ರತಿಗಳು ನೇಪಾಳದ ಗ್ರಂಥ ಭಂಡಾರದಲ್ಲೂ ಕ್ರಿ. ಶ. 859ರ ಪರಮೇಶ್ವರಾಗಮದ ಹಸ್ತಪ್ರತಿ ಕೇಂಬ್ರಿಜ್ ಲೈಬ್ರರಿಯಲ್ಲಿದೆ ಎಂದು ಅಭಿಪ್ರಾಯವಿದೆ (ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂಪುಟ:1, ಪುಟ : 163) ಶಿವಾಗಮಗಳ ಇತಿಹಾಸ ಪ್ರಾಚೀನವಾದುದು. ಕಾಮಿಕಾದಿ ವಾತುಲಾಂತದವರೆಗೆ 28 ಶಿವಾಗಮಗಳು. ಇವುಗಳನ್ನು ದಿವ್ಯಾಗಮಗಳೆಂದು ಕರೆಯುತ್ತಾರೆ. ಶಾಸನಗಳಲ್ಲೂ ಇವುಗಳ ಉಲ್ಲೇಖವಿದೆ. ಕ್ರಿ. ಶ. 5ನೇ ಶತಮಾನದ ಶಾಸನ ಕಂಚಿಯ ಕೈಲಾಸನಾಥನ ಗುಡಿಯಲ್ಲಿದೆ ಎಂದು ಡಾ : ರಾಧಾಕೃಷ್ಣರು ತಮ್ಮ 'ಇಂಡಿಯನ್ ಫಿಲಾಸಫಿ' (ಭಾಗ 2)ರಲ್ಲಿ ತಿಳಿಸುತ್ತಾರೆ. ಆದರೆ ಎಲ್ಲ ಆಗಮಗಳೂ ಪೂರ್ಣರೂಪದಲ್ಲಿ ದೊರೆಯುವುದಿಲ್ಲ.

ಆಗಮಗಳ ಸ್ವರೂಪ

ಶಿವಾಗಮಗಳಲ್ಲಿ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ, ಜ್ಞಾನಪಾದಗಳೆಂಬ ನಾಲ್ಕುವಿಧ. ಕ್ರಿಯಾಪಾದದಲ್ಲಿ ದೇವಾಲಯ, ಮೂರ್ತಿ ಪ್ರತಿಷ್ಠಾಪನೆಯ ವಿಚಾರವಿದೆ. ಚರ್ಯಾಪಾದದಲ್ಲಿ ವಿಗ್ರಹ ಪೂಜಾಕ್ರಮವಿದೆ. ಯೋಗಪಾದದಲ್ಲಿ ಶಿವಮಂತ್ರ, ಧ್ಯಾನ, ಸಮಾಧಿ ಇತ್ಯಾದಿ ಭಾಗವಿದೆ. ಜ್ಞಾನಪಾದದಲ್ಲಿ ಶೈವ-ವೀರಶೈವ ತತ್ತ್ವಪ್ರತಿಪಾದನೆ ಇದೆ. ವೇದ ಭಗವಂತನ ಉಸಿರು. ಆಗಮ ಭಾಷೆ ಎಂದು ಭಾರತೀಯರ ನಂಬಿಕೆ. ಶಿವಾಗಮಗಳಲ್ಲಿ ಶೈವ, ವೀರಶೈವ ತತ್ತ್ವಗಳಲ್ಲದೆ, ಶಿಲ್ಪ, ಚಿತ್ರ, ಸಂಗೀತ, ಜ್ಯೋತಿಷ್ಯ, ಯಂತ್ರ, ಮಂತ್ರ, ಕೃಷಿ, ರತ್ನಪರೀಕ್ಷೆ ಹಸ್ತ ಸಾಮುದ್ರಿಕ-ಹೀಗೆ ಎಲ್ಲ ಶಾಸ್ತ್ರಗಳೂ ಇವೆ. ಭಾರತೀಯ ಧರ್ಮ, ಸಾಹಿತ್ಯ, ಕಲೆ, ಸಂಸ್ಕೃತಿಗಳ ಜ್ಞಾನಕೋಶಗಳು ಆಗಮಗಳು.

ಶಿವಾಗಮಗಳ ಉತ್ತರ ಭಾಗದ ವೀರಶೈವ ತತ್ತ್ವಗಳನ್ನೊಳಗೊಂಡ ಆಗಮ ವಿಭಾಗಕ್ಕೆ 'ಸಿದ್ಧಾಂತಾಗಮ' ಎಂದು ಕರೆಯುತ್ತಾರೆ. ವೀರಶೈವ ಸಿದ್ಧಾಂತ ಗ್ರಂಥಗಳಲ್ಲಿ, 'ವೀರಶೈವಾಗಮ' ಎನ್ನುವ ಹೆಸರು ವಿಪುಲವಾಗಿ ಉಲ್ಲೇಖವಾಗಿದೆ. ನೀಲಕಂಠ ಶಿವಾಚಾರ್ಯರ ಕ್ರಿಯಾಸಾರದಲ್ಲಿ 'ವೀರಶೈವಾಗಮಾಖ್ಯಾತ' ಚನ್ನಬಸವ ಪುರಾಣದಲ್ಲಿ 'ವೀರಶೈವಾಗಮ' ಮಗ್ಗೆಯ ಮಾಯಿದೇವರ ಶತಕತ್ರಯದಲ್ಲಿ – 'ವೀರ ಶಿವಾಗಮೋಕ್ತ' ಚಿಹ್ನಾಂಕಿತ ರಾದವರ್ಗೆ' ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಅಕ್ಕಮಹಾದೇವಿಯ ತಂದೆ, ನಿರ್ಮಲನನ್ನು 'ವೀರಶೈವಾಗಮಿಕ' ಎಂದು ಕರೆದಿದ್ದಾರೆ. ಈ ಪದ ವಚನಗಳಲ್ಲೂ ಪ್ರಯೋಗವಾಗಿದೆ. ಹೀಗೆ 'ವೀರಶೈವಾಗಮ' ಪದ ಅನೇಕ ಶತಮಾನಗಳಿಂದ ವೀರಶೈವ ಗ್ರಂಥಗಳಲ್ಲಿ ಬಳಕೆಯಾಗಿದೆ. ವೀರಶೈವರಿಗೆ ಆಗಮಗಳು ಪ್ರಮಾಣ ಗ್ರಂಥಗಳು ಹಾಗೂ ವೀರಶೈವ ತತ್ತ್ವಗಳಿಗೆ ಮೂಲ ಆಕರಗಳು. ವೀರಶೈವ ಸಂಸ್ಕೃತ ಸಿದ್ಧಾಂತ ಗ್ರಂಥಗಳಲ್ಲಿ, ಕನ್ನಡ ಗ್ರಂಥಗಳಲ್ಲಿ, ವಚನ ಸಾಹಿತ್ಯದಲ್ಲಿ, ಕಾವ್ಯ, ಪುರಾಣ, ಶತಕಗಳಲ್ಲಿ; ಆಂಧ್ರ, ತಮಿಳು, ಮಹಾರಾಷ್ಟ್ರದ ವೀರಶೈವ ಗ್ರಂಥಗಳಲ್ಲಿ ಆಗಮಗಳ ಉಲ್ಲೇಖವನ್ನು ಕಾಣುತ್ತೇವೆ. ತತ್ತ್ವ ಪ್ರತಿಪಾದನೆಗೆ, ಆಗಮಗಳ ವಾಕ್ಯಗಳನ್ನೆ ಉದ್ಧರಿಸಿ ಪ್ರತಿಪಾದಿಸುವುದು ವೈಶಿಷ್ಟ್ಯವಾಗಿದೆ.

ವೀರಶೈವಕ್ಕೆ ಆಗಮಗಳ

ನೆಲೆ – ಹಿನ್ನೆಲೆ

ಆಗಮಗಳಲ್ಲಿ ವೀರಶೈವರನ್ನು ಸಾಮಾನ್ಯ, ವಿಶೇಷ ನಿರಾಭಾರಿ ಎಂದು ವಿಂಗಡಿಸುತ್ತಾರೆ. ಇದು ತಾತ್ವಿಕವಾದ ಹಂತವನ್ನು ಸಾಧಕನಲ್ಲಿ ಗುರುತಿಸುವ ವಿಧಾನವಾಗಿದೆ.

ವೀರಶೈವನಾರು ? ಎನ್ನುವ ಪ್ರಶ್ನೆಗೆ ಪರಮೇಶ್ವರಾಗಮ ಉತ್ತರಿಸುತ್ತದೆ :

ವೀರತ್ವಂ ನಾಮ ದೇವೇಶಿ ಯಥಾ ವೀರೋರಣೆ ಭವಃ
ತಥಾ ಮತೇಚ ಸದ್ಭಕ್ತ್ಯಾ ವೀರೋ ವೈರಾಗ್ಯತೋ ಭವೇತ್ ॥

ಯುದ್ಧ ಭೂಮಿಯಲ್ಲಿ ನಿಷ್ಠೆಯಿಂದ ಹೋರಾಡುವ ವೀರನಂತೆ, ವೀರಶೈವ ತತ್ತ್ವದಲ್ಲಿ ನಿಷ್ಠೆ, ತ್ಯಾಗ, ಗುಣ, ಉಳ್ಳವನೇ ವೀರಶೈವನೆಂದು ಅರ್ಥಪೂರ್ಣವಾಗಿ ತಿಳಿಸುತ್ತಾರೆ.

ವೀರಶೈವ ಮತ ತತ್ತ್ವಗಳಿಗೆ ಆಗಮಗಳು ಆಧಾರವೆಂದು ಆಚಾರ್ಯರು, ದಾರ್ಶನಿಕರು, ಭಾಷ್ಯಕಾರರು, ವಚನಕಾರರು ಸ್ಪಷ್ಟವಾಗಿ ತಿಳಿಸುತ್ತಾರೆ. ಉದಾಹರಣೆಗೆ ಕೆಲವನ್ನು ಇಲ್ಲಿ ಅವಲೋಕಿಸಬಹುದು :

1. ವೇದ ಶಾಸ್ತ್ರ ಪುರಾಣೇಷು ಕಾಮಿಕಾದ್ಯಾಗಮೇಷುಚ।
ಲಿಂಗಧಾರಣ ಮಾಖ್ಯಾತಂ। ವೀರಶೈವಸ್ಯ ನಿಶ್ಚಯಾತ್ ॥
(ಶಿವಯೋಗಿ ಶಿವಾಚಾರ್ಯ: ಸಿದ್ಧಾಂತ ಶಿಖಾಮಣಿಯಲ್ಲಿ)

2. ಸಿದ್ಧಾಂತಾಗಮ ಶೃತಿ ಸ್ಮೃತಿ। ಪುರಾಣೇಷು ವೈದಿಕಾನಾಂ।
ವರಾನನೇ ಲಿಂಗಧಾರಣ ಮಾಖ್ಯಾತಂ। ಸರ್ವಸಿದ್ಧಿ ಪ್ರದಾಯಕಂ॥
(ಶ್ರೀಪತಿ ಪಂಡಿತ: ಶ್ರೀಕರಭಾಷ್ಯ)

3. ಸಕಲ ನಿಗಮಾಗಮ ಸಾರಂ। ಷಟ್‌ಸ್ಥಲಂ ಜ್ಞಾನಮೇತತ್ ಭವ।
ವಿಪಿನ ಕುಠಾರಂ। ಸರ್ವತಂತ್ರಂ । ಪ್ರಸಿದ್ಧಂ॥
(ಶಂಕರ ಸಂಹಿತೆ: ಷಟ್‌ಸ್ಥಲಾಧ್ಯಾಯ ಉತ್ತರ ಶಂಕರ ಸಂಹಿತಾ ಅಧ್ಯಾಯ 84)

4. ಶಿವಾಗಮೋಕ್ತಾಶ್ರಮನಿಷ್ಠ ಮಾನವ:
ತ್ರಿಪುಂಡ್ರ ಲಿಂಗಂತು ಸದೈವಧಾರಯೇತ್ ॥
(ಸೂತ ಸಂಹಿತೆ, ಅಧ್ಯಾಯ 4 : 31ನೇ ಶ್ಲೋಕ)

5. ವೀರತಂತ್ರೋದಿತಾಚಾರ ಸಂಪನ್ನ ಸರ್ವೋಪನಿಷತ್ಶ್ರುತಿಪಾದ್ಯ
ಜ್ಞಾನಗೋಚರ ಕೈವಲ್ಯಸಾರಮಾರಭ್ಯತೇ॥
(ಮರಿತೋಂಟದಾರ್ಯರು: ಕೈವಲ್ಯಸಾರದಲ್ಲಿ)

6. ಸರ್ವೇಷಾಂ ಆಗಮಾನಾಂ ಸಮುದಾಯೈ : ಸಂಗೃಹೀತೈ:॥
(ನೀಲಕಂಠ ಶಿವಾಚಾರ್ಯರು: ಕ್ರಿಯಾಸಾರದಲ್ಲಿ)

7. ನುತಿಯ ಚಮತ್ಕೃತಿಯಲ್ಲಿದು
ಶೃತಿ ಶಾಸ್ತ್ರಾಗಮ ಪುರಾಣ ರಹಸ್ಯಾದಿಗಳೋಳ್
ಗತಿ ಯಶ ಯುಕ್ತಾರ್ಥಂ ಸಂ।
ಮ್ಮತವನೆ ಪೇಳ್ವೆನಿದನು ಚಿತ್ತೈಸಿ ಭಕ್ತಜನಂ॥
(ಕೆರೆಯ ಪದ್ಮರಸ: ದೀಕ್ಷಾಬೋಧೆಯಲ್ಲಿ)

8. ಶಿವಾಗಮ ರಹಸ್ಯಾರ್ಥಾನ್। ಸಿದ್ಧ ಸಿದ್ಧಾಂತ ಪದ್ಧತಿಂ
ಸಂಕ್ಷೇಪತಃ ಕೃತಾಲೋಡ್ಯ। ಶಿವಯೋಗ ಪ್ರದೀಪಿಕಾ॥
(ಚನ್ನಸದಾಶಿವಯೋಗೀ: ಶಿವಯೋಗ ಪ್ರದೀಪಿಕೆಯಲ್ಲಿ)

9. ಮಮಾತಯಾ ನಿರಾಸಸ್ಯ। ಲಿಂಗನಿಷ್ಠಾ ವಿಧೇಸ್ತಥಾ।
ಶಾಸನಾಚ್ಚಾಸ್ತ್ರ ಮಿತ್ಯುಕ್ತೋ । ವೀರಶೈವ ಮಹಾಗಮಾ:॥
(ಜಕ್ಕಣಾರ್ಯ: ಏಕೋತ್ತರ ಶತಸ್ಥಲದಲ್ಲಿ)

10. ಶಿವಾಗಮ್ಯೆ : ಶಿವಾದ್ವೈತರಹಸ್ಯ: ಪಾರಮಾರ್ಥಿಕೈ:।
ಕಥ್ಯತೆ ಶಿವಸಿದ್ಧಾಂತ। ತಂತ್ರಂ ಷಟ್‌ಸ್ಥಲ ನಿರ್ಣಯಂ॥
(ಮಗ್ಗೆಯ ಮಾಯಿದೇವರ ಅನುಭವ ಸೂತ್ರದಲ್ಲಿ)

11. ವೇದ ವೇದಾಂತಾಗಮ ಪುರಾಣಂಗಳಲ್ಲಿ ಸಾರತರಮೆನಿಸಿದತಿರಹಸ್ಯಾರ್ಥ ಪ್ರತಿಪಾದಕಮಾದ ವೀರಶೈವ ಮಾರ್ಗದಿಂ ಲಿಂಗಾಂಗ ಸಂಗಿಗಳಾದ ಷಟ್ ಸ್ಥಲ ಜ್ಞಾನಿಗಳಿಗೆ ಅವಿರಳ ಶಿವೈಕ್ಯಮಕ್ಕು.
(ನಿಜಗುಣ ಶಿವಯೋಗಿಗಳು: ವಿವೇಕ ಚಿಂತಾಮಣಿಯಲ್ಲಿ, ಪ್ರಕರಣ9)

12. ವೀರಶೈವ ಸಿದ್ಧಾಂತಗ್ರಂಥ ಸಿದ್ಧಾಂತಶಿಖಾಮಣಿಯು ಶಿವಾಗಮಗಳ ಸಾರವಾಗಿದೆ.

ಇನ್ನು ವಚನಗಳಲ್ಲಿ ಉದ್ಧೃತವಾದ ಶಿವಾಗಮ ವಾಕ್ಯಗಳನ್ನು ಅವಲೋಕಿಸಬಹುದು.

1. ಶ್ರೀ ಗುರವಾದಾತನು ಸಕಲಾಗಮಂಗಳ ಹೃದಯವನರಿದು ಉಪದೇಶವ ಮಾಡುವ ಪರಿಯಂತೆಂದಡೆ ವೀರತಂತ್ರೇ (ವೀರಾಗಮ) ಬ್ರಾಹ್ಮಣಂ ತ್ರೀಣಿವರ್ಷಾಣಿ। ಕ್ಷತ್ರಿಯಂ ವರ್ಷಷಟ್ಕುಚ। ವೈಶ್ಯಂತು ನವವರ್ಷಾಣಿ। ಶೂದ್ರಂ ದ್ವಾದಶವರ್ಷಕೆ। ಎಂಬುದಾಗಿ ಕೂಡಲ ಚನ್ನಸಂಗಮದೇವಾ॥ (ಚನ್ನಬಸವಣ್ಣ)
2. ವಾತುಲೀ : 'ಏವಂ ನಿರ್ವಹತೇಯಸ್ತು ಯಾವಜ್ಜೀವ ಪ್ರತಿಜ್ಞಯಾ'
(ಹಾವಿನಹಾಳ ಕಲ್ಲಯ್ಯ)
3. ವೀರಾಗಮಸಾಕ್ಷಿ : 'ಕಿಂಮಾಂಸಂ ಕಾ ಶಿವೇಭಕ್ತಿ : ಕಿಂ ಮದ್ಯಂ ಶಶ್ಮಿವಾರ್ಚನ :
(ಬಸವಣ್ಣ)
4. ವೀರತಂತ್ರೇ ಮೃಗಯಾ ಮದ್ಯವೇಶ್ಯಾ ಅನ್ಯದೈವಸ್ಯ ಪೂಜಕ :
(ಮಡಿವಾಳ ಮಾಚಿದೇವ)
5. ಆಗಮಸಾಕ್ಷಿ : ಸರ್ವಾಚಾರ ಪರಿಭ್ರಷ್ಟೋ ....
-ವೇದಶಾಸ್ತ್ರ ಪುರಾಣಾಗಮಂಗಳು ಹೇಳುತ್ತವೆ (ಉರಿಲಿಂಗ ಪೆದ್ದಿ)
6. ಓಂಕಾರವೆಂಬ ವೃಕ್ಷದಲ್ಲಿ ಆಗಮಗಳೆಂಬ ಕಾಯಿ ಬಲಿತು
(ಉರಿಲಿಂಗಪೆದ್ದಿ)

(ವಚನಶಾಸ್ತ್ರ ಸಾರ ಭಾಗ :1 ಫ. ಗು. ಹಳಕಟ್ಟಿ ಸಂಪಾದಿತ 1923, ವಿಜಾಪುರ ಪ್ರಕಟಣೆ)

ಹೀಗೆ ಮೇಲ್ಕಂಡ ವೀರಶೈವಧಾರ್ಮಿಕ ಸಾಹಿತ್ಯದಲ್ಲಿ ಆಗಮಗಳ ಆಧಾರದ ಉಲ್ಲೇಖಗಳನ್ನು ಗಮನಿಸಿದರೆ, ವೀರಶೈವಕ್ಕೆ ಆಗಮಗಳು ಆಧಾರ ಗ್ರಂಥಗಳು ಎಂದು ಸ್ಪಷ್ಟವಾಗುತ್ತದೆ.

ಆಗಮಗಳ ರಚನಾ ತಂತ್ರ

ಆಗಮಕಾರರು ಪ್ರಾಚೀನ ಪದ್ಧತಿಯನ್ನು ಅನುಸರಿಸಿ ಸಂವಾದಾತ್ಮಕ ತಂತ್ರದಲ್ಲಿ ಆಗಮಗಳನ್ನು ರಚಿಸಿದ್ದಾರೆ. ಈ ತಂತ್ರ ಓದುಗರಲ್ಲಿ ಕುತೂಹಲವನ್ನುಂಟುಮೂಡುತ್ತದೆ. ವೇದ, ಉಪನಿಷತ್ತು, ಭಗವದ್ಗೀತೆ, ಭಾಗವತ, ಸಿದ್ಧಾಂತ ಶಿಖಾಮಣಿ, ಯೋಗವಾಶಿಷ್ಟ

ಮೊದಲಾದ ಪ್ರಸಿದ್ಧ ಗ್ರಂಥಗಳಲ್ಲಿ ಈ ಸಂವಾದಾತ್ಮಕ ತಂತ್ರದ ಬಳಕೆಯನ್ನು ಕಾಣಬಹುದಾಗಿದೆ. ಆಗಮಗಳಲ್ಲಿ ಶಿವನನ್ನೇ ಉಪದೇಶಕನನ್ನಾಗಿ ಮಾಡಿ, ಪಾರ್ವತಿ ಸ್ಕಂಧರು ಶ್ರೋತೃಗಳಾಗಿದ್ದಾರೆ. ಆಗಮಗಳು ಪ್ರಶ್ನೋತ್ತರ ರೂಪದಲ್ಲಿವೆ. ಪಾರ್ವತಿ-ಸ್ಕಂದರು ಇಲ್ಲಿ ಸಾಂಕೇತಿಕರಾಗುತ್ತಾರೆ. ಸಾಧಕರ, ಸರ್ವಲೋಕ ಹಿತಾರ್ಥವೇ ಇವುಗಳ ಗುರಿಯಾಗಿದೆ. ಆಗಮ ಸಾಹಿತ್ಯ ಸಮೂಹ ಸೃಷ್ಟಿ. ಆಗಮಕಾರರು ಅನಾಮಧೇಯರು. ಹೆಸರನ್ನು ಬಯಸದ ಕೀರ್ತಿಯನ್ನು ಆಶಿಸದ ನಿರ್ಲಿಪ್ತರು. ಜಗತ್ತಿಗೆ ಜ್ಞಾನಭಂಡಾರವನ್ನೇ ನೀಡಿದ ಅಜ್ಞಾತ ಶಿವಾಚಾರ್ಯರು. ದಾರ್ಶನಿಕರು. ಭಾರತದ ಎಲ್ಲ ಮತಧರ್ಮದವರಿಗೂ ಆಗಮಗಳಿವೆ. ಆದರೆ ಅವುಗಳನ್ನು ರಚಿಸಿದವರ ಹೆಸರುಗಳು ಮಾತ್ರ ಅಜ್ಞಾತವಾಗಿವೆ. ಭಾರತದಲ್ಲಿ ಪ್ರಮುಖವಾದ 18 ಪುರಾಣಗಳನ್ನು ಬರೆದು ವಿದ್ವಾಂಸರು, ಎಲ್ಲವನ್ನು ವ್ಯಾಸರ ತಲೆಗೆ ಕಟ್ಟಿಹಾಕಿದರು. ತಮ್ಮ ಹೆಸರುಗಳನ್ನು ಎಲ್ಲೂ ಉಲ್ಲೇಖಿಸಲಿಲ್ಲ. ಆದರೆ ಆಗಮಗಳಲ್ಲಿ ಯಾರ ತಲೆಗೂ ಕಟ್ಟುವ ಕೆಲಸ ನಡೆಯಲಿಲ್ಲ. ಇದು 'ಶಿವನ ಉಪದೇಶ ವೆಂದು ಭಾವಿಸಿ ಸುಮ್ಮನಾದರು. ಇದು ಅವರ ದೈವೀಶ್ರದ್ಧೆಯ ಸಂಕೇತ ಹಾಗೂ ಅರ್ಪಿತ ಮನೋಭಾವಕ್ಕೆ ಸಾಕ್ಷಿ ಎಂದು ಹೇಳಬಹುದು. ಆಗಮಗಳಲ್ಲಿ ಬರುವ ಶಿವ ಪಾರ್ವತಿಗೆ, ಕುಮಾರನಿಗೆ ಬೋಧಿಸಿದ ಎನ್ನುವ ವಿಚಾರವನ್ನು ನಂಬಬೇಕಾಗಿಲ್ಲ. ಅದೊಂದು ತಾತ್ವಿಕ ಸಂಕೇತ ಎಂದು ಬಾವಿಸಬೇಕು. ಆಗಮಗಳಲ್ಲಿ ಇಂಥ ಅನೇಕ ಸಂಕೇತಗಳಿವೆ, ಅವುಗಳಿಗೆ ವಿಶಿಷ್ಟವಾದ ಅರ್ಥಗಳಿವೆ.

ಆಗಮಗಳಲ್ಲಿ ವೀರಶೈವ ತತ್ತ್ವ

ಇನ್ನು ಆಗಮಗಳಲ್ಲಿ ವೀರಶೈವ ತತ್ತ್ವದ ಸ್ವರೂಪವನ್ನು ಕುರಿತು ವಿವೇಚಿಸಬೇಕಾಗಿದೆ:

ಆಗಮಕಾರರು ಭಾರತೀಯ ಶೈವಧರ್ಮದಲ್ಲಿ ಅನಾದಿ-ಆದಿ-ಅನು-ಮಹಾಯೋಗ-ಜ್ಞಾನ ವೀರಶೈವವೆಂದು ಏಳು ಪ್ರಬೇದಗಳನ್ನು ಹೇಳುತ್ತಾರೆ. ಇವುಗಳಲ್ಲಿ ಸರಳವಾದ ರಚನೆಯ ವೀರಶೈವ ಸರ್ವೋತ್ಕೃಷ್ಟವೆನ್ನುವ ಗೌರವಪೂರ್ಣ ಉಲ್ಲೇಖವಿದೆ. 'ಸರ್ವೇಷಾಮಪಿ ಶೈವಾನಾಂ ವೀರಶೈವಂ ಮಹೋತ್ತಮಂ, ಸುಲಭಾದೇವಪೂಜಾ, ಸುಲಭಂ ಚ ಕ್ರಿಯಾವಹಂ' ಎಂದು ಹೇಳಿ ಮತ್ತೆ 'ಏಕ ಏವಾಯ ಮೇತಸ್ಮಿನ್ ಸರ್ವಸ್ಮಿನ್ ಜಗತೀತಯಃ' ಜಗತ್ತಿನಲ್ಲಿ ಇದೊಂದೇ ಎಂದು ಶಿಫಾರಸು ಮಾಡುತ್ತಾರೆ. ಹೀಗೆ ವೀರಶೈವರ ಲಕ್ಷಣವನ್ನು ಸುಪ್ರಭೇದಾಗಮ ಅರ್ಥಪೂರ್ಣವಾಗಿ ವ್ಯಾಖ್ಯಾನಿಸುತ್ತದೆ.

ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ।
ವಿನ್ಯಸ್ಯ ತಲ್ಲೀನ ಮನಃ ಪ್ರಸಾರಃ
ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ
ಸಂಪೂಜ್ಯಮತ್ಯಂಗ ಸವೀರಶೈವಃ

ಯಾವನು ತನ್ನ ಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟು, ಬಾಹ್ಯ ವ್ಯವಹಾರಗಳಿಂದ ವಿಮುಖನಾಗಿ

ಇಷ್ಟಲಿಂಗದಲ್ಲಿ ನಿಷ್ಠೆಯಿಂದ ಮನಸ್ಸನ್ನು ಲೀನಗೊಳಿಸಿ, ಪೂಜಿಸುವ ಅಂಗನೇ (ಸಾಧಕ) ವೀರಶೈವ ಎಂದು ಅನ್ವರ್ಥಕವಾಗಿ ವಿವರಿಸುತ್ತದೆ. ವೇದ-ಉಪನಿಷತ್ತುಗಳಿಂದ ಲಭಿಸುವ ಜ್ಞಾನಕ್ಕೆ 'ವಿದ್ಯೆ' ಎಂದು ಹೆಸರು. ಅಂಥ ವಿದ್ಯೆ (ಅಧ್ಯಾತ್ಮ)ಯಲ್ಲಿ ರಮಿಸುವವನು ವೀರಶೈವ ಎನ್ನುವ ನಿರ್ವಚನವೂ ಇದೆ.

ಶಿವಾಗಮಗಳಲ್ಲಿ ಇಷ್ಟಲಿಂಗದ ಪರಿಕಲ್ಪನೆ ಅತ್ಯಂತ ವಿಶಿಷ್ಟವಾಗಿದೆ.

ಪೀಠಿಕಾ ಪೃಥಿವೀ ಲಿಂಗಮಾಕಾಶ : ಸೃಷ್ಟಿಕಾರಣಂ
ನಿಸ್ಸಂದೇಹಮಿದಂ ಜ್ಞಾನಮಂಡಜಂ ಲಿಂಗಮೀರಿತಂ (ಸೂಕ್ಷ್ಮಾಗಮ)

ಆಕಾಶವೇ ಲಿಂಗ, ಪೃಥ್ವಿಯೇ ಪೀಠಿಕೆ, ಸರ್ವಭೂತಗಳಿಗೆ, ಚರಾಚರಗಳಿಗೆ, ನಿಲಯ ಮಾತ್ರ ಲಯಕಾರಣವಾಗಿ ಲಿಂಗವೆನಿಸಿದೆ. ಲಿಂಗವನ್ನು ವಿಶ್ವರೂಪದ ಪ್ರತಿಮಾವಿಧಾನದಲ್ಲಿ ಬಣ್ಣಿಸುವುದು ಎಂಥ ಭವ್ಯ ಕಲ್ಪನೆ ಇದು!

ಅದೇ ಆಗಮ ಮತ್ತೊಂದು ರೀತಿಯಲ್ಲಿ ಲಿಂಗವನ್ನು ನಿರ್ವಚಿಸುತ್ತದೆ.

ಲ ಕಾರೋ ಲಯ ಬುದ್ಧಿಸ್ಥೊ। ಬಿಂದುನಾ ಸ್ಥಿತಿರುಚ್ಯತೆ।
ಹಕಾರಾತ್ ಸೃಷ್ಟಿರಿತ್ಯಕ್ತಾ। ಲಿಂಗಂ ಸೃಷ್ಟ್ಯಾದಿಕಾರಣಂ॥
ಲೀನಂ ಪ್ರಪಂಚರೂಪಂ। ಹಿಸರ್ವಮೇತಚ್ಚರಾಚರಂ।
ಸರ್ಗಾದೌಗಮ್ಯತೆ ಯಸ್ಮಾತ್ । ತಲ್ಲಿಂಗಮುದೀರಿತಂ॥ (ಸೂಕ್ಷ್ಮಾ)

ಲಿಂಗ ಶಬ್ದದ 'ಲ' ಕಾರ, ಲಯಕ್ಕೂ, 0 ಸೊನ್ನೆ ಸ್ಥಿತಿಗೂ, 'ಗ' ಕಾರ ಸೃಷ್ಟಿಗೂ ಸಂಕೇತವಾಗಿ ಲಿಂಗ ಸೃಷ್ಟಿ - ಸ್ಥಿತಿ-ಲಯಕ್ಕೆ ಕಾರಣವಾಗಿದೆ. ಮತ್ತು ಪ್ರಪಂಚದ ಉಗಮಕ್ಕೂ, ಪ್ರಪಂಚವನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳುವುದಕ್ಕೂ ಕಾರಣವಾದದ್ದೇ 'ಲಿಂಗ'ವೆಂದು ನಿರ್ವಚನವಿದೆ. ನಿಜಕ್ಕೂ ಆಗಮಗಳಲ್ಲಿ ಲಿಂಗದ ಪರಿಕಲ್ಪನೆ ವಿರಾಟ್ ಸ್ವರೂಪದ್ದಾಗಿದೆ.

ಆಗಮಕಾರರು ಲಿಂಗವನ್ನು ಪರಮಾತ್ಮನ ಏಕಮೇವ ಪ್ರತೀಕವೆನ್ನುತ್ತಾರೆ. ಲಿಂಗವು ಸಾಕ್ಷಾತ್ ಪರಬ್ರಹ್ಮ, ಸಾಕ್ಷಾತ್ ಶಿವ, ಪೂಜೆಗಾಗಿ, ಲಿಂಗರೂಪನಾಗಿರುವನು. ನಾದರೂಪ ಶಿವನು ಮತ್ತು ಬಿಂದುರೂಪ ಶಕ್ತಿ ಕೂಡಿ, ಶಿವಲಿಂಗವಾಗಿದೆ. ಶಿವ-ಶಕ್ತಿ ಉಭಯಾತ್ಮಕ ವಾಗಿದೆ ಅದು ನಿರಾಕಾರ, ನಿರ್ಗುಣ, ನಿರಾಲಂಬ, ಕೇವಲ ಸಚ್ಚಿದಾನಂದ ಲಕ್ಷಣವಾಗಿದೆ. ಲಿಂಗಗಳಲ್ಲಿ ಮುಖ್ಯವಾಗಿ ಮೂರುವಿಧ. ಇಷ್ಟ, ಪ್ರಾಣ, ಭಾವ ಎಂದು.

ಗುರುವು ಬಾಹ್ಯಪೂಜೆಗೆ ಕೊಟ್ಟ ಲಿಂಗ-ಇಷ್ಟಲಿಂಗ
ಭಾವದಿಂದ ಪ್ರಾಣದಲ್ಲಿ ಪ್ರತಿಷ್ಠಾಸಿದ ಲಿಂಗ-ಪ್ರಾಣಲಿಂಗ
ಧ್ಯಾನಯೋಗದಿಂದ ಮಾಡುವ ಪೂಜೆ - ಭಾವಲಿಂಗ (ಸೂ. ವ. 6 ಶ್ಲೋ 54)

ಇಷ್ಟಲಿಂಗವನ್ನು ಧರಿಸುವ ಸ್ಥಾನವನ್ನು ಸೂಕ್ಷ್ಮಾಗಮ ನಿರ್ದೇಶಿಸುತ್ತದೆ :

ಉತ್ತಮಾಂಗ, ಕೊರಳು, ಕಕ್ಷೆ, ವಕ್ಷಸ್ಥಲಗಳಲ್ಲಿ ಲಿಂಗವನ್ನು ಧರಿಸಬೇಕು. ಮತ್ತು ನನ್ನ ಲಿಂಗವನ್ನೇ ಧರಿಸುವುದರಿಂದ, ಭಕ್ತನು ನಾನೇ ಆಗುವೆನೆಂಬಲ್ಲಿ ಸಂಶಯವಿಲ್ಲ ಎನ್ನುವ ಭರವಸೆಯನ್ನು ನೀಡುತ್ತದೆ. ಜೀವ ಹೋದರೂ ಇಷ್ಟಲಿಂಗವನ್ನು ಬಿಡಕೂಡದು. ಅದರ ಪೂಜೆ ಬಿಡಕೂಡದು. ಅಷ್ಟೇ ಅಲ್ಲ ಲಿಂಗವು ಕಳೆದುಹೋದರೆ, ಅದು ಸಿಕ್ಕದಿದ್ದರೆ, ಒಂದು ವೇಳೆ- ಭಿನ್ನವಾದರೆ, ಪ್ರಾಣತ್ಯಾಗ ಮಾಡಬೇಕೆಂದು ಹಲವು ಕಡೆಗೆ ಉಲ್ಲೇಖವಿದೆ. (ಪಾ.ಪ. 2, ಶ್ಲೋ 103, ಸೂ. ಪ. 7, ಶ್ಲೋ 62, ಪಾ. ಪ. 16, ಶ್ಲೋ 62)

ಇಷ್ಟಲಿಂಗ ದಾರಣೆಯ ಅವಶ್ಯಕತೆಯನ್ನು ಕುರಿತು ಸುಪ್ರಭೇದಾಗಮ ಮಾರ್ಮಿಕವಾಗಿ ತಿಳಿಸುತ್ತದೆ. ಮತ್ತೆ ಸೂಕ್ತವಾದ ದೃಷ್ಟಾಂತದೊಂದಿಗೆ ವಿಷಯವನ್ನು ಸಮರ್ಥಿಸುತ್ತದೆ.

ಗವಾಂಸರ್ಪಿಃ ಶರೀರರಸ್ಥಂ ನಕರೋತ್ಯಾತ್ಮ ಪೋಷಣಂ
ನಿಃಸೃತಂ ಕರ್ಮರಚಿತಂ ಪುನಸ್ರಸಾಂತು ಭೇಷಜಂ ॥
ಏವಮಂತಃ ಶರೀರಸ್ಥಃ ಸರ್ಪಿವತ್ಪರಮೇಶ್ವರಃ
ವಿನಾ ಚೋಪಾಸನಂ ದೇವೋ ನಕರೋತಿ ಹಿತಂ ನೃಣಾಂ (ಸು.ಪ.7, ಶ್ಲೋ 57-58)

ಅಂದರೆ ಒಂದು ಹಸುವಿನ ಮೈಮೇಲೆ ಹುಣ್ಣಾಗಿದೆ. ಆಗ ಅಲ್ಲಿಗೆ ಒಬ್ಬ ಪಶುವೈದ್ಯ ಬಂದು ಔಷಧ ಕೊಟ್ಟು ಅದನ್ನು ಹಸುವಿನ ತುಪ್ಪದಲ್ಲಿ ಬೆರೆಸಿ ಹುಣ್ಣಾದ ಸ್ಥಳಕ್ಕೆ ಲೇಪಿಸಲು ಹೇಳುತ್ತಾನೆ. ಅದಕ್ಕೆ ಹಸುವಿನ ಯಜಮಾನ ಹೇಳುತ್ತಾನೆ: 'ಅದು ಕರೆವ ಹಸು. ಅದರ ಕೆಚ್ಚಲಲ್ಲಿ ಹಾಲಿದೆ. ಆ ಹಾಲಿನಲ್ಲಿ ತುಪ್ಪವಿದ್ದೇ ಇದೆ. ಆದ್ದರಿಂದ ಔಷಧವನ್ನು ಮಾತ್ರ ಹುಣ್ಣಿಗೆ ಹಚ್ಚಿದರೆ ಸಾಕು, ಎನ್ನುತ್ತಾನೆ. ಹೀಗೆ ಅಂದರೆ ಹುಣ್ಣು ವಾಸಿಯಾಗುತ್ತದೆಯೇ ? ಇಲ್ಲ. ಅದಕ್ಕಾಗಿ ಹಸುವಿನ ಹಾಲು ಕರೆದು, ಕಾಯಿಸಿ, ಹೆಪ್ಪುಹಾಕಿ, ಮೊಸರು ಕಡೆದು, ಬೆಣ್ಣೆ ತೆಗೆದು, ಅದನ್ನು ಕಾಯಿಸಿ ತುಪ್ಪ ಮಾಡಿ ಔಷಧಕ್ಕೆ ಬೆರೆಸಿ ಹುಣ್ಣಿಗೆ ಹಚ್ಚಿದಾಗಲೇ ಅದು ವಾಸಿಯಾಗುತ್ತದೆ. ಅದರಂತೆ ಮಾನವನ ಶರೀರದಲ್ಲಿ ಶಿವಕಲೆ ಇರುವುದು ನಿಜ. ಮಾನವನಿಗೆ ಬಂದಿರುವ ಹುಟ್ಟು - ಸಾವು ಎಂಬ 'ಭವರೋಗ' ವಾಸಿಯಾಗಬೇಕಾದರೆ 'ಸದ್ಗುರು' ಎಂಬ ಭವರೋಗ ವೈದ್ಯನು ಇಷ್ಟಲಿಂಗವೆಂಬ ಔಷಧಕ್ಕೆ ಅವನಲ್ಲಿಯೇ ಇರುವ ಶಿವಕಲೆಯನ್ನು ಆಕರ್ಷಿಸಿ ಇಷ್ಟಲಿಂಗದಲ್ಲಿ ಸ್ಥಾಪಿಸಿ, ಅದನ್ನು ಶಿಷ್ಯನಿಗೆ ಧರಿಸಿ, ವಿಧ್ಯುಕ ವಾಗಿ ಭಕ್ತಿಯಿಂದ ಆರಾಧಿಸಲು ಉಪದೇಶ ಮಾಡುತ್ತಾನೆ. ಗುರುವಿನ ಆದೇಶದಂತೆ ಶಿಷ್ಯನು ಲಿಂಗವನ್ನು ಪೂಜಿಸುತ್ತ ಅನುಸಂಧಾನ ಮಾಡುವುದರಿಂದ, ಸಾಧಕನು (ಶಿವಯೋಗಿ) ಭವರೋಗದಿಂದ ಮುಕ್ತನಾಗುತ್ತಾನೆ. ಇದು ಇಷ್ಟಲಿಂಗ ಧಾರಣದ ಅವಶ್ಯಕತೆ ಎಂದು ಆಗಮಕಾರರ ಅಭಿಪ್ರಾಯವಾಗಿದೆ.

ಲಿಂಗಪೂಜೆಯನ್ನು ಹೇಗೆ ಮಾಡಬೇಕೆಂದು ಸೂಕ್ಷ್ಮಾಗಮ ಸೂಚಿಸುತ್ತದೆ :

ಕರಸ್ಥಲಗತಂ ಲಿಂಗಂ ವಾಮತಃ ಕೃತಗೋಮುಖಂ
ಕನಿಷ್ಠಿಕಾನಾಮಿಕಾಗ್ರಾಭ್ಯಾಂ ಶಿವಲಿಂಗ ಚ ಗೋಮುಖಂ
ಅಂಗುಷ್ಠಾಗ್ರೇಣ ಚೈವಂಹಿ ಸಂಸ್ಪೃಶೇತ್ ಅರ್ಚನಾ ವಿಧೌ (ಸೂಕ್ಷ್ಮ)

ಅಂದರೆ ಇಷ್ಟಲಿಂಗದ ಗೋಮುಖವನ್ನು ಕರಸ್ಥಲದ ಎಡಗಡೆ ಹರಿಸಬೇಕು. ಮತ್ತು ಲಿಂಗವನ್ನು ಎಡಗೈ ಕಿರಿಬೆರಳು, ಉಂಗುರ ಬೆರಳು ಮತ್ತು ಹೆಬ್ಬೆರಳುಗಳಿಂದ ಹಿಡಿದು ಪೂಜಿಸಬೇಕು.

'ಯೋವಿನಾ ಗುರುಕಾರಣ್ಯಮಿಚ್ಛಯಾ ಲಿಂಗಧಾರಣಂ. ಅಂದರೆ ಗುರುಕಾರುಣ್ಯವಿಲ್ಲದೆ ಲಿಂಗಧಾರಣೆ ಕೂಡದು ಎನ್ನುವ ಎಚ್ಚರಿಕೆಯ ಮಾತು ಇದೆ. ಮತ್ತು 'ಸ್ವೀಕರೋತಿಯದಾಲಿಂಗಂ ಗುರುಣಾ ದೀಕ್ಷಯಾ । ತದಾ ಪ್ರಭೃತಿ ಲಿಂಗೈಕ್ಯಂ ಅವಿನಾಭಾವ ಯೋಗತಃ' (ವಾತುಲ).

ದೀಕ್ಷೆಯಲ್ಲಿ ಗುರುವಿನಿಂದ ಪಡೆದ ಲಿಂಗವನ್ನು ವೀರಶೈವನು ತಾನು ಲಿಂಗೈಕ್ಯನಾಗುವ ವರೆಗೂ ಅವಿನಾಭಾವದಿಂದ ಪೂಜಿಸಬೇಕೆಂದು ಆಗಮಕಾರರು ಆದೇಶವನ್ನು ನೀಡುತ್ತಾರೆ.

ಶಿವಭಕ್ತನು ಇಷ್ಟಲಿಂಗ ಪೂಜೆಯನ್ನು ಮಾಡಿದರೆ ಸಾಲದು ಅದು ಪ್ರಾಣಲಿಂಗವೂ ಆಗಿರುವುದರಿಂದ ಅಂತರಂಗದಲ್ಲಿ ಪ್ರಾಣಲಿಂಗ ಪೂಜೆಯನ್ನು ಮಾಡಬೇಕೆಂದು ಆಗಮಗಳ ಅಭಿಪ್ರಾಯ.

ಲಿಂಗಂ ಪತಿ : ಚಾಪಂ (ಅಂಗಂ) ಭಾವೋಯಂ ವೀರಶೈವಿನಾಂ (ಸೂ. 7. 5.61)

ಲಿಂಗವೇ ಪತಿ, ಭಕ್ತನೇ (ಶರಣ) ಸತಿ, ಎಂಬ ಬಾವನೆ ಇರಬೇಕು. ಲಿಂಗಪೂಜೆಯ ಆಧ್ಯಾತ್ಮಿಕ ಧ್ಯೇಯವನ್ನು ವೀರಶೈವಾಗಮಕಾರರು ಸ್ಪಷ್ಟವಾಗಿ ತಿಳಿಸುತ್ತಾರೆ.

ಕರಕಮಲವನ್ನು ಪೀಠವ್ನಾಗಿ ಮಾಡಿ, ಲಿಂಗವನ್ನು ನಿತ್ಯ ಪೂಜಿಸಬೇಕು

ಅಹಿಂಸೆ, ಬ್ರಹ್ಮಚರ್ಯ, ಸರ್ವಭೂತದಯೆ,ಕ್ಷಮೆ, ಧ್ಯಾನ, ತಪ, ಜ್ಞಾನ ಸತ್ಯ ಎಂಬ ಎಂಟು ಹೂಗಳಿಂದ ಲಿಂಗಪೂಜೆ ಮಾಡಬೇಕೆಂದು ಅಭಿಪ್ರಾಯಪಡುತ್ತಾರೆ.

'ಸರ್ವದೇವಮಯಂಲಿಂಗಂ ಪೃಥವ್ಯಾಂಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿಚ ಎಲ್ಲ ದೇವರ ಸ್ವರೂಪವಾದ, ಎಲ್ಲ ತೀರ್ಥಕ್ಷೇತ್ರಗಳಂತೆ ಪವಿತ್ರವಾದ, ಮತ್ತು ಎಲ್ಲಾ ತೀರ್ಥಕ್ಷೇತ್ರಗಳನ್ನು ಒಳಗೊಂಡಿರುವ ಲಿಂಗವನ್ನು ಪೂಜಿಸಬೇಕು.

ವೀರಶೈವನು ಅನ್ಯದೈವಕ್ಕೆ ಪೂಜಿಸುವ ಆಗತ್ಯವಿಲ್ಲ. ತೀರ್ಥಕ್ಷೇತ್ರಗಳಿಗೆ ಹೋಗುವ ಅವಶ್ಯಕತೆ ಇಲ್ಲ. ಎನ್ನುವುದನ್ನು ಆಗಮಕಾರರು ಸ್ಪಷ್ಟಪಡಿಸುತ್ತಾರೆ. ಯಂತ್ರಗಳ ವಿಚಾರವನ್ನು ತಿಳಿಸುತ್ತಾರೆ, ಆಗಮಕಾರರು ಪ್ರಣವ ಸಹಿತ, ಪ್ರಣವ ರಹಿತ ಮಂತ್ರಗಳ ಮಹತ್ವವನ್ನು ತಿಳಿಸುತ್ತಾ, ಷಡಾಕ್ಷರಿ (ಓಂ ನಮಃ ಶಿವಾಯ), ಪಂಚಾಕ್ಷರಿ (ನಮಃ ಶಿವಾಯ) ಈ ಮಂತ್ರಗಳು ಸಮಸ್ತ ಫಲದಾಯಕವಾಗಿವೆ ಎಂದು ಅಭಿಪ್ರಾಯಪಡುತ್ತಾರೆ. ಮತ್ತು ನದಿಗಳಲ್ಲಿ ಗಂಗೆ, ಸ್ತ್ರೀಯರಲ್ಲಿ ಪಾರ್ವತಿ, ಕ್ಷೇತ್ರಗಳಲ್ಲಿಕಾಶಿ ಇದ್ದಂತೆ, ಮಂತ್ರಗಳಲ್ಲಿ ಪಂಚಾಕ್ಷರಿ, ಸ್ತ್ರೀ ಶೂದ್ರರಿಗೂ, ಈ ಮಂತ್ರವನ್ನು ಉಪದೇಶಿಸಬೇಕು ಎನ್ನುವ ಉದಾತ್ತ ವಿಚಾರವನ್ನು ಸೂಕ್ಷ್ಮಾಗಮ ವಿವರಿಸುತ್ತದೆ. ಅಲ್ಲದೆ ಮಂತ್ರಜಪದಲ್ಲಿ

'ವಾಚಕ', 'ಉಪಾಂಶು' 'ಮಾನಸ' ಎಂದು ಮೂರು ವಿಧ. ಇವುಗಳಲ್ಲಿ ಮಾನಸ ಜಪವೇ ಶ್ರೇಷ್ಠವೆಂದು ಅದು ನಿರ್ಣಯಿಸುತ್ತದೆ.

ವೀರಶೈವ ಧರ್ಮದಲ್ಲಿ ಅಷ್ಟಾವರಣವೇ ಅಂಗ. ಪಂಚಾಚಾರವೇ ಪ್ರಾಣ. ಷಟ್‌ಸ್ಥಲವೇ 'ಆತ್ಮ' ಎನ್ನುವ ಮಾತು ಇದೆ. ಇವುಗಳ ಕಲ್ಪನೆಯನ್ನು ಆಗಮಗಳಲ್ಲೇ ಕಾಣಬಹುದಾಗಿದೆ.

ಅಷ್ಟಾವರಣ ಕಲ್ಪನೆ

ಗುರುರ್ಲಿಂಗಂ ಜಂಗಮಶ್ಚ ತೀರ್ಥಂಚೈವ ಪ್ರಸಾದಕ:।
ಭಸ್ಮ ರುದ್ರಾಕ್ಷ ಮಂತ್ರಶ್ಚ ಅಷ್ಟಾವರಣ ಸಂಜ್ಞಕಾಃ॥

ಎಂದು-ಗುರು-ಲಿಂಗ-ಜಂಗಮ ಪಾದೋದ-ಪ್ರಸಾದ-ಭಸ್ಮ-ರುದ್ರಾಕ್ಷ-ಮಂತ್ರ ಇವು ಅಷ್ಟಾವರಣಗಳು. ಇವುಗಳ ವಿಸ್ತಾರವಾದ ವಿವರಣೆಯನ್ನು ಚಂದ್ರಜ್ಞಾನಾಗಮ ಮತ್ತು ಪರಮೇಶ್ವರಾಗಮಗಳಲ್ಲಿ ಕಾಣುತ್ತೇವೆ.

ಪಂಚಾಚಾರ ಕಲ್ಪನೆ

ಪಂಚಾಚಾರದ ಕಲ್ಪನೆಗೆ, ಚಂದ್ರಜ್ಞಾನಾಗಮ ಮೀಸಲಾಗಿದೆ. ಅಲ್ಲಿ ಪಂಚಾಚಾರಗಳ ತಾತ್ವಿಕ ವಿವರಣೆಯನ್ನು ಕಾಣುತ್ತೇವೆ.

ಲಿಂಗಾಚಾರ : ಸದಾಚಾರ : । ಶಿವಾಚಾರಸ್ತಥೈವಚ ।
ಗಣಾಚಾರೋ ಭೃತ್ಯಾಚಾರಃ। ಪಂಚಾಚಾರಃ ಪ್ರಕೀರ್ತಿತಾಃ॥
(ಚಂ. ಪ. 9, ಶ್ಲೋ 1)

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಈ ಐದು ಪಂಚಾಚಾರಗಳು

1. ಗುರು ಕರುಣಿಸಿದ ಲಿಂಗದ ಹೊರತು ಬೇರೆ ದೈವವಿಲ್ಲೆಂದು ಭಾವದಲ್ಲಿ ಅನುಸಂಧಾನ ಮಾಡುವುದೇ ಲಿಂಗಾಚಾರ.
2. ಧರ್ಮದಿಂದ ಸಂಪಾದಿಸಿದ ಧನದಿಂದ, ಗುರು-ಲಿಂಗ-ಜಂಗಮರಿಗೆ ಸಂತರ್ಪಣೆ ಮಾಡುವುದೇ ಸದಾಚಾರ.
3. ಶಿವನೇ ಪರಬ್ರಹ್ಮ ಆತ್ಮನನ್ನು ಬಿಟ್ಟರೆ ಬೇರೆ ಗತಿಯಿಲ್ಲೆಂದರಿವುದೇ ಶಿವಾಚಾರ
4. ಶಿವನ, ಶಿವಭಕ್ತನ, ಶಿವಧರ್ಮದ, ಶಿವಮಂತ್ರ ಮೊದಲಾದುದರ ನಿಂದೆಯನ್ನು ಕೇಳದಿರುವುದೇ ಗಣಾಚಾರ.
5. ಈ ಭೂಮಿಯಲ್ಲಿರುವ ಸರ್ವ ಶಿವಭಕ್ತರು, ಶ್ರೇಷ್ಠರು. ಅವರ ಭೃತ್ಯನು ನಾನು ಎಂದರಿತು ಆಚರಿಸುವುದ ಭೃತ್ಯಾಚಾರ.

- ಹೀಗೆ ಪಂಚಾಚಾರಗಳ ಕಲ್ಪನೆ ಶಿವಾಗಮಗಳಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ.

ಷಟ್‌ಸ್ಥಲದ ಪರಿಕಲ್ಪನೆ

'ಶೈವ ದೀಕ್ಷಾ ಕಲ್ಪವೃಕ್ಷಂ ।ತತ್ ಫಲಂ ಸ್ಥಲಷಟ್ಕಂ' ಅಂದರೆ ಶಿವದೀಕ್ಷೆ ಕಲ್ಪವೃಕ್ಷವಾದರೆ ಅದರ ಫಲವೇ ಷಟ್‌ಸ್ಥಲವೆಂದು ಆಗಮ ಸೊಗಸಾದ ದೃಷ್ಟಾಂತದೊಂದಿಗೆ ತಿಳಿಸುತ್ತದೆ.

ಪರಮೇಶ್ವರಾಗಮ ಮತ್ತು ಸೂಕ್ಷ್ಮಾಗಮಗಳಲ್ಲಿ ಷಟ್‌ಸ್ಥಲದ ವಿಚಾರ ವಿವರಣಾತ್ಮಕವಾಗಿ ಬರುತ್ತದೆ.

ಭಕ್ತ ಮಹೇಶ್ವರಶ್ಚೈವ । ಪ್ರಸಾದೀ ಪ್ರಾಣಲಿಂಗಿಕಃ।
ಶರಣಃ ಶಿವಲಿಂಗೈಕ್ಯಃ।ಸ್ಥಳಷಟಕಂ ಮಮಪ್ರಿಯಂ॥ (ಪ.ಪ.6, ಶ್ಲೋ 6)

ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ-ಎಂಬ ಆರು ಸ್ಥಲಗಳು. ಇವು ಅಂಗಸ್ಥಲಗಳು. ಗುರುಲಿಂಗ, ಆಚಾರಲಿಂಗ, ಪ್ರಸಾದಲಿಂಗ, ಚರಲಿಂಗ, ಶಿವಲಿಂಗ ಮತ್ತು ಮಹಾಲಿಂಗ ಇವು ಲಿಂಗಸ್ಥಲಗಳು. ಅಂಗಸ್ಥಲದೊಳಗಿನ ಒಂದೊಂದು ಲಿಂಗಸ್ಥಲದೊಳಗಿನ ಒಂದೊಂದನ್ನು ಕ್ರಮವಾಗಿ (6 ×6) ಕೂಡಿ 36 ಸ್ಥಲಗಳ ಕಲ್ಪನೆ ಇದೆ. (ಸೂಕ್ಷ್ಮಾಗಮ). ಇದೇ ಸೂಕ್ಷ್ಮಾಗಮದಲ್ಲಿ ದೇಹಾದಿಗಳ ಅಭಿಮಾನ ಬಿಟ್ಟವನು ಭಕ್ತ. ಅಮಲ ಚಿತ್ತ ಉಳ್ಳವನು ಮಹೇಶ. ಶುದ್ಧ ಚಿತ್ತನಾದವನು ಪ್ರಸಾದಿ. ಜೀವಭ್ರಮೆ ಬಿಟ್ಟು ಲಿಂಗವೇ ಆತ್ಮವೆಂದು ತಿಳಿದವನು ಪ್ರಾಣಲಿಂಗಿ. ಶಿವನ ನಿತ್ಯತ್ವವನ್ನು ಅರಿತು ನಿಶ್ಚಿಂತನಾಗಿ, ಆನಂದದಿಂದಿರುವವನು ಶರಣನು. ಶಿವ ಜೀವರ ಐಕ್ಯವನ್ನು ಅನುಭವಿಸುವವನು - ಐಕ್ಯನು ಎನ್ನುವ ವಿಶಿಷ್ಟ ವಿಚಾರವಿದೆ. ಪರಮೇಶ್ವರಾಗಮದಲ್ಲಿ ಇನ್ನೊಂದು ರೀತಿಯ ವಿವರಣೆ ಇದೆ : (ಪ. 6, ಶ್ಲೋ 32) ಸರ್ವಜ್ಞತ್ವವೇ ಭಕ್ತ; ತೃಪ್ತಿಯೇ ಮಹೇಶ್ವರ; ನಿರಂಕುಶ ಬೋಧೆ ಪ್ರಸಾದಿ; ಸ್ವಾತಂತ್ರ್ಯ ಪ್ರಾಣಲಿಂಗಿ, ಅಲುಪ್ತಿ ಶಕ್ತಿ ಶರಣ; ಅನಂತ ಶಕ್ತಿ ಐಕ್ಯ. ಮತ್ತು ಇದೇ ಆಗಮದಲ್ಲಿ ಷಟ್‌ಸ್ಥಲವನ್ನು ಕುರಿತು ಬೇರೊಂದು ರೀತಿಯಲ್ಲಿ ವಿವರಿಸಲಾಗಿದೆ. ಭಕ್ತಸ್ಥಲ ನಿರಹಂಕಾರಿ: ಮಹೇಶ ಸ್ಥಲದಲ್ಲಿ ಸುಚಿತ್ತ; ಪ್ರಸಾದಿ ಸ್ಥಲದಲ್ಲಿ ಸುಬುದ್ಧಿ; ಪ್ರಾಣಲಿಂಗ ಸ್ಥಲದಲ್ಲಿಸುಮನಸ್ಕ; ಶರಣಸ್ಥಲದಲ್ಲಿ ಸುಜ್ಞಾನಿ; ಐಕ್ಯಸ್ಥಲದಲ್ಲಿ ಶಿವೈಕ್ಯ ಭಾವದವನಾಗಿರಬೇಕೆಂದು ತಿಳಿಸುತ್ತದೆ. ಸೂಕ್ಷ್ಮಾಗಮದಲ್ಲಿ ಮತ್ತೊಂದು ವಿಶಿಷ್ಟ ರೀತಿಯ ಆಲೋಚನೆ ಇದೆ. ರುದ್ರಾಕ್ಷಧಾರಣ ಭಕ್ತಸ್ಥಲ, ಷಡಕ್ಷರ ಜಪ ಮಹೇಶ್ವರ ಸ್ಥಲ, ಲಿಂಗಪೂಜೆ ಪ್ರಸಾದಿ ಸ್ಥಲ, ಅನುಭವದಿಂದ ಆರಾಧಿಸುವುದು ಪ್ರಾಣಲಿಂಗಿ ಸ್ಥಲ, ಪ್ರಸಾದವನ್ನು ಸೇವಿಸುವುದು ಶರಣಸ್ಥಲ, ಪ್ರಸಾದ ಭೋಗದಿಂದ ತೃಪ್ತನಾಗುವುದು ಐಕ್ಯಸ್ಥಲ. ಹೀಗೆ ಆಗಮಗಳಲ್ಲಿ ಷಟ್‌ಸ್ಥಲದ ಕಲ್ಪನೆ ವೈವಿಧ್ಯಮಯವಾಗಿದೆ. ವೈಶಿಷ್ಟ್ಯಪೂರ್ಣವಾಗಿದೆ. ಷಟ್‌ಸ್ಥಲಗಳ ವಿವರಣೆ ವಿಭಿನ್ನವಾಗಿ ಕಂಡರೂ ತಾತ್ವಿಕವಾಗಿ ಷಟ್‌ಸ್ಥಲದ ಆಶಯ ಒಂದೇ ಆಗಿದೆ. ಆಗಮಗಳಲ್ಲಿ 36 ಸ್ಥಲಗಳ ಕಲ್ಪನೆ ಇದೆ. ಸಿದ್ಧಾಂತಾಗಮವೆಂದೂ, ಶಿವಾಗಮಗಳ ಸಾರಸರ್ವಸ್ವವೆಂದೂ ಹೆಸರಾದ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರಪ್ರಥಮವಾಗಿ ಏಕೋತ್ತರ (101) ಸ್ಥಲಗಳ ಕಲ್ಪನೆ ಇದೆ. ಶಿವಾಗಮಗಳಲ್ಲಿ (ಈಗ ಉಪಲಬ್ಧವಿರುವ) ಎಲ್ಲೂ ಏಕೋತ್ತರ ಶತಸ್ಥಲಗಳ ವಿಚಾರ ಪ್ರಸ್ತಾಪವಾದಂತೆ ಕಂಡುಬರುವುದಿಲ್ಲ.

ದೀಕ್ಷೆಯ ಪರಿಕಲ್ಪನೆ

ಆಗಮಗಳಲ್ಲಿ ಗರ್ಭಾದಾನದಿಂದ ಅಂತ್ಯಸಂಸ್ಕಾರದವರೆಗೂ ಸಂಸ್ಕಾರಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ ಪ್ರಮುಖವಾದ ದೀಕ್ಷಾ ಸಂಸ್ಕಾರವನ್ನು ಕುರಿತು ಆಗಮಗಳ ಪರಿಕಲ್ಪನೆಯನ್ನು ಗಮನಿಸಬಹುದು :

ದೀಯತೇ ಲಿಂಗ ಸಂಬಂಧಃ। ಕ್ಷೀಯತೇ ಕರ್ಮ ಸಂಚಯಃ।

(ಸೂ. ಪ. 8, ಶ್ಲೋ8)

ಲಿಂಗ ದೀಕ್ಷೆಯಿಂದ ಕರ್ಮತ್ರಯಗಳು ನಾಶವಾಗುತ್ತವೆ. ದೀಕ್ಷೆ ಇಲ್ಲದೆ ಲಿಂಗಧಾರಣೆ ಕೂಡದು ಎಂದು (ಪಾರಮೇಶ್ವರ ಆಗಮ, ಪ. 1, ಶ್ಲೋ 74) ಎಚ್ಚರಿಸುತ್ತದೆ. ಇಷ್ಟ, ಪ್ರಾಣ, ಭಾವ ಲಿಂಗಗಳಿಗೆ ಅನ್ವಯಿಸುವಂತೆ ವೇಧಾ, ಕ್ರಿಯಾ, ಮಂತ್ರವೆಂದು ದೀಕ್ಷೆಗಳಲ್ಲಿ ಮೂರು ವಿಧ. ಸಾಧಕನ ಜೀವನದಲ್ಲಿ ದೀಕ್ಷೆ ಶಿಕ್ಷೆ, ಅನುಭಾವ ಮೂರು ಮಹತ್ವದ ಮೆಟ್ಟಿಲುಗಳು. ಗುರುವಿನಿಂದ ಪಡೆಯುವ ದೀಕ್ಷೆಯಿಂದ ಜೀವ, ಶಿವರ ಜ್ಞಾನ ಉಂಟಾಗುತ್ತದೆ. ಈ ಜ್ಞಾನವನ್ನು ಅನುಭವಿಸುವುದು 'ಅನುಭಾವ' (ಸೂ. ಪ. 8, ಶ್ಲೋ 7-10) ಇತ್ಯಾದಿ ವಿಚಾರಗಳು ಆಗಮಗಳಲ್ಲಿ ವಿವರವಾಗಿ ಪ್ರಸ್ತಾಪಿತವಾಗಿವೆ.

ಪರಮೇಶ್ವರ ಮತ್ತು ಸೂಕ್ಷ್ಮ ಆಗಮಗಳಲ್ಲಿ ಗುರುವಿನ ಮಹತ್ವ ವಿಸ್ತಾರವಾಗಿ ವರ್ಣಿತವಾಗಿದೆ : 'ಗು' ಅಂದರೆ ಅಂಧಕಾರ, 'ರ' ಎಂದರೆ ಅದನ್ನು ಕಳೆಯುವುದು ಎಂದು ನಿರ್ವಚನ ನೀಡಿ ಗುರುಕೃಪೆ ಪರಮಾತ್ಮನ ಕೃಪೆಯಷ್ಟೇ ಮಹತ್ವದ್ದು ಎಂದು ಘೋಷಿಸುತ್ತವೆ.

ದೀಕ್ಷಾಸಂಸ್ಕಾರ ಸ್ತ್ರೀಪುರುಷರಿಗೂ ಸಮಾನವಾಗಿದೆ. ಧಾರ್ಮಿಕ ಸ್ವಾತಂತ್ರ್ಯ ಸ್ತ್ರೀಪುರುಷರಿಗೂಸಮಾನ ಎನ್ನುವ ಉದಾತ್ತ ವಿಚಾರವನ್ನು ಆಗಮಗಳಲ್ಲೇ ನಾವು ಕಾಣುತ್ತೇವೆ.

ಅದೀಕ್ಷಾ ಸಂಸ್ಕೃತಾ ನಾರೀ। ದೀಕ್ಷಿತಸ್ಯ ನಿಜೇಶಿತುಃ।
ನಯೋಗ್ಯ ಪರಿಚರ್ಯಾಯೈ। ದೀಕ್ಷಿತಾಯಾ ಸತೀತಃ ॥
ಅದೀಕ್ಷಾ, ಸಂಸ್ಕೃತಾನಾರೀ। ಯಂಯಂ ಪಾಕಂ ಕರೋತಿ ಚ
ಸ ನೈವಾರ್ಹತಿ ಕಿಲ ಪಾಕೋಽಯಂ ನಿವೇದಿತಂ ॥

ದೀಕ್ಷಾ ಸಂಸ್ಕಾರವಿಲ್ಲದ ಹೆಂಡತಿ, ದೀಕ್ಷಾ ಸಂಸ್ಕಾರವುಳ್ಳ ಗಂಡನ ಸೇವೆಗೆ ಯೋಗ್ಯಳಲ್ಲ. ಅಷ್ಟೇ ಅಲ್ಲ, ಅವಳ ಅಡಿಗೆ ನೈವೇದ್ಯಕ್ಕೆ ಸಲ್ಲದು ಎಂದು ಕಾರಣಾಗಮ ಸ್ತ್ರೀಯರಿಗೂ ದೀಕ್ಷೆಯ ಅಗತ್ಯವನ್ನು ತಿಳಿಸುತ್ತದೆ.

ವರ್ಣ-ಜಾತಿ ಪರಿಕಲ್ಪನೆ

ವೀರಶೈವರು ಪ್ರಾಕೃತ ವರ್ಣಾಶ್ರಮ ಧರ್ಮವನ್ನು ಮನ್ನಿಸುವುದಿಲ್ಲ. ಆದ್ದರಿಂದ ಅವರು ಅಪ್ರಾಕೃತರು. ವೈದಿಕ ಧರ್ಮದ ವರ್ಣಾಶ್ರಮ ಪದ್ಧತಿ ಇವರಿಗೆ ಅನ್ವಯವಾಗುವುದಿಲ್ಲ.

ಆದ್ದರಿಂದ ಇವರು ಅತಿ ವರ್ಣಾಶ್ರಮಿಗಳು. ಅಂದರೆ ವರ್ಣಾಶ್ರಮ ಪದ್ಧತಿಯನ್ನು ಮೀರಿದವರು ಎಂದು ಆಗಮಗಳು ಪ್ರತಿಪಾದಿಸುತ್ತವೆ. 'ದೀಕ್ಷೆಯನ್ನು ಹೊಂದಿದ ವೀರಶೈವನು ಅಥವಾ ವೀರಶೈವಳು ಪೂರ್ವಜಾತಿಗಳನ್ನು ನೋಡಬಾರದು' (ಸೂ. ಪ. 5, ಶ್ಲೋ 63-64).

''ವೀರಶೈವರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಹಾಗೂ ಸ್ತ್ರೀ ಎಲ್ಲ ಜಾತಿಯವರೂ ಇದ್ದಾರೆ. ಲಿಂಗಾಧರಣೆ ಮಾಡಿದರೆ ಸಾಕು ಅವರೆಲ್ಲ ನನ್ನವರು (ಪಾ. ಪ. , ಶ್ಲೋ 56-59)

''ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮಂತ್ರ-ಈ ಅಷ್ಟಾವರಣಗಳಿಂದ ಕೂಡಿದವರು ವೀರ ಮಾಹೇಶ್ವರರು. ಇವರಲ್ಲಿ ಜಾತಿಭೇದವಿಲ್ಲ. (ಪಾ.ಪ.7, ಶ್ಲೋ 53-55)

ಚಂಡಾಲ ವಾಟಿಕಾಯಂ ವಾ ಶಿವಭಕ್ತ : ಸ್ಥಿತೋಯದಿ
..... ತದ್‌ಗೃಹಂ ಶಿವಮಂದಿರಂ (ಪಾರಮೇಶ್ವರ)

- ಲಿಂಗವಿದ್ದ ಭಕ್ತನ ಮನೆ ಕೈಲಾಸ, ಅದು ಹೀನ ಕುಲದವನ ಮನೆಯಾದರೂ.

''ವೀರಶೈವರ ಪೂರ್ವಾಶ್ರಮದ ಜಾತಿಯನ್ನು ಹೇಳಿದರೆ, ಹಾಗೂ ಕೇಳಿದರೆ ಅವನು ಪರಮ ಪಾತಕಿ'' (ಪರಮೇಶ್ವರಾಗಮ)

ನ ಬಾಲ ವೃದ್ಧೋ ಭೇಧೋಸ್ತಿ। ನಮಸ್ಕಾರಾದಿ ಪೂಜನೇ।
ಸರ್ವೇಽಪಿ ವಂದನೀಯಾಹಿ। ವಿಧವಾ : ಪುಷ್ಪಿಣೀಯಥಾ ॥

ವೀರಶೈವ ದೀಕ್ಷೆಯನ್ನು ಹೊಂದಿದವರು ಸಣ್ಣವರಾಗಲಿ, ದೊಡ್ಡವರಾಗಲಿ, ವಿಧಾವಾ ಸ್ತ್ರೀಯಾಗಲಿ, ಮುತ್ತೈದೆಯರಾಗಲಿ ಎಲ್ಲರೂ ಸಮಾನ ಗೌರವಕ್ಕೆ ಪಾತ್ರರು.

ವೀರಶೈವ ಧರ್ಮದಲ್ಲಿ ಸ್ತ್ರೀಪುರುಷರಲ್ಲಿ ಬೇದವಿಲ್ಲ; ವರ್ಣಾಶ್ರಮದ ಭೇದವಿಲ್ಲ. ಎಲ್ಲರನ್ನು ಸಮಾನವಾಗಿ ಗೌರವದಿಂದ ಕಾಣುವುದೇ ಈ ಧರ್ಮದ ವೈಶಿಷ್ಟ್ಯ

ಶಿವ ಸಂಸ್ಕಾರ ಯುಕ್ತೇಷು। ಜಾತಿ ಭೇದೋ ನವಿದ್ಯತೆ
ಕಾಷ್ಠೇಷು ವಹ್ನಿಧಗ್ದೇಷು। ಯಥಾರೂಪಂ ನವಿದ್ಯತೆ ॥ (ಪಾ. ಪ. 5, ಶ್ಲೋ 41)

ಪರಮೇಶ್ವರಾಗಮದ ಈ ಶ್ಲೋಕ ಅರ್ಥಪೂರ್ಣವಾಗಿದೆ. ನಾನಾಜಾತಿಯ ಸೌದೆಗಳು ಅಗ್ನಿಗೆ ಬಿದ್ದು ಭಸ್ಮವಾಗಿ ತಮ್ಮ ನಾಮರೂಪಗಳನ್ನು ತ್ಯಜಿಸುವಂತೆ ದೀಕ್ಷೆಯನ್ನು ಹೊಂದಿದ ವೀರಶೈವರು ತಮ್ಮ ಪೂರ್ವಾಶ್ರಮದ ಜಾತಿಗಳಿಂದ ಬಿಡುಗಡೆ ಹೊಂದುತ್ತಾರೆ. ಹಿಂದಿನ ಜಾತಿಗಳನ್ನು ಕಳೆದುಕೊಂಡು ಎಲ್ಲರೂವೀರಶೈವರಾಗುತ್ತಾರೆ. ವರ್ಣ ಜಾತಿಯನ್ನು ಕುರಿತು ಇಂತಹ ಪ್ರಗತಿಪರ, ವೈಚಾರಿಕ ವಿವೇಚನೆ, ಆಧುನಿಕರೂ ತಲೆದೂಗುವಂತೆ ಆಗಮಗಳಲ್ಲಿ ಪ್ರತಿಪಾದಿತವಾಗಿದೆ.

'ಭಕ್ತ' ನ ಪರಿಕಲ್ಪನೆ

ಭಕಾರಾದ್ಭವ ಇತ್ಯುಕ್ತ:। ಕ ಕಾರಾತ್ಕಲುಷಂಭವೇತ್।
ತತಃ ಸಂತ್ರಾಯತೇ ತಸ್ಮಾತ್। 'ಭಕ್ತ' ಇತ್ಯುಚ್ಯತೆ ಬುಧೈ:॥ (ಸೂಕ್ಷ್ಮ)

'ಭ' ಎಂದರೆ, ಭವ 'ಕ' ಎಂದರೆ ಮಲ, 'ತ' ಎಂದರೆ ಭವದೋಷದಿಂದ ಬಿಡುಗಡೆ. ಜನನ ಮರಣ, ಮಲತ್ರಯ ದೋಷಗಳಿಂದ ಬಿಡುಗಡೆ ಹೊಂದಿದವನು 'ಭಕ್ತ' ಭಕ್ತ ಶಬ್ದದ. ಈ ಅರ್ಥಪೂರ್ಣ ನಿರುಕ್ತಿ ಆಗಮಗಳಲ್ಲೇ ದೊರೆಯುತ್ತದೆ.

'ಭವಿ-ಭಕ್ತ' ಪರಿಕಲ್ಪನೆ

ಆಗಮಗಳಲ್ಲಿ, ವೀರಶೈವ ಸಾಂಸ್ಕೃತಿಕ ಹಿನ್ನೆಲೆಯಲ್ಲಿ, ಲಿಂಗಧಾರಿಯಾಗಿ, ಸದಾಚಾರ ಸಂಪನ್ನನು 'ಭಕ್ತ; ಅಲಿಂಗಿಯಾಗಿ, ಅನಾಚಾರಿಯಾಗಿದ್ದರೆ ಅವನನ್ನು 'ಭವಿ' ಎಂದು ಕರೆಯುತ್ತಾರೆ.

ಚಾಂಡಾಲೇನಾಪಿ ದೇವೇಶಿ। ಸಂಸ್ಪೃಷ್ಟಂ ದೃತಲಿಂಗಿನಾ।
ಯೋಗ್ಯಂಸಾದನ್ನಪಾನಾದಿ। ನ ಶ್ರೇಷ್ಠೋ ನಾಪಿ ಲಿಂಗಿನಾ॥ (ಸೂಕ್ಷ್ಮ)

ಹೀನ ಕುಲದವನಾದರೂ ಲಿಂಗಧಾರಿಯಾಗಿದ್ದರೆ, ಅನ್ನ-ಪಾನ (ಊಟೋಪಚಾರ)ಗಳನ್ನು ಮಾಡಬಹುದು. ಉಚ್ಚಜಾತಿಯವನಾದರೂ ಅಲಿಂಗಿಯಾದರೆ, ಅವರಲ್ಲಿ ಅನ್ನಪಾನಾದಿಗಳನ್ನು ಮಾಡಬಾರದೆಂದು ಆಗಮಗಳು ಶಾಸನ ಮಾಡುತ್ತವೆ. ಅಷ್ಟೇ ಅಲ್ಲ, ತಂದೆ-ತಾಯಿಗಲು ಭವಿಗಳಿದ್ದರೂ ಅವರ ಸಂಗ ಬೀಡಬೇಕೆಂದು ಅಜ್ಞಾಪಿಸುತ್ತವೆ.

ವೃತ್ತಿ (ಕಾಯಕ) ಕಲ್ಪನೆ

ಆಗಮಗಳಲ್ಲಿ ವೃತ್ತಿಗೂ ಗೌರವದ ಸ್ಥಾನವಿದೆ. ಸೂಕ್ಷ್ಮಾಗಮ ಇದನ್ನು ಅರ್ಥಪೂರ್ಣವಾಗಿ ಉಲ್ಲೇಖಿಸುತ್ತದೆ.

ಯೇನಕೇನಾಪಿ ಮಾರ್ಗೇಣ। ಯೇಕೇನಚ ಕರ್ಮಣಃ।
ಶಿವೈಕನಿಷ್ಠ ಮನಸಃ ಭಕ್ತಾಸ್ತೇಜೊತ್ತಮೋತ್ತಮಾಃ॥ (ಸೂಕ್ಷ್ಮ)

ಉದ್ಯೋಗಗಳು (ವೃತ್ತಿ) ಬೇರೆ ಬೇರೆಯಾದರೂ, ಅವುಗಳನ್ನು ದೈವಸಾಕ್ಷಿಯಾಗಿ (ಸತ್ಯ ಶುದ್ಧವಾಗಿ) ಮಾಡಬೇಕು. ಹಾಗೆ ನಿಷ್ಠೆಯಿಂದ ಉದ್ಯೋಗ ಮಾಡುವವರೇ 'ಉತ್ತಮೋತ್ತಮ ಭಕ್ತರು' ಎಂದು ವೃತ್ತಿ ಗೌರವವನ್ನು ಎತ್ತಿಹಿಡಿಯುತ್ತದೆ.

ದಾಸೋಹ ಕಲ್ಪನೆ

ಆಗಮಗಳಲ್ಲಿ ದಾಸೋಹ ಕಲ್ಪನೆ ವೈಶಿಷ್ಟ್ಯಪೂರ್ಣವಾಗಿ ಉಲ್ಲೇಖವಾಗಿದೆ. 'ವೀರಾಗಮ' ದಾಸೋಹ ಕಲ್ಪನೆಯನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸುತ್ತದೆ.

ದಾಸೋಹಂ ಪ್ರಮಥಾಮೋಕ್ಷಂ
ವದಂತೀ ತೀ ನ ಸಂಶಯಃ॥ (ವೀರಾಗಮ)

ಇಲ್ಲಿ 'ಪ್ರಮಥಾ' ಎಂದರೆ ಗುರು-ಲಿಂಗ-ಜಂಗಮರು ಎಂದು ಅರ್ಥವಿದೆ. ಗುರು

ಲಿಂಗ ಜಂಗಮರಿಗೆ ಮಾಡುವ ದಾಸೋಹವು (ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ) ಮೋಕ್ಷಕ್ಕೆ ಕಾರಣವಾಗುತ್ತದೆ. ಇದರಲ್ಲಿ ಸಂಶಯವಿಲ್ಲ ಎಂದು ದಾಸೋಹದ ಪಾವಿತ್ರ್ಯವನ್ನು ಮಾರ್ಮಿಕವಾಗಿ ಪ್ರತಿಪಾದಿಸುತ್ತದೆ.

ಗುರು-ಲಿಂಗ-ಜಂಗಮ

ಪರಿಕಲ್ಪನೆ

ಎಲ್ಲ ಆಗಮಗಳೂ ಗುರು-ಜಂಗಮ-ಲಿಂಗಗಳುಸಮಾನವೆಂದೇ ಪರಿಭಾವಿಸುತ್ತವೆ. ಈ ವಿಚಾರದಲ್ಲಿ ಸೂಕ್ಷ್ಮಾಗಮದ ಅಭಿಪ್ರಾಯ ಹೀಗಿದೆ :

ಏಕಮೂರ್ತಿಸ್ತ್ರಯೋಭಾಗಃ ಗುರುರ್ಲಿಂಗಂತು ಜಂಗಮಃ।
ಜಂಗಮಶ್ಚ ಗುರುರ್ಲಿಂಗಂ ತ್ರಿವಿಧಂ ಲಿಂಗಮುಚ್ಯತೇ॥

ಗುರು-ಲಿಂಗ-ಜಂಗಮರು ಒಂದೇ ದೈವೀಶಕ್ತಿಯ ಮೂರು ರೂಪಗಳು. ಮತ್ತು ಜಂಗಮ-ಗುರು-ಲಿಂಗ ಈ ಮೂರು ಲಿಂಗಸ್ವರೂಪ, ಸಾಕ್ಷಾತ್ ದೈವ ಸ್ವರೂಪವೆಂದು ಎಲ್ಲ ಆಗಮಗಳೂ ಈ ತತ್ವವನ್ನು ಏಕಪ್ರಕಾರವಾಗಿ ಪ್ರತಿಪಾದಿಸುತ್ತವೆ. ಗುರುಗಳು-ಗುರುಗಳಲ್ಲೂ, ಜಂಗಮರು-ಜಂಗಮರಲ್ಲೂ, ಗುರು-ಜಂಗಮರಲ್ಲೂ ಭೇದವ ಎಣಿಸಬಾರದು. ಎಲ್ಲರೂ ಸಮಾನರು, ಪೂಜ್ಯರು ಎಂಬುದು ಆಗಮಕಾರರ ಮತ.

ಜಂಗಮೋ ಜಂಗಮಂ ದೃಷ್ಟ್ವಾ। ನ ಪ್ರಣಾಮಂ ಕರೋತಿಯಃ।
ಸ ಏವ ಜಂಗಮ ದ್ರೋಹಿ। ಮದ್ರೋಹೀಚ ನ ಸಂಶಯಃ॥
(ಸೂ. 7, ಶ್ಲೋ 89-91)

ಒಬ್ಬ ಜಂಗಮ ಇನ್ನೊಬ್ಬ ಜಂಗಮನನ್ನು ಕಂಡಾಗ, ಪ್ರಣಾಮ ಮಾಡಿ ಗೌರವಿಸಬೇಕು. ಹೀಗೆ ಮಾಡದಿದ್ದಲ್ಲಿ ಅವನು ಜಂಗಮದ್ರೋಹಿ ಮತ್ತು ದೈವದ್ರೋಹಿಯಾಗುತ್ತಾನೆ. ಈ ಮಾತು ಗುರುವಿಗೂ ಅನ್ವಯವಾಗುತ್ತದೆ.

ಜ್ಞಾನ-ಕ್ರಿಯಾ ಸಮುಚ್ಚಯ

ವೀರಶೈವ ಸಿದ್ಧಾಂತ ಜ್ಞಾನಕ್ರಿಯಾ ಸಮುಚ್ಚಯಾತ್ಮಕವಾದುದು. ಜ್ಞಾನವೆಂದರೆ 'ಅರಿಯುವುದು, ಕ್ರಿಯೆ ಎಂದರೆ ಆಚರಿಸುವುದು. ಎರಡೂ ಅನ್ಯೋನಾಶ್ರಯಿಗಳು. ಪರಸ್ಪರ ಅವಲಂಬಿಗಳು. ಈ ವಿಚಾರವನ್ನು ಸುಂದರವಾದ ದೃಷ್ಟಾಂತದೊಂದಿಗೆ ಚಂದ್ರಜ್ಞಾನಾಗಮ ಪ್ರತಿಪಾದಿಸುತ್ತದೆ.

ಅಪಶನ್ ಅಂಧಕೋದಗ್ಧ : ಪಶ್ಯನ್ ದಹತಿ ಪಂಗುಲ :।
ಅಂಧಪಂಗುವದನ್ಯೋನ್ಯ ಸಾಪೇಕ್ಷೇ ಜ್ಞಾನಕರ್ಮಣಿ॥ (ಚಂದ್ರಜ್ಞಾನಾಗಮ)

ಕಣ್ಣು ಕಾಣದೆ ಸುಡಿಸಿಕೊಳ್ಳುವವ ಕುರುಡ. ಕಣ್ಣು ಕಂಡರೂ ಸುಡಿಸಿಕೊಳ್ಳುವವನು ಹೆಳವ. ಕುರುಡನೂ ಒಬ್ಬನೇ ನಡೆಯಲಾರ. ಹೆಳವನೂ ಒಬ್ಬನೇ ಮುಂದೆ ಹೋಗಲಾರ.

ಇಲ್ಲಿ ಜ್ಞಾನಿ ಹೆಳವ . ಕರ್ಮಿ ಕುರುಡ. ಎರಡೂ ಅನ್ಯೋನ್ಯಾಶ್ರಯಿಗಳು. ಜ್ಞಾನವಿಲ್ಲದ ಕ್ರಿಯೆ, ಕ್ರಿಯೆಯಿಲ್ಲದ ಜ್ಞಾನ ಎರಡೂ ವ್ಯರ್ಥ.

ವೈಚಾರಿಕತೆ

ಆಗಮಕಾರರು ಜಾತಿ ಪದ್ಧತಿಯನ್ನು ನಿರಾಕರಿಸಿ ದೀಕ್ಷೆಯನ್ನು ಪಡೆದು ಶಿವಭಕ್ತರಾಗಲು ಅರ್ಹರು, ಎನ್ನುವ ವಿಚಾರವನ್ನು ಹಲವಾರು ದೃಷ್ಟಾಂತಗಳೊಂದಿಗೆ ವೈಚಾರಿಕ ನೆಲೆಯಲ್ಲಿ ಚರ್ಚಿಸಿ ಸಮರ್ಥಿಸಿದ್ದಾರೆ.

ಇದೇ ರೀತಿಯಾಗಿ ಲಿಂಗಾಧಾರಿಗಳಾದ ವೀರಶೈವ ಭಕ್ತರಿಗೆ :

ನ ತಿಥಿರ್ನಚ ನಕ್ಷತ್ರಂ। ನ ಯೋಗ ಕರಣಾದಿಕಂ।
ಸಾಮುದ್ರಿಕಂಚ ಭಕ್ತಾನಾಂ । ನಾಸ್ತಿಲಿಂಗಾಂಗ ಸಂಗಿನಾಂ (ಸೂ. ಪ : 7. 98-99)

ತಿಥಿ, ನಕ್ಷತ್ರ, ಯೋಗ, ಕರಣಗಳಿಂದ ಕೂಡಿದ ಪಂಚಾಂಗದ ಹಾಗೂ ಹಸ್ತ ಸಾಮುದ್ರಿಕ ಶಾಸ್ತ್ರ, ಅಂದರೆ 'ಜ್ಯೋತಿಷ್ಯ ಶಾಸ್ತ್ರದ ಅವಶ್ಯಕತೆ ಇಲ್ಲ. ಲಿಂಗಾಂಗಿಗಳು ಈ ಶಾಸ್ತ್ರವನ್ನು ನಂಬಬಾರದೆಂದು ಮಾರ್ಮಿಕವಾಗಿ ತಿಳಿಸುತ್ತಾರೆ. ಮತ್ತು ತೀರ್ಥಯಾತ್ರೆ, ಪುಣ್ಯ ಕ್ಷೇತ್ರ ದರ್ಶನ, ಕೈಲಾಸಪದವಿಯ ಆಕಾಂಕ್ಷೆಗಳನ್ನು ವೀರಶೈವರುತ್ಯಜಿಸಬೇಕು ಎಂದು ತಿಳಿಸುತ್ತಾರೆ.

'ದೇಹೋ ದೇವಾಲಯ : ಪ್ರೋಕ್ತೋ ಜೀವೋದೇವ ಸನಾತನಃ (ಸೂಕ್ಷ್ಮಾಗಮ)

ಲಿಂಗಧಾರಿಯಾದ ವೀರಶೈವನು ತಾನೇ ಸ್ವತಃ ಚಲಿಸುವ ದೇವಾಲಯವಾದ್ದರಿಂದ ಪ್ರತಿಯೊಬ್ಬ ಮಾನವರ ದೇಹವೇ ದೇವಾಲಯವಾಗಿ, ದೇಹದಲ್ಲಿರುವ 'ಜೀವ'ವೇ ದೇವನಾಗಿರುವಾಗ ದೇವಾಲಯಗಳ ಅಗತ್ಯವಿಲ್ಲ. ದೇವಾಲಯಗಳಿಗೆ ಹೋಗಿ ಪೂಜೆ ಮಾಡಿಸುವುದು, ತೀರ್ಥ ಸೇವಿಸುವುದು ನಿಷಿದ್ಧವೆಂದು ಆಗಮಕಾರರ ಅಭಿಪ್ರಾಯ. ದೇವಾಲಯ ಸಂಸ್ಕೃತಿಯ ಬಗ್ಗೆ ಗೌರವವಿರಲಿ ಎಂದೂ ಸೂಚಿಸುತ್ತಾರೆ. ಸ್ವಧರ್ಮದಲ್ಲಿ ನಿಷ್ಠೆ, ಪರಧರ್ಮದಲ್ಲಿ ಸಹಿಷ್ಣುತೆಯನ್ನು ಆಗಮಕಾರರು ಎತ್ತಿಹಿಡಿಯುತ್ತಾರೆ. ಪರಮೇಶ್ವರಾಗಮದಲ್ಲಿ ಒಂದು ಕಡೆ (ಪಾ. ಪ. 2 ಶ್ಲೋ 86-92) ಶುಭ ಮುಹೂರ್ತ ನೋಡಿ ದೀಕ್ಷೆ ಕೊಡಬೇಕು ಎನ್ನುವ ವಿಚಾರವಿದ್ದರೂ, ಮೊದಲು ಮುಹೂರ್ತದ ಬಗ್ಗೆ ಶುಭ ಕಲ್ಪನೆ ಇದ್ದರೂ, ನಂತರ ಆಧ್ಯಾತ್ಮದ ಹಂತದಲ್ಲಿ ಈ ಶಾಸ್ತ್ರದ ಅಗತ್ಯವಿಲ್ಲ ಎನಿಸಿರಬೇಕು. ವೀರಶೈವರಿಗೆ ಜನನ, ಮರಣ, ರಜ, ಉಚ್ಚಿಷ್ಠ ಇತ್ಯಾದಿ ಪಂಚಸೂತಕಗಳು ಅನ್ವಯಿಸುವುದಿಲ್ಲವೆಂದು ಅವುಗಳನ್ನು ಆಚರಣೆಯಲ್ಲಿ ತರಬಾರದೆಂದೂ ಕಠೋರವಾಗಿ ಆಗಮಕಾರರು ಆದೇಶ ನೀಡುತ್ತಾರೆ.

ಆಚರಣೆ

ಆಗಮಗಳಲ್ಲಿ, ವೀರಶೈವ ಆಚರಣೆಯಲ್ಲಿ ಅಳವಡಿಸಿಕೊಳ್ಳಬೇಕಾದ ನಿಯಮಗಳ ಚರ್ಚೆ ಇದೆ. ನಿರ್ಣಯವಿದೆ. ಇದು ಆಗಮಗಳ ವೈಶಿಷ್ಟ್ಯ.

ಲಿಂಗದ ಕರಡಿಗೆ ಹೇಗಿರಬೇಕು ? ಎನ್ನುವ ವಿಚಾರ ಕಾರಣಾಗಮದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

ಚತುರಶ್ರಂ ಪಂಕಜಾಭಂ। ವರ್ತುಲಂ ಬಿಂಬಕೋಪಮಂ।
ಯಥಾ ಸಂದರ್ಶಿತಂ ದೇವಿ । ಗುರುಣಾ ತತ್ತದಾಚರೇತ್ ॥

ಚತುರಸ್ರಕ್ಕೆ ಚೌಕ, ಕಮಲ ಹಾಗೂ ಬಿಂಬದಂತೆ ಗುಂಡಾಗಿರುವುದು ಗುಂಡಗಡಿಗೆ ಏಕ್ಕೆಕಾಯಿ ಮಾವಿನಕಾಯಿ, ಬಿಲ್ವಕಾಯಿಗಳಂತೆ ಇರುವ ಕರಡಿಗೆಗೆ 'ಲಿಂಗದ ಕಾಯಿ' ಎಂದು ಕನ್ನಡದಲ್ಲಿ ಹೇಳುವ ರೂಢಿ ಇದೆ. ಭರಣಿ, ಪೆಟ್ಟಿಗೆಗಳಂತಿದ್ದರೆ 'ಕರಂಡಕ' ಎಂದು ಹೆಸರು. ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ತವರ ಹಾಗೂ ಬಟ್ಟೆಗಳಲ್ಲಿ ಸಜ್ಜೆ ಅಂದರೆ ಕರಡಿಗೆ ಮಾಡಬಹುದು ಎನ್ನುವ ಸೂಚನೆ ಆಗಮಗಳಲ್ಲಿದೆ. ಇಷ್ಟಲಿಂಗದ ಪರಿಕಲ್ಪನೆ ಪ್ರಾಚೀನವಾಗಿರುವಂತೆ. ಇಷ್ಟಲಿಂಗವನ್ನಿಡುವ 'ಕರಂಡಕ'ದ ಕಲ್ಪನೆಯೂ ಪ್ರಾಚೀನವಾಗಿದೆ. ಅದರ ಉಲ್ಲೇಖವನ್ನು ಆಗಮಗಳಲ್ಲಿ ಕಾಣಬಹುದಾಗಿದೆ.

ಕಾರಣಾಗಮದ ನವಮ ಹಾಗೂ ದಶಮ ಪಟಲದಲ್ಲಿ ವೀರಶೈವನು ಅನುಸರಿಸಬೇಕಾದ ನಿಯಮಗಳನ್ನು ಆಗಮಕಾರರ ಸೂಚಿಸಿದ್ದಾರೆ. ಅವು ಪ್ರಶ್ನೋತ್ತರ ರೂಪದಲ್ಲಿವೆ. ಧರ್ಮ ಸೂಕ್ಷ್ಮದ ಆಚರಣೆಯ ಬಗ್ಗೆ ಅವು ಬೆಳಕನ್ನು ಚೆಲ್ಲುತ್ತವೆ. ಕುತೂಹಲಕ್ಕಾಗಿ ಕೆಲವನ್ನು ಇಲ್ಲಿ ಕೊಟ್ಟಿದ್ದೇನೆ.

1.ಪ್ರಶ್ನೆ : ದೀಕ್ಷೆಯನ್ನು ಪಡೆದ ವೀರಶೈವನು ಇತರ ದೇವತಾರ್ಚನೆ ಮಾಡಬಹುದೇ?

ಉತ್ತರ : ರಾಜಸೇವಕನು ರಾಜನಅಪ್ಪಣೆ ಪಡೆದು ಮಂತ್ರಿಗಳಸೇವೆ ಮಾಡುವಂತೆ ಅನಿವಾರ್ಯ ಪಕ್ಷದಲ್ಲಿ ಶಿವಾಜ್ಞೆ ಎಂದುಭಾವಿಸಿ ಇತರ ದೇವತಾರಾಧನೆಯನ್ನು ಮಾಡಬಹುದು.

2. ಪ್ರ: ವೀರಶೈವರು ಬೇರೆ ಜಾತಿಯ ಮಹಾತ್ಮರನ್ನು ಪೂಜಿಸಬಹುದೇ ?

ಉ: ಮಾನಸಿಕವಾಗಿ ಪೂಜಿಸಬಹುದು. ದೈಹಿಕ ಹಾಗೂ ಬಾಹ್ಯಕ್ರಿಯೆಯಿಂದಲ್ಲ.

3.ಪ್ರ : ದೇವತಾ ಪ್ರತಿಷ್ಠಾದಿಗಳಿಗೆ ಯಾರು ಅಧಿಕಾರಿ ?

ಉ : ಲಿಂಗಧಾರಿಯೇ ಅರ್ಹನು.

4.ಪ್ರ: ರಾತ್ರಿ ನಿದ್ರೆಯಲ್ಲಿ ಲಿಂಗದ ಕರಡಿಗೆ ನಮ್ಮ ಕೆಳಗೆ ಬೀಳುವುದು ದೋಷ ಅಲ್ಲವೇ?

ಉ : ನಿಜ. ರಾತ್ರಿ ಮಲಗಿದ್ದಾಗ ಹೆಂಡತಿಯ ಕೈಕಾಲುಗಳು ಪತಿಗೆ ಸೋಂಕಿದ ದೋಷ ಪರಿಹಾರಕ್ಕಾಗಿ ಅವಳು ಮುಂಜಾನೆಎದ್ದ ಕೂಡಲೆ ಪತಿಗೆವಂದಿಸುತ್ತಾಳೆ. ಅದರಂತೆ ವೀರಶೈವನು ಮುಂಜಾನೆ ಎದ್ದ ಕೂಡಲೇ ಕರಡಿಗೆ ಮುಟ್ಟಿ ಲಿಂಗಕ್ಕೆ ನಮಸ್ಕರಿಸಿ ಕ್ಷಮಾಯಾಚಿಸಬೇಕು.

5 ಪ್ರ : ಕ್ಷೌರ ಮಾಡಿಸಿಕೊಳ್ಳುವಾಗ ನಾಪಿತನ, ಸ್ಪರ್ಶವಾಗುತ್ತದೆ. ಅದಕ್ಕೆ ಪರಿಹಾರ?

ಉ : ನಾಪಿತನ ಸ್ಪರ್ಶವಾದರೆ ಪವಮಾನ ಸೂಕ್ತ ಹಾಗೂ ಶ್ರೀರುದ್ರಪಾರಾಯಣ ಮಾಡಬೇಕು.

6.ಪ್ರ : ಶಿವಪೂಜೆಗೆ ಅನಾನುಕೂಲವಾಗಿ ಪತ್ರಪುಷ್ಪಾದಿಗಳು ದೊರೆಯದಿದ್ದರೆ ಅದಕ್ಕೆ ಪರಿಹಾರ?

ಉ : ಮೂಲಮಂತ್ರವನ್ನು ನೂರೆಂಟು ಸಲ ಜಪಿಸಬೇಕು.

7. ಪ್ರ : ಇಷ್ಟಲಿಂಗವು ಕೆಳಗೆ ಬಿದ್ದರೆ ಏನು ಮಾಡಬೇಕು ?

ಉ: ಆ ಲಿಂಗವನ್ನು ಎತ್ತಿಕೊಂಡು ಮೂಲಮಂತ್ರವನ್ನು 108 ಸಲ ಜಪಿಸಬೇಕು. ಮುಂದೆ ಅಂತಹ ಸಂದರ್ಭ ಬರದಂತೆ ಎಚ್ಚರ ವಹಿಸಬೇಕು.

8. ಪ್ರ : ಗುರು ಕೊಟ್ಟ ಲಿಂಗವು ಭಿನ್ನವಾದರೆ ಅಥವಾ ಕಳೆದುಹೋದರೆ ?

ಉ : ಬೇರೆ ಸಜ್ಜರಸ (ಕಾಂತಿ) ಧರಿಸಿ ಕಲಾನ್ಯಾಸಮಾಡಿ ಮೂಲಮಂತ್ರವನ್ನು 108ಸಲ ಜಪಿಸಬೇಕು. ಗುರುಮುಖದಿಂದ ವಿದ್ಯುಕ್ತವಾಗಿ ಲಿಂಗಧಾರಣೆ ಪಡೆಯಬೇಕು. ಲಿಂಗವು ಕಳೆದುಹೋದರೆ, ಪ್ರಾಣವನ್ನೇ ಬಿಡಬೇಕು. ಇಲ್ಲದೆ ಹೋದರೆ, 21 ದಿವಸ ನಿರಾಹಾರಿಯಾಗಿದ್ದು ಮಂತ್ರ ಜಪಿಸುತ್ತಾ ಗುರುಮುಖದಿಂದ ದೀಕ್ಷೆ ಪಡೆಯಬೇಕು.

9 ಪ್ರ : ಹೊಸ ಲಿಂಗವನ್ನು ಧರಿಸಿದ ಮೇಲೆ ಕಳೆದು ಹೋದ ಲಿಂಗವು ದೊರೆತರೆ ?

ಉ : ಕಳೆದ ಲಿಂಗವು ದೊರೆತರೆ ಹೊಸ ಲಿಂಗದಲ್ಲಿ, ಹಳೆಯ ಲಿಂಗದಲ್ಲಿನ ಕಳೆಗಳನ್ನು ಆಕರ್ಷಿಸಿ ಅದನ್ನು ನೀರಿಗೆ ಬಿಡಬೇಕು.

10. ಪ್ರ : ಲಿಂಗವು ಕಳೆದ ಕೂಡಲೇ ಪ್ರಾಣ ಬಿಡಬೇಕು ಎಂದು ಹೇಳಲಾಗಿದೆ. ಆಗ ಆ ಅಲಿಂಗಿಯ, ದೇಹ ಸಂಸ್ಕಾರ ಹೇಗೆ ?

ಉ : ಲಿಂಗ ನಷ್ಟವಾದ ಕೂಡಲೇ ಪ್ರಾಣಬಿಡುವುದರಿಂದ ಅವನಿಗೆ ಮೋಕ್ಷ (ಕೈವಲ್ಯ) ಪ್ರಾಪ್ತಿಯಾಗುತ್ತದೆ. ಆದರೆ ಅವನ ಶರೀರ ಸಂಸ್ಕಾರ ಮಾಡುವಾಗ ಲಿಂಗದ ಕಳೆಗಳನ್ನು ಬೇರೆ ಲಿಂಗಕ್ಕೆ ಆಕರ್ಷಿಸಿ ವಿದ್ಯುಕ್ತವಾಗಿ ಶವಸಂಸ್ಕಾರ ಮಾಡಬೇಕು. ಶವಸಂಸ್ಕಾರಕ್ಕಾಗಿ ಲಿಂಗ ಧರಿಸಬೇಕು.

ಪ್ರಾಣಕ್ಕೆ ಹಾನಿಯಿಲ್ಲ. ಅದು ಮುಕ್ತವಾಗಿರುತ್ತದೆ. ಆದ್ದರಿಂದ ಬಹು ಎಚ್ಚರದಿಂದ ಧರಿಸಬೇಕು.

ಹೀಗೆ ಆಗಮಗಳಲ್ಲಿ ವೀರಶೈವ ಧರ್ಮದ ಆಚರಣೆಯ ಸ್ವರೂಪ ಸ್ಪಷ್ಟವಾಗಿ

ಕಂಡುಬರುತ್ತದೆ. ವೀರ ಶೈವದ ನೆಲೆ-ಹಿನ್ನೆಲೆ, ತತ್ತ್ವ-ಸಿದ್ಧಾಂತ ಸಂಸ್ಕಾರ, ಸಂಸ್ಕೃತಿಗಳನ್ನು ಆಗಮಗಳಲ್ಲಿ ನಾವು ವಿವರವಾಗಿ ಗುರುತಿಸಬಹುದಾಗಿದೆ. ಲೇಖನದ ಪರಿಮಿತಿಯನ್ನು ಅನುಲಕ್ಷಿಸಿ, 'ಕಡಲನ್ನು ಕೊಡದಲ್ಲಿ ಹಿಡಿಯುವ ಪ್ರಯತ್ನ ಮಾಡಿದ್ದೇನೆ. ಆಗಮಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಬಯಸುವವರಿಗೆ ಈ ಲೇಖನ ದಿಕ್ಸೂಚಿಯಾಗಿದೆ.

ಧರ್ಮ ಎನ್ನುವುದು ಒಂದು ವಸ್ತುವಲ್ಲ, ಪದಾರ್ಥವಲ್ಲ, ಅದಕ್ಕೆ ನಿರ್ದಿಷ್ಟವಾದ ಭೌತಿಕ ಸ್ವರೂಪವಿಲ್ಲ. ಅದು ಭಾವನೆಗಳ ಸಮುದಾಯ, ಕಲ್ಪನೆಗಳ ಕಟ್ಟು, ಆಚಾರ-ವಿಚಾರಗಳ ಮೂಟೆ. ಇದು ಎಲ್ಲ ಕಾಲಕ್ಕೂ ಒಂದೇ ರೀತಿಯಾಗಿ ಉಳಿಯುವುದಿಲ್ಲ. ಕಾಲಕಾಲಕ್ಕೆ ಬದಲಾಗುತ್ತ, ಸನ್ನಿವೇಶ, ಸಂದರ್ಭಕ್ಕನುಗುಣವಾಗಿ ಧರ್ಮ ಪರಿವರ್ತನಶೀಲವಾಗಿರುತ್ತದೆ. ಯಾವುದೇ ಒಂದು ಧರ್ಮಕ್ಕೆ ವ್ಯವಹಾರಿಕವಾಗಿಯೋ, ಅನ್ವರ್ಥಕವಾಗಿಯೋ, ಅಂಕಿತವಾಗಿಯೋ ಒಂದು ಹೆಸರು ಇರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಧರ್ಮದ ನೆಲೆ, ನಂಬಿಕೆ, ನಡವಳಿಕೆಗಳು ವಿಪರೀತ ವಾದಾಗಲೂ ಹೆಸರು ಮಾತ್ರ ಹಾಗೆ ಉಳಿಯುತ್ತದೆ. ಇದು ಜಗತ್ತಿನ ಎಲ್ಲ ಧರ್ಮಗಳಿಗೂ ಅನ್ವಯಿಸುವ ಮಾತು. ಇಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಲು ಕಾರಣ, ನನ್ನ ಈ ಲೇಖನದಲ್ಲಿ ಆಮಗಳ ಕಾಲದ 'ವೀರಶೈವ ಪರಿಕಲ್ಪನೆ' ನಂಬಿಕೆ, ನಡುವಳಿಕೆ ಸಂಸ್ಕೃತಿಗಳ ಸ್ಥೂಲ ನೋಟದ ಚಿತ್ರವನ್ನು ಓದುಗರ ಮುಂದೆ ಇಟ್ಟಿದ್ದೇನೆ. ವೀರಶೈವ ಧರ್ಮದ ವಿವರಣಾತ್ಮಕ ಪರಿಚಯಕ್ಕೆ ಮೂಲ ಆಗಮ ಕೃತಿಗಳ ಅಧ್ಯಯನ ಅನಿವಾರ್ಯವಾಗಿದೆ.

ಬಸವಪೂರ್ವ ವೀರಶೈವ

ಪೂಜ್ಯ ನಿರುಪಾಧಿ ಸ್ವಾಮಿಗಳು

ವೀರಶೈವ ಪ್ರಾಚೀನತೆಯ ಬಗ್ಗೆ ವಾದ ವಿವಾದ, ಬರಹ ಅದಕ್ಕೆ ಪ್ರತಿಕ್ರಿಯೆಗಳು ಪ್ರಕಟಗೊಳ್ಳುತ್ತಲೇ ಇವೆ. ಬಸವಪೂರ್ವ ವೀರಶೈವ ಧರ್ಮವಿಲ್ಲ. ಬಸವನಿಂದ ಸ್ಥಾಪಿತವೆಂಬ ಕೆಲವರ ನಿರೂಪಣೆ ನಡೆದೇ ಇದೆ. 'ವೀರಶೈವ' ಶಬ್ದ ಶರಣರ ವಚನಗಳಲ್ಲಿಯೂ ಸಾಕಷ್ಟು ಸಿಗುತ್ತವೆ.[1]

ಹಾಗಾದರೆ ಈ 'ವೀರಶೈವ' ಶಬ್ದ ಬಸವಾದಿ ಶರಣರ ಪೂರ್ವ ರಚನೆಗಳಲ್ಲಿ ಪ್ರಯೋಗ ವಾಗಿದೆಯೆ ? ಅಂದರೆ ಆಗಿದೆ ಎನ್ನಬಹುದು. ಅದು ಕೊಂಡಗುಳಿ ಕೇಶಿರಾಜನ ಕೃತಿಗಳಲ್ಲಿ ಸ್ಪಷ್ಟ ಸಿಗುತ್ತದೆ. ಇದನ್ನು ಸಂಶೋಧಕರು ಮನಸಾ ಒಪ್ಪಿದ್ದುಂಟು.

ಕ್ರಿ. ಶ. ೧೧೦೭ರಲ್ಲಿ ಕಲ್ಯಾಣದ ಚಾಲುಕ್ಯ ದೊರೆಯ ೧ನೇ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಆತನ ಮಹಾಪ್ರಧಾನನಾದ ಕೇಶಿರಾಜನು ಬಸವಪೂರ್ವ ಯುಗದಲ್ಲಿ ಮಿಂಚಿದ ಮಹಾ ಶರಣ. ಎಲ್ಲರಿಗಿಂತಲೂ ಮೊದಲೇ ಅಧಿಕಾರ ತ್ಯಜಿಸಿದ ಮಹಾಶರಣ.[2]

ಈ ಸೂಕ್ತಿ ಕೇಶಿರಾಜನು ಬಸವಪೂರ್ವದ ವೀರಶೈವ ಕವಿ ಎಂದು ಸ್ಪಷ್ಟಪಡಿಸುತ್ತದೆ. ಅವನ ಕೃತಿಗಳಾದ ಮಂತ್ರ ಮಹತ್ವದ ಕಂದ, ಲಿಂಗ ಸ್ತೋತ್ರದ ಕಂದ 'ಭಾಗ ೧-೨'; ಶೀಲ ಮಹತ್ವದ ಕಂದ ನವರತ್ನಮಾಲಾ ಎಂದು ಪ್ರಸಿದ್ಧಗೊಂಡಿವೆ. ಇವುಗಳಲ್ಲಿ ವೀರಶೈವ ಪಾರಿಭಾಷಿಕ ಶಬ್ದಗಳ ಬಳಕೆ ಸ್ವಚ್ಛವಾಗಿ ಕಂಡುಬಂದಿವೆ. ಬಲ್ಲವರು ಕಂಡುಕೊಳ್ಳಬಹುದು. ಲಿಂಗಾಯತ ಮತದ ಅನೇಕ ವಿವರಗಳನ್ನು ತಿಳಿಸುವ ಆರಂಭದ ಕೃತಿಗಳಲ್ಲಿ ಕೇಶಿರಾಜನು ಅಗ್ರಗಣ್ಯನೆಂದು ತಜ್ಞರ ಹೇಳಿಕೆ ಯಥಾರ್ಥನೀಯ.[3]

ಕೇಶಿರಾಜನ ಗುರು ವಿರುಪಾಕ್ಷ ಎಂದು ತಿಳಿದಾಗ ಇದು ಪೂರ್ವದಿಂದ ಗುರು ಪರಂಪರೆಯನ್ನು ಸೂಚಿಸುತ್ತದೆ. ಮಗನಿಗೆ ಇಷ್ಟಲಿಂಗವಿರುವಾಗ ತಂದೆಗೂ ಇರಬೇಕಲ್ಲ. ಗುರುವಿನಿಂದ ಬಂದ ಇಷ್ಟಲಿಂಗ ಅಂದಾಗ ಇಷ್ಟಲಿಂಗ ಕೊಟ್ಟವ ಗುರುವೆ ಎಂದು ಒಪ್ಪಬೇಕಾಗುತ್ತದೆ. ಸುಜ್ಞಾನಿಗಳ ವೈಚಾರಿಕ ನಿರೂಪಣೆಯೆ ಇದಕ್ಕೆ ಬಲಕಾರಕ.[4] ವೀರಶೈವರಲ್ಲಿ ಇಷ್ಟಲಿಂಗಧಾರಣವಿದ್ದಂತೆ ಶೈವರಲ್ಲಿ ಇಲ್ಲ. ಈ 'ವೀರಶೈವ' ಶಬ್ದ ಶೀಲಮಹತ್ವದ ಕಂದ, ಪ್ರಥಮ ನುಡಿಯಲ್ಲಿ ಪ್ರಯೋಗಕ್ಕೆ ಬಂದಿದೆ. (ಪುಟ : ೫೯)

(ಕೊಂಡಗುಳಿ ಕೇಶಿರಾಜನ ಕೃತಿಗಳು; ಸಂ: ಡಾ: ಎಂ. ಎಂ. ಕಲಬುರ್ಗಿ, ಇದರಲ್ಲಿಯ ಪುಟಗಳನ್ನು ಇಲ್ಲಿ ಗ್ರಹಿಸುತ್ತ ಸಾಗಿದೆ).

ಈಗಿನ ಶರಣರು ಲಿಂಗಾಯತ ಶಬ್ದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಾರೆ. ಈ ಶಬ್ದವೂ ಕೂಡ ಕೇಶಿರಾಜನ ಕಾಲದಲ್ಲಿ ಬಳಕೆಯಲ್ಲಿ ಇತ್ತೆಂದು 'ಲಿಂಗಾಯತವಂತದೀಗ ಹನ್ನೊಂದನೆಯದು' (ಪುಟ ೬೪) ಎಂಬುದರಿಂದ ತಿಳಿಯುತ್ತದೆ. 'ವೀರಶೈವ', 'ಲಿಂಗಾಯಿತ' ಶಬ್ದದ ಪ್ರಯೋಗ ಇಲ್ಲಿ ಬಂದಾಗ ಅದರ ಸರ್ವಾಚಾರ ಸಂಪತ್ತಿಯ, ಆಚರಣೆಯಲ್ಲಿ ಇತ್ತೆಂಬುದು ನಿಜ. ಇದನ್ನು ಇವನ ಕೃತಿಗಳಲ್ಲಿ ನಿರೀಕ್ಷಿಸುವ.

ಅಷ್ಟಾವರಣ,ಪಂಚಾಚಾರ, ಷಟ್‌ಸ್ಥಲ-ಇವೇ ಸರ್ವಾಚಾರ ಸಂಪತ್ತಿಗಳು. ಬಸವಣ್ಣನವರು ಪ್ರಕ್ರಿಯವಿಡಿದು ವಚನಗಳನ್ನು ರಚಿಸಿದಂತೆ ಕೇಶಿರಾಜನಲ್ಲಿ ಕಂಡುಬರದಿದ್ದರೂ ಅದರ ಪ್ರತಿಛಾಯೆ ಅವನ ಪದ್ಯಗಳಲ್ಲಿ ಬರದೇ ಹೋಗಿಲ್ಲ. ಅವುಗಳಲ್ಲಿ ಕ್ರಮವಾಗಿ ಗುರುತಿಸಿ ಇಲ್ಲಿ ನಿರೂಪಿಸುವೆ.

ಅಷ್ಟಾವರಣ

ಗುರು :

೧. ಫಲದೊಳಗಂ ಗುರುವಿನಧಿಕಕರುಣಂ ಫಲವದು (ಪುಟ ೧೭)

೨. ಗುರುವೇ ಪ್ರಸನ್ನ ಗುರುವೇ
ಗುರುವೇ ಶಿವಾಧಿಕ್ಯ ತ್ರಿವಿಧ ಮಲಹರ ಗುರುವೇ (ಪುಟ ೫೯)

ಈ ರೀತಿಯಾಗಿ ಗುರುವಿನ ಮಹಿಮೆಯನರುಹಿಸುತ್ತ ಲಿಂಗದ ಬಗ್ಗೆಯೂ ಹೇಳುತ್ತ ಗುರುನಾಥನಿಂದ ಇಷ್ಟಲಿಂಗದ ಕೊಡುಗೆ ಎಂಬುದನ್ನು ಅರುಹಿಸುತ್ತ ಸಾಗಿದ್ದಾನೆ.

ಲಿಂಗ :

ಗುರುವೆ ತ್ರಿಲಿಂಗಧಾರಣ
ಗುರುವೆ-(ಪುಟ : ೫೯)

ಇಲ್ಲಿ 'ತ್ರಿಲಿಂಗಧಾರಣ ಗುರುವೆ' ಅನ್ನುವಲ್ಲಿ ಇಷ್ಟ, ಪ್ರಾಣ, ಭಾವಲಿಂಗದ ರೀತಿ ಎದ್ದು ಕಾಣುತ್ತದೆ. ಲಿಂಗಸ್ತೋತ್ರದ ಕಂದ ೧.೨ರಲ್ಲಿ ಲಿಂಗದ ಮೇಲಿನ ನಿಷ್ಠೆ ಪ್ರಕಟಪಡಿಸಿದೆ. ಇಲ್ಲಿ ಸ್ಥಾವರಲಿಂಗದ ಬಗ್ಗೆ ಅಲ್ಲ. ಶೈವೀಯ ದೃಷ್ಟಿಯಲ್ಲಿ ಹೇಳಿದ್ದಾನೆಂದರೆ ಇಷ್ಟಲಿಂಗದ ವಿವರ ಏಕೆ ಮಾಡುತ್ತಿದ್ದ ?

೧. ಇದುಕಾರಣ ತ್ರಿಲಿಂಗವೆ
ಮುದದಿಂದಲಿ ಇಷ್ಟಲಿಂಗವೆಂಬುದದಾಯ (ಪುಟ : ೪೦)

೨. ಲಿಂಗವನಾರಾಧಿಸುತ್ತ ಧರಿಸುತ್ತಿಹುದುಂ (ಪುಟ : ೪೦)

ಈ ಶ್ರೀ ಗುರುವಿನಿಂದ ಬಂದ ಇಷ್ಟಲಿಂಗವನ್ನು ಆ ಕಾಲದಲ್ಲಿಯೂ ವಸ್ತ್ರದಲ್ಲಿ ಧರಿಸುತ್ತಿದ್ದರೆಂದು, ಅಲ್ಲದೆ ತುಪ್ಪದ ಇಲ್ಲವೆ ಕಪ್ಪರಕಂತೆ ಮಾಡಿದ ಲಿಂಗವನ್ನೇ ಧರಿಸುವ ಬಗ್ಗೆ ಕೆಳಗಿನ ಕಂದ ತತ್ಕಾಲೀನ ಪದ್ಧತಿಯನ್ನು ಪ್ರಕಟಪಡಿಸಿದೆ.

ಸೆಜ್ಜೆಯನೆ ತೆಗೆದು ನೋಡ
ಲ್ಯುಜ್ಜಳಿಸುವ ಲಿಂಗವೆಸೆಯೆ ಕಣ್ಣಂ ಮನಕಂ।
ಪಜ್ಜಳಿಪ ಕಾಂತಿಯೊಳಗಾಂ
ಜಭನೆ ಜರಿವುತ್ತೆ ಶಿವನೊಳೆಂದಿರ್ದಪೆನೋ॥ (ಪುಟ ೩೧)

ಈ ಕಂದದಲ್ಲಿ ಸೆಜ್ಜೆ, ಇದು ಲಿಂಗ ಧರಿಸುವ ವಸ್ತ್ರ ಸೂಚಿಸಿದೆ. ಕಜ್ಜಳಿ, ಇದು ಕಾಡಿಗೆ ಅಂದರೆ ತುಪ್ಪದ ಕಪ್ಪರಕಂತೆ ಮಾಡಿದ್ದು ಎಂದು ತಿಳಿಸುವ ಜೊತೆಗೆ ಅದರ ಹೊಳೆಯುವಿಕೆಯನ್ನು ಸಹ ಅರಿಸಿ, ಬಸವಪೂರ್ವ-ಕಾಡಿಗೆವಿಡಿದು ಕಂತೆಗೊಳಿಸುವ ಪದ್ಧತಿಯನ್ನು ಇಲ್ಲಿ ನಮಗೆಲ್ಲರಿಗೆ ಸೂಚಿಸುತ್ತದೆ ಈ ಸಾಲು. ಕೇರಿನ ಎಣ್ಣೆ ಕಪ್ಪು ತುಪ್ಪದ ಕಾಡಿಗೆ ಕಪ್ಪು ನಿರೀಕ್ಷಿಸುವ ಕಣ್ಣಿನ ಗುಡ್ಡೆ ಕಪ್ಪು ಇದು ಒಂದಕ್ಕೊಂದು ಸಂಬಂಧ. ಅದರ ನಿರೀಕ್ಷಣೆ ಭೌತಿಕ ಯೋಗದಲ್ಲಿ 'ಒಗೆವಶ್ರುಪುಳಕ' (ಪುಟ : ೨೬) ಸಹಜವಾದದ್ದು. ಲಿಂಗಾಂಗ ಸಾಮರಸ್ಯದ ಅನುಭವ ಚಿತ್ರಣವಿದು.

ಅಂಗೈಯೊಳಾಲಿಕಲ್ಲಂ
ಪಿಂಗದೆನಡೆ ನೋಡೆ ನೋಡೆ ಕರಗುವ ತೆರದಿಂ
ಲಿಂಗವನೆ ನೋಡಿ ಮತ್ಸ
ರ್ವಾಂಗ ನೆರೆಕರಗಿ - (ಪುಟ ೩೨)

'ಬಿಡದೆಯರ್ಚಿಸುತ್ತ ಕರದೋಳ್' (ಪುಟ : ೪೨) - ಇಷ್ಟಲಿಂಗವನ್ನು ಕರದಲ್ಲಿಟ್ಟು ಪೂಜಿಸುವ ಪದ್ಧತಿ ಅವಾಗ್ಲೂ ಇತ್ತೆಂಬುದು ಇದರ ಸೂಚನೆ

ಜಂಗಮ :

೧. ಘನಲಿಂಗ ಜಂಗಮಕ್ಕೆಂ (ಪುಟ ೬೨)
ದನುವಾಗಿಯೆ ಮಾಡಿಸುವದು ಜಂಗಮ ಭಕ್ತಂ
೨. ಜಂಗಮದ ಪಾದ ತೀರ್ಥವ (ಪುಟ : ೬೨)
೩. ಗುರುಲಿಂಗ ಜಂಗಮವನುಂ
ಸ್ಥಿರದಿಂದಲಿ ಒಂದೆಯೆಂದು ಎರಡದನಳಿದುಂ (ಪುಟ ೬೨)
೪. ಗುರುಲಿಂಗ ಜಂಗಮಕ್ಕಾ
ದರದಿಂ ತನುಮನವು ಧನವು ವಂಚನೆಯಳಿದುಂ (ಪುಟ ೬೨)

ಪಾದೋದಕ :

೧. ಜಂಗಮದ ಪಾದತೀರ್ಥವ
ಲಿಂಗದ ಸ್ನಾನಕ್ಕೆರೆದುದವರಶೇಷವನುಂ (ಪುಟ : ೬೨)

೨. ಏಕಾದಶವಿಧ ಪಾದೋದಕ (ಪುಟ ೭೨)

ಪ್ರಸಾದ :

೧. ಲಿಂಗಪ್ರಸಾದವಲ್ಲದೆ
ನುಂಗಿದುಂ ಕಿಲ್ಬಷಂಗಳದು ಕಾರಣದಿ (ಪುಟ ೬೧)

೨. ಏಕಾದಶ ಪ್ರಸಾದಂ
ಬೇಕಾಗೌರವವು ಲಿಂಗ ಜಂಗಮ ಭಾಗಂ (ಪುಟ : ೭೨)

ವಿಭೂತಿ :

೧. ನೊಸಲಲಿ ಮೈಯಲಿ ಭಸ್ಮಂ
ಅಸಮಾಕ್ಷನ ನೆನಹು (ಪುಟ : ೬೨)

೨. ತಿಲಕದಲಿ ಭಸಿತಂ ಲಕ್ಷಣಮಿದು (ಪುಟ : ೧೯)

೩. ತನ್ನಾಯತನವಹ ಧೇನುವ
ಉನ್ನತ ಗೋಮಯದಿಂದಂ ಗ್ರಹಸಾರಣೆಯಿಂ
ಸನ್ನಿಹಿತ ಭಸ್ಮವದರಿಂ
ಧನ್ಯಂ ಫಲವಾಗಿ (ಪುಟ : ೬೪)

ರುದ್ರಾಕ್ಷಿ :

೧. ಎಸೆವಾ ರುದ್ರಾಕ್ಷಿಯಿರಲು
ಅಸಮಾಕ್ಷನ್ (ಪುಟ ೬೨)

೧. ಸಕಲಾಧಾರಮು (ವದೆಲ್ಲಕೆ)
ಮುಖವಿದು ಮುಖ್ಯಾರ್ಥವೀವ ಪರಶಿವ ತಾನಿದು
ಮುಖ ರುದ್ರನಕ್ಷಿಯೆಂದಿದ
ಸುಖದಿಂದಂ ಧರಿಸ (ಪುಟ : ೭೬)

ಮಂತ್ರ :

೧. ವರಮಂತ್ರದೊಳಗೆ ಘನವಿದು
ಗುರುತರ ವೇದಾದಿಸಾರಮೀ ಶಿವಮಂತ್ರಂ
ಮುರಹರನ ಮೂಲನಿಧಿಯಿದು
ವರಮನ ಮಂತ್ರಂ ನಮಃಶಿವಾಯೆ ಬವದಂ (ಪುಟ : ೧೯)

೨. ಶಿವಮಂತ್ರಾಕ್ಷರದ ಜಪವನಳವಡಿಸುತ್ತಂ (ಪುಟ : ೫೦)

೩. ಶಿವಮಂತ್ರ ಶಿವಾನುಭವವೇ ಘನವೆಂದುಂ (ಪುಟ : ೬೬)

ಇಲ್ಲಿಯವರೆಗೆ ಅಷ್ಟಾವರಣ ಸಂಬಂಧಪಟ್ಟ ಸೂಕ್ತಿಗಳನ್ನು ನಿರೂಪಿಸಿ ಈಗ 'ಪಂಚಾಚಾರ' ಆಚರಣೆಗೆ ಸಂಬಂಧಿಸಿದವುಗಳನ್ನು ಆರಿಸಲಾಗುವುದು.

ಲಿಂಗಾಚಾರ :

೧. ನೋಡಿ ಕಣ್ ಪಾಡಿ ನಾಲಿಗೆ
ಯಾಡಿ ಪದಂ ಬಿಡದೆಯರ್ಚಿಸುತ್ತಂ ಕರದೋಳ್ (ಪುಟ ೪೨)

೨. ಕಾಮಿಸಿ ಕಲ್ಪಿಸಿ ಲಿಂಗದಿ
ನೇಮದಿ ಭಾವಿಸಿ ಭಜಿಸಿದಾ ಲಿಂಗದಲುಂ
ತಾಮಸವನಳಿದು ಇರಲುಂ (ಪುಟ : ೬೨)

ಸದಾಚಾರ :

ತನಗೆಂದು ಅಡಿಗೆ ಮಾಡದೆ
ಮನೆಯವರಿಗೆ ಮಾಡ ಎಂಬ ಮಾತನಳಿದುಂ
ಘನಲಿಂಗ ಜಂಗಮಕ್ಕೆಂ
ದನುವಾಗಿಯೆ ಮಾಡಿಸುವದು (ಪುಟ : ೬೨)

ಶಿವಾಚಾರ :

ಶಿವಕುಲವೆ ಭಕ್ತನೆಂದುಂ
ಶಿವಭಕ್ತರೆ ತನಗೆ ತಂದೆತಾಯಿಗಳಂದುಂ
ಶಿವಭಕ್ತಿ ಪಥದಿ ನಿಂದುಂ
ಶಿವನಾಯತವಾಗೆ – (ಪುಟ : ೬೬)

ಗಣಾಚಾರ :

ಭವಿಪಾಕಂ ಭವಿಭಾಂಡಂ
ಭವಿಲಿಂಗಂ ಭವಿಯ ಭೂಮಿ ಭವಿವಂದನೆಯು
ಭವಿನೋಟಂ ಭವಿಮಾಟಂ
ಭವಿಸೇವೆಯ ಮಾಡದಿಮ್ಮ್ರದೇ ಶೀಲಯುತಂ (ಪುಟ : ೬೨)

ಭೃತ್ಯಾಚಾರ :

೧. ದಾಸನಾಗಿಹುದು ಚರಕಂ
ವಾಸಿಯಲುಂ ವೀರದಾಸಭೃತ್ಯರ ಭೃತ್ಯಂ (ಪುಟ : ೬೨)

೨. ಭಕ್ತರೊಳು ಸರಸವಾಡದೆ
ಭಕ್ತರೊಳವಗು (ಣ) ಗಳೆಂದು ಕುಂದಂ ನುಡಿಯದೆ
ಭಕ್ತರ ಮನ ನೋವ ಮಾಡದೆ
ಭಕ್ತರ ಮನೆ ಮಗನದಾಗೆ (ಪುಟ : ೬೬)

ಭಕ್ತಸ್ಥಲ :

ಭಕ್ತರಿಗೆ ಮೂಲಧನ ಶಿವ
ಭಕ್ತಿಯೆ ಭಕ್ತಂಗೆ ಕುಲವುಂ ಭಕ್ತಿಯೆ ಒಲವುಂ
ಭಕ್ತಿಯೆ ನೆಲಮುಂ ಚಲಮುಂ
ಭಕ್ತಿಯೆ ಭಂಡಾರ ಭಕ್ತಗೆ ಸಿರಿತಾನುಂ (ಪುಟ : ೭೩)

ಮಹೇಶಸ್ಥಲ :

ಪರಧನವಂ ಪರವಧುವಂ
ಪರದೈವಂಗಳನು ತೊರೆದು ಲಿಂಗದ ನಿಜ (ವೊಂ)
ದಿರವಾಗಿಯನ್ಯವನರಿಯದೆ
ಇರಬಲ್ಲ ಮಹಾತ್ಮನೀಗಲವನೆ ಮಹೇಶಂ (ಪುಟ : ೫೯)

ಪ್ರಸಾದಸ್ಥಲ :

ಲಿಂಗಪ್ರಸಾದವಲ್ಲದೆ
ನುಂಗಿದಂ (ವು) ಕಿಲ್ಬಿಷಂಗಳದು ಕಾರಣದಿಂ
ಲಿಂಗಮುಖವಾಗಿ ಕೊಂಬುದು
ಲಿಂಗದದಾ ತನುವದಾಗಿ ಲಿಂಗದ ಶೇಷಂ (ಪುಟ : ೬೧)

ಪ್ರಾಣಲಿಂಗ :

ಲಿಂಗವನೆ ನಿರಸಿ ಮನದೊ
ಳ್ಪಿಂಗದೆ ತಾಂ ಕೂರ್ಮೆಯಿಂದ ಹೃದಯಾಂಬುಜದೊಳ್
ಲಿಂಗಮಯವಾಗಿ ತೋರ್ಪ ಬೆ
ಡಂಗಿನ ಕಂದೊಳಲ ಸುಖ (ಪುಟ : ೩೫)

ಶರಣಸ್ಥಲ :

ಅನುಸರಣೆ ನಡೆಯನಡೆಯದೆ
ಮನವಂ ತಾಕಿಕದವ (ರಾ) ಕಡೆಗಂ ತಾರದೆ
ತನುಮನದಾಸೆಯನಡರದೆ
ನೆನಹೇ ನಿಸ್ಸಂಗಿಯಾಗೆ (ಪುಟ : ೬೮)

ಐಕ್ಯಸ್ಥಲ :

ಬೊಮ್ಮವಹ ಲಿಂಗವನು ತಾಂ
ನೆಮ್ಮಿಯು ಲಿಂಗದಲ್ಲಿ ಶೇಷವಲ್ಲದೆ ಏನಂ

ನೆಮ್ಮದೆ ಎರಡರಿದಿಹುದುಂ
ನಿರ್ಮಲ - (ಪುಟ ೭೧)

ಚಿದ್ಘನಲಿಂಗವದಕೆ ತಾಂ
ಚಿದ್ಘನವಾಕಾಶಂ ಚಿಚ್ಚುಖ ಚಿತ್ಪ್ರಾಣಂ
ಚಿದ್ಘನವಂವನದಾಗಿಹ
ಚಿದ್ಘನ ಶೀಲದಲಿ ಇರಲು ಚಿದ್ಘನಲೋಲಂ (ಪುಟ : ೨೩)

ಈ ಪ್ರಕಾರ ಕೇಶಿರಾಜನು ತನ್ನ ರಚನೆಯಲ್ಲಿ ಸರ್ವಾಚಾರ ಸಂಪತ್ತಿಯ ಕ್ರಮ ಸಂಕ್ಷಿಪ್ತ ಸೂತ್ರಗಳಂತೆ ಕೊಡುವುದರ ಜೊತೆಗೆ ವೀರಶೈವರು ಆಚರಿಸಬೇಕಾದ ಸಾಮಾಜಿಕ ನಿಯಮಗಳನ್ನು ಹೇಳದೆ ಬಿಟ್ಟಿಲ್ಲ. ಇವೆಲ್ಲ ನಿಯಮಗಳು ಆ ಸಮಯದಲ್ಲಿಯೇ, ಆಚರಣೆಯಲ್ಲಿ ಇರದೇ ಅವನೆಂತು ಹೇಳಿಯಾನು ? ವೀರಶೈವಧರ್ಮದಲ್ಲಿ ಆಚಾರ ವಿಚಾರಕ್ಕೆ ಬಹಳ ಬೆಲೆಯಿದೆ.

ಗುರು-ನಿರಂಜನ ಮಠ ಹಾಗೂ ಅದರ ಆಸ್ತಿಗಳಿಗೆ ಲಿಂಗಮುದ್ರೆ ಹಾಕಿರಬೇಕೆಂಬುದು ಕೇಶಿರಾಜನ ಡಂಗುರ. ಅದರಂತೆ ಹಿಂದಿನ ಮಠಗಳಿಗೂ ಇತ್ತೀಚಿನ ಮಠಗಳಿಗೂ ಲಿಂಗಮುದ್ರೆಯನ್ನು ಆ ಕ್ಷೇತ್ರದ ನಾಲ್ಕು ದಿಕ್ಕುಗಳಲ್ಲಿ ಹಾಕಿದ್ದು ಸಾಕಷ್ಟು ಕಾಣುತ್ತೇವೆ. ಈ ಲಿಂಗಮುದ್ರೆ ವೀರಶೈವ ಮಠಕ್ಕೆ ಮಾತ್ರ ಹಾಕಿದ್ದು ಕಂಡುಬಂದಿದೆ. ಶೈವ ಮಠಗಳಿಗೆ ಹಾಕಿದ್ದು ವಿರಳ (ಪುಟ ೬೨). ಸೂತಕಾಚರಣೆ ಇವರಿಗಿಲ್ಲ.

ವಧು ರಜಸಿಲೆಯಾದರೆ ತಾನ್
ವಿಧಿಸೂತಕವಳಿವುದೀಗ (ಪುಟ ೬೨)

ಎಂದು ಹೇಳಿದ್ದಾನೆ. ವೀರಶೈವ ಧರ್ಮದಲ್ಲಿ ಗರ್ಭಿಣಿಗೆ ಲಿಂಗಧಾರಣದ ಪದ್ಧತಿ ಇದೆ. ಅದು ಅನ್ಯಧರ್ಮದಲ್ಲಿಲ್ಲ.

ಸತಿ ಗರ್ಭವಾಗೆ ತನಗಿಂದ ।
ದತಿಶಯ ಶೀಲಾವಧಾನಿಗಳ ಹಸ್ತದಲುಂ
ಪತಿಕರಿಸಿ ಭಸಿತವಿಟ್ಟ (ಡ) ।
ದತಿಶಯದಿಂ ಲಿಂಗಧಾರಣೆಯ್ಯೆದನೆಯ ಶೀಲಂ ॥ (ಪುಟ : ೬೨)

ಎನ್ನುವ ಕಂದದಲ್ಲಿ ಎಚ್ಚರಿಸಿದ್ದಾನೆ. ಲನೇ ತಿಂಗಳಲ್ಲಿ ಲಿಂಗಧಾರಣ ಸಂಸ್ಕಾರವಾದಾಗ ಗರ್ಭದ ಶಿಶು ಭವಿ ಎಂದೆನಿಸಿಕೊಳ್ಳುವುದಿಲ್ಲ. ತಾಯಿ ಉಂಡ ಪದಾರ್ಥ ಗರ್ಭಕ್ಕೆ ಅದರ ರಸಾಂಶ ತಲಪುವಂತೆ ಗರ್ಭಿಣಿಗೆ ಕಟ್ಟಿದ ಲಿಂಗದ ಸಂಸ್ಕಾರ ಗರ್ಭದ ಕೂಸಿಗೂ ತಲಪುತ್ತದೆ. ಅಂದರೆ ಜನಿಸುವ ಕೂಸು ಭವಿಯಾಗಿ ಜನಿಸುವುದಿಲ್ಲ. ಗರ್ಭಕ್ಕೆ ಮಾಡಿದ ಲಿಂಗ ಸಂಸ್ಕಾರ ಕೂಸಿಗೆ ಹೇಗೆ ? ಎಂಬ ಪ್ರಶ್ನೆ ನಿಮ್ಮದಾದರೆ ಗರ್ಭದ ಅಭಿಮನ್ಯುವಿಗೆ ಚಕ್ರವ್ಯೂಹದ ಪ್ರವೇಶದ ರೀತಿಯನಾಲಿಸಿದ ಪರಿ ಸುಳ್ಳೆನಬೇಕೆ ?

‘ಕರ್ಮಪೂಜೆಗಳ ಕಳೆದು (ಪುಟ : ೬೩)

ಧರ್ಮಾಚಾರದಲ್ಲಿ ನಡೆಯಲು ಹೇಳಿದೆ ಜಂಗಮದ ಪಾದತೀರ್ಥ ಲಿಂಗಕ್ಕೆರೆದು ಗ್ರಹಿಸುವುದು ಪಾದೋದಕದಿಂದ ಪಾತ್ರೆಗಳ ಶುದ್ಧೀಕರಣ, ಲಿಂಗಮುದ್ರೆಯುಟ್ಟ ಧೇನುವಿನ ಕ್ಷೀರದ ಉಪಯೋಗ (ಪುಟ : ೬೩) ಮಾಡಬೇಕೆಂಬುದನ್ನು ಹೇಳಲಾಗಿದೆ. ಸಂಕ್ರಾಂತಿ ಇತ್ಯಾದಿ ಉಪವಾಸಗಳನ್ನು ಆಚರಿಸದೆ ಇರುವುದನ್ನು ಹೇಳುತ್ತ,

ಆವ ಸೇವೆಗಳ ಮಾಡಲು
ದೇವನ ಮುಖಕದನು ಸವೆಸಲದು ಕರಲೇಸಂ
ಆವ ಸೇವೆಗಳ ಮಾಡಲು
ದೇವನದೆಂದೆಂಬ ರಾವನದು ತಾ ಯಿರವು - (ಪುಟ : ೭೩)

ಕಾಯಕದ ಶೀಲತೆಯನರಿಸಲಾಗಿದೆ . ಹೊಲ ಎತ್ತುಗಳಿಗೂ ಲಿಂಗಮುದ್ರೆ ಇರಬೇಕೆಂದು ಎಚ್ಚರಿಸಲಾಗಿದೆ. ಈ ರೀತಿ ನಿರೀಕ್ಷಿಸಿದ ಕೇಶಿರಾಜನ ತತ್ವದ ಛಾಯೆ ಮುಂದಿನವರ ಮೇಲೆ ಬೀಳದೆ ಇಲ್ಲವೆಂಬುದು ಸ್ಪಷ್ಟ (ಅದೇ ಕೃತಿ, ಪ್ರಸ್ತಾವನೆ ; ಪುಟ : ೧೯)

ಪರಧನವಂ ಪರವಧುವಂ
ಪರದೈವಂಗಳನು ತೊರೆದು (ಶೀಲಮಹತ್ವದ ಕಂದ : ೩ ಪುಟ : ೫೯)
ಮಹೇಶ್ವರನೆಂತೆಂಬೆನಯ್ಯಾ
ಪರಸ್ತ್ರೀಯ ಪರರರ್ಥದಾಸೆ ಬಿಡದನ್ನಕ್ಕ? (ಬಸವ ವಚನ ೫೦೯)

ಈ ಪ್ರಕಾರ ಕೇಶಿರಾಜನ ಸಾಹಿತ್ಯ ಸಮೀಕ್ಷೆ ಮಾಡಲು ಬಸವಪೂರ್ವ ವೀರಶೈವದ ತತ್ವಾಚರಣೆ ಇತ್ತೆಂಬುದು ಒಪ್ಪುವಂಥದು. ಅಲ್ಲದೆ ಬಸವಣ್ಣನವರ ಧರ್ಮ ಕೇಶಿರಾಜನ ಧರ್ಮದ ಮುಂದುವರಿದ ಪರಿಷ್ಕೃತಾಂಶ ಎಂಬುದನ್ನು[5] ಅಲ್ಲಗಳೆಯಲು ಶಕ್ಯವಿಲ್ಲ. ಕೇಶಿರಾಜನ ಕೃತಿಗಳಲ್ಲಿ ಎಲ್ಲಿಯೂ ಬಸವಣ್ಣನವರ ಸ್ತುತಿಯೂ ಇಲ್ಲ. ಇದು ಕೂಡ ಬಸವಪೂರ್ವ ಸೂಚಿಸುತ್ತದೆ. ಆದರೂ ಬಸವಪೂರ್ವ ವೀರಶೈವ ಧರ್ಮದ ಬಗ್ಗೆ ಒಪ್ಪದೇ ಹೋದರೆ ಇಲ್ಲಿ ಬರುವ ಆಯಾ ಪಾರಿಭಾಷಿಕ ಶಬ್ದಗಳು ಎಲ್ಲಿಂದ ? ಯಾರಿಂದ ಬಂದವು ? ಯಾವ ಧರ್ಮದವು ?

ಅಡಿ ಟಿಪ್ಪಣಿಗಳು :

1. ಅನುಭಾವ ಮಂಟಪ ದರ್ಶನ : ಡಾ: ಎಸ್.ಎಂ. ಹಿರೇಮಠ; ಪುಟ : ೧೧, ೧೨, ವಚನ ಸಂಪುಟ ೩, ಪುಟ :೨೯೩; ವಚನ ಕ್ರಮಾಂಕ : ೯೩೧
2. ಉಪನ್ಯಾಸ ಸಂಚಯ; ಸಂ : ಟಿ. ಆರ್ ಮಹದೇವಯ್ಯ; ಪುಟ : ೨೨-೨೭
3. ಲಿಂಗಾಯತ ಅಧ್ಯಯನಗಳು : ಪುಟ ೧-೨
4. ಬಸವಣ್ಣನವರು ಇಷ್ಟಲಿಂಗ ಜನಕರೇ ? - ಶ್ರೀ ಅನ್ನದಾನೀಶ್ವರ ಸ್ವಾಮಿಗಳು, ಮುಂಡರಗಿ ‘ಪರಂಜ್ಯೋತಿ’ ಮಾಸಪತ್ರಿಕೆ, ಜುಲೈ ೧೯೯೪, ಸಂಚಿಕೆ . ೧೨ ಸಂಪುಟ ೨೬.
5. ಬಸವಮಾರ್ಗ - ೨; ಕೊಂಡಗುಳಿ ಕೇಶಿರಾಜ; ಪುಟ ೨೭

ವೀರಶೈವ ಸಮಾಜ

ಡಾ॥ ಶೇಖರ್ ಪೂಜಾರ

ಪೀಠಿಕೆ :

ವೀರಶೈವವು, ಇಡಿಯ ಸಮಾಜವನ್ನೇ ಪ್ರತಿನಿಧಿಸುವ, ಮಾನವ ಕುಲಕ್ಕೇ ಸಂಬಂಧಿಸಿದ ಒಂದು ಸಂಘಟನೆ ಎನ್ನಬಹುದು. ಇದು ಒಂದು ಧರ್ಮ ಅಥವಾ ಜಾತಿ ಅಲ್ಲ. ಜಾತಿ, ಉಪ ಜಾತಿಗಳನ್ನು ಹೇಳಿಕೊಂಡರೆ ಅದು ವೀರಶೈವವೇ ಅಲ್ಲ. ಇದನ್ನು ಜಾತಿ, ಉಪಜಾತಿಗಳನ್ನಾಗಿ ಬೆಳೆಸಿಕೊಂಡು ಬಂದ ಮಹಾ ತಪ್ಪು ನಮ್ಮದು.

ಈ ವೀರಶೈವವು ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಮುಖಂಡತ್ವದಲ್ಲಿ ಸತ್ಯ ಶುದ್ಧಕಾಯಕ, ಸಮಾನತೆ, ದಯೆ, ದಾಸೋಹ, ಸೇವೆ, ಸುಧಾರಣೆ ಮುಂತಾದವುಗಳ ಮುಖಾಂತರ ಸಾಮಾಜಿಕ ಕ್ಷೇಮಾಭಿವೃದ್ಧಿಯನ್ನು ಸಾಧಿಸಿತು. 'ವೀರಶೈವ' ಎಂದರೆ ಶಿವನ ಕಟ್ಟಾ ಉಪಾಸಕ ಎಂದು ಹೇಳುತ್ತಾರೆ. "A Virasaiva which means a sworn votary of Siva" (ಪಿ. ಬಿ. ದೇಸಾಯ್ರಿ-೧೯೬೮ :೩೧೭), ಮುಂದುವರೆದು 'ವೀರ' ಎಂದರೆ ಶಕ್ತಿ, ನಿಶ್ಚಲತೆ, ಕೆಚ್ಚು ಮತ್ತು ಶ್ರೇಷ್ಠತೆ ಎಂದು ಧ್ವನಿತವಾಗುತ್ತದೆ. ಹಾಗೆಯೇ ''ಶಿವನಾಗಿ ಶಿವನನ್ನೇ ಪೂಜಿಸುವುದು ವೀರಶೈವವು'' ಎಂದು ಶ್ರೀ ವಿ. ಎಸ್. ಕಂಬಿಯವರು ಉಲ್ಲೇಖಿಸಿದ್ದಾರೆ. (೧೯೭೧: ೪೩) ಇಲ್ಲಿ ವೀರ ಮತ್ತು ಶಿವ ಎಂದರೆ ಬೇರಾವುದೂ ಅಲ್ಲ ವ್ಯಕ್ತಿಯ ಆತ್ಮಶಕ್ತಿ ಎನ್ನಬಹುದು. ಅಂದರೆ ವ್ಯಕ್ತಿಯು ಆತ್ಮಶಕ್ತಿಯಲ್ಲಿ ವಿಶ್ವಾವಿಟ್ಟು, ಅದನ್ನು, ಪವಿತ್ರವೆಂದು, ತಿಳಿದು, ಪೂಜಿಸು, ಪಳಗಿಸು, ಬೆಳೆಯಿಸು ಎಂದಂತಾಯಿತು. ಇದು ಮಾನವ ಶಕ್ತಿ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರ. ವೀರಶೈವದ ಇನ್ನೂ ಸ್ಪಷ್ಟವಾದ ಅರ್ಥವನ್ನು ಚೆನ್ನಬಸವಣ್ಣನವರು ಮೊದಲೆ ಹೇಳಿಬಿಟ್ಟಿದ್ದಾರೆ. ಅವರ ಪ್ರಕಾರ, ಯಾವುದೇ ವ್ಯಕ್ತಿಯು ತನ್ನನ್ನು ವೀರಶೈವನೆಂದು ಹೇಳಿಕೊಳ್ಳುವ ಸಮರ್ಥನೆಯು ಅವನ ಅತೀ ಆಶೆಯಿಲ್ಲದ ಅಹಿಂಸೆ ಮುಂತಾದ ನೀತಿ ಸಂಹಿತೆಗಳ (ವೀರಾಚಾರ) ಉಗ್ರ ಆಚರಣೆಯಲ್ಲಿದೆ. According to Channabasavanna, the justification for a Virasaiva to so call himself lies in the vigorous observance of moral codes (Virachara) like non-covetousness, non-violence, etc." (ಉಲ್ಲೇಖ ಡಾ. ಪಿ. ಬಿ. ದೇಸಾಯಿ, ೧೯೬೮, ೩೧೭).

ವೀರಶೈವ ಸಮಾಜವನ್ನು ಅರಿಯಬೇಕಾದರೆ ಹನ್ನೆರಡನೆಯ ಶತಮಾನದ ಬಸವಣ್ಣ ಹಾಗೂ ಶರಣರ ಜೀವನವನ್ನು ಅರಿಯುವುದು ಅವಶ್ಯ. ಹಾಗೆಯೇ ಬಸವಣ್ಣ, ಅಲ್ಲಮಪ್ರಭು ಅಕ್ಕಮಹಾದೇವಿ, ಲಕ್ಕಮ್ಮ, ಅಕ್ಕನಾಗಮ್ಮ, ದೇವರದಾಸಿಮಯ್ಯ ಮುಂತಾದವರ ವಚನ ಸಾಹಿತ್ಯವೂ ವೀರಶೈವ ಸಮಾಜನ್ನರಿಯಲು ಅಪಾರ ಭಂಡಾರವನ್ನೊದಗಿಸುತ್ತದೆ. ಒಂದು ಸಮಾಜದ ಸಾಂಸ್ಕೃತಿಕ ವ್ಯವಸ್ಥೆಯು ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿರುತ್ತದೆ. ಇದು ಸಾಮೂಹಿಕ ವರ್ತನೆಯ ಫಲ. ಅಂದರೆ ಸಾಹಿತ್ಯವು ಸಮಾಜದ ಪ್ರತಿಬಿಂಬ. ಅದು ಮಾನವನ ನಡೆ, ನುಡಿ, ಸಾಮಾಜಿಕ ಸಮಸ್ಯೆ, ಸಂಸ್ಕೃತಿ, ಸಂಪ್ರದಾಯ, ನಂಬಿಕೆ, ಆದರ್ಶ, ಆಶೋತ್ತರಗಳ ಮೇಲೆ ಬೆಳಕು ಚೆಲ್ಲುತ್ತದೆ. ಒಂದು ಸಮಾಜದ ಸಂಸ್ಕೃತಿಯಾಗಲಿ, ಜೀವನವಾಗಲಿ ಸಾಹಿತ್ಯದಲ್ಲಿ ಮೂಡಿಬಂದಿರುತ್ತದೆ.

ಸಮಾಜಶಾಸ್ತ್ರಜ್ಞರಾದ ಜೇಮ್ಸ್ ಎಚ್. ಬೋಸ್ಸಾರ್ಡ್ ಹಾಗೂ ಎಲೆನಾರ್ ಸ್ಟ್ಯಾಕರ್‌ಬೋಲ್ (೧೯೬೦ಪುಟ೬) ಹೇಳುವುದು ಹೀಗೆ : "ಮಾನವನು ಅನೇಕ ವರ್ಷಗಳಿಂದ ತನ್ನ ಅನುವರ್ತಿಗಳ ನಡೆವಳಿಕೆಗಳನ್ನು ಅವಲೋಕಿಸುತ್ತ ಬಂದಿದ್ದಾನೆ ಮತ್ತು ಅವುಗಳನ್ನು ಸಾಮಾನ್ಯವಾಗಿ ತನ್ನ ಅನುಭವಕ್ಕೆ ಮಾರ್ಗದರ್ಶನವನ್ನಾಗಿ ಉಪಯೋಗಿಸಿದ್ದಾನೆ. ಹಾಗೆಯೇ ನೀತಿಕಥೆ, ಚರಿತ್ರೆ, ಪುರಾಣ, ಗಾದೆ ಮಾತು, ಪುಣ್ಯ ಕಥೆಗಳು, ಸಾಹಿತ್ಯಕ ಕಥೆ ಮುಂತಾದವುಗಳನ್ನು ವಿಶ್ಲೇಷಿಸುವುದು ಅವಶ್ಯ. ಯಾಕೆಂದರೆ ಅವು ಆಯಾ ಕಾಲಗಳಲ್ಲಿ ಸಂಚಯಿಸಿದ ಜ್ಞಾನ ಭಂಡಾರದ ಅಂಶಗಳಾಗಿರುತ್ತವೆ. ಅವು ಈ ಮಾನವರು ಏನು ಮಾಡಿದರು ? ಏಕೆ ಮಾಡಿದರು ? ಎನ್ನುವ ಬಗೆಗೆ ಮಾನವನ ನಿರೀಕ್ಷೆ ಅವಲೋಕನಗಳನ್ನು ಪ್ರತಿಬಿಂಬಿಸುತ್ತವೆ; ಹಾಗೂ ಪ್ರತಿಪಾದಿಸುತ್ತವೆ. ಮತ್ತು ಇದೇ ಮಾನವನ ನಡವಳಿಕೆಯ ತಾತ್ಪರ್ಯವೂ ಆಗಿರುತ್ತದೆ." (Through the ages, man has observed the conduct of his fellows and utilised his generalisations as a guide for his experience. Thus must one interpret the fables, legends, myths, proverbs, sagas, sacred writings literary tales etc; which constitute the accumulated wisdom of the ages; they involved and reflected man's observations on what people did and why. And this is the substance of human behaviour).

ಸಮಾಜದ ಅರ್ಥ

ಇನ್ನು 'Society ' ಈ ಶಬ್ದವು Societas ಎನ್ನುವ ಲ್ಯಾಟಿನ್ ಶಬ್ದದಿಂದ ಬಂದದ್ದು (B.H. Kennedy ಬಿ.ಎಚ್. ಕೆನ್ನಡಿ 1932 ಪುಟ 13) "Society ಅಥವಾ 'Societas ದ ಅರ್ಥ ಒಡನಾಡಿತನ, ಸ್ನೇಹ ಎಂದಾಗುತ್ತದೆ. ಕನ್ನಡದಲ್ಲಿ 'ಸಮಾಜ', ಅಂದರೆ ಒಡನಾಡಿತನ, ಸ್ನೇಹ ಎಂದಂತಾಯಿತು. ಸಾಮಾನ್ಯವಾಗಿ, ಸಮಾಜದ ವ್ಯಾಖ್ಯೆಯನ್ನು ಹೀಗೆ ಕೊಡಬಹುದು. 'ಸಮಾಜ' ಎಂದರೆ ಸಾಮಾಜಿಕ ಸಂಬಂಧಗಳನ್ನು ತಳುಕು ಹಾಕಿಕೊಂಡ

ಬಲೆ ಗ್ರೀನ್‌ಬರ್ಗ್‌ರ ಪ್ರಕಾರ ಸಮಾಜ ಎಂದರೆ, "ನಿಶ್ಚಿತ ಪಡಿಸಿದ ಅಥವಾ ನಿಗದಿತ ಬಾಂಧವ್ಯಗಳ ಆಧಾರದ ಮೇಲೆ ಒಂದೆಡೆ ಒಡಗೂಡಿದ ವ್ಯಕ್ತಿಗಳ ಗುಂಪೇ ಸಮಾಜ." ಮೆಕ್ಕೈವರ್ ಹಾಗೂ ಪ್ರೇಜರ ಪ್ರಕಾರ, ಸಮಾಜವು ರೂಢಿಗಳ ಮತ್ತು ಕಾರ್ಯ-ವಿಧಾನಗಳ ಅಧಿಕಾರ ಮತ್ತು ಪರಸ್ಪರ ನೆರವಿನ ಅನೇಕ ಗುಂಪುಗಳ ಮತ್ತು ವಿಭಾಗಗಳ ಮಾನವ ವರ್ತನೆಯ ನಿಯಂತ್ರಣ ಹಾಗೂ ಸ್ವಾತಂತ್ರಗಳ ಪದ್ಧತಿಯಾಗಿರುವುದು. ಈ ನಿತ್ಯ ಪರಿವರ್ತನ ಶೀಲ ಸಂಕೀರ್ಣ ಪದ್ಧತಿಯನ್ನೇ ನಾವು ಸಮಾಜ ಎಂದು ಕರೆಯುತ್ತೇವೆ."


ಸಮಾಜವು ಒಡನಾಡಿತನ ಒಡನಾಡಿಗಳಿಂದ ಕೂಡಿರುತ್ತದೆ, ಎಂದು ಈ ಹಿಂದೆ ಹೇಳಿದೆ. ಯಾಕೆಂದರೆ ಮನುಷ್ಯ ಪರಾವಲಂಬಿ, ಕುಟುಂಬಾವಲಂಬಿ, ಸಮಾಜಾವಲಂಬಿಯಾಗಿ ಸಹಬಾಳ್ವೆ ಮಾಡಬೇಕಾಗುವುದು. ಅಲ್ಲಿ ಅನೇಕ ಕಟ್ಟುಪಾಡುಗಳು, ಬೇಕು ಬೇಡಗಳು, ಸಂಸ್ಕೃತಿ ಧರ್ಮಗಳು ಇರುತ್ತವೆ. ಅವುಗಳನ್ನು ಅರಿಯುವುದು ಅವಶ್ಯವೆನಿಸದಿರಲಾರದು. ಸಾಮಾನ್ಯವಾಗಿ, ಸಮಾಜದ ಗುಣ ಲಕ್ಷಣಗಳು, ಅವಶ್ಯಕ ಅಂಶಗಳು ಇಂತಿವೆ :

೧. ಸಾಮಾಜಿಕ ಸಂಬಂಧ : ನಾವು ಎನ್ನುವ ಭಾವನೆ (We feeling)
೨. ಪರಸ್ಪರ ಅವಲಂಬನೆ : ಕೊಟ್ಟು, ಕೊಂಡು ಬದುಕುವುದು (Give & take)
೩. ಹೋಲಿಕೆ ಹಾಗೂ ವ್ಯತ್ಯಾಸ : ಗಂಡು-ಹೆಣ್ಣು ಇತ್ಯಾದಿ,
೪. ಸಹಕಾರ (Co-operation)
೫. ಶ್ರಮ ವಿಭಜನೆ : (Division of Labour)

ಅಂದರೆ, ಸಮಾಜವೆಂದಮೇಲೆ ಹೆಣ್ಣೂ ಬೇಕು, ಗಂಡೂ ಬೇಕು. ಬೇರೆ ಬೇರೆ ಉದ್ಯೋಗ ವ್ಯವಸಾಯದವರೂ ಬೇಕು, ಸಹಕಾರ ಭಾವನೆಯೂ ಬೇಕು. ಮಾನವನು ತಾನೊಬ್ಬನೇ, ಏಕಾಗಿಯಾಗಿ ಜೀವಿಸುವುದು ಅಸಾಧ್ಯವೂ, ಅಸಹನೀಯವೂ, ಭಯಾನಕವೂ ಅಹುದು. ಅಂದ ಮೇಲೆ ಪರಸ್ಪರ ಅವಲಂಬನೆ ಅವಶ್ಯ. ಇಷ್ಟೆಲ್ಲ ವೈವಿಧ್ಯದಲ್ಲೂ "ನಾವು ನಮ್ಮವರು"ಎನ್ನುವ ಭಾವನೆಯಿಂದ ಒಬ್ಬರಿಗೊಬ್ಬರು ಕೊಟ್ಟುಕೊಂಡು ಬದುಕಬೇಕಾಗುವುದು.

ಸಂಸ್ಕೃತಿ

ಮಾನವ ಜೀವಿಗಳಿಗೆ ಸಂಸ್ಕೃತಿಯು ಒಂದು ಕನ್ನಡಿ. ಜನಜೀವನದ ನಿಜ ಚಿತ್ರಣದ ಪ್ರತಿಬಿಂಬವನ್ನು ಬಹಿರಂಗಗೊಳಿಸುವ ಅಂಶ. ಸಂಸ್ಕೃತಿಯಲ್ಲೂ ಎರಡು ಪ್ರಕಾರಗಳು : ಒಂದು ಭೌತಿಕ, ಇನ್ನೊಂದು ಅಭೌತಿಕ. ಅದನ್ನು ಕೆಳಗೆ ನೋಡಬಹುದು.



ಸಾಮಾನ್ಯವಾಗಿ ಎರಡೂ ಸಂಸ್ಕೃತಿಗಳು ಒಂದನ್ನೊಂದು ಅವಲಂಬಿಸಿ ಒಟ್ಟಿಗೆ ಬೆಳೆಯಬೇಕಾಗುವುದು. ಹಿಂದು ಮುಂದಾದರೆ ಸಾಮಾಜಿಕ ಶಿಥಿಲತೆ ಉಂಟಾಗಿ ಅನೇಕ ಸಮಸ್ಯೆಗಳೇಳುತ್ತವೆ. ಕಾರಣ, ವ್ಯಕ್ತಿ, ಸಮಷ್ಟಿಗಳಲ್ಲಿ ಇವೆಲ್ಲ ಬೆಳೆದು, ಬೆರೆತು ರಾಷ್ಟ್ರೀಯ ಸಂಸ್ಕೃತಿ ಹಾಗೂ ವಿಶ್ವ ಸಂಸ್ಕೃತಿಗೆ ಹೊಂದಾಣಿಕೆಯಾಗಿ ವಿಶ್ವಮಾನವತೆ ಮೆರೆಯಬೇಕು. ಅಂದರೇನ ಈ ಜಗತ್ತು ಜೀವಿಸಲು ಅರ್ಹ ಹಾಗೂ ನೆಮ್ಮದಿಯ ಸುಂದರ ತಾಣವಾಗಬಲ್ಲುದು. ಇಲ್ಲವಾದಲ್ಲಿ ಅಶಾಂತಿ, ದಂಗೆ, ಯುದ್ಧ, ಬಾಂಬು, ಬಲಿದಾನ ಬೆಂಕಿಗಳ ಸುರಿಮಳೆಯಾಗಿ ಮಾನವ ಜೀವ, ಜೀವನಗಳು ನಾಶವಾಗಬಲ್ಲವು.

ವೀರಶೈವ ಸಂಸ್ಕೃತಿ

ವೀರಶೈವದಲ್ಲಿ ಸಾಂಸ್ಕೃತಿಕ ಕ್ರಾಂತಿಯನ್ನು ನಾವು ಕಾಣುತ್ತೇವೆ. ನೂತನ ಸಮಾಜದ ಸಂಘಟನೆಯನ್ನೂ ಕಾಣುತ್ತೇವೆ. ಇಲ್ಲಿ ಮಾನವನು ಹುಟ್ಟುಹಾಕಿದ ಭೇದ ಭಾವಗಳನ್ನು ಕಳೆದು, ಮೇಲು ಕೀಳು, ಬಡವ ಬಲ್ಲಿದ, ಗಂಡು ಹೆಣ್ಣು ಅಸಮಾನತೆಗಳನ್ನು ಅಳಿದು ಸೌಹಾರ್ದ ಜೀವನ ನಡೆಸಿದ್ದನ್ನು ನೋಡುತ್ತೇವೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ ಸಮಾನತೆಯನ್ನು ತಂದು ಜನರಲ್ಲಿ ಸ್ನೇಹ, ಒಡನಾಡಿತ್ವ ಬೆಳೆಸಿ ಬದುಕಲು ವಾತಾವರಣನ್ನು ನಿರ್ಮಿಸಿ ನೆಮ್ಮದಿಯನ್ನುಂಟು ಮಾಡಲು ಶರಣರು ಪ್ರಯತ್ನಿಸಿದ್ದಾರೆ. ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ, ಶರಣ-ಶರಣೆಯರು ತಮ್ಮ ವಚನ, ನಡೆ ನುಡಿಗಳ ಮುಖಾಂತರ ಸರಳ ಮಾನವಧರ್ಮದ ಅರಿವು ಮೂಡಿಸಿದರು. ಸಾಮಾನ್ಯರಿಗೂ ಮಾದರಿಯಾದರು. ಅನೇಕ ಗೊಡ್ಡು ಸಂಪ್ರದಾಯಗಳನ್ನು ಮುರಿದು ಸಮಾಜ ಸುಧಾರಣೆಯನ್ನು ಸಾಧಿಸಿದರು. ಸಮಾಜಕಾರ್ಯಕ್ಕೆ ಒಳ್ಳೆಯ ಸರಕು ಸಾಮಗ್ರಿಗಳನ್ನು ನೀಡಿದರು ಎನ್ನಬಹುದು. ಅಷ್ಟೇ ಅಲ್ಲ, ಹನ್ನೆರಡನೆಯ ಶತಮಾನದಲ್ಲಿಯೇ ಇಪ್ಪತ್ತನೆಯ ಶತಮಾನದ ವೃತ್ತಿ ಸಮಾಜ ಕಾರ್ಯದ ಜ್ಞಾನ, ತತ್ತ್ವ, ತಂತ್ರಗುರಿ, ಧೋರಣೆಗಳ ಅನುಷ್ಠಾನವನ್ನು ಕಾಣುತ್ತೇವೆ.

ವೀರಶೈವ ಸಮಾಜ ಜೀವನ

ಬಸವಣ್ಣನವರು ಹಾಗೂ ಅನೇಕ ಶರಣರು ಸಾಮಾಜಿಕ ಧೋರಣೆಯನ್ನು ಹಾಕಿಕೊಂಡು ಅದನ್ನು ಆಗಲೇ ಅನುಷ್ಠಾನಕ್ಕೆ ತಂದಂತಿದೆ. ಆ ಪ್ರಕಾರ ವೀರಶೈವ ಸಾಮಾಜಿಕ ಧೋರಣೆಗು-ಲಕ್ಷಣಗಳು ಇಂತಿವೆ :

೧) ಸಮಾನತೆ, ೨) ಕಾಯಕದೃಷ್ಟಿ (ಶ್ರಮಗೌರವ), ೩) ಮೌಲ್ಯಗಳು: ಸತ್ಯ, ಪ್ರಾಮಾಣಿಕತೆ, ಅಹಿಂಸೆ, ನಿಸ್ವಾರ್ಥದೃಷ್ಟಿ, ಸೇವಾಭಾವ ೪) ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ. ೫) ಜಾಗತಿಕ ಸಮುದಾಯ ೬) ಸಂಗ್ರಹ ಪ್ರವೃತ್ತಿ, ಇಲ್ಲದಿರುವುದು ೭) ಶೋಷಣೆ ರಹಿತ ಸಮಾಜ. ಅಂದರೆ ಸತ್ಯ, ನಿಜ-ಧರ್ಮ, ಕಾಯಕ, ಸಮಾನತೆ, ಪ್ರಾಮಾಣಿಕತೆಗಳ ಆಧಾರದ ಮೇಲೆ ಸಮಾಜವನ್ನು ಕಟ್ಟಲು ಪ್ರಯತ್ನಿಸಿ ಸಫಲರಾದರು.

ವಿವೇಕಾನಂದರು ಹೇಳುವಂತೆ : "Place that can hold truth manifest truth, embody truth is society. Society should be moulded upon truth. Truth cannot adjust to society. If truth cannot be practised it is better for man to give up society and go into forest. It has to manifest truth, not to manufacture it "

ಹಾಗೆ ಬಸವಣ್ಣನವರು ಹಾಗೂ ಶರಣರು ಸತ್ಯವನ್ನು ನುಡಿದು, ಸತ್ಯವನ್ನು ನಡೆದು, ಸಮಾಜ ಜೀವನ ಸಾಗಿಸಿದರು. ಅಲ್ಲದೆ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದು ಅವುಗಳನ್ನು ನಿವಾರಿಸಿದರು. ಕಾರಣ ಅವರ ವಚನಗಳಲ್ಲಿ ವೀರಶೈವ ಸಮಾಜ ಜೀವನದ ಪ್ರತಿಬಿಂಬವನ್ನು ಕಾಣುತ್ತೇವೆ.

ವಚನಗಳು ಬರಿಯ ಪದ-ಪದ್ಯಗಳಲ್ಲ, ಭಾಷೆ ಸಾಹಿತ್ಯವಷ್ಟೇ ಅಲ್ಲ. 'ವಚನ' ಎಂದರೆ ಬದ್ಧವಾದ ನಡೆ (commitment). ''ರಘುಕುಲನೀತಿ ಸದಾಚಲಿ ಆಯೆ ಪ್ರಾಣ ಜಾಯ್ ಪರ್ ವಚನ ನ ಜಾಯ್'' ಎಂಬಂತೆ, ಅಂದರೆ ಪ್ರಾಣ ಹೋದರೂ ಚಿಂತೆಯಿಲ್ಲ, ನುಡಿದಂತೆ ನಡೆಯಲೇಬೇಕು. ಇದನ್ನೇ ಶರಣರನ್ನು ಕುರಿತ ಜಾನಪದ ಗೀತೆಯೊಂದರಲ್ಲಿ ಕಾಣುತ್ತೇವೆ.

> ''ಮರಣ ಬಂದರೂ ಕೂಡ ಶರಣ ಕಾಯಕ ಮುಗಿಸಿ
> ಹರುಷದಲಿ ಹರಣ ನೀಗಿದನು। ಕೇತಯ್ಯ
> ಹರನಿತ್ತ ಪದವ ಕರುಣೆಯಲಿ''

ಕರ್ನಾಟಕದಲ್ಲಿ ಬಸವಣ್ಣ ಹಾಗೂ ಉಳಿದ ಶರಣರು ಜನಜಾಗೃತಿಯ ಕೆಲಸವನ್ನು ಭಕ್ತಿ ಆಂದೋಲನದ ಮುಖಾಂತರವೂ ಮಾಡಿದರು ಎನ್ನುಬಹುದು. ಮಾನವಧರ್ಮವನ್ನು ಹಿನ್ನೆಲೆಯಲ್ಲಿರಿಸಿಕೊಂಡು ಜನಕಲ್ಯಾಣವನ್ನು ಸಾಧಿಸಿದರು. ಇನ್ನೂ ಮುಂದೆ ಹೋಗಿ, ಕ್ಷೇಮವು ಬರಿ ಮಾನವ ಪ್ರಾಣಿಗಳಿಗಷ್ಟೇ ಅಲ್ಲ, ಸಕಲ ಪ್ರಾಣಿಗಳಿಗೂ ಅವಶ್ಯ ಎಂದು ಹೇಳಿದರು. ಈಗಿನ ಪರಿಸ್ಥಿತಿ ನೋಡಿದರೆ, ಸಕಲ ಪ್ರಾಣಿಗಳ ಕ್ಷೇಮದಲ್ಲಿ ಮಾನವ ಕಲ್ಯಾಣವಡಗಿದೆ ಎಂದು ಘಂಟಾಘೋಷವಾಗಿ ಹೇಳಬಹುದು. ಈ ಕೆಳಗಿನ ವಚನ ನೋಡಿರಿ.

> ''ದಯವಿಲ್ಲದ ಧರ್ಮವಾವುದಯ್ಯ,
> ದಯವಿರಬೇಕು ಸಕಲ ಪ್ರಾಣಿಗಳಲ್ಲಿ
> ದಯವೇ ಧರ್ಮದ ಮೂಲವಯ್ಯ,
> ಕೂಡಲ ಸಂಗಮದೇವ.''

ಇಲ್ಲಿ ಬಸವಣ್ಣನವರು ಮಾನವ ಮಾನವರ ಸಂಬಂಧ ಹಾಗೂ ಮಾನವರ ಇತರ ಪ್ರಾಣಿಗಳ ಸಂಬಂಧವನ್ನು ಹೇಳಿದ್ದಾರೆ. ಇದು ಮಾನವ ಧರ್ಮವನ್ನು ಬೋಧಿಸುವುದಲ್ಲದೆ ಇಡೀ ಜೀವನ ಧರ್ಮವನ್ನೇ ಬೋಧಿಸುತ್ತದೆ. ಈ ಹಿನ್ನೆಲೆಯಲ್ಲಿ ಮಾನವ ಮಾನವರ

ನಡುವೆ ಸಂಬಂಧಗಳನ್ನು ಚೆನ್ನಾಗಿರಿಸಿಕೊಳ್ಳಬಹುದು. ಮಾನವರಿಗೆ ಉಪಯುಕ್ತವಾಗುವ ಪ್ರಾಣಿ ಜೀವಿಗಳನ್ನೂ ರಕ್ಷಿಸಿದಂತಾಗುವುದು. ಇಲ್ಲಿ ಒಂದು ಉದಾಹರಣೆ ಹೇಳಬೇಕೆಂದರೆ ಕಳ್ಳರು ಗೋವುಗಳನ್ನು ಕದ್ದೊಯ್ದಾಗ ಕರುಗಳನ್ನು ಕಳಿಸಿಕೊಟ್ಟು ಬಸವಣ್ಣನವರು ಕರುಗಳ ಕಲ್ಯಾಣ ಮಾಡಿದರು. ಕಳ್ಳರ ಮನಃಪರಿವರ್ತನೆಯೂ ಆಯಿತು.

ಇತ್ತೀಚಿನ ದಿನಗಳಲ್ಲಿ ಪರಿಸರ ಅಭಿವೃದ್ಧಿ, ಪ್ರಾಣಿ ಪಕ್ಷಿಗಳ ರಕ್ಷಣೆಯ ಮಾತು, ಘೋಷಣೆಗಳು ಕೇಳಿಬರುತ್ತವೆ. ಅವೆಲ್ಲಕ್ಕೆ ಈ ವಚನ ದಾರಿ ದೀಪ. ಮೆ ಕಿವರ್ ಹಾಗೂ ಪೇಜರು ಹೀಗೆ ಹೇಳಿದ್ದಾರೆ: "ಧರ್ಮವು ಬರಿ ಮಾನವ ಹಾಗೂ ದೇವರ ನಡುವಿನ ಸಂಬಂಧವಾಗಿರದೆ ಮಾನವ ಮತ್ತು ಮಾನವರ ನಡುವಿನ ಸಂಬಂಧವೂ ಆಗಿರುತ್ತದೆ" "ದೇವನನ್ನು ಕಾಣುವ ಅತ್ಯುತ್ತಮ ಮಾರ್ಗವೆಂದರೆ ಜನಸೇವೆ" ಎಂದು ವಿವೇಕಾನಂದರು ಹೇಳಿದ್ದಾರೆ. (Best way to reach God is to serve the mankind). ಆದರೆ ಬಸವಣ್ಣನವರು ಇನ್ನೂ ಮುಂದುವರಿದು "ದೇವಲೋಕ, ಮರ್ತ್ಯಲೋಕ ಬೇರಿಲ್ಲ ಕಾಣಿರೊ, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ, ಎಂದು ಹೇಳಿ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು ಎಂದು ಧರ್ಮದಲ್ಲಿ ವೈಜ್ಞಾನಿಕ ದೃಷ್ಟಿಯನ್ನಿಟ್ಟು ನಡೆದು ದಾರಿ ತೋರಿದ್ದಾರೆ. ಅಲ್ಲದೆ ದಯಧರ್ಮದ ಅಡಿಯಲ್ಲಿ ಅಪರಾಧಿ, ವೇಶ್ಯೆ, ದೀನ-ದಲಿತ, ದಾಸಿಗಳೆಲ್ಲರನ್ನೂ ದಯೆ ಅನುಕಂಪಗಳಿಂದ ಕಂಡು ಅವರಿಗೆ ಸಮಾಜ ಜೀವನ ಸಾಗಿಸಲು ನೆರವಾಗಿದ್ದಾರೆ. ವಿವೇಕಾನಂದರು ಹೇಳಿದ್ದೂ ಹೀಗೇ : "It is the duty of every soul to treat and think and behave with other soul. Religion should be man making and humanistic" ಎಂದಿದ್ದಾರೆ. ಬಸವಣ್ಣನವರು ಕಲ್ಲನಾಗರ ಪೂಜೆ, ಗುಡಿಗುಂಡಾರಗಳನ್ನು ಅಲ್ಲಗಳೆದರು. ಆತ್ಮ ಪರಮಾತ್ಮ, ಸತ್ಯದ ದಯೆಗಳೇ ಧರ್ಮವೆಂದು ನಡೆದರು. ಅನೇಕ ಶರಣ ಶರಣೆಯರ ಗುಂಪುಗಳನ್ನು ಸಮುದಾಯಗಳನ್ನು ರಚಿಸಿದರು. ಇದೇ ಸಮಾಜ ಸಂಘಟನೆಗೆ ತಳಪಾಯವಾಗಬಲ್ಲದು.

ಜಾತಿ ಭೇದವಿಲ್ಲದ ಸಮಾಜ ಜೀವನ

ಬಸವಣ್ಣನವರು ಉಚ್ಚ ಕುಲದಲ್ಲಿ ಜನಿಸಿದರೂ ಅದನ್ನು ತ್ಯಜಿಸಿ, ಅಂಧಾನುಕರಣೆಯ, ಕಂದಾಚಾರದ ಧರ್ಮವನ್ನು ತೊರೆದು, ಹೊಸ ಮಾನವೀಯ ಧರ್ಮವನ್ನು ಸ್ಥಾಪಿಸಿ, ಆ ತಳ ಹದಿಯ ಮೇಲೆ ಸಮಾಜವನ್ನು ಕಟ್ಟಿದರು. ಅದರ ಮುಂದುವರಿಕೆಯು ನಡೆದು ಬಂದಿದ್ದರೆ ಸಮಾಜ ಸಂಘಟಿತವಾಗಬಹುದಿತ್ತೇನೊ; ಪ್ರಗತಿ ಸಾಧಿಸಬಹುದಿತ್ತೇನೊ! ಆದರೆ ಅದು ಹಾಗಾಗಲಿಲ್ಲ. ಈಗಲಾದರೂ ಒಂದು ಸಮಾಜದ ಸಂಬಂಧವೇ ನಮಗೆ ಸೀಮೆಯಲ್ಲ; ಅನೇಕ ರಾಷ್ಟ್ರಗಳೊಡನೆ ಇಡೀ ಜಗತ್ತಿನೊಡನೆ ಸಂಬಂಧಗಳು ಬೆಳೆಯಬೇಕಾಗಿದೆ. ಜಗತ್ತೇ

ಒಂದು ಸಮಾಜ ಸಮುದಾಯ. ಅದಕ್ಕೆ ಈ ತೆರನಾದ ಧರ್ಮ ಬುನಾದಿಯಾಗಲು ಯೋಗ್ಯ. ಇದಕ್ಕೆ ಸರ್ವಜ್ಞನ ವಚನವೂ ಉಲ್ಲೇಖಾರ್ಹ:

"ಊರೆಲ್ಲ ನೆಂಟರು ಕೇರಿ ಎಲ್ಲವೂ ಬಳಗ
ಈ ಧಾರುಣಿಯೇ ನನ್ನ ಕುಲದೈವ। ಇದರಲ್ಲಿ
ಯಾರನ್ನು ಬಿಡಲೋ ಸರ್ವಜ್ಞ"

ಮಾನವನು ಹುಟ್ಟಿನಿಂದ, ಉದ್ಯೋಗದಿಂದ, ಮೇಲು ಕೀಳಲ್ಲ. ಅವನ ಸಾಧನೆ, ಜೀವನ, ನಡೆನುಡಿಗಳಿಂದ ಮೇಲು ಕೀಳಾಗಬಲ್ಲ ಬಸವಣ್ಣನವರು ಅಸ್ಪೃಶ್ಯತೆಯ ಸೊಲ್ಲಡಗಿಸಿ ವರ್ಗ ಭೇದ ಲಿಂಗಭೇದಗಳ ಬುಡವನ್ನೇ ಕಿತ್ತೆಸೆದು ಎಲ್ಲರಿಗೂ ಸಾಮಾಜಿಕ ಸಮಾನತೆಯನ್ನು ಸಾಧಿಸಿ ಕೊಟ್ಟರು. ಇದು ಸಮಾಜ ಸುಧಾರಣೆ, ಸಮುದಾಯ ಸಂಘಟನೆಯ ಮಾದರಿ.

ಸಮಾಜದಲ್ಲಿ ಮನುಷ್ಯ ಹುಟ್ಟಿ ಬಂದಂತೆ ಅವನೊಂದಿಗೆ ಬೇಡಿಕೆಗಳು ಹುಟ್ಟಿ ಬಂದವು. ಅವುಗಳ ಪೂರೈಕೆಗೆ ಅನೇಕರು ಅನೇಕ ಉದ್ಯೋಗಗಳನ್ನು ತಮ್ಮ ಅಶನ, ವಸನ, ವಾಸಕ್ಕಾಗಿ ತಮ್ಮ ಸೇವೆ ನೀಡಿ, ಬೇರೆಯವರಿಂದ ಸೇವೆ ಪಡೆಯುವ ಕಾರ್ಯವನ್ನು ಸಮಾಜದಲ್ಲಿ ನಡೆಸಬೇಕಾಯಿತು. ಒಂದು ಗಾದೆ ಮಾತು ಹೀಗಿದೆ : "ಕಲ್ಲವ್ವ ಕಡುಬು ಕೊಟ್ರ ಮಲ್ಲವ್ವ ಹೋಳಿಗಿ ಕೊಟ್ಲು" ಎಂದು. ಇದು ಸಮಾಜದಲ್ಲಿ ಒಬ್ಬರಿಗೊಬ್ಬರ ಅನ್ಯೋನ್ಯತೆಯನ್ನು ಮೆರೆಯುತ್ತದೆ. ಅದಕ್ಕೆ ಪುಷ್ಟಿಯನ್ನೂ ಕೊಡುತ್ತದೆ. ಮನುಷ್ಯ ಸಮಾಜ ಜೀವಿ, ತನ್ನ ಬೇಡಿಕೆಗಳನ್ನು ತಾನೊಬ್ಬನೇ ಪೂರೈಸಿಕೊಳ್ಳಲಾರ. ತಾನೂ ಉದ್ಯೋಗಿಯಾಗಿ ಸೇವೆ ಮಾಡಬೇಕಾದುದಲ್ಲದೆ, ಉಳಿದವರೂ ಸಮಾಜದ ಬೇಡಿಕೆಗಳನ್ನು ಪೂರೈಸುವ ಯಾವುದೇ ಉದ್ಯೋಗವನ್ನು ಮಾಡಬೇಕಾಗುವುದು. ಅದಕ್ಕೆ ಯಾವುದೇ ವೃತ್ತಿಯು ಕೀಳಲ್ಲ; ಕಮ್ಮಾರಿಕೆಯೂ ಬೇಕು, ಚಮ್ಮಾರಿಕೆಯೂ ಬೇಕು, ಕುಂಬಾರಿಕೆಯೂ ಬೇಕು. ಈಗ ಮಂತ್ರಿಯೂ ಬೇಕು, ಪ್ರಧಾನಿಯೂ ಬೇಕು, ರಾಷ್ಟ್ರಾಧ್ಯಕ್ಷರೂ ಬೇಕು. ಅವರವರ ವೃತ್ತಿಗಳನ್ನು ವೃತ್ತಿ ಮೌಲ್ಯ ಗೌರವಗಳೊಂದಿಗೆ ನಿರ್ವಹಿಸಬೇಕಾಗುವುದು. ಮತ್ತು ತಮ್ಮ ತಮ್ಮ ಜಾಣ್ಮೆ ಬುದ್ಧಿ-ಬಲಗಳ ನೀತಿ ನಿಯತ್ತುಗಳ ಪ್ರಕಾರ ಅವರು ಸಮಾಜದಲ್ಲಿ ಒಂದು ಸ್ಥಾನ ಪಡೆಯಬಹುದು. ಕುಲ ಉದ್ಯೋಗಗಳಿಂದಲ್ಲ ಈ ಸ್ಥಾನವೇ ಶರಣ ಸ್ಥಾನವಾಗಬಹುದು. "ಶರಣತ್ವ" ಇದನ್ನು ಸಾಮಾಜಿಕವಾಗಿ ಧಾರ್ಮಿಕವಾಗಿ ಅರ್ಥೈಸುವುದಾದರೆ ಇದು, ಮಾನವನ ನೈತಿಕ, ಆರ್ಥಿಕ, ಸಾಮಾಜಿಕ ಅಧ್ಯಾತ್ಮಿಕ ಘಟ್ಟಗಳಲ್ಲಿ ಪಡೆದ ಉನ್ನತ ಸ್ಥಾನವಾಗುತ್ತದೆ ಅಂಥ ಉನ್ನತ ಸ್ಥಾನ ಪಡೆದವರು ವೀರಶೈವ ಶರಣರು. ಅವರ ಜೀವನವನ್ನೇ ಮಾದರಿಯಾಗಿ ಮಾಡಿಕೊಳ್ಳಲು ಜನಸಾಮಾನ್ಯರೂ ಹಾಡಿದರು.:

"ಶರಣರ ನೆನೆದರ ಸರಿಗೀಯ ಇಟ್ಟಂಗ
ಅರಳ ಮಲ್ಲಿಗಿ ಮುಡಿದಂಗ, ಕಲ್ಯಾಣ
ಶರಣರ ನೆನೆಯೊ ಎಲೆ ಮನವೆ."

ಇದನ್ನೇ ಇಂದಿನ ಸಾಮಾಜಿಕ ಧೋರಣೆಯನ್ನಾಗಿಸಿಕೊಂಡು, ಸಾಮಾಜಿಕ, ಆರ್ಥಿಕ ಪ್ರಗತಿ ಸಾಧಿಸಬೇಕಾಗುವುದು. ಭೌತಿಕ, ನೈತಿಕ, ಪ್ರಗತಿ ಸಾಧನೆಯ ಕಾರ್ಯ ಚಟುವಟಿಕೆಯೇ ಸಾಮಾಜಿಕ ಧೋರಣೆಯಾಗಿದೆ. ಅಂದರೆ "material progress with moral advancement" ಆಗಬೇಕು. ಇದನ್ನು ನುಲಿಯ ಚಂದಯ್ಯನವರ ವಚನದಿಂದ ತಿಳಿಯಬಹುದು.

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ,
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು
ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶ ಪರಿವುದು
ಇದು ಚನ್ನಬಸವಣ್ಣಪ್ರಿಯ ಚಂದ್ರೇಶ್ವರ ಲಿಂಗದ ಅರಿವು.

ಕಾಯಕಮಾಡದೇ ಅಂಡಲೆಯುವುದು ಕೀಳು; ಕಾಯಕದಲ್ಲಿ ನೀತಿ ಇಲ್ಲದಿದ್ದರೆ ಕೀಳು. ಧರ್ಮ, ಜಾತಿ, ವರ್ಣ, ವರ್ಗ, ಲಿಂಗ,ವಯಸ್ಸು ಉದ್ಯೋಗಗಳ ಅಂತರ ಭೇದಗಳಿಲ್ಲದೆ ಇಲ್ಲಿ ಯೋಗ್ಯತೆಯೊಂದನ್ನು ಪರಿಗಣಿಸಿ ಸಮುದಾಯವನ್ನು ರಚಿಸಲಾಯಿತು. ಇದರಿಂದ ಅನೇಕ ಮಹನೀಯರು, ಮಹಿಳೆಯರು ಓದು ಕಲಿತರು, ಆಚಾರ ವಿಚಾರವಂತರಾದರು. ತಮ್ಮ ಅನುಭವಗಳಿಂದ ಅರಿವು ಪಡೆದು ವಚನ ರಚನೆ ಮಾಡಿದರು. ಸಮಾಜಕಾರ್ಯದ ಸಮುದಾಯ ಸಂಘಟನೆಯಲ್ಲಿ ಸಾಧಿಸಬಹುದಾದ ಪ್ರೌಢ ಶಿಕ್ಷಣ, ಕ್ರಿಯಾತ್ಮಕ ಅಕ್ಷರಜ್ಞಾನ (Functional Literacy) ಸಾಮಾಜಿಕ ಶಿಕ್ಷಣ, ಸಮಾನತೆ, ಅಸ್ಪೃಶ್ಯತಾ ನಿವಾರಣೆ, ಸಮುದಾಯ ಪ್ರಗತಿ ಮುಂತಾದವುಗಳು ಕೈಗೂಡಿದವು. ಜಾನಪದ ಗೀತೆಯಲ್ಲಿ ಅದು ಹೀಗೆ ಪ್ರಕಟವಾಗಿದೆ :

''ಸಾಧು ಸಾಧಲೆ ಬಸವ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು ಕೇಳಿದವು
ಮೇದಿನಿಗೆ ಬಂತು ಹೊಸ ಬೆಳಕು.''

ಭಾರತೀಯ ಸಂವಿಧಾನದಲ್ಲಿ ಉಲ್ಲೇಖಿಸಿದ ಮೂಲಭೂತ ಹಕ್ಕು ಹಾಗೂ ಕರ್ತವ್ಯಗಳ ನಿರ್ವಹಣೆಯು ಇಲ್ಲಿ ಸಾಧ್ಯವಾದವು. ಯಾವುದು ಕಾಯ್ದೆ ಕಾನೂನುಗಳಿಂದ ಇನ್ನೂ ಸಾಧ್ಯವಾಗಿಲ್ಲವೋ ಅದು ಬಸವಣ್ಣ ಹಾಗೂ ಉಳಿದ ಶರಣರಿಂದ ಸಾಧ್ಯವಾಯಿತು.

ಭಾರತೀಯ ಸಂವಿಧಾನದ ನಿಬಂಧನೆ (೧೫) ನಾಗರಿಕರ ಸಾಮಾಜಿಕ ಹಾಗೂ ಆರ್ಥಿಕ ಊನತೆಗಳನ್ನು ತೊಡೆದುಹಾಕುತ್ತದೆ. ಅದರಂತೆ ನಿಬಂಧನೆ (೨೯) ಪ್ರತಿಯೊಬ್ಬ ನಾಗರಿಕನಿಗೂ ಶಿಕ್ಷಣ ಪಡೆಯುವಲ್ಲಿ ಸಮಾನ ಅವಕಾಶಕೊಟ್ಟಿದೆ. ಆದರೆ ಅಂದಿನ ವೀರಶೈವ ಶರಣರು, ಅದರಲ್ಲೂ ಬಸವಣ್ಣನವರು, ಇವುಗಳನ್ನು ಅಂದೇ ಅನುಷ್ಠಾನಕ್ಕೆ ತಂದು ಪ್ರಗತಿ ಸಾಧಿಸಿದ್ದರು. ಆ ಬಗೆಗೆ ಜಾನಪದ ಗೀತೆಗಳು ಹೀಗಿವೆ.

''ಹೊಲೆಯ ಮಾದಿಗರೆಂಬ ಬಲಿಯತನ ಕಿತ್ತೊಗೆದ
ಭಲರೆ ಬಸವಯ್ಯ ಬಸವರಸ ನಿನ್ನುಸಿರು

ನೆಲೆಯಾತು ನಿತ್ಯ ಜನಪದಕೆ.
ಕಿರಿ ಕುಲದ ಹರಳಯ್ಯ ವರ ಶರಣ ತಾನಾದ
ಪರಮತವ ಜಯಿಸಿ ಹರಿಸಿದನು.
ಹರಳನಿಗೆ ಹರಮೆಚ್ಚಿ, ಮೆರೆಸಿ ಕರೆದೊಯ್ದು.''

ನಾವು ಎಂಬ ಭಾವನೆ (We feeling), ಒಡನಾಡಿತ್ವ, ಸಹಬಾಳ್ವೆ (Belongingness) ಇವು ಸಮಾಜ ಜೀವನಕ್ಕೆ ಮೂಲ ಆಧಾರಗಳು. ಇದಕ್ಕೆ ಬಸವಣ್ಣನವರ ಒಂದು ವಚನ ಪುಷ್ಟಿ ನೀಡುತ್ತದೆ . ಇದು ಸಮಾಜದ ವ್ಯಾಖ್ಯೆಯೇ ಆಗಿದೆ.

''ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ,
ಇವ ನಮ್ಮವ ಇವನಮ್ಮವ ಇವ ನಮ್ಮವನೆಂದೆನಿಸಯ್ಯಾ
ಕೂಡಲ ಸಂಗಮದೇವ ನಿಮ್ಮ ಮನೆಯ ಮಗನೆಂದೆನಿಸಯ್ಯಾ''

ಬಸವಣ್ಣನವರು ಈ ಸಾಮಾಜಿಕ ಧೋರಣೆಯ ಅನುಷ್ಠಾನಕ್ಕೆ, ಶರಣಜೀವನ ಸಾಗಿಸಲಿಕ್ಕೆ, ಅಂದಿನ ರಾಜ ರಾಣಿಯರು ದೇಶದ ಬೇರೆ ಬೇರೆ ಭಾಗಗಳಿಂದ ಬಂದರು. ಜನಸಾಮಾನ್ಯರು, ತುಳಿಯಲ್ಪಟ್ಟವರು ಸರಿಸಮಾನ ಜೀವನ ಬದುಕಿದರು. ಮೋಳಿಗೆ ಮಾರಯ್ಯ, ಲಕ್ಕಮ್ಮ, ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ, ಮೇಧಾವಿಗಳಾದ ಅಲ್ಲಮಪ್ರಭು, ಚೆನ್ನಬಸವಣ್ಣರಿಂದ ಪ್ರಾರಂಭಿಸಿ ಅಕ್ಕಮಹಾದೇವಿ, ಚೌಡಯ್ಯ, ಚೆನ್ನಯ್ಯ, ಕೇತಯ್ಯ, ಮಾಚಯ್ಯ, ಗುಂಡಯ್ಯ, ಬೊಮ್ಮಯ್ಯ, ಅಮುಗಯ್ಯ, ಇಳಿಹಾಳ ಬೊಮ್ಮಯ್ಯ, ಹರಳಯ್ಯ, ಮದುವಯ್ಯ, ಕಕ್ಕಯ್ಯ ಹೀಗೆ ಅನೇಕ ಶರಣ ಶರಣೆಯರನ್ನು ಒಗ್ಗೂಡಿಸಿ, ಸಾಮಾಜಿಕ ಅನಿಷ್ಟಗಳನ್ನು ತೊಡೆದು ಹಾಕಲು ಸತ್ಯ ನಿಷ್ಠಯ ಜೀವನ ಬದುಕಲು ಅನುಭವ ಮಂಟಪದಂಥ ಸಾಮಾಜಿಕ ಕ್ರಮ (Social action) ದ ರಂಗವನ್ನು ನಿರ್ಮಿಸಿ, ಅವುಗಳನ್ನು ಕಾರ್ಯಾಚರಣೆಯಲ್ಲಿ ತಂದರು. ಸಮಗ್ರ ಮಾನವ ಜೀವಿಗಳ ಏಳಿಗೆ ಅಥವಾ ಶ್ರೇಯಸ್ಸನ್ನು ಬಯಸುವುದೇ ಕಲ್ಯಾಣ ರಾಜ್ಯದ ಕರ್ತವ್ಯ. ಬಸವಣ್ಣನವರು ಅದಕ್ಕೂ ಬುನಾದಿ ಹಾಕಿ ಸಮಾಜವಾದಿ ಸಮಾಜ, ಕಲ್ಯಾಣ ರಾಜ್ಯವನ್ನು ನನಸಾಗಿಸಿದರು.

ಲಿಂಗಭೇದವಿಲ್ಲದ ಸಮಾನತೆ

ಭಾರತೀಯ ಸಂವಿಧಾನದ (೩೯)ನೆಯ ನಿಬಂಧನೆಯಲ್ಲಿ ಕಲ್ಯಾಣ ರಾಜ್ಯದ ವಿಚಾರದಲ್ಲಿ ಮಹಿಳೆಗೂ, ಪುರುಷರಿಗೂ ಸಮಾನ ಸೌಲಭ್ಯ, ಅವಕಾಶಗಳನ್ನು ಕೊಡಬೇಕೆಂದಿದೆ. ನಿಬಂಧನೆ (೧೫) ಪುರುಷ ಹಾಗೂ ಮಹಿಳೆಯರಿಬ್ಬರಿಗೂ ಸಮಾನ ಹಕ್ಕುಗಳನ್ನು ನೀಡಿದೆ. ನಿಬಂಧನೆ ೧೪, ೧೫ ಮತ್ತು ೧೬ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ, ಲಿಂಗಭೇದವಿಲ್ಲದೆ ಎಲ್ಲ ನಾಗರಿಕರಿಗೂ ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶ, ಕಾನೂನಿನ ಎದುರು ಎಲ್ಲರೂ ಸಮಾನರು, ಸರ್ವರಿಗೂ ಕಾನೂನು ಸಮಾನ ರಕ್ಷಣೆ ನೀಡಬೇಕೆಂದಿದೆ. ಶರಣರ ಕಲ್ಯಾಣ ರಾಜ್ಯದಲ್ಲಿ ಪ್ರಜಾಪ್ರಭುತ್ವದ

ಸಂವಿಧಾನದ ಹಕ್ಕು ಗಳಾದ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ವೃತ್ತಿ,ಗೌರವ ವ್ಯಕ್ತಿಗೌರವ (Human dignity) ಮೆರೆದವು. ಇವೆಲ್ಲದರ ಸಾರ ಸಾರಾಂಶವನ್ನು ತತ್ತ್ವ ರೂಪದಲ್ಲಿ, ಧರ್ಮದಿಂದ, ಸಮಾಜ ಧರ್ಮದಲ್ಲಿ ಬೋಧಿಸಿ ಆಚರಣೆಯ ಮೆರಗು ಕೊಟ್ಟಿದ್ದಾರೆ. ಬಂಗಾರಕ್ಕೆ ಕುಂದಣವನ್ನಿಟ್ಟಿದ್ದಾರೆ. ಅದಕ್ಕೆ ಅನೇಕ ವಚನಗಳನ್ನು ಇಲ್ಲಿ ಉದಾಹರಿಸಬಹುದು.

''ಮೊಲೆ ಮುಡಿ ಬಂದರೆ ಹೆಣ್ಣೆಂಬರು,
ಗಡ್ಡ ಮೀಸೆ ಬಂದರೆ ಗಂಡೆಂಬರು,
ಒಳಗೆ ಸುಳಿವ ಆತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ,
ಕಾಣಾ ರಾಮನಾಥ'' (ದೇವರ ದಾಸಿಮಯ್ಯ)

''ಹೆಣ್ಣು ಹೆಣ್ಣಲ್ಲ. ಹೆಣ್ಣು ರಾಕ್ಷಸಿಯಲ್ಲ,
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ'' (ಸಿದ್ಧರಾಮ)

ಶರಣರಲ್ಲದೆ, ಶರಣೆಯರೂ ಸ್ವತಃ ಅನುಭವಿಸಿ ಹಾಡಿದ್ದಾರೆ. ಉದಾಹರಣೆಗೆ ಅಕ್ಕಮಹಾದೇವಿ ಹಾಗೂ ಅಕ್ಕನಾಗಮ್ಮನವರ ವಚನಗಳನ್ನು ನೋಡಬಹುದು.

''ಕಾಮನ ಗೆಲಿದೆನು, ಬಸವ ನಿಮ್ಮ ದಯದಿಂದ
ಸೋಮಧರನ ಹಿಡಿದಪ್ಪೆನು ಬಸವ ನಿಮ್ಮ ಕೃಪೆಯಿಂದ
ನಾಮದಲ್ಲಿ ಹೆಂಗೂಸೆಂಬ ಹೆಸರಾದರೇನು ?
ಭಾವಿಸಲು ಗಂಡು ರೂಪು ಬಸವ ನಿಮ್ಮ ಕೃಪೆಯಿಂದ
ಅತಿ ಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರಿಕ್ಕಿ
ಎರಡರಿಯದೆ ಕೂಡಿದೆನು ನಿಮ್ಮ ಕೃಪೆಯಿಂದ'' (ಅಕ್ಕಮಹಾದೇವಿ)

''ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ
ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ
ಚೆನ್ನಮಲ್ಲಿಕಾರ್ಜುನೊಲಿದ ಶರಣಂಗೆ ಮಾಯೆ ಇಲ್ಲ
ಮರಹಿಲ್ಲ ಅಭಿಮಾನವೂ ಇಲ್ಲ'' (ಅಕ್ಕಮಹಾದೇವಿ)

''ಎನ್ನ ಕುಲ ಸೂತಕವ ಕಳೆದಾತ ಬಸವಣ್ಣ
ಎನ್ನ ಘನ ಸೂತಕವ ಕಳೆದಾತ ಬಸವಣ್ಣ
ಎನ್ನ ತನು ಸೂತಕವ ಕಳೆದಾತ ಬಸವಣ್ಣ
ಎನ್ನ ನೆನಹು ಸೂತಕವ ಕಳೆದಾತ ಬಸವಣ್ಣ
ಎನ್ನ ಕುರುಹು ಸೂತಕವ ಕಳೆದಾತ ಬಸವಣ್ಣ
ಎನ್ನ ಭಾವ ಸೂತಕವ ಕಳೆದಾತ ಬಸವಣ್ಣ
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ನಿಜದ ನಿರವಯ ಬಾಗಿಲ ತೋರಿದಾತ ಬಸವಣ್ಣ

ಬಸವಣ್ಣಪ್ರಿಯ ಚೆನ್ನಸಂಗನ ಹೃದಯದಲ್ಲಿ ನಿಜನಿವಾಸಿಯಾಗಿ
ಇರಿಸಿದ ಎನ್ನ ತಂದೆ ಸಂಗನಬಸವಣ್ಣ'' (ಅಕ್ಕನಾಗಮ್ಮ)

ಅನೇಕ ಶರಣೆಯರೂ ವಿಚಾರ ಸ್ವಾತಂತ್ರ್ಯ ವಾಕ್ ಸ್ವಾತಂತ್ರ್ಯ, ಪಡೆದು ಶರಣರಿಗೆ ಹೆಗಲೆಣೆಯಾಗಿ ಮುನ್ನಡೆದರು. ಅಂದು ಕಲ್ಯಾಣ ರಾಜ್ಯದ ಕನಸು ನನಸಾಯಿತು. ಆದರೆ ಇಂದು ವೀರಶೈವರಲ್ಲೂ ಸ್ತ್ರೀಯು ತುಳಿಯಲ್ಪಟ್ಟಿದ್ದಾಳೆ. ಆದರೆ, ಪೂಜಾ ಸಮಾನತೆಯನ್ನಷ್ಟು ಉಳಿಸಿಕೊಂಡಿದ್ದಾರೆ.

ಕುಲ ಅಥವಾ ಜಾತಿ ಸಮಾನತೆ

ಬಸವಣ್ಣನವರು ಮನುಷ್ಯ ಜಾತಿಯು ಒಂದೇ ಎಂದು ಬೋಧಿಸಿ, ಅದನ್ನು ಸಾಮಾಜಿಕವಾಗಿ ಧಾರ್ಮಿಕವಾಗಿ ಆಚರಣೆಯಲ್ಲಿ ತಂದರು. ಭಾರತೀಯ ಸಂವಿಧಾನದ ನಿಬಂಧನೆ (೧೭) ಅಸ್ಪೃಶ್ಯತೆಯನ್ನು ತೆಗೆದುಹಾಕಿದೆ. ನಿಬಂಧನೆ (೪೬) ದುರ್ಬಲವರ್ಗದವರ ಶಿಕ್ಷಣ ಮತ್ತು ಅರ್ಥಿಕ ಸೌಲಭ್ಯಗಳನ್ನು ವಿಶೇಷವಾಗಿ ಒದಗಿಸುತ್ತದೆ. ನಿಬಂಧನೆ ೩೩೦ ರಿಂದ ೩೩೬ ದುರ್ಬಲ ವರ್ಗದವರಿಗೆ ಪಾರ್ಲಿಮೆಂಟ್ ಹಾಗೂ ರಾಜ್ಯದ ನ್ಯಾಯಾಂಗಗಳಲ್ಲಿ ವಿಶೇಷ ಪ್ರಾತಿನಿಧ್ಯಗಳನ್ನು ಕೊಟ್ಟು ಹಾಗೂ ಸೇವೆ ಹುದ್ದೆಗಳಿಗೆ ಜಾಗೆ ಕಾಯ್ದಿರಿಸಿದೆ. ಅಲ್ಲದೆ ನಿಬಂಧನೆ ೩೩೮ ದುರ್ಬಲ ವರ್ಗದವರ ಸಮಸ್ಯೆ ಇನ್ನಿತರ ವಿಷಯಗಳನ್ನು ಕುರಿತು ಅಧ್ಯಯನಮಾಡಲು ವಿಶೇಷ ಅಧಿಕಾರಿಯನ್ನು ನೇಮಿಸುವ ಅವಕಾಶ ಕೊಡುತ್ತಿದೆ. ಆದರೆ ಅಂದು ವೀರಶೈವ ಶರಣರು ಅದರಲ್ಲೂ ಬಸವಣ್ಣನವರು, ಸಾಮಾಜಿಕ ಅಧಿಕಾರಿಯಾಗಿ, ಸಮಾಜದ ಕಾರ್ಯಕರ್ತರಾಗಿಯಾವ ಕಾಯ್ದೆ ಕಾನೂನುಗಳ ನೆರವಿಲ್ಲದೆ ಇಲ್ಲಿಯ ಅನೇಕ ನಿಬಂಧನೆಗಳನ್ನು ಕಾರ್ಯಗತ ಮಾಡಿದ್ದಾರೆ. ಅವರು ಅದಕ್ಕಾಗಿ ಸಾಮಾಜಿಕ ಕ್ರಮ ತೆಗೆದುಕೊಂಡರು. ಕಾನೂನು ಅಥವಾ ಪೋಲೀಸ ಕ್ರಮಗಳಿರಲಿಲ್ಲ. ಅಸ್ಪೃಶ್ಯತೆ ಬಗೆಗೆ ವಿವೇಕಾನಂದರು ಹೀಗೆ ಹೇಳುತ್ತಾರೆ "ಅಸ್ಪೃಶ್ಯತೆ ಎಂಬುದು ಮಾನಸಿಕ ವ್ಯಾಧಿ ಅದನ್ನು ಒದ್ದೋಡಿಸಿರಿ'' ಎಂದು. ಆದರೆ ಈ ಅಸ್ಪೃಶ್ಯತೆ ಇಪ್ಪತ್ತನೇ ಶತಮಾನದವರೆಗೂ ಮುಂದುವರಿದು ಬಂದಿದೆ. ಸಾಮಾಜಿಕವಾಗಿ ಹನ್ನೆರಡನೆಯ ಶತಮಾನದ ಸಾಧನೆಗಳು ಮುಂದುವರಿಯಲಿಲ್ಲ. ಈ ವೀರಶೈವರಲ್ಲಿಯೇ ಮೇಲು ಕೀಳು ಭಾವನೆಗಳು ಮರುಕಳಿಸಿವೆ. ವೀರ ಶೈವರಲ್ಲೂಮೇಲು ವೀರಶೈವ, ಕೀಳು ವೀರಶೈವ ಗುಂಪುಗಳಾಗಿವೆ. ಅಲ್ಲದೆ ಒಳ ಪಂಗಡಗಳ ಹೆಸರಿನಲ್ಲಿ ಸಂಘ ಸಂಸ್ಥೆಗಳು ಹುಟ್ಟಿಕೊಂಡಿವೆ. ಕಾರಣ ಬಸವಣ್ಣನವರ ಶರಣರ ಸಾಧನೆಗಳನ್ನು ಮುಂದಿಟ್ಟುಕೊಂಡು ಅದರ ನಿವಾರಣೆ ಮಾಡಬೇಕಾದ ಪ್ರಸಂಗ ಬಂದಿದೆ. ಬಸವಣ್ಣನವರ ಹಾಗೂ ದೇವರ ದಾಸಿಮಯ್ಯನವರ ವಚನಗಳನ್ನು ಇಲ್ಲಿ ಉದಾಹರಿಸಬಹುದು :

"ಹೊಲೆಯೊಳಗೆ ಹುಟ್ಟಿ ಕುಲವನರಸುವೆ
ಎಲವೋ ಮಾತಂಗಿಯ ಮಗ ನೀನು

ಸತ್ತುದನೆಳೆವವ ಎತ್ತಣದ ಹೊಲೆಯ
ಹೊತ್ತು ತಂದು ನೀವು ಕೊಲುವಿರಿ
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ಭೇದವೆಂಬುದು ನಿಮಗೆ ತಿಳಿಯದು
ನಮ್ಮ ಕೂಡಲಸಂಗನ ಶರಣರು
ಕರ್ಮ ವಿರಹಿತರು ಶರಣ ಸನ್ನಿಹಿತರು,
ಅನುಪಮ ಚರಿತ್ರರು
ಅವರಿಗೆ ತೋರಲು ಪ್ರತಿಯಿಲ್ಲವೋ''.

''ಕುಲವನರಸದಿರಿಂ ಭೋ ಕುಲದಿಂದ ಮುನ್ನೇನಾದಿರಿಂ ಭೋ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ
ಕೌಂಡಿನ್ಯನೆಂಬ ಋಷಿ ಮೂಲೋಕ ಭುವನ ವರಿಯೆ ನಾವಿದ ಕಾಣಭೋ''

''ನಮ್ಮ ಕೂಡಲ ಸಂಗನ ವಚನವಿಂತೆಂದುದು:
ಶ್ವಪಚೋಪಿಯಾದಡೇನು ಶಿವಭಕ್ತನೇ ಕುಲಜನು.

ನೂರನೋದಿ ನೂರಕೇಳಿದರೇನು
ಆಸೆ ಹರಿಯದು ರೋಷಬಿಡದು
ಮಜ್ಜನಕ್ಕೆರೆದು ಫಲವೇನು ?
ಮಾತಿನಂತೆ ಮನವಿಲ್ಲದ
ಜಾತಿಡೊಂಬರ ನೋಡಿ ನಗುವ
ನಮ್ಮ ಕೂಡಲ ಸಂಗಮದೇವ.''

(ಮೇಲಿನ ಮೂರು ವಚನಗಳು ಬಸವಣ್ಣನವರವು)

''ಹೊಲೆಯರ ಬಾವಿಯಳೊಂದು ಎಲುವು ನೆಟ್ಟಿದ್ದರೆ
ಹೊಲೆ ಹೊಲೆ ಎಂಬುದೀ ಲೋಕವೆಲ್ಲ
ಹಲವು ಎಲುವುಳ್ಳ ಬಾಯಲಿ ಅಲ್ಲದುದ ನುಡಿದರೆ
ಹೊಲೆಯರ ಬಾವಿಗಿಂತ ಕರಕಷ್ಟ, ಕಾಣಾ ರಾಮನಾಥ''

(ದೇವರ ದಾಸಿಮಯ್ಯ)

ಆದರೆ ವೀರಶೈವ ಶರಣರು ಕೊಲ್ಲುವುದನ್ನು, ಹೊಲಸು ತಿನ್ನುವುದನ್ನು ಖಂಡಿಸಿದರು. ಹಾಗೆ ಮಾಡುವವರು ಹೊಯೆಮಾದಿಗರೆಂದರು. ಅಪರಾಧ ಲಂಚಗುಳಿತನ, ಶೋಷಣೆ ಮುಂತಾದವು ಕೀಳು ನಡತೆಗಳು ಹೀಗೆ ನಡೆದವರು. ಕೀಳುಮಾನವರೆಂದರು. ಇಲ್ಲಿ ಕೆಲ ವಚನಗಳನ್ನು ನೋಡಬಹುದು.

"ಕೊಲುವವನೇ ಮಾದಿಗ
ಹೊಲಸು ತಿಂಬುವನೇ ಹೊಲೆಯ
ಕುಲವೇನು ಅವಂದಿರ ಕುಲವೇನು
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು"

(ಬಸವಣ್ಣ)

"ಶೆಟ್ಟಿ ಎಂಬೆನೆ ಸಿರಿಯಾಳನ
ಮಡಿವಾಳನೆಂಬೆನೆ ಮಾಚಯ್ಯನ
ಮಾದರನೆಂಬೆನೆ ಚೆನ್ನಯ್ಯನ
ಡೋಹರನೆಂಬೆನೆ ಕಕ್ಕಯ್ಯನ
ಆನು ಹಾರುವನೆಂದರೆ ಕೂಡಲಸಂಗಮ
ದೇವ ನಗುವನಯ್ಯ." (ಬಸವಣ್ಣ)

ಆದರೆ ಈಗ ವೀರಶೈವರಲ್ಲಿ ಲಂಚಗುಳಿತನ, ಕೊಲೆ ಮುಂತಾದ ಅಪರಾಧಗಳೇನೂ ಇಲ್ಲದಿಲ್ಲ. 'ಓದಿದವರೂ, ಅಧಿಕಾರಿಗಳೂ, ಶ್ರೀಮಂತರೂ ಇನ್ನೂ ಅನೇಕರು ಹೊಸ ಹೊಸ ವಿಧದ ಅಪರಾಧಗಳನ್ನು ಎಸಗುತ್ತಿದ್ದಾರೆ. ಅದಕ್ಕೆ ಇಲ್ಲೊಂದು ವಚನ ಹೀಗದೆ :

"ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲುಬಹುದೆ ?
ಏರಿ ನೀರುಂಬೊಡೆ ಬೇಲಿಕೆಯ್ಯ ಮೇವೊಡೆ
ನಾರಿ ತನ್ನ ಮನೆಯಲ್ಲಿ ಕಳುವೊಡೆ
ತಾಯ ಎದೆ ಹಾಲು ನಂಜಾಗಿ ಕೊಲುವೊಡೆ
ಇನ್ನಾರಿಗೆ ದೂರುವೆನಯ್ಯ ಕೂಡಲಸಂಗಮದೇವ."

(ಬಸವಣ್ಣ)

ಇನ್ನು ಅಂತರ್‌ಜಾತಿ ವಿವಾಹವನ್ನು ಬಸವಣ್ಣನವರು ಅಂದೇ ಸಾಧಿಸಿದರಾದರೂ, ಅಲ್ಲಿ ಅನುಚಿತವಾದಂತೆ ಕ್ರಾಂತಿ ನಡೆಯಿತು. ಇಲ್ಲಿ ಬ್ರಾಹ್ಮಣ ವಧುವನ್ನು ಹರಿಜನ ವರನಿಗೆ ಇಬ್ಬರ ಒಪ್ಪಿಗೆಯ ಮೇರೆಗೆ ಮದುವೆ ಮಾಡಿದರು. ಇಲ್ಲೊಂದು ಜಾನಪದ ಗೀತೆ ನೋಡಬಹುದು :

"ಹಾರುವರ ಮಧುವರಸ ಊರ ಮಾತನು ಮೀರಿ
ಧಾರೆ ಎರೆದಿತ್ತು ಮಗಳನ್ನು ಬೀಗಾರ
ಮಾರಹರ ಭಕ್ತ ಹರಳನಿಗೆ."

ಆದರೆ ಒಂದು ಮಾತು. ಇಲ್ಲಿ ಸಮಾಜವು ಇನ್ನೂ ಈ ದಿಶೆಯಲ್ಲಿ ತಯಾರಾಗಿರಲಿಲ್ಲ. ಅಥವಾ ಸಜ್ಜಾಗಿರಲಿಲ್ಲ ಎನ್ನಬಹುದು. ಆದರೆ ಇದೊಂದು ಉದಾತ್ತ ವಿಚಾರ ಅಷ್ಟೇ ಅಲ್ಲ ಉದಾತ್ತ ಕಾರ್ಯ. ಆದಾಗ್ಯೂ ಈ ಕಾರ್ಯ ಮಾಡುವದಕ್ಕಿಂತ ಮೊದಲು ಸಾಮಾಜಿಕವಾದ

ಬದಲಾವಣೆ ಆಗಬೇಕಾಗಿತ್ತು. ಸಮಾಜವನ್ನು ಆ ಎತ್ತರಕ್ಕೆ ತರಬೇಕಾಗಿತ್ತು. ಸಮುದಾಯಕ್ರಮ, ಸಮಾಜಕ್ರಮ (Community action and Social action) ಗಳ ಆವಶ್ಯಕತೆ ಇತ್ತು. ಆದರೂ ಅದೊಂದು ಸಮಾಜ ಸುಧಾರಣೆಗೆ ಒಂದು ಮೈಲುಗಲ್ಲು. ಅಕ್ಕ ಮಹಾದೇವಿಯ ವಿಷಯದಲ್ಲಿ ಅಲ್ಲಮಪ್ರಭುಗಳಿಗೆ ಗಂಡು ಹೆಣ್ಣಿನಲ್ಲಿ ಭೇದವೆಣಿಸಬಾರದೆಂದು ತಿಳಿದು ಬಂದಿದ್ದರೂ ಒಮ್ಮೆಲೆ ಅವಳಿಗೆ ಅನುಭವ ಮಂಟಪದಲ್ಲಿ ಸದಸ್ಯತ್ವ ನೀಡಲಿಲ್ಲ. ಬಸವಣ್ಣ ಹಾಗೂ ಉಳಿದ ಶರಣರೊಡನೆ ಸುದೀರ್ಘ ಚರ್ಚೆಯಾಗಿ ಎಲ್ಲರೂ ಒಪ್ಪಿಕೊಂಡ ಮೇಲೆ ಸಮುದಾಯ ಸಂಘಟನೆಯ ಆಧಾರದ ಮೇಲೆ ಅಕ್ಕಮಹಾದೇವಿಗೆ ಸದಸ್ಯತ್ವ ನೀಡಲಾಯಿತು.

ಕುಟುಂಬ ಕಲ್ಯಾಣ ಕಾರ್ಯ

ಶರಣರಿಗೆ ಕುಟುಂಬ ಕಲ್ಯಾಣ, ಕುಟುಂಬ ಸಂಘಟನೆಗಳು ಅಷ್ಟೇ ಮಹತ್ವದ್ದಾಗಿವೆ. ಅವರು ಸಂಸಾರದಲ್ಲಿದ್ದುಕೊಂಡು, ಮೌಲ್ಯ, ಆದರ್ಶಗಳನ್ನು ಆಚರಿಸಿ ಸದ್ಗತಿಯನ್ನು ಸಾಧಿಸಬೇಕೆಂದು ಅದನ್ನು ಅಳವಡಿಸಿ ಕಾರ್ಯಗತ ಮಾಡಿದರು. ಸತಿ-ಪತಿಗಳ ವಿಚಾರ ಸ್ವಾತಂತ್ರ್ಯದಿಂದ ತರ್ಕ ನಿರ್ಣಯಗಳನ್ನು ಪಡೆದು ಒಬ್ಬರಿಗೊಬ್ಬರು ಪೂರಕವಾದ ಪಾತ್ರಗಳನ್ನು ಆಡಿ ಕುಟುಂಬ ಸಾಗಿಸುವ, ಸಂಘಟಿಸುವ, ವಿಚಾರಗಳನ್ನು ಬಿತ್ತರಿಸಿದರು. ಉದಾಹರಣೆಗೆ ದೇವರ ದಾಸಿಮಯ್ಯನವರ ವಚನ ಹಾಗೂ ಜಾನಪದ ಗೀತೆಯನ್ನು ನೋಡಬಹುದು.

ಸತಿಪತಿಗಳೊಂದಾದ ಭಕ್ತಿ
ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆತಂತೆ
ಕಾಣಾ ರಾಮನಾಥ" (ದೇವರ ದಾಸಿಮಯ್ಯ)

"ಕೇತ ಕೇಳಿದನಂದು ಸಾತವ್ವ ಹೇಳಿದಳು,
ಜೇತ ಶಿವ ಮತಕೆ ನಾವಿಂದು ಪತಿದೇವ
ಮಾತಾಡಿ ಬಹಳ ಫಲವೇನು"
ಮಡದಿಗಂಗೆಯ ಕೂಡಿ ಬಡವ ಮಾದರ ಚೆನ್ನ
ತಡೆದ ಕಾಂಚಿಯೊಳು ಕಾಯಕಕ್ಕೆ
ನಿತ್ಯದಲಿ ಆಡಕದಲಿ ನಡೆಸಿ ಶಿವಪೂಜೆ"

ಇನ್ನೂ ಮುಂದೆ ಹೋಗಿ ಸಮಾಜಶಾಸ್ತ್ರಜ್ಞರು ಹೇಳುವಂತೆ, ಸತಿ-ಪತಿ ಸುತರೊಂದಿಗೆ ಮಾಡಿದ ಜೀವನ ತುಂಬು ಜೀವನ ಎಂದು ಕರೆದರೆ (He only is perfect man who consists of his wife, himself and his offspring), ಶರಣರೂ ಅದನ್ನು ಸಾಧಿಸಿದ್ದಾರೆ. ಉದಾಹರಣೆಗೆ ಈ ಜಾನಪದ ಗೀತೆ ಕೇಳಿ :

"ಮಡದಿ ಮಕ್ಕಳಕೂಡ ಒಡಲೂಟ ದಾಸೋಹ
ನಡೆಸಿ ದಿನಗೆಲಸ ಕಾಯಕವ ಮಾಡಯ್ಯ
ಒಡನಾಡಿ ಶರಣ ಮಂಟಪಕೆ"

ಹೀಗೆ ಹರಳಯ್ಯನ ಮಡದಿ ಕಲ್ಯಾಣಮ್ಮ, ಮಾರಯ್ಯನ ಮಡದಿ ಲಕ್ಕಮ್ಮ, ಮಾಚಯ್ಯನ ಮಡದಿ ಹಾಗೂ ಮಾಚಯ್ಯ, ಮಾದಯ್ಯನ ಮಡದಿ ಮಾದೇವಿ ಮಗ ಲಿಂಗಣ್ಣ, ಅಮುಗಯ್ಯನ ಮಡದಿ ದಾನವ್ವ, ಚೆನ್ನಯ್ಯನ ಮಡದಿ ಗಂಗಾದೇವಿ, ಗುಂಡಯ್ಯನ ಮಡದಿ ಕೇತಲದೇವಿ, ಕೇತಯ್ಯನ ಮಡದಿ ಸಾತವ್ವ, ಬಸವಣ್ಣ, ಬಸವಣ್ಣನ ಮಡದಿಯರು, ಮುಂತಾದವರು ಒಂದಾಗಿ ಸಂಸಾರವನ್ನು ಸಾಗಿಸಿದರು. ಸೇವಾಭಾವಗಳನ್ನು ಮೆರೆದರು. ಇದು ಬರಿಯಕುಟುಂಬಕ್ಕಲ್ಲದೆ, ಸಮುದಾಯ ಕಲ್ಯಾಣಕ್ಕೂ ನೆರವಾಗುವುದರಲ್ಲಿ ಸಂದೇಹವಿಲ್ಲ.

ಅಪರಾಧಿಯ ಸುಧಾರಣೆ ಹಾಗೂ ನಿಯಂತ್ರಣ

ಅಪರಾಧಿಯ ಸುಧಾರಣೆ ಹಾಗೂ ನಿಯಂತ್ರಣಗಳಲ್ಲೂ ಶರಣರ ಸಾಧನೆ ಹಿರಿದು. ಸಂಗ್ರಹ ಪ್ರವೃತ್ತಿ, ಲಂಚಗುಳಿತನ, ಕಳ್ಳತನ, ಕೊಲೆ ಸುಲಿಗೆಗಳ ವಿರುದ್ಧವಾದ ನೀತಿ ಕಟ್ಟಳೆಗಳನ್ನು ಹಾಕಿಕೊಂಡಿದ್ದರು. ಅಷ್ಟೇ ಅಲ್ಲದೆ, ಬಸವಣ್ಣನವರ ಮನೆಯೊಳಗೆ ಹೊಕ್ಕ ಕಳ್ಳನ ಮನಃಪರಿವರ್ತನೆಯಾಗಿ ಕಳ್ಳನೂ ಶರಣನಾದ. ಅನೇಕ ವಚನಗಳನ್ನು ಇಲ್ಲಿ ಉದಾಹರಿಸಬಹುದು.

"ಒಡನಿರ್ದಸತಿ, ಎಂದು ನಚ್ಚಿರ್ದೆನಯ್ಯಾ,
ಕೈಹಿಡಿದಸಜ್ಜನೆಯೆ ಎಂದು ನಂಬಿರ್ದೆನಯ್ಯಾ,
ಅಯ್ಯೋ ನಮ್ಮಯ್ಯನ ಕೈನೊಂದಿತ್ತು
ತೆಗೆದುಕೊಡೆ ಎಲೆ ಚಂಡಾಲಗಿತ್ತಿ
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಕೂಡಲ ಸಂಗಮನಲ್ಲದೆ ಮತ್ತಾವನೂ ಅಲ್ಲ." (ಬಸವಣ್ಣ)

ಇದರ ಪರಿಣಾಮವಾಗಿ ವೇಷ ಹಾಕಿಕೊಂಡು ಬಂದ ಕಳ್ಳನು, ತಾನು ಸಂಗಮನೂ ಅಲ್ಲ, ಜಂಗಮನೂ ಅಲ್ಲ, ತಾನೊಬ್ಬ ಕಳ್ಳನೆಂದು ಒಪ್ಪಿಕೊಂಡು ಶರಣನಾಗುತ್ತಾನೆ. ಕಳ್ಳನ ಮನಃ ಪರಿವರ್ತನೆ ಮಾಡುವುದಾಗಲಿ, ಕಳ್ಳನೆಂದು ನಿಜಸಂಗತಿ ಒಪ್ಪುವುದಾಗಲಿ ಇಂದಿನ ಮುಂದುವರಿದ ಆಧುನಿಕ ಸಮಾಜದಲ್ಲಿ, ಪೋಲೀಸರಿಂದ ಸುಧಾರಣಾ ಅಧಿಕಾರಿಗಳಿಂದ ಸಾಧ್ಯವಾಗಬೇಕಾಗಿದೆ. ಆದರೆ ಬಂದ ಅಪರಿಚಿತರನ್ನು ಇಂದಿನ ಕಾಲಮಾನದಲ್ಲಿ ಮನೆಯೊಳಗೆ ಕರೆಯುವುದೇ ಸಾಧ್ಯವಿಲ್ಲ. ಇನ್ನು ಕಳ್ಳನನ್ನು ಹಾಗೆ ಮಾತನಾಡಿಸುವುದು ಸಾಧ್ಯವೆ ? ಸಾಧ್ಯವಿಲ್ಲ ಎಂದರು. ಅದಕ್ಕೆ ಕಾರಣಗಳಿವೆ. ಸ್ವತಃ ನಾವೇ ಕಳ್ಳರು, ಮೋಸಗಾರರು ಇದ್ದಾಗ ಪರರನ್ನು ನಂಬುವುದು ಕಷ್ಟ. ಹಣ ಹೊಡೆದು ತಿನ್ನಲು ಹೊರಟು ಘಾತುಕರಿಗೆ

ಒಡಿದು ತಿನ್ನುವ ದರೋಡೆಕೋರರು ಹುಟ್ಟಿಕೊಂಡಿದ್ದಾರೆ. ಇಲ್ಲಿ ಬಸವಣ್ಣ ತಾನೂ ಸ್ವಲ್ಪ ಅಪರಾಧ ಮಾಡಿದ್ದೇನೆ. ಮಡದಿಯ ಮೈಮೇಲೆ ಹೆಚ್ಚಿನ ಆಭರಣಗಳಿವೆ. ಇದು ಸಂಗ್ರಹ ಪ್ರವೃತ್ತಿ. ಇದು ಒಂದು ರೀತಿ ನೀತಿ ಮೌಲ್ಯಬಾಹಿರವಾದ ನಡೆ. ಲೋಂಬ್ರೊಸ್ ಎಂಬ ಅಪರಾಧ ವಿಜ್ಞಾನಿ ''Everybody is a potential criminal' ಎಂದು ಹೇಳಿದ್ದಾನೆ. ಹಾಗೆ ತಿಳಿದು ಜೀವನ ಮಾಡಿದ್ದರೆ ಇನ್ನೊಬ್ಬ ಕಳ್ಳನ ಭಯವಿರುವುದಿಲ್ಲ. ಒಂದು ವೇಳೆ ಹಾಗಿದ್ದರೂ ಕಳ್ಳರನ್ನೂ ಸುಧಾರಣಾ ಮಾರ್ಗಕ್ಕೂ ತರಬಹುದಾಗಿದೆ.

ಖ್ಯಾತ ಅಪರಾಧ ಶಾಸ್ತ್ರಜ್ಞರಾದ ಸದರ್‌ಲ್ಯಾಂಡ್, ಫೆರಿ, ಬರ್ಟ್ ಮುಂತಾದವರು ಹೇಳುವುದೇನೆಂದರೆ, ಅಪರಾಧಕ್ಕೆ ಹಲವಾರು ಕಾರಣಗಳು. ಅವು ಭೌತಿಕ, ಆರ್ಥಿಕ, ಮಾನಸಿಕ ಹಾಗೂ ಸಾಮಾಜಿಕ ಎಂದು. ಇತ್ತಿತ್ತಲಾಗಿ ಸ್ಥಿತಿವಂತರನೇಕರು, ಅಧಿಕಾರಿಗಳನೇಕರು ಅಪರಾಧ ಮಾಡುತ್ತಿದ್ದಾರೆ. ಇವಕ್ಕೆ ಶ್ವೇತ ಪೋಷಾಕಿನ ಅಪರಾಧ ಎನ್ನುತ್ತಾರೆ ಕೂಡ. ಬಡವರು ಹೊಟ್ಟೆಯ ಹಸಿವಿಗಾಗಿ ಅಪರಾಧ ಮಾಡಿದರೆ ಸ್ಥಿತಿವಂತರು ದುರಾಶೆಗಾಗಿ ಅಪರಾಧ ಮಾಡುತ್ತಾರೆ.

ದುರಾಶೆಯೂ ಅಪರಾಧಕ್ಕೆ ಒಂದು ಕಾರಣವಾಗಿದೆ. ದುರ್ಜನರ ಸಂಗವೂ ಇದಕ್ಕೆ ಒಂದು ಕಾರಣ. ಇವೆಲ್ಲವುಗಳನ್ನು ಅಳಿಸಲು ಮಾಡಿದ ಶರಣರ ಪ್ರಯತ್ನಗಳು, ಆದರ್ಶದ ನಡೆಗಳು ಈ ಕೆಳಗಿನ ವಚನಗಳಲ್ಲಿ ಕಂಡುಬರುತ್ತವೆ.

''ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ'' (ಬಸವಣ್ಣ)

''ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗ ಜಂಗಮವೇ ಬೇಕೆಂಬ
ಛಲಬೇಕು ಶರಣಂಗೆ ಪ್ರಸಾದವೇ ಬೇಕೆಂಬ
ಛಲಬೇಕು ಶರಣಂಗೆ ಪರವಾದಿ ನಿಗ್ರಹದಲ್ಲಿ
ಛಲವಿಲ್ಲದಿರೆ ಮೆಚ್ಚ ಕೂಡಲ ಸಂಗಮದೇವ.'' (ಬಸವಣ್ಣ)

ಭಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ
ಹೋಗಬಾರದು,
ಕಳ್ಳನಾಣ್ಯ ಸಲುಗೆಗೆ ಸಲ್ಲದು

ಕಳ್ಳನಾಣ್ಯ ಸಲ್ಲಿಸಲೀಯರಯ್ಯ
ಭಕ್ತಿಯೆಂಬ ಭಂಡಕ್ಕೆ ಜಂಗಮವೆಂಬ ಸುಂಕಕ್ಕೆ
ಕೂಡಲಸಂಗಮದೇವ.'' (ಬಸವಣ್ಣ)

ಇಲ್ಲಿ ಕಪ್ಪು ಹಣದ ಮಾತು ಬರುವುದಿಲ್ಲ. ಈ ಮೇಲಿನ ವಚನಗಳನ್ನು ಬಸವಣ್ಣನವರು ಹೇಳಿದರೆ ಅಲ್ಲಮಪ್ರಭುಗಳು ಹೀಗೆನ್ನುತ್ತಾರೆ.

''ಹೊನ್ನುಮಾಯೆ ಎಂಬುವರಯ್ಯ, ಹೆಣ್ಣು ಮಾಯೆ ಎಂಬುವರಯ್ಯ,
ಮಣ್ಣು ಮಾಯೆ ಎಂಬುವರಯ್ಯ.
ಹೊನ್ನುಮಾಯೆ ಅಲ್ಲವಯ್ಯ, ಹೆಣ್ಣು ಮಾಯೆ ಅಲ್ಲವಯ್ಯ,
ಮಣ್ಣು ಮಾಯೆ ಅಲ್ಲವಯ್ಯಾ
ಮನದ ಮುಂದಣ ಆಸೆ ಮಾಯೆ ಕಾಣಾ ಗುಹೇಶ್ವರಾ.'' (ಅಲ್ಲಮ ಪ್ರಭು)

''ಆಶೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ
ಹೆಣ್ಣು ಹೊನ್ನಿಗೆ ಸತ್ತುದು ಕೋಟಿ
ಗುಹೇಶ್ವರಾ ನಿಮಗಾಗಿ ಸತ್ತವರನು ಕಾಣೆ'' (ಅಲ್ಲಮ ಪ್ರಭು)

ಅಪರಾಧ ಶಾಸ್ತ್ರಜ್ಞರನೇಕರು ದುಷ್ಟರ ಸಹವಾಸ, ಅಪರಾಧಿಗಳ ಸಂಗದಿಂದ ಒಳ್ಳೆಯವರೂ ತಪ್ಪು ದಾರಿ ತುಳಿಯುತ್ತಾರೆ; ಅಪರಾಧವೆಸಗುತ್ತಾರೆಂದು ಹೇಳಿದ್ದಾರೆ. ಕಾರಣ, ಸಜ್ಜನರ ಸಂಗದಿಂದ ಅಪರಾಧವನ್ನು ತಡೆಯಬಹುದಾಗಿದೆ. ಈ ದಿಶೆಯಲ್ಲಿ ಬಸವಣ್ಣನವರ ಈ ಕೆಳಗಿನ ವಚನಗಳನ್ನು ನೋಡಿ.

''ಸಾರಸಜ್ಜನರ ಸಂಗವು ಲೇಸು ಕಂಡಯ್ಯ
ದೂರ ದುರ್ಜನರ ಸಂಗ ಭಂಗವಯ್ಯ,
ಸಂಗವೆರಡುಂಟು ಒಂದು ಹಿಡಿದು ಒಂದು ಬಿಡು
ಮಂಗಳ ಮೂರ್ತಿ ನಮ್ಮ ಕೂಡಲಸಂಗನ ಶರಣರ'' (ಬಸವಣ್ಣ)

''ಮರಮರ ಮಥನದಿಂದ ಅಗ್ನಿಹುಟ್ಟಿ,
ಆ ಮರವನೆಲ್ಲವ ಸುಡದಿಪ್ಪುದೆ
ಮಹಾನುಭಾವರ ಸಂಗದಿಂದ ಜ್ಞಾನ ಹುಟ್ಟಿ
ಎನ್ನ ತನುಗುಣವೆಲ್ಲವ ಸುಡದಿಪ್ಪುದೆ
ಇದು ಕಾರಣ ಮಹಾನುಭಾವರ
ತೋರಿಸು ಕೂಡಲ ಸಂಗಮದೇವ.'' (ಬಸವಣ್ಣ)

ಹಾಗೆಯೇ ಆಯ್ದಕ್ಕಿ ಮಾರಯ್ಯನ ಸತಿ ಲಕ್ಕಮ್ಮ ತಮ್ಮ ತಮ್ಮ ಆವಶ್ಯಕತೆಗೂ ಮೀರಿದ ಅಕ್ಕಿಯನ್ನು ಮಾರಯ್ಯ ತಂದಾಗ, ಆಶೆ ಮಾಡಿದಾಗ ನಿಜವಾದ ಸತಿಯಾಗಿ, ಶರಣ ಶರಣೆಯರ ನೀತಿ, ಸಮಾಜ ಕಾಯ್ದೆಯ ಪ್ರಕಾರ ನಡೆದುಕೊಳ್ಳಲು ಎಚ್ಚರಿಸುತ್ತಾಳೆ.

ಯಾಕೆಂದರೆ ಇದು ಅಪರಾಧಕ್ಕೆ ದಾರಿ ಮಾಡಿದಂತಾಗುತ್ತದೆ. ಕಳ್ಳತನಕ್ಕೆ ಪ್ರೋತ್ಸಾಹ ಸಿಕ್ಕಂತಾಗುತ್ತದೆ. ಕಾರಣ ಸತಿಯಾದವಳು ಅದನ್ನು ತಡೆದಿದ್ದಾಳೆ. ವಚನ ನೋಡಿ :

"ಆಶೆ ಎಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೇ ಆಯ್ಯಾ ?
ಈಸಕ್ಕಿ ಆಶೆ ನಿಮಗೇಕಯ್ಯಾ ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ ." (ಲಕ್ಕಮ್ಮ)

ಆ ಕಾಲದಲ್ಲಿ ಅನೇಕ ವೇಶ್ಯೆಯರೂ ಮನಃಪರಿವರ್ತಿತರಾಗಿ ಪುನರ್ವಸತಿ (Rehabilitation) ಪಡೆದು ಶರಣೆಯರಾಗಿ ಅನೇಕ ವಚನಗಳನ್ನು ರಚಿಸಿದ್ದಾರೆ. ವೇಶ್ಯೆಯರ ಮಕ್ಕಳ, ದಾಸಿಯರ ಮಕ್ಕಳ ಜೀವನಾವಕಾಶವನ್ನು ವೀರಶೈವ ಶರಣರು ಮಾಡಿಕೊಟ್ಟಿದ್ದರು. ಇಲ್ಲೊಂದು ವಚನ ಅದಕ್ಕೆ ಸಾಕ್ಷಿ :

"ದಾಸಿ ಪುತ್ರನಾಗಲಿ ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದಬಳಿಕ ಸಾಕ್ಷಾತ್ ಶಿವನೆಂದು
ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ
ಹೀಗಲ್ಲದೆ ಉದಾಸೀನ ಮಾಡಿ ಬಿಡುವವರಿಗೆ
ಪಂಚಪಾತಕ ನರಕ ಕಾಣಾ ಕೂಡಲಸಂಗಮದೇವ." (ಬಸವಣ್ಣ)

ವ್ಯಕ್ತಿ ಹಾಗೂ ಸಮಾಜ ಸಂಘಟನೆ

ವ್ಯಕ್ತಿ ವ್ಯಕ್ತಿಗಳ ಸಂಘಟನೆಯಿಂದ ಸಮಾಜ ಸಂಘಟನೆಯು ಸಾಧ್ಯ. ವ್ಯಕ್ತಿಗಳ ಅಸಂಘಟನೆಯು, ಸಾಮಾಜಿಕ ಅಸಂಘಟನೆಗೆ ದಾರಿಯಾದರೆ, ಸಾಮಾಜಿಕ ಅಸಂಘಟನೆಯು ವ್ಯಕ್ತಿಯ ಅಸಂಘಟನೆಗೆ; ಹೀಗೆ ಒಂದಕ್ಕೊಂದು ಕಾರಣ, ಪರಿಣಾಮಗಳಾಗುತ್ತವೆ. ಈ ಎರಡೂ ಅಸಂಘಟನೆಗಳಿಂದ ಸಾಮಾಜಿಕ ಸಮಸ್ಯೆಗಳು ಉದ್ಭವಿಸುತ್ತವೆ. ವ್ಯಕ್ತಿ ಬಿಟ್ಟು ಸಮಾಜವಿಲ್ಲ; ಸಮಾಜ ಬಿಟ್ಟು ವ್ಯಕ್ತಿ ಇಲ್ಲ. ಇಲಿಯೆಟ್ ಹಾಗೂ ಮೆರಿಲ್ ಅವರು ಹೇಳುವಂತೆ, ವ್ಯಕ್ತಿಯು ಈ ಬ್ರಹ್ಮಾಂಡದಲ್ಲಿ ಒಂದು ಪಿಂಡಾಂಡ (Individual is the Microcosm of the Social macrocosm) ಇಲ್ಲಿ ಮೈಕ್ರೊಸ್ಕೋಪನ ಸಹಾಯದಿಂದ ಸಮಾಜವನ್ನು ವೀಕ್ಷಿಸಿದರೆ, ವ್ಯಕ್ತಿಯು ಕಾಣುತ್ತಾನೆ, ವ್ಯಕ್ತಿಗಳಿಂದ ಕೂಡಿದ ಇಡೀ ಸಮಾಜವೇ ಕಾಣುತ್ತದೆ. ಕಾರಣ, ಸಮಾಜದ ಸಂಘಟನೆಗೆ ವ್ಯಕ್ತಿಯ ಸಂಘಟನೆಯೂ ಅವಶ್ಯ. ಈ ಸಂಘಟನೆಗೆ ಪುಷ್ಟಿನೀಡುವ, ನೀಡಿದ ಅನೇಕ ವಚನಗಳನ್ನು ಇಲ್ಲಿ ಉದಾಹರಿಸಬಹುದು.

"ಲೋಕದ ಡೊಂಕ ನೀವೇಕೆ ತಿದ್ದುವಿರಿ,
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ,
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,

ನೆರೆಮನೆಯರ ದುಃಖಕ್ಕೆ ಅಳುವರ
ಮೆಚ್ಚ ಕೂಡಲ ಸಂಗಮದೇವ.'' (ಬಸವಣ್ಣ)

''ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯ,
ಎನ್ನ ಲಿಂಗವ್ಯಸನಿ ಜಂಗಮ ಪ್ರೇಮಿ ಎಂದೆನಿಸಯ್ಯ
ಅವಶ್ಯ ಮನೆ ಭೋಕ್ತವ್ಯ ಎಂದೆನಿಸದಿರಯ್ಯ
ಕೂಡಲ ಸಂಗಮದೇವ ಸೆರಗೊಡ್ಡಿ ಬೇಡುವೆನು.'' (ಬಸವಣ್ಣ)

''ಆಸೆ, ಆಮಿಷ, ತಾಮಸ, ಹುಸಿ, ವಿಷಯ ಕುಟಿಲ
ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ
ಇವನೆನ್ನ ನಾಲಿಗೆ ಮೇಲಿಂದತ್ತ ತೆಗೆದು ಕಳೆಯಯ್ಯಾ
ಅದೇಕೆಂದಡೆ, ನಿಮ್ಮತ್ತಲೆನ್ನ ಬರಲೀಯವು
ಇದು ಕಾರಣ, ಇವೆಲ್ಲವ ಕಳೆದು
ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವ.'' (ಬಸವಣ್ಣ)

''ಎನ್ನ ಒಡಲಿಂಗೆ, ಎನ್ನ ಒಡವೆಗೆ ಎನ್ನ ಮಡದಿಮಕ್ಕಳಿಗೆಂದು
ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ.'' (ಬಸವಣ್ಣ)

''ಕೊಲ್ಲೆನಯ್ಯಾ ಪ್ರಾಣಗಳ, ಕೊಲ್ಲೆನಯ್ಯಾ ಬಾಯಿಚ್ಛೆಗೆ
ಒಲ್ಲೆನಯ್ಯಾ ಪರಸತಿಯರ ಸಂಗವ,
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ
ಬಳ್ಳದ ಬಾಯಂತೆ ಒಂದೆ ಮನವಮಾಡಿ ನಿಲಿಸಯ್ಯ
ಕೂಡಲ ಸಂಗಮದೇವ.'' (ಬಸವಣ್ಣ)

''ಒಡಲ ಬಂಡಾರ, ಕಂಡವರ ದ್ರವ್ಯವ ಬಡ್ಡಿವ್ಯವಹಾರಕ್ಕೆ
ಮನೆಯ ಗೋಟನಲ್ಲಿ ಹೊಯಿದುಕೊಂಡಿದ್ದೆನಾದಡೆ
ಅದು ಎನ್ನರ್ಥವಲ್ಲ; ಅನರ್ಥವೆಂಬೆ ಸಂಗಮದೇವಾ.
ನೀನು ಜಂಗಮ ರೂಪಾಗಿ ಬಂದು ಮನವನು
ನೀನು ಬಲ್ಲಂತೆ ಎನ್ನ ಮುಂದೆ ಸೂರೆಗೊಳು.'' (ಬಸವಣ್ಣ)

''ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ
ಅನ್ನದೊಂದಗಳ, ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ

ನಿಮ್ಮ ಶರಣರಿಗಲ್ಲದೆ ಮತ್ತೊಂದರಿಯೆ
ಕೂಡಲ ಸಂಗಮದೇವಾ.'' (ಬಸವಣ್ಣ)

''ಆಯುಷ್ಯವುಂಟು ಪ್ರಳಯವಿಲ್ಲೆಂದು ಮಡುಗುವಿರಿ
ಆಯುಷ್ಯ ತೀರಿ ಪ್ರಳಯ ಬಂದೊಡೆ ಅರ್ಥವೆಂಬವರಿಲ್ಲ.'' (ಬಸವಣ್ಣ)

''ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ
ಮತಿಗೆಟ್ಟನು ಮನದವಿಕಾರದಿಂದ
ಧೃತಿಗೆಟ್ಟನು ಕಾಯವಿಕಾರದಿಂದ
ಶರಣುವೊಕ್ಕೆನು ಕೂಡಲ ಸಂಗಮದೇವ.'' (ಬಸವಣ್ಣ)

ದೈಹಿಕ ವಿಕಲತೆಯು ಮನೋವಿಕಲತೆಗೆ, ಮನೋವಿಕಲತೆಯು, ದೈಹಿಕದ ವಿಕಲತೆಗೆ (Psycho-Somatic disease) ಒಂದಕ್ಕೊಂದು ಕಾರಣವಾಗುತ್ತವೆ ಎಂಬುದನ್ನು ಮನೋಚಿಕಿತ್ಸಾ ಶಾಸ್ತ್ರಜ್ಞರು ಹೇಳಿದ್ದಾರೆ. ಕಾರಣ ಅದಾಗದಂತೆ, ವ್ಯಕ್ತಿಯು ಎಚ್ಚರಗೊಳ್ಳಬೇಕಾಗುವುದು. ಸಮಾಜದಲ್ಲಿ ಒಳ್ಳೆಯವನೆನಿಸಿಕೊಂಡು ಬದುಕಬೇಕು ಅಂದರೆ ಸಮಾಜ ಸಂಘಟನೆ ಅಗತ್ಯ. ಬಸವಣ್ಣನವರ ಮತ್ತೊಂದು ವಚನ ಇಂತಿದೆ.

''ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು
ಲೇಸೆನಿಸಿಕೊಂಡು ಮೂರುದಿನ ಬದುಕಿದರೇನು
ಲೇಸೆನಿಸಿಕೊಂಡು ಎರಡು ದಿನ ಬದುಕಿದರೇನು
ಕೂಡಲಸಂಗನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿನ ಬದುಕಿದರೇನು.'' (ಬಸವಣ್ಣ)

ಇಲ್ಲಿ ಭಿಕ್ಷೆಗೆ ಅವಕಾಶವಿಲ್ಲ, ಭಿಕ್ಷೆ ಬೇಡುವುದು ಕೀಳುಜೀವನ. ಕಾರಣ ಕಾಯಕ ಮಾಡಿ ಜೀವಿಸಬೇಕು. ಬಸವಣ್ಣನವರು ತಮ್ಮ ವಚನ ಒಂದರಲ್ಲಿ ಹೀಗೆಂದಿದ್ದಾರೆ. ''ಬೇಡುವಾತ ಭಕ್ತನಲ್ಲ, ಓಡುವಾತ ಲೆಂಕನಲ್ಲ--------'' ಅದಕ್ಕೇ ಕಾಯಕದ ಬಗೆಗೆ ಮಹತ್ವ ಕೊಟ್ಟಿದ್ದಾರೆ ಶರಣರು. ಅದನ್ನು ಈ ಕೆಳಗಿನ ವಚನಗಳಲ್ಲಿ ನೋಡಬಹುದು.

ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ ಮರೆಯಬೇಕು.
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿರ್ದಡೂ ಹಂಗುಹರಿಯಬೇಕು.
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದರೂ,
ಕಾಯಕದೊಳಗು '' (ಆಯ್ದಕ್ಕಿ ಮಾರಯ್ಯ).

ಇನ್ನೂ ಮುಂದೆ ಹೋಗಿ ದೇವರ ದಾಸಿಮಯ್ಯ ಹೇಳುತ್ತಾನೆ.

''ಕರಿಯನಿತ್ತಡೊಲ್ಲೆ ಸಿರಿಯನಿತ್ತಡೊಲ್ಲೆ
ಹಿರಿದಪ್ಪ ರಾಜ್ಯವನಿತ್ತಡೊಲ್ಲೆ

ನಿಮ್ಮ ಶರಣರ ಸೂಳು ನುಡಿಯ ಒಂದರಗಳಿಗೆ ಇತ್ತಡೆ
ನಿಮ್ಮನಿತ್ತೆ ಕಾಣಾ ರಾಮನಾಥಾ

ಕಿರಿವಯದ ಚೆನ್ನ ಬಸವಣ್ಣ ಕೂಡ ಉದಾತ್ತ ವಿಚಾರ, ಆಚಾರಗಳ ಬೆಸುಗೆ ಹಾಕುತ್ತಾರೆ. ಕಾಯಕದ ಮಹತ್ವ ಬಲ್ಲವರಾಗಿದ್ದಾರೆ;

"ತನು, ಮನ ಬಳಲದೆ ಉದ್ದಂಡ ವೃತ್ತಿಯಲ್ಲಿ ಧನವಗಳಿಸಿ
ಗುರು,ಲಿಂಗ, ಜಂಗಮಕ್ಕೆ ಮೆಚ್ಚಿಸಿ ದಾಸೋಹಮಾಡಿ
ಭಕ್ತರಾದೆವೆಂಬುವರಮುಖವ ತೋರದಿರಯ್ಯ ಎನಗೆ
ಅವ ಪರಧನಚೋರ, ಅಪಪಾಪಿ, ಕೋಪಿ ಪರಿಭ್ರಷ್ಟ
ಕೂಡಲ ಚೆನ್ನಸಂಗಯ್ಯ"

ಅದರಂತೆ ಬಸವಣ್ಣನವರ ಒಂದು ವಚನ ಇಂತಿದೆ :

"ಅತ್ತಲಿತ್ತ ಹೋಗದಂತೆ, ಹೆಳವನ ಮಾಡಯ್ಯಾ ತಂದೆ
ಸುತ್ತಿಸುಳಿದು ನೋಡದಂತೆ ಅಂಧನ ಮಾಡಯ್ಯಾ ತಂದೆ
ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯಾ ತಂದೆ
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಿಸದಂತೆ
ಇರಿಸೊ ಕೂಡಲ ಸಂಗಮದೇವ."

ಈ ಮೇಲಿನ ವಚನವು ಏಕಾಗ್ರತೆ ಬಗೆಗೆ ಹೇಳಿದೆ. ಹಾಗೆ ನೋಡಿದರೆ ಇತ್ತೀಚಿನ ದಿನಮಾನಗಳಲ್ಲಿ ಅಂಗವಿಕಲರೂ ಶಿಕ್ಷಣ, ತರಬೇತಿ ಪಡೆದು ದುಡಿದುಣ್ಣುತ್ತಿದ್ದಾರೆ. ಅವರೆಲ್ಲ ಕಾಯಕದಲ್ಲಿ ಏಕಾಗ್ರತೆಯಿಂದ ತೊಡಗಿದ್ದಾರೆ. ಉದಾಹರಣೆಗೆ ಪುಣೆಯ ಕ್ಯೂಮಿನ್ಸ್ ಫ್ಯಾಕ್ಟರಿಯಲ್ಲಿ ಬಾಂಬೆ ಉದ್ದಿಮೆಗಳಲ್ಲಿ ಕಿವುಡ, ಕಾರ್ಮಿಕರನ್ನೇ ಹೆಚ್ಚು ಹೆಚ್ಚಾಗಿ ಸೇರಿಸಿಕೊಳ್ಳುತ್ತಿದ್ದಾರೆ. ಅವರು ತಮ್ಮ ಕೆಲಸವನ್ನು ಏಕಾಗ್ರ ಚಿತ್ತದಿಂದ, ಗೈರುಹಾಜರಿಲ್ಲದೆ ಮಾಡುತ್ತಿರುವುದೇ ಇದಕ್ಕೆ ಕಾರಣವೆನ್ನಬಹುದು. ಕಿವಿ, ಕಣ್ಣು, ಕಾಲ್ಗಳಿದ್ದವರೂ ಹೀಗೆ ಕೆಲಸಕ್ಕೆ ಅಲಸದೆ, ಚಂಚಲಚಿತ್ತರಾಗದೆ ಏಕಾಗ್ರತೆಯಿಂದ ಕೆಲಸ ಮಾಡಬೇಕು. ಅಂದರೆ ಅಭಿವೃದ್ಧಿ ಸಾಧ್ಯ. ಆದರೆ ವಸ್ತುಸ್ಥಿತಿಯನ್ನು ನೋಡಿದರೆ, ಕಿವಿ, ಕಣ್ಣು ಕಾಲಿದ್ದವರೇ ಕೆಲಸಕ್ಕೆ ಹೆಚ್ಚಾಗಿ ಗೈರು ಹಾಜರಿದ್ದುದು ಅಧ್ಯಯನದಿಂದ ಕಂಡುಬಂದ ಸತ್ಯ. ಬರಿ ಉದ್ದಿಮೆಗಳಲ್ಲಲ್ಲದೆ ಅಂಗವಿಕಲರು ಅನೇಕ ಹಿರಿಯ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸ್ವಾವಲಂಬಿಗಳಾಗಿ ಮದುವೆಯಾಗಿ ಒಳ್ಳೆಯ ಕುಟುಂಬ ಜೀವನವನ್ನೂ ನೆಡಿಸುತ್ತಿದ್ದಾರೆ. ಸ್ವಸಾಮರ್ಥ್ಯದಿಂದ ಮುಂದಾಗುತ್ತಿದ್ದಾರೆ. ಈ ಸ್ವಹಸ್ತದ ಸಹಾಯವೂ ವ್ಯಕ್ತಿಯಲ್ಲಿ ಮೂಡಬೇಕು. 'Self help is the best help. But selfishness is the worst death,' ಎನ್ನಬಹುದು. ಇದನ್ನೂ ಕೂಡ ಬಸವಣ್ಣನವರು ನಡೆದಿದ್ದಾರೆ; ನುಡಿದಿದ್ದಾರೆ ನೋಡಿ :

"ತನ್ನಾಶ್ರಯದ ರತಿ ಸುಖವನ್ನು ತಾನುಂ ಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?

ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ
ನಿಮ್ಮನೆತ್ತಬಲ್ಲರು ಕೂಡಲ ಸಂಗಮದೇವಾ''

ಉಪಸಂಹಾರ

ಒಟ್ಟಾರೆ ಹೇಳಬೇಕಾದರೆ ವೀರಶೈವ ಶರಣರ ಸಮಾಜ ಜೀವನ ಸತ್ಯ, ಶುದ್ಧ ಕಾಯಕಗಳಿಂದ, ಸಮಾನತೆ, ಸ್ವಾವಲಂಬನೆಗಳಿಂದ ಸಂಘಟಿಸಲ್ಪಟ್ಟಿದ್ದು. ಅವರ ಜೀವನ ಕೊಡುಗೆ ಇಂದಿನ ಸಮಾಜದ ಸುಧಾರಣೆ, ಸಮಾಜ, ಕಾರ್ಯಗಳಿಗೆ, ಅತ್ಯಮೂಲ್ಯವಾದದ್ದು. ಅಷ್ಟೇ ಏಕೆ ಸಾರ್ವಕಾಲಿಕ ಸತ್ಯವನ್ನು ಬಿತ್ತರಿಸಿದ್ದಾಗಿದೆ. ಸತ್ಯದ ಆಧಾರ ಸಮಾಜಕ್ಕೆ ಎಷ್ಟು ಬೇಕಾಗುವುದೆಂಬುದನ್ನು ಸ್ವಾಮಿ ವಿವೇಕಾನಂದರು ಸ್ಪಷ್ಟಪಡಿಸಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ವ್ಯಾಪಾರ, ಉದ್ಯೋಗ, ಅಧಿಕಾರ ವೃತ್ತಿಗಳಲ್ಲೂ ಬಸವಣ್ಣ ಹಾಗೂ ಶರಣ ಸಂಕುಳವು ಸಮಾಜ ಸಂಘಟನೆಗೆ ಅತ್ಯವಶ್ಯವಾದ ಮೌಲ್ಯಗಳನ್ನು ಮೆರೆದರು. ಈಗ ವ್ಯಾಪಾರ, ರಾಜಕೀಯ, ಶಿಕ್ಷಣ, ಉದ್ದಿಮೆ, ಆಡಳಿತ ಇತ್ಯಾದಿ ಅನೇಕ ರಂಗಗಳಲ್ಲಿ ಆ ಮೌಲ್ಯಗಳು, ನೀತಿ, ಸತ್ಯಗಳು ಗಾಳಿಯಲ್ಲಿ ತೂರಲ್ಪಟ್ಟಿವೆ. ಕಾರಣ ಅನೇಕ ಸಾಮಾಜಿಕ ಸಮಸ್ಯೆಗಳು ಉದ್ಭವಿಸಿ ಉಲ್ಬಣಗೊಂಡಿವೆ. ನಮ್ಮ ಪ್ರವಾಹ "Truth to untruth, Nonacquisitive to acquisitive, self edifice to selfishness" ಅಂದರೆ ಸತ್ಯದಿಂದ ಅಸತ್ಯದೆಡೆಗೆ, ಅಪರಿಗ್ರಹದಿಂದ ಪರಿಗ್ರಹದೆಡೆಗೆ, ಆತ್ಮೋದ್ಧಾರದಿಂದ, ಸ್ವಾರ್ಥದೆಡೆಗೆ ಸಾಗುತ್ತಿದೆ. ಹೊಸ ಹೊಸ ಅಪರಾಧಗಳು ತಲೆ ಎತ್ತುತ್ತಿವೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಉನ್ನತ ಸ್ಥಾನದಲ್ಲಿದ್ದವರೂ, ಹೆಚ್ಚಿನ ಅದಾಯ ಪಡೆಯುವ ಅಧಿಕಾರಿಗಳೂ ಅಪರಾಧವೆಸಗುತ್ತಿದ್ದಾರೆ.

ಈಗಿನ ಯುಗಮಾನಕ್ಕೆ ಅಂದರೆ ಜಾಯಮಾನಕ್ಕೆ ತಕ್ಕಂತೆ ಹೊಸ ಹೊಸ ಉದ್ಯೋಗ ವ್ಯಾಪಾರ, ಆದಾಯ ಸಿಗುವ ಅಧಿಕಾರ ಬಂದರೂ ಸತ್ಯ, ನೀತಿ, ನಿಯತ್ತುಗಳು ಬೇಕಲ್ಲವೆ? ಕಾರಣ ಬಸವಣ್ಣ ಹಾಗೂ ಅವರ ಶರಣ ಸಂಕುಳವು ನುಡಿದು ನಡೆದ ಅನುಭವದ ಅಮೃತ ಸಮಾನವಾದ ವಾಣಿಗಳು ಇಂದಿನ ಸಮಾಜದ ಧೋರಣೆಗೂ ತಾರಕವಾಗಬಲ್ಲವು. ಭಾರತದಲ್ಲಿ ಸಾಮಾಜಿಕ ಆಡಳಿತದ (Social Administration) ವಿಧಾನವನ್ನು ಇನ್ನೂ ಅಳವಡಿಸಬೇಕಾಗಿದೆ. ಆಡಳಿತ ಮಾಡುವ ಅಧಿಕಾರಿಗಳು ಪ್ರಾಜ್ಞರನ್ನು, ಜನಸಾಮಾನ್ಯರನ್ನು, ಕಟ್ಟಕಡೆಯ ಮಾನವನನ್ನು ತಿಳಿದುಕೊಂಡು ಕಲ್ಯಾಣ ಕಾರ್ಯಗಳ ಅನುಷ್ಠಾನಗೊಳಿಸಬೇಕಾಗಿದೆ. ಮುಖಂಡರು, ಮಂತ್ರಿಗಳು, ಅಧಿಕಾರಿಗಳು ಪ್ರಜೆಗಳನ್ನು ದೂರು ಮಾಡುತ್ತಿರುವುದರಿಂದ ಪ್ರಜಗಳು ಇವರನ್ನು ಪರಕೀಯರಂತೆ ಕಾಣುತ್ತಿದ್ದಾರೆ. ಪ್ರಜಗಳ ಬೇಕು ಬೇಡಗಳ ತಿಳುವಳಿಕೆಯತ್ತ ಗಮನ ಹರಿಸದೆ ಉಳಿಯುತ್ತಿದ್ದಾರೆ. ಅಧಿಕಾರ ಮಂಚದ ಆಢ್ಯತೆಯಲ್ಲಿ ಕಣ್ಣು ತೆರೆಯದೆ ಕುಳಿತಿದ್ದಾರೆ. ಆಡಳಿತಾಧಿಕಾರಿಗಳು ಪ್ರಜಗಳೊಡನೆ

ಆರೋಗ್ಯಕರ ಸಂಬಂಧವನ್ನಾಗಲಿ, ಆಡಳಿತ ಯಂತ್ರವನ್ನು ನಡೆಸುವ ತಂತ್ರವನ್ನಾಗಲಿ ಅವರು ತಿಳಿದಿಲ್ಲ. ಈಗ ಬೇಕಾಗಿರುವುದು ಸಾಮಾಜಿಕ ಆಡಳಿತ, ಸಮಾಜಾಭಿವೃದ್ಧಿಗೆ ಬೇಕಾದ ಆಡಳಿತ. ಕಾರಣ ಅಧಿಕಾರಿಗಳಾಗಲಿ, ಮುಖಂಡರಾಗಲಿ, ಮಂತ್ರಿಗಳಾಗಲಿ ಸಾಮಾನ್ಯರನ್ನು ಮಾತನಾಡಿಸುವ ರೀತಿ, ನಡೆದುಕೊಳ್ಳುವ ನೀತಿಗಳು ಬದಲಾಗಬೇಕು. ಪ್ರಜರೂ ಪ್ರತಿಸ್ಪಂದಿಸಬೇಕು. ಅಭಿವೃದ್ಧಿಗಳ, ಯೋಜನೆ ಮುಂತಾದವುಗಳಲ್ಲಿ ಪಾಲ್ಗೊಳ್ಳಬೇಕು. ಹೀಗೆ ಹೇಳುವಾಗ ಬಸವಣ್ಣನವರ ವಚನಗಳನ್ನು ಉದಹರಿಸಬಹುದು.

"ಏನು ಬಂದಿರಿ ಹದುಳವಿದ್ದಿರೆ ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
ಕುಳ್ಳಿರೆಂದರೆ ನೆಲಕುಳಿ ಹೋದುದೆ ?
ಒಡನೆ ನುಡಿದರೆ ಸಿರ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ವುದೆ ಮೊಣ್ಣನೆ
ಕೂಡಲ ಸಂಗಮದೇವಯ್ಯ?

ಆನೆಯನೇರಿಕೊಂಡು ಹೋದಿರೇ ನೀವು,
ಕುದುರೆಯನೇರಿಕೊಂಡು ಹೋದಿರೇ ನೀವು,
ಕುಂಕುಮ ಕಸ್ತೂರಿಯ ಹೂಸಿಕೊಂಡು ಹೋದಿರೋ ಅಣ್ಣಾ !
ಸತ್ಯದ ನಿಲವನರಿಯದೆ ಹೋದಿರಲ್ಲಾ,
ಅಹಂಕಾರವೆಂಬ ಸದಮದ ಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ !
ನಮ್ಮ ಕೂಡಲಸಂಗಮ ದೇವರನರಿಯದೆ
ನರಕಕ್ಕೆ ಭಾಜನವಾದಿರಲ್ಲಾ !"

ಅಹಂಕಾರ, ಅಧಿಕಾರಮದ, ಅತೀ ಆಶೆ, ತ್ರಿವಿಧ ಮಲ, ರಾಗ, ದ್ವೇಷಗಳಿಗೆ ಅಜ್ಞಾನವೂ ಕಾರಣವೆಂದು ಬಸವಣ್ಣನವರು ಹೇಳಿದ್ದಾರೆ.

"ಅಜ್ಞಾನದಿಂದ ಹುಟ್ಟಿತ್ತು ಅಹಂಮಮತೆ
ಅಜ್ಞಾನದಿಂದ ಹುಟ್ಟಿತ್ತು ಮನಶ್ಚಂಚಲ
ಅಜ್ಞಾನದಿಂದ ಹುಟ್ಟಿತ್ತು ಇಂದ್ರಿಯೋದ್ರೇಕ

ಅಜ್ಞಾನದಿಂದ ಹುಟ್ಟಿತ್ತು ಅತೀಕಾಂಕ್ಷೆ
ಅಜ್ಞಾನದಿಂದ ಹುಟ್ಟಿತ್ತು ತ್ರಿವಿಧಮಲ
ಅಜ್ಞಾನದಿಂದ ಹುಟ್ಟಿತ್ತು ಸಂಸಾರ
ಅಜ್ಞಾನದಿಂದ ಹುಟ್ಟಿತ್ತು ರಾಗದ್ವೇಷ
ಅಜ್ಞಾನದಿಂದ ಹುಟ್ಟಿತ್ತು ಸರ್ವಪ್ರಪಂಚ
ಅಜ್ಞಾನದಿಂದ ಹುಟ್ಟಿತ್ತು ಸರ್ವದುಃಖ
ಕೂಡಲ ಸಂಗಮದೇವ ಅಜ್ಞಾನಭ್ರಮೆಯ ಕೆಡಿಸಿದಲ್ಲದೆ
ನಮ್ಮನ್ನೊಡಗೂಡಬಾರದಯ್ಯ."

ಕಲ್ಯಾಣವೆಂಬುದು ಬರಿಯ ಪಟ್ಟಣದ ಹೆಸರಲ್ಲ. ಅದು ಜನ ಕಲ್ಯಾಣದ, ಲೋಕಕಲ್ಯಾಣದ ಸಮಾಜಕಲ್ಯಾಣದ ತಾಣ. ಅಲ್ಲಿ ಹೋದವರು ಆಶೆ, ಆಮಿಷಗಳನ್ನು ತೊರೆಯಬೇಕಾಗುವುದು. ಸಮರ್ಪಣಾ ಭಾವ ಸೇವಾಭಾವ, ಸಮಗ್ರ ವ್ಯಕ್ತಿತ್ವ ಇರುವುದು ಅವಶ್ಯ. ಅಕ್ಕಮಹಾದೇವಿಯ ವಚನವನ್ನು ನೋಡಿದರೆ ಈ ಅರ್ಥ ಸ್ಫುಟವಾಗಿ ಕಂಡುಬರುವುದು.

ಕಲ್ಯಾಣವೆಂಬುದಿನ್ನಾರಿಗೆ ಹೊಗಬಹುದು ?
ಹೊಗಬಾರದು ಅಸಾಧ್ಯವಯ್ಯಾ
ಆಸೆ-ಆಮಿಷ ಅಳಿದಂಗಲ್ಲದೆ ಕಲ್ಯಾಣದತ್ತಲಡಿಯಿ ಡಬಾರದು
ಒಳಗು-ಹೊರಗು ಶುದ್ಧನಾದಂಗಲ್ಲದೆ ಕಲ್ಯಾಣವ ಹೊಗಬಾರದು.
ನೀನಾನೆಂಬುದ ಹರಿದಂಗಲ್ಲದೆ ಕಲ್ಯಾಣದ ಒಳಗು ತಿಳಿಯಬಾರದು.
ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆಳಿದೆನಾಗಿ
ಕಲ್ಯಾಣವಂ ಕಂಡು ನಮೋ, ನಮೋ ಎನ್ನುತ್ತಿದ್ದೆನು."

ಈ ಎಲ್ಲ ವಚನಗಳ ಅಧ್ಯಯನ ಮಾಡಲಾಗಿ, ವೀರಶೈವ ಸಮಾಜವು ಹೀಗಿತ್ತೆಂದು ತೋರಿಬರುತ್ತದೆ. ಅಂದಿನ ಶರಣರು ತಮ್ಮ ನಡೆ-ನುಡಿಗಳಲ್ಲಿ ಸಂಘಟಿತ, ಕಲ್ಯಾಣ ಸಮಾಜವನ್ನು ನಿರ್ಮಿಸಿದ್ದು ಖಂಡಿತ. ಆದರೆ ಇಂದು ವೀರಶೈವ ಸಮಾಜವು ಶಿಥಿಲಗೊಂಡಿದೆ. ಜಾತಿ, ಉಪಜಾತಿಗಳ ಮೇಲಾಟಗಳು ಹೆಚ್ಚಾಗತೊಡಗಿವೆ. ಈಗ ಹಾನಿಕಾರಕ ಕೀಳರಿಮೆಗಳು, ಆಶೆ, ಆಮಿಷಗಳು, ಕಳ್ಳತನ, ಲಂಚಗುಳಿತನ, ಮುಂತಾದವು ಕಂಡುಬಂದಿವೆ. ವೀರಶೈವ ಸಮಾಜ ಜೀವನವು ವಿಶ್ವಸಮಾಜ ಸಮುದಾಯ ಜೀವನಕ್ಕೆ ನಾಂದಿಯಾಗಿದ್ದುದು ಮುಂದುವರಿಯಲಿಲ್ಲ. ಹಾಗೆ ಸಂಘಟಿತವಾದರೆ ಇದು ಸಾಧ್ಯವಾಗಬಹುದೇನೋ.

ಆಧಾರ ಸಾಹಿತ್ಯ

1. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು, 1974.

2. ಸಂ.ಡಾ. ಹಾ. ಮಾ. ನಾಯಕ : ಕನ್ನಡ ಸಾಹಿತ್ಯ ಚರಿತ್ರೆ (ಮೊದಲನೆ ಸಂಪುಟ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974.

3. ಎಂ. ಎಂ. ದೇಸಾಯಿ : **Creative Literature and Social Work Education,** Somaiya Publications, Pvt Ltd., Bombay, 1979

4. ಡಾ. ಎಚ್. ಎಂ. ಮರುಳಸಿದ್ಧಯ್ಯ : ಸಮಾಜಕಾರ್ಯ ಅಭ್ಯುದಯ ಪ್ರಕಾಶನ, ಬೆಂಗಳೂರು - 1983

5. ಡಾ.ಎಸ್. ಎಫ್. ಪೂಜಾರ : ಜನಪದ ಹಾಗೂ ಸಮಾಜಕಾರ್ಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1984

6. ಡಾ. ಆರ್. ಸಿ. ಹಿರೇಮಠ : ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968

7. ಜಿ. ಎಚ್. ಹನ್ನೆರಡುಮಠ : ಲಿಂಗಗೊಂಚಲು ಚಿತ್ತರಗಿ ಶ್ರೀ ವಿಜಯ ಮಹಾಂತೇಶ ಧರ್ಮ ಪ್ರಸಾರಕ ಮಂಡಳ, ಇಳಕಲ್ಲ, 1976

8. Dr. P. B. Desai : **Basavesvara and His Times**
Kannada Research Institute
Karnataka University,
Dharwad, 1968

9. Dr. G. R. Madan : **Indian Social Problems**
Vol. I & II (Reprint)
Allied Publishers Pvt Ltd.,
New Delhi 1983

10. M. A. Elliot & F. E. Merril : **Social Disorganisation**
Hasper & Row ,
Publications
New York, 1961

11. ಡಾ. ಬಿ. ಎಸ್. ಗದ್ದಗಿಮಠ : ಕನ್ನಡ ಜಾನಪದ ಗೀತೆಗಳು
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, 1962

12. R.M. Mac Iver and C. H. Page: **Society**
S. G. Wasani for Macmillan
India, Ltd. New Delhi, 1974

13. Walter A. Fried lander : **Introduction Social Welfare**
Prentice hall of India,
New Delhi ,1961.

14. Bossard James H. S. and Boll Eleanor Stoker : **The Sociology of child Development**
Harper Brothers,
New York, 1960

ವೀರಶೈವ ಸಂಸ್ಕಾರಗಳು

ಷಣ್ಮುಖಯ್ಯ ಅಕ್ಕೂರಮಠ

ಮಾನವನು ಪ್ರಾಣಿಗಳಿಗಿಂತ ಶ್ರೇಷ್ಠನಾಗಲು ಅವನು ಪಡೆಯುವ ಸಂಸ್ಕಾರ ಅದರಿಂದ ಉಂಟಾಗುವ ಸಂಸ್ಕೃತಿಯೇ ಕಾರಣ. 'ಸಂಸ್ಕಾರ' ಪದ ಸಂಪೂರ್ವಕ 'ಕೃ' ಧಾತುವಿನಿಂದ ನಿಷ್ಪನ್ನವಾಗಿದೆ. ಇದು ಅನೇಕ ಅರ್ಥಚ್ಛಾಯೆಗಳನ್ನು ಪಡೆದಿದೆ. ಸಂಸ್ಕರಿಸು, ಪರಿಷ್ಕರಿಸು, ಶುದ್ಧಗೊಳಿಸು, ಮಾರ್ಪಡಿಸು, ತರಬೇತಿ (Training) ಗೊಳಿಸು ಇತ್ಯಾದಿ ಅರ್ಥಗಳೂ ಇವೆ.

ಜೀವನಕ್ಕೆ ಅವಶ್ಯಕವಾದ ಧಾರ್ಮಿಕ ಕ್ರಿಯೆಯೇ ಸಂಸ್ಕಾರ. 'ಆತ್ಮ-ಶರೀರ ವಿಹಿತ ಕ್ರಿಯಾಜನ್ಯಅತಿಶಯ ವಿಶೇಷಃ ಸಂಸ್ಕಾರಃ' ಎನ್ನುವ ಉಕ್ತಿಯೂ ಸಹ ಆತ್ಮ ಹಾಗೂ ದೇಹದ ಪರಿಶುದ್ಧತೆಗಾಗಿ ಮಾಡುವ ಕ್ರಿಯಾ ವಿಶೇಷವೇ ಸಂಸ್ಕಾರವೆಂದು ತಿಳಿಸುತ್ತದೆ. ಮನುಷ್ಯನ ಅಂತರಂಗದ ವಿಕಾಸಕ್ಕಾಗಿ ಸಂಸ್ಕಾರಗಳು ಅಗತ್ಯವಾಗುತ್ತವೆ. ಧಾತುಗಳು ಸಂಸ್ಕಾರವಿಲ್ಲದೆ ಶುದ್ಧವಾಗುವುದಿಲ್ಲ. ಧಾನ್ಯಗಳು ಸಂಸ್ಕಾರದಿಂದಲೇ ಭೋಜನಕ್ಕೆ ಯೋಗ್ಯವಾಗುತ್ತವೆ. ಇದೇ ರೀತಿಯಲ್ಲಿ ಸಂಸ್ಕಾರ ವಿಶೇಷದಿಂದ ಹತ್ತಿ ಬಟ್ಟೆಯಾಗುತ್ತದೆ. ಚಿನ್ನ ಒಡವೆಯಾಗುತ್ತದೆ. ಕಲ್ಲು ಮೂರ್ತಿಯಾಗುತ್ತದೆ. 'ಸಂಸ್ಕಾರಾಃ ಪ್ರಾಕ್ತನಾ ಇವ' (ರಘುವಂಶ) ಸಂಸ್ಕಾರಗಳು ಪರಂಪರೆಯಿಂದ ಬರುತ್ತವೆ ಎಂದು ಕಾಳಿದಾಸನ ಮಾತು. ಕವಿ ಮತ್ತೊಂದು ಮಾತನ್ನು ಹೇಳುತ್ತಾನೆ. 'ಸ್ವಭಾವ ಸುಂದರ ವಸ್ತು ನ ಸಂಸ್ಕಾರಮಪೇಕ್ಷತಿ' (ಶಾಕುಂತಲಾ) ಅಂದರೆ ಸ್ವಭಾವ ಸಿದ್ಧವಾಗಿಯೇ ಸುಂದರವಾದ ವಸ್ತುವಿಗೆ ಸಂಸ್ಕಾರದ ಅಗತ್ಯವಿಲ್ಲ ಎಂದು. ಆದರೆ ಜಗತ್ತಿನಲ್ಲಿ ಇಂತಹ ವಸ್ತುಗಳು ವಿರಳ.

ಸಂಸ್ಕಾರ ಜನ್ಯವಾದದ್ದು ಸಂಸ್ಕೃತಿ (culture). ಇದು ಆತ್ಮ ಹಾಗೂ ಮನಸ್ಸಿನ ಸಂಸ್ಕಾರಕ್ಕೆ ಸಂಬಂಧಿಸಿದ್ದು. ಹಾಗೆಯೇ ಬಾಹ್ಯ ಸಂಸ್ಕಾರಕ್ಕೆ ಸಂಬಂಧಿಸಿದ್ದು ನಾಗರೀಕತೆ (civilization) ಎನಿಸಿಕೊಳ್ಳುತ್ತದೆ. ಅಂತೂ ನಮ್ಮ ನಡೆ-ನುಡಿ ಚೆನ್ನಾಗಿ ಆಗಲು ಸಂಸ್ಕಾರ ಬೇಕು. ಹಾಗೂ ಮಾನಸಿಕ, ಅಧ್ಯಾತ್ಮಿಕ ಪ್ರಗತಿ ಸಾಧಿಸಲು ಸಂಸ್ಕಾರಗಳ ಅವಶ್ಯಕತೆ ಇದೆ. ಈ ಸಂಸ್ಕಾರ ಪದಕ್ಕೆ ಆಂಗ್ಲ ಭಾಷೆಯಲ್ಲಿ sacrament ಎಂದು ಕರೆಯುತ್ತಾರೆ.

ವ್ಯಕ್ತಿಯ ಮಲಿನತೆ ಕಳೆಯಲು ಜನನದಿಂದ ಮರಣದವರೆಗೆ ಅನೇಕ ಸಂಸ್ಕಾರ ಗಳಿವೆ.

ಅವು ವ್ಯಕ್ತಿಯು ಹುಟ್ಟುವ ಪೂರ್ವದಲ್ಲಿ ಆರಂಭವಾಗಿ ಅವನ ಮರಣಾನಂತವೂ ಮುಂದುವರಿಯುತ್ತವೆ. ಈ ಸಂಸ್ಕಾರಗಳನ್ನು ಧಾರ್ಮಿಕ ಸಂಪ್ರದಾಯದ ಹಿನ್ನೆಲೆಯಲ್ಲಿ ಆಚರಿಸುವುದರಿಂದ ಇವುಗಳನ್ನು ಧಾರ್ಮಿಕ ಆಚರಣೆಗಳೆಂದೂ ಕರೆಯುತ್ತಾರೆ. ಇವು ನಿರಂತರ ಮುಂದುವರಿಯುವ ಜೀವಂತ ಪ್ರಕ್ರಿಯೆಗಳು.

ಜನನ-ದೀಕ್ಷೆ-ವಿವಾಹ-ಸಾವು ಇವುಗಳನ್ನು ಕೇಂದ್ರದಲ್ಲಿಟ್ಟುಕೊಂಡು ಧಾರ್ಮಿಕಾಚರಣೆಗಳನ್ನು ಎಲ್ಲ ಜನಾಂಗದವರೂ ಆಚರಿಸುತ್ತಾರೆ. ಜಗತ್ತಿನ ಯಾವುದೇ ಧರ್ಮದಲ್ಲಿ ಈ ಆಚರಣೆಗಳಿವೆ.

ಧರ್ಮದಲ್ಲಿ :

1. Creed of Philosophy (ದರ್ಶನ)
2. Code of Conduct (ಆಚಾರ)
3. Cult of Worship (ಅರ್ಚನ)

ಈ ವಿಧಾನಗಳು ಇರುತ್ತವೆ.

ಸಂಸ್ಕಾರಗಳಿಲ್ಲದ ವ್ಯಕ್ತಿಯಿಲ್ಲ, ಸಮಾಜವಿಲ್ಲ, ಧರ್ಮವಿಲ್ಲ. ಹಿಂದೂ ಸಂಪ್ರದಾಯದಲ್ಲಿ ಈ ಸಂಸ್ಕಾರಗಳು ವೇದ ಹಾಗೂ ಆಗಮ ಕ್ರಮದಿಂದ ಆಚರಿಸಲ್ಪಡುತ್ತವೆ. ಸ್ಮೃತಿಕಾರನಾದ ಗೌತಮನು ಗರ್ಭಾದಾನ-ಪುಂಸವನ-ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಅನ್ನಪ್ರಾಶನ ಇತ್ಯಾದಿ 24 ಸಂಸ್ಕಾರಗಳಿವೆ ಎಂದು ಹೇಳಿ ಈ ಸಂಸ್ಕಾರಗಳನ್ನು ಆಚರಿಸುವವರು ಮುಕ್ತಿ ಹೊಂದುತ್ತಾರೆ ಎಂದು ತಿಳಿಸುತ್ತಾನೆ. ಮನು ಗರ್ಭಾದಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಧೇಯ, ನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಉಪನಯನ, ಕೇಶಾಂತ, ಸಮಾವರ್ತನ, ವಿವಾಹ ಹಾಗೂ ಸ್ಮಶಾನ ಎಂದು 13 ಸಂಸ್ಕಾರಗಳನ್ನು ಹೇಳುತ್ತಾನೆ. ಮನು, ಗೌತಮ, ಅಂಗೀರಸ, ಆಪಸ್ತಂಭರ ಧರ್ಮಶಾಸ್ತ್ರಗಳಲ್ಲಿ ಸಂಸ್ಕಾರಗಳೆಷ್ಟು ಎನ್ನುವ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೆ ಎಲ್ಲರೂ ಸಂಸ್ಕಾರಗಳ ಮಹತ್ವವನ್ನು ತಮ್ಮ ತಮ್ಮ ಸ್ಮೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಹಿಂದೂ ಸಂಪ್ರದಾಯದ ಸಂಸ್ಕಾರಗಳಲ್ಲಿ ವಿಶೇಷವಾಗಿ ಹತ್ತರಿಂದ ಹದಿನಾರು ಸಂಸ್ಕಾರಗಳು ತುಂಬ ಪ್ರಸಿದ್ಧವಾದವುಗಳು ಮತ್ತು ಹೆಚ್ಚಾಗಿ ಇಂದಿಗೂ ಆಚರಣೆಯಲ್ಲಿ ಉಳಿದಿರುವುವು. ಇವುಗಳನ್ನು 'ದಶಕರ್ಮ ಪದ್ಧತಿ' ಎಂದೂ, 'ಷೋಡಶ ಸಂಸ್ಕಾರ'ಗಳೆಂದೂ ಕರೆಯುವ ವಾಡಿಕೆ ಇದೆ. ಸಂಸ್ಕಾರಗಳನ್ನು ಕುರಿತು ವಿಪುಲವಾದ ಸಾಹಿತ್ಯವಿದೆ. ಸ್ಮೃತಿಗ್ರಂಥಗಳಲ್ಲದೆ, 'ವೀರ ಮಿತ್ರೋದಯ', 'ಸ್ಮೃತಿಚಂದ್ರಿಕೆ', 'ಸಂಸ್ಕಾರಮಯೂಖ', 'ಸಂಸ್ಕಾರವಿಧಿ', ಸಂಸ್ಕಾರ ಪದ್ಧತಿ, ಹಿಂದೂ ಸಂಸ್ಕಾರ, 'ಷೋಡಶ ಗ್ರಂಥವಿಧಿ' ಇತ್ಯಾದಿ ಗ್ರಂಥಗಳಲ್ಲಿ ಸಂಸ್ಕಾರದ ವಿಷಯಗಳು ವಿಸ್ತಾರವಾಗಿ ವಿವರಿಸಲ್ಪಟ್ಟಿವೆ.

ಸಂಸ್ಕಾರಗಳಲ್ಲಿ ಎರಡು ವಿಧವೆಂದು ಹೇಳುತ್ತಾರೆ. ಪೂರ್ವ ಸಂಸ್ಕಾರ ಹಾಗೂ ಉತ್ತರ ಸಂಸ್ಕಾರವೆಂದು. ಜನನದಿಂದ ಮರಣದವರೆಗೆ ನೆರವೇರಿಸುವ ಸಂಸ್ಕಾರಗಳನ್ನು ಪೂರ್ವ ಸಂಸ್ಕಾರಗಳೆಂದೂ, ಮರಣಾನಂತರ ಆಚರಿಸುವ ಸಂಸ್ಕಾರಗಳಿಗೆ ಉತ್ತರ ಸಂಸ್ಕಾರ ಅಥವಾ ಮರಣೋತ್ತರ ಸಂಸ್ಕಾರಗಳೆಂದು ಕರೆಯುತ್ತಾರೆ. ಹಿಂದೂ ಸಂಪ್ರದಾಯದಲ್ಲಿ ತೊಟ್ಟಿಲಿನಿಂದ ಮಸಣದವರೆಗೂ ಒಬ್ಬ ವ್ಯಕ್ತಿ ಅನೇಕ ವಿಧವಾದ ಸಂಸ್ಕಾರಗಳನ್ನು ಪಡೆಯಬೇಕಾಗುತ್ತದೆ. ಬಹುಪಾಲು ಸಂಸ್ಕಾರ ಗ್ರಂಥಗಳಲ್ಲಿ ಅಂತ್ಯ ಸಂಸ್ಕಾರವನ್ನು ಸೇರಿಸಿಲ್ಲ. ಗೃಹ್ಯ ಸೂತ್ರಗಳು ಅಂತ್ಯ ಸಂಸ್ಕಾರವನ್ನು ಅಮಂಗಳವೆಂದು ಈ ಗುಂಪಿಗೆ ಸೇರಿಸಲ್ಲವೆಂದು ತೋರುತ್ತದೆ. ಅಂತ್ಯ ಸಂಸ್ಕಾರವನ್ನು ಪ್ರತ್ಯೇಕ ಪುಸ್ತಕದಲ್ಲಿ ಬರೆದಿರುವುದು ಕಂಡು ಬರುತ್ತದೆ. ಗೌತಮನೂ ತನ್ನ ಸ್ಮೃತಿಯಲ್ಲಿ ಸುಮಾರು 40 ಸಂಸ್ಕಾರಗಳನ್ನು ಹೇಳುತ್ತಾನೆ. ಆದರೆ ಅವನ ಸಂಸ್ಕಾರಗಳ ಅನುಕ್ರಮಣಿಕೆಯಲ್ಲಿ ಅಂತ್ಯ ಸಂಸ್ಕಾರ ವಿಧಿ ಸೇರಿಲ್ಲ, ಕಾರಣ ಏನು ಇರಬಹುದು ? ಬಹುಶಃ ಇದು ಅಶುಭವೆಂಬ ಕಾರಣವಿರಬಹುದು. ಮತ್ತು ವ್ಯಕ್ತಿಯ ಚಾರಿತ್ರ್ಯವು ಅವನ ಸಾವಿನೊಂದಿಗೆ ಕೊನೆಗೊಳ್ಳುವುದರಿಂದ ಸಾವಿನ ನಂತರ ಮಾಡುವ ವಿಧಿಗಳು ಅವನ ವ್ಯಕ್ತಿತ್ವ ವಿಕಾಸಕ್ಕೆ ನೇರವಾಗಿ ಸಂಬಂಧವಾಗುವುದಿಲ್ಲವಾದ್ದರಿಂದ, ಹೀಗೆ ಮಾಡಿರಬೇಕು ಎಂದು ಊಹಿಸಬಹುದಾಗಿದೆ. ಆದರೂ 'ಅಂತ್ಯೇಷ್ಟಿ ವಿಧಿ' ಯೂ ಒಂದು ಸಂಸ್ಕಾರವೆಂದು ಗುರುತಿಸಲ್ಪಟ್ಟಿದೆ. ಮನು, ಯಾಜ್ಞ್ಯವಲ್ಕ್ಯ, ಜಾತೂಕರ್ಣ, ಇವರು ತಮ್ಮ ಕೃತಿಗಳಲ್ಲಿ 'ಅಂತ್ಯೇಷ್ಟಿ ವಿಧಿ'ಯನ್ನು ಉಲ್ಲೇಖಿಸಿದ್ದಾರೆ.

ಸಂಸ್ಕಾರಗಳು ಯಾವುದೇ ಧರ್ಮದಒಂದು ಭಾಗವೆಂದು ಗುರುತಿಸಲ್ಪಡುತ್ತವೆ. ಸಂಸ್ಕಾರ (Ritual) ಕಾರ್ಯ (Ceremony) ರೂಢಿ ನಿಯಮ (Custom) ಈಶಬ್ದಗಳನ್ನು ಸಾಮಾನ್ಯವಾಗಿ ಪರ್ಯಾಯ ಪದಗಳಾಗಿ ಬಳಸುತ್ತಾರೆ. ಆದರೆ ಇವುಗಳ ಅರ್ಥದಲ್ಲೂ ಸೂಕ್ಷ್ಮವಾದ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ಧಾರ್ಮಿಕ ಕ್ರಿಯೆಗಳಿಂದ ಕೂಡಿದ ವಿಧಿ ಕ್ರಿಯೆಗಳಿಗೆ ಸಂಸ್ಕಾರಗಳೆಂದು ಕರೆದರೆ, ಸಾಂಪ್ರದಾಯಕ ಕ್ರಿಯೆಗಳಿಂದ ಕೂಡಿದ ವಿಧಿ ಕ್ರಿಯೆಗಳಿಗೆ ರೂಢಿ ನಿಯಮ ಸಂಪ್ರದಾಯವೆಂದು ಕರೆಯುತ್ತಾರೆ. ನಮ್ಮ ದೇಶದಲ್ಲಿ ಹೆಜ್ಜೆ ಹೆಜ್ಜೆಗೆ ಆಚಾರ ಸಂಪ್ರದಾಯಗಳಿವೆ. ಪಾಶ್ಚಾತ್ಯರು ಭಾರತೀಯರನ್ನು ಕಂಡು 'ಭಾರತೀಯ ಆಚಾರವಾಗಿ ಹುಟ್ಟುವನು, ಆಚಾರವಾಗಿ ಕಾಲವಾಗುತ್ತಾನೆ' ಎಂದು ವಿಡಂಬಿಸುವುದುಂಟು ಮತ್ತು ಆಚಾರ ಪದ್ಧತಿಗಳನ್ನು ಕಂದಾಚಾರಗಳೆಂದು ಬೀಳುಗಳೆಯುವುದುಂಟು.

ಆದರೆ ಶ್ರೀಸಾಮಾನ್ಯರು ಇಂಥ ಆಚರಣೆಗಳಿಂದಲೇ ಬದುಕಿದ್ದಾರೆ. ಈ ಆಚರಣೆಗಳು ಬಾಹ್ಯದೃಷ್ಟಿಯಿಂದ ನೋಡಿದಾಗ ಶುಷ್ಕವಾಗಿ, ಅರ್ಥಹೀನ ಕ್ರಿಯೆಗಳಂತೆ ಗೋಚರಿಸುತ್ತವೆ. ವಿಚಾರ ಮಾಡಿ ನೋಡಿದಾಗ ಈ ಕ್ರಿಯೆಗಳು ಗಹನ ಆಧ್ಯಾತ್ಮಿಕ ತತ್ತ್ವಕ್ಕೆ ಒಂದು ಕುರುಹು ಆಗುತ್ತವೆ. ಮನುಷ್ಯನ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಶಬ್ದದ ಸಹಾಯ ಬೇಕು. ಶಬ್ದದ ಹಿಂದಿರುವ ಭಾವನೆಗಳಿಗೆ ಒಂದು ರೂಪ ಕೊಡಲು ಆಚರಣೆಗಳು ಬೇಕು. ಹೆಚ್ಚು ಆಚರಣೆಗಳು ಇರುವಲ್ಲಿ ಹೆಚ್ಚು ಭಾವನೆಗಳೂ ಇರುತ್ತವೆ. ಇವುಗಳನ್ನು ಅಲ್ಲಗಳೆಯುವಂತಿಲ್ಲ.

ಯಾಂತ್ರಿಕವೆನಿಸುವ ಈ ಆಚರಣೆಗಳಿಗೆ, ಭಾವನೆಯನ್ನು ತುಂಬಬೇಕಾಗಿದೆ. ಈ ಸಂದರ್ಭದಲ್ಲಿ ರಾಮಕೃಷ್ಣ ಪರಮಹಂಸರ ಮಾತು ಜ್ಞಾಪಕಕ್ಕೆ ಬರುತ್ತದೆ. ಅವರು ಹೇಳುತ್ತಾರೆ : 'ಸಂಪ್ರದಾಯ ಆಚರಣೆಗಳು ಅಕ್ಕಿಯ ಮೇಲಿರುವ ಹೊಟ್ಟಿನಂತೆ. ನಾವು ಊಟ ಮಾಡುವಾಗ ಹೊಟ್ಟನ್ನು ತೆಗೆದು ಅಕ್ಕಿಯನ್ನು ಬೇಯಿಸಿ ತಿಂದರೂ ನಾವು ಬಿತ್ತಬೇಕಾದರೆ ಬರೀ ಅಕ್ಕಿಯನ್ನು ಬಿತ್ತಿದರೆ ಬೆಳೆ ದೊರಕದು. ಮುಂದೆ ಅದನ್ನು ಬೆಳೆಯಬೇಕಾದರೆ ಮುಂದಿನವರಿಗೆ ಅದನ್ನು ಕೂಡಿಡಬೇಕಾದರೆ ಅಕ್ಕಿಗಿಂತ ಭತ್ತ ಶ್ರೇಷ್ಠ ಎಂದು ಸುಂದರವಾದ ದೃಷ್ಟಾಂತವನ್ನು ಕೊಟ್ಟು ಹೇಳುತ್ತಾರೆ.

ವೀರಶೈವ ಸಂಸ್ಕಾರಗಳು :

ವೇದ ಪ್ರಾಮಾಣ್ಯ ವರ್ಣಾಶ್ರಮ ಧರ್ಮ ಪರಿಪಾಲನೆ, ಬ್ರಾಹ್ಮಣ್ಯದ ಹಿರಿಮೆ, ಪೂರ್ವ ಜನ್ಮಗಳ ಕರ್ಮ ಫಲವಾಗಿ ಬರುವ ಪುನರ್ಜನ್ಮ, ಮೂವತ್ಮೂರು ಕೋಟಿ ದೇವತೆಗಳಲ್ಲಿ ನಂಬಿಕೆ, ಜಾತಿಪದ್ಧತಿ, ಪಿತೃಗಳ ಪೂಜೆ ಅಥವಾ ತಿಥಿ ಕರ್ಮ ಇತ್ಯಾದಿ ಲಕ್ಷಣಗಳನ್ನೊಳಗೊಂಡ ವೈದಿಕ ಧರ್ಮಕ್ಕೆ ತೀರಾ ವಿಭಿನ್ನವಾದುದು ವೀರಶೈವ ಧರ್ಮ. ಈ ಧರ್ಮ 'ತಾಂತ್ರಿಕ ವೈದಿಕ ಮತ'. ಅಂದರೆ ಈ ಧರ್ಮಕ್ಕೆ ಆಧಾರ ಗ್ರಂಥಗಳು, ಆಗಮಗಳು. ವೀರಶೈವದ ಜೀವನಾಡಿಯಂತಿರುವ ಮೂಲ ತತ್ತ್ವಗಳು ಆಗಮಗಳಲ್ಲೇ ಸ್ಫುಟವಾಗಿ ಕಂಡುಬರುತ್ತವೆ. ವೇದ ಗೌಣವಾದುದು. ಈ ಧರ್ಮದ ಸಮಾಜ ವರ್ಣ-ವರ್ಗರಹಿತವಾದುದು. ಇದಕ್ಕೆ 'ಅತಿ ವರ್ಣಾಶ್ರಮ' ಸಮಾಜ ಎಂದೂ ಕರೆಯುತ್ತಾರೆ. ಅಂದರೆ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ ವಿಂಗಡನೆ ಕಲ್ಪನೆ ಇಲ್ಲದ್ದು. ಹಾಗೂ ಇವರೆಲ್ಲರನ್ನು ಸಮಾನವಾಗಿ ಕಾಣುವ ದೃಷ್ಟಿಕೋನ ಉಳ್ಳದ್ದು.

ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ 'ಜಾತ್ಯತೀತ' ಸಮಾಜ ಅಥವಾ ಸೆಕ್ಯೂಲರ್ ಸೊಸೈಟಿಯ ಮಾದರಿ ಎಂದು ಹೇಳಬಹುದು. ವೀರಶೈವ ಧರ್ಮ, ಏಕ ದೇವೋಪಾಸನೆ, ಜಾತಿಪದ್ಧತಿ ನಿರಕಾರಣೆ, ಪೂರ್ವಜನ್ಮ, ಕರ್ಮಫಲ, ಜನ್ಮಾಂತರ, ಪಿತೃಪೂಜೆ ಇತ್ಯಾದಿ ವಿಷಯಗಳಲ್ಲಿ ನಿರಾಕರಣೆ ಭಾವನೆಯನ್ನು ಹೊಂದಿ ವೈದಿಕ ಧರ್ಮದಿಂದ ವಿಭಿನ್ನವೂ ವೈಶಿಷ್ಟ್ಯಪೂರ್ಣವೂ ಆಗಿದೆ.

ವೀರಶೈವರು ತಾಂತ್ರಿಕ-ವೈದಿಕ ಸಂಪ್ರದಾಯದವರಾಗಿ ಸಂಸ್ಕಾರಗಳನ್ನು ಆಗಮೋಕ್ತ ರೀತಿಯಿಂದಲೂ ಸೂಕ್ತ ವೈದಿಕ ಮಂತ್ರಗಳ ಪ್ರಯೋಗದ ಮೂಲಕ ಅನುಷ್ಠಾನ ಮಾಡುತ್ತಾರೆ. ಹಿಂದೂ ಸಂಪ್ರದಾಯದೊಂದಿಗೆ ಸಾಂಸ್ಕೃತಿಕ ಸಂಬಂಧವನ್ನು ಹೊಂದಿದ ವೀರಶೈವಧರ್ಮ ವೈದಿಕ ಧರ್ಮದ ಉತ್ತಮಾಂಶಗಳನ್ನು ಗ್ರಹಿಸಿದೆ. ವೇದದ ಕರ್ಮಕಾಂಡವನ್ನು ಬಿಟ್ಟು, ಜ್ಞಾನಕಾಂಡವನ್ನುಒಪ್ಪಿಕೊಂಡಿದೆ. ವೈದಿಕರಂತೆ ವೀರಶೈವರಲ್ಲೂ ತಾವು ಅನುಸರಿಸುವ ಸಂಸ್ಕಾರಗಳ ಪ್ರಕಾರಗಳಲ್ಲಿ ನಿರ್ದಿಷ್ಟ ಅಭಿಪ್ರಾಯವಿಲ್ಲ. ಕೆಲವರು ಷೋಡಶ ಸಂಸ್ಕಾರಗಳೆಂದು ಹೇಳಿದರೆ ಹಲವರು ದಶ ಸಂಸ್ಕಾರಗಳೆಂದು ಹೇಳುತ್ತಾರೆ.

ವೀರಶೈವ ಸಂಸ್ಕಾರಗಳನ್ನು ಎರಡು ರೀತಿಯಿಂದ ವರ್ಗೀಕರಿಸಬಹುದಾಗಿದೆ :

1. ಧಾರ್ಮಿಕ; 2. ಸಂಪ್ರಾದಾಯಿಕ

ಲಿಂಗಧಾರಣ, ದೀಕ್ಷಾ , ವಿವಾಹ, ಉತ್ತರ ಪ್ರಯೋಗ (ಅಂತ್ಯೇಷ್ಟಿ) ಇವು ಧಾರ್ಮಿಕ ಸಂಸ್ಕಾರಗಳು. ತುಂಬ ಮಹತ್ವವಾದವುಗಳು. ಕರ್ಣಭೇದ, ಚೌಲ, ಅನ್ನಪ್ರಾಶನ, ಸೂರ್ಯ ಚಂದ್ರಾವಲೋಕನ, ಆಂದೋಲಿಕಾರೋಹಣ ಇತ್ಯಾದಿಗಳನ್ನು ಸಾಂಪ್ರದಾಯಕ, ರೂಢಿಮೂಲ ಹಾಗೂ ಅನುಕರಣೆಯಿಂದ ಬಂದ ಆಚರಣೆಗಳೆಂದು ಗುರುತಿಸಬಹುದು. ಭಾರತದ ಎಲ್ಲ ಮತ ಧರ್ಮಗಳ ಮೇಲೂ ವೈದಿಕ ಪ್ರಭಾವವನ್ನು ಗುರುತಿಸಬಹುದಾಗಿದೆ. ಅಂತೆಯೇ ವೀರಶೈವ ಸಂಸ್ಕಾರಗಳ ಮೇಲೆ ವೈದಿಕ ಪ್ರಭಾವ ಅಥವಾ ಅನುಕರಣೆ ಕಂಡುಬಂದರೂ ಅವು ವೈದಿಕ ಸಂಸ್ಕಾರಗಳ ಪ್ರತಿರೂಪಗಳಲ್ಲ. ಸೂಕ್ಷ್ಮವಾಗಿ ಅವಲೋಕಿಸಿದರೆ ಅವುಗಳನ್ನು ಆಚರಿಸುವ ವಿಧಿಕ್ರಿಯೆ ಹಾಗೂ ಸಂದರ್ಭಕ್ಕೆ ತಕ್ಕಂತೆ ಹೇಳುವ ಮಂತ್ರಗಳಿಂದ ಈ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ವೈದಿಕ ಮತದವರಿಗೆ ವೇದಗಳು ಆಧಾರವಾದರೆ, ವೀರಶೈವರಿಗೆ ಆಗಮ ಪ್ರಧಾನವಾಗಿ, ವೇದ ಗೌಣವಾಗಿ ಆಧಾರವಾಗುತ್ತವೆ. ವೈದಿಕ ವಿವಾಹ ಪದ್ಧತಿಯಲ್ಲಿ ಅಗ್ನಿಸಾಕ್ಷಿ ಆಚರಣೆಯಲ್ಲಿದ್ದರೆ ವೀರಶೈವರಲ್ಲಿ ಧರ್ಮಾಚಾರ್ಯರ ಪಂಚಗುರು ಕಲಶಗಳು ಸಾಕ್ಷಿಯಾಗುತ್ತವೆ. ವೈದಿಕರ ಉಪನಯನದಲ್ಲಿ ಅಗ್ನಿಸಾಕ್ಷಿಯಾದರೆ, ವೀರಶೈವರ ದೀಕ್ಷಾ ಸಂಸ್ಕಾರದಲ್ಲಿ ಧರ್ಮಾಚಾರ್ಯರ ಪಂಚ ಗುರುಕಲಶಗಳು ಸಾಕ್ಷಿಯಾಗುತ್ತವೆ. ಅಂತ್ಯ ಸಂಸ್ಕಾರದಲ್ಲಿ ವೈದಿಕರದು ಅಗ್ನಿ ಸಂಸ್ಕಾರವಾದರೆ, ವೀರಶೈವರದು ಪೃಥ್ವಿ (ನಿಕ್ಷೇಪ) ಸಂಸ್ಕಾರವಾಗಿದೆ. ಹೀಗೆ ಪ್ರಧಾನ ಅಂಶಗಳಲ್ಲಿ ಸೂಕ್ಷ್ಮವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ಆದರೂ ಕೆಲವು ಸಂಸ್ಕಾರಗಳು, ವೈದಿಕ ಸಂಸ್ಕಾರಗಳ ಅನುಕರಣೆಯಿಂದ ಮಿಶ್ರರೂಪ ತಾಳಿವೆ ಎನ್ನುವ ಸತ್ಯಾಂಶವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ವೀರಶೈವರಿಗೆ ಶೈವಾಗಮ ಗ್ರಂಥಗಳೇ ಮೂಲ. ಇವುಗಳ ಆಧಾರದ ಮೇಲೆ ರಚಿತವಾಗಿರುವ

1. ವೀರಶೈವಾಚಾರ ಕೌಸ್ತುಭ
2. ವೀರಶೈವಾಚಾರ ಪ್ರದೀಪಿಕೆ
3. ವೀರಮಾಹೇಶ್ವರಾಚಾರ ಸಂಗ್ರಹ
4. ವೀರಶೈವ ಸದಾಚಾರ ಸಂಗ್ರಹ
5. ಕ್ರಿಯಾಸಾರ

ಇತ್ಯಾದಿಗ್ರಂಥಗಳಲ್ಲಿ ಸಂಸ್ಕಾರ ವಿಧಾನವು ಉಕ್ತವಾಗಿದೆ. ಇವುಗಳ ಆಧಾರದ ಮೇಲೆ ವೀರಶೈವ ವಿದ್ವಾಂಸರು 'ವಿಧಿ'ಗಳನ್ನು ರಚಿಸಿದ್ದಾರೆ.

ಸಂಸ್ಕಾರಗಳ ಉದ್ದೇಶ

ಹಿಂದೂ ಸಂಪ್ರದಾಯಕ್ಕೆ ಸೇರಿದ ಎಲ್ಲ ಮತ ಧರ್ಮಗಳೂ ಗರ್ಭಾದಾನದಿಂದ

ಸಂಸ್ಕಾರಗಳು ಆರಂಭವಾಗುತ್ತವೆ. ಗರ್ಭದೋಷ, ನಿಷಿದ್ಧಕಾಲ, ಮೈಥುನ ದೋಷಗಳು ಪರಿಹಾರವಾಗಿ ಪವಿತ್ರ ಸಂತಾನಕ್ಕೆ ಈ ಸಂಸ್ಕಾರವು ಸಾಧನವಾಗಿದೆ. 'ಗರ್ಭ : ಸಂಧಾರ್ಯತೆಯೇನ ಕರ್ಮಣಾ ತದ್ ಗರ್ಭಾದಾನಂ' ಎಂದು ಈ ಶಬ್ದದ ನಿರ್ವಚನವಿದೆ. ಅಂದರೆ ಸತ್ ಸಂತಾನಕ್ಕಾಗಿ ಪರಿಶುದ್ಧ ಭಾವನೆಯಿಂದ ಶುಭ ಮುಹೂರ್ತದಲ್ಲಿ ಪತಿ ಪತ್ನಿಯರು ಸಮಾಗಮವಾಗುವುದೇ ಗರ್ಭಾದಾನ ಸಂಸ್ಕಾರವಾಗಿದೆ.

ಗರ್ಭಾದಾನದ ತರುವಾಯ ಮೊದಲನೆ ತಿಂಗಳಲ್ಲಿ ಶುಕ್ಲ-ಶೋಣಿತಗಳು ಸೇರಿ ದ್ರವವಾಗಿ ಅದರಲ್ಲಿ ಬುಗ್ಗೆ ಹುಟ್ಟಿ ಅದು ಗೂಡಿನಂತೆ ನಿಲ್ಲುತ್ತದೆ. ಅದನ್ನು ಕಲಿಲವೆಂದು ಕರೆಯುತ್ತಾರೆ. ಎರಡನೆ ತಿಂಗಳಲ್ಲಿ ಅದು ಗಟ್ಟಿಯಾಗಿ ಪಿಂಡಾಕಾರವಾಗುತ್ತದೆ. ಮೂರನೆ ತಿಂಗಳಲ್ಲಿ ಕೈ ಕಾಲು ತಲೆ ಮುಂತಾದ ಅವಯವಗಳು ಅಂಕುರಿಸಲು ಆರಂಭವಾಗುತ್ತವೆ. ನಾಲ್ಕನೆ ತಿಂಗಳು ಚೇತನ ಉದಿಸುವುದು. ಐದರಲ್ಲಿ ರಕ್ತಮಾಂಸ ಪುಷ್ಟವಾದ ಪಿಂಡದಲ್ಲಿ ಚಿತ್ತವು ಪ್ರಬುದ್ಧವಾಗುತ್ತದೆ. ಆರನೆ ತಿಂಗಳು ಸ್ನಾಯು, ನಖ, ಕೇಶಾಂಕುರಗಳು ಬೆಳೆಯಲು ಆರಂಭವಾಗುತ್ತದೆ. ಏಳರಲ್ಲಿ ಅಂಗಾಂಗಗಳು ಪೂರ್ಣವಾಗುತ್ತವೆ. ಎಂಟರಲ್ಲಿ ಪಿಂಡಕ್ಕೆ ಸಂಪೂರ್ಣವಾಗಿ ಚರ್ಮವು ಆವರಿಸಿ ಸ್ಮರಣೆ ಉಂಟಾಗಲು ಆರಂಭವಾಗುತ್ತದೆ ಎನ್ನುವ ವಿಚಾರ ಗರ್ಭೋಪನಿಷತ್ತಿನಲ್ಲೂ ಶಿವಗೀತೆ (ಅಧ್ಯಾಯ 8) ಯಲ್ಲೂ ಪಿಂಡೋತ್ಪತ್ತಿ ಕ್ರಮವು ವೈಜ್ಞಾನಿಕವಾಗಿ ವಿವರಿಸಲ್ಪಟ್ಟಿದೆ.

ಗರ್ಭಸ್ಥ ಪಿಂಡದ ಅವಯವ ವಿಕಾಸಗಳ ಹಂತದಲ್ಲಿ ಮೂರನೆ ತಿಂಗಳಲ್ಲಿ ಪಿಂಡ ದೋಷ ಪರಿಹಾರವಾಗಿ ಸತ್ಪುತ್ರ ಜನನವಾಗಲೆನ್ನುವ ಸಂಕಲ್ಪದಿಂದ ಮಾಡುವ ಪುಂಸವನ ಸಂಸ್ಕಾರವೂ ನಾಲ್ಕನೆ ತಿಂಗಳಿನಿಂದ-ಎಂಟನೆಯ ತಿಂಗಳವರೆಗೆ ಸೀಮಂತವೆಂಬ ಸಂಸ್ಕಾರವೂ ಉಕ್ತವಾಗಿದೆ.

ಪಿಂಡದಲ್ಲಿ 'ಚೇತನ' ಅಭಿವ್ಯಕ್ತಿಯಾದ ಕೂಡಲೇ ಆ ಗರ್ಭಕ್ಕೆ ವೀರಶೈವ ಸಿದ್ಧಾಂತಕ್ಕನುಸಾರವಾಗಿ ಲಿಂಗಧಾರಣ ಸಂಸ್ಕಾರವನ್ನು ಸೀಮಂತದೊಂದಿಗೆ ಆಚರಿಸಬೇಕಾಗುತ್ತದೆ. ಆದರೆ ವ್ಯವಹಾರದಲ್ಲಿ (ಲೋಕ ರೂಢಿಯ ಪ್ರಕಾರ) ಲಿಂಗಧಾರಣ ಸಂಸ್ಕಾರವು ಜಾತಕರ್ಮದ ಅಂಗವಾಗಿ ಆಚರಿಸಲ್ಪಡುತ್ತದೆ. 'ಗರ್ಭಾಷ್ಟಮೆ ಲಿಂಗಾಧಾರಣ ಮುಚ್ಯತೆ' ಎನ್ನುವ ಆಗಮ ಪ್ರಮಾಣದಂತೆ ಸ್ತ್ರೀಯಳು 8ನೆಯ ತಿಂಗಳು ಗರ್ಭಿಣಿಯಾಗಿರುವಾಗ ಲಿಂಗಧಾರಣೆ ಸಂಸ್ಕಾರ ಮಾಡುವುದು ಶಾಸ್ತ್ರ ನಿಯಮವಾಗಿದೆ. ವ್ಯಕ್ತಿಯ ಕೀರ್ತಿ ಪ್ರತಿಷ್ಠೆಗಳಿಗೆ ಕಾರಣವಾದ ನಾಮಕರಣ, 'ಅನ್ನಾದ್ರೇತ : ರೇತಸ: ಪುರುಷಃ' ಎಂಬ ಶೃತಿವಚನದಂತೆ ಪ್ರಾಣಧಾರಣೆಗೆ ಮುಖ್ಯವಾದ ಅನ್ನಪ್ರಾಶ, ಆ ಮನೆಯಲ್ಲಿ ಅಂಬೆಗಾಲಿಟ್ಟು ಆಡುವ ಶಿಶುವಿಗೆ ಹೊಸ್ತಿಲನ್ನು ದಾಟಿಸಿ ಸೂರ್ಯ-ಚಂದ್ರರ ಹಾಗೂ ಗುರುಮಠ, ದೇವಸ್ಥಾನಗಳಿಗೆ ಸಂದರ್ಶನ ಮಾಡಿಸುವ ಉಪನಿಷ್ಕ್ರಮಣ, ಆಯುಷ್ಯ ಅಭಿವೃದ್ಧಿಗೆ ಕಾರಣವಾದ, ಚೌಲ-ಕರ್ಣಭೇದಗಳು ಜ್ಞಾನ ಸಾಧನವಾದ ವಿದ್ಯಾರಂಭ ಮುಂತಾದ ಸಂಸ್ಕಾರಗಳು ವಿಧ್ಯುಕ್ತವಾಗಿ

ನಡೆಯುತ್ತವೆ. ಐದನೆಯ ವರ್ಷದಲ್ಲಿ ವಿದ್ಯಾರಂಭ ಮಾಡಿದ ಬಾಲಕನು ತಕ್ಕಷ್ಟು ಅಕ್ಷರ ಪರಿಜ್ಞಾನವನ್ನು ಪಡೆದ ಮೇಲೆ 8ನೆ ವರ್ಷದಲ್ಲಿ ಅವನಿಗೆ ಶಿವಜ್ಞಾನದ ಅರಿವು ಉಂಟಾಗಲು ಶಿವದೀಕ್ಷೆಯೆಂಬ ಸಂಸ್ಕಾರವನ್ನು ನೆರವೇರಿಸಲಾಗುತ್ತದೆ.

ಗರ್ಭಾಷ್ಟಮೇ ಕೃತಾದೀಕ್ಷಾ ಮುಖ್ಯಾಸಾ ಷೋಢಶಾವಧಿ।
ಗೌಣಾ ತದೂರ್ಧ್ವಮಧಮಾ ವೀರಶೈವಾನ್ವ ಯಾಯಿನಾಮ್ ॥

ಅಂದರೆ ವೀರಶೈವನಿಗೆ ಗರ್ಭಲಿಂಗಧಾರಣೆಯ ತರುವಾಯ 8ನೇ ವರ್ಷದಲ್ಲಿ ಮಾಡುವ ದೀಕ್ಷೆಯು ಉತ್ತಮವಾದುದು. 16ನೇ ವರ್ಷಗಳಲ್ಲಿ ಮಾಡುವ ದೀಕ್ಷೆಯು ಮಧ್ಯಮವಾದುದು. ನಂತರ ಮಾಡುವುದು ಅಧಮವೆಂದು ಶಾಸ್ತ್ರಕಾರರ ಅಭಿಮತ. ವೀರಶೈವರಿಗೆ ದೀಕ್ಷೆಯಿಂದ ಮಲತ್ರಯ ನಾಶವಾಗಿ ಶಿವಜ್ಞಾನ ಪ್ರಾಪ್ತಿಯಾಗುತ್ತದೆ.

ಧೀಯತೆ ಜ್ಞಾನ ಸಂಬಂಧಃ ಕ್ಷಿಯತೇಚ ಮಲತ್ರಯಮ್।
ಧೀಯತೆ ಕ್ಷೀಯತೇ ಯೇನ ದೀಕ್ಷತ್ಯೇಷಾ ನಿಬದ್ಧ್ಯತೆ ॥

ಎಂಬುದು ಸಿದ್ಧಾಂತ ಶಿಖಾಮಣಿಯ ಮಾತು. ಇದು ಮೇಲಿನ ಅರ್ಥವನ್ನೆ ಸ್ಪಷ್ಟಪಡಿಸುತ್ತದೆ. ದೀಕ್ಷೆಯಲ್ಲಿ ಮೂರು ವಿಧ. ವೇಧಾ-ಮನು-ಕ್ರಿಯಾ ಎಂದು. ಗುರುವು ಶಿಷ್ಯನ ಶಿಖಾ ಚಕ್ರದಲ್ಲಿರುವ ಚಿತ್ಕಲೆಯನ್ನು ತನ್ನ ಹಸ್ತಕ್ಕೆ ಆಕರ್ಷಿಸಿ ತನ್ನ ವರದಹಸ್ತವನ್ನು ಶಿಷ್ಯನ ಮಸ್ತಕದ ಮೇಲಿಟ್ಟು ಅವನ ಕಾರಣ ತನುವಿನಲ್ಲಿ ಭಾವಲಿಂಗವನ್ನು ಸ್ಥಾಪಿಸುವುದು ವೇಧಾದೀಕ್ಷೆ. ಮಂತ್ರೋಪದೇಶದಿಂದ ಸೂಕ್ಷ್ಮ ದೇಹದಲ್ಲಿ ಪ್ರಾಣಲಿಂಗವನ್ನು ಸ್ಥಾಪಿಸುವುದು ಮನು ದೀಕ್ಷೆ. ಮತ್ತು ಸ್ಥೂಲ ದೇಹದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸುವುದು ಕ್ರಿಯಾದೀಕ್ಷೆ. ಇವುಗಳಿಂದ ಆತ್ಮನಿಗೆ ಸ್ವಾಭಾವಿಕವಾಗಿ ಅಂಟಿಬಂದಿರುವ ಅಣವ, ಮಾಯಾ ಮತ್ತು ಕಾರ್ಮಿಕ ಎಂಬ ಮಲತ್ರಯಗಳು ನಾಶವಾಗಿ ಶುದ್ಧಾತ್ಮನಾಗುತ್ತಾನೆ. ಅವನಲ್ಲಿ ಶಿವ ಜ್ಞಾನ, ಶಿವಾನುಭವ ಉಂಟಾಗುತ್ತದೆ ಎಂಬುದೇ ದೀಕ್ಷಾ ಸಂಸ್ಕಾರದ ಮುಖ್ಯ ಆಶಯವಾಗಿದೆ.

'ದೀಕ್ಷೆ' ಯಂತೆ ವೀರಶೈವರಿಗೆ ವಿವಾಹವೂ ಧಾರ್ಮಿಕ ಸಂಸ್ಕಾರವಾಗಿದೆ. ಕಾಳಿದಾಸನು ತನ್ನ ರಘುವಂಶದಲ್ಲಿ 'ಪ್ರಜಾಯೈ ಗೃಹಮೇಧಿನಾಂ' ಎಂದು ರಘುವಂಶದ ರಾಜರ ಗುಣಗಳನ್ನು ವರ್ಣಿಸುವಾಗ ಹೇಳುವ ಮಾತಿದು. ಅಂದರೆ ರಘು ಮಹಾರಾಜನು ಸತ್ಸಂತಾನಕ್ಕಾಗಿ ಗೃಹಸ್ಥರಾಗುತ್ತಿದ್ದರಲ್ಲದೆ ಕೇವಲ ಇಂದ್ರಿಯ ಉಪಭೋಗಕ್ಕಲ್ಲ ಎಂದು ತಿಳಿಸುತ್ತಾನೆ. ಹಿಂದೂ ಸಂಪ್ರದಾಯದಲ್ಲಿ ವಿವಾಹ ಎರಡು ಆತ್ಮಗಳ ಮಿಲನ. ಜೀವನ ಯಾತ್ರೆ ಸುಖಮಯ ಶಾಂತಿಮಯವಾಗಿ ಸಾಗಲು ವಿವಾಹ ಸಂಸ್ಕಾರ ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿದೆ.

ಸಂಸಾರವೇ ಸಮುದ್ರ. ಇಲ್ಲಿ ಸ್ತ್ರೀ ಪುರುಷರು ಯಾತ್ರಿಕರು, ವಿವಾಹ ಸಂಸ್ಕಾರವೇ

'ನಾವೆ' ಎನ್ನುವ ಸುಂದರ ಪರಿಕಲ್ಪನೆ ಇದೆ. ಭಾರತೀಯರಲ್ಲಿ ಗೃಹಸ್ಥ ಧರ್ಮ ಎಲ್ಲ ಆಶ್ರಮ ಧರ್ಮದವರಿಗೂ ಆಧಾರವಾಗಿದೆ ಎಂದು ನೀಲಕಂಠ ಶಿವಾಚಾರ್ಯರು ತಮ್ಮ ಕ್ರಿಯಾಸಾರದಲ್ಲಿ ಆದರ ಮಹತ್ವವನ್ನು ಎತ್ತಿ ಹೇಳುತ್ತಾರೆ. (ಆಶ್ರಮಾಣಾಂ ಸಮಸ್ತಾನಾಂ ಗೃಹಿಸ್ಯಾದುತ್ತಮೋಗುರು : (ಕ್ರಿ. ಸಾ. ಉ. 13) ಉತ್ತಮ ಗೃಹಸ್ಥರಾಗಿ ಬಾಳಲು ದಂಪತಿಗಳು ಧರ್ಮೇಚ, ಅರ್ಥೇಚ, ಕಾಮೇಚ ನಾತಿ ಚರಿತವ್ಯಾತ್ವಯಾ ಇಯಮ್ ಎನ್ನುವ ವೇದವಾಕ್ಯದಂತೆ ಧರ್ಮ-ಅರ್ಥ-ಕಾಮ ಮೋಕ್ಷಗಳಲ್ಲಿ ಸಹಭಾಗಿಗಳಾಗಿ ಬಾಳಲು ಸಂಸ್ಕಾರವನ್ನು ನೀಡುವುದೇ ವಿವಾಹದ ಪರಮ ಉದ್ದೇಶವಾಗಿದೆ. ಹೀಗೆ ಎಲ್ಲ ಸಂಸ್ಕಾರಗಳೂ ಮಾನವನ ಅಂತರಂಗ ವಿಕಾಸಕ್ಕೆ ನೆರವಾಗುತ್ತವೆ.

ಇಲ್ಲಿ ವೀರಶೈವರ ಈ ಸಂಸ್ಕಾರಗಳ ಕ್ರಿಯ ವಿಧಾನವನ್ನು ಸಮಾಜೋಧಾರ್ಮಿಕ ದೃಷ್ಟಿಯನ್ನು ಅನುಲಕ್ಷಿಸಿ ವಿಧಿ ವಿಧಾನಗಳ ಕ್ರಿಯೆಯ ಬಗ್ಗೆ ಹೆಚ್ಚು ವಿವರಣೆಗೆ ಹೋಗದೆ ಲೇಖನದ ಪರಿಮಿತಿಯನ್ನು ಗಮನಿಸಿ ಅವುಗಳನ್ನು ಸ್ಥೂಲವಾಗಿ ಪರಿಚಯಮಾಡಿಕೊಡುವುದು ಲೇಖನದ ಉದ್ದೇಶ.

1. ಗರ್ಭಾದಾನ (Conception)

ವಿವಾಹದ ನಂತರ ಪತಿ-ಪತ್ನಿಯರು ಶುಭ ಮುಹೂರ್ತದಲ್ಲಿ ವಂಶೋದ್ಧಾರಕ್ಕಾಗಿ ಸತ್ ಸಂತಾನವನ್ನು ಪಡೆಯಲು ಸಮಾಗಮವಾಗುವುದೇ ಗರ್ಭಾದಾನ ಸಂಸ್ಕಾರವಾಗಿದೆ. ಗಂಡನು ಹೆಂಡತಿಗೆ ಗರ್ಭವನ್ನು ದಾನ ಮಾಡುವ ಈ ಕ್ರಿಯೆಗೆ 'ಫಲಶೋಭನ'ವೆಂದೂ ಕರೆಯುತ್ತಾರೆ. ಗರ್ಭಾದಾನಕ್ಕೆ ಯೋಗ್ಯ ದಿನವನ್ನು ಆಯ್ದುಕೊಂಡು ದಂಪತಿಗಳು ಮಂಗಳ ಸ್ನಾನ ಮಾಡಿ ನೂತನ ವಸ್ತ್ರಗಳನ್ನು ಧರಿಸಿ, ಪೂಜಾ ಸಾಮಗ್ರಿಗಳನ್ನು ಅಣಿಗೊಳಿಸಿ ಇಷ್ಟಲಿಂಗ ಪೂಜೆಯನ್ನು ಮಾಡಿ, ಗುರು ಕರುಣೆ ಪ್ರಸಾದವನ್ನು ಪಡೆದು, ಪವಿತ್ರ ಆಸನದ ಮೇಲೆ ದಂಪತಿಗಳು ಕುಳಿತುಕೊಳ್ಳುತ್ತಾರೆ. ಮಾಹೇಶ್ವರರು (ಜಂಗಮರು) ಸಂಕಲ್ಪದೊಂದಿಗೆ ಗಣಪತಿ ಪೂಜೆ, ಪುಣ್ಯಾಹ, ನಾಂದೀ ಇತ್ಯಾದಿ ಮಂಗಳಕರವಾದ ಪೂಜಾ ಕ್ರಿಯೆಗಳನ್ನು ದಂಪತಿಗಳಿಂದ ಮಾಡಿಸುತ್ತಾರೆ. ಅನಂತರ ಸುಮಂಗಲಿಯರು ದಂಪತಿಗಳಿಗೆ ಆರತಿಯನ್ನು ಮಾಡುತ್ತಾರೆ. ದಂಪತಿಗಳು ಮಾಹೇಶ್ವರರಿಗೆ ಫಲ ತಾಂಬೂಲ ದಕ್ಷಿಣೆ ಕೊಟ್ಟು ಅವರಿಂದ ಆಶೀರ್ವಾದ ಪಡೆಯುತ್ತಾರೆ. ಅನಂತರ ಶುಭ ಮುಹೂರ್ತದಲ್ಲಿ ಗರ್ಭಾದಾನ ಕ್ರಿಯೆ ನೆರವೇರುತ್ತದೆ.

2. ಪುಂಸವನ (Quickening a male child)

'ಪುಮಾನ್ ಪ್ರಸೂಯತೆ ಯೇನ ಕರ್ಮಣಾ ತತ್ ಪುಂಸವನಮಿತೀರಿತಮ್' ಎಂಬುದು ಈ ಶಬ್ದದ ನಿರ್ವಚನ. ಗರ್ಭಸ್ಥ ಶಿಶುವಿಗೆ ಮಾಡುವ ಸಂಸ್ಕಾರವಿದು. ಪುರುಷ ಸಂತಾನವಾಗಲಿ ಎಂಬುದೇ ಇದರ ಆಶಯ. ಪುರುಷ ಸಂತಾನವಾಗುವುದರಿಂದ ಸಮಾಜದಲ್ಲಿ ತಾಯಿಗೆ

ಗೌರವ ಸ್ಥಾನ ಎನ್ನುವ ಕಲ್ಪನೆ ಹಿಂದಿನ ಕಾಲದಲ್ಲಿತ್ತು. 'ಪುಮಾಂಸಪುತ್ರಂ ಜನಂತು ತಂಪುಮಾನನುಜಾಯತಾಮ್' (ಅಥರ್ವವೇದ 3-23-3) ಈ ಮಂತ್ರವೂ ಮೇಲಿನ ವಿಚಾರವನ್ನೇ ಅನುಮೋದಿಸುತ್ತದೆ. ಗರ್ಭದಲ್ಲಿರುವ ಶಿಶುವು ಸದೃಢ ಹಾಗೂ ಸಶಕ್ತವಾಗಿ ಬೆಳೆಯಲಿ ಎನ್ನುವ ದೃಷ್ಟಿಯಿಂದ ಗರ್ಭಿಣಿಗೆ ಸೂಕ್ತವಾದ ವೈದ್ಯಕೀಯ ಚಿಕಿತ್ಸೆ ಹಾಗೂ ಸಂಸ್ಕಾರಗಳು ಅವಶ್ಯವಾಗಿರುತ್ತವೆ.

ಗರ್ಭಧಾರಣದ ನಂತರ 3-4ನೇ ತಿಂಗಳಲ್ಲಿ ಶುಭದಿನದಲ್ಲಿ ಈ ಪುಂಸವನ ಕಾರ್ಯ ನಡೆಯುತ್ತದೆ. ಕಾರ್ಯಾರಂಭದ ಮೊದಲನೆ ದಿವಸ ದಂಪತಿಗಳು ಪ್ರಾತಃಕಾಲದಲ್ಲಿ ಸ್ನಾನ ಮಾಡಿ, ಇಷ್ಟಲಿಂಗ ಪೂಜೆಯನ್ನು ಸಾಂಗಗೊಳಿಸಿ ಪತಿಯು ತನ್ನ ಪತ್ನಿಯನ್ನು ಪವಿತ್ರ ಆಸನದಲ್ಲಿ ಬಲಭಾಗಕ್ಕೆ ಕುಳ್ಳಿರಿಸಿಕೊಳ್ಳುತ್ತಾನೆ. ಮಾಹೇಶ್ವರರು ಸಂಕಲ್ಪಪೂರ್ವಕ ಪುಣ್ಯಾಹ, ನಾಂದಿ ಸಮಾರಾಧನೆ ಮಾಡಿ ಒಂದು ತಟ್ಟೆಯಲ್ಲಿ ಮಂಗಲಾಕ್ಷತೆಯನ್ನು ಹಾಕಿ ಫಲತಾಂಬೂಲದೊಂದಿಗೆ ಕಂಕಣ (ರಕ್ಷಾಬಂಧನ) ವನ್ನು ಷೋಢಶೋಪಚಾರದಿಂದ ಪೂಜಿಸಿ, ಸ್ತ್ರೀಯಳ ಎಡಮುಂಗೈಗೆ ಕಟ್ಟುತ್ತಾರೆ. ಅನಂತರ ಗುರುಪಾದ ಪೂಜೆ ಮಾಡಿ, ಪಾದೋದಕ ತೆಗೆದುಕೊಳ್ಳುತ್ತಾರೆ. ಗುರುಗಳಿಗೆ, ಮಾಹೇಶ್ವರರಿಗೆ ಫಲ ತಾಂಬೂಲ ದಕ್ಷಿಣೆ ಕೊಟ್ಟು ಆಶೀರ್ವಾದ ಪಡೆಯುತ್ತಾರೆ. ಸುಮಂಗಲಿಯರು ಆರತಿ ಮಾಡುತ್ತಾರೆ. ಅನಂತರ ಗುರು ಸನ್ನಿಧಿಯಲ್ಲಿ ಕಂಕಣವನ್ನು ಬಿಚ್ಚಿ ಇಡುತ್ತಾರೆ (ವಿಸರ್ಜನ). ಇದು ಪುಂಸವನ ಕಾರ್ಯ ವಿಧಿ ವಿಧಾನದಿಂದ ಈ ಸಂಸ್ಕಾರ ನೆರವೇರಿಸುತ್ತಾರೆ.

3. ಸೀಮಂತೋನ್ನಯನ (Hair parting)

ಸೀಮಂತದಲ್ಲಿ ಗರ್ಭಿಣಿ ಸ್ತ್ರೀಗೆ ವಿಧಿಪೂರ್ವಕ ಬೈತಲೆ ಬಾಚುವ ಕ್ರಿಯೆ ನಡೆಯುತ್ತದೆ. ''ಸೀಮಂತ: ಉನ್ನೀಯತೆ ಯಸ್ಮಿನ್ ಕರ್ಮಣಿ ತತ್ ಸೀಮಂತಃ' ಎಂಬುದು ಈ ಪದದ ನಿರ್ವಚನ. ಗರ್ಭದಲ್ಲಿರುವ ಪಿಂಡಕ್ಕೆ ಮನಸ್ಸು ಹಾಗೂ ಬುದ್ಧಿಯು ಐದು ಮತ್ತು ಆರನೆ ತಿಂಗಳಲ್ಲಿ ಬೆಳೆಯಲು ಆರಂಭವಾಗುತ್ತದೆ. ತಾಯಿಯ ಆರೋಗ್ಯ ಮತ್ತು ಮಾನಸಿಕ ಸ್ಥಿತಿಗತಿಗಳು ಈ ಸಂದರ್ಭದಲ್ಲಿ ಆರೋಗ್ಯವಾಗಿರುವುದು ಮಗುವಿನ ಬೆಳವಣಿಗೆಯ ದೃಷ್ಟಿಯಿಂದ ತೀರಾ ಅಗತ್ಯವಾಗುತ್ತವೆ. ಈ ಉದ್ದೇಶದ ಸಾಫಲ್ಯಕ್ಕಾಗಿ, ಗರ್ಭವತಿಯಾದ ಸ್ತ್ರೀಯ ತಲೆಗೂದಲನ್ನು ಸಂಸ್ಕರಿಸಿ (ಬಾಚಿ) ಹೂಗಳಿಂದ ತಲೆಯನ್ನು ಅಲಂಕರಿಸಿ ಅವಳಿಗೆ ಇಷ್ಟವಾದ ತಿಂಡಿ-ತಿನಿಸುಗಳನ್ನು ಕೊಡುತ್ತಾರೆ. ವೀರಶೈವರಲ್ಲಿ ಈ ಸಂಸ್ಕಾರಕ್ಕೆ 'ಹೂ ಮುಡಿಸುವುದು' ಎನ್ನುವ ಹೆಸರೂ ಇದೆ.

ಈ ಕಾರ್ಯವನ್ನು ಸ್ತ್ರೀಯರು ಗರ್ಭಧಾರಣವಾದ 4-6-8ನೆ ತಿಂಗಳಲ್ಲಿ ಮಾಡುತ್ತಾರೆ. ಸೀಮಂತ ಕಾರ್ಯದ ದಿವಸ ಮನೆಯನ್ನು ಸಾರಿಸಿ ರಂಗವಲ್ಲಿಯಿಂದ ಅಲಂಕಾರ ಮಾಡಿ ಮಹೇಶ್ವರರು ಸಂಕಲ್ಪ ಪೂರ್ವಕ ಪುಣ್ಯಾಹ-ನಾಂದೀ ಸಮಾರಾಧನೆ ಮಾಡಿ ದೇವಗೃಹದಲ್ಲಿ ಮಂಗಳಾಸನದ ಮೇಲೆ ಪತಿಯು ತನ್ನ ಪತ್ನಿಯನ್ನು ಬಲಭಾಗದಲ್ಲಿ ಕುಳ್ಳಿರಿಸಿಕೊಂಡು

ಮಾಹೇಶ್ವರರ ಸಮ್ಮುಖದಲ್ಲಿ ದಂಪತಿಗಳು ಕಂಕಣ (ರಕ್ಷಾಬಂಧನ)ವನ್ನು ಪೂಜಿಸುತ್ತಾರೆ. ಅನಂತರ ಮಾಹೇಶ್ವರರು ಕಂಕಣವನ್ನು ದಂಪತಿಗಳ ಮುಂಗೈಗೆ ಕಟ್ಟುತ್ತಾರೆ. ಪತ್ನಿಯು ಪೂರ್ವಾಭಿಮುಖವಾಗಿಯೂ, ಪತಿಯು ಪಶ್ಚಿಮಾಭಿಮುಖವಾಗಿಯೂ ಕುಳಿತು ದರ್ಭೆ ಅತ್ತಿಯ ಕೊನೆಗಳನ್ನು ಕೂಡಿಸಿ ಪತ್ನಿಯ ಹಣೆಯಿಂದ ಬೈತಲೆಯ ಗೆರೆಯ ಅಂತ್ಯದ ವರೆಗೂ ಮಂತ್ರಪೂರ್ವಕ 3-4 ಸಾರಿ ಎಳೆದು ಅವುಗಳನ್ನು ಬೈತಲೆಯ ಸ್ಥಾನದಲ್ಲಿ ಇಟ್ಟು ಗೋಧಿಯ ಕಾಳಿನ ಸರವನ್ನು ಹೆಂಡತಿಯ ಕೊರಳಿಗೆ ಹಾಕುತ್ತಾನೆ. ನೆರೆದ ಸುಮಂಗಲಿಯರು ಆರತಿಯನ್ನು ಮಾಡುತ್ತಾರೆ. ಗುರು ಸನ್ನಿಧಿಯಲ್ಲಿ ದಂಪತಿಗಳು ಕಂಕಣ ವಿಸರ್ಜನೆ ಮಾಡುತ್ತಾರೆ. ಅನಂತರ ಮಾಹೇಶ್ವರರಿಗೆ ಫಲ-ತಾಂಬೂಲ-ದಕ್ಷಿಣೆಕೊಟ್ಟು ಅವರಿಂದ ಆಶೀರ್ವಾದ ಪಡೆಯುತ್ತಾರೆ.

4. ಜಾತಕರ್ಮ ಮತ್ತು ನಾಮಕರಣ (Birth Ceremony and Nameing Cermony)

ಜಾತಕರ್ಮವೆಂದರೆ ಜನನ ಅಥವಾ ಜನ್ಮ ಸಂಸ್ಕಾರ. ಮಗು ಜನಿಸಿದಾಗ ನೆರವೇರಿಸುವ ಕ್ರಿಯಾ ವಿಧಾನವೇ ಜಾತಕರ್ಮ ಸಂಸ್ಕಾರವಾಗಿದೆ. ಜನಿಸಿದ ಮಗುವಿಗೆ ವಿಧಿಪ್ರಕಾರವಾಗಿ ಹೆಸರನ್ನಿಡುವ ಸಂಸ್ಕಾರಕ್ಕೆ ನಾಮಕರಣವೆಂದು ಹೆಸರು. 'ನಾಮಾಖಿಲಸ್ಯ ವ್ಯವಹಾರ ಹೇತುಃ ನಾಮ್ನೇವ ಕೀರ್ತಿಲಭತೇಮನುಷ್ಯಃ' ಎಂದು ಸ್ಮೃತಿಕಾರರ ಅಭಿಪ್ರಾಯದಂತೆ, ವ್ಯಕ್ತಿಯ ಹೆಸರು ಅವನ ಎಲ್ಲ ವ್ಯವಹಾರಕ್ಕೂ ಕಾರಣವಾಗುತ್ತದೆ. ಹೆಸರಿನಿಂದಲೇ ಮನುಷ್ಯ ಕೀರ್ತಿ ಪಡೆಯುತ್ತಾನೆ ಎಂಬುದು ನಮ್ಮ ಪ್ರಾಚೀನರ ಪರಿಕಲ್ಪನೆ. ವೀರಶೈವರಲ್ಲಿ ಜಾತ ಕರ್ಮದ ಅಂಗವಾಗಿ ನಾಮಕರಣ ಸಂಸ್ಕಾರ ಆಚರಿಸುವ ಪದ್ಧತಿ ಇದೆ. ನಾಮಕರಣವನ್ನು ಪ್ರತ್ಯೇಕವಾಗಿ ಆಚರಿಸುವ ಅಗತ್ಯವಿಲ್ಲ. ವೀರಶೈವ ಸ್ತ್ರೀ ಗರ್ಭವತಿಯಾದ 8ನೇ ತಿಂಗಳಲ್ಲಿ, ಗುರುಗಳು ಪಂಚಸೂತ್ರ ಘಟಿತವಾದ ಲಿಂಗವನ್ನು ವಿಧಾನದಂತೆ ಪೂಜಿಸಿ ಲಿಂಗಕ್ಕೆ ಪ್ರಾಣ ಪ್ರತಿಷ್ಠಾಪನೆ ಮಾಡಿ ಆಕೆಗೆ ಲಿಂಗ ಧಾರಣೆ ಮಾಡಿ ಪಾದೋದಕ ಪ್ರಸಾದಗಳನ್ನು ಕರುಣಿಸಿ ಆಶೀರ್ವದಿಸುತ್ತಾರೆ.

ಅನಂತರ ಮಗು ಜನಿಸಿದಾಗ8-10 ದಿನಗಳಲ್ಲಿ ಸೂತಕ ನಿವಾರಣೆಗಾಗಿ ಲಿಂಗ ಧಾರಣೆ ಮಾಡಿಸುವ ಕ್ರಮವಿದೆ. ಅಂದು ಮನೆಯನ್ನು ಗೋಮಯದಿಂದ ಸಾರಣೆ ಮಾಡಿ ತಳಿರು ತೋರಣಗಳಿಂದ ಸಿಂಗರಿಸಿ ಗುರುಗಳನ್ನು ಭಕ್ತಿಪೂರ್ವಕ ಮನೆಗೆ ಬರಮಾಡಿಕೊಂಡು ಪೂಜಾ ಪರಿಕರಗಳನ್ನು ಸಿದ್ಧಪಡಿಸಿ ಮಗು ಹಾಗೂ ಮಗುವಿನ ತಂದೆ ತಾಯಿಗಳು ಮಂಗಳ ಸ್ನಾನವನ್ನು ಮಾಡಿ ಗುರುಗಳ ಸನ್ನಿಧಿಯಲ್ಲಿ ಕುಳಿತುಕೊಳ್ಳುತ್ತಾರೆ. ಗುರುಗಳ ಆದೇಶದಂತೆ ಸಂಕಲ್ಪ ಪೂರ್ವಕ ಸ್ವಸ್ತಿವಾಚನ, ನಾಂದಿ ಸಮಾರಾಧನ ಹಾಗೂ ಗುರುಕಲಶವನ್ನು ಭಕ್ತಿ ಭಾವನೆಯಿಂದ ಪೂಜೆ ಮಾಡುತ್ತಾರೆ. ಗುರುಗಳು ಪಂಚಸೂತ್ರ ಯುಕ್ತವಾದ ಲಿಂಗಕ್ಕೆ ಅಭಿಷೇಕ, ಷೋಢಷೋಪಚಾರ ಪೂಜೆ ಮಾಡಿ ಜಲಾಧಿವಾಸ, ಧಾನ್ಯಾಧಿವಾಸಗಳಿಂದ

ಸಂಸ್ಕರಿಸಿ ಪುನಃ ಪಾದ್ಯಾದಿ ಮಂತ್ರಗಳಿಂದಲೂ ಮತ್ತು ಪಂಚಾಮೃತ ಮಂತ್ರಗಳಿಂದಲೂ, ಪಂಚ ಬ್ರಹ್ಮ ಮಂತ್ರಗಳಿಂದಲೂ ಲಿಂಗಕ್ಕೆ ಅಭಿಷೇಕ ಮಾಡಿ ಲಿಂಗಕ್ಕೆ ಪ್ರಾಣ ಪ್ರತಿಷ್ಠೆ ಮಾಡಿ ಶಿಶುವಿಗೆ ಭಸ್ಮವನ್ನು ಧರಿಸಿ ಲಿಂಗವನ್ನು ರೇಷ್ಮೆ ಅಥವಾ ಕೆಂಪು ವಸ್ತ್ರದಲ್ಲಿ ಕಟ್ಟಿ, ಗುರುಗಳು ಮಂತ್ರಪೂರ್ವಕ ಮಗುವಿನ ಕೊರಳಲ್ಲಿ ಲಿಂಗವನ್ನು ಧರಿಸುತ್ತಾರೆ. ಅನಂತರ ಮಗುವಿನ ಬಲಗಿವಿಯಲ್ಲಿ ಪಂಚಾಕ್ಷರ(ನಮಃಶಿವಾಯ)ಮಂತ್ರವನ್ನು ಉಪದೇಶ ಮಾಡುತ್ತಾರೆ. ಮತ್ತು ಒಂದು ಹನಿ ಗುರುಪಾದೋದಕವನ್ನು ಮಗುವಿನ ಬಾಯಲ್ಲಿ ಹಾಕುತ್ತಾರೆ. ಆಮೇಲೆ ಮನೆಯವರೆಲ್ಲ ಗುರುಗಳ ಪಾದೋದಕ ಪ್ರಸಾದ ಪಡೆದುಕೊಳ್ಳುತ್ತಾರೆ. ಗುರುಗಳು ಅದೇ ಸಮಯದಲ್ಲಿ ಅಕ್ಕಿ ತುಂಬಿರುವ ಒಂದು ಕಂಚಿನ ಪಾತ್ರೆಯಲ್ಲಿ ಚಿನ್ನದ ಉಂಗುರದಿಂದ ಮಗುವಿಗೆ ಇಡಬೇಕಾದ (ಜನ್ಮ ನಕ್ಷತ್ರವನ್ನು ಅನುಸರಿಸಿ) ಹೆಸರನ್ನು ಬರೆದು ಎಲ್ಲರಿಗೂ ತಿಳಿಯಪಡಿಸುತ್ತಾರೆ. ಇಷ್ಟದೇವರ ಹೆಸರನ್ನಾಗಲೀ, ಮನೆಯ ಹಿರಿಯರ ಹೆಸರನ್ನಾಗಲೀ, ಆಚಾರ್ಯರ, ಶರಣ - ಶರಣೆಯರ ಹಾಗೂ ಶಿವನ ಹೆಸರನ್ನು ಇಡುವ ಪದ್ಧತಿ ಇದೆ. ಹೀಗೆ ಹೆಸರನ್ನಿಡುವುದು ಶುಭ ಸಂಕೇತವೆನ್ನುವ ಭಾವನೆ ವೀರಶೈವರಲ್ಲಿದೆ. ಗುರುಗಳು ತಂದೆ ತಾಯಿಗಳು ಇಷ್ಟಪಡುವ ಹೆಸರನ್ನು ಮತ್ತೆ ಮತ್ತೆ ಅಲ್ಲಿ ನೆರೆದವರಿಗೆ ತಿಳಿಯಪಡಿಸಿ ಆ ಹೆಸರನ್ನೇ ಮಗುವಿಗೆ ಬಲಗಿವಿಯಲ್ಲಿ ಉಚ್ಚ ಸ್ವರದಿಂದ ಹೇಳುತ್ತಾರೆ. ಐದು ಸಲ ಹೇಳಿದ ನಂತರ ಮಗುವಿಗೂ, ತಂದೆ ತಾಯಿಗಳಿಗೂ ಆಶೀರ್ವಾದ ಮಾಡುತ್ತಾರೆ. ಮಗುವನ್ನು ಅಲಂಕರಿಸಿದ ತೊಟ್ಟಿಲಿಗೆ ಹಾಕಿ ಗುರುಗಳು ಇಟ್ಟ ಹೆಸರನ್ನು ಸುಮಂಗಲಿ ಯರು ಐದು ಸಲ ಪುನರುಚ್ಚರಿಸುತ್ತಾರೆ. ಆನಂತರ ಆರತಿ ಬೆಳಗಿ ಮಗುವಿಗೆ ಶುಭ ಹಾರೈಸುತ್ತಾರೆ.

5. ನಿಷ್ಕ್ರಮಣ (First outing)

ಜನಿಸಿದ ಮಗುವನ್ನು 4ನೇ ತಿಂಗಳ ನಂತರ ಪ್ರಥಮ ಬಾರಿಗೆ ಗುರುಗಳ ಮಠಕ್ಕೋ ಅಥವಾ ದೇವಾಲಯಕ್ಕೋ ಕರೆದುಕೊಂಡು ಹೋಗುವ ಸಂಸ್ಕಾರಕ್ಕೆ ನಿಷ್ಕ್ರಮಣ ಸಂಸ್ಕಾರವೆಂದು ಕರೆಯುತ್ತಾರೆ. ಆರಂಭದಲ್ಲಿ ಮಗು ಮನೆಯ ಒಳಗೆ ಮಾತ್ರ ಅಂಬೆಗಾಲಿಕ್ಕುತ್ತದೆ. ಬಾಹ್ಯ ಪ್ರಪಂಚಕ್ಕೆ ಕಾಲಿಡುವ ಸಂಭ್ರಮ ಮಗುವಿನ ಬೆಳವಣಿಗೆಯಲ್ಲಿ ತಂದೆ ತಾಯಿ ಬಂಧುವರ್ಗದವರಿಗೆಲ್ಲ ಸಂತೋಷದ, ಸಂದರ್ಭ.

ಮಗುವಿಗೆ ಬಾಹ್ಯ ಪ್ರಪಂಚದ ಪ್ರಥಮ ದರ್ಶನ, ಸೂರ್ಯ-ಚಂದ್ರರ ಅವಲೋಕನ ಇವುಗಳಿಂದ ದುಷ್ಟಶಕ್ತಿಗಳು ಪರಿಣಾಮ ಬೀರದಿರಲೆಂದು ಮನೆಯಲ್ಲಿ ಗುರು ದೇವತಾ ಪೂಜೆ ಪುನಸ್ಕಾರಗಳೊಂದಿಗೆ ಶಿಶುವನ್ನು ಮನೆಯಿಂದ ಹೊರಗೆ ತರುತ್ತಾರೆ. ಸೃಷ್ಟಿಯಲ್ಲಿ ಜನಿಸಿದ ಮಾನವ ಬದುಕಿನ ಪರ್ಯಂತರವೂ ಪರಿಸರದೊಂದಿಗೆ ನೇರ ಸಂಪರ್ಕ ವನ್ನಿಟ್ಟುಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಮಗುವಿಗೆ ಪ್ರಥಮ ನಿಸರ್ಗ ದರ್ಶನ ಮಾಡಿಸುವ ಸಂಸ್ಕಾರವಿದು.

ಮಗುವಿಗೆ 4ನೇ ತಿಂಗಳು ನಡೆಯುತ್ತಿರುವಾಗ ಗೊತ್ತು ಮಾಡಿದ ಶುಭ ದಿನದಲ್ಲಿ ಮಗುವಿನ ತಂದೆ ತಾಯಿಗಳು ಮಂಗಳ ಸ್ನಾನ ಮಾಡಿ, ಮಗುವಿಗೂ ಅಭ್ಯಂಗನ ಮಾಡಿಸಿ ನೂತನ ಬಟ್ಟೆಗಳನ್ನು ಧರಿಸಿ ಬ್ರಾಹ್ಮೀ ಮುಹೂರ್ತದಲ್ಲಿ (ಪ್ರಾತಃಕಾಲದಲ್ಲಿ) ಶಿವಪೂಜಾದಿ ನಿತ್ಯ ಕಾರ್ಯಕ್ರಮಗಳನ್ನು ನೆರವೇರಿಸಿ ಗುರು ಸಮ್ಮುಖದಲ್ಲಿ ಶುಭಾಸನದಲ್ಲಿ ಕುಳಿತು, ಸಂಕಲ್ಪ ಪೂರ್ವಕ ಗುರುಗಳ ಪಾದಪೂಜೆಯನ್ನು ನೆರವೇರಿಸುತ್ತಾರೆ. ಗುರುಕರುಣ ಪ್ರಸಾದವನ್ನು ಪಡೆದು, ಮಗುವಿಗೆ ನೂತನ ವಸ್ತ್ರಾಭರಣಗಳಿಂದ ಶೃಂಗರಿಸುತ್ತಾರೆ. ಆ ಮಗುವನ್ನು ಸೋದರಮಾವ ಎತ್ತಿಕೊಳ್ಳುತ್ತಾನೆ ಇಲ್ಲವೆ ವಾಹನದಮೇಲೆ ಕೂರಿಸಿಕೊಂಡು ಬಂಧುವರ್ಗದವರೊಡನೆ ಮನೆಯಿಂದ ಹೊರಗೆ ಹೋಗಿ ಮಗುವಿಗೆ ಸೂರ್ಯನ ಅವಲೋಕನ ಮಾಡಿಸುತ್ತಾರೆ. ಶಿವಯೋಗಿಗಳ ದರ್ಶನ, ಮಠಕ್ಕೆ ಹೋಗುವುದು ಇಲ್ಲವೇ ದೇವಾಲಯಕ್ಕೆ ಹೋಗುವ ಪದ್ಧತಿ ಉಂಟು. ಗುರುವಿಗಾಗಲಿ, ದೇವರಿಗಾಗಲಿ ಫಲ ಪುಷ್ಪ ದಕ್ಷಿಣೆ ನೀಡಿ ಆಶೀರ್ವಾದ ಪಡೆಯುವುದು ಅನಂತರ ಮಗುವನ್ನು ಸೋದರ ಮಾವನ ಮನೆಗೆ ಇಲ್ಲವೆ ಸಮೀಪದ ಬಂಧುಗಳ ಮನೆಗೆ ಕರೆದುಕೊಂಡು ಹೋಗಿ ಮಗುವಿಗೆ ಆರತಿ ಮಾಡಿಸುತ್ತಾರೆ. ಅದೇ ದಿನ ರಾತ್ರಿ ಮಗುವಿಗೆ ಚಂದ್ರದರ್ಶನವನ್ನು ಮಾಡಿಸುತ್ತಾರೆ.

6. ಅನ್ನಪ್ರಾಶನ (First Feeding)

ತಾಯಿ ಹಾಲನ್ನು ಬಿಟ್ಟು ಗಟ್ಟಿಯಾದ ಆಹಾರವನ್ನು ಪ್ರಥಮ ಬಾರಿಗೆ ಮಗುವಿಗೆ ಉಣಿಸುವ ವಿಧಿಯೇ ಅನ್ನಪ್ರಾಶನ. ಆಯುರ್ವೇದ ಸಂಹಿತೆಯ ಪ್ರಕಾರ ಮಗುವಿನ ದೇಹ ಸದೃಢವಾಗಿ ಬೆಳೆಯಲು ಚೇತನ ಶಕ್ತಿಯಾದ ಆಹಾರ ಅತ್ಯವಶ್ಯಕವಾಗಿದೆ. ಮಗುವಿಗೆ ಆರು ತಿಂಗಳು ನಂತರ ಗುರು ದೇವತಾ ಪೂಜೆಯೊಂದಿಗೆ ವಿಧಿ-ವಿಧಾನದೊಂದಿಗೆ ಪ್ರಥಮವಾಗಿ ಅನ್ನವನ್ನು ಊಟ ಮಾಡಿಸುವುದೇ ಅನ್ನಪ್ರಾಶನ ಸಂಸ್ಕಾರವಾಗಿದೆ. ಈ ಸಂಸ್ಕಾರ ನಂತರ ಮಗುವಿಗೆ ಸಮಯಕ್ಕೆ ಸರಿಯಾಗಿ ಆಹಾರವನ್ನು ಕೊಡಲಾಗುವುದು. 'ಅನ್ನಂ ಬ್ರಹ್ಮೇತಿ ವ್ಯಜಾನಾತ್' ಎನ್ನುವ ಉಕ್ತಿಯಂತೆ 'ಅನ್ನವೇ ದೇವರು' ಅನ್ನವೇ ಪ್ರಸಾದ ಎನ್ನುವ ಪವಿತ್ರ ಕಲ್ಪನೆ ಇರುವುದರಿಂದ ಮಗುವಿಗೆ ಅನ್ನ ಪ್ರಾಶನ ಮಾಡಿಸಬೇಕು ಎನ್ನುವ ಸದಾಶಯದಿಂದ ಈ ಸಂಸ್ಕಾರವನ್ನು ನೆರವೇರಿಸುತ್ತಾರೆ.

ಮಗುವು ಜನಿಸಿದ ಆರನೆಯ ತಿಂಗಳಲ್ಲಿ, ಶುಭ ದಿನದಲ್ಲಿ ದಂಪತಿಗಳ ಮಾಹೇಶ್ವರರನ್ನು ಮನೆಗೆ ಬರಮಾಡಿಕೊಂಡು, ಮಂಗಳಸ್ನಾನ ಮಾಡಿ, ಲಿಂಗಾರ್ಚನೆಯನ್ನು ಸಾಂಗಗೊಳಿಸಿ, ಗುರುಗಳ ಸಮ್ಮುಖದಲ್ಲಿ ಮಗುವಿಗೆ ಸಂಕಲ್ಪಪೂರ್ವಕ ರಕ್ಷಾಬಂಧನ ಮಾಡಿ ತಾಯಿಯ ತೊಡೆಯ ಮೇಲೆ ಮಗುವನ್ನು ಪೂರ್ವಾಭಿಮುಖವಾಗಿ ಕೂಡ್ರಿಸಿ, ಶಿವ ಸ್ಮರಣಪೂರ್ವಕ, ಗುರುಗಳಿಂದ ಮಗುವಿಗೆ ಅನ್ನ-ತುಪ್ಪವನ್ನು ಪ್ರಾಶನ ಮಾಡಿಸುತ್ತಾರೆ.

ಅನಂತರ ಮಾಹೇಶ್ವರರಿಗೆ ಫಲ ತಾಂಬೂಲ ದಕ್ಷಿಣೆ ನೀಡಿ ಅವರಿಂದ ಆಶೀರ್ವಾದ ಪಡೆಯುತ್ತಾರೆ.

7. ಚೌಲ ಕಾರ್ಯ ವಿಧಿ (ಜಾವುಳ) (Tonsure of the Hair)

ಚೌಲಕರ್ಮಕ್ಕೆ 'ಚೂಡಾಕರ್ಮ'ವೆಂಬ ಇನ್ನೊಂದು ಹೆಸರಿದೆ. 'ಚೂಡ' ಎಂದರೆ ಸಂಸ್ಕೃತದಲ್ಲಿ ಜಡೆ ಅಥವಾ ಕೂದಲು ಎನ್ನುವ ಅರ್ಥವಿದೆ. ಚರಕ ಸಂಹಿತೆಯ ಪ್ರಕಾರ ಮಗುವಿನ ಆರೋಗ್ಯ ದೃಷ್ಟಿಯಿಂದ ಸಕಾಲಕ್ಕೆ ಕೂದಲು ಮತ್ತು ಉಗುರುಗಳನ್ನು ತೆಗೆದು ಸ್ವಚ್ಛವಾಗಿಡಬೇಕು. 'ಪಾಪೋಪಶಮನಂ ಕೇಶ ನಖರೋಮಾಪಮಾರ್ಜನಮ್' (ಚರಕ ಸಂಹಿತಾ 14-72) ಎನ್ನುವ ಮಾತು ಕೂದಲು ಉಗುರುಗಳನ್ನು ತೆಗೆಯುವುದು ಮಗುವಿನ ದೇಹದ ಮಾಲಿನ್ಯವನ್ನು ಕಳೆದಂತಾಗುತ್ತದೆ ಎನ್ನುವ ಅಭಿಪ್ರಾಯವನ್ನೇ ತಿಳಿಸುತ್ತದೆ. ಗುರು ಹಿರಿಯರೆಲ್ಲ ಕೂಡಿಕೊಂಡು ಮಗುವಿನ ಕೂದಲು ತೆಗೆದು ತಲೆಯ ನಡುವೆ ಇಲ್ಲವೆ ಮುಂದಲೆಯಲ್ಲಿ ಶಿಖೆ ಅಥವಾ ಜುಟ್ಟು ಬಿಡುವುದು ಈ ಸಂಸ್ಕಾರದ ವೈಶಿಷ್ಟ್ಯ.

ಮಗುವು ಜನಿಸಿ 1-3-5-7ನೇ ವರ್ಷದಲ್ಲಿ ಶುಭ ಮುಹೂರ್ತದಲ್ಲಿ ಮಾಹೇಶ್ವರರನ್ನು ಮನೆಗೆ ಕರೆತಂದು ಮಗುವಿನ ತಂದೆ ತಾಯಿಗಳು ಮಂಗಳ ಸ್ನಾನ ಮಾಡಿ ಇಷ್ಟ ಲಿಂಗಾರ್ಚನೆಯನ್ನು ಸಾಂಗಗೊಳಿಸಿ ಗುರುಗಳ ಸಮ್ಮುಖದಲ್ಲಿ ಶುಭಾಸನದಲ್ಲಿ ಕುಳಿತುಕೊಂಡು ಸಂಕಲ್ಪ ಪೂರ್ವಕ ಪುಣ್ಯಾಹ, ನಾಂದಿ ಸಮಾರಾಧನ ಕಾರ್ಯಗಳನ್ನು ಆಚರಿಸುತ್ತಾರೆ. ಮಾಹೇಶ್ವರರು ಮಂತ್ರಪೂರ್ವಕ ಮಗುವಿನ ಬಲಮುಂಗೈಗೆ ರಕ್ಷಾಬಂಧನ (ಕಂಕಣ) ಕಟ್ಟುತ್ತಾರೆ. ಒಂದು ವೀಳ್ಯದೆಲೆಯನ್ನು ಕತ್ತರಿಯಾಕೃತಿ ಮಾಡಿಕೊಂಡು ಮಗುವಿನ ತಲೆಯ ಕೂದಲುಗಳಿಗೆ ಮುಟ್ಟಿಸುತ್ತಾರೆ. ಮಗುವನ್ನು ಪೂರ್ವಾಭಿಮುಖವಾಗಿ ಕೂಡ್ರಿಸಿ ಪೂರ್ವ ಪಶ್ಚಿಮ ಉತ್ತರ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಗೋಮಯದ ನಾಲ್ಕು ಉಂಡೆಗಳನ್ನಿಡುತ್ತಾರೆ. ಮಂತ್ರ ಪೂರ್ವಕ ಶುದ್ಧೋದಕವನ್ನು ಮಗುವಿನ ತಲೆಗೆ ಹಾಕಿ ಸವರುತ್ತಾರೆ. ತರುವಾಯ ಮಗುವಿನ ಮುಂದೆ ಮೂರು ದರ್ಭೆಗಳನ್ನಿಟ್ಟು ಮಂತ್ರವನ್ನು ಪಠಿಸುತ್ತಾ ತಲೆಯ ಮುಂದಿನ ಸ್ವಲ್ಪ ಕೂದಲನ್ನು ಕತ್ತರಿಸಿ ನೀರಿಗೆ ಮುಟ್ಟಿಸಿ ಆ ಕೂದಲನ್ನು ಪೂರ್ವದಿಕ್ಕಿನ ಆಕಳ ಸಗಣಿ ಉಂಡೆಯಲ್ಲಿಡುತ್ತಾರೆ. ಇದೇ ರೀತಿಯಾಗಿ ದಕ್ಷಿಣ-ಉತ್ತರ-ಪಶ್ಚಿಮ ಭಾಗದ ಮಗುವಿನ ತಲೆ ಕೂದಲನ್ನು ಕತ್ತರಿಸಿ ಆಯಾ ದಿಕ್ಕಿನಲ್ಲಿರುವ ಸಗಣಿ ಉಂಡೆಯಲ್ಲಿ ಇಡುತ್ತಾರೆ. ಆನಂತರ ವೀರಶೈವ ಕ್ಷೌರಿಕನಿಂದ ಮಗುವಿನ ತಲೆಯ ಎಲ್ಲ ಕೂದಲುಗಳನ್ನು ತೆಗೆಯಿಸಿ ಒಂದು ಕಡೆ ತೆಗೆದಿಡುತ್ತಾರೆ. ಮಗುವಿಗೆ ಅಭ್ಯಂಗನ ಸ್ನಾನ ಮಾಡಿಸಿ ಗುರುಪಾದೋದಕ ಕರುಣ ಪ್ರಸಾದ ಮಗುವಿಗೆ ಕೊಡಿಸಿ ನೂತನ ವಸ್ತ್ರವನ್ನು ಧರಿಸುತ್ತಾರೆ. ಆಮೇಲೆ ಮಗುವಿಗೆ ಸುಮಂಗಲಿ ಯರು ಆರತಿ ಮಾಡುತ್ತಾರೆ. ಅನಂತರ ಮಹೇಶ್ವರರ ಸನ್ನಿಧಿಯಲ್ಲಿ ಮಗುವಿನ ಕಂಕಣವನ್ನು ವಿಸರ್ಜಿಸುತ್ತಾರೆ. ಈ ಕಾರ್ಯವನ್ನು ಕೆಲವರು ತಮ್ಮ ವಂಶ

ಗುರುಗಳಿರುವ ಮಠ ಅಥವಾ ಪುಣ್ಯ ಕ್ಷೇತ್ರಕ್ಕೆ ಹೋಗಿ ಸಂಭ್ರಮದಿಂದ ಮಾಡುತ್ತಾರೆ. ಕೊನೆಗೆ ಮಗುವಿನ ಕೂದಲು ಗಳನ್ನು ಅತ್ತಿಯ ಮರದಡಿಯಲ್ಲಾಗಲೀ ಅಥವಾ ಪವಿತ್ರ ನದಿಯಲ್ಲಾಗಲಿ ಬಿಡುವ ಸಂಪ್ರದಾಯವಿದೆ.

8. ಕರ್ಣಭೇದ (Boring the Ears)

ಮಗುವಿಗೆ ಕಿವಿ ಚುಚ್ಚಿಸುವ ಸಂಸ್ಕಾರವೇ ಕರ್ಣಭೇದ. ಮಗುವಿನ ನಾಲ್ಕನೆಯ ವಯಸ್ಸಿನ ಒಳಗಾಗಿ ಕರ್ಣಭೇದ ಸಂಸ್ಕಾರವನ್ನು ಆಚರಿಸಲಾಗುತ್ತದೆ. ಕಿವಿಯ ಕೆಳಭಾಗವನ್ನು ತೂತುಮಾಡಿ ಆಭರಣ ಅಥವಾ ಓಲೆಗಳನ್ನು ಮಗುವಿಗೇಡುತ್ತಾರೆ. 'ರಕ್ಷಾಭೂಷಣ ನಿಮಿತ್ತಂ ಬಾಲಸ್ಯ ಕರ್ಣೌ ಛಿದ್ಯೇತ್' ಎಂದು ಶುಶ್ರುತ ಸಂಹಿತೆಯ ಅಭಿಪ್ರಾಯ. ಮಗುವಿನ ಆರೋಗ್ಯ ಹಾಗೂ ಅಲಂಕಾರದ ದೃಷ್ಟಿಯಿಂದ ಈ ಸಂಸ್ಕಾರ ಉಪಯುಕ್ತವಾಗಿದೆ. ಶುಶ್ರುತ ಸಂಹಿತೆಯ ಚಿಕಿತ್ಸೆ ಸ್ಥಾನ ಅಧ್ಯಾಯ 9ರಲ್ಲಿ, ಕಿವಿಗಳನ್ನು ಚುಚ್ಚುವುದರಿಂದ ಮಗುವಿಗೆ ಅಂಡವಾಯು ಹಾಗೂ ಇನ್ನಿತರ ರೋಗ ರುಜಿನಗಳು ಬರುವುದಿಲ್ಲವೆಂದು ವಿವರಿಸಲಾಗಿದೆ. ಹೆಣ್ಣು ಮಕ್ಕಳು ಅಲಂಕಾರ ಮಾಡಿಕೊಳ್ಳಲು ಈ ಸಂಸ್ಕಾರ ಸಹಾಯಕವಾಗುತ್ತದೆ. ಗೊತ್ತಾದ ಶುಭ ದಿನದಲ್ಲಿ ಮಗುವಿಗೆ ತಂದೆ ತಾಯಿಗಳು ಮಂಗಳ ಸ್ನಾನ ಮಾಡಿ ಇಷ್ಟಲಿಂಗಾರ್ಚನೆಯ ವಿಧಿಯನ್ನು ಸಾಂಗಗೊಳಿಸಿ ಮಗುವಿಗೆ ಮಂಗಳ ಸ್ನಾನ ಮಾಡಿಸಿ ಗುರುಗಳ ಪಾದಪೂಜೆ, ಪ್ರಸಾದವನ್ನು ಪಡೆದು ಮಾಹೇಶ್ವರರ ಸಮ್ಮುಖದಲ್ಲಿ ಈ ಸಂಸ್ಕಾರವನ್ನು ನೆರವೇರಿಸುತ್ತಾರೆ. ಅನಂತರ ಮಾಹೇಶ್ವರರಿಗೆ ಫಲ ತಾಂಬೂಲ, ದಕ್ಷಿಣೆ ಕೊಟ್ಟು ಅವರಿಂದ ಆಶೀರ್ವಾದ ಪಡೆಯುತ್ತಾರೆ.

9. ವಿದ್ಯಾರಂಭ (learning of Alphabets)

ಧರ್ಮಶಾಸ್ತ್ರಕಾರರು ಈ ಸಂಸ್ಕಾರವನ್ನು 'ವಿದ್ಯಾರಂಭ', 'ಅಕ್ಷರಾರಂಭ', 'ಅಕ್ಷರ ಸ್ವೀಕರಣ', 'ಅಕ್ಷರ ಲೇಖನ' ಇತ್ಯಾದಿ ಹೆಸರುಗಳಿಂದ ಕರೆದಿದ್ದಾರೆ. ಮಗುವಿಗೆ ಅಕ್ಷರಾಭ್ಯಾಸವನ್ನು ಆರಂಭ ಮಾಡುವ ಸಂಸ್ಕಾರವೇ ವಿದ್ಯಾರಂಭ. ಬಾಲಕನು ಜ್ಞಾನಾರ್ಜನೆಯನ್ನು ಮಾಡಿಕೊಂಡು ಸುಶಿಕ್ಷಿತನಾಗಿ ಸಮಾಜದ ಏಳ್ಗೆಗಾಗಿ ಪರಿಶ್ರಮಿಸಲಿ ಎಂಬುದು ಈ ಸಂಸ್ಕಾರದ ಉದ್ದೇಶ. ಬಾಲಕ ಅಥವಾ ಬಾಲೆಗೆ ಐದನೆಯ ವರ್ಷದಲ್ಲಿ ಉತ್ತರಾಯಣದ ಶುಭದಿನ ಹಾಗೂ ಮುಹೂರ್ತದಲ್ಲಿ ಅಭ್ಯಂಗನ ಮಾಡಿಸಿ ನೂತನ ಉಡುಪುಗಳನ್ನು ಧರಿಸುತ್ತಾರೆ. ಆರಂಭದಲ್ಲಿ ಗುರುಗಳ ಪಾದಪೂಜೆಯ ಪ್ರಸಾದವನ್ನು ಬಾಲಕನಿಗೆ ಕೊಡಿಸುತ್ತಾರೆ. ಬಾಲಕನು ಗುರುಗಳ ಆಶೀರ್ವಾದವನ್ನು ಪಡೆಯುತ್ತಾನೆ. ಅನಂತರ ಗುರುಗಳ ಸಮ್ಮುಖದಲ್ಲಿ ಕುಲದೇವತಾ ಹಾಗೂ ವಿದ್ಯಾಧಿದೇವತಾ ಪೂಜೆಯನ್ನು ಬಾಲಕನಿಂದ ಮಾಡಿಸಿ ಗುರುಗಳು ಫಲಕ (ಸ್ಲೇಟ್)ದ ಮೇಲೆ 'ಓಂ' ಎಂಬ ಪ್ರಣವಾಕ್ಷರವನ್ನು ಬರೆದು ಮತ್ತೆ ಬಾಲಕನಿಂದ ಬರೆಯಿಸಿ ಅವನಿಂದ ಓದಿಸುತ್ತಾರೆ. ಬಾಲಕನು ಗುರುಗಳಿಗೆ

ಫಲ ತಾಂಬೂಲ ದಕ್ಷಿಣೆ ಕೊಟ್ಟು, ಅವರಿಂದ ಆಶೀರ್ವಾದ ಪಡೆಯುತ್ತಾನೆ. ಗುರುಗಳು ಈ ಸಂದರ್ಭದಲ್ಲಿ ವಿದ್ಯಾಭ್ಯಾಸದ ಮಹತ್ವವನ್ನು ತಿಳಿಸಿ, ಬಾಲಕನ ನಡೆ, ನುಡಿ, ಆಚಾರ, ವಿಚಾರಗಳ ಕಡೆಗೆ ಸೂಕ್ತ ಗಮನ ಕೊಡಬೇಕೆಂದು ಬಾಲಕನ ತಂದೆ ತಾಯಿಗಳಿಗೆ ಸಲಹೆ ನೀಡುತ್ತಾರೆ.

10. ದೀಕ್ಷಾ ಸಂಸ್ಕಾರ : (Initiation)

ವೀರಶೈವರಲ್ಲಿ ದೀಕ್ಷೆಗೆ ಹೆಚ್ಚಿನ ಮಹತ್ವವಿರುತ್ತದೆ. ಎಂಟನೆಯ ವರ್ಷದಲ್ಲಿ ಬಾಲಕನಿಗೆ ಶಿವಜ್ಞಾನದ ಪ್ರಾಪ್ತಿಗಾಗಿ, ಶಿವಪೂಜೆಗೆ (ಇಷ್ಟಲಿಂಗ) ಅರ್ಹತೆ ಉಂಟಾಗಲು ಶಿವದೀಕ್ಷೆ ಸಂಸ್ಕಾರ ವಿಹಿತವಾಗಿದೆ. ಎಲ್ಲ ಶೈವ ಪಂಥಗಳಲ್ಲಿಯೂ ದೀಕ್ಷೆಗೆ ಮಹತ್ವವಿದೆ. ಶೈವ ಪರಂಪರೆಗೆ ಸೇರಿದ ವೀರಶೈವವೂ ದೀಕ್ಷಾವಿಧಾನಕ್ಕೆ ಆದ್ಯತೆ ನೀಡಿದೆ. ವೈದಿಕ ಧರ್ಮದ ಉಪನಯನದಷ್ಟೇ ಇದು ಮಹತ್ವದ ಸಂಸ್ಕಾರವಾಗಿದೆ. 'ಧೀಯತೆ ಜ್ಞಾನ ಸಂಬಂಧಿ ಕ್ಷೀಯತೇಚ ಮಲತ್ರಯಂ' ಎನ್ನುವ ಸಿದ್ಧಾಂತ ಶಿಖಾಮಣಿಯ ವಾಕ್ಯದಂತೆ ಮಲತ್ರಯ ನಿವಾರಣೆಗಾಗಿ, ಶಿವಜ್ಞಾನ ಪ್ರಾಪ್ತಿಗಾಗಿ ಈ ಸಂಸ್ಕಾರವಿದೆ. ಒಂದು ರೀತಿಯಿಂದ ಇದು ಪುನರ್ಜನ್ಮ. ದೀಕ್ಷೆಯಿಂದಲೇ ವ್ಯಕ್ತಿ ತನ್ನ ಭವಿತನವನ್ನು ಕಳೆದುಕೊಂಡು ಭಕ್ತನಾಗುತ್ತಾನೆ. ಮಾಂಸ ಪಿಂಡ ಮಂತ್ರಪಿಂಡವಾಗುತ್ತದೆ. ಅಂಗನು (ಸಾಧಕನು) ಲಿಂಗದೇವನ ಯಾತ್ರೆಗೆ ಸಾಗುವ ಪವಿತ್ರ ಸಾಧನ. ದೀಕ್ಷೆಯಿಂದಲೇ ವೀರಶೈವನಾಗುತ್ತಾನೆ. ದೀಕ್ಷೆಗಳಲ್ಲಿ ಮೂರು ವಿಧ. ವೇಧಾ, ಮನು, ಕ್ರಿಯಾ ಎಂದು. ಗುರುವು ಶಿಷ್ಯನ ಶಿಖಾ ಚಕ್ರದಲ್ಲಿರುವ ಚಿತ್ಕಳೆಯನ್ನು ತನ್ನ ಹಸ್ತಕ್ಕೆ ಆಕರ್ಷಿಸಿ ಆ ಹಸ್ತವನ್ನು ತನ್ನ ಶಿಷ್ಯನ ಮಸ್ತಕದ ಮೇಲೆ ಇಟ್ಟು ಅವನ ಕಾರಣ ತನುವಿನಲ್ಲಿ ಭಾವಲಿಂಗ ಸ್ಥಾಪಿಸುವುದು 'ವೇಧಾ' ದೀಕ್ಷೆ. ಮಂತ್ರೋಪದೇಶದಿಂದ ಸೂಕ್ಷ್ಮ ದೇಹದಲ್ಲಿ ಪ್ರಾಣಲಿಂಗವನ್ನು ಸ್ಥಾಪಿಸುವುದು 'ಮನು' ದೀಕ್ಷೆ. ಸ್ಥೂಲ ದೇಹದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸುವುದು 'ಕ್ರಿಯಾ'ದೀಕ್ಷೆ. ಈ ದೀಕ್ಷೆಯಿಂದ ಆತ್ಮನಿಗೆ ಸ್ವಾಭಾವಿಕವಾಗಿ ಅಂಟಿಬಂದಿರುವ ಆಣವ -ಕಾರ್ಮಿಕ, ಮಾಯಾ ಎಂಬ ಮಲಗಳು ನಾಶವಾಗುತ್ತವೆ. ಆತ್ಮನು ಶುದ್ಧಾತ್ಮನಾಗುತ್ತಾನೆ. ದೀಕ್ಷಾ ಸಂಸ್ಕಾರ ವೀರಶೈವನಿಗೆ ಆವಶ್ಯವಾಗಿದೆ . 'ಯಾವಜ್ಜೀವಂ ಸಮರ್ಚಯ' ಎಂದು ಗುರುವಿನ ಆಜ್ಞೆ. ಆದ್ದರಿಂದ ಶಿಷ್ಯನಿಗೆ ಲಿಂಗಪೂಜಾ ವ್ರತವು ಮಹಾ ವ್ರತವೆನಿಸುತ್ತದೆ. ದೀಕ್ಷೆ ಕ್ರಿಯಾ ಹಾಗೂ ಜ್ಞಾನರೂಪವಾಗಿದೆ. ಲಿಂಗ ಹಾಗೂ ಅಂಗ ಸಂಸ್ಕಾರಗಳು, ಕ್ರಿಯಾ ಪ್ರಧಾನವಾಗಿಯೂ, ಮಂತ್ರೋಪದೇಶ ಜ್ಞಾನ ಪ್ರಧಾನವಾಗಿಯೂ ಇರುತ್ತವೆ. ಪಟ್ಟಾಧಿಕಾರಿ ಗುರುಗಳು ಬಾಲಕನ (ವಟು) ಕಿವಿಯಲ್ಲಿ ಪಂಚಾಕ್ಷರ ಮಂತ್ರೋಪದೇಶ ಮಾಡಿ ಇಷ್ಟಲಿಂಗವನ್ನು ಕರುಣಿಸುತ್ತಾರೆ. ಇಷ್ಟಲಿಂಗ ಆತ್ಮದ ಕುರುಹು.

ವೀರಶೈವರಲ್ಲಿ ದೀಕ್ಷಾ ಸಂಸ್ಕಾರವು ಹೆಣ್ಣುಮಕ್ಕಳಿಗೂ, ಗಂಡು ಮಕ್ಕಳಿಗೂ ಸಮಾನವಾಗಿರುತ್ತದೆ. ಆದ್ದರಿಂದ ಧಾರ್ಮಿಕ ಕ್ರಿಯೆಗಳಲ್ಲಿ ಸ್ತ್ರೀಪುರಷರು

ಸಮಭಾಗಿಗಳಾಗುತ್ತಾರೆ. ವೀರಶೈವ ಧರ್ಮಾಚಾರ್ಯರ ಗುರುಸಾಕ್ಷಿಯಾಗಿ ಪಂಚ ಕಲಶ ಸ್ಥಾಪನೆಯೊಂದಿಗೆ ಈ ಸಂಸ್ಕಾರ ನಡೆಯುತ್ತದೆ. ಶಿವಾಗಮಗಳಲ್ಲಿ ಕಲಶ ಸ್ಥಾಪನೆ ಮತ್ತು ಕಲಶ ಪೂಜೆಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಶೈವರಲ್ಲಿ ಇದು ಪ್ರಾಚೀನ ಪದ್ಧತಿ ಎಂದು ತೋರುತ್ತದೆ. ವೈದಿಕ ಧರ್ಮದ 'ಉಪನಯನ'ದ ಸಂಸ್ಕಾರದಂತೆ ಅದು. ಆದರೆ ಅದಕ್ಕೆ ಭಿನ್ನವಾದ ಎಲ್ಲ ವಿಧಿ ವಿಧಾನಗಳೂ ಆಗಮೋಕ್ತವಾಗಿ ಇಲ್ಲಿ ಜರುಗುತ್ತವೆ. ಅಂದರೆ ಮಂಟಪದೇವತಾ ಪ್ರತಿಷ್ಠೆ, ಶಿವಲಿಂಗ ಸಂಸ್ಕಾರ, ಷಡಧ್ವಶೋಧನ, ಪ್ರಮಥಸ್ತುತಿ:, ಪಂಚಕಲಶ ಸ್ಥಾಪನ, ದೀಕ್ಷಾರಂಭ, ಜೀವಾತ್ಮ ಪ್ರತಿಷ್ಠಾಪನ, ಅಂಗ ಸಂಸ್ಕಾರ :, ಆಯತ್ತದೀಕ್ಷಾ ಸ್ವಾಯತ್ತ ದೀಕ್ಷಾ, ಆಚಾರ್ಯೋಪದೇಶ, ಶಿವದೀಕ್ಷೋಪದೇಶ ಇತ್ಯಾದಿ ದೀಕ್ಷಾಂಗವಾಗಿ ಅನೇಕ ಧಾರ್ಮಿಕ ಕ್ರಿಯೆಗಳು ನಡೆಯುತ್ತವೆ.

ಈ ಸಂದರ್ಭದಲ್ಲಿ ಆಚಾರ್ಯರು (ಗುರುಗಳು) ಶಿಷ್ಯನಿಗೆ ಈ ರೀತಿ ಉಪದೇಶ ಮಾಡುತ್ತಾರೆ :

"ಗುರು ಲಿಂಗ ಜಂಗಮರ ಹೊರತು ಸ್ಥಾವರ ಲಿಂಗಾದಿಗಳಲ್ಲಿ ಶಿವಪ್ರಸಾದದ ಹೊರತು ಪ್ರಾಕೃತ ಅನ್ನಾದಿಗಳಲ್ಲಿ ನಿನಗೆ ಆಸಕ್ತಿಯಾಗಬಾರದು. ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು. ಪರಿಶುದ್ಧವಾದ ಯಾವುದಾದರೊಂದು ಕಾಯಕದಿಂದ ದ್ರವ್ಯವನ್ನು ಗಳಿಸಿ ದಾಸೋಹಂಭಾವದಿಂದ ವರ್ತಿಸು. ದೀಕ್ಷೆಯಿಂದ ಪವಿತ್ರರಾದ ವೀರಶೈವರಲ್ಲಿ ಜಾತಿ ವೃತ್ತಿ ಕುಲಾಚಾರಗಳ ಭೇದವನ್ನು ಎಂದಿಗೂ ಮಾಡಬಾರದು. ವೀರಶೈವ ಧರ್ಮದಲ್ಲಿ ನಿನಗೆ ಸಂದೇಹ ಬಂದರೆ ಪೂರ್ವಾಚಾರ್ಯರ-ಶರಣರ ನಿರ್ಣಯವನ್ನು ಮಾನಿಸು. ವೀರಶೈವ ಧರ್ಮಕ್ಕೆ ಅಪಾಯವು ಸಂಭವಿಸಿದರೆ ನೀನು ಪ್ರಾಣವನ್ನಾದರೂ ಬಿಟ್ಟು ಅದಕ್ಕೆ ಪ್ರತೀಕಾರವನ್ನು ಮಾಡು. ಗುರುಜಂಗಮರಲ್ಲಿ ಭೇದವೆಣಿಸಬೇಡ. ತಾಯಿ, ತಂದೆ, ಗುರು, ಜಂಗಮರನ್ನು ದೇವರೆಂದು ತಿಳಿ. ನೀನು ಆಚಾರ್ಯರು ಬೋಧಿಸಿದ, ಶರಣರು ಆಚರಿಸಿದ ಮಾರ್ಗದಲ್ಲಿ ಸಾಗು. ಪ್ರಾತಃ ಸಾಯಂಕಾಲಗಳಲ್ಲಿ ನಿಯಮದಿಂದ ಸ್ನಾನ ಮಾಡಿ, ಭಸ್ಮ ರುದ್ರಾಕ್ಷಿಗಳನ್ನು ಧರಿಸಿ, ಶಿವಪಂಚಾಕ್ಷರಿಯನ್ನು ಜಪಿಸುತ್ತಾ ವಾಮಹಸ್ತ ಪೀಠದಲ್ಲಿ ನಿನ್ನ ಇಷ್ಟಲಿಂಗವನ್ನು ಪೂಜಿಸು. ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲವೇ ಆತ್ಮವಾಗಿ ಶಿವಯೋಗ ಮಾರ್ಗದಲ್ಲಿ ಸಾಗು. ಜ್ಞಾನವನ್ನು ಕ್ರಿಯೆಯಲ್ಲಿ ಪೂರ್ಣಗೊಳಿಸಿ ಲಿಂಗಾಂಗ ಸಾಮರಸ್ಯವೆಂಬ ಪರಮಾನಂದವನ್ನು ಹೊಂದು". ಇದೇ ಗುರುವಿನ ಆದೇಶ. ಇದೇ ಗುರುವಿನ ಉಪದೇಶವೆಂದು ಬೋಧಿಸುತ್ತಾರೆ.

ದೀಕ್ಷೆಯಿಂದ ವೀರಶೈವನು ಸಂಸ್ಕಾರವಂತನಾಗಿ ಆತ್ಮ ಸಂಯಮದ ಬಾಳನ್ನು ಬಾಳಲು ಗುರೂಪದೇಶ ಮಾರ್ಗದರ್ಶಕವಾಗುತ್ತದೆ. ವೀರಶೈವ ಧರ್ಮದಲ್ಲಿ ಗೌರವ, ತತ್ತ್ವದಲ್ಲಿ ಶ್ರದ್ಧೆ ಉಳ್ಳವರಿಗೆ, ಹಾಗೂ ದೀಕ್ಷೆ ಪಡೆಯಬೇಕೆಂದು ಅಪೇಕ್ಷಿಸುವವರಿಗೆ, ಎಲ್ಲರಿಗೂ 'ದೀಕ್ಷೆ' ಪಡೆಯಲು ಇಲ್ಲಿ ಅವಕಾಶ ಉಂಟು.

11. ವಿವಾಹ (Marriage Cermony)

ಬ್ರಹ್ಮಚರ್ಯಾ ಶ್ರಮವನ್ನು ಮುಗಿಸಿದ ಮಗನಿಗೆ ಅನುರೂಪಗಳಾದ ಕನ್ಯೆಯೊಂದಿಗೆ ಮದುವೆ ಮಾಡುವುದೇ ವಿವಾಹ ಸಂಸ್ಕಾರ. ವಿವಾಹದ ನಂತರ ಒಬ್ಬ ವ್ಯಕ್ತಿಯನ್ನು ಗೃಹಸ್ಥನೆಂದು ಕರೆಯುತ್ತಾರೆ. ಸಹಧರ್ಮಿಣಿಯಾಗಿ ಬಂದವಳು, ಆ ಕುಟುಂಬಕ್ಕೆ ಗೃಹಿಣಿಯಾಗುತ್ತಾಳೆ. ಭಾರತೀಯ ಸಮಾಜದಲ್ಲಿ ವಿವಾಹಗಳಲ್ಲಿ ಎಂಟು ವಿಧಗಳಿವೆ. ಪೈಶಾಚ (ವಂಚನೆಯಿಂದಾಗುವ ಮದುವೆ), ರಾಕ್ಷಸ (ಬಲಾತ್ಕಾರದ ಮದುವೆ), ಗಾಂಧರ್ವ (ಭಾವಾತಿರೇಕ ಅಥವಾ ಪ್ರೀತಿಯ ಮದುವೆ), ಅಸುರ (ವ್ಯಾವಹಾರಿಕ ಮದುವೆ) ಪ್ರಜಾಪತ್ಯ (ವಂಶದ್ದು) ಆರ್ಷ (ಸಂಯಮ), ದೈವ (ತ್ಯಾಗಮಯ) ಬ್ರಹ್ಮ (ಆಧ್ಯಾತ್ಮ ವಿವಾಹ). ಇವುಗಳಲ್ಲಿ ಆರ್ಷ, ದೈವ ವಿವಾಹಗಳು ಗೃಹಸ್ತರಾಗಲು ಆದರ್ಶವಾಗಿವೆ. ಭಾರತೀಯ ಸಮಾಜದಲ್ಲಿ ವಿವಾಹಕ್ಕೆ ತುಂಬಾ ಮಹತ್ವವಿದೆ. ಧರ್ಮ ಶಾಸ್ತ್ರಗಳಲ್ಲೂ ಪ್ರಾಮುಖ್ಯತೆ ಇದೆ. ಭಾರತೀಯರಿಗೆ ವಿವಾಹ ಕೇವಲ ಇಂದ್ರಿಯ ಭೋಗ ಸಾಧನೆ ಅಲ್ಲ; ಮಹಾಕವಿ ಕಾಳಿದಾಸನ ಮಾತಿನಂತೆ 'ಪ್ರಜಾಯೈ ಗೃಹಮೇಧಿನಾಂ' ಅಂದರೆ ಕೇವಲ ಸತ್ಸಂತಾನಕ್ಕಾಗಿ, ವಂಶಾಭಿವೃದ್ಧಿಗಾಗಿ ವಿವಾಹ ಸಂಸ್ಕಾರ ಏರ್ಪಟ್ಟಿದೆ. ವಿವಾಹ ಸ್ತ್ರೀಪುರುಷರ ಕೇವಲ ದೈಹಿಕ ಮಿಲನವಲ್ಲ, ಎರಡು ಆತ್ಮಗಳ ಏಕೀಕರಣ. 'ಸಂಸಾರವೇ ಸಮುದ್ರ, ಸ್ತ್ರೀ ಪುರುಷರು, ಯಾತ್ರಿಕರು, ವಿವಾಹ ಸಂಸ್ಕಾರವೆಂಬುದೇ ನಾವೆ' ಎನ್ನುವ ಸುಂದರ ಪರಿಕಲ್ಪನೆ ಇದೆ. ವಿವಾಹ ವಿಧಿಯಲ್ಲಿ ವಾಗ್ದಾನ, ಕಲಶಸ್ಥಾಪನೆ, ಕನ್ಯಾದಾನ, ಪಾಣಿಗ್ರಹಣ, ಸಪ್ತಪದಿ ಇತ್ಯಾದಿ ಕ್ರಿಯೆಗಳು ವಿವಾಹದ ಮಹತ್ವವನ್ನೇ ಸಾರುತ್ತವೆ. ಸ್ಥಳ ಶುದ್ಧಿಗಾಗಿ ಮಾಡುವ ಪುಣ್ಯಾಹ ವಾಚನ, ನಂದ್ಯಾದಿ ಪ್ರಮಥಗಣಾರಾಧನೆ, ಆಚಾರ್ಯರ ಸಾಕ್ಷಿಯಾಗಿ ಪಂಚಕಲಶ ಸ್ಥಾಪನೆ ಇತ್ಯಾದಿ ಮಹತ್ವದ ಕ್ರಿಯೆಗಳಾಗಿವೆ. ಮದುವೆಯ ಮಂಗಳ ಕಾರ್ಯದಲ್ಲಿ ಅನೇಕ ಧಾರ್ಮಿಕ ವಿಧಿಗಳನ್ನು ಆಚರಿಸಲಾಗುತ್ತದೆ. ವಿವಾಹ, ಆಧುನಿಕ ರೀತಿಯ ಒಪ್ಪಂದ ಮಾತ್ರವಲ್ಲ, ಅದು ಒಂದು ಧಾರ್ಮಿಕ ವಿಧಿ ಮತ್ತು ಸಂಸ್ಕಾರವಾಗಿದೆ. ಸತಿಪತಿಗಳನ್ನು ಒಂದುಗೂಡಿಸುವ ಈ ಮಂಗಳ ಕಾರ್ಯದಲ್ಲಿ ವಧೂವರರ, ತಂದೆ ತಾಯಿಗಳೂ ಸಮಸ್ತ ಸಮಾಜವೂ ನೆರವಾಗುತ್ತದೆ.

ವೀರಶೈವರಲ್ಲಿ ಈ ವಿವಾಹ ಸಂಸ್ಕಾರವನ್ನು ಕನ್ಯಾನಿಶ್ಚಯವಾದ ನಂತರ ಗುರು ಹಿರಿಯರು ಶುಭ ಮುಹೂರ್ತದಲ್ಲಿ ಮಾಹೇಶ್ವರರಿಂದ, ಲಗ್ನಪತ್ರಿಕೆಯನ್ನು ಕ್ರಮಬದ್ಧವಾಗಿ ಬರೆಯಿಸಿ ಅದನ್ನು ಷೋಢಶೋಪಚಾರಗಳಿಂದ ಪೂಜಿಸಿ, ಗುರುಹಿರಿಯರ ಹಸ್ತದಿಂದ, ಮಂತ್ರಾಕ್ಷತೆ ಹಾಕಿಸುತ್ತಾರೆ. ಅನಂತರ ಸುಮಂಗಲಿಯರು ಲಗ್ನಪತ್ರಿಕೆಯನ್ನು ಪೂಜಿಸಿ ಆರತಿ ಬೆಳುಗುತ್ತಾರೆ. ವಿವಾಹಕ್ಕೆ ಪೂರ್ವದಲ್ಲಿ ಹಂದರ (ಚಪ್ಪರ) ಹಾಕಿ ತಳಿರು ತೋರಣಗಳಿಂದ ಅಲಂಕರಿಸಿ ವಧೂವರರನ್ನು ಹಸೆಯ ಮೇಲೆ ಕೂರಿಸಿ ಪೂರ್ವ ಇಲ್ಲವೆ ಉತ್ತರಾಭಿಮುಖವಾಗಿ ವಧೂವರರಿಗೆ ಎಣ್ಣೆ ಮಿಶ್ರಿತವಾದ ಅರಿಶಿಣವನ್ನು ಮೈಗೆ ಹಚ್ಚಿ

ಮಂಗಲ ಸ್ನಾನ ಮಾಡಿಸುತ್ತಾರೆ. ಹಾಗೂ ಇಬ್ಬರಿಗೂ ಶ್ರೀಗುರುಗಳ ಪಾದೋದಕ ಕರುಣ ಪ್ರಸಾದ ಕೊಡಿಸುತ್ತಾರೆ. ಇದೆಕ್ಕ ಹರಿದ್ರಾಲೇಪನ ಕಾರ್ಯವೆಂದು ಕರೆಯುತ್ತಾರೆ.

ಮಾರನೆಯ ದಿನ ಗುರು ಜಂಗಮರಿಗೂ, ಬಂಧು ಬಳಗ ದೈವದವರಿಗೂ ಭೋಜನ ಸಮಾರಂಭ ಏರ್ಪಡಿಸುತ್ತಾರೆ. ಇದಕ್ಕೆ ಗುರುದೇವತಾ ಕಾರ್ಯವೆಂದು ಕರೆಯುತ್ತಾರೆ. ಮುಂದೆ ಕ್ರಮವಾಗಿ ಲಗ್ನ ಮಂಟಪ ಸ್ಥಾಪನೆ, ವಧೂವರರಿಗೆ ಕಂಕಣಧಾರಣೆ, ಪಂಚಕಲಶ ಸ್ಥಾಪನೆ, ಪೂಜೆ, ವಧೂವರರಿಗೆ ಬಾಸಿಂಗ ಧಾರಣೆ, ಮಧುಪರ್ಕ (ತಂದೆ ತಾಯಿಗಳು ಅಳಿಯನ ಕಾಲು ತೊಳೆಯುವುದು) ಕನ್ಯಾದಾನ, ಗುಡಜೀರಕ, ಮಾಂಗಲ್ಯಧಾರಣ, ಪಾಣಿಗ್ರಹಣ, ಆಜ್ಯ ಕ್ಷೀರ ಪಾದ ಸಂಘಟ್ಟನ (ಸಪ್ತಪದಿ), ಮಾಂಗಲ್ಯಧಾರಣ, ಅಕ್ಷತಾ ರೋಪಣ, ನಾಸಿಕಾಭರಣ ಧಾರಣ, ಫಲ ಪೂಜಾದಾನ, ಬ್ರಹ್ಮಬಂಧನ, ಗೌರೀದರ್ಶನ, ಮಂಗಳಾಷ್ಟಕ ಇತ್ಯಾದಿ ಪ್ರಕ್ರಿಯೆಗಳು ವಿಧಿ ವಿಧಾನೋಕ್ತವಾಗಿ ಜರುಗುತ್ತವೆ. ಮಂಗಳ ಕಾರ್ಯ ಮಾಹೇಶ್ವರರಿಂದ ಜರುಗುತ್ತದೆ. ಗುರು-ಜಂಗಮರ ಸಾನ್ನಿಧ್ಯವಿರುತ್ತದೆ. ವೈದಿಕ ಪದ್ಧತಿಯಂತೆ ಅಗ್ನಿಪೂಜೆ, ಹೋಮ, ಹವನಗಳಿಗೆ ಇಲ್ಲಿ ಅವಕಾಶವಿರುವುದಿಲ್ಲ.

12 ಅಂತ್ಯ ಸಂಸ್ಕಾರ (Death Ceremony)

ಆಕಸ್ಮಾತ್ ಆಗತಂ ಭೂತಂ ಆಕಸ್ಮಾದೇವಗಚ್ಛತಿ।
ತಸ್ಮಾಜ್ಞಾತಂ ಮೃತಂ ಚೈವ ಸಂಪಶ್ಯಂತಿ ಸುಚೇತಸಃ ॥

(ಬೋಧಾಯನ ಗುಹ್ಯಸೂತ್ರ)

ಜೀವನವೇ ಆಕಸ್ಮಿಕ. ಭೂಮಿಗೆ ಬಂದದ್ದು ಆಕಸ್ಮಿಕವೇ. ಹೋಗುವುದೂ ಆಕಸ್ಮಿಕವೇ. ಆದ್ದರಿಂದ ಜ್ಞಾನಿಗಳು ಜನನ ಮರಣವನ್ನು ಆಕಸ್ಮಿಕವೆಂದೇ ಭಾವಿಸುತ್ತಾರೆ. ವ್ಯಕ್ತಿಯ ಬದುಕಿನ ಕೊನೆಯ ಸಂಸ್ಕಾರವನ್ನು 'ಅಂತ್ಯೇಷ್ಟಿ' ಎಂದು ಕರೆಯುತ್ತಾರೆ. ವೀರಶೈವ ಸಿದ್ಧಾಂತದ ಪ್ರಕಾರ ಮರಣ ದೇಹಕ್ಕೆ ವಿನಃ ಆತ್ಮನಿಗಲ್ಲ. ಆದ್ದರಿಂದ ಆತ್ಮಕ್ಕೆ ಶಾಂತಿಯನ್ನು ಆಶಿಸಿ, ಶಾಸ್ತ್ರೋಕ್ತವಾಗಿ ಅಂತ್ಯ ಸಂಸ್ಕಾರವನ್ನು ಆಚರಿಸಲಾಗುತ್ತದೆ. ಅಂತ್ಯ ಸಂಸ್ಕಾರ ಗಳಲ್ಲಿ ಖನನ, ದಹನ, ತ್ಯಾಗವೆಂದು ಮೂರು ವಿಧ. ವೀರಶೈವರಿಗೆ ಖನನವು ಉಕ್ತವಾಗಿದೆ. ವೀರಶೈವನು ಲಿಂಗೈಕ್ಯನಾದ ಮೇಲೆ ಲಿಂಗ ಶರೀರವನ್ನು 'ಭೂ' ನಿಕ್ಷೇಪ ಮಾಡಬೇಕೆಂದು ನಿಯಮ ವಿಧಿಸಿದೆ. ವೀರಶೈವರು ಜನ್ಮಾಂತರ ಒಪ್ಪುತ್ತಾರೆ. ಆದರೆ ಪುನರ್ಜನ್ಮವನ್ನು ಅಂಗೀಕರಿಸುವುದಿಲ್ಲ. ಕಾರಣ-ವೀರಶೈವನು ತನ್ನ ಸಿದ್ಧಾಂತದಂತೆ ಸಾಧನೆ ಮಾಡಿದರೆ, ಅವನಿಗೆ ಒಂದೇ ಜನ್ಮದಲ್ಲಿ ಮುಕ್ತಿ ಲಭಿಸುತ್ತದೆ ಎನ್ನುವ ನಂಬಿಕೆ ಇದೆ. 'ಏಕೇನ ಜನ್ಮನಾಮುಕ್ತಿ : ವೀರಾಣಾಂತು ಮಹೇಶ್ವರಿ ಎಂಬ ಆಗಮ ವಾಕ್ಯ ಈ ಮಾತನ್ನು' ಸಮರ್ಥಿಸುತ್ತದೆ. ಪಂಚಭೂತಗಳಿಂದ ದೇಹ ನಿರ್ಮಾಣವಾಗಿದೆ. ಅದು ಪಂಚಭೂತಗಳಲ್ಲಿ ವಿಲೀನವಾಗಬೇಕು. ಆದ್ದರಿಂದ ಮೃತ ದೇಹವನ್ನು ಹೂಳಬೇಕು. (ಕರ್ದಮೇನ ಪ್ರಜಾಭೂತಾ ಮಯಿಕರ್ದಮ ಸಂಭವ) ಎನ್ನುವ ಕಲ್ಪನೆ ಇದೆ. ಮರಣ ಸೂತಕ ವೀರಶೈವರಿಗೆ

ಇಲ್ಲ. ಮರಣ ಹೊಂದಿದನೆಂದು ತಿಳಿಯುವ ವ್ಯಕ್ತಿಯ ಆತ್ಮ ಪರಮಾತ್ಮನಲ್ಲಿ ಬೆರೆತು ಒಂದಾಗುವುದರಿಂದ (ಲಿಂಗೈಕ್ಯ) ಯಾರೂ ದುಃಖಿಸಬೇಕಾದ ಅಗತ್ಯವಿಲ್ಲ.

ವೀರಶೈವನಿಗೆ ಮರಣಕಾಲ ಸನ್ನಿಹಿತವಾದಾಗ ಗುರು ಇಲ್ಲವೆ ಜಂಗಮರನ್ನು ಆಮಂತ್ರಿಸಿ ಅವರ ಪಾದಪೂಜೆಯನ್ನು ನೆರವೇರಿಸುತ್ತಾರೆ. ಆ ಸಂದರ್ಭದಲ್ಲಿ ರೋಗಿಗೆ ಸ್ನಾನ ಮಾಡಿಸಿ, ಮಡಿ ಬಟ್ಟೆ ಧರಿಸಿದ ಮೇಲೆ, ಗುರುಗಳು ಅವನಿಗೆ ಪ್ರಸಾದ ನೀಡುತ್ತಾರೆ. ಮನೆಯವರು, ಅತಿಥಿಗಳು ಸೇರಿ ಸಹಭೋಜನ ಮಾಡುತ್ತಾರೆ. ಆಮೇಲೆ ವಿಭೂತಿ ವೀಳೆಯ ವಿಧಿಯನ್ನು ನೆರವೇರಿಸುತ್ತಾರೆ. 'ವಿಭೂತಿ ವೀಳ್ಯೆ' ಎಂಬುದು ವೀರಶೈವರಲ್ಲಿ ಒಂದು ಪಾರಿಭಾಷಿಕ ಪದ. ರೋಗಿಯಾದವನಿಗೆ ಗುರುಗಳ ಪಾದ ಸ್ಪರ್ಶಕ್ಕೆ ಅನುಕೂಲವಾಗಲಿ ಎಂದು ಗುರುಗಳು ರೋಗಿಯ ಸಮೀಪದಲ್ಲಿ ಕುಳಿತುಕೊಳ್ಳುತ್ತಾರೆ. ಗುರುಗಳು ರೋಗಿಯ ಕಿವಿಯಲ್ಲಿ ಪ್ರಣವ ಪಂಚಾಕ್ಷರಿ ಮಂತ್ರವನ್ನು ಉಚ್ಚರಿಸುತ್ತಾರೆ. ಪಂಚಾಕ್ಷರ ವರ್ಣಗಳನ್ನು ಅವನ ದೇಹದ ಅಂಗಾಂಗಗಳ ಮೇಲೆ ವಿಭೂತಿಯಿಂದ ಬರೆಯುತ್ತಾರೆ. ಹನ್ನೊಂದು ರುದ್ರಾಕ್ಷಿಗಳನ್ನು ದೇಹದ ಬೇರೆ ಬೇರೆ ಭಾಗಗಳಲ್ಲಿ ಇಡುತ್ತಾರೆ. ಗುರುಜಂಗಮರಿಗೆ ದಾನ ದಕ್ಷಿಣೆ ಕೊಡುತ್ತಾರೆ. ಆ ಸಂದರ್ಭದಲ್ಲಿ ಶಿವಸ್ತೋತ್ರ, ಶಿವಭಜನೆ ಮಾಡುತ್ತಾರೆ. ಅಲ್ಲಿ ಆ ಸಂದರ್ಭದಲ್ಲಿ ದುಃಖದ ಸನ್ನಿವೇಶವಿರುವುದಿಲ್ಲ. ಸಂತೋಷ ಹಾಗೂ ಸಂಭ್ರಮದ ವಾತಾವರಣವಿರುತ್ತದೆ. ಇದಕ್ಕೆ 'ವಿಭೂತಿ ವೀಳ್ಯೆ' ಎನ್ನುತ್ತಾರೆ. ಇದು ಮರಣಕ್ಕೆ ಸಿದ್ಧನಾದ ವ್ಯಕ್ತಿಗೆ ಮಾಡುವ ಸಂಸ್ಕಾರವಾಗಿದೆ.

ಮರಣ ಸಂಭವಿಸಿದ ಮೇಲೆ ಮೃತ ದೇಹಕ್ಕೆ ಹೊಸ ಬಟ್ಟೆ ಧರಿಸಿ ಸಿಂಗರಿಸುತ್ತಾರೆ. ಕುಳಿತ ಭಂಗಿಯಲ್ಲೇ ಕೂರಿಸುತ್ತಾರೆ. ನೆರೆದವರ ಕೈಯಲ್ಲಿ ಪತ್ರ ಪುಷ್ಪಗಳನ್ನಿತ್ತು. ಪುಷ್ಪಾಂಜಲಿ ಹೇಳುತ್ತಾರೆ. ಆಗ ಜನರು ಪುಷ್ಪ -ಬಿಲ್ವ ದಳಗಳನ್ನು ಮೃತ ದೇಹದ ಮೇಲೆ ಹಾಕುತ್ತಾರೆ. ಶಿವಲೋಕದಿಂದಲಾ... ಎನ್ನುವ (ಚರಮಗೀತೆ) ಪುಷ್ಪಾಂಜಲಿ ಹೇಳುತ್ತಾರೆ. ಶಿವನಿಂದ ಬಂದ ಆತ್ಮವು ದೇಹವನ್ನು ಬಿಟ್ಟ ಮೇಲೆ ಪುನಃ ಶಿವನಲ್ಲಿಯೇ ಲೀನವಾಗುತ್ತದೆ ಎನ್ನುವ ವೀರಶೈವ ಮೂಲಭೂತ ತತ್ತ್ವಗಳ ಅಂಶಗಳು ಈ ಪುಷ್ಪಾಂಜಲಿಯಲ್ಲಿ ಇವೆ. ಇದು ಅಜ್ಞಾತ ಕವಿಯಿಂದ ರಚಿತವಾದ ಒಂದು ಕೈವಲ್ಯಗೀತ.

ಅನಂತರ ಬಿದುರಿನ ಗಳದಿಂದ ಕುರ್ಚಿ ಇಲ್ಲವೆ ಪಲ್ಲಕ್ಕಿಯಂತಹ ಒಂದು ಆಸನವನ್ನು ತಯಾರಿಸುತ್ತಾರೆ. ಮತ್ತು ಅದನ್ನು ಬಣ್ಣದ ಕಾಗದ ಹಾಗೂ ಹೂವಿನ ಸರಗಳಿಂದ ಅಲಂಕರಿಸುತ್ತಾರೆ. ಇದಕ್ಕೆ ಕೈವಲ್ಯ ವಿಮಾನ (ಸಿದಿಗಿ) ಎಂಬ ಹೆಸರುಗಳಿವೆ.

ಇದನ್ನು ನಾಲ್ಕು ಜನರ ಹೆಗಲ ಮೇಲೆ ಹೊತ್ತುಕೊಂಡು ಹೋಗುತ್ತಾರೆ. ಹಿಂದೆ ಜನ ಸಮೂಹ ಸಾಗುತ್ತದೆ. ಭಜನೆಯ ಮೇಳವಿರುತ್ತದೆ. ಮೆರವಣಿಗೆ ಸಾಗುತ್ತದೆ. ಶವವನ್ನು ರುದ್ರಭೂಮಿಗೆ ಒಯ್ಯುತ್ತಾರೆ. ಅಲ್ಲಿ ಶಾಸ್ತ್ರೋಕ್ತ ವಿಧಿಗನುಸಾರವಾಗಿ ಸಮಾಧಿಯನ್ನು

ಸಿದ್ಧಪಡಿಸುತ್ತಾರೆ. 'ಸಮಾಧಿ' ಒಂದು ಬಗೆಯ ಗುಹೆಯಾಕಾರವಾಗಿದ್ದು, ಕೆಳಗೆ ಇಳಿಯಲು ಮೆಟ್ಟಿಲುಗಲಿರುತ್ತವೆ. ಅವು ಚಿಕ್ಕ ಕೋಣೆಯಾಕಾರವಾಗಿದ್ದು, ಕೆಳಗೆ ಇಳಿಯಲು ಮೆಟ್ಟಿಲುಗಳಿರುತ್ತವೆ. ಅವು ಚಿಕ್ಕ ಕೋಣೆಯಾಕಾರದ ಗೂಡಿನವರೆಗೂ ಇರುತ್ತವೆ. ಕುಣಿಯ ಗೋಡೆ ಹಾಗೂ ನೆಲದಲ್ಲಿ ಅಲ್ಲಲ್ಲಿ ಮಂತ್ರಾಕ್ಷರಗಳನ್ನು ಬರೆದು ತಾಮ್ರದ ತಗಡುಗಳನ್ನು ಇಡುತ್ತಾರೆ. ಭಸ್ಮ, ಪತ್ರ, ಪುಷ್ಪಗಳಿಂದ ಗೋಡೆಗಳನ್ನು ಅಲಂಕರಿಸುತ್ತಾರೆ. ಸಮಾಧಿಯ ಹತ್ತಿರ 'ಕೈವಲ್ಯ'ವನ್ನಿಳಿಸಿ ಶವವನ್ನು ಹೊರಗೆ ತೆಗೆಯುತ್ತಾರೆ. ಮತ್ತೊಂದು ಸಲ ಪುಷ್ಪಾಂಜಲಿ ಹೇಳಿ, ಪತ್ರ ಪುಷ್ಪಗಳನ್ನು ಶವದ ಮೇಲೆ ಹಾಕುತ್ತಾರೆ. ಗುಹೆಯಾಕಾರದ ಸಮಾಧಿಯಲ್ಲಿ ಶವವನ್ನು ತುಂಬ ಜಾಗರೂಕತೆಯಿಂದ ಕುಳಿತಿರುವ ಭಂಗಿಯಲ್ಲಿ ಇರಿಸುತ್ತಾರೆ. ಲಿಂಗಪೂಜೆ ಮಾಡಿಕೊಳ್ಳುವಾಗ ಕುಳಿತಿರುವ ಭಂಗಿ ಎಂದರೆ ಪದ್ಮಾಸನ. ಶವದ ಕೈಯಲ್ಲಿ ಅವನ ಇಷ್ಟಲಿಂಗವನ್ನಿರಿಸಿ ದೊಡ್ಡ ಕಲ್ಲನ್ನು ಬಾಗಿಲಿಗೆ ಮುಚ್ಚುತ್ತಾರೆ. ಸಮಾಧಿಯ ಮೇಲೆ ನಿಂತ ಗುರುಗಳ ಪಾದ ಪೂಜೆ ಮಾಡಿ, ತೆಂಗಿನಕಾಯಿ ಒಡೆದು, ಕೊಬ್ಬರಿಯನ್ನು ಅಲ್ಲಿ ನೆರೆದ ಜನರಿಗೆ ಹಂಚುತ್ತಾರೆ. ಗುರು ಜಂಗಮರಿಗೆ ದಾನ ದಕ್ಷಿಣೆ ಕೊಡುತ್ತಾರೆ. ವೀರಶೈವರಲ್ಲಿ ಹುಗಿದ ಸ್ಥಲಕ್ಕೆ 'ಸಮಾಧಿ' ಎಂದು ಕರೆಯುತ್ತಾರೆ. ಇದು ಯೋಗದರ್ಶನದಲ್ಲಿ ಬರುವ ಒಂದು ಪಾರಿಭಾಷಿಕ ಪದ. ಬಾಹ್ಯಪ್ರಜ್ಞಾರಹಿತವಾಗಿ ಅಂತರ್ಲಿಂಗಗತವಾದ ಮಾನಸಿಕ ಸ್ಥಿತಿಯನ್ನು ಇಲ್ಲಿ 'ಸಮಾಧಿ' ಎಂದು ಕರೆಯುತ್ತಾರೆ. ಆತ್ಮ ಸಾಕ್ಷಾತ್ಕಾರ ಸ್ಥಿತಿಯನ್ನು ಮುಟ್ಟಿ ಇನ್ನಿಲ್ಲವಾದ ವೀರಶೈವನ ದೇಹವಿರುವ ಸ್ಥಲವನ್ನು ವೀರಶೈವರು 'ಸಮಾಧಿ' ಎಂದು ಕರೆಯುವುದು ಔಚಿತ್ಯಪೂರ್ಣ ಹಾಗೂ ಅರ್ಥಪೂರ್ಣ. ವೀರಶೈವರಲ್ಲಿ ಮರಣಕ್ಕೆ 'ಲಿಂಗೈಕ್ಯ' ಎಂದು ಕರೆಯುತ್ತಾರೆ. ಲಿಂಗದಲ್ಲಿ ಲೀನವಾದವರು ಎಂದು, ಅರ್ಥ. ವೀರಶೈವರು 'ಸಾವು' ಶಬ್ದವನ್ನು ಬಳಸದೆ 'ಲಿಂಗೈಕ್ಯ' ಎಂದೇ ಹೇಳುತ್ತಾರೆ. ಲಿಂಗೈಕ್ಯನಾದ ವ್ಯಕ್ತಿಯ 11ನೆಯ ದಿನದ ಹಾಗೂ ಮಾಸಿಕ ಆರಾಧನೆಯ ದಿವಸ ಗುರು ಜಂಗಮರನ್ನು ಭಕ್ತಿ ಭಾವನೆಯಿಂದ ಆಹ್ವಾನಿಸಿ, ಅವರ ಪಾದಪೂಜಾದಿಗಳನ್ನು ಮಾಡಿ ಮೃಷ್ಟಾನ್ನ ಭೋಜನದಿಂದ ಅವರನ್ನು ತೃಪ್ತಿಗೊಳಿಸಿ, ಯಥಾಶಕ್ತಿ ದಾನ ದಕ್ಷಿಣೆಗಳನ್ನು ಅರ್ಪಿಸಿ ಕಳುಹಿಸುತ್ತಾರೆ. ವಾರ್ಷಿಕ ಆರಾಧನೆಯ ದಿನವೂ ಶಿವಗಣಾರಾಧನೆ (ಗಣತೃಪ್ತಿ) ಮಾಡುತ್ತಾರೆ.

ಇಲ್ಲಿಯವರೆಗೂ ನಾನು ಉಲ್ಲೇಖಿಸಿದ ವೀರಶೈವರಲ್ಲಿ ಪ್ರಚಲಿತವಿರುವ ಸಂಸ್ಕಾರಗಳ ವಿಧಿ ವಿಧಾನಗಳನ್ನು ತೀರಾ ಸಂಕ್ಷಿಪ್ತವಾಗಿ ಪರಿಚಯಿಸಿದ್ದೇನೆ. ಪ್ರಾದೇಶಿಕ ಭೇದದಿಂದಲೂ ಸಂಸ್ಕಾರಗಳ ಆಚರಣೆಯ ವಿಧಿ ವಿಧಾನಗಳಲ್ಲಿ ವ್ಯತ್ಯಾಸಗಳು ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ ಆಗಿದೆ.

ಉಪಸಂಹಾರ :

ಕೊನೆಯದಾಗಿ, 21ನೇ ಶತಮಾನದಲ್ಲಿ ಕಾಲಿಡುತ್ತಿರುವ ನಾವುಗಳು ವೈಚಾರಿಕ ಹಾಗೂ ವೈಜ್ಞಾನಿಕ ಯುಗದಲ್ಲಿ ಬದುಕುತ್ತಿದ್ದೇವೆ. ಪಾಶ್ಚಾತ್ಯ ಶಿಕ್ಷಣ ಪದ್ಧತಿಗೆ, ಪ್ರಭಾವಕ್ಕೆ ಒಳಗಾಗಿ ನಮ್ಮ ಅನೇಕ ಸಂಸ್ಕಾರಗಳು ಈಗ ಮರೆತುಹೋಗಿವೆ.

ಗರ್ಭಾದಾನ, ಅನ್ನಪ್ರಾಶನ, ಚೂಡಾಕರ್ಮ, ನಿಷ್ಕ್ರಮಣ, ಅಕ್ಷರಾಭ್ಯಾಸ ಇತ್ಯಾದಿ ಸಂಸ್ಕಾರಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿರುತ್ತವೆ. ಕೇವಲ ಯಾಂತ್ರಿಕವಾಗಿ ಆಚರಿಸಲ್ಪಡುತ್ತಿವೆ. ವೀರಶೈವ ಸಮಾಜದಲ್ಲಿ ಹೆಚ್ಚಾಗಿ ನೆನಪಿರುವ ಸಂಸ್ಕಾರಗಳೆಂದರೆ ಜಾತಕರ್ಮ (ಲಿಂಗಧಾರಣ) ವಿವಾಹ ಹಾಗೂ ಅಂತ್ಯ ಸಂಸ್ಕಾರವೆಂದು ಹೇಳಬಹುದು. ಸಂಸ್ಕಾರಗಳು ಮನೋವೈಜ್ಞಾನಿಕ ತಳಹದಿಯ ಮೇಲೆ ವ್ಯಕ್ತಿಯ ಮನಸ್ಸು, ಬುದ್ಧಿ ಹಾಗೂ ಆರೋಗ್ಯಗಳ ರಕ್ಷಣೆಗಾಗಿ ಹಿಂದೆ ಆಚರಣೆಯಲ್ಲಿದ್ದವು. ಆದರೂ ಇಂದಿಗೂ ವಿರಳವಾಗಿ ಶುದ್ಧ ಸಂಪ್ರದಾಯದ ಕೆಲವು ವೀರಶೈವ ಕುಟುಂಬಗಳಲ್ಲಿ ಅಲ್ಲಲ್ಲಿ ಈ ಸಂಸ್ಕಾರಗಳು ಜೀವಂತವಾಗಿರುವುದನ್ನು ನಾವು ಕಾಣಬಹುದಾಗಿದೆ. ಧಾರ್ಮಿಕ ಸಂಸ್ಕಾರಗಳು ವ್ಯಕ್ತಿಯ ಅಂತರಂಗ ಹಾಗೂ ಬಹಿರಂಗಗಳೆರಡನ್ನು ಶುದ್ಧೀಕರಿಸಿ ವ್ಯಕ್ತಿತ್ವದ ವಿಕಾಸಕ್ಕೂ, ಸಮಾಜದ ಏಳ್ಗೆಗೂ ಕಾರಣವಾಗುತ್ತವೆ, ಎನ್ನುವ ಸಂಗತಿಯನ್ನು ಯಾರೂ, ಯಾವ ಕಾಲಕ್ಕೂ ಅಲ್ಲಗಳೆಯುವಂತಿಲ್ಲ.

●

ಸಹಾಯಕ ಸಾಹಿತ್ಯ

1. Hindu Samskaras : Rajbali Pandey
2. Hand Book of veerashaivism : Dr. Nandimatha
2. The Bibal of Hinduism : Dr. G. M. Ram
4. ಭಾರತೀಯ ಸಮಾಜದ ಅಧ್ಯಯನಃ ಎಸ್. ಜಿ. ಹಿರೇಮಠ
5. ವೀರಶೈವ ಪೂರ್ವಪ್ರಯೋಗರತ್ನಮ್ }
6. ವೀರಶೈವ ಆಗಮ ಪ್ರಯೋಗ ರತ್ನಮ್ } ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
7. ವೀರಶೈವ ಉತ್ತರ ಪ್ರಯೋಗ }
8. ಸಂಸ್ಕಾರ ಪದ್ಧತಿ; ಪಂ : ಬಾಲಕೃಷ್ಣ ಶಾಸ್ತ್ರಿ
9. ಅಂತ್ಯ ಸಂಸ್ಕಾರ ವಿಧಾನ : ಬಸವಯ್ಯ ಶಾಸ್ತ್ರೀ ಹಿರೇಮಠ, ಗದಗ
10. ವೀರಶೈವ ಸದಾಚಾರ ಸಂಗ್ರಹ
11. ವೀರಶೈವ ಧೀಕ್ಷಾವಿಧಿ : ಎನ್. ಆರ್. ಕರಿಬಸವ ಶಾಸ್ತ್ರಿ
12. ವೀರಶೈವ ಧರ್ಮಸಿಂಧು
13. ಕ್ರಿಯಾಸಾರ; ನೀಲಕಂಠ ಶಿವಾಚಾರ್ಯ
14. ಲಿಂಗಧಾರಣ ಚಂದ್ರಿಕಾ ; ನಂದಿಕೇಶ್ವರ
15. ಧರ್ಮಶಾಸ್ತ್ರಕಾ ಇತಿಹಾಸ್ (ಹಿಂದೀ)
    ಮೂಲ : ಪಾಂಡುರಂಗ ವಾಮನ ಕಾಣೆ
    ಅನು : ಅರ್ಜುನ ಚೌಬೆ ಕಾಶ್ಯಪ

ವೀರಶೈವ ಸಾಹಿತ್ಯ

ಡಾ॥ ವಿ. ಶಿವಾನಂದ

ವೀರಶೈವ ವಾಙ್ಮಯ ಕುರಿತು ವ್ಯಕ್ತಿಗತವಾಗಿ ಬರೆದ ಗ್ರಂಥ, ಲೇಖನಗಳು ಸಂಶೋಧನೆ, ಸಂಪಾದನೆ, ಸಂಭಾವನ ರೂಪದಲ್ಲಿ ವಿಪುಲ ಸಾಹಿತ್ಯ ಪ್ರಕಟಗೊಂಡಿರುವುದಾದರೂ, ಒಂದು ಸುಸಂಗತವಾದ ಸಮಗ್ರ ಸಾಹಿತ್ಯ ಚರಿತ್ರೆ ಪ್ರತ್ಯೇಕವಾಗಿ ರಚನೆಗೊಳ್ಳಬೇಕಾದ ಅಗತ್ಯ ಇದ್ದೇ ಇದೆ. ಕರ್ನಾಟಕ ಕವಿಚರಿತೆಯ ಮೂರು ಸಂಪುಟಗಳಲ್ಲಿ, ಕವಿ ಚರಿತೆಯ ಅನುಕ್ತ ಕೃತಿ ಸೂಚಿಯಲ್ಲಿ ಅಪಾರಸಂಖ್ಯೆ ಅಪ್ರಕಟಿತ ಹಸ್ತ ಪ್ರತಿ, ತಾಳೆಗರಿಗಳಲ್ಲಿ ಉಪಲಬ್ಧವಿರುವ ಎಲ್ಲ ಸಾಹಿತ್ಯರಾಶಿಯನ್ನು ಸಂಪೂರ್ಣವಾಗಿ ಪರಿಗಣಿಸಿದ್ದೇ ಆದರೆ ಜೈನ ವಾಙ್ಮಯ, ಬ್ರಾಹ್ಮಣ ವಾಙ್ಮಯ ಕಾಲು ಭಾಗದ್ದಾದರೆ ಮುಕ್ಕಾಲು ಪಾಲು ವೀರಶೈವ ಸಾಹಿತ್ಯವೇ ಗೋಚರಿಸುವುದರಲ್ಲಿ ಆಶ್ಚರ್ಯವಿಲ್ಲ. ಇದರ ವಿಸ್ತಾರ ಹೆಚ್ಚಲು ವೀರಶೈವ ವಾಙ್ಮಯಕಾರರು ಅವಲಂಬಿಸಿದ ವಿಚಾರಧೋರಣೆ, ಅನುಸರಿಸಿದ ಮಾಧ್ಯಮ, ಬಾಹ್ಯ ಪ್ರೇರಣೆಗಳಾದ ರಾಜಾಶ್ರಯ ಮತ್ತಿತರ ಪ್ರತಿಷ್ಠೆಗಳಿಗಿಂತ ಮುಕ್ತ ಸಮಾಜದಲ್ಲಿ ಸ್ವತಂತ್ರ ಶೀಲ ಪ್ರವೃತ್ತಿಯಿಂದ ಕೃತಿರಚನೆಗೈದುದು ಕಂಡುಬರುತ್ತದೆ. ವೀರಶೈವ ಸಾಹಿತ್ಯದ ನೈರಂತರ ಪ್ರಕ್ರಿಯೆಗಳ ನೆಲೆಗಟ್ಟು ಯಾವುದೆಂಬುದನ್ನು ಆಲೋಚಿಸುವುದೇ ಲೇಖನದ ಉದ್ದೇಶ.

ಅಧ್ಯಯನದ ಅನುಕೂಲಕ್ಕೆಂದು ಮಾತ್ರ ಮಾಡಿಕೊಳ್ಳಲಾದ ಇದುವರೆಗಿನ ಕನ್ನಡ ಸಾಹಿತ್ಯ ಚರಿತ್ರೆಯ ಯುಗ ವಿಭಜನೆ, ನಿತ್ಯ ಪರಿವರ್ತನಾಶೀಲವಾದ ಸಾಹಿತ್ಯದ ಸಾತತ್ಯ ಗುಣ-ಲಕ್ಷಣಗಳನ್ನು ತಿಳಿಯಲು ಅಡ್ಡಿಯಾಗುತ್ತದೆ. ಆದರೆ ಈ ಸಾತತ್ಯಗುಣ ಎಲ್ಲ ಕಡೆಗಳಲ್ಲೂ ಸಮಾನವಾಗಿ ಇರುತ್ತದೆಂದೇನೂ ಹೇಳಲಾಗದು. ವೀರಶೈವ ಸಾಹಿತ್ಯ ಈ ಸಾತತ್ಯಗುಣ ಸಾಪೇಕ್ಷತೆಯಿಂದ ಆರಂಭದ ಘಟ್ಟದಿಂದ ಮೊದಲಾಗಿ ಅದರ ಬೆಳೆಮುಖವನ್ನು ಕಾಣುತ್ತೇವೆಯೇ ಹೊರತು ಇಳಿ ಮುಖವನ್ನು ಕಾಣುವುದಿಲ್ಲ. ವೀರಶೈವ ಧರ್ಮ, ಸಮಾಜ, ಸಂಸ್ಕೃತಿಯ ಪ್ರಗತಿಶೀಲ ಧೋರಣೆ ಆ ಸಾಹಿತ್ಯದ ನಿರಂತರ ಪ್ರಕಿಯೆಗೆ ಕಾರಣವಾಗಿದೆ.

ಕನ್ನಡದಲ್ಲಿ ಬೌದ್ಧ ಸಾಹಿತ್ಯವಿತ್ತೆ ? ಎಂಬುದು ಒಂದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಬೌದ್ಧ ಧರ್ಮ ಈ ನೆಲದಲ್ಲಿ ಪ್ರಸಾರಗೊಂಡಿತ್ತಾದರೂ ಬೌದ್ಧ ಸಾಹಿತ್ಯ ಬೆಳೆದು ಬರಲಿಲ್ಲ. ರಾಜಾಶ್ರಯ ತಪ್ಪಿದ ಮೇಲೆ ಉಚ್ಛ್ರಾಯ ಸ್ಥಿತಿಗೇರಿದ್ದ ಜೈನ ಸಾಹಿತ್ಯ

ಇದ್ದಕ್ಕಿದ್ದಂತೆ ಹಿಮ್ಮೆಟ್ಟಿತು. ಬ್ರಾಹ್ಮಣ ವಾಙ್ಮಯ ಮಧ್ಯಕಾಲದಲ್ಲಿ ಪ್ರಸಾರಗೊಂಡಿತಾದರೂ ಅದರ ಪ್ರೇರಣೆ- ಧೋರಣೆಗಳೆಲ್ಲವೂ ಅದಕ್ಕಿಂತ ಮೊದಲಿಗೆ ಕನ್ನಡದಲ್ಲಿ ಕೃತಿಗಿಳಿದ ವೀರಶೈವ ಸಾಹಿತ್ಯದಲ್ಲಿ ಕಾಣಿಸಿಕೊಂಡಿದ್ದರಿಂದ ಅದು ಕನ್ನಡಿಗರಿಗೆ ಹೊಸ ಸ್ಫೂರ್ತಿಯನ್ನೇನೂ ನೀಡಲಿಲ್ಲ. ಮೇಲಾಗಿ ಮತೀಯ ಚೌಕಟ್ಟಿಗೆ ಮೀರಿನಿಂತ ಸಮಷ್ಟಿಕ್ರಾಂತಿಯನ್ನಾಗಲಿ, ಸಾಮಾಜಿಕ - ಧಾರ್ಮಿಕ ಬದಲಾವಣೆಯ ತೀವ್ರ ಹಂಬಲವನ್ನಾಗಲಿ ಅದು ತನ್ನ ಆಂತರಿಕ ಕಾಳಜಿಯಾಗಿ ಬಳಸಿಕೊಳ್ಳಲಿಲ್ಲ. ಈ ಹಿನ್ನೆಲೆಯಿಂದ ಸಮಗ್ರ ಕನ್ನಡ ಸಾಹಿತ್ಯದ ದೇಸೀನಿಷ್ಠ ಚರಿತ್ರೆಯ ಗುಣ - ವೈಲಕ್ಷಣ್ಯಗಳ ಮೇಲಿಂದ ಹೇಳುವುದಾದರೆ ವೀರಶೈವ ಸಾಹಿತ್ಯಕ್ಕೆ ಇನ್ನಾವ ಕಡೆಗಳಲ್ಲೂ ಕಾಣಲಾಗದ ಕೆಲವೊಂದು ಅಸಾಧಾರಣ ಶಕ್ತಿಗಳನ್ನು ಅದರ ಮುನ್ನಡೆಗೆ ಕಾರಣವಾಗಿರುವುದು ಹೊಳೆಯುತ್ತದೆ. ಆಯಾ ಕಾಲದ ಕವಿಕೃತಿಗಳ ಸಂಖ್ಯಾನಿರ್ದೇಶನದ ಮೇಲಿಂದಲೇ ಅದರ ಉತ್ಕರ್ಷಕಾರಣಗಳನ್ನು ನಾವು ತಿಳಿಯಬಹುದಾಗಿದೆ.

ಕರ್ನಾಟಕ ಕವಿಚರಿತೆಯ ಮೂರು ಸಂಪುಟಗಳಲ್ಲಿ ಆಯಾ ಕಾಲದ ಕವಿಗಳ ಸಂಖ್ಯಾನಿರ್ದೇಶನ ಈ ಕೆಳಗಿನಂತೆ ವ್ಯಕ್ತವಾಗುತ್ತದೆ.

ಕ.ಚ. ಸಂಪುಟ	ಜೈನ	ವೀರಶೈವ	ಬ್ರಾಹ್ಮಣ	ಇತರ	= ಒಟ್ಟು
(ಕ್ರಿ.ಶ. ೧೪೦೦ರವರೆಗೆ)	೯೫	೯೦	೪೫	೫೦	= ೧೭೫
(ಕ್ರಿ.ಶ. ೧೬೦೦ರವರೆಗೆ)	೫೬	೧೪೫	೭೬	೨೪	= ೪೫೩
(ಕ್ರಿ.ಶ.೧೭೦೦ರವರೆಗೆ	೨೩	೧೯೧	೧೦೮	೩೦	= ೩೮೮
(ಕ್ರಿ.ಶ. ೧೮೦೦ ರವರೆಗೆ)	೧	೨೭	೧೫೯	೨೮	= ೧೩೨
	೧೭೫	೪೫೩	೩೮೮	೧೩೨	= ೧೧೪೮

ಮೇಲಿನ ಸಂಖ್ಯೆಯಲ್ಲಿ ವಚನಕಾರರ ಸಂಖ್ಯೆ ಸೇರಿದರೆ ವೀರಶೈವ ಕರ್ತೃಗಳ ಸಂಖ್ಯೆ ದ್ವಿಗುಣಿತಗೊಳ್ಳುತ್ತದೆ. ಅಲ್ಲದೆ 'ವಚನ' ಒಂದು ಸಾಹಿತ್ಯ ಪ್ರಕಾರವಾಗಿ ಆಧುನಿಕ ಕಾಲದ ನವ್ಯ ಕವಿಗಳವರೆಗೂ ಸಂವಹನಶೀಲ ಮಾಧ್ಯಮವಾಗಿ ಮುಂದುವರಿದಿದೆ. ಕ.ಚ.ಕಾರರು ಮೊದಲ ಸಂಪುಟದಲ್ಲಿ ೧೨೪ ವಚನಕಾರರ ಸಂಖ್ಯಾ ನಿರ್ದೇಶನ ಮಾಡಿದ್ದು ಎರಡನೆಯ ಸಂಪುಟದಲ್ಲಿ ೬೦ ಜನ ಹೊಸಬರನ್ನು ಸೇರಿಸಿ ಆ ಸಂಖ್ಯೆಯನ್ನು ೧೮೪ಕ್ಕೆ ತರುತ್ತಾರೆ. ಅಲ್ಲದೆ ೫೯ ಹೊಸ ಅಂಕಿತಗಳು ಸಿಗುವುದರಿಂದ ಅಷ್ಟು ಸಂಖ್ಯೆಯ ವಚನಕಾರರೂ ಇರಬಹುದಾದ್ದರಿಂದ ಆ ಸಂಖ್ಯೆ ೨೪೩ಕ್ಕೇರುತ್ತದೆ. ಇತ್ತೀಚಿನ ಆಧಾರಗಳಿಂದ ಆ ಸಂಖ್ಯೆ ೪೦೦ಅನ್ನು ಸಮೀಪಸುವಂತಿದೆ. ಇದರಲ್ಲಿ ೩೨ಕ್ಕಿಂತ ಹೆಚ್ಚಿನ ಮಹಿಳೆಯರೂ ವಚನಕಾರ್ತಿಯರಾಗಿದ್ದಾರೆ. ಬಹುಶಃ ಜಗತ್ತಿನ ಇನ್ನಾವುದೇ ವಾಙ್ಮಯ ಚರಿತ್ರೆಯಲ್ಲಿ ಏಕೈಕಕಾಲದಲ್ಲಿ ಇಷ್ಟೊಂದು ಗಾತ್ರದ ಸಾಮೂಹಿಕ, ಸಂಘಟನಾತ್ಮಕ ಸಾಹಿತ್ಯದ ಸೃಜನ ಕ್ರಿಯೆ ಸಾಧ್ಯವಾಗಿಲ್ಲ. ಭಾರತದಲ್ಲಿ ಇಡೀ ದೇಶಕ್ಕೆ ಎಲ್ಲ ವೈವಿಧ್ಯವನ್ನು ಒಳಗೊಳ್ಳುವಂತಹ[1]

1. **ಕರ್ನಾಟಕ ಕವಿಚರಿತ್ರೆ** (ಸಂ,೧,೨,೩) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಇತ್ತೀಚೆಗೆ ಕರ್ನಾಟಕ ಸರಕಾರ ಡಾ॥ ಎಂ.ಎಂ.ಕಲಬುರ್ಗಿ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ೧೪. ವಚನಗಳ ಸಮಗ್ರ ಸಂಪುಟಗಳು ಈ ಸಾಹಿತ್ಯದ ವಿಸ್ತಾರವನ್ನು ಸೂಚಿಸುತ್ತವೆ.

ರಾಷ್ಟ್ರೀಯ ಸಾಹಿತ್ಯದ ಪರಿಯೋಜನೆಯಲ್ಲಿ ಇಂತಹ ಲಕ್ಷಣಗಳು ಇಂದು ಪುನರ್ ಜಾಗ್ರತಗೊಂಡಿವೆ. ನಿರಂಕುಶಪ್ರಭುತ್ವ ಹಾಗೂ ಸಂಪ್ರದಾಯಗಳು ಬೇರು ಬಿಟ್ಟ ಅಂದಿನ ಕಾಲದಲ್ಲೇ ಇಂದು ಮಹತ್ವವೆನಿಸಿರುವ ವ್ಯಕ್ತಿ ಸ್ವಾತಂತ್ರ್ಯ, ಪ್ರಜಾಸತ್ತಾತ್ಮಕ ಧೋರಣೆಯನ್ನೊಳಗೊಂಡು ವೀರಶೈವ ಸಾಹಿತ್ಯ ಸೃಷ್ಟಿಗೊಂಡಿರುವುದು ಎಷ್ಟು ವಿಸ್ಮಯವೋ ಅಷ್ಟೇ ಸತ್ಯಸಂಗತಿಯಾಗಿದೆ. ಇದರ ನೈರಂತರ ಪ್ರಕ್ರಿಯೆಗಳಲ್ಲಿ ಮುಖ್ಯವಾದುವು ಈ ಕೆಳಗಿನಂತಿವೆ.

೧. ಮುಕ್ತ ಸಮಾಜ

೨. ಅಭಿವ್ಯಕ್ತಿ ಸ್ವಾತಂತ್ರ್ಯ

೩. ವೈಚಾರಿಕತೆ

೪. ಜಾತಿ ಲಿಂಗಭೇದ ನಿರ್ಮೂಲನೆ

೫. ವೃತ್ತಿ ಸಂಚಲನೆ

೬. ಜನಪದ ಸಮಷ್ಟಿ ಸಮುದಾಯ ಭಾವನೆ.

೭. ಒತ್ತಾಯ ರಹಿತ ಧರ್ಮ ಪ್ರವೇಶ

೮. ಧಾರ್ಮಿಕ ಆಚರಣೆಗಳಲ್ಲಿ ಸಮಾನತೆ

೯. ವಿಶ್ವ ಮಾನವತಾವಾದ

೧೦. ಜನಭಾಷಾ ಪ್ರಾತಿನಿಧ್ಯ

೧೧. ಜನಸಂಪರ್ಕ-ಸಮೂಹ ಮಾಧ್ಯಮಗಳು

ಮುಕ್ತ ಸಮಾಜ

ಇದು ಸಂಪ್ರದಾಯಬದ್ಧ ಸಮಾಜದ ನಡುವಳಿಕೆಯನ್ನು ಪ್ರಶ್ನಿಸುತ್ತದೆ. ಮುಕ್ತ ಸಮಾಜದಲ್ಲಿ ವ್ಯಕ್ತಿ ಸಮಾಜದ ಅಂಗವಾಗಿದ್ದುಕೊಂಡೂ ವ್ಯಕ್ತಿಸ್ವಾತಂತ್ರ್ಯವನ್ನು ಅಲ್ಲದೆ ಅದನ್ನು ಪೋಷಿಸುವಂತಹ ಸಾಮಾಜಿಕ ಸಂಸ್ಥೆಗೂ ಬದ್ಧನಾಗಿರುತ್ತಾನೆ. ಹಿಂದುವಿನ ಸನಾತನ ಧರ್ಮದ ಚೌಕಟ್ಟಿನಲ್ಲಿ ರೂಪಿತವಾದ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ವ್ಯಕ್ತಿಯ ಕುಲ ಹುಟ್ಟಿನಿಂದಲೇ ನಿರ್ಧಾರಗೊಳ್ಳುತ್ತದೆ. ಆದರೆ ಮುಕ್ತ ಸಮಾಜದಲ್ಲಿ ವ್ಯಕ್ತಿಯ ಆಚರಣೆಗಳು ಯಾರವು ಉನ್ನತ ಮಟ್ಟದವೊ ಅವರನ್ನು ಕುಲಜರೆಂದು ಭಾವಿಸುವ ಧೋರಣೆ ಇರುತ್ತದೆ. ಪರ ಮತ್ತು ವಿರೋಧ ವಿಚಾರಗಳಿದ್ದಾಗಲೂ ಅವನ್ನು ಮುಕ್ತವಾಗಿ ಪ್ರಕಟಿಸುವ ಜನತಾಂತ್ರಿಕ ಮೌಲ್ಯಗಳು ಇಲ್ಲಿರುತ್ತವೆ. ಆರಂಭದ ಘಟ್ಟದಲ್ಲಿಯೇ ವಚನಕಾರರು ತಮ್ಮ ವಚನಗಳಲ್ಲಿ ಇಂತಹ ಒಂದು ಮುಕ್ತ ಸಮಾಜವನ್ನು ಮೊದಲು ರೂಪಿಸಿಕೊಂಡು ಪ್ರತ್ಯಕ್ಷ ಅನುಷ್ಠಾನಕ್ಕೆ ತಂದು ಅಂತಹ ಸಮಾಜ ಕುರಿತಾದ ಚಿಂತನೆಗಳನ್ನು ವಚನ ವಾಙ್ಮಯದಲ್ಲಿ ಬಿತ್ತರಿಸಿರುವುದು ಕಂಡುಬರುತ್ತದೆ.

ಅಭಿವ್ಯಕ್ತಿ ಸ್ವಾತಂತ್ರ್ಯ

ಯಾವ ಸಮಾಜದಲ್ಲಿ ಜನತೆಯ ಭಾವನೆ, ವಿಚಾರ, ಆಸೆ, ಆಕಾಂಕ್ಷೆಗಳನ್ನು ಅನಿರ್ಬಂಧವಾಗಿ ತಿಳಿಸಬೇಕಾದ ಅಭಿವ್ಯಕ್ತಿ ಸ್ವಾತಂತ್ರ್ಯವಿರುವುದಿಲ್ಲವೋ ಅಂಥ ಸಮಾಜ

ಜಡ. ನಿಶ್ಚೇಷ್ಟಿತ ಹಾಗೂ ನಿಷ್ಕ್ರಿಯಾತ್ಮಕ. ಎಲ್ಲ ಸ್ವಾತಂತ್ರ್ಯಗಳ ವಿಕಾಸಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯ ತಳಹದಿ ರೂಪದ್ದಾಗಿರುತ್ತದೆ.[2] ಇತರ ಪ್ರಾಣಿ ಪಶು ಪಕ್ಷಿಗಳಿಗಿಂತ ಮನುಷ್ಯನಲ್ಲಿರುವ ವಿಶಿಷ್ಟಶಕ್ತಿ ವಾಕ್ ಶಕ್ತಿಯಾಗಿರುವುದರಿಂದ ಅವನು ನಾಗರಿಕತೆಯ ಇತಿಹಾಸದಲ್ಲಿ ಮುಂದಾಗಿದ್ದಾನೆ. ಪ್ರಭುಸತ್ತೆ, ಸಂಪ್ರದಾಯ ನಿಷ್ಠ ಸಮಾಜ ಹಾಗೂ ಶತಶತಮಾನಗಳ ಗುಲಾಮೀ ಪ್ರವೃತ್ತಿಯಿಂದಾಗಿ ವ್ಯಕ್ತಿಯ ಅತಿಮೌಲಿಕವಾದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ 'ಅಡ್ಡಿಯಾಗಿರುವುದನ್ನು ಗಮನಿಸಿ ಭಾರತದ ಇಂದಿನ ಸಂವಿಧಾನದಲ್ಲಿ ನಾಗರಿಕನಿಗೆ ವಾಕ್‌ಸ್ವಾತಂತ್ರ್ಯದ ಹಕ್ಕಿರಬೇಕೆಂದು ಗೊತ್ತುಪಡಿಸಿದೆ (ಅನುಚ್ಛೇದ ೧೯(೧). ಕರ್ನಾಟಕದ ಶಿವಶರಣರು ಈ ಸ್ವಾತಂತ್ರ್ಯ ಕುರಿತು ಅಷ್ಟು ಹಿಂದೆಯೇ ಆಲೋಚಿಸಿದ್ದಾರೆ. ಒಬ್ಬೊಬ್ಬ ವಚನಕಾರರು ಹೆಚ್ಚು ಹೆಚ್ಚು ವಚನಗಳನ್ನು ಬರೆದಿರುವುದು ಅವರು ಹೊಂದಿದ್ದ ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಸಾಧ್ಯವಾಗಿದೆ. ಸಿದ್ಧರಾಮ ಅಲ್ಲಮರು ಅವರ ವಚನಗಳ ಸಂಖ್ಯೆಯನ್ನು ಕೋಟಿಗಟ್ಟಲೆ ಎಂದು ಹೇಳಿದ್ದಾರೆ. ಅವು ವಚನ ಸಂಖ್ಯೆಯಲ್ಲವಾದರೂ ಅವರಾಡಿದ ಬಿಡಿಬಿಡಿಯಾದ ಮಾತು, ನುಡಿಗಳಾಗಿರುವದಂತೂ ಸತ್ಯ. ವ್ಯಕ್ತಿ. - ವ್ಯಕ್ತಿಗಳಿಗಿಂತ ಇಡೀ ಸಮುದಾಯ ಸೇರಿ ಅನುಭವಗೋಷ್ಠಿಯಲ್ಲಿನ ತಮ್ಮ ವಿಚಾರಗಳ ಚಿಂತನ -ಮಂಥನದ ಮೂಲಕ ಅವರಿಗೆ ಹೊಸ ಹೊಸ ವಿಚಾರಗಳು ಹೊಳೆಯುತ್ತ ಹೋಗಿವೆ. ಇಂತಹ ಅಭಿವ್ಯಕ್ತಿ 'ಸೂಳ್ನುಡಿ', 'ವಚನ', 'ಪ್ರತಿವಚನ', 'ಪ್ರತ್ಯುತ್ತರ', 'ದೃಷ್ಟ' ಸಂವಾದ ಗೋಷ್ಠಿಗಳ ಮೂಲಕ ಹೆಚ್ಚುತ್ತ ನಡೆದಿದೆ. ಇದು ಅವರ ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಸಾಧ್ಯವಾಗಿರುವುದರ ಹೆಗ್ಗುರುತು.

ವೈಚಾರಿಕತೆ

ಸಾಮಾಜಿಕ - ಧಾರ್ಮಿಕ ಬದಲಾವಣೆಯ ತೀವ್ರ ಆ ಸಕ್ತಿಯನ್ನಿರಿಸಿಕೊಂಡಿದ್ದ ವಚನಕಾರರಿಗೆ ಅವರ 'ವೈಚಾರಿಕತೆ' ಅಥವ ಅವರ 'ಪ್ರಜ್ಞೆ ಮತ್ತು ಪರಿಸರ' ಗಳೆರಡೂ ಹೊಸ ಹೊಳಪನ್ನುಂಟುಮಾಡಿವೆ. ಶಿವಶರಣರ ವೈಚಾರಿಕತೆಗೆ ಎರಡು ಧ್ಯೇಯಾದರ್ಶಗಳು ಗುರಿಯಾಗಿದ್ದವು : ಒಂದು 'ಅಂತರಂಗಶುದ್ಧಿ', ಇನ್ನೊಂದು ಬಹಿರಂಗ ಶುದ್ಧಿ'. ವ್ಯಕ್ತಿಯ ಚಾರಿತ್ರ್ಯ ಶುದ್ಧಿ ಸಮಷ್ಟಿಯಲ್ಲೂ ಸಾಧಾರಣ ಸ್ವರೂಪದ್ದಾಗಿ ಬೆರೆತುಕೊಳ್ಳಬೇಕು. ಬಾಹ್ಯ ಬೋಧನೆಯಿಂದ ಶೋಧಿಸಲಾಗದ್ದನ್ನು ವ್ಯಕ್ತಿ ತನ್ನ ಸದಸದ್ ವಿವೇಕದಿಂದ ತಿಳಿಯಬೇಕು. 'ತನ್ನ ತಾಸರಿದೊಡೆ ತನ್ನರಿವೆ ತನಗೆ ಗುರು'. ವೇದಾಗಮ ಶಾಸ್ತ್ರ ಪುರಾಣ ತರ್ಕ ತಂತ್ರಗಳ ಬೆನ್ನು ಹತ್ತದೆ ತಮ್ಮ ಸಾಧನೋನ್ನತ ಅನುಭವವನ್ನೇ ಪ್ರಮಾಣವಾಗಿಸಿಕೊಂಡು ಅದನ್ನೇ ಅನುಭಾವದ ಮಟ್ಟಕ್ಕೆ ಕೊಂಡೊಯ್ದುದು ಅವರಲ್ಲಿನ ವೈಚಾರಿಕತೆ ಆಧ್ಯಾತ್ಮ

2. ಪ್ರಸಾರ ಮಾಧ್ಯಮ ಸ್ವಾತಂತ್ರ್ಯ : ರಾಮಕೃಷ್ಣಹೆಗಡೆ : ಭೀಮಸೇನ ಆಚಾರ ಸ್ಮಾರಕ ಉಪನ್ಯಾಸ ನವದೆಹಲಿ (1985) Man is a communicating animal. What we call 'Civilization' has been achieved by man through communication - Mecrosky - An **Introduction to Inter-Personal Communication (1971)**

ಗಾಮಿಯಾದವನಿಗೆ ಬಾಹ್ಯ ಪೂಜೆ, ಆಚರಣೆಗಳು, ಮಾಟ, ಮಂತ್ರಗಳು ವ್ಯರ್ಥವಾಗಿ ತೋರುತ್ತವೆ. ಧರ್ಮದ ಹೆಸರಲ್ಲಿ ಅಜ್ಞಾನ, ಅಂಧಃಶ್ರದ್ಧೆಗಳು ಬಹುದೇವತೋಪಾಸನೆ, ಕೀಳುದೈವಾನುಸರಣೆ, ಪ್ರೇತ - ಸೂತಕಗಳು ಮಡಿ-ಮೈಲಿಗೆ ಇವನ್ನೇ ಮಾಧ್ಯಮವಾಗಿಸಿಕೊಂಡ ಪೌರೋಹಿತ್ಯಶಾಹಿಯ ಅಟ್ಟಹಾಸತನ್ನ ಶೋಷಣೆ ತಾಂಡವವಾಡುತ್ತಿದ್ದ ಕಾಲದಲ್ಲಿ ಶಿವಶರಣರು ವಿಚಾರಕ್ರಾಂತಿಯ ಬೀಜಾರೋಪಣೆ ಮಾಡಿದರು. ಕುಲಗಳಲ್ಲಿನ ಮೇಲು ಕೀಳು ಭಾವನೆಯ ಕಿಲ್ಬಿಷವನ್ನು ತೊಡೆದುಹಾಕಿದರು. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಗೆ ದೊರಕಿದ್ದ ನಿಕೃಷ್ಟಸ್ಥಾನವನ್ನು ಉತ್ಕೃಷ್ಟ ಸ್ಥಾನದಲ್ಲಿ ಗೌರವಿಸಿದರು. ಗಂಡು - ಹೆಣ್ಣು ಭೇದ ಬಾಹ್ಯ ಕುರುಹು ಮಾತ್ರ. ಒಳಗೆ ಸುಳಿವ ಆತ್ಮ ಗಂಡೂ ಅಲ್ಲ ಹೆಣ್ಣುಅಲ್ಲ ಎಂದು ಸಾರಿದರು. ಎಂದಿನಿಂದಲೂ ನಾಯಬಾಲದ ಡೊಂಕದಿಂದಿರುವ ಸಮಾಜವನ್ನು ನೇರಗೊಳಿಸುವದು ಒಮ್ಮೆಲೇ ಸಾಧ್ಯವಾಗದೆಂದು ಅರಿತಿದ್ದರೂ ಅವರು ತಮಗೆ ತಿಳಿದ ನೂತನ ವಿಚಾರಗಳನ್ನು ಜನತೆಗೆ ಪ್ರಚುರಪಡಿಸುವುದನ್ನು ಅಚಲ ವ್ರತವಾಗಿಸಿಕೊಂಡರು. ಇದಕ್ಕೆ ನಿರ್ಭೀತ ಮತಿಬೇಕು. 'ಆತ್ಮಶ್ರೀ ಸಿದ್ಧಿ ನಿರಂಕುಶಮತಿಯಿಂದ ಸಾಧ್ಯವೆಂದು ಕುವೆಂಪು ನುಡಿಯುತ್ತಾರೆ. 'ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು ಓರೆಯಾವಿನ ಹಂಗೇಕೊ ಆನೀ ಬಿಜ್ಜಳಂಗಂಜುವೆನೆ ? ಎಂಬ ಬಸವಣ್ಣನವರ ನುಡಿಯಲ್ಲಿನ ಕೆಚ್ಚು ಇತರ ಶರಣರ ಆಂದೋಲನದಲ್ಲೂಕಹಳೆಯ ಧ್ವನಿಯಾಗಿ ಮೊಳಗಿರುವುದನ್ನು ನಾವು ಕಾಣುತ್ತೇವೆ.

ವೃತ್ತಿ ಸಂಚಲನೆ (Occupational Mobility)

ಮುಕ್ತ ಸಮಾಜದ ಇನ್ನೊಂದು ಪ್ರಧಾನ ಲಕ್ಷಣ ವೃತ್ತಿ ಸಂಚಲನೆ ಮತ್ತು ಶ್ರಮ ಗೌರವದ ನಡವಳಿಕೆ ಕಾಯಕದಲ್ಲಿ ತಾರತಮ್ಯವಿಲ್ಲದೆ ಯಾರು ಯಾವ ಉದ್ಯೋಗವನ್ನಾದರೂ ಕೈಕೊಂಡಿರಬಹುದು. ಕೈಕೂಲಿಯಿಂದ, ಕರಣಿಕನಿಂದ ಪ್ರಧಾನ ಮಂತ್ರಿವರೆಗಿನ ಎಲ್ಲ ಸ್ತರದ ವೃತ್ತಿಗಳು ಅವರವರಲ್ಲಿ ನೀಚೋಚ್ಚವಾಗಿರದೆ ಸಮಸ್ತರದಲ್ಲಿ ಇಡೀ ಸಮಾಜದ ಅಭ್ಯುದಯಕ್ಕೆ ಕಾರಣವಾಗುವುದನ್ನು ವೃತ್ತಿ ಸಂಚಲನೆಯಲ್ಲಿ ಕಾಣುತ್ತೇವೆ. ಸಮಗಾರ, ಡೋಹರ, ಮೇದಾರ, ವೋಳಿಗೆ, ಗಾಣಿಗ, ಕದಿರೆ, ಕನ್ನಡಿ ಪಡಿಹಾರಿ, ಅಂಬಿಗ, ಹಡಪ ನುಲಿಕಾಯಕದವರೆಲ್ಲರೂ ಅನುಭವ ಮಂಟಪದ ವೇದಿಕೆಯ ಮೇಲೆ ಸಮಾನಗೌರವದಿಂದ ವರ್ತಿಸುವುದನ್ನು ಶರಣ ಸಮಾಜದಲ್ಲಿಕಾಣುತ್ತೇವೆ. ಬಸವಣ್ಣ ಮೊದಲಿಗೆ ಒಬ್ಬ ಸಾಮಾನ್ಯ ಕರಣಿಕನಾಗಿದ್ದು ರಾಜ್ಯದ ಭಂಡಾರಿಯಾಗಿ, ಪ್ರಧಾನ ಮಂತ್ರಿಯಾಗುವ ಮುಕ್ತ ಅವಕಾಶ ಯೋಗ ಸಿದ್ಧನಾದ ಸಿದ್ಧರಾಮ ಮಲ್ಲಿಕಾರ್ಜುನನ ದಾಸೋಹದ ಮನೆಯ ಉಸ್ತುವಾರನಾಗಿ ರುವುದನ್ನು ಮಹಾರಾಜನಾಗಿದ್ದ ಮಾರಯ್ಯ ಕಲ್ಯಾಣದ ಬೀದಿಯಲ್ಲಿ ಮೋಳಿಗೆ ಹೊತ್ತು ಮಾರುವುದನ್ನು ನಾವು ಕಾಣುತ್ತೇವೆ. ಇದು ವೃತ್ತಿ ಸಂಚಲನೆಯನ್ನು ಮನ್ನಿಸಿರುವ ಸಮಾಜದ ಲಕ್ಷಣವಾಗಿ ತೋರುತ್ತದೆ.

ಜನಪದ ಸಮಷ್ಟಿ ಸಂಸ್ಕೃತಿ ಸಮುದಾಯ ಸಂಘಟನೆ

ಜಗತ್ತಿನ ಯಾವುದೇ ಒಂದು ಮಹಾಕ್ರಾಂತಿಯ ಯಶಸ್ಸಿನ ಹಿಂದೆ ಜನಪದ ಸಮಷ್ಟಿ ಶಕ್ತಿ ಸಮಷ್ಟಿ ಸಂಸ್ಕೃತಿ ಸ್ಫೂರ್ತಿಯ ಬಿಂದುವಾಗಿರುತ್ತದೆ. ಹಿಂದೂ ಧರ್ಮದ ಒಳರಚನೆ ಎಷ್ಟೇ ಸಾಂದ್ರತರ ಏಕೈಕವೆನ್ನಿಸಿದ್ದರೂ ಅದರ ಹೊರರಚನೆ ಅತ್ಯಂತ ವಿಕೇಂದ್ರಿತ, ಶಿಥಿಲ ಹಾಗೂ ಶ್ರೇಣಿನಿಷ್ಠ ವಾದುದಾಗಿದೆ. ಈ ಲಕ್ಷಣಗಳು ಕಂಡುಬರುವ ಅನ್ಯತ್ರ ಕಡೆಯ ಸಮಾಜ ಸಂಸ್ಕೃತಿಗಳಲ್ಲೂ ಈ ಉನ್ನತ ನಿಮ್ನ ಭಾವಗಳ ತಾಕಲಾಟ, ದ್ವಂದ್ವವಿದ್ದೇ ಇರುತ್ತದೆ. ಇದನ್ನು ಆಲೋಚಿಸಿದ ಸಾಂಸ್ಕೃತಿಕ ವಿಜ್ಞಾನಿಗಳು ಇಂಥಲ್ಲಿ ಎರಡು ಸಂಪ್ರದಾಯಗಳು ಒಂದು ಮಾರ್ಗನಿಷ್ಠ ಇನ್ನೊಂದು ದೇಸಿ ನಿಷ್ಠ (great and little traditions). ಇವು ಯಾವಾಗಲೂ ಶ್ರೇಣೀಕೃತ ವ್ಯವಸ್ಥೆಗೆ ಪೋಷಕವಾಗಿರುತ್ತವೆ ಎನ್ನುತ್ತಾರೆ. ಇದೇ ಬಗೆಯ ವಿಭಜನೆ ಹಿಂದೂ ಧರ್ಮದಲ್ಲಿದ್ದು ಇದನ್ನು ವೀರಶೈವ ವಚನಕಾರರಿಗೂ ಸಹ ಕೆಲವು ವಿದ್ವಾಂಸರು ಅನ್ವಯಿಸಿದ್ದಾರೆ[3] ಕೆಲವು ಸಮಾಜ ವಿಜ್ಞಾನಿಗಳು ಹಿಂದೂ ಧರ್ಮದ ಆಂತರಿಕ ಶ್ರೇಣಿಗಳನ್ನು ಅಖಿಲಭಾರತಸ್ತರ, ತಪ್ಪಲುಸರ ಪ್ರಾದೇಶಿಕಸ್ತರ ಮತ್ತು ಸ್ಥಳಿಕವೆಂದಾಗಿ ನಾಲ್ಕು ರೀತಿ ವಿಂಗಡಿಸುತ್ತಾರೆ[4] . ಆದರೆ ವೀರಶೈವ ಧರ್ಮ, ಸಂಸ್ಕೃತಿಗೆ ಇಂಥ ವಿಭಜನೆ ಸಲ್ಲದ್ದೆಂದು ಡಾ|| ಕೆ.ಈಶ್ವರನ್ ಸ್ಪಷ್ಟಪಡಿಸುತ್ತಾರೆ. ಅವರು ಹೇಳುವಂತೆ ಮಾರ್ಗ-ದೇಸೀಸಂಪ್ರದಾಯಗಳೆರಡನ್ನೂ ಸಂಯೋಜಿಸಿಕೊಂಡು ಸುಮಧುರ ಮಿಶ್ರಣದಿಂದ ಕ್ರಿಯಾಶೀಲವಾಗಿರುವ ಜನಪದ ಸಮಷ್ಟಿ ಸಂಸ್ಕೃತಿ ವೀರಶೈವದ್ದಾಗಿದೆ[5]. ಈ ವಿಚಾರ ಕುರಿತು ವಚನ ಪಿತಾಮಹ ಫ.ಗು. ಹಳಕಟ್ಟಿ ಅವರೂ ಸಹ ಹಿಂದೆಯೇ ಇದನ್ನು ಗಮನಿಸಿ ಹೇಳಿದ್ದಾರೆ. 'ವೀರಶೈವ ಧರ್ಮವು ಜನಸಮುದಾಯದ ಸರ್ವಸಾಮಾನ್ಯಧರ್ಮವು. ಒಂದೇ ಕಡೆಗೆ ದಟ್ಟವಾದ ಜನ ವಸತಿಯುಳ್ಳ ಧರ್ಮವು ಹಿಂದುಸ್ಥಾನದಲ್ಲಿ ಸೀಖ್‌ಧರ್ಮದ ಹೊರತಾಗಿ ಬೇರೆ ಯಾವ ಧರ್ಮದಲ್ಲಿ ಯೂ ಇರುವುದು ಕಂಡುಬರುವುದಿಲ್ಲ. ಮುಸಲ್ಮಾನ, ಬ್ರಾಹ್ಮಣ ಈ ಧರ್ಮಿಯರ ಸಂಖ್ಯೆ ವೀರಶೈವರಿಗಿಂತ ಹೆಚ್ಚು. ಏಕೆಂದರೆ ಅವರ ವಸತಿಯು ಬೇರೆಬೇರೆ ಪ್ರಾಂತಗಳಲ್ಲಿ ಹರಿದು ಹಂಚಿಹೋಗಿದೆ. ವೀರಶೈವ ಧರ್ಮ ಒಂದೇ ಕಡೆಗೆ ಅನೇಕ ಸಮಾಜಗಳಲ್ಲಿ ದಟ್ಟವಾಗಿ ಹಬ್ಬಿದ್ದರ ಮೇಲಿಂದ ಅದು ಹಿಂದಿನ ಕಾಲದಲ್ಲಿ ಜನ ಸಮುದಾಯಕ್ಕೆಲ್ಲ ಸರ್ವಸಾಮಾನ್ಯ ಧರ್ಮವಾಗಿತ್ತೆಂಬುದನ್ನು ತೋರಿಸುತ್ತದೆ[6]' ಕನ್ನಡದಲ್ಲಿ ವೀರಶೈವ ವಾಙ್ಮಯ ಎಲ್ಲ ಮತಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಸೃಷ್ಟಿಗೊಳ್ಳಲು ಈ ಸಮಷ್ಟಿ ಜನಪದ ಸಂಸ್ಕೃತಿಯೇ ಕಾರಣವೆಂದು ಬೇರೆ ಹೇಳಬೇಕಿಲ್ಲ. ಅದೇ ಒತ್ತಾಯರಹಿತ ಧರ್ಮಪ್ರವೇಶ, ಸಂಸ್ಕಾರ ಆಚರಣೆಗಳಲ್ಲಿನ ಸಮಾನತೆ.

3 Ramanujan A.K. : Speaking of Siva p. 34. Penguin Pub : 1979

4. ಎಂ.ಎನ್. ಶ್ರೀನಿವಾಸ ಕೊಡಗರ ಧರ್ಮ ಮತ್ತು ಸಮಾಜ

5. ಡಾ|| ಕೆ. ಈಶ್ವರನ್: ಲಿಂಗಾಯತ ಧರ್ಮ ಸಂಸ್ಕೃತಿ , ಸಮಾಜ. ಪು.೮ ೧೪೨, (ಮೈವಿವಿ ೧೯೮೧

6. ಫಗು. ಹಕಟ್ಟಿ ಅಮರ ಗಣಾಧೀಶ್ವರ ಚರಿತ್ರೆಗಳು, 'ವಿಜಾಪುರ'

ಒಂದು ಧರ್ಮದಲ್ಲಿ ಅಚಲ ಶ್ರದ್ಧೆಯುಳ್ಳವರು ಅದನ್ನೇ ವಿಶ್ವಾಸದಿಂದ ಆಚರಿಸಬಹುದು. 'ಕೊಟ್ಟ ಕುದುರೆಯನ್ನು ಏರದೆ ಹಲ್ಲಣವ ಹೊತ್ತುಕೊಂಡು ಬಳಲುವ ಚಂಚಲ ಮನಸ್ಕರನ್ನು ಅಲ್ಲಮ ವಿಡಂಬಿಸಿ ನುಡಿಯುತ್ತಾನೆ. ೧೨ನೆಯ ಶತಮಾನದ ಧರ್ಮಕ್ರಾಂತಿಯಲ್ಲಿ ಅನ್ಯಮತದವರನ್ನೂ ಸಹ ವೀರಶೈವವು ಆಕರ್ಷಿಸಿದೆ. ಇದರಲ್ಲಿ ಬ್ರಾಹ್ಮಣ, ಜೈನ ಅಲ್ಲದೆ ಶೈವ ಪ್ರಭೇದಗಳ್ಲೊಂದಾದ ಆರಾಧ್ಯ ಇವೆಲ್ಲವೂ ಸಹ ಇದರಲ್ಲಿ ಬಂದು ಸೇರಿವೆ. ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ ಆವ ಜಾತಿಯವನೇ ಆಗಲಿ ಅಂಗದ ಮೇಲೆ ಲಿಂಗವುಳ್ಳವರೆಲ್ಲ ಭಕ್ತರು ಇಲ್ಲದವರು ಭವಿಗಳು. ಈ ವಿಶಾಲದೃಷ್ಟಿಯಿಂದಾಗಿ ಶ್ರೇಣಿಕೃತ ಧಾರ್ಮಿಕ ಚೌಕಟ್ಟನ್ನು ಒಪ್ಪದವರು ವೀರಶೈವದಲ್ಲಿ ಸಂಲಗ್ನರಾಗಿದ್ದಾರೆ, ಆದರೆ ಇದು ಒತ್ತಾಯ ಪೂರ್ವಕ ನಡೆದ ಕ್ರಿಯೆಯಾಗಿರಲಿಲ್ಲ. ರಾಜಕೀಯ, ಆರ್ಥಿಕ ಪ್ರಲೋಭನೆ, ಜನಸಂಖ್ಯಾ ಹೆಚ್ಚಳ ಹಾಗೂ ತಮ್ಮ ಧರ್ಮವೇ ಶ್ರೇಷ್ಠವೆಂಬ ಪೂರ್ವಾಗ್ರಹಗಳಿಂದ ಅನೇಕರು ಮತಾಂತರವನ್ನು ಒಂದು ಪಿಡುಗಾಗಿಸಿರುವುದನ್ನು ನಾವು ಈಗಲೂ ಕಾಣಬಹುದು. ವೀರಶೈವರಲ್ಲಿ 'ಕುಲಕ್ಕೊಬ್ಬ ಶರಣ ' ನಿದ್ದರೂ ಅವರು ತಮ್ಮ ಪೂರ್ವಾಶ್ರಯದ ಜಾತಿ ಭಾವವನ್ನು ತ್ಯಜಿಸಿ ತಮ್ಮ ಆಚರಣೆಗಳಿಂದ ವೀರಶೈವದ ಸಮಾನದ ಸಂಸ್ಕಾರಗಳನ್ನು ಅಳವಡಿಸಿಕೊಂಡಿದ್ದಾರೆ. ಈಗಲೂ ವೀರಶೈವ ಮಠ ಮಾನ್ಯದವರಿಗೆ ಯಾವುದೇ ಜಾತಿಯವರಾದರೂ ಸಹ ಆ ಮಠದ ಭಕ್ತರಾಗಿರುವುದನ್ನು ಕಾಣುತ್ತೇವೆ. ವಚನಕಾರರು ತಮ್ಮ ಉದಾತ್ತ ಬೋಧನೆಯಿಂದ ತತ್ಕಲೀನ ಅನ್ಯಮತೀಯರ ಮೇಲೆ ಪ್ರಭಾವ ಮೂಡಿಸಿದ್ದರಿಂದ ಅನ್ಯರು ಸಹಜವಾಗಿಯೇ ಲಿಂಗಧಾರಕರಾಗಿ, ಲಿಂಗಾರಾಧಕರಾಗಿ ಮಾರ್ಪಾಡಾಗಿದ್ದಾರೆ. ಆದಯ್ಯ, ಏಕಾಂತ ರಾಮಯ್ಯ, ಗುಡ್ಡಾಪುರ ದಾನಮ್ಮ ,ದೇವರದಾಸಿಮಾರ್ಯ, ಗೊಗ್ಗವ್ವೆ, ತೆಲುಗು ಜೊಮ್ಮಯ್ಯಾ, ವೈಜವ್ವೆ, ತಿಲಕವ್ವೆ, ವಿಮಳಾದೇವಿ, ಸಿದ್ಧರಾಮನ ಲಿಂಗದೀಕ್ಷಾಪ್ರಕರಣಾದಿ ಪ್ರಸಂಗಗಳಲ್ಲಿ ವೀರಶೈವದಲ್ಲಿ ಅನ್ಯ ಮತೀಯರು ಸೇರಿಕೊಂಡುದರ ಕಾರಣಗಳನ್ನು ನಾವು ಸೂಕ್ಷ್ಮವಾಗಿ ಆಲೋಚಿಸಬಹುದು. ಮತೀಯ ಸಂಸ್ಕಾರಗಳು ಒಮ್ಮೆದೊರಕಿದ ಮೇಲೆ ಪರಸ್ಪರರಲ್ಲಿ ಸಹಭೋಜನ, ಸಹಪಂಕ್ತಿ ಗಂಡು - ಹೆಣ್ಣುಗಳ ನಂಟುತನ ಇದಾವದರಲ್ಲೂ ಬಾಧೆಯಿರದಂತೆ ಒಂದಾಗಿ ನಡೆದುಕೊಳ್ಳಬೇಕೆಂದು ವಚನಕಾರರು ಬೋಧಿಸಿದ್ದಾರೆ. ಹಿಂದೂ ಧರ್ಮದಲ್ಲಿಯೇ ಅನೇಕ ಸಿದ್ಧಾಂತಗಳು ಜೀವ - ಈಶ್ವರರಲ್ಲಿ ಭೇಧಕಲ್ಪಿಸುತ್ತವೆ. ರಾಮಾನುಜರು ಶ್ರೇಷ್ಠ ಭಕ್ತರಾದ್ದರಿಂದ ಅಂತ್ಯಜರಿಗೆ ದೇಗುಲ ಪ್ರವೇಶ ದೊರಕಬೇಕೆಂದು ಹೋರಾಡಿದ್ದು ಸ್ತುತ್ಯ. ಆದರೆ ಜೀವನಿಗೆ ಸಾಲೋಕ್ಯ- ಸಾಮೀಪ್ಯಗಳು ದೊರೆಯಬಲ್ಲುವು. ಆದರೆ ಪರಮಾತ್ಮನಲ್ಲಿ ಸಾಯುಜ್ಯ ಸಾಧ್ಯವಿಲ್ಲವೆಂದು ತಮ್ಮ ಸಿದ್ಧಾಂತದಲ್ಲಿ ಸಾರಿದ್ದುದು ಕಂಡುಬರುತ್ತದೆ. ಆದರೆ ಈ ಸಂಬಂಧ ಸ್ವರ್ಣಕುಂಭದಲ್ಲಿ ಹೊಳೆವ ಸೂರ್ಯನಂತೆ ಸರ್ವಾಂತರ್ಯಾಮಿಯೆಂದು ಜೀವ - ಪರಮಾತ್ಮರ ಐಕ್ಯತ್ವನ್ನು ವೀರಶೈವ ದರ್ಶನ ಪ್ರಕಟಿಸುತ್ತದೆ. ಆಧುನಿಕ ಕಾಲದಲ್ಲಿ ಕ್ರೈಸ್ತ ಮಿಷನರಿಗಳ ಮತಾಂತರ ಧೋರಣೆಗಳನ್ನು ವಿಚಾರವಾದಿ ರಾಜಾರಾಮ

ಮೋಹನರಾಯರು ವಿರೋಧಿಸಿದಾಗ ಬ್ಯಾಪ್ಟಿಸ್ಟ, ಕ್ಯಾಥೋಲಿಕ್, ಮತ್ತು ಪ್ರೋಟೆಸ್ಟಂಟ್‌ಗಳೆರಡನ್ನೂ ಸಮನ್ವಯಿಸಿಕೊಂಡ ಕ್ರೈಸ್ತ ಮಾರ್ಗದ ಮಾಹಾ ಮೇಧಾವಿಯಾದ ಮಿಷನರಿ ವಿಲ್ಯಂಕೇರಿ ಅವರಿಗೆ ಸಮಾಧಾನಕರ ಉತ್ತರ ನೀಡುತ್ತಾನೆ. to make any one a real christian is not the work of man but of God'. ನಿಜವಾದ ಕ್ರಿಸ್ತಾಂತರಣ ಮಾನವನ ಕ್ರಿಯೆಯಲ್ಲ. ಅದು ದೇವರಕಾರ್ಯ[7]. ಈ ಸೂಕ್ಷ್ಮವನ್ನು ತಿಳಿದು ಮತಾಂತರ ಕ್ರಿಯೆಗೆ ತೊಡಗುವವರು ಅತ್ಯಂತ ವಿರಳ. ಮಹಾತ್ಮಾಗಾಂಧೀಜಿ ಅದಕ್ಕೆಂದೇ 'ಪೀಡಪರಾಯಿಾ ಜೋ ಜಾನೆರೇ ತೇನೇ ವೈಷ್ಣವಜನ ಕಹೀಯೇ' ಹಿಂಸೆ ಪ್ರಲೋಭನೆ, ಮುಗ್ಧರ ಶೋಷಣೆ, ಒತ್ತಾಯ ಯಾವುದನ್ನು ಅನುಸರಿಸದೆ. ಇವ ನಮ್ಮವ ಇವನಮ್ಮವನೆಂಬ ಒಮ್ಮತದ ಭಾವನೆ, ಆಚರಣೆಗಳಿಂದ ಸಹಸ್ರಾರು ಜನ ವೀರಶೈವದಲ್ಲಿ ಒಂದಾಗಿರುವುದು ಅದರ ವಿಶಾಲತತ್ತ್ವದ ದ್ಯೋತಕವಾಗಿದೆ.

ಆಚರಣೆಯಲ್ಲಿ ಸಮಾನತೆ

ವೀರಶೈವದಲ್ಲಿ ಅನಂತರದ ಅವಸ್ಥೆಗಳಲ್ಲಿ ಮಠಗಳು ಬೆಳವಣಿಗೆಗೊಂಡವು. ಸಮಯಭೇದ, ಆಚರಣಾ ಭೇದಗಳು ಉಂಟಾಗಿ ಮತ್ತೆ ಹಿಂದೂ ಧರ್ಮದಲ್ಲಿರುವಂತೆ ಶ್ರೇಣಿ, ಅನುಶ್ರೇಣಿಗಳು ಉತ್ಪನ್ನಗೊಂಡಿರುವದಾಗಿ ಕೆಲವರು ತರ್ಕಿಸಿದ್ದಾರೆ[8]. ಇದನ್ನು ಚಾರಿತ್ರಿಕ ಆವಾಂತರದ ದೃಷ್ಟಿಯಲ್ಲಿ ಮಾತ್ರ ಒಪ್ಪಬಹುದು. ಆದರೆ ಸೈದ್ಧಾಂತಿಕವಾಗಿ ಸಮರ್ಥಿಸುವುದು ಅಪಾಯಕಾರೀ ನಿಲುಮೆಯಾಗಿ ಕಾಣುತ್ತದೆ, ಇದೇ ಲೇಖಿನ ಇದಕ್ಕೆ ಉತ್ತರವಿತ್ತಿರುವು ದನ್ನಿಲ್ಲಿ ಉಲ್ಲೇಖಿಸಲಾಗಿದೆ.

The previleges are given to Jangam are for the purposes of performances of certain religious duties but U.A. to devide the society into various segments and groups due to the social mobility found in the veerashaiva religion[9]. ಪಾಲ್ಕುರಿಕೆ ಸೋಮನಾಥನು ಹೇಳುವ ೬೪ ಶೀಲಗಳ ಆಚರಣೆಯಾಗಲಿ, ವೀರಶೈವ ಉಪಾಸನಾತತ್ತ್ವದಲ್ಲಿ ಕಂಡುಬರುವ 'ಆಯತ-ಸ್ವಾಯತ-ಸನ್ನಿಹಿತ' ಪ್ರಕ್ರಿಯೆಯಾಗಲಿ ಆಚರಣೆಗಳ ಸಮಾನತ್ವವನ್ನು ಕುರಿತು ಹೇಳುತ್ತವೆಯೇ ಹೊರತು ವಿಭಾಜಕವನ್ನು ಬೋಧಿಸುವ ಉದ್ದೇಶ ಹೊಂದಿದವುಗಳಾಗಿಲ್ಲ. ಲಿಂಗಾಯತ ಸಮುದಾಯದಲ್ಲಿ ಈ ಅವಿಚ್ಛಿನ್ನ ಧೋರಣೆಯಿದ್ದುದರಿಂದಲೇ ಗುರು-ವಿರಕ್ತರೆಂಬ ಭೇದಬುದ್ಧಿಯಿಲ್ಲದೆ ಹಿಂದಿನ ಅನೇಕ ಕವಿಗಳು, ಪಂಡಿತರು ಸಮಗ್ರ ವೀರಶೈವವಾಙ್ಮಯಕ್ಕೆ ಅನುಗುಣವಾದ ಸಾಹಿತ್ಯ ರಚನೆಗೆ ಕಾರಣರಾದುದಕ್ಕೆ ಅನೇಕ ನಿದರ್ಶನಗಳಿವೆ.

---

7. Early printing in Bengal.
8. ಡಾ॥ ಎಂ. ಚಿದಾನಂದಮೂರ್ತಿ: 'ಜಂಗಮ ಜಾತಿಯಲ್ಲಿ ಅನುಶ್ರೇಣಿ' ಸಾಧನೆ ೧೨-೪(೧೯೮೩)
9. Shivananda. V. Religion as a social Behaviour of speech, s.k.s (1994)

ವಿಶ್ವಸಮಾಜೋ-ಧಾರ್ಮಿಕ ದೃಷ್ಟಿ

ಕರ್ನಾಟಕದಂತಹ ಒಂದು ಚಿಕ್ಕ ಭೂ ಖಂಡದಲ್ಲಿ ಒಂದು ಕಾಲಕ್ಕೆ ಸುಸಂಘಟಿತರಾಗಿ, ಸಮಷ್ಟಿ ಸಮುದಾಯದಿಂದ ಪ್ರೇರಿತರಾದ ಶರಣರು ತಮ್ಮ ಕಾಲಕ್ಕೂ ಸಹ ಮೀರಿದ ಸಾರ್ವಕಾಲಿಕ ತತ್ತ್ವಗಳಿಂದ ಹೊಸದೊಂದು ಸಮಾಜ ಸ್ಥಾಪನೆಗೆ ಕಾರಣರಾದರು. ಅವರದು ಇತರ ಧರ್ಮಗಳಂತೆ ಒಂದು 'ಧರ್ಮ' ಮಾತ್ರವಾಗಿರದೆ ಸಮಾಜದ ಸಂವರ್ಧನೆಯನ್ನೇ ಗುರಿಯಾಗಿರಿಸಿಕೊಂಡ ಸಮಾಜೋಧರ್ಮ (Socio-Religion) ಲೋಕ ಸಂಘಟನೆ, ದೇವಲೋಕ - ಮರ್ತ್ಯಲೋಕ ಗಳೆರಡಕ್ಕೂ ಒಂದೇ ಜೀವನದ ಉದರವಾದ ಧರ್ಮ.'ಜಾತ್ಯತೀತ ಸಮಾಜ' ಸಂಪ್ರದಾಯ ವಿರೋಧಿಯಾದ ಸಮಾಜ, ಅಹಿಂಸಾ ಬೋಧಕ ಸಮಾಜ, ವೃತ್ತಿ ಗೌರವಾನ್ವಿತ ಸಮಾಜ ಸ್ತ್ರೀ ಸಮಾನತ್ವದ ಸಮಾಜ ಇವೆಲ್ಲ ತತ್ತ್ವಗಳು ಧಾರ್ಮಿಕಕ್ಕಿಂತ ಹೆಚ್ಚಿನ ಸಾಮಾಜಿಕ ಜೀವನದ ಉದ್ಧಾರ ಅಭಿಪ್ಸೆಯನ್ನೇ ಪರಮ ಲಕ್ಷ್ಯವಾಗಿರಿಸಿಕೊಂಡಿದ್ದವು. ಈ ಮೂಲಕ ಶಿವಶರಣರ ಸಂದೇಶ, ಜೀವನ ಮೌಲ್ಯಗಳ ಪ್ರಸಾರಕಾರ್ಯ ತ್ವರಿತ ಮತ್ತು ಅತ್ಯಗತ್ಯವಾಗಿ ವೀರಶೈವ ಕವಿಗಳಿಗೆ ತೋರಿದೆ. ಒಬ್ಬನೇ ಒಬ್ಬಕವಿ ಹರಿಹರ ೧೦೦ಕ್ಕೂ ಮೀರಿ ರಗಳೆಗಳನ್ನು ಒಬ್ಬೊಬ್ಬ ಶರಣರನ್ನು ಕುರಿತು ಬರೆಯಬೇಕಾದ ಸೃಜನಾತ್ಮಕ ಒತ್ತಡ ಕೇವಲ ಕವಿಯಲ್ಲಿನ ಭಕ್ತ್ಯಾವೇಶದಿಂದ್‌ಮಾತ್ರ ಸಾಧ್ಯವಾಯಿತೆಂದು ಹೇಳುವುದಾಗಲಿ ಹರಿಹರ ಕೇವಲ ಭಾವಾವೇಶದ ಕವಿಯೆಂದು ಪರಾಮರ್ಶಿಸುವುದಾಗಲಿ ಕಾಲ - ದೇಶ - ಪರಿಸರ - ಸಮಾಜ- ಸಂಸ್ಕೃತಿಗಳ ಪರಿಸ್ಥಿತಿಯನ್ನು ಕಡೆಗಣಿಸುವ ಕನಿಷ್ಠ ಧೋರಣೆಯ ಮಾತಾಗುತ್ತದೆ.

ಜನಭಾಷೆ - ಜನ ಸಂಪರ್ಕಮಾಧ್ಯಮಗಳು.

ಶಿವಶರಣರು ಸಾಮಾಜಿಕ - ಧಾರ್ಮಿಕ ಚಳುವಳಿಯ ಹರಿಕಾರರಾದಂತೆ ದೇಶ ಭಾಷಾಂದೋಲನಕ್ಕೂ ಕಾರಣರಾಗಿದ್ದಾರೆ. ಪಂಡಿತ ಸಮ್ಮುಖವಾಗಿದ್ದ ಭಾಷೆ ಜನಸಮ್ಮುಖವಾದ ಮೊದಲಘಟ್ಟ ಶಿವಶರಣರ ಕಾಲವಾಗಿದೆ. ಆಧುನಿಕ ಲೇಖಕರೊಬ್ಬರೂ ತೀಕ್ಷ್ಣ ಆಲೋಚಕರೂ ಆದ ಡಾ॥ ಅನಂತಮೂರ್ತಿ ಒಂದೆಡೆ ಹೇಳಿದ್ದು'೧೨ನೆಯ ಶತಮಾನದಲ್ಲಿ ಬಸವಣ್ಣ ವಚನಗಳನ್ನು ಬರೆದಾಗ ಇಂಗ್ಲೀಷ್ ಕಾಡು ಭಾಷೆಯಾಗಿತ್ತು[10] ಇಂದು ಜಗತ್ತಿನ ಸಂಪರ್ಕ ಭಾಷೆಯಾಗಿ ಇಂಗ್ಲೀಷ್ ಬೆಳವಣಿಗೆಗೊಂಡಿದೆ. ಆ ಮಾತು ಬೇರೆ. ಆದರೆ ಐತಿಹಾಸಿಕ ದೃಷ್ಟಿಯಿಂದ ಅದಕ್ಕಿಂತ ಮುಂಚೆಯೇ ಕನ್ನಡ ನೆಲದಲ್ಲಿ ಈ ಬಗೆಯ ದೇಶ ಭಾಷೆಯೊಂದನ್ನು ತಮ್ಮ ವಿಚಾರಗಳ ಸಮಗ್ರ ಅಭಿವ್ಯಕ್ತಿಗೆ ಬಾಹ್ಯ - ಆಂತರಿಕ ಜೀವನದ ಎಲ್ಲ ಸನ್ನಿವೇಶ, ಸಂದರ್ಭಗಳಲ್ಲಿ ಸಂವಹನಕ್ಕಾಗಿ ವಿನಿಯೋಗಿಸಿದ್ದು ವೀರಶೈವದ ವೈಶಿಷ್ಟ್ಯ. ಒಬ್ಬರು ಇನ್ನೊಬ್ಬರಿಗಿಂತ ಹೆಚ್ಚು ಸಂಖ್ಯೆಯಲ್ಲಿ ವಚನ ರಚಿಸುವುದಕ್ಕೆ

---

10 ಅನಂತಮೂರ್ತಿ ಪ್ರಜ್ಞೆ - ಪರಿಸರ ಪು. 69 (1992) ಅಕ್ಷರ ಪ್ರಕಾಶನ ಹೆಗ್ಗೋಡು.

ಮುಖ್ಯಕಾರಣ ಅವರು ವ್ಯಕ್ತಿ - ವ್ಯಕ್ತಿಗಳ ನಡುವೆ, ವ್ಯಕ್ತಿ - ಸಮುದಾಯ ಹಾಗೂ ವ್ಯಕ್ತಿ - ಸಮಾಜದ ಮುಂದೆ ಹೆಚ್ಚು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಂಡಿರುವುದೇ ಆಗಿದೆ. ವಚನಕಾರರ ಭಾಷೆ ಎರಡು ವಿಧದಲ್ಲಿ ಅಭಿವ್ಯಕ್ತಿಗೆ ಸಾಧ್ಯವಾಗಿದೆ. ದೈನಂದಿನ ಕುಲವಾರ್ತೆ, ಭಕ್ತರ ಸಂದರ್ಶನ, ನಿತ್ಯಕಾಯಕ, ಗೋಷ್ಠಿ ಮುಂತಾದ ಸನ್ನಿವೇಶಾತ್ಮಕ ಮಟ್ಟದಲ್ಲೂ (Situational level) ಗಹನವಾದ ಅಧ್ಯಾತ್ಮಕ್ಕೆ ಸಂಬಂಧಿಸಿದ ವಿಷಯ ನಿಷ್ಠಸ್ತರ (Topic or Contextual level) ಮೊದಲನೆಯ ಸ್ತರದಲ್ಲಿ ಸರಳವಾದ ಆಡುನುಡಿ, ಗದ್ಯ, ದೇಸೀಯ ನಾಣ್ಣುಡಿ, ನುಡಿಗಟ್ಟು ಲೋಕೋಪಮೆ, ದೃಷ್ಟಾಂತಭರಿತಮಾತುಗಳು ಎರಡನೆಯದರಲ್ಲಿ ಆಳವಾದ ವೈಚಾರಿಕತೆಯಿಂದ ಕೂಡಿದ ಪ್ರತಿಭಾ ಸಂಪನ್ನವಾದ ಸಾಹಿತ್ಯಕರ ಶೈಲಿ. ಹೀಗೆ ಸರಳಗದ್ಯದಿಂದ ಸುಪ್ರಸನ್ನಶೈಲಿಗೂ, ಸುಪ್ರಸನ್ನಶೈಲಿಯಿಂದ ಸರಳಗದ್ಯಕ್ಕೂ ಪರಸ್ಪರ ಸಾಪೇಕ್ಷವಾಗುವ ರೀತಿಯಲ್ಲಿ ಎಲ್ಲವನ್ನೂ ಕನ್ನಡವಾಣಿಯಲ್ಲಿ ಅಭಿಮುಖೀ ಕರಣಗೊಳಿಸಿರುವುದು ವಚನಗಳ ವೈಶಿಷ್ಟ್ಯವಾಗಿದೆ. ಎಲ್ಲ ಸ್ತರದಲ್ಲೂ ಆಡಳಿತ ಮಟ್ಟದಲ್ಲಿ ಕನ್ನಡವನ್ನು ಜಾರಿಗೆ ತರಲು ಸಾಕಷ್ಟು ಪ್ರಯತ್ನ ನಡೆದಾಗಲೂ ಸಹ ಅದು ಇಂದಿಗೂ ಅಸಾಧ್ಯಮಾತಾಗಿಯೇ ಉಳಿದ ಸಂದರ್ಭದಲ್ಲಿ ಏನೋ ದೋಷವಿರಬಹುದು. ನಮ್ಮೆಲ್ಲರ ಅಭಿಲಾಷೆ ಅದಾಗಿರಬಹುದಾದರೂ ನಮ್ಮೆಲ್ಲರ ಸಮಗ್ರ ಚಿಂತನೆ ಪ್ರಜ್ಞೆಯಲ್ಲಿ ಅದೊಂದೇ ಅಗತ್ಯ ಮತ್ತು ಅನಿವಾರ್ಯವಾದ ಮಾಧ್ಯಮವೆಂದು ಹೊಳೆದಾಗ ಭಾಷೆ ಸಹಜವಾಗಿಯೇ ನಮಗೆ ಏಕೈಕ ಅಭಿವ್ಯಕ್ತಿ ಸಾಧನವಾಗುತ್ತದೆ. ವಚನಕಾರರು ಭಾಷಾತ್ಮಕ, ಸಾಹಿತ್ಯಾತ್ಮಕ ಮಟ್ಟದಲ್ಲಲ್ಲದೆ ಜಾನಪದದ ಕ್ರಿಯಾತ್ಮಕ ಮಟ್ಟದಲ್ಲೂ ಪ್ರಸಾರ ಮಾಧ್ಯಮಗಳನ್ನು ಬಳಸಿಕೊಂಡಿದ್ದಾರೆ. ಸಂಗೀತ, ನಾಟ್ಯ, ಕೀರ್ತನೆ, ಬಹುರೂಪಿ, ಕೂಗು, ಉಗ್ಗಡಣೆ, ನಗಿಸುವಿಕೆ, ಕಂಕರಿ, ಕಿನ್ನರಿ, ಮದ್ದಳೆಗಳನ್ನು ನುಡಿಸುವಿಕೆ ಇವೇ ಮುಂತಾದ ಸಾಧನಗಳಿಂದ ಜನಸಂಪರ್ಕದಲ್ಲಿ ತಮ್ಮ ವಿಚಾರ, ಬೋಧನೆ, ಕಾಯಕ, ವೃತ್ತಿಕಲೆಗಳಿಂದ ಗಾಢ ಪ್ರಭಾವ ಬೀರಿದ್ದಾರೆ. ಯಾವುದೊಂದು ಮಾಧ್ಯಮ ಸಮೂಹ ಮಾಧ್ಯಮವಾಗಿ ಸಂವಹನಗೊಂಡಾಗ ಒಂದು ಜನಾಂಗದ ಸಾಂಸ್ಕೃತಿಕ ಸಾಧನೆ ಏನೆಂಬುದು ಗೊತ್ತಾಗಬಲ್ಲುದು. ಮಾಧ್ಯಮಗಳು ಆಧುನಿಕವೇ ಇರಬಹುದು. ಅಥವ ಪಾರಂಪರಿಕವೇ ಇರಬಹುದು. ಅದರ ಬಳಕೆ ಜನತೆಗೆ ಎಷ್ಟು ನಿಕಟ ಮತ್ತು ಎಷ್ಟು ಸಂಖ್ಯೆಯ ಎಷ್ಟು ತೀವ್ರದಲ್ಲಿ ಜನ ಸಂಪರ್ಕವನ್ನು ಕಲ್ಪಿಸಬಹುದೆಂಬುದರ ಮೇಲೆ ಆಧಾರವಾಗಿರುತ್ತದೆ.

Any communication network unfamilior to the masses, which does not function close to their cultural predespositions, and institutional values, will have little impact and no significance, studies have stressed that no mass media can exist in cultual vaccum[11]

11. Shyam Parakar: Traditional Folk Media in India (2nd ed. 1994) New Delhi

ಕಲ್ಯಾಣಕ್ರಾಂತಿ, ಶಿವಶರಣ ಧರ್ಮಯುದ್ಧಗಳು, ದೇಶತ್ಯಾಗ, ಬಿಜ್ಜಳವಧೆ, ಈ ಮುಂತಾದ ವಿನಾಶ ವಿಪ್ಲವಗಳ ಕಠಿಣ ಪರಿಸ್ಥಿತಿಯಲ್ಲೂ ಸಹ ಶರಣರು ಕಣ್ಮರೆಗೊಂಡರೂ ಸಹ ವಚನ ವಾಙ್ಮಯ ನೆಲದ ಮರೆಯನಿಧಾನದಂತೆ ಕೆಲಕಾಲವಿದ್ದು ಪುನಃ ವಿಜಯನಗರ ಸಾಮ್ರಾಜ್ಯದ ಹೊತ್ತಿಗೆ ಅಪಾರ ಸಂಖ್ಯೆಯಲ್ಲಿ ಹೊರಬರುತ್ತದೆ. ಇದನ್ನು ಸಂರಕ್ಷಿಸುವುದರ ಜೊತೆಯಲ್ಲೇ ಅದನ್ನು ಅಂದಿನವರೆಗೆ ಸಾಗಿಸಿಕೊಂಡು ಬರಲು ಕಾಲಜ್ಞಾನ ಮುಂತಾದ ಪ್ರಸಾರಮಾಧ್ಯಮಗಳು ಕಾರಣವಾಗಿವೆ. ಇದರಿಂದ ಸಮಗ್ರ ವೀರಶೈವ ವಾಙ್ಮಯ ಕಾಲದಿಂದ ಕಾಲಕ್ಕೆ ಜನಾಂಗದಿಂದ ಜನಾಂಗಕ್ಕೆ ಮೌಖಿಕ ಮತ್ತು ಗ್ರಾಂಥಿಕ ಎರಡೂ ತೆರದಲ್ಲಿಉಳಿದು ಬರಲು ಸಾಧ್ಯವಾಗಿದೆ. ವಚನಯುಗದ ತರುವಾಯದಲ್ಲಿ ಶರಣರ ಜೀವನ ತತ್ತ್ವ ಹಾಗೂ ಧಾರ್ಮಿಕ ಅಂಶಗಳೊಂದಿಗೆ ಬೆರೆತ ಪುರಾಣಗಳು ಕೇವಲ ಗ್ರಂಥಸ್ಥವಾಗಿ ಉಳಿದಿರದೆ ಅವನ್ನು ಪ್ರವಚನ ರೂಪದಲ್ಲಿ ಬಿತ್ತರಿಸುವುದನ್ನೇ ಕೆಲವು ಶರಣರು ಕಾಯಕವಾಗಿರಿಸಿಕೊಂಡಿದ್ದುದು ವೀರಶೈವರ ಪ್ರಸಾರ ಮಾಧ್ಯಮದ ವಿಸ್ತರಣೆಯನ್ನು ಸೂಚಿಸುತ್ತದೆ. ಇವು 'ಪುರಾಣ' ವೆಂದಿದ್ದರೂ ಸಹ ಹೆಚ್ಚಿನ ಕೃತಿಗಳು ಶಿವಶರಣರ ಚರಿತ್ರೆಗಳೇ ಆಗಿರುವುದನ್ನಿಲ್ಲಿ ಗಮನಿಸಬೇಕು.

ವೀರಶೈವ ಸಾಹಿತ್ಯದ ನೈರಂತರ ಪ್ರಕ್ರಿಯೆಗೆ ಪ್ರೇರೇಪಿತವಾದ ಮತ್ತು ಪೋಷಕವಾದ ತತ್ತ್ವಗಳ ಬಗೆಗೆ ಇದುವರೆಗೆ ಆಲೋಚಿಸಿದ್ದಾಗಿದೆ. ಈ ಸಾಹಿತ್ಯದ ರೂಪಗಳು ಆಯಾ ಕಾಲದಲ್ಲಿ ಭಿನ್ನವಾಗಿ ಕಂಡಾಗಲೂ ಇವೆಲ್ಲ ಸಾಹಿತ್ಯ ಮಾರ್ಗಗಳು ವೀರಶೈವ ಧರ್ಮದರ್ಶನ, ಸಾಮಾಜಿಕ ಚಿಂತನೆ ಅಖಂಡ ಸಂಸ್ಕೃತಿಯ ಸಂವರ್ಧನ ಕ್ರಿಯೆಯಲ್ಲಿ ಸಮ್ಮೆಕ್ಯಗೊಂಡವುಗಳಾಗಿಯೇ ತೋರುತ್ತವೆ.

ಮೊದಲಿಗೆ ಹೇಳಿದಂತೆ ಈ ನಿರಂತರ, ಪ್ರಗತಿಪರ ಸ್ಮರಣೆಯ ಸಾಹಿತ್ಯವನ್ನು ಕೃತಕ ಯುಗ ವಿಭಜನೆಯಲ್ಲಿ ತರುವುದು ಕಷ್ಟಸಾಧ್ಯ. ಡಾ॥ ರಂ.ಶ್ರೀ ಮುಗಳಿ ಅವರು ಕನ್ನಡ ಸಾಹಿತ್ಯದಲ್ಲಿನ ಪ್ರಭಾವಕಾರೀ ವ್ಯಕ್ತಿ ವಿಶೇಷದ ಮೇಲಿಂದ ಪಂಪಯುಗ, ಬಸವಯುಗ ಕುಮಾರವ್ಯಾಸಯುಗವೆಂದಾಗಿ ವಿಂಗಡಿಸಿದ್ದಾರೆ.[11] ಇವರ ವರ್ಗೀಕರಣದಲ್ಲಿ ಪಾರಸ್ಪರಿಕ ಕಾಲ, ದೇಶ, ಮತ, ಕಾವ್ಯಮಾರ್ಗ, ಉದ್ದೇಶ, ಶೈಲಿದರ್ಶನ ಇವೆಲ್ಲ ಹಂತಗಳಲ್ಲಿ ಸಂಕೀರ್ಣತೆ ಹಾಗೂ ವಿರೋಧಾಭಾಸಗಳು ಹೆಚ್ಚುತ್ತ ಹೋಗುತ್ತವೆ. ಆವರ ಸಾಹಿತ್ಯ ಚರಿತ್ರೆಯಲ್ಲಿನ ಈ ದ್ವಂದ್ವ ಸಮಸ್ಯೆಯ ಪರಿಶೀಲನೆಗೆ ಮುಂಚೆ ಅವರ ವಿಭಜನಕ್ರಮವನ್ನಿಲ್ಲಿಕೆಳಗೆ ಕೊಟ್ಟಿದೆ.

ಕ.ಸಾ.ಚ ಯ ಬಸವಯುಗ ೩

– ವಚನ ವಾಙ್ಮಯ (ಆದ್ಯವಚನಕಾರರು, ಬಸವೇಶ್ವರ ಇತರ ವಚನಕಾರರು, <u>ಹರಿಹರ, ರಾಘವಾಂಕ ಪದ್ಮ</u>ರಸರು –ಬಸವಯುಗದ ಇತರರು (೧–೩)

11. ರಂ.ಶ್ರೀ. ಮುಗಳಿ. ಕ. ಸಾ.ಚ. ಗೀತಾ ಬುಕ್ ಹೌಸ್ (1993) ಮೈಸೂರು.

ಕುಮಾರವ್ಯಾಸ ಯುಗ (೪)

- ಕುಮಾರವ್ಯಾಸ ಯುಗದ ವೀರಶೈವ ಸಾಹಿತ್ಯ ೧, ೨, ೩, ೪, ೫

ಬಸವ - ಕುಮಾರವ್ಯಾಸ ಆಯಾ ಯುಗದ ಪ್ರಭಾವಶಾಲೀ ವ್ಯಕ್ತಿಗಳಾಗಿದ್ದರೆಂಬುದು ನಿಜ. ವೀರಶೈವ ಧರ್ಮ, ದರ್ಶನ, ಸಾಮಾಜಿಕ ಪ್ರಜ್ಞೆ, ವಸ್ತು ಸ್ವಾತಂತ್ರ್ಯ ವಿಚಾರ ಸ್ವಾತಂತ್ರ್ಯ ಜನಸಮ್ಮುಖಿ ಧೋರಣೆಗಳಲ್ಲಿ ಬಸವ - ಕುಮಾರ ವ್ಯಾಸರ ಯುಗದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಈ ಸಮಗ್ರ, ಏಕೈಕ ವೀರಶೈವ ಸಾಹಿತ್ಯ ಮಾರ್ಗಾನುಯಾಯಿಗಳಾದ ಕವಿಗಳನ್ನು ಪುರಾಣ ಕರ್ತರನ್ನು ಕುಮಾರವ್ಯಾಸ ಯುಗದ ಕೆಳಗಡೆಗೆ ತರುವುದು ಅನುಚಿತ. ಸಾಹಿತ್ಯದ ರೂಪ ಸಾಮ್ಯತೆ (Formatic Similarity) ಗಿಂತ ಧ್ಯೇಯ ಧೋರಣೆಗಳಲ್ಲಿ ದಾರ್ಶನಿಕ ಮನೋಭೂಮಿಕೆಯಲ್ಲಿ (Content Similarity) ಹತ್ತಿರವಾಗುವಂತಹ ಸಾಹಿತ್ಯದ ಮಾರ್ಗವನ್ನು ನಾವು ಗುರುತಿಸುವುದು ಅತ್ಯವಶ್ಯ. ಆಯಾ ಶತಮಾನಗಳಲ್ಲಿ ನಿರಂತರ ಪ್ರವಾಹವಾಗಿ ಹರಿದು ಬಂದ ವೀರಶೈವ ಸಾಹಿತ್ಯವಾಹಿನಿ ಹಾಗೂ ಅದಕ್ಕೆ ಬಂದು ಸೇರಿದ ಉಪನದಿ ರೂಪದ ಸಾಹಿತ್ಯದ ಕವಲುಗಳನ್ನು ಈ ದೃಷ್ಟಿಯಿಂದ ಹೊಸದೊಂದು ಆಯಾಮದಲ್ಲಿ ಇಲ್ಲಿ ವಿಂಗಡಿಸಲು ಯೋಚಿಸಲಾಗಿದೆ

1. ವೀರಶೈವ ವಚನವಾಙ್ಮಯ ಮಾರ್ಗ

ಘಟ್ಟ೧. ಬಸವಪೂರ್ವಯುಗ (ಕ್ರಿ. ೧೦೪೦-೧೧೬೧) ಹಿಂದಿನ ವಚನಕಾರರು / ಶರಣರು

ಘಟ್ಟ ೨. ಬಸವಯುಗ (ಕ್ರಿ.ಶ. ೧೧೬೦-೧೨೦೦) ಸಮಕಾಲೀನ ಸಾಧ್ಯತೆ ಪ್ರಚಾರ, - ಪ್ರಭಾವ

ಘಟ್ಟ ೩. ವಚನಗಳ ಸಂಗೋಪನ (ಕ್ರಿ.ಶ.೧೨೧-೧೪೩೦) ವಚನಗಳಸಂರಕ್ಷಣೆಗೆ ಕಾರಣವಾದ ಸಂಗತಿಗಳು ಒರಂಗಲ್ಲು, ಶ್ರೀಶೈಲ ಮತ್ತು ಉಳುವೆಕಡೆಗಳಲ್ಲಿ ಪ್ರಸಾರ.

ಘಟ್ಟ ೪. ನೂರೊಂದು ವಿರಕ್ತರಯುಗ : ವಿಜಯನಗರದ ಪ್ರೌಢದೇವರಾಯ(ಕ್ರಿ.ಶ. ೧೪೩೦ - ೧೫೦೦) ಆಳಿಕೆಯಲ್ಲಿ ನಡೆದ ಸಾಂಘಿಕ ಪ್ರಯತ್ನಗಳು. ವಚನಸಂಕಲನ ಸ್ಥಳಕಟ್ಟು ಸ್ವರ ವಚನ, ಟೀಕೆ- ವ್ಯಾಖ್ಯಾನ ಮುಂ.

ಘಟ್ಟ ೫ ತೋಂಟದಸಿದ್ಧೇಶ್ವರ ಯುಗ : ೭೦೧ ವಿರತರ ಸಂಘಟನೆ, ಸ್ವತಂತ್ರವಚನ, (ಕ್ರಿ.ಶ. ೧೪೮೦-೧೬೦೦)ಶೂನ್ಯ ಸಂಪಾದವರ್ಗ ಆವಿಷ್ಕರಣ

ಘಟ್ಟ ೬. ಷಣ್ಮುಖ ಶಿವಯೋಗಿಕಾಲ : ಪಾರಂಪರಿಕ ವಚನಗಳ ಬಳುವಳಿಯ ರಕ್ಷಣೆ ಹಾಗೂ ಸ್ವಂತತ್ರ ವಚನರಚನೆ ಕಡಕೋಳದ ಮಡಿವಾಳರ ತನಕ. (ಕ್ರಿ.ಶ.೧೬೫೦ - ೧೮೦೦)

ಘಟ್ಟ ೭ ಆಧುನಿಕ ವಚನಕಾರರ ಕಾಲ ವಚನಗಳಲ್ಲಿ ಆಧುನಿಕತೆ ಅಂಶಗಳ ಸೇರ್ಪಡೆ (ವರ್ತಮಾನಕಾಲ) ಹಾಗೂ ವಚನ ನಿರ್ಮಾಣ

2. ವೀರಶೈವ ಕಾವ್ಯಮಾರ್ಗ :

ಘಟ್ಟ ೧. ಹರಿಹರ ಪೂರ್ವಕಾಲ ಪಾಲ್ಕುರಿಕೆ ಸೋಮನಾಥ ಕೊಂಡಗುಳಿಕೇಶಿ ರಾಜ ದಣ್ಣಾಯಕರ ರಚನೆಗಳು (೧೧-೧೨ ನೆಯ ಶತಮಾನ)

ಘಟ್ಟ ೨.ಹರಿಹರ ಯುಗ - ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಪದ್ಮವಾಂಕ, ಭೀಮಕವಿ, ಸಿಂಗಿರಾಜ ಮುಂತಾದವರು (೧೨೦೦-೧೪೦೦)

ಘಟ್ಟ ೩ ಚಾಮರಸಯುಗ - ಚಾಮರಸ, ಲಕ್ಕಣ್ಣ ದಂಡೇಶ ಗುರುಬಸವ ಚಂದ್ರಕವಿ ಸುರಂಗ ಗುಬ್ಬಿಮಲ್ಲಣ್ಣವಿರುಪಾಕ್ಷಪಂಡಿತರವ್ವರೆಗೆ (೧೪೩೦-೧೬೫೦)

ಘಟ್ಟ ೪. ಷಡಕ್ಷರಿಯುಗ - ಷಡಕ್ಷರಿ, ಇಮ್ಮಡಿ ಮುರಿಗೆ ದೇಸೀಕೇಂದ್ರ ಮುಂ.

ಘಟ್ಟ ೫ ಬಸವಪ್ಪ ಶಾಸ್ತ್ರಿ ಕಾಲ. ಬಸವಪ್ಪ ಶಾಸ್ತ್ರಿ, ಸಂಗವಿಭು, ಕುಮಾರ ವಿಭು, (ಕ್ರಿ.ಶ. ೧೯೦೦)

3. ವೀರಶೈವ ಅನುಭಾವ ಕಾವ್ಯಮಾರ್ಗ ಅಥವ ತತ್ತ್ವಪದಕಾರ ಮಾರ್ಗ

ಘಟ್ಟ ೧ ನಿಜಗುಣಶಿವಯೋಗಿಕಾಲ - ಅದ್ವೈತ ಮೂಲದ ಜ್ಞಾನ ಮಾರ್ಗದ ಜೊತೆ ವೀರಶೈವ ಭಕ್ತಿ, ಅನುಭಾವಗಳ ಚಿಂತನೆ ಹಾಗೂ ಸಾಹಿತ್ಯಕ್ಕೆ ಸಂಗೀತದ ರಾಗ - ಸ್ವರಮೇಳ

ಘಟ್ಟ ೨ ಮುಪ್ಪಿನ ಷಡಕ್ಷರಿಕಾಲ : ವೀರಶೈವದರ್ಶನ - ಶರಣಸತಿ - ಲಿಂಗಪತಿ ತತ್ತ್ವಜೋಡಣೆ (1700-1800)

ಘಟ್ಟ೩. ಘನಮಠದಾರ್ಯರ ಕಾಲ: ವೀರಶೈವ ಭಕ್ತಿ ಪಾರಮ್ಯ ಹಾಗೂ ವೈರಾಗ್ಯ ವಿಚಾರಗಳು (೧೮೫೦-೧೯೦೦)

ಘಟ್ಟ ೪. ಶಿಶುನಾಳ ಶರೀಫರಕಾಲ : ವೀರಶೈವ ಪ್ರಭಾವದಲ್ಲಿ ಸೂಫಿ ಚಿಂತನೆ ಹಾಗೂ ಅದ್ವೈತ ಬೋಧನೆ.

4. ವೀರಶೈವ ಶಿಷ್ಟ ಜನಪದ - ಜನಪದ ಕಾವ್ಯ ಮಾರ್ಗ:

ಸರ್ವಜ್ಞನ ತ್ರಿಪದಿ, ಅಂಬಲಗಿ ಚನ್ನಮಲ್ಲನ ಚೌಪದನಕೃತಿಗಳು ಮುಂತಾದುವು ಶಿಷ್ಟ -ಜನಪದ ಮಾರ್ಗದಲ್ಲಿ ಸ್ಥಾನ ಪಡೆಯುತ್ತವೆ. ಶುದ್ಧ ಜನಪದದಲ್ಲಿ ದೊಡ್ಡಾಟ, ಸಣ್ಣಾಟ, ಯಕ್ಷಗಾನ ಕೃತಿಕರ್ತರನ್ನು ಸೇರಿಸಬಹುದು. ದುರದುಂಡೀಶನ ಕಾಲದಿಂದ ಆಧುನಿಕ ನಲವಡಿ ಶ್ರೀಕಂಠ ಶಾಸ್ತ್ರಿಗಳವರೆಗೆ(೧೯೭೨) ಅನೇಕರು ಜಾನಪದ ಮಾಧ್ಯಮದಲ್ಲಿ ವೀರಶೈವ ಶಿವಶರಣರಿಗೆ ಸಂಬಂಧಿಸಿ ಬಯಲು ರಂಗ ಕೃತಿಗಳನ್ನು ರಚಿಸಿದ್ದಾರೆ.

5. ಲಘು ಸಾಹಿತ್ಯಮಾರ್ಗ

ಕೊಂಡಗುಳಿ ಕೇಶಿರಾಜನಿಂದ ಆರಂಭಿಸಿ ನಿರ್ಮಾಣಗೊಳ್ಳುತ್ತ ಬಂದ ಸ್ತೋತ್ರ, ಕಂದ, ಅಷ್ಟಕ, ಶತಕ, ಸಶೀಲ, ಉದ್ಧರಣೆ, ನಾಂದ್ಯ, ತಾರಾವಳಿ, ಗೋಪ್ಯ, ದಂಡಕ ಪ್ರಕಾರಗಳು ವೀರಶೈವ ಲಘುಸಾಹಿತ್ಯಮಾರ್ಗದಲ್ಲಿ ಸಮ್ಮಿಳಿತಗೊಳ್ಳುತ್ತವೆ.

ಶಾಸ್ತ್ರ, ಸಿದ್ಧಾಂತ ಪರವಾದ ಗ್ರಂಥಗಳನ್ನು, ಅನ್ಯಭಾಷೆಯಲ್ಲಿನ ವೀರಶೈವ ಸಾಹಿತ್ಯವನ್ನೂ ನಾವು ಪ್ರತ್ಯೇಕವಾಗಿ ಅವಲೋಕಿಸುವ ಅಗತ್ಯವಿರುವುದರಿಂದ ಕನ್ನಡದ ವೀರಶೈವ ವಾಙ್ಮಯದಲ್ಲಿ ಅದನ್ನು ಒಟ್ಟಾರೆ ಸಂಕೀರ್ಣಕೃತಿ ಮಾರ್ಗದಲ್ಲಿ ಸೇರಿಸಬಹುದು.

6. ವೀರಶೈವ ಆಧುನಿಕ ಸಾಹಿತ್ಯ ಮಾರ್ಗ :

ವಚನ ಪಿತಾಮಹ ಹಳಕಟ್ಟಿ, ಹರ್ಡೇಕರ ಮಂಜಪ್ಪ ಮಧುರಚೆನ್ನ, ಎನ್.ಆರ್. ಕರಿಬಸವ ಶಾಸ್ತ್ರಿಗಳೇ ಮೊದಲಾದವರನ್ನು ಆಧುನಿಕ ಕಾಲದ ಆರಂಭದಲ್ಲೂ, ಶಿ.ಶಿ.ಬಸವನಾಳ, ನಂದೀಮಠ, ಡಾ॥ಆರ್. ಸಿ. ಹಿರೇಮಠ,ಸ.ಸ. ಮಾಳವಾಡ, ಭೂಸನೂರು ಮಠರನ್ನು ಆಧುನಿಕ ಯುಗ ಮಧ್ಯದ ತಲೆಮಾರಿನಲ್ಲೂ, ಎಲ್. ಬಸವರಾಜು, ಡಾ॥ ಚಿದಾನಂದ ಮೂರ್ತಿ ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಡಾ॥ ಶಿವರುದ್ರಪ್ಪ, ಡಾ॥ ಪ್ರಭುಶಂಕರರನ್ನು ಮಧ್ಯಂತರದಲ್ಲೂಡಾ॥ಕಲಬುರ್ಗಿ ಅವರಿಂದ ಮೊದಲಾದ ವ್ಯಕ್ತಿಗಳನ್ನು ಸಮಕಾಲೀನರೆಂದೂ ಆಧುನಿಕ ಸಾಹಿತ್ಯ ಮಾರ್ಗದಲ್ಲಿ ಸಮಾಲೋಚಿಸಬಹುದು. ಸೃಜನ, ವಿಮರ್ಶನ, ಸಂಶೋಧನೆ, ಸಂಪಾದನೆ ಕ್ಷೇತ್ರದಲ್ಲಿ ಆಧುನಿಕ ಜ್ಞಾನಾರ್ಜನೆಯಿಂದ ವೀರಶೈವ ವಾಙ್ಮಯ ಹೊಸಕ್ಷಿತಿಜವನ್ನೇ ಕಂಡಿದೆ. ವೀರಶೈವೇತರ ವಿದ್ವಾಂಸರೂ ಸಹ ಈ ಒಲುಮೆಯುಳ್ಳವರಾಗಿರುವುದು ಅದರ ಸಾರ್ವಕಾಲಿಕ ಹಾಗೂ ಸರ್ವಜನಾಂಗದ ಮೌಲ್ಯಗಳ ಪ್ರತೀಕವಾಗಿದೆ. ಅ.ನ.ಕೃ.,ಎಂ. ಆರ್. ಶ್ರೀ ರಂಗನಾಥ, ದಿವಾಕರ, ಎಸ್.ವಿ. ರಂಗಣ್ಣ, ಎಸ್.ವಿ. ಪರಮೇಶ್ವರ ಭಟ್, ದೇಜಗೌ, ಅಷ್ಟೇ ಅಲ್ಲದೆ ಎ.ಕೆ. ರಾಮಾನುಜನ್, ಅರ್ಮೆಂಡೊ ಮ್ಯಾನೆಜೆಸ್, ಕಮೀಲ್ ಜ್ವೆಲೆಬಿಲ್‌ರು ವಚನವಾಙ್ಮಯನ್ನು ಅಂತರರಾಷ್ಟ್ರೀಯ ಸ್ತರದಲ್ಲಿ ಪ್ರಸಾರಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ..

ವೀರಶೈವ ಸಾಹಿತ್ಯ ನಿರಂತರ ಲಕ್ಷಣಗಳನ್ನು ಒಟ್ಟಾರೆ ಇಲ್ಲಿ ಸಮೀಕ್ಷಿಸಬಹುದಾಗಿದೆ.೧. ಮಾರ್ಗದೇಸಿ ಅಥವಾ ವಸ್ತುಕ - ವರ್ಣಕಗಳಲ್ಲಿ ಭೇದವನ್ನು ಕಲಿಸದೆ ಅವನ್ನು ಸಾಂದರ್ಭಿಕವಾದ ಶೈಲಿಯ ಎರಡು ವಿಧಾನಗಳಾಗಿ ಸ್ವೀಕರಿಸಿರುವುದು ೨. ವಚನಗಳ ಸೃಷ್ಟ್ಯಾತ್ಮಕ ಕ್ರಿಯೆಯ ಜೊತೆಜೊತೆಯಲ್ಲೇ ಅದರ ಅನುಸೃಷ್ಟ್ಯಾತ್ಮಕವಾದ ಪ್ರಯತ್ನಗಳ ಮೂಲಕ ಅದರ ವಿಸ್ತಾರಕ್ಕೆ ಕಾರಣವಾದುದು. ೪. ಪುರಾತನ ನೂತನರಲ್ಲದೆ ವರ್ತಮಾನ ಶರಣರ ಚರಿತ್ರೆಗಳನ್ನು ಸಹ ವಿಶ್ವಕೋಶ ಮಾದರಿಯಲ್ಲಿ ಸೇರಿಸುವ ದೃಷಿ. ೪. ಗುರು - ವಿರಕ್ತ ಭೇದವಿಲ್ಲದಂತೆ ಸಾಹಿತ್ಯ ಕೃತಿಗಳ ನಿರ್ಮಾಣ ೫. ಶಿಷ್ಟಕ್ಕಿಂತ ಜನ ಪದಕ್ಕೆ ಪಾಶಸ್ತ್ಯ ೬.ಜನಭಾಷೆ ೭. ಸಮೂಹ ಸಂವಹನ ಮಾಧ್ಯಮಗಳ ಬಳಕೆ ೮. ರಾಜಾಶ್ರಯದ ನಿರಾಕರಣೆ

೯. ಮುಕ್ತ ಸಮಾಜ ಪ್ರಜಾತಾಂತ್ರಿಕ ಮೌಲ್ಯಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ೧೦. ಜನಪದ ಸಮಷ್ಟಿ ಸಂಸ್ಕೃತಿ ನಿರ್ಮಾಣ,ಪೋಷಣೆ ಸಂವರ್ಧನೆ ಇವೇ ಮುಂತಾದ ಲಕ್ಷಣಗಳಿಂದ ವೀರಶೈವ ಸಾಹಿತ್ಯದ ಮೌಲ್ಯಗಳು ಏಕಕಾಲಿಕವಾಗಿ ಮಾತ್ರ ಉಳಿಯದೆ ಸಾರ್ವಕಾಲಿಕ ಸಾಹಿತ್ಯಮೌಲ್ಯಗಳ ಪ್ರಸಾರಣೆಗೆ ಕಾರಣವಾಗಿದೆ.

ಸಂದರ್ಭ ಸೂಚಿ :

ನರಸಿಂಹಾಚಾರ್. ಆರ್	ಕರ್ನಾಟಕ ಕವಿ ಚರಿತೆ (ಸಂ. 1,2,3) ಕ.ಸಾಪ, ಬೆಂಗಳೂರು
ಮುಗಳಿ. ರಂ.ಶ್ರೀ	ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು
ಹಳಕಟ್ಟಿ.ಫ.ಗು.	ಅಮರಗಣಾಧೀಶ್ವರ ಚರಿತ್ರೆ, ಶಿವಾನುಭವ ಗ್ರಂಥಮಾಲೆ. ಬಿಜಾಪುರ
ಹಿರೇಮಲ್ಲೂರ ಈಶ್ವರನ್	ಲಿಂಗಾಯತ ಧರ್ಮ, ಸಮಾಜ, ಸಂಸ್ಕೃತಿ, ಮೈ.ವಿ.ವಿ. ಮೈಸೂರು
ಎಂ. ಚಿದಾನಂದ ಮೂರ್ತಿ	ಸಾಧನೆ 12-4 (1983) ಬೆಂ. ವಿ.ವಿ. ಬೆಂಗಳೂರು
ಅನಂತಮೂರ್ತಿ ಯು.ಆರ್.	ಪ್ರಜ್ಞೆ ಮತ್ತು ಪರಿಸರ. ಅಕ್ಷರ ಪ್ರಕಾಶನ, ಹೆಗ್ಗೋಡು
ರಾಮಕೃಷ್ಣ ಹೆಗಡೆ	ಪ್ರಸಾರ ಮಾಧ್ಯಮ ಸ್ವಾತಂತ್ರ್ಯ ಭೀಮಸೇನ ಆಚಾರ್ ಸ್ಮಾರಕ ಉಪನ್ಯಾಸ, ನವದೆಹಲಿ
ಕಲಬುರ್ಗಿ ಎಂ.ಎಂ. (ಸಂ)	ಸಮಗ್ರವಚನ ಸಂಪುಟಗಳು. ಕರ್ನಾಟಕ ಸರಕಾರ ಕನ್ನಡ ಸಂಸ್ಕೃತಿ ಇಲಾಖೆ
Mckrocy	An Introduction to Inter - Personal Communication (1971)
Ramanujan A.K.	Speaking of Siva. Penguin Books Early Printing in Bengal
Shivanand V.	Studies in Kannada Sociolinguistics Kannada Chair B.H.K Varanasi (1994)
Shyam Parakar	Traditional Folk Media in India New Delhi (1994)

ಇತ್ತೀಚೆಗೆ ಶೋಧ (+ಪ್ರಕಟ) ಗೊಂಡ ವೀರಶೈವ ಕೃತಿಗಳು

– ಎಸ್. ಶಿವಣ್ಣ

ಸಂಶೋಧನೆ ಎಂಬುದು ನಿರಂತರ ಪ್ರವಾಹದಂತೆ ಸದಾ ಚಲನರೂಪ ಕ್ರಿಯಾತ್ಮಕವಾದ ಸ್ವರೂಪ ಪಡೆದದ್ದು. ಇದಕ್ಕೆ ಆದಿಯಲ್ಲದೆ ಅಂತ್ಯವಿಲ್ಲ. ಹೊಸ ಹೊಸ ಸಾಮಗ್ರಿಯ ಶೋಧ ಸಂಶೋಧನೆಗೆ ಹೊಸ ಹೊಸ ಆಯಾಮಗಳನ್ನು ಒದಗಿಸಿಕೊಡುತ್ತದೆ.

ಕನ್ನಡ ವಾಙ್ಮಯದಲ್ಲಿ ಒಂದು ಪ್ರಮುಖ ಸ್ಥಾನದಲ್ಲಿರುವ ವೀರಶೈವ ಸಾಹಿತ್ಯದಲ್ಲಿನ ಶೋಧ ಬತ್ತದ ತವನಿಧಿ. ಪ್ರತಿವರ್ಷವೂ ಹಲವಾರು ಹೊಸ ಕೃತಿಗಳೊಡನೆ ಪ್ರಾಚೀನ ಅಪ್ರಕಟಿತ ಕೃತಿಗಳು ಆಗಿಂದಾಗ ಪ್ರಕಟಗೊಳ್ಳುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಕಾವ್ಯಗಳ ಶೋಧದಲ್ಲಿದ್ದ ಆಸಕ್ತಿ ಪಲ್ಲಟಗೊಂಡು ಲಘು ಕೃತಿಗಳ ಪ್ರಕಾರದೆ ಕಡೆ ಗಮನ ಹರಿದಿದ್ದು ಸ್ವರ ವಚನಗಳು, ತಾರಾವಳಿ, ದಂಡಕ, ಅಷ್ಟಕ, ಕಂದ, ತ್ರಿವಿಧಿ ಇತ್ಯಾದಿ ಪ್ರಕಾರಗಳ ಕೃತಿಗಳು ಪ್ರಕಟವಾಗುತ್ತಿವೆ.

ಪ್ರಸ್ತುತ ಲೇಖನದಲ್ಲಿ ೧೯೯೩-೯೫ರ ಕಾಲಾವಧಿಯಲ್ಲಿ ಶೋಧಗೊಂಡು/ ಪ್ರಕಟವಾದ ಕೃತಿಗಳ ಬಗೆಗೆ ವಿವೇಚಿಸಲಾಗಿದೆ. ಆನುಷಂಗಿಕವಾಗಿ ಕೆಲವು ಅಪ್ರಕಟಿತ ಕೃತಿಗಳ ಬಗೆಗೂ ಸೂಚಿಸಲಾಗಿದೆ.

ಮೊದಲು ಕೃತಿಗಳ ರೂಪದಲ್ಲಿ ಪ್ರಕಟವಾದ ಪ್ರಕಟಣೆಗಳ ಬಗೆಗೆ - ಪ್ರಕಟಿತ ವರ್ಷಗಳನ್ನು ಗಮನದಲ್ಲಿರಿಸಿಕೊಂಡು - ತಿಳಿಸಲಾಗಿದೆ. ಅನಂತರ ಪತ್ರಿಕೆಗಳಲ್ಲಿ ಬಿಡಿಯಾಗಿ ಪ್ರಕಟಗೊಂಡ ಕೃತಿಗಳನ್ನು ವರ್ಷಾನುಕ್ರಮದಲ್ಲಿ ಪ್ರಸ್ತಾಪಿಸಿದೆ. (ಅನುಬಂಧದಲ್ಲಿ ಸಂಪಾದಕರ ಹಾಗೂ ಪ್ರಕಟಿತ ವಿವರಗಳನ್ನು ಕೊಡಲಾಗಿದೆ.)

ಕೃತಿಗಳ ಸ್ವರೂಪದಲ್ಲಿ :

ಕ್ರಿ.ಶ. ೧೯೯೩ ವಚನ ಸಾಹಿತ್ಯ ಶೋಧ/ ಪ್ರಕಟನೆಗಳಲ್ಲಿ ಚಿರಸ್ಮರಣೀಯ ವರ್ಷ. ಈ ವರ್ಷ ಕರ್ನಾಟಕ ಸರ್ಕಾರ, 'ಸಮಗ್ರ ವಚನ ಸಂಪುಟ ಜನಪ್ರಿಯ ಆವೃತ್ತಿ' ಹೆಸರಿನಲ್ಲಿ ವಚನಗಳಿಗೆ ಸಂಬಂಧಿಸಿದಂತೆ ೧೪ ಸಂಪುಟಗಳನ್ನು ಪ್ರಕಟಿಸಿದೆ. ಇವುಗಳಲ್ಲಿ ಸುಮಾರು

೨೧೫೦೦ ವಚನಗಳಿದ್ದು ಮೊದಲ ಬಾರಿಗೆ ಸುಮಾರು ೨೦೦೦ ವಚನಗಳು ಪ್ರಕಟವಾಗಿವೆ. ಈ ವಚನಗಳ ಬಹುಪಾಲಿನ ಶೋಧಿತ ಕೀರ್ತಿ ಡಾ॥ ವೀರಣ್ಣ ರಾಜೂರ ಹಾಗೂ ಡಾ॥ ಬಿ. ಆರ್. ಹಿರೇಮಠರಿಗೆ ಸಲ್ಲುತ್ತದೆ.

'ನೀಲಮ್ಮನ ವಚನಗಳು' ಕೃತಿಯನ್ನು ಡಾ॥ಸಾ. ಶಿ. ಮರುಳಯ್ಯ ಹಾಗೂ ಶ್ರೀ ಎಸ್. ಶಿವಣ್ಣನವರು ಪ್ರಕಟಿಸಿದ್ದಾರೆ. ಇದರಲ್ಲಿ ೧೬೨ ಹೊಸ ವಚನಗಳು ಮೊದಲ ಬಾರಿಗೆ ಬೆಳಕಿಗೆ ಬಂದಿವೆ.

ಡಾ॥ ಸಾ. ಶಿ. ಮರುಳಯ್ಯನವರು 'ಅಕ್ಕ ಮಹಾದೇವಿಯ ವಚನಗಳು' ಕೃತಿಯನ್ನು ಪ್ರಕಟಿಸಿದ್ದು ಇದರಲ್ಲಿ ೬೦ ಕ್ಕೂ ಮೀರಿ ಅಕ್ಕನ ಹೊಸ ವಚನಗಳು ಪ್ರಕಟವಾಗಿವೆ.

ಶ್ರೀ ಪಿ.ಎಂ. ಗಿರಿರಾಜು (ಮೈಸೂರು) ಅವರು ಎಳಂದೂರು ಪರ್ವತ ಶಿವಯೋಗಿಯ (೧೭೦೦) ಶಾಂತವೀರೇಶ್ವರ ಅಂಕಿತದ ೧೦೦೩ ವಚನಗಳ ಓಲೆ ಪ್ರತಿಯೊಂದನ್ನು ಹುಡುಕಿದ್ದಾರೆ. ಕೃತಿ ಅಪ್ರಕಟಿತ.

೧೯೯೪ರಲ್ಲಿ ಸಂಶೋಧಿತವಾಗಿ ಈ ವರ್ಷ ಪ್ರಕಟವಾದ ಡಾ॥ ವೀರಣ್ಣರಾಜೂರರ ವೀರಶೈವ ತಾರಾವಳಿ ಸಂಪುಟ ಅತ್ಯಂತ ಗಮನಾರ್ಹವಾದ ಕೃತಿ. ಇದರಲ್ಲಿ ೬೩ ತಾರಾವಳಿಗಳಿದ್ದು ಈ ಕೆಳಕಂಡ ೧೯(+೧) ತಾರಾವಳಿಗಳು ಮೊದಲ ಬಾರಿಗೆ ಪ್ರಕಟವಾಗಿವೆ.

ಕೋಟದ ವೀರಭದ್ರನ ಜಾತ್ರೆಯ ತಾರಾವಳಿ

ವೀರಭದ್ರ ತಾರಾವಲಿ (ಮೇಡ್ಲೇರಿ ಶಿವಲಿಂಗ)

ಶಿವಗಣ ಸಹಸ್ರ ತಾರಾವಳಿ (ಮಹಾಂತಸ್ವಾಮಿ)

ಶ್ರೀ ಚೆನ್ನಬಸವೇಶ್ವರನ ತಾರಾವಳಿ ಅಷ್ಟಕ

ಸಂಗಮೇಶ್ವರ ತಾರಾವಳಿ

ಸಿಂಕ್ಸುಮಾರನ ತಾರಾವಳಿ

ಎಳಮಲೆಯ ಗುರುಶಾಂತದೇವರ ತಾರಾವಳಿ

ಕಂಥೆಯ ಚರಲಿಂಗಮೂರ್ತಿಯ ತಾರಾವಳಿ

ದೇವಿಯರ ಸ್ತೋತ್ರದ ತಾರಾವಲಿ (ಸಿದ್ಧನಂಜೇಶ)

ಪಂಚಮುಖದ ಗಣೇಶ್ವರನ ತಾರಾವಳಿ

ಪ್ರಮಥ ತಾರಾವಲಿ ಸ್ತೋತ್ರ

ಬಸವೇಶ್ವರನ ಅರಮನೆ ವರ್ಣನೆ ತಾರಾವಳಿ

ಮೈಸೂರು ದೊರೆಗಳ ವಂಶಾವಳಿ

ವಿರಕ್ತ ಹುಚ್ಚನ ಬೋದಡೆ ಗುರುಬಸವಪ್ಪನ ತಾರಾವಳಿ

ಶರಭಲೀಲೆಯ ವೃತ್ತ (ಮೊದಿಯ ರುದ್ರ)

ಅರವತ್ತು ಮೂರು ಪುರಾತರ ತಾರಾವಳಿ

(ಇದರ ಹೆಸರು ತ್ರಿಷಷ್ಟಿಗಣವರ ಪೂಜೆ ಎಂದಿರಬೇಕು)

ಧರ್ಮ ಚಾರಿತ್ರ ತಾರಾವಳಿ (ಅಪೂರ್ಣ)

ಯೋಗ ತಾರಾವಳಿ (ಗದ್ಯ)

ಪುರವಿ ತಾರಾವಳಿ

ಕೊಟ್ಟೂರ ಬಸವೇಶ್ವರ ತಾರಾವಳಿ (ಕೇವಲ ಪಲ್ಲವಿ ಮಾತ್ರ)

ಡಾ || ಎಂ. ಎಂ. ಕಲಬುರ್ಗಿ ಅವರು ಮಲ್ಲ/ಮಲ್ಲೇಶನ ಗೊಲ್ಲ ಸಿರುಮನ ಚರಿತೆ ಪ್ರಕಟಿಸಿದ್ದಾರೆ. ಐತಿಹಾಸಿಕ ಸ್ವರೂಪದ ಈ ಕೃತಿಯಲ್ಲಿ ೬ ಸಂಧಿ ೧೦೫೩ ಸಾಂಗತ್ಯಗಳಿವೆ.

ಸ್ವರವಚನ ಪ್ರಕಾರಕ್ಕೆ ಸಂಬಂಧಿಸಿದಂತೆ ಪ್ರೊ || ಎಸ್. ಉಮಾಪತಿ ಅವರು ಸ್ವರವಚನ ವಾಹಿನಿ (ಸಂಪುಟ - ಒಂದು) ಪ್ರಕಟಿಸಿದ್ದಾರೆ. ಇದರಲ್ಲಿ ವಿವಿಧ ಸ್ವರವಚನಕಾರರ ೨೦೪ ಸ್ವರವಚನಗಳಿವೆ.

ಐನೂಲಿ ಕರಿಬಸವಾರ್ಯನ (೧೭೪೫-೧೮೪೦) ೩೦ ಹಾಡುಗಳನ್ನು ಶ್ರೀ ಶಿವರಾಜ ಎಂ. ದೇವಪ್ಪ ಅವರು 'ನೀತಿ ರತ್ನಾಕರ' ಹೆಸರಿನಿಂದ ಪ್ರಕಟಿಸಿದ್ದಾರೆ.

೧೯೯೫ನೆಯ ವರ್ಷದಲ್ಲಿ ಸ್ವರವಚನಗಳ ಪ್ರಕಟಣೆಯಲ್ಲಿ ಮೈಲಿಗಲ್ಲೊಂದು ಸ್ಥಾಪಿತವಾಗಿದೆ. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ (ಮೈಸೂರು) ಮೂಲಕವಾಗಿ ೫ ಸ್ವರ ವಚನ ಸಂಪುಟಗಳು ಪ್ರಕಟವಾಗಿವೆ.

ಸ್ವರ ವಚನ ಸಂಪುಟ-೧ (ಸಂ) ಎಸ್. ಶಿವಣ್ಣ

ಸ್ವರ ವಚನ ಸಂಪುಟ-೨ (ಸಂ) ಎಸ್. ಶಿವಣ್ಣ

ಸ್ವರ ವಚನ ಸಂಪುಟ-೩ (ಸಂ) ಜಿ.ಜಿ. ಮಂಜುನಾಥನ್

ಸ್ವರ ವಚನ ಸಂಪುಟ-೪ (ಸಂ) ವೈ.ಸಿ. ಭಾನುಮತಿ

ಸ್ವರ ವಚನ ಸಂಪುಟ-೫ (ಸಂ) ಕೆ. ಆರ್. ಶೇಷಗಿರಿ

ಇವುಗಳಲ್ಲಿ ೧,೨,೪ ನೆಯ ಸಂಪುಟಗಳಲ್ಲಿ ವಿವಿಧ ಸ್ವರ ವಚನಕಾರರ ಕೃತಿಗಳಿವೆ. ೩,೫ ನೆಯ ಸಂಪುಟಗಳು ಏಕ ಕರ್ತೃಕಗಳಾಗಿವೆ.

೩ನೆಯ ಸಂಪುಟ ಕರಿಬಸವೇಶ್ವರನ ವಚನ ಎಂಬ ಹೆಸರಿನಲ್ಲಿದೆ.ಇದರಲ್ಲಿ ೧೨೮ (-೧=೧೨೭) ಸ್ವರವಚನಗಳಿವೆ.

೫ನೆಯ ಸಂಪುಟ 'ನೀಲಗ್ರೀವನ' ವಚನಗಳು ಹೆಸರಿನಲ್ಲಿ ಪ್ರಕಟವಾಗಿದ್ದು ಇದರಲ್ಲಿ ೯೮ಲ ಸ್ವರ ವಚನಗಳಿವೆ. ಸಂಪಾದಕರು ಕರ್ತೃ ಅಜ್ಞಾತನೆಂದಿದ್ದಾನೆ. ಆದರೆ ಇದರ ಕರ್ತೃ ಚೆನ್ನನೆಂಬ ಅಂಶ ಇಲ್ಲಿನ ಪುಟ ೨೮, ೩೯, ೪೦ ಹಾಗೂ ೪೫ ರಲ್ಲಿನ ಉಲ್ಲೇಖಗಳಿಂದ ಸ್ಪಷ್ಟಪಡುತ್ತದೆ. ಈತನ ಸ್ವರ ವಚನಗಳಲ್ಲಿ, ಗುರು ಚೆನ್ನಬಸವ ಅಂಕಿತದ ಹಲವಾರು ಸ್ವರ ವಚನಗಳಿವೆ.

ಸಂಪುಟ ೨ ರಲ್ಲಿ ೩೦೦ ಸ್ವರವಚನಗಳಿವೆ ಇದೇ ವರ್ಷ 'ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಸ್ವರ ವಚನಗಳು' ಎಂಬ ಕೃತಿ ಶ್ರೀ ಎಸ್. ಶಿವಣ್ಣನವರಿಂದ ಶೋಧಿತವಾಗಿ ಪ್ರಕಟವಾಗಿದ್ದು ೨೧೨ ಸ್ವರ ವಚನಗಳಿವೆ.

ಸರ್ಪಭೂಷಣ ಶಿವಯೋಗಿಗಳ 'ಕೈವಲ್ಯ ಕಲ್ಪವಲ್ಲರಿ ' ಶ್ರೀ ಎಸ್. ಶಿವಣ್ಣ ನವರಿಂದ ಶೋಧಿತವಾಗಿ ಪ್ರಕಟವಾಗಿದೆ. ಇದರ ಪ್ರಕಟಿತ ಪಾಠವನ್ನು ಸರ್ಪಭೂಷಣರ ಜೀವಿತ ಕಾಲದಲ್ಲಿಯೆ ಲಿಖಿತಗೊಂಡ (ಕ್ರಿ.ಶ೧೮೩೧-೩೨) ಪ್ರತಿಯನ್ನು ಆಧರಿಸಿ ಸಿದ್ಧ ಪಡಿಸಲಾಗಿದೆ.

ತೋಂಟದ ಸಿದ್ಧಲಿಂಗರ ಜೀವಿತವನ್ನು ವಸ್ತುವಾಗುಳ್ಳ ಸುವ್ವಿಮಲ್ಲನ (ಸು.೧೬೦೦) ತೋಂಟದ ಸಿದ್ಧೇಶ್ವರನ ಸಾಂಗತ್ಯನವನ್ನು ವಿದ್ವಾನ್ ಎಂ. ಎಸ್. ಬಸವರಾಜಯ್ಯನವರು ಏಕೈಕ ಓಲೆ ಪ್ರತಿ ಶೋಧಿಸಿ ಪ್ರಕಟಿಸಿದ್ದಾರೆ. ಇದರಲ್ಲಿ ೫ ಸಂಧಿ ೬೩೮ ಪದ್ಯಗಳಿವೆ.

ಡಾ॥ಬಿ. ಆರ್. ಹಿರೇಮಠರು 'ಸೋದೆಯ ಸದಾಶಿವರಾಯನ ಕೃತಿಗಳು' ಹೆಸರಿನಲ್ಲಿ ಆತನ ೧೭ ಕೃತಿಗಳನ್ನು ಏಕೈಕ ಓಲೆಪ್ರತಿಯಿಂದ ಶೋಧಿಸಿ ಪ್ರಕಟಿಸಿದ್ದಾರೆ.

ಪ್ರೊ॥ಎಸ್. ಉಮಾಪತಿ ಅವರು ಹಿರಣ್ಯಾರ್ಯನ (ಕ್ರಿ.ಶ. ೧೫೬೧) 'ಷಟ್‌ಸ್ಥಲಜ್ಞಾನ ಸಾರಾಯ ಸಿದ್ಧಲಿಂಗೇಶ್ವರ ಸ್ತೋತ್ರದ ವೃತ್ತ' ಕೃತಿಯನ್ನು ಏಕೈಕ ಓಲೆ ಪ್ರತಿ ಆಧರಿಸಿ ಪ್ರಕಟಿಸಿದ್ದಾರೆ. ಕೃತಿ ವೃತ್ತ ರೂಪದಲ್ಲಿದೆ. ಅಲ್ಲಲ್ಲಿ ಸಿದ್ಧಲಿಂಗ ಅಂಕಿತದ ಸ್ವರವಚನಗಳಿವೆ. ಕೃತಿಯ ಆದಿಯ ಭಾಗವಿಲ್ಲ. ನಡುವೆ ಹಾಗೂ ಅಂತ್ಯಗಳಲ್ಲಿ ಕೃತಿ ತ್ರುಟಿತವಾಗಿದೆ. ಇಲ್ಲಿನ ೭೮೦ ವೃತ್ತಗಳಲ್ಲಿ ಹಲವಾರು ವೃತ್ತಗಳಿಲ್ಲ.

ಗುಬ್ಬಿಯ ಡಾ॥ಬಿ. ನಂಜುಂಡಸ್ವಾಮಿಯವರು ಇದುವರೆಗೂ ಕೇವಲ ಹೆಸರು ಮಾತ್ರ ತಿಳಿದು ಬಂದಿದ್ದ ವಿರಕ್ತ ತೋಂಟದಾರ್ಯನ 'ಚಿದಾನಂದ ಚಂಪು' ಕೃತಿಯ ಓಲೆ ಪ್ರತಿಯೊಂದನ್ನು ಪತ್ತೆಮಾಡಿದ್ದಾರೆ. ಕೃತಿ ಪ್ರಕಟವಾಗಿಲ್ಲ. ತೋಂಟದಾರ್ಯನ ಸಮಾಧಿ ಬೇಡತ್ತೂರಿನಲ್ಲಿರುವ ಸಂಗತಿಯನ್ನು ಶೋಧಿಸಿದ್ದಾರೆ.

ಪತ್ರಿಕೆಗಳಲ್ಲಿ ಪ್ರಕಟಿತ :

೧೯೯೩

ಪದ್ಮರಾಜ ಪುರಾಣದ ಕಥಾ ಸೂಚನೆ (ಗದ್ಯ) ೧

ವಿರಕ್ತ ತೋಂಟದಾರ್ಯನ (೧೬೧೬) ನೂತನ ಪುರಾತನರ ರಗಳೆ ೨

ಎರಡು ಹೊಸ ವಚನಗಳು ೩

(ಉರಿಲಿಂಗಪೆದ್ದಿ : 'ಪ್ರಣವವೆಂಬ ... ಮೋಳಿಗೆ ಮಾರಯ್ಯ : ಆಜುದೇವರು...)

ನಿರಾಳ ಪ್ರಿಯ ಸೊಡ್ಡಳಯ್ಯ ಅಂಕಿತದ ಅಪ್ರಕಟಿತ ವಚನ ೪

ಮೋಳಿಗೆ ಮಾರಯ್ಯನ ವಚನ ೫ (ಸ್ಥಿತಿ ಮೂಲ ...)

ಚೆನ್ನಬಸವಣ್ಣನವರ ಒಂದು ಅಪ್ರಕಟಿತ ವಚನ ೬

ಹಂಪೆಯ ಹರಿಹರ (?) ಕೃತ ಹಂಪೆಯ ರಾಯನ ಶತಕ ೭

ಚಿಕ್ಕ ನಂಜೇಶನ ಕಾಲವಿಚಾರ ಹಾಗೂ ಒಂದು ಹೊಸ ಕೃತಿ ೮

ಶಾಂತದೇವನ ಸಿದ್ಧವೀರೇಶ್ವರದೇವರ ನವರತ್ನಮಾಲೆಯ ಪದ ೯

ಕವಿಲಿಂಗನ ಒಂದು ಸ್ವರ ವಚನ ೧೦

ನಿರ್ವಾಣಿ ಅಲ್ಲಮಪ್ರಭು ಅಂಕಿತದ ಸ್ವರವಚನ ೧೧

ಮರಿ ಶಾಂತ ಬಸವದೇವನ ಒಂದು ಅಪ್ರಕಟಿತ ಸ್ವರ ವಚನ ೧೨

ಸೋಸಲೆ ರೇವಣಾರಾಧ್ಯನ ಒಂದು ಸ್ವರವಚನ ೧೩

ಸೋದೆ ಗುರುರಾಯನ 'ಕರ್ನಾಟಕ ಶಬ್ದಮಂಜರಿ ಟೀಕು ಸುಧಾ' ಒಂದು ಟಿಪ್ಪಣಿ ೧೪

೧೯೯೪

ಗುರುಬಸವಾಷ್ಟಕ (ಕಂದ) ೧೫

ಸಾಸಿರ ಲಿಂಗನ ಪದ್ಯ (ಕಂದ) ೧೬

ಸೋದೆ ಬಸವಲಿಂಗ ರಾಜನ (೧೬೯೭-೧೭೪೫) ಶ್ರೀ ಗುರುಸಿದ್ಧೇಶ್ವರ ಸ್ತೋತ್ರ (ಕಂದ) ೧೭

ಹಂಪೆಯ ಹರಿಹರದೇವನ ಶಿವಕೀರ್ತನೆಯ ರಗಳೆ ೧೮

ಅಂಬಿಗರ ಚೌಡಯ್ಯನ ನಾಲ್ಕು ಅಪ್ರಕಟಿತ ವಚನಗಳು ೧೯

ಬಸವಣ್ಣನವರ ಒಂದು ಹೊಸ ವಚನ ೨೦

('ಪಿಂಡವೇ ಆದಿಯಾಗಿ ...')

ಷಣ್ಮುಖ ಸ್ವಾಮಿಗಳ ೨ ಹೊಸವಚನ ೨೧

ಆಗಮಂಗಳೊಳಗಣ ಗೀತಾಮೃತದ ಸೃಷ್ಟಿಯ ವಚನ ೨೨

ಬಸವಲಿಂಗ ಕೃಪಾಂಗನಾಷ್ಟಕ (೮ ವೃತ್ತ) ೨೩

ವಿರೂಪಾಕ್ಷಯ್ಯನವರು ನಿರೂಪಿಸಿದ ಶಾರ್ದೂಲ ವೃತ್ತ

(೮ ವೃತ್ತ + ಕಂಜ ೧) ೨೪

ಇಮ್ಮಡಿ ಗುರು ಸಿದ್ಧಸ್ವಾಮಿಗಳ ಶಿವರಹಸ್ಯ ಪುರಾಣದ ನಾಂದ್ಯ ೨೫

(೨೮ ಭಾಮಿನೀಷಟ್ಪದಿ)

ಕರಿಬಸವಾರ್ಯ ವಿರಚಿತ ಬಸವೇಶ್ವರ ಸ್ತೋತ್ರದ ಪರಿವರ್ಧಿನಿ ೨೬

(೨೫ ಭಾ.ಷ + ಟೀಕೆ)

ಇಮ್ಮಡಿ ಗುರುಸಿದ್ಧ ಸ್ವಾಮಿಗಳ ಪಾದ ಸ್ತೋತ್ರ (೨೦ ಸ್ವರ ವಚನ) ೨೭

ಚತುರಾಚಾರ್ಯರ ಮಂಗಳ (ಹಾಡು) ೨೮

೧೯೯೫

ಚಿದಾರಣ್ಯಸ್ವಾಮಿ ಪ್ರಾರ್ಥನಾ ಸ್ತೋತ್ರ ನಾಂದ್ಯ ೨೯ (ಕಂದ)

ಭೈರವೇಶ್ವರಕಾವ್ಯದ ಕಥಾ ಸಾಗರ ೩೦ (ಗದ್ಯ)

(ಉತ್ತರದೇಶದ ಬಸವಲಿಂಗ)

ವಾಟಾಳ ಬಸವಲಿಂಗ ತಾರಾವಲಿ ೩೧

ಸಿದ್ಧಲಿಂಗೇಶ್ವರ ಕೃತ ಸಿದ್ಧೇಶ್ವರನ ಪವಾಡದ ತ್ರಿವಿಧಿ (೪೨ ತ್ರಿವಿಧಿ) ೩೨

ಕೂಡ್ಲೂರು ಸಂಗಮದೇವರ ವಚನ ೩೩ (೭ ವಚನ)

ಬಸವಣ್ಣನವರ ಒಂದು ಅಪ್ರಕಟಿತ ವಚನ ೩೪ ('ನೇಹದ ಸುಖವ ನೋಟ ...'.)

ಅನುಬಂಧ :

೧. (ಸಂ) ಎಫ್.ಟಿ. ಹಳ್ಳಿಕೇರಿ, ಬಸವಪಥ, ೧೫.೩, ೪೭-೫೦

೨. (ಸಂ) ಎಸ್. ಶಿವಣ್ಣ, ಬಸವಪಥ, ೧೫.೯ ೫೪-೬೫

೩. (ಸಂ) ವೀರಣ್ಣ ರಾಜೂರ, ಕರ್ನಾಟಕ ಭಾರತಿ, ೨೫.೩, ೧೬೪-೬೬

೪. (ಸಂ) ಎಸ್. ಶಿವಣ್ಣ, ಬಸವಪಥ, ೧೫.೪, ೨೪

೫. (ಸಂ) ಎಸ್. ಎಸ್. ಭೂಸರಡ್ಡಿ, ಮಧು ವೆಂಕಾರೆಡ್ಡಿ, ತರಳಬಾಳು, ೧೯.೩, ೧೮-೨೦

೬. (ಸಂ) ಎಸ್. ಶಿವಣ್ಣ, ಸತ್ಯ ಶುದ್ಧಕಾಯಕ, ೪-೧-೪, ೧೦೪-೦೫)

೭. (ಸಂ) ಎಸ್. ಶಿವಣ್ಣ, ಬಸವಪಥ, ೧೫.೪, ೧೯-೨೩

೮. (ಸಂ) ಎಸ್. ಶಿವಣ್ಣ, ಬಸವಪಥ, ೧೫.೯, ೫೦-೪

೯. (ಸಂ) ಎಸ್. ಶಿವಣ್ಣ ,ಗುರುಶ್ರೀ, ೫-೬

೧೦. (ಸಂ) ವೀರಣ್ಣ ರಾಜೂರ, ಪರಂಜ್ಯೋತಿ, ೨೫.೯, ೫೨೫-೨೬
೧೧. (ಸಂ) ಎಸ್. ಶಿವಣ್ಣ, ಬಸವಪಥ, ೧೫.೯, ೪೯
೧೨. (ಸಂ) ಎಸ್. ಶಿವಣ್ಣ, ಬಸವಪಥ, ೧೫.೪, ೨೩-೪
೧೩. (ಸಂ)ವೀರಣ್ಣ ರಾಜೂರ, ಬಸವಪಥ ೧೫.೧-೨, ೫೮-೯
೧೪. ಎಸ್.ಶಿವಣ್ಣ, ಸಂತುಷ್ಟಿ, ೩೨೨-೨೩
೧೫. (ಸಂ) ಎಸ್. ಶಿವಣ್ಣ, ಕಾಯಕ, ೨೨
೧೬. (ಸಂ) ಎಸ್. ಶಿವಣ್ಣ, ಬಸವಪಥ, ೧೬-೬, ೩೮-೪೧
೧೭. (ಸಂ) ಎಸ್. ಶಿವಣ್ಣ, ಬಸವಪಥ, ೧೬.೬, ೪೨-೩
೧೮. (ಸಂ) ಎಸ್. ಜಿ. ಪಾಟೀಲ, ಬಸವಪಥ, ೧೬-೧೦, ೨೮-೩೦
೧೯. (ಸಂ) ಎಸ್. ಶಿವಣ್ಣ, ಸುಕೃತಿ, ೪೬-೭
೨೦. (ಸಂ) ಚ. ಸುಂದರೇಶನ್, ಅಮರವಾಣಿ, ೩೭-೪೬
೨೧. (ಸಂ) ಚ. ಸುಂದರೇಶನ್, ಶ್ರೀ ಷಣ್ಮುಖ ಶಿವಯೋಗಿಗಳ ಸಮಗ್ರ ಕೃತಿಗಳು,
೨೨. (ಸಂ) ಎಸ್. ಜಿ. ಪಾಟೀಲ, ಸಾಧನೆ, ೨೩.೧-೨, ೯೮-೧೦೭
೨೩. (ಸಂ)ಎಸ್. ಶಿವಣ್ಣ, ಬಸವಪಥ, ೧೬.೯, ೩೮-೯
೨೪. (ಸಂ)ಎಸ್. ಶಿವಣ್ಣ, ಬಸವಪಥ,೧೫.೧೧, ೪೨-೪
೨೫. (ಸಂ)ಎಸ್. ಶಿವಣ್ಣ, ಕರ್ನಾಟಕ ಭಾರತಿ, ೨೭.೨, ೯೪-೯
೨೬. (ಸಂ)ಎಸ್. ಶಿವಣ್ಣ,ಬಸವಪಥ, ೧೬.೪, ೩೫-೫೪
೨೭. (ಸಂ)ಎಸ್. ಶಿವಣ್ಣ, ಸಾಧನೆ, ೨೩ .೧-೨, ೭೧-೮೫
೨೮. (ಸಂ)ಎಸ್. ಶಿವಣ್ಣ, ರಂಭಾಪುರಿ ಬೆಳಗು, ೩.೬, ೪೩-೪
೨೯. (ಸಂ) ಶಕುಂತಲಾಪಾಟೀಲ, ಬಸವಪಥ, ೧೭.೧,೪೩-೮
೩೦. (ಸಂ) ಎಸ್. ಉಮಾಪತಿ, ಸತ್ಯ ಶುದ್ಧ ಕಾಯಕ, (ಕ್ರಮಶ: ಪ್ರಕಟಿತ, ೧೯೯೧-೧೯೯೫)
೩೧. (ಸಂ) ಎಸ್. ಶಿವಣ್ಣ, ಮರಳೀಗವಿ ದೀಪ್ತಿ.
೩೨. (ಸಂ) ಎಸ್. ಶಿವಣ್ಣ, ಸಾಹಿತ್ಯ ಸೌರಭ, ೧೩೦-೩೫
೩೩. (ಸಂ) ಎಸ್. ಶಿವಣ್ಣ, ಬಸವಪಥ,೧೭-೧, ೩೯-೪೨
೩೪. (ಸಂ) ಎಸ್. ಶಿವಣ್ಣ, ಸಾಧನೆ, ೨೪.೨, ೫೫
೩೫. (ಸಂ) ಎಸ್. ಶಿವಣ್ಣ, ಸಂಶೋಧನ ವ್ಯಾಸಂಗ, VII 1-2, ೧
೩೬ (ಸಂ) ಎಸ್. ಶಿವಣ್ಣ, ಬಸವಪಥ, ೧೬-೭, ೪೧-೬
೩೭. (ಸಂ) ಎಸ್. ಶಿವಣ್ಣ, ಸರ್ಪಭೂಷಣ ಶ್ರೀ, ೨೭-೯
೩೮. (ಸಂ) ಬಿ.ಬಿ. ಬಿರಾದಾರ, ಬಸವಪಥ, ೧೭.೯, ೪೧-೨
೩೯. (ಸಂ) ಬಿ.ಬಿ. ಬಿರಾದಾರ, ಬಸವಪಥ, ೧೬.೫, ೫೬-೭
೪೦. (ಸಂ) ಎಸ್. ಶಿವಣ್ಣ, ಬಸವಪಥ, ೧೬.೧೦, ೩೭-೮
೪೧. (ಸಂ) ಬಿ.ವಿ. ಯಕ್ಕುಂಡಿ ಮಠ, ಬಸವಪಥ, ೧೭-೮, ೪೩-೪
೪೨. (ಸಂ) ಬಿ.ವಿ. ಯಕ್ಕುಂಡಿ ಮಠ, ಬಸವಪಥ, ೧೭.೬, ೪೪-೫
೪೩. (ಸಂ) ಎಸ್. ಶಿವಣ್ಣ, ಬಸವಪಥ, ೧೬.೧೦, ೩೮-೯
೪೪. (ಸಂ)ಎಸ್. ಶಿವಣ್ಣ, ಅಮರ ಸಿದ್ಧ, ೨೫-೬
೪೫. (ಸಂ)ಎಸ್. ಶಿವಣ್ಣ, ಅಭಿವ್ಯಕ್ತಿ ೪೯೪-೯೫

ವಚನಗಳಲ್ಲಿ ಧರ್ಮದ ಪರಿಕಲ್ಪನೆ

ಎನ್. ಬಸವಾರಾಧ್ಯ

ಪ್ರಸ್ತುತ ವಿಷಯವನ್ನು ನಿರೂಪಿಸುವುದಕ್ಕೆ ಮೊದಲು ವಚನ ಮತ್ತು ಧರ್ಮ ಇವುಗಳ ಅರ್ಥವ್ಯಾಪ್ತಿಯನ್ನು ಪರಿಭಾವಿಸುವುದು ಅತಗತ್ಯವಾದುದು. 'ವಚನ' ಎಂಬ ಶಬ್ದಕ್ಕೆ ನುಡಿಯುವುದು ಮಾತು ಎಂಬುದು ಶಬ್ದಾರ್ಥ, ವಾಚ್ಯಾರ್ಥ. ಇದಕ್ಕೆ ಗದ್ಯ ಎಂಬ ಅರ್ಥವೂ ಪ್ರಚಲಿತವಾಗಿದೆ. ವೀರಶೈವ ಪರಿಭಾಷೆಯಲ್ಲಿ ವಚನ ಎಂಬ ಶಬ್ದಕ್ಕೆ ಶಿವಶರಣರ ಅನುಭಾವದ ನುಡಿ, ಸೂಕ್ತಿ ಎಂದರ್ಥ ಇದು ಹನ್ನೆರಡನೆಯ ಶತಮಾನದಲ್ಲಿ ಮೈತಳೆದ ಒಂದು ವಿಶಿಷ್ಟ ಪ್ರಕಾರ. ವೀರಶೈವ ಧರ್ಮ, ಭಕ್ತಿ, ಸಮಾಜ ಸುಧಾರಣೆ ಮುಂತಾದುವನ್ನು ಕುರಿತು ರಚಿಸಿದ, ಕೊನೆಯಲ್ಲಿ ತನ್ನ ಇಷ್ಟ ದೈವದ ಅಂಕಿತವನ್ನು ಹೊಂದಿರುವ ಒಂದು ಬಗೆಯ ರಚನೆ. ದಿ॥ ಎಂ. ಆರ್. ಶ್ರೀನಿವಾಸಮೂರ್ತಿ ಅವರು "ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಹರಿಸುತ್ತ ಬರುವಾಗ ಒಂದು ಕಡೆ ತಪೋವನವನ್ನು ಪ್ರವೇಶಿಸಿದಂತೆಯೂ, ಸಿದ್ಧಸಾಧಕ ಋಷಿಗಳ ಸಂದರ್ಶನ ಪಡೆದು, ಅವರ ಉದಾತ್ತ ಜೀವನ ಧರ್ಮಬೋಧಗಳಿಂದ ನಮ್ಮ ಅಂತರಂಗ ಪರಿಶುದ್ಧವಾದಂತೆಯೂ, ಆತ್ಮದ ಬಂಧನಗಳು ಕಳಚಿಬಿದ್ದು ನಾವು ಮುಕ್ತರಾದಂತೆಯೂ ಒಂದು ದಿವ್ಯವಾದ ಆನಂದಾನುಭವ ಉಂಟಾಗುತ್ತದೆ. ಇಲ್ಲಿ ಪಟ್ಟಣವಾಸದ ಗೊಂದಲವಿಲ್ಲ. ತಪೋವನದ ಸಹಜ ಶಾಂತಿ, ಪರಸ್ಪರ ಪ್ರೇಮ, ಸಮತಾಭಾವ, ಸ್ವಾತಂತ್ರ್ಯ - ಇವು ಮೂರ್ತಿಮತ್ತಾಗಿ ಕಾಣುತ್ತವೆ. ಆರಣ್ಯಕಗಳಲ್ಲಿ ಉಪನಿಷತ್ತಿನ ದರ್ಶನವನ್ನು ಕಂಡಂತೆ, ಇಲ್ಲಿ ವಚನಧರ್ಮದ ದರ್ಶನವನ್ನು ಕಾಣುತ್ತೇವೆ. ಸತ್ಯದ ಹಂಬಲು ಸಾಹಿತ್ಯವಾಗಿ, ಸತ್ಯಾನ್ವೇಷಣ ಸಿದ್ಧಾಂತವಾಗಿ, ಸತ್ಯಸಾಕ್ಷಾತ್ಕಾರವೇ ದರ್ಶನವಾಗಿ ನಮಗೆ ಆನಂದವನ್ನುಂಟುಮಾಡುತ್ತವೆ.

ವಚನ ಸಾಹಿತ್ಯವೇ ತಪೋವನದ ಈ ಉಪನಿಷತ್ಸಾಹಿತ್ಯ. ವಚನಕಾರರೇ ಉಪನಿಷತ್ಕರ್ತೃಗಳಾದ ಮಹರ್ಷಿಗಳು. ಇಲ್ಲಿ 'ಗುಹ್ಯಾತ್ ಗುಹ್ಯತರವಾದ ರಹಸ್ಯಗಳೂ ಮುಚ್ಚುಮರೆಗಳೂ ಇಲ್ಲ. ವರ್ಣವ್ಯತ್ಯಾಸಗಳಿಂದಾಗಲಿ ಲಿಂಗಭೇದದಿಂದಾಗಲಿ ಅಧಿಕಾರಿ ಅನಧಿಕಾರಿ ಎಂಬ ತಾರತಮ್ಯವಿಲ್ಲ. ವೇದಗಳು ಹೆಚ್ಚೋ ಆಗಮಗಳು ಹೆಚ್ಚೋ ಎಂಬ ತರ್ಕವಿತರ್ಕಗಳೂ ಇಲ್ಲ. ವಚನಕಾರರು ಸ್ವತಂತ್ರವಾಗಿ ಸತ್ಯಶೋಧನೆಗೆ ಪ್ರಯತ್ನ ಪಟ್ಟವರಾದ್ದರಿಂದ ಅವರ ಅನುಭವ ವಚನಗಳು ಉಪನಿಷತ್ತಿನ ವಚನಗಳನ್ನು ಹೋಲುತ್ತವೆ.

ವಚನ ಸಾಹಿತ್ಯ ಎರವಲು ತಂದದ್ದಲ್ಲ. ಅದು ಕನ್ನಡದ ಸ್ವಾರ್ಜಿತಸ್ವತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ. ಅವರು ಅಚ್ಚಕನ್ನಡದ ಬೇಸಾಯಗಾರರು.

ಈ ಹೊಸಹುರುಪಿನ ಮುಂದಾಳುಗಳು ಸಂಪ್ರದಾಯಕ್ಕಿಂತ ಅನುಭವ ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರು ವಚನಧರ್ಮದೊಳಗೆ ದೇಶಕಾಲಾದಿಗಳ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಅನ್ವಯಿಸುವ ವಿಶ್ವಧರ್ಮವೊಂದು ಸೇರಿಕೊಂಡಿತು.

ವಚನಗಳು ನಮ್ಮ ಕನ್ನಡ ಸಾಹಿತ್ಯದ ಉಪನಿಷತ್ತುಗಳು. ಆ ಕವಿಗಳು ನಮ್ಮ ನಾಡಿನ ರಸಋಷಿಗಳು, ಆ ರಸಋಷಿಗಳ ಉಪದೇಶಸಾರ ಸಾಹಿತ್ಯವೇ ದರ್ಶನ, ದರ್ಶನವೇ ಸಾಹಿತ್ಯ ಸತ್ಯವೇ ಸೌಂದರ್ಯ ಸೌಂದರ್ಯವೇ ಸತ್ಯ'' ಎಂದೆಲ್ಲ ಹೇಳಿರುವುದು ವಚನ ಸಾಹಿತ್ಯಕ್ಕೆ ಹಿಡಿದ ಕೈಗನ್ನಡಿಯಂತಿದೆ.

'ಧರ್ಮ' ಅತ್ಯಂತವ್ಯಾಪಕಾರ್ಥಗಳುಳ್ಳ ಶಬ್ದ. ಜಗತ್ತಿನ ಸ್ಥಿತಿಗತಿಗಳ ದೃಷ್ಟಿಯಿಂದ ದೃಢವಾಗಿ ಹಿಡಿಯಬೇಕಾದುದು – ನಿಷ್ಠೆಯಿಂದ ಪರಿಪಾಲಿಸಬೇಕಾದುದು. ವಾಡಿಕೆಯಾಗಿ ಬಂದ ಮತ ಸಂಬಂಧವಾದ ಅನುಷ್ಠಾನ; ಕಟ್ಟಳೆ ವಿಧಿ : ಆಚಾರ, ಸಂಪ್ರದಾಯ, ವಿಹಿತವಾದ ಆಚರಣೆ (ಕನ್ನಡ ನಿಘಂಟು,. ಸಂ. ೪ ಪುಟ, ೪೯೨-೩)

'ಧರ್ಮವೆಂದರೆ ಮನುಷ್ಯನು ಇಹಪರದೃಷ್ಟಿಯಿಂದ ಸುಖಕ್ಕಾಗಿ ಮಾಡಬೇಕಾದ ಕೆಲಸಗಳು ' (ಹಿಂದೂದರ್ಶನ ಸಾರ. ಪುಟ. ೧೪೯)

ಜೀವನದ ಆಗುಹೋಗುಗಳನ್ನು ವಿಶ್ವದ ಸತ್ಯಾಸತ್ಯತೆಗಳನ್ನು ಮತ್ತು ವಿಶ್ವಕ್ಕೂ ಜೀವನಿಗೂ ಇರುವ ಸಂಬಂಧ ಪ್ರಕಾರಗಳನ್ನು ಯೋಚಿಸತೊಡಗಿದ ಜ್ಞಾನಿಗಳಿಗೆ ಹೊಳೆದ ಸತ್ಯವೇ 'ಧರ್ಮ' ವೆನಿಸಿತು. ಧರ್ಮವು ಜೀವನದ ಐಹಿಕ ಮತ್ತು ಆಮುಷ್ಮಿಕಗಳಿಗೆ ಏರ್ಪಟ್ಟ ಸುಭದ್ರ ಸೇತುವೆಯೆನಿಸಿತು. ಮಾನವನ ಇಹಪರ ಸುಖಸಾಧನೆಯ ನೆಲೆಗಟ್ಟು ಧರ್ಮದ ಆಧಾರದ ಮೇಲೆ ನೆಲೆಯೂರಿತು 'ಧ್ರಿಯತೆ ಅನೇನೇತಿ ಧರ್ಮಃ' ಧರ್ಮೇ ಸರ್ವಂ ಪ್ರತಿಷ್ಠಿತಂ' 'ಧಾರಣಾದ್ಧರ್ಮಮಿತ್ಯಾಹುಃ' ಎಂಬ ಉಕ್ತಿಗಳು ಈ ಅಂಶವನ್ನು ಸಮರ್ಥಿಸುತ್ತವೆ.

'ಯತೋಭ್ಯುದಯ ನಿಶ್ರೇಯಸ ಸಿದ್ಧಸ್ಸಧರ್ಮಃ' ಎಂಬ ಕಣಾದ ಮಹರ್ಷಿಗಳ ಮಾತು ಧರ್ಮವು ಇಹಪರ ಸುಖಸಾಧನವೆಂಬುದನ್ನು ದೃಢಪಡಿಸುತ್ತದೆ. (ಭಾರತೀಯ ಸಂಸ್ಕೃತಿ ದರ್ಶನ. ಪುಟ ೪೯)

'ಮಾನವ ಯಾವುದನ್ನು ಪವಿತ್ರಭಾವನೆಯಿಂದ ನೋಡುವನೋ ಅದರೊಡನೆ ಇರಿಸಿಕೊಳ್ಳುವ ಸಂಬಂಧವೇ ಧರ್ಮವೆಂಬ (ರಿಲಿಜನ್) ಶಬ್ದದ ವಿಶಾಲಾರ್ಥ.

ಪೂಜ್ಯ ವಸ್ತು ಮತ್ತು ಪೂಜಾಕರ್ಮಗಳನ್ನು ಧರ್ಮದ ಪ್ರಧಾನ ಘಟಕಗಳೆನ್ನಬಹುದು. ಇವೆರಡರ ಪರಸ್ಪರ ಪ್ರಕ್ರಿಯೆಯ ಫಲವಾಗಿಯೇ ವಿಶ್ವದಲ್ಲಿ ಪ್ರಸಿದ್ಧವಾಗಿರುವ

ನಾನಾಧರ್ಮಗಳು ಉದಯವಾಗಿವೆ. ಯಾವುದೇ ಧರ್ಮವಿರಲಿ ಅದರಲ್ಲಿ ಪವಿತ್ರವೆನಿಸುವ ಕರ್ಮಾದಿಗಳು, ಜಪಮಂತ್ರಾದಿಗಳು, ಕಥಾನಕಗಳು, ತಂತ್ರಗಳು ಕ್ಷೇತ್ರ ತೀರ್ಥಾದಿಗಳು, ಧಾರ್ಮಿಕ ಸಾಹಿತ್ಯ ವಿಧಿನಿಷೇಧಗಳು ಕೂಡಿಯೇ ಇರುತ್ತವೆ. ಭಿನ್ನ ಭಿನ್ನ ಮತಗಳಲ್ಲಿ ಇವೆಲ್ಲ ವಿಭಿನ್ನವಾಗಿಯೇ ಇದ್ದರೂ ಪವಿತ್ರ ಭಾವನೆ ಮಾತ್ರ ಸಕಲ ಮತ ಪ್ರಕ್ರಿಯೆಗಳಿಗೂ ಸಮಾನವಿರುವುದರಿಂದ ಅದು ಧರ್ಮ ಶಬ್ದದಿಂದ ವಾಚ್ಯವಾಗುತ್ತದೆ.

'ಧರ್ಮ'ಎಂಬುದು ಮತೀಯ ಆಚಾರವಿಚಾರಗಳ ಹಿಂದಿರುವ ಸಮಾನ ಮನೋವೃತ್ತಿಯನ್ನು ಸೂಚಿಸುವ ವಿಶಾಲಾರ್ಥಕವಾದ ವ್ಯಾಪಕ ಶಬ್ದ.'

(ಕನ್ನಡ ವಿಶ್ವಕೋಶ, ಸಂಪುಟ ೬, ಪುಟ ೬೦೨)

ಪಾಶ್ಚಾತ್ಯರು Religion ಎಂಬ ಶಬ್ದಕ್ಕೆ 'ಧರ್ಮ' ವನ್ನು ಪರ್ಯಾಯ ಪದವನ್ನಾಗಿ ಬಳಸಿದ್ದಾರೆ. ಅವರು ನಿರೂಪಿಸಿರುವ ಅರ್ಥಗಳಲ್ಲಿ ಪ್ರಮುಖವಾದವು.

1. A State of life bound by monastic vows; the condition of one who is a member of a religious order, esp. in the Roman Catholic Church.
2. A particular monastic or religious order or rule
3. Action or conduct indicating a belief in reverence for, and desire to please, a define ruling power, the exercise of practice of rites or observances implying this.
4. A particular system of faith and worship
5. Recognition on the part of man of some higher unseen power as having control of his destiny and as being entitled to obedience, reverence, and worship; the general mental and moral attitude resulting from this belief, with reference to its effect upon the individual or the community. Personal or general acceptance of this feeling as a standard of spiritual and parctical life
6. Devotion to some principle strict fidelity or faithfulness; consciousness ; pious affection or attachment.
7. The religious sanction or obligation of an oath etc.

(The oxford English Dictionary Vol VIII, page. 410)

ಭರತಖಂಡ ಹಲವಾರು ಧರ್ಮಗಳ ತವರೂರು. ಈ ದೇಶದಲ್ಲಿ ಒಂದೊಂದು ಕಾಲಕ್ಕೆ ಒಂದೊಂದು ಧರ್ಮ ತಲೆಯೆತ್ತಿ ಮೆರೆದಿರುವುದನ್ನು ಇತಿಹಾಸದಿಂದ

ಕಂಡುಕೊಳ್ಳಬಹುದಾಗಿದೆ. ಈ ಧರ್ಮಗಳ ಮಧ್ಯೆ ಸಂಘರ್ಷ ನಡೆದಾಗ ಧರ್ಮ ಸಮನ್ವಯ ಕಾರ್ಯ ನಡೆದಿರುವುದನ್ನೂ ಕಾಣಬಹುದಾಗಿದೆ. ಧರ್ಮ ಪ್ರಸಂಗಗಳೂ ಈ ನಾಡಿನಲ್ಲಿ ನಡೆಯುತ್ತಿದ್ದುದಕ್ಕೆ ಅನೇಕ ದೃಷ್ಟಾಂತಗಳಿವೆ. ರೋಣದ ಒಂದು ಶಾಸನದಲ್ಲಿ ವಿಕ್ರಮಾದಿತ್ಯ ನೃಪ ಧರ್ಮಪ್ರಸಂಗವನ್ನು ಕೇಳಿ ದಾನಧರ್ಮಗಳನ್ನು ಮಾಡಿದಂತೆ ವರ್ಣಿತವಾಗಿದೆ.

ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಉದ್ದಂಡ ಮಂಡಳಿಕ ರಿಪುಮದದ ಮಹೇಶ್ವರಂ ಸಿಂದಗೋವಿಂದನುವುದಾತ್ತ ರಾಮನುಂ ವೈರಿಮಂಡಳಿಕ ಶಿರೋ ವಜ್ರದಂಡನು ಮೆನಿಸಿದ ವಿಕ್ರಮಾದಿತ್ಯದೇವಂ ನಿಜರಾಜಧಾನಿಯೆನಿಪೆರಂಬರಗೆಯ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರ್ದು ಧರ್ಮ ಪ್ರಸಂಗದೊಳು:

ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ

ತಸ್ಮಾದ್ಧರ್ಮೋ ನ ಹಂತವ್ಯಸ್ಸರ್ವೈಶ್ವರ್ಯ ಫಲೇಪ್ಸುಭಿಃ

ಎಂಬ ಸುಭಾಷಿತ ವಚನಂಗಳಂ ಕೇಳ್ದು ತಾಂ ಸಾಜದಿಂ ಧರ್ಮಬುದ್ಧಿಯಪ್ಪುದ ರಿಂದಂ ತಮ್ಮ ಬಪ್ಪಂ ಶ್ರೀಮನ್ಮಹಾಮಂಡಲೇಶ್ವರಂ ಚಾವುಂಡರಸ ದೇವರ್ಗೆ ಪರೋಕ್ಷವಿನಯ ಪ್ರಾಯಶ್ಚಿತ್ತ ನಿಮಿತ್ತಂ ಯೆರಂಬರಗೆಯಲು ಭೂದಾನ ಗೃಹದಾನ ಗೋದಾನ ಸುವರ್ಣದಾನಂಗಳಂ ಮಾಡುತ್ತು ಮಿರ್ದ' (ಶಾಸನ ಸಾಹಿತ್ಯ ಸಂಚಯ ನಂ. 83)

ಧರ್ಮ ಈ ನಾಡಿನ ಜನಜೀವನದಲ್ಲಿ ಹಾಸು ಹೊಕ್ಕಾಗಿತ್ತೆಂಬುದಕ್ಕೆ ಈ ಮೇಲಿನ ಶಾಸನ ಜ್ವಲಂತ ನಿದರ್ಶನವಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಒಂದು ಧಾರ್ಮಿಕ ಕ್ರಾಂತಿ ಯುಂಟಾಯಿತು. ವರ್ಣಾಶ್ರಮ ಪದ್ಧತಿಯಿಂದ ವೈದಿಕಧರ್ಮ ಖಿಲವಾಗುತ್ತಿತ್ತು. ತರುವಾಯದ ಜೈನ ಬೌದ್ಧಧರ್ಮಗಳು ತಲೆದೋರಿದರೂ. ಅಹಿಂಸಾ ಪ್ರಧಾನವಾದ ಜೈನಧರ್ಮ ವೈದಿಕ ಧರ್ಮದೊಂದಿಗೆ ಸ್ಪರ್ಧಿಸಲಾಗಲಿಲ್ಲ. ಜ್ಞಾನ ಪ್ರಧಾನವಾದ ಬೌದ್ಧಧರ್ಮ ಈ ದೇಶದಲ್ಲಿ ನೆಲೆಯಾಗಿ ನಿಲ್ಲಲಿಲ್ಲ. ಈ ಪರ್ವಕಾಲದಲ್ಲಿ ವಚನಕಾರರ ನೇತಾರರಾದ ಬಸವಣ್ಣನವರು ತಮ್ಮ ಪ್ರಗತಿಪರ ಮನೋಭಾವದಿಂದ ಒಂದು ನೂತನ ಧರ್ಮದ ಮಾರ್ಗತೋರಿದರು. ವರ್ಣಾಶ್ರಮ ಧರ್ಮದ ಸಂಕೋಲೆಗಳಿಗೆ ಸಿಲುಕದಿದ್ದ ವೀರಶೈವಧರ್ಮವನ್ನು ಆವಿಷ್ಕರಿಸಿದರು, ಪರಿಷ್ಕರಿಸಿದರು. ಪ್ರಸ್ತುತ ಧರ್ಮ ಎಂದರೆ ವೀರಶೈವ ಧರ್ಮವೆಂದೇ ಪರಿಭಾವಿಸಬೇಕು. ವಚನಕಾರರು ಪ್ರತಿಪಾದಿಸಿದುದು ಸರ್ವೋದಯ ದೃಷ್ಟಿಯನ್ನು ಸಮಾಜದಲ್ಲಿನ ವರ್ಣಭೇದಗಳು ಅಳಿಯಬೇಕು. ಮೇಲು ಕೀಳುಎಂಬ ಭಾವನೆ ನಿರ್ಮೂಲವಾಗಬೇಕು. ಧರ್ಮ ತತ್ವಗಳು ಸರ್ವರಿಗೂ ಸಮಾನವಾಗಿರಬೇಕು. ಅರ್ಥರಹಿತವಾದ ಸಂಪ್ರದಾಯಗಳನ್ನೂ ಆಚರಣೆಗಳನ್ನೂ ತ್ಯಜಿಸಬೇಕು. ನಡೆನುಡಿಗಳು ಪರಿಶುದ್ಧವಾಗಿರಬೇಕು.ಸ್ವಾರ್ಥಕ್ಕಾಗಿ ಆಚರಿಸುವ ಯಜ್ಞಯಾಗಾದಿಗಳೂ ಪಶುವಧೆಗಳೂ

ನಿಲ್ಲಬೇಕು. ಪ್ರತಿಯೊಬ್ಬರೂ ತಮ್ಮ ತಮ್ಮ ಕಾಯಕಗಳನ್ನು ಕೈಕೊಳ್ಳಬೇಕು. ಸ್ತ್ರೀಯರಿಗೆ ಸಮಾಜದಲ್ಲಿ ಸಮಾನ ಸ್ಥಾನಮಾನಗಳು ದೊರಕಬೇಕು. ತಮ್ಮ ತಮ್ಮ ಆತ್ಮೋದ್ಧಾರ ಮಾರ್ಗವನ್ನು ಕಂಡುಕೊಳ್ಳಬೇಕು. ಪರಶಿವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು - ಇವೇ ಮೊದಲಾದವು ವಚನಕಾರರ ಧ್ಯೇಯೋದ್ದೇಶಗಳಾಗಿದ್ದುವು. ಈ ಪರಿಕಲ್ಪನೆ ವಚನಗಳಲ್ಲಿ ಹೇಗೆ ಪ್ರತಿಬಿಂಬಿತವಾಗಿದೆ ಎಂಬುದನ್ನು ಮುಂದೆ ನಿರೂಪಿಸುವ ಕೆಲವು ವಚನಕಾರರ ವಚನಗಳಿಂದ ಕಂಡುಕೊಳ್ಳಬಹುದಾಗಿದೆ. ಅಸಂಖ್ಯಾತ ವಚನಕಾರ ವಚನಕಾರ್ತಿಯರಲ್ಲಿ ಪ್ರಾತಿನಿಧಿಕವಾಗಿ ಕೆಲವರನ್ನು ಮಾತ್ರ ಆರಿಸಿಕೊಳ್ಳಲಾಗಿದೆ :

ದಯೆಯೇ ಧರ್ಮದ ಮೂಲ. ಸಕಲ ಪ್ರಾಣಿಗಳಲ್ಲಿಯೂ ದಯೆಯನ್ನು ತೋರಬೇಕು ಎಂಬುದನ್ನು

ಅಂತರಂಗ ಬಹಿರಂಗ ಶುದ್ಧಿ ಹೇಗಿರಬೇಕೆಂಬುದನ್ನು
ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ

ಬಸವಣ್ಣನವರ ಈ ವಚನಗಳು ಸಾರಿತೋರುತ್ತಿವೆ.

ಭಗವಂತ ತನ್ನ ಭಕ್ತರನ್ನು ನಾನಾವಿಧವಾಗಿ ಪರೀಕ್ಷಿಸುತ್ತಾನೆ. ಆ ಪರೀಕ್ಷೆಗಳಲ್ಲಿ ಅವರು ಜಯಶೀಲರಾದರೆ ಮಾತ್ರ ಒಲಿಯುತ್ತಾನೆ. ಎಂಬುದನ್ನು ದೇವರ ದಾಸಿಮಯ್ಯನವರ ಈ ವಚನ ಬಿತ್ತರಿಸುತ್ತದೆ.

ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಸುವರ್ಣದ ಚಿನ್ನದಂತೆ
ಅರೆದು ನೋಡುವ ಚಂದನದಂತೆ
ಅರಿದು ನೋಡುವ ಕಬ್ಬಿನ ಕೋಲಿನಂತೆ
ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ

ಧರ್ಮ, ದೈವದ ಪರಿಕಲ್ಪನೆಯ ಬಗೆಗೆ ಸಿದ್ಧರಾಮೇಶ್ವರರ ವಚನಗಳಿವು :

ಧರ್ಮವ ಧರಿಸಿದ ಬಳಿಕ
ಲಿಂಗಾರ್ಚನೆಯ ಮಾಡಿ ಸಾಯಬಹುದಯ್ಯಾ
ಸತ್ತಡೆ ಸಾಯಬಹುದು
ಹೊತ್ತಿಗೊಮ್ಮೆ ಸೂರ್ಯನಂತೆ ಬರಬಾರದಯ್ಯಾ
ಬಂದೆ ಬರಬಹುದು
ತನ್ನಾಯತವ ಮರೆದಿರಬಾರದಯ್ಯಾ
ಮಹಾದೇವ ಕಪಿಲಸಿದ್ಧ ಮಲ್ಲಿಕಾರ್ಜುನಾ

ಲಿಂಗಾರ್ಚಕನಾದ ಬಳಿಕ
ಲಿಂಗವಿಧಾನಂಗಳನರಿದರಿದು ಮಾಡಬೇಕು
ಲಿಂಗದೇಹಿ ತಾನಾದ ಬಳಿಕ
ಆ ಲಿಂಗಿಗಳ ಸಂಗವಳಿದಿರಬೇಕು
ಲಿಂಗಧ್ಯಾನಿ ತಾನಾದ ಬಳಿಕ
ಅಂಗನೆಯರ ನೋಡದಿರಬೇಕು
ಲಿಂಗೈಕ್ಯ ತಾನಾದ ಬಳಿಕ
ಕರುಣಾಕರ ಅಭಯಕರ ಕಪಿಲ ಸಿದ್ಧ ಮಲ್ಲಿಕಾರ್ಜುನನ
ಕಾರ್ಯದಲ್ಲಿ ಅಭೇದವಿರಬೇಕು ಕಾಣಾ, ಕೇದಾರಯ್ಯಾ

ವೇದ ಶಾಸ್ತ್ರ ಆಗಮ ಪುರಾಣಗಳ ಬಗ್ಗೆ ವಚನಕಾರರು ತಳೆದ ನಿಲವು ಎಂತಹುದು ಎಂಬುದನ್ನು ಮುಂದಿನ ವಚನಗಳು ನಿರೂಪಿಸುತ್ತಿವೆ.

ಅಲ್ಲಮ ಪ್ರಭುದೇವರ ವಚನ :

ವೇದಂಗಳೆಂಬವು ಬ್ರಹ್ಮನ ಭೂತಾಟ; ಶಾಸ್ತ್ರಗಂಳೆಂಬವು ಸರಸ್ವತಿಯ ಗೊಡ್ಡಾಟ
ಆಗಮಂಗಳೆಂಬವು ಋಷಿಯ ಮರುಳಾಟ
ಪುರಾಣಂಗಳೆಂಬವು ಪೂರ್ವದವರ ಗೊಡ್ಡಾಟ; ಇಂತಿವರ ನೇತಿಗಳೆದು
ನಿಜದಲ್ಲಿ ನಿಂದಿಪ್ಪಾತನೆ ಗುಹೇಶ್ವರನಲ್ಲಿ ಅಚ್ಚಲಿಂಗೈಕ್ಯನು

ಆದಯ್ಯನ ವಚನ :

ವೇದಂಗಳಹಿಂದೆ ಹರಿಯದಿರು ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು
ಪುರಾಣಂಗಳ ಹಿಂದೆ ಬಳಸದಿರು ಬಳಸದಿರು
ಆಗಮಂಗಳ ಹಿಂದೆ ತೊಳಲದಿರು ತೊಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೈಪಿಡಿದು ಶಬ್ದಜಾಲಂಗಳಿಗೆ ಬಳಲದಿರು ಬಳಲದಿರು

ವೀರಶೈವ ಧರ್ಮದಲ್ಲಿ ಷಟ್ಸ್ಥಲಗಳು ಬಹುಮುಖ್ಯವಾದವು. ಅಕ್ಕಮಹಾದೇವಿಯ ಈ ವಚನ ಈ ಬಗೆಗೆ ಒಂದು ನೈಜ ಚಿತ್ರವನ್ನು ನೀಡುತ್ತಿದೆ.

ಭಕ್ತೆಯಾನಪ್ಪೆನಯ್ಯಾ, ಕರ್ತೃಭೃತ್ಯವ ನಾನರಿಯೆ
ಮಾಹೇಶ್ವರಿಯಾದಪ್ಪೆನಯ್ಯಾ; ವ್ರತನೇಮ ಛಲವ ನಾನರಿಯೆ
ಪ್ರಸಾದಿಯಾನಪ್ಪೆನಯ್ಯಾ ಅರ್ಪಿತಾನರ್ಪಿತವೆಂಬ ಭೇದವನಾನರಿಯೆ
ಪ್ರಾಣಲಿಂಗಿಯಾನಪ್ಪೆನಯ್ಯಾ ಅನುಭಾವದ ಗಮನವ ನಾನರಿಯೆ
ಶರಣೆಯಾನಪ್ಪೆನಯ್ಯಾ ಶರಣಸತಿ ಲಿಂಗಪತಿ ಎಂಬ ಭಾವವ ನಾನರಿಯೆ
ಐಕ್ಯಳಾನಪ್ಪೆನಯ್ಯಾ, ಬೆರಸಿ ಭೇದವ ನಾನರಿಯೆ
ಚೆನ್ನಮಲ್ಲಿಕಾರ್ಜುನಯ್ಯಾ ಷಟ್ಸ್ಥಲದಲ್ಲಿ ನಿಃಸ್ಥಲವಾಗಿಪ್ಪೆನು

ಶೀಲ ವ್ರತನಿಯಮ ಆಚಾರಗಳ ಬಗೆಗೆ ಅಕ್ಕಮ್ಮ ಹಲವಾರು ವಚನಗಳನ್ನು ಬರೆದಿದ್ದಾಳೆ. ಆಕೆಯ ಒಂದು ವಚನ :

ಸರ್ವಶೀಲ ವ್ರತಾದಾಯತವೆಂತುಟೆಂದಡೆ
ತನ್ನ ವ್ರತವಿಲ್ಲದ ಗುರುವ ಪೂಜಿಸಲಾಗದು
ವ್ರತವಿಲ್ಲದ ಜಂಗಮದ ಪ್ರಸಾದನ ಕೊಳಲಾಗದು
ವ್ರತವಿಲ್ಲದವರ ಅಂಗಳವ ಮೆಟ್ಟಲಾಗದು : ಅದೆಂತೆಂದಡೆ
ಗುರುವಿಗೂ ಗುರು ಉಂಟಾಗಿ ಲಿಂಗಕ್ಕೂ ಉಭಯ ಸಂಬಂಧ ಉಂಟಾಗಿ
ಆ ಜಂಗಮಕೂ ಗುರುಲಿಂಗ ಉಭಯವುಂಟಾಗಿ ಜಂಗಮವಾದ ಕಾರಣ
ಇಂತೀ ಗುರುಲಿಂಗ ಜಂಗಮಕ್ಕೂ ಪಂಚಾಚಾರ ಶುದ್ಧವಾಗಿರಬೇಕು
ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರಉಂಟೆ
ಇಂತೀ ಒಡೆಯನ ವ್ರತಮೊದಲು ಕಡೆಯಲ್ಲಿ ಭಕ್ತರಿಗೆ
ಇಂತೀ ಉಭಯದ ವ್ರತವೂವೂಡಗೂಡಿದಲ್ಲಿ
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗಕ್ಕೆ ವ್ರತವೆ ವಸ್ತು

ಗುರುಲಿಂಗಜಂಗಮದ ಬಗೆಗೆ ಅಮುಗೆರಾಯಮ್ಮ ತಳೆದಿರುವ ನಿಲವು :

ಗುರುವೆಂಬೆನೆ ಗುರುವು ನರನು; ಲಿಂಗವೆಂಬೆನೆ ಲಿಂಗವು ಕಲ್ಲು
ಜಂಗಮ ವೆಂಬನೆ ಜಂಗಮವು ಆತ್ಮನು
ಪಾದೋದಕವೆಂಬೆನೆ ಪಾದೋದಕ ನೀರು
ಪ್ರಸಾದವೆಂಬೆನೆ ಪ್ರಸಾದ ಒಗರ; ಇಂತೆಂದುದಾಗಿ
ಹೊನ್ನು ಹೆಣ್ಣುಮಣ್ಣು ಈ ತ್ರಿವಿಧವ ಹಿಡಿದ ಕಾರಣ
ಗುರುವೆಂಬವನು ನರನು
ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಒಳಗಾದ ಕಾರಣ
ಲಿಂಗವೆಂಬುದು ಕಲ್ಲು.
ಆಶೆಪಾಶೆಗೆ ಒಳಗಾದ ಕಾರಣ ಜಂಗಮವೆಂಬುದು ಆತ್ಮನು
ಲಾಂಛನಗಳೆಂದು ಕಾಂಚನಕ್ಕೆ ಕೈಯಾನುವರಲ್ಲಿ
ಪಾದೋದಕ ಪ್ರಸಾದವ ಕೊಂಡೆನಾದಡೆ
ಕೆಸರಿನೊಳಗೆ ಬಿದ್ದ ಪಶುವಿನಂತೆ ಆಯಿತ್ತು ಕಾಣಾ ಅಮುಗೇಶ್ವರಾ

ಶಿವಶರಣರ ಕಪಟಭಕ್ತಿಯ ಬಗೆಗೆ ಕೋಲಶಾಂತಯ್ಯ ಹಾಡಿರುವ ವಚನ :

ವ್ರತನೇಮ ತೋರಿ ಗದಕದಲ್ಲಿ ಮಾಡುವ ಭಕ್ತಿ
ಪಶುವಕೊಂದು ಹಸಿಯ ಭಕ್ಷಿಸುವವನ ದೆಸೆ ಲೇಸು
ಪಶುಪತಿಯ ಭಕ್ತನಾಗಿದ್ದು ಹುಸಿದು ಸರ್ವರ ವಂಚಿಸಿ
ಪಿಸುಣತನದಿಂದ ಕಾಡಿ ಬೇಡಿ ತರೆದವನ ಮನೆಯನ್ನ ಕಿಸುಕುಳಕೆ ಸರಿ
ಅದು ಹುಸಿಯಲ್ಲ ನಿನ್ನ ನೀ ತಿಳಿದು ನೋಡು
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗ ಸಂಗ

ಮಡಿವಾಳ ಮಾಚಯ್ಯನ ಧರ್ಮದ ವಿಶ್ಲೇಷಣೆ ಇದು :

ಎಲ್ಲೆಲ್ಲಿಯ ಪ್ರಾಣಿಯ ಕೊಲ್ಲದಿಹುದೆ ಧರ್ಮ
ಒಲ್ಲದಿಪ್ಪುದೇ ತಪ
ಪರವಧುವಿನ ಆಸೆ ತನ್ನ ಮನದಲ್ಲಿ ಇಲ್ಲದಿರ್ದಡೆ
ದೇವ ತಾನಲ್ಲಿಯೇ ಎಂದ ಕಲಿದೇವಯ್ಯ

ಕರ್ಮಧರ್ಮಗಳ ಸಂಬಂಧ ಕುರಿತು ಮನಸಂದ ಮಾರಿತಂದೆ ಹೇಳಿರುವ ವಚನಗಳು:

ಕರ್ಮದ ಧರ್ಮಂಗಳೊಳಗಾಗಿ ಮಾಡುವ
ಮಾಟಂಗಳೆಲ್ಲವೂ ಕರ್ಮ ಶಕ್ತಿಗೆ ಬೀಜ
ಆ ಉಭಯವ ನೇತಿಗಳೆದು ಮಾಡುವುದೆಲ್ಲವೂ ಜ್ಞಾನ ಶಕ್ತಿಗೆ ಬೀಜ
ಸಕಲವ ವಿಚಾರಿಸಿ ಅಹುದಲ್ಲಾ ಎಂದು
ಹರಿದು ಮಾಡುವುದೆಲ್ಲವೂ ಮುಂದೊಂದ ಕುರಿತು
ವಸ್ತುವೆಂಬ ಒಡಲಿಗೆ ರೂಪಾಯಿತ್ತು
ಸ್ವಯವೆಂಬ ಭಾವ ನಿಜದಲ್ಲಿ ನಿಂದಲ್ಲಿ ಮನಸಂದಿತ್ತು ಮಾರೇಶ್ವರಾ

ಕರ್ಮದಿಂದ ಕಂಡೆಹೆನೆಂದಡೆ ಮಲರೂಪು
ವರ್ಮದಿಂದ ಅರಿತೆಹೆನೆಂದಡೆ ಆ ಭಾವ ಪ್ರಕೃತಿರೂಪು
ಕರ್ಮವ ಬಿಡಬಾರದು ವರ್ಮವನರಿಯ ಬಾರದು
ಸುಮ್ಮನಿದ್ದಡೆ ಸಮಬುಕ್ಕಲ್ಲ ಅರಿತಡೆ ಆತ್ಮಂಗಲ್ಲ
ಮರವೆ ಅರಿವು ಉಭಯವರತಲ್ಲಿ ಮನಸಂದಿತ್ತು ಮಾರೇಶ್ವರಾ

ವೀರಶೈವಧರ್ಮದ ಕ್ರಿಯೆ ಪ್ರಕ್ರಿಯೆಗಳನ್ನೆಲ್ಲ ಸಾಂಗೋಪಾಂಗವಾಗಿ ನಿರೂಪಿಸುವ ಮರುಳ ಶಂಕರದೇವರ ಸುದೀರ್ಘವಾದ ವಚನವಿದು :

ಶ್ರೀ ಗುರು ಶಿಷ್ಯಂಗೆ ಕರುಣದಿಂದ ಉಪದೇಶವ ಮಾಡಬೇಕೆಂದು ಬಂದು ಮೂರ್ತಿಗೊಂಡು ಆ ಶಿಷ್ಯನ ಪುನರ್ಜನ್ಮವಂ ಕಳೆದು ಪುನರ್ಜಾತನೆಂದೆನಿಸಿ ಹಸ್ತಮಸ್ತಕ ಸಂಯೋಗವಂ ಮಾಡಿ ವಿಭೂತಿಯ ಪಟ್ಟಮಂ ಕಟ್ಟಿ ಕಿವಿಯಲ್ಲಿ ಕರ್ಣಮಂತ್ರಮ ಹೇಳಿ ಮಾಂಸಪಿಂಡವಂ ಕಳೆದು ಮಂತ್ರಪಿಂಡವಂ

ಮಾಡಿ ಸರ್ವಾಂಗದವಗುಣಂ ಕಳೆದು ಆ ಶಿಷ್ಯಂಗೆ ಉಪದೇಶವ ಮಾಡಿದ ಪರಿಯೆಂತೆಂದಡೆ ಆದಿ ಲಿಂಗ ಅನಾದಿ ಲಿಂಗ ಪರುಷಲಿಂಗ ಅಮೃತಲಿಂಗ ಅಗೋಚರಲಿಂಗ ಅಪ್ರತಿಮಲಿಂಗ ಅನಾಮಯಲಿಂಗ ಅಭೇದ್ಯ ಭೇದಕಲಿಂಗ

ಅಸಾಧ್ಯ ಸಾಧಕಲಿಂಗ ಇಂತಪ್ಪ ಲಿಂಗಾಂಕಿತವ ಕೊಂಡು ಒಂದು ಇಷ್ಟಲಿಂಗವಂ ಮಾಡಿ

ಆ ಶಿಷ್ಯನ ಹಸ್ತದಲಿ ನಿಕ್ಷೇಪವಂ ಮಾಡಿದನು ಮಹಾಶ್ರೀಗುರು. ಆ ಲಿಂಗ ಬಂದು ಆ ಶಿಷ್ಯನ ಲಿಂಗವ ಸೋಂಕದ ಮುನ್ನವೆ ಆ ಲಿಂಗ ಆ ಶಿಷ್ಯನ ನವಗ್ರಹಿಸಿತ್ತಯ್ಯ ಆ ಶಿಷ್ಯನು ಆ ಗುರುವಿನ ಹಸ್ತದಲ್ಲಿ ಉಪದೇಶವಾಗದ ಮುನ್ನವೆ ಆ ಶ್ರೀ ಗುರುವನು ಆಶಿಷ್ಯನವಗ್ರಹಿಸಿಕೊಂಡ ನೋಡಿರಯ್ಯಾ ಅಂಗಸಂಗಿಗಳು ಹೋಗಿ ಲಿಂಗಸಂಗಿಗಳ ಸಂಗವ ಮಾಡಿಹೆನೆಂದು ಹೋದಡೆ ಅಂಗ ಸಂಗಿಗಳ ಲಿಂಗ ಸಂಗಿಗಳು ಅವಗ್ರಹಿಸಿಕೊಂಡರು ನೋಡಿರಯ್ಯಾ ಪರಿಮಳವುಳ್ಳ ಪುಷ್ಪಕ್ಕೆ ತುಂಬಿ ಬಂದು ಪರಿಮಳವ ಕೊಂಡೆಹೆನೆಂದು ಹೋದಡೆ ಆ ಪರಿಮಳವುಳ್ಳ ಪುಷ್ಪ ಆತುಂಬಿಯನವಗ್ರಹಿಸಿಕೊಂಡಿತ್ತು ನೋಡಿರಯ್ಯ ಅನಲ ಸಂಗವ ವಾಯು ಮಾಡಿಹೆನೆಂದು ಹೋದೆಡ ಆ ಅನಲದು ವಾಯುವಗ್ರಹಿಸಕೊಂಡಿತ್ತು ನೋಡಿರಯ್ಯಾ ರೂಪುದರ್ಪಣವ ರೂಹಿಸಿದೆವೆಂದು ಹೋದಡೆ ಆ ದರ್ಪಣ ಆ ರೂಪನವಗ್ರಹಿಸಿಕೊಂಡಿತ್ತು ನೋಡಿರಯ್ಯಾ ಕಂಗಳು ಕರಸ್ಥಲದ ಲಿಂಗವ ನೋಡಿಹೆನೆಂದು ಹೋದಡೆ ಆ ಕರಸ್ಥಲದ ಲಿಂಗ ಆ ಕಂಗಳ ನುಂಗಿದ ಪರಿಯ ನೋಡಿರಯ್ಯಾ ಸರ್ವಾಂಗ ಸಾಹಿತ್ಯ ಮಹಾಲಿಗೈಕ್ಯರ ಸಂಗವ ನಾನು ಮಾಡಿಹೆನೆಂದು ಹೋದಡೆ ಉರಿಯುಂಡ ಕರ್ಪುರದಂತೆ ಎನ್ನವವಗ್ರಹಿಸಿಕೊಂಡರು ಕಾಣಾ ಶುದ್ಧಸಿದ್ಧ ಪ್ರಸಿದ್ಧಪ್ರಸನ್ನ ಪ್ರಭುವೆ ಶಾಂತ ಚನ್ನಮಲ್ಲಿಕಾರ್ಜುನಯ್ಯಾ ದೇವ ನಿಮ್ಮ ಶರಣರ ನಾನು ನಂಬಿಕೆಟ್ಟು ಬಟ್ಟಬಯಲಾಗಿ ಹೋದೆನಯ್ಯಾ ನಿಮ್ಮ ಧರ್ಮ ನಿಮ್ಮ.

ಗುರುಲಿಂಗ ಜಂಗಮಕ್ಕೆ ತನುಮನಧನವನ್ನು ನೀಡಬೇಕೆಂದು ಎಲ್ಲ ವಚನಕಾರರೂ ಹೇಳಿದ್ದಾರೆ. ಮೋಳಿಗೆ ಮಾರಯ್ಯಗಳ ಎರಡು ವಚನಗಳಿವು. :

ಗುರುವಿಂಗೆ ತನು ಲಿಂಗಕ್ಕೆ ಮನ ಜಂಗಮಕ್ಕೆ ಧನ
ಇಂತಿವಕೊಟ್ಟು ಮುಕ್ತಿಯ ಗಳಿಸಿಕೊಂಡೆಹೆನೆಂಬ
ಮುಯ್ಯ ಬಂಧುಗಳಂತೆ
ಬಡ್ಡಿಯಾಸೆಗೆ ಕೊಟ್ಟ ಲುಬ್ದನಂತೆ ನಿಃಕಳಂಕ ಮಲ್ಲಿಕಾರ್ಜುನಾ

ಗುರುವೆಂದಡೆ ತನು ಲಿಂಗವೆಂದಡೆ ಆತ್ಮ
ಜಂಗಮವೆಂದಡೆ ಆತ್ಮನರಿವು
ತ್ರಿವಿಧದ ವ್ಯಾಪ್ತಿಯ ಕಳೆದುಳಿದ ಸಂಬಂಧವದು ನೀನೆ
ಅನುಪಮಲಿಂಗ ನಿರವಯ ನಿಃಕಳಂಕ ಮಲ್ಲಿಕಾರ್ಜುನಾ

ಶರಣದ ಮಾಹಾತ್ಮೆಯನ್ನು ಚಿತ್ತರಿಸುವ ಷಣ್ಮುಖ ಸ್ವಾಮಿಗಳ ಒಂದು ವಚನ ಇಂತಿದೆ :

ಧರ್ಮಅರ್ಥಕಾಮ ಮೋಕ್ಷವೆಂಬ
ಚತುರ್ವಿಧ ಫಲಪದಂಗಳ ನಾನೊಲ್ಲೆನಯ್ಯಾ
ಸಾಲೋಕ್ಯ ಸಾಮಿಪ್ಯ ಸಾರೂಪ್ಯ ಸಾಯುಜ್ಯವೆಂಬ
ಚತುರ್ವಿಧ ಫಲಪದಂಗಳ ನಾನೊಲ್ಲೆನಯ್ಯಾ
ಅಣಿಮಾದ್ಯಷ್ಟಸಿದ್ಧಿಗಳ ನಾನೊಲ್ಲೆನಯ್ಯಾ
ಎಲೆ ಶಿವನೆ ನಾನೊಂದ ಬೇಡುವೆನಯ್ಯ
ನಿಮ್ಮ ಶರಣರು ಉಂಡುಳಿದುದ ಕೊಂಡು ಮಿಕ್ಕಿದ
ಪರಮ ಪ್ರಸಾದಕ್ಕೆ ಯೋಗ್ಯನ ಮಾಡಿ
ಬದುಕಿಸಯ್ಯ ಎನ್ನ ಅಖಂಡೇಶ್ವರಾ

ಸಾರ್ವಾಕಾಲಿಕ ತತ್ವವನ್ನು ನಿರೂಪಿಸುವ ಉರಿಲಿಂಗಪೆದ್ದಿಗಳ ವಚನವಿದು :

ಶಿವನೇ ದೈವ ಶಿವಭಕ್ತನೇ ಕುಲಜ ಷಡಕ್ಷರಿಯೇ ಮಂತ್ರ ಕೊಲ್ಲದಿಪ್ಪುದೇ ಧರ್ಮ
ಅಧರ್ಮದಿಂದ ಬಂದುದನೊಲ್ಲದಿಪ್ಪದೇ ನೇಮ
ಆಸೆಯಿಲ್ಲದಿಪ್ಪುದೇ ತಪ ರೋಷವಿಲ್ಲದಿಪ್ಪುದೇ ಜಪ
ವಂಚನೆಯಿಲ್ಲದಿಪ್ಪುದೇ ಭಕ್ತಿ
ಹೆಚ್ಚುಕುಂದಿಲ್ಲದಿಪ್ಪುದೇ ಸಮಾಯಾಚಾರ
ಇದು ಸತ್ಯ ಶಿವಬಲ್ಲ ಶಿವನಾಣೆ
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ

ಶಿವಭಕ್ತರನ್ನು ಶಿವನೆಂದೇ ಏಕೆ ಕಾಣಬೇಕೆಂದು ಸ್ವತಂತ್ರ ಸಿದ್ಧಲಿಗೇಶ್ವರರು ಈ ವಚನದಲ್ಲಿ ತಿಳಿಸಿದ್ದಾರೆ.

ಶಿವಭಕ್ತರ ನಡೆಶುದ್ಧ ನುಡಿಶುದ್ಧ
ಶಿವಭಕ್ತರ ನೋಟಶುದ್ಧ ಮಾಟಶುದ್ಧ
ಶಿವಭಕ್ತರ ನೆನಹು ಶುದ್ಧ ಅನುಭಾವ ಶುದ್ಧ
ಶಿವಭಕ್ತರ ಕಾಯಶುದ್ಧ ಅನುಭಾವ ಶುದ್ಧ
ಶಿವಭಕ್ತರ ಕಾಯಶುದ್ಧ ಪ್ರಾಣಶುದ್ಧ
ಇದು ಕಾರಣ ಶಿವಭಕ್ತರನೇ ಶಿವನೆಂದು ನಂಬುವದು
ನಂಬಿದವರು ಶಿವನಪ್ಪುದು ತಪ್ಪದು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ

ಈ ವರೆಗಿನ ವಿವೇಚನೆಯಿಂದ ವಚನಗಳಲ್ಲಿ ಧರ್ಮ, ಎಂದರೆ ವೀರಶೈವ ಧರ್ಮದ ಪರಿಕಲ್ಪನೆ ಎಂತಿದೆ ಎಂಬುದರ ಒಂದು ಸ್ಥೂಲಪರಿಚಯವನ್ನು ಮಾಡಿಕೊಡಲಾಗಿದೆ. ಬಸವಣ್ಣನವರು ಈ ಧರ್ಮಕ್ಕೆ ಒಂದು ವಿಶೇಷ ವ್ಯಾಪಕತೆಯನ್ನು ಕೊಟ್ಟು ಸಾರ್ವತ್ರಿಕ ವಾಗುವಂತೆ ಮಾಡಿದರು. ಧರ್ಮದ ಚೌಕಟ್ಟಿನಲ್ಲೇ ವಚನಕಾರರು ತಮ್ಮ ತಮ್ಮ ಅನುಭವಪೂರ್ಣವಾದ ವಚನಗಳನ್ನು ರಚಿಸಿದ್ದಾರೆ. ಈ ವಚನಗಳು ಅಂತರಂಗದಿಂದ

ನೇರವಾಗಿ ಹೊರಹೊಮ್ಮಿರುವುದರಿಂದ ಜನತೆಯ ಅಂತರಂಗವನ್ನೇ ಮುಟ್ಟುತ್ತವೆ. ಈ ವಚನಗಳಲ್ಲಿ ಪ್ರತಿಪಾದಿತವಾದ ಸತ್ಯ ಸಾರ್ವಕಾಲಿಕವಾದದು : ಸರ್ವದೇಶಿಕವಾದುದು. ಧರ್ಮದ ಆಸ್ತಿವಾರದ ಮೇಲೆ ರಚಿತವಾದ ಈ ವಚನಗಳು ಧರ್ಮವನ್ನೇ ಪ್ರತಿಪಾದಿಸಿವೆ. ಮಾನವನ ಬಾಳು ಹಸನಾಗಬೇಕು. ಅದಕ್ಕಾಗಿ ಅವನು ಕೈಕೊಳ್ಳುವ ಕಾರ್ಯಗಳು ಧರ್ಮ ಸಮ್ಮತವಾಗಿರಬೇಕು ಎಂಬ ತತ್ವವನ್ನು ಎಲ್ಲರ ವಚನಗಳಲ್ಲೂ ಕಾಣಬಹುದಾಗಿದೆ. ಸ್ವಧರ್ಮದ ಅತ್ಯಂತಾಭಿಮಾನದಿಂದ ಅನ್ಯಧರ್ಮ ವಿಡಂಬನ ಮಾಡಿರುವುದೂ ಉಂಟು. ಇಲ್ಲಿ ನಾವು ಪರಿಗಣಿಸಬೇಕಾದುದು ಆ ವಚನಕಾರರ ಮೂಲೋದ್ದೇಶವೆ ನೆಂಬುದನ್ನು ಮಾತ್ರ ಅನ್ಯಧರ್ಮನಿರಸನ ಸ್ವಧರ್ಮ ಪ್ರತಿಪಾದನ ಈ ದೇಶದಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಧರ್ಮ ಸಂಘರ್ಷಗಳಾಗಿವೆ, ಧರ್ಮ ಸಮನ್ವಯಗಳಾಗಿವೆ. ಈ ಎಲ್ಲ ಧರ್ಮಗಳ ಮಥಿತಾರ್ಥವಿಷ್ಟೆ : ಮಾನವನ ಬಾಳು ಹಸನಾಗಬೇಕು; ಸನ್ಮಾರ್ಗದಲ್ಲಿ ನಡೆದು ಸದ್ಗತಿಯನ್ನು ಪಡೆದುಕೊಳ್ಳಬೇಕು - ಇದೇ ಅದರ ಪರಮೋದ್ದೇಶ. ಈ ದೃಷ್ಟಿಯಿಂದ ವಚನಗಳಲ್ಲಿ ಧರ್ಮದ ಪರಿಕಲ್ಪನೆ ಎಂತಾಗಿದೆ ಎಂಬುದನ್ನು ಪರಿಭಾವಿಸಬೇಕು. ಅಪಾರವಾದ ವಚನ ಸಿಂಧುವಿನಲ್ಲಿ ಕೆಲವು ರಸಬಿಂದುಗಳನ್ನು ಮಾತ್ರ ಇಲ್ಲಿ ತಂದು ನಿಮ್ಮ ಮನೋಮಂದಿರದಲ್ಲಿ ಸೇಚನಮಾಡಿದ್ದೇನೆ. ಇವು ಅಂತರಂಗ ಬಹಿರಂಗದ ಕಲ್ಮಷವನ್ನು ಕಳೆದು ಎಲ್ಲರ ಮನವನ್ನೂ ಮನೆಯನ್ನೂ ನಿರಂತರವಾಗಿ ಬೆಳಗುತ್ತಿರಲಿ ಎಂದು ಹಾರೈಸುತ್ತೇನೆ.

●

ಶರಣರು ಮತ್ತು ಪವಾಡಗಳು

ಡಾ॥ ವ್ಹಿ.ಜಿ. ಪೂಜಾರ

ಸಾಮಾನ್ಯವಾಗಿ ಜಗತ್ತಿನ ಎಲ್ಲ ಮಹತ್ವದ ಧರ್ಮಗಳು ಜ್ಞಾನಿಗಳ, ವಿಚಾರವಾದಿಗಳ ಮಹಾಪುರುಷರ ಪ್ರಯತ್ನದ ಫಲವಾಗಿವೆ. ಅವುಗಳಲ್ಲಿ ಕೆಲವು ಅವರಿಂದ ಸ್ಥಾಪಿತವಾದಂಥವು. ಇನ್ನು ಕೆಲವು ಮಹಾನ್ ವ್ಯಕ್ತಿಗಳಿಂದ ಪುನರುದ್ಧಾರ ಹೊಂದಿ ಪ್ರಸಿದ್ಧಿ ಪಡೆದಂಥವು. ಅವರೆಲ್ಲರೂ ಸಾಮಾನ್ಯರಂತೆಯೇ ಬಾಳಿದವರು. ತಮ್ಮ ಪ್ರಭಾವೀಯುತ ವ್ಯಕ್ತಿತ್ವ ಹಾಗೂ ಕರ್ತೃತ್ವಶಕ್ತಿಯಿಂದ ಜನತೆಯನ್ನು ತಮ್ಮತ್ತ ಆಕರ್ಷಿಸಿಕೊಂಡು ಧರ್ಮದ ತತ್ವಗಳನ್ನು ಅರುಹಿದವರು. ತಾವು ನಡೆದ ಧರ್ಮದ ಆ ಮಾರ್ಗದಲ್ಲಿಯೇ ಜನತೆಯೂ ಮುನ್ನಡೆಯುವಂತೆ ಯತ್ನಿಸಿದವರು. ಅವರು ಗತಿಸಿದ ಮೇಲೆ ಆಯಾ ಮತಧರ್ಮದ ಕವಿಗಳಿಗೆ, ಪುರಾಣಕಾರರಿಗೆ ಅವರ ಚರಿತ್ರೆಯನ್ನು, ಅವರು ಬೋಧಿಸಿದ ತತ್ವಗಳನ್ನು ಸಾಮಾನ್ಯ ಜನತೆಗೆ ತಿಳಿಸಿಕೊಡುವ ಅವಶ್ಯಕತೆ ಎನಿಸಿದಂತೆ ತೋರುತ್ತದೆ. ಕಠಿಣವಾದ, ತರ್ಕಬದ್ಧವಾದ ಧರ್ಮದ ತತ್ವಗಳನ್ನು ಗ್ರಹಿಸುವ ಶಕ್ತಿ ಸಾಮಾನ್ಯ ಜನತೆಗೆ ಇರುವುದಿಲ್ಲ. ಕವಿಗಳು ಇದನ್ನು ಮನದಂದು ಧರ್ಮದ ತತ್ವಗಳನ್ನು ಹಿನ್ನೆಲೆಯಾಗಿರಿಸಿಕೊಂಡು ಸಾಂಕೇತಿಕತೆ, ಪವಾಡ ಕಥೆ ಕಟ್ಟಿ ತಂತಮ್ಮ ಕೃತಿಗಳಲ್ಲಿ ವರ್ಣಿಸುತ್ತ ಬಂದುದನ್ನು ಕಾಣುವೆವು.

ಬಹುಸಂಖ್ಯೆಯ ಮತ-ಧರ್ಮಗಳ ಸಾಹಿತ್ಯದಲ್ಲೂ ಇಂಥ ಪದ್ಧತಿ ನಡೆದುಕೊಂಡು ಬಂದಿದೆ. ಇದಕ್ಕೆ ವೀರಶೈವ ಸಾಹಿತ್ಯವೂ ಹೊರತಲ್ಲ. ಕೆಲವು ವೀರಶೈವ ಕವಿಗಳೇ ಬಸವಾದಿ ಶರಣರನ್ನು ಕುರಿತು ರಚಿಸಿದ ಕಾವ್ಯ, ಪುರಾಣಗಳಲ್ಲಿ ಅನೇಕ ಪವಾಡಕಥೆಗಳನ್ನು ಕಟ್ಟಿ ಬಣ್ಣಿಸಿದ್ದಾರೆ. ಹೀಗೆ ಬಣ್ಣಿಸಿದ ಕಾರಣ ಶರಣರು ಮಹಿಮಾಪುರುಷರೆಂದೂ, ವೀರಶೈವ ಧರ್ಮದ ತತ್ವಗಳು ಶ್ರೇಷ್ಠವಾದುವೆಂದೂ ಸಾಮಾನ್ಯಜನತೆಗೆ ತಿಳಿಸಿ ಧರ್ಮ ಪ್ರಚಾರ ಮಾಡುವುದೇ ಆಗಿದೆಯೆಂದು ಬೇರೆ ಹೇಳಬೇಕಿಲ್ಲ. ಆದರೆ ಭಾರತೀಯ ಯೋಗ ಶಾಸ್ತ್ರವು ಹಠಯೋಗ ಸಾಧನೆಯಿಂದ ಸಾಧಕನು ಹಂತ-ಹಂತವಾಗಿ ಅಣಿಮಾದಿ ಅಷ್ಟೈಶ್ವರ್ಯ ಗಳನ್ನು, ಪವಾಡಗಳಂತಹ ಸಿದ್ಧಿಗಳನ್ನು ಪಡೆದುಕೊಳ್ಳಬಹುದೆಂದು ಹೇಳುತ್ತದೆ.[1]

---

1. ಸ್ವಾಮಿ ಆದಿದೇವಾನಂದ (ಸಂ) : ಪಾತಂಜಲ ಯೋಗದರ್ಶನ, ಸೂತ್ರ - 45

ಶ್ರೀಷಣ್ಮುಖ ಶಿವಯೋಗಿಗಳೂ ತಮ್ಮ ಈ ಕೆಳಗಿನ ವಚನದಲ್ಲಿ ಇದೇ ಅಭಿಪ್ರಾಯ ವ್ಯಕ್ತಪಡಿಸಿದುದನ್ನರಿಯಬಹುದು :

"ಬಳಿಕೀ ಪ್ರಕಾರದ ಹಠಯೋಗ ರೂಪಮಪ್ಪ ಅಷ್ಟಾಂಗಗಳಂ.
ನಿರಾಲಸ್ಯದಿಂ ಎಡೆಬಿಡುವಿಲ್ಲದೆ ಮಾಡಿದಾತಂಗೆ ಆಗುವ ಸಿದ್ಧಿಪ್ರಕಾರಗಳೆಂತೆನೆ
ಮೊದಲನೆ ವರ್ಷದಲ್ಲಿ ನಿರೋಗಿಯಾಗಿ ಸಕಲ ಜನ ಪ್ರೀತನಾಗುವನು
ಎರಡನೆಯ ವರ್ಷದಲ್ಲಿ ಸಂಸ್ಕೃತ ಭಾಷೆಯಿಂದ ಕವಿತ್ವವಂ ಮಾಡುವನು
ಮೂರನೆಯ ವರ್ಷದಲ್ಲಿ ಸರ್ಪಾದಿ ದುಷ್ಟಪ್ರಾಣಿಗಳಿಂದೆ ಬಾಧಿಸಿಕೊಳ್ಳುತಿರನು
ನಾಲ್ಕನೆಯ ವರ್ಷದಲ್ಲಿ ಹಸಿವು, ತೃಷೆ, ವಿಷಯ, ನಿದ್ರೆ ಶೋಕ ಮೋಹಾದಿಗಳಂ ಬಿಡುವನು
ಐದನೆಯ ವರ್ಷದಲ್ಲಿ ದೂರಶ್ರವಣ ವಾಕ್‌ಸಿದ್ಧಿ ಪರಕಾಯ ಪ್ರವೇಶಾಧಿಕವುಳ್ಳಾತನಾಹನು.
ಆರನೆಯ ವರ್ಷದಲ್ಲಿ ವಜ್ರಾದ್ಯಾಯುಧಗಳಿಂದೆ ಬೇಧಿಸಲ್ಪಡದಾತನಾಗಿ
ಶೀಘ್ರಗಾಮಿಯಾಗಿ ದೂರದರ್ಶನವುಳ್ಳಾತನಾಹನು
ಏಳನೆಯ ವರ್ಷದಲ್ಲಿ ಖೇಚರಗಾಮಿಯಾಗುವನು
ಎಂಟನೆಯ ವರ್ಷದಲ್ಲಿ ಅಣಿಮಾದಿ ಅಷ್ಟಮಹದೈಶ್ವರ್ಯ ಸಂಪನ್ನನಾಹನು.
ಒಂಬತ್ತನೆಯ ವರ್ಷದಲ್ಲಿ ಸ್ವೇಚ್ಛಾಗಮನಿಯಾಗಿ ವಜ್ರಶರೀರಿಯಾಹನು.
ಹತ್ತನೆಯ ವರ್ಷದಲ್ಲಿ ಮನೋಯೋಗಿಯಾಗಿ ಇಚ್ಛಾವಿಷಯಂಗಳ ಪಡೆಯುವನು.
ಹನ್ನೊಂದನೆಯ ವರ್ಷದಲ್ಲಿ ಸಕಲ ಲೋಕಂಗಳಿಗೆ ಆಜ್ಞಾಕರ್ತೃವಾಹನು.
ಹನ್ನೆರಡನೆಯ ವರ್ಷದಲ್ಲಿ ಶಿವನ ಸಮಾನನಾಗಿ ಸೃಷ್ಟಿ ಸ್ಥಿತಿ ಲಯಂಗಳಂ
ಮಾಡುತಿರ್ಪುದೆ ಹಠಯೋಗ ಸಿದ್ಧಿ ನೋಡಾ ಅಖಂಡೇಶ್ವರಾ"[2]

ದೇಹದಲ್ಲಿರುವ ಷಟ್ ಚಕ್ರಗಳ ಮೂಲಕ ಕುಂಡಲಿನಿ ಶಕ್ತಿಯನ್ನು ಜಾಗ್ರತಗೊಳಿಸಿಕೊಳ್ಳುವವರು ಪವಾಡ ಸಾಮರ್ಥ್ಯವನ್ನು ಹೊಂದಬಹುದೆಂದು ಶ್ರೀ ಗೋಪಿಕೃಷ್ಣ ಅವರು ಅಭಿಪ್ರಾಯಪಡುವರು.[3] ಕುಂಡಲಿನಿ ಶಕ್ತಿಯನ್ನು ಜಾಗ್ರತಗೊಳಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಾಗದು. ಇದು ತುಂಬ ಕಠಿಣ ಪರಿಶ್ರಮದಿಂದ ಸಾಧ್ಯವಾಗುವಂಥದು. ಸಾಧಕನು ವಿಶೇಷ ಶ್ರಮಪಟ್ಟು ಅಷ್ಟಾಂಗ ಯೋಗಗಳ ಆಚರಣೆಯಲ್ಲಿ ತೊಡಗಬೇಕಾಗುವುದು. 'ಇವುಗಳ ಸಾಧನೆಯಲ್ಲಿ ಸಾಧಕ ವಿವಿಕ್ತವಾಗಿದ್ದು ಅತ್ಯುಗ್ರವಾದ ವ್ರತಗಳನ್ನು ಆಚರಿಸಬೇಕಾಗುತ್ತದೆ. ಪ್ರಾಣಾಯಾಮದಿಂದ ಪ್ರಾಣವನ್ನು ನಿಯಂತ್ರಿಸುವಲ್ಲಿ ಅನೇಕ ಸಾರೆ ಪ್ರಾಣಕ್ಕೆ ಅಪಾಯವೊದಗುವ ಭಯವೂ ಉಂಟು. ಕುಂಡಲಿನಿಯನ್ನು ಜಾಗ್ರತಗೊಳಿಸಿ ಅದನ್ನು ಮೇಲಕ್ಕೇರಿಸುವಲ್ಲಿ ಅನೇಕ ಸಲ ವ್ರತಚ್ಯುತರಾಗುವ ಸಂಭವವೂ ಉಂಟು.'[4] ವ್ರತಚ್ಯುತರಾಗದೆ ಇಂಥ ಗಂಡಾಂತರಕಾರಿಯಾದ ಯೋಗವನ್ನಾಚರಿಸಿ

---

2. ಶಿವಾನಂದ ಎ (ಸಂ) : ಅಖಂಡೇಶ್ವರ ವಚನಗಳು, ವಚನ - 63
3. Gopi Krishna : "Higher Concious" Page - 128
4. ಹಿರೇಮಠ ಆರ್. ಸಿ. : 'ಷಟ್‌ಸ್ಥಲ ಪ್ರಭೆ', ಪುಟ : 412.

ಕುಂಡಲಿನಿಯನ್ನು ಜಾಗ್ರತಗೊಳಿಸಿಕೊಂಡ ಅನೇಕ ಧಾರ್ಮಿಕ ಮಹಾಪುರುಷರು ಶಕ್ತಿಯನ್ನು ಪಡೆದುಕೊಂಡು ಪ್ರದರ್ಶಿಸಬಲ್ಲರೆಂದು ಸಾಮಾನ್ಯಜನ ಪ್ರಾಚೀನ ಕಾಲದಿಂದಲೂ ನಂಬಿಕೊಂಡು ಬಂದಂತಿದೆ. ಮತ್ತು ಧಾರ್ಮಿಕ ಮಹಾಪುರುಷರೆಂದರೆ ಪವಾಡಗಳನ್ನು ಪ್ರದರ್ಶಿಸುವರೆಂದೂ, ಪವಾಡಗಳನ್ನು ಮಾಡದವರು ಧಾರ್ಮಿಕ ಮಹಾಪುರುಷರೇ ಅಲ್ಲವೆಂದೂ ಅವರು ಅಭಿಪ್ರಾಯಪಡುವರು. ಯೇಸುಕ್ರಿಸ್ತ, ಮಹಮ್ಮದ ಪೈಗಂಬರ, ಶಂಕರಾಚಾರ್ಯರು, ಮಹಾವೀರ, ಬುದ್ಧ, ಕಬೀರ ಮತ್ತು ಬಸವೇಶ್ವರ ಮುಂತಾದ ಧಾರ್ಮಿಕ ಮಹಾಪುರುಷರು ಯೋಗ ಸಾಧನೆಗೈಯದೆ ಯಾವ ಪೂರ್ವ ತಯಾರಿಯೂ ಇಲ್ಲದೆ ಸ್ವಾರ್ಥ, ಸ್ವಲಾಭವನ್ನೂ ಇರಿಸಿಕೊಳ್ಳದೆ ಸಂಕಷ್ಟದಲ್ಲಿ ಗಂಡಾಂತರದಲ್ಲಿ ಮುಳುಗಿದವರನ್ನು ಪಾರುಮಾಡಲು ಅನೇಕ ಪವಾಡಗಳನ್ನು ಪ್ರದರ್ಶಿಸಿದರೆಂದೂ ಕೆಲ ಸಾಮಾನ್ಯ ಜನತೆಯ ನಂಬುಗೆ.

ಬಸವಾದಿಶರಣರು ಮಾತ್ರ ಪವಾಡಗಳಂತಹ ಸಿದ್ಧಿಗಳನ್ನು ಪಡೆದುಕೊಂಡು ಪ್ರದರ್ಶಿಸಿದವರಲ್ಲ, ಅತಿಮಾನುಷ ಶಕ್ತಿಗಳನ್ನೂ ಪುರಸ್ಕರಿಸಿದವರಲ್ಲ. ಇದಕ್ಕೆ ಅವರ ವಚನಗಳೇ ಸಾಕ್ಷಿ. ಹಠಯೋಗಿಗಳನ್ನು ಮತ್ತು ಅವರು ಪ್ರದರ್ಶಿಸುತ್ತಿದ್ದರೆನ್ನಲಾದ ಕ್ಷುದ್ರಶಕ್ತಿಗಳನ್ನು, ಪವಾಡಗಳನ್ನು, ಶರಣರು ಕಡೆಗಣಿಸಿ ನುಡಿದಿರುವರೇ ವಿನಾ ಅವುಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸಿ ಒರೆಗೆ ಹಚ್ಚುವ ಪ್ರಯತ್ನವನ್ನು ಮಾಡಿದಂತೆ ತೋರುವುದಿಲ್ಲ. ಹಠಯೋಗಿಗಳು ಮತ್ತು ಪವಾಡಗಳ ಬಗೆಗೆ ಅವರು ವ್ಯಕ್ತಪಡಿಸಿದ ವಿಚಾರಗಳನ್ನು ಅವರ ವಚನಗಳಿಂದಲೇ ಕಂಡುಕೊಳ್ಳುವುದು ಇಲ್ಲಿ ಧ್ಯೇಯವಾಗಿದೆ.

ಶರಣರು ಹಠಯೋಗ ಸಾಧನೆಯಿಂದ ಸಿದ್ಧಿಸುತ್ತವೆಯೆಂದು ನಂಬಲಾದ ಅಣಿಮಾದಿ ಅಷ್ಟೈಶ್ವರ್ಯಗಳನ್ನು ಪವಾಡಗಳನ್ನು ತೃಣವಾಗಿ ಗಣಿಸಿದರು. ಸಿದ್ಧರಾಮನು ಹಠಯೋಗಿಗಳಿಗೆ 'ಅಷ್ಟಾಂಗಯೋಗವನರಿದಿಹೆವೆಂದು ಘಟಕೆಟ್ಟುನಷ್ಟವಾದವರ ಕಂಡೆ' ಎಂದಿರುವನು. ಹಠಯೋಗಿಗಳು ಪ್ರಾಣಾಯಾಮದ ಮೂಲಕ ಪ್ರಾಣಶಕ್ತಿಯ ದುರುಪಯೋಗ ಮಾಡಿಕೊಂಡು ದುರಂತಕ್ಕೀಡಾಗುವರು, ಎಂದು ಶರಣರು ಅಭಿಪ್ರಾಯಪಟ್ಟಿರುವರು. ಪ್ರಭುದೇವರು ತಮ್ಮ ವಚನವೊಂದರಲ್ಲಿ ಹಠಯೋಗ ಆಚರಿಸುತ್ತಿದ್ದ ಕಾಪಾಲಿಕರನ್ನು ಮತ್ತು ಅವರು ಪ್ರದರ್ಶಿಸುತ್ತಿದ್ದ ಬಿನುಗು ದೃಷ್ಟಗಳನ್ನು ಖಂಡಿಸುತ್ತ, ಶರಣರು ಇಂಥ ಆಚರಣೆಯುಳ್ಳವರಲ್ಲವೆಂದುದನ್ನಿಲ್ಲಿ ನೋಡಬಹುದು :

''ಹಠಯೋಗ ಲಂಬಿಕೆಯೆಂದು, ಆಕುಂಚನವೆಂದು
ವಜ್ರ ಅಮರಿಯ ಕಲ್ಪವೆಂದು
ಮಲ ಮೂತ್ರಂಗಳ ಸೇವಿಸುತ
ಇದು ಪೂರ್ವನವನಾಥ ಸಿದ್ಧರ ಮತೊಕ್ತವೆಂದು

---

5. ಹಿರೇಮಠ ಆರ್. ಸಿ. (ಸಂ) : ಸಿದ್ಧರಾಮೇಶ್ವರ ವಚನಗಳು

ಕಾಪಾಲಿಕರಾಚರಣೆಯನಾಚರಿಸುವರಲ್ಲ ಶರಣರು ।
ಮೇಣು,
ತಲೆಯೊಳಗಣ ವಾತಪಿತ್ತ ಶ್ಲೇಷ್ಮವ ತೆಗೆದು
ಅಮೃತವೆಂದು ಬಿನುಗು ದೃಷ್ಟವ ತೋರುವವರಲ್ಲ ಶರಣರು।
ದ್ರವಿಸುವ ದೇಹದಲ್ಲಿ
ಅಪ್ಪುವಿನ ಫಲರಸ ಕ್ಷೀರ ಮೊದಲಾದುವ ಸೇವಿಸುತ್ತ
ಅನ್ನವ ಬಿಟ್ಟೆವೆಂಬ ಭೂತ ಚೇಷ್ಟಿಕರಲ್ಲ ಶರಣರು
ಇವೆಲ್ಲವು ಕಾಕು ಸಟೆ ಭ್ರಾಂತೆಂದು
ತಿಳಿದು ನಿರ್ಧರ ನಿಜದಿ ನಿಂದರು
ಗುಹೇಶ್ವರ ನಿಮ್ಮ ಶರಣರು ಅಗ್ರಗಣ್ಯರು''[6]

ಶರಣರ ಮಾರ್ಗದಲ್ಲಿ ಕುಟಿಲ ಕುಹಕಿ ಕಪಟಿಗಳಿಗೆ ಎಡೆಯಿಲ್ಲ, ಚಮತ್ಕಾರಗಳಿಗೆ ಆಸ್ಪದವಿಲ್ಲವೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿದೆ. ಹಠಯೋಗ ಸಾಧನೆಯಿಂದ ದೇಹವನ್ನು ವಜ್ರದಂತೆ ಗಟ್ಟಿಮಾಡಿಕೊಂಡು ಅದರಿಂದ ಏನೆಲ್ಲವನ್ನು ಸಾಧಿಸಬಹುದೆಂದು ತಿಳಿದಿದ್ದ ಗೋರಕ್ಷನನ್ನು ಪ್ರಭುದೇವರು ಒಮ್ಮೆ ಸಂಧಿಸಿ ಆತನ ದೇಹಕ್ಕಿರುವ ಮಿತಿಯನ್ನು ತೋರಿಸಿಕೊಟ್ಟುದನ್ನು ಚಾಮರಸ ಕವಿಯು ವರ್ಣಿಸಿದ್ದಾನೆ.[7] ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಹಠಯೋಗಿ, ಲಯಯೋಗಿ, ಲಂಬಿಕಾಯೋಗಿ, ಮತ್ತು ಅಷ್ಟಾಂಗಯೋಗಿಗಳು ಯೋಗ ಸಾಧನೆಯಿಂದ ಪಡೆದ ಸಿದ್ಧಿಗಳನ್ನು ಕುರಿತು 'ಇವು ನಿತ್ಯವನೆ ಮರೆತು ಅನಿತ್ಯವನೆ ಹಿಡಿದು ಸತ್ತುಹೋದಂತೆ' ಎಂದಿದ್ದಾರೆ. ಮುಂದುವರಿದು ಅವರು :

''ಲಂಬಿಕಾಯೋಗಿಗಳಿಗೆ ಡೊಂಬರಿಗೆ ಸರಿಯೆಂದೆಂಬೆ
ಹಠಯೋಗಿಗಳಿಗೆ ಅಟಮಟಕಾರರೆಂದೆಂಬೆ
ಅಷ್ಟಾಂಗಯೋಗಿಗಳ ಕಷ್ಟಕರ್ಮಿಗಳೆಂದೆಂಬೆ
ಲಯಯೋಗಿಗಳ ನಾಯಿಗಿಂತ ಕಡೆಯೆಂದೆಂಬೆ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ!''[8]

ಎಂದು ಆ ಯೋಗಿಗಳನ್ನು ಹೀಗಳೆದು ನುಡಿದಿರುವರು. 'ಇಂಥವುಗಳ ಆಧಾರದಿಂದ ವಚನಶಾಸ್ತ್ರಕಾರರು (ಶರಣರು) ಯೋಗ ವಿರೋಧಿಗಳೆಂದು ಮಾತ್ರ ಕಲ್ಪಿಸಬಾರದು. ಅವರ ಟೀಕೆಯು ಯೋಗದ ಮುಖ್ಯ ಧ್ಯೇಯವಾದ ಅಂತರಂಗ ಶುದ್ಧಿಯನ್ನೂ,

---

6. ಬಸವರಾಜು ಎಲ್. (ಸಂ): ಅಲ್ಲಮನ ವಚನಗಳು, ವಚನ : 339
7. ಪ್ರಭುಲಿಂಗಲೀಲೆ, : ಗೋರಕ್ಷಾದಿಗಳಿಗೆ ಉಪದೇಶದ ಗತಿ.
8. ಹಿರೇಮಠ ಆರ್. ಸಿ. (ಸಂ) : ತೋಂಟದ ಸಿದ್ಧಲಿಂಗೇಶ್ವರರ ''ಷಟ್‌ಸ್ಥಲ ಜ್ಞಾನ ಸಾರಾಮೃತ'' 1964

ಈಶ್ವರಸಿದ್ಧಿಯನ್ನೂ ಮರೆತು ಕೇವಲ ಬಾಹ್ಯ ಶರೀರ ಚಮತ್ಕಾರಗಳನ್ನು ಸಾಧಿಸಿದ ಈ ಹಠಯೋಗಿಗಳನ್ನುದ್ದೇಶಿಸಿ ಮಾಡಲ್ಪಟ್ಟಿದೆಯೆಂಬುದನ್ನು ಲಕ್ಷ್ಯದಲ್ಲಿಡಬೇಕು"[9]

ನಮ್ಮ ದೇಹದಲ್ಲಿಯೇ ಅರುಹಿನ ರೂಪದಲ್ಲಿ ಅಂತರ್ಗತವಾಗಿರುವ ಶಿವರೂಪಿ ಶಕ್ತಿಯನ್ನು ಅರಿತುಕೊಳ್ಳುವುದಕ್ಕಾಗಿ ಯೋಗವನ್ನಾಚರಿಸಬೇಕೇ ವಿನಾ ಬಾಹ್ಯಶರೀರ ಚಮತ್ಕಾರಗಳನ್ನು ಸಿದ್ಧಿಗಳನ್ನು ಪಡೆದುಕೊಂಡು ಪ್ರದರ್ಶಿಸುವುದಕ್ಕಲ್ಲವೆಂದು ಮಹಾದೇವಿಯಕ್ಕ ತನ್ನ ಈ ಕೆಳಗಿನ ವಚನವೊಂದರಲ್ಲಿ ಸ್ಪಷ್ಟಪಡಿಸಿದುದನ್ನು ಕಾಣಬಹುದು:

> ''ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯವ ನುಡಿದಡೇನು ?
> ಆದಿ ಅನಾದಿಯ ಶುದ್ಧಿಯ ಕೇಳಿದಡೇನು ? ಹೇಳಿದಡೇನು ?
> ತನ್ನಲ್ಲಿದ್ದು ತಾನರಿಯದನ್ನಕ್ಕರ
> ಉನ್ಮನಿಯ ರಭಸದ ಮನ ಪವನದ ಮೇಲೆ
> ಚನ್ನಮಲ್ಲಿಕಾರ್ಜುನಯ್ಯನ ಬೇಧಿಸಲರಿಯರು.''[10]

ಯೋಗಿಯು ತನ್ನ ದೇಹವನ್ನು ದಂಡಿಸಿ ಪಡೆದುಕೊಳ್ಳುವ ಸಿದ್ಧಿಗಳು ಕ್ಷಣಿಕ ತೃಪ್ತಿಯನ್ನೀಯುವಂಥವು. ಅವು ಪರಮಾತ್ಮನನ್ನರಿಯಲು ಸಹಾಯಕವಾಗಲಾರವು. ಅಂತಹ ಸಿದ್ಧಿಗಳು ಸಾಧಕನಿಗೂ ದೇವರಿಗೂ ನಡುವೆ ಹಿಡಿದ ಕಪ್ಪು ಪರದೆಗಳು ಎಂದು ಅನೇಕ ಧಾರ್ಮಿಕ ಮಹಾಪುರುಷರು, ಸಾಧು ಸಂತರು ಮತ್ತು ಶರಣರು ಅಭಿಪ್ರಾಯ ಪಟ್ಟಿರುವರು. ತಮಿಳು ನಾಡಿನ ನಾಯನಾರರು ''ಕಾಡಿನ ಕ್ರೂರ ಪ್ರಾಣಿಗಳನ್ನೂ ವಿಷಸರ್ಪಗಳನ್ನೂ ಮಣಿಸುವುದು, ರಸಸಿದ್ಧಿ ಮಾಡುವುದು, ಅಗೋಚರರಾಗಿ ಚಲಿಸುವುದು, ನೀರಿನ ಮೇಲೆ ನಡೆಯುವುದು, ಬೆಂಕಿಯ ಮೇಲೆ ಕುಳಿತುಕೊಳ್ಳುವುದು, ಪರಕಾಯ ಪ್ರವೇಶ ಮಾಡುವುದು, ನಿತ್ಯ ಯೌವನವನ್ನುಳಿಸಿಕೊಳ್ಳುವುದು ಇತ್ಯಾದಿ ಸಿದ್ಧಿ ಸಿದ್ಧಿಯಾಗಬಹುದು. ಆದರೆ ಮನುಷ್ಯನನ್ನು ಸ್ವಾಧೀನದಲ್ಲಿಟ್ಟು ನಿಶ್ಚಲತೆಯನ್ನು ಪಡೆಯುವುದು ಕಷ್ಟಸಾಧ್ಯಎಂದಿದ್ದಾರೆ. ಇದೇ ಅಭಿಪ್ರಾಯ ಹೊಂದಿದ ಕಾಶ್ಮೀರದ ಸ್ತ್ರೀ ಸಂತಳಾದ ಲಲ್ಲೇಶ್ವರಿಯು ಹೇ ಯೋಗಿಯೇ ! ಅಗ್ನಿಯ ಬಿಸುಪನ್ನೇಕೆ ಆರಿಸುವೆ ? ನದಿಯನ್ನು ತಡೆಯುವೆ ಏಕೆ ? ತಲೆ ಕೆಳಗು ಕಾಲು ಮೇಲೆ ಮಾಡಿ ನಡೆಯುವೆ ಏಕೆ ? ಈ ಐಂದ್ರಜಾಲಿಕ ಮಾಟಗಳೇಕೆ?''[11] ಎಂದು ಮಾರ್ಮಿಕವಾಗಿ ಪ್ರಶ್ನಿಸುವಳು. ''ಅಗ್ನಿವಸನವನ್ನು ತೊಟ್ಟರೇನು ? ಕಬ್ಬಿಣವನ್ನು ತಿಂದರೇನು ? ನಭೋಮಂಡಲವನ್ನೇ ಕಿರಿಬೆರಳಿನಲ್ಲಿ ಹೊತ್ತರೇನು ? ಅಸಾಧ್ಯವಾದುದನ್ನು ಮಾಡಿ ತೋರಿದರೇನು ? ದೇವರ ಕೃಪೆಗೆ ಪಾತ್ರರಾಗದೆ ಇಂಥ ಕಾರ್ಯಗಳನ್ನೆಸಗುವುದು ವ್ಯರ್ಥ''[12]ವೆಂಗು ಗುರುನಾನಕರು ಇಂಥ ಸಿದ್ಧಿಗಳನ್ನು ಮತ್ತು ಇವುಗಳನ್ನು ಪ್ರದರ್ಶಿಸುವ

---

9. ಬಸವನಾಳ ಶಿ. ಶಿ. (ಸಂ) : ವೀರಶೈವ ತತ್ತ್ವಪ್ರಕಾಶ, ಪುಟ 123
10. ಹಿರೇಮಠ ಆರ್.ಸಿ.(ಸಂ) : ಮಹಾದೇವಿಯಕ್ಕನ ವಚನಗಳು, ವ-230
11. ಮಹದೇವನ್ ಟಿ. ಪಿ. (ಲೇ) ಮರಿಯಪ್ಪಭಟ್ (ಅನು) : ಸಂತರ ಚರಿತೆ, ಪುಟ - 10
12. ಗೋಪಾಲ ಸಿಂಗ (ಲೇ) , ಜವರೇಗೌಡ ದೇ (ಅನು) : ಗುರುನಾನಕ, ಪುಟ 63

ಯೋಗಿಗಳನ್ನು ಹೀಗಳೆದು ನುಡಿದಿದ್ದಾರೆ. ಸ್ವಾಮಿ ವಿವೇಕಾನಂದರೂ ತಮ್ಮ 'ರಾಜಯೋಗ' ಗ್ರಂಥದಲ್ಲಿ ಹಠಯೋಗಿಗಳಿಗಿದ್ದ ಮಿತಿಯನ್ನು ವಿವರಿಸುತ್ತ ಅವರು ಕೇವಲ ಆರೋಗ್ಯವಂತ ಪ್ರಾಣಿಗಳೆಂದು ಹೀಗೆ ನುಡಿದಿದ್ದಾರೆ. "He(Hathayogi) is determined not to fall sick, and he never dies. He lives long, a hundred years nothing to him. He is quite young and fresh when he is 150, without one hair turned grey. But that is all. A Banyan tree lives sometimes 5000 years, but it is a banyan tree and nothing more. So if a man lives long, he is only a healthy animal"[13].

ದೇಹವನ್ನು ದಂಡಿಸುವ ಹಠಯೋಗಿಗಳು ದೇವರ ಪ್ರೀತಿಗೆ ಪಾತ್ರರಾಗರು. ನಶ್ವರವಾದ ದೇಹವೇ ನಿತ್ಯವೆಂದು ನಂಬಿದ ಅವರಿಗೆ ಮುಕ್ತಿ ಲಭಿಸದು; ಎಂದು ಬಸವಾದಿ ಶರಣರ ನಂಬುಗೆ. "ಯೋಗಗಳ ಈ ಕಾಠಿಣ್ಯವನ್ನು ಹೋಗಲಾಡಿಸಿ ಸುಲಭಸಾಧ್ಯವಾದ ಶಿವಯೋಗವನ್ನು ವೀರಶೈವರು (ಶರಣರು) ಕಂಡು ಹಿಡಿದರು. ಅಷ್ಟಾಂಗ ಯೋಗದೊಳಗಿನ ಮೊದಲಿನ ಐದಂಗಗಳನ್ನು ಬಿಟ್ಟು ಧ್ಯಾನ, ಧಾರಣ, ಸಮಾಧಿ–ಈ ಮೂರನ್ನೇ ಶಿವಯೋಗದಲ್ಲಿ ಇಟ್ಟುಕೊಳ್ಳಲಾಯಿತು. ಇಷ್ಟಲಿಂಗ ಧಾರಣ, ಪ್ರಾಣಲಿಂಗಧ್ಯಾನ ಭಾವಲಿಂಗ ಸಮಾಧಿ ಇವು ವೀರಶೈವರಲ್ಲಿ ಮುಖ್ಯವಾದುವು. ವೀರಶೈವರು ನಿತ್ಯಮಾಡುವ ಶಿವಪೂಜೆಯೇ ಶಿವಯೋಗವಾಗುವಂತೆ ಏರ್ಪಡಿಸಿ, ವ್ಯವಹಾರಕ್ಕೆ ಪರಮಾರ್ಥವನ್ನು ಬೆರಸಿದರು.[14] ಈ ಯೋಗವನ್ನು ಎಲ್ಲರೂ ಸುಲಭವಾಗಿ ಆಚರಣೆಯಲ್ಲಿ ತರಬಹುದೆಂದರು. ಇದಕ್ಕೆ ಇನ್ನುಳಿದ ಯೋಗಗಳು ಸರಿಸಮಾನವಾಗಲಾರವು ಎಂಬುದು ಅವರ ಅಭಿಪ್ರಾಯ. ಶಿವಯೋಗವು ಎಂಥದೆಂಬುದನ್ನು ಪ್ರಭುದೇವರು ಒಂದೆಡೆ ನುಡಿದುದನ್ನಿಲ್ಲಿ ಉದಾಹರಿಸಬಹುದು :

"ನಾರುಬೇರಿನ ಕುಟಿಲಕಪಟ ಯೋಗವಲ್ಲದು ನಿಲ್ಲಿಭೋ।
ಕಾಯಸಮಾಧಿ ಶರಣ ಸಮಾಧಿ ಯೋಗವಲ್ಲದು ನಿಲ್ಲಿಭೋ।
ಜೀವಸಮಾಧಿಯೆಂಬುದಲ್ಲ ನಿಜಸಹಜ ಸಮಾಧಿ ಗೋಹೇಶ್ವರ"[15]

ಶಿವನನ್ನರಿಯಲು ಸಹಜವಾದ ಶಿವಯೋಗವಿರಲು ಶರಣರಿಗೆ ಅಷ್ಟಾಂಗ ಯೋಗಗಳ ಹಂಗೇಕೆ ? ಎಂದು ಮಹಾದೇವಿಯಕ್ಕ ತನ್ನ ವಚನವೊಂದರಲ್ಲಿ ಪ್ರಶ್ನಿಸಿದುದನ್ನು ಕಾಣಬಹುದು :

"ಉಸಿರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು ಸಮಾಧಿಯ ಹಂಗೇಕಯ್ಯಾ ?
ಚನ್ನ ಮಲ್ಲಿಕಾರ್ಜುನಾ"[16]

---

13. Swamy Vivekananda : 'Rajayoga' Page 14
14. ಹಿರೇಮಠ ಆರ್. ಸಿ. : ಷಟ್‌ಸ್ಥಲ ಪ್ರಭೆ, ಪುಟ 412
15. ಭೂಸನೂರ ಮಠ ಸಂ.ಶಿ (ಸಂ) : ವಚನ ಸಾಹಿತ್ಯ ಸಂಗ್ರಹ, ವಚನ –115
16. ಹಿರೇಮಠ ಆರ್. ಸಿ. (ಸಂ) : ಮಹಾದೇವಿಯಕ್ಕನ ವಚನಗಳು, ವಚನ : 229

ಅಷ್ಟಾಂಗಯೋಗಗಳು ಕೃತ್ರಿಮವಾದುವು ಎಂದು ಮಹಾದೇವಿಯಕ್ಕ ಅಭಿಪ್ರಾಯಪಡುತ್ತ, ಶರಣರಿಗೆ ಇಂಥ ಯೋಗಗಳ ಅವಶ್ಯಕತೆಯಿಲ್ಲವೆನ್ನುವಳು. ಇಲ್ಲಿ ಆಕೆ ಶಿವಯೋಗದ ಆಚರಣೆಯನ್ನು ಎತ್ತಿ ಹಿಡಿದುದನ್ನು ಗುರುತಿಸಬಹುದು. ಕುಟಿಲ ಸಿದ್ಧಿಗಳನ್ನು, ಅಷ್ಟವಿದ್ಯೆಗಳನ್ನು ವಶಮಾಡಿಕೊಂಡಿದ್ದ ವಿಕಾರಿ ಸಿದ್ಧರು, ಹಠಯೋಗಿಗಳು ಸಿದ್ಧರಾಮನ ಶಿವಯೋಗದ ನಿಲುವಿಗೆ ಸಮಾನರಲ್ಲವೆಂದು ರಾಘವಾಂಕ ಕವಿ ನುಡಿದುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು[17]. ಇದರಿಂದ ಬಸವಾದಿ ಶರಣರೆಲ್ಲರೂ ಶಿವಯೋಗದಾಚರಣೆ ಯುಳ್ಳವರಾಗಿದ್ದರೆಂಬುದು ವಿದಿತವಾಗುವುದು.

ಶಿವೈಕ್ಯಮರ್ಮವನ್ನು ಬೋಧಿಸುವ ಶಿವಯೋಗ ಮಾರ್ಗದಲ್ಲಿ ಮುನ್ನಡೆದ ಬಸವಾದಿ ಶರಣರು ಹಿಂದೆಯೇ ಹೇಳಿದಂತೆ, ಪವಾಡಗಳಂಥ ಸಿದ್ಧಿಗಳನ್ನು ಪಡೆದುಕೊಂಡು ಪ್ರದರ್ಶಿಸಲಿಲ್ಲವೆಂಬ ಮಾತು ಸೂರ್ಯ ಪ್ರಕಾಶದಷ್ಟು ಸತ್ಯ. ಆದರೆ ಅವರು ಗತಿಸಿದ ನಂತರ ಅವರ ಚರಿತ್ರೆಯ ಸುತ್ತ ಅನೇಕ ಕಟ್ಟು ಕಥೆಗಳು, ಪವಾಡ ಕಥೆಗಳು ಹುಟ್ಟಿಕೊಂಡುವು. ಬಸವಣ್ಣನವರ ಜೀವಿತಾವಧಿಯಲ್ಲಿಯೇ ಅವರನ್ನು ಮಹಾದೇವಿಯಕ್ಕ ದೇವರೆಂದೂ, ಸಿದ್ಧರಾಮ ಮಹಿಮಪುರುಷರೆಂದೂ ಸ್ತುತಿಸಿದುದನ್ನಿಲ್ಲಿ ಸ್ಮರಿಸಬಹುದು :

> ''ದೇವಲೋಕದವರಿಗೂ ಬಸವಣ್ಣನೆ ದೇವರು
> ಮರ್ತ್ಯಲೋಕದವರಿಗೂ ಬಸವಣ್ಣನೆ ದೇವರು
> ನಾಗಲೋಕದವರಿಗೂ ಬಸವಣ್ಣನೆ ದೇವರು
> ಮೇರುಗಿರಿ ಮಂದರಗಿರಿ ಮೊದಲಾದವೆಲ್ಲಕ್ಕೂ ಬಸವಣ್ಣನೆ ದೇವರು
> ಚನ್ನಮಲ್ಲಿಕಾರ್ಜುನಯ್ಯಾ
> ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೆ ದೇವರು.[18]

> ''ಕಾಲಿಲ್ಲದವಂಗೆ ಕಾಲು ಕೊಟ್ಟೆ ಬಸವಾ,
> ಕಣ್ಣಿಲ್ಲದವಂಗೆ ಕಣ್ಣುಕೊಟ್ಟೆ ಬಸವಾ,
> ಎನ್ನ ಕಣ್ಣು ಕಾಲಿಂಗೆ ನೀನೆಯಯ್ಯಾ ಬಸವಾ
> ಕಪಿಲ ಸಿದ್ಧಮಲ್ಲಿನಾಥಯ್ಯಾ''[19]

ಇಲ್ಲಿ ಕಾಲು ಮತ್ತು ಕಣ್ಣು ಕ್ರಿಯೆ ಮತ್ತು ಜ್ಞಾನಗಳಿಗೆ ಸಂಕೇತವಾಗಿವೆ. ಕ್ರಿಯೆ ಮತ್ತು ಜ್ಞಾನಗಳ ಸಾಮರಸ್ಯದ ಅರಿವು ನನಗೆ ಬಸವಣ್ಣನವರಿಂದಾಯ್ತು ಎಂದು ಸಿದ್ಧರಾಮನು ನುಡಿದಿರುವನು. ರೂಪಕಮಯವಾದ ಈ ವಚನದಿಂದ ಪ್ರೇರಿತರಾಗಿ ವೀರಶೈವ ಕವಿಗಳು

---

17. ಸಿದ್ಧರಾಮಚಾರಿತ್ರ ಸಂಧಿ : 1, ಪದ್ಯ - 9
18. ಹಿರೇಮಠ ಆರ್. ಸಿ. (ಸಂ) : ಮಹಾದೇವಿಯಕ್ಕ ನವಚನಗಳು, ವಚನ : 208
19. ಹಿರೇಮಠ ಆರ್. ಸಿ (ಸಂ) : ಸಿದ್ಧರಾಮೇಶ್ವರ ವಚನಗಳು

ತಮ್ಮ ಪುರಾಣಗಳಲ್ಲಿ, ಬಸವಣ್ಣನವರು ಕಾಲಿಲ್ಲದವರಿಗೆ ಕಾಲು ಕೊಟ್ಟರು, ಕಣ್ಣಿಲ್ಲದವರಿಗೆ ಕಣ್ಣುಕೊಟ್ಟರು ಎಂದು ಪವಾಡ ಕತೆಗಳನ್ನು ಕಟ್ಟಿ ಬಣ್ಣಿಸಿದ್ದಾರೆ. ಹೀಗೆ ಪುರಾಣಗಳಲ್ಲಿ ಬಸವಾದಿ ಶರಣರನ್ನು ಕುರಿತು ಪವಾಡಗಳು ಚಿತ್ರಣಗೊಳ್ಳಲು ಶರಣರ ವಚನಗಳೇ ಪ್ರೇರಣೆ ನೀಡಿವೆ. ಬಸವಣ್ಣನವರ ಸಮಕಾಲೀನ ಶರಣರೇ ಅವರನ್ನು ಹೀಗೆ ಸ್ತುತಿಸಿರುವಾಗ ಸಾಮಾನ್ಯಜನರಂತೂ ಸರಿಯೇ. ಅವರು ಬಸವಣ್ಣನವರನ್ನು ಶಿವನ ಅವತಾರಿಗಳೆಂದೂ, ಮರ್ತ್ಯರೇ ಅಲ್ಲವೆಂದೂ, ಪವಾಡ ಪುರುಷರೆಂದೂ ನಾನಾ ವಿಧವಾಗಿ ಆರಾಧಿಸತೊಡಗಿದಂತೆ ತೋರುತ್ತದೆ. ರೂಪಕಮಯವಾದ ಅವರ ಸಮಕಾಲೀನ ಶರಣರ ಸ್ತುತಿಪರ ವಚನಗಳನ್ನು ಮತ್ತು ಸಾಮಾನ್ಯಜನತೆಯ ಹೊಗಳಿಕೆಯ ನುಡಿಗಳನ್ನು ಕೇಳಿ ವಿನಯಶಾಲಿಗಳಾದ ಬಸವಣ್ಣನವರಿಗೆ ಕಸಿವಿಸಿಯಾಗಿರಬೇಕು. ಏನಿದು ನನ್ನನ್ನು ಈ ರೀತಿ ಸ್ತುತಿಸುವರಲ್ಲ ಎನ್ನುತ್ತ ಅವರು :

> ''ಎಂಬತ್ತೆಂಟು ಪವಾಡವ ಮೆರೆದು
> ಹಗರಣದ ಚೋಹದಂತಾಯಿತೆನ್ನ ಭಕ್ತಿ ''[20]

ಎಂದು ತಮ್ಮನ್ನೇ ತಾವು ವಿಡಂಬನೆಗೊಳಪಡಿಸಿಕೊಂಡಿದ್ದಾರೆ. ಸ್ವತಃ ಬಸವಣ್ಣನವರೇ ಪವಾಡ ಮೆರೆದೆನೆಂದು ನುಡಿದಿದ್ದಾರೆಂದು ವಿದ್ವಾಂಸರೊಬ್ಬರು 'ಆ ಮಾತನ್ನು ಅವರ ಹಿರಿಯ ಜೀವನದಲ್ಲಿ ಅಲ್ಲಗಳೆಯಲಾಗದು. ಪವಾಡಗಳನ್ನು ಮೆರೆಯದ ಮಹಾಮಹಿಮರೇ ಇಲ್ಲ. ಬಸವಣ್ಣನವರ ಜೀವನದಲ್ಲಿಯೂ ಪವಾಡಗಳು ಅಧಿಕ ಸಂಖ್ಯೆಯಲ್ಲಿ ನಡೆದಿವೆ. [21] ಎಂದು ಅಭಿಪ್ರಾಯಪಡುವರು. ಇವರಂತೆಯೇ ನಮ್ಮ ಜನ ಮುಗ್ಧ ಭಕ್ತಿಯಿಂದ ಅವರು ಮೆರೆದರೆಂದು ವರ್ಣಿಸಿದ ಪವಾಡಗಳನ್ನು ಎಣಿಸಲಿಕ್ಕೆ ಹೋಗುವರೇ ವಿನಾ ಅಣ್ಣನವರ ಇಂಗಿತವೇನಿತ್ತು ಎಂಬುದನ್ನರಿತುಕೊಳ್ಳಲು ಯತ್ನಿಸರು. ಇಲ್ಲಿ ಬಸವಣ್ಣನವರು ತಮ್ಮ ಭಕ್ತಿಯ ಬಳವಿಗೆ ಪವಾಡಗಳು ಆತಂಕಕಾರಿಗಳಾದುವು ಎಂದು ಅವುಗಳನ್ನು ಮಾರ್ಮಿಕವಾಗಿ ಹೀಗಳೆದಿದ್ದಾರೆ. ಇದರರ್ಥ ಅವರು ಪವಾಡಗಳನ್ನು ಪ್ರದರ್ಶಿಸಿದರೆಂದಲ್ಲ. 'ಅನಂತರ ಬಂದ ಭಕ್ತರು ಅವರ ತಲೆಗೆ ನೂರಾರು ಪವಾಡಗಳನ್ನು ಕಟ್ಟಿದರಾದರೂ ಅವರು ಸ್ವತಃ ಪವಾಡ ವಿರೋಧಿಗಳು, ಪುರುಷ ಪ್ರಯತ್ನ ವಾದಿಗಳು.[22] ಅಂದಿನ ಜನತೆಗೆ ಅವರ ಪ್ರತಿಯೊಂದು ಕಾರ್ಯವೂ ಪವಾಡ ಸದೃಶವಾಗಿ ಕಂಡಿರಬೇಕು. ಅವರ ಘನ ವ್ಯಕ್ತಿತ್ವಕ್ಕೆ ಮಾರುಹೋಗಿ ಜನ ಅವರನ್ನು ದೈವೀ ಪುರುಷ, ಪವಾಡ ಪುರುಷ ಎಂದು ಕೊಂಡಾಡಿರಬೇಕು. ಈ ರೀತಿಯ ಸ್ತುತಿಪರವಾದ ಮಾತುಗಳು ಬಾಯಿಂದ ಬಾಯಿಗೆ, ಕಾಲದಿಂದ ಕಾಲಕ್ಕೆ ಹರಿದು ಬಂದಿರಲು ಸಾಕು: ಇಂಥ ಸ್ತುತಿ–ಪರವಾದ ಜನತೆಯ ಮಾತುಗಳನ್ನೇ ಸಂಗ್ರಹಿಸಿ ವೀರಶೈವ

---

20. ಹಿರೇಮಠ. ಆರ್. ಸಿ. (ಸಂ) : ಭಕ್ತಿಭಾಂಡಾರಿ ಬಸವಣ್ಣನವರ ವಚನಗಳು, ವ - 891
21. ಜವಳಿ ಬಿ. ಸಿ. : 'ಧರ್ಮ ಭಂಡಾರಿ ಬಸವಣ್ಣನವರು', ಪ್ರಸ್ತಾವನೆ (ಪುಟ : viii)
22. ತಿಪ್ಪೇರುದ್ರಸ್ವಾಮಿ. ಎಚ್ : ವಚನ ಸಾಹಿತ್ಯ : ವೈಚಾರಿಕ ಅಧ್ಯಯನ, ಪುಟ 33

ಕವಿಗಳು, ಪುರಾಣಕಾರರು ಅವರ ಚರಿತ್ರೆಯನ್ನು ಬರೆದರು. ಶರಣರ ಚರಿತ್ರೆಯಲ್ಲಿ ಪವಾಡಕಥೆಗಳನ್ನು ಹಾಸುಹೊಕ್ಕಾಗಿ ನೆಯ್ದು ಅವರೆಲ್ಲರನ್ನು ಪವಾಡಪುರುಷರನ್ನಾಗಿಸಿದರು. ಸಾಮಾನ್ಯ ಜನ ಅವರ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿ ಪೂಜಿಸತೊಡಗುವಂತೆ ಮಾಡಿದರು. ಈ ರೀತಿ ಪುರಾಣಕಾರರು ಜನ ಸಾಮಾನ್ಯರ ಮನೋಮಂದಿರದಲ್ಲಿ ಶರಣರು ದೇವರಾಗಿ ರಾರಾಜಿಸುವಂತೆ ಮಾಡಿದರು.

ಚೆನ್ನಬಸವಣ್ಣನವರು ಶರಣ ಕಕ್ಕಯ್ಯಗಳ ಪ್ರಸಾದದಿಂದ ಜನಿಸಿದರೆಂದು ಪವಾಡ ಕಥೆಯೊಂದು ವರ್ಣಿಸುತ್ತದೆ. ವಾಸ್ತವಿಕತೆಗೆ ಬಹುದೂರವಾದ, ವಿಚಿತ್ರವೆನ್ನಿಸುವ 'ಇಂತಹ ಕಥೆಗಳು ಪ್ರಾಯಶಃ ಎಲ್ಲ ಮತಧರ್ಮಗಳ ಸಾಹಿತ್ಯದಲ್ಲಿಯೂ ಕಾಣಸಿಗುವವು. ಇವುಗಳ ನಿರೂಪಣೆಯ ಹಿನ್ನೆಲೆಯಲ್ಲಿ ಅಡಕವಾಗಿರುವ ತತ್ವ ತಂತಮ್ಮ ಮತಧರ್ಮಗಳ ಮಹಾಪುರುಷರು ಅಯೋನಿಜರೆಂದು, ಅಲೌಕಿಕ ರೀತಿಯಿಂದ ಜನಿಸಿದರೆಂದು ಸಾಧಿಸುವುದು ಆಗಿದೆ'[23] ಬಸವಣ್ಣನವರು ತಮ್ಮ ವಚನವೊಂದರಲ್ಲಿ:

> ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ
> ------------------------------
> ----------------------------
> ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ''[24]

ಎಂದು ಲೋಕಸತ್ಯವನ್ನು ತೀಕ್ಷ್ಣವಾಗಿ ವ್ಯಕ್ತಪಡಿಸುವುದರ ಜೊತೆಗೆ ವೈಚಾರಿಕತೆಗೆ ಮಾನ್ಯತೆಯಿತ್ತು ಪವಾಡಗಳನ್ನು ಕಡೆಗಣಿಸಿ ನುಡಿದಿದ್ದಾರೆ. ಪ್ರಭುದೇವರು ತಮಿಳುಪುರಾತನ ಶಿವಭಕ್ತರನ್ನು ಕುರಿತಿದ್ದ ಪವಾಡದ ಕಥೆಗಳನ್ನು ಕೇಳಿ ಭಾವುಕ ಭಕ್ತರಿಗೆ, ಮುಗ್ಧ ಜನತೆಗೆ ಹೀಗೆ ಪ್ರಶ್ನಿಸಿದ್ದಾರೆ.

> 'ಅಂಗನೆಯರ ಮೊಲೆ ಲಿಂಗವೆ,
> ಬಳ್ಳಲಿಂಗವೆ, ಕಿತ್ತು ಬಹ ಸಾಣೆ ಲಿಂಗವೆ,
> ಆಡಿನ ಹಿಕ್ಕಿ ಲಿಂಗವೆ,
> ಮೆಚ್ಚುವರೆ ಪ್ರಮಥರು ಮೆಚ್ಚುವರೆ ಪುರಾತನರು'[25]

ಭಾವುಕ ಭಕ್ತರ ಜಡಮೋಹದ ನಿದ್ರೆಯಿಂದೆಚ್ಚತ್ತು ವಾಸ್ತವ ಲೋಕದಲ್ಲಿ ಕಣ್ತೆರೆದು ಬಾಳಬೇಕೆಂಬುದು ಅವರ ಆಶಯವಾಗಿದೆ.

> ''ಬರಡು ಕರೆವಾಗ ಈಯಿತ್ತೆ ?
> ಆ ಕೊರಡು ಚಿಗುರುವಲ್ಲಿ ಹುಟ್ಟಿತ್ತೆ ?

---

23. ಹಿರೇಮಠ. ಆರ್. ಸಿ. ''ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು'' (ಪುಟ 40-41)
24. ಹಿರೇಮಠ ಆರ್. ಸಿ. (ಸಂ) : ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು (ವಚನ 589)
25. ಸುಂಕಾಪುರ ಎಂ. ಎಸ್. (ಸಂ) : ಸಕಲಪುರಾತನರ ವಚನಗಳು, ವ- 1345.

ಆಗ ತೃಣ ನುಡಿವಲ್ಲಿ ಆತ್ಮ ಜೀವಿಸಿತ್ತೆ ?
ಆಗ ಕಾಷ್ಠವೇಷವೆದ್ದು ನಡೆವಲ್ಲಿ ಅರಿವು ಕರೆಗೊಂಡಿತ್ತೆ ?
ಇಂತಿವು ವಿಶ್ವಾಸದ ಹಾಹೆ - - - - - - -
- - - - - - - - - - - - - - - - - - -
ಮಾತುಳಂಗ ಮಧುಕೇಶ್ವರನು "[26]

ಬಸವಣ್ಣನವರನ್ನು ಕುರಿತು ಅನಂತರ ಹುಟ್ಟಿಕೊಂಡ ಪವಾಡ ಕಥೆಗಳಿಗೆ ಭಕ್ತ ಜನತೆಯ ಶ್ರದ್ಧೆ, ವಿಶ್ವಾಸಗಳೇ ಕಾರಣವೆಂದು ದಾಸೋಹದ ಸಂಕಣ್ಣಗಳು ತಮ್ಮ ಮೇಲಿನ ವಚನದಲ್ಲಿ ಮೊದಲೇ ನುಡಿದಿರುವಂತಿದೆ. (ಈ ವಚನವನ್ನು ಅನಂತರ ಬೇರೆಯವರು ಬರೆದು ಅವರ ಹೆಸರಿಗೆ ಸೇರಿಸಿರುವ ಸಾಧ್ಯತೆಯೂ ಇದೆ.)

ಹೀಗೆ ವಾಸ್ತವತೆಗೆ ಪ್ರಾಧಾನ್ಯವಿತ್ತ, ಸ್ವತಂತ್ರ ವಿಚಾರಶೀಲರಾದ ಶರಣರು, ವೀರಶೈವ ಕವಿಗಳು, ಪುರಾಣಕಾರರು ವರ್ಣಿಸಿರುವಂತೆ, ಪವಾಡಗಳಂತಹ ಅತಿಮಾನುಷ ಕಾರ್ಯಗಳನ್ನೆಸಗಿದರೆನ್ನುವುದು ಹುರುಳಿಲ್ಲದುದು. ಪವಾಡ ವಿರೋಧಿಗಳಾದ, ಮನುಷ್ಯ ಶಕ್ತಿಯಲ್ಲಿ ದೃಢವಾದ ನಂಬುಗೆಯಿಟ್ಟ ಶರಣರು ಹಠಯೋಗಿಗಳನ್ನು, ಹಠಯೋಗ ಸಾಧನೆಯಿಂದ ಸಿದ್ಧಿಸುತ್ತವೆಯೆಂದು ಜನ ನಂಬಿದ ಕ್ಷುದ್ರಶಕ್ತಿಗಳನ್ನು ಮತ್ತು ಪವಾಡಗಳಂತಹ ಅತಿಮಾನುಷ ಕಾರ್ಯಗಳನ್ನು ತುಚ್ಛೀ ಕರಿಸಿ, ನೈಜವಾದ ಜ್ಞಾನ - ಕ್ರಿಯೆಗಳಿಗೆ, ವೈಚಾರಿಕತೆಗೆ ಮಹತ್ವ ಕೊಟ್ಟಿದ್ದರೆಂಬುದು ಮೇಲಿನ ವಿವೇಚನೆಯಿಂದ ವಿದಿತವಾಗುವುದು.

ಬಸವಾದಿ ಶರಣರು ಪವಾಡ ಶಕ್ತಿಯೇ ಇರಲು ಸಾಧ್ಯವಿಲ್ಲವೆಂದು ನಂಬಿರಲಿಕ್ಕಿಲ್ಲ. ಇಷ್ಟೊಂದು ಸುದೀರ್ಘ ಅವಧಿಯ ನಂತರ ಇದರ ಬಗೆಗೆ ನಮಗಿಂದು ಆಧಾರಗಳೂ ದೊರಕುತ್ತಿಲ್ಲ. ಪವಾಡ ಸಾಮರ್ಥ್ಯ ಇರಲು ಸಾಧ್ಯವಿದ್ದರೂ ಅದು ಮಹತ್ವದ್ದಲ್ಲವೆಂದು ಮಾತ್ರ ಅವರ ಖಚಿತವಾದ ಅಭಿಪ್ರಾಯವಾಗಿತ್ತೆನ್ನಬಹುದು.

●

---

26. ಸುಂಕಾಪುರ ಎಂ. ಎಸ್. (ಸಂ) : ಸಕಲ ಪುರಾತನರ ವಚನಗಳು, ವ - 1145

ಶಿವಯೋಗಿಗಳು

ಡಾ. ಬಿ. ಎಸ್. ಸ್ವಾಮಿ

ಭರತ ಖಂಡ ಧರ್ಮ ಭೂಮಿ, ವಿವಿಧ ಧರ್ಮಗಳ ಆಗರ. ಈ ಪುಣ್ಯ ಭೂಮಿಯಲ್ಲಿ ಅನೇಕ ಆಚಾರ್ಯರು, ವಿಭೂತಿ ಪುರುಷರು, ಶಿವಶರಣರು, ಸಾಧು ಸಂತರು, ಶಿವಯೋಗಿಗಳು ಅವತರಿಸಿ ವೇದ, ಆಗಮ, ಉಪನಿಷತ್ತು, ಸ್ಮೃತಿ, ಧರ್ಮ ಶಾಸ್ತ್ರ, ಪುರಾಣ, ಮುಂತಾದವುಗಳನ್ನು ಶ್ರೀಸಾಮಾನ್ಯರಿಗೆ ಬೋಧಿಸಿ ಅವರು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದರು. ಅಲ್ಲದೆ ತಾವು ಕೂಡ ಮೋಕ್ಷವನ್ನು ಪಡೆದರು.

ಯೋಗ ಮಾನವನ ಆತ್ಮೋದ್ಧಾರಕ್ಕೆ ಸಾಧನ. ಯೋಗ ಸಾಧನೆಯಿಂದ ಮರಣವನ್ನು ಜಯಿಸಬಹುದು. ಅನಾರೋಗ್ಯ, ಮುಪ್ಪು ಅಕಾಲ ಮರಣಗಳಿಂದ ಪಾರಾಗಿ ಮೃತ್ಯುಂಜಯನಾಗಬಹುದು. ಯೋಗ ಒಂದು ನಿರ್ದಿಷ್ಟವಾದ ಶಾಸ್ತ್ರ. ದೇಹ, ಮನಸ್ಸು, ಆತ್ಮಗಳ ನಿರ್ದಿಷ್ಟವಾದ ಶಾಸ್ತ್ರ. ದೇಹ, ಮನಸ್ಸು, ಆತ್ಮಗಳ ನಿರ್ದಿಷ್ಟ ಗುರಿಯೇ ಇದರ ಉದ್ದೇಶ. ಬಾಹ್ಯ ಪ್ರಪಂಚದಿಂದ ವಿಮುಖಿಗೊಳಿಸಿ ಇಂದ್ರಿಯಗಳನ್ನು ಆಂತರ್ಯದಲ್ಲಿ ಏಕಾಗ್ರತೆಗೊಳಿಸುವುದು. ಯೋಗದ ಹಾದಿ ಅಂತರ್ಮುಖಿಯಾದರೂ ಈ ಹಾದಿಯ ಹೆಚ್ಚಾಗಲು ಮಾನವನ ಹೃದಯ, ಮನಸ್ಸು ಇಂದ್ರಿಯ, ಭೌತಿಕ ಶರೀರವನ್ನೂ ಹತೋಟಿಯಲ್ಲಿಟ್ಟುಕೊಳ್ಳುವುದೇ ಯೋಗ. ದೇಹದೊಳಗಿನ ಸೂಕ್ಷ್ಮ ಶಕ್ತಿಗಳನ್ನು ಹದ್ದುಬಸ್ತಿನಲ್ಲಿಡುವುದೇ ಯೋಗ. ಯೋಗದಿಂದ ಶಾಂತಿ, ಶಾಶ್ವತ ಸಂಖ ದೊರೆಯುವುದು. ಪರಿಪೂರ್ಣತೆಯನ್ನು ಪಡೆಯ ಬಹುದು. ಯೋಗ ಮಾನವನ ನಿತ್ಯ ಜೀವನ, ವ್ಯಾಪಾರ, ವ್ಯವಹಾರಗಳಲ್ಲಿ ಸಹಾಯವಾಗುವುದಲ್ಲದೆ, ನೆಮ್ಮದಿ, ಶಕ್ತಿ, ಸಾಮರ್ಥ್ಯ, ದೀರ್ಘಾಯಸ್ಸು, ಉತ್ತಮ ಆರೋಗ್ಯ ನೀಡುವುದು. ಯೋಗಾಭ್ಯಾಸವು ಪಾಶವೀಸ್ವಭಾವದಿಂದ ದೈವೀ ಸ್ವಭಾವಕ್ಕೆ ಮಾರ್ಪಡಿಸಿ ಮಾನವನನ್ನು ದೈವ ಮಹಿಮೆಯ ಪರ್ವತದ ಶಿಖರಕ್ಕೇರಿಸುವುದೆಂದು ಶ್ರೀ ಸ್ವಾಮಿ ಶಿವಾನಂದರು ಹೇಳಿದ್ದಾರೆ.

ಯೋಗವು ಭಕ್ತಿ, ಜ್ಞಾನ, ಕರ್ಮ, ರಾಜ, ಕುಂಡಲಿ, ಹಠ, ಎಂದು ಆರು ವಿಧಗಳಾಗಿವೆ. ಇವೆಲ್ಲಕ್ಕೂ ಶ್ರೇಷ್ಠವಾದುದು ಶಿವಯೋಗ. ಯೋಗ ಮಾನವನ ಮುಕ್ತಿಗೆ ಅವಶ್ಯವಾದುದು.

ಚಿತ್ತವೃತ್ತಿಯನ್ನು ನಿರೋಧ ಮಾಡುವುದೇ ಯೋಗ ಎಂದು ಹೇಳುವರು. ಭಕ್ತನು ಭಗವಂತನೊಡನೆ ಬೆರೆಯುವುದೇ ಯೋಗ. ಜೀವ ಶಿವರ ಐಕ್ಯವೇ ಯೋಗ. ಅಂಗ-ಲಿಂಗ ಸಾಮರಸ್ಯವೇ ಯೋಗ. ಯೋಗವು ಮಂತ್ರಯೋಗ, ಲಯ ಯೋಗ, ಹಠಯೋಗ ರಾಜಯೋಗ, ಶಿವಯೋಗಗಳೆಂದು ಐದು ಪ್ರಕಾರಗಳಿವೆ.

ಮಂತ್ರದ ಕ್ರಮವನ್ನು ವಿಧಿವತ್ತಾಗಿ ಅನುಸರಿಸಿ ಮುಕ್ತಿಗೋಸ್ಕರ ಜಪಿಸುವುದೇ ಮಂತ್ರಯೋಗ. ಯಾವನ ಚಿತ್ತವು ತನ್ನ ಧ್ಯಾನಕ್ಕೆ ಯೋಗ್ಯವಾದ ಮೂರ್ತಿಯಲ್ಲಾಗಲೀ ಪ್ರಾಣಾಯಾಮದಿಂದ ಅಭಿವ್ಯಕ್ತವಾದ ನಾದದಲ್ಲಿಯಾಗಲೀ, ಮನೋ ಮಾರುತಗಳೊಡನೆ ಕೂಡಿ ಲಯವಾಗುವುದೋ ಅದೇ ಲಯ ಯೋಗ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗಗಳಿಂದಾಗಲೀ ಮಹಾಯುಧ, ಮಹಾಬಂಧ, ಮಹಾವೇಧ, ಖೇಚರೀ, ಉಡ್ಡಿಯಾನ, ಮೂಲ ಬಂಧ, ಜಾಲಂಧರಗಳೆಂಬ ದಶವಿಧ ಬಂಧಗಳಿಂದಾಗಲೀ, ಧೌತಿ, ಬಸ್ತಿ ನೇತಿ, ತ್ರೋಟಕ, ಸಾಲ, ಬಂಧ, ವಿಪತರಣಿ, ವಜ್ರೋಳೀ, ಶಕ್ತಿಚಾಲನ ಕಪಾಲ ಭೌತಿಗಳೆಂಬ ಷಟ್ಕರ್ಮಗಳಿಂದಾಗಲೀ, ಅಥವಾ ರೇಚಕ, ಪೂರಕ, ಪ್ರಾಣಾಯಾಮಗಳಲ್ಲದೆ ಕೇವಲ ಕುಂಭಕ ಪ್ರಾಣಾಯಾಮದಿಂದಾಗಲೀ ವಾಯುವನ್ನು ವಶಪಡಿಸಿಕೊಳ್ಳುವುದು ಹಠಯೋಗ ಎನಿಸಿಕೊಳ್ಳುವುದು. ಬಾಹ್ಯ ಲಕ್ಷ್ಯ, ಮಧ್ಯಲಕ್ಷ್ಯ, ಅಂತರ್ಲಕ್ಷ್ಯ ಅಥವಾ ಅಂತರ್ಮುದ್ರಾಜ್ಞಾನದಿಂದ ಪರಬ್ರಹ್ಮನನ್ನೂ ಸಾಕ್ಷಾತ್ಕರಿಸಿಕೊಳ್ಳುವುದೇ ರಾಜಯೋಗ. ನಾಲ್ಕು ಯೋಗಗಳಲ್ಲಿ ಇದು ಶ್ರೇಷ್ಠವಾದುದು. ಮೋಕ್ಷಾರ್ಥಿಗಳು ಶಿವಯೋಗವನ್ನೇ ಅನುಸರಿಸಬೇಕು.

ಶಿವಾಗಮಗಳಲ್ಲಿ ಶಿವಭಕ್ತಿಗೆ ಸಾಧನವಾದ ಮಹಾ ಕುಂಡಲಿನೀ ಜನಿತ ತಾರಕತ್ರಯ, ಸಾಕ್ಷಾತ್ಕಾರ ದ್ವಾರಾ ಶಕ್ತಿಯಲ್ಲಿ ವೃತ್ತಿ ಜ್ಞಾನವನ್ನು ಲಯಗೊಳಿಸಲು ಸರ್ವತೋಮುಖವಾಗಿ ವ್ಯಾಪ್ತವಾಗುವ ಶಿವತ್ವಾಭಿವ್ಯಕ್ತಿಯೇ ಶಿವಯೋಗ ಎಂದು ಕರೆಯಲ್ಪಡುವುದು. ರೆಪ್ಪೆ ಹೊಡೆಯದೆ ತದೇಕ ಚಿತ್ತದಿಂದ ಧ್ಯಾನಿಸುವುದೇ ಶಿವಯೋಗ. ಹಠ, ಲಯ, ರಾಜ, ಮಂತ್ರಯೋಗಿಗಳಿಗೆ ಭಿನ್ನವಾದವ ಶಿವಶರಣ. ಶಿರಸ್ಸು, ಹೃದಯ ಇವೆರಡೂ ಸಮನ್ವಯವಾಗಿ ಆಚರಣೆಯಲ್ಲಿರುವುದರಿಂದ ಇದಕ್ಕೆ ಶಿವಯೋಗ, ಸಮನ್ವಯಯೋಗ ಎನ್ನುವರು.

ಶೈವ ಸಂಪ್ರದಾಯದಂತೆ ವೀರಶೈವರಲ್ಲಿ ಶಿವದೀಕ್ಷೆಯಿಂದ ಇಷ್ಟಲಿಂಗ ಪೂಜೆ ಪ್ರಾರಂಭವಾಗುತ್ತದೆ. ಈ ಇಷ್ಟಲಿಂಗವನ್ನು ಶರೀರದ ಮೇಲೆ ಧರಿಸುವುದೇ ಬಾಹ್ಯ ಚಿಹ್ನೆ. ಶಿವದೀಕ್ಷೆಯಾದ ಮೇಲೆ ಲಿಂಗಪೂಜೆಗೂ, ಬ್ರಹ್ಮವಿಚಾರಕ್ಕೂ ಅರ್ಹನಾಗುವನು. ಲಿಂಗವೆಂದರೆ ಪರಬ್ರಹ್ಮನಾದ ಶಿವನೇ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ ಮಾರ್ಗಗಳ ಅನುಷ್ಠಾನದಿಂದ ಶಿವತತ್ತ್ವ ಹೊಂದಬೇಕೆಂಬುದೇ ಈ ಧರ್ಮದ ಗುರಿ. ಭಕ್ತಿಗೆ ಪ್ರಾಮುಖ್ಯತೆ ಹೆಚ್ಚು. ಶಿವನ ಸ್ವಪ್ರಕಾಶ ರೂಪವಾದ ಶಕ್ತಿಯೇ ಅಂಗರತವಾದ ಭಕ್ತಿ ಎನಿಸಿಕೊಳ್ಳುವುದು. ಈ ಭಕ್ತಿಯೂ ಶ್ರದ್ಧೆ, ನಿಷ್ಠ, ಅವಧಾನ, ಅನುಭವ, ಆನಂದ, ಸಮರಸ ಎಂದು ಆರು ವಿಧಗಳಾಗಿವೆ.

ಶಿವಾನುಭವ ಸೂತ್ರ ಎಂದರೆ ತಾನೇ ಶಿವನೆಂದು ತಿಳಿದು ಪೂಜಿಸುವ ವಿಧಾನ. ಈ ಭಕ್ತಿ ಮಾರ್ಗ ಅನುಸರಿಸುತ್ತಾ ಹೋದರೆ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ, ಎಂಬ ಆರು ಆಧ್ಯಾತ್ಮಿಕ ಸ್ಥಾನಗಳನ್ನು ಹೊಂದುತ್ತಾನೆ. ಭಕ್ತಿ ಯೋಗದಲ್ಲಿ ಜ್ಞಾನ, ಕ್ರಿಯೆ, ಎರಡೂ ಪ್ರಧಾನವಾಗಿವೆ. ಭಕ್ತ ಮಾಡುವ ಜ್ಞಾನ ಕ್ರಿಯಾತ್ಮಕವಾದ ಕರ್ಮಗಳೆಲ್ಲವನ್ನೂ ಲಿಂಗದಿಂದ ಮಾಡುವುದೇ ವೀರಶೈವ ಮತ ಸಾಧನೆಗಳಲ್ಲಿ ಅಡಗಿರುವ ತತ್ತ್ವ.

ಜೀವಾತ್ಮನು ಲಿಂಗ ಸ್ವರೂಪವನ್ನು ಪಡೆದುದಕ್ಕಾಗಿ ಯೋಗಾಂಗಿಯಾಗಿ ತನ್ನ ಭೋಗವನ್ನೆಲ್ಲಾ ಶಿವನಿಗರ್ಪಿಸಿ ಶಿವಪ್ರಸಾದ ರೂಪದಿಂದ ಸ್ವೀಕರಿಸುವವನು. ತ್ಯಾಗಾಂಗಿಯಾಗಿ ಶಿವದೀಕ್ಷೆ, ಶಿವಪೂಜೆ, ಶಿವಧ್ಯಾನದ ಮೂಲಕ ಸಂಸಾರ ಭ್ರಾಂತಿಯನ್ನು ತ್ಯಾಗ ಮಾಡುವನು. ಈ ಹಂತಗಳನ್ನು ಹತ್ತಿ ಶಿವನೇ ಆಗುವನು. ಷಟ್ಸ್ಥಲ ಆಚರಣೆ ಮಾಡುವವರೆಗ ಷಟ್ಸ್ಥಲ ಬ್ರಹ್ಮಿಗಳು ಎಂದು ಹೇಳುವರು. ಗುರುವು ವೇಧಾ ದೀಕ್ಷೆಯಿಂದ ತನ್ನ ಹಸ್ತವನ್ನು ಶಿಷ್ಯನ ಮಸ್ತಕದ ಮೇಲೆ ಸಂಯೋಗಮಾಡಿ ಶಿಷ್ಯನ ಕಾರಣ ತನುವಿನ ಪೂರ್ವಾಶ್ರಯವನ್ನು ಕಳೆದು ಭಾವಲಿಂಗ ಸಂಬಂಧ ಮಾಡುವನು. ಮಂತ್ರ ದೀಕ್ಷೆಯಿಂದ ಗುರುವು ಶಿಷ್ಯನ ಬಲಕಿವಿಯಲ್ಲಿ ಪ್ರಣವ ಪಂಚಾಕ್ಷರಿ ಮಂತ್ರವನ್ನು ಉಪದೇಶಿಸಿ ಅವನ ಸೂಕ್ಷ್ಮ ತನುವಿನ ಪೂರ್ವಾಶ್ರಮವನ್ನು ಕಳೆದು ಪ್ರಾಣಲಿಂಗ ಸಂಬಂಧ ಮಾಡುವನು. ಕ್ರಿಯಾದೀಕ್ಷೆಯಿಂದ ಗುರು ತನ್ನ ಶಿಷ್ಯನ ಕರಸ್ಥಲದಲ್ಲಿ ಈ ಮಂತ್ರ ಸ್ವರೂಪದ ಮಾಡಿ ಅವನ ಸ್ಥೂಲ ತನುವಿನ ಪೂರ್ವಾಶ್ರಮ ಕಳೆದು ಇಷ್ಟಲಿಂಗ ಸಂಬಂಧ ಮಾಡುವನು. ಶಿಷ್ಯನ ತನು ತ್ರಯದಲ್ಲಿರುವ ಮಲತ್ರಯಗಳನ್ನು ಪರಿಹರಿಸಿಕೊಂಡು ಲಿಂಗ ತ್ರಯವಿಡಿದು ಶಿವನೊಡನೆ ಬೆರೆಯುವುದೇ ಶಿವಯೋಗ.

ಶಿವಯೋಗವು ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವ ವ್ರತ, ಶಿವ ಪೂಜಾ ಎಂದು ಐದು ಬಗೆಗಳಾಗಿವೆ. ಶಿವಪೂಜೆಯು ಶಿವಜ್ಞಾನಾದಿಗಳನ್ನು ಅಳವಡಿಸಿಕೊಂಡಿರುವುದರಿಂದ ಶಿವಪೂಜೆಯೇ ಮುಖ್ಯವಾಗಿ ಶಿವಯೋಗವೆನಿಸುವುದು. ಜೀವಾತ್ಮ ಪರಮಾತ್ಮನಲ್ಲಿ ಬೆರೆಯಬೇಕಾದರೆ ಶಿವೋಪಾನಸನೆಯೇ ಮುಖ್ಯವಾದುದು. ಜನನ ಮರಣಗಳಿಂದ ಪಾರಾಗಲು ಶಿವಪೂಜೆ ವೀರಶೈವರಿಗೆ ಮುಖ್ಯ. ಇದರಲ್ಲಿ ಒಳ, ಹೊರ ಪೂಜೆಗಳು ಉಂಟು. ಇದರಲ್ಲಿ ಅಂತಃಪೂಜೆ ಮುಖ್ಯ. ಬಾಹ್ಯ ಇಷ್ಟ ಲಿಂಗ ಪೂಜೆ ಇಲ್ಲದೆ ಅಂತರ್ಲಿಂಗ ಸಿದ್ಧಿಸುವುದಿಲ್ಲ.

ಅಂತರ್ಲಿಂಗ ಪೂಜೆಗೆ ಇಷ್ಟಲಿಂಗ ಪೂಜೆಯೇ ಮೂಲ ಸಾಧನವಾಗಿರುವುದು. ಮಾನವ ಶಿವನಾಗಲು ಶಿವಯೋಗವನ್ನು ತಪ್ಪದೆ ಆಚರಿಸಬೇಕು. ಶಿವಯೋಗವು ಜೀವಾತ್ಮನನ್ನು ಪರಮಾತ್ಮನನ್ನಾಗಿ ಮಾಡುವ ಮುಖ್ಯ ಸಾಧನವಾಗಿದ್ದೂ, ಅನೇಕ ಶಿವಯೋಗಿಗಳು ಶಿವಯೋಗದಿಂದ ಶಿವಸಾಯುಜ್ಯ ಪಡೆದಿದ್ದಾರೆ.

ಶಿವಯೋಗಿಗಳು ತಪೋನಿಧಿಗಳು, ಪವಾಡ ಪುರುಷರು, ನಿಗ್ರಹ ಅನುಗ್ರಹ

ಶಕ್ತಿಮುಳ್ಳವರು. ತಪಸ್ಸು ಮಾಡಿ ಆಧ್ಯಾತ್ಮ ಸಂಪತ್ತುಗಳಿಸಿ ಲೋಕೋಪಕಾರಿಯಾಗುವರು. ಮಹಾಪುರುಷರಾಗುವರು. ಮಾನವ ತನ್ನ ಜೀವನ ಸಾರ್ಥಕಪಡಿಸಿಕೊಳ್ಳಲು ಧರ್ಮ ಪೀಠದ ಸಂಪರ್ಕ ಬೆಳೆಸಬೇಕು. ಮಠ ಮಾನ್ಯಗಳು ಧರ್ಮ, ಸಂಸ್ಕೃತಿಯ ಉಗಮಸ್ಥಾನಗಳು ಇಂತಹ ಪೀಠಗಳಲ್ಲಿ ಅನೇಕ ತಪೋನಿಧಿಗಳು ಜಗತ್ತಿನ ಕಲ್ಯಾಣಕ್ಕೆ ಅವತರಿಸಿದಾಗ ಇವರು ಬೋಧಿಸಿದ ತತ್ತ್ವಗಳು ಸದಾಕಾಲ ನೆಲೆಸುವುವು. ಪುಣ್ಯಶಾಲಿಗಳು, ವಿವೇಕವುಳ್ಳವರು ಇವನ್ನು ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವರು. ಶಿವಯೋಗಿಗಳು ತಮ್ಮ ಶಿವಯೋಗದ ಪೂರ್ಣ ಫಲವನ್ನು ಮಾನವನ ಕಲ್ಯಾಣಕ್ಕೆ ಧಾರೆ ಎರೆಯುತ್ತಾರೆ. ಶಿವಯೋಗಿಗಳು ದೇವರ ಬಂಧುಗಳು, ಭಕ್ತರ ಉದ್ಧಾರಕರು, ಭಕ್ತರಲ್ಲಿ ದೈವ ಕಾಣುವವರು, ಎಲ್ಲಾ ಜಾತಿ ಮತಗಳಲ್ಲೂ ಪ್ರೀತಿ ಪ್ರೇಮ ವಿಶ್ವಾಸವಿಟ್ಟವರು.

ಶಿವಯೋಗಿಗಳು ನಡೆದ ಭೂಮಿ ಪವಿತ್ರ, ಪಾವನ ಅವರ ಕೃಪಾ ದೃಷ್ಟಿಯಿಂದ ಪಾಪ ನಿವಾರಣೆ, ಪುನರ್ಜನ್ಮ ನಿವಾರಣೆ, ಅವರ ದರ್ಶನದಿಂದ ಭಕ್ತ ಕೃತಾರ್ಥ, ಅವರ ಕರಕಮಲ ಸ್ಪರ್ಶದಿಂದ ಕುಲಕೋಟಿಗಳ ಉದ್ಧಾರ, ಶಿವಯೋಗ ಕಾಯಕದಲ್ಲಿ ನಿರತರಾಗಿರುವವರು ದರ್ಶನ, ಭಕ್ತರ ಪಾಲಿಗೆ ಸುಯೋಗ, ಭಾಗ್ಯ !

ಶಿವಯೋಗಿಗಳು ಬರೀ ಯೋಗ ಮಾಡಿ ತಪಮಾಡಿ ತಮ್ಮನ್ನು ತಾವು ಉದ್ಧಾರ ಮಾಡಿಕೊಳ್ಳುವುದಷ್ಟೇ ಅಲ್ಲ, ಸಮಾಜದ ಉದ್ಧಾರ, ದೇಶದ ಕಲ್ಯಾಣ ಮಾಡುವುದೂ ಅವರ ಕೆಲಸವಾಯಿತು. ಅನ್ನದಾನ, ಜ್ಞಾನ ಸೋಹಗಳೂ. ಇವರ ಕೆಲಸವಾಯಿತು. ದೀನ ದಲಿತರ ಸೇವೆ ಮಾಡುವುದು, ಬಡ ಬಗ್ಗರಬಗ್ಗೆ ಅನುಕಂಪ ತೋರುವುದು, ಅನ್ಯಾಯವಾಗುತ್ತಿರುವವರಿಗೆ ನ್ಯಾಯ ಒದಗಿಸುವುದು ಇವೆಲ್ಲಾ ಮತ್ತಷ್ಟು ಕೆಲಸಗಳಾದುವು. ಅದಕ್ಕಾಗಿ ಮಠಮಾನ್ಯಗಳು ನಿರ್ಮಾಣವಾದುವು. ಆಚಾರ್ಯರು ಅವುಗಳ ಅಧಿಕಾರಿಗಳಾದರು. ಯಾವ ಗುರುವು ಶಿಷ್ಯರಿಗೆ ವೀರಶೈವ ಶಾಸ್ತ್ರೋಕ್ತ ರಹಸ್ಯಾರ್ಥಗಳನ್ನು ಬೋಧಿಸುತ್ತಾನೋ ಶಿಷ್ಯರನ್ನು ಆಚಾರದಲ್ಲಿ ನಡೆವಂತೆ ಮಾಡುತ್ತಾನೋ, ತಾನೂ ವೀರಶೈವಾಚಾರವನ್ನು ಆಚರಿಸುತ್ತಾನೋ, ಅವನೇ ಆಚಾರ್ಯ. ಈ ಆಚಾರ್ಯ ಅಥವಾ ಮಠಾಧಿಕಾರಿಯ ಜವಾಬ್ದಾರಿ ಹೆಚ್ಚಾಗಿದೆ. ಮಠಾಧಿಕಾರಿ ಶಿವಯೋಗಿಯಾಗುತ್ತಾನೆ. ಶಿವ ಯೋಗವನ್ನು ಶಿಷ್ಯರಿಗೆ ಉಪದೇಶಿಸುತ್ತಾನೆ. ಜನರನ್ನು ಧಾರ್ಮಿಕ ಕಾರ್ಯದಲ್ಲಿ ತೊಡಗಿಸು ವುದು ಧರ್ಮವನ್ನು ಉಪದೇಶಿಸಿ ಕೆಟ್ಟ ಮಾರ್ಗದಲ್ಲಿ ಹೋಗುವವರನ್ನು ಒಳ್ಳೆಯ ದಾರಿಯಲ್ಲಿ ನಡೆಯುವಂತೆ ಮಾಡುವುದು ಇವರ ಕರ್ತವ್ಯವಾಯಿತು. ಜನರನ್ನು ಒಲಿಸಲು ಅನೇಕ ಶಿವಯೋಗಿಗಳು ತಪಸ್ಸನ್ನು ಮಾಡಿ, ಪವಾಡವೆಸಗಿ, ಜನರ ಮನ ಒಲಿಸಿದ ಉದಾಹರಣೆಗಳೂ ಉಂಟು. ಪವಾಡವೆಸಗದಿದ್ದರೂ ಪವಾಡಗಳು ಘಟಿಸಿ ಅದರಿಂದ ಜನರು ಪರಿವರ್ತನೆ ಹೊಂದಿ ಒಳ್ಳೆಯ ದಾರಿ ಹಿಡಿದ ಉದಾಹರಣೆಗಳನ್ನು ಸಹ ನಾವು ಕಂಡಿದ್ದೇವೆ. ಶಿವಯೋಗಿಗಳು ಬರೀ ಸ್ವಾರ್ಥಿಗಳಲ್ಲ, ತಮ್ಮ ಮೋಕ್ಷಕ್ಕೆ ಕಣ್ಮುಚ್ಚಿ ತಪಸ್ಸನ್ನು ಮಾಡುವವರಲ್ಲ, ಶಿವಯೋಗವನ್ನು ಕಾಯಕದಲ್ಲಿ ಕಾಣಬೇಕು ಎಂಬ ಗುರಿ ಹೊಂದಿದವರು.

ಗುರುಗಳಲ್ಲಿ ಜಗದ್ಗುರುಗಳು ಮತ್ತು ವಿರಕ್ತರು ಎಂದು ಎರಡು ವಿಧಗಳಾದವು. ವಿರಕ್ತರುಗಳನ್ನು ನಿರಾಭಾರಿಗಳು, ಶ್ರೀಮನ್ ನಿರಂಜನ ಪ್ರಣವ ಸ್ವರೂಪಿಗಳು, ಗುರುಗಳು, ಆಚಾರ್ಯರು, ಸ್ವಾಮಿಗಳು, ಬುದ್ಧಿಯವರು, ಅಜ್ಜ ಅವರು ಪಟ್ಟದ್ದೇವರು, ಶಿವಾಚಾರ್ಯರರು, ಶಿವ ಯೋಗಿಗಳು ಯತಿಗಳು ಎಂದು ನಾನಾ ವಿಧವಾಗಿ ಕರೆಯಲಾಯಿತು. ಶರಣರೂ ಶಿವಯೋಗ ಆಚರಿಸುವುದುಂಟು. ಶಿವಯೋಗಿಗಳು ಇದುವರೆಗೆ ಎಷ್ಟು ಜನರು ಆಗಿಹೋಗಿದ್ದಾರೋ ಯಾರಿಗೆ ಗೊತ್ತು ? ಆಧುನಿಕ ಶರಣರ ಸಾಲಿನಲ್ಲಿ ಬರುವ ಶಿವಯೋಗಿಗಳ ಸಂಖ್ಯೆ ಅಪಾರ. ಅವುಗಳಲ್ಲಿ ನಾವು ಸಂಗ್ರಹಿಸಿರುವುದು ಸಮುದ್ರದಲ್ಲಿ ಒಂದು ಹನಿ ಎಂದರೂ ತಪ್ಪಲ್ಲ. ಕೆಲವು ಮುಖ್ಯವಾದವರನ್ನು ಗಮನದಲ್ಲಿಟ್ಟುಕೊಂಡು ಅವರ ಸೂಕ್ಷ್ಮ ಪರಿಚಯವನ್ನು ಮಾಡಲಾಗಿದೆ. ನಾನು ರಚಿಸಿರುವ ಸಮಗ್ರ ಶರಣರ ಕೃತಿಗಳಲ್ಲಿ ಬಸವಪೂರ್ವ, ಬಸವಯುಗ, ಬಸವೋತ್ತರ ಹಾಗೂ ಆಧುನಿಕ ಶರಣರಲ್ಲಿ, ಅನೇಕ ಶಿವಯೋಗಿಗಳು ಬರುತ್ತಾರೆ. ಈ ಶರಣರ ಎನ್ನುವುದಕ್ಕಿಂತ ಶಿವಯೋಗಿಗಳ ಕಾಯಕ, ಸಾಧನೆ, ಪೂಜೆ, ಭಕ್ತಿ, ಸಮಾಜ ಸೇವೆ, ಕಾವ್ಯ ರಚನೆ, ವಚನ ಸೃಷ್ಟಿ, ಗುರು-ಲಿಂಗ-ಜಂಗಮ ಪ್ರೇಮ, ಪವಾಡಗಳೂ ಕೆಲವೆಡೆ ಸೇರಿವೆ. ಕೆಲವು ಚಾರಿತ್ರಿಕ ಅಂಶಗಳನ್ನೊಳಗೊಂಡಿವೆ. ಶಿವಯೋಗಿಗಳು ಆಸೆ ಆಕಾಂಕ್ಷೆಗಳನ್ನು ತೊರೆದವರು, ಅಧ್ಯಾತ್ಮ ಪ್ರಿಯರು, ಭಾವೈಕ್ಯ ಬೆಸೆವರು. ಅನುಷ್ಠಾನ ಪ್ರಿಯರು, ತಪೋಸಿದ್ಧರು, ನಡೆ ನುಡಿಯಲೊಂದಾದವರೇ ಸಂಪೂರ್ಣ ಶಿವಯೋಗಿಗಳು. ಈ ಶಿವಯೋಗಿಗಳು ಯಾವ ಯಾವ ಯುಗದಲ್ಲಿ ಎಷ್ಟಿದ್ದರು ? ಅವರು ಏನೇನು ಸಾಧಿಸಿದರು ಎಂಬುದರ ಬಗೆಗೆ ಇದೀಗ ಪ್ರಕಟವಾಗುತ್ತಿರುವ ಸಮಗ್ರ ಶರಣರ ಕೃತಿಯಲ್ಲಿ ಅವಲೋಕಿಸಬಹುದು.

ಒಂದೊಂದು ಯುಗದಲ್ಲೂ ಹಲವಾರು ಜನ ಶಿವಯೋಗಿಗಳು ಆಗಿ ಹೋಗಿದ್ದಾರೆ. ಒಬ್ಬೊಬ್ಬರ ಜೀವನವೂ ಆದರ್ಶಮಯ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದ್ದು. ಎಲ್ಲ ಜೀವನವನ್ನೂ ತಿಳಿಯಲಾಗದಿದ್ದರೂ ಅಲ್ಲೊಂದು ಇಲ್ಲೊಂದು ಮಿಂಚಿದ ಕೆಲವು ಪ್ರಮುಖ ಶಿವಯೋಗಿಗಳ ಅವಲೋಕನ ಇಲ್ಲಿದೆ.

ಶಿವಯೋಗಿಗಳು ಗಂಡೇ ಆಗಿರಬೇಕೇ ? ಸಾಮಾನ್ಯವಾಗಿ ನಾವು ನೋಡುತ್ತಿರುವುದು. ಹೆಚ್ಚಿಗೆ ಪುರುಷರನ್ನೇ. ಇವರನ್ನು ಶಿವಾಚಾರ್ಯರು ಎಂದರೆ, ಶಿವಾಚಾರಣೆ ಎಂದು ಮಹಿಳೆಯರಿಗೆ ಹೇಳುವುದುಂಟು. ಅನೇಕ ಮಹಿಳೆಯರು ತಪಸ್ಸು ಮಾಡಿ, ಶರಣೆ ಎನಿಸಿಕೊಂಡರು. ಇತ್ತೀಚೆಗೆ ಮಾತೆ ಮಹಾದೇವಿಯಂಥವರು ಜಗದ್ಗುರುಗಳಾಗಿರುವುದನ್ನು ಗಮನಿಸಬಹುದು. ಆದರೆ ಚರಿತ್ರೆಯಲ್ಲಿ ಶಿವಯೋಗಿಗಳು ಪ್ರಮುಖವಾಗಿ ಗಂಡಸರೇ.

"ಒಂದ್ಹೊತ್ತು ಉಂಡವನು ಯೋಗಿ, ಎರಡು ಹೊತ್ತು ಉಂಡವನು ಭೋಗಿ, ಮೂರು ಹೊತ್ತು ಉಂಡವ ರೋಗಿ, ನಾಲು ಹೊತ್ತು ಉಂಡವನನ್ನು ಹೊತ್ತುಕೊಂಡು ಹೋಗಿ" ಅಂತ ಹೇಳುವುದುಂಟು. ಎಷ್ಟೋ ಜನ ತಪಸ್ವಿಗಳು, ಶಿವಯೋಗಿಗಳು, ಆಹಾರವಿಲ್ಲದೆ ಬರೇ

ಗಾಳಿ, ನೀರು ಸೇವಿಸಿಯೇ ಜೀವಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಯಾನ ಗೊಂಟಿಯ ಮಾಣಿಕಮ್ಮನವರು ಆಹಾರ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಉಪ್ಪು ಖಾರ, ಹುಳಿ, ಕಡಿಮೆ ಆದಾಗಲೇ ಆತ ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ಬರಬಹುದು. ಮಿತವಾದ, ಆಹಾರ, ಯೋಗ, ಕಾಯಕ, ಸಮಾಜ ಸೇವೆ, ಇವೆಲ್ಲಾ ಶಿವಯೋಗಿಗಳು ಅನುಸರಿಸಬೇಕಾದುದು. ಅನೇಕ ಪಂಡಿತರು ವಿದ್ಯಾಭ್ಯಾಸದಲ್ಲಿ ನೆರವಾಗುತ್ತಾರೆ. ಅನೇಕ ಶಾಲೆ ಕಾಲೇಜು, ಆಸ್ಪತ್ರೆ ತೆರೆದು ಸೇವೆಯನ್ನು ಸಲ್ಲಿಸುವುದನ್ನು ಕಾಣಬಹುದು. ಇವು ಬರೇ ಪ್ರಚಾರವಾಗದೆ ಜನಸೇವೆಗೆಂದು ಮೀಸಲಾದಾಗ ಮಾತ್ರ ಇದು ಸಾರ್ಥಕ.

ಒಬ್ಬೊಬ್ಬರ ಜೀವನ ಚರಿತ್ರೆಯಲ್ಲೂ ಹಲವಾರು ಘಟನೆಗಳಿವೆ. ಅವರು ಮಾಡಿದ ಅಪೂರ್ವ ಕಾರ್ಯಗಳಿವೆ. ಅವುಗಳೆಲ್ಲವನ್ನೂ ಈ ಲೇಖನದಲ್ಲಿ ಪ್ರಸ್ತಾಪ ಮಾಡಲು ಆಗುವುದಿಲ್ಲ. ಅಲ್ಲೊಂದು ಇಲ್ಲೊಂದು ಹೆಕ್ಕಿ ಪ್ರಮುಖ ಘಟನೆಗಳೊಡನೆ ಇಲ್ಲಿ ನಿರೂಪಿಸಲಾಗಿದೆ. ಒಬೊಬ್ಬರ ಜೀವನವೂ ಒಂದೊಂದು ಕಾದಂಬರಿಯಷ್ಟು ದೊಡ್ಡದಾಗಿರುವುದರಿಂದ ಅಲ್ಲೊಂದು ಇಲ್ಲೊಂದು ಹೊಳಹನ್ನು ಇಲ್ಲಿ ಮಂಡಿಸಲಾಗಿದೆ.

ಇಳಕಲ್ಲಿನ ವಿಜಯ ಮಹಂತ ಸ್ವಾಮಿಗಳು ಒಣಗಿದ ಮರವನ್ನು ಚಿಗುರುವಂತೆ ಮಾಡಿದರು. ಅನೇಕ ರೋಗ ರುಜಿನೆಗಳನ್ನು ವಾಸಿ ಮಾಡಿದರು. ಮಕ್ಕಳಿಲ್ಲದವರಿಗೆ ಮಾರ್ಗದರ್ಶನ ಮಾಡಿ ಆಶೀರ್ವದಿಸಿದರು ಇವರು ತಮ್ಮ ಪಾಕವನ್ನು ತಾವೇ ಸಿದ್ಧಪಡಿಸಿಕೊಳ್ಳುತ್ತಿದ್ದರು. ಅಂಕಲಗಿಯ ಅಡವಿ ಸ್ವಾಮಿಗಳು ಪವಾಡಪುರುಷರು. ವೈಶ್ಯನೊಬ್ಬನ ಪಾಂಡುರೋಗವನ್ನು ವಾಸಿ ಮಾಡಿದರು. ಬಾಲಲೀಲಾ ಮಹಂತ ಶಿವಯೋಗಿಗಳು ಮುಮ್ಮಡಿ ಕೃಷ್ಣರಾಜ ಒಡೆಯರ ರೋಗವನ್ನು ವಾಸಿಮಾಡಿದರು. ನಾವಿಕ ದೋಣಿಯಿಂದ ದಾಟಿಸದಿರಲು ತಮ್ಮ ಟೊಪ್ಪಿಗೆಯನ್ನೇ ನೀರಲ್ಲಿ ಹಾಕಿ ಹರಿಗೋಲು ಮಾಡಿ ದಾಟಿದರು. ಕರವೀರ ಶೆಟ್ಟಿಯ ಹೆಂಡತಿ ವೀರಮ್ಮ ಒಮ್ಮೆ ಪುರಾಣದಲ್ಲಿ ಶಾಸ್ತ್ರಿಗಳು ಹೇಳಿದ ಕತೆಯಲ್ಲಿ ಶಿವನಿಗೆ ಅಮ್ಮವ್ವೆ ಮೊಲೆಉಣಿಸಿದ ಪ್ರಸಂಗವನ್ನು ನೆನೆದು ''ನಾನು ಎಂದಿಗೆ ಮಗುವಿಗೆ ಮೊಲೆ ಉಣಿಸುವುದು' ಎಂದು ಚಿಂತಿಸಿದಳು ಆಗ ಬಾಲಲೀಲಾ ಮಹಂತ ಶಿವಯೋಗಿಗಳು ಆಕೆಯನ್ನುದ್ದೇಶಿಸಿ ''ನಿನಗೆ ನಾನು ಶಿಶು, ನಿನ್ನ ಮೊಲೆ ಉಣಿಸು'' ಎಂದರು. ಆಗ ಆಕೆ ಇವರು ಶಿವನೇ ಇರಬೇಕೆಂದು ಮೊಲೆ ನೀಡಿದಳು. ಜನರು ದುರ್ಮಾರ್ಗಿ ಎಂದರು. ಅವರು ಕೀವನ್ನು ಹೊರಗೆ ಉಗುಳಲು ಆಕೆಯ ಸ್ತನದ ಹುಣ್ಣುವಾಸಿಯಾಗಿ, ಎದ ಹಾಲು ತುಂಬಿತು. ತಾಯಿ ತನ್ನ ಮಗುವಿಗೆ ಹಾಲುಣಿಸಿದಳು. ಹೆಸರೇ ಹೇಳಿದಂತೆ ಬಾಲಲೀಲೆಯೇ ಇವರದು. ಶಂಕರಪ್ಪನ ಸಹೋದರಿ ಬಸವಾಂಬೆ ಮನೆಗೆ ಬಂದು ತಾಯೇ ನಿನಗೆ ಮಕ್ಕಳಿಲ್ಲ, ನನಗೆ 'ತಾಯಿ ಇಲ್ಲ, ನಾನೇ ನಿನ್ನ ಮಗ ನನ್ನನ್ನೇ ಜೋಪಾನ ಮಾಡು' ಎಂದು ಮಕ್ಕಳಂತೆ ಕಾಡಿ, ಬೇಡಿದರು. ಆಕೆ ಮಗುವಿನಂತೆ ಅವರಿಗೆ ತೊಟ್ಟಿಲಲ್ಲಿಹಾಕಿ ತೂಗುವುದು, ಊಟ ಮಾಡಿಸುವುದು, ಬಟ್ಟೆ ತೊಡಿಸುವುದು ಮಾಡತೊಡಗಿದಳು.

ಅಥಣಿ ಶಿವಯೋಗಿಗಳು ತಮ್ಮ ಬಟ್ಟೆಯನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಹೂವನ್ನು ತಂದು ಪೂಜೆ ಮಾಡುತ್ತಿದ್ದರು. ''ನೀವೇಕೆ ಈ ಕೆಲಸಮಾಡಬೇಕು?'' ಎಂದು ಶಿಷ್ಯರು ಕೇಳಿದಾಗ ''ಶಿವ ಕೈಕಾಲು ಗಟ್ಟಿಕೊಟ್ಟಿದ್ದಾನೆ'' ಎನ್ನುತ್ತಿದ್ದರು. ನಾಣ್ಯವನ್ನು ಚೇಳು ಎನ್ನುತ್ತಿದ್ದರು. ಒಮ್ಮೆ ಒಂದು ನಾಣ್ಯ ಕಾಣಲು, ''ಚೇಳಿದೆ ಕಸರಿಬರಿಕೆ ತೆಗೆದುಕೋಂಡು ಬಾ'' ಎನ್ನುತ್ತಾರೆ. ಆದರೆ ಇಂದು ಹಣಕ್ಕಾಗಿ ಹಾತೊರೆಯುವ ಸ್ವಾಮಿಗಳನ್ನು ಕಾಣುತ್ತಿದ್ದೇವೆ. ಹೆಣ್ಣು-ಹೊನ್ನು-ಮಣ್ಣುಗಳನ್ನು ತೊರೆದಾತನೇ ನಿಜವಾದ ಶಿವಯೋಗಿ!

ಹಾವೇರಿ ಶಿವ ಬಸವ ಸ್ವಾಮಿಗಳು ವಾಕ್ ಸಿದ್ಧಿ ಪಡೆದಿದ್ದರು. ನಿಜವಾದ ಶಿವಯೋಗಿಗಳು ನುಡಿದಂತೆ ಆಗುತ್ತದೆ. ಇವರ ಗುಡಿಸಲ ಮುಂದೆ ಕ್ರೂರ ಪ್ರಾಣಿಗಳಾದ ಹುಲಿ ಮುಂತಾದವು ಭಯವಿಲ್ಲದೆ ಆಡುತ್ತಿದ್ದುವು. ಇವರು ಧರ್ಮ ಪ್ರಚಾರಕರು, ದಯಾಶಾಲಿಗಳು, ಕರುಣಾಳು, ತ್ರಿಕಾಲ ಜ್ಞಾನಿಗಳು ಆಗಿದ್ದರು. ಹೀಗಾಗಲು ಶಿವಯೋಗಿಗಳಿಗೆ ಮಾತ್ರ ಸಾಧ್ಯ. ಇವರು ಗೊಡ್ಡು ಹಸುವನ್ನು ಕರಿಯಿರಿ ಎಂದಾಗ ಅದು ಹಾಲು ಕೊಡುತ್ತದೆ. ಇದು ಒಂದು ರೀತಿಯ ಪವಾಡವೇ ಸರಿ.

ಚನ್ನ ವೃಷಭೇಂದ್ರ ಸ್ವಾಮಿಗಳು ಬಿಜಾಪುರ ಜಿಲ್ಲೆಯಲ್ಲಿ ನೀರಿರದಿರಲು ಅಲ್ಲಿಗೆ ಬಂದು ತಮ್ಮ ಪಾದ ಸ್ಪರ್ಶ ಮಾಡಿದ ಕೂಡಲೇ ಗಂಗೆ ಉದ್ಭವಿಸಿದಳು. ಜನರು ಜಯಘೋಷ ಮಾಡಿದರು. ಲೆಕ್ಕವಿಲ್ಲದಷ್ಟು ಪವಾಡ ಮಾಡಿ ಜನರ ಉದ್ಧಾರ ಮಾಡಿದರು.

ಅಬ್ಬೆ ತುಮಕೂರಿನ ವಿಶ್ವಾರಾಧ್ಯರು ಪಿಶಾಚಿ ಬಿಡಿಸುವರು. ಒಮ್ಮೆ ಒಬ್ಬ ನೇಪಾಳದ ಸಾಧು ಅಪ್ಪನ ಕೆರೆಯಲ್ಲಿ ಕುಳಿತು ಅನುಷ್ಠಾನ ಮಾಡುತ್ತಿದ್ದಾಗ 'ನೀರಾಗ ಕುಂತ ಅನುಷ್ಠಾನ ಮಾಡಿದ್ರ ಜನ್ಮ ಸಾರ್ಥಕವಾಗದು. ಪರೋಪಕಾರ ಮಾಡು'' ಎಂದಾಗ ಆತ ''ನನಗೆ ಜ್ಞಾನದ ಕಣ್ಣು ತೆರೆಸಿದಿರಿ'' ಎಂದ. ಮನುಷ್ಯ ಕಾಯಕವನ್ನು ಮಾಡಬೇಕೆಂಬುದು ಅವರ ಹೃದ್ಗತ.

ಹಾನಗಲ್ಲು ಕುಮಾರ ಸ್ವಾಮಿಗಳು ಒಮ್ಮೆ ಭಿಕ್ಷೆಗೆ ಹೋದಾಗ ಕಾಮಿನಿಯೊಬ್ಬಳು ಇವರ ಜೋಳಿಗೆ ಹಿಡಿದೆಳೆಯಲು ಹಾಗೆಯೇ ಅದನ್ನು ಬಿಟ್ಟು ಹೊರಡುವರು. ಇವರು ಹೆಣ್ಣುಗಳತ್ತ ಕಣ್ಣೆತ್ತಿ ನೋಡುತ್ತಿರಲಿಲ್ಲ. ಹಳ್ಳಿ ಹಳ್ಳಿಯಲ್ಲಿ ಧರ್ಮ ಪ್ರಚಾರ ಮಾಡಿ, ಲಿಂಗ ಧಾರಣೆ ಮಾಡಿಸಿದರು. ಪ್ರಾಣಿಗಳ ಕೊಲೆ ತಪ್ಪಿಸಿದರು. ಫ. ಗು. ಹಳಕಟ್ಟಿಯವರ ವಚನ ಸಾಹಿತ್ಯ ಬೆಳಕಿಗೆ ಬರಲು ಕಾರಣ ಕರ್ತರಾದರು. ಸತ್ಯಶುದ್ಧಕಾಯಕ ಮಾಡುವಂತೆ ಬೋಧಿಸಿದರು. ಸಮಾಜ ಸೇವೆ, ದೀನ ದಲಿತರ ಉದ್ಧಾರಕ್ಕೆ ದುಡಿದರು.

ತೋಪಿನ ಮಠದ ಶಿವಯೋಗಿಗಳು ಹೆಂಗಸರ ದರ್ಶನ ಮಾಡುತ್ತಿರಲಿಲ್ಲ. ಬಿನ್ನಹದ ಮನೆಗೆ ಹೋಗುವುದು ಇವರಿಗೆ ಇಷ್ಟವಾಗುತ್ತಿರಲಿಲ್ಲ. ಹೆಣ್ಣಿನ ಕೈಯಿಂದ ನೀರನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ದಿವ್ಯ ದೃಷ್ಟಿಯಿಂದ ಅಥಣಿ ಶಿವಯೋಗಿಗಳು ಬರುವುದನ್ನು

ತಿಳಿಸಿದರು. ಇದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ತ್ರಿಕಾಲ ಜ್ಞಾನಿಗಳಿಗೆ ಮಾತ್ರ ಸಾಧ್ಯ!

ಗಾನಯೋಗ ಪಂಚಾಕ್ಷರಿ ಗವಾಯಿಗಳು ಅಂಧರಿಗಾಗಿ ಶಾಲೆಯನ್ನು ತೆರೆದು ಅನೇಕ ಸಂಗೀತಗಾರರನ್ನು ತಯಾರು ಮಾಡಿದರು. ಅವರ ಜೀವನಕ್ಕೆ ಆಶಾ ಜ್ಯೋತಿಯಾದರು. ನಾಟಕ ಮಾಡಿ ಕಾಯಕದಿಂದ, ಹಾಡಿ, ವಿದ್ಯಾರ್ಥಿಗಳನ್ನು ಸಾಕಿದರು. ಕಾಯಕದಿಂದಲೇ ಕೈಲಾಸ ಕಂಡ ಶಿವಯೋಗಿಗಳು ಇವರು. ಒಳ್ಳೆಯ ವಿದ್ವಾಂಸರೂ ಆಗಿದ್ದರು ಸಾಹಿತ್ಯ, ಸಂಗೀತ, ಸಂಸ್ಕೃತ, ಕನ್ನಡಗಳಲ್ಲಿ.

ಗುರುಮಲ್ಲೇಶ್ವರರನ್ನು ಒಮ್ಮೆ ಮುಮ್ಮಡಿ ಕೃಷ್ಣರಾಜ ಒಡೆಯರು ಆದರಿಸಿ, ಸತ್ಕರಿಸಿ ಧನಕನಕವನ್ನು ಧಾರಾಳವಾಗಿ ನೀಡಲು ಬರಲು ಮುಂದಾದರು ಆಗ ಪೂಜ್ಯರು "ಇದು ನೀನು ಕಷ್ಟ ಪಟ್ಟು ಸಂಪಾದನೆ ಮಾಡಿದುದಲ್ಲ. ಇದು ಜನರ ಸಂಪತ್ತು. ನೀನು ಕಷ್ಟಪಟ್ಟು ಸಂಪಾದನೆ ಮಾಡಿ ನಾಲ್ಕಾಣೆ ಕೊಡು ಸಾಕು ಎಂದು. ಹೇಳಲು ಮಹಾರಾಜರು ವೇಷ ಮರೆಸಿಕೊಂಡು ಸೌದೆ ಹೊಡೆದು ನಾಲ್ಕಾಣೆಯನ್ನು ಸಂಪಾದಿಸಿ ಗುರುಗಳಿಗೆ ಅರ್ಪಿಸಿದಾಗ ಗುರುಮಲ್ಲೇಶ್ವರರಿಗೆ ಸಂತೋಷವಾಗುತ್ತೆ. ಕಾಯಕಯೋಗಿ ಗುರುಮಲ್ಲೇಶ್ವರರು ದೇವನೂರಿನಲ್ಲಿ ಪ್ರಮುಖ ಮಠ ಸ್ಥಾಪಿಸಿದರೆ, ಬೇರೆ ಬೇರೆ ಕಡೆ ಹಲವಾರು ಮಠಗಳನ್ನು ಸ್ಥಾಪಿಸಿ ಧಾರ್ಮಿಕ ಮನೋಭಾವವನ್ನು ಜನರಲ್ಲಿ ಬೆಳೆಸಿದರು. ವೀರಶೈವ ಮತ ಪ್ರಚಾರ ಮಾಡಿದರು.

ಮುರುಗೋಡ ಮಹಂತ ಶಿವಯೋಗಿಗಳು ವಿಶಾಲ ಹೃದಯ ಹೊಂದಿದವರು ಹೊನ್ನನ್ನು ತುಚ್ಛೀಕರಿಸಿದವರು, ಹೆಣ್ಣನ್ನು ಪಾರ್ವತಿ ಎಂಬ ಭಾವದಿಂದ ನೋಡುತ್ತಿದ್ದರು. ಬೇರೆ ಧರ್ಮವನ್ನು ಪ್ರೀತಿಸುತ್ತಿದ್ದರು. ವಿಭೂತಿ ಹಾಕಿ ಹಾವು ಕಡಿದವರನ್ನು ಬದುಕಿಸಿದರು.

ಅಲ್ಲಿಪುರದ ತಾತ ಪವಾಡ ಮಾಡುವುದು ಜನರಿಗೆ ಗೊತ್ತಾಗಬಾರದು ಎನ್ನುತ್ತಿದ್ದರು. ಆದರೂ ಅವರ ಜೀವನದಲ್ಲಿ ಅನೇಕ ಪವಾಡಗಳು ಘಟಿಸಿ ಹೋಗುತ್ತಿದ್ದುವು.

ಚೆಳ್ಳಕುರಿಕೆಯ ಎರ್ರಿ ಸ್ವಾಮಿಯವರು ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕರುಣಿಸಿದ್ದಾರೆ. ಸತ್ತ ಎಮ್ಮೆ ಕರು ಬದುಕಿಸಿದ್ದಾರೆ. ನದಿಯ ಪ್ರವಾಹದಲ್ಲಿ ಸಮಾಧಿಸ್ಥರಾಗಿ ಕುಳಿತುಬಿಡುತ್ತಾರೆ. ಇವರು ವೈರಾಗ್ಯ ಸಂಪನ್ನರಾಗಿ ಜೀವನವನ್ನು ಸಾಗಿಸಿದ್ದಾರೆ.

ಅನೇಕ ಶಿವಯೋಗಿಗಳು ಷಡಕ್ಷರ ದೇವನಂತೆ ಕಾವ್ಯವನ್ನು ರಚಿಸಿದ್ದಾರೆ. ಕರಿಬಸವಾರ್ಯರು ಗುಲ್ಬರ್ಗ ಜಿಲ್ಲೆ ಜಂಚೋಳಿ ತಾಲ್ಲೂಕಿನ ಐನೂಲಿನವರು. ವಿದ್ವಾಂಸರು, ಕವಿಗಳು. ಶಿವಬಸವ ಸ್ವಾಮಿಗಳು ಹಾವೇರಿಯವರು. ಇವರು ಕನ್ನಡ ಸಂಸ್ಕೃತ ವಿದ್ವಾಂಸರಾಗಿ ಜನರ ಮೆಚ್ಚುಗೆಯನ್ನು ಪಡೆದರು. ಕೃಷಿಯನ್ನು ಹೇಗೆ ಮಾಡಬೇಕು, ಹೇಗೆ ಮಾಡಿದರೆ ಒಳಿತು ಎಂಬುದರ ಬಗೆಗೆ ಜನರಿಗೆ ಬೋಧಿಸಿದರಲ್ಲದೆ 'ಕೃಷಿ ಜ್ಞಾನ ಪ್ರದೀಪಿಕೆ" ಎಂಬ

ಪುಸ್ತಕವನ್ನು ರಚಿಸಿದರು. ಈಗಿನ ಗುಲ್ಬರ್ಗ ಹತ್ತಿರದ ಹಿರೇನಂದೂರಿನ ಹಿರೇಮಠದ ಸದಾಶಿವ ಶಿವಾಚಾರ್ಯರು ಆಯುರ್ವೇದ ಔಷಧ ಕೊಟ್ಟು ಜನರ ಆರೋಗ್ಯವನ್ನು ಈಗಲೂ ಕಾಪಾಡುತ್ತಿದ್ದಾರೆ.

ಗವಿಮಠದ ಗೌರಿಶಂಕರ ಸ್ವಾಮಿಗಳು ಸಂಸ್ಕೃತ ನಾಟಕ, ಅಕ್ಕಮಹಾದೇವಿಯ ಮಹಾಕಾವ್ಯದ ಅರ್ಥವನ್ನೂ ಮಾತ್ರ ಬರೆದು ಮುಗಿಸಿದ್ದಾರೆ. ಇವರು ಒಳ್ಳೆಯ ವಾಗ್ಮಿಗಳಾಗಿದ್ದುದಲ್ಲದೆ ಶಿವಯೋಗವನ್ನು ಜನರಲ್ಲಿ ಪ್ರಸಾರ ಮಾಡಿದರು. ಶಿರಾಳಕೊಪ್ಪದ ಚನ್ನಮಲ್ಲಪ್ಪನವರು ವಿದ್ವಾಂಸರು ಅನೇಕ ಕೃತಿಗಳನ್ನು ರಚಿಸಿದ್ದಾರಲ್ಲದೆ. ಧಾರ್ಮಿಕ ಪತ್ರಿಕೆಯನ್ನು ಪ್ರಕಟಸಿ ಧಾರ್ಮಿಕ ಶ್ರದ್ಧೆಯನ್ನು ಬೆಳೆಸಲು ಕಾರಣರಾಗಿದ್ದರು.

ಅನೇಕ ಶಿವಯೋಗಿಗಳು ಭಸ್ಮಲೇಪನದಿಂದ, ಮಂತ್ರೋದಕದಿಂದ ರೋಗ ಪರಿಹಾರ ಮಾಡಿರುವುದನ್ನು ಕಾಣಬಹುದು. ಸತ್ತ ಶಿಶುಗಳನ್ನು ಬದುಕಿಸಿದ್ದಾರೆ, ಮಕ್ಕಳಾಗದವರಿಗೆ ಮಕ್ಕಳಾಗಿವೆ. ಗವಿಸಿದ್ಧೇಶ್ವರರ ಆಶೀರ್ವಾದದಿಂದ ಹುಣಸಿಹಾಳು ಗೌಡರಿಗೆ ಮಕ್ಕಳಾಗುವುದು. ಸತ್ತ ಗೂಳಿಗೆ ಪ್ರಾಣದಾನ ನೀಡಿದರು. ಕುರುಡರಿಗೆ ದೃಷ್ಟಿದಾನ ನೀಡಿದರು. ಮೂಕರನ್ನು ಮಾತನಾಡಿಸಿದರು. ಶಿವಯೋಗಿಗಳು ಎಂಥ ಕೆಲಸ ಮಾಡಲೂ ಶಕ್ತರು. ಎಷ್ಟೋ ಜನ ಶಿವಯೋಗಿಗಳು ಜೀವಿತವಾಗಿರುವಾಗಲೇ ಸಮಾಧಿಯನ್ನು ಹೊಕ್ಕು ಗದ್ದುಗೆ ಆದುದುಂಟು. ಅನೇಕ ಲೀಲೆಗಳನ್ನು ತೋರಿದ ಶಿವಯೋಗಿಗಳುಂಟು.

ಹಾರಕೂಡ ಚನ್ನ ಬಸವ ಶಿವಯೋಗಿಗಳು ಗುಲ್ಬರ್ಗ ಜಿಲ್ಲೆ ಮುಗ್ಗಿಯವರು. ಬಸವ ಕಲ್ಯಾಣದ ಹಾರಕೂಡ ಗ್ರಾಮಕ್ಕೆ ಶಿವಯೋಗಿಗಳಾದರು. ಮಠಕ್ಕೆ ಹೆಚ್ಚಿಗೆ ಆಸ್ತಿ ಇರಬಾರದು ಎಂಬುದು ಇವರದಾಗಿತ್ತು. ಸರ್ಪ ಕಚ್ಚಿದವರನ್ನು ಬದುಕಿಸಿದರು. ಹೊಸಹಳ್ಳಿಯಲ್ಲಿ ಪುರಾಣವಾಗುವಾಗ ಮಳೆ ಬರುವುದನ್ನು ನಿಲ್ಲಿಸಿದರು. ಇಳಕಲ್ಲಿನ ವಿಜಯ ಮಹಂತಸ್ವಾಮಿಗಳು ಊಟ ಮಾಡುವಾಗ ಮಳೆ ಬೀಳದಂತೆ ಮಾಡಿದರು ಈ ರೀತಿಯ ಪವಾಡಗಳನ್ನು ಮಾಡಿದವರು ಹಲವಾರು ಶಿವಯೋಗಿಗಳು ಸಿಗುತ್ತಾರೆ.

ಒಮ್ಮೆ ಸಿದ್ಧಾರೂಢರನ್ನು ಕುಷ್ಠರೋಗಿಯೊಬ್ಬ ಬಂದು ''ಗುರುವೇ ಮನೋರೋಗಿಯನ್ನು ಗುಣಪಡಿಸಿದ್ದೀರಿ, ದೇಹದ ರೋಗವನ್ನೇಕೆ ಗುಣ ಪಡಿಸಬಾರದು ಎಂದಾಗ 'ಅದಕ್ಕೆ ವೈದ್ಯರಿದ್ದಾರೆ' ಎಂಬ ಉತ್ತರ ನೀಡುತ್ತಾರೆ. ಆತ ''ಎಲ್ಲೂ ನನಗೆ ವಾಸಿ ಆಗಲಿಲ್ಲ. ನಿಮ್ಮಿಂದಲೂ ನಾನು ಬಹಿಷ್ಕೃತನಾಗ ಬೇಕೇ ? '' ಎಂದು ಕೇಳಿಕೊಂಡಾಗ ಪಂಚಾಕ್ಷರಿ ಮಂತ್ರವನ್ನು ಉಪದೇಶಿಸಿ, ಪಾದೋದಕದಿಂದ ಸ್ನಾನ ಮಾಡಲು ಹೇಳಿದರು. ಆಗ ಆತ ಹಾಗೆಯೇ ಮಾಡಲು, ಆತನ ರೋಗವೆಲ್ಲಾ ವಾಸಿಯಾಯಿತು.

ತೋಂಟದ ಸಿದ್ಧಲಿಂಗಯತಿಗಳು ಮಹಾಜ್ಞಾನ ಮೂರ್ತಿಗಳು ತತ್ತ್ವಜ್ಞಾನಿಗಳು, ಶಿವಯೋಗಿಗಳು, ದಾರ್ಶನಿಕರು, ಕವಿ, ವಚನಕಾರ, ಘನ ವಿದ್ವಾಂಸ, ಅನುಭಾವಿ, ಶಿವಾನುಭವಿ,

ಷಟ್ಸ್ಥಲ ಜ್ಞಾನ ಪುಂಜ ರಂಜಿತರು, ಷಟ್ಸ್ಥಲೋದ್ಧಾರಕರು. ವೀರಶೈವವನ್ನು ಪುನರುಜ್ಜೀವನಗೊಳಿಸಿದವರು. ವೀರಶೈವ ಧರ್ಮ, ಸಮಾಜ, ಸಾಹಿತ್ಯ, ಸಂಸ್ಕೃತಿಗಳ ಪುನರುದ್ಧಾರಕರು, ನಿರ್ಮಾಪಕರು, ಷಟ್ಸ್ಥಲ ಸಿದ್ಧಾಂತ ನಿರ್ಮಾತೃಕರು, ಷಟ್ಸ್ಥಲ ಚಕ್ರವರ್ತಿ, ಷಟ್ಸ್ಥಲ ಸಾರ್ವಭೌಮ, ಜಗದ್ಗುರು ಹದಿನೈದನೆಯ ಶತಮಾನದಿಂದೀಚೆಗೆ ಆಗಿಹೋದ ಅಸಂಖ್ಯಾತ ಶಿವಯೋಗಿಗಳಲ್ಲಿ ಇವರ ಸ್ಥಾನ ಗುರುತರವಾದುದು.

ನರವಧೆ, ಪ್ರಾಣಿವಧೆ ಮದ್ಯಪಾನ, ಮಾಂಸ ಭಕ್ಷಣೆ, ದುರಾಚಾರ ದುಷ್ಟ ಶಕ್ತಿ ಪೂಜೆ, ಪರಸ್ತ್ರೀ ಸಂಗ, ಮೊದಲಾದ ನೀಚ ವೃತ್ತಿಗಳನ್ನು ಖಂಡಿಸಿ ಭೂತದಯೆ, ಮಾನವ ಪ್ರೇಮ, ಸದಾಚಾರ, ಸನ್ಮಾರ್ಗ ಪ್ರವೃತ್ತಿ, ಈಶ್ವರ ಪೂಜೆ, ಪರಿನಾರಿ ಮಾತೃಭಾವ, ಮೊದಲಾದ ಸದ್ಗುಣಗಳನ್ನು ಬೋಧಿಸಿ ಸಮಾಜೋದ್ಧಾರ ಮಾಡಿದರು.

ಉತ್ತುಂಗಜೋಗಿ ಕುಟಿಲ ಸಿದ್ಧರನ್ನು ವಾಮಾಚಾರದಲ್ಲಿದ್ದವರನ್ನು ಪರಿವರ್ತಿಸಿದರು. ಕುಂತಳ ನಾಡಿನಲ್ಲಿ ಜಂಗಮ ಸಿದ್ಧಲಿಂಗರಲ್ಲಿಗೆ ಬಂದು ಕಣ್ಣಿನ ದೃಷ್ಟಿ ನೀಡಬೇಕೆಂದ. ಆಗ ಅವರು ಆತನಿಗೆ ''ನೀನು ಬಾಹ್ಯ ಜಗತ್ತನ್ನು ನೋಡಲಾರೆ, ಜಂಗಮ ತತ್ತ್ವ ನಿನಗೆ ಲಭಿಸಲಿಲ್ಲ. ಸರ್ವಸಂಗ ಪರಿತ್ಯಾಗವೇ ಜಂಗಮ ಲಕ್ಷಣ ಶಿವಭಕ್ತಿಯೇ ಜಂಗಮ ದೃಷ್ಟಿ'' ಎಂದು ಬೋಧಿಸಿ ಕುರುಡನಿಗೆ ಜ್ಞಾನ ದೃಷ್ಟಿ ನೀಡಿದರು.

''ಮೊಲ ಕಂಡ ನಾಯಂತೆ
ಇಂದ್ರಿಯ ವಿಷಯಕ್ಕೆ ಮುಂದುವರಿಯದಿರಾ
ಅಂಗನೆಯರ ಸಮ್ಮೇಳದಿಂ ಭಂಗಿತನಾಗದಿರಾ
ಲಿಂಗವನಪ್ಪಿ ಸುಖಿಯಾಗಾ ಎಲೆ ಮನವೆ''

ಶಿವಯೋಗಿಗಳು ಕಾಮದಿಂದ ಕರಗಿ, ಕ್ರೋಧದಿಂದ ಕೊರಗಿ ಆಮೇಲೆ ಇವನ್ನೆಲ್ಲಾ ಕಳೆದು ನಿರಹಂಕಾರಿಯಾದೆ ಎಂದು ಹೇಳಿದ್ದಾರೆ. ಕೆಲವು ವಚನಗಳಲ್ಲಿ ಹೆಣ್ಣು-ಹೊನ್ನು-ಮಣ್ಣುಗಳಿಂದಹೇಗೆ ಪಾರಾಗುವುದು ಎಂಬುದನ್ನು ವಿವರಿಸುತ್ತಾರೆ.

ಮುಚ್ಚಿದ ಕಣ್ಣು ತೆರೆದುದ ಕಂಡೆ
ಕಿಚ್ಚಿನ ಜ್ವಾಲೆ ಕರೆವುದ ಕಂಡೆ
ಮೃತ್ಯುಗಳ ಮೊತ್ತ ಕಿತ್ತೋಡುವುದ ಕಂಡೆ
ಕತ್ತಲೆ ಬೆಳಗಾದುದು ಕಂಡೆ

ಸುಜ್ಞಾನವೆಂಬ ನೇತ್ರವನ್ನು ಮಾಯಾ ಪ್ರಪಂಚದ ಆವರಣವು ಮುಚ್ಚಿಕೊಂಡಿದ್ದೂ ಗುರುವಿನ ಉಪದೇಶದಿಂದ ನಿವೃತ್ತಿಯಾದುದನ್ನು ಜ್ಞಾನ ದೃಷ್ಟಿಯಿಂದ ಅರಿತೆ ಎನ್ನುತ್ತಾರೆ.

ಸರ್ಪಭೂಷಣ ಶಿವಯೋಗಿಗಳು ಅಸ್ಪೃಶ್ಯತೆಯನ್ನು ತೊಡೆದು ಹಾಕಿದವರು.

''ತನುವೆ ಪಂಪಾಕ್ಷೇತ್ರ ತನ್ನ
ಮನವೇ ದೇವಸ್ಥಾನವಲ್ಲಿ

ಮನವ ಜೀವನೆ ವಿರೂಪಾಕ್ಷೇಶ
ನೆನಿಪ ಸಮ್ಯಜ್ಞಾನವ ಮರೆದು
ತೀರ್ಥ ಕ್ಷೇತ್ರಗಳ ಬಗೆಗೆ ಅವರಿಗಿದ್ದ ನೀಲುವು !

ಇವರು ಸುಪ್ರಸಿದ್ಧ ವಾಗ್ಗೇಯಕಾರರು, ಉಭಯ ಭಾಷಾ ವಿದ್ವಾಂಸರು, ಕವಿಗಳಾಗಿದ್ದರು.

ನಿಜಗುಣ ಶಿವಯೋಗಿಗಳು ಬರೆದ ಕೈವಲ್ಯ ಪದ್ಧತಿಯಲ್ಲಿ ಕಾವ್ಯಾಂಶ, ತತ್ತ್ವ ಚಿಂತನೆ ಹಾಗೂ ಸಂಗೀತದ ತ್ರಿವೇಣಿ ಸಂಗಮವನ್ನು ಕಾಣಬಹುದು. ವಿವೇಕ ಚಿಂತಾಮಣಿ ಇವರ ಮತ್ತೊಂದು ಅದ್ಭುತ ಕೃತಿ

ಭಕ್ತರಿಗಾಗಿ ಶಿವಯೋಗಿಗಳು ತಮ್ಮ ತನು-ಮನ-ಧನವನ್ನು ಅರ್ಪಿಸಿದುದನ್ನು ನಾವು ಕಾಣಬಹುದು. ಶರಣ ಬಸವೇಶ್ವರರ ಭಕ್ತನೊಬ್ಬ ಅಸ್ತಮಾದಿಂದ ನರಳುತ್ತಾ ಬಂದು ಕಾಪಾಡಬೇಕೆಂದು ಕೇಳಲು ಅವರು ಆತನ ದಮ್ಮನ್ನು ತಾವು ತೆಗೆದುಕೊಂಡು ಆತನನ್ನು ಆರೋಗ್ಯವಂತನಾಗಿ ಮಾಡುವರು. ಇದು ಅವರ ತ್ಯಾಗ ಮನೋಭಾವಕ್ಕೆ ಉದಾಹರಣೆ.

ಕಡಕೋಳ ಮಡಿವಾಳಪ್ಪ ಆಡು ಭಾಷೆಯಯ ಪದ್ಯಗಳಲ್ಲಿ ಆಧ್ಯಾತ್ಮ, ತತ್ತ್ವಜ್ಞಾನ ತುಂಬಿ ಜನರನ್ನು ಎಚ್ಚರಿಸಿದ.

ಸಜ್ಜಲಗುಡ್ಡ ಶರಣಮ್ಮ ಜಾತಿಯಲ್ಲಿ ಕುರುಬರಾದರೂ ಅವರಿಗೆ ಗುರುಬಸವಾರ್ಯರು ಲಿಂಗದೀಕ್ಷೆ ಮಾಡಿಸಿ ಸಮಾಜದ ಜನರನ್ನು ಎದುರಿಸುತ್ತಾರೆ. ಇದು ಒಬ್ಬ ಶಿವಯೋಗಿ ಮಾಡಬೇಕಾದ ಕೆಲಸ. ಮಾನವ ಕುಲವೆಲ್ಲಾ ಒಂದೇ, ಎಂದು ಸಾರಿದರು. ಎಲ್ಲರೂ ವೀರಶೈವ ಧರ್ಮ ಅನುಸರಿಸಲು ಯೋಗ್ಯರು ದೀಕ್ಷೆಯಾದ ಮೇಲೆ ಅವರೂ ವೀರಶೈವರೆಂದೇ ಪ್ರತಿಪಾದಿಸಿದರು.

ಬಂದೇ ನವಾಜರು। ತಾವೇ ಹೆಚ್ಚೆಂದು ಶಿವಲಿಂಗೇಶ್ವರರನ್ನು ತಮ್ಮ ಉರುಸಿಗೆ ದೂತರಕೈನಲ್ಲಿ, ಬರಬೇಕೆಂದು ಹೇಳಿ ಕಳುಹಿಸಿದರು ಅವರು ಬರಲು ಸಾಧ್ಯವಾಗದು ಈಗ ಎಂದು ಹೇಳಿ ಕಳುಹಿಸಿದರು. ಮತ್ತೆ ನವಾಜರು. ಸೈನ್ಯ ಕಳುಹಿಸಲು ಶಿವಲಿಂಗೇಶ್ವರರು ಕಾಳಗನೆಂಬ ದೈತ್ಯನನ್ನು ಬಿಟ್ಟರು. ಆತ ಎಲ್ಲರನ್ನೂ ಧ್ವಂಸ ಮಾಡಿಬ. ವಿಷಯ ಬಂದೇ ನವಾಜರಿಗೆ ತಿಳಿದು ಹುಲಿಯ ಮೇಲೆ ಬರುತ್ತಾರೆ. ಆಗ ಶಿವ ಲಿಂಗೇಶ್ವರರು ಕಟ್ಟೆಯ ಮಲೆ ಕುಳಿತಿದ್ದರು. ಇವರು ಬರುವುದನ್ನು ತಿಳಿದು ಆಹ್ವಾನಿಸಲು ಕುಳಿತ ಕಟ್ಟೆಯಿಂದಲೇ ಅಲ್ಲಿಗೆ ಬಂದರು. ಅದನ್ನು ನೋಡಿ ನವಾಜರು ಕ್ಷಮೆ ಕೇಳಿದರು. ಉಡುಗೊರೆ ನೀಡಿದರು. ಶಿವನ ಟೊಪ್ಪಿಗೆ, ಶಲ್ಯಗಳನ್ನು ಮತ್ತೆ ಕಲ್ಬುರ್ಗಿ ಉರಸಿಗೆ ಬರಬೇಕೆಂದು ಆಹ್ವಾನವಿತ್ತರು. ಅರ್ಪಿಸಿ ಶಿವಲಿಂಗೇಶ್ವರರು ಸೈನಿಕರಿಗೆಲ್ಲಾ ಭಸ್ಮ ಧಾರಣೆ ಮಾಡಲು ಅವರೆಲ್ಲಾ

ಜೀವಂತವಾದರು. ಅವರ ಬಿನ್ನಹದ ಮೇರೆಗೆ ಒಮ್ಮೆ ಕಲ್ಬುರ್ಗಿ ಉರಸಿಗೆ ಶಿವಲಿಂಗೇಶ್ವರರು ಬಂದರು. ಹಿಂದೂ ಮುಸ್ಲಿಮರ ಭಾವೈಕ್ಯ ಹೇಗೆ ಬೆಸೆಯಿತೆಂಬುದಕ್ಕೆ ಇವರ ಜೀವನ ಒಂದು ಉದಾಹರಣೆಯಾಗಿದೆ.

ನಾಲತ್ವಾಡ ಶರಣರು ಜಂಗಮ ದಾಸೋಹಿಗಳು. ಹಕ್ಕಿಗಳಿಗೆ ಧಾನ್ಯ ತಿನ್ನಿಸಿ, ನೀರು ತೋರಿದರೆ ಅವರಿಗೆ ಎಲ್ಲಿಲ್ಲದ ಸಂತೋಷ. ಉಪಾಧ್ಯಾಯರಾಗಿ ಮಕ್ಕಳಿಗೆ ವಿದ್ಯಾ ದಾನ ನೀಡಿದರು. ನಾಲತ್ವಾಡದ ದೇಸಾಯಿಯವರಿಗೂ ನಾಡಗೌಡರಿಗೂ ಇದ್ದ ದ್ವೈಷವನ್ನು ತೊರೆಸಲು ಪ್ರಯತ್ನಿಸಿದರು. ಕೋಣನ ಬಲಿ ಕೊಡುವುದನ್ನು ತಪ್ಪೆಂದು ಹೇಳಿದರೂ ಊರ ಜನ ಕೇಳದಿರಲು, ತಮ್ಮ ಆಸ್ತಿಯನೆಲ್ಲಾ ದೀನ ದಲಿತರಿಗೆ ಹಂಚಿ ಊರನ್ನೇ ಬಿಡುವರು. ಗ್ರಾಮದ ಜನರು ಬೇಡಿಕೊಂಡರೂ ಅಲ್ಲಿರದೆ ಭಿಕ್ಷಾಟವೆ ಮಾಡುತ್ತಾ ಗುರು-ಜಂಗಮರ ದಾಸೋಹ ಮಾಡಲಾರಂಭಿಸಿದರು. ವೀರಶೈವ ಧರ್ಮ ಪ್ರಸಾರ ಮಾಡುತ್ತಾ ಸೊನ್ನಲಿಗೆಯಲ್ಲಿ ಶಿವೈಕ್ಯರಾದರು. ಶಿವಯೋಗ ಜೀವನದಲ್ಲಿ ಮುಕ್ತಿಯನ್ನು ಕಂಡರು.

ನಾನು ಮೊದಲೇ ತಿಳಿಸಿದಂತೆ ಶಿವಯೋಗಿಗಳ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಒಬ್ಬೊಬ್ಬರ ಜೀವನ ಒಂದೊಂದು ರೀತಿ ವೈಶಿಷ್ಟ್ಯಮಯ ವೈವಿಧ್ಯಮಯ. ಅವರ ಆದರ್ಶ, ಸಮಾಜ ಸೇವೆ, ಎಂದೆಂದಿಗೂ ಮರೆಯಲಾಗದು. ಕರ್ನಾಟಕದಲ್ಲಿ ಎಂತೆಂಥ ಶಿವಯೋಗಿಗಳಿದ್ದರು ಎಂಬುದಕ್ಕೆ ಕೆಲವು ಉದಾಹರಣೆಗಳು ಮಾತ್ರ ನಾನೀಗ ಪ್ರಸ್ತಾಪ ಮಾಡಿರುವೆನು. ಶಿವಯೋಗಿಗಳವರ ಜೀವನ ಚರಿತ್ರೆಗಳನ್ನು ಓದುತ್ತಿದ್ದರೆ ಭಕ್ತಿಯ ಮನೋಭಾವ ಉಂಟಾಗುತ್ತದೆ. ನಾಸ್ತಿಕ ಆಸ್ತಿಕನಾಗುತ್ತಾನೆ. ವಿಶ್ವಕಲ್ಯಾಣವೇ ಆಗುವುದು. ಶರಣರ ಶಿವಯೋಗಿಗಳ ಕಂಡರೆ ಶಿರಬಾಗುವುದು. ಈ ನಾಡು ಅವರಿಗೆ ಅತ್ಯುನ್ನತ ಸ್ಥಾನವನ್ನು ಗೌರವವನ್ನು ನೀಡುತ್ತಲೇ ಬಂದಿದೆ. ಅವರಿಂದಲೇ ಇಂದಿಗೂ ಮಳೆ-ಬೆಳೆ-ಶಾಂತಿ ನೆಮ್ಮದಿ ದೇಶಕ್ಕೆ.

ಅನುಭಾವ

ಡಾ|| ಡಿ. ಮಂಗಳಾ ಪ್ರಿಯದರ್ಶಿನಿ

ಧಾರ್ಮಿಕ ತತ್ತ್ವಗಳು ಕೊನೆಗೊಳ್ಳುವುದು ತೀರಾ ನಿಗೂಢವಾಗಿರುವುದರಿಂದ ಇವನ್ನು ಬೌದ್ಧಿಕ ವಾದದ ಆಧಾರದ ಮೇಲೆ ಅಧ್ಯಯನ ಮಾಡಲು ಅಸಾಧ್ಯವಾಗುತ್ತದೆ, ಎಂಬ ನಂಬಿಕೆಯೇ 'ಅನುಭಾವ'ದ ಅಧ್ಯಯನವನ್ನು ಸಮರ್ಥವಾದ ದಿಕ್ಕಿನಲ್ಲಿ ನಡೆಸಲು ತೊಡಕನ್ನು ತಂದೊಡ್ಡಿದೆ. 'ಅನುಭಾವ' ಧರ್ಮದ ಒಂದು ಭಾಗವಾಗಿರಬೇಕಾಗಿಲ್ಲ. ಇದು ಧರ್ಮನಿರಪೇಕ್ಷ ಸ್ವರೂಪದ ಮೂಲಕ ಹಾಗೂ ಧಾರ್ಮಿಕ ಜಿಜ್ಞಾಸೆಯ ಮೂಲಕ, ಹೀಗೆ ಈ ಎರಡೂ ನೆಲೆಗಳ ಮೂಲಕ ಯಾವುದೇ ಅನುಭಾವಿಯ ಆನುಭಾವಿಕ ಪ್ರಜ್ಞೆ ಪ್ರಕಟಗೊಳ್ಳಬಹುದು.

'ಆಧುನಿಕ ಮಾನವ ತನ್ನ ಆತ್ಮಶೋಧನೆಯಲ್ಲಿದ್ದಾನೆ'-ಎಂದು ಕಾರ್ಲ್ ಯುಂಗನು ತನ್ನ 'ಮಾಡರ್ನ ಮ್ಯಾನ್ ಇನ್, ಸರ್ಚ್ ಆಫ್ ಎ ಸೋಲ್' ಎಂಬ ಗ್ರಂಥದಲ್ಲಿ ಹೇಳುತ್ತಾನೆ. ಇದನ್ನೇ ಶಿಶಿರ್‌ಕುಮಾರ್‌ಘೋಷ್‌ರವರು 'ಈ ಆತ್ಮ ಶೋಧನೆಯ ಆಳವಾದ ಹುಡುಕಾಟ ಮತ್ತು ಸಾಧ್ಯತೆಗಳಿಗೆ 'ಅನುಭಾವ'ವೇ ಕಾರಣ ಹಾಗೂ ಗುರಿ ಎರಡೂ ಆಗಿದೆ'[೧] ಎನ್ನುತ್ತಾರೆ. ಹಾಗಾದರೆ 'ಅನುಭಾವಿ' ಯಾವುದರ ಶೋಧನೆಯಲ್ಲಿದ್ದಾನೆ? ಎಂಬ ಪ್ರಶ್ನೆಗೆ ಪ್ರತಿಯೊಬ್ಬ ಅನುಭಾವಿಯೂ, ಅನುಭಾವಿ ತನ್ನನ್ನು ತಾನು ಅನ್ವೇಷಿಸುತ್ತಾನೆ, ಎಂಬ ಉತ್ತರವನ್ನೇ ಕೊಟ್ಟಿದ್ದಾನೆ.

'ಅನುಭಾವ' ಎಂಬ ಪದವನ್ನು ಭರತನ ನಾಟ್ಯಶಾಸ್ತ್ರದಲ್ಲಿಯೇ ಕಾಣಬಹುದು. 'ರಸ'ದ ನಿಷ್ಪತ್ತಿಯನ್ನು ಕುರಿತು ಮಾತನಾಡುವಾಗ ಭರತ, 'ವಿಭಾವಾನುಭಾವ ವ್ಯಭಿಚಾರೀ ಸಂಯೋಗಾದ್ರಸ ನಿಷ್ಪತ್ತಿಃ' ಎಂದು ಹೇಳುತ್ತಾನೆ. ಅವನು 'ಅನುಭಾವ' ಎಂಬುದನ್ನು 'ಭಾವದ ಕಾರ್ಯ ಸಮುದಾಯ' ಎಂಬ ಅರ್ಥದಲ್ಲಿ ವಿವೇಚಿಸುತ್ತಾನೆ. 'ಅನುಭಾವ' ಎಂದರೆ ವಿಶಿಷ್ಟಾನುಭವ. 'ಮನುಷ್ಯ ಸ್ವಭಾವಕ್ಕೂ, ಅತ್ಯಂತಿಕ ವಾಸ್ತವಕ್ಕೂ ನಡುವೆ ತರ್ಕವನ್ನು ಹುಡುಕುವ, ಕಾರಣಗಳನ್ನು ಅನ್ವೇಷಿಸುವ ಕಡೆಗೆ ಈ ಅಭಿವ್ಯಕ್ತಿ ವಿಶೇಷ

೧. ಮಿಸ್ಟಿಕ್ಸ್ ಅಂಡ್ ಸೊಸೈಟಿ, ಶಿಶಿರ್‌ಕುಮಾರ್ ಘೋಷ್, ಪು. 10

ಆಸಕ್ತಿಯನ್ನು ತೋರುತ್ತದೆ,''[೨] ಎಂದು ಕಿ. ರಂ. ನಾಗರಾಜ ಅವರು ವ್ಯಾಖ್ಯಾನಿಸುತ್ತಾರೆ. ಆದರೆ ಈ ರೀತಿಯ ವಿಶಿಷ್ಟ ಅಭಿವ್ಯಕ್ತಿಯನ್ನೇ ಭಾರತೀಯ ತಾತ್ವಿಕ ಗ್ರಂಥಗಳಾದ ವೇದ, ಉಪನಿಷತ್ತುಗಳು ಬಳಸಿಕೊಂಡು ವಿವರಿಸಲು ಪ್ರಯತ್ನಿಸಿರುವುದನ್ನು ಕಾಣಬಹುದಾದರೂ, ಇಲ್ಲಿ 'ಅನುಭಾವ' ಎಂಬ ಪದದ ಬಳಕೆ ಈ ವಿಶಿಷ್ಟ ಅರ್ಥದಲ್ಲಿ ಪ್ರಯೋಗವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಇಂಗ್ಲಿಷಿನಲ್ಲಿ 'ಮಿಸ್ಟಿಸಿಸಂ' ಎಂಬ ಪದವನ್ನು 'ಅನುಭಾವ' ಎನ್ನುವುದಕ್ಕೆ ಸಮಾನಾಂತರವಾಗಿ ಬಳಸಲಾಗಿದೆ.

ಎನ್‌ಸೈಕ್ಲೋಪಿಡಿಯಾ ಆಫ್ ಬ್ರಿಟಾನಿಕ 'ಅನುಭಾವ'ವನ್ನು ''ಹುದುಗಿರುವ ಸತ್ಯ ಅಥವಾ ಜ್ಞಾನದ ಆಧ್ಯಾತ್ಮಿಕ ಅನ್ವೇಷಣೆಯನ್ನು ಸಾಮಾನ್ಯವಾಗಿ ಸೂಚಿಸುವ ಅಧ್ಯಯನ ಕ್ರಮ. ಅದರ ಗುರಿಯು ದೈವಿಕತೆ ಅಥವಾ ಪಾವಿತ್ರ್ಯತೆ- ಇವುಗಳೊಡನೆ ಒಂದುಗೂಡುವುದು, ನಿಗೂಢವಾದ ರೀತಿಯಲ್ಲಿ ಬದುಕುವ ಒಂದು ಮಾರ್ಗ. ಅದು ವ್ಯಕ್ತಿ ವಾಸ್ತವತೆಯ ವಿಭಿನ್ನವಾದ ಹಂತಗಳು ಸೇರುವ ಒಂದು ನೆಲೆಯನ್ನು ಸೂಚಿಸುತ್ತದೆ. ಎಂದರೆ, ವ್ಯಕ್ತಿ ಒಂದೇ ಆಯಾಮಕ್ಕಿಂತ ಹೆಚ್ಚಿನವನು ಮತ್ತು ಅವನು ತನ್ನ ಆಧ್ಯಾತ್ಮಿಕ ಗುರಿಯೆಡೆಗೆ ಬೇರೆ ಬೇರೆ ಹಂತಗಳಲ್ಲಿ ಮುಂದುವರಿಯಬಲ್ಲನು. ಈ ಹಂತಗಳನ್ನು ಸಾಮಾನ್ಯವಾಗಿ ಸಂಸ್ಕರಣ, ಶುದ್ಧೀಕರಣ, ಪ್ರಕಾಶೀಕರಣ ಹಾಗೂ ಏಕೀಕರಣ ಎಂಬುದಾಗಿ ಸೂಚಿಸಬಹುದು'' ಎಂದು ವ್ಯಾಖ್ಯಾನಿಸುತ್ತದೆ.

ಎನ್‌ಸೈಕ್ಲೋಪಿಡಿಯಾ ಆಫ್ ಸೋಷಿಯಲ್ ಸೈನ್ಸಸ್ 'ಅನುಭಾವ'ವನ್ನು ವಿವರಿಸುತ್ತಾ, ''ಅತಿ ಸಮೀಪವಾದ ಇರುವು ಮತ್ತು ನಿಕಟವಾಸ್ತವತೆ; ಅದೃಶ್ಯವಾದ ಮತ್ತು ಊಹೆಗೂ ನಿಲುಕದ ಪ್ರಪಂಚ-ಇವುಗಳೊಡನೆ ಹೊಂದುವ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಅನುಭವವೇ ಅನುಭಾವ'' ಎನ್ನುತ್ತದೆ.

ಜೆ. ಎ. ಪಿಕ್ಟನ್, ''ತನ್ನತನವನ್ನು ಮಹತ್ವದಲ್ಲಿ ಕರಗಿಸಿ, ಅವನ್ನು ವಿನಮ್ರಗೊಳಿಸುವ ಎಲ್ಲೆಗಳಲ್ಲದ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು 'ಅನುಭಾವ'' ಎಂದು ಗುರುತಿಸುತ್ತಾನೆ.

ಸ್ಟೇಸ್‌ನ ಪ್ರಕಾರ, ''ಅನುಭಾವಿಕ ಅನುಭವ,' 'ಕಾರಣ'ಗಳು ವಲಯಕ್ಕಿಂತ ಭಿನ್ನವಾದುದು. ಇಲ್ಲಿ 'ಕಾರಣ'ವನ್ನು ಯಾವ ಅರ್ಥದಲ್ಲಿ ಉಪಯೋಗಿಸುತ್ತಿದ್ದೇವೆ, ಎನ್ನುವುದೂ ಮುಖ್ಯ. ಅನುಭಾವಿಯೊಬ್ಬ ತನ್ನ ಅನುಭವಗಳು 'ಕಾರಣ' ವಲಯಕ್ಕಿಂತ ಮೇಲಿನದು ಎಂದು ಭಾವಿಸಿಕೊಳ್ಳುತ್ತಾನೆ. ಎಂದರೆ, ಸ್ಟೇಸ್, ''ಅನುಭಾವದ ಅನುಭವ ಕಾರಣಗಳ ವಲಯಕ್ಕಿಂತ ಭಿನ್ನವಾದುದು, ಹೊರಗಿನದು ಮತ್ತು ಅರ್ಥಮಾಡಿಕೊಳ್ಳಲು ದೂರವಾದುದು'' ಎನ್ನುತ್ತಾನೆ.

---

೨. **ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ**, ಕಿ. ರಂ. ನಾಗರಾಜ, ಪು 381

ವಿಶ್ವವಿಖ್ಯಾತ ಚಿಂತಕ ರಸಲ್, ''ಅನುಭಾವಿಯ ಅಂತರ್ದೃಷ್ಟಿ ಒಡೆಯಲಾಗದ ಕೌತುಕದ ಸಂವೇದನೆಯೊಂದಿಗೆ ಪ್ರಾರಂಭವಾಗುತ್ತದೆ. ಮುಚ್ಚಿಟ್ಟ ಬುದ್ಧಿ ಶಕ್ತಿ ತಕ್ಷಣದಲ್ಲಿ ಸಂಶಯವಾಗುತ್ತದೆ.'' ಎನ್ನುತ್ತಾನೆ.

''ಅನುಭಾವ' ಧರ್ಮ ನಿರಪೇಕ್ಷವಾದದ್ದು ಎಂಬ ಕೂಗಿನೊಡನೆ ಅನೇಕ ತಾತ್ತ್ವಿಕರು, 'ಅನುಭಾವ' ಮತ್ತು 'ಧರ್ಮ' ಇವೆರಡಕ್ಕೂ ಇರುವ ಸಂಬಂಧವನ್ನು ಗುರುತಿಸುವುದನ್ನು 'ಅನುಭಾವ'ದ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಹಿನ್ನೆಲೆಯಲ್ಲಿ ಮರೆಯುವಂತಿಲ್ಲ.

'ಧರ್ಮ'ದ ಮೂಲಕ 'ಅನುಭಾವ'ದ ಅಂತರಂಗದ ವಿಚಾರಗಳನ್ನು ಗ್ರಹಿಸಲು ಸಾಧ್ಯವಿದೆಯಾದರೂ, ಧಾರ್ಮಿಕ ಅನುಭವಗಳಿಗೂ, ಮತೀಯ ಧಾರ್ಮಿಕ ಅನುಭವಗಳಿಗೂ ಅಜಗಜಾಂತರ ವ್ಯತ್ಯಾಸ ಉಂಟು.

ಆರ್. ಡಿ. ರಾನಡೆಯವರು, ''ಅನುಭಾವ''ವನ್ನು ದೈವತ್ವದ ಅರಿವು, ಅದು 'ಪ್ರತಿಭೆ', 'ಅಂತರ್ದೃಷ್ಟಿ' ಅಥವಾ 'ಹೊಳಹಿ'ಗೆ ಸಂಬಂಧಿಸಿದ ವಿಚಾರ. ಅದು ಪ್ರತಿಭೆಯ ವಿಭಾವವನ್ನೊಳಗೊಂಡ ದೈವತ್ವದ ಅರಿವಿನ ತತ್ತ್ವ''[೩] ಎಂದು ಹೇಳುತ್ತಾರೆ.

ಡಾ. ಎಸ್. ರಾಧಾಕೃಷ್ಣನ್ ರವರು 'ಅನುಭಾವ'ವನ್ನು 'ಇಂದ್ರಿಯದರ್ಶಿತ ಕಾಣ್ಕೆ''[೪] ಎಂದು ಗುರುತಿಸಿದರೆ, ಅರವಿಂದರು ಈ ಅಂತರ್ದೃಷ್ಟಿಯನ್ನು 'ಸೃಷ್ಟಿಗೆ ಮೂಲಭೂತ ಕಾರಣವಾದ ಸತ್ಯದ ವಿವಿಧ ಸ್ವರೂಪಗಳನ್ನು ಪ್ರತ್ಯಕ್ಷವಾಗಿ ಕಂಡು, ಕೇಳಿ, ಸ್ಪರ್ಶಿಸಿ, ವಿವೇಚಿಸುವ ಶಕ್ತಿ' ಎಂದು ಕರೆಯುತ್ತಾರೆ.

'ಅನುಭಾವ' ಎಂಬ ಪದದ ಅರ್ಥ ಮೀಮಾಂಸೆಯನ್ನು ಗಮನಿಸಿದಾಗ, ಇದು ಒಂದು ರೀತಿಯ 'ಅಭೌತಿಕ ಪ್ರಜ್ಞೆ'. 'ಅನುಭಾವಿ' ಎಂಬ ಪದ, ವ್ಯಕ್ತಿ ಯಾವ ಪ್ರಭಾವ, ಪರಿಣಾಮ ಗಳಿಗೂ ಪಕ್ಕಾಗದೆ, ಬದ್ಧವಾಗದೆ ತನಗೆ ತಾನೇ ಪಡೆದ ಅನುಭವದ ವಲಯವನ್ನು ಒಳಗೊಳ್ಳುತ್ತದೆ. ಈ ಅನುಭಾವಿ ತನ್ನನ್ನು ತಾನೇ ವಿಶ್ಲೇಷಿಸಿಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ಆತ ಅಂತರಂಗ ಪರಿವೀಕ್ಷಣೆ, ಹಾಗೂ ಸ್ವಪ್ರಜ್ಞೆಗಳನ್ನು ಬಳಸಿಕೊಳ್ಳುತ್ತಾನೆ.

'ಅನುಭಾವ' ಎನ್ನುವ ಪದವನ್ನು ಕನ್ನಡ ಸಾಹಿತ್ಯಕ್ಕೆ ೧೨ನೆಯ ಶತಮಾನದ ವಚನಕಾರರು ನೀಡಿದ ಅಮೂಲ್ಯಕಾಣಿಕೆ ಎಂದೇ ಹೇಳಬೇಕಾಗುತ್ತದೆ. ಬಹುಶಃ ಎಲ್ಲ ವಚನಕಾರರೂ ಅನುಭಾವವನ್ನು ಕುರಿತಂತೆ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಆದ್ಯ ವಚನಕಾರರಾದ ದೇವರ ದಾಸಿಮಯ್ಯಗಳು,

---

೩. ಪಾತ್ ವೇ ಟು ಗಾಡ್ ಇನ್ ಕನ್ನಡ ಲಿಟರೇಚರ್, ಪು. 28.
೪. ಎನ್ ಐಡಿಯಲಿಸ್ಟ್ ವ್ಯೂ ಆಫ್ ಲೈಫ್, ಪು 18.

ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯ
ಅನುಭಾವವೇ ತನುವಿಂಗೆ ಆಧಾರ
ಅನುಭಾವಿಗಳ ಅನುಭಾವ ಮನವಾರೆ ವೇಧಿಸಿದವರಿಗೆ

ಅನುಭಾವ ಬದುಕಿಗೂ, ದೇಹಕ್ಕೂ-ಎರಡಕ್ಕೂ ಅತ್ಯಂತ ಅಗತ್ಯವಾದುದು ಎಂಬ ಅಭಿಪ್ರಾಯವನ್ನು ತಿಳಿಸುತ್ತಾರೆ.

ಬಸವಣ್ಣನವರು,
ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯಾ;
ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ!
ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಮನದ ಕೇಡ ನೋಡಯ್ಯಾ!'

ತನ್ನ ಮನಸ್ಸಿನಲ್ಲಿ ಕೇಡು ಮೂಡದಿರಬೇಕಾದರೆ ತಾನು ಅನುಭಾವಿಯಾಗಬೇಕು, ಆ ನೆಲೆ ತಾನು ಏರಬೇಕು, ಎಂಬ ಅಭಿಲಾಷೆಯನ್ನು ಬಸವಣ್ಣನವರು ವ್ಯಕ್ತಪಡಿಸುತ್ತಾರೆ.

ಅಕ್ಕಮಹಾದೇವಿಯು ಅನುಭಾವದ ಮೂಲಕ ತನ್ನ ಒಳ ಬದುಕನ್ನು ಅರ್ಥೈಸಿಕೊಳ್ಳಲು ಸಾಧ್ಯ ಎಂದು ಭಾವಿಸುತ್ತಾಳೆ.

ಮರ ಮರ ಮಥಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು
ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ
ತನುಗುಣಾದಿಗಳ ಸುಡಲಾಯಿತ್ತು.
ಇದು ಕಾರಣ ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ
ಎನ್ನೊಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ.

ಅಕ್ಕ ತನ್ನ ಆತ್ಮದ ನೆಲೆಯನ್ನು ತೆರೆದು ನೋಡಿಕೊಳ್ಳುವ ವಿಧಾನ ಇದು.

ಚೆನ್ನಬಸವಣ್ಣನು
ಅನುಭವ ಅನುಭಾವವೆಂದೆಂಬರಿ
ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣರೋ
ಅನುಭಾವವೆಂಬುದೇನು ರಚ್ಚೆಯ ಮಾತೇ ?
ಅನುಭಾವವೆಂಬುದೇನು ಸಂತೆಯ ಸುದ್ದಿಯೆ ?
ಅನುಭಾವವೆಂಬುದೇನು ಬೀದಿಯ ಪಸಾರವೆ ?
ಏನು ಹೇಳುವೆನಯ್ಯಾ ಅನುಭಾವದ ಘನವನು ?
ಆನೆಯ ಮಾನದೊಳಗಿಕ್ಕಿದೊಡೆ ಅಡಗುವುದೆ, ದರ್ಪಣದೊಳಗಲ್ಲದೆ ?
ಆ ಹಾಗೆ ಕಂಡಕಂಡಲ್ಲಿ ಗೋಷ್ಠಿ ಗೋಷ್ಠಿ
ನಿಂದ ನಿಂದಲ್ಲಿ, ಬಂದ ಬಂದಲ್ಲಿ ಅನುಭಾವವ ಮಾಡುವ
ಪಾತಕರನೆನಗೊಮ್ಮೆ ತೋರಿದಿರಯ್ಯಾ ಕೂಡಲ ಚೆನ್ನಸಂಗಮದೇವಾ.

ಚೆನ್ನಬಸವಣ್ಣನು ಅನುಭಾವದ ಮಹತ್ತ್ವವನ್ನು ಹೇಳುತ್ತಾನೆ. ಅದರೊಂದಿಗೆ 'ಅನುಭಾವ' ಎಂಬ ಪದ ಹೇಗೆ ತನ್ನ ಸಂದರ್ಭದಲ್ಲಿ ಎಲ್ಲರ ಬಾಯಲ್ಲಿ ಸಿಕ್ಕು ತನ್ನ ಘನವಾದ ಅರ್ಥವನ್ನು ಕಳೆದುಕೊಂಡು ಕಂಡಕಂಡಲ್ಲಿ, ನಿಂದ ನಿಂದಲ್ಲಿ, ಬಂದ ಬಂದಲ್ಲಿ ಸರಳೀಕೃತ ಚರ್ಚೆಗೆ ಒಳಗಾಗುತ್ತಿರುವ ಸಾಂಸ್ಕೃತಿಕ ಇತಿಹಾಸವನ್ನು ಬಹಳ ನೋವಿನಿಂದ ದಾಖಲು ಮಾಡುತ್ತಾನೆ. ಇಂಥವರನ್ನು ಆತ 'ಪಾತಕರು' ಎನ್ನುತ್ತಾನೆ.

'ನಿಶ್ಶಬ್ದವೇ ಅನುಭಾವ', 'ಅನುಭಾವವೆಂಬುವುದು ಅಂತರಂಗದ ರತ್ನ', 'ಅನುಭಾವವೆಂಬುದು ಆತ್ಮ ವಿದ್ಯೆ'- ಹೀಗೆ ವಚನಕಾರರು ತಮ್ಮ ವಚನಗಳಲ್ಲಿ ನಾನಾ ವ್ಯಾಖ್ಯಾನಗಳನ್ನು ನೀಡುತ್ತಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಈ 'ಅನುಭಾವ' ಎಂಬ ಮಾತಿನಲ್ಲಿ ಶರಣರು ತಮ್ಮ ಜೀವನದ ಅನುಭವ ಸಂಪತ್ತನ್ನು ತುಂಬಿ ಮಾನವ ಜೀವಿತದ ಮಹೋದ್ದೇಶವನ್ನು ಒಳಗೊಳ್ಳಬಲ್ಲ ವ್ಯಾಪಕ ಅರ್ಥದಿಂದ ಶ್ರೀಮಂತಗೊಳಿಸಿದರು", ಎನ್ನುತ್ತಾರೆ. ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ 'ಅನುಭಾವ' ಎಂಬ ಪದವನ್ನು ಬಳಸಿ, ಭಾರತೀಯ ಕಾವ್ಯ ಮೀಮಾಂಸೆಯ ಪದಕ್ಕಿಂತ ತೀರಾ ಭಿನ್ನವಾದ ಅರ್ಥ ಕಲ್ಪಿಸಿ, ಲೋಕಾನುಭವದಿಂದ ಮೀರಿದ ದೈವೀ ಅನುಭವವನ್ನು ವಿವರಿಸಲು, ಸೂಚಿಸಲು ಬಳಸಿದವರು 'ವಚನಕಾರರು' ಎಂದೇ ಹೇಳಬೇಕು. ಹಾಗೇ 'ಅನುಭಾವಿ' ಎಂಬ ಪದವೂ ಅವರ ವಿಶಿಷ್ಟ ಕೊಡುಗೆ, ಎಂದು ಇಲ್ಲಿ ಗುರುತಿಸಬೇಕಾಗುತ್ತದೆ.

'ಅನುಭಾವ'ವನ್ನು ಸಾಹಿತ್ಯದ ಸಂದರ್ಭದಲ್ಲಿ ವಿಚಾರ ಮಾಡುವುದು ಈ ಲೇಖನದ ಪ್ರಮುಖ ಆಶಯವಾಗಿದೆ. ಆದ್ದರಿಂದ 'ಅನುಭಾವ'ದ ಬಗ್ಗೆ ತಾತ್ತ್ವಿಕ ಸಮಸ್ಯೆಗಳು ಇಲ್ಲಿ ಮುಖ್ಯವಲ್ಲ. ಕವಿಯೊಬ್ಬನ ಸಂದರ್ಭದಲ್ಲಿ ಇಂಥದೊಂದು ಆಲೋಚನೆ ಹೇಗೆ ಕೆಲಸ ಮಾಡಿದೆ-ಎಂಬುದನ್ನಷ್ಟೇ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ಅನುಭಾವಿ'ಗಳೆಂದು ಕರೆಯಲ್ಪಡುವ ಕವಿಗಳು ಮುಖ್ಯವಾಗಿ ತಮ್ಮ ಕೃತಿಯಲ್ಲಿ ಆತ್ಮವಿಮರ್ಶೆ ಮಾಡಿಕೊಳ್ಳುತ್ತಾರೆ. ಇವರಲ್ಲಿ ಅಂತರ್ಜ್ಞಾನ ಅಥವಾ ಅಂತರ್ದೃಷ್ಟಿ ಮುಖ್ಯವಾದದ್ದು. ಈ ಅಂತರ್ಜ್ಞಾನ ಅಥವಾ ಅಂತರ್ದೃಷ್ಟಿಗಳನ್ನು ಜಾಗೃತ ಜ್ಞಾನದ ಸರಿ, ತಪ್ಪುಗಳಿಗೆ ಗುರಿಪಡಿಸಿ ನೋಡುವುದು ಸರಿಯಲ್ಲ. ಇಲ್ಲಿ ಅನುಭಾವಿಗಳ ಪ್ರಜ್ಞೆ, ಅನುಭವ ಸತ್ಯವಾಗಿದ್ದೂ, ಅಂತರ್ದೃಷ್ಟಿ ತಪ್ಪಾಗಿರುವುದೂ ಸಾಧ್ಯ. ಕೆಲವು ಸಂದರ್ಭಗಳಲ್ಲಿ ಅಂತರ್ದೃಷ್ಟಿ ಸರಿಯಿದ್ದೂ, ಅನುಭಾವ ಪ್ರಜ್ಞೆ ವೈಜ್ಞಾನಿಕವಾಗಿದ್ದೂ, ಇದನ್ನು ನಿರ್ವಹಿಸುವ ಪ್ರಣಾಳಿಕೆಗಳು ಅವೈಜ್ಞಾನಿಕವಾಗಿರಲೂ ಸಾಧ್ಯ, ಎಂಬ ವಿಚಾರವನ್ನು ಗ್ರಹಿಸುವುದು ಅತ್ಯಂತ ಅಗತ್ಯ.

'ಅನುಭಾವ'ದ ವಿವರಣೆ ತತ್ತ್ವಶಃ ಚರ್ಚೆಗೆ ಸಾಧ್ಯವಾಗುವುದಿಲ್ಲ. ಅನುಭಾವಿಯ

---

೫. ಶರಣರ ಅನುಭಾವ ಮಾರ್ಗ,ಪು. 161

ಜಗತ್ತು ಗ್ರಹಿಕೆಗೆ ನಿಲುಕದ ವಿಸ್ತಾರವಾದ ಜಗತ್ತು. ಇಲ್ಲಿ ಕಾಣುವ ಅನುಭಾವಿಕ ಅಂಶ, ದೇವರಿಗಾಗಿ ಹಂಬಲಿಸುವುದು, ಆದ್ಯಂತಿಕ ಜಗತ್ತನ್ನು, ಅಮೂರ್ತವಾದ ಜಗತ್ತನ್ನು. ಭೇದಿಸುವ ಮನೋಭಾವ ಇವರ ಮಾನಸಿಕ, ತಾತ್ತ್ವಿಕ ಮತ್ತು ಸಾಮಾಜಿಕ ಒತ್ತಡಗಳು, ಕಾವ್ಯ ಪ್ರತಿಮೆಗಳು ಹಾಗೂ ಪುರಾಣ ಪ್ರತೀಕಗಳ ಮೂಲಕ ಅಭಿವ್ಯಕ್ತಿಗೊಳ್ಳುತ್ತವೆ. 'ಅನುಭಾವವೇನು ನಾಟಕದ ಮಾತೆ? ಅಭಿನಯ ಮುದ್ರೆ ಬೇಕೆ ? ಹೃದಯ ಓಗೊಡುತ್ತಿರಲು ಆ ಕೂಟ ಸಾಕ್ಷಿ ಏಕೆ ? ನೆನವು ಮನವು ಅನುಭವ ವಿಭೂತಿ ಮನುಭವದ ಕವಚದಲ್ಲಿ, ಬೇರೇನು ಉಂಟು ವಚನೀಯ ಕವಚುವಲ್ಲಿ[೬], ಬೇಂದ್ರೆಯವರು 'ಅನುಭಾವ'ದ ಬಗ್ಗೆ ನೀಡುವ ವ್ಯಾಖ್ಯಾನ ಇದು.

ನಾವು ಸಾಹಿತ್ಯ ಕೃತಿಯಲ್ಲಿ 'ಅನುಭಾವ'ದ ಅಂಶಗಳನ್ನು ಗುರುತಿಸಬೇಕಾದರೆ ನಮಗೆ ಪ್ರಮಾಣವಾಗುವುದು ಇವರ ಭಾಷಿಕ ಅಭಿವ್ಯಕ್ತಿ. ಕವಿಯೊಬ್ಬ ತನ್ನ 'ಅನುಭಾವ'ದ ವಿಶಿಷ್ಟ ಅನುಭವಗಳನ್ನು ಭಾಷಿಕವಾಗಿ ಅಭಿವ್ಯಕ್ತಿಸುವ ಸಂದರ್ಭದಲ್ಲಿ ಹೇರಳವಾಗಿ ಪ್ರತಿಮೆಗಳನ್ನು, ಪ್ರತೀಕಗಳನ್ನು ಬಳಕೆ ಮಾಡಿಕೊಳ್ಳಲೇ ಬೇಕಾಗುತ್ತದೆ. ಆದ್ದರಿಂದಲೇ ಅನುಭಾವಿ ಕವಿಗಳ ಅಭಿವ್ಯಕ್ತಿ ಹೆಚ್ಚು ಹೆಚ್ಚು ನಿಗೂಢವಾದುದು. ೧೨ನೇ ಶತಮಾನದ ಅನುಭಾವಿ ಅಲ್ಲಮ ಪ್ರಭುಗಳು ಇದಕ್ಕೆ ಅತ್ಯುತ್ತಮ ಉದಾಹರಣೆ. ಅವರು ಎಷ್ಟೆಷ್ಟು ಅನುಭಾವಿಯಾಗುತ್ತಾರೋ ಅವರ ಕಾವ್ಯ ಅಷ್ಟಷ್ಟೆ ನಿಗೂಢವಾಗುತ್ತದೆ. ಆದ್ದರಿಂದಲೇ ಅನುಭಾವಿ ಕವಿಗಳನ್ನು ಅಭ್ಯಾಸ ಮಾಡುವ ಸಂದರ್ಭದಲ್ಲಿ ಅವರ ಕಾವ್ಯಶಿಲ್ಪವನ್ನು ಅವಶ್ಯಕವಾಗಿ ಅಭ್ಯಾಸಮಾಡಬೇಕಾಗುತ್ತದೆ. ಅನುಭಾವಿ ಕವಿಯ ಭಾಷೆ ಸಂಕೀರ್ಣವಾದದ್ದು, ಹೆಚ್ಚು ಹೆಚ್ಚು ಪ್ರತಿಮಾತ್ಮಕ, ರೂಪಕಾತ್ಮಕವಾದುದು. ಪ್ರಭುದೇವರ ವಚನಗಳು, 'ಬೆಡಗಿನ ವಚನ'ಗಳಾದವು.

ಅನುಭಾವದಿಂದ ಹುಟ್ಟಿತ್ತು ಲಿಂಗ
ಅನುಭಾವದಿಂದ ಹುಟ್ಟಿತ್ತು ಜಂಗಮ
ಅನುಭಾವದಿಂದ ಹುಟ್ಟಿತ್ತು ಪ್ರಸಾದ
ಅನುಭವದನುವಿನಲ್ಲಿ ಗುಹೇಶ್ವರ ನಿಮ್ಮ ಶರಣ ಅನುಪಮ ಸುಖಿ.

'ಅನುಭಾವ'ವನ್ನು ವಿವರಿಸುವ ಅಲ್ಲಮನ ಮಾತುಗಳು, ಇವು. ಆತ ಅನುಭಾವವೇ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾಗುತ್ತದೆ, ಎನ್ನುತ್ತಾನೆ. ಇಂಥ ಬೆಡಗಿನ ವಚನಗಳಲ್ಲಿಯೇ ಅಲ್ಲಮನು ಮಾತನಾಡಲು ಮುಖ್ಯಕಾರಣವೆಂದರೆ, ಆತ ತನ್ನ ಅಭೌತಿಕ ಆಲೋಚನೆಗಳನ್ನು ಭಾಷಿಕವಾಗಿ ಹಿಡಿದಿಡುವ ಪ್ರಯತ್ನ ಮಾಡುವುದರಿಂದ, ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಲು ಬೇಕು.

---

೬. ವಿನಯ, ನವವಿಸರ್ಗ, ಪು 94

'ಅನುಭಾವ'ದ ಸ್ಥಿತಿಯನ್ನು ಬಹುಕಾಲದವರೆಗೂ ಹಿಡಿದಿಡಲು ಸಾಧ್ಯವಾಗುವುದಿಲ್ಲ. ಇದು ಮಿಂಚಿ ಮಾಯವಾಗುವಂತಹದು. ಇದು ಕ್ಷಣಿಕವಾದುದು. ವ್ಯಕ್ತಿ ಈ ಸ್ಥಿತಿಯಿಂದ ಮತ್ತೆ ಸಹಜತೆಗೆ ಮರಳುವ ಎಲ್ಲ ಸಾಧ್ಯತೆಗಳೂ ಇವೆ. ಈ ಸ್ಥಿತಿಯನ್ನು ಸಂತ ಜಾನ್ ಎಂಬ ತತ್ತ್ವಶಾಸ್ತ್ರಜ್ಞ, 'ಇಂತಹ ಪ್ರೀತಿಯ ಸಿಹಿ ನಿದ್ದೆಗೆ ತೊಡಗುವ ಆತ್ಮ ತನ್ನನ್ನು ತಾನು ನಿರಾಕರಣೆ ಮಾಡಿಕೊಳ್ಳುತ್ತದೆ', ಎಂದು ವಿವರಿಸುತ್ತಾನೆ.

ಅನುಭಾವದ ಅನುಭವವನ್ನು ಪಡೆದುಕೊಳ್ಳಲು ಒಬ್ಬ ವ್ಯಕ್ತಿ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅನುಭಾವಿ ಕವಿ ಬದುಕಿನ ಸಹಜ ಅನುಭವಗಳನ್ನು ನಿರಾಕರಿಸಿ ಆಧ್ಯಾತ್ಮವಾದಿಯಾಗಲು ಸಾಧ್ಯವೇ ಇಲ್ಲ. ಏಕೆಂದರೆ ಕಾವ್ಯ ನಿಂತಿರುವುದು ಗ್ರಹಿಕೆಗಳ ಮೇಲೆ. ವಚನಕಾರರು ಭೌಮಿಕ ಬದುಕಿಗೆ ಮಹತ್ವ ನೀಡಿದರು, ಕಾಯಕತತ್ತ್ವವನ್ನು ಅನುಸರಿಸಿದರು. ಭೂಮಿಯನ್ನು ಅವರು 'ಕರ್ಮೋದ್ಯೋಗ ರಂಗ', 'ಕರ್ತಾರನ ಕಮ್ಮಟ' ಎಂದು ಕರೆದರು. ಆದ್ದರಿಂದಲೇ ವಚನಕಾರರು ಬದುಕಿನ ನಾನಾ ಅನುಭವಗಳಿಗೆ ತಮ್ಮನ್ನು ತಾವು ತೆರೆದುಕೊಂಡವರಾಗಿದ್ದಾರೆ. ಹಾಗೆಯೇ ದಾಸರು ಕೂಡ 'ಈಸಬೇಕು ಇದ್ದು ಜೈಸಬೇಕು', ಎನ್ನುತ್ತಾರೆ.

ಅನುಭಾವಿ ಕವಿಯ ಕೆಲವು ಪ್ರಮುಖ ಲಕ್ಷಣಗಳನ್ನು ಹೀಗೆ ಗುರುತಿಸಿಕೊಳ್ಳಬಹುದು.

೧. ಎಲ್ಲಾ ಜೀವಿಗಳಲ್ಲೂ ಅನುಭಾವಿ ಏಕತೆ ಅಥವಾ ಅಖಂಡತೆಯನ್ನು ಗುರುತಿಸುತ್ತಾನೆ. ಎಲ್ಲದರಲ್ಲೂ ಒಂದನ್ನೇ ಕಾಣುವ ಹಾಗೂ ಒಂದರಲ್ಲೇ ಎಲ್ಲವನ್ನೂ ಕಾಣುವ ಪ್ರವೃತ್ತಿ.

೨. ತನ್ನನ್ನು ತಾನು ಸಾಮಾನ್ಯವಾಗಿ ಕೀಳರಿಮೆಗೆ ಒಳಪಡಿಸಿಕೊಳ್ಳುವುದು. ತಾನು ತನ್ನ ಆರಾಧ್ಯ ದೈವಕ್ಕಿಂತ ಕೀಳು, ಎಂಬ ಭಾವನೆ. ಇದು ಒಂದು ರೀತಿಯಲ್ಲಿ ಅವನ ಭಾವ ಶುದ್ಧೀಕರಣದ ವಿಧಾನವೂ ಹೌದು. ತನ್ನನ್ನು ತಾನು ಎಷ್ಟೆಷ್ಟು ಕೀಳರಿಮೆಗೆ ಒಳಪಡಿಸಿಕೊಳ್ಳುತ್ತಾನೋ ಆತ ಅಷ್ಟಷ್ಟೂ ತನ್ನ ಆರಾಧ್ಯದೈವಕ್ಕೆ ಹತ್ತಿರವಾಗುತ್ತಿದ್ದೇನೆ, ಎಂದು ಭಾವಿಸುತ್ತಾನೆ. ಬಸವಣ್ಣನವರು

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ,
ನಿಮ್ಮ ಶರಣರ ಪಾದಕ್ಕಲ್ಲದೆ ಅನ್ಯವಿಷಯಕ್ಕೆಳಸದಂತೆ
ಇರಿಸು ಕೂಡಲ ಸಂಗಮದೇವ [೭]

---

೭. ವಚನ ಕಮ್ಮಟ, ಬೆಂಗಳೂರು ವಿವಿ ಪು. 37

೩.. ಶರಣಸತಿ ಲಿಂಗಪತಿ ಭಾವದ ಮೂಲಕ ತನ್ನ ಹಾಗೂ ತನ್ನ ದೈವದೊಂದಿಗೆ ಒಂದು ಅರ್ಥಪೂರ್ಣ ಸಂಬಂಧವನ್ನು ಸ್ಥಾಪಿಸಿಕೊಳ್ಳುವ ತವಕ ತೋರುತ್ತಾರೆ. ಪೂಜಿಸುವ ಭಕ್ತ ಸತಿಯಾದರೆ, ಪೂಜೆಗೊಂಬುವ ಆರಾಧ್ಯದೇವ ಪತಿಯಾಗುತ್ತಾನೆ. ಇಲ್ಲಿ ದೇವ-ಭಕ್ತರ ಸಂಬಂಧಗಳು 'ಆತ್ಮಕೂಟ'ದ ಸಂಬಂಧ ಸ್ಥಾಪಿಸಿಕೊಳ್ಳುತ್ತವೆ. ಅನೇಕ ಧರ್ಮಗಳಲ್ಲಿ ಅನುಭಾವಿಗಳು ಸೌಂದರ್ಯ, ಪ್ರೀತಿಯನ್ನು ಕುರಿತು ಮಾತನಾಡುವಾಗ ತಮ್ಮ ಆರಾಧ್ಯದೇವವನ್ನು ಹೆಣ್ಣು, ಗಂಡಿನ ಸಂಬಂಧದಲ್ಲಿ ಚರ್ಚೆಮಾಡುತ್ತಾರೆ. ಅವರು ತಾವು ಎಂದೂ ಏಕಾಕಿ ಎಂಬ ಭಾವ ತೋರುವುದೇ ಇಲ್ಲ. ಸೂಫೀಗಳು ಇದಕ್ಕೆ ಹೊರತಲ್ಲ. ನಮ್ಮ ನವೋದಯದ ಸಂದರ್ಭದಲ್ಲಿ ಮಧುರಚೆನ್ನರ 'ನಲ್ಲ' ಪರಿಕಲ್ಪನೆ ಇದಕ್ಕೆ ಉತ್ತಮ ಉದಾಹರಣೆ. ಕವಿ ಮಧುರಚೆನ್ನರು 'ನನ್ನ ನಲ್ಲ' ಕಾವ್ಯದಲ್ಲಿ ತಮ್ಮ ಆಧ್ಯಾತ್ಮಿಕ, ಅನುಭಾವಿಕ ಸಂಗಾತಿಯನ್ನು ಕುರಿತ ಅನ್ವೇಷಣೆ ನಡೆಸುತ್ತಾರೆ.

ನೆಲ ಬಗಿದು ಹುಡುಕುವೆನೆ ಮುಗಿಲೇರಿ ನೋಡುವೆನೆ
ನನ್ನ ಕರುಳಿನ ಕಿಚ್ಚು ಹೇಳಲಾರೆ
ಚೆಲುವ ಚೆನ್ನಿಗರಾಯನೆಲ್ಲಿ ಸಿಗಬಹುದಮ್ಮ
ಅವನ ಕಾಣದೆ ಇನ್ನು ತಾಳಲಾರೆ.[೮]

ಶಿಶುನಾಳ ಷರೀಫರು ತಮ್ಮ ಆರಾಧ್ಯದೈವವನ್ನು 'ಗಂಡ', 'ನಲ್ಲ' ಎಂದೇ ಗುರುತಿಸುತ್ತಾರೆ. ಅವರ 'ಎಲ್ಲರಂಥವನಲ್ಲ ನನ ಗಂಡ'ದಲ್ಲಿಯಾಗಲಿ, 'ನನ್ನೊಳಗೆ ನಾ ತಿಳಕೊಂಡೆ, ನನಗೆ ಬೇಕಾದ ಗಂಡನ ಮಾಡಿಕೊಂಡೆ', ಎನ್ನುವಲ್ಲಿಯಾಗಲಿ ಆರಾಧ್ಯದೇವ, 'ಗಂಡ'ನಾಗಿದ್ದಾನೆ.

೪. ಅನುಭಾವಿಕ ಅನುಭವದ ಮತ್ತೊಂದು ಪ್ರಮುಖ ಲಕ್ಷಣವೆಂದರೆ 'ಕಲಾತೀತತೆ'. ಅನುಭಾವಿ ಕವಿ 'ಕಾಲ'ದ ಆಯಾಮದ ಚೌಕಟ್ಟಿನಲ್ಲಿ ಸಿಲುಕಲು ನಿರಾಕರಿಸುತ್ತಾನೆ. ಅವನಿಗೆ ಭೂತ, ವರ್ತಮಾನ, ಭವಿಷ್ಯತ್ತುಗಳಿಲ್ಲ. ಪ್ರತಿಯೊಂದು ಸಂದರ್ಭದಲ್ಲೂ 'ಪ್ರಸ್ತುತ'ದಲ್ಲಿ ಬದುಕಲು ಯತ್ನಿಸಿರುತ್ತಾರೆ.

೫. ಶರಣು ಹೋಗುವಿಕೆ ಮತ್ತು ನಿಷ್ಕ್ರಿಯತೆಗಳು ಕೂಡ ಅನುಭಾವಿ ಕವಿಗಳ ಮತ್ತೊಂದು ಲಕ್ಷಣವೆನ್ನಬೇಕಾಗುತ್ತದೆ. ಹನ್ನೆರಡನೆಯ ಶತಮಾನದ ವಚನಕಾರರು ತಮ್ಮನ್ನು ತಾವು 'ಶರಣರು' ಎಂದು ಕರೆದುಕೊಂಡರೆ, ಹದಿನಾರನೆಯ ಶತಮಾನದಲ್ಲಿ ಬಂದ ಭಕ್ತ ಕವಿಗಳು 'ದಾಸರು' ಎಂದು ಕರೆದುಕೊಳ್ಳುತ್ತಾರೆ.

ಅನುಭಾವಿಗಳು ಪ್ರಸ್ತುತದಲ್ಲಿ ಬದುಕಲು ನಿರಂತರವಾಗಿ ಹಂಬಲಿಸುವುದು ನಮಗೆ ಇಲ್ಲಿ ಮುಖ್ಯ ಎನ್ನಿಸುತ್ತದೆ. ಅವರ ದೇವರ ಕಲ್ಪನೆ ಮತ್ತು ವಾಸ್ತವ ಬದುಕಿನ ನಿರಾಕರಣೆ

---

೮. ನನ್ನನಲ್ಲ, ಮಧುರ ಚೆನ್ನ, ಪು. 5

ನಡೆಯುವುದು ಪಲಾಯನವಾದದಿಂದಲ್ಲ. ಅವರು ಅಮೂರ್ತ ಜಗತ್ತನ್ನು ತಲುಪುವುದು, ವಿರಕ್ತಮಾರ್ಗವನ್ನು ಅನುಸರಿಸುವುದು, ಆಧ್ಯಂತಿಕ ನೆಲೆ ತಲುಪುವುದು, ಬದುಕಿನ ಬಗೆಗೆ ಅವರಿಗಿರುವ ತೀವ್ರ ಕಾಳಜಿಯಿಂದ. ಬದುಕಿನ ಬಗೆಗೆ ಇರುವ ಅವರ ದ್ವಂದ್ವ ಅವರ ಆಂತರಿಕ ಹಾಗೂ ಬಾಹ್ಯ ಜಗತ್ತಿನ ನಡುವಿನ ಘರ್ಷಣೆಯಿಂದ ನಿರ್ಮಾಣಗೊಂಡಿದ್ದು ಎಂಬುದನ್ನು ಇಲ್ಲಿ ಆವಶ್ಯಕವಾಗಿ ಗುರುತಿಸಬೇಕಾಗುತ್ತದೆ.

ಎಲ್ಲಾ ಅನುಭಾವಿ ಕವಿಗಳ ಅತ್ಯಂತ ದೊಡ್ಡ ಸಮಸ್ಯೆ ಎಂದರೆ, ತಮಗಾದ ಆನುಭಾವಿಕ ಅನುಭವಗಳನ್ನು ಭಾಷಿಕವಾಗಿ ಅಭಿವ್ಯಕ್ತಿಸುವ ಬಗೆಗೆ ಇರುವ ತೊಡಕು. ಅನುಭಾವಿಗಳು ತಮ್ಮ ಅನುಭವಗಳನ್ನು ವಿವರಿಸಲು ಭಾಷೆಗೆ ಸಾಧ್ಯವಾಗದೆ ಹೋಗುತ್ತದೆ, ಎಂದು ಭಾವಿಸುತ್ತಾರೆ. ಆದ್ದರಿಂದಲೇ ಅವರು ತಮ್ಮ ಅನುಭವದ ಸಮರ್ಥನೆ, ಸ್ಪಷ್ಟತೆಯ ಅಭಿವ್ಯಕ್ತಿಗೆ ತಕ್ಕುದಾದ ಭಾಷೆ ದೊರಕಿಲ್ಲವೆಂದೇ ಹೇಳುತ್ತಾರೆ. ಇದು ಕೇವಲ ಅನುಭಾವಿಗಳನ್ನಷ್ಟೇ ಅಲ್ಲದೆ, ಅನುಭಾವಿ ಕವಿಗಳನ್ನು ಕಾಡಿರುವ ಸಮಸ್ಯೆಯೂ ಆಗಿದೆ. ಪ್ರತಿಯೊಬ್ಬ ಅನುಭಾವಿ ಕವಿಯೂ ತನ್ನ ಆನುಭಾವಿಕ ಅನುಭವಗಳನ್ನ, ಆಧ್ಯಂತಿಕ ಜಗತ್ತಿನ ವಿವರಗಳನ್ನು ಸ್ಪಷ್ಟವಾಗಿ ಮೂಡಿಸಲು ಭಾಷೆಯ ಸಮಸ್ಯೆಯಿಂದ ಅವನಿಗೆ ಸಾಧ್ಯವಾಗುತ್ತಿಲ್ಲ, ಎಂದೇ ಭಾವಿಸುತ್ತಾನೆ. ಭಾಷೆಯ ಅಭಿವ್ಯಕ್ತಿ ಸಮಸ್ಯೆ ಅವನಿಗಿದ್ದರೂ ತನ್ನ ಅನುಭವಗಳನ್ನು ಹೇಳಲೂ ಸಾಧ್ಯವಿಲ್ಲದೆ, ಹೇಳದೆ ಹಾಗೆ ಇರಲೂ ಸಾಧ್ಯವಾಗದೆ ತೊಳಲಾಡುತ್ತಾ ಭಾಷೆಯೊಂದಿಗೆ ಹೋರಾಟವನ್ನು ನಡೆಸುವುದನ್ನು ಕಾಣಬಹುದು.

ಅನುಭಾವಿಯ ಭಾಷೆ ಸಂಕೀರ್ಣವಾಗಿದ್ದು, ಅವನ ಅಭಿವ್ಯಕ್ತಿ ಅಸ್ಪಷ್ಟವಾಗಲು ಇರುವ ಇನ್ನೊಂದು ಅತಿಮುಖ್ಯ ಕಾರಣವೆಂದರೆ, 'ಸಾಮಾನ್ಯ ಸಂವೇದನೆ'. ಅನುಭಾವಿ ಕವಿ ಸದಾ ತನ್ನ ಜಾಗೃತ ಮನಸ್ಸು ಉಳಿದವರಿಗಿಂತ ಭಿನ್ನವಾದದ್ದು, ಎಂದೇ ಭಾವಿಸುತ್ತಾನೆ. ಸಾಮಾನ್ಯ ಜನರು ಅನುಭವಿಸುವ ದೈನಂದಿನ ಅನುಭವಗಳನ್ನೇ ಕವಿಯೂ ಅನುಭವಿಸುತ್ತಾನೆ. ಆದರೆ, ಸಾಮಾನ್ಯ ಜನರ ಮನಸ್ಸಿಗಿಂತ ಕವಿಯ ಮನಸ್ಸು ಹೆಚ್ಚು ಹೆಚ್ಚು ಸಂವೇದನಾಶೀಲವಾದುದು. ಆದ್ದರಿಂದ ಇಲ್ಲಿ ಭಾಷೆಯ ಸಂಕೀರ್ಣತೆಯಿಂದಲೇ ಸಂವೇದನೆಗಳ ನಡುವೆ ವ್ಯತ್ಯಾಸವನ್ನು ಗುರುತಿಸಬೇಕಾಗುತ್ತದೆ.

ಕೆಲವೊಮ್ಮೆ ಕಲ್ಪಕತೆಯಿಲ್ಲದ ಮನಸ್ಸು, ತನ್ನ ಕಣ್ಣಿಗೆ ಕಾಣದ ಜಗತ್ತಿನ ವಿಚಾರಗಳನ್ನು ನಂಬಲಸಾಧ್ಯವಾದ ಮನಸ್ಥಿತಿ-ಇವು ಆನುಭಾವಿಕ ಅನುಭವಗಳನ್ನೂ ತನ್ನ ನೆಲೆಗೇ ಕೆಳಗೆಳೆದು ತರುವ ಪ್ರಯತ್ನವನ್ನು ಮಾಡುತ್ತದೆ. ಅನುಭಾವಿ ಕವಿ ತನ್ನ ಅನುಭವಗಳನ್ನು ಸಾಮಾನ್ಯ ಸಂವೇದನೆಗೆ ಒಳಗು ಮಾಡಲು ಹೆಣಗುತ್ತಾನೆ. ತನ್ನ ಆನುಭಾವಿಕ ಅನುಭವಗಳ ಸಂಪೂರ್ಣ ಸ್ವರೂಪವನ್ನು ವಿವರಿಸಲು ಅಸಮರ್ಥನಾಗುತ್ತಾನೆ. ಹೀಗೆ ಕೆಲವೊಮ್ಮೆ

ಅಸಮರ್ಥವಾದ ಸಂದರ್ಭದಲ್ಲಿಯೇ ಆತ ಅನುಭವಗಳನ್ನು ಸ್ಪಷ್ಟವಾಗಿ ಚಿತ್ರಿಸಲು ಸಾಧ್ಯವಾಗದ್ದು, 'ಭಾಷೆ'ಯ ಕಾರಣದಿಂದಲೇ ಎಂದು ಭಾವಿಸುತ್ತಾನೆ. ಹೀಗಾಗಿಯೇ ಅನುಭಾವಿ ಕವಿಯ 'ಭಾಷೆ' ಸಂಕೀರ್ಣಕ್ಕೊಳಗಾಗುತ್ತದೆ.

ಅನುಭಾವಿಕ ಅನುಭವಗಳು ಕೇವಲ ಭಾವನಾತ್ಮಕವಾದುವಲ್ಲ. ನಾನಾ ಭಾವನೆಗಳನ್ನು ಹಲವೊಮ್ಮೆ ಭಾಷೆಯ ಮೂಲಕ ಅಭಿವ್ಯಕ್ತಿಸಲು ಸಾಧ್ಯವಾಗದೆ ಹೋಗಬಹುದು. ಬಳಸಿ ಸವಕಲಾದ ಭಾಷೆಯಲ್ಲಿ ತನ್ನ ಅನುಭವಗಳ ತಾಜಾತನವನ್ನು ದಾಖಲು ಮಾಡುವುದು ಹಲವೊಮ್ಮೆ ಅವನಿಗೆ ಸವಾಲೂ ಆಗಬಹುದು. ಭಾವನೆಗಳು ಎಷ್ಟೆಷ್ಟು ತೀವ್ರವಾಗುತ್ತವೋ ಅಭಿವ್ಯಕ್ತಿ ಅಷ್ಟಷ್ಟೂ ಸಂಕೀರ್ಣವಾಗುತ್ತದೆ. ಟೆನಿಸನ್, 'ಭಾವನೆಗಳು ಕಣ್ಣೀರಿಗಿಂತಲೂ ಆಳದಿಂದ ಮೂಡಿ ಬರುತ್ತವೆ,' ಎನ್ನುತ್ತಾನೆ. ವರ್ಡ್ಸ್‌ವರ್ತ್ ಕೂಡ ತನ್ನ ಕಾವ್ಯದಲ್ಲಿ ಭಾವನೆಗಳು ಕಣ್ಣೀರೂ ಅಭಿವ್ಯಕ್ತಿಸಲಾರದ ಆಳದಿಂದ 'ಮೂಡಿಬಂದವು' ಎನ್ನುತ್ತಾನೆ. ಅವು ಕಣ್ಣೀರಿನ ಆಳದಿಂದ ಬಂದುದಷ್ಟೇ ಅಲ್ಲದೆ, ಮಾತು, ಪದದ ಹಿಡಿತಕ್ಕೂ ಸಿಕ್ಕಲಾರದು. ಜಾಗೃತ ಪ್ರಜ್ಞೆಯ ಮೇಲು ಪದರದಲ್ಲಿರುವ ಭಾವನೆಗಳ ಬಗೆಗೆ ನಾವು ಸುಲಭವಾಗಿ ಮಾತನಾಡಬಹುದು. ಆದರೆ, ವ್ಯಕ್ತಿತ್ವದ ಆಳವನ್ನು ಕಲಕಿದಾಗ, 'ಮೌನ'ವಷ್ಟೇ ಉಳಿಯುವುದು. ಅನುಭಾವಿಯೊಬ್ಬನ ಭಾವನೆಗಳು ಆಳದಿಂದ ಮೂಡಿಬರುತ್ತಿದ್ದಾಗ ಅವು ಹೆಚ್ಚು ಹೆಚ್ಚು ಮೌನವಾಗುತ್ತವೆ. ಅಲ್ಲಿ 'ಭಾಷೆ', 'ಮೌನ'ವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಆತನ 'ಭಾಷೆ' ಭಾವನೆಗಳ ಆಳವನ್ನು ತೆರೆದು ತೋರುವುದರಲ್ಲಿ ಅಸಹಾಯಕವಾಗುತ್ತದೆ. ಇಲ್ಲಿ ಆತನ ಅನುಭಾವಿಕ ಅನುಭವ 'ಮಾತಿಗೆ ಸಿಲುಕದ ಆಳ'ವಾಗುತ್ತದೆ.

ನಿಶ್ಶಬ್ದ ನಿಶ್ಶಬ್ದ ಶಬ್ದದಾಚೆಯ ಶಬ್ದ
ನಿಶ್ಶಬ್ದವಿದ್ದರೂ ಮೌನವಲ್ಲ೬

ಈ 'ಮಾತಿಗೆ ಸಿಲುಕದ ಆಳ', 'ಮೌನ'ವಾದರೂ, ಮೌನವಲ್ಲ. ಮೌನವೂ ಏನನ್ನೋ ಹೇಳುವುದನ್ನ ಗಮನಿಸಬೇಕು. ಮಧುರಚೆನ್ನರ ಈ ಮಾತುಗಳು ಇಂತಹ ಒಂದು ಅನುಭಾವಿಕ ಅನುಭವದ ದಾಖಲೆಯಾಗಿರುವುದನ್ನು ಕಾಣಬಹುದು. ಅಲ್ಲಮ ಪ್ರಭು ಹೇಳುವ, 'ಶಬ್ದದೊಳಗಣ ನಿಶ್ಶಬ್ದದಂತೆ' ಎನ್ನುವ ಮಾತುಗಳೂ ಇಂಥದೇ ಒಂದು ಅನುಭಾವಿಕ ಅನುಭವದ ವಿಶಿಷ್ಟ ದಾಖಲೆ ಎನ್ನಬಹುದು.

ಅನುಭಾವದಲ್ಲಿ ಭಾವುಕತೆಯಿದ್ದರೂ, ಅದರ ಮುಖ್ಯ ಲಕ್ಷಣ ಭಾವುಕತೆ ಅಥವಾ ಭಾವುಕತನವಲ್ಲ. ಅನುಭಾವಿ ತನ್ನ ಅನುಭವವನ್ನು ಕೇವಲ ಭಾವನೆಗಳ ಮೂಲಕವಷ್ಟೇ

---

೬. ನನ್ನ ನಲ್ಲ, ಮಧುರಚೆನ್ನ, ಪು. 41

ಪಡೆಯುತ್ತಾನೆ ಎಂದಲ್ಲ. ಅವನ್ನು ತನ್ನ ಸುತ್ತಲಿನ ವಸ್ತು ಪ್ರಪಂಚದ ಗ್ರಹಿಕೆಗಳ ಮೂಲಕ ಪಡೆಯುತ್ತಾನೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕು.

ಜಗತ್ತಿನ ಅತಿ ದೊಡ್ಡ ಅನುಭಾವಿಗಳೆಲ್ಲರೂ 'ಮೌನ', 'ಶಾಂತತೆ'ಗಳಿಂದ ಆನುಭಾವಿಕ ಅನುಭವಗಳನ್ನು ಪಡೆದಿರುವುದನ್ನು ಗಮನಿಸಬಹುದು. ಆದರೆ 'ಮೌನ'ವನ್ನು ಕವಿ ಎಲ್ಲ 'ಶಬ್ದ'ಗಳ ನಡುವೆಯೇ ಗುರುತಿಸಿಕೊಳ್ಳುತ್ತಾನೆ. 'ಮೌನ', 'ಭಾಷೆ' ಒಂದರೊಡನೊಂದು ಅಂಟಿಕೊಂಡು ಬಂದ ಪರಿಕಲ್ಪನೆಗಳು. ಈ 'ಮೌನ' ಕವಿಯ ಭಾವನೆಗಳಿಗೆ ಒಂದು ಮುಂದುವರಿಕೆಯನ್ನು ತಂದುಕೊಡುತ್ತದೆ. ಇದು ಅಭಿವ್ಯಕ್ತಿಯ ಹಾಗೂ ಅದಕ್ಕೆ ಮುಂಚಿನ ಪೂರ್ವಭಾವೀ ಸ್ಥಿತಿಯೂ ಹೌದು ಎಂದು ಅನುಭಾವಿ ಕವಿಗಳು ಭಾವಿಸುತ್ತಾರೆ. 'ಮೌನ' ಮಾತುಗಳಾಚೆಯದು. ಅದು ಯಾವಾಗಲೂ ಮಾತಿನ ಶರೀರವನ್ನು ಪಡೆದುಕೊಂಡು ಸದೇಹವಾಗಲು ಪ್ರಯತ್ನಿಸುತ್ತದೆ ಎಂಬುದು ಬೇಂದ್ರೆಯವರ ನಿಲುವು.

ಮಾತುಗಳಾಚೆಯ ವಿದೇಹಭಾವ
ಸದೇಹವಾಗಲು ತಪಿಸುತ್ತಿದೆ[೧೦]

ಈ ಮೌನದಲ್ಲೂ ಎರಡು ರೀತಿಗಳನ್ನು ಸೋನ್‌ಟಾಗ್ ಗುರುತಿಸುತ್ತಾಳೆ. ಅದು 'ಕರ್ಕಶ ಮೌನ' ಹಾಗೂ 'ಮೃದು ಮೌನ'. 'ಕರ್ಕಶ ಮೌನ' 'ನಿರ್ದ್ರವ್ಯ' ಸ್ಥಿತಿಗೆ ಸಂಬಂಧಪಟ್ಟ 'ನೆಗಟಿವ್ ಸೈಲನ್ಸ್' ಆದರೆ, 'ದ್ರವ್ಯ' ಸ್ಥಿತಿಗೆ ಸಂಬಂಧಪಟ್ಟ 'ಮೃದು ಮೌನ', 'ಪಾಸಿಟಿವ್ ಸೈಲನ್ಸ್' ಎಂದು ಗುರುತಿಸಬಹುದು.

ಅನುಭಾವಿಯೊಬ್ಬ ಯಾವುದರ ಶೋಧನೆಯಲ್ಲಿದ್ದಾನೆ ಎಂಬ ಪ್ರಶ್ನೆಗೆ ಅನುಭಾವಿ ಕವಿಗಳೆಲ್ಲರೂ 'ಆತ್ಮ'ದ ಶೋಧನೆಯಲ್ಲಿದ್ದಾನೆ ಎಂಬ ಉತ್ತರವನ್ನೇ ನೀಡಿದ್ದಾರೆ. ಕಾರ್ಲ್‌ಯುಂಗನು, 'ಆಧುನಿಕ ಮಾನವ ತನ್ನ ಆತ್ಮಶೋಧನೆಯಲ್ಲಿದ್ದಾನೆ' ಎನ್ನುತ್ತಾನೆ. ಇದನ್ನೇ ಶಿಶಿರ್ ಕುಮಾರ್ ಘೋಷ್‌ರವರು, 'ಈ ಆತ್ಮ ಶೋಧನೆಯ ಆಳವಾದ ಹುಡುಕಾಟ ಮತ್ತು ಸಾಧ್ಯತೆಗಳಿಗೆ ಅನುಭಾವವೇ ಕಾರಣ ಹಾಗೂ ಗುರಿ' ಎರಡೂ ಆಗುತ್ತವೆ'[೧೧] ಎನ್ನುತ್ತಾರೆ.

ತನ್ನನ್ನೇ ತಾನು ಅರಿಯುವುದು, ತನ್ನ ಆತ್ಮದ ನಿಜ ಸ್ವರೂಪವನ್ನು ಕುರಿತು ಅನ್ವೇಷಣೆ ಮಾಡುವುದು, ತನ್ನಲ್ಲಿಯ ಮಹತ್ತರವಾದ ಆಳಗಳಿಗೆ ಇಳಿದು ಅಲ್ಲಿ ತನ್ನ ಆತ್ಮದ ದೈವಿಕತೆಯನ್ನು ಕಂಡುಕೊಳ್ಳುವುದು 'ಆತ್ಮಾನುಭಾವ'ದ ಮುಖ್ಯ ತಿರುಳು.

---

೧೦. **ಸಪಿಲೀತ**: ದ.ರಾ ಬೇಂದ್ರೆ,
೧೧. **ಮಿಸ್ಟಿಕ್ಸ್ ಅಂಡ್ ಸೊಸೈಟಿ,** ಪು. 10

ಓ ನನ್ನ ಚೇತನ
ಆಗು ನೀ ಅನಿಕೇತನ
ರೂಪ ರೂಪಗಳನು ದಾಟಿ,
ನಾಮ ಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ,
ಓ ನನ್ನ ಚೇತನ
ಆಗು ನೀ ಅನಿಕೇತನ![೧೨]

ಇಲ್ಲಿ ಕವಿ ಕುವೆಂಪುರವರು ತಮ್ಮ 'ಚೇತನ', 'ಆತ್ಮ' ಅನಂತತೆಯನ್ನು ಮುಟ್ಟಲಿ ಎಂದು ಆಶಿಸುವುದನ್ನು ಕಾಣಬಹುದು. ಅನುಭಾವಿಕ-ಕವಿ ತನ್ನ ಆತ್ಮ ಹೆಚ್ಚು ಮುಕ್ತವಾಗಲಿ, ಕಾಲ, ದೇಶಗಳನ್ನು ಮೀರಿ ಬೆಳೆಯಲಿ, ಅನಂತವಾಗಲಿ, ಎಂದು ಆಶಿಸುತ್ತಾನೆ.

ಅನುಭಾವಿಕ ಕವಿಗಳು ತಮ್ಮ 'ಅಂತರಾತ್ಮ'ವನ್ನು ಗುರುಸ್ವರೂಪಿ, ಎಂದು ಭಾವಿಸುತ್ತಾರೆ. ಗುರುವಿನ ಮುಂದೆ ಎಲ್ಲವನ್ನೂ ನಿವೇದಿಸಿಕೊಳ್ಳುವ ಗುಣ ಇವರಲ್ಲಿದೆ. ಇದನ್ನು ನಾವು ಕ್ರೈಸ್ತ ಹಾಗೂ ಸೂಫೀ ಅನುಭಾವಿಗಳಲ್ಲೂ ಕಾಣಬಹುದು. ವಚನಕಾರರಾಗಲಿ, ದಾಸರಾಗಲಿ, ಭಕ್ತಿಪಂಥಕ್ಕೆ ಸೇರಿದ ಎಲ್ಲ ಅನುಭಾವಿ ಕವಿಗಳೂ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎನ್ನುತ್ತಾರೆ. ತಮ್ಮ ಗುರುವಿನ ಮುಂದೆ ತಾವು ಮಾಡಿದ ಪಾಪ, ಪುಣ್ಯಗಳನ್ನು ನಿವೇದಿಸಿಕೊಳ್ಳುವುದರ ಮೂಲಕವೂ ಇವರು ತಮ್ಮ ಆತ್ಮಶೋಧನೆಯನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ.

ಮುಚ್ಚು ಮರೆಯಿಲ್ಲದೆಯೆ ನಿನ್ನ ಮುಂದೆಲ್ಲವನು
ಬಿಚ್ಚಿಡುವೆ, ಓಗುರುವೆ, ಅಂತರಾತ್ಮ
ನಾಕವಿದೆ, ನರಕವಿದೆ, ಪಾಪವಿದೆ, ಪುಣ್ಯವಿದೆ;
ಸ್ವೀಕರಿಸು ಓ ಗುರುವೆ, ಅಂತರಾತ್ಮ ![೧೩]

ತಮ್ಮ ಮನಸ್ಸಿನ ಎಲ್ಲ ವಿಚಾರಗಳನ್ನೂ 'ಗುರು' ಅಥವಾ 'ಅಂತರಾತ್ಮನ' ಮುಂದೆ ನಿವೇದಿಸುವ ಮುಖಾಂತರವೂ ಇವರು ಆತ್ಮಶುದ್ಧಿಗೆ ಪ್ರಯತ್ನಿಸುತ್ತಾರೆ. 'ಆತ್ಮಶುದ್ಧಿ' ಕೂಡ 'ಆತ್ಮಾನುಭಾವ'ದ ಒಂದು ಮಜಲು ಎಂದೇ ಹೇಳಬೇಕು.

'ಆತ್ಮನಿಂದನೆ' ಕೂಡ 'ಆತ್ಮಾನುಭಾವ' ದ ಒಂದು ಮಾರ್ಗ. ಆತ ತನ್ನನ್ನು ಎಷ್ಟೆಷ್ಟು ನಿಂದಿಸಿಕೊಳ್ಳುತ್ತಾನೋ ಅಷ್ಟಷ್ಟು ಪರಿಶುದ್ಧಗೊಳ್ಳುತ್ತೇನೆ ಎಂದು ಭಾವಿಸುತ್ತಾನೆ. ಬಸವಣ್ಣನವರು, 'ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ!' ಎಂದು ಹೇಳಿಕೊಳ್ಳುತ್ತಾರೆ.

---

೧೨. ಅನಿಕೇತನ, ಕುವೆಂಪು, ಪು. 60
೧೩. ಅಗ್ನಿಹಂಸ, ಕುವೆಂಪು, ಪು 65

ಅಕ್ಕಮಹಾದೇವಿ,

ಮನೆ ಮನೆದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ!
ಬೇಡಿದರೆ ಇಕ್ಕದಂತೆ ಮಾಡಯ್ಯ!
ಇಕ್ಕಿದರೆ ನೆಲಕ್ಕೆ ಬೀಳುವಂತೆ ಮಾಡಯ್ಯ!
ನೆಲಕ್ಕೆ ಬಿದ್ದರೆ ನಾನೆತ್ತಿಕೊಂಬುವುದಕ್ಕೆ ಮುನ್ನವೇ
ಶುನಿ ಎತ್ತಿಕೊಂಬಂತೆ ಮಾಡಾ
ಚೆನ್ನಮಲ್ಲಿಕಾರ್ಜುನಯ್ಯ![೧೪]

ಎನ್ನುತ್ತಾಳೆ. ಬಸವಣ್ಣನಲ್ಲಾಗಲಿ, ಅಕ್ಕನಲ್ಲಾಗಲಿ 'ಆತ್ಮನಿರಸನ'ವಿದೆ. ಯಾವುದೇ ವ್ಯಕ್ತಿ ಸಾಮಾನ್ಯವಾಗಿ ಆಶಿಸಲಾರದ ಬೇಡಿಕೆಯನ್ನು ಅಕ್ಕ ಚೆನ್ನಮಲ್ಲಿಕಾರ್ಜುನನ ಮುಂದಿಕ್ಕುತ್ತಾಳೆ. ಯಾವುದೇ ವ್ಯಕ್ತಿ ತನಗೆ ಒಳ್ಳೆಯದಾಗಲಿ, ಒಳ್ಳೆಯದನ್ನು ಕೊಡು, ಮಾಡು ಎಂದು ಕೇಳಿದರೆ, ಅನುಭಾವಿಗಳು 'ಆತ್ಮನಿರಸನ' ಮಾಡಿಕೊಳ್ಳುತ್ತಾರೆ. ತಮ್ಮನ್ನು ತಾವು ಹಳಿದುಕೊಳ್ಳುವುದರ ಮೂಲಕ 'ಆತ್ಮಶೋಧನ' ಕ್ರಿಯೆಯೂ ನಡೆಯುತ್ತದೆ.

ಎಂಥಿಂಥಾದೆಲ್ಲಾನು ಬರಲಿ
ಚಿಂತೆಯೆಂಬೋದು ನಿಜವಾಗಿರಲಿ
ಗಂಡಸ್ತಾನ ಇಲ್ಲದಂತಾಗಲಿ
ಬಂಡನೆಂದು ಜನಗಳು ಬೈದಾಡಲಿ
ಕುಂಡಿ ಕುಂಡಿ ಮೇಲೆ ನಾಲ್ವರೊದೆಯಲಿ
ಬಂಡು ಮಾಡಿ ಬಯಲಿಗೆ ನಗುತಿರಲಿ[೧೫]

ತಾನು ದೇವನಿಗಿಂತ ಬಹಳ ಕೀಳು ಎಂಬ ಭಾವ ಅವನಲ್ಲಿ ತಲೆದೋರುವುದು ಕೂಡ ಭಾವ ಶುದ್ಧೀಕರಣ, ಆತ್ಮ ಶುದ್ಧೀಕರಣದ ಒಂದು ವಿಧಾನ. ಅನುಭಾವಿಕ ಕವಿ 'ಆತ್ಮ'ಗಳಿಗೆಲ್ಲ ಮೂಲವಾದ ಆತ್ಮ 'ಪರಮಾತ್ಮ', ಎಂದು ಭಾವಿಸುತ್ತಾನೆ. ಈ ಪರಮಾತ್ಮ ಬೇರೆಲ್ಲೋ ಇಲ್ಲ, ಆತ ಭಕ್ತನ ಹೃದಯದಲ್ಲಿಯೇ ಮನೆ ಮಾಡಿದ್ದಾನೆ ಎಂದು ನಂಬುತ್ತಾನೆ. ಆದ್ದರಿಂದಲೇ ಅನುಭಾವಿ ಕವಿ ದೇವರ ಶೋಧನೆ ಅಥವಾ ಅನ್ವೇಷಣೆಯನ್ನು ಮಾಡಲು ಆತ್ಮದ ಅನ್ವೇಷಣೆ ಅಥವಾ ಶೋಧನೆಗೆ ತೊಡಗುವುದನ್ನು ಗಮನಿಸಬಹುದು.

ದೇವನ ಇರುವು ಆತ್ಮನ ಅರಿವು[೧೬]

ಜೀವಾತ್ಮನ ಇರವೇ ಪರಮಾತ್ಮನ ಅರಿವಾಗುತ್ತದೆ. ಅನುಭಾವಿ ಕವಿ 'ಆತ್ಮ'ವನ್ನು 'ದೇವರಿ'ಗೆ ಸಮಾನ ಎಂದು ಭಾವಿಸುತ್ತಾನೆ. ಆದ್ದರಿಂದಲೇ 'ಆತ್ಮ'ದ ಬಗೆಗೆ ಪ್ರಜ್ಞಾವಂತನಾಗಿ ತಿಳಿದುಕೊಂಡರೆ ಭಗವಂತನನ್ನು ಅರ್ಥಮಾಡಿಕೊಂಡಂತೆ, ಎಂದೇ

---

೧೪. ವಚನ ಕಮ್ಮಟ, ಬೆಂಗಳೂರು ವಿ. ವಿ. ಪು. 72
೧೫. ಬರಕೋ ಪದಾ ಬರಕೋ, ಪು 42
೧೬. ನನ್ನನಲ್ಲ, ಪು. 16

ನಂಬುತ್ತಾನೆ. ಈ ಹಂತದಲ್ಲಿಯೇ ಆತ 'ನಾನು' ಎಂಬುದು ಅಳಿಯಬೇಕು ಎಂದು ಆಶಿಸುತ್ತಾನೆ.

ನೀನೆಂಬ ಜ್ಯೋತಿಯಲಿ ನಾನೆಂಬ ಪತಂಗ
ಸೋತ ಉಲಿ ಏಳಲಿ
ದೀಪ ಹಬ್ಬಾ[೧೭]

ತನ್ನ 'ಅಹಂ' ಅಳಿದು ತನ್ನದು ಎಂಬುದೆಲ್ಲ ಸಂಪೂರ್ಣವಾಗಿ ನಶಿಸಿ, ಆ ಮೂಲಕ ಭಗವಂತನ 'ಅಹಂ'ನ ನಿರಸನದ ವಿಧಾನದ ಮೂಲಕ ಅನುಭಾವವನ್ನು ಪಡೆಯುವ ಮಾರ್ಗವಿದೆ. ಈ ಆತ್ಮಪ್ರಜ್ಞೆ, ವಿಶ್ವಪ್ರಜ್ಞೆಗೆ ದಾರಿ ಮಾಡಿಕೊಡುತ್ತದೆ.

'ಜಡ, ಜೀವ, ಈಶ್ವರ-ಇವುಗಳಲ್ಲಿ ಅತ್ಯಂತ ಪಾರಮಾರ್ಥಿಕ ಭೇದವಿದೆ ಮತ್ತು ಅದು ಮುಕ್ತ ಸ್ಥಿತಿಯಲ್ಲಿಯೂ ಹಾಗೇ ಇರುವುದು', ಎಂದು ಪಂಚಮುಖಿಯವರು ಹೇಳುತ್ತಾರೆ. ಇದೇ ಸಂದರ್ಭದಲ್ಲಿ ಅವರು ದಾಸಪಂಥದಲ್ಲಿ ಬಂದ ಮುಕ್ತಕ ಲಕ್ಷಣಗಳನ್ನು ಹಾಗೂ ಚತುರ್ವಿಧ ಮುಕ್ತಿಗಳನ್ನು ವರ್ಣಿಸುತ್ತಾರೆ. ದಾಸರು ಜೀವಾತ್ಮ ಹಾಗೂ ಪರಮಾತ್ಮ ಬೇರೆ ಬೇರೆ ಎಂದು 'ದ್ವೈತ' ಸಿದ್ಧಾಂತವನ್ನು ಪ್ರತಿಪಾದಿಸಿದರೆ, ಅದ್ವೈತ, 'ಜೀವಾತ್ಮ' 'ಪರಮಾತ್ಮ'ಗಳು ಬೇರೆ ಬೇರೆಯಲ್ಲ, ಅವು ಒಂದೇ ಎಂದು ಹೇಳುತ್ತದೆ. ಪರಮಾತ್ಮನ ಒಂದು ರೂಪವೇ ಜೀವಾತ್ಮ, ಇದನ್ನು ಕಠೋಪನಿಷತ್ತಿನಲ್ಲಿಯೂ ಕಾಣಬಹುದು.

ಅಣೋರಣೀಯಾನ್ ಮಹತೋ ಮಹೀಯಾನ್
ಆತ್ಮಸ್ಯಜಂತೋ ರ್ನಿಹಿತೋ ಗುಹಾಯಾಂ.

ಆತ್ಮ ಅಣುವಿಗಿಂತಲೂ ಸಣ್ಣ ಪ್ರಮಾಣದ್ದು, ಮಹತ್ತಿಗಿಂತಲೂ ಮಹತ್ತರವಾದುದು. ಈ ಆತ್ಮ ಸಕಲ ಜೀವ ಚರಾಚರಗಳಲ್ಲಿಯೂ ಇರುವಂತಹದೆ. ಆದರೆ ಈ ಆತ್ಮ ಸಾಕ್ಷಾತ್ಕಾರವಾಗುವ ತನಕ ಜೀವಾತ್ಮನಿಗೆ, ಪರಮಾತ್ಮನಿಗೆ ಅಂತರ ಉಂಟು. ಪರಮಾತ್ಮನ ಅರಿವನ್ನು ಅದ್ವೈತಿಗಳು 'ಜ್ಞಾನ' ಮಾರ್ಗದಿಂದ ಸಾಧಿಸಿಕೊಳ್ಳುತ್ತಾರೆ. ದ್ವೈತಿಗಳು 'ಭಕ್ತಿ' ಮಾರ್ಗವನ್ನು ಅನುಸರಿಸುತ್ತಾರೆ.

ಪುಲ್ಲಿಂಗ ಬ್ರಹ್ಮಕಂಡೆ - ಸ್ತ್ರೀಲಿಂಗ ಬ್ರಹ್ಮ ಕಂಡೆ
ನಪುಂಸಕ ಬ್ರಹ್ಮ ಕಂಡೆ.[೧೮]

ಇಲ್ಲಿ ಕವಿ ಚೇತನ ಎಲ್ಲರಲ್ಲಿರುವುದೂ ಒಂದೇ. ಅದು ನಾನಾ ರೂಪಗಳನ್ನು ಧರಿಸಿ, ನಾನಾ ಜೀವರಾಶಿಗಳಲ್ಲಿ ಅಡಗಿಕೊಂಡಿದೆ ಎಂದು ಹೇಳುತ್ತಿರುವುದನ್ನು ಗಮನಿಸಬಹುದು. ವಚನಕಾರರೂ 'ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ' ಎಂದು ಹೇಳುತ್ತ ಆತ್ಮಕ್ಕೆ ಹೆಣ್ಣು, ಗಂಡು ಗುಣಗಳಾವುವೂ ಇಲ್ಲ, ಎಂದು ಹೇಳುತ್ತಾರೆ.

೧೭. ಅರುವತ್ತರ ಅರಲು, ಪು. 31
೧೮. ಓಂ ತತ್ ಸತ್, ಮುಗಿಲ ಮಲ್ಲಿಗೆ, ಪು. 12

ಆತ್ಮಾನುಭಾವಿ, 'ನಾನು' 'ನನ್ನದು' 'ನನ್ನಿಂದ', - ಎಂಬ 'ಅಹಂ' ಪ್ರಜ್ಞೆಯನ್ನು ಕಳೆದುಕೊಳ್ಳಲು ಪ್ರಯತ್ನಿಸುತ್ತಾನೆ. 'ಅಹಂಕಾರ'ದ ನಾಶವೇ ಸಾಧಕನ ಮೊದಲ ಹೆಜ್ಜೆ. ಇದು ಅತ್ಯಂತ ಕಷ್ಟಕರವಾದುದೂ ಹೌದು. ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ; ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ' ಎಂದು ಹೇಳುವಲ್ಲಿ 'ಆತ್ಮಾನುಭಾವ'ದ ಮಿಡಿತವನ್ನು ಗಮನಿಸುತ್ತೇವೆ. 'ಹೀಗೆ ಅಹಂಕಾರವನ್ನು ಬಿಟ್ಟು ಏಕೈಕ ನಿಷ್ಠೆಯಿಂದ ಪರಮಾತ್ಮನ ಮೊರೆಹೊಕ್ಕು ಸಾಧಕನ ಪ್ರೇಮವು 'ನಾನು' ಎಂಬ ಸಂಕುಚಿತ ಸ್ವಾರ್ಥವನ್ನು ದಾಟುವುದರಿಂದ ನಿರ್ಹೇತುವಾಗುತ್ತದೆ; ಪ್ರತಿಫಲಾಪೇಕ್ಷೆ ಇಲ್ಲದುದಾಗುತ್ತದೆ.'[೧೯] ಲೌಕಿಕ ಅವಶ್ಯಕತೆಗಳ ದೃಷ್ಟಿಯಿಂದಲೇ ವಸ್ತುಗಳ, ವಿಚಾರಗಳ ಬೆಲೆ ಕಟ್ಟಲು ಪ್ರಾರಂಭಿಸಿದರೆ ನಿರಂತರ ಸತ್ಯದ ಸ್ವರೂಪ ದೊರೆಯದೆ ಹೋಗಬಹುದು. ಆದ್ದರಿಂದ ಅವುಗಳನ್ನು ಪ್ರಯೋಜನ ದೃಷ್ಟಿಯಿಂದಲೇ ಪರಿಗಣಿಸಬಾರದು. ಹಾಗೇನಾದರೂ ಪರಿಗಣಿಸಿದರೆ, ಮಾನವೀಯತೆಯನ್ನು, ಮನುಷ್ಯತ್ವವನ್ನು ಕಡೆಗಣಿಸಿದಂತಾಗುತ್ತದೆ. ಆದ್ದರಿಂದ 'ನನ್ನನ್ನು', 'ಅವನ'ಲ್ಲಿ ಯಾವಾಗ ಕಂಡುಕೊಳ್ಳಲು ಸಾಧ್ಯವೆಂದರೆ, ಸ್ವಾರ್ಥರಹಿತ, ಶುದ್ಧ ಪ್ರೇಮ ಜಾಗೃತವಾದಾಗ ಮಾತ್ರ. ಇದೇ ಚೈತನ್ಯಾತ್ಮಕ ಶಕ್ತಿ ಎಂಬ ನಿಸ್ವಾರ್ಥ ಪ್ರೇಮ. ಈ ಗುಣ ಆತ್ಮಾನುಭಾವಿಯಲ್ಲಿ ಜಾಗೃತವಾಗಿರುತ್ತದೆ.

ಯಾವುದೇ ಒಂದು ವಿಚಾರಕ್ಕೂ ಕ್ರಮಬದ್ಧತೆ ಇರುವಂತೆ, ಅನುಭಾವಿಯೊಬ್ಬ ತಾನು ಕಂಡು, ಅರ್ಥೈಸಿಕೊಳ್ಳುವ ಆನುಭಾವಿಕ ಅನುಭವವೂ ನಾನಾ ಹಂತಕ್ಕೆ ಒಳಪಟ್ಟು ಬಂದುದಾಗಿರುತ್ತದೆ. ಪ್ರತಿಯೊಂದು ಹಂತವೂ ಅಂತರ್ ಪ್ರಕ್ರಿಯೆ, ತೀವ್ರ ಘರ್ಷಣೆಗೆ ಒಳಗಾದುದಾಗಿದೆ. ಅನುಭಾವಿ ತಾನು ಆನುಭಾವಿಕ ಅನುಭವವನ್ನು ಪಡೆದಿದ್ದೇನೆ ಎಂದು ಕಂಡುಕೊಳ್ಳುವ ಹೊತ್ತಿಗಾಗಲೇ ಅವನಿಗೆ ಅರಿವಿರುವಂತೆಯೋ ಅಥವಾ ಅರಿವಿಲ್ಲದಂತೆಯೋ ಅವನ ಮನಸ್ಸು ನಾನಾ ಹಂತಗಳಲ್ಲಿ ಸಂಚರಿಸಿರುತ್ತದೆ. ಹೀಗಾಗಿ, ಮಧುರ ಚೆನ್ನರಂತಹ ನಮ್ಮ ಸಂದರ್ಭದ ಒಬ್ಬ ಅನುಭಾವಿ ಕವಿಯನ್ನು ಗಮನದಲ್ಲಿಟ್ಟುಕೊಂಡು ವಿವಿಧ ಅನುಭವಗಳ ನಾನಾ ಹಂತಗಳನ್ನು ಈ ರೀತಿ ವಿಭಜಿಸಿಕೊಳ್ಳಬಹುದು.

೧. ಪೂರ್ವರಂಗ

೨. ಕಾಳರಾತ್ರಿ

೩. ಬೆಳಗು.

ಈ ವಿಭಜನೆಯನ್ನು ಮಧುರಚೆನ್ನರು ತಮ್ಮ ಅನುಭಾವದ ಕಾಣ್ಕೆಯ ಸಂದರ್ಭದಲ್ಲಿ ಮಾಡಿಕೊಂಡಿದ್ದಾರೆ. ಅದನ್ನೇ ನಮ್ಮ ಅಧ್ಯಯನಕ್ಕೆ ಬಳಸಿಕೊಳ್ಳಬಹುದು. ಅನುಭಾವಿಯೊಬ್ಬ ಆನುಭಾವಿಕ ಅನುಭವಗಳನ್ನು ಪಡೆಯುತ್ತಿದ್ದಾನೆ ಎಂದ ಮಾತ್ರಕ್ಕೆ ಆತ

---

೧೯. ಶರಣರ ಅನುಭಾವ ಸಾಹಿತ್ಯ, ಪು 55

ಕಡ್ಡಾಯವಾಗಿ ಈ ಎಲ್ಲ ಸ್ಥಿತಿಗಳನ್ನೂ ಕ್ರಮಬದ್ಧವಾಗಿಯೇ ತಲುಪುತ್ತಿದ್ದಾನೆ ಅಥವಾ ತಲುಪಬೇಕು ಎಂದೇನಿಲ್ಲ. ಯಾವುದಾದರೊಂದು ಸ್ಥಿತಿಯನ್ನು ಮುಟ್ಟದೆ, ಮತ್ತೊಂದು ಸ್ಥಿತಿಯನ್ನು ಅನುಭಾವಿ ಪಡೆಯಲು ಸಾಧ್ಯವಿದೆ. ಆರ್. ಡಿ. ರಾನಡೆಯವರು ಮಹಾರಾಷ್ಟ್ರದ ಅನುಭಾವಿಗಳನ್ನು ಕುರಿತು ಮಾತನಾಡುವಾಗ ಇದನ್ನು ಸ್ಪಷ್ಟಪಡಿಸುತ್ತಾರೆ. ಬನಿಯನ್ ಅಂತಹ ಅನುಭಾವಿಗಳು 'ಕಾಳರಾತ್ರಿ'ಯ ದಿನಗಳನ್ನು ಕಾಣುತ್ತಾರೆ. ಆದರೆ ಪ್ಲಾಟಿನಸ್ ಅಂತಹ ಅನುಭಾವಿಗಳು ಇಂತಹ ದಿನಗಳನ್ನು ಅನುಭವಿಸುವುದೇ ಇಲ್ಲ. ಮಹಾರಾಷ್ಟ್ರದ ಅನುಭಾವಿಗಳಾದ ತುಕಾರಾಮ್, ನಾಮದೇವ-ಮುಂತಾದವರು ಇಂತಹ 'ಕಾಳರಾತ್ರಿ'ಯ ಅನುಭವವನ್ನು ಪಡೆಯುತ್ತಾರೆ. ರಾಮದೇವನಲ್ಲಿ ಇವರಿಗಿಂತ ಕಡಿಮೆ ಪ್ರಮಾಣದಲ್ಲಿ ಕಂಡುಬಂದರೆ, ಜ್ಞಾನೇಶ್ವರಿಯಲ್ಲಿ ಕಾಳರಾತ್ರಿಯ ಸುಳಿವು ಕಿಂಚಿತ್ತೂ ಇಲ್ಲ[೨೦] ಎಂದು ಹೇಳುವುದನ್ನು ಗಮನಿಸಬಹುದು. ಸಾಮಾನ್ಯವಾಗಿ, ಭಕ್ತ ಕವಿಗಳು ಈ ಮೂರು ಹಂತಗಳನ್ನು ಅನುಭವಿಸುತ್ತಾರೆ. ೧೨ನೇ ಶತಮಾನದ ಅಕ್ಕಮಹಾದೇವಿ ಇದರ ಅತ್ಯುತ್ತಮ ಉದಾಹರಣೆ.

ಪೂರ್ವರಂಗ

ಇದು ಅನುಭಾವಿಕ ಅನುಭವದ ಅತ್ಯಂತ ಪ್ರಾಥಮಿಕ ಹಂತ. ಅನುಭಾವಿಯೊಬ್ಬನಿಗೆ ಆಧ್ಯಾತ್ಮಿಕ ಅನುಭವವಾಗಿದೆ. ದೇವರ ಅಸ್ತಿತ್ವದ ಅರಿವಿದೆ. ಆದರೆ ಅದರ ಅಸ್ತಿತ್ವವನ್ನು ಹುಡುಕಿಕೊಳ್ಳುವ ಶೋಧನೆ, ಅನ್ವೇಷಣೆ, ಹುಡುಕಾಟಗಳು ಈ ಸ್ಥಿತಿಯಲ್ಲಿ ಮುಖ್ಯವಾಗುತ್ತವೆ.

'ಪೂರ್ವರಂಗ' ಯಾವುದೇ ಅನುಭಾವಿಯ ಸಾಧನೆಯ ಆರಂಭದ ಹಂತ. 'ದೇವರನ್ನು ಕಾಣಬೇಕು' ಎಂಬ ಉದ್ದೇಶ, ತವಕ ಈ ಸ್ಥಿತಿಯಲ್ಲಿ ಮುಖ್ಯವಾದ ಲಕ್ಷಣ, ಎಂದೇ ಹೇಳಬೇಕಾಗುತ್ತದೆ. 'ದೇವರು ತನಗೆ ಕಾಣಸಿಗದಿದ್ದರೂ, ಅದರ ಅನುಭವ ಆಗಿರದಿದ್ದರೂ, ಆತ ಇದ್ದೇ ಇದ್ದಾನೆ ಎಂಬ ದೃಢವಾದ ನಂಬಿಕೆಯನ್ನು ಆತ ಹೊಂದಿರಬೇಕು. 'ಸಾಧಕನು' ತನ್ನ ಸರ್ವಪತನಗಳಲ್ಲಿಯೂ ಪರ್ಯಾಯದಿಂದ ತನ್ನ ಪ್ರಗತಿಯೇ ನಡೆದಿದೆ ಎಂಬ ಸಂಪೂರ್ಣ ಶ್ರದ್ಧೆಯುಳ್ಳವನಾಗಿರಲಿಕ್ಕೇ ಬೇಕು. ಸತ್ಯವಾಗಿಯೂ ಅವನಿಗೆ ಯೋಗ ಸಿದ್ಧಿ ತಪ್ಪಿದ್ದಲ್ಲ. ಪರಮಾತ್ಮನು ಪೂರ್ಣ ಮಂಗಲಮಯನೆಂಬ ಮಾತು ನೆನಪಿರಲಿ. ಸಮಗ್ರ ಜಗತ್ತನ್ನಾಳುವ ಮಹಾಶಕ್ತಿಗೆ ಕನಿಷ್ಠ ಪಕ್ಷ ನಿನ್ನಷ್ಟಾದರೂ. ಬುದ್ಧಿ ಇಲ್ಲದೆ ಇಲ್ಲವೆಂಬುದನು ಮರೆಯದಿರು[೨೧] ಎನ್ನುತ್ತಾರೆ, ಮಧುರಚೆನ್ನರು

ಹರನೇ ನೀನೆನಗೆ ಗಂಡನಾಗಬೇಕೆಂದು
ಅನಂತಕಾಲ ತಪಿಸಿದ್ದೆ ನೋಡಾ [೨೨]

---

೨೦ ಮಿಸ್ಟಿಸಿಂ ಇನ್ ಮಹಾರಾಷ್ಟ್ರ, ಪುಟ 17

೨೧. ಪೂರ್ವರಂಗ, ಪು. 40

೨೨. ವಚನ ಕಮ್ಮಟ, ಬೆಂಗಳೂರು ವಿ. ವಿ. ಪು. 58

ಇಲ್ಲಿ ಆಕೆಗೆ ದೇವರ ಅಸ್ತಿತ್ವದ ಬಗೆಗೆ ಸ್ಪಷ್ಟ ಅನುಭವವಾಗಿದೆ. ಆದರೆ ಅದನ್ನು ಕುರಿತಾದ ಶೋಧನೆ, ಅನ್ವೇಷಣೆ ಮುಖ್ಯವಾಗುತ್ತದೆ.

ಹಗಲ ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು
ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು !
ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಒಲುಮೆ ನಟ್ಟು
ಹಸಿವು-ತೃಷೆ-ನಿದ್ರೆಯ ಮರೆದೆನು !

ಇದು ಅಕ್ಕನ ಅನುಭಾವ ಸಾಧನೆಯ ಪ್ರಾಥಮಿಕ ಹಂತ. ತನ್ನ ಇಷ್ಟದೈವವನ್ನು ಕಾಣಬೇಕೆಂಬ ತವಕ, ಉದ್ದೇಶಗಳನ್ನು ಹೊಂದಿರುವ ಹಂತ. ಇಲ್ಲಿ ಆತನ ಸಾಕ್ಷಾತ್ಕಾರ ಇನ್ನೂ ಆಗದಿದ್ದರೂ, ಆತ ಇದ್ದೇ ಇದ್ದಾನೆಂಬ ದೃಢವಾದ ನಂಬಿಕೆ ಇದೆ.

ಪೂರ್ವರಂಗವು ಅದರ ಹೆಸರೇ ಹೇಳುವಂತೆ ಅನುಭಾವಿಯೊಬ್ಬನ ಸಾಧನೆಯ ಆರಂಭದ ಹಂತ. ಇಲ್ಲಿ ದೇವರ ಬಗೆಗೆ ಅಚಲವಾದ ಶ್ರದ್ಧೆ, ನಂಬಿಕೆಗಳಿರುತ್ತವೆ. ಜೊತೆಗೆ ತಾಳ್ಮೆ ಹಾಗೂ ನಿರೀಕ್ಷಣಾಭಾವಗಳಿರುವುದು ಬಹಳ ಮುಖ್ಯವಾದ ಅಂಶಗಳು.

ಕಾಳರಾತ್ರಿ

'ಪೂರ್ವರಂಗ'ದಲ್ಲಿ ಅನುಭಾವಿಯ ಸಾಧನೆಯು ಪ್ರಾರಂಭವಾದರೆ, 'ಕಾಳರಾತ್ರಿ'ಯ ಸ್ಥಿತಿಯಲ್ಲಿ ಅದರ ಹೆಸರೇ ಸೂಚಿಸುವಂತೆ, ಅನುಭಾವಿಕ ಸಾಧನೆ ಕತ್ತಲಲ್ಲಿ ಮುಳುಗಿ ತಟಸ್ಥಗೊಳ್ಳುತ್ತದೆ. 'ಪೂರ್ವರಂಗ'ದಲ್ಲಿ ಕಂಡು ಬರುವ ದೇವನ ಅಸ್ತಿತ್ವದ ಸ್ಪಷ್ಟ ಅರಿವು ಇಲ್ಲಿ ಅಸ್ಪಷ್ಟವಾಗುತ್ತದೆ.

ಪಾಶ್ಚಾತ್ಯ ಅನುಭಾವಿಗಳು ಗುರುತಿಸುವ 'Dark night of the soul' ಎಂಬ ಸ್ಥಿತಿಗೆ ಸಮಾನಾಂತರವಾದ ಸ್ಥಿತಿ ಇದು. ಇದೊಂದು ಜಡ ಸ್ಥಿತಿ. ದೇವನ ಅಸ್ತಿತ್ವವನ್ನು ಖಚಿತಪಡಿಸಿಕೊಳ್ಳುವ ಸಂದರ್ಭದಲ್ಲಿ ಉದ್ಭವಿಸುವ ತೊಡಕುಗಳು, ತೊಂದರೆಗಳನ್ನು ಈ ನೆಲೆಯಲ್ಲಿ ಕಾಣಬಹುದು. 'ಕಾಳರಾತ್ರಿ'ಯ ಸ್ಥಿತಿಯನ್ನು ವಿವರಿಸುತ್ತಾ ಸಿಂಪಿ ಲಿಂಗಣ್ಣನವರು ಹೇಳುವ ಮಾತುಗಳನ್ನು ಇಲ್ಲಿ ಗಮನಿಸಬಹುದು. ''ಪೂರ್ವರಂಗ'ದಲ್ಲಿ ಶ್ರದ್ಧೆಯನ್ನು ಹೆಚ್ಚು ಶುದ್ಧಗೊಳಿಸುವುದಕ್ಕೆಂದು ಸಂದೇಹಗಳ ದಾಳಿಯು ತಿರು ತಿರುಗಿ ತೂರಿ ತೂರಿ ಬರುವಂತೆ, ಮುಂದಿನ ಮಧ್ಯರಂಗದ ಕಾಲದಲ್ಲಿ ಶಕ್ತಿಯನ್ನು ಹೆಚ್ಚು ಬಲಪಡಿಸಲಿಕ್ಕೆಂದು ಸಂಕಟಗಳ ಸೈನ್ಯವು ಕ್ಷಣ ಕ್ಷಣಕ್ಕೆ ಹೊಸ ಹೊಸ ಉಗ್ರ ಸ್ವರೂಪದಿಂದ ಸಾಧಕನನ್ನು ಸಂಧಿಸುವುದು . ಇದೇ ಕಾಳರಾತ್ರಿಯು''[೨೩]

---

೨೩. ಶ್ರೀ ಮಧುರಚೆನ್ನರ ಸ್ಮೃತಿಗಳು, ಪು 83

'ಕಾಳರಾತ್ರಿ'ಯಲ್ಲಿ ಅಕ್ಕನಿಗೆ 'ಪೂರ್ವರಂಗ'ದಲ್ಲಿ ಭಗವಂತನ ಬಗೆಗೆ ಇದ್ದಂತಹ ಸ್ಪಷ್ಟತೆ ಮರೆತು ಅಸ್ಪಷ್ಟತೆಗಳು ಉಂಟಾಗುತ್ತವೆ. ಈ ಹಂತದಲ್ಲಿ ಆಕೆ ನೆಲೆತಪ್ಪಿದ ಹಕ್ಕಿಯಾಗುತ್ತಾಳೆ.

ಆಲಿಸೆನ್ನ ಬಿನ್ನಪವ, ಲಾಲಿಸೆನ್ನ ಬಿನ್ನಪವ, ಪಾಲಿಸೆನ್ನ ಬಿನ್ನಪವ
ಏಕೆನ್ನ ಮೊರೆಯ ಕೇಳೆಯಯ್ಯಾ ತಂದೆ ?
ನೀನಲ್ಲದೆ ಮತ್ತಿಲ್ಲ, ಮತ್ತಿಲ್ಲ.
ನೀನೇ ಎನಗೆ ಗತಿ, ನೀನೇ ಎನಗೆ ಮತಿಯಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ[೨೪]

ಚೆನ್ನಮಲ್ಲಿಕಾರ್ಜುನ ತನ್ನ ಮೊರೆಯನ್ನು ಕೇಳುತ್ತಿಲ್ಲವೆಂಬ ಹತಾಶೆ, ನಿರಾಶೆಗಳು ಇಲ್ಲಿಂದ ಪ್ರಾರಂಭವಾಗುತ್ತವೆ. ಆಕೆ ತನ್ನ ದೈವದ ಅನ್ವೇಷಣೆ ಸ್ಥಗಿತಗೊಂಡಾಗ, ಅಸ್ಪಷ್ಟಗೊಂಡಾಗ, ಪ್ರಾಣಿ ಪ್ರಪಂಚ, ಪ್ರಕೃತಿ ಪ್ರಪಂಚದೊಡನೆ ನೇರವಾಗಿ ಸಂಭಾಷಣೆಗಿಳಿಯುತ್ತಾಳೆ.

ಅಳಿ ಸಂಕುಲವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ
ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು; ಎನ್ನೊಡೆಯ
ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೇ.[೨೫]

ಮನುಷ್ಯ ಪ್ರಪಂಚದ ಕಾಠಿಣ್ಯದಿಂದಾಗಿ ಆಕೆಗೆ ಪ್ರಾಣಿ ಜಗತ್ತು, ಪಕ್ಷಿಜಗತ್ತು, ಪ್ರಾಕೃತಿಕ ಜಗತ್ತು ಅತ್ಯಂತ ಆತ್ಮೀಯವಾಗುತ್ತವೆ, ಆಪ್ತವಾಗುತ್ತವೆ.

ಆಕೆ ಯಾವ ಹಂತ ತಲುಪುತ್ತಾಳೆಂದರೆ ಮನವೊಲಿಸುವ ಹಂತವನ್ನಲ್ಲ

ಅಯ್ಯಾ ನೀನು ಒಲಿದೆಡೆ ಒಲಿ
ಒಲಿಯದಿದ್ದಡೆ ಮಾಣು, ಆನು ಪೂಜಿಸದಲ್ಲದೆ ಸೈರಿಸಲಾರೆನು.[26]

ಆತನ ಕಡೆಯಿಂದ ಬರಬಹುದಾದ ಪ್ರತಿಕ್ರಿಯೆಗಳಿಗೆ ಕಿವುಡಾಗಿ ತನ್ನ ಕರ್ತವ್ಯದಲ್ಲಿ ನಿರತಳಾಗಿರುವ ಸಾಧಕಿಯ ತಾಟಸ್ಥ್ಯ ಸ್ಥಿತಿ ಇದು.

ಈ ಹಂತದಲ್ಲಿ ಸಾಧಕನಿಗೆ ತನ್ನ ಗುರಿ ಎತ್ತ ಕಡೆಗಿದೆ ? ತಾನು ಎತ್ತ ಸಾಗಬೇಕು, ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ. ಆದರೂ ನಡೆದು ದಾರಿ ಸಾಗಿಸಬೇಕೆಂಬ ಛಲ ಮುಖ್ಯವಾಗುತ್ತದೆ. ಈ ಗಳಿಗೆಯಲ್ಲಿ ಮಾರ್ಗದರ್ಶಕ ಅಗತ್ಯವಾಗುತ್ತಾನೆ. ಅನುಭಾವಿ ಕವಿ 'ಗುರು'ವನ್ನು ಮಾರ್ಗದರ್ಶಕ, ಎಂದು ಸ್ವೀಕರಿಸುತ್ತಾನೆ.

---

೨೪. ಶಿವಶರಣರ ಸಂಪುಟ, ಪು. 22
೨೫. ವಚನ ಕಮ್ಮಟ, ಅಕ್ಕಮಹಾದೇವಿ, ಪು. 59
೨೬. ಶಿವಶರಣ ಸಂಪುಟ. ಪು. 9

ಅನುಭಾವಿ ಕವಿಯೊಬ್ಬನ ಸಂದರ್ಭದಲ್ಲಿ 'ಕಾಳರಾತ್ರಿ' ಅನಿವಾರ್ಯವಾಗಿ ಬರಬಹುದು. ಎಲ್ಲಾ ಅನುಭಾವಿಗಳ ಸಂದರ್ಭದಲ್ಲೂ ಇದು ಆಗೇ ಆಗುತ್ತದೆ ಎಂಬ ಕಡ್ಡಾಯವಿಲ್ಲ. ಆದರೂ ಇಂತಹ ಸ್ಥಿತಿ, 'ಪೂರ್ವರಂಗ'ದ ಸ್ಥಿತಿಯಲ್ಲಿನ ಅವನ ಸಾಧನೆಯನ್ನು ಕುಂಠಿತಗೊಳಿಸುತ್ತದೆ, ದಿಕ್ಕು ತಪ್ಪಿಸುತ್ತದೆ. ಅವನಲ್ಲಿ ಅಧೈರ್ಯವನ್ನುಂಟುಮಾಡಿ, ಆಶಾಭಾವನೆಯನ್ನು ಕಳೆದು ಜಡವಾಗಿಸುತ್ತದೆ. ಈ ಸ್ಥಿತಿಯಲ್ಲಿ ಆತನ ಆತ್ಮ ಕರಾಳ ಕಪ್ಪು ಛಾಯೆಯಲ್ಲಿ ಮುಳುಗಿ ನಿರ್ದಿಷ್ಟವಾಗಿ ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಸೋಲುತ್ತದೆ. ತನ್ನ ಮಾರ್ಗದರ್ಶನಕ್ಕೆ ಗುರುವೊಬ್ಬನ ಅಗತ್ಯವಿದೆ, ಎಂದು ನೆನೆಯುತ್ತದೆ. ಅವನ ಸಹಾಯದಿಂದ ತನ್ನ ಸಾಧನೆಗೆ ನಿರ್ದಿಷ್ಟ ತಿರುವು ಸಿಕ್ಕಬಹುದೆಂದು ಆಶಿಸುತ್ತದೆ. ಇದು 'ಆತ್ಮನ ಕಾಳರಾತ್ರಿ', ಆತ್ಮ ಅನುಭವಿಸಿದ ಸಂಕಷ್ಟಗಳ ಸ್ಥಿತಿ ಕೂಡ ಆಗುತ್ತದೆ.

ಬೆಳಗು

ಇದು ಸಾಧಕನೊಬ್ಬನ ಮುಂದಿನ ಹಾಗೂ ಕೊನೆಯ ಘಟ್ಟ. ಹೆಸರೇ ಸೂಚಿಸುವಂತೆ ಅನುಭಾವಿಯ ಅನುಭಾವ ಮಾರ್ಗದಲ್ಲಿನ 'ಕಾಳರಾತ್ರಿ'ಯ ಸ್ಥಿತಿ ಮುಗಿದು, ಅವನಲ್ಲಿ ಉಂಟಾಗುವ ಸ್ಪಷ್ಟತೆ, ಆತ್ಮಸಾಕ್ಷಾತ್ಕಾರದ ಸ್ಥಿತಿಯೇ ಇದು.

'ಕಾಳರಾತ್ರಿ'ಯ ಸ್ಥಿತಿಯಲ್ಲಿರುವ ಆತ್ಮ ತನ್ನ ಬದುಕಿನ ಸಾಧನೆಯ ಸಂದರ್ಭದಲ್ಲಿ ಅನೇಕ ಕಷ್ಟ ನಷ್ಟಗಳನ್ನನುಭವಿಸುತ್ತದೆ. ತಾನು ನಡೆಸುತ್ತಿರುವ ಸಾಧನೆ ಸಫಲವಾಗುತ್ತಿಲ್ಲ, ಎಂಬ ಅನಿರ್ದಿಷ್ಟ ಸ್ಥಿತಿ ತಲುಪಿ, ಅತ್ಯಂತ ತೀವ್ರವಾದ ನಿರಾಶೆಗೆ ಒಳಗಾಗುತ್ತದೆ.

ಈ ಸ್ಥಿತಿ ಕ್ರಮೇಣ ಮಾಯವಾಗಿ ಅವನೆಲ್ಲ ಗೊಂದಲ, ಭ್ರಮಾತ್ಮಕ ಚಿಂತನೆಗಳಿಗೆ ಒಂದು ನಿರ್ದಿಷ್ಟತೆ ಉಂಟಾಗಲು ಪ್ರಾರಂಭವಾಗುತ್ತದೆ. ಇಂತಹ ಸ್ಥಿತಿಯನ್ನೇ ನಾವು 'ಬೆಳಗು' ಎಂದು ಗುರುತಿಸುತ್ತೇವೆ. ಅಸ್ಪಷ್ಟವಾದ, ಮಬ್ಬು, ಅಜ್ಞಾನದ ಬದುಕಿಗೆ ಕ್ರಮೇಣ ಸ್ಪಷ್ಟತೆ, ಜ್ಞಾನ, ಬೆಳಕುಂಟಾಗುವ ಸ್ಥಿತಿಯೇ ಇದು. ಈ ಸ್ಥಿತಿ ಸಾಧಕನ ಸಾಧನೆಯ ವಿಕಾಸವನ್ನೂ ಕುರಿತು ಹೇಳುತ್ತದೆ. ಅನುಭಾವಿ ಯಾವುದೋ ಹೊಳಹುಗಳಿಂದ ಈ ಬೆಳಗನ್ನು ಅನುಭವಿಸಬಹುದು. ಅದು ನಲ್ಲನ ಇರುವಿಕೆಯಾಗಬಹುದು. ಈ ಸತ್ಯದರ್ಶನ ಅವನಿಗೆ ಧ್ವನಿಯ ಮೂಲಕ ಉಂಟಾಗಬಹುದು. ಬಣ್ಣ, ನಿರಾಕಾರ, ಸಾಕಾರ-ಯಾವುದರ ಮೂಲಕವಾದರೂ ಆಗಬಹುದು.

ಅಕ್ಕ ಮಹಾದೇವಿ,

ಘನವ ಕಂಡೆ, ಅನುವ ಕಂಡೆ
ಆಯತ ಸ್ವಾಯತ ಸನ್ನಿಹಿತ ಸುಖವ ಕಂಡೆ
ಅರಿವರಿದು ಮರಹ ಮರೆದೆ
ಕುರುಹಿನ ಮೋಹ ಮೊರೆಗೆಡೆದೆ

ಚೆನ್ನಮಲ್ಲಿಕಾರ್ಜುನಾ
ನಿಮ್ಮನರಿದು ಸೀಮೆಗೆಟ್ಟನು[27]

ಅನುಭಾವದ ಅನುಭವ, ದೈವಸಾಕ್ಷಾತ್ಕಾರವಾದ ಅಕ್ಕನ ಅಭಿವ್ಯಕ್ತಿ ಇದು. ಇಲ್ಲಿ ಅಸ್ಪಷ್ಟ ಗೊಂದಲದ, ಕತ್ತಲೆಯ ಕಾಳರಾತ್ರಿಯ ಸ್ಥಿತಿ ಮಾಯವಾಗಿ ಬೆಳಕುಂಟಾಗಿದೆ.

ಅನುಭಾವಿ ಕವಿ 'ಬೆಳಗಿನ' ಸ್ಥಿತಿಯಲ್ಲಿ ತನ್ನ ಬದುಕಿನ ಕಷ್ಟ, ನಷ್ಟಗಳಿಂದ ಪಾರಾಗಿ ಹೊಸ ಸ್ವರೂಪವನ್ನು ಪಡೆದುಕೊಳ್ಳುತ್ತಾನೆ. ದೇವನ ಅಸ್ತಿತ್ವದ ಬಗೆಗಿನ ಅಸ್ಪಷ್ಟತೆ, ಅಮೂರ್ತತೆ, ಭೀಕರತೆ, ಕತ್ತಲು-ಇವೆಲ್ಲ ಮಾಯವಾಗಿ ಅದಕ್ಕೆ ಬದಲಾಗಿ ಸ್ಪಷ್ಟತೆ, ಮೂರ್ತತೆ, ಶಾಂತತೆ ಬೆಳಕನ್ನು ಕಂಡುಕೊಳ್ಳುತ್ತಾನೆ. ಈಗ ಇವನಲ್ಲಿ ಪೂರ್ವರಂಗ, ಕಾಳರಾತ್ರಿಗಳ ಸ್ಥಿತಿಯಲ್ಲಿದ್ದ ಅಶಾಂತಿಯಿಲ್ಲ. ಒಂದು ರೀತಿಯ ಮಾನಸಿಕ ನೆಮ್ಮದಿ, ಸ್ಥಿಮಿತತ್ವ, ಶಾಂತಿ, ಸಮಾಧಾನಗಳು ಬಂದೊದಗುತ್ತವೆ. ದೈವವನ್ನು ಕುರಿತಾದ ದಿವ್ಯ ಕಾಣ್ಕೆ, ದಿವ್ಯ ದರ್ಶನಗಳು 'ಬೆಳಗು' ಸ್ಥಿತಿಯಲ್ಲಿ ಅನುಭಾವಿ ಕವಿಗೆ ಉಂಟಾಗುವುದನ್ನು ಗಮನಿಸಬಹುದು.

ಅನುಭಾವಿಕ ಅನುಭವ ಮತ್ತು ಅನುಭಾವಿಕ ಪ್ರಜ್ಞೆಯನ್ನು ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ನಾವು ತಾರ್ಕಿಕ ಪ್ರಜ್ಞೆಯನ್ನೂ ಮೀರುವ ಪ್ರಜ್ಞೆಯನ್ನು ಕುರಿತು ವಿಚಾರ ಮಾಡಿದ್ದೇವೆ. ಇದು ಮನುಷ್ಯ ಸಹಜವಾಗಿ ತನ್ನ ಬದುಕಿನ ಸಂದರ್ಭದಲ್ಲಿ ಪರಿಕಲ್ಪನೆಗಳನ್ನು ಗ್ರಹಿಸುವ ಸಂದರ್ಭದಲ್ಲಿ ಉಂಟಾದುದೇ ಆಗಿದೆ. ಅನೇಕ ಅನುಭಾವಿಗಳು ತಾವು ಆಧ್ಯಾತ್ಮಿಕ ಜಗತ್ತನ್ನು ಭೇದಿಸಿದ ತೃಪ್ತಿಯನ್ನೂ ವ್ಯಕ್ತಪಡಿಸಿರುವುದನ್ನು ಗಮನಿಸಿದ್ದೇವೆ. ಆದರೆ ಅವರ ಈ ಅನುಭವ ಪ್ರಾಮಾಣಿಕವಾದುದು ಎಂದು ಪ್ರಮಾಣಿಸಿ ಒಪ್ಪಿಕೊಳ್ಳಲು ನಮಗೆ ಯಾವ ಸ್ಪಷ್ಟ ಆಧಾರಗಳೂ ಇಲ್ಲ, ಎಂಬುದನ್ನು ಗಮನಿಸಬೇಕಾಗುತ್ತದೆ.

ಅನುಭಾವಿಕ ಪ್ರಜ್ಞೆಯ ಅಧ್ಯಯನವಿರುವುದೇ ಅನನುಭಾವಿಕ ಪ್ರಜ್ಞೆಯ ಮೇಲೆ ಕೆಲವೊಂದು ಸಂಶಯಗಳನ್ನು ಚೆಲ್ಲಲು. ಅನನುಭಾವಿಗಳು ತಮ್ಮ ಪ್ರಜ್ಞೆ ತಾರ್ಕಿಕವೆಂದು, ತಾವು ಗ್ರಹಿಕೆಗಳನ್ನು ಕೇವಲ ಸಂವೇದನೆಗಳ ಮೂಲಕವೇ ಪಡೆಯುತ್ತೇವೆಂದು ಭಾವಿಸಿರುತ್ತಾರೆ.

ಒಂದು ಕಾವ್ಯದಲ್ಲಿರುವ ಅನುಭವವನ್ನು ಕಂಡುಹಿಡಿಯುವುದು ಕಷ್ಟವಾಗುತ್ತದೆ. ಒಂದು ಸಂಸ್ಕೃತಿಯೇ ಅದನ್ನು ಹಾಗೆ ವ್ಯಾಖ್ಯಾನಿಸಿ ಬಿಡುತ್ತದೆ. ಆದ್ದರಿಂದಲೇ ಅನುಭಾವಿಕ ಕವಿಗಳು ಸಾಹಿತ್ಯದ ವಿದ್ಯಾರ್ಥಿಗಳಿಗೆ ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ. ಸಾಹಿತ್ಯದ ವಿದ್ಯಾರ್ಥಿಗಳಿಗೆ ಬಹಳ ಮುಖ್ಯವಾಗಿ ಒದಗುವ ಸಮಸ್ಯೆಗಳೆಂದರೆ ಅವರ ಭಾಷೆ, ಅವರು

---

27. ಶಿವಶರಣರ ಸಂಪುಟ, ಪು. 52

ಬಳಸುವ ನಿರ್ದಿಷ್ಟ ವಸ್ತು ಪ್ರಪಂಚ, ಅವರ ಪ್ರತಿಮಾ ಜಗತ್ತು, ಅವರು ಅರ್ಥೈಸಿಕೊಳ್ಳುವ ಧರ್ಮ, ಸಂಸ್ಕೃತಿ, ಅವರ ಸಮಾಜದೊಂದಿಗಿನ ಇತರ ಸಂಬಂಧಗಳು, ಇತ್ಯಾದಿ. ಆದರೆ ಇಷ್ಟೆಲ್ಲ ವಿಷಯವ್ಯಾಪ್ತಿಯ ನಡುವೆ ಆತ ಹೇಗೆ ಸ್ಪಂದಿಸುತ್ತಾನೆ ಎಂಬುದನ್ನು ವಿಚಾರ ಮಾಡುವುದು ನಮಗೆ ಮುಖ್ಯವೇ ಹೊರತು ಅವನು ಅನುಭಾವಿಯೋ ಅಲ್ಲವೋ ಎಂಬ ಸಮಸ್ಯೆಯಲ್ಲ. ಏಕೆಂದರೆ ಯಾವುದೇ ಅನುಭಾವಿಯೂ ತನ್ನ ಸುತ್ತಲಿನ ಗ್ರಹಿಕೆಯ ಜಗತ್ತಿನ ಪರಿಕಲ್ಪನೆಗಳ ಮೂಲಕವೇ ತನ್ನ ಕಾವ್ಯ ಚಿಂತನೆ, ಸತ್ಯ ದರ್ಶನವನ್ನು ಮಾಡಿಕೊಳ್ಳುತ್ತಾನೆ ಎಂಬುದನ್ನು ಮರೆಯಬಾರದು. ಅವನ ಎಲ್ಲ ಅನುಭವಗಳಿಗೆ, ಅಭಿವ್ಯಕ್ತಿಗೆ ಮೂಲವಾದುದು ವಸ್ತು ಪ್ರಪಂಚ ಮತ್ತು ಸುತ್ತಲಿನ ಗ್ರಹಿಕೆಗಳು. ಹೀಗಾಗಿ ಪ್ರಭುದೇವ ಹೇಳುವ "ಗಗನ ದಿಂದಾಚೆ ಅನುಭಾವವಿಲ್ಲ" ಎಂಬ ಮಾತುಗಳು ನಮಗೆ ಬಹಳ ಮುಖ್ಯವಾಗುತ್ತವೆ.

'ಅನುಭಾವ' ಎನ್ನುವುದು ಮನಸ್ಸಿನ ಒಂದು ಸ್ಥಿತಿ. ಈ ಸ್ಥಿತಿಯನ್ನು ಆತ ತಲುಪಬೇಕಾದರೆ ಗ್ರಹಿಕೆಯ ಜಗತ್ತು ಆತನಿಗೆ ಬಹಳ ಅಗತ್ಯ. ಅನುಭಾವಿ ಕವಿ ಧರ್ಮ ಸಂಬಂಧೀ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದರೂ, ಆತ ಧರ್ಮ ನಿರಪೇಕ್ಷಿಯಾಗಿರುತ್ತಾನೆ. ಆತ ಒಂದು ರೀತಿಯ 'ಅವಧೂತ' ಸ್ಥಿತಿಯಲ್ಲಿರುತ್ತಾನೆ. 'ಸಂಸಾರ'ದ ಹಾಗೂ 'ಆಚರಣೆ' ವಿಧಿಗಳಿಂದ ದೂರವಾಗಿರುತ್ತಾನೆ. ಆತನಲ್ಲಿ ಅನೇಕ ವೈರುಧ್ಯಗಳು, ದ್ವಂದ್ವಗಳು ಕಾಣಿಸಿಕೊಳ್ಳುವುದು ಈ ಕಾರಣದಿಂದಲೇ. ಹಲವೊಮ್ಮೆ ಆತ 'ಸಂಸಾರ'ದ ಪರಿಕಲ್ಪನೆಯಿಂದ ದೂರವಾದರೂ, 'ನಲ್ಲ', 'ಗಂಡ', 'ಗೆಳೆಯ' ನಾಗುವ ಹಂಬಲ ತೋರುತ್ತಾನೆ.

ಅನುಭಾವಿಗಳು ಒಂದು ಕಡೆ ತರ್ಕಬದ್ಧ, ಸಕಾರಣಿಕ ವಿಚಾರಗಳನ್ನು ಎತ್ತಿ ಹಿಡಿಯುತ್ತಿದ್ದರೂ, ಇನ್ನೊಮ್ಮೆ ಆಧುನಿಕ ವಿಚಾರಗಳನ್ನೆತ್ತಿ ಹಿಡಿಯುತ್ತಾರೆ. ಇದಕ್ಕೆ ಬಹಳ ಒಳ್ಳೆಯ ಉದಾಹರಣೆ ದಾಸರು. ಲೌಕಿಕ ಬದುಕಿನ ನಿರಾಕರಣೆ, ವ್ಯಕ್ತಪ್ರಪಂಚದ ನಿರಾಕರಣೆ ಒಂದು ಕಡೆಯಾದರೆ, 'ಈಸಬೇಕು ಇದ್ದು ಜೈಸಬೇಕು' ಎಂದು ದೃಢ ವಾಸ್ತವದ ಬದುಕನ್ನು ಅಪ್ಪಿಕೊಳ್ಳುವ ಧೋರಣೆ ಇನ್ನೊಂದು ಕಡೆ. ಹೀಗೆ, ಅವರಲ್ಲಿನ ಈ ದ್ವಂದ್ವಕ್ಕೆ, ವೈರುಧ್ಯತೆಗಳಿಗೆ ಅಂದಂದಿನ ದೈನಿಕ ಜೀತಗಳೇ ಕಾರಣ, ಎಂಬುದನ್ನು ಗಮನಿಸಬೇಕು.

ಅನುಭಾವಿ ಕವಿ ಸಾಮಾನ್ಯವಾಗಿ 'ಸತಿ-ಪತಿ' ಭಾವದ ಹಿನ್ನೆಲೆಯಲ್ಲಿ ತನ್ನ ಆರಾಧ್ಯ ದೇವದ ಅನ್ವೇಷಣೆಯನ್ನು ಮಾಡುವುದನ್ನು ಗಮನಿಸಬಹುದು. ಪ್ರೀತಿ, ಭಕ್ತಿಯ ಇನ್ನೊಂದು ಸ್ಥಿತಿಯಾಗುತ್ತದೆ. ಭಕ್ತರು ಆಕಾರದಲ್ಲಿ ಭಗವದನುಭೂತಿಯನ್ನು ಗ್ರಹಿಸುವ ಪ್ರಯತ್ನ ಪಟ್ಟರೆ, ಅನುಭಾವಿ ಕವಿಗಳು ನಿರಾಕಾರದಲ್ಲಿ, ಬೆಳಗು, ಬಣ್ಣ, ಧ್ವನಿ, ಸ್ಪರ್ಶ ಮುಂತಾದವುಗಳ ಮುಖಾಂತರ ಗ್ರಹಿಸುವ ಪ್ರಯತ್ನ ಮಾಡುತ್ತಾರೆ. ಭಕ್ತರಾದ ಸಾಧಕರಿಗೂ, ಅನುಭಾವಿ ಕವಿಗಳಿಗೂ ವ್ಯತ್ಯಾಸವಿದೆ. ಸಾಧಕ, ನಾಮ, ರೂಪಗಳ ಮೂಲಕ ತನ್ನ ಅನುಭವಗಳನ್ನು

ಗ್ರಹಿಸುತ್ತಾನೆ. ಅನುಭಾವಿ ಕವಿಗಳು ಇಂದ್ರಿಯಗ್ರಾಹಿಯಾದ ಗ್ರಹಿಕೆಗಳ ಮೂಲಕ ಅನುಭವಗಳನ್ನು ಗ್ರಹಿಸುವ ಪ್ರಯತ್ನ ಮಾಡುತ್ತಾರೆ.

ಅನುಭಾವಿ ಕವಿಗಳಿಗೆ ಉಂಟಾದ ಆನುಭಾವಿಕ ಅನುಭವಗಳು ಸತ್ಯಕ್ಕೆ ಎಷ್ಟರ ಮಟ್ಟಿಗೆ ಬದ್ಧವಾದವು ಎಂಬ ಪ್ರಶ್ನೆ ಇದ್ದೇ ಇರುತ್ತದೆ. ಕೆಲವೊಮ್ಮೆ ಅವರ ಆನುಭಾವಿಕ ಅನುಭವಗಳು ಪ್ರಾಮಾಣಿಕವಾಗಿದ್ದರೂ ಅವನ್ನು ಅಭಿವ್ಯಕ್ತಿಸುವ ನಿರ್ದಿಷ್ಟವಾಗಿ ಪ್ರಕಟವಾಗದೇ ಹೋಗುವ ಸಾಧ್ಯತೆಗಳೂ ಉಂಟು. ಹಾಗೆಯೇ ಆನುಭಾವಿಕ ಅನುಭವಗಳನ್ನು ಪಡೆಯದ ಯಾವುದೇ ವ್ಯಕ್ತಿ ತನಗೆ ಒಳ್ಳೆಯ ಭಾಷೆ, ಅಭಿವ್ಯಕ್ತಿ ಸಾಮರ್ಥ್ಯವಿದ್ದರೆ, ತನ್ನದಲ್ಲದ ಅನುಭವಗಳನ್ನೂ ಅಚ್ಚುಕಟ್ಟಾಗಿ, ಅತಿಸಮರ್ಥವಾಗಿ ಮನಮುಟ್ಟುವಂತೆ ಚಿತ್ರಿಸುವ ಸಾಧ್ಯತೆಗಳೂ ಉಂಟು. ಏಕೆಂದರೆ ನಮಗೆ ಅನುಭಾವಿ ಕವಿಯ ಅನುಭವ ಪ್ರಾಮಾಣ್ಯ ಒದಗಿಸುವುದು ಅವನ 'ಭಾಷೆ'. ಕೆಲವೊಮ್ಮೆ ಆನುಭಾವಿಕತೆಯನ್ನು ಅನುಭವಿಸುತ್ತಿದ್ದೇವೆ ಎಂದು ಹೇಳಿಕೊಳ್ಳುವ ಕವಿಗಳೂ ವೇದಾಂತಿಯ ವೇಷ, ಆಧ್ಯಾತ್ಮೀಕರಣದ ಸೋಗು ತೊಟ್ಟು ಓದುಗರನ್ನು ಮೋಸಗೊಳಿಸುವ ಎಲ್ಲಾ ಸಾಧ್ಯತೆಗಳೂ ಇವೆ. ಆದ್ದರಿಂದ ಇಂತಹ ಕವಿಗಳನ್ನು ಕುರಿತು ಆಲೋಚಿಸುವಾಗ ಈ ಬಗೆಯ ಅಪಾಯಗಳಿವೆ, ಎಂಬುದನ್ನು ನಮ್ಮ ಅಧ್ಯಯನದ ಸಂದರ್ಭದಲ್ಲಿ ಅಲ್ಲಗಳೆಯಲು ಸಾಧ್ಯವಾಗುವುದಿಲ್ಲ..

ಗ್ರಂಥಋಣ

1. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೫, ಬೆಂಗಳೂರು ವಿಶ್ವವಿದ್ಯಾಲಯ
2. ಶರಣರ ಅನುಭಾವ ಸಾಹಿತ್ಯ, ಡಾ. ತಿಪ್ಪೇರುದ್ರ ಸ್ವಾಮಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
3. ವಿನಯ, ದ. ರಾ. ಬೇಂದ್ರೆ, ಗೀತಾ ಬುಕ್‌ಹೌಸ್, ಮೈಸೂರು
4. ವಚನ ಕಮ್ಮಟ, ಸಂಪಾದಕರು ಡಾ. ಕೆ. ಮರುಳಸಿದ್ಧಪ್ಪ, ಶ್ರೀ ಕಿ. ರಂ. ನಾಗರಾಜ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
5. ನನ್ನನಲ್ಲ, ಮಧುರ ಚೆನ್ನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
6. ಸಖೀಗೀತ, ದ.ರಾ. ಬೇಂದ್ರೆ, ಮನೋಹರ ಗ್ರಂಥಮಾಲೆ, ಧಾರವಾಡ
7. ಅನಿಕೇತನ, ಕುವೆಂಪು, ಉದಯರವಿ ಪ್ರಕಾಶನ, ಮೈಸೂರು.
8. ಅಗ್ನಿಹಂಸ, ಕುವೆಂಪು, ಉದಯರವಿ ಪ್ರಕಾಶನ, ಮೈಸೂರು.
9. ಬರಕೋ ಪದಾ ಬರಕೋ, ಸಂ. ಶಿವಾನಂದ ಗುಬ್ಬಣ್ಣನವರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
10. ಅರುವತ್ತರ ಅರಳು : ಎಸ್.ವಿ. ಪರಮೇಶ್ವರ ಭಟ್ಟ, ಮಂಗಳ ಗಂಗೋತ್ರಿ, ಮಂಗಳೂರು
11. ಮುಗಿಲ ಮಲ್ಲಿಗೆ, ದ. ರಾ.ಬೇಂದ್ರೆ, ಪ್ರತಿಭಾ ಗ್ರಂಥ ಮಾಲೆ, ಧಾರವಾಡ.
12. ಮಧುರಚೆನ್ನ-ಜೀವನ ಹಾಗೂ ಕೃತಿಗಳ ಸಮೀಕ್ಷೆ, ಡಾ. ಜಿ. ಎಸ್. ಕಾಪಸೆ, ಕರ್ನಾಟಕ ವಿ. ವಿ. ಧಾರವಾಡ
13. ಶಿವಶರಣರ ಸಂಪುಟ, ಸಂ. ಡಾ. ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
14 Mysticism sacred and prophane, R. C. Zaehner, The clarendon press, oxford.
15. Mysticism and philosophy, W. T. Stace, Mac Millan and company, London.
16. Pathway to god in kannada literature, Prof. Ranade, Bharathiya Vidya Bhavan Bombay.
17. Exploring Mysticism, Frist stall, penguin Book series
18. Mystics and society-A Point of view, sisir Kumar Ghose, Asia publishing House, New york.

ಶರಣ ಚಳವಳಿಯ ಮೂಲ ದ್ರವ್ಯ : ಪ್ರೀತಿ-ಗೌರವ

ಡಾ. ಎಂ. ಚಿದಾನಂದಮೂರ್ತಿ

I

ವಚನ ವಾಙ್ಮಯದ ಯಾರೂ ಲಕ್ಷಿಸದೇ ಇರುವ ಒಂದು ಬಹು ಮುಖ್ಯ ಅಂಶದ ಕಡೆ ಗಮನ ಹರಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ. ಆ ವಾಙ್ಮಯವನ್ನು ಹೆಚ್ಚು ನಿಕಟವಾಗಿ ನೋಡಿದಂತೆ ಅದರ ಅನೇಕ ಮಗ್ಗುಲುಗಳು ವಿಸ್ಮಯವನ್ನು ಹುಟ್ಟಿಸುತ್ತ ಹೋಗುತ್ತವೆ. "ವಚನ ವಾಙ್ಮಯ"ವನ್ನು "ವಚನ ಸಾಹಿತ್ಯ" ವೆಂದು ಪರಿಭಾವಿಸಿ, ಕರೆದು, "ಸಾಹಿತ್ಯ"ದ ದೃಷ್ಟಿಯಿಂದಲೇ ನೋಡಲು ಸಾಧ್ಯವಾಗುವ ಸಾಹಿತ್ಯದ ವಿದ್ಯಾರ್ಥಿಗಳೇ ವಿದ್ವಾಂಸರೇ ಆ ಬಗ್ಗೆ ಮತ್ತೆ ಮತ್ತೆ ಮಾತನಾಡಿ ಆ ವಾಙ್ಮಯವನ್ನು ಸಮಗ್ರವಾಗಿ ನೋಡಲು ಒಂದು ಬಗೆಯ ಅಡ್ಡಿಯಾಗಿರುವುದು ಒಂದು ವಿಪರ್ಯಾಸ. (ಅದಕ್ಕೆ ಆ ವ್ಯಕ್ತಿಗಳು ಖಂಡಿತ ಕಾರಣ ಅಲ್ಲ ಎಂಬುದನ್ನು ಹೇಳಬೇಕಾಗಿಲ್ಲ) "ವಾಙ್ಮಯ" ಎನ್ನುವ ಮಾತು ಮಾತಿನ ರೂಪವಾದ ಬರಹವನ್ನು ಹೇಳುವ ಒಂದು ಸಾಮಾನ್ಯ (general) ಪದ. "ಸಾಹಿತ್ಯ"ವು ಒಂದು ನಿರ್ದಿಷ್ಟ ರೀತಿಯ ಬರಹವನ್ನು ಹೇಳುತ್ತದೆ. ವಚನಕಾರರು ಯಾವ ದೃಷ್ಟಿಯಿಂದ ವಚನಗಳನ್ನು ಬರೆದರು ಎಂಬುದನ್ನು ಹೀಗೆಯೇ ಎಂದು ಹೇಳಲು ಬಾರದಿದ್ದರೂ ಅವರು ಬರಿಯ ಸಾಹಿತಿಗಳಂತೂ ಆಗಿರಲಿಲ್ಲ, ತಾವು ಬರೆದಿದ್ದು ಸಾಹಿತ್ಯವಾಗಲಿ ಎಂಬ ಉದ್ದೇಶವೂ ಅವರಿಗಿರಲಿಲ್ಲ ಎನ್ನುವ ಮಾತು ವಿವಾದಾತೀತವಾದುದು. . ವಚನ ವಾಙ್ಮಯ ಎಂಬ ಪದ ಆ ಬರಹದ ವ್ಯಾಪ್ತಿ ಉದ್ದೇಶಗಳನ್ನು (ಅವು ಏನೇ ಆಗಿರಲಿ) ಸೀಮಿತಗೊಳಿಸುವುದಿಲ್ಲ; "ವಚನ ಸಾಹಿತ್ಯ" ಆ ಕೆಲಸವನ್ನು, ಸೀಮಿತಗೊಳಿಸುವುದನ್ನು ಮಾಡುತ್ತದೆ. "ವಚನ ಸಾಹಿತ್ಯ"ವೆಂದು ಕರೆದು ಆ ವಾಙ್ಮಯದ ಕಡೆ ಸಮಾಜ ವಿಜ್ಞಾನಿಗಳು, ಮನೋ ವಿಜ್ಞಾನಿಗಳು ಗಂಭೀರ ಗಮನವನ್ನು ಕೊಡಲು ಅಡ್ಡಿ ಮಾಡಲಾಗಿದೆ. ಹಾಗೆ ನೋಡಿದರೆ ಆ ವಾಙ್ಮಯದ ನಿಜವಾದ ಅಧ್ಯಯನ ಸಮಾಜದ ಅಧ್ಯಯನದ ಶಿಸ್ತನ್ನು ರೂಢಿಸಿಕೊಂಡಿರುವವರಿಂದಲೂ ಹೆಚ್ಚು ಆಗಬೇಕಾಗಿತ್ತು; ಕರ್ನಾಟಕದ ಸಾಂಸ್ಕೃತಿಕ-ಸಾಮಾಜಿಕ ಚರಿತ್ರೆಯ ವಿದ್ವಾಸರಿಂದ ನಡೆಯಬೇಕಾಗಿತ್ತು. ಅಷ್ಟೇ ಮುಖ್ಯವಾಗಿ ಮತ-ತತ್ತ್ವಶಾಸ್ತ್ರದ ವಿದ್ವಾಂಸರ ಹೆಚ್ಚಿನ ಗಮನವನ್ನೂ ಸೆಳೆಯಬೇಕಾಗಿತ್ತು. ಸಾಹಿತ್ಯ ವಿಮರ್ಶಕರು

ಆ ಎಲ್ಲ ದೃಷ್ಟಿಗಳೂ ತಮಗೆ ಇವೆಯೆಂದು ಗಟ್ಟಿಯಾಗಿ ಹೇಳಿಕೊಳ್ಳಬಲ್ಲರು. ಅವರು ತಮ್ಮ ಕೊರತೆಗಳನ್ನು ತಮಗಿರುವ ಭಾಷೆಯ ಮೇಲಿನ ಹಿಡಿತದಿಂದ, ಆಕರ್ಷಕ ಮಾತುಗಳಿಂದ ಮುಚ್ಚಿಕೊಳ್ಳಬಲ್ಲವರಾದ್ದರಿಂದ ಅವರು ಹೇಳುವುದು ಸರಿಯಾಗಿದೆ ಎಂದು ಜನ ಒಪ್ಪಿಕೊಳ್ಳುವಂತೆ ಅವರು ಮಾಡಬಲ್ಲರು. ಆದರೆ ಇಷ್ಟು ಮಾತ್ರ ನಿಜ- ಅವರಲ್ಲಿ ಬಹುಪಾಲು ಜನ ಎಲ್ಲೋ ಕೆಲವು ಸುಂದರ ಆಕರ್ಷಕ ವರ್ಷಗಳನ್ನು ಇಟ್ಟುಕೊಂಡು ಅವೇ ವಚನ ಸಾಹಿತ್ಯವೆಂದು ಭಾವಿಸಿ ಅವನ್ನೇ ಹಾಗೆ ಹೀಗೆ ಹೊರಳಿಸಿ, ಅದೇ ವಿಷಯವನ್ನು ಪರಿಣಾಮಕಾರಿಯಾಗಿ, ಬೇರೆ ರೀತಿಯಲ್ಲಿ ಹೇಳುವುದರತ್ತ ನಿರತರಾಗಿರುತ್ತಾರೆಯೇ ಹೊರತು ಶ್ರಮವಹಿಸಿ ಇಡೀ ವಚನ ವಾಙ್ಮಯವನ್ನು ಎಚ್ಚರಿಕೆಯಿಂದ, ಶ್ರದ್ಧೆಯಿಂದ ಅಭ್ಯಾಸಮಾಡಿ ಅವನ್ನು ಗ್ರಹಿಸುವುದರತ್ತ ಆಸಕ್ತಿ ತೋರುವುದಿಲ್ಲ. ಅಂತಹ ಶ್ರಮಪೂರ್ಣ ಅಧ್ಯಯನ ಅವರಿಗೆ ಕ್ಷಿಪ್ರ ಲಾಭವನ್ನು ತಂದುಕೊಡುವುದಲ್ಲ ತಾನೇ !

ಇದರಿಂದಾಗಿ, ವಚನ ವಾಙ್ಮಯದ, ಅಥವಾ 'ವಚನ ಸಾಹಿತ್ಯ'ದ ಬಗ್ಗೆ ಬರೆಯುವ ಅಥವಾ ಮಾತನಾಡುವ ಜನ ಒಂದೇ ರೀತಿಯವರೂ ಆಗಿದ್ದಾರೆ; ಮತ್ತು ಬರೆಯುವುದೂ ಮಾತನಾಡುವುದೂ ಅದೇ ಆಗಿರುತ್ತದೆ. ಅವರು ಹೇಳುವುದರಲ್ಲಿ ಹೊಸ ರೀತಿ ಇರಬಹುದು; ಹೊಸತು ಇರುವುದಿಲ್ಲ. ವಚನಗಳನ್ನು ಯಾರಾದರೂ 'ಸಾಹಿತ್ಯ'ವಾಗಿ ಭಾವಿಸಿದರೆ ಅದರಲ್ಲಿ ಯಾವುದೇ ಆಕ್ಷೇಪವೂ ಇಲ್ಲ. ಗಮನಿಸಬೇಕಾದ ಸಂಗತಿಯೆಂದರೆ ವಚನಗಳ ಬಹುಭಾಗವನ್ನು 'ಸಾಹಿತ್ಯ'ವೆಂದು ಕರೆಯಲು ಸಾಧ್ಯವಾಗುವುದಿಲ್ಲ. ಅದು 'ಸಾಹಿತ್ಯ' ಆಗಿದೆಯೇ ಇಲ್ಲವೇ ಮುಖ್ಯವಲ್ಲ. ವಚನಗಳನ್ನು ನೋಡಬೇಕಾದ ದೃಷ್ಟಿ ಬೇರೆಯಾಗಬೇಕಾಗಿದೆ. ಒಂದು ನಿದರ್ಶನದೊಡನೆ ನನ್ನ ಮಾತನ್ನು ಸ್ಪಷ್ಟಪಡಿಸುತ್ತೇನೆ. ಬಹುಪಾಲು ಜನಕ್ಕೆ ಮಹಾದೇವಿಯಕ್ಕನ ಹೆಸರು ಗೊತ್ತಿದೆ; ಜೊತೆಗೆ ಇನ್ನು ಒಂದಿಬ್ಬರು ವಚನಕಾರ್ತಿಯರ ಹೆಸರು ತಿಳಿದಿರಬಹುದು. ಆದರೆ ಅವರಿಗೆ ಕಾಳವ್ವೆ ಎಂಬ ದಲಿತವರ್ಗದ ವಚನಕಾರ್ತಿಯ ಹೆಸರಾಗಲಿ ಸೂಳೆ ಸಂಕವ್ವೆಯಂತಹ "ಹೀನ" ವೃತ್ತಿಯ ವಚನಕಾರ್ತಿಯ ಹೆಸರಾಗಲಿ ತಿಳಿದಿರುವುದಿಲ್ಲ. ಸೂಳೆ ಸಂಕವ್ವೆಯ ಲಭ್ಯ ಏಕೈಕ ವಚನದಲ್ಲಿ ಯಾವುದೇ ಸಾಹಿತ್ಯಕ ಆಕರ್ಷಣೆಯೂ ಇಲ್ಲ. 'ಸೂಳೆ' ಯಾಗಿದ್ದು ಶರಣರು ಮೂಡಿಸಿದ ಸಾಮಾಜಿಕ ಎಚ್ಚರದಿಂದ ತನ್ನ ವೃತ್ತಿಯಿಂದ ಹೊರ ಬಂದು ಧೈರ್ಯವಾಗಿ ತನ್ನ ಭಾವನೆಗಳನ್ನು ಹೇಳಿಕೊಂಡದ್ದಾಗಲಿ, ಅವಳು ಬಳಸಿದ "ನಿರ್ಲಜ್ಜೇಶ್ವರ" ಅಂಕಿತವಾಗಲಿ ಅವಳ ಬಗ್ಗೆ ಮತ್ತು ಅಂದಿನ ಸಮಾಜೋಧಾರ್ಮಿಕ ಚಳವಳಿಯ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಅವಳು ಬರೆದದ್ದು ಸಾಹಿತ್ಯವೇ ಅಲ್ಲವೇ ಎಂಬ ಪ್ರಶ್ನೆ ತೀರ ಬಾಲಿಶವಾದುದು.

ಕರ್ನಾಟಕದ ಆ ಹನ್ನೆರಡನೆಯ ಶತಮಾನದ ಸಮಾಜೋಧಾರ್ಮಿಕ ಚಳವಳಿಯನ್ನು "ವಚನ ಚಳವಳಿ" ಎಂಬ ಸೀಮಿತ ಅರ್ಥದ ಪದಕ್ಕಿಂತ "ಶರಣ ಚಳವಳಿ" ಎಂದು ನಿರ್ದೇಶಿಸುವುದು ಸೂಕ್ತ. ಶರಣರು ತಮ್ಮ ಚಳವಳಿಯನ್ನು ಸಫಲಗೊಳಿಸಲು ವಚನ

ರಚನೆಗೆ ಕೈ ಹಾಕಿದರು. 'ಶರಣೆ' ಸ್ತ್ರೀವಾಚಕವನ್ನೂ ಒಳಗೊಳ್ಳುವ 'ಶರಣ' ಮಾತು ಆ ಸಮಾಜದ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಹೆಂಡದ ಮಾರಯ್ಯರಿಂದ ಹಿಡಿದು ಬಸವ, ಚನ್ನಬಸವ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ, ಲಕ್ಕಮ್ಮ ಎಲ್ಲರನ್ನೂ ಒಳಗೊಳ್ಳುತ್ತದೆ. ಅವರು ಹುಟ್ಟಿದ ಬೇರೆ ಬೇರೆ ಜಾತಿಗಳು ಬೇರೆ ಬೇರೆ ಅಂತಸ್ತನ್ನು ಅಂದಿನ ಪರಿಸರದಲ್ಲಿ ಹೊಂದಿರುವುದಾಗಿದ್ದರೂ ಅವರೆಲ್ಲರೂ ಶರಣರಾಗಿ ಮತೀಯವಾಗಿ ಸಾಮಾಜಿಕವಾಗಿ ಸಂಪೂರ್ಣ ಸಮಾನರಾಗಿದ್ದರು. 'ಶರಣ' ಮಾತು ಸಮಾನತೆಯ ಸಂಕೇತ; ಅದು ಅಂದಿನ ಸಮಾಜೋಧಾರ್ಮಿಕ ಚಳವಳಿಯ ವ್ಯಾಪ್ತಿಗೆ ಬಂದ ಎಲ್ಲರನ್ನೂ. ಹೇಳುತ್ತದೆ ಯಾದ್ದರಿಂದ 'ಶರಣ ಚಳವಳಿ' ಎಂಬ ಮಾತು ಬಸವ ಚಳವಳಿ, ವೀರಶೈವ ಚಳವಳಿ, ಲಿಂಗಾಯತ ಚಳವಳಿ, ವಚನ ಚಳವಳಿ ಈ ಮಾತುಗಳಿಗಿಂತ ಹೆಚ್ಚು ಅರ್ಥಪೂರ್ಣ ಧ್ವನಿಪೂರ್ಣ ಮಾತಾಗಿದೆ. ಯಾರಾದರೂ ಅದರ ಜಾಗದಲ್ಲಿ ಬೇರೊಂದು ಪದವನ್ನು ಬಳಸುವುದಾದಲ್ಲಿ ಅದಕ್ಕೆ ಆಕ್ಷೇಪವೇನೂ ಇಲ್ಲ-ಅದು ಕೇವಲ ಪರಿಭಾಷೆಯ ಪ್ರಶ್ನೆ ತಾನೇ!

ಶರಣ ಚಳವಳಿ ಭಾರತದ ಸಾಮಾಜಿಕ ಚರಿತ್ರೆಯ ಇತಿಹಾಸದಲ್ಲಿ ಅನೇಕ ಮೊದಲುಗಳನ್ನು ಪಡೆದಿವೆ :

1. ಆ ಪ್ರಮಾಣದ, ಸರಿಯಾಗಿ ಹೇಳುವುದಾದರೆ ನಿಜವಾದ ಅರ್ಥದ ಪೂರ್ಣ ಪ್ರಮಾಣದ ಸಾಮಾಜಿಕ ಚಳವಳಿ ನಡೆದುದು ಅದೇ ಮೊದಲು.*

---

* ಈ ಸಂದರ್ಭದಲ್ಲಿ ಒಂದು ಘಟನೆ ನನ್ನ ಜ್ಞಾಪಕಕ್ಕೆ ಬರುತ್ತದೆ. 1970ರ ಸುಮಾರಿನಲ್ಲಿ ಕುರುಕ್ಷೇತ್ರ ವಿಶ್ವವಿದ್ಯಾಲಯದಲ್ಲಿ ನಡೆದ Indian Religious reformist movements and their social content ಎಂಬ ರಾಷ್ಟ್ರ ಮಟ್ಟದ ವಿಚಾರ ಗೋಷ್ಠಿಯಲ್ಲಿ ನಾನು ಭಾಗವಹಿಸಿದ್ದೆ. ಮೊದಲ ದಿನ ವೈದಿಕ, ಬೌದ್ಧ, ಜೈನ ಯುಗಗಳ ಬಗ್ಗೆ ಅದ್ವೈತವೂ ಸೇರಿದಂತೆ ಎಲ್ಲ ಚಿಂತಕರ ಬಗ್ಗೆ ಸಂಪ್ರಬಂಧಗಳು ಮಂಡಿತವಾದುವು. ಪ್ರತಿ ಸಂಪ್ರಬಂಧದ ಕೊನೆಯಲ್ಲಿ ಎದ್ದ ಪ್ರಶ್ನೆಯೆಂದರೆ-"ನೀವು ಹೇಳುವುದು ಸರಿ, ನೀವು ಹೇಳಿದ ವ್ಯಕ್ತಿಗಳು ದೊಡ್ಡವರು ನಿಜ ಆದರೆ ಅವರದು ಎಷ್ಟರ ಮಟ್ಟಿಗೆ 'movement' ಅದು ಎಷ್ಟರ ಮಟ್ಟಿಗೆ 'reformist', ಅವರ ಚಿಂತನೆಯ ಸಾಮಾಜಿಕ ಆಯಾಮ ಏನು, ಸಮಾಜದ ಕೆಳವರ್ಗದವರ ಮೇಲೆ ಅವರ ಕ್ರಿಯೆ ಅಥವಾ ಚಿಂತನೆ ಎಷ್ಟು ಪ್ರಭಾವ ಬೀರಲು ಸಾಧ್ಯವಾಯಿತು ?" ಇದಕ್ಕೆ ಉತ್ತರವಿರಲಿಲ್ಲ. ಎರಡನೆಯ ದಿನ ಬೆಳಿಗ್ಗೆ ನನ್ನ ಸಂಪ್ರಬಂಧ ಬಸವಣ್ಣ ಮತ್ತು ಅವರ ಶರಣ ಚಳವಳಿ ಕುರಿತಾದುದಾಗಿತ್ತು. ನನ್ನದು ಮೊದಲನೆಯದೂ ಆಗಿತ್ತು. ನಾನು ಓದಿ ಮುಗಿಸುತ್ತಿದ್ದಂತೆ ವಿದ್ವಾಂಸರು ಹೇಳಿದರು "ಈ ಗೋಷ್ಠಿಗೆ ಸಂಪೂರ್ಣ ಪ್ರಸ್ತುತವಾಗುವ ಸಂಪ್ರಬಂಧವನ್ನು ಇದೇ ತಾನೇ ಕೇಳಿದೆವು". ಈ ಘಟನೆ ಒಂದು ರೀತಿಯಲ್ಲಿ ಸಾಂಕೇತಿಕವೂ ಹೌದು. ಭಾರತದ ಇತಿಹಾಸದಲ್ಲಿ, ಬೌದ್ಧ ಧರ್ಮವನ್ನೂ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ನಡೆದ ಮೊದಲ ಸಮಾಜೋಧಾರ್ಮಿಕ ಚಳವಳಿಯೆಂದರೆ ಶರಣ ಚಳವಳಿಯೇ ಆಗಿದೆಯೆಂಬಲ್ಲಿ ಅನುಮಾನ ಎಲ್ಲ.

2. ಸಂಸ್ಕೃತವೂ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಅಷ್ಟು ಸಂಖ್ಯೆಯ ಕೃತಿಕಾರರು ಒಂದು ಸಮಾನ ವೇದಿಕೆಯಡಿ ಕೃತಿರಚನೆ ಮಾಡಿರುವುದು ಅದೇ ಮೊದಲು.

3. ಬ್ರಾಹ್ಮಣೇತರ ಮಹಿಳೆಯರು ಕೃತಿರಚನೆಗೆ ಕೈಹಾಕಿದ್ದು ಅದೇ ಮೊದಲು.

4. ಇಡೀ ಭಾರತದ ಮೊತ್ತ ಮೊದಲ ದಲಿತವರ್ಗದ ಅತಿ ಶ್ರೇಷ್ಠ ಸಂಸ್ಕೃತ ವಿದ್ವಾಂಸನಾಗಿ ಉರಿಲಿಂಗ ಪೆದ್ದಿ ಆ ಚಳವಳಿಗೆ ಸೇರಿದವನು (ಅವನ ರಚನೆಗಳು ಕನ್ನಡದಲ್ಲಿವೆ. ತನ್ನ ನಿರೂಪಣೆಗೆ ಪ್ರಮಾಣವಾಗಿ ಅವನು ಯಥೇಷ್ಟವಾಗಿ ಸಂಸ್ಕೃತ ಶ್ಲೋಕಗಳನ್ನು ಅವುಗಳ ಆಕರ ಸಮೇತ ಕನ್ನಡ ವಚನಗಳ ಮಧ್ಯೆ ಉಲ್ಲೇಖಿಸಿದ್ದಾನೆ.)

5. ಇಡೀ ಭಾರತದ ಮೊತ್ತ ಮೊದಲ ದಲಿತವರ್ಗದ, ಅಸ್ಪೃಶ್ಯರೆಂದು ಭಾವಿಸಿದ್ದ ವರ್ಗದ ಮೊತ್ತ ಮೊದಲ ಕೃತಿಕಾರರು ಆ ಕಾಲದವರು ಮಾತ್ರವೇ ಅಲ್ಲ, ದಲಿತ ವರ್ಗದ, ವೇಶ್ಯಾ ವೃತ್ತಿಯ ಇಬ್ಬರು ಲೇಖಿಕಿಯರೂ ಇದ್ದಾರೆಂಬುದನ್ನು ಆಗಲೇ ನೋಡಿದ್ದೇವೆ. ದಲಿತ ಉರಿಲಿಂಗ ಪೆದ್ದಿಯ ಹೆಂಡತಿ ಕಾಳವ್ವೆಯೂ ಸಂಸ್ಕೃತವನ್ನು ಚನ್ನಾಗಿ ಬಲ್ಲವಳಾಗಿದ್ದಳು.

6. ಎಲ್ಲ ಭಕ್ತಿ ಪಂಥಗಳೂ ಎಲ್ಲ ಮನುಷ್ಯರ 'ಆಧ್ಯಾತ್ಮಿಕ ಸಮಾನತೆ'ಯನ್ನು ಪ್ರತಿಪಾದಿಸಿವೆ; ಆದರೆ 'ಸಾಮಾಜಿಕ ಸಮಾನತೆ'ಯನ್ನು ಪ್ರತಿಪಾದಿಸಿದ್ದು ಮೊತ್ತ ಮೊದಲು ಶರಣ ಚಳವಳಿಯೇ. ಬ್ರಾಹ್ಮಣರಿಗೂ ದಲಿತರಿಗೂ ಅವರು ಶಿವಭಕ್ತರಾಗಿದ್ದರೆ ಯಾವುದೇ ಭೇದ ಅವರ ಮಧ್ಯೆ ಇರುವುದಿಲ್ಲವೆಂದು ಪ್ರತಿಪಾದನೆ ಮಾಡಿದ್ದು ಮಾತ್ರವಲ್ಲದೆ ಆ ಎರಡು ಜಾತಿಗಳ ಮಧ್ಯೆ ವಿವಾಹ ಸಂಬಂಧಕ್ಕೆ ಒಪ್ಪಿಗೆ ಕೊಟ್ಟು ಅಂತಹ ಕಾರ್ಯಕ್ಕೆ ಮುಂದಾದ ಏಕೈಕ ಉದಾಹರಣೆ ಶರಣ ಚಳವಳಿಯದು.

7. ವ್ಯಕ್ತಿಯ ಹುಟ್ಟು ಏನೇ ಆಗಿರಲಿ, ವೃತ್ತಿ ಏನೇ ಆಗಿರಲಿ, ಆ ವ್ಯಕ್ತಿಯ ವೃತ್ತಿ ಉಳಿದ ಯಾವುದೇ ವೃತ್ತಿಗೂ ಕಡಮೆಯಲ್ಲವೆಂಬುದನ್ನು ಪ್ರತಿಪಾದಿಸಿದ ಮೊದಲ ಉದಾಹರಣೆ ಆ ಚಳವಳಿಯದು.

8. ಇಂದಿನ ಕರ್ನಾಟಕದ ಬಹುತೇಕ ಎಲ್ಲ ಹಿಂದುಳಿದ ವರ್ಗಗಳಿಗೆ ಸಾಂಸ್ಕೃತಿಕ ವೀರರನ್ನು ಒದಗಿಸಿದ್ದು ಆ ಚಳವಳಿ. ಮಡಿವಾಳರಿಗೆ ಮಡಿವಾಳ ಮಾಚಯ್ಯ, ನೇಕಾರರಿಗೆ ಜೇಡರ ದಾಸಿಮಯ್ಯ, ಅಂಬಿಗರಿಗೆ ಅಂಬಿಗರ ಚೌಡಯ್ಯ, ಕುಂಬಾರರಿಗೆ ಕುಂಬಾರ ಗುಂಡಯ್ಯ (ಇವನು ವಚನಕಾರರಿಗಿಂತ ಹಿಂದಿನವನು, ಅರೆ ಐತಿಹಾಸಿಕ ವ್ಯಕ್ತಿ), ಡೋಹರರಿಗೆ ಡೋಹರ ಕಕ್ಕಯ್ಯ, ಒಕ್ಕಲಿಗರಿಗೆ ಒಕ್ಕಲಿಗ ಮುದ್ದಣ್ಣ, ಮಾದಾರರಿಗೆ ಮಾದಾರ ಚನ್ನಯ್ಯ ಇತ್ಯಾದಿ). ಇಂತಹುದು ಭಾರತದ ಬೇರೆ ಪ್ರಾಂತಗಳಲ್ಲಿ ಬಹುಶಃ ಕಾಣಸಿಗದು.

9. ಇಂದಿಗೂ ಹನ್ನೆರಡನೆಯ ಶತಮಾನದ ಶರಣರು ಕರ್ನಾಟಕದ ಜಾನಪದ ವಾಙ್ಮಯದಲ್ಲಿ ಸ್ಥಾಯಿಯಾಗಿ ಉಳಿದುಕೊಂಡು ಬಂದಿದ್ದಾರೆ. ಹಳ್ಳಿಗಳ ಎಲ್ಲ

ಜಾತಿಗಳ ಜನರ ಬೀಸುವ ಹಾಡುಗಳಲ್ಲಿ, ದಲಿತವರ್ಗದವರ ಆಸಾದಿ ಹಾಡುಗಳಲ್ಲಿ ಅವರ ಹೆಸರುಗಳು ಉಳಿದುಕೊಂಡು ಬಂದಿವೆ. ಇಂದಿಗೂ ಹಳ್ಳಿಯ ಜನ ತಮ್ಮ ಕಷ್ಟ ಕಾಲದಲ್ಲಿ ಬಸವ ಯಾರು ಎಂಬುದನ್ನು ತಿಳಿಯದೆ ಅವನನ್ನು ಸ್ಮರಿಸುತ್ತಾರೆ. ಈಚಿನ ಐತಿಹಾಸಿಕ ವ್ಯಕ್ತಿಗಳು ಕೆಲವು ಲಾವಣಿ, ಗಾದೆಗಳಲ್ಲಿ ಉಳಿದು ಬರಬಹುದು. ಆದರೆ ಎಂಟು ನೂರು ವರ್ಷಗಳ ಹಿಂದಿನ ಶರಣ ಶರಣೆಯರು ಒಟ್ಟು ಜಾನಪದದ ಭಾಗವಾಗಿರುವುದು ಆ ಚಳವಳಿಯ ಪ್ರಭಾವ ಸಮಾಜದ ಮೇಲು ಸ್ತರದಿಂದ ತೀರ ಕೆಳಗಿನ ಸ್ತರದವರೆಗೆ ವ್ಯಾಪಿಸಿತ್ತು ಎಂಬುದರ ದ್ಯೋತಕ ಅದು.

10. ಎಲ್ಲ ಚಿಂತಕರೂ ಜಾತಿ, ಲಿಂಗ, ವೃತ್ತಿ ಭೇದವಿಲ್ಲದೆ ಒಂದೆಡೆ ಸೇರಿ ವೃತ್ತಿ, ಜಾತಿ, ಕರ್ತವ್ಯ, ನೀತಿ, ಲೋಕ-ಪರಲೋಕ ಇಂತಹ ಉದಾತ್ತ ವಿಷಯಗಳ ಬಗ್ಗೆ ಮುಕ್ತವಾಗಿ ಚರ್ಚೆ ನಡೆಯಿಸಿದ್ದು ಭಾರತೀಯ ಇತಿಹಾಸದಲ್ಲಿ ಅದೇ ಮೊದಲ ಬಾರಿ.

11. ಭಾರತೀಯ ಪರಂಪರೆಯಲ್ಲಿ "ಗುರು"ವಿಗಿಂತ ದೊಡ್ಡವರು ಯಾರೂ ಇಲ್ಲ. "ನ ಗುರೋರಧಿಕಂ") ಆದರೆ ಆ ಗುರು ಒಂದು ನಿರ್ದಿಷ್ಟ ಜಾತಿಯಲ್ಲೇ ಹುಟ್ಟಿದವನಾಗಿರಬೇಕೆಂದಿದ್ದರೆ ಆಗ ಕೆಳಜಾತಿಯ ಒಬ್ಬ ವ್ಯಕ್ತಿ ಎಷ್ಟೇ ದೊಡ್ಡವನಾಗಿ ಬೆಳೆದರೂ. ಆ ಮೇಲ್ಜಾತಿಯ ಗುರುವೇ ಕೆಳಜಾತಿಯ ಅರ್ಹ ವ್ಯಕ್ತಿಗಿಂತ ದೊಡ್ಡವನಾಗುತ್ತಾನೆ. ಬಹುಶಃ ಇದನ್ನು ಮನಗಂಡ ಶರಣ ಚಳವಳಿಯು 'ಗುರು'ವಿಗಿಂತ 'ಜಂಗಮ' ದೊಡ್ಡವನು ಎಂದು ಭಾವಿಸಿತು. ("ಗುರುವಿನ ಗುರು ಜಂಗಮ" "ಗುರೂಪದೇಶ ಮಂತ್ರ ವೈದ್ಯ, ಜಂಗಮೋಪದೇಶ ಶಸ್ತ್ರ ವೈದ್ಯ"). ಒಬ್ಬ ವ್ಯಕ್ತಿ 'ಜಂಗಮ'ನಾಗಲು ಆಧ್ಯಾತ್ಮಿಕ ಶ್ರೇಷ್ಠತೆಯೊಂದೇ ಮುಖ್ಯ, ಹುಟ್ಟು ಅಲ್ಲ. ಹುಟ್ಟಿನಿಂದ ದಲಿತನಾಗಿದ್ದರೂ ಅವನು ಶಿವೋಪಾಸಕನಾಗಿ, ಉದಾತ್ತ ಧ್ಯೇಯದಿಂದ ಪ್ರೇರಿತವಾದ ಜೀವನವನ್ನು ನಡೆಸಲು ದೇಶ ಸಂಚಾರವನ್ನು ಕೈಗೊಂಡು (ಆ ಕಾರಣವೇ ಅವನು 'ಜಂಗಮ' ಎಂದರೆ ಸುತ್ತಾಡುವವನು) ಅಂತರ್ನಿರೀಕ್ಷೆಯಿಂದ ಶಿವಭಕ್ತಿಯಿಂದ ತನ್ನನ್ನು ತಾನು ತಿದ್ದಿಕೊಂಡು ಲೋಕವನ್ನು ತಿದ್ದಲು ಅದರ ಕಷ್ಟ ಸುಖಗಳಲ್ಲಿ ಭಾಗಿಯಾಗಲು ಮನಸ್ಸು ಮಾಡುವವನೇ "ಜಂಗಮ". ಅಸ್ಪೃಶ್ಯ ಜಾತಿಯ ಉರಿಲಿಂಗ ಪೆದ್ದಿಯಾಗಲಿ, ಶೂದ್ರ ಜಾತಿಯ ಅಲ್ಲಮನಾಗಲಿ "ಜಂಗಮ"ರೇ. (ಇಂದು "ಜಂಗಮ" ಎಂಬುದು ಕೇವಲ ಜಾತಿ ಸೂಚಕವಾಗಿರುವುದು ಒಂದು ದುರಂತ-ಆ ಪ್ರಶ್ನೆ ಬೇರೆ.)

12. ದಲಿತ ವರ್ಗದ ಶಿವಭಕ್ತರು ಸ್ಥಾಪಿಸಿದ ಮಠಗಳು ಎಲ್ಲ ಮಠಗಳಂತೆ ಪೂಜನೀಯವಾಗಿರುವುದು ಇಡೀ ಭಾರತದಲ್ಲಿ ವಿಶೇಷ. ಉರಿಲಿಂಗ ಪೆದ್ದಿ ಸ್ಥಾಪಿಸಿದ ಮಠಗಳು ಬೀದರ್ ಜಿಲ್ಲೆಯಲ್ಲಿದ್ದು ಆ ಮಠಗಳಿಗೆ ಎಲ್ಲ ಲಿಂಗಾಯತರೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

13. ಅಸ್ಪೃಶ್ಯರ ಮತಾಂತರಕ್ಕೆ, ಅವರ ಬದುಕಿನ ಉತ್ತಮಿಕೆಗೆ ಗಮನ ಕೊಟ್ಟುದು ಶರಣ ಚಳವಳಿಯೇ ಮೊದಲು.

ಈ ಪಟ್ಟಿಯನ್ನು ಇನ್ನೂ ಬೆಳಸಲು ಸಾಧ್ಯವಿದೆ

II

ಶರಣರು ನಡೆಸಿದ ಮುಕ್ತ ಚರ್ಚೆಗಳ ಒಂದು ಸ್ಥೂಲ ಚಿತ್ರಣ ದೊರಕುವುದು "ಶೂನ್ಯ ಸಂಪಾದನೆ" ಎಂಬ ಹೆಸರಿನ ಕೃತಿಗಳಲ್ಲಿ. ಅವು ನಾಲ್ಕರ ಹೆಸರಲ್ಲಿ ಇವೆಯಾದರೂ (ಶಿವಗಣ ಪ್ರಸಾದಿ ಮಹಾದೇವಯ್ಯ-ಕಾಲ ಸು. ಕ್ರಿ. ಶ. 1400; ಹಲಗೆಯ ದೇವ ಕಾಲ ಸು. 1520; ಗುಮ್ಮಳಾಪುರದ ಸಿದ್ಧಲಿಂಗಯತಿ- ಕಾಲ ಸು. 1550; ಗುಳೂರು ಸಿದ್ಧವೀರಣ್ಣೊಡೆಯ - ಕಾಲ ಸು. 1560), ಅವುಗಳಲ್ಲಿ ಶಿವಗಣ ಪ್ರಸಾದಿ ಮಹಾದೇವಯ್ಯನದೇ ಮೂಲ ಸಂಪಾದನೆ. ಅಂತಹ ಕೃತಿಯೊಂದರ ಶಿಲ್ಪ ಹೊಳೆದುದೇ ಅವನಿಗೆ; ಉಳಿದ ಮೂವರು ಆ ಮೂಲ ಸಂಪಾದನೆಯಿಂದ ಮಾಡಿಕೊಂಡ ಪರಿಷ್ಕರಣಗಳು ಮಾತ್ರ. ಕನ್ನಡದಲ್ಲಿ ತೀರ ವಿಶಿಷ್ಟ ಎನ್ನಬಹುದಾದ ಆ ಶೂನ್ಯ ಸಂಪಾದನೆಯನ್ನು ಬರೆದ ಶಿವಗಣ ಪ್ರಸಾದ ಮಹಾದೇವಯ್ಯ ಯಾವ ಕಾಲದವನು, ಎಲ್ಲಿಯವನು, ಅವನ ತಂದೆ ತಾಯ್ಗಳು ಯಾರು ಇತ್ಯಾದಿ ಏನೂ ವಿಷಯ ತಿಳಿಯದು. ಅವನ ಕಾಲ ಸು. ಕ್ರಿ. ಶ. 1400 ಎಂದು ಮಾತ್ರ ಹೇಳಬಹುದು. ಅವನ ಹೆಸರು ಮಹಾದೇವಯ್ಯ; 'ಶಿವಗಣ ಪ್ರಸಾದಿ' ಎಂಬುದು ಅವನ ವಿಶೇಷಣ. "ಶಿವಗಣ ಪ್ರಸಾದಿ" ಎಂದರೇನು ಎಂಬುದನ್ನು ಅವನ ಕೃತಿಯಲ್ಲಿ ಬೇರೊಂದು ಸಂದರ್ಭದಲ್ಲಿ ಬರುವ ವಿವರಣೆಯಿಂದ ತಿಳಿಯಬಹುದಾಗಿದೆ. ಅಲ್ಲಮ ಪ್ರಭುಗಳೂ ಸಿದ್ಧರಾಮರೂ ಕಲ್ಯಾಣಕ್ಕೆ ಬಂದಾಗ, ಬಸವಣ್ಣನ ಮನೆಗೆಲ್ಲ ಬಂದು ಹೋಗುತ್ತಿದ್ದ ಬೇರೆ ಬೇರೆ ಸ್ವಭಾವದ ಸಾಧನೆಯ ಭಕ್ತ ಜನರನ್ನು ಮಹಾದೇವಯ್ಯ ವರ್ಣಿಸುತ್ತಾನೆ. (ಎಲ್. ಬಸವರಾಜು ಸಂಪಾದಿಸಿರುವ ಶೂನ್ಯ ಸಂಪಾದನೆ, ಪು. 71). ಬಸವಣ್ಣನ ಮನೆಗೆ ಬರುತ್ತಿದ್ದ

'ಶಿವಗಣ ಪ್ರಸಾದಿ'ಗಳ ವರ್ಣನೆ ಹೀಗಿವೆ-

> "ಮತ್ತಂ, ಶಿವಗಣಂಗಳು ಆರೋಗಿಸಿ ಮಿಕ್ಕ ಶಿವಪ್ರಸಾದಮಂ ಕಂಡು, ಉಬ್ಬಿ-ಕೊಬ್ಬಿನಲ್ಲಿ. ನಲಿದಾಡುತ್ತ, ಆ ಪ್ರಸಾದದೊಳು ಅಣು ಮಾತ್ರಮಂ ನೆಲಕ್ಕೆ ತಪ್ಪಲೀಯದೆ ಎತ್ತಿ ತಂದು, ಮಹಾ ಪ್ರಸಾದ ರಾಶಿಯಂ ಮಾಡಿ, ಆ ಪ್ರಸಾದದಮಂ ಅಷ್ಟ ವಿಧಾರ್ಚನೆಯಿಂದರ್ಚಿಸಿ, ಪರಮಾನಂದದಿಂ ಪ್ರಸಾದಮಂ ಸ್ವೀಕಾರಂ ಮಾಡಿ ಪರಮ ಪರಿಣಾಮದೊಳಿಪ್ಪ ಶಿವಗಣ ಪ್ರಸಾದಿಗಳ. "

ಶಿವಭಕ್ತರು ('ಶಿವಗಣ') ಊಟಮಾಡಿ ತಟ್ಟೆಯಲ್ಲಿ ಉಳಿಸಿದ ಆಹಾರಭಾಗವನ್ನು (ಅದೇ 'ಶಿವಪ್ರಸಾದ') ಶ್ರದ್ಧೆಯಿಂದ ಸಂಗ್ರಹಿಸಿ ತಂದು ಅದನ್ನು ಭಕ್ತಿಯಿಂದ ಪೂಜಿಸಿ ಸಂತೋಷದಿಂದ ಅದನ್ನು ಸ್ವೀಕರಿಸುವವನೇ 'ಶಿವಗಣ ಪ್ರಸಾದಿ' : ಶಿವಗಣಗಳ ಪ್ರಸಾದವನ್ನು,

ತಿಂದು ಬಿಟ್ಟ ಆಹಾರವನ್ನು ತೆಗೆದುಕೊಳ್ಳುವವನೇ ಶಿವಗಣ ಪ್ರಸಾದಿ ಮಹಾದೇವಯ್ಯ ಅಂತಹ ವ್ಯಕ್ತಿಯಾಗಿದ್ದನೆಂಬುದು ಸ್ಪಷ್ಟವಾಗಿದೆ. ಹನ್ನೆರಡನೆಯ ಶತಮಾನದಲ್ಲಿದ್ದ ಆಯ್ದಕ್ಕಿ ಮಾರಯ್ಯನು ಶರಣರ ಮನೆಗಳಲ್ಲಿ ದಾನ ನೀಡುವಾಗ ಆಕಸ್ಮಿಕವಾಗಿ ನೆಲದ ಮೇಲೆ ಬೀಳುತ್ತಿದ್ದ ಧಾನ್ಯವನ್ನು ಸಂಗ್ರಹಿಸಿ ತಂದು ಅದರಿಂದ ಅಡುಗೆ ಮಾಡಿಸಿ ಅದರಿಂದ ತೃಪ್ತನಾಗುತ್ತಿದ್ದ ವ್ಯಕ್ತಿಯಾಗಿದ್ದರೆ, ಕ್ರಿ. ಶ. 1400ರ ಮಹಾದೇವಯ್ಯನು ಇನ್ನೂ ಒಂದು ಹೆಜ್ಜೆ ಹೋಗಿ ಶರಣರು ಊಟ ಮಾಡಿ ತಟ್ಟೆಯಲ್ಲಿ ಉಳಿಸುತ್ತಿದ್ದ ಶೇಷಾನ್ನವನ್ನು (ಆಧುನಿಕರ ದೃಷ್ಟಿಯಿಂದ ಹೇಳುವುದಾದರೆ ಎಂಜಲನ್ನು ಆದರೆ ಅಂದಿನ ಶರಣರ ದೃಷ್ಟಿಯಿಂದ ಹೇಳುವುದಾದರೆ 'ಪ್ರಸಾದ' ವನ್ನು) ಸಂಗ್ರಹಿಸಿ ಭೋಗಿಸುತ್ತಿದ್ದ ಅಪರೂಪದ ಶರಣನಾಗಿದ್ದ ಅವನು. ಮಹಾದೇವಯ್ಯ ನಿಶ್ಚಿತವಾಗಿಯೂ ಗುರು ವರ್ಗದ ಶರಣನಾಗಿರಲಿಲ್ಲ-ಗುರುವರ್ಗದವನಾಗಿದ್ದರೆ ಸಮಾಜದ ಅವನ ಕಾಯಕಕ್ಕೆ ನಿಶ್ಚಯವಾಗಿಯೂ ಅವಕಾಶ ನೀಡುತ್ತಿರಲಿಲ್ಲ. ಅವನು ನಿಶ್ಚಿತವಾಗಿಯೂ ಭಕ್ತವರ್ಗದ ಶರಣ : ಒಬ್ಬ ಮಹಾನುಭಾವಿ; ಒಬ್ಬ ನಿಜವಾದ 'ಜಂಗಮ'; ಕರ್ನಾಟಕವು ಕಂಡ ವಿರಳ ಪ್ರತಿಭಾಶಾಲಿಗಳಲ್ಲೊಬ್ಬ. ಶರಣ ಚಳವಳಿಯು ಮುಂದಿನ ಶತಮಾನಗಳಲ್ಲಿ ಕರ್ನಾಟಕಕ್ಕೆ ನೀಡಿದ ಒಂದು ಪಕ್ವ ಫಲ. ಅಂತಹ ಇನ್ನೊಬ್ಬ ವ್ಯಕ್ತಿ ಕರ್ನಾಟಕದಲ್ಲಿಯೂ ದೊರಕುವುದಿಲ್ಲ; ಭಾರತದ ಬೇರೆ ಕಡೆಯೂ ದೊರಕುವುದಿಲ್ಲ.

III

ಅವನ ಕೃತಿಯ ಪರಿಚಯವನ್ನು ಮಾಡಿ ಕೊಡುವ ಉದ್ದೇಶ ಇಲ್ಲಿಲ್ಲ. ಅವನ ಕೃತಿ ಶರಣ ಚಳುವಳಿಯಲ್ಲಿ ಭಾಗಿಗಳಾಗಿದ್ದ ಬೇರೆ ಬೇರೆ ಶರಣ ಶರಣೆಯರು ಪರಸ್ಪರ ಹೇಗೆ ಸ್ಪಂದಿಸುತ್ತಿದ್ದರು ಎಂಬ ಚಿತ್ರಣವನ್ನು ಅವರದೇ ವಚನಗಳನ್ನು ಬಳಸಿ ಸಂಭಾಷಣೆಗಳ ಮೂಲಕ ನಮ್ಮ ಮುಂದೆ ಇಡುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. "ಶೂನ್ಯ ಸಂಪಾದನೆ"ಯಲ್ಲಿ ಪಾತ್ರಗಳು ತಾವೇ ರಚಿಸಿದ ವಚನಗಳ ಮೂಲಕ ಪರಸ್ಪರ ಸಂಭಾಷಿಸಿ ತಮ್ಮ ವ್ಯಕ್ತಿತ್ವವನ್ನು ಓದುಗರ ಮುಂದೆ ಬಿಚ್ಚಿಡುತ್ತ ಹೋಗುತ್ತವೆ. ಹರ್ಷದಲ್ಲಿ ದುಃಖದಲ್ಲಿ ನಿರಾಸೆಯಲ್ಲಿ ಕೋಪದಲ್ಲಿ ವಿಡಂಬನೆಯಲ್ಲಿ ಕರುಣೆಯಲ್ಲಿ ಸ್ವಾತ್ಮ ನಿರೀಕ್ಷೆಯಲ್ಲಿ ಅನುಭಾವದ ಔನ್ನತ್ಯದಲ್ಲಿ ಅಹಂಕಾರದಲ್ಲಿ ಅಸಡ್ಡೆಯಲ್ಲಿ ಪಶ್ಚಾತ್ತಾಪದಲ್ಲಿ ಹೀಗೆ ಮನುಷ್ಯನಿಗೆ ಎದುರಾಗುವ ಭಿನ್ನ ಭಿನ್ನ ಸಂದರ್ಭಗಳಲ್ಲಿ ಆ ಪಾತ್ರಗಳು ಪರಸ್ಪರ ಮಾತನಾಡುತ್ತವೆ; ಅಥವಾ ತಮಗೆ ತಾವೇ ಮಾತನಾಡಿಕೊಳ್ಳುತ್ತವೆ. ಆ ಪಾತ್ರಗಳು ಅಲ್ಲಮನಂತಹ ಅನುಭಾವಿ ಬಸವಣ್ಣನಂತಹ ಚಕ್ರವರ್ತಿ ಬಳಿಯ ಭಂಡಾರಿ, ಮಡಿವಾಳ ವೃತ್ತಿಯ ಮಾಚಯ್ಯ, ಮುಕ್ತಾಯಕ್ಕನಂತಹ ದುಃಖಿ, ಅಕ್ಕಮಹಾದೇವಿಯಂತಹ ಲೋಕ ನಿಂದೆಗೆ ಗುರಿಯಾದವಳು, ಸಿದ್ಧರಾಮನಂತಹ ಕಾಯಕಯೋಗಿ ಇವರೇ ಮೊದಲಾದವರು. ಇವರು ಪರಸ್ಪರ ಭೇಟಿಯಾದಾಗ ಹೇಗೆ ನಡೆದುಕೊಂಡಿವೆಯೆಂಬುದನ್ನು ಶೂನ್ಯ ಸಂಪಾದನೆ

ಮನೋಜ್ಞವಾಗಿ ಚಿತ್ರಿಸಿದೆ. ಆ ಪಾತ್ರಗಳು ಏನನ್ನು ಚರ್ಚಿಸಿದುವು ಎಂಬುದು ಅವರ ಬೌದ್ಧಿಕತೆಗೆ ಅವರ ಆಧ್ಯಾತ್ಮಿಕ ಸಾಧನೆಯ ಕುರುಹಾದರೆ ಅವರು ವೈಯಕ್ತಿಕ ನೆಲೆಯಲ್ಲಿ ಪರಸ್ಪರ ಹೇಗೆ ಕಂಡರು ಎಂಬುದು ಅವರ ಸಂಸ್ಕೃತಿಗೆ ಸಂಕೇತವಾಗುತ್ತದೆ. ಈ ಎರಡನೆಯ ಅಂಶವನ್ನು ಎತ್ತಿ ತೋರುವುದು ಈ ಸಂಪ್ರಬಂಧದ ಮುಖ್ಯ ಆಶಯವಾಗಿದೆ.

ಅ. ಅಲ್ಲಮ-ಮುಕ್ತಾಯಕ್ಕಗಳ ಪ್ರಸಂಗ :

ಅಣ್ಣನನ್ನು ಕಳೆದುಕೊಂಡು ದುಃಖದಲ್ಲಿ ಮುಳುಗಿದ್ದ ಮುಕ್ತಾಯಕ್ಕನನ್ನು ಅವಳಿಗೆ ಅಪರಿಚಿತನಾಗಿದ್ದ ಅಲ್ಲಮ ಅವಳನ್ನು ಪರಿಚಯ ಮಾಡಿಕೊಳ್ಳುವ ಮೊದಲ ಮಾತಿನಲ್ಲೇ "ಎಲೆ ಅವ್ವ" ಎಂದು ಸಂಬೋಧಿಸುತ್ತಾನೆ. ಜ್ಯೋತಿಯಲ್ಲಿ ಜ್ಯೋತಿ ಒಂದಾದ, ಅಜಗಣ್ಣನ ತಂಗಿ ತಾನು ಎಂದು ಅವಳು ಹೇಳಿಕೊಂಡಾಗ ಅಲ್ಲಮ "ನಿಮ್ಮ ಶರಣ ಅಜಗಣ್ಣಂಗೆ ಶರಣೆಂದು ಬದುಕಿದೆನು" ಎಂದು ಅಜಗಣ್ಣನಿಗೆ ಗೌರವ ತೋರುತ್ತಾನೆ. ಮುಂದೆ ಅವಳನ್ನು ಅಲ್ಲಮ "ಎಲೆ ತಾಯೆ" ಎಂದು ಮಾತನಾಡಿಸುತ್ತಾನೆ. ಎಂದು ಘಟ್ಟದಲ್ಲಿ ಮುಕ್ತಾಯಕ್ಕ ಅಲ್ಲಮನಿಗೆ "ಸಹಜ ಜ್ಞಾನ ನಿನಗಿಲ್ಲ"ವೆಂದು ತೀವ್ರ ಅಸಮಾಧಾನದಿಂದ ಹೇಳಿದರೂ, ಪ್ರಾಶಾಂತನಾಗಿ ಅಲ್ಲಮ ಅವಳಿಗೆ "ನಮ್ಮ ಗೊಗೇಶ್ವರ ಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ ಬಾಯ್ದೆರೆದನಲ್ಲದೆ ಭಿನ್ನ ಉಂಟೇ ಹೇಳಾ ಮರುಳೇ" ಎನ್ನುತ್ತಾನೆ. ("ಮರುಳೇ"-ಹುಚ್ಚಿ' ಎಂಬ ಪ್ರೀತಿಯ ಮಾತು ಗಮನಿಸಿ). ಅಂತ್ಯದಲ್ಲಿ ಅಲ್ಲಮನನ್ನು ಅರ್ಥಮಾಡಿಕೊಂಡ ಮುಕ್ತಾಯಕ್ಕ "ಎನ್ನ ಅಜಗಣ್ಣ ತಂದೆಯ ನೊಳಗೋಂಡಿಪ್ಪ ನಿಮ್ಮ ಮಹಿಮೆಗೆ ನಮೋ - ನಮೋ ಎನುತಿದ್ದೆನು" ಎಂದು ಅವನಿಗೆ ಗೌರವವನ್ನು ವ್ಯಕ್ತಪಡಿಸುತ್ತಾಳೆ. ಈ ಪ್ರಸಂಗದಲ್ಲಿ ಕಂಡು ಬರುವ ಪರಸ್ಪರ ಪ್ರೀತಿ, ಗೌರವ ಭಾವನೆಗಳನ್ನು ಗಮನಿಸಬೇಕು.

ಆ. ಅಲ್ಲಮ-ಸಿದ್ಧರಾಮ ಪ್ರಸಂಗ

ಕೆರೆ ಕಟ್ಟಿಸುವುದರಲ್ಲೇ, ಅಂತಹ ಬಾಹ್ಯ ಕ್ರಿಯೆಗಳಲ್ಲೇ ತನ್ನನ್ನು ತೊಡಗಿಸಿಕೊಂಡು ಅಂತರಂಗದ ಸಾಧನೆಗೆ ವಿಮುಖವಾಗಿದ್ದ ಸೊನ್ನಲಿಗೆಯ ಸಿದ್ಧರಾಮನನ್ನು ಅಲ್ಲಮ ಎಲ್ಲರ ಮುಂದೆ ವಿಡಂಬಿಸಿದಾಗ ಸಿದ್ಧರಾಮನಿಗೆ ಅಸಾಧ್ಯ ಕೋಪ ಬರುತ್ತದೆ. ಆಗ ಸಿದ್ಧರಾಮ ಬಿಟ್ಟ ಹಣೆಗಣ್ಣಿನ ಜ್ವಾಲೆಯನ್ನು ಅಲ್ಲಮ ತನ್ನ ಅಂಗಾಲಲ್ಲಿ ಅಡಗಿಸಿಕೊಂಡನೆಂದು ಕತೆ ಹೇಳುತ್ತದೆ (ಇದು ಸಾಂಕೇತಿಕವೂ ಹೌದು). ಮುಂದೆ ಸಿದ್ಧರಾಮನಿಗೆ ತನ್ನ ತಪ್ಪಿನ ಅರಿವಾಗಿ ಅವನ ಮರೆ ಹೊಕ್ಕಾಗ, ಅವನನ್ನು "ಪರಮಯೋಗಿ, ಶುದ್ಧ ಸಾತ್ವಿಕ ಯೋಗಿ," ಇತ್ಯಾದಿ ಹೊಗಳಿ ಅವನನ್ನು ಅಪ್ಪಿಕೊಂಡು ಕೊಂಡಾಡಿ "ಗೊಗೇಶ್ವರನ ಶರಣ ಸಿದ್ಧರಾಮನ ಕಂಡೆನ್ನ ಭವಂ ನಾಸ್ತಿಯಾಯಿತ್ತು" ಎಂದೂ, "ನಿಮ್ಮ ಶರಣ ಶಿವಯೋಗಿ ಸಿದ್ಧರಾಮನು ನಪ್ಪಿ ಸೊಪ್ಪಳಿದು ನಮೋ ನಮೋ ಎನುತಿದ್ದೆನು " ಎಂದೂ ಹೊಗಳುತ್ತಾರೆ. ಮುಂದೆ ಏಕಾಂತದಲ್ಲಿ ಅಲ್ಲಮ ಸಿದ್ಧರಾಮನಿಗೆ ಆತ್ಮ ತತ್ವವನ್ನು ಬೋಧಿಸುತ್ತಾನೆ. ಇಷ್ಟಲಿಂಗ ಘನವನ್ನು ತಿಳಿಸಿಕೊಡು ಎಂದು ಸಿದ್ಧರಾಮ ಬೇಡಿಕೊಂಡಾಗ, ಅದನ್ನು ನನಗಿಂತ ಬಸವಣ್ಣ

ಬಲ್ಲ, ಅವನಿಂದ ನಾವಿಬ್ಬರೂ ತಿಳಿದುಕೊಳ್ಳೋಣ ಎಂದು ವಿನಯದಿಂದ ಅಲ್ಲಮ ಸಿದ್ಧರಾಮನನ್ನು ಬಸವಣ್ಣನ ಬಳಿಗೆ ಕರೆತರುತ್ತಾನೆ. ("ಇಂತು ಷಡುಸ್ಥಲದಂತುವ ಸಂಧಿಸಿ ಒಂದುಮಾಡಿಕೊಂಡಿಪ್ಪ ಕರಸ್ಥಲದನುವನು ಗೊಗೇಶ್ವರನ ಶರಣ ಸಂಗನ ಬಸವಣ್ಣ ಬಲ್ಲ. ಬೆಸೆಗೊಂಬ ಬಾರಾ ಸಿದ್ಧರಾಮಯ್ಯ"; "ನಮ್ಮ ಗೊಗೇಶ್ವರ ಲಿಂಗದಲ್ಲಿಸಂಗನ ಬಸವಣ್ಣನ ಶ್ರೀ ಪಾದಕ್ಕೆ ಶರಣೆಂದು ಧನ್ಯರಾಗಬೇಕು ನಡೆಯಾ ಸಿದ್ಧರಾಮಯ್ಯ") ಸಾಧನೆ ಮತ್ತು ವಯಸ್ಸಿನಲ್ಲಿ ಕಿರಿಯನಾಗಿದ್ದ ಸಿದ್ಧರಾಮನ ಜೊತೆ ಅಲ್ಲಮ ನಡೆದುಕೊಂಡ ರೀತಿ, ಅವನ ಕೋಪವನ್ನು ಕ್ಷಮಿಸಿ ಅವನನ್ನು ಹೊಗಳಿದ್ದಲ್ಲದೆ ಅವನಿಗೆ ನಮೋ ನಮೋ ಎಂದು ಅಲ್ಲಮ ಬಾಗುವುದನ್ನು ಗಮನಿಸಿಬೇಕು. ಅಂತೆಯೇ ತನಗಿಂತ ಹೆಚ್ಚು ಬಲ್ಲ ವ್ಯಕ್ತಿ ಎಂದು ಬಸವಣ್ಣನನ್ನು ಗುರುತಿಸಿದ್ದಲ್ಲದೆ ಬಸವಣ್ಣನ ಶ್ರೀ ಪಾದಕ್ಕೆ ಶರಣಾಗಿ ಧನ್ಯರಾಗುವ ಮಾತು ಆಡುತ್ತಾನೆ ಅಲ್ಲಮ.

ಇ. ಬಸವಣ್ಣ-ಚನ್ನಬಸವಣ್ಣ ಪ್ರಸಂಗ

ಬಸವಣ್ಣನವರ ತಂಗಿಯ ಮಗ ಚನ್ನಬಸವಣ್ಣ ಬಸವಣ್ಣನವರನ್ನು ತನಗೆ ಉಪದೇಶ ನೀಡಲು ಪ್ರಾರ್ಥಿಸಿಕೊಳ್ಳುತ್ತಾನೆ. "ಆಗ ಬಸವ ಎಲ್ಲಾ ಶಿವಭಕ್ತರಿಗೆಯು ಶಿಶುವಲ್ಲದೆ ಒಬ್ಬರಿಗೆಯು ನಾನು ಗುರುವಲ್ಲವೆಂದು" ಹೇಳಿ ವಿನಯವನ್ನು ವ್ಯಕ್ತ ಪಡಿಸುತ್ತಾನೆ. ಬಸವನಿಂದ ಚನ್ನಬಸವನಿಗೆ ಲಿಂಗಾನುಗ್ರಹವಾಗುತ್ತದೆ. ಆದರೂ ಬಸವಣ್ಣ ಚನ್ನಬಸವಣ್ಣ ನಿಂದ ತನಗೆ "ಸತ್ ಪಥ" ದೊರೆಯಿತೆಂದು ಹೇಳಿಕೊಳ್ಳುತ್ತಾನೆ. ಚನ್ನಬಸವಣ್ಣ ಸಹಜವಾಗಿ ತನ್ನ "ಗುರು"ವಿನ ಬಗ್ಗೆ, ಬಸವನ ಬಗ್ಗೆ "ಹರಿ ಬ್ರಹ್ಮಾದಿಗಳಿಗೆ ಅಗೋಚರವಾದ ಕೂಡಲ ಚೆನ್ನಸಂಗನೆಂಬ ಲಿಂಗವ ತೋರಿದ ಬಸವಗುರುವೆ ಶರಣು" ಎಂದು ಸ್ತೋತ್ರ ಮಾಡಿದರೆ, ಬಸವಣ್ಣ "...ಕೂಡಲ ಸಂಗಮ ದೇವರಲ್ಲಿ ಚೆನ್ನಬಸವಣ್ಣನೆನ್ನ ನಾನು ಮಾಡಿ ಉಳುಹಿದನಾಗಿ ಇನ್ನು ಮರ್ತ್ಯ ಲೋಕಕ್ಕೆ ಬಂದರೆ ಚೆನ್ನಬಸವಣ್ಣನ ಶ್ರೀಪಾದದಾಣೆ" ಎಂದು ಚನ್ನ ಬಸವಣ್ಣನ ಸ್ತೋತ್ರ ಮಾಡುತ್ತಾನೆ.

ಈ. ಅಲ್ಲಮ-ಬಸವಣ್ಣ ಪ್ರಸಂಗ

ಕಲ್ಯಾಣಕ್ಕೆ ಬಂದ ಅಲ್ಲಮ ಸಿದ್ಧರಾಮರಿಬ್ಬರೂ ಬಸವಣ್ಣನ ಮನೆಯನ್ನು ಕಂಡು "ಧನ್ಯರಾದೆ"ವೆಂದು ಭಾವಿಸುತ್ತಾರೆ. ಲಿಂಗಾರ್ಚನೆಯಲ್ಲಿ ನಿರತನಾಗಿದ್ದ ಬಸವಣ್ಣ ಅವರನ್ನು ಕರೆತರಲು ತಾನೇ ಹೋಗದೆ ಪರಿಚಾರಕರನ್ನು ಕಳಿಸುತ್ತಾನೆ. ಅದರಿಂದ ಅಲ್ಲಮನಿಗೆ ಬಸವನಲ್ಲಿ ಅಹಂಕಾರದ ಭಾವನೆ ಮೂಡಿದೆಯೆಂದು ತೀವ್ರ ಅಸಮಾಧಾನವಾಗುತ್ತದೆ. ಬಸವಣ್ಣನಿಗೆ ಮುಂದೆ ತನ್ನ ತಪ್ಪಿ ನ ಅರಿವಾಗಿ ತಾನೇ ಹೋಗಿ ಕ್ಷಮೆ ಕೇಳಿ ಕರೆತರುತ್ತಾನೆ. ಆಗ ಅವನ ಬಾಯಿಂದ "..ಒಮ್ಮಿಂಗೆ ಕರುಣಿಸಯ್ಯ... ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎಂಬೆನು" ಎಂಬ ಮಾತು ಬರುವುದು ಸಹಜವೇ. ಅಲ್ಲಮನು

ಬಸವಣ್ಣನ ನಡತೆಯನ್ನು "ಖಂಡಿಸು"ತ್ತಾನೆ. ಎಲ್ಲ ಶರಣರೂ ಬಸವಣ್ಣನ ವಿನಯಾದಿ ಗುಣಗಳನ್ನು ಎತ್ತಿ ಹೇಳಿ ಕ್ಷಮಿಸಲು ಪ್ರಾರ್ಥಿಸಿಕೊಳ್ಳುತ್ತಾರೆ. ಪ್ರಸನ್ನನಾದ ಅಲ್ಲಮ "ನಿಮ್ಮ ಶರಣ ಸಂಗನ ಬಸವಣ್ಣನ ಮರೆಯ ಹೊಕ್ಕು ನಾನು ಬದುಕಿದೆನು", "ನಿಮ್ಮ ಶರಣ ಸಂಗನ ಬಸವಣ್ಣಂಗೆ ನಮೋ ನಮೋ ಎಂಬೆನು", "ನಿಮ್ಮ ಶರಣ ಸಂಗನ ಬಸವಣ್ಣನ ಶ್ರೀಪಾದವ ಕಂಡು ಶರಣೆಂದು ಬದುಕಿದೆನು" ಎಂಬ ಉದ್ಗಾರಗಳನ್ನು ಎತ್ತುತ್ತಾನೆ. ಅದೇ ಒಂದು ಸಂದರ್ಭದಲ್ಲಿ ಅಲ್ಲಮನು "ಗೊಗ್ಗೇಶ್ವರ ಲಿಂಗದಲ್ಲಿ ಸರ್ವ ಸಂದೇಹವ ಕಳೆದಿಪ್ಪ ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆನು"-ಎಂದು ಚನ್ನಬಸವಣ್ಣನಿಗೆ ಗೌರವ ತೋರುತ್ತಾನೆ. ಒಂದು ಘಟ್ಟದಲ್ಲಿ ಚನ್ನಬಸವಣ್ಣ ತಾನು ಅಲ್ಲಮನಿಗೆ "ಚಿಕ್ಕ ತಮ್ಮ"ನಾಗಬೇಕೆಂದು ಹೇಳಿಕೊಳ್ಳುತ್ತಾನೆ. ಮಡಿವಾಳ ಮಾಚಯ್ಯ "ಪ್ರಭುವೆಂಬ ಲಿಂಗೈಕ್ಯನ ಶ್ರೀ ಪಾದದಲ್ಲಿ ಮಗ್ನನಾಗಿದ್ದೆನು" ಎಂದು ಅಲ್ಲಮನನ್ನು ಸ್ತೋತ್ರಮಾಡಿದರೆ ಅಲ್ಲಮ ಪ್ರತಿಯಾಗಿ "ಗೊಗ್ಗೇಶ್ವರನ ಶರಣ ಮಡಿವಾಳನ ಶ್ರೀಪಾದಕ್ಕೆ ನಮೋ ನಮೋ ಎನುತಿದ್ದೆನು" ಎಂದು ಕೀರ್ತಿಸುತ್ತಾನೆ. ಅಂತೆಯೇ ಸಿದ್ಧರಾಮನು "ಮಡಿವಾಳನ ಪಾದದಲ್ಲಿದ್ದು ಮನಮಗ್ನನಾದೆನು" ಎಂದು ಮಾಚಯ್ಯನನ್ನು ಹೊಗಳುತ್ತಾನೆ.

ಉ. ಅಲ್ಲಮ-ಮಹಾದೇವಿ ಪ್ರಸಂಗ

ಬಲವಂತದಿಂದ ಕೈಹಿಡಿದಿದ್ದ ಕೌಶಿಕನನ್ನು ತೊರೆದು ಜಗತ್ತಿನ ಕಠಿಣೋಕ್ತಿಗೆ ಗುರಿಯಾದ ಮಹಾದೇವಿಯಕ್ಕ ಶರಣರ ಪ್ರೀತಿಯನ್ನೂ ಪರಮಾತ್ಮನನ್ನು ಪತಿಯೆಂದು ಭಾವಿಸಿದ ತನ್ನನ್ನು ಒಪ್ಪಿಕೊಂಡು ಸ್ವೀಕರಿಸುವರೆಂಬ ಶರಣರ ಭರವಸೆಯನ್ನೂ ಬಯಸಿ ಕಲ್ಯಾಣಕ್ಕೆ ಬರುತ್ತಾಳೆ. ಅಲ್ಲಿನ ಸಭೆಯಲ್ಲಿ ಸಹಜವಾಗಿ ಅವಳ ಗಂಡನ ಗುರುತು ಹೇಳುವಂತೆ ಅಲ್ಲಮನಿಂದ ಪ್ರಶ್ನಿತಳಾಗುತ್ತಾಳೆ. ಆಗ ಅಲ್ಲಮ ಹೇಳುವ ಮಾತು ಹೀಗಿದೆ.

ಉದಮದದ ಯೌವನವನೊಳಕೊಂಡ ಸತಿ ನೀನು
ಇತ್ತಲೇಕೆ ಬಂದೆಯವ್ವ
ಸತಿ ಎಂದರೆ ಮುನಿವರು ನಮ್ಮ ಶರಣರು
ಎನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿರು
ಅಲ್ಲದಡೆ ತೊಲಗು ತಾಯೆ
ನಮ್ಮ ಗೊಗ್ಗೇಶ್ವರನ ಶರಣರಲ್ಲಿ ಅಂಗ ಸುಖ ಸನ್ನಿಹಿತವ ಬಯಸುವರೆ
ನಿನ್ನ ಪತಿ ಯಾರೆಂಬುದ ಹೇಳಾ ಎಲೆಯವ್ವ.

ಇಡೀ ವಚನವನ್ನು ಬೇಕೆಂದೇ ಉದಾಹರಿಸಲಾಗಿದೆ. ಸಾರ್ವಜನಿಕರಿಗೆ ಮಹಾದೇವಿಯ ಮೇಲೆ ಅನೇಕ ಗುಮಾನಿಗಳಿವೆ. ಅವಳನ್ನು ಮದುವೆಯಾಗಿದ್ದವನು ಒಬ್ಬ ದೊರೆ, ಕೌಶಿಕ (ಅವನು ವಾಸ್ತವವಾಗಿ ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯಲ್ಲಿ-ಇದು ಮಹಾದೇವಿಯಕ್ಕನ ಊರಿನ ಪಕ್ಕದ ಚಾಲುಕ್ಯರ ದಕ್ಷಿಣದ ರಾಜಧಾನಿ - ಆಳುತ್ತಿದ್ದ ಕಸಪಯ್ಯ ನಾಯಕ);

ಅವನನ್ನು ಸುಂದರಿ ಯುವತಿ ಮಹಾದೇವಿ ತ್ಯಜಿಸಿ ಕಾಣದ ಶಿವನೇ ತನ್ನ ಗಂಡನೆಂದು ಹೇಳಿಕೊಂಡು ತಿರುಗುತ್ತಿದ್ದರೆ ಸಹಜವಾಗಿಯೇ ಅವಳ ಬಗ್ಗೆ ಏನೆಲ್ಲ ಕಥೆಗಳು ಹಬ್ಬಿರುವ ಸಾಧ್ಯತೆಗಳಿವೆ. ಹೆಚ್ಚು ಕಡಿಮೆ ಅವಳ ಊರಿನವನೇ ಆದ ಜ್ಞಾನಿ ಅಲ್ಲಮನು ಮಹಾದೇವಿಯ ಆದರ್ಶವನ್ನು ಬಲ್ಲವನಾಗಿದ್ದ ,ಮೆಚ್ಚಬಲ್ಲವನೂ ಆಗಿದ್ದ. ಆದರೆ ಉಳಿದ ಸಾಮಾನ್ಯ ಜನರಿಗೆ ಅವಳ ನಿಜಸ್ವರೂಪವನ್ನು ತಿಳಿಸುವ ಉದ್ದೇಶದಿಂದ ಅವನು ಕಠಿಣರೀತಿಯಲ್ಲಿ ಪ್ರಶ್ನಿಸುತ್ತಾನೆ : ಆದರೆ ಆ (ತೋರಿಕೆಯ) ಕಾಠಿಣ್ಯದ ಹಿಂದೆ ಇರುವ ಪ್ರೀತಿ ವಾತ್ಸಲ್ಯ ಮಾರ್ದವತೆ ಗೌರವಗಳನ್ನು ಗಮನಿಸಬೇಕು. ''ಅವ್ವ'' ಎಂದು ಅವಳನ್ನು ಸಂಬೋಧಿಸಿ, ನಿನ್ನ ಗಂಡ ಯಾರು ಎಂಬುದನ್ನು ನೀನು ಸರಿಯಾಗಿ ಹೇಳದಿದ್ದರೆ ''ತೊಲಗು'' ಎಂಬ ನಿರ್ದಯದ ಮಾತನಾಡಿದರೂ ಆ ನಿರ್ದಯ ಭಾವನೆಯನ್ನು ಆ ಮುಂದಿನ ''ತಾಯೆ'' ಎಂಬ ಮಾತು ಎಷ್ಟು ಕೋಮಲಗೊಳಿಸುತ್ತದೆ ಎಂಬುದನ್ನು ಗಮನಿಸಬೇಕು. ಅಲ್ಲಮ ನ್ಯಾಯಾಧೀಶನ ಜಾಗದಲ್ಲಿ ಕುಳಿತು ಅಪರಾಧಿಯೊಬ್ಬನನ್ನು (ಅವಳು 'ಅಪರಾಧಿ' ಅಲ್ಲ ಎಂಬುದರ ಪೂರ್ಣ ಅರಿವು ಅವನಿಗಿದೆ) ನೇರವಾಗಿ ಪ್ರಶ್ನಿಸುವ ರೀತಿಯಲ್ಲಿ ಅವನ ಮಹಾದೇವಿಯಕ್ಕನ ಸಂಭಾಷಣೆ ನಡೆಯುತ್ತದೆ. ಅವಳ ಪ್ರಾಮಾಣಿಕವಾದ ಭಕ್ತಿಯ ನಿರ್ಭರತೆ ಸಾಬೀತಾಗುತ್ತದೆ. ಮರುಕ್ಷಣದಲ್ಲೇ ಅಲ್ಲಮ ''ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ ಗೊಗೇಶ್ವರ ಲಿಂಗದಲ್ಲಿ ಅಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು'' ಎಂದು ಮಹಾದೇವಿಗೆ ನಮಸ್ಕಾರ ಮಾಡುತ್ತಾನೆ. ಶರಣರ ''ಕರುಣದ ಶಿಶು ನಾನು'' ಎಂದೇ ಭಾವಿಸಿದ್ದ ಮಹಾದೇವಿ ಅಲ್ಲಮನ ಮಾತಿನಿಂದ ಭಾವಪರವಶಳಾಗಿ ಭೂಮಿಗೆ ಇಳಿದು ಹೋಗುತ್ತಾಳೆ. ಶರಣರು ಕೊಂಡಾಡಿದರೆ ''ಇರುವೆ ರುದ್ರನಾಗದೆ'' ಇರುತ್ತದೆಯೇ ಎಂದು ವಿನಯವನ್ನು ಮೆರೆಯುತ್ತಾಳೆ. ''ಪ್ರಭುವಿಂದ ಕೃತಕೃತ್ಯಳಾದೆ ನಾನು, ಮರೆಯಲಾಗದು ನಿಮ್ಮ ಶಿಶುವೆಂದು. ಎನ್ನನು ಚೆನ್ನಮಲ್ಲಿಕಾರ್ಜುನನ ಬೆರೆಸೆಂದು ಹರಸುತ್ತಿಹುದು'' ಎಂದು ಕೇಳಿಕೊಂಡು ಶ್ರೀ ಶೈಲದತ್ತ ಹೊರಡುತ್ತಾಳೆ. ಮಡಿವಾಳ ಮಾಚಿದೇವ ''ಕಲಿದೇವರ ದೇವ, ನಿಮ್ಮ ನೊಲಿಸಿ ಒಚ್ಚುತವಾದ ಮಹಾದೇವಿಯಕ್ಕನ ಪಾದವ ನೆನೆದು ನಾನು ಬದುಕಿದೆನು'' ಎಂದು ಕೊಂಡಾಡುತ್ತಾನೆ.

ೞ. ಕಲ್ಯಾಣದಲ್ಲಿ ಶರಣರು

ಕಲ್ಯಾಣದಿಂದ ಹೊರಟ ಅಲ್ಲಮ ನಿಜವಾದ 'ಜಂಗಮ'ನಂತೆ ಇಡೀ ಭಾರತವನ್ನು ಸುತ್ತಾಡಿ ಹಿಂದಕ್ಕೆ ಕಲ್ಯಾಣಕ್ಕೆ ಬಂದು 'ಶೂನ್ಯ ಸಿಂಹಾಸನ'ವನ್ನು ಏರುತ್ತಾನೆ. ಆಗ ಶರಣರು ಪರಸ್ಪರ ಈ ಸ್ತುತಿಸಿರುವ ರೀತಿ-

ಅಲ್ಲಮ ಚನ್ನಬಸವನ ಬಗ್ಗೆ ''ಗೊಗೇಶ್ವರ ಶರಣ ಚೆನ್ನಬಸವಣ್ಣಂಗೆ ಶರಣೆಂದು ಬದುಕಿದೆನು ಕಾಣಾ ಸಂಗನ ಬಸವಣ್ಣ''.

ಅಲ್ಲಮ ಬಸವನ ಬಗ್ಗೆ " ಉತ್ಸಾಹವ ನೋಡಿರೇ .... ಜೀವಿಗಳೆಲ್ಲವೂ ಜೀಯ ಜೀಯ ಎನುತ್ತಿದ್ದವು. ಆತ್ಮಂಗಳೆಲ್ಲವೂ ಅನುವ, ಬೇಡುತ್ತಿದ್ದವು. ಗೊಗೇಶ್ವರ, ಸಂಗನ ಬಸವಣ್ಣನ ಪಾದಕ್ಕೆ ಈರೇಳು ಭುವನವೆಲ್ಲವೂ ಜಯ ಜಯ ಎನುತ್ತಿದ್ದವು".

ಚೆನ್ನಬಸವಣ್ಣ ಬಸವನ ಬಗ್ಗೆ-"ಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು".

ಬಸವಣ್ಣ ಚೆನ್ನಬಸವಣ್ಣನ ಬಗ್ಗೆ-"ಚೆನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು"

ಅಲ್ಲಮ ಮಡಿವಾಳ ಮಾಚಿದೇವನ ಬಗ್ಗೆ - "ಮಡಿವಾಳ ಮಾಚಿ ತಂದೆಗಳ ಪದಕ್ಕೆ ನಮೋ ನಮೋ ಎನುತಿದ್ದೆನು.

ಹಡಪದಪ್ಪಣ್ಣ ಪ್ರಭುದೇವನ ಬಗ್ಗೆ- "ನಿಮ್ಮ ಶರಣ ಪ್ರಭುದೇವರಿಗೆ ನಮೋ ನಮೋ ಎನುತಿದ್ದೆನು".

ಡೋಹರ ಕಕ್ಕಯ್ಯ, ಅಕ್ಕನಾಗಮ್ಮ, ಮೋಳಿಗೆ ಮಾರಯ್ಯ, ಏಕಾಂತದ ರಾಮಯ್ಯ, ಶಂಕರ ದಾಸಿಮಯ್ಯ, ಮೇದರ ಕೇತಯ್ಯ, ಘಟ್ಟಿವಾಳ, ಮುದ್ದಣ್ಣ ಇವರೆಲ್ಲ "ಪ್ರಭುದೇವರ ಕರುಣದಿಂದ" ಬದುಕಿದೆವು ಎಂಬರ್ಥ ಬರುವಂತೆ ಸ್ತೋತ್ರ ಮಾಡುತ್ತಾರೆ. ಎಲ್ಲರಿಗೂ ಅವರವರ ಮುಕ್ತಿಯ ಮಾರ್ಗವನ್ನು ಅಲ್ಲಮ ತೋರುತ್ತಾನೆ.

ಇವು ಶೂನ್ಯ ಸಂಪಾದನೆಯಿಂದ ಆರಿಸಿದ ಕೆಲವು ಪ್ರಸಂಗಗಳು, ಮತ್ತು ಆ ಪ್ರಸಂಗಗಳಿಂದ ಆರಿಸಿದ ಕೆಲವು ಮಾತುಗಳು.

IV

ಮೇಲಿನ ಅಂಶಗಳನ್ನು ಪರಿಭಾವಿಸಿದರೆ ಹನ್ನೆರಡನೆಯ ಶತಮಾನದ ಶರಣರು ಪರಸ್ಪರ ಯಾವ ದೃಷ್ಟಿಯಿಂದ ನೋಡಿದರು, ನಡೆದುಕೊಂಡರು ಎಂಬುದರ ಒಂದು ಸ್ಪಷ್ಟ ಚಿತ್ರ ದೊರಕುತ್ತದೆ. ಆರು ಪ್ರಸಂಗಗಳನ್ನು ಆರಿಸಿಕೊಂಡು ಅಲ್ಲಿ ಬಂದಿರುವ ಕೆಲವು ಅಂಶಗಳನ್ನು ಎತ್ತಿ ತೋರಲಾಗಿದೆ. ಅವುಗಳ ವಿಶ್ಲೇಷಣೆಯಿಂದ ಕೆಳಗಿನ ಮಹತ್ವದ ಸಂಗತಿಗಳು ಧ್ವನಿತವಾಗುತ್ತವೆ.

1. ಭಾಷೆಯಲ್ಲಿ ಬಾಂಧವ್ಯ ಅಥವಾ ಕಳ್ಳುಬಳ್ಳಿ ಪದಗಳು (kinship terms) ಅನೇಕ ನಿಯೋಗಗಳನ್ನು (Functions) ಮಾಡುತ್ತವೆ. ಇಬ್ಬರು ವ್ಯಕ್ತಿಗಳ ಬಾಂಧವ್ಯದ ಸಂಬಂಧ ಸೂಚಿಸುವ ಕೆಲಸ ಅವುಗಳ ಮುಖ್ಯ ನಿಯೋಗ. ಅಪ್ಪ, ಅಮ್ಮ, ಅವ್ವ, ಅಣ್ಣ, ತಂಗಿ, ಅಕ್ಕ, ಗಂಡ, ಹೆಂಡತಿ, ಮಗ, ಮಗಳು, ನಾದಿನಿ ಇತ್ಯಾದಿ ಪದಗಳು ಕೆಲವು ನಿರ್ದಿಷ್ಟ ಸಂಬಂಧಗಳನ್ನು ಹೇಳುತ್ತವೆ. ಅಂತಹ ಸಂಬಂಧಗಳು ಇಬ್ಬರು ವ್ಯಕ್ತಿಗಳ ಮಧ್ಯೆ ವಾಸ್ತವವಾಗಿ

ಇಲ್ಲದಿದ್ದರೂ ಆ ಪದಗಳನ್ನು ಭಾವನಾತ್ಮಕ ಸಂಬಂಧ ಸೂಚಕವಾಗಿಯೂ ಬಳಸಬಹುದು. ''ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ..'' ಎಂಬ ವಚನದಲ್ಲಿ ಮಹಾದೇವಿ ಇನ್ನೊಬ್ಬ ಹೆಂಗಸನ್ನು ಉದ್ದೇಶಿಸಿ ಮಾತನಾಡಿದ್ದಾಳೆ. ಆ ವ್ಯಕ್ತಿ ಕೇವಲ ಹೆಂಗಸು ಅಲ್ಲ, 'ಅಕ್ಕ'ನಂತೆ ಅವಳು ಸ್ನೇಹ ಸಲಿಗೆಗೆ 'ಅವ್ವ'ನಂತೆ ಗೌರವ ಪಾತ್ರಳು ಎಂಬ ಭಾವನಾತ್ಮಕ ಸಂಬಂಧವನ್ನು ಆ ವ್ಯಕ್ತಿಯ ಜೊತೆ ಮಹಾದೇವಿಯಕ್ಕ ಏರ್ಪಡಿಸಿಕೊಳ್ಳುತ್ತಾಳೆ. ವಚನಕಾರರ ಹೆಸರುಗಳಲ್ಲೇ ಅಂತಹ ಕಳ್ಳು ಬಳ್ಳಿ ಪದಗಳು ಸೇರಿಕೊಂಡಿರುವುದು ಎಲ್ಲರಿಗೂ ತಿಳಿದ ವಿಚಾರ. ಬಸವಣ್ಣ, ಚನ್ನಬಸವಣ್ಣ ಇಂತಹ ಹೆಸರುಗಳಲ್ಲಿ, ಅಕ್ಕ ಮಹಾದೇವಿ, ಅಕ್ಕ ನಾಗಮ್ಮ ಇಂತಹ ಹೆಸರುಗಳಲ್ಲಿ ಇರುವ 'ಅಣ್ಣ', 'ಅಕ್ಕ' ಪದಗಳು ಪ್ರೀತಿಯಿಂದ ಜನರು ಅವರ ಹೆಸರುಗಳಿಗೆ ಸೇರಿಸಿದ್ದು - ಅವು ಅಂದಿನ ಸಮಾಜ ಅವರ ಬಗ್ಗೆ ತೋರಿದ ಪ್ರೀತಿ ಆದರಗಳ ಸಂಕೇತ. ಅಲ್ಲಮನು ಮಹಾದೇವಿಯನ್ನು 'ಅವ್ವ' ಎಂದು 'ತಾಯೆ' ಎಂದು ಸಂಬೋಧಿಸಿದ್ದನ್ನು ನಾವು ಮೇಲೆ ನೋಡಿದ್ದೇವೆ - 'ಉ' ನೋಡಿ. ಚನ್ನಬಸವಣ್ಣ ಯಾವುದೋ ಕಾರಣ ಹೇಳಿ ತಾನು ಅಲ್ಲಮನಿಗೆ 'ಚಿಕ್ಕತಮ್ಮ' ನಾಗಬೇಕೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ- 'ಈ'ನೋಡಿ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೀಗೆ ಕಳ್ಳು ಬಳ್ಳಿ ಪದಗಳನ್ನು ಭಾವನಾತ್ಮಕ ಸಂಬಂಧವಾಗಿ ಈ ಪ್ರಮಾಣದಲ್ಲಿ ಬಳಸಿದ್ದು ಮೊತ್ತ ಮೊದಲು ವಚನ ವಾಙ್ಮಯದಲ್ಲಿ. ಎಲ್ಲ ಶರಣ ಶರಣೆಯರು ವಾಸ್ತವವಾಗಿ ರಕ್ತ ಸಂಬಂಧಿಗಳಲ್ಲದಿದ್ದರೂ. ಬದುಕಿನಲ್ಲಿ ಪ್ರೀತಿಯನ್ನು ಅಮೂಲ್ಯ ಮೌಲ್ಯವೆಂದು ಭಾವಿಸಿದ್ದ ಅವರು ಎಲ್ಲರ ಜೊತೆ ಅವರು ಬೇರೆ ಬೇರೆ ಭಾವನಾತ್ಮಕ ಸಂಬಂಧಗಳನ್ನು ಹೊಂದಿ ವ್ಯವಹರಿಸಿದರು. ಪ್ರೀತಿ ಅಂದಿನ ಶರಣ ಚಳವಳಿಯ ಮೂಲ ದ್ರವ್ಯವಾಗಿತ್ತು.

2. ಶರಣ ಶರಣೆಯರು ಹೆಣ್ಣು-ಗಂಡು, ಹಿರಿಯ-ಕಿರಿಯ, ಉಚ್ಚ-ನೀಚ ಎಂಬ ಭೇದವಿಲ್ಲದೆ ಎಲ್ಲರೂ ಉಳಿದ ಎಲ್ಲರನ್ನೂ ಪೂಜನೀಯ ಎಂದು ಹೇಳುವಷ್ಟು ಗೌರವದಿಂದ ಕಂಡಿರುವುದಕ್ಕೆ ಮೇಲೆ ಸಾಕಷ್ಟು ಉದಾಹರಣೆಗಳನ್ನು ಕೊಡಲಾಗಿದೆ. ಎಲ್ಲರೂ ಶಿವಭಕ್ತರು; ಎಲ್ಲರೂ ಶಿವನನ್ನು ಹೃದಯದಲ್ಲಿ ಧರಿಸಿದವರು; ಎಲ್ಲರೂ ಸಮಾನ ಗೌರವಕ್ಕೆ ಪಾತ್ರರು- ಆ ಕಾರಣ ಪೂಜನೀಯರು. ಅಲ್ಲಮ ತಾನು ಪ್ರತ್ಯಕ್ಷವಾಗಿ ಭೇಟಿ ಮಾಡಿರದಿದ್ದರೂ 'ಆರೂಢ' ಸ್ಥಿತಿಗೆ ಏರಿದ್ದ ಅಜಗಣ್ಣನ ಬಗ್ಗೆ ಜನರಿಂದ ಕೇಳಿ ತಿಳಿದಿದ್ದ ಅಜಗಣ್ಣನಿಗೆ 'ಶರಣೆಂದು ಬದುಕಿದೆನು' ಎನ್ನುತ್ತಾನೆ. ಮುಕ್ತಾಯಕ್ಕ ಅಲ್ಲಮನ 'ಮಹಿಮೆಗೆ ನಮೋ ನಮೋ ಎನುತಿದ್ದೆನು' ಎಂದು ಸುತ್ತಿಸುತ್ತಾಳೆ. ಅಲ್ಲಮ ಸಿದ್ಧರಾಮನನ್ನು ಪ್ರೀತಿಯಿಂದ ಅಪ್ಪಿಕೊಳ್ಳುತ್ತಾನೆ; ಅವನಿಗೆ 'ನಮೋ ನಮೋ' ಎಂದು ವಿನಯವನ್ನು ವ್ಯಕ್ತಪಡಿಸುತ್ತಾನೆ, ಸಿದ್ಧರಾಮ. ಬಸವಣ್ಣನಿಂದ ನೀನು ಇಷ್ಟಲಿಂಗದ ಸೂಕ್ಷ್ಮವನ್ನು ತಿಳಿದುಕೊಳ್ಳಬೇಕೆಂದು ಅಲ್ಲಮನು ಸಿದ್ಧರಾಮನಿಗೆ ಸೂಚಿಸಿ ಬಸವಣ್ಣನ ದರ್ಶನದಿಂದ ನಾವಿಬ್ಬರೂ ಧನ್ಯರಾಗೋಣ ಎಂದು ಹೇಳಿ ಕಲ್ಯಾಣಕ್ಕೆ ಕರೆತರುತ್ತಾನೆ. ಚನ್ನಬಸವಣ್ಣ 'ಬಸವ ಗುರು'ವನ್ನು ಸ್ತೋತ್ರ

ಮಾಡಿದರೆ ಬಸವಣ್ಣ 'ಚೆನ್ನ ಬಸವಣ್ಣನ ಶ್ರೀಪಾದ'ದ ಮೇಲೆ ಆಣೆ ಇಟ್ಟು ಮಾತನಾಡುತ್ತಾನೆ. ಬಸವಣ್ಣ "ಅಲ್ಲಮನ ಶ್ರೀಪಾದಕ್ಕೆ ನಮೋ ನಮೋ ಎಂಬೆನು" ಎಂದರೆ, ಅಲ್ಲಮ "ಬಸವಣ್ಣನ ಶ್ರೀಪಾದವ ಕಂಡು ಶರಣೆಂದು ಬದುಕಿದೆನು" ಎನ್ನುತ್ತಾನೆ. ಮಡಿವಾಳ ಮಾಚಯ್ಯ ಅಲ್ಲಮನನ 'ಶ್ರೀಪಾದ'ವನ್ನು ಸ್ಮರಿಸಿದರೆ ಅಲ್ಲಮನು ಮಡಿವಾಳಘನ "ಶ್ರೀಪಾದಕ್ಕೆ ನಮೋ ನಮೋ ಎನುತಿದ್ದೆನು" ಎಂದು ಕೊಂಡಾಡುತ್ತಾನೆ. ಅಲ್ಲಮ, ಅಕ್ಕಮಹಾದೇವಿಯರು ಪರಸ್ಪರ ಹೀಗೆಯೇ ನಡೆದುಕೊಳ್ಳುತ್ತಾರೆ. ಮನುಷ್ಯ ಮನುಷ್ಯರ ಸಂಬಂಧ ಶರಣರಿಗೆ ಹೀಗೆ ಪವಿತ್ರವಾಗಿ ಕಂಡಿದೆ.

ಆಧುನಿಕ ನಾಗರಿಕತೆ ಎಲ್ಲ ಮನುಷ್ಯರು ಸಾಮಾನ್ಯರು ಎನ್ನುತ್ತದೆ. ಬಸವಣ್ಣನೂ ಯಾವ ಮನುಷ್ಯರೂ ಕಿವಿಯಿಂದ ಬಂದವರಲ್ಲ, ಎಲ್ಲರೂ ಒಂದೇ ರೀತಿಯಲ್ಲಿ ಜನಿಸಿದವರು ಎಂದು ಹೇಳುವುದರ ಮೂಲಕ ಮನುಷ್ಯರ ಸಮಾನತೆಯನ್ನು ಬೆಂಬಲಿಸಿದ್ದಾನೆ. ಬಸವನೂ ಸೇರಿದಂತೆ ಎಲ್ಲ ಶರಣರಲ್ಲಿ ಪ್ರತಿಯೊಬ್ಬನೂ ಒಂದು ಹೆಜ್ಜೆ ಮುಂದೆ ಹೋಗಿ, ತನ್ನನ್ನು ಬಿಟ್ಟು ಉಳಿದವರೆಲ್ಲ ಸಮಾನರು, ತಾನು ಉಳಿದವರಿಗಿಂತ ಕೆಳಗಿನವನು ಎಂದು ಭಾವಿಸಿದಂತಿದೆ. "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬ ಮಾತು ಬಸವಣ್ಣನ ಮಾತು ಮಾತ್ರವಲ್ಲ, ಅದು ಎಲ್ಲರ ಭಾವನೆಯೂ ಆಗಿತ್ತೆಂದು ಕಾಣುತ್ತದೆ. ತನ್ನ ಬದುಕು ಇರುವುದು ಉಳಿದವರ ಸುಖಕ್ಕಾಗಿ, ಗೌರವಕ್ಕಾಗಿ ಎಂಬ ಭಾವನೆಯಿಂದ ಪ್ರೇರಿತವಾಗಿದ್ದಿತು ಶರಣ ಚಳವಳಿ. ತನಗಿಂತ ಉಳಿದವರೆಲ್ಲ ಹಿರಿಯರು. ಎಂಬ ಅಕೃತಕ ವಿನಯ ಅಂದಿನ ಶರಣ ಸಂಸ್ಕೃತಿಯ ವಿಶೇಷಾಂಶ, ಇದು ಪರ್ಯಾಯವಾಗಿ ಮಾನವ ಸಮಾನತಾ ಭಾವನೆಯ ಇನ್ನೊಂದು ರೂಪವೇ ಆಗಿದೆ.

ಈ ಸಂದರ್ಭದಲ್ಲಿ ಅಲ್ಲಮನ ಒಂದು ವಚನ ಸಹಜವಾಗಿಯೇ ನಮಗೆ ನೆನಪಾಗುತ್ತದೆ

> ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ
> ಆಗಲಿ ಮಹಾ ಪ್ರಸಾದವೆಂದೆನಯ್ಯ.
> ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಯ್ದು ಬುದ್ಧಿಯ ಕಲಿಸಿದರೆ
> ಆಗಲಿ ಮಹಾ ಪ್ರಸಾದವೆಂದೆನಯ್ಯ
> ದ್ವಾಪರಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಜಂಕಿಸಿ ಬುದ್ಧಿಯ ಕಲಿಸಿದರೆ
> ಆಗಲಿ ಮಹಾಪ್ರಸಾದವೆಂದೆನಯ್ಯ
> ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ
> ಆಗಲಿ ಮಹಾಪ್ರಸಾದವೆಂದೆನಯ್ಯ
> ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು.

ಗುರುವಿನ ಬಳಿ (ಆಧ್ಯಾತ್ಮಿಕವೇ ಆಗಲಿ ಲೌಕಿಕವೇ ಆಗಲಿ) ಶಿಕ್ಷಣವನ್ನು ಆರಂಭಿಸಿದ

ಶಿಷ್ಯ ಒಂದು ಹಂತದಲ್ಲಿ ಜ್ಞಾನದ ದೃಷ್ಟಿಯಿಂದ ಗುರುವನ್ನು ಮೀರಿ ಬೆಳೆದು ನಿಂತಾಗ ಆಗ ಗುರುವು ತನ್ನ ಶಿಷ್ಯನಿಗೆ-ಶಿಷ್ಯನ ಜ್ಞಾನಕ್ಕೆ ವಂದಿಸುತ್ತಾನೆಂದೂ ಅದು ಗುರುವು ಶಿಷ್ಯನಿಗೆ ತೋರುವ ದೈಹಿಕ ವಂದನೆಯಲ್ಲವೆಂದೂ ಶಿಷ್ಯನ ಒಳಗಿನ ಜ್ಞಾನಕ್ಕೆ ತೋರುವ ಮಾನಸಿಕ ಗೌರವವೆಂದೂ ಆ ವಚನಕ್ಕೆ ನಾವು ವ್ಯಾಖ್ಯಾನಿಸಬೇಕು. (ಈಗಿನ ಕಾಲದ ಕೆಲವರು ಆಧುನಿಕ ಕಾಲದಲ್ಲಿ ಗುರುಗಳು ಶಿಷ್ಯರಿಗೆ ಹೆದರುತ್ತ ಬದುಕಬೇಕಾಗಿ ಬಂದಿರುವ ದುರಂತವನ್ನು ಅಲ್ಲಮ ಸೂಚಿಸಿದ್ದಾನೆ ಎಂದು ಮಾಡುವ ಜನಪ್ರಿಯ ವ್ಯಾಖ್ಯಾನವು ತಪ್ಪಾದುದು ಎಂದು ನಾನು ಈಗಾಗಲೇ ತೋರಿಸಿಕೊಟ್ಟಿದ್ದೇನೆ). ಎಂದೆಂದಿಗೂ ಗುರುವು ಗುರುವೇ ಶಿಷ್ಯನು ಶಿಷ್ಯನೇ: ಗುರು ಆರ್ಥಿಕವಾಗಿ ಎಷ್ಟೇ ಸಾಮಾನ್ಯನಾದರೂ ಒಂದು ವೇಳೆ ಜ್ಞಾನದಲ್ಲಿ ಅವನನ್ನು ಮೀರಿಸಿ ಶಿಷ್ಯ ಬೆಳೆದರೂ ಆಗಲೂ ಗುರುವಿಗೆ ಶಿಷ್ಯನು ತೋರಬೇಕಾದ ಭಕ್ತಿ ಗೌರವಗಳಲ್ಲಿ ಯಾವುದೇ ವ್ಯತ್ಯಾಸ ಆಗಬಾರದು, ಆಳದಲ್ಲಿ ನಿಜವಾದ ಗುರು ನಿಜವಾದ ವಿದ್ಯಾರ್ಥಿಯೂ ಆಗಿರುತ್ತಾನೆ. ತನ್ನ ಶಿಷ್ಯನು ತನ್ನನ್ನು ಜ್ಞಾನ ಕ್ಷೇತ್ರದಲ್ಲಿ ಮೀರಿಸಬೇಕೆಂಬುದೇ ಪ್ರತಿ ಗುರುವಿನ ಅಪೇಕ್ಷೆ (''ಶಿಷ್ಯಾತ್ ಇಚ್ಛೇತ್ ಪರಾಜಯಂ'').

ಅಲ್ಲಮ ಪ್ರಭುವಿನ ಈ ಮಾತು ಅಂದಿನ ಶರಣರಲ್ಲಿ ಕೇವಲ ಮಾತಾಗಿ ಉಳಿದಿರಲಿಲ್ಲವೆಂಬುದು ಅವರು ಪರಸ್ಪರ ಗೌರವದಿಂದ ನಡೆದುಕೊಂಡ ರೀತಿಯಿಂದ ಸ್ಪಷ್ಟವಾಗುತ್ತದೆ. ಶರಣರು ತಮ್ಮ ಆತ್ಮ ನಿರೀಕ್ಷಣೆಯನ್ನು ಮಾಡಿಕೊಂಡರು; ಇನ್ನೊಬ್ಬರನ್ನು ಆತ್ಮ ನಿರೀಕ್ಷಣೆ ಮಾಡಿಕೊಳ್ಳಲು ಸಹಾಯಕವಾಗಲು ಪ್ರಶ್ನಿಸಿದರು. ಅವರು ಒಬ್ಬ ವ್ಯಕ್ತಿ ಶಿವನ ಹೆಸರು ಹೇಳಿಕೊಂಡೋ ಅಧ್ಯಾತ್ಮದ ಮಾತನಾಡುತ್ತ ತೋರಿಕೆಯ ಸಾಧಕನಾಗಿರುವನೋ ಅಥವಾ ನಿಜವಾದ ಆತ್ಮ ಸಾಧಕನಾಗಿರುವನೋ ಎಂಬ ಬಗ್ಗೆ ಪ್ರಶ್ನೆಗಳ ಮೂಲಕ ಸವಾಲುಗಳ ಮೂಲಕ ಪರೀಕ್ಷಿಸಿದರು. ಮುಕ್ತಾಯಕ್ಕೆ ಅಲ್ಲಮನಿಗೆ 'ನಿನಗೆ ಸಹಜ ಜ್ಞಾನ ಇಲ್ಲ'ವೆಂದೇ ವಾದಿಸಿ ಸವಾಲು ಹಾಕಿದಳು. ಬಸವನ ಅಹಂಕಾರವನ್ನು ಅಲ್ಲಮ ಕಟುವಾಗಿ ಖಂಡಿಸಿದನು. ಅಕ್ಕ ಮಹಾದೇವಿಯನ್ನು ತುಂಬಿದ ಸಭೆಯಲ್ಲಿ ಅಲ್ಲಮ ಪ್ರಭು ಮಾರ್ಮಿಕ ಪ್ರಶ್ನೆಗಳಿಂದ ಪರೀಕ್ಷಿಸಿದನು. ಶೂನ್ಯ ಸಂಪಾದನೆಯಲ್ಲಿ ಒಂದೆಡೆ ಹೀಗಿದೆ ''ಬಸವರಾಜ ದೇವರು ಪ್ರಭುದೇವರು ತಮ್ಮೊಳಗೆ ಮಹಾನುಭಾವ ಗೋಷ್ಠಿಯ ಮಾಡುತ್ತಿದ್ದ ಪ್ರಸ್ತಾವದೊಳು ಚಿಕ್ಕ ದಣ್ಣಾಯಕರು ಇಬ್ಬರನೂ ಪರೀಕ್ಷಿಸಿ'' ಪ್ರಸ್ತಾವದ ವಚನ''; ಚನ್ನಬಸವಣ್ಣ ಬಸವ ಮತ್ತು ಅಲ್ಲಮ ಇಬ್ಬರನ್ನೂ ಪರೀಕ್ಷೆಗೆ ಗುರಿ ಮಾಡಿದನೆಂದಿದೆ. ವ್ಯಕ್ತಿಗಳನ್ನು ''ಒರೆದೊರೆದು'' ನೋಡಿದ ಹಲವು ಪ್ರಸಂಗಗಳು ಇಲ್ಲಿವೆ. ಹಾಗೆ ಒರೆದು ನೋಡುವಾಗ ಇನ್ನೊಬ್ಬ ವ್ಯಕ್ತಿಯನ್ನು ತಿದ್ದುವ ಮತ್ತು ಅವನಿಂದ ತಿದ್ದಿಸಿಕೊಳ್ಳುವ ಧೋರಣೆಯಿತ್ತೇ ಹೊರತು ಕೇವಲ ಖಂಡನೆ ಯಾರದೇ ಉದ್ದೇಶವಾಗಿರಲಿಲ್ಲ. ವ್ಯಕ್ತಿಗಳು ಇತರರನ್ನು ತಿದ್ದಿದರು; ತಾವು ತಿದ್ದಿಕೊಂಡರು, ತಿದ್ದಿ ಸಿಕೊಂಡರು. ಇದನ್ನು ಹೇಳಲು ಮುಖ್ಯ ಕಾರಣವೆಂದರೆ, ಲಿಂಗವಂತರು ಎಂಬ ಒಂದು ಕಾರಣಕ್ಕೆ ಶರಣರು ವ್ಯಕ್ತಿಗಳನ್ನು ಕುರುಡಾಗಿ ಪ್ರಶಂಸಿಸಿಲ್ಲ. ಅಕ್ಕಮ್ಮನಂತಹ

ವಚನಕಾರ್ತಿಯು ವಿರಕ್ತರನ್ನು ತೀವ್ರವಾಗಿ ವಿಮರ್ಶಿಸಿರುವುದನ್ನು ಯಾರಾದರೂ ಗುರುತಿಸಬಹುದು. ಪ್ರಶ್ನಿಸಿ, ಪರೀಕ್ಷೆಗೆ ಒಳಗುಮಾಡಿ ಒಬ್ಬ ವ್ಯಕ್ತಿಯ ಅರ್ಹತೆಯನ್ನು ಖಚಿತ ಪಡಿಸಿಕೊಂಡಮೇಲೆ ಆ ವ್ಯಕ್ತಿಯ ದೊಡ್ಡತನಕ್ಕೆ ತೋರಬೇಕಾದ ಗೌರವವನ್ನು ತೋರಿದ್ದಾರೆ ಎಂಬುದು ಗಮನಾರ್ಹ. ಹೀಗೆ "ಶ್ರೀ ಗುರು ಶಿಷ್ಯಂಗೆ ವಂದಿಸಿ..." ಎಂಬ ಮಾತು ಶರಣರು ಪರಸ್ಪರ ನಡೆದುಕೊಂಡ ರೀತಿಯಿಂದ ಇನ್ನೂ ಹೆಚ್ಚು ಅರ್ಥವಂತಿಕೆಯನ್ನು ಪಡೆಯುತ್ತದೆ.

ಶರಣ ಚಳವಳಿ (ಅವರ ಸೀಮಿತ ವಲಯದಲ್ಲಿಯೇ ಆಗಲಿ) ಯಶಸ್ವಿಯಾಗಲು ಪರಸ್ಪರ ಪ್ರೀತಿ, ಮತ್ತು ಗೌರವಗಳನ್ನು ತಾತ್ವಿಕ ಬುನಾದಿಯಾಗಿ ಹೊಂದಿದ್ದುದೇ ಕಾರಣವೆಂಬಲ್ಲಿ ಅನುಮಾನವಿಲ್ಲ. "ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ" ಎಂದಿದ್ದಾನೆ ಬಸವಣ್ಣ. ಜನ ಅವನನ್ನು ಹುಡುಕಿಕೊಂಡು ಬರಲು ಕಾರಣ ಅವನಿಂದ ದೊರೆಯುತ್ತಿದ್ದ ಪ್ರೀತಿ, ಅವನಂತೆಯೇ ಅಂದಿನ ಶರಣರು ಅಲೌಕಿಕ ಉದಾತ್ತ ಧ್ಯೇಯಗಳಿಂದ ಪ್ರೇರಿತರಾಗಿ ಲೌಕಿಕವಾಗಿ ಪರಸ್ಪರ ಪ್ರೀತಿ ಗೌರವಗಳನ್ನು ಬದುಕಿನಲ್ಲಿ ತೋರಿದರು. ಆ ಎಲ್ಲದರ ಚಿತ್ರಣವನ್ನು "ಶೂನ್ಯ ಸಂಪಾದನೆ" ಕೃತಿ ನೀಡುತ್ತದೆಯೆಂಬ ಕಾರಣಕ್ಕಾಗಿಯೂ ಅದಕ್ಕೆ ಮೌಲಿಕ ಸ್ಥಾನವಿದೆಯೆಂಬುದು ನಿಸ್ಸಂದೇಹ ವಿಷಯವಾಗಿದೆ.

ಶರಣರ ಶಿಕ್ಷಣ ಪ್ರಣಾಲಿ

ಉಷಾಕಿರಣ್

ಶಿಕ್ಷಣ-ಚಿಂತನೆ

ಶಿಕ್ಷಣವನ್ನು ಕುರಿತ ಇದುವರೆಗಿನ ಚಿಂತನೆಯಲ್ಲಿ ಹಲವಾರು ಅಂಶಗಳು ಸ್ಪಷ್ಟವಾಗಿವೆ. ಶಾರೀರಕ ಶುದ್ಧಿ, ಮನಸ್ಸಿನ ಶುದ್ಧಿ ಹಾಗೂ ಚೈತನ್ಯದ ಪಾವಿತ್ರ್ಯತೆಗಳು ಶಿಕ್ಷಣದ ಪರಮಗುರಿ ಎಂಬುದನ್ನು ಮನಗಂಡಿದ್ದೇವೆ. ಅಂತರಂಗ ಶುದ್ಧಿ ಬಹಿರಂಗ ಶುದ್ಧಿಗಳನ್ನು ಸಾಧಿಸಿದವನು ಈ ಲೋಕದಲ್ಲಿ ಮಾತ್ರವಲ್ಲ ಎಲ್ಲ ಲೋಕಗಳಲ್ಲಿಯೂ ಸಲ್ಲುತ್ತಾನೆಂಬುದು ಇಂದಿಗೂ ಉಚ್ಚವಾದ ಆದರ್ಶವಾಗಿದೆ. ಶಿಕ್ಷಣವು ಅಂತರಂಗದ ಅಜ್ಞಾನವನ್ನು ಕಳೆದು ಜ್ಞಾನದ ಬೆಳಕನ್ನು ತುಂಬುವ ಪ್ರಕಾಶ. ಪ್ರಾಣಿ ಸಮನಾದ ಮನುಷ್ಯನನ್ನು ವಿವೇಚನಾಯುಕ ಮಾನವನನ್ನಾಗಿ ಪರಿವರ್ತಿಸುವ ವಿಶಿಷ್ಟ ಸಾಧನೆ. ಜ್ಞಾನವು ಮನುಷ್ಯನಿಗೆ ಮೂರನೆಯ ಕಣ್ಣು ಇದ್ದಂತೆ. ಅಂತರ್ದೃಷ್ಟಿಯಿಂದ ಸರ್ವವನ್ನೂ ಯಥೋಚಿತವಾಗಿ ತಿಳಿಯುವ ಸಾಮರ್ಥ್ಯದ ಸಾಧನೆ ಶಿಕ್ಷಣದ ಅಂತಿಮ ಘಟ್ಟ. ಇದರಿಂದ ಅವನಿಗೆ ಜಗತ್ತನ್ನು ಅವಲೋಕಿಸುವ ದೃಷ್ಟಿ ಹಾಗೂ ತನ್ನ ನಡವಳಿಕೆಯನ್ನು ನಿರ್ಧರಿಸುವ ಶಕ್ತಿ ಸಾಧಿತವಾಗುತ್ತದೆ. ''ವಿದ್ಯಾ ವಿಹೀನ ಪಶುಭಿಃ ಸಮಾನ' ಎಂಬಂತೆ ಇದನ್ನು ಪಡೆಯದವನು ಪಶು ಸಮಾನನೇ ಸರಿ. ದೇಹ, ಬುದ್ಧಿ ಮನಸ್ಸು ಮೂರನ್ನೂ ಸುಶಿಕ್ಷಿತಗೊಳಿಸುವುದೇ ನಿಜವಾದ ಶಿಕ್ಷಣ.

ಚಿತ್ತ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ, ಆಂತರಿಕ ಕ್ಷೋಭೆಗೆ ಒಳಗಾಗದೆ ಸಾಕ್ಷೀಪ್ರಜ್ಞೆಯಿಂದ ಎಲ್ಲವನ್ನೂ ಅವಲೋಕಿಸುವ ಹಾಗೂ ಸತ್ಯದ ಬಲದಿಂದ ಹೋರಾಡಿ ಉಳಿದುಕೊಳ್ಳುವ ಶಕ್ತಿ ನಿಜವಾದ ಶಿಕ್ಷಣದ ಸಾಧನೆ. ಸತ್ಯದ ಅನ್ವೇಷಣೆಯೇ ಶಿಕ್ಷಣದ ಗುರಿ. ಅದು ಸಾಮಾಜಿಕ ಸ್ಥಿರತೆ ಮತ್ತು ಔನ್ನತ್ಯದ ಸಾಧನವೂ ಹೌದು. ನಾವು ಕಂಡುಕೊಂಡ ಸತ್ಯ ಸಮಾಜೋದ್ಧಾರಕ್ಕೆ ಉಪಯುಕ್ತವಾಗಬೇಕು. ಶಿಸ್ತು ಸಂಯಮಗಳು ಬದುಕಿನ ವಿಧಾನವಾಗಬೇಕೇ ಹೊರತು ಬಲವಂತವಾಗಿರಬಾರದು. ಜೀವನ ವಿಕಾಸ ಮತ್ತು ವ್ಯಕ್ತಿತ್ವ ವಿಕಾಸಗಳು ಶಿಕ್ಷಣದ ಪರಿಣಾಮ ಶಕ್ತಿಗಳು. ಜ್ಞಾನ ಅಂತರಂಗದ ನಿಧಿಯಾದರೆಯ ವಿವೇಚನೆ ಅದರ ಕೀಲಿ ಕೈ. ಅದಿಲ್ಲದಿದ್ದರೆ ಜ್ಞಾನವು ವ್ಯರ್ಥ.

ವ್ಯಾವಹಾರಿಕವಾದ ವಿವೇಕ ಅತ್ಯಾವಶ್ಯಕ. ಎಲ್ಲಕ್ಕಿಂತ ಹೆಚ್ಚಾಗಿ ಇಳಿತದ ಸೂತ್ರಕ್ಕೆ ಒಳಗಾಗದ ಒಂದೇ ಒಂದು ಉತ್ಪಾದನಾ ವಸ್ತುವೆಂದರೆ ಜ್ಞಾನ ಎಂಬ ಅಂಶ ಶಿಕ್ಷಣದ ಪರಮೋಚ್ಛತೆಯ ದ್ಯೋತಕವಾಗಿದೆ. 'ಯಾ ವಿದ್ಯಾ ಸಾ ವಿಮುಕ್ತಯೇ'- ಮುಕ್ತಿ ಕೊಡುವಂತಹುದೇ ನಿಜವಾದ ವಿದ್ಯೆ, ಸತ್ಯದ ಏಕತ್ವದ ತಿಳಿವಳಿಕೆಯನ್ನು ನೀಡುವುದೇ ಶಿಕ್ಷಣದ ಉದ್ದೇಶ ಎಂಬಂತಹ ನುಡಿ ಮುತ್ತುಗಳು ಮನುಷ್ಯನ ಆಧ್ಯಾತ್ಮಿಕತೆಯ ಸಾಧನೆಯಲ್ಲಿ ಬಿಡುಗಡೆಯ ಹಾದಿಯನ್ನು ತೋರುವ ಮಾರ್ಗದರ್ಶಿಗಳಾಗಿವೆ. 'ಸರ್ವ ಶಾಸ್ತ್ರ ಪ್ರಯೋಜನಂ ಆತ್ಮದರ್ಶನಂ' ಎಂಬ ಸೂಕ್ತಿಯಂತೆ ಶಿಕ್ಷಣವು ಮನುಷ್ಯನನ್ನು ಅಹಮ್ಮಿನ ಬಂದೀಖಾನೆಯಿಂದ ಹೊರಗೆಳೆದು ಬದುಕಿನ ವಿಶಾಲವಾದ ಹಂದರದೊಳಕ್ಕೆ ಕೊಂಡೊಯ್ಯುವಂತಹ ಸತ್ವಶಾಲಿ ವಿಧಾನವಾಗಿದೆ. ಆದರೆ ಕಲಿಕೆಯಲ್ಲಿ ಇದು ಎಷ್ಟು ಮಟ್ಟಿಗೆ ಸಫಲವಾಗಿದೆ ಎಂದು ವಿಮರ್ಶಿಸುವಾಗ ಶರಣರ ಶಿಕ್ಷಣ ಪ್ರಣಾಲಿಗಳನ್ನು ಗುರುತಿಸುವುದು ಅತ್ಯಂತ ಉಪಯುಕ್ತವೆನಿಸುತ್ತದೆ. ಸುಸಂಬದ್ಧ ಪ್ರಣಾಲಿಗಳ ರೂಪದಲ್ಲಿ ನಿರೂಪಿಸುವ ಶಿಕ್ಷಣ ವ್ಯವಸ್ಥೆಗಿಂತ ಜೀವಂತ ಮಾದರಿಯ ಪ್ರತ್ಯಕ್ಷ ಅನುಭವ ಮೂಲದ ಸಂಗತಿಗಳು ಅತ್ಯಂತ ಪರಿಣಾಮಕಾರಿಯಾಗಿರುವುದಕ್ಕೆ ಶರಣರ ಸುಶಿಕ್ಷಿತ ವಿಚಾರ ಶೀಲತೆ ಮತ್ತು ಆದರ್ಶ ಪ್ರಾಯವಾದ ಜೀವನ ಸಂಸ್ಕೃತಿಗಳೇ ಅಪೂರ್ವವಾದ ಉದಾಹರಣೆಗಳಾಗಿವೆ.

ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ
ಅನ್ನದೊಳಗೊಂದಗುಳ
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ,
ನಿಮ್ಮಾಣೆ ನಿಮ್ಮ ಪುರಾತನರಾಣೆ!
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ,
ಕೂಡಲ ಸಂಗಮ ದೇವಾ.

ಸ್ವವಿಮರ್ಶೆಯ ದಿಟ್ಟತನ, ನೇರ ನಡೆಗಳಿಗೆ ಇದಕ್ಕಿಂತ ಹೆಚ್ಚಿನ ಮಾದರಿ ಬೇಕೆ! ಸಾವಿರ ನೀತಿ ಸೂತ್ರಗಳು, ಧೋರಣೆಗಳು ಸೋಲುವ ಹಂತದಲ್ಲಿ ಇಂತಹ ಜೀವನ ಮಾದರಿಗಳು ದಾರಿದೀಪವಾಗುತ್ತವೆ. ಒಟ್ಟಾರೆ ಅರ್ಥದಲ್ಲಿ ಶಿಕ್ಷಣವು ಸ್ವಯಂಶಿಕ್ಷಿತ ಮತ್ತು ಪ್ರಗತಿಪರವಾದ ಶ್ರಮಸಾಧನೆ ಯಾಗಬೇಕು. ವ್ಯಕ್ತಿ ಸ್ವತಃ ತಿಳಿದುಕೊಂಡು ಉನ್ನತಿಯ ಮಾರ್ಗದಲ್ಲಿ ಜೀವನ ನಡೆಸುವಂತಹುದು ಶಿಕ್ಷಣ. ಶಿಕ್ಷಣವೆಂದರೆ ಕಲಿಯುವಿಕೆ, ವಿದ್ಯಾ ಪ್ರಾಪ್ತಿ, ಕಲಿಯುವುದು ಜೀವನವಿಡೀ ನಡೆಯುತ್ತಲೇ ಇರುವ ಕಾರ್ಯ. ಕಲಿಕೆಗೆ ಕೊನೆ ಇಲ್ಲ. ಪ್ರತಿಯೊಂದನ್ನೂ ತಿಳಿಯಬೇಕೆನ್ನುವ ಕಾತರ. ಶಿಕ್ಷಣದಿಂದ ಈ ಜ್ಞಾನದಾಹಕ್ಕೆ ತೃಪ್ತಿ. ವಿಷಯ ಸಂಗ್ರಹವಷ್ಟೇ ಶಿಕ್ಷಣವಾಗದೆ ಮನುಷ್ಯನ ಪ್ರವೃತ್ತಿ ಸ್ವಭಾವಗಳಲ್ಲಿ ಆ ತತ್ವಗಳು ಮೂಡಿಬಂದಾಗಲೇ ಅದು ನಿಜವಾದ ಶಿಕ್ಷಣವಾಗುತ್ತದೆ. ಸುಸಂಸ್ಕೃತಿ ಮತ್ತು ಪಾಂಡಿತ್ಯ ಎರಡೂ ಒಂದುಗೂಡಿದಾಗ ಆತ ಸುಶಿಕ್ಷಿತನಾಗುತ್ತಾನೆ. ಸರ್ವೋನ್ನತಿಯ ಸಾಮಾಜಿಕ ಕರ್ತವ್ಯ ಪಾಲನೆಯ ದೃಷ್ಟಿ ಅದರಲ್ಲಿ ಸಮನ್ವಯಿತವಾದಾಗ ಅದಕ್ಕೆ ಸಂಪೂರ್ಣತೆ ಬರುತ್ತದೆ.

ಭಾರತದ ಉಜ್ವಲವಾದ ಸಾಂಸ್ಕೃತಿಕ ಪರಂಪರೆಯಲ್ಲಿ ಮನುಷ್ಯನ ಬೌದ್ಧಿಕ ವಿಕಸನಕ್ಕೆ ಅತ್ಯಮೂಲ್ಯ ಸಾಧನವಾಗಿರುವ ಶಿಕ್ಷಣಕ್ಕೆ ಒಂದು ಮಹತ್ವದ ಸ್ಥಾನವಿದೆ. ಶರಣರ ಶಿಕ್ಷಣ ಪ್ರಣಾಲಿಯನ್ನು ಕುರಿತು ಚಿಂತಿಸುವ ಹಿನ್ನೆಲೆಯಲ್ಲಿ ಶಿಕ್ಷಣ ಹಾಗೂ ಶಿಕ್ಷಣ ವ್ಯವಸ್ಥೆಯ ಇತಿಹಾಸವನ್ನು ಕುರಿತ ಒಂದೆರಡು ಮಾತುಗಳನ್ನು ನೆನೆಯಬಹುದಾಗಿದೆ. ವೇದೋಪನಿಷತ್ತುಗಳ ಕಾಲದಲ್ಲಿನ ಗುರುಕುಲಗಳು ವಿದ್ಯಾಧಿದೇವತೆಯ ಪವಿತ್ರ ಸ್ಥಾನಗಳಾಗಿದ್ದಂತೆ ಪ್ರಾಚೀನ ಕರ್ನಾಟಕದಲ್ಲಿನ ವೀರಶೈವ ಮಠಗಳು ವಿದ್ಯಾರ್ಜನೆಗಾಗಿ ಬಂದ ಶಿಷ್ಯರಿಗೆ ವಿದ್ಯಾದಾನವನ್ನು ನೀಡುವ ಕಲ್ಪವೃಕ್ಷಗಳಾಗಿದ್ದವು. ಅಂದಿನಿಂದ ಇಂದಿನವರೆಗೂ ನಾಡಿನ ಹಲವಾರು ಸಂಸ್ಥಾನಗಳಲ್ಲಿ ವಿದ್ಯೆಗೆ ಪೋಷಕವಾಗಿ ಅನೇಕ ಮಠಗಳು ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಾ ಉನ್ನತ ಶಿಕ್ಷಣಗಳಿಗೆ ನೆರವಾಗಿರುವುದು ಇದಕ್ಕೆ ಸಾಕ್ಷೀರೂಪಗಳಾಗಿವೆ. ಇಂತಹ ಮಠಗಳಲ್ಲಿ ಆಶ್ರಯ ಹೊಂದಿ ಶಿಕ್ಷಣ ಪಡೆದು ಯಶಸ್ವಿಯಾದ ಸಾವಿರಾರು ವಿದ್ಯಾರ್ಥಿಗಳು ತಮ್ಮ ಸಾಧನೆಗೆ ನೆರವಾಗಿ ನಿಂತ ಮಠಮಾನ್ಯಗಳನ್ನು ತುಂಬು ಹೃದಯದ ಕೃತಜ್ಞತೆಯಿಂದ ನೆನೆಯುತ್ತಾರೆ.

ಶಿಕ್ಷಣ ವ್ಯವಸ್ಥೆ

ಪ್ರಾಚೀನ ಕರ್ನಾಟಕದಲ್ಲಿ ಪ್ರಸಿದ್ಧವಾದ ಹಲವು ವಿದ್ಯಾಕೇಂದ್ರಗಳಲ್ಲಿ ಬಳ್ಳಿಗಾವೆಯ ಹೆಸರು ಹೆಚ್ಚು ಪ್ರಮುಖವಾಗಿ ಕಂಡುಬರುತ್ತದೆ. ಇಲ್ಲಿ ಹಲವಾರು ರೀತಿಯ ವಿದ್ಯಾಸಂಸ್ಥೆಗಳು ಕೆಲಸ ಮಾಡಿವೆ. ವಿಶೇಷವಾಗಿ ಸ್ತ್ರೀಯರಿಗೂ ವಿದ್ಯಾಭ್ಯಾಸದ ಸೌಲಭ್ಯ ದೊರಕಿದ ಮಹತ್ವದ ಸಂಗತಿ ಕಂಡುಬರುತ್ತದೆ. ಮಹದೇವಿಯಕ್ಕನಂತೆ ಇತರ ಹಲವಾರು ಶರಣೆಯರೂ ವಿದ್ಯಾಭ್ಯಾಸ ಪಡೆದುದಕ್ಕೆ ಈ ಹಿನ್ನೆಲೆಯೇ ಕಾರಣವಾಗಿದೆ. ಎಲ್ಲ ಬಗೆಯ ಪ್ರಚಲಿತ ಶಿಕ್ಷಣಗಳಿಗೂ ಇಲ್ಲಿ ಅವಕಾಶ ದೊರೆತಿದ್ದು ಇಲ್ಲಿ ತರಬೇತಿ ಹೊಂದಿದ ಶರಣ ಶರಣೆಯರು ಅನಂತರ ಕಲ್ಯಾಣದ ಅನುಭವ ಮಂಟಪದಲ್ಲಿ ಉನ್ನತ ಶಿಕ್ಷಣದ ಅವಕಾಶ ಪಡೆಯುವಂತಹ ವ್ಯವಸ್ಥೆ ತನ್ನಿಂದ ತಾನೇ ರೂಪುಗೊಂಡಂತೆ ಕಂಡುಬರುತ್ತದೆ. ಇಂತಹ ಒಂದು ಅಪೂರ್ವ ಸನ್ನಿವೇಶದಲ್ಲಿ ಉರಿಲಿಂಗ ಪೆದ್ದಿ ಕಾಳವ್ವೆಯರಂತಹ ಕೆಳವರ್ಗದವರೂ ಕೂಡ ಉನ್ನತ ಶಿಕ್ಷಣ ಸಂಪಾದಿಸಿ ಗುರುವಿನ ಉತ್ತರಾಧಿಕಾರಿಯಾಗಿ ಸ್ಥಾನ ನಿರ್ವಹಿಸುವ ಅರ್ಹತೆಯನ್ನು ಪಡೆದುಕೊಂಡರು.

ಶರಣರ ಶಿಕ್ಷಣ ಪ್ರಣಾಲಿ

ಶಿಕ್ಷಣ ಅಥವಾ ಪ್ರಣಾಲಿ ಎಂಬ ಯಾವುದೇ ಶಬ್ದ ಸಂಯೋಗವನ್ನು ಸಂಯೋಜಿಸದೆಯೇ ಶರಣರು ಅಪೂರ್ವವಾದ ಒಂದು ಶಿಕ್ಷಣ ಕ್ರಮದ ಆವಿರ್ಭಾವಕ್ಕೆ ಕಾರಣರಾದರು. ಆಧ್ಯಾತ್ಮಿಕತೆಯ ಉನ್ನತ ಶಿಕ್ಷಣವನ್ನೇ ಗುರಿಯಾಗಿ ಹೊಂದಿದ್ದ ಶರಣರ ಉದಾತ್ತವಾದ ಆದರ್ಶಗಳು, ಉದಾತ್ತವಾದ ಧ್ಯೇಯಗಳೇ ಅವರ ಶಿಕ್ಷಣ ಪ್ರಣಾಲಿ ಎನ್ನಬಹುದು. ವೇದಾಧ್ಯಯನಗಳ ಸೀಮಿತ ವ್ಯಾಪಕತೆಯನ್ನು ಮೀರಿದ ಸರ್ವಜನಹಿತವಾದ

ಸಾರ್ವಕಾಲಿಕವಾದ ಆದರ್ಶ ಧೋರಣೆಗಳನ್ನು ಶರಣರ ಶಿಕ್ಷಣ ಕ್ರಮದಲ್ಲಿ ಕಾಣುತ್ತೇವೆ. ಮಾನವತಾವಾದ ಹಾಗೂ ಸಮಾಜೋದ್ಧಾರದ ಅಡಿಗಲ್ಲಿನ ಮೇಲೆ ಭದ್ರವಾಗಿ ನಿಂತ ಬಸವಣ್ಣನವರ ತತ್ವಗಳು ಸರ್ವಾದರಣೀಯವಾಗಿ ಹೊಸ ಚೈತನ್ಯದ ಸೆಲೆಯಾದವು. ಇದರೊಂದಿಗೆ ಅಲ್ಲಮ, ಮಹದೇವಿಯಕ್ಕ, ಸಿದ್ಧರಾಮರಂತಹ ಮಹಾಯೋಗಿಗಳ ಆಧ್ಯಾತ್ಮಿಕ ಅನುಭಾವಗಳೂ ಒಂದಾಗಿ ಬೆರೆತು ವಿಶ್ವಧರ್ಮದ ಹೊಸ ಆಯಾಮದ ಚಿಂತನೆಗಳು ಮೂಡಿಬಂದವು. ಮನುಷ್ಯನನ್ನು ಸುಸಂಸ್ಕೃತಗೊಳಿಸುವ, ವೈಚಾರಿಕತೆಯ ಹಾದಿಯನ್ನು ಸ್ಪಷ್ಟಗೊಳಿಸುವ ವಿಧಾನವಾಗಿ ಶಿಕ್ಷಣ ಶರಣರ ಕಾಲದಲ್ಲಿ ನಿಜವಾದ ಅರ್ಥದಲ್ಲಿ ಅತ್ಯಂತ ಉಜ್ವಲವಾಗಿ ಕಾರ್ಯರೂಪಗೊಂಡಿತು. ವ್ಯಕ್ತಿತ್ವ ವಿಕಸನಕ್ಕೆ ಅಂತರಂಗ ಶುದ್ಧತೆಗೆ ಹೆಚ್ಚಿನ ಮಹತ್ವ ದೊರಕಿದ್ದರಿಂದ ವ್ಯಕ್ತಿಗತ ಬದುಕಿನೊಂದಿಗೆ ಸಮರಸತ್ವ ಪಡೆಯಿತು. ಬಸವಣ್ಣನವರ ವಿಚಾರ ಕ್ರಾಂತಿಯಿಂದಾಗಿ ವೀರಶೈವ ಧರ್ಮದ ತತ್ವಗಳಿಗೆ ಹೊಸ ಶಕ್ತಿ ಕೂಡಿಕೊಂಡು ಸಾಮಾನ್ಯ ಜನತೆಯನ್ನು ಪುರೋಹಿತ ವರ್ಗದ ಹಿಡಿತದಿಂದ ಬಿಡುಗಡೆಗೊಳಿಸಿತು. ಅಂಧಾನುಕರಣೆ, ಜಾತಿ ಪದ್ಧತಿ, ವರ್ಗ ಪದ್ಧತಿಗಳನ್ನು ಎದುರಿಸಿದ ನೀತಿಗಳೇ ಶರಣರ ಶಿಕ್ಷಣದ ಪ್ರಮುಖ ಪ್ರಣಾಲಿಗಳಾದವು. ಯಜ್ಞಯಾಗಾದಿಗಳ ಆಚರಣೆಯಲ್ಲಿ ತಾತ್ವಿಕತೆಗಿಂತ ಶುಷ್ಕ ಅನುಸರಣೆಗಳೇ ಹೆಚ್ಚಾಗಿ ಅವು ಮಹತ್ವ ಕಳೆದುಕೊಂಡ ಸಮಯದಲ್ಲಿ ಬದುಕಿಗೆ ಅವಶ್ಯಕವಾದ ಮೌಲ್ಯಗಳನ್ನು ಎತ್ತಿ ಹಿಡಿಯುವುದರ ಮೂಲಕ ಶರಣರ ತತ್ವಗಳು ಪ್ರತಿಯೊಂದು ಹೆಜ್ಜೆಯಲ್ಲೂ ಆಚರಣೆಗೆ ಬಂದು ಉಪಯುಕ್ತವಾದ ರೀತಿಯಲ್ಲಿ ಜನಜೀವನದಲ್ಲಿ ಬೆರೆತುಕೊಂಡವು.

ಮನುಷ್ಯರನ್ನು ಹೊಗಳುವ ಹಳೆಯ ಪದ್ಧತಿಯನ್ನು ಬಿಟ್ಟು ರಾಜಾಸ್ಥಾನದಿಂದ ಬಿಡುಗಡೆ ಪಡೆದು ದಿವ್ಯ ಪ್ರಕೃತಿಯಲ್ಲಿ ಭಕ್ತಿಯ ನೆಲೆಯನ್ನು ಕಂಡುಕೊಳ್ಳುವಿಕೆ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ ಎಂಬ ಉದಾತ್ತ ನಿಲುವು, 'ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ' 'ದಯವೇ ಧರ್ಮದ ಮೂಲ', 'ದೇವನೊಬ್ಬ ನಾಮ ಹಲವು' ಆಚಾರವೇ ಸ್ವರ್ಗ ಅನಾಚಾರವೇ ನರಕ ಮುಂತಾದ ವಿಶ್ವಾನುಕಂಪದ ನುಡಿಗಳು ಅಂದಿನ ಕುರುಡು ಸಂಪ್ರದಾಯಗಳ ವಿರುದ್ಧ ಸಮರವನ್ನೇ ಸಾರಿದವು. ಇವನಾರವ ಇವನಾರವ ? ಎಂಬ ಹೀನಪ್ರಜ್ಞೆಯನ್ನು ತಪ್ಪಿಸಿ 'ಇವ ನಮ್ಮವ' ಇವ ನಮ್ಮವ' ಎನ್ನುವ ಕಲ್ಪನೆಯತ್ತ ಚಿಂತಿಸುವಂತಾಯಿತು. ಈ ಲೋಕದ ಬದುಕಿಗಾಗಿ ಧರ್ಮದ ಆಧಾರ ಸ್ತಂಭವನ್ನು ಕಟ್ಟಬಯಸಿದ ಶರಣರಲ್ಲಿ ಕಾಯಕತತ್ವದ ಪರಿಕಲ್ಪನೆ ಸ್ವಾವಲಂಬನೆಯ ಒಂದು ಅದ್ಭುತ ಶಕ್ತಿಯಾಗಿ ಪರಿಣಮಿಸಿತು. ಇದರೊಂದಿಗೆ 'ಶರಣ ಸಂಗ'ದ ಮಹತ್ವವನ್ನು ಸಾರುವ ಅನುಭವ ಮಂಟಪದ ವೈಚಾರಿಕ ಗೋಷ್ಠಿಗಳು ಸಾಮೂಹಿಕ ಪ್ರಗತಿಯ ಮನೋಭಾವವನ್ನು ಬೆಳೆಸುವ ಕಮ್ಮಟ ಶಾಲೆಗಳಾದವು. ಶರಣರ ಬದುಕಿನರೀತಿಯೇ ಒಂದು ಸುಶಿಕ್ಷಿತ ಕ್ರಮವಾಗಿತ್ತು. ಕಾಯಕತತ್ವದ ಮೂಲಕ ಅವರು ತಮ್ಮ ವೃತ್ತಿ ಪ್ರವೃತ್ತಿಗಳನ್ನು ಒಂದುಗೂಡಿಸಿಕೊಂಡು ಸಕಲ ಜೀವಾತ್ಮರಿಗೆ ಲೇಸನೇ

ಬಯಸುವ ಸಮನ್ವಯದ ಬದುಕನ್ನು ನಿರೂಪಿಸಿದರು. ಪ್ರತಿ ದಿನದ ಅನುಭಾವ ಗೋಷ್ಠಿಗಳಲ್ಲಿ ರೂಪುಗೊಳ್ಳುತ್ತಿದ್ದ ವಚನಗಳು ಮನೆ ಮನೆಗೂ ಮುಟ್ಟುವಂತೆ ಕ್ರಮಕೈಗೊಂಡಿದ್ದಲ್ಲದೆ ಸಾಮಾನ್ಯರಿಗೆ ಅರ್ಥವಾಗಬೇಕೆಂಬ ಉದ್ದೇಶದಿಂದ ಸರಳವಾದ ಭಾಷೆಯನ್ನು ರೂಢಿಸಿಕೊಂಡು ಕನ್ನಡ ಭಾಷೆಯ ಆಡುನುಡಿಯ ಸಂಪತ್ತನ್ನು ಶ್ರೀಮಂತಗೊಳಿಸಿದವು.

ಮರ ಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು
ಇಂತಪ್ಪ ಅನುಭಾವರ ಅನುಭಾವವ ತೋರಿ
ಎನ್ನ ಒಡಲನುಳುಹಿಕೊಳ್ಳಾ ಚನ್ನಮಲ್ಲಿಕಾರ್ಜುನಾ

ಎಂಬ ಅಕ್ಕನ ವಚನದಲ್ಲಿ ಇಡೀ ಶರಣ ಸಮುದಾಯದಲ್ಲಿ ವಿಚಾರಗಳು ಹುಟ್ಟುತ್ತಿದ್ದ ಬಗೆಯನ್ನೂ ಹೊಸ ವಿಚಾರಗಳನ್ನು ಸ್ವಾಗತಿಸುವ ಅವರ ಜ್ಞಾನದ ಹಸಿವಿನ ಹಿರಿಮೆಯನ್ನು ಮನಗಾಣುತ್ತೇವೆ.

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲ ಸಂಗಮದೇವ.

ಇಂತಹ ಸರಳವಾದ ನೇರ ವಿಚಾರದ ವಚನ ಭಾಷೆಗಳ ಮೂಲಕ ಬಸವಣ್ಣನವರು ಮನ ಮುಟ್ಟುವ ಜೀವನ ಸೂತ್ರಗಳನ್ನು ನಿರೂಪಿಸಿ ಎಂತಹ ಪ್ರಸಂಗದಲ್ಲೂ ತಮ್ಮತನವನ್ನು ಮರೆಯದೆ ಸಂಯಮಶೀಲರಾಗಿರುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಜನತೆಗೆ ನೆರವಾದರು. ದೇಹವೇ ದೇವಾಲಯ, ಕಾಯಕವೇ ಕೈಲಾಸ ಎಂಬ ಪ್ರಗತಿಪರ ನವೀನ ವಿಚಾರಗಳಿಂದ ದೇವಸ್ಥಾನಗಳ ಬಗ್ಗೆ ಬೆಳೆಯುತ್ತಿದ್ದ ಅಂಧಶ್ರದ್ಧೆಯನ್ನು ಕಡಿದು ಹಾಕಿದರು. ಇಂದಿನ ಶಿಕ್ಷಣ ಕ್ರಮಕ್ಕೆ ಹೋಲಿಸಿದರೆ ಶರಣರು. ಅನುಸರಿಸಿದ ಅಂದಿನ ಕ್ರಮವೇ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಇಳಿದು ಕ್ರಾಂತಿಬೀಜ ಬಿತ್ತಿದುದನ್ನು ಕಾಣಬಹುದು. ಇದು ನೈತಿಕ ಶಿಕ್ಷಣದ ಅತ್ಯಂತ ಸುಸಂಬದ್ಧ ವಿಧಾನವಾಗಿದ್ದು ಕರ್ನಾಟಕದ ಇತಿಹಾಸದಲ್ಲಿ ಹಿಂದೆಂದೂ ಕಾಣದಂತಹ ಅತ್ಯಂತ ಸುಸಂಸ್ಕೃತ ಸಮಾಜವೊಂದು ಅಂದಿನ ಪರಿಸರದಲ್ಲಿ ನಿರ್ಮಾಣವಾಗಲು ನೆರವಾಯಿತು. ಅಂದಿನಿಂದ ಇಂದಿನವರೆಗೆ ಮತ್ತೊಂದು ಇಂತಹ ವೈಚಾರಿಕ ಪ್ರಗತಿಶೀಲ ವಾತಾವರಣ ಕಂಡುಬರದಿರುವುದೂ ಒಂದು ವೈಚಿತ್ರ್ಯವೇ ಸರಿ. ಅಧಿಕಾರಶಾಹಿಯನ್ನು ಎದುರಿಸಿ ನಿಂತು, ದಾಸ್ಯತೆಯನ್ನು ಧಿಕ್ಕರಿಸಿ, ಆತ್ಮ

ಪ್ರತ್ಯಯವನ್ನು ಸಮನಿಸಿಕೊಂಡು ಆತ್ಮೋದ್ಧಾರವನ್ನು ಸಾಧಿಸಿದ ಹಿರಿಮೆ ಇಂದಿನ ಚಿಂತನಶೀಲರೂ ಕೂಡ ತಲೆ ಬಾಗುವಂತಿದೆ. 'ಕ್ರಿಯೆಯೇ ಜ್ಞಾನ, ಜ್ಞಾನವೇ ಕ್ರಿಯೆ' ಎಂದು ನಡೆನುಡಿಗಳನ್ನು ಪರಿಷ್ಕರಿಸುವ ಕ್ರಮ, 'ಗಿಳಿಯೋದಿ ಫಲವೇನು?' ಎಂಬ ಶುಷ್ಕ ಜ್ಞಾನದ ಅರಿವು ಶರಣರ ಸಚ್ಚಾರಿತ್ರ್ಯದ ಅಡಿಗಲ್ಲುಗಳಾಗಿದ್ದವು.

ಅನುಭವ ಮಂಟಪದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಅಲ್ಲಮ ಪ್ರಭು ಎಲ್ಲ ಶರಣರಿಗೆ ಮಹಾಪರೀಕ್ಷಕನೂ ಆಗಿದ್ದು ಬಸವಣ್ಣ, ಸಿದ್ಧರಾಮ, ಮಹಾದೇವಿಯಕ್ಕನಂತಹವರ ಅಪೂರ್ವ ವ್ಯಕ್ತಿಶಿಲ್ಪಗಳಿಗೆ ರೂವಾರಿಯಾದನು. ಇಂತಹ ನೇತೃತ್ವದಲ್ಲಿ ಎಲ್ಲ ಶರಣ-ಶರಣೆಯರಿಗೆ ಸತ್ಯಶುದ್ಧ ಆಚರಣೆಗಳಿಂದ ಆತ್ಮಶೋಧನೆಯ ಮಟ್ಟಕ್ಕೇರಲು ಉತ್ತಮವಾದ ಪ್ರಣಾಳಿಗಳು ಸ್ವಯಂರೂಪಿತಗೊಂಡವು. ಹಾಲಿನ ನೇಮ, ಪುಷ್ಪನೇಮಗಳನ್ನು ಹಿಡಿದವರ ಭ್ರಮೆಗಳನ್ನು ಬಿಡಿಸಿ ನಿಷ್ಠೆಯ ಮಾರ್ಗವನ್ನು ಗಟ್ಟಿಗೊಳಿಸಿದ ಧೀಮಂತ ವ್ಯಕ್ತಿಯಾದ ಅಲ್ಲಮನ ಈ ಕೆಳಗಿನ ವಚನ ಅಂತರಂಗದ ಸಾಧನೆಯ ಉತ್ಕೃಷ್ಟತೆಯನ್ನು ಹೇಳುತ್ತದೆ.

ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯಾ
ಭ್ರಾಂತಿನ ಬೇರ ಒಡೆದು, ಸಂಸಾರ ಹೆಂಟೆ ಬಡಿದು
ಬಿತ್ತಿದೆನಯ್ಯಾ ಬ್ರಹ್ಮ ಬೀಜವ
ಅಖಂಡ ಮಂಡಲವೆಂಬ ಬಾವಿ ಪವನವೇ ರಾಟಾಳ
ಸುಷುಮ್ನನಾಳದಿಂದವೆ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯ ನಿಕ್ಕಿ
ಆವಾಗಲೂ ತೋಂಟದಲಿ ಜಾಗರವಿದ್ದು ಸಸಿಯ ಸಲಹಿದೆನು
ಕಾಣಾ ಗುಹೇಶ್ವರಾ

ಇದು ಎಲ್ಲ ಸಾಧಕರಿಗೂ ಅನುಸರಿಸಲು ಯೋಗ್ಯವಾದ ಮಾರ್ಗದರ್ಶಕ ವಿಧಾನವಾಗಿದೆ. ಪ್ರತಿಯೊಬ್ಬರೂ ಸ್ವಪ್ರಯತ್ನದಿಂದ ಶ್ರದ್ಧೆಯಿಂದ ಸಾಧನೆ ಮಾಡಿ ಸಾಮಾನ್ಯ ಭೂಮಿಯಂತಿರುವ ನಮ್ಮ ಅಂತರಂಗವನ್ನು ಸೊಗಸಾದ ತೋಟವನ್ನಾಗಿ ಸಿದ್ಧಗೊಳಿಸಿ ಸಮತೆ ಸೈರಣೆಗಳ ಕಾಪಿನಲ್ಲಿ ನಿರ್ಭಯ ಭಾವವನ್ನು ಗಳಿಸಿ ಯಶಸ್ಸು ಪಡೆಯುವ ಮಾರ್ಗವನ್ನು ಇದು ತೋರಿಸುತ್ತದೆ.

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು
ಬುದ್ಧಿಗಲಿಸಿದರೆ
ಆಗಲಿ ಮಹಾಪ್ರಸಾದವೆಂಬೆನಯ್ಯಾ
ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬೈದು

ಬುದ್ಧಿಗಲಿಸಿದರೆ
ಆಗಲಿ ಮಹಾಪ್ರಸಾದವೆಂಬೆನಯ್ಯಾ
ದ್ವಾಪರಯುಗದಲ್ಲಿ ಶ್ರೀ ಗುರು ಶಿಷ್ಯಂಗೆ
ಝುಂಕಿಸಿ ಬುದ್ಧಿಗಲಿಸಿದರೆ
ಆಗಲಿ ಮಹಾಪ್ರಸಾದ ವೆಂಬೆ ನಯ್ಯಾ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ
ವಂದಿಸಿ ಬುದ್ಧಿಗಲಿಸಿದರೆ
ಆಗಲಿ ಮಹಾಪ್ರಸಾದವೆಂಬೆನಯ್ಯಾ
ಗುಹೇಶ್ವರ ನಿನ್ನ ಕಾಲದ ಕಲಿತನದ ಕಟ್ಟಳೆಗಳಿಗೆ ನಾನು
ಬೆರಗಾದೆನಯ್ಯಾ !

ಮೇಲಿನ ವಚನ ಗುರುಶಿಷ್ಯರ ಆತ್ಮೀಯ ಸಂಬಂಧವನ್ನು ಪರೋಕ್ಷವಾಗಿ ಹೇಳುತ್ತದೆನ್ನಬಹುದು. ಗುರುವಿನ ಕರ್ತವ್ಯ ಶಿಷ್ಯನನ್ನು ಹೊಡೆದಾದರೂ ಸರಿ, ಬೈದಾದರೂ ಸರಿ, ಝುಂಕಿಸಿಯಾದರೂ ಸರಿ, ವಂದಿಸಿಯಾದರೂ ಸರಿ ಅದು ಕಾಲಮಾನಕ್ಕೆ ತಕ್ಕಂತಿದೆಯೆಂಬುದನ್ನು ಅರಿತುಕೊಂಡು ಒಟ್ಟಿನಲ್ಲಿ ಬುದ್ಧಿ ಕಲಿಸುವುದು ಕರ್ತವ್ಯ. ಕಾಲದ ಕಟ್ಟಳೆಗೆ ನಿಯಮಿತನಾಗುವ ಅನಿವಾರ್ಯತೆಯಿದ್ದಾಗಲೂ ಸಹ ಗುರು ತನ್ನ ಕರ್ತವ್ಯವನ್ನು ಪ್ರೀತಿಯಿಂದ ಕೈಗೊಂಡಾಗ ಅದು ಮಹಾಪ್ರಸಾದವೇ ಆಗುತ್ತದೆ. ಇದು ಒಂದು ರೀತಿಯಲ್ಲಿ ತಾಯಿಮಕ್ಕಳ ವಾತ್ಸಲ್ಯವನ್ನು ಹೋಲುತ್ತದೆ. ಈ ದಿಸೆಯಲ್ಲಿ ಬಸವಣ್ಣ-ಚನ್ನಬಸವಣ್ಣ,ಸಿದ್ಧರಾಮ-ಚನ್ನಬಸವಣ್ಣ, ಬಸವಣ್ಣ-ಮಹದೇವಿಯಕ್ಕ ಇವರುಗಳ ಗುರುಶಿಷ್ಯ ಸಂಬಂಧದ ಅಪೂರ್ವ ಚಿಂತನೆಯ ವಚನಗಳು ಆಧಾರವಾಗಿ ನಿಲ್ಲುತ್ತವೆ. ಪರಸ್ಪರರ ಹಿರಿಮೆಗಳನ್ನು ಗುರುತಿಸಿ ಒಬ್ಬರಿಗೊಬ್ಬರು ನಮೋ ಎಂದು ವಂದಿಸುವ ರೀತಿ ಅಸಾಧಾರಣವಾಗಿದೆ.

ಕುಲಮದ ಛಲಮದ ವಿದ್ಯಾಮದದವರ ತೋರದಿರಾ ಎಂದು ಅಲ್ಲಮ ಲೌಕಿಕ ಜ್ಞಾನದ ಕ್ಷುಲ್ಲಕತೆಯನ್ನೂ 'ವೇದವೆಂಬುದು ಓದಿನ ಮಾತು' ಎಂಬಲ್ಲಿ ವೇದಜ್ಞಾನವನ್ನು ಜೀವನಕ್ಕೆ ಅಳವಡಿಸಿಕೊಳ್ಳದ ನಿಷ್ಫಲತೆಯನ್ನೂ ಹೇಳುವುದರೊಂದಿಗೆ ಸ್ವರವೆಂಬುದು ಲಿಂಗಕ್ಕೆ ಸಿಂಹಾಸನವಾಗಿರ್ದುದು ಎಂದು ಸ್ವರದ ವಿಶೇಷ ಪೂಜ್ಯ ಸ್ಥಾನವನ್ನು ಕುರಿತು ಹೇಳುತ್ತಾರೆ. ಕಲ್ಲಮನೆಯ ಮಾಡಿ ಕಲ್ಲದೇವರ ಮಾಡಿ ಕಲ್ಲು ಕಲ್ಲ ಮೇಲೆ ಕಡೆದರೆ ದೇವರೆತ್ತ ಹೋದರೋ ? ಎಂದು ಲಿಂಗಪ್ರತಿಷ್ಠಾಪನೆಯ ಅಜ್ಞಾನವನ್ನು ಖಂಡಿಸಿ ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆ ಎಂದು ಅಂತರಂಗ ಸಾಧನೆಯ ಪರಿಪಕ್ವತೆಯನ್ನು ತೋರಿದ್ದಾರೆ.

ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ
ಬ್ರಹ್ಮವ ನುಡಿದು ಭ್ರಮಿತನಾದೆನಯ್ಯ
ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯ
ಗುಹೇಶ್ವರ, ನಿಮ್ಮ ಶರಣ ಸಂಗನ ಬಸವಣ್ಣನ ಸಾನ್ನಿಧ್ಯದಿಂದ
ನಾನು ಸದ್ಭಕ್ತನಾದೆನಯ್ಯ.

ಇತರರನ್ನು ಸದಾ ಪರೀಕ್ಷೆಗೆ ಒಳಪಡಿಸಿ ಪರಿಪಕ್ವ ಸ್ಥಿತಿಗೆ ಒಯ್ಯುವ ಅಲ್ಲಮನ ಮೇಲಿನ ವಚನದಲ್ಲಿ ತನ್ನದೇ ಆತ್ಮಪರೀಕ್ಷೆಯನ್ನು ಮಾಡಿಕೊಳ್ಳುವ ರೀತಿ ಆದರ್ಶ ಪ್ರಾಯವಾಗಿದೆ. ಹುಟ್ಟಿನಿಂದ ಶೂದ್ರನಾದರೂ ಶೂನ್ಯಸಿಂಹಾಸನದ ಅಧಿಕಾರದ ಅರ್ಹತೆಯನ್ನು ತನ್ನ ಆಧ್ಯಾತ್ಮಿಕ ಸಾಧನೆಯಿಂದ ಸಿದ್ಧಿಸಿಕೊಂಡ ಅಲ್ಲಮನಿಗೂ ಬಸವಣ್ಣನೇ ಪರಮಾರಾಧ್ಯನಾದರೆ ಬಸವಣ್ಣನಿಗೆ ಅಲ್ಲಮನೇ ಗತಿಮತಿ, ಪರಮಗುರು, ಅಂತರಂಗದ ಜ್ಯೋತಿ. ಹೀಗೆ ಒಬ್ಬರ ಆದರ್ಶಗಳನ್ನು ಮತ್ತೊಬ್ಬರು ಪುರಸ್ಕರಿಸಿ ಅನುಸರಿಸಿದ ರೀತಿ ಅಸಾಧಾರಣವಾಗಿದೆ. ಆಧ್ಯಾತ್ಮಿಕ ಶಿಕ್ಷಣದ ಅತ್ಯುಚ್ಚ ನಿಲವಿನ ದ್ಯೋತಕವಾಗಿದೆ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮ ದೇವನೆಂತೊಲಿವನಯ್ಯಾ

ಹೀಗೆ ನಡೆ-ನುಡಿಗಳು ಮನುಷ್ಯನಲ್ಲಿ ದೈವತ್ವ ಮೂಡಿಸುವ ಸಾಧನಗಳಾದಾಗ ದೇವಲೋಕ ಮರ್ತ್ಯಲೋಕಗಳು ಬೇರೆಯಾಗಿರಲು ಸಾಧ್ಯವೇ ? ಸತ್ಯವ ನುಡಿವುದೇ ದೇವಲೋಕ ಮಿಥ್ಯವ ನುಡಿವುದೇ ಮರ್ತ್ಯಲೋಕ ಆಚಾರವೇಸ್ವರ್ಗ ಅನಾಚಾರವೇ ನರಕ ಎಂಬ ಆದರ್ಶಗಳು ಇಹದ ಬದುಕಿಗೆ ಮಹತ್ವ ನೀಡಿ ಕಾಯಕವೇ ಕೈಲಾಸವೆನಿಸಿದ ಅನುಭಾವಿಕ ನೆಲೆಯ ಉನ್ನತ ವಿಚಾರವನ್ನು ಅತ್ಯಂತ ಸರಳರೀತಿಯಲ್ಲಿ ಚಿತ್ತರಗೊಳಿಸುತ್ತವೆ. ಮರ್ತ್ಯಲೋಕವು ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ಎಂಬ ಖಂಡಿತ ನೀತಿಯ ಮೂಲಕ ನೇರವಾದ ನಿರ್ದುಷ್ಟವಾದ ನುಡಿಗಳಲ್ಲಿ ಇಲ್ಲಿ-ಅಲ್ಲಿಗಳನ್ನು ಒಂದುಗೊಳಿಸಿದ ದೃಷ್ಟಿ ಬಸವಣ್ಣನವರು ನಮ್ಮ ಶಿಕ್ಷಣ ನೀತಿಗೆ ನೀಡಿದ ಒಂದು ಮಹತ್ವದ ಕೊಡುಗೆಯಾಗಿದೆ. ಇದೇ ರೀತಿಯಲ್ಲಿ ಧಾರ್ಮಿಕ, ನೈತಿಕ ಮತ್ತು ಆಧ್ಯಾತ್ಮಿಕತೆಗಳ ಆಧಾರದಿಂದ ಆರ್ಥಿಕ, ಶೈಕ್ಷಣಿಕ ಹಾಗೂ ಸಾಹಿತ್ಯಕ ನೀತಿಗಳಲ್ಲಿ ಹೊಚ್ಚ ಹೊಸದಾದ ಆರೋಗ್ಯಪೂರ್ಣವಾದ ನಿಲವುಗಳನ್ನು ಪ್ರತಿಪಾದಿಸಿದ್ದಾರೆ. ಎನಗಿಂತ ಕಿರಿಯರಿಲ್ಲ ಎಂಬ

ನಿರಹಂಭಾವದೊಂದಿಗೆ ಜಾತೀಯತೆ, ಕಂದಾಚಾರಗಳು, ವರ್ಗಭೇದ, ವರ್ಣಭೇದ ಹಾಗೂ ಲಿಂಗ ಭೇದಗಳನ್ನು ತೊಡೆದು ಹಾಕಿ ಕಾಯಕ ಗೌರವವನ್ನು ಪ್ರತಿಷ್ಠಾಪಿಸಿದ ರೀತಿಯಿಂದಾಗಿ ಬಸವಣ್ಣನವರು ವಿಶ್ವದ ಅತ್ಯಂತ ಶ್ರೇಷ್ಠ ದಾರ್ಶನಿಕರು, ಸಮಾಜವಾದಿ ಹಾಗೂ ಮಾನವತಾವಾದಿಗಳ ಸಾಲಿನಲ್ಲಿ ನಿಲ್ಲುತ್ತಾರೆ. ಇವರ ವಿಚಾರಗಳು ಶುದ್ಧ ವೈಜ್ಞಾನಿಕ ದೃಷ್ಟಿಕೋನ ಮತ್ತು ನಿರ್ಮಲ ಅಂತಃಕರಣದ ಪಡಿನುಡಿಗಳಾಗಿದ್ದು ಇವುಗಳನ್ನು ಪರಿಪೂರ್ಣವಾಗಿ ಪಾಲಿಸಿದರೆ ಇಂದಿನ ಶಿಕ್ಷಣವುಟ್ಟದಲ್ಲಿ ಅಪೂರ್ವವಾದ ಸುಧಾರಣೆಯಾಗುವುದು ಖಂಡಿತವೆನಿಸುತ್ತದೆ. ಇದರಿಂದ ಇಂದು ಮಾಯವಾಗುತ್ತಿರುವ ಮನುಷ್ಯ ಮನುಷ್ಯರ ನಡುವಣ ಸೌಹಾರ್ದಸಂಬಂಧಗಳು ದಯೆ, ಅನುಕಂಪ, ಸಹಾನುಭೂತಿಗಳು ಮತ್ತೆ ನೆಲೆ ನಿಂತು ಬದುಕು ಹಸನಾಗುವ ಸಾಧ್ಯತೆಯನ್ನು ಕಾಣಬಹುದು.

'ಎಲ್ಲ ಎಲ್ಲವನರಿದು ಫಲವೇನಯ್ಯಾ ತನ್ನ ತಾನರಿಯಬೇಕಲ್ಲದೆ' ಎಂದು ಆತ್ಮಜ್ಞಾನದ ವಿದ್ಯೆಯ ಮಹತ್ವವನ್ನು ಒಡಗೂಡಿಸಿಕೊಂಡ ಮಹದೇವಿಯಕ್ಕ 'ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ ? ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?' ಎಂದು ದಯೆ, ಅನುಕಂಪಗಳಿಂದ ಮಾನವೀಯತೆಯನ್ನು ಸಾಧಿಸುವ ವಿಧಾನವನ್ನು ತೋರಿದ್ದಾಳೆ. ಯಾವುದೇ ವಿದ್ಯೆ ಪೂರ್ಣ ಸಾರ್ಥಕವಾಗಲು ಅದರ ಶ್ರದ್ಧಾಪೂರ್ಣವಾದ ಅನುಷ್ಠಾನ ಅತ್ಯಗತ್ಯವೆಂಬುದನ್ನು ಖಡಾಖಂಡಿತವಾಗಿ ನಡೆದು ತೋರಿದವರು ಶರಣರು. ಪ್ರತಿಯೊಂದು ಅನುಷ್ಠಾನವೂ ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿಗೆ ದಾರಿತೋರುವ ಸಾಧನವಾಗಬೇಕೆಂಬ ಜ್ಞಾನದ ಉತ್ತುಂಗ ನಿಲವನ್ನು ಸಾಧಿಸಿದ 'ಕತ್ತಲೆಯ ಕಳೆದುಳಿದ ಸತ್ಯಶರಣರ ಪರಿ' ಜಗತ್ತಿನ ಇತಿಹಾಸದಲ್ಲಿ ಅತ್ಯಂತ ಅಪರೂಪದ್ದಾಗಿದೆ.

ವಚನ ಸಾಹಿತ್ಯದಲ್ಲಿ ಜನಪರ ನಿಲವುಗಳು

ಡಾ॥ ಬಸವರಾಜ ಸಾದರ

'ಜನಪರ ನಿಲವುಗಳು' ಎಂಬ ಜೋಡಿ ಶಬ್ದಗಳು ಇಂದು ಕ್ಲೀಷೆಯ ಮಟ್ಟ ಮುಟ್ಟಿವೆ. ವಚನ ಸಾಹಿತ್ಯದಲ್ಲಿ ಜನಪರ ನಿಲವುಗಳನ್ನು ಗುರುತಿಸುವ ಮೊದಲು ಈ ಪದಗಳ ಅರ್ಥ-ಸ್ಪಷ್ಟನೆ ಅಗತ್ಯ. 'ಜನಪರ' ಎಂಬುದಂತೂ ಹಿಗ್ಗಾಮುಗ್ಗಾ ಹೀಜಾಡಲ್ಪಟ್ಟ ಶಬ್ದ. ವಿವಿಧ ಕಾಲಘಟ್ಟಗಳಲ್ಲಿ, ವಿಭಿನ್ನ ಮನೋಭಾವದ ಚಿಂತಕರು ಈ ಶಬ್ದದ ವ್ಯಾಪ್ತಿಯೊಳಗೆ ಗುರುತಿಸಿದ ಜನರೂ ಬೇರೆ ಬೇರೆ. ವೃತ್ತಿಯೋ, ವರ್ಣವೋ, ಗುಣಸ್ವಭಾವವೋ ಯಾವುದೋ ಒಂದು ಮಾನದಂಡದ ಆಧಾರದಿಂದ ವರ್ಗೀಕೃತವಾಗಿದ್ದ ನಮ್ಮ ಪೂರ್ವದ ವ್ಯವಸ್ಥೆಯನ್ನೇ ನಿದರ್ಶನಕ್ಕಿಟ್ಟುಕೊಂಡರೆ, ಅಲ್ಲಿ ಜನಪರರು ಯಾರು ? ಶೂದ್ರರೆ ? ವೈಶ್ಯರೆ? ಕ್ಷತ್ರಿಯರೆ ? ಎಂಬ ಪ್ರಶ್ನೆ ಸಹಜವಾಗಿಯೇ ಹುಟ್ಟುತ್ತದೆ. ಶ್ರೇಣೀಕೃತ ಸಮಾಜದ ಮೇಲ್ಪದರದಲ್ಲಿರುವವರು ತಮ್ಮನ್ನೂ ಜನಪರರೆಂದು ಕರೆದುಕೊಂಡರೂ ಆಶ್ಚರ್ಯಪಡಬೇಕಿಲ್ಲ. ಮೀಸಲಾತಿ ಸೌಲಭ್ಯವನ್ನು ಪಡೆಯುವುದಕ್ಕಾಗಿ ತಮ್ಮನ್ನೂ ಹಿಂದುಳಿದ ಜಾತಿ-ವರ್ಗಗಳಲ್ಲಿ ಸೇರಿಸಬೇಕೆಂದು ಕೆಲವು ಮುಂದುವರೆದ ಜಾತಿಯ ಜನರು ನಡೆಸುವ ಹೋರಾಟಗಳೇ ಇದಕ್ಕೆ ಸಾಕ್ಷಿ. ಕ್ರಾಂತಿಕಾರಿಗಳು, ಪ್ರಗತಿಪರರು, ಸುಧಾರಣಾವಾದಿಗಳೆಂದು ಖ್ಯಾತರಾಗಿರುವ ಹಲವಾರು ಮಹನೀಯರು ಹಾಗೂ ಅಸಂಖ್ಯ 'ಇಜಂ'ಗಳೂ ಸಹ ಈ ಶಬ್ದದಲ್ಲಿ ಕಂಡ ಜನರು ಬೇರೆ ಬೇರೆಯವರು. ಸಾಹಿತಿಗಳಲ್ಲೇ ಬಂಡಾಯದವರು ಜನಪರರೆಂದು ಕರೆಯುವ ಜನ ಒಂದಾದರೆ, ದಲಿತ ಸಾಹಿತಿಗಳು ಕರೆಯುವ ಜನಪರರೇ ಬೇರೆ. ಹೀಗೆ ವಿವಿಧ ಅರ್ಥಗಳಲ್ಲಿ ಹಾಗೂ ವೈರುಧ್ಯಾರ್ಥಗಳಲ್ಲಿ ಬಳಕೆಯಾಗುತ್ತ ಬಂದ 'ಜನಪರ' ಎಂಬ ಶಬ್ದಕ್ಕೆ ಒಂದು ನಿಖರವಾದ, ಖಚಿತವಾದ ಅರ್ಥ ಹೇಳುವುದು ಕಠಿಣ ಕೆಲಸವಲ್ಲವಾದರೂ, ಅದಕ್ಕೆ ತೊಡಗಿದವರೆಲ್ಲ ತಮ್ಮ ಮೂಗಿನ ನೇರಕ್ಕೆ ಮಾತ್ರ ನೋಡಿದ್ದರಿಂದ ಅದು ಸಾಧ್ಯವಾಗಿಲ್ಲ. ಯಾವುದೇ ಸಮಾಜ ವ್ಯವಸ್ಥೆಯಲ್ಲಿ ಮೇಲ್‌ಸ್ತರದಲ್ಲಿರುವ ವರ್ಗದವರ- ಅದು ವರ್ಗ, ವರ್ಣ, ಲಿಂಗ ಯಾವುದೂ ಆಗಿರಬಹುದು- ನಿರ್ಲಕ್ಷ್ಯಕ್ಕೆ, ಅವಹೇಳನಕ್ಕೆ, ಶೋಷಣೆಗೆ ಸಿಕ್ಕು ತಮಗೆ ದೊರೆಯಬೇಕಾದ ಸವಲತ್ತುಗಳಿಂದಲೂ ವಂಚಿತರಾಗಿ, ಆ ವಂಚಿತ ಸ್ಥಿತಿಯನ್ನೇ ತಮ್ಮ ಬದುಕನ್ನಾಗಿಸಿಕೊಂಡು, ಅನಿವಾರ್ಯವಾಗಿ ಗತಾನುಗತಿಕ ಬದುಕನ್ನು ನಡೆಸುವ ಜನರೇ 'ಜನಪರ'ರೆನ್ನಬಹುದು.

ಇನ್ನು 'ನಿಲವು'ಗಳು ಎಂಬ ಶಬ್ದ. ಇದರ ಶಬ್ದಾರ್ಥ ಅಭಿಪ್ರಾಯಗಳು ಎಂದು. 'ಜನಪರ' ಎಂಬ ಶಬ್ದದೊಡನೆ ಸೇರಿದಾಗ ಅದಕ್ಕೆ ಜನಪರರ ಬಗೆಗಿನ ಅಭಿಪ್ರಾಯಗಳು ಎಂಬ ಅರ್ಥ ಬರುತ್ತದೆ. ಸಾಹಿತ್ಯಕ ಸಂದರ್ಭದಲ್ಲಿ ಈ ಎರಡೂ ಶಬ್ದಗಳನ್ನು ಒಟ್ಟಾಗಿ ಬಳಸಿದಾಗ, ಸಾಹಿತ್ಯದಲ್ಲಿ ಜನಪರರ ಬಗೆಗಿನ ಅಭಿಪ್ರಾಯಗಳು ಎಂದಾಗುತ್ತದೆ. ಅಂದರೆ ಇಲ್ಲೆಲ್ಲ 'ನಿಲವು'ಗಳು ಶಬ್ದದ ಮಿತಿ ಕೇವಲ ಅಭಿಪ್ರಾಯಗಳ ಮಟ್ಟದ್ದು. ಇಂಥಲ್ಲಿ ಬದ್ಧತೆ ಎಂಬುದರ ಸ್ವರೂಪ ಎಂಥದೆಂಬುದು ಸ್ಪಷ್ಟವಾಗುವುದಿಲ್ಲ. ಅಭಿಪ್ರಾಯಗಳ ಮಟ್ಟದ ನಿಲವುಗಳನ್ನು ಸಾಹಿತಿಯೊಬ್ಬ ಹೊರೆ ಹೊರೆಯಾಗಿ ಬರೆದಿಡುತ್ತಲೇ ಹೋದರೆ ಅಲ್ಲಿ ಬದಲಾವಣೆಗಾಗಿ ಅಥವಾ ಪ್ರಗತಿಗಾಗಿ ತುಡಿಯುವ ಕ್ರಿಯಾತ್ಮಕ ಬದ್ಧತೆ ಶೂನ್ಯವಾಗುತ್ತದೆ. ತನ್ನ ಮಗ ಕೆಳಜಾತಿಯಲ್ಲಿ ಹುಟ್ಟಿದ ಹುಡುಗಿಯನ್ನು ಮದುವೆಯಾದಾಗ ಜಾತಿ ಭ್ರಷ್ಟವಾಯ್ತೆಂದು ನೋಯುವ ಸಾಹಿತಿ, ಜಾತಿ ಸಮತೆ ಹಾಗೂ ಅಸ್ಪೃಶ್ಯತೆಯನ್ನು ಕುರಿತು ಅತ್ಯಂತ ಕಳಕಳಿಯ ಹಾಗೂ ಸಂವೇದನಾಪೂರ್ಣ ಕಥೆ-ಕವನ ಬರೆದರೆ ಅದು ಸಾಹಿತ್ಯಕ ಸಹಾನುಭೂತಿ ಮಾತ್ರ ಆಗುತ್ತದೆ. ಈ ರೀತಿ ನಿಲವುಗಳನ್ನು ಮೌಲ್ಯ, ಆದರ್ಶಗಳ ರೀತಿಯಲ್ಲಿ ರೀಲು ಬಿಡುತ್ತ ಹೋಗುವ ಸಾಹಿತಿ ಒಬ್ಬ ಭಂಡ ಪ್ರಗತಿಶೀಲನಾಗುತ್ತಾನೆ. ಇಂಥಲ್ಲೆಲ್ಲ ಸಾಹಿತಿ ಮತ್ತು ಆತನ ಸಾಹಿತ್ಯ ಅಭಿಪ್ರಾಯಗಳ ಮಟ್ಟದ 'ನಿಲವು'ಗಳು ಎಂಬ ಶಬ್ದ ಒಳಗೊಳ್ಳುವ ಅರ್ಥ ಈ ಬಗೆಯದು. ಆದರೆ ಅದು ಅಷ್ಟಕ್ಕೇ ಸೀಮಿತವಾಗಬಾರದು. ನಿಲವುಗಳು ನಿಜವಾದ ಕ್ರಿಯಾತ್ಮಕ ಕಾಳಜಿಗಳಾಗಬೇಕು. ಹಾಗಾಗಬೇಕಾದರೆ ಅಲ್ಲಿ ನಡೆ ಮತ್ತು ನುಡಿ-ಎರಡಕ್ಕೂ ಸಾಹಿತಿಯೊಬ್ಬನ ಬದ್ಧತೆ ಅಗತ್ಯವಾಗುತ್ತದೆ.

ಹೀಗೆ ಹೇಳತೊಡಗಿದ ತಕ್ಷಣ ಎಷ್ಟೋ ಬರಹಗಾರರು, ಇದು ಸಾಹಿತ್ಯದ ಕೆಲಸವಲ್ಲ, ಅಂಥ ಕ್ರಾಂತಿ ಸಾಹಿತ್ಯದಿಂದ ಸಾಧ್ಯವಿಲ್ಲ, ಅದನ್ನು ನಿರೀಕ್ಷಿಸುವುದೂ ಸಲ್ಲ- ಎಂಬಂಥ ಕಾವ್ಯಮೀಮಾಂಸೆಯ ವ್ಯಾಖ್ಯೆಗಳನ್ನು ಹೇಳಬಹುದು. ಸಾಹಿತ್ಯವನ್ನು ರತಿಕ್ರೀಡೆಗೆ ಹೋಲಿಸುವ ಅಥವಾ ರತಿವಿಜ್ಞಾನಕ್ಕಾಗಿ ವಿರೇಚಕ ಸಾಹಿತ್ಯ ಹುಟ್ಟುತ್ತಿರುವ ಈ ಕಾಲದಲ್ಲಿ ಇದೆಲ್ಲ ಸಹಜವೆ. ಹೀಗಿರುವಾಗ ಸಾಹಿತ್ಯದಲ್ಲಿ ಧನಪರ ಹಾಗೂ ಕೀಳು ಮನರಂಜನಾಪರ ನಿಲವುಗಳೇ ಹೆಚ್ಚಾಗಿ ಅದು ವಾಣಿಜ್ಯದ ಸರಕಾಗಿ ದೊಡ್ಡ ತೂಕ ಪಡೆಯುತ್ತದೆ. ಇಂಥ ಸಾಹಿತ್ಯದಲ್ಲಿ ಜನಪರ ನಿಲವುಗಳನ್ನು, ಅದೂ ಕ್ರಿಯಾತ್ಮಕವಾದ ಜನಪರ ನಿಲವುಗಳನ್ನು ಹುಡುಕುವುದು ಕತ್ತಲಲ್ಲಿ ಕರಿಬೆಕ್ಕನ್ನು ಹುಡುಕಿದ ಹಾಗೆ. ಪರಿಸ್ಥಿತಿ ಹೀಗಿರುವಾಗ ಸಾಹಿತ್ಯದಲ್ಲಿ ಜನಪರ ನಿಲವುಗಳನ್ನು ಕುರಿತು ಮಾತಾಡುವುದು ತುಂಬ ಕಷ್ಟದ ಕೆಲಸ. ಬಹಳೆಂದರೆ ವಿಮರ್ಶನ ವೃತ್ತಿಯವರಿಗೆ ಮಾತ್ರ ಅನಿವಾರ್ಯವಾಗಿ ಸೀಮಿತವಾಗಿರುವ ಇಂದಿನ ಬಹುಪಾಲು ಸಾಹಿತ್ಯ ಈ ನೆಲದ ಅಸಂಖ್ಯಾತ ನಿರಕ್ಷರಿಗಳಿಗೆ ತಲುಪಿದರೆ ತಾನೆ ಅದರ ಕೆಲಸ ಪ್ರಾರಂಭವಾಗುವುದು ? ಮುಖ್ಯವಾಗಿ ಈ ತಲುಪುವ ಕೆಲಸವೇ ಆಗದಿದ್ದಾಗ ಅಲ್ಲಿ ಕ್ರಾಂತಿಯ ಕಹಳೆ, ಸ್ಲೋಗನ್‌ಗಳ ಸುರಿಮಳೆ ಸುರಿದರೂ ಪ್ರಯೋಜನವಿಲ್ಲ. ಇಂಥಲ್ಲೆಲ್ಲ 'ಜನಪರ' ಎಂದು ಹೇಳುವುದು ಒಂದು ಫ್ಯಾಶನ್ ಮಾತ್ರ ಆಗುತ್ತದೆ.

ಆದರೆ ಈಗ ಇಲ್ಲಿ ಮುಖ್ಯವಾಗಿ ಗಮನಿಸುತ್ತಿರುವ ವಚನ ಸಾಹಿತ್ಯದ ರೀತಿಯೇ ಬೇರೆ. 'ಜನಪರ ನಿಲವುಗಳು' ಎಂಬ ಮಾತನ್ನು ಮೊದಲು ಕ್ರಿಯೆಯಲ್ಲಿ ಮಾಡಿ ತೋರಿಸಿ, ಅನಂತರ ಮಾತಿನಲ್ಲಿ ನುಡಿದು ಸಾಹಿತ್ಯವನ್ನಾಗಿಸಿದ ವಚನಕಾರರ ಬದ್ಧತೆ ನಿಜಕ್ಕೂ ಅಪೂರ್ವವಾದದ್ದು. ಈವರೆಗೆ ಮಾಡಿದ 'ಜನಪರ ನಿಲವುಗಳು' ಶಬ್ದಗಳ ವಿಶ್ಲೇಷಣೆಯಲ್ಲಿ ಸೂಚ್ಯವಾಗಿರುವ ಅಕ್ಷರಕ್ಷರಕ್ಕೂ ಅರ್ಥತರುವ ಸಾಹಿತ್ಯ, ವಚನ ಸಾಹಿತ್ಯ. ಅದರೊಂದಿಗೆ ತೌಲನಿಕವಾಗಿ ಪರಿವೀಕ್ಷಿಸಿದಾಗ ಇಂದಿನ ಸಾಹಿತ್ಯದಲ್ಲಿ ಜನಪರ ನಿಲವುಗಳು ಪಡೆದ ಬಣ್ಣ ಸ್ಪಷ್ಟವಾಗಿಯೇ ಗೋಚರವಾಗುತ್ತದೆ. ವಚನ ಸಾಹಿತ್ಯದಲ್ಲಿರುವ ನಿಜವಾದ ಜನಪರ ನಿಲವುಗಳನ್ನು ಗುರುತಿಸುವ ಮೊದಲು ಈ ಪೂರ್ವಪೀಠಿಕೆ ಅಗತ್ಯವೆನಿಸುತ್ತದೆ.

ವಚನಕಾರರ ಅಥವಾ ವಚನ ಸಾಹಿತ್ಯ ಸೃಷ್ಟಿಯಾದ ಕಾಲ ರಾಜಪ್ರಭುತ್ವ ಹಾಗೂ ಪುರೋಹಿತಶಾಹಿಗಳು ಆಳುತ್ತಿದ್ದ ಕಾಲ. ಇವೆರಡು ಶಕ್ತಿಗಳಲ್ಲಿ ಮೊದಲಿನದಕ್ಕೆ ಅಧಿಕಾರದ ದರ್ಪ ದಂಡವಾದರೆ, ಎರಡನೆಯದಕ್ಕೆ ನೆವದ ಧರ್ಮ ದಂಡವಾಗಿತ್ತು. ತಲೆಯಿಲ್ಲದ ಬಲ ಮೊದಲನೆಯ ಶಕ್ತಿಯದಾದರೆ; ಬಲ, ಅಂದರೆ ದೈಹಿಕ ಸಾಮರ್ಥ್ಯವಿರದ ಜಾಣತಲೆ ಎರಡನೆಯ ಶಕ್ತಿಯದು. ಪರಮಸ್ವಾರ್ಥ ಎರಡೂ ಶಕ್ತಿಗಳ ಸಾಮಾನ್ಯಗುಣ. ಧರ್ಮ ದೇವರುಗಳ ವಾರಸುದಾರರು ತಾವೇ ಎಂದು ಹೇಳಿಕೊಳ್ಳುತ್ತಿದ್ದ ಎರಡನೆಯ ಶಕ್ತಿ, ಅನುಕೂಲ ಸಿಂಧು ಧರ್ಮದ ತತ್ವ ಹೆಣೆದು ಸಮಾಜವನ್ನು ಹಾಗೂ ಜನಸಾಮಾನ್ಯರನ್ನು ಅಂಧ ಕಾರದಲ್ಲಿಟ್ಟು ಸುಲಿಯುತ್ತಿದ್ದರೆ, ಅದು ರೂಪಿಸಿದ ಮೋಸದ ತಂತ್ರಗಳನ್ನೇ ನಂಬಿ ಅಧಿಕಾರ ನಡೆಸುತ್ತಿದ್ದ ಮೊದಲ ಶಕ್ತಿ, ದರ್ಪ-ದುರಹಂಕಾರಗಳಿಂದ ಜನತೆಯನ್ನು ಶೋಷಿಸುತ್ತಿತ್ತು. ಈ ಎರಡೂ ಬಗೆಯ ಶಕ್ತಿಗಳ ಕೂಡುವಿಕೆಯಿಂದಾಗಿ ಇಡೀ ವ್ಯವಸ್ಥೆ ಅಪಾಯಕಾರಿ ಹಾಗೂ ಆತಂಕಕಾರಿ ಸ್ಥಿತಿಯನ್ನು ತಲುಪಿತ್ತು. ಮೋಸದ ಧರ್ಮ ಹಾಗೂ ದರ್ಪದ ಅಧಿಕಾರ ಎರಡೂ ಸೇರಿ ಇಡೀ ಸಮಾಜ ಶೋಷಕ ಮತ್ತು ಶೋಷಿತರೆಂಬ ಸ್ಪಷ್ಟ ಭೇದ ಕಂಡಿತ್ತು. ಶೋಷಣೆಯ ಸ್ವರೂಪವು ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಸ್ಪಷ್ಟಗೋಚರವಾಗಿತ್ತು. ಇಂಥ ಅಸಮಾನತೆ, ಶೋಷಣೆ, ಕತ್ತಲೆ ಕವಿದಾಗ ಸಂಭವಾಮಿ ಯುಗೇ ಯುಗೇ ಎಂದ ದೇವರೂ ತಾನಾಗಿಯೇ ಹುಟ್ಟಿ ಬರುವ ಸಾಧ್ಯತೆಯಿರಲಿಲ್ಲ. ಕಾರಣವೆಂದರೆ, ಧರ್ಮವನ್ನು ನಿಯಂತ್ರಿಸುತ್ತಿದ್ದ ಶಕ್ತಿಯೇ ದೇವರನ್ನೂ ನಿಯಂತ್ರಿಸುತ್ತಿತ್ತು.

ಈ ರೀತಿಯ ಸ್ಥಗಿತ ಸ್ಥಿತಿಯಲ್ಲಿ ಅನ್ಯಮಾರ್ಗವೇ ಇಲ್ಲದಾದಾಗ, ಶೋಷಿತ ಜನಶಕ್ತಿಯೇ ಸಂಘಟಿತವಾಗಿ ಶೋಷಕ ಶಕ್ತಿಗಳೆದುರು ಸಿಡಿದು ನಿಂತಿತು. ಶೋಷಣೆಯ ಸ್ವರೂಪ ಅಸಾಧ್ಯ ಘಟ್ಟ ಮುಟ್ಟಿದಾಗ ಅದರಿಂದ ಶೋಷಣೆಗೊಳಗಾದ ಸಮುದಾಯವೇ ಸಂಘರ್ಷಕ್ಕಿಳಿದು ಪ್ರಗತಿಗಾಗಿ ಹೋರಾಟ ಮಾಡುವ ಸಾಮಾನ್ಯ ನಿಯಮಕ್ಕೆ ಪೂರಕವೇ ಆಗಿತ್ತು 12ನೆಯ ಶತಮಾನದ ಈ ಪ್ರತಿಭಟನೆ. ಕಾಲಮಾನಕ್ಕೆ ತಕ್ಕ ಹಾಗೆ ಈ ಪ್ರತಿಭಟನೆ ನೀತಿ-ಮೌಲ್ಯ-ಆದರ್ಶಗಳ ಅನುವಿಡಿದೇ ಹೊಸ ಬೆಳಕೊಂದನ್ನು ಬೀರುವ ಹಾಗೂ ಕಾಣುವ

ಪ್ರಯತ್ನ ಮಾಡಿತು. ಈ ರೀತಿ, ಮೌಲ್ಯ ಆದರ್ಶಗಳು ಕ್ರಾಂತಿಕಾರಿ ಸ್ವರೂಪದವಾಗಿದ್ದು, ಶೋಷಕರೆದುರು ತೀವ್ರ ಪ್ರತಿಭಟನೆ, ಕ್ರಿಯಾತ್ಮಕ ಹೋರಾಟ ಹಾಗೂ ಶೋಷಿತರೆಡೆಗೆ ಆತ್ಮೀಯ ಅನುಕಂಪ, ಅವರನ್ನು ಅಪ್ಪಿಕೊಳ್ಳುವ ಉದ್ದೇಶ ಅವುಗಳದಾಗಿತ್ತು. ಅವರನ್ನು ವೈಚಾರಿಕವಾಗಿ ಜಾಗೃತ ಗೊಳಿಸುವುದೂ ಅವುಗಳದಾಗಿತ್ತು. ಜನಶಕ್ತಿಯ ಈ ಹೋರಾಟಕ್ಕೆ ಜ್ವಾಲಾಮುಖಿಯ ಸ್ವರೂಪವಿತ್ತಾದರೂ ಅದರ ಮಾರ್ಗ ಕತ್ತಲೆಯಲ್ಲಿ ದೀಪ ಮುಡಿಸಿ ಬೆಳಕು ಬೀರುವ ರೀತಿಯದಾಗಿತ್ತು. ಇಂಥ ಪ್ರತಿಭಟನೆ ಬಸವಣ್ಣನಂಥ ಕ್ರಾಂತಿಕಾರಿಯ ನೇತೃತ್ವದಲ್ಲಿ ಪ್ರಾರಂಭವಾಯಿತಾದರೂ ಆತನ ಧ್ವನಿಗೆ ದನಿಗೂಡಿಸಿ, ಕೈಗೆ ಕೈ ಕೂಡಿಸಿ, ಇಡೀ ಪ್ರತಿಭಟನೆಗೆ ವೈಚಾರಿಕ ಕ್ರಾಂತಿಯ ಮುಖ ಕೊಟ್ಟವರು ಅಂದಿನ ಶೋಷಿತ ಸಮುದಾಯದ ಜನಶಕ್ತಿ. ಜನಶಕ್ತಿಯೇ ಸಿಡಿದೆದ್ದು ಸ್ಥಗಿತ ವ್ಯವಸ್ಥೆಯೆದುರು ಪ್ರತಿಭಟನೆ ವ್ಯಕ್ತಪಡಿಸಿ, ಚಲನಶೀಲ ಸಮಾಜವೊಂದರ ನಿರ್ಮಾಣಕ್ಕೆ ತೊಡಗಿದ ಕಾರಣಕ್ಕಾಗಿಯೇ ಈ ಹೋರಾಟ ತನ್ನ ಸತ್ವ-ಸ್ವರೂಪದಲ್ಲಿ ಇಡೀ ಜಗತ್ತಿನಲ್ಲೇ ಅಪೂರ್ವತೆ ಪಡೆಯಿತು. ಶೋಷಿತ ಜನಶಕ್ತಿಯೇ ತಮ್ಮ ಬೇಕುಗಳಿಗಾಗಿ ಹೋರಾಡಿ, ಅವುಗಳನ್ನು ಪಡೆಯುವಲ್ಲಿ ಮಾಡಿದ ಈ ಪ್ರಯತ್ನ ಅನ್ಯಾದೃಶವಾದದ್ದು.

ಈ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ 12ನೆಯ ಶತಮಾನದಲ್ಲಿ ವಿವಿಧ ಬಗೆಯ ಸಮಾನತೆಗಾಗಿ ನಡೆದ ಹೋರಾಟವು ನಾವೀಗ ಜನಪರರೆಂದು ಗುರುತಿಸಿದ ಜನವರ್ಗದಿಂದಲೇ ಸಂಘಟಿತವಾದುದೆಂಬುದು ಸ್ಪಷ್ಟವಾಗುತ್ತದೆ. ತಮಗಾಗಿ ಹಾಗೂ ತಮ್ಮಂಥ ಶೋಷಿತರಿಗಾಗಿ, ಅಂದರೆ ಜನಸಾಮಾನ್ಯರು ಜನಸಾಮಾನ್ಯರಿಗಾಗಿ ನಡೆಸಿದ ಹೋರಾಟವದು. ಬರೀ ಘೋಷಣೆ, ಭಾಷಣ, ಗೊತ್ತುವಳಿ, ನಿರ್ಣಯ ಸ್ವೀಕಾರದ ಮಟ್ಟದ ಹೋರಾಟ ಅದಾಗಿರಲಿಲ್ಲ; ಅದು ನಿಜವಾದ ಕ್ರಿಯಾತ್ಮಕ ಹೋರಾಟವಾಗಿತ್ತು. ಸರ್ವಸಮಾಜೀಕರಣ ಹಾಗೂ ವೈಚಾರಿಕತೆಯಲ್ಲಿ ನಿಜವಾದ ಒಲವಿದ್ದ ಜನರು ಜಾತಿ-ವರ್ಗ-ಲಿಂಗ-ಹೀಗೆ ಯಾವ ತರ-ತಮಭಾವವಿಲ್ಲದೆ ಪಾಲ್ಗೊಂಡು, ಒಂದಾಗಿ ನಡೆಸಿದ ಕ್ರಮಬದ್ಧ ಹಾಗೂ ಪ್ರಗತಿಪರ ಹೋರಾಟವದು. ಇಂಥ ಕ್ರಿಯಾತ್ಮಕ ಹೋರಾಟವೊಂದನ್ನು ಸಾರಿ, ಅದು ನಡೆಯುತ್ತಿರುವಂತೆಯೇ ಅದರ ಸ್ವರೂಪ, ಉದ್ದೇಶ, ಗುರಿ-ಗಮನಗಳನ್ನು ನಿತ್ಯ ಆಲೋಚಿಸುತ್ತಿದ್ದ ಹಾಗೂ ಚರ್ಚಿಸುತ್ತಿದ್ದ ಜನವರ್ಗದ ಅಭಿವ್ಯಕ್ತಿಯೇ ವಚನ. ಅಂದರೆ ವಚನ ಆ ಹೋರಾಟಗಾರರ ಮಾತು. ಹೋರಾಟದ ಸ್ವರೂಪವನ್ನು ತಿಳಿಸುವಂತೆಯೇ ಅದು ಕಂಡ ತೀರ್ಮಾನಗಳನ್ನು ನುಡಿಯುವ ಮಾತು. ಅದನ್ನೇ ನಾವಿಂದು ವಚನ ಸಾಹಿತ್ಯವೆಂದು ಕರೆದದ್ದು. ಇಂಥ ಮಾತನ್ನಾಡಿದವರು ಅಥವಾ ಆ ಬಗೆಯ ಹೋರಾಟ ಮಾಡಿದವರು ವಚನಕಾರರು. ಹೊಸ ಮನ್ವಂತರ ಕಂಡ ಮಾತು, ಅಥವಾ ಕಾಣಲು ದಿಕ್ಸೂಚಿಯಾದ ಮಾತು ಸಾಹಿತ್ಯಕ ಲಕ್ಷಣಗಳನ್ನೂ, ಕಾವ್ಯದ ಲಯಗಾರಿಕೆಯನ್ನೂ ಸಹಜವಾಗಿಯೇ ಕರಗತ ಮಾಡಿಕೊಂಡ ಕಾರಣ ಅದನ್ನು ವಚನ ಸಾಹಿತ್ಯವೆಂದು ಗುರುತಿಸಿದ್ದು ಸಹಜವೆ.

ಹೀಗೆ ಜನಸಾಮಾನ್ಯರಿಂದ ಸಂಘಟಿತವಾದ ಹೋರಾಟ, ಜನಸಾಮಾನ್ಯರ ಒಳಿತಿಗಾಗಿ ಕ್ರಿಯಾತ್ಮಕವಾಗಿ ಮಿಡಿದು, ಮಿಡಿತಕ್ಕೆ ತಕ್ಕ ಧ್ವನಿ ಪಡೆದು, ವ್ಯಾಪಕವಾದ ಸಾಮಾಜಿಕ ಸ್ವರೂಪ ಪಡೆಯಿತು. ಮೊದಲು ನಡೆ, ನಂತರ ನುಡಿ-ಹೀಗೆ ಎರಡರಲ್ಲೂ ಜನಪರರಿಂದ, ಜನಪರರಿಗಾಗಿ ಬದ್ಧಗೊಂಡು ನಡೆದ ಹೋರಾಟ ಮತ್ತು ಅದರ ಅಭಿವ್ಯಕ್ತಿ ಇಡೀ ವಿಶ್ವದಲ್ಲೇ ಮೊಟ್ಟ ಮೊದಲನೆಯದು. ವಚನಕಾರರ ಹಾಗೂ ವಚನಸಾಹಿತ್ಯದ ಮಹತ್ತಿರುವುದೇ ಇಲ್ಲಿ. ಜನಪರರಿಂದ ನಡೆದ ಹಾಗೂ ಅವರಿಂದಲೇ ನುಡಿ ಪಡೆದ ಈ ಒಟ್ಟಾರೆ ಕ್ರಿಯೆಯ ಅಭಿವ್ಯಕ್ತಿಯಾಗಿರುವ ವಚನ ಸಾಹಿತ್ಯ ಎಲ್ಲಿ ಗಮನಿಸಿದರೂ ಜನಪರತೆಯನ್ನೇ ಒಳಗೊಂಡಿರುವುದು ಸ್ಪಷ್ಟವಾಗುತ್ತದೆ. ವಚನಕಾರರು ಮತ್ತು ವಚನ ಸಾಹಿತ್ಯವೆಂದು ಬೇರ್ಪಡಿಸಲಾಗದ ಹಾಗೆ ಅವರ ಬದುಕು, ಕ್ರಿಯೆ ಹಾಗೂ ಅವರ ಅಭಿವ್ಯಕ್ತಿ ಇವೆಲ್ಲವುಗಳಲ್ಲೂ ಅನ್ಯೋನ್ಯ ಸಂಬಂಧವಿದೆ. ಈ ಕಾರಣಕ್ಕಾಗಿಯೇ 'ಜನಪರ ನಿಲವುಗಳು' ಎಂಬ ಶಬ್ದಗಳು ವಚನಕಾರರ ಹಾಗೂ ವಚನ ಸಾಹಿತ್ಯದ ಸಂದರ್ಭದಲ್ಲಿ ನಿಜವಾದ ಅರ್ಥಪಡೆಯುತ್ತವೆ.

ವಚನ ಸಾಹಿತ್ಯದಲ್ಲಿ ಜನಪರ ನಿಲವುಗಳನ್ನು ಗುರುತಿಸುವಾಗ, ಮೊದಲು ಅದು ಅಭಿವ್ಯಕ್ತಿಯ ವಿಷಯದಲ್ಲಿ ಸಾಧಿಸಿದ ಹೊಸತನವನ್ನು ಅವಲೋಕಿಸಬೇಕಾಗುತ್ತದೆ. ಜನಪರರತ್ತ ಕ್ರಿಯಾತ್ಮಕ ಕಾಳಜಿ ತೋರಿಸುವಲ್ಲಿ ಅದು ಇಟ್ಟ ಮೊದಲ ಹೆಜ್ಜೆಯೆಂದರೆ ಅಭಿವ್ಯಕ್ತಿ ಮತ್ತು ಸಂವಹನದಲ್ಲಿ ಸಾಧಿಸಿದ ಹೊಸತನ. ಸಾಹಿತ್ಯದ ಭಾಷೆ ಮತ್ತು ಅದರ ಸಂವಹನದ ರೀತಿಗಳು ಅದುವರೆಗೂ ಸಂಸ್ಕೃತಮಯವೇ ಆಗಿದ್ದವು. ಧಾರ್ಮಿಕ ವಿಚಾರಗಳನ್ನು ಹೇಳುವಾಗಲಂತೂ ಸಂಸ್ಕೃತವೇ ಪ್ರಮಾಣೀಕೃತ ಭಾಷೆಯಾಗಿತ್ತು. ಜನಸಾಮಾನ್ಯರಿಗೆ ಅದು ಕಬ್ಬಿಣದ ಕಡಲೆಯಾಗಿತ್ತು. ಅಷ್ಟೇ ಅಲ್ಲ; ಕೆಲವು ಜನವಿರೋಧಿ ತತ್ವಗಳನ್ನು ತಿಳಿಯಲಾರದ ಭಾಷೆಯಲ್ಲಿ ಹೇಳಿ ಅನುಕೂಲಸಿಂಧು ಅರ್ಥ ಕಲ್ಪಿಸುವ ಭಾಷಿಕ ಮೋಸ ಕೂಡ ನಡೆದು, ಜನಸಾಮಾನ್ಯರು ಅದರಿಂದಲೂ ಶೋಷಣೆಗೀಡಾಗಿದ್ದರು. ವಚನಕಾರರು ಮೊದಲು ಇದನ್ನು ಖಂಡಿಸಿದರು. ನಗೆಯ ಮಾರಿತಂದೆ ಎಂಬ ಸಾಮಾನ್ಯ ವಚನಕಾರ ಈ ಹಿನ್ನೆಲೆಯಲ್ಲಿ ವ್ಯಕ್ತಪಡಿಸಿದ ಪ್ರತಿಭಟನೆ ಗಮನಾರ್ಹವಾಗಿದೆ :

> ಕಲ್ಲಿಯ ಹಾಕಿ, ನೆಲ್ಲವ ತುಳಿದು ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
> ವಾಗದ್ವೈತವ ಕಲಿತು,
> ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು,
> ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವಂತೆ
> ಅದೇತರ ನುಡಿ ? ಮಾತಿನ ಮರೆ
> ಆತುರವೈರಿ ಮಾರೇಶ್ವರಾ

ತಿಳಿಯಲಾರದ ಭಾಷೆಯ ಮೂಲಕ ಜನಸಾಮಾನ್ಯರಿಗೆ ವ್ಯವಸ್ಥಿತ ಮೋಸ ನಡೆಯುತ್ತಿದ್ದ ರೀತಿಯನ್ನು ಮಾರಿತಂದೆ ಇಲ್ಲಿ ನೇರವಾಗಿ ಕೆಣಕುತ್ತಾನೆ. ಇಂಥ ವಿರೋಧದ ಹಿಂದೆ ಜನಸಾಮಾನ್ಯರಿಗೆ ಅರ್ಥವಾಗುವ, ಅವರನ್ನು ನೇರವಾಗಿ ತಲುಪಬಹುದಾದ ಅತ್ಯಂತ

ಸರಳವಾದ ಭಾಷೆಯೊಂದರ ತುಡಿತ ಎದ್ದು ಕಾಣುತ್ತದೆ. ಈ ತುಡಿತ ಕೇವಲ ತುಡಿತವಾಗದೆ ಅಭಿವ್ಯಕ್ತಿಯಾಗಿಯೂ ಪ್ರಕಟವಾಯಿತು-

ಬತ್ತಲೆಯಿದ್ದವರೆಲ್ಲ ಕತ್ತೆಯ ಮರಿಗಳು,
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು,
ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ
ಆವ ಪ್ರಕಾರವಾದಡೇನು, ಅರಿವೆ ಮುಖ್ಯವಯ್ಯಾ,
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ

ಎಂಬ ಅಕ್ಕಮ್ಮನ ವಚನದ ಮಾತನ್ನಾಗಲಿ, ಹಾಗೂ

ಒರುಶಠಗನ ಭಕ್ತಿ ದಿಟವೆಂದು ನಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ರಾಮನಾಥ

ಎಂಬ ದೇವರ ದಾಸಿಮಯ್ಯನ ವಚನದ ಮಾತನ್ನೇ ಆಗಲಿ-ಉದಾಹರಣೆಗಾಗಿ ಗಮನಿಸಿದರೆ, ಇಲ್ಲಿಯ ಭಾಷೆಯ ಸ್ವರೂಪ, ಸಂವಹನದ ರೀತಿ ಎಂಥವೆಂಬುದು ಸ್ಪಷ್ಟವಾಗುತ್ತದೆ. ಹೇಳಬೇಕಾದುದನ್ನು ಜನಸಾಮಾನ್ಯರೂ ಅರ್ಥಮಾಡಿಕೊಳ್ಳಬಲ್ಲ ಭಾಷೆಯ ಮೂಲಕ ಹೇಳಿದಾಗ ಅದು ಉಂಟು ಮಾಡುವ ಪರಿಣಾಮ ಹೆಚ್ಚು ತೀವ್ರವಾದದ್ದು. ವ್ಯಾಖ್ಯಾನ ಮತ್ತು ವಿಶ್ಲೇಷಣೆಗಳ ಅಗತ್ಯವಿಲ್ಲದ ಹಾಗೆ ವಸ್ತು-ವಿಷಯ-ಸಂದರ್ಭಗಳನ್ನು ನೇರವಾಗಿ ಬಿಡಿಸಿಡುವ ಇಂಥ ಭಾಷೆ ಶರಣರ ಮಾತುಗಳನ್ನು ಅನನ್ಯ ಸಾಹಿತ್ಯವನ್ನಾಗಿಸಿತು. ಹೀಗೆ ಮಾತನಾಡುವ ಭಾಷೆ (spoken language) ಶರಣರ ಅಭಿವ್ಯಕ್ತಿ ಮಾಧ್ಯಮವಾಗಿ ಸಾಹಿತ್ಯ ಜನಸಾಮಾನ್ಯರನ್ನು ನೇರವಾಗಿ ತಲುಪುವ ಸಾಧ್ಯತೆ ಪಡೆದುಕೊಂಡಿತು. ಸಂವಹನದ ಸಾಧ್ಯತೆಯಲ್ಲಿ ಕೆಲವರಿಗೇ ಮೀಸಲಾಗಿದ್ದ ಸಾಹಿತ್ಯ ಪರಂಪರೆಯನ್ನು ಈ ರೀತಿ ಜನಸಾಮಾನ್ಯರ ಹತ್ತಿರಕ್ಕೆ ತಂದದ್ದು ವಚನ ಸಾಹಿತ್ಯದ ಮಹತ್ವದ ಸಾಧನೆ.

ರಾಮಾಯಣ, ಮಹಾಭಾರತ, ಪುರಾಣ ಕಥೆಗಳೇ ಪ್ರಮುಖವಾಗಿದ್ದ ಹಳಗನ್ನಡ ಸಾಹಿತ್ಯ ಪರಂಪರೆಗೆ ತಕ್ಷಣದ ತಡೆಯೊಡ್ಡಿ, ಪ್ರಮುಖವಾಗಿ ಈ ನೆಲದ ಮೇಲೆ, ವರ್ತಮಾನದಲ್ಲಿ ಬದುಕುವ ಸಾಮಾನ್ಯ ಜೀವಿಯ ಸ್ಥಿತಿ-ಗತಿ, ಸಮಸ್ಯೆ-ಸಂಕೀರ್ಣತೆಗಳನ್ನು ವಸ್ತುವಾಗಿ ಮಾಡಿಕೊಂಡದ್ದು ವಚನ ಸಾಹಿತ್ಯದಲ್ಲಿ ಜನಪರ ನಿಲವುಗಳನ್ನು ಗಮನಿಸುವಾಗ ಅವಲೋಕಿಸಬೇಕಾದ ಮತ್ತೊಂದು ಮಹತ್ವದ ಅಂಶ. ಈ ಬದಲಾವಣೆ ಪರಂಪರೆಗೆ ಪ್ರತಿಕ್ರಿಯೆಯೊಡ್ಡುವ ಸ್ವರೂಪದ್ದಾಗಿರುವಂತೆಯೇ, ಅದರಲ್ಲಿನ ಹುಳುಕು ಕೊಳಕುಗಳನ್ನು ಎತ್ತಿ ತೋರಿಸಿ, ಜನತೆ ಅದರಿಂದ ಮೋಸ ಹೋಗದಂತೆ ಎಚ್ಚರಿಸುವ ಉದ್ದೇಶದ್ದೂ ಆಗಿತ್ತು. ಒಂದು ಸಣ್ಣ ಉದಾಹರಣೆಯನ್ನು ಗಮನಿಸಬಹುದು. ಒಬ್ಬ ಕುಲಹೀನ ಶಿಷ್ಯನಿದ್ದರೆ, ಶೂದ್ರನೆಂದು ಆತನನ್ನು ಕರೆದ ಪರಂಪರೆ, ಅವನಿಗೆ ದೀಕ್ಷೆಯ ಅನುಗ್ರಹ ಮಾಡುವ ಪ್ರಸಂಗವನ್ನು, ವಿಧಿ-ಕ್ರಿಯೆಗಳನ್ನು ವೇದ-ಪುರಾಣ, ಉಪನಿಷತ್ತೋಕ್ತಿಗಳಿಂದ ಪ್ರಮಾಣೀಕರಿಸಿ

ತೋರಿಸಬಹುದು. ಶೂದ್ರನಿಗೆ ದೀಕ್ಷೆ ಕೊಡುವ ಅಂಥ ಗುರುವಿನ ಹಿರಿಮೆಯನ್ನು ಕೊಂಡಾಡಬಹುದು. ಆ ಸಂದರ್ಭದಲ್ಲಿ ಗುರುವು ಶಿಷ್ಯನ ಮನೆಯಲ್ಲಿ ಉಣ್ಣದೇ ಹೋದರೆ ಅದಕ್ಕೂ ಶಾಸ್ತ್ರ-ಪುರಾಣಗಳ ಸಮರ್ಥನೆ ಹಾಗೂ ಕಾರಣಗಳನ್ನು ಕೊಡಬಹುದು. ವರ್ಣವ್ಯವಸ್ಥೆ ಪ್ರಚಲಿತವಾಗಿದ್ದ ಕಾಲದಲ್ಲಿ ಈ ಬಗೆಯ ಸಾಹಿತ್ಯ ಸಹಜವಾಗಿಯೇ ಒಡಮೂಡಿರಬಹುದು. ವಚನ ಸಾಹಿತ್ಯ ಇಂಥದಕ್ಕೆ ಪ್ರತಿಭಟನೆ ಒಡ್ಡಿತು. ಅನುಕೂಲಸಿಂಧುತ್ವದ ಪರಂಪರೆಗೆ ವಾಸ್ತವಿಕ ಬದುಕಿನ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿದ ವಚನಕಾರರು ಅಲ್ಲಿದ್ದ ಶೋಷಣೆಯ ಮೂಲವನ್ನೇ ಅಲ್ಲಾಡಿಸಿದರು. ಇಂಥ ವಾಸ್ತವ ಸ್ಥಿತಿಯೊಂದರ ಹಿನ್ನೆಲೆಯಲ್ಲೇ ರೂಪುಗೊಂಡ ಅಂಬಿಗರ ಚೌಡಯ್ಯನ ವಚನವೊಂದು ಇಲ್ಲಿ ಗಮನಾರ್ಹ-

ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ
ತಿರುಗಿ ಆವನ ಮನೆಯಲ್ಲಿ ಉಣ್ಣಬಾರದೆಂದು
ಅಕ್ಕಿ ಕಣಕವ ತೆಗೆದುಕೊಂಡು ಹೋಗುವ ಗುರುವಿನ ಕಂಡರೆ-
ಕೆಡವಿ ಹಾಕಿ, ಮೂಗನೆ ಕೊಯ್ದು
ಇಟ್ಟಂಗಿ ಕಲ್ಲಲೆ ತಿಕ್ಕಿ-ಸಾಸಿವೆಯ
ಹಿಟ್ಟನೆ ತಳಿದು, ಮೇಲೆ ನಿಂಬಿಯ ಹುಳಿಯನೆ ಹಿಂಡಿ
ಪಡುವಣ ಗಾಳಿಗೆ ಹಿಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯ.

ಈ ವಚನದ ಒಳಹೊಕ್ಕು ನೋಡಿದರೆ ಕುಲೀನ, ಕುಲಹೀನರೆಂಬ ಭೇದ ಕಲ್ಪಿಸಿದವರೇ ಕುಲಹೀನರಾದವರಿಗೆ ಮಾಡುವ ಶೋಷಣೆಯ ಸ್ವರೂಪ ಯಾವ ಬಗೆಯದಾಗಿತ್ತೆಂಬುದು ಒಂದೆಡೆ ಸ್ಪಷ್ಟವಾದರೆ, ಇನ್ನೊಂದೆಡೆ ಊಸರವಳ್ಳಿತನದ ಜನವರ್ಗದ ಒಳಗನ್ನು ಬಗೆದು ತೋರಿಸಿರುವುದೂ ಅಷ್ಟೇ ಸ್ಪಷ್ಟವಾಗುತ್ತದೆ. ಹೀಗೆ ವಸ್ತುವಿನ ಆಯ್ಕೆಯಲ್ಲಿ ಪ್ರಮುಖ ಬದಲಾವಣೆಯಾದ ವಚನ ಸಾಹಿತ್ಯದಲ್ಲಿ, ವರ್ತಮಾನದ ಬದುಕಿಗೆ ಹೊಸ ಮುಖ ಮೂಡಿಸುವ ಪ್ರಾಮಾಣಿಕ ಹಾಗೂ ಕ್ರಾಂತಿಕಾರಿ ಪ್ರಯತ್ನವೂ ನಡೆಯಿತು. ಈ ಪ್ರಯತ್ನದಲ್ಲಿ ಶೋಷಿತ ಜನವರ್ಗಗಳತ್ತ ತೋರಿದ ಕಾಳಜಿ ಅಪೂರ್ವವಾದದ್ದು.

ವಚನಕಾರರ ಸಂಘಟನೆಯ ಮೂಲಕೇಂದ್ರ ಅನುಭವ ಮಂಟಪ. ಸಮಾನ ಮನೋಭಾವದ ಮತ್ತು ಪರಂಪರಾಗತ ಸ್ಥಗಿತ ವ್ಯವಸ್ಥೆಯನ್ನು ತಿರಸ್ಕರಿಸಿದ ಅಸಂಖ್ಯ ಜನರು ಒಂದೆಡೆ ಸೇರಿ ಪ್ರಗತಿಪರ ಸಮಾಜ ರಚನೆಗಾಗಿ ಹೊಸ ಸೂತ್ರಗಳನ್ನು ರೂಪಿಸಲು ಚರ್ಚೆ ನಡೆಸುತ್ತಿದ್ದ ತಾಣವೇ ಅನುಭವ ಮಂಟಪ. ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಕೀಳು ಕುಲದವರು, ಅಸ್ಪೃಶ್ಯರು, ಮಹಿಳೆಯರು, ವಿವಿಧ ಕಾಯಕದವರು ಹಾಗೂ ಜನ ಸಾಮಾನ್ಯರು ಯಾವುದೇ ತರ-ತಮ ಭಾವನೆಗಳಿಲ್ಲದೆ ಅಲ್ಲಿ ಸೇರಿ ತಾವು ಕಟ್ಟಬಯಸಿದ್ದ ಹೊಸ ಸಮಾಜದ ರೂಪು-ರೇಷೆಗಳ ಬಗ್ಗೆ ಆತ್ಮೋನ್ನತಿಯ ಬಗ್ಗೆ, ಸಮಾಜ ಜೀವನದ ಸುಧಾರಣೆಯ ಬಗ್ಗೆ-ಹೀಗೆ ಹಲವು ಹತ್ತು ಪ್ರಗತಿಪರ ವಿಚಾರಗಳ ಕುರಿತ ಚರ್ಚೆ-ಪ್ರತಿ

ಚರ್ಚೆ, ವಾದ-ವಿವಾದ, ಗೋಷ್ಠಿಗಳನ್ನು ಅಲ್ಲಿ ನಿತ್ಯ ನಡೆಸುತ್ತಿದ್ದರು. ನೀಲಮ್ಮನ ಒಂದು ವಚನದಲ್ಲಿ ಬರುವಂತೆ ಅನುಭವ ಮಂಟಪದಲ್ಲಿ 770 ಜನ ಭಾಗವಹಿಸುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ಚರ್ಚೆಯ ಫಲವಾಗಿ ಬಂದ ತೀರ್ಮಾನಗಳೇ ವಿವಿಧ ವ್ಯಕ್ತಿಗಳ ಅಭಿವ್ಯಕ್ತಿ ಸಾಮರ್ಥ್ಯಕ್ಕನುಗುಣವಾಗಿ ವಚನಗಳ ರೂಪ ತಾಳುತ್ತಿದ್ದವು. ಜನಸಾಮಾನ್ಯರನ್ನು ಒಳಗೊಂಡ ಒಂದು ಸಾಮುದಾಯಿಕ ಶಕ್ತಿ ಹೀಗೆ ಸಂಪೂರ್ಣ ಜಾಗೃತವಾಗಿ, ಹೊಸ ಕ್ರಾಂತಿಕಹಳೆಯನ್ನು ಮೊಳಗಿಸಿದ್ದು ಜಗತ್ತಿನ ಇತಿಹಾಸದಲ್ಲೇ ಮೊದಲನೆಯದೆಂದು ತೋರುತ್ತದೆ. ಅವಕಾಶ ದೊರೆತರೆ ಸಾಮಾನ್ಯ ಜನರೂ ಹೇಗೆ ಬೆಳಗಬಲ್ಲರೆಂಬುದಕ್ಕೆ ಇದೊಂದು ಸಮರ್ಥ ಉದಾಹರಣೆ. ಇಂಥ ಜನಪರರನ್ನೆಲ್ಲ ಸಂಘಟಿಸಿ, ಸಂಘರ್ಷಕ್ಕೆ ತೊಡಗಿಸಿದ ಬಸವಣ್ಣನೇ ಮೊದಲಾದ ಅಂದಿನ ಪ್ರಗತಿಶೀಲರು ಇಂದಿಗೂ ಮಾದರಿಯಾಗಿದ್ದಾರೆ.

ವಚನ ಸಾಹಿತ್ಯದ ಒಳಹೊಕ್ಕು, ಅಲ್ಲಿರುವ ಜನಪರ ನಿಲವುಗಳನ್ನು ತಿಳಿಯ ಹೊರಟರೆ ಆಯ್ಕೆಯದೇ ದೊಡ್ಡ ಸಮಸ್ಯೆಯಾಗುತ್ತದೆ. ವಚನಕಾರರು, ಜನಸಾಮಾನ್ಯರ ಎತ್ತರಕ್ಕೆ ನಿಲುಕಬಹುದಾದ ಹೊಸ ಧರ್ಮವೊಂದರ ಪರಿಕಲ್ಪನೆಯನ್ನು ರೂಪಿಸಿಕೊಂಡು, ಅದಕ್ಕೆ ಬೇಕಾದ ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರವೇ ಮೊದಲಾದ ತತ್ವ ವಿಚಾರಗಳನ್ನು ಹಾಗೂ ಆ ಮಾರ್ಗದಲ್ಲಿ ನಡೆಯಬೇಕಾದ ಬಗೆಯೆನ್ನು ಅಸಂಖ್ಯ ವಚನಗಳಲ್ಲಿ ವಿವರಿಸಿದ್ದಾರೆ. ಈ ವಚನಗಳು ಮೇಲ್ನೋಟಕ್ಕೆ ಧಾರ್ಮಿಕವೆಂಬಂತೆ ತೋರಿದರೂ, ವ್ಯಕ್ತಿ ತನ್ನ ವೈಯಕ್ತಿಕ ಸ್ತರದಲ್ಲಿ ಶುದ್ಧನಾದರೆ ಸಮಾಜ ಅದರಿಂದ ತಂತಾನೇ ಸುಧಾರಿಸುತ್ತದೆಯೆಂಬ ವಿಚಾರವೇ ಅವುಗಳಲ್ಲಿ ಎದ್ದು ಕಾಣುತ್ತದೆ. ಈ ಬಗೆಯ ವಚನಗಳನ್ನು ಬಿಟ್ಟರೆ ಉಳಿದೆಲ್ಲ ವಚನಗಳೂ ಜನಪರ ಕಾಳಜಿಯನ್ನೇ ಪ್ರಮುಖವಾಗಿಟ್ಟುಕೊಂಡಂಥವು.

ರಾಜಪ್ರಭುತ್ವವನ್ನು ತಿರಸ್ಕರಿಸಿ, ಜನಪ್ರಭುತ್ವವನ್ನು ತರಬಯಸಿದ ವಚನಕಾರರದು ಅಧಿಕಾರದ ಆಶೆಯಿಲ್ಲದ ಸಮಾಜವಾದಿ ನಿಲವು. ಈ ಕಾರಣಕ್ಕಾಗಿಯೇ ಅವರು ಜನವಿರೋಧಿಯಾಗಿದ್ದ ರಾಜನನ್ನು ನೇರವಾಗಿ ತರಾಟೆಗೆ ತೆಗೆದುಕೊಂಡರು. ಆಯ್ದಕ್ಕಿ ಲಕ್ಕಮ್ಮ "ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?" ಎಂದು ಅರಸನನ್ನು ತಿವಿದರೆ, ಮಡಿವಾಳ ಮಾಚಯ್ಯ "ಅರಸಿನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು" ಎಂದು ವ್ಯಂಗಿಸುತ್ತಾನೆ. ಬಸವಣ್ಣ ಒಂದೆಡೆ "ನೆಲನಾಳ್ದನ ಹೆಣನೆಂದಡೆ ಒಂದಡಕೆಗೆ ಕೊಂಬರಿಲ್ಲ" ಎಂದು ಗೇಲಿ ಮಾಡುತ್ತಾನೆ. ಮತ್ತೊಂದೆಡೆ ಆತನೇ "ಅರಸನ ಮನೆಯಲ್ಲಿ ಅರಸಿಯಾಗಿಪ್ಪುದಕಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ" ಎಂದೂ ಕೆಡೆನುಡಿಯುತ್ತಾನೆ. ಬಿಜ್ಜಳನ ಆಸ್ಥಾನದಲ್ಲಿ ಅರ್ಥಸಚಿವನಾಗಿದ್ದುಕೊಂಡೇ ಬಸವಣ್ಣ ಈ ಬಗೆಯ ವಿರೋಧ ವ್ಯಕ್ತಪಡಿಸಿದ್ದು ಹಾಗೂ ಸಾಮಾನ್ಯ ವಚನಕಾರರೂ ಯಾವ ಭಯವಿಲ್ಲದೇ ರಾಜವಿರೋಧಿ ಅಭಿಪ್ರಾಯಗಳನ್ನು ನುಡಿದದ್ದು ಗಮನಾರ್ಹ. ಈ ವಿರೋಧದ ಹಿಂದಿದ್ದ ವಚನಕಾರರ ಒಟ್ಟಾರೆ ತುಡಿತವೆಂದರೆ, ರಾಜಪ್ರಭುತ್ವದ ದುರಹಂಕಾರ ಮತ್ತು ದಬ್ಬಾಳಿಕೆ ಅಂತ್ಯಗೊಂಡು ಜನಸಾಮಾನ್ಯರು ನೆಮ್ಮದಿಯ ಉಸಿರಾಡಿ ಬದುಕಲಿ ಎಂಬುದು.

ಬಲ್ಲಿದ-ಬಡವ, ಉಚ್ಚಜಾತಿ-ನೀಚಜಾತಿ ಹಾಗೂ ಗಂಡು-ಹೆಣ್ಣುಗಳೆಂಬ ಭೇದತ್ರಯಗಳನ್ನು ನಿರ್ಮಿಸಿದ್ದ ಅಂದಿನ ವ್ಯವಸ್ಥೆಯಲ್ಲಿ ಎರಡನೆಯ ವರ್ಗದ ಜೀವಿಗಳಿಗೆ ಬಾಯಿ ಇರಲಿಲ್ಲ. ಶೋಷಣೆಗೊಳಗಾಗುವುದೇ ಅವರ ಧರ್ಮ ಎಂಬಷ್ಟು ಮಟ್ಟಿಗೆ ಅವರ ಜೀವನ ದಾರುಣವಾಗಿತ್ತು. ಶರಣರ ಆಗಮನದ ನಂತರ ಈ ಸ್ಥಿತಿ ಬದಲಾಗತೊಡಗಿತು. ಶೋಷಣೆಯೇ ಮೂಲವಾಗಿದ್ದ ಸ್ಥಗಿತ ವ್ಯವಸ್ಥೆಯನ್ನು ಅವರು ಪ್ರಶ್ನಿಸತೊಡಗಿದರು -

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?
ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ ?
ಕಡೆಯಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ ?
ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥ ?

ಎಂಬ ಮೂಲಭೂತ ಪ್ರಶ್ನೆಗಳನ್ನು ಹಾಕುವ ದೇವರ ದಾಸಿಮಯ್ಯ, ಈ ವಚನದಲ್ಲಿ ಹೆಣ್ಣು, ಬಡವ ಹಾಗೂ ಅಂತ್ಯಜರು ಕಡಮೆಯವರೆಂದು ಕರೆಯುವವರನ್ನೇ ಜಡರೆಂದು ಕರೆಯುವ ಪರಿ ಧೈರ್ಯದ್ದಾಗಿದೆ. ಸ್ವಾರ್ಥಿ ಜನವರ್ಗ ನಿರ್ಮಿಸಿದ ಸಾಮಾಜಿಕ ಕಟ್ಟಳೆಗಳು ಅನುಕೂಲ ಸಿಂಧುವಾದುವೇ ಹೊರತು, ಅಲ್ಲಿ ವಾಸ್ತವತೆ, ತರ್ಕಸಹಜತೆ ಇರಲಿಲ್ಲವೆಂಬುದು ಸತ್ಯ. ಆದರೂ ತಾವು ಹೇಳಿದ್ದೆಲ್ಲ ನಡೆಯುತ್ತದೆ, ನಡೆಯಲೇಬೇಕೆಂದು ದರ್ಬಾರು ನಡೆಸುವವರ ಪ್ರಾಬಲ್ಯದಿಂದಾಗಿ ಸಮಾಜ ಪ್ರಗತಿವಿರೋಧಿ ನಿಲುವುಗಳನ್ನೇ ಅನಿವಾರ್ಯವಾಗಿ ಅನುಸರಿಸಬೇಕಾಗಿತ್ತು. ವಚನಕಾರರು ಇಂಥದಕ್ಕೆ ತಡೆ ಹಾಕಿದರು. ವಸ್ತುಸ್ಥಿತಿಯನ್ನು ತಾರ್ಕಿಕವಾಗಿ ಸಾಧಿಸಿ ತೋರಿಸಬಲ್ಲ ಸಮರ್ಥ ಪ್ರಶ್ನೆಗಳನ್ನು ಹಾಕುವುದರ ಮೂಲಕ ಅವರು ಸಮಾಜಕ್ಕೆ ಬಿದ್ದಿದ್ದ ಕೋಳಗಳನ್ನು ಕಡಿದರು. ಸಾಮಾನ್ಯ ಜನತೆ ಇದರಿಂದ ಮುಕ್ತವಾಗಿ ನಡೆದಾಡುವ, ಮಾತಾಡುವ ಹಾಗೂ ತಪ್ಪಿದ್ದರೆ ಪ್ರತಿಭಟಿಸುವ ಧೈರ್ಯಪಡೆದರು. ಹೀಗೆ ಜನಪರರು ಕೂಡ ಹೊಸ ಪ್ರಗತಿವಾಹಿನಿಯಲ್ಲಿ ಸೇರಿಕೊಂಡು ಇಡೀ ಅವ್ಯವಸ್ಥೆಯನ್ನು ಚಿಕಿತ್ಸೆಗೊಳಪಡಿಸುವ ಪ್ರಯತ್ನಕ್ಕೆ ತೊಡಗಿದರು. ಅವರೂ ಮಾತಾಡಿದರು, ಮಾತಾಡಿದ್ದನ್ನು ನಡೆದರು, ನಡೆದದ್ದನ್ನು ನುಡಿದರು. ವಚನ ಸಾಹಿತ್ಯದ ಸುಮಾರು ಅರ್ಧಭಾಗ ಈ ಬಗೆಯ ಸಾಮಾನ್ಯ ಜನವರ್ಗದ ಅಭಿವ್ಯಕ್ತಿಯಾಗಿರುವುದೇ ಇದಕ್ಕೆ ಸಾಕ್ಷಿ.

ಅರ್ಥದ ಸಮಾಜೀಕರಣ (Socialisation of economy) ದಿಂದ ಬಡವ-ಬಲ್ಲಿದರೆಂಬ ವರ್ಗಭೇದವನ್ನು ತೊಡೆದು ಹಾಕಲು ಸಾಧ್ಯವೆಂಬುದನ್ನರಿತ ಶರಣರು ಕಾಯಕ ಮತ್ತು ದಾಸೋಹ ಎಂಬೆರಡು ಅಪೂರ್ವ ಮತ್ತು ವಿಶ್ವಮಾನ್ಯ ತತ್ವಗಳನ್ನು ಜಾರಿಗೆ ತಂದರು. ದುಡಿದೇ ತಿನ್ನಬೇಕು, ದುಡಿದದ್ದರಲ್ಲಿನ ಹೆಚ್ಚುವರಿ ಆದಾಯವನ್ನು ಸಮಾಜಕ್ಕೆ ವಿನಿಯೋಗಿಸಬೇಕು, ಅದನ್ನು ನಾಳಿಗೆಂದು ಸಂಗ್ರಹಿಸಿಡಕೂಡದು ಎಂಬ ಪ್ರಾಯೋಗಿಕ ಸಿದ್ಧಾಂತಗಳನ್ನು ತಮ್ಮ ಬದುಕಿನಲ್ಲಿ ಆಚರಿಸಿ ತೋರಿಸಿದ ಅವರು, ಅದಕ್ಕೆ ವಿರುದ್ಧವಾಗಿ ಬದುಕುವವರನ್ನು "ಸಿರಿಗರ ಹೊಡೆದವರ ನುಡಿಸಲು ಬಾರದು", "ಪಾಪಿಯ ಧನ ಪ್ರಾಯಶ್ಚಿತ್ತಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ" ಎಂದು ವ್ಯಂಗಿಸಿದರು. ವಚನಕಾರರ ಪ್ರಕಾರ

ಯಾವನೇ ಇರಲಿ ಆತ ಕಾಯಕ ಮಾಡಲೇಬೇಕಿತ್ತು. ಹೀಗೆ ಮಾಡುವ ಕಾಯಕ "ಮಾ ಫಲೇಷು ಕದಾಚನ" ಎಂಬ ಕರ್ಮಸಿದ್ಧಾಂತದ್ದಾಗಿರದೇ, ದುಡಿತಕ್ಕೆ ತಕ್ಕ ಫಲವನ್ನು ಪಡೆಯುವುದಾಗಿತ್ತು. ಅಲ್ಲಿಯೂ ಎಂಥ ಪ್ರಾಮಾಣಿಕತೆ! ಆಯ್ದಕ್ಕಿ ಮಾರಯ್ಯನ ವಚನವೊಂದನ್ನು ಗಮನಿಸಬೇಕು-

ಹಾಗದ ಕಾಯಕವ ಮಾಡಿಕೊಂಡು
ಹಣವಡ್ಡ ತಾ ಎಂಬಲ್ಲಿ ಸತ್ಯಕಾಯಕವುಂಟೆ ?
ಭಕ್ತರಲ್ಲಿ ಕಾಯಕಕ್ಕೆ ಕಡಮೆಯಾಗಿ ತಾ ಎಂಬುದು
ಅಮರೇಶ್ವರ ಲಿಂಗಕ್ಕೆ ಚಿತ್ತಶುದ್ಧ ಕಾಯಕ.

ಕೆಲಸ ಕಡಿಮೆ ಮಾಡಿ ಹೆಚ್ಚು ಆದಾಯಕ್ಕೆ ಕೈಚಾಚುವುದಲ್ಲ, ಕಾಯಕಕ್ಕೆ ಕಡಿಮೆಯಾಗಿಯೇ ಆದಾಯ ಪಡೆಯುವುದು. ಅಂದರೆ ಮೋಸ - ವಂಚನೆಗಳಿಗೆ ಇಲ್ಲಿ ಅವಕಾಶವಿಲ್ಲ. ಆಧುನಿಕ ಯುಗದಲ್ಲಿ ಕಾರ್ಲಮಾರ್ಕ್ಸ್ ಪ್ರತಿಪಾದಿಸಿದ "ಸಾಮರ್ಥ್ಯಕ್ಕೆ ತಕ್ಕ ದುಡಿತ, ದುಡಿತಕ್ಕೆ ತಕ್ಕ ಪ್ರತಿಫಲ" ಎಂಬ ಮಹತ್ವದ ಆರ್ಥಿಕ ತತ್ವವನ್ನು ವಚನಕಾರರು 12ನೆಯ ಶತಮಾನದಷ್ಟು ಹಿಂದೆಯೇ ಜಾರಿಯಲ್ಲಿ ತಂದದ್ದು ಇದರಿಂದ ಸ್ಪಷ್ಟವಾಗುತ್ತದೆ. ಆಶೆಯ ದಾಸರಾಗಿ ದುಡಿತಕ್ಕೆ ಮಿಕ್ಕಿ ಆದಾಯ ತಂದರೆ ಅಥವಾ ಆ ಬಗೆಯ ಜೀವನ ನಿಯಮವನ್ನು ಮುರಿದರೆ ಶರಣರು ಹೇಗೆ ಕ್ರಿಯಾತ್ಮಕವಾಗಿ ಪ್ರತಿಭಟಿಸುತ್ತಿದ್ದರೆಂಬುದಕ್ಕೆ ಆಯ್ದಕ್ಕಿ ಮಾರಯ್ಯ ಹಾಗೂ ಲಕ್ಕಮ್ಮನವರ ಬದುಕಿನಲ್ಲಿ ನಡೆದ ಘಟನೆಯೇ ಸಾಕ್ಷಿಯಾಗಿದೆ.

ಹೀಗೆ ದುಡಿತಕ್ಕೆ ಸಮಾನವಾದ ಅಥವಾ ದುಡಿತಕ್ಕೆ ಕಡಮೆಯಾದ ಆದಾಯವನ್ನು ತಂದು ಅದನ್ನು ತಾನೊಬ್ಬನೇ ಕಬಳಿಸುವ ಹಾಗಿಲ್ಲ, ಅಥವಾ ಅದನ್ನು ಸಂಗ್ರಹಿಸಿಟ್ಟು ಕೊಳ್ಳುವಂತಿರಲಿಲ್ಲ. ಅಂದಂದಿನ ಆದಾಯ ಅಂದು ವಿನಿಯೋಗವಾಗಲೇಬೇಕು. "ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ! ನಿಮ್ಮ ಪುರಾತನರಾಣೆ! ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲ ಸಂಗಮದೇವ"- ಇದು ಶರಣರು ಆಚರಿಸಿದ ಅರ್ಥನೀತಿ. ದುಡಿಯದೇ, ಮೋಸಗಾರಿಕೆಯಿಂದ ಹರಾಮಿ ಆದಾಯ ಪಡೆಯುತ್ತಿದ್ದ ಜನವರ್ಗಕ್ಕೆ ಶರಣರು ಈ ಮೂಲಕ ದೊಡ್ಡ ಸವಾಲನ್ನೆ ಹಾಕಿದರು. ಅರ್ಥದ ಹಿನ್ನೆಲೆಯಲ್ಲಿ ಶೋಷಣೆಗೀಡಾಗಿದ್ದ ಜನಸಾಮಾನ್ಯರ ಬದುಕಿಗೆ "ಅರ್ಥದ ಸಮಾಜೀಕರಣ"ದ ಈ ಕ್ರಿಯಾತತ್ವ ಹೊಸ ಆಶಯ ಮೂಡಿಸಿತು. ಅವರ ವೃತ್ತಿಘನತೆ- ಗೌರವಗಳು ಹೆಚ್ಚಿದವಲ್ಲದೇ ಕಾಯಕಗಳಲ್ಲಿನ ತರ-ತಮ ಭಾವನೆಗಳು ದೂರವಾಗತೊಡಗಿದವು. ಇದರಿಂದ ಜನಪರರ ಜೀವನಮಟ್ಟ ಸುಧಾರಿಸಿತು. ಸಮಾಜದಲ್ಲಿ ಅವರಿಗೆ ಗೌರವದ ಸ್ಥಾನ ದೊರಕಿತು. ಶರಣರ ಈ ಆರ್ಥಿಕ ಸಿದ್ಧಾಂತ ಇಂದಿಗೂ ಪ್ರಸ್ತುತವಾಗಬಲ್ಲದೆಂಬುದನ್ನು ಪ್ರತ್ಯೇಕ ಹೇಳುವ ಅಗತ್ಯವಿಲ್ಲ.

ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಗಳು ನಮ್ಮ ಸಮಾಜದ ಪುರಾತನ ಪಿಡುಗುಗಳು. ಚಾತುರ್ವರ್ಣದ ವಿಭಾಗೀಕರಣ ಹುಟ್ಟುಹಾಕಿದ ಜಾತಿಗಳು ಇಲ್ಲಿ ಅಸ್ಪೃಶ್ಯತೆಯನ್ನು ಮೇಲು-

ಕೀಳನ್ನೂ ನಿರ್ಮಿಸಿದ್ದು, ಈ ಕಾರಣಕ್ಕಾಗಿ ಕೀಳುಕುಲದವರೆಂದೂ, ಅಸ್ಪೃಶ್ಯರೆಂದೂ ದೂರವಿಡಲ್ಪಟ್ಟ ಸಮಾಜದ ಒಂದು ಜನವರ್ಗ ಅನುಭವಿಸುತ್ತ ಬಂದ ಯಾತನೆ ಸಣ್ಣದಲ್ಲ. 12ನೆಯ ಶತಮಾನದಲ್ಲಿ ನಡೆದ ಶರಣರ ಹೋರಾಟ ಪ್ರಮುಖವಾಗಿ ಇಂಥ ಅವ್ಯವಸ್ಥೆಯ ವಿರುದ್ಧವೇ ಸಂಘಟಿತವಾದದ್ದು. ಶೋಷಕ ವರ್ಗದ ಕೃತ್ಯಗಳಿಗೆ ಬೇಸತ್ತ ಕೆಲವು ವಚನಕಾರರು ಅಲ್ಲಿಂದ ಹೊರಬಂದು, ಅವುಗಳ ಪ್ರಗತಿವಿರೋಧಿ ನಿಲವುಗಳನ್ನು ಪ್ರತಿಭಟಿಸಿದ್ದಲ್ಲದೇ, ಜಾತಿರಹಿತ, ಅಸ್ಪೃಶ್ಯತೆ ರಹಿತ ಮಾನವತಾವಾದಿ ಸಮಾಜ ರಚನೆಗೆ ಕರೆಕೊಟ್ಟರು. ಅದಕ್ಕಾಗಿ ತಾವು ಬದ್ಧರಾದರು. ಕೀಳುಜಾತಿಯವರೆಂದು, ಅಸ್ಪೃಶ್ಯರೆಂದು ಕಡೆಗಣಿಸಲ್ಪಟ್ಟಿದ್ದ ಜನಪರರನ್ನು ತಮ್ಮ ಪ್ರಗತಿಪರ ಸಂಘರ್ಷದಲ್ಲಿ ಸೇರಿಸಿಕೊಂಡ ವಚನಕಾರರು ಅವರಲ್ಲಿದ್ದ ಕೀಳರಿಮೆಯನ್ನು ತೊಡೆದು ಹಾಕಿದ್ದಲ್ಲದೇ, ಪ್ರಗತಿವಿರೋಧಿಶಕ್ತಿಗಳೆದುರು ಅವರೂ ಸಿಡಿದೇಳುವಂತೆ ಮಾಡಿದರು. ಮನುಷ್ಯ ಮನುಷ್ಯರ ನಡುವೆ ಜಾತಿಯ ಅಡ್ಡಗೋಡೆ ಇರಬಾರದೆಂಬ ಸಿದ್ಧಾಂತದ ವಚನಕಾರರು, ಜಾತಿವ್ಯವಸ್ಥೆಯ ಅತಾರ್ಕಿಕತೆಯನ್ನು ತರ್ಕಬದ್ಧವಾಗಿ ಅಲ್ಲಗಳೆದರು. "ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ ಎಲ್ಲರಿಗೂ ಜನನವೊಂದೆ" ಎಂದು ಒಬ್ಬ ವಚನಕಾರ ಹೇಳಿದರೆ, ಇನ್ನೊಬ್ಬ ವಚನಕಾರ "ನರಕುಲ ಹಲವಾದಲ್ಲಿ ಯೋನಿಯ ಉತ್ಪತ್ಯ ಒಂದೇ ಭೇದ" ಎನ್ನುತ್ತಾನೆ. ಕಾಸಿ ಕಮ್ಮಾರನಾಗುವ, ಬೀಸಿ ಮಡಿವಾಳನಾಗುವ, ವೇದವನೋದಿ ಹಾರುವನಾಗುವ ಕಾಯಕಗಳೇ ಜಾತಿಗಳಾಗಲಾರವೆಂಬುದನ್ನು ಸ್ಪಷ್ಟವಾಗಿ ನುಡಿಯುವ ಬಸವಣ್ಣ, ಆತ್ಮ-ಜೀವ ಸಮಾಯುಕ್ತವಾಗಿರುವುದರಿಂದ ವರ್ಣಗಳಿಂದ ಯಾವ ಪ್ರಯೋಜನವೂ ಇಲ್ಲವೆಂದು ಸಾರುತ್ತಾನೆ. ಜೀವಿಗಳಿಗೆಲ್ಲ ನೆಲ-ಜಲ ಒಂದೇ ಆಗಿರುವ ಸತ್ಯವನ್ನು ಪ್ರತಿಪಾದಿಸಿದ ವಚನಕಾರರು, ಅಸ್ಪೃಶ್ಯರೆಂದೂ, ಕೀಳುಕುಲದವರೆಂದೂ ಕಡೆಗಣಿಸಲ್ಪಟ್ಟಿದ್ದ ಜನಸಮುದಾಯವನ್ನು ಅಪ್ಪಿಕೊಂಡರು. ಬಸವಣ್ಣ, ತಾನು ಮಾದಾರ ಚೆನ್ನಯ್ಯನ ದಾಸಿಯ ಮಗನ ಹಾಗೂ ಡೋಹರ ಕಕ್ಕಯ್ಯನ ದಾಸಿಯ ಮಗಳ ಮಗ ಎಂದು ಕರೆದುಕೊಂಡ. ಕಂಬಳಿಯ ನಾಗಿದೇವನೆಂಬ ಅಸ್ಪೃಶ್ಯನ ಮನೆಯಲ್ಲಿ ಉಂಡ. ಅಷ್ಟೇ ಏಕೆ ? ಬ್ರಾಹ್ಮಣ ಮಧುವರಸನ ಹಾಗೂ ಅಸ್ಪೃಶ್ಯ ಹರಳಯ್ಯನ ಮಕ್ಕಳಲ್ಲಿ ಅಂತರ್ಜಾತಿಯ ಮದುವೆ ಮಾಡಿದ. ವಚನಕಾರರು ಜಾತಿ ಸಮತೆಯ ಹಾಗೂ ಅಸ್ಪೃಶ್ಯತೆ ನಿವಾರಣೆಯ ಕ್ರಿಯಾತ್ಮಕ ಕ್ರಾಂತಿಯನ್ನೇ ಮಾಡಿದರು. ಕುಲೀನರೆಂದುಕೊಂಡವರಿಗೆ ಇದೇ ಅಪಥ್ಯವಾಯ್ತು. ಜಾತಿರಹಿತ ಸಮಾಜ ರಚನೆಗಾಗಿ ಶರಣರು ಇಟ್ಟ ಗಟ್ಟಿ ಹಾಗೂ ಕ್ರಾಂತಿಕಾರಿ ಹೆಜ್ಜೆಗಳೇ ಮತೀಯ ಕರ್ಮಠರಲ್ಲಿ ಕಿಚ್ಚು ಹಚ್ಚಿದವು. ಆ ಕಿಚ್ಚೇ ಹುಚ್ಚೆದ್ದು ಉರಿದು ಕಲ್ಯಾಣದ ಕ್ರಾಂತಿಯನ್ನು ಅರ್ಧಕ್ಕೇ ನಿಲ್ಲಿಸಿತು. ಕಾಲಕಾಲಾಂತರದಿಂದ ನಿರಂತರ ಶೋಷಣೆಗೀಡಾಗುತ್ತ ಬಂದಿದ್ದ ಜನ ವರ್ಗದ ಉದ್ಧಾರಕ್ಕೆ ವಚನಕಾರರು ಪಟ್ಟ ಶ್ರಮ, ಮಾಡಿದ ಕ್ರಿಯಾತ್ಮಕ ಹೋರಾಟಗಳು ನಿಜಕ್ಕೂ ಅಪೂರ್ವವಾದವುಗಳು. ಇದರ ಫಲವಾಗಿಯೇ, ಅಸ್ಪೃಶ್ಯರೆಂದೂ, ಕೀಳುಕುಲದವರೆಂದೂ ದೂರವಿಡಲ್ಪಟ್ಟಿದ್ದ ಜನ ಶರಣರ ಕ್ರಾಂತಿಯಲ್ಲಿ ನೇರವಾಗಿ

ಪಾಲ್ಗೊಳ್ಳುವಂತಾಯ್ತು. ಪರಿಣಾಮವಾಗಿ ಅವರೂ ಮುಕ್ತವಾಗಿ ನಡೆದಾಡಿದರು, ಮಾತನಾಡಿದರು, ವಚನಗಳನ್ನು ರಚಿಸಿದರು. ಜಾತಿಯಾಚರಣೆ ಮತ್ತು ಅಸ್ಪೃಶ್ಯತೆಯಂಥ ದುಷ್ಟ ಕೃತ್ಯಗಳನ್ನು ಹೀಗಳೆವ ಅಸಂಖ್ಯ ವಚನಗಳು ರಚಿತವಾದದ್ದು ಈ ಬಗೆಯ ಸಂಘರ್ಷದ ಫಲ. ಗಮನಿಸಬೇಕಾದ ವಿಷಯವೆಂದರೆ ಆ ಬಗೆಯ ಶೋಷಣೆಯಿಂದ ಜರ್ಜರಿತರಾದವರು ಹಾಗೂ ಮಹಿಳೆಯರೂ ಇಂಥ ಕ್ರಾಂತಿಕಾರಿ ವಚನಗಳನ್ನು ರಚಿಸಿದ್ದು. ಜನಪರರು ಜನಪರರ ಹೋರಾಟಕ್ಕೆ ತೊಡಗುವುದು ಒಂದು ಅಪೂರ್ವ ಕ್ರಿಯೆಯಾದರೆ, ವಚನಕಾರರು ಆ ಬಗೆಯ ಅಪೂರ್ವ ಕ್ರಿಯೆಗೆ ಅವಕಾಶ ಕಲ್ಪಿಸಿದ ಮಹತ್ವದ ಪ್ರಗತಿಶೀಲರಾಗುತ್ತಾರೆ.

ಈ ನೆಲದಲ್ಲಿ ಪುರಾತನ ಕಾಲದಿಂದಲೂ ಗಂಡಿನ ಬಗೆ ಬಗೆಯ ಶೋಷಣೆಗೆ ಒಳಗಾಗುತ್ತ ಬಂದ ದಾರುಣ ಜೀವಿ ಮಹಿಳೆ. ಧಾರ್ಮಿಕವಾಗಿ ಅಸ್ಪೃಶ್ಯಳೂ, ಸಾಮಾಜಿಕವಾಗಿ ಕೇವಲ ಉಪಭೋಗದ ವಸ್ತುವಿನಂತೆಯೂ ಶೋಷಿತಳಾಗುತ್ತ ಬಂದ ಮಹಿಳೆ ಎಲ್ಲ ಜಾತೀಯರಲ್ಲೂ ಹೀನಾಯಮಾನ ಸ್ಥಿತಿಯನ್ನು ಅನುಭವಿಸಬೇಕಾಗಿತ್ತು. ವಚನಕಾರರು ಈ ಅಮಾನವೀಯತೆಯನ್ನು ಖಂಡಿಸಿ, ಅಲ್ಲಗಳೆದದ್ದಲ್ಲದೇ, ತಮ್ಮ ಪ್ರಗತಿ-ವಾಹಿನಿಯಲ್ಲಿ ಅವರನ್ನೂ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ಮಹಿಳೆ ಹೇಗೆ ಪುರುಷನ ಸಮಾನಳಾಗಬಲ್ಲಳೆಂಬುದನ್ನು ತಾರ್ಕಿಕವಾದ ಸತ್ಯಗಳ ಹಿನ್ನೆಲೆಯಲ್ಲಿ ಪ್ರತಿಪಾದಿಸಿದ್ದಲ್ಲದೆ, ಆವಳನ್ನು ಕೀಳಾಗಿ ಕಾಣುವವರಿಗೆ ಅವೇ ತರ್ಕಗಳ ಹಿನ್ನೆಲೆಯಲ್ಲಿ ಸವಾಲೆಸೆದರು. ‘‘ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ’’ ಎಂದು ದೇವರ ದಾಸಿಮಯ್ಯ ಹೇಳಿದರೆ ‘‘ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ’’ ಎಂದು ಸಿದ್ಧರಾಮ ಅವಳನ್ನು ಇನ್ನೂ ಉನ್ನತ ಸ್ಥಾನದಲ್ಲಿ ಕಾಣುತ್ತಾನೆ. ಮಹಿಳೆಯರ ಮೇಲೆ ನಡೆಯುತ್ತಿದ್ದ ಅತ್ಯಾಚಾರಗಳನ್ನು ಖಂಡಿಸಿದ ವಚನಕಾರರು, ‘‘ನೋಡಲಾಗದು ನುಡಿಸಲಾಗದು ಪರಸ್ತ್ರೀಯ, ಬೇಡ ಕಾಣಿರೋ’’ ಎಂದೂ, ‘‘ಗಂಡನುಳ್ಳಮ್ಮನ ಗೌರಿಯೆಂದು’’ ಕಾಣಬೇಕೆಂದೂ ಹೇಳುತ್ತಾರೆ. ಆ ರೀತಿ ಅವರೂ ನಡೆದಿದ್ದಾರೆ. ಹೆಣ್ಣಿಗೆ ನೈಸರ್ಗಿಕವಾಗಿ ಸಹಜವಾಗಿರುವ ಮುಟ್ಟಾಗುವಿಕೆಯನ್ನೇ ಹೊಲೆಯೆಂದು ಭಾವಿಸಿ ಅವಳನ್ನು ಅಸ್ಪೃಶ್ಯಳನ್ನಾಗಿಟ್ಟಿದ್ದ ಕ್ರೂರ ವ್ಯವಸ್ಥೆಯನ್ನು ವಿರೋಧಿಸಿದ ವಚನಕಾರರು ‘‘ಸತಿ ಭಕ್ತೆಯಾದೊಡೆ ಹೊಲೆಗಂಜಲಾಗದು’’ ಎಂದು ಅವರಿಗೆ ಜಾಗೃತಿಯ ಸೂಚನೆ ಕೊಡುತ್ತಾರೆ.

ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಮಹಿಳೆಯರು ಮುಕ್ತವಾಗಿ ಭಾಗವಹಿಸಲು ಅವಕಾಶ ಕಲ್ಪಿಸಿದರು ವಚನಕಾರರು. ಈ ಕಾರಣಕ್ಕಾಗಿಯೇ ಅದ್ಭುತವೆನ್ನುವಷ್ಟು ಸಂಖ್ಯೆಯ ಮಹಿಳೆಯರು ಶರಣರ ಕ್ರಾಂತಿಯಲ್ಲಿ ಭಾಗವಹಿಸಿದ್ದಲ್ಲದೇ ಮೂವತ್ತಕ್ಕೂ ಹೆಚ್ಚು ಮಹಿಳೆಯರು ಯಾವ ವಚನಕಾರರಿಗೂ ಕಡಮೆಯಿಲ್ಲದ ಹಾಗೆ ವಚನಗಳನ್ನು ರಚಿಸಿದ್ದು ಗಮನಾರ್ಹವಾಗುತ್ತದೆ. ಇಂಥವರಲ್ಲಿ ಕೆಳವರ್ಗದಿಂದ ಬಂದ

ವಚನಕಾರ್ತಿಯರ ಸಂಖ್ಯೆಯೇ ಹೆಚ್ಚಾಗಿರುವುದು ಇನ್ನೂ ಗಮನಾರ್ಹ. ಎಲ್ಲ ಬಗೆಯಲ್ಲೂ ಇದೊಂದು ಐತಿಹಾಸಿಕ ದಾಖಲೆ. ಗೊಗ್ಗವ್ವೆ ಒಂದು ಮಹತ್ವದ ಪ್ರಶ್ನೆ ಕೇಳುತ್ತಾಳೆ :

ಗಂಡು ಮೋಹಿಸಿ ಹೆಣ್ಣು ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು

ಎಂದು. ಅನುಕೂಲಸಿಂಧು ಪುರುಷ ಪ್ರಧಾನ ಸಮಾಜ ಗೊಗ್ಗವ್ವೆಯ ಈ ಸವಾಲಿಗೆ ಇಂದೂ ಉತ್ತರ ಕೊಡಲಾಗದೇನೊ! ಇಷ್ಟರ ಮಟ್ಟಿಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಮಹಿಳೆ ಸಿದ್ಧಳಾದ ರೀತಿ ನಿಜಕ್ಕೂ ಆಶ್ಚರ್ಯಕರವಾಗಿ ಕಾಣುತ್ತದೆ. ಇಷ್ಟೊಂದು ಮಹಿಳೆಯರು ಅದು ಹೇಗೆ (ಪುರುಷರೂ ಸಹ) ಅಕ್ಷರಸ್ಥರಾದರು ? ಅವರಿಗೆ ಶಿಕ್ಷಣ ಹೇಗೆ ದೊರೆಯಿತು ? ಯಾವ ಮಾಧ್ಯಮದ ಮೂಲಕ ? ಎಂಬೆಲ್ಲ ಪ್ರಶ್ನೆಗಳು ಕುತೂಹಲ ಕೆರಳಿಸುತ್ತವೆ. ನಮ್ಮ ಸಂಶೋಧಕರು ಈ ಪ್ರಶ್ನೆಗಳಿಗೆ ಉತ್ತರ ಹುಡುಕಿದರೆ ಹೊಸ ವಿಷಯವೊಂದು ಬೆಳಕಿಗೆ ಬರಬಹುದಲ್ಲದೆ, ಸಾಕ್ಷರತೆಗಾಗಿ ಸರಕಾರಗಳು ಮಾಡುತ್ತಿರುವ ಪ್ರಯತ್ನಕ್ಕೆ ಹೊಸ ಮಾರ್ಗವೂ ಕಂಡೀತು. ಹೀಗೆ ಮಹಿಳೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಹಾಗೂ ಇನ್ನಿತರ ಕ್ಷೇತ್ರಗಳಲ್ಲೂ ಪುರುಷನಿಗೂ ಸರಿಸಮನಾಗಿ ನಿಲ್ಲುವಂತೆ ಮಾಡಿದ್ದು ಶರಣರ ಅನನ್ಯ ಹೋರಾಟದ ಫಲ ಎನ್ನಬಹುದು.

ಧರ್ಮ-ದೇವರುಗಳ ವಾರಸುದಾರಿಕೆ ಒಂದೇ ವರ್ಗದ ಜನರಲ್ಲಿ ಕೇಂದ್ರೀಕೃತವಾಗಿದ್ದ ಕಾಲವದು. ಅಷ್ಟೇ ಅಲ್ಲ, ಧರ್ಮ-ದೇವರುಗಳ ಹೆಸರಲ್ಲಿ ಯೋಜಿತ ಸುಲಿಗೆ ಕೂಡ ನಡೆಯುತ್ತಿದ್ದ ಕಾಲವದು. ಕ್ರೌರ್ಯದ ಹಾಗೂ ಅಮಾನವೀಯವಾದ ಪಶುಬಲಿಯೇ ಮೊದಲಾದ ತಾಮಸ ಪ್ರವೃತ್ತಿಗಳೇ ಪೂಜೆಯ ವಿಧಾನವಾಗಿದ್ದ ಆ ಕಾಲದಲ್ಲಿ ಭಯ ಮೂಲವಾದ ಭಕ್ತಿ ಇಡೀ ಸಮುದಾಯದ ಜೀವನವನ್ನೇ ಆತಂಕದ ನೆರಳಲ್ಲಿಟ್ಟಿತ್ತು. ಅಂಧ ಶ್ರದ್ಧೆ, ಅಸಂಖ್ಯ ದೈವೋಪಾಸನೆಗಳ ತಾಂಡವ ಆಗ ನಡೆದಿತ್ತು. ಈ ಎಲ್ಲ ಪ್ರಗತಿವಿರೋಧಿ ಕ್ರಿಯೆಗಳೇ ಸಮಾಜದ ಧಾರ್ಮಿಕತೆಯ ಜುಟ್ಟನ್ನು ಹಿಡಿದದ್ದು ಶರಣರ ಕಣ್ಣಿಗೆ ಬಿತ್ತು. ಅವುಗಳ ಬೇರನ್ನೇ ಅವರು ಶೋಧಿಸಿದರು. "ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೆ ಹೋತೆ ಅಳು ಕಂಡಾ! ವೇದವನೋದಿದವರ ಮುಂದೆ ಅಳು ಕಂಡಾ!" ಎಂದು ಪರೋಕ್ಷವಾಗಿ ಶರಣರು ಯಜ್ಞ-ಯಾಗಗಳನ್ನು ಪ್ರಶ್ನಿಸಿದರು. ಗುಡಿ-ಗುಂಡಾರ ಕಟ್ಟಿಸಿ, ಕಲ್ಲ ಮೂರ್ತಿ ನಿಲ್ಲಿಸಿ, ಅದನ್ನು ಎಲ್ಲ ರೀತಿಯ ಸುಲಿಗೆಗೆ ಉಪಯೋಗಿಸುತ್ತಿದ್ದುದರ ವಿರುದ್ಧ ಪ್ರತಿಭಟಿಸಿದ ಅವರು - "ಕಲ್ಲ ಮನೆಯ ಮಾಡಿ, ಕಲ್ಲದೇವರ ಮಾಡಿ, ಆ ಕಲ್ಲು ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದರೋ ? ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರಾ!" ಎಂದು ಎಚ್ಚರಿಸಿದರು. "ಕಾಲೇ ಕಂಭ, ದೇಹವೇ ದೇಗುಲ, ಸಿರ ಹೊನ್ನ ಕಳಸವಯ್ಯಾ. ಕೂಡಲ ಸಂಗಮದೇವ ಕೇಳಯ್ಯಾ. ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ"- ಎಂದು

ಅರಿವು ನೀಡಿದರು, "ದೇಹದೊಳಗೆ ದೇವಾಲಯವಿರಲು ಮತ್ತೆ ಬೇರೆ ದೇವಾಲಯವೇಕೆ ? ಎಂದೂ ಪ್ರಶ್ನಿಸಿದರು.

ಈ ಎಲ್ಲ ವಚನಗಳ ಹಿಂದೆ ಧರ್ಮ, ದೇವರು, ದೇವಸ್ಥಾನಗಳನ್ನು ವೈಯಕ್ತಿಕ ಹಂತದಲ್ಲಿ ಕಂಡುಕೊಳ್ಳುವ ಅದ್ಭುತ ವೈಚಾರಿಕ ಕ್ರಿಯೆಯೊಂದರ ಸೂಚನೆಯಿರುವುದು ಗಮನಾರ್ಹ. ಈ ಅದ್ಭುತ ವೈಚಾರಿಕ ಕ್ರಿಯೆ ಅರಿವು. ಆ ಅರಿವಿನ ಮೂಲಕ ಸ್ವಶಕ್ತಿಯನ್ನು ತನ್ನಾತ್ಮದಲ್ಲಿ ಗುರುತಿಸಿಕೊಳ್ಳುವುದೇ ನಿಜವಾದ ಸಾಧನೆ. ಸ್ವಶಕ್ತಿಯ ಅಥವಾ ಅರಿವಿನ ಕುರುಹೇ ಲಿಂಗ. ಅವೆರಡರ ಅನುವಿಡಿದು ನಡೆಯುವುದೇ ಜಂಗಮ. ಹೀಗೆ ಇಡೀ ಧಾರ್ಮಿಕ ವಲಯವನ್ನೇ ವೈಯಕ್ತಿಕ ಆಚರಣೆಯ ನೆಲೆಯನ್ನಾಗಿಸಿ, ಆ ವೈಯಕ್ತಿಕ ಆಚರಣೆಯ ಸ್ವರೂಪವನ್ನೇ ಸಮಾಜೀಕರಣಗೊಳಿಸಿ ವಚನಕಾರರು ಧರ್ಮದ ಪರಿಕಲ್ಪನೆಗೆ ವಿಶಿಷ್ಟ ಅರ್ಥ ನೀಡಿದರು. ಅದು ಜನಸಾಮಾನ್ಯರಿಗೆ ಸುಲಭವಾಗಿ ಎಟುಕುವಂತೆ ಮಾಡಿದರು. ನೀರ ಕಂಡಲ್ಲಿ ಮುಳುಗುವ, ಮರಕಂಡಲ್ಲಿ ಸುತ್ತುವ, ಕಲ್ಲು, ಮೊರಗಳನ್ನೇ ದೇವರೆಂದು ಪೂಜಿಸುವ ಜನರಿಗೆ ಅದು ಹಾಗಲ್ಲ ಎಂಬ ಅರಿವು ನೀಡಿದ ಅವರು, ವ್ಯಕ್ತಿ-ವ್ಯಕ್ತಿಯಲ್ಲಿರುವ ದೈವತ್ವದ ಅರಿವನ್ನು ಜಾಗೃತಗೊಳಿಸಿದರು. ದಯೆ ಧರ್ಮದ ಮೂಲವಾಯ್ತು. ಇದೆಲ್ಲದರಿಂದಾಗಿ ಧರ್ಮ ಸಮಾಜೀಕರಣಗೊಂಡು, ಪ್ರಗತಿವಿರೋಧಿ ಧರ್ಮಗಳ ಪ್ರಾಬಲ್ಯ ಕುಂದಿತು. ಜನಸಾಮಾನ್ಯರು ಧಾರ್ಮಿಕ ಹಿನ್ನೆಲೆಯಲ್ಲಿ ನಡೆಯುತ್ತಿದ್ದ ಶೋಷಣೆಗಳಿಂದ ಮುಕ್ತವಾಗಲು ಇದು ಹೊಸ ಮಾರ್ಗ ತೋರಿತು.

ವ್ಯಕ್ತಿಯ ವೈಯಕ್ತಿಕ ನೆಲೆಯ ಸುಧಾರಣೆಯಲ್ಲೇ ಇಡೀ ಸಮಾಜದ ಪ್ರಗತಿಯನ್ನು ಕಾಣಬಯಸಿದ ವಚನಕಾರರು "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ"- ಎಂದು ಅತ್ಯಂತ ಸರಳವಾದ ಭಾಷೆಯಲ್ಲಿ ಸಪ್ತಶೀಲಗಳನ್ನು ಸಾರಿ, ಅವುಗಳ ನಿಯತ ಆಚರಣೆಯಿಂದಲೇ ಅಂತರಂಗ-ಬಹಿರಂಗಗಳ ಶುದ್ಧಿ ಸಾಧ್ಯವೆಂದರು. ಇವನಾರವ ಎಂದೆನ್ನದೇ, ಇವ ನಮ್ಮವ ಎಂದು ಎಲ್ಲರನ್ನೂ ಅಪ್ಪಿಕೊಳ್ಳುವ ಸಹಜ ಜೀವನದ ಮಹಾನ್ ತತ್ವವನ್ನು ಸಾರಿ ಅದರಂತೆ ಬದುಕಿ ತೋರಿಸಿದರು. ಮನುಷ್ಯರಲ್ಲಿಲ್ಲದ ಸಹಬಂಧುತ್ವ, ಹಂಚಿ ಉಣ್ಣುವ ಮನೋಭಾವಗಳು ಕಾಗೆ ಕೋಳಿಯಂಥ ಪಕ್ಷಿ ಸಂಕುಲದಲ್ಲಿರುವುದನ್ನು ಎತ್ತಿ ತೋರಿಸಿ ಅವುಗಳನ್ನು ಅನುಕರಿಸಲು ಸೂಚಿಸಿದರು. ಈ ಎಲ್ಲ ಸಂವೇದನಾಶೀಲ ಪ್ರಯತ್ನಗಳ ಹಿಂದೆ ಮೇಲು-ಕೀಳು, ತರ-ತಮ, ಹೆಚ್ಚು-ಕಡಿಮೆಗಳಿಲ್ಲದ ಸಮತಾವಾದಿ ಸಮಾಜ ರಚನೆಯ ಉದ್ದೇಶವಿತ್ತು, ತಲೆತಲಾಂತರದಿಂದ ಶೋಷಿತವಾಗುತ್ತ ಬಂದ ಜನಸಮುದಾಯ ಆ ಶೋಷಣೆಯಿಂದ ಮುಕ್ತವಾಗಿ ನೆಮ್ಮದಿಯ ಬದುಕು ಕಾಣಲೆಂಬ ಆಶಯವಿತ್ತು. ಈ ಆಶಯ ಸಾಧನೆಗಾಗಿ ಶರಣರು ಇಟ್ಟ ಕ್ರಿಯಾತ್ಮಕ ಹೆಜ್ಜೆಗಳು ಹಲವಾರು. ಈ ಎಲ್ಲ ಕ್ರಿಯಾತ್ಮಕ ಹೆಜ್ಜೆಗಳ ಹಿಂದಿದ್ದ ಉದ್ದೇಶ ಎಲ್ಲ ರೀತಿಯ ಸ್ಥಾವರ

ವ್ಯವಸ್ಥೆಯನ್ನು ಜಂಗಮಗೊಳಿಸುವುದು, ಚಲನಶೀಲಗೊಳಿಸುವುದು. ಇಂಥ ಪ್ರಕ್ರಿಯೆಗೆ ವಚನಕಾರರು ಜನಸಾಮಾನ್ಯರನ್ನೇ ಮೊದಲು ಸಜ್ಜು ಮಾಡಿದ್ದು. ಅಂತೆಯೇ ಇದು ಜನಪರರು ಜನಪರರಿಗಾಗಿ ಮಾಡಿದ ಹೋರಾಟ. ಈ ಕಾರಣಕ್ಕಾಗಿಯೇ ವಚನಕಾರರು 12ನೆಯ ಶತಮಾನದಷ್ಟು ಹಿಂದೆ ಮಾಡಿದ ಪ್ರಯತ್ನ ವಿಶ್ವದ ಇತಿಹಾಸದಲ್ಲೇ ಅಪೂರ್ವ ಸ್ಥಾನ ಪಡೆಯುತ್ತದೆ. ''ಸಾಮೂಹಿಕವಾಗಿ ಸಮಷ್ಟಿ ಮನಸ್ಸನ್ನು ಜಾಗೃತಗೊಳಿಸಿ ಕಾರ್ಯೋನ್ಮುಖವಾಗುವಂತೆ ಮಾಡಲು ಕೈಗೊಳ್ಳುವ ಬಹುಜನರ ಬಹುಮುಖ ಪ್ರಯತ್ನಗಳ ನಿರಂತರ ಸರಣಿಯೇ ಚಳುವಳಿ : ಅದರ ಫಲವಾಗಿ ಸಮಾಜದಲ್ಲಿ ಮೂಡುವ ತೀವ್ರವಾದ ಪ್ರತಿಕ್ರಿಯೆ ಮತ್ತು ಬದಲಾವಣೆ ಕ್ರಾಂತಿ ಎನ್ನಬಹುದು''.[1] 12ನೆಯ ಶತಮಾನದಲ್ಲಿ ವಚನಕಾರರು ಮಾಡಿದ್ದು ಈ ಬಗೆಯ ಚಳುವಳಿಯನ್ನು. ಅದು ನಿಶ್ಚಿತವಾಗಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದದ್ದು ಐತಿಹಾಸಿಕ ಸತ್ಯ. ಇಂಥ ಕ್ರಾಂತಿಕಾರಿ ಬದಲಾವಣೆಯ ಮೂಲ ಕೇಂದ್ರವನ್ನು ವ್ಯಕ್ತಿಯಲ್ಲೇ ಗುರುತಿಸಿದ ಶರಣರು. ''ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ'' ಎಂದು ಕರೆಕೊಟ್ಟರು, ಅದರಂತೆ ನಡೆದರು. ಬಂಡಾಯದ ಬಗ್ಗೆ, ಅದು ಸಾಧಿತವಾಗುವ ಬಗ್ಗೆ ನಾವು ಬಹಳಷ್ಟು ಮಾತಾಡುತ್ತೇವೆ. ಆದರೆ ತನ್ನನ್ನು ತಾನು ಸುಧಾರಿಸಿಕೊಳ್ಳುವುದೇ ಮೊದಲ ಮತ್ತು ಕೊನೆಯ ಬಂಡಾಯವಲ್ಲವೆ ? ವಚನಕಾರರು ಜನಪರರಲ್ಲಿ ತುಂಬಿದ್ದು ಇಂಥ ಬಂಡಾಯವನ್ನೆ.

ವಚನಕಾರರ ಕ್ರಿಯಾತ್ಮಕ ಮತ್ತು ಸಾಹಿತ್ಯಕ ಹೋರಾಟಗಳು ಕೇವಲ ಜನಪರವಾಗಿದ್ದವು. ಅಂತೆಯೇ ಜನಪರ ಹೋರಾಟಗಳು ಸಾಮಾನ್ಯವಾಗಿ ಪಡೆಯುವ ಅಂತ್ಯವನ್ನೇ ಅವು ಪಡೆದವು. ರಾಜಕೀಯವಲ್ಲದ ಹಾಗೂ ದಂಡವಿಲ್ಲದ, ಕೇವಲ ನೈತಿಕ ಶಕ್ತಿಯೊಂದರಿಂದಲೇ ಪ್ರೇರಿತವಾದ ಈ ಹೋರಾಟ ಪಟ್ಟಭದ್ರರ ಹಾಗೂ ಪರಂಪರಾಗತ ಪ್ರಗತಿವಿರೋಧಿಗಳ ಕೈವಾಡದಿಂದ ಅರೆಸಫಲವಾಯ್ತು. ಆದರೆ ಆ ಕ್ರಾಂತಿಯ ಬೆಳಕು ಇಂದಿಗೂ ಪ್ರಸ್ತುತವಾಗುತ್ತದೆ. ಹನ್ನೆರಡನೆಯ ಶತಮಾನಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಹದಗೆಟ್ಟಿರುವ 20ನೆಯ ಶತಮಾನದಲ್ಲಿ ವಚನಕಾರರು ಅಂದು ನಡೆಸಿದ ರೀತಿಯದೇ ಆದ ಕ್ರಿಯಾತ್ಮಕ ಹೋರಾಟ ಸಂಘಟಿತವಾಗುವ ಅಗತ್ಯವಿದೆ.

ಜನಪರ ಪ್ರಗತಿಗಾಗಿ ಆಧುನಿಕ ಕಾಲದಲ್ಲಿ ಶ್ರಮಿಸಿದ ಮಹನೀಯರು ಹಲವರಿದ್ದಾರೆ. ಆರ್ಥಿಕ ಸಮತೆ ಸಾಧಿಸಲು ಬಂಡವಾಳಶಾಹಿಗಳೆದುರು ಬಂಡೆದ್ದ ಮಾರ್ಕ್ಸ್, ಜಾತಿಸಮತೆಗಾಗಿ ಮತ್ತು ಅಸ್ಪೃಶ್ಯತೆಯ ನಿವಾರಣೆಗಾಗಿ ತಮ್ಮ ಬದುಕನ್ನೇ ಸವೆಸಿದ ಮಹಾತ್ಮಗಾಂಧೀಜಿ, ದಲಿತರ ದಾರುಣ ಬದುಕನ್ನು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕವಾಗಿ ಉನ್ನತಿಗೇರಿಸಲು

---

1. ಡಾ. ಎಚ್. ತಿಪ್ಪೇರುದ್ರಸ್ವಾಮಿ : ವಚನ ಚಳುವಳಿ : ಕಾಯಕ ಪರಿಣಾಮಿ : ಪು -103

ಹೋರಾಡಿದ ಡಾ. ಬಿ. ಆರ್. ಅಂಬೇಡ್ಕರ್, ಕರಿಯರ ಮೇಲಿನ ಶೋಷಣೆ ತಡೆಗಟ್ಟಲು ಬಿಳಿಯರ ವಿರುದ್ಧ ಸಮರ ಸಾರಿ, ಜೀವನದ ಬಹುಕಾಲವನ್ನು ಜೈಲಿನಲ್ಲೇ ಕಳೆದ ನೆಲ್ಸನ್ ಮಂಡೇಲಾ-ಇಂಥ ಕ್ರಾಂತಿಕಾರಿಗಳು ಇಲ್ಲಿ ಗಮನಾರ್ಹರಾಗಿದ್ದಾರೆ. ಈ ಎಲ್ಲ ಹೋರಾಟಗಾರರು ಆಧುನಿಕ ಕಾಲದಲ್ಲಿ ನಡೆಸಿದ ಹೋರಾಟಗಳನ್ನೆಲ್ಲ ವಚನಕಾರರು 12ನೆಯ ಶತಮಾನದಷ್ಟು ಹಿಂದೆಯೇ ಕ್ರಿಯಾತ್ಮಕ ರೀತಿಯಲ್ಲಿ ನಡೆಸಿದ್ದರೆಂಬುದು ವಿಶೇಷವಾಗಿ ಗಮನಿಸಬೇಕಾದ ವಿಷಯ. ಈ ಹೋರಾಟದ ಸ್ಪಷ್ಟ ಹೆಜ್ಜೆಗಳು ಅವರ ವಚನಗಳ ರೂಪದಲ್ಲಿ ದಾಖಲಾಗಿದ್ದು, ಈ ಕಾರಣಕ್ಕಾಗಿಯೇ ವಚನ ಸಾಹಿತ್ಯದ ಹೆಚ್ಚು ಭಾಗ ಕ್ರಿಯಾತ್ಮಕವಾದ ಜನಪರ ನಿಲುವುಗಳದೇ ಆಗಿದೆ.

ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಮತ್ತು ನ್ಯಾಯ-ಈ ನಾಲ್ಕು ಪ್ರಮುಖ ತತ್ವಗಳ ಸ್ಥಾಪನೆಯ ಮೂಲಕ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಮಾದರಿಯ ಜೀವನವನ್ನು ರೂಪಿಸಲು ನಿರಂತರ ಪ್ರಯತ್ನಿಸುತ್ತಿರುವ ನಮ್ಮ ಸಂವಿಧಾನದ ಮೂಲಭೂತ ವಿಚಾರಗಳನ್ನು ವಚನಕಾರರು 12ನೆಯ ಶತಮಾನದಷ್ಟು ಹಿಂದೆಯೇ ಆಚರಣೆಯಲ್ಲಿ ತಂದಿದ್ದರೆಂಬುದೂ ವಚನಗಳಲ್ಲಿ ಸ್ಪಷ್ಟವಾಗುತ್ತದೆ. ವೈಜ್ಞಾನಿಕ ಪ್ರಗತಿಯಾಗಿರುವ ಆಧುನಿಕ ಯುಗದಲ್ಲಿ ಜನಪರರಿಗಾಗಿ ಯೋಜಿತವಾದ ಕಾರ್ಯಕ್ರಮಗಳು ವಚನಕಾರರ ಕಾಲದಲ್ಲೇ ಕಾರ್ಯರೂಪಕ್ಕೆ ಬಂದದ್ದು ಅದ್ಭುತ ಸಾಧನೆ.

ಕನ್ನಡ ಸಾಹಿತ್ಯದಲ್ಲಿ, ಅದೂ ಹೊಸಗನ್ನಡ ಸಾಹಿತ್ಯದಲ್ಲಿ ಜನಪರ ಹೆಸರಿನಲ್ಲಿ ನಡೆದ ಸಾಹಿತ್ಯಕ ಚಳುವಳಿಗಳು, ಘಟ್ಟಗಳು ಹಲವಾರಿವೆ. ಪ್ರಗತಿಶೀಲ ಚಳುವಳಿ, ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯ ಸಂಘಟನೆ - ಇವು ಈ ಸಾಲಿನಲ್ಲಿ ಪ್ರಮುಖವಾಗಿ ಗಮನಿಸಬೇಕಾದವು. ಈ ಎಲ್ಲ ಸಾಹಿತ್ಯ ಚಳುವಳಿಗಳ ಮುಖ್ಯ ನೆಲೆಗಳು ಕನ್ನಡ ಸಾಹಿತ್ಯದಲ್ಲಿ ಮೊದಲು ಕಂಡಬಂದದ್ದು ವಚನಸಾಹಿತ್ಯದಲ್ಲಿಯೆ. ಇದೇ ವಚನಸಾಹಿತ್ಯದ ಹಿರಿಮೆ. ಈ ಕಾರಣಕ್ಕಾಗಿಯೇ ವಚನ ಸಾಹಿತ್ಯ ಇಂದಿಗೂ ಪ್ರಸ್ತುತವೇ ಆಗಿದೆ.

ವಚನ ಸಾಹಿತ್ಯ ಕೇವಲ ವೀರಶೈವ ಧರ್ಮದ ಸಾಹಿತ್ಯವೆಂಬ ಮಿತವಾದ ಪರಿಕಲ್ಪನೆಯನ್ನು ಬಿಟ್ಟು, ಅದು ಜನಪರರಿಗಾಗಿ ಮಿಡಿದ ಮತ್ತು ನುಡಿದ ಸಮಾಜವಾದಿ ಧೋರಣೆಯ ಸಾಹಿತ್ಯವೆಂಬ ಸತ್ಯವನ್ನು ಇಂದು ಮೊದಲು ಮನಗಾಣಬೇಕಾದ ಹಾಗೂ ಮನಗಾಣಿಸಬೇಕಾದ ಅಗತ್ಯವಿದೆ. ಜೊತೆಗೇ ಅದನ್ನು ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಅನುವಾದಿಸುವ ಮೂಲಕ ವಿಶ್ವಕ್ಕೆಲ್ಲ ತಲುಪಿಸುವ ಅಗತ್ಯವೂ ಇದೆ. ಹೀಗೆ ಮಾಡಿದಾಗ ಅದರಲ್ಲಿರುವ ಕ್ರಿಯಾತ್ಮಕ ಜನಪರ ನೀಲುವುಗಳು ಮತ್ತು ಆ ನಿಲುವುಗಳಿಗೆ ಪೂರಕವಾಗಿ ನಡೆದ ಹೋರಾಟ ಇವೆಲ್ಲವುಗಳು ಎಲ್ಲೆಡೆ ಪರಿಚಯವಾಗುತ್ತವೆ. ಈ ಕ್ರಿಯೆ ಕನ್ನಡ ನಾಡಿಗಷ್ಟೇ ಅಲ್ಲ : ಇಡೀ ಭಾರತಕ್ಕೆ ಹೆಚ್ಚಿನ ಹಿರಿಮೆ ತರಲು ಸಾಧ್ಯ. ಇದರ ಜೊತೆಗೇ ವಚನ ಸಾಹಿತ್ಯದಲ್ಲಿ ವ್ಯಕ್ತವಾದ ಶರಣರ ಜನಪರವಾದ ಕ್ರಿಯಾತ್ಮಕ ಹೋರಾಟ ಇಂದು ಮತ್ತೆ ಸಂಘಟಿತವಾಗುವುದೂ ಅಗತ್ಯ.

ಕಾಯಕ-ದಾಸೋಹ

ಕೆ. ಬಿ. ಮಲ್ಲೇಶಯ್ಯ

ಕಾಯಕ ಪದದ ಸಾಮಾನ್ಯಾರ್ಥ-ಕೆಲಸ. ತನ್ನ ಹುಟ್ಟಿನೊಂದಿಗೇ ಕಟ್ಟಿಕೊಂಡು ಬರುವ ಹೊಟ್ಟೆಯನ್ನು ತುಂಬಿಸಲು ಮನುಷ್ಯ ಏನಾದರೊಂದು ಸಂಪಾದನೆಯ ಮಾರ್ಗವನ್ನು ಹಿಡಿಯಬೇಕಾಗುವುದಷ್ಟೇ ? ಈ ರೀತಿಯ ಉಪಜೀವನ ನಿರ್ವಹಣೆಗಾಗಿ ಅವನು ಕೈಕೊಳ್ಳುವ ವೃತ್ತಿ ಅಥವ ಉದ್ಯೋಗವನ್ನು ಕಾಯಕ ಎಂದು ಕರೆಯಬಹುದಾಗಿದೆಯಾದರೂ ಶರಣಕ್ರಾಂತಿ ಅಥವ ವಚನ ಚಳವಳಿಯ ವಲಯದಲ್ಲಿ ಈ ಪದ ವಿಶೇಷಾರ್ಥವನ್ನೊಳಗೊಂಡು ಪಾರಿಭಾಷಿಕ ಪದವಾಗಿ ಬಳಕೆಯಾಗಿದೆ. ಈ ಪದವು ಧಾರ್ಮಿಕ, ಸಾಮಾಜಿಕ, ಆರ್ಥಿಕ ಹೀಗೆ ಮೂರು ಮುಖ್ಯ ಆಯಾಮಗಳಲ್ಲಿ ಅರ್ಥವ್ಯಾಪ್ತಿಯನ್ನು ಪಡೆದಿದೆ. ಈ ಅರ್ಥ ವಿಶ್ಲೇಷಣೆಗೆ ತೊಡಗುವ ಮುನ್ನ ಕಾಯಕ ತತ್ವವು ಅಸ್ತಿತ್ವಕ್ಕೆ ಬಂದುದರ ಹಿನ್ನೆಲೆಯನ್ನೊಂದಿಷ್ಟು ಪರಿಶೀಲಿಸಬೇಕಾಗಿದೆ.

ಹಿನ್ನೆಲೆ

ಶ್ರೇಣೀಕೃತ ಸಮಾಜ, ಆ ವ್ಯವಸ್ಥೆಯ ದೋಷಗಳು ಹಾಗೂ ಪರಿಣಾಮಗಳೇ 12ನೆಯ ಶತಮಾನದಲ್ಲಿನ ಕಲ್ಯಾಣ ಕ್ರಾಂತಿಗೆ[1] ಪ್ರೇರಕವಾದುವು. ಬಹುಸಂಖ್ಯಾತ ಸಾಮಾನ್ಯ ಜನತೆ ಅಥವ ಶ್ರಮಿಕ ವರ್ಗ ಅರ್ಥಾತ್ ಶೂದ್ರಸಮುದಾಯವು ಪಿರಮಿಡ್ ಆಕಾರದ [2] ಈ ಸಮಾಜದ ವ್ಯವಸ್ಥೆಯ ಅತ್ಯಂತ ಕೆಳಸ್ತರ ಅಥವ ತಳಹದಿಯಾಗಿತ್ತು. ಇವರ ಮೇಲೆ ಸಮಾಜದ ಆರ್ಥಿಕ ವ್ಯವಸ್ಥೆಯ ಮೇಲೆ ನಿಯಂತ್ರಣ ಹೊಂದಿದ್ದ ವ್ಯಾಪಾರಿಗಳು ಅಥವ ವೈಶ್ಯರಿದ್ದರು. ಸಂಖ್ಯೆಯಲ್ಲಿ ಇವರಿಗಿಂತಲೂ ಕಡಮೆಯಿದ್ದ ಕ್ಷತ್ರಿಯರು ನಾಡಿನ ರಾಜಕೀಯದ ಅಥವಾ ಅಧಿಕಾರದ ಸೂತ್ರಗಳನ್ನು ಹಿಡಿದಿದ್ದರು. ಈ ಮೂರೂ ವರ್ಣದವರಿಗಿಂತಲೂ

---

1. ಕಳಚುರಿ ಸಾಮ್ರಾಜ್ಯದ ರಾಜಧಾನಿ ಕಲ್ಯಾಣವನ್ನು ಕೇಂದ್ರವಾಗಿ ಹೊಂದಿ ಜರುಗಿದ ಈ ಕ್ರಾಂತಿಯು ಜನಸಾಮಾನ್ಯರ 'ಕಲ್ಯಾಣ'ಕ್ಕಾಗಿ ಜರುಗಿದ ಕ್ರಾಂತಿಯಾದ್ದರಿಂದ ಈ ಮಾತು ಅನ್ವರ್ಥವೂ, ಅರ್ಥಪೂರ್ಣವೂ, ಧ್ವನಿಪೂರ್ಣವೂ ಆಗಿದೆ.
2. ಪಿರಮಿಡ್ ಆಕಾರದ ಸಮಾಜ ವ್ಯವಸ್ಥೆಯ ಕಲ್ಪನೆಗೆ ನಾನು ಕವಿ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕೃತಿಗೆ ಋಣಿಯಾಗಿದ್ದೇನೆ.

ಕಡಮೆ ಸಂಖ್ಯೆಯಲ್ಲಿದ್ದರೂ ಎಲ್ಲ ವರ್ಗದವರ ಮೇಲೆ ಹಿಡಿತ ಸಾಧಿಸಿದ್ದ ಬ್ರಾಹ್ಮಣರು ತುತ್ತ ತುದಿಯಲ್ಲಿದ್ದು ಸಮಾಜದಲ್ಲಿ ಸರ್ವಶ್ರೇಷ್ಠ ಸ್ಥಾನಮಾನಗಳನ್ನು ಪಡೆದಿದ್ದರು. ಇವರು ಧರ್ಮ ಸಂಹಿತೆ, ನೈತಿಕ ನಿಯಮಾವಳಿಗಳನ್ನು ರೂಪಿಸುವವರಾಗಿದ್ದರು. ಇವರ ಸಂಹಿತೆಯಲ್ಲಿ ಶೂದ್ರರನ್ನುಳಿದು ಕ್ಷತ್ರಿಯ ಹಾಗೂ ವೈಶ್ಯ ಸಮುದಾಯಗಳಿಗೆ ಹೆಚ್ಚಿನ ರಿಯಾಯ್ತಿಗಳಿದ್ದವು; ಸವಲತ್ತುಗಳಿದ್ದವು. ಇವರೂ ಬ್ರಾಹ್ಮಣರಂತೆಯೇ ಯಜ್ಞೋಪವೀತ ಧಾರಣೆಗೆ ಅರ್ಹರಾಗಿದ್ದರು.

ಕ್ರಮವಾಗಿ ತಮ್ಮ ವಿದ್ವತ್ತು, ಅಧಿಕಾರ ಮತ್ತು ಹಣ ಬಲದಿಂದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಶಿಷ್ಟರೆನ್ನಿಸಿಕೊಂಡು ಮೆರೆಯುತ್ತಿದ್ದರು. ತಮ್ಮ ಸ್ಥಾನ ಮಾನಗಳ ಭದ್ರತೆಗಾಗಿ ಈ ಮೂರೂ ವರ್ಗದವರಲ್ಲಿ ಒಂದು ರೀತಿಯ ಒಡಂಬಡಿಕೆಯುಂಟಾಗಿತ್ತು. ಸ್ವತಃ ಮೈಕೈ ದುಡಿಸದಿದ್ದರೂ ಐಷಾರಾಮದಿಂದಿರಬಯಸಿದ್ದ ಈ ವರ್ಗದವರು ತಮ್ಮ ಬುದ್ಧಿ, ತೋಳ್ಬಲ ಮತ್ತು ಹಣಬಲದಿಂದ ಶ್ರಮಜೀವಿಗಳನ್ನು ಅಡಿಯಾಳಾಗಿಟ್ಟುಕೊಳ್ಳುವ ಹುನ್ನಾರದಿಂದ ವರ್ಣವ್ಯವಸ್ಥೆಯನ್ನು ಹುಟ್ಟುಹಾಕಿದ್ದರು. ಜೀವಿಗಳು ತಮ್ಮ ಪ್ರಾಕ್ತನ ಕರ್ಮಾನುಸಾರವಾಗಿ ಸೃಷ್ಟಿಪುರುಷನ ಮುಖ, ತೋಳು, ತೊಡೆ ಹಾಗೂ ಪಾದಗಳಿಂದ ಜನಿಸುತ್ತಾರೆ. ಆಯಾ ವರ್ಣದವರಿಗೆ ನಿಸರ್ಗದತ್ತವಾಗಿ ಬಂದ ಸತ್ವ, ರಜ, ತಮಾದಿ ಗುಣಗಳಿಗನುಗುಣವಾಗಿ ಕರ್ತವ್ಯಗಳು ದೇವರಿಂದಲೇ ಹೇಳಲ್ಪಟ್ಟಿವೆಯಾಗಿ ಇದು ಧರ್ಮ ಸಮ್ಮತ, ಸಮಾಜದ ಈ ಸ್ವರೂಪ ರಚನೆ ದೇವನಿರ್ಮಿತ. ಬ್ರಾಹ್ಮಣ್ಯವಾಗಲೀ ಶೂದ್ರತ್ವ ವಾಗಲೀ ಯಾರೊಬ್ಬರಿಂದ ಮಾಡಲ್ಪಟ್ಟಿಲ್ಲ. ಸ್ವರ್ಗ, ಮೋಕ್ಷ, ಆತ್ಮೋದ್ಧಾರ ಮುಂತಾಗಿ ಧರ್ಮಾಚರಣೆ, ಆಧ್ಯಾತ್ಮವಿಚಾರಗಳೆಲ್ಲ ಉಚ್ಚಕುಲದವರಿಗೆ ಮಾತ್ರವೇ ಮೀಸಲಾದುವು. ಶೂದ್ರರಿಗೆ, ದುಡಿಮೆಗಾರರಿಗೆ ಅವರ ಸೇವಾ ವೃತ್ತಿಯೊಂದೇ ಧರ್ಮಮಾರ್ಗ. ಇದು ಈಶ್ವರೀ ನ್ಯಾಯ. ಇದನ್ನು ಮೀರಿದರೆ ಪಾಪ ಸಂಚಯವಾಗುತ್ತದೆ. ಪಾಲಿಸುವುದರಿಂದಪುಣ್ಯ ಸಂಚಯವಾಗಿ ಮುಂದಿನ ಜನ್ಮದಲ್ಲಿ ಉತ್ತಮ ವರ್ಣ ಪ್ರಾಪ್ತವಾಗುತ್ತದೆ ಎಂದು ನಂಬಿಸಲಾ ಗಿತ್ತು. ವಿದ್ಯೆ, ಅಧಿಕಾರ, ಐಶ್ವರ್ಯಗಳಿಂದ ವಂಚಿತರಾಗಿದ್ದ ಮುಗ್ಧ ದುಡಿವ ವರ್ಗವು ಶಿಷ್ಟ ವರ್ಗದವರಿಗಾಗಿ ದುಡಿವುದೇ ತನ್ನ ಧರ್ಮ, ಅವರನ್ನು ಸೇವಿಸುವುದೇ ತನ್ನ ಕರ್ತವ್ಯವೆಂದು ಭಾವಿಸಿ ಅವರ ಸುಖ ಸೌಲಭ್ಯಗಳಿಗಾಗಿ ಜೀವ ತೇಯುತ್ತಿತ್ತು. ಅವರಲ್ಲಿದ್ದ ಈ ನಂಬಿಕೆಯು ಮುಕ್ಕಾಗದಂತೆ ಶಿಷ್ಟವರ್ಗವು ವ್ಯವಸ್ಥಿತ ರೀತಿಯಲ್ಲಿ ಅದನ್ನು ಕಾಪಾಡಿಕೊಂಡು ಬರುತ್ತಿತ್ತು.

ಶೂದ್ರರನ್ನುಳಿದು ಮೇಲಿನ ಮೂರೂ ವರ್ಣದವರಲ್ಲಿ ವೈಶ್ಯ ಹಾಗೂ ಕ್ಷತ್ರಿಯರಿಗೆ ತಮ್ಮ ತಲೆಯ ಮೇಲೆ ಇನ್ನೊಬ್ಬರು ಸವಾರಿ ಮಾಡುವ ನೋವು ಇದ್ದರೂ ತಮ್ಮ ಕಾಲ ಕೆಳಗೆ ಇನ್ನೊಂದು ವರ್ಣದವರಿದ್ದು ಅವರ ಮೇಲೆ ತಾವು ಸವಾರಿ ಮಾಡುತ್ತಿರುವ ಸಮಾಧಾನವೂ ಇತ್ತು. ತಾವು ಮೇಲಿನವರಿಂದ ತುಳಿಸಿಕೊಳ್ಳುತ್ತಿರುವ ಆಕ್ರೋಶವನ್ನವರು ತಮ್ಮ ಕಾಲ್ಕೆಳಗಿನವರನ್ನು ತುಳಿದು ತೀರಿಸಿಕೊಳ್ಳುತ್ತಿದ್ದರು. ಆದರೆ ತೀರಾ ಕಟ್ಟಕಡೆಯವರಾದ ಶೂದ್ರರಿಗೆ ಈ ಸಮಾಧಾನ ಸವಲತ್ತುಗಳಿಲ್ಲದೇ ಅವರು ಅವಮಾನದಿಂದ ಕುಗ್ಗಿಹೋಗಿದ್ದರು.

ಮೇಲಿನವರ ತುಳಿತದಿಂದ ಬಳಲಿಹೋಗಿದ್ದರು. ಅವರಲ್ಲಿ ಅತೃಪ್ತಿ, ಅಸಮಾಧಾನಗಳು ಹೊಗೆಯಾಡುತ್ತಿದ್ದವು. ಅವರ ಈ ಆಕ್ರೋಶದ ಸ್ಫೋಟಕ್ಕೆ ಬಸವಣ್ಣ ಕ್ರಾಂತಿಯ ಕಿಡಿ ತಾಗಿಸಿದರು. ಆದರೆ ಸ್ಫೋಟಗೊಂಡ ಈ ಶಕ್ತಿ-ಒತ್ತಡಕ್ಕೊಂದು ಸ್ಪಷ್ಟ, ರಚನಾತ್ಮಕ ಪ್ರಣಾಳಿಯನ್ನು ಅವರು ಸಿದ್ಧಪಡಿಸಿಟ್ಟುಕೊಂಡಿದ್ದರು. ಕಾಯಕ-ದಾಸೋಹ ತತ್ವಗಳಗೆ ಅವರನ್ನು ಬದ್ಧರಾಗಿಸಿ ಮಾರಕವಾಗಿ ಹೊಮ್ಮಲಿದ್ದ ಶಕ್ತಿಯನ್ನು ಸಮಾಜದ ಶ್ರೇಯಕ್ಕೆ ಪೂರಕವಾಗಿ ಬಳಸಿದರು, ಬೆಳೆಸಿದರು.

ಶರಣರು ಮತ್ತು ಆರ್ಥಿಕ ಧೋರಣೆ

ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯ ಹೀಗೆ ಕಲ್ಯಾಣ ಕ್ರಾಂತಿಯು ಸರ್ವತೋಮುಖವಾದದ್ದು-ಸಮಾಜ ಕಲ್ಯಾಣದ ಬಗ್ಗೆ ಬಸವಣ್ಣನವರಿಗಿದ್ದ ಪೂರ್ಣ ದೃಷ್ಟಿಯಿಂದ; ಅವರು ಜೀವನವನ್ನು ಸಮಗ್ರ ಸ್ವರೂಪದಲ್ಲಿ ನೋಡಿದುದರಿಂದ, ಜೀವಿಯ ಉತ್ಥಾನಕ್ಕೆ ಆಧ್ಯಾತ್ಮದಂತಹ ಪಾರಲೌಕಿಕ ವಿಚಾರಗಳಷ್ಟೇ 'ಅರ್ಥ'ದಂತಹ ಲೌಕಿಕ ವಿಚಾರಗಳೂ ಬಸವಾದಿ ಶರಣರಿಗೆ ಮುಖ್ಯವಾಗಿ ಕಾಣಿಸಿದವು. ಆದ್ದರಿಂದಲೇ ಅವರಿಗೆ ಆಧ್ಯಾತ್ಮಿಕ ಅರ್ಥದ ಧರ್ಮ[3] ಸುಧಾರಣೆಯಷ್ಟೇ ಆರ್ಥಿಕ ಸುಧಾರಣೆಯೂ ಅನಿವಾರ್ಯವೆನ್ನಿಸಿತು. ಶರಣರು ಧರ್ಮಕ್ಕೆ ಹೊಸ ವ್ಯಾಖ್ಯೆ ನೀಡಿದರು. ಅವರ ಪ್ರಕಾರ 'ಧರ್ಮವೆಂಬುದು ಮಾನವನ ಸಾಮಾಜಿಕ ಆರ್ಥಿಕ-ರಾಜಕೀಯ ಜೀವನಕ್ಕೆ ಹೊರತಾಗಿ ನಿಲ್ಲುವ ವಿಶಿಷ್ಟ ಆಯಾಮವಲ್ಲ. ಮಾನವನ ಎಲ್ಲ ವ್ಯವಹಾರ ಆಯಾಮಗಳನ್ನೂ ತನ್ನಲ್ಲಿ ಧರಿಸಿರುವುದೇ ಧರ್ಮ. ಮಾನವನ ಸರ್ವತೋಮುಖ ಅಭಿವೃದ್ಧಿಗೆ ಅದು ಸಹಾಯಕವಾಗಬೇಕು''[4]. ಆದ್ದರಿಂದಲೇ ಶರಣ ಧರ್ಮವು 'ಜೀವನ ಧರ್ಮ' ವೆನಿಸಿತು.

ಸಮಾಜದ ಸರ್ವಾಂಗೀಣ ಸುಧಾರಣೆಯಲ್ಲಿ ಅರ್ಥವ್ಯವಸ್ಥೆಗೆ ನಿರ್ದಿಷ್ಟವಾದ, ನಿರ್ಣಯಾತ್ಮಕವಾದ ಪಾತ್ರವಿದೆ ಎಂಬುದನ್ನೂ ಅಂದಿನ ಸಮಾಜದಲ್ಲಿ (ಅಷ್ಟೇ ಏಕೆ ಇಂದಿನ ಸಮಾಜದಲ್ಲಿಯೂ) ದೈತ್ಯಾಕಾರವಾಗಿ ಬೆಳೆಯುತ್ತಿದ್ದ ಸಾಮಾಜಿಕ ಅಸಮತೆಗೆ ಆರ್ಥಿಕ ಅಸಮತೆಯೂ ಒಂದು ಮುಖ್ಯ ಕಾರಣವೆಂಬುದನ್ನು ಶರಣರು ಅರಿತಿದ್ದರು. ಹಸಿದ ಹೊಟ್ಟೆಗೆ ತತ್ವಶಾಸ್ತ್ರಗಳು ರುಚಿಸುವುದಿಲ್ಲ. ಮನುಷ್ಯನಿಗೆ ತನ್ನ ಅನ್ನಮಯದ ಅಗತ್ಯಗಳು ನೀಗಿದ ಮೇಲೆಯೇ ಜ್ಞಾನ, ವಿಜ್ಞಾನಮಯದ ಕಡೆಗೆ ಮೊಗಮಾಡಲು ಸಾಧ್ಯ. ಆದರೆ

---

3. 'ಧರ್ಮ ಶಬ್ದಕ್ಕೆ ನೀತಿ ನಿಯಮಗಳೆಂದು ಅರ್ಥವಿದ್ದರೂ, ಅದರ ಮುಖ್ಯವಾದ ಅರ್ಥ ಆಧ್ಯಾತ್ಮಿಕತೆ. ಆಧ್ಯಾತ್ಮಿಕ ದೃಷ್ಟಿಯಿಂದ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಧರ್ಮವೆಂದು ಪರಿಭಾಷೆ' ('ಭಾರತೀಯ ಸಂಸ್ಕೃತಿಯಲ್ಲಿ ಧರ್ಮದ ಸಮನ್ವಯ ಸ್ವರೂಪ'-ಪ್ರೊ॥ ಎಸ್. ಎಸ್. ರಾಘವಾಚಾರ್ "ಸಿದ್ಧಗಂಗಾಶ್ರೀ" 1981 ಪುಟ 434).
4. 'ಕ್ರೈಸ್ತ ಧರ್ಮ' ಪ್ರಶಾಂತ್ ಮಾಡ್ತ; ಪು ; ಅದೇ, 515 - 1981

ಭಾರತೀಯ ಮತಧರ್ಮಗಳು ಮನುಷ್ಯನ ಈ ಮೂಲಭೂತ ಅಗತ್ಯಗಳ ಕುರಿತು ಚಿಂತಿಸಿದ್ದು ಕಡಮೆಯೇ[5].

ವೈದಿಕ ಧರ್ಮದಲ್ಲಿ ಅರ್ಥವೂ ಪುರುಷಾರ್ಥಗಳಲ್ಲಿ ಒಂದೆಂದು ಹೇಳಿದೆ. ಜೀವನು ದೇವನಲ್ಲಿ ಸಂಲಗ್ನವಾಗುವುದೇ ಮೋಕ್ಷ. ಇದು ಎಲ್ಲ ಜೀವಿಗಳ ಪರಮಗುರಿ. ಜ್ಞಾನ ಯೋಗ, ಕರ್ಮಯೋಗ ಮತ್ತು ಭಕ್ತಿಯೋಗಗಳನ್ನು ಮೋಕ್ಷಸಾಧನೆಗೆ ಮಾರ್ಗಗಳಾಗಿ ಅಲ್ಲಿ ಹೇಳಲಾಗಿದೆ. ಜ್ಞಾನ ಶಕ್ತಿಯನ್ನು ಉಪಯೋಗಿಸಿಕೊಂಡು ಪರತತ್ವವನ್ನು ಸೇರುವುದಕ್ಕೆ ಜ್ಞಾನಯೋಗವೆಂತಲೂ ಕ್ರಿಯಾಶಕ್ತಿಯನ್ನು ನಿಃಸ್ವಾರ್ಥತೆಯಿಂದ ಈಶ್ವರ ಪ್ರಾಪ್ತಿಗೋಸುಗ ಲೋಕಕಲ್ಯಾಣಕ್ಕೆ ಉಪಯೋಗಿಸುವುದು ಕರ್ಮಯೋಗವೆಂತಲೂ, ಭಗವತ್ಪ್ರೇಮವನ್ನು ಸರ್ವಭೂತಾನುಕಂಪೆಯಾಗಿ ಪರಿವರ್ತಿಸಿ ಎಲ್ಲರಲ್ಲಿಯೂ; ಎಲ್ಲದರಲ್ಲಿಯೂ ಭಗವಂತನ ಲೀಲೆಯನ್ನೇ ಕಂಡು ಸಚ್ಚಿದಾನಂದಕ್ಕೆ ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು ಭಕ್ತಿಯೋಗವೆಂತಲೂ ವಿವರಿಸಲ್ಪಟ್ಟಿದೆ. ಕರ್ಮ ಸನ್ಯಾಸವು ಉಚಿತವಲ್ಲ, ಭಗವದಾರಾಧನಾ ರೂಪವಾಗಿ ಸ್ವವಿಹಿತ ಕರ್ಮಾನುಷ್ಠಾನವನ್ನು ಮಾಡುವುದೇ ಧರ್ಮ. ಭಗವಂತನು ಸ್ವತಂತ್ರ. ಜೀವಿಯು ಪರತಂತ್ರ. ಭಗವಂತನೇ ಸರ್ವವ್ಯಾಪಾರಗಳನ್ನೂ ಮಾಡಿಸುವವನು. ಕರ್ತೃತ್ವ-ಭೋಕ್ತೃತ್ವ, ಸಾಧನೆ-ಫಲಗಳೆಲ್ಲವೂ ಅವನಿಗೇ ಸೇರಿದ್ದು, ಅವನ ಪ್ರೇರಣೆಯಿಂದಲೇ ಎಲ್ಲವೂ ನಡೆಯುವುದು. ಜ್ಞಾನ-ಕರ್ಮಗಳು ಪರಸ್ಪರ ವಿರುದ್ಧವಲ್ಲ, ಜ್ಞಾನಿಗಳೂ ಕರ್ಮ

---

5. ಅಷ್ಟೇ ಏಕೆ ಪ್ರಪಂಚದ ಇತರೇ ಪ್ರಮುಖ ಧರ್ಮಗಳಾದ ಕ್ರೈಸ್ತ ಮತ್ತು ಮುಸ್ಲಿಂ ಧರ್ಮದಲ್ಲಿಯೂ ಆರ್ಥಿಕ ವಿಚಾರಗಳ ಕುರಿತಾದ ಸ್ಪಷ್ಟ ಪ್ರಣಾಲಿಗಳು ಇಲ್ಲ. 'ಆಕಾಶದ ಪಕ್ಷಿಗಳನ್ನು ನೋಡಿ ಅವು ಬಿತ್ತುವುದಿಲ್ಲ. ಕೊಯ್ಯುವುದಿಲ್ಲ. ಕಣಜಗಳಲ್ಲಿ ತುಂಬಿಡುವುದಿಲ್ಲ. ಆದರೂ ಪರಲೋಕದಲ್ಲಿರುವ ನಿಮ್ಮ ತಂದೆ ಅವುಗಳನ್ನು ಪೋಷಿಸುತ್ತಾನೆ. ಬಯಲಿನಲ್ಲಿ ಹೂಗಳು ಹೇಗೆ ಬೆಳೆಯುತ್ತವೆ ನೋಡಿ, ಅವು ದುಡಿಯುವುದೂ ಇಲ್ಲ, ನೂಲುವುದೂ ಇಲ್ಲ. ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಬಯಲಿನ ಹುಲ್ಲಿಗೇ ದೇವರು ಹೀಗೆ ಉಡಿಸಿದರೆ ನಿಮಗೆ ಇನ್ನೇನು ಮಾಡಲಾರನು ? ... ಎನ್ನುವ ಕ್ರಿಸ್ತವಾಣಿಯೂ ಬದುಕಿನಲ್ಲಿ ಕ್ರಿಯಾಶೀಲವಲ್ಲದ ತಾಟಸ್ಥ್ಯ ಧೋರಣೆಯನ್ನೇ ಪ್ರೇರಿಸುತ್ತದೆ. (ಆದರೆ ಅದು ಜೀವಿಗಳಿಗೆ ದೇವರ ರಕ್ಷೆಯಿದೆ ಎಂಬ ಭರವಸೆ ನೀಡುತ್ತದೆ ಮತ್ತು ನಮ್ಮಲ್ಲಿ ಪ್ರಚಲಿತವಿರುವ ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ ಎಂಬ ಆಡುಮಾತನ್ನು ನೆನಪಿಗೆ ತರುತ್ತದೆ. ಅಂತೆಯೇ ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗೆ ಅಲ್ಲಿಗಲ್ಲಿಗೆ ಆಹಾರವನಿತ್ತು ದೇವರೇ ಸಲಹುತ್ತಾನೆನ್ನುವ ದಾಸವಾಣಿಗೆ ಇದು ಸಂವಾದಿಯಾಗಿದೆ) ಇಸ್ಲಾಂ ಧರ್ಮದಲ್ಲಿಯೂ ದೇವರ ರಾಜ್ಯ ಪ್ರಾಪ್ತಿಯೇ ಜೀವಿಯ ಪರಮ ಗುರಿ, ಇದಕ್ಕಾಗಿ ಮುಸಲ್ಮಾನರು ಧರ್ಮ ಮಾಡಬೇಕು ಎಂದು ಹೇಳಿದೆ. ಮುಸ್ಲಿಮರು ತಮ್ಮ ಆದಾಯದ 5ನೇ ಒಂದು ಭಾಗದಷ್ಟು ದ್ರವ್ಯವನ್ನು ಧರ್ಮಕಾರ್ಯಕ್ಕೆ ಮೀಸಲಿಡಬೇಕೆಂದು ಹೇಳಲಾಗಿದೆ. ಕ್ರೈಸ್ತ ಧರ್ಮದಲ್ಲಾಗಲೀ, ಇಸ್ಲಾಂ ಧರ್ಮದಲ್ಲಾಗಲೀ ಆರ್ಜಿಸಿದ ಹಣದ ವಿನಿಯೋಗವನ್ನು ಅಂಶಿಕವಾಗಿ ಹೇಳಿದೆಯಲ್ಲದೇ ಗಳಿಕೆಯ ಮಾರ್ಗೋಪಾಯಗಳನ್ನಾಗಲೀ, ಉದ್ಯೋಗವು ಒಳಗೊಳ್ಳಬೇಕಾದ ನೈತಿಕ ನಿಯಮಗಳನ್ನಾಗಲೀ ಅಲ್ಲಿ ಹೇಳಿಲ್ಲ.

ಮಾಡಬೇಕು. ಫಲಾಪೇಕ್ಷೆಯಿಲ್ಲದೇ ಭಗವದರ್ಪಣ ಬುದ್ಧಿಯಿಂದ ವಿಹಿತ ಕರ್ಮಗಳನ್ನು ಮಾಡುವುದು ದೇವ ವಿದಿತ. ವಿಹಿತ ಕರ್ಮಾನುಷ್ಠಾನ- ಅಂದರೆ ಸಕ್ರಿಯ ಜೀವನವೇ ಆಧ್ಯಾತ್ಮಿಕ ಉನ್ನತಿಯ ಮೊದಲ ಹೆಜ್ಜೆ. ಕೇವಲ ಪೂಜಾದಿಗಳು ಮಾತ್ರ ಕರ್ಮವಲ್ಲ. ಸತ್ಯ, ಪರೋಪಕಾರ, ಸದ್ವರ್ತನೆ, ನಾನಾಜನ ಶುಶ್ರೂಷೆ ಇವೆಲ್ಲ ವಿಹಿತ ಕರ್ಮದ ಅವಿಭಾಜ್ಯ ಅಂಗಗಳು ಎಂಬುದಾಗಿ ಗೀತಾ ಭಾಷ್ಯದಲ್ಲಿ ಹೇಳಲಾಗಿದೆ.

ವೈದಿಕ ಧರ್ಮದಲ್ಲಿ ಹೇಳಲಾಗಿರುವಂತೆ ಮೋಕ್ಷಸಾಧನಗಳಾದ ಜ್ಞಾನ-ಕರ್ಮಗಳು ಪರಸ್ಪರ ವಿರುದ್ಧವಲ್ಲದಿದ್ದರೂ ಪರಸ್ಪರ ಅವಲಂಬನೆ ಅನಿವಾರ್ಯನೇನೂ ಅಲ್ಲ. ಅಂದರೆ ಜ್ಞಾನ ಶಕ್ತಿಯನ್ನು ಉಪಯೋಗಿಸಿಕೊಂಡು ವಿಚಾರ ಮಾಡಿ ಪರತತ್ತ್ವವನ್ನು ಸೇರುವುದಕ್ಕೆ ಸಾಧ್ಯವಿದೆ. ಇದಕ್ಕೆ 'ಕರ್ಮ'ವನ್ನು ಮಾಡಲೇ ಬೇಕೆಂದೇನೂ ಇಲ್ಲ.[6] ಶ್ರಮಿಕರಲ್ಲದ ವರ್ಗದವರಿಗೆ ಇದು ಸುಲಭವಾದ ಮಾರ್ಗವಾಗಿ ಕಂಡಿತು. ದುಡಿಯದೇ ಸುಖವಾಗಿರಬೇಕೆನ್ನುವವರು ಈ ಮಾರ್ಗವನ್ನು ಆರಿಸಿಕೊಂಡರು. ಈ ಮಾರ್ಗ ತಮಗೆ ದೈವದತ್ತವಾದುದೆಂದು ಸಾರಿ ಅವರು ಬಹುಸಂಖ್ಯಾತ ಶ್ರಮಿಕ ವರ್ಗಕ್ಕೆ ಕರ್ಮಮಾರ್ಗ (ಅಂದರೆ ಕ್ರಿಯಾಶಕ್ತಿಯನ್ನು ಈಶ್ವರ ಪ್ರಾಪ್ತಿಗೋಸುಗ ಲೋಕಕಲ್ಯಾಣಕ್ಕೆ ವ್ಯಯಿಸುವುದು)ವನ್ನು ಹೇಳಿದರು. ಕಾಯಕಷ್ಟದ ಕೆಲಸಗಳನ್ನು ಮಾಡುವುದರಲ್ಲಿಯೇ ಮೋಕ್ಷಕಾಣಲು ಸಾಧ್ಯವಿದೆ; ಇದಕ್ಕೆ ಜ್ಞಾನದ ಅಗತ್ಯವೇನೂ ಇಲ್ಲ ಎಂದು ಹೇಳಿ ಕರ್ಮದೊಟ್ಟಿಗೆ ಭಕ್ತಿಯನ್ನೂ ಅವರಿಗೆ ಚಳುವಳಿಯಾಗಿ ನೀಡಿದರು. ತಮ್ಮ ಅಳಲನ್ನು ಮಾನವರಾದವರು ಕೇಳದಾದಾಗ ಅದನ್ನು ಭಗವಂತನಿಗೆ ನಿವೇದಿಸಿಕೊಂಡು ಸಾಂತ್ವನ ಹೊಂದುವುದು ಸಾಮಾನ್ಯರಿಗೆ ಸಮಾಧಾನ ಕೊಟ್ಟದ್ದರಿಂದಾಗಿ ಭಕ್ತಿ ಸಾಮಾನ್ಯಜನರ ಪ್ರಿಯ ಸಾಧನ ಮಾರ್ಗವಾಯಿತು.

ಪುರುಷಾರ್ಥಗಳಲ್ಲಿ ಧರ್ಮ-ಅರ್ಥ-ಕಾಮ-ಮೋಕ್ಷಗಳನ್ನು ಪ್ರತ್ಯೇಕವಾಗಿ ಗುರುತಿಸಿದ್ದರೂ ಅವುಗಳಲ್ಲಿ ಅರ್ಥ-ಕಾಮ ಹಾಗೂ ಧರ್ಮ-ಮೋಕ್ಷಗಳನ್ನು ಎರಡು ಗುಂಪುಗಳಾಗಿ ಮಾಡಲು ಸಾಧ್ಯವಿದೆ. ಅರ್ಥ ಕಾಮಗಳು ಲೌಕಿಕ ಹಾಗೂ ಧರ್ಮ

---

6. ಕರ್ಮ ಸನ್ಯಾಸ ಉಚಿತವಲ್ಲ; ಜ್ಞಾನಿಗಳೂ ಕರ್ಮವನ್ನು ಮಾಡಬೇಕು ಎನ್ನುವ ನಿರ್ದೇಶನವಿದ್ದರೂ 'ಕರ್ಮ' ಪದದ ಅರ್ಥ ವ್ಯಾಪ್ತಿ ಸ್ಪಷ್ಟವಾಗಿಲ್ಲ. ಈ ಮಾತುಗಳಲ್ಲಿ (ಜ್ಞಾನಿಗಳೂ ಕರ್ಮವನ್ನು ಮಾಡಬೇಕು...) ಕರ್ಮವೆಂದರೆ ತನು-ಮನ ದುಡಿಸಿ ಮಾಡುವ ಕೆಲಸ ಎನ್ನುವ ಅರ್ಥವಿದ್ದರೂ ಸಮಾಜ ಜೀವಿಯ ಪ್ರತಿಯೊಂದು ಕ್ರಿಯೆಯೂ ಪ್ರವೃತ್ತಿಯೂ ಉದಾ : ದಾನ, ಧರ್ಮ, ಉಪಕಾರ, ಅಪಕಾರ, ದಯೆ, ಪ್ರೀತಿ, ಹಿಂಸೆ, ಆರಾಧನೆ, ತಪಸ್ಸು ಮುಂತಾದುವೂ 'ಕರ್ಮ' ಪದದ ವ್ಯಾಪ್ತಿಗೇ ಬರುತ್ತವೆ. ಆದರೆ ಶರಣ ಧರ್ಮದ ವಲಯದಲ್ಲಿ ಶಿವಯೋಗಿಯ ದೇಹವಾದರೂ ವೃಥಾ ಸವೆಯಲಾಗದು, ಅನುಗೊಂಬನಿತು ಕಾಯಕ ನಡೆಯುತ್ತಿರಬೇಕು ಎಂದು ಹೇಳಿದೆ. ಇಲ್ಲಿ ಕಾಯಕವೆಂದರೆ ಸ್ಪಷ್ಟವಾಗಿ ತನು-ಮನ ದುಡಿಸಿ ಮಾಡುವ ಕಾಯಕಷ್ಟದ ಕೆಲಸವೆಂಬುದು ಅರ್ಥ.

ಮೋಕ್ಷಗಳು ಅಲೌಕಿಕ ಪಾತಳಿಗಳ ಮೇಲೆ ನಿಲ್ಲುವ ವಿಚಾರಗಳಾಗಿವೆ. ಮೊದಲನೆಯ ಗುಂಪು ಪ್ರವೃತ್ತಿ ಜೀವನಕ್ಕೂ ಎರಡನೆಯ ಗುಂಪು ನಿವೃತ್ತಿ ಜೀವನಕ್ಕೂ ಸಂಬಂಧಿಸಿದವುಗಳಾಗಿವೆ. ವೈದಿಕ ಧರ್ಮವು ಕರ್ಮಸನ್ಯಾಸ ಉಚಿತವಲ್ಲವೆಂದಿದ್ದರೂ ಅದನ್ನೂ ಒಳಗೊಂಡು ಉಳಿದ ಭಾರತೀಯ ಮತಧರ್ಮಗಳು ಬಹುತೇಕ ಪ್ರವೃತ್ತ ಜೀವಿಗಳಿಗೆ ನಿವೃತ್ತಿಯ ಮಾರ್ಗವನ್ನು ಬೋಧಿಸುವ ಕಡೆಗೇ ಹೆಚ್ಚು ಗಮನವನ್ನು ಹರಿಸಿವೆ. ಅರ್ಥ-ಕಾಮಗಳಿಗಿಂತಲೂ ಧರ್ಮ-ಮೋಕ್ಷದ ಕಡೆಗೇ ಅವು ವಾಲಿಕೊಂಡಿವೆ; ಒತ್ತುಕೊಟ್ಟಿವೆ. ಇದರಿಂದಾಗಿ ಭಾರತೀಯ ಸಮಾಜವು ಹೆಚ್ಚು ವೈರಾಗ್ಯ ಮತ್ತು ವಿರಾಶಾಮನೋಭಾವನೆಯನ್ನು ಬೆಳೆಸಿಕೊಂಡಿದೆ. [7] ಮೋಕ್ಷ ಸಾಧನೆಯು ಕಟುತರವಾದುದೆಂದು ಭಾವಿಸಿ ಅದರ ಸಾಧನೆಯ ಕಡೆಗೇ ಹೆಚ್ಚು ಗಮನಹರಿಸಿ ಅದಕ್ಕೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಲು ಶ್ರಮಿಸಿದಷ್ಟು ಭಾರತದ ಧರ್ಮ/ಸಮಾಜ ಸುಧಾರಕರು ಅರ್ಥ ಸಂಪಾದನೆ ಮತ್ತು ಅದರ ಸಮಂಜಸ ವಿತರಣೆಯ ಕುರಿತು ಮಾರ್ಗೋಪಾಯಗಳನ್ನು ಕಂಡು ಹಿಡಿಯಲು ಶ್ರಮಿಸಲಿಲ್ಲ. ಇದರಿಂದಾಗಿ ಅರ್ಥಶಾಸ್ತ್ರವು ಒಂದು ಗಂಭೀರ ಚಿಂತನೆಯಾಗಿ ರೂಪುಗಳ್ಳಲಿಲ್ಲ.

ಇದಕ್ಕೆ ಅಪವಾದವೆನ್ನುವಂತೆ ರಾಜಮಂತ್ರ ಪ್ರವೀಣ ಹಾಗೂ ಅರ್ಥಶಾಸ್ತ್ರಜ್ಞನ ಕೌಟಿಲ್ಯನನಂತರ ಮೊದಲಬಾರಿಗೆ ಮನುಷ್ಯನ ಜೀವನದಲ್ಲಿ ಪ್ರಮುಖ ಪಾತ್ರವನ್ನಾಡುವ ಹಣದ ಗಳಿಕೆ, ಮನುಷ್ಯನ ಜೀವನೋಪಾಯದ ಮಾರ್ಗ, ಆಯವ್ಯಯ ಸ್ವರೂಪ, ಗಳಿಕೆ-ಉಳಿಕೆಗಳ ಪರಿಣಾಮಗಳಂತಹ ಆರ್ಥಿಕ ವಿಚಾರದ ಕುರಿತು ಆಳಚಿಂತನೆಯಿಂದ ರೂಪುಗೊಂಡ ಅನುಭವ ಜನ್ಯ ಆರ್ಥಿಕ ಸಿದ್ಧಾಂತಗಳನ್ನು ಮಂಡಿಸಿದವರೆಂದರೆ ಶರಣರೇ. ಧರ್ಮದ,

---

7. ಪ್ರಾಚೀನ ಭಾರತೀಯ ಧರ್ಮಗಳಲ್ಲಿ ಒಂದಾದ ಜೈನಧರ್ಮವು-ಜೀವಿಯು ತಾನು ಗೈಯ್ಯುವ ಕರ್ಮಾನುಸಾರವಾಗಿ ಪಾಪ ಪುಣ್ಯಗಳನ್ನೂ ಅದಕ್ಕನುಗುಣವಾಗಿ ಉತ್ತಮ ಅಥವ ಅಧಮ ವರ್ಗದಲ್ಲಿ ಪುರುಹುಟ್ಟುಪಡೆಯವುದಾಗಿಯೂ ಕರ್ಮ ಬಂಧನದಿಂದ ಬಿಡುಗಡೆಯೇ ಮೋಕ್ಷ ಸಾಧನವೆಂದೂ ಹೇಳಿ ನಿವೃತ್ತಿಮಾರ್ಗವನ್ನು ಬೋಧಿಸಿದರೆ, ಆಸೆಯೇ ದುಃಖಕ್ಕೆ ಕಾರಣವೆಂದು ಹೇಳುವ ಬೌದ್ಧ ಧರ್ಮವೂ ರಾಗಾತೀತ, ಭಾವಾತೀತ ವೈರಾಗ್ಯಪರ ನಿಲುವೇ 'ಬುದ್ಧ' ಸ್ಥಿತಿಯೆಂದು ಹೇಳುವ ಮೂಲಕ ನಿವೃತ್ತಿಯನ್ನು ಬೋಧಿಸುತ್ತದೆ.

ಸೂಫಿಯಂತಹ ಇತರೇ ಧರ್ಮಗಳೂ ನಿವೃತ್ತಿಯ ಕಡೆಗೇ ಹೆಚ್ಚು ವಾಲಿಕೊಂಡಿವೆ. 'ಸೂಫಿಗಳು ಆರ್ಥಿಕವಾಗಿ ಪರಾವಲಂಬಿಗಳಾಗಿದ್ದರು. ಹೀಗಾಗಿ ಅವರು ಭಿಕ್ಷುಕರಾಗಿದ್ದರು. ಅವರಲ್ಲಿ ಕೆಲವರು ದೇವರಲ್ಲಿ ಅತಿಯಾಗಿ ನಂಬಿಕೆ ಇಟ್ಟು ದುಡಿಯದೆ ಕೊನೆಗೆ ಭಿಕ್ಷಕ್ಕೂಹೋಗದೆ ಆಹಾರವು ತನ್ನಷ್ಟಕ್ಕೆ ತಾನೇ ಹುಡುಕಿಕೊಂಡು ಬರುತ್ತದೆ ಎಂದು ಸುಮ್ಮನೇ ಕುಳಿತಿರುತ್ತಿದ್ದರು. ಈ ಭಾವನೆ ಬರುಬರುತ್ತಾ ನಿರುದ್ಯೋಗಕ್ಕೂ ಸೋಮಾರಿತನಕ್ಕೂ ಇಳಿದು ಕೆಟ್ಟಿತು.''

'ಸೂಫಿ ಧರ್ಮ ಮತ್ತು ವೀರಶೈವ ಅನುಭಾವ ಸಾಹಿತ್ಯ'- ಷಣ್ಮುಖಯ್ಯ ಅಕ್ಕೂರಮಠ; ಸಿದ್ಧಗಂಗಾಶ್ರೀ ಪುಟ. 527

ಆಧ್ಯಾತ್ಮದ ಹೆಸರಿನಲ್ಲಿ ಹಣಕ್ಕೆ ಸಂದ ಅವಗಣನೆಯನ್ನು ನಿವಾರಿಸಿ ಅರ್ಥಕ್ಕೆ ಹೊಸ 'ಅರ್ಥ'ವನ್ನವರು ದೊರಕಿಸಿಕೊಟ್ಟರು. ಏಕೆಂದರೆ ಸಮಾಜ ಜೀವಿಯ ಬದುಕಿನಲ್ಲಿ ಪ್ರಭಾವ ಬೀರುವ ಅನೇಕ ವಿಷಯಗಳಲ್ಲಿ 'ಅರ್ಥ'ವು ಬಹುಮುಖ್ಯವಾದುದೆಂದು ಅವರು ಕಂಡುಕೊಂಡಿದ್ದರು. ಅಭಾವ ವೈರಾಗ್ಯ, ನೈರಾಶ್ಯಗಳಿಗೆ ಮೂಲವಾದ ಬಡತನ, ನಿರುದ್ಯೋಗ ನಿವಾರಣೆಗೆ ಅವರು ಗಂಭೀರ ಚಿಂತನೆ ನಡೆಸಿ ಪರಿಹಾರ ರೂಪವಾಗಿ ಕಾಯಕ ಮತ್ತು ದಾಸೋಹ ತತ್ವಗಳನ್ನು ರೂಪಿಸಿದರು. ಅದನ್ನು ತಮ್ಮ ನಿಜ ಜೀವನದಲ್ಲಿ ಆಚರಣೆಗೆ ತಂದರು. ಇದರಿಂದ ಸಾಮಾನ್ಯ ಜನ ಸಮುದಾಯದಲ್ಲಿ ತುಂಬಿಕೊಂಡಿದ್ದ ಹತಾಶ ಹಾಗೂ ದೈನೇಸೀ ಭಾವಗಳನ್ನು ತೊಡೆದು ಹಾಕಿ ಆತ್ಮಗೌರವ ಹಾಗೂ ಸ್ವಾವಲಂಬನ ಪೂರಿತ ಸ್ವಾಭಿಮಾನೀ ಸಮಾಜವನ್ನು ನಿರ್ಮಾಣ ಮಾಡುವುದರಲ್ಲಿ ಅವರು ಯಶಸ್ವಿಯಾದರು. .

ಹಣವು ತನಗೆ ತಾನೇ ಸ್ವತಂತ್ರ ಮೌಲ್ಯವಲ್ಲದಿದ್ದರೂ ಮುಖ್ಯವಾದೊಂದು ಸಶಕ್ತ ಸಾಧಕ ಮೌಲ್ಯ. ಯಾವುದೇ ನೇಮವಿರಲಿ, ಹೇಮವಿಲ್ಲದೇ ಅದು ಸಾಗುವುದಿಲ್ಲವೆಂದು ಅವರು ಅರಿತಿದ್ದರು. ಅವರ ಆರ್ಥಿಕ ತತ್ವಗಳು ಅನುಭವದ ತಳಹದಿಯ ಮೇಲೆ ಕಟ್ಟಲ್ಪಟ್ಟವು. ಅವರ ತತ್ವಗಳು ಅದೃಷ್ಟ ದುರಾದೃಷ್ಟಗಳ ಮೇಲೆ ಕಟ್ಟಲ್ಪಟ್ಟಿಲ್ಲ. ಪ್ರಯತ್ನಕ್ಕೆ ಅವರದು ಪ್ರಥಮ ಪ್ರಾಶಸ್ತ್ಯ. ''ಅವರ ತತ್ವಗಳು ಅದೃಷ್ಟವನ್ನೇ ಅವಲಂಬಿಸಿದ್ದರೆ ಅವರಿಂದ ಯಾವ ಆರ್ಥಿಕ ಸಾಮಾಜಿಕ ಕ್ರಾಂತಿಯೂ ಸಾಧ್ಯವಾಗುತ್ತಿರಲಿಲ್ಲ. ಸರ್ವಾಂಗೀಣ ಸಾಮಾಜಿಕ ಬದಲಾವಣೆಯಲ್ಲೆಲ್ಲಾ ಮಾನವ ಪ್ರಯತ್ನಕ್ಕೆ ನಿರ್ಣಯಾತ್ಮಕ ಸ್ಥಾನ ನೀಡಿ ಅವರು ತಮ್ಮ ವೈಜ್ಞಾನಿಕ ದೃಷ್ಟಿಕೋನ ವ್ಯಕ್ತ ಪಡಿಸಿದ್ದಾರೆ. ''[8]

ಸಮಾನತೆಯ ಸೂತ್ರ

ಲಿಂಗಧಾರಣೆಯನ್ನು ಲಿಂಗಾಂಗ ಸಾಮರಸ್ಯದ ಸಾಧನ ಮಾತ್ರವಲ್ಲ, ಧಾರ್ಮಿಕ ಸಮಾನತೆಯ ಸೂತ್ರವಾಗಿಸಿದಂತೆಯೇ ಶರಣರು ಕಾಯಕ-ದಾಸೋಹ ತತ್ವಗಳನ್ನು ಸಹಕಾರ, ಸಾಮಾಜಿಕ ಸಮಾನತೆಯ ಸೂತ್ರವಾಗಿಸಿಕೊಂಡರು. ಕಾಯಕವು ಸ್ವಾತಂತ್ರ ಸಾಧನೆಯ ಮಾರ್ಗವೂ ಸುಲಿಗೆಯ ವಿರೋಧಿಯೂ, ಐಕ್ಯತೆಯ ಸಾಧನವೂ ಆಗಿ ಪರಿಣಮಿಸಿತು. ಅತ್ತ ಆಧ್ಯಾತ್ಮಿಕತೆಯಿಂದಲೂ ಇತ್ತ ಐಶ್ವರ್ಯದಿಂದಲೂ ವಂಚಿತರಾಗಿದ್ದ ಸಾಮಾನ್ಯರಿಗಾಗಿ, ಶ್ರಮಜೀವಿಗಳಿಗಾಗಿ ಬಸವಣ್ಣ ಮಾನವತೆಯ ನೆಲೆಗಟ್ಟಿನ ಮೇಲೆ ಶರಣ ಧರ್ಮವನ್ನು ರೂಪಿಸಿ ಅದರ ಮಾರ್ಗಗಳನ್ನು ಇಂತಹವರಿಗಾಗಿ ಮುಕ್ತವಾಗಿ ತೆರೆದಿರಿಸಿದರು. ಹಾಗೆ ನೋಡಿದರೆ ಬಸವಣ್ಣನವರಿಗೆ ಇಂತಹವರ ಬಗ್ಗೆಯೇ ಕಾಳಜಿ ವಿಶೇಷವಾಗಿತ್ತು. ಸಾಮಾನ್ಯರ

---

8. 'ಶರಣರ ಆರ್ಥಿಕ ಯೋಜನೆಗಳು' - ಬಿ. ಶೇಷಾದ್ರಿ ; 'ಕಾಯಕ ಪರಿಣಾಮಿ' (ಸಂ.) : ಶಾಂತರಸ; ಲಿಂಗಣ್ಣ ಸತ್ಯಂ ಪೇಟೆ; ಪುಟ. 1121-1137

ಬದುಕಿನಲ್ಲಿ ಪ್ರಮುಖವಾದ ದುಡಿಮೆಗೆ ಸಾಮಾಜಿಕ ಹಾಗೂ ಪಾರಮಾರ್ಥಿಕ ಸ್ಥಾನಮಾನಗಳನ್ನು ಅವರು ಪ್ರತಿಷ್ಠಿತಗೊಳಿಸಿದರು. ಶ್ರಮಿಕರ ಜೀವನದಲ್ಲಿಯೇ ಉನ್ನತ ನೈತಿಕ, ಸಾಮಾಜಿಕ, ಪಾರಮಾರ್ಥಿಕ ಮೌಲ್ಯಗಳು ಅವತರಿಸಬಲ್ಲವೆಂದು ಬಸವಣ್ಣನವರಿಗೆ ತಿಳಿದಿತ್ತು. ಹಾಗಾಗಿಯೇ ಅವರು ಮೌಢ್ಯ ಅವಿದ್ಯೆ ನೆಲೆಸಿದ್ದ ಜನ ಸಾಮಾನ್ಯರನ್ನು ಎಚ್ಚರಿಸುವ ಕಟುತರ ಮಣಿಹವನ್ನು ಕೈಕೊಂಡರು. ಬದುಕು ಮಿಥ್ಯೆಯೆಂಬ ಭ್ರಮೆಯಲ್ಲಿ ಜಡವಾಗಿದ್ದ ಸಮಾಜವನ್ನು ಚೈತನ್ಯಶೀಲವಾಗಿಸಿದರು.

ಶ್ರಮಿಕರ, ದಲಿತರ, ಶೋಷಣೆಗೆ ಒಳಗಾದವರ ಸಾಮಾಜಿಕ ಪರಿಸ್ಥಿತಿಯಿಂದಾಗಿ ಈ ಕಾಯಕ ಸಿದ್ಧಾಂತವು ರೂಪಿತವಾಯಿತು. ಆಧ್ಯಾತ್ಮವಿದ್ಯೆಯಿಂದ ವಂಚಿತರಾಗಿದ್ದವರ ಪಾಲಿಗೆ ಇದು ಜೀವಾತ್ಮನನ್ನು ಪರಮಾತ್ಮನೊಂದಿಗೆ ಸಮರಸಗೊಳಿಸ ಬಲ್ಲ. ಯೋಗವಾಗಿ ಪರಿಣಮಿಸಿತು. ಶ್ರಮ ಜೀವಿಗಳೆಲ್ಲ ಒಂದು, ಎಲ್ಲ ಕಾಯಕಗಳೂ ಸಮಾನ ಗೌರವಕ್ಕೆ ಅರ್ಹವಾದವು ಎಂಬ ಸಿದ್ಧಾಂತ ನೆಲೆಯೂರಿತು. ಇದರಿಂದಾಗಿ ಸಮಾಜದಲ್ಲಿ ತಾಂಡವವಾಡುತ್ತಿದ್ದ ಅಸಮಾನತೆ, ಜಾತೀಯತೆಗಳು ಕಳಚಿ ಹೋಗಿ 'ಶರಣ ಸಮಾಜ' ನಿರ್ಮಾಣವಾಯಿತು. ಕಾಯಕ ನಿರತರೆಲ್ಲ ಇದರ ಸದಸ್ಯರಾದರು. ಶರಣರು ಎಲ್ಲ ಬಗೆಯ ಕಾಯಕವಂತರನ್ನೂ ಗೌರವದಿಂದ ಕಂಡರು. ಸಾಮಾಜಿಕ ಅಲಕ್ಷ್ಯಕ್ಕೊಳಗಾಗಿದ್ದ, ಸ್ವಂತ ಹಕ್ಕುಗಳಿಂದ ವಂಚಿತರಾಗಿದ್ದ ದುಡಿಮೆಗಾರರ ಸಾಮಾಜಿಕ ಸ್ಥಾನ ಮಾನ, ದುಡಿಮೆಯ ಘನತೆ ಗೌರವಗಳು ಸುಪ್ರತಿಷ್ಠಗೊಂಡವು.

ಸಮಾಜದ ಆರ್ಥಿಕ ವ್ಯವಸ್ಥೆಯ ಮೂಲ-ಮಾನವ ಶಕ್ತಿ. ಅದು ಕ್ರಿಯಾಶೀಲವಾದಾಗಲೇ ಉತ್ಪಾದನೆ ಸಾಧ್ಯ. ಅಂತೆಯೇ ಸಮಾಜದ ಅಂಗವಾದ ವ್ಯಕ್ತಿ ಆರ್ಥಿಕವಾಗಿ ಸ್ವಾವಲಂಬಿಯಾದಾಗ ಸಮಷ್ಟಿಯೂ ತಂತಾನೇ ಸಂಪದ್ಯುಕ್ತವಾಗುವುದು. ಅದಕ್ಕಾಗಿ ಸಮಾಜದ ಎಲ್ಲರೂ-ಅವನು ಶ್ರೀಮಂತನಿರಲಿ, ಬಡವನಿರಲಿ, ಗುರುವಾಗಲೀ, ಜಂಗಮವಾಗಲೀ ದುಡಿದೇ ತಿನ್ನಬೇಕು, ದುಡಿದೇ ಬದುಕಬೇಕೆಂಬ ಸಿದ್ಧಾಂತಕ್ಕೆ ಶರಣರು ಬದ್ಧರಾಗಿದ್ದರು.

ಕಾಯಕ ತತ್ತ್ವ

ಕಾಯಕ ಪದ ಸಂಸ್ಕೃತ ಮೂಲದಿಂದ ಬಂದದ್ದು. ಕಾಯ (ದೇಹ)ವನ್ನು ದಣಿಸಿ ಮಾಡುವ ದುಡಿಮೆ ಎಂಬರ್ಥದಲ್ಲಿ ಕಾಯಕ ಪದ ರೂಪಿತವಾಗಿದೆ. ಈಗಾಗಲೇ ಹೇಳಿರುವಂತೆ ಅದು ಉಪಜೀವನ ನಿರ್ವಹಣೆಗಾಗಿ ಸಮಾಜ ಜೀವಿ ಅವಲಂಬಿಸುವ ವೃತ್ತಿ ಅಥವ ಉದ್ಯೋಗ ಎಂಬ ಸಾಮಾನ್ಯಾರ್ಥವನ್ನು ಸೂಚಿಸುತ್ತದೆ. ಆದರೆ ಶರಣ ಧರ್ಮದ-ವಲಯದಲ್ಲಿ ಈ ಪದ ವಿಶೇಷ ಅರ್ಥವನ್ನು ಒಳಗೊಂಡು ಪಾರಿಭಾಷಿಕ ಪದವಾಗಿ ಬಳಕೆಯಾಗಿದೆ.

ಕಾಯಕವೆಂದರೆ ಶರಣ ಧರ್ಮ ಪರಿಭಾಷೆಯಲ್ಲಿ ಬರಿಯ ಉದರಂಭರಣ ವೃತ್ತಿ ಅಲ್ಲ. ಯಾವುದೇ ಉದ್ಯೋಗವನ್ನು ಶ್ರದ್ಧೆ ಮತ್ತು ಭಾವಶುದ್ಧಿಯಿಂದ ಮಾಡುವುದು ಮತ್ತು ದೊರೆತ ಪ್ರತಿಫಲವನ್ನು ಪ್ರಸಾದ ಭಾವನೆಯಿಂದ ಸ್ವೀಕರಿಸಿ ಅದರಲ್ಲಿ ತನ್ನ ಹಾಗೂ ಕುಟುಂಬದ ಪೋಷಣೆಗೆ ಅಗತ್ಯವಿರುವಷ್ಟನ್ನು ಮಾತ್ರ ಬಳಸಿ ಉಳಿದುದನ್ನು ಜಂಗಮಕ್ಕೆ ಎಂದರೆ ಸಮಾಜಕ್ಕೆ ನೀಡಿ ತೃಪ್ತಿಯಿಂದಿರುವುದು ಕಾಯಕವೆನಿಸುತ್ತದೆ.

ಒಡಲ ಕಳವಳಕ್ಕೆ ಕುದಿದು ಮಾಡುವುದು ಕಾಯಕವಲ್ಲ ಕೂಲಿ. ಆದರೆ ಪರಹಿತಕ್ಕೆ, ಸಮಾಜದ ಏಳಿಗೆಗೆಂದು ದುಡಿಯುವುದು ಕಾಯಕ. ತನಗೆ ತನ್ನ ಬಂಧುಗಳಿಗೆಂದು ಮಾಡುವ ದುಡಿಮೆ ಸ್ವಾರ್ಥ ಮೂಲದ್ದು. ಅದು ಕಾಯಕವಲ್ಲ. ಈ ಸ್ವಾರ್ಥವನ್ನೇ ಹಿರಿದಾಗಿಸಿ ತಾನು ಸಮಾಜದ ಒಂದು ಅಂಗ, ಸಮಾಜದಲ್ಲಿ ನಾನು ಬೆಳೆದು ಬಲಗೊಂಡಿದ್ದೇನೆ. ಅದರ ಋಣಸಂದಾಯ ನನ್ನ ಕರ್ತವ್ಯ ಎಂಬ ಉದಾತ್ತ ಶಿವಭಾವದಿಂದ ಮಾಡಿದರೆ ಅದು ಕಾಯಕ.

ನಾನು ದುಡಿದದ್ದು ನನಗೇ ಇರಲಿ ಎಂದರೆ ಅದು ಕಾಯಕವಲ್ಲ. ದುಡಿದದ್ದು ದಾಸೋಹಕ್ಕೆ ವಿನಿಯೋಗವಾದಾಗ ಮಾತ್ರ ಅದು ಕಾಯಕ. ನಾನು ದುಡಿಮೆಗಾರ, ನಾನು ಸಂಪತ್ತಿನ ಉತ್ಪಾದಕ, ಒಡೆಯ ಎಂಬ ಅಹಮಿಕೆಯಿಂದ ಮಾಡಿದ್ದೂ ಕಾಯಕವಲ್ಲ. ನನ್ನ ಕರ್ತವ್ಯವನ್ನಷ್ಟೇ ಮಾಡಿದ್ದೇನೆ. ಸಮಾಜದ ಋಣಸಂದಾಯಕ್ಕೆ ಕಾಯಕ ನನಗೆ ದೊರೆತ ಸಾಧನ, ಒಂದು ಅವಕಾಶ ಎಂಬ ಕೃತಕೃತ್ಯ ಭಾವನೆಯಿಂದ ಮಾಡಿದರೆ ಅದು ಕಾಯಕ. ಕಾಯಕದಿಂದ ಆರ್ಜಿಸಿದ್ದು ಕೂಲಿಯಲ್ಲ, ಸಂಭಾವನೆಯೂ ಅಲ್ಲ. ಅದು ಪ್ರಸಾದ ಪ್ರಸಾದವನ್ನು ಸಮಾಜ ಜೀವಿಗಳೊಂದಿಗೆ ಹಂಚಿ ಉಣ್ಣುವುದೇ ಶಿವನಿಗೆ ಪ್ರಿಯವಾದುದು.

ಹೀಗೆ ಶರಣರು ಕಾಯಕಕ್ಕೆ ನೀಡಿರುವ ದಾರ್ಶನಿಕ ಸ್ಪರ್ಶದಿಂದ ಅದು ಪಾರಲೌಕಿಕ ಅರ್ಥ ವ್ಯಾಪ್ತಿಯನ್ನು ಗಳಿಸಿತು. ಪಾವಿತ್ರ್ಯವನ್ನು ಪಡೆಯಿತು. ಆಧ್ಯಾತ್ಮಿಕ ಉತ್ಕರ್ಷದ ಸಾಧನವಾಯಿತು. ಧರ್ಮಾರ್ಥಗಳ ಮತ್ತು ಇಹ ಪರಗಳ ಮಧ್ಯೆ ಬೆಸುಗೆಯನ್ನು ಹಾಕಲು ಶರಣರು ರೂಪಿಸಿದ ಮಹೋನ್ನತ ಕ್ರಾಂತಿಕಾರಿ ತತ್ವವಾಯಿತು. ದಾಸೋಹ. ಶಿವಕೇಂದ್ರೀಯ ಪ್ರಜ್ಞೆಯಿಂದ ಮುಕ್ತಿಯಾತ್ಮಕವಾಗಿ ಮಾಡುವ ಯಾವುದೇ ಕೆಲಸ ಕಾಯಕದ ಮಟ್ಟಕ್ಕೆ ಏರುತ್ತದೆ. ಪಾರಮಾರ್ಥಿಕ ಸಿದ್ಧಿಯನ್ನು ಲೌಕಿಕ ಸ್ತರದಲ್ಲಿಯೇ ನಿಂತು ಸಾಧಿಸಲು ಶರಣರು ಕಂಡುಕೊಂಡ ಸಾಧನ ಕಾಯಕ. ಆಧ್ಯಾತ್ಮವನ್ನು ಬಿಟ್ಟರೆ ಕಾಯಕ ಕೇವಲ ಒಡಲವಸರದ ಕುದಿತವಾದರೆ ಪಲಾಯನ ಕಾಯಕವನ್ನುಳಿದ ಆಧ್ಯಾತ್ಮ ಮಾರಕವಾದ ವಾದವಾಗುತ್ತದೆ. ಶಿವೇತರ ಕ್ರಿಯೆಯಾಗುತ್ತದೆ. ಈ ಜೀವನದಿಂದ ಪಲಾಯನ ಮಾಡಿ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿರುವುದರಲ್ಲಿ ಯಾವುದೇ ಅರ್ಥವಾಗಲೀ ಹೆಚ್ಚುಗಾರಿಕೆಯಾಗಲೀ ಇಲ್ಲ. ಮರ್ತ್ಯವೆಂಬ ಈ ಕರ್ತಾರನ ಕಮ್ಮಟದಲ್ಲಿ ನಾವು ಚಲಾವಣೆಯ ನಾಣ್ಯಗಳೆಂದು ಸಾಧಿಸಿ ತೋರಿಸಬೇಕು. ಹೀಗೆಂದು ಶರಣರು ಕಾಯಕವನ್ನು ಬದುಕಿನ ದಾರಿಯನ್ನಾಗಿ ರೂಪಿಸಿ ಜೀವನ

ಮೌಲ್ಯವನ್ನಾಗಿಸಿದರು. ಕಾಯಕದ ಅಡಿಗಲ್ಲಿನ ಮೇಲೆಯೇ ಶರಣಧರ್ಮದ ತತ್ವ ಸಿದ್ಧಾಂತಗಳನ್ನ ಕಟ್ಟಡವನ್ನು ಕಟ್ಟಿದರು. ಮುಖ್ಯವಾಗಿ ಅವರ ಸ್ವತಂತ್ರ ಆರ್ಥಿಕ ವಿಚಾರಗಳು ಕಾಯಕ-ದಾಸೋಹದ ಮತ್ತು ಜೀವನಾನುಭವದ ಅಡಿಪಾಯದ ಮೇಲೆ ಕಟ್ಟಲ್ಪಟ್ಟವು. ಅಂತೆಯೇ ಅವು ಧರ್ಮ, ನೀತಿಗಳ ಚೌಕಟ್ಟಿನ ಒಳಗಡೆ ಇರುವಂತೆ ಅವರು ಎಚ್ಚರವಹಿಸಿದರು. ಕಾಯಕ ತತ್ವದ ನೀತಿ ನಿಯಮಗಳನ್ನು ಸಂಕ್ಷಿಪ್ತವಾಗಿ ನಾವು ಪರಿಶೀಲಿಸಬಹುದಾಗಿದೆ.

ಶರಣ ಸಮಾಜದ ಪ್ರತಿಯೊಬ್ಬ ಸದಸ್ಯನೂ ದುಡಿದೇ ಉಣ್ಣಬೇಕು. ಕುಳಿತು ಉಣ್ಣುವುದು ಸಾಧುವೂ ಅಲ್ಲ; ಸಾಧ್ಯವೂ ಅಲ್ಲ. ದುಡಿಯದೇ ಉಣ್ಣುವುದು ಅಪರಾಧ. ಸಮಾಜದ ಅಂಗವಾದ ವ್ಯಕ್ತಿ ಕ್ರಿಯಾಶೀಲನಾಗಿದ್ದಾಗ ಸಮಾಜವೂ ಚಲನಶೀಲವಾಗಿರುತ್ತದೆ. ಚೈತನ್ಯಶೀಲವಾಗಿರುತ್ತದೆ. ಅರಸನಿಂದ ಆಳಿನವರೆಗೆ ಎಲ್ಲರೂ ದುಡಿಯಬೇಕು. ಯಾರಿಗೂ ದುಡಿಮೆಯಿಂದ ವಿನಾಯ್ತಿ ಇಲ್ಲ. ಕೊನೆಗೆ ಗುರು ಲಿಂಗ ಜಂಗಮವಾದರೂ ಕಾಯಕದಿಂದ ಅವರಿಗೂ ವಿನಾಯ್ತಿ ಇಲ್ಲ.[9]

ಗುರು ಲಿಂಗ ಜಂಗಮಾರಾಧನೆಗಿಂತಲೂ ಕಾಯಕವೇ ಶ್ರೇಷ್ಠವೆಂದು ಶರಣರು ಸಾರಿದುದು ಕಾಯಕ ತತ್ವದ ಉನ್ನತ ದಾರ್ಶನಿಕ ಸ್ತರವಾಯಿತು. ಕಾಯಕವೇ ಕೈಲಾಸ ವಾದ ಕಾರಣ ಕಾಯಕದಿಂದಲೇ ಜೀವನ್ಮುಕ್ತಿ ಸಾಧ್ಯವೆಂಬುದು ಅವರ ಶ್ರದ್ಧೆ ನಂಬುಗೆಯಾಗಿತ್ತು. ಯಾವುದೇ ಕಾರಣಕ್ಕೂ ಕಾಯಕವನ್ನು ಅವಗಣಿಸುವಂತಿಲ್ಲ.[10] ಸಮಾಜ ಜೀವಿ ತನ್ನ ಯಾವುದೇ ನೇಮದ ಮಧ್ಯೆಯೂ ಕಾಯಕವನ್ನು ನೆರವೇರಿಸಬೇಕು. ಇದು ಶರಣರಿಗೆ ವಿಧಿಸಲಾದ ಮೀರಬಾರದ ಕಟ್ಟಳೆ.[11]

ದಾಸೋಹವನ್ನುಳಿದು ಕಾಯಕಕ್ಕೆ ಬೆಲೆಯಿಲ್ಲ. ಕಾಯಕದಿಂದ ಆರ್ಜಿಸಿದ

---

9. ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದವೇ ಶಿಲೆಯ ಕುರುಹು ಹರಿವುದು
ಜಂಗಮವಾದರೂ ಕಾಯಕದಿಂದವೇ ತನ್ನ ವೇಶದ ಪಾಶ ಹರಿವುದು...

10. ಕಾಯಕದಲ್ಲಿ ನಿರುತನಾದರೆ ಗುರುದರುಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು...

11. ಶರಣರು ರೂಪಿಸಿದ ಕಾಯಕ ತತ್ವದ ಎಲ್ಲ ಮಗ್ಗುಲುಗಳನ್ನೂ ವಿವರವಾಗಿ ಪರಿಶೀಲಿಸಿ ನಾಟಕೀಯ ಶೈಲಿಯಲ್ಲಿ ಚಿತ್ರಿಸಿದ ಕೃತಿ ಶೂನ್ಯಸಂಪಾದನೆ. ಅದರಲ್ಲಿಯ ಒಂದು ಪ್ರಸಂಗದಲ್ಲಿ ಆಧ್ಯಾತ್ಮ ಗೋಷ್ಠಿಯಲ್ಲಿ ಶಿವಾನುಭಾವದಲ್ಲಿ ಮುಳುಗಿ ಮೈಮರೆತಿದ್ದ ಆಯ್ದಕ್ಕಿ ಮಾರಯ್ಯನನ್ನು ಅವನ ಪತ್ನಿ ಲಕ್ಕಮ್ಮ ಈ ಚರ್ಚೆ/ಗೋಷ್ಠಿಗಳಿಗಿಂತಲೂ ಕಾಯಕ ಬಹುಮುಖ್ಯವಾದದ್ದು, ನೀನದನ್ನು ಮರೆತು ಇಲ್ಲಿ ಮಾತಿನಲ್ಲಿ ಮುಳುಗಿ ಕಾಲಕಳೆಯಬಹುದೆ ? ಎಂದು ಪ್ರಶ್ನಿಸುವಲ್ಲಿ ಯಾವ ನೇಮಕ್ಕಿಂತಲೂ ಕಾಯಕ ನೇಮವೇ ಮುಖ್ಯವಾದುದು ಎಂದು ಪ್ರತಿಪಾದಿಸಲಾಗಿದೆ.

ಕಾರೆಯಸೊಪ್ಪಾದರೂ ಅದು ಶ್ರೇಷ್ಠ. ದುಡಿಯದೇ ಬಂದ ದ್ರವ್ಯದಿಂದ ಮಾಡಿದ ದಾಸೋಹವು ನಿರರ್ಥಕ. ಕಾಯಕವೆಂದರೆ ಅದು ಸತ್ಯ ಶುದ್ಧ ಕಾಯಕವೇ ಆಗಿರಬೇಕು. ಸುಳ್ಳು, ಮೋಸ ವಂಚನೆ, ಸಮಾಜಬಾಹಿರ ಚಟುವಟಿಕೆಗಳಿಂದ ಗಳಿಸಿದ ದ್ರವ್ಯದಿಂದ ದಾಸೋಹ ಮಾಡುವಂತಿಲ್ಲ.[12] ದಾಸೋಹಕ್ಕಾಗಿ ದುಡಿಮೆಯೇ ಹೊರತು ಸ್ವಾರ್ಥಕ್ಕಾಗಿ ದುಡಿಮೆ ಯಲ್ಲ [13].

ಶರಣರಿಗೆ, ಕಾಯಕ ಜೀವಿಗಳಿಗೆ ಅತ್ಯಾಶೆ ಸಲ್ಲದು. ಅವರು ಅನಾಯಾಸವಾಗಿ ದೊರಕಿತೆಂದು ಕಾಮಿಸಿ ಹೇಮವ ಹಿಡಿಯುವಂತಿಲ್ಲ. ತನ್ನ ಕಾಯಕಕ್ಕೆ ಯುಕ್ತ ಪ್ರತಿಫಲ ಅಥವ ಬೆವರಿಗೆ ತಕ್ಕ ಬೆಲೆಯನ್ನು ಮಾತ್ರಾ ಪಡೆಯತಕ್ಕದ್ದು.[14]

ಇಂತಹ ಉದಾತ್ತ ನೈತಿಕ ನಿಯಮಗಳ ಚೌಕಟ್ಟಿನ ಒಳಗಡೆ ರೂಪಿಸಿದ ಕಾಯಕ ತತ್ವವು ಸಾರ್ವಕಾಲಿಕ, ಮೌಲ್ಯಯುಕ್ತವೂ, ವಿಶ್ವಮಾನ್ಯತತ್ವವೂ ಆಗಿದೆ. ನುಡಿದಂತೆ ಶರಣರು ನಡೆದದ್ದರಿಂದಾಗಿ ಅವರ ಜೀವನದಲ್ಲಿ ನೈತಿಕ ನೈರ್ಮಲ್ಯ ಹೆಚ್ಚಿತು. ಅವರಲ್ಲಿ ಸ್ವಾಭಿಮಾನ ಆತ್ಮಗೌರವಗಳು ಮೊಳೆದೋರಿದವು. ಈ ನೈತಿಕ ಧೈರ್ಯ ಅವರಲ್ಲಿ ಸಾಕ್ಷಾತ್ ಶಿವನನ್ನೇ ದುಡಿಮೆಗೆ ಹಚ್ಚುವ ಕೆಚ್ಚನ್ನೂ ಕೊಡಮಾಡಿತು.[15]

ದಾಸೋಹ ತತ್ವ

ಕಾಯಕ ಮತ್ತು ದಾಸೋಹ ತತ್ವಗಳು ಬೇರೆ ಬೇರೆಯಲ್ಲ. ವಾಸ್ತವವಾಗಿ ಅವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ತತ್ವದ ಎರಡು ಕೊನೆಗಳಿದ್ದಂತೆ. ಕಾಯಕ ಗಳಿಕೆಯ ಮಾರ್ಗವಾದರೆ ದಾಸೋಹ ಬಳಕೆಯ ಮಾರ್ಗ. ಗಳಿಕೆಯಿಲ್ಲದೆ ಬಳಕೆ ಸಾಧ್ಯವಿಲ್ಲ. ಅಂತೆಯೇ ದಾಸೋಹವಿಲ್ಲದ ಕಾಯಕಕ್ಕೆ ಬೆಲೆಯಿಲ್ಲ. ಸಂಪತ್ತಿನ ಉತ್ಪಾದನೆ

---

12. ಪಾಪಿಯಧನ ಪ್ರಾಯಶ್ಚಿತ್ತಕ್ಕಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ-ಬಸವಣ್ಣ
13. ನಾನು ಆರಂಭವ ಮಾಡುವೆನಯ್ಯಾ ಗುರು ಪೂಜೆಗೆಂದು .... -''-
    ..... ಎನ್ನೊಡಲ ಅವಸರಕ್ಕೆ ಕುದಿದೆನಾದಡೆ ತಲೆದಂಡ ...... -''-
14. ಇದೇ ಶೂನ್ಯ ಸಂಪಾದನೆಗಳಲ್ಲಿ ಬರುವ ಆಯ್ದಕ್ಕಿ ಮಾರಯ್ಯಗಳ ಸಂಪಾದನೆಯಲ್ಲಿ ಅಂದಿನ ನೇಮಕ್ಕೆ ಅಗತ್ಯವಾದಷ್ಟು ಪ್ರತಿಫಲವನ್ನು ಮಾತ್ರ ಕಾಯಕದಿಂದ ಪಡೆಯಬೇಕು ಎಂಬದನ್ನು ಪ್ರತಿಪಾದಿಸಲಾಗಿದೆ. ಏನೋ ಆಲೋಚನೆಯಲ್ಲಿ ಹೆಚ್ಚಿಗೆ ಆಯ್ದುತಂದ ಅಕ್ಕಿಯನ್ನು ಕಂಡು ಮಾರಯ್ಯನ ಪತ್ನಿ ಲಕ್ಕಮ್ಮ ಆಸೆಯೆಂಬು ಅರಸಿಗಲ್ಲದೆ ಶಿವಭಕ್ತರಿಗಲ್ಲ, ಹೆಚ್ಚಿನ ಅಕ್ಕಿಯನ್ನು ಅಲ್ಲಿಯೇ ಸುರಿದು ಬನ್ನಿ ಎನ್ನುತ್ತಾಳೆ.

14-15 ಇನ್ನೊಂದು ಪ್ರಸಂಗ - ನೂಲಿಯ ಚಂದಯ್ಯಗಳ ಸಂಪಾದನೆಯಲ್ಲಿ ಶಿವನೂ ತನ್ನೊಂದಿಗೆ ಕೂಡಿ ದುಡಿಯಬೇಕೆಂಬ ಷರತ್ತಿನ ಮೇಲೆ ನೂಲಿಯ ಚಂದಯ್ಯ ಇಷ್ಟಲಿಂಗವನ್ನು ಮರಳಿ ಸ್ವೀಕರಿಸುತ್ತಾನೆ. ಅಂತೆಯೇ ಲಿಂಗಯ್ಯಕೊಂಡುತಂದ ಬೆವರಿಗೆ ಮಾರಿದ ಬೆಲೆಗಾಗಿ ಝುಂಕಿಸಿ ಹಿಂತಿರುಗಿ ಕೊಡಿಸುತ್ತಾನೆ.

ಮತ್ತು ವಿತರಣೆಯ ಸೂತ್ರಗಳಾಗಿ ಶರಣರು ಕಾಯಕ ದಾಸೋಹ ತತ್ವಗಳನ್ನು ರೂಪಿಸಿದರು.

ದಾಸೋಹವೆಂಬುದು 'ದಾಸೋಹಂ' ಎಂಬುದರ ವ್ಯತ್ಯಸ್ತರೂಪ. 'ದಾಸಃ ಅಹಂ' ನಾನು ದಾಸ ಎಂಬ ಭಾವನೆಯಿಂದ ಮಾಡುವ ಸೇವೆಯೇ ದಾಸೋಹ. ದಾಸೋಹವೆಂಬುದು ಸತ್ಯ ಶುದ್ಧ ಕಾಯಕದಿಂದ ಅರ್ಜಿಸಿದುದನ್ನು ಸಮಾಜಕ್ಕೆ ವಿನಿಯೋಗಿಸುವುದು ಎಂಬ ಅರ್ಥವನ್ನು ಒಂದು ಸ್ತರದಲ್ಲಿ[16] ನೀಡಿದರೆ ಮುಂದುವರೆದು ಜಗತ್ತಿನ ಸಚರಾಚರವೂ ಭಗವಂತನ ಸೃಷ್ಟಿ, ಎಲ್ಲವೂ ಶಿವಮಯ, ಈ ಬ್ರಹ್ಮಾಂಡದ ಒಂದು ಭಾಗ ನಾನು, ನಾನೂ ಪರಮಾತ್ಮನ ಒಂದು ಅಂಶ. ಜೀವಾತ್ಮನಾದ ನಾನು ನನ್ನ ಪರಿಮಿತ ವ್ಯಕ್ತಿತ್ವನ್ನು ನಿರಸನಗೊಳಿಸಿ ಮಹತ್ತಿನಲ್ಲಿ ಸಂಲಗ್ನವಾಗುವುದೇ ನನ್ನಗುರಿ. ಆದಕ್ಕಾಗಿ ನಾನು ಸಮರ್ಪಣ ಭಾವದಿಂದ ಶರಣಾಗುತ್ತೇನೆ. ನನ್ನದೆನ್ನುವ ಎಲ್ಲವನ್ನೂ ನಿನ್ನ ಪದತಲದಲ್ಲಿ ಈಡಾಡುತ್ತೇನೆ. ಆಗ ನಾನು ನೀನೇ ಆಗುತ್ತೇನೆ. ಎಂಬ ಆತ್ಮನ ಅಹಂ ವರ್ಜಿತ ಶರಣಾಗತಿಯ ಭಾವವನ್ನು ತುರೀಯ ಸ್ತರದಲ್ಲಿ ಸೂಚಿಸುತ್ತದೆ. ಇದು ಅಲೌಕಿಕ ಸ್ತರ.

ಆದರೆ ಲೌಕಿಕ ಸ್ತರದಲ್ಲಿ ದಾಸೋಹವೆಂದರೆ-ತ್ರಿವಿಧ ದಾಸೋಹವೆಂದರೆ-ತನು,ಮನ, ಧನವನ್ನು ಗುರು ಲಿಂಗ ಜಂಗಮಕ್ಕೆ ಅರ್ಪಿಸಿ ಕೃತಕೃತ್ಯ ಭಾವನೆಯನ್ನು ಹೊಂದುವುದೇ ಆಗಿದೆ. ದಾಸೋಹವೆಂದರೆ ದಾನವಲ್ಲ. ದಾನಿ ಪ್ರತಿಫಲವಾಗಿ ಪುಣ್ಯವನ್ನು ನಿರೀಕ್ಷಿಸುತ್ತಾನೆ, ಕೃತಜ್ಞತೆಯನ್ನು ಬಯಸುತ್ತಾನೆ. ಆದರೆ ದಾಸೋಹಿ ಇವಾವುಗಳನ್ನೂ ನಿರೀಕ್ಷಿಸದೇ ಕರ್ತವ್ಯ ದೃಷ್ಟಿಯಿಂದ ದಾಸೋಹ ಮಾಡುತ್ತಾನೆ. ದುಡಿಯುವುದು ಹೇಗೆ ವ್ಯಕ್ತಿಯ ಕರ್ತವ್ಯವೋ ಅಂತೆಯೇ ದಾಸೋಹವೂ ಅವನಿಗೆ ಬದ್ಧತೆಯೇ ಆಗಿದೆ. ಕಾಯಕ ಜೀವಿ ತಾನು ದುಡಿದುದಕ್ಕೆ ಯಜಮಾನನಲ್ಲ. ದುಡಿದದ್ದು ಸಮಾಜದ ಸ್ವತ್ತು. ಅವನು ಕೇವಲ ಅದರ ಧರ್ಮದರ್ಶಿ ಮಾತ್ರ. ಹಾಗಾಗಿ ಸ್ವಂತದ್ದಲ್ಲದ ಆ ದ್ರವ್ಯ/ಸಂಪತ್ತನ್ನು ಅವನು ದಾನವೆಂದು ನೀಡಲಾಗುವುದಿಲ್ಲ. ಕೆರೆಯ ನೀರನ್ನು ಕೆರೆಗೆ ಚೆಲ್ಲುವಂತೆ ನಿರ್ವಿಕಲ್ಪ ಭಾವದಿಂದ ಅದನ್ನು ಜಂಗಮಕ್ಕೆ ಅಂದರೆ ಸಮಾಜಕ್ಕೆ ದಾಸೋಹ ರೂಪದಲ್ಲಿ ವಿನಿಯೋಗಿಸುತ್ತಾನೆ.[17] ಲಿಂಗದ ಬಾಯಿ ಜಂಗಮ. ತರುಲತಾದಿಗಳ ಬೇರಿಗೆ ನೀರೆರೆದರೆ ಮೇಲೆ ಕೊಂಬೆ ರೆಂಬೆಗಳು

---

16. ದಾಸೋಹವೆಂದರೆ ಆಹಾರ ದಾನವೆಂಬ ಅರ್ಥ ಪ್ರಚಲಿತದಲ್ಲಿದೆ. ಜಂಗಮ ರೂಪಿ ಲಿಂಗಕ್ಕೆ ಅರ್ಪಿಸುವ ಅನ್ನ, ಆಸರೆ, ಅಕ್ಷರ ಮುಂತಾದ ವಸ್ತುಗಳಲ್ಲಿ ಅಶನವೇ ಮೂಲಭೂತ ಅಗತ್ಯವೂ ಮುಖ್ಯವೂ ಆದುದರಿಂದ ಇಂದು ದಾಸೋಹವೆಂದರೆ ಊಟ ಅಥವಾ ಪ್ರಸಾದ ನೀಡಿಕೆಯೆಂಬರ್ಥ ಪ್ರಾಥಮಿಕವಾಗಿ ಸ್ಫುರಿಸುತ್ತದೆ.

17. ''ಕೆರೆ ಬಾವಿ ಹೂದೋಟ ಚೌಕ ಛತ್ರಂಗಳ ಮಾಡಿ ಜೀವಂಗಳ ಮೇಲೆ ಕೃಪೆಯುಂಟೆಂದು ಎನ್ನ ದಾನಿ ಎಂಬರು. ಆನು ದಾನಿಯಲ್ಲ. ಅಯ್ಯಾ ನೀ ಹೇಳಿದಂತೆ ಮಾಡಿದೆನು, ನೀ ಬರಹೇಳಿದಲ್ಲಿ ನಾ ಬಂದೆನು''-ಸಿದ್ಧರಾಮ

ಪಲ್ಲವಿಸುವಂತೆ ಜಂಗಮಕ್ಕೆ (ಜಂಗಮ ಶಬ್ದವನ್ನು ಶರಣರು ಚೈತನ್ಯಶೀಲ ಸಮಾಜಕ್ಕೆ ಅನ್ವಯಿಸಿರುವುದೂ ಉಂಟು) ದಾಸೋಹ ಮಾಡಿದರೆ ಲಿಂಗಕ್ಕೆ ನೈವೇದ್ಯ ಮಾಡಿದಂತಾಗುತ್ತದೆ. ಹಾಗಾಗಿ ದಾಸೋಹಿಯು ತಾನು ಮಾಡುವ ದಾಸೋಹದ ಬಗೆಗೆ ಅಹಂ ಪ್ರಜ್ಞೆಯನ್ನು ಹೊಂದಿರಬಾರದು.[18] ಹಾಗೆಯೇ ಅಲ್ಲಿ ದೈನ್ಯತೆಯೂ ಇರಬಾರದು. ತನು ಮನವನ್ನು ಬಳಲಿಸಿ ತಂದ ಕೆಚ್ಚಿನ ತೃಪ್ತಿಯ ವಿಶಿಷ್ಟ ಉತ್ಸಾಹವಿರಬೇಕು.[19]

ಶರಣರು ಕಾಯಕದಿಂದ ಬರುವ ಪ್ರತಿಫಲವನ್ನು ನಿರಾಕರಿಸಲಿಲ್ಲ. ಹಾಗೆಯೇ ಅದನ್ನು ಸ್ವಾರ್ಥಕ್ಕಾಗಿ ಬಳಸುವ ಆಸೆದೋರಲೂ ಇಲ್ಲ. ಆದರೆ ಅವರು ನಿರಾಶಾಪರರೂ ಅಲ್ಲ. ಅವರು ತಮ್ಮ ಆಸೆಯನ್ನು ಹಿರಿಯಾಸೆಯಾಗಿ ಮಾರ್ಪಡಿಸಿದರು. (ದುರಾಸೆ ಅಲ್ಲ). ಅಂದರೆ ತನಗಾಗಿ, ತನ್ನವರಿಗಾಗಿ ಮಾತ್ರವೆಂದು ದುಡಿಯುವವನಿಗಿಂತ ತನ್ನ ಊರಿಗಾಗಿ ನಾಡಿಗಾಗಿ ಸಮಾಜಕ್ಕಾಗಿ ಎಂದು ದುಡಿಯುವವನ ಸ್ವಾರ್ಥ ಹಿರಿದಾದುದು-ಯೋಗ್ಯತೆಯಲ್ಲಿ.ಶರಣರು ಜೀವಿಗಳ ಸಂಕುಚಿತತೆಯನ್ನು ಕಿತ್ತೆಸೆದರು. ದುಡಿತಗಳಿಕೆಗಳು ನನ್ನ ಹೊಟ್ಟೆಪಾಡಿಗಾಗಿ ಮಾತ್ರವಲ್ಲ ಸಮಾಜಕ್ಕೂ ಅದರ ಬಳಕೆಯಾಗಬೇಕು. ಇದರಿಂದ ವ್ಯಕ್ತಿಯೂ ದೊಡ್ಡವನಾಗುತ್ತಾನೆ, ಸಮಾಜಕ್ಕೂ ಒಳಿತಾಗುತ್ತದೆ ಎನ್ನುವ ಶರಣರಿಗೆ ಇಡಿಯ ಸಮಾಜವೇ ಜಂಗಮ ರೂಪಿನಲ್ಲಿ ಕಾಣಿಸಿದೆ.

ಅಸಂಗ್ರಹ ಅಥವ ಅಪರಿಗ್ರಾಹ್ಯತತ್ವ ದಾಸೋಹದ ಜೀವಾಳ. ಉತ್ಪಾದನೆಯ ಉದ್ದೇಶ ಉಪಭೋಗವಲ್ಲದೇ ಸಂಗ್ರಹಣೆಯಲ್ಲ. ಬಹುಜನರ ದುಡಿಮೆಯ ಫಲವಾದ ಸಂಪತ್ತನ್ನು ಕೆಲವರು ವ್ಯಾಪಾರ ವ್ಯವಹಾರದ ವ್ಯಾಜದಲ್ಲಿ ಸಂಗ್ರಹಿಸಿಡುವುದು ತಪ್ಪು. ಸಂಪತ್ತಿನ ಸಂಗ್ರಹ ಆರಂಭವಾದಾಗಲೇ ವಿತರಣೆಯಲ್ಲಿನ ತಾರತಮ್ಯವೂ ಆರಂಭವಾಗುತ್ತದೆ. ಮನುಷ್ಯನ ನಾಳಿನ ಗೀಳು ಅವನ ಸಂಗ್ರಹ ಆರಂಭವಾದಾಗಲೇ ವಿತರಣೆಯಲ್ಲಿನ ತಾರತಮ್ಯವೂ ಆರಂಭವಾಗುತ್ತದೆ. ಮನುಷ್ಯನ ನಾಳಿನ ಗೀಳು ಅವನ ಸಂಗ್ರಹ ಬುದ್ಧಿಗೆ ಮೂಲ. ತಾನು ಗಳಿಸಿಟ್ಟುದರ ಮೇಲಿನ ಹಕ್ಕು ಸ್ಥಾಪನೆಗೆ ಹೆಣಗಾಟ, ದುರ್ಬಲರ ಆಸ್ತಿಗೆ ಕೈಚಾಚುವ

---

18. ಮಾಡಿದೆನೆನ್ನದಿರಾ ಲಿಂಗಕ್ಕೆ
ಮಾಡಿದೆನೆನ್ನದಿರಾ ಜಂಗಮಕ್ಕೆ
ಮಾಡಿದೆನೆಂಬುದು ಮನದಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ-ಬಸವಣ್ಣ

19. ಅಯ್ಯ ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನು ಮನ ಧನವಲಸದಂತೆ ಮಾಡಯ್ಯ
ತನುದಾಸೋಹಕ್ಕೆ ಉಬ್ಬುವಂತೆ ಮಾಡು
ಮನ ದಾಸೋಹಕ್ಕೆ ಲೀಯವಂತೆ ಮಾಡಯ್ಯ
ಧನ ದಾಸೋಹಕ್ಕೆ.... - ಬಸವಣ್ಣ

ದುರಾಶಾಪರತೆ, ಮೇಲಾಟ ಇವೆಲ್ಲ ಸಮಾಜ ಸ್ವಾಸ್ಥ್ಯದ ಅಸಮತೋಲನಕ್ಕೆ ಹೇತುಗಳು. ದಾಸೋಹ ತತ್ವದ ಮೂಲಕ ಶರಣರು ಆಸ್ತಿಯ ಹಕ್ಕನ್ನು ನಿರಾಕರಿಸಿದರು. ಇದರಿಂದ ವ್ಯಕ್ತಿಯ ಕಾಳಜಿಯನ್ನು ಸಮಾಜವೇ ಹೊತ್ತುಕೊಳ್ಳುವಂತಾಯಿತು. ನಾಳಿನ ಚಿಂತೆಯಿಂದ ಮುಕ್ತನಾದ ಶರಣ ನಿರ್ವಿಕಲ್ಪ ಮನದಿಂದ ಕಾಯಕದಿಂದ ಗಳಿಸಿದ್ದನ್ನು ದಾಸೋಹದಲ್ಲಿ ವಿನಿಯೋಗಿಸುವಂತಾಯ್ತು. ಹೆಚ್ಚಿನ ಸಂಪಾದನೆಯನ್ನು ಅವರು ದಾಸೋಹದಲ್ಲಿ ತೊಡಗಿಸುವುದರಿಂದ ಸಮಾಜದ ದೀನರು, ದಲಿತರು, ಅಂಗವಿಕಲರು, ಮಕ್ಕಳು, ಅಸಹಾಯಕರು ಸಹಜವಾಗಿ ಹೊಟ್ಟೆಹೊರೆಯುವಂತೆಯೂ ಆಯಿತು. ಕಾಯಕ-ದಾಸೋಹವೆಂಬ ತಂತ್ರಬಳಸಿ ಇಡಿಯಾಗಿ ಸಮಾಜದ ಸ್ವಾಸ್ಥ್ಯವನ್ನೇ ಅನಾಯಾಸವಾಗಿ ಸುಧಾರಿಸಿದ ಕೀರ್ತಿ ಶರಣರದ್ದಾಯಿತು. ಈ ಬಗೆಯ ಕ್ರಾಂತಿ ಜಗತ್ತಿನಲ್ಲಿಯೇ ವಿಶಿಷ್ಟವೂ, ಅದ್ಭುತವೂ ಆಯಿತು.

ಕಾಯಕ ತತ್ವ ಮತ್ತು ಸಮಾಜವಾದ

ಮಾರ್ಕ್ಸ್ ವಾದದಂತಹ ಆಧುನಿಕ ಸಮಾಜವಾದದ ವಿಚಾರಗಳನ್ನು ಶರಣರ ಸಮಾಜ ಸುಧಾರಣೆಯ ಚಿಂತನೆಗಳೊಂದಿಗೆ ಹೋಲಿಸುವುದುಂಟು. ಮೇಲ್ನೋಟಕ್ಕೆ ಅವುಗಳಲ್ಲಿ ಕೆಲವು ಸಮಾನಾಂಶಗಳು ಇರುವುವಾದರೂ ಕೆಲವು ಮೂಲಭೂತ ಭಿನ್ನತೆಗಳೂ ಇಲ್ಲದಿಲ್ಲ. ಆರ್ಥಿಕ ಅಸಮಾನತೆಯೇ ಮಾನವನ ದುಃಖಕ್ಕೆಲ್ಲ ಮೂಲವಾದಂತೆ ಧರ್ಮಗಳು ಶೋಷಣೆಯ ಕೇಂದ್ರಗಳಾಗಿವೆ ಎನ್ನುತ್ತದೆ ಮಾರ್ಕ್ಸ್‌ವಾದ. ದೈವಿಕ ಅಧಿಕಾರದ ಸೋಗಿನಿಂದ ಮಾನವತೆಯನ್ನು ಒಡೆದು ಆಳುವ ಧರ್ಮಗಳು ಶೋಷಣೆಗೆ ಕಾರಣವಾದುದನ್ನು ಅಲ್ಲಗಳೆಯುವಂತಿಲ್ಲವಾದರೂ ಭೌತಿಕ ಸುಖದಲ್ಲಿಯೇ ಎಲ್ಲವನ್ನೂ ಹುಡುಕುವ ಮಾರ್ಕ್ಸ್‌ವಾದದಂತಹ ನಾಸ್ತಿಕವಾದ ಇನ್ನೊಂದು ಅತಿರೇಕಕ್ಕೆ ಹೋಯಿತು. ಸಾಮಾಜಿಕ ಸಮಾನತೆಯಲ್ಲಿ ಆರ್ಥಿಕತೆಯ ಮಹತ್ವವನ್ನು ನಿರಾಕರಿಸುವಂತಿಲ್ಲವಾದರೂ ವರ್ಗರಹಿತ, ಆರ್ಥಿಕ ಸಮಾನತೆಯ ಸ್ಥಾಪನೆಯೊಂದೇ ಎಲ್ಲ ಸಮಸ್ಯೆಗಳಿಗೂ ಸಮಾಧಾನವಲ್ಲ. ಮನುಷ್ಯನಿಗೆ ಹೊರಗಡೆ ಒಂದು ದೇಹವಿರುವಂತೆ ಒಳಗೆ ಮನಸ್ಸೂ ಒಂದಿದೆ. ಅದರ ಆಂತರಿಕ ಹಸಿವು ಆಧ್ಯಾತ್ಮದಿಂದ ಮಾತ್ರ ಅಡಗುತ್ತದೆ. ಇದನ್ನು ಬಲ್ಲವರಾಗಿದ್ದ ಶರಣರು ಸಂತುಲಿತ ಭೌತಿಕ ಮತ್ತು ಆಧ್ಯಾತ್ಮಿಕ ವಿಚಾರಗಳ ಹಂದರದ ಮೇಲೆ ಸಮಾಜ ಸುಧಾರಣೆಯ ವಿಚಾರಗಳನ್ನು ಬೆಳೆಸಿದರು. ಅವರು ಇಹವನ್ನು ತ್ಯಜಿಸುವ ಬದಲು ಪರಕ್ಕೆ ಅದನ್ನು ಮೆಟ್ಟಿಲಾಗಿಸಿಕೊಂಡರು. ಐಹಿಕ-ಭೌತಿಕ ವಿಚಾರಗಳೊಟ್ಟಿಗೆ ಹದವಾಗಿ ಪಾರಮಾರ್ಥಿಕ ವಿಚಾರಗಳನ್ನು ಬೆರೆಸಿದರು. ಹಾಗೆ ಬೆರೆಸಿ ತಯಾರಿಸಿದ ರಸಗಟ್ಟಿಗಳಲ್ಲೊಂದು ಕಾಯಕ ದಾಸೋಹ ತತ್ವ. ಅವರ ದೃಷ್ಟಿಯಲ್ಲಿ ಆಧ್ಯಾತ್ಮಿಕ ವಿಚಾರದಿಂದ ಹೊರತಾದ ಕಾಯಕಕ್ಕೆ ಅರ್ಥವಿಲ್ಲ. ಹಾಗೆಯೇ ಶುಷ್ಕ ಆಧ್ಯಾತ್ಮವೂ ಅರ್ಥಹೀನ, ಅನಾವಶ್ಯಕ.

ಆಧುನಿಕ ಸಮಾಜವಾದದಲ್ಲಿ ದುಡಿಮೆಯು ಸಮಾಜ ಜೀವಿಯ ಹಕ್ಕು. ಆದರೆ

ಶರಣರ ಅನ್ವಯ ಕಾಯಕವು ಸಮಾಜ ಜೀವಿಯ ಬಾಧ್ಯತೆ. ದುಡಿಮೆಗೆ ತಕ್ಕ ಪ್ರತಿಫಲವನ್ನು ಬಾರ್ಗೇನ್ (ಚೌಕಾಸಿ) / ಹಕ್ಕೊತ್ತಾಯದ ಮೂಲಕ ಪಡೆಯಲು ಯತ್ನಿಸಿದರೆ ಕಾಯಕ ತತ್ವವು ಬೆವರಿಗೆ ಮೀರಿದ ಬೆಲೆಯನ್ನು ನಿರಾಕರಿಸುತ್ತದೆ. ಮಾರ್ಕ್ಸ್‌ವಾದವು ಭೌತಿಕ ಪ್ರಗತಿಯಲ್ಲಿ ನೆಮ್ಮದಿಯನ್ನು ಕಂಡರೆ ಶರಣರ ಕಾಯಕ ತತ್ವವು ಲೌಕಿಕ, ಅಲೌಕಿಕ ತತ್ವಗಳ ಸಮನ್ವಯದಲ್ಲಿ ಶಿವವನ್ನು ಅರಸುತ್ತದೆ.

ಮಾರ್ಕ್ಸ್‌ವಾದ ಮತ್ತು ಬಸವಣ್ಣನವರ ತತ್ವಗಳಲ್ಲಿ ಇರುವ ಸಮಾನ ಅಂಶವೆಂದರೆ ಮಾನವತಾವಾದ. ಇಬ್ಬರೂ ಮಾನವನ ದುಃಖಕ್ಕಾಗಿ ಮರುಗಿದರು ಮತ್ತು ಅದನ್ನು ನಿವಾರಿಸಲು ಹೆಣಗಿದರು. ಶೋಷಣೆಯ ಮೂಲಗಳ ನಿವಾರಣೆ, ಸಂಪತ್ತಿನ ಹಂಚಿಕೆಯ ಕುರಿತು ಇಬ್ಬರ ವಿಚಾರದಲ್ಲೂ ಸಾಕಷ್ಟು ಸಾಮ್ಯವಿದೆ. ದುಡಿಮೆ ವ್ಯಕ್ತಿಯನ್ನು ದೊಡ್ಡವನನ್ನಾಗಿ ಮಾಡುತ್ತದೆ. ಈ ಅಹಂ ನೆತ್ತಿಗೇರಬಾರದೆಂದು ದಾಸೋಹತತ್ವ ರೂಪಿತವಾಗಿದೆ. ಮಾರ್ಕ್ಸ್ ರೀತ್ಯ ದುಡಿಮೆಗಾರನ ಅಗತ್ಯ ನೀಗಿ ಉಳಿದದ್ದು ಸ್ಟೇಟ್‌ನ ಅಂದರೆ ಸಮಾಜದ ಒಳಿತಿಗೆ ವಿನಿಯೋಗವಾಗಬೇಕು.

ಮಾರ್ಕ್ಸ್ ವಾದದಲ್ಲಿರುವಂತೆ ಕಾಯಕ-ದಾಸೋಹ ತತ್ವದಲ್ಲೂ ಕೆಲವು ದೋಷಗಳು ಮಿತಿಗಳು ಇವೆ. ಮಾರ್ಕ್ಸ್ ವಾದದಲ್ಲಿ ದುಡಿಮೆಗಾರನಿಗೆ ಅವನ ದುಡಿಮೆಗೆ ತಕ್ಕ ಪ್ರತಿಫಲ ದಕ್ಕದಿದ್ದಲ್ಲಿ ಅದನ್ನು ಹಕ್ಕೊತ್ತಾಯದಿಂದ ಸಾಧಿಸಬೇಕೆಂದು ಹೇಳಿದೆ. ಆದರೆ ಶರಣರಲ್ಲಿ ಕಾಯಕಕ್ಕೆ ಪ್ರತಿಫಲವು ದೊರೆಯದಿದ್ದಾಗ ಅದನ್ನು ಯಾವ ರೀತಿ ದಕ್ಕಿಸಿಕೊಳ್ಳಬೇಕೆಂಬುದರ ಬಗ್ಗೆ ಸಿದ್ಧಾಂತವಿಲ್ಲ. ಪ್ರಚಲಿತ ವ್ಯವಸ್ಥೆಯನ್ನು ವಿರೋಧಿಸುತ್ತಾ ಪ್ರತಿಭಟನಾತ್ಮಕವಾಗಿ ಹುಟ್ಟಿದ ಶರಣಕ್ರಾಂತಿಯಲ್ಲಿ ಕಾಯಕಕ್ಕೆ ಪ್ರತಿಫಲ ದಕ್ಕದಿದ್ದಾಗ ಅದಕ್ಕೆ ಯಾವ ಪ್ರತಿಭಟನೆಯನ್ನೂ ಹೇಳದಿರುವುದು ಆಶ್ಚರ್ಯಕರವಾಗಿದೆ.

ಕಾಯಕದಂತೆಯೇ ಶರಣರಿಗೆ ದಾಸೋಹವೂ ಮೀರಬಾರದ ಕಟ್ಟಳೆಯೇ ಆಗಿತ್ತು. ಆದರೆ ಪ್ರತಿಯೊಬ್ಬರೂ ದುಡಿದೇ ಉಣ್ಣಬೇಕೆಂಬುದು ಶರಣಸಮಾಜದ ನಿಷ್ಠುರ ನಿಲುವಾಗಿತ್ತಷ್ಟೆ ? ಎಲ್ಲರೂ ದುಡಿದೇ ತಿನ್ನುವವರಾದರೆ ದಾಸೋಹವನ್ನು ಮಾಡುವುದಾದರೂ ಯಾರಿಗೆ ? ಬಸವಣ್ಣನವರೇ ಒಂದೆಡೆಯಲ್ಲಿ ಬೇಡುವವರಿಲ್ಲದೆ ನಾನು ಬಡವನಾದೆ ಎಂದಿದ್ದಾರೆ. ಅಶಕ್ತರು ಎಷ್ಟು ಮಂದಿ ಇದ್ದಾರು ? ದೀನರಲ್ಲದಿದ್ದರೆ ಜಂಗಮರಿಗಾದರೂ ನೀಡಿ ದಾಸೋಹ ನಿಯಮವನ್ನು ಆಚರಿಸಬೇಕಾಯಿತು. ಲಿಂಗದ ಬಾಯಿ ಜಂಗಮವೆನ್ನುವ ಮಾತಿನಲ್ಲಿ ಜಂಗಮವೆಂದರೆ ಸಮಾಜವೆಂಬ ಅರ್ಥವೇ ಪ್ರಧಾನವಾಗಿದ್ದರೂ 'ಜಂಗಮ' ವೆಂಬೊಂದು ವರ್ಗ ರೂಪಿತವಾಯಿತು. ದಾಸೋಹಕ್ಕೆ ತಾವು ಹಕ್ಕುದಾರರೆಂದು ಅದು ಅಪರೋಕ್ಷಭಾವಿಸಿತು. ವೃತ್ತಿ/ಪ್ರವೃತ್ತಿಯಲ್ಲಿ ಜಂಗಮರಲ್ಲದಿದ್ದರೂ ಅಶನಕ್ಕಾಗಿ ಕಾವಿಯ ವಸನ ಧರಿಸಿದ ಜಂಗಮರಿಂದಾಗಿ ಸಮಾಜದಲ್ಲಿ ಸೋಮಾರಿಗಳ ಗುಂಪು ಹುಟ್ಟಿಕೊಂಡಿತು. ಬಸವಣ್ಣನವರನ್ನೂ ಸೇರಿಸಿಕೊಂಡು ಇನ್ನಿತರ ಶರಣರೂ ಇಂತಹ ಅಶನಾರ್ಥಿ ಜಂಗಮರನ್ನು

ತಮ್ಮ ವಚನಗಳಲ್ಲಿ ಟೀಕಿಸಿದ್ದಾರೆ. ಇದನ್ನು ನೋಡಿದಾಗ ಸಂಪೂರ್ಣ ಸ್ವಾವಲಂಬೀ ಸಮಾಜ ನಿರ್ಮಾಣದ ಶರಣರ ಯೋಜನೆ ಪೂರ್ತಿಯಾಗಿ ಯಶಸ್ವಿಯಾಗದಿರುವುದು ಕಂಡುಬರುತ್ತದೆ.

ಒಂದು ಒಗಟು

ಕಾಯಕಗಳಲ್ಲಿ ಮೇಲು ಕೀಳುಗಳನ್ನು ನಿರಾಕರಿಸಿದ ಶರಣರು ಸಮಾಜದಲ್ಲಿ ಎಲ್ಲ ತರಹದ ಕಾಯಕಗಳೂ ಅಗತ್ಯವೆಂದು ಭಾವಿಸಿ ಪ್ರೋತ್ಸಾಹಿಸಿದರು. ಇದರಿಂದಾಗಿ ಕಾಯಕ ಗೌರವ ಸ್ಥಾಪಿತವಾಯಿತು. ದುಡಿಮೆಗಾರರು ಕೆಚ್ಚಿನಿಂದ ಎದ್ದು ನಿಂತರು. ಅವರಿಗೆ ತಮ್ಮ ಕಾಯಕಗಳ ಬಗ್ಗೆ ಇದ್ದ ಕೀಳರಿಮೆಗಳು ತೊಲಗಿದವು. ವಚನಕಾರರು ತಮ್ಮ ಹೆಸರಿನ ಮುಂದೆ ತಾವು ಅವಲಂಬಿಸಿದ ಕಾಯಕದ ಹೆಸರುಗಳನ್ನೂ ಉದಾಹರಣೆ-ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಕನ್ನದ ರಾಮಯ್ಯ, ಸೂಳೆ ಸಂಕವ್ವೆ ಮುಂತಾಗಿ ಇಟ್ಟುಕೊಂಡಿರುವುದು ಇದನ್ನು ಸ್ಪಷ್ಟಪಡಿಸುತ್ತದೆ. ವಚನಕಾರರಲ್ಲಿ ಬರುವ ಕಾಯಕ ವೈವಿಧ್ಯ ಬೆರಗು ಹುಟ್ಟಿಸುವಂತಾದ್ದು. ಶರಣರೇನೋ ಎಲ್ಲ ಕಾಯಕಗಳೂ ಗೌರವಾರ್ಹವೆಂದರು. ಆದರೆ ಕಳವು, ಸೂಳೆಗಾರಿಕೆಯಂತಹ ವೃತ್ತಿಗಳು ಅಂದು ಮಾನ್ಯವಾಗಿದ್ದವೆ ? (ಇಂದಂತೂ ಅಲ್ಲವೆಂಬುದು ಸ್ಪಷ್ಟ) ಎಂಬ ಅನುಮಾನ ಕಾಡುತ್ತದೆ. ಶರಣ ಚಳವಳಿಯ ವ್ಯಾಪ್ತಿಗೆ ಬಂದನಂತರ ಆ ವ್ಯಕ್ತಿಗಳು ಅವರ ಈ ಆಕ್ಷೇಪಾರ್ಹ ವೃತ್ತಿಗಳನ್ನು ತ್ಯಜಿಸಿದ್ದರು ಎಂದಿಟ್ಟುಕೊಂಡರೂ ತಮ್ಮ ತಮ್ಮ ವಚನಗಳಲ್ಲಿ ಅವರು ಆಧ್ಯಾತ್ಮಿಕ ಅನುಭವ ನಿರೂಪಣೆಗೆ ಹಿಂದೆ ತಾವು ಅವಲಂಬಿಸಿದ್ದ ಆ ಆಕ್ಷೇಪಾರ್ಹ ವೃತ್ತಿಯ ಪಾರಿಭಾಷಿಕ ಪದಗಳನ್ನೇ ಬಳಸಿದ್ದಾರಲ್ಲ ಇದು ಹೇಗೆ ಎಂಬುದು ಒಂದು ಒಗಟಾಗೇ ಉಳಿಯುತ್ತದೆ.

ಕಾಯಕ ದಾಸೋಹ ತತ್ವಗಳು ತಮ್ಮ ಕೆಲವು ಮಿತಿಗಳ ನಡುವೆಯೂ-ಆಧುನಿಕ ಜೀವನ ಮೌಲ್ಯಗಳು ಮತ್ತು ಮಾನವ ಹಕ್ಕುಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಅವುಗಳ ಸತ್ಯ ಹಾಗೂ ಸಾರ್ವಕಾಲಿಕತೆಯು ಎದ್ದು ತೋರುವುದರಿಂದ ಅವುಗಳು ಕಾಲಾತೀತ ಪ್ರಸ್ತುತತೆಯನ್ನು ಪಡೆದಿವೆಯೆಂಬುದು ಅರಿವಾಗುತ್ತದೆ. ಕಾಯಕದ ಆಯ್ಕೆ ವ್ಯಕ್ತಿಗೇ ಬಿಟ್ಟದ್ದು ಹುಟ್ಟಿನಿಂದ ವೃತ್ತಿಗಳು ಹೇರಲ್ಪಡಬಾರದು ಎಂಬ ನಿಲುವಿನಿಂದಾಗಿ ಇದು ಕರ್ಮ ಸಿದ್ಧಾಂತದಿಂದಲೂ, ಕರ್ಮ ನನ್ನದು ಆದರ ಫಲ ನಿನಗೆ (ಭಗವಂತನಿಗೆ) ಬಿಟ್ಟದ್ದು ಎನ್ನುವ ನಿಷ್ಕಾಮ ಕರ್ಮಸಿದ್ಧಾಂತದಿಂದಲೂ ಕಾಯಕ-ದಾಸೋಹ ತತ್ವವು ಬೇರೆಯದೇ ಆಗಿ ಪ್ರಸ್ತುತವಾಯಿತು. ಪ್ರತಿಫಲವನ್ನು ನಿರಾಕರಿಸದಿದ್ದರೂ ಕಾಯಕದಿಂದ ಆರ್ಜಿಸಿದುದನ್ನು ಸಮಾಜಕ್ಕೆ ವಿನಿಯೋಗಿಸುವ ಬದ್ಧತೆಯ ಮೂಲಕ ಅದು ಸಮಾಜಕಲ್ಯಾಣವನ್ನೂ ಯಶಸ್ವಿಯಾಗಿ ಸಾಧಿಸಿತು. ಒಟ್ಟಿನಲ್ಲಿ ಅದು ಇಹಪರಗಳ ಸಾಧನೆಗೆ ಸುಲಭವೂ ಜನಪ್ರಿಯವೂ ಆದ ಮಾರ್ಗವಾಗಿ ಪರಿಣಾಮ ಪಡೆಯುವುದರಲ್ಲಿ ಯಶಸ್ವಿಯಾಯಿತು. ಶರಣ ಚಳುವಳಿಯ ಸಾರಸರ್ವಸ್ವದ ವೈಜಯಂತಿಯೂ ಆಯಿತು. ●

ಪರಾಮರ್ಶನ ಗ್ರಂಥಗಳು

01. "ಕಾಯಕ ಪರಿಣಾಮಿ"
ಸಂ : ಶಾಂತರಸ, ಚೆನ್ನಬಸವಪ್ಪ ಬೆಟ್ಟದೂರು, ಲಿಂಗಣ್ಣ ಸತ್ಯಂಪೇಟೆ, ಎಂ. ಬಡೆಪ್ಪ
ಪ್ರಕಟಣೆ : ಪೂಜ್ಯ ಚನ್ನಬಸವ ಪಟ್ಟದೇವರ ಶತಮಾನೋತ್ಸವ ಸಮಿತಿ. ಭಾಲ್ಕಿ,
ಬೀದರ ಜಿಲ್ಲೆ ಪ್ರ. 1991

02. "ಸಿದ್ಧಗಂಗಾಶ್ರೀ"
ಸಂ : ಪಂಡಿತ ಚನ್ನಪ್ಪ ಎರೆಸೀಮೆ , ಟಿ. ಆರ್. ಮಹಾದೇವಯ್ಯ
ಪ್ರಕಟಣೆ : ಹಳೆಯ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ , 1981

03. "ವಚನಕಾರರ ಪ್ರಮುಖ ಪರಿಕಲ್ಪನೆಗಳು"
ಸಂ : ಷಣ್ಮುಖಯ್ಯ ಅಕ್ಕೂರಮಠ
ಪ್ರ : ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ, ಕೆಂಪೇಗೌಡ ವೃತ್ತ,
ಬೆಂಗಳೂರು - 560 009 ಪ್ರ. 1994

04. "ವಚನ ಪರಿಸರ" - ಡಾ॥ ಓ. ವಿ. ನಾರಾಯಣ ಪ್ರ. 1994

05. "ವಚನ ಸಾಹಿತ್ಯ" - ಡಾ॥ ಎಂ. ಚಿದಾನಂದ ಮೂರ್ತಿ
ಪ್ರ : ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ಪ್ರ. 1975

ವೀರಶೈವ ವಿದ್ಯಾರ್ಥಿ ನಿಲಯಗಳು

ಡಾ॥ ಎಚ್. ಎಂ. ಮರುಳಸಿದ್ಧಯ್ಯ

ಇದು ಅವಲೋಕನವಲ್ಲ, ಚಿಂತನೆ; ಇದು ವರದಿಯಲ್ಲ, ವಿಶ್ಲೇಷಣೆ; ಇದು ಸಂಖ್ಯಾ ನಿರ್ಣಯವಲ್ಲ, ಸತ್ವ-ಸಾಧ್ಯತೆಯ ನಿರೂಪಣೆ; ಇದು ಕೇವಲ ಇಂದಿನ ವಸ್ತುಸ್ಥಿತಿಯ ವಿವರವಲ್ಲ, ಪರಂಪರೆಯು ನವೀನ ಟಿಸಿಲುಗಳನ್ನು ಹೊಮ್ಮಿಸಿದ ಪರಿಶೀಲನೆ.

ವೀರಶೈವ

ವೀರಶೈವವು ಶಕ್ತಿ ವಿಶಿಷ್ಟಾದ್ವೈತ ದರ್ಶನದ ಸತ್ವದಿಂದ ಹಳೆಯ ಭೂಮಿಕೆಯ ಮೇಲೆ ಮೊಳೆಕೆದೋರಿ ಹೊಸ ಉಸಿರನ್ನು ಮೈಗೂಡಿಸಿಕೊಂಡು ಅಪೂರ್ವ ರೆಂಬೆ -ಕೊಂಬೆಗಳನ್ನು ಬೆಳೆಸಿಕೊಂಡ ಧರ್ಮ; ಅಷ್ಟಾವರಣದ ರಕ್ಷಣೆಯೊಳಗೆ ಪಂಚಾಚಾರದ ಅನುಷ್ಠಾನದ ಮೂಲಕ ಷಟ್‌ಸ್ಥಲವನ್ನು ಏರಲು, ಜೀವನವನ್ನು ಇಹ-ಪರಗಳೆರಡರ ಸಮತೋಲನದ ತೊಟ್ಟಿಲನ್ನಾಗಿ ಮಾರ್ಪಡಿಸಿಕೊಳ್ಳಲು ಮಾನವನಿಗೆ ನೆರವಾಗುವ ಧರ್ಮ; ಶರಣ ಕ್ರಾಂತಿಯಿಂದ ಕಾಂತಿಯನ್ನೂ, ಹರಿತವನ್ನೂ, ಸದಾ ಪ್ರಸ್ತುತತೆಯನ್ನೂ, ನಿತ್ಯ ನೂತನತೆಯನ್ನೂ ಪಡೆದ ಧರ್ಮ. ಕಾಯಕ ಮತ್ತು ದಾಸೋಹ ಪರಿಕಲ್ಪನೆಗಳು ವೀರಶೈವದ ಅಪೂರ್ವ ಕೊಡುಗೆಗಳು. ವಿದ್ಯಾರ್ಥಿ ನಿಲಯಗಳು ಅಥವಾ ವೀರಶೈವ ಪರಿಭಾಷೆಯಲ್ಲಿ ಪ್ರಸಾದ ನಿಲಯಗಳು ಈ ಅವಳಿ ಪರಿಕಲ್ಪನೆಗಳ ತಾರ್ಕಿಕ ಮತ್ತು ಕ್ರಿಯಾತ್ಮಕ ಒಡನಾಡಿಗಳು .

ಕಾಯಕ – ದಾಸೋಹ : ಹಕ್ಕು – ಹೊಣೆ

ಪ್ರತಿಯೊಬ್ಬನೂ ಹಕ್ಕು-ಹೊಣೆಗಳನ್ನು ಹೊಂದಿದ್ದಾನೆ : ಈ ಪ್ರಪಂಚದಲ್ಲಿ ಬಾಳಲು, ಅದರಲ್ಲೂ ಸುಖವಾಗಿ, ಆನಂದಮಯವಾಗಿ ಬಾಳಲು, ಅವನಿಗೆ ಹಕ್ಕು ಇದೆ; ಇದು ಮೂಲಭೂತವಾದದ್ದು, ಇದರಿಂದ ಅವನು ವಂಚಿತನಾಗುವಂತಿಲ್ಲ; ಅವನ ಹಕ್ಕಿನ ಸ್ಥಾಪನೆಗೆ ಅವನ ಲಿಂಗ, ವಯಸ್ಸು, ಜಾತಿ, ಧರ್ಮ, ಅಭಿಪ್ರಾಯ, ಮನೋಸ್ಥಿತಿ, ದೈಹಿಕ ರೂಪು- ಸ್ಥಿತಿ, ಸ್ಥಳ, ಶಿಕ್ಷಣ, ಕುಟುಂಬ, ಯಾವುದೂ ಅಡ್ಡಿಯಾಗದು, ಅಡ್ಡಿಯಾಗಕೂಡದು. ಇದು ನಾಣ್ಯದ ಒಂದು ಮುಖ. ಇದರಿಂದಷ್ಟೇ ನಾಣ್ಯದ ಇಡೀ ಸ್ಥಿತಿಯು ಅರ್ಥವಾಗದು. ಅದರ ಇನ್ನೊಂದು ಮುಖದ ಪರಿಶೀಲನೆಯಿಂದ ಮಾತ್ರವೇ ಅದರ ಪೂರ್ಣ ಪರಿಚಯವಾಗುತ್ತದೆ. ಅದೇ ಹೊಣೆ. ಪ್ರತಿಯೊಬ್ಬನಿಗೂ ಪಾತ್ರಗೊಂಚಲಿರುತ್ತದೆ. ಅವನ ಸ್ಥಾನಕ್ಕೆ ಅನುಗುಣವಾಗಿ ಅವನ ಪಾತ್ರವಿರುತ್ತದೆ. ಪಾತ್ರಕ್ಕೆ ತಾಗುವ ಹೊಣೆಗಾರಿಕೆಯಿರುತ್ತದೆ.

ತನಗೆ ಇರುವ ಹೊಣೆಯನ್ನು ಪೂರೈಸುವುದು ಅಗತ್ಯ ಮತ್ತು ಅನಿವಾರ್ಯ. ಅವನು ಹುಟ್ಟಿ ಬೆಳೆದು ಬಾಳುತ್ತಿರುವ ಸಮಾಜಕ್ಕೆ ಸಲ್ಲಿಸಲೇಬೇಕಾದ ಕಾಣಿಕೆಯೇ ಹೊಣೆಯ ಪೂರೈಕೆ. ಎಲ್ಲರೂ ಹೊಣೆಯ ಗುರುತ್ವವನ್ನು ಅರಿತುಕೊಂಡು ಕರ್ತವ್ಯ ನಿರತರಾದರೆ ಸಾಂಗ್ರಾಹಿಕ ಪರಿಣಾಮವಾಗಿ ಸಮಾಜವು ಗಟ್ಟಿಮುಟ್ಟಾಗಿ ವ್ಯವಸ್ಥಿತಗೊಂಡಿರುತ್ತದೆ.

ಕಾಯಕ-ದಾಸೋಹ ಪರಿಕಲ್ಪನೆಗಳನ್ನು ಪರಿಶೀಲಿಸುವಾಗ ಹಕ್ಕು – ಹೊಣೆಗಾರಿಕೆಗಳನ್ನು ಪರಿಶೀಲಿಸುವುದೂ ಅಗತ್ಯ. ಮನೋದೈಹಿಕ ಶಕ್ತಿಯುಳ್ಳ ವ್ಯಕ್ತಿಯು ಕಾಯಕದಲ್ಲಿ ನಿರತನಾಗಿ ಉತ್ಪಾದನೆಯನ್ನು ಮಾಡುವುದು ಅವನ ಹೊಣೆಯಾಗಿದೆ; ತನ್ನ ಉತ್ಪಾದನೆಯಲ್ಲಿ ಕೆಲವು ಭಾಗವನ್ನು ಅನ್ಯರೊಡನೆ ಹಂಚಿಕೊಳ್ಳುವ, ಅಂದರೆ, ಅನ್ಯರಿಗೆ ನೀಡುವ ಹೊಣೆಯ/ ಕರ್ತವ್ಯವು ಅವನದ್ದು. ತನ್ನ ಕಾಯಕದ ಫಲವನ್ನು ಉಣ್ಣುವ ಹಕ್ಕು ಕಾಯಕದಲ್ಲಿ ನಿರತನಾಗಿರುವವನಿಗೆ ಇರುವುದು ಸಹಜವೇ. ಜೊತೆಗೆ, ಅನ್ಯರ ದುಡಿಮೆಯ ಫಲದಲ್ಲಿನ ಕೆಲವು ಭಾಗವನ್ನು ಪಡೆಯುವ ಹಕ್ಕು ಕೂಡಾ ಇವನಿಗೆ ಇದೆ. ಈ ವಿವರದಿಂದ ಉಣ್ಣುವ ಫಲಶೃತಿಯೆಂದರೆ, ಕಾಯಕವನ್ನು ಕೈಗೊಳ್ಳುವುದು ಒಂದು ಹೊಣೆ, ಒಂದು ಕರ್ತವ್ಯ; ದಾಸೋಹ ಮಾಡುವುದೂ ಒಂದು ಹೊಣೆ, ಒಂದು ಕರ್ತವ್ಯ . ಅಂತೆಯೇ ದುಡಿಯಲು ಪ್ರತಿಯೊಬ್ಬನಿಗೂ ಹಕ್ಕು ಇರುವಂತೆ ದಾಸೋಹದ ಮೂಲಕ ಫಲವನ್ನು ಉಣ್ಣುವ ಹಕ್ಕೂ ಇದೆ. ಹೀಗೆ ಕಾಯಕ – ದಾಸೋಹ ಮತ್ತು ಹಕ್ಕು ಹೊಣೆಗಾರಿಕೆಗಳ ಜೋಡಿಗಳು ಅವಿನಾಭಾವದಿಂದ, ಕ್ರಿಯಾತ್ಮಕವಾಗಿ ಬೆರೆತಿವೆ: ಹಕ್ಕು – ಹೊಣೆಗಾರಿಕೆಗಳು ಕಾಯಕದಲ್ಲೂ, ದಾಸೋಹದಲ್ಲೂ ಆಂತರಿಕ ಸತ್ವಗಳಾಗಿರುವುದನ್ನು ಅರಿತುಕೊಳ್ಳಬೇಕು. ದಾಸೋಹವಿಲ್ಲದ ಕಾಯಕವಾಗಲಿ, ಹೊಣೆಗಾರಿಕೆಯಿಲ್ಲದ ಹಕ್ಕಾಗಲಿ ಪೂರ್ಣತ್ವವನ್ನು ಪಡೆಯುವುದಿಲ್ಲ. ಪಾತ್ರೆ – ಪದಾರ್ಥಗಳ ಸಂಬಂಧವು ಈ ಎರಡು ಜೋಡಿಗಳಿಗೆ ಇರುವುದನ್ನು ನೆನೆದುಕೊಂಡಾಗ ಇವುಗಳ ಅವಿನಾಭಾವಸ್ಥಿತಿ ಮತ್ತು ಮಹತ್ವಗಳ ಅರಿವು ನಮಗಾಗುತ್ತದೆ.

ವೀರಶೈವವು ಕಾಯಕದ ಹಿನ್ನೆಲೆಯಲ್ಲಿ ದಾಸೋಹಕ್ಕೆ ಒತ್ತುಕೊಟ್ಟು ವಿವಿಧ ತೆರನ ದಾಸೋಹಗಳನ್ನು ಗುರುತಿಸಿ, ಅವುಗಳ ಅನುಷ್ಠಾನಕ್ಕೆ ನಿರ್ದೇಶನಗಳನ್ನು ನೀಡುತ್ತದೆ. ವೀರಶೈವದ ಅನುಯಾಯಿಗಳು ವೈಯಕ್ತಿಕ ನೆಲೆಯಲ್ಲಿ, ಕುಟುಂಬ, ಮಠ ಅಥವಾ ಸಾಂಘಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ದಾಸೋಹದ ಕೈಂಕರ್ಯವನ್ನು ಕೈಗೊಳ್ಳುವುದನ್ನು ನಿಗದಿಪಡಿಸಲಾಗಿದೆ; ಇದನ್ನು ಮನಃಪೂರ್ವಕವಾಗಿ ಮತ್ತು ಶ್ರದ್ಧಾಪೂರ್ವಕವಾಗಿ ಮಾಡಬೇಕೆಂದು ನಿರ್ದೇಶಿಸಲಾಗುತ್ತದೆ.

ಮನೆ – ಮಠಗಳು

ಪರಂಪರೆಯಿಂದ ವೀರಶೈವ ಮನೆಗಳು ಅದರಲ್ಲೂ ಅನೌಪಚಾರಿಕ ಮಠಗಳೆಂದು ಗಣಿತವಾದ ಜಂಗಮರ ಮನೆಗಳು, ದಾಸೋಹವನ್ನು ನಿತ್ಯ ಕರ್ತವ್ಯವೆಂದು ಪಾಲಿಸಿಕೊಂಡು ಬರುತ್ತಿವೆ. ವೀರಶೈವ ಮಠಗಳಂತೂ ದಾಸೋಹದ ಕೇಂದ್ರಗಳೇ ಆಗಿವೆ. ತಿಳಿವಳಿಕೆಯನ್ನು ನೀಡುವ, ನೈತಿಕ ಪಾಠವನ್ನು ಬೋಧಿಸುವ, ಆಹಾರವನ್ನು ಒದಗಿಸುವ ಕ್ರಿಯೆಯಲ್ಲಿ ಕುಟುಂಬಗಳೂ, ಮಠಗಳೂ ನಿರತವಾಗಿರುತ್ತವೆ. ಜ್ಞಾನ ದಾಸೋಹ ಮತ್ತು ಅನ್ನ

ದಾಸೋಹಗಳೆಂಬ ಎರಡು ಪ್ರಮುಖ ಪ್ರಕಾರಗಳನ್ನು ಸಾಮಾನ್ಯವಾಗಿ ಗುರುತಿಸಿ, ಅವನ್ನು ಪಾಲಿಸಿಕೊಂಡು ಹೋಗಲಾಗುತ್ತದೆ. ಹಳ್ಳಿಗಳಲ್ಲಿ ಯಾರಾದರೂ ಪ್ರಯಾಣಿಕರು, ಅಪರಿಚಿತರು ಆಗಮಿಸಿ ಅಲ್ಲಿಯೇ ಉಳಿದುಕೊಳ್ಳುವ ಪ್ರಸಂಗ ಬಂದಾಗ ಜಂಗಮರ ಮನೆಗಳಲ್ಲಿ ಸಾಮಾನ್ಯವಾಗಿ ಊಟದ ವ್ಯ ವಸ್ಥೆಯನ್ನು ಮಾಡಲಾಗುತ್ತದೆ. ಜಂಗಮರಾದರೂ 'ಕೋರಾನ್ನ ಭಿಕ್ಷೆ' ಮಾಡಿಯೇ ಬದುಕುತ್ತಿದ್ದುದುಂಟು. ಕೋರಾನ್ನವು ಹಕ್ಕಿನಿಂದ ಪಡೆಯುವ ಆಹಾರದಿನಿಸು. ತಮ್ಮ ಧಾರ್ಮಿಕ ಮತ್ತು ನೈತಿಕ ಕರ್ತವ್ಯ ನಿರ್ವಹಣೆಯ ಕಾಯಕದಲ್ಲಿ ತೊಡಗಿರುವ ಜಂಗಮರು ಜನರಿಂದ ಕಾಳು ಕಡಿಗಳನ್ನು ಮತ್ತಿತರ ಜೀವನೋಪಾಯದ ಪಡಿಪದಾರ್ಥಗಳನ್ನು ಹಕ್ಕಿನಿಂದ ಪಡೆಯಲು ಅರ್ಹರಾಗಿರುತ್ತಿದ್ದರು. ಅವರು ಸಾಮಾನ್ಯವಾಗಿ ಅಕ್ಷರಸ್ಥರಾಗಿದ್ದುದರಿಂದ ಅವರು 'ಓಚಯ್ಯ' (ಓದಿಸುವ ಅಯ್ಯ) ಆಗಿ ಕೆಲಸ ಮಾಡುತ್ತಿದ್ದರು; ಅವರ ಮನೆಗಳೇ 'ಓದೋಮಠ' (ಶಾಲೆ) ಗಳಾಗಿರುತ್ತಿದ್ದವು. ಸಮುದಾಯವು ಅವರ ಆವಶ್ಯಕತೆಗಳನ್ನು ಪೂರೈಸುತ್ತಿದ್ದಿತು. ಹೀಗಾಗಿ, ಅನ್ನ - ಆಶ್ರಯದ ಛತ್ರಗಳಿಲ್ಲದ ಹಳ್ಳಿಗಳಲ್ಲಿ ಜಂಗಮರ ಮನೆಗಳೇ ತಂಗುದಾಣಗಳೂ, ಅನ್ನ ಸತ್ರಗಳೂ ಆಗಿರುತ್ತಿದ್ದುವು. ಮಠಗಳಂತೂ ಸಮುದಾಯದ ಧರ್ಮ-ನೈತಿಕ ಪ್ರಸಾರದ, ನಿರ್ದೇಶನದ ವ್ಯವಸ್ಥಾಕೇಂದ್ರ ಗಳಾಗಿದ್ದುದಲ್ಲದೆ ದಾಸೋಹ ಕೇಂದ್ರಗಳೂ ಆಗಿದ್ದವು. ಆಸ್ತಿ ಪಾಸ್ತಿಗಳಿದ್ದ ಮಠಗಳು ಆ ಆಸ್ತಿಗಳಿಂದಲೂ, ಸಮುದಾಯದ ದಾನಿಗಳಿಂದಲೂ ತಮ್ಮ ಅಂಗೀಕೃತ ಕರ್ತವ್ಯಗಳನ್ನು ಪರಿಪಾಲಿಸುತ್ತಿದ್ದವು; ಈಗಲೂ ಆ ಕರ್ತವ್ಯಗಳನ್ನು ನಡೆಸುತ್ತಲೇ ಇವೆ. ಮಠಕ್ಕೆ ಹೋಗುವ ಭಕ್ತರಿಗೆ ಜ್ಞಾನ ದಾಸೋಹದ ಜೊತೆಗೆ ಅನ್ನ ದಾಸೋಹನ್ನೂ ಮಠಗಳು ಒದಗಿಸುತ್ತಿವೆ. ಯಾತ್ರಾರ್ಥಿಗಳಾಗಿ ಬಂದವರು ಇಳಿದುಕೊಳ್ಳಲು ವಸತಿ, ಊಟ ಮಾಡಲು ಅನ್ನ, ಇತರ ಆವಶ್ಯಕತೆಗಳ ಪೂರೈಕೆಗಾಗಿ ಅನುಕೂಲಗಳನ್ನು ಮಠಗಳು ಒದಗಿಸುವುದುಂಟು. ಈ ಕಾರ್ಯದ ಭಾಗವಾಗಿ ನಿರಾಶ್ರಿತರು, ವಿವಿಧ ರೀತಿಯ ಊನಶಕ್ತರು, ಜ್ಞಾನಾರ್ಥಿಗಳು ಮಠಗಳಲ್ಲಿ ವಾಸಿಸುತ್ತಿರುವುದುಂಟು. ಇವರಿಗೆ ಬೇಕಾದ ಸವಲತ್ತುಗಳನ್ನು ಮಠಗಳು ಒದಗಿಸುತ್ತವೆ.

ಪ್ರಸಾದ ನಿಲಯ

ಈ ಪರಂಪರೆಯ ಕವಲೇ ಪ್ರಸಾದ ನಿಲಯವಾಗಿ ರೂಪುಗೊಂಡಂತೆ ಕಾಣುತ್ತದೆ. ವೀರಶೈವ ಧರ್ಮವನ್ನು ಅಧ್ಯಯನ ಮಾಡಲು, ಅದರ ಅನುಷ್ಠಾನದ ಪರಿಪರಿ ವಿಧಿ ವಿಧಾನಗಳನ್ನು ಅರಿತುಕೊಳ್ಳಲು ಮಠಗಳು ಬೋಧನಾ ಕೇಂದ್ರಗಳಾಗಿವೆ. ಶರಣ ಕ್ರಾಂತಿಯ ಕಾರಣದಿಂದ ಮಠಗಳ ಸಂಖ್ಯೆಯಲ್ಲಿ ಹೆಚ್ಚಳವಾಯ್ತು ಮತ್ತು ವ್ಯವಸ್ಥೆಯಲ್ಲಿ ನಾವೀನ್ಯತೆ ಹಾಗೂ ಹರಿತ ಮೈಗೂಡಿದವು. ಸಮಾಜದ ಸುಧಾರಣೆಯು ಪ್ರಮುಖ ಉದ್ದೇಶವಾಗಿದ್ದುದರಿಂದ ಮಠಗಳು ಸ್ವಾಮಿಗಳಾಗುವವರಲ್ಲಿ ಕ್ರಾಂತವ್ಯಕ್ತಿತ್ವವನ್ನು ಬೆಳೆಸಲು ಕ್ರಮಗಳನ್ನು ಕೈಗೊಂಡವು. ಅಂಥವರಿಗಾಗಿ ಆಶ್ರಯವನ್ನು ಏರ್ಪಡಿಸಲಾಯಿತು.

ಆಧುನಿಕ ಕಾಲದಲ್ಲಿ ನವೀನ ಜೀವನ ಕ್ರಮಗಳಿಗೆ ಸ್ಪಂದಿಸತೊಡಗಿದ ವೀರಶೈವ

ಮಠಗಳು ದಾಸೋಹ ಪರಿಕಲ್ಪನೆಯನ್ನು ಹಿಗ್ಗಿಸಿ, ಪ್ರಸಾದ ಪರಿಕಲ್ಪನೆಯನ್ನು ಅಳವಡಿಸಿಕೊಂಡು ಅನ್ನದಾಸೋಹದ ನಿಲಯಗಳನ್ನು ಪ್ರಸಾದ ನಿಲಯಗಳನ್ನಾಗಿ ಪರಿವರ್ತಿಸಿದವು. ಪ್ರಸಾದ ನಿಲಯಗಳಲ್ಲಿ ಮಠಗಳಲ್ಲಿನ ಕಾರ್ಯಕರ್ತರು ಮಾತ್ರವೇ ಅಲ್ಲದೆ ಯಾತ್ರಾರ್ಥಿಗಳೂ, ವಿದ್ಯಾರ್ಥಿಗಳೂ ಪ್ರಸಾದ ಸ್ವೀಕಾರವನ್ನು ಮಾಡುವಂತಾಯಿತು. ಪ್ರಸಾದ ನಿಲಯಗಳೇ ವಿದ್ಯಾರ್ಥಿ ನಿಲಯಗಳಾಗಿ ಪರಿವರ್ತನೆಗೊಂಡವು.

ಆಧುನಿಕಕ್ಕೆ ಸ್ಪಂದನ

ವೀರಶೈವ ಮಠಗಳು ಕ್ರಮೇಣ ತಮ್ಮ ಕಾರ್ಯಚಟುವಟಿಕೆಗಳನ್ನು ಶಿಕ್ಷಣ ಕ್ಷೇತ್ರಕ್ಕೆ ವಿಸ್ತರಿಸಿದವು. ಶಾಲೆ- ಕಾಲೇಜುಗಳನ್ನು ಸ್ಥಾಪಿಸಿ, ನಡೆಸತೊಡಗಿದವು. ಶಿಶುವಿಹಾರದಿಂದ ಹಿಡಿದು ಸ್ನಾತಕೋತ್ತರ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ನಡೆಸುತ್ತಿರುವ ದೊಡ್ಡ ಮಠಗಳು ಕರ್ನಾಟಕದಲ್ಲಿವೆ. ಸಿದ್ಧಗಂಗೆ, ಸುತ್ತೂರು, ಸಿರಿಗೆರೆ, ಹುಬ್ಬಳ್ಳಿಯ ಮೂರು ಸಾವಿರ, ಮಠ ಚಿತ್ರದುರ್ಗದ ಮುರುಘರಾಜೇಂದ್ರ, ಉಜ್ಜಿನಿ, ಇತ್ಯಾದಿ ಮಠಗಳು ನೂರಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿವೆ. ಸಾಮಾನ್ಯ ಶಿಕ್ಷಣದ ಜೊತೆಗೆ ತಾಂತ್ರಿಕ ಶಿಕ್ಷಣವನ್ನು ಒದಗಿಸುವ ಇಂಜಿನಿಯರಿಂಗ್, ವೈದ್ಯಕೀಯ, ಕಾನೂನು, ಔಷಧೀಯ ಮಹಾ ವಿದ್ಯಾಲಯಗಳನ್ನು ನಡೆಸುತ್ತಲಿವೆ. ಈ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಸಾವಿರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಲಿಯುತ್ತಿದ್ದಾರೆ. ಇವರೆಲ್ಲರಿಗೂ ಊಟ-ವಸತಿಯ ಸೌಕರ್ಯವು ಅಗತ್ಯವಾಗುತ್ತದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಮಠಗಳು ಈ ಆಶ್ರಯದ ಅನುಕೂಲವನ್ನು ಏರ್ಪಡಿಸಬೇಕಾಗುತ್ತದೆ.* ಇಲ್ಲಿ ನಾಲ್ಕು ವರ್ಗದ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ನಾವು ಗುರುತಿಸಬಹುದು : ೧) ಶಿಕ್ಷಣ ಸಂಸ್ಥೆಗಳಿಗೆ ನೇರವಾಗಿ ಸೇರಿದ ವ್ಯವಸ್ಥೆಯ ಎಲ್ಲ ಖರ್ಚನ್ನೂ ಕೊಡುವಂಥವರು; ೨) ತಮ್ಮ ತಮ್ಮ ವ್ಯವಸ್ಥೆಯನ್ನು ಖಾಸಗಿಯಾಗಿ ಸಮುದಾಯದಲ್ಲಿ ಏರ್ಪಡಿಸಿಕೊಂಡವರು; ೩) ತಮ್ಮ ಮನೆಗಳಲ್ಲೋ, ಬಂಧುಗಳ ಮನೆಗಳಲ್ಲೋ ಇದ್ದು ವಿದ್ಯಾಭ್ಯಾಸದಲ್ಲಿ ತೊಡಗಿರುವಂಥವರು, ಮತ್ತು ೪) ಮಠಗಳೇ ನಡೆಸುವ ಪ್ರಸಾದ ಅಥವಾ ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸುವಂಥವರು. ಈ ಕೊನೆಯ ಪ್ರಕಾರದ ಜ್ಞಾನ ದಾಹಿಗಳು ನಮ್ಮ ಪರಿಶೀಲನೆಯ ಕಕ್ಷೆಗೆ ಬರುತ್ತಾರೆ.

ಕಾರಣ – ಪರಿಣಾಮಗಳು

ಕರ್ನಾಟಕದಲ್ಲೇ ಹೆಚ್ಚು ಸಂಖ್ಯೆಯಲ್ಲಿ ವೀರಶೈವ ಮಠಗಳಿರುವುದರಿಂದ ಈ ರಾಜ್ಯದಲ್ಲಿಯೇ ಪ್ರಸಾದ ನಿಲಯಗಳು ಹೆಚ್ಚು ಸಂಖ್ಯೆಯಲ್ಲಿವೆ. ಈ ಸಂದರ್ಭದಲ್ಲಿ

---

* ವಿದ್ಯಾರ್ಥಿ ನಿಲಯಗಳ ಒಂದು ಸಮೀಕ್ಷೆಯನ್ನು ನೋಡಬಯಸುವವರು ಹಿ.ಚಿ. ಶಾಂತವೀರಯ್ಯ ಅವರ "ವೀರಶೈವ ವಿದ್ಯಾರ್ಥಿ ನಿಲಯಗಳು" ಲೇಖನವನ್ನು ನೋಡಿ. (ಅಖಿಲ ಭಾರತ ವೀರಶೈವ ಮಹಾಸಭಾ ೨೦ನೆಯ ಅಧಿವೇಶನ ಮೈಸೂರು, ಸ್ಮರಣ ಸಂಪುಟ, ೧೯೮೩, ಪು. ೧೫೧-೧೫೮). ಈ ಸಮೀಕ್ಷೆಯಲ್ಲಿ ಪಟ್ಟಿಮಾಡಿದ ೩೪ ವಿದ್ಯಾರ್ಥಿ ನಿಲಯಗಳನ್ನು ಪರಿಶೀಲಿಸಿದರೆ ಸ್ಥಳ, ಪ್ರಾಯೋಜಕರು, ಪ್ರಮಾಣಗಳ ವೈವಿಧ್ಯಮಯ ಅಂಶಗಳನ್ನು ಅರಿತುಕೊಳ್ಳಬಹುದು.

ಎರಡು ಮುಖ್ಯ ಆಧುನಿಕ ವಿಚಾರಗಳು ಕಸಿಗೊಂಡ ಸಂಗತಿಯನ್ನು ಪ್ರಸ್ತಾಪಿಸುವುದು ಸೂಕ್ತವೆನ್ನಿಸುತ್ತದೆ. ಮೊದಲನೆಯದು ಹಿಂದುಳಿದ ವರ್ಗಗಳ ಆಂದೋಲನ /ಚಳುವಳಿಯ ವಿಚಾರ, ಮತ್ತೊಂದು ಅತ್ಯಂತ ಆಧುನಿಕ ಜ್ಞಾನ ಶಾಖೆಗಳ ವಿಚಾರ. ಹದಿನೆಂಟು-ಹತ್ತೊಂಬತ್ತನೆಯ ಶತಮಾನದ ಅವಧಿಯಲ್ಲಿ ಇಡೀ ಭಾರತವು ಆಧುನಿಕ ವಿಚಾರಗಳ ಚಳುವಳಿಗೆ ತನ್ನನ್ನು ತಾನು ಒಡ್ಡಿಕೊಂಡಿತು. ಸಮಾಜೋ-ಧಾರ್ಮಿಕ ಆಂದೋಲನಗಳು ಜನಜೀವನದ ನರ-ನಾಡಿಗಳಲ್ಲಿ ಹರಿದಾಡಿದವು. ಜಾತಿ - ಜಾತಿಗಳ ವಿಭೇದಗಳನ್ನು ಹೋಗಲಾಡಿಸುವ, ಹೆಣ್ಣಿನ ಶೋಷಣೆಯನ್ನು ತೊಡೆದು ಹಾಕುವ, ಬಾಲ್ಯವಿವಾಹವನ್ನು ತಡೆಗಟ್ಟುವ, ಅಸ್ಪೃಶ್ಯತೆಯನ್ನು ನಿವಾರಿಸುವ, ವಿಧವೆಯರ ಗೋಳನ್ನು ಶಮನಗೊಳಿಸುವ, ಕ್ರೈಸ್ತೀಕರಣವನ್ನು ಹದ್ದಿನಲ್ಲಿಡುವ, ಇತ್ಯಾದಿ ಕ್ರಮಗಳನ್ನು ಸಮಾಜ ಸುಧಾರಕರು ಕೈಗೊಂಡರು. ಇವುಗಳಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಆರಂಭವಾಗಿ ಹಬ್ಬತೊಡಗಿದ್ದುದು ಹಿಂದುಳಿದ ವರ್ಗಗಳ ಚಳುವಳಿ. ಇದು ಇನ್ನೊಂದು ರೀತಿಯಲ್ಲಿ ಅಬ್ರಾಹ್ಮಣ ಆಂದೋಲನವೇ ಆಯಿತು. ಈ ಚಳುವಳಿಯು ಧರ್ಮದ ಸುಧಾರಣೆಗಿಂತಲೂ ರಾಜಕೀಯ - ಆರ್ಥಿಕ - ಆಡಳಿತಾತ್ಮಕ ಆಯಾಮಗಳನ್ನು ಹೊಂದಿದ ಸಮಾಜ ಸುಧಾರಣಾ ಪ್ರಕ್ರಿಯೆಯಾಗಿತ್ತು ಎಂದು ಹೇಳುವುದೇ ಹೆಚ್ಚು ಸಮಂಜಸ. ಈ ಆಂದೋಳನವು ಹನ್ನೆರಡನೆಯ ಶತಮಾನದಲ್ಲಿ ಆದ ಶರಣಕ್ರಾಂತಿಯ ಸೆಳೆತವನ್ನು ಹೊಂದಿರುವುದು ಗೋಚರಿಸುತ್ತದೆ. ಆದರೆ, ಅದಕ್ಕಿಂತ ಇದು ಪ್ರಮುಖವಾಗಿ ಭಿನ್ನವಾದ ಆಶಯವನ್ನು ಹೊಂದಿರುವುದ ಕಾಣಿಸುತ್ತದೆ. ಅದು ವೈದಿಕ ಸಿದ್ಧಾಂತದ ವಿರುದ್ಧ ಹೋರಾಟಕ್ಕೆ ನಿಂತ ಆಂದೋಲನವಾಗಿದ್ದರೆ, ಇದು ಮೇಲ್ ವರ್ಗದವರ ವಿರುದ್ಧ ಅರ್ಥೋ-ರಾಜಕೀಯ ಲಾಭಕ್ಕಾಗಿ ಸಂಘಟನೆಗೊಂಡ ಆಂದೋಲನವಾಗಿತ್ತು. ಅದು ಎಲ್ಲ ಪಂಗಡಗಳನ್ನು ವೈದಿಕ ಸಂಪ್ರದಾಯಕ್ಕೆ ಸೇರಿದವರನ್ನೂ ಒಳಗೊಂಡಂತೆ - ಏಕದೇವೋಪಾಸನೆಯ ಅಡಿಯಲ್ಲಿ ತಂದು ವಯಸ್ಸು - ಲಿಂಗ - ಕಾಯಕ ಇ.,ಗಳನ್ನು ಆಧರಿಸಿದ ಸ್ಥಾನ- ಪಾತ್ರಗಳ ಭೇದವನ್ನು ತೊಡೆದು ಹಾಕುವ, ಮೋಕ್ಷಸಾಧನೆಗೆ ಎಲ್ಲರೂ ಸಮಾನವಾದ ಅರ್ಹತೆಯನ್ನು ಉಳ್ಳವರೆಂದು ತೋರಿಸುವ, ಐಹಿಕ ಭೋಗ - ಭಾಗ್ಯಗಳು ತ್ಯಾಜ್ಯವಲ್ಲವಾದುದರಿಂದ ವಿಶುದ್ಧ ದೃಷ್ಟಿಯಿಂದ ಅವುಗಳನ್ನು ಸ್ವೀಕರಿಸಬೇಕೆಂದು ಪ್ರತಿಪಾದಿಸುವ ಆಂದೋಲನವು ಅದಾಗಿತ್ತು. ಆದರೆ, ಮುಂದುವರಿದ ವರ್ಗಗಳ ವಿರುದ್ಧ ಸ್ಪರ್ಧಿಸಲು ಸಶಕ್ತರಾಗಿ ಅವುಗಳಂತೆ ಶಿಕ್ಷಣ, ಆರ್ಥಿಕತೆ, ರಾಜಕೀಯ ಮತ್ತು ಆಡಳಿತೆಯ ಕ್ಷೇತ್ರಗಳಲ್ಲಿ ಪ್ರಾಗತಿಕ ಹೆಜ್ಜೆಗಳನ್ನೂ ಇರಿಸುವುದು ಇದರ ಪ್ರಮುಖ ಆಶಯವಾಗಿತ್ತು. ಮುಂದುವರಿದವರು, ಅದರಲ್ಲೂ ಬ್ರಾಹ್ಮಣರು, ಸುಶಿಕ್ಷಿತರೂ, ದೈಹಿಕವಲ್ಲದ ದುಡಿಮೆಗಳಲ್ಲಿ ತೊಡಗಿದವರೂ, ಶಿಷ್ಟಕಲೆ-ಸಾಹಿತ್ಯಗಳಲ್ಲಿ ಪರಿಣತರೂ, ರಾಜ್ಯಾಡಳಿತೆಯಲ್ಲಿ ಅಧಿಕಾರಿಗಳಾಗಿದ್ದವರೂ, ತುಂಬಾ ಚಲನಶೀಲರೂ ಆಗಿದ್ದುದನ್ನು ಗಮನಿಸಿದ ಹಿಂದುಳಿದವರು ಒಗ್ಗೂಡಿ ಸಂಘಟಿತರಾಗಿ ದಾಪುಗಾಲನ್ನು ಇಡಬೇಕೆಂದು ನಿಶ್ಚಯಿಸಿ 'ಹಿಂದುಳಿದ ವರ್ಗಗಳ ಆಂದೋಲನ ' ಆರಂಭಿಸಿದರು.

ಆಂದೋಲನವು ಯಶಸ್ವಿಯಾಗಲು ಶಿಕ್ಷಣವೇ ಮೂಲಾಧಾರ ಎಂಬ ತಿಳಿವಳಿಕೆಯು

ಅವರಲ್ಲಿ ಮೂಡಿದುದ್ದರಿಂದ ಹಿಂದುಳಿದ ಅಬ್ರಾಹ್ಮಣ ಜಾತಿಗಳು ತಮ್ಮ ತಮ್ಮ ಮಕ್ಕಳನ್ನು ಶಾಲೆ - ಕಾಲೇಜುಗಳಿಗೆ ಹೆಚ್ಚು ಹೆಚ್ಚಾಗಿ ಕಳಿಸತೊಡಗಿದರು. ಆ ಸಂದರ್ಭದಲ್ಲಿ ತಮಗಿರುವ ಅನಾನುಕೂಲಗಳ ಅರಿವು ಅವರಿಗೆ ಆಯಿತು. ಅದು ಶಾಲೆ - ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ಊಟ-ವಸತಿಯ ಸೌಕರ್ಯದ ಅಭಾವದ ಅರಿವು ಸಾಮಾನ್ಯವಾಗಿ ಹಳ್ಳಿಗಳಲ್ಲೇ ವಾಸಿಸುತ್ತಿದ್ದ ಹಿಂದುಳಿದ ವರ್ಗಗಳಿಗೆ ತಮ್ಮ ಮಕ್ಕಳು ಓದಲು ಅವರನ್ನು ಪಟ್ಟಣ - ನಗರಗಳಿಗೇ ಕಳಿಸಬೇಕಾಗಿತ್ತು. ಯಾಕೆಂದರೆ ಶಾಲೆ-ಕಾಲೇಜುಗಳು ಹಳ್ಳಿಗಳಲ್ಲಿ ಇರಲಿಲ್ಲ; ಪಟ್ಟಣ-ನಗರಗಳಲ್ಲಿ ಊಟ-ವಸತಿಗಳಿಗೆ ಪ್ರತ್ಯೇಕ ಏರ್ಪಾಟುಗಳನ್ನು ಹಿಂದುಳಿದ ವರ್ಗಗಳು ಮಾಡಲೇಬೇಕಾಯಿತು. ಹೀಗಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವುದು ಅನಿವಾರ್ಯವಾಯಿತು. ಆದುದರಿಂದ ಬ್ರಾಹ್ಮಣ ಜಾತಿಗಳು ಪಟ್ಟಣ - ನಗರಗಳಲ್ಲಿ ತಮ್ಮ ತಮ್ಮ ಜಾತಿ-ಮಕ್ಕಳಿಗೆ ವಿದ್ಯಾರ್ಥಿ-ನಿಲಯಗಳನ್ನು ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಆರಂಭಿಸಿದರು. ಹಳ್ಳಿಗಳಿಂದ ಹೋದ ಬಡಮಕ್ಕಳು ಶಿಕ್ಷಣ ಪಡೆಯಲು, ಅದರಲ್ಲೂ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಯಿತು.

ಈ ಹಿಂದುಳಿದ ವರ್ಗಗಳ ಆಂದೋಲನದ ಅಂಗವಾಗಿ ಶಿಕ್ಷಣ ಪ್ರಸಾರವಾಗಲು ವಿದ್ಯಾರ್ಥಿ ನಿಲಯಗಳ ಕೊಡುಗೆ ಮಹತ್ವದ್ದು. ಪರಂಪರೆಯಿಂದಲೇ ದಾಸೋಹವನ್ನು ನಡೆಸುತ್ತಿದ್ದ ವೀರಶೈವ ಮಠಗಳು ಪ್ರಸಾದ ನಿಲಯಗಳನ್ನು ಆರಂಭಿಸಿ ನಡೆಸುವುದು ಕಷ್ಟವಾಗಲಿಲ್ಲ. ಹಿಂದುಳಿದ ವರ್ಗಗಳ ಗುಂಪಿಗೆ ವೀರಶೈವರೂ ಸೇರಿದ್ದುದರಿಂದ ಪ್ರಸಾದ ನಿಲಯಗಳನ್ನು ಹೆಚ್ಚಿಸುವುದು ಅನಿವಾರ್ಯವಾಯಿತು. ವೀರಶೈವರಲ್ಲದ ಹಿಂದುಳಿದ ಜಾತಿಗಳವರಿಗೆ ವೀರಶೈವರಂತೆ ಮಠಗಳ ಪರಂಪರೆ ಇಲ್ಲದಿದ್ದುದರಿಂದ ಆಯಾಯ ಜಾತಿಗಳ ಪ್ರಮುಖರು ಹೊಚ್ಚ ಹೊಸದಾಗಿ ತಮ್ಮವರ ನೆರವಿನಿಂದ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಿ, ನಡೆಸತೊಡಗಿದರು. ವಿದ್ಯಾರ್ಥಿನಿಲಯಗಳನ್ನು ವೀರಶೈವ ಮಠಗಳು ನಡೆಸಲು ಅಷ್ಟೇನೂ ಕಷ್ಟವಿರಲಿಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ. ಮಠಗಳ ಪ್ರಸಾದ ನಿಲಯಗಳಂತೆ ಲೌಕಿಕ ವೀರಶೈವರು ಕೊಡುಗೈಯಿಂದ ವಿದ್ಯಾಭಿವೃದ್ಧಿ ಸಂಸ್ಥೆಗಳನ್ನೂ, ಅವುಗಳ ಆಶ್ರಯದಲ್ಲಿ ವಿದ್ಯಾರ್ಥಿ ನಿಲಯಗಳನ್ನೂ ರಾಜ್ಯದ ನಾನಾ ಕಡೆ ಸ್ಥಾಪಿಸಿ, ನಡೆಸತೊಡಗಿದರು. ಈ ಕ್ರಮದಿಂದ ಹಿಂದುಳಿದ ವರ್ಗಗಳ ಆಂದೋಲನಕ್ಕೆ ಮೊನಚು ದೊರೆಕಿತು. ಈ ಕ್ರಮದಿಂದ ಪ್ರಸಾದ ನಿಲಯದ ಫಲಾನುಭವಿಗಳು ಹಿಂದುಳಿದ ವರ್ಗಗಳ ನೋವು - ನಲಿವುಗಳ ಬಗೆಗೆ ಆಸಕ್ತಿ ತಳೆಯುವಂತಾಗಿ, ಬದಲಾಗುತ್ತಿರುವ ಸಮಾಜದ ಒಲವುಗಳನ್ನು ಗುರುತಿಸಲು ಸಾಧ್ಯವಾಯಿತು.

ಎರಡನೆಯ ಪರಿಣಾಮವೆಂದರೆ, ನವೀನ ಶೈಕ್ಷಣಿಕ ಮೌಲ್ಯಗಳು, ರಾಜಕೀಯ ಮತ್ತು ಆರ್ಥಿಕ ಒತ್ತಡಗಳಿಂದ ವೀರಶೈವ ಪ್ರಸಾದ ನಿಲಯಗಳ ಫಲಾನುಭವಿಗಳು ವೈಜ್ಞಾನಿಕ ಆವಿಷ್ಕಾರಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳುವಂತಾಯಿತು. ಸಂಪ್ರದಾಯದ ಬಿಗಿ ಚೌಕಟ್ಟಿನ ಎಲ್ಲೆಗಳನ್ನು ನಿಧಾನವಾಗಿಯಾದರೂ ಖಚಿತವಾಗಿ ಶಿಥಿಲಗೊಳಿಸಿ, ಹೊಚ್ಚ ಹೊಸ ಸಮಾಜದಲ್ಲಿ ಆಗುತ್ತಿರುವ ತೀವ್ರ ತರ ಸ್ಥಿತ್ಯಂತರಗಳಿಗೆ ಇತ್ಯಾತ್ಮಕವಾಗಿ ಸ್ಪಂದಿಸಲು ಅವರಿಗೆ ಸಾಧ್ಯವಾಯಿತು. ಮಠಗಳ ಸ್ವಾಮಿಗಳು ಕೂಡ ನವೀನ ಸಮಾಜದ

ಆಶೋತ್ತರಗಳಿಗೆ, ಯುವಜನರ ಆಕಾಂಕ್ಷೆಗಳಿಗೆ ಅನುಕೂಲಕರವಾದ ರೀತಿಯಲ್ಲಿಯೇ ಸ್ಪಂದಿಸುವಂತಾಯಿತು. ಪ್ರಸಾದ ನಿಲಯದ ಫಲಾನುಭವಿಗಳು ಬದಲಾಗುತ್ತಿರುವ ಸಮಾಜಕ್ಕೂ ಸಂಪ್ರದಾಯ ಬದ್ಧವಾದ ಮಠಗಳಿಗೂ ನಡುವೆ ಆರೋಗ್ಯಕರವಾದ ಸಂಬಂಧಗಳನ್ನು ಬೆಳೆಸಲು ಸಾಧ್ಯವಾಯಿತು. ಹೀಗಾಗಿ ಮಠಗಳು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳು ಅವುಗಳ ಫಲಾನುಭವಿಗಳಲ್ಲಿ ಆಧುನಿಕ ಮನೋಭಾವವನ್ನು ಬೆಳೆಸಲು ನೆರವಾದವು.

ಸಾಮಾನ್ಯವಾಗಿ ಇತರರಂತೆ ವೀರಶೈವರೂ ಪುರುಷರಿಗೇ ಪ್ರಾಧಾನ್ಯವೀಯುತ್ತಿದ್ದರು. ಶರಣರು ಲಿಂಗ ಭೇದವನ್ನು ಮಾಡದಿದ್ದರೂ ಇಂದಿನ ವೀರಶೈವರ ಹೆಣ್ಣುಮಕ್ಕಳು ಅನಕ್ಷರಸ್ಥರೂ, ಅವಿದ್ಯಾವಂತರೂ. ಆಗಿದ್ದರು ಆದರೆ, ಆಧುನಿಕ ಒಲವುಗಳಿಗೆ ಅನುಗುಣವಾಗಿ ಮಠಗಳುಧಾರ್ಮಿಕ ಚಟುವಟಿಕೆಗಳ ಜೊತೆಗೆ ಶಾಲೆ-ಕಾಲೇಜುಗಳನ್ನು ಸ್ಥಾಪಿಸಿ ನಡೆಸುವುದರ ಮೂಲಕ ಶೈಕ್ಷಣಿಕ ಕಾಯಕ್ರಮಗಳನ್ನು ಕೈಗೊಳ್ಳತೊಡಗಿದರು. ಈ ಮೊದಲೇ ವೀರಶೈವರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ, ನೂರಾರು ಶಾಲೆ - ಕಾಲೇಜುಗಳನ್ನು ಆರಂಭಿಸಿ ನಡೆಸುತ್ತಿದ್ದರು. ಪ್ರೌಢಶಾಲೆಗಳಲ್ಲಿ, ತಾಂತ್ರಿಕ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಕಲಿಯುತ್ತಿದ್ದ ವೀರಶೈವ ಯುವಕರಿಗೆ ವಿದ್ಯಾರ್ಥಿ ನಿಲಯಗಳನ್ನು, ಅವುಗಳಲ್ಲಿ ಕೆಲವನ್ನಾದರೂ, ಉಚಿತ ಪ್ರಸಾದ ನಿಲಯಗಳೆಂದು ಬಡವರಿಗೆ ನಡೆಸುತ್ತಿದ್ದರು. (ಈ ಉಚಿತ ವಿದ್ಯಾರ್ಥಿ ನಿಲಯಗಳನ್ನು ಫ್ರೀ ಬೋರ್ಡಿಂಗ್ ನಾಮದಲ್ಲಿ ಕರೆಯಲಾಗುತ್ತಿತ್ತು, ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ.) ಬಹಳ ವರ್ಷಗಳವರೆಗೂ ಈ ಎಲ್ಲ ನಿಲಯಗಳು ಸಾಮಾನ್ಯವಾಗಿ ಪುರುಷರಿಗೇ ಮೀಸಲಾಗಿದ್ದವು. ಹುಡುಗಿಯರನ್ನು ವಿದ್ಯಾಭ್ಯಾಸಕ್ಕೆಂದು ಕಳಿಸುವುದೇ ಕಡಿಮೆ; ಕಳಿಸಿದರೂ ಊರ ಹೊರಗೆ ಇರುವ, ನಗರದಲ್ಲಾದರೂ ದೂರ ದೂರ ಇರುವ, ಶಾಲೆ ಕಾಲೇಜುಗಳಿಗೆ ಕಳಿಸುತ್ತಿರಲಿಲ್ಲ. ಈ ಕಾರಣದಿಂದಲೂ ಮಹಿಳೆಯರಿಗಾಗಿ ನಿಲಯಗಳನ್ನು ಮೊದಮೊದಲು ಆರಂಭಿಸಲಿಲ್ಲ. ಆದರೆ, ಕ್ರಮೇಣ, ಅದರಲ್ಲೂ ಸ್ವಾತಂತ್ರಾ ನಂತರ, ಸ್ತ್ರೀಯರಿಗೂ ವಿದ್ಯಾಭ್ಯಾಸದ ಅಗತ್ಯವನ್ನು ಅರಿತುಕೊಂಡು ಅವರನ್ನು ಶಾಲೆ-ಕಾಲೇಜುಗಳಿಗೆ ಕಳಿಸತೊಡಗಿದರು. ನಗರಗಳಲ್ಲಿ ಮಠಗಳು ಮತ್ತು ವಿದ್ಯಾಸಂಸ್ಥೆಗಳು ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ನಿಲಯಗಳನ್ನೂ ಸ್ಥಾಪಿಸತೊಡಗಿದವು. ಮಹಿಳೆಯರಿಗೇ ಪ್ರತ್ಯೇಕ ನಿಲಯಗಳಿವೆ, ಅವುಗಳಲ್ಲಿದ್ದರೆ ರಕ್ಷಣೆಯೂ ಇರುತ್ತದೆ ಎಂದು ತಿಳಿದ ಮೇಲೆ ಹೆತ್ತವರು ತಮ್ಮ ಪುತ್ರಿಯರನ್ನು ದೂರದ ಊರುಗಳಿಗೆ ಶಿಕ್ಷಣಕ್ಕಾಗಿ ಕಳಿಸತೊಡಗಿದರು. ಇದರಿಂದಾಗಿ ವೀರಶೈವ ಮಹಿಳೆಯರು ಸುಶಿಕ್ಷಿತರಾಗಲೂ, ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಲೂ, ಆಧುನಿಕ ಕಾಲದಲ್ಲಿ ತಮ್ಮ ಪತಿಯಂದಿರ ಜೊತೆ ಹೆಗಲೆಣೆಯಾಗಿ ದುಡಿಯಲೂ ಮುಂದಾದರು.

ಸ್ಥಿತಿ ಗತಿ

ಶಿಕ್ಷಣ ಪ್ರಸಾರದ ಆತುರದಲ್ಲಿ, ಪ್ರಖ್ಯಾತಿ ಗಳಿಸುವ ಇರಾದೆಯಿಂದ ಮಠಗಳೂ, ಉತ್ಸಾಹಿಗಳೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಿದ್ದುದರಿಂದ ವೀರಶೈವರಲ್ಲಿ ಹೆಚ್ಚಾಗಿ ಜಾಗ್ರತಿ ಉಂಟಾಯಿತು ಎಂಬುದರಲ್ಲಿ

ಸಂಶಯವಿಲ್ಲ. ಆದರೆ, ವಿದ್ಯಾರ್ಥಿ ನಿಲಯಗಳನ್ನು ಒಟ್ಟಾರೆಯಾಗಿ ಅವಲೋಕಿಸಿದರೆ ಅವುಗಳ ವ್ಯವಸ್ಥೆಯಲ್ಲಿ, ಅವುಗಳ ನಿರ್ವಹಣೆಯಲ್ಲಿ, ಅವುಗಳ ಕನಿಷ್ಠ ಆವಶ್ಯಕತೆಗಳನ್ನು ಪೂರೈಸುವಲ್ಲಿ ಶೈಥಿಲ್ಯವನ್ನೂ, ವಿಫಲತೆಯನ್ನೂ ಕಾಣುತ್ತೇವೆ. ದಾಸೋಹ ಪರಿಕಲ್ಪನೆಯನ್ನು ವಿಸ್ತರಿಸಿದ ಸಂಸ್ಥೆಗಳಲ್ಲಿ ಕೆಲವಾದರೂ ಸಾರ್ವಜನಿಕರ ಬೆಂಬಲದಿಂದಲೇ ವಿದ್ಯಾರ್ಥಿಗಳು ಬದುಕಬೇಕೆಂಬ ಅಭಿಪ್ರಾಯದಿಂದ ವಿದ್ಯಾರ್ಥಿಗಳನ್ನು ಬೆಳಗಿನಂದು ವೀರಶೈವರ ಮನೆಗಳಿಗೆ ಕಳಿಸಿ ಅಲ್ಲಿಂದ ರೊಟ್ಟಿ ಮುಂತಾದ ಆಹಾರವನ್ನು ಸಂಗ್ರಹಿಸಿಕೊಂಡು ಬರುವ ಕ್ರಮವನ್ನು ಕೈಗೊಂಡವು. ಆಗಾಗ ವಿದ್ಯಾರ್ಥಿಗಳನ್ನು ಗುಂಪುಗುಂಪಾಗಿ ಕಳಿಸಿ, ವೀರಶೈವ ದಾನಿಗಳಿಂದ ಹಣವನ್ನು ಸಂಗ್ರಹಿಸುತ್ತಿದ್ದುದೂ ಉಂಟು. ಈಗಲೂ ಈ ಕ್ರಮವು ಕೆಲವು ಕಡೆ ಮುಂದುವರಿದಿರಲೂ ಬಹುದು. ಮಠಗಳಿಗೆ ಭಕ್ತಾದಿಗಳು ವಸ್ತುಗಳ, ಹಣದ ಮತ್ತು ಸೇವೆಯ ರೂಪದಲ್ಲಿ ತಮ್ಮ ಕಾಣಿಕೆಯನ್ನು ನೀಡುತ್ತಿರುವುದರಿಂದ ಪ್ರಸಾದ ನಿಲಯಕ್ಕೆಂದೂ ಹೆಚ್ಚಿನ ಕಾಣಿಕೆಯನ್ನು ನೀಡುತ್ತಿರುವುದುಂಟು. ಮಠಗಳೂ, ಸೇವಾಸಂಸ್ಥೆಗಳೂ ಹೀಗೆ ಸಮುದಾಯದ ನೆರವಿನಿಂದ ಸಾರ್ವಜನಿಕ ಸೇವೆಯನ್ನು ಮಾಡುತ್ತಾ ಜನಕಲ್ಯಾಣವನ್ನು ಸಾಧಿಸುವುದು ಮೆಚ್ಚತಕ್ಕಂಥಾದ್ದೇ.

ಆದರೆ, ವಿದ್ಯಾರ್ಥಿ ನಿಲಯಗಳ ನಿರ್ವಹಣೆಯಲ್ಲಿ ಹಲವಾರು ದೋಷಗಳೂ, ಕೊರತೆಗಳೂ ಕಂಡುಬರುತ್ತಲಿವೆ. ಊಟ-ವಸತಿಗಳೆರಡನ್ನೂ ಬಯಸಿ ಬರುವ ಬಡ ವಿದ್ಯಾರ್ಥಿಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲಿರುವುದರಿಂದ, ಸಾರ್ವಜನಿಕರ ನೆರವು ನಿರೀಕ್ಷಿಸಿದ ಪ್ರಮಾಣದಲ್ಲಿ ಇರದೇ ಹೋಗುವುದರಿಂದ, ವ್ಯವಸ್ಥಾಪಕರ ನಿರ್ಲಕ್ಷ್ಯ ಮತ್ತು/ ಅಥವಾ ಭ್ರಷ್ಟ ವ್ಯವಹಾರದಿಂದ, ನಿರ್ವಾಹಕರ ಬೇಜವಾಬ್ದಾರಿ ವರ್ತನೆಯಿಂದ, ಸಾರ್ವಜನಿಕರ ಉಪೇಕ್ಷೆಯಿಂದ ಮತ್ತು ವಿದ್ಯಾರ್ಥಿಗಳ ಸೋಮಾರಿತನದಿಂದ ವಿದ್ಯಾರ್ಥಿ ನಿಲಯಗಳು ಕೊಳೆಕೊಂಪೆಗಳಾಗಿ, ಸಾಮಾನ್ಯ ಸವಲತ್ತುಗಳಿಂದ ವಂಚಿತವಾಗಿ ಅಲ್ಲಿನ ಜೀವನವು ಚಿಂತಾಜನಕವಾಗಿರುವುದುಂಟು. ಒಂದೊಂದು ಚಿಕ್ಕ ಕೋಣೆಯಲ್ಲಿ ಮೂರುನಾಲ್ಕು ವಿದ್ಯಾರ್ಥಿಗಳನ್ನು ತುರುಕಿರುವುದು, ಹಾಸಿಗೆ, ಕುರ್ಚಿ-ಮೇಜುಗಳಿಲ್ಲದಿರುವುದು, ವಿದ್ಯುತ್ತು ನೀರಿನ ಅಭಾವ, ಗಾಳಿ- ಬೆಳಕುಗಳ ಕೊರತೆ, ಪರಿಸರವೂ ಮಲಿನವಾಗಿರುವುದು, ಪೌಷ್ಟಿಕಾಹಾರದ ಕೊರತೆ, ಸದಾ ಕೊಳಕು ನಾರುತ್ತಿರುವ ಕಕ್ಕಸ್ಸುಗಳು, ಸರಿಯಾಗಿ ತೊಳೆಯದ ಪಾತ್ರೆ ಪಡುಗಗಳು, ಇ. ಇಂಥ ಸ್ಥಿತಿಯಲ್ಲಿರುವ ವಿದ್ಯಾರ್ಥಿ ನಿಲಯಗಳು ಜ್ಞಾನ ನಿಧಿಗಳನ್ನು ಸೃಜಿಸುವ ಬದಲು ಅಶಿಸ್ತಿನ, ತೇಜೋ ಹೀನ, ಸಮಾಜ ಕಂಟಕ ವ್ಯಕ್ತಿಗಳನ್ನು ನಿರ್ಮಾಣ ಮಾಡುವ ಕಾರ್ಖಾನೆಗಳಾಗುತ್ತವೆ.

ಈ ಸ್ಥಿತಿಗತಿಯನ್ನು ವ್ಯವಸ್ಥಾಪಕರು ಗಮನಿಸುವುದು ತೀರಾ ಅಗತ್ಯ. ವಿದ್ಯಾರ್ಥಿ ನಿಲಯಗಳು ಆದರ್ಶ ವಸತಿಗೃಹಗಳಾಗಿ ವ್ಯವಸ್ಥೆಗೊಂಡಿರಬೇಕು. ಸರಿಯಾದ ಕಟ್ಟಡ, ಪೀಠೋಪಕರಣಗಳು, ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್, ನೀರಿನ ಸರಬರಾಜು ಇರಬೇಕು ಕಟ್ಟಡದ ಒಳಹೊರಗೆಲ್ಲಾ ನೈರ್ಮಲ್ಯ, ಅಡುಗೆ ಮನೆ, ಉಗ್ರಾಣ ಕೋಣೆ, ಊಟದ ಮನೆಗಳು ಅತ್ಯಂತ ಸ್ವಚ್ಛತೆಯನ್ನು ಕಾಪಾಡಿಕೊಂಡು ಬರಬೇಕು; ಅಡುಗೆಯವರು

ಶುಚಿರ್ಭೂತರಾಗಿ, ಸರಳವಾದದ್ದೇ ಆಗಲಿ, ಪೌಷ್ಟಿಕಾಂಶಗಳನ್ನು ಹೊಂದಿದ ಆಹಾರವನ್ನು ಮುತುವರ್ಜಿಯಿಂದ ತಯಾರಿಸಬೇಕು ಮತ್ತು ಪ್ರೀತಿ ವಾತ್ಸಲ್ಯದಿಂದ ನೀಡಬೇಕು. ಉಣ್ಣುವ ಆಹಾರವನ್ನು ವೀರಶೈವ ಪರಿಭಾಷೆಯಲ್ಲಿ 'ಪ್ರಸಾದ' ಎಂದು ಭಾವಿಸಲಾಗುತ್ತದೆ. ಇದು ಅತ್ಯುನ್ನತ ಪರಿಕಲ್ಪನೆ. ಇದು . ಪ್ರಸಾದವಾದುದರಿಂದ ಇದನ್ನು ಪವಿತ್ರ ಭಾವನೆಯಿಂದ ಸಿದ್ಧ ಗೊಳಿಸಬೇಕು ನೀಡಬೇಕು ಮತ್ತು ಸ್ವೀಕರಿಸಬೇಕು. ವಿದ್ಯಾರ್ಥಿ ನಿಲಯಗಳಲ್ಲಿ ಆವಶ್ಯಕ ಪುಸ್ತಕಗಳನ್ನು ಹೊಂದಿದ ಗ್ರಂಥಭಂಡಾರ ಇರಲೇಬೇಕು. ಆಗಾಗ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುವ ವ್ಯವಸ್ಥೆಯಿರಬೇಕು. ಕೆಲವು ವಿದ್ಯಾರ್ಥಿನಿಲಯಗಳನ್ನು ಹಣ ಸಂಗ್ರಹದ ದೃಷ್ಟಿಯಿಂದ ಮದುವೆ ಮುಂತಾದ ಸಮಾರಂಭಗಳಿಗೆ ಬಾಡಿಗೆಗೆ ಕೊಡುವುದುಂಟು. ಇದರಿಂದ ವಿದ್ಯಾರ್ಥಿಗಳ ಏಕಾಗ್ರಚಿತ್ತಕ್ಕೆ ಭಂಗ ಬರುತ್ತದೆ. ಇಂಥದನ್ನು ನಿಲ್ಲಿಸುವುದು ಸೂಕ್ತ.

ವಿದ್ಯಾರ್ಥಿ ನಿಲಯಗಳನ್ನು ನೋಡಿಕೊಳ್ಳುವ ವ್ಯವಸ್ಥಾಪಕನು ಸಮಾಜಕಾರ್ಯದ ಸೂತ್ರ - ವಿಧಾನಗಳನ್ನು ಅರಿತು ಆಚರಣೆಗೆ ತರುವಂಥವನಾಗಿರಬೇಕು. ನಿವಾಸಿಗಳನ್ನು ಸಂಘಟಿಸಿ, ವಿದ್ಯಾರ್ಥಿ ನಿಲಯವನ್ನು ಸರಿಯಾಗಿ ನಡೆಸುವಲ್ಲಿ, ನೆರೆಹೊರೆಯವರಿಗೆ 'ಪಿಡುಗು' ಆಗಿರದ ನಡತೆಯನ್ನು ಬೆಳೆಸಿಕೊಳ್ಳುವಲ್ಲಿ, ಅವರನ್ನು ಸಾರ್ವಜನಿಕ ಸೇವಾಕಾರ್ಯದಲ್ಲಿ ತೊಡಗಿಸುವಲ್ಲಿ (ಈ ಬಗ್ಗೆ ಮುಂದೆ ವಿವರಿಸಲಾಗುವುದು) ಯಶಸ್ವಿಯಾಗಬೇಕು. ಜೊತೆಗೆ, ಅವನು ವ್ಯವಸ್ಥಾಪಕರಿಗೂ, ಸಮುದಾಯಕ್ಕೂ ಆರೋಗ್ಯಕರ ಕೊಂಡಿಯಾಗಿರಬೇಕು. ನಾನಾ ವೃತ್ತಿಗಳಲ್ಲಿ ತೊಡಗಿ ಉತ್ತಮ ನಾಗರಿಕರಾಗಿ ಸಮಾಜದ ಒಳಿತಿಗೆ ಕಾಳಜಿಪೂರ್ವಕವಾಗಿ ಬದುಕುವಂಥ ವ್ಯಕ್ತಿಗಳನ್ನು ಕಂಡರಿಸುವ ಕಮ್ಮಟಗಳೇ ವಿದ್ಯಾರ್ಥಿ ನಿಲಯಗಳು ಎಂಬುದನ್ನು ಸದಾ ಮನಸ್ಸಿನಲ್ಲಿ ಇರಿಸಿಕೊಳ್ಳುವುದು ಬಹು ಮುಖ್ಯ. ಶರಣರ ತತ್ತ್ವಾದರ್ಶವು ವಿದ್ಯಾರ್ಥಿ ನಿಲಯದ ಎಲ್ಲರ ಕಾಳಜಿಯಾಗಬೇಕು. ಒಟ್ಟಿನಲ್ಲಿ ಆಲಂಕಾರಿಕ ವಾಗಿರದ ಕ್ರಿಯಾತ್ಮಕ ಸಂಘಟನೆಯಾಗಿ ವಿದ್ಯಾರ್ಥಿ ನಿಲಯವು ವ್ಯವಸ್ಥೆಗೊಂಡಿರುವುದು ತುಂಬಾ ಮುಖ್ಯವಾದದ್ದು. ಮುಂದಿನ ಸಾಲುಗಳಲ್ಲಿ ಮತ್ತಷ್ಟು ಚಿಂತನೆ ಮಾಡಲಾಗುವುದು.

ಅಪೇಕ್ಷಿತ ಚಟುವಟಿಕೆಗಳು

ಕರ್ನಾಟಕದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿದರೆ ವೀರಶೈವರು ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದಾರೆ. ವೀರಶೈವ ಮಠಗಳ, ವೀರಶೈವ ಸಂಘಟನೆಗಳ ಮತ್ತು ಉದಾರ ವೀರಶೈವರ ನೆರವಿನಿಂದ ಇದು ಸಾಧ್ಯವಾಯಿತು. ಲಕ್ಷಲಕ್ಷಗಟ್ಟಲೆ ವೀರಶೈವರು ವಿದ್ಯಾವಂತರಾಗಲು ಮುಖ್ಯವಾಗಿ ಕಾರಣರಾದವರು ವೀರಶೈವರಿಗೆಂದೇ ಉಚಿತ ಪ್ರಸಾದ ನಿಲಯಗಳನ್ನು ಸ್ಥಾಪಿಸಿ ನಡೆಸುತ್ತಿರುವವರು.* ಬಡವರಿಗೆಂದೇ ಈ ನಿಲಯಗಳು ಸ್ಥಾಪನೆಗೊಂಡಿವೆ. ಶ್ರೀಮಂತ ವೀರಶೈವರು ಕಾಲೇಜುಗಳು ನಡೆಸುತ್ತಿರುವ, ಹಣ ತೆಗೆದುಕೊಂಡು ನೆರವಾಗುತ್ತಿರುವ, ವಿದ್ಯಾರ್ಥಿ ನಿಲಯಗಳಿಗೆ ಹೋಗುತ್ತಾರೆ. ಎರಡನೆಯ

ಪ್ರಕಾರದ ಶ್ರೀಮಂತ ವಿದ್ಯಾರ್ಥಿಗಳು ತಮ್ಮ ತಮ್ಮ ಮನೋಭಿಲಾಷೆಯಿಂದ ನಡೆದುಕೊಳ್ಳಲು ಇತರರೊಡನೆ ಸಹಜೀವಿಸುತ್ತಾರೆ. ಆದರೆ, ಪ್ರಸಾದ ನಿಲಯದ ವೀರಶೈವ ವಿದ್ಯಾರ್ಥಿಗಳು ಅನ್ಯರೊಡನೆ ಬೆರೆಯುವುದು ಅವರು ಶಾಲೆ - ಕಾಲೇಜುಗಳಲ್ಲಿ ಮಾತ್ರ. ಇದರಿಂದ ಅವರಿಗೆ ವಿಶ್ವದ ವೈಶಾಲ್ಯವು ಅನುಭಾವಕ್ಕೆ ಬರುವುದು ಅಪರೂಪ. ಇದರಿಂದ ಕೆಡುಕೂ ಪರಿಣಮಿಸಬಹುದು, ಒಳಿತೂ ಆಗಬಹುದು. ಎರಡೂ ಪ್ರಕಾರದ ವಿದ್ಯಾರ್ಥಿ ನಿಲಯಗಳಲ್ಲಿ ಒಂದಂತೂ ನಿಶ್ಚಿತವಾಗಿ ಪರಿಣಮಿಸುತ್ತದೆ. ಅದು ಅವರೆಲ್ಲರೂ ತಮ್ಮ ತಮ್ಮ ಕುಟುಂಬಗಳ ದಿನ ದಿನದ ನಿಕಟ ಸಂಪರ್ಕದಿಂದ ವಂಚಿತರಾಗಿ ಕೌಟುಂಬಿಕ ಮತ್ತು ಅದಕ್ಕೆ ಅನುಗುಣವಾದ ಭವಿಷ್ಯತ್ತಿನ ಜೀವನದಲ್ಲಿ ವಾಸ್ತವತೆಗಿಂತಲೂ ಕಲ್ಪನೆಗೇ ಹೆಚ್ಚಿನ ಒತ್ತನ್ನು ಕೊಡುವ ಸಾಧ್ಯತೆಯು ಹೆಚ್ಚಾಗಿರುತ್ತದೆ. ಇದರ ಚರ್ಚೆಗೆ ನಾನು ತೊಡಗುವುದಿಲ್ಲ.

ಆದರೆ, ವಿದ್ಯಾರ್ಥಿ ನಿಲಯಗಳ ಮೂಲಕ ವೀರಶೈವ ಮಠಗಳು ಏನೆಂಥ ಕಾರ್ಯವನ್ನು ಕೈಗೊಳ್ಳಬಹುದೆಂದು ಸ್ಥೂಲವಾಗಿ ಸೂಚಿಸಲು ಪ್ರಯತ್ನಿಸುತ್ತೇನೆ. ವಿದ್ಯಾರ್ಥಿಗಳು ಜ್ಞಾನ ಸಂಪಾದನೆಗೆ ಬಂದಿರುವುದು ನಿಜವಾದರೂ ಮನುಷ್ಯನಾಗಿ ಜೀವಿಸಲು ಬೇಕಾದ ಜ್ಞಾನವನ್ನು ಅವರು ಸಂಪಾದಿಸುತ್ತಾರೆ ಎಂಬ ಭರವಸೆಯಿಲ್ಲ. ದಿನದಿನದ ವಾಸ್ತವ ವ್ಯವಹಾರದಿಂದ ದೂರವಾಗಿ, ಒಂದು ರೀತಿಯಲ್ಲಿ ವಂಚಿತರಾಗಿ, ಸಮಾಜದ ಸ್ಥಿತಿಗತಿಗಳ ಬಗ್ಗೆ ಅನ್ಯ ಲಿಂಗಿಗಳ ಮತ್ತು ವಯಸ್ಸಿನವರ ಬಗ್ಗೆ ವಿಪರೀತ ಕಲ್ಪನೆಗಳನ್ನು ಬೆಳೆಸಿಕೊಳ್ಳುತ್ತಾರೆ. ಇದು ಆರೋಗ್ಯಕರವಾದ ವ್ಯಕ್ತಿತ್ವದ ಬೆಳವಣಿಗೆಗೆ ಮಾರಕವಾಗುತ್ತದೆ. ವ್ಯಕ್ತಿಯು ಹಕ್ಕು ಹೊಣೆಗಳನ್ನು ಆಂತರಿಕಗೊಳಿಸಿಕೊಂಡು ಅವನ್ನು ಸಮತೋಲನದಲ್ಲಿ ಬಳಸಿಕೊಳ್ಳುವುದು ಅವನ ವ್ಯಕ್ತಿತ್ವದ ಆರೋಗ್ಯಕರ ಬೆಳವಣಿಗೆಗೆ ಅತೀ ಅಗತ್ಯ. ಆದರೆ, ಭ್ರಮಾಲೋಕದಲ್ಲಿರುವ ವಿದ್ಯಾರ್ಥಿಯು ತನ್ನ ಹಕ್ಕಿನ ಬಗೆಗೇ ಚಿಂತಿಸುತ್ತಾನಲ್ಲದೆ ತನ್ನ ಹೊಣೆಗಾರಿಕೆಯಬಗೆಗಲ್ಲ ಆದುದರಿಂದ ಅವನಿಗೆ ಹಕ್ಕು - ಹೊಣೆಗಳೆರಡೂ ಒಂದೇ ನಾಣ್ಯದ ಎರಡು ಮುಖಗಳೆಂದು ತಿಳಿವಳಿಕೆ ನೀಡಿ, ಒಂದರಿಂದ ಇನ್ನೊಂದು ಜೀವಂತವಾಗಿರುತ್ತದೆ ಎಂಬುದನ್ನು ಬಿಂಬಿಸಬೇಕು. ಇದು ಸಾಧ್ಯವಾಗುವುದು ಅವನಿಗೆ ವಾಸ್ತವಾನುಭವವು ದೊರೆತ ಮೇಲೆಯೇ.

ಆದುದರಿಂದಲೇ ಮಠಗಳು ತಮ್ಮ ಸುತ್ತಣ ಸಮುದಾಯ/ ಸಮುದಾಯಗೊಂಚಲನ್ನು ಅಭಿವೃದ್ಧಿಪಡಿಸಲು ಪ್ರಸಾದ ನಿಲಯದ ನಿವಾಸಿಗಳನ್ನು ಪರಿಣಾಮಕರವಾಗಿ ಬಳಸಿ ಕೊಳ್ಳಬಹುದು. ಅನ್ಯ ಧರ್ಮದ ಮಠಗಳ ಉದ್ದೇಶಗಳು ಏನೇ ಇರಲಿ ವೀರಶೈವ ಮಠಗಳಂತೂ ಸಮಾಜ ಸುಧಾರಣೆಯ, ಸಮಾಜ ಕಲ್ಯಾಣಾಭಿವೃದ್ಧಿಯ ಸೇವಾಕೇಂದ್ರಗಳಾಗಿಯೇ ನಡೆದು ಕೊಳ್ಳಬೇಕು. ಜನರ ಔದಾರ್ಯದಿಂದಲೇ ಮಠಗಳು ಮತ್ತು ಅವು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳು ನಡೆಯುತ್ತಿವೆ. ಜನರಿಗೆ ತಮ್ಮ ಕೃತಜ್ಞತೆಗಳನ್ನು ಅರ್ಪಿಸುವುದು ಅವರ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಸಾಧ್ಯವಾಗುತ್ತದೆ.

---

* ಈ ಬರೆಹದ ಲೇಖಕನೂ ಅಂಥ ಲಕ್ಷಲಕ್ಷ ಫಲಾನುಭವಿಗಳಲ್ಲಿ ಒಬ್ಬನು; ಮೈಸೂರಿನಲ್ಲಿ ಶ್ರೀ ಸುತ್ತೂರು ಮಠವು ನಡೆಸುತ್ತಿರುವ ವಿದ್ಯಾರ್ಥಿ ನಿಲಯದಲ್ಲಿ ಇದ್ದು ಶಿಕ್ಷಣ ಪಡೆದವನು.

ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು, ಹೇಗೆ ಹೇಗೆ ಅವುಗಳನ್ನು ಅನುಷ್ಠಾನಗೊಳಿಸಬಹುದು, ನಿಲಯದ ವಿದ್ಯಾರ್ಥಿಗಳನ್ನು ಹೇಗೆ ಹೇಗೆ ಉಪಯೋಗಿಸಿಕೊಳ್ಳಬಹುದು, ಇತ್ಯಾದಿಗಳನ್ನು ತರಬೇತಿ ಪಡೆದ ಸಮುದಾಯ ಸಂಘಟಕರಿಂದ ತಿಳಿದುಕೊಳ್ಳಬಹುದು; ಅವರ ನೆರವನ್ನು ಪಡೆದು ಅವರ ಮಾರ್ಗದರ್ಶನದಲ್ಲಿ ಕಾರ್ಯಗಳನ್ನು ಕೈಗೊಂಡರೆ ಮಠಗಳು ಶರಣರ ನಿಜವಾದ ಆದರ್ಶಗಳನ್ನು ಆಚರಣೆಗೆ ತರಲು ಸಾಧ್ಯವಾಗುತ್ತದೆ.

ವಿದ್ಯಾರ್ಥಿ ನಿಲಯಗಳು ಅತ್ಯುತ್ತಮವಾಗಿ ನಿರ್ವಹಣೆಗೊಳ್ಳಬೇಕಾದರೆ ಅವುಗಳಿಗೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನೂ ಪ್ರಮಾಣಬದ್ಧವಾಗಿ ಒದಗಿಸಬೇಕಾಗುತ್ತದೆ. ಇದು ಒಂದು ನಿಟ್ಟಿನ ಕೆಲಸ. ಈ ಕೆಲಸದಿಂದ ವಿದ್ಯಾರ್ಥಿಗಳು ಸಮರ್ಥರೂ ಆಗುತ್ತಾರೆ, ಕೃತಜ್ಞತೆಯಿಂದ ಕಂಪಿತರಾಗುತ್ತಾರೆ. ಅವರ ಶಕ್ತಿ ಸಾಮರ್ಥ್ಯವನ್ನು ಬಳಸಿಕೊಂಡು ಸಮುದಾಯಾಭಿವೃದ್ಧಿಯನ್ನು ಸಾಧಿಸಬೇಕು. ಇದು ಎರಡನೆಯ ಕೆಲಸ. ಈ ಎರಡೂ ಪೂರಕ ಕಾರ್ಯಗಳು. ಇವುಗಳಿಂದ ಶಾಲೆಕಾಲೇಜುಗಳಂತೆ ವಿದ್ಯಾರ್ಥಿ ನಿಲಯಗಳೂ ಸಮಾಜಕ್ಕೆ ಮಾರ್ಗದರ್ಶನ ನೀಡುವ ಜಾಗೃತ ಕೇಂದ್ರಗಳಾಗುವುದು ಅಗತ್ಯ, ಅತ್ಯಗತ್ಯ.

ಒಟ್ಟಿನಲ್ಲಿ ...

ಕಾಯಕ - ದಾಸೋಹಗಳ ಹಿನ್ನೆಲೆಯಲ್ಲಿ ಹುಟ್ಟಿದ ಪ್ರಸಾದ ನಿಲಯಗಳು, ವಿದ್ಯಾರ್ಥಿ ನಿಲಯಗಳಾಗಿ, ಹೊರ ಜಗತ್ತಿನೊಡನೆ ಸಂಪರ್ಕ ಬೆಳೆಸಿ, ಶರಣರ ಕ್ರಾಂತ ದೃಷ್ಟಿಯನ್ನು ಅಳವಡಿಸಿಕೊಂಡು ತಮ್ಮ ವ್ಯಕ್ತಿತ್ವವನ್ನು ಆರೋಗ್ಯಕರವಾಗಿ ರೂಪಿಸಿಕೊಳ್ಳುತ್ತಾ ತಮ್ಮ ಸಮುದಾಯವನ್ನು ಸುಂದರ - ನಿರ್ಮಲ ಸಮುದಾಯವನ್ನಾಗಿ ಅಭಿವೃದ್ಧಿಪಡಿಸುವ ಜಾಗ್ರತ ಕೇಂದ್ರಗಳಾಗಲಿ.

ವೀರಶೈವ ಸಂಗೀತ ಕಲಾವಿದರು

ಪ್ರೊ। ಸಿದ್ಧರಾಮಯ್ಯ ಮಠಪತಿ (ಗೋರಟಾ)

ಭಾರತೀಯ ಸಂಗೀತದಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳು. ಒಂದು ಹಿಂದುಸ್ತಾನಿ; ಇನ್ನೊಂದು ಕರ್ನಾಟಕಿ. ಅವರೆಡರ ಮೂಲ ಒಂದೇ. ಎರಡೂ ಸಂಗೀತ ಪ್ರಕಾರಗಳಿಗೆ ಸಮಾನ ಸ್ಥಾನ-ಮಾನ ನೀಡಿದ ರಾಜ್ಯ ಕರ್ನಾಟಕ ಒಂದೇ. ಕರ್ನಾಟಕದ ದಕ್ಷಿಣಭಾಗ ಮತ್ತು ದಕ್ಷಿಣದ ರಾಜ್ಯಗಳಲ್ಲಿ ಕರ್ನಾಟಕೀ ಸಂಗೀತ ಪ್ರಾಮುಖ್ಯತೆ ಪಡೆದಿದ್ದರೆ; ಕರ್ನಾಟಕದ ಉತ್ತರ ಭಾಗ ಮತ್ತು ದೇಶದ ಉತ್ತರಭಾಗ ಸಂಪೂರ್ಣವಾಗಿ ಹಿಂದುಸ್ತಾನಿ ಸಂಗೀತಕ್ಕೆ ವ್ಯಾಪಕಸ್ಥಾನ ನೀಡಿದೆ.

ಸಂಗೀತದಲ್ಲಿ ಧ್ರುಪದ, ಧಮಾರ, ಖಯಾಲ್, ಠುಮ್ರಿ, ಟಪ್ಪಾ, ತರಾನಾ, ಗಜಲ್, ಚತುರಂಗ, ಜಾನಪದ, ಲಘುಸಂಗೀತ, ಚಿತ್ರ ಸಂಗೀತ-ಮುಂತಾದ ವಿವಿಧ ಶೈಲಿಗಳುಂಟು. ಪ್ರಸ್ತುತ ಲೇಖನದಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಖ್ಯಾಲ್ (ಖಯಾಲ್) ಸಂಗೀತಗಾರರನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

ಹಿಂದುಸ್ತಾನಿ ಶಾಸ್ತ್ರೀಯ ಖಯಾಲ್ ಸಂಗೀತಕ್ಕೆ ಕನ್ನಡಿಗರ ಕೊಡುಗೆ ಅಪಾರ. ಅದರಲ್ಲಿ ವೀರಶೈವ ಸಂಗೀತ ಕಲಾವಿದರ ಸಂಖ್ಯೆ ಅಧಿಕ. ಕರ್ನಾಟಕೀ ಸಂಗೀತಕ್ಕೆ ವೀರಶೈವ ಸಂಗೀತ ಕಲಾವಿದರ ಕೊಡುಗೆ ಇಲ್ಲವೆಂದೇನಿಲ್ಲ. ಆದರೆ ಪ್ರಸ್ತುತ ಲೇಖನದಲ್ಲಿ ಕೇವಲ ಹಿಂದುಸ್ತಾನಿ ಸಂಗೀತ ಕಲಾವಿದರನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ವೀರಶೈವ ಸಂಗೀತ ಕಲಾವಿದರಲ್ಲಿ ಗಾಯಕರು, ಗಾಯಕಿಯರು, ತಬಲಾ ವಾದಕರು, ಸಿತಾರವಾದಕರು, ಪಿಟಿಲು ವಾದಕರು, ಸರೋದವಾದಕರು, ಹಾರ್ಮೋನಿಯಂ ವಾದಕರು-ಎಂದು ವಿಂಗಡಿಸಲಾಗಿದೆ. ವಿವಿಧ ಸಂಗೀತಕಲಾವಿದರ ವಿಸ್ತೃತ ವಿವರಣೆ ಇಲ್ಲಿದೆ.

೧. ಗಾಯಕ

ವೀರಶೈವ ಸಂಗೀತ ಕಲಾವಿದರಲ್ಲಿ ಹೆಚ್ಚಿನವರು ಗಾಯಕರು. ಅವರಲ್ಲಿ ಅನೇಕರು ಅಖಿಲ ಭಾರತ ಖ್ಯಾತಿಗಳಿಸಿದವರಾಗಿದ್ದಾರೆ. ಸಂಖ್ಯೆ ಹಾಗೂ ಮೌಲಿಕತೆಯಿಂದ ಅವರಿಗೆ

ಅಗ್ರಸ್ಥಾನವಿದೆ. ಭಾರತದ ಹೆಸರಾಂತ ಗಾಯಕರಲ್ಲಿ ವೀರಶೈವ ಗಾಯಕರ ಸಂಖ್ಯೆಯೇ ಅಧಿಕವಾಗಿದೆ. ಅಂಥವರ ಸಂಕ್ಷಿಪ್ತವಿವರಣೆ ಇಲ್ಲಿದೆ.

ವಿಜಯಜಂಗಮ

ವೀರಶೈವ ಸಂಗೀತ ಕಲಾವಿದರ ಇತಿಹಾಸ ಹದಿನೈದನೇ ಶತಮಾನದಿಂದ ಆರಂಭವಾಗುತ್ತದೆ ಎಂದು ಹೇಳಬಹುದು. ಹನ್ನೆರಡನೆ ಶತಮಾನದಲ್ಲಿದ್ದ ಬಸವಾದಿ ಶಿವಶರಣರು, ಹದಿನೈದನೇ ಶತಮಾನದಲ್ಲಿ ಆಗಿಹೋದ ಮಹಾಯೋಗಿ ಶ್ರೀಮನ್ನಿಜಗುಣ ಶಿವಯೋಗಿಗಳು ಸಂಗೀತವನ್ನು ಭಕ್ತಿಮಾರ್ಗದ ಸಾಧನೆಗಾಗಿ ಮಾಧ್ಯಮವನ್ನಾಗಿ ಬಳಸಿದರೇ ವಿನಹ ಅವರಾರೂ ಮೂಲತಃ ಸಂಗೀತ ಕಲಾವಿದರಾಗಿರಲಿಲ್ಲ. ಸಂಗೀತದ ಕೃತಿಗಳನ್ನು ರಚಿಸಿ, ಅದನ್ನು ಆಧ್ಯಾತ್ಮಿಕ ಹಿನ್ನೆಲೆಗೆ ಪೂರಕವಾಗಿ ಪ್ರಚಾರ ಮಾಡಿದರೇ ವಿನಹ ಅವರಾರೂ ವೇದಿಕೆಯ ಮೇಲೆ ಕುಳಿತು ಸಂಗೀತ ಕಚೇರಿ ನಡೆಸಿಕೊಡಲಿಲ್ಲ. ಸಂಗೀತ ಮಾಧ್ಯಮವನ್ನಾಗಿರಿಸಿಕೊಂಡು ಭಕ್ತಿಯ ನೆಲೆಗಟ್ಟು ಸ್ಥಾಪಿಸಿಕೊಂಡಿದ್ದರೇ ಹೊರತು ಸಂಗೀತ ಕಲಾವಿದರಾಗಿ ಅವರು ಬಾಳಲಿಲ್ಲ. ಸ್ವತಂತ್ರ ಕಲಾವಿದರಾಗಿ ಸಂಗೀತವೇ ತನ್ನ ಬಾಳಿನ ಉಸಿರನ್ನಾಗಿರಿಸಿಕೊಂಡು ಕಲಾವಿದರಾಗಿ ಸಂಗೀತ ಪಾಠ ಶಾಲೆಸ್ಥಾಪಿಸಿ ತನ್ಮೂಲಕ ಸಂಗೀತ ಕಲೆಯನ್ನು ಪ್ರಚುರ ಪಡಿಸಿ ನಿಜವಾದ ಅರ್ಥದಲ್ಲಿ 'ಸಂಗೀತಕಲಾವಿದ'ರಾಗಿ ಬದುಕಿದ ಮೊದಲ ವೀರಶೈವ ಸಂಗೀತ ಕಲಾವಿದರೆಂದು ಹೇಳಬೇಕಾದರೆ ಹದಿನೈದನೇ ಶತಮಾನದಲ್ಲಿ ಆಗಿಹೋದ 'ವಿಜಯ ಜಂಗಮ.' ನೆಂದು ಹೇಳಬೇಕು. ಅವನು ಪ್ರಸಿದ್ಧ ವೀಣಾವಾದಕನಾಗಿದ್ದನೆಂದು ಹೇಳಲಾಗುತ್ತದೆ.

ಹದಿನೈದನೇ ಶತಮಾನದಲ್ಲಿದ್ದ ಗ್ವಾಲಿಯರ್‌ದ ಮಹಾರಾಜಾ ಮಾನಸಿಂಹ ತೋಮರನ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದ ವೈಜೂ ಹಾಗೂ ಇನ್ನಿತರ ಸಂಗೀತ ಕಲಾವಿದರಲ್ಲಿ ವಿಜಯ ಜಂಗಮನೂ ಒಬ್ಬನೆಂದು ಹೇಳಲಾಗುತ್ತದೆ. ರಾಜಾಮಾನಸಿಂಹನು ಸ್ವತಃ ಸಂಗೀತ ಕಲಾವಿದನಾಗಿದ್ದು ತನ್ನ ಮಡದಿ 'ಮೃಗನಯನಿ'ಯ ಮನಃತೃಪ್ತಿಗಾಗಿ ಅನೇಕ ಧ್ರುಪದರಚನೆಗಳನ್ನು ರಚಿಸಿದನೆಂದು ಹೇಳಲಾಗುತ್ತದೆ. ರಾಜಾ ಮಾನಸಿಂಹನ ಆಸ್ಥಾನದಲ್ಲಿದ್ದ ವಿಜಯ ಜಂಗಮನು ಗ್ವಾಲಿಯರ್‌ದಲ್ಲಿ ಸಂಗೀತ ಪಾಠ ಶಾಲೆಯನ್ನು ಸ್ಥಾಪಿಸಿ ತನ್ಮೂಲಕ ಸಂಗೀತವನ್ನು ಪ್ರಚಾರ ಮಾಡಿದನೆಂದು ಹೇಳುತ್ತಾರೆ. ಹಿಂದಿ ಸಾಹಿತ್ಯದ ಹೆಸರಾಂತ ಲೇಖಕ ವೃಂದಾವನಲಾಲ ಶರ್ಮಾ ಅವರು ಬರೆದ ಐತಿಹಾಸಿಕ ಕಾದಂಬರಿ 'ಮೃಗನಯನಿ' ಯಲ್ಲಿ ವಿಜಯ ಜಂಗಮನು ಕರ್ನಾಟಕದ ಮೂಲದ ವೀರಶೈವ (ಲಿಂಗಾಯತ) ಕಲಾವಿದನೆಂದು ಉಲ್ಲೇಖಿಸಿದ್ದಾರೆ.[೧] ಹೀಗಾಗಿ ವೀರಶೈವ ಸಂಗೀತ ಕಲಾವಿದರಲ್ಲಿ ವಿಜಯಜಂಗಮನ ಹೆಸರು ಹದಿನೈದನೆಯ ಶತಮಾನದಲ್ಲಿಯೇ

---

೧. 'ಆರೈದು'-ಭಾಗ ಒಂದು, ಲೇ : ಶ್ರೀಜಗದ್ಗುರು ಅನ್ನದಾನೀಶ್ವರ ಸ್ವಾಮಿಗಳು ಮುಂಡರಗಿ. ಪುಟ - ೬೧

ಬರುತ್ತದಾದರೂ ಕರ್ನಾಟಕದ ಮೂಲದವನಾದ ಅವನ ಸಂಗೀತ ಗುರು ಯಾರು ? ಆತನ ಸಂಗೀತದ ಹಿನ್ನೆಲೆ ಏನೆಂಬುದು ಸ್ಪಷ್ಟವಾದರೆ ವೀರಶೈವ ಸಂಗೀತಕಲಾವಿದರ ಹಿನ್ನೆಲೆಗೆ ಇನ್ನಷ್ಟು ಬಲಬರುತ್ತದೆ.

ರಾಜಮಾನಸಿಂಹನ ಕಾಲಾವಧಿಯಲ್ಲಿ ಧ್ರುಪದ ಸಂಗೀತ ಪ್ರಚಾರದಲ್ಲಿತ್ತಾದ್ದರಿಂದ ವಿಜಯ ಜಂಗಮನ ಧ್ರುಪದ ಸಂಗೀತಗಾರನಿದ್ದನೆನ್ನುವುದರಲ್ಲಿ ಸಂದೇಹವಿಲ್ಲ. ಆಧುನಿಕ ಜನಪ್ರಿಯ ಶೈಲಿಯಾದ 'ಖಯಾಲ' (ಕ್ಯಾಲ) ಸಂಗೀತ ಅಸ್ತಿತ್ವಕ್ಕೆ ಬಂದುದು ಹದಿನೈದನೆ ಶತಮಾನದ ಉತ್ತರಾರ್ಧದಲ್ಲಿದ್ದ ಗ್ವಾಲಿಯರ್ ಘರಾಣೆಯ ಸಂಗೀತವನ್ನು ಕರ್ನಾಟಕದಲ್ಲಿ ಮೊಟ್ಟ ಮೊದಲಬಾರಿಗೆ ಅಸ್ತಿತ್ವಕ್ಕೆ ತಂದ ವೀರಶೈವ ಸಂಗೀತ ಕಲಾವಿದರೆಂದರೆ ಪಂ. ನೀಲಕಂಠಬುವಾ ಆಲೂರಮಠ (ಮಿರಜ್‌ಕರ) ಅವರು.

ಪಂ. ನೀಲಕಂಠಬುವಾ ಆಲೂರಮಠ (ಮಿರಜ್‌ಕರ್)

ಉಸ್ತಾದ್ ಅಬ್ದುಲ್ ವಹೀದ್ ಖಾನರ ಮೂಲಕ ಆಗ್ರಾ ಘರಾಣಾ, ಉಸ್ತಾದ್ ಅಬ್ದುಲ್ ಕರೀಮ್ ಖಾನರ ಮೂಲಕ ಕಿರಾನಾ ಘರಾಣಾ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಿ ದ್ದರೆ ನೀಲಕಂಠ ಬುವಾರ ಮೂಲಕ ಗ್ವಾಲಿಯರ್ ಘರಾಣಾ ಅಸ್ತಿತ್ವಕ್ಕೆ ಬಂದಿತು. ನೀಲಕಂಠ ಬುವಾ ಅವರು ಮಿರಜ್‌ದಲ್ಲಿ ಸ್ಥಾಯಿಯಾಗಿ ನಿಂತುಕೊಂಡು ಗ್ವಾಲಿಯರ್ ಘರಾಣೆಯ ಅದ್ವಿತೀಯ ಗಾಯನಾಚಾರ್ಯರಾಗಿದ್ದ ಪಂ.ಬಾಲಕೃಷ್ಣಬುವಾ ಇಚಲ ಕರಂಜೀಕರ ಅವರಲ್ಲಿ ಸಂಗೀತ ಅಭ್ಯಾಸಮಾಡಿ ಮಹಾರಾಷ್ಟ್ರದಲ್ಲಿ ತುಂಬ ಹೆಸರು ಪಡೆದರು.

ನೀಲಕಂಠಬುವಾ ಅವರು ಮೂಲತಃ ಕರ್ನಾಟಕದವರು. ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಹೊಳೆಆಲೂರಿನವರು. ಅವರ ಪೂರ್ವಜರು ಕಾಲಾಂತರದಲ್ಲಿ ಹುಟ್ಟೂರನ್ನು ಬಿಟ್ಟು ವ್ಯಾಪಾರಾರ್ಥವಾಗಿ ಮಿರಜಕ್ಕೆ ಹೋಗಿ ಅಲ್ಲಿಯೇ ಖಾಯಂ ಆಗಿ ನೆಲೆನಿಂತು 'ಆಲೂರಮಠ' ಹೆಸರಿಂದ ಮಿರಜದಲ್ಲಿ ಖ್ಯಾತರಾದರು. ಮಹಾನ್ ಸಂಗೀತಗಾರರಾಗಿ ''ನೀಲಕಂಠಬುವಾ'' ಎನಿಸಿದರು.

ಹಾವೇರಿಯ ಹುಕ್ಕೇರಿಮಠದ ಶ್ರೀ ಮ. ನಿ. ಪ್ರ. ಲಿಂ. ಶಿವಬಸವಮಹಾಸ್ವಾಮಿಗಳ ಸಹಯೋಗದಿಂದ ನೀಲಕಂಠ ಬುವಾ ಅವರು ಹಾನಗಲ್ಲ ಶ್ರೀಕುಮಾರಸ್ವಾಮಿಗಳ ಪರಿಚಯ ಪಡೆದು ಕೊಂಡರು. ಕುಮಾರಸ್ವಾಮಿಗಳು ಆಗಲೇ 'ಶಿವಯೋಗ ಮಂದಿರ' ಸ್ಥಾಪಿಸಿ ಅದರ ಉಜ್ವಲತೆಗೆ ಕಂಕಣ ಬದ್ಧರಾಗಿದ್ದರು. ಆ ದಿನಗಳಲ್ಲಿ ಕುಮಾರ ಸ್ವಾಮಿಗಳು ಪಂಚಾಕ್ಷರಿ ಗವಾಯಿಗಳಿಗೆ ಸಂಗೀತ ಕಲಿಸುವ ಗುರುವಿನ ಹುಡುಕಾಟದಲ್ಲಿದ್ದರು. ಸಮಯಕ್ಕೆ ಸರಿಯಾಗಿ ನೀಲಕಂಠಬುವಾರು ದೊರೆತುದು ಅಪಾರ ಆನಂದವಾಯಿತು. ಕುಮಾರಸ್ವಾಮಿಗಳ ಅಪ್ಪಣೆಯಂತೆ ನೀಲಕಂಠಬುವಾರು ಪಂಚಾಕ್ಷರಿಗವಾಯಿಗಳಿಗೆ ಶಿವಯೋಗ ಮಂದಿರದಲ್ಲಿದ್ದು ಕೊಂಡು ಗ್ವಾಲಿಯರ್ ಘರಾಣೆಯ ಸಂಗೀತವನ್ನು ಕಲಿಸಿದರು.

ನೀಲಕಂಠಬುವಾ ಅವರು ಮರಳಿ ಕರ್ನಾಟಕದ ಸಂಪರ್ಕ ಪಡೆದಾಗ ಕರ್ನಾಟಕದಲ್ಲಿ ಹಿಂದುಸ್ತಾನಿ ಸಂಗೀತದ ಗಾಳಿ ಬೀಸಲಾರಂಭಿಸಿತು. ವೀರಶೈವರ ಮಟ್ಟಿಗೆ ಅದು ''ವೀರಶೈವ ಸಂಗೀತಗಾರರ ಸುವರ್ಣ ಕಾಲ'' ಎನ್ನಬಹುದು. ಉತ್ತರ ಕರ್ನಾಟಕದಲ್ಲಿ ಕರ್ನಾಟಕೀ ಸಂಗೀತದ ಪ್ರಾಬಲ್ಯವೇ ಅಧಿಕವಾಗಿದ್ದ ದಿನಗಳಲ್ಲಿ ನೀಲಕಂಠಬುವಾರ ಆಗಮನದಿಂದಾಗಿ ಉತ್ತರಕರ್ನಾಟಕ ಭಾಗದಲ್ಲಿ ಹಿಂದುಸ್ತಾನಿ 'ಖಯಾಲ' ಸಂಗೀತದ ಗಾಳಿ ಬೀಸಲಾರಂಭಿಸಿತು. ನೀಲಕಂಠ ಬುವಾರ ಮೂಲಕ ಆಧುನಿಕ ವೀರಶೈವ ಸಂಗೀತ ಕಲಾವಿದರ ಪರಂಪರೆ ಆರಂಭವಾಗುವುದರಿಂದ ನೀಲಕಂಠಬುವಾ ಅವರನ್ನು ಕರ್ನಾಟಕದ ಆಧುನಿಕ ವೀರಶೈವ ಸಂಗೀತ ಪರಂಪರೆಯ ಆದ್ಯ ಪ್ರವರ್ತಕನೆನ್ನಬಹುದು.

ನೀಲಕಂಠಬುವಾ ಅವರು ಕುಮಾರಸ್ವಾಮಿಗಳ ಮೂಲಕ ಪಂಚಾಕ್ಷರಿ ಗವಾಯಿ ಗಳಿಗೆ ಸಂಗೀತ ವಿದ್ಯೆ ನೀಡಿ ಶಿಷ್ಯನನ್ನಾಗಿಸಿದರೆ, ನಾಟಕ ಕಂಪನಿಯಲ್ಲಿ ಪಾತ್ರ ಮಾಡುತ್ತಿದ್ದ ಮಲ್ಲಿಕಾರ್ಜುನ ಮನಸೂರರನ್ನು ತಮ್ಮೊಂದಿಗೆ ಮಿರಜಕ್ಕೆ ಕರೆದೊಯ್ದು ಸಂಗೀತವಿದ್ಯೆ ನೀಡಿ ಮಹಾನ್ ಸಂಗೀತಗಾರನನ್ನಾಗಿಸಿದರು.

ನೀಲಕಂಠಬುವಾ ಅವರು ವೀರಶೈವ ಸಮಾಜವೆಂಬ ಪಣತೆಯಲ್ಲಿ ಕುಮಾರಸ್ವಾಮಿಗಳ ಪ್ರೋತ್ಸಾಹವೆಂಬ ತೈಲವನೆರೆದು ಪಂಚಾಕ್ಷರಿ ಗವಾಯಿ ಮತ್ತು ಮಲ್ಲಿಕಾರ್ಜುನ ಮನಸೂರರೆಂಬ ಎರಡೆಳೆಯ ಬತ್ತಿಗೆ ತಮ್ಮ ಸಂಗೀತವೆಂಬ ಜ್ಯೋತಿಯನ್ನು ಬೆಳಗಿಸಿದ ಪರಿಣಾಮವಾಗಿ ಇಂದು ಕರ್ನಾಟಕದ ಒಳ ಹೊರಗೆ ಅಸಂಖ್ಯಾತ ಸಂಗೀತದ ಜ್ಯೋತಿಗಳು ಬೆಳಗುತ್ತ ಭಾರತಕ್ಕೆ ಸಂಗೀತದ ಬೆಳಕು ಚೆಲ್ಲುತ್ತಿವೆ.

ಪಂ. ಪಂಚಾಕ್ಷರಿ ಗವಾಯಿ

ಪಂಚಾಕ್ಷರಿ ಗವಾಯಿಗಳು ಕರ್ನಾಟಕದ ವೀರಶೈವ ಸಂಗೀತಕ್ಷೇತ್ರದ ಒಂದು ನಿಧಿ. ಶರಣರ ವಚನಗಳಿಗೆ ಮೊಟ್ಟ ಮೊದಲ ಹಿಂದುಸ್ತಾನಿ ಪದ್ಧತಿಯಲ್ಲಿ ಸ್ವರಸಂಯೋಜಿಸಿ ಹಾಡಿದ ''ವಚನ ಸಂಗೀತ ಪಿತಾಮಹ''; ದೀನದಲಿತರಿಗೆ, ಅಂಧ-ಅಂಗವಿಕಲರಿಗೆ ಸಂಗೀತವಿದ್ಯೆ ನೀಡಿದ 'ಸಂಗೀತದ ಮಹಾದಾನಿ'. ಬಹುಶಃ ಪಂಚಾಕ್ಷರಿ ಗವಾಯಿಗಳು ಹುಟ್ಟದಿದ್ದಲ್ಲಿ ಕರ್ನಾಟಕದಲ್ಲಿ ಸಂಗೀತ ಕಲೆ ಬೆಳೆಯುತ್ತಿಲ್ಲವೇನೋ !

ಪಂಚಾಕ್ಷರಿ ಗವಾಯಿಗಳು ಹುಟ್ಟಿದ್ದು ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿನ ಕಾಡಶೆಟ್ಟಿಹಳ್ಳಿಯಲ್ಲಿ. ಜನ್ಮಾಂಧರಾಗಿ ಹುಟ್ಟಿದ ಗವಾಯಿಗಳಿಗೆ ತೊಟ್ಟಿಲಲ್ಲಿಟ್ಟ ಹೆಸರು ಗದಿಗಯ್ಯ. ಅಭಿಜಾತ ಸಂಗೀತದ ಪ್ರತಿಭೆಯನ್ನು ಹುಟ್ಟಿನಿಂದಲೇ ಪಡೆದುಕೊಂಡು ಬಂದಿದ್ದ ಪಂಚಾಕ್ಷರಿ ಗವಾಯಿಗಳ ಮೇಲೆ ಹಾನಗಲ್ಲ ಕುಮಾರಸ್ವಾಮಿಗಳ ಕೃಪಾಕಟಾಕ್ಷ ಬಿದ್ದ ಪರಿಣಾಮವಾಗಿ ಪಂಚಾಕ್ಷರಿ ಗವಾಯಿಗಳು ಸಂಗೀತದ ಶ್ರೀಮಂತರೆನಿಸಿದರು.

1. ಸಿದ್ಧಾರಾಮಯ್ಯ ಮಠಪತಿ, 'ನೆನಹು' ಪುಟ - ೧೦೧

ಪಂಚಾಕ್ಷರಿ ಗವಾಯಿಗಳು ಆರಂಭದಲ್ಲಿ ಶಿರಾಳಕೊಪ್ಪದ ಗದಿಗೆಪ್ಪ ಗವಾಯಿಗಳಲ್ಲಿ ಹಾಗೂ ಮೈಸೂರಿನಲ್ಲಿ ಕರ್ನಾಟಕೀ ಸಂಗೀತವನ್ನು ಕಲಿತು ನಂತರ ಆಗ್ರಾ ಘರಾಣೆಯ ಅಬ್ದುಲ್ ವಹಿದ್ ಖಾನರಿಂದ ಮೊದಲ ಬಾರಿಗೆ, ಆನಂತರ ಗ್ವಾಲಿಯರ್ ಘರಾಣೆಯ ನೀಲಕಂಠಬುವಾ ಅವರಿಂದ ಹಿಂದುಸ್ತಾನಿ ಸಂಗೀತವನ್ನು ಕಲಿತು 'ಉಭಯ ಗಾನವಿಶಾರದ' ರೆನಿಸಿದರು. ಗದುಗಿನಲ್ಲಿ 'ಶ್ರೀ ವೀರೇಶ್ವರ ಪುಣ್ಯಾಶ್ರಮ' ಸ್ಥಾಪಿಸಿ ತನ್ಮೂಲಕ ಅಸಂಖ್ಯ ಅಂಧ, ಅನಾಥ, ಅಂಗವಿಕಲ ಪ್ರತಿಭಾವಂತರಿಗೆ ಉಚಿತವಾಗಿ ವಸತಿ, ಊಟ ನೀಡಿ ಸಂಗೀತ ವಿದ್ಯೆ ನೀಡಿದುದರ ಫಲವಾಗಿ ಇಂದು ಕರ್ನಾಟಕದಲ್ಲಿ 'ಗವಾಯಗಳ ಗಾನ ಬಳ್ಳಿ' ಎಲ್ಲೆಲ್ಲೂ ಹಬ್ಬಿದೆ. ಉತ್ತರ ಭಾರತದಲ್ಲಿ ಪಂ. ಪಲುಸ್ಕರ ಹಾಗೂ ಪಂ. ಭಾತ್ತಖಂಡೆಯವರು ಮಾಡಿದ ಸಂಗೀತದ ಕ್ರಾಂತಿಯನ್ನೇ ಕರ್ನಾಟಕದಲ್ಲಿ ಪಂಚಾಕ್ಷರಿಗವಾಯಿಗಳು ಅಕ್ಷರಶಃ ಮಾಡಿದರು.

ಪಂಚಾಕ್ಷರಿ ಗವಾಯಿಗಳು ಮಹಾನ್ ಸಂಗೀಗಾರರೆನಿಸಿ, ಸಂಗೀತ ಶಾಲೆಯನ್ನು ಸ್ಥಾಪಿಸಿ, ನಾಟಕ ಕಂಪನಿಯನ್ನು ಕಟ್ಟಿ, ಕೀರ್ತನ, ಪುರಾಣ, ಪ್ರವಚನ ಪಟುಗಳನ್ನು ತಯರಿಸಿ ಕರ್ನಾಟಕವನ್ನು ಸ್ವಾಮಿ ಹರಿದಾಸರ 'ಬೃಂದಾವನ' ವನ್ನಾಗಿಸಿದ್ದಾರೆ. ಅವರ ಪ್ರಯತ್ನದ ಫಲವಾಗಿ ಇಂದು ಮದರಾಸನ್ನು ಮೊದಲ್ಗೊಂಡು ದೆಹಲಿಯವರೆಗೂ ಅವರ ಶಿಷ್ಯರಿದ್ದಾರೆ. ಸಹಸ್ರ, ಸಹಸ್ರ ಸಂಖ್ಯೆಲ್ಲಿ ಉಚಿತವಾಗಿ ಊಟ, ವಸತಿ ಕಲ್ಪಿಸಿ ಸಂಗೀತ ವಿದ್ಯೆ ನೀಡಿದ ಉದಾಹರಣೆ ಬಹುಶಃ ಜಗತ್ತಿನಲ್ಲಿಯೇ ಅವರೇ ಮೊದಲಿಗರೆನಬೇಕು. ಅಂತೆಯೇ ಇಂತಹ ಮಹಾನ್ ಸಾಧನೆಯನ್ನು ಗಮನಿಸಿ ಅಮೇರಿಕೆಯ ಖಾಸಗಿ ಸಂಸ್ಥೆ 'ಶ್ರೀ ವಿರೇಶ್ವರ ಪುಣ್ಯಾಶ್ರಮ'ಕ್ಕೆ ಬೃಹತ್ ಪ್ರಮಾಣದಲ್ಲಿ 'ಸಂಗೀತದ ಸಂಕೀರ್ಣ' ಕಟ್ಟಡ ಕಟ್ಟಿಸಿಕೊಟ್ಟಿದೆ.

ಪಂ. ಮಲ್ಲಿಕಾರ್ಜುನ ಮನಸೂರ :

ಅಖಿಲ ಭಾರತ ಖ್ಯಾತಿಯ ವೀರಶೈವ ಸಂಗೀತ ಕಲಾವಿದರಲ್ಲಿ ಪಂ. ಮಲ್ಲಿಕಾರ್ಜುನ ಮನಸೂರ ಅಗ್ರಗಣ್ಯರು. ಆ ಮಟ್ಟಿದ ವೀರಶೈವ ಗಾಯಕರಲ್ಲಿ ಅವರು ಮೊದಲಿಗರು. ವಚನಸಂಗೀತಕ್ಕೆ ಅಖಿಲ ಭಾರತ ಮಟ್ಟದ ಸ್ಥಾನವನ್ನು ಕಲ್ಪಿಸಿಕೊಟ್ಟ ವೀರಶೈವ ಸಂಗೀತಗಾರರಲ್ಲಿ ಪ್ರಥಮರು. ಭಾರತದ ಸರ್ವೋತ್ಕೃಷ್ಟ ಸಂಗೀತ ಪ್ರಶಸ್ತಿ 'ಕಾಲಿದಾಸ ಸಮ್ಮಾನ' ಪಡೆದ ಮೊದಲ ಸಂಗೀತಗಾರ ಹಾಗೂ ಪ್ರಥಮ ವೀರಶೈವ ಸಂಗೀತ ಕಲಾವಿದ.

ಹೀಗೆ ಹಲವು 'ಪ್ರಥಮ'ಗಳನ್ನು ತನ್ನದಾಗಿಸಿಕೊಂಡ ಮಲ್ಲಿಕಾರ್ಜುನರು ಸಂಗೀತಗಾರರ ತವರೂರೆನಿಸಿದ ಧಾರವಾಡ ಸಮೀಪದ 'ಮನಸೂರ' ಗ್ರಾಮದವರು. ಆರಂಭದಲ್ಲಿ ರಂಗಭೂಮಿಯ ಖ್ಯಾತ ನಟ, ಗಾಯಕ ಹಾಗೂ ಸಂಗೀತ ನಿರ್ದೇಶಕ ಅಣ್ಣ ಬಸವರಾಜ ಮನಸೂರರೊಟ್ಟಿಗೆ ರಂಗಭೂಮಿಯಲ್ಲಿ ನಟರಾಗಿ, ಗಾಯಕರಾಗಿ ನಂತರ ಪಂ. ನೀಲಕಂಠಬುವಾರ ಕೃಪಾಕಟಾಕ್ಷದಿಂದ ರಂಗಭೂಮಿಯಿಂದಸಂಗೀತಕ್ಷೇತ್ರಕ್ಕೆ

ಬಂದವರು. ಆರಂಭದಲ್ಲಿ ನೀಲಕಂಠಬುವಾ ಅವರಲ್ಲಿ ಗ್ವಾಲಿಯರ್ ಘರಾಣೆಯ ಸಂಗೀತ ಅಭ್ಯಾಸ ಮಾಡಿ ನಂತರ ಜೈಪುರ ಘರಾಣೆಯ ಅದ್ವಿತೀಯ ಗಾಯನಾಚಾರ್ಯ ಉಸ್ತಾದ್ ಅಲ್ಲಾದಿಯಾ ಖಾನರ ಮಕ್ಕಳಾದ ಉಸ್ತಾದ್ ಮಂಜೀಖಾನ್ ಮತ್ತು ಉಸ್ತಾದ್ ಬುರ್ಜಿಖಾನರಲ್ಲಿ ಸಂಗೀತ ವಿದ್ಯೆ ಪಡೆದು, ಅವಿಶ್ರಾಂತ ಸಂಗೀತ ಸಾಧನೆ ಮಾಡಿ ಸಂಗೀತಕ್ಷೇತ್ರದಲ್ಲಿ ಮೇರು ಸದೃಶಕೀರ್ತಿ ಪಡೆದರು.

ವಚನಗಳಿಗೆ ಹಿಂದುಸ್ತಾನಿ ಸ್ವರ ಸಂಯೋಜಿಸಿ ಅವುಗಳಿಗೆ ರಾಷ್ಟ್ರೀಯ ಮನ್ನಣೆ ತಂದುಕೊಟ್ಟರು. ವಚನ ಸಂಗೀತಕ್ಕೆ ಖಯಾಲದ ಗಾಂಭೀರ್ಯವನ್ನು. ಠುಮ್ರಿ ಸಂಗೀತದ ರಂಜಕತೆಯನ್ನು, ಭಾವ ಸಂಗೀತದ ಮಾಧುರ್ಯವನ್ನು ತಂದುಕೊಟ್ಟವರು. ಪಂ. ಮಲ್ಲಿಕಾರ್ಜುನ ಮನಸೂರ. ಈ ಶತಮಾನದ ಒಬ್ಬ ಸಂಗೀತದ ತಪಸ್ವಿಗಳು. ಘರಾಣಾಗಾಯಕಿಯನ್ನು ಶುದ್ಧವಾಗಿ ಉಳಿಸಿಕೊಂಡು ಬಂದವರು. ಖಯಾಲ್ ಹಾಡುಗಾರಿಕೆಯಲ್ಲಿ ಅವರಿಗೆ ಅಗ್ರಸ್ಥಾನವಿದೆ. ಅಂತೆಯೇ ಉತ್ತರ ಭಾರತದ ಸಂಗೀತಗಾರರು ಅವರನ್ನು ''ಫಕೀರ ಆಫ್ ಖಯಾಲ'' (ಖಯಾಲ ಹಾಡುಗಾರಿಕೆಯ ಶ್ರೇಷ್ಠಸಂತ) ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ. ಲಿಂಗ ಪೂಜೆ ಹಾಗೂ ಸಂಗೀತಸಾಧನೆ ಅವೆರಡು ಅವರ ಕಣ್ಣುಗಳು. ಸಂಗೀತದಲ್ಲಿ ಅಂತಹ ಮತ್ತೊಬ್ಬ ಕಲಾವಿದನನ್ನು ಕಾಣುವುದು ವಿರಳ. ಪಂ. ಪಂಚಾಕ್ಷರಿ ಗವಾಯಿಗಳು ಅಖಂಡ ಬ್ರಹ್ಮಚಾರಿಗಳಾಗಿ ಸಂಗೀತದ ಸಾಧನೆಯೊಂದಿಗೆ ಪಾರಮಾರ್ಥವನ್ನುಸಾಧಿಸಿದರೆ ಸಂಸಾರಿಯಾಗಿದ್ದು ಸಂಗೀತಸಾಧನೆಯ ಜೊತೆಗೆ ಪಾರಮಾರ್ಥದ ಸಾಧನೆಗೈದುದು ಮನ್ಸೂರರ ಅಗ್ಗಳಿಕೆ. ಹಾಗಾಗಿ ಮನಸೂರವರು ಬರೀ ಸಂಗೀತಗಾರರಾಗದೆ ಪಾರಮಾರ್ಥ ಸಂಗೀತಗಾರರಾಗಿದ್ದರು.

ಪಂ. ಪುಟ್ಟರಾಜ ಗವಾಯಿ :

ಸಾಹಿತ್ಯ, ಸಂಗೀತ ಸರಸ್ವತಿಯ ಎರಡು ಕಣ್ಣು. ಅವರೆಡು ಒಂದೇ ಕಡೆ ಮೇಳೈಸುವುದು ವಿರಳ. ಅಂತಹ ವಿರಳ ವಿದ್ವಾಂಸರಲ್ಲಿ ಡಾ. ಪುಟ್ಟರಾಜ ಗವಾಯಿಗಳು ಅಗ್ರಗಣ್ಯರು. ಒಬ್ಬ ಅಂಧ ಗುರುವಿಗೆ ಒಬ್ಬ ಪ್ರತಿಭಾವಂತ ಅಂಧ ಶಿಷ್ಯ ದೊರೆಯುವುದು ಪುಣ್ಯವಿಶೇಷ. ಅಂತಹ ಭಾಗ್ಯ ಪಂ. ಪುಟ್ಟರಾಜರದಾಗಿದೆ.

ಡಾ. ಪುಟ್ಟರಾಜ ಗವಾಯಿಗಳ ಹುಟ್ಟೂರು ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿನ 'ಹೊಸಪೇಟ' ಎಂಬ ಹಳ್ಳಿ. ಹುಟ್ಟಿದ ಆರುತಿಂಗಳಲ್ಲಿ ಕಣ್ಣುಗಳನ್ನು, ಹೆತ್ತವರನ್ನು ಕಳೆದುಕೊಂಡು ಅನಾಥರಾಗಿ ಸೋದರ ಮಾವ ದೇವಗಿರಿಯ ಚಂದ್ರಶೇಖರಯ್ಯ ನವರಲ್ಲಿ ಆಶ್ರಯಪಡೆದು ಪಂ. ಪಂಚಾಕ್ಷರಿಗವಾಯಿಗಳ ಶಿಷ್ಯತ್ವ ವಹಿಸಿ, ಸಂಗೀತದಲ್ಲಿ ಸಿದ್ಧಿಯನ್ನು ಪಡೆದು ಇಂದು ಸಂಗೀತ ಲೋಕದಲ್ಲಿ ಅಪಾರ ಖ್ಯಾತಿಯನ್ನು ಪಡೆದಿದ್ದಾರೆ.

ರುದ್ರವೀಣೆ, ದಿಲ್‌ರೂಬಾ, ಸಾರಂಗಿ, ತಬಲಾ ಮುಂತಾದ ವಾದ್ಯಗಳನ್ನು

ಸಮರ್ಥವಾಗಿ ನುಡಿಸಬಲ್ಲ ಪುಟ್ಟರಾಜ ಗವಾಯಿಗಳು ಹಾರ್ಮೋನಿಯಂ ನುಡಿಸುವುದರಲ್ಲಿ ಸಿದ್ಧಹಸ್ತರಾಗಿದ್ದಾರೆ. ಪಂಚಾಕ್ಷರಿ ಗವಾಯಿಗಳ ಪಟ್ಟದ ಶಿಷ್ಯರಾಗಿ ಗುರುಗಳು ಸ್ಥಾಪಿಸಿದ 'ಶ್ರೀವೀರೇಶ್ವರ ಪುಣ್ಯಾಶ್ರಮ'ವನ್ನು ಮುನ್ನಡೆಸಿಕೊಂಡು ಬರುತ್ತ ನಾಡಿನ ಅಸಂಖ್ಯ ಅನಾಥ, ಅಂಗವಿಕಲ, ಅಂಧ ಸಂಗೀತಾಸಕ್ತರಿಗೆ ಉಚಿತವಾಗಿ ಸಂಗೀತ ವಿದ್ಯೆ ಹಾಗೂ ಊಟ-ವಸತಿ ನೀಡುತ್ತಿರುವುದು ಸಂಗೀತ ಕ್ಷೇತ್ರದಲ್ಲಿಯೇ ಒಂದು ವಿಶಿಷ್ಟ ಕಾರ್ಯವೆನ್ನಬಹುದು. ಇಂದು ಭಾರತದ ತುಂಬೆಲ್ಲ ಇವರ ಶಿಷ್ಯರಿದ್ದಾರೆ.

ಪುಟ್ಟರಾಜ ಗವಾಯಿಗಳು ಒಬ್ಬ ಸಮರ್ಥ ಲೇಖಕರು ಹೌದು. ಅವರು ತ್ರಿಭಾಷಾ ಪಂಡಿತರೆಂದೇ ಹೆಸರು ಗಳಿಸಿದ್ದಾರೆ. ಅವರು ಇದುವರೆಗೆ ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಸುಮಾರು 54 ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ನಾಟಕ, ಪುರಾಣ, ಜೀವನಚರಿತ್ರೆ, ಕಾವ್ಯ, ಸಂಗೀತ ಶಾಸ್ತ್ರ ಮುಂತಾದವುಗಳಲ್ಲಿ ಕೃಷಿ ಮಾಡಿದ್ದಾರೆ. 'ಪಂಚಾಕ್ಷರಿ' ಎಂಬ ಅಂಕಿತದಲ್ಲಿ ಅನೇಕ ಕನ್ನಡ ಭಾಷೆಯ ಸಂಗೀತ ಚೀಜ್‌ಗಳನ್ನು ರಚಿಸಿದ್ದಾರೆ. ಅವರಿಗೆ ಅನೇಕ ಪ್ರಶಸ್ತಿ, ಬಿರುದು ಸಂದಿವೆ.

ಪಂ. ಬಸವರಾಜ ರಾಜಗುರು

ಅಖಿಲ ಭಾರತ ಖ್ಯಾತಿಯ ವೀರಶೈವ ಗಾಯಕರಲ್ಲಿ ಪಂ. ಬಸವರಾಜ ರಾಜಗುರು ಒಬ್ಬರು. ಅವರು ಹುಟ್ಟಿದ್ದು ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಯಲಿವಾಳ. ಅವರದು ಸಂಗೀತ ಮನೆತನ. ತಂದೆ ಮಹಾಂತಯ್ಯ ಪಿಟಿಲುವಾದಕರು. ಚಿಕ್ಕಪ್ಪ ಚನ್ನಬಸವ ಸ್ವಾಮಿ ಬಯಲಾಟ ಪದಗಳ ಸುಶ್ರಾವ್ಯ ಗಾಯಕ. ಮನೆತನದ ಸಂಗೀತ ಪರಿಸರ ಬಸವರಾಜರ ಮೇಲೆ ಪ್ರಭಾವ ಬೀರಿತು. ಹುಟ್ಟನೊಂದಿಗೆ ಮಧುರ ಕಂಠ ಪಡೆದುಕೊಂಡು ಬಂದಿದ್ದ ಅವರಿಗೆ ಪ್ರೋತ್ಸಾಹ ದೊರೆಯಿತು. ಹಾಗಾಗಿ ಮಗನ ಸಂಗೀತ ಕಲಿಕೆಗೆ ತಂದೆ ಶ್ರೀಕಾರಹಾಕಿದರು.

ಆರಂಭದಲ್ಲಿ ರಂಗಭೂಮಿಯ ಪ್ರಭಾವಕ್ಕೊಳಗಾಗಿ ನಟರಾಗಿ, ಗಾಯಕರಾಗಿ ಜನಮನ ಗೆದ್ದವರು. ರಂಗಭೂಮಿಗೆ ಗಂಟು ಬಿದ್ದವರು ಹಾಳಾಗುತ್ತಾರೆಂದು ಬಗೆದ ತಂದೆ ಅವರನ್ನು ವಟುವಾಗಿಸಲು ಹುಬ್ಬಳ್ಳಿಯ ಜಗದ್ಗುರು ಶ್ರೀಮೂರು ಸಾವಿರ ಮಠಕ್ಕೆ ಕರೆತಂದರು. ಪಂ. ಪಂಚಾಕ್ಷರಿ ಗವಾಯಿಗಳು ಮಠಕ್ಕೆ ಬಂದಾಗ ಬಾಲಕ ಬಸವರಾಜನ ಸಂಗೀತ ಪ್ರತಿಭೆಕಂಡು ಶಿಷ್ಯನನ್ನಾಗಿಸಿಕೊಂಡು ತಮ್ಮೊಂದಿಗೆ ಕರೆದುಕೊಂಡು ಹನ್ನೆರಡು ವರ್ಷ ತಮ್ಮ ಗರಡಿಯಲ್ಲಿ ಸಂಗೀತ ವಿದ್ಯೆ ನೀಡಿದರು.

ಪಂ. ಪಂಚಾಕ್ಷರಿಗವಾಯಿಗಳಲ್ಲಿ ಗ್ವಾಲಿಯರ್ ಘರಾಣೆಯ ಸಂಗೀತ ಕಲಿತು ನಂತರ ಕಿರಾನಾ, ಪಟಿಯಾಲಾ ಘರಾಣೆಯ ಸಂಗೀತಗಾರರಲ್ಲಿ ತಮ್ಮ ಸಂಗೀತ ಕಲೆಯನ್ನು ವಿಸ್ತಾರವಾಗಿಸಿಕೊಂಡರು. ದೇಶದ ಸುಪ್ರಸಿದ್ಧರೆನಿಸಿದ ಒಂಬತ್ತು ಜನ ಸಂಗೀತ ಗುರುಗಳಲ್ಲಿ

ಸಂಗೀತ ವಿದ್ಯೆ ಪಡೆದ ಏಕೈಕ ಕಲಾವಿದರು ಬಸವರಾಜರು. ರಾಜಗುರು ಅವರದು 'ಕಿರಾಣಾ ಘರಾಣಾ' ಎಂದು ಹೇಳಲಾಗುತ್ತಿದ್ದರೂ ಸಹ ಅವರ ಗಾಯಕಿಯಲ್ಲಿ ಗ್ವಾಲ್ಹೇರ, ಕಿರಾನಾ, ಪಟಿಯಾಲಾ ಘರಾಣೆಗಳ ಸುಖಕರ ಮೇಳಾಪ ಕಂಡುಬರುತ್ತದೆ. ಮೂರುಘರಾಣೆಗಳ ಮಿಶ್ರಣ ಗಾಯಕಿಗೆ 'ಮಣಿಕಾಂಚನ ಸಂಯೋಗ' ವೆಂದು ಕರೆಯುತ್ತಾರೆ.

ಪಂ. ರಾಜಗುರು ಅವರ ಕಂಠ ತುಂಬ ಮಧುರ. ಬಿಳೀ ನಾಲ್ಕನೇ ಪಟ್ಟಿಯಲ್ಲಿ ನಡೆಯುವ ಅವರ ಗಾಯನ ಮೂರು ಸಪ್ತಕಗಳನ್ನು ಲೀಲಾಜಾಲವಾಗಿ ತೇಲಿಸಬಲ್ಲುದು. ಅವರ ಗುರು ಪಂ.ಪಂಚಾಕ್ಷರಿಗವಾಯಿಗಳು 'ಸ್ವರರಾಜ'ರೆಂದು ಕರೆದಿರುವುದು ರಾಜಗುರುಗಳ ಮಧುರಕಂಠಕ್ಕೆ ನಿದರ್ಶನ. ರಾಜಗುರು ಅವರು 'ಚೀಜ್‌ಗಳ ಖಜಾನೆ' ಯಂತಿದ್ದರು. ಒಂದೊಂದು ರಾಗದಲ್ಲಿ, ಬೇರೆ ಬೇರೆ ತಾಲಗಳಲ್ಲಿ ಅವರಿಗೆ 40-50 ಬಂದೀಶ್‌ಗಳು ತುದಿನಾಲಿಗೆ ಮೇಲಿದ್ದವು. ಅವರ ಬಳಿ ಸರಿಸುಮಾರು ಸಾವಿರಕ್ಕೂ ಮಿಕ್ಕಿ ಬಂದೀಶಗಳ ಸಂಗ್ರಹವಿತ್ತೆಂದು ಒಮ್ಮೆ ಅವರೇ ಹೇಳಿದ್ದುಂಟು.

ಖಯಾಲ ಮೊದಲ್ಗೊಂಡ ಧ್ರುಪ್ರದ, ಧಮಾರ, ತರಾನಾ ಠುಮ್ರಿ, ಗಝಲ್, ನಾಟ್ಯಗೀತ, ವಚನ, ಭಜನ, ದಾಸರಪದ, ಬಯಲಾಟ ಹಾಗೂ ದೊಡ್ಡಾಟದ ಹಾಡು- ಹೀಗೆ ಅವರ ಗಾಯಕಿಯಲ್ಲಿ ಇವೆಲ್ಲ ಸಮೃದ್ಧ. ಯಲಿವಾಳದಿಂದ ಮೊದಲ್ಗೊಂಡು ದೇಶದ ಪ್ರತಿಷ್ಠಿತ ಕೇಂದ್ರಗಳಲ್ಲಿ ಅವರ ಸಂಗೀತ ಕಚೇರಿ ಏರ್ಪಟ್ಟಿವೆ.

'ಸೂರ್ ಕಾ ಬಾದಶಹಾ', 'ಹುಕುಮಿಯಕ್ಕಾ', ಮುಂತಾದ ಬಿರುದುಗಳನ್ನು, ಪದ್ಮಶ್ರೀ. ಪದ್ಮಭೂಷಣ ಪ್ರಶಸ್ತಿಗಳನ್ನು ಪಡೆದು ದೇಶದೆಲ್ಲೆಡೆ ಅಪರಾ ಖ್ಯಾತಿಪಡೆದಿದ್ದ ಅವರು ತಮ್ಮ ಹಿಂದೆ ಅಪಾರ ಅಭಿಮಾನಿ, ಬಹುಸಂಖ್ಯೆಯ ಶಿಷ್ಯರನ್ನು ಬಿಟ್ಟು ಹೋಗಿದ್ದಾರೆ.

ಪಂ. ಕುಮಾರ ಗಂಧರ್ವ

ಕರ್ನಾಟಕದಲ್ಲಿ ಹುಟ್ಟಿ ಮಧ್ಯ ಪ್ರದೇಶದ 'ದೇವಾಸ'ದಲ್ಲಿ ಖಾಯಂ ಆಗಿ ನೆಲೆನಿಂತು, ದೇಶದ ಪ್ರತಿಷ್ಠಿತ ಗಾಯಕರನಿಸಿಕೊಂಡು 'ದೇವಾಸ'ದಲ್ಲಿಯೇ ಕೊನೆಯುಸಿರೆಳೆದ ಪಂ. ಕುಮಾರ ಗಂಧರ್ವರು ವೀರಶೈವ ಕಲಾವಿದರೆಂಬುದೇ ಒಂದು ಅಭಿಮಾನದ ಮಾತು.

ಬೆಳಗಾವಿ ಜಿಲ್ಲೆಯ 'ಸೂಳಿ ಭಾವಿ' ಎಂಬ ಹಳ್ಳಿಯಲ್ಲಿ ಕೋಮ್‌ಕಾಳಿಮಠ ಎಂಬ ಸಂಗೀತ ಮನೆತನದಲ್ಲಿ ಹುಟ್ಟಿದ ಕುಮಾರ ಗಂಧರ್ವರ ಮೊದಲ ಹೆಸರು ಶಿವಪುತ್ರ ಕೋಮ್ ಕಾಳಿಮಠ. ತಂದೆ ಸಿದ್ಧರಾಮಯ್ಯ ಸಂಗೀತಗಾರರು. ಮಗನಿಗೆ ಸಂಗೀತ ವಿದ್ಯೆಗೆ ಶ್ರೀಕಾರ ಹಾಕಿದವರು. ಹುಟ್ಟಿನೊಂದಿಗೆ ಅಭಿಜಾತ ಸಂಗೀತ ಪ್ರತಿಭೆಯನ್ನು ಪಡೆದುಕೊಂಡು ಬಂದಿದ್ದ ಬಾಲಕ ಶಿವಪುತ್ರ ತನ್ನ 6ನೇ ವಯಸ್ಸಿನಲ್ಲಿ ಉಳಿವಿಯ ಶ್ರೀ ಚನ್ನಬಸವೇಶ್ವರ ಜಾತ್ರೆಯಲ್ಲಿ ಸಹಸ್ರಾರು ಜನರ ಮಧ್ಯೆ ಹಾಡಿದ ಅವನ ಸಂಗೀತ ಚಮತ್ಕಾರವನ್ನು ಗುರುತಿಸಿದ್ದ ಮತ್ತು ಸಭೆಯಲ್ಲಿದ್ದ ಗುಲಬರ್ಗಾ ಜಿಲ್ಲೆಯ ಗುರುಕಲ್ಮಠದ ಶ್ರೀ

ಶಾಂತವೀರಮಹಾಸ್ವಾಮಿಗಳು ಈತ ಸಾಮಾನ್ಯ ಸಂಗೀತಗಾರನಲ್ಲ ಈತ 'ಕುಮಾರಗಂಧರ್ವ'ನೆಂದು ಉದ್ಗಾರತೆಗೆದರು. ಅಂದಿನಿಂದ 'ಕುಮಾರ ಗಂಧರ್ವ' ಅವರ ಅನ್ವರ್ಥಕನಾಮವಾಯಿತು.

ಅಭಿಜಾತ ಕಲಾಪ್ರತಿಭೆ ಗುರುತಿಸಿದ ಮುಂಬೈನ ಮಹಾನ್ ಸಂಗೀತ ವಿದ್ವಾಂಸ ಹಾಗೂ ಶಾಸ್ತ್ರಜ್ಞ ಪಂ. ಬಿ. ಆರ್. ದೇವಧರ ಕುಮಾರ ಗಂಧರ್ವರಿಗೆ ಸುಮಾರು ಹನ್ನೆರಡು ವರ್ಷ ಸಂಗೀತ ತಾಲೀಮು ನೀಡಿದರು. ಫಲವಾಗಿ ಕುಮಾರು ಗಂಧರ್ವ ದೇಶದ ಪ್ರತಿಷ್ಠಿತ ಸಂಗೀತ ಕಲಾವಿದರಲ್ಲಿ ಒಬ್ಬರೆನಿಸಿದರು. ಸಂಗೀತಗಾರ್ತಿ ಶ್ರೀಮತಿ ಭಾನುಮತಿ ಕಂಸರನ್ನು ಮದುವೆಯಾದರು. ದೇಶದೆಲ್ಲೆಡೆ ಸಂಗೀತ ಕಚೇರಿ ಮೊಳಗಿಸಿ ಮಧ್ಯ ಪ್ರದೇಶದ ಭೂಪಾಲ ಸಮೀಪದ 'ದೇವಾಸ'ದಲ್ಲಿ ಖಾಯಂ ಆಗಿ ನೆಲೆ ನಿಂತರು.

ಮದುವೆಯಾದ ಒಂದೇ ವರ್ಷದಲ್ಲಿ ಕುಮಾರ ಗಂಧರ್ವರು ಶ್ವಾಸಕೋಶದ ಕಾಯಿಲೆಗೆ ಒಳಗಾದರು. ಹಾಡು ನಿಲ್ಲಿಸಿ ಹಾಸಿಗೆ ಹಿಡಿದರು. ಅಂತರಂಗದಲ್ಲಿ ಸಂಗೀತದ ಸಾಧನೆ ಮುನ್ನಡೆಯಿಸಿದರು. ಸಂಗೀತ ಕುರಿತು ಚಿಂತನೆಗೈದರು. ಅದರ ಫಲವಾಗಿ, 'ಅನೇಕ ರಾಗಗಳನ್ನು ಕಂಡುಹಿಡಿದು, 'ಅನುಪಮ ವಿಲಾಸ'ವೆಂಬ ಗ್ರಂಥ ಬರೆದು ಪ್ರಕಟಿಸಿದರು. ತಜ್ಞರ ಆರೈಕೆಯಿಂದ ಅವರ ಆರೋಗ್ಯ ಸುಧಾರಿಸಿತಾದರೂ ಒಂದು ಶ್ವಾಸ ಕೋಶವನ್ನು ಕಳೆದುಕೊಂಡರು. ಒಂದೇ ಶ್ವಾಸಕೋಶದ ಮೇಲೆ ಸಂಗೀತ ಸಾಧನೆ ಮಾಡಿದರು.

ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ

ಖ್ಯಾತ ಹಿಂದುಸ್ತಾನಿ ಗಾಯಕ ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿಯವರು ಜನಿಸಿದ್ದು ಧಾರವಾಡ ಜಿಲ್ಲೆಯ ಸಂತ ಶರೀಫರ ಪುಣ್ಯ ಭೂಮಿಯಾದ ಶಿಶುನಾಳದಲ್ಲಿ. ಸಂಗೀತ ಪರಿಸರದ ಮನೆತನದಲ್ಲಿ ಹುಟ್ಟಿದ ಅವರಿಗೆ ಸಂಗೀತ ತಾನಾಗಿಯೇ ಬಂದಿತು. ಆರಂಭದಲ್ಲಿ ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳಲ್ಲಿ ಸಂಗೀತ ಶಿಕ್ಷಣ ಪಡೆದು ನಂತರ ಪಂ. ಮಲ್ಲಿಕಾರ್ಜುನಮನಸೂರು ಅವರ ಶಿಷ್ಯರಾಗಿ ಜೈಪುರ ಘರಾಣೆಯ ಸಂಗೀತದ ತಾಲೀಮು ಪಡೆದ ಪಂ. ಮತ್ತಿಗಟ್ಟಿಯವರು ಹೆಸರಾಂತ ಗಾಯಕರಾಗಿದ್ದಾರೆ. ಆರಂಭದಲ್ಲಿ ರಂಗಭೂಮಿಯಲ್ಲಿ ನಟರಾಗಿ, ಖ್ಯಾತ ಗಾಯಕರೆನಿಸಿ, ಧಾರವಾಡದ ಕ. ವಿ. ವಿ. ಸಂಗೀತ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತಿಹೊಂದಿ ಧಾರವಾಡದಲ್ಲಿ ವಿಶ್ರಾಂತಿ ಜೀವನ ನಡೆಸುತ್ತಿರುವ ಅವರು ಅಮೇರಿಕ, ಜರ್ಮನ್, ಫ್ರಾನ್ಸ್ ದೇಶಗಳಲ್ಲಿ ಭಾರತೀಯ ಖಯಾಲ್ ಸಂಗೀತ ಕಚೇರಿ ನೀಡಿ ಕಡಲಾಚೆಗೂ ಭಾರತದ ಕೀರ್ತಿ ಮೆರೆದಿದ್ದಾರೆ. ಧಾರವಾಡ ಆಕಾಶವಾಣಿಯ 'ಎ' ಶ್ರೇಣಿಯ ಕಲಾವಿದರಾದ ಅವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 'ಕರ್ನಾಟಕ ಕಲಾತಿಲಕ' ಬಿರುದು ನೀಡಿ ಪುರಸ್ಕರಿಸಿದೆ. ಅವರುಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ. ವಚನಗಾಯನದಲ್ಲೂ ಇವರು ಪ್ರಸಿದ್ಧರು.

ಪಂ. ಮೃತ್ಯುಂಜಯ ಬುವಾ ಪುರಾಣಿಕಮಠ

ಪಂ. ಪಂಚಾಕ್ಷರಿ ಗವಾಯಿಗಳ ಹಿರಿಯ ಶಿಷ್ಯರಲ್ಲೊಬ್ಬರಾದ ಶ್ರೀ ಮೃತ್ಯುಂಜಯ ಬುವಾ ಅವರು ಕರ್ನಾಟಕದ ಹಿರಿಯ ತಲೆಮಾರಿನ ಹೆಸರಾಂತ ಗಾಯಕರಲ್ಲೊಬ್ಬರು. ಸದ್ಯ ಬೆಳಗಾವಿಯಲ್ಲಿ ಖಾಯಂ ಆಗಿ ನೆಲೆಸಿರುವ ಅವರು ಮೂಲತಃ ಧಾರವಾಡ ಜಿಲ್ಲೆಯ ಹಾವೇರಿಯವರು. ಅನೇಕ ಜನ ಶಿಷ್ಯರನ್ನೂ ತಯಾರಿಸಿರುವ ಅವರು 'ಹಿಂದುಸ್ತಾನಿ ಸಂಗೀತ'ವೆಂಬ ಪುಸ್ತಕ ರಚಿಸಿ ಪ್ರಕಟಿಸಿದ್ದಾರೆ.

ಪಂ. ಸಂಗಮೇಶ್ವರ ಗುರವ

ಖ್ಯಾತ ಹಿಂದುಸ್ತಾನಿ ಗಾಯಕರಾದ ಪಂ. ಸಂಗಮೇಶ್ವರ ಗುರವ ಅವರು ಕಿರಾಣಾ ಘರಾಣೆಯ ಪ್ರತಿಷ್ಠಿತ ಗಾಯಕರಲ್ಲೊಬ್ಬರು. ಈಗ ಧಾರವಾಡದಲ್ಲಿ ಖಾಯಂ ಆಗಿ ನೆಲೆಸಿರುವ ಅವರು ಮೂಲತಃ ಜಮಖಂಡಿಯವರು. ಅವರದು ಸಂಗೀತ ಮನೆತನ. ತಂದೆ ಗಣಪತರಾವ ಗುರವ ಹಿರಿಯ ತಲೆಮಾರಿನ ಸಂಗೀತಗಾರರು. ಇಂತಹ ಪರಿಸರದಲ್ಲಿ ಜನಿಸಿದ ಪಂ. ಸಂಗಮೇಶ್ವರ ಗುರವ ಅವರಿಗೆ ತಂದೆಯಿಂದ ಸಂಗೀತದೀಕ್ಷೆ ದೊರೆಯಿತು. ಅಪಾರ ಸಾಧನೆ, ಅಚಲ ಶ್ರದ್ಧೆಯ ಫಲವಾಗಿ ಅವರು ಹೆಸರಾಂತ ಗಾಯಕರೆನಿಸಿದರು. ಕಿರಾಣಾ ಘರಾಣೆಯ ಅಧ್ವರ್ಯು ಉಸ್ತಾದ್ ಅಬ್ದುಲ್ ಕರೀಮ್ ಖಾನರ ಗಾಯಕಿಯನ್ನು ನೆನಪಿಗೆ ತರುವ ಅವರ ಕಂಠ ಬಲು ಮಧುರ. ಧಾರವಾಡ, ಮುಂಬೈ ಆಕಾಶವಾಣಿಯ ಕಲಾವಿದರಾದ ಅವರು ಅನೇಕ ವರ್ಷ ಧಾರವಾಡದ ಕ. ವಿ. ವಿ ಸಂಗೀತ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತಿ ಜೀವನ ನಡೆಸುತ್ತಿದ್ದಾರೆ. ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿಯ 'ಕರ್ನಾಟಕ ಕಲಾತಿಲಕ' ಬಿರುದಿನೊಂದಿಗೆ ಪ್ರಶಸ್ತಿ ಪಡೆದಿರುವ ಅವರು ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ. ವಚನ ಗಾಯನದಲ್ಲೂ ಅವರು ಪ್ರಸಿದ್ಧರಾಗಿದ್ದಾರೆ.

ಪಂ. ಚಂದ್ರಶೇಖರ ಪುರಾಣಿಕ ಮಠ

ಹೆಸರಾಂತ ಹಿಂದುಸ್ತಾನಿ ಗಾಯಕರಾದ ಪಂ. ಚಂದ್ರಶೇಖರ ಪುರಾಣಿಕ ಮಠರು ಆರಂಭದಲ್ಲಿ ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿ, ಪಂ. ಪುಟ್ಟರಾಜ ಗವಾಯಿ, ನಂತರ ಹಿರಿಯ ಸಹೋದರ ಪಂ. ಮೃತ್ಯುಂಜಯ ಬುವಾ ಪುರಾಣಿಕಮಠ ಹಾಗೂ ಪಂಢರಪುರದ ಪಂ. ಜಗನ್ನಾಥಬುವಾ ಅವರಲ್ಲಿ ಸಂಗೀತ ಶಿಕ್ಷಣ ಪಡೆದಿರುವ ಅವರು ಅನೇಕ ವರ್ಷ ಧಾರವಾಡ ಆಕಾಶವಾಣಿಯ ನಿಲಯದ ಕಲಾವಿದರಾಗಿ ಕಾರ್ಯ ನಿರ್ವಹಿಸಿ ಈಗ ನಿವೃತ್ತರಾಗಿ ಖಾಯಂ ಆಗಿ ಧಾರವಾಡದಲ್ಲಿ ನೆಲೆಸಿದ್ದಾರೆ. ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿಯ 'ಕರ್ನಾಟಕ ಕಲಾತಿಲಕ' ಬಿರುದಿನೊಂದಿಗೆ ಪ್ರಶಸ್ತಿ ಪುರಸ್ಕೃತರಾದ ಅವರು ಕೆಲಕಾಲ ಶಿರಶಿಯ ಶ್ರೀಮಾರಿಕಾಂಬಾ ಹೈಸ್ಕೂಲು ಹಾಗೂ ಹಾವೇರಿಯಲ್ಲಿ ಸಂಗೀತ

ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಧಾರವಾಡ ಕ.ವಿ.ವಿ. ಸಂಗೀತ ವಿಭಾಗದಲ್ಲಿ ಹಂಗಾಮಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅವರು ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ. ಖಯಾಲದ ಜೊತೆ ವಚನಗಾಯನದಲ್ಲೂ ಅವರು ಸಿದ್ಧಹಸ್ತರು.

ಪ್ರೊ. ಅಜ್ಜಣ್ಣ ಪಾಟೀಲ

ಮೂಲತಃ ಬೆಳಗಾವ ಜಿಲ್ಲೆಯ ಬೈಲಹೊಂಗಲ ತಾಲೂಕಿನ 'ದೇಗಾಂವಿ' ಗ್ರಾಮದವರಾದ ಪ್ರೊ. ಅಜ್ಜಣ್ಣ ಪಾಟೀಲರು ಆರಂಭದಲ್ಲಿ ಪಂ. ಮೃತ್ಯುಂಜಯ ಬುವಾ ಪುರಾಣಿಕ ಮಠರಲ್ಲಿ ಗ್ವಾಲಿಯರ್ ಗಾಯಕಿಯನ್ನು ನಂತರ ಪಂ. ಮಲ್ಲಿಕಾರ್ಜುನ ಮನಸೂರ ಅವರಲ್ಲಿ ಜೈಪುರಘರಾಣೆಯ ಗಾಯಕಿಯನ್ನೂ ಅಭ್ಯಾಸಮಾಡಿ.. ಹೆಸರಾಂತ ಗಾಯಕರೆನಿಸಿದ ಅವರು ಆರಂಭದಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ನಂತರ. ಕ.ವಿ.ವಿ. ಸಂಗೀತ ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿ ಹೊಂದಿ ಈಗ ವಿಶ್ರಾಂತಿ ಜೀವನ ನಡೆಸುತ್ತಿರುವ ಅವರು ಒಬ್ಬ ಸೃಜನಶೀಲ ಚಿತ್ರಕಲಾವಿದರು. ಚಿತ್ರಕಲೆಯಲ್ಲಿ ಅತ್ಯುನ್ನತ ಪದವಿ (ಆರ್ಟ್ ಮಾಸ್ಟರ್) ಪಡೆದಿರುವ ಅವರು ಒಬ್ಬ ಶ್ರೇಷ್ಠ ಸಂಗೀತ ಸಾಹಿತಿಗಳು. 'ಸಂಗೀತ ಶಾಸ್ತ್ರಪರಿಚಯ, ಸಂಗೀತ ಶಾಸ್ತ್ರ ದರ್ಪಣ', 'ಹಿಂದುಸ್ತಾನಿ ಸಂಗೀತ ಪದ್ಧತಿಯ ರೂಪರೇಷೆಗಳು', ಪಂಚಾಕ್ಷರಿ ಗವಾಯಿ-ಮುಂತಾದ ಸಂಗೀತ ಕೃತಿಗಳನ್ನು ರಚಿಸಿರುವ ಅವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಮಾರ್ಗದರ್ಶನದಲ್ಲಿ ಅನೇಕ ಜನ ಪ್ರಾಧ್ಯಾಪಕರು ಸಂಗೀತದಲ್ಲಿ ಪಿ.ಹೆಚ್. ಡಿ. ಪದವಿ ಪಡೆದಿದ್ದಾರೆ. ಅವರು ಪಂ. ಮಲ್ಲಿಕಾರ್ಜುನನಮನಸೂರ ಅವರ ಹಿರಿಯ ಅಳಿಯಂದಿರು.

ಪಂ. ಪ್ರಭುದೇವ ಸರ್ದಾರ

ಖ್ಯಾತ ಹಿಂದುಸ್ತಾನಿ ಗಾಯಕ ಪಂ. ಪ್ರಭುದೇವ ಸರ್ದಾರ ಅವರು ಮೂಲತಃ ಬೆಳಗಾವ ಜಿಲ್ಲೆಯ ಕಿತ್ತೂರಿನವರು. ಮುಂಬೈಯಲ್ಲಿ ಅನೇಕ ವರ್ಷ ಇದ್ದುಕೊಂಡು ಈಗ ಪುಣೆಯಲ್ಲಿ ನೆಲೆಸಿರುವ ಅವರು ಮಹಾರಾಷ್ಟ್ರದಲ್ಲಿ ಹೆಸರು ಪಡೆದ ಕನ್ನಡಿಗ ಕಲಾವಿದರು. ಖಯಾಲ ಹಾಗೂ ಹಿಂದಿ ಭಜನ್ ಹಾಡುಗಾರಿಕೆಯಲ್ಲಿ ಅವರು ಪ್ರಸಿದ್ಧರು.

ಪಂ. ಗುರುಬಸವಾರ್ಯ ಹಿರೇಮಠ

ಪಂ. ಪಂಚಾಕ್ಷರಿ ಗವಾಯಿಗಳ ಹಿರಿಯ ತಲೆಮಾರಿನ ಶಿಷ್ಯರಲ್ಲೊಬ್ಬರಾದ ಪಂ. ಗುರು ಬಸವಾರ್ಯರು ಖಯಾಲ ಹಾಗೂ ವಚನ ಸಂಗೀತ ಹಾಡುಗಾರಿಕೆಯಲ್ಲಿ ಪ್ರಸಿದ್ಧರು. ಅವರು ವಚನಗಳಿಗೆ ಸ್ವರಪ್ರಸ್ತಾರ ಹಾಕಿ ಪುಸ್ತಕ ಪ್ರಕಟಿಸಿದ್ದಾರೆ. ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ.

ಪ್ರೊ. ಆರ್. ಪಿ. ಹೂಗಾರ

ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಬೂದಿಹಾಳು ಗ್ರಾಮದ ಸಂಗೀತ ಮನೆತನದಲ್ಲಿ ಹುಟ್ಟಿದ ಪ್ರೊ. ಆರ್. ಪಿ. ಹೂಗಾರ ಅವರು ಗ್ವಾಲಿಯರ್ ಘರಾಣೆಯ ಪಂ. ಬಾಲಕೃಷ್ಣ ಬುವಾ ಈಚಲಕರಂಜೀಕರ ಅವರ ಶಿಷ್ಯರಾದ ಪಂ. ನಾರಾಯಣಾಚಾರ ದಂಡಾಪೂರ ಅವರ ಶಿಷ್ಯರು. ಖಯಾಲ್ ಹಾಡುಗಾರಿಕೆಯಲ್ಲಿ ಅತ್ಯಂತ ನಿಷ್ಣಾತರಾಗಿದ್ದ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದಲ್ಲಿ ಅನೇಕ ವರ್ಷ ಸಂಗೀತ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ನಿವೃತ್ತರಾದರು. ಧಾರವಾಡ ಆಕಾಶವಾಣಿಯ ಕಲಾವಿದರಾಗಿದ್ದ ಅವರು ಕೆಲಕಾಲ ಧಾರವಾಡ ಕ.ವಿ.ವಿ. ಸಂಗೀತ ವಿಭಾಗದ ಗೌರವ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದರು. ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ. ಸಂಗೀತ ಕುರಿತು ಪುಸ್ತಕವೊಂದನ್ನು ರಚಿಸಿದ್ದಾರೆ.

ಸಿದ್ಧರಾಮ ಜಂಬಲದಿನ್ನಿ

ಖ್ಯಾತ ಹಿಂದುಸ್ತಾನಿ ಗಾಯಕ ಪಂ. ಸಿದ್ಧರಾಮ ಜಂಬಲದಿನ್ನಿಯವರು ಆರಂಭದಲ್ಲಿ ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳಲ್ಲಿ ನಂತರ ಪಂ. ಮಲ್ಲಿಕಾರ್ಜುನ ಮನಸೂರ ಅವರ ಬಳಿ ಸಂಗೀತ ಕಲಿತು, ಅಸಾಧಾರಣ ಸಾಧನೆಯಿಂದ ಹೆಸರು ಪಡೆದಿರುವ ಅವರು ಸುಮಧುರಕಂಠದ ಗಾಯಕರಾಗಿದ್ದರು. "ವಚನ" ಹಾಗೂ "ಸ್ವರವಚನ" ಗಾಯನದಲ್ಲಿ ಅವರನ್ನು ಸರಿಗಟ್ಟುವವರು ಇಲ್ಲವೆಂದೇ ಹೇಳಬೇಕು. ಅವರು ಧಾರವಾಡ, ಗುಲಬರ್ಗಾ ಆಕಾಶವಾಣಿಯ ಕಲಾವಿದರಾಗಿ, ಅನೇಕ ವರ್ಷ ಗುಲಬರ್ಗಾದ ಶ್ರೀ ಶರಣಬಸವೇಶ್ವರ ಕಲಾ ಮಹಾ ವಿದ್ಯಾಲಯದಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ್ದರು. ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ.

ಪ್ರೊ. ರಾಜಶೇಖರ ಮನಸೂರ

ಪಂ. ಮಲ್ಲಿಕಾರ್ಜುನ ಮನಸೂರ ಅವರ ಪುತ್ರ ಹಾಗೂ ಶಿಷ್ಯರಾದ ಪ್ರೊ. ರಾಜಶೇಖರ ಮನಸೂರ ಅವರು ಧಾರವಾಡದ ಕ.ವಿ.ವಿ. ಇಂಗ್ಲೀಷ ವಿಭಾಗದ ಪ್ರಾಧ್ಯಾಪಕರು. ತಂದೆಯ ಗರಡಿಯಲ್ಲಿ ಜೈಪುರ ಘರಾಣೆಯ ಗಾಯಕಿಯನ್ನು ಕರಗತ ಮಾಡಿಕೊಂಡಿರುವ ಅವರು ಧಾರವಾಡ ಆಕಾಶವಾಣಿಯ "ಎ" ಶ್ರೇಣಿಯ ಕಲಾವಿದರಾಗಿದ್ದಾರೆ. ದೇಶದ ತುಂಬ ತಂದೆ ಪಂ. ಮಲ್ಲಿಕಾರ್ಜುನ ಮನಸೂರ ಅವರಿಗೆ ಸಹಗಾಯಕರಾಗಿ ಅಸಂಖ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಶ್ರೀ ಫಕೀರೇಶ ಕಣವಿ :

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ಫಕೀರೇಶ ಕಣವಿಯವರು ಸುಶ್ರಾವ್ಯ

ಕಂಠದ ಗಾಯಕರಾಗಿದ್ದಾರೆ. ಗುಲಬರ್ಗಾ ಆಕಾಶವಾಣಿ ಕೇಂದ್ರದ ನಿಲಯದ ಕಲಾವಿದರಾದ ಅವರು 'ವಚನಗಾಯನ'ದಲ್ಲೂ ಪ್ರಸಿದ್ಧರೆನಿಸಿದ್ದಾರೆ.

ಶ್ರೀಬಸವರಾಜ ಗೋನಾಳು

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ಬಸವರಾಜ ಗೋನಾಳು ಅವರು ಸುಶ್ರಾವ್ಯ ಕಂಠದ ಗಾಯಕರಾಗಿದ್ದಾರೆ. ಧಾರವಾಡ ಆಕಾಶವಾಣಿಯ ನಿಲಯದ ಕಲಾವಿದರಾಗಿರುವ ಅವರು 'ವಚನ ಗಾಯನ'ದಲ್ಲಿ ಪ್ರಸಿದ್ಧರೆನಿಸಿದ್ದಾರೆ.

ಶ್ರೀ ಗುರುಬಸವಾರ್ಯ ಹಿರೇಮಠ

ಪಂ. ಪಂಚಾಕ್ಷರಿಗವಾಯಿಗಳ ಹಿರಿಯ ತಲೆಮಾರಿನ ಶಿಷ್ಯರಲ್ಲೊಬ್ಬರಾಗಿದ್ದ ಶ್ರೀ ಗುರುಬಸವಾರ್ಯ ಹಿರೇಮಠ ಅವರು ಹೆಸರಾಂತ ಹಿಂದುಸ್ತಾನಿ ಗಾಯಕರು. ಶಿಷ್ಯರನ್ನು ತಯಾರಿಸಿದ್ದಾರೆ. ಬಸವಣ್ಣನವರ ವಚನಗಳಿಗೆ ಸ್ವರಸಂಯೋಜಿಸಿ ಪುಸ್ತಕ ರಚಿಸಿ ಅದನ್ನು ಪ್ರಕಟಿಸಿದ್ದಾರೆ.

ಉಸುರಿನ ನಿಯಂತ್ರಣದಿಂದಾಗಿ ಅವರು ಹಾಡುವಶೈಲಿಯನ್ನೇ ಬದಲಾಯಿಸಿಕೊಂಡರು ಅದು ಸಂಗೀತ ಕ್ಷೇತ್ರದಲ್ಲಿ 'ಕುಮಾರ ಶೈಲಿ'ಯೆಂದೇ ಗುರುತಿಸಿಕೊಂಡಿದೆ. ಅವರು ಅನಾರೋಗ್ಯದಿಂದ ಚೇತರಿಸಿಕೊಂಡು ಕಚೇರಿ ಕೊಡುವಷ್ಟರಲ್ಲಿ ಮಡದಿ ಮಣ್ಣಿಗೆ ಮರೆಯಾದಳು. ಈ ಘಟನೆ ಅವರ ಮನಸ್ಸಿಗೆ ತುಂಬ ಆಘಾತ ತಂದಿತು. ಶ್ರೀಮತಿ ವಸುಂಧರಾ ಶ್ರೀಖಂಡೆ ಎನ್ನುವ ಕಲಾವಿದೆಯೊಂದಿಗೆ ಮರು ಮದುವೆ ಮಾಡಿಕೊಂಡರು.

ದೇಶದೆಲ್ಲೆಡೆ ಪ್ರಖ್ಯಾತಿ ಪಡೆದ ಅವರಿಗೆ ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ, ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್, 'ಕಾಲಿದಾಸ ಸಮ್ಮಾನ್' ಮುಂತಾದ ಪ್ರಶಸ್ತಿ, ಪದವಿಗಳು ಅವರ ಮಡಿಲಿಗೆ ತಾನಾಗಿಯೇ ಬಂದಿವೆ. ದೇಶದ ಪ್ರತಿಷ್ಠಿತ ಸಂಗೀತ ಪ್ರಶಸ್ತಿ 'ಕಾಲಿದಾಸ ಸಮ್ಮಾನ್' ಮೊದಲ ಪ್ರಶಸ್ತಿ ಪಂ. ಮಲ್ಲಿಕಾರ್ಜುನ ಮನಸೂರ ಹಾಗೂ ಎರಡನೇ ಪ್ರಶಸ್ತಿ ಪಂ. ಕುಮಾರ ಗಂಧರ್ವರಿಗೆ ದೊರೆತುದು ವೀರಶೈವರಿಗೆ ಅಭಿಮಾನದ ಮಾತು.

ಶ್ರೀಪ್ರಭುದೇವ ಸಾಲಿಮಠ

ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯರಾದ ಶ್ರೀ ಪ್ರಭುದೇವ ಸಾಲಿಮಠ ಅವರು ಉತ್ತಮಗಾಯಕರು. ತಾಳಿಕೋಟೆಯ ಶ್ರೀಖಾಸ್ಗತೇಶ್ವರ ಸಂಗೀತ ವಿದ್ಯಾಲಯದಲ್ಲಿ ಸಂಗೀತ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಈಗ ಮುದ್ದೇಬಿಹಾಳದಲ್ಲಿ ನೆಲೆಸಿರುವ ಅವರಿಗ ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿ 'ಕರ್ನಾಟಕ ಕಲಾತಿಲಕ' ಬಿರುದಿನೊಂದಿಗೆ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

ಶ್ರೀ ಸ್ವಾಮಿ ಸಂಗಮೇಶ ಹಿರೇಮಠ

ಮೂಲತಃ ಜಮಖಂಡಿ ಸಮೀಪದ ಮದರ ಖಂಡಿಯವರಾದ ಶ್ರೀ ಸ್ವಾಮಿಸಂಗಮೇಶ ಹಿರೇಮಠರು ಪಂ. ಬಸವರಾಜ ರಾಜಗುರು ಅವರ ಶಿಷ್ಯರು. ಧಾರವಾಡ ಆಕಾಶವಾಣಿಯ ಕಲಾವಿದರು ಆಗಿರುವ ಅವರು ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ. ಅವರು ಉತ್ತಮ ಗಾಯಕರಾಗಿದ್ದಾರೆ.

ಶ್ರೀ ಶಿವರಾಜ ಗವಾಯಿ

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ಶಿವರಾಜ ಗವಾಯಿಗಳು ಸುಶ್ರಾವ್ಯ ಕಂಠದ ಗಾಯಕರಾಗಿದ್ದಾರೆ. ದಾವಣಗೆರೆಯಲ್ಲಿ ಸ್ವರಸಾಗರ ಸಂಗೀತ ವಿದ್ಯಾಲಯ ಸ್ಥಾಪಿಸಿ ತನ್ಮೂಲಕ ಸಂಗೀತ ಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತ ಶಿಷ್ಯರನ್ನು ತಯಾರಿಸುತ್ತಿರುವ ಅವರು ವಚನ ಗಾಯನ ಕುರಿತು ಅನೇಕ ಧ್ವನಿ ಸುರುಳಿ ತಯಾರಿಸಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸಂಗೀತ ಪ್ರಶಸ್ತಿ ಅವರಿಗೆ ಲಭಿಸಿವೆ.

ಶ್ರೀ ದೊಡ್ಡಬಸವಾರ್ಯ ಹಿರೇಮಠ

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಲ್ಲೊಬ್ಬರಾದ ಶ್ರೀಯುತರು ಸುಶ್ರಾವ್ಯ ಕಂಠದ ಗಾಯಕರು. ಶಿಷ್ಯರನ್ನು ತಯಾರಿಸಿದ್ದಾರೆ.

ಶ್ರೀ ಮೌನೇಶಕುಮಾರ ಛಾವಣಿ

ಸುಶ್ರಾವ್ಯಕಂಠದ ಗಾಯಕರಾದ ಶ್ರೀ ಮೌನೇಶ ಕುಮಾರ ಛಾವಣಿಯವರು ಆಕಾಶವಾಣಿ ಕಲಾವಿದರೂ ಆಗಿದ್ದಾರೆ.

ಪಂ. ಸೋಮನಾಥ ಮರಡೂರ

ಹೆಸರಾಂತ ಹಿಂದುಸ್ತಾನಿ ಗಾಯಕರಾದ ಪಂ. ಸೋಮನಾಥ ಮರಡೂರ ಅವರು ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿ ಹಾಗೂ ಡಾ. ಪುಟ್ಟರಾಜ ಗವಾಯಿಗಳಲ್ಲಿ ನಂತರ ಪಂ. ಬಸವರಾಜ ರಾಜಗುರು ಅವರಲ್ಲಿ ಸಂಗೀತ ವಿದ್ಯೆ ಸಂಪಾದಿಸಿ, ಅವಿರತ ಸಾಧನೆಯಿಂದ ಹೆಸರುಪಡೆದಿರುವ ಅವರು ಧಾರವಾಡ ಆಕಾಶವಾಣಿಯ ಕಲಾವಿದರಾಗಿದ್ದುಕೊಂಡು ದೇಶದಲ್ಲೆಡೆ ಸಂಗೀತ ಕಚೇರಿ ಕೊಟ್ಟಿದ್ದಾರೆ. ಖಯಾಲ ಹಾಡುಗಾರಿಕೆಯ ಜೊತೆಗೆ ಅವರು ಪ್ರಸ್ತುತಪಡಿಸುವ ಶರಣರ ವಚನಗಾಯನ ಆಧರಿಸಿದ ''ಶರಣವಾಣಿ' ಕೇಳಿಯೇ ಆನಂದಿಸಬೇಕು. ಧಾರವಾಡ ಕರ್ನಾಟಕ ಸಂಗೀತ ಕಾಲೇಜಿನಲ್ಲಿ ಕೆಲಕಾಲ ಗೌರವ ಪ್ರಾಧ್ಯಾಪಕರಾಗಿ ಕೆಲಸ ಮಾಡಿರುವ ಅವರು ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ.

ಶ್ರೀ ಎಸ್. ಎಫ್. ಗೊಜನೂರ

ಪಂ. ಬಸವರಾಜ ರಾಜಗುರು ಅವರ ಶಿಷ್ಯರಾದ ಪ್ರೊ. ಎಸ್. ಎಫ್. ಗೊಜನೂರ ಧಾರವಾಡದ ಸರಕಾರಿ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಸಂಗೀತ ಅಧ್ಯಾಪಕರಾಗಿರುವ ಅವರು ಧಾರವಾಡ ಆಕಾಶವಾಣಿಯ ಕಲಾವಿದರಾಗಿದ್ದಾರೆ. ಉತ್ತಮ ಚಿತ್ರಕಲಾವಿದರೂ ಆಗಿರುವ ಅವರು ಶಿಷ್ಯರನ್ನೂ ತಯಾರಿಸಿದ್ದಾರೆ. ಅನೇಕ ಕಡೆ ಕಾರ್ಯಕ್ರಮ ನೀಡಿದ್ದಾರೆ. ವಚನ ಗಾಯನದಲ್ಲಿ ಅವರು ನಿಷ್ಣಾತರು.

ಪ್ರೊ ರವೀಂದ್ರ ಜಕಾತಿ

ಬೆಳಗಾವಿ ಜಿಲ್ಲೆಯ ಕಿತ್ತೂರಿನವರಾದ ಪ್ರೊ. ರವೀಂದ್ರ ಜಕಾತಿ ಗದುಗಿನ ಪಂ. ಪಂಚಾಕ್ಷರಿ ಗವಾಯಿ ಸಂಗೀತ ಮಹಾವಿದ್ಯಾಲಯದಲ್ಲಿ ಗಾಯನ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅವರು ಧಾರವಾಡ ಆಕಾಶವಾಣಿಯ ಕಲಾವಿದರೂ ಆಗಿದ್ದಾರೆ.

ಪ್ರೊ. ಮೃತ್ಯುಂಜಯ ಶೆಟ್ಟರ

ಪಂ. ಸಂಗಮೇಶ್ವರ ಗುರವ ಅವರ ಶಿಷ್ಯ ಪ್ರೊ. ಮೃತ್ಯುಂಜಯ ಶೆಟ್ಟರ ಗದುಗಿನ ಪಂ.ಪಂಚಾಕ್ಷರಿ ಗವಾಯಿ ಸಂಗೀತ ಮಹಾವಿದ್ಯಾಲಯದಲ್ಲಿ ಗಾಯನ ಪ್ರಾಧ್ಯಾಪಕರಾಗಿದ್ದಾರೆ. ಸಂಗೀತ ಕುರಿತು ಲೇಖನ ಬರೆದಿದ್ದಾರೆ.

ಪ್ರೊ. ಚಂದ್ರಶೇಖರ ಹಿರೇಮಠ

ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿಯವರ ಶಿಷ್ಯ ಪ್ರೊ. ಚಂದ್ರಶೇಖರ ಹಿರೇಮಠ ಗದುಗಿನ ಪಂ.ಪಂಚಾಕ್ಷರಿಗವಾಯಿ ಸಂಗೀತ ಕಾಲೇಜಿನಲ್ಲಿ ಗಾಯನ ಪ್ರಾಧ್ಯಾಪಕರಾಗಿದ್ದಾರೆ.

ಪ್ರೊ. ಮಹೇಶಕುಮಾರ ಚಿಂಚಖಂಡಿ ಮಠ

ಪಂ. ಬಸವರಾಜ ರಾಜಗುರು ಪಂ. ವ್ಹಿ. ಆರ್. ಅಠವಲೆ ಅವರ ಶಿಷ್ಯ ಪ್ರೊ. ಮಹೇಶಕುಮಾರ ಚಿಂಚಖಂಡಿಮಠ ಗೋವಾ ಆಕಾಶವಾಣಿ ಕಲಾವಿದರಾಗಿದ್ದು ಈಗ ಗೋವಾದ ಕಲಾ ಅಕಾಡೆಮಿಯಲ್ಲಿ ಗಾಯನ ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿದ್ದಾರೆ.

ಶ್ರೀ ಸಿದ್ಧರಾಮಸ್ವಾಮಿ ಕೋರವಾರ

ಪಂ. ಪುಟ್ಟರಾಜ ಗವಾಯಿಗಳು ಶಿಷ್ಯರಾದ ಸಿದ್ಧರಾಮ ಸ್ವಾಮಿ ಕೋರವಾರ ಅವರು ಮಧ್ಯ ಪ್ರದೇಶದ ಭೂಪಾಲ ಆಕಾಶವಾಣಿ ಕೇಂದ್ರದ ನಿಲಯದ ಕಲಾವಿದರಾಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಕೈವಲ್ಯಕುಮಾರ ಗುರವ

ಪಂ. ಸಂಗಮೇಶ್ವರ ಗುರವ ಅವರ ಕಿರಿಯಪುತ್ರ ಹಾಗೂ ಶಿಷ್ಯರಾದ ಶ್ರೀ ಕೈವಲ್ಯಕುಮಾರ ಖಯಾಲ, ಠುಮರಿ ಹಾಗೂ ನಾಟ್ಯಸಂಗೀತದಲ್ಲಿ ಅಖಿಲ ಭಾರತ ಮಟ್ಟದ ಹೆಸರು ಪಡೆದಿದ್ದಾರೆ. ಧಾರವಾಡ ಆಕಾಶವಾಣಿ ಕಲಾವಿದರಾದ ಅವರು ಹಾಡಿದ ಅನೇಕ 'ನಾಟ್ಯ ಗೀತ' ಗಳನ್ನೂ ಹೆಚ್. ಎಂ. ವಿ. ಕ್ಯಾಶೆಟ್ ತಯಾರಿಸಿದೆ. ವೀರಶೈವ ಯುವ ಸಂಗೀತಗಾರರಲ್ಲಿ ಭರವಸೆಯ ಕಲಾವಿದ. ಪಂ. ಜಸರಾಜಪ್ರಶಸ್ತಿ ಅವರಿಗೆ ದೊರಕಿದೆ.

ಡಾ. ವೀರಣ್ಣ ಹೂಗಾರ

ಪಂ. ಪಂಚಾಕ್ಷರಿ ಸ್ವಾಮಿ ಮುತ್ತಿಗಟ್ಟಿಯವರ ಶಿಷ್ಯ ಡಾ. ವೀರಣ್ಣ ಹೂಗಾರ ಪ್ರೊ. ಆರ್. ಪಿ. ಹೂಗಾರ ಅವರ ಕಿರಿಯಮಗ. ಪಂ. ಪಂಚಾಕ್ಷರಿ ಗವಾಯಿಗಳ ಕುರಿತು ಪಿಹೆಚ್.ಡಿ ಮಾಡಿರುವ ಅವರು ಈಗ ಧಾರವಾಡದ ಕ. ವಿ. ವಿ. ಸಂಗೀತ ವಿಭಾಗದಲ್ಲಿ ಗಾಯನ ಪ್ರಾಧ್ಯಾಪಕರಾಗಿದ್ದಾರೆ.

ಪ್ರೊ. ಸಿದ್ಧರಾಮಯ್ಯ ಮಠಪತಿ

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ 'ಗೋರಟಾ' ಗ್ರಾಮದ ಪ್ರೊ. ಸಿದ್ಧರಾಮಯ್ಯ ಮಠಪತಿಯವರು ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಗಾಯನ ಪ್ರಾಧ್ಯಾಪಕರಾಗಿದ್ದಾರೆ. ನಾಡಿನ ಹಲವೆಡೆ ಸಂಗೀತಕಾರ್ಯಕ್ರಮ ನೀಡಿರುವ ಅವರು 'ಹಿಂದುಸ್ತಾನಿ ಸಂಗೀತಗಾರರು', 'ಸಂಗೀತ ಶ್ರೀರುದ್ರ'ಗಳೆಂಬ ಎರಡು ಸಂಗೀತ ಪುಸ್ತಕರಚಿಸಿ, ಸ್ವತಂತ್ರ ಪ್ರಕಟಿಸಿದ್ದಾರೆ. 'ಸಂಗೀತ ಶ್ರೀರುದ್ರ' ಗ್ರಂಥಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದ (1996) ಪುಸ್ತಕ ಪ್ರಶಸ್ತಿ ಬಂದಿದೆ.

ಶಾಸ್ತ್ರೀಯ ಸಂಗೀತ ಕಲಾವಿದರಲ್ಲಿ ಶ್ರೀ ಗದಿಗಯ್ಯ ನಂದಿಮಠ, ರವೀಂದ್ರ ಸೋರಗಾವಿ, ಮೃಡದೇವ ಗವಾಯಿ ಇನ್ನೂ ಅನೇಕರು ಉಲ್ಲೇಖನಿಯರಾಗಿದ್ದಾರೆ.

2. ಗಾಯಕಿಯರು

ವೀರಶೈವ ಮಹಿಳಾ ಸಂಗೀತಕಲಾ ಪರಂಪರೆಯಲ್ಲಿ ಕಡಿಮೆ ಸಂಖ್ಯೆಯ ಕಲಾವಿದೆಯರಿದ್ದರೂ ಸಹ ಮೌಲಿಕತೆಯಿಂದ ಕಡಿಮೆಯಿಲ್ಲ. ಇತರ ಸಮಾಜದಂತೆ ವೀರಶೈವ ಮಹಿಳಾ ಕಲಾವಿದೆಯರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಅದಕ್ಕೆ ಕಾರಣ ಇಲ್ಲದಿಲ್ಲ. ಸಂಗೀತ ವ್ಯಸನಿಗಳ ವಿದ್ಯೆ. ಸೋಮಾರಿಗಳ ವಿದ್ಯೆ. ಸಂಗೀತ-ನಾಟಕ ಹವ್ಯಾಸಗಳಿಗೆ ಅಂಟಿಕೊಂಡವ ಬಾಳ್ವೆ ಮಾಡಲು ಅಸಮರ್ಥ ಎಂಬ ಅಪಸ್ವರ ಒಂದು ಕಾಲದಲ್ಲಿತ್ತು. ಅಂತಹ ಕಲಾವಿದರಿಗೆ ಹೆಣ್ಣು ಸಹ ಕೊಡುತ್ತಿದ್ದಿಲ್ಲ. ಅಂತಹ ದಿನಗಳಲ್ಲಿ ಗಂಡಸರೇ ಸಮಾಜದ ಅವಕೃಪೆಗೆ ಪಾತ್ರವಾಗಿದ್ದ ಸ್ಥಿತಿಯಲ್ಲಿ ಹೆಣ್ಣು ಮಕ್ಕಳು ಸಂಗೀತ

ಕಲಿಯುವುದೊತ್ತಟ್ಟಿಗಿರಲಿ ಸಂಗೀತ ಸಭೆ, ಸಮಾರಂಭಗಳನ್ನು ನೋಡಲಿಕ್ಕೂ ನಿರ್ಬಂಧವಿತ್ತು. ಹಾಗಾಗಿ ಸಂಗೀತಕಲೆಯಿಂದ ಮಹಿಳೆಯರು ದೂರ ಉಳಿಯುವುದು ಅನಿವಾರ್ಯವಾಯಿತು. ಈ ಮಾತು ವೀರಶೈವರಿಗೆ ಹೊರತೇನಲ್ಲ.

ಉತ್ತರ ಕರ್ನಾಟಕದಲ್ಲಿ ಕರ್ನಾಟಕೀ ಸಂಗೀತದ ಗಾಳಿ ದೂರವಾಗಿ ಆ ಸ್ಥಾನವನ್ನು ಹಿಂದುಸ್ತಾನಿ ಸಂಗೀತ ಆಕ್ರಮಿಸಿದ ಮೇಲೆ ಉತ್ತರಕರ್ನಾಟಕ ಭಾಗದಲ್ಲಿ ಸಾರ್ವಜನಿಕವಾಗಿ ಏರ್ಪಡುವ ಸಂಗೀತಕಚೇರಿಗಳಲ್ಲಿ ಹೆಣ್ಣುಮಕ್ಕಳು ಶ್ರೋತೃಗಳಾಗಿ ಭಾಗವಹಿಸಲಾರಂಭಿಸಿದರು. ಸಮಾಜದಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯದೊರಕಿತು. ಫಲವಾಗಿ ಮಹಿಳೆಯರು ಸಂಗೀತ ಕಲಿಕೆಗೆ ಮುಂದಾದರು.

ಹಿಂದುಸ್ತಾನಿ ಸಂಗೀತವನ್ನು ಮೊದಲ ಬಾರಿಗೆ ಕಲಿತು ಗಾಯಕಿ ಎನಿಸಿಕೊಂಡ ಮಹಿಳೆಯರಲ್ಲಿ ಇದುವರೆಗಿನ ತಿಳಿವಳಿಕೆಯ ಪ್ರಕಾರ ಪಂ. ಮಲ್ಲಿಕಾರ್ಜುನ ಮನಸೂರ ಅವರ ಎರಡನೇ ಮಗಳು ಶ್ರೀಮತಿ ನೀಲಮ್ಮ ಕೊಡ್ಲಿ ಎಂದು ಹೇಳಬಹುದೇನೋ. ಅವರಿಗಿಂತ ಮೊದಲು ವೀರಶೈವ ಮಹಿಳಾ ಗಾಯಕಿಯರು ಯಾರೆಂಬುದು ಸ್ಪಷ್ಟವಾಗುತ್ತಿಲ್ಲ.[1] ಒಂದುವೇಳೆ ಇದ್ದರೆ ಅವರಾರು ? ಎಂಬುದು ತಿಳಿದಿಲ್ಲ. ರಂಗಭೂಮಿಯಲ್ಲಿ ಆಮುನ್ನ ಯಾರಾದರೂ ವೀರಶೈವ ಮಹಿಳೆಯರಿದ್ದರೆ ಅವರು ರಂಗಭೂಮಿ ಕಲಾವಿದರಾಗಿದ್ದಿರಬಹುದೇ ವಿನಹ ಮಹಿಳಾ ಗಾಯಕಿ ಎನಿಸಿರಲಿಲ್ಲ. ಹಾಗಾಗಿ ಶ್ರೀಮತಿ ನೀಲಮ್ಮ ಕೊಡ್ಲಿಯವರೇ ವೀರಶೈವ ಪ್ರಥಮ ಮಹಿಳಾ ಗಾಯಕಿ ಎನ್ನಬಹುದೇನೋ.

ಶ್ರೀಮತಿ ನೀಲಮ್ಮ ಕೊಡ್ಲಿ

ಪಂ. ಮಲ್ಲಿಕಾರ್ಜುನ ಮನಸೂರ ಅವರ ಏಳು ಜನ ಹೆಣ್ಣು ಮಕ್ಕಳಲ್ಲಿ ಎರಡನೇ ಮಗಳಾದ ಶ್ರೀಮತಿ ನೀಲಮ್ಮ ಸುಮಧುರ ಕಂಠದ ಗಾಯಕಿ. ಸಂಗೀತ ಮನೆತನದಲ್ಲಿ ಮತ್ತು ವಿಖ್ಯಾತ ಗಾಯಕರ ಮಗಳಾಗಿ ಹುಟ್ಟಿದ ಅವರಿಗೆ ಸಂಗೀತ ರಕ್ತಗತವಾಗಿಯೇ ಬಂದುದು. ಮಧುರ ಕಂಠದ ಗಾಯಕಿ ನೀಲಮ್ಮ ಎಳನೇವಯಸ್ಸಿನಲ್ಲಿಯೇ ತಂದೆ ಪಂ. ಮಲ್ಲಿಕಾರ್ಜುನ ಮನಸೂರ ಅವರಲ್ಲಿ ಸಂಗೀತ ದೀಕ್ಷೆ ಪಡೆದು ಜೈಪುರ ಘರಾಣೆಯ ಗಾಯಕಿಯನ್ನು ಕರಗತ ಮಾಡಿಕೊಂಡಿದ್ದಾರೆ. ಧಾರವಾಡ ಆಕಾಶವಾಣಿಯ ಶಾಸ್ತ್ರೀಯ ಹಾಡುಗಾರಿಕೆಯ ಕಲಾವಿದೆಯಾದ ಶ್ರೀಮತಿ ನೀಲಮ್ಮ ಖಯಾಲ ಹಾಡುಗಾರಿಕೆಯ ಜೊತೆಗೆ ವಚನ, ಅನುಭಾವ ಗೀತೆ, ದಾಸರ ಪದಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ. ಕೊಡ್ಲಿಯವರ ಕೈಹಿಡಿದು ವೀರಶೈವ ಮಹಿಳಾ ಗಾಯಕಿಯರಲ್ಲಿ ಅಗ್ರಗಣ್ಯರಾಗಿದ್ದಾರೆ.

---

1. ಇದು ನನ್ನ ವೈಯಕ್ತಿಕ ಅಭಿಪ್ರಾಯ ಮಾತ್ರ.

ಪ್ರೊ. ಶ್ರೀಮತಿ ನಂದಾ ಬಿ. ಪಾಟೀಲ

ವೀರಶೈವ ಮಹಿಳಾ ಕಲಾವಿದೆಯರಲ್ಲಿ ಒಬ್ಬರೆನಿಸಿದ ಶ್ರೀಮತಿ ನಂದಾ. ಪಾಟೀಲರು ಕೋಮಲ ಕಂಠದ ಗಾಯಕಿಯರು. ಧಾರವಾಡದವರಾದ ಶ್ರೀಮತಿ ನಂದಾ ಪಾಟೀಲರು ಹುಟ್ಟಿನಿಂದಲೇ ಸಂಗೀತ ಪ್ರತಿಭೆಯನ್ನು ಪಡೆದು ಬಂದವರು. ಎಳೆ ವಯಸ್ಸಿನಲ್ಲಿಯೇ ತಂಬೂರಿಯ ತಂತಿಯ ಮೇಲೆ ಕೈಹಾಕಿದ ಅವರು ಧಾರವಾಡ ವಯೋವೃದ್ಧ ಗಾಯಕ ಶ್ರೀ ನಾರಾಯಣರಾವ್ ಮಜುಮದಾರ ಅವರಲ್ಲಿ ಸಂಗೀತಕ ಶಿಕ್ಷಣಪಡೆದು, ಅವಿರತ ಸಾಧನೆಯಿಂದ ಸಂಗೀತಕ್ಷೇತ್ರದಲ್ಲಿ ಹೆಸರುಗಳಿಸಿದ್ದಾರೆ. ಧಾರವಾಡದ ಕ.ವಿ.ವಿ ಸ್ನಾತಕೋತ್ತರ ಸಂಗೀತ ಪದವೀಧರೆಯಾದ ಅವರು ಈಗ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದಲ್ಲಿ ಸಂಗೀತ (ಗಾಯನ) ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಧಾರವಾಡ ಆಕಾಶವಾಣಿಯ ಶಾಸ್ತ್ರೀಯ ಸಂಗೀತ ಕಲಾವಿದೆಯಾದ ಅವರು ಸಂಗೀತದಲ್ಲಿ ಪಿಹೆಚ್.ಡಿ ಅಧ್ಯಯನ ಕೈಗೊಂಡಿದ್ದಾರೆ. ವೀರಶೈವ ಮಹಿಳಾ ಗಾಯಕಿಯರಲ್ಲಿ ಪ್ರಮುಖರೆನಿಸಿದ್ದಾರೆ.

ಕುಮಾರಿ ವೀಣಾ ಮರಡೂರ

ಧಾರವಾಡದ ಹೆಸರಾಂತ ಸಂಗೀತಗಾರ ಪಂ. ಸೋಮನಾಥ ಮರಡೂರ ಅವರ ಹಿರಿಯ ಮಗಳಾದ ಕುಮಾರಿ ವೀಣಾ ಅವರು ಸುಶ್ರಾವ್ಯ ಕಂಠದ ವೀರಶೈವ ಗಾಯಕಿಯರು. ಸಂಗೀತ ಮನೆತನದಲ್ಲಿಯೇ ಹುಟ್ಟಿದ ಅವರಿಗೆ 'ನಾದನಿನಾದ' ರಕ್ತಗತ. ತಂದೆಯಿಂದ ಸಂಗೀತ ದೀಕ್ಷೆ ಪಡೆದ ಅವರು ಧಾರವಾಡ ಆಕಾಶವಾಣಿಯ ಶಾಸ್ತ್ರೀಯ ಕಲಾವಿದೆ ಯಾಗಿದ್ದಾರೆ. ಕರ್ನಾಟಕದ ಒಳ ಹೊರಗೆ ಅನೇಕ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ ಅವರು ಈಗ ಧಾರವಾಡದ ಕ.ವಿ.ವಿ. ಯಲ್ಲಿ ಸ್ನಾತಕೋತ್ತರ ಸಂಗೀತ (ಪ್ರಥಮ ವರ್ಷ) ಅಭ್ಯಾಸಮಾಡುತ್ತಿದ್ದಾರೆ.

ಶ್ರೀಮತಿ ವಿಜಯಾ ಹಿರೇಮಠ, ಶ್ರೀಮತಿ ಪಾರ್ವತಿಬಾಯಿ ಮಾಳೇಕೊಪ್ಪಮಠ, ಶ್ರೀಮತಿ ವನಮಾಲಾ ಮಾನಶೆಟ್ಟಿ, ಶ್ರೀಮತಿ ಸುಮಿತ್ರಾ ಕಾಡದೇವರಮಠ, ವಾಣಿ ಮರಡೂರ ಪ್ರತಿಭಾ ಕವಡಿಮಟ್ಟಿ ಕರ್ನಾಟಕ ಸಂಗೀತ ಕಾಲೇಜಿನ ಸಂಗೀತ ಉಪನ್ಯಾಸಕಿ ಶ್ರೀಮತಿ ಚವಡಿ ಇನ್ನಿತರರು ಸಂಗೀತಕಲೆಯಲ್ಲಿ ಮುಂದೆಬರುತ್ತಿದ್ದಾರೆ.

3. ಪಿಟೀಲು ವಾದಕರು

ಶ್ರೀ ಬಿ. ಎಸ್. ಮಠ

ವಿಜಾಪೂರ ಜಿಲ್ಲೆಯ ಚಿತ್ತರಗಿಯವರಾದ ಶ್ರೀ ಬಸವಲಿಂಗಯ್ಯ ಮಠ ಅವರು ಗಾನಯೋಗಿ ಪಂಚಾಕ್ಷರಿ ಹಾಗೂ ಪಂ. ಪುಟ್ಟರಾಜ ಗವಾಯಿಗಳಲ್ಲಿ ಪಿಟಿಲು ಅಭ್ಯಾಸಮಾಡಿ

ಈಗ ದೇಶದ ಹೆಸರಾಂತ ಪಿಟಿಲು ವಾದಕರಲ್ಲೊಬ್ಬರೆನಿಸಿದ್ದಾರೆ. ವೀರಶೈವ ಪಿಟೀಲು ವಾದಕರಲ್ಲಿ ಅಗ್ರಗಣ್ಯರೆನಿಸಿರುವ ಅವರು ಕೆಲವು ವರ್ಷ ಧಾರವಾಡ ಆಕಾಶವಾಣಿ ನಿಲಯದ ಪಿಟೀಲು ಕಲಾವಿದರಾಗಿ ಕಾರ್ಯ ನಿರ್ವಹಿಸಿ ಈಗ ಗೋವಾ ಆಕಾಶವಾಣಿಯಲ್ಲಿ ಪಿಟೀಲುವಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತನ್ನ ಶಿಷ್ಯೆ ಶ್ರೀಮತಿ ಅಕ್ಕಮಹಾದೇವಿ ಹಿರೇಮಠರನ್ನು ಕೈಹಿಡಿದು ವೃತ್ತಿ ಜೀವನ ಹಾಗೂ ಸಂಗೀತ ಲೋಕದಲ್ಲು ಅವರು ಅನುಪಮ ಜೋಡಿಯಾಗಿದ್ದಾರೆ. ಪತಿ-ಪತ್ನಿಯರು ಸಮರ್ಥ ಪಿಟೀಲುವಾದಕರಾಗಿ ಕಾರ್ಯ ನಿರ್ವಹಿಸುತ್ತಿರುವುದು ಸಂಗೀತ ಲೋಕದಲ್ಲಿಯೇ ಅಪರೂಪವೆನ್ನಬೇಕು.

ಶ್ರೀ ರೇವಣಪ್ಪ ಕುಂಕುಮಗಾರ

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ರೇವಣಪ್ಪ ಕುಂಕುಮಗಾರ ಅವರು ಕರ್ನಾಟಕದ ಪ್ರಸಿದ್ಧ ಪಿಟೀಲು ವಾದಕರಲ್ಲೊಬ್ಬರೆನಿಸಿದ್ದಾರೆ. ಪ್ರಸ್ತುತ ಅವರು ಗುಲಬರ್ಗಾ ಆಕಾಶವಾಣಿಯ ನಿಲಯದ-ಪಿಟೀಲು ಕಲಾವಿದರಾಗಿ ಕೆಲಸ ಮಾಡುತ್ತಿದ್ದಾರೆ. ನಾಡಿನ ಅನೇಕ ಕಡೆಗಳಲ್ಲಿ ಪಿಟೀಲು ಕಚೇರಿ ನೀಡಿದ್ದಾರೆ.

ಶ್ರೀ ವೀರೇಶ್ವರ ಮದರಿ

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ವೀರೇಶ್ವರ ಮದರಿಯವರು ಪ್ರಸಿದ್ಧ ಪಿಟೀಲು ವಾದಕರು. ಪ್ರಸ್ತುತ ಅವರು ಮದ್ರಾಸ್‌ನಲ್ಲಿ ನೆಲೆಸಿದ್ದಾರೆ. ಚಲನಚಿತ್ರ ಪ್ರಪಂಚದಲ್ಲಿ ಸಹ ಅವರು ಸಂಗೀತ (ಪಿಟೀಲು) ನಿರ್ದೇಶನ ನೀಡಿ ಖ್ಯಾತಿ ಪಡೆದಿದ್ದಾರೆ.

ಶ್ರೀ ಈಶ್ವರ ಮೋರಗೇರಿ

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ಈಶ್ವರ ಮೋರಗೇರಿಯವರು ಪ್ರಸಿದ್ಧ ಪಿಟೀಲು ವಾದಕರು. ಅವರು ಒಳ್ಳೆ ತಬಲಾ ಕಲಾವಿದರೂ ಆಗಿದ್ದಾರೆ. ಆಕಾಶವಾಣಿ ಕಲಾವಿದರೂ ಆಗಿದ್ದಾರೆ.

4. ಪಿಟಿಲು ವಾದಕಿಯರು

ತಂತು ವಾದ್ಯಗಳಲ್ಲೊಂದಾದ ಪಿಟೀಲು ವಾದ್ಯ ಕರ್ನಾಟಕೀ ಸಂಗೀತದ ಒಂದು ಪಕ್ಕವಾದ್ಯ. ಅದು ಇತ್ತೀಚೆಗೆ ಹಿಂದುಸ್ಥಾನಿಯಲ್ಲಿ ಸ್ವತಂತ್ರವಾದನ ಸ್ಥಾನ ಪಡೆದಿದೆ. ಪಿಟೀಲು ವಾದ್ಯನುಡಿಸುವ ವೀರಶೈವ ಕಲಾವಿದರು ವಿರಳ. ಅದರಲ್ಲಿ ಮಹಿಳಾ ಕಲಾವಿದೆಯರು ಒಂದೆರಡು ಸಂಖ್ಯೆಯಲ್ಲಿ ಮಾತ್ರ. ಅಂಥವರಲ್ಲಿ ಶ್ರೀಮತಿ ಅಕ್ಕಮಹಾದೇವಿ ಹಿರೇಮಠ ಮೊದಲಿಗರೆನ್ನಬಹುದೇನೊ ಇದುವರೆಗಿನ ತಿಳಿವಳಿಕೆಯ ಪ್ರಕಾರ ಅಕ್ಕಮಹಾದೇವಿಯವರೇ ವೀರಶೈವ ಪ್ರಥಮ ಮಹಿಳಾ ಪಿಟೀಲು ವಾದಕಿಯರೆನ್ನಬಹುದೇನೋ.[1]

೧. ಇದು ನನ್ನ ವ್ಯಕ್ತಿಕ ಅಭಿಪ್ರಾಯ ಮಾತ್ರ.

ಶ್ರೀಮತಿ ಅಕ್ಕಮಹಾದೇವಿ ಹಿರೇಮಠ

ಧಾರವಾಡದವರಾದ ಶ್ರೀಮತಿ ಅಕ್ಕಮಹಾದೇವಿ ಹಿರೇಮಠ ವೀರಶೈವ ಮಹಿಳಾ ಪಿಟೀಲುವಾದಕರಲ್ಲಿ ಅಗ್ರಗಣ್ಯರು. ತಂದೆ ಗದಿಗಯ್ಯನವರು ಧಾರವಾಡ ಆಕಾಶವಾಣಿಯ ನಿಲಯದ ತಬಲಾ ಕಲಾವಿದರಾಗಿ ನಿವೃತ್ತರಾದವರು. ಸಂಗೀತ ಮನೆತನದಲ್ಲಿ ಹುಟ್ಟಿದ ಅಕ್ಕಮಹಾದೇವಿಯವರಿಗೆ ಸಂಗೀತ ರಕ್ತಗತವಾಗಿ ಬಂದ ಕಲೆ. ಧಾರವಾಡ ಆಕಾಶವಾಣಿಯ ನಿಲಯ ಪಿಟೀಲು ಕಲಾವಿದ ಖ್ಯಾತ ಪಿಟೀಲು ವಾದಕ ಶ್ರೀ ಬಿ. ಎಸ್. ಮಠ ಅವರಲ್ಲಿ ಪಿಟೀಲು ವಾದನ ಅಭ್ಯಾಸಮಾಡಿ ಶಿಷ್ಯೆಯಾಗಿ ನಂತರ ಗುರುವನ್ನೇ ಕೈಹಿಡಿದ ಗೃಹಿಣಿ ಅಕ್ಕಮಹಾದೇವಿ ಕರ್ನಾಟಕದ ಹೆಸರಾಂತ ಮಹಿಳಾ ಪಿಟೀಲು ವಾದಕಿಯರಲ್ಲಿ ಒಬ್ಬರು. ಪತಿ-ಪತ್ನಿಯರಿಬ್ಬರೂ ಈಗ ಗೋವಾ ಆಕಾಶವಾಣಿಯ ನಿಲಯದ ಕಲಾವಿದರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

5. ತಬಲಾ ವಾದಕರು

ಭಾರತದ ಹೆಸರಾಂತ ತಬಲಾವಾದಕರಲ್ಲಿ ಹೆಚ್ಚಿನವರು ಉತ್ತರಭಾರತದವರು. ದಕ್ಷಿಣದಲ್ಲಿ ಅಂತಹ ಪ್ರತಿಭಾವಂತರಿಲ್ಲವೆಂದೇನಿಲ್ಲ. ಆದರೆ ಅವರ ಸಂಖ್ಯೆ ಕಡಿಮೆ. ವಿರಳವಾದಕರಲ್ಲಿ ಪ್ರಸಿದ್ಧ ತಬಲಾ ವಾದಕ ಪಂ. ಬಸವರಾಜ ಬೆಂಡಿಗೇರಿ ಒಬ್ಬರು.

ಪಂ. ಬಸವರಾಜ ಬೆಂಡಿಗೇರಿ

ತಬಲಾ ವಾದನದಲ್ಲಿ ಅಖಿಲ ಭಾರತ ಖ್ಯಾತಿಪಡೆದವರಲ್ಲಿ ಪಂ. ಬಸವರಾಜ ಬೆಂಡಿಗೇರಿಯವರು ಒಬ್ಬರು. ಅವರು ವೀರಶೈವ ಕಲಾವಿದರೆಂಬುದು ಹೆಮ್ಮೆಯಮಾತು. ಅವರು ಕರ್ನಾಟಕದ ವೀರಶೈವ ತಬಲಾ ಕಲಾವಿದರಲ್ಲಿ ಮೊದಲಿಗರೆನ್ನಬೇಕು. ಅವರು ಜನಿಸಿದ್ದು ಬೆಳಗಾವ ಸಮೀಪದ ಖಾಸಭಾಗದಲ್ಲಿ. ಹುಟ್ಟಿನಿಂದಲೇ ದೃಷ್ಟಿಮಾಂದ್ಯರಾದ ಅವರು ಶಾಲಾವಿದ್ಯೆಯಿಂದ ವಂಚಿತರಾಗಿ ತಬಲಾ ಕಲೆಯತ್ತ ಒಲವು ಬೆಳೆಸಿಕೊಂಡರು. ತಂದೆ ಶಂಕ್ರಪ್ಪ ತಬಲಾ ನುಡಿಸುತ್ತಿದ್ದರು. ಅದು ಅವರಿಗೆ ಪ್ರೋತ್ಸಾಹ ದೊರಕಿಸಿತು. ಮಿರಜ್‌ದ ಉಸ್ತಾದ್ ಮೆಹಬೂಬ ಸಾಹೇಬರಲ್ಲಿ ತಬಲಾ ವಿದ್ಯೆ ಪಡೆದು, ಅವಿರತ ಪರಶ್ರಮದಿಂದ ದೇಶದೆಲ್ಲೆಡೆ ಹೆಸರು ಗಳಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದಲ್ಲಿ ತಬಲಾ ಪ್ರಾಧ್ಯಾಪಕರಾಗಿ 27 ವರ್ಷ ಕೆಲಸಮಾಡಿ, ಈಗ ನಿವೃತ್ತಿಜೀವನ ನಡೆಸುತಿದ್ದಾರೆ. ದೇಶದ ಪ್ರತಿಷ್ಠಿತ ಸಂಗೀತಗಾರರಿಗೆ ತಬಲಾಸಾಥಿ ನೀಡಿ, ಅನೇಕ ಶಿಷ್ಯರನ್ನು ತಯಾರ ಮಾಡಿ, ದೇಶದ ಅನೇಕ ಸಂಗೀತ ಸಮ್ಮೇಳನಗಳಲ್ಲಿ ತಬಲಾ ಕಚೇರಿ ನೀಡಿದ ಪಂ. ಬೆಂಡಿಗೇರಿಯವರಿಗೆ ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿ 'ಕರ್ನಾಟಕ ಕಲಾತಿಲಕ' ಬಿರುದು ನೀಡಿ ಪುರಸ್ಕರಿಸಿದೆ.

ಡಾ. ರಾಚಯ್ಯ ಹಿರೇಮಠ

ಪಂ. ಬಸವರಾಜ ಬೆಂಡಿಗೇರಿ ಹಾಗೂ ಶ್ರೀ ಮಮ್ಮುಲಾಲ ಸಮ್‌ಗಾಂವಕರ ಅವರ

ಶಿಷ್ಯರಾದ ಡಾ. ರಾಚಯ್ಯ ಹಿರೇಮಠ ಅವರು ತಬಲಾ ವಾದನದಲ್ಲಿ ಸಂಗೀತ ಅಲಂಕಾರ ಪದವಿಪಡೆದು ಧಾರವಾಡದ ಕ.ವಿ.ವಿ. ಸಂಗೀತ ವಿಭಾಗದಲ್ಲಿ ಸಂಗೀತ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಧಾರವಾಡ ಆಕಾಶವಾಣಿಯ ಕಲಾವಿದರಾದ ಅವರು ತಬಲಾ ಕುರಿತು ಪಿಹೆಚ್.ಡಿ ಪದವಿ ಪಡೆದಿದ್ದಾರೆ. ನಾಡಿನ ಅನೇಕ ಕಡೆಗಳಲ್ಲಿ ತಬಲಾ ಕಚೇರಿ ಹಾಗೂ ಅನೇಕ ಸಂಗೀತಗಾರರಿಗೆ ಸಾಥಿನೀಡಿದ್ದಾರೆ. ಜರ್ಮನ, ಫ್ರಾನ್ಸಗಳಿಗೂ ಹೋಗಿ ತಬಲಾ ಸಾಥಿ ಹಾಗೂ ಕಚೇರಿ ನೀಡಿದ್ದಾರೆ.

ಪ್ರೊ. ಶ್ರೀ ಶೈಲ. ಚ. ಬಳ್ಳೂರ

ಬಾಗಲಕೋಟೆಯ ಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ತಬಲಾ ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿರುವ ಪ್ರೊ. ಬಳ್ಳೂರ ಅವರು ಪಂ. ಬಸವರಾಜ ಬೆಂಡಿಗೇರಿಯವರ ಶಿಷ್ಯರು. ಮೂಲತಃ ಜಮಖಂಡಿಯವರಾದ ಅವರು ಗೋವಾ ಆಕಾಶವಾಣಿಯ ತಬಲಾ ಕಲಾವಿದರಾಗಿದ್ದಾರೆ.

ಶ್ರೀ ನಂದಿಕೇಶ್ವರ ಗುರವ

ಖ್ಯಾತ ಹಿಂದುಸ್ತಾನಿ ಗಾಯಕ ಪಂ. ಸಂಗಮೇಶ್ವರ ಗುರವ ಅವರ ಹಿರಿಯಪುತ್ರರಾದ ಶ್ರೀ ನಂದಿಕೇಶ್ವರ ಗುರವ ಅವರು ಪಂ. ಬಸವರಾಜ ಬೆಂಡಿಗೇರಿಯವರ ಶಿಷ್ಯರು. ಧಾರವಾಡದ ಕ.ವಿ.ವಿ. ಸಂಗೀತ ವಿಭಾಗದಲ್ಲಿ ತಬಲಾ ಕಲಾವಿದರಾಗಿ ಕಾರ್ಯನಿರ್ವಹಿಸುತ್ತಿರುವ ಅವರು ಧಾರವಾಡ ಆಕಾಶವಾಣಿಯ ಕಲಾವಿದರಾಗಿದ್ದಾರೆ. ತಂದೆ ಹಾಗೂ ಕಿರಿಯ ಸಹೋದರ ಕೈವಲ್ಯ ಕುಮಾರ ಅವರಿಗೆ ಸಾಥಿ ನೀಡುತ್ತ ಶಿಷ್ಯರನ್ನು ತಯಾರಿಸುತ್ತಿದ್ದಾರೆ.

ಶ್ರೀ ಶಾಂತಲಿಂಗ ಹೂಗಾರ

ಪಂ. ಬಸವರಾಜ ಬೆಂಡಿಗೇರಿ ಹಾಗೂ ಶ್ರೀ ರಘುನಾಥ ನಾಕೋಡ ಅವರ ಶಿಷ್ಯರಾದ ಯುವತಬಲಾ ಪಟು ಶ್ರೀ ಶಾಂತಲಿಂಗ ಹೂಗಾರ ಮೂಲತಃ ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನ ದೇಸಾಯಿಕಲ್ಲೂರ ಗ್ರಾಮದವರು. ಸಂಗೀತ ಮನೆತನದಲ್ಲಿ ಹುಟ್ಟಿದ ಅವರು ಪದ್ಮಭೂಷಣ ಪಂ. ಬಸವರಾಜ ರಾಜಗುರು ಮೊದಲಾದ ಸಂಗೀತ ದಿಗ್ಗಜರೊಂದಿಗೆ ತಬಲಾ ಸಾಥ ನೀಡಿದ್ದಾರೆ. ಧಾರವಾಡದ ಆಕಾಶವಾಣಿ ಕಲಾವಿದರಾದ ಅವರು ಧಾರವಾಡದ ಸಿತಾರವಾದಕ ಪ್ರೊ. ಶಿವಾನಂದ ತರಲ ಘಟ್ಟಿಯವ ರೊಂದಿಗೆ ಇಂಗ್ಲೆಂಡ್, ಫ್ರಾನ್ಸ್ ದೇಶಗಳಲ್ಲಿ ತಬಲಾ ಸಾಥಿ ಹಾಗೂ ಕಚೇರಿ ನೀಡಿದ್ದಾರೆ.

ಶ್ರೀ ಬಸವರಾಜ ಮರಡೂರ

ಪಂ. ಸೋಮನಾಥ ಮರಡೂರರ ಮಗ ಹಾಗೂ ಡಾ. ರಾಚಯ್ಯ ಹಿರೇಮಠರ ಶಿಷ್ಯ

ಬಸವರಾಜ ಮರಡೂರ ವೀರಶೈವ ಯುವ ತಬಲಾ ವಾದಕರಲ್ಲಿ ಪ್ರಮುಖರು ಹಾಗೂ ಧಾರವಾಡ ಆಕಾಶವಾಣಿ ಕಲಾವಿದರೂ ಆಗಿದ್ದಾರೆ.

ಶ್ರೀ ಗುರುಸಂಗಪ್ಪ

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ಗುರು ಸಂಗಪ್ಪನವರು ತಬಲಾ ಕಲೆಯಲ್ಲಿ ಪರಿಣಿತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಅವರು ನಾಡಿನ ಅನ್ನೇಕ ಹೆಸರಾಂತ ಸಂಗೀತಗಾರರಿಗೆ ತಬಲಾ ಸಾಥಿ ನೀಡಿದ್ದಾರೆ.

ಪ್ರೊ. ಕೆ. ಎಸ್. ಹಡಪದ್

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಪ್ರೊ. ಕೆ. ಎಸ್. ಹಡಪದ ಅವರು ಪ್ರಸಿದ್ಧ ಕಲಾವಿದರಾಗಿದ್ದಾರೆ. ಗುಲಬರ್ಗಾದ ಶ್ರೀ ಶರಣ ಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ತಬಲಾ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ಈಗ ವಿಶ್ರಾಂತಿ ಜೀವನ ನಡೆಸುತ್ತ ಗುಲಬರ್ಗಾದಲ್ಲಿ ಖಾಯಂ ನೆಲೆಸಿರುವ ಅವರು ಗುಲಬರ್ಗಾ ಹಾಗೂ ಧಾರವಾಡ ಆಕಾಶವಾಣಿಯ ಕಲಾವಿದರೂ ಆಗಿದ್ದಾರೆ.

ಶ್ರೀ ಎಂ. ಎಸ್ ಆರಾಧ್ಯ ಮಠ

ಪಂ. ಬಸವರಾಜ ಬೆಂಡಿಗೇರಿಯವರ ಶ್ರೀ ಎಂ. ಎಸ್ ಆರಾಧ್ಯ ಮಠ ಅವರು ವೀರಶೈವ ತಬಲಾ ಕಲಾವಿದರಲ್ಲಿ ಒಬ್ಬರು. ಅವರು ಕೆಲಕಾಲ ಧಾರವಾಡದ ಕರ್ನಾಟಕ ಸಂಗೀತ ಮಹಾ ವಿದ್ಯಾಲಯದಲ್ಲಿ ತಬಲಾ ಕಲಾವಿದರಾಗಿ ಕೆಲಸ ಮಾಡಿದ್ದಾರೆ. ಧಾರವಾಡ ಆಕಾಶವಾಣಿ ಕಲಾವಿದರೂ ಆಗಿದ್ದಾರೆ.

ತಬಲಾ ಕಲಾವಿದರಲ್ಲಿ ಹಿರಿಯ ತಲೆಮಾರಿನ ಕಲಾವಿದರಲ್ಲಿ ಶ್ರೀ ಅಪ್ಪಾ ಸಾಹೇಬ ವಂಟಮುರಿ, ಕಲ್ಲಪ್ಪ ಹೂಗಾರ, ಮಲ್ಲೇಶಪ್ಪ ಹೂಗಾರ, ಶಂಕರೆಪ್ಪ ಪ್ರಸಿದ್ಧರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹಾವೇರಿಯ ಎಸ್.ಬಿ. ಆರಾಧ್ಯಮಠ, ಸುರೇಶ ನಿಡಗುಂದಿ, ಎಸ್. ಎಸ್. ಗುಡ್ನದ ಮಠ, ಧಾರವಾಡ ಆಕಾಶವಾಣಿಯ ನಿಲಯದ ತಬಲಾ ಕಲಾವಿದರಾದ ಶ್ರೀ ಶಂಕರ ಕವಡಿಮಟ್ಟಿ ಉಲ್ಲೇಖನೀಯರಾಗಿದ್ದಾರೆ.

6. ಸಿತಾರ ವಾದಕರು

ಪ್ರೊ. ಶಿವಾನಂದ ತರಲಘಟ್ಟಿ

ಧಾರವಾಡದ ಕರ್ನಾಟಕ ಸಂಗೀತ ಮಹಾವಿದ್ಯಾಲದಲ್ಲಿ ಅನೇಕ ವರ್ಷ ಸಿತಾರ ಪ್ರಾಧ್ಯಾಪಕರಾಗಿ ಕೆಲಸಮಾಡಿ ಈಗ ನಿವೃತ್ತಿ ಹೊಂದಿದ ಪ್ರೊ. ಶಿವಾನಂದ ತರಲಘಟ್ಟಿಯವರು

ವೀರಶೈವ ಸಿತಾರ ಕಲಾವಿದರಲ್ಲಿ ಅಗ್ರಗಣ್ಯರು. ಅಮೆರಿಕ, ಫ್ರಾನ್ಸ್, ಇಟಲಿ, ಜರ್ಮನ್ ದೇಶಗಳಲ್ಲಿ ಸಿತಾರ ಕಚೇರಿ ನೀಡಿದ್ದಾರೆ. ಕೆಲವು ಜನ ಶಿಷ್ಯರನ್ನು ತಯಾರಿಸಿದ್ದಾರೆ.

ಪ್ರೊ. ರಾಜೀವ ಹಿರೇಮಠ

ಗದುಗಿನ ಪಂ. ಪಂಚಾಕ್ಷರಿ ಗವಾಯಿ ಸಂಗೀತ ಕಾಲೇಜಿನ ಸಿತಾರ ಪ್ರಾಧ್ಯಾಪಕರಾಗಿರುವ ಪ್ರೊ. ರಾಜೀವ ಹಿರೇಮಠ ಉತ್ತಮ ಸಿತಾರವಾದಕರು. ಸಂಗೀತ ಕುರಿತು ಒಂದು ಪುಸ್ತಕ ರಚಿಸಿದ್ದಾರೆ.

ಪ್ರೊ. ಮಲ್ಲಿಕಾರ್ಜುನ ತರಲಘಟ್ಟಿ

ಪ್ರೊ. ಶಿವಾನಂದ ತರಲಘಟ್ಟಿಯವರ ಮಗ ಹಾಗೂ ಶಿಷ್ಯ ಪ್ರೊ. ಮಲ್ಲಿಕಾರ್ಜುನ ತರಲಘಟ್ಟಿಯವರು ಧಾರವಾಡದ ಕರ್ನಾಟಕ ಸಂಗೀತ ಮಹಾವಿದ್ಯಾಲಯದಲ್ಲಿ ಸಿತಾರ ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿದ್ದಾರೆ.

7. ಹಾರ್ಮೋನಿಯಂ ವಾದಕರು

ಶ್ರೀ ವೀರೇಶ್ವರ ಹಿರೇಮಠ

ಪಂ. ಪಂಚಾಕ್ಷರಿ ಗವಾಯಿ ಹಾಗೂ ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ವೀರೇಶ್ವರ ಹಿರೇಮಠ ಅವರು ವೀರಶೈವ ಹಾರ್ಮೋನಿಯಂ ಕಲಾವಿದರಲ್ಲಿ ಅಗ್ರಗಣ್ಯರು. ಧಾರವಾಡ ಆಕಾಶವಾಣಿಯ ಕಲಾವಿದರಾದ ಅವರು ಗದುಗಿನಲ್ಲಿ ನೆಲೆಸಿದ್ದಾರೆ. ಅನೇಕ ಹೆಸರಾಂತ ಗಾಯಕರಿಗೆ ಹಾರ್ಮೋನಿಯಂ ಸಾಥಿ ನೀಡಿದ್ದಾರೆ.

ಶ್ರೀ ನಾಗಲಿಂಗಯ್ಯ ವಸ್ತ್ರದ ಮಠ

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾದ ಶ್ರೀ ನಾಗಲಿಂಗಯ್ಯ ವಸ್ತ್ರದ ಮಠ ಧಾರವಾಡದ ಆಕಾಶವಾಣಿಯ ಕಲಾವಿದರಾಗಿದ್ದಾರೆ. ಅವರು ಮೂಲತಃ ಗುಲಬರ್ಗಾ ಜಿಲ್ಲೆಯ ಅಫಜಲಪೂರತಾಲ್ಲೂಕಿನವರಾದ ಅವರು ಸದ್ಯ ಹಾವೇರಿಯ ಶ್ರೀ ಹುಕ್ಕೇರಿ ಮಠದ ಶಾರದಾ ಸಂಗೀತ ವಿದ್ಯಾಲಯದ ಸಂಗೀತ ಶಿಕ್ಷಕರಾಗಿದ್ದಾರೆ.

ಪ್ರೊ. ರೇವಯ್ಯ ವಸ್ತ್ರದ ಮಠ

ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರೂ ಹಾಗೂ ಶ್ರೀ ನಾಗಲಿಂಗಯ್ಯ ವಸ್ತ್ರದಮಠರ ಕಿರಿಯ ಸಹೋದರರೂ ಆದ ಪ್ರೊ. ರೇವಯ್ಯನವರು ಗುಲಬರ್ಗಾ ಆಕಾಶವಾಣಿಯ 'ಬಿ'ಹೈ ಶ್ರೇಣಿಯ ಹಾರ್ಮೋನಿಯಂವಾದಕರಾಗಿದ್ದಾರೆ. ಸಿತಾರಕಲಾವಿದರೂ ಆದ ಅವರು

ಗುಲಬರ್ಗಾದ ಶ್ರೀ ವೀರಮ್ಮಗಂಗಸಿರಿ ಮಹಿಳಾ ಕಾಲೇಜಿನಲ್ಲಿ ಸಿತಾರ ಪ್ರಾಧ್ಯಾಪಕರಾಗಿದ್ದಾರೆ.

ಶ್ರೀ ಕೆ. ಗುರುಮೂರ್ತಿ

ಧಾರವಾಡ ಆಕಾಶವಾಣಿಯ ಹಾರ್ಮೋನಿಯಂ ಕಲಾವಿದರಾದ ಶ್ರೀ ಕೆ. ಗುರುಮೂರ್ತಿಯವರು ಮೂಲತಃ ಜಮಖಿಂಡಿಯವರು. ಶ್ರೀ ಪಾಂಡೋಬಾ ಮಾಸ್ತರ ಪವಾರ ಅವರ ಶಿಷ್ಯರಾದ ಶ್ರೀಯುತರು ನಾಡಿನ ಹೆಸರಾಂತ ಸಂಗೀತಗಾರರಿಗೆ ಹಾರ್ಮೋನಿಯಂ ಸಾಥಿ ನೀಡಿದ್ದಾರೆ.

ವೀರಶೈವ ವಾಗ್ಗೇಯಕಾರರು

ಟಿ. ಆರ್. ಮಹಾದೇವಯ್ಯ

ಹಾಡುಕಟ್ಟಿ, ರಾಗ, ತಾಳ ನಿರ್ದೇಶನ ಮಾಡಿ ಹಾಡುವವರು ವಾಗ್ಗೇಯಕಾರರು. ಶಾರ್ಙ್ಗದೇವನು 'ವಾಗ್ಗೇಯಕಾರ' ಶಬ್ದಕ್ಕೆ ಹೀಗೆ ವ್ಯಾಖ್ಯಾನ ನೀಡಿದ್ದಾನೆ: 'ವಾಚಂ ಗೇಯಂ ಕುರುತೇ ಯಃ ಸಃ ವಾಗ್ಗೇಯಕಾರಃ'-ಆಡಬಹುದಾದುದನ್ನು, ಹಾಡಬಹುದಾದುದನ್ನು ರಚಿಸುವಾತನೇ ವಾಗ್ಗೇಯಕಾರ. ವಾಚ್ಯವೂ ಗೇಯವೂ ಆದ ವಚನಗಳನ್ನು, ಸ್ವರ ವಚನಗಳನ್ನು ಬರೆದು ರಾಗ,ತಾಳ ನಿರ್ದೇಶನ ಮಾಡಿ ಹಾಡಿದ ಶಿವಶರಣರು ವಾಗ್ಗೇಯಕಾರರು. ಮುಂದೆ ವಚನಗಳ ಮಾದರಿಯಲ್ಲಿ ಉಗಾಭೋಗಗಳನ್ನು ರಚಿಸಿದ, ಭಗವನ್ನಾಮ ಸಂಕೀರ್ತನೆಗಳನ್ನು ರಚಿಸಿ ಹಾಡಿದ ಹರಿದಾಸರೂ ವಾಗ್ಗೇಯಕಾರರು.

ವಾಗ್ಗೇಯಕಾರರು ರಚಿಸಿದ ಹಾಡುಗಳು ಸಾಹಿತ್ಯ ಹಾಗೂ ಸಂಗೀತಗಳು ಹದವಾಗಿ ಸಮರಸಗೊಂಡ ರೂಪಗಳು. ಒಟ್ಟು ಸಾಹಿತ್ಯ ಸಮುದಾಯವನ್ನು ಗುಣ ಧರ್ಮದೃಷ್ಟಿಯಿಂದ ಓದುಗಬ್ಬ, ಹಾಡುಗಬ್ಬ ಮತ್ತು ನೋಡುಗಬ್ಬಗಳೆಂದು ಸ್ಥೂಲವಾಗಿ ವಿಭಾಗಿಸಬಹುದು. ಓದುಗಬ್ಬಗಳು ಸಂಸ್ಕೃತ ವೃತ್ತಗಳ ಬಂಧದಿಂದ ಚಂಪೂಶೈಲಿಯಲ್ಲಿ ರಚಿತವಾಗಿ ಸುಪ್ರೌಢವಾಗಿರುತ್ತವೆ. ಇವು ಪಂಡಿತ ಮಾನ್ಯ. ಆದರೆ ಪಾಮರರಿಗೆ ಕಷ್ಟಸಾಧ್ಯ. ಹಾಡುಗಬ್ಬಗಳು ಗೇಯತೆಗೆ ಹೊಂದಿಸಿದ ತಾಳ ಲಯಬದ್ಧ ಪದಗಳು; ಇವು ಹಾಡುವುದಕ್ಕಾಗಿ ಇರುವಂಥವು. ಇಂಥವು ಪಂಡಿತ-ಪಾಮರ ರಂಜಕ. ನೋಡುಗಬ್ಬಗಳೆಂದರೆ ದೃಶ್ಯಕಾವ್ಯ; ನಾಟಕ.

'ಹಾಡುಗಬ್ಬ' ಪದದಲ್ಲಿರುವ 'ಹಾಡು' ಸಂಗೀತವನ್ನೂ, 'ಕಬ್ಬ' ಸಾಹಿತ್ಯವನ್ನೂ ಪ್ರತಿನಿಧಿಸುತ್ತದೆ. ಆದರೆ ಇಲ್ಲಿ ಬಳಕೆಯಾಗುವ ಸಂಗೀತ ಅತ್ಯಂತ ಶಾಸ್ತ್ರೀಯವಾದದ್ದೇನೂ ಅಲ್ಲ. ಇಲ್ಲಿ ಸಂಗೀತವು ಸಾಹಿತ್ಯಕ್ಕೆ ಪೂರಕ ಅಷ್ಟೇ. ಅಂದರೆ ಹಾಡಿನಲ್ಲಿರುವ ಸಾಹಿತ್ಯವನ್ನು ಪರಿಣಾಮಕಾರಿಯಾಗಿ ಸವಿಗಾಣಿಸಲು ಸಂಗೀತ ಸಹಾಯಕವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಹಾಡುಕಟ್ಟಿದ ವಿದ್ವಾಂಸ ಅಥವಾ ಅನುಭವಿ ಸ್ವತಃ ಸಂಗೀತಗಾರನಿದ್ದು ತನ್ನ ಸಂಗೀತಜ್ಞಾನವನ್ನು ಬಳಸಿಕೊಂಡಿರಬಹುದು. ಆದರೆ ಆತ ಹಾಡು ಬರೆದದ್ದು, ಹಾಡಿದ್ದು ಸಂಗೀತಕಲೆಯ ಪ್ರದರ್ಶನಕ್ಕಾಗಿಯಲ್ಲ; ಬದಲು ಆ ಪದದ ಸಾಹಿತ್ಯವನ್ನು,

ಅದರಿಂದ ಮೂಡಿದ ವಿಚಾರಗಳನ್ನು ಸರ್ವರ ಹೃದಯಸಂವೇದ್ಯಗೊಳಿಸಲು ಸಂಗೀತವನ್ನು ಪೂರಕವಾಗಿ ಬಳಸಿರುತ್ತಾನೆ, ಅಷ್ಟೆ. ಆದ್ದರಿಂದ ಹಾಡುಗಬ್ಬಗಳಲ್ಲಿರುವ ಸಂಗೀತ ಹೃದಯ ಸಂಗೀತ, ಬುದ್ಧಿ ಸಂಗೀತವಲ್ಲವೆಂಬ ಮಾತು ಗಮನಾರ್ಹ.

ಹಾಡುಗಳಲ್ಲಿ ತತ್ತ್ವಪದಗಳು, ಸ್ತುತಿಗಳು, ದೇವರ ನಾಮಗಳು ಎಂದು ಹಲವು ಬಗೆಗಳಿವೆ. ಇವು ಭಕ್ತಿ ಜ್ಞಾನ ವೈರಾಗ್ಯಗಳ ತ್ರಿವೇಣೀ ಸಂಗಮ. ಕೀರ್ತನೆಗಳು ಎಂದು ಕರೆಯುವ ಪ್ರಭೇದವು ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ಭಗವಂತನ ನಾಮ ಸಂಕೀರ್ತನೆ ಅವುಗಳ ಮುಖ್ಯ ಉದ್ದೇಶ. ದೇವ-ಭಕ್ತರ ನಡುವಿನ ಸಂಬಂಧದ ನಿಬಿಡ ಭಾವ ಅಲ್ಲಿ ಸಾಂದ್ರವಾಗಿರುತ್ತದೆ. ಇವುಗಳ ಸ್ಥಾಯಿಾ ಭಾವ ಭಕ್ತಿ. ಸತ್ಯ ಸಾಕ್ಷಾತ್ಕಾರಕ್ಕೆ ಭಕ್ತಿಮಾರ್ಗವು ಸುಲಭವೆಂದು ತಿಳಿದು ಅವರು ಆತ್ಮನಿವೇದನೆಗಾಗಿ, ಮೊರೆಗಾಗಿ ಕೀರ್ತನೆಗಳನ್ನು ಬಳಸಿದ್ದಾರೆ. ಸಂಸಾರದ ನಿಸ್ಸಾರತೆ, ಭೋಗದ ನಶ್ವರತೆಯನ್ನು ಮನಗಂಡು ಲೌಕಿಕ ಜಂಜಾಟದಿಂದ ವಿಮುಖವಾಗಿ ಶಾಶ್ವತ ಸುಖಾಪೇಕ್ಷಿಗಳಾಗಿ ಭಗವಂತನ ಕಡೆ ಮನಸ್ಸನ್ನು ತಿರುಗಿಸುವುದು ಅಲ್ಲಿನ ಮುಖ್ಯ ಉದ್ದೇಶವಾಗಿರುತ್ತದೆ. ಇಂಥ ಹಾಡುಗಳು ವಯ್ಯಕ್ತಿಕ ಅನಿಸಿಕೆಗಳಂತೆ ಕಂಡರೂ ಅವುಗಳಲ್ಲಿ ಸಮಷ್ಟಿಯ ಉದ್ಧಾರದ ಹಂಬಲವಿರುತ್ತದೆ. ಆದ್ದರಿಂದಲೇ ಇಂಥ ಹಾಡುಗಳು ಸಾಮಾಜಿಕ ಮಹತ್ವವನ್ನು ಪಡೆದುಕೊಂಡಿವೆ.

ಮತ್ತೆ ಕೆಲವು ಹಾಡುಗಳು ಸುತ್ತಮುತ್ತಣ ಬದುಕನ್ನು, ವ್ಯಕ್ತಿಚಾರಿತ್ರ್ಯವನ್ನು ಕಂಡು ಪ್ರತಿಕ್ರಿಯಿಸಿದವು. ಅವು ನೇರವಾಗಿ ಮಾನವಜೀವನದ ಮೌಲ್ಯವನ್ನು ಕುರಿತವು. ಜನರಲ್ಲಿ ಗಾಢ ಮೂಢನಂಬಿಕೆ, ಅಂಧಶ್ರದ್ಧೆ, ಕಂದಾಚಾರಗಳನ್ನು ಅಲ್ಲಗಳೆದು ಸರ್ವಾದರಣೀಯವಾದ ವೈಚಾರಿಕ ನೆಲಗಟ್ಟಿನ ಮೇಲೆ ಸರ್ವಸಮತೆಯ ಆದರ್ಶಗಳನ್ನು ಮುಂದಿರಿಸುವಂಥವು. ಈ ಕಾರಣದಿಂದ ಇಂಥ ಹಾಡುಗಳು ಸಾರ್ವಕಾಲಿಕ ಮೌಲ್ಯವನ್ನು ಪಡೆದವು.

ಇಂಥ ಹಾಡುಗಳನ್ನು ರಚಿಸಿದ ವೀರಶೈವ ವಾಗ್ಗೇಯಕಾರರನ್ನು ನಾವು ಹನ್ನೆರಡನೆಯ ಶತಮಾನದ ಶಿವಶರಣರಿಂದಲೇ ಗುರುತಿಸಬಹುದು. ಹನ್ನೆರಡನೆಯ ಶತಮಾನವು ಕನ್ನಡ ನಾಡಿನ ಇತಿಹಾಸದಲ್ಲಿ ಸಾಂಸ್ಕೃತಿಕವಾಗಿ ಹೊಸಬೆಳಕು ಮೂಡಿಸಿದ ಕಾಲ. ಬಸವಾದಿ ಶಿವಶರಣರು ನಿಂತ ನೀರಿನಂತೆ ಮಲೆತು, ಚಲನಶೀಲತೆಯನ್ನು ನೀಗಿಕೊಂಡು ಸ್ಥಾವರವಾಗಿದ್ದ ಸಮಾಜದಲ್ಲಿ ಸಮೂಲ ಬದಲಾವಣೆಯನ್ನು ತಂದು, ವಿಚಾರಶೀಲತೆ ಮತ್ತು ಸರ್ವ ಸಮಾನತೆಯ ಆಧಾರದ ಮೇಲೆ ನವಸಮಾಜ ನಿರ್ಮಾಣ ಮಾಡಲು ಕ್ರಾಂತಿಕಹಳೆಯನ್ನು ಮೊಳಗಿಸಿದರು. ಅವರ ದೃಷ್ಟಿ ದೌರ್ಜನ್ಯಕ್ಕೆ ಒಳಗಾಗಿದ್ದ ದೀನ ದಲಿತರ, ಶೋಷಿತರ ಉದ್ಧಾರದ ಕಡೆಗಿತ್ತು. ಪಶುಸದೃಶ ಜೀವನ ನಡೆಸುತ್ತಿದ್ದ ಕೆಳವರ್ಗದವರ ಕಡೆಗಿತ್ತು. ಅವರಲ್ಲಿ ಮನೆ ಮಾಡಿದ್ದ ಕೀಳರಿಮೆ, ಮೌಢ್ಯ, ಹಿಂಜರಿಕೆಗಳನ್ನು ಹೋಗಲಾಡಿಸಿ ಆತ್ಮ ವಿಶ್ವಾಸ ಮೂಡಿಸಬೇಕಿತ್ತು. ಅವರಿಗೆ ಬದುಕುವ ಕಲೆಯನ್ನು ತಿಳಿಸಬೇಕಿತ್ತು. ಅವರಿಗೆ ತಿಳಿವ ತಿದ್ದಲು, ಜೀವನದ ರೀತಿ-ನೀತಿಯನ್ನು ಮನವರಿಕೆ ಮಾಡಲು ಒಂದು ಅಭಿವ್ಯಕ್ತಿ ಮಾಧ್ಯಮ

ಬೇಕಿತ್ತು. ಆಗ ಅವರು ಆವಿಷ್ಕರಿಸಿಕೊಂಡದ್ದೇ 'ವಚನ' ಎನ್ನುವ ಸಾಹಿತ್ಯ ಪ್ರಕಾರ. ಪದ್ಯಗಂಧಿಯಾದ ಗದ್ಯ ಭಾಷೆ, ಆಡುಮಾತು, ದಿನ ಬಳಕೆಯತು ಜೀವಂತ ಭಾಷೆ; ಅದರಲ್ಲಿ ವ್ಯಕ್ತಪಡಿಸಿದ ವಿಚಾರ ದಿನ ನಿತ್ಯದ ಬಾಳಿಗೆ ಸಂಬಂಧಿಸಿದ್ದು. ಹೇಳಿದ ರೀತಿಯಿಂದ, ಜನ ಸಾಮಾನ್ಯರಿಗೂ ಅನುಭವಕ್ಕೆ ಮುಟ್ಟುವ ಸರಳ ದೃಷ್ಟಾಂತಗಳಿಂದ, ಶರಣರ ಜನಪರ ಕಾಳಜಿಯ ಆತ್ಮೀಯ ಭಾವದಿಂದಾಗಿ ವಚನ ಸಾಹಿತ್ಯ ಜನಜಾಗೃತಿಯ ಸಮರ್ಥ ಸಾಧನವಾಯಿತು.

ವಚನಗಳೂ ಗೇಯತೆಗೆ ಒಗ್ಗುವಂಥವೇ. ಅವುಗಳನ್ನು ಗೀತಗಳೆಂದು ಕರೆದಿರುವುದೂ ಉಂಟು. ಶರಣರ ವಚನಗಳನ್ನು ಪ್ರಚಾರಕರು ಊರಿಂದೂರಿಗೆ ಹಾಡುತ್ತಾ ಸಂಚರಿಸುತ್ತಿದ್ದ ನಿದರ್ಶನಗಳು ಇವೆ. ಶರಣರು ತಮ್ಮ ವಚನಗಳನ್ನು ಕಿನ್ನರಿ, ವೀಣೆ, ದಂಡಿಗೆ, ದಂಬಡಿ, ತಾಳ ಮುಂತಾದ ವಾದನಗಳ ಹಿಮ್ಮೇಳದಲ್ಲಿ ಹಾಡುತ್ತಿದ್ದರೆಂಬುದಕ್ಕೆ ಆಧಾರಗಳಿವೆ. 'ತಾಳಮಾನಸವನರಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ. ಆನು ಒಲಿದಂತೆ ಹಾಡುವೆ', 'ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಸಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ, ಎನ್ನ ಬೆರಳ ಕಡ್ಡಿಯ ಮಾಡಯ್ಯ, ಬತ್ತೀಸರಾಗವ ಹಾಡಯ್ಯ ಉರದಲೊತ್ತಿ ಬಾರಿಸು' (ಬಸವ 494, 500) ಮೊದಲಾದ ವಚನಗಳಲ್ಲಿ ಸಂಗೀತದ, ಹಾಡುಗಾರಿಕೆಯ ಸೂಚನೆಗಳಿವೆ. ಶಿವಶರಣರಲ್ಲಿ ಅನೇಕರು ಸಂಗೀತಶಾಸ್ತ್ರಜ್ಞರಿದ್ದರು. ಆದರೆ ಅವರು ಆ ಕಲೆಯ ಶಾಸ್ತ್ರೀಯತೆಯನ್ನು ತಮ್ಮ ಉದ್ದೇಶಕ್ಕೆ ಎಷ್ಟು ಬೇಕೋ ಅಷ್ಟೇ ಬಳಸಿಕೊಂಡು ತಮ್ಮ ಉಚಿತಾನುಚಿತ ವಿವೇಕವನ್ನು ಪ್ರದರ್ಶಿಸಿದ್ದಾರೆ.

ವಚನಗಳನ್ನು ರಚಿಸಿದ ಶಿವಶರಣರೇ ಹಾಡುಗಳ ಮೂಲಿಗರು. ಅವರು ರಚಿಸಿದ ಛಂದೋಬದ್ಧ ಹಾಗೂ ರಾಗ ತಾಳ ಸಹಿತವಾದ ವಚನಗಳಿಗೆ ಸ್ವರ ವಚನ, ಸ್ವರಪದ ಎಂದು ಕರೆಯಲಾಗಿದೆ. ಸ್ವರ ವಚನಗಳೆಂದರೆ ಹಾಡಲೆಂದೇ ರಚಿತವಾದುವು. ಹಾಡುಗಳಲ್ಲಿ ಅಷ್ಟಕ, ಶತಕ, ಮುಕ್ತಕ, ಲಾಲಿಪದ, ಜೋಗುಳ, ದುಂದುಮಿ, ಸೋಬಾನ, ಲಾವಣಿ, ಬಿರುದಾವಳಿ, ತಾರಾವಳಿ, ನಾಂದೀ ಪದ್ಯಗಳು–ಮೊದಲಾದ ಪ್ರಕಾರಗಳಿವೆ. ಅವು ದ್ವಿಪದಿ ತ್ರಿಪದಿ, ಚೌಪದಿ, ಏಳೆ, ಷಟ್ಪದಿ, ಅಷ್ಟಪದಿ ಮೊದಲಾದ ಛಂದಸಿನಲ್ಲಿ ಮೂಡಿರುವುದುಂಟು. ಇವಕ್ಕೆ ರಾಗ ತಾಳಗಳ ನಿರ್ದೇಶನವಿವೆ. ವಚನಗಳು ಅನುಭವ ಗದ್ಯ ಪ್ರಕಾರವಾದರೆ, ಸ್ವರ ವಚನಗಳು ಅನುಭಾವದ ಗೀತ ಪ್ರಕಾರಗಳು. ವಚನಗಳು ತಮ್ಮ ಸಾಹಿತ್ಯಗುಣದಿಂದ ಸಹೃದಯರನ್ನು ಆಕರ್ಷಿಸಿದರೆ, ಸ್ವರ ವಚನಗಳು ತಮ್ಮ ಗೇಯಗುಣದಿಂದ ಮನ ಸೆಳೆಯುತ್ತವೆ. ಅವು ಕಟ್ಟಿದ ಕವಿತೆಗಳು ಎನ್ನುವುದಕ್ಕಿಂತ ತಾವಾಗಿಯೇ ಹೊಮ್ಮಿದ ಉಸಿರು ಎನ್ನಬಹುದು. ಸಕಲೇಶ ಮಾದರಸರ ವೀಣೆ, ಬಸವಣ್ಣನ ದಂಡಿಗೆ, ಅಲ್ಲಮನ ಮದ್ದಳೆ, ಬ್ರಹ್ಮಯ್ಯ ಮತ್ತು ಮರುಳಸಿದ್ಧರ ಕಿನ್ನರಿ, ಮಾರಯ್ಯನ ಡಕ್ಕೆ, ಬಾಹೂರ ಬ್ರಹ್ಮಯ್ಯನ ತಾಳ ಮೊದಲಾದವು ಸ್ವರವಚನಗಳಿಗೆ ಪಕ್ಕವಾದ್ಯಗಳಾಗಿರಬೇಕು. ಶಿವಶರಣರಲ್ಲಿ ಕೆಲವರಿಗೆ ಇದೊಂದು ಕಾಯಕವೇ ಆಗಿತ್ತು. ಸಂಗೀತ, ಗಮಕ, ಕೀರ್ತನೆ, ಪ್ರವಚನ, ನರ್ತನ,

ಅಭಿನಯ ಮೊದಲಾದ ಕಲಾಮಾಧ್ಯಮಗಳ ಮೂಲಕ ಅವರು ತತ್ತ್ವ ಪ್ರಚಾರ ಕೈಗೊಂಡಿದ್ದರು.

ಈ ಹಾಡುಗಳು ಜನಪದ ಭಾಷೆಯಲ್ಲಿ ಆಧ್ಯಾತ್ಮಿಕ ವಿಚಾರಗಳನ್ನು ಮನಸ್ಸಿಗೆ ಹಿಡಿಸುವಂತೆ ಹೇಳಿವೆ. ಅಲ್ಲಿ ನಿರೂಪಿತವಾಗಿರುವುದು ಕೈವಲ್ಯಸಾಹಿತ್ಯವಾದರೂ ಶುಷ್ಕಗೊಡ್ಡುವೇದಾಂತವಲ್ಲ; ದಿನನಿತ್ಯದ ವ್ಯವಹಾರದಿಂದ ಹಿಮ್ಮೆಟ್ಟಿಸುವ, ನಿಷ್ಕ್ರಿಯಗೊಳಿಸುವ ವೇದಾಂತವಲ್ಲ. ಚೆನ್ನಾಗಿ ಬಾಳು ನಡೆಸಲು ಅಗತ್ಯವಾಗಿ ಬೇಕಾದ, ಆಚರಣ ಸಾಧ್ಯವಾದ ವಿಚಾರಗಳು ಅವುಗಳಲ್ಲಿ ಅಡಕವಾಗಿವೆ. ಹಾಡುಗಳನ್ನು ಕಟ್ಟಿ ಹಾಡಿದ ಅನುಭಾವಿಗಳು ಜನರ ಮಧ್ಯೆ ಬೆಳೆದು ಬಾಳಿದವರು. ಅವರಿಗೆ ಜನರ ಆಸೆ-ಆಕಾಂಕ್ಷೆ, ಅನಿಸಿಕೆ-ಅನುಭವಗಳು, ಅವರ ಕುಂದು-ಕೊರತೆ, ದೌರ್ಬಲ್ಯ-ಸಬಲತೆಗಳೆಲ್ಲವೂ ಗೊತ್ತು. ತಮ್ಮ ದೌರ್ಬಲ್ಯಗಳನ್ನು ನೀಗಿಕೊಂಡು ಹೇಗೆ ವಿಕಾಸದ ಹಾದಿಯನ್ನು ಹಿಡಿಯಬಹುದೆಂಬುದನ್ನು ಅವರು ತಿಳಿಸಿದರು. ಇಹ-ಪರ ಸಾಧಕವಾದ ಸುವರ್ಣ ಮಾರ್ಗವನ್ನು ಅವರು ಜನತೆಯ ಮುಂದಿರಿಸಿದರು.

ಅವರು ಮಾಡಿದ ಇನ್ನೊಂದು ಉಪಕಾರವೆಂದರೆ ಜನರಲ್ಲಿ ಶುದ್ಧ ಅರಿವು ಮೂಡಲು ಕಾರಣರಾದರು. ಒಳ್ಳಿತಾವುದು, ಕೆಟ್ಟದ್ದಾವುದು ಎಂಬುದರ ವಿವೇಕ ಬೆಳೆಯಲು ಕಾರಣವಾದ ವಿಚಾರಶಕ್ತಿಯನ್ನು ಕುದುರಿಸಿದರು. 'ನಿಮ್ಮ ಅರಿವೇ ನಿಮಗೆ ಗುರು' ಎಂದರು. ಕಾಯಕಯೋಗಿಗಳಾಗಿದ್ದ ಅವರು ಸತ್ಯ ಶುದ್ಧ ದುಡಿಮೆ ಹೇಗೆ ಪರಮಾರ್ಥ ಸಾಧನೆಗೆ ಸಾಧಕವೆಂಬುದನ್ನು ತೋರಿದರು. ಜಾತಿ, ಮತ, ಧರ್ಮ, ವರ್ಣ, ವರ್ಗದ ಸಂಕುಚಿತದ ಎಲ್ಲೆಯನ್ನು ದಾಟಿ ಇಡೀ ಮಾನವತೆಗೆ ಮಾದರಿಯಾಗಬಲ್ಲ ಜೀವನದರ್ಶನವನ್ನು ಹಾಡುಗಳ ಮೂಲಕ ಪಸರಿಸಿದರು.

ಅವರು ನುಡಿದ ನುಡಿಗೂ, ಅವರ ವಾಸ್ತವ ನಡೆಗೂ ಅಂತರವಿರಲಿಲ್ಲ. ನಡೆ-ನುಡಿಗಳು ಒಂದಾದ ಅವರ ಬದುಕು ಆದರ್ಶವಾಗದೆ ಇನ್ನೇನು ?

ಹಾಡುಗಬ್ಬಗಳನ್ನು ರಚಿಸಿದ ವೀರಶೈವ ವಾಗ್ಗೇಯಕಾರರಲ್ಲಿ ಎರಡು ಬಗೆಯವರು ಕಾಣುತ್ತಾರೆ :

1. ಕೇವಲ ಭಕ್ತಿಯ ಆವೇಶದಿಂದ ಹಾಡಿದವರು. ಇವರು ಸೃಜನಶೀಲ ಶಿಷ್ಟ ಸಾಹಿತಿಗಳಂತೆ ಉದ್ದೇಶ ಪೂರ್ವಕವಾಗಿ ಅಭ್ಯಾಸಪೂರ್ಣ ಹಾಡು ಕಟ್ಟಿದವರಲ್ಲ. ಅವರು ಆಶು ಕವಿಗಳು. ಕುಂತಲ್ಲಿ ನಿಂತಲ್ಲಿ ಹಾಡಿದರು. ತಾವು ಅನುಭಾವಿಕ ತುರೀಯ ನಿಲವಿಗೇರಿದ್ದರೂ ಜನಸಾಮಾನ್ಯರ ಮಟ್ಟಕ್ಕೆ ಇಳಿದು ದಿನಬಳಕೆಯ ಭಾಷೆಯನ್ನೇ ಬಳಸಿ ಹಾಡಿದರು. ಅವರದು ಸಹಜ ಅಭಿವ್ಯಕ್ತಿ. ಬಾಲಲೀಲಾ ಮಹಂತರು, ಘನ ಮಠದಾರ್ಯರು, ಕಡಕೋಳ ಮಡಿವಾಳಪ್ಪ ಮೊದಲಾದವರು ಈ ಗುಂಪಿಗೆ ಸೇರುತ್ತಾರೆ.

2. ಶಾಸ್ತ್ರಾಧ್ಯಯನ ಮಾಡಿ, ತತ್ತ್ವಗಳನ್ನು ಅರಿತು ಆಚರಿಸಿನೋಡಿ ಅಧಿಕಾರವಾಣಿಯಿಂದ ಇತರರಿಗೆ ತಿಳಿಸುವ ಉದ್ದೇಶದಿಂದ ತಮ್ಮ ಕಾವ್ಯಶಕ್ತಿಯನ್ನು ಬುದ್ಧಿಪೂರ್ವಕವಾಗಿ ಬಳಸಿಕೊಂಡು ಕೃತಿರಚನೆ ಮಾಡಿದ ಮಹಾನುಭಾವರ ಗುಂಪು ಇದೆ. ನಿಜಗುಣ ಶಿವಯೋಗಿಗಳು, ಸರ್ಪಭೂಷಣ ಶಿವಯೋಗಿಗಳು, ಬಸವಲಿಂಗ ಶರಣರು ಮೊದಲಾದವರನ್ನು ಹೆಸರಿಸಬಹುದು.

ಹನ್ನೆರಡನೆಯ ಶತಮಾನದ ವಾಗ್ಗೇಯಕಾರದಲ್ಲಿ ಬಸವಣ್ಣ, ಸಕಳೇಶ ಮಾದರಸ, ಅಲ್ಲಮಪ್ರಭುದೇವ, ಚೆನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದವರೂ ಸೇರಿದಂತೆ ಅನೇಕ ವಚನಕಾರರಿದ್ದಾರೆ. ನಮಗೆ ದೊರಕಿರುವ ಮಹತ್ವದ ಸಂಕಲನ ಗ್ರಂಥ 16ನೇ ಶತಮಾನದ ಕೊನೆಯ ಭಾಗದಲ್ಲಿದ್ದ ಚೆನ್ನವೀರಾರ್ಯನ 'ಶಿವಯೋಗ ಪ್ರದೀಪಿಕೆ'ಯಲ್ಲಿ ಸಂಕಲನಕಾರನು ಬಸವಣ್ಣನೇ ಮೊದಲಾದ ಪ್ರಮಥರಿಂದ ಹಿಡಿದು ಆತನ ಕಾಲದವರೆಗಿನ ಶರಣರ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾನೆ. ಅದರಲ್ಲಿ ಒಟ್ಟು 73 ಹಾಡುಗಳಿವೆ. ಸಂಕಲನಕಾರ ಅವನ್ನು ಸಕಲ ಪುರಾತನರ ಗೀತೆಗಳೆಂದು ಕರೆದಿದ್ದಾನೆ.

ಸಕಳೇಶ ಮಾದರಸರ ಸ್ವರವಚನವೇ ಉಪಲಬ್ಧವಾಗಿರುವ ಪ್ರಾಚೀನ ಹಾಡು. ಸಕಳೇಶ ಮಾದರಸರು ಬಸವಣ್ಣನವರು ಹಿರಿಯ ಸಮಕಾಲೀನ. 'ಸಕಳೇಶ' ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸಿದ್ದಾರೆ. ಸಕಳೇಶಮಾದರಸರು ಸಂಗೀತಜ್ಞರಾಗಿದ್ದರಲ್ಲದೆ, ವೀಣಾಗಾನ ವಿಶಾರದರಾಗಿದ್ದರು. ಅವರು ರಾಗ ತಾಳ ಲಯಬದ್ಧವಾದ ಹಾಡುಗಳನ್ನು ರಚಿಸಿದ್ದಾರೆ. ''ಲಿಂಗಮನೋವೇದ್ಯ ಅನುತಾಪ ರತಿ'' ಎಂಬುದು ಅವರ ಸುಂದರವಾದ ಹಾಡು .

ಇದರಂತೆ ಬಸವಣ್ಣ, ಅಲ್ಲಮ, ಚನ್ನಬಸವಣ್ಣ, ಅಕ್ಕ ಮೊದಲಾದವರ ಅನೇಕ ಸ್ವರವಚನಗಳು ಆ ಸಂಕಲನದಲ್ಲಿವೆ. ಹೀಗಾಗಿ 11 ಮತ್ತು 12ನೆಯ ಶತಮಾನವೆಂದರೆ ಸ್ವರವಚನಗಳ ಸುಗ್ಗಿಯ ಕಾಲವೆನ್ನಬಹುದು. ಈ ಪರಂಪರೆ ಅನುಸ್ಯೂತವಾಗಿ ಇಪ್ಪತ್ತನೆಯ ಶತಮಾನದವರೆಗೂ ಮುಂದುವರಿದಿದೆ. ಇದು ಅದರ ಉಪಯುಕ್ತತೆ ಮತ್ತು ಜನಪ್ರಿಯತೆಯ ಕುರುಹಾಗಿದೆ.

ಶಿವಶರಣರ ಇಂಥ ಸಾಹಿತ್ಯ-ಸಂಗೀತಗಳ ಸಮರಸದ ಕಲೆಯ ಪ್ರಚಾರದಿಂದಾಗಿ ಸಂಗೀತ ಶಾಸ್ತ್ರ ರಚನೆಗೆ ಕಾರಣವಾಯಿತೆನ್ನಬೇಕು. ಹದಿಮೂರನೆಯ ಶತಮಾನದಲ್ಲಿ ಸೋಮೇಶ್ವರ ಮತ್ತು ಶಾರ್ಙ್ಗದೇವ ಇವರು ಕ್ರಮವಾಗಿ 'ಮಾನಸೋಲ್ಲಾಸ' ಹಾಗೂ 'ಸಂಗೀತ ರತ್ನಾಕರ'ಗಳೆಂಬ ಶಾಸ್ತ್ರ ಗ್ರಂಥಗಳನ್ನು ರಚಿಸಿದರು. 'ಮಾನಸೋಲ್ಲಾಸ' ಅಥವಾ 'ಅಭಿಲಷಿತಾರ್ಥ ಚಿಂತಾಮಣಿ' ನೂರು ಅಧ್ಯಾಯಗಳಿಂದ ಕೂಡಿದ ಸಂಗೀತ ವಿಶ್ವಕೋಶ. ಇದನ್ನು ನೀಡಿದವನು ಕನ್ನಡದ ಅರಸ, ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಮೂರನೆಯ ಸೋಮೇಶ್ವರ. ಮೊದಲು ಕಲೆ, ಆಮೇಲೆ ಶಾಸ್ತ್ರ. ಕಲೆ ಹುಟ್ಟಿ ವಿಕಾಸ ಹೊಂದಿದ ಮೇಲೆ ಶಾಸ್ತ್ರಕಾರ ಅದರ ಸಾಮಾನ್ಯ ರೂಪು-ರೇಷೆಗಳನ್ನು ಅಭ್ಯಾಸ ಮಾಡಿ ಹೀಗೆ ಇರಬೇಕೆಂದು

ನಿಯಮ ಮಾಡಿ ಕಲೆಗೆ ಶಾಸ್ತ್ರೀಯ ರೂಪ ಕೊಡುತ್ತಾನೆ; ಮುಂದಿನವರಿಗೆ ಮಾರ್ಗದರ್ಶನ ನೀಡುತ್ತಾನೆ. ಸೋಮೇಶ್ವರನಿಗೆ ಸಾಮಗ್ರಿ ದೊರೆತದ್ದು ರಾಗದ ಸಂಕಣ್ಣ, ಬಹುರೂಪಿ ಚೌಡಯ್ಯ, ಜೇಡರ ದಾಸಿಮಯ್ಯ, ಸಕಳೇಶ ಮಾದರಸ, ಬಸವಣ್ಣ, ಅಲ್ಲಮ, ಅಕ್ಕ ಮೊದಲಾದ ಶರಣರಿಂದ.

'ಸಂಗೀತರತ್ನಾಕರ'ವನ್ನು ರಚಿಸಿದವನು ಶಾರ್ಙ್ಗದೇವ ಅಥವಾ ಸಾರಂಗದೇವ (1220). ಈತನು ದೇವಗಿರಿಯ ಸಿಂಘಣದೇವನ ಆಶ್ರಯದಲ್ಲಿ ಕೋಶಾಧಿಪತಿಯಾಗಿದ್ದನಂತೆ. ಈತನು ತನ್ನ ಕೃತಿಯಲ್ಲಿ ಸ್ವರ ಮೇಳಗಳು, ರಾಗಗಳು, ಪ್ರಬಂಧಗಳು, ವಾದ್ಯಗಳು ಮುಂತಾದ ಸಂಗೀತದ ವಿಷಯಗಳನ್ನು ಚರ್ಚಿಸಿದ್ದಾನೆ; ವಿವರಿಸಿದ್ದಾನೆ. ಈತನೂ ಸಹ ಶಿವಶರಣರ ಕೃತಿಗಳಿಂದ ಮಾಹಿತಿ ಪಡೆದಿದ್ದಾನೆಂಬುದು ಸ್ಪಷ್ಟ.

ಪದಕಟ್ಟಿ ಹಾಡುವ, ಗೇಯಕೃತಿಗಳನ್ನು ರಚಿಸಿ ಹಾಡುವ ಪರಂಪರೆ 900 ವರ್ಷಗಳಷ್ಟು ಪ್ರಾಚೀನ. ವೀರಶೈವ ವಾಗ್ಗೇಯಕಾರರೇ ಇಂಥ ಹಾಡುಗಳ ಗಂಗೋತ್ರಿ ಎಂಬುದು ಕೇವಲ ಅಭಿಮಾನದ ಮಾತಲ್ಲ. ಹಿಂದಿನ ಹಾಡುಗಳನ್ನು ಸಂಕಲಿಸುವುದು, ಪ್ರಸಾರಮಾಡುವುದು; ತಮ್ಮದೇ ಆದ ಪಾಡುಗಳನ್ನು ಹೊಸ ಹೊಸ ರಾಗ, ತಾಳಗಳಲ್ಲಿ ಹಾಡುವುದು–ಈ ಎರಡೂ ಕೆಲಸಗಳು ಸತತವಾಗಿ ಸಾಗಿ ಬಂದಿವೆ. ಇಂಥ ಹಾಡುಗಬ್ಬಗಳ ಸಂಕಲನಗಳನ್ನು ಅಧ್ಯಯನ ದೃಷ್ಟಿಯಿಂದ ಸ್ಥೂಲವಾಗಿ ಹೀಗೆ ವಿಭಾಗಿಸಬಹುದು. :

1. ವಚನ ಮತ್ತು ಸ್ವರವಚನಗಳು ಸೇರಿರುವ ಸಂಕಲನಗಳು

ಉತ್ತರ ಕರ್ನಾಟಕದ ಹುಲಿಗೆರೆ (ಲಕ್ಷ್ಮೇಶ್ವರ)ಯಲ್ಲಿ ಮಹಲಿಂಗದೇವ (ಏಕೋತ್ತರ ಶತಸ್ಥಲ), ದಕ್ಷಿಣದ ಗುಬ್ಬಿಯಲ್ಲಿ ಮಲ್ಲಣ (ಗಣಭಾಷ್ಯರತ್ನಮಾಲೆ) ವಚನ ಸಾಹಿತ್ಯದ ರಕ್ಷಣೆ ಮತ್ತು ಪ್ರಸಾರಕ್ಕೆ ಅಭೂತಪೂರ್ವ ವಿಧಾನವನ್ನು ರೂಪಿಸಿದರು. ಅವರು ವಚನಗಳನ್ನು ಸಂಗ್ರಹಿಸಿದರು, ವ್ಯಾಖ್ಯಾನಿಸಿದರು, ಸ್ಥಳಕಟ್ಟುಗಳಾಗಿ ವಿಂಗಡಿಸಿದರು. ಮಹಲಿಂಗದೇವನು ಷಟ್ಸ್ಥಲಾನುಸಾರ ವಿಂಗಡಣೆ ಮಾಡಿದರೆ, ಮಲ್ಲಣನು ಆಚರಣೆಯ ದೃಷ್ಟಿಯಿಂದ 101 ಶೀರ್ಷಿಕೆಯಡಿ ವಚನಗಳನ್ನು ಪವಣಿಸಿ ಅವಕ್ಕೆ ಆಗಮಾದಿಗಳ ಪ್ರಾಮಾಣ್ಯವನ್ನು ಒದಗಿಸಿದನು. ಮಹಲಿಂಗ ದೇವ ಶಿವಶರಣರ ವಚನಗಳ ಜೊತೆಗೆ ಹಾಡುಗಳನ್ನು ಸಂಗ್ರಹಿಸಿ ಕೊಟ್ಟು ಮಹೋಪಕಾರ ಮಾಡಿದ್ದಾನೆ. ಇದರಂತೆ ಮಹತ್ತ ದೇವನ, 'ವೀರಶೈವ ಚಿಂತಾಮಣಿ' ಹಾಗೂ ಸೋಸಲೆ ಚಿಕ್ಕಣಾರಾಧ್ಯನ 'ಪರಮ ಮೂಲಜ್ಞಾನ ಷಟ್ಥಲ ವಚನಗಳು' ಉತ್ತಮ ಸಂಕಲನಗಳು.

2. ಶೂನ್ಯ ಸಂಪಾದನೆಗಳಲ್ಲಿರುವ ಸ್ವರ ವಚನಗಳು

ವಿಜಯನಗರ ಸಾಮ್ರಾಜ್ಯದ ಪ್ರೌಢ ದೇವರಾಯನ ಕಾಲವೆಂದರೆ ವಚನ ಸಾಹಿತ್ಯದ ಪುನರುತ್ಥಾನ ಕಾಲ. ಕಲ್ಲುಮಠದ ಪ್ರಭುದೇವ, ಕರಸ್ಥಲದ ನಾಗಿದೇವ, ಜಕ್ಕಣಾರ್ಯ

ಮೊದಲಾದ 101 ವಿರಕ್ತರು ವಚನಗಳ ಸಂಗ್ರಹಣ, ಪರಿಷ್ಕರಣ ಹಾಗೂ ಪ್ರಸರಣದ ಕಾರ್ಯವನ್ನು ಕೈಗೆತ್ತಿಕೊಂಡರು. ಅಲ್ಲದೆ ಅವರು ಸ್ವತಃ ವಚನಗಳನ್ನು ಹಾಗೂ ಸ್ವರವಚನಗಳನ್ನು ರಚಿಸಿದರು. ನಿರ್ವಾಣಿ ಬೋಳ ಬಸವ, ಮೊದಲಾದವರ ಹಾಡುಗಳು ದೊರೆತಿವೆ.

ಈ ಕಾಲದ ಇನ್ನೊಂದು ಮಹತ್ವದ ಕಾರ್ಯವೆಂದರೆ 'ಶೂನ್ಯ ಸಂಪಾದನೆ'ಯ ರಚನೆ. ಅನುಭವ ಮಂಟಪದಲ್ಲಿ ಶರಣ-ಶರಣೆಯರ ನಡುವೆ ನಡೆದ ಆನುಭಾವಿಕ ಚರ್ಚೆಯ ಹಿನ್ನೆಲೆಯಲ್ಲಿ ಶಿವಗಣ ಪ್ರಸಾದಿ ಮಹಾದೇವಯ್ಯ (1400) ವಚನಗಳನ್ನು ಸಂವಾದ ರೂಪದಲ್ಲಿ ಅಳವಡಿಸಿದ ಅಪೂರ್ವ ಕೃತಿ ಅದು. ಶಿವಗಣಪ್ರಸಾದಿಯು ಶರಣರ ವಚನಗಳ ಜೊತೆಗೆ ಅನೇಕ ಸ್ವರವಚನಗಳನ್ನೂ ಅದರಲ್ಲಿ ಜೋಡಿಸಿದ್ದಾನೆ. ಆತನ ಈ ಸಂಕಲನ ಎಷ್ಟು ಜನಾನುರಾಗ ಗಳಿಸಿತೆಂದರೆ 1593ರೊಳಗೆ ಮತ್ತೆ ಮೂರು ಪರಿಷ್ಕರಣಗಳನ್ನು ಕಂಡಿತು.

ತೋಂಟದ ಸಿದ್ಧಲಿಂಗರ ಕಾಲವೆಂದರೆ ವಚನ ಸಾಹಿತ್ಯದ ಎರಡನೆಯ ಮಜಲು. ತೋಂಟದಾರ್ಯರು ಸ್ವತಃ ವಚನಗಳನ್ನು ರಚಿಸಿದರು (ಷಟ್ಸ್ಥಲಜ್ಞಾನಸಾರಾಮೃತ) ಜೊತೆಗೆ ತಮ್ಮ ಅಸಂಖ್ಯಾತ ಶಿಷ್ಯರಿಗೆ ಪ್ರೇರಣೆ ನೀಡಿದರು. ಅವರು 701 ವಿರಕ್ತರೆಂದೇ ಪ್ರಸಿದ್ಧರಾಗಿದ್ದಾರೆ. ಅವರಲ್ಲಿ ಅನೇಕರು ವಚನಗಳನ್ನು, ಸ್ವರವಚನಗಳನ್ನು, ತತ್ತ್ವ ಪದಗಳನ್ನು ರಚಿಸಿದ್ದಾರೆ. ಸಂಪಾದನೆಯ ಪರಿಷ್ಕರಣ ಕಾರ್ಯ ನಡೆಸಿದ ಗುಮ್ಮಳಾಪುರದ ಸಿದ್ಧಲಿಂಗ ಮತ್ತು ಗೂಳೂರು ಸಿದ್ಧವೀರಣ್ಣೊಡೆಯ ಇವರು ಈ ತೋಂಟದಾರ್ಯ ಪರಂಪರೆಗೆ ಸೇರಿದವರು. ಪರಿಷ್ಕರಣದಲ್ಲೂ ಹಾಡುಗಳು ಉಳಿದಿವೆ. ಶಿವಗಣ ಪ್ರಸಾದಿಯ ಶೂನ್ಯ ಸಂಪಾದನೆಯಲ್ಲಿ 11 ಹಾಡುಗಳಿದ್ದರೆ, ಹಲಗೆದೇವನ ಕೃತಿಯಲ್ಲಿ ಅವು 35ಕ್ಕೆ ಏರಿದವು. ಗುಮ್ಮಳಾಪುರದ ಸಿದ್ಧಲಿಂಗ ಅವನ್ನು 18ಕ್ಕೆ ಇಳಿಸಿದ್ದರೆ, ಗೂಳೂರು ಸಿದ್ಧವೀರಣ್ಣೊಡೆಯ 21 ಹಾಡುಗಳನ್ನು ತನ್ನ ಕೃತಿಯಲ್ಲಿ ಉಳಿಸಿಕೊಂಡಿದ್ದಾನೆ.

3. ಕಾವ್ಯಗಳಲ್ಲಿ ಸ್ವರವಚನಗಳು

ಶಿವಶರಣರ ಜನಪರ ನಿಲುವಿನಿಂದ ಪ್ರಭಾವಿತರಾದ ಮುಂದಿನ ಹರಿಹರ, ರಾಘವಾಂಕ ಮೊದಲಾದ ಕವಿಗಳು ಮಾರ್ಗಛಂದಸ್ಸನ್ನು ಬಿಟ್ಟು ದೇಶೀಯ ಛಂದಸ್ಸಿನ ಕಡೆ ಒಲಿದರು. ಜೊತೆಗೆ ಅವರು ಸಂಗೀತಜ್ಞರೂ ಆಗಿದ್ದುದರಿಂದ ಅವರ ಕಾವ್ಯಗಳಲ್ಲಿ ಗೇಯತೆಯನ್ನು ಕೂಡಿಸಿದರು. ಅವರ ಕಾವ್ಯಗಳು ಹಾಡುಗಬ್ಬಗಳು. ಮುಂದೆ ಭೀಮಕವಿಯ 'ಬಸವಪುರಾಣ' ಪ್ರಸಿದ್ಧ ಷಟ್ಪದಿಕಾವ್ಯವೆನಿಸಿತು. ಅದನ್ನು ರಾಗತಾಳ ಲಯಬದ್ಧವಾಗಿ ಹಾಡಿ ಪ್ರವಚನ ಮಾಡಿದ ಗುಬ್ಬಿಯ ಮಲ್ಲಣಾರ್ಯ ಸಹ ವಾಗ್ಗೇಯಕಾರನೇ.

ನಮ್ಮ ಕವಿಗಳು ಶಿವಶರಣರ ವಚನಗಳಿಂದ ಪ್ರಭಾವಿತರಾಗಿರುವ ಮಾತಿರಲಿ, ತಮ್ಮ ಕಾವ್ಯಗಳಲ್ಲಿ ನೇರವಾಗಿ ವಚನಗಳನ್ನು, ಹಾಡುಗಳನ್ನು ಸೇರಿಸಿಕೊಂಡಿರುವ ಅಪೂರ್ವ

ನಿದರ್ಶನಗಳೂ ಇವೆ. ಸಿಂಗಿರಾಜನ 'ಅಮಲ ಬಸವ ಚರಿತೆ (ಸಿಂಗಿರಾಜ ಪುರಾಣ)'ಯಲ್ಲಿ 'ಸಂಗನ ಬಸವ' ಅಂಕಿತದ ಒಂದು ಹಾಡನ್ನು (34 ಸಂಧಿ, 32ನೇ ಪದ್ಯದ ನಂತರ), 'ಕೂಡಲ ಚನ್ನಸಂಗಯ್ಯ' ಅಂಕಿತದ ಇನ್ನೊಂದು ಹಾಡನ್ನು (2ನೇ ಸಂಧಿ, 10ನೇ ಪದ್ಯದ ನಂತರ) ಸೇರಿಸಲಾಗಿದೆ. ಚಿಕ್ಕನಂಜೇಶನ 'ರಾಘವಾಂಕ ಚಾರಿತ್ರ'ದ 14ನೆಯ ಸಂಧಿಯ 132 ಪದ್ಯದ ನಂತರ ' ಆ ಸಮಯದುಚಿತ ವಚನವನು ಪೇಳ್ದ' ಎಂದು ಹೇಳಿ ಒಂದು ಹಾಡನ್ನು ಸೇರಿಸಲಾಗಿದೆ.

4. ಕೇವಲ ಸ್ವರವಚನಗಳು ಇರುವಂಥ ಸಂಕಲನಗಳು

ಈ ಮೊದಲೇ ಉಲ್ಲೇಖಿಸಿರುವಂತೆ ಸ್ವರವಚನ ಸಂಕಲನ 'ಶಿವಯೋಗ ಪ್ರದೀಪಿಕೆ' ಒಂದು ಮಹತ್ವದ ಕೃತಿ. ಇದರಲ್ಲಿ ಬಸವಣ್ಣ, ಅಲ್ಲಮ ಮೊದಲಾದ ಹಿರಿಯ ಶರಣರ ಹಾಡುಗಳ ಜೊತೆಗೆ ನೀಲಮ್ಮ, ಅಮುಗಿದೇವಯ್ಯ, ಬಹುರೂಪಿ ಚೌಡಯ್ಯ, ಕರಸ್ಥಲದ ನಾಗಿದೇವ, ಗುರುಬಸವ, ನಿರ್ವಾಣಬೋಳೇಶ, ಬತ್ತಲೇಶ್ವರ, ಶಂಕರ ದೇವ ಮೊದಲಾದವರ ಹಾಡುಗಳೂ ಸೇರಿವೆ.

'ಗಣವಚನ ರತ್ನಾವಲಿ'ಯು ಪುರಾತನ ಮತ್ತು ನೂತನ ಶರಣರ 216 ಸ್ವರವಚನಗಳನ್ನುಳ್ಳ ಇನ್ನೊಂದು ಕೃತಿ. ಇದನ್ನು ಸಂಕಲಿಸಿದವನು ಷಟ್‌ಸ್ಥಲಾಚಾರ್ಯವರ್ಯ ಕಂಬಾಳದ ಶಾಂತಮಲ್ಲೇಶ (1600). ಶರಣರ ಅಂತರಂಗದ ಅನುಭಾವ ಇಲ್ಲಿನ ಹಾಡುಗಳಲ್ಲಿ ಹೊನಲಾಗಿ ಹರಿದಿದೆ.

ಶಿವರುದ್ರಸ್ವಾಮಿಯ 'ಬಿಡಿ ಸ್ವರ ವಚನಗಳು' ಕೃತಿ ಬೇರೆ ಬೇರೆ ಶರಣರ ಹಾಡುಗಳನ್ನು ಹೊಂದಿರುವುದಲ್ಲದೆ 'ಮುದ್ದು ಸಂಗಮೇಶ' ಅಂಕಿತದ ಕೆಲವು ಹಾಡುಗಳನ್ನು ಒಳಗೊಂಡಿದೆ. 'ಬಸವಾದಿ ಪ್ರಮಥರ ಪದಗಳು ಭಾಗ 1, 2, ಮತ್ತು 3'–ಈ ಸಂಕಲನಗಳನ್ನು ಯಲಬುರ್ಗಿಯ ಸಂಸ್ಥಾನ ಮಠದ ಶ್ರೀ ಸಿದ್ಧರಾಮ ಶಿವಾಚಾರ್ಯರು ಹೊರತಂದಿದ್ದಾರೆ. ಇವುಗಳಲ್ಲಿ ಬಸವಾದಿ ಪ್ರಮಥರ, ಆ ನಂತರದ ಶರಣರು, ಶಿವಯೋಗಿಗಳು ರಾಗ ತಾಳ ಲಯಬದ್ಧವಾಗಿ ಹಾಡಿದ ಪದಗಳನ್ನು ಸಂಗ್ರಹಿಸಲಾಗಿದೆ. ಇವರಂತೆ 'ಕನ್ನಡ ನಾಡಿನ ಸತ್ಪುರುಷರ ಅನುಭವ ಪದಗಳು–ಭಾಗ 1 ರಿಂದ 8'. ಇವನ್ನು ಇಂಚಗೇರಿಯ ಶ್ರೀ ಗಣಪತಿರಾವ್ ಕನ್ನೂರ ಅವರು ಹೊರತಂದಿದ್ದಾರೆ.

5. ಏಕ ಕರ್ತೃತ್ವವುಳ್ಳ ಹಾಡುಗಳ ಸಂಗ್ರಹಗಳು

ಜಿಗುನಿ ಮರುಳದೇವನಿಂದ ಹಿಡಿದು ಇಪ್ಪತ್ತನೆಯ ಶತಮಾನದವರೆಗಿನ ವೀರಶೈವ ವಾಗ್ಗೇಯಕಾರರಲ್ಲಿ ಕೆಲವರನ್ನು ಇನ್ನು ಮುಂದೆ ಸಂಕ್ಷಿಪ್ತವಾಗಿ ಪರಿಚಯಿಸಲಾಗುವುದು. ಈ ಶೀರ್ಷಿಕೆಯಡಿ ಸುಮಾರು 40ಕ್ಕೂ ಹೆಚ್ಚು ಜನರನ್ನು ಗುರುತಿಸಲಾಗಿದೆ. ಕೊನೆಯಲ್ಲಿ ವೀರಶೈವವೇತರರು ವೀರಶೈವ ಧರ್ಮದ ತತ್ವಗಳನ್ನು ಕುರಿತು ಕಟ್ಟಿರುವ ಹಾಡುಗಳ ಬಗ್ಗೆ

ಪ್ರಸ್ತಾಪಿಸಲಾಗುವುದು.

1. ಜಿಗುನಿ ಮರುಳದೇವ (1580) : "ಜಿಗುನಿ ಮರುಳ ದೇವರ ಕೃತಿಗಳು"

ಜಿಗುನಿ ಮರುಳದೇವ ಖ್ಯಾತ ಶಿವತತ್ತ್ವವೇತ್ತ, ಶ್ರೇಷ್ಠಮಟ್ಟದ ಅನುಭಾವಿ. ಈತ ತೋಂಟದ ಸಿದ್ಧಲಿಂಗರ ಶಿಷ್ಯ. ಅವನ ಹಾಡುಗಳಲ್ಲಿ ಭಕ್ತಿಯ ಹೊನಲು ತುಂಬಿ ಹರಿದಿದೆ. ಅವು ಮುಮುಕ್ಷುಗಳಿಗೆ ದಾರಿದೀಪವಾಗಿವೆ. ಇವರ ಅಂಕಿತ 'ನಿಜಗುರು ಸಿದ್ಧಶಾಂತ'.

2. ನಿಜಗುಣ ಶಿವಯೋಗಿ (16ನೆಯ ಶತ) "ಕೈವಲ್ಯ ಪದ್ಧತಿ"

ಹನ್ನೆರಡನೆಯ ಶತಮಾನದ ಶಿವಶರಣರನ್ನು ಬಿಟ್ಟರೆ ವೀರಶೈವ ವಾಗ್ಗೇಯಕಾರರಲ್ಲಿ ನಿಜಗುಣರು ಅಗ್ರಗಣ್ಯರು. ಕೊಳ್ಳೇಗಾಲದ ಬಳಿಯ ಶಂಭುಲಿಂಗನ ಬೆಟ್ಟದ ಸುತ್ತಮುತ್ತಣ ಪ್ರದೇಶದಲ್ಲಿ ಅರಸರಾಗಿ ಆಳಿದ ಇವರು ನಂತರ ಭೋಗಜೀವನವನ್ನು ತೊರೆದು ಶಂಭುಲಿಂಗ ಶಿವಾಚಾರ್ಯರ ಮಾರ್ಗದರ್ಶನದಲ್ಲಿ 12 ವರ್ಷಕಾಲ ದೀರ್ಘ ತಪಸ್ಸು ಮಾಡಿದರು. ತಾವು ಸಾಕ್ಷಾತ್ಕರಿಸಿಕೊಂಡ ದಿವ್ಯಾನುಭವಗಳನ್ನು ತಮ್ಮ ಷಟ್‌ಶಾಸ್ತ್ರಗಳಲ್ಲಿ ನಿರೂಪಿಸಿದ್ದಾರೆ. ಕೈವಲ್ಯ ಪದ್ಧತಿ 'ಹಾಡುಗಳ ಸಂಕಲನ'. ಅಂಕಿತ 'ಶಂಭುಲಿಂಗ'. ಅವರು ಶ್ರೀ ಸಾಮಾನ್ಯನಿಗೆ ತಿಳಿಹೇಳಿದ ರೀತಿ ಅನನ್ಯವಾದುದು.

3. ಮುಪ್ಪಿನ ಷಡಕ್ಷರಿ (16ನೇ ಶತ) "ಸುಬೋಧ ಸಾರ"

ಇವರು ನಿಜುಗುಣರ ಸಮಕಾಲೀನರು. ಎರಗಂಬಳಿ ಮಠದ ಸಿದ್ಧಲಿಂಗ ಶಿವಯೋಗಿಯ ಶಿಷ್ಯರು. ಇವರು ಒಳ್ಳೆಯ ವಾಗ್ಗೇಯಕಾರರು. 'ಸುಬೋಧಸಾರ'ದಲ್ಲಿ 74 ಹಾಡುಗಳೂ ಶಿವಪೂಜಾಷ್ಟಕ ಶಿವಯೋಗಾಷ್ಟಕಗಳೂ ಇವೆ. ಅಂಕಿತ 'ಷಡಕ್ಷರಿ'. 'ಸಿರಿಯು ಕನಸಿನಂತೆ' ಎಂಬುದನ್ನು ತಿರುಕನ ಕಥೆಯ ಮೂಲಕ ಮನದಟ್ಟು ಮಾಡಿರುವ ರೀತಿ ಮನೋಜ್ಞ. 'ಧರೆಯ ಭೋಗವನ್ನು ಮೆಚ್ಚಿ ! ಹರನ ಮರೆದು ಕೆಡಲು ಬೇಡ, ಧರೆಯ ಭೋಗ ಕನಸಿನಂತೆ ಕೇಳು ಮಾನವಾ' (ಪು. 61). ಅವರ ಹೃದಯ ವೈಶಾಲ್ಯಕ್ಕೆ ಈ ಹಾಡು : ಅವರವರ ದರುಶನಕೆ । ಅವರವರ ವೇಷದಲಿ ಅವರವರಿಗೆಲ್ಲ ಗುರುವು ನೀನೊಬ್ಬನೆ."

4. ಶಂಕರದೇವ (1580) "ಶಂಕರದೇವರ ಸ್ವರವಚನಗಳು"

ತುಮಕೂರು ಜಿಲ್ಲೆಯ ದೇವರಾಯ ಪಟ್ಟಣದ ಶಂಕರದೇವನು ಹರಿಹರನ ಉದಿತಮಾರ್ಗದಲ್ಲಿ ಸಾಗಿದ ರಗಳೆ ಹಾಗೂ ಶತಕಗಳ ಕವಿ. ಅವನ 24, ರಗಳೆಗಳು ಕೆಲವು ಶತಕಗಳು ಸಿಕ್ಕಿವೆ ಜೊತೆಗೆ ಈತ ಹಾಡುಗಳನ್ನು ಬರೆದಿದ್ದಾನೆ. ಅಂಕಿತ 'ಶಂಕರಲಿಂಗ'. 124 ಹಾಡುಗಳಿವೆ. ಈತ ಸಂಗೀತಜ್ಞ. ಪ್ರತಿ ಹಾಡಿಗೆ ತಾಳ ಲಯದ ನಿರ್ದೇಶನವಿದೆ.

5. ಮರಿಶಾಂತ ಬಸವದೇವ (1608) "ಮರಿ ಶಾಂತ ಬಸವದೇವರ ಸ್ವರ ವಚನಗಳು"

ಈತನ 74 ಸ್ವರವಚನಗಳು ಸಿಕ್ಕಿವೆ. 'ಮಳೆಯ ಮಲ್ಲೇಶ' ಅಂಕಿತ. ಹಾಡುಗಳಲ್ಲಿ ಕಂಡುಬರುವ ಶೃಂಗಾರ ಶರಣಸತಿ ಲಿಂಗಪತಿ ಭಾವದವು :

"ಬಾರೆ ಬಾ ಮುದ್ದು ನೀರೆ ಬಿಟ್ಟಿರಲಾರೆ
ಬಾರೆ ಬಾ ಮುದ್ದು ನೀರೆ
ಬಾರೆ ಬಾರೆ ಸವಿತಾರೆ ಸುವಿಚಾರೆ
ಧೀರೆ ಹತ್ತಸಾರೆ ವೈಯಾರಿ ನೀ (ಪು. 55)

6. ಸೋದೆ ಸದಾಶಿವರಾಯ (1680)

ಸ್ವಾದಿ ಅರಸುಮನೆತನದ ರಾಜ. ಒಳ್ಳೆಯ ದಾರ್ಶನಿಕ, ಕವಿ, ಸಮರ್ಥ ವಾಗ್ಗೇಯಕಾರ. 17ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾನೆ. ಅವನ 160 ಸ್ವರವಚನಗಳು ಸಿಕ್ಕಿವೆ. ಅಂಕಿತ 'ಮಳೆಯ ಗುರು', 'ಗುರು ನಂದಯ್ಯ'. ಈತನು ವೃತ್ತ, ಕಂದ, ಷಟ್ಪದಿ, ತ್ರಿಪದಿ, ರಗಳೆ ಮೊದಲಾದ ಛಂದಸ್ಸಿನಲ್ಲಿ ಕೃತಿ ರಚನೆ ಮಾಡಿದ್ದಾನೆ.

7. ರಾಮಪುರ ಬೊಕ್ಕಪ್ಪ (17 ಶತದ ಉತ್ತರಾರ್ಧ)

ಸಗರನಾಡಿನ ಈ ಶರಣ ಕವಿಯು ಅನುಭಾವಿ, ಹಾಡುಗಬ್ಬಕಾರ. ಈತ ನೂರಾರು ಹಾಡುಗಳನ್ನು, ಹಲವಾರು ವಚನಗಳನ್ನೂ, 'ನಿಜಶರಣ ತ್ರಿವಿದಿ' (211 ಪದ್ಯಗಳು) ಎಂಬ ಕೃತಿಯನ್ನು ಬರೆದಿದ್ದಾನೆ. ಈತನ ಹಾಡುಗಳು ತುಂಬಾ ಜನಪ್ರಿಯವಾಗಿವೆ. ಜಾನಪದ ಸೊಗಡಿನ ಅವನ ಹಾಡಿನಲ್ಲಿ ಮೂಡಿರುವ ಶರಣಸತಿ ಲಿಂಗಪತಿ ಭಾವ ವಿಶಿಷ್ಟವಾಗಿದೆ.

8. ವೀಣೆ ಗುರು ಬಸವ (1700) "ವೀಣೆ ಗುರು ಬಸವನ ಪದಗಳು "

ಸಕಲೇಶ ಮಾದರಸರಂತೆ ಈತನೂ ವೀಣೆಯನ್ನು ನುಡಿಸುತ್ತಾ ಹಾಡುಗಳನ್ನು ಹಾಡುತ್ತಿರಬಹುದು. ವೇದಾಂತ ಮತ್ತು ಶಿವಯೋಗದಲ್ಲಿ ಬಲ್ಲಿದನಾದ ಈತ ಒಳ್ಳೆಯ ಸಂಗೀತಜ್ಞನೂ ಆಗಿದ್ದನು. ಜನರ ದೌರ್ಬಲ್ಯಗಳನ್ನು ಎತ್ತಿ ತೋರಿರುವ ಆತನ ಹಾಡುಗಳು, ಸಾಮಾಜಿಕ ಕಳಕಳಿಯ ಹಾಡುಗಳು ಪ್ರಸಿದ್ಧವಾಗಿವೆ.

9. ಹಾಗಲವಾಡಿ ಮುದ್ವೀರ ಸ್ವಾಮಿ (1700). "ಮುದ್ವೀರಸ್ವಾಮಿ ಸ್ವರವಚನಗಳು"

ಇವರು ಹಾಗಲವಾಡಿಯ ಪಾಳೆಯಗಾರ ಮುದಿಯಪ್ಪನಾಯಕನ ರಾಜಗುರುವಾಗಿದ್ದರು. ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದ ಉದ್ದಾಮ ವಿದ್ವಾಂಸರು. 'ಶಿವ ತತ್ತ್ವ ಸುಜ್ಞಾನ ಪ್ರದೀಪಿಕೆ' (ಷಟ್ಪದಿ) ರಚಿಸಿದ್ದಾರೆ. ಅಲ್ಲದೆ 108

ಸ್ವರ ವಚನಗಳನ್ನು ರಚಿಸಿದ್ದಾರೆ. ಅಂಕಿತ 'ಗುರು ಸಂಗ'. ಅನುಭಾವಿಯಾದ ಈ ಕವಿಯು ಸ್ತೋತ್ರ, ಜೋಗುಳ, ಸುವ್ವಿ, ಪರಾಕು, ಮಂಗಳ ಮೊದಲಾದವನ್ನು ರಚಿಸಿದ್ದಾರೆ. 'ಭಸಿತ ರುದ್ರಾಕ್ಷಿ ಧಾರಣ ಮಂತ್ರೋಚ್ಚಾರಣೆ ಮಿಸುಪ ಚರಣಾಂಬುಶೇಷವ ವರ್ಣಿಸುವೆನು' (ಪು. 24) ಎಂಬ ಹಾಡಿನಲ್ಲಿ ಅಷ್ಟಾವರಣಗಳ ವಿವರ ಹೃದ್ಯವಾಗಿ ಮೂಡಿದೆ.

10. ಕೆಸ್ತೂರ ದೇವ (1700) 'ಕೆಸ್ತೂರದೇವರ ಸ್ವರ ವಚನಗಳು'

ತೋಂಟದಾರ್ಯರ ಶಿಷ್ಯ ಪರಂಪರೆಗೆ ಸೇರಿದ ಕೆಸ್ತೂರ ದೇವ ಯಾವುದೋ ಮಠದ ಸ್ವಾಮಿಯಾಗಿರಬೇಕು. ಒಳ್ಳೆಯ ಸಂಗೀತಜ್ಞ. 'ಗುರು ಸಿದ್ಧಲಿಂಗ' ಅಂಕಿತದಲ್ಲಿ ನೂರಾರು ಹಾಡುಗಳನ್ನು ಬರೆದಿದ್ದಾನೆ. ಪ್ರತಿ ಹಾಡಿಗೂ ರಾಗ, ತಾಳ ನಿರ್ದೇಶನವಿದೆ.

11. ಇಮ್ಮಡಿಗುರುಸಿದ್ಧ (1720) "ಕೈವಲ್ಯ ಸೋಪಾನನಾಮೈಕೋತ್ತರಶತಸ್ಥಲ".

ಚಿತ್ರದುರ್ಗದ ಮುರುಘಾಮಠದ ಒಂಭತ್ತನೆಯ ಪಟ್ಟಾಧಿಕಾರಿ, ಘನವಿದ್ವಾಂಸ, ಷಟ್ಸ್ಥಲಜ್ಞಾನಿ. ಇವರ 23ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅನೇಕ ಹಾಡುಗಳನ್ನು ಕಟ್ಟಿದ್ದಾರೆ. 'ಶಿವಲಿಂಗ' ಇವರ ಅಂಕಿತ. ಏಕೋತ್ತರ ಶತಸ್ಥಲಗಳು ಕೈವಲ್ಯ ಸಂಪಾದನೆಗೆ ಸೋಪಾನಗಳು-ಈ ಸಿದ್ಧಾಂತವನ್ನು ಗುರುಸಿದ್ಧರು ತಮ್ಮದೇ ಆದ ರೀತಿಯಲ್ಲಿ ಹಾಡುಗಳ ಮೂಲಕ ಸಂಯೋಜಿಸಿದ್ದಾರೆ. "ತಿಳಿಯಲರಿಯದೆ ಮೋಕ್ಷಕೆಳಸಿ ಬಳಲುವರು ತಮ್ಮೊಳು ಹೊಳೆವ ಷಟ್ಸ್ಥಾರೆಗಳ ಬಗೆಯನು" (ಪು. 84) ಎನ್ನುವ ಅವರು ಆ ಬಗೆಯನ್ನು ಹೃದ್ಯವಾಗಿ ನಿರೂಪಿಸಿದ್ದಾರೆ.

12. ಗೂಗಲ್ಲು ಪರಪ್ಪಯ್ಯ (1780)

ಕಲ್ಬುರ್ಗಿ ಜಿಲ್ಲೆ, ಶಹಾಪುರ ತಾಲ್ಲೂಕು ಬೆಂಡಿಬೆಂಬಳಿ ಊರಿನ ಪರಪ್ಪಯ್ಯ ಗೂಗಲ್ಲಿನ ಪ್ರಭುದೇವರನ್ನು ತನ್ನ ಇಷ್ಟದೈವವಾಗಿ ಸ್ವೀಕರಿಸಿ ತನ್ನ ಅಂತರಂಗದ ತುಡಿತಗಳನ್ನು ಹಾಡಿನ ಮೂಲಕ ವ್ಯಕ್ತ ಪಡಿಸಿದ್ದಾನೆ ಪರ್ವ, ನಗರ ಪರ್ವ, ಪ್ರಭು, ಆನೆಗೊಂದಿ ವೀರಭದ್ರ"- ಎಂಬ ನಾಲ್ಕು ಅಂಕಿತದಲ್ಲಿ ಅವನು ಹಾಡುಗಳನ್ನು ಬರೆದಿದ್ದಾನೆ.

14. ಸರ್ಪ ಭೂಷಣ ಶಿವಯೋಗಿ (1830) "ಕೈವಲ್ಯ ಕಲ್ಪವಲ್ಲರಿ"

ಬೆಂಗಳೂರಿನ ತಿಪ್ಪಶೆಟ್ಟಿ ಮಠದ ಗುರುಸಿದ್ಧ ಸ್ವಾಮಿಗಳ ಕರಕಮಲಸಂಜಾತರಾದ ಸಪ್ಪಣ್ಣಪ್ಪನವರು ನಮ್ಮ ನಾಡು ಕಂಡ ಶ್ರೇಷ್ಠಶಿವಯೋಗಿಗಳು ಹಾಗೂ ಉನ್ನತ ಮಟ್ಟದ ವಾಗ್ಗೇಯಕಾರರು. ನಿಜಗುಣರ 'ಕೈವಲ್ಯ ಪದ್ಧತಿ ' ಎಂಬ ಕಲ್ಪವೃಕ್ಷಕ್ಕೆ ಹಬ್ಬಿಸಿದ ಕಲ್ಪವಲ್ಲರಿ ಅವರ ಹಾಡುಗಳ ಸಂಕಲನ. ತಾತ್ವಿಕವಿಚಾರಗಳನ್ನು ವ್ಯವಹಾರಿಕ ದೃಷ್ಟಾಂತ ನೀಡಿ ಸಾಮಾನ್ಯರಿಗೆ ತಿಳಿಸುವ ಪರಿ ಅನನ್ಯವಾದದು. ಅವರು ಹಾಡು, ತತ್ವಪದಗಳು ಜನರ ನಾಲಗೆಯ ಮೇಲೆ ನಲಿಯುತ್ತಿವೆ. 'ಶರೀರವೆಂದೆಂಬುವ ಹೊಲನ ಹಸನ ಮಾಡಿ ಪರತತ್ವ

ಬೆಳೆಯನೆ ಬೆಳೆದುಣ್ಣಿರೋ' (ಪು. 77) ಎಂಬ ಹಾಡನ್ನಾಗಲೀ 'ಕಾಯಕಾಂತಾರವ ಹೊಕ್ಕು ಬೇಂಟೆಯನಾಡಿ ಮಾಯಾಮೋಹದ ಮೃಗಗಳ ಕೊಲ್ಲಿರೋ' (ಪು. 73) ಎಂಬ ಹಾಡನ್ನಾಗಲಿ ಯಾರು ಮರೆಯಲು ಸಾಧ್ಯ ? ಅತ್ಯುನ್ನತ ಆದರ್ಶಗಳನ್ನು ಸಾಮಾನ್ಯರ ಮಟ್ಟಕ್ಕೆ ತಂದು ತಿಳಿಯಾಗಿ ಮನಂಬುಗಿಸಿದ ಕೀರ್ತಿ ಅವರದು.

15. ಕೂಡಲೂರು ಬಸವಲಿಂಗ (1770) "ಬ್ರಹ್ಮತತ್ವರತ್ನಾಕರ"

ಕಲ್ಬುರ್ಗಿಜಿಲ್ಲೆ, ಯಾದಗಿರಿ ತಾಲ್ಲೂಕು ಬಳಿಚಕ್ರದಲ್ಲಿ ಹುಟ್ಟಿದ ಬಸವಲಿಂಗರು ಅಂತರಂಗದ ಹಸಿವೆ ಹೆಚ್ಚಿಸಿಕೊಂಡು ಮನೆಮಾರು ತೊರೆದು ನಿರಂತರ ಧ್ಯಾನ್ಯತಪಗಳಿಂದ ಬ್ರಹ್ಮಜ್ಞಾನವನ್ನು ಪಡೆದರು. ಅವರ ಜಾಯಮಾನ ಜಾನಪದ. ಅವರು ಸಮಯಸ್ಫೂರ್ತಿಯಿಂದ ಅನುಭಾವ ಗೀತೆಗಳನ್ನು ಹಾಡಿದರು. ವ್ಯಾವಹಾರಿಕ ಭಾಷೆಗೆ ಆಧ್ಯಾತ್ಮವನ್ನು ಬಿಂಬಿಸುವ ಶಕ್ತಿಯಿದೆ ಎಂಬುದನ್ನು ಅವರು ಮತ್ತೊಮ್ಮೆ ತೋರಿಸಿದರು. ಅವರ ಹಾಡುಗಳು 'ಬ್ರಹ್ಮತತ್ವರತ್ನಾಕರ' ವೆಂಬ ಹೆಸರಿನಲ್ಲಿ ಹೊರಬಂದಿವೆ ಲಿಂಗಪತಿ ಶರಣಸತಿ ಭಾವವನ್ನು 'ನೀರಿಗೆ ಬಾ' ಎಂದು ಕರೆವ ಹಾಡಿನಲ್ಲಿ ಮನೋಜ್ಞನವಾಗಿ ಹಾಡಿದ್ದಾರೆ. "ನೀರಿಗಂತಲೆ ಬಾರೆ ನಾರಿ", ನೀ ಬರುವ ದಾರಿಲಾನು ಇರತೀನಿ ಪೋರಿ".

16. ಮೈಲಾರ ಬಸವಲಿಂಗ ಶರಣ (1790) "ಶಿವಾನುಭವದರ್ಪಣ"

ಬಳ್ಳಾರಿ ಜಿಲ್ಲೆ, ಹೂವಿನ ಹಡಗಲಿ ತಾಲ್ಲೋಕು ಮೈಲಾರದ ಒಬ್ಬ ವ್ಯಾಪಾರಿ ಬಸವಲಿಂಗ. ಉದ್ದಾಮ ಪಂಡಿತ, ಗೃಹಸ್ಥನಾದರೂ ವೈರಾಗ್ಯ ಶೀಲ; ಅನುಪಮ ಶಿವಾನುಭವಿ. ಲಿಂಗನಾಯಕನಹಳ್ಳಿಗೆ ಬಂದು ಹಾಲವರ್ತಿ ಚೆನ್ನವೀರಸ್ವಾಮಿಗಳ ಬಳಿ ಆಧ್ಯಾತ್ಮ ಶಿಕ್ಷಣ ಪಡೆದರು. ವೀರಶೈವ ಸಿದ್ಧಾಂತವನ್ನು ಅರಿತು, ಆಚರಿಸುತ್ತಲೇ ಅದನ್ನು ಕಾವ್ಯ ಕಟ್ಟಿ ಹಾಡಿದರು. 'ಗುರು ಕರುಣ ತ್ರಿವಿಧಿ', 'ಶಿವಾನುಭವ ದರ್ಪಣ' ಹಾಗೂ 'ಲಿಂಗಪೂಜಾವಿಧಾನ' ಇವು ಅವರ ಕೃತಿಗಳು. ಅವರು ಹೇಳಿದ್ದು ವೀರಶೈವಾಚಾರವಾದರೂ ಅದರಲ್ಲಿ ಮಾನವಕುಲದ ಮಹೋನ್ನತ ದರ್ಶನ ಅಡಗಿದೆ.

"ಗುರುವೆ ಭಕ್ತರ ಕಲ್ಪತರುವೆ ಸಜ್ಜನ ಮನೋ
ಹರವೆ ನಿಜಭಕ್ತಿಜ್ಞಾನ ವೈರಾಗ್ಯ ಮಂ
ದಿರವೆ ಮದ್ಗುರುವೆ ಕೃಪೆಯಾಗು (ಗುರುಕರುಣ ತ್ರಿವಿಧಿ 37).

17. ಗುರುಲಿಂಗ ಜಂಗಮ ಮಹಾರಾಜ (1850) "ಶ್ರೀ ಸದ್ಗುರು ಗುರುಲಿಂಗ ಜಂಗಮ ಮಹಾರಾಜರ ವಚನಗಳು"

ವಿಜಾಪುರ ಜಿಲ್ಲೆ ನಿಂಬರಗಿಯಲ್ಲಿ ಹುಟ್ಟಿದ ನಾರಾಯಣನು ಗುರುಲಿಂಗಜಂಗಮರಾದುದು ಒಂದು ಪವಾಡ ಸದೃಶ ಕಥೆ. ಊರೂರು ಸುತ್ತಿ, ಗವಿಯ ಏಕಾಂತದಲ್ಲಿ ತಪಗೈದು ಊರಿಗೆ ಹಿಂತಿರುಗಿ ಹೊರಗೆ ಪ್ರಾಪಂಚಿಕ ವ್ಯವಹಾರ, ಒಳಗೆ ಆಧ್ಯಾತ್ಮ ಸಾಧನೆಗಳನ್ನು

ನಡೆಸಿದರು. ತಮ್ಮ ದಿವ್ಯಾನುಭವಗಳನ್ನು ಹಾಡುಕಟ್ಟಿ ವ್ಯಕ್ತಪಡಿಸಿದರು. ನಿಂಬರಗಿ ಮಹಾರಾಜರೆನಿಸಿದ ಅವರ ಹಾಡುಗಳಲ್ಲಿ ಪ್ರಾದೇಶಿಕ ಸೊಗಡು ಹಾಗೂ ಜಾನಪದ ಗೇಯತೆಗಳು ಮನೆ ಮಾಡಿದ್ದವು. 'ಕಳಕೊ ಮಲಿನ ನೀನೆಲೋ । ತಿಳಕೋ ಶ್ರೀ ಗುರುಮುಖದಿ ॥ಪ॥ ಸರ್ವ ಜೀವವು ಬ್ಯಾರೆಯಲ್ಲ। ತಿಳಿದು ನೋಡೋ ಪರಮಾರ್ಥವು'.

18. ಗೊಬ್ಬೂರು ಹಂಪಣ್ಣ (1795) ''ಕೈವಲ್ಯ ದೀವಿಗೆ''

ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಅರಕೇರಿಯ ಹಂಪಣ್ಣ ಜ್ಞಾನದಾಹದಿಂದ ಮನೆ ತೊರೆದು ಹೊರಟು ಗೊಬ್ಬೂರಿಗೆ ಬಂದು ದೊಡ್ಡ ಗುರುಬಸವಪ್ಪನವರ ಅನುಗ್ರಹಕ್ಕೆ ಪಾತ್ರವಾಗಿ ಅಜ್ಞಾನದ ಕಾವಳ ಕಳೆದುಕೊಂಡು ಜ್ಞಾನಾನುಭವಗಳ ಗಣಿಯಾದ. ಹಗಲೆಲ್ಲಾ ವ್ಯಾಪಾರ -ವ್ಯವಹಾರ; ರಾತ್ರಿ ಹಾಡು ಮತ್ತು ಗ್ರಂಥರಚನೆ. 'ಕೈವಲ್ಯ ದೀವಿಗೆ', 'ಮೋಹ ವಿವೇಕ'-ಇವರ ಕೃತಿಗಳು. 76ಕ್ಕೂ ಹೆಚ್ಚಿನ ಹಾಡುಗಳಿಗೆ ರಾಗ ಮತ್ತು ತಾಳ ನಿರ್ದೇಶನವಿದೆ. ಅಂಕಿತ: 'ಮಣಿಪುರದೊಡೆಯ', 'ಘನ ವೃಷಭ'. ಅನುಭಾವಕ್ಕೆ ಜಾತಿ ಮತ, ವರ್ಣ ವರ್ಗಗಳ ಎಲ್ಲೆ ಇಲ್ಲವೆಂಬುದಕ್ಕೆ ಹಂಪಣ್ಣನ ಬದುಕು ನಿದರ್ಶನ.

19. ನವಿಲುಗುಂದದ ನಾಗಲಿಂಗಪ್ಪ (1800)

ಬಿಜಾಪುರ ಜಿಲ್ಲೆ, ಬಾದಾಮಿ ತಾಲ್ಲೂಕು, ಜವಳಗೇರಿಯಲ್ಲಿ ಹುಟ್ಟಿದ ನಾಗಲಿಂಗಪ್ಪ ಹುಟ್ಟುವಿರಾಗಿ. ನವಿಲಗುಂದಕ್ಕೆ ಬಂದು ಗವಿಯಲ್ಲಿ ವಾಸಿಸತೊಡಗಿದರು. ಲೋಕದ ಕಣ್ಣಿಗೆ ಮರುಳರಂತೆ ಇದ್ದರು. ಅವರೊಡನೆ ಯಾವಾಗಲೂ ನಾಯಿಗಳು ಇರುತ್ತಿದ್ದುದರಿಂದ ಅವರನ್ನು 'ನಾಯಿ ನಿಂಗ' ಎಂದು ಚೇಡಿಸುತ್ತಿದ್ದರು. ತಮ್ಮ ವಿಶಿಷ್ಟ ಸ್ವಭಾವದಿಂದ ಮಹಂತ ಶಿವಯೋಗಿ ಬಾಲವತ್, ಶರೀಫರು ಉನ್ಮಾದವತ್, ನಾಗಲಿಂಗರು ಪಿಶಾಚವತ್ ಎನಿಸಿಕೊಂಡಿದ್ದಾರೆ. ಅವರು ಕಂಡು ಬಣ್ಣಿಸಿದ ಘನವಸ್ತು ಇದು : 'ಆನಂದವಾದ ಚಿದ್ಘನ ವಸ್ತು ನಾಕಂಡೆ ಭಾನುವಿಲ್ಲದ ಬಿಸಲೇನಮ್ಮ ॥ಪ॥

20. ನೀರಲಕೇರಿ ಬಸವಲಿಂಗ (1850) ''ಜ್ಞಾನಗೀತೆ''

ವಿಜಾಪುರ ಜಿಲ್ಲೆ, ಹುನುಗುಂದ ತಾಲ್ಲೂಕು, ಗೂಡೂರಲ್ಲಿ ಹುಟ್ಟಿದ ಬಸವಲಿಂಗ ಚಿತ್ತರಿಗೆಯ ಮಹಾಂತ ಸ್ವಾಮಿಗಳ ಬಳಿ ಕಲಿತರು. ಆಳವಾದ ಅಧ್ಯಯನ, ತರ್ಕಬುದ್ಧಿಗಳಿಂದ ಖ್ಯಾತರಾದರು. ನೀರಲಕೇರಿ ಮಠಕ್ಕೆ ಅಧಿಪತಿಗಳಾದರು ಅವರು ತಮ್ಮ ಹಾಡುಗಳ ಮೂಲಕ ಜನರ ಅಜ್ಞಾನ ನೀಗಿ ಸುಜ್ಞಾನ ಬೆಳೆಸಿದರು. ಅವರ 'ಜ್ಞಾನ ಗೀತೆ'ಯು 182 ಹಾಡುಗಳ ಸಂಕಲನ. ಅಂಕಿತ 'ನೀರಲ್ಕೇರಿ'.

21. ಘನಮಠ ಶಿವಯೋಗಿ (1884) "ಭಕ್ತಿಸುಧಾಸಾರ".

ನಾಗಭೂಷಣ ಘನಮಠಾರ್ಯರು ಹುಟ್ಟಿದ್ದು ಆಂಧ್ರ, ಬೆಳೆದದ್ದು ಕರ್ನಾಟಕ, ತುಳಿದದ್ದು ಬಸವಾದಿ ಶರಣರ ಪಥ. ತಮ್ಮ 21ನೇ ವಯಸ್ಸಿಗೇ ವೈರಾಗ್ಯದಿಂದ ಮನೆ ತೊರೆದು ಬಂದರು. ಯರಗೋಳ ಮಠದ ರೇವಣಸಿದ್ಧಯ್ಯನವರಿಂದ ಕನ್ನಡ ಭಾಷೆ ಕಲಿತರು. ವಚನಗಳನ್ನು ಅಧ್ಯಯನ ಮಾಡಿದರು. ಶರಣ ತತ್ತ್ವಪ್ರಚಾರಕ್ಕೆ ತಮ್ಮ ಬದುಕನ್ನು ಮೀಸಲಿಟ್ಟರು. ಅವರು ನೂರಾರು ಹಾಡುಗಳನ್ನು ಬರೆದಿದ್ದಾರೆ. ಅಂಕಿತ 'ಘನಮಠೇಶ'. ಹುಟ್ಟುಕವಿಯಾದ ಘನಮಠಾರ್ಯರು ಉನ್ನತ ಮಟ್ಟದ ವಾಗ್ಗೇಯ ಕಾರರಾಗಿದ್ದರು. ಅವರ 'ಭಕ್ತಿ ಸುಧಾಸಾರ', 'ಬಸವ ತ್ರಿವಿಧಿ'ಗಳಲ್ಲಿ ಅವರ ದಿವ್ಯಾನುಭವಗಳು ಮೂಡಿವೆ. ಅವರು ಸಮಾಜದ ಕೊರತೆಯನ್ನು ನೀಗಲು ಅವನ್ನು ಎತ್ತಿ ತೋರಿ ವಿಡಂಬಿಸಿರುವುದೂ ಉಂಟು. ಅವು ಅವರು ಜೀವಿಗೆ ನೀಡಿದ ಸಂದೇಶವೆಂಬಂತಿವೆ.

22. ಬಾಲಲೀಲಾ ಮಹಂತ ಶಿವಯೋಗಿ (1850) "ಕೈವಲ್ಯ ದರ್ಪಣ"

ವಿಜಾಪುರ ಜಿಲ್ಲೆ, ಮನಗೋಳಿಯ ಬಳಿಯ ಯರನಾಳದಲ್ಲಿ ಹುಟ್ಟಿದ ಇವರು ಮುಳುಗುಂದದ ಕಲ್ಮಠದ ಮಹಂತದೇಶಿಕರ ಅನುಗ್ರಹಕ್ಕೆ ಪಾತ್ರರಾದರು. ಮುಂದೆ ಆ ಮಠದ ಅಧಿಪತಿಗಳಾದರು. ಮೈಸೂರರಸ ಮುಮ್ಮಡಿ ಕೃಷ್ಣರಾಜರ ಆಹ್ವಾನದ ಮೇಲೆ ಹೋಗಿ ಅವರಿಗೆ ಅನುಗ್ರಹಿಸದಂತೆಯೂ, ಪರಮವಿರಾಗಿಗಳಾದ ಅವರು ರಾಜೋಚಿತ ಕಾಣಿಕೆಗಳೇನನ್ನೂ ಸ್ವೀಕರಿಸದೆ ಒಂದು ಕುಂಬಳ ಬುರುಡೆಯನ್ನು ತಂದರೆನ್ನುತ್ತಾರೆ. ಮಹಂತರು ಪರಮತತ್ತ್ವಜ್ಞಾನಿ, ಆಶುಕವಿ. ಕುಂತಲ್ಲಿ ನಿಂತಲ್ಲಿ ಹಾಡುತ್ತಿದ್ದ ಅವರು ಒಮ್ಮೊಮ್ಮೆ ಮಠದ ತೊಲೆ ಕಂಬಗಳ ಮೇಲೆ ಪದಗಳನ್ನು ಬರೆಯುತ್ತಿದ್ದರು. ಅವರ 142 ಹಾಡುಗಳು 'ಕೈವಲ್ಯದರ್ಪಣ'ದಲ್ಲಿ ಸೇರಿವೆ. ಅವರು ಬಾಲಕನಂತೆ ವರ್ತಿಸುತ್ತಿದ್ದುದರಿಂದ 'ಬಾಲಲೀಲಾ' ಎಂಬುದು ಅವರ ಹೆಸರಿನೊಡನೆ ಸೇರಿತು.

23. ಸೋಮೇಕಟ್ಟೆ ಕರಿವೃಷಭಸ್ವಾಮಿ (1850)

ಇವರು ಶಿವಗಂಗೆಯ ಬಳಿಯ ಅದರಂಗಿಯಲ್ಲಿ ಜನಿಸಿ ಬಾಲ್ಯದಿಂದಲೇ ವಿರಕ್ತಭಾವದಿಂದ ಶಿವಾನುಭವ ಶಾಸ್ತ್ರವನ್ನು ಅಭ್ಯಾಸಮಾಡಿದರು. ಅನಂತರ ನೊಣವಿನಕೆರೆಯ ಕಾಡಸಿದ್ಧೇಶ್ವರ ಮಠದ ರುದ್ರಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದರು. ಸುದೀರ್ಘಕಾಲ ಅಧ್ಯಯನ, ಅನುಷ್ಠಾನದಲ್ಲಿ ತೊಡಗಿ ಸಿದ್ಧಿಯನ್ನು ಪಡೆದರು. ನಂತರ ನಿರಂತರ ಪ್ರವಚನಗಳನ್ನು ನಡೆಸಿದರು. ಅವರು ತತ್ತ್ವಪ್ರತಿಪಾದನೆಯ ಹಲವು ಹಾಡುಗಳನ್ನು ರಚಿಸಿದ್ದಾರೆ. ಅಂಕಿತ 'ಕರಿವೃಷಭೇಂದ್ರ' ಇವರ 50 ಹಾಡುಗಳು ದೊರಕಿವೆ. ಜೊತೆಗೆ 'ಅಷ್ಟಾವರಣ' ತ್ರಿವಿಧಿ', 'ಅಷ್ಟೋತ್ತರ ಶತ ತ್ರಿವಿಧಿಗಳನ್ನು' ಬರೆದಿದ್ದಾರೆ. ಇವರ

ಶಿಷ್ಯರಾದ ಮಲ್ಲೇನಹಳ್ಳಿ ಚೆನ್ನಬಸವಯ್ಯ, ಹೊನ್ನುಡಿಕೆ ಗಂಗಾಧರಸ್ವಾಮಿ, ಗುಬ್ಬಿ ಕಿಡಿಯಣ್ಣಪ್ಪನವರೂ ಹಾಡುಗಳನ್ನು ರಚಿಸಿದ್ದಾರೆ.

24. ಕಡಕೋಳ ಮಡಿವಾಳಪ್ಪ (1870) "ಕಡಕೋಳ ಮಡಿವಾಳೇಶ್ವರನ ವಚನಗಳು"

ಗುಲ್ಬರ್ಗ ಜಿಲ್ಲೆ, ಜೇವರ್ಗಿ ತಾಲ್ಲೋಕಿನ ಕಡಕೋಳದಲ್ಲಿ ಹುಟ್ಟಿದ ಮಡಿವಾಳಪ್ಪ ಚಿಕ್ಕಂದಿನಿಂದಲೇ ಜಪತಪಗಳಲ್ಲಿ ನಿಷ್ಠೆಯುಳ್ಳವರಾಗಿ ಆಧ್ಯಾತ್ಮಿಕ ಒಲವನ್ನು ಬೆಳೆಸಿಕೊಂಡು ಕಲ್ಬುರ್ಗಿಯ ಶರಣ ಬಸವೇಶ್ವರರಿಂದ ದೀಕ್ಷೆ ಹೊಂದಿದರು. ಅನಂತರ ಚಿಮಣಗೇರಿಗುಡ್ಡ ಹಾಗೂ ಶ್ರೀ ಶೈಲದ ಕೊಳ್ಳದಲ್ಲಿ ದೀರ್ಘಕಾಲ ತಪಸ್ಸು ಮಾಡಿ ಸಿದ್ಧಿ ಗಳಿಸಿದರು. ಆಮೇಲೆ ತನ್ನ ಅನುಭವಗಳನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಹಳ್ಳಿಗರ ಮಾತಿನಲ್ಲಿ ಪದಗಳನ್ನು ಮತ್ತು ವಚನಗಳನ್ನು ರಚಿಸಿದರು. ಹಾಡುಗಳ ಅಂಕಿತ 'ಕಡಕೋಳ ಮಡಿವಾಳೇಶ'. ಇವರ ಸ್ವರವಚಗಳು 'ಕೈವಲ್ಯ ವಾಕ್ಯಾಮೃತ'ದಲ್ಲಿ ಸೇರಿವೆ. ಅವರು ಎಷ್ಟು ಜನಪ್ರಿಯರಾಗಿದ್ದರೆಂದರೆ 'ಅವರು ನೆಲೆ ನಿಂತಲ್ಲೇ ಶಿಷ್ಯರ ಬಳಗ, ಅಲ್ಲೇ ಅನುಭವಮಂಟಪ.' 'ತನ್ನ ತಾ ತಿಳಿದ ಮೇಲೆ ಇನ್ನೇನಿನ್ನೇನೋ ತನ್ನಂತೆ ಸರ್ವಜೀವರ ಮನ್ನಿಸಿ ಮೂಕಾದ ಮೇಲೆ ಇನ್ನೇನಿನ್ನೇನೋ' ಎಂಬ ಹಾಡು ಅವರ ಜೀವನ ಸಂದೇಶದಂತಿದೆ.

25. ದೇವದುರ್ಗದ ಚೆನ್ನಮಲ್ಲ (1850)

ಸುರಪುರ ತಾಲ್ಲೋಕು ಲಿಂಗಂಪೇಟೆಯಲ್ಲಿ ಶಿಕ್ಷಕರಾಗಿದ್ದ ಚೆನ್ನಮಲ್ಲರು ಅನಿರೀಕ್ಷಿತ ರೀತಿಯಲ್ಲಿ ತಮ್ಮ ಹೆಂಡತಿ ಮತ್ತು ಮಗುವನ್ನು ಕಳೆದುಕೊಂಡಾಗ ವಿರಾಗಿಯಾದರು; ಆಧ್ಯಾತ್ಮದ ಕಡೆ ಒಲಿದರು. ಹಗಲು ಮಕ್ಕಳಿಗೆ ಪಾಠ, ರಾತ್ರಿ ವೇದಾಂತ, ನಿಜಗುಣರ ಷಟ್‌ಶಾಸ್ತ್ರ, ವಚನ ಶಾಸ್ತ್ರ ಅಧ್ಯಯನ, 'ಅಧ್ಯಾಪನ'. ಅವರೊಬ್ಬ ಅದ್ಭುತ ಪ್ರವಚನಕಾರರು. ಅವರು ಅನೇಕ ಅನುಭಾವದ ಹಾಡುಗಳನ್ನು ಬರೆದಿದ್ದಾರೆ. ಅಂಕಿತ 'ಸುರದುರ್ಗನಾಥ'.

26. ಹೇರೂರ ವಿರುಪಣ್ಣ (1850) "ಕೈವಲ್ಯ ಪದಗಳು".

ರಾಯಚೂರು ಜಿಲ್ಲೆ, ಗಂಗಾವತಿ ತಾಲ್ಲೋಕು ಹೇರೂರಿನ ವಿರುಪನಗೌಡರು ಹುಟ್ಟು ಆಧ್ಯಾತ್ಮಜೀವಿ. ಆತ್ಮದ ಹಸಿವಿನಿಂದ ಮನೆ ಬಿಟ್ಟು ಅಲೆದು ಕೊನೆಗೆ ರುದ್ರಸ್ವಾಮಿಗಳಿಂದ ಅನುಗ್ರಹೀತನಾದರು. ಲೋಕದ ಕಣ್ಣಿಗೆ ಹುಚ್ಚನಂತಿದ್ದು ಜನರ ಪೀಡನೆಗೆ ಒಳಗಾದದ್ದು ಉಂಟು. ಕೈವಲ್ಯಪದಗಳನ್ನು ಕಂಚಿನಕಂಠದಿಂದ ಹಾಡುತ್ತಾ ಊರೂರು ಸುತ್ತಿದರು. ಅವರ 49 ಹಾಡುಗಳ ಸಿಕ್ಕಿವೆ. ಅವರು 'ರುದ್ರೇಶ ಶತಕ'ದ 104 ಭಾಮಿನಿಷಟ್ಪದಿಗಳಲ್ಲಿ ಅನುಭಾವದ ಉಸಿರಾಟವಾಡುತ್ತಿದೆ.

27. ಬಳಗಾನೂರು ಮರಿಸ್ವಾಮಿ (1860) "ಮರಿದೇವರ ಜೀವನಜ್ಯೋತಿ"

ಮರಿಸ್ವಾಮಿಗಳು ರಾಯಚೂರು ಜಿಲ್ಲೆ, ಮಸ್ಕಿಯ ಬಳಿಯ ಬಳಗಾನೂರಿನಲ್ಲಿದ್ದ

ಉರುವಕೊಂಡ ಮಠದ ಶಾಖಾಮಠದ ವಿರಕ್ತಸ್ವಾಮಿ. ಒಳ್ಳೆಯ ವಿದ್ವಾಂಸರು. 'ಜನ ನೀತಿವಂತರಾಗಿ, ಒಳ್ಳೆಯ ಜೀವನ ನಡೆಸಲಿ, ಈ ನೆಲ ಕೈಲಾಸವಾಗಲಿ' ಎಂದು ಹಾರೈಸಿ ಅವರು ಹಾಡುಕಟ್ಟಿ ಹಾಡಿದರು. ಮರಿಸ್ವಾಮಿಯವರು ಸರ್ವ ಧರ್ಮ ಸಮನ್ವಯವನ್ನು ಸಾಧಿಸಿದ ಮಹಾನುಭಾವಿ. ಕೆಲವು ನಾಟಕಗಳನ್ನು ಬರೆದಿರುವ ಅವರು ಅನೇಕ ಹಾಡುಗಳನ್ನು ರಚಿಸಿದ್ದಾರೆ.

28. ಮಠಕೂರು ನಂಜುಂಡಶಿವಯೋಗಿ (1860) 'ಅಟವೀಶ್ವರ ಗೀತಾಮಂಜರಿ''

ತುಮಕೂರು ಬಳಿಯ ಮೈದಾಳದವರಾದ ನಂಜುಂಡರು ಸಿದ್ಧಗಂಗೆಯ ಯೋಗಿ ಅಟವೀಸ್ವಾಮಿಗಳ ಪ್ರಭಾವಕ್ಕೆ ಒಳಗಾದರು; ಆಧ್ಯಾತ್ಮ ಸಾಧನೆಗೆ ತೊಡಗಿದರು. ಒಳ್ಳೆಯ ವಿದ್ವಾಂಸರಾಗಿದ್ದ ಅವರು ಸಂಗೀತಜ್ಞರೂ ಆಗಿದ್ದರು. ವಿವಿಧ ಮಟ್ಟುಗಳಲ್ಲಿ, ವಿವಿಧ ಛಂದಸ್ಸಿನಲ್ಲಿ ಹಾಡುಗಳನ್ನು ಕಟ್ಟಿದ್ದಾರೆ. 'ಅಟವೀಶ್ವರ ಗೀತಾಮಂಜರಿ'ಯಲ್ಲಿ 99 ಹಾಡುಗಳಿವೆ.

29. ಕಂಬಿ ಬಸವಾರ್ಯ (1900)

ಶಿಕ್ಷಕರಾಗಿದ್ದ ಬಸವಾರ್ಯರು ವಿಚಾರವಂತ ವಿದ್ವಾಂಸರು. ಸಮಾಜದಲ್ಲಿ ಕಾಣುವ ವಂಚನೆ, ಆಡಂಬರ, ಅರ್ಥಹೀನ ನಡವಳಿಕೆಗಳನ್ನು ಖಂಡಿಸುವ ಇವರು ಕೃತಿ ರಚಿಸಿದ್ದಾರೆ. ಅಲ್ಲದೆ ಅನೇಕ ಹಾಡುಗಳನ್ನು ರಚಿಸಿದ್ದಾರೆ. ಇವರ ಶಿಷ್ಯ ವೀರಪ್ಪ ನಾಗಶೆಟ್ಟಿಯೂ ಹಾಡುಗಳನ್ನು ರಚಿಸಿದ್ದಾರೆ. ಅವರ ವಿನೋದ ದೃಷ್ಟಿಗೆ ಉದಾಹರಣೆಯಾಗಿವೆ ಕೆಲವು ಹಾಡುಗಳು.

30. ದೊಡ್ಡಪೇಟೆ ಬಸವ (೧9 ಶತ.)

ಬಸವ ಒಳ್ಳೆಯ ಹಾಡುಗಬ್ಬಕಾರ. ಸರ್ವಸಮತಾಭಾವ ಇವರ ಹಾಡಿನ ಸ್ಥಾಯಿಭಾವ. ಹಿಂದೂ-ಮುಸ್ಲಿಂ ಮೈತ್ರಿಯನ್ನು ಸಾರುವ ಹಾಡುಗಳಿವೆ. 'ಹುಸೇನಿ ಸಾಹೇಬರ ಬದಿಯಲ್ಲಿ ಹೋಗಿ ಹಸನಾಗಿ ನಾವು ಬಂದೇವು' ಎಂಬ ಹಾಡು ಅನುಭಾವಿಗಳು ಜಾತಿ ಮತ ಪಂಥಗಳ ಸಂಕುಚಿತ ಎಲ್ಲೆಯನ್ನು ದಾಟಿ ನಿಂತವರು ಎಂಬುದನ್ನು ಸಾರುತ್ತದೆ.

31. ಮಹಾಂತ ದೇಶಿಕ (19 ಶತ.)

ಬೆಂಗಳೂರಿನ ತಿಪ್ಪಶೆಟ್ಟಿ ಮಠದ ಸ್ವಾಮಿಗಳಾದ ಮಹಾಂತರು ಉಭಯಭಾಷಾ ವಿದ್ವಾಂಸರು; ನುರಿತ ವಾಗ್ಗೇಯಕಾರರು. ವಿವಿಧ ಛಂದಸ್ಸಿನಲ್ಲಿ ಶತಕಗಳನ್ನು, ಸ್ತೋತ್ರಗಳನ್ನು ಬರೆದಿದ್ದಾರೆ. 27 ಸ್ವತಂತ್ರ ಕೃತಿಗಳನ್ನು ರಚಿಸಿರುವ ಅವರು ರಾಗ, ತಾಳಗಳನ್ನು ಅಳವಡಿಸಿ ಹಾಡುಗಬ್ಬಗಳನ್ನು ರಚಿಸಿದ್ದಾರೆ.

32. ನಂದ್ಯಾಳಸಂಗ (19ಶತ.)

ಬಿಜಾಪುರ ಜಿಲ್ಲೆ, ಬಾಗೇವಾಡಿ ತಾಲ್ಲೋಕು, ನಂದ್ಯಾಳದಲ್ಲಿ ಹುಟ್ಟಿದ ಸಂಗ ಕೈವಲ್ಯ ಸಾಹಿತ್ಯವನ್ನು, ಶರಣರ ಅನುಭಾವ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದರು; ಅನುಭವ ಗಳಿಸಿದರು. ಅನಂತರ ತಮ್ಮ ಜ್ಞಾನಾನುಭವಗಳನ್ನು ತತ್ತ್ವಪದಗಳ ಮೂಲಕ ನಾಡವರಿಗೆ ಹಂಚಿದರು. ಅಂಕಿತ 'ನಂದ್ಯಾಳಸಂಗ' .

33. ಬಂಡೇಶ (19 ಶತ.)

ಬಂಡೇಶ ಒಬ್ಬ ಒಳ್ಳೆಯ ಹಾಡುಗಬ್ಬಕಾರ. ತನ್ನ ಇನ್ನೂರಕ್ಕೂ ಹೆಚ್ಚಿನ ಹಾಡುಗಳಿಗೆ ಸ್ಪಷ್ಟ ರಾಗ ತಾಳ ನಿರ್ದೇಶನ ಮಾಡಿದ್ದಾರೆ. ಅಂಕಿತ 'ಬಂಡೆಗುರು'. ಹಾಡುಗಳನ್ನು ಸ್ಥಲವಾರು ವಿಂಗಡಿಸಿ 'ಕೈವಲ್ಯ ಕಲ್ಪವೃಕ್ಷ'ದಲ್ಲಿ ಸಂಕಲಿಸಲಾಗಿದೆ.

34. ವೀರನಗೆರೆ ಪುಟ್ಟಣ್ಣ (19 ಶತ.)

ಮೈಸೂರರಸರ ಆಶ್ರಯದಲ್ಲಿದ್ದ ಪುಟ್ಟಣ್ಣ, ಷಟ್ಪದಿ ಹಾಗೂ ವೃತ್ತಗಳಲ್ಲಿ ಕಾವ್ಯ ರಚನೆ ಮಾಡಿದ್ದಾರೆ. ಅನೇಕ ನಾಟಕಗಳನ್ನು ಬರೆದಿದ್ದಾರೆ. ಅವರು ಹಾಡುಗಳನ್ನೂ ಸಹ ರಚಿಸಿದ್ದಾರೆ. ಅರ್ಜುನ ಜೋಗಿ ಹಾಡು, ದೇವರ ಜಾತ್ರೆ ಪದಗಳು, ತುರಾಲಾವಣಿಗಳು ಅವರು ಜಾನಪದ ಸಾಹಿತ್ಯಶಕ್ತಿಗೆ ನಿದರ್ಶನಗಳಾಗಿವೆ.

35. ದೇವದುರ್ಗದ ಆದಿ ಅಮಾತೆಪ್ಪ (19 ಶತ.) "ಸದಾನಂದಪ್ಪನ ವಚನಗಳು"

ಆದಿ ಅಮಾತೆಪ್ಪ ಸಿರಿವಂತ. ವೃತ್ತಿಯಲ್ಲಿ ನೇಕಾರ. ಸದಾಚಾರ ಸಂಪನ್ನ, ಸಕಲಜೀವಾವಳಿಗೆ ಲೇಸ ಬಯಸಿದ ಶರಣ ಮಾರ್ಗಾನುಯಾಯಿ. ಆತ ಕವಿ ಹಾಗೂ ವಚನಕಾರ. ಅಂಕಿತ 'ಸದಾನಂದ' ಆತನ ಹಾಡುಗಳು ಜನರ ಅಜ್ಞಾನ, ಮೌಢ್ಯ ಆಚರಣೆಗಳನ್ನು ಖಂಡಿಸಿ ಸದಾಚಾರವನ್ನು ಎತ್ತಿ ಹಿಡಿದಿದೆ.

36. ಹೊ ಸಪೇಟೆಯ ಅಯ್ಯಪ್ಪ ಪಂಥೋಜಿ (20 ಶತ.)

ರಾಯಚೂರು ತಾಲ್ಲೋಕು, ಹೊಸಪೇಟೆಯಲ್ಲಿ ಶಿಕ್ಷಕನಾಗಿದ್ದ ಅಯ್ಯಪ್ಪ ವಿದ್ವಾಂಸ, ಸಂಗೀತಜ್ಞ. ಗುರು ಹಂಪಣ್ಣನ ಅನುಗ್ರಹಕ್ಕೆ ಪಾತ್ರನಾಗಿ ಲೌಕಿಕ-ಪಾರಮಾರ್ಥಿಕಗಳೆರಡನ್ನೂ ಸಾಧಿಸುವ ಸುಲಭಮಾರ್ಗವನ್ನು ಅನುಭಾವದ ಹಾಡುಗಳಲ್ಲಿ ನಿರೂಪಿಸಿದ್ದಾನೆ. ಅಂಕಿತ 'ಪಂಪಾಪತಿ'.

ಹೀಗೆ ವೀರಶೈವ ಹಾಡುಗಾರರ, ವಾಗ್ಗೇಯಕಾರರ ಸಂಖ್ಯೆ ವಿಪುಲ. ಈ ಶ್ರೇಣಿಯಲ್ಲಿ ಇನ್ನೂ ಮಾಗಡಿ ವೀರಪ್ಪ ಶಾಸ್ತ್ರೀ, ಆರಸಿನಕುಂಟೆ ವೀರಪ್ಪಾರಾಧ್ಯ, ನನ್ನಪ್ಪ ಶಾಸ್ತ್ರಿ, ಪಡಗದಿನ್ನೆಮಠ, ವಿ. ಪಾ. ಗುರುಪಾದಪ್ಪ, ಎಮ್ಮಿಗನೂರು ಪ್ರಭುದೇವ, ಮಧುರಚೆನ್ನ ಮೊದಲಾದವರು ಸೇರಬೇಕು. ಕರ್ತೃ ಗೊತ್ತಿಲ್ಲದ ಬರೀ ಅಂಕಿತದಿಂದ. ಗುರುತಿಸಿರುವ ಅನೇಕ ಹಾಡುಗಳೂ ಸಿಕ್ಕಿವೆ.

ವೀರಶೈವೇತರರು ಕೆಲವರು ವೀರಶೈವ ಧರ್ಮ, ಆಚಾರ ವಿಚಾರಗಳ ಬಗ್ಗೆ ಪದಗಳನ್ನು ಕಟ್ಟಿ ಹಾಡಿದ್ದಾರೆ. ಶ್ರೇಷ್ಠ ಜಾನಪದ ಕವಿ ಶಿಶುನಾಳ ಶರೀಫರ ಹೆಸರನ್ನು ಇಲ್ಲಿ ಸ್ಮರಿಸಬೇಕು. ಕರ್ನಾಟಕದ ಕಬೀರನೆನಿಸಿದ ಈ ಸಂತ ಹುಟ್ಟಿದ್ದು ಮುಸ್ಲಿಮನಾಗಿ, ದೀಕ್ಷೆ ಹೊಂದಿದ್ದು ಬ್ರಾಹ್ಮಣನಿಂದ, ಹಾಡು ಕಟ್ಟಿ ಹೇಳಿದ್ದು ವೀರಶೈವ ಧರ್ಮದ ತತ್ತ್ವಗಳನ್ನು ಅವರ ಅಂಕಿತ 'ಶಿಶುನಾಳಾಧೀಶ'. ಹಾಡಿನ ಸಂಕಲನ 'ಬರಕೋ ಪದ ಬರಕೋ'.

ಇಲ್ಲಿ ಉಲ್ಲೇಖಿಸಬೇಕಾದ ಇನ್ನೊಂದು ಹೆಸರು ಮಂಜರ್ಲಾದ ಖಾದರ್‌ಸಾಬ್ (1903). ರಾಯಚೂರು ಜಿಲ್ಲೆಯ ಈ ಮಹಾನುಭಾವಿ ಒಳ್ಳೆಯ ಹಾಡುಗಾರ. ಸಿದ್ಧರಾಮ ಸ್ವಾಮಿಗಳ ಪಟ್ಟ ಶಿಷ್ಯ. ಕುರಾನಿನಂತೆಯೇ ವೀರಶೈವ ತತ್ತ್ವಗಳನ್ನು ಅರಿತ ಈತ ಕನ್ನಡ, ತೆಲುಗು, ಉರ್ದು-ಈ ಮೂರೂ ಭಾಷೆಗಳಲ್ಲಿ ತತ್ವಪದಗಳನ್ನು ರಚಿಸಿದ್ದಾರೆ. ಅಂಕಿತ: 'ಶ್ರೀಗುರು, ಸಿದ್ಧರಾಮ, ಸಿದ್ಧರಾಮೇಶ್ವರ'.

ಚಿದಾನಂದಾವಧೂತರು ಅನೇಕ ಹಾಡುಗಳನ್ನು ರಚಿಸಿದ್ದಾರೆ. ಅವರ ತತ್ತ್ವಪದಗಳು ಪ್ರಾರ್ಥನೆಗಳಾಗಿ, ಭಜನೆ ಪದಗಳಾಗಿ ಬಳಕೆಯಾಗುತ್ತಿವೆ. ಶಾಲ್ಯದರಸರೆಂದು ಖ್ಯಾತರಾದ ಕೃಷ್ಣರಾಜರೂ ಸಹ ಅನೇಕ ಹಾಡುಗಳನ್ನು ರಚಿಸಿದ್ದಾರೆ. ಅವು 'ಭಕ್ತಿ ಮಾರ್ಗ ಸರೋವರ', 'ಜ್ಞಾನಮಾರ್ಗ ಸರೋವರ' ಎನ್ನುವ ಕೃತಿಗಳಲ್ಲಿ ಪ್ರಕಟವಾಗಿವೆ.

ಹೀಗೆ ವೀರಶೈವ ವಾಗ್ಗೇಯಕಾರರ ಪರಂಪರೆ ಹನ್ನೆರಡನೆಯ ಶತಮಾನದಿಂದ ಆರಂಭವಾಗಿ ಇಪ್ಪತ್ತನೆಯ ಶತಮಾನದವರೆಗೆ ಸಾಗಿಬಂದಿದೆ. ಸಂಗೀತ ಮತ್ತು ಸಾಹಿತ್ಯಗಳ ಮಧುರ ಸಾಮರಸ್ಯದಿಂದ ಮೂಡಿ ಬಂದ ಹಾಡುಗಳು ತಮ್ಮ ಅಂತಸ್ಸತ್ವದಿಂದ, ಗೇಯತೆಯಿಂದ ಹಾಗೂ ಜನಪರ ಕಾಳಜಿಯ ಆತ್ಮೀಯಭಾವದಿಂದ ಜನಾನುರಾಗವನ್ನು ಗಳಿಸಿಕೊಂಡಿವೆ. ಹಾಡುಗಬ್ಬಕಾರರು ಜಾನಪದ ಹಿನ್ನೆಲೆಯುಳ್ಳವರೂ, ಸಂಗೀತದಲ್ಲಿ ಪರಿಶ್ರಮವುಳ್ಳವರೂ ಆಗಿದ್ದುದರಿಂದ ಅವರ ಹಾಡುಗಳು ಪಂಡಿತ-ಪಾಮರರು ಇಬ್ಬರಿಗೂ ಹಿಡಿಸಿದವು. ಅವು ಹಾಡಲು ಅಣಿಗೊಳಿಸಿದವುಗಳಾದ್ದರಿಂದ ಜನ ಜ್ಞಾನಪಕದಲ್ಲಿಟ್ಟುಕೊಳ್ಳಲು ಅನುಕೂಲವಾಯಿತು. ಅವುಗಳ ಪ್ರಸಾರ ಹೆಚ್ಚಾದವು. ಅಂತೆಯೇ ಅವುಗಳ ಪ್ರಭಾವವೂ ಅಧಿಕವಾಯಿತು.

ಇಂಥ ಹಾಡುಗಳಿಂದ, ಸ್ವರವಚನಗಳಿಂದ, ತತ್ತ್ವಪದಗಳಿಂದ ಆದ ಉಪಕಾರವನ್ನು ಪಟ್ಟಿಮಾಡಿ ಹೇಳುವುದು ಸುಲಭವಲ್ಲ. ಅವಿದ್ಯಾವಂತರೇ ಹೆಚ್ಚಾಗಿರುವ ನಮ್ಮ ನಾಡಿನಲ್ಲಿ ಅವು ಶೈಕ್ಷಣಿಕ ಕಾರ್ಯವನ್ನು ನೆರವೇರಿಸಿದವು. ಕನ್ನಡ ಪದ, ಪದ್ಯಗಳನ್ನು ವಿವಿಧ ರಾಗ, ತಾಳಗಳಿಗೆ ಹೊಂದಿಸುವ ಪ್ರಯತ್ನ, ಪ್ರಯೋಗಶೀಲತೆ ಕಂಡುಬಂತು. ಪರಿಣಾಮವಾಗಿ ಸಾಹಿತ್ಯ-ಸಂಗೀತ ರಂಗಗಳಲ್ಲಿ ಜೀವಂತಿಕೆ, ಲವಲವಿಕೆ ಮೂಡಿತು. ಬದುಕುವ ಕಲೆ ಸಾಹಿತ್ಯದ ಮೂಲಕ, ಸಂಗೀತದ ಸವಿಯೊಡನೆ ಎಲ್ಲರದಾಯಿತು. ವೀರಶೈವ ವಾಗ್ಗೇಯಕಾರರಿಂದ ಆದ ಈ ಉಪಕಾರ ಕಡಿಮೆಯದಲ್ಲ.

●

ಭಕ್ತಿ ಪಂಥದ ನೆಲೆಯಲ್ಲಿ ಮಹಿಳೆ

ಶಶಿಕಲಾ ಶಿವಶಂಕರ್

ಭಾರತೀಯ ಮಹಿಳೆಯ ಸ್ಥಾನ-ಮಾನಗಳ ಬಗ್ಗೆ ವೇದ ಶಾಸ್ತ್ರ ಪುರಾಣಗಳು ಏನೆಲ್ಲಾ ಸಮರ್ಥನೆಗಳನ್ನು, ಆಧಾರ ಪ್ರಮಾಣಗಳನ್ನು ನೀಡಿದರೂ ಆಕೆಯ ಪರಿಸ್ಥಿತಿ ಶೋಚನೀಯವಾಗಿಯೇ ಇತ್ತೆಂಬುದು ಸುಸ್ಪಷ್ಟ. ಹೆಣ್ಣಿನ ಯಜಮಾನಿಕೆಯನ್ನು ಮೂಲೆ ಗುಂಪಾಗಿಸುವುದನ್ನೇ ಪರಮಗುರಿಯನ್ನಾಗಿಸಿಕೊಂಡಿದ್ದ ಆರ್ಯ ಸಂಸ್ಕೃತಿಯು ಸ್ಥಳೀಯ ದ್ರಾವಿಡ ಸಂಸ್ಕೃತಿಯಲ್ಲಿದ್ದ ತಾಯಾಳಿಕೆ, ತಾಯಿ ಪರಂಪರೆ, ತಾಯಿ ಹಕ್ಕುಗಳನ್ನು ನಿರ್ಮೂಲಗೊಳಿಸಲು ಯತ್ನಿಸಿತು. ಈ ಪ್ರಕ್ರಮದ ಪ್ರಾಥಮಿಕ ಹೆಜ್ಜೆಯಾಗಿ ಮಹಿಳೆಯ ಜೈವಿಕ ಲಕ್ಷಣಗಳನ್ನು ಆಧಾರವಾಗಿರಿಸಿಕೊಂಡು ಮಹಿಳೆ ಮೈಲಿಗೆಯ ವಸ್ತು, ಮಹಿಳೆಯ ಪಾತ್ರ ಕೇವಲ ಸಂತಾನಾಭಿವೃದ್ಧಿಗಾಗಿಯಷ್ಟೇ ಮೀಸಲು ಎಂಬ ಶಾಸನ ಹೊರಡಿಸಿತು. ಅನಂತರದಲ್ಲಿ ಭಾರತೀಯ ಮಹಿಳೆಯರು ವಿವಾಹ, ವಿವಾಹಾನಂತರದ ಸ್ಥಾನ-ಮಾನ, ವೈಧವ್ಯ, ವರದಕ್ಷಿಣೆ, ಆಸ್ತಿಯ ಉತ್ತರಾಧಿಕಾರತ್ವ ಮುಂತಾದ ಸಾಮಾಜಿಕ ವಿಷಯಗಳಲ್ಲಿ ತಾರತಮ್ಯತೆಗೆ ಬಲಿಯಾಗಿ ನಾನಾ ಬಗೆಯ ತೊಂದರೆಗಳಿಗೀಡಾದರು. ಹಾನಿಕರ ಮತಪ್ರಕ್ರಿಯೆಗಳು, ಸಾಮಾಜಿಕ ಸಂಪ್ರದಾಯಗಳು ಮಹಿಳೆಯ ಬದುಕಿನ ಸಾರವನ್ನು ಕಸಿದುಕೊಂಡವು. ಜೈವಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ - ಈ ಎಲ್ಲಾ ರಂಗಗಳಲ್ಲಿಯೂ ಮಹಿಳೆ ಸ್ವಾತಂತ್ರ್ಯದಿಂದ ವಂಚಿತಳಾದಳು. ಪುರುಷ ಪ್ರಧಾನ ಸಮಾಜವು ಅತ್ಯಂತ ಎಚ್ಚರದಿಂದ ಬುದ್ಧಿಪೂರ್ವಕವಾಗಿ ಹೆಣ್ಣನ್ನು ವೈಭವೀಕರಿಸುತ್ತಲೇ, ಮತ್ತೊಂದೆಡೆಯಲ್ಲಿ ಅವಳ ನಿರಂತರ ಪತನಕ್ಕೆ ತೊಡಗಿತು. ಭಾರತದಲ್ಲಿ ಹುಟ್ಟಿ ಬೆಳೆದ ಯಾವುದೇ ಧರ್ಮವೂ, ಬೌದ್ಧಧರ್ಮವನ್ನು ಹೊರತುಪಡಿಸಿ, ಹೆಣ್ಣಿಗೊಂದು ಸ್ವಂತ ವ್ಯಕ್ತಿತ್ವ ಇದೆ ಎಂಬುದನ್ನೇ ಪರಿಗಣಿಸಲಿಲ್ಲ. ವೈದಿಕ ಧರ್ಮಶಾಸ್ತ್ರಗಳು ಹೆಣ್ಣಿನ ಮೇಲೆ ಹೇರಿದ ವಿಧಿನಿಷೇಧಗಳಿಗಂತೂ ಲೆಕ್ಕವೇ ಇಲ್ಲ. ಸಮಾಜ ಮತ್ತು ಧರ್ಮ ಒಂದಾಗಿ ಹುಟ್ಟುಹಾಕಿದ ಕಟ್ಟುಪಾಡುಗಳು ಮಹಿಳೆಯರನ್ನು ನಿರಂತರ ದಾಸ್ಯದಲ್ಲಿರಿಸಿದವು. ಪುರುಷರ ಎಲ್ಲಾ ಬೇಡಿಕೆಗಳನ್ನು ಪೂರೈಸುವ ಸಾಧನ ಮಾತ್ರವಾಗಿ ಯಾವ ಹಕ್ಕು ಬಾಧ್ಯತೆಗಳಿಲ್ಲದೆ ಕೇವಲ ಚರಸ್ವತ್ತಾಗಿ ಪರಿಣಮಿಸಿದಳೆಂಬುದು ನಮಗೆ ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಸತ್ಯ ಕಣ್ಮುಂದೆ ಬಯಲಾಗುತ್ತದೆ.

ಮಾನವ ಚರಿತ್ರೆಯ ಇತಿಹಾಸದುದ್ದಕ್ಕೂ ಮೌಢ್ಯಗಳ ಪೊರೆ ಕಳಚಲು ಹೊರಟ ಹೆಣ್ಣಿಗೆ ಸರಪಳಿ ಹಾಕಿ ಅವಿಚಾರದ ಕೂಪಕ್ಕೆ ನೂಕುವ ಪುರುಷ ದಬ್ಬಾಳಿಕೆಗೆ ಸಾಕ್ಷಿಗಳನ್ನು ಕಾಣುತ್ತೇವೆ. ಹೆಣ್ಣು ತನ್ನ ಅಂತಃಸಾಕ್ಷಿಗೆ ಅನುಗುಣವಾಗಿ ನಡೆಯದಂತೆ ತನ್ನ ಒಳದನಿ ಮತ್ತು ನಿಜದನಿಗಳಿಗೆ ನೇರವಾಗಿ ನಡೆಯಲು ಅಸಾಧ್ಯವಾಗುವಂತೆ ಸಮಾಜವು ಉದ್ದಕ್ಕೂ ಹೆಣ್ಣಿನ ಮೇಲೆ ಪ್ರತಿಬಂಧಗಳನ್ನು ಹೇರುತ್ತಲೇ ಬಂದಿದೆ. ವೇದಕಾಲದಲ್ಲಿ ಕಿಂಚಿತ್ತು ಸ್ವಾತಂತ್ರ್ಯ ಹೆಣ್ಣಿನ ಪಾಲಿಗಿದ್ದಿತಾದರೂ, ಶಿಕ್ಷಣಾವಕಾಶಗಳಿದ್ದರೂ, ನಂತರದ ಕಾಲದಲ್ಲಿ ವಿದ್ಯೆಯ ಬಾಗಿಲು ಮುಚ್ಚಿಹೋಯಿತು. ಧರ್ಮಶಾಸ್ತ್ರದ ಕಾಲದಲ್ಲಿ ಸ್ತ್ರೀ ಶೂದ್ರಳು, ಸ್ತ್ರೀಜನ್ಮ ಪ್ರಜನನಾರ್ಥಕ್ಕಾಗಿಯೇ ಇರುವುದು ಮುಂತಾದ ಭಾವನೆಗಳಿಂದಾಗಿ ವೈದಿಕ ಸಂಸ್ಕೃತಿಯಲ್ಲಿ ಹೆಣ್ಣು ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ ಕತ್ತಲಿಗೆ ಸರಿದಳು. ಋಕ್ಕುಗಳ ಕಾಲದಲ್ಲಿ ಸ್ತ್ರೀ ಪುರುಷನಷ್ಟೇ ಸರಿ ಸಮಾನವಾಗಿ ಯಜ್ಞಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದಳು. ಸ್ತ್ರೀ ಪುರುಷರೀರ್ವರೂ ಒಟ್ಟಾಗಿ ಸೇರಿ ಯಜ್ಞ ನಿರ್ವಹಿಸಿದರೆ ಮಾತ್ರವೇ ಯಜ್ಞ ಸಂಪೂರ್ಣ ಫಲಪ್ರದಾಯಕ ಎಂಬುದನ್ನು ನಾವು ಅವಲೋಕಿಸಬಹುದಾಗಿದೆ. ಆದರೆ ಬ್ರಾಹ್ಮಣಗಳು ಧರ್ಮ ಸೂತ್ರಗಳ ಕಾಲಕ್ಕೆ ಪ್ರತಿಲೋಮ ವಿವಾಹಗಳ ಫಲವಾಗಿ ಸ್ತ್ರೀ ಅನಾರ್ಯಳಾದಳು, ಅಸ್ಪೃಶ್ಯಳೆನಿಸಿಕೊಂಡಳು. ವೇದ್ಯಾಯನದ ಹಕ್ಕು ನಿರಾಕರಿಸಲ್ಪಟ್ಟಿತು. ಉಪನಯನ ಸಂಸ್ಕಾರದ ಅವಕಾಶವೂ ಸಹ ಕೈ ತಪ್ಪಿಹೋಯಿತು. ದೇಹ-ಪ್ರಕೃತಿಗಳ ದೃಷ್ಟಿಯಿಂದ ಹೆಣ್ಣಿನ ಅಸ್ತಿತ್ವ ಇರುವುದೇ ಸಂತಾನಾಭಿವೃದ್ಧಿಗಾಗಿ, ಮಕ್ಕಳನ್ನು ಹೆರುವುದು ಸಾಕುವುದರಲ್ಲೇ ಹೆಣ್ಣಿನ ಬದುಕಿನ ಸಾರ್ಥಕತೆ ಅಡಗಿದೆ ಎಂದು ಮನು ಸಾರಿದನು. ಪುರುಷ ಪ್ರಾಧಾನ್ಯತೆ ವಿಜೃಂಭಿಸಿ ಧರ್ಮದ ಹೆಸರಿನಲ್ಲಿ ಹೆಣ್ಣು ಆಧ್ಯಾತ್ಮಿಕ, ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಎರವಾಗಬೇಕಾಗಿ ಬಂದು, ವೈದಿಕ ಧರ್ಮದಲ್ಲಿ ಮಹಿಳೆಗೆ ಧಾರ್ಮಿಕ ಸಂಸ್ಕಾರಗಳಿಲ್ಲದಂತಾಗಿ ಮದುವೆ, ಪತಿಭಕ್ತಿ, ಮಕ್ಕಳು ಅದರಲ್ಲೂ ಗಂಡು ಮಕ್ಕಳನ್ನು ಹೆತ್ತು ಸಂತಾನಾಭಿವೃದ್ಧಿಗೆ ಗಂಡನ ವಂಶೋದ್ಧಾರಕಷ್ಟೇ ತನ್ನ ಬದುಕನ್ನು ಮೀಸಲಿರಿಸಬೇಕಾಗಿ ಬಂತು.

ಅವೈದಿಕ ಪರಂಪರೆಯಲ್ಲಿ ಬಂದ ಜೈನ ಧರ್ಮಹೆಣ್ಣಿಗೆ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟಿತಾದರೂ ಹೆಣ್ಣು ಜೀವ ಮುಕ್ತಿ ಪಡೆಯಬೇಕಾದರೆ ಅದು ಮತ್ತೆ ಗಂಡಾಗಿ ಹುಟ್ಟಬೇಕು ಎಂದು ಬೋಧಿಸಿತು. ಉಪನಿಷತ್ಕಾರರ ನಂತರ ಮಹಿಳೆಯ ಬದುಕಿನಲ್ಲಿ ಆತ್ಮವಿಶ್ವಾಸವನ್ನು ತುಂಬುವಲ್ಲಿ ಬೌದ್ಧಧರ್ಮ ಯಶಸ್ವಿಯಾಯಿತಾದರೂ ಕಾಲಕ್ರಮೇಣ ಅದರಲ್ಲಿಯೂ ಹಳೆಯಶ್ರದ್ಧೆ, ನಂಬಿಕೆಗಳು ಸೇರಿ ಮತ್ತೆ ಮಹಿಳೆಯ ಬದುಕು ಹಳೆಯ ಪ್ರವಾಹದಲ್ಲಿಯೇ ಕೊಚ್ಚಿ ಹೋಗುವಂತಾಯಿತು. ಬುದ್ಧನು ಸಹ ತನ್ನ ಸಂಘಕ್ಕೆ ಸ್ತ್ರೀಯರನ್ನು ಸೇರಿಸಿಕೊಳ್ಳಲು ಆರಂಭದಲ್ಲಿ ಅನುಮಾನಿಸಿದನೆಂಬ ಉಲ್ಲೇಖವನ್ನು ಗಮನಿಸಿದಾಗ ಮಹಿಳಾ ಸಂಬಂಧಿ ವಿಚಾರದಲ್ಲಿ ಪುರುಷ ಮನೋಭಾವ ಎಷ್ಟು ಕಠಿಣವಾಗಿತ್ತೆಂಬುದನ್ನು ಕಾಣಬಹುದು. ಪ್ರಿಯಶಿಷ್ಯ ಆನಂದನ ಒತ್ತಾಯದ ಮೇರೆಗೆ ಮಹಿಳೆಯರನ್ನು ಸಂಘಕ್ಕೆ ಸೇರಿಸಿಕೊಳ್ಳಲು ಬುದ್ಧ ಅನುಮತಿಸಿದನಾದರೂ, ಧರ್ಮದ

ಅನುಯಾಯಿಗಳಾಗಲು, ಅದನ್ನು ಆಚರಿಸಲು ವಿರಾಗಿಣಿಯರಾಗಲು ಅವಕಾಶವಿತ್ತೇ ಹೊರತು ಧರ್ಮದ ನಿರ್ದಿಷ್ಟ ಕ್ರಿಯೆಯಲ್ಲಿ ಪಾಲ್ಗೊಳ್ಳುವಂತಿರಲಿಲ್ಲ. ನಂತರ ಬಂದ ಮುಸಲ್ಮಾನರು ಧಾರ್ಮಿಕ ನಿಲುವಿನಲ್ಲಿ ಯಾವುದೇ ಬಗೆಯ ಸಹಿಷ್ಣುತೆ, ಹೊಂದಾಣಿಕೆಗಳನ್ನು ಮಾಡಿಕೊಳ್ಳದೆ ರಕ್ತಪಿಪಾಸುಗಳಾಗಿ ಭಾರತದಾದ್ಯಂತ ಬಲವಂತವಾಗಿ ತಮ್ಮ ಧರ್ಮವನ್ನು ಅನುಷ್ಠಾನಕ್ಕೆ ತಂದರು. ಫಲವಾಗಿ ಭಾರತೀಯರ ಬದುಕಿನಲ್ಲಿ ಅಳಿಸಲಾರದ ಮಡಿವಂತಿಕೆ, ಸಂಕುಚಿತ ಮನೋಭಾವಗಳು ತಲೆದೋರಿ ಮಹಿಳೆಯ ಬದುಕು ಮತ್ತಷ್ಟು ಮುದುಡಿಕೊಂಡಿತು.

ನಿರಂತರ ವಿದೇಶಿ ಆಕ್ರಮಣಗಳು, ಪರಕೀಯರ ಧಾಳಿಗಳ ಫಲವಾಗಿ ಉಂಟಾದ ರಾಜಕೀಯ, ಅನಿಶ್ಚಿತ ವಾತಾವರಣ, ಕೌಟುಂಬಿಕ ವ್ಯವಸ್ಥೆಯ ಮೇಲಾದ ಪರಿಣಾಮಗಳು, ಆರ್ಥಿಕ ಮುಗ್ಗಟ್ಟು, ಸಮಾಜದಲ್ಲಿ ತಲೆದೋರಿದ್ದ ಅನಿರ್ದಿಷ್ಟ ಭೀತಿ ಭದ್ರತೆಯ ಬಗೆಗಿನ ತೀವ್ರ ಅರಕ್ಷಿತತೆ ಮುಂತಾದವುಗಳಿಂದಾಗಿ ಮಹಿಳೆಯು ಅಮಾನುಷವೂ, ಅನಪೇಕ್ಷಣಿಯವೂ ಆದ ದುಸ್ಸಂಪ್ರದಾಯಗಳಿಗೀಡಾದಳು. ಮಧ್ಯಕಾಲೀನ ಯುಗದ ಹೊತ್ತಿಗೆ ಭಾರತೀಯ ಮಹಿಳೆಯ ಬದುಕು ಸಂಪೂರ್ಣವಾಗಿ ಕತ್ತಲಿನಿಂದ ತುಂಬಿಹೋಗಿತ್ತು .

ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಮಹಿಳೆಯ ವಿಮೋಚನೆಗೆಂದು ಕರ್ನಾಟಕದಲ್ಲಿ ಪ್ರವಾಹದೋಪಾದಿಯಲ್ಲಿ ಧಾವಿಸಿಬಂದು ಕೊಳೆಯನ್ನೆಲ್ಲಾ ಕೊಚ್ಚಿ ಹಾಕಿ ಹೊಸತನ್ನು ತೆರೆದ ಧಾರ್ಮಿಕ ಅಲೆ ವೀರಶೈವ ಧರ್ಮ. ೧೨ನೇ ಶತಮಾನದಲ್ಲಿ ಜರುಗಿದ ವಚನ ಚಳವಳಿಯು ಕರ್ನಾಟಕದಲ್ಲಷ್ಟೇ ಅಲ್ಲ ಭಾರತದಾದ್ಯಂತ ಮಹಿಳೆಯ ಹಕ್ಕುಬಾಧ್ಯತೆಗಳನ್ನು, ಸ್ವತಂತ್ರ ವ್ಯಕ್ತಿತ್ವವನ್ನು, ಸಂಗಾತಿಯನ್ನು ಆರಿಸಿಕೊಳ್ಳುವ ಹಕ್ಕನ್ನು, ವಿಧವಾ ವಿವಾಹವನ್ನು, ಕೆಲವು ಪರಿಸ್ಥಿತಿಗಳಿಗನುಗುಣವಾಗಿ ವಿಚ್ಛೇದನದ ಸ್ವಾತಂತ್ರ್ಯವನ್ನು ಪ್ರತಿಪಾದಿಸುವಲ್ಲಿ ಆದರ್ಶಪ್ರಾಯವಾಯಿತು. ವಚನ ಚಳವಳಿಯ ನೇತೃತ್ವವನ್ನು ವಹಿಸಿದ ಬಸವಾದಿ ಶರಣರು ಕತ್ತಲಿನಲ್ಲಿ ಮುಳುಗಿದ್ದ ಮಹಿಳಾ ಸಮುದಾಯವನ್ನು ಬೆಳಕಿನ ಕಡೆಗೆ ಕರೆದೊಯ್ದರು. ಅಂಧಕಾರದಿಂದ ಮುಕ್ತವಾಗಲು ಮಹಿಳೆ ವಚನಯುಗದವರೆಗೂ ಕಾಯಬೇಕಾಯಿತು. ವೈದಿಕ ಹಿತಾಸಕ್ತಿಗಳ ಕಪಿಮುಷ್ಠಿಯಲ್ಲಿ ಸಿಕ್ಕು ನರಳುತ್ತಿದ್ದ ಹೆಣ್ಣಿಗೆ ಬಸವಾದಿ ಶರಣರು ತಂಗಾಳಿಯನ್ನು ತಂದಿತ್ತರು. ಮಹಿಳೆಯರು ಕಳೆದುಕೊಂಡಿದ್ದ ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯವನ್ನು ಮರಳಿ ಗಳಿಸಿಕೊಡುವಲ್ಲಿ ನೆರವಾದರು. ಸ್ತ್ರೀ ಕುಲದ ಅಭೀಪ್ಸೆ, ಘನತೆ, ಗೌರವಗಳನ್ನು ಎತ್ತಿ ಹಿಡಿದು ಜಾತಿ, ಲಿಂಗ,ವರ್ಗ, ವರ್ಣ ಬೇಧವಿಲ್ಲದೆ ಧರ್ಮ ಸಂಸ್ಕಾರ ನೀಡಿ ವಾಕ್-ವಿಚಾರ, ಆಚಾರ ಸ್ವಾತಂತ್ರ್ಯಗಳನ್ನು ದೊರಕಿಸಿಕೊಟ್ಟರು. ಕಾಯಕ ತತ್ವವನ್ನು ಪ್ರತಿಪಾದಿಸುವುದರ ಮೂಲಕ ಮಹಿಳೆಗೆ ದುಡಿಯುವ ಹಕ್ಕನ್ನು ತಂದುಕೊಟ್ಟರು. ಮೊತ್ತ ಮೊದಲಬಾರಿಗೆ ಸಮಾಜದ ಬಹು ಸಂಖ್ಯಾತ ವರ್ಗವಾದ ಸ್ತ್ರೀ ಸಮುದಾಯವು ಮೌನ ಮುರಿದು ಮಾತನಾಡಲಾರಂಭಿಸಿದ್ದು ಈ ಚಳವಳಿಯ ಅಪೂರ್ವ ಸಾಧನೆಗಳಲ್ಲೊಂದು. ಮಹಿಳೆಯು ತನ್ನ ಜೀವನಾನುಭವವನ್ನು ಬರವಣಿಗೆಗಿಳಿಸಿದ್ದು ಬಸವಣ್ಣನ ಅಕ್ಷರ ಕ್ರಾಂತಿಯ ಫಲವಾಗಿ ಮೂಡಿ ಬಂದ ಸಾಧನೆ.

ಇಷ್ಟೆಲ್ಲಾ ಬದಲಾವಣೆ ೧೨ನೇ ಶತಮಾನದಲ್ಲಿ ದಿಢೀರನೆ ಸಂಭವಿಸಿದ್ದಲ್ಲ. ವಚನ ಚಳವಳಿಯು ಕೈಗೊಂಡ ಅಭೂತಪೂರ್ವ ಸ್ತ್ರೀ ಸಂಘಟನೆಯ ಹಿನ್ನೆಲೆಯಲ್ಲಿ ಅನೇಕ ಪ್ರಭಾವ., ಪ್ರೇರಣೆಗಳಿದ್ದವು. ೧೨ ನೇ ಶತಮಾನ ಎಲ್ಲಾ ಪ್ರಜ್ಞಾವಂತರಿಗೆ ಸವಾಲಿನ ಸಮಯವಾಗಿತ್ತು. ಆತ್ಮಾಭಿಮಾನವುಳ್ಳವರು ತಮ್ಮ ಅಸ್ತಿತ್ವಕ್ಕಾಗಿ, ಅಂದಿನ ಧಾರ್ಮಿಕ ಸಾಮಾಜಿಕ ವ್ಯವಸ್ಥೆಗಳ ವಿರುದ್ಧ, ಯಜಮಾನ ಸಂಸ್ಕೃತಿಯ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಹೋರಾಡಬೇಕಾಗಿತ್ತು. ಮಹಿಳಾ ಸ್ವಾತಂತ್ರ್ಯವನ್ನು ಎತ್ತಿಹಿಡಿದಿದ್ದ ಅವೈದಿಕ ಮತಪರಂಪರೆಯನ್ನು ಮಹಿಳಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಉದ್ದೇಶವನ್ನೇ ಗುರಿಯನ್ನಾಗಿಸಿಕೊಂಡಿದ್ದ ವೈದಿಕ ಮತ ಪರಂಪರೆಯು ನುಂಗಿ ನೊಣೆದಿತ್ತು. ಇಂತಹ ಬಲಿಷ್ಟ ಧಾರ್ಮಿಕ ಪಂರಪರೆಯನ್ನು ಎದುರಿಸಿ ನಿಂತು ಮಹಿಳೆಯ ಚೇತರಿಕೆಗೆ ಎಲ್ಲಾ ಬಗೆಯ ಸ್ವಾತಂತ್ರ್ಯವನ್ನು ದೊರಕಿಸಿಕೊಡುವುದಕ್ಕೆ ವಚನಕಾರರ ಮೇಲೆ ಬೀರಿದ ಪ್ರಭಾವ ಪ್ರೇರಣೆಗಳು ಹತ್ತು ಹಲವು. ಇದಕ್ಕೆ ಅಂದಿನ ಧಾರ್ಮಿಕ, ಸಾಮಾಜಿಕ ಪರಿಸರವೂ ಕಾರಣವಾಗಿತ್ತು ಎಂಬುದನ್ನು ಮರೆಯುವಂತಿಲ್ಲ.

ವೈದಿಕ ಸಂಸ್ಕೃತಿಯ ಕಪಿಮುಷ್ಠಿಯಲ್ಲಿ ಕರಗಿ ಹೋಗಿದ್ದ ಮಹಿಳಾ ಸಮುದಾಯವು ವಚನಕಾರರ ಸಮಸಂಸ್ಕೃತಿಯಲ್ಲಿ ಬಸವಾದಿ ಶರಣರ ಪ್ರಯತ್ನಗಳಿಂದಾಗಿ ಹೊಸ ಬೆಳಕನ್ನು ಕಂಡಿತು. ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಪಡೆದುಕೊಂಡು ಸಾಮಾಜಿಕವಾಗಿ ಸಮಾನತೆಯನ್ನು ಸಾಧಿಸಿ, ತನ್ನ ವ್ಯಕ್ತಿತ್ವವನ್ನು ವಿಕಸನಗೊಳಿಸಿಕೊಂಡಿದ್ದೇ ಅಲ್ಲದೆ ಅಭಿವ್ಯಕ್ತಿಯ ಎಲ್ಲಾ ಸಾಧ್ಯತೆಗಳನ್ನು ಸೂರೆ ಹೊಡೆಯಿತು. ವಚನಕಾರರ ಆಗಮನವು ಮಹಿಳೆಯ ಪಾಲಿಗೆ ತಂಗಾಳಿಯಾಯಿತು. ಮಹಿಳೆಗೆ ಹೊಸ ಲೋಕವೊಂದನ್ನು ಪರಿಚಯಿಸಿತು. ಕತ್ತಲಿನಲ್ಲಿದ್ದ ಹೆಣ್ಣನ್ನು ಬೆಳಕಿನೆಡೆಗೆ ಕರೆತಂದ ಶರಣರು ಹೆಣ್ಣನ್ನು ಗೌರವದಿಂದ ನಡೆಸಿಕೊಂಡರು. ಹೆಣ್ಣು ಮೈಲಿಗೆ, ಮಾಯೆ ಮುಂತಾದ ಪಾರಂಪರಿಕ ಕಲ್ಪನೆಗಳನ್ನು ಧಿಕ್ಕರಿಸಿದ ಶರಣರು ಸ್ತ್ರೀ ಸಮುದಾಯವನ್ನು ಸಂಘಟಿಸಿ ಅವರ ಏಳಿಗೆಗಾಗಿ ಶ್ರಮಿಸಿದರು. ಇಷ್ಟಲಿಂಗ ಧಾರಣೆ, ದುಡಿಯುವ ಹಕ್ಕು ನೀಡಿಕೆ, ಲಿಂಗಬೇಧ ನಿವಾರಣೆ, ವಿಚಾರ ಸ್ವಾತಂತ್ರ್ಯ ನೀಡಿಕೆ, ಅನುಭವ ಮಂಟಪ ನಿರ್ಮಾಣ ಮುಂತಾದ ಚಟುವಟಿಕೆಗಳಿಂದಾಗಿ ಶತಶತಮಾನಗಳಿಂದ ತುಳಿತಕ್ಕೊಳಗಾಗಿದ್ದ ಸ್ತ್ರೀ ಸಮುದಾಯವು ಒಮ್ಮೆಲೇ ತನ್ನೆಲ್ಲಾ ಒತ್ತಡ, ಬಂಧನಗಳನ್ನು ಝಾಡಿಸಿ ಹರಿದೊಗೆದು ವಚನಾಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಗಂಡಿಗೆ ಸಮಗೈಯಾಗಿ ಬೆಳೆಯಿತು; ಬೆಳಗಿತು. ಅಕ್ಕಮಹಾದೇವಿಯಿಂದ ಮೊದಲ್ಗೊಂಡು ಸೂಳೆ ಸಂಕವ್ವೆಯವರೆಗೂ ಬಸವ ಬೆಳಕಿನಲ್ಲಿ ಮೇಲು-ಕೀಳಿನ ತಾರತಮ್ಯವಿಲ್ಲದೆ ಸಾಮಾಜಿಕ ಸಿದ್ಧಾಂತಗಳನ್ನು ಹುಟ್ಟು ಹಾಕಿದ ಹರಿಕಾರರೆನಿಸಿಕೊಂಡರು. ಸ್ತ್ರೀಸಮಾನತೆ ಸಾಧಿಸುವಲ್ಲಿ, ಬಸವಾದಿ ಶರಣರು ತಮ್ಮ ಹಿಂದಣ ಹಲವು ನೆಲೆಗಳನ್ನು ಆಧರಿಸಿದ್ದರು. ವಚನಕಾರರ ಸಂಘಟನೆಗೆ ಕಾರಣವಾದ ನೆಲೆಗಳು ಮತ್ತು ಸ್ತ್ರೀವಾದಿ ನಿಲುವು ಎಂತಹವುಗಳಾಗಿದ್ದ ವೆಂಬುದು ನಿಜಕ್ಕೂ ತಲಸ್ಪರ್ಶಿಯಾಗಿಸುವಂತದ್ದು. ಇದು ಚರಿತ್ರಾರ್ಹವಾದ ಘಟನೆ. ಸುಮಾರು ೮೦೦ ವರ್ಷಗಳಷ್ಟು ಹಿಂದೆಯೇ ಕ್ರಿಯಾಶೀಲರಾಗಿ ತಮಗೆ ತೋಚಿದ ಹಾದಿಯಲ್ಲಿ

ಪ್ರಾಮಾಣಿಕವಾಗಿ ಮುನ್ನಡೆದ ವಚನಕಾರರು ಸಮಾಜದ ಬಹುಸಂಖ್ಯಾತರಲ್ಲಿ ಆತ್ಮ ಸ್ಥೈರ್ಯವನ್ನು ತುಂಬಿದರು. ಅವರ ಮಾತು, ಕ್ರಿಯೆ, ಆದರ್ಶಗಳ ನಡುವೆ ಎಳ್ಳಷ್ಟು ಕಂದಕವಿಲ್ಲದಿದ್ದುದರಿಂದ ಲಕ್ಷಾಂತರ ಜನ ಇವರೊಂದಿಗೆ ಸೇರಿದರು. ಮತವೊಂದರ ಪ್ರಸಾರಕ್ಕೆಂದು ಹೊರಟ ಮಂದಿ ಮತೀಯ ಚೌಕಟ್ಟಿನಲ್ಲಿಯೇ ಸಾಮಾಜಿಕ, ವೈಚಾರಿಕ ಅಂಶಗಳನ್ನು ಬೆರೆಸಿಕೊಂಡು ಜನರಿಗೆ ಬದುಕು ನೀಡಿದರೆಂಬುದು ಐತಿಹಾಸಿಕ ಸತ್ಯ.

ಪುರುಷ ಪ್ರಧಾನ ಸಮಾಜದ ನಿಯಂತ್ರಣದಲ್ಲಿ ಸಿಲುಕಿ ನಿರಂತರವಾಗಿ ನರಳುತ್ತಿದ್ದ ಮಹಿಳಾ ಸಮುದಾಯವನ್ನು ಸಂಘಟಿಸಿ ವಚನ ಯುಗವು ಎಲ್ಲಾ ಬಗೆಯ ಸ್ವಾತಂತ್ರ್ಯವನ್ನು ತಂದುಕೊಟ್ಟಿತು. ಸುಮಾರು ೬ನೇ ಶತಮಾನದಿಂದ ಬೆಳೆದು ಬಂದ ಭಕ್ತಿಪಂಥ, ತಾಂತ್ರಿಕ ಶೈವ ಮತ, ಕೆಳವರ್ಗದ ಸಂಸ್ಕೃತಿಯಲ್ಲಿ ಹೆಣ್ಣಿಗಿದ್ದ ಸ್ವಾತಂತ್ರ್ಯ, ದಾರ್ಶನಿಕರ ವಿಚಾರಧಾರೆ-ಇತ್ಯಾದಿಗಳೆಲ್ಲವೂ ವಚನಕಾರರ ಮೇಲೆ ಅಗಾಧವಾದ ಪ್ರಭಾವ ಬೀರಿದ್ದವೆಂಬುದೂ ನಿಜ.

ಭಾರತದ ಧಾರ್ಮಿಕ ಸಂದರ್ಭದಲ್ಲಿ ೬-೭ನೇ ಶತಮಾನ ಅತ್ಯಂತ ತೀವ್ರ ಸಂಘರ್ಷಕ್ಕೊಳಗಾಗಿದ್ದ ಕಾಲ. ಭಾರತವನ್ನು ಪ್ರವೇಶಿಸಿದ ಮುಸಲ್ಮಾನರು ವರ್ಧಿಸಿಕೊಳ್ಳುತ್ತಿದ್ದ ರಾಜಕೀಯ ಪ್ರಾಬಲ್ಯ, ಅವರ ಧಾರ್ಮಿಕ ರಿವಾಜು, ಒಡ್ಡಿದ ಬೆದರಿಕೆಗಳು ಕಾಲಕ್ರಮದಲ್ಲಿ ಹೆಚ್ಚು ಅಮಾನವೀಯವಾಗುತ್ತಾ ಬಂದಿದ್ದ ಹಿಂದೂಧರ್ಮದ ವಕ್ತಾರ ಎನಿಸಿಕೊಂಡ ವೈದಿಕ ಧರ್ಮದ ನಿಷ್ಠುರ ಕಾಠಿಣ್ಯಭರಿತ ಕರ್ಮಠ ಬ್ರಾಹ್ಮಣ್ಯರ ವಿಧಿ ವಿಧಾನಗಳು, ಇದೇ ಅವಧಿಯಲ್ಲಿ ಅವೈದಿಕ ಧರ್ಮಗಳೆನಿಸಿಕೊಂಡ ಜೈನ ಧರ್ಮ, ಬೌದ್ಧ ಧರ್ಮಗಳಲ್ಲಿನ ಮಾನವೀಯ ಗುಣಗಳಿಂದಾಗಿ ಜನರು ಬಹುಸಂಖ್ಯೆಯಲ್ಲಿ ಆಕರ್ಷಿತರಾದದ್ದು ಇವೆಲ್ಲವುಗಳ ಪರಿಣಾಮವಾಗಿ ಹಿಂದೂ ಸಮಾಜದಲ್ಲಿ ಹುಟ್ಟಿದ ಪ್ರತಿಕ್ರಿಯೆ ಭಕ್ತಿ ಚಳವಳಿಯ ರೂಪು ತಾಳಿತು. ಹಿಂದೂ ಧರ್ಮದಿಂದ ಸಿಡಿದು ಹೊರ ನಡೆದಿದ್ದ ಬಹು ಸಂಖ್ಯಾತ ಕೆಳವರ್ಗದ ಜನತೆಗೆ ಸಮಾನತೆಯ ಅವಕಾಶ ನೀಡಬೇಕಾದ ಒತ್ತಡವಿತ್ತು. ಅಮಾನವೀಯ ಧರ್ಮಶಾಸ್ತ್ರಗಳನ್ನು ರಕ್ಷಿಸಲು ಪಣತೊಟ್ಟ ವೈದಿಕ ಧರ್ಮದಿಂದ ಜನ ಸಾಮಾನ್ಯರ ಹಿತರಕ್ಷಣೆಯಾಗದು ಎಂಬ ಅರಿವು ಕ್ರಮೇಣ ವಿಚಾರವಂತರಾದ ಕೆಲವರ ಮನಸ್ಸಿನಲ್ಲಿ ಬೆಳೆದು ಬಂದಿತು. ಪ್ರಬಲಗೊಳ್ಳುತ್ತಿರುವ ಜೈನ, ಬೌದ್ಧ ಧರ್ಮಗಳ ಆಕರ್ಷಣೆಯಿಂದ ಜನರನ್ನು ವಿಮುಖಗೊಳಿಸಿ ಆರ್ಯಧರ್ಮವನ್ನು ಪುನರ್ ಪ್ರತಿಷ್ಠಾಪಿಸುವ ಸಲುವಾಗಿ ಆರ್ಯಧರ್ಮ ಸಂಪೂರ್ಣವಾಗಿ ಮಾರ್ಪಾಟನ್ನು ಹೊಂದಿ ಸಾಮಾನ್ಯರನ್ನು ಆಕರ್ಷಿಸುವಂತಹ ಧಾರ್ಮಿಕತೆಯನ್ನು ರೂಪಿಸಲು ಯತ್ನಿಸಿತು. ಆರ್ಯ ಧರ್ಮದೊಳಗಿನ ಜನರ ಮನಸ್ಸಿಗೆ ಬಾರದಂತಹ ಹಲಕೆಲವು ವಿಷಯಗಳನ್ನು ತೆಗೆದು ಹಾಕಲಾಯಿತು. ಫಲವಾಗಿ "ವೇದಗಳಲ್ಲಿ, ಸ್ಮೃತಿಗಳಲ್ಲಿ ಉಕ್ತವಾಗಿದ್ದ ವಿಧಿ ವಿಧಾನಗಳಿಗನುಸಾರವಾದ ಕರ್ಮಗಳಿಂದ ಮೋಕ್ಷಸಾಧ್ಯವೆಂಬ ಮತ್ತು ಜ್ಞಾನ ಮಾರ್ಗವೇ ಶ್ರೇಷ್ಠವಾದದ್ದು ಎಂಬ ವಾದಗಳನ್ನೆಲ್ಲ ತಿರಸ್ಕರಿಸಿ, ಎಲ್ಲಾ ಹಳೆಯ ಧರ್ಮಗಳನ್ನು ಮತಗಳನ್ನು ನಿರಾಕರಿಸಿ ಸಮಾಜದ ಎಲ್ಲಾ ಜಾತಿಯ ಜನರನ್ನು ತನ್ನ

ತೆಕ್ಕೆಗೆ ತೆಗೆದುಕೊಂಡು ಭಕ್ತಿ ಕಾಯಕಗಳಿಂದ ಮಾತ್ರ ಎಲ್ಲರಿಗೂ ಮೋಕ್ಷಸಾಧ್ಯವೆಂದು ಸಾರಿದ ಭಕ್ತಿ ಪಂಥ ಜನಸಾಮಾನ್ಯರ ಧರ್ಮವಾಯಿತು. ಕರ್ಮಠ ಭಾವನೆಗಳು, ಧಾರ್ಮಿಕ ಕ್ರಿಯಾ ವಿಧಿ ವಿಧಾನಗಳನ್ನು ಭಕ್ತಿ ಪಂಥವು ಕೈ ಬಿಟ್ಟಿತು. ಭಕ್ತಿ ಪ್ರೇಮದ ಮೂಲಕ ದೇವಾಲಯದಲ್ಲಲ್ಲದೆ ದೇಹದಲ್ಲಿಯೇ ದೇವರನ್ನು ಕಾಣಲು ಸಾಧ್ಯ. ಇದಕ್ಕಾಗಿ ಗುರುವಿನ ನೆರವು ಅತ್ಯಗತ್ಯ. ಸಂಪೂರ್ಣ ಶರಣಾಗತಿಯೇ ಪರಮೋಚ್ಚ ಪೂಜೆ ಎಂಬುದು ಈ ಪಂಥದ ಮುಖ್ಯ ಅರಿವು. ಈ ನಿಲುವು ಸಾಮಾನ್ಯ ಜನರಿಗೂ ನಿಲುಕವಂಥದ್ದಾಗಿದ್ದು ಬಹುಬೇಗ ಜನಪ್ರಿಯವಾಯಿತು. ಭಾರತದಲ್ಲಿ ಕ್ರಿ.ಶ. ೭-ಅನೇ ಶತಮಾನಗಳಿಂದಲೇ ಕಂಡು ಬರುವ ಭಕ್ತಿಪಂಥವು ಸ್ಥಾಪಿತ ಹಿತಾಸಕ್ತಿಗಳನ್ನುಳ್ಳ ಸಾಂಸ್ಥಿಕ ಸ್ವರೂಪದ ಧರ್ಮಗಳ ವಿರುದ್ಧದ ಒಂದು ಸಣ್ಣ ಪ್ರತಿಭಟನೆಯಾಗಿದೆ ಎಂಬುದನ್ನು ತಳ್ಳಿ ಹಾಕುವಂತಿಲ್ಲ''[1]

ಭಾರತೀಯ ಅಧ್ಯಾತ್ಮದಲ್ಲಿ ಪ್ರಧಾನವಾಗಿ ಎರಡು ಬಗೆಗಳನ್ನು ಗುರುತಿಸಬಹುದು. ಮೊದಲನೆಯದು ಸಾಂಪ್ರದಾಯಿಕ ಶಿಷ್ಯ ಮಾದರಿಯ ಅಧ್ಯಾತ್ಮವಾದರೆ ಮತ್ತೊಂದು ಅಸಾಂಪ್ರಾದಾಯಿಕ ಇಚ್ಛಾನುಸಾರಿಯಾದ ಪ್ರೇಮಲ ಆಧ್ಯಾತ್ಮ. ವ್ಯಕ್ತಿಯೊಬ್ಬ ತನಗಿಷ್ಟ ಬಂದ ರೀತಿಯಲ್ಲಿ, ಇಷ್ಟ ಬಂದ ಹಾದಿಯಲ್ಲಿ ನೇರವಾಗಿ ದೇವರನ್ನರಸುತ್ತಾ ಹೊರಡುವ ಎರಡನೇ ಬಗೆಯ ಆಧ್ಯಾತ್ಮಿಕತೆಯೇ ಭಕ್ತಿ ಪರಂಪರೆಯಾಗಿ ರೂಪುಗೊಂಡಿತು. ಭಕ್ತಿಮಾರ್ಗದಲ್ಲಿ ದೇವರನ್ನು ಹುಡುಕುವುದಕ್ಕೆ ಕಾಲ ದೇಶಗಳ, ಗಂಡು-ಹೆಣ್ಣುಗಳ, ಸಂಸಾರಿ-ಸನ್ಯಾಸಿ ಎಂಬುದರ ಭೇದವಿಲ್ಲ. ಯಾವುದೇ ನಿರ್ದಿಷ್ಟ ದೈವದ ಆರಾಧನೆಯ ಅಂಟೂ ಸಹ ಭಕ್ತಿ ಪಂಥೀಯರಿಗಿರಲಿಲ್ಲ. ಭಕ್ತಿ ಪರಂಪರೆಯ ಗುರಿ ಇಚ್ಛಾನುಸಾರವಾದ ಇಚ್ಛಿತ ಆಯ್ಕೆಯ ದೇವರತ್ತ ಸಾಗುವುದಷ್ಟೇ. ಈ ಗುರಿಗಾಗಿ ಅವರು ತಮ್ಮನ್ನೇ ಸಮರ್ಪಿಸಿಕೊಂಡಿದ್ದರು. ತಾವು ದೇವರಿಗೆ ಸೇರಿದವರೆಂಬ ಭಾವ ಇವರಲ್ಲಿ ಗಟ್ಟಿಗೊಂಡಿದ್ದುದರಿಂದ ಲೌಕಿಕರಿಗೆ ಇವರ ಎಲ್ಲಾ ನಡವಳಿಕೆಗಳೂ ಭಿನ್ನವಾಗಿ ತೋರುತ್ತಿದ್ದವು ಹಾಗೂ ಭಕ್ತಿ ಪರಂಪರೆಗೆ ಸೇರಿದವರು ಸಾಮಾನ್ಯರಿಗಿಂತ abnormal ಆಗಿರುತ್ತಾರೆಂಬ ಅಭಿಪ್ರಾಯ ಎಲ್ಲಾ ಕಡೆಗೂ ಬೇರು ಬಿಟ್ಟಿದ್ದಿತು.

ಭಕ್ತಿ ಪಂಥಕ್ಕೆ ಸೇರಿದ ನಂತರದ ಗುರಿ ಪರಮಾರ್ಥ ಸಾಧನೆಯಾದರೂ, ಲೌಕಿಕದ ಸಂದರ್ಭದಲ್ಲಿಯೇ ತಮ್ಮೆಲ್ಲಾ ಆದರ್ಶಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ಕೂಡಿದ್ದರು. ಜನಸಾಮಾನ್ಯರ ಬಗ್ಗೆ ಇವರಿಗೆ ಅಪಾರವಾದ ಪ್ರೀತಿ. ಜನತೆಯ ಬದುಕನ್ನು ಹಸನುಗೊಳಿಸಬೇಕೆಂಬ ಕಳಕಳಿ, ನೋವಿಗೀಡಾದವರ ಬಗೆಗೆ, ನಿಕೃಷ್ಟರ ಬಗೆಗೆ ಪ್ರೀತಿಯ ಅಮೃತಧಾರೆಯನ್ನೇ ಹರಿಸಿದರು. ಭಕ್ತಿ ಪರಂಪರೆಗೆ ಸೇರಿದವರಿಗೆ ಜಾತಿ-ಮತಗಳ ಕಟ್ಟಿರಲಿಲ್ಲ. ಇವರನ್ನು ಅರಸಿ ಬರುವವರೂ ಸಹ ವರ್ಣಲಿಂಗ ಭೇದಗಳಿಲ್ಲದೆ ಸಾಮಾಜಿಕ

---

1. ಚಂದ್ರಶೇಖರಯ್ಯ : ಬಸವಣ್ಣ : ಕ.ಸಾ.ಅ. 1994 ಪು : 6

ನೆಲೆಯಲ್ಲಿ ಸರ್ವರ ಹಿತ ಬಯಸುವ ಸಂತರಿಗೆ ಸಹಜತೆ ಎನ್ನುವುದು ಅವಿಚ್ಛಿನ್ನ ಆಚ್ಛಾದವಾಗಿತ್ತು. ಸಾಮಾನ್ಯ ಜನರಂತೆ ಪ್ರಜ್ಞಾಪೂರ್ವಕವಾಗಿಯಾಗಲಿ, ಅಪ್ರಜ್ಞಾಪೂರ್ವಕವಾಗಿಯಾಗಲಿ ಹೆಣ್ಣನ್ನು ಎಂದಿಗೂ ಕೀಳಾಗಿ ಕಂಡಿಲ್ಲ. ಆತ್ಮ ಹೆಣ್ಣು ಅಲ್ಲ; ಗಂಡು ಅಲ್ಲ ಎನ್ನುವ ಸಹಜ ಪರಿಜ್ಞಾನ ಅವರಿಗಿದ್ದಿತು.

ಭಾರತದಲ್ಲಿ ಭಕ್ತಿ ಪಂಥವು ಮೊದಲಿಗೆ ಅಸ್ಸಾಂ, ಒರಿಸ್ಸಾ, ಗುಜರಾತ್ ಮುಂತಾದ ಕಡೆಗಳಲ್ಲಿ ಪ್ರಾಚುರ್ಯಕ್ಕೆ ಬಂದಿತು. ದಕ್ಷಿಣ ಭಾರತದಲ್ಲಿ ಪ್ರಪ್ರಥಮವಾಗಿ ಈ ಪಂಥವು ತಮಿಳು ನಾಡಿನಲ್ಲಿ ಬೆಳೆದು ಬಂದಿತು. ಕ್ರಿ. ಶ. ೫ನೇ ಶತಮಾನದಿಂದ ೯ನೇ ಶತಮಾನದವರೆಗಿನ ಅವಧಿಯಲ್ಲಿ ನಾಯನಾರ್ ಎಂಬ ಹೆಸರಿನ ಶೈವ ಸಂತರು ದಕ್ಷಿಣ ಭಾರತದ ತುಂಬಾ ಭಕ್ತಿ ಮಾರ್ಗವನ್ನು ಬೆಳೆಸಿದರು. ಈ ಸಂತರಲ್ಲಿ ಸ್ತ್ರೀಯರು ದಲಿತರೂ ಇದ್ದರು. ಭಕ್ತಿಮಾರ್ಗವನ್ನೇ ತಮ್ಮ ಗುರಿಯನ್ನಾಗಿರಿಸಿಕೊಂಡು ತೀರಾ ಸಾಮಾನ್ಯರಿಗೂ ಸುಲಭವಾಗಿ ಮನಮುಟ್ಟುವಂತೆ ಹಾಡುಗಳನ್ನು ರಚಿಸಿ ಆ ಮೂಲಕ ಜನರಲ್ಲಿ ಶಿವಜ್ಞಾನವನ್ನು ಬಿತ್ತಿ ಬೆಳೆಸಿದರು. ಅರವತ್ತೂಮ್ರು ಮಂದಿ (೬೩) ಪುರಾತನರೆಂದೇ ಹೆಸರಾದ ಇವರು ಸಾತ್ವಿಕ ಶೈವರು. ಇವರಿಗೆ ಯಾವುದೇ ಜಾತಿ-ಮತಗಳ ತೊಡಕಾಗಲಿ, ಹೆಣ್ಣು-ಗಂಡೆನ್ನುವ ಭೇದವಾಗಲಿ ಇರಲಿಲ್ಲ. ಆಂತರಂಗಿಕವಾದ ಶುದ್ಧ ಭಕ್ತಿಯ ಪ್ರತಿಪಾದನೆಯೇ ಇವರ ಗುರಿಯಾಗಿದ್ದಿತು. ಬಸವಣ್ಣನವರು ಕನ್ನಡದನಾಡಿನಲ್ಲಿ ಜನಿಸುವ ಪೂರ್ವದಲ್ಲಿಯೇ ಈ ೬೩ ಮಂದಿ ಪುರಾತನ ಶಿವಶರಣರ ಕಥೆಗಳು ಕನ್ನಡ ನಾಡಿನ ಮನೆ ಮಾತಾಗಿದ್ದವು . ಕಾಲ ದೇಶಗಳಿಂದ ಮುಕ್ತರಾಗಿ ಕರ್ನಾಟಕದ ಜನಮಾನಸದಲ್ಲಿ ಒಂದಾಗಿ ಹೋಗಿದ್ದರು. ಇದೇ ರೀತಿಯಲ್ಲಿ ಉತ್ತರ ಭಾರತದ ಅದರಲ್ಲೂ ಕಾಶ್ಮೀರ, ಗುಜರಾತ್‌ಗಳ ಶಿವಭಕ್ತರ ಕತೆಗಳೂ ಸಹ ಕರ್ನಾಟಕದಲ್ಲಿ ಜನಜನಿತವಾಗಿದ್ದವು.

ಭಕ್ತಿ ಪಂಥವನ್ನು ಬೆಳೆಸಿದವರು ಶೈವ ಸಂತರಾದರೂ ''ಅದಕ್ಕೊಂದು ತಾತ್ವಿಕ ರೂಪ ಒದಗಿಬಂದು ಅದೊಂದು ಸಿದ್ಧಾಂತವಾಗಿ ಶಿಷ್ಟ ಸಂಸ್ಕೃತಿಗೆ ಪರ್ಯಾಯವಾಗಿ, ಸಾಮಾಜಿಕ ಅಸಮಾನತೆಯ ವಿರುದ್ಧದ ಪ್ರತಿಭಟನೆಯಾಗಿ ರೂಪುಗೊಂಡದ್ದು ಮಾತ್ರ ಕ್ರಿ. ಶ. ೧೧-೧೨ ನೇ ಶತಮಾನದಲ್ಲಿ ಜೀವಿಸಿದ್ದ ವಿಶಿಷ್ಟಾದ್ವೈತ ಸಿದ್ಧಾಂತದ ಶ್ರೀರಾಮಾನುಜಾಚಾರ್ಯರ ಪರಿಶ್ರಮದಿಂದ''. ೧೨ನೇ ಶತಮಾನದ ಪೂರ್ವಾರ್ಧದಲ್ಲಿ ತಮಿಳುನಾಡಿನ ಶೈವ ಮತಾವಲಂಬಿಗಳಾದ ಚೋಳರ ಕಿರುಕುಳ ಸಹಿಸಲಾರದೆ ಕರ್ನಾಟಕಕ್ಕೆ ವಲಸೆ ಬಂದ ರಾಮಾನುಜಾಚಾರ್ಯರು ಮೇಲುಕೋಟೆಯಲ್ಲಿ ನೆಲೆಸಿ ಕನ್ನಡ ನಾಡಿನಲ್ಲಿ ವೈದಿಕ ಪಂಥವನ್ನು ಹರಡಿದರು. ಉದಾರ ಹೃದಯಿಗಳಾದ ಆಚಾರ್ಯರು ಶೂದ್ರರಿಗೆ ವೇದ ವಿದ್ಯೆಯನ್ನು ಕಲಿಸ ಹೊರಟರಾದರೂ ಭಾಷಾ ತೊಡಕಿನಿಂದಾಗಿ ಕೆಳವರ್ಗದ ಜನತೆಯನ್ನು ತಲುಪಲು ಇವರಿಂದ ಸಾಧ್ಯವಾಗಲಿಲ್ಲ. ಆದಾಗ್ಯೂ ಕೆಳವರ್ಗದ ಜನತೆಯ ಬಗ್ಗೆ ಇವರಿಗಿದ್ದ ಪ್ರೀತ್ಯಾದರಗಳು ಹರಿಜನರನ್ನು ತಿರುಕುಲರೆಂದು ಕರೆದಿದ್ದು, ಮೇಲುಕೋಟೆಯ ತಿರುನಾರಾಯಣಸ್ವಾಮಿ ದೇವಾಲಯಕ್ಕೆ ಹರಿಜನರಿಗೆ ಪ್ರವೇಶವನ್ನು ಕಲ್ಪಿಸಿದ್ದು - ಇವೆಲ್ಲವೂ ಪ್ರಗತಿಪರವಾದ

ಸಾಧನೆಗಳೇ ಸರಿ. ಭಗವಂತನಲ್ಲಿ ಅಹೇತುಕವಾದ ನಿರ್ಮಲ ಪ್ರೇಮವನ್ನಿಟ್ಟು ಅವನಿಗೆ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕೆಂದು ಆಚಾರ್ಯರು ಸಾರಿದ್ದರು.

ಭಕ್ತಿಪಂಥವು ಸ್ತ್ರೀಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತಂದುಕೊಟ್ಟಿತು. ಇತಿಹಾಸದಲ್ಲಿಯೇ ಮೊದಲಬಾರಿಗೆ ಹೆಣ್ಣು ಮುಕ್ತವಾಗಿ ಆಧ್ಯಾತ್ಮ ಪ್ರಪಂಚವನ್ನು ಹೊಕ್ಕಿದ್ದು ಭಕ್ತಿ ಪಂಥದ ಗಮನಾರ್ಹ ಸಾಧನೆಗಳಲ್ಲಿ ಒಂದಾಗಿದೆ. ಸಾಮಾಜಿಕವಾಗಿ ಮಹಿಳೆಯನ್ನು ಮೇಲೆತ್ತುವ ದಿಸೆಯಲ್ಲಿ ಭಕ್ತಿ ಪಂಥ ಅಷ್ಟಾಗಿ ತೊಡಗಿಕೊಳ್ಳಲಿಲ್ಲವಾದರೂ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ನೀಡಿತು. ಮಧ್ಯಯುಗದ ಭಕ್ತಿ ಚಳವಳಿಗಳ ಸ್ತ್ರೀ ಕವಿ ಸಂತರ ಒಂದು ಸರಣಿಯೇ ಆನೇ ಶತಮಾನದ ತಮಿಳು ಕವಯಿತ್ರಿ ಕಾರೈಕ್ಕಲ್ ಅವ್ವೆಯಾರ್ ಅವರಿಂದ ಪ್ರಾರಂಭವಾಯಿತು. ನಾಯನಾರ್ ಚಳವಳಿಯ ಪ್ರಾರಂಭದ ಗೀತೆಗಳನ್ನು ಈಕೆಗೆ ಆಧ್ಯಾರೋಪಿಸಲಾಗಿದೆ. 'ಭಕ್ತಿ ಚಳವಳಿಗಳ ಕವಯಿತ್ರಿಯರು ಧರ್ಮದ ವ್ಯವಸ್ಥೆಯೊಳಗೆ ಮಾತ್ರ ಲಭ್ಯವಿದ್ದ ಅವಕಾಶಗಳನ್ನು ಮೊರೆ ಹೋಗಬೇಕಾದ ಪರಿಸ್ಥಿತಿ ಬದಲಾಗಿ ಮಹಿಳೆಯರ ಕಾವ್ಯ ಆಸ್ಥಾನ ಮತ್ತು ದೇವಸ್ಥಾನಗಳಿಂದ ಹೊರಟು ಹೊಲಗದ್ದೆಗಳ ಮುಕ್ತ ವಾತಾವರಣವನ್ನು, ಅವರ ಕ್ಷೇತ್ರಗಳನ್ನು ಮತ್ತು ಸಾಮಾನ್ಯ ಮಹಿಳೆಯ ಅಡುಗೆಯ ಕೋಣೆಯನ್ನು ಸಹ ವ್ಯಾಪಿಸಿದವು. ಭಕ್ತಿ ಕವಿಗಳು ಪ್ರಾದೇಶಿಕ ಭಾಷೆಗಳಲ್ಲಿ ಕಾವ್ಯ ರಚಿಸುವ ಮೂಲಕ ಸಾಹಿತ್ಯ ಮತ್ತು ಧರ್ಮಗಳ ಕ್ಷೇತ್ರದಲ್ಲಿ ಸಂಸ್ಕೃತ ಹೊಂದಿದ್ದ ಪ್ರಾಬಲ್ಯವನ್ನು ಉದ್ದೇಶಪೂರ್ವಕವಾಗಿಯೇ ಮುರಿಯತೊಡಗಿದರು. ಜನರು ಮಾತನಾಡುತ್ತಿದ್ದ ಮತ್ತು ಅರ್ಥಮಾಡಿಕೊಳ್ಳಲು ಸಾಧ್ಯವಿದ್ದ ಭಾಷೆಗಳಲ್ಲೇ ಜನಸಾಮಾನ್ಯರನ್ನು ಉದ್ದೇಶಿಸಿ ತಮ್ಮ ಗೀತೆಗಳನ್ನು ರಚಿಸಿದರು. ಬಹುತೇಕ ಪ್ರಾದೇಶಿಕ ಸಾಹಿತ್ಯಗಳು ತಮ್ಮ ಉಗಮವನ್ನು ಭಕ್ತಿ ಸಂತರ ಕಾವ್ಯಗಳಲ್ಲಿ ಗುರುತಿಸುತ್ತವೆ. ಈ ಭಕ್ತರು ತಮ್ಮ ಕಾವ್ಯವನ್ನು ಪರಿಚಿತ ಸಂದರ್ಭಗಳಲ್ಲಿರಿಸಿ ದುಡಿಯುವ ಮಂದಿಯ ದಿನ ನಿತ್ಯದ ಬದುಕಿನಲ್ಲಿ ತಮ್ಮ ಪ್ರತಿಮೆಗಳನ್ನು ಕಂಡುಕೊಂಡರು''[೩] ಭಕ್ತಿ ಪಂಥದಲ್ಲಿ ಬಹುಪಾಲು ಕವಿಗಳು ಮಹಿಳೆಯರಾಗಿದ್ದಾರೆ ಮತ್ತು ಇವರೆಲ್ಲರೂ ಸಮಾಜದ ನಿರ್ಬಂಧಿತ ಜೀವನಕ್ರಮದ ಬಗ್ಗೆ ಬಂಡೆದ್ದವರಾಗಿದ್ದಾರೆ, ಭಕ್ತಿ ಪಂಥ ಮಹಿಳೆಯರ ಬದುಕಿಗೆ ಹೊಸದೊಂದು ಭರವಸೆಗಳನ್ನು ತಂದುಕೊಟ್ಟಿತು. ''ಭಕ್ತಿ ಚಳವಳಿಗಳಿಂದ ಸ್ತ್ರೀ ಬರಹಗಳನ್ನು ಪರಿಗಣಿಸಿದರೆ. ಆ ಅವಧಿಯನ್ನು ಪಿತೃಪ್ರಧಾನ ವ್ಯವಸ್ಥೆಯ ನಿಯಂತ್ರಣಗಳನ್ನು ದಿಟ್ಟವಾಗಿ ಪ್ರಶ್ನಿಸಿದ ಹಾಗೂ ಸಾಮಾನ್ಯ ಸ್ತ್ರೀಯರ ಜೀವನಕ್ರಮ ಬದಲಾದಂಥ ಅವಧಿ ಎಂಬುದಾಗಿ ನೋಡುವ ಪ್ರೇರಣೆ ಉಂಟಾಗುತ್ತದೆ. ಈ ವರ್ಗಗಳಿಗೆ ಹೊಸದಾಗಿ ಲಭಿಸಿದ ಉಚ್ಛ್ರಾಯ ಸ್ಥಿತಿ, ಆತ್ಮಸಾಮರ್ಥ್ಯದ ಹೊಸ ಭಾವ ನಿತ್ಯಗಟ್ಟಲೆಯ ಮನೆಗೆಲಸಗಳಿಗೆ ನೀಡಲಾದಂಥ ಹೊಸ ಘನತೆ- ಇವು ಸ್ತ್ರೀಯರಿಗೆ ಒಂದು ಹೊಸ ಬಗೆಯ ಆತ್ಮವಿಶ್ವಾಸವನ್ನು ತಂದುಕೊಟ್ಟವು''[೪]. ಮಹಿಳೆಯರ ಮತ್ತು ಶೂದ್ರರ

೨ ಚಂದ್ರಶೇಖರಯ್ಯ : ಬಸವಣ್ಣ : ಕ. ಸಾ. ಅ. 1994 ಪು. 7 ಪ

೩. ಸಂ: ಮನು ಚಕ್ರವರ್ತಿ : ಭಾರತೀಯ ಸ್ತ್ರೀವಾದ : ಅಕ್ಷರ ಪ್ರಕಾಶನ ಪುಟ : ೮೬

೪. ಅದೇ : ಪುಟ : ೯೬

ಬದುಕಿನನಲ್ಲಿ ಕವಿದಿದ್ದ ಕತ್ತಲೆಯನ್ನು ತೊಡೆದುಹಾಕಿ ಅವರಲ್ಲಿ ಆತ್ಮವಿಶ್ವಾಸ ಕ್ರಿಯಾಶೀಲ ನಂಬಿಕೆಯನ್ನು ಹುಟ್ಟು ಹಾಕಿದ್ದಲ್ಲದೆ ಅಸಂಖ್ಯಾತ ಜನರ ಆತ್ಮಹೀನ ಬದುಕಿನಲ್ಲಿ ಆತ್ಮಜ್ಞಾನವನ್ನು ಉದ್ದೀಪನಗೊಳಿಸಿತು. ವ್ಯಕ್ತಿ ಸ್ವಾತಂತ್ರ್ಯದ ಅರಿವನ್ನು ಬೆಳೆಸಿತು. ಅಭಿವ್ಯಕ್ತಿ ಸ್ವಾತಂತ್ರ್ಯದ ಅರಿವನ್ನು ತಂದುಕೊಟ್ಟಿತು.

ಮಹಿಳೆಯರಿಗೆ ಆಧ್ಯಾತ್ಮಿಕ ಸ್ವಾತಂತ್ರ್ಯ ಲಭಿಸಿದ ಅಪೂರ್ವ ಉದಾಹರಣೆಗಳು ಚರಿತ್ರೆಯಲ್ಲಿ ಬೆರಳೆಣಿಕೆಯಷ್ಟಿವೆ. ಆದರೆ ಬೃಹತ್ ಪ್ರಮಾಣದಲ್ಲಿ ಮುಕ್ತವಾಗಿ ಚಳವಳಿಯೊಂದರಲ್ಲಿ ಮಹಿಳೆಯರು ಸಾಮೂಹಿಕವಾಗಿ ಪ್ರವೇಶಿಸಿದ್ದು ಸಕ್ರಿಯವಾಗಿ ಪಾಲ್ಗೊಂಡಿದ್ದು, ಮಹಿಳೆ ನಡೆದು ಬಂದ ಹಾದಿಯಲ್ಲಿ ಗುರುತ್ವದ ಮೈಲಿಗಲ್ಲು. ಭಕ್ತಿಪಂಥ ಮಹಿಳಾ ಸಮುದಾಯಕ್ಕೆ ಇಂತಹದೊಂದು ಅಪೂರ್ವ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಭಾವನಾ ಪ್ರಧಾನವಾದ ಭಕ್ತಿ ಮಾರ್ಗದಲ್ಲಿ ಸಾಮಾನ್ಯರೊಂದಿಗೆ ಸ್ತ್ರೀಯರೂ ತಂಡ ದೋಪಾದಿಯಲ್ಲಿ ಸಾಧನೆಗಳನ್ನು ಗೈದರು. ಈ ಹಿನ್ನೆಲೆಯಲ್ಲಿ ೧೨ನೇ ಶತಮಾನದಲ್ಲಿ ಬಸವಣ್ಣನವರು ಕೈಗೊಂಡ ಸ್ತ್ರೀ ಶಕ್ತಿ ಸಂಘಟನೆಯು ಭಕ್ತಿ ಪರಂಪರೆಯ ಮುಂದುವರಿಕೆಯಾಗಿ ಸ್ತ್ರೀಯರನ್ನು ವಚನ ಚಳವಳಿಯಲ್ಲಿ ಒಳಗೊಳ್ಳುವಲ್ಲಿ ಒಂದು ಹೆಜ್ಜೆ ಮುಂದೆ ಹೋಗಿದೆ.

ಬಸವಪೂರ್ವ ಯುಗದಲ್ಲಿ ಮಹಿಳೆಯ ಸ್ಥಾನ-ಮಾನಗಳನ್ನು ಎತ್ತಿ ಹಿಡಿಯುವಲ್ಲಿ ವೀರಶೈವ ಧರ್ಮದ ಶಾಖೆಗಳೂ ಸಹ ಶಕ್ತ್ಯಾನುಸಾರ ಕೊಡುಗೆ ನೀಡಿರುತ್ತವೆ. ಶೈವಧರ್ಮದ ಪ್ರಮುಖ ಶಾಖೆಗಳಲ್ಲಿ ಒಂದಾದ ಶಾಕ್ತಪಂಥವು ಮಹಿಳೆಯ ಪರವಾಗಿ ಪ್ರಥಮವಾಗಿ ದನಿ ಎತ್ತಿದ್ದು ಕಂಡುಬರುತ್ತದೆ. ಕ್ರಿ. ಶ. ೬ ರಿಂದ ೧೦ನೇ ಶತಮಾನದವರೆಗೂ ಶಾಕ್ತ ಪಂಥದ ಪ್ರಭಾವ ಭಾರತದಲ್ಲಿ ಪ್ರಬಲವಾಗಿದ್ದಿತು. ವೈದಿಕ-ಅವೈದಿಕ ಮತಧಾರೆಗಳ ಮೇಲೆ ಶಾಕ್ತ ಪಂಥದ ಪ್ರಭಾವ ವಿಪುಲವಾಗಿತ್ತೆಂಬುದಕ್ಕೆ ಆಯಾಯ ಮತಗಳಲ್ಲಿ ಈ ನಾಲ್ಕು ಶತಮಾನಗಳ ನಡುವಣ ಅವಧಿಯಲ್ಲಿ ಉಂಟಾದ ಸ್ಥಿತ್ಯಂತರಗಳು ಸಾಕ್ಷಿಯಾಗಿವೆ. ಶೈವ, ವೈಷ್ಣವ ಧರ್ಮಗಳೆರಡಲ್ಲೂ ತಾಂತ್ರಿಕ ಆರಾಧನೆ ರೂಢಿಗೆ ಬಂದದ್ದು ಶಾಕ್ತ ಪಂಥದ ಪ್ರಭಾವದಿಂದಲೇ. ಶಾಕ್ತರಲ್ಲಿ ಯಂತ್ರ, ಮಂತ್ರ, ಮುದ್ರಾನ್ಯಾಸ ಮುಂತಾದವುಗಳಿಗೆ ಪ್ರಥಮ ಪ್ರಾಶಸ್ತ್ಯ. ತ್ರಿಪುಂಡ್ರಧಾರಣೆ, ವರ್ಗ-ವರ್ಣ-ಲಿಂಗ ಅಭೇದ ಕಲ್ಪನೆ, ಗುರುವಿನ ಆಶ್ರಯ, ದೀಕ್ಷಾಧಾರಣೆ ಶಾಕ್ತರಲ್ಲಿ ರೂಢಿಯಲ್ಲಿದ್ದ ಧಾರ್ಮಿಕ ಆಚರಣೆಗಳು. ತಾಂತ್ರಿಕ ಆರಾಧನೆಯಲ್ಲಿ ಹೆಣ್ಣಿಗೆ ಪೂಜನೀಯ ಪ್ರಧಾನಸ್ಥಾನವಿದ್ದಿತು. ಹೆಣ್ಣನ್ನು ಹೊರತುಪಡಿಸಿ ಸಾಧನೆ ಸಿದ್ಧಿಯಾಗುತ್ತಿರಲಿಲ್ಲ. ಅಂತೆಯೇ ಶಿವಭಕ್ತಿಯೂ ಸಹ ಹೆಣ್ಣಿಲ್ಲದೆ ಪೂರ್ಣವಾಗುವುದಿಲ್ಲ. "ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂದು ವಚನಕಾರರು ಹೇಳುವಲ್ಲಿ ತಾಂತ್ರಿಕ ಶೈವ ಪಂಥಗಳ ಪ್ರಭಾವವನ್ನು ಗುರುತಿಸಬಹುದು.

ಶಾಕ್ತರು ಸ್ತ್ರೀ ಶಕ್ತಿ ಪೂಜಕರು. ಆದರೆ ಇವರದು ಗುಪ್ತ ಧಾರ್ಮಿಕಾಚರಣೆಯಾಗಿದ್ದುದ ರಿಂದ ಬಹಿರಂಗವಾಗಿ ಎಲ್ಲಿಯೂ ಶಾಕ್ತರ ತತ್ವ ಪ್ರತಿಪಾದನೆಯಾಗಲಿ, ದನಿಯಾಗಲಿ

ಕೇಳಿಬರಲಿಲ್ಲ. ಇವರ ಧಾರ್ಮಿಕ ಸಾಹಿತ್ಯ ಅನ್ಯರನ್ನು ತಲುಪಲಿಲ್ಲ. ವೈದಿಕ ಧರ್ಮ ಸ್ತ್ರೀಯನ್ನು 'ತಾಯಿ' ಎಂದು ಗೌರವಿಸಿದ ನೆಲೆಯಲ್ಲಿಯೇ ''ನ ಸ್ತ್ರೀ ಸ್ವಾತಂತ್ರ್ಯಮರ್ಹತಿ'' ಎಂದು ಸಾರಿ ಮಹಿಳೆಯ ಬದುಕನ್ನು ನಿಕೃಷ್ಟ ಸ್ಥಿತಿಗಿಳಿಸಿತು. ಆದರೆ ಶಾಕ್ತಪಂಥವು ಹೆಣ್ಣನ್ನು ತಾಯಿ ಎಂಬ ಭಾವನೆಯನ್ನು ಸ್ಥಾಯಿಯಾಗಿಯೇ ಉಳಿಸಿಬೆಳೆಸಿಕೊಂಡು ಬಂದಿತು. 'ಮಹಾನಿರ್ವಾಣ' ತಂತ್ರ ಎಂಬ ಧಾರ್ಮಿಕ ಗ್ರಂಥದಲ್ಲಿ ಶಾಕ್ತರು ಅಭಿವ್ಯಕ್ತಿಸಿರುವ ಸ್ತ್ರೀ ಸಂಬಂಧಿ ವಿಚಾರಗಳು ಅತ್ಯಂತ ಉದಾತ್ತವಾದವುಗಳಾಗಿವೆ. ''ಕುಟುಂಬದ ಯಜಮಾನ ತನ್ನ ಹೆಂಡತಿಯನ್ನು ಶಿಕ್ಷಿಸಕೂಡದು. ಬುದ್ಧಿವಂತ ಗಂಡನು ತನ್ನ ಹೆಂಡತಿ ಜೀವಂತವಿರುವಾಗ ಅನ್ಯಸ್ತ್ರೀಯರನ್ನು ಕೆಟ್ಟ ದೃಷ್ಟಿಯಿಂದ ನೋಡಕೂಡದು. ಹಾಗೆ ಮಾಡಿದ ಪಕ್ಷದಲ್ಲಿ ಆತ ನರಕಕ್ಕೆ ಹೋಗುವುದು ಖಂಡಿತ. ಆಭರಣ, ಅಲಂಕಾರ, ಪ್ರೀತಿ, ಮರ್ಯಾದೆ ಮತ್ತು ಮೃದು ಮಾತುಗಳಿಂದ ಆತ ತನ್ನ ಹೆಂಡತಿಯನ್ನು ಸಂಪ್ರೀತಳನ್ನಾಗಿಸಲು ಪ್ರಯತ್ನಿಸಬೇಕು. ಆಕೆಯ ಮನ ನೋಯುವ ಯಾವ ಕಾರ್ಯವನ್ನೂ ಮಾಡತಕ್ಕದ್ದಲ್ಲ ಇತ್ಯಾದಿ''. ಶಾಕ್ತ ಪಂಥವು ಸತೀ ಪದ್ಧತಿಯನ್ನು ನಿಷೇಧಿಸಿದೆ. ಹೆಣ್ಣಿನ ಮೇಲೆ ನಡೆಯುವ ಎಂತಹುದೇ ಪುರುಷ ದಬ್ಬಾಳಿಕೆಯನ್ನು ಅದು ಖಂಡಿಸುತ್ತದೆ. ಹೆಣ್ಣನ್ನು ಹಿಂಸಿಸುವವನಿಗೆ ಮರಣವೇ ತಕ್ಕ ಶಾಸ್ತಿ ಎಂದು ಸಾರುತ್ತದೆ. ಹೆಂಡತಿಯನ್ನು ಅಕಾರಣವಾಗಿ ತ್ಯಜಿಸಿದವನು ಕತ್ತೆಯ ಚರ್ಮವನ್ನು ಮೈಮೇಲೆ ಹೊದ್ದು ಭಿಕ್ಷಾ ಪಾತ್ರೆ ಹಿಡಿದುಕೊಂಡು ಏಳು (೭) ಮನೆಗಳಿಗೆ ಹೋಗಿ ''ಹೆಂಡತಿಯನ್ನು ಬಿಟ್ಟ ನನಗೆ ಭಿಕ್ಷೆ ನೀಡಿರಿ'' ಎಂದು ಕೇಳಲು ಹೇಳಿದೆ. ಯಜ್ಞ ಯಾಗಾದಿಗಳಲ್ಲಿ ಹೆಣ್ಣು ಪಶುವನ್ನು ಸಂಹರಿಸುವುದೂ ಸಹ ಪಾಪ ಕೃತ್ಯವೇ ಎಂದು ಸಾರಿದ ತಾಂತ್ರಿಕರ ಗುಪ್ತಸಾಧನೆಯ ಕಾರಣದಿಂದಾಗಿ ಧರ್ಮ ಪ್ರಚಾರಕ್ಕೆ ತೊಡಗದೆ ತಮ್ಮಲ್ಲಿಯೇ ಗುಪ್ತವಾಗಿ ಹುದುಗಿಸಿಕೊಂಡಿದ್ದರ ಫಲವಾಗಿ ಇವರ ಸ್ತ್ರೀಪರ ಉದಾತ್ತ ವಿಚಾರಧಾರೆ ವೈದಿಕ ಪರಂಪರೆಯ ಅಬ್ಬರದಲ್ಲಿ ಅಡಗಿ ಹೋಯಿತು.

ಶಾಕ್ತರು ಜಾತ್ಯಾತೀತರು, ಮತಾತೀತರು ಆಗಿದ್ದರು. ಯಾವುದೇ ವರ್ಗ, ವರ್ಣ, ಲಿಂಗ ಭೇದಗಳ ಕಲ್ಪನೆಯಿಲ್ಲದೆ ಸಾಮಾಜಿಕ ಅಸಮಾನತೆಯಿಲ್ಲದೆ ಸಹಜ ಸಾಧಕ ಸಿದ್ಧರಾಗಿದ್ದ, ಗುಪ್ತ ಸಾಧನೆಗಳಲ್ಲಿ ತೊಡಗಿದ್ದ ಗುಪ್ತ ಸಮಾಜದ ಸದಸ್ಯರನ್ನು ''ಇಷ್ಟ'' ಲಾಂಛನದ ಕೆಳಗೆ ಒಂದುಗೂಡಿಸಿ ಶಿವಶರಣರನ್ನಾಗಿ ಸಂಘಟಿಸಿದವರು ಬಸವಣ್ಣನವರು. ಈ ಹಿನ್ನೆಲೆಯಲ್ಲಿ ಬಸವಾದಿ ಶರಣರ ಎಲ್ಲಾ ಬಗೆಯ ಸಂಘಟನೆಗಳ ಹಿಂದೆ ತಾಂತ್ರಿಕ ಸಮಾಜದ ಪ್ರಭಾವವೂ ಇದ್ದಿತೆಂಬುದು ಸ್ಪಷ್ಟವಾಗುತ್ತದೆ.

ಸಾಮಾಜಿಕವಾಗಿ ಉಚ್ಚಶ್ರೇಣಿಗೆ ಸೇರಿದ ಮಹಿಳೆಯರಿಗೆ ಧರ್ಮವು ಸಮಾಜದಲ್ಲಿ ಪ್ರಾತಿನಿಧ್ಯವನ್ನಾಗಲಿ, ಸ್ಥಾನಮಾನವನ್ನಾಗಲಿ, ದನಿಯನ್ನಾಗಲಿ ನೀಡಿರಲಿಲ್ಲ. ಆದರೆ ಕೆಳವರ್ಗದ ಗ್ರಾಮೀಣ ಸಂಸ್ಕೃತಿಯಲ್ಲಿ ಕೌಟುಂಬಿಕ ಮಟ್ಟದಲ್ಲಿ ಮಹಿಳೆಯ ಸ್ಥಾನ ಮೇಲುಸ್ತರದಲ್ಲಿತ್ತು. ಈ ಸಂಸ್ಕೃತಿಯಲ್ಲಿ ಮಹಿಳೆಗೆ ಧಾರ್ಮಿಕವಾಗಿ ಆಯ್ಕೆಯ ಸ್ವಾತಂತ್ರ್ಯವಿತ್ತು. ಗಂಡ ಬೇರೊಂದು ಧರ್ಮಕ್ಕೆ ಮತಾಂತರ ಹೊಂದಿದರೂ ಹೆಂಡತಿಯಾದವಳು

ತಾನು ಮೊದಲಿನಿಂದಲೂ ಅನುಸರಿಸಿಕೊಂಡು ಬಂದ ಧರ್ಮಕ್ಕೆ ಅಂಟಿಕೊಂಡಿದ್ದಳೆಂಬುದಕ್ಕೆ ವಚನಗಳು ಸಮರ್ಥನೆ ನೀಡುತ್ತವೆ. ಮಹಿಳೆಗೆ ದುಡಿಯುವ ಹಕ್ಕಿದ್ದು ಗಂಡಿಗೆ ಸರಿಸಮಾನವಾಗಿ ವೃತ್ತಿ ನಿರ್ವಹಣೆ ಕೌಶಲ್ಯ ಸಾಧಿಸಿದ್ದಳು. ಮಾತೃ ಪ್ರಧಾನ ವ್ಯವಸ್ಥೆ ರೂಢಿಯಲ್ಲಿದ್ದು ತಾಯಾಳಿಕೆ, ತಾಯಿ ಹಕ್ಕುಗಳು ಚಲಾವಣೆಯಲ್ಲಿದ್ದವು. ಹೆಣ್ಣಿಗೆ ತೆರಕೊಟ್ಟು ಮದುವೆಯಾಗುವ ಪದ್ಧತಿ ಚಾಲ್ತಿಯಲ್ಲಿದ್ದಿತು. ವೈದಿಕ ಆಚರಣೆಗಳಿಗೆ ವಿರುದ್ಧವಾಗಿ ಕೂಡಿಕೆ, ವಿಧವಾ ವಿವಾಹ ಮೊದಲಾದವುಗಳನ್ನು ಅನುಸರಿಸುವ ಧೈರ್ಯದ ಮತ್ತು ಮಾನವೀಯ ಮೌಲ್ಯಗಳಿಂದ ಕೂಡಿದ ಗುಣಗಳು ಜಾನಪದೀಯ ಸಂಸ್ಕೃತಿಯಲ್ಲಿ ಹೇರಳವಾಗಿವೆ.

ಮೂಕ ಜನಕೋಟಿಯ ಅಲಿಖಿತ ದಾಖಲೆಗಳ ಬೃಹತ್ ಕಣಜವಾದ ಜನಪದ ಸಾಹಿತ್ಯವು ಸಂಪೂರ್ಣವಾಗಿ ಮಹಿಳೆಯ ಬದುಕಿನ ಹಂದರದ ಮೇಲೆಯೇ ಹಬ್ಬಿದೆ. ಆ ಕ್ಷಣ ಕೇಳಿದ್ದಕ್ಕೆ ಆ ಕ್ಷಣವೇ ಪ್ರತಿಕ್ರಿಯಿಸುವ, ಗ್ರಹಿಸುವ ಈ ಸಂಪ್ರದಾಯ ಮಹಿಳೆಗೆ ತಕ್ಕ ಮಟ್ಟಿನ ಅಭಿವ್ಯಕ್ತಿ ಸ್ವಾತಂತ್ರವನ್ನು ತಂದುಕೊಟ್ಟಿದೆ. ವೈದಿಕ ಪರಂಪರೆಯ ಹಿಡಿತದಲ್ಲಿದ್ದೂ ತೀರಾ ವಿಭಿನ್ನತೆಯನ್ನು ಉಳಿಸಿಕೊಂಡು ಬಂದಿರುವ ಜನಪದ ಬದುಕು ತನ್ನ ಜೀವನಕ್ರಮದಲ್ಲಿರುವ ಎಲ್ಲಾ ಬಗೆಯ ವೈಶಿಷ್ಟ್ಯಗಳನ್ನು ಸಾಹಿತ್ಯದಲ್ಲಿ, ಅಭಿವ್ಯಕ್ತಿಸಿರುತ್ತದೆ. ತಾನು ಪ್ರೀತಿಸಿದ ಹೆಣ್ಣು 'ಆಹುತಿ'ಯಾದ ಸ್ಥಳದಲ್ಲೇ ನೀರಿಗೆ ಬಿದ್ದು ಸಾಯುವ ಅಪೂರ್ವ ಪ್ರೇಮದ ಗಂಡು ಈ ಸಾಹಿತ್ಯದಲ್ಲಿ ಮಾತ್ರವೇ ಕಂಡುಬರುತ್ತಾನೆ. ಶ್ರುತಿ ಸಂಪ್ರದಾಯದಲ್ಲಿ ಮಹಿಳೆಯರದೆನ್ನಬಹುದಾದ ಅಭಿವ್ಯಕ್ತಿ ಪರಂಪರೆಯಲ್ಲಿ ಸಾಮಾನ್ಯವಾಗಿ ಪ್ರತಿಭಟನೆಯನ್ನು ಹಿಂದಕ್ಕೆಳೆಯುವ ಅಂಶಗಳು ಸಾಕಷ್ಟಿವೆಯಾದರೂ ಹೊರಗೂ ದುಡಿಯುವ ಗ್ರಾಮೀಣ ಹೆಣ್ಣಿನ ಆತ್ಮವಿಶ್ವಾಸದ ಸಹಜದನಿಯಲ್ಲಿ ಪ್ರತಿಭಟನೆಯ ಸತ್ವ ಅಲ್ಲಲ್ಲಿ ಕಾಣಸಿದೆ. 'ಬಾಳುವೆಗೆಟ್ಟು ಮತಿಗೆಟ್ಟು ಬಾಳಿದರೆ ಹೆತ್ತವರ ಕುಲಕೆ ಹಗೆಯಾದೆ' ಎಂಬ ಸದಾಚುಚ್ಚುವ ಎಚ್ಚರದಲ್ಲಿ ''ಅತ್ತೆಯ ಮನೆಯಲ್ಲಿ, ಹತ್ತಾರು ಬೈಗಳು ಉತ್ತಾರ ಬೇಡ ನನ ಮಗಳೆ' ಎಂದು ಅಭಿವ್ಯಕ್ತಿಯನ್ನು ಹತ್ತಿಕ್ಕುವ ಸತತ ಯತ್ನದ ನಡುವೆ 'ಮೂರಾಯ್ನ ಬಿಸಿಲ ವರತ್ಹಿಂಗ' ಎಂದು ಗಂಡನನ್ನು ಬಣ್ಣಿಸುವುದಾಗಲೀ 'ಬಿಟ್ಟಾಡಿಕೊಳುವ ವೈರೀಯ ಮನಿಮುಂದ ಬಿಚ್ಚುಗತ್ತ್ಯಾಗಿ ಹೊಳೆದೇನ' ಎಂಬ ದಿಟ್ಟತನವಾಗಲೀ, 'ಬಾಳೆ ಕಡಿದಾರೆ ತೋಟ ಹಾಳಾಗಬಲ್ಲದೆ, ಬಾಳಿಸಲಾರದೆ, ಮಡದೀಯ ಬಿಟ್ಟಾರೆ ಬಾಳೆ ಹಣ್ಣೇನೆ ಕೊಳಿಯಾಕೆ' ಎಂಬ ಸವಾಲಾಗಲೀ,. ಸ್ವತಂತ್ರವಾದ ಕೆಚ್ಚಿನ ಮನೋಭಾವವಿಲ್ಲದೆ ಬರುವಂಥದಲ್ಲ. ಇಂತಹ ಸ್ತ್ರೀಪರವಾದ ಸಾಹಿತ್ಯ ವಚನಕಾರರಿಗೆ ನೆರವಿಗೆ ಬಂದಿರುವುದಲ್ಲದೆ, ಏಕದೇವತೋಪಾಸನೆಯನ್ನು ಪ್ರತಿಪಾದಿಸುವ ರಭಸದಲ್ಲಿ ಕೆಳವರ್ಗದ ಸಂಸ್ಕೃತಿಯನ್ನು ಕ್ಷುದ್ರವೆಂದು ಖಂಡಿಸಿದ ವಚನಕಾರರೇ ಮುಂದೆ ಮಹಿಳಾ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ಕೆಳವರ್ಗದ ಸಂಸ್ಕೃತಿಯಿಂದಲೇ ಪ್ರೇರಣೆ ಪಡೆದರೆಂಬುದು ಮುಖ್ಯವಾಗುತ್ತದೆ.

ಒಟ್ಟಾರೆಯಾಗಿ ಶತಶತಮಾನಗಳಿಂದಲೂ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಾಹಿತ್ಯಕವಾಗಿ ವಂಚಿತಳಾದ ಹೆಣ್ಣು ಕೇವಲ ಹೆರಿಗೆಯಂತ್ರ

ಮಲದಭಾಂಡ, ಪಂಚಮ, ಶೂದ್ರಳೆಂದು ಕರೆಯಿಸಿಕೊಂಡವಳು ಶರಣರ ದಿವ್ಯಕ್ರಾಂತಿಯ ಪ್ರಭೆಯಲ್ಲಿ ತನ್ನ ಶಕ್ತಿ ಮತ್ತು ಅಸ್ತಿತ್ವವನ್ನು ಗುರುತಿಸಿಕೊಂಡಳು. ಸ್ತ್ರೀ ಪುರುಷನಿಗಿಂತ ಕೀಳಲ್ಲ. ತ್ರಿಪ್ತಿ ಆಸಕ್ತಿಗಳಿಂದ ಕೂಡಿದ ಆಚರಣೆಗಳಿಂದ ಅವಳಿಗೆ ಪುರುಷನನ್ನು ಮೀರಿ ಬೆಳೆಯಬಲ್ಲ ಶಕ್ತಿ ಇದೆ ಎಂಬುದನ್ನು ವಚನಕಾರರು ತೋರಿಸಿಕೊಟ್ಟರು. 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದು ಸಾರಿಕೊಂಡುಬಂದ ತತ್ತ್ವವನ್ನು ಧಿಕ್ಕರಿಸಿ ಸ್ತ್ರೀ ಶೂದ್ರಳೂ ಅಲ್ಲ, ಸ್ವಾತಂತ್ರ್ಯಕ್ಕೆ ಅನರ್ಹಳೂ ಅಲ್ಲ ಎಂಬುದನ್ನು ಸಾಧಿಸಿ ತೋರಿಸಿದರು. ಆತ್ಮೀಯತೆ, ಸ್ವಾತಂತ್ರ್ಯ, ಸ್ವಾಭಿಮಾನದ ಅರಿವನ್ನು ಮಹಿಳೆಯರಲ್ಲಿ ಮೂಡಿಸಿದರು. ಇದರಿಂದಾಗಿ ಜನಪರವಾದ ಕ್ರಾಂತಿಯಲ್ಲಿ ಮಹಿಳೆ ಮುಕ್ತವಾಗಿ ಪಾಲ್ಗೊಳ್ಳುವ ಅವಕಾಶ ಒದಗಿಬಂದಿತು. ಮಹಿಳೆಯರ ಬಗ್ಗೆ ಉದಾರ ನಿಲುವನ್ನು ತಾಳಿ ಅದನ್ನು ಸಾಕಾರಗೊಳಿಸಿ ಪ್ರತ್ಯಕ್ಷ ಕಾರ್ಯಾಚರಣೆಗೆ ತಂದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ವಚನಕಾರರ ಸ್ತ್ರೀವಾದಿ ನಿಲುವುಗಳು ಆರೋಗ್ಯಕರವಾದುವು. ಪ್ರಗತಿಪರ ವಾದವುಗಳಾಗಿದ್ದವು. ಅಂತರಂಗ ಬಹಿರಂಗ ಶುದ್ಧಿಗಳೆರಡನ್ನು ಏಕ ಕಾಲಕ್ಕೆ ಜಾಗೃತಗೊಳಿಸಿ ಈ ಉಭಯಶುದ್ಧಿಗಳ ಅಂಗವಾಗಿ ವಚನಕಾರರು ಸ್ತ್ರೀ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡಿದರು. ಸ್ತ್ರೀ ಪುರುಷರಿಬ್ಬರಿಗೂ ಪ್ರಾಧಾನ್ಯತೆ ಇರುವ ಸಮಾಜವನ್ನು ನಿರ್ಮಿಸಿ ಅದರೊಂದಿಗ ಆಧ್ಯಾತ್ಮಿಕತೆಯನ್ನು ಸಂಮಿಲನಗೊಳಿಸಿದರು. ಪ್ರಾಪಂಚಿಕ ಸ್ತರ ಪಾರಮಾರ್ಥಿಕ ಸ್ತರಗಳೆರಡರಲ್ಲಿಯೂ ಮಹಿಳೆಯ ಬದುಕಿಗೆ ಬದಲಾವಣೆ ತಂದುದರ ಫಲವಾಗಿ ಹೆಣ್ಣು ಏಕ ಕಾಲದಲ್ಲಿ ಸಾಮಾಜಿಕ ಸ್ವಾತಂತ್ರ್ಯದೊಂದಿಗೆ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಅನುಭವಿಸುವಂತಾಯಿತು. ಲಿಂಗಭೇದದ ಅಸಮಾನತೆಯನ್ನು ತೊಡೆದುಹಾಕಿ ಸ್ತ್ರೀಯನ್ನು ಸಮಾನತೆಯ ಸಹಭಾಗಿ ಎಂದು ಪರಿಗಣಿಸಿ ಎಲ್ಲಾ ಹಂತಗಳಲ್ಲಿಯೂ ಹೆಣ್ಣು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಲು ದಾರಿ ಮಾಡಿಕೊಟ್ಟರು. ಪರಿಣಾಮವಾಗಿ ಹತ್ತು ಹಲವು ಕಾಯಕಗಳಲ್ಲಿ ನಿರತರಾಗಿದ್ದ ಮಹಿಳೆಯರು ವಚನಾಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಕ್ರಿಯಾ ಚೇತನವಾಗಿ ವಚನಕಾರರ ನಿಲುವುಗಳು ಮಹತ್ವದ ಪಾತ್ರವನ್ನು ವಹಿಸಿ ಸಮಾಜದ ಬದುಕಿಗೆ ನಿರ್ಣಾಯಕವಾದ ನಿಲುವನ್ನು ನೀಡಿತು.

"ಶರಣಾರ ನೆನೆದಾರೆ ಸರಗೀಯ ಇಟ್ಟಂಗೆ"

ಡಾ॥ಚಕ್ಕೆರೆ ಶಿವಶಂಕರ್

ಜನತೆಯ ನಾಲಿಗೆಯ ತೂಗುದೊಟ್ಟಿಲಿನ ಮೇಲೆ ನರ್ತಿಸುತ್ತಾ ಜನಸಾಮಾನ್ಯರ ಸರ್ವತೋಮುಖ ಅಭಿವ್ಯಕ್ತಿಯಾಗಿ ಮನುಷ್ಯ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ ತಲೆಮಾರುಗಳಿಂದಲೂ ಮೌಖಿಕ ಪರಂಪರೆಯಲ್ಲಿ ತೇಲಿ ಬಂದ ಜನಪದ ಸಾಹಿತ್ಯವು ದುಡಿಮೆಯ ಜತೆಯಲ್ಲಿಯೇ ಹುಟ್ಟಿಬಂದದ್ದು. ಜನ ಸಮುದಾಯದ ವೈಶಿಷ್ಟ್ಯ ಪೂರ್ಣ ಧೋರಣೆ ಹಾಗೂ ನಂಬಿಕೆಗಳ ಸಮೂಹಪ್ರಜ್ಞೆಯ ಫಲವಾಗಿ ಹುಟ್ಟಿದ ಈ ಸಾಹಿತ್ಯವು ವೈಷ್ಟೀಕೃತವಾದರೂ ಸಮಷ್ಟಿಯ ಸ್ವತ್ತು. ಅನಾಮಿಕನೊಬ್ಬ ಸೃಷ್ಟಿಸಿ ನಾಡಿನ ಮೇಲೆ ಹರಿಯಬಿಟ್ಟುದನ್ನು ಇಡೀ ಜನಾಂಗವೇ ತನ್ನದನ್ನಾಗಿಸಿಕೊಂಡು ಸಾಮೂಹಿಕವಾಗಿ ಪುನರ್ ಸೃಷ್ಟಿಸುತ್ತಾ ಬಂದಿರುವುದರಿಂದ ಇಲ್ಲಿ ಕೇಳಿ ಬರುವುದು ಒಬ್ಬರ ದನಿಯಲ್ಲ; ಸಮುದಾಯದ ದನಿ, ಜೀವನ ಶ್ರದ್ಧೆಯಿಂದ, ಅದನ್ನು ಜೀವನ ಪ್ರೀತಿಯಿಂದ ಹುಟ್ಟಿದ ಜನಪದ ಸಾಹಿತ್ಯವು ಅನಕ್ಷರಸ್ಥ ಬದುಕಿನ, ಅವಕಾಶ ವಂಚಿತರ, ಪದದಲಿತರ ನೋವು ನಲಿವಿನ ದಾಖಲೆ 'ಉಂಡೂಟ ಉಂಡಂಗೆ ಕಂಡ ಕನಸು ಕಂಡಂಗೆ' ಹೇಳುವುದೇ ಈ ಸಾಹಿತ್ಯದ ಬಹು ಮುಖ್ಯ ಲಕ್ಷಣ. ಇದರ ಸೃಷ್ಟಿಕರ್ತರಿಗೆ ಬದುಕು ಪ್ರಧಾನವಾಗಿದ್ದಿತೇ ಹೊರತು ಸಾಹಿತ್ಯ ರಚನೆಯಲ್ಲ. ಅಂದಂದಿನ ದಂದುಗಕ್ಕೆ ಮೈಸೋತು, ಮನ ತೆರೆದಾಗ ತಾನೇ ತಾನಾಗಿ ಹೊರಹೊಮ್ಮಿದ್ದು ವರ್ಡ್ಸ್‌ವರ್ಥ್ ಹೇಳುವ. "The spontaneous overflow of powerful feelings" ಎಂಬ ಮಾತು ಅರ್ಥ ಸಾಧಿಸಿದ್ದೇ ಇಲ್ಲಿ. ಬದುಕಿನ ಸಮಸ್ತ ಅನುಭವಗಳನ್ನು ತೋಡಿಕೊಳ್ಳುವಾಗ ವಸ್ತುವಿನ ಆಯ್ಕೆಯ ಬಗೆಗಾಗಲಿ, ಬಳಸುವ ಭಾಷೆಯ ಬಗೆಗಾಗಲಿ ಯಾವುದೇ ಮಡಿವಂತಿಕೆ, ಸಂಕೋಚಗಳನ್ನು ಇರಿಸಿಕೊಳ್ಳದೆ ಸ್ವಚ್ಛಂದವಾಗಿ ರೂಪುಗೊಂಡದ್ದು ಜನಪದ ಸಾಹಿತ್ಯ. ಇಲ್ಲಿನ ವಸ್ತು ಬದುಕಿನ ವಿಸ್ತಾರ ಲೋಕದ ಚಿತ್ತಾರ. ದೇವರಲ್ಲಿ, ಗುರು ಹಿರಿಯರಲ್ಲಿ ಭಕ್ತಿ, ಊರನ್ನು ಕುರಿತ ಪ್ರೇಮ, ಮನೆಯನ್ನು ಕುರಿತಾದ ಹೆಮ್ಮೆ, ಬಂಜೆಯ ಬೇಸರ, ತಾಯ್ತನದ ಸಂತಸ, ತವರಿನ ಹಂಬಲ, ಬಡತನದ ಬೇಗೆ, ಮೆಚ್ಚಿದ ಹೆಣ್ಣಿನ ಪ್ರೀತಿ, ಹೀಗೆ ನೂರೆಂಟು ಬಗೆ. ಭಾಷೆ ಇಲ್ಲಿ ಅನುಭವದ ವಾಹಕವಷ್ಟೆ. ಬೌದ್ಧಿಕ ಚಮತ್ಕಾರಗಳಾಗಲಿ, ಭಾಷಾ ಬಳಕೆಯಲ್ಲಿನ ಅಭಿನಯಗಳಾಗಲಿ ಇಲ್ಲಿಲ್ಲ. ಇರುವುದೆಲ್ಲವೂ ಸರಳ, ನೇರ, ಸ್ಪಷ್ಟ. ಹೃದಯದಿಂದ ಹೃದಯಕ್ಕೆ ನೇರವಾಗಿ

ಹರಿದುಬರುವ ಪರಿ. ವೈಯಕ್ತಿಕ ಆಸೆ ಅನಿಸಿಕೆಗಳಿಗಿಂತಲೂ ಹೆಚ್ಚಾಗಿ ಸಮುದಾಯದ ಆಸೆ ಅನಿಸಿಕೆಗಳಿಗೇ ಪ್ರಾಧಾನ್ಯ. ವ್ಯಕ್ತಿಯ ಬದುಕನ್ನು ಒಟ್ಟು ಸಾಮಾಜಿಕ ಬದುಕಿನ ಸಂದರ್ಭದಲ್ಲಿಟ್ಟು ನೋಡುವುದು ಇಲ್ಲಿನ ವಿಶೇಷ. ಗುರು ಹಿರಿಯರ ಕುರಿತಾಗಲಿ, ಪ್ರಿಯ ಪ್ರಜೆಗಳ ವಿಷಯವಾಗಲಿ ಹೇಳುವಾಗ ತನ್ನದೇ ಆದ ಮೌಲ್ಯಗಳನ್ನು ಇರಿಸಿಕೊಂಡಿರುವುದು ಈ ಸಾಹಿತ್ಯದ ಪ್ರಧಾನ ಗುಣ. ಆದ ಕಾರಣವೇ ಜನಪದ ಸಾಹಿತ್ಯದ ಸಂಬಂಧ ಯಾವುದೇ ಭಾಷಾ ಸಾಹಿತ್ಯಕ್ಕಿದ್ದರೂ ಆರೋಗ್ಯಕರವಾದ ಸಂಬಂಧವೇ ಸರಿ.

ಜನಪದ ಸಂಸ್ಕೃತಿಯಲ್ಲಿ ಸಮುದಾಯವನ್ನು ನಿರ್ದಿಷ್ಟ ದಿಕ್ಕಿನಲ್ಲಿ ನಡೆಸಿಕೊಂಡು ಬಂದ ಹಲವಾರು ಶಕ್ತಿಗಳಲ್ಲಿ ಧರ್ಮವೂ ಒಂದು. ಅನಾದಿ ಕಾಲದಿಂದಲೂ ಧರ್ಮವು ಜನಪದರ ಜೀವನವಾಹಿನಿಯಲ್ಲಿ ಅವಿನಾಭಾವವಾಗಿ ಬೆರೆತುಕೊಂಡು ಬಂದಿರುತ್ತದೆ. ಹನ್ನೆರಡನೆಯ ಶತಮಾನ ಸಮುದಾಯದ ಬದುಕಿನಲ್ಲಿ ಕನ್ನಡ ನಾಡಿನಲ್ಲಿ ಪರಿವರ್ತನೆಯ ನೂತನ ಮನ್ವಂತರವನ್ನು ಸಾಧಿಸಿದ ಕಾಲ. ಸಮಗ್ರ ಜನ ಬದುಕಿನ ಜಡ್ಡುಗಟ್ಟಿದ ಪರಂಪರೆಗಳನ್ನು, ನಂಬಿಕೆಗಳನ್ನು, ಮೌಢ್ಯವನ್ನು ಬುಡಮಟ್ಟ ಅಲ್ಲಾಡಿಸಿ ವರ್ಣ ವ್ಯವಸ್ಥೆಯ, ವರ್ಗಭೇದದ ಶೋಷಿತ ಚೌಕಟ್ಟುಗಳನ್ನು ಕಿತ್ತೆಸೆದು 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಹೊಸ ದೃಷ್ಟಿಕೋನವನ್ನು ಬಿತ್ತಿ ಬೆಳೆಯಿಸಿದ್ದು ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಶಿವಶರಣರ ಆಂದೋಳನ. ವೈದಿಕ ಧರ್ಮದ ಪಟ್ಟಭದ್ರ ಹಿತಾಸಕ್ತಿಗಳ ನಿರಂತರ ಸುಲಿಗೆ ಹಾಗೂ ಬಹು ದೇವತೋಪಾಸನೆಯ ಗೊಂದಲಕ್ಕೆ ಸಿಲುಕಿ ಬಳಲಿ ಬೆಂಡಾಗಿದ್ದ ಜನ ಸಮುದಾಯಕ್ಕೆ ತಂಪನ್ನು, ನೆಮ್ಮದಿಯನ್ನು, ವಿಚಾರ ಪ್ರಜ್ಞೆಯನ್ನು ತಂದುಕೊಟ್ಟ ಶಿವಶರಣರ ಸಮಸಂಸ್ಕೃತಿಯ ಶರಣ ಧರ್ಮವನ್ನು ಜನಪದರು ಒಪ್ಪಿ ಅಪ್ಪಿಕೊಂಡರು. ಶರಣರ ಕ್ರಾಂತಿಯ ಮುಖ್ಯ ವಾಹಿನಿಯಲ್ಲಿ ಒಂದಾದರು : ಆಂದೋಳನವನ್ನು ಬೆಳೆಯಿಸಿದರು.

ಜನಪದರು ಶರಣರ ಸಂಪೂರ್ಣ ಪ್ರಭಾವಕ್ಕೊಳಗಾಗಲು ಇದ್ದಿರಬಹುದಾದ ಕಾರಣಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು

೧. ಶಿವಶರಣರು ತಮ್ಮ ಕಾಲದ ಬದುಕಿನೊಂದಿಗೆ ಸಾವಯುವ ಸಂಬಂಧವನ್ನಿರಿಸಿಕೊಂಡಿದ್ದುದು.
೨. ಅನಕ್ಷರಸ್ಥ ಸಮುದಾಯದ ನಾಲಿಗೆಗಳಲ್ಲಿ ಜೀವಂತವಾಗಿ ಪ್ರವಹಿಸುತ್ತಿದ್ದ, ಸ್ಪಂದಿಸುತ್ತಿದ್ದ ಜನ ಭಾಷೆಯ ಎಲ್ಲಾ ಸಾಧ್ಯತೆಗಳನ್ನು ಶಿವಶರಣರು ದುಡಿಸಿಕೊಂಡಿದ್ದು.
೩. ಬಹುತೇಕ ಶಿವಶರಣರು ಸಮಾಜದ ಅತ್ಯಂತ ಕೆಳಸ್ತರದಿಂದ ಬಂದು ಶರಣರಾಗಿ ಗೌರವಾನ್ವಿತರಾದದ್ದು.
೪. ಶರಣರು ಕಾಯಕಕ್ಕೆ ನೀಡಿದ ಮಹತ್ವ ಮತ್ತು ಅತೀವವಾದ ಕಾಯಕನಿಷ್ಠೆಯನ್ನು ಪ್ರದರ್ಶಿಸಿದ್ದು.
೫. ಶ್ರಮಿಕ ವರ್ಗದಿಂದ ಬಂದ ಶರಣರು ಶ್ರಮಕ್ಕೆ ಗೌರವವನ್ನು ತಂದುಕೊಟ್ಟಿದ್ದು.

೬. ಸಮಾಜದ ಅರ್ಧದಷ್ಟು ಜನಸಂಖ್ಯೆಯಲ್ಲಿದ್ದ ಮಹಿಳೆಯರ ಬಗ್ಗೆ ಅತ್ಯಂತ ಉದಾರವಾದೀ ನಿಲುವುಗಳನ್ನು ತಳೆದು ವ್ಯಕ್ತಿ ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ತಂದುಕೊಟ್ಟಿದ್ದು.

೮. ಎಲ್ಲಕ್ಕಿಂತ ಮಿಗಿಲಾಗಿ ಸಮಾಜದ ಬಹುಸಂಖ್ಯಾತರಾದ ಕೆಳವರ್ಗದ ಜನತೆಯ ಪಾಲಿಗೆ ಮುಚ್ಚಿದ್ದ ಅಕ್ಷರದ ಬಾಗಿಲನ್ನು ತೆರೆದದ್ದು.

ಶರಣರ ಬದುಕು, ನಡೆನುಡಿಗಳಲ್ಲಿನ ಪ್ರಾಮಾಣಿಕತೆ, ನಡೆ ನುಡಿಗಳಲ್ಲಿ ಕಂದರವಿಲ್ಲದ್ದು, ಸರಳತೆ, ನಿಷ್ಕಾಪಟ್ಯಗಳು ಜಾನಪದಗಳ ಪ್ರಭಾವಲಯವನ್ನು ಪ್ರವೇಶಿಸಿದವು. ಶರಣರ ನಿಸ್ಪೃಹತೆಯಿಂದ ಕೂಡಿದ ಬದುಕು, ಸಮತೆ, ಸಮಾಧಾನ, ಸಹಜಾನಂದ ಯೋಗದಲ್ಲಿ ಬಾಳುವುದನ್ನು ಕಲಿಸಿದ ಶರಣರ ಜೀವನ ದರ್ಶನವನ್ನು ಜನಪದರು ಸಾರಾಸಗಟಾಗಿ ಸ್ವೀಕರಿಸಿದ್ದರ. ಫಲವಾಗಿ ಇಂದೂ ಸಹ ಅಕ್ಷರಸ್ಥರ ಅಭಿವ್ಯಕ್ತಿಗಳನ್ನು ಮೀರಿ ಭಿನ್ನ ನೆಲೆಯಲ್ಲಿ ಅನಕ್ಷರಸ್ಥರ ಬಾಯಲ್ಲಿ ಶಿವಶರಣರು ಬದುಕಿದ್ದಾರೆ. ತಮಗೆ ಹಾಗೂ ತಮ್ಮ ಬದುಕಿಗೆ ಹೊಣೆಯಾಗಿ ನಿಂತ ಶರಣರ ಜೀವನ ಸಂದೇಶಗಳು, ಸಾಧನೆಗಳು ಬಿಡಿ ಗೀತೆಗಳಲ್ಲಿ, ಕಥನಗೀತೆಗಳಲ್ಲಿ, ಖಂಡ ಕಾವ್ಯಗಳಲ್ಲಿ, ಮಹಾಕಾವ್ಯಗಳಲ್ಲಿ ಬಯಲಾಟಗಳಲ್ಲಿ ಅರಳಿ ನಿಂತಿವೆ.

ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು ಸಮಗಾರಿಕೆಯನ್ನೇ ತನ್ನ ಕಾಯಕವನ್ನಾಗಿಸಿಕೊಂಡು ಆ ಮೂಲಕ ಪರಮಾರ್ಥ ಜ್ಞಾನವನ್ನು ಗಳಿಸಿ ಶಿವ ಸಂಸ್ಕೃತಿಯಲ್ಲಿ ಮೇರುಪ್ರಾಯನೆನಿಸಿದ ಮಾದರ ಚನ್ನಯ್ಯನಿಂದ ಮೊದಲುಗೊಂಡು ವೈರಾಗ್ಯನಿಧಿ ಅಲ್ಲಮಪ್ರಭುವಿನವರೆಗೂ ಜನಪದರ ಮೇಲೆ ಪ್ರಭಾವ ಬೀರಿದ ಶರಣರು ಒಬ್ಬಿಬ್ಬರಲ್ಲ. ಬಸವಣ್ಣ, ಚನ್ನಬಸವಣ್ಣ, ಘನಶರಣ ಹರಳಯ್ಯ, ಇಳಿಹಾಳ ಬೊಮ್ಮಯ್ಯ, ನುಲಿಗೆ ಚಂದಯ್ಯ, ಮಡಿವಾಳ ಮಾಚಯ್ಯ, ಮೇದರ ಕೇತಯ್ಯ, ಕುಂಬಾರ ಗುಂಡಯ್ಯ, ನೇಗಿಯ ಅಮುಗಯ್ಯ, ಹೂಗಾರ ಮಾದಯ್ಯ, ಕಿನ್ನರಿ ಬೊಮ್ಮಯ್ಯ, ಅಂಬಿಗರ ಚವುಡಯ್ಯ, ಅಕ್ಕಮಹಾದೇವಿ, ಅಕ್ಕ ನಾಗಮ್ಮ, ನಿಜಭಕ್ತಿಯುಳ್ಳ ನೀಲಮ್ಮ, ಬಿಜ್ಜಮಹಾದೇವಿ ಹೀಗೆ ದೊಡ್ಡ ಪಟ್ಟಿಯೇ ಆಗುತ್ತದೆ.

ಜನಪದರಿಗೆ ನಾಡ ಮೇಲಿನ ಎಲ್ಲಾ ಶರಣರ ಬಗೆಗೂ ಭಕ್ತಿ ಗೌರವಗಳಿವೆ. ಕಾಯಕ ನಿಷ್ಠ ಸಮಾಜದಲ್ಲಿ ಆಳರಸನಾಗಲಿ, ದೇವರಾಗಲಿ ಅವರಿಗೆ ಮುಖ್ಯವೆನಿಸಲಿಲ್ಲ. ಬದಲಾಗಿ, ದುಡಿಮೆಗೆ ಅದು ಎಂತಹುದೇ ಆಗಿರಲಿ, ಗೌರವ ತಂದಿತ್ತ ಶರಣರು ತಮ್ಮ ನಡೆ ನುಡಿಗಳಿಂದ ಜನಪದರ ಕಂಗಳಲ್ಲಿ ದೊಡ್ಡವರೆನಿಸಿಕೊಂಡರು; ದೇವರುಗಳಾದರು. ಕಾಯಕದ ಮುಖಾಂತರವೇ ದೈವತ್ವಕ್ಕೇರಿದ ಶರಣರನ್ನು ಕಾಯಕ ಸಂಸ್ಕೃತಿ ತಮ್ಮವರನ್ನಾಗಿಸಿಕೊಂಡಿತು. ಕಾಯಕ ನೆನೆಯರಿಕೆ ಜನಪದರ ಉಸಿರಾಯಿತು; ಶ್ರದ್ಧೆಯಾಯಿತು. ಫಲವಾಗಿ ಕರ್ನಾಟಕದಾದ್ಯಂತ ಶಿವಶರಣರ ಬಗ್ಗೆ ಸಾಕಷ್ಟು ಜನಪದ ಗೀತೆ ಸಾಹಿತ್ಯ ಲಭ್ಯವಿದೆ.

ಉತ್ತರ ಕರ್ನಾಟಕದಲ್ಲಿ ಶರಣರನ್ನು ಕುರಿತಾದಂತೆ ಕೋಲುಪದ, ಗರತಿ ಹಾಡು,

ಡೊಳ್ಳಿನ ಪದ, ಹೋಳಿ ಹಾಡು, ಗೀಗೀಪದ, ದುಂಡಮೆ ಪದ, ಲಾವಣಿ ಮೊದಲಾದ ವಿವಿಧ ಛಂದೋಗತಿಗಳ ಬಿಡಿ ಗೀತ ಸಾಹಿತ್ಯ ಕಂಡುಬರುತ್ತದೆ. ಈ ಎಲ್ಲಾ ಹಾಡುಗಳಲ್ಲಿಯೂ ಶರಣರ ಬಗೆಗಿನ ಭಕ್ತಿ, ಶ್ರದ್ಧೆಗಳು ತುಂಬಿ ತುಳುಕಾಡುತ್ತವೆ.

ಶರಣರ ನೆನೆದಾರೆ ಸರಗೀಯ ಇಟ್ಟಾಂಗ
ಅರಳ ಮಲ್ಲಿಗೆ ಮುಡಿದ್ಹಂಗ-ಕಲ್ಯಾಣ
ಶರಣರ ನೆನೆಯೊ ನನ ಮನವೆ ॥

ಎಂದು ಪ್ರತಿಯೊಬ್ಬ ಜಾನಪದಿಯು ಕಲ್ಯಾಣದ ಶರಣರನ್ನು ಒಕ್ಕೊರಲಿನಿಂದ, ಒಮ್ಮನಸ್ಸಿನಿಂದ ನೆನೆಯುತ್ತಾನೆ. ಶರಣರ ನೆನಪು ಶಿವಪದವನ್ನು ಕೊಡುವ ಸಿದ್ಧಿಮಂತ್ರವೇ ಸರಿ. ಬಸವಣ್ಣನವರ ಬಗ್ಗೆ ಜನಪದರಿಗೆ ಅಪಾರವಾದ ಭಕ್ತಿ, ಎಲ್ಲಿಲ್ಲದ ಅಭಿಮಾನ. ಅವರ ಬಗ್ಗೆ ಎಷ್ಟು ಹಾಡಿ ಹೊಗಳಿದರೂ ಅವರ ಮನಸ್ಸು ತಣಿಯದು; ದಣಿಯದು. 'ಬೆಳಗಾಗ ನಾನೆದ್ದು ಯಾರ್ಯಾರ ನ್ಯನಿಯಾಲಿ, ನಮ್ಮಗುರು ತಂದೆ ಕಲ್ಯಾಣದ ಬಸವಯ್ಯ ಮುಂಜಾನ ದರುಶನವ ನೀಡಾನೆ'' ಎನ್ನುವಲ್ಲಿ ಭಕ್ತಿ ಭಾವುಕತೆ, ನಾಡಿನಾದ್ಯಂತ ಶಿವ ಬೆಳಕನ್ನು ತಂದು ಚೆಲ್ಲಿದ ಬಸವಣ್ಣನ ಬಲ್ಲಿದ ತನದ ಕೀರ್ತಿಯೊಂದಿಗೆ ಮಿಳಿತವಾಗಿದೆ. ಜನಪದರ ಬಸವಾರ್ಪಣೆ ಅವರ ಶಿವನಿಷ್ಠೆಗೆ ಸಂಕೇತವಾಗಿದೆ. ಬಸವಣ್ಣನನ್ನು ಕಾಣುವುದಂತಿರಲಿ ಬಸವನ ಹೆಸರು ಕಿವಿಗೆ ಬಿದ್ದರೂ ಸಾಕು:

ಉತ್ತ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವ ಮಂತ್ರ ನಿನ್ಹೆಸರು-ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥

ಬಸವ ಮಂತ್ರ ಜಪದಿಂದ ಲೌಕಿಕ ಉದ್ಧಾರವಷ್ಟೇ ಅಲ್ಲ. ಆತ್ಮ ವಿಕಸನಕ್ಕೆ ದಾರಿ. ದೈನಂದಿನ ದುಡಿಮೆಯಲ್ಲಿ ಕ್ಷಣ ಕ್ಷಣಕ್ಕೆ ವ್ಯಕ್ತಿಯನ್ನು ಉತ್ಸಾಹಿಯನ್ನಾಗಿಸಿ, ಕ್ರಿಯಾಶೀಲನನ್ನಾಗಿಸಿ ಕಾಯಕದತ್ತ, ಮೋಕ್ಷದ ಹಾದಿಯೆಡೆಗೆ ಕೈಹಿಡಿದು ನಡೆಸುವ ಸತ್ಯ ಶಿವ ಮಂತ್ರ, ಜನಪದರ ಪಾಲಿಗೆ.

ಕನ್ನಡ ನಾಡಿನ ತುಂಬೆಲ್ಲಾ ಬಸವಣ್ಣನವರ ಬಗ್ಗೆ ವಿಪುಲವಾದ ಜನಪದ ಸಾಹಿತ್ಯ ಸಾಮಗ್ರಿ ಹುದುಗಿದೆ. ಹೆಂಗಸರು ಮಕ್ಕಳೆನ್ನದೆ, ಆಬಾಲವೃದ್ಧರಾದಿಯಾಗಿ ಬಸವಣ್ಣನವರ ಬದುಕಿನ ಸಂಗತಿಗಳನ್ನು ಹಾಡುಕಟ್ಟಿ ಹರಿಯಬಿಟ್ಟಿದ್ದಾರೆ. ಕೇವಲ ಬಿಡಿಗೀತೆಗಳಲ್ಲೇ ಅಲ್ಲದೆ ವಿವಿಧ ಪಠ್ಯಗಳನ್ನೊಳಗೊಂಡ ಉತ್ಕೃಷ್ಟ ಕಾವ್ಯ, ಖಂಡಕಾವ್ಯಗಳೂ ಲಭ್ಯ ಇವೆ. ಕ್ಷೇತ್ರ ಪರಿವೀಕ್ಷಣೆಯಿಂದ ಈ ಎಲ್ಲಾ ಸಾಮಗ್ರಿಯನ್ನು ಕಲೆ ಹಾಕಿ ಸಮಗ್ರವಾಗಿ ಪರಿಶೀಲಿಸಿ ಸಂಪಾದಿಸಿದರೆ ಕನ್ನಡ ಜನಪದ ಸಾಹಿತ್ಯ ಭಂಡಾರಕ್ಕೆ ಮತ್ತೊಂದು ಮಹೋನ್ನತ ಮಹಾಕಾವ್ಯ ಸೇರ್ಪಡೆಯಾಗುವುದರಲ್ಲಿ ಸಂದೇಹವಿಲ್ಲ.

ಒಕ್ಕಳಕ್ಕೆ ಹಾಕಿ ಒಂದು ಮಾನ ಬ್ಯಾಳಿ ಒಂದು ಬದನೆಕಾಯಿ ಹಾಕಿ ಲಕ್ಷದ ಮ್ಯಾಲೆ

ತೊಂಬತ್ತಾರು ಸಾವಿರ ಜಂಗಮರಿಗೆ ಆರೋಗಣೆ ಮಾಡಿಸಿದ ಘನ ಶರಣೆ ನೀಲಮ್ಮನನ್ನು ಕಂಡರೆ ಜನಪದರಿಗೆ ಎಲ್ಲಿಲ್ಲದ ಪ್ರೀತಿ. ತಮ್ಮ ಮನೆಯ ಹೆಣ್ಣುಮಗಳು ತವರಿಗೆ ಹೂವ ತಂದಳೆನ್ನುವ ಹೆಮ್ಮೆ. ನೀಲಮ್ಮನನ್ನು ಕುರಿತಾದಂತೆ ವಿಸ್ತಾರವಾದ ಕಾವ್ಯ ಲಭ್ಯ ಇರುವುದಿಲ್ಲವಾದರೂ ಬಿಡಿಗೀತೆಗಳಿಗೆ ಕೊರತೆ ಇಲ್ಲ. ನೀಲಮ್ಮನ ನಿಜಭಕ್ತಿಗೆ ಮನಸೋತ ಜನಪದರು ಹಾಡಿ ಹೊಗಳಿದ್ದಾರೆ

ನೀಲಮ್ಮ ನಿನ್ನಂಥ ನಿಜಭಕ್ತಿ ಕೊಡು ನಮಗೆ
ಮಾಡೀದ ಜೋಗ ತವ ನಿಧಿ -ಶರಣರಿಗೆ
ನೇಮದ ಭಕ್ತಿ ಕೊಡು ನಮಗೆ ॥

ಮಹಾಮನೆಯ ದಾಸೋಹದ ಹೊಣೆ ಹೊತ್ತ ನೀಲಮ್ಮ ಸದಾ ಪತಿಯ ಕೈಂಕರ್ಯದಲ್ಲಿ ನಿರತಳು. ನೀಲಮ್ಮನ ದಾಸೋಹ ನಿಷ್ಠೆಯ ಬಗ್ಗೆ :

ಶರಣರು ಬಂದವರೆ ಶರಣೆ ನೀ ಎಡೆ ಮಾಡೆ
ಸೆರಳಿಗೆ ಪಾಯಸ ತಿಳಿದುಪ್ಪ-ನೀಲಮ್ಮ
ಶರಣೆ ಜಂಗಮರಿಗೆ ನೀ ಎಡೆ ಮಾಡೆ

ತನ್ನ ಮಡದಿ ಪೃಥ್ವಿಗಗ್ಗಳ ಚಲುವೆ ನೀಲಲೋಚನೆಗೆ ಪುತ್ರ ಸಂತಾನವಿಲ್ಲದ ದುಃಖ ಬಸವಣ್ಣನವರನ್ನು ಬಾಧಿಸುತ್ತಿತ್ತು ಎಂಬಂಶವನ್ನು ಜನಪದರು ದಾಖಲು ಮಾಡಿದ್ದಾರೆ

ಹಕ್ಕೀಗೆ ಫಲವುಂಟು ಪಕ್ಷೀಗೆ ಫಲವುಂಟು
ನನ್ನ ಮಡದಿ ನೀಲೋಜಮ್ಮನಿಗೆ ಫಲವಿಲ್ಲ
ಹಾವೀಗು ಫಲವುಂಟು ಚೇಳೀಗು ಫಲವುಂಟು
ನನ್ನಾ ಮಡದಿ ನೀಲೋಜಮ್ಮನಿಗೆ ಫಲವಿಲ್ಲ
ಹಾಗಂದ ಮಾತು ಕೇಳಿ ಬ್ರಹ್ಮದೇವಾರು
ಅವರು ಭಾರೀಯ ಕಡತ ನೋಡಾರೊ
ಕಿಲಿಕಿಲಿ ಅನ್ನ ಮುಖವ ಖಿನ್ನಗೆ ಮಾಡಿ
ದುಃಖ ಮಾಡಾರೋ ತಮ್ಮ ಮನದಲ್ಲಿ ॥

ಅನುಭಾವದ ಎತ್ತರದ ನೆಲೆಯನ್ನು ತಲುಪಿದ ನೀಲಮ್ಮನವರು ಕನ್ನಡ ನಾಡು ಕಂಡ ಅಪರೂಪದ ಹೆಣ್ಣುಮಗಳು. ಇಂತಹ ಅಸದೃಶ ವ್ಯಕ್ತಿತ್ವವನ್ನು ಜನಪದರು ಮಾನವೀಯ ನೆಲೆಯಲ್ಲಿ ಕಡೆದಿರಿಸಿದ್ದಾರೆಂಬುದನ್ನು ಜನಪದ ಸಾಹಿತ್ಯ ಸಾದರಪಡಿಸುತ್ತದೆ.

ಬಿಡಿಗೀತೆಗಳನ್ನು ಹೊರತುಪಡಿಸಿ, ಘಟ್ಟಿವಾಳಯ್ಯ, ಮೇದರ ಕೇತಯ್ಯ, ಕುಂಬಾರ ಗುಂಡಯ್ಯ, ನುಲಿಗೆಯ ಚಂದಯ್ಯ, ಗುಂಡ ಬ್ರಹ್ಮಯ್ಯ, ಮಡಿವಾಳ ಮಾಚಯ್ಯ, ಘನಶರಣ ಹರಳಯ್ಯ ಮೊದಲಾದವರ ಬಗ್ಗೆ ಕಥನ ಕಾವ್ಯಗಳು ಲಭ್ಯ ಇವೆ. ಈ ಕಾವ್ಯ ಕಥೆಗಳನ್ನು

ಹೆಂಗಸರು, ಗಂಡಸರು ಹಾಗೂ ವೃತ್ತಿಗಾಯಕ ಪರಂಪರೆಗೆ ಸೇರಿದ ನೀಲಗಾರರು, ಕಂಸಾಳೆಯವರು, ಗೊರವರು ಅತ್ಯಂತ ಸುಶ್ರಾವ್ಯವಾಗಿ, ನಿರರ್ಗಳವಾಗಿ ಹಾಡುತ್ತಾರೆ. ನಿದರ್ಶನಕ್ಕೆ ಹರಳಯ್ಯನವರ ಕಾವ್ಯ ಕಥೆಯನ್ನಿಲ್ಲಿ ಗಮನಿಸಬಹುದು.

'ಹರಳಯ್ಯನೆಂಬೋನು ನರನಲ್ಲ ಕಾಣಿರೋ ಶರಣರಿಗೆ ಶರಣ ಘನ ಶರಣ' ಎಂಬ ಖ್ಯಾತಿ ಹರಳಯ್ಯನದು. ಬಸವಣ್ಣನವರ ದರ್ಶನಾರ್ಥಿಯಾಗಿ ತನ್ನ ಕಕ್ಕೆ ಸೊಪ್ಪಿನ ಮಠ ಬಿಟ್ಟು ಹೊರ ಬಂದ ಹರಳಯ್ಯ ಜಂಗಮ ಸಭೆಯಲ್ಲಿ ಕುಳಿತಿದ್ದ ಅಣ್ಣನವರನ್ನು ಕಂಡಾಗ ಬಸವಣ್ಣನವರು 'ಬಂದಪ್ಪ ಹರಳಯ್ಯ ನಿಮಗೆ ಸರಣು ಸರಣಾರ್ಥಿ' ಎಂದರು. ಬೆದರಿದ ಹರಳಯ್ಯ ಒಂದೇ ಉಸಿರಿನಲ್ಲಿ 'ಬುದ್ಧಿ ನಿಮಗೂ ಸರಣು' ಎಂದ್ಹೇಳಿ ಮುಗಿಸಿದ. ಬಸವಣ್ಣನವರ ಒಂದು ಶರಣು ಹರಳಯ್ಯನ ಮೇಲೆ ಉಳಿದ ಕಾರಣವಾಗಿ ಆವನ ಕಣ್ಣು ಕುರುಡಾದವು. ವಿಷಯ ತಿಳಿದ ಹರಳಯ್ಯನ ಪತ್ನಿ ಘನ ಶರಣೆ ಕಲ್ಯಾಣಮ್ಮ ತಪ್ಪು ಹರಕೆ ಕಟ್ಟಿಕೊಂಡರೆ ಪಾಪ ಪರಿಹಾರ ಎಂದು ಗಂಡ ಹೆಂಡಿರಿಬ್ಬರೂ ಉಪವಾಸವಿದ್ದು ಲಿಂಗಪೂಜೆ ಮಾಡಿ ಹರಳಯ್ಯನ ಎಡ ತೊಡೆಯ ಚರ್ಮ, ಕಲ್ಯಾಣಮ್ಮನ ಬಲ ತೊಡೆಯ ಚರ್ಮ ತೆಗೆದು, ಅಂಗಯ್ಯನ್ನೇ ಅಡಿಗಲ್ಲು ಮಾಡಿ, ಮುಂಗೈ ಕೊಡತಿ ಮಾಡಿ ಹೆಬ್ಬೆರಳನ್ನು ಕಂಪಿ ಮಾಡಿ ಕಲ್ಯಾಣಮ್ಮನ ಬೆನ್ನುಳಿ ನರವನ್ನು ದಾರ ಮಾಡಿ ಬಸವಣ್ಣನವರ ಪಾದದಳತೆಗೆ ಪಾದರಕ್ಷೆ ತಯಾರಿಸಿ.

> 'ದಯಮಾಡಿ ನನ ಗುರು ನನ ದಯವುಳ್ಳ ಬಸವಣ್ಣ ನಿಮಗೆ ಮಾಡಿಕೊಂಡು ಬಂದಿನಿ ಪಾದರಕ್ಷೆ'

ಎಂದಾಗ 'ನರಲೋಕಕ್ಕೆ ಸಲ್ಲುವ ಪಾದರಕ್ಷೆ ಇವಲ್ಲ; ಇವು ಕೈಲಾಸಕ್ಕೆ ಸಲ್ಲುವ ಪಾದರಕ್ಷೆ, ಎಂದು ಅವನ್ನು ತಲೆಯ ಮೇಲಿಟ್ಟಕೊಂಡು ಬಸವಣ್ಣನವರು ಜಂಗಮರ ಸಭೆಯಲ್ಲಿ ಮೆರೆದರು. ಹರಳಯ್ಯನು ಆ ಪಾದರಕ್ಷೆಗಳನ್ನು ವಾಪ್ಸು ತರುವಾಗ ರಾಜಬೀದಿಯಲ್ಲಿ ಎದುರಾದ ಮಧುವರಸನು ಹರಳಯ್ಯನನ್ನು ಗೇಲಿ ಮಾಡಿ ಬಲವಂತವಾಗಿ ಪಾದರಕ್ಷೆಗಳನ್ನು ಮೆಟ್ಟುತ್ತಾನೆ

> ಆ ಸತ್ತವಂತರ ಪಾದಕ್ಕೆ ಮಾಡಿರುವ ಪಾದ್ರಕ್ಷಿ
> ಅದ ಮೆಟ್ಟಿ ಬ್ರಾಮಣ ನೀ ಕೆಡಟ್ಟಿಡ।
> ಬ್ರಹ್ಮ ಪಿಂಡದೊಳಗೆ ನಾ ಹುಟ್ಟಿದ ಬ್ರಾಮಣ
> ನನಗಿಂತ ಹೆಚ್ಚಾ ನಿನ್ನ ಬಸವಣ್ಣ।
> ನನಗಿಂತ ಹೆಚ್ಚಾ ತಿರುಪೆ ಮಾಡೊ ಬಸವಣ್ಣ
> ಅಂತ ಎತ್ತೀದ ಕಾಲ ಪಾದ್ರಕ್ಷಿಗೆ।
> ಕಾಲುಗಳ ಎತುದಾಗ ಅವು ಕೈಲಾಸಕೆ ಹೊಂಟೇದೊ
> ಇವ ಬಗ್ಗನೆ ಕತುಕೊಂಡ ಮಧುವರಸ।

ಭಗ್ಗಭಗ್ಗನೆ ಉರಿ ಎದ್ದು ಧಿಗ್ಗುಧಿಗ್ಗುನೆ ಉರಿದು
ಅವ ಜಗ್ಗು ಜಗ್ಗುನೆ ಬ್ರಾಮಣ ಕುಣಿದಾನೊ।
ಮೂರು ಸಾರಿ ಹತ್ತಿ ಫಕ್ಕನೆ ಕೆಟ್ಬೋಯ್ತು
ಉರಿ ಹೊಪ್ಪಳೆ ಅವನ ಮೈಯಲ್ಲಿ।
ಬಾಯ್ ಬಾಯ್ ಬಡಿಕೊಂಡು ಬಿದ್ದೊದ್ವಾಡವನೆ ಬ್ರಾಮಣ
ಓಡಿ ಬಂದು ಬಿದ್ದ ತನ್ನರಮನೆಯಲ್ಲಿ।

ಮಧುವರಸನ ಮೈಗೆ ಅಂಟಿದ ಉರಿಯನ್ನಾರಿಸಲು ಹರಳಯ್ಯ ಚರ್ಮ ಹದಮಾಡುವ ಹಳ್ಳದ ನೀರು ಗತಿಯಾಯಿತು.

ಆ ಹರಳಯ್ನ ನಿಂದೀಸಿ ನಾ ಕತ್ತು ಬೆಂದೆನಲ್ಲ
ಈಗವನ ಮನೆಯ ನಿರುತೀರ್ಥ।
ಯಾರ ಮನೆ ಕೊಳವಲ್ಲ ಹರುಳಯ್ನ ಮನೆ ಕೊಳ
ಅವುನೆಂತಾದನಾಗಿರ ಬೌದು ಘನ ಶರಣ।

ಹೀಗೆ ಹರಳಯ್ಯನವರ ಮಹಿಮೆಯ ಅತಿಶಯವನ್ನು ಕೊಂಡಾಡುವುದರೊಂದಿಗೆ ಕಾವ್ಯ ಕಥೆ ಕೊನೆಗೊಳ್ಳುತ್ತದೆ. ಇದೇ ಬಗೆಯಲ್ಲಿ ಚನ್ನಬಸವಣ್ಣನವರನ್ನು ಕುರಿತಾದ ಸವಿಸ್ತಾರವಾದ ಖಂಡ ಕಾವ್ಯವೇ ಲಭ್ಯವಿದೆ. ಕಕ್ಕಯ್ಯನವರ ಮನೆ ಪ್ರಸಾದ ತಿಂದು ಗರ್ಭವತಿಯಾದ ಅಕ್ಕ ನಾಗಮ್ಮನ ಉದರದಲ್ಲಿ ಜನಿಸಿದ ಚನ್ನಬಸವಣ್ಣನವರು ಹುಟ್ಟುವಾಗಲೇ ಹೇಗೆ ಪವಾಡಗಳನ್ನು ಎಸಗಿದರು ಎಂಬ ಅತಿಮಾನುಷ ವಿವರಗಳನ್ನು ಒಳಗೊಂಡ ಈ ಸುಂದರ ಕಾವ್ಯವನ್ನು ವೃತ್ತಿಗಾಯಕರಾದ ನೀಲಗಾರರು ಕಂಸಾಳೆಯವರ ಅತ್ಯಂತ ವಿಸ್ತಾರವಾಗಿ, ಸುಶ್ರಾವ್ಯವಾಗಿ ಹಾಡುತ್ತಾರೆ.

ಮಡದಿ ನೀಲಮ್ಮನಿಗೆ ಮಕ್ಕಳಿಲ್ಲದ ದುಃಖ ಬಾಧಿಸುತ್ತಿರುವುದನ್ನು ಕಂಡ ಬಸವಣ್ಣನವರು ನೀಲಮ್ಮನ ಮಾತನ್ನು ತಿರಸ್ಕರಿಸಲಾರದೆ ಮಕ್ಕಳ ಫಲಕ್ಕಾಗಿ ಶಿವನನ್ನು ಧ್ಯಾನಿಸಿ ಕಕ್ಕಯ್ಯನವರ ಮಠಕ್ಕೆ ಹೋಗಿ ಪ್ರಸಾದ ತಂದು ಉರಿಯ ಗದ್ದುಗೆಯ ಮೇಲಿರಿಸುತ್ತಾರೆ. ಇತ್ತ ಮಠದಲ್ಲಿದ್ದ ತಂಗಿ ನಾಗಮ್ಮ 'ಮುತ್ತಿನಿಡುಗಾಲದಲ್ಲಿ ಕಸ ಹೊಡೆಯುತ್ತಿದ್ದಾಗ ಪ್ರಸಾದದ ವಾಸನೆ ಹಿಡಿದು, ಒಂದೇ ಗ್ಬುಟ್ಟಿಗೊಡ ಹುಟ್ಟು ಒಬ್ಬಾಳೆ ಎನುತ್ಹೇಳಿ ನನ್ಗೆ ತಂದು ನಮ್ಮಣ್ಣಯ್ಯ ಮಡುಗವರೆ' ಎಂದು ಭಾವಿಸಿ, ಸೇವಿಸಿದರು, ಸರಣ ಮಾತ್ಮನ ಮನೆಯ ಕರುಳುಳ್ಳ ಪ್ರಾಸಾದಕೆ 'ನಾಗಮ್ಮನವರಿಗೆ ಮುಟ್ಟುನಿಂತಿತು. ತಂಗಿ ನಾಗಮ್ಮ ಬಸುರಿಯಾದ ವಿಚಾರ ತಿಳಿದ ಕೊಂಡೆಯ ಮಂಚಣ್ಣ 'ಅನ್ನ ಉಂಡೆಂಗುಸರೆಲ್ಲ ಹಂಗಂಗೆ ಬಸುರಾದ್ರೆ ಗಂಡ್ಯಾಕೆ ಬೇಕು ಈ ಧರಿಯಲ್ಲಿ' ಎಂದು ಹಂಗಿಸಿ ಬಹಿರಂಗವಾಗಿ ನಾಗಮ್ಮನನ್ನು ನಾನಾ ವಿಧ ಪರೀಕ್ಷೆಗಳಿಗೆ ಗುರಿಪಡಿಸುತ್ತಾನೆ. ನಾಗಮ್ಮ ಕಕ್ಕಯ್ಯನ ಮನೆ ಪ್ರಸಾದದಿಂದ ಬಸುರಾದದ್ದು ನಿಜವೇ ಆದರೆ ಹೊಟ್ಟೆಯ ಮಗು ಮಾತಾಡಲಿ ಎಂದಾಗ ಗರ್ಭದಲ್ಲಿದ್ದ ಚನ್ನಬಸವಣ್ಣ ಭೂಮಿ ಕಂಪಿಸುವಂತೆ ಗುಟುರು ಹಾಕುತ್ತಾನೆ. ಅದಕ್ಕೆ ಮಂಚಣ್ಣ ನಂಬದೆ

'ಮಾಯಾದ ಗೊಂಬೆ ಮಾಡಿ ನೆರಿಯ ಚೆಂಡಲ್ಲಿ ಕಟ್ಟಿಪ್ರುಳೆ, ಎಂದು ಸಾಗವ್ವನ ಸೀರೆಯ ನೆರಿಗೆಗೆ ಕೈಹಾಕಿ ಎಳೆಯಲು ಬಂದಾಗ ಬೆನ್ನಿನ ಮೂಳೆಯಿಂದ ಹುಟ್ಟಿಬಂದ ಚನ್ನಬಸವಣ್ಣನು ಕೊಂಡೆಯ ಮಂಚಣ್ಣ ಬಿಜ್ಜಳರನ್ನು ಸಂಹಾರ ಮಾಡಿದ ಕಥೆಯನ್ನು ಈ ಖಂಡಕಾವ್ಯ ಒಳಗೊಂಡಿದೆ.

ಜನಪದ ಧರ್ಮವನ್ನವಲಂಬಿಸಿ ಅದರ ಪ್ರಸಾರಕ್ಕಾಗಿ ಹೊರಟು ಒಕ್ಕಲನ್ನು ಪಡೆಯುತ್ತಾ ನಾಡಿನ ಉತ್ತರದ ಕಲ್ಯಾಣದಿಂದ ಹೊರಟು ದಕ್ಷಿಣದ ಮಳವಳ್ಳಿಯ ಬೇಪ್ಪಗೌಡನ ಪುರಕ್ಕೆ ಬಂದ ಮಂಟೇ ಸ್ವಾಮಿ ಮಹಾಶರಣ. ಇವರ ಮುಖ್ಯ ಶಿಷ್ಯರು ರಾಚಪ್ಪಾಜಿ ಮತ್ತು ಸಿದ್ಧಪ್ಪಾಜಿ. ಈ ಮೂವರು ಮಹಾಮಹಿಮರಿಗೂ ಸಂಬಂಧಪಟ್ಟಂತೆ ರೂಪುಗೊಂಡಿರುವ ಮಹಾಕಾವ್ಯಧಾರೆಗೆ ದೊಡ್ಡವರ ವಚನಗಳು, ಸಿದ್ಧಪ್ಪಾಜಿ ವಚನ, ಹಲಗೂರು ಪವಾಡ, ರಾಚಪ್ಪಾಜಿ ವಚನ, ಚಿಕ್ಕಲ್ಲೂರು ಸಾಲು ಎಂಬ ಐದು ಕವಲುಗಳು. ಕಲ್ಯಾಣದಿಂದ ಆರಂಭವಾಗುವ 'ಮಂಟೇಸ್ವಾಮಿ ಮಹಾಕಾವ್ಯ'ವು ಮಂಟೇಸ್ವಾಮಿ ಜೊತೆಯಲ್ಲಿಯೇ ದಕ್ಷಿಣದತ್ತ ಸಾಗಿ ಅನಂತರ ಪೂರ್ವ ಪಶ್ಚಿಮಗಳಿಗೆ ವ್ಯಾಪಿಸಿ ಚಿಕ್ಕಲ್ಲೂರು ಮತ್ತು ಕಪ್ಪಡಿಗಳಲ್ಲಿ ನಿಲುಗಡೆ ಪಡೆಯುತ್ತದೆ.

ಸಿದ್ದಯ್ಯ ಶಿವನೆ ಬನ್ನಿ
ಪ್ರವಾಡ ಗೆದ್ದಯ್ಯ ನೀವೇಬನ್ನಿ
ಸಿದ್ದು ಸಿದ್ದರಿಗೆಲ್ಲ ಅತಿ ಮುದ್ದು ಘನನೀಲ
ಸಿದ್ದಯ್ಯ ಸ್ವಾಮಿ ಬನ್ನಿ''

ಎಂಬ ಸಾಲುಗಳು ಕಾವ್ಯದುದ್ದಕ್ಕೂ ಪಲ್ಲವಿಯ ರೂದಲ್ಲಿ ಬರುತ್ತವೆ. ಈ ಮಹಾಕಾವ್ಯವನ್ನು ಮಂಟೇಸ್ವಾಮಿಯ ಗುಡ್ಡರಾದ ನೀಲಗಾರರು ಮಾತ್ರವೇ ಹಾಡುತ್ತಾರೆ. ಇವರ ಪ್ರಕಾರ ಧರೆಗೆ ದೊಡ್ಡವರು ಅಲ್ಲಮ ಪ್ರಭು ಅಂದರೆ ಮಂಟೇಸ್ವಾಮಿ. ಕೈಲಾಸದಿಂದ ಕಲ್ಯಾಣಕ್ಕೆ 'ನಮಗೆಗುರುಸ್ವಾಮಿ ಇಲ್ಲ ಅಂತ ತಬಸ ಮಾಡುತ್ತಿದ್ದ' ಬಸವಣ್ಣನವರ ಚಿಂತೆಯನ್ನು ದೂರ ಮಾಡಲು ಬಂದವರು ಮಂಟೇಸ್ವಾಮಿಯವರು ಮೊದಲ ಬಾರಿಗೆ ಕಲ್ಯಾಣದಲ್ಲಿ ಪ್ರಕಟವಾದ ರೀತಿಯು ಅತ್ಯಂತ ವಿಶಿಷ್ಟವಾದುದಾಗಿದೆ.

ಕೈಯವೆ ಸೊಟ್ಟುಗಳು
ಕಾಲುವೆ ಕುಂಟುಗಳು
ಕಣ್ಣಾವೆ ಕುರುಡುಗಳು
ಕಿವಿಲಿ ಬಂಗಿಸೊಪ್ಪು
ಕಯ್ಯಲಿ ಸುರೆ ಗಡಿಗಿ
ಅಪ್ರು ಆಕಾರ ರೂಪ
ನಮ ಗುರುವು ಧರಿಸಿದರಂತೆ
ಸತ್ತೆಮ್ಮಿ ಕರುವ ಹೆಗಲ ಮ್ಯಾಲೆ ಹೊತುಕೊಂಡು
ಕೈಲಾಸದಿಂದ ಕಲ್ಯಾಣಕ್ಕೆ ದಯಮಾಡವರೆ

ಮಂಟೇಸ್ವಾಮಿಯವರು ಕಲ್ಯಾಣದ ಬಾಗಿಲಿನಲ್ಲಿ ಕಾಣಿಸಿಕೊಂಡಾಗ ಕಲ್ಯಾಣ ಪಟ್ಟಣದ ಬಾಗಿಲಿಗೆ ಕಟ್ಟಿಸಿದ್ದ ನಾಲಿಗೆ ಇಲ್ಲದ ಗಂಟೆ ನಾದ ಮಾಡುತ್ತದೆ. ಬಾಗಿಲಿನಲ್ಲಿದ್ದ ಪಹರೆಯವರು ಧರೆಗೆ ದೊಡ್ಡವರ ಅಸಹ್ಯರೂಪವನ್ನು ಕಂಡು ಹೊರ ಅಟ್ಟುತ್ತಾರೆ. ಆಗ ಅವರು ಬೂದಿ ಗುಡ್ಡೆ ಮೇಲೆ ಹೋಗಿ ಹುಲಿ ಚರ್ಮ ಹಾಸಿ ಭಂಗಿ ಎಳೆಯುತ್ತಾ ಕೂರುತ್ತಾರೆ. ನಾಲಗಿಲ್ಲದ ಗಂಟೆ ನಾದ ಮಾಡಿದ ದನಿ ಕೇಳಿ ಬಸವಣ್ಣನವರು ಮತ್ತು ನೀಲಮ್ಮನವರು ಯಾರಿರಬಹುದೆಂದು ಹುಡುಕಿ ಬಂದು ಮಂಟೇ ಸ್ವಾಮಿಯನ್ನು ಮಠಕ್ಕೆ ಬರುವಂತೆ ಪ್ರಾರ್ಥಿಸುತ್ತಾರೆ. ಒತ್ತಾಯಿಸುತ್ತಾರೆ. ಒಪ್ಪದ ಧರೆಗೆ ದೊಡ್ಡವರ ಪಾದವನ್ನು ಹಿಡಿದು ಬೇಡುತ್ತಾರೆ ಆಗ :

ಎರಡು ಪಾದವೆ ಕಿತ್ತು ಬಂದವಂತೆ
ಎರಡು ರಟ್ಟೆ ಹಿಡಿದೆತ್ತಿದರಂತೆ
ಎರಡು ರೆಟ್ಟೆ ಈಜಿ ಬಂದವಂತೆ
ದಯಮಾಡಬೇಕೆಂದು
ಮುಂಡಾಸ ಹಿಡಿದರಂತೆ
ಮುಂಡಾಸವೇ ಎದ್ದು ಬಂದಿತಂತೆ

ಆಗ ನೀಲಮ್ಮನವರು 'ನಮ್ಮ ನಿಜ ಶೋಧನೆ ಮಾಡಬೇಕೆನ್ನೋದಾಗಿ ನಮ ಗುರು ಸ್ವಾಮಿ ಈ ರೂಪ ತಾಳವರೆ' ಎಂದು ಕಿತ್ತು ಬಂದ ಶರೀರದ ಭಾಗಗಳನ್ನೆಲ್ಲಾ ಆಯ್ದು ಗಂಟು ಕಟ್ಟಿಕಂಡು ಕಲ್ಯಾಣದ ಮಠಕ್ಕೆ ಉರಿ ಗದ್ದಿಗೆ ಮೇಲಿಟ್ಟು ಸ್ವಾಮಿಗೆ ಮಂಗಳಾರತಿ ಬೆಳಗಿದಾಗ ಅವರಿಬ್ಬರ ಭಕ್ತಿಗೆ ಮೆಚ್ಚಿದ ಧರೆಗೆ ದೊಡ್ಡವರು ತಮ್ಮ ನಿಜಸ್ವರೂಪವನ್ನು ತೋರುತ್ತಾರೆ.

ಇದೇ ರೀತಿಯಲ್ಲಿ ಹರಹರಾ ನಮ್ಮಪ್ಪಾಜಿ ಏಳು ಮಲೆ ಹೆತ್ತಯ್ಯ, ಬೂದಿ ಮುಚ್ಚಿದ ಕೆಂಡ ಬೂಲೋಕಕ್ಕೆ ಗಂಡ, ಆದಿ ಒಳಗೆ ಉದ್ದಂಡ, ನಮ್ಮಯ್ಯ ನೀತಿಗು ನಿಂಗಪ್ಪ ದ್ರುಡುಕ ದುಂಡು ಮಾದೇವ, ಮಾತುಗ ಮರಿದೇವು, ಹೆಂಡರಿಲ್ಲ ಪುಂಡುಗಾರ ಮಲೆ ಮಾದೇವ, ಉತ್ತುರು ದೇಸದಲ್ಲಿ ಹುಟ್ಟಿ ದಕ್ಷಿಣಕ ದಯ ಮಾಡಿ, ಆದಿ ಕುಂತೂರು ಮಠ ಸೇರಿ ಪಂಚೇಳ ದೀಕ್ಷ ಪಡದು ಗುರುವನ್ನ ಪಡಕೊಂಡು ಮುಂದೆ ಬರುವಂಥ ಕಲಿಯುಗದಲ್ಲಿ ಮಾದಪ್ಪನಿಗೆ ತಂದೆ ತಾಯಿಲ್ಲ ಅಂತೇಳಿ ಆಡಕೋತಾರೆ ಎಂದು ತಂದೆ ಸಂಕರ ಮೂರ್ತಿಯವರನ್ನು, ತಾಯಿ ಉತ್ರಾಜಮ್ಮನವರನ್ನು ಪಡೆದುಕೊಂಡು ಆದಿಪುರದ ಮಾವುಟಳ್ಳಿ ಬಾಡ ಬಾಕಲು ವಿಸಂಸಾರಿ ಮೆಳೆ ಒಳಗೆ ಎದೆಯುದ್ದ ಹುಟ್ಟಿದ ಏಳ ಬಾಯಿ ಹೊನ್ನುತ್ತದಲ್ಲಿ ಮೂರ್ತವಾದ ಘನ ಮಹಾಮಹಿಮ ಮಹದೇಶ್ವರನ ಬಗ್ಗೆ ಮಹದೇಶ್ವರನ ಗುಡ್ಡರಾದ ಕಂಸಾಳೆಯವರು ಏಳು ಸಾಲು (ಸಾಲು ಅಂದರೆ ಅಧ್ಯಾಯ)ಗಳಲ್ಲಿ ಅತ್ಯಂತ ಸುದೀರ್ಘವಾದ ಮಹಾಕಾವ್ಯವನ್ನು ಹಾಡುತ್ತಾರೆ.

ಶುದ್ಧ ಭಕ್ತಿಯನ್ನು ಸಮುದಾಯದಲ್ಲಿ ಹರಡಲು ಶತಶತಮಾನಗಳಿಂದಲೂ ಸಾಧು ಸಂತರು, ಶರಣರು, ದಾಸರು ಯತ್ನಿಸುತ್ತಲೇ ಬಂದಿದ್ದಾರೆ. ಭಕ್ತಿಯ ಮಹತ್ವ ಜನ

ಸಾಮಾನ್ಯರ ಸ್ವತ್ತಾಗಬೇಕೆಂಬುದು ಅವರ ಬಯಕೆಯಾಗಿದ್ದು ಈ ದಿಸೆಯಲ್ಲಿ ಬಯಲಾಟದ ಕೃತಿಗಳು ಸಹ ಕಾಲಕಾಲಕ್ಕೆ ಮೂಡಿ ಬಂದು ಹಳ್ಳಿ ಹಳ್ಳಿಗಳಲ್ಲಿ ಜನಮನಸ್ಸನ್ನು ರಂಜಿಸಿ ಭಕ್ತಿಯೆಡೆಗೆ ಉತ್ತೇಜಿಸುತ್ತಾ ಬಂದಿವೆ. ಶರಣರಾಟ ಇಂತಹ ಬಗೆಯದಾಗಿದೆ. ಶರಣರಾಟದಲ್ಲಿ ಅಲ್ಲಮಪ್ರಬು, ಉಡುತಡಿಯ ಮಹಾದೇವಿ ಮೊದಲಾದ ಸಣ್ಣಾಟಗಳು ಉತ್ತರ ಕರ್ನಾಟಕದ ಸುತ್ತಿನಲ್ಲಿ ಸಾಕಷ್ಟು ಜನಪ್ರಿಯತೆ ಪಡೆದಿವೆ. ದಾಸರು ಹರಿಭಕ್ತಿ ಮೆರೆಯಲು ದಾಸರಾಟವನ್ನು ಪ್ರಾರಂಭಿಸಿದರೆ ಶರಣರು ಹರಭಕ್ತಿ ಮೆರೆಯಲು ಶರಣರಾಟಗಳನ್ನು ಪ್ರಾರಂಭಿಸಿದರು. ಕಥಾವಸ್ತು, ಪಾತ್ರಸೃಷ್ಟಿ, ನಿರೂಪಣೆ, ರಂಗಸಜ್ಜಿಕೆ, ವೇಷ ಭೂಷಣ, ನೃತ್ಯ, ಹಾಡು ಸಂಭಾಷಣೆಯ ಶೈಲಿ ಇವೆಲ್ಲಾ ದೃಷ್ಟಿಯಿಂದಲೂ ದಾಸರಾಟಕ್ಕಿಂತ ಶರಣರಾಟವು ಉತ್ತಮವಾದದ್ದು. ಭಕ್ತಿ ಮಾರ್ಗವನ್ನು ಹಿಡಿದ ಶರಣರಾಟದಲ್ಲಿ ಆಟಗಾರರಿಗೆ ಶರಣರ ಸತ್ವ ಸಂದೇಶಗಳ ಸಂಪೂರ್ಣ ಅರಿವಿದ್ದಿತು.

ಜಾನಪದದಲ್ಲಿ ಶಿವಶರಣರು ಎಂಬ ವಿಷಯವು ಮಹಾಪ್ರಬಂಧಕ್ಕೆ ವಸ್ತುವಾಗುವಂತಹದ್ದು. ಈ ಬಗ್ಗೆ ಕ್ರಮಬದ್ಧವಾದ ಕ್ಷೇತ್ರಕಾರ್ಯ, ಪರಿವೀಕ್ಷಣೆ, ಅಧ್ಯಯನ ನಡೆಯಬೇಕಾಗಿದೆ. ಜನಪದ ರಂಗಭೂಮಿ, ಜನಪದ ಕಲೆಗಳಲ್ಲಿಯೂ ಶರಣರ ಪಾತ್ರ ಪ್ರಭಾವಗಳು ಪರಿಣಾಮಕಾರಿಯಾದವುಗಳಾಗಿವೆ. ಸದ್ಯದ ಲೇಖನದಲ್ಲಿ ಜನಪದ ಸಾಹಿತ್ಯದಲ್ಲಿ ಕಂಡುಬರುವ ಶರಣ ಪ್ರಭಾವಗಳ ಸ್ಯಾಂಪಲ್ಲುಗಳನ್ನಷ್ಟೇ ಪ್ರಸ್ತಾಪಿಸಿರುತ್ತೇನೆ ಎಂಬುದನ್ನು ತಿಳಿಸ ಬಯಸುತ್ತೇನೆ.

ಜನಪದ ಸಾಹಿತ್ಯದಲ್ಲಿ ಕಂಡು ಬರುವ ಶರಣ ಸಾಹಿತ್ಯ ಎಲವೂ ಮೂಲತಃ ಪುರಾಣ ಪ್ರಸಂಗಗಳನ್ನು ಆಧರಿಸಿದ್ದೇ ಆಗಿದೆ. ಚರಿತ್ರೆಯಲ್ಲಿ ಆಗಿಹೋದ ವ್ಯಕ್ತಿಗಳು ಇದರಲ್ಲಿ ಪ್ರಧಾನರಾಗಿದ್ದರೂ ಚಾರಿತ್ರಿಕಾಂಶಗಳು ಗೌಣವಾಗಿ ಪುರಾಣ ದೃಷ್ಟಿಯೇ ಪ್ರಧಾನವಾಗಿರುವುದರಿಂದ ಅದ್ಭುತ ಘಟನಾವಳಿಗಳು ಹಾಗೂ ಉತ್ಪ್ರೇಕ್ಷೆಗಳು ಕಿಕ್ಕಿರಿದಿವೆ. ಜನಪದ ಗೀತೆಗಳು ಕಾವ್ಯಗಳು ಅಕ್ಷರ ರೂಪಕ್ಕೆ ಬಂದಾಗ ಸೇರಿದಂತೆ ಕಂಡರೂ ಗಾಯಕರು ವಾದ್ಯಗಳೊಂದಿಗೆ ಹಾಡುವಾಗ ಅದರಲ್ಲೂ ಧಾರ್ಮಿಕ ವೃತ್ತಿಗಾಯಕರ ಹಾಡುಗಾರಿಕೆ ಅದೆಷ್ಟು ಭಕ್ತಿ ಭಾವುಕತೆ, ತನ್ಮಯತೆ, ರೋಮಾಂಚನಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಕೇಳಿಯೇ ಆನಂದಿಸಬೇಕು.

ವೀರಶೈವ ಅರಸು ವಂಶಗಳು

ಪ್ರೊ|| ಎಂ.ಜಿ. ನಾಗರಾಜ್

ಹಿನ್ನೆಲೆ

ಯಾವುದೇ ಒಂದು ಅರಸು ಮನೆತನದ ವಿಷಯ ತೆಗೆದುಕೊಂಡರೆ, ಸಾಮಾನ್ಯವಾಗಿ ಅದರ ರಾಜಕೀಯ ಸಂದರ್ಭಗಳತ್ತವೇ ಗಮನ ಕೊಡುವುದು ಒಂದು ಪರಿಪಾಠ. ಇತಿಹಾಸದಲ್ಲಿ ಆ ಕುರಿತ ದಾಖಲೆಗಳು ವಿಪುಲವಾಗಿ ಲಭ್ಯವಾಗುವುದು ಅದಕ್ಕೆ ಕಾರಣವೆನಿಸುತ್ತದೆ. ಆಯಾ ಅರಸು ಮನೆತನದ ಸಾಧನೆಯನ್ನು ಕೇವಲ ಯುದ್ಧಗಳ ಜಯವಾಗಿ ಗಮನಿಸಿದರೆ ಆ ನೋಟ ಪಾರ್ಶ್ವಿಕ ಎನಿಸುತ್ತದೆ. ಅಂತಾಗಿ, ಸಾಮಾಜಿಕ, ಸಾಂಸ್ಕೃತಿಕ ಶೈಕ್ಷಣಿಕ ಸಾಹಿತ್ಯಿಕ ವಂಶಿಕ ಹಾಗೂ ಜನನೆಲೆಗಳಿಂದಲೂ ಗಮನಿಸಿದರೆ, ಆ ಅರಸು ಮನೆತನದ ರಾಜಕೀಯ ಇತಿಹಾಸಕ್ಕೆ ಪೂರ್ಣತೆ ಒದಗುವಂತಾಗುತ್ತದೆ. ಆಳಿದ ಅರಸುಗಳು ಯಾವುದೇ ಧರ್ಮೀಯರಾದರೂ, ನಾಡಿನ ಜನಜೀವನದ ಮೇಲೆ ಮೂಡಿಸಿದ ಪ್ರಭಾವಗಳು ರಾಜನ ಧರ್ಮದ ಸಂದರ್ಭಗಳನ್ನು ಒಳಗೊಂಡು ಸಾಂಸ್ಕೃತಿಕ ನೆಲೆಗಳನ್ನು ವಿಸ್ತರಿಸಿವೆ ಎನ್ನಬೇಕು. ರಾಜ ಅನುಸರಿಸಿದ ಧರ್ಮ ವೈಯಕ್ತಿಕ ಕೌಟುಂಬಿಕ, ಹಾಗೂ ಆಡಳಿತ ವಲಯದಲ್ಲಿ ದಟ್ಟವಾದರೂ ಜನಸಾಮಾನ್ಯರೆಲ್ಲರೂ ಅದನ್ನೆ ಅನುಸರಿಸಿದರು ಎನ್ನುವಂತಿಲ್ಲ. ಆದರೆ ರಾಜನು ಅನುಸರಿಸಿದ ಧರ್ಮದ ಗುರುಗಳ ಉಪದೇಶದ ಪರಿಚಯ ಅಥವಾ ಆ ಧರ್ಮದ ಸಂಗತಿಗಳ ಸಾಮಾನ್ಯ ಪರಿಚಯವು ಜನಗಳಿಗೆ ಒದಗುತ್ತದೆ. ಆ ಮಟ್ಟಿನ ಸ್ಥೂಲ ಪ್ರಭಾವವೂ ಅವರ ಮೇಲೆ ಆಗುತ್ತದೆ. ಈ ದೃಷ್ಟಿಯಿಂದ ವೀರಶೈವ ಅರಸುಮನೆತನಗಳನ್ನು ಗಮನಿಸಿದರೆ ಅವರಲ್ಲಿ ಧರ್ಮಸಾಮರಸ್ಯ-ಸಮನ್ವಯ, ಕಾಣಬರುತ್ತದೆ.

ವೀರಶೈವ ಅರಸು ಮನೆತನಗಳು, ಎಲ್ಲಿಯೂ ತಮ್ಮ ಧರ್ಮವನ್ನು ಬಲವಂತವಾಗಿ ಸಾಮಾನ್ಯ ಜನತೆಯ ಮೇಲೆ ಹೇರಿದಂತೆ ಕಾಣಬರುವುದಿಲ್ಲ. ಬಲವಂತ ಮತಾಂತರಕ್ಕೆಳಸಿ ದಂತೆಯೂ ಕಾಣಬರುವುದಿಲ್ಲ. ಈ ಅರಸು ಮನೆತನಗಳಲ್ಲಿ ಸಾಮಾನ್ಯವಾಗಿ ಮೂರು ಬಗೆಯನ್ನು ಧರ್ಮದ ದೃಷ್ಟಿಯಿಂದ ಕಾಣುತ್ತೇವೆ. ಮೊದಲಿಗೆ ಒಂದು ಧರ್ಮವನ್ನು ಅನುಸರಿಸುತ್ತಿದ್ದವರು ಮುಂದೆ ಸ್ವಯಿಚ್ಛೆಯಿಂದ ವಂಶಪಾರಂಪರ್ಯವಾಗಿ ವೀರಶೈವ ಧರ್ಮ ಅನುಸರಿಸಿ ಬಂದ ಅರಸರುಗಳು; ಎರಡನೆಯದು ಮೊದಲಿನಿಂದಲೂ ವೀರಶೈವರಾಗಿ ಆಳ್ವಿಕೆ ನಡೆಸಿದ ಅರಸರುಗಳು; ಮೂರನೆಯದು ವಂಶದ ಕೆಲವು ಅರಸರು ಮಾತ್ರ

ವೀರಶೈವರಾಗಿದ್ದುದು. ಒಂದು ಕಾಲಕ್ಕೆ ಜೈನ, ವೈದಿಕ(ಬ್ರಾಹ್ಮಣ) ಮೂಲದ ಅರಸರೆನಿಸಿದ್ದವರು ವೀರಶೈವರಾಗಿ, ಒಕ್ಕಲಿಗ ಮೂಲದಿಂದ ಬಂದ ಅರಸರುಗಳು ವೀರಶೈವರಾಗಿ ರಾಜ್ಯಾಡಳಿತ ನಡೆಸಿದ ಇತಿಹಾಸವಿದೆ. ಕೆಲವು ಅರಸರು ವೈಯಕ್ತಿಕವಾಗಿ ಮಾತ್ರ ವೀರಶೈವವನ್ನು ಅನುಸರಿಸಿ, ಕುಟುಂಬದವರು ಎಂದಿನಂತೆಯೆ ಇರಲು ಬಿಟ್ಟ ಉದಾಹರಣೆಯೂ ಇದೆ. ಈ ಅರಸರುಗಳಿಗೆ ಧರ್ಮದೀಕ್ಷೆ ನೀಡಿದವರೆ ಕುಲಗುರು, ರಾಜಗುರುಗಳೂ ಆದ ಸಂದರ್ಭಗಳಿವೆ. ಅಂತಾಗಿ ವೀರಶೈವ ಮಠಗಳು, ವೀರಶೈವ ಗುರುಗಳು ಇವರ ಕಾಲದ ಸಾಂಸ್ಕೃತಿಕ ಜಂಗಮ ನೆಲೆಗಳಾಗಿದ್ದುದು ಕಾಣಬರುತ್ತದೆ. ಹಾಗೆಂದು ಈ ಸಂದರ್ಭಕ್ಕೇ ತಮ್ಮೆಲ್ಲ ದೃಷ್ಟಿಯನ್ನು ಮೀಸಲಿಟ್ಟರೆಂದು ಈ ಅರಸರ ಬಗ್ಗೆ ಹೇಳಬರುವಂತಿಲ್ಲ. ಅವರು ಬ್ರಾಹ್ಮಣಮಠ, ಮಸೀದಿ, ಚರ್ಚು, ಬಸದಿ, ದೇಗುಲಗಳಿಗೆ ದಾನ ದತ್ತಿ, ನೀಡಿ ಗೌರವಗಳನ್ನು ಸಲ್ಲಿಸಿದ್ದಾರೆ.

ಈ ವೀರಶೈವ ಅರಸುವಂತಿಕೆಯ ಮೂಲ ಹೆಕ್ಕಬೇಕಾದರೆ, ಸಾಂಪ್ರದಾಯಿಕ ಹಾಗೂ ಐತಿಹಾಸಿಕ ವಿಂಗಡನೆಗಳೆರಡನ್ನೂ ಗಮನಿಸಬೇಕಾಗುತ್ತದೆ. ಸಾಂಪ್ರದಾಯಿಕ ವಿಂಗಡನೆಯಲ್ಲಿ ಶಾಸನಗಳಂತಹ ದಾಖಲೆಗಳು ಲಭ್ಯವಾಗದಿರಬಹುದು. ವೀರಶೈವ ಧರ್ಮಗ್ರಂಥದ ಉಲ್ಲೇಖಗಳಿಂದಲೋ, ಆಗಮಗಳಿಂದಲೋ, ಪುರಾಣಗಳಿಂದಲೋ ಹೆಕ್ಕುವಾಗ, ಇತಿಹಾಸದ ನಿಕಷಕ್ಕೆ ಒಗ್ಗದೆ ಹೋಗುವ ಸಂದರ್ಭವೇ ಹೆಚ್ಚು. ಅಥವಾ ವೈಭವೀಕರಣದ ಗೊಂದಲದಲ್ಲಿ ಸಲ್ಲದ ಸೃಷ್ಟಿಗಳು ನುಸುಳಬಹುದು. ಆದರೆ ನಮ್ಮ ಸಾಂಸ್ಕೃತಿಕ ಪರಂಪರೆಯ ದೃಷ್ಟಿಯಿಂದ ಆ ಮೂಲದಿಂದ ಒದಗುವ ಸೂಕ್ಷ್ಮ ಸಂಕೇತಗಳನ್ನು ತೀರ ನಿರ್ಲಕ್ಷಿಸುವುದು ಸಲ್ಲ. ಅದರಿಂದ ಹೆಕ್ಕುವುದು ಕೇವಲ ಕಟ್ಟುಕತೆ ಎಂದರೆ ಸರಿಯಲ್ಲ. ಸಂಕೇತಗಳನ್ನು ನಿಕಷಕ್ಕೆ ನಿಲುಕಿಸಿ, ನಿರ್ಧಾರಕ್ಕೆ ಸಾಧ್ಯವಿದ್ದಷ್ಟು ಹತ್ತಿರ ಬರುವುದು ಸೂಕ್ತ. ಶಾಸನ, ಇತಿಹಾಸದ ದಾಖಲೆಗಳನ್ನು ಪರಿಶೀಲಿಸಿದಾಗಲೂ ಎಲ್ಲ ವಿವರಗಳು ನಿಖರವಾಗಿರುತ್ತವೆ ಎನ್ನುವಂತಿಲ್ಲ. ಅಲ್ಲಿಯೂ ಸುಳ್ಳು ಹುಟ್ಟುಗಳನ್ನು ಸೇರಿಸಿರುವುದುಂಟು. ಕೃತಕ ಸೃಷ್ಟಿಗಳ ವೈಭವೀಕರಣವೂ ಉಂಟು. ತೌಲನಿಕ ಆಧಾರಗಳಿಂದ ಆಧುನಿಕ ವಿವೇಚನೆ ಮಾಡಿದರೆ ಸನಿಹ ಖಚಿತತೆ ಸಿಗಬಹುದು. ಆದರೆ ಪರಂಪರೆಯಲ್ಲಿ ಸಾಂಪ್ರದಾಯಿಕ ನಿಲುವಿನಲ್ಲಿಯ ಸಂಕೇತಗಳನ್ನು ಗ್ರಹಿಸಿದರೆ ಇತಿಹಾಸದ ಎಳೆಗಳನ್ನು ಕಾಣಬಹುದೆನಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಇತಿಹಾಸದ ವ್ಯಕ್ತಿಗಳಿಗೆ ಪುರಾಣವನ್ನು ಆರೋಪಿಸಿರುವುದುಂಟು. ಪೌರಾಣಿಕ ವ್ಯಕ್ತಿಗಳನ್ನು ಇತಿಹಾಸದ ಲೇಪನದಲ್ಲಿ ಗ್ರಹಿಸಿರುವುದುಂಟು. ಈ ದೃಷ್ಟಿಯಿಂದ ಈ ವರ್ಗಗಳನ್ನು ಸಾಂಕೇತಿಕವಾಗಿ ಪರಿಗಣಿಸುವುದು ಲೇಸು.

ಪರಂಪರಾಗತ ಪದರುಗಳು

ಜಗತ್ತಿನಲ್ಲಿ ಆದಿಗೆ ಇದ್ದವ ವ್ರಾತ್ಯ ಎಂಬುದು ಪೈಪ್ಪಲಸಂಹಿತೆಯ ಮಾತು. 'ವ್ರಾತ್ಯಃ ಪರಮೇಶ್ವರಃ' ಅಂದರೆ ಪರಮೇಶ್ವರನೆ ವ್ರಾತ್ಯ. ಯೋಗಿಗಳ ಸಂಪ್ರದಾಯಕ್ಕೆ ಸೇರಿದ

ವ್ರಾತ್ಯರು ಪ್ರಾಚೀನ ಶಿವೋಪಾಸಕರು, ಭಾರತದ ಮೂಲನಿವಾಸಿಗಳು. ಜೀವ ಸಂಕುಲದ ಪತಿ ಪರಮೇಶ್ವನೆ. ಆದಾಗಿ ಅವನು ಪಶುಪತಿ. ವ್ರಾತ್ಯ ಹಾಗೂ ಪಶುಪತಿ ಹಾಗಾಗಿ ಒಂದೇ ಅರ್ಥದವು. ಈ ಶಿವೋಪಾಸಕರೇ ವ್ರಾತ್ಯಪಾಶುಪತರು. ಇವರಿಗೆ ಆಧಾರವಾಗಿದ್ದ ಆಗಮುಗಳು ಅವರ ಭಾಷೆಯಾಗಿದ್ದ ಪೂರ್ವ ದ್ರಾವಿಡದಲ್ಲಿದ್ದುವು. ಪಾಶುಪತ ಯತಿಗಳು ಕರಪೀಠಾರ್ಚಕರಾಗಿದ್ದುದು,'ಅಯಂ ಮೇ ಹಸ್ತೋಭಗವಾನ್,ಅಯಂ ಮೇ ಭಗವತ್ತರಃ', ಹಸ್ತಪೀಠದಲ್ಲಿ ಪರಶಿವನ ಕುರುಹಾದ ಲಿಂಗವನ್ನಿಟ್ಟು ಆರಾಧಿಸುತ್ತಿದ್ದುದರಿಂದ ವಿದಿತವಾಗುತ್ತದೆ. ವ್ರಾತ್ಯ ಪಾಶುಪತರು ಲಿಂಗಧಾರಿಗಳೆ. ಸಿಂಧು ಕಣಿವೆಯಲ್ಲಿದ್ದ ಅನೇಕ ರಾಜವಂಶಗಳಲ್ಲಿ ಕಾಶೀವಂಶವೂ ಒಂದು. ಆ ವಂಶದ ಕೆಲವರು ವ್ರಾತ್ಯ ರಾಜರು ಆಳುತ್ತಿದ್ದ ವಾರಣಾಸಿಯಲ್ಲಿ ನೆಲಸಿದ್ದರು. ಈ ಕಾಶೀವಂಶದ ಶಿವೋದಾಸ ಹಾಗೂ ಅವನ ಮಗ ದಿವೋದಾಸರು ಕಾಶೀ ನಗರವನ್ನು ಸ್ಥಾಪಿಸಿದರು. ರಾಹುಲ ಸಾಂಕೃತ್ಯಾಯನರ ರೀತ್ಯಾ ಇವರ ಕಾಲ ಕ್ರಿ.ಪೂ. ಸು. ೧೫೦೦. ವಾರಣಾಸಿಯಲ್ಲಿ ವ್ರಾತ್ಯರಾಜನ್ಯರ ಗುರುಗಳು,ವ್ರಾತ್ಯ ಪಾಶುಪತ ಜಂಗಮ ಮುನಿಗಳಾಗಿದ್ದು, 'ಜಂಗಮವಾಡಿ'ಯನ್ನು ಏರ್ಪಡಿಸಿದ್ದರು[1]. ಅಂದರೆ ಶಿವಧರ್ಮ ಸಂಸ್ಕೃತಿಯನ್ನು ಅನುಸರಿಸಿ ಬಂದ ರಾಜ ಪರಂಪರೆ ವ್ರಾತ್ಯರಾಜರ ಕಾಲದಿಂದಲೆ ಇತ್ತು ಎನ್ನುವುದಾಗುತ್ತದೆ.

ಕ್ರಿ.ಶ. ೩-೪ನೆಯ ಶತಮಾನದ ಭಾರಶಿವರು ಮತ್ತು ವಾಕಾಟಕರು ಶಿವಲಿಂಗ ಧಾರಿಗಳೆನ್ನುವುದು ಶಾಸನೋಕ್ತವಾಗಿದೆ. ಹಾಗೆಯೆ ಕ್ರಿ. ಶ. ೬ನೆ ಶತಮಾನದ ಪಲ್ಲವರಾಜನಾದ ರಾಜಸಿಂಹನೂ ಆಗಮಾನುಸಾರಿ ಹಾಗೂ ಶಿರೋ ಶಿವಲಿಂಗಧಾರ(ಶಿರೋವೃತಿ) ಎಂಬುದೂ ಶಾಸನೋಕ್ತ.[2]

ಇವರಿಗೂ ಮುನ್ನ ಇದ್ದರೆನ್ನಲಾದ ಶಿಂಶುಮಾರ, ಡಿಂಡಿಮಾರ (ಮಾಣಿಷ್ಮತಿ ಪಟ್ಟಣದ ರಾಜ) ಸಿಂಹನಾದ, ಕುಂಡಿನೀಪುರದ ಮಣಿಭದ್ರ, ದ್ವಿತೀಯ ಪರಮೇಶ್ವರನೆನಿಸಿದ ಧರ್ಮಗುಪ್ತ ಹಾಗು ಶತಾನಂದ ರಾಜರು ವೀರಮಾಹೇಶ್ವರಾಚಾರವನ್ನು ಅನುಸರಿಸಿದ್ದರು. ತಮ್ಮ ಶಿವಾಚಾರ್ಯ ಗುರುವಾದ ಶ್ರೀ ಆದಿ ರೇಣುಕರ ನಿರ್ದೇಶನಕ್ಕನುಗುಣವಾಗಿ ಮಠಗಳನ್ನೂ ನಿರ್ಮಿಸಿ ಆತಿಥ್ಯ, ದಾಸೋಹ, ಅರಣ್ಯನಿರ್ವಹಣೆ (ಪವಿತ್ರಾರಣ್ಯ) ತ್ರಿಷಷ್ಠಿ ಕ್ರಿಯಾ ಶೀಲಾ ಚರಣ, ಶಿವಜ್ಞಾನಾನುಭಾವಗೋಷ್ಠಿ, ಇಷ್ಟಲಿಂಗಾರಾಧನ - ನಿತ್ಯಾನುಷ್ಠಾನಗಳ ವ್ಯವಸ್ಥೆ ಮಾಡಿದ್ದರು[3]. ಅದು ವೀರಾಗಮದಲ್ಲಿ ಹೀಗೆ ಉಕ್ತವಿದೆ :

---

1. ಶಿವಾಗಮ ಸೌರಭ : (ಸಂ) ಎಂ.ಜಿ. ನಂಜುಂಡಾರಾಧ್ಯ, ಬೆಂಗಳೂರು, ೧೯೮೬, ಪೀಠಿಕಾ ಪು. ೨೩, ೩೫ ಮತ್ತು ೪೧
2. ಡಾ। ಹೆಚ್. ಪಿ. ಮಲ್ಲೇದೇವರು : 'ವೀರಶೈವ ಧರ್ಮದ ಪ್ರಾಚೀನತೆ', ಸಿದ್ದಗಂಗಾಶ್ರೀ, ೧೯೮೦, ಪು.೫೬೦-೬೧ ಹಾಗೂ ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್ ನಂ.೧, ಸಂಖ್ಯೆ. ೩೨, ಇಂಡಿಯನ್ ಆಂಟಿಕ್ವೆರಿ ನಂ.೧೨
3. ಡಾ। ಶ್ರೀ ಜಚನಿ : ಶ್ರೀ ಜಗದ್ಗುರು ಆದಿರೇಣುಕರು, ಗದಗ, ೧೯೮೩, ಪು. ೨೪-೨೮ ಮತ್ತು ಮಾಮಿಡಿ (ರೇಣುಕಾಂಕ -೧) ಸಂ ೭, ಸಂ.. ೨೬ ಪು ೪೨-೪೩

ಶಿಂಶುಮಾರ ಗಣಾಧೀಶಂ ಚಾರಿತ್ರೇಣ ಮನೋಹರಂ
ವೀರಮಾಹೇಶ್ವರಾಚಾರಂ ರೇಣುಕೇನ ಪ್ರಪೇರಿತಂ
ಪಾಂಥಾತಿಥ್ಯಂ ಚ ಗುರುಣಾ ಶ್ರಮಚ್ಛೇದಕರಂ ವರಂ
ಪುಣ್ಯ ವೃಕ್ಷೈಶ್ಚ ಸಂವೃದ್ಧಂ ವೀರಮಾಹೇಶ್ವರಾನ್ವಿತಂ
ತಚ್ಛೈವಂ ಮಠಮಿತ್ಯಾಹುಃ ಕೇಚಿತ್ಕಾಂತಾ ವರಾನನೇ

ಬಹುಶಃ ಈ ಕಾರಣಗಳಿಂದ ಕ್ರಿ.ಶ. ೧೨೮೦ರ ಮರಡಿಪುರ ಶಾಸನವು ಪರಂಪರೆಯನ್ನು ಗುರುತಿಸುತ್ತ ತಂತ್ರಶಿವಾಚಾರವೇ ಪಥವಾಗಿ ನಡಪ ರಿಷಿಗಣಂಗಳು.... ನಂದಿ ಮಹಾಕಾಳ ವೀರಭದ್ರ...... ಧಾರುಕ ರೇಣುಕ..... ಮತ್ತಂ ಮರ್ತ್ಯಲೋಕದ..... ಕರಿಕಾಲಚೋಳ, ಭೋಗದೇವ ...... ಕೇಶಿರಾಜದಣ್ಣಾಯಕ..... ಸಂಗನ ಬಸವಯ್ಯ.....ಏಕಾನ್ತದ, ರಾಮಯ್ಯ.....ನೆಲುವಿಗೆಯ ಸಾಂತಯ್ಯ. ಸಕಲಗಣ ಪರಿವೇಷ್ಟಿತ ಶ್ರೀ ಕಲಿದೇವರ ಪ್ರಶಸ್ತಿ ಮಂಗಳಂ' ಎಂದಿರುವುದು ಗಮನಾರ್ಹ. ಇಲ್ಲಿ ರೇಣುಕರ ಹೆಸರಷ್ಟೇ ಅಲ್ಲ, ವೀರಶೈವ ಸಾಮಂತರ, ದಂಡನಾಯಕರ ಹೆಸರುಗಳೂ ಇವೆ.

ಬಸವಣ್ಣನವರನ್ನು 'ಸಂಗನ ಬಸವಯ್ಯ' ಎಂದು ಕಲಿದೇವರ ಈ ಪ್ರಶಸ್ತಿ ಗದ್ಯ ಶಾಸನದಲ್ಲಿ ತಿಳಿಸಿದೆ. ಇದಕ್ಕೂ ಮುನ್ನಿನ ಅರ್ಜುನವಾಡ ಹಾಗೂ ಚೌಡದಾನಪುರ ಶಾಸನದಲ್ಲಿ ಬರುವ 'ಸಂಗನ ಬಸವ ' ಇಲ್ಲಿ 'ಸಂಗನ ಬಸವಯ್ಯ' ಎಂದು ಉಕ್ತವಾಗಿ ಸಂಗಮೇಶ್ವರ ಹಾಗೂ ಬಸವೇಶ್ವರರ ದೈವೀಸಂಬಂಧವನ್ನು ಗಟ್ಟಿಗೊಳಿಸುತ್ತದೆ[4]. ಶಿವಾಚಾರಪಥದಲ್ಲಿ ನಡೆದು ಬಂದವರಲ್ಲಿ ಪುರಾತನರ, ನೂತನರ ಅವಿಭಾಜ್ಯ ಸಂಬಂಧವನ್ನು 'ಕಲಿದೇವರ'ನ್ನು ನೆನೆದು ಹೇಳಿರುವಲ್ಲಿ, 'ಕಲಿದೇವರ' ಸಂಬಂಧಗಳು ಕಾಳಾಮುಖಯತಿ, ಲಕುಲೀಶರಿಗೆ ಕೇವಲ ಅನ್ವಯವೆನಿಸದೆ, ವೀರಶೈವರಿಗೂ ಅನ್ವಯಿಕವಾಗಿತ್ತು ಎಂಬುದನ್ನೆ ಸೂಚಿಸುತ್ತದೆ. ತದಾನುವರ್ತಿಯಾಗಿ ಪ್ರಾಚೀನ ವೀರಶೈವ ಅರಸರ ಸಂಬಂಧಕ್ಕೂ ಅದು ಅನ್ವಯವೆ.

ಮಧ್ಯಮ ಪದರಗಳು

ಕ್ರಿ.ಶ. ೪೨೮ರ ವಾಕಾಟಕ ೨ನೆಯ ಪ್ರವರ ಸೇನನ ಶಿಲಾ ಶಾಸನದಲ್ಲಿ ಬರುವ ಮಾತು: 'ಅಂಶಭಾರ ಸನ್ನಿವೇಶಿತ ಶಿವಲಿಂಗೋದ್ವಹನ ಶಿವ ಪರಿತುಷ್ಟ ಸಮುತ್ಪಾದಿತ ರಾಜವಂಶಾನಾಂ' ಶಿವಲಿಂಗವನ್ನು ಸದಾ ಭುಜದಲ್ಲಿ ಧಾರಣಮಾಡಿದರೆ ಶಿವನ ಕೃಪೆ ಭವನಾಗರಿಗೆ ಒದಗುತ್ತದೆ. ಈ ಲಿಂಗ ವ್ಯಕ್ತಿಗತ ಶಿವಚೈತನ್ಯದ ಕುರುಹಾಗಿದ್ದರೆ ಮಾತ್ರ ಇದು ಸಾಧ್ಯ. ಹೀಗೆನ್ನುವಲ್ಲಿ ಕೇವಲ ಪ್ರದರ್ಶನಕ್ಕಲ್ಲದೆ ಅಂಗದ ಮೇಲೆ ಲಿಂಗ ಧರಿಸುವ ರಾಜರು ಆ ಕಾಲಕ್ಕಿದ್ದರು ಎಂದಾಗುತ್ತದೆ.[5] ಕ್ರಿ.ಶ.೪ನೆಯ ಶತಮಾನದ ವಯಲೂರು ಶಾಸನದಲ್ಲಿ ರಾಜಸಿಂಹ ಎಂಬ

4. ಡಾ। ಎಂ. ಎಂ. ಕಲಬುರ್ಗಿ: ಶಾಸನಗಳಲ್ಲಿ ಶಿವಶರಣರು, ಗದಗ, ೧೯೭೮, ಪು. ೬೯
5. ಪುಲ್ಲಕವಿ ವಿರಚಿತ ಶ್ರೀಶೈಲ ಪಂಡಿತಾರಾಧ್ಯ ಚರಿತ್ರಮು, ಬೆಂಗಳೂರು, ೧೯೫೪ , ಎಂ. ಜಿ. ನಂಜುಂಡಾರಾಧ್ಯರ ಉಪೋದ್ಘಾತ, ಪು. ೯೯-೧೦೦ (Fleet's Gupta inscription No. 45)

ದೊರೆಯನ್ನು 'ಮಹೇಶ್ವರ ಶಿಖಾಮಣಿ ದೀಪ್ತಿಮೌಲಿ: ' ಹಾಗೂ 'ಶಿವಚೂಡಾಮಣಿ' ಎಂದು ವರ್ಣಿಸಲಾಗಿರುವಲ್ಲಿ ಇವನು ಅಂಗದ ಮೇಲೆ ಲಿಂಗ ಧರಿಸಿದ್ದ ವಿಷಯ ವಿದಿತವಾಗುತ್ತದೆ[6]. ಕ್ರಿ.ಶ. ೭ನೇ ಶತಮಾನದ ಕಂಚಿಯ ಅತ್ಯಂತಕಾಮು (ಅತ್ಯ ಪ್ರಕಾರ) ಗುಣಭರ ಇತ್ಯಾದಿ ಪಲ್ಲವ ವಂಶದ ರಾಜರು ಲಿಂಗಧಾರಿಗಳಾಗಿದ್ದರು ಎಂಬುದು, 'ಶಿರಸಿ ಶಂಕರಂ' 'ಶಿವ ಶಿರಸಿ ಧಾರಯತಾ' 'ವೃಷಭಲಾಂಛನ' 'ಆಗಮಾನುಸಾರಿ' ಇತ್ಯಾದಿ ವಿಶೇಷಣಗಳು ಅವರಿಗಿದ್ದ ಬಗ್ಗೆ ಶಾಸನೋಕ್ತಿಗಳಿಂದ ತಿಳಿಯುತ್ತದೆ. ಅಂದರೆ ಅವರ ಕಾಲದ ಪದ್ಧತಿಯ ರೀತ್ಯಾ ಲಿಂಗದೀಕ್ಷಿತರಾಗಿ (ಗುರು ಕೊಟ್ಟ ಕರದಿಷ್ಟಲಿಂಗ) ಲಿಂಗಧಾರಣೆ ಮಾಡುತ್ತಿದ್ದ ಪ್ರಕಾರವನ್ನು ಇವು ತಿಳಿಸುವಂತಿವೆ. ಹಾಗೆ ನೋಡಿದರೆ ೧೧-೧೨ನೇಯ ಶತಮಾನದ ಶಿವಶರಣ ಶಂಕರ ದಾಸಿಮಯ್ಯನೂ ಭುಜದಲ್ಲಿ ತನ್ನ ಇಷ್ಟಲಿಂಗವನ್ನು (ಗುರುಕೊಟ್ಟ ಕ್ರಿಯಾಕರದಿಷ್ಟಲಿಂಗ) ಧರಿಸುತ್ತಿದ್ದನೆನ್ನಲಾಗಿದೆ. ಶಿರಸ್ಥಾನ ಶ್ರೇಷ್ಠ ಎಂಬ ಕಲ್ಪನೆ ಶಿರೋವ್ರತಿಗಳಲ್ಲಿದ್ದ ಕಾರಣ ಪ್ರಾಚೀನ ವೀರಶೈವರಲ್ಲಿ ಶಿರದಲ್ಲಿ ಇಷ್ಟಲಿಂಗ ಧರಿಸುತ್ತಿದ್ದ ಪದ್ಧತಿ ಇದ್ದು ಆ ರಾಜರಲ್ಲಿ ಅದು ರೂಢಿಗೊಂಡಿರಬಹುದೆನ್ನಲು ಮೇಲಿನ ಉದಾಹರಣೆಗಳಿರುವಂತಿವೆ. ಇಂದಿನ ವೀರಶೈವ ಲಿಂಗವಂತರಲ್ಲಿ ವ್ಯಕ್ತಿಗತ ಶಿವಚೈತನ್ಯದ ಕುರುಹಾದ ಆಯತ್ತ ಸ್ವಾಯತ್ತ ಸನ್ನಿಹಿತ ಲಿಂಗವನ್ನು ಹೊಂದಿಯೂ ಅನೇಕರು ಗೂಟಕ್ಕೆ ಆ ಇಷ್ಟಲಿಂಗವನ್ನು ತಗುಲಿಹಾಕಿ ಬೇಕಾದಾಗ ಪೂಜೆ ಮಾಡಿಕೊಳ್ಳುವಂತೆ, ಆ ಕಾಲಕ್ಕೂ, ಇಷ್ಟಲಿಂಗ ಧಾರಣ ಪದ್ಧತಿಯಲ್ಲಿ ಅಪಭ್ರಂಶಿತ ರೂಢಿಗಳು ಅಥವಾ ವಿಕೃತ ರೂಪಗಳು ಚಾಲ್ತಿಗೊಂಡಿದ್ದಂತೆ ಭಾಸವಾಗುತ್ತದೆ. ಪರಿಣಾಮವಾಗಿ ವೀರಶೈವದಲ್ಲಿ ವಿವಿಧ ಶೈವ ಸ್ವರೂಪಗಳು ರೂಪುಗೊಂಡವೇನೋ ? ಆಗ ವೀರಶೈವದ ಪುನರ್‌ಮೌಲ್ಯ ಸ್ಥಾಪನಾಕಾಂಕ್ಷೆ ಬಲಗೊಂಡು ಬರುತ್ತಿದ್ದು ರಾಜಾಶ್ರಯ ಪಡೆದಿರಬೇಕು. ಅಂತಹ ಮುಂದುವರಿಕೆಯ ಪ್ರಯತ್ನಗಳು ೧೧-೧೨ ಶತಮಾನದಲ್ಲಿಯೂ ನಡೆದು ವೀರಶೈವ ಅರಸರ ಮೇಲೂ ಪರಿಣಾಮ ಬೀರಿವೆ.ಅಲ್ಲದೆ ವೀರಶೈವ ಶರಣರೇ 'ಇಷ್ಟಲಿಂಗ' ಪದವನ್ನು ವೈಯಕ್ತಿಕ ಆಯತ್ತಲಿಂಗಕ್ಕೆ,.[7] ಬಳಸಿಕೊಂಡರೆಂದರೆ ಸ್ಥಾವರಲಿಂಗದಲ್ಲಿ ಇಷ್ಟವಾದದ್ದು ಎಂಬ ಬೇರೆಯೆ ಅರ್ಥದ ಆರೋಪವು 'ಇಷ್ಟಲಿಂಗಕ್ಕೆ' ಸಲ್ಲದಾಗುತ್ತದೆ.

ಬಾದಾಮಿ ಚಾಲುಕ್ಯರಲ್ಲಿ

ಬಾದಾಮಿ ಚಾಲುಕ್ಯರ ಆರಂಭದ ದೊರೆಗಳು ವೈಷ್ಣವಧರ್ಮಿಗಳೆಂದು ತೋರಿ ಬಂದರೂ ಶೈವಧರ್ಮದತ್ತವೂ ಹಾಗೂ ಸಪ್ತಮಾತೃಕಾರಾಧನೆ (ರುದ್ರಕನ್ನಿಕೆಯರು [8])

---

6. ಅ) ಟಿ.ಎನ್. ಮಲ್ಲಪ್ಪ,: ವೀರಶೈವದ ಉಗಮ ಮತ್ತು ಪ್ರಗತಿ, ಬೆಂಗಳೂರು, ೧೯೬೯, ಪು.೪೧ (Epirgraphia Indica, Xviii pp. 149-150 ರಿಂದ ಉದ್ಧೃತ).
   ಆ) ಎಸ್.ಕೆ ರಾಮಚಂದ್ರರಾವ್ : ಮೂರ್ತಿಶಿಲ್ಪ ನೆಲೆ- ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೫ ಪು. ೧೧೨-೧೩
7. ಎಂ.ಎಂ. ಕಲಬುರ್ಗಿ : ಮಾರ್ಗ (ಸಂಪುಟ - ೧), ಬೆಂಗಳೂರು ೧೯೮೮, ಪುಟ. ೧೮೭
8. ಡಾ| ಶ್ರೀ ಜಚನಿ : ಶ್ರೀ ಜಗದ್ಗುರು ಆದಿ ರೇಣುಕರು, ಅದೇ, ಪು. ೨೧ ರಲ್ಲಿಉಕ್ತ - 'ಬ್ರಾಹ್ಮೀ ಮಾಹೇಶ್ವರೀ ಮುಖ್ಯಾ ರುದ್ರಕನ್ಯಾ ಕಳಾಮುಖಾಃ'

ಯಲ್ಲಿಯೂ ಅವರಿಗೆ ಒಲವಿತ್ತು.ಅವರಲ್ಲಿನ ಮಂಗಲೀಶನನ್ನು (ಕ್ರಿ.ಶ. ೫೯೭-೬೧೦) ಭಾಗವತ ಪಂಥದ ವಿಷ್ಣುವಿನ ಪರಮ ಆರಾಧಕನೆಂದು ವರ್ಣಿಸಲಾಗಿದೆ.[9] (ಹಾಗೆ ನೋಡಿದರೆ ಆ ಚಂಗಾಳ್ವ ವೀರಶೈವ ಅರಸ ಕ್ರಿ.ಶ. ೧೨೪೫ರ ಶಾಸನೋಕ್ತ ಬೊಪ್ಪದೇವ ಶ್ರೀರಂಗನಾಥನ ಪರಮ ಆರಾಧಕನಾಗಿ ದೇಗುಲವನ್ನು ಕಟ್ಟಿಸಿದ ಉದಾಹರಣೆ ಇದೆ).

ಆದರೆ ಕ್ರಿ.ಶ. ಸು.೬೦೦ ರ ಬಾದಾಮಿ ಗುಹೆಯ ಮೇಲಿನ ಶಾಸನ ಪಾಠದಲ್ಲಿ (ಇಂಡಿಯನ್ ಆಂಟಿಕ್ವರಿ. ಪು. ೫೯-೬೦) ಮಂಗಲೀಸನಾ ಕಲ್ಮನೆಗೆ 'ಲಂಜಿಗೇಸರಂ ' ನ ಸಂಬಂಧದ ಉಲ್ಲೇಖವಿದೆ.[10] ಇಲ್ಲಿ 'ಲಂಜಿಗೆ' ಎಂಬ ಶಬ್ದವನ್ನು ಲಕ್ಷ್ಮಿಗೆ ಅನ್ವಯಿಸಿ ಲಂಜಿಗೇಸರ (= ಲಂಜಿಗೇಶ್ವರ) ಎಂದರೆ 'ಲಕ್ಷ್ಮೀಪತಿ' ಎಂದು ಕನ್ನಡ - ಕನ್ನಡ ನಿಘಂಟು ಹೇಳಿದೆ. ಜೊತೆಗೆ 'ವಿಷ್ಣು ?' ಎಂದು ಆ ಶಬ್ದಕ್ಕೆ ಪ್ರಶ್ನೆಯ ಚಿಹ್ನೆ ಇಟ್ಟು ಅರ್ಥವನ್ನು ಸೂಚಿಸಿದೆ. ಆದರೆ ಇಲ್ಲಿ 'ಈಶ್ವರ' ಶಬ್ದವನ್ನು ಕೇವಲ ವಿಷ್ಣುವಿನ ಒಡೆತನಕ್ಕೆ ಮಿತಿಗೊಳಿಸಿದಂತಿದೆ. ಅಥವಾ 'ಒಡೆಯ' ಎಂಬ ಅರ್ಥಕ್ಕೆ ಸೂಚಿಸಲಾಗಿದೆ. ಮುಖ್ಯವಾಗಿ 'ಈಶ್ವರ' ಶಬ್ದವೆ ಶಿವನಿಗೆ ಆರೋಪಿತವಾದದ್ದು. ಶಿವ-ಶಕ್ತಿ ತತ್ತ್ವಾನುಸಾರ ಉಮೆಯ ಒಂದು ರೂಪವೆ ಶ್ರೀ ಲಕ್ಷ್ಮಿ. ಲಕ್ಷ್ಮಿ, ಪಾರ್ವತಿ ಏಕಾನ್ವಯರು. ಶ್ರೀ ಸೂಕ್ತದ ೧೫ನೆಯ ಮಂತ್ರದ ರೀತ್ಯಾ ತ್ರ್ಯಂಬಕೆ (ಶಿವೆ) ಎಂಬ ಹೆಸರೂ ಲಕ್ಷ್ಮಿಗೆ ಇದೆ. ಇದಲ್ಲದೆ ಬಹು ಪ್ರಾಚೀನದಲ್ಲಿ ಲಕ್ಷ್ಮಿಯು ವಿಷ್ಣುವಿನ ಸಂಬಂಧವಿಲ್ಲದ ಸ್ವತಂತ್ರದೇವತೆ ಆಗಿದ್ದಳು.[11] ಹೀಗಾದರೆ ಮೊದಲು ಆಕೆಗೆ ಶಿವಸಾಮೀಪ್ಯದ ಆರಾಧನೆ ಇದ್ದಿರಬಹುದೆನಿಸುತ್ತದೆ. ಈ ಹಿನ್ನೆಲೆಗಳಲ್ಲಿ ಮಂಗಲೀಸ(ಮಂಗಲೀಶ)ನ ಹೆಸರೇ ಶಿವ ಸಂಬಂಧಿಯದಾಗುತ್ತದೆ. ಅವನು ಕೆತ್ತಿಸಿದ(ಕಟ್ಟಿಸಿದ?) ಬಾದಾಮಿಯ ಮೂರನೆಯ ಗುಹೆಯಲ್ಲಿ (ಬೇರೆಯೆ ಕಲ್ಮನೆ ಅಥವಾ ದೇವಗುಡಿಗೆ ಎಂಬ ಅರ್ಥಗಳಾಗುವ ಸಾಧ್ಯತೆ ಇದೆ.) ಕಲ್ಮನೆಗೆ 'ಲಂಜಿಗೇಸರಂ' ಎಂಬ ಊರನ್ನು ದಾನ ನೀಡಿದ. ದೇವರಿಗೆ ಹೂವಿಡುವ ಮಾಲೆಕಾರರಿಗೆ ಹಣದ ರೂಪದ ಸಂಭಾವನೆ ನೀಡುವ ಬಗ್ಗೆಯೂ ಶಾಸನೋಕ್ತ ಮಾಡಿದ ಎಂದು ಅರ್ಥೈಸಲಾಗಿದೆ. ಹೀಗಿದ್ದರೂ ಶಿವಾಲಯವೊಂದಿದ್ದ ಕಾರಣ ಹೆಸರುಗೊಂಡಿದ್ದ ಲಂಜಿಗೇಸರ ಗ್ರಾಮವನ್ನು ಈ ಗುಹೆಯ ದೇವಾರಾಧನೆಗೆ ನೀಡಲಾಗಿತ್ತು ಎಂದು ಅರ್ಥೈಸಲು ಅವಕಾಶವಿದೆ. ಲಂಜಿಗೇಶ್ವರ ಎಂಬ ಶಿವಲಿಂಗವನ್ನು ಈ ಕಲ್ಮನೆಯೊಂದರಲ್ಲಿ ಕೆತ್ತಿಸಿ ಅಥವಾ ಸ್ಥಾಪಿಸಿ (ಇತ್ತೊದು) ದಾನ

---

9. D.C. Sircar : 'Amudalapadu plates of vikramaditya I .EC. Vol . xxxii - partI January 1959, p. 178; ಈ ಶಾಸನದತ್ತ ನನ್ನ ಗಮನವನ್ನು ಸೆಳೆದ(ದಿ) ಡಾ॥ ಜಿ.ಎಸ್. ಗಾಯಿ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುವೆ.
10. ಶಾಸನ ಸಂಗ್ರಹ : (ಸಂ) ಎ. ಎಂ. ಅಣ್ಣಿಗೇರಿ, ಆರ್ ಶೇಷಶಾಸ್ತ್ರಿ, ಕನ್ನಡಸಾಹಿತ್ಯ ಪರಿಷತ್ತು, ೧೯೭೫, ಪು. ೨೮ ರೀತ್ಯಾ ಸಾಲುಗಳು ಹೀಗಿವೆ:
೧. ಸಸ್ತಿ ಶ್ರಿಮತ್ ಪ್ರಿ [ಪೃ]ಥಿವಿ ವಲ್ಲಭ ಮಂಗ [ಲೀ] ಸ [ಶ]ನಾ ೨. ಕಲ್ಮನೆಗೆ ಇತ್ತೊದು ಲಂಜಿಗೇಸರಂದೇವರ್ಕೆ ಪೂನಿಜುವ ೩. ಮಾಲ [ಲಾ]ಕಾರರ್ಗೆ ಅರ್ಧವಿಸದಿ ಇತ್ತೊದಾನಬಿವೊನ್ ೪. ಪಞ್ಚ ಮಹಾಪಾತಕನಕುಂ [ಕ್ಕುಂ] ಏಬನೆಯಾ ನರಕದಾ ಪುಬಿ ಅಕು [ಕ್ಕು] ಮ್ (ii*)
11. ಎಸ್.ಕೆ. ರಾಮಚಂದ್ರರಾವ್ : ಅದೇ, ಪು. ೧೮೨

ನೀಡಿರಬಹುದೆ ? ಅಥವಾ 'ಲಂಜಿಗೇಸರಂ' ಶಬ್ದದಲ್ಲಿ ಲಿಪಿಕಾರನ ದೋಷದಿಂದಾಗಿ ಅನುಸ್ವಾರವಿದ್ದು ಅದು ಅನಗತ್ಯವೆಂದರೆ (ಶಾಸನ ಸಂಪಾದನೆಯಲ್ಲಿ ಲಿಪಿಕಾರನ ಕೆಲವು ದೋಷಗಳನ್ನು ತೋರಿಸಲಾಗಿದೆ) ಲಂಜಿಗೇಸರ ದೇವರಿಗೆ(ಶಿವನಿಗೆ), ಮಾಲೆಕಾರರು ಹೂ ವಿಡುವ ಸಲುವಾಗಿ ನೀಡಬೇಕಾದ ಹಣದ ಮೊತ್ತವನ್ನು ಸೂಚಿಸಿರಬಹುದೇ ? ಎಂಬ ಅರ್ಥಗಳೂ ಹೊರಡಬಹುದು. ಒಂದು ಗ್ರಾಮವನ್ನೆ ದಾನನೀಡಲಾಗಿದೆ ಎಂದರೂ, ಕಲ್ಮನೆಯ ಎಲ್ಲ ನಿರ್ವಹಣೆಯ ವ್ಯವಸ್ಥೆಗೆ ಗ್ರಾಮದ ಆದಾಯದಿಂದ ಒದಗಿ ನಿರ್ವಹಣಾಕಾರರು ಅದನ್ನೆಲ್ಲ ನೋಡಿಕೊಳ್ಳುವುದಿರುತ್ತದೆ. ಮಾಲೆಕಾರರಿ (ನ) ಗೆ ಪ್ರತ್ಯೇಕವಾಗಿ ಹಣ ನೀಡುವ ಬಗ್ಗೆ ಹೇಳಿದೆ ಎಂದರೆ ಅಲ್ಲಿನ ಎಲ್ಲ ಕಲ್ಮನೆಗಳ ದೇವರುಗಳಿಗೆ ಹೂವಿಡುವ ಬಗ್ಗೆ ಹಾಗೂ ಅದು ಗುಡಿಯ ಶಿವಲಿಂಗವೊಂದಿದ್ದ ಬಗ್ಗೆ ಸೂಚನೆಯಾಗಿರಬಹುದು. ಬಾದಾಮಿಯ ಗುಹೆಗಳಲ್ಲಿ ವಾಮನ, ವರಾಹಶಿಲ್ಪ, ನಟರಾಜ, ಹರಿಹರ ಶಿಲ್ಪವು ಇರುವಲ್ಲಿ,. ವಿಷ್ಣು ಕ್ಷೇತ್ರದಲ್ಲಿ ಶಿವ, ಶಿವಕ್ಷೇತ್ರದಲ್ಲಿ ವಿಷ್ಣುವಿದ್ದರೆ ಮಾತ್ರ ಅವಕ್ಕೆ ಶ್ರೇಷ್ಠತೆ ಎಂಬ ಪರಂಪರೆ ಅಲ್ಲಿಯೂ ಇದೆ. ಅಲ್ಲದೆ 'ಜಗದ್ಯೋನಿ ಸಾಮಿನಾಂ ವಿಷ್ಣುಃ', ಎಂದು ಶಿವಲಿಂಗದ ಪೀಠ ಭಾಗಕ್ಕೆ ಅನ್ವಯಿಸಿ ಹೇಳಿರುವುದೂ ಇದೆ. ಅಂದರೆ ಮಂಗಳೇಶನ ಹರಿಹರ ಸಮನ್ವಯ ದೃಷ್ಟಿ ಇಲ್ಲಿ ತೋರುವಂತಿದೆ. 'ಮಂಗಲೀಸನಾ ಕಲ್ಮನೆಗೆ 'ಎನ್ನುವಲ್ಲಿಯೂ ಬಹುಶಃಅವನು ನಿರ್ಮಿಸಿದ. ಶೈವಗುಹೆಗೂ ಅನ್ವಯವಾಗಿ ಚಾಲುಕ್ಯರ ಈ ರಾಜನಿಗೆ ಶಿವಧರ್ಮದ ಬಗ್ಗೆಯೂ ಇದ್ದ ಒಲವಿನ ಸಂಕೇತವೆನಿಸುತ್ತದೆ. ೩ನೆಯ ವೈಷ್ಣವ ಗುಹೆಯನ್ನು ಕಟ್ಟಲಾರಂಭಿಸಿದವನೆ ಅವನ ಅಣ್ಣ ಕೀರ್ತಿವರ್ಮ. ಮಂಗಲೀಶ ಅದನ್ನು ಪೂರ್ಣಗೊಳಿಸಿದ್ದು ಅಣ್ಣನ ಆಶಯದಂತೆ, ಎಂಬುದೇ ಧ್ವನಿಪೂರ್ಣವಾಗಿದೆ. ವಿಷ್ಣುವಿನ ಪರಮ ಆರಾಧಕ ನಾಗಿಯೂ, ಇಂಥ ಒಲವನ್ನೂ ಹೊಂದಿದ್ದ ಫಲವಾಗಿ ಅವನಿಂದ ಅನುಗುಣ ಗುಹಾಲಯಗಳು ನಿರ್ಮಿತವಾಗಿರಬೇಕು.

ಈ ರಾಜ ಮನೆತನದ ಮುಂದಿನ ಒಂದನೆ ವಿಕ್ರಮಾದಿತ್ಯನನ್ನು ಕ್ರಿ.ಶ. ೬೭೧ರ ನೌಸಾರಿಯ ತಾಮ್ರಪಟಗಳು 'ಪರಮ ಮಾಹೇಶ್ವರ' ಎಂದು ಕರೆದಿವೆ. ಇದು ವೀರಶೈವ ಪಾರಿಭಾಷಿಕ ಶಬ್ದದಂತಿದೆ. ಇದಕ್ಕೆ ಕಾರಣವೂ ಇದೆ. ಡಿ.ಸಿ. ಸರ್ಕಾರ್ ಅವರು ಹೇಳಿರುವಂತೆ ಕ್ರಿ.ಶ. ೬೫೮-೬೦ರ ಅಮುದಲಪಾಡು ತ್ರಾಮ ಶಾಸನದ ರೀತ್ಯಾ ಈ ವಿಕ್ರಮಾದಿತ್ಯನು 'ಶಿವಮಂಡಲದೀಕ್ಷೆ' ಯನ್ನು ತನ್ನ ದೀಕ್ಷಾಗುರುವಿನಿಂದ ಪಡೆದಿದ್ದಾನೆ. ಈ ಶಿವಮಂಡಲ ದೀಕ್ಷೆಯು ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ದೊರೆಗಳಿಗೆ ನೀಡುವ ಜ್ಞಾನದೀಕ್ಷೆ ಆಗಿದೆ. ಆದರೆ ಶಾಸನದಲ್ಲಿನ ಸಂದರ್ಭಗಳನ್ನು ನೋಡಿದರೆ ಅವು ಈ ದೀಕ್ಷೆಯು ವೀರಶೈವ ದೀಕ್ಷಾ ಸಂಸ್ಕಾರ ದಂತಿದೆ, ಎಂಬುದಕ್ಕೆ ಪೋಷಕವಾಗಿವೆ.[12] ಈ ದೀಕ್ಷೆ ಶಿವಜ್ಞಾನ ದೀಕ್ಷೆಯೂ ಹೌದು.ಬಹುಶಃ ಈ ಶಿವಜ್ಞಾನ ದೀಕ್ಷೆಯನ್ನು 'ಶಿವಮಂಡಲ'ದಲ್ಲಿ

---

12. D.C. Sirear : op. cit., pp. ೧೬೫-೧೮೨

ಅರ್ಥಾತ್ ಶಿವಾಚಾರದ ಆವರಣಗಳಲ್ಲಿ ವಿಕ್ರಮಾದಿತ್ಯನನ್ನು ತೊಡಗಿಸಿ ದೀಕ್ಷೆ ನೀಡಿದ ಮುಖ್ಯಗುರು ಸುದರ್ಶನಾಚಾರ್ಯನಾಗಿದ್ದಾನೆ. ಇವನಿಗೆ ಗೋತ್ರವನ್ನು ಉಲ್ಲೇಖಿಸಿಲ್ಲದಿರುವುದು, ಬಹುಶಃ ಇವನು ವೀರಶೈವ ಪೀಠದ ಗುರುವಾಗಿದ್ದನೆ ? ಎನಿಸುತ್ತದೆ; ಅಂತಾಗಿ ಇಲ್ಲಿನ 'ಶಿವಮಂಡಲ ದೀಕ್ಷೆ', ಅಷ್ಟಾವರಣಗಳ ಸಂಬಂಧದ ಪ್ರಾಚೀನ ರೂಪವಾಗಿರಬಹುದು ಎನಿಸುತ್ತದೆ. ಇದು ಬರಿ 'ಜ್ಞಾನ ದೀಕ್ಷೆ' ಅಲ್ಲ ಎನ್ನಲು, ವಿಕ್ರಮಾದಿತ್ಯನಿಗೆ ಮೇಘಾ ಚಾರ್ಯ ಎಂಬ ಶಿಕ್ಷಾಗುರುವಿದ್ದ ಎಂಬುದು ಶಾಸನ ಸಂಗತಿಯಿಂದಲೂ ವಿದಿತವಾಗುತ್ತದೆ. ಎಂದಿನ 'ಜ್ಞಾನ'ದ ಸಂಗತಿಗಳನ್ನು ಅರಿವಿಗೆ ತರಲು ಅವನಿದ್ದನೆಂದಾಗುತ್ತದೆ. ಇದಲ್ಲದೆ ಕನ್ನಡ-ಕನ್ನಡ ನಿಘಂಟು (ಮೊದಲ ಸಂಪುಟ ೧೯೭೦) 'ಆಯತ' ಎಂಬ ಶಬ್ದಕ್ಕೆ ಗುರು ಭಕ್ತನಿಗೆ ಇಷ್ಟಲಿಂಗ ಕೊಡುವ ದೀಕ್ಷೆ ಎಂದು ಉದ್ಧೃತ ಮಾಡಿ ನೀಡಿರುವ ಪ್ರಯೋಗ ಇಂತಿದೆ:

'ಮುನ್ನಿನ ಪುರುಷಪ್ರತಿಯರು ಒಲಿಸಿದ ಆಯತವ ಪರಿಪರಿಯಲು ಬಣ್ಣಿಸಲು ಬಹುದಲ್ಲದೆ, ಹೊಕ್ಕು ತೋಱಲು ಬಾರದು' (ಬಸವ ೬.೨೪). ಇದರ ಜೊತೆಗೆ ಪುರಾತನರ ಉಲ್ಲೇಖವನ್ನು ಬಸವಣ್ಣ ಮಾಡಿರುವುದನ್ನು ಗಮನಿಸಬಹುದಾಗಿದೆ.

ಇಲ್ಲಿ ಬರುವ ಪುರುಷಪ್ರತಿಯರಲ್ಲಿ ಶಿವಭಕ್ತರಿದ್ದಾರೆ. ಶಿವನಿಷ್ಠೆಯ ಜೊತೆಗೆ ಪತಿನಿಷ್ಠೆಯ ಈ ಪತಿವ್ರತೆಯರು ಹೇಗೋ ಹಾಗೆ, ಲಿಂಗ ನಿಷ್ಠೆಯಲ್ಲಿ ಶಿವಧರ್ಮಾನುಸಾರಿಗಳಾಗಿ ಇರುತ್ತಿದ್ದ ಶಿರೋವ್ರತಿ - ಶಿರೋವ್ರತರಿಗೂ[13] ಈ ಆಯ ತವಂತಿಕೆ ಅನ್ವಯವಾಗುವಂತಿದೆ. ಪುರಾತನರಿಗೂ ಸಂಬಂಧಿಸಿದೆ. ಇದೊಂದು ರೀತಿ ಹೆಣ್ಣು ಗಂಡು ಎರಡಕ್ಕೂ ಲಿಂಗಭೇದ

---

13. ಕನ್ನಡ ಕನ್ನಡ ನಿಘಂಟು(ಆನೆಯ ಸಂಪುಟ ೧೯೯೫) ವಿನ ಪ್ರಯೋಗಗಳನ್ನೂ ಗಮನಿಸಿದರೆ ಶಿರೋವ್ರತವು ಲಿಂಗದೀಕ್ಷೆ ಲಿಂಗ ನಿಷ್ಠೆಗೆ ಸಂಬಂಧಿಸಿದ ವ್ರತವಾಗಿ ತೋರುತ್ತದೆ. ವೀರಶೈವ ಹಾಗೂ ಅದರ ಶಾಖೆಗಳಿಗೂ ಇರುವ ಸಂಬಂಧವನ್ನು ತಿಳಿಸುವಂತಿದೆ. 'ಎಲ್ಲಾ ಋಷಿಶ್ರೇಷ್ಠರೊಳು ಶ್ರೇಷ್ಠನೆನಿಸುತ ನಿತ್ಯದಲಿ ಸುಖಿಸುತ್ತಿರುವ ಶ್ರೀ ವೀರಶೈವ ಮತವೆಲ್ಲ ಶೈವಂಗಳ ಶಿರೋವ್ರತಮ್ಮದನು ಯಾಚರಿಸುವಡೆ ನಿತ್ಯರಹರು'; 'ಲಿಂಗಧಾರಣರೂ ಲಿಂಗಪೂಜಾವ್ರತವನ್ನು ಶಾಂಭವ ವ್ರತ, ಪಾಶುಪತ ವ್ರತ, ಶಿರೋವ್ರತವೆಂದು ಶಿವಾಗಮಗಳು ಹೇಳುತ್ತಿವೆ. ಅಲ್ಲಮ ಪ್ರಭುವೂ 'ಉತ್ತಮಾಂಗದಲ್ಲಿ ಲಿಂಗವ ಧರಿಸಿಕೊಂಡಾತನು ರುದ್ರನು' ಎಂದಿದ್ದಾನೆ. ತೋಂಟದ ಸಿದ್ಧಲಿಂಗೇಶ್ವರರು ಅನಾದಿ ವಿಡಿದು ಬಂದ ಗುರು.. ಲಿಂಗ.. ಜಂಗಮ ಪಾದೋದಕ ಪ್ರಸಾದ, ಅನಾದಿವಿಡಿದು ಬಂದ ವೀರಶೈವ ಧರ್ಮ' ಎಂದಿರುವುದು ಈ ಮೇಲಿನ ಅಂಶಗಳಿಗೆ ಒತ್ತುಕೊಡುವಂತಿದೆ. ಅಂದರೆ ಲಿಂಗವಂತಿಕೆಯ ಅರ್ಥಾತ್ ಗುರುವು ಅಂಗಸ್ಥಲಕ್ಕೆ ಕ್ರಿಯೆ ಪಿಡಿದುಕೊಡುವ (ವೀರಶೈವರ) ಕುರುಹಿನ ಪ್ರಾಚೀನ ಸಂದರ್ಭದ ಸ್ವರೂಪವನ್ನು ಸೂಚಿಸುವಂತಿದೆ. ಡಾ। ಶ್ರೀ ಜಚನಿ ಅವರ ರೀತ್ಯಾ ('ಶಿರೋವ್ರತ ವೀರಶೈವಮತ' ದಾಸೋಹ, (ಸಂ) ಡಾ. ಆರ್. ಸಿ. ಹಿರೇಮಠ, ಬೆಂಗಳೂರು ೧೯೬೭, ಪು. ೪೨೦-೨೪) ಭಾರತದಲ್ಲಿ ಬಹುಜನರಲ್ಲಿ ವಿವಿಧ ರೀತಿಯಲ್ಲಿ ಶಿರೋವ್ರತವಿದ್ದರೂ ವೀರಶೈವ ಮತದ ಶಿರೋವ್ರತವೇ ಬೇರೆ ಬಗೆಯದು. ಅದು ಪರಿಪೂರ್ಣ ಶಿವವ್ರತ. ಗುರುವಿನ ಕರುಣೆಯಿಂದ ತಿಳಿದ ಶಿವ ಸ್ವರೂಪದ ಅರಿವು. ಕಾರಣಾಗಮದ ರೀತ್ಯಾ ಶಿರೋವ್ರತಕ್ಕೆ ಅತ್ಯಾಶ್ರಮ ವ್ರತ, ಪಾಶುಪತವ್ರತ, ಶಾಂಭವ ವ್ರತ ಎಂಬ ಪರ್ಯಾಯ ನಾಮಗಳಿವೆ. ವೀರಶೈವರು ಅತ್ಯಾಶ್ರಮಿಗಳೆಂದು ವಿದಿತ. ಸಿದ್ಧಾಂತಶಿಖಾಮಣಿ

ಶಬ್ದವಾಗದಂತಿರುವ, 'ಅಂಗಸತಿ ಲಿಂಗಪತಿ' ಭಾವ ಸಮನಿಸಿದಂತಿದೆ. ೬ನೆಯ ಶತಮಾನದಲ್ಲಿ ಶಿರೋವ್ರತಿ ಅರಸರು ಹಾಗೂ ಶಿರೋವ್ರತಿ ಸಾಮಾನ್ಯರೂ ಇದ್ದರು. ಆದಾಗಿ ಈ ವಿಕ್ರಮಾದಿತ್ಯನ ಸಂದರ್ಭಕ್ಕೂ ಅನ್ವಯವಾಗುವಂತೆ 'ಆಯತ ಶಿರೋವ್ರತವು' ಸ್ವಾಯತವೂ ಸನ್ನಿಹಿತವೂ ಆಗಿ ನಡೆದಿರಬೇಕೆನ್ನಿಸುತ್ತದೆ. ಶಾಸನದಲ್ಲಿ ಶಿವಮಂಡಲ ದೀಕ್ಷೆಯ ಹೆಚ್ಚಿನ ವಿವರಗಳನ್ನು ಹೇಳದಿರುವ ಕಾರಣವೆಂದರೆ ಆ ಕಾಲದ ಜನರಿಗೆ ಅದು ಬಹು ಪ್ರಚಲಿತವಾಗಿದ್ದ ಸಂಗತಿ ಆಗಿದ್ದಿರಬೇಕು. ದೀಕ್ಷಾ ಮುಖ್ಯಸ್ಥನಾದ ಸುದರ್ಶನ ಆಚಾರ್ಯ ಹಾಗೂ ಅವನ ಭಾರ್ಯೆಗೂ ದಾನಗಳನ್ನು ವಿಕ್ರಮಾದಿತ್ಯ ನೀಡಿದ. ಈ ದೀಕ್ಷೆಯ ಆಚಾರಗಳಿಗೆ ಕೇವಲ ನೆರವಾಗಿದ್ದವರು ಶೈವ ಬ್ರಾಹ್ಮಣರು. ಸುದರ್ಶನ ಆಚಾರ್ಯನು ತನಗೆ ರಾಜನಿಂದ ಒದಗಿದ ಭೂದಾನದಲ್ಲಿ ಕೆಲವಷ್ಟು ಭಾಗವನ್ನು ಅವರಿಗೂ ಹಂಚಿದ. ಈ ರೀತಿಯ ಶಾಸನೋಕ್ತ ಶಿವಧರ್ಮ ದೀಕ್ಷೆಯ ಸಂದರ್ಭವನ್ನು ಗಮನಿಸಿದರೆ ೭ನೆಯ ಶತಮಾನದ ಕರ್ನಾಟಕದಲ್ಲಿ ವೀರಶೈವ ಹಾಗೂ ಶೈವ ಧರ್ಮಿಗಳು ಸಮನ್ವಯ ಸಹಯೋಗದಲ್ಲಿ ಇದ್ದರು ಎಂಬ ಸೂಚನೆ ದೊರೆಯುತ್ತದೆ.[14] ಹಾಗೂ ಜನತೆ ಅವುಗಳ ನಡುವೆ ಭೇದವನ್ನು

ವೀರಶೈವವನ್ನು 'ಪಶುಪತಿ ಮತ' ವೆಂದಿದೆ. ಅಂತಾಗಿ ಬಸವಣ್ಣನವರು ' ಬಾರದು 'ಬಾರದು ವಿಷಯಿಗೆ ಪಶುಪತ ಬ್ರತವು 'ಎಂದಿರುವುದೂ ಸಾಂಬಂಧಿಕವೇ ಆಗಿದೆ. ಶಾಂಭವೀವ್ರತ, ಶಾಂಭವೀ ದೀಕ್ಷೆ ಇತ್ಯಾದಿಗಳು ವೀರಶೈವಕ್ಕೆ ಮೀಸಲಿವೆ. ಲಿಂ। ಮಲ್ಲಿಕಾರ್ಜುನರು ವೀರಶೈವದ ಹಿನ್ನೆಲೆ ಕುರಿತಂತೆ ಹೇಳುತ್ತ (ದಾಸೋಹ : ಅದೇ, ಪು. ೪೫೪), ಬಸವೇಶ್ವರರ ವಚನವೊಂದರ ಪ್ರಕಾರ ಅವರು 'ಪಶುಪತ ವ್ರತ'ವನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಬಹು ಪ್ರಾಚೀನದಲ್ಲಿದ್ದ ಪ್ರಮಥರ ಆಚಾರವು ಸಾವಿರಾರು ವರ್ಷಗಳ ನಂತರ ಪಾಶುಪತ ವ್ರತವಾಗಿ ಬದಲಾಯಿಸಲ್ಪಟ್ಟಿರಬೇಕು, ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಇದಲ್ಲದೆ ವೀರಶೈವವು ಪುರಾಣಕಾಲದಲ್ಲಿ ಸಾಮಾನ್ಯವಾಗಿ ಪಾಶುಪತವೆಂದೂ ವಿಶೇಷ ಭೇದವಾಗಿ ಮಹಾಪಾಶುಪತವೆಂದೂ ವ್ಯವಹರಿಸಲ್ಪಡುತ್ತಿತ್ತು. ಲಿಂಗ ಹಾಗು ಸ್ಕಂದ ಪುರಾಣಗಳಲ್ಲಿ ಶಿವಲಿಂಗಧಾರಿಗೆ ಪಾಶುಪತನೆಂಬ ವರ್ಣನೆ ಇದೆ. ಅಂದರೆ ಲಿಂಗಧಾರಿಗಳಲ್ಲದ ಪಾಶುಪತರೂ ಇದ್ದಿರಬೇಕು, ಎಂದು ಗುರುವಿನ ಪುರ ಮಠದ ಶ್ರೀ ಗುರು ಸಿದ್ಧ ಶಿವಾಚಾರ್ಯರು ಅಭಿಪ್ರಾಯ ಪಡುತ್ತಾರೆ (ದಾಸೋಹ:ಅದೇ, ಪು. ೩೯೮). ಈ ಹಿನ್ನೆಲೆಗಳನ್ನೆಲ್ಲ ಗಮನಿಸಿದರೆ, ಅಲಿಂಗಿ ಪಾಶುಪತರನ್ನು ಕುರಿತೇ, 'ಪಾಶುಪತ ಪಥವನರಿಯ' ಎಂದೂ, ಲಿಂಗಧಾರಿ ಪಾಶುಪತರಿಗೆ 'ಪಶುಪತಿ ವ್ರತ' ರೆಂದು (ಬಾರದು ಬಾರದು ವಿಷಯಿಗೆ ಪಶುಪತಿ ಬ್ರತವು ಗಮನಿಸಿ) ಬಸವಣ್ಣ ಹೇಳಿರಬೇಕು.

14. D.C. Sircar : op. Cit., pp, ೧೭೫-೧೮೨ ರೀತ್ಯಾ ಆ ಕಾಲಕ್ಕೆ 'ಶಿವ, ಪಶುಪತಿ, ಮಹೇಶ್ವರ' ಇತ್ಯಾದಿ ಶಿವಭಕ್ತರನ್ನು ಶೈವ, ಪಾಶುಪತ ಅಥವಾ ಮಾಹೇಶ್ವರ ಎಂದು ನಿರ್ಭೇಧವಾಗಿ ಗುರುತಿಸಲಾಗುತ್ತಿತ್ತು. ಕಾಲಕ್ರಮದಲ್ಲಿ ಭೇದಗಳನ್ನು ಕಲ್ಪಿಸಿಕೊಂಡರಷ್ಟೆ. ಶಾಸನ ಹಾಗೂ ನಾಣ್ಯಲೇಖನಗಳಲ್ಲಿ ಈ ಶಿವ ಸಮಯದ ರಾಜರನ್ನು 'ಮಾಹೇಶ್ವರ' ರೆಂದುಕೊಳ್ಳಲಾಗಿತ್ತು. ಮುಂದೆ ಲಕುಲೀಶನ ಜನಪ್ರಿಯತೆಯ ಕಾರಣ ಶೈವ, ಪಾಶುಪತ ಅಥವಾ ಮಾಹೇಶ್ವರ ಸಮಯಕ್ಕೆ ಅವನು ಇನ್ನೊಂದು ಹೆಸರಾಗಿಬಿಟ್ಟ. ಮಧ್ಯಕಾಲೀನರಾದ ವಾಚಸ್ಪತಿ, ಯಾಮುನಾಚಾರ್ಯ, ರಾಮಾನುಜರು, ಶೈವಧರ್ಮವನ್ನು, ಶೈವ, ಪಾಶುಪತ, ಉಗ್ರಪಂಥೀಯ, ಕಾಪಾಲಿಕ, ಕಾಳಾಮುಖಿ, ಎಂದೆಲ್ಲ ಹೆಸರಿಸಿದರು. ಆದರೆ ವೀರಶೈವ ಅಥವಾ ಲಿಂಗಾಯಿತವು ಎಂಬುದು ಆದರ ಭಕ್ತರಲ್ಲಿ ಶೈವದರ್ಶನ ಅಥವಾ ಸಿದ್ಧಾಂತ ದರ್ಶನ ಎಂಬ ತಿಳಿವಳಿಕೆ ಇತ್ತು, ಎಂಬುದು ಭಂಡಾರ್‌ಕರ್ ಅವರ ಅಭಿಮತವಾಗಿದೆ.

ಈ ದೃಷ್ಟಿಯಿಂದ ಶಾಸನದ ಸಂಗತಿಯು ವೀರಶೈವ (ಲಿಂಗವಂತಿಕೆ) ಹಾಗೂ ಶೈವದ ಆ ಕಾಲದ ಒಡನಾಟವನ್ನು ತೋರುವಂತಿದೆ. ಗುರುವಿನಿಂದ 'ಶಿವಮಂಡಲ ದೀಕ್ಷೆ ' ಸಮನಿಸಿರುವಲ್ಲಿ ಅದು

ಮಾಡದೆ ಪಾಲಿಸುತ್ತಿದ್ದಿರಬೇಕೆಂದಾಗುತ್ತದೆ. ಹೀಗೆಲ್ಲ ಇದ್ದರೆ ಅವೀರಶೈವ ರಾಜಮನೆತನವಾದ ಬಾದಾಮಿ ಚಾಲುಕ್ಯರ ಪೈಕಿ ಒಂದನೆಯ ವಿಕ್ರಮಾದಿತ್ಯನು 'ನಿಜೇಷ್ಟಲಿಂಗ' ದೀಕ್ಷಿತನಾಗಿ ವೀರಶೈವದ ಪಾರಿಭಾಷಿಕ ಅರ್ಥದಂತೆ 'ಪರಮ ಮಾಹೇಶ್ವರ' ನೆನ್ನಿಸಿಕೊಂಡಿರ ಬೇಕೆನಿಸುತ್ತದೆ. ಇದಲ್ಲದೆ ಅಂದಿನ ವೀರಶೈವ ದೀಕ್ಷಿತ ಅರಸರು ಇಂತಹ ಸಾಂಸ್ಕೃತಿಕ ಸಂದರ್ಭಗಳಲ್ಲಿ ಹೇರಳ ದಾನ ನೀಡುತ್ತಿದ್ದರು ; ಧಾರ್ಮಿಕ ಸ್ವಾತಂತ್ರ್ಯ ಹೊಂದಿ ಇಚ್ಛಿತ ಧರ್ಮ ದೀಕ್ಷೆ ಪಡೆದು ಪಾಲಿಸುತ್ತಿದ್ದರೆಂದಾಗುತ್ತದೆ. ಇನ್ನೊಂದು ಪೂರಕ ಉದಾಹರಣೆಯೂ ಇದೆ. ಶ್ರೀ ಶೈಲ ಪಂಡಿತಾರಾಧ್ಯ ಪರಂಪರೆಯ ಪಟ್ಟವಲ್ಲರಿಯಲ್ಲಿ ೨ನೆಯವರಾಗಿ ಉಕ್ತರಾದ ಜ॥ ಚನ್ನಮಲ್ಲಶಿವಾಚಾರ್ಯರಿದ್ದಾರೆ. ಅವರು 'ನರೇಂದ್ರ ಮೃಗರಾಜ' ಎನಿಸಿದ ಚಾಲುಕ್ಯರ ಎರಡನೆಯ ವಿಜಯಾದಿತ್ಯನಿಗೆ ಶಿವಧರ್ಮ ದೀಕ್ಷೆ ನೀಡಿ 'ಪರಮಮಾಹೇಶ್ವರ' ನನ್ನಾಗಿ ಮಾಡಿದರಂತೆ. ವೈರಿ ದೊರೆಗಳನ್ನು ಕೊಂದು ಗೆದ್ದ ಮೇಲೆ ಹತ್ಯಾದೋಷವನ್ನು ನಿವಾರಿಸಿಕೊಳ್ಳಲು ಈ ಪೀಠಾಧಿಪತಿಗಳ ಸಲಹೆಯ ಮೇರೆಗೆ 'ನರೇಂದ್ರೇಶ್ವರ' ಎಂಬ ಹೆಸರಿನ ೧೦೮ ಶಿವಾಲಯಗಳನ್ನು ನಿರ್ಮಿಸಿದನಂತೆ. (ಇವನು ಒಂದನೆಯ ವಿಕ್ರಮಾದಿತ್ಯನ ಮಗನಾದ ವಿಜಯಾದಿತ್ಯನಾಗಿರಬಹುದು). ಈಗ ಪಟ್ಟದ ಕಲ್ಲಿನಲ್ಲಿ ಸಂಗಮೇಶ್ವರ ದೇಗುಲವೆಂದು ಕರೆಯುವ ವಿಜಯೇಶ್ವರ ದೇಗುಲವು ಮೇಲಿನ ಪೀಠದ ಸಂಗತಿಯ ಸಂದರ್ಭದ ಸಾಂಕೇತಿಕ ಕಟ್ಟಡವಾಗಿಬಹುದೆ ? ಎನಿಸುತ್ತದೆ ಇವನ ನಂತರ ಆಳಿದ ಇಮ್ಮಡಿ ವಿಕ್ರಮಾದಿತ್ಯನ ಮಗ ಇಮ್ಮಡಿಕೀರ್ತಿ ವರ್ಮನ ಕಾಲದಲ್ಲಿ(ಕ್ರಿ.ಶ. ೭೪೪-೫೭) ವಿಜಯೇಶ್ವರ ದೇಗುಲಾಲಯದಲ್ಲಿ ಜ್ಞಾನಶಿವಾಚಾರ್ಯನು ವಾಸ್ತವ್ಯವಿದ್ದ. ಈತನು ವಿಜಯೇಶ್ವರ ಲೋಕೇಶ್ವರ ಹಾಗೂ ತ್ರೈಲೋಕ್ಯೆಶ್ವರ ದೇಗುಲಗಳ ಮಧ್ಯೆ ತ್ರಿಶೂಲಾಂಕಿತವಾದ ಶಿಲಾಸ್ತಂಭವನ್ನು ನಿಲ್ಲಿಸಿದ. ಈ ಅಂಶವು ದೇಗುಲದ ಈ ಆಚಾರ್ಯ ಶಿವಧರ್ಮದ ಮಠವನ್ನು ರೂಪಿಸಿದ ಹಾಗೂ ಆ ಧರ್ಮದ ಸಂಕೇತಗಳನ್ನು ಪ್ರಚಲಿತಗೊಳಿಸಿದ, ಎಂದು ತೋರಿಸುವಂತಿದೆ. ಇವೆಲ್ಲ ಚಾಲುಕ್ಯರ ಅರಸರಲ್ಲಿ ಕೆಲವರ ಶಿವಧರ್ಮನಿಷ್ಠೆಯನ್ನು ತೋರಿಸುವಂತಿವೆ.

ವೀರಶೈವದಲ್ಲಿಯಂತೆಯೆ ವ್ಯಕ್ತಿಗಳ ಶಿವ ಚೈತನ್ಯದ ಅರಿವನ್ನು ನೀಡಿ ಕುರುಹು ತೋರುವ ಸಂದರ್ಭವೆ ಆಗಿರಬೇಕು. ಪಾರಮೇಶ್ವರಾಗಮದ ರೀತ್ಯಾ ವೀರಶೈವದ ಶಾಖೆಗಳು ಅಂದರೆ ವೀರಶೈವದಿಂದ ಸಿಡಿದು ಬಂದವು, ಶೈವಗಳಾಗಿವೆ, ಎಂಬುದಿದೆ. ಬಹುಶಃ ಈ ವೀರಶೈವ, ಶೈವಗಳ ಸಹಯೋಗಗಳಲ್ಲಿ ವ್ಯತ್ಯಾಸ ಕಾಣಲಿಚ್ಛಿಸದೆ, ಮಾಧವರ ಸರ್ವದರ್ಶನ ಸಂಗ್ರಹದ ಕಾಲದಲ್ಲಿ (೧೪ನೆಯ ಶತಮಾನ) ವೀರಶೈವ ಎಂದೇ ಬಹಳ ಪ್ರಚಲಿತವಾಗಿದ್ದರೂ, ಪ್ರಾಚೀನದಿಂದ ಹೆಸರುಗೊಂಡು ಬಂದ 'ಪಾಶುಪತ ' ಎಂಬ ಹೆಸರಿನಲ್ಲಿಯೆ 'ವೀರಶೈವ ಲಿಂಗಾಯತತತ್ತ್ವ'ವನ್ನು ದಾಖಲು ಮಾಡಲಾಗಿದೆಂದೆನಿಸುತ್ತದೆ. ವೀರಶೈವ - ಲಿಂಗಾಯತತತ್ತ್ವ, ಸ್ವತಂತ್ರದರ್ಶನವಲ್ಲವೆಂಬ ಕಪಟರಾಳಕೃಷ್ಣರಾಯರ ಸಾಂದರ್ಭಿಕ ಗ್ರಹಿಕೆಯ ಮಿತಿಯನ್ನು ತೋರಿ ಟಿ.ಎನ್. ಮಲ್ಲಪ್ಪನವರು ವೀರಶೈವ ಸಿದ್ಧಾಂತದ ಸ್ವಂತಿಕೆಯನ್ನು ಸಾಧಾರವಾಗಿ ಹೇಳಿದ್ದಾರೆ (ವೀರಶೈವದ ಉಗಮ ಮತ್ತು ಪ್ರಗತಿ, ೧೯೬೯, ಪು. ೧೪೪).

ಚೋಳರಲ್ಲಿ

ತಮಿಳುನಾಡು ಹಾಗೂ ಕೇರಳದ ಶಾಸನಗಳು ರಾಜವರ್ಗ ಹಾಗೂ ಧಾರ್ಮಿಕ ವರ್ಗದಲ್ಲಿ ಶೈವ ಮತ್ತು ವೀರಶೈವದ ಒಡನಾಟವನ್ನು ೧೧ನೆಯ ಶತಮಾನದಲ್ಲಿಯೂ ಸ್ಪಷ್ಟವಾಗಿ ತೋರುತ್ತವೆ. ಪಾಶುಪತವೆನಿಸಲಿ, ಅಭಿನವ ಪಾಶುಪತವೆನಿಸಲಿ ವೀರಶೈವದ ಟಿಸಿಲುಗಳಂತೆ ಅನ್ವಯಿಕವಾಗಿ ಅವೆಲ್ಲ ಕಾಣುತ್ತವೆ. ಅಂದಿನ ಅರಸರು ಅಂತಹ ಶಿವಧರ್ಮ ದೀಕ್ಷೆಗೆ ವೈಯಕ್ತಿಕವಾಗಿಯೋ ಕೌಟುಂಬಿಕವಾಗಿಯೋ ವಂಶಿಕವಾಗಿಯೋ ಒಡ್ಡಿಕೊಂಡು ಆಚಾರಗಳನ್ನು ನಡೆಸುತ್ತಿದ್ದಂತೆ ತೋರುತ್ತದೆ.

ಕ್ರಿ.ಶ. ೯೨೮ ರಿಂದ ೯೭೪ರ ಅವಧಿಯಲ್ಲಿ ಚೋಳ ರಾಜರಾದ ಒಂದನೆ ಹಾಗೂ ಎರಡನೇ ಪರಾಂತಕರ ಕಾಲದಲ್ಲಿ ಮಠಗಳ ಹಾಗೂ ಮಾಹೇಶ್ವರರ ಅಸ್ತಿತ್ವ, ಗಣಪೆರುಮಕ್ಕಳು, ಗಣವಾರಿಯ ಪೆರುಮಕ್ಕಳು ಇದ್ದು, 'ಪರ್ವ' ಆಚರಿಸಲು '೩೦೦ ಕೊಡಿ ಭತ್ತ'ದ ಕೊಡುಗೆ ಇತ್ಯಾದಿಗಳು ಶಾಸನೋಕ್ತವಾಗಿವೆ. ಶ್ರೀಶೈಲಸಂಪ್ರದಾಯ ಮೂಲದ್ದೆನ್ನಬಹುದಾದ ಚಂದ್ರಮೌಳೀಶ್ವರ ಲಿಂಗದ ಪ್ರಸ್ತಾಪಗಳು ಶಾಸನಗಳಲ್ಲಿ ಕಾಣಬರುತ್ತವೆ. ಕ್ರಿ.ಶ. ೧೦೦೯-೧೦೬೨ರ ಅವಧಿಯಲ್ಲಿನ ರಾಜೇಂದ್ರಚೋಳನ ಆ ಶಾಸನಗಳು ಗಮನಾರ್ಹವಾಗಿವೆ. ಈ ಶಾಸನಗಳಲ್ಲಿ ಪಾಶುಪತಮೂರ್ತಿ, ನಕುಲೇಶ್ವರಮೂರ್ತಿ, ಗೋತ್ರೋಲ್ಲೇಖವಿಲ್ಲದ ಶಿವಬ್ರಾಹ್ಮಣರು, ಇವರಲ್ಲದೆ ಬೇರೆಯೆ ಬ್ರಾಹ್ಮಣರು, ವೈಷ್ಣವ ಬ್ರಾಹ್ಮಣರು ಪಡೆದ ದಾನಾದಿಗಳ ಪ್ರಸ್ತಾಪವಿದೆ. ವಿಶೇಷವೆಂದರೆ ಕ್ರಿ.ಶ.೧೦೫೧ರ ಒಂದನೇ ರಾಜಾಧಿರಾಜ ಚೋಳನ ಕಾಲದಲ್ಲಿ, 'ಪರ್ವತ್ತಿರ ಮಾಣಿಕ ಮಡಂಗೆ' ಭೂ ಆದಾಯವನ್ನು ನೀಡಿರುವ ಬಗ್ಗೆ ಶಾಸನವು ನುಡಿಯುತ್ತದೆ. ಕ್ರಿ. ಶ. ೧೧೧೮-೮೫ರ ಕುಲೋತ್ತುಂಗ ಚೋಳನ ಕೆಲವು ಶಾಸನಗಳಲ್ಲಿ ಮಾಹೇಶ್ವರರಿಗೆ 'ಪಾರಿವಟ್ಟು' (ಪಾರಿವಟ್ಟೆ= ಒಂದು ಬಗೆ ಬಣ್ಣದ ಬಟ್ಟೆ. ಈ ಸಂದರ್ಭದಲ್ಲಿ ಬಹುಶಃ ಕೆಂಪುವಸ್ತ್ರ) ಹಾಗೂ ಮಠ ನಿರ್ವಹಣೆಗೆ ದಾನ ನೀಡಿರುವ ಸಂಗತಿಗಳಿವೆ. ಅಲ್ಲದೆ ಗೋತ್ರ ಸೂಚಿತ ಕಾಳಾಮುಖರನ್ನು ಹೆಸರಿಸಿ ದಾನ ನೀಡಲಾಗಿದೆ.[15] ಈ ಅಂಶಗಳು ಶೈವ ಚೋಳ ಅರಸರಲ್ಲಿಯೂ ವೀರಶೈವದೊಲವಿನ ಅಥವಾ ವೀರಶೈವ ದೀಕ್ಷಿತರಾದ ಅರಸರಿದ್ದರೆಂಬ ಸೂಚನೆ ನೀಡುವಂತಿವೆ. ಕಾಳಾಮುಖ, ಬ್ರಾಹ್ಮಣ, ಶಿವಬ್ರಾಹ್ಮಣ, ವೈಷ್ಣವಬ್ರಾಹ್ಮಣ, ಮಾಹೇಶ್ವರ ಎಂಬ ಪ್ರತ್ಯೇಕ ವರ್ಗಗಳೇ ಇದ್ದು ಚೋಳರಲ್ಲಿನ ವೀರಶೈವ ಅರಸರು ಅವರಿಗೆಲ್ಲ ದಾನ ನೀಡುವಲ್ಲಿ ಸಮನ್ವಯ ದೃಷ್ಟಿಯನ್ನು ತೋರಿರುವುದು ಕಾಣಬರುತ್ತದೆ. 'ಪರ್ವತ್ತಿರ ಮಾಣಿಕ ಮಠ'ದ ಅಸ್ತಿತ್ವವು

15. T. V Mahalingam : A Topographical list of inscriptions, New Delhi, 1985 (ARE 1897, 1910, 1915, 1963) pp. 2, 12,17,43,64-65, 76,78, 110,125, 130 134, 285

ಶ್ರೀಶೈಲಪೀಠಸಂಪ್ರದಾಯದ ಗೋತ್ರಪ್ರವರದ ಇತಿಹಾಸದ ಸಂಕೇತವಾದಂತೆ, ಚೋಳ ಅರಸರ ಶ್ರೀಶೈಲ ಪೀಠದೊಲವನ್ನು ತೋರಿಸುವಂತಿದೆ. ಗಣಪೆರುಮಕ್ಕಳ 'ಪರ್ವ'ಕ್ಕೆ ನೀಡಿದ ಭತ್ತದ ಪ್ರಮಾಣವನ್ನು ಗಮನಿಸಿದರೆ ಭಕ್ತರ ಸಾಮೂಹಿಕ ಊಟ (ಅನ್ನದಾಸೋಹ)ದ ಸಂದರ್ಭವಾದ 'ಗಣಪರ್ವ'ವನ್ನು ಅದು ಸಂಕೇತಿಸುವಂತಿದೆ. ಗಣಪೆರುಮಕ್ಕಳ ಈ 'ಪರ್ವ'ಕ್ಕೆ ಗಣವಾರಿಯರುಗಳೇ ನಿರ್ವಹಣೆಯ ಹೊಣೆ ಹೊತ್ತಿದ್ದರೆಂದು ತೋರುತ್ತದೆ.

ಬಹುಶಃ ವೀರಶೈವ ಪ್ರಣೀತದ ಇಂತೆಲ್ಲ ಪ್ರಭಾವದ ಸಂಕೇತವೆಂಬಂತೆ ಕುಲೋತ್ತುಂಗ ಚೋಳನು ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನದೇವರಿಗೆ ನಡೆದುಕೊಂಡು ಸಂಗತಿ ಶಾಸನೋಕ್ತವಿದೆ. ಶಾಸನದಲ್ಲಿ ಈ ನೆಲೆಯುನ್ನು 'ಶ್ರೀ ಗಿರಿ' ಎಂದೇ ಪ್ರಸ್ತಾಪಿಸಿದೆ. ಕ್ರಿ.ಶ. ೧೬೦೭ರ ಬೆಟ್ಟದಪುರದ ಶಾಸನದಲ್ಲಿ.,[16] 'ಶ್ರೀ ಶೈಲ ಪರ್ುವತದ ಮಲ್ಲಿಕಾರ್ಜುನ ಸ್ವಾಮಿ ಅಜ್ಞೆಕೆಯಾಗಿ... ಲಕ್ಷದತೊಂಭತ್ತಾರು ಸಾವಿರ ಜಂಗಮ ದೇವರ ಮುಂದೆ ಕೊಟಂಥಾ' ಶಿಲಾಸಾಸನ ಎಂಬ ಉಕ್ತಿಯು ಶ್ರೀಶೈಲ ಶಾಖಾನುವರ್ತಿ ಪ್ರಭಾವದ ಪರಂಪರೆ ಹಾಗೂ ಹಿಂದಿನ ಚೋಳರ ಮೇಲೆ ಆಗಿದ್ದ ವೀರಶೈವದ ಪ್ರಭಾವವನ್ನು ಸೂಚಿಸುವಂತಿದೆ. ಶ್ರೀಶೈಲ ಪೀಠದ ಜ॥ ಚಂದ್ರಗುಂಡ ಶಿವಾಚಾರ್ಯರು ದಕ್ಷಿಣದ ಚೋಳ ಪ್ರಾಂತ್ಯಗಳಲ್ಲಿ ಧರ್ಮಜಾಗೃತಿ ಮಾಡಿದರೆಂದು ಹೇಳಲಾಗಿರುವುದರಿಂದ,[17] ಬಹುಶಃ ಚೋಳ ಅರಸರು ಅವರ ಪ್ರಭಾವಕ್ಕೆ ಒಳಗಾಗಿರುವಂತಿದೆ. ಅದರ ಫಲವಾಗಿ ತಮ್ಮ ಗುರುಗಳ ನಡೆಯಂತೆ ವೀರಭದ್ರ ಮೂರ್ತಿಗಳನ್ನು ತಾವು ಗೆದ್ದ ನೆಲೆಗಳಲ್ಲಿ ಅವರು ಸ್ಥಾಪಿಸಿರುವಂತಿದೆ. ಅದಕ್ಕೊಂದು ಉದಾಹರಣೆ ಎಂದರೆ ಕ್ರಿ.ಶ.೧೦೦೪ರಲ್ಲಿ ಗಂಗರನ್ನು ಚೋಳರು ಕೊಡಗಿನ ಉತ್ತರ ಭಾಗಕ್ಕೆ ಸನಿಹವಾದ ಪನಸೋಗೆಯ ಕಾಳಗದಲ್ಲಿ ಸೋಲಿಸಿದರು. [18] ಆ ನಂತರದ ಕಾಲದಲ್ಲಿ ಕೊಡಗಿನ ಪೂರ್ವದ ಕಾವೇರಿ ದಂಡೆಯಲ್ಲಿ (ಈಗಿನ ನಂಜರಾಯ ಪಟ್ಟಣ ಪ್ರದೇಶ) 'ಚೋಳ ಪ್ರತಿಷ್ಠಾ ವೀರಭದ್ರ' ನನ್ನು ಪ್ರತಿಷ್ಠಾಪಿಸಿದರು. [19] ಇದಕ್ಕೆ ಮುನ್ನವೂ ೧೦ನೆಯ ಶತಮಾನದ ಶ್ರೀ ಶೈಲ ಪೀಠದ ವಿರೂಪಾಕ್ಷ ದೇಶಿಕೇಂದ್ರರು ದಕ್ಷಿಣದಲ್ಲಿ ಚೋಳಪ್ರಾಂತ್ಯದಿಂದ ಉತ್ತರದಲ್ಲಿ ಕಾಶ್ಮೀರದವರೆಗೆ ಆ ಪ್ರಾಂತದ ರಾಜರನ್ನು ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ಆಚರಣೆಗೆ ಆಕರ್ಷಿಸಿದ್ದರು. ಕಾಶ್ಮೀರದರಸ ಶಿವದೇವನನ್ನು ಹಾಗೂ ಅವನ ಪರಿವಾರದವರನ್ನು ಅವರು ವೀರಶೈವ ದೀಕ್ಷಿತರನ್ನಾಗಿ ಮಾಡಿದರಂತೆ. ಈ ಶಿವದೇವನ ವಂಶಿಕನೆನ್ನಲಾದ ಮಹಾದೇವಭೂಪನೇ ಮುಂದೆ ೧೨ನೆಯ ಶತಮಾನದಲ್ಲಿ ಕಲ್ಯಾಣಕ್ಕೆ ಬಂದು ಕಾಯಕ ಕೈಗೊಂಡ ಮೋಳಿಗೆ ಮಾರಯ್ಯ ಎನ್ನಲಾಗಿದೆ. [20]

---

16. ಎ.ಕ.ಸಂ. ೪ :ಮೈಸೂರು ಜಿಲ್ಲೆ,ಮೈಸೂರು ವಿಶ್ವವಿದ್ಯಾಲಯ, ೧೯೭೫, ಬೆಟ್ಟದಪುರ ೫೯
17. ಶ್ರೀ ಜಚನಿ : ಚಿತ್ಕಳಾಮೂರ್ತಿ ಚಂದ್ರಗುಂಡ ಶಿವಾಚಾರ್ಯ, ಬೆಂಗಳೂರು, ೧೯೬೪, ಪು. ೨೩
18. ಎ.ಕ. ಸಂಪುಟ ೧ (ಪರಿಷ್ಕೃತ), ಕೊಡಗು ಜಿಲ್ಲೆ, ಮಾಲಂಬಿ ೬೫ (೪೬)
19. Coorg District Gazetteer (Ed) B.N. Satyan ,1965, pp. 44-45
20. ಡಾ। ಶ್ರೀ ಜಚನಿ: ಯುಗಪುರುಷ ಶ್ರೀ ವಿರೂಪಾಕ್ಷ ದೇಶಿಕೇಂದ್ರರು, ಬೆಂಗಳೂರು, ೧೯೯೦, ಪು. ೩೩-೩೫

ಕ್ರಿ.ಶ. ೧೧ನೆಯ ಶತಮಾನದ ಹೈಹಯವಂಶದ ರಾಜೇಂದ್ರಚೋಳನಿಗೆ ನಿಗರಿಲಿ ಚೋಳಮಂಡಲಕ್ಕೆ ಸೇರಿದ್ದ ಕೋಲಾರ ಜಿಲ್ಲೆಯ ಗುಯಲೂರು (ಗೊಯ್ಯದವಾಡಿ) ರಾಜಧಾನಿ ಆಗಿತ್ತು .ಅಲ್ಲಿಗೆ ಶ್ರಿ ಚಂದ್ರಗುಂಡ ಶಿವಾಚಾರ್ಯರು ಬಂದಾಗ ಅವರ ಮಹಿಮೆಗೆ ಬಾಗಿ ಪತ್ನಿಸಮೇತನಾಗಿ ಶಿವದೀಕ್ಷೆ ಪಡೆದು ವೀರಶೈವನಾಗಿ ಬೃಹನ್ಮಠವನ್ನು ಗುರುಗಳಿಗೆ ಕಟ್ಟಿಸಿಕೊಟ್ಟ. ಇಲ್ಲಿಯೆ ಶ್ರೀ ಚಂದ್ರಗುಂಡ ಶಿವಾಚಾರ್ಯರಿಗೆ ಶಿವಪೂಜಾಸಮಯದಲ್ಲಿ 'ನಾರಿಕೇಳದ'ಭಿಕ್ಷೆ ಬೇಡಿದಾಗ ತೆಂಗಿನಮರ ಬಾಗಿ ಫಲ ನೀಡಿದ ಪವಾಡ ನಡೆಯಿತು. ಅದಾಗಿ ಆಚಾರ್ಯರಿಗೆ ನೆಲೆಯಾಗಿ ವೀರಶೈವ ಕೇಂದ್ರವೆನಿಸಿತು. ಈ ಹೈಹಯ ರಾಜವಂಶಿಕರು 'ಸಜ್ಜನ ಶುದ್ಧ ಶಿವಾಚಾರ'ದವರೆಂದೂ ಉಲ್ಲೇಖಿತರಾದರು. ಗಾಣದ ಕಾಯಕವೂ ಅವರಿಗೆ ಕೂಡಿಬಂದಿತು. ಇದಲ್ಲದೆ ಹೊಲೆ ೧೮ ಕುಲದ ದಲಿತರನ್ನು (೧೮ ಫಣಕಟ್ಟು) ವೀರಶೈವಕ್ಕೆ ಆಕರ್ಷಿಸಿದ ಕೇಂದ್ರವಾಗಿಸಲು ಹೈಹಯ ರಾಜವಂಶವು ಇಲ್ಲಿ ಶ್ರೀ ಚಂದ್ರಗುಂಡ ಶಿವಾಚಾರ್ಯರಿಗೆ ಅನುಪಾಯಿತು. [21] ಆಹವಮಲ್ಲ ಒಂದನೇ ಸೋಮೇಶ್ವರನ ಮಾಂಡಲಿಕ ದಂಡನಾಯಕನಾದ ಕ್ರಿ. ಶ. ೧೦೫೪ರ ಶಾಸನೋಕ್ತ ರೇವರಸನೂ ಹೈಹಯ ವಂಶಿಕನಾಗಿದ್ದಾನೆ.[21ಅ] ಅಂದರೆ ಇವೆಲ್ಲವೂ ರಾಜರಲ್ಲಿ ಮಾಂಡಲಿಕರಲ್ಲಿ ಶಿವಾಚಾರದ ಪ್ರಭಾವದ ಸಂಕೇತವೆನಿಸುತ್ತವೆ.

ಇನ್ನು ತಮಿಳುನಾಡಿನ ೬೩ ಪುರಾತನರು ಕರ್ನಾಟಕದ ನೂತನರಿಗೆ ಅರ್ಥಾತ್ ಶರಣರಿಗೆ, ಪ್ರಮಥರಿಗೆ ಪೂಜ್ಯರೆನಿಸಿರುವರೆಂದರೆ, ಅವರೆಲ್ಲ ಶರಣರ ಭಕ್ತಿಪಂಥಕ್ಕೆ ಆದರ್ಶರಾದವರು, ಸಲ್ಲುವವರಾಗಿದ್ದರು ಎನಿಸುತ್ತದೆ. ಅವರು ವೀರಶೈವದ ಸಂಬಂಧಿಗಳೂ ಆಗಿದ್ದ ಉದಾರಣೆಗಳು ಕಾಣುವಂತಿವೆ.. ಕ್ರಿ.ಶ. ಸು. ೯೦೦ ರ ಮಾಣಿಕ್ಯವಾಚಕರು ೬೩ ಪುರಾತನರೊಳಗಣ ವೀರಶೈವರೆಂದು ಆರ್. ಎಸ್. ವೇದಾಚಲಂ ತಿಳಿಸಿದ್ದಾರೆ.[22] ಪುರಾತನರನ್ನು 'ಅರವಥಮೂವರು ಮಹಾಗಣಂಗಳು', ಎಂದು ವೀರಶೈವ ಪರಿಭಾಷೆಯಲ್ಲಿಯೆ ಅರಕಲಗೂಡು ಶಾಸನವು ದಾಖಲಿಸಿದೆ. ಇವರ ಧರ್ಮ ಪ್ರಸಾರಕ್ಕೆ ರಾಜ ಪೋಷಣೆಯನ್ನು ನೀಡಿದ ಚೋಳ ಚಕ್ರವರ್ತಿಗಳ ಹೆಸರುಗಳು ಗಣಸಹಸ್ರನಾಮಾವಳಿಯಲ್ಲಿ ಬರುತ್ತವೆ.

---

21. i. ಶ್ರೀ ಜಚನಿ: ಚಿತ್ಕಳಾಮೂರ್ತಿ ಚಂದ್ರಗುಂಡ ಶಿವಾಚಾರ್ಯ, ಅದೇ, ಪು. ೮೬
    ii..ಪುಲ್ಲಕವಿ ವಿರಚಿತ ಶ್ರೀ ಶೈಲ ಪಂಡಿತಾರಾಧ್ಯ ಚರಿತಮು, ಬೆಂಗಳೂರು, ೧೯೫೪, ೧೦೭-೧೧೧
    iii. ಡಾ। ಶ್ರೀ ಜಚನಿ : 'ಸನ್ನುತ ಶ್ರೀ ಚಂದ್ರಗುಂಡ ಶಿವಾಚಾರ್ಯ ಸನ್ನಿಧಿಯವರು', ಮಾಮಿಡಿ ವಿಶೇಷಾಂಕ -೧೪, ಬೆಂಗಳೂರು ಸಂ.೯ ನಂ. ೩೫-೩೭, ಪು. ೧೨

21 ಅ. ಕಪಟರಾಳ ಕೃಷ್ಣರಾವ್: ಕರ್ನಾಟಕ ಸಂಸ್ಕೃತಿಯ ಶೋಧನೆ, ಮೈಸೂರು, ೧೯೭೦, ಪು. ೩೭.

22. ಡಾ। ಹೆಚ್.ಪಿ. ಮಲ್ಲೇದೇವರು :'ವೀರಶೈವ ಧರ್ಮದ ಪ್ರಾಚೀನತೆ', ಸಿದ್ದಗಂಗಾ ಶ್ರೀ, ೧೯೮೧, ಪು. ೫೫; ಇದಲ್ಲದೆ, 'ಅನಾದಿ ವೀರಶೈವ ಸಂಗ್ರಹ'ವೂ ಈ ಅಂಶವನ್ನು ಪೋಷಿಸುತ್ತದೆ.

ಕಳಚಂಗಚೋಳ,ಪಗಲ್‌ಚೋಳ ವೀರಚೋಳ, ಕರಪೂರಚೋಳ, ಇತ್ಯಾದಿಗಳೇ ಆ ಹೆಸರುಗಳಾಗಿವೆ. ಹೀಗೆಯೆ ಕರಿಕಾಲಚೋಳ ಹಾಗೂ ಸಿಂಧು ಬಲ್ಲಾಳ ಅರಸರ ಹೆಸರು ಶರಣರ ನಡುವೆ ಉಲ್ಲೇಖಿಗೊಂಡಿವೆ. ಚೇರಸಾಮ್ರಾಟರ ಪೈಕಿ ಚೇರಮ - ಚೇರಮಾಂಕ-ಚೇರಮ ಎಂಬ ಹೆಸರಿನ ದೊರೆಯು ೬೩ ಪುರಾತನರ ಪಟ್ಟಿಯಲ್ಲಿದ್ದು ಶಿವಶರಣರೊಡನೆ ಉಲ್ಲೇಖಿತನಾಗಿ ಶಾಸನಗಳಲ್ಲಿ ಕಂಡು ಬರುತ್ತಾನೆ.[23] ರೇವಣಸಿದ್ಧರ ಧರ್ಮಪತ್ನಿಯರಾದ ಚೋಳರಸ ವೀರರಾಜೇಂದ್ರನ ಮಗಳು ಆಗಮಮೋಹಿನಿ, ವೀರಭದ್ರಚೋಳನ ಮಗಳು ವೇದಕಂಚುಕಿ, ಸಿಂಹವಿಕ್ರಮಚೋಳರಾಜನ ಮಗಳು ಶಾಂಭವಿದೇವಿ, ರಾಜೇಂದ್ರ ಚೋಳರಾಜನ ಮಗಳು ಸೌಂದರೀದೇವಿ- ಇವರೆಲ್ಲರೂ ವಚನ ರಚಿಸಿದ ಗುರುದೇವಿಯರಾದ ರಾಜಕುಮಾರಿಯರು. ರೇವಣಸಿದ್ಧರ ಪ್ರಭಾವದಿಂದ, ಬಹುಶಃ ಈ ಅರಸರೆಲ್ಲರೂ, ವೀರಶೈವ ಧರ್ಮಾನುಸಾರಿಗಳಾಗಿ ರೇವಣಸಿದ್ಧರಿಗೆ ತಮ್ಮ ಕುಮಾರಿಯರನ್ನು ಮದುವೆ ಮಾಡಿಕೊಟ್ಟಂತಿದೆ. ಕೇರಳದ ಅವಲೂರಿನ ಗೊಗ್ಗವ್ವೆ ಕೇರಳದ ಅರಸನಾದ ಚೇರಮರಾಯನಿಗೆ ತ್ರಿವಿಧ ದೀಕ್ಷೆಯನ್ನು ನೀಡಿದ ಗುರುದೇವಿ ಆಗಿದ್ದಾಳೆ.[23-ಅ] ಈ ಉದಾಹರಣೆಗಳು ಆ ಕಾಲದ ಸ್ತ್ರೀಪ್ರತಿಭೆ ಹಾಗೂ ಗುರುತ್ವವನ್ನು ಅರಸರು ಮಾನಿಸಿದುದಕ್ಕೆ ಸಾಕ್ಷಿ ಎನಿಸುತ್ತದೆ.

ಗಂಗವಂಶಿಕರಲ್ಲಿ

ಗಂಗರಲ್ಲಿ ನಾಲ್ಕುಜನ ರಾಚಮಲ್ಲ ಎಂಬ ಹೆಸರಿನವರು ಎಂಟರಿಂದ ಹತ್ತನೆಯಶತಮಾನದ ಅವಧಿಯಲ್ಲಿ ಕಾಣಬರುತ್ತಾರೆ. ಡಾ. ಶ್ರೀ ಜಚನಿ ಅವರ ರೀತ್ಯಾ 'ರಾಚಮಲ್ಲ' ಎಂಬ ಹೆಸರಿನಲ್ಲಿ, 'ರಾಚ' ಎಂಬ ಶಬ್ದಕ್ಕೆ ಶುಭ, ಮಂಗಳ, ಹಾಗೂ ಭದ್ರ ಎಂಬ ಅರ್ಥಗಳಿವೆ; 'ಮಲ್ಲ' ಎಂಬ ಶಬ್ದ 'ವೀರ' ಎಂಬ ಶಬ್ದಕ್ಕೆ ಸಂವಾದಿ ಆಗಿದೆ. ಹೀಗಾಗಿ 'ರಾಚಮಲ್ಲ' ಎಂಬುದು 'ವೀರಭದ್ರ' ಎಂಬ ಹೆಸರಿನ ಇನ್ನೊಂದು ರೂಪ ಎನ್ನುವ ಅಭಿಪ್ರಾಯವಾಗಿದೆ. ಇದಕ್ಕೆ ಪೂರಕವೆನ್ನಬಹುದಾದ 'ರಾಚೋಟಿ (ರಾಚವಟ್ಟಿ=ರಾಚಹಟ್ಟಿ) ವೀರಭದ್ರ'ನು ವೀರಶೈವ ಮನೆತನಗಳಿಗೆ ಕುಲದೇವರಾಗಿರುವ ಸಂಗತಿಯಲ್ಲಿ ನಾಮ ದ್ವಿರುಕ್ತಿಯಾಗಿ 'ರಾಚಮಲ್ಲ' ಶಬ್ದಕ್ಕೆ ತೀರ ಸನಿಹವೆನಿಸುತ್ತಾನೆ. ಈ ಸಂಗತಿಯು ಗುಂಡ್ಲುಪೇಟೆ ತಾಲೂಕು ತೊಂಡವಾಡಿ ಶಾಸನದಲ್ಲಿ ಉಕ್ತವಿರುವುದು ಗಮನಾರ್ಹ.[24] ಅವೆಲ್ಲ ಒಂದು

23. ಡಾ॥ ಎಂ. ಎಂ. ಕಲಬುರ್ಗಿ: ಶಾಸನಗಳಲ್ಲಿ ಶಿವಶರಣರು, ಅದೇ, ಪು.೧೬-೧೮, ಹಿರಿಯೂರು ಮರಡಿಪುರ, ದೇವರಪುರ ಶಾಸನಗಳು.

23ಅ. ಶ್ರೀ ಜಚನಿ : 'ವಚನ ರಚಿಸಿದ ಗುರುದೇವ-ಗುರುದೇವಿಯರು', ವಿಭೂತಿ, ಗಿರಿಯಾಪುರ ೧೯೬೧, ಪು. ೨೯೦-೯೧, ೩೦೨

24. ಎ.ಕ. ಸಂಪುಟ ೩, ಮೈಸೂರು ಜಿಲ್ಲೆ, ೧೯೭೮, ಗುಂಡ್ಲುಪೇಟೆ ೬೧, ಇದಲ್ಲದೆ 'ರಾಚೋಟಿ' ಎಂಬುದನ್ನು ರಾಚವೀಟಿ, ರಾಯಚೂಟಿ ಎಂದು ಆಂಧ್ರದಲ್ಲಿ ಕರೆವುದು ರೂಢಿ ಮತ್ತು ಪುಲ್ಲಕವಿಯ ತೆಲುಗು ಭಾಷಾ ಕೃತಿ 'ಶ್ರೀ ಶೈಲ ಪಂಡಿತಾರಾಧ್ಯ ಚರಿತಮು' ಏನಲ್ಲಿ 'ರಾಚವೀಟಿನ್' ಎಂದು ವೀರಭದ್ರನಿಗೆ ಸಹಜವಾಗಿ ಅನ್ವಯಿಸಿದೆ. ಆದರೆ ವೀರಭದ್ರನು 'ಕಣ್ಣಡಿಕ'> ಕನ್ನಡಿಗ ಎಂದು ಶ್ರೀ ಜಚನಿ ಅವರೇ ಹೇಳುವಲ್ಲಿ 'ರಾಚಹಟ್ಟಿ' ಎಂಬಲ್ಲಿ 'ರಾಚವಟ್ಟಿ' ಎಂಬ ಕನ್ನಡ ರೂಪವೂ ಕನ್ನಡ ಶಾಸನಗಳಲ್ಲಿ ಉಕ್ತವಾಗಿರುವುದು ಹೆಚ್ಚು ಸಹಜವೆನಿಸುತ್ತದೆ.

ಕಾಲದ ಗಂಗವಾಡಿಯ ಭಾಗಗಳೆ. ಅಂದರೆ ಗಂಗರಲ್ಲಿಯೂ ಶಿವಧರ್ಮಾನುಸಾರಿ ರಾಜರೂ ಇದ್ದಿರಬಹುದೆನಿಸುತ್ತದೆ. ಗಂಗರ ಕಾಲದಲ್ಲಿ ನಿರ್ಮಿತವಾದ ಹೆಚ್ಚಿನ ದೇವಾಲಯಗಳು ಶಿವದೇವಾಲಯಗಳಾಗಿದ್ದುವು ಎಂಬುದು ಈಚೆಗಿನ ಪಿ.ಎಚ್.ಡಿ ಅಧ್ಯಯನದಿಂದ ತಿಳಿದು ಬರುತ್ತದೆ.[25] ಇದಲ್ಲದೆ ಮಮ್ಮಿಗಟ್ಟಿ ಶಾಸನದಲ್ಲಿ 'ಬಾಣನವೋಲ್ ಶಿವಭಕ್ತ' ಎಂದು ಬಾಣನ ಶಿವಭಕ್ತಿಯನ್ನು ಉಕ್ತಿ ಮಾಡಿದೆ. ಹಾಗೆಯೆ ತಂಗಡದ, ಮರಡಿಪುರ ಹಾಗೂ ಹಿಪ್ಪರಗಿ ಶಾಸನಗಳಲ್ಲಿ 'ಬಾಣನನ್ನು' ಶರಣರ ಪಂಕ್ತಿಯಲ್ಲಿ ಸೇರಿಸಲಾಗಿದೆ. ಇಂತಹ 'ಶರಣ' ಬಾಣನಿಗೆ 'ಗಂಗವಂಶದ ರಾಚಮಲ್ಲ'ನು ಸಮಾನನೆಂದು ಕ್ರಿ.ಶ. ೧೦೭೭ರ ಹುಮ್ಮಚದ ಶಾಸನವು ವರ್ಣಿಸುತ್ತದೆ.[26] ಈ ರಾಚಮಲ್ಲನು ಕೊಡಗಿನ ಬಳಿ ಚೋಳರಿಂದ ಪರಾಜಿತನಾದ ರಕ್ಕಗಂಗನ ಅಣ್ಣ ನಾಲ್ವಡಿ ರಾಚಮಲ್ಲನಿರಬೇಕು. ರಕ್ಕಸ ಗಂಗನಿಗೆ ಕೊಡಗಿನಲ್ಲಿದ್ದ ಅವನ ಆಶ್ರಿತ ಕವಿ, ಯೋಧ ಛಂದೋಂಬುಧಿಯ, ನಾಗವರ್ಮನೂ[27] ಶಿವಬ್ರಾಹ್ಮಣ ಎಂಬುದು ಗಮನಾರ್ಹ. ಅಂದರೆ ಶಿವಬ್ರಾಹ್ಮಣನಿಗೂ ಆಸರೆ ಕೊಡುವ ಶಿವಪರ ಒಲವು ರಾಚಮಲ್ಲ ಹಾಗೂ ರಕ್ಕಸಗಂಗರಲ್ಲಿದ್ದಂತೆ ತೋರುತ್ತದೆ. ಕೇವಲ ಸಾಹಿತ್ಯದ ಆದರಕ್ಕಷ್ಟೆ ಅದು ಸೀಮಿತವಾಗಿರಲಿಲ್ಲ ಎನಿಸುತ್ತದೆ. ಶರಣರ ಪಂಕ್ತಿಯಲ್ಲಿಯೂ ಈ ಗಂಗ ಅರಸರ ಹೆಸರು ಕಾಣಬರುವಲ್ಲಿ, ಅವೀರಶೈವ ಅರಸುವಂಶದಲ್ಲಿ ಶಿವಧರ್ಮದೊಲವಿನ ಕೆಲ ಅರಸರೂ ಇದ್ದರೆಂಬ ಸೂಚನೆ ದೊರೆಯುತ್ತದೆ. ಕ್ರಿ.ಶ. ೯೭೯ರ ಹೂಲಿಯ ನವಲಿಂಗೇಶ್ವರ ದೇಗುಲದ ಶಾಸನದಲ್ಲಿ ಹೇಳಿರುವುದಿಂತಿದೆ:.[28]

'ಸ್ವಸ್ತಿ ಶ್ರೀ ಪೂವಲಿಯೂರೊಡೆಯ ವೀರ ವಿಜಯರಸಂ ತನ್ನ ಪಿರಿಯ
ವೀರವರ್ಮರಸರುಂ ಪಿಂದೆ ಮಾಡಿದೀ ಸ್ಥಾನಾಚಾರ್ಯರಪ್ಪಷ್ಟಾವರಣ ಸಂಪನ್ನರುಂ'

---

25. ಡಾ| ದೇವರಕೊಂಡಾರೆಡ್ಡಿ : ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ , ಕನ್ನಡ ಸಾಹಿತ್ಯ ಪರಿಷತ್ತು, ೧೯೯೪, ಪು. ೮೯
26. ಡಾ| ಎಂ.ಎಂ. ಕಲಬುರ್ಗಿ : ಅದೇ, ಪು. ೨೪-೨೫
27. i. ಎಂ. ಗೋವಿಂದಪೈ : 'ನಾಗವರ್ಮರು ಎಷ್ಟು ಮಂದಿ ?' ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ, ೨೦, ಸಂ. ೧ ಏಪ್ರಿಲ್ ೧೯೩೫, ಪು. ೨೯-೩೦
    ii. ಎ.ಕ. ಸಂಪುಟ ೧ (ಪರಿಷ್ಕೃತ) ಅದೇ, ಕೊಡಗು ಜಿಲ್ಲೆ, ಪ್ರಸ್ತಾವನೆ ಪು. xxx
28. ಡಾ| ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು, ಅದೇ, ಪು. ೧೭೯, ರೀತ್ಯಾ ೧೦ನೇ ಶತಮಾನದ ಈ ಶಾಸನದ ಲಿಪಿ ೧೩ನೇ ಶತಮಾನದ್ದೆನ್ನುವ ಅಭಿಪ್ರಾಯವಿದೆ. ಈ ಶಾಸನದ ಕಾಲ ಸಂದೇಹದಲ್ಲಿ ನಿಂತಿದೆ ಎನ್ನಲಾಗಿದೆ. ಆದರೆ ಹಿಂದಿನ ಶಾಸನದ ಸಂಗತಿಯನ್ನು ೧೩ನೇ ಶತಮಾನದಲ್ಲಿ ಮತ್ತೆ ಲಿಪಿ ಪ್ರತಿಸಿರಬಹುದು. ಹಾಗೆ ನೋಡಿದರೆ ಕ್ರಿ.ಶ. ೪೬೬ರ ಮಡಿಕೇರಿ ಶಾಸನವನ್ನು ೯ನೇ ಶತಮಾನದ ಬರೆದ ಮೂಲಪ್ರತಿಯ ರೂಪವೆನ್ನಲಾಗಿದೆ. ಹೀಗೆಯೆ ೭-೮ನೇ ಶತಮಾನದಲ್ಲಿ ಪುಲಿಕೇಶಿ ಹಾಗೂ ವಿಕ್ರಮಾದಿತ್ಯನ ಶಾಸನಗಳನ್ನು ೧೦ನೆಯ ಶತಮಾನದ ಕನ್ನಡ ಲಿಪಿ ಬಳಸಿ ಲಕ್ಷ್ಮೇಶ್ವರದ ಶಂಖಬಸ್ತಿಯ ಶಿಲಾಶಾಸನದಲ್ಲಿ ಬರೆದಿರುವ ಉದಾಹರಣೆಗಳೂ (ನೋಡಿ : ಡಾ| ಕೆ. ವಿ. ರಮೇಶ್: ಕರ್ನಾಟಕ ಶಾಸನ ಸಮೀಕ್ಷೆ ೧೯೭೧, ಪು. ೧೫-೧೬) ಈ ಅಂಶಕ್ಕೆ ಒತ್ತುಕೊಡುತ್ತವೆ. ಕ್ರಿ.ಶ. ೧೭೯೬ರಲ್ಲಿ ಬರೆದ ಕೊಡಗಿನ ಅಬ್ಬಿಮಠದ ಶಾಸನವು, ಕ್ರಿ.ಶ. ೧೭೨೪ರ ದಾನದ ಸಂಗತಿಯನ್ನು ಹೀಗೆಯೆ ತನ್ನಕಾಲದ ಲಿಪಿಯಲ್ಲಿ ಬರೆದ ಉದಾಹರಣೆಯಾಗಿದೆ.

ಈ ಶಾಸನದಲ್ಲಿ ವೀರಶೈವದ ಒಂದು ಮುಖ್ಯ ಪಾರಿಭಾಷಿಕ ಶಬ್ದ ಹಾಗೂ ಆಚರಣೆಯ ಸಂಕೇತವೂ ಆಗಿರುವ 'ಅಷ್ಟಾವರಣ ಸಂಪನ್ನರುಂ' ಎಂದಿದೆ. ಅಂದರೆ ೧೧ನೆಯ ಶತಮಾನದಲ್ಲಿ ವೀರವಿಜಯರಸ ಎಂಬ ದೊರೆ ವೀರಶೈವ ಅರಸನಾಗಿ ಅಥವಾ ವೀರಶೈವದೊಲವಿನ ಅರಸನಾಗಿ ತನ್ನ ಪೂರ್ವಜರ ಆಚರಣೆ, ಹಾಗೂ ವ್ಯವಸ್ಥೆಯನ್ನು ಮಾನಿಸಿರುವ ಸಂಗತಿ ಇಲ್ಲಿ ತಿಳಿಯುವಂತಿದೆ. ಈ ಹೂಲಿಯ ಮಠ ಮೂಲತಃ (ಅಭಿನವ ಪಾಶುಪತ ಅಭಿನವ ಎಳಮೇಲ ?) ಸಿಂಹಪರ್ಷೆಗೆ ಸೇರಿತ್ತೆಂದರೂ,[29] ವೀರಶೈವದ ಆಗಮೋಕ್ತ ಆಚರಣೆ, ಆವರಣಗಳು ಅಲ್ಲಿಯೂ ಅಡಕವಿದ್ದಿರಬೇಕು. ಅಂತಾಗಿ ಶೈವದಲ್ಲಿಯೂ ಅಂತಹ ಅಷ್ಟಾವರಣದ ಅಂಗಗಳು ಪೂಜ್ಯವಾಗಿದ್ದುವು ಎಂಬ ಅಭಿಪ್ರಾಯವು[30] ವ್ಯಕ್ತವಾಗಿರುತ್ತದೆ. ಹಾಗಿದ್ದರೆ ಶೈವ ಮತ್ತು ವೀರಶೈವದ ಒಡನಾಟದ ಸಂದರ್ಭವನ್ನು ಪೋಷಿಸಿದಂತಾಗುತ್ತದೆ, ಅಷ್ಟೆ. ಅಲ್ಲವೆಂದರೆ ಎಡೆಯೂರ ಶಾಸನದಲ್ಲಿ ತೋಂಟದಾರ್ಯನನ್ನು 'ಅಷ್ಟಾವರಣಾಲಂಕರಣ' ಎಂದಿರುವ ವೀರಶೈವದ ಸಂದರ್ಭವೂ ಶೈವವೆ ಆಗಿ ಬಿಡಬಲ್ಲುದೆನಿಸುತ್ತದೆ.

ಇತಿಹಾಸದ ಪದರುಗಳು

ಕ್ರಿ ಶ. ೧೦೦೦-೧೧೦೦ ರ ಅವಧಿಯಲ್ಲಿ ಬೀದರ್ ಜಿಲ್ಲೆಯ ಉತ್ತರಭಾಗದಲ್ಲಿ ವೀರಗಣಾಚಾರಿ, ವೀರಸಂಗಯ್ಯನಂತಹ ಧೀರ ಶರಣರೂ ದೌರ್ಜನ್ಯದ ವಿರುದ್ದ ಖಡ್ಗ ಓಡಿದೆತ್ತಿದವರಾಗಿದ್ದರು. ಈ ವೀರ ಸಂಗಯ್ಯ ಇಡೀ ಬೀದರ್ ಜಿಲ್ಲೆಯನ್ನು ವೀರಶೈವ ಧರ್ಮದ ಕೇಂದ್ರವಾಗಿ ಬೆಳೆಸಿದ. ಈತನು ತನ್ನ ೧೬ನೆಯ ವಯಸ್ಸಿನಲ್ಲಿ ಶಿವದೇವಸ್ವಾಮಿಗಳಿಂದ (ಲಿಂಗ) ದೀಕ್ಷೆಯನ್ನು ಪಡೆದಿದ್ದ. ಈತನಿಗೆ ಚಂದ್ರಾಣಿ ಎಂಬ ಸುಂದರ ಕನ್ಯೆ ಭಾವಿ ಸತಿಯಾಗುವವಳಿದ್ದಳು. ಆಗ ಅವಳೂರಿನ ರಾಜ ಭಾಸ್ಕರ ಎಂಬುವನು ಕಣ್ಣು ಹಾಕಿದ. ಆಕೆ ಅದನ್ನು ಪ್ರತಿಭಟಿಸಿ, ತನ್ನನ್ನು ರಕ್ಷಿಸಿಕೊಂಡು ವೀರಸಂಗಯ್ಯನನ್ನು ಮದುವೆ ಆದಳು. ಈ ಪ್ರತಿಭಟನೆಗೆ ನೆರವಾದವ ವೀರಸಂಗಯ್ಯನೆ. ನಂತರ ರಾಜ ಈ ದಂಪತಿಗಳ ವ್ಯಕ್ತಿತ್ವ ತಿಳಿದ. ತಪ್ಪನ್ನರಿತು 'ಹರನ ಕಂಡೆನು ತಾಯಿ ನಿಮ್ಮೊಡನಾಡಿ' ಎಂದ. ಪರನಾರಿ ಸೋದರನಾಗಿ ಅರುಹಿನ ಆಚಾರ ಕಂಡು ಸುಜ್ಞಾನಿ ಆದ. ಈ ವೀರಸಂಗಯ್ಯ ೬೩ ಪುರಾತನರ ಚರಿತ್ರೆಯಲ್ಲಿ ಉಕ್ತನಾಗಿದ್ದು ಬಸವಣ್ಣನನ್ನೂ ಈತನ ಕತೆಯನ್ನು ಬಿಜ್ಜಳನಿಗೆ

---

29. ಬಿ.ವ್ಹಿ. ಮಲ್ಲಾಪುರ: 'ಬಸವಪೂರ್ವ ವೀರಶೈವದ ರಾಜಗುರುಗಳು';ಸಿದ್ಧರಾಮ ಸಂಪದ ,(ಸಂ) ಡಾ। ಬಿ.ವ್ಹಿ. ಶಿರೂರ, ಯಲಬುರ್ಗಿ, ೧೯೯೫, ಪು. ೧೪; ಇದಲ್ಲದೆ ಹೂಲಿ ಮಠದಲ್ಲಿನ ಹಿಂದಿನ ನೀಲಕಂಠ ಶಿವಾಚಾರ್ಯರ ಸಹಿತವಾಗಿ ಶಿವಾಚಾರ್ಯರು ತಲೆಯಲ್ಲಿ ಲಿಂಗವನ್ನು ಧರಿಸುವ ವೀರಶೈವ ಗುರುವರ್ಗದವರೇ ಹೊರತು ಕೆಲವರು ವಾದಿಸುವಂತೆ ಅಲಿಂಗಿ ಶಿವಾಚಾರ್ಯರಲ್ಲ ,ಎಂದು ಟಿ.ಎಸ್. ಮಲ್ಲಪ್ಪನವರು ಹೇಳುತ್ತಾರೆ. (ನೋಡಿ : ದಾಸೋಹ , ಅದೇ, ಪು. ३६३)
30. ಡಾ। ಎಂ. ಎಂ. ಕಲಬುರ್ಗಿ : ಅದೇ, ಪು. ೧೭೯.

ಇಲ್ಲಿನ ಮಳಲಿ ಶಾಸನೋಕ್ತ 'ಕದಂಬಕಂ.. ಚಾಗಿ ಬಯಲ್ನಾಡಂ,' ಕಿತ್ತೂರು ಶಾಸನೋಕ್ತ 'ವೀರಮಹೇಶ್ವರ.. ಕದಂಬ ಕಂಠೀರವ... ವಿಷ್ಣುಪದ ಸೇಕರಂ... ಬನವಾಸಿ ವಿಷಯಾಧೀಶ್ವರಂ ಮಹೇಶ್ವರ ಭಕ್ತಂ ಬೀರ ಬಯಲ್ನಾಡ... ರವಿವರ್ಮ್ಮಂ' (ರವಿಯ್ಯಮ್ಮರಸ), ಕೊಡಗಿನ ಯಡೂರು ಶಾಸನದ ದುದ್ದರಸ, ಮಂಜರಾಬಾದ್ ಶಾಸನದ 'ಚಾಗಿ' ಇವರೆಲ್ಲ ಹಾನುಗಲ್ಲು ಕದಂಬ ವಂಶಿಕರಾಗಿ ಅಥವಾ ಮನೆತನದ ಶಾಖೆಯವರಾಗಿ ಶಿವಧರ್ಮಿಗಳಾಗಿರುವುದು ಶಾಸನದ ಪದಪುಂಜಗಳಿಂದ ವ್ಯಕ್ತವಾಗುವಂತಿದೆ. ಆದರೆ ರವಿಯ್ಯಮ್ಮರಸನಿಗೆ 'ವಿಷ್ಣುಪದಸೇಕರಂ' ಎಂದಿರುವುದು ಆತನ ಧರ್ಮಸಾಮರಸ್ಯವನ್ನು ತೋರುವ ಸಂಕೇತವೆನಿಸುತ್ತದೆ. ಅಲ್ಲದೆ ಕೊಡಗಿನ ವಿಸ್ತಾರವು ಆ ಕಾಲಕ್ಕೆ ತೆರಕಣಾಂಬಿಯಿಂದ ಹಾಸನದ ಪ್ರಸ್ತುತ ಶಾಸನೋಕ್ತ ಪ್ರದೇಶಗಳವರೆಗೆ ಹರಡಿದುದಾಗಿತ್ತು. ಈ ರಾಜರು ಮಾಡಿದ ದೇವದಾನ, ದತ್ತಿಗಳ, ಆಳಿದ ಪ್ರದೇಶಗಳ ಬಗ್ಗೆಯೂ ಶಾಸನಗಳು ತಿಳಿಸುತ್ತವೆ. ಧಾರವಾಡದ ಬಳಿಯ ಮತ್ಸ್ಯದೇಶವೆನಿಸಿದ್ದ ಹಾನುಗಲ್ಲಿನ ಕದಂಬವಂಶದ ಅರಸುಗಳಿಗೂ ಮತ್ಸ್ಯದೇಶವೆಂದೇ ಹೆಸರಿದ್ದ ಕೊಡಗಿನ ಭಾಗದ ಹಾನುಗಲ್ಲು ಕದಂಬವಂಶಿಕರಿಗೂ ಸಂಬಂಧಗಳು ಇದ್ದ ಬಗ್ಗೆ ಸಾಂದರ್ಭಿಕ ಘಟನೆಗಳನ್ನು ಹೆಕ್ಕುವುದರಿಂದ ವಿದಿತವಾಗುತ್ತದೆ.

ದಂಡನಾಯಕ ಕೊಂಡಕುಳಿ ಕೇಶಿರಾಜ ಆರನೆಯ ವಿಕ್ರಮಾದಿತ್ಯನ ಮಂತ್ರಿ. ಮೊದಲ ವೀರಶೈವ ಕವಿ ಎಂದು ಪಂಡಿತರ ಅಭಿಪ್ರಾಯ. ಕೊಂಡಕುಳಿ ಶಾಸನ (ಕ್ರಿ.ಶ. ೧೧೦೭)ದಲ್ಲಿ ಅವನ ಇಷ್ಟದೇವರಾದ 'ಸೋಮೇಶ್ವರ' ಲಿಂಗದ ಹೆಸರಿನಲ್ಲಿ ದೇವಾಲಯ ಕಟ್ಟಿಸಿ, ದತ್ತಿಬಿಟ್ಟ ವಿಷಯವಿದೆ. ಇವನು ನಿಂಬಣ ದಂಡನಾಥನ ಮಗ. ಶಾಸನದಲ್ಲಿ 'ವಾಜಿಕುಳಾರ್ಣ್ನವ ಪಾರಿಜಾತ' ಎಂದಿರುವಲ್ಲಿ ಅವನ ವಂಶವೂ ಉಕ್ತವಾಗಿದೆ (ಇವನಹಿಂದಿನವರುಮೊದಲು ಬ್ರಾಹ್ಮಣ ಅಥವಾ ಜೈನರಿದ್ದು ನಂತರ ವೀರಶೈವರಾದರೆ ? ಅಥವಾ ಇವನೇ ಜೈನದಿಂದ ವೀರಶೈವಕ್ಕೆ ಬಂದವನೇ ? ಎಂಬುದನ್ನು ಗಮನಿಸಬೇಕು). 'ಅವನನ್ನು ಹರಚರಣರ ಜೋರಂಜಿತೋತ್ತಮಾಂಗ' ಎಂದಿರುವುದು ಅವನ ಶಿವಭಕ್ತಿಯ ದ್ಯೋತಕವಾಗಿದೆ. ಸದ್ಯ ಶಾಸನ ಕ್ರಿ.ಶ. ೧೧೦೭ರದಾಗಿದ್ದು ಅವನ ಪ್ರಸಿದ್ಧಿಗೆ ಬಂದಿದ್ದ ಕಾಲವದಾಗಿರಬೇಕು. ಅಂತಾಗಿ ಅವನು ೧೧ನೆಯ ಶತಮಾನದ ಉತ್ತರಾರ್ಧದಲ್ಲಿ ಜನಿಸಿದ ವೀರಶೈವರಲ್ಲಿನ ವಂಶಿಕನಿರಬೇಕು. ಅದೇನೇ ಇರಲಿ ಅವನ ಸಾಧನೆಯ ದೃಷ್ಟಿಯಿಂದ 'ಷಡಕ್ಷರಿಯ ಕಂದ' ಎಂದೂ ಹೆಸರುಗೊಂಡಿರುವ ಮಂತ್ರಮಹತ್ವದ ಕಂದ, ಲಿಂಗಸ್ತೋತ್ರದ ಕಂದ, 'ಶೀಲಮಹತ್ವದಕಂದ,' ನವರತ್ನಮಾಲೆ, ಎಂಬವು ಅವನ ಕೃತಿಗಳಾಗಿವೆ. ಶಾಂತಲಿಂಗದೇಶಿಕನ ರೀತ್ಯಾ ಇವನು ವಚನಕಾರನೂ ಹೌದು ಎನ್ನಲಾಗಿದೆ. ಅವನ ಶೀಲಮಹತ್ವಕಂದದಲ್ಲಿ ವೀರಶೈವ, ಲಿಂಗಾಯತವಂತ ಎಂಬ ಶಬ್ದಗಳೂ ಇದ್ದು ಅವನ ಶಿವಧರ್ಮಾನುಸರಣೆಯ ಕುರುಹೆನಿಸುತ್ತದೆ. ಡಾ। ಚಿಂದಾನಂದ ಮೂರ್ತಿವರ ಅಭಿಪ್ರಾಯದಂತೆ, ಈ ಕೇಶಿರಾಜನ ಬದುಕು, ಕೃತಿಗಳ ವಿಶ್ಲೇಷಣೆ ವೀರಶೈವ ಸಾಹಿತ್ಯ, ವಚನಸಾಹಿತ್ಯಗಳ ಆರಂಭದ ಬಗ್ಗೆ ತಿಳಿಯಲು ಸಹಾಯಕವಾಗುತ್ತದೆ. [41] ಇವನು ವೀರಶೈವ ಪುರಾಣೋಕ್ತನೂ ಆಗಿದ್ದಾನೆ.

41. ಡಾ।ಎಂ. ಚಿದಾನಂದ ಮೂರ್ತಿ: 'ವೀರಶೈವ ಸಾಹಿತ್ಯದ ಉಗಮ,' ಸಿದ್ಧಗಂಗಾಶ್ರೀ, ೧೯೮೧, ಪು. ೭೭೭

'ಮಹಾಸಾಮನ್ತಾಧಿಪತಿ' ಎಂದು ಕ್ರಿ.ಶ. ೧೧೦೭ರ ಕೊಂಡಕುಳಿ ಶಾಸನವು ಹೇಳಿದೆ, ವೀರಶೈವ ಪುರಾಣಗಳ ರೀತ್ಯಾ ಅರಸನಿಗೆ ಮಣೆಯದೆ ದಂಡನಾಯಕ ಪದವಿಯನ್ನು ತ್ಯಜಿಸಿದ ನಿರ್ಮೋಹಿ, ನಿರ್ಭಿಡೆಯ ಶರಣ ನಾಗಿದ್ದಾನೆ. ಇವನ ಕೆಲವು ಕಂದಪದ್ಯಗಳು ಬಸವಣ್ಣನಲ್ಲಿ ವಚನಗಳಾಗಿ ನಿಂತಿವೆ [42] ಎಂಬ ಮಾತೂ ಇದೆ. ಇವನ ಸಾಹಿತ್ಯ ಕೃತಿಗಳಲ್ಲಿ ಉಕ್ತವಾಗಿರುವ ವೀರಶೈವ ತತ್ತ್ವಾಚರಣೆಗಳಿಂದ ಹಾಗೂ ವೀರಶೈವ ಪಾರಿಭಾಷಿಕ ಶಬ್ದಗಳಿಂದ ಬಸವಪೂರ್ವ ವೀರಶೈವದ ಚಿತ್ರಣ ದೊರೆಯುತ್ತದೆ.

ಚಾಲುಕ್ಯ ವಂಶದವರೆನ್ನಲಾದ ಕೋವೂರ ಬ್ರಹ್ಮಯ್ಯ ಹಾಗೂ ಚಾಳುಕ್ಯ ಭೀಮ ಎಂಬ ಶರಣರು ಹೆಸರಿನ ಮೇಲ್ನೋಟಕ್ಕೆ ಆ ವಂಶಿಕರಿರಬಹುದೆನ್ನಬಹುದೇ ವಿನಾ ಅವರು ಅರಸರಾಗಿದ್ದರು ಅಥವಾ ಅಧಿಕಾರಿಗಳಾಗಿದ್ದರು ಎನ್ನಲು ಇನ್ನೂ ಪುರಾವೆಗಳ ಅಗತ್ಯವಿದೆ.

ಕಲಚೂರಿ ಬಿಜ್ಜಳನ ಕಾಲಕ್ಕೆ ವೀರಶೈವಕ್ಕೆ ಹೊಸ ತಿರುವನ್ನು ತಂದುಕೊಟ್ಟ ಭಕ್ತಿಭಂಡಾರಿ ಬಸವಣ್ಣ ಅವನ ಮಹಾಮಂತ್ರಿಯಾಗಿ ಶರಣರ ಸಂಘಟನೆಮಾಡಿದ. ಭೇದಗಳ ಮುಸುಕು ತೆಗೆದು ಹಾಕಿದ. ವಚನ ಸಾಹಿತ್ಯಕ್ಕೆ ಪ್ರಬಲ ವೇದಿಕೆ ನಿರ್ಮಿಸಿದ. ಯುಗಪುರುಷನೆನಿಸಿದ. ವಚನ, ಕಾವ್ಯ, ಐತಿಹ್ಯವುಳಿದು ಅರ್ಜುನವಾಡ ಶಾಸನ ಬಸವಣ್ಣನ ಚರಿತ್ರೆಯ ಮೇಲೆ ಹೊಸತನ್ನು ನೀಡಿದ ವಿಶಿಷ್ಟ ಶಾಸನವಾಗಿದೆ. ಇವನ ನಂತರ ಸಮ್ಯಗ್‌ಜ್ಞಾನಿ ಚನ್ನಬಸವಣ್ಣ ಮಂತ್ರಿಯಾದ. ಇವರಲ್ಲದೆ ಕಾಶ್ಮೀದರಸನಾಗಿದ್ದ ಮೋಳಿಗೆ ಹಾಗೂ ಮಾರಯ್ಯ ಅವನ ರಾಣಿ ಮಹಾದೇವಿಯಮ್ಮ ಈ ಕಾಲದವರೆ.

ಚಂಗಾಳ್ವರು

ಚಂಗಾಳ ಅರಸರಲ್ಲಿ ಕೊಡಗಿನ ಭಾಗದಲ್ಲಿದ್ದವರು ವೀರಶೈವರಾದರು. ಮೂಲತಃ ಜೈನರು.ಚೋಳ ಮಾಂಡಲಿಕರಾದ ಮೇಲೆ ಕಾಲಾನಂತರದಲ್ಲಿ ಶಿವಧರ್ಮಕ್ಕೆ ತೆರೆದುಕೊಂಡರು. ಕ್ರಿ.ಶ. ೯೭೨ರ ಬೇಲೂರು ಶಾಸನದಲ್ಲಿ 'ಚಂಗನಡ ಗೋವಂ ಹೊ ಶ್ಯ.ಳ ಮಾರೆಯ ಸೊಸೆವೂರ ಆಳುಲ್ತೆಲೆ' ಎಂದಿದೆ.[43] ಇಲ್ಲಿನ 'ಚಂಗನಡ ಗೋವ[44] ಶಬ್ದಕ್ಕೆ ಹೊಯ್ಸಳ ಮಾರೆಯನ ಸಂದರ್ಭದಿಂದ ಹೊಯ್ಸಳ ವಿನಯಾದಿತ್ಯನಿಗೂ ಸಂಬಂಧವನ್ನು ಸೂಚಿಸಲಾಗಿದೆ; ಹಾಗೂ ಅದು ಚಂಗಾಳ್ವ ಹಾಗೂ ಹೊಯ್ಸಳರ ರಕ್ತ ಸಂಬಂಧದ ನಂಟೆಂದು ಅಭಿಪ್ರಾಯ ಪಡಲಾಗಿದೆ. ಅಂದರೆ ಚಂಗಾಳ್ವರ ಮೂಲವನ್ನು ಹೊಯ್ಸಳರಲ್ಲಿ ಅರಸುವ ಸನ್ನಿವೇಶ ವಾಗುತ್ತದೆ. ಆದರೆ ಈ ಶಬ್ದಕ್ಕೆ ಸಂವಾದಿಯಂತಿರುವ 'ಕಟಕದ ಗೋವಂ' ಎಂಬುದು

---

42. ಡಾ। ಎಂ. ಎಂ. ಕಲಬುರ್ಗಿ, ಮಾರ್ಗ (ಸಂಪುಟ ೧), ಅದೇ, ಪು. ೪೦೪
43. ಎ.ಕ. ಸಂಪುಟ ೯ (೧೯೯೦), ಬೇಲೂರು ೫೪೦ (ಕ್ರಿ.ಶ. ೯೭೨)
44. S.S. Jagirdar : 'New light on the Hoysalas', Q.J.M.S. Vol. L XXXV. No.1 Jan - Mar . 1994

ಬಿರುದಾಗಿರುವ[45] ಹಿನ್ನೆಲೆಯಲ್ಲಿ ಹೊಯ್ಸಳ ಮೂಲ ಅಥವಾ ಸಂಬಂಧಕ್ಕೆ ಇನ್ನು ಆಧಾರಗಳ ಅಗತ್ಯವಿದೆ. ಸದ್ಯಕ್ಕೆ ಅದು ಹೊಯ್ಸಳ ಮಾರೆಯನ ಬಿರುದು ಎನ್ನಬೇಕು.

ಈವರೆವಿಗೆ ತಿಳಿದಿರುವ ಚಂಗಾಳ್ವಅರಸರಲ್ಲಿ ಮೊತ್ತಮೊದಲಿನವ ನನ್ನಿ ಚೆಂಗಾಳ್ವನು ಚೋಳ ಎಂಬ ಅಭಿದಾನದ ರಾಜೇಂದ್ರ ಚೋಳನಾಗಿದ್ದಾನೆ.[46] ಇದು ಶಾಸನಗಳಲ್ಲಿ ಕಂಡಂತೆ ಹೇಳಿರುವ ಸಂಗತಿ. ಇವನು ಕ್ರಿ.ಶ. ೧೦೦೪ರ ಮಾಲಂಬಿ ಶಾಸನದ 'ನನ್ನಿಯ ಮೇರು' ಆಗಿದ್ದರೆ ಚೋಳರಿಂದ ಸೋತ ಅಧೀನ ಮಾಂಡಲಿಕ 'ನನ್ನಿಯ ಚೆಂಗಾಳ್ವ'ನಾಗುತ್ತಾನೆ. ಈ ಚಂಗಾಳ್ವರು ಕ್ರಿ.ಶ. ೧೦೭೯ರ ವರೆಗೂ ಜೈನರಾಗಿಯೆ ಇದ್ದರು. ಪ್ರಬಲ ಜೈನಕೇಂದ್ರವಾಗಿ ಕೊಂಗಾಳ್ವರ ಆಳ್ವಿಕೆಯಲ್ಲಿದ್ದ ಸಾಲಿಗ್ರಾಮ ನಗರವನ್ನು ಕ್ರಿ.ಶ. ೧೦೭೯ರಲ್ಲಿ ಧಾಳಿಮಾಡಿ ಕೊಂಗಾಳ್ವರನ್ನು ಇವರು ಸೋಲಿಸಿದರು ಎಂಬುದು ಸಾಲಿಗ್ರಾಮ ೬೬ನೇ ಶಾಸನದಿಂದ ವ್ಯಕ್ತ. ಅಂದರೆ ಆ ಹೊತ್ತಿಗೆ ಜೈನಧರ್ಮವನ್ನು ತ್ಯಜಿಸಿ ಚಂಗಾಳ್ವರು ಶಿವಧರ್ಮದೊಲವನ್ನು ಪಡೆದಿದ್ದಂತೆ ತೋರುತ್ತದೆ. ಮುಂದಿನ ಶಾಸನಗಳಲ್ಲಿ ಬರುವ, ಮಾದೆಯರಸ (ಮಾಚಿ ಅರಸ) ಮಾದೇವ, ಕುಲೋತ್ತುಂಗಚೋಳ ಚಂಗಾಳ್ವ, ಒಡೆಯಾದಿತ್ಯದೇವ, ಅನ್ನದಾನಿ ಚಂಗಾಳ್ವ, ಪೆಮ್ಮವೀರಪ್ಪ ಬೊಪ್ಪದೇವ, ಸೋಮದೇವ, ಮಲ್ಲಿದೇವ, ಹರಿಹರದೇವ ಇತ್ಯಾದಿ ಹೆಸರುಗಳು ಕ್ರಿ.ಶ. ೧೩೦೦ರವರೆಗೂ ಕಾಣಬರುತ್ತವೆ. ಇವರನ್ನು ಮೊದಲ ಚಂಗಾಳ್ವರು ಅಥವಾ ಪೂರ್ವಚಂಗಾಳ್ವರೆನ್ನುವುದುಂಟು. ಈ ಮೊದಲ ಚಂಗಾಳ್ವರು ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವರನ್ನು ತಮ್ಮ ಕುಲದೇವರನ್ನಾಗಿ ಮಾಡಿಕೊಂಡು ಅಲ್ಲಿನ ವೀರಶೈವ ಗುರುಗಳನ್ನು ತಮ್ಮ ಕುಲಗುರುಗಳನ್ನಾಗಿ ಮಾಡಿಕೊಂಡರು. ಈ ಸಮಯದಲ್ಲಿ ಇವರ ಆಳ್ವಿಕೆಯ ಪ್ರದೇಶ, ಕೊಡಗಿನ ಉತ್ತರ, ಪೂರ್ವ ಹಾಗೂ ದಕ್ಷಿಣ ಭಾಗಗಳನ್ನು ಒಳಗೊಂಡು ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ ತಾಲೂಕಿನ ಭಾಗಗಳನ್ನು ಕೂಡಿಕೊಂಡಿತ್ತು. ಇವರು ಕ್ರಿ.ಶ. ೧೩೦೦-೧೪೦೦ರ ಅವಧಿಯಲ್ಲಿ ಕೊಡಗುಶ್ರೀರಂಗಪಟ್ಟಣ (ನಂಜರಾಯಪಟ್ಟಣ ಪ್ರದೇಶ), ಪಾಲ್ಪರೆ, ಮಾಲಂಬಿ, ಕುರ್ಚಿ, ಬಾಡಗ ಇತ್ಯಾದಿ ಪ್ರದೇಶದಲ್ಲಿ ಬದುಕು ಸಾಗಿಸಿದ್ದರು. ಕ್ರಿ.ಶ. ೧೧೭೧ ರಲ್ಲಿ ಹುಣಸೂರಿನಿಂದ ಕೊಡಗಿನ ಪಾಲ್ಪರೆ ನಂತರ ಕೊಡಗು ಶ್ರೀರಂಗಪಟ್ಟಣಕ್ಕೆ ರಾಜಧಾನಿಯನ್ನು

45. ಎ.ಕ. ೭ ಶಿವಮೊಗ್ಗ ೪, (ಕ್ರಿ.ಶ. ೧೧೭೭) ರೀತ್ಯಾ 'ಕಟಕದ ಗೋವಂ ರಕ್ಕಸಗಂಗಂ,' ಮತ್ತು ಕ್ರಿ.ಶ. ೧೧೯೯ರ ಶಿವಮೊಗ್ಗ ೧೨೫ ರ ರೀತ್ಯಾ 'ವೀರವಿದ್ಯಾಧರಂ ಕಟಕದ ಗೋವನಚಳಿತ ಧೈರ್ಯ್ಯಂ' ಎಂದಿರುವಲ್ಲಿ ಬಿರುದಿನ ಸ್ವರೂಪಗಳು ಕಾಣುತ್ತವೆ.ಅಲ್ಲದೆ 'ಯಾದವ ವಂಶಿಕ' ರೆಂದುಕೊಳ್ಳುವ ಅರಸರಲ್ಲಿ ಹೊಯ್ಸಳೇತರರೂ ಇದ್ದಾರೆ. ಕೊಂಗಾಳ್ವ(ಕೊಂಗಾಳುವ) ಎಂಬುದು ಪ್ರಾದೇಶಿಕ ಆಳ್ವಿಕೆಯ ಸೂಚನೆ ಎಂದರೆ ಚೆಂಗಾಳುವ ಗೋವ, ಎಂಬ ಶಬ್ದವೂ ಚಂಗನಾಡನ್ನು ರಕ್ಷಿಸಿಕೊಟ್ಟವ ಎಂಬ ಅರ್ಥ ಮೀರಿ 'ಸಂಬಂಧ' ಹೇಳಲಾರದು ಎನಿಸುತ್ತದೆ. 'ಚಂಗ' ಎಂದರೆ ಸಹಾಯಕರು ಎಂಬ ಅರ್ಥವಿರುವಲ್ಲಿ 'ಹೊಯ್ಸಳರ ಮಾಂಡಲಿಕರಾಗಿ, ಚಂಗಾಳ್ವರು' ಎಂದಾಗಿ, 'ಚಂಗನಡಗೋವ', ಆ ಅರ್ಥಕ್ಕೆ ಸನಿಹವಾಗಬಹುದೆನಿಸುತ್ತದೆ.

46. ಎ.ಕ. ೧ (ಪರಿಷ್ಕೃತ) ಅದೇ, ಕೊಡಗುಜಿಲ್ಲೆ, ಪೀಠಿಕೆ, ಪು. ೩೨ ಮತ್ತು ಎ.ಕ. ಸಂ. ೫ ,ಮೈಸೂರು ಜಿಲ್ಲೆ (೧೯೭೬), ಕೆ.ಆರ್. ನಗರ ೮೫ (ಕುರುಬರಹಳ್ಳಿ, ಕ್ರಿ.ಶ. ೧೦೩೪)

ಬವಲಾಯಿಸಿಕೊಂಡು ಆಳಿದ್ದು ಹೊಯ್ಸಳರಿಗೆ ಸೋತ ಮಾಂಡಳಿಕರಾಗಿಯೇ. ಕ್ರಿ.ಶ. ೧೪೦೦ರ ಸುಮಾರಿಗೆ 'ಸಂತರದ ಚಂಗಾಳ್ವ'ರ ವಂಶವು ಉಮಿಸಿದಂತಿದೆ. ಕ್ರಿ.ಶ. ೧೫೦೩–೦೪ರ ಹಿರೇ ಮಳಲಿಯ ಶಾಸನವು 'ಸಂತರದ ಚಂಗಾಳ್ವರ' ವಂಶವೃಕ್ಷವನ್ನು 'ಚಂಗಾಲ್ವ' ನಿಂದ ಆರಂಭಿಸಿ, ನಾಗ (ರಾಜ), ರಂಗ(ರಾಜ), ಪಿರಿಯಣ್ಣ, ನಂಜ(ರಾಜ), ಮಹಾದೇವರ ವರೆಗೆ ಹೇಳುತ್ತದೆ. ಅಂದರೆ ಕ್ರಿ.ಶ. ೧೪೦೦ರಿಂದ, ಹಿಡಿದು, ಕ್ರಿ.ಶ. ೧೬೪೪ರ ವೀರರಾಜನವರೆಗೆ ಚಂಗಾಳ್ವರ ಆಳ್ವಿಕೆಯು ಶಾಸನಗಳಿಂದ ತಿಳಿಯುತ್ತದೆ. ೧೬೪೪ರಲ್ಲಿ ವಂಶ ಮುಕ್ತಾಯವಾಗುತ್ತದೆ. ಕ್ರಿ.ಶ. ೧೪೫೦ರ ಸುಮಾರಿನಲ್ಲಿ ಇವರ ಒಂದು ಶಾಖೆ ಕೆಳದಿಯತ್ತ ಸಾಗಿಹೋಗಿ ಕೆಳದಿ ಅರಸರ ವಂಶಭೂತರೆನಿಸಿರಬಹುದೆಂಬುದನ್ನು ಸಾಂದರ್ಭಿಕ ಘಟನೆಗಳಿಂದ ತಿಳಿಯಬಹುದು. ಈ ನಂತರದ ಚಂಗಾಳ್ವರು, ಕೆಳದಿ ಹಾಗೂ ಹಾಲೇರಿ ಅರಸು ವಂಶಗಳಿಗೆ ವಂಶಿಕ ಸಂಬಂಧಗಳು ಇವೆ. 'ನಂತರದ ಚಂಗಾಳ್ವರ ಪೈಕಿಯ 'ನಾಗರಾಜ' ಜನಪ್ರಿಯ ದೊರೆ. ಇವನಿಂದಾಗಿ ಕೊಡಗಿನ 'ನಾಗರ ಹೊಳೆ'ಗೆ ಹೆಸರಾಯಿತು.

ಚಂಗಾಳ್ವರ ಅವಧಿಯಲ್ಲಿ ವೀರಶೈವ ಮಠಗಳು ವೀರಭದ್ರ ದೇಗುಲಗಳು ಮಲ್ಲಿಕಾರ್ಜುನ ದೇಗುಲಗಳು, ಸಿದ್ಧೇಶ್ವರ ದೇಗುಲಗಳು ನಿರ್ಮಿತವಾದವು . ದಾನ, ದತ್ತಿ ಹಾಗೂ ಗಣಾಚಾರ ಪ್ರಚಲಿತವಾಗಿತ್ತು. ಹೆಣ್ಣು ಮಕ್ಕಳಿಗೆ, ತೊತ್ತಿನ ಮಕ್ಕಳಿಗೆ ಆಸ್ತಿಯ ಹಕ್ಕನ್ನು ಶಾಸನಬದ್ಧ ಮಾಡಲಾಗಿತ್ತು. ಹರಿಹರಾಭೇದದ ಸಂಕೇತವಾಗಿ ಶ್ರೀರಾಮ ಹಾಗು ಶ್ರೀರಂಗನಾಥನ ಗುಡಿಗಳು ನಿರ್ಮಿತವಾಗಿದ್ದುವು. ಸೈನ್ಯದ ತೆರಿಗೆ, ದಂಡಿನ ಕಾಣಿಕೆ, ಮನೆವಣ ಜಾರಿಯಲ್ಲಿತ್ತು. ಇವರು ಚೋಳ ಹಾಗೂ ಹೊಯ್ಸಳ ರಾಜವಂಶದಲ್ಲಿ ವೈವಾಹಿಕ ಸಂಬಂಧಗಳನ್ನು ಪಡೆದಿದ್ದರು.[47] ಕೊಡಗು ಶ್ರೀರಂಗಪಟ್ಟಣ ಒಂದು ಮುಖ್ಯವ್ಯಾಪಾರ ಕೇಂದ್ರವಾಗಿತ್ತು.[48] ಇವರ ಕಾಲದ ದೇಗುಲ ವಾಸ್ತುವು ಗರ್ಭಗೃಹ, ಸುಖನಾಸಿ, ನವರಂಗ, ಕಡೆದ ಕಂಬಗಳು ಮುಖಮಂಟಪ ಹಾಗೂ ಪಾರ್ಶ್ವಮಂಟಪ ಹೊಂದಿದ್ದ, ಶಿಲಾ ಕಟ್ಟಡವಾಗಿದ್ದುವು. ಇವರ ವೀರಶೈವ ಧರ್ಮಾನುಸರಣೆಯಿಂದಾಗಿ, ಕೆಳದಿಯ ಅರಸುಮನೆತನದಿಂದ ಸಿಡಿದುಬಂದ ರಾಜಕುಮಾರ ವೀರಒಡೆಯ(ರಾಮರಾಜನಾಯಕನ ಹಿರೇಮಗ)ನಿಗೆ ವಂಶಸ್ಥಾಪನೆಗೆ ಅನುವಾಗಿ 'ಹಾಲೇರಿ ವಂಶ' ಕೊಡಗಿನಲ್ಲಿ ಉದಿಸಿತು. ಚಂಗಾಳ್ವರ ಕಾಲದಲ್ಲಿಮಂಗರಸನ ನಿಘಂಟು, ನಂಜುಂಡಕವಿಯ ಕುಮಾರರಾಮಸಾಂಗತ್ಯ, ದೊಡ್ಡಯ್ಯ ಕವಿಯ ಚಂದ್ರಪ್ರಭಾಸಾಂಗತ್ಯ, ಭುಜಬಲಿಶತಕ, ದೇವಪ್ಪಕವಿಯ ರಾಮವಿಜಯ ಕಾವ್ಯ, ರಾಮಪ್ಪಕವಿಯಗೀತರಾಘವ, ಮಂಗರಸನ ಜಯನೃಪ ಕಾವ್ಯ ಇತ್ಯಾದಿಗಳು ಹೊರಬಂದುವು. ಇದು ಚಂಗಾಳ್ವರ ಕವಿಜನಾಶ್ರಯದ ಚಿತ್ರ ನೀಡುತ್ತದೆ.

47. ಎ.ಕ.. ೧, ಅದೇ, ಗೋಣಿ ಮರೂರು ೫೦, ಗಣಗೂರು ೫೭, ಚೌಡ್ಲು ೬೦, ಚೇರಲ ಸಿರಿಮಂಗಲ ೩೫ ಮತ್ತು ಅಬ್ಬಿಮಲ್ಲಿಕಾರ್ಜುನ ಗುಡಿ ಶಾಸನ (ಅಪ್ರಕಟಿತ) ಎ.ಕ. ೫, ಮೈಸೂರು ಜಿಲ್ಲೆ (೧೯೭೭) ಬೆಟ್ಟದ ಪುರ ೬೨

48. ಕೊಡಗು ಜಿಲ್ಲಾ ಗ್ಯಾಸೆಟಿಯರ್, (ಸಂ) ಸೂರ್ಯನಾಥ ಯು. ಕಾಮತ್, ೧೯೯೩, ಪು. ೪೦೦

ಹೇಳಿದನೆಂದಿದೆ.[31] ಆಂದರೆ ರಾಜನಾದ ಭಾಸ್ಕರನು ಆಡಿದ ಮಾತು ಹಾಗೂ ಅನುಸರಿಸಿದ ಆಚಾರ ಗಮನಿಸಿದರೆ ಅವನೂ ವೀರಶೈವನಾದನೆಂದು ತೋರುತ್ತದೆ.

ಕಲ್ಯಾಣ ಚಾಲುಕ್ಯರಲ್ಲಿ

ಕಲ್ಯಾಣದ ಚಾಲುಕ್ಯರಲ್ಲಿ ಆಹವಮಲ್ಲ ತೈಲಪನ ತಾಯಿ ಬೊಂತಾದೇವಿ . ಈ ತೈಲಪ ಸೆರೆಯಲ್ಲಿಟ್ಟಿದ್ದ ಮಾಳವದೇಶದ ಅರಸು, 'ಉತ್ಪಲ' ಎಂಬ ಹೆಸರಿನ ಮುಂಜರಾಜ ಆಗಿದ್ದಾನೆ. ಸಾನಂದ ಚರಿತೆಯಲ್ಲಿ ಶರಣರಾದ ಬಸವ, ಚನ್ನಬಸವಣ್ಣನ ಹೆಸರುಗಳ ನಡುವೆ ಈ ಹೆಸರು, ಹಾಗೂ ವೀರಶೈವ ಪುರಾಣಗಳಲ್ಲಿ ಶರಣೆ ರಾಣಿ ಬೊಂತಾದೇವಿಯ ಹೆಸರು ಇರುವಲ್ಲಿ [32] ಅವೆಲ್ಲ ಕಲ್ಯಾಣಿ ಚಾಲುಕ್ಯರ ಅರಸ ಅರಸತಿಯರಿಗೆ ಸಂಬಂಧಿಸಿವೆಯೆ ? ಎಂಬ ಪ್ರಶ್ನೆ ಬರುತ್ತದೆ. ಹಾಗಿದ್ದರೆ ಪುರಾಣಗಳ ರೀತ್ಯಾ ಆ ಚಾಲುಕ್ಯವಂಶದಲ್ಲಿ ಹೀಗೆ ಒಬ್ಬಿಬ್ಬ ಅರಸ, ಅರಸತಿಯರು ಆರಂಭದ ಕಾಲಗಳಲ್ಲಿ ವೀರಶೈವಾನುವರ್ತಿಗಳಾಗಿರಬಹುದೆನಿಸುತ್ತದೆ. ಈ ಚಾಲುಕ್ಯರ ಕಾಲದಲ್ಲಿ ಶ್ರೀಶೈಲ ಪೀಠದ ಜ॥ಚಂದ್ರಗುಂಡ ಶಿವಾಚಾರ್ಯರಿಂದ ವೀರಶೈವ ದೀಕ್ಷಿತನಾಗಿ ಮುದನೂರಿನಲ್ಲಿದ್ದ ದಾಸಿಮಯ್ಯ ರಾಮನಿಂದ ಪೂಜೆಗೊಂಡ ಪರಂಪರೆಯ ರಾಮನಾಥಲಿಂಗವನ್ನು ತನ್ನ ಸೂಳ್ನುಡಿಗಳ ಅಂಕಿತ ಮಾಡಿಕೊಂಡು ದೇವರ ದಾಸಿಮಯ್ಯ ಎನಿಸಿದ. ಅವನು ತನ್ನಕಾಲದ ಕೇವಲ ಶಿವಭಕ್ತ ಮುಖಂಡನಾಗಿರದೆ ವೀರಶೈವ ಧರ್ಮದ ಮಹಿಮಾನ್ವಿತ ಕೀರ್ತಿಶಾಲಿ ಮುಖ್ಯಸ್ಥನಾಗಿದ್ದ. ಬಹುಶಃ ಈ ಕಾರಣಗಳಿಂದಲೂ ಈ ಚಾಲುಕ್ಯ ವಂಶದ ರಾಜ ಜಯಸಿಂಹ, ರಾಣಿ ಸುಗ್ಗಲಾದೇವಿಯರು ಅವನಿಂದ ಲಿಂಗ ದೀಕ್ಷಿತರಾದರು (ಹೀಗೆಲ್ಲ ಪ್ರಭಾವ ಬೀರಿದ ದೇವರ ದಾಸಿಮಯ್ಯನ ಜಯಂತಿಯು ಇಂದಿಗೂ ಅನೇಕ ವೀರಶೈವ ಮಠಗಳಲ್ಲಿ ನಡೆದುಬರುತ್ತಿದೆ). ಅಂದರೆ ಬಹುಶಃ ಈ ಹಿನ್ನೆಲೆ ಇದ್ದಕಾರಣವೋ ಏನೋ ತೈಲಪನ ಮೊಮ್ಮಗನಾದ ಜಯಸಿಂಹ, ಹಾಗೂ ಅವನ ರಾಣಿ ಸುಗ್ಗಲಾದೇವಿಗೆ ಕ್ರಿ.ಶ.(೧೦೧೮-೧೦೪೨)ರ ಅವಧಿಯಲ್ಲಿ ದೇವರದಾಸಿಮಯ್ಯನಿಂದ ವೀರಶೈವದೀಕ್ಷೆಯನ್ನು ಪಡೆಯಲೂ ಒಂದು ಮಾನಸಿಕ ಸಿದ್ಧತೆ ಇದ್ದಂತೆ ತೋರುತ್ತದೆ. ಬಹುಶಃ ಇಂತಹ ಶಿವಸಮನ್ವಿತ ದಾಂಪತ್ಯಕಂಡು ದೇವರದಾಸಿಮಯ್ಯನಲ್ಲಿ 'ಸತಿಪತಿಗಳೊಂದಾದ ಭಕ್ತಿ ಹಿತಮಪ್ಪುದು ಶಿವಂಗೆ' ಎಂಬ ಸೂಳ್ನುಡಿಗೆ ಪ್ರೇರಣೆಯೊದಗಿತೆ? ಎಂದೆನಿಸುತ್ತದೆ. ಇದೇ ಸಂದರ್ಭಗಳಿಂದಾಗಿ ಸಹಸ್ರಾರು ಜೈನರು ವೀರಶೈವವನ್ನು ಸ್ವೀಕರಿಸಿದರು. ೭೦೦ ಬಸದಿಗಳು ವೀರಶೈವ ಮಠಗಳಾಗಿ ಪರಿವರ್ತಿತವಾದುವು, ಎನ್ನಲಾಗಿದೆ. ಜಯಸಿಂಹ

---

31. ಡಾ। ಎಲ್. ಆರ್. ಕುಲಕರ್ಣಿ : 'ಬಸವಪೂರ್ವದ ಬೀದರ್ ಜಿಲ್ಲೆಯ ಶಿವಶರಣ ಸಂಗಯ್ಯ,' ಇತಿಹಾಸ ದರ್ಶನ, (ಸಂ) ಸೂರ್ಯನಾಥ ಯು. ಕಾಮತ್ ಮತ್ತು ಲಕ್ಷ್ಮಣ ತೆಲಗಾವಿ, ಬೆಂಗಳೂರು, ೧೯೮೮, ಪು. ೧೭-೨೬

32. ಡಾ। ಎಂ. ಎಂ. ಕಲಬುರ್ಗಿ: ಮಾರ್ಗ (ಸಂಪುಟ೧), ಬೆಂಗಳೂರು, ೧೯೮೮, ಪು. ೪೦೪ (ನೋಡಿ 'ವೀರಶೈವ ಅರಸುಮನೆತನಗಳು')

- ಸುಗ್ಗಲೆಯರ ಮಗನಾದ ಸೋಮೇಶ್ವರನು (ಕ್ರಿ.ಶ. ೧೦೪೨-೬೮) ಕಲ್ಯಾಣ ಪಟ್ಟಣವನ್ನು ಶಿವಶರಣರ ಬೀಡನ್ನಾಗಿ ಮಾಡಿದನೆಂದು ಹೇಳಲಾಗಿದೆ.[33] ಈ ಸುಗ್ಗಲಾದೇವಿಯನ್ನು ವೀರಶೈವ ಕೃತಿಗಳು ಬಹುವಾಗಿ ಹೊಗಳಿವೆ. ಇವಳ ಸರ್ವಪಂಥ ಸಮತಾ ಭಾವದ ಪ್ರತೀಕವಾಗಿ ಪಾಶುಪತಯೋಗಾಚಾರ್ಯ ಬ್ರಹ್ಮರಾಸಿ ಪಂಡಿತನಿಗೆ ದಾನ ನೀಡಿದ ಸಂಗತಿಯನ್ನು ಕ್ರಿ.ಶ. ೧೦೨೯ರ ದೇವೂರ ಶಾಸನವು ತಿಳಿಸುತ್ತ, 'ದ್ವಿತೀಯ ಲಕ್ಷ್ಮೀ ವಿಶಿಷ್ಟಜನ ಕಾಮಧೇನು ಆಶ್ರಿತಜನ ಕಲ್ಪಲತೆ ರೂಪವಿದ್ಯಾಧರಿ ಕಲಿಕಾಲ ಸರಸ್ವತಿ' ಎಂದು ಹೊಗಳಿದೆ. ಕ್ರಿ.ಶ. ೧೧೮೨ರ ಕೆರಸಂತೆ ಗ್ರಾಮದ ಶಾಸನದ ರೀತ್ಯಾ ಈಕೆ ಪ್ರಾಚೀನ ಆದರ್ಶ ರಾಣಿಯರಲ್ಲಿ ಒಬ್ಬಳಾಗಿ ಘನ ವ್ಯಕ್ತಿತ್ವದ ಕುರುಹಾಗಿ ಉಕ್ತಳಾಗಿದ್ದಾಳೆ. ಈಕೆಯ 'ಭಾಷೆಯೂ ಆದರ್ಶವೆನಿಸಿ ಭಾಷೆಯಿನಾಸುಗ್ಗಲ ದೇವಿ ಕೊಟ್ಟ ತೆಜಿದಿಂ' ಎಂದು ಬೇಲೂರು ಶಾಸನದಲ್ಲಿ ಹೋಲಿಕೆ ಇದೆ. 'ಜಗಮೆಲ್ಲಂ ಬಣ್ಣಿಸಲ್' ಪೂಣ್ದ ಭಾಷೆ ಆದಾಗಿತ್ತು ಎನ್ನುವಲ್ಲಿ, 'ಸರಸ್ವತಿ' ಎಂದೂ ಇರುವಲ್ಲಿ ಆಕೆ ಆಡಿದ ಮಾತು ಶುಭದ್ದು, ಪ್ರಮಾಣಭೂತವಾದದ್ದು, ಜಗತ್ತಿಗೆಲ್ಲ ತಿಳಿಯುವಂತಹ ಸರಳ ರೀತಿಯದು ಎಂಬ ಅರ್ಥ ಇಲ್ಲಿ ಸಮನಿಸುವಂತಿದೆ. ಇದಲ್ಲದೆ ಶಿವದೀಕ್ಷೆಗೆ ಮುನ್ನ, 'ಜಿನಮತಕ್ಕಿಂತ ಶಿವಮತ ಹೆಚ್ಚಿನದೆ ? ದೇವರ ದಾಸಿಮಯ್ಯ ಸರ್ವಜ್ಞನೆ!' ಎಂದೆಲ್ಲ ಜಯಸಿಂಹ ಸುಗ್ಗಲೆಯನ್ನು ಪ್ರಶ್ನಿಸಿದ ಸಂದರ್ಭವಾಯಿತು. ಆಗ ಆಕೆ 'ನೀವು ಬಹಿರಂಗಕ್ಕೆ ಪತಿಯಲ್ಲದೆ ಅಂತರಂಗಕ್ಕಲ್ಲ... ಸಂವಾದಕ್ಕೆ ಅನುವುಮಾಡಿದರೆ ದಾಸಿಮಯ್ಯ, ಸರ್ವಜ್ಞಮುನಿ ನಡುವೆ ಗೆಲುವು ಯಾರದೆಂದು ತಿಳಿಯುತ್ತದೆ.', ಎಂದು ಭಾಷೆಯಾಡಿ, ಕೊನೆಗೆ ಆಡಿದ ಭಾಷೆಯಂತೆ ದಾಸಿಮಯ್ಯನ ಗರಿಮೆಯನ್ನು ಪ್ರಕಟಿಸುತ್ತಾಳೆ. ಇದು ಪರಂಪರೆಯಲ್ಲಿ ಆಕೆಯ 'ಶಿವ ಭಾಷೆ'ಯ ಕಲ್ಪನೆಯಾಗಿ ಮೂಡಿರುವಂತಿದೆ. ಅಂತೇ ಆಕೆ 'ತಸ್ಯ ಸುಗ್ಗಲಾದೇವೀ ಸರ್ವಸೌಭಾಗ್ಯ ಸುಂದರೀ ಸುಪ್ರಿಯಾ ಭಗವದ್ಗುಣೈ ಶ್ಲಾಘ್ಯಾ ಮಹಾದೇವಿ ಪದಂಗತಾ' ಎಂದು ಕೀರ್ತಿಸಲ್ಪಟ್ಟಳು. ಶಿವಗುಣ- ಶಿವಾಚಾರದಿಂದಾಗಿ ಮಹಾದೇವಿ ಎನಿಸಿಕೊಂಡ ರಾಣಿ ಅವಳಾಗಿದ್ದಳು.[34] ಶಿವಶರಣ ತೆಲುಗು ಜೊಮ್ಮಯ್ಯನ ಪರಮ ಶಿಷ್ಯೆ ಲಕ್ಷ್ಮಿದೇವಿ ಚಾಲುಕ್ಯ ಜಯಸಿಂಹನ ಮೊಮ್ಮಗ ೬ನೆಯ ವಿಕ್ರಮಾದಿತ್ಯನ ರಾಣಿ ಆಗಿದ್ದಳು. ಇವಳು ರಾಜ್ಯದ ಭಾಗಗಳನ್ನು ಆಳಿದವಳಾಗಿದ್ದಾಳೆ. ಬಹುಶಃ ಈ ರಾಣಿ ವೀರಶೈವ ದೀಕ್ಷೆ ಪಡೆದಿದ್ದಿರಬಹುದು.

ಕಲ್ಯಾಣಿ ಚಾಲುಕ್ಯರ ತ್ರಿಭುವನಮಲ್ಲ ನಾಲ್ಕನೆಯ ಸೋಮೇಶ್ವರನು ಏಕಾಂತ ರಾಮಯ್ಯನ ಸಂದರ್ಭದಲ್ಲಿ ಅಬ್ಬಲೂರು ಗ್ರಾಮವನ್ನು ವೀರಸೋಮನಾಥ ದೇವರಿಗೆ

33-34. ಡಾ।ಶ್ರೀ ಜಚನಿ : ಹನ್ನೊಂದನೆಯ ಶತಮಾನದ ಶಿವಾಚಾರಿಣಿಯರ ಶ್ರೇಣಿ, ಬೆಂಗಳೂರು, ೧೯೯೦ ಪು. ೩೦-೩೨; ಆದರೆ ಬಸವಪುರಾಣ, ಶಿವತತ್ವಚಿಂತಾಮಣಿ ಮುಂತಾದವುಗಳಲ್ಲಿ ೭೦೦ ಬಸದಿಗಳು, ಶಿವಾಲಯಗಳಾದುವು ಎಂದಿದೆ. ಆಗಿನ ಕಾಲಕ್ಕೆ ದೇಗುಲಗಳಿಗೆ ಹೊಂದಿಕೊಂಡಂತೆ ಮಠಗಳೂ ಇದ್ದಿದ್ದ ಕಾರಣ, ಮಠ ಹಾಗೂ ಶಿವಾಲಯಗಳ ಸಂಯುಕ್ತ ನಿರ್ಮಾಣಗಳಾದುದನ್ನು ಪರಿಭಾವಿಸಬಹುದು.

ದಾನಮಾಡಿದ ಸಂಗತಿ ಕ್ರಿ.ಶ.ಸು ೧೨೦೦ರ ಅಬ್ಬಲೂರು ಶಾಸನದಲ್ಲಿ ಕಾಣಬರುತ್ತದೆ. ಇಲ್ಲಿ ವೀರಶೈವ, ಜೈನ ಮತಗಳ ನಡುವಣ ಸಂಘರ್ಷ, ವೀರಮಾಹೇಶ್ವರ ನಿಷ್ಠೆ ಎದ್ದು ಕಾಣುತ್ತವೆ. ಒಂದು ರೀತಿಯಲ್ಲಿ ವೀರಶೈವ ಹಾಗು ಜೈನ ಮತೀಯರ ಸಂಘರ್ಷದಲ್ಲಿ, ವೀರಶೈವದ ಪ್ರಾಬಲ್ಯಕ್ಕೂ ಹೆಚ್ಚಳಕ್ಕೂ ಈ ರಾಜವಂಶದ ಅರಸರ ಅವಧಿಯು ಅನುವುಮಾಡಿ ಕೊಟ್ಟಂತೆ ತೋರುತ್ತದೆ. ಈ ಅಬ್ಬಲೂರು ಶಾಸನದಲ್ಲಿ 'ಓಹಿಲ, ದಾಸ, ಚೆಂನ, ಸಿರಿಯಾಳ ಹಳಾಯುಧ, ಬಾಣನುದ್ಭಟರ್' ಎಂದು ಶಿವಶರಣರ[35] ಉಲ್ಲೇಖ, 'ಭಕ್ತಿ ಸದ್ಗೇಹ', ಶಿವಯೋಗ ಯುಕ್ತನಾಗಿ', 'ಶಿವಾಗಮೋಕ್ತ ವಿವಿಧ ಕ್ಷೇತ್ರಂಗಳೊಳು ಶಾಂಭಾವಾಯನ ' 'ಶಿವ ಸಂನಿಧಿಯೊಳನ್ಯ ದೇವತಾಸ್ತವನಂ ಮಾಡಲಾಗದು,' 'ಹರನೊಳ್ಪಡದರನೇಕರ್ವ್ವರಮಂ ಬಾಣದಿನಿಶಾಳ ಭಕ್ತಗಣಂಗಳು, ' ಮಾಹೇಶ್ವರ ಭಕ್ತಿ 'ಗಂ ಮೆಚ್ಚಿ, 'ಧರ್ಮಗೋಷ್ಠಿಯೊಳಿರ್ದು ಪುರಾತನ ನೂತನರಪ್ಪ ಶಿವಭಕ್ತರ ಗುಣಸ್ತವನಂ ಮಾಡುತ್ತಮಿರ್ದು,' 'ಶಿವಸಮಯ ಪ್ರಾಕಾರನೆನಿಸಿ,' 'ಪಾರಮೇಶ್ವರ ದತ್ತಿಯಾಗೆ' 'ಶ್ರೀ ಪರ್ವ್ವತಾದಿ ಪುಣ್ಯಕ್ಷೇತ್ರದಲ್ಲಿ' 'ಹರನೊಳ್ತವನಿಧಿಯಂ', ಇತ್ಯಾದಿ ಪದಸಾಲುಗಳು ವೀರಶೈವ ದ ಪರಿಸರವನ್ನು ಅಚ್ಚೊತ್ತಿದಂತೆ ಕಾಣಿಸಿಸುತ್ತವೆ. ಅಂತಾಗಿ ಚಾಲುಕ್ಯರ ಸೋಮೇಶ್ವರನನ್ನು ಒಲಿಸಿ ಇಲ್ಲಿನ ಸನ್ನಿವೇಶಕ್ಕೆ ಕಾರಣನೂ ಆಗಿರುವ ಈ ಶಾಸನೋಕ್ತ ಚಾಳುಕ್ಯರಾಜ್ಯ ಪ್ರತಿಷ್ಠಾ ಪಕನಪ್ಪ ಸಕಳ ಚಮೂನಾಥ ಶಿರೋಮಣಿ ಕುಮಾರ ಬಮ್ಮೆಯನು ವೀರಶೈವನಿರಬಹುದು[36] ಹಾಗೂ ಸೋಮೇಶ್ವರನಲ್ಲಿ, ಅವನ ಕೆಲನ ಹಿರಿಯ ಅರಸರಲ್ಲಿಯಂತೆ ವೀರಶೈವದೊಲವನ್ನು ಮೂಡಿಸಲು ಏಕಾಂತ ರಾಮಯ್ಯನ ಶಿರಸ್ಸು ಪವಾಡದ ಸಂದರ್ಭವನ್ನು ಬಳಸಿರಬಹುದೆನಿಸುತ್ತದೆ. ಈ ಶಾಸನದಲ್ಲಿ 'ಮಹಾಮಂಡಲೇಶ್ವರ ಪಾನುಂಗಲ್ಲೈನೂಱುವಂ' ಆಳುತ್ತಿದ್ದ ಹಾನುಗಲ್ಲು ಕದಂಬರ ಕಾಮದೇವರಸನು ಮಲ್ಲವಳ್ಳಿ ಎಂಬ ಗ್ರಾಮವನ್ನು ಕಾಲಂಕರ್ಚಿ ದಾನನೀಡಿದ ಸಂಗತಿಯೂ ಇದ್ದು (ಕಲಚೂರಿ ಬಿಜ್ಜಳನೂ ಸೇರಿದಂತೆ) ಆ ವಂಶದ ಕೆಲ ಅರಸರು ವೀರಶೈವದೊಲವನ್ನು ಹೊಂದಿದ್ದಂತೆ ಅವನೂ ಹೊಂದಿದ್ದಿರಬಹುದೆನಿಸುತ್ತದೆ.

ಹಾನುಗಲ್ಲು ಕದಂಬರು

ಹಾನುಗಲ್ಲು ಕದಂಬರ ದೃಷ್ಟಿಯಿಂದ ಕೊಡಗಿನ ಕ್ರಿ.ಶ. ೧೦೯೫ರ ಯಡೂರ ಶಾಸನವು ಅವರಲ್ಲಿ ಕೆಲ ಅರಸರ ವೀರಶೈವತ್ವತನ್ನು ಪೋಷಿಸುವ ಸೂಚನೆ ನೀಡುತ್ತದೆ. ಈ ಶಾಸನದಲ್ಲಿ 'ಮಹಾಮಣ್ಣಲೇಶ್ವರ' ದುದ್ದರಸನನ್ನು 'ಅಯ್ಯನಂಕಕಾರ ಶಿವಪಾದ ಸೇಖರಂ' 'ಶಿವಲೋಕ ಪ್ರಾಪ್ತನಾಗಲ್' ಎಂದಿದೆ. ಇದು ಶಿವಧರ್ಮದ ಮಾಹೇಶ್ವರ ಪ್ರಭಾವವನ್ನು ಸೂಚಿಸುವಂತಿದೆ. ಅಂದರೆ ದುದ್ದರಸನು ಮಾಹೇಶ್ವರ ಸಂಪ್ರದಾಯದ ಶಿವಾಚಾರಸ್ಥನಾಗಿದ್ದನೆಂಬ ಸೂಚನೆ ದೊರಕುತ್ತದೆ.[37] ಆ ಕಾಲದ ಮಹಾಮಾಂಡಲೇಶ್ವರರು, ಸಾಮಂತರು, ದಂಡನಾಯಕರು –

35. ಡಾ॥ ಎಂ. ಎಂ. ಕಲಬುರ್ಗಿ: ಶಾಸನಗಳಲ್ಲಿ ಶಿವಶರಣರು, ಅದೇ, ಪು.೨೭

36. ಡಾ। ಬಿ.ಎಸ್. ಗದ್ದಗೀಮಠ: 'ಶಾಸನೋಕ್ತ ವೀರಶೈವರು', ವಿಭೂತಿ, ಅದೇ, ಪು ೨೭೪

37. ಎಂ.ಜಿ. ನಾಗರಾಜ :'ಕೊಡಗಿನ ಕೊಲೆಕಲ್ಲುಗಳು,' ಹರತಿಸಿರಿ, (ಸಂ) ಲಕ್ಷ್ಮಣ ತೆಲಗಾವಿ, ೧೯೮೭, ಪು. ೭೧೬ರಲ್ಲಿ ಇವನು ಹೇಗೆ ಬಾಣವಂಶಿಕನಾಗಲಾರ ಎಂದು ತೋರಿಸಲಾಗಿದೆ.

ಇವರಲ್ಲಿ ಅನೇಕರು ಮಾಹೇಶ್ವರ ಸಂಪ್ರದಾಯದ ಶಿವಾಚಾರಕ್ಕೆ ಸದುಭಕ್ತರಾಗಿದ್ದುದು ನೆರೆಯ ಹಾಸನ ಜಿಲ್ಲೆಯ ಶಾಸನಗಳಿಂದಲೂ ತಿಳಿಯುತ್ತದೆ. ಅಂದರೆ ವೀರಶೈವ ರಾಗಿದ್ದರೆಂದು ತೋರುತ್ತದೆ. 'ಅಯ್ಯನಂಕಕಾರ' ಎಂಬ ಶಬ್ದಕ್ಕೆ ಅಯ್ಯನ=ವೀರಶೈವ ಗುರುವಿನ, ಅಂಕಕಾರ = ಆಶ್ರಯದಲ್ಲಿರುವವ, ಎಂದು ಕನ್ನಡ-ಕನ್ನಡ ನಿಘಂಟನ್ನು ಅನುಸರಿಸಿ ಹೇಳಬಹುದು.[38] ಒಬ್ಬರಾಜ, ಗುರುವಿನ ಆಸರೆಯಲ್ಲಿರುವವ ಎಂದರೆ, ಶಿವಪಾದಶೇಖರನೂ ಆಗಿರುವಲ್ಲಿ, ವೀರಶೈವ ಗುರುವಿನ ಕರಕಂಜಾತ ಎಂಬ ಅರ್ಥವೇ, ಹೆಚ್ಚು ಸಮಂಜಸವೆನಿಸುತ್ತದೆ. ಇದು ಕೊಡಗಿನ ಭಾಗದ ಹಾನುಗಲ್ಲು ಕದಂಬವಂಶದ ದುದ್ದರಸನು ಶಿವಾಚಾರವನ್ನನುಸರಿಸಿದ್ದವನಾಗಿದ್ದ, ಎಂದಾಗುತ್ತದೆ. ವೀರಶೈವನಾಗಿದ್ದ ಕುರುಗೋಡ ೧ನೆಯ ರಾಚಮಲ್ಲನನ್ನು ಶಾಸನಗಳು 'ಶಿವಪಾದಶೇಖರ', 'ಮಾಹೇಶ್ವರ' ಎಂದಿರುವುದು ದುದ್ದರಸನ ಸಂದರ್ಭದ ವೀರಶೈವತನಕ್ಕೆ ಪೂರಕ ಸಾಕ್ಷಿ ಎನಿಸುತ್ತದೆ. ಯಡೂರಿನ ನೆರೆಯಲ್ಲಿಯೆ ಪ್ರಾಚೀನ ವೀರಶೈವ ಗುರುಮಠವಿದ್ದ ಬಗ್ಗೆ, ಅಲ್ಲಿನ ಮಠಪರಂಪರೆಯಿಂದ ತಿಳಿದು ಬರುತ್ತದೆ. ಅಲ್ಲಿ ಜಯ ಮಲ್ಲಿಕಾರ್ಜುನ ಗುಡಿಯ ಅಸ್ತಿತ್ವವನ್ನು ಕ್ರಿ.ಶ. ೧೪೬೪ರ ಅಪ್ರಕಟಿತ ಶಾಸನವು ತಿಳಿಸುತ್ತದೆ. ವೀರಶೈವ ಗುರುಗಳು ಅಲ್ಲಿ 'ಮಲ್ಲಿಕಾರ್ಜುನ ಪರ'(ಪರ್ವ)ವನ್ನು ಗಣಂಗಳೊಡನೆ ಆಚರಿಸುತ್ತಿದ್ದರು. ಇಂದು ಅದು ಜನತೆಯಿಂದ ಆಚರಣೆಯಲ್ಲಿದೆ. ದಲಿತರು ಅದರಲ್ಲಿ ಪಾಲ್ಗೊಳ್ಳುವುದು ಪರಂಪರೆಯಿಂದ ಬಂದಿರುವುದಾಗಿದೆ. ಈ ದುದ್ದರಸನು ಅತುಲ ಬಲ ಪರಾಕ್ರಮಿ, ಜಪ್ಪನಿಗ, ಮಲೆಪರ ನಂದನವನ, ಮಲೆಗಳನ್ನು ಪ್ರತಿಪಾಳಿಸುವವನಾಗಿದ್ದ., ಇವನಲ್ಲಿ ಲೆಂಕರು, ಕಾಲಾಳುಗಳು, ಅಶ್ವಬಲವಿದ್ದುವು, ಪ್ರಜಾಪ್ರಿಯನಾಗಿದ್ದ. ಕೆರೆ, ಸತ್ರ, ತೊರೆಗಪ್ಪೆಗಳನ್ನು ನಿರ್ಮಿಸಿದ್ದ , ಜನಪದ ಸಂಸ್ಕೃತಿ ಪೋಷಕನಾಗಿದ್ದ ಎಂದೆಲ್ಲ ಯಡೂರು ಶಾಸನವು ವರ್ಣಿಸುತ್ತದೆ.[39] ಇದೇ ರೀತಿ ದುದ್ದರಸನ ಹೆಸರು ಹಾಸನ ಜಿಲ್ಲೆಯ ಮಂಜರಾಬಾದ್ (ಸಕಲೇಶಪುರ) ಶಾಸನದಲ್ಲಿಯೂ ಕಾಣಬಂದು ಶಿವಧರ್ಮಿ ಅರಸನಿಗೆ ಸಂಬಂಧಗೊಂಡಂತಿದೆ. ಹೆಗ್ಗಡದೇವನಕೋಟೆ ತಾಲೂಕಿನ ೧೦-೧೧ನೇ ಶತಮಾನದ ಶಾಸನಗಳಲ್ಲಿ ಬರುವ ರೈಸರ ರೀತ್ಯಾ ಬಯಲ್ನಾಡಿನ ಕದಂಬರಲ್ಲಿ ರವಿಯಮ್ಮರಸ, ಚಾಗಿ, ಕನ್ನವರ್ಮರಿದ್ದಾರೆ. ಬನವಾಸಿ ಪುರವರಾಧೀಶ್ವರರೆಂದು ಕರೆದುಕೊಂಡ ಹಾನುಗಲ್ಲು ಕದಂಬರಂತೆ ಈ ಬಯಲ್ನಾಡಿನ ಕದಂಬರ ಶಾಸನಗಳೂ ಉಲ್ಲೇಖಿವಿಡುತ್ತವೆ.[40] ಅಂದರೆ

---

38. ಕನ್ನಡ - ಕನ್ನಡ ನಿಘಂಟು, ಕ.ಸಾ. ಪರಿಷತ್ತು, ಮೊದಲ ಸಂಪುಟ, ೧೯೭೦, ಪು. ೨-೩ ಮತ್ತು ೩೬೧ ರೀತ್ಯಾ ಬೂತುಗನಂಕಕಾಜ ಎಂಬುದಕ್ಕೆ ಬೂತುಗ ಎಂಬ ಒಡೆಯನ ಆಶ್ರಯದಲ್ಲಿರುವವ ಎಂದಿದೆ.
39. ಎಂ. ಕ.ಸಂ. ೧, ಅದೇ ಕೊಡಗು ಜಿಲ್ಲೆ, ಯಡೂರು ೬೨ (೫೭)
40. ಎ.ಕ. ಸಂ. ೩ : ಮೈಸೂರು ಜಿಲ್ಲೆ ,ಮೈಸೂರು ವಿಶ್ವವಿದ್ಯಾಲಯ, ೧೯೭೪, ಮುಗ್ಗೆ ೧೪೨ (ಕ್ರಿ.ಶ ೯೯೪-೯೯); ಕಿತ್ತೂರು ೧೨೩ (ಕ್ರಿ. ಶ. ೧೦೨೯); ಮಳಲಿ ೧೦(೧೦ನೇ ಶತಮಾನ); ಅಲ್ಲದೆ ಮಳಲಿ ಹಾಗೂ ಮಂಜರಾಬಾದ್ ಶಾಸನಗಳಲ್ಲಿ 'ಚಾಗಿ' ಎಂಬ ಅರಸರ ಹೆಸರು, ಮಂಜರಾಬಾದ್ ಶಾಸನದಲ್ಲಿ ವಯಸಿಂಹ ನೃಪನ ಮತ್ತು ಯಡೂರು ಶಾಸದಲ್ಲಿ ದುದ್ದರಸನ ಹೆಸರೂ ಬಂದು ಇವರೆಲ್ಲ ಕದಂಬ ವಂಶದವರೆಂಬ ಸೂಚನೆಯೂ ದೊರಕುತ್ತದೆ.

ಗಣಪತಿದೇವ ಬದುಕಿದ್ದಾಗ, ಈಕೆ ಯುವರಾಜಪದವಿಯಲ್ಲಿದ್ದಾಗಲೇ ಮಹಾಕವಿ ರಾಘವಾಂಕನು ಓರುಂಗಲ್ಲಿನ ವೀರೇಶ್ವರನಿಗೆ ತನ್ನ ಮೀಸಲುಗವಿತೆಯಾದ 'ವೀರೇಶ' ಚರಿತೆಯನ್ನು ಬರೆದು ಅರ್ಪಿಸಿ ಅಲ್ಲಿ ಕಾಕತೀಯ ಚಕ್ರವರ್ತಿಯಿಂದ ಸನ್ಮಾನಿತನಾದ,[63] ಎಂಬುದು ದೇವೀರಪ್ಪನವರ ಅಭಿಮತ. ಈಕೆಯ ನಂತರ ಇವಳ ಮೊಮ್ಮಗ ೨ನೆಯ ಪ್ರತಾಪರುದ್ರ ರಾಜನಾದ. ರಾಜನೀತಿ ಯುದ್ಧನೀತಿ ನಿಪುಣನಾಗಿ ಗಜದಳ ಅಶ್ವದಳದಿಂದ ಕೂಡಿದ ಸೈನ್ಯದಬಲ ಹೆಚ್ಚಿಸಿ ಆಡಳಿತದ ಪುನರ್ ವ್ಯವಸ್ಥೆಮಾಡಿದ. 'ನಾಯಂಕಾರ' ವ್ಯವಸ್ಥೆಯನ್ನು (೭೭ ನಾಯಕರು)ಪುನರ್ ರೂಪಿಸಿದ. ಬಾಹತ್ತರ ನಿಯೋಗ ಪದ್ಧತಿಯನ್ನು ದೇಗುಲ ಹಾಗೂ ಅರಮನೆ ಆಡಳಿತಕ್ಕೆ ವಿಸ್ತರಿಸಿದ. ವಿದೇಶವ್ಯಾಪಾರ, ಹಾಗೂ ವರ್ತಕರ ಸಂಘಗಳನ್ನು ಉತ್ತೇಜಿಸಿದ. ಅಗತ್ಯವಿರುವೆಡೆ ಕಾಡುಕಡಿಸಿ ಗ್ರಾಮಗಳನ್ನು ರೂಪಿಸಿದ. ಲೆಂಕರ ಸ್ಥಾನವನ್ನು ದಲಿತರಿಗೆ ಗಿರಿಜನರಿಗೆ ನೀಡಿ, ಮಂತ್ರಿಗಳ ಸಹಿತವಾಗಿ ತನ್ನೊಡನೆ ಅವರನ್ನು ಸಹಪಂಕ್ತಿ ಭೋಜನಕ್ಕೆ ಕೂರಿಸಿಕೊಂಡು ಕ್ರಾಂತಿಕಾರಿಸುಧಾರಣೆಗಳನ್ನು ಮಾಡಿದ. ಬಹುಶಃ ಇದಕ್ಕೆ ಕರ್ನಾಟಕದ ೧೧-೧೨ನೆಯ ಶತಮಾನದ ವೀರಶೈವದ ಹೊಸ ಚಳುವಳಿಯ ಪ್ರಭಾವದ ಕಾರಣವಾಗಿರುವಂತಿದೆ. ಇವನಿಗೆ ಶ್ರೀಶೈಲದ ಶಾಖಾಮಠದಲ್ಲಿದ್ದ ಪಟ್ಟದ ಈಶ್ವರ ಶಿವಾಚಾರ್ಯರು ಗುರುವಾಗಿದ್ದರೆಂದು ಶಾಸನಗಳು ತಿಳಿಸುತ್ತವೆ.[64] ಇವನ ಕಾಲದಲ್ಲಿ ಸಂಸ್ಕೃತ ಹಾಗೂ ತೆಲುಗು ಕವಿಗಳು ಮೌಲಿಕ ಕೃತಿಗಳನ್ನು ರಚಿಸಿದರು; ನಿರೋಷ್ಟ್ಯ ರಾಮಾಯಣ, ಬಾಲಭಾರತ, ಮಾರ್ಕಂಡೇಯ ಪುರಾಣ, ಪ್ರತಾಪರುದ್ರಯಶೋಭೂಷಣ, ವೀರಶೈವ ದೀಕ್ಷಾಬೋಧ, ಬಸವಪುರಾಣ ಶಂಭುಲೀಲೆ, ವೀರಭದ್ರವಿಜಯ, ಹರಗಣ ಮಾಲೆ ಇತ್ಯಾದಿ ಕೃತಿಗಳು ರಚಿತವಾದವು. ಕನ್ನಡ ಭಾಷಾಕೃತಿಗಳಿಗೂ ಪ್ರೋತ್ಸಾಹ ನೀಡಲಾಗಿತ್ತು. ಇವರ ಕಾಲದ ಶಾಸನಗಳು ಕನ್ನಡ ತೆಲುಗು ಹಾಗೂ ನಾಗರಿ ತಮಿಳು ಗ್ರಂಥಲಿಪಿಯಲ್ಲಿವೆ; ಇವನನ್ನು 'ಪರಮಮಾಹೇಶ್ವರ' ಎಂದು ಕರೆದಿವೆ.[65]

ಕಾಕತೀಯರ ಕಾಲದಲ್ಲಿಯೆ ಶಿವಧರ್ಮದ ಪ್ರಚಾರಕ್ಕೆ 'ಬುರ್ರಕಥಾ' ಜನಪದ ಕಲೆಯನ್ನು ಬಳಸಿಕೊಳ್ಳಲಾಯಿತು. ಅವರ ಕಾಲದ ಪಲನಾಡಿನ ವೀರರ ಚರಿತ್ರೆಯು, ಲಾವಣಿ ಹಾಗೂ ಕತೆಗಳಲ್ಲಿ ಬಂದಿವೆ. ಅವರ ಕಾಲದಲ್ಲಿ ರೂಢಿಗೆ ಬಂದ 'ವೀರನಾಟ್ಯಂ' ಎಂಬ ಜನಪದ ವೀರ ನೃತ್ಯಗಳು ಮಹಾಶಿವರಾತ್ರಿಯಂದು ಲಿಂಗೋದ್ಭವಕಾಲವಾದ ನಡುರಾತ್ರಿಯಲ್ಲಿ ನಡೆಯುತ್ತಿವೆ.[66] ಕಾಕತೀಯರ ಕಾಲದ ದೇಗುಲಗಳು ಬಹುತೇಕ

---

63. ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೪, ಭಾಗ ೨ : ಮೈ. ವಿಶ್ವವಿದ್ಯಾಲಯ, ೧೯೭೭, ಪು. ೧೪೪೮, ೧೫೩೯
64. 'ನಿಡುಮಾಮಿಡಿ ಶ್ರೀಶೈಲ ಪೀಠಾಧಿಪತಿಗಳನ್ನು ಆರಾಧಿಸಿದರಾಜರು', ನೂತನ ಚೇತನ (ಸಂಸ್ಮರಣ ಸಂಪುಟ), (ಸಂ)ಡಾ। ಸಾ. ಶಿ. ಮರುಳಯ್ಯ, ಡಾ.। ಎನ್. ವಿದ್ಯಾಶಂಕರ್, ಬೆಂಗಳೂರು, ೧೯೯೦, ಪು. ೩೧
65. ಕನ್ನಡ ವಿಶ್ವಕೋಶ : ಸಂ. ೪, ಮೈ. ವಿಶ್ವವಿದ್ಯಾಲಯ, ೧೯೭೨, ಪು. ೪೧೪
66. ಬಿ. ರಾಮರಾಜು : ಆಂಧ್ರ ಪ್ರದೇಶ ಜಾನಪದ, ದೆಹಲಿ, ೧೯೭೮ ಪು, ೧೪೦-೪೧, ೧೫೭

ಶಿವಾಲಯಗಳಾಗಿವೆ. ಪಾಲಂಪೇಟೆ, ಹನುಮಕೊಂಡದ ಸಾವಿರ ಕಂಬದ ದೇಗುಲ, ಭದ್ರಕಾಳಿ ದೇಗುಲ, ಪೆದಕಲ್‌ಪಲ್ಲಿ, ಮೋಟುಪಲ್ಲಿ, ಪಾಂಗಲ್ಲುದೇಗುಲ, ಹಾಗೂ ಓರಂಗಲ್ಲು ವೀರಭದ್ರ ದೇಗುಲಗಳು ಬಹಳ ಪ್ರಸಿದ್ಧವಾಗಿವೆ. ಕಾಕತೀಯರ ನಾಣ್ಯಗಳಲ್ಲಿ ಕಲ್ಯಾಣ ಚಾಲುಕ್ಯರ ಪ್ರಭಾವದಿಂದಾಗಿ ವರಾಹ ಚಿಹ್ನೆಯ ಚಿನ್ನದ ನಾಣ್ಯಗಳಿದ್ದರೂ (ಬಹುಶಃ ವೀರಶೈವವನ್ನು ಅಪ್ಪಿದ ಮೇಲೆ) ಕಾಕತೀಯ ರುದ್ರನ ನಾಣ್ಯಗಳಲ್ಲಿ ನಂದಿಯ ಚಿತ್ರಗಳು ಕಾಣಸಿಕೊಳ್ಳುತ್ತವೆ.[67] ಹೀಗೆಲ್ಲ ಪ್ರಭಾವಯುತವಾಗಿದ್ದ ವೀರಶೈವ ಕಾಕತೀಯ ಸಾಮ್ರಾಜ್ಯದ ಕೊನೆ ಅರಸ ಪ್ರತಾಪರುದ್ರನು ದೆಹಲಿಗೆ ಸೆರೆಯಾಗಿ ಹೋಗುವಲ್ಲಿ ಜಲಸಮಾಧಿಯಾದ. ಅವನ ಸೋದರ ಅನ್ನಮದೇವ ಗೋದಾವರಿ ನದಿಯ ಉತ್ತರದ ವಿಂಧ್ಯ ಸಾತ್ಪುರ ಗಿರಿಗಳ ನಡುವೆ ಆಂಧ್ರದಿಂದ ಹೋಗಿ ಹೊಸ ರಾಜ್ಯ ಕಟ್ಟಿದ. ಅವನ ವಂಶಿಕರೇ ಮಧ್ಯಪ್ರದೇಶದ ಬಸ್ತಾರ್‌ನ ಮಹಾರಾಜ ಪ್ರವೀಣಚಂದ್ರಭಂಜದೇವ ಎಂದು ಹೇಳಲಾಗಿದೆ.[68] ಆದರೆ ಕಾಕತೀಯ ವಂಶಿಕರಾದ ಈ ಬಸ್ತಾರ್‌ರಾಜರು ವೀರಶೈವ ಧರ್ಮಿಗಳಾಗಿ ಮುಂದುವರೆದ ಬಗ್ಗೆ ಮಾಹಿತಿ ಕಾಣದು. ಇದಲ್ಲದೆ ಕಾಕತೀಯ ಪ್ರತಾಪರುದ್ರನಲ್ಲಿ ಹಕ್ಕಬುಕ್ಕರು ಬಂಢಾರಿಗಳಾಗಿದ್ದು ಕರ್ನಾಟಕ ಮೂಲದ ಕನ್ನಡಿಗರಾಗಿದ್ದರು;. ಕಂಪಿಲಿಯಲ್ಲಿದ್ದಾಗ ದೆಹಲಿ ಸುಲ್ತಾನನಿಗೆ ಸೆರೆಯಾಗಿ ಹೋದರೆನ್ನಲಾಗಿದೆ.

ಆಂಧ್ರದ ನಾಯಕರು ಹಾಗೂ ರೆಡ್ಡಿಅರಸುಗಳು

ಕ್ರಿ.ಶ. ೧೩೨೩ರಲ್ಲಿ ಓರಂಗಲ್ಲು ಪತನವಾಗಿ ಪ್ರತಾಪರುದ್ರನ ಅಂತ್ಯವಾದ ಮೇಲೆ ಅವನ ಸೇನಾಪತಿ ಪ್ರೋಲಯನಾಯಕನ ನೇತೃತ್ವದಲ್ಲಿ ವೇಮ, ಕೋಲನಿರುದ್ರ, ಮುಂತಾದ ವೀರಶೈವಾನುಯಾಯಿ ನಾಯಕರು ಮಹಮದೀಯ ಆಕ್ರಮಣದ ವಿರುದ್ಧ ಒಂದುಗೂಡಿದರು. ಕ್ರಿ.ಶ. ೧೩೨೫ರ ಮಲ್ಲಾವರಂ ಶಾಸನವು ಪ್ರೋಲಯ ವೇಮರೆಡ್ಡಿಯ ಇಂತಹ ಪ್ರಯತ್ನವನ್ನು ಸೂಚಿಸುತ್ತದೆ. ಇವನಿಗೆ 'ಅದ್ದಂಕಿ' ಹಾಗೂ 'ಕೊಂಡವೀಡು' ನಗರಗಳು ರಾಜಧಾನಿ ಆಗಿದ್ದುವು. 'ಅದ್ದಂಕಿ' ಕೃಷ್ಣಾನದಿಯ ದಕ್ಷಿಣದ ಪುಂಗಿನಾಡಿನ ರಾಜಧಾನಿ ಆಗಿತ್ತು. ಹಕ್ಕ ಬುಕ್ಕರ ಸಂಬಂಧಿಕರಾಗಿದ್ದ ಪ್ರೋಲಯನಾಯಕ ಮತ್ತು ಕಾಪೆಯನಾಯಕರು ಕ್ರಿ.ಶ. ೧೩೩೫-೩೬ರ ಅವಧಿಯಲ್ಲಿ ಉಳಿದ ನಾಯಕರೊಡನೆ ಸೇರಿ ದಂಗೆ ಎದ್ದು ಆಕ್ರಮಣವನ್ನು ತೆರವು ಮಾಡಿದರು. ಹಕ್ಕ ಬುಕ್ಕರು ದೆಹಲಿ ಸುಲ್ತಾನನ ಅಧಿಕಾರಿಗಳಾಗಿ, ಇಸ್ಲಾಂಗೆ ಮತಾಂತರವಾಗಿದ್ದವರು ಕಂಪಿಲಿಗೆ ಬಂದಾಗ ಜನರ ಆಕಾಂಕ್ಷೆಯಂತೆ ಮೊದಲಿನ ಧರ್ಮಕ್ಕೆ

---

67. P.V. Parabrahma Sastry: Kakatiya Coins and Measures, Hyderabad, 1975, p.5
68. i. N.G. Ranga : op.Cit., pp.10 and 66-67 Foot notes.
    ii. Dr. V. Yashodadevi: After the Kakatiyas, op. cit., p. 36

ಹಿಂದಿರುಗಿ ನೆಲೆಯಾಗಿ ಹೊಸರಾಜ್ಯ ಕಟ್ಟಲು ಅನುವಾದರು.[69] ಇನ್ನು ಕಾಕತೀಯ ನಾಯಕರಲ್ಲಿ ರೆಡ್ಡಿವಂಶದವರು ವೀರಶೈವ ರಾಜವಂಶದವರಾದರು. ಕಾಕತೀಯರ ಸೇನಾಪತಿಯಾಗಿದ್ದ ಪ್ರೋಲಯವೇಮಾರೆಡ್ಡಿಯು ಸ್ವತಂತ್ರವಾಗಿ ಪೆನುಕೊಂಡೆಯ ರಾಜ್ಯಭಾರಮಾಡಿದ ವೀರಶೈವ ರಾಜನಾಗಿದ್ದನು. ೧೭ ವರ್ಷದ ಇವನ ರಾಜ್ಯಭಾರದ ನಂತರ ಇವನ ಮಗ ದೇಸಟಿ ವೇಮಾರೆಡ್ಡಿಯು ಕ್ರಿ.ಶ. ೧೩೫೦ರವರೆಗೆ ರಾಜ್ಯವಾಳಿದ. ರಾಜ್ಯ ವಿಸ್ತರಿಸಿದ. ಪ್ರಜಾ ಹಿತೈಷಿಯಾಗಿದ್ದ. ಶ್ರೀಶೈಲದಲ್ಲಿ ವೀರಶೈವ ಮಠವನ್ನು ಕಟ್ಟಿಸಿದ. ಇವನ ಮಗ ಅನಪೋತರೆಡ್ಡಿಯು ಕ್ರಿ.ಶ. ೧೩೯೨ರ ವರೆಗೆ ಆಳಿದ. ಇವನ ಪುತ್ರ ಕುಮಾರಗಿರಿರೆಡ್ಡಿಯೇ ಹೇಮರೆಡ್ಡಿ ಎಂದುಹೆಸರಾದ. ಈ ಹೇಮರೆಡ್ಡಿಯ ಸೊಸೆಯೆ ಹೇಮರೆಡ್ಡಿಮಲ್ಲಮ್ಮ ಎನಿಸಿದಳು. ಆನಂತರ ಪೆದಕೋಟಿ ವೇಮಭೂಪಾಲನ ಆಳ್ವಿಕೆಯಲ್ಲಿ ಶ್ರೀನಾಥಕವಿ ರಾಜಾ ಶ್ರಿತನಾಗಿದ್ದ. ಇವನ ಮಗನ ಕಾಲಕ್ಕೆ ರಾಜ್ಯ ಅಳಿದು ವಿಜಯನಗರದಲ್ಲಿ ವಿಲೀನವಾಯಿತು. ನಂತರ ಈ ವೀರಶೈವ ರೆಡ್ಡಿರಾಜ ವಂಶಿಕರು ವಲಸೆ ಹೋಗಿ ಕಡೂರು, ತರೀಕೆರೆತಾಲೂಕಿನ ಗಿರಿಯಾಪುರ, ಗೊಂಡೇದಹಳ್ಳಿ, ಹೆಬ್ಬೂರು ಬಗ್ಗವಳ್ಳಿ ಇತ್ಯಾದಿ ಕಡೆ ನೆಲೆನಿಂತು ಬಡಗನಾಡ ವೀರಶೈವರೆನಿಸಿದರು. [70.]

ಸಂಗಮರು

ಸಂಗಮವಂಶದ ಹಕ್ಕಬುಕ್ಕರು ಮತಾಂತರವಾಗಿದ್ದರೆನ್ನುವ ಬಗ್ಗೆ ಆಂಧ್ರ ಇತಿಹಾಸಕಾರರ ಹಾಗೂ ಕೆ. ಎ. ನೀಲಕಂಠ ಶಾಸ್ತ್ರಿಗಳ ಅಭಿಪ್ರಾಯವನ್ನು ಮಾನಿಸಿದರೆ, ವೈದಿಕಧರ್ಮದಲ್ಲಿ ಮರು ಮತಾಂತರದಿಂದ ಸ್ವೀಕರಣ ಸಾಧ್ಯವಿಲ್ಲವಾದ ಕಾರಣ, ಶಿವ ಧರ್ಮ ದೀಕ್ಷೆಯನ್ನು ಹಕ್ಕಬುಕ್ಕರಿಗೆ ನೀಡಿ, ಜನ ಸ್ವೀಕರಣಕ್ಕೆ, ಮುಂದಿನ ರಾಜ್ಯಸ್ಥಾಪನೆಯ ಸಂದರ್ಭಕ್ಕೆ ಮೊದಲಾಗಿ ಅನುವಾದವನು ಕಾಶೀವಿಲಾಸ ಕ್ರಿಯಾಶಕ್ತಿಯೆ ಆಗಿರಬೇಕು. ಈ ಕಾಶೀ ವಿಲಾಸ

---

69. i . Dr. V. Yashodadevi : op.Cit., pp. 42,49
 ii. N.G. Ranga : op. cit., pp. 49, 62 - 'Princes Harihara and Bukka of kampili who were related to kakatiya princes of prolaya and Kapaya agreed to go back to kampli as governers but they had also to undergo conversion to islasm. They went back to their own former dominions as governers but as agents of Delhi. so the people were not reconciled to them and the revolts continued. They then came under the influence of Vidyaranya and thought fit to abandon islam, re-embrace Hinduism and thus be reconciled to their people. So, the people again hailed them as leaders.' - ಈ ಹೇಳಿಕೆಯಲ್ಲಿ ಹಿಂದು ಧರ್ಮಕ್ಕೆ ಮರು ಮತಾಂತರದಿಂದ ಸ್ವೀಕರಣಕ್ಕೆ ಅವಕಾಶ ನೀಡಿದವರ ಬಗ್ಗೆ ಹೇಳಿಲ್ಲ. ವೈದಿಕ ಧರ್ಮದಲ್ಲಿ ಇಂತಹ ಸ್ವೀಕರಣಕ್ಕೆ ಅವಕಾಶವಿಲ್ಲವಾದ ಕಾರಣ, ವೀರಶೈವದಲ್ಲಿ ಮತಾಂತರದ ಮರುಸ್ವೀಕರಣಕ್ಕೆ ಅವಕಾಶವಿರುವ ಕಾರಣ, ಆ ಕೆಲಸವನ್ನು ವೀರಶೈವ ಮಠಾಧಿಪತಿಯಾಗಿದ್ದ ಕಾಶಿವಿಲಾಸ ಕ್ರಿಯಾಶಕ್ತಿಯು, ಮಾಡಿ ಹಿಂದೂಧರ್ಮದ ಕಕ್ಷೆಗೆ ಹಕ್ಕ ಬುಕ್ಕರನ್ನು ಪುನಹ ಸೇರಿಸಿದನೆಂದು ಕಾಣುತ್ತದೆ. ಮುಂದೆ ಆ ಬಗ್ಗೆ ಕಿರು ವಿವರವನ್ನು ಹೇಳಿದೆ.
 iii. K.A. Neelakanta Sastry: A History of South India, London, 1955, p.227
70. 'ಬಡಗನಾಡು ಹೇಮರೆಡ್ಡಿ ವೀರಶೈವರು : ವಿಭೂತಿ, ಗಿರಿಯಾಪುರ, ೧೯೬೧, ಪು. ೧೦೬-೧೦೭

ಕ್ರಿಯಾಶಕ್ತಿಗಳು ಮೊದಲಿಗೆ ಕಾಳಾಮುಖ ಪಂಗಡದವರೆನಿಸಿದ್ದರೂ ಶ್ರೀಶೈಲ ನಿಡುಮಾಮಿಡಿ ಪೀಠದ ಆಚಾರ್ಯರಿಂದ (ಬಹುಶಃ ಇಮ್ಮಡಿ ಕರಿಬಸವ ದೇಶಿಕೇಂದ್ರರು!) 'ನಿಜೇಷ್ಟಲಿಂಗ ಧೃತಾಧಿಷ್ಠಾನ'ರಾಗಿ ವೀರಶೈವ ದೀಕ್ಷೆಪಡೆದು ಕಾಲಾಂತರದಲ್ಲಿ ಆ ಪೀಠದ ಆಚಾರ್ಯರೂ ಆದರು ಎನ್ನಲಾಗಿದೆ.[71] ಅಂದರೆ ಹಕ್ಕಬುಕ್ಕರನ್ನು ಮತ್ತೆ ಹಿಂದೂಧರ್ಮದ ಕಕ್ಷೆಗೆ ಮೊದಲು ಹೀಗೆ ತರಲಾಯಿತೆಂದಾಗುತ್ತದೆ. ಈ ಕ್ರಿಯಾಶಕ್ತಿಯು ಹೀಗಾಗಿ ಹಕ್ಕಬುಕ್ಕರಿಗೆ ರಾಜಗುರು, ಕುಲಗುರುವಾಗಿರಬೇಕು. ವಿದ್ಯಾರಣ್ಯರಿಗೆ ನೆರವಾಗಿರಬೇಕು.

ಕ್ರಿ. ಶ. ೧೩೩೬-೫೬ರ ಅವಧಿಯಲ್ಲಿ ಸಂಗಮವಂಶದ ಹಕ್ಕ ಬುಕ್ಕರು ವಿಜಯನಗರ ಸ್ಥಾಪನೆ ಮಾಡುವಲ್ಲಿ ಅವರ ಕುಲಗುರುವಾಗಿ ರಾಜಗುರುವಾಗಿ ಕಾಶೀವಿಲಾಸ ಕ್ರಿಯಾಶಕ್ತಿ ಹಾಗೂ ಮಾಧವ ವಿದ್ಯಾರಣ್ಯರ ಪಾತ್ರವೂ, ಆಶೀರ್ವಾದವೂ ಇತ್ತು. ಈ ಕ್ರಿಯಾಶಕ್ತಿಯು ೨ನೆಯ ಹರಿಹರನ ಕಾಲದಲ್ಲಿಯೂ ಕುಲಗುರುವಾಗಿದ್ದ.[72] ಈ ಸಂಗಮವಂಶದಲ್ಲಿ ವೀರಶೈವಧರ್ಮದೊಲವಿನಿಂದ 'ವೀರಶೈವ ಸಮುದ್ಧರಣ ಯುಗ'ವೆನಿಸಿ ಅದರ ಹೆಚ್ಚಿನ ಪ್ರಸಾರಕ್ಕೂ ಕಾರಣನಾದವ (ಕ್ರಿ.ಶ. ೧೪೨೯-೪೬)ರ ಇಮ್ಮಡಿ ದೇವರಾಯ. ಇವನ ಕಾಲದಲ್ಲಿ ಶ್ರೀಶೈಲ ನಿಡುಮಾಮಿಡಿ ಪೀಠದ ಶ್ರೀ ಚಂದ್ರಭೂಷಣದೇವ ಒಡೆಯರು ವಿಜಯನಗರಸರ ರಾಜಗುರುವಾಗಿದ್ದುದಕ್ಕೆ, ನಿಡುಮಾಮಿಡಿಯ ಶಾಸನವು ಸಾಕ್ಷಿಯಾಗಿದೆ.

---

71. ಎಂ.ಜಿ. ನಂಜುಂಡಾರಾಧ್ಯ : 'ನಿಡುಮಾಮಿಡಿ ಶ್ರೀಶೈಲ ಪೀಠಾಧಿಪತಿಗಳನ್ನು ಆರಾಧಿಸಿದ ರಾಜರು', ಶ್ರೀಶೈಲಪೀಠ ದರ್ಶನ, (ಸಂ) ಶ್ರೀ ಜಚನಿ, ಬೆಂಗಳೂರು, ೧೯೬೭, ಪು.೨೧೦; ಇದಲ್ಲದೆ ನಿಡುಮಾಮಿಡಿಯಲ್ಲಿರುವ ಶಾಸನದಲ್ಲಿ (ಕ್ರಿ.ಶ. ೧೪೦೩), 'ಶ್ರೀ ಗುರುಭ್ಯೋನಮಃ ಸ್ವಸ್ತಿ ಭಾನು ಸಂ। ಮಾಘ ಬ।, ೩೦ಬು ಶ್ರೀ ಮದ್ರಾಯ ರಾಜಗುರು ಮಹಾಮಂಡಲಾಚಾರ್ಯ ಕ್ರಿಯಾಶಕ್ತಿ ದೇವರಾಯ ಒಡೆಯರು' ಎಂದಿರುವುದು ಈ ಅಂಶಕ್ಕೆ ಒತ್ತುಕೊಡುವಂತಿದೆ. ಜೊತೆಗೆ 'ನಿಜೇಷ್ಟಲಿಂಗ ಧೃತಾಧಿಷ್ಠಾನ' ವೆಂದರೆ - ಗುರುವು ಶಿವದೀಕ್ಷಾ ಸಮಯದಲ್ಲಿ ಶಿಷ್ಯನ ಹೃದಯ ಅಥವಾ ಭ್ರೂಮಧ್ಯದ ಜ್ಯೋತಿರ್ಲಿಂಗ ಸ್ವರೂಪದ ಶಿವಕಲೆಯನ್ನು ಯೋಗ ಶಕ್ತಿಯಿಂದ ಆಕರ್ಷಿಸುವುದು. ವಿದ್ಯುಕ್ತವಾಗಿ ಸಂಸ್ಕರಿಸಿ ಇಷ್ಟಲಿಂಗದಲ್ಲಿ ಸ್ಥಾಪಿಸಿ ಶಿಷ್ಯನ ಕರಕಮಲದಲ್ಲಿ ಧಾರಣಮಾಡುವುದು; ಆ ಲಿಂಗದಲ್ಲಿರುವ ಶಿವಕಲೆಯು ಆ ಶಿಷ್ಯನದೇ ಆದ್ದರಿಂದ ಅದು ನಿಜೇಷ್ಟಲಿಂಗವೆನಿಸುವುದು (ಇಂತಹ ಕರದಲ್ಲಿ - ಧೃತ = ಇಡುವಿಕೆ - ಅಧಿಷ್ಠಾನ ಪಡೆದ ಕಾಶೀವಿಲಾಸ ಕ್ರಿಯಾಶಕ್ತಿ ವೀರಶೈವನಾಗಿ, ಗುರುಪೀಠದ ಆಚಾರ್ಯನಾದ. ವಿಜಯ ನಗರ ಸ್ಥಾಪಕರ ಕುಲಗುರು, ರಾಜಗುರುವಾಗಿ, ನೆರವಾದ.) ಇದೇ ಅರ್ಥವನ್ನು ಇನ್ನೂ ಸ್ಫುಟವಾಗಿ, ಷಡಕ್ಷರ ದೇವನ 'ರಾಜಶೇಖರ ವಿಳಾಸದಲ್ಲಿ (೩-೪೪) ಬರುವ 'ಕರದೊಳ್ ತಾಳ್ದ ನಿಜೇಷ್ಟಲಿಂಗದೆ' - ಕರಪೀಠದಲ್ಲಿರುವ ತನ್ನ ಶಿವಕಲೆಯ ಕುರುಹು - ಎಂಬ ಸಾಲು; ಪೆರ್ಮಾಡಿರಾಯನ ಮಂತ್ರಿ ಕೊಂಡಕುಳಿಕೇಶಿರಾಜ, ಪದವಿ ತ್ಯಜಿಸಿ ಬರುವಲ್ಲಿ 'ಅಂಗೈಯ ಸೆಜ್ಜೆಯೊಳು, ಸೋಮನಾಥನ ನಿರಿಸಿ' ಹೊರಬರುವುದು; ಅದನ್ನು ತಿಳಿದ ಅವನ ಸತಿ ಗಂಗಾದೇವಿ 'ಕರಕಮಲ ಸ್ಥಿತ ಶಿವಲಿಂಗ ಸಂಪನ್ನೆಯಾಗಿ', ಅವನನ್ನು ಹಿಂಬಾಲಿಸುವುದು, ಇತ್ಯಾದಿಗಳು ಸಂದರ್ಭ ವಿದಿತಗೊಳಿಸುತ್ತವೆ.
72. i. T.V. Mahalingam: Administration and Social life under Vijayanagar, Part II, 1975, p.213, ರೀತ್ಯಾ (ಕ್ರಿ.ಯಾಶಕ್ತಿಯ ಶಿಷ್ಯ!) ಮಾಧವಾಚಾರ್ಯನು ಬುಕ್ಕನ ಕುಲಗುರುವೆಂದುಕೊಂಡಿದ್ದಾನೆ.
ii. H.R. Raghunatha Bhat: 'A new lithic record of kriyasha kti yatishwara', Early Vijayanagara Studies in its History and culture, (Ed) G.S.Dikshit, 1988, p.35
iii. ಡಾ। ಎಂ. ಚಿದಾನಂದ ಮೂರ್ತಿ 'ಕರ್ನಾಟಕದ ಸಂಕ್ಷಿಪ್ತ ಚರಿತ್ರೆ', ಕನ್ನಡ - ಕನ್ನಡಿಗ - ಕರ್ನಾಟಕ ಕನ್ನಡ ಶಕ್ತಿಕೇಂದ್ರ, ಬೆಂಗಳೂರು, ೧೯೯೦, ಪು. ೫೧

ಹಗರಟಗೆ ಬಯ್ಯಕುಲದರಸರು ಗುಲ್ಬರ್ಗ, ವಿಜಾಪುರ ಜಿಲ್ಲೆ ಹಾಗು ಸಿಂದಗಿ ತಾಲೂಕಿನ ಭಾಗಗಳನ್ನ ಆಳುತ್ತಿದ್ದು ಕಲ್ಯಾಣ ಚಾಲುಕ್ಯ ಇಮ್ಮಡಿ ಜಯಸಿಂಹನ ಕಾಲದಲ್ಲಿ ಬೆಳಕಿಗೆ ಬಂದ ವೀರಶೈವ ಅರಸರಾಗಿದ್ದಾರೆ. ಈ ವಂಶದಲ್ಲಿಕ್ರಿ.ಶ. ೧೦೨೭ರ ಗೊಲಗೇರಿ ಶಾಸನದ ರೀತ್ಯಾ ರೆಬ್ಬರಸನು ಬಹಳ ಪ್ರಸಿದ್ಧನಾದವ. ಜಯಸಿಂಹನ ಮಹಾಸಾಮಂತನಾಗಿ ದಂಡನಾಯಕನಾಗಿದ್ದ. ಇವನ ನಂತರ ಹಗರಟಗೆ ನಾಡಿನ ಅರಸನಾಗಿ ವೀರಶೈವ ಧರ್ಮದ ಪ್ರಗತಿಗೆ ಶ್ರಮಿಸಿದವ ವಿರುಪರಸ. ಇವನು ವಂಶದ ಕೀರ್ತಿ ಉಳಿಯುವಂತೆ ಬಯ್ಯೇಶ್ವರ ದೇವಾಲಯವನ್ನು ಕಟ್ಟಿಸಿದ; ಗಣಮಠವನ್ನಾಗಿ ಮಾಡಿ ಗಣಾಚಾರಕ್ಕೆ ಅನುವುಮಾಡಿದ. ಇವನನ್ನು ತಾಳಿಕೋಟೆ(ಕ್ರಿ.ಶ. ೧೧೮೪) ಶಾಸನದಲ್ಲಿ 'ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳ ಸಾಮಾದಿ ಸಮಸ್ತ ಪ್ರಶಸ್ತಿ ಸಹಿತಂ' ಎಂದು ಕೀರ್ತಿಸಲಾಗಿದೆ. ಶಾಸನದಲ್ಲಿ 'ಭೃತ್ಯಾಚಾರ' 'ಗಣಮಠ' 'ಶಿವಲಿಂಗ ಸಿಂಹಾಸನಮಂ' ಇತ್ಯಾದಿ ವೀರಶೈವದ ಪಾರಿಭಾಷಿಕ ಪದಪುಂಜಗಳು(ಕನ್ನಡ ಶಾಸನಗಳಲ್ಲಿ ಮೊದಲಿಗೆ)ಕಾಣಿಸಿಕೊಂಡಿರುವುದು ವಿಶೇಷವೆನಿಸುತ್ತದೆ. ಬಸವಪೂರ್ವ ವೀರಶೈವ ಶರಣರ ಕಾಯಕವನ್ನು ಈ ಶಾಸನ ಎತ್ತಿ ಹೇಳಿದೆ.[49] ಜಿನ ಹಾಗೂ ಬೌದ್ಧ ಸಮಯಗಳೆದುರು ವೀರಶೈವವು ಪ್ರಾಬಲ್ಯಹೊಂದಿದ್ದುದನ್ನು ಇವನ ಶಾಸನ ಸೂಚಿಸಿದೆ.

ಕುರುಗೋಡ ಸಿಂದರು ನಾಗವಂಶೋದ್ಭವರೆಂದು ಭೈರನಮಟ್ಟಿ ಶಾಸನದಿಂದ ವ್ಯಕ್ತ. ಅರಿಬಲ್ಲದಾಗ್ರನಿಂದ ಕ್ರಿ.ಶ. ೯೪೭ರ ಕುಡತಿನಿ ಶಾಸನದ ರೀತ್ಯಾ ವಂಶದ ಪುನರಾಳ್ವಿಕೆ ಕೂಡಿತು. ಇವರು ನಿಷ್ಠ ಶಿವಾರಾಧಕರು. ಬಳ್ಳಾರಿ ಜಿಲ್ಲೆಯ ಬಲ್ಲಕುಂದೆ - ೩೦೦ ಪ್ರಾಂತವನ್ನು ರಾಜಧಾನಿ ಕುರುಗೋಡದಿಂದ ಆಳುತ್ತಿದ್ದರು. ಈ ವಂಶದ ಪ್ರಸಿದ್ಧ ಸೋವಿದೇವನ ನಂತರ ಅವನ ಮಗ ಒಂದನೆಯ ರಾಚಮಲ್ಲ (ಕ್ರಿ.ಶ. ೧೧೪೧-೭೩) ಬಹು ಹೆಚ್ಚು ಶಾಸನೋಕ್ತನಾಗಿ 'ಶಿವಪಾದ ಶಿಖಾಮಣಿ' ಎನಿಸಿದ್ದಾನೆ. ವೀರಶೈವದೊಲವನ್ನು ಎತ್ತಿ ತೋರಿಕೊಂಡಿದ್ದಾನೆ. ಇವನ ಮೊಮ್ಮಗ '೨ನೆಯ ರಾಚಮಲ್ಲ' ಎಂದು ಹೆಸರಾಗಿದ್ದಾನೆ. ಈ ವಂಶಿಕರು ಆರಂಭದಲ್ಲಿ ನೊಳಂಬಪಲ್ಲವರಲ್ಲಿ ಮಹಾಸಾಮಂತರಾಗಿ ನಂತರ ಹೊಯ್ಸಳ ಚಕ್ರವರ್ತಿಗಳಲ್ಲಿ ನಿಷ್ಠೆ ಬೆಳಸಿಕೊಂಡು ಮಹಾಮಂಡಲೇಶ್ವರರಾದರು. ರಾಚಮಲ್ಲನು ಬ್ರಾಹ್ಮಣವರ್ಗಕ್ಕೆ ಸೀಮಿತವಾಗಿದ್ದ ಅಗ್ರಹಾರವನ್ನು ಕಾಳಾಮುಖಶೈವರಿಗೂ ತೆರೆದಿಟ್ಟು ಕೊಟ್ಟವನಾಗಿದ್ದಾನೆ. ನಾಡಿನಲ್ಲಿ ಶಿವದೇವಾಲಯಗಳನ್ನು ನಿರ್ಮಿಸಿ ದಾನಗಳನ್ನು ಈ ಸಿಂದರು ನೀಡಿದ್ದಾರೆ. ಕುಮಾರ ಪದ್ಮರಸನ ಸಾನಂದ ಚರಿತ್ರೆಯಲ್ಲಿ ಶರಣರ ಜೊತೆಗೆ 'ಕುರುಗೋಡ ರಾಚಮಲ್ಲ'ನನ್ನು ಹೆಸರಿಸಿರುವುದು ಅವನ ವೀರಶೈವತ್ವವನ್ನು ತೋರುವಂತಹುದಾಗಿದೆ.[50] ಈ ಸಿಂದರಿಗೆ ಓರುವಾಯಿ ಗ್ರಾಮದ ಕಲಿದೇವರೇ ಕುಲದೈವ. ಅದರ (ದೇಗುಲ) ಸ್ಥಾನಾಚಾರ್ಯರೇ ರಾಜಗುರುಗಳಾಗಿದ್ದರು.[51] ಕುರುಗೋಡ ಶಾಸನವು (ಕ್ರಿ.ಶ. ೧೦೭೬) ರಾಚಮಲ್ಲನನ್ನು 'ಪರಮ ಮಾಹೇಶ್ವರ 'ನೆಂದಿದೆ.

49-50. ಸಾರಂಗ ಶ್ರೀ (ವೀರಶೈವ ಅರಸುಮನೆತನಗಳ ಅಧ್ಯಯನ), (ಸಂ). ಡಾ. ಎಂ. ಎಂ. ಕಲಬುರ್ಗಿ, ಸಿಂದಗಿ, ೧೯೯೪, ನೋಡಿ.

51. ಚನ್ನಬಸವ ಹಿರೇಮಠ: 'ಕುರುಗೋಡು ಸಿಂದರ ರಾಜಗುರುಗಳು,' ಸಿದ್ಧರಾಮಸಂಪದ, ಅದೇ, ಪು.೨೭

ಗೋವೆಯ ಕದಂಬರು ಕಲ್ಯಾಣಿ ಚಾಲುಕ್ಯರಿಗೆ ಮಾಂಡಲಿಕರಾಗಿದ್ದವರು. ವಂಶಮೂಲವನ್ನು 'ಹರಧರಿಣೀ ಪ್ರಸೂತ'ರೆಂದು ಸೂಚಿಸಿದ್ದಾರೆ. ಮನೆದೇವರು ಸೌರಾಷ್ಟ್ರ ಸೋಮೇಶ್ವರ. ಈ ವಂಶದ ಒಂದನೇ ಜಯಕೇಶಿ ಕ್ರಿ.ಶ. ೧೦೫೦ರಲ್ಲಿ ಪಟ್ಟಕ್ಕೆ ಬಂದು ಪಾಂಡ್ಯ ಚೋಳ ಪಲ್ಲವ, ಪರಮಾರರನ್ನು ಸೋಲಿಸಿ ಕದಂಬರನ್ನು ಸಂಘಟಿಸಿದಾತ. [52] ಬಹುಶಃ ಹಾನುಗಲ್ಲು, ಬೇಲೂರು, ಉಚ್ಚಂಗಿ, ನಾಗರಬಂಡೆ, ಕಲಿಂಗ, ಬಯಲುನಾಡುಗಳ ಕದಂಬರು ಹಾಗೂ ಹಾನುಗಲ್ಲು ಪರಿಸರವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಆಳಿದ ಹಾನುಗಲ್ಲು ಕದಂಬ ಮನೆತನದ ಶಾಖೆಯಾದ ಬಂಕಾಪುರದ ಕದಂಬರು[53] ಮತ್ತು ಮಂಜರಾಬಾದ್- ಕೊಡಗಿನ ಕದಂಬರು ಈ ಸಂಘಟನೆಗೆ ಒಳಗಾಗಿರಬಹುದೆ ? ಎನಿಸುತ್ತದೆ. ಇವರಲ್ಲಿ ಶಿವಧರ್ಮ ಸಂಸ್ಕೃತಿಯು ವಂಶದ ಹಿನ್ನೆಲೆಯಲ್ಲಿ ಬೆಳೆದಿರಲಿಕ್ಕೆ ಸಾಕು. ಈ ಗೋವೆಯ ವಂಶದ ಅರಸ 'ಗೋವೆಯ ವಜ್ರರಾಯ' ನನ್ನು(ವಜ್ರದೇವ : ಕ್ರಿ.ಶ. ೧೨೧೪-೨೬) ಸಾನಂದ ಚರಿತೆಯಲ್ಲಿ ವೀರಶೈವ ಶರಣರ ಸಾಲಿನಲ್ಲಿ ನಿಲ್ಲಿಸಲಾಗಿದೆ. ಶಾಸನಗಳಲ್ಲಿ ಇವನನ್ನು 'ಕಾದಂಬ ಶಿವಚಿತ್ತ ಶ್ರೀ ವೀರವಜ್ರ ದೇವ' ಎಂದು ಕರೆಯಲಾಗಿದೆ. [54] ಕಲ್ಯಾಣ ಕ್ರಾಂತಿಯ ಕಾಲಕ್ಕೆ ಶರಣರ ತಂಡ ಇವರ ಆಳ್ವಿಕೆಗಿದ್ದ ಉಳವಿಗೆ ಬಂದದ್ದು ಇವರಲ್ಲಿ ಶಿವಧರ್ಮದೊಲವಿದ್ದದ್ದೆ ಕಾರಣವೆನ್ನಲಾಗಿದೆ.

ದೇವಗಿರಿ ಯಾದವರಲ್ಲಿ ಮಂತ್ರಿ ಮಾಂಡಲಿಕರೆಲ್ಲ ವೀರಶೈವದ ಅಭಿಮಾನಿಗಳಾಗಿ ಸಿದ್ಧರಾಮನ ಹೆಸರಿನಲ್ಲಿ ಶಾಸನೋಕ್ತ ದಾನದತ್ತಿಗಳನ್ನು ನೀಡಿದ್ದಾರೆ. ಬಹುಶಃ ಆ ವಂಶದರಸರ ಒಲವು ಕೆಲವರಲ್ಲಿಯಾದರೂ ಹಾಗಿದ್ದಿರಬೇಕೆನಿಸುತ್ತದೆ. 'ಭಿಲ್ಲಮರಾಯ ಚರಿತೆ' ಎಂಬ ವೀರಶೈವ ಕಾವ್ಯದಲ್ಲಿ ಬರುವ ಭಿಲ್ಲಮರಾಮನು ಈ ವಂಶದರಸ ಎಂಬ ಅಭಿಪ್ರಾಯವಿದೆ.[55] ಲಕ್ಕಣ್ಣ ದಂಡೇಶನು ಶಿವತತ್ವಚಿಂತಾಮಣಿಯಲ್ಲಿ 'ತಾನೊಂದನುಂಡು ಜಂಗಮಕೊಂದನಿಕ್ಕದತಿಮಾನನಿಧಿ' ಎಂದು ಈ ಯಾದವವಂಶದ ರಾಮರಾಯನ ಜಂಗಮಾರಾಧನೆಯ ಜಂಗಮಪರ್ವದ ಬಗೆಯನ್ನು ವರ್ಣಿಸಿ ಅವನ ವೀರಶೈವ ವ್ಯಕ್ತಿತ್ವಕ್ಕೆ ಶರಣಾಗಿದ್ದಾನೆ. ಅವನ ಶೌರ್ಯಕ್ಕೆ ಅಭಿಮಾನ ಸೂಚಿಸಿದ್ದಾನೆ.

ಮೋಪೂರಿನ ಅರಸು ವಂಶವು ಆಂಧ್ರದ ಕಡಪಾ ಜಿಲ್ಲೆಯಲ್ಲಿ ಆಳುತ್ತಿದ್ದ ವಂಶ. ಈ ವಂಶದ ಭೈರವರಾಜನು ತನ್ನ ರಾಣಿ ಮಹಾದೇವಿಯಮ್ಮ ನೊಂದಿಗೆ ಕರ್ನಾಟಕ್ಕೆ ಬಂದು ಹಾಲಸೋಮೇಶ್ವರನ ಶಿಷ್ಯನಾದ. ಸಾಸಲು ಗ್ರಾಮದ ಸಾಸಲದ ಸೋಮೇಶ್ವರ ದೇವರ

52. ಡಾ॥ಎಸ್. ಶ್ರೀಕಂಠಶಾಸ್ತ್ರಿ : 'ಸಣ್ಣಪುಟ್ಟರಾಜವಂಶಗಳು', ಕರ್ನಾಟಕ ಪರಂಪರೆ, ಸಂ.೧, ಬೆಂಗಳೂರು, ೧೯೭೦, ಪು. ೩೫೪
53. ಡಾ। ಚೆನ್ನಕ್ಕ ಎಲಿಗಾರ : 'ಬಂಕಾಪುರದ ಕದಂಬರು', ಸಂಶೋಧನ (ಡಾ। ಎಂ. ಚಿದಾನಂದ ಮೂರ್ತಿ ಗೌರವಸಂಪುಟ), (ಸಂ) ಲಕ್ಮಣ ತೆಲಗಾವಿ, ಬೆಂಗಳೂರು, ೧೯೯೧, ಪು-೭೭೪
54. ಡಾ।ಎಂ.. ಎಂ. ಕಲಬುರ್ಗಿ, ಶಾಸನಗಳಲ್ಲಿ ಶಿವಶರಣರು, ಅದೇ, ಪು. ೧೧೫
55-56 ಎಂ.ಎಂ. ಕಲಬುರ್ಗಿ : ಮಾರ್ಗ-೧, (ವೀರಶೈವ ಅರಸುಮನೆತನಗಳು) ಅದೇ, ಪು. .೪೦೬

ಭಕ್ತನಾಗಿ ಅಲ್ಲಿಯೆ ಐಕ್ಯನಾದ.ಇವನ ಕುರಿತು ವೀರಶೈವ ಕಾವ್ಯಗಳು ಸ್ತುತಿಸಿವೆ. ಇವನಕುರಿತಾಗಿ ಭೈರವೇಶ್ವರಕಾವ್ಯ, ಭೈರವೇಶ್ವರಪುರಾಣ ಇತ್ಯಾದಿ ಕನ್ನಡ ಕೃತಿಗಳಿರುವಲ್ಲಿ, ಇವನ ವೀರಶೈವದಭಿಮಾನದ ಅನುಸರಣೆಯ ಸೂಚನೆ ಸಿಗುವಂತಿದೆ. ಇವನ ಕಾಲ ಕ್ರಿ.ಶ. ಸು ೧೨೦೦ ಎನ್ನಲಾಗಿದೆ. [56] ರಾಜವಂಶಾವಳಿ ಕೈಫಿಯತ್ತಿನ ಪ್ರಕಾರ ಈ ವಂಶದಲ್ಲಿ ಬರುವ ಸಂಗಮರಾಜಕ್ಷತ್ರಿಯ ಭೈರವರಾಜನ ತಂದೆ. ಹೆಸರನ್ನು ಗಮನಿಸಿದರೆ ಸಂಗಮರಾಜನು ವೀರಶೈವದೊಲವಿನವನಂತೆ ಕಾಣುತ್ತಾನೆ.

ಕಾಕತೀಯರು

ಕಾಕತೀಯರದು ಆಂಧ್ರದ ಪಸಿದ್ಧ ರಾಜವಂಶವಾಗಿದೆ. ರಾಷ್ಟ್ರಕೂಟಾನುಯಾಯಿಗಳಾಗಿ ನಂತರ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ದುರ್ಜಯ ವಂಶದವರೆಂದು ಕ್ರಿ.ಶ. ೧೨ನೆಯ ಶತಮಾನದಲ್ಲಿ ಸ್ವತಂತ್ರರಾಗಿ ಪ್ರಸಿದ್ಧರಾದರು. [57] ಇವರ ಮೂಲನೆಲೆ ಕರ್ನಾಟಕದಲ್ಲಿನ ಗ್ರಾಮವೊಂದಕ್ಕೆ(ಬೆಳಗಾವಿ ಸನಿಹದ ಕಾಕತಿ !) ಆರೋಪಿತನಾಗಿರುವುದೂ ಉಂಟು. ಇವರಲ್ಲಿ (ಕ್ರಿ.ಶ. ೧೦೩೦-೧೦೭೫)ರ ಒಂದನೇ ಪ್ರೋಲನು ಶಿವಧರ್ಮದೊಲವನ್ನು ತೋರಿಸಿದ. ಆದರೆ ಸ್ವತಂತ್ರ ದೊರೆಗಳಾಗಿ ಹನುಮಕೊಂಡದಿಂದ ಓರಂಗಲ್ಲಿಗೆ ರಾಜಧಾನಿಯನ್ನು ಬದಲಾಯಿಸಿಕೊಳ್ಳುವ ವೇಳೆಗೆ ಅಂದರೆ ೧ನೇ ಪ್ರತಾಪರುದ್ರದೇವನ ಕಾಲದಲ್ಲಿ (ಕ್ರಿ.ಶ. ೧೧೫೦-೯೫) ಅವರ ಒಲವು ಶಿವಧರ್ಮದ ಇನ್ನೊಂದು ಶಾಖೆಯಾದ ಗೋಳಕಿ ಮಠದ ಸಂಪ್ರದಾಯದತ್ತ ತಿರುಗಿತು. [58] ಇದಕ್ಕೆ ಪೋಷಕವಾಗಿ ಆ ಮುಂದಿನ ಅರಸರ ಹಾಗೂ ರಾಣಿಯರ ಹೆಸರೆಲ್ಲ ದಟ್ಟ ಶಿವಸಂಸ್ಕೃತಿಯದಾಗಿವೆ. ದೇವಗಿರಿ ಯಾದವರ ಹಾಗೂ ಕಾಕತೀಯರ ನಡುವಣ ಹೋರಾಟದ ನಂತರ ಗಣಪತಿದೇವನ ಕಾಲದಲ್ಲಿ (ಕ್ರಿ.ಶ. ೧೧೯೯-೧೨೭೧) ಪೂರ್ಣವಾಗಿ ಶಿವಧರ್ಮವನ್ನು ಕಾಕತೀಯರು ಅಪ್ಪಿದರೆನ್ನಲಾಗಿದೆ. [59] ಆದರೆ ಇಮ್ಮಡಿ ಪ್ರೋಲನ ಕಾಲದಲ್ಲಿಯೆ (ಕ್ರಿ.ಶ. ೧೧೧೭-೫೦) ಈ ವಂಶಿಕರು ವೀರಶೈವನು ಧರ್ಮವನ್ನು ಅಪ್ಪಿ, ಮುಂದಿನವರು ಅದರ ಅಭಿವೃದ್ಧಿಯಲ್ಲಿ ತೊಡಗಿದುದಕ್ಕೆ ಸಾಕ್ಷ್ಯಗಳಿವೆ. ಬಿ.ಶಿವಮೂರ್ತಿಶಾಸ್ತ್ರಿಗಳೂ ಇದೇ ಅಭಿಪ್ರಾಯವನ್ನು ತಳೆದಿದ್ದಾರೆ. ರುದ್ರದೇವನ ಕಾಲದಲ್ಲಿ ವೀರಶೈವಧರ್ಮವು ಆಂಧ್ರದೇಶದ ತುಂಬಾ ಹರಡಿತು. ಅನೇಕ ವೀರಶೈವ ಮಠಗಳು ಶ್ರೀಶೈಲ ಮತ್ತು ಕೊಲ್ಲಿಪಾಕಿಯಲ್ಲಿ ಸ್ಥಾಪನೆ ಆದುವು . ಶಿವತತ್ತ್ವಸಾರಮು, ಗಣಸಹಸ್ರನಾಮಾವಳಿ ಇತ್ಯಾದಿ ಕೃತಿಗಳು ಬಂದುವು.. ಈ ಕಾಲದಲ್ಲಿಯೆ ಅಲ್ಲಿ ಪಾಲ್ಕುರಿಕೆ ಸೋಮನಾಥನು ಜನಿಸಿ ತೆಲುಗು, ಸಂಸ್ಕೃತ ಹಾಗು ಕನ್ನಡದಲ್ಲಿ ೩೬ ಗ್ರಂಥಗಳನ್ನು ಬರೆದ. ವೀರಶೈವ ಸಾಹಿತ್ಯವನ್ನು ಮುಂಚೂಣಿಯಲ್ಲಿಟ್ಟ. ಮಲ್ಲಿಕಾರ್ಜುನ ಪಂಡಿತಾರಾಧ್ಯರಂತಹ

57. ಡಾ। ಪ್ರತಿಭಾ ಚಣ್ಣಪ್ಪ : 'ಕಾಕತೀಯ - ಶಬ್ದಾರ್ಥ ವಿವೇಚನೆ ಮತ್ತು ಮೂಲ', ಹರತಿಸಿರಿ, ಅದೇ, ಪು. ೨೬೬
58. ಕೈ.ರಾ. ಗಣೇಶ್: 'ಆಂಧ್ರ ಪ್ರದೇಶದ ಕಾಳಾಮುಖ ಶೈವರು,' ಸಂಶೋಧನ, ಅದೇ, ಪು. ೬೨೫
59. N.G. Ranga: Kakatiya Nayakas, Nidubrolu, 1971, p-23

ವೀರಶೈವ ಗುರುಗಳು ಪ್ರಭಾವಶಾಲಿಗಳಾಗಿದ್ದರು. ಬಸವಣ್ಣನ ಕ್ರಾಂತಿಯನ್ನು ಮೆಚ್ಚಿದವರಾಗಿದ್ದರು.[60] ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿವತತ್ತ್ವ ಸಾರವೂ ಆ ಕಾಲದ ಪ್ರಸಿದ್ಧ ಕೃತಿಯಾಗಿತ್ತು. ಪಾಲ್ಕುರಿಕೆ ಸೋಮನಾಥನು ತನ್ನ ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆಯಲ್ಲಿ, ಅವರ ವೀರಶೈವತ್ವವನ್ನು ಚಿತ್ರಿಸಿದ್ದಾನೆ. ವೀರಶೈವ ಹಾಗೂ ವೀರಮಾಹೇಶ್ವರ ಎಂಬ ಶಬ್ದಗಳು ಏಕಾರ್ಥಶಬ್ದಗಳಾಗಿರುವಲ್ಲಿ, ಪಾಲ್ಕುರಿಕೆ ಸೋಮನಾಥನು ಬಸವಣ್ಣ ಹಾಗು ಮಲ್ಲಿಕಾರ್ಜುನ ಪಂಡಿತಾರಾಧ್ಯರನ್ನು 'ವೀರಮಾಹೇಶ್ವರಾಚಾರ' 'ವೀರಮಾಹೇಶ್ವರ' ಎಂದು ಅನುಕ್ರಮವಾಗಿ ಹೇಳಿದ್ದಾನೆ. [60ಅ] ಗಣಪತಿದೇವನಕಾಲವು ಆಂಧ್ರದಲ್ಲಿ ವೀರಶೈವದ ಸುವರ್ಣಯುಗವಾಗಿತ್ತು. ಕ್ರಿ.ಶ. ೧೨೬೧ರ ಮಲ್ಕಾಪುರ ಶಾಸನೋಕ್ತ 'ವೀರಶೈವಾಚಾರ್ಯ ಶತೈರ್ವೃತಃ'(ನೂರಾರು ವೀರಶೈವ ಆಚಾರ್ಯರಿಗ ಮುಖ್ಯಸ್ಥ)ನಾದ ವಿಶ್ವೇಶ್ವರ ಶಿವಾಚಾರ್ಯನು ಗಣಪತಿದೇವನ ಕಾರುಣ್ಯಗುರುವಾಗಿದ್ದ.[61] ಶಾಸನದಲ್ಲಿ ಬರುವ 'ಪಾಶುಪತವ್ರತಾನಾವುಷ್ಯ' 'ಶೈವಾಗಮಾನಾವುಪಿ, 'ನೈಷ್ಠಿಕ ದೇಶಿಕೇಂದ್ರ' 'ಶಿವಾಚಾರ್ಯಧೀಮಾನ್ರಾಜರುಃ...ವೀರಶೈವಾಚಾರ್ಯ,' ಶಬ್ದಗಳು ಆ ಗುರುವು ವೀರಶೈವ ಶಿವಾಚಾರ್ಯನಾಗಿದ್ದನೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಅವನು ರಾಜಗುರುವೂ ಆಗಿದ್ದ. ಆತನು 'ಸ್ತ್ರೀಯಾದರೂ ಹಕ್ಕಿದೆ' ಎಂದು ರಾಜಕುವರಿ ರುದ್ರಮ್ಮನಿಗೆ ಪಟ್ಟಗಟ್ಟಲು ಗಣಪತಿದೇವನಿಗೆ ಸಲಹೆ ನೀಡಿದ.

ಈ ಗಣಪತಿದೇವನು ಕೋಟೆ ಹಾಗೂ ೭೫ ಕೊತ್ತಲಗಳನ್ನು ಕಟ್ಟಿಸಿ ನಾಯಕರನ್ನು ನೇಮಿಸಿದ್ದ, ದೇಗುಲಗಳನ್ನು ಕಟ್ಟಿಸಿದ್ದ. ಕೃಷಿಯನ್ನು ಉತ್ತೇಜಿಸಿದ. ದಕ್ಷ ಹಾಗೂ ಜನಪ್ರಿಯ ದೊರೆ ಆಗಿದ್ದ. ಇವನ ಕಾಲದಲ್ಲಿ ಯುವರಾಜ ಪದವಿ ಪಡೆದ ಇವನ ಮಗಳು ರುದ್ರಾಂಬೆ (ರುದ್ರ ಮಹಾದೇವ) ರಾಜಕೀಯ ವ್ಯವಹಾರ ನಿಪುಣೆಯಾಗಿ, ಶೂರಳಿದ್ದು, ಜನಹಿತ ಕಾರ್ಯ ಮಾಡಿ ಖ್ಯಾತಳಾದಳು. ಈಕೆಯ ಕೃಷಿ, ನೀರಾವರಿಯ ಉತ್ತಮ ವ್ಯವಸ್ಥೆ, ವಜ್ರದ ಗಣಿಗಾರಿಕೆಯ ನಿರ್ವಹಣೆ ಬಗ್ಗೆ, ಆಡಳಿತದ ಬಗ್ಗೆ ಕ್ರಿ.ಶ. ೧೨೯ ರಲ್ಲಿ ಬಂದ ವೆನೀಷಿಯನ್ ಪ್ರವಾಸಿ ಮಾರ್ಕೊಪೋಲೋ ಮುಕ್ತಕಂಠದಿಂದ ಹೊಗಳಿದ್ದಾನೆ. [62] ಈಕೆ ರೈತರಿಗೆ ಅನುಕೂಲ ಮಾಡಿಕೊಟ್ಟಳು. ಕವಿ, ಕಲಾವಿದ ಸಾಹಿತಿಗಳನ್ನು ಉತ್ತೇಜಿಸಿದಳು. ರೈತ ಹಾಗೂ ಗಿರಿಜನ ಹೆಂಗಸರು ಮತ್ತು ಹೆಣ್ಣು ಮಕ್ಕಳಿಗೆ ಶಸ್ತ್ರ ಬಳಕೆಯ ತರಬೇತಿ ನೀಡಿದ್ದಳು. ಈಕೆಯ ತಂದೆ

---

60 i. ಬಿ. ಶಿವಮೂರ್ತಿಶಾಸ್ತ್ರಿ : 'ವೀರಶೈವ ರಾಜಮನೆತಗಳು', ಶ್ರೀ ಜ॥ ಪಂಚಾಚಾರ್ಯ ದರ್ಶನ (ಸ್ಮರಣಸಂಚಿಕೆ), (ಸಂ) ಎಂ. ವಿ. ಗುರುಬಸಪ್ಪಶೆಟ್ಟಿ, ಬೆಂಗಳೂರು, ೧೯೭೨, ಪು. ೯೭
 ii. ಡಾ। ಶ್ರೀ ಜಚನಿ : 'ಮಲ್ಲಿಕಾರ್ಜುನ ಪಂಡಿತಾರಾಧ್ಯ', ಹನ್ನೊಂದನೆಯ ಶತಮಾನದ ವೀರಶೈವ ಉತ್ಕ್ರಾಂತಿ, (ಸಂ) ಚ. ಸುಂದರೇಶನ್, ಬೆಂಗಳೂರು, ೧೯೮೪, ಪು. ೨೧೮-೧೯

60ಅ. K. Lalitamba : Virashaivism in Andra, Guntur, 1981, pp. 33, 56

61 ಡಾ। ಶ್ರೀ ಜಚನಿ : 'ಕಾಕತೀಯ ರುದ್ರಮ್ಮರಾಣಿ ವೀರಶೈವ ಕಾತ್ಯಾಯಿನಿ' ಮಾಮಿಡಿ, ೧೯೮೧, ಸಂ. ೨ ಸಂ. ೬, ಪು.೨೦

62. i. Andrapradesh District Gazetteer, Warangal, 1976, p.35
 ii. V. Yashoda Devi: After the Kakatiyas, Andrapradesh Sahitya Academi , p.3

ಕ್ರಿ.ಶ. ೧೪೩೮ರ ಬಸವನ ವಿಗ್ರಹದ ಪೀಠದ ಬಲಪಾರ್ಶ್ವದಲ್ಲಿರುವ ಆ ಶಾಸನದಲ್ಲಿ **'ಶ್ರೀ ಮದ್ರಾಯ ರಾಜಗುರು ಮಂಡಲಾಚಾರ್ಯ ಶ್ರೀ ಚಂದ್ರಭೂಷಣ ದೇವ ಒಡೆಯರ ನಿಡಮಾಮಿ(ವಿ)ಡಿನ ಸುದೇವಸ್ಥಾನದಲಿ'** ಎಂದಿದೆ. ಈ ಗುರುಗಳು ಹಂಪೆಯಲ್ಲಿ ಶಾಖಾಮಠವನ್ನು ನಿರ್ಮಿಸಿ ಅಲ್ಲಿ ಲಿಂಗೈಕ್ಯರಾದರು. ಈ ದೇವರಾಯನು ಮಲಪನಗುಡಿಯ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿರುವುದು ಶಾಸನೋಕ್ತವಾಗಿರುವಲ್ಲಿ ಬಹುಶಃ ಚಂದ್ರ ಭೂಷಣದೇವ ಒಡೆಯರ ಪ್ರಭಾವದಾಗಿರಬೇಕು. ಹಂಪೆಯ ಮಾತಂಗ ಪರ್ವತದ ನೆತ್ತಿಯಲ್ಲಿರುವ ವೀರಭದ್ರ ದೇವಾಲಯವು ಸಂಗಮವಂಶದವರ ಕಾಲದ್ದೆಂದಿರುವಲ್ಲಿ ಬಹುಶಃ ಈ ಒಡೆಯರ ಕಾಲದಲ್ಲಿ ಪ್ರತಿಷ್ಠಾಪನೆಯಾಗಿರಬಹುದು. ಇದಲ್ಲದೆ ಒಂದನೇ ಹರಿಹರನು ಶ್ರೀಶೈಲ ಮಲ್ಲಿಕಾರ್ಜುನ ದೇವರ ಪರಮ ಭಕ್ತನಾಗಿದ್ದ ಕಾರಣ 'ಮಲಪನಗುಡಿ'ಯ ನಿರ್ಮಾಣ ಅವನ ಕಾಲದ್ದಾಗಿರಬೇಕು. ಹಾಗೂ ಮಾತಂಗ ಪರ್ವತದ ವೀರಭದ್ರನಗುಡಿಗೆ ಹೊಂದಿಕೊಂಡಿರುವ ಮಠವು ವೀರಶೈವಮಠವಾಗಿದ್ದು ಅವನ ಕಾಲದಲ್ಲಿ ನಿರ್ಮಿತವಾಗಿರುವಂತಿದೆ. ಶಬರಿಯ ಗುರು ಪಂಪಾಕ್ಷೇತ್ರದ ಕಿರಾತಕುಲದ ಮತಂಗ. ಇವನ ಮಗ ಮಾತಂಗ. ಈ ಮಾತಂಗನು ಬೇಟೆಗಾರನಾಗಿ, ನರವಧೆ, ಋಷಿವಧೆ. ಯೋಗಿವಧೆಗಳಲ್ಲಿ ತೊಡಗಿದ್ದ. ಇಂತಹ ಕ್ರೂರಿಯನ್ನು, ವೀರಶೈವನನ್ನಾಗಿಸಿ, ವೀರಮಾಹೇಶ್ವ ರಾಚಾರವಂತನನ್ನಾಗಿ ಆದಿರೇಣುಕ ಶಿವಾಚಾರ್ಯರು ಪರಿವರ್ತಿಸಿದರೆಂದು, ವೀರಾಗಮದ ಮಾತಂಗನಿಗೆ ಅನ್ವಯಿಕವಾಗಿ ಡಾ॥ ಶ್ರೀಜಚನಿ ಅವರು ಉಲ್ಲೇಖಿಸಿದ್ದಾರೆ. ಜನಪದದಲ್ಲಿ ಮತಂಗಯ್ಯನ ಮಠವೆಂದೇ ಈ ಮಠ ರೂಢಿಗೊಂಡಿದೆ. ಇನ್ನು ಕೃಷ್ಣದೇವರಾಯನು ಶ್ರೀಶೈಲ ನಿಡುಮಾಮಿಡಿ ಪೀಠದ ಕರಿಬಸವ ಸ್ವಾಮಿಗಳಿಗೆ ಕಟ್ಟಿಸಿಕೊಟ್ಟ ಮಠವು ಹಂಪೆಮಠವಾಗಿರಬಹುದು. ಉದ್ದಾನ ವೀರಭದ್ರಸ್ವಾಮಿಯನ್ನು ಶಾಸನದಲ್ಲಿ ಮುದುವೀರಂಣ ಎಂದಿದೆ. ಅಂದರೆ ಈ ಮುದುವೀರಂಣನೇ ಉದ್ದಾನ ವೀರಭದ್ರ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.[72ಅ] ಸದಾಶಿವರಾಯನಲ್ಲಿ ಕಾರ್ಯಕರ್ತನಾಗಿದ್ದ ರಾಮರಾಜಯ್ಯನ ತಮ್ಮ ಜಂಗಮಯ್ಯ ಕ್ರಿ.ಶ. ೧೫೪೫ರಲ್ಲಿ ಇದನ್ನು ಕಟ್ಟಿಸಿದ ಬಗ್ಗೆ ಶಾಸನವಿದೆ. ಇಲ್ಲಿ ವೀರಭದ್ರ ಸಂಬಂಧವಿರುವ ಕಾರಣ ಮಠವು ಅಂದಿನ ಜ॥ ಕರಿಬಸವಸ್ವಾಮಿಗಳಿಗಾಗಿ ನಿರ್ಮಿತಗೊಂಡಿರಬಹುದು. ಈ ಗುಡಿಯ ಸುಕನಾಸಿಯಲ್ಲಿರುವ ಸರ್ವಾಂಗ ಲಿಂಗವು ನೆತ್ತಿಯಲ್ಲಿ ೩೬ ಲಿಂಗಗಳನ್ನು ಹೊಂದಿದ್ದು ಇದು ಶ್ರೀಶೈಲ ನಿಡುಮಾಮಿಡಿ ಪೀಠದ ಪ್ರೇರಣೆ ಎಂದೇ ತೋರುತ್ತದೆ. ಕಾರಣ ಪೀಠದಲ್ಲಿಯೂ ಆ ಲಿಂಗವಿದ್ದು, ಪೀಠದ ಚಂದಗುಂಡ ಶಿವಾಚಾರ್ಯರ ಸಂಬಂಧವನ್ನು ಹೊಂದಿದೆ. ಈ ಲಿಂಗವಿರುವ 'ಗದ್ದುಗೆ' ದೇಗುಲದಲ್ಲಿ ವಿಜಯನಗರದ ರಾಜಲಾಂಛನಮುದ್ರೆಯಲ್ಲಿ ಕಂಡುಬರುವ 'ಬಾಕು'ವಿನ ಶಿಲ್ಪವು ಸ್ತಂಭ ಗಳಲ್ಲಿದೆ. ಪೀಠದ ಪತ್ರವ್ಯವಹಾರದಲ್ಲಿ, ಮಂಗಳವಾಚಿಯಾಗಿ ಶಿಖಾ ಮುದ್ರೆಗಳಲ್ಲಿ 'ವಿರೂಪಾಕ್ಷ' ಎಂಬ ಒಪ್ಪವೂ ಗುರುಗಳಿಗೆ ದತ್ತವಾಗಿದ್ದಿದೆ. ಹಂಪೆಯ

---

72 ಅ. ಡಾ। ಬಸವರಾಜ ಮಲಶೆಟ್ಟಿ: ಹಂಪೆ - ಒಂದು ಪರಿಚಯ, ಹಂಪೆ, ೧೯೮೧, ಪು. ೧೭

ವಿರೂಪಾಕ್ಷ ಲಿಂಗವು ಕಲ್ಯಾಣಿ ಚಾಲುಕ್ಯರ ಕಾಲದ್ದು ಎಂದು ಡಾ। ಅ. ಸುಂದರ ಅವರು ಹೇಳಿರುವಲ್ಲಿ ಪೀಠದ ಪ್ರಾಚೀನತೆಯು ಆ ಶತಮಾನದಲ್ಲಿಯೂ ಕಾಣುವ ಕಾರಣ ಶಿವಧರ್ಮ ಸಂಬಂಧವು ವಿದಿತವಾಗುತ್ತದೆ.

೧೧ನೇ ಶತಮಾನದಲ್ಲಿ ತಿರುಪತಿಯ ವೀರಭದ್ರ ವೆಂಕಟೇಶ್ವರನಾದದ್ದು ಇತಿಹಾಸ. ಮುಂದೆ ಬಹುಶಃ ಈ ಇತಿಹಾಸ ತಿಳಿದಿದ್ದ ಪರಂಪರೆಯ ಜನ ಸಂಘರ್ಷಕ್ಕೆ ಸಿದ್ಧವಾಗುವ ಸನ್ನಿವೇಶ ಬುಕ್ಕರಾಯನ ಕಾಲದಲ್ಲಿ ನಡೆದಂತೆ ಕಾಣುತ್ತದೆ. ಆದರೆ ಅದಕ್ಕೆ ಅವಕಾಶ ಕೊಡದೆ ಹರಿ-ಹರ ಸಮನ್ವಯವನ್ನು ಅವನು ತೋರಿದ. ಇಂತಹುದೇ ಒಂದು ಸಂಘರ್ಷ ಪ್ರೌಢದೇವರಾಯನ ಕಾಲದಲ್ಲಿ ನಡೆದಾಗ ಅದನ್ನು ಸಮನ್ವಯದಲ್ಲಿ ಸರಿಮಾಡಿದಂತಿದೆ. ಅವನ ಸಮಾಜೋ - ಧಾರ್ಮಿಕ ನಡೆಯನ್ನು ಜನತೆ ವೈಶಾಲ್ಯದಿಂದ ಒಪ್ಪಿತು. ಅದು ತಾತ್ವಿಕ ವಿರೋಧದ ನೆಪಗಳ ಮುಸುಕನ್ನು ಹೊದ್ದಿರಲಿಲ್ಲ. ಹೊದೆಯಲೂ ಇಲ್ಲ. ತಿರುಪತಿ ದೇವರಂತಹ ವಿಷ್ಣು ದೇವತೆಯನ್ನು ಪೂಜಿಸಲು ಆರಂಭಿಸಿದ ವೀರಶೈವರಿಗೆ ಅವನ ಸ್ವರೂಪ ವೀರಭದ್ರನದೆ ಆಗಿ ಯಾವ ರೂಪದಲ್ಲಿ ವೀರಭದ್ರನಿರಲಿ ಕುಲದೇವರೆಂದುಕೊಳ್ಳುವ ಭಕ್ತರಿರುವಲ್ಲಿ ವೀರಭದ್ರನ ವೆಂಕಟೇಶ ಪೂರ್ವದ ಇತಿಹಾಸವೇನೂ ಮರೆಯಾಗದು. ಈ ದ್ವಯದೇವರೂಪದ ಆರಾಧನೆ, ವೀರಶೈವರಲ್ಲಿ ಅನುಸರಣ ವಿಧಾನವಾಗಿ, ಮುಚ್ಚಿತವನ್ನು ತೆರೆದು ಹೊರಬಂದಿದೆ ಎನ್ನಬೇಕು.

ಈ ದೇವರಾಯನ ಕಾಲದಲ್ಲಿ ಕರಸ್ಥಲದ ವೀರಣ್ಣ, ಲಕ್ಕಣ ದಂಡೇಶ, ಗುರುರಾಯ, ಚಾಮರಸ ಮುಂತಾದ ಮಂತ್ರಿಗಳಿದ್ದು, ಇಷ್ಟಲಿಂಗಚರಿತೆ, ಶಿವತತ್ತ್ವಚಿಂತಾಮಣಿ, ಪ್ರಭುಲಿಂಗಲೀಲೆ ಇತ್ಯಾದಿ ಪ್ರಸಿದ್ಧ ವೀರಶೈವ ಸಾಹಿತ್ಯ ಕೃತಿಗಳಲ್ಲದೆ ಅನ್ಯಕಾವ್ಯಗಳನ್ನೂ ಬರೆದರು. ವಿಜಯನಗರದ ತುಳುವ ವಂಶದವರ ಪೈಕಿ ಕೃಷ್ಣದೇವರಾಯನು ನಿಡುಮಾಮಿಡಿ ಪೀಠದ ಜ॥ ಕರಿಬಸವ ಸ್ವಾಮಿಗಳನ್ನು ಸತ್ಕರಿಸಿ ವಿಜಯನಗರದಲ್ಲಿ ಮಠಕಟ್ಟಿಸಿಕೊಟ್ಟ. ಕೃಷ್ಣದೇವರಾಯನ ಮಲತಮ್ಮ ಅಚ್ಯುತದೇವರಾಯನು (ಕ್ರಿ.ಶ. ೧೫೩೦-೪೨) ಉಪ ರಾಜಧಾನಿ ಪೆನುಗೊಂಡೆಯಲ್ಲಿ ಈ ಪೀಠದ ಕರಿಬಸವೇಂದ್ರ ಸ್ವಾಮಿಗಳನ್ನು ಸತ್ಕರಿಸಿ ತನ್ನ ಶಿಷ್ಯತ್ವದ ಬಗ್ಗೆ ಶಾಸನ ಹಾಕಿಸಿರುವುದನ್ನು ಪುಲ್ಲಕವಿಯ ಪಂಡಿತಾರಾಧ್ಯ ಚರಿತ್ರೆಯು ತಿಳಿಸುತ್ತದೆ. 'ಘನಗಿರಿ ಸಿಂಹಾಸನ' ಮಠವೆಂದು ಕಟ್ಟಿಸಿಕೊಟ್ಟು ಪೆನುಗೊಂಡೆ ಪ್ರಾಂತ್ಯದ ಧರ್ಮಾಚಾರಾಧಿಪತ್ಯವನ್ನು ನೀಡಿದ. ಶಾಸನ ಹೀಗಿದೆ :

'ಶ್ರೀ ಮನ್ನಿಡುಮಾಮಿಡಿ ಸ್ವಾಮುಲು ಅಷ್ಟಾವರಣಂ ಸಾಲುಮೂಲ ದ್ವಾಪರ ದೇಶಮುದ್ರ ಶೆಟ್ಟಿ, ಶ್ಯಾನುಭೋಗುಲುಯೆದ್ದು ವೇಲ್ಪು ಕಾಪು ಕಮ್ಮಟಂ ದ್ವಾಪರಕೊಂಡ ದೆಬ್ಬಯೇಲು ಕುಲಂ. ಇದಿ ಪೆನುಗೊಂಡ ಕನಕಪುರಾಯಿ ಸಿಂಹಾಸನಂ ನಿಡುಮಾಮಿಡಿ ಜಂಗಮಯ್ಯ ಪಂಡಿತಾರಾಧ್ಯ ಸೂರ್ಯಸಿಂಹಾಸನಾನ್ಕಿ ನಡಿವಲಮು, ಅಚ್ಯುತರಾಯಲು ಶಿಷ್ಯಲು ಆಗುಟೆ ಸಾಕ್ಷಿ ಶ್ರೀ ಶ್ರೀ ಶ್ರೀ ಎಂಬುದು', ಅಚ್ಯುತರಾಯನ ವೀರಶೈವದ ಮಾನ್ಯತೆಯನ್ನು ತಿಳಿಸುತ್ತದೆ.

ಇವನ ನಂತರ ಅಳಿಯ ರಾಮರಾಯನಿಗೆ ಬಹುಶಃ ಕುಲಗುರು, ರಾಜಗುರುವಾಗಿದ್ದವರು, ಈ ಪೀಠದ ಇಮ್ಮಡಿ ಕರಿಬಸವಸ್ವಾಮಿಗಳು. ಕಾರಣ ಬೊಕ್ಕಸಂ ತಿಮ್ಮಯ್ಯನ ಪಿತೂರಿಯನ್ನು,ಅಡಗಿಸಲು ರಾಮರಾಯನು ಈ ಸ್ವಾಮಿಗಳಲ್ಲಿ ನೆರವು - ಆಶೀರ್ವಾದಗಳನ್ನು ಯಾಚಿಸಿದ; ಅವರಿಂದ ಆದೇಶಿತನಾದ ಹಂಡೆಹನುಮಪ್ಪ ನಾಯಕನ ಸಹಾಯದಿಂದ ಅಡಗಿಸಿದ. ವಿಜಯನಗರದ ಹುಟ್ಟುವಿಕೆಗೆ ವೀರಶೈವರಿಂದ ನೆರವು ಬಂದಂತೆ, ಅದರ ಪತನಾನಂತರ ಆ ಕನ್ನಡ ಸಂಸ್ಕೃತಿಯನ್ನು ಜತನಗೊಳಿಸಿ ಬೆಳೆಸಲು ಮುಂದಿನ ವೀರಶೈವ ಅರಸರ ಪಾಲೂ ಪ್ರಮುಖವಾಯಿತು. ವಿಜಯನಗರಸರ ಕಾಲದಲ್ಲಿ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಸಮನ್ವಯ ಸಂಸ್ಕೃತಿ ಬೆಳೆದು ವೈಭವಗೊಂಡಿತ್ತು.

ಹಂಡೆವಂಶದರಸರು

ಹಂಡೆವಂಶದ ಹಂಡೆ ಬಾಲದಹನುಮಪ್ಪನಾಯಕನು ವಂಶದ ಮೂಲಪುರುಷನಾಗಿ ವೀರಶೈವ ಕುಲಗುರುಗಳನ್ನು ಹೊಂದಿದ್ದ. ಮೂಲತಃ ಕುರುಬರಾಗಿದ್ದ ಈ ವಂಶಿಕರು ನಂತರ ಲಿಂಗಧಾರಿಗಳಾಗಿ ಆಳ್ವಿಕೆ ನಡೆಸಿದರೆಂದು ಡಾ. ಚೆನ್ನಕ್ಕ ಪಾವಟೆ ಹೇಳುತ್ತಾರೆ. ಈ ವಂಶಿಕರು ಅನಂತಪುರ, ಬಳ್ಳಾರಿ, ಕುರುಗೋಡುಗಳನ್ನು ರಾಜಧಾನಿ ಮಾಡಿಕೊಂಡು (ಕ್ರಿ.ಶ. ೧೫೫೫-೧೮೮೯) ಆಳಿದರು. ಹಂಡೆ ಹನುಮಪ್ಪನಾಯಕನು ವಿಜಯನಗರದ ರಾಮರಾಯನಿಗೆ ಬೊಕ್ಕಸಂ ತಿಮ್ಮಯ್ಯನ ಸಂಚನ್ನು ವಿಫಲಗೊಳಿಸುವಲ್ಲಿ, ನಿಜಾಂ ಪಾದುಷಾಹನನ್ನು ಕೈಸೆರೆ ಹಿಡಿದುಕೊಡುವಲ್ಲಿ ನೆರವಾಗಿದ್ದ. ನಂತರ ಬಿಜಾಪುರದ ಆದಿಲ್‌ಶಾಹನ ಸೈನ್ಯದಲ್ಲಿ ವಜೀರನಾಗಿದ್ದ.[73] ಇವನ ಕುಲಗುರು ಕರಿಬಸವ ದೇಶಿಕೇಂದ್ರ ಶಿವಾಚಾರ್ಯರನ್ನು ಆದಿಲ್‌ಶಾಹನು ಗೌರವಿಸಿಸನ್ಮಾನಿಸಿದ. ಮುಂದೆ ಇವನ ವಂಶದ ೨ನೆಯ ಪವಾಡಪ್ಪನಾಯಕನನ್ನು ಕಡಪ ನವಾಬನು ಬಂಧಿಸಿ ಅನಂತಪುರದಲ್ಲಿಟ್ಟಾಗ ಅನಂತಪುರದ ಕೊತ್ತಚೆರುವು ಮಠದಲ್ಲಿದ್ದ ಕರಿಬಸವರಾಜ ಶಿವಾಚಾರ್ಯರು (ಕ್ರಿ.ಶ.೧೭೫೦-೭೫) ಬಂದು ಉಪಾಯವಾಗಿ ನಾಯಕನನ್ನು ಮಠಕ್ಕೆ ಕರೆತಂದರು. ನಾಯಕನ ಸೈನಿಕರನ್ನು ಹುರಿದುಂಬಿಸಿ, ನವಾಬನ ಸೈನಿಕರನ್ನು ಸೋಲಿಸುವಂತೆ ಮಾಡಿ ಓಡಿಸಿದರು. ಈ ನಾಯಕ ಆಜೀವ ಪರ್ಯಂತ ಈ ಗುರುಗಳಲ್ಲಿ ಭಕ್ತಿಯಿಂದ ನಡೆದುಕೊಂಡು ಕೊತ್ತಚೆರುವು ಮಠದಲ್ಲಿಯೆ ತನ್ನ ಗದ್ದುಗೆ ಸಮಾಧಿ ಮಾಡಿಸಿಕೊಂಡ. ಹೀಗೆಯೆ (ಕ್ರಿ.ಶ.೧೮೮೯)ರ ಹಂಡೆ ರಾಮಪ್ಪನಾಯಕನು ಗದುಗಿನ ತೋಂಟದ ಸಿದ್ಧಲಿಂಗೇಶ್ವರರನ್ನು ಆರಾಧಿಸಿದ. ಅಂದರೆ ಈ ವಂಶವು ಗುರು-ವಿರಕ್ತಸಂಪ್ರದಾಯಗಳಿಗೆ ಭಕ್ತಿಗೌರವಗಳನ್ನು ಸಲ್ಲಿಸಿ ನಡೆದುಕೊಂಡು ಸಮನ್ವಯ ತೋರಿದುದಾಗಿದೆ.

---

73. ಕರ್ನಾಟಕದ ಕೈಫಿಯತ್ತುಗಳು: (ಸಂ) ಎಂ.ಎಂ. ಕಲಬುರ್ಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯ, ೧೯೯೪, ಪು. ೪೭೪, ೫೨೫

ಇಕ್ಕೇರಿ - ಕೆಳದಿ ಅರಸು ವಂಶವು ಮೂಲತಃ ವೀರಶೈವ ಅರಸುವಂಶ. ಬುಕಾನಿನ್, ಈ ವಂಶಿಕರು ಕೆಳದಿ ಸನಿಹದಲ್ಲಿದ್ದ ಮಲವರ ಕೀಳುಕುಲದ (ಲಿಂಗವಂತ) ಶಿವಭಕ್ತರು ಎಂದಿದ್ದಾನೆ.[74] ವೆಂಕಟರಂಗೋಕಟ್ಟಿಯವರು ಮಲ್ಲವರು (ಮಲವರು) ಉತ್ತಮ ಕುಲದ ಲಿಂಗವಂತರು ಎಂದಿದ್ದಾರೆ.[75] ಮಲವರು ಎಂದರೆ ಮಲಪರು(ಮಲೆವಾಸಿಗಳು ಮಲಸೀಮೆಯವರು) ಎಂಬ ಅಭಿಪ್ರಾಯ ಚಿದಾನಂದಮೂರ್ತಿಯವರದು. ಸಾಗರ ಕೈಫಿಯತ್ತಿನಲ್ಲಿ, 'ಕೆಳದಿ ಎಂಬ ಗ್ರಾಮದ ವಳಗಣ ಹಲ್ಲೆ (> ಹುಲ್ಲೆ) ಬಯಲು ಎಂಬ ಸ್ಥಳದಲ್ಲಿ ಬಸಪ್ಪಾ ಯಂಬ ಹುಲ್ಲು ಮೊಲ್ಲರಸ ಗೌಡಗೆ ಚವುಡಗೊಂಡ', ಎಂದಿದೆ.[76] ಇಲ್ಲಿನ 'ಮೊಲ್ಲರಸ' ಎಂಬುದು 'ಮಲವರ ಅರಸ' ಎಂಬುದಕ್ಕೆ ಸಂವಾದಿಯಾಗಿರುವಂತಿದೆ. ಈ ಅಂಶಗಳು ಹಾಗೂ ಕಡೂರು, ಸೊರಬದ ಶಾಸನಗಳಲ್ಲಿ ಚಂಗಾಳ್ವರ ಯುದ್ಧದ ಪ್ರಸಕ್ತಿಗಳು ಇರುವಲ್ಲಿ ,ಬಹುಶಃ ಈಗಾಗಲೆ ಸೂಚಿಸಿರುವಂತೆ ನಂತರದ ಚಂಗಾಳ್ವರ ಅರಸು ವಂಶೀಯರು ವಲಸೆ ಹೋಗಿ ಕೆಳದಿ ಸನಿಹದಲ್ಲಿ (ಕ್ರಿ.ಶ. ೧೪೫೦ರ ನೆರೆಯಲ್ಲಿ,) ಕೊಡಗು ಮಲೆಪ್ರದೇಶದಿಂದ ಬಂದು ಮಲವರೆನಿಸಿದರೆಂಬುದಕ್ಕೆ ಪೋಷಕವಾಗಬಹುದು. ಆ ಮಲವರ ಪೈಕಿಯಿಂದ ಕೆಳದಿ ವಂಶವು ರೂಪಿತವೆಂದರೆ, 'ಇಕ್ಕೇರಿಯಿಂದ ಕೊಡಗಿಗೆ ಬಂದು ರಾಜ್ಯಸ್ಥಾಪನೆ ಮಾಡಿದವನು ಚಂಗಾಲ್ವ ವಂಶದವನಿರಬಹುದು', ಎಂಬ 'ಪಟ್ಟೋಲೆ ಪಳಮೆ'ಯ ಮಾತಿಗೆ ಇಂಬು ಕೊಡುವಂತಾಗುತ್ತದೆ. ಅಂದರೆ ಕೊಡಗಿನ ಚೆಂಗಾಲ್ವರ ಶಾಖೆ ಕೆಳದಿ ಅರಸುವಂಶವಾಗಿರಬಹುದು ಎಂಬ ಊಹೆಗೆ ಅವಕಾಶವಾಗುತ್ತದೆ.

ಈ ಅರಸುವಂಶವು ಕ್ರಿ.ಶ. ೧೪೯೯ ರಿಂದ ೧೭೬೩ರವರೆಗೆ ಆಳ್ವಿಕೆ ನಡೆಸಿತು. ಇವರು ಶಾಸನಗಳಲ್ಲಿ 'ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ ಶಿವಗುರು ಭಕ್ತಿಪರಾಯಣ' ಎಂದೂ ಹೇಳಿಕೊಂಡಿದ್ದಾರೆ. ಇವರ ಗುರುಮಠವಾದ ಕೆಳದಿ ಹಿರೇಮಠವು ರಂಭಾಪುರಿ ಸಂಪ್ರದಾಯದ್ದು . ಇವರು ಸ್ಥಾಪಿಸಿದ ಮಠಗಳಲ್ಲಿ ಮಹತ್ತಿನ ಮಠ, ಮಹಾಮತ್ತಿನ ಮಠ, ವಾಶೀಕೃತಮಠ, ನಿರಾಸೆಮಠ ಇತ್ಯಾದಿ ವೀರಶೈವ ಮಠಗಳಲ್ಲಿ ಮಹತ್ತಿನ ಮಠಗಳು ಬಹುಸಂಖ್ಯಾತವಾಗಿದ್ದುವು. ಉತ್ತರಕನ್ನಡ, ಧಾರವಾಡ, ಬಿಜಾಪುರ, ಮೈಸೂರು , ಕೊಡಗು, ದೆಹಲಿ, ಕಾಶಿ ಮುಂತಾದ ಕಡೆ ಜಂಗಮ ಮಠಗಳನ್ನು ಸ್ಥಾಪಿಸಿದರು. ಸಣ್ಣ ಮಠಗಳು ಚರಂತಿಮಠಗಳೆನಿಸಿದ್ದುವು. ಇವುಗಳ ಮೇಲ್ವಿಚಾರಣೆ ನಡೆಸುವ ಮಠಗಳಿಗೆ ಸಿಂಹಾಸನ ಧರ್ಮ ಮಠಗಳೆಂದು ರೂಢಿಗಿತ್ತು.[77] ಈ ಮಠಗಳಿಗೆ ಹಾಗೂ ಅಗ್ರಹಾರಗಳಿಗೆ ಕೆಳದಿ

74. Francis Buchanin : A Journey from madras through Mysore, Canara and Malabar, 1807, p. 252-54
75. ವೆಂಕಟರಂಗೋಕಟ್ಟಿ : ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ ಗ್ಯಾಸೆಟಿಯರ್ (ಕನ್ನಡ ಭಾಷಾಂತರ) ೧೮೯೩, ಪು.೧೯೯- ಕಟ್ಟಿಯವರು ಸ್ಥಳೀಯ ಸಂಗತಿಗಳನ್ನು ತಿಳಿದವರಾದ ಕಾರಣ ಅವರ ಮಾತು ಹೆಚ್ಚು ವಿಶ್ವಸನೀಯವಾಗುತ್ತದೆ.
76. ಕರ್ನಾಟಕದ ಕೈಫಿಯತ್ತುಗಳು, ಅದೇ, ಪು. ೧೪೪
77. ಕೆಳದಿ ಗುಂಡಾಜೋಯಿಸ್: ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ, ಕೆಳದಿ, ೧೯೭೫, ಪು. ೭೫

ಅರಸರು ಯಥೇಚ್ಛವಾಗಿ ದಾನದತ್ತಿಗಳನ್ನು ನೀಡಿದರು. ಶಿವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ವೀರಭದ್ರ ಹಾಗೂ ಹನುಮಂತನ ದೇಗುಲಗಳ ನಿರ್ಮಾಣ ವಿಪುಲವಾಗಿ ಇವರ ಕಾಲದಲ್ಲಿ ಆಯಿತು. ಈ ಮಠಗಳು ಸಾಂಸ್ಕೃತಿಕ ಕೇಂದ್ರಗಳೆನಿಸಿ, ಶಿಕ್ಷಣ, ಶಿವದೀಕ್ಷೆ ಲಿಂಗಧಾರಣೆ, ಶಿವಾಚಾರ, ಹುಟ್ಟು, ಸಾವು, ಮದುವೆಗಳಂತಹ ವಿಧಿಪೂರ್ವಕ ಕಾರ್ಯಗಳನ್ನು, ಹಾಗು ಜಾತ್ರೆ, ರಥೋತ್ಸವ, ದೀಪಾರಾಧನೆಗಳನ್ನು ನಡೆಸುತ್ತಿದ್ದುವು. ಇವರ ಕಾಲದ ಲಿಂಗವಂತರ ಮನೆಗಳಲ್ಲಿ ದಾಸೋಹ, ವಿರಕ್ತರ ಗ್ರಾಮ ಸಂಚಾರ, ಬಸವಣ್ಣನ ದೇಗುಲ ಕಟ್ಟಿ 'ಗಣಪರ್ವ' ವಿಡುವ ರೂಢಿ ಇತ್ತು.[78] ಚೌಡಪ್ಪನಾಯಕನಿಂದ ಸ್ಥಾಪಿತವಾದ ಈ ರಾಜ್ಯದಲ್ಲಿ ದೊಡ್ಡಸಂಕಣ್ಣನಾಯಕ, ರಾಮರಾಜನಾಯಕ, ಹಿರಿಯವೆಂಕಟಪ್ಪನಾಯಕ, ಶಿವಪ್ಪನಾಯಕ, ಚನ್ನಮ್ಮಾಜಿ, ಹಿರಿಯ ಬಸಪ್ಪನಾಯಕ, ಇಮ್ಮಡಿ ಸೋಮಶೇಖರನಾಯಕ, ಬೂದಿ ಬಸಪ್ಪನಾಯಕ ಮುಂತಾದವರು ಗಮನಾರ್ಹರು. ಇವರು ವಿಜಯನಗರದರಸರ ಮಾಂಡಲಿಕರಾಗಿ ವಿಶ್ವಾಸವನ್ನು ಗಳಿಸಿಕೊಂಡಿದ್ದರು. ಶಿವಪ್ಪನಾಯಕನ ಶಿಸ್ತು, ಹಿರಿಯ ವೆಂಕಟಪ್ಪನಾಯಕನ ಜೈತ್ರಯಾತ್ರೆ ಕೆಳದಿ ಬಸವರಾಜನ 'ಶಿವತತ್ತ್ವ ರತ್ನಾಕರ 'ಪ್ರಸಿದ್ಧವಾದವು. ಇವರಲ್ಲಿನ ಅಧಿಕಾರಿ ವಿಭಾಗಗಳು, ಯುದ್ಧದ ರೀತಿ, ನೌಕಾದಳ ವ್ಯವಸ್ಥೆ, ನ್ಯಾಯಾಂಗ ಪದ್ಧತಿ, ಧರ್ಮ ಸಮನ್ವಯ ದೃಷ್ಟಿ, ರಾಣಿಯರ ಆಡಳಿತ, ಸಾಮಾಜಿಕ ಅಭಿವೃದ್ಧಿ ಕಾರ್ಯ ಸ್ವದೇಶಿಯ ಹಾಗೂ ವಿದೇಶಿಯರೊಡನೆ ವ್ಯಾಪಾರ - ವಾಣಿಜ್ಯ ಸಂಬಂಧ, ತೆರಿಗೆ ಪದ್ಧತಿ. ನೀರಾವರಿ ಪದ್ಧತಿ, ಶಿಕ್ಷಣವ್ಯವಸ್ಥೆ, ವಾಸ್ತು ಶಿಲ್ಪ,ಕೋಟೆಕೊತ್ತಲಗಳು, ಸಾಹಿತ್ಯ ಕಲೆಗಳು ಸುಮಾರು ೨೬೩ ವರ್ಷಗಳ ಆಳ್ವಿಕೆಯಲ್ಲಿ ವಿಕಾಸಗೊಂಡ ರೀತಿಯು ವಿಶಿಷ್ಟವೆನಿಸಿದೆ. ವೀರಮಾಹೇಶ್ವರಾಚಾರ ಸುಧಾವಾರ್ಧಿಟೀಕೆ, ವೀರಶೈವ ಸುಧಾನಿಧಿ ಟೀಕೆ, ಗಣಸಹಸ್ರನಾಮ ಕಾಶೀಕಾಂಡ ಚನ್ನವೀರಮಾಹೇಶ್ವರನ ವೀರಾಗಮ ಟೀಕು, ಶಿವತತ್ತ್ವರತ್ನಾಕರ, ಕೆಳದಿ ನೃಪವಿಜಯ, ಕೆಳದಿ ರಾಜಾಭ್ಯುದಯ ಪಾರಿಜಾತ, ತುಂಗ ಭಾರತ, ಸಂಸ್ಕೃತಾರ್ಥ ಪ್ರಕಾಶಿಕಾ, ವೈಯಾಕರಣ ಭೂಷಣ, ಇತ್ಯಾದಿಗಳು ಇವರ ಕಾಲದ ಅರಸರು ಹಾಗೂ ಇತರ ಕವಿ ವೈಯಾಕರಣಿಗಳು ರಚಿಸಿದ ಕೃತಿಗಳಾಗಿವೆ. ಇವರು ಜನಪದ ಗೀತೆ ಮತ್ತು ಕಲೆಗಳಿಗೂ ಉತ್ತೇಜನವಿತ್ತರು. ಇವರ ಕುಲದೇವರುಗಳಾದ ಕೊಲ್ಲೂರಿನ ಮೂಕಾಂಬಿಕಾದೇವಿಯ ದೇಗುಲ, ಕೆಳದಿಯ ಶ್ರೀರಾಮೇಶ್ವರ ದೇವಾಲಯ, ಇಕ್ಕೇರಿಯ ಅಘೋರೇಶ್ವರ ದೇವಾಲಯ, ಕೆಳದಿಯ ವೀರಭದ್ರ ದೇವಾಲಯ ಹಾಗೂ ನಗರದ ಶ್ರೀ ನೀಲಕಂಠೇಶ್ವರ ದೇವಾಲಯಗಳು, ಇವರ ಕಾಲದ ವಾಸ್ತು ಶಿಲ್ಪ-ಕಲೆಗಳ ಪ್ರತೀಕಗಳಾಗಿವೆ.[79] ಅಂದರೆ ಒಂದು ಅಚ್ಚುಕಟ್ಟಾದ ಜನಪ್ರಿಯ ಆಡಳಿತವನ್ನು ಒಂದು ರಾಜಕೀಯ ವ್ಯವಸ್ಥೆ ಹೇಗೆ ಮಾಡಬಹುದು ಎಂಬುದಕ್ಕೆ

78. ಬಸವರಾಜ ನೆಲ್ಲಿಸರ : 'ಕೆಳದಿ - ವೀರಶೈವಧರ್ಮ ಮತ್ತು ಸಮಾಜ, -ಕೆಳದಿಸಂಸ್ಥಾನ ಸಮಗ್ರ ಅಧ್ಯಯನ, (ಸಂ) ಡಾ। ಎಂ.ಎಂ. ಕಲಬುರ್ಗಿ, ಬಿ.ಎಸ್. ರಾಮಭಟ್ಟ, ಆನಂದಪುರ, ೧೯೯೪, ಪು. ೨೧೫-೧೮

79. ಕೆಳದಿಗುಂಡಾಜೋಯಿಸ್: 'ಕೆಳದಿ ಅರಸರ ಕುಲದೇವತೆಗಳು,' ಮಾನವಿಕ ಕರ್ನಾಟಕ, ೧೯೭೩, ಸಂ.೩ ಸಂ.೩ ಮತ್ತು ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ : ಅದೇ, ನೋಡಿ.

ಈ ವೀರಶೈವ ರಾಜವಂಶವು ಒಂದು ಮೈಲಿಗಲ್ಲಾಗಿ ತೋರಿಕೊಂಡಿದೆ. ಇನ್ನು ಕೆಳದಿ ಅರಸರ ಬಿರುದಾದ 'ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ' ಎಂಬುದು ವೀರಶೈವದ ಸಂದರ್ಭವಾಗದೆ ಶೃಂಗೇರಿ ಮಠದ ಆಗುಹೋಗುಗಳ ಪಾಲುದಾರಿಕೆಯ ಕಾರಣ ಅಂಟಿಕೊಂಡಿದೆ ಎಂಬ ಅಭಿಮತ ಡಾ॥ ಎಂ.ಎಂ. ಕಲಬುರ್ಗಿ ಅವರದಾಗಿದೆ.[80] ಆದರೆ ವೀರಶೈವವು 'ತಾಂತ್ರಿಕ ವೈದಿಕ' ನಿಷ್ಠೆಯನ್ನೂ ಹೊಂದಿದೆ, ಎಂಬ ಪರಿಭಾವನೆ ಇರುವಲ್ಲಿ ಕೆಳದಿ ಅರಸರ ಮಹತ್ತಿನ ಮಠಗಳ ಶಾಸನಗಳಲ್ಲಿ ಬರುವ ' ಶ್ರೀಮತ್ಸಜ್ಜನ ಶುದ್ಧ ಶಿವಾಚಾರ ಸಂಪಂನ ದ್ಯಾವಾಪ್ರಥ್ವಿ ಮಹಾಮಹತ್ತಿನೊಳಗಾದ ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ ಶಿವಗುರು ಭಕ್ತಿಪರಾಯಣರಾದ' ಎಂಬ ಸಾಲಿನಲ್ಲಿ 'ಸಜ್ಜನ ಶುದ್ಧಶಿವಾಚಾರ', 'ಮಹಾಮಹತ್ತಿನೊಳಗಾದ,' ಎಂಬ ವಿಶೇಷಣಗಳೂ ಇರುವ ಕಾರಣ, ಇಲ್ಲಿ ಈ ಬಿರುದೆಲ್ಲವೂ ವೀರಶೈವದ ಶಿವಭಕ್ತಿ ಹಾಗೂ ವೀರಶೈವದ ಗುರುಭಕ್ತಿಗೆ, ಮುಖ್ಯವಾಗಿ ಸಂಮಿಲಿತವಾಗುತ್ತದೆ ಎನ್ನಬೇಕು. ಇಲ್ಲಿ ಶೃಂಗೇರಿ ಮಠದ ಸಂಬಂಧ, ಒಂದು ಸಂಕೇತವಷ್ಟೆ ಎನ್ನಬಹುದು. ರಂಭಾಪುರಿ ಸಂಪ್ರದಾಯಸ್ಥರಾಗಿದ್ದ ಕಾರಣ ಅಂತಹ ವೀರಶೈವ ಸಂಬಂಧೀ ಬಿರುದುಗಳಿದ್ದುವೆನಿಸುತ್ತದೆ. ಇವರ ಕಾಲದಲ್ಲಿ ಮಠಗಳ ರಾಚನಿಕ ವ್ಯವಸ್ಥೆಯು, ಸಾಮಾಜಿಕ ಸಾಂಸ್ಕೃತಿಕ ತುಡಿತಗಳನ್ನು ಹೊಂದಿದ್ದು ವಿಶಿಷ್ಟವಾದ ಆಧುನಿಕ ಚಾಲನೆ ಆಗಿತ್ತು. ಪೋರ್ಚುಗೀಸರೊಡನೆ ಇವರಿಗೆ ರಾಜಕೀಯ ಸಂಬಂಧಗಳಿದ್ದುವು.

ಹಾಲೇರಿ ಅರಸರು

ಕೊಡಗಿನ ಹಾಲೇರಿ ಅರಸು ವಂಶವು ಕೆಳದಿ ವಂಶದಿಂದ ಕುಡಿಯೊಡೆದು ಬಂದಿತ್ತು. ಚಂಗಾಳ್ವರೊಡನೆ ಈ ವಂಶದರಸರು ಸ್ವಕೀಯರಾಗಿದ್ದರು. ಚಂಗಾಳ್ವ ಹಾಗೂ ಕೆಳದಿಯವರಲ್ಲಿ ಅವರ ಸಗ್ಗಾವತ್ತಿನ (ವಂಶ ಪೂರ್ವಜರು) ಅರಸರಿದ್ದರು. ವಿಜಯನಗರದ ಪತನಾನಂತರ ಅನಾಯಕತ್ವದಿಂದ ಕೂಡಿ ನಾಯಕರ, ಬಾಳುಕಾರರ, ಬಾಚೆಕಾರರ ಕಚ್ಚಾಟದಿಂದ ರೋಸಿಹೋಗಿದ್ದ ಕೊಡಗಿನ ಜನತೆಗೆ ನೆಮ್ಮದಿ ತಂದು ಕೊಟ್ಟದ್ದು ಈ ವಂಶ. ಕೊಡಗನ್ನು ಒಟ್ಟಾಯವಾಗಿ ಮಾಡಿ ಆಳಿದ್ದು ಈ ವಂಶ. ಚಂಗಾಳ್ವರು ಹರಡಿದ್ದ ಶಿವಸಂಸ್ಕೃತಿಯನ್ನು ವ್ಯಾಪಕವಾಗಿ ಕೊಡಗಿನಲ್ಲಿ ಇದು ಬೆಳೆಸಿತು; ೬೩ ವೀರಶೈವ ಮಠಗಳನ್ನು ನಿರ್ಮಿಸಿ ಹಾಗೂ ಅನುಗುಣ ಜಂಗಮರನ್ನು ನೇಮಿಸಿ ಚಂಗಾಳ್ವರ ಕಾಲದವನ್ನೂ ಸೇರಿದಂತೆ ೧೦೮ ಮಠಗಳನ್ನು ತೀರ ಪುಟ್ಟ ಜಿಲ್ಲೆ ಕೊಡಗಿನಲ್ಲಿ ಪೋಷಿಸಿತು. ಆದರೆ ಮತಾಂತರದ ಮುಳ್ಳಾಗದೆ ವೀರಶೈವದ ಸಾಂಸ್ಕೃತಿಕ ಪುಷ್ಪ ಅರಳಲು ಇಲ್ಲಿ ಅನುವು ಮಾಡಿಕೊಟ್ಟಿತು. ಕನ್ನಡದ ಸಂಸ್ಕೃತಿಯನ್ನು ಬೆಳೆಸಿತು. ಚಂಗಾಳ್ವರ ಸಮರ್ಥ ವಾರಸುದಾರನಾಗಿತ್ತು. ಈ ವಂಶದ ಮೊದಲ ರಾಜ ವೀರಒಡೆಯ (ವೀರರಾಜ) ಕೆಳದಿವಂಶದ ರಾಮರಾಜನಾಯಕನ ಹಿರಿಯ ಮಗ.[81]

80. ಎಂ. ಎಂ. ಕಲಬುರ್ಗಿ : 'ಕೆಳದಿಸಂಸ್ಥಾನ - ಕೆಲವು ಹೊಸಸಂಗತಿಗಳು', ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ, ಅದೇ, ಪು. ೨೮

81. ಎಂ.ಜಿ. ನಾಗರಾಜ್ : 'ಕೊಡಗಿನ ಹಾಲೇರಿ ಅರಸುಮನೆತನ,' ಸಾರಂಗ ಶ್ರೀ, ಅದೇ, ಪು. ೮೮

ಇವನು ಕ್ರಿ.ಶ. ೧೫೮೨-೯೩ರ ಅವಧಿಯಲ್ಲಿ ಕೊಡಗಿನ ಹಾಲೇರಿ ಗ್ರಾಮದಲ್ಲಿ ವಂಶವನ್ನು ಸ್ಥಾಪಿಸಿದ. ಇವನ ಮೊಮ್ಮಗ ಮುದ್ದುರಾಜನಕೇರಿ = ಮಡಿಕೇರಿಯನ್ನು ಕ್ರಿ.ಶ. ೧೬೮೧ರಲ್ಲಿ ಕಟ್ಟಿ ನಾಡುಗಳನ್ನು ವಿಂಗಡಿಸಿ ದಕ್ಷ ಸಂಘಟಕನಾಗಿ ಆಳಿದ. ಇವನ ಮಗ ಸಿರಿಬಾಯಿ ದೊಡ್ಡವೀರಪ್ಪ ತಂದೆ ರೂಪಿಸಿದ ೨೮ ನಾಡುಗಳಿಗೆ ಮತ್ತೆ ೭ ನಾಡುಗಳನ್ನು ಕೂಡಿಸಿ ವೈರಿಗಳನ್ನು ಗೆದ್ದು ರಾಜ್ಯದ ಗಡಿಗಳನ್ನು ಬಿಗಿಮಾಡಿದ. ನಂತರ ಹೆಸರಾದವ ದೊಡ್ಡವೀರರಾಜೇಂದ್ರ ಒಡೆಯ, ವೀರರಾಜೇಂದ್ರ ಪೇಟೆ ಹಾಗೂ ನಾಲ್ನಾಡು ಅರಮನೆಯನ್ನು ಕಟ್ಟಿ ಜನಪ್ರಿಯ ಆಡಳಿತಗಾರನಾಗಿದ್ದ. ವಂಶದ ಇತಿಹಾಸ ಹಾಗೂ ರಾಜಕೀಯ ನಡೆಗಳ ವಿವರದ ಸಾಂಸ್ಕೃತಿಕ ಕೃತಿಯಾದ 'ರಾಜೇಂದ್ರ ನಾಮೆ'ಯನ್ನು ಬರೆಸಿದ. ಇವನ ಮಗಳು ರಾಣಿ ದೇವಮ್ಮಾಜಿ ಸ್ವಲ್ಪ ಕಾಲ ಆಳುವಷ್ಟರಲ್ಲಿ ಇವನ ಸೋದರ ೨ನೇ ಲಿಂಗರಾಜ ಒಡೆಯ ಸಿಂಹಾಸನ ಪಡೆದ. ಬಹಳ ದಕ್ಷ, ರೈತಜನ ಹಿತೈಷಿಯಾಗಿ, ಆಡಳಿತ ಹಾಗೂ ನಾಡಿನ ಆಗುಹೋಗುಗಳ ಕುರಿತ ನಿಯಮಗಳ ಹಾಗೂ ಸಾಂಸ್ಕೃತಿಕ ನಡಾವಳಿಗಳ ದಾಖಲೆಯಾದ 'ಹುಕುಂನಾಮೆ' ಯನ್ನು ರೂಪಿಸಿ ನಡಾವಳಿಗಳನ್ನು ಜಾರಿಗೆ ತಂದ. ನಿಜಗುಣ ಶಿವಯೋಗಿಯ 'ವಿವೇಕ ಚಿಂತಾಮಣಿ'ಯನ್ನು ಸಂಸ್ಕೃತಕ್ಕೆ ಅನುವಾದಿಸಿದ. 'ಬಸವರಾಜ ವಿಜಯ' ಎಂಬ ಕೃತಿಯನ್ನೂ ರಚಿಸಿದನೆನ್ನಲಾಗಿದೆ. ಈತ ಕವಿ ಆಗಿದ್ದು ಚಿತ್ರಕಲೆಗೆ ಉತ್ತೇಜನ ನೀಡಿದ. ಇವನ ಮಗ ಕೊಡಗಿನ ಕೊನೆ ಅರಸ ಚಿಕ್ಕವೀರರಾಜೇಂದ್ರ ಒಡೆಯ, ಶೂರ, ದಕ್ಷ ಹಾಗೂ ಜನಪ್ರಿಯ ದೊರೆಯಾದರೂ ತಾರುಣ್ಯದಲ್ಲಿ ತುಸು ದುಡುಕಿದ ಎನ್ನಲಾಗಿದೆ. ಕ್ರಿ.ಶ. ೧೮೩೪ರಲ್ಲಿ ಆಂಗ್ಲರು ಕೊಡಗನ್ನು ಆಕ್ರಮಿಸಿದಾಗ ಈ ಅರಸು ವಂಶದ ಆಳ್ವಿಕೆಯು ಅಂತ್ಯವಾಯಿತು. ದೊಡ್ಡವೀರರಾಜೇಂದ್ರ ಒಡೆಯನು ಕಟ್ಟಿಸಿದ ಮಾದಾಪುರ ಮಠ, ವೀರರಾಜೇಂದ್ರ ಪೇಟೆಯ ಚರ್ಚು ಇಂದಿಗೂ ಇವೆ. ೨ನೇ ಲಿಂಗರಾಜಕಟ್ಟಿಸಿದ ಓಂಕಾರೇಶ್ವರ ದೇಗುಲ ಹಾಗೂ ರಾಜರ ಗದ್ದುಗೆ ಕಟ್ಟಡಗಳು ಆದಿಲ್ ಶಾಹಿ ಪ್ರಭಾವಿತ ಇಂಡೋ-ಇಸ್ಲಾಮಿಕ್‌ಶೈಲಿಯ ಕಟ್ಟಡಗಳಾಗಿವೆ. ದಾಖಲೆಯ ರೀತ್ಯವೂ ಈ ವಂಶದ ಕೊನೆಯ ರಾಜಗುರು ರುದ್ರಪ್ಪ ಸ್ವಾಮಿಗಳ ಗದ್ದುಗೆಯು ಮಡಿಕೇರಿಯಲ್ಲಿ ರಾಜರ ಗದ್ದುಗೆಗಳ ಆವರಣದಲ್ಲಿದೆ.

ಈ ವಂಶವು, ಕೆಳದಿ, ಮಲೆಯಾಳ ಅರಸುಗಳು ಹಾಗೂ ಆಂಗ್ಲರೊಡನೆ ಸಾಕಷ್ಟು ವಿಶ್ವಾಸಪೂರಿತ ಸಂಬಂಧಗಳನ್ನು ಹೊಂದಿತ್ತು; ಸ್ವಾದೆ, ಪುಂಗನೂರು, ಬೆಳಗಾವಿ ಜಿಲ್ಲೆರುದ್ರಾಪು ರ ದೇಸಗತಿ ಸಂಬಂಧದ ನಾಗರಮನವಳ್ಳಿ ಮನೆತನ, ಹಾಸನಜಿಲ್ಲೆ ಐಗೂರು ಹಾಗೂ ಚೆಂಗಾಳ್ವರ ಅರಸರಲ್ಲಿ ರಕ್ತಸಂಬಂಧಗಳನ್ನು ಹೊಂದಿತ್ತು. ಇವರ ವೀರಶೈವ ಧರ್ಮಾನುಸರಣೆಯ ಫಲವಾಗಿ ಕೊಡಗಿನ ಮಠಗಳಿಗೆ ಸಾಕಷ್ಟು ದಾನ ದತ್ತಿ ಉಂಬಳಿ ಜಮೀನು ದೊರೆತಿತ್ತು. ಆ ಮಠಗಳು ಸ್ಥಳೀಯ ಜನಸಂಸ್ಕೃತಿ ಘಟಕಗಳಾದ ಹುತ್ತರಿ ಹಬ್ಬ ಮತ್ತು ಕೋಲಾಟ, ಕಾವೇರಿ ತುಲಾಸಂಕ್ರಮಣ, ಭದ್ರಕಾಳಿ ಆರಾಧನೆ ಇತ್ಯಾದಿಗಳ ಆಚರಣೆಗಳನ್ನು ಅಳವಡಿಸಿಕೊಂಡಿದ್ದುವು. ಗ್ರಾಮಗ್ರಾಮಗಳಲ್ಲಿ ಶಿವಾಲಯಗಳು, ಶಿವನೆಲೆಗಳು, ದೇವರ ಕಾಡುಗಳಲ್ಲಿ ಇದ್ದು ಆರಾಧನಾ ಕೇಂದ್ರಗಳಾಗಿದ್ದವು. ಮನೆ

ಮನೆಗಳಲ್ಲಿ ವಿಭೂತಿಯ ಭಸ್ಮಸಂಪುಟಗಳಿದ್ದು, ಅನೇಕ ಕೊಡವ ಮನೆತನಗಳು, ತಮ್ಮ ಹಿರಿಯರ ಸಮಾಧಿಗಳಿಗೆ, ದೇಗುಲಗಳಿಗೆ ವಾರ್ಷಿಕ ಸಂಸ್ಕಾರವನ್ನು ಜಂಗಮರಿಂದ ಮಾಡಿಸುತ್ತಿದ್ದರು. ಇಂದಿಗೂ ಆ ಪದ್ಧತಿ ಇದೆ. ಈ ದೃಷ್ಟಿಯಿಂದ ಹಾಲೇರಿ ಅರಸು ವಂಶವು ವೀರಶೈವ ಧರ್ಮದ ಸಾಂಸ್ಕೃತಿಕ ನೆಲೆಗಳನ್ನು ಗಾಢವಾಗಿ ಕೊಡಗಿನಲ್ಲಿ ಬೆಳಸಿತೆನ್ನಬೇಕು. ರಂಭಾಪುರಿ ಸಂಪ್ರದಾಯಾನುವರ್ತಿಗಳಾದರೂ ಈ ಅರಸುವಂಶವು ಗುರು – ವಿರಕ್ತಮಠಗಳೆಂಬ ಭೇದವಿಲ್ಲದೆ, ಸಮಾನಧರ್ಮದಿಂದ ನೋಡಿತು. ಶಾಸನಗಳಲ್ಲಿ ಇದಕ್ಕೆಲ್ಲ ಪೋಷಕವಾಗಿ 'ಶಿವಗಂಗೆ ಮೇಲಿನ ಗವಿ ಸಿಂಹಾಸನಾರೂಢರ ಸಾಂಪ್ರದಾಯಸ್ತರಾದ ಶಿಥಪುರದ ಮಠದ ಸ್ವಾಮಿಯವರ ಕರಮಲಸಂಜಾತರಾದ ವೀರಶೈವ ಮತಸ್ತರಾದ... ಭಾರದ್ವಾಜ ಗೋತ್ರದ ಆಶ್ವಲಾಯನ ಸೂತ್ರ ರುಕ್ಸಭಾಸುಕಾಧ್ಯಾಯ (ಋಕ್‌ಶಾಖಿ) ಗಳಾದ ವೀರಶೈವ ಮತ ಧುರೀಣ ಪ್ರವೀಣರಾದ ಶ್ರೀಮತ್ಕೊಡಗು ಸಂಸ್ಥಾನ ಸಂಸ್ಥಿತಾಸವದ್ಯ ಕ್ಷೀರಸಗರ ಮಧ್ಯ ಪರಿಭ್ರಾಜಮಾನ...' ಎಂದೇ ಬರೆದುಕೊಂಡಿದ್ದಾರೆ. ಹಾಗೂ 'ವೀರಸಿಂಹಾಸನ ಮರುಘಾತರ್ಕ' ದ ಸಾಮರಸ್ಯದ ಸಂಪ್ರದಾಯವನ್ನು ಮಾನಿಸಿದ್ದಾರೆ, ಎಂಬುದು ಅಬ್ಬಿಮಠದಲ್ಲಿ ಮುಂದೆ ಆದ ಶಾಸನೋಕ್ತ ವಿರಕ್ತ ಸಂಪ್ರದಾಯದ ನಿರ್ವಹಣೆಯಿಂದ ತಿಳಿಯುತ್ತದೆ. ಕುಂಭಕೋಣದ ಪೆರಿಯ ಮಠವೂ ಈ ರೀತಿಯ ಸಂಯುಕ್ತ ಸಂಪ್ರದಾಯದ ಮಠವಾಗಿದೆ. ರೇಣುಕ ಸಂಪ್ರದಾಯದ ಷಡಕ್ಷರದೇವ ಹಾಗೂ ವಿರಕ್ತರಾದ ಇಮ್ಮಡಿ ಮುರುಗಾಸಿದ್ದರು, ಏಕವಂಶೀಯರಾಗಿ ಇಂತಹುದೇ ಸಂಪ್ರದಾಯವನ್ನು ಎತ್ತಿ ಹಿಡಿದಂತೆ ತೋರುತ್ತದೆ. ಸರ್ವಧರ್ಮಸಮನ್ವಯವನ್ನು ಈ ಅರಸರು ಪಾಲಿಸಿದರು.

ಸ್ವಾದಿ ಅರಸರು

ಉತ್ತರ ಕನ್ನಡದ ಸ್ವಾದಿ (ಸೋದೆ) ಅರಸು ಮನೆತನವು ಮೂಲದಲ್ಲಿ ಬ್ರಾಹ್ಮಣವಾಗಿದ್ದು, ಮರಾಠಿದಾಖಲೆಗಳ ರೀತ್ಯಾ ವಂಶದ ಒಂದನೇ ರಘುನಾಥ ನಾಯಕನ ಕಾಲದಲ್ಲಿ (ಕ್ರಿ.ಶ. ೧೬೧೮-೧೬೩೮) ವೀರಶೈವವಾಯಿತು.. ಇವರ ಕುಲದೈವ ಬನವಾಸಿಯ ಮಧುಕೇಶ್ವರ ಲಿಂಗ. ಈ ನಾಯಕನ ಮಗ ಒಂದನೆಯ ಮಧುಲಿಂಗರಾಜ ಬಹಳ ಪ್ರಸಿದ್ಧಿಯಾಗಿದ್ದ. ಮುಂದಿನ ಸವಾಯಿರಾಮಚಂದ್ರನ ಕಾಲದಲ್ಲಿ ರಾಜ್ಯವು ರಾಜಕೀಯ ಹಾಗೂ ಆರ್ಥಿಕ ಪ್ರಗತಿ ಸಾಧಿಸಿತು. ಇವನ ಸೋದರ ಒಂದನೆಯ ಸದಾಶಿವರಾಯನ ಕಾಲವು ಸ್ವಾದಿಯ ವೀರಶೈವದ ಸುವರ್ಣಯುಗವಾಯಿತು. ಇವನು ಬರೆದ ಸಾಹಿತ್ಯ, ಶಿವಭಕ್ತಿ ಹಾಗೂ ಶಿವದರ್ಶನದ ಸಾಹಿತ್ಯವಾಗಿದೆ ಎನ್ನಲು ಇವನು ರಚಿಸಿದ ಸ್ವರವಚನಗಳು, ಪಂಚವಿಂಶತಿಲೀಲೆಯ ರಗಳೆ, ತ್ರಿವಿಧಿ, ಉಳುವೆಯ ಮಹಾತ್ಮೆ, ಅಷ್ಟಕಗಳು, ಪ್ರಭುಲಿಂಗಲೀಲೆಯ ಜಾವಡಿ, ಸದಾಶಿವ ನೀತಿ, ಹಾಲಾಸ್ಯಪುರಾಣ ಇತ್ಯಾದಿಗಳಿವೆ.[82] ತನ್ನ 'ಸದಾಶಿವನೀತಿ' ಕೃತಿಯ ಕೊನೆಯಲ್ಲಿ 'ಶ್ರೀ ಮನ್ಮಹಾ ವೀರ ಮಾಹೇಶ್ವರಾಚಾರ್ಯವರ್ಯ ಮಳೆಯ ಗುರು ನಂದೀಶ್ವರ ಕರಕಮಲ ಸಂಜಾತ ಸದಾಶಿವರಾಜೇಂದ್ರ ....' ಎಂದಿರುವಲ್ಲಿ ಲಿಂಗ ದೀಕ್ಷಾಗುರುವನ್ನು ನೆನೆದಿದ್ದಾನೆ.[83] ಬನವಾಸಿಯಲ್ಲಿ ಗುರುನಂದಿಕೇಶ್ವರ ಮಠ,

82. ಸೋದೆಯ ಸದಾಶಿವರಾಯನ ಕೃತಿಗಳು : (ಸಂ) ಡಾ। ಬಿ.ಆರ್. ಹಿರೇಮಠ, ಗದಗ, ೧೯೯೫, ಪು. ೨೯
83. ಎಂ. ಜಿ. ವಾರಿ : 'ಸೋದೆ ಅರಸರ ರಾಜಗುರುಗಳು'; ಸಿದ್ಧರಾಮ ಸಂಪದ, ಅದೇ, ಪು. ೪೬

ಮಹಂತಿನ ಮಠ ಇತ್ಯಾದಿ ಹಲವಾರು ವೀರಶೈವ ಮಠಗಳಿವೆ. ಇವರಲ್ಲಿ ಸರ್ವಧರ್ಮ ಸಮನ್ವಯ ದೃಷ್ಟಿಯೂ ಕಾಣುತ್ತದೆ. ೧೭-೧೮ ನೇ ಶತಮಾನಗಳಲ್ಲಿ ವೀರಶೈವದ ವಿಶೇಷ ಪ್ರಸಾರಕ್ಕೆ ಸೋದೆಯಲ್ಲಿ ಶ್ರಮಿಸಿದವರು ಚಿತ್ರದುರ್ಗದ ಶ್ರೀ ಚಿನ್ಮೂಲಾದ್ರಿ ಮಠದ ಆದಿಗುರುಗಳಾದ ಮುರಿಗಾ ಶಾಂತವೀರ ದೇಶಿಕೇಂದ್ರಸ್ವಾಮಿಗಳು ಹಾಗೂ ಅವರ ಶಿಷ್ಯ ಇಮ್ಮಡಿ ಮುರುಗಾ ಗುರುಸಿದ್ಧರಾಗಿದ್ದಾರೆ. ಸ್ವಾದಿ ಅರಸು ಮನೆತನದಲ್ಲಿ ಇಮ್ಮಡಿ ಸದಾಶಿವರಾಯನೇ (ಕ್ರಿ.ಶ ೧೭೪೫-೬೭) ಕೊನೆಯವನಾಗಿದ್ದಾನೆ. ಈ ಸದಾಶಿವರಾಯ ಹಾಗೂ ಬಸವಲಿಂಗರಾಯನ ಸಮಾಧಿಗಳು ಸ್ವಾದಿಯ ಗದ್ದುಗೆ ಮಠದ ಬಳಿ ಇವೆ. ಅವುಗಳ ವಿಶಾಲ ಸ್ವರೂಪದ ಶಿಲಾ ಹೊದಿಕೆ ಹಾಗೂ ಶಿಲಾ ಪಾರ್ಶ್ವಗಳಲ್ಲಿ ಬಿಡಿಸಿರುವ ಶಿಲ್ಪಗಳು ಕೇವಲ ರಾಜಗದ್ದುಗೆ ಮೇಲಿವೆ ಎಂಬುದಷ್ಟೆ ಮುಖ್ಯವಾಗದೆ, ಬಹಳ ಕಲಾತ್ಮಕವಾಗಿವೆ. ಈ ಬಗೆಯ ಗದ್ದುಗೆಯ ರೂಪಗಳು ಹಾಸನಜಿಲ್ಲೆಯ ಕೆಲವು ವೀರಶೈವ ಮಠಗಳಲ್ಲಿ ಕಾಣಬರುತ್ತವೆ. ಇದಕ್ಕೆ ಒಂದು ಉದಾಹರಣೆ ಮಲ್ಲಾಪುರದ ಮಠ. ಈ ವಂಶದ ಬಾಂದೇವಾಡಿಯ ಬಸವಲಿಂಗನಾಯಕನು ಕ್ರಿ.ಶ. ೧೮೦೨ರಲ್ಲಿ ಕೊಡಗಿನ ದೊಡ್ಡವೀರರಾಜೇಂದ್ರಮಗಳು ರಾಜಮ್ಮಾಜಿಯನ್ನು ಮದುವೆ ಆಗಿದ್ದ. ಕ್ರಿ.ಶ. ೧೮೦೯ರಲ್ಲಿ ಕೆಲಕಾಲ ಕೊಡಗಿನ ಮುಖ್ಯದಿವಾನನೂ ಆಗಿದ್ದ.

ಬೀಳಗಿ ಅರಸರು

ಉತ್ತರ ಕನ್ನಡ ಜಿಲ್ಲೆಯ ಬೀಳಗಿ ರಾಜ ಮನೆತನವು ಐಸೂರಿನ ಅಂದಣ್ಣನಿಂದ (ಕ್ರಿ.ಶ. ೧೪೭೫) ಶುರುವಾದ ವಂಶ. ಆರಂಭದಲ್ಲಿನ ಅವರುಗಳ ಹೆಸರಿನ ಕಾರಣ ಮೂಲತಃ ವೈಷ್ಣವರಿದ್ದು, ನಂತರ ಜೈನರಾದರು ಎಂಬ ಅಭಿಪ್ರಾಯವಿದೆ. ಮುಮ್ಮಡಿ ಘಂಟೇಂದ್ರನ (ಕ್ರಿ.ಶ ೧೬೦೦-೩೨) ಕಾಲದಲ್ಲಿ ವೀರಶೈವರಾದರೆಂಬ ಮಾತೂ ಇದೆ. ಇವರಲ್ಲಿ ಶೂರನೆನಿಸಿದ ೧ನೇ ನರಸಿಂಹನು ಪ್ರಮುಖನಾದವ. ತನ್ನ ಶೌರ್ಯದಿಂದ ವಿಜಯನಗರದ ಕೃಷ್ಣದೇವರಾಯನನ್ನು ಮೆಚ್ಚಿಸಿದ. ಅವನ ಮಗಳಾದ ಹರಿಯಬ್ಬೆಯನ್ನು ಮದುವೆಯಾದ. ಮತ್ತೆ ಪ್ರಭಾವಶಾಲಿಯಾಗಿ ಪ್ರಖ್ಯಾತನಾದ. ಇಮ್ಮಡಿ ಘಂಟೇಂದ್ರ ತನ್ನ ತಂದೆ ೩ನೇ ನರಸಿಂಹ ಕಟ್ಟಿಸಲಾರಂಭಿಸಿದ ರತ್ನತ್ರಯ ಬಸದಿಯನ್ನು ಪೂರ್ಣಗೊಳಿಸಿದ. ಈ ನರಸಿಂಹನೇ ಐಸೂರಿನಿಂದ ಬೀಳಗಿಗೆ ರಾಜಧಾನಿಯನ್ನು ಬದಲಾಯಿಸಿದವ. ಈ ಘಂಟೇಂದ್ರನ ಕಾಲಕ್ಕೆ ಈ ಅರಸರು ವೀರಶೈವರ ಜೊತೆ ರಕ್ತಸಂಬಂಧ ಬೆಳಸಿರಬೇಕು , ಎಂದು ಹೇಳಿ ಅದಕ್ಕೆ ಕಾರಣ ಕ್ರಿ.ಶ. ೧೫೭೦ರಲ್ಲಿ ಬೀಳಗಿಯಲ್ಲಿ ವೀರಭದ್ರ (ವಿರೂಪಾಕ್ಷ) ದೇವಾಲಯವನ್ನು ನರಸಿಂಹನು ಕಟ್ಟಿಸಿದ ಹಿನ್ನೆಲೆಯೆ ಆಗಿದೆ, ಎಂಬುದು ಡಾ। ಸೂರ್ಯನಾಥ ಕಾಮತ್‌ರ ಅಭಿಮತವಾಗಿದೆ. ಕ್ರಿ.ಶ. ೧೫೭೦ರ ಬೀಳಗಿಯ ವಿರೂಪಾಕ್ಷ ದೇಗುಲದ ಶಾಸನ ರೀತ್ಯಾ ಈ ಮೂರನೆ ನರಸಿಂಹನು ತನ್ನ ತಾಯಿ ವೀರಮಾಂಬೆ(ವೀರಾಂಬಿಕಾ) ಯ ಆಶಯದ ಮೇರೆಗೆ ಸೋಮನದಿ ತೀರದಲ್ಲಿ ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿದ. ವೀರಪ್ಪ ಒಡೆಯನ ರಾಣಿಯಾದ ಈ ವೀರಮ್ಮ (ವೀರಮಾಂಬೆ) ತನ್ನ ಪತಿಗೆ ಅಕ್ಷಯ ಪುಣ್ಯಲೋಕ, ತನಗೆ ಶಿವಸಾಯುಜ್ಯ ಆಗಲಿ ಎಂದು ತನ್ನ ಕುವರ ನರಸಪ್ಪ ಒಡೆಯರ (ನರಸಿಂಹ ?) ಕೈಯಲ್ಲಿ ದೇಗುಲಕ್ಕೆ ದಾನ ನೀಡಿಸಿ,

ಬ್ರಾಹ್ಮಣರಿಗೂ ದಾನ ನೀಡಿದ್ದಾಳೆ. ಇದು ಶೈವ ಪ್ರಭಾವವೆನ್ನಲಾಗಿದೆ. ಆದರೆ 'ಅಕ್ಷಯ ಪುಣ್ಯಲೋಕ' ಜೈನ ಸಂಬಂಧಕ್ಕೆ ಹೆಚ್ಚು ತಾಗಿ, 'ಶಿವಸಾಯುಜ್ಯ' ವೀರಶೈವಕ್ಕೆ ಹೆಚ್ಚು ಸ್ಪರ್ಶವುಳ್ಳದ್ದಾಗುತ್ತದೆ. ಅಲ್ಲದೆ 'ವೀರಪ್ಪ ಒಡೆಯ ಹಾಗೂ ವೀರಮ್ಮ ಅಥವಾ ವೀರಮಾಂಬೆ' ಹೆಸರುಗಳು ವೀರಶೈವ ಪರವಾದವು ಎನ್ನಬೇಕು. ಅಂದರೆ ಅವರಿಬ್ಬರೂ ವೀರಶೈವದೊಲವಿನವರಾಗಿರಬೇಕು ಎನಿಸುತ್ತದೆ. ಅಥವಾ ವೀರಪ್ಪ ಜೈನನಾಗಿದ್ದು ವೀರಮ್ಮ ವೀರಶೈವ ಮನೆತನದಿಂದ ಬಂದಿರುವ ಸಾಧ್ಯತೆಯೂ ಆಗಬಹುದು. ಅಂತ್ಯದಲ್ಲಿ ಇಬ್ಬರೂ ವೀರಶೈವದ ಗುರುವಿನ ಪ್ರಭಾವಕ್ಕೆ ಒಳಗಾಗಿರಬೇಕು. ದಾನದಲ್ಲಿ ವೀರಶೈವರ ಹೆಸರಿಲ್ಲ ಎಂದರೆ, ಆ ಕಾಲದ ಬ್ರಾಹ್ಮಣ ಪ್ರಭಾವ ಹಾಗೂ ಸಾಮಾಜಿಕವಾಗಿ ಜನರ ಮುಂದೆ ಅವರು ವೀರಶೈವದ ಅನುವರ್ತಿಗಳಾಗಿ ತೋರಿಸಿಕೊಂಡಿಲ್ಲದಿದ್ದುದರ ಕಾರಣವೇ ಆಗಿರಬೇಕು. ಈ ದೃಷ್ಟಿಯಿಂದ ಕಾಮತರ ಅಭಿಪ್ರಾಯವೂ, ಮಮ್ಮಡಿ ಘಂಟೇಂದ್ರನ ಕಾಲದ ಮುಂಚೆಯೆ ವೀರಶೈವ ಮತಕ್ಕೆ ಈ ಅರಸರು ಒಲಿದಿದ್ದರೆಂಬಮಾತಿಗೆ ಪೋಷಕವಾಗುತ್ತದೆ. ಸ್ಪಷ್ಟವಾಗಿ ಇವರು ವೀರಶೈವಧರ್ಮಿಗಳಾದ ಸಂಗತಿ ಮುಮ್ಮಡಿ ಘಂಟೇಂದ್ರನ ಕಾಲಕ್ಕೆ, ಎಂಬುದು ಎದ್ದು ಕಾಣುತ್ತದೆ. ಹೀಗೆ ವೀರಶೈವನಾದ ಕಾರಣ ಹುಚ್ಚು ಹಿಡಿದು ಹಾಳಾದ (೩ನೆಯ) ಘಂಟೇಂದ್ರ, ಎನ್ನುವುದು ಮತ್ಸರಗ್ರಸ್ತ, ಕುಹಕಿಗಳ ಮಾತಾಗಿತ್ತು. ಅಚ್ಚುಕಟ್ಟಾಗಿ ದಕ್ಷತೆಯಿಂದ ರಾಜ್ಯವಾಳುತ್ತಿದ್ದ ಘಂಟೇಂದ್ರನಿಗೆ ಮತಿಭ್ರಮಣೆಯು ಕೆಳದಿ ರಾಜ್ಯದ ಆಕ್ರಮಣದ ಭಯದಿಂದಾಗಿರಬೇಕು. (ಹಾಗಿಲ್ಲದಿದ್ದರೆ ಬ್ರಾಹ್ಮಣ, ಜೈನ ಮತದಿಂದ ವೀರಶೈವ ಧರ್ಮ ಅವಲಂಬಿಸಿದ ರಾಜರೆಲ್ಲರಿಗೂ ಹುಚ್ಚು ಹಿಡಿಯಬೇಕಾಗಿತ್ತು). ಅದಕ್ಕೆ ಪೋಷಕವಾಗಿ ಅವನು ತೀರಿದ ಮೇಲೆ ಬೀಳಗಿಯ ಮೇಲೆ ಆಕ್ರಮಣ ಮಾಡಿ ಗೆದ್ದವರು ಕೆಳದಿ ಅರಸರು. ಕ್ರಿ.ಶ. ೧೬೨೯ರಲ್ಲಿ ವಿಜಯನಗರದ ಮಾಂಡಲಿಕತ್ವವನ್ನು ತೊರೆದು ೩ನೆಯ ಘಂಟೇಂದ್ರ ಸ್ವತಂತ್ರನೆಂದು ಘೋಷಿಸಿಕೊಂಡಿದ್ದನೆನ್ನಲಾಗಿದೆ. ಕೆಳದಿಯ ಹಿರಿಯ ವೆಂಕಟಪ್ಪನಾಯಕ ತೀರಿಕೊಂಡಮೇಲೆ ಬೀಳಗಿ, ಸ್ವಾದಿ ಹಾಗೂ ಕೆಳದಿ ರಾಮರಾಜನಾಯಕನ ಮಗ ವೀರಪ್ಪನಾಯಕನೂ ಸೇರಿದಂತೆ ಕೆಳದಿ ವೀರಭದ್ರನಾಯಕನ ವಿರುದ್ಧ ದಂಗೆ ಎದ್ದರಂತೆ. ಆದರೆ ಆಗ ಶಿವಪ್ಪನಾಯಕನೊಡಗೂಡಿ ವೀರಭದ್ರನಾಯಕ ಗೆದ್ದ. ನಂತರ ಕೆಳದಿ ಶಿವಪ್ಪನಾಯಕನು ಬೀಳಗಿಯನ್ನು ಕೆಳದಿಗೆ ಸೇರಿಕೊಂಡರೂ, ರಾಣಿಚೆನ್ನಮಾಜಿಯ ಹಾಗೂ ಬೀಳಗಿಯ ವೀರಶೈವರಲ್ಲಿಯ ಪ್ರಭಾವಿಶಾಲಿಗಳ ಪ್ರಾರ್ಥನೆಯ ಮೇರೆಗೆ, ಆಕೆಯ ದತ್ತುಮಗ ಕ್ಯಾದಗಿ ವೀರಶೈವ ಮನೆತನದ ಶಿವಪ್ಪನ ಪಟ್ಟಾಧಿಕಾರಕ್ಕೆ ಬೀಳಗಿಯನ್ನು ಬಿಟ್ಟುಕೊಟ್ಟ.

ಬೀಳಗಿ ಅರಸರು ಕೆಳದಿ ವೆಂಕಟಪ್ಪನಾಯಕನ ಆಸ್ಥಾನದಲ್ಲಿದ್ದು, ಸಾಮಂತರೆನಿಸಿದ್ದರು. ಈ ಅರಸರ ಶಾಸನಗಳಲ್ಲಿ ಶೇಕಡ ೨೫ ಭಾಗ ಮಾತ್ರ ಜೈನಮತ ಸಂಬಂಧದ ಶಾಸನಗಳಾಗಿವೆ. ಇವರಲ್ಲಿಯ ಬಸವೇಂದ್ರನು ಅನ್ನದಾಸೋಹ, ಮಕ್ಕಳಿಗೆ ಹಾಲು ಬೆಣ್ಣೆ, ಜಾನುವಾರುಗಳಿಗೆ ಹುಲ್ಲು ನೀಡಿಕೆಯ ವ್ಯವಸ್ಥೆ ಮಾಡಿದ್ದ. ಸಾಮಾಜಿಕ ಜೀವನದಲ್ಲಿ ಶಾಂತಿ ಇತ್ತು. ಇಮ್ಮಡಿ ಸೋಮಶೇಖರ ಅರಸನು ಲಿಪಿಶಾಸ್ತ್ರ, ಭರತ ಗಣಿತ, ಛಂದೋಶಾಸ್ತ್ರದಲ್ಲಿ ಪರಿಣತನಾಗಿದ್ದ. 'ಬಿಳಗೀ ನೃಪ ವಿಜಯ' ಎಂಬ ಕೃತಿಯೂ ರಚಿತವಾಗಿತ್ತೆನ್ನಲಾಗಿದೆ. ಈ ಅರಸರ ಕಾಲದ

ಕದಂಬನಾಗರ ಶಿಖರ ಶೈಲಿಯ ಇಟಗಿ ರಾಮೇಶ್ವರಾಲಯ, ವಿರೂಪಾಕ್ಷ ದೇಗುಲಗಳು ಮುಖ್ಯವಾಗಿವೆ. ವಿಜಯನಗರ, ಕೆಳದಿ, ಸ್ವಾದಿ ಹಾಗೂ ತುಸು ಇಸ್ಲಾಮಿಕ್ ಶೈಲಿಯ ಸಂಯುಕ್ತರೂಪವು ಇವರ ವಾಸ್ತುಶಿಲ್ಪದಲ್ಲಿ ಕಾಣಬರುತ್ತದೆ. ಕರಸ್ಥಲದಲ್ಲಿ ಇಷ್ಟಲಿಂಗ ಹಿಡಿದ ವೀರ ಶಿಲ್ಪಗಳೂ ಇವೆ. ಹನುಮಂತ, ವೀರಭದ್ರ ಇವರಲ್ಲಿ ಜನಪ್ರಿಯ ದೈವವಾಗಿದ್ದುವು. ಜಾನಪದ ಗ್ರಾಮದೈವಗಳಿಗೆ ಪ್ರಾಮುಖ್ಯತೆ ಇತ್ತು. ಅರ್ಥ ವ್ಯವಸ್ಥೆಯು ಸ್ಥಳೀಯ ಕೃಷಿಯನ್ನವಲಂಬಿಸಿತ್ತು. ಮೆಣಸು, ಏಲಕ್ಕಿ,. ಅಡಿಕೆ ಆರ್ಥಿಕ ಬೆಳೆಗಳಾಗಿದ್ದುವು.[84] ಇವರಿಗೆ, ಕೊಡಗು, ಪುಂಗನೂರು, ಹಾಗಲ್ವಾಡಿ ವೀರಶೈವ ಅರಸು ಮನೆತನಗಳೊಡನೆ ವೈವಾಹಿಕ ಸಂಬಂಧವಿತ್ತು. ಈ ಅರಸರು ಕಟ್ಟಿಸಿದ ರಂಭಾಪುರಿ ಸಂಪ್ರದಾಯದ ಹಿರೇಮಠ, ಸೋಮನದಿ ದಂಡೆಯಲ್ಲಿದ್ದ ಕಲ್ಯಾಣದೇವರ ವಿರಕ್ತಮಠ(ದೇಗುಲ ಸಹಿತವಾಗಿ), ಕಾನನ ಮಠ, ಚಿಲುಮೆಮಠ', ಮಹಾಂತಿನಮಠ, ಚೌಕಿಮಠ, ಮುರ್ಗಿಮಠ, ಅವರ ಮಠವಾಸ್ತು ರೂಪದ ಶಿಥಿಲ ಅವಶೇಷಗಳಾಗಿ ಉಳಿದುಕೊಂಡಿವೆ.[85] ಕೂಡಲೂರು ಮಠದ ಬಸವಲಿಂಗದೇವ ಅಲಾಡಿಮಠದ ಬಸವಪ್ರಭುದೇವರು ಇವರ ರಾಜಗುರುಗಳೋ, ಕುಲಗುರುಗಳೋ ಎಂಬುದು ಸ್ಪಷ್ಟವಿಲ್ಲ, ಎನ್ನುವುದು ಹನುಮಾಕ್ಷಿ ಗೋಗಿ ಅವರ ಮಾತಾಗಿದೆ.

ಬೆಳವಡಿ ಅರಸರು

ಬೆಳವಡಿ ಅರಸು ವಂಶವು ಸವದತ್ತಿ ರಟ್ಟರ ಒಂದು ಶಾಖೆಯವರೆಂದು ಕ್ರಿ.ಶ. ೧೬೮೦ರ ಮಲ್ಲಮ್ಮರಾಣಿಯ ದಾನಶಾಸನದಿಂದ ತಿಳಿದು ಬರುತ್ತದೆ. ಈ ಬೆಳವಡಿ ಮಲ್ಲಮ್ಮ ಸ್ವಾದಿಮನೆತನದವಳು. ಈ ವಂಶ, ಆರಂಭಕ್ಕೆ ಜೈನವೆಂದಿತ್ತು. ೧೬ನೆಯ ಶತಮಾನದಲ್ಲಿ ಬಿಜಾಪುರದ ಸುಲ್ತಾನರೊಡನೆ ಹೋರಾಡಿದ ಈ ವಂಶದ ಸೋಮರಾಜ, ನಂತರ ಚಂದ್ರಶೇಖರರಾಜ, ಸಿದ್ಧಪ್ಪನಾಯಕ, ಸಿದ್ದಬಸಪ್ಪನಾಯಕ, ಮಲ್ಲಮ್ಮನ ಪತಿ ಈಶಪ್ರಭುರಾಯ, ಇವರು ಗಮನಾರ್ಹರು. ಬೆಳವಡಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿದೆ. ಬೆಲವಡಿಮಲ್ಲಮ್ಮ ಸ್ವಾದಿಮನೆತನದವಳು ಎಂಬ ಬಗ್ಗೆ ವಿವಾದವಿದೆ, ಎಂಬ ಮಾತು ಲಕ್ಷ್ಮಣ ತೆಲಗಾವಿ ಅವರದಾಗಿದೆ. ಡಾ॥ ಜಿ.ಎಸ್. ದೀಕ್ಷಿತ್ ಅವರು ಸ್ವಾದಿ ವಂಶಸ್ಥಳೆಂದು ಆಕೆಯ ವ್ಯಕ್ತಿತ್ವವನ್ನು ನಿರೂಪಿಸಿದ್ದಾರೆ. ಆಕೆಯ ನೇತೃತ್ವದಲ್ಲಿ ರೂಪುಗೊಂಡ ಸ್ತ್ರೀ ಸೈನಿಕ ಪಡೆ ಇತ್ತು. ಮರಾಠರ ಅಪಹಾಸ್ಯ ಹಾಗು ಆಕ್ರಮಣದ ವಿರುದ್ಧ, ತನ್ನ ಎರಡು ಸಾವಿರ ಸ್ತ್ರೀ ಸೈನಿಕರೊಡನೆ ಕಾದು ಸೋಲಿಸಿ ವಿಜಯೋತ್ಸವ ಆಚರಿಸಿದಳು. ಶಿವಾಜಿಯ ಮರಾಠ ಸೈನ್ಯವು ಬೆಳವಡಿಕೊಟೆಯನ್ನು ಮುತ್ತಿದಾಗ ಹೂಲಿಯ ಹಿರೇಮಠದ ಸ್ವಾಮಿಗಳಿಂದ ಸೈನ್ಯ ಸಹಾಯ ಹಾಗೂ ಅಶನ ಸಾಮಗ್ರಿಗಳು ತಲುಪುವುದು ತಡವಾಗಿ ಈಶಪ್ರಭು ಬಿದ್ದ.

---

84. ಬಿಳಗಿ ಅರಸು ಮನೆತನ : (ಸಂ) ಡಾ। ಎಚ್.ಆರ್. ರಘುನಾಥಭಟ್. ಡಾ। ಎಂ. ಎಂ. ಕಲಬುರ್ಗಿ, ಬೆಳಗಾವಿ, ೧೯೯೫ : ನೋಡಿ
85. ಬಿ. ಶಿವಮೂರ್ತಿಶಾಸ್ತ್ರಿ : 'ಬಿಳಗಿಯ ರಾಜ್ಯ ಚರಿತ್ರೆ', ಶಿವಾನುಭವ, ೧೯೨೭, ನಂ. ೨. ಸಂ೫, ಪು. ೭೭-೭೮

ನಂತರ ಸ್ವಾಮಿಗಳ ಕಡೆಯಿಂದ ಸೈನ್ಯವೂ ಬಂದು, ಮಲ್ಲಮ್ಮಾಜಿ ಶಿವಾಜಿಯ ಸೈನ್ಯವನ್ನು ಸೋಲಿಸಿದಳು. ಬೆಳವಡಿಯಲ್ಲಿ ಯುದ್ಧ ತಂತ್ರದಲ್ಲಿ ಕುಶಲಿಗಳಾದ ಕಾಲಾಳು, ಕುದುರೆಸವಾರರು, ಬಂದೂಕುಧಾರಿಗಳು ಆನೆ ಒಂಟೆಗಳು ಸಾಕಷ್ಟು ಇದ್ದು ಸೈನ್ಯ ಶಕ್ತಿಯುತವಾಗಿತ್ತು. ಈಶಪ್ರಭು ಮಲ್ಲಮ್ಮಾಜಿ ದಕ್ಷತೆಯಿಂದ ರಾಜ್ಯವಾಳಿದರು. ಬೆಳವಡಿ ಮತ್ತು ಸ್ವಾದಿ ರಾಜ್ಯಗಳ ವ್ಯಾಪಾರ ವ್ಯವಹಾರ ಸಂಬಂಧ ಸುಗಮವಾಗಿತ್ತು ಜಿಲ್ಲೆಯ ಬಂದರುಗಳಲ್ಲಿ ಆಮದು ರಫ್ತುಗಳ ಸುವ್ಯವಸ್ಥೆ ಇತ್ತು. ಜೀರಿಗೆ, ಮೆಣಸು, ಏಲಕ್ಕಿ, ಜಾಜಿಕಾಯಿ, ಕಬ್ಬು ಇತ್ಯಾದಿ ಆರ್ಥಿಕ ಬೆಳೆಗಳೇ ಅಲ್ಲದೆ, ಆಹಾರೋತ್ಪನ್ನಗಳ ಸಮರ್ಪಕ ಬೆಳಸುಗಳಿದ್ದುವು. ಹಣ್ಣುಗಳು ಸುಲಭ ಬೆಲೆಯಲ್ಲಿ ದಕ್ಕುತ್ತಿದ್ದುವು. ಮಲ್ಲಮ್ಮಾಜಿ ಸಾಹಸಿ ಎನ್ನಲು ಗಂಡ ಹಾಗೂ ತನ್ನ ಮೇಲೆ ಏರಿ ಬಂದ ಹುಲಿಗಳನ್ನು ಕತ್ತಿ, ಭರ್ಜಿಗಳಿಂದ ಕೊಂದದ್ದೇ ಆಗಿದೆ. ಶಿವಾಜಿಯು ಈಕೆಯನ್ನು ಗೌರವದಿಂದ ಕಂಡಂತೆ ರಾಜಾರಾಮನ ರಾಣಿ ತಾರಾಬಾಯಿಯೂ ಕಂಡು ಗೌರವ ಮರ್ಯಾದೆ ತೋರಲು ಅಪರೂಪದ ಸಾಂಕೇತಿಕ ಶಿಲ್ಪಗಳನ್ನು ನಿರ್ಮಿಸಿದಳು.[86] ಈ ವಂಶದವರ ಮೇಲೆ ಹೂಲಿಯ ಹಿರೇಮಠದ ಸ್ವಾಮಿಗಳ ಪ್ರಭಾವ ಹಾಗು ನೆರವು ಇತ್ತು. ಅಂತೇ ಮಠದಿಂದ ಸೈನ್ಯ ಸಹಾಯ ಕಷ್ಟ ಕಾಲದಲ್ಲಿ ಅವರಿಗೆ ಒದಗಿತು. ಈ ಪೀಠದ ೧೭ನೆಯ ಚರಪಟ್ಟಾಧಿಕಾರಿ ಅಘೋರೇಶ್ವರ ಸ್ವಾಮಿ ಇಕ್ಕೇರಿ ಸಂಸ್ಥಾನದ ಸ್ಥಾಪನೆಗೂ ಪ್ರೇರಣೆ ನೀಡಿದವರೆನ್ನಲಾಗಿದೆ. ಅಂದರೆ ಅಘೋರೇಶ್ವರ ದೇಗುಲ ನಿರ್ಮಾಣಕ್ಕೂ ಅವರು ಪ್ರೇರಕರಾಗಿರಬಹುದೆ ? ಎನಿಸುತ್ತದೆ. ಈ ಮಠದ ಸಿದ್ಧನಂಜೇಶ್ವರರು ಇಮ್ಮಡಿ ಹರಿಹರನ ಕಾಲದಲ್ಲಿ ಹಂಪೆಯಲ್ಲಿ ಮಠವೊಂದನ್ನು ಸ್ಥಾಪಿಸಿದರಂತೆ. ಈ ಮಠದ ಸ್ವಾಮಿಗಳ ಮೇಲೆ ಮಲ್ಲಮ್ಮಾಜಿ ಬಹಳ ನಂಬಿಕೆ, ನಿಷ್ಠೆಗಳನ್ನು ತಳೆದು, ವಿಪುಲ ದಾನ ದತ್ತಿ ನೀಡಿದ್ದಳು. ಜೊತೆಗೆ ಈ ಪೀಠದ ಶ್ರೀ ಸಿದ್ಧವೀರ ಯೋಗಿಯು ಸ್ವಾದಿಗೆ ಬಂದಾಗ ಆಗ ಅಲ್ಲಿದ್ದ ಮಲ್ಲಮ್ಮಾಜಿ ಅವರ ಸೇವೆ ಮಾಡಿ ಆಶೀರ್ವಾದ ಪಡೆದಿದ್ದಳು. ಆಕೆಯ ಮದುವೆಯ ಸಂದರ್ಭದಲ್ಲಿ ಪಂಚಪೀಠಾಧೀಶ್ವರರೇ ಅಲ್ಲದೆ ಹೂಲಿ, ಕೆಳದಿ, ಕೂಡ್ಲಿಗಿ ಮತ್ತು ಸಂಕೇಶ್ವರ ಸಿಂಹಾಸನದ ಸ್ವಾಮಿಗಳಿಗೆ ಭಕ್ತಿ ಗೌರವ ಸತ್ಕಾರಗಳು ಸಂದುವು. ಶ್ರಾವಣಮಾಸದಲ್ಲಿ ಅರಮನೆಯಲ್ಲಿ ಗುರುಗಳ ಪಾದಪೂಜೆ ಹಾಗೂ ವೀರಭದ್ರ ಸ್ವಾಮಿ ಪೂಜೆಯನ್ನು ಮಲ್ಲಮ್ಮ ನಡೆಸಿಕೊಂಡು ಬರುತ್ತಿದ್ದಳು.[87] ಒಟ್ಟಾರೆ ಇಂದು ವೀರಶೈವ ಅರಸು ಮನೆತನದ ರಾಣಿಯ ಶೌರ ಹಾಗೂ ವೀರಶೈವ ಮಠಗಳ ನೆರವು ಹಾಗು ರಾಜಗುರು ಮಾರ್ಗದರ್ಶನದ ಚಿತ್ರ ಈ ವಂಶದ ಚರಿತ್ರೆಯಿಂದ ಲಭ್ಯವಾಗುತ್ತದೆ. ಕ್ರಿ.ಶ. ೧೭೧೭ರಲ್ಲಿ ಮಲ್ಲಮ್ಮ ಲಿಂಗೈಕ್ಯಳಾದಳು. 'ತುರುಕಾರಿ ಪಂಚಮರ ಇತಿಹಾಸದ' ರೀತ್ಯಾ ಕಿತ್ತೂರಿನ ಎಂಟನೆಯ ದೇಸಾಯಿ ಮಲ್ಲಸರ್ಜ ಈ ಸಂಸ್ಥಾನದ ಆಳ್ವಿಕೆಯನ್ನು ಮುಕ್ತಾಯ ಮಾಡಿದ ಎನ್ನಲಾಗಿದೆ. ೧೭-೧೮ನೇ ಶತಮಾನದಲ್ಲಿ ಬಾಳಿದ ಈ ವಂಶ ಮುಕ್ತಾಯವಾದದ್ದು ಹೀಗೆ.

86. ಡಾ| ಜಿ.ಎಸ್. ದೀಕ್ಷಿತ್ : 'ಶಿವಾಜಿ - ಮಲ್ಲಮ್ಮಾಜಿ ಸಮರೋತ್ಸವ ಕೃತಿ ಪರಿಶೀಲನೆ;' ಸಂಶೋಧನ, ಅದೇ, ಪು. ೭೮೬, ೬೯೦

87. ಲಕ್ಷ್ಮಣ ತೆಲಗಾವಿ : 'ಕರ್ನಾಟಕದ ಕೆಲವು ವೀರಶೈವ ರಾಜಮನೆತನಗಳು'; ಸಿದ್ಧಗಂಗಾಶ್ರೀ, ಅದೇ, ಪು. ೧೦೩೮

ಕಿತ್ತೂರು ಅರಸರು

ಕಿತ್ತೂರು ಅರಸುಮನೆತನವು ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನದು. ಕ್ರಿ.ಶ. ೧೫೮೫ರಲ್ಲಿ ಹಿರೇಮಲ್ಲನಿಂದ ಸಂಪಗಾವಿಯು ರಾಜಧಾನಿಯಾಗಿ ಆರಂಭವಾದ ಈ ವಂಶದ ಆಳ್ವಿಕೆ, ಕ್ರಿ.ಶ. ೧೬೬೦ರಲ್ಲಿ ಅಲ್ಲಪ್ಪಗೌಡ ಸರದೇಸಾಯಿ ಕಿತ್ತೂರಿಗೆ ರಾಜಧಾನಿಯನ್ನು ಬದಲಾಯಿಸಿದ ಮೇಲೆ ಅಲ್ಲಿ ಆಳ್ವಿಕೆ ಶುರುವಾಯಿತು. ಈ ಬದಲಾವಣೆಗೆ ಪ್ರೇರಕರು ಚೌಕಿ ಮಠದಲ್ಲಿ ಕರ್ತೃ ಸಮಾಧಿಸ್ಥರಾದ ರಾಜಗುರು ಕಲ್ಮಠದ ಶ್ರೀ ಗುರುಸಿದ್ಧೇಶ್ವರರಾಗಿದ್ದಾರೆ. ಈ ಮನೆತನದ ಮೂಲಪುರುಷ ಕೆಳದಿ ಅರಸುಗಳಿಗೆ ಸಂಬಂಧಿಕನ್ನೆಲಾಗಿದೆ. ಹಾಗಿದ್ದರೆ ಮಲವ ಲಿಂಗವಂತಕುಲದವರೆಂದು ಕೆಳದಿ ಅರಸರಿಗೆ ಹೇಳಲಾಗಿರುವಲ್ಲಿ ಕಿತ್ತೂರು ಅರಸರ ಪೈಕಿ ಕನಿಷ್ಠ ೯ನೆಯ ಅರಸು 'ಮಲವರುದ್ರಗೌಡ'ನ ಹೆಸರಿನ ಹಿಂದಣ ವಿಶೇಷಣದಿಂದಾಗಿ ಕೆಳದಿ ಮೂಲವನ್ನು ಗುರುತಿಸಬಹುದೆನ್ನಿಸುತ್ತದೆ. ಇವನು 'ನಿರಂಜನಿ' ಎಂಬ ಮುಸ್ಲಿಮ ಪಾತ್ರದ ಹೆಣ್ಣಿಗೆ ಲಿಂಗದೀಕ್ಷೆ ನೀಡಿಸಿ ಮದುವೆ ಮಾಡಿಕೊಂಡು ನಿರಂಜನಿ ಮಹಲನ್ನು ಕಟ್ಟಿಸಿದ್ದು ಜಾನಪದ ಹಾಗೂ ಶಿಷ್ಟ ಸಾಹಿತ್ಯಕ್ಕೂ ಆಕರ - ಪ್ರೇರಣೆಯಾಯಿತು. ಬಹುಶಃ ರಾಜಗುರು- ಕುಲಗುರುಗಳಾಗಿದ್ದ ಕಲ್ಮಠದ ಮಡಿವಾಳ ಶ್ರೀಗಳು ಈಕೆಗೆ ಲಿಂಗದೀಕ್ಷೆ ನೀಡಿರುವಂತಿದೆ. ಹಾಗೂ ಅರಸನ ಹಿಂದೂ-ಮುಸ್ಲಿಂ ಸಮನ್ವಯದ ಸಂಕೇತವಾಗಿ ಹುಸೇನ ಎಂಬ ಫಕೀರನ (ಸಂತನ) ಸಂಪರ್ಕವನ್ನು ಈ ಮಠಕ್ಕೆ ಅನುವುಗೊಳಿಸಿರಬಹುದು. ಆದರಿಂದ 'ಹುಸೇನ ಸಾಬಕಲ್ಮಠ' ಎಂಬ ಹೆಸರೂ ಇಲ್ಲಿ ರೂಪುಗೊಂಡಿರುವಂತಿದೆ. ಈ ಅರಸು ವಂಶ ಕ್ರಿ.ಶ. ೧೮೨೪ರ ವರೆಗೆ ಆಳಿ ೨೩೯ ವರ್ಷದ ಆಳ್ವಿಕೆಯಲ್ಲಿ ೧೨ ಜನ ದೇಸಾಯರು ಆಗಿ ಹೋದರು. ಇವರಲ್ಲಿ ಕಿತ್ತೂರನ್ನು ಬೆಳಸಿದವ ೮ನೇ ದೇಸಾಯಿ ಮಲ್ಲಸರ್ಜ, ಆಡಳಿತ ದಕ್ಷನಾಗಿದ್ದ. ಗ್ರಾಮಗಳ ಸ್ವತಂತ್ರ ಘಟಕಗಳನ್ನು ಏರ್ಪಡಿಸಿ ಗ್ರಾಮಪಂಚಾಯಿತಿ ಮೂಲಕ ಕಾರ್ಯ ನಿರ್ವಹಣೆಯ ವ್ಯವಸ್ಥೆ ಮಾಡಿದ್ದ. ರಾಜ್ಯಕ್ಕೆ ನಾಲ್ಕುಲಕ್ಷ ರೂಗಳ ಕಂದಾಯದ ಉತ್ಪನ್ನವಿತ್ತು. ಇವನ ಆಸ್ಥಾನದಲ್ಲಿ ಕೊಳಸೀ (ಕೊಳ್ಳಿ!) ರಂಗಾಚಾರ್ಯ ಎಂಬ ಸಂಸ್ಕೃತ ಪಂಡಿತ, ವೇಲಂಗಿ (ವ್ಯಂಗಿ!) ಚನ್ನಬಸಪ್ಪ ಎಂಬ ಕನ್ನಡಪಂಡಿತ; ಮುಳುಗುಂದ ಜವಳೀ ಚನ್ನಬಸಪ್ಪ ಮುಂತಾದ ಪಂಡಿತರಿದ್ದರು; ಮಲ್ಲಸರ್ಜಕಾವ್ಯ ಬರೆದ ಲೋಕಾಪುರದ ರುದ್ರಕವಿ, 'ಮಲ್ಲೇಂದ್ರ ಮಾನಸೋಲ್ಲಾಸ ತರಂಗಿಣಿ' ಕೃತಿ ಬರೆದ ಅಮೃತೇಶ್ವರಕವಿ ಇದ್ದರು. ನೀಲಕಂಠಾಚಾರ್ಯ, ಶಿವಲಿಂಗಶಾಸ್ತ್ರಿ ಮುಂತಾದ ಆಸ್ಥಾನ ಕವಿಗಳೂ ಇದ್ದರು. ಇವನನ್ನು 'ಜಂಗಮ ದಾಸೋಹ ಪ್ರಿಯ' ಎಂದು ಕಾವ್ಯಗಳು ಹೊಗಳಿವೆ. ಇಂತಹ ದೊರೆ ಪೇಶ್ವೆಯರ ಮಾಂಡಲಿಕನಾಗಿದ್ದ ಸಮಯ. ಈ ಕಿತ್ತೂರಿನ ಮೇಲೆ ಟಿಪ್ಪು ದಾಳಿಮಾಡಿ ಮಲ್ಲಸರ್ಜನನ್ನು ಕೊಪ್ಪಳದಲ್ಲಿ ಸೆರೆಯಲ್ಲಿಟ್ಟ. ನಂತರ ಪೇಶ್ವೆಗಳು ಟೀಪುವಿನ ಮೇಲೆ ಧಾಳಿ ಮಾಡಿದ ಸಂದರ್ಭದಲ್ಲಿ ಅವನು ಕ್ರಿ.ಶ. ೧೭೮೨ರಲ್ಲಿ ಸೆರೆಯಿಂದ ತಪ್ಪಿಸಿಕೊಂಡು ಬಂದ. ಪೇಶ್ವೆಗಳಿಂದ ಕಿತ್ತೂರಿನ ಎಲ್ಲ ಹಕ್ಕು ಬಾಧ್ಯತೆಗಳನ್ನು ಪಡೆದ. ಕ್ರಿ ಶ. ೧೮೧೬ ರಲ್ಲಿ ಲಿಂಗೈಕ್ಯನಾದ. ನಂತರ ಇವನ ರಾಣಿ ಕಾಕತಿ ದೇಸಾಯರ ಮಗಳಾದ ಚೆನ್ನಮ್ಮ ಕಿತ್ತೂರಿನ ಆಡಳಿತ ವಹಿಸಿಕೊಂಡಳು. ಇವಳ ಔರಸ ಪುತ್ರ ಬಾಲ್ಯದಲ್ಲಿಯೇ ತೀರಿದ್ದದರಿಂದ,

ಬಲಮಗನನ್ನು ಪಟ್ಟಕ್ಕೆ ಕೂರಿಸಿದಳು. ಆದರೆ ಅವನು ರೋಗಿಷ್ಠನಾಗಿದ್ದ ಕಾರಣ ಶಿವಲಿಂಗಪ್ಪ ಎಂಬುವನನ್ನು ದತ್ತು ಪಡೆದಮೇಲೆ ತೀರಿಕೊಂಡ. ಆಂಗ್ಲರು ದತ್ತು ಪುತ್ರನಿಗೆ ಹಕ್ಕಿಲ್ಲವೆಂಬ ನೆಪದಲ್ಲಿ ಕಿತ್ತೂರನ್ನೂ ಥ್ಯಾಕರೆ ಮೂಲಕ ಕಸಿಯಲು ಯತ್ನಿಸಿದರು. ಕಿತ್ತೂರು ಸೇನೆ ಥ್ಯಾಕರೆಯನ್ನು ರಾಣಿಚೆನ್ನಮ್ಮನ ನೇತೃತ್ವದಲ್ಲಿ, ಎದುರಿಸಿ ಕೊಂದಿತು. ಆದರೆ ಮುಂದೆ ಸ್ಥಳೀಯರ ಸಂಚಿನಿಂದಾಗಿ ಆಂಗ್ಲರಿಗೆ ನೆರವು ಒದಗಿ ಕಿತ್ತೂರು ಪತನವಾಯಿತು. ಬೈಲಹೊಂಗಲದಲ್ಲಿ ಸೆರೆಯಲ್ಲಿದ್ದ ರಾಣಿ ಚೆನ್ನಮ್ಮ ೧೮೨೯ನೇ ಫೆಬ್ರುವರಿ ೨ರಂದು ಲಿಂಗೈಕ್ಯಳಾದಳು. ಈ ಮನೆತನದ ಆಳ್ವಿಕೆಯಲ್ಲಿ ಆಗ್ರಹಾರ, ಮಸೀದೆ, ಶಾಕ್ತ- ಗೋಸಾವಿ - ವೀರಶೈವರಿಗೆ ಮಠಗಳು ನಿರ್ಮಿತವಾದವು. ಸಾವಿರ ವೀರಶೈವ ಮಠಗಳು ಇದ್ದು ಉಂಬಳಿ ಜಮೀನು ಹೊಂದಿದ್ದುವು. ಇವು ಊರಿನ ದೂರುಗಳನ್ನು ಪರಿಹರಿಸುತ್ತಿದ್ದುವು. ನ್ಯಾಯ ಪೀಠಗಳಂತೆ ಇದ್ದವು ಹಿರೇಮಠಗಳು. ಇವುಗಳಲ್ಲಿ ಹಸ್ತಪ್ರತಿ ಸಂಗ್ರಹ, ಅಧ್ಯಯನ, ಶಿಕ್ಷಣ ವ್ಯವಸ್ಥೆಯೂ ಇತ್ತು, ಕಲ್ಮಠದ ಸ್ವಾಮಿಗಳು ರಾಜಗುರುಗಳಾಗಿದ್ದ ಕಾರಣ ಅವರ ಮಠದಲ್ಲಿ ಈ ವಂಶದ ದೇಸಾಯರ ಸಮಾಧಿಗಳಿವೆ. [88]

ವಂಟಮುರಿ ಅರಸು ವಂಶವು ಕಿತ್ತೂರು ಅರಸುವಂಶ ಆಳಿದ ಮೇಲೆ ಉಳಿದುಕೊಂಡುಬಂದ ಬೆಳಗಾವಿ ಜಿಲ್ಲೆಯ ಪ್ರಸಿದ್ಧ ದೇಸಗತಿಯದಾಗಿದೆ. ಕನ್ನಡ ಮೂಲದ ದೇಸಗತಿಯಾಗಿ ಕ್ರಿ.ಶ. ೧೪೦೦ರ ಸುಮಾರಿಗೆ ಹುಕ್ಕೇರಿಯಲ್ಲಿ ಹುಟ್ಟಿದ, ಈ ದೇಸಗತಿಯು ನಂತರ ಘಟಪ್ರಭೆಯ ದಕ್ಷಿಣತಡಿಯಲ್ಲಿರುವ ಒಂಟಮುರಿಗೆ ಬಂದು ನಿಂತಿತು, ಎಂದು ಎಂ. ಬಿ. ನೇಗಿನಹಾಳ ನುಡಿಯುತ್ತಾರೆ. ಇವರ ಮೂಲಪುರುಷ ಪ್ರಭು ಬಸವಂತರಾಯ. ತೇರದಾಳ ಮಠದ ಬಸವಪ್ರಭುಸ್ವಾಮಿಗಳು ಈ ಹುಕ್ಕೇರಿಗೆ ಬಂದಿದ್ದಾಗ ಈ ವಂಶವನ್ನು ಆಶೀರ್ವದಿಸಿ ತಮ್ಮ ಸಂಕೇತವಾದ 'ಮಗಿ'ಯನ್ನು ನೀಡಿದರು. ಅದರಿಂದ ಮುಂದಿನ ಆ ಮಠದ ಗುರುಗಳು ಇವರ ದೇಸಗತಿಗೆ ಕುಲಗುರುಗಳೂ ಆದರು. ಈ ಮನೆತನದ ಕೊನೆಯ ಮುಖ್ಯ ದೇಸಾಯಿಗಳಾದ ರಾಜಾಲಖಮಗೌಡರು ಅಖಿಲ ಭಾರತ ವೀರಶೈವ ಮಹಾಸಭೆ, ಧಾರವಾಡ ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ, ಕೆ.ಎಲ್.ಇ ಸಂಸ್ಥೆ ಮುಂತಾದುವುಗಳ ವಿಕಾಸಕ್ಕೆ ಅಮೂಲ್ಯ ಕೊಡುಗೆ ನೀಡಿದವರಾಗಿದ್ದಾರೆ. ಈ ಮನೆತನದ ಮುಖ್ಯ ಆರಾಧ್ಯ ದೇವತೆ ಹುಕ್ಕೇರಿಯ ಸನಿಹದ ಲಕ್ಕವ್ವ. ಮಂಗಸೂಳಿಯ ಮೈಲಾರದೇಗುಲವನ್ನು ಈ ಮನೆತನದವರು ಕಟ್ಟಿಸಿದ್ದಾರೆ. [89]

ಹರಪನಹಳ್ಳಿ ಪಾಳೇಗಾರವಂಶವು ಮೂಲತಃ ವಾಲ್ಮೀಕಿ ಮತಸ್ಥ. ಮೂಲ ಪುರುಷ ದಾದಯ್ಯನಾಯಕನಾದರೂ, ಇವನ ವಂಶಿಕನಾದ (ಕ್ರಿ.ಶ. ೧೬೮೨-೧೭೦೫)ರ ಬಸವಂತ ನಾಯಕ ವೀರಶೈವನಾಗಿ ತನ್ನ ಹೆಸರನ್ನು ಕೊಟ್ರಪ್ಪನಾಯಕನೆಂದು ಮಾರ್ಪಡಿಸಿಕೊಂಡ. ಈ

---

88. ನೋಡಿ ,ಸಿದ್ದಗಂಗಾಶ್ರೀ ಅದೇ, ಪು. ೧೦೬೯; ಸಾರಂಗಶ್ರೀ, ಅದೇ, ಪು. ೩೨೦; ಸಿದ್ಧರಾಮ ಸಂಪದ, ಅದೇ, ಪು. ೧೪೩

89. ಎಂ. ಬಿ. ನೇಗಿನಹಾಳ : 'ವಂಟಮುರಿ ದೇಸಗತಿ', ಸಾರಂಗಶ್ರೀ, ಅದೇ, ನೋಡಿ.

ವಂಶದ ಕೊನೆಯವನಾದ ಬಸಪ್ಪನಾಯಕ ಕ್ರಿ.ಶ. ೧೭೮೭ರಲ್ಲಿ ಟೀಪುವಿಗೆ ಸೆರೆಯಾಗಿ ಶ್ರೀರಂಗಪಟ್ಟಣದಲ್ಲಿ ಶಿವೈಕ್ಯನಾದ. ಈ ವಂಶವು ಚಿತ್ರದುರ್ಗದ ಸಂಸ್ಥಾನದೊಡನೆ ಬಾಂಧವ್ಯಹೊಂದಿತ್ತು. ಪಂಚಗಣಾಧೀಶರಲ್ಲಿ ಒಬ್ಬರಾದ ಶ್ರೀ ಗುರುಬಸವೇಶ್ವರರು (ಕೊಟ್ರಯ್ಯ) ಇವರ ರಾಜಗುರುಗಳಾಗಿದ್ದರೆಂದು ಕುಂ.ಬಾ. ಸದಾಶಿವಪ್ಪ ಬರೆದಿದ್ದಾರೆ. ಇನ್ನು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಜರಿಮಲೆ ಸಂಸ್ಥಾನದ ಸ್ಥಾಪಕ ಪೆನ್ನಪ್ಪನಾಯಕ ಎಂಬುವನಾಗಿದ್ದಾನೆ. ವಂಶಾವಳಿಯ ರೀತ್ಯಾ ಭೂಮರಾಜನು ಉಜ್ಜಯಿನಿ ಪೀಠದ ಮರಳುಸಿದ್ಧರೇ ತನ್ನ ಮನೆಗುರು ಎಂದು ಹೇಳಿ, ಮರಳುಸಿದ್ಧ ದೇವಾಲಯವನ್ನು ಕಟ್ಟಿಸಿದ್ದಾನೆ. ಶಿರಸಂಗಿ ಸಂಸ್ಥಾನವು ವೀರಶೈವ ಕುಡುವಕ್ಕಲಿಗ ರಾಜಮನೆತನದ್ದಾಗಿದೆ: ಇದರ ಇತಿಹಾಸ ಕ್ರಿ.ಶ. ೧೩೦೧ರಿಂದ ಶುರುವಾಗುತ್ತದೆ. ಈ ವಂಶದ ಜಾಯಪ್ಪದೇಸಾಯರ ಸಾಹಿತ್ಯ ಸೇವೆ, ಆಳಿದ ದೇಸಾಯಣಿಯರು, ಲಿಂಗರಾಜರ ಒಕ್ಕಲುತನದ ಸುಧಾರಣೆ ಹಾಗೂ ಅಭಿವೃದ್ಧಿ, ಉದಾರ ದಾನಗುಣ, ವಿದ್ಯಾಪ್ರಸಾರದ ಪರಿಶ್ರಮ, ವಿದ್ಯಾಭಿಮಾನದ ಜನಹಿತ ಕಾರ್ಯಗಳಿಂದಾಗಿ ಎಡ್ವರ್ಡ್ ಚಕ್ರವರ್ತಿಯಿಂದ ಮಾನಿತರಾದರು. ಈ ಮಹಾದಾನಿಯ ಸಂಸ್ಮರಣೆಯ ಪ್ರತೀಕವಾಗಿ ಲಿಂಗರಾಜಕಾಲೇಜು ಬೆಳಗಾವಿಯಲ್ಲಿದೆ. ಈ ವಂಶ ಕುರಿತು ವಿವರವಾಗಿ ವಿರೂಪಾಕ್ಷ ಬಡಿಗೇರ ಬರೆದಿದ್ದಾರೆ. ಸಿದ್ದಗಿರಿಯ ಕಾಡಸಿದ್ಧೇಶ್ವರರು ಈ ವಂಶದ ರಾಜಗುರು ಮತ್ತು ಕುಲದೇವರಾಗಿದ್ದಾರೆ. ಹೀಗೆಯೆ ಕೊಲ್ಹಾರ ದೇಸಗತಿ ಕ್ರಿ.ಶ. ೧೫೨೫ರ ಸುಮಾರಿನಲ್ಲಿ ಅದ್ಮಶ್ಯಕವಿ (ಅದೃಶ್ಯಪ್ಪ) ನಿಂದ ಆರಂಭವಾಗಿ ಪ್ರಸಿದ್ಧಿಪಡೆದುದಾಗಿದೆ. ಇವರಿಗೆ ಗುರು ಮಳೆಯ ಮಲ್ಲೇಶ, ಕುಲದೈವ ಉಪ್ಪಲದಿನ್ನಿಯ ಸಂಗಮೇಶ.

ಸುರಪುರದ ಅರಸರು ಬೇಡಜನಾಂಗದವರಾಗಿದ್ದು ೧೮ನೇ ಶತಮಾನದಲ್ಲಿ ತಿರುಪತಿ ವೆಂಕಟರಮಣನ ಭಕ್ತರಾದರು. ಈ ಅರಸರು ಕರ್ನಾಟಕದ ದಕ್ಷಿಣ ಭಾಗದಿಂದ ಉತ್ತರ ಕರ್ನಾಟಕಕ್ಕೆ ವಲಸೆ ಹೋದವರಾಗಿದ್ದಾರೆ. ಇವರ ಆರು ಜನ ಸೋದರರಲ್ಲಿ ಗಡ್ಡಿಪಿಡ್ಡನಾಯಕ ಸುರಪುರ ಸಂಸ್ಥಾನದ ಸ್ಥಾಪಕನೆನ್ನಲಾಗಿದೆ. ಇವರ ಧ್ವಜ ಹನುಮಧ್ವಜ. ರಾಜಮುದ್ರೆಯಲ್ಲಿ ಆನೆಮರಿಗಳನ್ನು ಕೊಕ್ಕುಗಳಲ್ಲಿ ಹಿಡಿದ ಗಂಡುಭೇರುಂಡದ ಅಚ್ಚು ಇದೆ. ಇವರು ತಮ್ಮನ್ನು 'ಗೋಸಲವಂಶ'ದವರೆಂದೇ ಹೇಳಿಕೊಳ್ಳುತ್ತಾರೆ.[90] 'ಗೋಸಲ' ಶಬ್ದ ಸ್ಥಳವಾಚಿ ಅಲ್ಲ. ಅದು ಸಂಚಾರ ಮಾಡುತ್ತ ಜನಸಾಮಾನ್ಯರಿಗೆ ಉಪದೇಶ ಮಾಡುವ ಗುರು, ಜಂಗಮ, ಚರಾಚಾರ್ಯ ಎಂಬ ವಿಶಿಷ್ಟ ಅರ್ಥಪಡೆದ ಶಬ್ದವಾಗಿದೆ. ಇದು ಹರದನಹಳ್ಳಿಯ ಮಠ ಹಾಗೂ ಅದರ ಅಧಿಪತಿಗಳಿಗೆ ಅನ್ವಯವಾಗಿದೆ. ವಾಣಿಜ್ಯಪುರ ಶೂನ್ಯಸಿಂಹಾಸನದ ಪೀಠಾಧೀಶ್ವರರ ಮೂಲ ಗುರುಪರಂಪರೆಯಲ್ಲಿ ಋಷಿಗಳಿದ್ದರು. ಐವಳ್ಳಿ ಗಣನಾಥ ವಂಶಜರಾದ ಹರದನಹಳ್ಳಿ ಹರದರು ನಿರ್ಮಿಸಿದ ಬೃಹತ್ ದೇಗುಲದಲ್ಲಿ ಜಟಾಮಕುಟದ ಯತಿಗಳ ಕರದಲ್ಲಿ ಲಿಂಗ ಹಾಗೂ ಅದರ ಪೂಜಾವೈಭವದ ಶಿಲ್ಪ ಹಾಗೂ ಮೂರ್ತಿಗಳಿವೆ.

90. ಈ ವಿಷಯವನ್ನು ತಿಳಿಸಿದವರು, ನಿವೃತ್ತ ಪ್ರಾಂಶುಪಾಲ ಶ್ರೀ ಆರ್. ಭೀಮಪ್ಪ ಸುರಪುರ ಅವರು

ಈ ಪರಂಪರೆಯ ಗೋಸಲ ದೇವರು 'ಶ್ರೀ ಗೋಸಲಾರ್ಯಯತಿ' ಎಂದೇ ಉಕ್ತರಾಗಿದ್ದಾರೆ. ತೋಂಟದ ಸಿದ್ದಲಿಂಗೇಶ್ವರರು ತಮ್ಮ ಗುರುಪರಂಪರೆಯನ್ನು ಹೇಳುತ್ತ 'ಹರದನಹಳ್ಳಿ ಗೋಸಲ ದೇವರನ್ನು ಸ್ಮರಿಸಿದ್ದಾರೆ, ಎಂದೆಲ್ಲ ಪ್ರೊ। ಸಿ.ಮಹಾದೇವಪ್ಪ ವಿವೇಚಿಸಿದ್ದಾರೆ.[90ಅ] ಡಾ। ಶ್ರೀ ಜಚನಿ ಅವರು ಹರದನಹಳ್ಳಿ ಗೋಸಲ ವಿರಕ್ತ ಪರಂಪರೆಯನ್ನು ೧೦ನೆಯ ಶತಮಾನವೆಂದು ನಿರ್ದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸುರಪುರದರಸರು ಮೊದಲಿಗೆ ಗೋಸಲ ವಿರಕ್ತ ಪರಂಪರಾಪೀಠದ ಶಿಷ್ಯತ್ವಹೊಂದಿದ್ದು ವೀರಶೈವ ಧರ್ಮಿಗಳಾಗಿದ್ದು, ೧೮ನೆ ಶತಮಾನದಲ್ಲಿ ಬೇರೆ ಧರ್ಮವನ್ನು ಅಪ್ಪಿರಬೇಕು. ತಿರುಪತಿವೆಂಕಟೇಶ, ಮೊದಲಿಗೆ ವೀರಭದ್ರನಾಗಿದ್ದ ಕಾರಣ, ಇವರು ಮತಾಂತರಗೊಂಡರೂ ಮೊದಲಿನ ಪ್ರತೀಕವನ್ನೆ ಇಂದಿನ ಹೆಸರಿನಲ್ಲಿಯೂ ತಮ್ಮ ಆರಾಧ್ಯದೈವವನ್ನಾಗಿ ಮುಂದುವರಿಸಿದ್ದು ಸಹಜ. ಹನುಮಂತ ವೀರಭದ್ರ ಪುತ್ರ ಎನ್ನಲಾಗಿದೆ. ತಮಿಳಿನ ಕಂಬರಾಮಾಯಣದ ರೀತ್ಯಾ ಹನುಮಂತ ರುದ್ರಾಂಶಿತನಾಗಿದ್ದಾನೆ. ವಿಜಯನಗರ ಕಾಲದಲ್ಲಿ ನಿರ್ಮಿತವಾದ ಪ್ರಳಯಕಾಲದ ವೀರಭದ್ರನ ಗುಡಿಯಲ್ಲಿ (ಬೆಂಗಳೂರು) ಹನುಮನ ಶಿಲ್ಪವನ್ನು ಈ ಸಂಪ್ರದಾಯದ ಹಿನ್ನೆಲೆಯಲ್ಲಿಯೆ ಕೆತ್ತಲಾಗಿದೆ. ಈ ಪರಂಪರೆಯಲ್ಲಿ ಬಂದ ಅರಸರಿಗೆ, ಸಹಜವಾಗಿ ಹನುಮಧ್ವಜ ಸಂಕೇತವಾಯಿತು. ಕೊಡಗಿನ ದೊಡ್ಡಕೂಡ್ಲಿಕಲ್ಲುಮಠದಲ್ಲಿನ ಶಿಲಾಸ್ತಂಭಗಳಲ್ಲಿ ಆನೆಮರಿಗಳನ್ನು ಕೊಕ್ಕಿನಲ್ಲಿ ಹಿಡಿದ ಗಂಡುಭೇರುಂಡ ಶಿಲ್ಪವೂ ಇದೆ. ಅಂದರೆ ಮಠ ಪರಂಪರೆಯಲ್ಲಿ ಬಂದ ಶಿಲ್ಪವೊಂದು ಸುರಪುರದರಸರ ರಾಜಮುದ್ರೆಯಲ್ಲಿ ಇರುವುದೂ ಅವರ ವೀರಶೈವ ಹಿನ್ನೆಲೆಯನ್ನು ಬಹುಶಃ ಸೂಚಿಸುವಂತಿದೆ. ನಿಷ್ಠಿಸಚಿವರಿಗೆ ಇವರ ವೀರಶೈವ ಹಿನ್ನೆಲೆ ತಿಳಿದಿರಬೇಕೆನಿಸುತ್ತದೆ.

ನಿಷ್ಠಿ ಸಚಿವ ಸೋದರರು ಸುರಪುರ ದೊರೆಗಳ ಆಸ್ಥಾನದಲ್ಲಿದ್ದ ವೀರಶೈವ ಧರ್ಮಿಗಳು. ಮನೆತನದ ಮೂಲ ಪುರುಷ ಸಂಗಪ್ಪ ಪಟ್ಟಣಶೆಟ್ಟಿ ಗುಲ್ಬರ್ಗ ಜಿಲ್ಲೆ ಚಿಂಚೋಳಿ ತಾಲೂಕಿನ ಸುಲೇಪೇಟೆಯವ. ಈ ಮನೆತನದ ಸಚಿವ ಕಡಲಪ್ಪನವರು ೨೫ ಗುರು, ವಿರಕ್ತಮಠಗಳನ್ನು ಕಟ್ಟಿಸಿ ಅನ್ನದಾಸೋಹಕ್ಕೆ ಅಣಿಮಾಡಿದರು. ಸಚಿವವೀರಪ್ಪನವರು ಕೆರೆ,ಬಾವಿ, ತೋಂಟ, ಬಿಘೇದ (ಭೂಮಾಪನ)ಕಟ್ಟೆ, ನ್ಯಾಯದ ಕಟ್ಟೆಗಳನ್ನು ಕಟ್ಟಿಸಿದರು. ಧಾರವಾಡ ಜಿಲ್ಲೆ ಹಂದಿಗನೂರು ದೇಸಾಯಿ ಮನೆತನದ ಮೂಲಪುರುಷ ವಿಠಲನಾಥ ಬುಳ್ಳಪ್ಪ ಸರಶೆಟ್ಟಿ, ಬಿಜಾಪುರದ ಬಾದಶಾಹನಿಗೆ ಆಹಾರ ಸರಬರಾಜಿನ ಗುತ್ತಿಗೆದಾರರಾಗಿದ್ದರು. ಕ್ರಿ.ಶ. ೧೫೭೫ರಲ್ಲಿ ಬಾದಶಹನಿಂದ ಸನ್ನದು ಇವರಿಗಾಯಿತು. ಬಿ.ವಿ.ಯಕ್ಕುಂಡಿಮಠ ಅವರು ಈ ಬಗ್ಗೆ ವಿವರಗಳನ್ನು ದಾಖಲಿಸಿದ್ದಾರೆ.[90ಆ]

ಬೆಳಗಾವಿ ತಾ। ಕಾಗತಿ ದೇಶಗತಿ ಮನೆತನದ ಮೂಲಪುರುಷ ಮಡೆಮಾಮಗೌಡ, ಆದಿಲ್‌ಶಾಹಿಯ ಕಾಲದಲ್ಲಿ ಕಾಗತಿಗೆ ವಲಸೆ ಬಂದ. ಈ ವಂಶದ ೧೨ನೆಯ ತಲಮಾರಿನವನಾದ

90ಅ. ಪ್ರೊ। ಸಿ. ಮಹಾದೇವಪ್ಪ : 'ಗೋಸಲ, ಶಬ್ದ ಕಲ್ಪದ್ರುಮ', ಅಮರವಾಣಿ, (ಸಂ) ಪ್ರೊ। ಎನ್. ಬಸವಾರಾಧ್ಯ, ಷಣ್ಮುಖಯ್ಯ ಅಕ್ಕೂರಮಠ, ಬೆಂಗಳೂರು, ೧೯೯೪, ಪು. ೧೯-೨೦,೨೨

90ಆ. ನೋಡಿ, ಸಾರಂಗಶ್ರೀ, ಅದೇ

೩ನೆಯ ಖಾನಗೌಡ ಕ್ರಿ.ಶ. ೧೭೭೫ರಲ್ಲಿ ಸ್ವಶಕ್ತಿಯಿಂದ ಕಾಗತಿ ದೇಶಗತಿಯನ್ನು ಸಾಧಿಸಿದ. ಇವನು ವೀರಶೈವ ಧರ್ಮದೊಲವನ್ನು ಹೊಂದಿದ್ದ. ಹಾಗು ವಂಶದ ಬಹಳಷ್ಟು ಮನೆತನಗಳು ವೀರಶೈವಕ್ಕೆ ಬಂದವು. ಇವನ ಕಾಲದಲ್ಲಿ ಪಟ್ಟದ ದೇವರ ಹಿರೇಮಠ ಅಸ್ತಿತ್ವಕ್ಕೆ ಬಂದಿರುವಂತಿದೆ. ಈ ವಂಶಿಕರ ಕುಲದೇವರಾದ ಕಾಗತಿಯ ಸಿದ್ದೇಶ್ವರ ದೇವಾಲಯವನ್ನು ಇವನು ಜೀರ್ಣೋದ್ಧಾರ ಮಾಡಿದ. ತಲ್ಲೂರ ದೇಶಗತಿಯ ಮೂಲ ಪುರುಷ 'ತುರುಕಾರಿ ಪಂಚಮರ' ಇತಿಹಾಸದ ರೀತ್ಯಾ ಬೆಳವಡಿ ರಾಜ್ಯವಾಳುತ್ತಿದ್ದ ಚಂದ್ರಶೇಖರರಾಜ. ಕ್ರಿ.ಶ. ೧೫೧೧ರ ಆದಿಲ್‌ಶಾಹಿ ಕಾಲದಲ್ಲಿ ರಾಜ್ಯ ವಿಭಾಗಮಾಡಿಕೊಂಡು ಇವನ ಸೋದರರಾದ ಸಿದ್ದಪ್ಪನಾಯಕ ತಲ್ಲೂರಿನಲ್ಲಿ ಮುರಗೋಡು ೩ಂಕ್ಕೆ ದೇಸಾಯಿಯಾಗಿ, ಸಿದ್ದಬಸಪ್ಪನಾಯಕರು ಬೈಲಹೊಂಗಲದಲ್ಲಿ ಆಳುತ್ತಿದ್ದರು. ಶ್ರೀಶೈಲ ಮಲ್ಲಿಕಾರ್ಜುನನಿಗೆ ಈ ದೇಸಾಯಿ ಮನೆತನದವರು ವಾರ್ಷಿಕವಾಗಿ ತಲ್ಲೂರಿನಿಂದ ಪ್ರಮುಖ ಪಲ್ಲಕ್ಕಿಯನ್ನು ತಮ್ಮ ವಾಡೆಯಿಂದ ಕಳುಹಿಸುತ್ತಿದ್ದರು. ಈ ದೇಶಗತಿಯ ಇಂದಿನ ಹಿರಿಯರು ಮುರುಗೋಡ ಹಿರಿಯ ಮಠದ ಪಟ್ಟದ ದೇವರನ್ನು ತಮ್ಮ ಕುಲಗುರುಗಳೆಂದು ಹೇಳುತ್ತಾರೆ. ಬಾಳೆಹಳ್ಳಿಯ ಪೀಠವನ್ನು ತಮ್ಮ ಗುರುಪರಂಪರೆಯ ಮೂಲವೆಂದು ಮಾನಿಸಿಕೊಂಡಿದ್ದಾರೆ. ಇವರ ಮನೆದೇವರು ಬೆಳವಡಿಯ ವೀರಭದ್ರದೇವರಾಗಿದ್ದಾನೆ. ಸವದತ್ತಿ ತಾಲೂಕಿನ ಚಚಡಿ ದೇಶಗತಿ ಅತಿ ಚಿಕ್ಕದೇಶಗತಿ. ಈ ಮನೆತನದ ಮೂಲಪುರುಷರಾದ ನಾಲ್ವರಲ್ಲಿ ಮೊದಲಿನವರು ವೀರಪ್ಪದೇಸಾಯಿನಾಯಕರೆಂದಿದೆ. ವಾಸ್ತವವಾಗಿ ದೇಶಗತಿಯು ವಂಶದ ೮ನೆಯ ತಲಮಾರಿನ ವನೆನ್ನಲಾದ ಸಿದ್ದಪ್ಪನಾಯಕ ದೇಸಾಯಿಯಿಂದ ಬೆಳಕಿಗೆ ಬಂದಿತು. ಈ ದೇಶಗತಿಯ ಅಧೀನಕ್ಕಾದ ಹಳ್ಳಿಗಳನ್ನು 'ಚಾವರಾತ ಹಳ್ಳಿಗಳು' ಎನ್ನುವುದು ರೂಢಿ. ಅಂತಾಗಿ ಚಚಡಿ 'ಚಾವರಾತ' ಎಂದು ಪ್ರಸಿದ್ಧಿಯಾಯಿತು. ಈ ಮನೆತನದವರು ಕಿತ್ತೂರು ರಾಣಿ ರುದ್ರಮ್ಮನ ಪ್ರಭಾವಕ್ಕೆ ಒಳಗಾಗಿ ವೀರಶೈವರಾದರು. ಈ ದೇಶಗತಿಗೆ ಜಾಲಿಕಟ್ಟೆ ಬಸವಣ್ಣ, ಮುರುಗೋಡ ವೀರಭದ್ರ, ಸೌಂದತ್ತಿ ಎಲ್ಲಮ್ಮ, ಶ್ರೀಶೈಲಮಲ್ಲಿಕಾರ್ಜುನ ಹಾಗೂ ಚಚಡಿ ಸಂಗಮೇಶ್ವರ, ಇವು ಕುಲದೇವರುಗಳಾಗಿದ್ದಾರೆ. ಮುರುಗೋಡದ ಮಹಾಂತಪ್ಪಗಳೇ ತಮ್ಮ ಗುರುಗಳು ಎಂದು ಇವರು ಹೇಳಿಕೊಳ್ಳುತ್ತಾರೆ. ಕೊಣ್ಣೂರ ಮತ್ತು ಮರಡಿಮಠದ ಕಾಡದೇವರಮಠಕ್ಕೆ ನಡೆದುಕೊಳ್ಳುತ್ತಾರೆ. ಆ ಮಠಗಳಿಗೆ ಹೊಲವನ್ನು ದಾನ ನೀಡಿದ್ದಾರೆ. ಈ ದೇಶಗತಿಯ ಐತಿಹಾಸಿಕ ಸ್ಮಾರಕವಾಗಿ ಇಂದಿಗೂ ಅರಮನೆ, ಕೋಟೆಯ ಅವಶೇಷಗಳು ಉಳಿದು ನಿಂತಿವೆ. ಈ ಮನೆತನವು ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸೇವೆ ಸಲ್ಲಿಸಿ ಜನಪದಕಲೆ, ಸಾಹಿತ್ಯ ಕ್ರೀಡೆಗಳಿಗೆ ಉತ್ತೇಜನ ನೀಡಿದೆ. ರುದ್ರಾಪೂರ ದೇಶಗತಿಯ ಮೂಲಪುರುಷ, ಹುಲಿವೀರರಾದ ಚಂದ್ರಪ್ಪದೇಸಾಯಿ ಎನ್ನಲಾಗಿದೆ. ಬಹುಶಃ ಈ ಕಾರಣದಿಂದ ಇವನ ವಾಡೆಯ ಅಗಸಿಬಾಗಿಲಿನ ಮೇಲೆ ಹುಲಿಯ ಚಿತ್ರವನ್ನು ಬಿಡಿಸಲಾಗಿದೆ. ಇವರ ಮನೆ ದೇವರು ಗೊಡಚಿ ವೀರಭದ್ರ ದೇವರು. ಮನೆಯ ಕಂಬಿ ಪ್ರತಿವರ್ಷ ಶ್ರೀಶೈಲಕ್ಕೆ ಹೋಗಿ ಬರುತ್ತಿತ್ತು. ಕೊಡಗಿನ (ಚಿಕ್ಕವೀರರಾಜೇಂದ್ರನ ಸೋದರಿ ದೇವಮ್ಮಾಜಿ ವಂಶಿಕರು) ರಾಜವಂಶಿಕರೊಡನೆ, ಸಂಬಂಧ ವಿರುವ ನಾಗರಮುನವಳ್ಳಿ ಮನೆತನದ ಹೆಣ್ಣನ್ನು ಇವರು ತಂದುಕೊಂಡರು. ಈ

ಮನೆತನದವರು ಸಮಾಜಸೇವೆ, ಸಾಹಿತ್ಯ ಸೇವೆಯಲ್ಲಿ ಆಸಕ್ತಿತಳೆದಿದ್ದರು.[91] ಲಕ್ಷ್ಮೇಶ್ವರ ದೇಸಗತಿಯ ಮೂಲಪುರುಷ ಕ್ರಿ.ಶ. ೧೫೭೯ರ ವೀರಣಗೌಡ ದೇವಣಗೌಡ ದೇಸಾಯಿ. ಇವರು ಮೂಲದಲ್ಲಿಕುಡುವಕ್ಕಲಿಗ ಜಾತಿಯವರಾಗಿದ್ದು ಕ್ರಿ.ಶ. ೧೬೧೦-೩೪ರ ಒಂದನೆ ಖಾನಗೌಡನ ಮಗ ಸೋಮಣ್ಣ, ಫಕೀರಸ್ವಾಮಿ ಎಂಬುವನಿಂದ ಲಿಂಗದೀಕ್ಷೆ ಪಡೆದನೆನ್ನಲಾಗಿದೆ. ಈ ಖಾನಗೌಡನು ವಂಶದ ಪ್ರಸಿದ್ಧಿಗಾಗಿ ಶ್ರಮಿಸಿದವ. ೨ನೇ ಖಾನ ಗೌಡನು ತನ್ನ ಕಾಲದಲ್ಲಿ ಕೆಂಚಬಸವೇಶ್ವರ ದೇವರ ಪ್ರತಿಷ್ಠೆ ನಡೆಸಿ, ಆದಿಲ್‌ಶಾಹಿ ಸರದಾರ ಅಂಕುಶಖಾನನಿಂದ ಈ ದೇಗುಲಕ್ಕೆ ಇನಾಂಭೂಮಿ ಕೊಡುವಂತೆ ಪ್ರಭಾವ ಬೀರಿದ. ವಂಶದ ೪ನೆಯ ಖಾನಗೌಡ ೧೬೮೬ರಿಂದ ದೇಸಾಯಿಯೆಂದು ಆಳಿ, ಮರಾಠರಿಗೆ ಹಾಗು ಮೊಘಲರಿಗೆ ಸಾಂಧರ್ಭಿಕವಾಗಿ ನೆರವಾದ. ಈ ವಂಶದಲ್ಲಿ ೬ನೆಯ ಖಾನಗೌಡನೇ ಕೊನೆಯ ದೇಸಾಯಿ ಇರಬಹುದೆಂದು ಡಾ। ಕೆ.ಎನ್. ಚಿಟ್ನೀಸ್ ಅವರ ಅಭಿಪ್ರಾಯವಾಗಿದೆ. ಲಕ್ಷ್ಮೇಶ್ವರ ದೇಸಾಯಿಗಳು ಸ್ವತಂತ್ರ ಪ್ರವೃತ್ತಿಯುಳ್ಳವರಾಗಿದ್ದರು. ಇವರ ಕಾಲದಲ್ಲಿ ಹೊಲಗಳಲ್ಲಿ ಮಾತ್ರ ಬೀಜವರಿ ಕಂದಾಯ ಪದ್ಧತಿ ಇತ್ತು. ಇವರ ಸೈನ್ಯದಲ್ಲಿ, ಹಿಂದೂ ಹಾಗೂ ಮುಸ್ಲಿಮ ಅಧಿಕಾರಿಗಳಿದ್ದರು.

ಹಾಗಲವಾಡಿ ಅರಸು ಮನೆತವು ಮೂಲತಃ ಬೇಡಕುಲಕ್ಕೆ ಸೇರಿದ್ದೆನ್ನಲಾಗಿದೆ. ಈ ಮನೆತನದ ಮೂಲಪುರುಷ ಎರಿಮಾದನಾಯ್ಕ. ಈ ವಂಶವು ಕ್ರಿ.ಶ. ೧೪೭೮ ರಿಂದ ೧೭೬೫ರವರೆಗೆ ಮೊದಲು ಚಿಕ್ಕನಾಯಕನಹಳ್ಳಿಯಲ್ಲಿ ಆಳಿ ನಂತರ ಹಾಗಲದಹಳ್ಳಿ (ಗುಬ್ಬಿ ತಾಲೂಕಿನ ಒಂದು ಹೋಬಳಿ) ಗೆ ರಾಜಧಾನಿಯನ್ನು ಬದಲಾಯಿಸಿತು. ಅದಕ್ಕೆ ಕೋಟೆ ಕಟ್ಟಿ ಪಟ್ಟಣವಾದ ಮೇಲೆ ಹಾಗಲವಾಡಿ ಎಂದು ಕರೆಸಿಕೊಂಡಿತು. (ಕ್ರಿ.ಶ. ೧೫೪೪-೭೮)ರ ಮನೆತನದ ಮೂರನೆಯ ಅರಸು ಭೈರವನಾಯಕನು ವೀರಶೈವ ಮತವನ್ನು ಅಪ್ಪಿದ. ನಂತರ ಮುಂದಿನ ಅರಸರೆಲ್ಲ ಆ ಧರ್ಮವನ್ನೆ ಅನುಸರಿಸಿದರು. ಇವರಲ್ಲಿ (ಕ್ರಿ.ಶ. ೧೭೨೦-೪೦) ಇಮ್ಮಡಿ ಮುದಿಯಪ್ಪನಾಯಕನು ಧರ್ಮ, ಸಾಹಿತ್ಯ, ಸಂಸ್ಕೃತಿ, ವಲಯದಲ್ಲಿ ಗಣ್ಯಕೊಡುಗೆ ನೀಡಿದ. ಕಾಶಿಯಲ್ಲಿ ಧರ್ಮಛತ್ರ, ಕಾಶಿಯ ಮುದ್ವೀರಸ್ವಾಮಿಗಳಿಂದ ತತ್ತ್ವೋಪದೇಶ ಸ್ವೀಕಾರ, ಸಂಗೀತಗಾರರಿಗೆ ಆಶ್ರಯ, ಬ್ರಾಹ್ಮಣರಿಗೆ, ಜಂಗಮರಿಗೆ ಉದಾರ ಆಸರೆ, ಸೆರೆಮನೆಯ ಖೈದಿಗಳ ಬದುಕಿನ ಸುಧಾರಣೆ, ಈ ಎಲ್ಲವನ್ನು ನಿರ್ವಹಿಸಿದ. ೭೦೦ ಪದ್ಯಗಳ ರಚನೆ ಮಾಡಿ ಹಾಡಿದ. ಇವನ ಕಾಲ ಈ ಪಾಳೆಪಟ್ಟಿನ ಸುವರ್ಣಯುಗವಾಗಿ, 'ಧರ್ಮಸಂಸ್ಥಾನ' ಎಂದು ಹೆಸರುಗೊಂಡಿತು. ಕ್ರಿ.ಶ. ೧೭೭೫ರಲ್ಲಿ, ಮುಮ್ಮಡಿ ಮುದಿಯಪ್ಪನಾಯಕನಿಗೆ ಪಟ್ಟವಾಗಿದ್ದರೂ, ಪ್ರಾಪ್ತ ವಯಸ್ಕನಲ್ಲವೆಂದು ಜೀವನಕ್ಕೆ ಕೆಲವು ಜಹಗೀರು ಗ್ರಾಮಗಳನ್ನು ನೀಡಿ ಹೈದರಾಲಿ ಹಾಗಲವಾಡಿ ಸಂಸ್ಥಾನವನ್ನು ಶ್ರೀರಂಗಪಟ್ಟಣಕ್ಕೆ ಸೇರಿಸಿಬಿಟ್ಟ. ಇನ್ನು ಸೋಸಲೆಯ ರೇವಣಾಚಾರ್ಯನು ಹಿರಿಯ ಮುದಿಯಪ್ಪನಾಯಕನ (ಕ್ರಿ.ಶ. ೧೫೭೮-೧೬೧೮) ಆಸ್ಥಾನ ಕವಿಯಾಗಿದ್ದ. ರೇಣುಕ ಸಂಪ್ರದಾಯದವನಾದ ಇವನು ಮಹಿಮ್ನಸ್ತವ,

91. ಬೆಳಗಾವಿಜಿಲ್ಲೆಯ ವೀರಶೈವ ದೇಶಗತಿಗಳು : (ಸಂ) ಬಾಳಣ್ಣ ಸೀಗೀಹಳ್ಳಿ, ಗದಗ, ೧೯೮೯, ನೋಡಿ.

ಸಿದ್ಧಾಂತಶಿಖಾಮಣಿ, ಸದ್ಗುರುರಗಳೆಗಳಿಗೆ ಕನ್ನಡ ವ್ಯಾಖ್ಯಾನ ಬರೆದ. ಇವಲ್ಲದೆ ಶಾರೀರ ಪ್ರಕಾಶಿಕೆ ಅಂತಃಕರಣ ಪ್ರಕಾಶಿಕೆ, ಮುಂತಾದ ಸ್ವತಂತ್ರ ಕೃತಿಗಳನ್ನು ಬರೆದ. (ಕ್ರಿ.ಶ. ೧೬೭೧-೧೭೦೧)ರ ಅರಸ ಸಿದ್ದರಾಮಪ್ಪನಾಯಕನು ರಾಜಕವಿ ಎಂದು ಹೆಸರಾಗಿದ್ದು ಮಹಾನುಭವ ಪ್ರಕಾಶಿಕೆ'ಎಂಬ ಗದ್ಯ ಕೃತಿಯನ್ನು ರಚಿಸಿದ. ಈ ಮನೆತನದ ದೊರೆಗಳು., ಎಡೆಯೂರು ಸಿದ್ದೇಶ್ವರರ ಪರಮ ಆರಾಧಕರಾಗಿದ್ದರು. ಹಾಗಲವಾಡಿಗೆ ಬರಮಾಡಿಕೊಂಡು ಮೆರವಣಿಗೆ ಮಾಡಿದರು. ಚಿತ್ರದುರ್ಗದ ಬೃಹನ್ಮಠದ ಭಕ್ತರೂ ಹೌದು. ಇವರ ಮನೆದೇವರು ರಾಮೇಶ್ವರ. ಹಾಗಲವಾಡಿಯಲ್ಲಿ ರಾಮೇಶ್ವರ ದೇವಾಲಯ, ಚೆನ್ನಕೇಶವ ದೇವಾಲಯ, ವೀರಭದ್ರ ದೇವಾಲಯ, ಬಸವಣ್ಣನ ಗುಡಿ, ಚಂದ್ರಮೌಳೀಶ್ವರ ದೇವಾಲಯಗಳನ್ನೂ ಹಾಗೂ ವೀರಶೈವ ಮಠಗಳನ್ನು ನಿರ್ಮಿಸಿದರು. ಇವಲ್ಲದೆ ಮುದ್ವೀರಸ್ವಾಮಿಗಳ ಹಾಗೂ ಕಂಬಳಿ ಬಸಮ್ಮನ ಗದ್ದುಗೆಗಳು ಗಮನಾರ್ಹವಾಗಿವೆ. ಮಹಾ ನಾಡ ಪ್ರಭುಗಳು ಮಧುಗಿರಿ ಮತ್ತು ಬಿಜ್ಜಾವರ ಪ್ರದೇಶವನ್ನು ರಾಜಧಾನಿ ಮಾಡಿಕೊಂಡು ಆಳಿದ ನೊಣಂಬ ಪಲ್ಲವ ಮನೆತನದವರಾಗಿ ನೊಣಬ ವೀರಶೈವರ ಮೂಲಪುರುಷರಾಗಿದ್ದಾರೆ. ಕ್ರಿ.ಶ. ೧೩೯೯ರ ಮುನ್ನ ವಿಜಯನಗರದರಸ ಹರಿಹರನಿಗೆ ಮಹಮದೀಯ ಆಕ್ರಮಣದ ವಿರುದ್ಧ ಗೆಲವು ತಂದು ಕೊಟ್ಟು, ಊರು ಕೋಟೆ ಕಟ್ಟಿ, ಹೆಸರು ಪಡೆದರು. ಊರಿಗೆ ಮುಮ್ಮಡಿಪಟ್ಟಣವೆಂದು ಕರೆದರು. ನೊಣಬೇಶ್ವರ ದೇಗುಲಕಟ್ಟಿ, ಹಿರೇ ಚಿಕ್ಕಪ್ಪಗೌಡನು ಹಾಳಾಗಿದ್ದ ಮುಮ್ಮಡಿ ಪಟ್ಟಣವನ್ನು ಜೀರ್ಣೋದ್ಧಾಮಾಡಿದ. ಕ್ರಿ.ಶ. ೧೫೭೪ರ ಸುವರಿನಲ್ಲಿ ಶ್ರೀ ವೀರಭದ್ರಸ್ವಾಮಿಯನ್ನು ಪ್ರತಿಷ್ಠೆಮಾಡಿ ಬಿಜ್ಜಾವರ ಗ್ರಾಮವನ್ನು ಸ್ಥಾಪಿಸಿ, ಅಲ್ಲಿಗೆ ಮುಮ್ಮಡಿಯಿಂದ ರಾಜಧಾನಿಯನ್ನು ಬದಲಾಯಿಸಲಾಯಿತು. ಮುಮ್ಮಡಿ ಚಿಕ್ಕ ಭೂಪಾಲನನ್ನು ರಾಜ್ಯದ ಗದ್ದುಗೆಗೆ ಮನೆತನದ ಗುರುಗಳಾದ ಬೋಳಬಸವೇಶ್ವರರು ಕೂರಿಸಿದರು. ಇವನು ರಾಜಧಾನಿಯನ್ನು ಕ್ರಿ. ಶ. ೧೫೯೮ರಲ್ಲಿ ಈ ಬಿಜ್ಜಾವರದಿಂದ ಮಧುಗಿರಿಗೆ ಕೋಟೆಕಟ್ಟಿ ವರ್ಗಾಯಿಸಿದ. ಈ ಅರಸುಗಳ ಕಾಲದಲ್ಲಿ ಕನ್ನಡ ಹಾಗು ಸಂಸ್ಕೃತ ಗ್ರಂಥಗಳು ಪ್ರಕಟವಾದುವು. ಇಮ್ಮಡಿ ಚಿಕ್ಕಭೂಪಾಲ ಕವಿಜನಾಶ್ರಯನಾಗಿದ್ದ. ವೀರಶೈವ ಶಾಸ್ತ್ರ ಹಾಗೂ ಕಾವ್ಯ ಪಠಣದ ಸಂದರ್ಭಗಳಲ್ಲಿ ಅರಸರು ಹೋಗಿ ಕೇಳುತ್ತಿದ್ದರು. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಸಂಸ್ಕೃತ ಬಸವಪುರಾಣಟೀಕೆ, ಸಂಸ್ಕೃತ ಪಂಡಿತಾರಾಧ್ಯಚರಿತ್ರಟೀಕೆ ಇತ್ಯಾದಿಗಳು ಇವರ ಕಾಲದವು. ಇವರ ಕಾಲದಲ್ಲಿ ಗುರಮ್ಮನ ಮಠ, ಭಿಕ್ಷಾವರ್ತಿಮಠ, ಗುರುನಂಜಮ್ಮನ ಮಠಗಳು ನಿರ್ಮಿತವಾದವು. ವಿಶೇಷವೆಂದರೆ ಅವು ವೀರಶೈವ ಮಠದಮ್ಮನ ಹೆಸರಿನಲ್ಲಿರುವುದು ಗಮನಾರ್ಹ. ಚಿತ್ರದುರ್ಗಜಿಲ್ಲೆ ಹೊಸದುರ್ಗ ತಾಲೂಕಿನ ಬೂದಿಹಾಳು ಪಾಳೆಗಾರರು ಮೂಲತಃ ಗೊಲ್ಲವಂಶದವರು. ಇವರಲ್ಲಿ ಪ್ರಖ್ಯಾತನಾದ ಸಿರುಮನ ಕಾಲಕ್ಕೆ ವೀರಶೈವಧರ್ಮವನ್ನು ಅಪ್ಪಿಕೊಂಡಂತಿದೆ. ಬೂದಿಹಾಳಿನ ನಿರಾಸೆಮಠ ಇದಕ್ಕೆ ಕಾರಣವೆಂದು ಊಹಿಸಲಾಗಿದೆ. ಈ ಪಾಳೆಯಪಟ್ಟು ಕ್ರಿ.ಶ. ೧೪೩೫ರ ಹೊತ್ತಿಗೆ ಬಹುಶಃ ಶುರುವಾಗಿರಬಹುದೆಂದು ಬಿ. ರಾಜಶೇಖರಪ್ಪ ಹೇಳುತ್ತಾರೆ. ಕಾವ್ಯಗಳಲ್ಲಿ ಸಿರುಮನನ್ನು

ಮಂಡಲೇಶ್ವರ ಎಂದಿರುವ ಕಾರಣ ಆಳ್ವಿಕೆಯ ಪ್ರದೇಶ ದೊಡ್ಡದಿದ್ದಿರಬೇಕೆನಿಸುತ್ತದೆ. ಸಮೃದ್ಧ ಕೃಷಿ ಪ್ರದೇಶವಾಗಿ ತೆಂಗು, ಅಡಿಕೆ ಇತ್ಯಾದಿ ಆರ್ಥಿಕ ಬೆಳೆಗಳಲ್ಲದೆ ಹಣ್ಣಿನ ತೋಟಗಳಿಂದ ಇದು ಕೂಡಿತ್ತು. ರಕ್ಷಣಾವ್ಯವಸ್ಥೆಗೆ ದೊಡ್ಡ ಸೈನ್ಯವಿತ್ತು. ಸುಭದ್ರ ಕೋಟೆ ಕೊತ್ತಲ, ಶಸ್ತ್ರಾಸ್ತ್ರಗಳಿದ್ದುವು. ಈ ಅರಸರು ಸರ್ವಧರ್ಮ ಸಮನ್ವಯಕಾರರಾಗಿದ್ದರು. ಸೋಮೇಶ್ವರ, ವೀರಭದ್ರದೇವರು ಮನೆದೇವರುಗಳಾಗಿದ್ದರು. ನಿರಾಸೆಮಠಗಳಿಗೆ ನಡೆದುಕೊಂಡ ಇವರ ಜಂಗಮದಾಸೋಹ ಪ್ರಸಿದ್ಧವಾಗಿತ್ತು. ಹೊಸದುರ್ಗ ತಾಲೂಕಿನ ಇನ್ನೊಂದು ಅರಸು ಮನೆತನ ಮತ್ತೋಡು ಪಾಳೇಗಾರರು ಕ್ರಿ.ಶ. ೧೬೦೪ರಿಂದ ೧೭೭೯ರವರೆಗೆ ಆಳಿದವರೆನ್ನಲಾಗಿದೆ. ಇದರ ಸ್ಥಾಪಕ ಬೇಡಕುಲದ ಗಿರಿಯಪ್ಪನಾಯಕ. ಈ ಮನೆತನದಲ್ಲಿ ಬಹಳ ಹೆಸರಾದವನಾದ ದೊಡ್ಡಹಾಲಪ್ಪನಾಯಕನು ಕ್ರಿ.ಶ. ೧೬೮೫-೧೭೦೭ರ ಅವಧಿಯಲ್ಲಿ ಕುಟುಂಬ ಸಹಿತ ವೀರಶೈವದ ಅನುಯಾಯಿಯಾದ. ದೇವಾಲಯ, ಅಗ್ರಹಾರ, ಮಠಗಳನ್ನು, ಕಟ್ಟಿಸಿ ನಿರ್ವಹಣೆಗೆ ವ್ಯವಸ್ಥೆಮಾಡಿದ. ಕ್ರಿ.ಶ. ೧೭೦೭ರಲ್ಲಿ ಮುರಿಗೆ, ಸ್ವಾಮಿಗಳ ಮಠವನ್ನು ತಂದೆತಾಯಿಗಳಿಗೆ ಶಿವಸಾನ್ನಿಧ್ಯವಾಗಲೆಂದು ಮುತ್ತೋಡಿನಲ್ಲಿ ಕಟ್ಟಿಸಿದ. ಗ್ರಾಮದಾನ ನೀಡಿದ. ಉಡಿಸೆತಾಯಿ ಬೇವಿನಹಳ್ಳಮ್ಮ ಎಂಬ ಈ ಗ್ರಾಮದ ೧೭ನೇ ಶತಮಾನದ ಶಾಸನೋಕ್ತ ದೇವತೆ ಇವರಿಗೆ ಆರಾಧ್ಯದೇವತೆ ಎಂಬುದು, ಶ್ರೀ ಬಿ. ರಾಜಶೇಖರಪ್ಪ ಅವರು ಈಚೆಗೆ ಪತ್ತೆ ಹಚ್ಚಿದ ಈ ಶಾಸನದಿಂದ ಸೂಚಿತವಾಗುವಂತಿದೆ. ಶ್ರೀಶೈಲದ ಕಡೆಯಿಂದ ಬಂದ ಪರ್ವತ ಮಲ್ಲಿಕಾರ್ಜುನ ಸ್ವಾಮಿಗಳಿಗೂ, ಅವರು ತೊಂದರೆ ನಿವಾರಣೆ ಮಾಡಿದ ಕಾರಣ ಮಠ ಕಟ್ಟಿಸಿಕೊಟ್ಟ ಎಂದು ಹೇಳಲಾಗಿದೆ. ಈ ನಾಯಕನ, ವಿದ್ಯಾಪ್ರೇಮ, ಸಾಹಿತ್ಯ ಪ್ರೇಮದಿಂದಾಗಿ 'ಶೈವಶಾಸ್ತ್ರಪಾರಂಗತ' ಎಂದು ಹೆಸರಿಸಲಾಗಿದೆ. ಇವರು ಯಳನಾಡು ಸಿದ್ದರಾಮೇಶ್ವರರ ಭಕ್ತರೂ ಆಗಿದ್ದರು. ಇವರ ಆಳ್ವಿಕೆ ನೆಮ್ಮದಿಯಿಂದಿದ್ದು ಕೃಷಿ, ವ್ಯಾಪಾರ, ಉದ್ಯಮ, ಕುಶಲಕಲೆಗಳಿಗೆ ಉತ್ತೇಜನಕೊಟ್ಟಿತು. ಸೈನ್ಯಬಲ ದಕ್ಷವಾಗಿತ್ತು. ವೃತ್ತಿತೆರಿಗೆ ಜಾರಿಯಲ್ಲಿತ್ತು. ಚಿಕ್ಕಮಗಳೂರು ಜಿಲ್ಲೆಯ ದಾನಿವಾಸ ರಾಜಧಾನಿ. ಇಂದು ನೀರಲ್ಲಿ ಮುಳುಗಿದ್ದರೂ, ದಾನಿವಾಸ ಅರಸುಮನೆತವು ಇದ್ದ ಬಗ್ಗೆ ಶಾಸನಗಳು ತಿಳಿಸುತ್ತವೆ. ವಿರೂಪಾಕ್ಷ ಪಂಡಿತನು 'ಚನ್ನಬಸವ ಪುರಾಣ'ದಲ್ಲಿ ಜಂಗಮದಾಸೋಹ ಮಾಡುತ್ತಿದ್ದ ಈ ದೊರೆಗಳನ್ನು, ಹೆಸರಿಸುತ್ತ 'ಜಂಬೂರ ದಾನಿವಾಸದ ದೊರೆಗಳು' ಎಂದಿದ್ದಾನೆ. ಅಲ್ಲದೆ ವಿಜಯನಗರ ಕಾಲದ ಲಿಂಗಾಪುರದ ಶಾಸನದಲ್ಲಿ ದಾನಿವಾಸದ ಸೀಮೆ' ಎಂದೂ ಬಂದಿದೆ. ಅಂದರೆ 'ದಾನಿವಾಸದ ರಾಜಧಾನಿ ಜಂಬೂರು ಆಗಿರಬೇಕು. ಅಥವಾ ದಾನಿವಾಸದ ದೊರೆವಂಶದ ಶಾಖೆ ಜಂಬೂರನ್ನು ಆಳುತ್ತಿದ್ದಿರ 'ಬೇಕೆಂದಾಗುತ್ತದೆ.

ಆದರೆ ಕ್ರಿ.ಶ. ೧೩೪೦ರ ಮುನ್ನ ದಾನಿವಾಸ ಅರಸುಮನೆತನವಿತ್ತು, ಎಂಬುದು ಡಾ। ಬಿ.ನಂಜುಂಡಸ್ವಾಮಿಯವರ ಅಂಬೋಣ. ಈ ಮನೆತನದಲ್ಲಿ ವಿರೂಪಾಕ್ಷ ಅರಸು ಕ್ರಿ.ಶ. ೧೫೫೩ರಲ್ಲಿದ್ದನೆಂಬುದು ಕೊಪ್ಪ ತಾಲೂಕಿನ ಶಾಸನವೊಂದರಿಂದ ತಿಳಿಯುತ್ತದೆ. ಬಾಳೆಹಳ್ಳಿಮಠದ ವೀರಭದ್ರ ದೇಗುಲಾವರಣದಲ್ಲಿ ಕ್ರಿ.ಶ. ೧೫೭೯ರ ಶಿಲಾಶಾಸನದಲ್ಲಿ ಈ

ಮನೆತನದ ರಾಜರಿಗೆ ಮಠವು ಕೊಟ್ಟ ಬೃಹತ್ ಮೊತ್ತದ ಸಾಲ ನೀಡಿದ ಸಂಗತಿ ಇದೆ. ಅಂದರೆ ಅರಸರಿಗೆ ಆಡಳಿತದ್ದೋ, ರಾಜಕೀಯದ್ದೋ ಸಂದರ್ಭವು ಒದಗಿ ಸಾಲಪಡೆದ ಸಂಗತಿ ಅದಾಗಿರಬೇಕು. ಹಾಗೂ ಆ ಮಠವು ಇವರ ರಾಜಗುರುಮಠವಾಗಿ ನೆರವು, ಮಾರ್ಗದರ್ಶನ ನೀಡಿರಬೇಕು ಎನಿಸುತ್ತದೆ. ಯಡೆಯೂರಿನ ದೇಗುಲದ ಶಾಸನದ ರೀತ್ಯಾ ತೋಂಟದ ಸಿದ್ಧಲಿಂಗೇಶ್ವರರ ಸಮಾಧಿಯ ಮೇಲೆ ಕಲ್ಲುಮಠ ಕಟ್ಟಿಸಿದ ಬಗ್ಗೆ ಹಾಗೂ ದಾನಿವಾಸದ ಅರಸರು ಅವರನ್ನು ವೀರಶೈವದ ಸೈದ್ಧಾಂತಿಕ ಶ್ರೇಷ್ಠತೆಯ ಪ್ರತೀಕವಾಗಿ ಕಂಡಿರುವ ಬಗ್ಗೆ ಉಕ್ತವಿದೆ. ದಾನಿವಾಸದ ದೊರೆಗಳನ್ನು ಹೆಸರಿಸಿ ಕಲ್ಲುಮಠ ಕಟ್ಟಿಸಿರುವುದನ್ನು ಸೂಚಿಸಿರುವ ಕಾರಣ, ಸಿದ್ಧಲಿಂಗೇಶ್ವರರ ಬಗೆಗಿನ ಅವರ ಭಕ್ತಿ ವಿದಿತವಾಗುತ್ತದೆ. ಆ ಮಧ್ಯಂತರದ ಅರಸರು ಅವರನ್ನು ಕುಲಗುರುವಾಗಿ ಪರಿಗಣಿಸಿರುವ ಸಾಧ್ಯತೆಯನ್ನು ಅದು ಸೂಚಿಸುತ್ತದೆ. ಅಂತಾಗಿ ಚೆನ್ನವೀರಪ್ಪವಡೆಯ ದಂಪತಿಗಳು ಒಂದು ರೀತಿಯಲ್ಲಿ ಮನೆತನದಲ್ಲಿ ಗುರು ವಿರಕ್ತ ಸಮನ್ವಯ ಸಂಬಂಧವನ್ನು ನಿದರ್ಶಿಸಿರುವ ಸೂಚನೆ ಇದಾಗಿದೆ ಎನಿಸುತ್ತದೆ. ಪುಂಗನೂರು ಅರಸು ಮನೆತನವು ಕ್ರಿ.ಶ. ೧೫೫೦ದಿಂದ ಸುಗುಟೂರು ವಂಶದ ಶಾಖೆಯಾಗಿ ಆಂಧ್ರದ ಚಿತ್ತೂರು ಜಿಲ್ಲೆಯ ತಾಲೂಕು ಕೇಂದ್ರ ಪುಂಗನೂರಿನಲ್ಲಿ ಆಳುತ್ತಿದ್ದ ಸಂಸ್ಥಾನಿಕರದಾಗಿದೆ. ಮೊದಲಿಗೆ ಕೋಲಾರವನ್ನು ಆಳುತ್ತಿದ್ದ ಸುಗಟೂರು ಶಾಖೆಗೆ ಪುಂಗನೂರು ಸೇರಿತ್ತು. ಆ ಸಮಯದಲ್ಲಿ ಒಂದು ಭದ್ರವಾದ ಕೋಟೆಯು ನಿರ್ಮಾಣವಾಯಿತು. ಇವರು ಕ್ರಿ.ಶ. ೧೬೪೯ರಲ್ಲಿ ಕೋಲಾರದಿಂದ ಪುಂಗನೂರು ಬಳಿಯ ಅವಲಪಲ್ಲಿಗೆ ರಾಜಧಾನಿಯನ್ನು ಬದಲಾಯಿಸಿಕೊಂಡರು. ಬಿಜಾಪುರ, ಹಾಗು ಕಡಪದ ನವಾಬರಿಗೆ ಕಪ್ಪಕಾಣಿಕೆ ನೀಡುತ್ತಿದ್ದರು. (ಕ್ರಿ.ಶ. ೧೭೮೦-೧೮೩೨)ರಲ್ಲಿ ವಂಶದ ಶಂಕರರಾಯನು ಟೀಪು ವಿರುದ್ಧ ಆಂಗ್ಲರಿಗೆ ನೆರವಾದರೂ ಪುಂಗನೂರಿನ ಮೊದಲಿನ ರಾಜ್ಯ ದಕ್ಕದೆ ಸಾಮಾನ್ಯ ಅಧಿಕಾರ ಮಾತ್ರ ದಕ್ಕಿತು. ಕ್ರಿ.ಶ. ೧೮೬೪ರಲ್ಲಿ ಇಮ್ಮಡಿ ಶಂಕರರಾಯನಿಗೆ ಹೆಚ್ಚಿನ ಅಧಿಕಾರ ದೊರಕಿತು. ಈ ಇಮ್ಮಡಿ ಶಂಕರರಾಯನು ಕೋಲಾರ ಜಿಲ್ಲೆ ಗೂಳೂರಿನ ಶ್ರೀ ಶೈಲ ನಿಡುಮಾಮಿಡಿ ಪೀಠದ ಇಮ್ಮಡಿ ಕರಿಬಸವೇಂದ್ರ ಸ್ವಾಮಿಗಳನ್ನು (ಕ್ರಿ.ಶ. ೧೮೩೫-೯೯) ಬಿರುದಾವಳಿ ಉತ್ಸವದೊಡನೆ ಬರಮಾಡಿಕೊಂಡು ಪೂಜಿಸಿದ ಎಂದು ಶ್ರೀಶೈಲ ಪೀಠದರ್ಶನ, (ಪು.೨೩೪)ದಲ್ಲಿ ಹೇಳಿದೆ. ಅಂದರೆ ಈ ಪೀಠದವರು ಪುಂಗನೂರು ವಂಶದ ರಾಜಗುರುಗಳಾಗಿದ್ದಿರಬೇಕು ಎನಿಸುತ್ತದೆ. ನಂತರ ವೀರಬಸವರಾಜ ಪಟ್ಟಕ್ಕೆ ಬಂದ. ಬಹುಶಃ ಈ ವಂಶಿಕರು ಮೊದಲ ತಲೆಮಾರಿನಲ್ಲಿ ವೀರಶೈವದೊಲವು ತೋರಿಸಿರುವಂತೆ ಕಾಣುತ್ತದೆ. ಪುಂಗನೂರಿನಲ್ಲಿ ಇವರ ಮೂಲ ಗ್ರಾಮದೇವತೆ ಸುಗಟೂರಮ್ಮನನ್ನು ಆರಾಧಿಸುತ್ತಾರೆ. ಆನೇಕಲ್‌ನಲ್ಲಿಯೂ ಇವರ ಶಾಖೆಯು ವೀರಶೈವ ಅರಸರಾಗಿಯೆ ಆಳತೊಡಗಿತು.. ಚೌಡೇಪಲ್ಲಿಯ ವೀರಶೈವ ಮಠ, ಮೃತ್ಯುಂಜಯೇಶ್ವರ ದೇಗುಲ, ವಿಶ್ವನಾಥಸ್ವಾಮಿ ದೇಗುಲ, ಆಂಜನೇಯ ದೇವಾಲಯ ಇತ್ಯಾದಿಗಳು ಇವರ ನಿರ್ಮಾಣ ದವಾಗಿವೆ. ಮಠಗಳಿಗೆ ಇವರು ದಾನ-ದತ್ತಿ ನೀಡಿ ಕೆರೆಗಳ ಜೀರ್ಣೋದ್ಧಾರ ಮಾಡಿದ್ದಾರೆ. ಕ್ರಿ.ಶ. ೧೮೪೧ರ ನಂತರ ಈ ಮನೆತನ ವೀರಶೈವದ ಹೆಚ್ಚು ಪ್ರಭಾವಕ್ಕೆ ಒಡ್ಡಿಕೊಂಡಿತು.

ಸೋದೆ ಹಾಗೂ ಕೊಡಗಿನ ಅರಸುಮನೆತನದವರೊಡನೆ ಇವರ ವೈವಾಹಿಕ ಸಂಬಂಧಗಳು ನಡೆದಿವೆ. ಉಮ್ಮತ್ತೂರು ಅರಸು ವಂಶವು ಚಾಮರಾಜನಗರದ ಬಳಿಯ ಉಮ್ಮತ್ತೂರಿನಲ್ಲಿ ಕೋಟೆಕಟ್ಟಿ ನಿಂತದ್ದು. ಈ ವಂಶದ ಮೂಲಪುರುಷ ಹನುಮಪ್ಪಒಡೆಯನಾಗಿದ್ದು ಸೂರ್ಯವಂಶಕ್ಷತ್ರಿಯಕುಲದವರಾಗಿರಬಹುದೆಂದು ಸೀತಾರಾಮ ಜಾಗಿರ್‌ದಾರ್ ಊಹಿಸುತ್ತಾರೆ. ಕ್ರಿ.ಶ. ೧೪೬೩ರ ಸುಮಾರಿನಲ್ಲಿ ವಂಶಿಕರು ಗುರು ರುದ್ರಾಕ್ಷಿಒಡೆಯರಿಂದಾಗಿ ವೀರಶೈವಕ್ಕೆ ಬಂದರೆಂದು ಕಾಣುತ್ತದೆ. ಕೊಮಾರಮಠ, ಉಮ್ಮತ್ತೂರಮಠ (ನಿರಾಸಿಮಠ) ಇತ್ಯಾದಿ ಮಠಗಳಿಗೆ ವಿಪುಲವಾಗಿ ದಾನ ದತ್ತಿ ನೀಡಿದ್ದಾರೆ, ಈ ಅರಸರು. ಈ ವಂಶದ ಬಹು ಪ್ರಸಿದ್ಧ ಅರಸನಾದ ನಂಜರಾಜ, ಶಿವರಾತ್ರೆಯಾರ್‍ಯನಿಂದ ವೀರಶೈವ ದೀಕ್ಷೆ ಪಡೆದ. ನಂಜನಗೂಡು ನಂಜುಂಡೇಶ್ವರ ಗುಡಿಯನ್ನು ನಿರ್ಮಿಸಿದ. ಆರಾಧ್ಯ ಚರಿತೆಯನ್ನು ಬರೆದ. ಕ್ರಿ.ಶ. ೧೪೮೫ರ ನೀಲಕಂಠಾಚಾರ್ಯನನ್ನು ಇವನು ಆರಾಧಿಸಿದ. ಈ ವಂಶದವರು ಸಕಲ ಧರ್ಮಗಳನ್ನು ಗೌರವಿಸಿದವರಾಗಿದ್ದರು. ತೆರಕಣಾಂಬಿ ವರದರಾಜಸ್ವಾಮಿಗೆ ವಾರ್ಷಿಕ ತೇರು ಕಾಣಿಕೆಯನ್ನು ಇವರು ನೀಡುತಿದ್ದರು. ಈ ವಂಶದವರಲ್ಲಿಕೆಲವರು ಬೆಟ್ಟದಕೋಟೆ ಹಾಗು ತೆರಕಣಾಂಬಿಯಲ್ಲಿ ಆಳಿದರು. [92]

ಹದಿನಾಡು ಅರಸರು

ಹದಿನಾಡು ವೀರಶೈವ ಅರಸು ವಂಶಕ್ಕೆ ಯಳಂದೂರು ರಾಜಧಾನಿ ಆಗಿತ್ತು. ಕ್ರಿ.ಶ. ೧೫೪೯-೧೬೬೭ರ ಅವಧಿಯಲ್ಲಿ ಈ ಅರಸುಗಳು ಆಳ್ವಿಕೆ ನಡೆಸಿದರು. ಇವರು ಕ್ರಿ.ಶ. ೧೫೭೨ರ ಚೆನ್ನರಾಜನ ಕಾಲದಲ್ಲಿ ವೀರಶೈವರಾದರೆಂದು ಎಂ. ಎಂ. ಕಲಬುರ್ಗಿ ಅವರು ಹೇಳುತ್ತಾರೆ. ಆದರೆ ಮೂಲತಃ ಗೌಡರಾದ ಇವರಲ್ಲಿ, ಕೊಳ್ಳೆಗಾಲದ ಶಾಸನದ ರೀತ್ಯಾ, ಕ್ರಿ.ಶ.೧೫೪೯ರಲ್ಲಿನ ಹದಿನಾಡುಸೀಮೆಯ ಮಹಾಮಂಡಲೇಶ್ವರ ನಂದ್ಯಾಲದ ನಾರಪರಾಜನಲ್ಲಿ ಕಾರ್ಯಕರ್ತನಾಗಿದ್ದ ಹದಿನಾಡ ಚಾಮರಸಗವುಡನು ಮಳವಳ್ಳಿಯ ಸಿಂಹಾಸನಕ್ಕೆ ಕರ್ತರಾದ ನೀಲವಂದ ದೇವರಿಗೆ ಗ್ರಾಮದಾನ ಕೊಟ್ಟಸಂಗತಿ ಇದೆ. ಅಂದರೆ ವಂಶದ ಮೂಲಪುರುಷ ದೇವಪ್ಪಗೌಡನಾದರೂ ಅವನ ಹಿರಿಯಮಗ ಚಾಮರಸ ನಾಯಕನ ಕಾಲಕ್ಕೆ ಸ್ಪಷ್ಟವಾಗಿ ವೀರಶೈವದೊಲವು ಕಾಣುತ್ತದೆ. ಕ್ರಿ.ಶ. ೧೫೪೯-೬೮ರ ಈ ನಾಯಕನೇ ಹದಿನಾಡಿನ ಮೊದಲರಸ. ಇವನ ಕಿರಿಯ ತಮ್ಮನಾದ ಚೆನ್ನೊಡೆಯನು ಅಂದರೆ 'ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತರಾದ ವಿರಕ್ತ ಸಿದ್ದಲಿಂಗದೇವರಿಗೆ ಹದಿನಾಡ ಯಳಂದೂರ ಅರಸು ಚೆಂನೊಡಿಯರು ಶೂನ್ಯಸಂಪಾದನೆಯ ವಚನ ಸಂಗ್ರಹವನ್ನು ಬರಿಸಿ', (ಕ್ರಿ.ಶ. ೧೫೭೬ - ೧೫೯೫) ರ ಅವಧಿಯಲ್ಲಿ ಅರ್ಪಿಸಿರುವ ಕಾರಣ ಇವರ ವೀರಶೈವದ ಅಪ್ಪುಗೆಯನ್ನು ಹೆಚ್ಚು ಸ್ಪಷ್ಟವಾಗಿ ಬಿಂಬಿಸುತ್ತದೆ. ದಿಟ. ಆದರೆ ಅದು ಚಾಮರಸನ ಕಾಲದಿಂದಲೇ ಕುಡಿಯೊಡೆಯಿತು ಎಂಬುದನ್ನು ತಳ್ಳಿಹಾಕಲಾಗುವುದಿಲ್ಲ. ಮುಂದೆ ಆಳಿದ ತಿರುಮಲರಾಜ ನಾಯಕನು (ಕ್ರಿ.ಶ.೧೬೦೪-೨೮) ಶಿವನಸಮುದ್ರದ ವೀರೇಶ್ವರ

92. ವಿವರಗಳಿಗೆ ನೋಡಿ, ಸಾರಂಗ ಶ್ರೀ , ಅದೇ,

ದೇವಾಲಯದಲ್ಲಿ ಮಹತ್ತಿನ ಮಠವನ್ನು ಸ್ಥಾಪಿಸಿದ ಬಗ್ಗೆ ನಂಜನಗೂಡಿನ ಶಾಸನವೊಂದರಿಂದ ವ್ಯಕ್ತವಾಗುತ್ತದೆ. (ಕ್ರಿ.ಶ. ೧೬೦೪-೧೬೧೩)ರ ನಂಜರಾಜವೊಡೆಯನು ಉಮ್ಮತ್ತೂರ ಸಿಂಹಾಸನಕ್ಕೆ ಕರ್ತರಾದ ಸಿದ್ಧಮಲ್ಲಿಕಾರ್ಜುನ ದೇವರಿಗೆ ಹರದನಹಳ್ಳಿಮಠ ಕಟ್ಟಿ, ಗ್ರಾಮದಾನ ಮಾಡಿದ್ದು ಶಾಸನೋಕ್ತವಾಗಿದೆ. ಇವನು ಹದಿನಾಡಿನಲ್ಲಿ ಅನೇಕ ಮಠಗಳನ್ನು ಸ್ಥಾಪಿಸಿದ. ಈ ಮನೆತನದ ಮುದ್ದುರಾಜಯ್ಯ (ಕ್ರಿ.ಶ. ೧೬೫೪-೬೭) ಯಳಂದೂರ ಗೌರೀಶ್ವರ ದೇಗುಲವನ್ನು ಕಟ್ಟಿಸಿ, ಪಂಚಲಿಂಗಗಳ ಪ್ರತಿಷ್ಠೆ ಮಾಡಿ, ತೋಟ, ಗದ್ದೆ, ಗ್ರಾಮಗಳ ದಾನ ನೀಡಿದ. ಈ ವಂಶದ ದೊರೆಗಳ ಆಳ್ವಿಕೆಗೆ ಮುನ್ನ ಇದ್ದ ಅರಾಜಕತೆಯು ಮಲೆಯೂರು ದೇವಚಂದ್ರನ ರಾಜಾವಳೀ ಕಥಾಸಾರದಲ್ಲಿ ಉಕ್ತವಾಗಿದೆ : ಅಲ್ಲಿನ ತೆಂಕಣನಾಡು ಇತ್ಯಾದಿ ವಿವಿಧ ನಾಡುಗಳಲ್ಲಿ ಒಬ್ಬೊಬ್ಬ ರಾಯರು (ನಾಯಕರು) ಹುಟ್ಟಿಕೊಂಡು, ಪರಸ್ಪರ ಹವಾಲು ಮಾಡಿಕೊಳ್ಳುತ್ತಿದ್ದರು. ಬೇರೆ ತೆಲುಗರು ಬಂದು ಮಾನ್ಯಗಳನ್ನು ಕೆಡಿಸಿ ಉಪದ್ರವ ಕೊಡುತ್ತಿದ್ದರು. ಆಗ ನಾಡೆಲ್ಲ ಒಂದಾಗಿ ವೈರಿಗಳನ್ನು ಓಡಿಸಿದರೂ, ಮನೆಮನೆಗಳಲ್ಲಿ ಹಟ್ಟಿಹಟ್ಟಿಗಳಲ್ಲಿ ತಾವೆ ದೊರೆಗಳಂತೆ ಮನೆ ಯಜಮಾನರು ವರ್ತಿಸುತ್ತಿದ್ದರು. ಆಗ ಹದಿನಾಡ ನಂಜಯ್ಯ ಅವರನ್ನೆಲ್ಲ ತಹಬಂದಿಗೆ ತಂದ, ಎಂಬ ಅರ್ಥದಿಂದ ಅದು ಕೂಡಿದೆ. ಇದೊಂದು ರೀತಿ ಕೊಡಗಿನ ಪರಿಸರದಲ್ಲಿ ಹಾಲೇರಿ ಅರಸರು ರಾಜ್ಯ ಸ್ಥಾಪನೆ ಮಾಡುವಮುನ್ನ ಇದ್ದಂತಹ ಪರಿಸ್ಥಿತಿಯನ್ನೆ ಹೋಲುತ್ತದೆ. ಇನ್ನು ಹದಿನಾಡು ಅರಸರಿಗೂ ಕಳಲೆ ಮನೆತನಕ್ಕೂ ವೈವಾಹಿಕ ಸಂಬಂಧವಿತ್ತು, ಹಾಗೂ ಹದಿನಾಡು ಅರಸರು ಮೈಸೂರು ಒಡೆಯರ ಪೂರ್ವಜರು ಎಂಬ ಅಭಿಪ್ರಾಯಗಳೂ ಇವೆ. ಇವರ ಆಡಳಿತದಲ್ಲಿ ಮಾಗಣಿಕಾರರು, ಪಾರುಪತ್ಯಗಾರರು, ಗೌಡ, ಸೇನಬೋವ ಮತ್ತು ಚಾವಡಿಯ ಕರಣಿಕ ಇತ್ಯಾದಿ ವರ್ಗಗಳಿದ್ದ ಬಗ್ಗೆ ಕ್ರಿ.ಶ.೧೫೪೯ರ ಚಾಮರಾಜನಗರದ ಶಾಸನವೊಂದು ತಿಳಿಸುತ್ತದೆ. ಇವರ ಸೈನ್ಯಬಲ ಪ್ರಬಲವಾಗಿದ್ದುದರ ಬಗ್ಗೆ ಕಂಠೀರವನರಸರಾಜ ವಿಜಯ ಸೂಚನೆ ನೀಡುತ್ತದೆ. ಜಾತಿ ತೆರಿಗೆ ಪದ್ಧತಿ ಹಾಗೂ ಬದುಕು ತಪ್ಪಿದ ಹೆಣ್ಣಿಗೆ ಜೀವಿತ ನಿಧಿ ನೀಡುವ ವ್ಯವಸ್ಥೆ ಇತ್ತು. ಇವರ ಕಾಲದ ಪ್ರಮುಖ ಕೃತಿಕಾರರು ಷಡಕ್ಷರದೇವ, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮುಂತಾದವರಾಗಿದ್ದಾರೆ. ಷಡಕ್ಷರದೇವ-ರೇಣುಕ ಪರಂಪರೆಯ ರಂಭಾಪುರಿ ಶಾಖಾಮಠಾಧಿಪತಿ, ಇವರ ರಾಜಗುರುವಾಗಿದ್ದ. ಇವನು ಮಳವಳ್ಳಿ ತಾಲೂಕಿನ ದನಗೂರಿನವ. ಈ ವಂಶದ ಮುದ್ದುರಾಜನು ಎಳಂದೂರಿನಲ್ಲಿ ಮಠ ಕಟ್ಟಿಸಿಕೊಟ್ಟು, ಎಳಂದೂರಿನ ಮಠಕ್ಕೂ ಷಡಕ್ಷರದೇವನು ಅಧಿಪತಿಯಾಗಿರುವಂತೆ ಪ್ರಾರ್ಥಿಸಿ ಬರಮಾಡಿಕೊಂಡ. ಷಡಕ್ಷರ ದೇವ ಕನ್ನಡ ಹಾಗೂ ಸಂಸ್ಕೃತ ಭಾಷಾಕೃತಿಕಾರನಾಗಿದ್ದ. ಇವನ ರಾಜಶೇಖರವಿಳಾಸ ಹಾಗೂ ಕವಿಕರ್ಣರಸಾಯನ ಬಹು ಪ್ರಸಿದ್ಧ. ಇವನೂ ಹಾಗೂ ಇಮ್ಮಡಿ ಮುರುಗಾಗುರುಸಿದ್ಧನು ಏಕವಂಶೀಯರು. ಷಡಕ್ಷರದೇವ ಮೂರು ರಾಜಮನೆತನಗಳ ಗೌರವಕ್ಕೆ ಪಾತ್ರನಾಗಿದ್ದರೂ ಆವರ ಆಶ್ರಯದಲ್ಲಿ ಬದುಕಲಿಲ್ಲ. ಆಸ್ಥಾನ ಪಂಡಿತನಾಗಿರಲಿಲ್ಲ. ರಾಜಗುರುವಾಗಿದ್ದ. ಇದು ಹದಿನಾಡು ಅರಸರ ಕವಿಗೌರವವನ್ನು ಸೂಚಿಸುತ್ತದೆ. ಇವರ ಕಾಲದ ವಾಸ್ತು -

ಮೂರ್ತಿ ಶಿಲ್ಪಗಳು ಜಾನಪದ ಹಾಗೂ ಶಿಷ್ಟ ಪದ ಪರಂಪರೆಯನ್ನು ಪೋಷಿಸಿವೆ; ಬಸವಣ್ಣ, ಕೆಂಪಮ್ಮ, ಚೌಡೇಶ್ವರಿ, ಮಾರಮ್ಮ, ಚೆನ್ನಿಗರಾಯಸ್ವಾಮಿ, ಗೌರೀಶ್ವರ ಗುಡಿಗಳಿದ್ದು - ಶೈವ, ವೈಷ್ಣವ ಸಂಪ್ರದಾಯಗಳ ಸಮನ್ವಯವೂ ಇವರಲ್ಲಿದೆ, ಎಂದು ಡಾ। ಡಿ. ವಿ. ದೇವರಾಜ್ ಅವರು ಸೂಕ್ತವಾಗಿ ಗಮನಿಸಿದ್ದಾರೆ. ಇದಲ್ಲದೆ ವಿರಕ್ತ ಮಠ, ಮಹತ್ತಿನಮಠ ಹಾಗೂ ಗದ್ದುಗೆ ಇತ್ಯಾದಿಗಳ ಕಟ್ಟೋಣ ಇವರ ವೀರಶೈವ ನಿಷ್ಠೆಯ ದ್ಯೋತಕಗಳಾಗಿವೆ. ಇವರು ಹದಿನಾಡಿನ ಸುವರ್ಣಾವತಿ ನದಿಗೆ ಅಣೆಕಟ್ಟು ಹಾಗೂ ಕಾಲುವೆ ವ್ಯವಸ್ಥೆ ಮಾಡಿ ಕೃಷಿಗೆ ಅನುವು ಮಾಡಿದ್ದರು.[93] ಇದಲ್ಲದೆ ಶ್ರೀಶೈಲ ನಿಡುಮಾಮಿಡಿ ಪೀಠದ ಜ॥ಶಾಂತವೀರದೇಶಿಕೇಂದ್ರರ (ಕ್ರಿ.ಶ. ೧೬೫೦) ಪಿತಾಮಹ ವೀರಣಾರಾಧ್ಯನು ಬಿಜ್ಜಾವರದಲ್ಲಿ ಪೂಜೆಗೊಳ್ಳುತ್ತಾನೆ. ನಂತರ ಹದಿನಾಡಿನ ಶಿವಪೂಜೆಯ ಭೂಪಾಲನಿಂದ ಸನ್ಮಾನಿತನಾಗಿ ರಾಜಾಶ್ರಯವನ್ನು ಪಡೆಯುತ್ತಾನೆ.[94] ಈ ಭೂಪಾಲನ ಹೆಸರು ಹದಿನಾಡು ವಂಶದಲ್ಲಿ ಕಾಣಬರದು. ಆದರೆ ವೀರಣಾರಾಧ್ಯನ ಕಾಲವನ್ನು (ಕ್ರಿ.ಶ. ೧೬೦೦) ಗಮನಿಸಿದರೆ, ತಿರುಮಲ ರಾಜನಾಯಕನು ಮಹತ್ತಿನ ಮಠವನ್ನು ಕಟ್ಟಿಸಿರುವ ಕಾರಣ ಬಹುಶಃ ಶಿವಭೂಪಾಲನೆ ಅವನಾಗಿರಬೇಕು, ತಪ್ಪಿದರೆ ನಂಜರಾಜವೊಡೆಯ ಆಗಿರಬೇಕು. ಇಬ್ಬರೂ ಅಲ್ಲವೆಂದರೆ ಶಿವಭೂಪಾಲ ಎಂಬ ಅರಸನ ಹೆಸರು ವಂಶಾವಳಿಗೆ ಹೊಸದಾಗಿ ಸೇರ್ಪಡೆಗೊಳಿಸಬೇಕಾಗುತ್ತದೆ. ಹಾಗೂ ಈ ಮನೆತನಕ್ಕೆ ವೀರಣಾರ್ಯನು ಒಬ್ಬ ರಾಜಗುರುವಾಗಿರಬೇಕೆನಿಸುತ್ತದೆ.

ಕಳಲೆ ದಳವಾಯಿಗಳು

ನಂಜನಗೂಡು ತಾ। ಕಳಲೆದಳವಾಯಿ ಮನೆತನವು ೧೭-೧೮ನೇ ಶತಮಾನದಲ್ಲಿ ಆಳಿದ ವಂಶವಾಗಿದೆ. ಇವರಿಗೆ ಮೈಸೂರು ಅರಸರೊಡನೆ ರಕ್ತಸಂಬಂಧ ಬೆಳೆದಿತ್ತು. ಮುಂದೆ ಮೈಸೂರು ದಳವಾಯಿಗಳೂ ಆದರು. ಸಾಹಿತ್ಯಾಧಾರವಾಗಿ ವಂಶವನ್ನು 'ಕಳಲೆ ಅರಸು ವಂಶಾವಳಿ' ಯು ಕಾಂತಒಡೆಯನಿಂದ ಆರಂಭಿಸಿದರೆ, ಬೇರೆಯುವು ಕುಮಾರ ಮಲ್ಲರಾಜ (ಕರಿಕಾಲಮಲ್ಲರಾಜ!) ನಿಂದ ಆರಂಭಿಸುತ್ತವೆ. ಶಾಸನಗಳು (ಇಮ್ಮಡಿ) ತಿಮ್ಮರಾಜನಿಂದ ಆರಂಭಿಸುತ್ತವೆ. ಈ ವಂಶದಲ್ಲಿ ಬಂದ ದಳವಾಯಿ ವೀರರಾಜಯ್ಯನ ಮಕ್ಕಳು ದೇವರಾಜ, ನಂಜರಾಜ. (ಕ್ರಿ.ಶ. ೧೭೧೩-೧೭೩೨)ರ ಮೈಸೂರಿನ ದೊಡ್ಡಕೃಷ್ಣರಾಜಒಡೆಯನಲ್ಲಿ ದೇವರಾಜಯ್ಯ ದಳವಾಯಿ ಆದ. ಇವನ ಸಂಬಂಧಿ ನಂಜರಾಜ ಸರ್ವಾಧಿಕಾರಿಯಾಗಿ ಮೈಸೂರ ಅರಸರಿಂದ ನೇಮಿತನಾದ. ಇವನು ಶಿವೈಕ್ಯನಾದ ನಂತರ ಕರಾಚೂರಿ ನಂಜರಾಜಯ್ಯ (ಕ್ರಿ.ಶ. ೧೭೩೯) ಸರ್ವಾಧಿಕಾರಿ ಆದ. ಮೈಸೂರು ಅರಮನೆಯ

93. ಹದಿನಾಡು ವೀರಶೈವ ಅರಸು ಮನೆತನ : (ಸಂ) ಡಾ। ಎಸ್. ವಿದ್ಯಾಶಂಕರ್, ಬೆಂಗಳೂರು, ೧೯೯೩
94. ಎಂ.ಜಿ. ನಂಜುಂಡಾರಾಧ್ಯ : 'ನಿಡಮಾಮಿಡಿ ಶ್ರೀಶೈಲ ಪೀಠಾಧಿಪತಿಗಳ ಇತಿಹಾಸವನ್ನು ಬರೆದ ಕವಿಗಳು,' ನೂತನ ಚೇತನ, (ಸಂ) ಡಾ। ಸಾ.ಶಿ. ಮರುಳಯ್ಯ, ಡಾ। ಎಸ್. ವಿದ್ಯಾಶಂಕರ್, ಬೆಂಗಳೂರು, ೧೯೯೦, ಪು. ೪೬-೭

ಪ್ರಸಿದ್ಧ ತ್ರಿನಯನೇಶ್ವರ ದೇಗುಲದ ಗೋಪುರವನ್ನು (ಕ್ರಿ.ಶ. ೧೭೫೩) ಕಟ್ಟಿಸಿದ ಬಗ್ಗೆ ಶಾಸನವಿದೆ. ಬಹುಶಃ ಮೊದಲ ನಂಜರಾಜನಿಂದ ಎನ್ನುವುದಕ್ಕಿಂತ ಕರಾಚೂರಿ ನಂಜರಾಜಯ್ಯನಿಗೆ ಗೋಪುರ ನಿರ್ಮಾಣದ ಸಂಗತಿ ಅನ್ವಯವಾಗುತ್ತದೆ. ಮುಂದೆ ದಳವಾಯಿತನವನ್ನು ದೇವರಾಜಯ್ಯ ಈ ತನ್ನ ಸೋದರನಿಗೆ ವಹಿಸಿಕೊಟ್ಟ. ಈ ನಂಜರಾಜಯ್ಯ ಯುದ್ಧ ಶೂರನಿದ್ದಂತೆ, ದೈವಭಕ್ತ, ವಿದ್ವಾಂಸ, ಕವಿಪೋಷಕನೂ ಆಗಿದ್ದ. ೬೩ ಪುರಾತನರ ವಿಗ್ರಹಗಳನ್ನು ನಂಜನಗೂಡು ನಂಜುಂಡೇಶ್ವರ ದೇಗುಲಕ್ಕೆ ಮಾಡಿಸಿಕೊಟ್ಟ. ಶೈವ ಪುರಾಣಗಳನ್ನು ಕನ್ನಡಕ್ಕೆ ಇಳಿಸಿಕೊಟ್ಟ. 'ಕಕುದ್ಗಿರಿಮಹಾತ್ಮೆ,' 'ಸಂಗೀತ ಗಂಗಾಧರ' ಗ್ರಂಥಗಳನ್ನು ರಚಿಸಿದ. ಇವನ ಕಾಲದಲ್ಲಿ ಕಳಲೆ ಮನೆತನದ ಪ್ರಭಾವ ಹೆಚ್ಚಿತು. ಕಳಲೆಯಲ್ಲಿ ಕ್ರಿ.ಶ. ೧೬೬೨ರ ಶಾಸನರೀತ್ಯಾ ಮಹಾಮಹತ್ತಿನ ಮಠಗಳನ್ನು ಕಟ್ಟಿಸಲಾಗಿತ್ತು. ಇದು ಸುತ್ತೂರು ಪರಂಪರೆಯ ಮಠಗಳಿಗೆ ಸಂಬಂಧಗೊಂಡಿರಬಹುದೆಂದು ಡಾ| ಬಿ. ಆರ್. ಗೋಪಾಲ್ ಅವರ ಊಹೆ. ಕರಾಚೂರಿ ನಂಜರಾಜಯ್ಯ ಮನೆವಾರ್ತೆಯ ವ್ಯಕ್ತಿಗೂ (ವೀರಯ್ಯ)ಧರ್ಮಕ್ಕೆಂದು ಮಲದೇವನಹಳ್ಳಿ ಕೆರೆ ಕಟ್ಟಿಸಿದ. ಹರದನಹಳ್ಳಿ ದಿವ್ಯಲಿಂಗೇಶ್ವರ ದೇಗುಲಕ್ಕೆ ದೇವವಿಗ್ರಹಗಳನ್ನು ಮಾಡಿಸಿಕೊಟ್ಟ. ಕಳಲೆಯಲ್ಲಿ ನಂಜನಾಥದೇವರ ಮಠವು ನಿರ್ಮಿತವಾಯಿತು. ಕ್ರಿ.ಶ. ೧೭೫೯ರಲ್ಲಿ ಇವನು ತೀರಿಕೊಂಡ ಮೇಲೆ, ಮೈಸೂರಿನಲ್ಲಿ ಇವನು ರೂಪಿಸಿದ ವಿದೇಶಿ ಶಕ್ತಿಯ ಪ್ರಾಬಲ್ಯಕ್ಕೆ ಒಡ್ಡುಹಾಕುವ ದೇಶೀಯ ನೀತಿಯನ್ನು, ಮುಂದೆ ಹೈದರ್ ಟಿಪ್ಪೂಗಳು ಅನುಸರಿಸಿದರು. ಈ ವಂಶದವರ ಕಾಲದಲ್ಲಿ ಕಳಲೆ ಸೀಮೆ ಸುಭಿಕ್ಷದಿಂದಿತ್ತು. ಆರ್ಥಿಕ ಪ್ರಗತಿ ಹೊಂದಿತ್ತು. ಸಾಹಿತ್ಯ ಕಲೆಗಳಿಗೆ ಉತ್ತೇಜನವಿತ್ತು. ಮಠಗಳನ್ನು ಕಟ್ಟಿ ಜನರ ಧಾರ್ಮಿಕ ನಿಷ್ಠೆ ಬೆಳೆಸಿದರು. ಜನ ಹಿತಕ್ಕಾಗಿ ದುಡಿದರು.[95] ಧರ್ಮಸಮನ್ವಯ ದೃಷ್ಟಿಯನ್ನು ಹೊಂದಿದ್ದರು.

ಸುಗುಟೂರು ಅರಸರು

ಸುಗುಟೂರು ಅರಸುಮನೆತನವು ಬೆಂಗಳೂರು - ಕೋಲಾರ ಜಿಲ್ಲೆಯ ಭಾಗಗಳಲ್ಲಿ ಮುಖ್ಯವಾಗಿ ಬೆಳೆದ ವಂಶ. ಆವತಿನಾಡ ಪ್ರಭುಗಳ ಸೋದರ ಸಂಬಂಧದಲ್ಲಿ ಬಂದವರು. ಮೂಲಪುರುಷ ದೇವಯ್ಯಗೌಡ (ಕ್ರಿ.ಶ. ೧೪೦೮-೨೨) ಎನ್ನಲಾಗಿದೆ. ಮೂಲಪುರುಷ ನಾಗಣ್ಣ ಒಡೆಯ ಎಂದೂ ಹೇಳುವುದುಂಟು. ಮುಂದಿನ ಹಿರಿಯ ತಮ್ಮಪ್ಪಗೌಡನು ಹೊಸ ಕೋಟೆಯನ್ನು ಕಟ್ಟಿಸಿದ. ಹೊಸೂರಿನ ನಿಜಗುಣ ಸುಜ್ಞಾನಸ್ವಾಮಿಗೆ ಹೊಸಹಳ್ಳಿ ಗ್ರಾಮವನ್ನು 'ಅಯ್ಯನ ಹೊಸಹಳ್ಳಿ' ಎಂಬ ಮರುನಾಮವಿಟ್ಟು ಗಣಾರಾಧನೆಯ ಫಲಶ್ರುತಿ ಹೇಳಿ, ಲಿಂಗಮುದ್ರೆ ಹಾಕಿ ದತ್ತಿ ಬಿಟ್ಟ ವಿಷಯ ಶಾಸನೋಕ್ತ. ಈ ವಂಶದ ಶೂರ ದೊರೆಯಾಗಿ 'ಚಿಕ್ಕರಾಯ' ಎಂಬ ಬಿರುದನ್ನು, ವಿಜಯನಗರದರಸರಿಂದ ಪೆನುಗೊಂಡೆಯಲ್ಲಿ ಮುಸ್ಲಿಮರ ಆಕ್ರಮಣವನ್ನು ತವಿಸಲು ನೆರವಾದ ಕಾರಣ, ಪಡೆದವನು. ಕ್ರಿ.ಶ೧೪೭೪-

95. ಡಾ| ಬಾ.ರಾ. ಗೋಪಾಲ : 'ಕಳಲೆ ಅರಸು ಮನೆತನದ ಅಧ್ಯಯನ : ಆಕರಗಳು - ಶಾಸನ', ಕಳಲೆ ಮನೆತನದ ವೀರಶೈವ ದಳವಾಯಿಗಳು, ಪು. ೭೬-೭೭, ಮತ್ತು ಸಾರಂಗಶ್ರೀ, ಅದೇ.

೧೫೪೨) ರ ಚಿಕ್ಕ ತಮ್ಮೇಗೌಡ . ವಂಶದ ಮುಮ್ಮಡಿ ತಮ್ಮೇಗೌಡನು ಬಹಳ ಕೀರ್ತಿಪಡೆದ ಅರಸ. ಬಸವಾಪುರದ ಬಸವಲಿಂಗೇಶ್ವರ ಗುಡಿಯನ್ನು ಮಠವಾಗಿಸಿ ನಗರ್ತೇಶ್ವರ ದೇವನ ಶಿಷ್ಯ ಮಹಾದೇವನಿಗೆ ಪಟ್ಟಕಟ್ಟಿ ಮಠಾಧಿಪತಿಯನ್ನಾಗಿ ಮಾಡಿದ. ಇವನು ಕನ್ನಡ, ತೆಲುಗು ಹಾಗೂ ಸಂಸ್ಕೃತ ಭಾಷೆಯ ತ್ರಿಭಾಷಾಕವಿಯಾಗಿದ್ದ. ರಾಜೇಂದ್ರಚೋಳ ಚರಿತೆ, ಕುಮಾರಾರ್ಜುನೀಯ, ರಸಿಕ ಮನೋರಂಜನ, ಇತ್ಯಾದಿ ವಿವಿಧ ಭಾಷಾಕೃತಿಗಳನ್ನು ರಚಿಸಿ, 'ಶಿವದರ್ಪಣ' ಎಂಬ ಗ್ರಂಥದ ಸಂಕಲನಕಾರನಾಗಿದ್ದ. ವಂಶಾವಳಿಯಲ್ಲಿ ಕ್ರಿ.ಶ. ೧೮೬೦ರ ವರೆಗೂ ಈ ವಂಶಿಕರ ಹೆಸರಿದ್ದರೂ, ಹೈದರಾಲಿ ಕಾಲದಲ್ಲಿ ಪ್ರಾಮುಖ್ಯತೆ ಕಡಿಮೆಯಾದದ್ದು ಕಾಣುತ್ತದೆ. ಈ ವಂಶದ ಶಾಖೆಯ ಅರಸರು ಪುಂಗನೂರು ಸಂಸ್ಥಾನದ ಒಡೆಯರಾಗಿ ಆಳಿದರು. ವಿಕೇಂದ್ರೀಕೃತ ಆಡಳಿತ ಇವರದಾಗಿದ್ದು ಗೌಡಾಳಿಕೆಯ ನಾಡಪ್ರಭುವಿನ ಅಧಿಕಾರವಿದ್ದು, ಹಳ್ಳಿಯ ಆಡಳಿತ ಸ್ವಯಮಾಡಳಿತದ ಸ್ವರೂಪ ಹೊಂದಿತ್ತು. ಕೃಷಿ, ಕೈಕಸಬು, ಪಶುಪಾಲನೆ ಜನರ ಬದುಕಿನ ಆಸರೆ ಆಗಿತ್ತು. ಈ ಅರಸರಿಗೆ ಒಕ್ಕಲುತನದ ಹಿನ್ನೆಲೆ ಇದ್ದ ಕಾರಣ, ನಾಡಿನ ಜನಜೀವನದಲ್ಲಿ ಅದಕ್ಕೆ ಒತ್ತು ಕೊಟ್ಟಿದ್ದುದು ಸಹಜ. ಇವರು ಕುಲದೇವಿ ಯಂತ್ರಕಲ್ ರೂಪದ ಸತ್ಯಮ್ಮನೆನಿಸುವ 'ಗಂಗಮ್ಮ' ನಾಗಿದ್ದು ಆಕೆಗೆ ಗುಡಿಯೆ ನಿರ್ಮಿತವಾಗಿದೆ. ಜಾತ್ರೆಯೂ ನಡೆಯುತ್ತದೆ. ಮೊದಲಿಗೆ ಇವರು ಚೆನ್ನಕೇಶವ ದೇವಾಲಯವನ್ನು ನಿರ್ಮಿಸಿದರೆನ್ನಲಾಗಿದೆ. ಕೋಲಾರದ ಬಳಿಯ ಅಂತರಗಂಗೆಯಲ್ಲಿ ಏಕಾಂಬರನಾಥ ಮತ್ತು ಕಾಮಾಕ್ಷಮ್ಮ ದೇವತೆಗಳ ಜೊತೆಗೆ ೩೩ ಗಣಸಂಖ್ಯೆಯ ಪರಿವಾರ ದೇವತೆಗಳನ್ನು ಸ್ಥಾಪಿಸಿದರು. ಮುಗುಳುಬಾಳು, ವೀರಭದ್ರ ಹಾಗೂ ಸೋಮೇಶ್ವರ ದೇವರು ಇವರಿಗೆ ಇಷ್ಟದೇವತೆಗಳಾಗಿದ್ದರು. ಇವರು ಆರಂಭದಿಂದಲೇ ವೀರಶೈವ ಧರ್ಮನಿಷ್ಠೆ ಯುಳ್ಳವರಾಗಿದ್ದ ಕಾರಣ ಗೊಣಗನಹಳ್ಳಿ, ಹೊಸಹಳ್ಳಿ, ಕಟ್ಟಿಗೇಹಳ್ಳಿ ಇತ್ಯಾದಿ ಕಡೆ ಮಠಗಳನ್ನು ಕಟ್ಟಿಸಿ ದಾನದತ್ತಿಗಳನ್ನು ನೀಡಿದರು. ಅಗ್ರಹಾರದ ಬ್ರಾಹ್ಮಣರಿಗೂ ದಾನದತ್ತಿಗಳನ್ನು ನೀಡಿದರು.[96] ಒಟ್ಟಾರೆ, ಶೌರ್ಯ, ದಾನ, ಆಡಳಿತ ಹಾಗೂ ಸಾಹಿತ್ಯಿಕವಾಗಿ ಈ ಅರಸು ಮನೆತನ ಸಮನ್ವಯ ರೀತಿಯಲ್ಲಿ ಬಾಳಿತು ಎನ್ನಬೇಕು. ಇನ್ನೊಂದು ಗಮನಾರ್ಹ ಸಂಗತಿಯಾಗಿ ಸುಗುಟೂರು ಬೌದ್ಧಮೂಲದ ಹೆಸರಾಗಿದ್ದು[96ಅ] ಸ್ರಗ್ಧರಾ ಎಂಬ ಪರ್ಯಾಯನಾಮದ, ತಾಂತ್ರಿಕ ಬೌದ್ಧರಲ್ಲಿಯೂ ಬರುವ, 'ತಾರಾತ್ವಸುಗತಾಮೇ' ಆಗಿರುವ 'ತಾರಾ ಸುಗತಾ' ಶಬ್ದವು ವಿಲೋಮ ರೂಪದಲ್ಲಿ ಸುಗ ತಾರಾ > ಸುಗತೂರಾ> ಸುಗುಟೂರು ಎಂದಾಗಿರಬಹುದು. ಹಾಗಿದ್ದರೆ 'ಸುಗುಟೂರಮ್ಮ' ಎನಿಸುವ ಈ ಅರಸರ ಗ್ರಾಮದೇವತೆ, ಕುಲದೇವತೆ 'ಸತ್ಯಮ್ಮ-ಗಂಗಮ್ಮ,' ಬೌದ್ಧ ಮೂಲದ ತಾರಾ ಆಗಿ ಈ ಅರಸರ ಕಾಲದಲ್ಲಿ ಶೈವೀಕರಣವಾಗಿದ್ದಾಳೆ ಎನಿಸುತ್ತದೆ.

---

96. ಪಿ.ವಿ. ಕೃಷ್ಣಮೂರ್ತಿ : ಸುಗುಟೂರು ವೀರಶೈವ ಅರಸುಮನೆತನ, ಕನ್ನಡ ಅಧ್ಯಯನ ಪೀಠ, ಧಾರವಾಡ ೧೯೯೪, ನೋಡಿ.

96ಅ. ಡಾ । ತಾಳ್ತಜೆ ವಸಂತಕುಮಾರ್ : ಕರ್ನಾಟಕದಲ್ಲಿ ಬೌದ್ಧಸಂಸ್ಕೃತಿ, ಬೆಂಗಳೂರು, ೧೯೮೮, ಪು. ೮೫

ಚಿತ್ರದುರ್ಗದ ನಾಯಕರ ಮನೆತನವು ಮೂಲತಃ ಬೇಡರಕುಲದ್ದು ಎನ್ನಲಾಗಿದೆ. ಕ್ರಿ.ಶ. ೧೫೪೯ರಿಂದ ೧೭೭೯ ರವರೆಗೆ ಆಳಿದ ಈ ವಂಶದಲ್ಲಿ ಒಬ್ಬ ಅರಸು ಪರಿವಾರ ಸಮೇತ ವೀರಶೈವ ಧರ್ಮವನ್ನು ಅಪ್ಪಿ ಸ್ವಲ್ಪ ಕಾಲ ನಡೆದುಕೊಂಡನೆಂದು ಹೇಳಲಾಗಿದೆ. ಒಬ್ಬನೆ ನಾಗತಿ ಮಾತ್ರ ಆ ಧರ್ಮದಲ್ಲಿಯೆ ಉಳಿದಳಂತೆ . ಈ ಸಂದರ್ಭಕ್ಕೆ ಸಂಬಂಧಿಸಿದವನು ಕ್ರಿ.ಶ.(೧೬೭೫-೮೬)ರ ಚಿಕ್ಕಣ್ಣನಾಯಕ ವೀರಶೈವನಾಗಿದ್ದ. ಕ್ರಿ.ಶ.(೧೬೦೨-೫೨)ರ ೧ನೇ ಕಸ್ತೂರಿ ರಂಗಪ್ಪನಾಯಕನ ನಾಗತಿ ಕಾಟವ್ವ, ಕಾಟಿಮಠ ಮತ್ತು ತೋಪು ನಿರ್ಮಿಸಿ ಚರಂತಿ ಗುರುವೊಬ್ಬರನ್ನು ನಿಲ್ಲಿಸಿದ ಸಂದರ್ಭವೇ, ವೀರಶೈವದ ಸಂಪರ್ಕ ಸಂದರ್ಭದ ಸಾಕ್ಷಿ ಎನ್ನಬಹುದು. ಬಹುಶಃ ಈ ಮಠದ ಗುರುಗಳೆ ತತ್ಕಾಲದ ಕುಲಗುರು, ರಾಜಗುರುಗಳಾಗಿರಬೇಕು, ಎನಿಸುತ್ತದೆ. ಮುಂದೆ ಇಮ್ಮಡಿ ಮದಕೇರಿ ನಾಯಕನಿಗೂ (ಕ್ರಿ.ಶ. ೧೬೫೨-೭೪) ಈ ವೀರಶೈವ ಸಂಬಂಧ ಒದಗಿದಂತಿದೆ. ಕ್ರಿ.ಶ.೧೬೭೮ರ ಸುಮಾರಿನಲ್ಲಿ ಚಿಕ್ಕಣ್ಣನಾಯಕ, ನಾಗತಿ ಸಹಿತವಾಗಿ ಲಿಂಗಧಾರಿ ಆದ. ಆಗ ಇದ್ದ ಉಗ್ಗ ಚೆನ್ನವೀರ ಸ್ವಾಮಿಗಳಿಗೆ ಲಾಳದ ಕೋಟೆಯಲ್ಲಿ ಇವರು ಕಲ್ಲುಮಠವನ್ನ ಕಟ್ಟಿಸಿಕೊಟ್ಟರು. ನಂತರ ಈ ಮಠದಲ್ಲಿ ಸುಲೇಗಾವಿಯ ಮಹಾಂತದೇವರು ನಿಂತರು. ವೀರಶೈವಕ್ಕೆ ಬಂದ ಕುಟುಂಬ ಆ ವರ್ಷವೇ ಲಿಂಗವನ್ನು ತ್ಯಜಿಸಿಬಿಟ್ಟರೂ, ನಾಯಕನ ಸತಿ, ಹಟ್ಟಿನಾಯಕನ ಪುತ್ರಿ ಮಲ್ಲವ್ವನಾಗತಿಯ ಮೇಲೆ ತವರು ಮನೆಯ ಗುರು ತಿಪ್ಪೆರುದ್ರಸ್ವಾಮಿಗಳಿಂದ ಬಾಲ್ಯದಿಂದಲೂ ಆಗಿದ್ದ ಪ್ರಭಾವದ ಕಾರಣ ಆ ಧರ್ಮಾನುಸಾರಿಯಾಗಿಯೆ ಉಳಿದಳು. ಕ್ರಿ.ಶ. (೧೬೮೯-೧೭೨೧)ರ ಭರಮಣ್ಣನಾಯಕನ ಕಾಲದಲ್ಲಿ ೧ನೆಯ ಮುರಿಗೆ ಶಾಂತವೀರ ಸ್ವಾಮಿಗಳಿಗೆ ಬಹಳ ಭಕ್ತಿ ಗೌರವದಿಂದ ನಡೆದುಕೊಳ್ಳಲಾಯಿತು. ಬಿಚ್ಚುಗತ್ತಿ ಭರಮನಾಯಕನು ೩೦೦ ಅಂಕಣದ ಬೃಹನ್ಮಠವನ್ನು ಕಟ್ಟಿಸಿಕೊಟ್ಟ ಹಾಗೂ ತನ್ನ ಮಗನೊಬ್ಬನನ್ನು ಈ ಮಠದ ಸೇವೆಗೂ ಬಿಟ್ಟು ಕೊಟ್ಟ. ಈ ಮನೆತನದ ನಾಯಕರು ಮುಂದೆ ರಾಜಗುರು ನೆಲೆವನಿಸಿದ್ದ ಮುರಿಗೆ ಮಠವಷ್ಟೆ ಅಲ್ಲದೆ ಬೇರೆ ವೀರಶೈವ ಮಠಗಳನ್ನೂ ಕಟ್ಟಿಸಿ ದಾನ ದತ್ತಿ ನೀಡಿದರು.[97] ಬಹುಶಃ ಚಿಕ್ಕಣ್ಣನಾಯಕನು ವೀರಶೈವಧರ್ಮ ಸ್ವೀಕರಿಸಲು, ಮಲ್ಲವ್ವನಾಗತಿಯೇ ಕಾರಣಳಿರಬಹುದು. ಆದರೆ ಶಿವಾಚಾರದ ನಿಯಮಗಳಿಗೆ ಕುಟುಂಬದ ಉಳಿದವರಿಗೆ ಹಾಗೂ ನಾಯಕನಿಗೆ ಕಷ್ಟವಾಗಿ, ನಾಗತಿಯೊಡನೆ ಕಸಿವಿಸಿಗೂ ಕಾರಣವಾಗಿರಬೇಕು. ಅದೊಂದು ರೀತಿ ಅಂತರಂಗದ ಅತೃಪ್ತಿಯ ಮಾನಸಿಕ ವಿರೋಧದಿಂದ ಸತಿಯ ಇಚ್ಛೆಯನ್ನು ಕೆಣಕಲೆಂದೇ ವೀರಶೈವವನ್ನು ತ್ಯಜಿಸಿರಬಹುದು. ಅದು ಆಕೆ ಅರಮನೆಯಿಂದ ದೂರಸರಿದು ನಿಲ್ಲಲೂ ಕಾರಣವಾಗಿರಬೇಕು. ಮುಂದೆ ಮಠ, ಗುರುಗಳಿಗೆ ಭಕ್ತಿ ಗೌರವ ತೋರಿಸಿದುದು ರಾಜ್ಯಾಡಳಿತದ ಒಂದು ಮುಖವಷ್ಟೆ. ಧರ್ಮಾಂತರಕ್ಕೆ ಕುಟುಂಬದಬೇರೆ ಸದಸ್ಯರಿಂದ

97. ಬಿ. ರಾಜಶೇಖರಪ್ಪ: 'ಚಿತ್ರದುರ್ಗದ ನಾಯಕರು ವೀರಶೈವರಾದಾಗಿನ ಅವರ ರಾಜಗುರುಗಳು', ಸಿದ್ಧರಾಮಸಂಪದ, ಅದೇ, ಪು. ೧೬೫-೬೬

ಅಸಮ್ಮತಿ ಹಾಗೂ ಸಾಂಸ್ಕೃತಿಕ ಮೇಲಾಳಿಕೆಯ ಜನರಿಂದ ಅಂತರಿಕ ವಿರೋಧವೂ ಒದಗಿರಬೇಕು. ಅದೇನೇ ಇರಲಿ, ನಾಯಕರು ಶಿವಪರ ನಿಲುವನ್ನು ವಿರೋಧಿಸಲಿಲ್ಲವಷ್ಟೆ.

ಮೈಸೂರು ಒಡೆಯರು

ಮೈಸೂರು ಒಡೆಯರ ಮನೆತನವು ಯಾದವ ವಂಶಮೂಲವನ್ನು ಹೇಳಿಕೊಂಡರೂ, ಹದಿನಾಡು ಅರಸರ ವಂಶಮೂಲವೂ ಅವರಿಗೆ ಆರೋಪಿತವಾದೆ. ಅವರಲ್ಲಿ ಬಹುಶಃ ಚಿಕ್ಕದೇವರಾಜ ಒಡೆಯರು ವೈಷ್ಣವ ಧರ್ಮ ಸ್ವೀಕರಿಸುವವರಿಗೂ ವೀರಶೈವಾಚಾರಗಳನ್ನು ಪಾಲಿಸುತ್ತಿದ್ದಂತೆ ತೋರುತ್ತದೆ. ಮುಂದೆ ಕ್ರಿ.ಶ. ೧೪೯೯-೧೬೧೦ರ ವರೆಗೆ ವೀರಶೈವವನ್ನು ಅನುಸರಿಸಿದ ಲಿಂಗಧಾರಿಗಳಗಿದ್ದವರು ಲೂಯಿಸ್‌ರೈಸರ ರೀತ್ಯಾ ರಾಮಾನುಜರ ವೈಷ್ಣವ ಅನುಸಾರಿಗಳಾದರು. ಆದರೆ ಮೂಲದಲ್ಲಿ ಯದುರಾಯರ ಧರ್ಮದ ಕಾಲದಿಂದ ವೀರಶೈವಕ್ಕೆ ಬಂದರು ಎನ್ನುವುದಕ್ಕೆ ಮತ್ತೂ ಸಮರ್ಥನೆ ಬೇಕು. ಹದಿನಾಡು ಅರಸರ ಕಾರಣ ೧೬ನೇ ಶತಮಾನದಲ್ಲಿ ಈ ವಂಶದರಸರು ವೀರಶೈವದ ಅನುಸಾರಿಗಳಾಗಿರುವಂತಿದೆ. ಚಿಕ್ಕದೇವರಾಯರ ಪ್ರಧಾನಿ ವಿಶಾಲಾಕ್ಷಪಂಡಿತ ಹಾಗೂ ಇತರ ಪ್ರಭಾವಶಾಲಿ ಮತೀಯರಿಂದಾಗಿ ಬೇರೆ ಮತಾಂತರ ನಡೆದು, ಜಂಗಮರ ಕೊಲೆ ಹಾಗೂ ಮಠಗಳ ನಾಶಕ್ಕೆ ಕಾರಣವಾಯಿತನ್ನಲಾಗಿದೆ. ಹೀಗೆಲ್ಲ ಆದರೂ ಚಿಕ್ಕದೇವರಾಜ ಒಡೆಯನ ಹಿರಿಯ ರಾಣಿ ಎಳಂದೂರಿನ ದೇವರಾಜಮ್ಮಣ್ಣಿ ಲಿಂಗವಂತಳಾಗಿಯೆ ಉಳಿದು ವೀರಶೈವ ಧರ್ಮವನ್ನು ಅನುಸರಿಸಿದಳು. ಷಡಕ್ಷರದೇವನು ಈ ರಾಜರಿಗೂ ಗುರುವಾಗಿದ್ದ.[98] ಆದರೂ ಮುಂದಿನ ಅರಸರಲ್ಲಿ ಶಿವಧಾರ (ಲಿಂಗಧಾರಿ)ಹಾಗೂ ಜನಿವಾರ ಎರಡೂ ಬಳಕೆಯಲ್ಲಿತ್ತು ಎನ್ನುವುದುಂಟು.

ಕೆಂಪೇಗೌಡ ದೊರೆಗಳು

ಆವತಿ ಯಲಹ(ಂ)ಕ ಬೆಂಗಳೂರು - ಮಾಗಡಿ ಗೌಡ ದೊರೆಗಳಲ್ಲಿ ಕ್ರಿ.ಶ. ೧೩೬೭ರ ಹೊಸಕೋಟೆ ಶಾಸನದ(ಬೈ)ರಿದೇವನ ಹೆಸರು ರಣಭೈರೇಗೌಡನಿಗೇ ಅನ್ವಯವೆಂದರೆ ಅವನು ಮನೆತನದ ಮೂಲ ಪುರುಷನಾಗುವುದು ಸಹಜವೆನಿಸುತ್ತದೆ. ಕಾರಣ ಅವುಗಳ ಬಗ್ಗೆ ಸಾಹಿತ್ಯ ಐತಿಹ್ಯಗಳು ಕಾಟಾಚಾರಕ್ಕೆ ಹುಟ್ಟಿಕೊಳ್ಳುವುದಿಲ್ಲ. ಈ ಮನೆತನಕ್ಕೆ ಪ್ರಸಿದ್ಧಿಯ ಕಾರಣ ಕೆಂಪೇಗೌಡ ವಂಶ ಎನ್ನುವುದುಂಟು. ಆವತಿಯಿಂದ ಹೊರಟ ಶಾಖೆಗಳಲ್ಲಿ ಸುಗುಟೂರು, ಎಲಹಂಕ ಹಾಗು ಮಾಗಡಿ ಶಾಖೆಯ ಕೆಲವು ಅರಸರು ವೀರಶೈವದತ್ತ ಆಕರ್ಷಿತರಾದರು. ಹಿರಿಯಕೆಂಪೇಗೌಡ ಯಲಹಂಕದಲ್ಲಿದ್ದವನು ಬೆಂಗಳೂರನ್ನು ಕ್ರಿ.ಶ. ೧೫೩೦ ರ ಸಮಯದಲ್ಲಿ ಕಟ್ಟಲು ಆರಂಭಿಸಿ ಕ್ರಿ.ಶ. ೧೫೩೫ರ ಸುಮಾರಿಗೆ ಮುಗಿಸಿದ.[99]

98. ಓ ಎನ್. ಲಿಂಗಣ್ಣಯ್ಯ : 'ನಿಡುಮಾಮಿಡಿ ಶ್ರೀಶೈಲ ಗುರುಪೀಠ ಮತ್ತು ಮೈಸೂರು ಅರಮನೆ', ಶ್ರೀಶೈಲ ಪೀಠದರ್ಶನ, (ಸಂ) ಶ್ರೀ ಜಚನಿ, ಬೆಂಗಳೂರು, ೧೯೭೭, ಪು. ೬೬
99. ಡಾ। ಹೆಚ್. ಎಸ್ ಗೋಪಾಲರಾವ್ ಅವರು ಕ್ರಿ.ಶ. ೧೫೩೭, ಬೆಂಗಳೂರಿನ ನಿರ್ಮಾಣ ವರ್ಷ ಎಂಬ ಅಭಿಪ್ರಾಯವನ್ನು ಎಂ.ಎನ್. ಶ್ರೀನಿವಾಸರಂತೆ ಸೂಚಿಸಿದ್ದರೂ ಅದು ನಿರ್ಮಾಣದ ಆರಂಭವರ್ಷವೆ? ಪೂರ್ತಿಗೊಂಡವರ್ಷವೆ ? ಎಂಬುದು ಸ್ಪಷ್ಟವಾಗುವುದಿಲ್ಲ. (ಬೆಂಗಳೂರು ಕೆಂಪೇಗೌಡ ವಂಶಸ್ಥರು, (ಸಂ) ಪ್ರೊ। ಎಂ.ಎಚ್.ಕೃಷ್ಣಯ್ಯ ಡಾ। ದೇವರಕೊಂಡಾರೆಡ್ಡಿ, ೧೯೯೬ ಪು.೩೦)

ಮುಖ್ಯವಾಗಿ ವೀರಶೈವದ ಸಂದರ್ಭವನ್ನು ಈ ವಂಶದ ಮಾಗಡಿಯ ಇಮ್ಮಡಿ ಕೆಂಪೇಗೌಡ (ಕ್ರಿ.ಶ.೧೫೮೩-೧೬೫೮)ನಿಂದ ಗಮನಿಸಬೇಕಾಗುತ್ತದೆ. ನಿರಂಜನ ವಂಶರತ್ನಾಕರದ ರೀತ್ಯಾ ಕಲ್ಯಾಣದ ಗಗನದಾರ್ಯರು ಕ್ರಿ.ಶ.೧೬೦೭ ರ ಸಮಯದಲ್ಲಿ ಮಾಗಡಿಗೆ ಬಂದಾಗ ಈ ಕೆಂಪೇಗೌಡನು ಲಿಂಗದೀಕ್ಷೆ ಪಡೆದು ಶಿಷ್ಯನಾದ. ಮಾಗಡಿಯ ಸುತ್ತಮುತ್ತಲಿನಲ್ಲಿಯೂ ಅನೇಕ ವಿರಕ್ತ ಮಠಗಳ ನಿರ್ಮಾಣಕ್ಕೆ ಅನುವಾದ. ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದ ರೀತ್ಯಾ ಸುಗುಟೂರು ತಮ್ಮಣ್ಣಗೌಡ ಹಾಗೂ ಎಲಹಂಕದ ದೊರೆಗಳು ವೀರಶೈವ ಭಕ್ತರಾಗಿ ಮಾಗಡಿಯಲ್ಲಿ ಜಂಗಮದಾಸೋಹ ನಡೆಸುತ್ತಿದ್ದರು. ಇದು ಸಾವನದುರ್ಗದ ವೀರಭದ್ರಸ್ವಾಮಿ ಸನ್ನಿಧಿಯಲ್ಲಿರಬೇಕು. ಏಕಾಂಬರ ಶಾಸ್ತ್ರಿಯ ವೀರಭದ್ರ ವಿಜಯದಲ್ಲಿ ವರ್ಣಿಸುವ ವೀರಭದ್ರದೇವರ ಪೂಜಾವೈಭವವನ್ನು ಗಮನಿಸಿದರೆ ಇದಕ್ಕೆ ಇಂಬು ದೊರೆಯುತ್ತದೆ. ಲಿಂಗಧಾರಿಯಾಗಿದ್ದ ಇಮ್ಮಡಿ ಕೆಂಪೇಗೌಡ ಇದರಲ್ಲಿ ಪಾಲುಗೊಳ್ಳುತ್ತಿದ್ದನೆಂಬುದು ಸಹಜ ನಿರೀಕ್ಷೆ. ಬಹುಶಃ ವೀರಭದ್ರನೂ ಮನೆದೇವರಾಗಿದ್ದ ಕಾರಣ ನೆಲಪಟ್ಟಣ ಕಟ್ಟುವಲ್ಲಿ ಅವನ ಆ ನೆಲೆಗೆ ಗುಡಿಯನ್ನು ಕೇಂದ್ರವಾಗಿರಿಸಿಕೊಂಡಿರಬೇಕು. ಗುಡಿ ಮೊದಲಿದ್ದು ಮುಂದೆ ಜೀರ್ಣೋದ್ಧಾರದ ಸಮಯದಲ್ಲಿ ಹೊಸ ವಿನ್ಯಾಸವನ್ನು ಅದು ಒಳಗೊಂಡಿರಬಹುದು.[100] ಇಮ್ಮಡಿ ಕೆಂಪೇಗೌಡನ ಮಗ ಮುಮ್ಮಡಿಕೆಂಪೇಗೌಡನು ಇಷ್ಟದೇವರಾದ ಸಾವನದುರ್ಗದ ವೀರಭದ್ರಸ್ವಾಮಿಯ(ನೆಲಪಟ್ಟಣ - ಸಾವನದುರ್ಗಾಂತರ್ಗತ) ಸನ್ನಿಧಿಯಲ್ಲಿ ಗ್ರಾಮವೊಂದಕ್ಕೆ ಪ್ರತಿನಾಮಧೇಯಮಾಡಿ ದಾನಮಾಡಿದ ಸಂಗತಿ ಇರುವಲ್ಲಿ, ಆ ಗುಡಿ ಆ ಹೊತ್ತಿಗೆ ಬಹಳ ಪ್ರಸಿದ್ಧಿಗೊಂಡಿರಬೇಕು. ಅಂತಾಗಿ ಅದರ ಸ್ವರೂಪ, ಮರು ವಿನ್ಯಾಸ ಬದಲಾವಣೆ ಅಲಂಕರಣ ಇತ್ಯಾದಿಗಳು ನೆಲಪಟ್ಟಣ ರೂಪುಗೊಂಡನಂತರ ಮುಂದೆ ಆಗಿರಬೇಕು. ಇಷ್ಟದೇವರಲ್ಲದಿದ್ದರೆ, ಜಂಗಮದಾಸೋಹ, ಹೊಸ ಪಟ್ಟಣವೊಂದು ಅದರ ಸುತ್ತ ಬೆಳೆಯಲು ಅವಕಾಶವಿರುತ್ತಿರಲಿಲ್ಲ. ಈ ಜಂಗಮದಾಸೋಹದಲ್ಲಿ :

ಯಳಂದೂರರರಸು ಚನ್ನೊಡೆಯುರು, ಬರಗಿವಿಯಾ ದೇವಿನಾಯಕನು ಬುಕ್ಕಣ್ಣೊಡೆಯ ಜಂಬೂರ ದಾನಿವಾಸದ ದೊರೆಗಳಂತೆಯೆ, ಬಿಜ್ವಾವರದ ಪ್ರಭುವೆ ಚಿಕ್ಕಣಗೌಡ, ಸಾತಿಶಯದಿಂದೆ 'ಸುಕಟೂರ ತಮ್ಮಣಗೌಡ... ಭೋಗವಾಡಿಯ ಲಿಂಗರಾಯ.... ಉದು(ಯಲ)ಹಂಕ ನಾಡಪ್ರಭು', ಪಾಲ್ಗೊಂಡಿದ್ದರು, ಎಂದಿರುವಲ್ಲಿ 'ಮಾಗಡಿ ಪಟ್ಟಣಕ್ಕೆ ಚಿತ್ತೈಸಿ ಆ ಊರ ಅರಸನಾದ ನಾಡಗೌಡನಿಗೆ ಶಾಸ್ತ್ರಮುಖದಿ ಒಡಂಬಡಿಸಿ ಲಿಂಗಧಾರಣವಂ ಮಾಡಿಸಿ', ಆ ಪಟ್ಟಣದಲ್ಲಿ ೬೬ ವಿರಕ್ತ ಮಠಗಳನ್ನು ಆ ಊರ ಭಕ್ತರ ಭಕ್ತಿಯಿಂದ ಕಟ್ಟಿಸಿ.. ಆ ಊರ

100. ಡಾ|.ಕೋ. ವಸಂತಲಕ್ಷ್ಮಿಯವರು ವೀರಭದ್ರನ ಗುಡಿಯು ಇಮ್ಮಡಿಕೆಂಪೇಗೌಡನ ಕಾಲದ ವಿನ್ಯಾಸವಾಗದೆ, ನಂತರದ ಕಾಲದ್ದು ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆದರೆ ಗುಡಿ ಅವನ ಕಾಲದಲ್ಲಿತ್ತು. ರಾಮಗಿರಿಯ ರಾಮದೇಗುಲ ಕೆಂಪೇಗೌಡರ ಕಾಲಾಂತರಗಳಲ್ಲಿ, ವಿನ್ಯಾಸಗಳನ್ನು ಪಡೆಯುತ್ತ ಹೋದಂತೆ, ಇಲ್ಲಿಯೂ ಆಗಿರುವುದನ್ನು ಗಮನಿಸಬೇಕು.

ರಾಜನನ್ನು ಕೃತಾರ್ಥನಂ ಮಾಡಿ' ಎಂದು ಗಗನದಾರ್ಯನ ಚರ್ಯೆಯನ್ನು ಕುರಿತು ಹೇಳಿರುವಲ್ಲಿ., ಇಮ್ಮಡಿ ಕೆಂಪೇಗೌಡರನು ಆ ದಾಸೋಹ ಕಾಯಕದವಸರದಲ್ಲಿ ಪಾಲ್ಗೊಂಡಿರಬೇಕು. ಇದಲ್ಲದೆ ಸಾವನದುರ್ಗದ ಸನಿಹದಲ್ಲಿ ಕಲ್ಯಾಣಒಡೆಯರ ಮಠವು ಇತ್ತು. ಮತ್ತು ಬೆಟ್ಟಹಳ್ಳಿ ಮಠದ ಗುರು ಜಂಗಮಾರಾಧನೆ, ದಾಸೋಹಗಳಿಗೆಂದು ದಾನದತ್ತಿಗಳನ್ನು ನೀಡಿದ್ದ ಮುಮ್ಮಡಿ ಕೆಂಪವೀರಪ್ಪಗೌಡನು (ಕ್ರಿ.ಶ.೧೭೭೦-೯೮)ನು ಮಠದಲ್ಲಿನ ಶಿವರಾತ್ರಿಯುತ್ಸವದಲ್ಲಿ ಭಾಗವಹಿಸ್ತುದ್ದ ಬಗ್ಗೆ ಕ್ರಿ.ಶ. ೧೭೧೩ರ ಈ ಮಠಕ್ಕೆ ನೀಡಿರುವ ದಾನ ಶಾಸನದಲ್ಲಿ, [100ಅ] ಉಕ್ತವಾಗಿದೆ. ಹೀಗೆಲ್ಲ ಇದ್ದರೂ ಕರ್ಲಮಂಗಲ ಶ್ರೀಕಂಠಯ್ಯನವರು (ಇಮ್ಮಡಿ) ಕೆಂಪೇಗೌಡ ಲಿಂಗಧಾರಿಯಾಗಿದ್ದ ಬಗ್ಗೆ, ವಂಶದವರು ಲಿಂಗಧಾರಿಗಳಾಗಿದ್ದ ಬಗ್ಗೆ ಶಾಸನ ಸಾಹಿತ್ಯಗಳಿಂದ ಸೂಚನೆ ಕಾಣಬರದೆಂದಿದ್ದಾರೆ.[101] ಇದಲ್ಲದೆ ಶಾಸನಗಳಲ್ಲಿ ಯಲಹಂಕ ಪ್ರಭುಗಳು, 'ಚತುರ್ಥಗೋತ್ರ' ಎನ್ನುವ ಬದಲು 'ಸದಾಶಿವಗೋತ್ರ' ಎಂದು ಬದಲಾಯಿಸಿಕೊಂಡುದುದಕ್ಕೆ ಮುಮ್ಮಡಿ ಕೆಂಪವೀರ ಗೌಡರು ಭಾರ್ಗವತಿ ಎಂಬ ವೀರಶೈವ ಸ್ತ್ರೀಯ ಸಂಬಂಧವೆ ಕಾರಣ ಎಂಬ ಊಹೆಯನ್ನು ಮಾಡಲಾಗಿದೆ.[102] ಅಲ್ಲದೆ ಯಲಹಂಕ ಪ್ರಭುಗಳು ಕಾಶ್ಯಪಗೋತ್ರದವರೆಂದು ಶಾಸನವೊಂದರ(ಮಾಗಡಿ -೪೨) ಉಲ್ಲೇಖ ಮಾಡಲಾಗಿದೆ.[103] ಆದರೆ ಇದಕ್ಕೆ ಎದುರಾಗಿ ಬೇರೆಯೆ ಅಂಶಗಳು ಎದ್ದು ಕಾಣುತ್ತವೆ.

ಇಮ್ಮಡಿ ಕೆಂಪೇಗೌಡ ಲಿಂಗಧಾರಣೆ ಮಾಡಿಸಿಕೊಂಡ ಎಂದರೆ ಕುಟುಂಬದವರೆಲ್ಲ ವೀರಶೈವವನ್ನು ಅಂದಿನಿಂದಲೇ ಅನುಸರಿಸಿದರು ಎನ್ನುವಂತಿಲ್ಲ. ಶೂದ್ರತ್ವವನ್ನು ಆರೋಪಿಸಿಯೇ 'ಚತುರ್ಥಗೋತ್ರ' ವೆಂದು ಉಕ್ತಿಸಲಾಗಿರುವ ವ್ಯಕ್ತಿಗಳ ಬಳಿ ಇರುವ ೧೭ನೇ ಶತಮಾನದ ಕೆಲವು ಶಾಸನಗಳನ್ನು ಹೊರತು ಪಡಿಸಿದರೆ, ದೇಗುಲ ಹಾಗೂ ದೇಗುಲದ ಅರ್ಚಕರ ಬಳಿಯ ಅನೇಕ ತಾಮ್ರ ಶಾಸನ ಶಿಲಾಶಾಸನಗಳಲ್ಲಿ ಗೋತ್ರವನ್ನು ಶಿವಧರ್ಮದೊಲವಿನ 'ಸದಾಶಿವಗೋತ್ರ'ವೆಂದು ಉದಾತ್ತೀಕರಿಸಿಕೊಂಡಿರುವುದು ಈ ಲಿಂಗಧಾರಣೆಯ ವಿಷಯಕ್ಕೆ ಪೋಷಕವಾಗಿದೆ. ಎ.ಕ.ಸಂ. ೯ ಮಾಗಡಿ ೨ನೇ ಶಾಸನ ರೀತ್ಯಾ ಕ್ರಿ.ಶ. ೧೬೦೭ (ಶಕ ೧೫೨೯ ಏನ್ನುವ ಬದಲು ೧೫೯೨ ಎಂದು ತಪ್ಪಾಗಿ ಅಚ್ಚಾಗಿರುವುದು ಶಾನಸದ ಅಂತರಿಕಪ್ರಮಾಣದಿಂದಲೇ ವಿದಿತವಾಗುತ್ತದೆ.) ರಲ್ಲಿಯ 'ಸದಾಶಿವಗೋತ್ರ'ದ ಯಲಹಂಕ ನಾಡಪ್ರಭುಗಳಾದ ಕೆಂಪನಂಜೇಗೌಡರ ಪೌತ್ರರಾದ ಹಿರಿಯ ಕೆಂಪೇಗೌಡರ ಪುತ್ರರಾದ ಯಿಂಮಡಿ ಕೆಂಪೇಗೌಡರು ಬಿಂನಹಂ ಮಾಡಿ ಬರೆಸಿಕೊಟ್ಟ ತಾಂಬ್ರಶಾಸನ ವೀರೇಶ್ವರ ಸ್ವಾಮಿ (ವೀರಭದ್ರಸ್ವಾಮಿ) ಶ್ರೀ ಪಾದಪದ್ಮಕ್ಕೆ 'ಯಿಂಮಡಿಕೆಂಪೇಗೌಡನ ವಪಿತಾ 'ಎಂಬ ಸಾಲುಗಳೀ ಮೇಲಿನ ಅಂಶಕ್ಕೆ ಹಾಗೂ ಮಾಗಡಿ ೩೦,೮೩,೮೩, ೫೧ನೇ ಶಾಸನಗಳು, ಒತ್ತುಕೊಡುತ್ತವೆ.

100ಅ. ಜಿ.ವಿ. ಶಿವಸ್ವಾಮಿ : ಬೆಟ್ಟಹಳ್ಳಿ ಮಠದ ಶ್ರೀ ಉರಿಲಿಂಗ ಶಿವಾಚಾರರ್ಯರ ಚರಿತ್ರೆ, ಕುಣಿಗಲ್ಲು ತಾಲೂಕು, ೧೯೭೮, ಪು. ೬೪.

101 ಗೌಡಕುಲ ವಿಭೂಷಣ ಕೆಂಪೇಗೌಡ ಜಯಪ್ರಶಸ್ತಿ : (ಸಂ) ಕರ್ಲಮಂಗಲಂ ಶ್ರೀಕಂಠಯ್ಯ, ಮಾಗಡಿ, ೧೯೬೧, ಮುನ್ನುಡಿ, ಪು. ೪೧

102. ಹೆಚ್.ಎಂ. ನಾಗರಾಜರಾವ್ : 'ಶಾಸನಗಳಲ್ಲಿ ಯಲಹಂಕ ಪ್ರಭುಗಳು', ಯಲಹಂಕ ಪ್ರಭುಗಳು (ಪ್ರ.ಸಂ) ಡಾ। ರಾಮೇಗೌಡ, ೧೯೯೪, ಪು.೪೭

ಶ್ರೀ ಶೈಲ ನಿಡುವಮಾಮಿಡಿ ಪೀಠದ ಅಧಿಪತಿಯಾಗಿದ್ದ ಕ್ರಿ.ಶ. ಸು. ೧೬೫೦ ಶಾಂತವೀರದೇಶಿಕೇಂದ್ರನ ಪಿತಾಮಹನಾದ ವೀರಣಾರ್ಯನು ಹದಿನಾಡಿನ ಅರಸನಿಂದ ಸನ್ಮಾನಿತನಾಗಿ ಬೆಂಗಳೂರಿನಗೆ ಬಂದಾಗ ಮಾಗಡಿ ಕೆಂಪೇಗೌಡ (ಇಮ್ಮಡಿಕೆಂಪೇಗೌಡ) ನಿಂದಲೂ ಸನ್ಮಾನಿತನಾದ. ಹಾಗೂ 'ನಿಲಯ ಹಿತ್ತಲ ಬಿತ್ತಿ ಮಹಾಕೂಪಂಗಳಂ ನಿರ್ಮಿಸಿ ನೀವಿರ್ಪುದೆಂದು ವೀರಣಾರ್ಯಗೊಪ್ಪಿಸಿದನು.' ಎಂಬುದು ಈ ಶಾಂತವೀರ ದೇಶಿಕನ' 'ಶಿವಲಿಂಗ ಚಾರಿತ'ದಲ್ಲಿದೆ. ಅಂದರೇ ಮಠಟ್ಟಿಸಿ ಕುಲಗುರುವನ್ನಾಗಿ ಮಾಡಿಕೊಂಡ ಸಂಗತಿ ಇದಾಗಿದೆ.[103] ಇದಲ್ಲದೆ ಕ್ರಿಶ. ೧೬೦೬ರ ಗುಮ್ಮಳಾಪುರದ ಶಾಸನವೊಂದರ ರೀತ್ಯಾ ರಂಭಾಪುರಿ ಪೀಠ ಶಾಖಾನುವರ್ತಿಗಳಾದ ಗುಮ್ಮಳಾಪುರ ಮಠಾಧಿಪತಿ ಗುರುನಂಜೇದೇವರು, ಇಮ್ಮಡಿ ಕೆಂಪೇಗೌಡನಿಗೆ ಗುರುಗಳಾಗಿದ್ದ ಸಂಗತಿ ಇದೆ. ಮತ್ತು ಈ ವಂಶದವರು ಮಾಗಡಿಯ ಸುತ್ತ ೩೦೦ ಮಠಗಳನ್ನು ಕಟ್ಟಿದರು. ಇಮ್ಮಡಿ ಕೆಂಪೇಗೌಡನ ಮಗ ಇಮ್ಮಡಿ ಹಿರಿಯ ಕೆಂಪೇಗೌಡನೂ ಮಠಗಳನ್ನು ಕಟ್ಟಿಸಿದ. ಇವನ ರಾಣಿಯಾದ ವೆಂಕಟಕೃಷ್ಣಮ್ಮಾಜಿಗೆ ರಾಮನಗರದ ರಾಮದೇವರ ಬೆಟ್ಟದ ಪಶ್ಚಿಮ ಪಾರ್ಶ್ವದ ಕಾರ್ಖಾನೆ ಬಂಡೆ ಕೋಟೆಯ ಬಳಿ ಇರುವ ಅಪ್ರಕಟಿತ ಶಾಸನದ ಸಾಲು 'ಕೆಂಪಣಶಿಯರು (ಕಟಿಸಿದ) ತ್ರಿಯಂಬಕರ ಮಟ' ದ ನಿರ್ಮಾಣವು ಅನ್ವಯಿಕವಾಗಿರುವಂತಿದೆ.[104] ಬೆಟ್ಟದ ಮೇಲೆ ರಾಮ ಹಾಗು ರಾಮೇಶ್ವರ ದೇಗುಲಗಳು ಮಾತ್ರವಿದ್ದು, ಹಿರಿಯಕೆಂಪೇಗೌಡನಿಂದ ಹಿಡಿದು ಕೊನೆಯ ಕೆಂಪವೀರಪ್ಪಗೌಡನವರೆಗೆ ಈ ಬೆಟ್ಟ ಮಾಗಡಿಕೆಂಪೇಗೌಡನ ಗಿರಿದುರ್ಗವಾಗಿತ್ತು. ಅಂತಾಗಿ ಇಲ್ಲಿನ 'ಮಟ' ಶಬ್ದ.' ತ್ರಯಂಬಕ=ತ್ರಿಯಂಬಕ ಅಂದರೆ ಶಿವ ಸಂಬಂಧೀ ಮಠವಾಗಿರಬೇಕು. ಅರ್ಥಾತ್ ಇಮ್ಮಡಿ ಕೆಂಪೇಗೌಡನ ಸೊಸೆಯಾಗಿ ಹಾಗೂ ಪತಿಯು ಮಠಕಟ್ಟಿಸುತ್ತಿದ್ದ ಈ ಕೈಂಕರ್ಯಕ್ಕೆ ಸಹಯೋಗವಾಗಿ ಕೆಂಪಣರಶಿಯು ಇಲ್ಲಿ ಶಿವಮಠ ಎಂದರೆ ವೀರಶೈವಮಠವೊಂದನ್ನು ಕಟ್ಟಿಸಿರಬೇಕು. ಅವಶೇಷಗಳು ಅಲ್ಲಿ ದೇಗುಲವಿದ್ದ ಕುರುಹನ್ನು ತೋರದೆ ಮಠದ ಗೋಡೆಗಳನ್ನು ತೋರುತ್ತಿದ್ದವು. ಈಗ, ಅವೂ ನೆಲವನ್ನಪ್ಪಿವೆ. ಇನ್ನೊಬ್ಬ ಮಗನಾದ ಮುಮ್ಮಡಿ ಕೆಂಪೇಗೌಡನು (ಕ್ರಿ.ಶ. ೧೬೬೭-೭೮) ಪರಮಶಿವಭಕ್ತ. ಪ್ರಸನ್ನ ವಿರೇಶ್ವರ ಎಂಬ ದೇಗುಲವನ್ನು ಕಟ್ಟಿಸಿದ. ಇವನ ಮಗನೊಬ್ಬನಿಗೂ ಮುಮ್ಮಡಿ ಕೆಂಪೇಗೌಡ ಎಂಬ ಹೆಸರಿದ್ದು ಶಾಸನದಲ್ಲಿ ಚನ್ನವೀರಪ್ಪ ಎಂಬ ಹೆಸರಿಗೆ ಅನ್ವಯಗೊಂಡಿದ್ದು ಅವನ ಶಿವಾಚಾರತನವನ್ನು ಸೂಚಿಸುವಂತಿದೆ. ಈ ಮುಮ್ಮಡಿಗಳ ಸಂದರ್ಭದಲ್ಲಿ (ಅಂದರೆ ೧೬ನೇ ಶತಮಾನದ ಉತ್ತರ ಭಾಗದಲ್ಲಿ) ಬರುವ ಭಾರ್ಗವತಿ, ಜಾಪಾಮುದ್ದಿ (ಚಾಪಾಮುದ್ದಿ)ಯರು ಕರ್ಲಮಂಗಲ ಶ್ರೀಕಂಠಯ್ಯ ಅವರು ಹೇಳುವಂತೆ ಉಪಪತ್ನಿಯರು[105] ಅಲ್ಲ. ಬದಲು ರಾಣಿ ವಾಸದವರ ಮಾಸಲು,ಕರೆಗಳಾಗಿದ್ದು ರಾಣೀವಾಸದ

---

103. ಎಂ.ವಿಕೃಷ್ಣರಾವ್: ಬೆಂಗಳೂರು ಕೆಂಪೇಗೌಡ, ಬೆಂಗಳೂರು, ೧೯೬೪, ಪು. ೧೯೪ ಅಲ್ಲದೆ ; ಈ ಮಠವಿದ್ದ ಜಾಗದಲ್ಲಿ ಗವಿಪುರಂ ಗುಟ್ಟಹಳ್ಳಿಯಲ್ಲಿ ಇಂದು ಶ್ರೀ ಗೌರೀಶಂಕರ ದೇವಾಲಯ ಎದ್ದುನಿಂತಿದೆ (ನೋಡಿ ಎಂ. ಜಿ. ನಾಗರಾಜ್ : ಶ್ರೀ ಗೌರೀಶಂಕರ ದರ್ಶನ , ಬೆಂಗಳೂರು. ೧೯೯೦ ಪು.೧೪-೧೭).
104. ಎಂ.ಜಿ. ನಾಗರಾಜ್ : ಶಿವ - ಶ್ರೀರಾಮಗಿರಿಕ್ಷೇತ್ರದರ್ಶನ, ರಾಮನಗರ, ೧೯೭೯ ,ಪು. ೪೪-೪೫ರಲ್ಲಿ ಪರಿಷ್ಕತಪಾಠದ ಚಿತ್ರ ಹಾಗೂ ಪು. ೨೮.
105. ಕೆಂಪೇಗೌಡ ಜಯಪ್ರಶಸ್ತಿ, ಮುನ್ನುಡಿ, ಅದೇ, ಪು. ೬೧

ಸೇವೆಯಾಗಿ ಮಾಗಡಿಯ ಭಾರ್ಗವತಿ ಹಾಗೂ ಚಾಪಾಮುದ್ರಿ ಕೆರೆಗಳ ನಿರ್ಮಾಣವು.[106] ಅವರ ಬಗೆಗಿನ, ಪೂಜ್ಯತೆ, ಗೌರವ ಹಾಗೂ ರಾಣಿತ್ವದ ಸಂಕೇತವಾಗಿದೆ. ಮೊದಲನೇ ಮುಮ್ಮಡಿ ಕೆಂಪೇಗೌಡ ಅಥವಾ ಅವನ ಮಗ ಚನ್ನವೀರಪ್ಪ(ಎರಡನೆ ಮುಮ್ಮಡಿ ಕೆಂಪ ವೀರಪ್ಪಗೌಡ)ನು ಶಿವಾಚಾರಸ್ಥನೆನಿಸಿ ಅವನು ಮದುವೆಯಾದ ವೀರಶೈವ ರಾಣಿಯರಿವರಾಗಿರಬೇಕು. ಕುಟುಂಬದ ಸವತಿ ರಾಣಿಯರ ಅಥವಾ ಮತ್ಸರಿ ಅನ್ಯಮತೀಯರ ಕುಹಕದಿಂದಾಗಿ ಜನರಲ್ಲಿ ಅಂತಹ 'ಉಪಪತ್ನಿ' ಕತೆಯನ್ನು ಹರಡಿರುವಂತಿದೆ. ಅಂತಾಗಿ '**ಸದಾಶಿವಗೋತ್ರವು**' ಇಮ್ಮಡಿ ಕೆಂಪೇಗೌಡನ ಕಾಲಕ್ಕೆ (೧೬೦೭ರ ನಂತರ) ಸೂಚಿತವಿರುವಲ್ಲಿ, ಭಾರ್ಗವತಿಯು ಕೊನೆಯ ಅರಸು ಕೆಂಪವೀರಗೌಡನಿಗೆ ಸತಿಯಾಗದೆ, ತಾಯಿ ಸ್ಥಾನದಲ್ಲಿ ನಿಂತು ಶಿವಾಚಾರದ ಸಂದರ್ಭವನ್ನು ಸೃಷ್ಟಿಸಿಕೊಟ್ಟಂತೆ ಕಾಣುತ್ತದೆ. ಮಾಗಡಿ ೪೨ನೆಯ (ಕ್ರಿ.ಶ. ೧೭೧೨) ಶಾಸನದಲ್ಲಿ ಕೊನೆಯ ಅರಸು ಕೆಂಪವೀರಪ್ಪ ಗೌಡನದು(ಕ್ರಿ.ಶ. ೧೭೧೦-೨೮) ಕಾಶ್ಯಪಗೋತ್ರ ಎಂದಿರುವುದು ಲಿಪಿಕಾರನ ದೋಷವೆಂದರೂ ವೈರುಧ್ಯವೇನಿಲ್ಲ. ಕಾರಣ ವೀರಶೈವ ಚಂಗಾಳ್ವ ಅರಸರಲ್ಲಿ ಹಾರೀತಿ ಗೋತ್ರ ಹಾಗೂ ವೀರಶೈವ ಹಾಲೇರಿ ವಂಶದ ಚಿಕ್ಕವೀರ ಒಡೆಯನಲ್ಲಿ'ಕಾಶ್ಯಪಗೋತ್ರ' ಸಂಬಂಧಗಳು ಉಕ್ತವಾಗಿವೆ.[107] ಈ ಮೇಲಿನ ಅಂಶಗಳಿಂದ ಮಾಗಡಿ ಕೆಂಪೇಗೌಡನ ವಂಶಿಕರಲ್ಲಿ ಕೆಲವು ಅರಸರು ಹಾಗೂ ಕೆಲವು ರಾಣಿಯರು ಶಿವಾಚಾರಸ್ಥರಾಗಿ ವೀರಶೈವ ಧರ್ಮದೊಲವನ್ನು ಪಡೆದಿದ್ದರೆಂದಾಗುತ್ತದೆ.

ಇನ್ನು ಕ್ರಿ.ಶ. ೧೬೪೮ರಲ್ಲಿ ರಣದುಲ್ಲಾ ಖಾನನೊಡನೆ ಹರಪನಹಳ್ಳಿ, ಕನಕಗಿರಿ, ಉಜ್ಜಿನಿ, ಕೊಡಗು - ಪಾಲ್ವರೆಯ ಹನುಮಪ್ಪನಾಯಕ ಮುಂತಾದ ಅರಸರು ಹಾಗೂ ನಾಯಕರು ಇಮ್ಮಡಿ ಕೆಂಪೇಗೌಡನನ್ನು ಎದುರಿಸಲು ಬಂದರು ಎಂದರೆ ಅವನು ಕೇವಲ ಪಾಳೆಗಾರನೆನಿಸದೆ ಶೂರ ಹಾಗೂ ದಕ್ಷ ದೊರೆಯಾಗಿದ್ದ ಎಂಬುದನ್ನು ತೋರಿಸುತ್ತದೆ.[108] ಇವನ ಸಮಯದಿಂದ ಲಿಂಗಮಾಂಬೆ, ಬಸವಾಂಬೆ, ಮುದ್ದುವೀರಮ್ಮಾಜಿ ಎಂಬ ಹೆಸರುಗಳು ಮನೆತನದಲ್ಲಿ ಹೆಚ್ಚು ಪ್ರಚಲಿತವಾಗಿರುವುದು ಈ ವಂಶದ ಶಿವಧರ್ಮದೊಲವಿನಸಂಕೇತವೂ ಆಗಿದೆ.

ಈ ಅರಸರಲ್ಲಿ ವೀರಶೈವಕ್ಕೆ ಉತ್ತೇಜನ ನೀಡಿ ಕೆಲವರು ಅನುಸರಿಸಿದರೂ ಜೈನ, ಹಾಗೂ ವೈಷ್ಣವ ಧರ್ಮಗಳಿಗೂ ಪ್ರೋತ್ಸಾನೀಡಿದರು. ವೀರಶೈವ ಮಠಗಳನ್ನು ನಿರ್ಮಿಸಿದಂತೆ, ರಾಮಗಿರಿಯ ಶ್ರೀರಾಮ, ರಾಮೇಶ್ವರ ದೇಗುಲಗಳು, ಮಾಗಡಿ ರಂಗನಾಥ, ಚೆನ್ನಿಗರಾಯ ಸ್ವಾಮಿ, ವರದರಾಜ ಸ್ವಾಮಿ, ನರಸಿಂಹ ದೇಗುಲಗಳನ್ನು, ವೀರಭದ್ರ, ಸೋಮೇಶ್ವರ ದೇಗುಲಗಳನ್ನು ಕಟ್ಟಿಸಿ, ಬೆಂಗಳೂರಿನ ಗವಿಗಂಗಾಧರೇಶ್ವರ ಗುಡಿಯನ್ನು ಜೀರ್ಣೋದ್ಧಾರ

---

106. ಎಂ. ವಿ. ಕೃಷ್ಣರಾವ್ :ಅದೇ, ಪು. ೧೫೯.
107. ಎಂ. ಜಿ. ನಾಗರಾಜ್ : 'ಯಲಹಂಕ ವಂಶದ ಕೆಂಪೇಗೌಡ ದೊರೆಗಳು - ಜೀವನ ಸಂಗತಿಗಳು', ಬೆಳ್ಳಿಬಾಗಿನ, ವಿಶ್ವೇಶ್ವರ ಪುರಂ ಕಾಲೇಜುಗಳ ರಜತ ಮಹೋತ್ಸವ ಸಂಚಿಕೆ (ಸಂ) ಡಿ.ಲಿಂಗಯ್ಯ,೧೯೯೪, ಬೆಂಗಳೂರು, ಪು. ೧೫೮, ೧೬೪-೫
108. ಎಂ.ಜಿ. ನಾಗರಾಜ್ : 'ಶಾಸನ ಮತ್ತು ಜಾನಪದದಲ್ಲಿ ಕೆಂಪೇಗೌಡ ಪ್ರಭುಗಳು,' ಆದಿ ಚುಂಚನಗಿರಿ, ಮೇ, ೧೯೯೫, ನಂ. ೧೧ ಸಂ. ೧೧

ಮಾಡಿದರು. ಸಾಹಿತ್ಯಿಕವಾಗಿ ವಿಕಾಂಬರ ಶಾಸ್ತ್ರಿಯ ವೀರಭದ್ರ ವಿಜಯ (೧೭ನೆಯ ಶತಮಾನ), ಸದ್ಗುರು ನಂಜೇಶ್ವರ ವಿರಚಿತ (ಗುರುನಂಜೇದೇವರು ಅಥವಾ ಅವರ ಕರಕಮಲ ಸಂಜಾತ ಕಿರಿಯ ಗುರು ಯಾ ಶಿಷ್ಯನೊಬ್ಬನು ಗುರುನಾಮಾಂಕಿತವಿಟ್ಟು ರಚಿಸಿ ರಬಹುದು). 'ಕೆಂಪೇಗೌಡನ ಜಯ ಪ್ರಶಸ್ತಿ', ಇವರ ಕಾಲದ ಪ್ರಮುಖ ಕೃತಿಗಳಾಗಿವೆ. ಆರ್ಥಿಕವಾಗಿ, ವೀರಭದ್ರವರಹ, ಭೈರವ ನಾಣ್ಯಗಳನ್ನು ಮುದ್ರಿಸಿ ಚಾಲ್ತಿಗಿಟ್ಟಿದ್ದರೆನ್ನಲಾಗಿದೆ. ಇದರ ಜೊತೆಗೆ 'ವಿಜಯ' ಎಂಬ ನಾಣ್ಯವೂ ಅವರ ಕಾಲದಲ್ಲಿ ಬಳಕೆಯಲ್ಲಿತ್ತು ಎಂದು ಗ್ರಾಮೀಣ ಹಿರಿಯರು ಹೇಳುತ್ತಾರೆ. ಕೃಷಿ ವ್ಯವಸ್ಥೆ ಸುವ್ಯಸ್ಥಿತವಾಗಿತ್ತು. ಹೊಲಗದ್ದೆ ತೋಟಗಳ ವ್ಯವಸಾಯಕ್ಕೆ ಓಲೆಕಾರರ ಪೈಕಿ ಯುದ್ಧಾಳುಗಳನ್ನು ಯುದ್ಧವಿಲ್ಲದ ಸಂದರ್ಭಗಳಲ್ಲಿ ನೇಮಿಸಲಾಗುತ್ತಿತ್ತು. ಕೊಡಗಿನ ಹಾಲೇರಿ ಅರಸರಲ್ಲಿ ರಾಜರ ಖಾಸಗಿ ಕೃಷಿ ಜಮೀನಿಗೆ ಪಣ್ಯ (ಪನ್ಯ ಜಮೀನು) = ಪನ್ಯ ಎಂಬ ಹೆಸರಿದ್ದಂತೆ, ಕೆಂಪೇಗೌಡರಲ್ಲಿಯೂ ಸ್ವಂತ ಕೃಷಿ ಭೂಮಿಯೂ ಇದ್ದು ಅದು 'ಅರಮನೆ ಪಣ್ಯ', ಎಂಬ ಹೆಸರಿನಲ್ಲಿತ್ತು; ಸಮಾಜೋ-ಧಾರ್ಮಿಕ ಸಂಸ್ಕೃತಿಯಾಗಿ, ಚಾಲ್ತಿಯಾಗಿದ್ದ, ವಿವಾಹಸಮಯದಲ್ಲಿ ಕನ್ಯೆಯರು ಭೈರವನಿಗೆ 'ಕಿರುಬೆರಳು' ಕೊಡುವ ಪದ್ಧತಿಯನ್ನು ನಿಲ್ಲಿಸಿ,ಸುಧಾರಣಾ ನಡೆಯನ್ನು ನಿದರ್ಶಿಸಿದರು. ಈ ಕೆಂಪೇಗೌಡರ ಕುರಿತು ಖಚಿತ ಚಾರಿತ್ರಿಕ ಗ್ರಂಥ ರಚನೆಗೆ ಸಹಾಯಕವಾಗಲೆಂದು, ಶಾಸನಗಳು, ಸಂಶೋಧಕರ ದಾಖಲೆಗಳನ್ನೂ ಬಳಸಿಕೊಂಡಿ ರುವುದಾಗಿ ಪ್ರೊ। ಎಂ. ವಿ. ಕೃಷ್ಣರಾವ್ ಅವರು 'ಬೆಂಗಳೂರು ಕೆಂಪೇಗೌಡ' ಎಂಬ ಕೃತಿಯನ್ನು ಬರೆದು ಹೇಳಿಕೊಂಡಿರುವಲ್ಲಿ ಅದು 'ಕತೆ'ಯ ಪುಸ್ತಕ ಎನಿಸದೆ ಕಥಾಶೈಲಿಯ 'ಚಾರಿತ್ರಿಕ ಕೃತಿ' ಎಂದರೆ ಹೆಚ್ಚು ಸೂಕ್ತವಾಗಿ ಕಾಣಬರುತ್ತದೆ ಹೀಗೆ ಕೆಂಪೇಗೌಡರ ಜೀವನ ಸಂಗತಿಗಳು ಚರಿತ್ರೆಕಾರರ ತುಂಬು ಗಮನವನ್ನು ಸೆಳೆದು ಈಚೆಗೂ ಕೃತಿಗಳು ಹೊರಬರುತ್ತಿರುವುದು ಸ್ವಾಗತಾರ್ಹ.

ತೆಂಗಿನಕಲ್ಲಿನ ಅರಸ ಚಾಮರಾಜ .ಇವನ ರಾಜಧಾನಿ ಆಲೂರು. ಈ ತೆಂಗಿನಕಲ್ಲು ಪ್ರಸಿದ್ಧ ರೇವಣಸಿದ್ಧೇಶ್ವರ ಬೆಟ್ಟವಿರುವ ರಾಮನಗರ ತಾಲೂಕಿನ ಅವ್ವೇರಹಳ್ಳಿ (ಅವ್ವೆಯರ ಹಳ್ಳಿ) ಹಾಗೂ ಕಾಡನಕುಪ್ಪೆಯ ಮಧ್ಯದ ಮೂಲೆಗಿರುವ ಪ್ರಾಚೀನ ಗ್ರಾಮ. ತೆಂಗಿನಕಲ್ಲು ಕೂಡ ಒಂದು ಬೆಟ್ಟವೆ. ಇಂದಿಗೂ ಅಲ್ಲಿ ಕೋಟೆಯ ದಿಡ್ಡಿ ಬಾಗಿಲ ಅವಶೇಷಗಳಿವೆ. ಹೆಬ್ಬಾಗಿಲ ನೆಲಕುಳಿಗಳೂ ಕಾಣುತ್ತವೆ. ಆನೆ ಹಾಗೂ ಕುದುರೆ ಲಾಯಗಳ ನೆಲೆಯನ್ನು ಅಲ್ಲಿನ ಗ್ರಾಮಿಣರು ಇಂದಿಗೂ ತೋರುತ್ತಾರೆ. ರಾಜನ ಕಾಲದಲ್ಲಿ ಈ ಬೆಟ್ಟದ ತಪ್ಪಲಿನಲ್ಲಿ ಸಂತೆ ನಡೆಯುತ್ತಿದ್ದ ಬಗ್ಗೆ, ಸಂತೆಮಾಳದ ಬಗ್ಗೆ ತಮ್ಮ ಹಿರಿಯರು ಹೇಳುತ್ತಿದ್ದ ಸಂಗತಿಯನ್ನು ಅಲ್ಲಿನ ಇಂದಿನವರು ನೆನಸಿ ಹೇಳುತ್ತಾರೆ.[109] ರೇವಣಸಿದ್ಧೇಶ್ವರ ಬೆಟ್ಟಕ್ಕೆ ಸುಮಾರು ೫ ಮೈಲಿ ದೂರದ ಈ ಊರು ಹಾಗೂ ಇದರ ದೊರೆಯ ಸಂಗತಿ ಐತಿಹಾಸಿಕವಾದವು. ರೇವಣಸಿದ್ಧರು ಈ ಗಿರಿಗೆ ಬಂದ ಸಂದರ್ಭ ಹಾಗೂ ಮಾಡಿದ ಮಹಿಮೆಯ ಕಾರ್ಯಗಳನ್ನು

109. ತೆಂಗಿನ ಕಲ್ಲುಗ್ರಾಮದ ಶ್ರೀ ಬೋಳಯ್ಯ ಹಾಗೂ ಶ್ರೀ ಬಸವರಾಜ್ ಅವರು ಬೆಟ್ಟಕ್ಕೆ ಕರೆದುಕೊಂಡು ಹೋಗಿ ತೋರಿಸಿದ ಹಾಗೂ ಹೇಳಿದ ಸಂಗತಿಗಳು. ಈ ಸಮಯದಲ್ಲಿ ಅವರನ್ನೂ ನೆನೆಸುವೆ.

೧೬ನೇ ಶತಮಾನದ ರೇವಣಾರಾಧ್ಯನು ತನ್ನ ಭೀಮೇಶಾದ್ರಿ, ಪುರಾಣದಲ್ಲಿ ಹೇಳಿದ್ದಾನೆ. ತೆಂಗಿನಕಲ್ಲಿನ ರಾಜ ಹಾಗೂ ರೇವಣಸಿದ್ಧರ ಸಂಬಂಧದ ಕತೆಯೊಂದಿದೆ:

ಕಾಟುಕ ಎಂಬ ಬೇಡನೊಬ್ಬ ಬೇಟೆಗೆಂದು ಬರುತ್ತಿದ್ದಾಗ ಉಡವೊಂದನ್ನು ಕಂಡು ಬೆನ್ನಟ್ಟಿದ. ಅದು ರೇವಣಸಿದ್ಧರು ತಪಸ್ಸಿಗೆ ಕುಳಿತಿದ್ದ ಬೆಟ್ಟದ ಗುಹೆಯೊಳಕ್ಕೆ ನುಗ್ಗಿತು. ಹಿಂಬಾಲಿಸಿ ಬಂದ ಬೇಡನಿಗೆ ರೇವಣಸಿದ್ಧರ ದರ್ಶನವಾಯಿತು. ಆಗ ಗುರುಕೃಪೆಯಿಂದ ಸಂಪತ್ತು ಒದಗಿತು. ಆದರೆ ತಾವಿರುವ ತಾಣವನ್ನು ಯಾರಿಗಾದರೂ ತಿಳಿಸಿದರೆ ಶಿರ ಹೋಳಾದೀತು ಎಂದು ಎಚ್ಚರಿಸಿದರು. ಆ ಬಗ್ಗೆ ಅವನು ಆಣೆ ಇಟ್ಟ; ಭಾಷೆ ಕೊಟ್ಟ. ಆದರೆ ಒದಗಿದ ಸಂಪತ್ತಿನ ಮೂಲವನ್ನು ಯಾವುದೋ ಘಳಿಗೆಯಲ್ಲಿ ಎಚ್ಚರದಪ್ಪಿ ಹೆಂಡತಿಗೆ ಹೇಳಿದ. ಅದರಿಂದ ಗುರುವಿಗೆ ಕೊಟ್ಟಿದ್ದ ಭಾಷೆ ಅವನಲ್ಲಿ ಮಾನಸಿಕ ಚಿಂತೆ, ಕಳವಳವನ್ನು ಹುಟ್ಟಿಸಿ ಅವನು ಶಿರದ ಆಘಾತಕ್ಕೆ ಒಳಗಾಗಿ ಸತ್ತ. ಅವನ ಹೆಂಡತಿ ಗೋಳಾಡಿ ಆಳುತ್ತಿದ್ದ ದೊರೆ ಚಾಮರಾಜನಲ್ಲಿಗೆ ಹೋಗಿ ಅಳಲು ತೋಡಿಕೊಂಡಳು. ದೊರೆ ಅವಳಿಗೆ ಸಾಂತ್ವನ ನೀಡಿದ. ಈ ಗುರು ಮಹಿಮಾನ್ವಿತರೆಂದುಕೊಂಡು ಗಿರಿಗೆ ಬಂದು ರೇವಣಸಿದ್ಧರ ದರ್ಶನ ಮಾಡಿದ. ತನಗೊಬ್ಬ ಸುಂದರ ಕನ್ನಿಕೆ ಪತ್ನಿಯಾಗಲು ಆಶೀರ್ವದಿಸಬೇಕೆಂದ. ಅದಕ್ಕೆ ರೇವಣಸಿದ್ಧರು ಬೆಟ್ಟದ ೧೦೧ ಗವಿಗಳಲ್ಲಿ ಪ್ರವೇಶ ಮಾಡಿ ಅಲ್ಲಿ ಯಾವ ಹೆಣ್ಣು ದೇವತೆಗೆ ಸ್ವಾಮಿ ಇಲ್ಲವೋ ಆ ದೇವತೆಯನ್ನು ನೀನು ಪಡೆ ಎಂದರಂತೆ. ರಾಜ ಅದರಂತೆ ೧೦೧ ಗವಿಗಳಲ್ಲಿ ಅರಸಿದಾಗ ಎಲ್ಲೆಡೆ ಜೋಡಿ ದಂಪತಿ ದೇವತೆಗಳೇ ಇದ್ದರಂತೆ. ಈ ಪವಾಡವನ್ನು ಕಂಡ ರಾಜನಿಗೆ ವಿರಕ್ತಿ ಹುಟ್ಟಿ ತನ್ನ ಸಕಲ ಸಂಪತ್ತು ವೈಭವಗಳನ್ನು, ಗುರುಗಳಿಗೆ ಅರ್ಪಿಸಿ ದೀಕ್ಷೆ ಬಯಸಿದನಂತೆ. ಹಾಗು ಲಿಂಗಪೂಜೆಗೆ 'ನೆಲೆದೋರಿ ಎಂದನಂತೆ.' ಆಗ 'ನಿನ್ನ ಸಂಪತ್ತು ಜನರಿಗಾಗಲಿ. ನೀನು ದೀಕ್ಷೆ ಪಡೆದು ಈ ಗಿರಿಯಲ್ಲಿ ಪೂಜೆಗೊಳ್ಳು', ಎಂದು ಹರಸಿದರಂತೆ. ಆಗ ವೀರಶೈವ ದೀಕ್ಷಿತನಾಗಿ ವೀರಭದ್ರ ದೇಗುಲಗಳನ್ನು ಮಠವನ್ನು ಭೀಮೇಶ್ವರ ಗುಡಿ ಹಾಗೂ ಅವ್ವೆಯರ (ಸಪ್ತ ಮಾತೃಕಾ ರುದ್ರಕನ್ನಿಕೆಯರು) ಶಿಲ್ಪಗಳನ್ನು ನಿರ್ಮಿಸಿದನಂತೆ. ಇವನದೆಂದು ಹೇಳಲಾಗುವ ಪ್ರಣಾಮಭಂಗಿಯ ಸ್ಥಾನಕ ಶಿಲ್ಪವೊಂದು ಗಿರಿಯ ಆರಂಭದ ಮೆಟ್ಟಿಲುಗಳ ಬಳಿಯ ಗಣೇಶನ ಗುಡಿಯ ಎದುರು ಬಂಡೆಯ ಮೇಲಿದೆ. ಗುಡಿಗಳು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗಿರುವುದು ಶಾಸನಗಳಿಂದ ಕಾಣಬರುತ್ತದೆ. ಈ ಮೇಲಿನ ಕತೆಗೆ ಇತಿಹಾಸದ ಎಳೆಗಳಿರುವುದು ಶಾಸನಗಳಿಂದ ಸೂಚಿತವಾಗುತ್ತದೆ. ಬೇಡ 'ಕಾಟುಕ' ನ ಹೆಸರಿನಲ್ಲಿ ಬಹುಶಃ ಇಂದಿನ ಕಾಡನಕುಪ್ಪೆಯು ಅಂದಿನ ಗ್ರಾಮದ ಹೆಸರಿನ ಹೊಸ ರೂಪವೆನಿಸುತ್ತದೆ. ಭೀಮೇಶ್ವರ ದೇಗುಲದ ಮೇಲ್ಚಾಂಡೆಯಲ್ಲಿದ್ದ ಶಾಸನವು ಕ್ರಿ.ಶ. ೧೦೮೮ರ ದೆಂದು ತೋರುತ್ತಿದ್ದು ಕಲ್ಯಾಣಿ ಚಾಲುಕ್ಯರ ಕಾಲದ ಲಿಪಿ ಲಕ್ಷಣವನ್ನು ಹೋಲುತ್ತದೆ. ಬಹುತೇಕ ಅಕ್ಷರಗಳು ಸವೆದಿದ್ದು ಇಂದು ಆ ಭಾಗವು ಕೊಠಡಿಯ ಛಾವಣಿಯ ಸಿಮೆಂಟ್‌ನಿಂದ ಮುಚ್ಚಿಹೋಗಿರುವ ಅಪ್ರಕಟಿತ ಶಾಸನವಾಗಿದೆ.[110] ಬೆಂಗಳೂರು ಜಿಲ್ಲೆ ಬಯಿರತ್ತಿಯ ಕ್ರಿ.ಶ. ೧೦೦೦ರ ಶಾಸನದಲ್ಲಿ 'ಮುಸುಕುಂದ ಮಹಾರುಸಿಯ ಪಿ ಶಾಮ ರೇವಣಸಿದ್ಧೆಯ ದೇವರ...' ಎಂದಿದೆ[111] ಹಾಗೆಯೇ ಕ್ರಿ..ಶ. ೧೧೯೩ರದೆನ್ನಲಾದ ಭೀಮೇಶ್ವರ

110. ಎಂ.ಜಿ . ನಾಗರಾಜ್ : ಶಿವ ಶ್ರೀರಾಮಗಿರಿ ಕ್ಷೇತ್ರ ದರ್ಶನ, ಅದೇ, ಪು.೨೧

111. ಎ.ಕ.. ಸಂಪುಟ ೯, ಬೆಂಗಳೂರು ಜಿಲ್ಲೆ, ಹೊಸಕೋಟೆ ತಾ (ಬಯಿರತ್ತಿ)೧೨೩

ಗುಡಿಯ ಹಿಂದಣ ಶಾಸನದಲ್ಲಿ ರೇವಣಸಿದ್ಧರ ಸಂಬಂಧದ ಪವಾಡದ ಉಲ್ಲೇಖವು ಚಾಮರಾಜನ ಕತೆಗೆ ಹೊಂದಿಕೊಳ್ಳುವಂತಿದೆ. ಶಾಸನ ಹೀಗಿದೆ.[112]

೧. ಆನಂದ ಸಂವಚರದ ಆಗೋರತ್ರೆಗೆ

೨. ಹಜರ ಗವಿ ಬಗಿಲ ತೆಗೆದು ಮೂಲೋ

೩. ಕ. ಅಜಿವಹಿ ಪವಡವ ತೋಋಿದರು.

೪. ರೇವಣಸಿದೇಶ್ವರನ ಮಗ

೫. ಮರುಳ ಸಿದೇಶ್ವರನು ...

ಚಾಮರಾಜನಿಗೆ ಸಂಬಂಧಿಸಿದ ಪವಾಡದ ಸಂಕೇತ ಇದೆಂದಾದರೆ, ಆ ಕಾಲದ ವೀರಶೈವ ಅರಸನೊಬ್ಬನ ಅಸ್ತಿತ್ವ ಈ ಪ್ರದೇಶದಲ್ಲಿ ಇದ್ದ ಬಗ್ಗೆ ಸೂಚನೆ ಆಗುತ್ತದೆ. ಆದರೆ ಈ ಶಾಸನ ಹಾಗೂ ಬಂಡೆಯ ತಳಮುಖದ ಮುಚ್ಚಿಹೋಗಿರುವ ಶಾಸನ ಬೇರೆ ಬೇರೆಯೆ ಆಗಿವೆ.

ಕ್ರಿ.ಶ.೧೫೩೨ರ ಹುಲ್ಲುಕೆರೆ ಗುಂನೂರು ಗ್ರಾಮದ ಶಾಸನವು, ವಿಜಯನಗರದ ಅಚ್ಯುತ ರಾಯನ ಕಾಲದಲ್ಲಿ ಚಾವಪ್ಪರಾಯ ಎಂಬ ಪ್ರಮುಖನು (ಪ್ರತಿನಿಧಿ) ರೇವಣಸಿದ್ಧರ ತೇರನ್ನು ನಿರ್ಮಿಸಿದುದರ ಬಗ್ಗೆ ಸುಳುಹು ನೀಡುತ್ತದೆ.[113] ಈ ಮೇಲಿನ ಅಂಶಗಳು ಈ ಪ್ರದೇಶದ ಅರಸರು, ಹಾಗೂ ನಾಯಕರು, ಪರಂಪರೆಯಲ್ಲಿ ವೀರಶೈವವನ್ನು ಅಪ್ಪಿದವರಾಗಿ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಉತ್ಥಾನಗಳನ್ನು ಮಾಡಿದ ಬಗ್ಗೆ ಸೂಚಿಸುತ್ತವೆ. ಈ ಅರಸರ ಸಾಂಸ್ಕೃತಿಕ ಕೈಂಕರ್ಯದ ಉದಾಹರಣೆಗಳಾಗಿ, ರೇವಣಸಿದ್ಧೇಶ್ವರ ಬೆಟ್ಟದ ಸುತ್ತ ಪಂಚ ವೀರಭದ್ರ ಕ್ಷೇತ್ರಗಳಾಗಿ ಕೋಟಳ್ಳಿ, ನೆಲಮಲೆ, ಅಚ್ಚಲು, ಶಿವನಹಳ್ಳಿ, ತೆಂಗಿನಕಲ್ಲು ಗ್ರಾಮಗಳಿರುವುದು ಎದ್ದುಕಾಣುತ್ತದೆ.[114]

ಐಗೂರು ಅರಸರು

ಹಾಸನ ಜಿಲ್ಲೆಯ ಐಗೂರು ನಾಯಕರು ಚಂಗಾಳ (ಚಂಗಾಳ್ವ) ನಾಯಕನೆನಿಸಿದ ಚೆನ್ನಪ್ಪನಾಯಕರ ವಂಶಿಕರೆನ್ನುವುದುಂಟು. ಆದರೆ ವಿಜಯನಗರ ಕಾಲದಲ್ಲಿ ಐಗೂರು ಪಾಳೇಗಾರರ ಪೂರ್ವವಂಶಿಕನಾದ ಲಿಂಗಪ್ಪನಾಯಕನಿಗೆ ಕ್ರಿ.ಶ.೧೩೯೭ರಲ್ಲಿ ವಿಜಯನಗರದರಸ ಇಮ್ಮಡಿ ಹರಿಹರನು ಎಂಭತ್ತು ಸಾವಿರ ರೂ ಹುಟ್ಟುವಳಿ ಇದ್ದ ಮಂಜರಾಬಾದ್(ಬಲಂ)ಪ್ರದೇಶವನ್ನು ಅವನು ಸಲ್ಲಿಸಿದ ಸೇವೆಗಾಗಿ ಜಹಗೀರಾಗಿ ನೀಡಿದ ನೆನ್ನಲಾಗಿದೆ.[115] ಈ ಕಾರಣದಿಂದ ಇವರಿಗೆ ಬಲಂ ನಾಯಕರು ಎಂಬ ಹೆಸರೂ ಬಂದಿತು.

112. ಡಾ। ಎಂ ಎಂ. ಕಲಬುರ್ಗಿ: ಶಾಸನಗಳಲ್ಲಿ ಶಿವಶರಣರು, ಅದೇ, ಪು. ೫೧
113. ಎಂ. ಜಿ. ನಾಗರಾಜ್ : 'ರಾಮನಗರ ತಾಲೂಕಿನ ಕೆಲವು ಪುರಾತನ ನೆಲೆಗಳು, ಪವಿತ್ರ ಕ್ಷೇತ್ರಗಳು' ಭಾರತೀಯ ಸಂಸ್ಕೃತಿ ವಿದ್ಯಾಪೀಠ (ಸಂಸ್ಮರಣ ಸಂಚಿಕೆ), ರಾಮನಗರ, ೧೯೭೯.
114. ಚಂದ್ರಶೇಖರಯ್ಯ: ಶ್ರೀ ರೇವಣಸಿದ್ಧೇಶ್ವರ ಕ್ಷೇತ್ರ ದರ್ಶನ, ರಾಮನಗರಂ, ೧೯೯೧, ಪು.೭
115. Lowin B. Bowring: Eastern Experience, Mysore Historical and Descriptive II Edn. 1872.

ಬಹುಶಃ ವೀರಶೈವ ಚಂಗಾಳ್ವ ವಂಶಿಕರಾಗಿದ್ದು, ಕಾಲಾಂತರದಲ್ಲಿ ಬೇಲೂರು ನಾಯಕರೆನಿಸಿ ಯರ ಕೃಷ್ಣಪ್ಪನಾಯಕನ ವಂಶದವರೆನಿಸಿ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಈ ವಂಶದ ಕೆಲ ಅರಸರು, ವೈಷ್ಣವಧರ್ಮವನ್ನು ಅನುಸರಿಸಿದಂತೆ ತೋರುತ್ತದೆ. ಆಗ ಬೇಲೂರು ಸೀಮೆಯ ನಾಯಕತನ ಪಡೆದರೆಂದೂ ಹೇಳಲಾಗಿದೆ.[116] ಆದರೆ ಇವರು ಲಿಂಗಪ್ಪನಾಯಕನ ವಂಶಿಕರೋ ಅಥವಾ ಅವನಿಂದ ಬೇರೆಯಾದ ಯರಕೃಷ್ಣಪ್ಪ ನಾಯಕನಿಗೆ ಸಂಬಂಧಿಸಿದವರೋ ಎಂಬುದು ಸ್ಪಷ್ಟವಿಲ್ಲ. ಒಟ್ಟಾರೆ ಎರಡು ವಿಭಾಗಗಳಿಂದರೂ ಮೂಲ ಚೆಲಗಾಳ್ವವಂಶವೆಂದು ತೋರುತ್ತದೆ. ಇದಕ್ಕೆ ಪೂರಕ ಸಂಗತಿಗಳೂ ಇವೆ.

ಹಾಸನಜಿಲ್ಲೆ ಬೇಲೂರು ತಾಲೂಕು ಪುಷ್ಪಗಿರಿ ಸಂಸ್ಥಾನದ ಮಲ್ಲಾಪುರ ಮಠದ ಗುರುಗಳಾಗಿ ಬಂದವರು ಚಂಗಾಳ್ವರಾಜ ನಂಜುಂಡ ಅರಸುವಿನ ರಾಜಸಂಬಂಧಿಗಳು. ಇವರು ಜಂಗಮಸ್ಥಲದಲ್ಲಿ ನಿಂತು ಈ ಮಠದ ಗುರುಗಳಾದರು.[117] ಬಾಳೆಹೊನ್ನೂರು ಶಾಖೆಯ ಈ ಮಠಕ್ಕೆ ಬೇಲೂರು ವೆಂಕಟಾದ್ರಿ ನಾಯಕನು ದಾನ ದತ್ತಿಗಳನ್ನು ನೀಡಿರುವುದು, ಮಠದ ತೋಟದಲ್ಲಿರುವ ಶಾಸನದಿಂದ ತಿಳಿಯುತ್ತದೆ. ಹಾಲೇರಿ ಅರಸ ಚಿಕ್ಕವೀರಪ್ಪನು ಕಾಶ್ಯಪಗೋತ್ರ ಎಂದು ತಾನು ಶೃಂಗೇರಿ ಮಠಕ್ಕೆ ಕೊಟ್ಟ ದಾನ ಶಾಸನದಲ್ಲಿ ಹೇಳಿಕೊಂಡಿರುವಂತೆ, ಅದಕ್ಕೆ ಮುನ್ನವೆ ಕ್ರಿ.ಶ. ೧೯೩೩ರ ಕಟ್ಟೆಪುರ ಶಾಸನದಲ್ಲಿ ವೆಂಕಟಾದ್ರಿ ನಾಯಕನ ಮಗ ನಾಲ್ಕನೆಯ ಕೃಷ್ಣಪ್ಪನಾಯಕನು ಕಾಶ್ಯಪ ಗೋತ್ರವೆಂದು ಹೇಳಿಕೊಂಡಿದ್ದಾನೆ.[118] ಕ್ರಿ.ಶ೧೬೦೮-೧೬೩೩ರ ಸುಮಾರಿನ ಹಾಲೇರಿ ಅರಸ ಅಪ್ಪಾಜಿರಾಜೇಂದ್ರನನ್ನು ಕೆಳದಿಯ ಶಿವಪ್ಪನಾಯಕನು ಯುದ್ಧವೊಂದರಲ್ಲಿ ಕೈಸೆರೆ ಹಿಡಿದಾಗ, ಅಪ್ಪಾಜಿರಾಜೇಂದ್ರನ ರಾಣಿ ಅರ್ಕಲಗೂಡಿನಲ್ಲಿ ಆಳುತ್ತಿದ್ದ ಬೇಲೂರಿನ ಕೃಷ್ಣಪ್ಪನಾಯಕ(ಮುಮ್ಮಡಿ ಕೃಷ್ಣಪ್ಪನಾಯಕ)ನ ಬಳಿ ಹೋಗಿ ತನ್ನ ಪತಿಯನ್ನು ಬಿಡಿಸಿಕೊಡಬೇಕೆಂದು ಮರೆ ಹೊಕ್ಕಳು. ಈಕೆ ಬಹುಶಃ ಬೇಲೂರು ನಾಯಕರ ವಂಶದ ರಾಜಕುಮಾರಿ ಆಗಿ ಮನೆತನದ ಸಂಬಂಧವನ್ನು ಹೀಗೆ ಬಳಸಿಕೊಂಡಳೆಂದು ತೋರುತ್ತದೆ. ಇದಲ್ಲದೆ ಕೆಳದಿ ಹಿರಿಯ ವೆಂಕಟಪ್ಪನಾಯಕನ ಮಗ ಭದ್ರಪ್ಪನಾಯಕನಿಗೆ ಬೇಲೂರು ಇಮ್ಮಡಿ ವೆಂಕಟಾದ್ರಿ ನಾಯಕನ ಮಗಳು ಬಂಗಾರಮ್ಮ ರಾಣಿ ಆಗಿದ್ದಳು.[119] ಅಂದರೆ ವೀರಶೈವ ಅರಸು' ಮನೆತನಗಳಾದ ಕೆಳದಿ, ಹಾಲೇರಿ ವಂಶದವರಲ್ಲಿ ಬೇಲೂರು ನಾಯಕರ ಮನೆತನದ ವೈವಾಹಿಕ ಸಂಬಂಧವಿದ್ದಿರಬೇಕು ಎನಿಸುತ್ತದೆ. ಈ ಸಂಗತಿಗಳು ಬೇಲೂರು ನಾಯಕರಲ್ಲಿ ಕೆಲವರು ವೀರಶೈವವನ್ನು ಅನುಸರಿಸಿಕೊಂಡು ಬಂದದ್ದುದರ ಸಾಕ್ಷಿ ಎನಿಸುತ್ತವೆ.

116. ಎ.ಕ. ಸಂಪುಟ೧ (ಹೊಸತು) ಕೊಡಗು ಜಿಲ್ಲೆ , ೧೯೭೨, ಪೀಠಿಕೆ, ಪು. ೩೪

117. ಈ ಅಂಶವನ್ನು ಹಾಲಿ ಮಠಾಧಿಪತಿ ಷ.ಬ್ರ. ದೊಡ್ಡ ಚನ್ನಮಲ್ಲಿಕಾರ್ಜುನ ಒಡೆಯರು (೧೫.೪.೧೯೮೭) ತಿಳಿಸಿದರು.

118. ಎ.ಕೆ. ಸಂಪುಟ೧ : ಅದೇ, ಕೊಡಗು ೨೮ (೧೧) ಕಟ್ಟೆಪುರ

119. ಕೆಳದಿ ಗುಂಡಾಜೊಯಿಸ್ : ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ, ಅದೇ, ಪು. ೨೯

ಇನ್ನೊಂದು ಉದಾಹರಣೆ ಎಂದರೆ ಮಡಿಕೇರಿಯಲ್ಲಿ ಸಿಂಹಾಸನದ ಹಕ್ಕಿಗಾಗಿ ಹೊರಮಲೆಯ ಹಾಲೇರಿ ವಂಶಿಕರಲ್ಲಿ ದೇವಪ್ಪರಾಜ ಸ್ಪರ್ಧೆ ಮಾಡಿ ಕುಳಿತಾಗ, ಒಂದನೆ ಲಿಂಗರಾಜ ಒಡೆಯನು ತನ್ನ ಹಾಗೂ ಅಣ್ಣನ ಮಕ್ಕಳೊಡನೆ ಐಗೂರು ವಂಶ(ಬೇಲೂರು)ದರಸರಲ್ಲಿ ಹೋದ. ಈ ಲಿಂಗರಾಜನ ಸೋದರಿ ಸ್ಫುರದ್ರೂಪಿ ದೇವಮ್ಮಾಜಿಯನ್ನು ಐಗೂರು ಅರಸು ವಂಶದ ಬಸಪ್ಪನಿಗೆ ಮದುವೆಮಾಡಿ ಕೊಡಲಾಗಿತ್ತು. ದಾಯಾದಿ ಸಂಬಂಧದ ವೈರವೋ, ಇನ್ನೇನು ಕಾರಣವೋ ಐಗೂರು ಅರಸುವಂಶದ ಶೀಲೇಗೌಡನನ್ನು ವೆಂಕಟಾದ್ರಿನಾಯಕ ಕೊಲ್ಲಿಸಿದನ್ನೆಲಾಗಿದೆ. ಕೊನೆಗೆ ಈ ವಂಶದಲ್ಲಿ ಉಳಿದಿದ್ದ ಮಗು ಐಗೂರಪ್ಪನನ್ನು ವೆಂಕಾಟದ್ರಿನಾಯಕನೇ ತನ್ನ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ಮತ್ತೆ ಐಗೂರು ಆಳ್ವಿಕೆಗೆ ಹಕ್ಕುದಾರನನ್ನಾಗಿ ಮಾಡಿದನಂತೆ.

ಐಗೂರಪ್ಪನ ವಂಶಿಕರಾಗಿ ಶೀಲೇಗೌಡ, ಬಲವಂತಗೌಡ (ಹಾಡ್ಯಗ್ರಾಮ) ಶೀಲೇಗೌಡ, ಮಲ್ಲೇಗೌಡರು ಮುಂದೆ ಆಳಿದರು. ೧೯ನೆಯ ಶತಮಾನದಲ್ಲಿ ಮೈಸೂರು ಅರಸರ ಅಂಕಿತಕ್ಕೆ ಹಾಸನ ಜಿಲ್ಲೆ ಬಂದಾಗ ಈ ವಂಶಿಕರು ನಾಡ ಪಟೇಲರಾಗಿ, ಸಾಂಸ್ಕೃತಿಕ ಆಚರಣೆಗಳ ಮುಖ್ಯಸ್ಥರಾಗಿ ಬದುಕುಸಾಗಿಸಿದರು. ಇವರ ವಂಶಿಕರು ಇಂದಿಗೂ ಐಗೂರಿನ ದೊಡ್ಡಮನೆಯಲ್ಲಿದ್ದಾರೆ.[120] ಇವರಲ್ಲಿ ಸುಗ್ಗಿಕಟ್ಟೆ ದೇವರ ಹಬ್ಬ ಬಹು ಪ್ರಸಿದ್ಧವಾಗಿದೆ.

ಈ ವಂಶಗಳಲ್ಲದೆ ಬಿಡಿಬಿಡಿಯಾಗಿ ಕೆಲವರನ್ನು ಗಮನಿಸುವುದು ಅಗತ್ಯವಿದೆ. ಕ್ರಿ.ಶ. ೯೫೦ರ ಕೃಷ್ಣೆಯ ಬಳಿಯ ವರೆಯೂರ ಪಟ್ಟಣದ ರಾಜ ನನ್ನಿಚೋಡದೇವನು 'ಕುಮಾರ ಸಂಭವ' ಎಂಬ ಕೃತಿರಚಿಸಿ ತನ್ನ ವಂಶದ ಗುರುಗಳಾದ ಶ್ರೀಶೈಲ ಪೀಠಾಧಿಪತಿಗಳಿಗೆ ಅರ್ಪಿಸಿ ತನ್ನ ಶಿವಧರ್ಮನಿಷ್ಠೆಯನ್ನುತೋರಿದ್ದಾನೆ. ಕೇದಾರಪೀಠಕ್ಕೆ ಉದಯಪುರ, ಗ್ವಾಲಿಯರ್, ಪಾಟಿಯಾಲ, ನೇಪಾಳ ಮುಂತಾದ ದೊರೆಮನೆತನದವರು ಶಿಷ್ಯರಾಗಿ ಕಾಣಿಕೆ ಅರ್ಪಿಸುತ್ತಾರೆ. ಆ ವಂಶಗಳಲ್ಲಿ ಶಿವಧರ್ಮದೊಲವು ಪಡೆದವರಿದ್ದ ಬಗ್ಗೆ ಶೋಧನೆ ಆಗಬೇಕಿದೆ. ಕಾಶಿಯ ರಾಜ ಜಯನಂದದೇವ ಕಾಶಿಪೀಠದ ಶಿಷ್ಯನಾಗಿದ್ದ. ಅರುಣಾಚಲದ ಸಿಂಧುಬಲ್ಲಾಳ ಲಿಂಗದೀಕ್ಷಿತನಾಗಿದ್ದಬಗ್ಗೆ ಪುಲ್ಲಕವಿಯ ಪಂಡಿತಾರಾಧ್ಯ ಚರಿತ್ರೆಯು ತಿಳಿಸುತ್ತದೆ. ಆ ರಾಜನ ಸೋದರಿ ಅಕ್ಕಾಜಮ್ಮನ ಪ್ರಾರ್ಥನೆಯಂತೆ ಗುರುಮಠವನ್ನು ಕಟ್ಟಿಸಲಾಯಿತು. ಹೊಯ್ಸಳರಲ್ಲಿ ಕೆರೆಯ ಪದ್ಮರಸ, ಗೌರಪದಣಾಯಕರು ವೀರಶೈವ ಮಂತ್ರಿಗಳಾಗಿದ್ದ ಸಂಗತಿ ವೀರಶೈವ ಕಾವ್ಯಗಳಿಂದಲೂ ತಿಳಿಯುತ್ತದೆ. 'ಸೌಂದರವಿಲಾಸ' ಕಾವ್ಯ ಬರೆದ ಅಣ್ಣಾಜಿ, ನುಗ್ಗಿಹಳ್ಳಿಯ ಲಿಂಗಮಂತ್ರಿ, ಕಾಕೊಳಲಧಿಪ ರಾಮೇಂದ್ರ, ಶಾಂತನೃಪ, ಬಾಗುಳಿಯ ಸೋಮಶೇಖರ ಭೂಪ, ಬಹುಶಃ ಹಸ್ತಾಯುರ್ವೇದದ ಕನ್ನಡ ಟೀಕಾಕಾರ ವೀರಭದ್ರರಾಜ, ಉತ್ತೊಳಲೀಶ್ವರ ಅಮೃತನೃಪ, ನಂಜನಾಥ ಭೂಪಾಲ,

---

120. ವಂಶಿಕರಾದ ಶ್ರೀ ಐ. ಎಮ್. ಚನ್ನಬಸಪ್ಪ ಹಾಗೂ ಶ್ರೀ ಐ.ಎಮ್. ದೇವರಾಜ್ ಅವರು ಈ ಸಂಗತಿಗಳನ್ನು ತಿಳಿಸಿದರು.

ಕೆಳದಿಯ ನಿರ್ವಾಣ ಮಂತ್ರಿ, ತರಿಮೇಲ ಪುರಾಧಿಪತಿ ಚೆನ್ನರಾಜ ಮುಂತಾದವರು ವೀರಶೈವ ರಾಜಸಂಬಂಧಿಗಳಾಗಿಯೋ ಮಂತ್ರಿಗಳಾಗಿಯೋ ಇದ್ದ ಬಗ್ಗೆ ವೀರಶೈವ ಕೃತಿಗಳಿಂದ ಸೂಚನೆ ದೊರೆಯುತ್ತದೆ. ಕೊಳ್ಳೆಗಾಲದ ಬಳಿ ಶಂಭುಲಿಂಗನ ಬೆಟ್ಟದ ಪ್ರದೇಶದಲ್ಲಿ ನಿಜಗುಣ ಶಿವಯೋಗಿಗಳು ಅರಸಾಗಿ ಆಳಿದವರಾಗಿದ್ದಾರೆ. ಅವರಿಗೆ ವಿರಕ್ತಿಯೊದಗಿದಾಗ ಶಂಭುಲಿಂಗ ಶಿವಾಚಾರ್ಯರಲ್ಲಿ ಶಿಷ್ಯತ್ವ ಪಡೆದು ೧೨ ವರ್ಷಕಾಲ ತಪೋಮಗ್ನರಾಗಿದ್ದರು. ಅವರು ೧೬ನೇ ಶತಮಾನದ ಪ್ರಸಿದ್ಧ ವಾಗ್ಗೇಯಕಾರರೆನಿಸಿದರು. ಅವರ ಅನುಭಾವದ ರಸಘಟ್ಟಿಯಾಗಿ, ಹಾಡಿನ ಸಂಕಲನವಾಗಿ 'ಕೈವಲ್ಯ ಪದ್ಧತಿ' ಯು ಮೂಡಿ ಬಂದಿತು. ಶ್ರೀ ಸಾಮಾನ್ಯರಿಗೂ ಅನುಭಾವವನ್ನು ದಾಸೋಹಕ್ಕೆಳಸಿ, ಇವರು ಸರಳತೆಯನ್ನು ತುಂಬಿತೋರಿದ ಜನೈಕ ದೃಷ್ಟಿಯುಳ್ಳವರಾಗಿದ್ದರು.

ವಿಜಾಪುರಜಿಲ್ಲೆಯ ನಿಂಬರಗಿಯ ಮಹಾರಾಜರಾದ ನಾರಾಯಣ ಅವರು ವೀರಶೈವ ದೀಕ್ಷೆ ಪಡೆದು 'ಗುರುಲಿಂಗ ಜಂಗಮ ಮಹಾರಾಜ' ಎನಿಸಿದರು. ಜನಪ್ರಿಯ ಅರಸಾಗಿದ್ದ ಇವರು ವಚನಗಳನ್ನು ಬರೆದರು.

ಬಂಗಾಳವನ್ನಾಳಿದ ಕರ್ನಾಟಕದ ಸೇನವಂಶದ ವಿಜಯಸೇನ ಹಾಗೂ ಬಲ್ಲಾಳಸೇನರು ಶಿವಧರ್ಮವನ್ನವಲಂಬಿಸಿದರು. 'ಪರಮ ಮಹೇಶ್ವರ' ಎನಿಸಿದ ಅವರು ಬಹುಶಃ ವೀರಶೈವದೊಲವನ್ನು ಪಡೆದ್ದಿರಬಹುದೆ ? ಎನಿಸುತ್ತದೆ. ಇನ್ನು ಕರ್ನಾಟಕದ ಗಡಿಗಳಲ್ಲಿ ಬೇರಿಕೆ, ಸೂಳಗೆರೆ, ನೆಲ್ಯಾಳಂ ಮುಂತಾದ ಕಡೆ ವೀರಶೈವ ರಾಜಮನೆತನಗಳಿದ್ದ ಬಗ್ಗೆ ಶಿವಮೂರ್ತಿಶಾಸ್ತ್ರಿಗಳು ತಿಳಿಸಿದ್ದಾರೆ. ಈ ಬಗ್ಗೆ ಶೋಧಗಳು ನಡೆಯಬೇಕಿದೆ.

ಒಟ್ಟಾರೆ ನುಡಿ

ಈವರೆಗೆ ಇಲ್ಲಿ ದಾಖಲಿಸಿರುವ ವೀರಶೈವ ಅರಸು ಮನೆತನಗಳ ಸಂಗತಿಗಳು ಪೂರ್ಣ ವಿವರದವೆನ್ನುವಂತಿಲ್ಲ. ಅದು ಲೇಖನದ ಉದ್ದೇಶವೂ ಅಲ್ಲ. ಇಲ್ಲಿ ೧. ಪರಂಪರಾಗತ ಪದರುಗಳು ಎಂಬ ವಿಭಾಗದಲ್ಲಿ ಹೇಳಿರುವ ದೊರೆಗಳು ಅಥವಾ ದೊರೆ ಮನೆತನಗಳು ಪೌರಾಣಿಕ ಆರೋಪವನ್ನು ಹೊತ್ತಂಥವರು. ಅವರು ಇತಿಹಾಸದಲ್ಲಿ ಇದ್ದರೆನ್ನುವುದು ಸಾಂಪ್ರದಾಯಿಕ ನೇಯ್ಗೆಯೊಡನೆ ಸೇರಿರುವಂತಹುದು. ಅವರ ವಿಷಯದಲ್ಲಿ ಇತಿಹಾಸದ ಎಳೆಗಳನ್ನು ತೀರ ನಿಖರವಾಗಿ ಕಾಣುವುದು ಕಷ್ಟ. ಆದರೆ ಅವರ ಅಸ್ತಿತ್ವ ನಗಣ್ಯವೆನ್ನಲು ಬಾರದ ಶ್ರದ್ಧೆಯ ಮೇಲೆ ಹೆಚ್ಚು ಅವಲಂಬಿತ ಎನ್ನಬಹುದು. ೨. ಮಧ್ಯಮ ಪದರುಗಳುಲ್ಲಿ ವಿಭಾಗಗೊಂಡಿರುವ ದೊರೆಮನೆತನದವರು ಇತಿಹಾಸಕ್ಕೆ ಸಮೀಪವಾದವರು. ಆ ಅರಸುಗಳು ವೀರಶೈವರಲ್ಲವೇ ಅಲ್ಲ ಅನ್ನುವ ಹಾಗಿಲ್ಲ; ಅನ್ನದೆ ಇರುವಂತಿಲ್ಲ. ಹೌದು ಎನ್ನಲು ಇರುವ ಪುರಾವೆಗಳಿಗೆ ತುಸು ತುಂಬಿಸಬೇಕಾದ ಅಗತ್ಯವಿದೆ. ೩. ಇತಿಹಾಸದ ಪದರುಗಳು ಎಂಬ ವಿಭಾಗದಲ್ಲಿ ಸ್ಪಷ್ಟವಾಗಿ ವೀರಶೈವ ಸಂಬಂಧಗಳನ್ನು ಹೊಂದಿರುವ ಶಾಸನೋಕ್ತವಾಗಿಯೂ

ದಾಖಲಿತರಾದ ವೀರಶೈವ ಅರಸರ - ಅರಸು ಮನೆತನಗಳ ಸಂಗತಿಗಳಿವೆ.

ಇತಿಹಾಸ, ನಡೆದ ಘಟನೆಗಳ ಕೇವಲ ದಂತಗೋಪುರದ ನಿರೂಪಣೆ ಅಥವಾ ಕೇವಲ ವ್ಯಾಖ್ಯಾನ ಅಲ್ಲ. ಜನ ಸಂಸ್ಕೃತಿಯ ಬೆಳಸು ಕಂಡು ಬೆಳೆಯುವಂತಹುದು. ಜನರಿದ್ದರೆ ಅರಸರು. ಅರಸರು ಆಳ್ವಿಕೆ ನೀಡಿದರೆ, ಜನರು ಬದುಕು ನೀಡುತ್ತಾರೆ. ಇವೆಲ್ಲದರ ಪರಿಣಾಮೀ ನೆಲೆಗಳನ್ನು ಗರ್ಭೀಕರಿಸಿಕೊಂಡಿರುವ ಇತಿಹಾಸ ಇದ್ದದ್ದನ್ನೆ, ನಡೆದಷ್ಟನ್ನೆ ಬರಿ ಹೇಳಿ ಬಿಟ್ಟುಬಿಡುತ್ತದೆ ಎನ್ನುವಂತಿಲ್ಲ. ಅದೊಂದು ನಡೆದ ಘಟನೆಗಳ ಕೇವಲ ಸಂಗ್ರಹದ ದಾಖಲಾತಿ ಅಲ್ಲ; ಮೌನ ಪ್ರೇಕ್ಷಕನ ಬರಿನೋಟ ಅಲ್ಲ. ಜನ ಬದುಕಿನ ಮೇಲೆ ಅವು ಮಾಡಿದ, ಮಾಡುತ್ತಿರುವ, ಮಾಡುವ ಪರಿಣಾಮಗಳನ್ನು ಸಮಾಜದ ಮುಂದೆಯೆ ಚಿತ್ರಿಸುತ್ತದೆ. ಅದರ ಹುಡುಕಾಟ ಎಂದರೆ ಕಾಣುವ ಕಣ್ಣಿಟ್ಟು ಕೊಂಡು ಘಟನೆಗಳು ನಡೆದ ನೆಲೆಯಲ್ಲಿ ಲಭ್ಯವಿರುವಷ್ಟು ಶ್ರುತ, ಬರೆಹ, ಸಂದರ್ಶನ, ಸಾಂಕೇತಿಕ ಆಚರಣೆಗಳ ಹಾಗೂ ಜನಪದ ಐತಿಹ್ಯಗಳ ದಾಖಲೆಗಳನ್ನು ತೌಲನಿಕವಾಗಿ ಪಡೆದುಕೊಂಡು ಅನ್ವೀಕ್ಷಣ ಮಾಡಿ ಹಾಗು ದಾಖಲಿಸುವುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಬರಹ ಎಲ್ಲ ಪದರುಗಳಲ್ಲಿ ಪೂರ್ಣ ಅನ್ವೀಕ್ಷಣ ಮಾಡಿದೆ ಎನ್ನುವಂತಿಲ್ಲ. ಆದರೆ ಆ ಹಾದಿಯಲ್ಲಿನ ತೋರುಗಲ್ಲು ಎನ್ನಬಹುದು. ಕೆಲವಡೆ ಸಂದಿಗ್ಧಗಳು ತೋರಿಬರುವಲ್ಲಿ ಹೆಚ್ಚು ವಿವೇಚನೆ ಮಾಡಲಾಗಿದೆ. ಮೂಲ ಆಕರಗಳ ಬಗ್ಗೆ ಇತರ ಲೇಖಕರ ಅಭಿಪ್ರಾಯವನ್ನೂ ಗಮನಿಸಿದಾಗ ಅವರ ಆಸಕ್ತಿಯ ಬೇರೊಂದು ಮುಗ್ಗುಲೂ ಕಾಣಿಸಬಹುದು. ಆದರೆ ಯಾವುದೇ ಸಿದ್ಧಾಂತವೆಂದರೂ ಅದೇ ಅಂತಿಮ ತೀರ್ಮಾನ ಎನ್ನುವುದಾಗದು. ನಿರ್ಣೀತ ವಿಷಯ ಎನ್ನುವುದೇ ಸಂಶೋಧನೆಗೆ ಹೊರಗಾಗುತ್ತದೆ. ತೆರೆದಿಡುವಿಕೆ ಸಂಶೋಧನೆಯ ಪರಿಕ್ರಮ. ಯಾವುದೇ ಸಂಶೋಧನೆಯಲ್ಲಿ ಹೊರಬಂದ ಸಂಗತಿಯೂ ಲಭ್ಯ ದಾಖಲೆಗಳಿಂದ ಸದ್ಯಕ್ಕೆ ತಳೆದ ತೀರ್ಮಾನ ಅಥವಾ ಅಭಿಪ್ರಾಯ ಎನ್ನುವುದು ಸೂಕ್ತ. ಪ್ರಯೋಗ ಪ್ರಾತ್ಯಕ್ಷಿಕೆಗಳ ಸಂದರ್ಭವಿಲ್ಲದ ಶಿಸ್ತುಗಳ ವಿಷಯದಲ್ಲಿಯಂತೂ ಇದು ಹೆಚ್ಚು ಅನ್ವಯಿಕ. ಈ ದೃಷ್ಟಿಯಿಂದ ಇನ್ನೊಬ್ಬರ ಬರಹದಲ್ಲಿ, ಹೊಸ ಶೋಧದ ಹೆಸರಿನಲ್ಲಿ ತಪ್ಪು ಹುಡುಕುವ ಕಸುಬಿಗಿಳಿಯದೆ ಮುಕ್ತ ಮನಸ್ಸಿನಿಂದ ಆ ಮುಖಗಳ ದರ್ಶನ ಮಾಡಬೇಕು. ನಮಗೆ ತೋರಿದ ವೈರುಧ್ಯ ಇನ್ನೊಬ್ಬರ ದೃಷ್ಟಿಯಲ್ಲಿ ಸಾನ್ನಿಧ್ಯವಾಗುವ ಸಾಧ್ಯತೆ ಇದೆ. ಇದನ್ನರಿತರೆ ನ್ಯೂಟನ್ನಿನ ಸಿದ್ಧಾಂತವನ್ನು ಐನ್‌ಸ್ಟೈನ್, ನಂತರ ಅವನನ್ನು ನಾರ್ಲೀಕರ್ ಪ್ರಶ್ನಿಸಿದ ಬಗೆ ಅರಿವಿಗೆ ಬರುತ್ತದೆ. ನದಿಯ ಪಥ ಪಾತ್ರ ಬದಲಿಸಿ ಹರಿಯುತ್ತಿರುವಲ್ಲಿ ಪ್ರಾಚೀನ ಪಥ ಅವಶೇಷವೆನಿಸಿದರೂ ಅದೂ ಕೂಡ ಇತಿಹಾಸದ ಪದರುಗಳನ್ನು ಬಿಚ್ಚಬಲ್ಲುದು. ಅದರ ಅರಿವು ಹೊಸಶೋಧದಲ್ಲಿ ಮರೆವಿನ ಜಾಗವನ್ನು ತುಂಬಬಲ್ಲುದು. ಅಂತಾಗಿ ಹಳೆಯ ತಪ್ಪು ಮುಂದುವರಿದರೂ ಹೊಸ ಶೋಧದಲ್ಲಿ ಆ ಮುಖದ ಪರಿಚಯವೂ ಇರಬೇಕು. ಹೊಸ ಶೋಧದ ಅಭಿಪ್ರಾಯವೂ (ತೀರ್ಮಾನ!) ವಸ್ತುನಿಷ್ಠತೆಗೆ ಸೇರಿಕೊಂಡು ಬರುವ ಒಂದು ಪದರವೆ. ಇತಿಹಾಸಕಾರನು ಸ್ಥಳೀಯ

ವಾಸ್ತವಗಳನ್ನು ತನ್ನ ತೆಕ್ಕೆಯಲ್ಲಿರಿಸಿಕೊಂಡಾಗ ಹಳೆಯ ಗುಂಗಿನ ಬರೆಹಗಳಿಂದ ಹೊರಬಂದು ಸಮಷ್ಟಿಸಮ್ಮುಖಿ ವಿದೂರತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಈ ವಿದೂರತೆಯು ಕೇವಲ ವ್ಯಷ್ಟಿಯ ಮಾನಸಿಕ ದೂರ ಎನಿಸದು; ಸಮಷ್ಟಿಗೆ ತೆರೆದುಕೊಂಡು ಪರಿಭಾವಿಸುವ, ನಿಶೆಯಾಗದ ನಿರಂಜನ ನಿಲುವು ಅದು; ಬಯಲ ಬೆಳಕು ಅದು. ಸುತ್ತಲ ಗಾಳಿಯ ನಡುವೆಯೂ ಆರದಿರುವ ಬಯಲ ಬೆಳಕು ಅದು. ಅದು ಆಳಿದ ದೊರೆಗಳ ಇತಿಹಾಸದಿಂದ ಚಿಮ್ಮಿದ ಕೇವಲ ಬೆಳಕಾಗದು. ಜೊತೆ ಜೊತೆಗೆ ಸಮುದಾಯದ ಸಮಕಾಲೀನ ಇತಿಹಾಸದೊಡನೆ ಚಿಮ್ಮಿದ ನಿಜ ಇತಿಹಾಸದ ಬೆಳಕಾಗಿ ಬಂದಾಗಲೇ, ಬಿತ್ತಿದ ಬೆಳಕಿನಿಂದ ಮೂಡಿದ ಮಿಂಚಿನ ಚಿಲುಮೆಗಳಾಗಿ ಕಂಡು ಬರುವಂತಹುದು.

ಹೀಗೆ ಬಯಲ ಭಾವದಿಂದ ನೋಡುವುದೇ ಮುಕ್ತನಡೆಯ ಬೆಡಗಾಗುತ್ತದೆ. ಅದೊಂದು ರೀತಿ ವೃಕ್ಷದ ಬದುಕಿನ ಪಾತ್ರವೂ ಹೌದು. ಮಣ್ಣಿನ ಸಾರ, ನೀರಿನಾಂಶ-ಇವುಗಳನ್ನು ಸೆಳೆದು ಒಳಗಿನಿಂದ ಅದು ಬದುಕುತ್ತ ಬರುತ್ತದೆ. ಅದು ನೆಲದೊಳಗಣ ಅಥವಾ ಇಳೆಯೊಳಗಣ ಕೂಡಲಬಾಳು. ನೆಲದ ಮೇಲೆ ಬಂದು ಬೆಳೆದು ಹೂ ಬಿಟ್ಟು, ಕಾಯಿ ಹಣ್ಣುಗಳನ್ನು ರೂಪಿಸುತ್ತದೆ. ಹಣ್ಣು ಕಳಿತಾಗ ಕೂಡಲಸಂಗಮ ದೇವ ತನಗೆ ಬೇಕೆಂದು ಎತ್ತಿಕೊಳ್ಳಲಾಶಿಸಿದಾಗ, ಮರ ಕಳಚಿಕೊಡುತ್ತದೆ. ಇದು ನೆಲದ ಮೇಲಣ ನಿರಂಜನ ನಿಲುವು ಅಥವಾ ಇಳೆಯೊಳಗಣ ಬಯಲ ನಿಲುವು. ಇತಿಹಾಸಕಾರನು ಸಮಾಜ ಗರ್ಭದಿಂದ ಬೆಳೆದು ಬಂದ ಘಟನೆಗಳನ್ನು ಸಮಷ್ಟಿರಕ್ತಿಯ ಬೆಡಗಿನಲ್ಲಿದ್ದೂ ಅದರ ಹೊರಗೆ ನಿಂತು ಪಕ್ವ ಸಮಷ್ಟಿ ಭಾವದಿಂದ ಹುಡುಕಾಟ ನಡೆಸಿದಾಗ ಚರಿತ್ರೆಯ ವೃಕ್ಷದ ಫಲಗಳು ಬಯಲ ಬೆಳಕಿನ ರಸಮಿಂಚುಗಳನ್ನು ತೋರಬಲ್ಲುವು. ಇದು ವ್ಯಕ್ತಿಯ ಜೀವಧ್ವನಿಯನ್ನು ಸಮಾಜದ ಜೀವನಧ್ವನಿಯನ್ನಾಗಿಸಬಲ್ಲಂತಹುದು; ಇತಿಹಾಸದ ವ್ಯಕ್ತಿಯ ಕೇವಲ ಬೆಳಸು ಆಗದೆ ಇತಿಹಾಸದ ವ್ಯಕ್ತಿತ್ವದ ಬೆಳಸು ಆಗುವಂತಹುದು. ಈ ದೃಷ್ಟಿಯಿಂದ ವೀರಶೈವ ಅರಸು ವಂಶಗಳನ್ನು ಮತ್ತೂ ಶೋಧಗಳಿಗೆ ಒಡ್ಡಬೇಕು ಎನಿಸುತ್ತದೆ.

ಈ ಅರಸರು ಅನುಸರಿದ ಶೈವ ಹಾಗೂ ವೀರಶೈವದ ಗಡಿಗಳನ್ನು ಗುರುತಿಸುವಲ್ಲಿ ಗೊಂದಲವಾಗಬಹುದು. ಸಾಮಾನ್ಯವಾಗಿ ವೀರನಿಷ್ಠೆಯಿಂದ ಸರಳಗೊಳ್ಳುವ ನಡೆಗೆ ಹಾಯುವುದು ಕಾಲಾಂತರದ ಜಾಯಮಾನ. 'ವೀರಶೈವ' ಶಬ್ದ ಕೇಶಿರಾಜ, ಹಾಗು ಬಸವಾದಿ ಶಿವಶರಣರ - ವಚನಕಾರರ ಸೂಳ್ನುಡಿ, ವಚನಗಳಲ್ಲಿ ಬಳಕೆಯಾಗಿ ಅಂತರ್ಗತಗೊಂಡ, ಆಗಮೋಕ್ತ ಶಬ್ದ. ಕೇಶಿರಾಜನಲ್ಲಿ ಲಿಂಗವಂತ, ಲಿಂಗಾಯಿತ ವಂತ, ವೀರಶೈವ ಎಂಬ ಶಬ್ದಳಿರುವಲ್ಲಿ 'ವೀರಶೈವ' ಶಬ್ದ ಮಾತ್ರ ಪ್ರಕ್ಷಿಪ್ತ ಎಂದರೆ ಈ ಎಲ್ಲರೂ ಪ್ರಕ್ಷಿಪ್ತರೆನಿಸಿಬಿಡುತ್ತಾರೆ. ಅದಲ್ಲ ಮಾತು. ವೀರಶೈವ ಕಡು ನಿಷ್ಠೆಯದು. ಬೌದ್ಧದಲ್ಲಿ ಜೈನದಲ್ಲಿ, ನಿಷ್ಠೆಯ ರೂಪ ಕವಲಾದಾಗ ಮೊದಲಿನದರ ಬಗೆಗಿದ್ದ ತೀವ್ರತೆ ಕಡಿಮೆಯಾಯಿತು. ಹಾಗೆಯೆ ಆದಿಯಲ್ಲಿ ವೀರಶೈವವಿದ್ದು ಅದರ ಅನುಗತ ಶಾಖೆಗಳಾಗಿ ಶೈವಗಳೂ ಮೂಡಿ

ಬಂದಿರುವುದು ಇಂಥಹ ಜಾಯಮಾನದ್ದೆ ಎನ್ನಬೇಕು. ಹಾಗಾಗಿ ಅರಸರಲ್ಲಿಯೂ ವೀರಶೈವನಿಷ್ಠೆ ತೆಳುವಾದಾಗಲೋ ಪಾಲಿಸದಿದ್ದಾಗಲೋ, ಶೈವ, ವೈಷ್ಣವ ಅಥವಾ ಬೇರೆಯೆ ಧರ್ಮೀಯ ನಿಷ್ಠೆಗೆ ತತ್ಕಾಲೀನ ಪ್ರಭಾವದ ಕಾರಣ ಅವರ ಒಲವು ಸಾಗಿರುವುದು ಕಾಣುತ್ತದೆ. ಹೀಗಿದ್ದರೂ ವೀರಶೈವ ಮೊದಲಾಗಿ, ಶೈವ ನಂತರವಾಗಿ ಬೆಳೆದ ಶಾಖೆಗಳ ಹಾದಿಯಲ್ಲಿ ಅನುಶೈವ, ಲಕುಲೀಶ, ಮಾಹೇಶ್ವರ, ಪಾಶುಪತ, ಕಾಳಾಮುಖ, ಲಿಂಗಾಯಿತ, ಶಿವಾಚಾರ ಇತ್ಯಾದಿ ವಿಂಗಡನೆಗಳು ಇವೆ. ಪ್ರಾದೇಶಿಕ ಹಾಗೂ ವ್ಯಕ್ತಿ ಶಕ್ತಿಗಳ ಪ್ರಭಾವದಿಂದ ಆ ಸಮಕಾಲೀನ ಹೆಸರುಗಳನ್ನು ವೀರಶೈವಕ್ಕೆ ಪ್ರತಿನಾಮಧೇಯ ಮಾಡಿಕೊಂಡು ಅದರಂತೆ ಅನುಸರಿಸಿದ ಗುರುಗಳು, ಅರಸರೂ ಇದ್ದಂತೆ ತೋರುತ್ತದೆ. ಅಂದರೆ ವೀರಶೈವ ಶೈವಗಳಲ್ಲಿ ಭೇದಗಳನ್ನು ಮಾನಿಸದೆ ನಡೆದುಕೊಂಡ ಅರಸರೂ ಅಂತರಿಕ ವಲಸಿಗರಾಗಿ ಧರ್ಮಾಚರಣೆ ನಡೆಸಿದಂತೆ ಕಾಣಬರುತ್ತಾರೆ. ಅಲ್ಲದೆ ಒಂದು ಕಾಲಕ್ಕೆ ವೀರಶೈವ ಧರ್ಮವನ್ನು ಅಪ್ಪಿ, ಬಿಟ್ಟು ಮತ್ತೆ ಅಪ್ಪಿದ ಅರಸು ವಂಶೀಕರೂ ಇದ್ದಾರೆ. ಅಪ್ಪದೆ ಹಿಂದಿನ ವಂಶದ ಹೆಸರಷ್ಟು ಮಾತು ಹೇಳಿ ಬೇರೆಯೆ ಧರ್ಮಾನುಯಾಯಿಗಳಾದ ಅರಸರೂ ಇಲ್ಲಿದ್ದಾರೆ. ಸದ್ಯದ ಬರಹದಲ್ಲಿ ಮುಖ್ಯವಾಗಿ ವೀರಶೈವರಾದ ಅಥವಾ ವೀರಶೈವರಾಗಿದ್ದಾಗಿನ ಸಂದರ್ಭಗಳನ್ನು ಮುಂದಿಡಲಾಗಿದೆ.

ಈ ಮೇಲಿನ ವೀರಶೈವ ಅರಸುವಂಶಗಳು ತಮ್ಮ ಕಾಲದಲ್ಲಿ ವೀರಶೈವಕ್ಕೆ ಆರೋಪಿತವಾಗಿದ್ದ ಹೆಸರುಗಳಡಿಯಲ್ಲಿ ಧರ್ಮವನ್ನು ಪಾಲಿಸಿಕೊಂಡು ಬಂದಿರುವುದು ಕಾಣುತ್ತದೆ. ಧಾರ್ಮಿಕ ವಲಯದ ಏನೇ ಬದಲಾವಣೆಗೂ ಆ ವಲಯದ ಧರ್ಮಾಧಿಕಾರಿಗಳ ಅಧಿಕಾರಕ್ಕೆ ಅದನ್ನು ಬಿಟ್ಟು, ಆ ನಡೆಯನ್ನು ಮಾನಿಸಿದ್ದಾರೆ. ವೀರಶೈವ, ಶೈವ, ಪಾಶುಪತ, ಮಾಹೇಶ್ವರ, ವೀರಮಾಹೇಶ್ವರ, ಅಭಿನವ ಪಾಶುಪತ, ಶಿವಾಚಾರ, ಲಿಂಗವಂತ, ಲಿಂಗಾಯಿತವಂತ, ಇತ್ಯಾದಿ ಹೆಸರುಗಳ ಬಗ್ಗೆ ಅವರು ತಲೆಕೆಡಿಸಿಕೊಳ್ಳಲಿಲ್ಲ . ಅಂತರಂಗದ ನೆಮ್ಮದಿಗಂತೆಯೇ, ರಾಜಕೀಯ ಮಾರ್ಗದರ್ಶನ, ಸಮಾಜಹಿತ, ಶೈಕ್ಷಣಿಕ, ಸಾಂಸ್ಕೃತಿಕ ನೆರವಿನ ನೆಲೆಗಳಿಗಾಗಿ ಈ ವೀರಶೈವ ಧರ್ಮ ಹಾಗೂ ಮಠದ ಗುರುಗಳನ್ನು ಅನುಸರಿಸಿದರು, ಮಾನಿಸಿದರು. ವೈಯುಕ್ತಿಕವಾಗಿ ಈ ಧರ್ಮವನ್ನು ಪಾಲಿಸಿದವರು ಕುಟುಂಬ ಅಥವಾ ಮನೆತನಗಳ ಮೇಲೆ ಅದನ್ನು ಹೇರಲಿಲ್ಲ ಹಾಗು ತಾವು ಬೇರೆಯದಕ್ಕೆ ವಾಲಿದರೂ, ಈ ಧರ್ಮ ಅನುಸರಿಸಿದ ಪತ್ನಿ ಅಥವಾ ಕುಟುಂಬವರ್ಗದವರ ಅನುಸರಣೆಗೆ ಅಡ್ಡಿ ಬರಲಿಲ್ಲ. ಆಡಳಿತವಿತ್ತೆಂದು ಬಲವಂತ ಮತಾಂತರಕ್ಕೆ ಕೈಹಾಕಲಿಲ್ಲ. ವೀರಶೈವ ಸಾಹಿತ್ಯ, ಸಂಸ್ಕೃತಿ ಪೋಷಣೆಗಷ್ಟೇ ಸೀಮಿತವಾಗದೆ ಅನ್ಯಧರ್ಮ ಹಾಗೂ ಧರ್ಮೀಯರನ್ನು ಸಮಾನಗೌರವದಿಂದ ಕಂಡರು. ವೈಯಕ್ತಿಕ ಧರ್ಮ ಬೇರೆ; ರಾಜಧರ್ಮಬೇರೆ ಎಂಬುದು ಅವರ ನಿಲುವಾಗಿತ್ತು. ಆಡಳಿತದಲ್ಲಿ ದಕ್ಷತೆ ತೋರಿದರು. ಪ್ರಭಾವ ಶಾಲಿಗಳಾಗಿದ್ದರು. ಶಿಕ್ಷಣ, ವಾಸ್ತು, ಶಿಲ್ಪ ಜನಪದಕಲೆ ದೇಗುಲ ನಿರ್ಮಾಣ ಹಾಗೂ ಜನ ಸಂಸ್ಕೃತಿಯ ಇತರ ಆಗುಹೋಗುಗಳಲ್ಲಿ

ಮಿಂದರು. ಒಂದು ರೀತಿಯಲ್ಲಿ ವಿದೇಶಿ ಧರ್ಮದ ಮತಾಂತರಗಳ ಅವಸರಗಳಲ್ಲಿ ವೈದಿಕ ಧರ್ಮದಲ್ಲಿ ಮರುಮತಾಂತರದಿಂದ ಸ್ವೀಕರಣ ಸಾಧ್ಯವಿಲ್ಲದಿದ್ದಾಗ ಆಸಕ್ತರಿಗೆ ವೀರಶೈವಧರ್ಮದ ದೀಕ್ಷೆ ನೀಡಿಸಿ ಒಂದೂ ಧರ್ಮದ ಕಕ್ಷೆಗೆ ಕರೆದುತಂದುಕೊಡುವ ಸಾಂಸ್ಕೃತಿಕ ಅಗತ್ಯದ ಸಂದರ್ಭಗಳಿಗೆ ಅನುಗುಣವಾದ ಕಾಯಕವನ್ನು ಈ ಅರಸರೂ ಮಾಡಿದರು. ಒಂದು ರೀತಿ ಬಲವಂತ ಮತಾಂತರಕ್ಕೆ ಒಡ್ಡು ಹಾಕಿದರು ಎನ್ನಬೇಕು. ಈ ಎಲ್ಲ ಕಾರಣಗಳಿಂದಲೇ ಅವರಲ್ಲಿನ ಅನೇಕ ದೊರೆಗಳ ಇತಿಹಾಸದಲ್ಲಿ ಕೇವಲ ರಾಜರ ಇತಿಹಾಸವಿರದೆ ಜನಸಂಸ್ಕೃತಿಯ ಇತಿಹಾಸವೂ ಮೇಳೈಸಿತು, ಎನ್ನಬಹುದು. ಅವರಲ್ಲಿ ದೋಷಗಳಿರಲಿಲ್ಲವೆಂದಲ್ಲ; ಎಲ್ಲರೂ ಪುರುಷೋತ್ತಮರೇನಲ್ಲ. ಆದರೆ ಅದೆಲ್ಲ ಮಾನವ ಸಹಜ ಮಿತಿಗಳೆನ್ನಬೇಕು.

ಇತಿಹಾಸ ಕೇವಲ ರಾಜರದ್ದಲ್ಲ. ರಾಜರ ಕಾಲದ ಜನತೆಯ ಆಗಿನ ಆಳ್ವಿಕೆಯ ಪರಿಣಾಮದ ಹಾಗೂ ಮುಂದೆ ಆ ಕಾರಣದಿಂದ ಒದಗಿದ ಪ್ರೇರಣೆಗಳ ಪಾಠವಾಗಿಯೂ ಇತಿಹಾಸ ಇರುತ್ತದೆ; ಆಗುತ್ತದೆ. ಇತಿಹಾಸದ ಅಸ್ತಿತ್ವದ ನೆಲ ಮುಂದಿನ ಯುಗಕ್ಕೆ ಮಾರ್ಗದರ್ಶನವಾಗಿಯೂ ಇರುತ್ತದೆ. ವೀರಶೈವ ಅರಸು ವಂಶತನಗಳು ಇದಕ್ಕೊಂದು ಪ್ರಾತಿನಿಧಿಕ ಸಂಕೇತಗಳಾಗಿವೆ ಎನ್ನಬೇಕು. ಅಲ್ಲದೆ ಅವು ತಾವಿದ್ದ ನೆಲೆಗಳನ್ನು ಕೇವಲ ರಾಜಕೀಯ ರಾಜಧಾನಿಗಳನ್ನಾಗಿಸಲಿಲ್ಲ. ತಮ್ಮ ಬದುಕಿನ ಬಗೆಯಿಂದಲೂ ಅವುಗಳನ್ನು ಸಾಂಸ್ಕೃತಿಕ ರಾಜಧಾನಿಗಳನ್ನಾಗಿಸಿದುವು. ಅಂತಾಗಿ ಕರ್ನಾಟಕ ಸಂಸ್ಕೃತಿಯ ಒಟ್ಟಾಯಕ್ಕೆ ಭಾರತೀಯ ಸಂಸ್ಕೃತಿಯ ಜಾಯಮಾನಕ್ಕೆ ತಮ್ಮ ಪತಿಯಿಂದಲೂ ಆ ಅರಸು ವಂಶಗಳು ನೀಡಿದ ದೇಣಿಗೆಯನ್ನು ಮರೆಯುವಂತಿಲ್ಲ; ಕನ್ನಡ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಇವರ ಪಾತ್ರವೂ ಮುಖ್ಯವಾಗಿದೆ ಎಂಬುದನ್ನು ಮರೆಯುವಂತಿಲ್ಲ.

●

ಲೇಖಕರ ವಿಳಾಸಗಳು

ಲೇಖಕರ ವಿಳಾಸಗಳು

೧. ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು
ಸಂಸ್ಥಾನ ಮಠ, ಮುಂಡರಗಿ - ೫೬೨ ೧೧೮
ಜಿ॥ ಧಾರವಾಡ

೨. ಶ್ರೀಮತಿ ಉಷಾ ಕಿರಣ್
ಕನ್ನಡ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ
ಹೆಬ್ಬಾಳ, ಬೆಂಗಳೂರು

೩. ಶ್ರೀ ಲಂಕಾ ಕೃಷ್ಣಮೂರ್ತಿ
೧೦೮, ೧೦ನೆಯ ಅಡ್ಡರಸ್ತೆ, ೧ನೆಯ ಹಂತ, ಇಂದಿರಾನಗರ
ಬೆಂಗಳೂರು - ೫೬೦ ೦೩೮

೪. ಶ್ರೀ ಹೆಚ್. ಗಂಗಾಧರನ್
೧೦೮೯, ವಿಷ್ಣುವರ್ಧನ ರಸ್ತೆ, ಚಾಮರಾಜಪುರಂ,
ಮೈಸೂರು - ೫೭೦ ೦೦೪

೫. ಡಾ. ಸಿ. ಆರ್. ಚಂದ್ರಶೇಖರ್
ಡಿಪಾರ್ಟ್‌ಮೆಂಟ್ ಆಫ್ ಸೈಕಿಯಾಟ್ರಿ, ನಿಮಾನ್ಸ್, ಹೊಸೂರು ರಸ್ತೆ
ಬೆಂಗಳೂರು - ೫೬೦ ೦೨೯

೬. ಡಾ. ಎಂ. ಚಿದಾನಂದಮೂರ್ತಿ
೬ಎ. ಮಿಂಚು, ೪ನೆಯ ಅಡ್ಡರಸ್ತೆ, ೧೧ನೆಮುಖ್ಯರಸ್ತೆ, ವಿಜಯನಗರ ೨ನೆಯ ಹಂತ,
ಬೆಂಗಳೂರು - ೫೬೦ ೦೪೦

೭. ಶ್ರೀಮತಿ ಜಿ. ವಿ. ಜಯಾ ರಾಜಶೇಖರ್
೩೩, ೧೫ನೆಯ ಅಡ್ಡರಸ್ತೆ, ೩ನೆಯ ಬ್ಲಾಕ್ ಜಯನಗರ
ಬೆಂಗಳೂರು - ೫೬೦ ೦೧೧

೮. ಡಾ. ಅ. ಲ ನರಸಿಂಹನ್
ಅನ್ವೇಷಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ೮ನೆಯ ಮಹಡಿ, ಕಾವೇರಿ ಭವನ
ಬೆಂಗಳೂರು - ೫೬೦ ೦೦೯

೯. ಪ್ರೊ. ಎಂ. ಜಿ. ನಾಗರಾಜ್
೨೯(ಮಹಡಿ), ೨ನೆಯ ಕ್ರಾಸ್, ಶ್ರೀರಾಮನಗರ, ಮಹಾಲಕ್ಷ್ಮೀಪುರಂ
ಬೆಂಗಳೂರು - ೫೬೦ ೦೮೬

೧೦. ಡಾ. ಪಿ. ವಿ. ನಾರಾಯಣ
೩೦, ತಂಗಾಳಿ, ಆರ್. ಬಿ. ಐ. ಕಾಲೋನಿ, ಜಯನಗರ ೩ನೆಯ ಬ್ಲಾಕ್ ಪೂರ್ವ
ಬೆಂಗಳೂರು - ೫೬೦ ೦೧೧

೧೧. ಶ್ರೀ ಜ. ಹೊ. ನಾರಾಯಣಸ್ವಾಮಿ
೨೦೬೪/ಎ, ಮಾನವ, ಉತ್ತರ ಬಡಾವಣೆ
ಹಾಸನ - ೫೭೩ ೨೦೧

೧೨. ಪೂಜ್ಯ ಶ್ರೀ ನಿರುಪಾಧಿ ಸ್ವಾಮಿಗಳು
ಶ್ರೀ ಅಡವೀಸ್ವಾಮಿ ಮಠ, ಮರೇಗುದ್ದಿ - ೫೮೭ ೧೨೧
ತಾ॥ ಜಮಖಂಡಿ, ಜಿ॥ ವಿಜಾಪುರ

೧೩. ಪ್ರೊ. ಕೆ. ಟಿ. ಪಾಂಡುರಂಗಿ
೧೩೨, ೩ನೆಯ ಬ್ಲಾಕ್, ಜಯನಗರ, ಕೇಂದ್ರ ಗ್ರಂಥಾಲಯದ ಹಿಂಭಾಗ
ಸೌತ್ ಎಂಡ್ ಸರ್ಕಲ್, ಬೆಂಗಳೂರು - ೫೬೦ ೦೧೧

೧೪. ಡಾ. ಎಸ್. ಎಫ್. ಪೂಜಾರ್
ನಿಸರ್ಗ, ಕಲ್ಯಾಣ ನಗರ
ಧಾರವಾಡ - ೫೮೦ ೦೦೭

೧೫. ಡಾ. ವ್ಹಿ. ಜಿ. ಪೂಜಾರ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗ ವಿಶ್ವವಿದ್ಯಾಲಯ
ಗುಲಬರ್ಗ

೧೬. ಡಾ. ಬಸವರಾಜ ಸಬರದ
ಕನ್ನಡ ವಿಭಾಗ, ಗುಲಬರ್ಗ ವಿಶ್ವವಿದ್ಯಾಲಯ
ಗುಲಬರ್ಗ

೧೭. ಡಾ. ಬಸವರಾಜ ಸಾದರ
ಆಕಾಶವಾಣಿ,
ಧಾರವಾಡ

೧೮. ಪ್ರೊ. ಎಸ್. ಬಸವಾರಾಧ್ಯ
೭೮೩ ೩ನೆಯ ಬ್ಲಾಕ್, ರಾಜಾಜಿನಗರ (ಹಳೇ ಪೊಲೀಸ್ ಸ್ಟೇಷನ್ ಹತ್ತಿರ)
ರಾಜಾಜಿನಗರ, ಬೆಂಗಳೂರು - ೫೬೦ ೦೧೦

೧೯. ಡಾ. ಡಿ ಮಂಗಳಾ ಪ್ರಿಯದರ್ಶಿನಿ
೧೭೫, ಶ್ರೀಮಾತಾ, ೬ನೆಯ ಬ್ಲಾಕ್, ಜಯನಗರ
ಬೆಂಗಳೂರು - ೫೬೦ ೦೧೧

೨೦. ಶ್ರೀ ಸಾ. ಮಂಚಯ್ಯ
ನಿರ್ದೇಶಕರು (ನಿ) ಸಾರ್ವಜನಿಕ ಶಿಕ್ಷಣ ಇಲಾಖೆ,
ನಂ : ೧೧೯೨, ೩೫ನೆಯ 'ಬಿ' ಕ್ರಾಸ್, ೨೮ನೆಯ ಮುಖ್ಯರಸ್ತೆ, ೪ನೆಯ 'ಟಿ' ಬ್ಲಾಕ್,
ಜಯನಗರ, ಬೆಂಗಳೂರು - ೫೬೦ ೦೧೧

೨೧. ಡಾ. ಸಿ. ಯು. ಮಂಜುನಾಥ್
೧೪೪೮, ೭ನೆಯ 'ಸಿ' ಮುಖ್ಯರಸ್ತೆ, ಕಲ್ಯಾಣ ಗೃಹ ನಿರ್ಮಾಣ ಸಂಘದ ಬಡಾವಣೆ
ವಿಜಯನಗರ, ೨ನೆಯ ಹಂತ, ಬೆಂಗಳೂರು - ೫೬೦ ೦೪೦

೨೨. ಡಾ. ಎಚ್. ಎಂ. ಮರುಳಸಿದ್ಧಯ್ಯ
೬೨, ಈಶಕೃಪೆ, ಮಂಜುನಾಥ ಕಾಲೋನಿ, ಜೆ. ಪಿ. ನಗರ
ಬೆಂಗಳೂರು - ೫೬೦ ೦೭೮

೨೩. ಶ್ರೀ ಕೆ. ಬಿ. ಮಲ್ಲೇಶಯ್ಯ
೫೨, ಮೃತ್ಯುಂಜಯ ನಿಲಯ, ೯ನೆಯ ಮುಖ್ಯ ರಸ್ತೆ, ವಿಜಯನಗರ
೨ನೆಯ ಹಂತ, ಬೆಂಗಳೂರು - ೫೬೦ ೦೪೦

೨೪. ಶ್ರೀ ಟಿ. ಆರ್. ಮಹಾದೇವಯ್ಯ
ಭಾಗ್ಯರವಿ ೫೭೮, ೮ನೆಯ ಮುಖ್ಯರಸ್ತೆ, ಎಂ. ಸಿ. ಬಡಾವಣೆ, ವಿಜಯನಗರ,
ಬೆಂಗಳೂರು - ೫೬೦ ೦೪೦

೨೫. ಶ್ರೀಮತಿ ಎಲ್. ಜಿ. ಮೀರಾ
೧೨೩, ೧ನೆಯ 'ಆರ್' ಬ್ಲಾಕ್, ೨ 'ಬಿ' ಮುಖ್ಯ ರಸ್ತೆ, ರಾಜಾಜಿನಗರ
ಬೆಂಗಳೂರು - ೫೬೦ ೦೧೦

೨೬. ಪ್ರೊ. ಎಸ್. ಕೆ. ರಾಮಚಂದ್ರ ರಾವ್
೩೦೫, ೬ನೆಯ ಅಡ್ಡರಸ್ತೆ, ೧ನೆಯ ಬ್ಲಾಕ್, ಜಯನಗರ
ಬೆಂಗಳೂರು - ೫೬೦ ೦೧೧

೨೭. ನ್ಯಾಯಮೂರ್ತಿ ಎಂ. ರಾಮಾಜೋಯಿಸ್
೮೭೦/ಸಿ, ೫ನೆಯ ಬ್ಲಾಕ್, ರಾಜಾಜಿನಗರ
ಬೆಂಗಳೂರು - ೫೬೦ ೦೧೦

೨೮. ಡಾ. ಸಿ. ಕೆ. ರೇಣುಕಾರ್ಯ
ಅರ್ಥಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ
ಮೈಸೂರು

೨೯. ಡಾ. ಮಠಂ ವಾಸುದೇವ ಮೂರ್ತಿ
೧೩೪೪, ೩೨ನೆಯ ಅಡ್ಡರಸ್ತೆ , ತಿಲಕನಗರ
ಬೆಂಗಳೂರು - ೫೬೦ ೦೪೧

೩೦. ಶ್ರೀ ಮಲ್ಲೇಪುರಂ ಜಿ. ವೆಂಕಟೇಶ್
ಮುಖ್ಯಸ್ಥರು, ಭಾಷಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

೩೧. ಶ್ರೀಮತಿ ಶಶಿಕಲಾ ಶಿವಶಂಕರ್
೮೬, ಹೆಚ್. ಆರ್. ವಿ. ಲೇಔಟ್, ಮಾಗಡಿ ರಸ್ತೆ (ಚೆಕ್‌ಪೋಸ್ಟ್ ಎದುರು)
ಬೆಂಗಳೂರು - ೫೬೦ ೦೭೯

೩೨. ಎಸ್. ಶಿವಣ್ಣ
೧೩೮, ೭ನೆಯ ಮುಖ್ಯರಸ್ತೆ, ವಿಜಯನಗರ, 2ನೆಯ ಹಂತ
ಬೆಂಗಳೂರು - ೫೬೦ ೦೪೦

೩೩. ಡಾ. ಎಂ. ಶಿವಮೂರ್ತಿ
೩೬, ಕಲಾಕುಂಜ, ಈಸ್ಟ್‌ಲಿಂಕ್ ರೋಡ್,
'ಬಿ'ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - ೫೬೦ ೦೦೩

೩೪. ಡಾ. ಚಕ್ಕೆರೆ ಶಿವಶಂಕರ್
೮೬, ಹೆಚ್. ಆರ್. ವಿ. ಲೇಔಟ್, ಮಾಗಡಿ ರಸ್ತೆ (ಚೆಕ್‌ಪೋಸ್ಟ್ ಎದುರು)
ಬೆಂಗಳೂರು - ೫೬೦ ೦೭೯

೩೫. ಡಾ. ವಿ. ಶಿವಾನಂದ
ಭಾರತೀಯ ಭಾಷೆಗಳ ವಿಭಾಗ, ಬನಾರಸ್ ಹಿಂದೂ ವಿಶ್ವವಿದ್ಯಾಲಯ,
ವಾರಣಾಸಿ - ೨೨೧ ೦೦೫, ಉತ್ತರ ಪ್ರದೇಶ

೩೬. ಶ್ರೀ ಷಣ್ಮುಖಯ್ಯ ಅಕ್ಕೂರಮಠ
೬೭. ದೇವ ಗಂಗೋತ್ರಿ, ಶಂಕರಮಠದ ರಸ್ತೆ, ಶಂಕರಪುರಂ,
ಬೆಂಗಳೂರು - ೫೬೦ ೦೦೪

೩೭. ಪ್ರೊ. ಸಿದ್ಧರಾಮಯ್ಯ ಮಠಪತಿ (ಗೋರಟಾ)
ಸಂಗೀತ ವಿಭಾಗ, ಬಸವೇಶ್ವರ ಕಲಾ ಮಹಾವಿದ್ಯಾಲಯ
ಬಾಗಲಕೋಟೆ-೫೮೭ ೧೦೧, ವಿಜಾಪುರ ಜಿಲ್ಲೆ

೩೮. ಡಾ. ಸೂರ್ಯನಾಥ ಯು. ಕಾಮತ್
೭೯೮, ೬ನೆಯ ಅಡ್ಡರಸ್ತೆ, ೧ನೆಯ ಮುಖ್ಯರಸ್ತೆ, ಹನುಮಂತನಗರ,
ಬೆಂಗಳೂರು -೫೬೦ ೦೧೯

೩೯. ಡಾ. ಬಿ. ಎಸ್. ಸ್ವಾಮಿ
ಆಕಾಶವಾಣಿ, ಮಂಗಳೂರು
ದಕ್ಷಿಣ ಕನ್ನಡ ಜಿಲ್ಲೆ

೪೦. ಡಾ. ಬಿ. ಆರ್. ಹಿರೇಮಠ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ - ೫೮೦ ೦೦೩

